REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

1—5—1958

ಸಂಚಿಕೆ ೩೪
NO. 34

ಸಾಮ್ಯವಾದಿಗಳಿಗೆ ಉಪದೇಶ—

ಅಹಿಂಸೆಯಿಂದಲೇ ವಿಶ್ವಶಾಂತಿ

ಪ್ರಧಾನಿ ನೆಹರೂರವರು ಕೆಂಪ ಕೇರಳದ ಸಂಚಾರ ಕಾರ್ಯಕ್ರಮಗಳನ್ನು ಕಳೆದ ವಾರ ಕೈಗೊಂಡಿದ್ದರು ಈ ಸಂದರ್ಭದಲ್ಲಿ ಅವರು ಅಲ್ಲಿಯ ಜನತೆಗೆ ಅಹಿಂಸೆಯ ಮಹತ್ವವನ್ನು ಮನಗಾಣಿಸಿದರು ಕಾಂಗ್ರೆಸ್ ಕೇರಳವನ್ನು ಕಳೆದುಕೊಂಡಿದ್ದರೂ, ಅಲ್ಲಿ ಕಮ್ಯೂನಿಸ್ಟ್ ಸರಕಾರವಿದ್ದರೂ ಎರಡೂ ಪಕ್ಷಗಳ ಮೂಲ ತತ್ವಗಳು ಭಿನ್ನವಾಗಿದ್ದರೂ, ಉದ್ದೇಶವೊಂದೇ—ದೇಶದ ಪ್ರಗತಿಯೇ ನಮ್ಮೆಲ್ಲರ ಧ್ಯೇಯವಾಗಿರಬೇಕೆಂಬುದನ್ನು ಜನತೆಗೆ ಅವರು ಮನಗಾಣಿಸಿದರು.

ತಿರುವನಂತಪುರ ನಗರ ಕಾರ್ಪೊರೇಶನು ಈ ಸಭೆಯಲ್ಲಿ ಅವರಿಗೆ ಮಾನಪತ್ರವನ್ನರ್ಪಿಸಿತು ಶ್ರೀನೆಹರೂರವರು ಅದನ್ನು ಪ್ರಾರಂಭದಲ್ಲಿ ಪ್ರಸ್ತಾಪಿಸಿ "ಕೇರಳದ ಸಲ ನಾನು ಇಲ್ಲಿಗೆ ಬಂದಾಗ ಸಾರ್ವತ್ರಿಕ ಚುನಾವಣೆಯ ಕಾಲವಾಗಿತ್ತು. ಚುನಾವಣೆಯ ಕಾಲಕ್ಕೆ ಜನರೆಲ್ಲರಿಗೂ ಚುನಾವಣೆಯ ಜೊರತು ಜಗತ್ತಿನೆಡೆಗೆ ಅಷ್ಟೇಕೆ ನಮ್ಮ ದೇಶ ಹಾಗೂ ನಮ್ಮ ಸಮಸ್ಯೆಗಳತ್ತ ನೋಡಲು ಬಿಡುವೇ ಇರುವುದಿಲ್ಲ. ಈಗ ಸಾಮಾನ್ಯ ಕಾಲದಲ್ಲಿ ಇಲ್ಲಿಗೆ ಬರಲು ನನಗೆ ಆನಂದವೆನಿಸುತ್ತದೆ.

"ದೀರ್ಘ ಕಾಲದಿಂದ ಕಾಂಗ್ರೆಸಿಗನಾಗಿದ್ದವನು ಕಮ್ಯೂನಿಸ್ಟ್ ಸರಕಾರವಿರುವ ರಾಜ್ಯಕ್ಕೆ ಹೇಗೆ ಹೋದೀತೆಂದು ನನಗೆ ಅನೇಕರು ಕೇಳಿದ್ದಾರೆ. ಬಹುಶಃ ನಾನಿಲ್ಲಿಗೆ ಬಂದಾಗ ಒಂದಾನೊಂದು ರೀತಿಯ ಪಟುಕಿ ಇಲ್ಲಿ ಹಾರೀತೆಂದು ಅವರು ನಿರೀಕ್ಷಿಸುತ್ತಾರೆ. ನಾನು ಅಜವರ್ಷಗಳಿಂದ ಕಾಂಗ್ರೆಸಿಗೂ ಅದರ ಧೋರಣೆಗಳಿಗೂ ಅಂಟಿಕೊಂಡಿರುವದೇನೋ ನಿಜ, ಇಂದಿನ ಕೇರಳ ಸರಕಾರ—ಕಾಂಗ್ರೆಸಿಗೆ ಸಂಬಂಧವಿಲ್ಲದುದೂ ನಿಜ. ಯಾವದೊಂದು ಪಕ್ಷಕ್ಕೆ ಸಂಬಂಧಿಸಿದ ವ್ಯಕ್ತಿ ಕೆಲವೊಂದು ಮೂಲಭೂತ ತತ್ವಗಳಿಗೆ ಅಂಟಿಕೊಂಡಿರುವದು ಸ್ವಾಭಾವಿಕ ಬಹುಶಃ ಕಾಂಗ್ರೆಸಿಗನಾದ ನಮ್ಮನ್ನಿಸ್ಟನಿಗೂ ರಾಜಕೀಯ ತತ್ವಜ್ಞಾನ ಅಥವಾ ಆರ್ಥಿಕ ತತ್ವಜ್ಞಾನಗಳಲ್ಲಿ ಭಿನ್ನಾಭಿಪ್ರಾಯವಿರುತ್ತದೆ ಆದರೂ ಪ್ರತ್ಯಕ್ಷವಾಗಿ ಒಪ್ಪದ ಕೆಲಸ ಮಾಡುವಾಗ ಭಿನ್ನಾಭಿಪ್ರಾಯಗಳಿಗಿಂತಲೂ ಏಕಾಭಿಪ್ರಾಯಗಳೇ ಬಹಳ ಇರುವವು ಇಲ್ಲಿ ನಾನು ಅವುಗಳನ್ನೆಲ್ಲ ಚರ್ಚಿಸುತ್ತ ಹೋಗದೆ ಭಾರತ ಹಾಗೂ ಕೊರಗಿನ ಸದ್ಯದ ಪರಿಸ್ಥಿತಿಗಳ ಬಗ್ಗೆ ಕೆಲ ವಿಚಾರಗಳನ್ನು ನಿಮ್ಮೆದುರು ಪ್ರಸ್ತಾಪಿಸುತ್ತೇನೆ" ಎಂದು ಹೇಳಿದರು

"ಕೇರಳದ ಜನತೆ ಸುಶಿಕ್ಷಿತರಾದುದರಿಂದ ಸಾಮಾನ್ಯ ಸಾರ್ವಜನಿಕ ಸಭೆಯಾದ್ದರಿಂದ ನಾನು ಮಾತನಾಡದೆ ಬಾಯಿಪಾಠ ಮಟ್ಟದಲ್ಲಿ ಮಾತನಾಡುತ್ತೇನೆ ಬಂಡವಳವಾದಿ ದೇಶವಾದ ಜರ್ಮನಿಯೂ ಕಮ್ಯೂನಿಸ್ಟ್ ದೇಶವಾದ ರಷಿಯವೂ ಯುದ್ಧದಿಂದಾದ ಆಘಾತದಿಂದ ಕಳೆದ ಗತ ವರ್ಷಗಳಲ್ಲಿ ಅದ್ಭುತವಾಗಿ ಚೇತರಿಸಿಕೊಂಡಿವೆ ಆ ದೇಶಗಳಲ್ಲಿ ತಂತ್ರಿಕ ಹೊಂದಿದ ಕುಶಲ ವ್ಯಕ್ತಿಗಳು ಇದ್ದುದೇ ಇದಕ್ಕೆ ಕಾರಣವಾಗಿದೆ. ಈ ಧೋರಣೆ ಇಲ್ಲದೆ ಆ ಧೋರಣೆಯನ್ನು ಕುರಿತ ಘೋಷಣೆಗಳು ಅಂತಿಮವಾಗಿ ಲೆಕ್ಕಕ್ಕೆ ಬರಲಾರವು, ಕುಶಲ, ತರಬೇತಿ ಹೊಂದಿದ ಹಾಗೂ ಕಷ್ಟಸಹಿಷ್ಣು ಸ್ತ್ರೀಪುರುಷರೇ ರಾಷ್ಟ್ರ ಕಟ್ಟಬಲ್ಲರು.

ಈ ಎಲ್ಲ ತೊಂದರೆಗಳು, ಅಡ್ಡಿಗಳು ಇದ್ದರೂ ಭಾರತವು ಮೇಲೇಳುತ್ತಿದ್ದು ಇಲ್ಲಿ ಔದ್ಯಮಿಕ ಕ್ರಾಂತಿ ಸಂಭವಿಸುತ್ತಿದೆ ಪಶ್ಚಿಮ ರಾಷ್ಟ್ರಗಳಿಗೆ ಎದುರಾದ ಸಮಸ್ಯೆಗಳಿಗಿಂತಲೂ ನಮಗದುವಾಗಿರುವ ಸಮಸ್ಯೆಗಳು ಹೆಚ್ಚು ಕಠಿಣವಾದವುಗಳಾಗಿವೆ. ೧. ನೂರೈವತ್ತು ವರ್ಷಗಳ ಹಿಂದೆ ಯುರೋಪದಲ್ಲಿ ಔದ್ಯಮಿಕ ಕ್ರಾಂತಿ ಸಂಭವಿಸುವಾಗ ಅಲ್ಲಿದ್ದುದಕ್ಕಿಂತಲೂ ಕೆಳತರಗತಿಯ ಜೀವನಮಟ್ಟ ಇಂದು ನಮ್ಮಲ್ಲಿದೆ ೨. ನಮ್ಮಲ್ಲಿ ಜನಸಂಖ್ಯೆ ವಿಪರೀತವಾಗಿದೆ ೩. ಉತ್ತಮ ಜೀವನಮಟ್ಟವನ್ನು ಅಪೇಕ್ಷಿಸುವ ಪ್ರಜಾತಾಂತ್ರಿಕ ಪದ್ಧತಿ ನಮ್ಮದೆ ಇಂಗ್ಲಂಡದಲ್ಲಾಗಲೀ ಬೇರೆಡೆಯಾಗಲೀ ಔದ್ಯಮಿಕ ಕ್ರಾಂತಿ ಪೂರ್ಣವಾಗುವವರೆಗೂ ಪ್ರಜಾಸತ್ತೆ ಇದ್ದಿಲ್ಲ ಆ ದೇಶಗಳಲ್ಲಿ ರಾಜಕೀಯ ಕ್ರಾಂತಿಗಿಂತ ಮೊದಲು ಆರ್ಥಿಕ ಕ್ರಾಂತಿ ಸಂಭವಿಸಿತು ಭಾರತದಲ್ಲಿ ತದ್ವಿರುದ್ಧವಾಗಿದೆ

"ಧೋರಣೆಗಳು ಮುಖ್ಯವಾದವುಗಳಾಗಿದ್ದರೂ ಮಾನವ ಸಂಪತ್ತೇ ನಿಜವಾದ ಅವಶ್ಯಕತೆಯಾಗಿದೆ ಚಾರಿತ್ರ್ಯವಂತ ಹಾಗೂ ಕಷ್ಟಸಹಿಷ್ಣುವಾದ, ತರಬೇತಿ ಹೊಂದಿದ ಮಾನವ ಬಲವಿದ್ದರೆ ಬೇರೇನೂ ಅವಶ್ಯವಿಲ್ಲ. ಘೋಷಣೆಗಳಿಂದ ನಮ್ಮ ಭಾವನೆಗಳನ್ನು ಪ್ರಚೋದಿಸಬಹುದಲ್ಲದೆ ಬೇರೇನೂ ಆಗಲಾರದು.

"ಸತಿಯೊಬ್ಬನೂ ಕ್ರಾಂತಿಕಾರಿ ಬದಲಾವಣೆಯ ಬಗ್ಗೆ ಮಾತನಾಡುವಾಗ ಕ್ರಾಂತಿಯೆಂದರೆ ಸಾಮಾಜಿಕ ಬದಲಾವಣೆ ಎಂದು ತಿಳಿದಿರುತ್ತಾನೆ. ಕ್ರಾಂತಿಯನ್ನು ಹೇರಲು ಸಾಧ್ಯವಿಲ್ಲ. ಅದು ಬೆಳೆಯಬೇಕಾಗುತ್ತದೆ ಜಾಗತಿಕ ಪರಿಸ್ಥಿತಿಗೆ ಅನುಗುಣವಾಗಿರಬೇಕಾಗುತ್ತದೆ ನೂರೈವತ್ತು ವರ್ಷಗಳ ಹಿಂದೆ ಸಂಭವಿಸಿದ ಫ್ರೆಂಚ ಕ್ರಾಂತಿ ಇಲ್ಲವೆ ಅಂ ವರುಷಗಳ ಹಿಂದೆ ಸಂಭವಿಸಿದ ರಷಿಯನ್ ಕ್ರಾಂತಿಗಳು ಮಹಾ ಘಟನೆಗಳನ್ನಿಸಿರುವವಾದರೂ ಇಂದೂ ಅಂಧ ಕ್ರಾಂತಿಯ ಮಾತನಾಡುವದು ಮೂರ್ಖತನವೆನಿಸುವದು.

"ಸಮಸ್ಯೆಗಳನ್ನು ಹಿಂಸೆಯಿಂದ ಎದುರಿಸುವ ಕಾಲ ಆಗಿಹೋಯಿತು. ಇಂದು ಹಿಂಸೆಯನ್ನು ಅದು ಚಿಕ್ಕದಾಗಿದ್ದರೂ ತ್ಯಜಿಸುವದು ನವ್ಯರಾಷ್ಟ್ರೀಯ ಜೀವನದ ಅತ್ಯಾವಶ್ಯಕ ಅಂಶವಾಗಿದೆ. ಗಾಂಧೀಜಿ ಇಲ್ಲದೆ ಬುದ್ಧರ ಅಹಿಂಸೆಯು ಹಿಂದಿನ ಕಾಲದಲ್ಲಿ ಒಂದು ಅದ್ಭುತವಾಗಿದ್ದಿರಬಹುದು, ಇಂದದು ವಿನಾಶವನ್ನು ತಪ್ಪಿಸಲು ಏಕಮೇವ ವ್ಯಾವಹಾರಿಕ ದಾರಿಯನಿಸಿದೆ

"ಪಂಚವಾರ್ಷಿಕ ಯೋಜನೆಯ ವಿಷಯದಲ್ಲಿ, ಕೆಲವರು ಬಹು ಆವೇಶದಿಂದ ನಡೆಯುತ್ತಿದ್ದೇವೆಂದರೆ ಇನ್ನು ಕೆಲವರು ಬಹು ತೀವ್ರ ನಡೆಯುತ್ತಿದ್ದೇವೆನ್ನುತ್ತಾರೆ ಲೋಕ ಕಾರಣ ಇಂದ ಈ ಸಮಸ್ಯೆಯನ್ನು ಕಠಿಣವೆನಿಸಿದೆ. ಇದ ವರೆಗಿನ ಪ್ರಗತಿಯಿಂದ ನನಗೆ ಸಮಾಧಾನವನಿಸಿರದಿದ್ದರೂ ಉತ್ತಮವಾಗಿಯೇ ನಾವು ಮಾಡಿದ್ದೇವೆಂದು ನನಗೆನಿಸುತ್ತದೆ ನಮ್ಮಲ್ಲಿ ಹಣವಿಲ್ಲವೆಂದು ನಮ್ಮ ಪ್ರಗತಿ ಕುಂಠಿತವಾಗಿಲ್ಲ. ಹಣ ಗಾಣ ವಿಷಯ ನಮ್ಮಲ್ಲಿ ಶಿಕ್ಷಣ ತರಬೇತಿಯಿದ್ದವರ ಕೊರತೆಯಿರುವದೇ ಅದಕ್ಕೆ ಕಾರಣವಾಗಿದೆ. ನಾವು ನಮ್ಮಲ್ಲಿ ಶಕ್ತಿಯನ್ನೂ ಸಹಕಾರ ಪ್ರಯತ್ನವನ್ನೂ ಅದಕ್ಕಾಗಿ ಕೇಂದ್ರೀಕರಿಸಬೇಕು

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ವಾರದ ಸಣ್ಣ ಕಥೆ—

ರಂಗಣ್ಣನ ಪ್ರವಾಸ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ

"ಹಲವು ಕಾಲದಿಂದ ನಾವು ಪುರಾಣಗಳನ್ನು ಓದುತ್ತೇವೆ. ದಿನನಿತ್ಯವೂ ಸ್ವರ್ಗದಲ್ಲಿ ಹೇಗೆ ನಡೆಯುತ್ತದೆ, ವೈಕುಂಠದಲ್ಲಿ ಹೇಗೆ ನಡೆಯುತ್ತದೆ ಎಂಬ ವಿವರಗಳು, ಕಥೆಗಳು ಅದರಲ್ಲಿವೆ. ಋಷಿಗಳು, ಅಪ್ಸರೆಯರು, ಇಂದ್ರ-ಚಂದ್ರರ ನಿತ್ಯ ಜೀವನ ಲೀಲಾ ವಿನೋದ ಕಥನಗಳು ಅದರಲ್ಲಿವೆ. ಆದರೆ ಈಗ ಸ್ವರ್ಗದಲ್ಲಿ ಏನು ನಡೆಯುತ್ತಿದೆಯೆಂದು ಯಾರೂ ಬರೆದಿಡುತ್ತಿಲ್ಲ, ಬರೆಯುತ್ತಿಲ್ಲ. ಅಂದು ಅದೆಲ್ಲಾ ಹೇಗೆ ತಿಳಿಯಿತು? ಇಂದು ಅದೆಲ್ಲಿ ಹೋಯಿತು? ಅದನ್ನು ತಿಳಿಯುವುದು ಹೇಗೆ? ಈಗ ಸ್ವರ್ಗದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಹೇಗೆ ತಿಳಿಯಲು ಸಾಧ್ಯ? ಛೆ! ಏನು ಮಾಡಲಿ?" ಎಂದು ತಹತಹಿಸಿಡುತ್ತಾ ವಾದಿಸುತ್ತಿದ್ದ ರಂಗಣ್ಣ.

"ಸತ್ತು ಸ್ವರ್ಗ ಸೇರು!" ಗೆಳೆಯ ಗುಂಡಣ್ಣ ಹೇಳಿದ,

"ಸತ್ತರಾದರೂ ಅದನ್ನು ತಿಳಿಯಬಹುದೇ ಗುಂಡಣ್ಣ? ಆದರೆ ಅದೇನೋ ಫಿಸಿಕ್ಸ್‌ನಲ್ಲಿ ಪ್ರಾಣಹೋಗುವುದು ಅಂದರೆ ದೇಹಕ್ರಿಯೆ ನಿಲ್ಲುವುದು ಜೀವಾತ್ಮನೂ ಇಲ್ಲ ಪರಮಾತ್ಮನೂ ಇಲ್ಲ ಅಂತಿದೆಯಲ್ಲಾ?"

"ನಿನ್ನ ತಲೆ. ನೀನು B. A. ಕಲಿತದ್ದಕ್ಕೆ ಸಾರ್ಥಕವಾಯ್ತು. ಅದೆಲ್ಲಾ ಸೈಂಟಿಫಿಕ್ ಕಣೋ, ಸೈಂಟಿಫಿಕ್! ಮಾನವನೆಂಬನಿದ್ದರೆ, ಭೂಗ್ರಹವೆಂಬುದಿದ್ದರೆ ಅಂತಹದೇ ಇನ್ನೊಂದು ಸ್ವರ್ಗಲೋಕವೂ ಇರಬಹುದು. ಜೀವಾತ್ಮ ಪರಮಾತ್ಮನೂ ಇರಬಹುದು ಎಷ್ಟೋ ಯುಗಗಳ ಹಿಂದೆ ಸ್ವರ್ಗದ ಕಥೆ ಹಾಗಿತ್ತೆಂದರೆ ಇಂದೂ ಬೇಕು ತಾನೆ? ಆದರೆ ಅದೆಲ್ಲಾ ಕಟ್ಟುಕತೆಯೋ ಏನೋ? ಯಾರು ಬಲ್ಲ? ಅಥವಾ ಇಂದದನ್ನು ನೋಡುವವರಾಗಲೀ, ದಿವ್ಯ ದೃಷ್ಟಿಯಿಂದರಿಯುವವರಾಗಲೀ ಇಲ್ಲವೋ ಏನೋ? ಸತ್ತ ಮೇಲೆ ಜೀವಾತ್ಮನೆಂಬುದಿದ್ದರೆ ಅದೂಂದು ತಮಾಷೆ ನೋಡಬಹುದು. ಆದರೆ.... ತಮಾಷೆಗಾಗಿ ಯಾರು ಸಾಯುವರು?"

"ತಮಾಷೆಯಲ್ಲ ಗುಂಡಣ್ಣ, ಇದು ಕಾರ್ಯ ಸಾಧನೆ! ಸತ್ತರೂ ಪರವಾಗಿಲ್ಲ. ಸ್ವರ್ಗವನ್ನು ಕಂಡು ಅದರ ವಿವರವನ್ನು ಮರ್ತ್ಯರಿಗೆ ತಿಳಿಸಬೇಕು."

"ಹೇಗೆ ತಿಳಿಸುತ್ತಿ?" ಗುಂಡಣ್ಣ ಕೇಳಿದ.

ರಂಗಣ್ಣ ಆಲೋಚಿಸಿದ: "ಹುಂ, ಆಗ ಅದಕ್ಕೆ ಏನಾದರೂ ದಾರಿ ಸಿಗಬಹುದು. ತಿಳಿದಿದ್ದರೆ ತಾನಾದರೂ ತಿಳಿದಂತಾಯಿತಲ್ಲಾ!"

"ಸರಿ ನಿನ್ನ ವಿಚಾರ ನನಗರ್ಥವಾಗೋಲ್ಲಪ್ಪ' ಎಂದು ಗುಂಡಣ್ಣ ನಿಲ್ಲಿಸಿದ.

"ಬಾಂದವಲ್ಲ ಇದು! ಇದನ್ನೇ ಕಾರ್ಯಕ್ಕೆಳಿಸಬೇಕೋಣವೇ ಎಂದು ರಂಗಣ್ಣ ಲೆಕ್ಕ ಹಾಕುತ್ತಿದ್ದ. ಗುಂಡಣ್ಣ ಅವನ ಮನೆಗೆ ಹೋದ ಮೇಲೆ ರಂಗಣ್ಣ ಯೋಚನಾಮಗ್ನನಾದ. ಹೇಗೂ ಆಗಲಿ ಇದೊಂದು ಯಾತ್ರೆ ಮಾಡುವುದೆಂದು ತೀರ್ಮಾನಿಸಿದ.

ಸರಿ. ಸಾಯುವುದು ಹೇಗೆ?

ಹಗ್ಗ, ಬಂಕಿ, ನೀರು, ವಿಷ... ಹುಂ ಇವೆಲ್ಲಾ ಪ್ರಾಣ ಹೋಗ-ವಾಗ ಯಾತನೆಯನ್ನು ತರುವಂಥವುಗಳು! ಇವು ಬೇಡ. ಮತ್ತೆ .. ಎಲೆಕ್ಟ್ರಿಕ್ ಪವರಿಗೆ ಕೈ ಹಾಕುವುದು! ಕ್ಷಿಪ್ರದಲ್ಲಿ ಹಾರಿ ಹೋಗುತ್ತೆ ಪ್ರಾಣ! ಇದು ಸರಿಯಲ್ಲ ಏಕೆಂದರೆ ಪ್ರಾಣಹೋಗುವಾಗ ಏನೆಲ್ಲಾ ನಡೆಯುತ್ತೆ. ನಾನು ಜೀವಾತ್ಮನಾಗಿ ಶರೀರದಿಂದ ಹೇಗೆ ಹೊರಡುತ್ತೇನೆ. ಎಂದೆಲ್ಲಾ ತಿಳಿಯಬೇಕಾದರೆ ನಿಧಾನವಾಗಿ ಸಾಯುವ ಮಾರ್ಗ ಹುಡುಕಬೇಕು ಇದಕ್ಕೆ ವಿಷವೇ ಯೋಗ್ಯ. ಇಲೆಕ್ಟ್ರಿಕ್ ಪವರಿನಿಂದ ಜೀವಾತ್ಮನೇ ಭಸ್ಮವಾಗಲೂ ಸಾಕು!

ಸರಿ. ರಂಗಣ್ಣ ವಿಷವನ್ನು ಪಾನಮಾಡಿದ. ಅವನಿಗೆ ದುಃಖವಾಗಲಿಲ್ಲ ಅಳ್ಳದೆ ಅದು ಆತ್ಮಹತ್ಯೆಯೂ ಅಲ್ಲ. ಅವನ ಕಾರ್ಯ ಸಾಧನೆ! ಧ್ರುವ ಶೋಧನೆಗೆ ಹೊರಟ ಸ್ಕೋಟನಂತೆ!

ವಿಷದ ಜ್ವಾಲೆಯಿಂದ ಶರೀರ ಹೊರಳಾಡಿತು.. ಕಟ್ಟಕಡೆಗೆ ರಂಗಣ್ಣ ತನ್ನ ಐಹಿಕ ಶರೀರದಿಂದ ಜೀವಾತ್ಮನ ರೂಪದಲ್ಲಿ ಹೊರಬಂದ. ಹೊರಬಂದು ರಂಗಣ್ಣ ತನ್ನನ್ನೊಮ್ಮೆ ನೋಡಿಕೊಂಡ; ವಿಚಿತ್ರವೇನೆಂದರೆ ಎಂದಿನಂತೆಯೇ ಸಶರೀರನಾಗಿದ್ದಂತೆಯೇ ಕಂಡಿತವನಿಗೆ ತನ್ನ ಆಕಾರ! ಅದೇ ಪ್ಯಾಂಟ್, ಅದೇ ಬುಶ್, ಕೋಟು ಅದೇ ಕ್ರಾಫ್! ಆದರೆ ಅವನೀಗ ಎಲ್ಲೂ ಸಂಚರಿಸಬಲ್ಲವನಾಗಿದ್ದ. ಅವನೊಮ್ಮೆಲೇ ನವಸ್ಫೂರ್ತಿಯಿಂದ ಮೇಲಕ್ಕೇರಿದ

ಎಷ್ಟೋ ಸಹಸ್ರ ಮೈಲುಗಳನ್ನು ರಂಗಣ್ಣ ಹಾರಿರಬಹುದು. ಯಶಸ್ವೀ ಉಪಗ್ರಹದಂತೆ ಹಾರುತ್ತಿದ್ದ ರಂಗಣ್ಣ. ನೋಡಗಳೆಲ್ಲಾ ಇವನ ಇಕ್ಕಡೆಗಳಲ್ಲಿ ಹಕ್ಕಿಗಳಂತೆ ಹಾರುತ್ತಲಿದ್ದುವು. ಅದೂ! ತನ್ನೆದುರು ಅನತಿ ದೂರದಲ್ಲಿ ಪ್ಯಾಂಟ್ ಕೋಟುಗಳನ್ನು ಧರಿಸಿದ ಓರ್ವ ತೆಳ್ಳನೆಯ ವ್ಯಕ್ತಿ ಬರುತ್ತಿರುವುದು ಕಾಣಿಸಿತು! ಆ ವ್ಯಕ್ತಿ ಹಾಡುತ್ತಾ ಬರುತ್ತಿದ್ದ.

What is life in morn full
numbers,
Life is but an emty dream.

ರಂಗಣ್ಣ ಅವನನ್ನೊಮ್ಮೆ ಆಪಾದಮಸ್ತಕ ನೋಡಿ, ಇವನೊಬ್ಬ ಬ್ರಿಟಿಷನ ಜೀವಾತ್ಮನಾಗಿರಬಹುದೆಂದು ಭಾವಿಸಿ

"ಗುಡ್ ಮಾರ್ನಿಂಗ್ ತಮ್ಮ ಸವಾರಿ ಎತ್ತ?" ಎಂದು ಇಂಗ್ಲಿಷಿನಲ್ಲೇ ಕೇಳಿದ.

"ಒಹೋ ರಂಗಣ್ಣ ಸವಾರಿ ಎತ್ತ ಎಂದೇನು, ನಾವು ಮೂರು ಲೋಕಗಳನ್ನೂ ಸಂಚರಿಸಬಲ್ಲೆವು. ಅದನ್ನಿನ್ನೂ ಅರಿಯೆಯಾ?"

"ಅಷ್ಟೇ ತಾನೆ? ನಾನೂ ಸಂಚರಿಸಬಲ್ಲೆ. ಅದಿರಲಿ. ನಿಮ್ಮ ಪರಿಚಯವಾಗಿಲ್ಲವಲ್ಲಾ. ನೀವೇನಾದರೂ ಭೂಲೋಕದಲ್ಲಿ ವಿಸಿಸ್ಟರೋ, ಡಾಕ್ಟರೋ, ವಕೀಲರೋ ಆಗಿ ಅನ್ಯಾಯಗಳನ್ನು ಮಾಡಿ ಪ್ರಾಣಬಿಟ್ಟು......"

"ಶಟಪ್! ಅಯ್ಯೋ ಮೂರ್ಖ ನಾನು ತ್ರಿಲೋಕ ಸಂಚಾರಿ ನಿ| ನಾರದ ಕಪೂರ್."

"ಅಬ್ಬಬ್ಬಾ ನಾರದ!! ತಾವೇ ಏನು ಕಲಹಪ್ರಿಯರು? ನಮೋಸ್ತು ನಮೋನ್ನಮಃ ಆದರೆ ...ಇದೇನು ನಿಮ್ಮ ವೇಷ ಭೂಷಣ. . ."

"ಆಧುನಿಕ ಫೇಶನ್ ರಂಗಣ್ಣ! ಐ ಲೈಸ್‌ಡ್ ಜಂಟಲ್‌ಮೆನ್ ನಾನು! ಹುಂ, ನೀನು ಬಹುಶಃ ಸ್ವರ್ಗಕ್ಕೆ ಹೊರಟಿರಬೇಕೆಂದು ತಿಳಿದೆ. ಆಗಲಿ, ನೀನು ಮುಂದೆ ಹೋಗು. ಅಲ್ಲಿ ಇಂಡಿಯದಲ್ಲಿ ಕಾಶ್ಮೀರ ಸಮಸ್ಯೆಯನ್ನು ಜಟಿಲಗೊಳಿಸಬೇಕಾಗಿದೆ. ನಾನು ಹೋಗುತ್ತೇನೆ ಟಾಟಾ!" ಇಳಿದರು ನಾರದ ಕಪೂರರು ಕೆಳಗೆ!

"ಸರಿ ಇನ್ನು ತಿಳಿದಂತಾಯಿತು. ಇಲ್ಲಿಯೂ ನವ್ಯ ನಾಗರಿಕತೆ ಬಂದಿದೆ." ಎಂದು ರಂಗಣ್ಣ ಮುಂದುವರಿದ. ಸ್ವರ್ಗದ ನಂದನವನ ಕಾಣತೊಡಗಿತು. ನವೀನ ತರದ ಕಸಿ ಹೂವಿನ ಗಿಡಗಳು, ಇಂಗ್ಲಿಷ್ ನಾವಿಕಾರಿ ಹೂಗಳು, ಫ್ಲವರ್ ಬೆಡ್ಸ್, ಇಲೆಕ್ಟ್ರಿಕ್ ಶಕ್ತಿಯಿಂದ ಹಾರುವ ಕಾರಂಜಿಗಳು! ಸಾಕ್ಷಾತ್ ನಮ್ಮ ಕೃಷ್ಣರಾಜ ಸಾಗರದ ವೃಂದಾವನ ಎಂದುಕೊಂಡ ರಂಗಣ್ಣ.

ಬೀದಿಗಳೋ ನಮ್ಮ ಮದರಾಸ್-ಕಲ್ಕತ್ತಾಗಳ ಮೈನ್ ರೋಡುಗಳಂತೆಯೇ ಇವೆ. ಟ್ರಾಮುಗಳೂ, ಬಸ್ಸುಗಳೂ ಓಡಾಡುತ್ತಿವೆ. ಬೀಟಿನ ಪೋಲೀಸರೂ ಇದ್ದಾರೆ ಬೀಡಾ ಬೀಡಿ ಸಿಗರೇಟಿನಿಂದ ಅರಂಭವಾಗಿ ಎಲ್ಲಾ ವ್ಯಾಪಾರಗಳೂ, ರೇಡಿಯೋದ ಕಿರುಚಲು ಕೂಗೂ ಇವೆ ಸಾಕ್ಷಾತ್ ನ್ಯೂಡೆಲ್ಲಿಯ ಅಪರಾವತಾರ!

ರಂಗಣ್ಣ ಮುಂದೆ ಹೋಗುತ್ತಿರುವಷ್ಟರಲ್ಲಿ ನೀಲಿ ಬಣ್ಣದ ಶವರ್‌ಲೆಟ್ ಕಾರೊಂದು ಪುರ್ರೆಂದು ಬಂದು ನಿಂತಿತು. ಅದರೊಳಗಿಂದ ಓರ್ವ ಹೇದೆ ಕೆಳಗಿಳಿದು:

"ಬನ್ನಿ ಸಾರ್ ತಾವು ನಮ್ಮ ಸ್ವರ್ಗಲೋಕವನ್ನು ನೋಡಬಂದಿರುವಿರೆಂದು ತಿಳಿದು ನಮ್ಮ ಇಂದ್ರರಿಗೆ ಸಂತೋಷವಾಗಿದೆ ನೋಡಿ ಫಸ್ಟ್ ಸೀಟಿನಲ್ಲಿರುವವರೇ ಇಂದ್ರರು. ಬನಿ ಬನ್ನಿ" ಎಂದು ಸ್ವಾಗತಿಸಿದ.

ರಂಗಣ್ಣ ಹತ್ತಿ ಕುಳಿತುಕೊಂಡ ಇಂದ್ರ ರಂಗಣ್ಣನನ್ನೊಮ್ಮೆ ನೋಡಿ "ಡಿಯರ್ ಮಿಸ್ಟರ್ ರಂಗಣ್ಣ, ತಮ್ಮ ಆಗಮನದ ಕಾರಣ ತಿಳಿದಿದೆ. ಇಂತಹ ಸಾಹಸವಾಡಿ ಇಲ್ಲಿ ಬಂದವರು ಕಡಿಮೆ. ನಿಮ್ಮಂತವರು ಕೆಲವರುವುದರಿಂದಲೇ ನಮ್ಮ ಸ್ವರ್ಗದ ಹಿರಿಮೆ ಇನ್ನುಳಿದವರಿಗೆ ತಿಳಿಯಬೇಕಾಗಿದೆ" ಎಂದ.

ಡ್ರೈವರ್ ಮಾತಲಿಯು ಸ್ಟೇರಿಂಗಿನ ಮೇಲೆ ಒಮ್ಮೆ ಕೈಯೋಡಿಸಿ ಸಿಗರೇಟ್ ಪೇಕನ್ನು ತೆಗೆದು ರಂಗಣ್ಣನೆಡೆಗೆ ತೋರಿಸಿದ ರಂಗಣ್ಣನೂ ಇಂದ್ರನೂ ಸಿಗರೇಟ್ ಸೇದಲಾರಂಭಿಸಿದರು.

"ಅಂದ ಹಾಗೆ ಊರ್ವಶಿ ಎಲ್ಲಿ?" ರಂಗಣ್ಣನು ಮೆಲ್ಲನೆ ಪೇದೆಯನ್ನು ಕೇಳಿದ

"ಓಹೋ ತಾವಿನ್ನೂ ತಿಳಿದಿಲ್ಲವೆ? ಅಲ್ಲಾ ಹೇಗೆ ತಿಳಿಯೋದು? ಊರ್ವಶಿಗೂ ಇಂದ್ರರಿಗೂ ಡೈವೋರ್ಸ್ ಆಗಿದೆ. ಈಗವರ ಹೆಂಡತಿ ಮಿಸೆಸ್ ಗ್ಲೋಬ್! ಅವಳು ಸ್ವರ್ಗದ ಹಾಲಿವುಡ್ಡಿಗೆ ಹೋಗಿದ್ದಾಳೆ."

ಅಷ್ಟರಲ್ಲಿ ಫಸ್ಟ್ ಸೀಟಿನಲ್ಲಿ ಕುಳಿತ ಇಂದ್ರ ಮಾತನಾಡಲಾರಂಭಿಸಿದ."ನೋಡಿಮಿ. ರಂಗಣ್ಣ ಹಲವು ಯುಗಗಳ ದುವು ಇಂತಹ ಒಂದು ಪ್ರಸಂಗ ನಡೆಯದೆ. ಪಂಪ, ವಾಲ್ಮೀಕಿ, ವಿಶ್ವಾಮಿತ್ರ, ವಶಿಷ್ಠರು ಹೇಳಿದ್ದೇನೋ ಅಷ್ಟೇ. ಇಂದು ನಮ್ಮ ಕಥೆ ಬೇಗೆ ಪ್ರಸಿದ್ಧವಾಗಲಿ? ಅದೀಗ ನಿಮ್ಮ ಮೂಲಕ ನಡೆಯಬೇಕಾಗಿದೆ" ಸ್ವಲ್ಪ ನಿಲ್ಲಿಸಿ ಒಮ್ಮೆ ಬಲವಾಗಿ ಸಿಗರೇಟು ಸೇದಿ ' ನೋಡಿ, ನಾವು ಇಲ್ಲಿ ಬರ್ತ್ ಕಂಟ್ರೋಲ್ ಜಾರಿಮಾಡಿ ಅಭ್ಯಸಿಸುತ್ತಾ ಇದ್ದೇನೆ. ಕಳೆದ ನಮ್ಮ ಚ

(೧೧ನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾದ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; ½ ರಾತಲಿಗೆ ರೂ. 2/0
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಉಡುಪಿ ಕೃಷ್ಣ ಭವನ ಸ್ಟಾಲ್. ಮಂಗಳೂರು.
2 ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3 ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ಭಾರತದಲ್ಲಿ ರೈಲುಗಾಡಿಗಳ ಉತ್ಪಾದನೆ--

ಪೆರಂಬೂರ್ ರೈಲುಗಾಡಿ ಕಾರಖಾನೆ

ಶ್ರೀ ಕೆ ಸ್ವರೂಪ್

ಸಮಗ್ರ ರೈಲುಗಾಡಿ ಕಾರ್ಖಾನೆಯು ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸ್ಥಾಪನೆಯಾದ ಬೃಹದ್ ಕಾರ್ಖಾನೆಗಳಲ್ಲಿ ಒಂದು ಈ ಕಾರ್ಖಾನೆಯಲ್ಲಿ ಕೆಲಸವು ೧೯೫೨ರ ಸೆಪ್ಟಂಬರ್‌ನಲ್ಲಿ ಆರಂಭವಾದರೂ, ಈ ಕಾರ್ಖಾನೆಯ ಉತ್ಪಾದನೆಯನ್ನು ೧೯೫೫ರ ಅಕ್ಟೋಬರ್ ೨ರಂದು ಭಾರತದ ಪ್ರಧಾನ ಮಂತ್ರಿಗಳು ಉದ್ಘಾಟಿಸಿದರು ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಕಾರ್ಖಾನೆಯಲ್ಲಿ ರೈಲ್ವೆ ಪೀರೋಪಸ್ಕರಣಗಳನ್ನು ತಯಾರಿಸುವ ವಿಭಾಗವನ್ನು ೩-೯೯ ಕೋಟಿ ರೂಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು ಈ ಕಾರ್ಖಾನೆಯಲ್ಲಿನ ಯಂತ್ರೋಪಕರಣಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು, ಆದಷ್ಟು ಬೇಗ ಎರಡನೆಯ ಶಿಫ್ಟನ್ನು ಆರಂಭಿಸಲು ಪ್ರಯತ್ನಗಳಾಗುತ್ತಿವೆ

ಮೂಲತಃ ಈ ಕಾರ್ಖಾನೆಯು, ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಪೂರ್ಣ ಉತ್ಪಾದನೆಯನ್ನು ನಡೆಸುವ ಗುರಿಯನ್ನಿಟ್ಟುಕೊಳ್ಳಲಾಗಿತ್ತು. ಆದರೆ ಈ ಗುರಿಯನ್ನು ಎಡು ವರ್ಷಗಳ ಮೊದಲೇ ಸಾಧಿಸುವ ನಿರೀಕ್ಷೆಯಿರುವುದು. ಈ ಕಾರ್ಖಾನೆಯ ವಿವಿಧ ಯೋಜನೆಗಳ ಒಟ್ಟು ವಿನಿಯೋಗವು ಈ ರೀತಿ ಇರುವುದು ರೈಲುಗಾಡಿಗಳ ವಿಭಾಗ ೭ ೩೫ ಕೋಟಿ ರೂಪಾಯಿಗಳು; ಪೀರೋಪಸ್ಕರಣಗಳ ವಿಭಾಗ ೩ ೯೯ ಕೋಟಿ ರೂಪಾಯಿಗಳು, ರಾತ್ರಿ ಶಿಫ್ಟಿನ ಕೆಲಸ ೦ ೯೯ ರೂಪಾಯಿಗಳು

ಆರಂಭದ ವರ್ಷಗಳಲ್ಲಿ ರೈಲ್ವೆ ಗಾಡಿಗಳ ನಮೂನೆಯ ಆ ಕಾಲದ ರಸ್ತೆ ವಾಹನಗಳಿಂದ ಸ್ಫೂರ್ತಿಯನ್ನು ಪಡೆದಿರುತ್ತಿತ್ತು. ಆದರೆ, ರೈಲ್ವೆಗಳು ಹೆಚ್ಚು ಭಾರದ ಸಾಮಗ್ರಿಗಳನ್ನು ಸಾಗಿಸಬಲ್ಲವೆಂಬ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಲಾಯಿತು. ಆದ್ದರಿಂದ ರೈಲ್ವೆ ಗಾಡಿಗಳ ನಮೂನೆಯನ್ನು ಹೆಚ್ಚು ಸರಕುಗಳ ಸಾಗಾಣಿಕೆಯ ದೃಷ್ಟಿಯನ್ನಿಟ್ಟುಕೊಂಡು ರೂಪಿಸಲಾಯಿತು ಗಾಡಿಗಳ ಓಡಾಟದ ವೇಗವು ಕ್ರಮವೇಣ ಹೆಚ್ಚಾಗತೊಡಗಿದ್ದರಿಂದ ತೂಕವು ಪೀರ(ಸೀಟ) ಒಂದಕ್ಕೆ ೨೨೦ ರಾತಲುಗಳಿಂದ ಅರ್ಧಟನ್ನಿಗೆ ಏರಿತು. ಇದು ಸ್ವಭಾವತಾಗಿ ತಯಾರಿಕೆಯ ವೆಚ್ಚವನ್ನು ಏರಿಸಿತು. ರಸ್ತೆ ಸಾರಿಗೆಯಲ್ಲಿನ ಸ್ಪರ್ಧೆಯ, ಹಗುರವಾದ ಪ್ರಯಾಣಿಕರ ಗಾಡಿಗಳನ್ನು ತಯಾರಿಸುವುದರ ಕಡೆಗೆ ರೈಲ್ವೆಯವರ ಗಮನ ಹರಿಯುವಂತೆ ಮಾಡಿತು. ಹಗುರವಾದ ರೈಲು ಗಾಡಿಗಳ ತಯಾರಿಕೆಯಿಂದ ವೇಗ, ಸುರಕ್ಷತೆ ಹಾಗೂ ಉಳಿತಾಯಗಳಿಗೆ ಸಾಧ್ಯವಾಗುವುದು.

ಹಗುರವಾದ ರೈಲ್ವೆ ಪ್ರಯಾಣಿಕರ ಗಾಡಿಯಲ್ಲಿ ಬಳಸುವ ತಂತ್ರವನ್ನೇ ಇತರ ರೈಲ್ವೆ ಗಾಡಿಗಳಿಗೂ ಅನ್ವಯಿಸಿ ತನ್ನೂಳಕ ರೈಲ್ವೆಯ ಕಾರ್ಯಾಚರಣೆಯ ವೆಚ್ಚದಲ್ಲಿ ಉಳಿತಾಯವನ್ನು ಸಾಧಿಸಲಾಗುವುದು ಭಾರತದಲ್ಲಿ ಉತ್ತಮ ಪ್ರಮಾಣದಲ್ಲಿ ಉಷ್ಣಾಂಶವನ್ನು ಕೊಡುವ ಕಲ್ಲಿದ್ದಲಿನ ಅಭಾವವಿರುವುದು ಈ ಕಲ್ಲಿದ್ದಲನ್ನು ಉಳಿಸುವುದು ರಾಷ್ಟ್ರೀಯ ಪ್ರಾಮುಖ್ಯವಾಗಿರುವುದು ಈ ಎಲ್ಲ ಅಂಶಗಳು ಭಾರತೀಯ ರೈಲ್ವೆಯವರು ಪ್ರಯಾಣಿಕರ ಗಾಡಿಗಳಿಗಾಗಿ ಹಗುರವಾದ ರೈಲುಗಾಡಿಗಳನ್ನು ತಯಾರಿಸುವುದಕ್ಕೆ ಆದ್ಯ ಗಮನವೀಯುವಂತೆ ಮಾಡಿವೆ

ಹಗುರವಾದ ಗಾಡಿಗಳು, ಇತರ ರೀತಿಯ ಗಾಡಿಗಳಿಗಿಂತ ಹೆಚ್ಚಿನ ಪ್ರಯಾಣ ಸೌಲಭ್ಯಗಳನ್ನು ಹೊಂದಿರುವುವು ಅವುಗಳ ರಿಪೇರಿ ಖರ್ಚ, ಕಾರ್ಯಾಚರಣೆ ನೆಚ್ಚ ಕಡಿಮೆ ಅಪಘಾತಗಳಾದಾಗ, ರೈಲು ಗಾಡಿಗಳಿಗ ಗ ವಅವಾಹು ಕಡಿಮೆ ಗಾಡಿಗಳ ಕೊನೆಯಲ್ಲಿರುವ ಶೌಚದ ವಿಭಾಗಗಳು ಮಂತಾದವು ಅವಾಯ ಸಂಬಂಧವಾದ ಸಂಘಟನೆಯನ್ನು ನಶ್ಚವಾಗುವುವೇ ಹೊರತು ಪ್ರಯಾಣಿಕರು ಕುಳಿತುಕೊಳ್ಳುವ ವಿಭಾಗಗಳಿಗೆ ಅವಾಯ ಸಂಭವಿಸುವುದು ತೀರಾ ಕಡಿಮೆ ಈ ಗಾಡಿಗಳ ಒಳಕೆಯು ಹೆಚ್ಚು

ಹಗುರವಾದ ರೈಲು ಗಾಡಿಗಳ ತಯಾರಿಕೆಯ ಈ ಕಾರ್ಖಾನೆಯಲ್ಲಿ ಸ್ವಯ ಸ್ಥಿತಗೊಂಡಿದೆ ೧೯೫೬—೫೭ರಲ್ಲಿ ಈ ಕಾರ್ಖಾನೆಯು ೧೫೦ ಗಾಡಿಗಳನ್ನು ತಯಾರಿಸುವ ಗುರಿಯನ್ನಿಟ್ಟುಕೊಂಡಿತ್ತು ಆದರೆ ವಾಸ್ತವವಾಗಿ ೧೫೦ ರೈಲು ಗಾಡಿಗಳನ್ನು ತಯಾರಿಸಿತು ೧೯೫೮-೫೯ರಲ್ಲಿ ಈ ಕಾರ್ಖಾನೆಯು ವರ್ಷಕ್ಕೆ ೩೫೦ ಗಾಡಿಗಳನ್ನು ತಯಾರಿಸುವ ಸರಮಾಪಥಿಗುರಿಯನ್ನು ಮುಟ್ಟುವ ನಿರೀಕ್ಷೆಯಿದೆ. ತಾಂತ್ರಿಕ ಸಹಾಯ ಕಾರ್ಯಕ್ರಮದ ಪ್ರಕಾರ ೧೯೬೦-೬೧ರ ವೇಳೆಗೆ ಈ ಗುರಿಯನ್ನು ಸಾಧಿಸಬೇಕೆಂಬ ನಿರೀಕ್ಷೆಯಿತ್ತು ಉತ್ಪಾದನಾ ವೆಚ್ಚದಲ್ಲಿ ಗಮನಾರ್ಹ ರೀತಿಯಲ್ಲಿ ಸಾಧಿಸಲಾಗಿದೆ

ಆಮದುಮಾಡಿಕೊಂಡ ಒಂದು ರೈಲು ಗಾಡಿಯ ಹೊರಭಾಗದ ಪಚ್ಚ ೧೮ ಲಕ್ಷ ರೂಗಳು ಈ ಕಾರ್ಖಾನೆಯು ಸುಮಾರು ಒಂದು ಲಕ್ಷ ರೂಗಳ ವೆಚ್ಚದಲ್ಲಿ ರೈಲುಗಾಡಿಗಳನ್ನು ಈಗ ಉತ್ಪಾದಿಸುತ್ತಿದೆ ಭಾರತ ಕೈಗಾರಿಕೆಗಳಲ್ಲಿ ಅನೇಕ ಸಾಮಗ್ರಿಗಳನ್ನು ಸಾಮಾನ್ಯವಾಗಿ ಹೊರಗಡೆಯಿಂದ ಕೊಂಡುಕೊಳ್ಳಲಾಗುತ್ತಿದೆ ಆದರೆ, ಈ ಕಾರ್ಖಾನೆಯಲ್ಲಿ ಈ ರೀತಿ ಹೊರಗಡೆಯಿಂದ ತರಸಿಕೊಳ್ಳುವ ವಸ್ತುಗಳಲ್ಲಿ ಆಮದುಮಾಡಿಕೊಳ್ಳಬೇಕಾದ ವಸ್ತುಗಳ ಪ್ರಮಾಣವನ್ನು ಗಮನಾರ್ಹವಾಗಿ ಕಡಿಮೆಮಾಡಿದೆ

ಒಂದು ಗಾಡಿಗೆ ಕಚ್ಚಾ ಸಾಮಗ್ರಿ, ಜೋಡಣೆ ಇತ್ಯಾದಿಗಳಿಗಾಗಿ ೫೫,೦೦೦ ರೂಗಳ ವೆಚ್ಚವಾಗುವುದು. ಅವುಗಳಲ್ಲಿ ೩೭,೦೦೦ ರೂಗಳಷ್ಟು ಮೌಲ್ಯದ ಕಚ್ಚಾ ಸಾಮಗ್ರಿಗಳನ್ನು ಹೊರಗಿನಿಂದ ಆಮದು ಮಾಡಿಕೊಳ್ಳಬೇಕಾಗುವುದು ಈ ಕಾರ್ಖಾನೆಯು ಮಾಡುತ್ತಿರುವ ಸ್ವಯಂಕೃತದ ಫಲವಾಗಿ ಈ ಆಮದು ಮೌಲ್ಯದ ವೆಚ್ಚವನ್ನು ೩೭,೦೦೦ ರೂಗಳಿಂದ ೨೭,೦೦೦ ರೂಗಳಿಗೆ ಇಳಿಸಲು ಸಾಧ್ಯವಾಯಿತು ಉಕ್ಕಿನ ಪೂರೈಕೆಗಾಗಿ ದೇಶದಲ್ಲಿ ಸೂಕ್ತ ಸಾಧನ ಸಂಪತ್ತುಗಳನ್ನು ಪಡೆಯಲಾಗಿದೆ ಈ ಸಾಧನ ಸಂಪತ್ತುಗಳಿಂದ ಉಕ್ಕಿನ ವೆಚ್ಚವು ಇನ್ನೂ ಕಡಿಮೆಯಾಗುವುದು

ಪೀರೋಪಸ್ಕರಣಗಳಿಗಾಗಿ ಪ ಮಾರು ಒಂದು ಗಾಡಿಗೆ ೫೦,೦೦೦ ರೂಗಳಷ್ಟು ವಿನಿಯೋಗವಾಗುವುದು ಅದರಲ್ಲಿ ನೂರಕ್ಕೆ ೨೦ ರಷ್ಟನ್ನು ಹೊರದೇಶಗಳಿಂದಲೂ, ನೂರಕ್ಕೆ ೮೦ ರಷ್ಟನ್ನು ಸ್ವದೇಶಿ ಮೂಲಗಳಿಂದಲೂ ಪಡೆಯಲಾಗುವುದು ಎಲ್ಲಾ ಆಮದು ವಸ್ತುಗಳನ್ನು ಕಡಿಮೆಮಾಡಲು ಪ್ರಯತ್ನಮಾಡಲಾಗುತ್ತಿದೆ

ಈ ಕಾರ್ಖಾನೆಯ ೧೯೫೭-೫೮ರಲ್ಲಿ ೪೫ ಲಕ್ಷ ರೂಪಾಯಿಗಳ ಸಾಮಗ್ರಿಗಳನ್ನು ಕೊಂಡುಕೊಂಡಿತು ೧೯೭೦-೭೧ರ ವೇಳೆಗೆ ಅದು ೫೬ ೩೬ ಲಕ್ಷ ರೂಗಳಿಗೆ ಏರುವ ನಿರೀಕ್ಷೆಯಿದೆ ಈ ಸಾಮಗ್ರಿಗಳಲ್ಲಿ ರೈಲುಗಾಡಿಗಳ ನಿರ್ಮಾಣಕ್ಕೆ ಉಪಯೋಗಿಸುವ ಬಿಡಿಭಾಗಗಳೆಲ್ಲವೂ ಸೇರಿವೆ

ಭಾರತದಲ್ಲಿನ ಸುಮಾರು ೫೦೦ ವಿವಿಧ ಸಂಸ್ಥೆಗಳಿಂದ ಈ ಕಾರ್ಖಾನೆಯ ಸಾಮಗ್ರಿಗಳನ್ನು ಕೊಂಡುಕೊಳ್ಳುವುದು ಹಲವು ಕೈಗಾರಿಕೆಗಳು, ಈ ಕಾರ್ಖಾನೆಯ ಬೇಡಿಕೆಯ ಫಲವಾಗಿ ಅಭಿವೃದ್ಧಿಗೊಳ್ಳುತ್ತಿವೆ ಸಮಗ್ರ ರೈಲುಗಾಡಿಗಳಿಗೆ ಸಹಾಯವಾಗುವಂತಹ ಕಾರ್ಖಾನೆಗಳಿಗೆ ತಾಂತ್ರಿಕ ನೆರವನ್ನು ಒದಗಿಸುವ ವಿಭಾಗವೊಂದು ಈ ಕಾರ್ಖಾನೆಯಲ್ಲಿರುವುದು ಈ ಕಾರ್ಖಾನೆಗೆ ಬೇಕಾಗುವ ಅಲ್ಯೂಮಿನಿಯಂ ಭಾಗಗಳನ್ನು ಅಲ್ವಾಯ್‌ನಲ್ಲಿರುವ ಭಾರತೀಯ ಅಲ್ಯೂಮಿನಿಯಂ ಕಾರ್ಖಾನೆಯ ಪೂರೈಸುವುದು ಹಲವು ರಬ್ಬರ್ ಕಂಪನಿಗಳು ರಬ್ಬರ್ ವಸ್ತುಗಳನ್ನು ಪೂರೈಸುತ್ತಿವೆ

ಮೂಲತಃ ಈ ಕಾರ್ಖಾನೆಯಲ್ಲಿ ರೈಲುಗಾಡಿಯ ಹೊರಭಾಗವನ್ನು ಮಾತ್ರ ಉತ್ಪಾದಿಸುವ ಉದ್ದೇಶವಿತ್ತು ಪೀರೋಪಸ್ಕರಣಗಳನ್ನು ಸಜ್ಜುಗೊಳಿಸುವ ಕಲಸವನ್ನು ವಿವಿಧ ವಲಯ ರೈಲ್ವೆಗಳಿಗೆ ವಹಿಸಿಕೊಡಲಾಗಿತ್ತು ಆದರೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆ ವರ್ಕ್‌ಷಾಪ್‌ಗಳಲ್ಲಿ ಅಗತ್ಯವಾದ ಪ್ರಮಾಣದ ಕಲಸಗಳು ನಡೆಯ ತೊಡಗಿದ್ದರಿಂದ, ಪೀರೋಪಸ್ಕರಣ ಕಲಸವನ್ನು ಈ ಕಾರ್ಖಾನೆಯೇ ವಹಿಸಿಕೊಳ್ಳಬೇಕಾಗಿ ಬಂದಿತು

ಈ ವಿಭಾಗವನ್ನು ಸ್ಥಾಪಿಸುವುದಕ್ಕೆ ಸಂಬಂಧಪಟ್ಟ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಅಗತ್ಯ ನಿವೇಶನಗಳನ್ನು ಪಡೆಯಲಾಗಿದೆ ತಾತ್ಕಾಲಿಕವಾದ ಸ್ಥಳ ಸೌಕರ್ಯವನ್ನು ಅಗಲಕ್ಷ ರೂಗಳ ವೆಚ್ಚದಲ್ಲಿ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ೬ ಲಕ್ಷ ರೂಗಳ ಮೌಲ್ಯದ ಕೆಲವು ಯಂತ್ರೋಪಕರಣಗಳನ್ನು ಪಡೆದುಕೊಳ್ಳಲಾಗಿದೆ ಈ ಸಂಬಂಧ ತುತ್ತ ವಿಭಾಗಗಳನ್ನು ರೂಪಿಸಲಾಗುತ್ತಿದೆ ಅಗತ್ಯ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗುತ್ತಿದೆ ೫೦ ರೈಲುಗಾಡಿಗಳಿಗೆ ಪೀರೋಪಸ್ಕರಣ ವ್ಯವಸ್ಥೆಯನ್ನು ಈಗ ಮಾಡಲಾಗಿದೆ

ರೈಲ ಗಾಡಿಗಳ ಬೇಡಿಕೆಯನ್ನು ಪೂರೈಸುವ ಸಲುವಾಗಿ ಈ ಕಾರ್ಖಾನೆಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿದೆ ಅದಕ್ಕಾಗಿ ರಾತ್ರಿ ವೇಳೆಯಲ್ಲೂ ಕಲಸವನ್ನು ನಡೆಸಲು ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ

ಈ ಕಾರ್ಖಾನೆಯಲ್ಲಿ ಗಾಡಿಗಳ ಹೊರಭಾಗವನ್ನು ತಯಾರಿಸುವ ವಿಭಾಗವು ಪೂರ್ಣ ಉತ್ಪಾದನೆಯನ್ನು ಆರಂಭಿಸಿದಾಗ ಈ ವಿಭಾಗದಲ್ಲಿ ೪,೦೦೦ ಮಂದಿ ಕೆಲಸ ಮಾಡುವರು ಪೀರೋಪಸ್ಕರಣ ವಿಭಾಗದಲ್ಲಿ ೨,೫೦೦ ಮಂದಿ ಕೆಲಸಗಾರರು

(ಇನೇ ಪುಟ ನೋಡಿರಿ)

ದಿ ಕನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಉಡುಪಿ.
ಪ್ರಧಾನ ಕಚೇರಿ ಉಡುಪಿ ಸ್ಥಾಪನೆ 1925

ನಮ್ಮ ಬೇಂಕಿನ
ಹುನಗುಂದ
(ಬಿಜಾಪುರ ಜಿಲ್ಲೆ)
ಶಾಖೆಯು
ತಾ 18-4-'58 ರಂದು
ತೆರೆಯಲ್ಪಟ್ಟಿತು

ಎಲ್ಲ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ—ಉತ್ತಮ ಸೌಕರ್ಯಗಳಿಗೆ ಅತ್ಯುತ್ತಮ ಬೇಂಕು

ಟಿ ಎ ಪೈ, ಬಿ ಕಾಂ.(ಲೊಂ) ಎ ಐ ಐ ಬಿ ಯಸ್ ಆರ್ ಇ ಯಸ್ (ಲಂಡನ್)
ಜನರಲ್ ಮೆನೇಜರ್

ಡಾ ಟಿ ಮಾಧವ ಪೈ, ಎಂ ಬಿ & ಬಿ ಎಸ್
ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ನಾವು ಅಲಕ್ಷಿಸಿದ ಸೌಂದರ್ಯಸಾಗರ—

ಸಂಜೀವಿನೀ ಶಕ್ತಿಯುಕ್ತ ಕೊಟಶಾದ್ರಿ

ಶ್ರೀ. ಕೆ. ವಿಶ್ವಂಭರ ಉಪಾಧ್ಯಾಯ, ವಿದ್ವಾನ್.

ಹಲವು ವರ್ಷಗಳ ಬಯಕೆ ವಿಳಂಬಿಯ ಸೌರ ಯುಗಾದಿಯಂದು ಕೈಗೂಡಿತು. ಮಾಸ್ತರ್ ಗೋವಿಂದ ರಾಯರು, ಜಾನು, ಬಾಲು, ದೇವು—ಕೈಚೀಲಗಳಲ್ಲಿ ಪಾತ್ರೆ ಅವಲಕ್ಕಿ, ಬನ್ಸ್, ಕಾಫಿಯ ಸರಂಜಾಮುಗಳನ್ನು ಹೊತ್ತು ನಾಗೋಡಿನಲ್ಲಿ ಬಸ್ಸಿನಿಂದಿಳಿದೆವು. ಅದೇ ಕಾಲುದಾರಿಯಲ್ಲಿ ಕೊಟಶಾದ್ರಿಯ ಪಯಣ ಆರಂಭವಾಯಿತು.

ಒಂದು ಫರ್ಲಾಂಗ್ ನಡೆಯುವಷ್ಟರಲ್ಲೇ ನಾವು ಬಾಯಾರಿ, ಬಸವಳಿದು, ಬೆಂಡಾಗಿ, ಕಂಗೆಟ್ಟು (ಇನ್ನೂ ಏನೇನೋ ಆಗಿ) ಸೋತಿದ್ದೆವು—ಎಂದ ಮೇಲೆ ಕೈಯ್ಯಲ್ಲಿದ್ದ ತಂಬಿಗೆಯ ನೀರಿನ ಆಯುಷ್ಯ ತೀರಿತ್ತೆಂದು ಬೇರೆ ಹೇಳಬೇಕಿಲ್ಲವಷ್ಟೆ? ಅಮೃತ ಪಾನಕದಿಂದ ಸಚೇತನರಾಗಿ ಬರಿಯ ಕಂಬಿಗೆಯನ್ನು ಹೊತ್ತು, ಮುನ್ನಡೆದೆವು—ಇನ್ನು ಉಳಿದುದು ನಡೆದಷ್ಟೇ ದೂರವೆಂಬ ಉತ್ಸಾಹದಿಂದ.

ಎಷ್ಟು ಗುಡ್ಡಬೆಟ್ಟಗಳನ್ನು ಹತ್ತಿ ಇಳಿದರೂ, ಕಣ್ಣಿಗೆ ಕಾಣುತಿದ್ದ ಕೊಟಶಾದ್ರಿ ಜಲಮರೀಚಿಕೆಯಂತೆ ಸತ್ತಿರ ಬರಲೊಲ್ಲದು. ತಿರುಗಿ ಎರಡನೇ ಫರ್ಲಾಂಗಿನಲ್ಲಾದ ಬಾಯಾರಿಕೆಯನ್ನು ಸಹಿಸಿಕೊಂಡೇ ಎಂಟು ಮೈಲು ನಡೆಯಬೇಕಾಯಿತು. ಚೀಲದೊಳಗಿನ ಕಾಫಿಹುಡಿ ಮಾತ್ರ ತಿನ್ನಲಾಗದೆ ಉಳಿದಿತ್ತು.

ಮೂರು ಮೈಲು ದೂರದಿಂದಲೇ ಕೊಟಶಾದ್ರಿಯಲ್ಲಿರುವ ಹಾಳುಬಿದ್ದ ಬಂಗಲೆ ಕಾಣಿಸಿತು. ಅಷ್ಟು ಎತ್ತರ ಏರಬೇಕೆಂಬುದನ್ನು ನೆನೆದಾಗ, ನಮ್ಮ ಕೈಕಾಲಿನ ಶಕ್ತಿಯೇ ಉಡುಗಿ ಹೋಯಿತು. ಅಲ್ಲಲ್ಲಿ ಬಿಸಿಲು ನಮ್ಮನ್ನು ಬಾಧಿಸಿದರೂ ಹೆಮ್ಮರಗಳ ನೆಳಲಲ್ಲಿ ಉಪಾಯವಿಲ್ಲದೆ ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ್ತ ಮೇಲೇರ ತೊಡಗಿದೆವು

ರವಿಕಿರಣಗಳಿಗೆಗೂ ಅಗಮ್ಯವಾದ ಸ್ಥಳವು ಅಲ್ಲಿತ್ತು. ಅಲ್ಲೊಂದು ಇಲ್ಲೊಂದು ಕೆಂಜಳ್ಳಿ ಓಡುತಿತ್ತು; ವಿಚಿತ್ರವಾಗಿ ಕೂಗುತಿತ್ತು. ಆಗಾಗ ಕರಿಮುಸುಡಿನ ಬುಕ್ಕನ ದರ್ಶನವಾಗುತಿತ್ತು. ಟಿಟ್ಟಭ ರಾಜನ ಟಿಟ್ಟ ಟ್ಟೀ—ವನದ ಮೌನವನ್ನು ಸೀಳಿ ಮುನ್ನಡೆದಿತ್ತು. ಪ್ರಾಣಿಯೊ ಪಕ್ಷಿಯೊ ದೂರದಲ್ಲಿ ಮನುಷ್ಯನ ಹೂಂಕೃತಿಯನ್ನು ಅನುಕರಿಸುತಿತ್ತು. ಅದರ ಕೂಗನ್ನು ಅನುಕರಿಸಿದಾಗ ಸಿಟ್ಟಿನಿಂದ ಪಂಚಮವನ್ನೂ ಮೀರಿ ಕೂಗುವ ಹಕ್ಕಿಯೊಂದರ ಜತೆಯಲ್ಲಿ ಜಗಳಾಡುತ್ತಾ ಮೇಲೇರಿದೆವು. ಅಷ್ಟರಲ್ಲಿ ಸಂಜೆಯ ತಂಪು ಗಾಳಿಯೂ ಬೀಸ ತೊಡಗಿತು. ವನರಾಣಿಯ ಬೆಡಗಿನಲ್ಲಿ ಬಳಲಿಕೆ ಮರೆಯಿತು. ತೂಗುವ ಬೀಳನ್ನು ಹಿಡಿದು ತೂಗುತ್ತ, ಬಿದ್ದ ಮರಗಳ ಮೇಲೇರುತ್ತ; ವನಚರಗಳ ಕೂಗನ್ನೇ ಅನುಕರಿಸುತ್ತ, ದೂಗುತ್ತ, ಹಾಡುತ್ತಾ ಮುಂಬರಿದೆವು.

ಕೊಟಶಾದ್ರಿಯನ್ನು ಮುಕ್ಕಾಲು ಪಾಲು ಮೇಲೇರಿದಾಗ ಏರಿದ ಎತ್ತರದ ಅರಿವಾಯಿತು; ನೋಡಿ ನಾವೇ ಬೆರಗಾದೆವು ಕೆಳಕಣಿವೆಯ ಭೇತಾಳ ವೃಕ್ಷಗಳು, ಚಿಕ್ಕ ಪೊದೆಗಳಂತಿದ್ದವು.

ಬಾಯಿಯ ಭಾವಿಬತ್ತಿ ಎಷ್ಟೋ ಬೇಸಗೆ ಸಂದಿತ್ತು, ಅಂತೂ ನಡೆಯಲೇ ಬೇಕಲ್ಲ. ನಡೆಯದಿದ್ದರೆ ಕತ್ತಲೆಯ ಕಾಳ ರಾಕ್ಷಸನಿಗೆ ಶುತ್ತಾದೇವೆಂದು ಹೆದರಿ ಬೇಗ ಬೇಗನೆ ಮೇಲೇರಿದೆವು. ಅತೀ ಎತ್ತರದಲ್ಲಿ ವಸ್ತ್ರ ಹೊದೆದ ವನುಷ್ಯಾಕೃತಿಯನ್ನು ನೋಡಿ ಅಶೋಭಯವಾಯಿತು.

ಸೂರ್ಯನು ಮುಳುಗುವುದಕ್ಕೆ ಸ್ವಲ್ಪ ಮೊದಲು "ಕಾಮ ತೀರ್ಥವನ್ನು" ಸೇರಿದೆವು. ಅರಳಿ ನಗುತ್ತ ನಿಂತ ಗುಲಾಬಿಯು ಶುಂಬು ಹೃದಯದಿಂದ ನಮ್ಮನ್ನು ಸ್ವಾಗತಿಸಿತು. ನೀರಿಲ್ಲದೆ ಕಂಗೆಟ್ಟ ನಾವು ಅಲ್ಲಿ ಸುರಿಯುತ್ತಿದ್ದ ಕಿರುಜಲ ಧಾರೆಯನ್ನು ನೋಡಿ, ಕೇಕೆ ಹಾಕಿ ಕುಣಿದೆವು. ಹಿಮಮಿಶ್ರಿತ ನೀರಿನಂತೆ ತಂಪಾದ ಆ ಅಮೃತೋದಕವನ್ನು ಕುಡಿದಾಗಲೇ ದಣುವಾರಿತು.

ಮಧ್ಯಾಹ್ನವಿಡೀ ನಮ್ಮನ್ನು ಪೀಡಿಸಿದ "ಭಗವಾನ್" ಭಾಸ್ಕರನು; ನಮ್ಮಂತೆ ಸೋತು ಹಣ್ಣಾಗಿ, ಪಡುಗಿರಿಯಿಂದ ಕಾಲುಜಾರಿ ಪಡುಕಡಲಿಗೆ ಬೀಳುವಾಗ ನಾವೆಲ್ಲ ಸುಮ್ಮನೆ ನೋಡುತ್ತ ನಿಂತೆವೇ ವಿನಃ ಒಬ್ಬರೂ ತುಟಿ ಎತ್ತಲಿಲ್ಲ ಹಾಲಿನ ಹೊಳೆಯಲ್ಲಿ ಅತ್ತಿಯ ಹಣ್ಣು ಬಿದ್ದಂತಾಗಿತ್ತು. ಸೂರ್ಯ ಮುಳುಗುವ ತನಕ ಬೆಟ್ಟಗಳ ಎಡೆಯಲ್ಲಿ ಪ್ರತಿಫಲಿಸುತ್ತಿದ್ದ ಕಾಮನ ಬಿಲ್ಲು; ಆಕಾಶ ಹೊದೆದ ರಂಗುರಂಗಿನ ಹೊದಿಕೆ; ಬೆಟ್ಟಕ್ಕೆ ಬಳಿದ ಸುವರ್ಣಲೇಪ; ಕಾಡು ಹೊವಿನ ಪರಿಮಳವನ್ನು ಹೊತ್ತು ಮೆಲ್ಲನೆ ಸಂಚರಿಸುವ ಗಾಳಿ ಸಂಜೆಯ ಹಾಡನ್ನು ಹಾಡುವ ಹಕ್ಕಿಯ ಬಳಗ ಇವುಗಳಿಂದ ಆ ಸೀಮೆ ನಿಜವಾದ 'ಗಂಧರ್ವರ' ಸೀಮೆಯೇ ಆಗಿತ್ತು.

ವಸಂತದ ಸಂತಸಕ್ಕೆ ಆಗೊಮ್ಮೆ ಈಗೊಮ್ಮೆ ಹೊರ ಹೊರಟ ಕೋಗಿಲೆಯ ಬುಕಿಲು ಬಹುದೂರ ಪಯಣಿಸಿ ಬರುವಾಗ, ಒಂದಕ್ಕೆ ಎರಡಾಗಿ, ಎರಡು ನಾಲ್ಕಾಗಿ, ನಾಲ್ಕು ಹತ್ತಾಗಿ ಬೆಟ್ಟವನ್ನೆಲ್ಲಾ ತುಂಬಿಬಿಟ್ಟಿತು. ಆ ನಾದ ನರ್ತನಕ್ಕೆ, ಹರಿಯುವ ಕಿರುಜೋಗದ ಮಂಜುಳ ಧ್ವನಿಯು ನಿರಾಭರಣವಾದ ಹಿನ್ನೆಲೆಯ ಮುರಜವಾಯಿತು.

ದೂರದಲ್ಲಿ ಕಂಗೊಳಿಸುವ ಮಡುನೂರಿನ ವಿದ್ಯುದ್ದೀಪಗಳ ಮಾಲೆಯನ್ನುಳಿದರೆ ಅಲ್ಲಿ ಕಾಣುವುದು ಅಲ್ಲೊಂದು ಇಲ್ಲೊಂದು ಭುಗಿಲೆಂದು ಹಾರುವ ಕಾಡ್ಗಿಚ್ಚಿನ ನಾಲಗೆ ಮಾತ್ರ. ಪಟ್ಟಣದ ನಡುನಡುವೆ ಕಾರಖಾನೆಯ ಚಿಮಣಿ ಕಾರುವ ಹೊಗೆಯಂತೆ, ಅಲ್ಲಲ್ಲಿ ಕಾಳ್ಗಿಚ್ಚಿನ ಧೂಮ ಪ್ರಣಾಳಿಗಳನ್ನು ನೋಡಬಹುದು. ಆಕಾಶದಲ್ಲಿ ಬೆಳಗುವ ಅಸಂಖ್ಯಾತ ನಕ್ಷತ್ರ, ಅದ್ರಿಯ ತಪ್ಪಲಲ್ಲಿರುವ ಮರಗಳೆಡೆಯಲ್ಲಿ ಮಿನುಗುವ "ಮಿಂಚುಳ್ಳಿ" ಗಳಿಂದ ಭೂಮ್ಯಾಕಾಶಗಳ ಅಂತರವೇ ಮರೆಯಾಯಿತು. ಮಂಜಿನ ಮುಸುಕು ಸುತ್ತಲೂ ವ್ಯಾಪಿಸಿತು ಆಕಾಶದ ಮೇಲೆ ಕುಳಿತೋ ಹಾಲ್ಗಡಲಿನ ನಡುವಿನ ಖಂಡದ್ವೀಪದಲ್ಲಿ ನಿಂತೋ—ಪ್ರಕೃತಿಯ ಮೋಹಕ ಸೌಂದರ್ಯದೊಂದಿಗೆ ವಿಲೀನರಾದೆವು. ದೇವಿಯ ಆರಾಧನೆಯ ಘಂಟಾನಾದವು ನಮ್ಮನ್ನೆಚ್ಚರಿಸಿತು. ಪ್ರಸಾದ ಸ್ವೀಕರಿಸಿ, ಭಕ್ತಿಪರವಶರಾಗಿ ದೇವಿಯನ್ನು ಹೊಗಳಿ ಹಾಡಿದೆವು.

ಯಾವ ಪಟ್ಟಣಿಗನಿಗೂ ಸಿಗದ ನಳ್ಳಿಯ ಸೌಕರ್ಯ ಅಲ್ಲಿದೆ. ಸಮುದ್ರ ಮಟ್ಟದಿಂದ ಸಾಧಾರಣ ನಾಲ್ಕು ಸಾವಿರ ಅಡಿ ಎತ್ತರದಲ್ಲಿರುವ ತಂಪಾದ ಆ ನೀರಿನ ಊಟಿಯನ್ನು ನೋಡಿ, ಅಶ್ಚರ್ಯವೆನಿಸುತ್ತದೆ. ತಿಲಂಗದಿಂದ ಹಿಡಿದು, ಬಚ್ಚಲಿನ ವರೆಗೂ ಪ್ರತ್ಯೇಕ ಕಿರುತಡಸಲುಗಳಿವೆ. ತರಕಾರಿಯ ತೋಟಕ್ಕೆ, ಹೊವಿನ ಉದ್ಯಾನಕ್ಕೆ ನೀರು ತಾನಾಗಿಯೇ ಹರಿದು, ಅದನ್ನು ಬೆಳೆಸುತ್ತದೆ. ನಿರ್ಮಲವಾದ ಕಾಮತೀರ್ಥದ ಪಾವನೋದಕವನ್ನು ನೋಡುವಾಗಲೇ ಪಾಪಮುಕ್ತರಾದೆವೆನಿಸುತ್ತದೆ. ಆ ಸ್ಥಳದ ಮಹಾತ್ಮೆಯಿಂದಲೋ ದೇವಿಯ ಮಹಿಮೆಯಿಂದಲೋ ಅಲ್ಲಿ ಬಹುಬೇಗ ಧ್ಯಾನ ಮಗ್ನರಾಗಿ ಬಿಡಬಹುದು.

ವಿಳಂಬಿಯ ಉದಯಭಾನುವನ್ನು ಕೊಟಶಾದ್ರಿಯ ತತ್ತ್ವತುದಿಯ ಸರ್ವಜ್ಞ ಪೀಠದಲ್ಲಿ ಇದಿರುಗೊಳ್ಳಲು ಹೊರಟೆವು. ಇಬ್ಬನಿಯ ಮುತ್ತುಗಳು ಹುಲ್ಲಿನ ಮೇಲೆ ಕೊರಳಾಡುತಿದ್ದುವು. ಕಾಜಾಣದ ಕಹಳೆಯು ಸೂರ್ಯನ ಬರವನ್ನು ಸಾರಿತು. ಅದರೂ ಮಂಜಿನ ಘರದಿ ಸರಿಯಲಿಲ್ಲ. ದೊಡ್ಡವರೆದುರು ತಮ್ಮದೇನು ಕುಣಿತವೆಂದು ನಾಚಿ ತಾರೆಗಳು ಮರೆಯಾದವು ಮೂಡಣ ಬಾನುಕೆಂಪೇರಿತು. ಉಷೆ ಜಾರಿನಳು. ಮೆಲ್ಲನೆ ಮಂಜು ಕರಗಿತು ಉದಯಾದ್ರಿಯು ಕಂಗೊಳಿಸ ತೊಡಗಿತು. ರಂಗಿನ ರಂಗಸ್ಥಳಿ ನಾಲಂಕಾರವಾಗಿ ಶೋಭಿಸತಿತ್ತು. ಅರುಣ ಬಾಲಾದಿತ್ಯನು ಚಂಡಿನಂತೆ ಪುಟನೆಗೆದು, ಒಡ್ಡೋಲಗಕೊಟ್ಟನು. ಹೊಂಬಿಸಿಲಿನ ಬಣ್ಣ ನಿಮಿಷ ಕಳೆದಂತೆ ಸ್ಫುಟವಾಗುತಿತ್ತು. ಕ್ಷಣಾರ್ಧದಲ್ಲಿ ಅದು ಸುವ

(೧೯ನೇ ಪುಟ ನೋಡಿರಿ)

ಶಬ್ದವೇಗದಿಂದಲೂ ಅಧಿಕವಾಗಿ ಇದು ಗಂಟೆಗೆ 1130 ಮೈಲು ವೇಗದಿಂದ ಸಂಚರಿಸುವ ಅಮೆರಿಕೆಯ ಬೊಂಬರು. ಇದರ ಹೆಸರು, ಹಸ್ಟ್ಲರ್ ಎಂದು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ವಿತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಟೈಶ್ಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

'ನವಯುಗ' ವಾರಪತ್ರಿಕೆ
ಉಡುಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

ಸಾಹಿತಿಗಳ ಮೇಲೆ ಬೆಳಕು ಬೀರೋಣವೇ?

ಟಾಗೋರರ ಜನ್ಮದಿನ

ಇದೇ ತಿಂಗಳ ಏಳನೆ ದಿನಾಂಕಕ್ಕೆ ಬರಲಿರುವ ವಿಶ್ವಕವಿ ಗುರುದೇವ ರವೀಂದ್ರನಾಥರ ಜನ್ಮದಿನದ ಅವಸರದಲ್ಲಿ, ಅವರು ಸಾಹಿತ್ಯ ಮಾಧ್ಯಮದ ಮೂಲಕ ಸ್ವದೇಶೋದ್ಧಾರಕ್ಕೆ ಮಾಡಿದ ಮಹಾಕಾರ್ಯಗಳ ಕುರಿತಾಗಿ ಸ್ಮರಿಸಿಕೊಳ್ಳುವುದು ಭಾರತೀಯರೆಲ್ಲರ ಕರ್ತವ್ಯವೇ ಆಗಿರುತ್ತದೆ. ದೇಶಭಕ್ತ ರವೀಂದ್ರರಿಗೆ ಯಾವ ಚಿಂತೆಯೂ ಇರಲಿಲ್ಲ—ಸದಾ ಪ್ರಸನ್ನರಾಗಿರುವುದು, ನಿಶ್ಚಿಂತರಾಗಿರುವುದು ಅವರ ಸ್ವಭಾವವಾಗಿತ್ತು. ರವೀಂದ್ರನಾಥರ ಸ್ವದೇಶೀ, ಸಮಾಜ ಮೊದಲಾದ ನಿಬಂಧಗಳನ್ನು ಅಥವಾ ಉಪನ್ಯಾಸ ರೂಪದ ಪಂಚಲನಗಳನ್ನು ಇಲ್ಲವೇ ಚೋಕೇರ ಬಾಲಿ, ಒಡೆದ ನೌಕೆ, ಗೋರಾ ಮೊದಲಾದ ಗ್ರಂಥಗಳನ್ನು ಸೂಕ್ಷ್ಮರೀತಿಯಲ್ಲಿ ಅಭ್ಯಸಿಸಿದವರು ಶ್ರೀ ಟಾಗೋರರ ಕೃತಿಗಳು ಇಪ್ಪತ್ತನೆಯ ಶತಮಾನದ ಉಪನಿಷತ್ತುಗಳೆಂದು ಒಪ್ಪಿಕೊಳ್ಳುವರು. ಚೋಕೇರಬಾಲಿಯಲ್ಲಿ ಮಾನವೀಯ ಹೃದಯದ ವ್ಯಾಕುಲತೆಯು ನೋಡಲು ದೊರೆಯುವಂತೆ ರಾಮಾಯಣದ ಅಪೂರ್ವ ನಿಷ್ಠೆಯು ಓತಪ್ರೋತವಾಗಿ ಕಾಣುವುದು. ಸಾಮಾಜಿಕ ಸುಧಾರಣೆಯ ಒಳಗಡೆ ಧರ್ಮ ತತ್ವಗಳ ದರ್ಶನ ಮಾಡಿಸುವುದೇ 'ಗೋರಾ' ಕಾದಂಬರಿಯ ಸಾರ ಸರ್ವಸ್ವವಾಗಿದೆ.

ರವೀಂದ್ರ ಬಾಬು ಭಾರತವನ್ನು ವಿಶ್ವಬಂಧುತ್ವದ ಪ್ರಯೋಗ ಶಾಲೆಯನ್ನಾಗಿ ಮಾಡುವ ಸ್ವಪ್ನವನ್ನು ನಿತ್ಯವೂ ಕಾಣುತಿದ್ದರು. ಅವರು ಈ ಅಮರ ಸ್ವಪ್ನದ ಬಹ್ವಂಶ ಈಗಾಗಲೇ ನಿಜರೂಪವನ್ನು ಧರಿಸಿದೆ ಎಂದು ಹೇಳಬಹುದು. ಅವರ ಜನಗಣಮನ ಅಧಿನಾಯಕ ಜಯ ಹೇ ಎಂಬ ಗೀತೆಯು ವಿಶ್ವಸಮನ್ವಯದ ಬಗ್ಗೆ ಅವರ ಉದಾತ್ತ ಭಾವನೆಯಿರುವುದನ್ನು ಎತ್ತಿತೋರಿಸುವುದಿಲ್ಲವೆ? ಇದಕ್ಕಿಂತಲೂ ಅಧಿಕವಾಗಿ ಈ ಒಂದು ಭಾವನೆಯು ಅವರ "ಹೇ ಮೋರ ಚಿತ್ತ ಪುಣ್ಯತೀರ್ಥ ಜಾಗೋ ರೇ ಧೀರೇ ಏಯಿ ಭಾರತೇರ ಮಹಾಮಾನವೇ ರ ಸಾಗರತೀರೆ" ಎಂಬ ಗೀತೆಯಲ್ಲಿ ಸುಸ್ಪಷ್ಟಗೊಂಡಿದೆ. 'ವಂದೇ ಮಾತರಂ' ನಮ್ಮ ವಿಶಾಲ ಭಾವನೆಯ ದ್ಯೋತಕವಾಗಿದೆ.

ಶ್ರೀ ಗುರುದೇವರು ನಮ್ಮ ಜನತೆಗೆ ಕಾಣಿಕೆಯಾಗಿ ಕೊಟ್ಟಿರುವ ಈ ಅಮರ ಗೀತೆಗಳು ಅವರ ಅಪಾರ ಕೀರ್ತಿಯನ್ನು ಯುಗಯುಗಗಳ ತನಕ ಪ್ರತಿಧ್ವನಿಸುವ ಅಮೂಲ್ಯ ಭೇರಿಗಳಂತೆಯೆ ಎಂಬುದು ನಿಶ್ಚಯವೇ ಹೌದು. ವಿಶ್ವದ ಜನತೆಯಿಂದಲೇ ಮಾನಿತನಾದ ಈ ವಿಶ್ವಕವಿ, ಕವಿಗಳಿಗೆ ಗುರುದೇವರಾಗಿದ್ದಾರೆ. ಅಂತಹ ಮಹಾನ್ ಕವಿಯ ರಾಷ್ಟ್ರಪ್ರೇಮ ಅವರ್ಣನೀಯವಿದೆ. ನಾವು ಅವರ ಜನ್ಮದಿನವಾದ ಮೇ ೭ರಂದು ಅವರಲ್ಲಿದ್ದ ಮಾತೃಭೂಮಿಯ ಪ್ರೇಮ, ರಕ್ತದ ಕಣಕಣಗಳಲ್ಲೂ ತುಂಬಿ ಬರಲಿ ಎಂದು ಬಯಸುವರೆ, ಅದರಲ್ಲಿ ಆಶ್ಚರ್ಯವಿಲ್ಲ. ಜನ್ಮಭೂಮಿಯ ಮೇಲ್ಮೈಯನ್ನು ಸಾರಿಸಬಯಸುವ ನಮಗೆ ಅವರ ಆಶೀರ್ವಾದದ ಪುಷ್ಪವೃಷ್ಟಿ ಸುರಿಯಲಿ.

ಶ್ರೀ ರವೀಂದ್ರನಾಥ ಟಾಗೋರರವರು ಪ್ರತ್ಯಕ್ಷ ಮಾರ್ಗದರ್ಶನದಿಂದ ಭಾರತೀಯರ ನೆಮ್ಮದಿಯನ್ನು ಹಾರೈಸಿದ್ದಾರೆ. ಅವರು ಋಷಿತುಲ್ಯರು, ಉತ್ತಮ ಅಧ್ಯಾಪಕರು. ವಿರಾಗಿಗಳು, ವೀತರಾಗರು, ಕವಿಗಳು, ಸ್ವಾತಂತ್ರ್ಯ ಪ್ರೇಮಿಗಳು, ಭಾವುಕರು, ನೋಬೆಲ್ ಪಾರಿತೋಷಕ ವಿಜೇತರು. ಇವೆಲ್ಲಿಂದ ಗುಣಗಳು ಪ್ರತಿಯೊಂದು ಅತ್ಯಮೂಲ್ಯವಾಗಿರುವಂಥವು. ಅವುಗಳಲ್ಲಿ ನಾವೂ ಕಡಿಮೆ ಪಕ್ಷ ಒಂದೊಂದನ್ನಾದರೂ ಪಡೆಯುವುದು—ನಮ್ಮ ಉದ್ಧಾರಕ್ಕೆ ಕಾರಣೀಭೂತವೆನಿಸುವುದು. ಯೋಜನೆ, ದೇಶಕ್ಕೆಲ್ಲೆಗೆಂದು ಹಾರಾಡುವ ನಮಗೆಲ್ಲ ಅವರ ಅಮೃತವರ್ಷ ಸುರಿದು ಬರಲಿ, ತನ್ಮೂಲಕ ನಮ್ಮ ಹಾಗೂ ದೇಶದ ಉದ್ಧಾರ ಕಾರ್ಯದಲ್ಲಿ ಸಹಯೋಗಿಗಳಾಗುವ ಸುಯೋಗ ನಮಗೂ ದಕಲಿ.

ಶ್ರೀ ಗುಂಥರರ ಆತ್ಮಕತೆ

ಪಾಶ್ಚಾತ್ಯ ಲೇಖಕರಲ್ಲಿ ಒಂದು ವಿಷಯದ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡದೇ ಕೇವಲ ವಸ್ತುಸ್ಥಿತಿಯನ್ನು ಕಲಾತ್ಮಕವಾಗಿ ವಿಶ್ಲೇಷಿಸಿ ಸಾಕಿರನ್ನು ತನ್ನತ್ತ ಆಕರ್ಷಿಸಿಕೊಳ್ಳುವ ಅರ್ಹತೆಯನ್ನು ಪಡೆದವರೆಂದರೆ ಶ್ರೀ ಜಾನ್ ಗುಂಥರು. ವಿಶ್ವದ ಯಾವುದೇ ಮೂಲೆಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜನೈತಿಕ ಸ್ಥಿತಿಗತಿಯೊಡನೆ ಹೊಂದಿಕೊಂಡು, ಅದರಲ್ಲಿಯೇ ತಾದಾತ್ಮ್ಯವನ್ನು ಪಡೆದು ಆ ಪ್ರದೇಶದ ಅಂತರಂಗವನ್ನು ಪ್ರಕಟಿಸುವ ಮಹಾಕಾರ್ಯದಲ್ಲಿ ಶ್ರೀ ಗುಂಥರು ಪಡೆದ ಪ್ರಾವೀಣ್ಯವು ಅಪಾರವಾದುದು.

ಶ್ರೀ ಗುಂಥರ ಮಹಾಶಯರು ಬರೆದ ಯುರೋಪು, ಅಮೆರಿಕ, ಆಫ್ರಿಕಾ ಮತ್ತು ಏಶಿಯಾಗಳ ಅಂತರಂಗ ಸಂಬಂಧಿ ಪುಸ್ತಕಗಳನ್ನು ತೀವ್ರಾಸಕ್ತಿಯಿಂದ ಓದುವವರು ಮೇಲೆ ಉಲ್ಲೇಖಿಸಿದ ಅಂಶವನ್ನು ಸಂಪೂರ್ಣವಾಗಿ ಒಪ್ಪುವರಲ್ಲದೇ ಅಷ್ಟೇ ಉತ್ಸಾಹದಿಂದ ಅವರ ಇತ್ತೀಚಿನ ಕೃತಿ 'ಇನ್‌ಸೈಡ್ ರಶಿಯಾ' (ರಶಿಯದ ಅಂತರಂಗದಲ್ಲಿ) ಎಂಬ್ಯ ಹೊತ್ತಗೆಯನ್ನೂ ಪಠಿಸುತ್ತಾರೆ.

ಶ್ರೀ ಗುಂಥರರು ಉಲ್ಲಿಖಿತ ದೇಶಗಳಲ್ಲಿ ಯಾವುದಾದರೊಂದರ ಪಕ್ಷೀಯ ರಾಜನೀತಿಯನ್ನು ಪ್ರತಿಪಕ್ಷದಲ್ಲಿ ದುಸ್ಪರಿಣಾಮವಾಗುವಂತೆ ವಿವರಿಸುವ ಗೋಜಿಗೆ ಎಲ್ಲಿಯೂ ಹೋಗಲಿಲ್ಲ. ಇನ್‌ಸೈಡ್ ರಶಿಯಾ ಎಂಬ ಪುಸ್ತಕದಲ್ಲಿ ಜವಾಬ್ದಾರಿಯಲಾಲಂ ಜೀವನದ ಬಗ್ಗೆ ಕಡಿವೆ. ತಿಳಿದಿದ್ದವರಿಗೆ ಪ್ರಕಾಶ ಕಿರಣವನ್ನು ತೋರಿಸಿವಾರೆ. ಇದು ಒಬ್ಬ ಪ್ರಭಾವಶಾಲಿ ಲೇಖಕನು ವಿವಾದಗ್ರಸ್ತ ವಿಷಯಗಳನ್ನು ಎಟ್ಟರ ಅಪ್ರತ್ಯಕ್ಷರೂಪದಲ್ಲಿ ತಮ್ಮ ಇಂಗಿತವನ್ನು ವ್ಯಕ್ತಪಡಿಸಲು ಹೇಗೆ ಸಾಧ್ಯವಿದೆ ಎಂಬುದನ್ನು ತಿಳಿಸುತ್ತದೆ. ಆಫ್ರಿಕಾ ವಿಷಯಕ ಗ್ರಂಥದಲ್ಲಿ ಶ್ರೀ ಗುಂಥರರು ಇದೇ ರೀತಿಯ ಚಮತ್ಕಾರವನ್ನು ನಜೀಬ, ನಸ್ಸೇರ, ಲಿವಿಂಗ್‌ಸ್ಟನ್ ಮೊದಲಾದ ಪ್ರಸಿದ್ಧ ವ್ಯಕ್ತಿಗಳ ಶಬ್ದ ಚಿತ್ರವನ್ನು ಬರೆಯುತ್ತ ಪ್ರಕಟಿಗೊಳಿಸಿದ್ದಾರೆ.

ಶ್ರೀ ಗುಂಥರರ ನೂತನ ಕೃತಿ ಇನ್‌ಸೈಡ್ ರಶ್ಯಾ ಎನ್ನುವುದು ಅವರ ಉಳಿದ ಗ್ರಂಥಗಳಿಗಿಂತ ಉತ್ಕೃಷ್ಟವೆನಿಸಿಲ್ಲ. ಇದಕ್ಕೆ ಕಾರಣಗಳೂ ಇವೆ. ಮೊನ್ನೆ ಮೊನ್ನೆಯ ವರೆಗೂ ಸೋವಿಯತ್ ರಶ್ಯ ಸಂಬಂಧದ ಎಲ್ಲ ಮಾತುಗಳೂ ಉಕ್ಕಿನ ತೆರೆದೊಳಗೆ ನಡೆಯುತಿದ್ದುವು. ಸೋವಿಯತ್ ರಶ್ಯ ಮತ್ತು ಅದರ ನೇತಾರರ ಗತಿವಿಧಿಗಳ ಸಂಬಂಧದ ಬಹಿರಂಗಗೊಂಡ ವಿಷಯಗಳು ಪರಿಜ್ಞಾನವು ಸಾಮಾನ್ಯವಾಗಿ ಪತ್ರಿಕೆಗಳ ಮೂಲಕ ಎತ್ತಲೂ ಆಗಿದೆ. ಆದುದರಿಂದಲೇ ಶ್ರೀ ಗುಂಥರರಿಗೆ ನೂತನವಿನ್ಯಾಸಪೂರ್ಣ ಸಾಮಗ್ರಿ ಸಂಗ್ರಹಿಸುವುದರಲ್ಲಿ ಸಫಲತೆ ದೊರೆಯಲಿಲ್ಲ.

ಶ್ರೀ ಗುಂಥರರ ಕೃತಿಗಳ ಪ್ರೇಮಿಗಳು ಲೇಖಕರ ಜೀವನ ಚರಿತ್ರೆಯ ಅಜ್ಞಾತ ವಿಷಯಗಳು 'ಇನ್‌ಸೈಡ್ ಗುಂಥರ್' ಎಂಬ ಕೃತಿಯ ಮೂಲಕ ಹೊರಬರಲಿ ಎಂದು ಹಾರೈಸಿದರೆ ಆಶ್ಚರ್ಯವಿಲ್ಲ. ಈ ಕೃತಿಯೂ ಶ್ರೀಘ್ರದಲ್ಲಿಯೇ ಪ್ರಕಾಶಕ್ಕೆ ಬರಬಹುದು. ಆದರೆ, ಅದನ್ನು ಯಾರ ಬರೆಯಬಲ್ಲರೆಂಬುದೇ ಒಂದು ಪ್ರಶ್ನೆ. ಸ್ವತಃ ಗುಂಥರರೇ ಬರೆಯುವರೆ ಅಥವಾ ಅವರ ಸಹಸ್ರ ಸಂಖ್ಯೆಯ ಭಕ್ತರಲ್ಲಿ ಯಾರಾದರೊಬ್ಬರು ಕೃತಿ ಸೂತ್ರಕ್ಕಿಳಿಸುವರೇ ಇದನ್ನು ನೋಡಬೇಕು.

ವಾಳೇನು ನಡೆಯಲಿದೆ?

ನಾಳೆನ ದಿನ ಒಟ್ಟು ಶಾಖೆಗಳಲ್ಲಿ 53 ನೆಯದಾದ ನಮ್ಮ

ಕಲ್ಕತ್ತಾ

ಶಾಖೆಯು ರಾಯಲ್ ಎಕ್ಸ್‌ಚೇಂಜ್ ಪ್ಲೇಸಿನಲ್ಲಿರುವ
9ನೇ ನಂಬ್ರದ ಕಟ್ಟಡದಲ್ಲಿ ತೆರೆಯಲ್ಪಡುವುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಪ್ರಧಾನ ಕಛೇರಿ : **ಉಡುಪಿ** (ದ. ಭಾರತ)

ದಯವಿಟ್ಟು ನಿಮ್ಮ ಬಾಕಿ ಚಂದಾಹಣವನ್ನು ಮನಿಯಾರ್ಡರು ಮಾಡಿರಿ.

ನಾರದ ಮಹಾನು ಭಾವ—

ಮಾರ್ಶಲ್ ಟಿಟೋ

ಯುಗೋಸ್ಲಾವಿಯಾದ ಅಧ್ಯಕ್ಷ ಮಾರ್ಶಲ್ ಟಿಟೋ ಹಾಗೂ ಸೋವಿಯತ್ ಪ್ರಧಾನಿಯಾದ ಕ್ರುಶ್ಚೇವರೊಂದಿಗಿದ್ದ ಮತಭೇದವು ಅವಬ್ಬರು ಒಂದಾದ ಕೆಲವು ದಿನಗಳ ಮೇಲೆ ಬೆಳಕಿಗೆ ಬರತೊಡಗಿತು. ಈ ವಿಷಯವು ಸೋವಿಯತ್ ಕೂಟದ ಬೇರೆ ದೇಶಗಳಿಗೆ ಅತ್ಯಂತ ಮಹತ್ವಪೂರ್ಣದ್ದೆನಿಸಿದೆ.

೧೯೫೮ ನವಂಬರ ತಿಂಗಳಲ್ಲಿ ಅಂದರೆ ಸಾಮಾನ್ಯ ಆರು ತಿಂಗಳ ಮೊದಲೇ ಕಮ್ಯುನಿಸ್ಟ್ ಪೀಪರ್ಸ್ಟ್ ಪ್ರಕಟಣೆಗೆ ಹಕ್ಕಾಕ್ಷೇವನ್ನು ಹಾಕಲು ನಿರಾಕರಿಸಿದ ಮೇಲೆ ಮಾರ್ಶಲರ ಸ್ಥೈರ್ಯವು ಪ್ರಕಾಶಕ್ಕೆ ಬಂತು. ಆದರೆ ಈಗ ಆ ಮತಭೇದವು ಒಂದು ಸತ್ಯ ಸ್ಥಿತಿಯಲ್ಲಿ ಮುಂದೆ ನಿಂತಿದೆ.

ತಾನು ಯಾವ ರೀತಿಯಿಂದಲೂ ರಶ್ಯಾದ ನೀತಿ ಧೋರಣೆಯನ್ನು ಅನುಸರಿಸುವುದಕ್ಕೆ ಅಸಮರ್ಥನೆಂದು ಮಾರ್ಶಲರು ಆರು ತಿಂಗಳ ಮೊದಲೇ ಕ್ರುಶ್ಚೇವರಿಗೆ ತಿಳಿಸಿದ್ದರು. ಇದೇ ಕಾರಣದಿಂದ ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಮಾರ್ಶಲರು ಕ್ರುಶ್ಚೇವರೊಡನೆ ನಿಬಲ್ ಗ್ರೇಡಿನಲ್ಲಿ ಮಾತುಕತೆ ನಡೆಸಿದ್ದರು. ಆಗ ಯುಗೋಸ್ಲೇವಿಯಾದ ಜನತೆ ಅಚ್ಚರಿಗೊಂಡಿತ್ತು.

ಇದರಿಂದ ಮಾರ್ಶಲ್ ಟಿಟೋರು ಸೋವಿಯತ್ ಪ್ರಧಾನಿಯವರೊಡನೆ ಒಪ್ಪಂದ ಮಾಡಿಕೊಂಡು ಕಮ್ಯುನಿಸ್ಟ್ ಒಕ್ಕೂಟವನ್ನು ಪ್ರಬಲಗೊಳಿಸುವರೆಂಬುದರಲ್ಲಿ ಜನರಿಗೆ ನಂಬುಗೆಯುದ್ದಿಲ್ಲ.

೧೯೫೮ ನವಂಬರ ತಿಂಗಳಲ್ಲಿ ಸೋವಿಯತ್ ಸರಕಾರದ ಮುಖಪತ್ರವೆನಿಸಿದ 'ಪ್ರಾವ್ದಾ'ವು ಮಾರ್ಶಲರು ಸೋವಿಯತ್ ಒಕ್ಕೂಟವನ್ನು ಮುರಿಯುವ ಯತ್ನದಲ್ಲಿದ್ದಾರೆಂಬ ದಾಗಿ ಆರೋಪ ಮಾಡಿತ್ತು. ಇದಕ್ಕಿಂತ ಒಂದು ತಿಂಗಳ ಮೊದಲೇ ಮಾರ್ಶಲರು ಮಾಸ್ಕೊವಿಗೆ ಪ್ರಯಾಣ ಬೆಳೆಸಿದ್ದರು. ಆಗಲೇ ಅವರನ್ನು ಕಮ್ಯುನಿಸ್ಟ್ ಒಕ್ಕೂಟಕ್ಕೆ ಎಳೆದುಕೊಳ್ಳುವುದರ ಶ್ರೇಯಸ್ಸು ಕ್ರುಶ್ಚೇವರಿಗೆ ಕೊಡಲ್ಪಟ್ಟಿತ್ತು. ಅದೇ ಸಮಯದಲ್ಲಿ ಹಂಗೇರಿಯ ಪ್ರಧಾನಿ ಯುಗಾಸ್ಲೇವಿಯಾದ ಮಾರ್ಶಲರ ಆಶೀರ್ವಾದವನ್ನು ಪಡೆಯಲಿಕ್ಕೆ ಆಗಮಿಸಿದ್ದರು. ಇದರಿಂದ ಮಾರ್ಶಲರು ಕಮ್ಯುನಿಸ್ಟ್ ಒಕ್ಕೂಟವನ್ನು ಸೇರದಿರು

(ಅನೇ ಪುಟ ನೋಡಿರಿ)

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧-೫-೨೫ಜಲ	೩೪

ನಾಗರಿಕರಿಗೆ ಭದ್ರತೆ

ಒಂದು ದೇಶದ ರಕ್ಷಣೆ ಮತ್ತು ಭದ್ರತೆಗಳು ಆ ದೇಶದ ಸರಕಾರದ ಮುಖ್ಯ ಕೆಲಸ. ಯಾವ ಸರಕಾರವು ಜನತೆಯನ್ನು ಪರಾಕ್ರಮಣಕ್ಕೆ ತಡೆ ಸ್ವಂತತೆಗೆ ಭದ್ರತೆಯನ್ನೀಯುವ ಶಕ್ತಿ ಪಡೆದಿಲ್ಲವೋ ಅಂತಹ ಸರಕಾರವು ಜನಪ್ರೀತವಾಗಲಾರದು. ಜನತೆ ಕರವನ್ನು ತೆರುವುದಾದರೂ ಸರಕಾರವನ್ನು ಬಯಸುವುದಾದರೂ ತಮ್ಮ ಸುಖವನ್ನು ಪರರು ಹಾಳುಗೆಡವದಂತೆ ತಡೆಗಟ್ಟಬೇಕೆಂದು ಮಾತ್ರ. ಹಾಗೆಯೇ ಸಾಮಾನ್ಯ ಜನರಿಗೆ ಸರಕಾರವಿದೆ, ತಮಗಾಗಿ ಅದು ಕೆಲಸ ಮಾಡುತ್ತಿದೆ ಎಂದು ಗೋಚರಕ್ಕೆ ಬರುವುದಾದರೂ ತಮ್ಮ ಭದ್ರತೆ ರಕ್ಷಣೆಗೆ ಸರಕಾರೀ ಬಲಯೆಗಳು ಧಾವಿಸಿದಾಗ ಮಾತ್ರ. ಆದುದರಿಂದಲೇ ದೇಶದೊಳಗಡೆ ನ್ಯಾಯಪರಿಪಾಲನೆಯನ್ನು ಮಾಡಿ, ಜನತೆಗೆ ಕೊಟ್ಟರುವ ವೈಯಕ್ತಿಕ ಅಧಿಕಾರಗಳನ್ನು ರಕ್ಷಿಸುವ ಕಾರ್ಯವೂ ಅಗತ್ಯವಾಗಿದೆ. ಇದಕ್ಕಾಗಿ ಅಪರಾಧವೆಂದರೇನು, ಅಂತಹ ಅಪರಾಧವನ್ನು ಮಾಡಿದವನಿಗೆ ತನ್ನ ಅಪರಾಧಕ್ಕೆ ಸರಿಯಾದ ಶಿಕ್ಷೆಯೇನು, ನ್ಯಾಯಾಧೀಶರ ಅಧಿಕಾರಗಳು ಇತ್ಯಾದಿ ವಿಚಾರಗಳಿಂದ ಕೂಡಿಕೊಂಡಿರುವ ನ್ಯಾಯಶಾಸ್ತ್ರವು ಅನೇಕ ಸುಪ್ರಸಿದ್ಧ ವ್ಯಕ್ತಿಗಳಿಂದ ಸಿದ್ಧವಾಗಿದ್ದು, ಪ್ರತಿ ದೇಶದಲ್ಲಿಯೂ ಈ ರೀತಿಯ ವ್ಯವಸ್ಥೆಯಿದೆ. ಈ ನ್ಯಾಯಶಾಸ್ತ್ರದಲ್ಲಿ ನಿರೂಪಿತವಾಗಿರುವ ಶಿಕ್ಷೆಗಳಲ್ಲಿ ಮರಣದಂಡನೆಯೂ ಒಂದು. ಹಿಂದಿನಕಾಲದಲ್ಲಿ ಅಪರಾಧಗಳಿಗೆ ಅತ್ಯಂತ ಕ್ರೂರವಾದ ಶಿಕ್ಷೆಗಳು ವಿಧಿಸುತ್ತಿದ್ದರು. ಮೌರ್ಯರ ಕಾಲದಲ್ಲಿ, ಗುಪ್ತರ ಕಾಲದಲ್ಲಿ ಜನತೆಯು ಸುಖಸಮೃದ್ಧಿಯಿಂದ ಬಾಳಿರುವುದು ದಿಟವೆಂದಾದರೆ, ಅದಕ್ಕೆ ಆ ಕಾಲದಲ್ಲಿ ಅಪರಾಧಿಗಳಿಗೆ ಘೋರ ಶಿಕ್ಷೆಯೊಯಿತಿದ್ದುದೂ ಒಂದು ಕಾರಣವಾಗಿದೆ. ಕಣ್ಣಿಗೆ ಕಣ್ಣು, ರುಂಡಕ್ಕೆ ರುಂಡ, ಹಸ್ತಕ್ಕೆ ಹಸ್ತ, ಜೀವಕ್ಕೆ ಜೀವ ಎಂಬಿತ್ಯಾದಿಯಾಗಿ ಶಿಕ್ಷೆಗಳು ಭಯಾನಕವೂ ಅಸಹನೀಯವೂ ಆಗಿದ್ದುವು. ಇವೆಲ್ಲವೂ ಅನಾಗರಿಕವೆಂದು ಕೆಲವರು ಆಸ್ಸುತ್ತಾರೆ. ಇತ್ತೀಚೆಗೂ ವಿದ್ಯಾರ್ಥಿಗಳಲ್ಲಿ ಶಿಸ್ತುಗೇಡಿತನವು ಬೆಳೆಯುತ್ತ ಬರುವುದು ದೃಷ್ಟಿಗೋಚರವಾಗುತ್ತದೆ. ಅದೇ ಕೆಲವು ಹಸ್ತು ವರ್ಷ ಪೂರ್ವದಲ್ಲಿ ಈ ಪರಿಸ್ಥಿತಿಯಿರಲಿಲ್ಲ. ಇದಕ್ಕೆ ಆಗ ವಿದ್ಯಾಲಯಗಳಲ್ಲಿ ತಪ್ಪುಮಾಡಿದವನಿಗೆ ಪರಂಗಿ ಮಂಚೆ, ಕೋಲು ದಂಡೆ ಮೊದಲಾದ ಕಠಿಣ ಶಿಕ್ಷೆಗಳು ಕೊಡಲ್ಪಡುತಿದ್ದುವು. ಈಗಲಾದರೋ ಬೆತ್ತದ ಪೆಟ್ಟು ಕೊಡುವುದೂ ಸರಿಯಲ್ಲ! ಹೀಗಾಗಿ, ಅಪರಾಧಿಗಳಲ್ಲಿ ಅಪರಾಧೀ ಭಾವನೆಯೇ ಬೆಳೆಯುತ್ತ ಹೋಗಿ, ಅವರು ದೊಡ್ಡವರಾದ ಮೇಲೆ ಶಿಸ್ತುಗೇಡಿತನವಾಗದೆ ಮತ್ತೇನಾದೀತು? ಆದುದರಿಂದ, ತಪ್ಪು ಮಾಡಿದವನಿಗೆ ಕ್ಷಮೆಯನ್ನೀಯುವುದು ಪರಾಣಾಮಕಾರಿಯಾಗುವುದಕ್ಕಿಂತ ಕಠಿನ ದಂಡನೆಯಿಂದಲೇ ಸಾಮಾನ್ಯವಾಗಿ ಉತ್ತಮ ಪರಿಣಾಮವಾಗಬಹುದು.

ಆದರೆ, ನಾಗರಿಕತೆ ಬೆಳೆದು ಬಂದಂತೆ, ಜನತೆ ಮಾನವತೆಯ ಕೈವಾರಿಯಾದಂತೆ ಅಪರಾಧಿಗಳಿಗೆ ಕೊಡಲ್ಪಡುವ ಶಿಕ್ಷೆಯು ಉಗ್ರ, ಅಮಾನುಷ ವಿಧಾನದ್ದಾಗಿರಬಾರದು; ಅಲ್ಲಿಯೂ ಸೌಮ್ಯ ಮತ್ತು ಮಾನವತೆಗಳು ಪ್ರಕಟಗೊಳ್ಳಬೇಕೆಂಬ ವಾದಗಳು ತಲೆದೋರಿ ಮರಣ ದಂಡನೆಯನ್ನು ನಿರೋಧಿಸುವ ಶಾಸನಗಳು ಪ್ರಪಂಚದ ಕೆಲವೆಡೆ ನಡೆದಿರುವುವು. ಅಂತೆಯೇ ಶಾಂತ ಧೋರಣೆ, ಸೌಮ್ಯತೆಯ ಕೈವಾರಿ ಭಾರತವೂ ಮರಣ ದಂಡನೆಯನ್ನು ತಡೆ ಹಿಡಿಯಬೇಕೆಂಬ ಸರಕಾರೇತರ ಗೊತ್ತುವಳಿಯೊಂದನ್ನು ಲೋಕ ಸಭೆಯಲ್ಲಿ ಶ್ರೀ ಸೃಷ್ಟಿರಾಜಕಪೂರರು ಮಂಡಿಸಿದರು. ಇದನ್ನು ಸಮರ್ಥಿಸಿಯೂ ಕೆಲವರು ಮಾತಾಡಿದರು. ಆದರೆ, ಗೃಹ ಮಂತ್ರಿ ಪಂಡಿತ ಪಂತರು ಮರಣ ದಂಡನೆಯನ್ನು ರದ್ದು ಪಡಿಸಲು ನಮ್ಮ ದೇಶದಲ್ಲಿ ಅನುಕೂಲ ವಾತಾವರಣ ಉತ್ಪನ್ನವಾಗಿಲ್ಲವೆಂದು ಅಭಿಪ್ರಾಯಪಟ್ಟು ಆ ಸಮಯ ಬಂದಾಗ ಪುನರಾಲೋಚಿಸುವುದು ಸರಿಯಾಗಬಹುದೆಂದು ವಿರೋಧಿಸಿದರು. ಪಂಡಿತ ಪಂತರು ಮರಣದಂಡನೆಯನ್ನು ತೆಗೆದುಹಾಕಿದ ದೇಶಗಳಲ್ಲಿನ ಕೊಲೆಗಳ ಸಂಖ್ಯೆಯು ೧೦ ಲಕ್ಷಗಳಿಗೆ ೪ ಇರುವಾಗ ನಮ್ಮಲ್ಲಿ ೩೬ ಇರುತ್ತವೆ. ಇಷ್ಟೊಂದು ಹೆಚ್ಚು ಕೊಲೆಗಳು ನಡೆಯುತ್ತಿರುವಾಗ, ಕೊಲೆಗಳಿಗೆ ಮಾತ್ರ ಮರಣದಂಡನೆಯನ್ನು ವಿಧಿಸಬಹುದೆಂದಿರುವಾಗ. ನಾವು ಈ ಶಿಕ್ಷೆಯನ್ನೂ ರದ್ದುಪಡಿಸಿದರೆ, ದೇಶದ ಶಾಂತಿ ಕಲುಷಿತವಾಗಬಹುದು; ಕೊಲೆಗಳ ಸಂಖ್ಯೆ ಏರಬಹುದು: ಮರಣದಂಡನೆಯು ಅಮಾನುಷವೆಂದು ತಿಳಿದರೂ, ಆ ಶಿಕ್ಷೆಯು ದೇಶದ ಭದ್ರತೆಗಾಗಿ ಅಗತ್ಯವೆಂದು ನುಡಿದು, ತಮ್ಮ ವಿರೋಧಾಭಿಪ್ರಾಯವನ್ನು ಮಂಡಿಸಿದರು. ಶ್ರೀ ಕಪೂರರೂ ತಮ್ಮ ಗೊತ್ತುವಳಿಯನ್ನು ಹಿಂತೆಗೆದರು.

ಗೊತ್ತುವಳಿಗಳು ಬರುತ್ತವೆ; ಹೋಗುತ್ತವೆ. ಅವುಗಳಲ್ಲಿ ಅರ್ಥವಿರುವುದೂ ಇದೆ; ಇಲ್ಲದಿರುವುದೂ ಇಲ್ಲವೆಂದಿಲ್ಲ. ಸದ್ಯದ ಗೊತ್ತುವಳಿಯು ಭಾರತದ ಶಾಂತಿ ಮತ್ತು ಸಮಾಧಾನಗಳ ತತ್ವಗಳಿಗೆ ಅನುಗುಣವಾದುದು. ಪ್ರಪಂಚದ ಮುಂದುವರಿದ ಕೆಲವು ರಾಷ್ಟ್ರಗಳಲ್ಲಿ ಮರಣದಂಡನೆಯನ್ನು ತಡೆ ಹಿಡಿಯಲಾಗಿದೆ. ಆದರೆ, ಅಂತಹ ದೇಶಗಳಲ್ಲಿ ನಡೆಯುವ ಕೊಲೆಗಳ ಸಂಖ್ಯೆಯು ತೀರ ಅತ್ಯಲ್ಪ. ಕೊಲೆಗೆ ಹೇಸುವ ಮನೋವೃತ್ತಿ ಅವರಿಗೆ ರೂಢವಾಗಿದೆ. ಕಳವು, ವಂಚನೆಗಳ ಬಗೆಗೆ ತಿರಸ್ಕಾರವು ಅಲ್ಲಿ ಮನೆಮಾಡಿದೆ. ಆದರೆ, ನಮ್ಮ ದೇಶದ ವಾತಾವರಣ ಹೀಗಿರುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಂಗಡಿಗಳಲ್ಲಿ ಪತ್ರಿಕೆಗಳನ್ನು ತೆಗೆದು ಅದರ ಬೆಲೆಯನ್ನು ಅಲ್ಲಿಟ್ಟ ಡಬ್ಬಿಗೆ ಹಾಕಿ ಹೋಗುತ್ತಾರಂತೆ, ಅಂಗಡಿಕಾರ ಇಲ್ಲದಾಗ! ಆದರೆ, ನಮ್ಮಲ್ಲಿ ನಾವಿರುವಾಗಲೇ ನಮ್ಮನ್ನು ಮೋಸಗೊಳಿಸುವ ವ್ಯಕ್ತಿಗಳು ಎಷ್ಟಿಲ್ಲ! ಎಂದರೆ; ನನಗಿನ್ನೂ ಅಂತಹ ಪರಿಪಾಠವಾಗಬೇಕಷ್ಟೆ. ಎಂತಲೇ ಕ್ರಿಮಿನಲ್ ಕೋಡನ್ನು ಮನ್ನಾಮಾಡುವಂತಹ ವಾತಾವರಣ ನಮ್ಮಲ್ಲಿ ನಿರ್ಮಾಣವಾಗಿಲ್ಲ. ಈಗಾಗಲೇ ದೇಶದಲ್ಲಿ ವಿಧಿಸುವ ಹಲವಾರು ಶಿಕ್ಷೆಗಳಿಗೆ ಮಾನವೀಯತೆಯನ್ನೂ ಜೋಡಿಸಲಾಗಿದೆ. ಅಪರಾಧಗಳನ್ನು ತಡೆಯಬೇಕಾದರೆ, ಶಿಕ್ಷೆಯೊಯುಬಾರದು, ಇತ್ತರೂ ಸೌಮ್ಯರೂಪದ ದಂಡನೆಕೊಡಬೇಕು ಎಂದು ವಾದಿಸುವವರೂ ಇದ್ದಾರೆ. ಆದರೆ, ಈ ಘೋರಣೆಯು ಪರಿಣಾಮಗೊಂಡ ಉದಾಹರಣೆಗಳು ತೀರ ಅಪರೂಪ; ಲಕ್ಷ್ಯಕ್ಕೆ ಒಂದೋ ಎರಡೋ ಇರಬಹುದು. ಹಾಗಿರುವಾಗ. ಬಹುಸಂಖ್ಯಾಕ ಅಪರಾಧಿಗಳನ್ನು ಮನಃಪರಿವರ್ತನೆಯಿಂದಲೇ ಸನ್ಮಾರ್ಗಕ್ಕೆ ಹೆಚ್ಚುವುದು ಸಾಧ್ಯವಿಲ್ಲ ಎನ್ನುವುದು ಸುಸ್ಪಷ್ಟ. ಎಂತಲೇ ಶಿಕ್ಷೆಯು ತೀರ ಪಪ್ಪೆಯಾಗಿರಬಾರದು ಜನತೆಗೆ ಧೈರ್ಯವು ಮಹಾಪರಾಧವೆಂದರೆ, ಪ್ರಾಣಹರಣ ಇದು ಅಮಾನುಷವಲ್ಲವೆ? ಒಬ್ಬನ ಪ್ರಾಣವನ್ನು ಮರಳಿಕೊಡುವುದು ಸಾಧ್ಯವೆ? ಧನವನ್ನು ಕನಕವನ್ನು ಮತ್ತೇನನ್ನಾದರೂ ಗಳಿಸಬಹುದು, ಹಿಂದಿರುಗಿಸಬಹುದು. ಸದ್ಯದ ವಿಜ್ಞಾನ ಶಾಸ್ತ್ರ ವಿಧಾನದಲ್ಲಿಯೂ ಪ್ರಾಣಕ್ಕೆ ಪ್ರಾಣ ತ್ಯಾಗಮಾಡಬಹುದೆಷ್ಟೇ ಹೊರತು, ಕಳೆದ ಪ್ರಾಣ ಹಿಂದೆ ಒಲಿಬರದು. ಇದು ರಾಕ್ಷಸೀ ಕೃತ್ಯವಲ್ಲವೆ? ಅಪರಾಧಿಗಳು ಇಂತಹ ಕೆಲಸಕ್ಕೆ ಕೈಹಾಕಿದರೆ, ಅದಕ್ಕೆ ಸೌಮ್ಯ ಶಿಕ್ಷೆಯಿತ್ತರೆ, ದೇಶದಲ್ಲಿ ಕೊಲೆಗಳು ಹೆಚ್ಚುವುದಿಲ್ಲವೆ? ಆದುದರಿಂದ ಪಂಡಿತ ಪಂತರ ವಿರೋಧವು ಸ್ವಾಗತಾರ್ಹ. ಇಷ್ಟೇ ಅಲ್ಲದೆ, ಅಪರಾಧಿಗಳಲ್ಲಿ ಇಂದು ದಂಡನೆಯು ವಿಶೇಷ ಪರಿಣಾಮ ಮಾಡುವುದು ಗೋಚರಿಸುವುದಿಲ್ಲ. ಇದು ಕೊಲೆ, ಸುಲಿಗೆ, ಕಳವು, ಆಕ್ರಮಣಗಳು ಹೆಚ್ಚುತ್ತ ಹೋಗುತ್ತಿರುವುದರಿಂದ ವ್ಯಕ್ತವಾಗುತ್ತದೆ. ದಂಡನೆಯು ಸ್ವಲ್ಪ ಕಠಿನವಿದ್ದರೇನೇ ಇವು ಕಡಿಮೆಯಾಗಬಹುದೋ ಏನೋ ಎಂದೂ ಜನತೆ ಊಹಿಸುತ್ತಿದೆ. ಜನತೆ ಇಂದು ಬಯಸುವುದು ಅಪರಾಧಿಗಳಿಗೆ ಕಠಿನ ಶಿಕ್ಷೆಯಾಯಬೇಕೆಂದಲ್ಲ; ಅಪರಾಧವೇ ನಡೆಯಬಾರದು; ತಮ್ಮ ನಾಗರಿಕ ಭದ್ರತೆಗೆ ವ್ಯತ್ಯಯ ಬೊದಗಬಾರದು ಎಂದು. ಇದಕ್ಕೆ ದಂಡನಾಕ್ರಮವು ತುಸು ಬಿಗಿಯಾಗಿಯೇ ಇರುವುದು ಪರಿಣಾಮಕಾರಿಯಾಗದಿರಲಾರದೆನ್ನಬಹುದು.

ಉಡುಪಿ

ಸಂಸ್ಕೃತ ಕಾಲೇಜಿನಲ್ಲಿ ಹೊಸಕಾಗಿ ಕಟ್ಟಿಸಿದ ವಿದ್ಯಾರ್ಥಿನಿಲಯದ ಉದ್ಘಾಟನೆ ತಾ. ೨೫ರಂದು ಕಾಣೂರು ಮಠದ ಶ್ರೀ ವಿದ್ಯಾಸಮುದ್ರ ತೀರ್ಥಸ್ವಾಮಿಗಳವರು ಉದ್ಘಾಟಿಸಿದರು. ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಧಮಾರು ಮಠದ ಶ್ರೀ ಸುಬುಧೇಶ ತೀರ್ಥ ಸ್ವಾಮಿಗಳವರು ಮಂದಿರದ ಕುರಿತು ಮಾತನಾಡಿದರು. ಶ್ರೀ ಅಲೆವೂರು ಸೀತಾರಾಮಾಚಾರ್ಯರು ಧನ್ಯವಾದಗಳನ್ನಿತ್ತರು.

ಡಾ। ನೋಡಿಯವರಿಗೆ ಮಾನಪತ್ರ– ಉಡುಪಿ ಡಿವಿಜನಾದ ಆಯುರ್ವೇದ ಸಂಘದ ಕಡೆಯಿಂದ ಅದರ ಅಧ್ಯಕ್ಷ ಶ್ರೀ ಸಿ. ಲಕ್ಷ್ಮೀನಾರಾಯಣ ನಾಯ್ಕರು ಕಳೆದ ತಾ. ೨೮ರಂದು ಪದ್ಮಶ್ರೀ ಡಾ. ಎಮ್. ಸಿ. ನೋಡಿಯವರಿಗೆ ಮಾನಪತ್ರವಿತ್ತು ಗೌರವಿಸಿದರು. ಡಾ. ಎಸ್. ಆರ್. ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಬಿ. ಎಸ್. ಲೂವೀಸರು ಧನ್ಯವಾದವಿತ್ತರು.

ಪ್ರವಾಸಿ ವಿದ್ಯಾರ್ಥಿಗಳು– ಕಳೆದ ತಾ. ೨೭ರಂದು ಮೈಸೂರು ಕೋಪರೇಟಿವ್ ಟ್ರೈನಿಂಗ್ ಇನ್‌ಸ್ಟಿಟ್ಯೂಟಿನ ೪೦ ಮಂದಿ ವಿದ್ಯಾರ್ಥಿಗಳು ಅದರ ಪ್ರಿನ್ಸಿಪಾಲ್ ಶ್ರೀ ಶಿವಣ್ಣನವರ ಮುಂದಾಳುತ್ವದಲ್ಲಿ ಸಹಕಾರ ನೃತ್ವದಲ್ಲಿ ಪ್ರತ್ಯಕ್ಷ ತರಬೇತು ಕೊಡುವರೆ ಉಡುಪಿ ಸಹಕಾರ ಹಾಲು ಸರಬರಾಯಿ ಸಂಘಕ್ಕೆ ಸಂದರ್ಶನವಿತ್ತರು. ಸಂಘದ ಕಾರ್ಯದರ್ಶಿ ಶ್ರೀ ವಾಮನ ಭಟ್ಟರು ಎಲ್ಲರನ್ನೂ ಸ್ವಾಗತಿಸಿ ಸಂಘದ ಚಟುವಟಿಕೆಗಳನ್ನು ವಿವರಿಸಿದರು. ಮುಖ್ಯ ಅತಿಥಿಗಳಲ್ಲರೂ ಶ್ರೀ ವಾಮನ ಭಟ್ಟರ ತರುಣೋತ್ಸಾಹ ಹಾಗೂ ಚಟುವಟಿಕೆಗಳನ್ನು ಪ್ರಶಂಸಿಸಿದರು. ಸಂಜೆ ಪ್ರವಾಸಿಗಳೆಲ್ಲರೂ ಶ್ರೀ ಕೃಷ್ಣಮಠ, ಮಲ್ಪೆ, ಮಣಿಪಾಲಗಳಿಗೆ ಸಂದರ್ಶನವಿತ್ತರು.

ನಿಟ್ಟೂರು ಹಾಯರ್ ಎಲಿಮೆಂಟರೀ ಶಾಲೆಯ ವರ್ಷಾತ್ಯುತ್ಸವವು ದಿನಾಂಕ 27ರಂದು ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪೂರ್ವಾಹ್ನ ಅಡ್ವೋಕೇಟ್ ಎನ್. ರಾಮಚಂದ್ರ ಭಟ್ಟರಿಂದ ಧ್ವಜಾರೋಹಣವಾದ ಮೇಲೆ ಸಿಹಿತಿಂಡಿಯನ್ನು ಹಂಚಲಾಯಿತು. ಅಪರಾಹ್ನ ಶ್ರೀ ಎ. ಜೆ. ಆಳ್ವಿಯವರು ಶಾಲೆಯ ಹಸ್ತಲಿಖಿತ ಪತ್ರಿಕೆ 'ಚಂದ್ರಿಕಾ'ದ ಉದ್ಘಾಟನೆಯನ್ನು ನೆರವೇರಿಸಿದರು. ಮುಖ್ಯೋಪಾಧ್ಯಾಯರು ಶಾಲೆಯ ವರದಿಯನ್ನೋದಿದರು. ಪ್ರಾಕ್ಟನ ವಿದ್ಯಾರ್ಥಿ ಶ್ರೀ ಎಸ್. ಗೋಪಾಲಕೃಷ್ಣ ನಾಯಕರು ಸ್ವಸ್ತಿವಾಚನವನ್ನು ಮಾಡಿದರು. ವಿವಿಧ ವಿನೋದಾವಳಿಗಳು, ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿ, ಅಧ್ಯಕ್ಷರ ಭಾಷಣ ನಡೆದುವು. ವಿದ್ಯಾರ್ಥಿ ಮತ್ತು ಅಭ್ಯಾಸಕರಿಂದ ನಾಟಕ, ಯಕ್ಷಗಾನಗಳು ಪ್ರತಿಪ್ರತ್ಯೇಕವಾಗಿ ಅಭಿನಯಿಸಲ್ಪಟ್ಟುವು. ಶ್ರೀ ಎಲ್. ಬಿ. ಪುತ್ತೂರಾಯರು ನಾಟಕದಲ್ಲಿ ಉತ್ತಮ ಅಭಿನಯ ನಟಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು.

ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಉಡುಪಿ ಕೇಂದ್ರದಲ್ಲಿ ಕಳೆದ ಫೆಬ್ರವರಿಯಲ್ಲಿ ಜರಗಿದ ಹಿಂದಿ ಉತ್ತಮ (ಡಿಪ್ಲೊಮಾ) ಪರೀಕ್ಷೆಯಲ್ಲಿ ಶ್ರೀ ವಿ. ಸುಬ್ರಹ್ಮಣ್ಯ ಭಟ್ಟ ಮತ್ತು ಶ್ರೀ ಸಿ. ಶ್ರೀನಿವಾಸ ಅಡಿಗರವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರಲ್ಲದೆ ಇದಿ ಪ್ರಚಾರ ಪರಿಷತ್ತಿನೇನೇ ಈ ಪರೀಕ್ಷೆಯಲ್ಲಿ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಪಡೆದಿದ್ದಾರೆ. ಇವರು ಸ್ಥಳೀಯ ಗೀತಾಭವನದಲ್ಲಿ ತಮ್ಮ ಅಭ್ಯಾಸವನ್ನು ಮಾಡಿಕೊಂಡಿದ್ದರು.

ಅಖಿಲ ಭಾರತೀಯ ಸಂಸ್ಕೃತಿ ಭಾಷಾ ಪ್ರಚಾರ ಸಮಿತಿ (ಸೂರತ್) –ಈ ಸಮಿತಿಯ ನೇತೃತ್ವದಲ್ಲಿ ಕಳೆದ ಮಾರ್ಚ ತಿಂಗಳಲ್ಲಿ ಜರಗಿದ ಪರೀಕ್ಷೆಗಳಲ್ಲಿ ಈ ಕೆಳಗಿನಂತೆ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ—

ಪ್ರಥಮ— ವಿಶೇಷ ಯೋಗ್ಯತೆ—೨೩ಜಲರಿಂದ ೨೩೬೨.

೧ನೆ ಶ್ರೇಣಿ—೨೩೫೩ ಮಾತ್ರ.

ಪ್ರಾರಂಭಿಣೀ— ವಿಶೇಷ ಯೋಗ್ಯತೆ—೨೩೩, ೩೮ರಿಂದ ೮೦.

೧ನೆ ಶ್ರೇಣಿ—೨೩೩, ೩೪, ೩೬ ಮತ್ತು ೩೭.

೨ನೆ ಶ್ರೇಣಿ—೨೩೩೦ ಮತ್ತು ೩೩.

ಪ್ರವೇಶಿಕಾ— ೨ನೆ ಶ್ರೇಣಿ— ೧೦೭೦ ಮತ್ತು ೭೦.

ಪರಿಚಯ–೧ನೆ ಶ್ರೇಣಿ–೨೯೩ ಮಾತ್ರ.

೨ನೆ ಶ್ರೇಣಿ—೨೮೯ರಿಂದ ೧೨.

೩ನೆ ಶ್ರೇಣಿ—೨೯೪ ಮಾತ್ರ.

ವಿಶಾರದ—೩ನೆ ಶ್ರೇಣಿ—೧೩೩ ಮತ್ತು ೩೪.

ಸಂಕ್ಷಿಪ್ತ ಸುದ್ದಿಗಳು

ನೆಹರೂ ನಿವೃತ್ತರಾಗುವುದಿಲ್ಲ

ಇತ್ತೀಚೆಗೆ ಭಾರತದ ಪ್ರಧಾನಿಯವರಾದ ಶ್ರೀ ಜವಾಹರಲಾಲ ನೆಹರೂರವರು ತಮ್ಮ ಪ್ರಧಾನಿಪಟ್ಟವನ್ನು ಬೇರೆಯವರಿಗೆ ಇತ್ತು ತಾವು ನಿವೃತ್ತರಾಗಬೇಕು; ಮತ್ತು ಸರಕಾರದಿಂದ ಹೊರಗಿದ್ದುಕೊಂಡೇ ದೇಶದ ಏಕತೆಗಾಗಿಯೂ ಅಭಿವೃದ್ಧಿಗಾಗಿಯೂ ಶ್ರಮವಹಿಸಬೇಕು. ಹಾಗೂ ಸರಕಾರಕ್ಕೆ ಯೋಗ್ಯ ಮಾರ್ಗದರ್ಶನ ಮಾಡಬೇಕು ಎಂದು ಶ್ರೀ ಜಯಪ್ರಕಾಶ ನಾರಾಯಣರು ಅಭಿಪ್ರಾಯ ವ್ಯಕ್ತಪಡಿಸಿದ್ದರಷ್ಟೆ? ಈ ಬಗ್ಗೆ ಈಗ, ಕೇರಳ ಸಂಚಾರದಲ್ಲಿರುವ ಪ್ರಧಾನಿಯವರು ತಮ್ಮ ಅಸಮ್ಮತಿಯನ್ನು ಕಣ್ಣಾನೂರಿನಲ್ಲಿ ಬಹಿರಂಗಗೊಳಿಸಿದರು. ದೇಶದ ಜನತೆಯ ಮೇಲೆ ಗಂಭೀರ ರೀತಿಯಲ್ಲಿ ಪರಿಣಾಮಮಾಡುವ ಸಮಸ್ಯೆಗಳು ನನ್ನನ್ನು ಕಾಡುತ್ತಿರುವಾಗ ತಾನು ದೂರವಾಗುವುದಾದರೂ ವಿಶ್ರಾಂತಿಯನ್ನು ಪಡೆದುಕೊಳ್ಳುವುದಾದರೂ ಆ ಗದ ಹೋಗದ ಮಾತೆಂದು ಶ್ರೀ ನೆಹರೂ ಅಭಿಪ್ರಾಯಪಟ್ಟಿದ್ದಾರೆ. ದೇಶದ ಅಭ್ಯುದಯವನ್ನು ಬಯಸಿ ತಾವು ಆ ಬಗ್ಗೆ ಶ್ರಮಿಸುವುದಾಗಿ ದೃಢಸಂಕಲ್ಪವನ್ನು ಮಾಡಿರುವಾಗ, ಅಂತಹ ಅಭ್ಯುದಯವನ್ನು ಸಾಧಿಸದೆ ತಾವು ನಿವೃತ್ತರಾಗುವುದಿಲ್ಲವೆಂದೂ, ತಾವು ಈ ಸಂಗ್ರಾಮದಲ್ಲಿ ಹೋರಾಡುವುದಾಗಿಯೂ ಆ ಬಗ್ಗೆ ತನ್ನಲ್ಲಿ ಶಕ್ತಿಯಿರುವುದೆಂದೂ ಅವರು ಸಾರಿದರು. "ಜವಾಹರಲಾಲರು ನಿವೃತ್ತರಾಗುವರೆ?" "ಅವರು ವಿಶ್ರಾಂತಿ ಹೊಂದುವರೆ" ಎಂಬಿತ್ಯಾದಿಯಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಪ್ರಶ್ನೆಗಳನ್ನೂ ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿದರು.

ದಕ್ಷಿಣ ಭಾರತ ಒಕ್ಕೂಟ

ಅಸೇತು ಹಿಮಾಚಲದ ವರೆಗಿರುವ ಭಾರತದಲ್ಲಿ ಏಕತೆಯನ್ನುಳಿಸುವ ಪ್ರಯತ್ನವೊಂದುಕಡೆ ಜಾಗುತ್ತಿರುವಾಗ, ದಕ್ಷಿಣ ಭಾರತವನ್ನು ಪ್ರತ್ಯೇಕಿಸುವ ಬಗ್ಗೆ ಒತ್ತಾಯವೂ ಇನ್ನೊಂದೆಡೆ ಮುನ್ನಡೆಯುತ್ತಿದೆ. ಕೇರಳ, ಕರ್ನಾಟಕ, ಮದ್ರಾಸ ಮತ್ತು ಆಂಧ್ರ ಪ್ರದೇಶಗಳನ್ನೊಳಗೊಂಡ ಉತ್ತರ ಭಾರತದ ಸಂಬಂಧವಿರದ ದಕ್ಷಿಣ ಭಾರತ ರಾಷ್ಟ್ರವನ್ನು ಸ್ಥಾಪಿಸುವ ಕುರಿತಾಗಿ ದಿನಾಂಕ ೬೬ರಂದು ಬೆಂಗಳೂರಿನಲ್ಲಿ ಕರ್ನಾಟಕ ದ್ರಾವಿಡ ಮುನ್ನೇತ್ರ ಕಜಗಂನ ಆಶ್ರಯದಲ್ಲಿ ಸೇರಿದ ರಾಜಕೀಯ ಸಮ್ಮೇಳನದಲ್ಲಿ ಪತ್ತಾಯಿಸಲಾಯಿತು. ಈ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಮದ್ರಾಸ ವಿಧಾನ ಸಭಾ ಸದಸ್ಯೆಯರಾದ ಶ್ರೀಮತಿ ಸತ್ಯವಾಣಿ ಮುತ್ತುರವರು ವಹಿಸಿದ್ದು ಶ್ರೀ ಡಿ. ವಿ. ನಾರಾಯಣಸ್ವಾಮಿಯವರು ಉದ್ಘಾಟಿಸಿದರು. ಈ ಸಮ್ಮೇಳನಕ್ಕೆ ಕರ್ನಾಟಕ ಮತ್ತು ತಮಿಳುನಾಡಿನ ಸುಮಾರು೧೫೦೦ ಪ್ರತಿನಿಧಿಗಳು ಉಪಸ್ಥಿತರಿದ್ದರು. ದಕ್ಷಿಣ ಭಾರತ ರಾಜ್ಯಗಳ ಸ್ವಾತಂತ್ರ್ಯವನ್ನುಳಿಸುವ ಸಲುವಾಗಿಯೇ ಕಜಗಂ ಜನಸ್ತಿಯವಾಗಿದೆ ಎಂದು ಉದ್ಘಾಟಕರು ಉದ್ಗರಿಸಿದರು. ಎಲ್ಲ ಅಧಿಕಾರವೂ ಕೇಂದ್ರ ಸರಕಾರದಡಿಯಲ್ಲಿದ್ದ, ಭಾರತ ಪ್ರಜಾತಂತ್ರದ ಅಂಗಗಳಾದ ವಿವಿಧ ರಾಜ್ಯ ಸರಕಾರಗಳು ಅದರ ಕರವಸೂಲು ಮಾಡುವ ಪ್ರತಿನಿಧಿಗಳಾಗುವೆ ಎಂದು ಅಧ್ಯಕ್ಷೆಯರು ನುಡಿದರು. ದಕ್ಷಿಣ ಭಾರತಕ್ಕೆ ಆದ ಅನ್ಯಾಯ, ಹಿಂದಿಯನ್ನು ಹೇರುವ ಅವಾಸ್ತವಿಕತೆಯನ್ನು ಕುರಿತಾಗಿ ಕೆಲವರು ಭಾಷಣವನ್ನು ಮಾಡಿ, ಸರಕಾರದ ಭಾಷಾಧೋರಣೆಯನ್ನು ಕಟುವಾಗಿ ಟೀಕಿಸಿದರು. ಈ ಸಮ್ಮೇಳನವು ಒಟ್ಟು ಎರಡು ದಿನ ನಡೆಯಿತು.

ಸ್ಫೋಟನಕ್ಕೆ ಅಧಿಕಾರವಿಲ್ಲ

ಅಣ್ವಸ್ತ್ರಗಳನ್ನು ಈಗ ಮಿತ ಪ್ರಮಾಣದಲ್ಲಿಯೇ ಸ್ಫೋಟಗೊಳಿಸಿದರೂ ಅದರ ಅಪಾಯವು ಅಮಿತವಾಗುವುದಲ್ಲದೇ ಮುಂದಿನ ಪೀಳಿಗೆಯವರ ಮೇಲೆ ಭಯಾನಕ ಪರಿಣಾಮವನ್ನುಂಟುಮಾಡುವುದು, ಆದುದರಿಂದ, ಇದು ಕೇವಲ ಅಣ್ವಸ್ತ್ರವಿರುವ ದೇಶಗಳಿಗೆ ಮಾತ್ರ ಸಂಬಂಧಿಸಿದ ಪ್ರಶ್ನೆಯಾಗಿರದೆ ಜಗತ್ತಿನ ಎಲ್ಲರಿಗೂ ಹೊಂದಿಕೊಳ್ಳುವಂತಹದಾಗಿದೆ. ಕಾಲಹರಣಕ್ಕೆ ಅವಕಾಶವನ್ನೀಯದೆ ಅವನ್ನು ನಿಲ್ಲಿಸಲೇಬೇಕು. ಅಖಂಡ ಜಗತ್ತಿನಮೇಲೆ ಭೀಕರ ಪರಿಣಾಮವನ್ನು ಮಾಡುವ ಈ ಮಾರಕಾಸ್ತ್ರ ಪ್ರಯೋಗವನ್ನು ಮಾಡುವುದಕ್ಕೆ ಯಾರು ಯಾರಿಗೆ ಅಧಿಕಾರವಿತ್ತಿರುವರು? ಎಂದು ಓಸ್ಲೋದಲ್ಲಿ ಆಕಾಶವಾಣಿ ಭಾಷಣಮಾಡುತ್ತ ಪ್ರಸಿದ್ಧ ನಿಜ್ಞಾನಿ ಡಾ. ಆಲ್ಬರ್ಟ್ ಸ್ವೀಟ್ಜರು ಪ್ರಶ್ನಿಸಿ, ನಿಶ್ಶಸ್ತ್ರೀಕರಣಒಪ್ಪಂದಕ್ಕೂ ಅಣ್ವಸ್ತ್ರ ಸ್ಫೋಟನ ನಿರೋಧಕ್ಕೂ ಏನೇನೂ ಸಂಬಂಧವಿಲ್ಲವೆಂದು ನುಡಿದರು. ಅಲ್ಲದೇ ಈ ಮಾರಕಾಸ್ತ್ರಗಳ ಗಂಡಾಂತರವನ್ನುಂಟುಮಾಡುವುದು ಸರಿಯಲ್ಲ ಎಂದವರು ಅಭಿಪ್ರಾಯ ವ್ಯಕ್ತಪಡಿಸಿದರು.

ಭದ್ರಾವತಿಯ ಕಾರಖಾನೆ

ಭದ್ರಾವತಿಯ ಕಬ್ಬಿಣ ಕಾರಖಾನೆಯಲ್ಲಿನ "ಕಾಸ್ಟ್ ಐರನ್ ಸ್ಪನ್ ಪೈಪ್" ಯಂತ್ರದ ಉದ್ಘಾಟನೆಯನ್ನು ದಿನಾಂಕ ೬೬ರಂದು ಕೇಂದ್ರ ಸರಕಾರದ ಉಕ್ಕು, ಗಣಿ ಮತ್ತು ಉರುವಲು ಶಾಖೆಯ ಮಂತ್ರಿಗಳಾದ ಸರದಾರ ಸ್ವರ್ಣಸಿಂಗರು ನೆರವೇರಿಸಿದರು. ಈ ಯಂತ್ರದ ಸ್ಥಾಪನೆಗೆ ೫೦ ಲಕ್ಷ ರೂಪಾಯಿಗಳ ವೆಚ್ಚವಾಗಿದ್ದು, ಈ ಯೋಜನೆಯಿಂದಾಗಿ ಮೈಸೂರು ರಾಜ್ಯದ ನಗರಗಳಲ್ಲಿ ನೀರು ಸರಬರಾಯಿಗಾಗಿ ಕೊಳವೆಗಳು ಧಾರಾಳವಾಗಿ ದೊರೆಯಲಿರುವುದೆಂದು ಆಶಿಸಲಾಗಿದೆ. ದ್ವಿತೀಯ ಯೋಜನಾವಧಿಯಲ್ಲಿ ಭದ್ರಾವತಿಯ ಕಾರಖಾನೆಗೆ ೬ ಕೋಟಿ ರೂಪಾಯಿಗಳ ವಿಸ್ತರಣಾ ಯೋಜನೆಯೊಂದನ್ನು ಸ್ವೀಕರಿಸಿದ್ದು ಪ್ರಕೃತದ ಕೊಳವೆಯುತ್ಪಾದನಾ ಯಂತ್ರ ಕಾರ್ಯಾರಂಭವು ಅದರ ಮೊದಲ ಹೆಂತವಾಗಿದೆ. ಸರದಾರರು ಉಕ್ಕಿನ ಕಾರಖಾನೆಗಳ ಆವಶ್ಯಕತೆಗಳನ್ನುಪ್ರತಿಬಿಂಬಿಸುತ್ತ ನಾವು ವಿದೇಶಗಳಿಂದ ಉಕ್ಕನ್ನು ಆಯಾತ ಮಾಡುವುದರಿಂದ ವಿದೇಶ ವಿನಿಮಯದ ಕೊರತೆಯು ತಲೆದೋರುತ್ತದೆ. ಹೀಗಾಗದಂತೆ ನಾವು ಈಗ ಮೂರು ನೂತನ ಕಾರಖಾನೆಗಳನ್ನು ಸ್ಥಾಪಿಸುವ ಪ್ರಯತ್ನದಲ್ಲಿರುವೆವಲ್ಲದೆ ಈಗಿರುವ ಕಾರಖಾನೆಗಳ ವಿಸ್ತರಣೆಗೂ ಅವಕಾಶವನ್ನು ಕೊಡುತಿದ್ದೇವೆ. ಇವೆಲ್ಲವುಗಳಿಂದ ನಮಗೆ ಬೇಕಾಗುವಷ್ಟಲ್ಲದೇ ನಿದೇಶಗಳಿಗೆ ನಿರ್ಯಾತ ಮಾಡಲನುಕೂಲವಾಗುವ ಪ್ರಮಾಣದಲ್ಲಿ ಉಕ್ಕು ನಮ್ಮಲ್ಲಿತಯಾರಾಗುವಂತಾಗಲಿ ಎಂದು ಹಾರೈಸಿದರು.

ಉಪಗ್ರಹಗಳ ಮೂಲಕ ಶುಕ್ರನ ಹಿಡಿಯದ ಉಕ್ಕನ್ನು ಬಳಸುತ್ತಾರೆ. ಚಿತ್ರದಲ್ಲಿ ಇಂತಹ ಮೂಲೆಯನ್ನು ಕಾಣಬಹುದು.

ವಿಶ್ವವಿದ್ಯಾಲಯ ಸಮೀಕ್ಷೆ

ಮೈಸೂರು ಸರಕಾರವು ರಾಜ್ಯದ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿನ ಕಾರ್ಯಪ್ರಣಾಳಿ ಮತ್ತು ಶೈಕ್ಷಣಿಕ ಧೋರಣೆಗಳಲ್ಲಿ ಏಕರೂಪತೆಯನ್ನು ಸಾಧಿಸುವ ಸಲುವಾಗಿ ಮದ್ರಾಸ ವಿಶ್ವವಿದ್ಯಾನಿಲಯದ ಉಪಕುಲಪತಿಯವರಾದ ಡಾ.ಎ. ಲಕ್ಷ್ಮಣಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ಒಂದು "ವಿಶ್ವವಿದ್ಯಾಲಯ ಶೈಕ್ಷಣಿಕ ವಿಲಯನ ಸಮಿತಿಯೊಂದನ್ನು ನೇಮಿಸಿದೆ. ಈ ಸಮಿತಿಯಲ್ಲಿ ಉಭಯ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳೂ ಪ್ರಾಧ್ಯಾಪಕರೂ ವಿಧಾನಸಭೆ ಮತ್ತು ಸಚಿವತ್ವಗಳ ಸದಸ್ಯರೂ ಇರುವರು.

ರಶ್ಯದಲ್ಲಿ ನಾಸೀರರು

ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷರಾದ ಶ್ರೀ ನಾಸೀರರು ೧೮ ದಿನಗಳ ಸಂದರ್ಶನ ಕಾರ್ಯಕ್ರಮಗಳನ್ನಿಟ್ಟುಕೊಂಡು ರಶ್ಯಕ್ಕೆ ತೆರಳಿದ್ದಾರೆ. ಅಲ್ಲಿ ಅವರು ೧೬ ಭಾಷಣಗಳನ್ನು ಮಾಡುವರಲ್ಲದೇ ಔದ್ಯಮಿಕ ಕೇಂದ್ರಗಳು, ಎಣ್ಣೆಗನಿಗಳು, ಸಾಮೂಹಿಕ ಒಕ್ಕಲತನ ಕೇಂದ್ರಗಳು ಮತ್ತು ಸೈನಿಕ ಶಾಲೆಗಳಿಗೆ ಭೇಟಿಯೀಯಲಿರುವರು. ಇವರೊಡನೆ ಉಪಾಧ್ಯಕ್ಷ ಅಬ್ದೆಲ್ ಲತೀಫ ಬೊಗದಾದಿ ಮತ್ತು ಅಕ್ಬಮ ಹೌಶಾನಿಯವರೂ ಮೂವರುಮಂತ್ರಿಗಳೂ ತೆರಳಿರುವರು.

ಒಡಿಸ್ಸದಲ್ಲಿ ಬಿಕ್ಕಟ್ಟು

ಒಡಿಸ್ಸಾ ರಾಜಕಾರಣದಲ್ಲಿ ಬಹುದೊಡ್ಡ ಬಿರುಕೆದ್ದಿದೆ. ಈಗ ಇಲ್ಲಿರುವ ಕಾಂಗ್ರೆಸ್ ಸರಕಾರವನ್ನು ಉರುಳಿಸುವ ಉದ್ದೇಶದಿಂದ ವಿರೋಧೀ ಪಕ್ಷದ ಸದಸ್ಯರು ತಮ್ಮ ಪಕ್ಷದ ಬಲವನ್ನು ಹೆಚ್ಚಿಸಿಕೊಳ್ಳಲು ಹಲವಾರು ಚಟುವಟಿಕೆಗಳನ್ನು ನಡೆಸಿದರು. ಇದರಿಂದಾಗಿ ಕಾಂಗ್ರೆಸ್ ಸದಸ್ಯರಲ್ಲಿ ಕೆಲವರು ಕಾಂಗ್ರೆಸಿಗೆ ರಾಜೀನಾಮೆಯಿತ್ತರು. ಹೀಗೆಇಂತಹಚಟುವಟಿಕೆಗಳಿಂದ ನಗರದಲ್ಲಿನ ಪರಿಸ್ಥಿಯು ಪ್ರತ್ಯಕ್ಷಬದ್ಧವಾಗಿದೆ. ನಗರದಲ್ಲಿ ಶಾಂತತೆ ಭಂಗವಾಗುವ ಭೀತಿಯಿಂದ ರಾತ್ರಿ ಮಿಲಿಟರಿ ಪೋಲೀಸರು ಕಾವಲು ನಡೆಸಿದ್ದರು. ವಿರೋಧೀ ಪಕ್ಷದ ನಾಲ್ವರು ಶಾಸನಸಭಾ ಸದಸ್ಯರನ್ನು ಬಂಧಿಸಲಾಗಿದೆ. ಉಪಮಂತ್ರಿಯಾಗಿದ್ದ ಶ್ರೀ ಅನುಪಸಿಂಗರನ್ನು ಪದವಿಯಿಂದ ರಾಜ್ಯಪಾಲರು ಕಿತ್ತುಹಾಕಲಾಗಿದ್ದಾರೆ. ಹೀಗಾಗಿ ಅಸ್ತವ್ಯಸ್ತತೆಯ ತೂಗುಯ್ಯಾಲೆಯಲ್ಲಿ ಒಡಿಸ್ಸವು ನೇತಾಡುವಂತಾಗಿದೆ.

ಕುಷ್ಠರೋಗ ನಾಶಿನಿ

ಸಿಫಾ, ೧೯೫೬ ಎಂಬ ಹೆಸರಿನ ಕುಷ್ಠರೋಗ ನಾಶಿನಿಯಾದ ಔಷಧಿಯೊಂದನ್ನು ಅಮೆರಿಕೆಯ ವೈದ್ಯ ಶ್ರೀ ಟಿ. ಎಫ್. ದಾವೆಯವರು ಕಂಡುಹಿಡಿದಿದ್ದಾರೆ. ಇವರು ಈ ಹೊಸ ಮದ್ದಿನ ಪ್ರಯೋಗವನ್ನು ಮಾಡಿ ಆಶ್ಚರ್ಯಕರ ಪರಿಣಾಮವನ್ನು ಹೊಂದಿದ್ದಾರೆ. ಇದು ಚರ್ಮದ ಮೇಲಿನ ಕಲೆಗಳನ್ನು ನಾಶವಾಡುವುದು; ಅಂಗವಿಕಲರಾಗುವುದನ್ನು ತಡೆಯುವುದು. ಈ ಮದ್ದು ಅಮೆರಿಕೆಯ ಔಷಧಿಯಲ್ಲವಾದುದರಿಂದ, ಮಕ್ಕಳಿಗೂ ಇದರಿಂದ ಚಿಕಿತ್ಸೆ ನಡೆಸಬಹುದು. ಜಗತ್ತಿನ ಬೇರೆ ಬೇರೆಡೆಗಳಲ್ಲಿ ಈ ಔಷಧಿಯನ್ನು ಪರೀಕ್ಷಿಸಲಾಗಿದೆ, ಮತ್ತು ಉತ್ತಮ ಫಲಿತಾಂಶವನ್ನು ಪಡೆದಿದೆ.

ಮೈಸೂರು ವಿಧಾನ ಸಭೆ

ಮೈಸೂರು ವಿಧಾನ ಸಭೆಯಲ್ಲಿ ನಾನಾ ವಿಭಾಗಗಳ ೧೯೫೮—೫೯ ಅಂದಾಜು ಬೇಡಿಕೆಗಳನ್ನು ಒಪ್ಪಿ ಮಂಗಡಪತ್ರವನ್ನು ಸ್ವೀಕರಿಸಿತು. ರಸ್ತೆ ಸಾರಿಗೆಯ ರಾಷ್ಟ್ರೀಕರಣದ ಅಂಗವಾಗಿ ಮತ್ತೆ ಯಾವ ಯಾವ ಮಾರ್ಗಗಳನ್ನು ಸರಕಾರವು ವಹಿಸಿಕೊಳ್ಳುವುದೆಂದು ಜೇಗನೇ ತಿಳಿಸಲಾಗುವುದೆಂದೂ ಮೈಸೂರಿನ ರಸ್ತೆ ಸಾರಿಗೆಯು ಉಳಿದ ರಾಷ್ಟ್ರಗಳಿಗಿಂತ ಉತ್ತಮವಿರುವುದೆಂದೂ ಗೃಹಮಂತ್ರಿ ಸಿ. ಎಂ. ಪೂಣಚ್ಚರು ಹೇಳಿದ್ದಾರೆ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುಸಿದ್ಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ

ಮಂಗಳೂರು

ದ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಇದೇ ತಾ ೨ರಂದು ಅಪರಾಹ್ನ 2 ಗಂಟೆಗೆ ಬೋರ್ಡಿನ ಸಭಾಭವನದಲ್ಲಿ ಜರಗಲಿದ್ದು ಪೆಕ್ಸ್ಲರ್ ಮತ್ತು ಕಮ್ಯೂನಿಕೇಶನ್ಸ್ ಸ್ಟ್ರೀಂಡಿಂಗ್ ಕಮಿಟಿಗೆ ಹೆಚ್ಚ ಸದಸ್ಯರನ್ನು ಈ ಸಭೆಯಲ್ಲಿ ಆರಿಸಲಾಗುವುದು.

ಡಾ| ಬಿ. ವಿ. ಕೇಸ್ಕರರು ಕೇಂದ್ರ ಸರಕಾರದ ವಾರ್ತೆ ಮತ್ತು ಪ್ರಸಾರ ಖಾತೆಯ ಮಂತ್ರಿ ಡಾ| ಬಿ. ವಿ. ಕೇಸ್ಕರರು ಕಳದ ತಾ. 22ರಂದು ಸ್ಥಳೀಯ ಲಲಿತ ಕಲಾ ಮಂಡಳಿಯ ಸಂಗೀತ ಶಾಲೆಗೆ ಭೇಟಿಯಿತ್ತರು. ಮಂಡಳಿಯ ಉಪಾಧ್ಯಕ್ಷ ಶ್ರೀ ಎಮ್. ಅಣ್ಣಪ್ಪ ಕಾಮತ್ ಮೊದಲಾದವರು ಸ್ವಾಗತಿಸಿದರು. ಮಂತ್ರಿಗಳಿಗೆ ಬಿನ್ನವತ್ತಳೆಯೊಂದನ್ನು ಅರ್ಪಿಸಲಾಯಿತು. ಮಂತ್ರಿಗಳು ಉತ್ತರವೀಯುತ್ತ, ಪರಕೀಯರ ಆಳಿಕೆಯಲ್ಲಿ ಮೂಲಪಾಲಾದ ನಮ್ಮ ಕಲೆಗಳ ಪುನರುದ್ಧಾರವನ್ನು ಅಷ್ಟು ಬೇಗನೆ ಮಾಡುವುದು ಸಾಧ್ಯವಿಲ್ಲ ಆದರೂ ಕೇಂದ್ರ ಸರಕಾರ ಈ ವಿಚಾರದಲ್ಲಿ ಸಾಧ್ಯವಾದಷ್ಟು ಕೆಲಸಮಾಡುತ್ತಿದೆ. ಸಂಗೀತದ ಅಭಿವೃದ್ಧಿಗಾಗಿ ಪ್ರಾಥಮಿಕ ಶಾಲೆಗಳಲ್ಲೂ ಸಂಗೀತವನ್ನು ಕಡ್ಡಾಯವಾಗಿ ಕಲಿಸಬೇಕೆಂದರು. ಈ ಸಂದರ್ಭದಲ್ಲಿ ಶ್ರೀ ಬಿ. ರಾಮಮೂರ್ತಿಯವರ ಸಂಗೀತ ಜರಗಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಂಥಾಲಯ ಸಪ್ತಾಹ ಮಂಗಳೂರು: ಇದೇ ಬರುವ ಮೇ ತಿಂಗಳ ತಾ. 30ರಿಂದ 9ರ ತನಕ ಲೋಕಲ್ ಲೈಬ್ರೇರಿ ಅಥೋರಿಟಿಯ ಆಶ್ರಯದಲ್ಲಿ ಗ್ರಂಥಾಲಯ ಸಪ್ತಾಹವು ಇದರ ಶಾಖಾ ಪುಸ್ತಕಾಲಯಗಳಲ್ಲೂ, (ಉಡುಪಿ, ಕಾರ್ಕಳ, ಕುಂದಾಪುರ, ಬೆಳ್ತಂಗಡಿ, ಮತ್ತು ಪುತ್ತೂರು) ಇವುಗಳ ಕೇಂದ್ರ ಗ್ರಂಥಾಲಯವಿರುವ ಮಂಗಳೂರಿನಲ್ಲೂ ಹಾಗೂ ಇವುಗಳ ಪುಸ್ತಕ ವಿತರಣಾ ಕೇಂದ್ರಗಳಲ್ಲೂ, (ಪಡುಬಿದ್ರಿ, ಶಿರ್ವ, ಹಿರಿಯಡ್ಕ, ಬ್ರಹ್ಮಾವರ, ಮೂಡಬಿದ್ರಿ, ನಾರಾಯಣ ಮೇಣೂರು, ಹೆಬ್ರಿ, ಶಂಕರನಾರಾಯಣ, ಬಸ್ರೂರು, ಬೈಂದೂರು, ಮಂದಬಡಕೋಡೆ, ಪುಂಜಾಲಕಟ್ಟೆ, ಮುಲ್ಕಿ, ಉಜ್ರೆ, ಉಪ್ಪಿನಂಗಡಿ, ಕೊಕ್ಕಡ, ಕಡಬ, ಬೆಳ್ಳಾರೆ, ಸುಳ್ಯ, ಪಿಟ್ಲ, ಬಂಟ್ವಾಳ, ಬಜ್ಪೆ, ಮೆತ್ತು ಕೋಟೆಕಾರು) ಆಚರಿಸಲ್ಪಡುವುದು.

ಸಾರ್ವಜನಿಕರಲ್ಲಿ ಓದುವ ಮನೋವೃತ್ತಿಯನ್ನು ಹುಟ್ಟಿಸುವುದು. ಮತ್ತು ಅವರಿಗೆ ಪುಸ್ತಕಗಳ ಜಿಜ್ಞಾಸೆ ಉಪಯೋಗವು ಲಭಿಸುವಂತೆಯಾಗಿ ಲೋಕಲ್ ಲೈಬ್ರೇರಿ ಅಥೋರಿಟಿಯವರು ನಡಸಿಕೊಂಡು ಬಂದಿರುವ ಗ್ರಂಥಾಲಯ ಮತ್ತು ಪುಸ್ತಕ ವಿತರಣಾ ಕೇಂದ್ರಗಳಿಗೂ, ಜಿಲ್ಲೆಯ ಇತರ ಗ್ರಾಮ ಪಂಚಾಯತು ಮತ್ತು ಸಹಕಾರಿ ಸಂಘಗಳು ಹಾಗೂ ಶಾಲಾ ಕಾಲೇಜುಗಳು ನಡೆಸುವ ಪುಸ್ತಕಾಲಯಗಳಿಗೂ ಪರಸ್ಪರ ನೇರ ಸಂಬಂಧವನ್ನು ಬೆಳಸುವುದು, ಇವೆರಡು ಈ ಸಪ್ತಾಹದ ಮುಖ್ಯ ಉದ್ದೇಶಗಳಾಗಿವೆ.

ನಮ್ಮ ದೇಶದ ಲೈಬ್ರೇರಿ ಚಳವಳದ ಧುರೀಣರೆನಿಸಿದ ಮತ್ತು ದ್ವಿಬಿಂಧು ವರ್ಗೀಕರಣ ಪದ್ಧತಿಯ ಪ್ರವರ್ತಕರಾದ ಪದ್ಮಶ್ರೀ ಶಿಯಾಳ ಡಾ| ಎಸ್. ಆರ್. ರಂಗನಾಥನ್ ಇವರು ಈ ಸಪ್ತಾಹವನ್ನು ತಾ. 30ರಂದು ಕಾರ್ನಾಡು ಸದಾಶಿವರಾವ್ ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರೇರಿ, ಮಂಗಳೂರು ಇಲ್ಲಿ ಉದ್ಘಾಟಿಸಲಿರುವರು.

ಓದುಗರ ಕೂಟ, ಸುಳ್ಳಳ ಸುತ್ತು ಸಾಹಿಳಾ ದಿನಾಚರಣೆ, ಕವಿ ರವೀಂದ್ರರ ದಿನಾಚರಣೆ, ಚಿತ್ರಕಲಾ ಮತ್ತು ಪುಸ್ತಕ ಪ್ರದರ್ಶನ ಸಾಹಿತ್ಯಾಧ್ಯಯ ವರ್ಷಾಲದ ಮತ್ತು ದ. ಕನ್ನಡ ಗ್ರಂಥಾಲಯ ಸಂಘದ ಉದ್ಘಾಟನೆ ಹಾಗೂ ಜೇಲಭಕ್ತ ಕಾರ್ನಾಡು ಸದಾಶಿವ ರಾಯರ ತೈಲಚಿತ್ರ ಅನಾವರಣ ಮುಂತಾದ ಕಾರ್ಯಕ್ರಮಗಳು ಈ ಸಪ್ತಾಹದ ಅಂಗವಾಗಿ ಜರಗಲಿರುವುದು.

ಜಿಲ್ಲೆಯ ಇತರ ಪುಸ್ತಕಾಲಯಗಳು ಹಾಗೂ ಈ ಸಪ್ತಾಹದಲ್ಲಿ ಸಹಭಾಗಿಗಳಾಗಬೇಕೆಂದು ಲೋಕಲ್ ಲೈಬ್ರೇರಿ ಅಥೋರಿಟಿಯ ಚೆಯರ್‌ಮೇನರಾದ ಶ್ರೀ ಎಮ್. ಎಸ್. ನಿಕಾಂಬರ ರಾವ್ ಇವರು ತಿಳಿಸುತ್ತಾರೆ.

ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರವು ಮಂಗಳೂರು ಉರ್ವದಲ್ಲಿರುವ ಕೆನರಾ ಹೈಸ್ಕೂಲು ಶಾಲೆಯ ಕಟ್ಟಡದಲ್ಲಿ ಪ್ರಸಿದ್ಧ ನೇತ್ರ ಚಿಕಿತ್ಸಾತಜ್ಞ ಪದ್ಮಶ್ರೀ ಡಾ| ವೇಣಿಯವರಿಂದ ಕಳದ ತಾ. 29ರಂದು ಪ್ರಾರಂಭವಾಗಿ 15 ದಿವಸಗಳ ತನಕ ಜರಗುವುದು, ಶಿಬಿರವಾಸಿಗಳಿಗೆ ಧರ್ಮಾರ್ಥವಾಗಿ ಊಟದ ವ್ಯವಸ್ಥೆ ಮಾಡಲಾಗಿದೆ.

ರಾತ್ರಿ ಶಾಲಾ ವಾರ್ಷಿಕೋತ್ಸವ— ಅತ್ತಾವರ ಫ್ರೆಂಡ್ಸ್ ಯುನ್ಯಾಟೆಡ್ ಕ್ಲಬ್ಬಿನ ಆಶ್ರಯದಲ್ಲಿ ನಡೆಸಲ್ಪಡುವ ರಾತ್ರಿ ಶಾಲೆಯ ವಾರ್ಷಿಕೋತ್ಸವವು ಕಳದ ತಾ. 26ರಂದು ಸಂಜೆ ಡಾ. ಕೆ. ನಾಗಪ್ಪ ಅಳ್ಳ, ಎಮ್. ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಪರಂತ ಕುಮಾರರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯಿನಿ ಕುಮಾರಿ ಪತ್ಮಲಾ ಕುಮಾರಿಯವರು ಶಾಲಾ ವರದಿಯನ್ನೋದಿದರು. ವಾರ್ಷಿಕೋತ್ಸವದ ಅಂಗವಾಗಿ ಅಂದು ಸಾಧ್ಯಾನ್ಹ ಸಿಶ್ರಭೋಜನ ಕೂಟವೂ ನಡೆದಿತ್ತು.

ಕ್ಲಬ್ಬಿನ ವಾರ್ಷಿಕೋತ್ಸವ— ಅತ್ತಾವರ ಫ್ರೆಂಡ್ಸ್ ಯುನ್ಯಾಟೆಡ್ ಕ್ಲಬ್ಬಿನ ವಾರ್ಷಿಕೋತ್ಸವವು ತಾ. 27ರಂದು ಸಂಜೆ ಸೂಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಸಂತ ಕುಮಾರರು ಸ್ವಾಗತಿಸಿದ ಬಳಿಕ ಉಪಕಾರ್ಯದರ್ಶಿ ಶ್ರೀ ಎ. ಶ್ರೀಧರನವರು ಕ್ಲಬ್ಬಿನ ಗತವರುಷದ ವರದಿಯನ್ನೋದಿದರು. ಬಹುಮಾನ ವಿತರಣೆ. ಅಧ್ಯಕ್ಷ ಭಾಷಣಾನಂತರ ವಿವಿಧ ವಿನೋದಾವಳಿಗಳಾದುವು.

ಹಿರಿಯಡಕ—ಇಲ್ಲಿಯ ಶ್ರೀ ವೀರಭದ್ರ ಸ್ವಾಮಿ ಸನ್ನಿಧಿಯಲ್ಲಿ ಕಾಲಂಸ್ತ್ರತ ಜರಗುವ ಮಹೋತ್ಸವವು ಇದೇ ತಾ. 3ರಲ್ಲು ಧ್ವಜಾರೋಹಣದಿಂದ ಆರಂಭವಾಗಿ ತಾ. 8 ರಂದು ಕೊನೆಗೊಳ್ಳುವುದು, ತಾ. 6ರಂದು ಶ್ರೀ ಮನ್ಮಹಾ ರಥೋತ್ಸವ ಜರಗುವುದು.

ಸುಬ್ರಹ್ಮಣ್ಯ— ಶ್ರೀ ಮರದಲ್ಲಿ ಶ್ರೀ ಸುದ್ರಿಶ್ವಸ್ಥ ತೀರ್ಥಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಇನೇ ತಾ. 1ರಿಂದ ಪ್ರಾರಂಭವಾಗಿ ತಾ. 3ರಂ ೨ ಅವಭೃತೋತ್ಸವ, ವಸಂತ ಪೂಜಾದಿ ಕಾರ್ಯಕ್ರಮಗಳೊಂದಿಗೆ ಸಾಂಗವಾಗಿರುವುದು.

ಮೂಡಬಿದ್ರೆ— ಸ್ಥಳೀಯ ಸಮಾಜ ಮಂದಿರದಲ್ಲಿ ಮೂಡಬಿದ್ರೆ ಚರ್ಮ ಕೈಗಾರಿಕೆ ಸಹಕಾರ ಸಂಘವನ್ನು ಕಳದ ತಾ. 24 ರಂದು ಇಂಡಸ್ಟ್ರೀಸ್ ಸೀನಿಯರ್ ಇನ್ಸ್ಪೆಕ್ಟರ್ ಶ್ರೀ ಯು. ಎಲ್. ಭಟ್ಟರು ಉದ್ಘಾಟಿಸಿದರು. ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಮ್. ಪಿ. ಮಾಬೆದರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ. ಪಿ. ಬೆನೆಗ್ನಶರು ಸಂಘದ ಉಪನಿಬಂಧನೆಗಳನ್ನು ವಿವರಿಸಿದ ಬಳಿಕ ಕಾರ್ಯಕಾರೀ ಸಮಿತಿಗೆ ಚುನಾವಣೆ ನಡೆಯಿತು.

ಅಥವಾರು— ಸ್ಥಳೀಯ ಬೋರ್ಡು ಹೈಸ್ಕೂಲು ಮತ್ತು ಹಿರಿಯಡಕ ಬೋರ್ಡು ಹೈಸ್ಕೂಲುಗಳ ಅಧ್ಯಾಪಕ ವೃಂದದವರು ಕಳದ ತಾ. 28ರಲ್ಲು ಪಾರ್ಥನ ತೀರ್ಥಯಾತ್ರೆ ಮತ್ತು ಅಭಿನವ್ಯ ಪ್ರತಾಸ ಎಂಬ ಪ್ರಸಂಗಗಳನ್ನು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು. ಶ್ರೀ ವಿಶ್ವನಾಥ ರಾಯರು ಸ್ವಾಗತಿಸಿದರು. ಶ್ರೀ ಅಥವಾರು ಸ್ವಾಮಿಗಳವರು ಭಾಷಣವಿತ್ತರು. ಶ್ರೀ ಪೊಲ್ಕಿ ದೇಜು ಸೆಟ್ಟರು ಧನ್ಯವಾದ ವಿತ್ತರು

ಬಾಕೂರು— ಸ್ಥಳೀಯ ನೇಶನಲ್ ಹೈಸ್ಕೂಲ್ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳದ ತಾ. 29ರಂದು ಶ್ರೀ ಎ. ಜಿ ಅಳ್ಳಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಪಿ ಎಸ್. ಭೂಪರಾಯರು ಸ್ವಾಗತಮಾತುಗಳನ್ನಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಜಿ. ಪುಟ್ಟಣ್ಣ ಐತಾಳರು ವರದಿಯನ್ನೋದಿದರು, ಅಧ್ಯಕ್ಷ ಭಾಷಣಾನಂತರ ನೃತ್ಯ, ನಾಟಕ, ಯಕ್ಷಗಾನ ಬಯಲಾಟ ಕಾರ್ಯಕ್ರಮಗಳಾದುವು.

ಶಿರ್ವ— ಇಲ್ಲಿಯ ಸಂಚಾಯತ ಬೋರ್ಡಿನ ಸಭೆಯು ಕಳದ ತಾ. 19ರಂದು ಶ್ರೀ ಎಸ್. ಎ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಅಭಿವೃದ್ಧಿ ಯೋಜನೆಯ ಸಹಾಯವನ್ನು ಪಡೆದು ಬೋರ್ಡಿಗೊರದು ಅಭೀಸು ಕಟ್ಟಡ ಕಟ್ಟಿಸುವುದು ಇತ್ಯಾದಿ ನಿರ್ಣಯಗಳಾದುವು.

ಬಾಳೆ ಕುದುರು—ಹಂಗಾರಕಟ್ಟೆ ಬಾಳೆಕುದುರು ಸುತ್ತಲ್ಲಿ ಶ್ರೀ ಶಂಕರ ಜಯಂತೀ ಸಭೆಯು 12ನೆ ಅಧಿವೇಶನ ಮತ್ತು ಜಯಂತಿ ಮಹೋತ್ಸವಗಳು ಕಳದ ತಾ. 23-24ರಂದು ವೈಭವದಿಂದ ಜರಗಿದುವು. ಶ್ರೀ ದ್ವಾರಕಾ ಜಗದ್ಗುರು ಶ್ರೀ ಶಂಕರಾಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು.

ಕೊಡವೂರು—ಕೊಡವೂರು ಮೂಡಬೆಟ್ಟು ಬಾಸಗಿ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ಕಳದ ತಾ. 25ರಂದು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಉದ್ಘಾಟಿಸಿದರು. ಡಾ. ಎಸ್. ಆರ್. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಕಟ್ಟಡದ ಸಮಿತಿ ಅಧ್ಯಕ್ಷ ಡಾ. ಯು. ಬಾಬರಾಯಣ ಆಚಾರ್ಯರು ಸ್ವಾಗತ ಭಾಷಣಮಾಡಿದರು. ಶ್ರೀ ಪಿ. ರಾಮಚಂದ್ರ ನಾಯ್ಕರು ವರದಿಯನ್ನೋದಿದರು. ಶ್ರೀ ಕೆ ಆರ್. ಶೆಣೈಯವರು ಸಂದೇಶವಾಚನಮಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ರಾಮಚಂದ್ರ ಭಟ್ಟರು ಶಾಲಾ ಚಟುವಟಿಕೆಗಳನ್ನು ವಿವರಿಸಿ ಮಾತನಾಡಿದರು. ಶ್ರೀಗಳಾದ ಕೆ. ಶಂಕರನಾರಾಯಣ ಎಮ್. ಶಂಕರನಾರಾಯಣ ಸಾಮಗರು ಮತ್ತು ಪಿ ಕೃಷ್ಣರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು. ಮನರಂಜನ ಕಾರ್ಯಕ್ರಮಗಳು ಮತ್ತು ಯಕ್ಷಗಾನ ಬಯಲಾಟಗಳು ಡಾ. ವಿ. ಕೆ. ಬಲ್ಲಾಳರ ನಾಯಕತ್ವದಲ್ಲಿ ನಡೆಯಿತು.

ಹಿರಿಯಡಕ ಪುತ್ತಿಗೆ— ಯಲ್ಲಿಯ ಅದಿ ಪುತ್ತಿಗೆ ಮಠದ ಜೀರ್ಣೋದ್ಧಾರ ಮತ್ತು ಶ್ರೀ ಮುಖ್ಯಪ್ರಾಣ ದೇವರ ಪ್ರತಿಷ್ಠಾಮಹೋತ್ಸವವು ಕಳದ ತಾ. 25ರಂದು ಶ್ರೀ ಮಠದ ಶ್ರೀ ಸಜ್ಜಾನೇಂದ್ರತೀರ್ಥ ವಿದ್ಯಾವಲ್ಲಭ ಖ್ಯಾತಿಗಳವರ ನೇತೃತ್ವದಲ್ಲಿ ವಿಧಿಯುಕ್ತವಾಗಿ ನಡೆಯಿತು.

ಶಾಲಾ ವರ್ಧಂತಿ—ಬೈಲೂರು ಎಮ್. ಮ್. ಬುನಾದಿ ಎಲಿಮೆಂಟರಿ ಶಾಲೆಯ ವರ್ಧಂತಿಯುತ್ಸವವು ಕಳದ ತಾ. 16ರಂದು ಸರಕಾರಿ ಬುನಾದಿ ಶಾಲೆಯ ಹೆಡ್ಮಾಸ್ಟರ್ ಶ್ರೀ ಬಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಾ ಸಂಧಾರಕ ಸಮಿತಿಯ ಅಧ್ಯಕ್ಷ ಡಾ| ಶ್ಯಾಮ ಸೆಟ್ಟರು ಸ್ವಾಗತ ಭಾಷಣ ಮಾಡಿದರು, ಶಾಲಾ ಮುಖ್ಯೋಪಾಧ್ಯಾಯ ಶ್ರೀ ಗ್ಲೇಡ್ಸನ್ ಜತ್ತನ್ನರು ಶಾಲಾ ವರದಿಯನ್ನೋದಿದರು. ಶ್ರೀ. ಎಸ್. ಕರ್ಕಡರು ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಜೋಜ್ ಡಿ. ಅಸ್ಮನ್ನ (ಮೆನೇಜರ್), ಎನ್. ಶ್ಯಾಮ ಸೆಟ್ಟಿ, ಎ. ಟಿ. ಐಮನ್ ಮೊದಲಾದವರು ಈ ಶಾಲೆಯನ್ನು ಹಾ| ಎ ಶಾಲೆಯನ್ನಾಗಿ ಪರಿವರ್ತಿಸುವ ಅವಶ್ಯಕತೆಯ ಕುರಿತು ಮಾತನಾಡಿದರು. ಅಧ್ಯಕ್ಷ ಭಾಷಣಾನಂತರ ವಿನೋದಾವಳಿ ಕಾರ್ಯಕ್ರಮಗಳಾದುವು. ಅಂದು ಬೆಳಿಗ್ಗೆ ಶ್ರೀ ಕೆ. ದೇವಯ್ಯ ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಡಾ| ಶ್ಯಾಮ ಸೆಟ್ಟರ ಕೃಪೆಯಿಂದ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಮಾರ್ಶಲ್ ಟೀಟೋ

(ಹಿನೆ ಸುಟದಿಂದ)

ವುವರ ಬಗ್ಗೆ ಹೊರಿಸಿದ ಆರೋಪವು ಎಲ್ಲಿವರೆಗೆ ಅವರ ಪಕ್ಷವಿದೆಯೋ ಅಲ್ಲಿ ವರೆಗೆ ಅದು ನಿರಾಧಾರವಾದುದೆಂದು ತಿಳಿದುಬರುತ್ತದೆ. ಏಕೆಂದರೆ ಸ್ಟಾಲಿನರ ಕಾಲದಲ್ಲಿಯೇ ಅವರು ಯಾವ ನೀತಿಯನ್ನು ಅವಲಂಬಿಸಿದ್ದರೋ ಇಂದಿಗೂ ಕೂಡಾ ಅದನ್ನೆ ಹಿಡಿದಿದ್ದಾರೆ.

ಮಾರ್ಶಲ್ ಟಿಟೋರು ತಮ್ಮದೇ ಆದ ವಿಚಾರಶಕ್ತಿಯುಳ್ಳ ಅನುಭವಸ್ಥ ವ್ಯಕ್ತಿಯಾಗಿದ್ದಾರೆ, ಅವರು ಯಾವುದೇ ತರದ ಅಂತಾರಾಷ್ಟ್ರೀಯ ಒಳಪಕ್ಷವನ್ನು ಪರಿಗಣಿಸುವುದಿಲ್ಲ. ಅವರು ಭಾರತದ ತಾಟಸ್ಥ್ಯ ಧೋರಣೆಯನ್ನು ತುಂಬಾ ಮೆಚ್ಚುತ್ತಾರೆ. ಈ ವಿಷಯವನ್ನು ಅವರು ಭಾರತಕ್ಕೆ ಆಗಮಿಸಿದಾಗ ಚೆನ್ನಾಗಿ ವ್ಯಕ್ತಗೊಳಿಸಿದ್ದರು.

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ಬೆಂಕಟ್ರಾವ್, ಎಲ್. ಎ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕನರಕ	3=00
ಪಂಚಮಿತು	2=50
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮಿಷ್ಟೆ	2=50
ಮೈಲುಕಲ್ಲಿನೊಡನೆ ಮಾತುಕತೆ	ಗಳು 1=50
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೋ ವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಪ್ಪನ್ನಕ್ಕೆ ತಾವೇ ಕತೆ, ಹಾಡು, ಅರ್ಥಗಂಭೀರಾಣಿ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಪೆರಂಬೂರ್ ರೈಲುಗಾಡಿ ಕಾರಖಾನೆ

(೩ನೇ ಪುಟದಿಂದ)

ರುವರು ಎರಡನೆಯ ಶಿಫ್ಟನ್ನು ಆರಂಭಿಸಿದರೆ, ಅದಕ್ಕನುಗುಣವಾದ ಸಂಖ್ಯೆಯ ಕೆಲಸಗಾರರು ಬೇಕಾಗುವರು

ಈ ಕಾರ್ಖಾನೆಯಲ್ಲಿ ಅವರವರ ಕೆಲಸಗಳಲ್ಲಿ ತರಬೇತಿ ನೀಡಲು ಆಧುನಿಕ ರೀತಿಯ ತಾಂತ್ರಿಕ ಶಾಲೆಯೊಂದಿರುವುದು ಈ ಶಾಲೆಯಲ್ಲಿ ಕೆಲಸಗಾರರು ಮತ್ತು ಪರಿಶೀಲಕರಿಗೆ ತರಬೇತಿ ದೊರೆಯುವುದು ಕೆಲಸಗಾರರ ಶ್ರೇಯೋಭಿವೃದ್ಧಿಗಾಗಿ ರೆಫ್ರೆಸರ್ ತರಗತಿಗಳನ್ನೂ ಆರಂಭಿಸಲಾಗುವುದು

ಈ ಕಾರ್ಖಾನೆಯಲ್ಲಿ ಈಗಾಗಲೆ ೨೦ ಮಂದಿ ಪದವೀಧರರಾದ ಎಂಜಿನಿಯರುಗಳಿಗೂ, ೩೦೦ ಮಂದಿ ಎಲ್. ಎಂ. ಇ ಡಿಪ್ಲೊಮಾ ಪಡೆದವರಿಗೂ ೧೦೦೦ ಮಂದಿ ಇತರ ತಾಂತ್ರಿಕರಿಗೂ ಉದ್ಯೋಗವನ್ನು ಒದಗಿಸಲಾಗಿದೆ. ಮತ್ತೆ ೨೦ ಮಂದಿ ಪದವೀಧರರಿಗೆ, ೩೦೦ ರಿಂದ ೪೦೦ ಮಂದಿ ಎಲ್. ಎಂ. ಇ ಡಿಪ್ಲೊಮಾ ಪಡೆದವರಿಗೆ, ಹಾಗೂ ೧೦೦೦ ಮಂದಿ ತಾಂತ್ರಿಕ ಕೆಲಸಗಾರರಿಗೆ ಗಾಲಿಗರ ಕೊನೆಯವರೆಗೆ ವೇತನ, ಎರಡನೆಯ 'ಶಿಫ್ಟ್' ಹಾಗೂ ಹಗಲಿನ 'ಶಿಫ್ಟ್'ನ್ನು ಆರಂಭಿಸಲು, ಉದ್ಯೋಗ ದೊರೆಯುವುದು

ಈ ಕಾರ್ಖಾನೆಯ ಕೆಲಸಗಾರರಿಗಾಗಿ ೪೦೦ ಮನೆಗಳುಳ್ಳ ವಸಾಹತೊಂದನ್ನು ನಿರ್ಮಿಸಲಾಗಿದೆ ಈ ಕಾಲೋನಿಯಲ್ಲಿ ಎಲ್ಲಾ ಆಧುನಿಕ ವ್ಯವಸ್ಥೆಗಳನ್ನೂ ಮಾಡಿಕೊಡಲಾಗಿದೆ ಪ್ರಾಥಮಿಕ ಶಾಲೆ, ಮಕ್ಕಳ ಕ್ರೀಡಾವನ ಮನರಂಜನಾ ಸಂಘ ಮತ್ತು ಸಹಕಾರ ವ್ಯವಸ್ಥೆಯಲ್ಲಿ ಕೆಲಸಮಾಡುವ ಅಂಗಡಿಗಳಿರುವುವು. ಸೀರೋಪಸ್ಕರಣ ವಿಭಾಗದಲ್ಲಿ ಕೆಲಸಮಾಡುವವರಿಗೂ ವಸತಿ ವ್ಯವಸ್ಥೆಯನ್ನು ಕಲಿಸಲ್ಪಡಲಾಗುವುದು.

ಕೆಲಸಗಾರರಿಗೆ ಉತ್ತಮ ಕೆಲಸದ ಪರಿಸ್ಥಿತಿಯನ್ನು ಈ ಕಾರ್ಖಾನೆಯ ಆಡಳಿತ ವರ್ಗದವರ ಮುಖ್ಯ ಗುರಿಯಾಗಿದೆ. ಅದಕ್ಕಾಗಿ ಅನೇಕ ಸುವಿಧಾನಗಳನ್ನು ಅವರು ಕೈಗೊಂಡು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿರುವರು,

ಸಮಗ್ರ ರೈಲುಗಾಡಿ ಕಾರ್ಖಾನೆಯಲ್ಲಿ ಸಿಬ್ಬಂದಿಯ ಮನರಂಜನೆಗಾಗಿ ಏರ್ಪಟ್ಟಿರುವ ಸಂಸ್ಥೆಯು ಬಹಳವಾಗಿ ಮುಂದುವರಿದಿದೆ. ಫುಟ್ ಬಾಲ್, ಹಾಕಿ ಮುಂತಾದ ಆಟಗಳಲ್ಲಿ ಈ ಸಂಸ್ಥೆಯ ಸದಸ್ಯರು ಹೆಸರು ಗಳಿಸಿರುವರು ಉದ್ಯಾನವನ ಸ್ಪರ್ಧೆಯಲ್ಲಿ ಈ ಕಾರ್ಖಾನೆಯು ಕಳೆದ ಮೂರು ವರ್ಷಗಳಿಂದಲೂ ಬಹುಮಾನ ಗಳಿಸುತ್ತಿದೆ

ಈ ಕಾರ್ಖಾನೆಯ ಕೆಲಸಗಾರರು ಬಹು ಶ್ರಮಪಟ್ಟು ಕೆಲಸಮಾಡುತ್ತ, ಈ ಕಾರ್ಖಾನೆಯು ದೇಶದ ರಾಷ್ಟ್ರೀಕೃತ ಕಾರ್ಖಾನೆಗಳಲ್ಲಿ ಅತ್ಯುತ್ತಮವಾದುದೆಂದು ಹೆಸರುಗಳಿಸಲು ನೆರವಾಗಿರುವರು ಈ ಕಾರ್ಖಾನೆಗೆ ಭೇಟಿಯಿತ್ತ ಭಾರತೀಯರು ಹಾಗೂ ವಿದೇಶೀಯರು ಈ ಕಾರ್ಖಾನೆಯು ಸಾಧಿಸಿರುವ ಪ್ರಗತಿಯನ್ನು ಮನಸಾರೆ ಹೊಗಳಿರುವರು.



ಸ್ವೀನ ದೇಶಕ್ಕೆ ಬ್ರಿಟಿಷ ಇಂಜಿನಿಯರಿಂಗ್ ಕಂಪೆನಿಯೊಂದು ಒದಗಿಸಿ ನಿಲ್ಲಿಸಿಕೊಟ್ಟ ಒಂದು ಉಕ್ಕಿನ ಕುಲುಮೆಯ ಚಿತ್ರವಿದು ಇದು ಇಡಿ ಸ್ಪೇನಿನಲ್ಲಿಯೇ ಹಿರಿದಾಕಾರದ್ದಾಗಿರುತ್ತದೆ ಇದೇ ಮಾದರಿಯ ಕುಲುಮೆಗಳನ್ನು ಭಾರತದ ದುರ್ಗಾಪುರದಲ್ಲಿಯೂ ಎಂಟು ಬ್ರಿಟಿಷ ಕಂಪೆನಿಗಳ ಸಹಾಯದಿಂದ ಸ್ಥಾಪಿಸಲಾಗುವುದು

ಸಂಜೀವಿನೀ ಶಕ್ತಿಯುಕ್ತ ಕೊಟಶಾದ್ರಿ

(೪ನೇ ಪುಟದಿಂದ)

ರ್ಣ ಗಿರಿಯಾಯಿತು ಹೊಳಪು ಕಲ್ಲುಗಳೆಲ್ಲಾ ರತ್ನ, ವಜ್ರ ವೈಢೂರ್ಯಗಳಾಗಿ ಕಂಗೊಳಿಸಿದವು

ಸರ್ವಜ್ಞಪೀಠದ ಶಿಖರೇರಿದಾಗ, ರಮ್ಯವಾದ ನೋಟವನ್ನು ನೋಡಬಹುದು ಕಣ್ಣಿಟಿಕುವಷ್ಟಕ್ಕೂ ಗುಡ್ಡ-ಬೆಟ್ಟಗಳ ಮರಗಿಡಗಳ ಹೂವತು, ಪ್ರಾಣಿಗಳ ಸುಳಿವೂ ಭೂಮಿಯ ಮೇಲಿಲ್ಲವೆಂಬಂತೆ ತೋರುವುದು ದೂರದಲ್ಲಿ ಕೊಲ್ಲೂರು, ಬೆಂಕಿಪೆಟ್ಟಿಗೆಯ ಮಕ್ಕಳ ಮನೆಯಂತೆ ತೋರುವುದು

ಅಲ್ಲಿಂದ 'ಚಿತ್ರಮೂಲಕ್ಕೆ' ಅರ್ಧ ಮೈಲು ಕೆಳಕ್ಕಿಳಿಯಬೇಕು ಅದು ಯಜ್ಞಾಶ್ರಮದಂತೆ ಕಂಗೊಳಿಸುತಿತ್ತು ಒಬ್ಬ ಯೋಗಿ ಅಲ್ಲಿ ಧ್ಯಾನನಿರತನಾಗಿದ್ದ

ಇಂಥ ಸ್ವರ್ಗೀಯ ಭಾವನಗಳ ಸುಳಿಯಲ್ಲಿ ತೇಲುತ್ತಾ ಗಿರಿಯನ್ನು ಇಳಿಯತೊಡಗಿದೆವು. ಬೆಟ್ಟದ ದಕ್ಷಿಣ ಶ್ರೇಣಿಯಿಂದು ಜೋಳ ಬೆಟ್ಟವಾದುದರಿಂದ, ಬಹುದೂರದ ಪ್ರಕೃತಿಯ ಬಿನ್ನಾಣವನ್ನು ನಾವಲ್ಲಿ ನೋಡಬಹುದು ಜಾಗ್ರತೆ ತಪ್ಪಿದರೆ, ಕಾಲುಬುಡದ ಪಾತಾಳದ ಕಣಿವೆಯ ನ್ನು ಸೇರುವುದೂ ನಿನಿಷಾರ್ಧದ ಕೆಲಸ

ಸಾಧಾರಣ ಒಂದು ಸಾವಿರ ವರ್ಷಗಳ ಹಿಂದೆ ಶಂಕರ ಚಾರ್ಯರು ಸಾಧಿಸಿದ ಮಹತ್ಕಾರ್ಯವನ್ನು ನೆನೆದು ಅಭಿಮಾನದಿಂದ ಹೃದಯ ತುಂಬುವುದು ಸರ್ವಜ್ಞಪೀಠವನ್ನು ಆಚಾರ್ಯರೇ ಸ್ಥಾಪಿಸಿದರು ಅಲ್ಲಿ ಅವರು ತಮ್ಮ ವ್ಯಕ್ತಿತ್ವವನ್ನು ನೆಲೆಗೊಳಿಸಿದ್ದರು ಅವರು ಸಿದ್ಧಿಪಡೆದ ಕ್ಷೇತ್ರವಿದು ಆದುದರಿಂದಲೇ ಸಿದ್ಧಿಕ್ಷೇತ್ರವೆನಿಸಿದೆ.

ಸಂಜೀವಿನೀ ಶಕ್ತಿಯಿರುವ, ಗಿಡಮೂಲಿಕೆಗಳು ಅಲ್ಲಿ ಸಿಗುತ್ತವೆ ಆದುದರಿಂದಲೇ ಆ ಪರ್ವತಕ್ಕೆ 'ಕುಟಜಾದ್ರಿ' ಎಂಬ ಹೆಸರು ಕುಟಜಾದ್ರಿಯೇ 'ಕೊಟಶಾದ್ರಿ' ಯಾಯಿತು

ಆ ಬೆಟ್ಟದ ಮೇಲೂ ಮನುಷ್ಯನು ವಾಸಿಸುವ ಸಾಹಸ ಪ್ರವೃತ್ತಿಯನ್ನು ನೆನೆದು ಆಶ್ಚರ್ಯವೆನಿಸುತ್ತದೆ. ಆದರೆ ಸರಕಾರ ಮಾತ್ರ ಇಂಥ ಅಪೂರ್ವ ಕ್ಷೇತ್ರವನ್ನು ತೀರಾ ಗಡೆಗಣಿಸಿಬಿಟ್ಟಿದೆ

ಹಿಂದ ಮೈಸೂರಿನ ಮಹಾರಾಜರು ಲಕ್ಷಾಂತರ ರೂಪಾಯಿಗಳನ್ನು ಆ ಕ್ಷೇತ್ರದ ಅಭಿವೃದ್ಧಿಗಾಗಿ ಖರ್ಚುಮಾಡಿದ್ದರು ಆದರೆ ಆ ಒಂಗಲೆಗಳೆಲ್ಲಾ ಈಗ ನೆಲಸಮವಾಗುತ್ತಿವೆ ಒಂದು ಹಂಚಿಗೆ ಎಂಟಾಣೆ ಕೊಟ್ಟು, ಒಂದು ಹೆಡಿಗೆ ಮಳಲಿಗೆ ಒಂದು ರೂ ಕೂಲಿಕೊಟ್ಟು ಕಟ್ಟಿಸಿದ ಕಟ್ಟಡಗಳು ಹಾಳುಬೀಳುವುದನ್ನು ನೋಡುವಾಗ ಕನಿಕರವೆನಿಸುತ್ತದೆ

ಮಹಾತ್ಮೆಯಲ್ಲಾಗಲಿ, ಪ್ರಕೃತಿ ಸೌಂದರ್ಯದಲ್ಲಾಗಲಿ ಎರಡನೆ ಬದರಿಕಾಶ್ರಮದಂತಿರುವ ಈ ಕ್ಷೇತ್ರವನ್ನು ಸರಕಾರ ಅಭಿವೃದ್ಧಿಪಡಿಸಿದರೆ, ಕನ್ನಡನಾಡಿಗೇ ಒಂದು ಹೆಮ್ಮೆಯ ವಿಷಯವಾದೀತು ಮಲೆಯಾಳಿಗಳನ್ನು ಆಕರ್ಷಿಸುವ ಈ ಪ್ರದೇಶ ದಕ್ಷಿಣ ಭಾರತವನ್ನೂ ತನ್ನತ್ತ ಸೆಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲ

ಯಾವುದಾದರೂ ಒಂದು ಬಡ ವಿಧವೆಯ ಸಂಸ್ಥೆಗೆ ಈ ಪ್ರದೇಶ ಒಳಪಟ್ಟಿದ್ದರೂ, ಇಷ್ಟರೊಳಗೇ ಅದು ಗಮ್ಯವಾಗುತಿತ್ತು ಆದರೆ ಕನ್ನಡಿಗರ ದುರ್ದೈವದಿಂದಲೇ ಈ ಕಡೆಗೆ ನಮ್ಮ ಸರಕಾರದ ಗಮನ ಹರಿದಿಲ್ಲ

ಸೃಷ್ಟಿ ಸೌಂದರ್ಯದ ತಾಯ್ನಾಡು, ಸಾಹಸ ಪ್ರಿಯರಿಗೆ ಆಹ್ವಾನವೀಯುವ ಅಗಮ್ಯ ಪಥದೆಡೆಯಲ್ಲಿ ಹುದುಗಿರುವ ನರನಾಡು, ಆ ನೇತು ಹಿಮಾಚಲ ಕೀರ್ತಿಶಾಲಿಗಳಾದ ಶ್ರೀ ಶಂಕರಾಚಾರ್ಯರ ಸರ್ವಜ್ಞ ಪೀಠದ ನಲವೀಡು ನಮ್ಮ ಸರಕಾರದ ದೃಷ್ಟಿಗೆ ಗೋಚರಿಸದಿರುವುದು ಸರಿಯಲ್ಲ ಆದುದರಿಂದ ಮುಂದಾದರೂ ನಮ್ಮ ಜನತಾ ಸರಕಾರ, ಈ ದೆಸೆಯಲ್ಲಿ ಕಾರ್ಯ ಪ್ರವರ್ತಕವಾಗಬೇಕೆಂಬುದೇ ಒಂದು ಬಾರಿ ಕುಟಶಾದ್ರಿಯನ್ನು ಪ್ರಯಾಸ ಸಾಹಸಗಳಿಂದ ಹತ್ತಿ ಇಳಿದು ಬಂದವರ ಮನೋವಾಂಛಿತವಾಗಿದೆ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ವಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ತರು ಷಾ ಕಂಪೆನಿ, ಮಂಗಳೂರು—1

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು ಎಮ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು,

ಬೆಲೆ ಐದಾಣೆ ಮಾತ್ರ ವಿ. ಪಿ. ಪ್ರತ್ಯೇಕ.

ನವಯುಗ ವರ್ಸ್, ಉಡುಪಿ

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ

ಹದಿಮೂರು ವರ್ಷಗಳಿಗೆ ಮೊದಲು–

ಅಡಾಲ್ಫ್ ಹಿಟ್ಲರನ ಪ್ರತಾಪ

ಶ್ರೀ. ಎನ್. ರಘುನಂದನ ರಾವ್

ಎರಡನೇ ಜಾಗತಿಕ ಯುದ್ಧವನ್ನು ನೆನೆದರೆ, ಸಾಮಾನ್ಯವಾಗಿ ನಮ್ಮ ಸ್ಮೃತಿ ಪಟಲದಲ್ಲಿ ತೋರುವುದು ಹಿಟ್ಲರನ ಚಿತ್ರ. ದ್ವಿತೀಯ ಜಾಗತಿಕ ಯುದ್ಧವು ಜರ್ಮನಿಯ ಪತನಕ್ಕೆ ಕಾರಣವಾಯಿತೆಂದರೆ ತಪ್ಪಾಗದು. ಹಿಟ್ಲರನ ಅತ್ಯಾಸೆಗೆ ಜರ್ಮನಿಯ ಜನತೆ ಬಲಿಯಾಗಬೇಕಾಯಿತು. ತನ್ನೊಬ್ಬನ ಆಸೆ ಆಕಾಂಕ್ಷೆಗಳನ್ನೇ ಈಡೇರಿಸಿಕೊಳ್ಳಲೋಸುಗ ಹಿಟ್ಲರ್ ಅಸಂಖ್ಯಾತ ಜನತೆಯ ಕೊಲೆಗೆ ಕಾರಣನಾದ, ಹಲವು ರಾಷ್ಟ್ರಗಳನ್ನು ಧ್ವಂಸ ಪಡಿಸುವುದಕ್ಕೂ ಮುಂದಾದ. ಆದರೆ, ಪಾರತಂತ್ರ್ಯದ ಬಂಧನದಲ್ಲಿ ಕೊಳೆಯುತ್ತಿದ್ದ ಅಂದಿನ ಭಾರತಕ್ಕೆ ಮಾತ್ರ ಅವನಿಂದ ತುಂಬಾ ಸಹಾಯವೊದಗಿದೆಯೆಂಬುದನ್ನಿಲ್ಲಿ ಮರೆಯಲಾಗದು. ಭಾರತದ ಬಿಡುಗಡೆಯ ಹೋರಾಟದ ಅಂಗವಾಗಿ ನೇತಾಜಿ ಸುಭಾಷಚಂದ್ರ ಬೋಸರಿಗೆ ತುಂಬಾ ಸಹಾಯ ದೊರೆತಿದೆ, ಅವನಿಂದ. ಇದಕ್ಕಾಗಿ ಭಾರತ ಅವನಿಗೆ ಕೃತಜ್ಞವಾಗಿದೆ.

ಹಿಟ್ಲರನದು ಅದ್ಭುತವಾದ ಜೀವನ. ಜರ್ಮನ್ ಜನತೆಯ ಮೇಲೆ ಅವನ ಹಿಡಿತ ಬಲುಬಿಗಿಯಾಗಿತ್ತು. ಆದರೆ ಯುದ್ಧ ಪ್ರಿಯ ಜರ್ಮನರಿಗೆ ಅವನೇ ಬೇಕಾದವನಾಗಿದ್ದ! ಅವನೇ ಅವರ ಸಮರ್ಥ ಮುಂದಾಳಾಗಿದ್ದ. ಅವನ ಅದ್ಭುತ ಜೀವನವನ್ನಿಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಎಡೊಲ್ಫ್ ಹಿಟ್ಲರನ ಜನ್ಮ ೧೮೮೯ರಲ್ಲಿ, ಆಸ್ಟ್ರಿಯದ ಪಟ್ಟಣವೊಂದರಲ್ಲಿ– ಆಸ್ಟ್ರಿಯ, ಜರ್ಮನಿ ದೇಶಗಳ ಮೇರೆಗಳು ಸಂಧಿಸುವಲ್ಲಿ. ತಂದೆ ಆಸ್ಟ್ರಿಯದ ಓರ್ವ ಸುಂಕದ ಅಧಿಕಾರಿ. ಹಿಟ್ಲರನಿಗೆ ಶಾಲೆಯ ವಿದ್ಯಾಭ್ಯಾಸ ರುಚಿಸಲಿಲ್ಲ. ಪ್ರಸಿದ್ಧ ಕಲಾವಿದನಾಗಬೇಕೆಂದು ಅವನ ಆಸೆ. ಹದಿನೆಂಟರ ಎಳೆ ಹರೆಯದಲ್ಲೇ ಮಾತಾಪಿತರು ಮೃತರಾದುದರಿಂದ ತನ್ನ ಜೀವನ ನಿರ್ವಹಣೆಗಾಗಿ ಅವನು ಸಂಪಾದನೆಗೆ ತೊಡಗಿದನು. ವಿಯೆನ್ನಕ್ಕೆ ತೆರಳಿ, ಚಿತ್ರಕಾರನಿಗೆ ಜೀವನವನ್ನವನು ಜೀವಿಸಲಾರಂಭಿಸಿದನು. ೨೩ರ ಪ್ರಾಯದಲ್ಲಿ ಮ್ಯೂನಿಚಿಗೆ ತೆರಳಿ ಎರಡು ವರ್ಷಗಳಲ್ಲೇ ಪ್ರಥಮ ಜಾಗತಿಕ ಯುದ್ಧಾರಂಭವಾದುದರಿಂದ ಹಿಟ್ಲರ್ ಓರ್ವ ಜರ್ಮನ್ ಯೋಧನಾದ. ಆಗಿನ ಅವನ ಧೈರ್ಯ ಸಾಹಸಗಳು ಪ್ರಶಂಸಾರ್ಹವಾಗಿದ್ದು, ಅವನು "Iron cross" ಬಹುಮಾನಿತನಾದನು.

ಯುದ್ಧಾನಂತರ, ಜರ್ಮನ್ ಯೋಧರಲ್ಲಿ ಹಲವರು ಜರ್ಮನಿಯಲ್ಲಿನ ಪ್ರಜಾಪ್ರಭುತ್ವ ಸರಕಾರವನ್ನು ಕಿತ್ತೆಸೆಯಬೇಕೆಂದು ಕುಣಿಸುತ್ತಿದ್ದರು. ಎಡೊಲ್ಫ್ ಇವರಿಗೆ ಅನುಕೂಲನಾಗಿದ್ದುದರಿಂದ ಕಾರ್ಯಕ್ರಮಕ್ಕೆ ಸ್ಫೋತ್ಸಾಹ ದೊರೆತಂತಾಯಿತು.

ಹಿಟ್ಲರ್ ಅಸಾಮಾನ್ಯವಾಗ್ಮಿಯೂ ಆಗಿದ್ದನು. ಸ್ಫೂರ್ತಿಯುತನಾಗಿ ಭಾಷಣ ಮಾಡುವಾಗ ಶಬ್ದಗಳು ಅವನ ನಾಲಗೆಯಿಂದ ನಿರಾತಂಕವಾಗಿ ಹೊಂದುತ್ತಿದ್ದುವು. ಒಮ್ಮೆಮ್ಮೆ ಅವನಿಗೆ, ತಾನು ಹೇಳಿದ್ದೇನು, ಎಂಬುದರ ಕುರಿತೂ ಅರಿವಿರುತ್ತಿದ್ದಿಲ್ಲ. ಅಷ್ಟು ಭಾವನಾಪರನಾಗುತ್ತಿದ್ದನವನು. ಅವನ ಭಾಷಣಗಳು ಜರ್ಮನರ ಮೇಲೆ ತುಂಬಾ ಪರಿಣಾಮ ಬೀರಿದುವು. ಅವನನ್ನೇ ಅನುಸರಿಸತೊಡಗಿದರವರು. ವಾಗ್ಮೈಖರಿ ಹಿಟ್ಲರನಿಗೆ ದೈವದತ್ತವಾದ ಬಹುಮಾನ. ಇದರಿಂದ ಅವನಿಗೂ, ಅವನ ಹಿಂಬಾಲಕರಿಗೂ, ತುಂಬಾ ಉಪಯುಕ್ತವಾಯಿತು.

ಜರ್ಮನಿಯ ಸ್ಥಿತಿ ದಿನೇದಿನೇ ದಾರುಣವಾಗುತ್ತ ಬರುತ್ತಿದ್ದ ಕಾಲವದು. ಜನರಿಗೆ ತನ್ನ ದೇಶವನ್ನು ಹೇಗೆ ಉದ್ಧರಿಸಬಹುದೆಂಬೊಂದೇ ಯೋಚನೆ. ಅವನ್ನು ತೊಲಗಿಸಲು ಅವರು ನಿನ ಮಾಡಲಿಕ್ಕೂ ಸಿದ್ಧರಾಗಿಯೇ ಇದ್ದರು. ಹಿಟ್ಲರ್ ಹಾಗೂ ಅವನ ಅನುಚರರು National Socialist Party (ರಾಷ್ಟ್ರೀಯ ಸಮಾಜವಾದಿ ಪಕ್ಷ)ಯೆಂಬ ಪಕ್ಷವೊಂದನ್ನು ಸ್ಥಾಪಿಸಿದರು. ಇದಕ್ಕೆ 'ನಾಝಿಗಳ' ಎಂಬುದಾಗಿಯೂ ಹೇಳುತ್ತಾರೆ. ಅದರ ಧ್ವಜವು ಸ್ವಸ್ತಿಕದಿಂದ ಕೂಡಿದುದಾಗಿದೆ. ಈ ಪಕ್ಷದ ಪ್ರೋತ್ಸಾಹಕರ ಸಂಖ್ಯೆಯೂ ತುಂಬಾ ಕಟ್ಟಿತು. ತತ್ಪರಿಣಾಮವಾಗಿ ೧೯೩೩ರಲ್ಲಿ ಇದು ಜರ್ಮನಿಯ ಪ್ರಮುಖ ಪಕ್ಷವಾಯಿತು. ೧೯೩೩ರಲ್ಲಿ ಹಿಟ್ಲರ್ ಜರ್ಮನಿಯ ಪ್ರಧಾನಿ (Chancellor)ಯಾದನು.

ಪ್ರಧಾನಿಯಾದ ಕೆಲವೇ ದಿನಗಳಲ್ಲಿ ಜರ್ಮನಿಯ ಮೇಲೆ ಈತನ ಅಧಿಕಾರ ಚಲಾವಣೆಗಾರಂಭವಾಯಿತು. ಅವನಿಗೂ, ಅವನ 'ನಾಝಿ' ಪಂಥಕ್ಕೂ ಒಪ್ಪದವರನ್ನು ಸೆರೆಮನೆಗೆ ಕಳುಹಿಸಲಾಗುವುದೆಂಬ ಆಜ್ಞೆಯೂ ಹೊರಟಿತು. ಕೆಲಸಮಯದ ನಂತರ ಜರ್ಮನಿಯಲ್ಲಿ 'ನಾಝಿಗಳ' ಸಂಧದ ಹೊರತು, ಇನ್ನಾವ ಪಕ್ಷವೂ ಇರಬಾರದೆಂದು ನಿರ್ಬಂಧವೂ ಜಾರಿಗೆ ಬಂದಿತು. ವೃತ್ತಪತ್ರಿಕೆಗಳೂ, ಚಲಚ್ಚಿತ್ರಗಳೂ, ಬಾನುಲಿಯೂ, ವಿದ್ಯೆಯೂ ಅವರ ಹಿಡಿತಕ್ಕೆ ಬಂದುವು.

ಆದರೆ ಹಿಟ್ಲರ್ ನಿರುದ್ಯೋಗ ಸಮಸ್ಯೆಯನ್ನು ತನ್ನ 'ನಾಝಿಗಳ' ರೀತಿಯಲ್ಲಿಯೇ ನಿವಾರಿಸಿದ. ಯಾ ಇಲ್ಲಿ ಸ್ಮರಣಾರ್ಹ. ಯೆಹೂದಿಗಳನ್ನು ದ್ವೇಷಿಸುತ್ತಿದ್ದನಾತ. ಜರ್ಮನಿಯಲ್ಲಿ ದೊಡ್ಡ ವಹಿವಾಟುದಾರರೂ, ಐಶ್ವರ್ಯವಂತರೂ ಅವರೇ ಆಗಿದ್ದರು. ಅವರನ್ನು ಮೊದಲು ಜರ್ಮನಿಯಿಂದ ತೊಲಗಿಸಬೇಕೆಂಬ ತನ್ನ ಉದ್ದೇಶವನ್ನು ಸಾಧಿಸಲು ಜರ್ಮನರಿಗೆ ಹಿಟ್ಲರ್ ಕರೆಯಿತ್ತನು: ಅಲ್ಲದೇ ಪ್ರಥಮ ಜಾಗತಿಕ ಯುದ್ಧದಲ್ಲಿ ಜರ್ಮನಿಯ ಸೋಲಿಗೂ, ನಂತರ ನಿರುದ್ಯೋಗಕ್ಕೂ ಕಾರಣರಾದವರು ಯೆಹೂದಿಗಳೇ ಎಂಬುದಾಗಿ ಸಾರಿದನವನು. ಇದರಿಂದಾಗಿ ಜರ್ಮನರು ಯೆಹೂದಿಗಳ ವಿರುದ್ಧ ದೊಡ್ಡ ಕಾರ್ಯಾಚರಣೆಯನ್ನೇ ಆರಂಭಿಸಿದರು. ಯೆಹೂದಿಗಳಲ್ಲಿ ಕೆಲವರು ಕೊಲ್ಲಲ್ಪಟ್ಟರು, ಕೆಲವರನ್ನು ಸೆರೆಮನೆಗಳಿಗಟ್ಟಲಾಯಿತು. ಇನ್ನು ಕೆಲವರು ದೇಶವನ್ನೇ ಬಿಟ್ಟೋಡಿದರು. ಪ್ರಖ್ಯಾತ ಗಣಿತಜ್ಞರಾಗಿದ್ದ ಐನ್‌ಸ್ಟೀನ್ ಅವರಲ್ಲೊಬ್ಬರು. ಇದಾದ ಮೇಲೆ, ಇನ್ನೊಂದು ದೊಡ್ಡ ಸೇನೆಯನ್ನು ತಯಾರಿಸಬೇಕೆಂದು ಹಿಟ್ಲರ್ ಜನರಿಗೆ ಹೇಳಿದ. ನಿರುದ್ಯೋಗಿ ತರುಣರು ಸೈನ್ಯಕ್ಕೂ, ವಾಯುದಳಕ್ಕೂ ಸೇರಿದರು. ಯುದ್ಧೋಪಕರಣಗಳನ್ನು ತಯಾರಿಸುವ ಸಲುವಾಗಿ ನಿರ್ಮಿತವಾದ ಕಾರ್ಖಾನೆಗಳಲ್ಲಿ ಹಲವರು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಡಲಾಯಿತು. ಹೀಗೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿದನಾತ.

ಇಷ್ಟರಲ್ಲಿ, ವಿಶ್ವಶಾಂತಿಗಾಗಿ ಸ್ಥಾಪಿತವಾಗಿದ್ದ ಜನಾಂಗ ಸಂಘ ನಿರ್ಬಲವಾಗಿತ್ತು. ಜರ್ಮನರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಯುರೋಪಿನ ಭಾಗಗಳನ್ನು ಜರ್ಮನಿಗೆ ಸೇರಿಸಬೇಕೆಂದು ಉದ್ದೇಶಿಸಿ, ತನ್ನ ಸೇನೆಗಳನ್ನು ರೈನ್‌ಲೇಂಡಿನ ತನಕ ಮುಂದುವರಿಸಿದನು ಹಿಂದಿನ ವರ್ಸಾಯಿ ಒಪ್ಪಂದದ ಪ್ರಕಾರ ಜರ್ಮನ್ ಸೈನಿಕರಿಗೆ ಇಲ್ಲಿ ಪ್ರವೇಶವಿರಲಿಲ್ಲ. ಆದರೂ ಜರ್ಮನರು ಇಲ್ಲಿಯ ತನಕ ಮುಂದುವರಿದರು.

ಮೊದಲು, ೧೯೩೮ರಲ್ಲಿ ಅವನು ಆಸ್ಟ್ರಿಯಕ್ಕೆ ಮುತ್ತಿಗೆ ಹಾಕಿದನು. ಜರ್ಮನರು ವಾಸಿಸುತ್ತಿದ್ದ ಝೆಕೊಸ್ಲೊ ವೇಕಿಯದ ಕೆಲವು ಭಾಗಗಳು ಅವನ ಅಧೀನಕ್ಕೆ ಬಂದುವು. ಈಗ ಕೆಲವು ರಾಷ್ಟ್ರಗಳಿಗೆ ಎಚ್ಚರ ಉಂಟಾಯಿತು. ಯಾಕೆಂದರೆ ತಾನು ದುಳಿ ನಡೆಸುವುದಿಲ್ಲವೆಂದು ಸಹಿ ಹಾಕಿದ್ದ ಒಪ್ಪಂದಗಳನ್ನೇ ಆತ ಅತಿಕ್ರಮಿಸಿದ್ದ!

೧೯೩೯ರ ಸೆಪ್ಟೆಂಬರ್‌ನಲ್ಲಿ ಪೋಲೇಂಡಿನ ಮೇಲೆ ಹಿಟ್ಲರನ ಆಕ್ರಮಣ ನಡೆಯಿತು. ಆಂಗ್ಲರೂ, ಫ್ರೆಂಚರೂ ಹಿಟ್ಲರನು ಸೇನೆಗಳನ್ನು ಹಿಂದೆ ಕರೆಸಿಕೊಳ್ಳಬೇಕೆಂದು ಅವನನ್ನು ಕೇಳಿಕೊಂಡರು. ಆದರೆ ಅವನಿದನ್ನು ಕೇಳಲಿಲ್ಲ. ಹಾಗೆ ಸೆಪ್ಟೆಂಬರ್ ತಿಂಗಳಿಂದ ಮಹಾಯುದ್ಧಕ್ಕೆ ಮೊದಲಾಯಿತು. ರಷ್ಯನರನ್ನೂ ಮೋಸಗೊಳಿಸಲಿಕ್ಕೆ ಸಿದನು, ಹಿಟ್ಲರ್ ಆದರೆ ಸ್ಟೆಲಿನ್ ಜಾಣನಾಗಿದ್ದ, ಅನಾಕ್ರಮಣ ಒಪ್ಪಂದಕ್ಕೆ ಸಹಿ ಹಾಕಿದ್ದರೂ, ಪೋಲೇಂಡಿನ ಮೇಲೆ ಆಕ್ರಮಣ ನಡೆದಾಗ ಸ್ಟೆಲಿನ್ ತನ್ನ ಸೇನೆಯನ್ನು ಕಳುಹಿಸಿದ. ರಷ್ಯಕ್ಕೆ ಸಮೀಪವಾಗಿದ್ದ ಪೋಲೇಂಡಿನ ಪೂರ್ವ ಭಾಗವೊಂದನ್ನುಳಿದು, ವಿಶ್ವ ಪ್ರದೇಶವೆಲ್ಲ ಆಕ್ರಮಣಕ್ಕೊಳಗಾಯಿತು.

ಫ್ರಾನ್ಸ್ ಮೊದಲೇ ತನ್ನ ಭದ್ರತೆಗೆ ಆರಂಭಿಸಿತು. ಜರ್ಮನರು ೧೯೪೦ರ ಎಪ್ರಿಲ್‌ನಲ್ಲಿ ನೋರ್ವೇ ಮತ್ತು ಡೆನ್ಮಾರ್ಕನ್ನೂ, ಮೇ ತಿಂಗಳಲ್ಲಿ ಹೊಲ್ಲೇಂಡ್ ಮತ್ತು ಬೆಲ್ಜಿಯಂಗಳನ್ನೂ ಆಕ್ರಮಿಸಿದರು. ಬೆಲ್ಜಿಯನ್ ಸೇನೆ ವಿರೋಧಿಗಳ ಕೊಡೆತಗಳಿಗೆ ತತ್ತರಿಸಿ, ಶರಣಾಗತವಾಯಿತು. ಆಂಗ್ಲರು ಡನ್‌ಕರ್ಕ್ ಎಂಬಲ್ಲಿಗೆ ಹಿಂದೂಡಲ್ಪಟ್ಟರು. ಫ್ರೆಂಚ್ ಸೇನೆಯು ಹಿಟ್ಲರನ ಸೈನಿಕರೊಡನೆ ನಡೆದ ಕಾದಾಟದಲ್ಲಿ ನುಜ್ಜುಗುಜ್ಜಾಯಿತು. ಈ ವೇಳೆಯಲ್ಲಿ ಇಟಲಿಯ ಬೆನಿಟೋ ಮುಸ್ಸೊಲಿನಿಯೂ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್‌ಗಳ ಮೇಲೆ ಯುದ್ಧ ಸಾರುತ್ತ ಹಿಟ್ಲರನನ್ನು ಸೇರಿಕೊಂಡನು. ಫ್ರಾನ್ಸ್ ಜರ್ಮನಿಯ ಹಿಡತಕ್ಕೊಳಗಾಯಿತು.

(೧೨ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಶೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%

ಕರೆಂಟ್ ಎಕೌಂಟು 2%

The Moolky Bank, Ltd.

ಗಟ್ಟಿಗಾಗಿ ಸರಳ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರವರ ರಕ್ಷಣ್ಯಯಗಳು

ಟ್ರೇಡ್ ಮಾರ್ಕ್

ಪಂ|| A.R. ಅಯ್ಯಂಗಾರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7–4–0.

"ಮದನ ವಿಲಾಸ" ಗುಳಿಗೆಗಳು ಅಷ್ಟುಷ್ಟ ಶಮನವಾಗಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ದಂಪತಿಗಳಾಗಿ 16–18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟ್ಯಾಂಪು ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯಂಗರ್ ಸನ್ & ಕಂ.. (ನೆ. ಯು.)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I.)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುಟುಂಬ ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಟೈಪ್‌ರೈಟರ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ರಂಗಣ್ಣನ ಪ್ರವಾಸ

(೨ನೇ ಪುಟದಿಂದ)

ನಾವಣೆಯಲ್ಲಿ ಗುಪ್ತ ಮತದಾನ ಪದ್ಧತಿಯನ್ನು ಜಾರಿಗೆ ತರಲಾಗಿದೆ..." ಅಷ್ಟರಲ್ಲಿ ಬೋರ್ಡ್‌ಕಟ್ಟಿನ ಅರೆನಗ್ನ ತರುಣಿಯೋರ್ವಳು ಮಾರ್ಗದ ಮಧ್ಯದಲ್ಲಿ ನಿಂತು ಕೈ ತೋರಿಸಿ ಕಾರನ್ನು ನಿಲ್ಲಿಸಿದಳು ಇಂದ್ರನೂ ಅವಳೂ ಏನೇನೋ ಮಾತನಾಡಿಕೊಂಡರು. 'ಟೀಪಾರ್ಟಿಗೆ ಬರುತ್ತೆನೆ'ಂದು ಕೇಳಿ ಆ ತರುಣಿ ಹೋದಳು. ಕಾರು ಚಲಿಸಲಾರಂಭಿಸಿತು. "ನೋಡಿದಿರಲ್ಲಾ, ಅವಳೇ ನಮ್ಮ ರಂಭಾದೇವಿ. ಅದಿರಲಿ. ಅಂದ ಹಾಗೆ ನಾವೀಗ ಸರ್ವ ತಂತ್ರಸ್ವತಂತ್ರರು. ಅಂದು ರಾಕ್ಷಸರಿಂದಾಗಿ ನಮಗೆ ಪಾರತಂತ್ರ್ಯದಾಸ್ಯ ಬಂದಿತ್ತು. ಆದರೆ ಈಗ ನಮ್ಮ ಸ್ವರ್ಗ ಸ್ವತಂತ್ರವಾಗಿದೆ. ನಾನು ಅದರ ಸರ್ವಾಧಿಕಾರಿಯಾದರೂ ಸ್ಪೈಮ್ ಮಿನಿಸ್ಟರಾಗಿ ತಿಲೋತ್ತಮೆಯನ್ನು ಚುನಾಯಿಸಿದ್ದೇವೆ ಡೆಮೊಕ್ರೆಟಿಕ್ ನೋಡಿ! ನಮ್ಮ ಮಂತ್ರಿಮಂಡಲದೊಳಗೇ ಕೆಲವು ಮದುವೆಗಳು ಜರಗಿದುವು ಇತ್ತೀಚೆಗೆ, ನಮ್ಮಲ್ಲಿ ಐದಾರು ರಾಜಕೀಯ ಪಕ್ಷಗಳೂ ಇವೆ. ಈ ಸಲ ಅಮರಾವತಿಯ ಹತ್ತಿರದ ಸ್ಟೇಟಿನಲ್ಲಿ ಕೆಂಪು ಸರಕಾರವೆಂದೊಂದು ಅಧಿಕಾರಕ್ಕೆ ಬಂದಿದೆ. ಪೊಲಿಟಿಕಲ್ ಸ್ಟಂಟ್ ಇವೆಲ್ಲಾ! ವೈತರಣೀ ನದಿಯ ಈ ಕಡೆಯಲ್ಲಿರುವ ಏಲೆಂಡ್ ಸ್ವರ್ಗದವರಿಗೋ, ನರಕದವರಿಗೋ ಎಂದು ನಿರ್ಧಾರವಾಗದೆ ಅಲ್ಲೆಲ್ಲಾ ಕ್ರಾಂತಿಯುತ ಶಾಂತಿ ಸತ್ಯಾಗ್ರಹ ನಡದಿದೆ. ಕಾಲ ವಿಳಂಬವಿಲ್ಲದೆ ಜನರ ಜೀವನವನ್ನು ತೆಗೆಯಲು ಯಮಲೋಕದಲ್ಲಿ ಕೈಡೋಜನ್ ಬೋಂಬ್, ಫಯರ್ ಬೋಂಬ್ ತಯಾರಾಗುತ್ತಿದೆ ಈ ತಿಂಗಳಲ್ಲಿ, ನಾವೊಂದು ಉಪಗ್ರಹವನ್ನು ವೈಕುಂಠದೆಡೆಗೆ ಕೇಲಬಿಟ್ಟಿದ್ದೇವೆ. ಈಶ್ವರನನ್ನು ಕಪಟ ಸನ್ಯಾಸಿಯೆಂದು ತಿಳಿದು ಒಮ್ಮೆ ಅರಿಸ್ಟ್ ಮಾಡಿದರು. ಬ್ರಹ್ಮನ ಜಾಮೀನಿನ ಮೇಲೆ ಕಡೆಗೆ ಬಿಡಲಾಗಿದೆ. ನರಕದಲ್ಲಿ ಚಿತ್ರಗುಪ್ತ ರಾಜಿನಾಮೆ ಕೊಟ್ಟನಂತೆ, ಏನೋ ಲಂಚವಂದ ಅಯುಷ್ಯವನ್ನು ಹೆಚ್ಚಿಸಿದ ಕೇಸ್! ಹೆಚ್ಚೇನಿದೆ ರಂಗಣ್ಣ ಇನಿಷ್ಟು ವಿಶೇಷಗಳು ಉಳಿದುದೆಲ್ಲಾ ನಿಮ್ಮಂತೆಯೇ" ಎಂದನು ಇಂದ್ರ.

ರಂಭಾ ವಿಲಾಸ ರೆಸ್ಟೋರೆಂಟಿನೆದುರು ಕಾರು ನಿಂತಿತು. ಎಲ್ಲರೂ ಒಳಕೂಕ್ಕು ಕಾಫಿ ಸೇವಿಸಿ ಹೊರಬಂದರು.

"ಇಂದು ಸಂಜೆ ಆರು ಗಂಟೆಗೆ ನಮ್ಮ ಕ್ರಿಸ್‌ಮಸ್ ಹೋಲಿನಲ್ಲಿ ನನ್ನ ನೇತೃತ್ವದಲ್ಲಿ ಒಂದು ಟೀಪಾರ್ಟಿ ಬಳಿಕ ನೃತ್ಯ ಡಿನ್ನರ್ ಪಾರ್ಟಿಗಳ ಪ್ರೋಗ್ರಾಂ ಇದೆ. ಹೊಸ ಅರ್ಧ ಮಂತ್ರಿಯ ಅಧಿಕಾರ ಸ್ವೀಕಾರದ ಬಗ್ಗೆ. ಮಿ ರಂಗಣ್ಣ ಸ್ವರ್ಗಲಕ್ಷ್ಮೀ ಥಿಯೇಟರಿನಲ್ಲಿ ಒಳ್ಳೆಯ ಹಿಂದೀ ಫಿಲ್ಮ್ ಬಂದಿದೆ. ಮ್ಯಾಟಿನಿ ನೋಡಿ ಪಂಚ ಆರು ಗಂಟೆಗೆ ಕ್ರಿಸ್‌ಮಸ್ ಹೋಲ್ ಕಡೆಗೆ ಹೋಗೋಣ. ಅಂದ ಹಾಗೆ ನಾಳೆ ನಮ್ಮ ಮುಖ್ಯ ಮಂತ್ರಿ ತಿಲೋತ್ತಮೆಯ ಟೂರ್ ಇದೆ ನನಗೂ ಹೋಗಲಿದೆ. ಬಂದೇ ಬರುವಿರಲ್ಲಾ. ಹುಂ ಈಗ ಬನ್ನಿ ಹೋಗೋಣ" ಎಂದ ಏ| ಇಂದ್ರ.

ಕಾರ್ ಸ್ವರ್ಗ ಲಕ್ಷ್ಮೀ ಥಿಯೇಟರಿನ ಮುಂದೆ ನಿಂತಿತು. ಡ್ರೈವೋರ್ಸ್ ಅದ ಊರ್ವಸಿ ಅಲ್ಲಿದ್ದಳು. ಇಂದ್ರ ಮತ್ತು ಊರ್ವಸಿಯರು ಜತೆಯಲ್ಲಿ ರಂಗಣ್ಣನೊಂದಿಗ ಸ್ವರ್ಗ ಲಕ್ಷ್ಮೀ ಥಿಯೇಟರಿನಲ್ಲಿ ಸಿನೆಮಾ ನೋಡಿದರು.

ಸ್ವರ್ಗ ಲೋಕಕ್ಕೆ ಹೋದ ರಂಗಣ್ಣನಿಗೆ ನಮ್ಮೂರಿಗಿಂತ ಅಲ್ಲೇನೂ ವಿಶೇಷ ಕಾಣಲಿಲ್ಲ. ಅದೇ ನಮ್ಮ ಮುಂಬಯಿ, ಕಲ್ಕತ್ತಾಗಳ ಬೀದಿಗಳು, ಕಾರ್ಖಾನೆ, ರೈಲು, ಸಿನೇಮಾ, ಎಸೆಂಬ್ಲಿ—ಮಂತ್ರಿಗಳು, ವರ್ತಾಪತ್ರಿಕೆ—ಗಲಭೆ, ಉಂಟು ತಿಂಡಿ ಎಲ್ಲಾ. ಮುಂಬಯಿಯಂತೆಯೆ ಊರಿನಲ್ಲಿರುವ ಮಂತ್ರಿಯ ಅಳಿಯ ತನ್ನ ಮಾವನ ಮನೆಗೆ ಬಂದು ಹತ್ತು ದಿನ ಇದ್ದಂತಾಯಿತು ರಂಗಣ್ಣನಿಗೆ ಇಂದ್ರನೊಡನೆ ಹತ್ತು-ಹದಿನೈದು ದಿನದ ಜೀವನ.

ಒಂದು ದಿನ ರಂಗಣ್ಣ ತಾನಿನ್ನು ಭೂಲೋಕಕ್ಕೆ ಹೋಗುತ್ತೇನೆಂದು ಹಟ ಹಿಡಿದ. ಅಲ್ಲಿಯ ಅಪ್ಸರೆಯರು, ಇಂದ್ರ ಸಹಿತ ಎಲ್ಲರೂ ಗೌರವ ಸಮರ್ಪಣೆ ಮಾಡಿ ಬೀಳ್ಕೊಟ್ಟರು ವಿವಿಧ ಟೀಪಾರ್ಟಿ, ಸಮಾರಂಭಗಳಿಗಾಗಿ ಇನ್ನು ಏಳೆಂಟು ದಿನಗಳು ಬೇಕಾದುವು. ನಮ್ಮ ಸ್ವಭವ ಜೀವನವನ್ನು ನಿಮ್ಮಲೋಕದ ಅಜ್ಜರಿಗೆ ತಿಳಿಸಬೇಕೆಂದು ತನ್ನ ಬೀಳ್ಕೊಡುವ ಭಾಷಣದಲ್ಲಿ ಇಂದ್ರ ರಂಗಣ್ಣನೊಡನೆ ಕೇಳಿಕೊಂಡ "ನಡದು ಹೋಗಲು ಇಷ್ಟವಿಲ್ಲ ಏರೋಪ್ಲೇನ್ ಕಲುಹಿಸಿದಾಗಾತ್ತಿತ್ತು' ಎಂದುಕೊಂಡ ಮನಸ್ಸಿನಲೋ ರಂಗಣ್ಣ' ಅಷ್ಟರಲ್ಲಿ ಓರ್ವ ಇಂಜಿನಿಯರ್ ಬಳಿಗೆ ಬಂದು:

'ಹೇಗೆ ಹೋಗಲಿ? ಎಂದು ಯೋಚಿಸಬೇಡಿ. ನಾವು ಒಂದೆಡೆಯಿಂದಿನ್ನೊಂದೆಡೆಗೆ ಮುಟ್ಟುವಷ್ಟು ವಿಜ್ಞಾನ ಯುಗದಲ್ಲೂ ಮುಂದೆ ಹೋಗಿದ್ದೇವೆ ಕೆಲವೇ ವರುಷದಲ್ಲಿ ನೀವೂ ಈ ಸ್ಥಿತಿಗೆ ಮುಟ್ಟುವಿರಿ"ಅನ್ನುತ್ತಾ ರಂಗಣ್ಣನನ್ನೊಂದು ಸ್ಪಂಟಿಫಿಕ್ ಚೇರಿನಲ್ಲಿ ಕುಳ್ಳಿರಿಸಿದ ಕಣ್ಣು ಮುಚ್ಚಲು ಹೇಳಿ 'ನೋಡಿ, ಕಣ್ಣು ಬಿಡುವಷ್ಟರಲ್ಲಿ ನಿಮ್ಮ ಲೋಕದಲ್ಲಿ ನೀವಿರುತ್ತೀರಿ' ಎಂದು ಏನೋ ಒಂದು ಸ್ವಿಚ್ ನೆಡೆಗೆ ಕೈಹಾಕಿದ 'ಗುಡ್ ಬೈ, ಟಾಟಾ' ಇಂದ್ರನೂ ಅಪ್ಸರೆಯರೂ ದನಿಗೂಡಿಸಿದರು ರಂಗಣ್ಣ ಗುಡ್ ಬೈ ಹೇಳಿ ಕಣ್ಮುಚ್ಚಿದ ಇಂಜಿನಿಯರ್ ಸ್ವಿಚ್ಚನ್ನು "ಕ್ಲಿಕ್" ಎನ್ನಿಸಿದ ಸುರ್‌ಕ್ಕನೆ ಎಂದೊಂದು ತೀಕಲವಾದ ಗಾಳಿ ಬೀಸಿದಂತಾಯಿತು.

ರಂಗಣ್ಣ ಕಣ್ಣು ತೆರೆದ

ಸೂರ್ಯನುದಯಿಸಿ ಆಗಲೇ ಮೇಲೆ ಬಂದಿದ್ದ. ರಂಗಣ್ಣನ ತಾಯಿ ಕಾಫಿ ಕುಡಿಯಲು ರಂಗಣ್ಣನನ್ನು ಕರೆಯುತ್ತಿದ್ದರು ತನ್ನ ಕೊಟಡಿಯಲ್ಲಿಯೂ ಇದ್ದಂತೆಯೇ ಇತ್ತು ತಿತ್ತಿತ್ತ ನೋಡಿ ಹೌದು, ತನ್ನ ಮನೆಯಲ್ಲಿಯೇ ಇದ್ದೇನೆಂದು ಖಚಿತಪಡಿಸಿಕೊಂಡ ರಂಗಣ್ಣ.

ಭಾರತೀಯ ಸಂಸ್ಕೃತಿಯ ಪ್ರತೀಕ—

ಸಂಸ್ಕೃತ ಭಾಷೆಗೆ ಜನಮನ್ನಣೆ

ಶ್ರೀ ಎ. ಸುಬ್ರಾಯಾಚಾರ್ಯ, ವಿದ್ವಾನ್.

ಶ್ರೇಯಾನ್ ದ್ರವ್ಯಮಯಾತ್।
ಯಜ್ಞಾತ್ ಜ್ಞಾನಯಜ್ಞಃ ಪರಂತಪ
ಸರ್ವಂ ಕರ್ಮಾಖಿಲಂ ಪಾರ್ಥ।
ಜ್ಞಾನೇ ಪರಿಸಮಾಪ್ಯತೇ ॥

ನಮ್ಮ ಇದಿರು ಕಾಣುವ ಈ ಪ್ರಪಂಚದಿಂದ ಬೇರೆಯೇ ಆಗಿರುವ ಆತ್ಮತತ್ವದ ಕುರಿತು ಸಂಸ್ಕೃತ ವಾಙ್ಮಯ ನ್ಯಾಯ ಮಾಡಿದೆಯೆನ್ನು ಮತ್ತಾವುದೂ ಮಾಡಿಲ್ಲವೆಂಬುದು ಸರ್ವವಿದಿತ. ಭೌತಿಕ ಶಕ್ತಿಗಿಂತ ಆತ್ಮಿಕ ಶಕ್ತಿಗೆ ಬಲ ಹೆಚ್ಚು. ಅದರಿಂದಲೇ ಸುಖ ಶಾಂತಿ.

ಭೌತಿಕ ಅಣುವಿಜ್ಞಾನ ಅದ್ಭುತ ಕೃತಿಗಳನ್ನು ಮಾಡಿ ತೋರಿಸುತ್ತಿದೆ ಇಂದು. ಆದರೆ ಭೌತಿಕ ಅಣುಗಳಿಗಿಂತಲೂ ಅಣುವಾಗಿರುವ ಆತ್ಮನ ಶಕ್ತಿಯನ್ನು ಕಂಡು ಹಿಡಿದು ಅದರ ಪ್ರಕಾಶವನ್ನು ಜಗತ್ತಿನಲ್ಲಿ ಅದ್ಭುತವಾಗಿ ಬೆಳಗಿದ್ದಾರೆ ನಮ್ಮ ಹಿರಿಯರು ಅದುದರಿಂದಲೇ ವಿಶ್ವದ ಅನೇಕ ದೇಶಗಳ ಇತಿಹಾಸ ಏನೇನೂ ಗೋಚರಕ್ಕೆ ಬಾರದ ಕಾಲದಲ್ಲಿಯೂ ಭಾರತಭೂಮಿ ಅತ್ಯುಚ್ಚ ನಾಗರಿಕತೆಯ ನೆಲನಾಡೂ ಸುಖ ಶಾಂತಿಯ ಬೀಡೂ ಆಗಿತ್ತೆಂಬುದು ಅನುಭವಿಗಳಿಗೆ ತಿಳಿಯದ ಸಂಗತಿಯಲ್ಲ.

ಇಂದು ಈ ಆತ್ಮಿಕ ವ್ಯವಸಾಯ ಕಡಿಮೆಯಾಗಿದೆ. ಅದುದರಿಂದಲೇ ಭೌತಿಕದ ಜಡಶಕ್ತಿ ಆತ್ಮಿಕ ಶಕ್ತಿಯ ಅಂಕಃ ಸತ್ವವಿಲ್ಲದೇ ಜಗತ್ತಿಗೇ ಅಂಧಕಾರ ಕವಿಸುತ್ತಿದೆ ಮುಂದಾದರೂ ಶಾಂತಿಸಾಧಕರು ಆತ್ಮಶಕ್ತಿಯ ಬೆಳವಣಿಗೆಗೆ ಅವಕಾಶವನ್ನು ಕೊಡಲಿ. ಅದಕ್ಕೆ ಸಾಧಕವಾದ ಸಂಸ್ಕೃತ ಸಾಹಿತ್ಯ ಪ್ರಸಾರ ಹೊಂದಲಿ.

ನಾವು ನಮ್ಮ ಶಾಲೆಯಲ್ಲೂ ನಮ್ಮ ವಸಾರದಲ್ಲೂ ಅಪೇಕ್ಷೆಗಳಾಗಿ ಬರುವ ವಿದ್ಯಾರ್ಥಿಗಳಿಗೆ ಭಾಷಾಜ್ಞಾನವನ್ನೂ ತನ್ಮೂಲಕ ಸಂಸ್ಕೃತ ವಿದ್ಯಾಪ್ರಸಾರವನ್ನೂ ಮಾಡುವ ದೀಕ್ಷೆ ಹೊರಬೇಕು. ಎಲ್ಲರೂ ಈ ಕೃತಿಗೆ ನೆರವಾಗಬೇಕು. ಶಕ್ತರು ಇದೇ ರೀತಿಯ ಪ್ರಸಾರ ಕಾರ್ಯವನ್ನು ಕೈಕೊಂಡು ವಿಶ್ವಕ್ಕಾಗಿ ಕರ್ಮವನ್ನು ಮಾಡುವ ಆ ವಿಶ್ವ ಕರ್ಮನ ಆರಾಧನೆಯನ್ನು ವಿಶ್ವಶ್ರೇಯಕ್ಕಾಗಿರುವ ಆತ್ಮಜ್ಯೋತಿ ಕರ್ಮದ ಮೂಲಕ ಮಾಡುವುದು ಆಗತ್ಯವಿದೆ.

ಸರ್ವಾರ್ಥ ಸಾಧನವಾದ ದೈವ ಭಕ್ತಿ ಇಂದು ಲುಪ್ತವಾಗಿದೆ. ಆದ್ದರಿಂದಲೇ ಮಾನವನು ನಿರ್ಮಲ ಮನಸ್ಸು, ಶಾಶ್ವತ ಸುಖಶಾಂತಿ ಇವುಗಳಿಂದ ವಂಚಿತನಾಗಿದ್ದಾನೆ ನಮ್ಮ ಪೀಳಿಗೆ ಸುಶೀಲವೂ ಸುಖ ಶಾಂತಿ ಪೂರ್ಣವೂ ಸಶಕ್ತವೂ ಆಗಬೇಕೆಂಬ ಅಪೇಕ್ಷೆ ನಮಗಿರುವುದಾದರೆ, ಅದಕ್ಕೆ ಏಕೈಕ ಮಾರ್ಗವಾದ ಈ ಸಂಸ್ಕೃತ ಸಾಹಿತ್ಯದ ಅಭಿಮಾನವನ್ನು ನಮ್ಮ ಪೀಳಿಗೆಗೆ ಹುಟ್ಟಿಸೋಣ ಸಂಕ್ಷೇಪವನ್ನು ಪಡೆಯುವುದು ಅವರ ದೈಹಿಕ ಮಾನಸಿಕ ಬೆಳವಣಿಗೆಯನ್ನು ಸಾಧಿಸುವುದು ಹೇಗೆ ಮಾತಾಪಿತೃಗಳ ಹಿತ ಚಿಂತಕರ ಕರ್ತವ್ಯವೋ ಅದೇ ರೀತಿ ಮಕ್ಕಳು ಓಜಸ್ವಿಗಳೂ ಮಹಾಪುರುಷರೂ ಆಗುವಂತೆ ಯತ್ನಿಸುವುದೂ ಅವರ ಮುಖ್ಯ ಕರ್ತವ್ಯವೇ ಆಗಿದೆ. ನಮ್ಮ ಪೀಳಿಗೆ ಒಳ್ಳೆಯದಾಗಬೇಕೆಂಬ ಅಪೇಕ್ಷೆ ಇರುವುದಿದ್ದರೆ, ಜಗತ್ತಿನ ಸ್ವಾಸ್ಥ್ಯದಲ್ಲಿ ಪ್ರಗತಿಯಲ್ಲಿ ಅಭಿಮಾನವಿರುವವರಿದ್ದರೆ, ಹೊಟ್ಟೆಯ ಹಸಿವನ್ನು ಇಂಗಿಸುವುದಕ್ಕೆ ಯತ್ನಿಸುವಂತೆಯೇ ಈ ಸಂಸ್ಕೃತ ವಿದ್ಯಾ ಪ್ರಸಾರ ಕಾರ್ಯದಲ್ಲಿ ಪ್ರವರ್ತರಾಗಬೇಕು. ಈ ಸತ್ಕಾರ್ಯದಲ್ಲಿ ನಿರತೆಂದಾ ಉಡುಪಿ ಅಂಬಲಪಾಡಿಯ ಗೀತಾ ಭವನವು ಸ್ತುತ್ಯ ಕಾರ್ಯವನ್ನು ಮಾಡುತ್ತಿದೆ.

(ಗೀತಾಭವನದ ೫ನೆ ಪ್ರಮಾಣಪತ್ರ ವಿತರಣೋತ್ಸವದ ಸಂದರ್ಭದಲ್ಲಿ ಮಾಡಿದ ಭಾಷಣದ ಸಾರ)

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc No. 466 N/50 date 2-12-1950 of the Director of public Instruction, Madras.

ಅಡಾಲ್ಫ್ ಹಿಟ್ಲರನ ಪ್ರತಾಪ

(೧೦ನೇ ಪುಟದಿಂದ)

ಆಗಸ್ಟ್‌ನಲ್ಲಿ ಹಿಟ್ಲರನು ಬ್ರಿಟನಿನ ಮೇಲೆ ಯುದ್ಧ ಸಾರಿದನು ಜರ್ಮನ್ ಸೇನೆ ಬ್ರಿಟನಿನಲ್ಲಿ ನಿರಂತರವಾಗಿ ಎರಡು ತಿಂಗಳುಗಳ ತನಕ ಬಾಂಬುಗಳನ್ನೆಸೆಯಲಾರಂಭಿಸಿತು. ಆಗಲೇ ತಯಾರಾದ ಬ್ರಿಟಿಷ್ ವಿಮಾನಗಳು ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದುವು. ಇವುಗಳು ಸಂಖ್ಯೆಯಲ್ಲಿ ಜರ್ಮನಿಯ ವಿಮಾನಗಳಿಗಿಂತ ಕಡಿಮೆಯಿದ್ದರೂ, ಜರ್ಮನ್ ಬಾಂಬರ್ ವಿಮಾನಗಳಿಗಿಂತಲೂ ವೇಗವುಳ್ಳವುಗಳಾಗಿದ್ದುವು. ಇದರಿಂದಾಗಿ ಜರ್ಮನರಿಗೆ ತುಂಬಾ ನಷ್ಟವಾಗಿ ಅವರ ಸೋಲಿಗೆ ಕಾರಣವಾಯಿತು.

ಹಿಟ್ಲರನ ಯುದ್ಧ ಪಿಪಾಸೆ ಇನ್ನೂ ಅರಲಿಲ್ಲ. ಅದು ಇನ್ನೊಂದು ಹಾಡಿಯನ್ನು ಹಿಡಿಯಿತು. ಪೂರ್ವ ಯುರೋಪನ್ನು ತನ್ನ ಹಿಡಿತಕ್ಕೆ ತರಲೆತ್ನಿಸಿದನಾತ. ೧೯೪೧ರ ಮಾರ್ಚಿಯಲ್ಲಿ ಅವನ ಸೇನೆಗಳು ಗ್ರೀಸ್ ದೇಶವನ್ನು ಹಿಡಿದುಕೊಂಡುವು. ಒಪ್ಪಂದಕ್ಕೆ ವಿರುದ್ಧವಾಗಿ ಹಿಟ್ಲರ್ ೧೯೪೧ರ ಜೂನ್ ೨೨ರಂದು ರಷ್ಯಕ್ಕೆ ಮುತ್ತಿಗೆ ಹಾಕಿದನು. ಜರ್ಮನರು ರಷ್ಯದ ಪೂರ್ವ ಭಾಗವನ್ನು ಆಕ್ರಮಿಸಿಕೊಂಡು ಲೆನಿನ್ ಗ್ರಾಡನ್ನು ಮುತ್ತಿದರು. ಹಿಟ್ಲರನೇ ವಿಜಯಿಯಾಗುವನೋ ಎಂದೆನಿಸಹತ್ತಿತು. ಅಮೇರಿಕವು ಪ್ರತ್ಯಕ್ಷವಾಗಿ ಕದನ ಕಣಕ್ಕಿಳಿಯದಿದ್ದರೂ, ರಷ್ಯಕ್ಕೂ, ಬ್ರಿಟನಿಗೂ ಸಹಾಯ ಕೊಡುತ್ತಲಿತ್ತು.

ಜಪಾನ್ ಈಗ ಯುದ್ಧ ಪ್ರವೃತ್ತವಾಯಿತು. ೧೯೪೧ರ ದಶಂಬರ ೭ರಂದು, ಅಮೇರಿಕದ ನೌಕಾಬಲದ ಮೇಲೆ, ಪರ್ಲ್ ಹಾರ್ಬರ್‌ನ ಮೇಲೆ ಜಪಾನಿನ ಸೇನೆಗಳು ಪ್ರಬಲವಾದ ವಾಯುದಾಳಿಯನ್ನೇ ಗೈದುವು.

ಜರ್ಮನರು ರಷ್ಯದಲ್ಲಿ ಇನ್ನೂ ಮುಂದೊತ್ತಿ, ಬೆಲೆಬಾಳುವ ಎಣ್ಣೆ ಬಾವಿಗಳಿರುವ ಕಾಕಸಸ್ ಪ್ರದೇಶವನ್ನೂ ವಶಪಡಿಸಿಕೊಂಡರು ೧೯೪೨ರ ಚಳಿಗಾಲವಾಗಿತ್ತದು. ಮಿತ್ರರಾಷ್ಟ್ರಗಳ ನೆರವಿನಿಂದ ರಷ್ಯನರು ತಮ್ಮ ಮಾತೃಭೂಮಿಯನ್ನು ಸ್ವತಂತ್ರಗೊಳಿಸಲು ಸಿದ್ಧರಾದರು. ಮೂರು ಲಕ್ಷಕ್ಕೂ ಮಿಕ್ಕಿದ ಜರ್ಮನ್ ಸೈನಿಕರು ರಷ್ಯನರ ಹೊಡೆತದಿಂದ ತತ್ತರಿಸಿ, ಇಹವನ್ನು ತೊರೆದರು. ಕೆಲವರು ಸೆರೆಯಾಳುಗಳೂ ಆದರು. ರಷ್ಯನರೀಗ ವಿಜಯಪಥದಲ್ಲಿದ್ದರು. ಕೈಬಿಟ್ಟ ಭಾಗಗಳು ರಷ್ಯಕ್ಕೆ ಪುನಃ ದೊರಯಲಾರಂಭಿಸಿದುವು. ೧೯೪೫ನ ನವೆಂಬರದ ಹೊತ್ತಿಗೆ ಸಂಯುಕ್ತ ರಾಷ್ಟ್ರಗಳೊಂದುಗೂಡಿ ಜರ್ಮನಿಯನ್ನೆಣಗಿಸಲೆತ್ನಿಸಿ, ಅದರ ಹಿಡಿತಕ್ಕೊಳಗಾದ ಪ್ರದೇಶಗಳನ್ನು ಮರಳಿ ಗೆದ್ದು, ರ್‍ಹೈನ್ ನದಿಯ ತನಕ ಮುಂದುವರಿದರು.

ಮುಂದೊತ್ತುತ್ತ ಬಂದ ರಷ್ಯನ್ ಸೈನ್ಯವು ೧೯೪೫ರ ಎಪ್ರಿಲ್ ೨೪ರಂದು ಬರ್ಲಿನಿಗೆ ಮುತ್ತಿಗೆ ಹಾಕಿತು. ಹೀಗೆ ಪ್ರಬಲವೆನಿಸಿದ್ದ ಜರ್ಮನಿಯು ಸಂಯುಕ್ತ ರಾಷ್ಟ್ರಗಳಿಗೆ ಶರಣುಬಂತು. ೧೯೪೫ರ ಮೇ ೧೧ರಂದು ಜರ್ಮನಿಯ ಸರ್ವಾಧಿಕಾರಿಯಾದ ಎಡೊಲ್ಫ್ ಹಿಟ್ಲರ್ ತನ್ನ ಇಹಲೀಲೆಯ ಯಾತ್ರೆಯನ್ನು ಮುಗಿಸಿದನು. ಅವನ ಮರಣ ಆತ್ಮಹತ್ಯೆಯೆಂದು ಹಲವರು ಹೇಳುತ್ತಾರೆ. ಜಗತ್ತಿನ ಜನರ ದೃಷ್ಟಿಯಲ್ಲಿ ಹಿಟ್ಲರ್ ಕೆಟ್ಟವನಾಗಿ ಕಾಣಿಸಿಕೊಂಡರೂ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನ ಅಂಶದಾನವನ್ನಿತ್ತಿದ್ದಾನೆ, ಅವನು. ಇದಕ್ಕಾಗಿ ಭಾರತದ ಜನತೆ ಅವನಿಗೆ ಕೃತಜ್ಞವಾಗಿದೆ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

Britain, an Official hand book-Published by central Office of Information London. Copies are availabe for sale from the Manager, H. M. S. O. Sales Section, British information Services, India Palace H Block, Connaught circus, New Delhi-1. Pages-530. Price: Rs. 7-87 Net.

ಜಗತ್ತಿನ ಹಿರಿಯ ರಾಷ್ಟ್ರಗಳಲ್ಲಿ ಒಂದಾದ ಗ್ರೇಟ್ ಬ್ರಿಟನ್ನನ ಸಂಕ್ಷಿಪ್ತ ವಿವರಣೆಗಳನ್ನು ಈ ಪುಸ್ತಕದಲ್ಲಿ ಕಾಣಬಹುದು ಬ್ರಿಟಿಷ ದ್ವೀಪಗಳ ಭೌಗೋಲಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು, ಸರಕಾರ ಮತ್ತು ಆಡಳಿತ, ರಕ್ಷಣೆ, ರಾಷ್ಟ್ರೀಯ ಆರ್ಥಿಕಸ್ಥಿತಿ, ಉದ್ದಿಮೆಗಳು, ಸಾರಿಗೆ ಮತ್ತು ಸಂಪರ್ಕ, ಕಾರ್ಮಿಕ ವಿಭಾಗ, ಆರ್ಥಿಕ ಸ್ಥಿತಿ, ವ್ಯಾಪಾರ ಸಾಮಾಜಿಕ ಅಭಿವೃದ್ಧಿ, ಯೋಜನೆಗಳು ಮತ್ತು ವಸತಿ, ಧರ್ಮ, ವಿಜ್ಞಾನ, ಮತ್ತು ಕಲೆಗಳು, ಶಬ್ದ ದೂರ ದರ್ಶನ ಮತ್ತು ಅಕಾಶ ವಾಣಿ, ಪತ್ರಿಕೆಗಳು, ಮೊದಲಾದುವುಗಳ ವಿಷಯದಲ್ಲಿ ಈ ಪುಸ್ತಕದೊಳಗೆ ಸಾಕಷ್ಟು ಮಾಹಿತಿಗಳನ್ನು ಕೊಡಲಾಗಿದೆ ಸಾಮಾನ್ಯವಾಗಿ ಗ್ರೇಟ್ ಬ್ರಿಟನ್ನನ ಬಗ್ಗೆ ನಾವು ತಿಳಿದುಕೊಳ್ಳಬೇಕಾದ ಎಲ್ಲ ವಿಷಯಗಳೂ ಇಲ್ಲಿ ಅಡಕವಾಗಿರುವುದು ಗೋಚರವಾಗುತ್ತದೆ. ವಿಷಯ ನಿರೂಪಣೆಯು ಸರಳ ಶೈಲಿಯಲ್ಲಿರುವುದರಿಂದ, ಸಾಮಾನ್ಯ ಆಂಗ್ಲ ಭಾಷೆಯಲ್ಲವರಿಗೂ ಇದರಿಂದ ಉಪಯೋಗವಾಗಲಿದೆ ಎಂದು ಧೈರ್ಯದಿಂದ ಹೇಳಬಹುದು. ಈ ಪುಸ್ತಕದಲ್ಲಿ ಸುಮಾರು ೧೧೩ ರೇಖಾ ಚಿತ್ರಗಳೂ ೯೫ನಕ್ಷೆಗಳೂ ೩೩ ಚಿತ್ರಗಳೂ ಕೂಡಿಕೊಂಡಿರುವುದು ಪುಸ್ತಕದ ಅಂದ ಚಂದಗಳನ್ನು ಹೆಚ್ಚಿಸುತ್ತದೆ. ಉತ್ತಮವಾದ ಹಾಲು ಕಾಗದದಲ್ಲಿನ ಈ ಮುದ್ರಣವು ೧೯೫೮ನ ವರ್ಷಕ್ಕೆ ಸಂಬಂಧಿಸಿದ್ದು ಇದರಲ್ಲಿ ದೊರೆಯಬಹುದಾದ ಅಂಕೆಸಂಖ್ಯೆಗಳು ತೀರ ಇತ್ತೀಚೆಯವಾಗಿರುವುವು ಸಾಮಾನ್ಯವಾಗಿ ೧೯೫೭ನ ವರ್ಷದ ಸಿಪ್ಟಂಬರ್ ತಿಂಗಳ ಅಂತ್ಯದಲ್ಲಿ ಕೈಗೆ ಸಿಕ್ಕಿದ ಎಲ್ಲ ವಿವರಗಳನ್ನೂ ಇಲ್ಲಿ ಸಂಗ್ರಹಿಸಲಾಗಿದೆ. ಗ್ರೇಟ್ ಬ್ರಿಟನ್ನನ ಬಗ್ಗೆ ಸೂಕ್ಷ್ಮ ಪರಿಚಯವನ್ನು ಮಾಡಿಕೊಳ್ಳುವ ಇರಾದೆಯಿರುವವರಿಗೆ ಇದು ಅತ್ಯಂತ ಪ್ರಯೋಜನಕರವಾದ ಪುಸ್ತಕವಾಗಿ ಸಂಗ್ರಹಣೀಯವಾಗಿದೆ.

ಕುಟುಂಬ ಯೋಜನೆ—ಬರೆದವರು ಶ್ರೀ. ಕೆ. ಆರ್. ಉಡುಪಿ, ಎಂ ಎ ಬಿ ಟಿ ಪ್ರಕಾಶಕರು ಸಾಹಿತ್ಯ ಭಂಡಾರ, ಹುಬ್ಬಳ್ಳಿ ಪುಟಗಳು. ೩೪ ಬೆಲೆ ರೂ. ೦-೫೦.

ಭಾರತ ಸರಕಾರದ ವಿದ್ಯಾಖಾತೆಯವರೇ ಸರಡಿಸಿದ್ದ ಜನಸಂಖ್ಯೆಯ ಸಾಹಿತ್ಯಕ್ಕೆ ಪ್ರೋತ್ಸಾಹವೀಯುವ ೧೯೫೭ರ ಸ್ಪರ್ಧೆಯಲ್ಲಿ ಬಹುಮಾನ ದೊರೆತ ಕನ್ನಡ ಪುಸ್ತಕವಾದ ಶ್ರೀ ಉಡುಪರ "ಕುಟುಂಬ ಯೋಜನೆ" ಎಂಬ ಈ ಸಣ್ಣ ಪುಸ್ತಕವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ ಆರ್ಥಿಕ ಸ್ವಾತಂತ್ರ್ಯವನ್ನು ಭಾರತೀಯರು ಪಡೆಯುವುದಕ್ಕಾಗಿ ನಮ್ಮ ನಾಯಕರು ತಮ್ಮ ಬುದ್ಧಿಮತ್ತೆಯನ್ನು ವೆಚ್ಚಮಾಡಿ ಹಲವಾರು ಯೋಜನೆಗಳನ್ನು ರೂಪಿಸಿ ಅವನ್ನು ಕಾರ್ಯಗತಗೊಳಿಸುತ್ತಿದ್ದಾರೆ ಆದರೆ, ಮರಣ ಸಂಖ್ಯೆಯು ಇಳಿದು ಜನನ ಸಂಖ್ಯೆಯು ಹೆಚ್ಚುತ್ತ ಬರುವಾಗ, ಇಂತಹ ಯೋಜನೆಗಳ ಫಲವನ್ನುಣ್ಣುವ ಬಾಯಿಗಳು ಅಧಿಕವಾಗುವುದರಿಂದ ಯಾವ ಪ್ರಗತಿಯೂ ನಮಗೆ ತೋರುವುದು ಅಸಂಭವ. ಇದಕ್ಕೆ ಇರುವ ಒಂದೇ ಒಂದು ಉಪಾಯವೆಂದರೆ, ಭಾರತೀಯರು ತನ್ನ ಕುಟುಂಬದ ಜನಸಂಖ್ಯೆಯನ್ನು ತನ್ನ ಆರ್ಥಿಕ ಸ್ಥಿತಿಗತಿಗಳಿಗನುಸಾರವಾಗಿ ಇಟ್ಟುಕೊಳ್ಳುವುದೇ ಆಗಿದೆ. ವರ್ಷವೊಂದಕ್ಕೆ ೫ರ ಲಕ್ಷದಂತೆ ಏರುತ್ತ ಹೋಗುತ್ತಿರುವ ಜನರ ಬಾಯಿಗೇನನ್ನು ತುಂಬಿಸಬೇಕೆಂಬುದೇ ಒಂದು ಸಮಸ್ಯೆ ಇದಕ್ಕೆ ಕುಟುಂಬ ಯೋಜನೆಯೊಂದೇ ಬಲವಾದ ಉಪಾಯ. ಪ್ರಕೃತ ಪ್ರಕಟಿತ ಪುಸ್ತಕದಲ್ಲಿ ಈ ಸಂಬಂಧದ ವಿವರಣೆಯನ್ನು ಅಕ್ಷರಜ್ಞರಿಲ್ಲರಿಗೂ ಅರ್ಥವಾಗುವಂತೆ ಬರೆಯಲಾಗಿದೆ. ಅಲ್ಲಲ್ಲಿ ನಕ್ಷೆಚಿತ್ರಗಳೂ ಕೂಡಿದ್ದು ಎಲ್ಲರಿಗೂ ಉಪಯೋಗಕ್ಕೆ ಬರುವಂತಾಗಿದೆ ಕುಟುಂಬ ಯೋಜನೆಯನ್ನು ಕೈಗೊಳ್ಳಲು ಹಲವಾರು ವೈಜ್ಞಾನಿಕ ವಿಧಾನಗಳಿರುವುದಾದರೂ ಜನಸಾಮಾನ್ಯರಿಗೆ ಸುಲಭ ಮಾರ್ಗದಲ್ಲಿ ಅಚಿಂತೆಯಲ್ಲಿ ತರಲು ಅನುಕೂಲವಾದ ಮೂರು ಕ್ರಮಗಳನ್ನು ತಕ್ಕ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ ಪುಸ್ತಕದ ಮೊದಲನೆಯ ಬಾಗದಲ್ಲಿ ಕುಟುಂಬ ಯೋಜನೆಯ ಆವಶ್ಯಕತೆಗಳನ್ನು ಸಂಕ್ಷೇಪದಲ್ಲಿ ತಿಳಿಸಿದ್ದಾರೆ. ಹೀಗೆ ಇಂದಿನ ಕಾಲದಲ್ಲಿ ಅತ್ಯಂತಾವಶ್ಯಕವೆನಿಸಿದ ಈ ಪುಸ್ತಕವನ್ನು ಕನ್ನಡದಲ್ಲಿ ಬರೆದ ಶ್ರೀ ಉಡುಪರ ಸಾಹಸದ ಫಲವನ್ನು ಆವಶ್ಯಕತೆಯಿರುವವರು ಪಡೆದು, ತಮ್ಮನ್ನು ತಮ್ಮಾಲಕ ರಾಷ್ಟ್ರವನ್ನೂ ಅಭಿವೃದ್ಧಿಯ ಪಥದಲ್ಲಿ ಸಾಗಿಸಲು ಪ್ರಯತ್ನಿಸಬೇಕು ಹಾಗಾಗಿ, ಈ ಕೃತಿಯ ಸಂಪೂರ್ಣ ಪ್ರಯೋಗವನ್ನು ಕನ್ನಡಿಗ ಸಂಸಾರಿಗರು ಪಡೆದುಕೊಳ್ಳಬೇಕು

ದ ಕ. ಜಿಲ್ಲೆಯ ಮಾರ್ಕೆಟು ಸಮಿತಿಯ ವರದಿ—೧೯೫೬

ಮಂಗಳೂರಿನಲ್ಲಿ ಕೇಂದ್ರ ಕಾರ್ಯಾಲಯವಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಕೆಟು ಸಮಿತಿಯವರ ೧೯೫೬ನ ವರ್ಷಕ್ಕೆ ಸಂಬಂಧಿಸಿದ ಆಡಳಿತದ ವರದಿಯು ಸಮಿತಿಯ ಚಟುವಟಿಕೆಗಳನ್ನು ವಿವರಿಸುತ್ತದೆ. ಸಮಿತಿಯ ಆರ್ಥಿಕ ಸ್ಥಿತಿಗತಿಯ ಚಿತ್ರಣ, ವೇಟೆಯ ಧಾರಣೆಗಳ ವಿಮರ್ಶೆ, ಅಡಿಕೆ, ತೆಂಗುವಿನ ಸೈರುಗಳಿಗೆ ಸಂಬಂಧಿಸಿದ ಅಂಕೆ ಸಂಖ್ಯೆಗಳನ್ನು ಇಲ್ಲಿ ಕಾಣಬಹುದು. ಸಮಿತಿಯ ವರದಿಯು ಆಶಾಜನಕವಾಗಿ ಕಂಡು ಬರುತ್ತದೆ.

—ಗೋರಾ.

ರಾಣಿ ೨ನೆ ಎಲಿಜಬೆತರು ಇತ್ತೀಚೆಗೆ ತನ್ನ ಖಾಸಿಗಿ ಅಂಗರಕ್ಷಕ ದಳವನ್ನು ಬಕ್ಕಿಂಗಾಮ ಅರಮನೆಯಲ್ಲಿ ವೀಕ್ಷಿಸುತಿದ್ದಾರೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ|ಶ್ರೀ. ಕೊರಡ್ಕಲ್ಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಕ್ಕಳ ಮಗ್ಗಿಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ VOL. 37

8—5—1958

ಸಂಚಿಕೆ ೩೫ NO. 35

ವಿಶಾಲ ಭಾರತಕ್ಕೆ ಸಮರ್ಥ ನಾಯಕತ್ವ—

ನೆಹರೂ ಚಿರಕಾಲ ಉಳಿಯಬೇಕು

ನಾಲ್ಕು ವರ್ಷಗಳ ಹಿಂದೆ ಒಂದು ವಿಸ್ಮಯದಾಯಕವಾದ ಮತ್ತು ಭಾರತೀಯರನ್ನು ವಿವಂಚನೆಗೀಡುಮಾಡುವ ವಾರ್ತೆಯು ಹರಡಿತ್ತು ಮತ್ತದು ಅಂತೆಯೇ ಮಾಯವಾಯಿತು. ಇದೀಗ ಮನಃ ಅದೇ ರೀತಿಯ ವರ್ತಮಾನದ ಕರ್ಣೋಪಕಾವು ಹರಡಿ, ಹಾಗೆಯೇ ಓಡಿಹೋದ ಸುದ್ದಿಯು ಪ್ರಕಟವಾಗಿದೆ.

ಭಾರತದ ಮನೆಮನೆಗಳಲ್ಲಿ, ಭಾರತೀಯರ ಮನಮನದಲ್ಲಿ ಭಾರತದ ಪ್ರತ್ಯೇಕ ಕಾರ್ಯಕಲಾಪಗಳಲ್ಲಿ ಜನಪ್ರೀತ ಪ್ರಧಾನಿ ನೆಹರೂ ಚಿರಸ್ಮರಣೀಯರಾಗಿ ಉಳಿದಿದ್ದಾರೆ. ಭಾರತ ಮತ್ತು ನೆಹರೂಗಳೊಳಗಿನ ಸಂಬಂಧದ ಬೆಸುಗೆ ಕಳಚಲಾರದುದು. ಹಾಗಿದ್ದರೂ ತಮ್ಮ ದೈನಂದಿನ ಕಾರ್ಯಕ್ರಮಗಳಿಂದ, ಪ್ರಧಾನಿ ಪಟ್ಟದಿಂದ ದೂರವುಳಿಯುವ ಯೋಚನೆಯನ್ನವರು ಹಿಂದೊಮ್ಮೆ ಬಹಿರಂಗಗೊಳಿಸಿದ್ದರು. ಆದರೆ, ಆಗ ಅವರು ಪ್ರಧಾನಿ ಪಟ್ಟ, ಅಣು, ವಿದೇಶ ಮತ್ತು ಸಂರಕ್ಷಣಾ ಶಾಖೆಗಳುಂದಿಗೆ ಅಖಿಲ ಭಾರತೀಯ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನವನ್ನೂ ಇಟ್ಟುಕೊಂಡಿದ್ದರು. ಜನತೆಯ ವತ್ತಾಯವನ್ನು ಮೀರಲಾರದೆ, ಅಂದು ತಮ್ಮ ಕಾರ್ಯಭಾರವನ್ನು ಕಡಿಮೆಮಾಡಿಕೊಳ್ಳುವ ನಿರ್ಧಾರಕ್ಕೆ ಬಂದು ಪ್ರಧಾನಿಗಳಾಗಿಯೇ ತಮ್ಮ ದೇಶ ಸೇವೆಯನ್ನು ಮುಂದುವರಿಸಿದರು. ಇಂದು ನೆಹರೂರವರ ತಲೆಯ ಮೇಲೆ ಹಿಂದಿನಷ್ಟು ಹೊರೆ ಬಿದ್ದಿಲ್ಲ. ಕಾಂಗ್ರೆಸ್‌ನ ಅಧ್ಯಕ್ಷಸ್ಥಾನ ಮತ್ತು ಸಂರಕ್ಷಣಾ ಖಾತೆಗಳನ್ನು ಯೋಗ್ಯ ಪ್ರತಿಭಾಶಾಲಿ ವ್ಯಕ್ತಿಗಳ ಕೈಗೊಪ್ಪಿಸಿ ತಾನು ಕೇವಲ ಅಣು ಮತ್ತು ವಿದೇಶ ಶಾಖೆಗಳನ್ನು ನೋಡಿಕೊಂಡು, ಪ್ರಧಾನಿತ್ವದ ಹೊಣೆಗಾರಿಕೆಯನ್ನು ನಿರ್ವಹಿಸುತಿದ್ದಾರೆ. ಪ್ರಾಯಶಃ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನಿರಂತರವಾಗಿ ಪಂಡಿತ ನೆಹರೂರವರಷ್ಟು ಏಕ ಪದವಿಯಲ್ಲಿದ್ದ ನಾಯಕರನ್ನು ಕಾಣಲಾರೆವು. ಭಾರತವು ಉಳಿದೆಡೆಗಳಲ್ಲಿ ವಿಶ್ವಮಾರ್ಗ ದರ್ಶನ ಮಾಡಿರುವಂತೆಯೇ ವಿಶ್ವದಾಖಲೆಯನ್ನುಂಟು ಮಾಡಿರುವಂತೆಯೇ ಈ ವಿಷಯದಲ್ಲಿ ಇಂತಹ ಜನಪ್ರಿಯ ನಾಯಕನಿರುವನೆಂಬುದನ್ನು ತೋರಿಸಿ ಕೊಟ್ಟಿದೆ.

ತಾನು ಕೆಲಸಮಯದ ವರೆಗೆ ಪ್ರಧಾನಿತ್ವದಿಂದ, ಸರಕಾರೀ ವಲಯದಿಂದ ದೂರವಿದ್ದು ಮೂರನೆಯ ವ್ಯಕ್ತಿಯಾಗಿ, ದೇಶದ ಕುಂದುಕೊರತೆಗಳನ್ನು ಕಂಡುಕೊರಡು, ಅವನ್ನು ಸರಿಗೊಳಿಸುವುದಕ್ಕೆ ಮನಃ ಇದಕ್ಕಿಂತ ಹೆಚ್ಚಿನಉತ್ಸಾಹ ಮತ್ತು ಶಕ್ತಿಗಳಿಂದ ದುಡಿಯುವ ಸಲುವಾಗಿ ಅಲ್ಪಕಾಲದ ವಿರಾಮವನ್ನು ಬಯಸುತ್ತಿರುವುದಾಗಿ ಶ್ರೀ ನೆಹರೂ ವ್ಯಕ್ತಪಡಿಸಿದರು. ಇಂತಹ ಬಯಕೆ ಅಹೋರಾತ್ರಿ ಎಡೆಬಿಡದೆ ದೇಶದೇಳಿಗೆಗಾಗಿಯೇ ದುಡಿಯುವ ಮಹಾ ವಿಭೂತಿಗಳಿಗೆ ಅಗತ್ಯವೇ ಎಂದು ಹೇಳಬಹುದು. ಸ್ವತಃ ಪಂಡಿತ ನೆಹರೂರವರೇ ಹೇಳಿರುವಂತೆ, ತನ್ನ ಮುಂದಿರುವ ನೂರಾರು ಸಮಸ್ಯೆಗಳನ್ನು ಬಗೆಹರಿಸದೆ ಹೊರತು ಅವರಿಗೆ ವಿಶ್ರಾಂತಿಯಿಲ್ಲ ಎಂಬುದಂತೂ ಒಪ್ಪಲೇ ಬೇಕಾದ ಮಾತು. ಇಂದು ಭಾರತದ, ಭಾರತೀಯರ, ಭಾರತೀಯ ಗೌರವದ ಮತ್ತು ಉನ್ನತಿಯ ಬಗ್ಗೆ ಸತರ್ಕನಾಗಿ ಚಿಂತಿಸುವ ವ್ಯಕ್ತಿಗಳು, ಪಂಡಿತ ನೆಹರೂರವರನ್ನು ಬಿಟ್ಟರೆ, ದೊರೆಯುವುದು ಬೆರಳಿಣಿಕೆಯಷ್ಟು ಮಾತ್ರ. ಭಾರತದ ಒಳಗಡೆ ಹಾಗೂ ಹೊರಗಡೆ ವಿಷರೂಪೀ ಸರ್ಪಗಳು ತಾಂಡವಾಡುತ್ತಿರುವಾಗ, ಜಾತೀಯತೆ, ಅನೈಕ್ಯಗಳು ತಲೆದೋರುತ್ತಿರುವಾಗ, ಅವುಗಳೊಡನೆ ಹೊಡೆದಾಡಿ ಜಯಿಸುವ ಕೆಚ್ಚೆದೆಯ ಭಾರತೀಯನೆಂದರೆ ಪಂಡಿತ ನೆಹೂ ಎಂತಲೇ ನೆಹರೂ ಎಂದರೆ ಭಾರತ, ಭಾರತವೆಂದರೆ ನೆಹರೂ ಎಂಬ ಸ್ಥಿತಿ ನಮಗಿಂದೊದಗಿದೆ

ಆದರೆ, ನೆಹರೂರವರೆಂತೆ ನಿಷ್ಪಕ್ಷಪಾತ ದೃಷ್ಟಿಯಿಂದ, ಇಂದಿನ ಅಡಳಿತೆಯ ಕುಂದ ಕೊರತೆಗಳನ್ನು ತಿಳಿದು ಅವನ್ನು ಸರಿಪಡಿಸಿ, ಭಾರತದ ಮೇಲ್ಮೆಯನ್ನು ಸಾಧಿಸಬೇಕಾಗಿದೆ ಕಣ್ಣಿನ ಹುಳುಕು ತನಗೆ ಕಾಣದಿರುವಾಗ, ಬೇರೊಬ್ಬನದನ್ನು ತೋರಿಸಿದರೆ, ಸಂಬುಗೆ ಹುಟ್ಟದಿರುವುದರಿಂದ, ನಾವು ಕನ್ನಡಿಯ ಮುಂದೆ ಶರಣುಬರುತ್ತೇವೆ. ಅಂತೆಯೇ ಸ್ವಲ್ಪ ಸಮಯ ನೆಹರೂ ಹೊರನಿಂತು, ತಪ್ಪುಗಳನ್ನು ನೆಪ್ಪಗೆಗಳಿಸಲು ತಕ್ಕ ಸಲಹೆ ಸೂಚನೆಗಳನ್ನುಕೊಡುವುದೂ ನ್ಯಾಯೋಚಿತವೇ ಆದರೆ, ನೆಹರೂ ಎಂದರೆ ಜೀವ ಬಿಡುವುದಕ್ಕೂ ಸಿದ್ಧರಿರುವ ಜನತೆ ಅವರನ್ನು ಒಂದುಗಳಿಗೆಯಾದರೂ ಹೊರ ಹೋಗಲು ಬಿಡುವುದಿಲ್ಲ ಆದುದರಿಂದಲೇ ಒಂದು ವಿಷದ ಬಲವಂತದಿಂದಲೇ ಶ್ರೀ ನೆಹರೂರವರನ್ನು ಕಾಂಗ್ರೆಸಿಗರು ಕಟ್ಟಿಹಾಕಿದೆ ವಾರ್ತೆ ತಲಪಿ, ನೆಹರೂ ನಿವೃತ್ತಿ ಸದ್ಯಕ್ಕಿಲ್ಲ ಎಂದು ಸಮಾಧಾನದ ನಿಟ್ಟುಸುರು ಬಿಡುವಂತಾಗಿದೆ. ನೆಹರೂರವರಿಗೆ ತಮ್ಮ ಕಾರ್ಯಭಾರದಿಂದ ದಣಿವುಂಟಾಗುತ್ತದೆ ನುಮಾರು ಒರ ಮುಮಕನ್ನಾಗತ್ತ ಬಂದ ನೆಹರೂ ಸತ್ಯ, ಅಹಿಂಸೆಯ ಜೀವಂತ ಮೂರ್ತಿಯಾಗಿ ಜನಮನದ ನೆಚ್ಚಿನ ಪ್ರಧಾನಿಯಾಗಿ ಮೇ ಉಳಿದು ದೇಶಕ್ಕೂ ವಿದೇಶಗಳಿಗೂ ಮಾರ್ಗದರ್ಶನ ಮಾಡಬೇಕು, ಬರಕ ಪೂ ಉಳಿದ ಪ್ರಗತಿಪರ ರಾಷ್ಟ್ರಗಳೆದುರು ಊರ್ಧ್ವ ಶಿರಸ್ಸಿನಿಂದ ನಿಲ್ಲಬೇಕು- ಇದಕ್ಕೆ ನೆಹರೂ ಅಗತ್ಯವಾಗಿ ಇನ್ನೂ ಬಹಳಷ್ಟು ಕಾಲ ಪ್ರಧಾನಿಯಾಗುಳಿಯಬೇಕು ಎಂಬ ಬಯಕೆ ಅನೇಕರಲ್ಲಿದೆ. ಆದರೆ, ನೆಹರೂ ತನ್ನ ನಂತರ ತನ್ನ ಸ್ಥಾನಕ್ಕೊಬ್ಬನನ್ನು ಸಿದ್ಧಪಡಿಸುವ ಸಲುವಾಗಿ ಹೊರಬರಬೇಕೆನ್ನುವದೂ ಇದ್ದಾರೆ. ಆದರೆ, ಈ ಮಾತು ಕೇವಲ ಉನ್ಮತ್ತಾವಸ್ಥೆಯಲ್ಲಿ ಬರುವಂತಹುದು. ಭಾರತ ಮಾತೆಯ ಅನಂತ ಪುತ್ರರಲ್ಲಿ ಯಾರಾದರೊಬ್ಬರು ಆ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವರು, ಕಾಲಬಂಜೆಯಾಗುಳಿಯಲಾರದು ಎಂಬ ದೃಢ ವಿಶ್ವಾಸ ಶ್ರೀ ನೆಹರೂಗಳದು. ಆದರೆ, ಈ ವಿಶ್ವಾಸದ ಮೇಲೆ ಪೂರ್ಣ ವಿಶ್ವಾಸವಿಟ್ಟು ಮುಂದಿನ ಭವಿಷ್ಯದ ಬಗ್ಗೆ ಚಿಂತಿಸದೆ ಕೈಕಟ್ಟಿ ಕೂರುವುದು ಮಾತ್ರ ಶ್ರೇಯಸ್ಕರವೆನ್ನಬರುವಂತಿಲ್ಲ. ಅಂತಹ ನಾಯಕನನ್ನು ನಾವು ಆರಿಸಿಕೊಳ್ಳಬೇಕು, ಅಷ್ಟೆ.

ಪಂಡಿತ ನೆಹರೂರವರ ಉಪಯೋಗವನ್ನು ಸದ್ಯ ನಾವು ಆದಷ್ಟು ಕಡಿಮೆಮಾಡಿಕೊಳ್ಳಬೇಕು, ಹಾಗಾದರೆ ಮಾತ್ರ, ನೆಹರೂ ನಮಗೆ ಬಹುಕಾಲ ಉಳಿದಾರು ಇದಕ್ಕಾಗಿ ಅವರ ದಣಿವನ್ನು, ಕಾರ್ಯಬಾರವನ್ನು ಕಡಿಮೆಗೊಳಿಸಬೇಕು ಅವರಟ್ಟುಕೊಂಡ ಬಾತೆಗಳ ಜವಾಬ್ದಾರಿಯನ್ನು ಪ್ರಧಾನತ್ವದ ಹೊಣೆಗಾರಿಕೆಯ ಭಾರವನ್ನು ಇಳಿಸಿ ಬೇರೆಯವರು ಹೊತ್ತುಕೊಳ್ಳಬೇಕು. ಆಗ, ನೆಹರೂರವರಿಗೂ ದೇಶದ ಬಗ್ಗೆ ಸುದೀರ್ಘವಾಗಿ ಯೋಚಿಸಲು, ಚಿಂತಿಸಲು, ಕಾರ್ಯಕ್ರಮಗಳನ್ನು ರೂಪಿಸಲ್ಪಾಕಷ್ಟು ಕಾಲಾವಕಾಶವು ದೊರೆಯುವುದು; ನೆಹರೂರವರ ನಾಯಕತ್ವ ನಮಗೆ ಬಹುಕಾಲ ಲಭಿಸುವುದು. ಇದಕ್ಕಾಗಿಯೇ ಪಂಡಿತ ಗೋವಿಂದ ವಲ್ಲಭ ಪಂಡಿತರನ್ನು ಉಪಪ್ರಧಾನಿಯವರನ್ನಾಗಿ ಆರಿಸಲಾಗುವುದೆಂಬ ಊಹೆಯಿತ್ತು. ಆದರೆ, ಅದೇನೂ ಹೀಗಾಗಲಿಲ್ಲ ಅವರು ಉಪನಾಯಕರಾಗಿ ಮಾತ್ರ ಆರಿಸಲ್ಪಟ್ಟರು. ಆದರೂ ಒಂದು ಆತಾಜನಕವಾದ ವಾರ್ತೆ ತಲುಪಿದೆ ಕಾಂಗ್ರೆಸ್ ಅಧ್ಯಕ್ಷರು, ಪಕ್ಷದ ಕೆಲವು ಸದಸ್ಯರು ಹಾಗೂ ದೇಶದ ಜನರು ತಪ್ಪುದಾರಿ ಹಿಡಿದಿರುವರೆಂಬ ಭಾವನೆಯಿಂದ ಶ್ರೀ ನೆಹರೂರವರು ನಿವೃತ್ತಿಯ ಸೂಚನೆಯನ್ನಿಟ್ಟಿರುವರೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಹಿಡಿದಿರುವ ವಕ್ರ ಮಾರ್ಗವನ್ನು ಬಿಟ್ಟು ಸರಿದಾರಿಗೆ ಬರಲು ಪ್ರಯತ್ನಿಸಬೇಕೆಂದು ವಿನಂತಿಸಿದರು. ಹಾಗೆಯೇ ಗೃಹಮಂತ್ರಿ ಪಂತರು, ನಮ್ಮೆಲ್ಲರ ಲೋಪದೋಷಗಳಿಂದ ಅವರ ಮನಸ್ಸಿನಷ್ಟು ನೊಂದಿದೆಯೆನ್ನುವುದನ್ನು ನೀವೀಗ ಕೇಳಿದ್ದೀರಿ, ಆದುದರಿಂದ ಅವರ ಮನಸ್ಸಿಗೆ ಸದಾ ಉಲ್ಲಾಸವನ್ನುಂಟುಮಾಡುವಂತಹ ರೀತಿಯಲ್ಲಿ ನಾವು ನಮ್ಮ ಕೆಲಸಗಳನ್ನು

(ಇನೂ ಮುಂದೆ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಸ್ವರ್ಣ ಪಂಜರದಲ್ಲಿ ಗಿಳಿ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ.

ಸ್ವರ್ಣ ಪಂಜರದಲ್ಲಿ
ಕೋಗಿಲೆಯು ತಂದಿರಿಸಿ
ನವರತುನಗಳ ನಿಡಲು
ಸವಿಯಬಹುದೆ?
ಮಾಮರದೊಳುಲಿದಂತೆ
ಹಾಡಬಹುದೆ?

ಉದಯ ಗಿರಿಯ ನೆತ್ತಿಯಿಂದ ನೇಸರ ಕಿರಣಗಳು ಹರಿದು ಬರಲಾರಂಭಿಸಿದಂತೆ, ಕಾಡುಮಾಡುಗಳ ಮೇಲೆ ಮುಸುಕಿದ ಮಂಜು ಕರಗಿ, ಹಚ್ಚ ಹಸುರಾದ ಮರ ಗಿಡಗಳು, ಹೊಲ ತೋಟಗಳು ಕಂಗೊಳಿಸಲಾರಂಭಿಸಿದುವು.

ಅಲ್ಲೊಂದು ಹಳ್ಳಿ; ಪೃಷ್ಟಿ ಸೌಂದರ್ಯದ ನೆಲೆವೀಡಾದ, ಚೆಲುವಾದ ಹಳ್ಳಿ. ಅನತಿ ದೂರದಲ್ಲಿ ಕಾಡುಗುಡ್ಡಗಳ, ಹುಲ್ಲು ಹಾಸುಗಳು. ಮಧ್ಯದಲ್ಲಿ ವಿಶಾಲವಾದ ಹಳ್ಳಿಯು, ಭೂದೇವಿಗಿರಿಸಿದ ಫಲ ಪುಷ್ಪಗಳಿಂದ ತುಂಬಿದ ಹೊಂಬಟ್ಟೆಯಂತೆ ಶೋಭಿಸುತಿತ್ತು.

ಕಾನನದಲ್ಲಿ ಎಲೆವನೆಗಳಿರುವಂತೆ, ಹಳ್ಳಿಯಲ್ಲಿ ಅಲ್ಲಲ್ಲಿ ಅಂದವಾದ ಗುಡಿಸಲುಗಳು ಕಾಣ ಬರುತ್ತಿದ್ದುವು. "ಮಧುರ ಶಾಂತಿಯ ಬೀಡುಹಳ್ಳಿ ಗುಡಿಸಲಿನ ಮುಂದೆ ಅರಮನೆಯ ಸಂಪತ್ತು ರೊಟ್ಟಿ ಚೂರಿನ ಎದುರು ಚಿನ್ನದ ದ್ರಾಕ್ಷೆಗಳಿದ್ದಂತೆ!"

ಒಂದೆಡೆಯಲ್ಲಿ ಬಳುಕಿ, ಬಳುಕಿ ಮುಂದರಿದ ಸುವ್ಯವಸ್ಥಿತವಾದ ನಿರ್ಮಲವಾದ ಹಳ್ಳಿಯ ದಾರಿಯು ಕಾಣಿಸುತಿತ್ತು, ಹಳ್ಳಿಗೆ ಬರಲು, ಹಳ್ಳಿಯಿಂದ ಹೋಗಲು ಅದೊಂದೇ ದಾರಿ. ದಾರಿಯಿಂದ ಸ್ವಲ್ಪವೇ ದೂರದಲ್ಲಿ ಒಂದು ಅಚ್ಚುಕಟ್ಟಾದ ಹುಲ್ಲಿನ ಮನೆ. ಮನೆಯ ಮುಂದೊಂದು ಚಿಕ್ಕ ಹೂದೋಟ. ಹತ್ತಿರವೇ ಒಂದು ತಿಳಿನೀರಿನ ಕೊಳ. ಕೊಳದ ಒಂದು ಅಂಚಿನಲ್ಲಿ ಒಂದು ಸಂಪಿಗೆಯ ಮರ. ಸ್ವಲ್ಪ ದೂರದಲ್ಲಿ ವಿಶಾಲವಾಗಿ ಬೆಳೆದು ನಿಂತಿರುವ ಒಂದು ರೆಂಜೆಯ ಮರ. ರೆಂಜೆಯ ಮರದ ಬುಡದಲ್ಲಿ ಪುಟ್ಟದೊಂದು ತಿಳಿನೀರಿನ ತೊರೆ. ಅಕ್ಕಪಕ್ಕದಲ್ಲಿ ಹಾಸಿದಂತೆ, ಉರುಳಿಸಿ ಬಿಟ್ಟಂತೆ ತೋರುವ ಕಲ್ಲು ಬಂಡೆಗಳು. ಒಂದೆಡೆಯಲ್ಲಿ ಕಂಗು ಬಾಳೆಗಳಿಂದ ಸೊಗಯಿಸುವ ಚಿಕ್ಕದೊಂದು ತೋಟ.

ಆ ಹುಲ್ಲಿನ ಮನೆಯೇ ಶ್ಯಾಮಲೆಯ ಮನೆ. ಹೌದು! ಶ್ಯಾಮಲೆಯ ಮನೆ. ಏಕೆಂದರೆ ಇಡೀ ಹಳ್ಳಿಯಲ್ಲಿ ಶ್ಯಾಮಲೆಯು ಎಲ್ಲರಿಗೂ ಪರಿಚಿತಳು; ಪ್ರಸಿದ್ಧಳು. ಅವಳ ಹೆಸರು ಎಲ್ಲರಿಗೂ ಗೊತ್ತು. ಅವಳ ಕೋಕಿಲ ಕಂಠದ ಸುಮಧುರ ಸಂಗೀತವನ್ನು ಸವಿಯದವರು ಆ ಹಳ್ಳಿಯಲ್ಲಿ ಯಾರೂ ಇರಲಿಲ್ಲ. ಅವಳ ಕೊರಳ ಮಂಜುಳನಿನಾದಕ್ಕೆ ಪಕ್ಷಿಗಳೂ ಮೈಮರೆತು ಕಿವಿಗೊಡುವುವು. ದನಕರುಗಳು ತಮ್ಮ ಕೆಲಸವನ್ನು ಬಿಟ್ಟು ಆಲಿಸುವುವು.

ಅವಳ ತಂದೆ-ತಾಯಿಗಳು ವೃದ್ಧರು. ಉಂಡುಡುವುದಕ್ಕೆ ಅವರಿಗೆ ಕೊರತೆಯಿರಲಿಲ್ಲ. ಚಿಕ್ಕ ತೋಟವಿದೆ; ಹೊಲವಿದೆ. ಚೆಲುವು, ಶಾಂತಿಗಳಿಂದ ಕೂಡಿದ ಪರಿಸರವಿದೆ. ಒಬ್ಬಳೇ ಮಗಳು ಶ್ಯಾಮಲಾ. ಅಧ್ಯಾತ್ಮಿಕ ಜೀವನ ಅವಳ ತಂದೆ-ತಾಯಿಗಳದು. ಉಚ್ಚಮಟ್ಟದ ಬ್ರಾಹ್ಮಣ ಕುಟುಂಬವೆನಿಸಿಕೊಂಡು, ಹಳ್ಳಿಗರಿಗೆ ಸದಾಚಾರ, ಸುವಿಚಾರಗಳ ದರ್ಶನ ಮಾಡಿಸುತ್ತಾ, ಏಕ ರೀತಿಯ ಶಾಂತಿಸಂತಸದ ಜೀವನವನ್ನವರು ನಾಗಿಸುತ್ತಿದ್ದರು.

ಅಂದು ಹಳ್ಳಿ ಸಿಂಗಾರವಾಗಿತ್ತು. ಹಳ್ಳಿಯ ದಾರಿಯು ತಳಿರು ತೋರಣಗಳಿಂದ ರಂಜಿಸುತಿತ್ತು. ಗುಡಿಸಲುಗಳೆಲ್ಲವೂ ಶೃಂಗರಿಸಲ್ಪಟ್ಟಿದ್ದುವು ಅಲ್ಲಿ ಇಲ್ಲಿ ವಾದ್ಯ ಧ್ವನಿಗಳು, ಗೆಜ್ಜೆಯನಾದಗಳು ಕೇಳಿ ಬರುತ್ತಿದ್ದುವು. ಸುಗಂಧ ವಸ್ತುಗಳ ಕುವಾಸನೆಯು ಗಾಳಿಯಲ್ಲಿ ಹರಡಿತ್ತು. ಜನರೆಲ್ಲರೂ ಹರ್ಷಭರಿತರಾಗಿದ್ದರು. ಬಣ್ಣ ಬಣ್ಣದ ಹೊಸ ಹೊಸ ಉಡುಪುಗಳನ್ನು ಧರಿಸಿ ಒಡನೆತೊಡವೆಗಳನ್ನು ತೊಟ್ಟು ಓಡಾಡುತ್ತಿದ್ದರು.

ಅಂದು ಆ ರಾಜ್ಯದ ಅರಸನಾಗಮಿಸುವನೆಂದು ಹಳ್ಳಿಯಲ್ಲಿ ಈ ಸಂಭ್ರಮ ಆನೆಯ ಮೇಲೆ ಗಂಭೀರವಾಗಿ ಕುಳಿತು ತಮ್ಮ ಹಳ್ಳಿಯನ್ನು ಪ್ರವೇಶಿಸುವ ತಮ್ಮ ಮಹಾರಾಜನನ್ನು ನೋಡಬೇಕೆಂದು ಹಳ್ಳಿಗರು ಕುತೂಹಲಚಿತ್ತದಿಂದ, ಸ್ಫೂರ್ತಿಯುತರಾಗಿ ಸರ್ವಸನ್ನಾಹಗಳನ್ನು ಮಾಡುತ್ತಲಿದ್ದರು.

ಅರಸನು ದಯಾಳು, ಪ್ರಜಾನುರಾಗಿ, ದೇಶ ಸೇವಾಕಾಂಕ್ಷಿ; ಜನರ ಮೇಲೆ ಪ್ರೀತಿಯುಳ್ಳವನು. ಈ ಹಿಂದೆ ನಾಡಿನ ವೈಭವವನ್ನು ಮೆರೆಸಿ, ಶೋಭೆಯೇರಿಸಿದವನು. ಆದುದರಿಂದ ಜನರಿಗೆ ಅವನ ಮೇಲೆ ಅಪೂರ್ವವಾದ ರಾಜಭಕ್ತಿ. ಅದೂ ಅಲ್ಲದೆ ಅರಸನು ಒಂದು ದಿನ ತಮ್ಮೂರಿನಲ್ಲಿ ಬೀಡು ಬಿಟ್ಟು, ತಮ್ಮ ಸುಖ ದುಃಖಗಳನ್ನು ವಿಚಾರಿಸಿಯೇ ಮುಂದರಿಯಲಿರುವನೆಂಬುದನ್ನು ಕೇಳಿ, ಹಳ್ಳಿಗರಿಗೆ ಅಮಿತವಾದ ಹೊಟ್ಟೆಯಲ್ಲಿ ಹಿಡಿಸದ ಆನಂದೋತ್ಸಾಹಗಳು. ಇಷ್ಟು ತಾಳ್ಮೆಯಿಂದ, ಆಸ್ಥೆಯಿಂದ, ಪ್ರಜೆಗಳ ಮೇಲೆ ಪ್ರೀತಿಯಿರಿಸಿ, ತನ್ನ ರಾಜ್ಯದ ಹಳ್ಳಿ ಮೂಲೆಗಳಲ್ಲಿ ಕೂಡ ಸಂಚರಿಸಿ ಬರುವರು. ಆದರದಿಂದ ತಮ್ಮನ್ನು ನೋಡುವ ಅರಸನ ಮೇಲೆ ಹಳ್ಳಿಗರಿಗೆ ಎಷ್ಟೋ ಪ್ರೇಮ.

ಸೂರ್ಯನ ಹೊಂಗಿರಣಗಳನ್ನೂ ಬಿಸಿಯೇರಲಾರಂಭಿಸಿರಲಿಲ್ಲ. ದೂರದಲ್ಲಿ ಅರಸನ ಸರಿವಾರೆ ಸಹಿತವಾದ ಮೆರವಣಿಗೆಯ ಸಂದಣಿಯು ಕಾಣಿಸಿತು. ಮೆರವಣಿಗೆಯಲ್ಲಿ ಕೂಡಿಕೊಂಡಿರುವ ಸೈನಿಕ, ಸೇವಕ, ಜನಸಮೂಹದ ಚಿತ್ರ ವಿಚಿತ್ರ ವಿಧವಿಧದ ವರ್ಣರಂಜಿತ ವೇಷ ಭೂಷಣಗಳು. ದೂರದಲ್ಲಿ ಸ್ವಾಗತಕ್ಕೆ ಸಿದ್ಧರಾಗಿ ನಿಂತ ಹಳ್ಳಿಗರಿಗೆ ಕಾಣಿಸಿದುವು ಪ್ರೇಮ ಭಯ-ಭಕ್ತಿಗಳಿಂದ ಎದುರ್ನೋಡುತ್ತಿರುವ ಹಳ್ಳಿಗರೆದುರಿಗೆ ಶುಭ ಧ್ವನಿಗಳಿಂದೊಡಗೂಡಿ ಪಟ್ಟದಾನೆಯ ಮೇಲೆ ಗಂಭೀರನಾಗಿ ಕುಳಿತ ಸುದೃಢ, ಸುಪುಷ್ಟ, ಸುಲಕ್ಷಣನಾದ ರಾಜ್ಯಾಧೀಶ್ವರನು ಗೋಚರಿಸಿದನು. ಐವತ್ತು ದಾಟಿದ ತಮ್ಮರಸನ ಹುರುಪೂ, ತುಂಬುಗೆಲವಿನ ಮುಗುಳ್ನಗುವಿನ ರೀತಿಯೂ ಜನರನ್ನು ಮತ್ತಷ್ಟು ಹರ್ಷಗೊಳಿಸಿದುವು ಹಳ್ಳಿಗರು ತಮ್ಮ ಭಕ್ತ್ಯಾನುಸಾರ ವಂದನೆ ಗೈದರು.

ವಿಧವಿಧದ, ಸಭೆ, ಸಂಗೀತ, ನರ್ತನಗಳಿಂದೊಡಗೂಡಿದ ವಿನೋದ ಕೂಟಗಳು ಜರಗಿದುವು. ರಾಜನ ಆಗಮನದ ಉತ್ಸವವನ್ನು ಹಳ್ಳಿಗರು ವಿಜೃಂಭಣೆಯಿಂದ ನೆರವೇರಿಸಿದರು. ಉತ್ಸಾಹದ ಚಟುವಟಿಕೆಯಲ್ಲಿ ಹಗಲು ಕಳೆದು ಬೈಗು ಸವಿಯಿಸಿತು. ಅರಸನಿಗಾಗಿ ನಿರ್ಮಿಸಿದ ಭವ್ಯ ಭವನವೊಂದಕ್ಕೆ ಆತ ವಿಶ್ರಾಂತಿಗಾಗಿ ತೆರಳಿದ.

oo oo oo

ಮಧ್ಯರಾತ್ರಿ ಶೃಂಗಾರ ಸೌಧದಲ್ಲಿ ಮೃದುತಲ್ಪದಲ್ಲಿ ಮಲಗಿದ ಅರಸನಿಗೆಚ್ಚರವಾಯಿತು. ಹೊರಗೆ ನೋಡಿದಾಗ ಹಾಲಿನಂತೆ ಶುಭ್ರವಾದ ಬೆಳದಿಂಗಳು ಹರಡಿತ್ತು. ಮೆಲ್ಲಮೆಲ್ಲನೆ ತೀಡುವ ತಂಗಾಳಿ. ಅದೇನು?.....ಅದರೊಡನೆ ಎಲ್ಲೋ ದೂರದಿಂದ ಅಲೆಯಲೆಯಾಗಿ ಮಂಜುಳ ಗಾನವೊಂದು ಕೇಳಿ ಬರುತಿತ್ತು. ಅರಸನ ಕಿವಿ ಮಾತ್ರವಲ್ಲ, ಹೃದಯವೂ ಅಲಿಸಿತು. ಅದರ ಮಾಧುರ್ಯಕ್ಕೆ ಅರಸನ ದೇಹ ಪುಲಕದಿಂದ ಕಂಪಿಸಿತು. ಅಂದಿನ ವರೆಗೆ ಅಂತಹ ಸ್ವರ್ಗೀಯ ಗಾನವನ್ನು ಆತ ಕೇಳಿರಲಿಲ್ಲ. ಮಧುರ ವೀಣಾ ಗಾನತರಂಗ ತರಂಗ! ಅಲ್ಲಲ್ಲ, ಯಾರೋ ಅದಕ್ಕಿಂತಲೂ ಇನಿಯನಿದಾಗಿ, ಮಂಜುಳವಾಗಿ ಕೋಗಿಲೆಯಂತೆ ಮಧುರ ಕಂಠದ ಕೋಮಲೆ ಹಾಡುತ್ತಿದ್ದಳು!

ಇನಿಗೊರಳಿನ ಹೃದಯಂಗಮಹಾಡಿನ ಧ್ವನಿಯ ನೋಡಿಗೆ ಸುವರ್ಣ ಸೌಧದಲ್ಲಿ ಜೀವಿಸುವ ರಾಜ್ಯಾಧೀಶ್ವರ ಮಾರು ಹೋದ! ಮರುಳಾದ! ಅವನ ಹೃದಯದಲ್ಲಿ ಕುಸುಮವು ಕಚಗುಳಿಯಿಟ್ಟಂತೆ ಭಾಸವಾಯಿತು! ಚರ ಅಚರ ವಸ್ತುಗಳೆಲ್ಲವೂ ಯಾವುದೋ ಅಗೋಚರ ಮಾಯೆಗೆ ಒಳಗಾಗಿ ಆಲಿಸುತ್ತಿರುವಂತೆ ಅರಸನಿಗೆ ಕಾಣಿಸಿತು! ಅವನ ಮೈಮನಗಳೆಲ್ಲವೂ ಆ ಹಾಡಿನ ಧ್ವನಿಯಲ್ಲಿ ತನ್ಮಯವಾದುವು. ಅವನ ಹೃದಯವನ್ನು ಚುಂಬಿಸಿದ ಆ ಚುಂಬಕ ಗಾನ ಅವನನ್ನು ತನ್ನತ್ತ ಸೆಳೆಯಿತು!

ಒಂದೊಂದೇ ಮೆಟ್ಟಲನ್ನು ಇಳಿದು ತನಗರಿಯದಂತೆಯೇ ಅರಸ ಸಾಗಿ ಹೋದ. ಪುಂಗಿಯ ನಾದಕ್ಕೆ ಮರುಳಾಗುವ ಹಾವಿನಂತೆ ದಾರಿಯಾವುದೆಂದರಸದೆ ಆನೆಯ ಮೇಲೆ ಸಂಚರಿಸುವ ಅರಸ ಕಲ್ಲು ಮುಳ್ಳಿನ ಮೇಲೆ ತೇಲಿಹೋಗುವಂತೆ ಸಾಗಿದ! ಅವ್ಯಕ್ತವಾದ ಶಕ್ತಿಯೊಂದು ಆ ಹೆಂಗೊರಳು ಹೊಂಗಳಲಂತೆ ನುಡಿಯುವೆಡೆಗೆ ಅರಿಜ್ಞೋಂಪಿನಲ್ಲಿ ಕೊಂಡೊಯ್ಯುತಿತ್ತು.

ರೆಂಜೆಯ ಮರದಡಿಯಲ್ಲಿ ತಿಳಿನೀರ ತೊರೆಯ ತಡಿಯಲ್ಲಿ ಬಂಡೆಯ ಮೇಲೆ ಕುಳಿತು ಶ್ಯಾಮಲಾ ಹಾಡುತ್ತಿದ್ದಳು. ತನ್ನನ್ನೇ ಮರೆತು ಹಾಡುತ್ತಿದ್ದಳು. ಇದು ಅವಳ ನಿತ್ಯಾಭ್ಯಾಸ! ಅವಳಿಗಾಗಿ ಹಾಡಲ್ಲ ಹಾಡಿಗಾಗಿ ಅವಳು ಹುಟ್ಟಿದ್ದಳೋ ಏನೋ! ಅವಳಾಗಿ ಹಾಡುವಳೋ ತಾನಾಗಿ ಹಾಡು ಹುಟ್ಟಿ ಹರಿಯುವುದೋ ಯಾರು ಬಲ್ಲರು? ಆ ರಾತ್ರಿಯಲ್ಲಿಯೂ ಹಾಗೆ ಬಂದು ಕುಳಿತು ಹಾಡುವಂತೆ ಅವಳಿಗೇನೋ ಆತ್ಮಾನಂದದ ಅವ್ಯಕ್ತ ಪ್ರಚೋದನೆ ದೊರೆಯುತಿತ್ತು.

ಅರಸ ಬಂದು ಕೊಳದ ದಂಡೆಯ ಸಂಪಿಗೆಯ ಮರದ ಮರೆಯಲ್ಲಿ ಒರಗಿ ನಿಂತ. ದೇವ ಲೋಕದಿಂದಿಳಿದ ದೇವ ಕನ್ನಿಕೆಯಂತೆ ದೇವ ಗಾಯಕಿಯಾಗಿ ಶ್ಯಾಮಲಾ ಕಂಗೊಳಿಸಿದಳು. ಅರಸನ

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಧೈರ್ಯವು ಬಹಿಷ್ಕೃತ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತವೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಆತ್ಮಶಕ್ತಿ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು, ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಕ್ರಿಮಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I.)

PHONE 203 ESTD 1926

FOUNDATION STONE
Engraved MARBLE TABLETS
(GOLD FILLED & LEAD FILLED)

Crown RUBBER STAMP CO.
BALMATTA ROAD, MANGALORE.

ಇವರಿಗಾಗುವಾಗ ಚಿಕ್ಕಾಸುಳಿದಿಲ್ಲ!

ಸರಕಾರ ಶಿಕ್ಷಕರನ್ನು ಕಡೆಗಣಿಸಿದೆ!

ಶಿಕ್ಷಣ ಮತ್ತು ಶಿಕ್ಷಕರ ನಡುವೆ ಆಳವಾದ ಸಂಬಂಧವಿದೆ. ಶಿಕ್ಷಕರು ಮಾತ್ರವೇ ವಿದ್ಯಾರ್ಥಿಗಳಿಗೆ ಶಿಕ್ಷಣವೀಯುತ್ತಾರೆ ಹೊರತು ಬೇರಾರಿಂದಲೂ ಹೀಗೆ ಮಾಡುವುದು ಸಾಧ್ಯವಿರುವುದಿಲ್ಲ. ಆದರೆ, ಇವರ ವಿಚಾರ ಮಾತ್ರ ಬಹಳ ದಯನೀಯವಾಗಿದೆ. ಅವರ ಪ್ರಶಿಕ್ಷಣ ಹಿಂದಿನ ಕಾಲದ್ದಾಗಿದೆ. ಅದನ್ನು ಬದಲಾಯಿಸಬೇಕು; ಅವರಲ್ಲಿ ನೂತನ ವಿಚಾರಗಳ ಸಮಾವೇಶಗೊಳ್ಳುವಂತಾಗಬೇಕು. ಭಾರತದಲ್ಲಿ ಶಿಕ್ಷಣವೊಂದು ಕಳೆದುಹೋದ ವಿಷಯವೆಂದು ತಿಳಿಯಲಾಗುತ್ತದೆ. ಆದರೆ, ಅನ್ಯದೇಶಗಳಲ್ಲಿ ಇಂತಹ ಮಾತುಗಳೇಳುವುದಿಲ್ಲ. ಕುಂಬಾರನು ಮಣ್ಣಿನಿಂದ ಅನ್ಯ ಪ್ರಕಾರದ ಉಪಯೋಗೀ ವಸ್ತುಗಳನ್ನು ತಯಾರಿಸಿ ಮತ್ತುಳಿದ ಮಣ್ಣಿನಿಂದ ದೀಪಕಗಳನ್ನು ಮಾಡುವಂತೆ ಬ್ರಿಟಿಷ ಸರಕಾರದ ಶಿಕ್ಷಣ ವಿಷಯದ ಪರಿಸ್ಥಿತಿಯಿದೆ. ನಮ್ಮ ರಾಷ್ಟ್ರೀಯ ಸರಕಾರವು ಇಂದಿಗೂ ಅದೇ ಧಾರಾಯಲ್ಲಿ ಮುನ್ನಡೆಯುತ್ತಿದೆ. ಸರಕಾರವು ತನ್ನ ಮುಂಗಡ ಪತ್ರದಲ್ಲಿ ಅಧಿಕಾಧಿಕ ಧನ ರಾಶಿಯನ್ನು ಅನ್ಯ ವಿಭಾಗಗಳಿಗೆ ಬರ್ಚು ಮಾಡಲು ನಿರ್ಧರಿಸುತ್ತದೆ; ಮತ್ತು ಉಳಿದ ಶೇಷಾಂಶವನ್ನು ಮಾತ್ರ ಶಿಕ್ಷಣ ಖಾತೆಗೆ ವ್ಯಯ ಮಾಡಲು ನಿಶ್ಚಯಿಸುತ್ತದೆ ಸರಕಾರವು ಶಿಕ್ಷಣದ ವಿಷಯದಲ್ಲಿ ಇಷ್ಟೊಂದು ಉದಾಸೀನತೆಯನ್ನು ವ್ಯಕ್ತಪಡಿಸುತ್ತಿರುವಾಗ ಅದರ ರಕ್ಷಣೆಯನ್ನಾದರೂ ಭಗವಂತನೇ ಮಾಡಬೇಕು.

ಪ್ರಾಯಃ ಶಿಕ್ಷಣದ ಸ್ಥಾನವು ದೇಶದಲ್ಲಿ ಯಾವುದೆಂದು ಸರಕಾರನಿನ್ನೂ ತಿಳಿದಂತೆ ಕಾಣುವುದಿಲ್ಲ ಪ್ರಾಚೀನ ಕಾಲದಲ್ಲಿ ಈ ದೇಶದಲ್ಲಿ ಶಿಕ್ಷಣಕ್ಕೆ ಪ್ರಮುಖ ಸ್ಥಾನವಿತ್ತು. ಶಿಕ್ಷಣಕ್ಷೇತ್ರದಲ್ಲಿ ಅಧಿಕ ವೆಚ್ಚವಾಗುತಿತ್ತು, ನಳಂದ, ತಕ್ಷಶಿಲೆ, ವಿಕ್ರಮಶಿಲೆಗಳ ವಿಶ್ವವಿದ್ಯಾಲಯಗಳೇ ಇದಕ್ಕೆ ಜ್ವಲಂತ ಉದಾಹರಣೆಗಳಾಗಿವೆ. ಆ ಸಮಯ ದೇಶವು ಎಷ್ಟೊಂದು ಸಬಲ ಮತ್ತು ಉನ್ನತಿಶೀಲವಾಗಿತ್ತು! ಆ ವೇಳೆಯಲ್ಲಿ ದೇಶದಲ್ಲಿ ಶಿಕ್ಷಣ ಮತ್ತು ಶಿಕ್ಷಕರಿಗೆ ಅಗ್ರಗಣ್ಯ ಸ್ಥಾನವಿತ್ತು. ಇದರಿಂದಾಗಿಯೇ ವಿದೇಶೀಯರು ಇಲ್ಲಿನ ಶಿಕ್ಷಣವನ್ನು ಪಡೆಯುವುದಕ್ಕಾಗಿ ಅಪೇಕ್ಷಿತರಾಗಿ ಇಲ್ಲಿ ಇರುತಿದ್ದರು ಮತ್ತು ಇಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದು ತಮ್ಮನ್ನು ಮತ್ತು ತಮ್ಮ ದೇಶವನ್ನು ಧನ್ಯರೆಂದು ತಿಳಿಯುತಿದ್ದರು.

ಇಂದು ನಮ್ಮ ದೇಶದ ಪರಿಸ್ಥಿತಿ ತೀರ ವಿಪರ್ಯಾಸ ಹೊಂದಿದೆ ನಮ್ಮ ಸರಕಾರ ತನ್ನ ವಿದ್ಯಾರ್ಥಿಗಳನ್ನು ವಿದೇಶೀಯ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಿಸುವಂತೆ ಮಾಡಿ ತಾನು ಧನ್ಯವೆಂದು ತಿಳಿಯುತ್ತದೆ ಅಥವಾ ಹಾಗೆ ಕಳಿಸುವುದರಿಂದ ತನ್ನ ಕರ್ತವ್ಯ ಇತಿಶ್ರೀ ಯಾಯಿತೆಂದು ಬಗೆಯುತ್ತದೆ ಅದು ತನ್ನಲ್ಲಿಯ ಶಿಕ್ಷಣ ಮಟ್ಟವನ್ನು ಎತ್ತರಿಸಲು ಬಯಸುವುದಿಲ್ಲ ಈ ರೀತಿಯಲ್ಲಿ ನಾವು ಉಚ್ಚ ಶಿಕ್ಷಣವನ್ನು ಪಡೆಯಲು ಎದುರವರೆಗೆ ಪರರ ಮುಖ ನೋಡುತ್ತ ಕೂರಬೇಕು? ವಿಜ್ಞಾನದಲ್ಲಿ ಉಚ್ಚ ಶಿಕ್ಷಣ ಪಡೆಯಲು ಬಾಹ್ಯ ದೇಶಗಳಿಗೆ ಹೋಗುವುದು ಅವಶ್ಯವಿರಬಹುದು; ಆದರ, ಇಲ್ಲಿಯ ಜನರು ಹಿಂದಿ ಮತ್ತು ಸಂಸ್ಕೃತಗಳ ಅಭ್ಯಾಸವನ್ನೂ ಪರದೇಶಗಳಲ್ಲಿಯೇ ಮಾಡುತ್ತಾರೆ.

ಶಿಕ್ಷಣವು ದೇಶದ ತಾಯಿಬೇರು; ಅದರ ಆಧಾರಶಿಲೆ ಹಾಗೂ ಮೇರುದಂಡ. ಒಂದು ದೇಶದ ಶಿಕ್ಷಣವು ಉತ್ತಮ ರೀತಿಯಲ್ಲಿದ್ದರೆ, ಅಲ್ಲಿನ ಮೂಲವೂ ಉತ್ತಮವಿರುತ್ತದೆ ಭಾವೀ ನಾಗರಿಕರು ತಯಾರಾಗುವ ಕಾರಖಾನೆಗಳೆಂದರೆ, ಶಿಕ್ಷಣಾಲಯಗಳು ಅವುಗಳ ಅವಸ್ಥೆಯು ದೀನ ಹೀನ ಮತ್ತು ಅಸ್ತವ್ಯಸ್ತವಾಗಿದೆ. ಅಲ್ಲಿ ವ್ಯವಸ್ಥೆಯ ಸ್ಥಾನದಲ್ಲಿ ಅವ್ಯವಸ್ಥೆಯೇ ಮನೆಮಾಡಿದೆ ಆ ಶಿಕ್ಷಣಾಲಯಗಳಲ್ಲಿ ಪ್ರಗತಿಯ ಚಿಹ್ನೆಗಳು ದೃಷ್ಟಿಗೋಚರವಾಗುವುದಿಲ್ಲ ರಾಜ್ಯಸರಕಾರಗಳ ಧನರಾಶಿಯ ಬಲದಿಂದ ವಿದೇಶೀ ವಿಶ್ವವಿದ್ಯಾಲಯಗಳ ಪಡೆದವರ ದೃಷ್ಟಿಕೋಣವೇ ಬದಲಾಗುತ್ತದೆ ಅವರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಮೋಹವು ಉದ್ಭವಿಸುತ್ತದೆ ಆದರೆ, ಅವರು ಒಂದು ಮೂರ್ಖತೆಯಿಂದ ತಪ್ಪಿ ಮತ್ತೊಂದಕ್ಕೆ ಕಸಿಯುತ್ತಾರೆ. ಅವರು ಕೇವಲ ತಮ್ಮ ಉನ್ನತಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಯೋಚಿಸುವ ಅಭ್ಯಾಸವುಳ್ಳವರಾಗುತ್ತಾರೆ, ಇವರ ದುಷ್ಪರಿಣಾಮವನ್ನು ಅನ್ಯ ಜನರೂ ಭೋಗಿಸಬೇಕಾಗಿ ಬರುತ್ತದೆ ಅವರು ಜನತೆಯನ್ನು ಅಂದಕಾರದಿಂದ ಪ್ರಕಾಶದತ್ತ ಕರೆದೊಯ್ಯುವುದೇ ತಮ್ಮ ಕರ್ತವ್ಯವೆಂಬ ಸುಖಕ್ಕೆ ವಿಷಯವನ್ನು ತಿಳಿಯುವುದಿಲ್ಲ

ಇಂದು ನಮ್ಮ ದೇಶದಲ್ಲಿ ಯಾವ ಸ್ಥಿತಿ ಇದೆ ಎಂದು ದೃಷ್ಟಿಸುವ. ಶಿಕ್ಷಣ ವಿಭಾಗದ ಕರ್ಮಗಳಲ್ಲಿ ಯಾವುದೇ ಆಕರ್ಷಣೆ ಅಥವಾ ನಾವೀನ್ಯವಿರುವುದಿಲ್ಲ ಈ ಭಾಗದಲ್ಲಿ ಕೆಲಸಮಾಡುತ್ತಿರುವವರಿಗೆ-ಸ್ವತಃ ಉಪಾಧ್ಯಾಯರಿಗೆ ಸಹ, ಸುಯೋಗ್ಯ ಮತ್ತು ದಕ್ಷ ವ್ಯಕ್ತಿಗಳನ್ನು ಈ ವಿಭಾಗವು ತನ್ನೆಡೆಗೆ ಆಕರ್ಷಿಸಲು ಸಾಧ್ಯವಾಗುವಂತಹ ಹೀನ ಮಟ್ಟದ ವೇತನವನ್ನು ಕೊಡುತ್ತದೆ ಬೇರೆ ವಿಭಾಗಗಳಲ್ಲಿ ತಲೆ ಹಾಕಲು ಅಸಾಧ್ಯರಾದ ವ್ಯಕ್ತಿಗಳೇ ಹೆಚ್ಚಾಗಿ ಈ ವಿಭಾಗದಲ್ಲಿರುತ್ತಾರೆ. ಉತ್ತಮ ವರ್ಗದ ಜನರು ಈ ಕ್ಷೇತ್ರಕ್ಕೆ ಕಾಲಿರಿಸುವುದಿಲ್ಲ. ಕೆಲವೊಂದು ಉತ್ತಮ ವ್ಯಕ್ತಿಗಳು ಅಪ್ಪಿತಪ್ಪಿ ಬರುವುದುಂಟು. ಆದರೆ, ಅವರು ರಾತ್ರಿ ಹಗಲು ಈ ಕ್ಷೇತ್ರದಿಂದ ದೂರವಿರಲು ಬಯಸುತ್ತಾರೆ. ಈ ವಿಭಾಗದಲ್ಲಿಯೇ ಉಳಿದವರೂ ತಮ್ಮ ಸ್ಥಿತಿಗತಿಗಳ ಕುರಿತಾಗಿಯೇ ಚಿಂತಿಸುತ್ತಿರುತ್ತಾರೆ ಹೀಗಾಗಿ ಈ ಕ್ಷೇತ್ರದಲ್ಲಿ ಸುಯೋಗ್ಯ ಮತ್ತು ದಕ್ಷ ವ್ಯಕ್ತಿಗಳಿರುವುದು ಅಪರೂಪವಾಗಿ ಕಂಡುಬರುತ್ತದೆ. ವೇತನವು ಕಡಿಮೆಯಾಗಿರುವುದರೊಂದಿಗೆ ಭವಿಷ್ಯವು ಉನ್ನತವಾಗಿಲ್ಲದಿರುವುದರಿಂದ, ಇವರ ಕಾರ್ಯಾಕ್ಷಮತೆಯು ಹ್ರಾಸಗೊಳ್ಳುತ್ತ ಬರುವುದು ನಮ್ಮಲ್ಲಿ ಶಿಕ್ಷಣಕ್ಷೇತ್ರವು ಕುಸಿಯುತ್ತ ಬರಲು ಇದೇ ಕಾರಣ ಈ ಕ್ಷೇತ್ರದಲ್ಲಿ ಪಾರಂಗತರಾದವರ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತ ಹೋಗುತ್ತದೆ ಅವರಿಗೆ ಹೊಟ್ಟೆಕುಂಬ ಆಹಾರ ದೊರೆಯುವುದೂ ದುಷ್ಕರವಾಗಿ ಪರಿಣಮಿಸುತ್ತದೆ ಅವರು ಅಹೋರಾತ್ರಿ ತಮ್ಮ ಉದರಾಗ್ನಿಯನ್ನು ಶಾಂತಗೊಳಿಸಲು ಉರುಳಾಡುತ್ತಾರೆ. ಅವರ ಮೆದುಳು ಅಶಾಂತಿಯ ಗೂಢಾಗಾರವಾಗಿರುತ್ತದೆ. ಅವರಿಗೆ ತಮ್ಮ ಭವಿಷ್ಯದ ಕುರಿತು ಚಿಂತಿಸುವ ಸಮಯವಿಲ್ಲ, ದೇಶ ಮತ್ತು ಸಮಾಜಗಳ ಉನ್ನತಿಯ ವಿಶಯದಲ್ಲೂ ಆಸಕ್ತಿಯಿಲ್ಲ. ತಮ್ಮ ಉದರ ಪೂರ್ತಿಗಾಗಿ ಅವರಿಗೆ ಶಿಕ್ಷಣಾಲಯಗಳ ಹೊರತಾಗಿ ಅನ್ಯ ಸ್ಥಾನಗಳಲ್ಲಿ ತಮ್ಮ ಬಿಡು ಸಮಯದಲ್ಲಿ ಕೆಲಸಮಾಡುವ ಸಂದರ್ಭ ಬರುತ್ತದೆ, ಈಗ ಮಾತ್ರ ಅವರ ಹೊಟ್ಟೆ ತುಂಬಲ್ಲದು. ಏಕಗ್ರಾಹಿಯಾಗಿ ಉಳಿದರೆ ಸುಖೋದಯವೇ ಸಮನಿಸುವುದಿಲ್ಲ ಅವರಿಗೆ ತಮ್ಮ ಜ್ಞಾನ ವಿಕಾಸ ಮತ್ತು ಉನ್ನತಿಗಾಗಿ ಯೋಚಿಸುವ ಬಿಡುವೂ ಇರುವುದಿಲ್ಲ, ಅಥವಾ ಅದಕ್ಕೆ ಬೇಕಾದ ಸಾಧನವೂ ಕಾಣಿಸುವುದಿಲ್ಲ

ಅವರಲ್ಲಿ ಹೊಸ ಜ್ಞಾನ ಅಥವಾ ಹೊಸ ಜ್ಞಾನಸಂಕಾರಿಗಳನ್ನು ಸ್ವಾಸ್ತಿಸುವ ಅವಕಾಶವಾಗಲೀ ಉತ್ಸಾಹವಾಗಲೀಕಾಣಿಸುವುದಿಲ್ಲ. ಸಮಯ ವ್ಯತಿಕ್ರಮವಾಗುತ್ತ ಬಂದರೂ ಈ ಶಿಕ್ಷಕರು ದೇಶವಿದೇಶಗಳಲಾದ ನೂತನ ಪ್ರಗತಿ, ನೂತನ ವಿಚಾರ್ಗಳ ಮತ್ತು ನವಸಂಶೋಧನಾಮಗಳನ್ನು ತಿಳಿಯದಿದ್ದುದರಿಂದ ಕೂಪಮಂಡೂಕರಾಗುತ್ತಾರೆ. ಇಂತಹ ಅಧ್ಯಾಪಕರಲ್ಲಿ ಓದಿ ವಿದ್ಯಾರ್ಥಿಗಳ ಶಿಕ್ಷಣ ಮಟ್ಟವು ಎತ್ತರಿಸುವುದಾದರೂ ಹೇಗೆ?

ನಮ್ಮ ದೇಶದಲ್ಲಿ ಮುಖಂಡರು ಶಿಕ್ಷಣದ ವಿಷಯದಲ್ಲಿ ಎಂದೂ ಗಂಭೀರವಾಗಿ ವಿಚಾರಿಸಿಲ್ಲ. ಅನ್ಯಕಾರ್ಯಗಳಲ್ಲಿಯೇ ಏನಾದರೂ ದೊರೆಯದಿರುವಾಗ, ಪಾಪ, ಅವರಾದರೂ ಇತ್ತ ಹೇಗೆ ದೃಷ್ಟಿ ಹಾಯಿಸಿಯಾರು?

ದೇಶದ ಉದ್ಧಾರಕ್ಕಾಗಿ ಎರಡು ಸಂಜೀವಾಷ್ಟಕ ಯೋಜನೆಗಳು ಆದುವು. ಆದರೆ, ಅವುಗಳಲ್ಲಿ ಶಿಕ್ಷಣ ಸುಧಾರಣೆಗೆ ಯಾವ ಸ್ಥಾನವನ್ನೀಯಲಾಗಿದೆಯೋ ವ್ಯಕ್ತವಾಗುವುದಿಲ್ಲ ಶಿಕ್ಷಣವು ವಿಶೇಷ ಪ್ರಚಾರವಾಗಬೇಕು ಎಂಬುದೊಂದಲ್ಲದೆ ಮತ್ತಾವುದೂ ಇಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ. ಎಂತಹ ಶಿಕ್ಷಣ? ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವಂತಹ ಒಣ ಶಿಕ್ಷಣವೆ? ಶಿಕ್ಷಕರ ಆರ್ಥಿಕ ಮಟ್ಟವು ಸುಧಾರಿಸಬೇಕು; ಅವರೂ ಮನುಷ್ಯರಂತೆ ಜೀವನ ನಡೆಸಬೇಕು ಎಂಬ ವಿಚಾರವು ನಮ್ಮ ರಾಜಕಾರಣಿಗಳಲ್ಲಿ ಎಂದಾದರೂ ಮೂಡಿದ್ದಿದೆಯೇ?

ಶಿಕ್ಷಕರು ರಾಷ್ಟ್ರನಿರ್ಮಾಪಕರು ಅವರು ರಾಷ್ಟ್ರವನ್ನು ಕಟ್ಟಬಲ್ಲರು, ಅಂತೆಯೇ ಛಿದ್ರಗೊಳಿಸಬಲ್ಲರು ಅವರು ದೇಶದ ಭಾ

(೧೫ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಉಡುಪಿ.

ಪ್ರಧಾನ ಕಚೇರಿ, ಉಡುಪಿ ಸ್ಥಾಪನೆ. 1925.

ನಮ್ಮ ಬೇಂಕಿನ
ಹುನಗುಂದ
(ಬಿಜಾಪುರ ಜಿಲ್ಲೆ)
ಶಾಖೆಯು
ತಾ. 18-4-'38ರಂದು
ತೆರೆಯಲ್ಪಟ್ಟಿತು

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ—ಉತ್ತಮ ಸೌಕರ್ಯಗಳಿಗೆ
ಅತ್ಯುತ್ತಮ ಬೇಂಕು

ಟಿ ಎ ಪೈ, ಬಿ ಕಾಂ.(ಜೊಂ.) ಡಾ: ಟಿ ಮಾಧವ ಪೈ,
ಎ ಐ ಐ ಬಿ.ಯಫ್ ಆರ್ ಇ.ಯಸ್ (ಲಂಡನ್) ಎಂ.ಬಿ.ಹೆ ಬಿ ಎಸ್.
ಜನರಲ್ ಮೆನೇಜರ್. ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi.

ಉಡುಪಿ ಕರ್ನಾಟಕ ಸಂಘದ
ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ ಕೆ ಎಲ್.ಪಿತಾಳ್ಳ, ಎಂ ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಾರದ ಸಣ್ಣ ಕಥೆ—

ಸ್ವರ್ಣ ಪಂಜರದಲ್ಲಿ ಗಿಳಿ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ.

ಸ್ವರ್ಣ ಪಂಜರದಲ್ಲಿ
ಕೋಗಿಲೆಯು ತಂದಿರಿಸಿ
ನವರತುನಗಳ ನಿಡಲು
ಸವಿಯಬಹುದೆ?
ಮಾಮರದೊಳುಲಿದಂತೆ
ಹಾಡಬಹುದೆ?

ಉದಯ ಗಿರಿಯ ನೆತ್ತಿಯಿಂದ ನೇಸರ ಕಿರಣಗಳು ಹರಿದು ಬರಲಾರಂಭಿಸಿದಂತೆ, ಕಾಡುಹಾಡುಗಳ ಮೇಲೆ ಮುಸುಕಿದ ಮಂಜು ಕರಗಿ, ಹೆಚ್ಚು ಹಸುರಾದ ಮರಗಿಡಗಳು, ಹೊಲ ತೋಟಗಳು ಕಂಗೊಳಿಸಲಾರಂಭಿಸಿದುವು.

ಅಲ್ಲೊಂದು ಹಳ್ಳಿ; ಸೃಷ್ಟಿ ಸೌಂದರ್ಯದ ನೆಲೆವೀಡಾದ, ಚೆಲುವಾದ ಹಳ್ಳಿ. ಅನತಿ ದೂರದಲ್ಲಿ ಕಾಡುಗುಡ್ಡಗಳು, ಹುಲ್ಲು ಹಾಸುಗಳು. ಮಧ್ಯದಲ್ಲಿ ವಿಶಾಲವಾದ ಹಳ್ಳಿಯು. ಭೂದೇವಿಗಿರಿಸಿದ ಫಲ ಪುಷ್ಪಗಳಿಂದ ತುಂಬಿದ ಹೊಂಬಟ್ಟೆಯಂತೆ ಶೋಭಿಸುತಿತ್ತು.

ಕಾನನದಲ್ಲಿ ಎಲೆವನೆಗಳಿರುವಂತೆ, ಹಳ್ಳಿಯಲ್ಲಿ ಅಲ್ಲಲ್ಲಿ ಅಂದವಾದ ಗುಡಿಸಲುಗಳು ಕಾಣ ಬರುತ್ತಿದ್ದುವು. "ಮಧುರ ಶಾಂತಿಯ ಬೀಡುಹಳ್ಳಿ ಗುಡಿಸಲಿನ ಮುಂದೆ ಆರಮನೆಯ ಸಂಪತ್ತು ರೊಟ್ಟಿ ಚೂರಿನ ಎದುರು ಚಿನ್ನದ ದ್ರಾಕ್ಷೆಗಳಿದ್ದಂತೆ!"

ಒಂದೆಡೆಯಲ್ಲಿ ಬಳುಕಿ, ಬಳುಕಿ ಮುಂದರಿದ ಸುವ್ಯವಸ್ಥಿತವಾದ ನಿರ್ಮಲವಾದ ಹಳ್ಳಿಯ ದಾರಿಯು ಕಾಣಿಸುತಿತ್ತು, ಹಳ್ಳಿಗೆ ಬರಲು, ಹಳ್ಳಿಯಿಂದ ಹೋಗಲು ಅದೊಂದೇ ದಾರಿ. ದಾರಿಯಿಂದ ಸ್ವಲ್ಪವೇ ದೂರದಲ್ಲಿ ಒಂದು ಅಚ್ಚುಕಟ್ಟಾದ ಹುಲ್ಲಿನ ಮನೆ. ಮನೆಯ ಮುಂದೊಂದು ಚಿಕ್ಕ ಹೂದೋಟ. ಹತ್ತಿರವೇ ಒಂದು ತಿಳಿನೀರಿನ ಕೊಳ. ಕೊಳದ ಒಂದು ಅಂಚಿನಲ್ಲಿ ಒಂದು ಸಂಪಿಗೆಯ ಮರ. ಸ್ವಲ್ಪ ದೂರದಲ್ಲಿ ವಿಶಾಲವಾಗಿ ಬೆಳೆದು ನಿಂತಿರುವ ಒಂದು ರೆಂಜೆಯ ಮರ. ರೆಂಜೆಯ ಮರದ ಬುಡದಲ್ಲಿ ಸುಟ್ಟದೊಂದು ತಿಳಿನೀರಿನ ತೊರೆ. ಅಕ್ಕಪಕ್ಕದಲ್ಲಿ ಹಾಸಿದಂತೆ, ಉರುಳಿಸಿ ಬಿಟ್ಟಂತೆ ತೋರುವ ಕಲ್ಲುಬಂಡೆಗಳು. ಒಂದೆಡೆಯಲ್ಲಿ ಕಂಗು ಬಾಳೆಗಳಿಂದ ಸೊಗಯಿಸುವ ಚಿಕ್ಕದೊಂದು ತೋಟ.

ಆ ಹುಲ್ಲಿನ ಮನೆಯೇ ಶ್ಯಾಮಲೆಯ ಮನೆ. ಹೌದು! ಶ್ಯಾಮಲೆಯ ಮನೆ. ಏಕೆಂದರೆ ಇಡೀ ಹಳ್ಳಿಯಲ್ಲಿ ಶ್ಯಾಮಲೆಯು ಎಲ್ಲರಿಗೂ ಪರಿಚಿತಳು; ಪ್ರಸಿದ್ಧಳು. ಅವಳ ಹೆಸರು ಎಲ್ಲರಿಗೂ ಗೊತ್ತು. ಅವಳ ಕೋಕಿಲ ಕಂಠದ ಸುಮಧುರ ಸಂಗೀತವನ್ನು ಸವಿಯದವರು ಆ ಹಳ್ಳಿಯಲ್ಲಿ ಯಾರೂ ಇರಲಿಲ್ಲ. ಅವಳ ಕೊರಳ ಮಂಜುಳನಾದಕ್ಕೆ ಪಕ್ಷಿಗಳೂ ಮೈಮರೆತು ಕಿವಿಗೊಡುವುವು. ದನಕರುಗಳು ತಮ್ಮ ಕೆಲಸವನ್ನು ಬಿಟ್ಟು ಆಲಿಸುವುವು.

ಅವಳ ತಂದೆ-ತಾಯಿಗಳು ವೃದ್ಧರು. ಉಂಡುಡುವುವಕ್ಕೆ ಅವರಿಗೆ ಕೊರತೆಯಿರಲಿಲ್ಲ. ಚಿಕ್ಕ ತೋಟವಿದೆ; ಹೊಲವಿದೆ. ಚೆಲುವು, ಶಾಂತಿಗಳಿಂದ ಕೂಡಿದ ಪರಿಸರವಿದೆ. ಒಬ್ಬಳೇ ಮಗಳು ಶ್ಯಾಮಲಾ. ಆಧ್ಯಾತ್ಮಿಕ ಜೀವನ ಅವಳ ತಂದೆ-ತಾಯಿಗಳದು. ಉಚ್ಚಮಟ್ಟದ ಬ್ರಾಹ್ಮಣ ಕುಟುಂಬವೆನಿಸಿಕೊಂಡು, ಹಳ್ಳಿಗರಿಗೆ ಸದಾಚಾರ, ಸುವಿಚಾರಗಳ ದರ್ಶನ ಮಾಡಿಸುತ್ತಾ, ಏಕ ರೀತಿಯ ಶಾಂತಿಸಂತಸದ ಜೀವನವನ್ನವರು ಸಾಗಿಸುತ್ತಿದ್ದರು.

ಅಂದು ಹಳ್ಳಿ ಸಿಂಗಾರವಾಗಿತ್ತು. ಹಳ್ಳಿಯ ದಾರಿಯು ತಳಿರು ತೋರಣಗಳಿಂದ ರಂಜಿಸುತಿತ್ತು. ಗುಡಿಸಲುಗಳೆಲ್ಲವೂ ಶೃಂಗರಿಸಲ್ಪಟ್ಟಿದ್ದುವು. ಅಲ್ಲಿ ಇಲ್ಲಿ ವಾದ್ಯ ಧ್ವನಿಗಳು, ಗೆಜ್ಜೆಯನಾದಗಳು ಕೇಳಿ ಬರುತ್ತಿದ್ದುವು. ಸುಗಂಧ ವಸ್ತುಗಳ ಘಮಾಸನೆಯು ಗಾಳಿಯಲ್ಲಿ ಹರಡಿತ್ತು. ಜನರೆಲ್ಲರೂ ಹರ್ಷಭರಿತರಾಗಿದ್ದರು. ಬಣ್ಣ ಬಣ್ಣದ ಹೊಸ ಹೊಸ ಉಡುಪುಗಳನ್ನು ಧರಿಸಿ ಒಡವೆತೊಡವೆಗಳನ್ನು ತೊಟ್ಟು ಓಡಾಡುತ್ತಿದ್ದರು.

ಅಂದು ಆ ರಾಜ್ಯದ ಅರಸನಾಗಲಿಸುವನೆಂದು ಹಳ್ಳಿಯಲ್ಲಿ ಈ ಸಂಭ್ರಮ ಆನೆಯ ಮೇಲೆ ಗಂಭೀರವಾಗಿ ಕುಳಿತು ತಮ್ಮ ಹಳ್ಳಿಯನ್ನು ಪ್ರವೇಶಿಸುವ ತಮ್ಮ ಮಹಾರಾಜನನ್ನು ನೋಡಬೇಕೆಂದು ಹಳ್ಳಿಗರು ಕುತೂಹಲಚಿತ್ತದಿಂದ, ಸ್ಫೂರ್ತಿಯುತರಾಗಿ ಸರ್ವಸನ್ನಾಹಗಳನ್ನು ಮಾಡುತ್ತಲಿದ್ದರು.

ಅರಸನು ದಯಾಳು, ಪ್ರಜಾನುರಾಗಿ, ದೇಶ ಸೇವಾಕಾಂಕ್ಷಿ; ಜನರ ಮೇಲೆ ಪ್ರೀತಿಯುಳ್ಳವನು. ಈ ಹಿಂದೆ ನಾಡಿನ ವೈಭವವನ್ನು ಮೆರೆಸಿ, ಶೋಭೆಯೇರಿಸಿದವನು. ಆದುದರಿಂದ ಜನರಿಗೆ ಅವನ ಮೇಲೆ ಅಪೂರ್ವವಾದ ರಾಜಭಕ್ತಿ. ಆದೂ ಅಲ್ಲದೆ ಅರಸನು ಒಂದು ದಿನ ತಮ್ಮೂರಿನಲ್ಲಿ ಬೀಡು ಬಿಟ್ಟು, ತಮ್ಮ ಸುಖ ದುಃಖಗಳನ್ನು ವಿಚಾರಿಸಿಯೇ ಮುಂದರಿಯಲಿರುವನೆಂಬುದನ್ನು ಕೇಳಿ, ಹಳ್ಳಿಗರಿಗೆ ಅಮಿತವಾದ ಹೊಟ್ಟೆಯಲ್ಲಿ ಹಿಡಿಸದ ಆನಂದೋತ್ಸಾಹಗಳು. ಇಷ್ಟು ತಾಳ್ಮೆಯಿಂದ, ಆಸೆಯಿಂದ, ಪ್ರಜೆಗಳ ಮೇಲೆ ಪ್ರೀತಿಯಿರಿಸಿ, ತನ್ನ ರಾಜ್ಯದ ಹಳ್ಳಿ ಮೂಲೆಗಳಲ್ಲಿ ಕೂಡ ಸಂಚರಿಸಿ ಕನಿಕರ, ಆದರದಿಂದ ತಮ್ಮನ್ನು ನೋಡುವ ಅರಸನ ಮೇಲೆ ಹಳ್ಳಿಗರಿಗೆ ಎನಿತೋ ಪ್ರೇಮ.

ಸೂರ್ಯನ ಹೊಂಗಿರಣಗಳೆನ್ನೂ ಬಿಸಿಯೇರಲಾರಂಭಿಸಿರಲಿಲ್ಲ. ದೂರದಲ್ಲಿ ಅರಸನ ಪರಿವಾರ ಸಹಿತವಾದ ಮೆರವಣಿಗೆಯ ಸಂದಣಿಯು ಕಾಣಿಸಿತು. ಮೆರವಣಿಗೆಯಲ್ಲಿ ಕೂಡಿಕೊಂಡಿರುವ ಸೈನಿಕ, ಸೇವಕ, ಜನಸಮೂಹದ ಚಿತ್ರ ವಿಚಿತ್ರ ವಿಧವಿಧದ ವರ್ಣರಂಜಿತ ವೇಷ ಭೂಷಣಗಳು, ದೂರದಲ್ಲಿ ಸ್ವಾಗತಕ್ಕೆ ಸಿದ್ಧರಾಗಿ ನಿಂತ ಹಳ್ಳಿಗರಿಗೆ ಕಾಣಿಸಿದುವು. ಪ್ರೇಮ ಭಯ:ಭಕ್ತಿಗಳಿಂದ ಎದುರ್ನೋಡುತ್ತಿರುವ ಹಳ್ಳಿಗರೆದುರಿಗೆ ಶುಭ ಧ್ವನಿಗಳಿಂದೊಡಗೂಡಿ ಪಟ್ಟದಾನೆಯ ಮೇಲೆ ಗಂಭೀರನಾಗಿ ಕುಳಿತ ಸುದೃಢ, ಸುಸ್ಪಷ್ಟ, ಸುಲಕ್ಷಣನಾದ ರಾಜ್ಯಾಧೀಶ್ವರನು ಗೋಚರಿಸಿದನು. ಎತ್ತರ ದಾಟಿದ ತಮ್ಮರಸನ ಹುರುಪೂ, ತುಂಬುಗೆಲವಿನ ಮುಗುಳ್ನಗುವಿನ ಶೀವಿಯೂ ಜನರನ್ನು ಮತ್ತೆತ್ತು ಹರ್ಷಗೊಳಿಸಿದುವು. ಹಳ್ಳಿಗರು ತಮ್ಮ ಭಕ್ತ್ಯಾನುಸಾರ ವಂದನೆ ಗೈದರು.

ವಿಧವಿಧದ, ಸಭೆ, ಸಂಗೀತ, ನರ್ತನಗಳಿಂದೊಡಗೂಡಿದ ವಿನೋದ ಕೂಟಗಳು ಜರಗಿದುವು. ರಾಜನ ಆಗಮನದ ಉತ್ಸವವನ್ನು ಹಳ್ಳಿಗರು ವಿಜೃಂಭಣೆಯಿಂದ ನೆರವೇರಿಸಿದರು. ಉತ್ಸಾಹದ ಚಟುವಟಿಕೆಯಲ್ಲಿ ಹಗಲು ಕಳೆದು ಬೈಗು ಸವಿಯಾಸಿತು. ಅರಸನಿಗಾಗಿ ನಿರ್ಮಿಸಿದ ಭವ್ಯ ಭವನವೊಂದಕ್ಕೆ ಆತ ವಿಶ್ರಾಂತಿಗಾಗಿ ತೆರಳಿದ.

ಂಂ ಂಂ ಂಂ

ಮಧ್ಯರಾತ್ರಿ ಶೃಂಗಾರ ಸೌಧದಲ್ಲಿ ಮೃದುತಲ್ಪದಲ್ಲಿ ಮಲಗಿದ ಅರಸನಿಗೆಚ್ಚರವಾಯಿತು. ಹೊರಗೆ ನೋಡಿದಾಗ ಹಾಲಿನಂತೆ ಶುಭ್ರವಾದ ಬೆಳದಿಂಗಳು ಹರಡಿತ್ತು. ಮೆಲ್ಲಮೆಲ್ಲನೆ ತೀಡುವ ತಂಗಾಳಿ. ಅದೇನು?.....ಅದರೊಡನೆ ಎಲ್ಲೋ ದೂರದಿಂದ ಅಲೆಯಲೆಯಾಗಿ ಮಂಜುಳ ಗಾನವೊಂದು ಕೇಳಿ ಬರುತಿತ್ತು. ಅರಸನ ಕಿವಿ ಮಾತ್ರವಲ್ಲ. ಹೃದಯವೂ ಆಲಿಸಿತು. ಅದರ ಮಾಧುರ್ಯಕ್ಕೆ ಅರಸನ ದೇಹ ಪುಲಕದಿಂದ ಕಂಪಿಸಿತು. ಅಂದಿನ ವರೆಗೆ ಅಂತಹ ಸ್ವರ್ಗೀಯ ಗಾನವನ್ನು ಆತ ಕೇಳಿರಲಿಲ್ಲ. ಮಧುರ ವೀಣಾ ಗಾನತರಂಗ ತರಂಗ! ಅಲ್ಲಲ್ಲ, ಯಾರೋ ಅದಕ್ಕಿಂತಲೂ ಇನಿಯಿನಿದಾಗಿ, ಮಂಜುಳವಾಗಿ ಕೋಗಿಲೆಯಂತೆ ಮಧುರ ಕಂಠದ ಕೋಮಲೆ ಹಾಡುತ್ತಿದ್ದಳು!

ಇನಿಗೊರಳಿನ ಹೃದಯಂಗಮಹಾಡಿನ ಧ್ವನಿಯ ಮೋಡಿಗೆ ಸುವರ್ಣ ಸೌಧದಲ್ಲಿ ಜೀವಿಸುವ ರಾಜ್ಯಾಧೀಶ್ವರ ಮಾರುಹೋದ! ಮರುಳಾದ! ಅವನ ಹೃದಯದಲ್ಲಿ ಕುಸುಮವು ಕಚಗುಳಿಯಿಟ್ಟಂತೆ ಭಾಸವಾಯಿತು! ಚರ-ಅಚರ ವಸ್ತುಗಳೆಲ್ಲವೂ ಯಾವುದೋ ಅಗೋಚರ ಮಾಯೆಗೆ ಒಳಗಾಗಿ ಆಲಿಸುತ್ತಿರುವಂತೆ ಅರಸನಿಗೆ ಕಾಣಿಸಿತು! ಅವನ ಮೈಮನಗಳೆಲ್ಲವೂ ಆ ಹಾಡಿನ ಧ್ವನಿಯಲ್ಲಿ ತನ್ಮಯವಾದುವು. ಅವನ ಹೃದಯವನ್ನು ಚುಂಬಿಸಿದ ಆ ಚುಂಬಕ ಗಾನ ಅವಸನ್ನು ತನ್ನತ್ತ ಸೆಳೆಯಿತು!

ಒಂದೊಂದೇ ಮೆಟ್ಟಲನ್ನು ಇಳಿದು ತನಗರಿಯದಂತೆಯೇ ಅರಸ ಸಾಗಿ ಹೋದ. ಸುಂಗಿಯ ನಾದಕ್ಕೆ ಮರುಳಾಗುವ ಹಾವಿನಂತೆ ದಾರಿಯಾವುದೆಂದರಸದೆ ಆನೆಯ ಮೇಲೆ ಸಂಚರಿಸುವ ಅರಸ ಕಲ್ಲು ಮುಳ್ಳಿನ ಮೇಲೆ ತೇಲಿಹೋಗುವಂತೆ ಸಾಗಿದ! ಅವ್ಯಕ್ತವಾದ ಶಕ್ತಿಯೊಂದು ಆ ಹೆಂಗೊರಳು ಹೊಂಗಳಲಂತೆ ನುಡಿಯುವೆಡೆಗೆ ಅರೆಜೋಂಪಿನಲ್ಲಿ ಕೊಂಡೊಯ್ಯುತಿತ್ತು.

ಗೆಂಜೆಯ ಮರದಡಿಯಲ್ಲಿ ತಿಳಿನೀರ ತೊರೆಯ ತಡಿಯಲ್ಲಿ ಬಂಡೆಯ ಮೇಲೆ ಕುಳಿತು ಶ್ಯಾಮಲಾ ಹಾಡುತ್ತಿದ್ದಳು. ತನ್ನನ್ನೇ ಮರೆತು ಹಾಡುತ್ತಿದ್ದಳು. ಇದು ಅವಳ ನಿತ್ಯಾಭ್ಯಾಸ! ಅವಳಿಗಾಗಿ ಹಾಡಲ್ಲ. ಹಾಡಿಗಾಗಿ ಅವಳು ಹುಟ್ಟಿದ್ದಳೋ ಏನೋ! ಅವಳಾಗಿ ಹಾಡುವಳೋ ತಾನಾಗಿ ಹಾಡು ಹುಟ್ಟಿ ಹರಿಯುವುದೋ ಯಾರು ಬಲ್ಲರು? ಆ ರಾತ್ರಿಯಲ್ಲಿಯೂ ಹಾಗೆ ಬಂದು ಕುಳಿತು ಹಾಡುವಂತೆ ಅವಳಿಗೇನೋ ಆತ್ಮಾನಂದದ ಅವ್ಯಕ್ತ ಪ್ರಚೋದನೆ ದೊರೆಯುತಿತ್ತು.

ಅರಸ ಬಂದು ಕೊಳದ ದಂಡೆಯ ಸಂಪಿಗೆಯ ಮರದ ಮರೆಯಲ್ಲಿ ಒರಗಿ ನಿಂತ. ದೇಸ ಲೋಕದಿಂದಿಳಿದ ದೇವ ಅನ್ನಿಕೆಯಂತೆ ದೇವ ಗಾಯಕಿಯಾಗಿ ಶ್ಯಾಮಲಾ ಕಂಗೊಳಿಸಿದಳು. ಅರಸನ

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Mooiky Bank, Ltd.

ಗುಟ್ಟಾಗಿ ಸರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಪಂ|| A.R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)
ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.
"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ಪಷ್ಟ ಮತ್ತು ತೀಕ್ಷ್ಣ ಸ್ಖಲನಗಳನ್ನು ತಡೆಗಟ್ಟಿ, ಮೂತ್ರಸಲ್ಲಿ ಧಾತು ಹೋಗುವುದನ್ನು, ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತದೆ.
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.
ರೋಗಿಯ ವಯಸ್ಸು ಮತ್ತು ಬಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N.P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)
628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I.)

PHONE 203 ESTD 1926

ಇವರಿಗಾಗುವಾಗ ಚಿಕ್ಕಾಸುಳಿದಿಲ್ಲ!

ಸರಕಾರ ಶಿಕ್ಷಕರನ್ನು ಕಡೆಗಣಿಸಿದೆ!

ಶಿಕ್ಷಣ ಮತ್ತು ಶಿಕ್ಷಕರ ನಡುವೆ ಅಳವಾದ ಸಂಬಂಧವಿದೆ. ಶಿಕ್ಷಕರು ಮಾತ್ರವೇ ವಿದ್ಯಾರ್ಥಿಗಳಿಗೆ ಶಿಕ್ಷಣವೀಯುತ್ತಾರೆ ಹೊರತು ಬೇರಾರಿಂದಲೂ ಹೀಗೆ ಮಾಡುವುದು ಸಾಧ್ಯವಿರುವುದಿಲ್ಲ. ಆದರೆ, ಇವರ ವಿಚಾರ ಮಾತ್ರ ಬಹಳ ದಯನೀಯವಾಗಿದೆ. ಅವರ ಪ್ರಶಿಕ್ಷಣ ಹಿಂದಿನ ಕಾಲದ್ದಾಗಿದೆ. ಅದನ್ನು ಬದಲಾಯಿಸಬೇಕು; ಅವರಲ್ಲಿ ನೂತನ ವಿಚಾರಗಳ ಸಮಾವೇಶಗೊಳ್ಳುವಂತಾಗಬೇಕು. ಭಾರತದಲ್ಲಿ ಶಿಕ್ಷಣವೊಂದು ಕಳೆದುಹೋದ ವಿಷಯವೆಂದು ತಿಳಿಯಲಾಗುತ್ತದೆ. ಆದರೆ, ಅನ್ಯದೇಶಗಳಲ್ಲಿ ಇಂತಹ ಮಾತುಗಳೇಳುವುದಿಲ್ಲ. ಕುಂಬಾರನು ಮಣ್ಣಿನಿಂದ ಅನ್ಯ ಪ್ರಕಾರದ ಉಪಯೋಗೀ ವಸ್ತುಗಳನ್ನು ತಯಾರಿಸಿ ಮತ್ತುಳಿದ ಮಣ್ಣಿನಿಂದ ದೀಪಕಗಳನ್ನು ಮಾಡುವಂತೆ ಬ್ರಿಟಿಷ ಸರಕಾರದ ಶಿಕ್ಷಣ ವಿಷಯದ ಪರಿಸ್ಥಿತಿಯಿದೆ. ನಮ್ಮ ರಾಷ್ಟ್ರೀಯ ಸರಕಾರವು ಇಂದಿಗೂ ಅದೇ ದಾರಿಯಲ್ಲಿ ಮುನ್ನಡೆಯುತ್ತಿದೆ. ಸರಕಾರವು ತನ್ನ ಮುಂಗಡ ಪತ್ರದಲ್ಲಿ ಅಧಿಕಾಧಿಕ ಧನರಾಶಿಯನ್ನು ಅನ್ಯ ವಿಭಾಗಗಳಿಗೆ ಖರ್ಚು ಮಾಡಲು ನಿರ್ಧರಿಸುತ್ತದೆ; ಮತ್ತು ಉಳಿದ ಶೇಷಾಂಶವನ್ನು ಮಾತ್ರ ಶಿಕ್ಷಣ ಖಾತೆಗೆ ವ್ಯಯ ಮಾಡಲು ನಿಶ್ಚಯಿಸುತ್ತದೆ. ಸರಕಾರವು ಶಿಕ್ಷಣದ ವಿಷಯದಲ್ಲಿ ಇಷ್ಟೊಂದು ಉದಾಸೀನತೆಯನ್ನು ವ್ಯಕ್ತಪಡಿಸುತ್ತಿರುವಾಗ ಅದರ ರಕ್ಷಣೆಯನ್ನಾದರೂ ಭಗವಂತನೇ ಮಾಡಬೇಕು.

ಪ್ರಾಯಃ ಶಿಕ್ಷಣದ ಸ್ಥಾನವು ದೇಶದಲ್ಲಿ ಯಾವುದೆಂದು ಸರಕಾರವಿನ್ನೂ ತಿಳಿದಂತೆ ಕಾಣುವುದಿಲ್ಲ ಪ್ರಾಚೀನ ಕಾಲದಲ್ಲಿ ಈ ದೇಶದಲ್ಲಿ ಶಿಕ್ಷಣಕ್ಕೆ ಪ್ರಮುಖ ಸ್ಥಾನವಿತ್ತು. ಶಿಕ್ಷಣಕ್ಷೇತ್ರದಲ್ಲಿ ಅಧಿಕ ಪೇಚ್ಚವಾಗುತಿತ್ತು; ನಲಂದ, ತಕ್ಷಶಿಲೆ, ವಿಕ್ರಮಶಿಲೆಗಳ ವಿಶ್ವವಿದ್ಯಾಲಯಗಳೇ ಇದಕ್ಕೆ ಜ್ವಲಂತ ಉದಾಹರಣೆಗಳಾಗಿವೆ. ಆ ಸಮಯ ದೇಶವು ಎಷ್ಟೊಂದು ಸಬಲ ಮತ್ತು ಉನ್ನತಿಶೀಲವಾಗಿತ್ತು! ಆ ವೇಳೆಯಲ್ಲಿ ದೇಶದಲ್ಲಿ ಶಿಕ್ಷಣ ಮತ್ತು ಶಿಕ್ಷಕರಿಗೆ ಅಗ್ರಗಣ್ಯ ಸ್ಥಾನವಿತ್ತು. ಇದರಿಂದಾಗಿಯೇ ವಿದೇಶೀಯರು ಇಲ್ಲಿನ ಶಿಕ್ಷಣವನ್ನು ಪಡೆಯುವುದಕ್ಕಾಗಿ ಅಪೇಕ್ಷಿತರಾಗಿ ಇಲ್ಲಿ ಇರುತಿದ್ದರು ಮತ್ತು ಇಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದು ತಮ್ಮನ್ನು ಮತ್ತು ತಮ್ಮ ದೇಶವನ್ನು ಧನ್ಯರೆಂದು ತಿಳಿಯುತಿದ್ದರು.

ಇಂದು ನಮ್ಮ ದೇಶದ ಪರಿಸ್ಥಿತಿ ತೀರ ವಿಪರ್ಯಾಸ ಹೊಂದಿದೆ. ನಮ್ಮ ಸರಕಾರ ತನ್ನ ವಿದ್ಯಾರ್ಥಿಗಳನ್ನು ವಿದೇಶೀಯ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಿಸುವಂತೆ ಮಾಡಿ ತಾನು ಧನ್ಯವೆಂದು ತಿಳಿಯುತ್ತದೆ. ಅಥವಾ ಹಾಗೆ ಕಳಿಸುವುದರಿಂದ ತನ್ನ ಕರ್ತವ್ಯ ಇತಿಶ್ರೀ ಯಾಯಿತೆಂದು ಬಗೆಯುತ್ತದೆ. ಅದು ತನ್ನಲ್ಲಿಯ ಶಿಕ್ಷಣ ಮಟ್ಟವನ್ನು ಎತ್ತರಿಸಲು ಬಯಸುವುದಿಲ್ಲ. ಈ ರೀತಿಯಲ್ಲಿ ನಾವು ಉಚ್ಚ ಶಿಕ್ಷಣವನ್ನು ಪಡೆಯಲು ಎದುನರೆಗೆ ಪರರ ಮುಖ ನೋಡುತ್ತ ಕೂರಬೇಕು? ವಿಜ್ಞಾನದಲ್ಲಿ ಉಚ್ಚ ಶಿಕ್ಷಣ ಪಡೆಯಲು ಬಾಹ್ಯ ದೇಶಗಳಿಗೆ ಹೋಗುವುದು ಅವಶ್ಯವಿರಬಹುದು; ಆದರೆ, ಇಲ್ಲಿಯ ಜನರು ಹಿಂದಿ ಮತ್ತು ಸಂಸ್ಕೃತಗಳ ಅಭ್ಯಾಸವನ್ನೂ ಪರದೇಶಗಳಲ್ಲಿಯೇ ಮಾಡುತ್ತಾರೆ.

ಶಿಕ್ಷಣವು ದೇಶದ ತಾಯಿಬೇರು; ಅದರ ಆಧಾರಶಿಲೆ ಹಾಗೂ ಮೇರುದಂಡ. ಒಂದು ದೇಶದ ಶಿಕ್ಷಣವು ಉತ್ತಮ ರೀತಿಯಲ್ಲಿದ್ದರೆ, ಅಲ್ಲಿನ ಮೂಲವೂ ಉತ್ತಮವಿರುತ್ತದೆ. ಭಾವೀ ನಾಗರಿಕರು ತಯಾರಾಗುವ ಕಾರಖಾನೆಗಳೆಂದರೆ, ಶಿಕ್ಷಣಾಲಯಗಳು. ಅವುಗಳ ಅವಸ್ಥೆಯು ದೀನ ಹೀನ ಮತ್ತು ಅಸ್ತವ್ಯಸ್ತವಾಗಿದೆ. ಅಲ್ಲಿ ವ್ಯವಸ್ಥೆಯ ಸ್ಥಾನದಲ್ಲಿ ಅವ್ಯವಸ್ಥೆಯೇ ಮನೆಮಾಡಿದೆ. ಆ ಶಿಕ್ಷಣಾಲಯಗಳಲ್ಲಿ ಪ್ರಗತಿಯ ಚಿನ್ಹೆಗಳು ದೃಷ್ಟಿಗೋಚರವಾಗುವುದಿಲ್ಲ. ರಾಜ್ಯಸರಕಾರಗಳ ಧನರಾಶಿಯ ಬಲದಿಂದ ವಿದೇಶೀ ಶಿಕ್ಷಣ ಪಡೆದವರ ದೃಷ್ಟಿಕೋಣವೇ ಬಜಲಾಗುತ್ತದೆ. ಅವರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಮೋಹವು ಉದ್ಭವಿಸುತ್ತದೆ. ಆದರೆ, ಅವರು ಒಂದು ಮೂರ್ಖತೆಯಿಂದ ತಪ್ಪಿ ಮತ್ತೊಂದಕ್ಕೆ ಕುಸಿಯುತ್ತಾರೆ. ಅವರು ಕೇವಲ ತಮ್ಮ ಉನ್ನತಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಯೋಚಿಸುವ ಅಭ್ಯಾಸವುಳ್ಳವರಾಗುತ್ತಾರೆ, ಇವರ ದುಷ್ಪರಿಣಾಮವನ್ನು ಅನ್ಯ ಜನರೂ ಭೋಗಿಸಬೇಕಾಗಿ ಬರುತ್ತದೆ. ಅವರು ಜನತೆಯನ್ನು ಅಂಧಕಾರದಿಂದ ಪ್ರಕಾಶದತ್ತ ಕರೆದೊಯ್ಯುವುದೇ ತಮ್ಮ ಕರ್ತವ್ಯವೆಂಬ ಮಹತ್ವದ ವಿಷಯವನ್ನು ತಿಳಿಯುವುದಿಲ್ಲ

ಇಂದು ನಮ್ಮ ದೇಶದಲ್ಲಿ ಯಾವ ಸ್ಥಿತಿ ಇದೆ ಎಂದು ದೃಷ್ಟಿಸುವ. ಶಿಕ್ಷಣ ವಿಭಾಗದ ಕರ್ಮಗಳಲ್ಲಿ ಯಾವುದೇ ಆಕರ್ಷಣೆ ಅಥವಾ ನಾವೀನ್ಯವಿರುವುದಿಲ್ಲ. ಈ ಭಾಗದಲ್ಲಿ ಕೆಲಸಮಾಡುತ್ತಿರುವವರಿಗೆ-ಸ್ವತಃ ಉಪಾಧ್ಯಾಯರಿಗೆ ಸಹ, ಸುಯೋಗ್ಯ ಮತ್ತು ದಕ್ಷ ವ್ಯಕ್ತಿಗಳನ್ನು ಈ ವಿಭಾಗವು ತನ್ನೆಡೆಗೆ ಆಕರ್ಷಿಸಲು ಸಾಧ್ಯವಾಗುವಂತಹ ಹೀನ ಮಟ್ಟದ ವೇತನವನ್ನು ಕೊಡುತ್ತದೆ. ಬೇರೆ ವಿಭಾಗಗಳಲ್ಲಿ ತಲೆ ಹಾಕಲು ಅನಾದ್ಯರಾದ ವ್ಯಕ್ತಿಗಳೇ ಹೆಚ್ಚಾಗಿ ಈ ವಿಭಾಗದಲ್ಲಿರುತ್ತಾರೆ. ಉತ್ತಮ ವರ್ಗದ ಜನರು ಈ ಕ್ಷೇತ್ರಕ್ಕೆ ಕಾಲಿರಿಸುವುದಿಲ್ಲ. ಕೆಲವೊಂದು ಉತ್ತಮ ವ್ಯಕ್ತಿಗಳು ಅಪ್ಪಿತಪ್ಪಿ ಬರುವುದುಂಟು. ಆದರೆ, ಅವರು ರಾತ್ರಿ ಹಗಲು ಈ ಕ್ಷೇತ್ರದಿಂದ ದೂರವಿರಲು ಬಯಸುತ್ತಾರೆ. ಈ ವಿಭಾಗದಲ್ಲಿಯೇ ಉಳಿದವರೂ ತಮ್ಮ ಸ್ಥಿತಿಗತಿಗಳ ಕುರಿತಾಗಿಯೇ ಚಿಂತಿಸುತ್ತಿರುತ್ತಾರೆ. ಹೀಗಾಗಿ ಈ ಕ್ಷೇತ್ರದಲ್ಲಿ ಸುಯೋಗ್ಯ ಮತ್ತು ದಕ್ಷ ವ್ಯಕ್ತಿಗಳಿರುವುದು ಅಪರೂಪವಾಗಿ ಕಂಡುಬರುತ್ತದೆ. ವೇತನವು ಕಡಿಮೆಯಾಗಿರುವುದರೊಂದಿಗೆ ಭವಿಷ್ಯವು ಉನ್ನತವಾಗಿಲ್ಲದಿರುವುದರಿಂದ, ಇವರ ಕಾರ್ಯಕ್ಷಮತೆಯು ಹ್ರಾಸಗೊಳ್ಳುತ್ತ ಬರುವುದು. ನಮ್ಮಲ್ಲಿ ಶಿಕ್ಷಣಕ್ಷೇತ್ರವು ಕುಸಿಯುತ್ತ ಬರಲು ಇದೇ ಕಾರಣ ಈ ಕ್ಷೇತ್ರದಲ್ಲಿ ವಾದಾರ್ಹಿತರಾದವರ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತ ಹೋಗುತ್ತದೆ ಅವರಿಗೆ ಹೊಟ್ಟೆತುಂಬ ಆಹಾರ ದೊರೆಯುವುದೂ ದುಸ್ತರವಾಗಿ ಪರಿಣಮಿಸುತ್ತದೆ ಅವರು ಅಹೋರಾತ್ರಿ ತಮ್ಮ ಉದರಾಗ್ನಿಯನ್ನು ಶಾಂತಗೊಳಿಸಲು ಉರುಳಾಡುತ್ತಾರೆ. ಅವರ ಮೆದುಳು ಅಶಾಂತಿಯ ಗೂಢಾರವಾಗಿರುತ್ತದೆ. ಅವರಿಗೆ ತಮ್ಮ ಭವಿಷ್ಯದ ಕುರಿತು ಚಿಂತಿಸುವ ಸಮಯವಿಲ್ಲ; ದೇಶ ಮತ್ತು ಸಮಾಜಗಳ ಉನ್ನತಿಯ ವಿಶಯದಲ್ಲೂ ಆಸಕ್ತಿಯಿಲ್ಲ. ತಮ್ಮ ಉದರ ಪೂರ್ತಿಗಾಗಿ ಅವರಿಗೆ ಶಿಕ್ಷಣಾಲಯಗಳ ಹೊರತಾಗಿ ಅನ್ಯ ಸ್ಥಾನಗಳಲ್ಲಿ ತಮ್ಮ ಬಿಡು ಸಮಯದಲ್ಲಿ ಕೆಲಸಮಾಡುವ ಸಂದರ್ಭ ಬರುತ್ತದೆ; ಈಗ ಮಾತ್ರ ಅವರ ಹೊಟ್ಟೆ ತುಂಬಬಲ್ಲದು. ಏಕಗ್ರಾಹಿಯಾಗಿ ಉಳಿದರೆ ಸುಯೋಗದಯವೇ ಸನುನಿಸುವುದಿಲ್ಲ. ಅವರಿಗೆ ತಮ್ಮ ಜ್ಞಾನ ವಿಕಾಸ ಮತ್ತು ಉನ್ನತಿಗಾಗಿ ಯೋಚಿಸುವ ಬಿಡುವೂ ಇರುವುದಿಲ್ಲ; ಅಥವಾ ಅದಕ್ಕೆ ಬೇಕಾದ ಸಾಧನವೂ ಕಾಣಿಸುವುದಿಲ್ಲ

ಅವರಲ್ಲಿ ಹೊಸ ಜ್ಞಾನ ಅಥವಾ ಹೊಸ ಜ್ಞಾನಕಾರಿಗಳನ್ನು ಪ್ರಾಪ್ತಿಸುವ ಅವಕಾಶವಾಗಲೀ ಉತ್ಸಾಹವಾಗಲೀ ಇಣಿಸುವುದಿಲ್ಲ. ಸಮಯ ವ್ಯತೀತವಾಗುತ್ತ ಬಂದರೂ ಈ ಶಿಕ್ಷಕರು ದೇಶವಿದೇಶಗಳಲಾದ ನೂತನ ಪ್ರಗತಿ, ನೂತನ ವಿಚಾರ ಮತ್ತು ನವಪರಿಣಾಮಗಳನ್ನು ತಿಳಿಯದಿದ್ದುದರಿಂದ ಕೂಪಮಂಡೂಕರಾಗುತ್ತಾರೆ. ಇಂತಹ ಅಧ್ಯಾಪಕರಲ್ಲಿ ಓದಿ ವಿದ್ಯಾರ್ಥಿಗಳ ಶಿಕ್ಷಣ ಮಟ್ಟವು ಎತ್ತರಿಸುವುದಾದರೂ ಹೇಗೆ?

ನಮ್ಮ ದೇಶದಲ್ಲಿ ಮುಖಂಡರು ಶಿಕ್ಷಣದ ವಿಷಯದಲ್ಲಿ ಎಂದೂ ಗಂಭೀರವಾಗಿ ವಿಚಾರಿಸಿಲ್ಲ. ಅನ್ಯಕಾರ್ಯಗಳಲ್ಲಿಯೇ ವಿರಾಮ ದೊರೆಯದಿರುವಾಗ, ಪಾಪ, ಅವರಾದರೂ ಇತ್ತ ಹೇಗೆ ದೃಷ್ಟಿ ಹಾಯಿಸಿಯಾರು?

ದೇಶದ ಉದ್ಧಾರಕ್ಕಾಗಿ ಎರಡು ಪಂಚವಾರ್ಷಿಕ ಯೋಜನೆಗಳು ಆದುವು. ಆದರೆ, ಅವುಗಳಲ್ಲಿ ಶಿಕ್ಷಣ ಸುಧಾರಣೆಗೆ ಯಾವ ಸ್ಥಾನವನ್ನೀಯಲಾಗಿದೆಯೋ ವ್ಯಕ್ತವಾಗುವುದಿಲ್ಲ. ಶಿಕ್ಷಣವು ವಿಶೇಷ ಪ್ರಚಾರವಾಗಬೇಕು ಎಂಬುದೊಂದಲ್ಲದೆ ಮತ್ತೊಮ್ಮೆಯೂ ಇಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ. ಎಂತಹ ಶಿಕ್ಷಣ? ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವಂತಹ ಒಣ ಶಿಕ್ಷಣವೆ? ಶಿಕ್ಷಕರ ಆರ್ಥಿಕ ಮಟ್ಟವು ಸುಧಾರಿಸಬೇಕು, ಅವರೂ ಮನುಷ್ಯರಂತೆ ಜೀವನ ನಡೆಸಬೇಕು ಎಂಬ ವಿಚಾರವು ನಮ್ಮ ರಾಜಕಾರಣಿಗಳಲ್ಲಿ ಎಂದಾದರೂ ಮೂಡಿದ್ದಿದೆಯೇ?

ಶಿಕ್ಷಕರು ರಾಷ್ಟ್ರನಿರ್ಮಾಪಕರು. ಅವರು ರಾಷ್ಟ್ರವನ್ನು ಕಟ್ಟಬಲ್ಲರು; ಅಂತೆಯೇ ಭಿದ್ರಗೊಳಿಸಬಲ್ಲರು. ಅವರು ದೇಶದ ಭಾ

(೧ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಉಡುಪಿ.
ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1925.

ನಮ್ಮ ಬೇಂಕಿನ
ಹುನಗುಂದ
(ಬಿಜಾಪುರ ಜಿಲ್ಲೆ)
ಶಾಖೆಯು
ತಾ. 18-4-'58 ರಂದು
ತೆರೆಯಲ್ಪಟ್ಟಿತು.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ—ಉತ್ತಮ ಸೌಕರ್ಯಗಳಿಗೆ ಅತ್ಯುತ್ತಮ ಬೇಂಕು.

ಟಿ. ಎ ಪೈ, ಬಿ ಕಾಂ.(ಹೊಂ.) ಎ ಐ. ಐ. ಬಿ.ಯಸ್.ಆರ್ ಇ.ಯಸ್.(ಲಂಡನ್)
ಜನರಲ್ ಮೆನೇಜರ್.

ಡಾ। ಟಿ. ಮಾಧವ ಪೈ, ಎಂ.ಬಿ. & ಬಿ ಎಸ್.
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್ ಪಿತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವೃತ್ತಿಪರ ಮತ್ತು ರಾಷ್ಟ್ರೀಯ ರಂಗಭೂಮಿಗಳು--

ಇಂದಿನ ಕನ್ನಡ ನಾಟಕಗಳು

ಆಧುನಿಕ ಕನ್ನಡ ನಾಟಕದ ಮೂಲವನ್ನು, ಗ್ರಾಮಾಂತರ ನಾಟಕ, ಯಕ್ಷಗಾನ, ಬೈಲಾಟ ಮತ್ತು ಕೀಲುಗೊಂಬೆ ಆಟ ಮುಂತಾದ ಜಾನಪದ ಪರಂಪರೆ ಹಾಗೂ ಸಾಹಿತ್ಯ ಪರಂಪರೆಗಳೆರಡರಲ್ಲೂ ಕಾಣಬಹುದು. ಈ ಸಾಹಿತ್ಯ ಪರಂಪರೆಯು ಶತಮಾನಗಳ ಕಾಲದವರೆಗೆ ಸಂಸ್ಕೃತ ನಾಟಕ ಪರಂಪರೆಯೇ ಆಗಿತ್ತು; ಇತ್ತೀಚೆಗಿನ ವರ್ಷಗಳಲ್ಲಿ ಪಾಶ್ಚಾತ್ಯ ನಾಟಕ ಪರಂಪರೆಯೂ ಬಂದು ಕೂಡಿಕೊಂಡಿದೆ.

ನಮಗೆ ಉಪಲಬ್ಧವಾಗಿರುವ ಮೊತ್ತಮೊದಲ ನಾಟಕವೆಂದರೆ: 'ಮಿತ್ರವಿಂದಾಗೋವಿಂದ'. ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿದ್ದ ಸಿಂಗರಾರ್ಯರು, ಶ್ರೀ ಹರ್ಷನ "ರತ್ನಾವಲೀ" ನಾಟಕವನ್ನನುಸರಿಸಿ ಈ ನಾಟಕವನ್ನು ಬರೆದಿರುವರು. ಈ ನಾಟಕದ ಕಾಲ ೧೬೮೦ ನಮಗೆ ತಿಳಿದಂತೆ, ಕನ್ನಡ ರಂಗಭೂಮಿಯು, ಅಸ್ತಿತ್ವಕ್ಕೆ ಬಂದಿದ್ದು ಅದಾದ ಎರಡು ನೂರು ವರ್ಷಗಳ ನಂತರ. ಉತ್ತರ ಕರ್ನಾಟಕದಲ್ಲಿ ಚುರಮುರಿ ಶೇಷಗಿರಿ ರಾಯರ ಸಂಗೀತ ಪ್ರಧಾನ 'ಶಾಕುಂತಲಾ', ಮೈಸೂರಿನಲ್ಲಿ ಬಸಪ್ಪ ಶಾಸ್ತ್ರಿಗಳ 'ಶಾಕುಂತಲಾ'—ಈ ಎರಡು ನಾಟಕಗಳೊಂದಿಗೆ ಕನ್ನಡ ರಂಗಭೂಮಿಯ ಉದಯವಾಯಿತೆನ್ನಬಹುದು. ಪಾಶ್ಚಾತ್ಯ ಭಾಷೆಗಳಿಂದ ಅಳವಡಿಸಿಕೊಂಡ ನಾಟಕಗಳಲ್ಲಿ ಕೆರೂರು ನಾಸುದೇವಾಚಾರ್ಯರ 'ಪತಿ ವಶೀಕರಣ' ಪ್ರಥಮ ನಾಟಕವಾದರೆ ದಿ|| ಬಿ. ಎಂ. ಶ್ರೀ ಕಂಠಯ್ಯನವರ 'ಅಶ್ವತ್ಥಾಮನ್' ಮತ್ತು ಎ. ಎನ್. ಮೂರ್ತಿರಾಯರ 'ಅಷಾಢಭೂತಿ' ನಾಟಕಗಳು ಅತ್ಯುತ್ತಮವಾದುವೆನ್ನಬಹುದು. ಶ್ರೀ ಕಂಠಯ್ಯನವರು ತಮ್ಮ ರತ್ನನ 'ಗದಾಯುದ್ಧ' ನಾಟಕದೊಂದಿಗೆ ಪದ್ಯ ನಾಟಕವೆಂದು ಹೊಸ ಮಾರ್ಗವನ್ನು ತೆರೆದರು. ಈ ಪ್ರಕಾರದಲ್ಲಿ ಕುವೆಂಪುರವರ ಲೇಖನಿಯಿಂದ ಸೊಗಸಾದ ನಾಟಕಗಳು ಮೂಡಿಬಂದಿವೆ. ಇತರ ರೀತಿಯ ಪದ್ಯ ನಾಟಕಗಳು, ಒಂದು ಕಡೆ ಯಕ್ಷಗಾನ, ನಾಡ ಪದಗಳು, ಅಣಕ ನಾಟಕಗಳಿಂದಲೂ ಮತ್ತೊಂದು ಕಡೆ ಗೇಯ ನಾಟಕಗಳಿಂದಲೂ ವೃದ್ಧಿಗೊಂಡವು.

ಈ ಕ್ಷೇತ್ರದಲ್ಲಿ ಮೊದಲಿಗರೆಂದರೆ ಶಿವರಾಮ ಕಾರಂತರು, ಮಾಸ್ತಿ ವೆಂಕಟೇಶ ಅಯ್ಯಂಗಾರರು ಮತ್ತು ಪು. ತಿ. ನರಸಿಂಹಾಚಾರ್ಯರು. ಪದ್ಯಾತ್ಮಕ ಗದ್ಯವನ್ನು 'ಸಂಸ'ರು ತಮ್ಮ ಐತಿಹಾಸಿಕ ನಾಟಕಗಳಲ್ಲಿ ಬಳಸಿಕೊಂಡಿರುವರು. ಈ ಶತಮಾನದ ಎರಡನೆಯ ದಶಕದಲ್ಲಿ ಕನ್ನಡ ನಾಟಕದಲ್ಲಿ ವಾಸ್ತವತೆ ಮತ್ತು ವ್ಯಂಗ್ಯವು ಬಂದು ಸೇರಿದವು ೧೮೮೭ರಲ್ಲಿ ಪ್ರಕಟಿಸಲಾದ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ಎಂಬ ಅತ್ಯಂತ ಸುಂದರವಾದ ವ್ಯಂಗ್ಯ ಹಾಗೂ ವಾಸ್ತವಪೂರ್ಣ ನಾಟಕವು ಇತ್ತೀಚೆಗೆ ನಮಗೆ ದೊರೆತಿದೆ. ಆದರೂ, ಈ ಹೊಸ ಹಾದಿಯಲ್ಲಿ ಪ್ರಥಮ ಹಾಗೂ ಪ್ರಮುಖ ಲೇಖಕರೆಂದರೆ ಟಿ. ಪಿ. ಕೈಲಾಸಂರವರು ಅವರು ಪೌರಾಣಿಕ ನಾಟಕಗಳನ್ನು ಇಂಗ್ಲೀಷಿನಲ್ಲಿ ಬರೆದರು. ಕನ್ನಡದಲ್ಲಿ ಅವರು, ನಾರಾಯಣ ರಾವ್ ಹುಯಿಲುಗೋಳ ಮುಂತಾದ ಸಾಮಾಜಿಕ ನಾಟಕ ಕರ್ತೃಗಳಂತಲ್ಲದೆ, ಆಧುನಿಕ ಜೀವನ ಮತ್ತು ರೀತಿನೀತಿಗೆ ರನ್ನಗನ್ನಡಿಯನ್ನು ಹಿಡಿಯುವಂತಹ ಹೊಸ ವ್ಯಾಕಾರ, ಹೊಸ ಶೈಲಿಯನ್ನು ಅವರು ಸೃಜಿಸಿದರು ಇದೇ ಶೈಲಿಯನ್ನನು ಸರಿಸಿದ ಮತ್ತೊಬ್ಬ ಪ್ರಮುಖ ಲೇಖಕರೆಂದರೆ 'ಶ್ರೀ ರಂಗ'. ಅವರೂ ಕೈಲಾಸಂರವರಂತೆ, ಸಂಸ್ಕೃತ ನಾಟಕ ಪರಂಪರೆ ಹಾಗೂ ಇಂಗ್ಲೀಷ್ ರಂಗಭೂಮಿಯ ಪೂರ್ಣ ಪರಿಚಯವನ್ನು ಹೊಂದಿದವರು. 'ಶ್ರೀ ರಂಗ'ರು ಸಾಮಾಜಿಕ ನಾಟಕಗಳನ್ನು ಕೈಲಾಸಂರವರಿಗಿಂತ ಒಂದು ಹೆಜ್ಜೆ ಮುಂದೆ ತೆಗೆದುಕೊಂಡು ಹೋಗಿ, ಅದನ್ನು ಮತ್ತಷ್ಟು ನವಿರಾಗಿಯೂ, ಜೊಳ್ಳುವಾಗಿಯೂ ಮಾಡಿದರು ಈಗ ವಾಸ್ತವತೆ ಕ್ರಮೇಣ ಸಾಂಕೇತಿಕ ನಿರೂಪಣೆಗೆ ಎಡೆಗೊಟ್ಟಿದ್ದರೂ, 'ಶ್ರೀರಂಗ'ರ ಮತ್ತು ಕೈಲಾಸಂರವರ ನಾಟಕ ಸಾಧನೆಯಲ್ಲಿ ವಾಸ್ತವತೆಯು ಕೇವಲ ಒಂದು ದೃಷ್ಟಿಕೋಣವಾಗಿರುವುದರಿಂದ ಅವರು ಎಂದಿಗೂ ಪ್ರಭಾವ ಶಾಲಿಗಳಾಗಿಯೇ ಇರುವರು.

ಮಹಾಮನೆ ಸ್ವಾಮಿ, ರಂಗಚಂದ್ರ ಶರ್ಮ ಮತ್ತು ಕೀರ್ತಿನಾಥ ಕುರ್ತಕೋಟಿ ಮುಂತಾದ ತರುಣ ಲೇಖಕರ ಕೃತಿಗಳಲ್ಲಿ, ವಾಸ್ತವತೆಯು ಸಾಂಕೇತಿಕ ನಿರೂಪಣೆಯಲ್ಲಿ ಪರಿವರ್ತನೆಯಾಗುತ್ತಿರುವ ಭವಿಷ್ಯತ್ ಪ್ರವೃತ್ತಿಯನ್ನು ನೋಡಬಹುದು. ರೇಡಿಯೋ ನಾಟಕವು ಒಂದು ಹೊಸ ಸಾಹಿತ್ಯ ವ್ಯಾಕಾರ ಈ ಕ್ಷೇತ್ರದಲ್ಲಿ ಶ್ರೀಗಳಾದ ಎಚ್. ಕೆ. ರಂಗನಾಥ, ಎಸ್. ಎನ್. ಶಿವಸ್ವಾಮಿ ಎನ್. ಕೆ. ಕುಲಕರ್ಣಿ ಮತ್ತು ರಾಮಚಂದ್ರ ಶರ್ಮಾರವರು ಮೊದಲಿಗರು. ಈ ಪ್ರಕಾರವು ನಾಟಕ ರಚನೆಯ ಮೇಲೆ ಸತ್ವಭಾವವನ್ನು ಬೀರಿ, ಅದರ ಶೈಲಿಯನ್ನು ಉತ್ತಮಪಡಿಸಿ, ಧೈರ್ಯವಾದ ತಾಂತ್ರಿಕ ಪ್ರಯೋಗಗಳಿಗೆ ಪ್ರಚೋದನೆಯಿತ್ತಿದೆ ಕಾರಂತರ 'ಸೋಮಿಯ ಸೌಭಾಗ್ಯ' ಮಾಸ್ತಿಯವರ 'ಕಾಕನ ಕೋಟೆ' ಮುಂತಾದ ಜಾನಪದ ನಾಟಕಗಳು, ಕುವೆಂಪುರವರ 'ಜೆರಳ್ಳ ಕೊರಳ್' ಮತ್ತು ಪು. ತಿ. ನರಸಿಂಹಾಚಾರ್ಯರ 'ಅಹಲ್ಯೆ' ಮುಂತಾದ ಪೌರಾಣಿಕ ಪದ್ಯ ನಾಟಕಗಳು, 'ಸಂಸ'ನ 'ವಿಗಡ ವಿಕ್ರಮರಾಯ' ಗಳಂತಹ ಐತಿಹಾಸಿಕ ನಾಟಕ ಕೈಲಾಸಂರವರ 'ಟೊಳ್ಳು-ಗಟ್ಟಿ', 'ಶ್ರೀರಂಗ'ರ 'ಸಂಧ್ಯಾಕಾಲ' ಮತ್ತ ಶರ್ಮಾರವರ 'ಸೆರಗಿನಕೆಂಡ' ಗಳಂತಹ ರೇಡಿಯೊ ನಾಟಕಗಳನ್ನು ತೆಗೆದುಕೊಂಡರೆ, ಕನ್ನಡ ನಾಟಕದ ವಿಕಾಸಮಾವಲೋಕನ ಮಾಡಬಹುದು. ಈ ನಾಟಕಗಳೆಲ್ಲವನ್ನೂ ಕಲಾವಿಲಾಸಿ ನಾಟಕ ಸಂಸ್ಥೆಗಳು ಆಗಾಗ್ಗೆ ರಂಗಭೂಮಿಯ ಮೇಲೆ ಅಭಿನಯಿಸುತ್ತಿವೆ ಈ ನಾಟಕ ರಂಗಗಳಲ್ಲಿ ಬೆಂಗಳೂರಿನ ಎ. ಡಿ. ಎ ಸಂಘವು ಬಹಳ ಹಳೆಯದು ಹಾಗೂ ಅತ್ಯಂತ ಪ್ರಸಿದ್ಧವಾದುದು ಭಾರತೀಯ ನಾಟ್ಯಸಂಘ ಅತ್ಯಂತ ಕಿರಿಯದೂ, ಅತ್ಯಂತ ಉತ್ಸಾಹಿಯೂ ಆಗಿರುವುದು.

ವೃತ್ತಿ ಪ್ರಧಾನ ಕನ್ನಡ ರಂಗಭೂಮಿಯು ಸುಮಾರು ೧೮೮೦ರಿಂದ ಅರ್ಧ ಶತಮಾನ ಕಾಲ ಉಚ್ಛ್ರಾಯಸ್ಥಿತಿಯಲ್ಲಿತ್ತು. ಈಗ ಗುಬ್ಬಿ ವೀರಣ್ಣನವರ ಕಂಪನಿಯನ್ನುಳಿದು ಇತರ ಕಂಪನಿಗಳು ಅವನತಿಯನ್ನು ಹೊಂದಿವೆ. ಗುಬ್ಬಿ ವೀರಣ್ಣನವರ ಕಂಪನಿಯು ಪೌರಾಣಿಕ ನಾಟಕವಾದ 'ದಶಾವತಾರ'ವನ್ನು ಅತ್ಯುತ್ತಮ ರೀತಿಯಲ್ಲಿ ಪ್ರದರ್ಶಿಸಿ, ಜನಪ್ರಿಯವಾಗುಯಶಸ್ಸುಗಳಿಸಿರುವರು. ಆದಾಗ್ಯೂ, ಲೇಖಕರು, ನಟರು ಮತ್ತು ವೃತ್ತಿ ಪ್ರಧಾನ ರಂಗಭೂಮಿಯ ಪ್ರೇಕ್ಷಕರ ನಡುವೆ ನಿರ್ದಿಷ್ಟವಾದ ಅಂತರಗಳಿರುವುವು. ರತ್ನಾವಳಿ ಥಿಯೇಟರ್ ಕಂಪನಿಯ ವರದಾಚಾರ್ಯರಂತಹ ಪ್ರತಿಭಾಶಾಲಿ ನಟರು ಹಲವು ವರ್ಷಗಳ ಹಿಂದೆ, ಈ ಅಂತರವನ್ನು ಒಂದುಕಡೆ ಸರಿಪಡಿಸಿದರು. ಪರ್ವತವಾಣಿಯವರಂತಹ ಲೇಖಕರು ಮತ್ತೊಂದು ಕಡೆ ಈ ಅಂತರವನ್ನು ಸರಿಪಡಿಸಲು ಶ್ರಮಿಸಿದರು ವಾಸ್ತವಿಕ ಉತ್ಸಾಹಿಯ ಮೂಲಕ ತಮ್ಮ ತಾಂತ್ರಿಕ ಶಕ್ತಿಯನ್ನು ವೃದ್ಧಿಮಾಡಿಕೊಂಡು, ನಮ್ಮ ನಾಟಕ ಕರ್ತೃಗಳು, ಹೆಚ್ಚು ಆಳವಾದ, ವಿಶ್ವವ್ಯಾಪ್ತಿಯಾದ ಕಥಾವಸ್ತುಗಳನ್ನು ತೆಗೆದುಕೊಂಡ, ವೃತ್ತಿಪ್ರಧಾನ ರಂಗಭೂಮಿ ಮತ್ತು ಕಲಾವಿಲಾಸಿ ರಂಗಭೂಮಿಗಳನ್ನೂ ನಿಜವಾದ ರಾಷ್ಟ್ರೀಯ ರಂಗಭೂಮಿಯಲ್ಲಿ ವಿಲಯನಗೊಳಿಸುವರೆಂದು ಆಶಿಸಲಾಗಿದೆ.

—ಆಕಾಶವಾಣಿಯವರ ಸೌಜನ್ಯದಿಂದ.

ನಿಶಸ್ತ್ರೀಕರಣ ವಿಚಾರದಲ್ಲಿ ಅಮೆರಿಕೆಯ ಪ್ರತಿನಿಧಿಯಾಗಿ ನೀನಿ-ಸಲ್ಪಟ್ಟ ಶ್ರೀ ಜೇಮ್ಸ್ ಜೆ. ವಡ್ಸ್‌ವರ್ತ್.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು ಲೇಖಕಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ನಿಮ್ಮ ಹಣದ ಸುರಕ್ಷಿತತೆ ಮತ್ತು ಭದ್ರತೆಗಳಲ್ಲಿ ನಿಮ್ಮ ಮನೆಗಿಂತಲೂ ಮಿಗಿಲಾಗಿ, ಯಾವ ಮನೆಯಲ್ಲೂ ಎಂದೂ ಇರದ ಹೆಚ್ಚಿನ ಸೌಲಭ್ಯವಾದ ಬಡ್ಡಿ ಸಂಪಾದನೆಯನ್ನು ನಿಮ್ಮ ಹಣವು ಮಾಡಿ ಅದು ಸತತ ವೃದ್ಧಿಗೊಳ್ಳಲು ಸಹಕರಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ. ಉಡುಪಿ, ದ ಭಾರತ.

52 ವರುಷಗಳಿಗೂ ಮೀರಿದ ಬೇಂಕು ಅನುಭವವೂ, ಒಟ್ಟು 53 ಶಾಖೆಗಳೂ, ದೇಶದಾದ್ಯಂತ ಏಜನ್ಸಿ ಏರ್ಪಾಡುಗಳೂ ನಮ್ಮ ಬೇಂಕಿಗಿವೆ.

'ನವಯುಗ' ವಾರಪತ್ರಿಕೆ
ಉ ಡು ಪಿ.
ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

ಸಾಹಿತ್ಯ ಸಿಂಹಾವಲೋಕನ—

ಕನ್ನಡದಲ್ಲಿ ವ್ಯಾಕರಣ ಗ್ರಂಥಗಳು

ಶ್ರೀ. ಗೋಪೀಚಂದರಾವ್, ವಿದ್ವಾನ್, ವಿಶಾರದ

ಶಾಸ್ತ್ರ ಗ್ರಂಥಗಳು

ಕನ್ನಡ ಭಾಷೆಯು ತನ್ನ ಮಾತೃ ಭಾಷೆಯ ಮೂಲನುಡಿಗಳಂದ ಕೂಡಿಕೊಂಡಿರುವುದಲ್ಲದೇ ಸಂಸ್ಕೃತ ಭಾಷೆಯ ಪದಗಳನ್ನೂ ಕನ್ನಡಲ್ಲಿ ಬೇಕಾದಷ್ಟು ಆಳವಡಿಸಿಕೊಂಡಿದೆ. ಹೀಗಾಗಿ ಕನ್ನಡ ನುಡಿಯೂ ಸಂಸ್ಕೃತಿಯೂ ಸಂಸ್ಕೃತದ ಮರಿ ಎಂಬ ಪರಿಸ್ಥಿತಿಯುಂಟಾಯಿತು. ಭಾರತೀಯ ಸಾಹಿತ್ಯಗಳಿಗೆಲ್ಲಾ ಪ್ರೋತ್ಸಾಹಪೂರ್ಣವಾದ ಸಂಸ್ಕೃತದ ಕೃತಿರತ್ನಗಳು ಕನ್ನಡದ ಮೇಲೆಯೂ ಸಾಕಷ್ಟು ಪರಿಣಾಮವನ್ನು ಮಾಡಿದುವೆನ್ನಬೇಕು. ಏಕೆಂದರೆ, ಕನ್ನಡದಲ್ಲಿ ಬರೆಯಲ್ಪಟ್ಟ ಶಾಸ್ತ್ರ ಗ್ರಂಥಗಳೆಲ್ಲವೂ ಸಂಸ್ಕೃತ ಶಾಸ್ತ್ರ ಗ್ರಂಥಗಳ ಪರಿವರ್ತನೆಯೋ ಆಧಾರಿಕ ಕೃತಿಗಳೋ ಆಗಿವೆ ಎಂಬುದು ಗಮನೀಯವಾದ ಸಂಗತಿ.

ವ್ಯಾಕರಣವೇಕೆ?

ಭಾಷೆಯೊಂದು ಬೆಳೆದು ಬರಬೇಕಾದರೆ, ಅನೇಕ ಕಾರಣಗಳಿರುವುದು. ಬಾಹ್ಯ ಮತ್ತು ಆಂತರಿಕ ವಿಧಾನಗಳಿಂದ ಭಾಷೆಯ ನುಡಿಗಳಲ್ಲಿ ಬದಲಾವಣೆಯಾಗಬಹುದು. ಆದರೆ, ಇಂತಹ ಬದಲಾವಣೆಗಳು ಕೆಲವೊಮ್ಮೆ ಮೇರೆ ಮೀರಿ ಓಡುವುದುಂಟು. ಹೀಗೆ ನಾಗಾಲೋಟದಿಂದ ಓಡುತ್ತಿರುವ ಭಾಷಾಶ್ವವನ್ನು ಅಂಕೆಯಲ್ಲಿಟ್ಟುಕೊಳ್ಳುವ ಒಂದು ಮಹತ್ವದ ಪಾತ್ರ ವಹಿಸುವ ಸಾಧನವೆಂದರೆ ವ್ಯಾಕರಣ ಶಾಸ್ತ್ರ. ಶಬ್ದ ಶುದ್ಧಿಯನ್ನುಂಟು ಮಾಡಿ, ಅರ್ಥ ಸ್ಪಷ್ಟವಾಗುವಂತೆ ಸಹಾಯಿಸುವುದು ಈ ಶಾಸ್ತ್ರ. ಯಾವುದೇ ಭಾಷೆಯಲ್ಲಿ ಅಡಕವಾದ ನುಡಿಗಳ ಅಧಿಕೃತ ರೂಪಗಳನ್ನು, ಅವುಗಳ ಪ್ರಯೋಗಗಳನ್ನು ಮತ್ತು ಬಳಸುವಲ್ಲಿ ಅನುಸರಿಸಬೇಕಾದ ವಿಧಾನಗಳನ್ನು ಇದು ಇಳಿಸುತ್ತದೆ. ಆದುದರಿಂದ, ವ್ಯಾಕರಣವೆನ್ನುವುದು ಸಿಕ್ಕಾಬಟ್ಟೆ ಹರಿಯುವ ಭಾಷಾ ಪ್ರವಾಹಕ್ಕೆ ತಡೆ ಹಾಕುವ ಒಡ್ಡೆಂದು ಹೇಳಬಹುದು. "ವ್ಯಾಕ್ರಿಯಂತೇ ವ್ಯುತ್ಪಾದ್ಯಂತೇ ಅನಾಧು ಭ್ಯೋಽಏವಿಧ್ಯ ಬೋಧ್ಯಂತೇ ಯತ್ರ ವ್ಯಾಕರಣಂ" ಎಂಬ ಉಕ್ತಿಯಲ್ಲಿರುವಂತೆ ವ್ಯಾಕರಣ ಅಶುದ್ಧರೂಪಗಳನ್ನು ದೂರೀಕರಿಸಿ ಸಾಧುರೂಪಗಳನ್ನು ಬಳಸಿಕೊಳ್ಳಲು ಹೇತುವಾಗಬಹುದಾದ ಒಂದು ಮಹಾ ಸಾಧನ.

ಸಂಸ್ಕೃತ ವ್ಯಾಕರಣವನ್ನೇ ಅವಲಂಬಿಸಿಕೊಂಡು ಕನ್ನಡದ ವ್ಯಾಕರಣವೂ ಸರ್ವಸಾಮಾನ್ಯವಾಗಿ ಸಿದ್ಧವಾಗಿದೆ. ಭಾಷೆಯಲ್ಲಿ ಬರುವ ಸಂಸ್ಕೃತ ಪದಗಳನ್ನು ಸಂಸ್ಕೃತ ವ್ಯಾಕರಣಾನುಸಾರವಾಗಿಯೇ ಶುದ್ಧಾಶುದ್ಧಗಳೆಂದು ನಿರ್ಣಯಿಸಬೇಕಾದರೂ, ಕನ್ನಡದ ನುಡಿಗಳಿಗೂ ವ್ಯಾಕರಣ ಶಾಸ್ತ್ರದ ಕಡಿವಾಣವಿರುತ್ತದೆ. ಹೀಗಾಗಿ ಕನ್ನಡ ವ್ಯಾಕರಣವೆನ್ನುವುದು ಕನ್ನಡದಲ್ಲಿ ಬಳಸಿಕೊಳ್ಳುತಿದ್ದ ಪದಗಳ ಸಾಧುತ್ವವನ್ನು ಬೋಧಿಸಬೇಕಾಗುತ್ತದೆ.

ಇಲ್ಲಿ ಒಂದು ಮಾತು ಹೇಳಬಹುದು. ವ್ಯಾಕರಣವೆನ್ನುವುದು ಮೊದಲೇ, (ಅದನ್ನುಪಯೋಗಿಸಿದ) ಕಾವ್ಯ ಮೊದಲೇ ಎಂಬ ಪ್ರಶ್ನೆ ಯೇಳುವುದು ಸಹಜ. ಸಾಮಾನ್ಯವಾಗಿ ಈ ಪ್ರಶ್ನೆಗೆ ಉತ್ತರಗೊಡುವುದು ಸಾಹಸದ ಮಾತಾಗಬಹುದು. ಆದರೂ ವಿದ್ವಜ್ಜನರ ಅಭಿಪ್ರಾಯದಂತೆ ಕಾವ್ಯ ಮೊದಲು ಮತ್ತು ವ್ಯಾಕರಣಾದಿಗಳು ಅ ಮೇಲೆ ಎಂತಲೇ ಶಬ್ದ ಶುದ್ಧಿಯನ್ನೂ ಪ್ರಕ್ರಿಯೆಯನ್ನೂ ಬೋಧಿಸುವ ಇಂತಹ ಶಾಸ್ತ್ರಗ್ರಂಥಗಳಲ್ಲಿ ಪ್ರಯೋಗ ಶರಣಾಃ ವೈಯಾಕರಣಾ. ಎಂದು ಮಹಾಕವಿಪ್ರಯೋಗಗಳನ್ನು ಮನ್ನಿಸಿದ ಉದಾಹರಣೆಗಳು ಸಾಕಷ್ಟಿವೆ ಇದರಿಂದ ಕಾವ್ಯ ಮತ್ತು ಕವಿಪ್ರಯೋಗಗಳನ್ನು ತಮ್ಮ ಮುಂದಿಟ್ಟುಕೊಂಡೇ ವೈಯಾಕರಣಿಗಳು ತಮ್ಮ ಪರುಪಗಳನ್ನು ಹೊರತೆಗೆಯುತಿದ್ದರೆಂದು ತಿಳಿಯಬಹುದು.

ಕನ್ನಡದಲ್ಲಿ ವ್ಯಾಕರಣ ಗ್ರಂಥಗಳು

ಕನ್ನಡದಲ್ಲಿ ಪ್ರಾಚೀನ ಕೃತಿಗಳು ದೊರೆಯುವುದು ದುರ್ಲಭವಾದಂತೆಯೇ ಶಾಸ್ತ್ರಗ್ರಂಥಗಳೂ ಸಿಗುವುದು ಅಪರೂಪ. ವ್ಯಾಕರಣ ಶಾಸ್ತ್ರ ನಿರೂಪಣಾತ್ಮಕಕೃತಿಗಳಲ್ಲಿ ಮುಖ್ಯವಾದುವು ನಾಲ್ಕು ಮಾತ್ರ. ಇವುಗಳು ಹಳಗನ್ನಡದ ಮತ್ತು ನಡುಗನ್ನಡ ಕಾಲದ ಶಬ್ದೋತ್ಪತ್ತಿ ವಿಚಾರಗಳನ್ನು ತಿಳಿಸುತ್ತವೆ ಇವಲ್ಲದೆ, ಇತ್ತೀಚೆಗೆ ಕೆಲವೊಂದು ಚಿಕ್ಕ ಸುಟ್ಟ ವ್ಯಾಕರಣ ಗ್ರಂಥಗಳು ತಲೆದೋರಿದ್ದರೂ ಅವು ಹೈಸ್ಕೂಲುಗಳಲ್ಲಿ ಪಠ್ಯಪುಸ್ತಕಗಳಾಗಲು ಯೋಗ್ಯವೇ ಹೊರತು ವ್ಯಾಚೀನ ವ್ಯಾಕರಣ ಕೃತಿಗಳಂತೆ ಸಿದ್ಧಿವಸರಣಾಸಹಿತವಾಗಿಲ್ಲ. ಅವಕ್ಕೆ ಸ್ವತಂತ್ರವೆನಿಸಿದ ನಿಲುಮೆಯಿಲ್ಲ

ಆದಿ ಗ್ರಂಥ ಕವಿರಾಜ ಮಾರ್ಗವು ಅಲಂಕಾರ ಗ್ರಂಥವೇ ವ್ಯಾಕರಣ ಗ್ರಂಥವೇ ಎಂಬುದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ ಅದು ಅಲಂಕಾರ ಗ್ರಂಥವೇ ಎಂಬ ನಿರ್ಧಾರಕ್ಕೂ ವಿದ್ವಾಂಸರು ಬಂದು ಮುಟ್ಟಿದ್ದಾರೆ ಇದರಲ್ಲಿ ಕೆಲವೊಂದು ಕಡಗಳಲ್ಲಿ ಶಬ್ದಶುದ್ಧಿಯತ್ತ ಲೆಖಿಸಿರುವಿದೆ ಅರಿಸಮಾಸಗಳು, ಸಾಂಕೇತಿಕ ವಚನ, ಕಾರಕಗಳು ಮೊದಲಾದುವುಗಳನ್ನು ಇಲ್ಲಿ ಅರಿಸಿ, ತಲ್ಲಿ ಮಾರ್ಗಾಮಾರ್ಗಗಳನ್ನು ವಿವೇಚಿಸಲಾಗಿದೆ ಇಲ್ಲಿ ಅವು ಕಾವ್ಯಗುಣಗಳ ವಿಚಾರವಾಗಿ ವಿಮರ್ಶಿಸುವಾಗ, ಈ ದೋಷಗಳೂ ಕೃತಿವಧ್ಯವಿಗೆ ವಿಷಯವನ್ನುಂಟುಮಾಡುವುದರಿಂದ. ಕೃತಿವದುವಿನ ಸೌಂದರ್ಯಕ್ಕೆ ಕುಂದುಂಟಾಗಬಾರದೆಂದು ಅವು ಸಾಂದರ್ಭಿಕವಾಗಿ ಬಂದಿವೆಯಾದುದರಿಂದ ಈ ಕೃತಿಯು ಅಲಂಕಾರ ಶಾಸ್ತ್ರಕೃತಿಯೆಂದು ದೃಢವಾಗಿ ಹೇಳುವುದು ಉಚಿತವಾದುದು.

ನಯಸೇನ ವ್ಯಾಕರಣ

೧೧೦೦ರ ಸುಮಾರಿನಲ್ಲಿದ್ದ ನಯಸೇನನು ಒಂದು ವ್ಯಾಕರಣ ಗ್ರಂಥವನ್ನು ಬರೆದಿದ್ದನೆಂದು ಉಲ್ಲೇಖವು ದೊರೆತಿದೆ. ಎರಡನೆ ನಾಗವರ್ಮ ರಚಿತವಾದ ಕರ್ನಾಟಕ ಭಾಷಾ ಭೂಷಣದಲ್ಲಿ 'ದೀರ್ಘೋಕ್ತಿರ್ನಯ ಸೇನಸ್ಯ' ಎಂಬ (೭೪೪ನೆ) ಸೂತ್ರವೇ ಈ ಊಹೆಗೆ ಆಧಾರವಾಗಿದೆ ಆದರೆ, ನಮಗೆ ಇದು ವರೆಗೆ ಈ ಕೃತಿಯು ದೊರೆತಿಲ್ಲ. ಹೇಗಿದ್ದರೂ, ಇಂತಹ ಒಂದು ಸೂತ್ರವು ನಯಸೇನನ ಹೆಸರನ್ನೆತ್ತಿ ಹೇಳುವುದರಿಂದ, ನಯಸೇನನೂ ಒಂದು ವ್ಯಾಕರಣ ಗ್ರಂಥವನ್ನು ಒದಿರಬೇಕು ಅದು ಹೊರತಾಗಿ ನಯಸೇನನು ತನ್ನ ಕಾವ್ಯದಲ್ಲಿ ಅಂತಹ ಪ್ರಯೋಗ (ಸಂಬೋಧನೆಗೆ ದೀರ್ಘ)ಗಳನ್ನು ಮಾಡಿದ್ದಾನೆನ್ನುವ ಉದ್ದೇಶವಿದೆ ಎಂದು ತಿಳಿಯುವುದು ಅಷ್ಟು ಸಮಂಜಸವಲ್ಲ ಆಗಿ, ಕಾಲಗರ್ಭದಡಿಯಲ್ಲಿ ಹುದುಗಿರುವ ಈ ಕೃತಿ ಎಂದು ಬೆಳಕಿಗೆ ಬರುವುದೋ ಕಾದು ನೋಡಬೇಕಾಗಿದೆ. ಈ ವಿಚಾರದಲ್ಲಿ ಮುಂದಿನ ಸಂಶೋಧನೆಗಳು ನಡೆಯುವ ವರೆಗೆ ಇಷ್ಟೇ ಸಮಾಧಾನಪಟ್ಟುಕೊಳ್ಳಬೇಕು

ಶಬ್ದಸ್ಮೃತಿ, ಭಾಷಾಭೂಷಣ

ಮುಂದೆ, ೧೧೪೫ರಲ್ಲಿದ್ದನೆಂದು ಊಹಿಸಲಾದ ಎರಡನೆಯ ನಾಗವರ್ಮನು ಕನ್ನಡದಲ್ಲಿ ಶಬ್ದಸ್ಮೃತಿ ಮತ್ತು ಸಂಸ್ಕೃತದಲ್ಲಿ ಕರ್ನಾಟಕ ಭಾಷಾಭೂಷಣವೆಂಬ ಕೃತಿಗಳನ್ನು ರಚಿಸಿದ್ದಾನೆ. ಈ ಎರಡು ಗ್ರಂಥಗಳಲ್ಲಿ ಆತನ ಯಾವುದನ್ನು ಮೊದಲು ಬರೆದನು ಮತ್ತೆ ಎರಡು ಕೃತಿಗಳನ್ನು ವಿಭಿನ್ನ ಭಾಷೆಯಲ್ಲಿ ಏಕೆ ಬರೆದನು ಎಂಬ ಪ್ರಶ್ನೆ ಏಳುವುದು ಸಹಜ ಶಬ್ದ ಸ್ಮೃತಿಯಲ್ಲಿ ಕನ್ನಡ ವ್ಯಾಕರಣವನ್ನು ಅತ್ಯಂತ ಸಂಕ್ಷೇಪವಾಗಿ ಕವಿ ವಿವರಿಸಿದ್ದನೆ ಮುಂದೆ, ಭಾಷಾಭೂಷಣದಲ್ಲಿನ ವಿಷಯವು ಸ್ಮೃತಿಗಿಂತ ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿದೆಯಾದುದರಿಂದ, ಕವಿಯು ಶಬ್ದಸ್ಮೃತಿಯನ್ನೇ ಮೊದಲುರಚಿಸಿ, ಭಾಷಾಭೂಷಣವನ್ನು ಮುಂದೆ ಬರೆದನೆನ್ನಬಹುದು ಕವಿಯು 'ಕಾವ್ಯಾವಲೋಕನ' ವೆಂಬ ಅಲಂಕಾರ ಗ್ರಂಥವನ್ನು ಬರೆಯಹೋಗಿ, ಅವಕ್ಕೆ ಶಬ್ದವಿಚಾರವೂ ಅಗತ್ಯವೆಂದು ಕಂಡುಬಂದು, ಆತ ಆ ಬೃಹತ್ ಗ್ರಂಥದ ಒಂದು ಅಧಿಕರಣವನ್ನು ವ್ಯಾಕರಣ ವಿಷಯಕ್ಕೆ ಮೀಸಲಾಗಿಟ್ಟನು. ಆದರೆ, ಮುಂದಕ್ಕೆ ವ್ಯಾಕರಣವನ್ನು ಬರೆಯುವ ಮನಸ್ಸಾಗಲು, ಆತನು ಸಂಸ್ಕೃತ ವಿದ್ವಾಂಸನಾದುದರಿಂದ, ಮತ್ತು ಸಂಸ್ಕೃತ ವ್ಯಾಕರಣವನ್ನೇ ಆಧಾರಿಸಿ ಈ ಭಾಷೆಯ ವ್ಯಾಕರಣವನ್ನೂ ಬರೆಯುವ ಆತುರದಿಂದ ಸಂಸ್ಕೃತ ಸೂತ್ರವೃತ್ತಿಗಳೊಡನೆ ಲಿಖಿಸಿದನು. ಮತ್ತಿದು ಸಂಸ್ಕೃತ ಬಲ್ಲವರಿಗೆ ಭಾಷೆಯ ಕುರಿತಾಗಿ ಅಭಿಮಾನವನ್ನು ಹುಟ್ಟಿಸುವಲ್ಲಿ ಸಹಕಾರಿಯಾಯಿತೆನ್ನಬಹುದು. ಈ ಭಾಷಾಭೂಷಣವು ತಣ್ಣಿಂದು ಕೂಲಂಕಷವಾಗಿ ವ್ಯಾಕರಣವನ್ನು ಬೋಧಿಸುವುದಿಲ್ಲವಾದರೂ, ಕನ್ನಡದ ಪ್ರಾಚೀನ ವ್ಯಾಕರಣ ಗ್ರಂಥವಾದುದರಿಂದ, ಇದೊಂದು ಮಹತ್ವದ ಕೃತಿಯಾಗಿದೆ.

ಶಬ್ದಸ್ಮೃತಿಯು ಕೇವಲ ತೊಂಬತ್ತೆಂಟು ಸೂತ್ರಗಳಲ್ಲಿ ಕನ್ನಡ ವ್ಯಾಕರಣದ ಪ್ರಮುಖಾಂಶಗಳನ್ನು ವಿವರಿಸುತ್ತದೆ. ಎಂದರೆ ಅದಷ್ಟು ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿತವಾಗಿದೆ. ಎಂತಲೇ ಅದು ಕ್ಲಿಷ್ಟವಾಗಿಯೇ ಉಳಿದಿದೆ ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟದರಿಂದ ಇದೊಂದು ಮುಖ್ಯವಾದ ಗ್ರಂಥವಾಗಿದೆ.

ಶಬ್ದ ಮಣಿದರ್ಪಣ

ನಾಗವರ್ಮನ ಎರಡು ಕೃತಿಗಳು ಪರಿಶುದ್ಧ ಅಥವಾ ಸಂಪೂರ್ಣ ಗ್ರಂಥಗಳೆಂದು ಹೇಳುವುದು ಸಾಧ್ಯವಿಲ್ಲ. ಅಲ್ಲದೆ, ಅವುಗಳಲ್ಲಿನ ಸೂತ್ರವೃತ್ತಿಗಳೂ ಒಂದಕ್ಕೊಂದು ಹೊಂದಿಕೊಳ್ಳದಿರುವುದೂ ಉಂಟು. ಇದಕ್ಕೆ ಬೇರೆ ಕಾರಣವಿರಬಹುದು. ಆದರೆ, ಅವುಗಳು ಮುಂದೆ ರಚಿತವಾದ ಶಬ್ದ ಮಣಿದರ್ಪಣವೆಂಬ ಇನ್ನೊಂದು ವ್ಯಾಕರಣ ಗ್ರಂಥಕ್ಕೆ ಆಕರವಾಗಿ ಸಂಗ್ರಹಿಸಿದುವು ಕೇಶಿರಾಜನು ೧೨೬೨ರಲ್ಲಿ ಈ ವಿಖ್ಯಾತವಾಗಿ, ಭಾಷಾಭೂಷಣ ಮತ್ತು ಶಬ್ದ ಸ್ಮೃತಿಗಳ ಆದರದಿಂದ ಹೊಸ ವಿಷಯ ಸಂಗ್ರಹದೆಯಿಂದ ಈ ಕೃತಿಯನ್ನು ನಿರ್ಮಿಸಿದರು ಇದು ವರೆಗೆ ದೊರೆತಿರುವ ಕನ್ನಡ ವ್ಯಾಕರಣಗಳಲ್ಲಿ ಶಬ್ದ ಪ್ರಾಮಾಣ್ಯದಲ್ಲಿಯೂ ವಿಸ್ತಾರದಲ್ಲಿಯೂ ಮೊದಲನೆಯ ಸ್ಥಾನವನ್ನು ಇದು ಪಡೆದಿದೆ ಕನ್ನಡದಲ್ಲಿಯೇ ಸೂತ್ರಗಳನ್ನು ಬರೆದು, ಅವಕ್ಕೆ ಕನ್ನಡದಲ್ಲಿಯೇ ವೃತ್ತಿಯನ್ನು ಹೊಂದಿಸಿ, ಅನೇಕಾನೇಕ ಉದಾಹರಣೆಗಳನ್ನು ಪೂರ್ವಕವಿಗಳ ಕೃತಿಗಳಿಂದ ಆರಿಸಿಕೊಟ್ಟಿದ್ದಾನೆ. ಈತನ ಸೂತ್ರ ಜೋಡಣೆಯು ಶಬ್ದಸ್ಮೃತಿಯಂತೆ ಕಂದ ಪದ್ಯಗಳಲ್ಲಿದ್ದರೂ, ಸರಳ ಶೈಲಿಯಲ್ಲಿದೆ. ವಿಷಯಗಳೆಲ್ಲವೂ ನಾಗವರ್ಮನ ಕೃತಿಗಳಾಧಾರವಾಗಿದ್ದು ಅವಕ್ಕೆ ವಿವರವಾದ ವ್ಯಾಖ್ಯಾನದಂತೆ ಇದು ಕಂಡ ಬರುತ್ತದೆ ಕೇಶಿರಾಜನು ಕನ್ನಡಿಗರಿಗೆ ಮಾಡಿದ ಒಂದು ಉಪಕಾರವೆಂದರೆ ಪ್ರಾಮಾಣ್ಯ ಗ್ರಂಥವೊಂದನ್ನು ಅವರಿಗೊದಗಿಸಿದುದು.

ಶಬ್ದಾನುಶಾಸನಂ

೧೬೦೪ರಲ್ಲಿ ಭಟ್ಟಾಕಲಂಕ ದೇವನು "ಕರ್ನಾಟಕ ಶಬ್ದಾನುಶಾಸನಂ" ಎಂಬ ಇನ್ನೊಂದು ವ್ಯಾಕರಣವನ್ನು ಬರೆದನು. ಇದು ಪೌಥವಾಗಿದೆ. ಕನ್ನಡವೆಂದರೆ ಮೂಗುಮುರಿಯುತಿದ್ದ ಸಂಸ್ಕೃತ ವಿದ್ವಾಂಸರೆಡೆಯಲ್ಲಿ ಕನ್ನಡವೂ ಅಮರಾಗ

(ಅನೇ ಪುಟ ನೋಡಿರಿ)

38 ವರುಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.
ದಿ ಪಾಂಗಾಳ ನಾಯಕ್ ಬೇಂಕ್ ಲಿ.
ಪ್ರಧಾನ ಕಚೇರಿ ಉಡುಪಿ, ದ ಭಾರತ
ನಮ್ಮ ಬೇಂಕಿನ
ಶಿವಮೊಗ್ಗ ಶಾಖೆಯು
ತಾ 9-5-1958 ರಂದು
ತೆರೆಯಲ್ಪಡುವುದು.
ಶೀಘ್ರದಲ್ಲಿಯೇ ತೆರೆಯಲಿರುವ ಇತರ ಶಾಖೆಗಳು
ಬೆಂಗಳೂರು — ಬೇಲೂರು — ಕುಣಿಗಲ್
THE PANGAL NAYAK BANK LTD.
ESTD 1920

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೮-೫-೧೯೫೮	ಸಂಚಿಕೆ ೩೫

ಜಾತಿವರ್ಗಗಳ ಪೆಡಂಭೂತ

ನಮ್ಮ ದೇಶದಲ್ಲಿ ಇಂದು ಹಲವಾರು ಪ್ರಶ್ನೆಗಳು ಸಮಸ್ಯೆಗಳ ರೂಪವನ್ನು ತಾಳಿ ಒಗಟುಗಳಾಗಿಯೇ ಕೊನೆಯ ತನಕ ಉಳಿಯುವಂತಾಗಿವೆ. ಇವುಗಳನ್ನು ಬಗೆಹರಿಸುವ ಪ್ರಯತ್ನಗಳಾವುಪೂ ನಡೆಯದೆ ಕೇವಲ ಭಾಷಣ, ವಿಧೇಯಕ, ಕಾಗದಪತ್ರಗಳು ಮೊದಲಾದುವಲ್ಲಿ ಮಾತ್ರ ಯಶಸ್ಸು ಸಿಗುವ ವಾಡಿಕೆ ನಡೆದು ಬಂದಿದೆ. ಇವುಗಳಲ್ಲಿ ಹಿಂದುಳಿದವರ ಅಭಿವೃದ್ಧಿ ಮತ್ತು ಜಾತ್ಯತೀತ ಧೋರಣೆಗಳು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿರುತ್ತವೆ. ಸಮಾಜದ ಇತರ ಬಹುಸಂಖ್ಯಾಕ ಜನರಿಗಿಂತ ಪ್ರತಿ ವಿಷಯದಲ್ಲಿಯೂ ಹಿಂದುಳಿದವರ ಅಲ್ಪಸಂಖ್ಯಾಕರ ಪಂಗಡವೊಂದಿದೆ ಎನ್ನುವುದೂ, ಹೀಗೆ ಬಹುಕಾಲದಿಂದಲೂ ಕಾರಣಾಂತರದಿಂದ ಹಿಂದುಳಿದು ಬಂದವರನ್ನು ಇತರರಿಗೆ ಸಮಾನವಾದ ಸ್ಥಾನಮಾನಗಳಲ್ಲಿ ಕೂರಿಸುವುದೂ, ಅಂತಹರ ಅಭಿವೃದ್ಧಿಗಳಿಗಾಗಿ ಅವರನ್ನು ಸುಸಂಸ್ಕೃತರನ್ನಾಗಿ ಮಾಡುವುದಕ್ಕಾಗಿ ಪ್ರತ್ಯೇಕ ಪ್ರಯತ್ನ ನಡೆಯುವುದು ಅಗತ್ಯವೆಂಬುದೂ ನಿರ್ವಿವಾದ ಆದರೆ, ನಮ್ಮ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಈ ವಿಷಯದಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಳ್ಳುವಂತಾದರೂ, ಅವು ಫಲಕಾರಿಯಾಗಿರುವುದಿಲ್ಲ. ಹಿಂದುಳಿದ ಅಲ್ಪಸಂಖ್ಯಾಕರಿಗೆ ತಂತಮ್ಮ ಸಂಸ್ಕೃತಿ, ಧರ್ಮಗಳನ್ನುಳಿಸಿಕೊಟ್ಟು, ಅವರನ್ನು ಎತ್ತರಿಸುವ ಕೆಲಸ ನಡೆಯುತ್ತಿದೆ. ಅಂತೆಯೇ ಅಂತಹರನ್ನು ಇತರ ಜನರಿಂದ ಪ್ರತ್ಯೇಕಿಸುವ ಕೆಲಸವೂ ನಡೆಯುತ್ತಿರುವುದನ್ನು ಕಾಣುವಾಗ ವಿಚಿತ್ರವೆನಿಸುತ್ತದೆ.

ಉದಾಹರಣೆಗಾಗಿ ಒಂದು ವಿಷಯವನ್ನು ಪ್ರಸ್ತಾಪಿಸಬಹುದು. ಭಾರತದಲ್ಲಿ ಅತ್ಯಂತ ನಿಷ್ಕೃಷ್ಟಾವಸ್ಥೆಯಲ್ಲಿರುವ ಸಮಾಜವೆಂದರೆ ಅಸ್ಪೃಶ್ಯರೆಂದು ದೂರೀಕೃತರಾದ ಹರಿಜನರು. ಇವರು ಬೇರೆಯಾಗಲಿದ್ದ ಕಾರಣಗಳೇನೇ ಇರಲಿ, ಇಂದಿನ ನಾಗರಿಕಯುಗದಲ್ಲಿ ಅವರನ್ನು ಪರಿಶಿಷ್ಟ ಜನಾಂಗದವರೆಂದೋ ಹಿಂದುಳಿದ ವರ್ಗದವರೆಂದೋ ಎತ್ತರಿಸುವ ಪ್ರಯತ್ನ ನಡೆಯುತ್ತಿರುವುದು ಪ್ರಶಂಸನೀಯ. ಹಾಗೆಯೇ ಹರಿಜನರ ಕೇರಿಯಲ್ಲಿ ಮನೆಕಟ್ಟಿ ವಾಸಿಸುವವರಿಗೆ, ಹರಿಜನರನ್ನು ವಿವಾಹವಾಗುವ ಇತರರಿಗೆ ಸರಕಾರ ಸಹಾಯಧನವನ್ನೂ ಕೊಟ್ಟು, ಅಸ್ಪೃಶ್ಯತೆಯನ್ನೂ ಜಾತೀಯ ತೆಯನ್ನೂ ದೂರಗೊಳಿಸಲು ಪ್ರಯತ್ನಿಸುತ್ತದೆ; ಯಾರಾದರೂ ಇಂತಹ ಮನೋಕಾಂಕ್ಷೆಯುಳ್ಳವರಿದ್ದರೆ, ಪ್ರೋತ್ಸಾಹಿಸುತ್ತದೆ. ಆದರೆ, ಹರಿಜನರಲ್ಲಿಯೇ ಇರುವ ನಾನಾ ಪಂಗಡ ಭೇದಗಳು; ಅವುಗಳೊಳಗಿರುವ ಸ್ಪರ್ಧೆಗಳು, ಅಂತರಗಳು, ಸ್ಪರ್ಶಾಸ್ಪರ್ಶತೆಗಳನ್ನು ದೂರೀಕರಿಸುವತ್ತ ಯಾರ ಮನಸ್ಸೂ ಮುನ್ನಡೆದುದು ತೋರುವುದಿಲ್ಲ. ಹರಿಜನರಿಗಾಗಿ ಪ್ರತ್ಯೇಕ ಪಾಠಶಾಲೆಗಳು, ವಸತಿಗೃಹಗಳು, ವಸಾಹತುಗಳು ದಿನೇ ದಿನೇ ಬೆಳೆದು, ಜನಾಂಗದ ಇತರ ವರ್ಗದ ಜನರಿಂದ ದೂರವಿರಲು ಅವರೇ ಅನ್ಯಮಾರ್ಗಗಳನ್ನು ಕಲ್ಪಿಸಿ ಅದಕ್ಕೆ ಉತ್ತೇಜನವೀಯುತ್ತಿರುವಾಗ, ಹರಿಜನೇತರರು ಅವರೊಡನೆ ಬೆರೆಯುವ ಅವಕಾಶವಾದರೂ ಎಲ್ಲಿ? ಇದೇ ರೀತಿಯಲ್ಲಿ ಅಲ್ಪಸಂಖ್ಯಾಕರ ಅಭಿವೃದ್ಧಿ ಕಾರ್ಯಕ್ರಮವೂ ಸರಕಾರವು ಅವರನ್ನು ಮುಂದೆ ತರುವ ಉದ್ದೇಶದಿಂದ ಕೂಡಿರುವುದು ಸ್ತುತ್ಯರ್ಹ ಮತ್ತು ಅಗತ್ಯವೇ. ಆದರೆ, ಮುಂದುವರಿದ ಜನಾಂಗದವರನ್ನು ಜಗ್ಗಿ ಹಿಡಿದು, ಹಿಂದುಳಿದವರನ್ನು ಮುಂದೆ ತರುವ ಕಾರ್ಯ ನಡೆದರೆ ಮಾತ್ರ, ಅದರಿಂದ ದೇಶಕ್ಕೇನೇ ಗಂಡಾಂತರವೊದಗುವ ಪ್ರಶ್ನೆಯಾಗುತ್ತದೆ. ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ವೇತನಗಳು ದೊರೆಯಲಿ, ಇತರ ಸಹಾಯ ದೊರೆಯಲಿ, ಪರೀಕ್ಷೆಗಳಲ್ಲಿಯೂ ಕೆಲವೊಂದು ಅಂಕಗಳ ವಿನಾಯತಿಯಿರಲಿ, ಸರಕಾರೀ ಉದ್ಯೋಗಾವಕಾಶಗಳಲ್ಲಿಯೂ ಅವರಿಗೆ ಸ್ಥಾನಗಳು ಕಾಯ್ದಿರಿಸಲ್ಪಡಲಿ — ಈ ಮಾತಿಗೆ ಯಾರೂ ಬೇಡವೆನ್ನುವುದಿಲ್ಲ. ಆದರೆ, ಒಬ್ಬ ವ್ಯಕ್ತಿಯು ಹಿಂದುಳಿದ ಜನಾಂಗ ಅಥವಾ ವರ್ಗದ ಮನೆತನದಲ್ಲಿ ಹುಟ್ಟಿದ ಮಾತ್ರಕ್ಕೇನೇ ಆತನಿಗೆ ಇಷ್ಟೊಂದು ಸೌಲಭ್ಯಗಳು ದೊರೆಯ ಎನ್ನುವುದು ಸರಿಯೆ? ಹಿಂದುಳಿದವರಲ್ಲಿ ಶ್ರೀಮಂತರಿರಬಹುದು ಅವರಲ್ಲಿಯೂ ಮುಂದುವರಿದವರಿರಬಹುದು.— ಅಂತಹರ ಮಕ್ಕಳಿಗೆ ವಿದ್ಯಾರ್ಥಿ ವೇತನ ಬೇಕೆ? ಕಲಿಯುವಂತೆ ಪ್ರೋತ್ಸಾಹಿಸಲು, ದೊರೆಯ ಬೇಕಾದ ಆವಶ್ಯಕ ಅಂಕಗಳಲ್ಲಿ ಕಡಿತಮಾಡಬೇಕೆ? ಇಂತಹ ಕ್ಷುಲ್ಲಕವೆನಿಸುವ ಹಲವಾರು ವಿಚಿತ್ರ ಕಾರ್ಯಕ್ರಮಗಳು ಮುಂದುವರಿದ ಜನಾಂಗಗಳಲ್ಲಿಯೂ ಆರ್ಥಿಕ ದೃಷ್ಟಿಯಿಂದ ಹಿಂದುಳಿದವರಲ್ಲಿಯೂ ಬೇಸರವನ್ನುಂಟು ಮಾಡದಿರುವುದೆ? ಆದುದರಿಂದ, ಹಿಂದುಳಿದವರ ಬಗ್ಗೆ ಕೊಡುವ ಗಮನದಲ್ಲಿ ಒಂದಂಶವನ್ನು ಮುಂದುವರಿದವರ ಪಲುಎಾಗಿಯೂ ಈಯುವುದು ಅಗತ್ಯವೆಂದು ಹೇಳಬಹುದು.

ಇನ್ನು ನಮ್ಮ ಮೈಸೂರು ರಾಜ್ಯದಲ್ಲಿ ಹಿಂದುಳಿದವರು ಯಾರು ಎಂಬ ಪ್ರಶ್ನೆಯೂ ಭೂತಾಕಾರವನ್ನು ತಾಳಿದೆ. ಇತ್ತೀಚೆಗೆ ಮೈಸೂರು ವಿಧಾನಸಭೆಯಲ್ಲಿ ಹಿಂದುಳಿದವರು ಯಾರು ಎಂಬ ಪ್ರಶ್ನೆ ಎದ್ದಾಗ ಬ್ರಾಹ್ಮಣೇತರರು ಎಂಬ ಉತ್ತರ ಬಂತು. ಹಳೆಯ ಮೈಸೂರಿನ ಈ ಪದ್ಧತಿಯಿಂದ ಅಲ್ಲಿನ ಜನರಲ್ಲಿ ಸೇರಿಹೋಗಿರುವುದನ್ನು ಹಿಂದುಳಿದವರು ಎಂದು ತಿಳಿಯಬಹುತ್ತದೆ. ಹಿಂದುಳಿದವರೇ ಅಧಿಕ ಸಂಖ್ಯಾಕರಿರುವಾಗ ಮುಂದುವರಿದವರಿಗೆ ಯಾವ ಸ್ಥಾನಮಾನಗಳು ದೊರೆಯಬಹುದು? ಹೀಗಾಗಿ ಅದೊಂದು ಹಿಂದುಳಿದ ರಾಜ್ಯವೇ ಆಗಿರುವಂತೆ ತೋರುತ್ತದೆ.

ಯಾವುದಾದರೂ ಒಂದು ರಾಜ್ಯದಲ್ಲಿ ಬಹುಸಂಖ್ಯಾಕರು ಹಿಂದುಳಿದವರೆನ್ನುವುದು ಶೋಭನೀಯವಲ್ಲ; ಇದರಲ್ಲೂ ಮುಂದುವಂದ ಮಾದರಿ ಮೈಸೂರಿನಲ್ಲಿ ಸಲ್ಲದೇ ಸಲ್ಲದು. ಆದುದರಿಂದ ಹಿಂದುಳಿದವರು ಯಾರು ಎಂಬುದು ಮೊದಲಾಗಿ ನಿರ್ಧಾರಕ್ಕೆ ಬರಬೇಕು. ಜಾತಿಯಲ್ಲಿ ಹಿಂದುಳಿದವರು, ವರ್ಗದಲ್ಲಿ ಹಿಂದುಳಿದವರು ಆರ್ಥಿಕ ದೃಷ್ಟಿಯಿಂದ ಹಿಂದುಳಿದವರು ಮೊದಲಾದ ವಿವರಗಳನ್ನು ಕಲೆಹಾಕಿ, ಅವರಲ್ಲಿ ಅವರವರಿಗೆ ಅಗತ್ಯವೆನಿಸಿದ ಮತ್ತು ಸಮಂಜಸವೆನಿಸಿದ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡಬೇಕು. ವಿದ್ಯಾಲಯಗಳಲ್ಲಿ, ಸರಕಾರಿ ನೌಕರಿಗಳಲ್ಲಿ ಇಂತಹ ಜಾತೀಯ ಮತ್ತು ವರ್ಗೀಯ ಪ್ರಶ್ನೆಗಳು ಇರುವವರೆಗೆ ಜಾತೀಯತೆ ನಾಶವಾಗಲಾರದು; ನಮ್ಮನು ಜಾತ್ಯತೀತ ಸರಕಾರವಾಗಲಾರದು. ಯೋಗ್ಯತೆಯನ್ನು ಅನುಸರಿಸಿಯೇ ಸಾಧ್ಯವಾದಷ್ಟು ಮಟ್ಟಿಗೆ ಸರಕಾರವು ತನ್ನ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಲ್ಲಿ, ದೇಶದ ಉದ್ಧಾರವಿದೆ; ಮತ್ತು ಕ್ಷೇಮವಿದೆ; ಜಾತೀಯತೆ ನಿರ್ಮೂಲನವೂ ಸಾಧ್ಯವಿದೆ; ಹಿಂದುಳಿದವರು—ಮುಂದುವರಿದವರೆಂಬ ಭೇದ ತೊಲಗುವುದೂ ಸಂಭವನೀಯವಿದೆ.

ಸಂಕ್ಷಿಪ್ತ ಸುದ್ದಿಗಳು

ಭಾವಿ ತಾಲೂಕು ಬೋರ್ಡುಗಳು

ಮೈಸೂರ ಗ್ರಾಮ ಪಂಚಾಯತಿಯ ಮತ್ತು ಸ್ಥಳೀಯ ಸಂಸ್ಥೆಗಳ ವಿಧೇಯಕವೊಂದು ಮೈಸೂರ ವಿಧಾನ ಸಭೆಯಲ್ಲಿ ಮಂಡಿಸಲ್ಪಟ್ಟಿತು. ಜಿಲ್ಲಾ ಬೋರ್ಡುಗಳ ಬದಲು ತಾಲೂಕು ಬೋರ್ಡ್‌ಗಳನ್ನು ರಚಿಸುವ ಅಂಶವೇ ಈ ವಿಧೇಯಕದ ಪ್ರಧಾನ ವೈಶಿಷ್ಟ್ಯವಾಗಿದೆ. ಇದರನ್ವಯ, ಗ್ರಾಮ ಪಂಚಾಯತಿಗಳಿಗೆ ಪ್ರತ್ಯಕ್ಷ ಚುನಾವಣೆಯು ನಡೆಯುತ್ತದೆ. ಈ ಪಂಚಾಯತಿಯ ಸದಸ್ಯರು ತಾಲೂಕು ಬೋರ್ಡಿನ ಸದಸ್ಯರನ್ನು ಅಪ್ರತ್ಯಕ್ಷ ಮತದಾನದ ಮೂಲಕ ಆರಿಸಲಿರುವರು. ಸರಕಾರವು ಹಳ್ಳಿಯ ಆದಾಯದಲ್ಲಿ ನೂರಕ್ಕೆ ೧೫ರಷ್ಟು ಗ್ರಾಮ ಪಂಚಾಯತಿಗೆ, ತಾಲೂಕಿನ ಆದಾಯದಲ್ಲಿ ನೂರಕ್ಕೆ ೧೫ರಷ್ಟು ತಾಲೂಕು ಬೋರ್ಡ್‌ಗಳಿಗೆ ಕೊಡುವುದರಿಂದ ಅವುಗಳ ಆರ್ಥಿಕ ಸ್ಥಿತಿಯು ಸುಧಾರಿಸಲ್ಪಡುವುದು. ಈಗ ೧೪ ಸಾವಿರಕ್ಕೂ ಮಿಕ್ಕಿರುವ ಪಂಚಾಯತಗಳನ್ನು ೮ ಸಾವಿರಕ್ಕೆ ಇಳಿಸಲಾಗುವುದು. ಇದಕ್ಕಾಗಿ ಪ್ರತಿ ೧೫೦೦ ಜನಸಂಖ್ಯೆಗೊಂದರಂತೆ ಗ್ರಾಮ ಪಂಚಾತಿಗಳು ರಚಿಸಲ್ಪಟ್ಟು, ಈಗ ತೀರ ಚಿಕ್ಕದಿರುವುವುಗಳನ್ನು ಒಂದುಗೂಡಿಸಲಾಗುವುದು. ರಾಜ್ಯದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಸಾಕಷ್ಟು ಧನಬಲ ಹಾಗೂ ಅಧಿಕಾರ ರಹಿತವಾದ ಪ್ರಜಾಸ್ವಭುತ್ವವಾದಿ ಸಂಸ್ಥೆಗಳ ಸ್ಥಾಪನೆಗೆ ಇದರಿಂದ ಸಹಾಯವಾಗುವುದೆಂದು ನಂಬಲಾಗಿದೆ. ಈ ವಿಧೇಯಕವನ್ನು ಕೇಂದ್ರ ಸರಕಾರವು ರಾಜ್ಯಗಳಿಗೆ ಕಳಿಸಿದ ಸೂಚನೆಗಳ ನ್ವಯ ರೂಪಿಸಲಾಗಿದೆ.

ಸಂಪು ನಡೆಯಬಾರದು

ದೇಶದಲ್ಲಿ ಯಾವುದೇ ರೀತಿಯ ಸಂಪು ನಡೆಯದಂತೆ ಸರಕಾರವು ನೋಡಿಕೊಳ್ಳಬೇಕು. ಇಲ್ಲವಾದರೆ ಪ್ರಾರಂಭವಾದ ಸಂಪುಗಳನ್ನು ಆದಷ್ಟು ಬೇಗನೇ ಮುಕ್ತಾಯಗೊಳಿಸಬೇಕು. ಇದು ಸರಕಾರದ ಕರ್ತವ್ಯ. ಕೇವಲ ಕಾಯದೆ ಸುವ್ಯವಸ್ಥೆಯನ್ನು ಕಾಯುವುದಷ್ಟೆ ಅದರ ಕಾರ್ಯವಲ್ಲ ಉದ್ಯೋಗ ಸಂಸ್ಥೆಯ ಮಾಲಿಕರಿಗೆ ಮತ್ತು ನೌಕರರಿಗೆ ಮನಬಂದಂತೆ ಹೊಯ್ದಾಡಲು ಅವಕಾಶವಿರಬಾರದು. ಕೊನೆಗೆ ಅದು ಬಂಡವಳದ್ದಿರಲಿ ಅಥವಾ ಕೆಲಸಗಾರರ ವೇತನ ಪ್ರಶ್ನೆಯಿರಲಿ ಅದು ಗ್ರಾಹಕರ ವಸೂಲಿಯದಿರುತ್ತದೆ." ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಅಧ್ಯಕ್ಷಭಾಷಣಗಳಾದ ಶ್ರೀ ಎಸ್. ವಿ. ಗಾಡಗೀಳರು ಸಿಟಿಬೇಂಕಿನ ನೌಕರರ ಸಂಘದ ಸ್ನೇಹ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಮಾತಾಡಿದರು.

ಸರ್ವೋದಯ ಸಮ್ಮೇಳನ

ಮೇ ತಿಂಗಳ ೨೯-೩೦ ಹಾಗೂ ಜೂನ್ ೧ರಂದು ಪಂಡರಪುರದಲ್ಲಿ ದಶಮ ಸರ್ವೋದಯ ಸಮ್ಮೇಳನವು ನಡೆಯಲಿರುವುದು. ಈ ಬಗ್ಗೆ ಸಾಕಷ್ಟು ಕಾರ್ಯಗಳು ನಡೆಯುತ್ತಿವೆ. ಕರ್ನಾಟಕದಿಂದ ಇದಕ್ಕೆ ಪ್ರತಿನಿಧಿಗಳಾಗಿ ಹೋಗಬಯಸುವವರು [೩ ರೂ ನಿವಾಸ ಶುಲ್ಕವನ್ನು ಮೇ ೧೦ರೊಳಗೆ ಹುಬ್ಬಳ್ಳಿ ಅಥವಾ ಬೆಂಗಳೂರಿನ ಸರ್ವಸೇವಾ ಸಂಘಕ್ಕಾಗಲೀ ಮಂಗಳೂರಿನ ಎಸ್. ಯು. ರಾಮಚಂದ್ರ ರಾವ್, ಆರ್ಯ ಸಮಾಜ ರಸ್ತೆ, ಮಂಗಳೂರು-೩ ಇವರಿಗಾಗಲೀ ಕಳಿಸಿ ನಿವಾಸ ಪ್ರವೇಶ ಪತ್ರ ಹಾಗೂ ರೇಲ್ವೆ ರಿಯಾಯತಿ ಪ್ರಮಾಣಪತ್ರಗಳನ್ನು ತರಿಸಿಕೊಳ್ಳಬೇಕಾಗಿದೆ.

ಬುದ್ಧ ಬೋಧಿಸಿದ ತತ್ವಗಳು

ಬುದ್ಧನು ಸ್ವತಂತ್ರ ವಿಚಾರ ಪ್ರಣಾಲಿಯ ಜಗತ್ತಿನಲ್ಲಿದ್ದನು. ವೇದಗಳ ಯುಗವು ಹಿಂದಾಗಿತ್ತು. ಕರ್ಮಕಾಂಡವು ಬೆಳೆದು ವಿವಿಧ ಪದ್ಧತಿಗಳಲ್ಲಿ ಘರ್ಷಣೆಯು ತಲೆದೋರಿತ್ತು. ಆಗ, ಆತನು ಯಾವ ಅತಿರೇಕವನ್ನೂ ಬೋಧಿಸದೆ, ಮಾನವನ ಸಮಸ್ಯೆಗಳನ್ನು ಬಿಡಿಸಲು ಯಾವ ಸೂತ್ರವನ್ನೂ ಉಪದೇಶಿಸದೆ, ಸಮಸ್ಯೆಯ ಮೂಲವನ್ನು ಕಂಡುಹಿಡಿದು, ಅದರ ಪರಿಹಾರ ಕಂಡುಕೊಳ್ಳಬೇಕೆಂದು ತಿಳಿಸಿದನು. ಭಾರತದ ಇಂದಿನ ಸಮಾಜದಲ್ಲಿನ ಸಮಸ್ಯೆಗಳನ್ನೆಲ್ಲ ಪರಿಹರಿಸಿಕೊಳ್ಳಬೇಕಾಗಿದ್ದರೆ, ಜನರು ಬುದ್ಧನ ಜೀವನವನ್ನೂ ಆತನ ತತ್ವಜ್ಞಾನವನ್ನೂ ಅರಿತು ಅರಿಗಿಸಿಕೊಳ್ಳಬೇಕಾದುದು ಅತ್ಯಗತ್ಯವಾಗಿದೆಂದು ಬುದ್ಧ ಜಯಂತಿ ಉತ್ಸವವನ್ನು ಪ್ರಾರಂಭಿಸುತ್ತ ಶ್ರೀ ದಿವಾಕರರು ನುಡಿದರು.

ರಾಷ್ಟ್ರೀಯ ಅಭಿವೃದ್ಧಿ ಮಂಡಳ

ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯು ನವದೆಹಲಿಯಲ್ಲಿ ತಾ. ೪ರಂದು ಸೇರಿತ್ತು. ಇದರಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ವೆಚ್ಚವಾಗುವ ನೊಬಲಗನ್ನು ಕಡಿಮೆ ಮಾಡುವ ಸೂಚನೆ ಬಂದರೂ ವಿವಿಧ ಮುಖ್ಯಮಂತ್ರಿಗಳ ಒತ್ತಾಯದಿಂದಾಗಿ ರಖಮು ಹಾಗೆಯೇ ಉಳಿದು. ಅದರಲ್ಲಿ ೪೫೦೦ ಕೋಟಿ ಮತ್ತು ೩೦೦ ಕೋಟಿ ರೂಪಾಯಿಗಳ ಎರಡು ಭಾಗಗಳನ್ನು ಮಾಡಲಾಯಿತು. ಪಂಚವಾರ್ಷಿಕ ಯೋಜನೆಯ ಬಗ್ಗೆ ಯೋಜನಾ ಆಯೋಗವು ಮನವಿಯೊಂದನ್ನು ಸಿದ್ಧಪಡಿಸಿ, ಸದ್ಯದ ಅಂದಾಜಿನಂತೆ ಯೋಜನಾವಧಿಯಲ್ಲಿ ೪೨೬೦ ಕೋಟಿ ರೂಪಾಯಿಗಳು ದೊರೆಯಬಹುದೆಂದು ಹೇಳಿದೆ. ಈ ಹಣದಲ್ಲಿ ಸ್ವದೇಶೀಯ ಕರಗಳಿಂದ ೨,೦೨೨ ಕೋಟಿ, ವಿದೇಶೀಯ

ಸಹಾಯದಿಂದ ೧,೦೦೮ ಕೋಟಿ ಮತ್ತು ಕೊರತೆ ಧನವಿನಿಯೋಗದಿಂದ ೧,೨೦೦ ಕೋಟಿ ರೂಪಾಯಿಗಳು ಕೂಡಿರುತ್ತವೆ. ಆದರೆ, ಈ ಪ್ರಮಾಣವು ೪೫೦೦ ಕೋಟಿ ಗಳಿಗೇರಬೇಕಾದರೆ ೨೪೦ ಕೋಟಿ ಹಣ ವನ್ನು ಹೇಗಾದರೂ ಮಾಡಿ ಒಟ್ಟುಗೂಡಿ ಸಬೇಕಾಗಿದೆ.೧೦೦ ಕೋಟಿ ಅನ್ನಿಕ ಕರಗ ಳಿಂದ, ೬೦ ಕೋಟಿ ಸಾಲ ಹಾಗೂ ಚಿಕ್ಕ ಉಳಿತಾಯ ಯೋಜನೆಗಳಿಂದ ಮತ್ತುಳಿದ ೮೦ ಕೋಟಿಯನ್ನು ಮಿತವ್ಯ ಯಸಾಧನೆಯಿಂದ ಹಾಗೂ ಬಾಕಿಯುಳಿ ದ ಕರ ವಸೂಲಿಯಿಂದ ತುಂಬಿಸಿಕೊಳ್ಳ ಬಹುದು.ಎಂದು ಆಯೋಗವು ಸೂಚಿಸಿದೆ.

ಭಾರತದ ಶಸ್ತ್ರಾಸ್ತ್ರಗಳು

ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದಂತೆ ವೈ ಜ್ಞಾನಿಕ ಸಂಶೋಧನೆ, ವಿಕಾಸ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಗ್ರಾಹಕರು ಮತ್ತು ಉತ್ಪಾದಕರ ನಡುವೆ ಪರಿಣಾಮಕಾರಿಯಾದ ಸಂಬಂಧವು ಸಾ ಧಿಸಲ್ಪಟ್ಟಿದೆ. ಪಾರ್ಲಿಮೆಂಟಿನಲ್ಲಿ ರಕ್ಷ ಣಾ ಮಂತ್ರಿ ಶಾಖೆಗೆ ಸಂಬಂಧಿಸಿದ ಬೇಡಿ ಕೆಗಳ ಬಗ್ಗೆ ಚರ್ಚೆಗಳು ನಡೆದ ನಂತರ ಈ ಶಾಖೆಯ ಮಂತ್ರಿಯವರು ಈಚೆಗೆ ದೆಹಲಿಯಲ್ಲಿ ಸೇನಾಧಿಕಾರಿಗಳ ಸಭೆ ಯೊಂದನ್ನು ಸೇರಿಸಿದ್ದರು. ಈ ಸಭೆ ಯಲ್ಲಿ ಸಾಮಂತ್ರಿಗಳು ಭೂ, ನೌಕಾ ಹಾಗೂ ವಿಮಾನ ಸೇನೆಗಳಿಗೆ ಆವಶ್ಯಕ ವಾಗುವ ಎಲ್ಲ ವಿಧದ ಶಸ್ತ್ರಾಸ್ತ್ರಗ ಳನ್ನೂ ಉತ್ಪಾದಿಸುವ ಸಾಮರ್ಥ್ಯವನ್ನು ಹೆಚ್ಚಿಸುವ ಸಂಬಂಧವಾದ ಸಮಸ್ಯೆಯ ನ್ನು ಬಗೆಹರಿಸುವ ಹೊಸ ಮಾರ್ಗವೊಂ ದನ್ನು ಕಂಡುಹಿಡಿಯುವ ಅಗತ್ಯವನ್ನು ಒತ್ತಿಹೇಳಿದರು. ದೇಶದಲ್ಲಿಯೇ ತಯಾ ರಾದ ಶಸ್ತ್ರಾಸ್ತ್ರಗಳಿಂದ ಭಾರತದ ಸ ಶಸ್ತ್ರ ಸೇನೆಗಳು ಸುಸಜ್ಜಿತಗೊಳ್ಳಬೇ ಕೆಂದವರು ಸೂಚಿಸಿದರು.

ನೇಕಾರರಿಗೆ ವಸತಿಸೌಕರ್ಯ

ಭಾರತ ಸರಕಾರದವರು ಅಂಗೀಕರಿ ಸಿರುವ ಕಾರ್ಯಯೋಜನೆಗಳ ಮೇರೆಗೆ ಕೈಮಗ್ಗದ ನೇಕಾರರಿಗಾಗಿ ಮೈಸೂರು ಮತ್ತು ಒರಿಸ್ಸ ರಾಜ್ಯಗಳಲ್ಲಿ ಮತ್ತೆ ಎರ ಡು ವಸಾಹತುಗಳನ್ನು ನಿರ್ಮಿಸಲಾಗು ವುದು. ಮೈಸೂರು ಯೋಜನೆಯನ್ವಯ ಆದಿಕರ್ನಾಟಕ ನೇಕಾರ ಸಹ ಕಾರ ಸಂಘದ ಸದಸ್ಯರಿಗಾಗಿ ೧೦೦ ವಸತಿಗೃಹಗಳನ್ನು ನಿರ್ಮಿಸ ಲಾಗುವುದು. ಇದನ್ನು ಕಾರ್ಯರೂಪದ ಲ್ಲಿ ತರುವ ಸಲುವಾಗಿ ಕೇಂದ್ರವಾಣಿಜ್ಯ ಹಾಗೂ ಕೈಗಾರಿಕಾ ಮಂತ್ರಿ ಶಾಖೆಯ ವರು ಮೈಸೂರು ರಾಜ್ಯಕ್ಕೆ ೯೮ ಸಾವಿರ ರೂಪಾಯಿಗಳನ್ನು ಸಾಲದ ರೂಪದಲ್ಲಿ ಮಂಜೂರುಮಾಡಿರುವರು. ಈ ಸಾಲದ ಮೂರರಲ್ಲೊಂದು ಭಾಗವನ್ನು ಈಗಾಗ ಲೇ ಕೊಡಲಾಗಿದ್ದು, ಉಳಿದಂಶವನ್ನು ವಸತಿಗೃಹಗಳ ನಿರ್ಮಾಣಕಾರ್ಯವನ್ನು ನೋಡಿಕೊಂಡು ಎರಡು ಸಮಾನ ಕಂ ತುಗಳಲ್ಲಿ ಕೊಡಲಾಗುವುದು.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆ ಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ

ಉಡುಪಿ

ಡಾ. ಮಾಧವ ಪೈಗಳ ಷಷ್ಟ್ಯಬ್ದಿ ಪೂರ್ತಿ ಸಮಾರಂಭವು—

ಇದೇ ತಾ. ೩೦೦೦ದು ವಿಶ್ವೋದಯಾ ಜುಬಿಲಿ ಕ್ಲಬ್ಬಿನ ವತಿಯಿಂದ ಬಿಡಾರಿನ ಮಾಜಿ ರಾಜ್ಯಪಾಲ ರಾದ ಶ್ರೀ ಆರ್. ಆರ್. ದಿವಾಕರರ ಅಧ್ಯ ಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಡಾ. ಮಾಧವ ಪೈ ಷಷ್ಟ್ಯಬ್ದಿಪೂರ್ತಿ ಸಮಿತಿಯ ಅಧ್ಯಕ್ಷ ಡಾ. ಯು. ಸುಂದರರಾಮ ಪೈಗಳು ಸ್ವಾಗತ ಭಾಷಣಮಾಡುತ್ತ ಬ್ಯಾಂಕಿಂಗ್ ಕೈ ಗಾರಿಕೋದ್ಯಮ ಹಾಗೂ ಶೈಕ್ಷಣಿಕ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು ಖ್ಯಾತಿಗಳಿಸಿದ ಡಾ. ಟಿ. ಎಮ್. ಎ. ಪೈಗ ಳಿಗೆ ಷಷ್ಟ್ಯಬ್ದಿಪೂರ್ತಿ ಸಮಾರಂಭವನ್ನು ಸೆರ ವೇರಿಸಿ ಅವರಿಗೆ ಒಂದು ಲಕ್ಷದ ನಿಧಿಯನ್ನ ಸಮರ್ಪಿಸಬೇಕೆಂದಿದ್ದಾಗ ಒಂದು ಲಕ್ಷದ ೨೫ ಸಾವಿರ ಕೂಡಿಬಂದಿರುವುದು. ಡಾ. ಪೈಗಳ ಮೇಲೆ ಜನತೆಗಿರುವ ಗೌರವವನ್ನು ವ್ಯಕ್ತಪ ಡಿಸುತ್ತಿದೆಂದರು. ಶ್ರೀ ಟಿ. ಎ. ಪೈಗಳು ಶ್ರೀಗಳವರ ಮಂಗಳಮಯ ರಾಜ್ಯಪಾಲ ಶ್ರೀ ಪ್ರಕಾಶ್, ಕೇರಳ ರಾಜ್ಯಪಾಲ ಬಿ. ರಾಮಕೃಷ್ಣ ರಾವ್, ಕೇಂದ್ರ ಸರಕಾರದ ಮಂತ್ರಿ ಕೆ. ಸಿ. ರೆಡ್ಡಿ, ಮೈಸೂರು ಮುಖ್ಯ ಮಂತ್ರಿ ಎಸ್. ನಿಜಲಿಂಗಪ್ಪ, ರಾಜ್ಯ ಸಭೆಯ ಉಪಾ ಧ್ಯಕ್ಷರಾದ ಎಸ್. ವಿ. ಕೃಷ್ಣಮೂರ್ತಿ ರಾವ್, ಮೈಸೂರು ಶಾಸನ ಸಭಾಧ್ಯಕ್ಷ ಎಸ್. ಆರ್. ಕಂಠಿ, ಮದ್ರಾಸು ಮಂತ್ರಿ ಎಂ. ಭಕ್ತವತ್ಸ ಲಂ, ಮೈಸೂರು ಮಂತ್ರಿ ಬಿ. ವೈಕುಂಠ ಬಾಳಿಗ, ಮಂತ್ರಿ ವೀರಣ್ಣ ಗೌಡ, ಕೇರಳ ಮಂತ್ರಿ ವಿ. ಆರ್. ಕೃಷ್ಣ ಅಯ್ಯರ್, ಮದ್ರಾ ಸು ಮಂತ್ರಿ ಸಿ. ಸುಬ್ರಹ್ಮಣ್ಯಂ, ಮೈಸೂರು ಉಪಮಂತ್ರಿ ರಾಮಕೃಷ್ಣ ಹೆಗ್ಡೆ, ಮೈಸೂರು ಮಂತ್ರಿಗಳಾದ ಸಿ. ವೆಂಕಟಪ್ಪ, ಅಜಾ. ಎಸ್. ರುದ್ರಪ್ಪ, ಆರ್. ಎಂ. ಪಾಟೀಲ, ಟಿ. ಮರಿಯಪ್ಪ, ಆಂದ್ರ ಮಂತ್ರಿ ಕೌಲಾ ವೆಂಕಟ್ರಾವ್, ವಿಶ್ವವಿದ್ಯಾಲಯ ಗ್ರಾಂಟ್ ಕಮಿಷನಿನ ಅಧ್ಯಕ್ಷ ಸಿ. ಡಿ. ದೇಶಮುಖ್, ಕೆ. ಹನುಮಂತಯ್ಯ, ಮೈಸೂರು ಅಧ್ಯಕ್ಷ ಎಸ್. ಚೆನ್ನಯ್ಯ, ಎ. ಬಿ. ಶೆಟ್ಟಿ, ಟಿ ವೆಂಕಟ ಸುಬ್ಬ ರಾವ್, ಡಾ. ಸಿ. ಎಸ್. ಪಾಟೀಲ, ಎಂ. ಗೋವಿಂದ ಪೈ, ಕಸ್ತೂರಿ ಶ್ರೀನಿವಾಸ ನ್, ಸ್ವಾಮಿ ರಾಮದಾಸ್, ಡಿ. ಸಿದ್ದಾಚಟ್ಟಿ, ಸಿ. ಆರ್. ಶ್ರೀನಿವಾಸನ್, ಎಂ. ಸಿ. ಪಾ ಟೀಲ, ರತ್ನಸರ್ವರಾಜ ಹೆಗ್ಡೆ, ಶ್ರೀ ಕೃಷ್ಣಾ ಪುರ ಸ್ವಾಮಿಗಳೇ ಮೊದಲಾದವರಿಂದ ಬಂದ ಸಂದೇಶನನ್ನೋದಿದರು.

ಶ್ರೀ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು ಹಿಂದಿನ ರಾಜ ಸುತಾರಾಜರಂತೆ ಉಡುಪಿಯಲ್ಲಿ ಔದ್ಯೋಗಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅವಿರತವಾಗಿ ದುಡಿದು ಖ್ಯಾತಿಗಳಿಸಿದ ಡಾ. ಟಿ. ಎಂ. ಎ. ಪೈಗಳಿಗೆ ಶ್ರೀ ಕೃಷ್ಣ ಪರಮಾತ್ಮನು ಆಯು ರಾರೋಗ್ಯವನ್ನು ದಯಸಾಲಿಸಿ ಮುಂದಕ್ಕೂ ಇನ್ನೂ ಹೆಚ್ಚಿನ ಜನಸೇವೆ ದೇಶಸೇವೆ ಗೈಯು ವಂತೆ ಆಸಗ್ರಹಿಸಲೆಂದು ಆಶೀರ್ವದಿಸಿದರು.

ಡಾ. ಪೈಗಳಿಗೆ ಉಡುಪಿಯ ನಗರಸಭೆ ಮುಂತಾದ ವಿವಿಧ ಸಂಘ ಸಂಸ್ಥೆಗಳಿಂದ ಮಾ ನಪತ್ರಗಳನ್ನರ್ಪಿಸಲಾಯಿತು.

ಡಾ. ಪೈಗಳು ಸೋದೆ ಶ್ರೀಗಳನ್ನೂ ದಿವಾ ಕರರನ್ನೂ ಅಭಿನಂದಿಸುತ್ತಾ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಂಕಲ್ಪ ಸ್ಥಾಪನಾ ಕಾಲದಲ್ಲಿ ಮಂತ್ರಿಗಳಾದಿಯಾಗಿ ಎಲ್ಲರೂ ಹೆದರಿತಿದ್ದರೂ ಶ್ರೀಗಳವರ ಅಶೀ ರ್ವಾದ ಶ್ರೀಕೃಷ್ಣನ ಅನುಗ್ರಹ, ಜನತೆಯ ಸಂಪೂರ್ಣ ಸಹಕಾರ ದೊರಕಿದ್ದಲ್ಲಿ ಯಾವ ಸಂಘ ಸಂಸ್ಥೆಗಳನ್ನಾದರೂ ಕಟ್ಟಿ ಬೆಳೆಸಬಹು ದೆಂದೂ ತನ್ನ ಬಾಲ್ಯ ಜೀವನದಲ್ಲಿ ಕಲ್ಯಾಣ ಪುರ ಹಿಂದೂ ಹಾಯರ್ ಎಲಿಮೆಂಟರಿ ಶಾ ಲಾಧ್ಯಾಪಕನಾಗಿ ಆ ಶಾಲಾ ಅಭಿವೃದ್ಧಿಯ ಕುರಿತು ಪ್ರಸ್ತಾಪಿಸಿ, ಇಂದು ಪ್ರಾಥಮಿಕ ಕಷ್ಟಾಯ ಶಿಕ್ಷಣ, ಬ್ರೌಢ ವಿದ್ಯಾಭ್ಯಾಸದಲ್ಲಿ ಎಡೆದು ತೊಡರುಗಳನ್ನು ನಿವರಿಸಿ ಜನ ಬೆಂ ಬಲವನ್ನು ಕೋರಿ ಎಳೇಜೆಮಿ ಆಫ್ ಜನರ ಲ್ ಎಜ್ಯುಕೇಶನಿನಂತಹ ಸಂಘ ಸಂಸ್ಥೆಗಳು ಹೆಚ್ಚುವಂತೆಯೂ ಕುಂದಾಪುರ, ಕಾರ್ಕಳ, ಮೂಲ್ಕಿಗಳಲ್ಲಿ ಆರ್ಟ್ಸ್ ಕಾಲೇಜು, ಕಾರವಾ ರದಲ್ಲಿನ್ನೊಂದು ಮೆಡಿಕಲ್ ಕಾಲೇಜು, ಹೊ ನ್ನಾವರದಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಅವಶ್ಯಕತೆಯ ಕುರಿತು ಪ್ರಸ್ತಾಪಿ ಸಿ ಜನತೆಯ ಸಹಕಾರ ಮನೋವೃತ್ತಿಯಿಂದ ಆ ಬಗ್ಗೆ ಪ್ರಯತ್ನ ಸ್ವೀಯಬೇಕೆಂದೂ ವಿವರಿ ಸಿದರಲ್ಲದೆ ತನ್ನ ವೈದ್ಯಕೀಯ ವೃತ್ತಿಯನ್ನು ತೊರೆದು ಬೇಂಕಿಂಗ್ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ದುಡಿಯಲು ಕಾರಣಕೊಟ್ಟು ಆ ಬಗ್ಗೆ ನೆರವಾದ ಶ್ರೀ ಎ. ಬಿ. ಶೆಟ್ಟಿ ಮತ್ತು ಎಂ.ವಿ.ಕೃಷ್ಣರಾಯರೇ ಮೊದಲಾದವರಿಗೆ ಅಭಿ ನಂದಿಸಿ ಅನೇಕ ಸಂಘ ಸಂಸ್ಥೆಗಳು ತನಗಿತ್ತ ಮಾನಪತ್ರಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಪತ್ರಕೋದ್ಯಮಿಗಳು ತನ್ನ ಎಲ್ಲಾ ಕಾರ್ಯಗ ಳಲ್ಲಿ ತನಗಿತ್ತ ಸಹಕಾರಗಳನ್ನು ಕೊಂಡಾಡಿ, ಈ ಸಮಾರಂಭವನ್ನು ರಚಿಸಿ ಈ ಸಮಾರಂಭದ ಸ್ವೇಚ್ಛಾಧಿಪತಿಯಾದ ಡಾ. ಎಸ್. ಆರ್. ಪೈಗಳಿಗೂ ಸಮಾರಂಭದಲ್ಲಿ ಭಾಗವಹಿಸಿದ ಶ್ರೀ ಆರ್. ಆರ್. ದಿವಾಕರರಿಗೂ ಆಭಾರ ಸೂಚಿಸಿ, ಉಡುಪಿಯ ಮಹಾ ಜನರ ಬೆಂಬಲವನ್ನು ನೆನೆದು ತಾನು ತನ್ನ ಕುಟುಂಬ ಸದ�ೀತವಾಗಿ ಜನಸೇವೆ ದೇಶಸೇವೆ ಗೈಯ್ಯುವಂತೆ ತನ್ನ ಮ ನೀಷೆಯೆಂದರು.

ಅಧ್ಯಕ್ಷರು ತನಗೀ ಸಮಾರಂಭದಲ್ಲಿ ಭಾ ಗಿವಹಿಸಲು ಒದಗಿಬಂದ ಸಂಯೋಗಕ್ಕಾಗಿ ಸಂತೋಷ ವ್ಯಕ್ತಪಡಿಸಿ ಡಾ. ಪೈಗಳ ಕರ್ತ ವ್ಯನಿಷ್ಠೆ-ತ್ಯಾಗಮಯ ಜೀವನವನ್ನು ಕೊಂ ಡಾಡಿದರು. ೪೦೦ ವರ್ಷಗಳ ಹಿಂದೆ ಈ ಸ್ಥಳ ದಲ್ಲಿ ಶ್ರೀ ಮನ್ಮಧ್ವಾಚಾರ್ಯರು ೮ ಮಠಗಳ ನ್ನು ಸ್ಥಾಪಿಸಿ ಇದಿಗೂ ಅವು ಮೃಷ್ಟಿಶ ರೀತಿಯಲ್ಲಿ ನಡೆಯುತ್ತ ಬಂದಿರುವಂತೆ ಡಾ. ಪೈಗಳು ಸ್ಥಾಪಿಸಿದ ಸಂಘ ಸಂಸ್ಥೆಗಳೂ ಉ ತ್ತರೋತ್ತರ ಅಭಿವೃದ್ಧಿ ಹೊಂದುತ್ತಾ, ಬಂದು ಜನತಾ ಸರಕಾರ ಮತ್ತು ಜನತೆಯು ಎಲ್ಲಾ ಸರಕಾರಗಳನ್ನಿತ್ತು, "ಬಹುಜನ ಹಿತಾಯ ಬಹುಜನ ಸುಖಾಯ" ಎನ್ನುವ ಬುದ್ಧನ ಆದರ್ಶವನ್ನಿಟ್ಟುಕೊಂಡ ಡಾ. ಪೈಗಳ ಆದರ್ಶ ಜೀವನವನ್ನು ನಮ್ಮ ತರುಣ ತರುಣಿಯರು ಅನುಕರಿಸಬೇಕೆಂದೂ ಉಡುಪಿಯೊಂದು ಶೈ ಕ್ಷಣಿಕ ಕೇಂದ್ರವಾತ್ರವಾಗಿರದೆ ಬುದ್ಧಿಶಾಲೀ ಕ್ರಿಯಾಶಾಲೀ ಜನತೆಯನ್ನು ನಿರ್ಮಾಣಕೇಂ ದ್ರವಾಗಿ ಮಾರ್ಪಡಲೆಂದೂ ಆ ಬಗ್ಗೆ ಇನ್ನೂ ಹೆಚ್ಚಾಗಿ ಶ್ರಮಿಸಲು ಡಾ. ಪೈಗಳಿಗೆ ಆಯು ರಾಗ್ಯವನ್ನು ಪರಮಾತ್ಮನು ಅನುಗ್ರಹಿಸಲೆಂ ದೂ ಆಶಿಸಿದರು.

ಬಳಿಕ ಸಮಿತಿಯವರು ಸಂಗ್ರಹಿಸಿದ ರೂ. ೧ ಲಕ್ಷ ೨೫ ಸಾವಿರ ನಿಧಿಯನ್ನು ಡಾ. ಮಾಧ ವ ಪೈಗಳಿಗೆ ಅರ್ಪಿಸಲಾಯಿತು. ಕೆನರಾ ಮ್ಯೂಚುವಲ್ ಮಾಜಿ ಕೆಲಸಗಾರರಿಂದಲೂ ಬೋರ್ಡು ಹೈಸ್ಕೂಲ್ ಹಳೇ ವಿದ್ಯಾರ್ಥಿಗಳಿಂ ದಲೂ ಚಿಕ್ಕ ನಿಧಿಯನ್ನು ಡಾ. ಪೈಗಳಿಗೆ ಅರ್ಪಿಸಲಾಯಿತು ಡಾ. ಪೈಗಳು ಎಲ್ಲಾ ಬ ಹುಮಾನಗಳನ್ನೂ ನಿಧಿಗಳನ್ನೂ ಪ್ರೀತ್ಯಾದರ ದಿಂದ ಸ್ವೀಕರಿಸಿ ಬಡ ವಿದ್ಯಾರ್ಥಿಗಳ ಸಮ ಪಯೋಗಕ್ಕಾಗಿ ಎಂ. ಜೆ. ಎಂ. ಕಾಲೇಜಿಗೆ ಕಾಲೇಜ್ ಕಟ್ಟಡಾಭಿವೃದ್ಧಿಗೆ ಶ್ರೀ ಟಿ. ಎ. ಪೈಗಳಗೊಪ್ಪಿಸಿದರು. ಶ್ರೀ ಎ. ಜೆ. ಅಲ್ಪಿಯ ವರು ಧನ್ಯವಾದಗಳನ್ನರ್ಪಿಸಿದರು. ಆರಂಭದ ಲ್ಲಿ ಶ್ರೀ ದೇವದಾಸ ಜೋಶಿಯವರ ಪಿಟೀಲು ವಾದನ, ಶ್ರೀ ಕೆ. ಸುಂದರೆ ಆಚಾರ್ಯರ ಮೃದಂಗವಾದನ ನಡೆಯಿತು.

ಶ್ರೀ ಲಕ್ಷ್ಮೀ ವೆಂಕಟೇಶ ದೇವ ಸ್ಥಾನದ—

ವರದೇಂದ್ರ ಕಲಾ ಮಂದಿರದಲ್ಲಿ ಶ್ರೀ ಕೊಚ್ಚಿಕಾರ್ ಸದ್ಗಣಾಥ ಪೈಗಳ ಅಧ್ಯ ಕ್ಷತೆಯಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ ದೇವ ಸ್ಥಾನ, ಶ್ರೀ ಕಾಶಿ ಮಠ ಕಲ್ಯಾಣ ನಿಧಿಯ ಜೋಸಲ್ ಕೌನ್ಸಿಲ್, ಗೌಡಸಾರಸ್ವತ ಬ್ರಾ ಹ್ಮಣ ಸಂಘಗಳು, ಉಡುಪಿ ಶ್ರೀ ಲಕ್ಷ್ಮೀ ವೆಂ ಕಟೇಶ ಸೇವಾ ಸಮಿತಿ ಉಡುಪಿ ಮೊದಲಾದ ಸಂಸ್ಥೆಗಳಿಂದ ಡಾ. ಪೈಗಳಿಗೆ ಮಾನಪತ್ರ ಅರ್ಪಿಸಲಾಯಿತು. ಡಾ. ಯು. ಸುಂದರರಾಮ ಪೈಗಳು ಸ್ವಾಗತಮಾತುಗಳನ್ನಾಡಿದರು. ಡಾ. ಪಿ. ಆರ್. ನಾಯ್ಕರು ಶ್ರೀ ಟಿ. ಎ. ಪೈ ಮೊದಲಾದವರಿಂದ ಬಂದ ಸಂದೇಶಗಳನ್ನೋ ದಿ ಮಾನಪತ್ರಗಳನ್ನು ಅರ್ಪಿಸಿದರು. ಶ್ರೀ ಕೆ. ವಾಸುದೇವ ನಾಯ್ಕರು ತಾನೇ ಚಿತ್ರಿಸಿದ ಡಾ. ಪೈಗಳ ಭಾವಚಿತ್ರವನ್ನು ಅವರಿಗೆ ಸಮ ರ್ಪಿಸಿದರು. ಮುಖ್ಯ ಅತಿಥಿಗಳ ಹಾಗೂ ಅಧ್ಯಕ್ಷರ ಭಾಷಣಗಳಾದ ಬಳಿಕ ಶ್ರೀ ಕೆ. ನರಸಿಂಹ ಕಾಮತರು ಧನ್ಯವಾದಗಳನ್ನಿತ್ತರು.

ಶಾಲಾವರ್ಧಂತಿ-

ಸ್ಥಳೀಯ ಮೊಡರ್ನ್ ಸ್ಕೂಲ್ ಒಫ್ ಕಾಮರ್ಸ್, ಇದರ ವಾ ರ್ಷಿಕೋತ್ಸವವು ತಾ ೨೦ರಂದು ಶ್ರೀ ವರದೇಂ ದ್ರ ಕಲಾಮಂದಿರದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಟಿ. ಎ. ವಾಸುದೇವಸ್ಥರವರು ಸ್ವಾ ಗತಿಸಿ ಶಾಲಾ ಚಟುವಟಿಕೆಗಳ ವರದಿಯ ನ್ನೋದಿದರು. ಶ್ರೀ ಎಮ್. ಎಸ್. ಜೆಟ್ಟಾರ ರು ಶಾಲಾ ಸ್ವತ್ತುವಾಚನ ಗೈದರು. ಶ್ರೀ ಪಾ ರ್ಕರ್ ಬಹುಮಾನರು ಉತ್ತರವಿತ್ತರು. ಉತ್ಸ ವದ ನಿಮಿತ್ತ ಏರ್ಪಡಿಸಲಾದ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಶ್ರೀಮತಿ ಪ್ರೇಮಾ ಎ. ಪೈಗಳು ಬಹುಮಾನವಿತರಣೆಮಾಡಿದರು. ಅ ಧ್ಯಕ್ಷರ ಭಾಷಣ, ಕನ್ನಡ ಹಾಗೂ ತುಳು ನಾಟಕಾಭಿನಯಗಳೊಂದಿಗೆ ಸಮಾರಂಭ ಕೊ ನೆಗೊಂಡಿತು.

ಇರ್ದೆ—

ದೂಮದ್ದ ಬೋರ್ಡು ಎಲಿಮೆಂ ಟರಿ ಶಾಲಾ ವರ್ಧಂತ್ಯುತ್ಸವವು ಕಳದ ತಾ. ೨೭ರಂದು ಶ್ರೀ ಸಿ. ರಾಮಕೃಷ್ಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕಟ್ಟಡಕ್ಕಾ ಗಿ ದುಡಿದ ಶ್ರೀ ದರ್ಭೆ ಹರಿಕೃಷ್ಣ ಭಟ್ಟರ ಭಾವಚಿತ್ರವನ್ನೂ ಶ್ರೀ ಸಿ. ಗೋಪಾಲಕೃಷ್ಣ ಕುಂದ್ಣಾಯರು ಶಾಲೆಗೆ ಉಚಿತವಾಗಿ ಕೊಟ್ಟ ಭಾರತದ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದ ರ ಭಾವಚಿತ್ರವನ್ನೂ ಅಧ್ಯಕ್ಷರು ಅನಾವರಣ ಮಾಡಿದರು. ಬಹುಮಾನ ವಿತರಣೆ, ಜನಮನ ರಂಜನ ಕಾರ್ಯಕ್ರಮಗಳೊಂದಿಗೆ ಉತ್ಸವವು ಕೊನೆಗೊಂಡಿತು.

ಕುಳ್ಳೆ (ಸುರತ್ಕಲ್)—

ಕುಳ್ಳೆ ಗ್ರಾಮ ಸಂಘದ ಕಡೆಯಿಂದ ರಾ. ವಿ. ಯೋಜನೆಯ ನ್ವಯ ಕಟ್ಟಿಸಲಾದ ಶ್ರೀ ಭಾರತೀ ವಾಚನಾ ಲಯದ ನೂತನ ಮಂದಿರವನ್ನು ಇದೇ ತಾ. ೧ರಂದು ಶ್ರೀ ಪಿ. ಶ್ರೀನಿವಾಸರಾಯರ ಅಧ್ಯಕ್ಷ ತೆಯಲ್ಲಿ ಕುಂದಾಪುರ ಡಿವಿಜನಿನ ಅಸಿಸ್ಟಾಂಟ್ ಕಮಿಷನರ್ ಶ್ರೀ ಕೆ. ಎಲ್. ಸೂರ್ಯ ನಾರಾಯಣರಾಯರು ಉದ್ಘಾಟಿಸಿದರು. ಸಂ ಘದ ಅಧ್ಯಕ್ಷರು ಸ್ವಾಗತಿಸಿದರು. ಕಾರ್ಯ ದರ್ಶಿಗಳು ವರದಿಯನ್ನೋದಿದರು. ಅಧ್ಯಕ್ಷರ ಭಾಷಣಾನಂತರ ಹರಿಕಥಾ ಕಾಲಕ್ಷೇಪ ಜರ ಗಿತು.

ಮೂಲೂರು—

ಸ್ಥಳೀಯ ಪಂಚಾಯತ ಬೋರ್ಡಿನ ಕಡೆಯಿಂದ ಕಟ್ಟಿಸಲಾದ ಸಮು ದ್ರ ಕಡಾವಳಿಗೆ ಹೋಗುವ ನೂತನ ರೆಸ್ಟಿಯ ಸಂಕದ ಉದ್ಘಾಟನೆಯನ್ನು ಕಳದ ತಾ. ೨೮ ರಂದು ಶ್ರೀ ಟಿ. ಎ. ಪೈಗಳು ನೆರವೇರಿಸಿದ ರು. ಮೂಳೂರು ಪಂಚಾಯತ ಅಧ್ಯಕ್ಷ ಶ್ರೀ ಭೋಜ ಪೆಡ್ತಿಯನರು ಸ್ವಾಗತ ಭಾಷಣ ಮಾ ಡಿ ಗ್ರಾಮದ ಕೆಲಪೊಂದು ಅಡಚಣೆಗಳ ನಿ ವಾರಣೆಯ ಅವಶ್ಯಕತೆಯನ್ನು ಸೂಚಿಸಿದರು.

ಕಟಪಾಡಿ—

ಇಲ್ಲಿಯ ಮಂಡಲ ಕಾಂ ಗ್ರೆಸ್ ಸಮಿತಿಯನ್ನು ಕಳದ ತಾ. ೨೭ರಂದು ಶ್ರೀ ಪಿ. ಜನಾರ್ಧನ ನಾಯ್ಕರ ಅಧ್ಯಕ್ಷತೆ ಯಲ್ಲಿ ಶ್ರೀ ಟಿ. ಎ. ಪೈಗಳು ಉದ್ಘಾಟಿಸಿ ದರು. ಮಂಡಲ ಸಮಿತಿ ಉಪಾಧ್ಯಕ್ಷ ಶ್ರೀ ಕೆ. ಗಣಪಯ್ಯ ಶೆಟ್ಟಿರು ಸ್ವಾಗತ ಮಾತುಗಳ ನ್ನಾಡಿದರು.

ಹೊಸ ಯೋಜನಾ ಸಮಿತಿ—

ಸೌತ್ ಕೆನರಾ ಮೆಡಿಕಲ್ ರಿಲೀಫ್ ಸೊಸೈ ಟಿ ನಾಮಾಭಿಧಯದಿಂದ ಜನ್ಮ ತಾಳಿದ ಈ ಸ ಮಿತಿಯಲ್ಲಿ ಶ್ರೀ ಸೋದೆ ಸ್ವಾಮಿಗಳವರು ಅಧ್ಯಕ್ಷರಾಗಿಯೂ, ಶ್ರೀ ಅಧಮಾರು ಮತ್ತು ಶ್ರೀ ಪೇಜಾವರ ಸ್ವಾಮಿಗಳವರು ಉಪಾಧ್ಯಕ್ಷ ರಾಗಿಯೂ ಶ್ರೀ ಟಿ. ಎ. ಪೈಗಳು ಕಾರ್ಯ ದರ್ಶಿಗಳಾಗಿಯೂ ಡಾ. ಟಿ. ಎಮ್. ಎ. ಪೈ, ಡಾ. ಎಸ್. ಆರ್. ಪೈ, ಡಾ. ಕೆ. ಎಲ್. ಪಿತಾಳ್ ಮತ್ತು ಶ್ರೀ ಬಿ. ಎಲ್. ಎನ್. ರೈಗಳು ಸದಸ್ಯರಾಗಿಯೂ ಇರುವರು. ಮಣಿಪಾಲ, ಅಲೆವೂರು, ಕಟಪಾಡಿ, ಕಾಪು, ಪಡುಬಿದ್ರೆಯಲ್ಲಿರುವ ಹೆರಿಗೆ ಕೇಂದ್ರಗಳನ್ನು ಈ ಸಮಿತಿಯು ಸ್ವಾಧೀನ ಪಡಿಸಿಕೊಂಡು, ಮಣಿಪಾಲದ ಡಾ. ಕೆ. ಪಿ. ಪ್ರಭುಗಳವರ ನೇತೃತ್ವದಲ್ಲಿ ಸರ್ಜಿಕಲ್ ವಾರ್ಡನ್ನು ನಡೆಸ ಬೇಕೆಂದೂ, ನೂರು ಹಾಸಿಗೆಗಳುಳ್

ಮಂಗಳೂರು

ನಿಷೇಧ ಸಭೆ— ಮಂಗಳೂರಿನ ಕೆಥೋಲಿಕರ ಸಾರ್ವಜನಿಕ ಸಭೆಯು ಕಳದ ತಾ. 27ರಂದು ಮಿಲಾಗ್ರಿಸ್ ಇಗರ್ಜಿಯ ಎದುರುಗಡೆ ಮೈದಾನದಲ್ಲಿ ರಿ ಫಾ ಪಿ. ಸಲ್ದಾನರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ವೆನ್ಲೋಕ್ ಆಸ್ಪತ್ರೆಯ ಬಡಾವಣೆಗಾಗಿ ಮಂಗಳೂರು ನಗರ ಸಭೆಯವರು ಮಿಲಾಗ್ರಿಸ್ ಇಗರ್ಜಿಯ ಎದುರಿಗಿರುವ ಮೈದಾನನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ನಿಷೇಧ ಸೂಚಿಸಲಾಯಿತು. ಚರ್ಚ್ ಮೈದಾನದ ಮೇಲಿಂದ ಹೊಸರಸ್ತೆ ಮೋಗಬಾರದೆಂಬುದಾಗಿ ಸರಕಾರದವರನ್ನು ಕೇಳಿಕೊಳ್ಳುವ ನಿರ್ಣಯ ಪಾಸಾಯಿತಲ್ಲದೆ ಶ್ರೀ ಎಫ್. ಎಕ್ಸ್. ಡಿ. ಸಿಂಟ್ರೊ, ಎಮ್. ಎಲ್. ಎ. ಮೊದಲಾದವರುಳ್ಳ ಕ್ರಿಯಾ ಸಮಿತಿಯೊಂದು ರಚಿಸಲಾಯಿತು.

ಡಾ. ಶ್ರೀಮತಿ ರತ್ನಾ ವಿ. ಕೆ. ಅಳ್ವ— ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡಾ. ಶ್ರೀಮತಿ ರತ್ನಾ ವಸಂತ ಕಾಮಾರ್ ಅಳ್ವರು ಇಂಗ್ಲಾಂಡಿನ ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ವಿಭಾಗದಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಇದೀಗ ಮಂಗಳೂರಿಗೆ ಮರಳಿರುವರು. ಶ್ರೀಮತಿಯವರು ಇಂಗ್ಲಾಂಡಿನಲ್ಲಿ ಡಿ. ಟಿ. ಎಮ್., ಎಂಡ್ ಎಚ್. ಮತ್ತು ಎಮ್. ಆರ್. ಸಿ. ಪಿ. ಪದವಿಗಳನ್ನು ಗಳಿಸಿರುವರು ರೆಕ್ಟ ಶಾಸ್ತ್ರದಲ್ಲಿ ವಿಶೇಷ ಅಭ್ಯಾಸ ಮಾಡಿದ ಇವರು ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಶೀಘ್ರರಾಗಿ ಸೇವೆಗೆ ಹೊಂದಿರುವರು.

ನೇತ್ರ ಚಿಕಿತ್ಸಾ ಶಿಬಿರದಲ್ಲಿ— ಪದ್ಮಶ್ರೀ ಡಾ. ಎಮ್. ಸಿ. ಮೋದಿಯವರು ಐದು ದಿನಗಳ ಶಸ್ತ್ರ ಚಿಕಿತ್ಸಾ ಕಾರ್ಯಕ್ರಮದಲ್ಲಿ ಒಟ್ಟು 100ರ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿರುವರು. ಮೈಸೂರಿನ ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ತಾ. 4ರಂದು ಬೆಳಿಗ್ಗೆ ಡಾ. ಮೋದಿಯವರ ಶಿಬಿರಕ್ಕೆ ಸಂದರ್ಶನವಿತ್ತು ತಮ್ಮ ಆತ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಮಂಗಳೂರು ನಗರ ಸಭೆಯ ಆರೋಗ್ಯ ಇಲಾಖೆಯವರು ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಆರೋಗ್ಯಕಾಲನಾ ಕ್ರಮಗಳನ್ನು ಉತ್ತಮ ರೀತಿಯಲ್ಲಿ ನಡೆಸಿದ್ದರು.

ಗ್ರಂಥಾಲಯ ಸಪ್ತಾಹ ಉದ್ಘಾಟನೆ— ತಾ. 3ರಂದು ಸಂಜೆ ಸ್ಥಳೀಯ ಮಹಿಳಾ ತರಬೇತಿ ಶಾಲೆಯಲ್ಲಿ ಜರಗಿದ ಪ್ರಥಮ ಗ್ರಂಥಾಲಯ ಸಪ್ತಾಹವನ್ನು ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ್, ಅವರು ಉದ್ಘಾಟಿಸುತ್ತಾ, ಪುಸ್ತಕಗಳು ಒಂದು ದೇಶದ ಭಾವಿ ಜನಾಂಗವನ್ನು ವಿಚಾರಶೀಲರನ್ನಾಗಿ ಮಾಡಬಲ್ಲುವು. ಗ್ರಂಥಾಲಯಗಳು ಸಾಮಾಜಿಕ ಸಂಸ್ಥೆಗಳಾಗಿದ್ದು ಜನರ ಸಮಾಜ ಸೇವೆಯ ಕಡೆಗಿನ ಅಸಕ್ತಿಯನ್ನು ಅವುಗಳು ಹೆಚ್ಚಿಸಬೇಕು. ಈ ಗ್ರಂಥಾಲಯಗಳಿಂದ ಜನರು ಹೆಚ್ಚಿಷ್ಟು ಪ್ರಯೋಜನ ಪಡೆಯಲು ಅನುಕೂಲವಾಗುವಂತೆ ಜನತೆಯನ್ನು ಈ ಕಡೆಗೆ ಆಕರ್ಷಿಸುವಲ್ಲಿ ಜಿಲ್ಲಾ ಗ್ರಂಥಾಲಯಗಳ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಮುಂತಾಗಿ ಹೇಳಿದರು. ದ್ವಿತೀಯ ಪಂಚವರ್ಷಿಕ ಯೋಜನಾನಾಧಿಯಲ್ಲಿ ಈ ಲೈಬ್ರೆರಿ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದಾಗಿ ರೂಪಾಯಿ 1.75 ಕೋಟಿಯನ್ನು ಬೇರ್ಪಡಿಸಲಾಗಿದೆ. ಎಂಬುದಾಗಿಯೂ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ದೇಶದಲ್ಲಿ ವಿದ್ಯಾಭ್ಯಾಸವು ಬಹಳವಾಗಿ ಪ್ರಗತಿ ಹೊಂದುತ್ತಾ ಇದ್ದರೂ ದೇಶದಲ್ಲಿ ಅನಕ್ಷರಸ್ಥರ ಸಂಖ್ಯೆ ಇನ್ನೂ ಬಹಳವಾಗಿದೆ. ಪಲ್ಲಿ ಪ್ರದೇಶಗಳಲ್ಲಿ ಹೆಚ್ಚಿನ ಗ್ರಂಥಾಲಯ ಮತ್ತು ವಾಚನಾಲಯಗಳನ್ನು ತೆರೆದು ಈ ಕೊರತೆಯನ್ನು ನೀಗಿಸುವಲ್ಲಿ ಪ್ರಯತ್ನಿಸಬಹುದೆಂದರು. ಮದ್ರಾಸು ರಾಜ್ಯದಲ್ಲಿ ಗ್ರಂಥಾಲಯಗಳ ಪ್ರಗತಿಗಾಗಿ ಶ್ರಮಿಸಿದ ಡಾ. ರಂಗನಾಥನ್‌ರವರ ಕಾರ್ಯವನ್ನು ಪ್ರಶಂಸಿಸಿದರು. ಆರಂಭದಲ್ಲಿ ಲೋಕಲ್ ಲೈಬ್ರೆರಿ ಅಥೋರಿಟಿಯ ಅಧ್ಯಕ್ಷರಾದ ಶ್ರೀ ಎಮ್. ಎಸ್. ಪಾಲಾರ್‌ರ ರಾಯರು ಸ್ವಾಗತ ಭಾಷಣಮಾಡುತ್ತಾ ಕಳದ ಏಳು ವರ್ಷಗಳಲ್ಲಿ ದ. ಕ ಜಿಲ್ಲೆಯಲ್ಲಿ ಗ್ರಂಥಾಲಯಗಳ ಮಟ್ಟಿಗಾದ ಪ್ರಗತಿಯನ್ನು ವಿವರಿಸಿದರು. ಲೈಬ್ರೇರಿಯನ್ ಶ್ರೀ ಗೋಪಾಲಕೃಷ್ಣ ಶೃಂಗೇರಿಗರು ಕೊನೆಯಲ್ಲಿ ಧನ್ಯವಾದಗಳನ್ನಿತ್ತರು.

ವಿಶೇಷ ಮಹಾಸಭೆ— ದ. ಕ. ಜಿಲ್ಲಾ ದೇವಾಡಿಗ ಸಮಾಜ ಸುಧಾರಕ ಸಂಘದ ವಿಶೇಷ ಮಹಾ ಸಭೆಯು ಕಳದ ತಾ. 27ರಂದು ಶ್ರೀ ಬಿ. ಗಂಗಾಧರದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಮ್. ಬಿ. ನರ್ಸಪ್ಪನವರು ವರದಿಯನ್ನು ಮಾಡಿ ಲೆಖ್ಖ ಪತ್ರಗಳನ್ನು ಒಪ್ಪಿಸಿದರು. ದ. ಕ. ಜಿಲ್ಲಾ ದೇವಾಡಿಗರ ಸುಧಾರಕ ಸಂಘ ರಿಜಿಸ್ಟರ್ಡ್ ಇವರಿಂದ ಬಂದ "ಎಲ್ಲಾ ದೇವಾಡಿಗ ಮತ್ತು ಹೊಲಿ ಸ್ವಜಾತಿ ಬಾಂಧವರನ್ನು ಪಕ್ಷ ಭೇದ ವಿಲ್ಲದೆ ಸಂಘಕ್ಕೆ ಸ್ವಾಗತಿಸುತ್ತದೆ" ಎಂಬ ಪತ್ರವನ್ನು ಓದಿ ಅದನ್ನು ಅನುಮೋದಿಸಲಾಯಿತು. ಸಭಾಧ್ಯಕ್ಷರು ಸಮಾಜಾಭಿವೃದ್ಧಿಯ ಕುರಿತು ಯೋಗ್ಯ ಸಲಹೆಗಳನ್ನಿತ್ತು ಈ ಎರಡು ಸಂಘಗಳು ಸೇರ್ಪಡೆ ಹೊಂದಿ ಉತ್ತಮ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಹಾರೈಸಿದರು.

ಗಂಗೊಳ್ಳಿ— ಮೈಸೂರಿನ ಕಾರ್ಮಿಕ ಸಚಿವ ಶ್ರೀ ಬಿ. ವೈಕುಂಠ ಬಾಳಿಗರು ತಾ. 30ರಂದು ಗಂಗೊಳ್ಳಿ ಬಂದರಕ್ಕೆ ಸಂದರ್ಶನ ವಿತ್ತಾಗ ಅವರಿಗೊಂದು ಮಾನಪತ್ರ ಅರ್ಪಿಸಲಾಯಿತು. ಮಂತ್ರಿಗಳು ಉತ್ತರಿಸುತ್ತಾ, ಮೈಸೂರು ರಾಜ್ಯದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕರಾವಳೀ ಪ್ರದೇಶದ ಮೀನುಗಾರಿಕೆಯ ಪ್ರಗತಿ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗುವುದು. ಕರಾವಳಿ ಪ್ರದೇಶದಲ್ಲಿ ಹಿಡಿದ ಮೀನನ್ನು ಮಾರಾಟಕ್ಕಾಗಿ ಒಳ ಪ್ರದೇಶಗಳಿಗೆ ಸಾಗಿಸಲನುಕೂಲವಾಗುವಂತೆ ಸರಕಾರವು ಹಲವು ಹೊಸ ರಸ್ತೆಗಳನ್ನು ರಚಿಸಲಿದೆ. ಹೆಚ್ಚಿಗೆ ದೊರೆತ ಮೀನನ್ನು ಹಾಳಾಗದ ರೀತಿಯಲ್ಲಿ ದಾಸ್ತಾನು ಇಡುವ ದಕ್ಕಾಗಿ ರಾಜ್ಯದಲ್ಲಿ ಬರುವ ವರ್ಷ ನಾಲ್ಕು ಶೀತಲೀಕರಣ ಕೇಂದ್ರಗಳನ್ನು ರಚಿಸಲಾಗುವುದು. ಅವುಗಳಲ್ಲಿ ಒಂದನ್ನು ಕುಂದಾಪುರದಲ್ಲಿ ರಚಿಸಲಾಗುವುದೆಂದರು.

ಕುಂದಾಪುರ ತಾಲೂಕು ಮರ್ಚಂಟ್ಸ್ ಎಸೋಸಿಯೇಶನ್ನಿನ ಪರವಾಗಿ ಶ್ರೀ ಕೃಷ್ಣರಾಯ ಕಾಮತರೂ, ಗಂಗೊಳ್ಳಿ ಪಂಚಾಯತು ಗ್ರಾಮ ಸೇವಾ ಸಂಘದ ಪರವಾಗಿ ಶ್ರೀ ದೇವದಾಸ ಶೆಟ್ಟಿಯವರೂ ಮನವಿಗಳನ್ನರ್ಪಿಸಿದರು. ಮಂತ್ರಿಗಳು ಉತ್ತರಿಸುತ್ತಾ ಋಣ ಪ್ರಮಾಣದ ಕೈಗಾರಿಕೆಗಳ ಕಡೆಗೆ ಹೆಚ್ಚಿನ ಗಮನ ಅಗತ್ಯವಾದುದೆಂದು ಹೇಳಿ ಇಲ್ಲಿ ದೊರೆಯುವ ಬೆತ್ತದ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕೆಂದರು. ರಾಜ್ಯದ ಕೆಲವೆಡೆಗಳಲ್ಲಿ ಬಿದಿರು ಪದಗೊಳಿಸುವ ಕೇಂದ್ರಗಳನ್ನು ತೆರೆಯುವಾಗ ದ. ಕ ಜಿಲ್ಲೆಯಲ್ಲೂ ಕೇಂದ್ರವೊಂದನ್ನು ತೆರೆಯಲು ಪ್ರಯತ್ನಿಸುವುದಾಗಿ ಆಶ್ವಾಸನೆಯಿತ್ತರು. ಶ್ರೀ ವೈ ಮಂಜಯ್ಯ ಶೆಟ್ಟಿ, ಎಮ್. ಎಲ್. ಎ; ಅವರು ಸಭಾಧ್ಯಕ್ಷತೆ ವಹಿಸಿದ್ದರು. ಸಚಿವರು ಕುಂದಾಪುರ ಬಂದರನ್ನು ಪರಿಶೀಲಿಸಿದರು. ಕುಂದಾಪುರ ಕರಾವಳಿಯ ಮೀನುಗಾರಿಕೆ ಅಭಿವೃದ್ಧಿ, ಒಳ ಪ್ರದೇಶ ಜಲಯಾನದ ಅಭಿವೃದ್ಧಿ ಮುಂತಾದ ಕುರಿತು ವಿಚಾರವಿನಿಮಯ ನಡೆಯಿತು.

ತಾ. 2ರಂದು ಸಂಜೆ ಮಂತ್ರಿಗಳು ಶಂಕರ ನಾರಾಯಣದಲ್ಲಿ ಬೈಂದೂರು ಸಮಾಜಾಭಿವೃದ್ಧಿ ಯೋಜನೆಯನ್ನಯ ತೆರೆಯಲ್ಪಡುವ 15 ಸಮಾಜ ಕಲ್ಯಾಣ ಕೇಂದ್ರಗಳಲ್ಲಿ ಪ್ರಥಮ ಕೇಂದ್ರವನ್ನು ಉದ್ಘಾಟಿಸಿದರು. ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎನ್. ಎಸ್. ಪರಮೇಶ್ವರಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಪ್ರಫುಲ್ಲಾ ಹೆಗ್ಡೆಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಸುಬ್ರಾಯ ಅಚಾರ್ಯರು ಮನವಿಯೊಂದನ್ನರ್ಪಿಸಿದರು. ಸಚಿವರು ಉತ್ತರಿಸುತ್ತಾ, ಸ್ವಾತಂತ್ರ್ಯ ಹೊರಹೊಮ್ಮಿದ ತಿರಿಗೆಗಳನ್ನು ಸಮೂಲವಾಗಿ ಮಾಡುವುದನ್ನೇ ಆಗಿನ ಸರಕಾರ ಮುಖ್ಯ ಧ್ಯೇಯವಾಗಿಟ್ಟುಕೊಂಡಿತ್ತು. ಈಗಿನ ಪ್ರಜಾಪ್ರಭುತ್ವ ಸರಕಾರವು ಸಮಾಜ ಕಲ್ಯಾಣವನ್ನೇ ತನ್ನ ಮುಖ್ಯ ಗುರಿಯನ್ನಾಗಿಟ್ಟುಕೊಂಡಿದೆ. ಇದನ್ನು ಸಾಧಿಸಲು ಪ್ರತಿಯೊಬ್ಬ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ವಿದ್ಯಾಭ್ಯಾಸವನ್ನು ಪಡೆದು ಸಮಾಜ ಸೇವೆಗೆ ಮುಂದಾಗಬೇಕೆಂದರು. ಬೈಂದೂರು ಜ್ಞಾನಿನ ಎಸ್. ಇ. ಬಿ. ಶ್ರೀ ಬಿ. ವೆಂಕಟ್ರಮಣ ಆಚಾರ್ಯರು ಧನ್ಯವಾದ ವಿತ್ತರು.

ಕುಟ್ಟ ನದಿಯ ಸೇತುವೆ ಉದ್ಘಾಟನೆ— ಸಚಿವರು ತಾ. 2ರಂದು ಸಂಜೆ ಹಾಲಾಡಿ ಪಂಚಾಯ್ತಿಯಲ್ಲಿ ಕುಟ್ಟ ನದಿಗೆ ಹಾಕಿದ ಸೇತುವೆಯನ್ನು ಉದ್ಘಾಟಿಸುತ್ತಾ, ಮಲೆನಾಡಿನ ವಿಶೂಲವಾದ ಪ್ರಾಕೃತಿಕ ಸಂಪತ್ತನ್ನು ಉಪಯೋಗಕ್ಕೆ ಪಡ್ಡುವುದರಲ್ಲಿ, ಸಾರಿಗೆ ಸಂಪರ್ಕಾನುಕೂಲತೆಯ ಪಾತ್ರ ಮಹತ್ವವಿದೆ ಎಂದರು. ಸಾರಿಗೆ-ಸಂಪರ್ಕಾನುಕೂಲತೆ ಇಲ್ಲದೆ ಹಿಂದುಳಿದಿರುವ ಮಲೆನಾಡಿನ ಈ ಭಾಗದ ಜನರಿಗೆ ಈ ನದಿಯ ಸೇತುವೆಯು ವಿಶೇಷ ಉಪಯುಕ್ತವಾಗುವುದೆಂದರು ಮಲೆನಾಡು ಅಭಿವೃದ್ಧಿ ಮಂಡಲವು ರಚಿಸಲ್ಪಟ್ಟಿದೆ. ಜನರು ಇದರ ಉಪಯೋಗವನ್ನು ಸರಿಯಾಗಿ ಪಡೆಯುತ್ತಾ ತಮ್ಮ ಅಭಿವೃದ್ಧಿ ಸಾಧಿಸಬೇಕೆಂದು ಸೂಚಿಸಿದರು. ದ. ಕ. ಜಿಲ್ಲೆಯ ಕರಾವಳಿ ರಸ್ತೆಯಲ್ಲಿ ಹಲವಾರು ನದಿಗಳಿಗೆ ಸೇತುವೆಯನ್ನು ಹಾಕಿಸುವುದರಲ್ಲಿ ಶ್ರೀ ಯು ಶ್ರೀನಿವಾಸ ಮಲ್ಯರು ಮಾಡಿದ ಯತ್ನವನ್ನು ಶ್ಲಾಘಿಸಿದರು. ಆಹಾರ ಕೊರತೆಯ ಕುರಿತು ಸಮಾಧಾನ ಹೇಳುತ್ತಾ, ಅಧಿಕ ಬೆಳೆ ಉತ್ಪಾದಿಸಲು ಸರಕಾರವು ನೀಡುವ ಸಹಕಾರ ಪ್ರಕೃತಿ ಸಾಲಭ್ಯಗಳನ್ನು ರೈತರು ಸರಿಯಾಗಿ ಸದುಪಯೋಗಗೊಳಿಸಬೇಕೆಂದರು.

ಮೈಸೂರು ರಾಜ್ಯದ ಚೀಫ್ ಎಂಜಿನಿಯರ್ ಶ್ರೀ ಜಿ. ಎಸ್. ಗಣಪತಿ, ಅವರು ಸ್ವಾಗತ ಭಾಷಣ ಮಾಡುತ್ತಾ, ಹಾಲಾಡಿ, ಪಂಚೆ ಮತ್ತು ಜಡ್ಕಲ್ ಸೇತುವೆಗಳ ರಚನೆಗೆ ಈ ವರ್ಷದ ಮುಂಗಡಪತ್ರದಲ್ಲಿ ಹಣ ಒದಗಿಸಲಾಗಿದೆಯೆಂದೂ, ಬೇಗನೇ ಅವುಗಳ ಕೆಲಸ ಅರಂಭವಾಗುವುದೆಂದೂ ಹೇಳಿದರು. ಮೊಲ್ಲಿ ಮತ್ತು ಉದ್ಯಾವರ ಸೇತುವೆಗಳ ಉದ್ಘಾಟನೆಯು ಇದೇ ಜೂನ್ ತಿಂಗಳ ಪ್ರಥಮ ವಾರದಲ್ಲಿ ಆಗುವುದೆಂದೂ, ಅದೇ ಸಂದರ್ಭದಲ್ಲಿ ರೂಪಾಯಿ ಎಂಭತ್ತೆರಡು ಲಕ್ಷ ಅಂದಾಜು ವೆಚ್ಚದ ನೇತ್ರಾವತಿ ನದಿಯ ಸೇತುವೆಗೆ ಶಂಕು ಸ್ಥಾಪನೆಯಾಗುವುದೆಂದೂ ನುಡಿದರು. ಸಭಾಧ್ಯಕ್ಷತೆ ವಹಿಸಿದ್ದ ವೈ. ಮಂಜಯ್ಯ ಶೆಟ್ಟರು ತಮ್ಮ ಸಮಯೋಚಿತ ಭಾಷಣದಲ್ಲಿ, ಸಾರ್ವಜನಿಕ ಕಾಮಗಾರಿ ಇಲಾಖೆಯ ಕಾರ್ಯದಕ್ಷತೆಯನ್ನು ಪ್ರಶಂಸಿಸಿ, ಸರಕಾರವು ಕೈಗೊಂಡ ಅಭಿವೃದ್ಧಿ ಕಾರ್ಯಗಳಿಗೆ ಜನರು ಸಹಕಾರ ನೀಡಬೇಕೆಂದು ಕೇಳಿಕೊಂಡರು. ಮಂಗಳೂರು ವಿಭಾಗದ ಸುಪರಿಂಟೆಂಡಿಂಗ್ ಇಂಜಿನಿಯರ್ ಡಾ. ಎಸ್. ಅಡ್ಯೆಯವರು ಧನ್ಯವಾದವಿತ್ತರು.

ಬೇಲಂಪಾಡಿ— ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಿರದಲ್ಲಿ ಕಳದ ತಾ. 26ರಂದು "ಮಾಗದ ವಧೆ, ಎಂಬ ಪ್ರಸಂಗದ ತಾಳಮದ್ದಳೆ ಸಮಾರಂಭವು ಶ್ರೀ ಕೀರಿಕ್ಕಾಡು ಭಾಸ್ಕರ್ ವಿಷ್ಣುಮೂರ್ತಿ ಭಟ್ಟರ ಅಧ್ಯಕ್ಷತೆಯಲ್ಲಿ ನುರಿತ ಅರ್ಥದಾರಿಗಳ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು. ತಾ. 3ರಂದು "ಅಶ್ವಮೇಧ" ಎಂಬ ಪ್ರಸಂಗದ ನಾಟಕ ಪ್ರದರ್ಶನ ನಡೆಯಿತು.

ಆಲೂರು— ಕುಂದಾಪುರ ತಾಲೂಕು ಆಲೂರು ಪಂಚಾಯತ ಬೋರ್ಡ್ ಚುನಾವಣೆಯು ಕಳದ ತಾ. 30ರಂದು ಜರಗಿತು. ಶ್ರೀಗಳಾದ ಶ್ರೀನಿವಾಸ ಜೈಸ್, ಅಧ್ಯಕ್ಷ; ಮಾದಯ್ಯ ಶೆಟ್ಟಿ, ಕೃಷ್ಣ ಉಡಾಪ, ಮಹಾಬಲ ಶೆಟ್ಟಿ, ಮಹಾದೇವ ಬಾಯರಿ, ಪುಟ್ಟಯ್ಯ ಶೆಟ್ಟಿ, ಗೋಪಿನಾಥ ಪೂಜಾರಿ, ಮೆಂಬರರಾಗಿ ಅವಿರೋಧ ಆಯ್ಕೆ ಹೊಂದಿದರು.

ಕನ್ನಡದಲ್ಲಿ ವ್ಯಾಕರಣ ಗ್ರಂಥಗಳು

(ಜನೇ ಪುಟದಿಂದ)

ನಕ್ಕೆ ಅರ್ಹವಾದ ಭಾಷೆ ಎಂದು ಉದ್ಘೋಷಿಸುವ ಸಲುವಾಗಿ ಸಂಸ್ಕೃತದ ಶ್ರೇಷ್ಠ ವ್ಯಾಕರಣವಾದ ಪಾಣಿಯ ಸಿದ್ಧಾಂತ ಕೌಮುದೀಯ ವಿಭಾಗ, ಸೂತ್ರವೃತ್ತಿ, ವ್ಯಾಖ್ಯಾನ ಕ್ರಮಗಳನ್ನು ಅನುಸರಿಸಿ ಬೃಹದ್ವ್ಯಾಕರಣವನ್ನು ರಚಿಸಿದ್ದಾನೆ. ಇದು ಸಂಪೂರ್ಣ ಸಂಸ್ಕೃತಮಯವಾಗಿದೆ. ಸಂಸ್ಕೃತದಲ್ಲಿಯೇ ಬರೆಯಲ್ಪಟ್ಟಿದೆ. ಇದರ ವ್ಯಾಖ್ಯಾನದಲ್ಲಿ ಹಿಂದಿನ ಅನೇಕಾನೇಕ ಸಂಸ್ಕೃತ-ಕನ್ನಡ ವೈಯಾಕರಣಿಗಳ ಸೂತ್ರಗಳು ಉಕ್ತಿಗಳು, ನ್ಯಾಯಗಳು ಸಮರ್ಥನೆಗಾಗಿ ಬಳಸಿಕೊಳ್ಳಲ್ಪಟ್ಟಿವೆ. ಹೀಗಾಗಿ ಇದರ ಅಭ್ಯಾಸ ಅತೀವ ಶ್ರಮಸಾಧ್ಯವಾದುದು. ಆದುದರಿಂದಲೇ ವ್ಯಾಕರಣವು ಹೊಸತಾದರೂ ಪ್ರತಿಪಾದನಾಕ್ರಮವು ವೈಶಿಷ್ಟ್ಯಪೂರ್ಣವಾಗಿದ್ದರೂ, ಆಕಾರದಲ್ಲಿ ವಿಸ್ತಾರವಾಗಿದ್ದರೂ ಇದು ಪ್ರಾಮಾಣ್ಯ ಗ್ರಂಥವಾಗಬಲ್ಲದಿಲ್ಲ ಆದರೂ ಕನ್ನಡ ವ್ಯಾಕರಣದ ಪ್ರಾಥಾಭ್ಯಾಸ ಮಾಡಬೇಕೆಂದಿರುವವರಿಗೆ ಮಾತ್ರ ಇದರ ಅಭ್ಯಾಸ ಉಪಯೋಗಿ. ಇದನ್ನು ಅಭ್ಯಸಿಸುವಾಗ ತಾಳ್ಮೆ ಮತ್ತು ಏಕಾಗ್ರತೆಗಳು ಅವಶ್ಯ.

ಕನ್ನಡದ ಕೊರತೆ

ಇದರನಂತರ ಇಂತಹ ಸ್ವತಂತ್ರ ವ್ಯಾಕರಣ ಗ್ರಂಥಗಳಾವುವೂ ಹುಟ್ಟಿಕೊಂಡಿಲ್ಲ. ಎಂತಲೇ ಕನ್ನಡದಲ್ಲಿ ೧೭ನೆ ಶತಮಾನಾನಂತರವಾದ ಭಾಷಾರೂಪಗಳಿಗೆ ಪ್ರಾಮಾಣ್ಯವನ್ನು 'ನಿರ್ಧರಿಸುವ ವ್ಯಾಕರಣ ಗ್ರಂಥದ ಅಭಾವವಿದೆ. ದಿನೇ ದಿನೇ ಬೆಳೆಯುತ್ತ ಬರುವುದು ಜೀವಂತ ಭಾಷೆಯ ಲಕ್ಷಣವಾದರೂ ಭಾಷೆಯು ಕಟ್ಟಾಣವಿಲ್ಲದ ಕುದುರೆಯಂತೆ ಓಡಬಾರದು. ಆದರೂ ಜೀವಂತ ಭಾಷೆಗಳು ಹಲವು ಬಗೆಗಳಿಂದ ಬೆಳೆಯುತ್ತವೆ. ಹೊಸ ಶಬ್ದಗಳು ಬಂದು ಸೇರಬಹುದು; ಅನ್ಯದೇಶ್ಯ ಪದಗಳು ಬರಬಹುದು, ಕೆಲವು ಪ್ರಚಲಿತ ಪದಗಳು ಪ್ರಯೋಗದಿಂದಲೇ ಜಾರಿಬೀಳಬಹುದು. ಅಥವಾ ಸೌಲಭ್ಯಾಕಾಂಕ್ಷೆಯಿಂದ ಮೂಲಪದಗಳ ರೂಪ ಬದಲಾವಣೆಗೊಳ್ಳಬಹುದು.

ಹಾಗೆಯೇ ಕನ್ನಡದಲ್ಲಿಯೂ ಬದಲಾವಣೆ ಆಗುತ್ತಿವೆ. ಇಂದು ಪ್ರಾಚೀನಕಾಲದ ಅಚ್ಚಕನ್ನಡ ಪದಗಳು ಮರೆಯಾಹೋಗಿ ಇಂಗ್ಲಿಷ್, ಮರಾಠಿ, ಉರ್ದು, ಹಿಂದಿ ಇತ್ಯಾದಿ ಅನ್ಯ ಭಾಷೆಗಳ ಪದಗಳು ಬಳಕೆಯಲ್ಲಿವೆ. ಅಲ್ಲದೆ ಗುಂಡು ಸೂಜಿ, ಆಕಾಶಬುಟ್ಟಿ ಮೊದಲಾದ ಹೊಸ ಪದಗಳು ಸಿದ್ಧವಾಗಿವೆ. ಹಾಗೆಯೇ ಹಳೇಯ ಕಲ್, ಬೇರ್ ಇತ್ಯಾದಿ ವ್ಯಂಜನಾಂತ ಪದಗಳು ಕಲ್ಲು ಬೇರು ಎಂದು ಸ್ವರಾಂತವಾಗಿವೆ. ಹೆಚ್ಚೇಕೆ, ವಿಭಕ್ತಿ ಪ್ರತ್ಯಯಗಳು, ಅವ್ಯಯಾತ್ಮ ಪ್ರತ್ಯಯಗಳೇ ವಿಸ್ತಾರ್ಯಸ ಹೊಂದಿವೆ. ಸಂಧಿನಿಯಮಗಳು ಶಿಥಿಲವಾಗಿವೆ. ಸಮಾಸವು ತೀರ ವಿಕಲ್ಪವಾಗಿದೆ. ವ್ಯಾಕರಣವು ಕೆಲ ಪ್ರಯೋಗಗಳನ್ನು ಹೊಂದಿಕೊಂಡು ಶಬ್ದಗಳ ಸರಿಯಾದ ರೂಪನಿಷ್ಪತ್ತಿಯನ್ನು ತೋರಿಸುವುದು. ಆದುದರಿಂದ ಭಾಷೆ ಬೆಳೆಯುತ್ತ ಬಂದಾಗ ವ್ಯಾಕರಣವೂ ಬೆಳೆಯದೆ ಹೋದರೆ, ಅದನ್ನು ಅಭ್ಯಸಿಸುವ ಆ ಕಾಲದ ಭಾಷಾಭ್ಯಾಸಿಗಳಿಗೇನು ಪ್ರಯೋಜನ? ೧೬ನೆ ಶತಮಾನದಲ್ಲಿ ಭಟ್ಟಾಕಳಂಕನೋ ೧೩ನೆಂಶತಮಾನದಲ್ಲಿ ಕೇಶಿರಾಜನೋ ಬರೆದಿಟ್ಟ ವ್ಯಾಕರಣದ ಆಧಾರದಿಂದ ಈಗ ಬಳಕೆಯ ಭಾಷೆಯನ್ನು ಪರಿಶೀಲಿಸಿದರೆ, ಅದೆಷ್ಟು ಪದಗಳು ವ್ಯಾಕರಣ ಬದ್ಧವಾಗಿರುವುವು? ಆದುದರಿಂದ ಇಂದು ನಮಗಿರುವ ಕೊರತೆಯೆಂದರೆ ಒಂದು ಸಂಪೂರ್ಣ ವ್ಯಾಕರಣದ್ದು. ಇಂದು ಜನರ ನಾಲಿಗೆಯಲ್ಲಿ ಪ್ರಜಲಿತವಿರುವ ಭಾಷೆಗನುಗುಣವಾದ, ಇಂದು ಕವಿ ಪ್ರಯೋಗಗಳಿಗೆ ಸಾಧುತ್ವವನ್ನು ಕಲ್ಪಿಸುವ ವಿಸ್ತಾರವಾದ ವ್ಯಾಕರಣವೊಂದು ನಿರ್ಮಾಣವಾಗಬೇಕು ಅದಕ್ಕೆ ಬಹುಭಿಷಾ ಪಂಡಿತರು ಮುಂದೆ ಬರಬೇಕು.



ಬ್ರಿಸ್ಟಲ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಶ್ರೀ. ಸಿ ಎಫ್. ಪವೆಲರು ಒಂದು ವಿಶೇಷ ರೀತಿಯ ಆಕಾಶಬುಟ್ಟಿಯನ್ನು ತಯಾರಿಸಿದ್ದಾರೆ. ಇದು ೧೬ ಸಾವಿರ ಘನ ಮೀಟರ್ ವಿಸ್ತಾರವಿದೆ.

ನಿತ್ಯ ಜೀವನದಲ್ಲಿ ಮೌನದ ಸ್ಥಾನ—

ಮೌನಂ ಸರ್ವಾರ್ಥ ಸಾಧನಂ

ಮೌನವೆನ್ನುವುದು ಮುನಿಗೆ ಸಂಬಂಧಿಸಿದುದು. ಆದರೆ, ಸಾಮಾನ್ಯವಾಗಿ "ಮೌನ"ವೆಂದರೆ, ಮಾತನಾಡದಿರುವುದು ಎಂದರ್ಥ. ನಮ್ಮ ಧರ್ಮವೂ ಶಾಸ್ತ್ರಗಳೂ ಹಲವಾರು ಸಂದರ್ಭಗಳಲ್ಲಿ ಮೌನವನ್ನಾಚರಿಸುವುದರ ಆವಶ್ಯಕತೆಗಳನ್ನು ಕಲ್ಪಿಸಿಕೊಟ್ಟಿವೆ. ನಾವು ಆಹಾರವನ್ನು ಸೇವಿಸುತ್ತಿರುವಾಗ, ಮೌನವನ್ನಾಚರಿಸಬೇಕೆಂದು ಹೇಳಿದೆ. ಇಲ್ಲಿ ಮೌನವೆಂದರೆ ಮಾತನಾಡದಿರುವುದೆಂದರ್ಥ. ಆತ್ಮನಿಯಂತ್ರಣದ ಗುರಿಯಲ್ಲಿ ಮಾತಾಡುವ ಆಕಾಂಕ್ಷೆಯನ್ನು ತಡೆಹಿಡಿಯುವುದೂ ಒಂದೆಂದು ತಿಳಿಯಲಾಗಿದೆ.

ಮದ್ರಾಸು ರಾಜ್ಯದ ವಿದ್ಯಾಧಿಕಾರಿಗಳು ಶಾಲೆಗಳಲ್ಲಿನ ದೈನಂದಿನ ಕಾರ್ಯಕಲಾಪಗಳನ್ನು ಪ್ರಾರ್ಥನೆಯಿಂದ ಪ್ರಾರಂಭಿಸುವ ಕುರಿತಾಗಿ ಯೋಚಿಸುತಿದ್ದಾರೆ. ಶಾಲೆಗಳಲ್ಲಿ ನಾನಾ ವರ್ಗದ ವಿದ್ಯಾರ್ಥಿಗಳು ಒಟ್ಟು ಸೇರುವುದರಿಂದ ಯಾವ ರೀತಿಯ ಪ್ರಾರ್ಥನಾ ಗೀತೆಯನ್ನು ಹಾಡಬೇಕೆಂಬುದೊಂದು ಪ್ರಶ್ನೆಯಾಗಿದೆ. ಇಷ್ಟೇ ಅಲ್ಲದೆ, ಕೆಲವರಿಗೆ ದೇವರ ಮೇಲೆ ವಿಶ್ವಾಸವಿಲ್ಲದೆ ಇರುವುದರಿಂದ, ಅವರ ದೃಷ್ಟಿಯಲ್ಲಿ ಪ್ರಾರ್ಥನೆಯೊಂದು, ಅವರ ತಿಳುವಳಿಕೆಗೆ ವಿರುದ್ಧವೆನಿಸಿದ ಒಂದು ಕ್ರಿಯೆಯಾಗಿ ಪರಿಣಮಿಸುತ್ತದೆ. ಆದುದರಿಂದಾಗಿ ಈ ವಿಷಯದಲ್ಲಿ ಇದಮಿತ್ಥಂ ಎಂದು ನಿರ್ಧರಿಸುವುದು ಜಟಿಲವಾಗುವುದು ಸತ್ಯ. ಕೆಲವೊಂದು ಪಕ್ಷಗಳ ಪ್ರಚಾರ ಕಾರ್ಯವು ತ್ವರಿತಗತಿಯಿಂದ ಸಾಗುತ್ತಿರುವುದರಿಂದ, ಇದು ಸಣ್ಣ ಮಕ್ಕಳ ಮನಸ್ಸಿನಲ್ಲಿ ವಿಷವೇರುವುದು. ಇಂತಹ ಸಂದರ್ಭದಲ್ಲಿ ಸರಕಾರವು ಒಂದು ನಿಶ್ಚಿತ ಧೋರಣೆಯನ್ನು ತಳೆಯಬೇಕು. ಈ ಬಗ್ಗೆ—ಒಂದು ಧೋರಣೆಯನ್ನು ರೂಪಿಸಿ, ಪ್ರತಿ ದಿನವೂ ದಿನದ ಕಾರ್ಯಾರಂಭಕ್ಕೆ ಮೊದಲು ಎಲ್ಲ ವಿದ್ಯಾರ್ಥಿಗಳನ್ನೂ ಒಂದೆಡೆ ಸೇರಿಸಿ ಎರಡು ಯಾ ಮೂರು ನಿಮಿಷಗಳ ಮೌನ ಪ್ರಾರ್ಥನೆಯನ್ನು ಮಾಡುವುದು ಉತ್ತಮವೆಂದು ಹೇಳಬಹುದು.

ಪರಮಾತ್ಮನನ್ನು ಸೂಚಿಸುವ ವಿಧಾನಗಳಲ್ಲಿ ಮೌನವೊಂದು ಮಹತ್ವದ ಪಾತ್ರವನ್ನು ವಹಿಸಿದೆ. ಮೌನವೆಂದೊಡನೆಯೇ ಕೇವಲ ಸುಮ್ಮನಿರುವುದು; ಮಾತಾಡದಿರುವುದು ಎಂದರ್ಥವಲ್ಲ. ಎಲ್ಲ ಮನೋವಿಕಾರಗಳಿಂದ ಮನಸ್ಸನ್ನು ದೂರಗೊಳಿಸಿ ನಿರ್ಮಲವಾಗಿರಿಸುವುದೂ ಮೌನಾಚರಣೆಗೆ ಅತ್ಯಗತ್ಯ. ಎಂದರೆ, ನಾವು ಮೌನವನ್ನಾಚರಿಸುವಾಗ ನಮ್ಮ ಎಲ್ಲ ಅಂಗಾಂಗಗಳನ್ನೂ ಆತ್ಮದ ಅಧೀನದಲ್ಲಿಟ್ಟುಕೊಂಡು ಏಕಾಗ್ರತೆಯಿಂದಿರಬೇಕು. ಯಾವುದೇ ಒಂದು ಇಂದ್ರಿಯವಾದರೂ ಈ ಬಿಗಿತದಿಂದ ದೂರವುಳಿಯುವಂತಾಗಬಾರದು. ಇಂತಹ ಅಮೌಲ್ಯ ಮೌನವು ನಮ್ಮ ಆತ್ಮದಲ್ಲಿ ದಿವ್ಯ ಜ್ಯೋತಿಯನ್ನು ಬೆಳಗಿಸುತ್ತದೆ; ನಮ್ಮನ್ನು ಹಾಗೂ ಪರಮಾತ್ಮನನ್ನು ಕಾಣುವ ನಮ್ಮ ಧ್ಯೇಯದಲ್ಲಿ ನಾವು ಜಯಶೀಲರಾಗುವುದಕ್ಕೆ ನೆರವಾಗುತ್ತದೆ. ಸಮುದ್ರದ ತೆರೆಗಳಂತೆ ನಿರಂತರವಾಗಿ ಉದ್ಭವಿಸುವ ಮತ್ತು ಮೃತಿಯನ್ನೈದುವ ನಾನಾ ತೆರದ ಭಾವನೆಗಳು ನಮ್ಮಲ್ಲಿ ಹುದುಗಿಕೊಂಡಿರುವ ಆತ್ಮದಿಂದ ನಮ್ಮ ಮನಸ್ಸನ್ನು ಅಡಗಿಸುವುವು. ಒಂದು ಬಾರಿ ನಮ್ಮ ವಿವಿಧ ಯೋಜನೆಗಳನ್ನು ನಾವು ಅಂಕಿತದಲ್ಲಿಟ್ಟುಕೊಂಡೆವೆಂದರೆ, ಆಗ, ಆತ್ಮವು ತನ್ನ ಕಾರ್ಯವನ್ನು ನಿರಾಶಂಕವಾಗಿ ಮಾಡಲು ಮೊದಲು ಮಾಡುತ್ತದೆ. ಈ ತೆರದ ಮೌನವೇ ಮುನಿಯದು. ಇದನ್ನು ನಾವೆಂದೂ ತಿಳಿದು ಸಂತೋಷಿಸುವುದಿಲ್ಲ, 'ತೂಷ್ಣೀಂ ಕಿಂಚಿತ್ ಅಚಿಂತಯನ್' ಎಂಬ ಪ್ರಮಾಣ ವಾಕ್ಯವಿದೆ. ಈ ರೀತಿಯಿಂದ, ಶಾಲೆಗಳಲ್ಲಿ ಉದ್ಭವಿಸಿದ ಪ್ರಾರ್ಥನಾ ಪ್ರಶ್ನೆಗಳನ್ನು ಬಗೆ ಹರಿಸುವಲ್ಲಿ ಈ ವಿಧಾನವು ಉತ್ತಮ ಪರಿಹಾರೋಪಾಯವೆಂದು ಹೇಳಬಹುದು.

ಈ ಮೌನದ ಅಭ್ಯಾಸವು ಕೇವಲ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಾಗಿರಬೇಕಾಗಿಲ್ಲ. ನಾವು ಮೌನವನ್ನು ಅತ್ಯಧಿಕ ಪ್ರಮಾಣದಲ್ಲಿ ಅಭ್ಯಸಿಸಿ ನಮ್ಮಲ್ಲಿರುವ ನಾನಾ ವಿಧದ ಭಾವನೆಗಳನ್ನು ದೂರಗೊಳಿಸುವುದಕ್ಕೆ ತಪ್ಪಿದರೆ, ನಾವು ಧ್ಯೇಯರಹಿತ ಜೀವನವನ್ನು ಬದುಕಬೇಕಾಗಿ ಬಂದುದಕ್ಕೆ ಮರುಗಬೇಕಾಗುವುದು. ಭಾವರಹಿತತೆಯಿಂದ ನಾವು ಪರಮಾತ್ಮ ಭಾವನೆಯನ್ನು ಉದ್ಬುದ್ಧಗೊಳಿಸಬಹುದು. ನಾವು ದೇವರ ನಾಮವನ್ನು ಉಚ್ಚರಿಸಬಹುದು; ಮಹಾತಾಯಿ, ಲಕ್ಷ್ಮೀನಾರಾಯಣ ಅಥವಾ ಉಮಾ ಮಹೇಶ್ವರರ ಧ್ಯಾನವನ್ನು ಮಾಡಬಹುದು. ದುಸ್ಸಂಗಕ್ಕೆ ಕಟ್ಟಿಬಿದ್ದ ಮನುಷ್ಯನು, ಆ ಸಂಗದಿಂದ ದೂರವಿರಲು ಪೊಲೀಸರ ಸಹಾಯವನ್ನು ಯಾಚಿಸಬೇಕಾಗುತ್ತದೆ. ಆತನ ಮೊದಲಿನ ದುಷ್ಟ ಸಂಗಾತಿಗಳು ಅವನಿಗೆ ಉಪದ್ರವನ್ನುಂಟು ಮಾಡುವುದಿಲ್ಲವೆಂಬ ನಂಬಿಕೆಯು ಆತನಲ್ಲಿ ಹುಟ್ಟಿದನಂತರ ಅವರ ರಕ್ಷಣೆಯನ್ನು ಬಯಸದಿರಬಹುದು. ಹಾಗೆಯೇ ನಮ್ಮ ಆತ್ಮನಲ್ಲಿ ಹುದುಗಿಕೊಂಡಿರುವ ಮೈಲಿಗೆಯನ್ನು ದೂರ ಮಾಡಿ ಆತ್ಮಪಾವಿತ್ರ್ಯವನ್ನೊದಗಿಸುವ ಸಲುವಾಗಿ ನಾವು-ದೈವಿಕ ಶಕ್ತಿಯೊಂದರ ಮರೆಹೋಗಬೇಕಾಗಿದೆ. ಪರಮಾತ್ಮನ ಸಂಗವು ಶೂನ್ಯದತ್ತ ಕೊಂಡೊಯ್ದು ಆತ್ಮಾನ್ವೇಷಣೆಯಲ್ಲಿ ಪರಿಣಾಮಹೊಂದುತ್ತದೆ. ಆ ಮೇಲೆ ಆತ್ಮವು ಪುನರ್ಜನ್ಮದಿಂದ ಮುಕ್ತವಾಗುವುದು. 'ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ; ನಿರ್ಮೋಹತ್ವೇ ನಿಶ್ಚಲ ತತ್ವಂ ನಿಶ್ಚಲ ತತ್ವೇ ಜೀವನ್ಮುಕ್ತಿಃ" ಎಂಬ 'ಭಜಗೋವಿಂದಂ'ದ ಉಲ್ಲೇಖವನ್ನು ಸಮರ್ಥಿಸುತ್ತದೆ. ನಾವು 'ಶತ' (ಒಳ್ಳೆಯದು)ನೊಡನೆ ಕೂಡಿಕೊಂಡಾಗ, 'ಅಹಂ'ವೆಂಬುದು ನಾಶವಾಗುವುದು; ಅಹಂ ಎಂಬುದು ಬ್ರಹ್ಮನೊಡನೆ ಪರಿಚಯ ಹೊಂದುವುದು. ಪರಮಾತ್ಮನಿಂದ ನಾವು ಅತ್ಯಂತ ದೂರವಿರುತ್ತೇವೆ ಎಂಬ ಭಾವನೆಯು ನಮ್ಮಲ್ಲಿರುವ ವರೆಗೆ 'ಅಹಂ' ಇರುತ್ತದೆ. ಜೀವಾತ್ಮ ಪರಮಾತ್ಮನ ಗುಣಗಳನ್ನು ಹೊಂದಿ, ಆತನಲ್ಲಿ ಲೀನವಾಗಬೇಕು; ಆಗಲೇ ಮಾನವನ ಜೀವನದ ಧ್ಯೇಯವು ಪೂರ್ಣವಾಗುವುದು. ಇದಕ್ಕೆ ಮೌನವು ಸಾಧನವಾಗುವುದು. ಆದುದರಿಂದಲೇ 'ಮೌನಂ ಸರ್ವಾರ್ಥಸಾಧನಂ'ಎಂಬ ಉಕ್ತಿಯು ಪ್ರಚಲಿತವಿದೆ. ಎಂತಲೇ ಮೌನವು ನಮ್ಮ ಜೀವನದಲ್ಲಿ ಮಹತ್ವದ ಪಾತ್ರ ವಹಿಸುವ ಒಂದು ಸಾಧನ.

ನಾವು ದಿನನಿತ್ಯವೂ ಒಂದು ನಿಶ್ಚಿತ ವೇಳೆಯಲ್ಲಿ ಮೌನವ್ರತವನ್ನಾಚರಿಸಿದರೆ, ಅದರಿಂದ ನಮಗೆ ಶ್ರೇಯಸ್ಸಾಗುವುದು; ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿ, ಆತ್ಮವನ್ನು ಶುದ್ಧಿಗೊಳಿಸಿ, ಪರಮಾತ್ಮನನ್ನು ಕಂಡುಕೊಂಡು, ತನ್ನತನವನ್ನು ಕೃಷೀಕರಿಸಿ ಜೀವನ್ಮುಕ್ತಿಯನ್ನು ಪಡೆಯಬಹುದು.

(ಜಗದ್ಗುರು ಶಂಕರಾಚಾರ್ಯರ ಭಾಷಣದಿಂದ ಈ ಲೇಖನವನ್ನು ಸಿದ್ಧಪಡಿಸಿದೆ.)

The Academy of General Education,
MANIPAL, SOUTH KANARA.

—x—

GRAHINI VIDYALAYA.

In co-operation with the Mahila Samaj, Udipi the Academy of General Education proposes to start the Grahini Vidyalaya in the premises of the new buildings of the Mahila Samaj at Ajjarkad. The purpose of the School is to instruct young women of the town in works like (i) Cooking, (ii) Needle work, (iii) embroidery work, (iv) knitting and hand-work, (v) cutting and tailoring, (vi) health and home science, (vii) home medicines, (viii) nursery class and (ix) gardening.

In order to gauge the probable response from the public we request such young women as are interested in joining the Grahini Vidyalaya to send their names to Mrs. K. Asha Bhat, President, Grahini Vidyalaya, "Gita", Ambalpadi, Udipi. Classes will be conducted for one hour in the morning and one hour in the afternoon. Timings will be fixed to suit the convenience of the majority of students. Qualified tutors will be appointed to teach. The necessary books, furniture and other contingencies will be supplied by the Academy. A nominal fee of Rs. 3/. per month is proposed to be collected from each student. Thirty students will be admitted for the first batch. The duration of the course will be six months.

T. M. A. Pai, *M.B.B.S.,*
Registrar.

ವಿಶಾಲ ಪ್ರಚಾರವಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಶೀಘ್ರ ಪ್ರತಿಫಲ ಪಡೆಯಿರಿ.

ಸರಕಾರ ಶಿಕ್ಷಕರನ್ನು ಕಡೆಗಣಿಸಿದೆ

(೩ನೇ ಪುಟದಿಂದ)

ವಿ ನಾಗರಿಕರ ನಿರ್ಮಾಪಕರು, ಪೋಷಕರು ಮತ್ತು ಭಾಗ್ಯ ವಿಧಾತರಾಗಬಲ್ಲರು. ಯಾವ ದೇಶದ ಶಿಕ್ಷಕರು ಪರಿಶ್ರಮಿ, ಸುಚ್ಚರಿತ್ರ ಮತ್ತು ವಿಚಾರಶೀಲರಾಗಿರುವರೋ ಆದು ಬಲಿಷ್ಠ ಹಾಗೂ ಪ್ರಗತಿಶೀಲವಾಗುವುದು. ಆದರೆ, ನಮ್ಮ ಸ್ವತಂತ್ರ ಭಾರತದಲ್ಲಿ ಯಾರೊಬ್ಬರ ಗಮನವೂ ಶಿಕ್ಷಣ ಮತ್ತು ಶಿಕ್ಷಕರ ಕಡೆಗೆ ಹರಿಯುತ್ತಿಲ್ಲ. ಇದನ್ನು ತಮ್ಮ ದೇಶದ ಸೌಭಾಗ್ಯವೆಂದು ಕರೆಯಲೇ ಅಥವಾ ದುರ್ಭಾಗ್ಯವೆಂದೆ?

ಆಗಾಗ ನಮ್ಮ ಮಂತ್ರಿಮಂದರು ಶಿಕ್ಷಕರೊಡನೆ 'ನೀವು ರಾಷ್ಟ್ರ ನಿರ್ಮಾತರಿದ್ದೀರಿ, ನಿಮ್ಮ ಶಿರಸ್ಸಿನ ಮೇಲೆ ದೇಶದ ಭವಿಷ್ಯ ನಿರ್ಧಾರವಾಗಿದೆ? ಎಂಬಿತ್ಯಾದಿಯಾಗಿ ಹೇಳಿ ಅವರನ್ನು ಸಂತೋಷಗೊಳಿಸಲು ಹವಣಿಸುತ್ತಾರೆ. ಆದರೆ, ಅಂತಹ ಪ್ರಶಂಸಕರು ಅಧ್ಯಾಪಕರ ಮೂಲ ಸ್ಥಿತಿಗತಿಗಳ ಕುರಿತು ಎಂದಾದರೂ ಚಿಂತಿಸಿದ್ದಿದೆಯೇ? "ನೀವು ಕಸಿವೆ ನೀರಡಿಕೆಗಳಿಂದ ಕ್ಷುಬ್ಧರಾಗಿರುವುದಾದರೆ, ಪುಸ್ತಕಾಲಯಗಳಿಗೆ ಹೋಗಿ ನಿಮ್ಮ ಹಸಿವೆ ನೀರಡಿಕೆಗಳನ್ನು ದೂರಮಾಡಿರಿ" ಎನ್ನುತ್ತಾರೆಯೆ? ಹಸಿವೆಯ ಸ್ಥಾನದಲ್ಲಿಯೇ ಜ್ಞಾನದ ಸ್ಥಾನವಿದೆಯೆ? "ವಿಭುಃಕ್ಷಿತ ಕಿಂ ನ ಕರೋತಿ" (ಹಸಿದಿರುವವನೇನು ಮಾಡುವುದಿಲ್ಲ?) ಎಂಬ ವಚನ ಎಂದಿಗೂ ಸುಳ್ಳಾಗಲಾರದು. ಶಿಕ್ಷಕರಿಗೆ ಅತ್ಯಲ್ಪ ವೇತನವನ್ನೀಯುವುದು ಮಾತ್ರವಲ್ಲದೆ ಅವರೊಡನೆ ಕೆಟ್ಟ ವ್ಯವಹಾರವನ್ನೂ ಮಾಡಿಕೊಳ್ಳಲಾಗುತ್ತದೆ. ಅವರಿಗೆ ಸಹಾನುಭೂತಿಯ ಎರಡು ಮಾತುಗಳನ್ನು ಕೇಳುವ ಭಾಗ್ಯವೂ ಇರುವುದಿಲ್ಲ. ನಾಲ್ಕೂ ನಿಟ್ಟಿನಲ್ಲಿ ಭರ್ತ್ಸನೆಯೇ ಕೇಳಬರುತ್ತದೆ. ಅವರಿಗಿಂದು ಸಮಾಜದಲ್ಲಿ ಸ್ಥಿರ ಸ್ಥಾನವು ದೊರೆತಿಲ್ಲ. ಇಂತಹ ನಿರಾಶಾಜನಕ ಪರಿಸ್ಥಿತಿಯಲ್ಲಿ ಶಿಕ್ಷಕ ಸಮೂಹವಿಂದು ನಿರಾಶರಾಗಿ ಹೋಗಿದ್ದಾರೆ.

ಸರಕಾರವು ಜನತೆಯನ್ನು ಮಾರ್ಗದರ್ಶನಮಾಡುವ ಅಧ್ಯಾಪಕರನ್ನು ಕಡೆಗಣಿಸಿದರೆ, ಭಾವೀ ಪೀಳಿಗೆಯ ತಲೆಗೆ ಕಲ್ಲು ಹೊಯ್ದಂತೆ ಎಂಬುದನ್ನು ತಿಳಿದು, ತನ್ನ ಇತರ ಭಾಗಗಳ ನೌಕರಿಗಿರುವ ವೇತನ ಸೌಲಭ್ಯಗಳನ್ನು ಅನುಗ್ರಹಿಸುವತ್ತ ದೃಷ್ಟಿಹರಿಸಿದರೆ ಚೆನ್ನು. ಇಲ್ಲವಾದರೆ, ಅಧ್ಯಾಪಕರೆನ್ನುತ್ತಾರೆ— "ನಮಗೆ ಮಾತ್ರ ವೇತನವೀಯಲು ಸರಕಾರದೊಡನೆ ಹಣವಿಲ್ಲ; ಮತ್ತೆಲ್ಲ ಶಾಖೆಗಳಿಗೆ ದುರ್ವ್ಯಯ ಮಾಡಲು ನಿರಾಕಷ್ಟ ಬಂಡವಾಳವಿದೆ!"

—ಯೋಜನಾ.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸತಿ ವಿರಾಜ್— ಮೂಲ: ದಿ. ಶರಚ್ಚಂದ್ರ ಚಟ್ಟೋಪಾಧ್ಯಾಯ. ಅನುವಾದಕರು: ಮ. ವೆಂಕಟೇಶ. ಪ್ರಕಾಶಕರು ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಪುಟಗಳು: ೧೭೨ ಬೆಲೆ: ಸಾದಾ ಪ್ರತಿ: ರೂ. ೧.೮೮. ಕೆಲಿಕೋ ಪ್ರತಿ: ರೂ. ೩.೬೩.

ಅಧುನಿಕ ರೀತಿಯ ಕಾದಂಬರಿಗಳು ಕನ್ನಡದಲ್ಲಿ ಹೊರಬರುವುದಕ್ಕಾರಂಭವಾದುದು ಬಂಗಾಳಿ ಕಾದಂಬರಿಗಳ ಅನುವಾದದಿಂದ. ಹೀಗಾಗಿ ದಿವಂಗತ ಬಂಕಿಮಚಂದ್ರ ಮತ್ತು ಶರಚ್ಚಂದ್ರರ ಕಾದಂಬರಿಗಳು ಕನ್ನಡಿಗರಿಗೆ ಕಾದಂಬರಿಯ ರುಚಿಯನ್ನೇ ಹಿಡಿಸಿಬಿಟ್ಟುವು. ಇದರಿಂದ ಇವರೆ ಮತ್ತು ಇವರಂತಹರ ಹಲವಾರು ಸುಪ್ರಸಿದ್ಧ ಕಾದಂಬರಿಗಳು ಬೇರೆ ಬೇರೆ ಭಾಷೆಗಳಲ್ಲಿ ಅನುವಾದವಾಗಿವೆ. ಈ ಅನುವಾದಿತ ಕಾದಂಬರಿಗಳು ಭಾಷೆಯ ಮೂಲ ಕೃತಿಗಳಂತೆಯೇ ಜನಾದರಣೆಯನ್ನು ಪಡೆದಿವೆ. ಶರಚ್ಚಂದ್ರರ ಹಲವಾರು ಕೃತಿಗಳು ಕನ್ನಡೀಕರಣವಾಗಿದ್ದು ಅವುಗಳಲ್ಲಿ ಸತಿ ವಿರಾಜ್ ಎಂಬುದೂ ಒಂದು. ಇದು ಮೊತ್ತ ಮೊದಲಿಗೆ ೧೯೪೫ರಲ್ಲಿ ಉಲ್ಲಿಖಿತ ಪ್ರಕಾಶಕರಿಂದಲೇ ಬೆಳಕು ಕಂಡಿತ್ತು. ಕಥೆಯ ಪೃಷ್ಠವು ಸ್ವಶಕ್ತತೆ, ಮಾರ್ದವತೆಗಳಿಂದಾಗಿ ಇದು ಜನಮನ ಮೆಚ್ಚುಗೆಯನ್ನು ಪಡೆದು, ಇದೀಗ ಹದಿನೂರು ವರ್ಷಗಳನಂತರ ಮರುಬೆಳಕು ಕಾಣುವಂತಾಗಿದೆ

ನೀಲಾಂಬರ ಸಂಪ್ರದಾಯ ಶರಣ, ಕುಲ ಮರ್ಯಾದೆಯನ್ನು ಗೌರವಿಸುವವ. ಅವನ ತಮ್ಮ ಪೀತಾಂಬರ ಇದಕ್ಕೆ ವಿರುದ್ಧಸ್ಥ. ಇವರ ತಂಗಿ ಪರಿಮತಿಯ ವಿವಾಹದ ನೆಚ್ಚಿದಿಂದ ನೀಲಾಂಬರ ಸಂಪೂರ್ಣ ಕುಸಿದುಬಿದ್ದ. ಸದಾ ಪರಸೇವೆ, ಪರೋಪಕಾರಗಳಲ್ಲಿಯೇ ತಲ್ಲೀನನಾಗಿತ್ತಿದ್ದ ನೀಲಾಂಬರ ತನ್ನ ಮಡದಿ ವಿರಾಜ್‌ಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ನೀಲಾಂಬರನ ಗೃಹಕೃತ್ಯ ನಿರ್ಲಕ್ಷ್ಯತೆಗಳಿಂದಾಗಿ ವಿರಾಜ್ ಪಡಬಾರದ ಬನ್ನವನ್ನು ಸಹಿಸಬೇಕಾಯಿತು. ಕೊನೆಗೆ ಹರಿಜನರ ಕೇರಿಯಿಂದ ಸುಚ್ಚಕ್ಕಿಯನ್ನು ಬೇಡಿತಂದು ತನ್ನ ಪತಿಗೆ ಅಟ್ಟು ಬಡಿಸುವ ಗತಿ ಬಂದಿತು. ಪೀತಾಂಬರ-ನೀಲಾಂಬರರೊಳಗೆ ವೈಮನಸ್ಯವಿದ್ದು, ಪೀತಾಂಬರನ ಪತ್ನಿ ಮೋಹಿನಿಗೂ ವಿರಾಜಳ ಸಹಾಯಕ್ಕೆ ನಿಲ್ಲುವ ಸ್ವಾತಂತ್ರ್ಯವಿರಲಿಲ್ಲ. ಆದರೆ, ಮೋಹಿನಿಯಿಂದ ಭಾಷೆ ತೆಗೆದುಕೊಂಡು, ವಿರಾಜ್ ಮನೆಯಿಂದ ಹೊರಬಂದು, ತನ್ನ ಮೇಲೆ ಮೊಡಲೇ ಕಣ್ಣುಹಾಕಿತ್ತಿದ್ದ ಜಮೀನುದಾರ ರಾಜೇಂದ್ರನೊಡನೆ ಓಡಿಹೋಗಿ ಬಯಸಿದಳು. ಆದರೆ ಅರ್ಧ ದಾರಿಯಲ್ಲಿ ಅಕೆಗೆ ತನ್ನ ತಪ್ಪು ತಿಳಿದೋಯಿತೋ ಏನೋ ನದಿಗೆ ಹಾರಿ, ಕಿನಾರೆಗೆ ಈಜಿದಳು. ಅಸ್ತ್ರೈರಲ್ಲಿ ಕೆಲಸಮಯ ಅಕೃಕೆಕೊಂಡಿ, ಅಲ್ಲಿಂದ ಬಿಡುಗಡೆಗೊಂಡಿದ ಬಳಿಕ ತನ್ನ ಪತಿಯನ್ನರಸಲು ಸಪ್ತಗ್ರಾಮಕ್ಕೆ ಹಿಂದಿರುಗುವ ಪ್ರಯತ್ನದಲ್ಲಿ ತೊಡಗಿದಳು. ಅತ್ತ ವಿರಾಜಳ ಶೋಧನೆಯಲ್ಲಿ ನಿಸ್ಪೃಹಾಯಕರಾಗಿದ್ದ ಅಣ್ಣತಮ್ಮಂದಿರು ಮೋಹಿನಿಯ ಮಾಧ್ಯಮದಿಂದ ಮುನಃ ಒಂದಾದರು. ಪೀತಾಂಬರ ಹಾವು ಕಚ್ಚಿ ದುರ್ಮರಣಕ್ಕೊಳಗಾದ ಅತ್ತ ಪರಿಮತಿಯೂ ತನ್ನ ಅಣ್ಣನೊಡನೆ ಮನಶ್ಶಾಂತಿಗಾಗಿ ತೀರ್ಥಸ್ಥಳ ಸಂದರ್ಶನೆಗೆ ಹೊರಟಳು. ಒಂದೆಡೆ ಭಯಾನಕ ಪೀಡೆಯಿಂದ ಯಾತನೆಯನ್ನು ಪಡುತ್ತಿದ್ದ ವಿರಾಜಳ ಪತ್ತೆಯಾಗಿ, ಅಕೆಯನ್ನು ಮನೆಗೆ ತರಲಾಯಿತು ಅಲ್ಲಿ, ತನ್ನ ಸ್ವಗೃಹದಲ್ಲಿ ಸ್ವಪತಿಯ ಸಾನ್ನಿಧ್ಯದಲ್ಲಿ ಅವಿಶ್ರಾಂತ ದುಃಖದಿಂದ ನೊಂದಿರುವ ಒಬ್ಬ ಹತಭಾಗ್ಯಳ ಜೀವನಾಂತ್ಯವಾಯಿತು.

ಶರತ್ಚಂದ್ರರ ಲೇಖನಿಯು ಹೃದಯ ವಿದ್ರಾವಕವಾದ ಈ ಕಥೆಯನ್ನು ಲಿಖಿಸಿದೆ ವೆಂಕಟೇಶರ ಅನುವಾದವೂ ಸತ್ವಪೂರ್ಣವಾಗಿದೆ. ವಿರಾಜಳು ನೀಲಾಂಬರನನ್ನು ಸೀತೆ ರಾಮನನ್ನು ಹಂಬಲಿಸಿದಂತೆ, ಪ್ರತಿಕ್ಷಿಸಿದಂತೆ, ಚಿಂತಿಸಿದಂತೆ ಕಂಡಿದ್ದಳು ರಾಮಾಯಣದ ಸೀತೆ ರಾವಣನಲ್ಲಿದ್ದರೂ ಅಪರ್ತ್ಯಕ್ಕೆಯಾದುದರಿಂದ ಆ ರಾಮನನ್ನು ನೆನೆಯುತ್ತಿದ್ದಳು ಇಲ್ಲಿ ವಿರಾಜಳು ತನ್ನ ಪತಿಯ ಕ್ರೂರಾಚರಣೆಯಿಂದ, ಅತನಲ್ಲಿ ಸಿಟ್ಟುಗೊಂಡು, ತನ್ನ ಜ್ಞಾನವನ್ನೇ ಮರೆತು ಚೇತನಾವಿಹೀನಳಾಗಿ ಪರಪುರುಷನೊಡನೆ ಓಡಿಹೋಗುವ ಹವ್ಯಾಸಕ್ಕೆ ಬಿದ್ದಳು; ತಾನೇನುಮಾಡುತ್ತಿದ್ದೇನೆಂಬುದರ ಅರಿವಾದೊಡನೆಯೇ ಅಕೆ ತಪ್ಪಿಸಿಕೊಂಡು ತನ್ನ ಪತಿಯನ್ನು ಸೇರಲೆಳಸಿದಳು. ವಿರಾಜಳ ಪಾತ್ರ ಕಾಸರಂಬಿಯ ಜೀವನಾಡಿಯಾಗಿದ್ದು ಅದು ಸಂಪೂರ್ಣವಾಗಿ ಫಲಕಾರಿಯಾಗಿದೆ. ಒಂದೊಂದು ಮಾತೂ ಅರ್ಥಗರ್ಭಿತವಾಗಿದ್ದು ಅದು ಆಯಾ ಪಾತ್ರದ ಮಹತ್ವವನ್ನು ತಿಳಿಸುತ್ತದೆ. ಮೋಹಿನಿಯು ಅಕ್ಕನನ್ನು ಅಕೆಯ ಸಂಸಾರವನ್ನು ಪ್ರೀತಿಸಿದ ಬಗ್ಗೆ, ಪರಿಮತಿಯ ಸಿಡುಕುತನ, ನೀಲಾಂಬರನ ಸಂಸಾರಾನಾಸಕ್ತಿ, ಪೀತಾಂಬರನ ಸ್ವಾರ್ಥ, ಸುಂದರಿಯ ಸೇವಾಜೀವನ—ಇವು ಮನೋಜ್ಞವಾಗಿ ಚಿತ್ರಿಸಲ್ಪಟ್ಟಿವೆ

ಕಾದಂಬರಿಯ ಕಥೆ ಹೃದಯಂಗಮವಾಗಿರುವುದಲ್ಲದೆ, ಭಾರತೀಯ ಸಂಸ್ಕೃತಿಯ ಅವಲಂಬಿಯರೆನಿಸಿದ ನಾರಿಯರು ಯಾವ ರೀತಿಯಲ್ಲಿರಬೇಕು ಎಂಬುದು ಅರ್ಥಗರ್ಭಿತವಾಗಿ ಚಿತ್ರಿತವಾಗಿದೆ. ಪತಿಸತಿಯರಿಬ್ಬರೂ ಸಂಸಾರದ ಎರಡು ಅಧಾರಸ್ತಂಭಗಳಾಗಿದ್ದು ಅವು ಒಂದೆರೊಡನೊಂದು ಕೂಡಿಕೊಂಡಿದ್ದರೆ ಮಾತ್ರ ಸುಸೂತ್ರವಾಗಿ ಸಾಗುವುದು ಸಾಧ್ಯವೆಂದಿಲ್ಲಿ ಗಮ್ಯವಾಗಿದೆ. ಸತಿ ವಿರಾಜ್— ಪರಿವೃತ್ತಿಯಾಗಿ ವಿರಾಜಿಸಿದ ವಿರಾಜಳ ಜೀವನದ ಚಿತ್ರವಾಗಿ ಜನಾಕರ್ಷಕವಿದೆ. ಅನುವಾದನ ಕಾರ್ಯ ಸುಂದರವಿದೆ. ಭಾಷೆ ಸುಲಲಿತವಿದೆ. ಪುಸ್ತಕಕ್ಕೆ ಬಳಸಿದ ಕಾಗದ, ಮುದ್ರಣಗಳು ಆಕರ್ಷಕವಿವೆ. ಹಾಗಾಗಿ ಪ್ರಕಾಶಕರು ಕನ್ನಡಿಗರು ಪ್ರತಿ ದೊರೆಯದೆ ನಿರಾಶರಾಗುವಾಗ ಯೋಗ್ಯ ಕಾರ್ಯವನ್ನೇ ಮಾಡಿದ್ದಾರೆ. ಅವಶ್ಯ ಸಂಗ್ರಹಿಸಿಡುವ ಕಾದಂಬರಿಗಳಲ್ಲಿ ಸತಿ ವಿರಾಜ್ ಒಂದು ಎಂದು ಧೈರ್ಯದಿಂದ ಹೇಳಬಹುದು.

ಮೂಲದ ಒಂದು ಕೃತಿಯನ್ನು ಒಬ್ಬರಿಗಿಂತ ಹೆಚ್ಚು ಜನರು ಬೇರೆ ಬೇರೆ ಹೆಸರಿನಲ್ಲಿ ಅನುವಾದ ಮಾಡುವ ಕುರಿತು ಪ್ರಕಾಶಕರೊಂದು ಮಾತು ಹೇಳಿದ್ದಾರೆ ಅದನ್ನು ಎಲ್ಲರೂ ಗಮನಿಸಬೇಕಾದ ಅಂಶವೆಂದಿಷ್ಟೇ ಇಲ್ಲಿ ಉಲ್ಲೇಖಿಸಬಹುದು.

ಪುಷ್ಪಾಂಜಲಿ— (ನಾಲ) ಸರಸ್ವತಿ ವಿದ್ಯಾಲಯ ಹೈಸ್ಕೂಲ್, ಗಂಗೊಳ್ಳಿ, ದ. ಕ. ದ ಪತ್ರಿಕೆ. ಪುಟಗಳು: ೪೦ - ೬.

ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಹೈಸ್ಕೂಲಿನ ಪತ್ರಿಕೆಯದಿಗೆ ಎರಡನೆ ಬಾರಿ ಅಚ್ಚಿನ ಮನೆಯನ್ನು ದಾಟಿ ಹೊರಬಂದಿರುವುದು. ಇದರಲ್ಲಿ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಕೃತಿಗಳು ಪೋಣಿಸಲ್ಪಟ್ಟಿವೆ. ಪುಷ್ಪಾಂಜಲಿಯ ಶೀರ್ಷಿಕೆ ಪುಷ್ಪಗಳು ಸಾಮಾನ್ಯವಾಗಿ ಸಂಗಂಧಿತವಾಗಿಯೇ ಇವೆ. ಶಾಲೆಯಲ್ಲಿ ಆದ ಪಾಠ್ಯಕ್ರಮಗಳಿರುವಾಗ ಈ ಎಲ್ಲ ವರ್ಗಗಳ ಕಿರಿಯ ಸೋದರಿ ಸೋದರರ ಕೃತಿಗಳನ್ನು ಕಾಣುವಂತಾಗಿಲ್ಲ. ಸಂಪಾದಕರು ವ್ಯಾಪಕರೀತಿಯಲ್ಲಿ ಒಳ್ಳೆಯ ಕೃತಿಗಳನ್ನು ಆರಿಸುವುದರಿಂದ ಎಲ್ಲ ವರ್ಗಗಳ ವಿದ್ಯಾರ್ಥಿ ಕೃತಿಗಳನ್ನು ಓದುವ ಅವಕಾಶ ಸಮ್ಮಂತಹರಿಗೆ ದೊರೆಯುತ್ತದೆ. ಕನ್ನಡ, ಆಂಗ್ಲ ಹಾಗೂ ಹಿಂದಿ ಭಾಷೆಗಳಲ್ಲಿ ಲೇಖನ ಕಥೆಗಳಿದ್ದು ಕವಿತೆಯ ರಸಾಸ್ವಾದನೆಗೆ ಅವಕಾಶ ಕಡಿಮೆಯಿದೆ. ಇವಕ್ಕೆಲ್ಲ ಸ್ಥಳಾವಕಾಶದ ಕೊರತೆಯೇ ಕಾರಣವಿರಬಹುದು. ಶಾಲಾವರ್ಧಂತಿ, ಪ್ರವಾಸಾದಿಗಳಿಗೆ ಸಂಬಂಧಿಸಿದ ಕೆಲವಾರು ಚಿತ್ರಗಳಿವೆ ಸರಸ್ವತಿ ಮಾತೆಯು ತನ್ನ ಎಳೆಯ ಮಕ್ಕಳಿಂದ ಅರ್ಪಿಸಲ್ಪಟ್ಟಿರುವ ಈ ಪುಷ್ಪ ಮಾಲೆಯನ್ನು ಮನಸ್ಸಂತೋಷದಿಂದ ಸ್ವೀಕರಿಸುವಳೆಂಬುದು ನಿಶ್ಚಯ.

—ಗೋಪಾ

ಕುಮಾರಿ ಬಿಲ್ಲೆಗಳು

Govt. Regd.

ಜೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA-40

ಸ್ವಾಕಿಸ್ವರು: ಷಾ ಕಂಪೆನಿ, ಮಂಗಳೂರು—1.

ಆಟೋಮೊಬೈಲ್ ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ಬೊಂಬಾಯಿಯ ಶ್ರೀ. ಎ ಸಿ. ಖಾಟೇಲರು ಬ್ರಿಟನ್ನಿನ ಚೆಲ್ಸಿಯಾ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಬ್ರಿಟಿಷ ವಿಶ್ವವಿದ್ಯಾಲಯಗಳಲ್ಲಿ ವಿದೇಶದ ವಿದ್ಯಾರ್ಥಿಗಳಿಗೆ ತಾಂತ್ರಿಕ ನಿಪುಣತೆಯನ್ನು ಕೊಡುತ್ತಿರುವ ಕಡೆಯಲ್ಲಿ ಬಹು ಪ್ರಗತಿಯನ್ನು ಸಾಧಿಸಲಾಗಿದೆ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸ್ವರ್ಣ ಪಂಜರದಲ್ಲಿ ಗಿಳಿ

(೨ನೇ ಪುಟದಿಂದ)

ಕಣ್ಣಿಗೆ! ಇನ್ನೂ ಅಲೆಅಲೆಯಾಗಿ ತೇಲಿಬರುತ್ತಿತ್ತು ಗೀತಾ ತರಂಗವು! ಶ್ಯಾಮಲೆಯ ಮಧುರಾಕೃತಿಯೂ ಮಧುರ ಗಾನವೂ ಅರಸನನ್ನು ಮಾಯೆಯ ಮೋಡಿಯಿಂದ ಮರುಳುಗೈದುವು! ತಾನು ದೇವನಗರಿಯಲ್ಲಿಲ್ಲೋ ಇರುವಂತೆ ನಿರ್ಲಿಪ್ತನಾಗಿ ಅಲಿಸಿದನು ಅರಸ!

ಸ್ವಲ್ಪ ಹೊತ್ತಿನಲ್ಲಿ ಶ್ಯಾಮಲೆಯ ಹಾಡು ನಿಂತಿತು ಅವಳು ನಿಧಾನವಾಗಿ ನಡೆದು ತನ್ನ ಗುಡಿಸಲಿನೊಳಹೊಕ್ಕಳು ಯಾವುದೋ ಲೋಕದಿಂದ ಇಳಿದುಬಂದಂತೆ ಸ್ವಪ್ನ ರಾಜ್ಯದಿಂದ ಅರಸನೆಚ್ಚರಗೊಂಡು ವೈಮನಗಳನ್ನು ಕಣ್ಣಾಗಿಸಿ ನೋಡಿದನು ಶ್ಯಾಮಲೆಯು ಮರೆಯಾದೊಡನೆ ತನ್ನ ಹೃದಯವೇ ಎತ್ತಲೋ ಹೋಗುತ್ತಿರುವಂತೆ ಭಾಸವಾಯಿತು ಅರಸನಿಗೆ! "ಇಂತಹ ದಿವ್ಯ ಗಾನವನ್ನು ನಿತ್ಯವೂ ಕೇಳುವ ಭಾಗ್ಯ ಕನಗಿರುತ್ತಿದ್ದರೆ ಮರಣ ಕಾಲದಲ್ಲಿಯೂ ಹೀಗೆಯೇ ಅಲಿಸುತ್ತಾ ಅಲೌಕಿಕ ಸುಖದಿಂದಲೇ ಪ್ರಾಣ ತೊರೆಯುತ್ತಿದ್ದೆ" ಎಂದುಕೂಂಡ ಆ ಮಹಾ ಭಾಗ್ಯಶಾಲಿಯಾದ ಅರಸ!

ಮರದಿನ ಹಳ್ಳಿಗರ ಸಭೆ ಸೇರಿತು ಹಳ್ಳಿಗರು ತಮ್ಮ ಸುಖ ದುಃಖಗಳನ್ನು ರಾಜನಲ್ಲಿ ಹೇಳಿಕೊಂಡರು ರಾಜನು ಮನವಿಟ್ಟು ಕೇಳಿ ಅನುಕಂಪ ತೋರಿಸಿ ಸಮಾಧಾನಗೈದು ಹೊಸ ಭರವಸೆಗಳನ್ನು ನೀಡಿದ ತನ್ನ ಮೇಲೆ ಅಪಾರ ಪ್ರೇಮ ವಿರಿಸಿದ ಹಳ್ಳಿಗರನ್ನು ಪ್ರೀತ್ಯಾದರಗಳಿಂದ ನೋಡಿದ

ದಿವ್ಯ ಗಾನ ಸುಧೆಯನ್ನುಣಿಸಿ, ಮೋಹಕ ರೂಪಿನಿಂದ ಮರುಳುಗೊಳಿಸಿದ ಆ ಸುಂದರಿಯ ಭಾವಚಿತ್ರ ರಾಜನ ಹೃತ್ಪಟಲದ ಮೇಲೆ ಆಗಾಗ ಮಿಂಚಿ ಬಿಂಬಿಸುತ್ತಲೂ, ಮಾಯವಾಗುತ್ತಲೂ ಇತ್ತು. ಇನ್ನೊಮ್ಮೆ ಆ ಸುಯೋಗಕ್ಕಾಗಿ, ಆ ವರ್ಣನೀಯಾನಂದಾನುಭವಕ್ಕಾಗಿ ಅವನು ಹೃದಯದಲ್ಲೇ ಹಾತೊರೆದು ಕಾತರಿಸುತ್ತಿದ್ದನೆ.

ಸಭೆ ಚದರಿದ ಬಳಿಕ ಶ್ಯಾಮಲೆಯ ತಂದೆಗೆ ಅರಸನ ಕರೆಹೋಯಿತು. ಆ ವೃದ್ಧ ಬ್ರಾಹ್ಮಣ ಬಂದು ರಾಜನಿಗೆ ವಂದಿಸಿದ ರಾಜನೂ ಭಕ್ತಿಯಿಂದ ವಂದಿಸಿ ಆಸನವಿತ್ತು ಕುಳ್ಳಿರಿಸಿದ

"ಅರಸನೆಂಸಿಯಾಗಿ ಅರಮನೆಯಲ್ಲಿ, ರಾಜ ವೈಭವದಲ್ಲಿ ರಂಜಿಸಬೇಕಾದ ಸ್ತ್ರೀರತ್ನ ಶ್ಯಾಮಾಲಾ ಅವಳು ತನ್ನರಸಿಯಾಗಬೇಕೆಂಬುದೇ ರಾಜನ ಮಹತ್ವಾಕಾಂಕ್ಷೆ ತನ್ನ ಬಯಕೆಯನ್ನು ಕೇಳಿಕೆಯ ರೂಪದಲ್ಲಿ ಆ ವೃದ್ಧನ ಮುಂದಿರಿಸಿದ ಹೌದು! ವಿನಂತಿ! ಆದರೆ ತಾನದಕ್ಕೊಪ್ಪದಿದ್ದರೆ ವಿನಂತಿ ಜುಲ ಮೆಯ ಆಜ್ಞೆಯಾಗಲೂ ಬಹುದು! ಪವಿತ್ರರ ಅಂಪನ ಕಣ್ಣು ಕದಿನಾರರ ಹರೆಯದ ಯುವತಿಯ ಮೇಲೆ ಹರಿದಿದೆ! ವೃದ್ಧ ಬ್ರಾಹ್ಮಣ ಅರಿಸಿಮಿತ ಚಿಂತಿಸಿದ "ಅರಸಿಯಾಗುವ ಭಾಗ್ಯ ಹಿರಿದು. ಆದರೆ ವಿಧಿಯನ್ನು ಅಣಕಿಸಿ ಕೊರಟ ವೃದ್ಧನ ಪತ್ನಿಯಾಗುವದೆ ಭಾಗ್ಯವೂ ಹೌದು! ಅದಂತಾಗಲಿ ವಿಶ್ವೇಶ್ವರನ ಇಚ್ಛೆ" ವೃದ್ಧ ಅರಸನ ಬಯಕೆಗೆ ಸಮ್ಮತಿಸಿದ ಅರಸನಾಣತಿಗೆದುಂದಿಯೆ? ಅವನಿಚ್ಛೆಗೆ ಇನ್ನೊಬ್ಬರ ಸೂಚನೆಯೂ ಬೇಡ, ಯೋಚನೆಯೂ ಬೇಡ

ಅಪಸಿಚ್ಛೆಯಂತೆ ವಿವಾಹ ನಡೆದು ಹೋಯಿತು ಶ್ಯಾಮಲೆಯ ತಂದೆ ತಾಯಿಗಳು ಮಗಳು ಮಹಾರಾಜನ ಮಡದಿಯಾದಳೆಂದು ಸಂತಸಪಡಲಿಲ್ಲ ವೃದ್ಧನ ಕೈಹಿಡಿದಳೆಂದು ದುಃಖಿಸಿದರು. ದುಃಖಿಸಿ ಫಲವೇನು? ದೈವೇಚ್ಛೆಯೆಂದು ಸುಮ್ಮನಾದರು

ಹಳ್ಳಿ ಮಾತ್ರ ನಿಸ್ತೇಜವಾಯಿತು ಸ್ವರ್ಗೀಯ ಸಂಗೀತವನ್ನು ಕೇಳದೆ ಮರಗಿಡಗಳು, ಪಚ್ಚೆ ಪೈರುಗಳು, ಕರೆ ಹೊಲಗಳು ನಳನಳಿಸಿ ಬಾಳುವುದನ್ನು ಮರೆತು ಕಳವಳಿಸಿದುವು ಏನೋ! ಹಳ್ಳಿಯಿಡಿ ದುಃಖಿಸಿರಬೇಕು! ಹಳ್ಳಿಗರು ಒಮ್ಮೆ ಆಶ್ಚರ್ಯ ಹೊಂದಿದರು ಇನ್ನೊಮ್ಮೆ ಸಂತಸಗೊಂಡರು ಮಗುದೊಮ್ಮೆ ಚಿಂತಿಸಿದರು ಅಮರ ಸಂಗೀತ ಸುಧೆಯನ್ನುಣ್ಣುವ ಭಾಗ್ಯ ಬರಿದಾಯಿತೆಂದು ನೊಂದುಕೊಂಡರು

ಶ್ಯಾಮಲೆಯಿಂದು ಅರಸನ ಸಚ್ಚಿನ ರಾಣಿ ಪಟ್ಟದ ರಾಣಿಯಾಗಿ ಪ್ರೇಮದ ರಾಣಿಯ ಸ್ಥಾನ ಹಿರಿದು! ಅವಳಿಗಾಗಿ ಪ್ರತ್ಯೇಕವಾದ ಒಂದು ಭವ್ಯ ಭವನ ಸಿದ್ಧವಾಗಿದೆ ಅದರ ಮುಂದೆ ವೃಂದಾವನ ವಿವಿಧ ಪುಷ್ಪಲತೆಗಳು ತೆಳಗೊಳ, ಚಿಮ್ಮುವ ಕಾರಂಜಿ ತಲ್ಲಿ ಹಾಂಗಲ್ಲಿನ ಬೊಂಬೆಗಳು, ಶಿಲಾ ವಿಗ್ರಹಗಳು! ತಂಪಾದ, ಸುಖಸೂರ್ಣ ಪ್ರಶಾಂತ ವಾತಾವರಣ ಶ್ಯಾಮಲೆಯ ಸೇವೆಗಾಗಿ ಹಿಂದೆ ಮುಂದೆ, ಒಳಗೆ ಹೊರಗೆ, ನಿಂತಲ್ಲಿ ಕುಳಿತಲ್ಲಿ ಆಳುಕಾಳುಗಳ, ಬೇಡವೆಂದರೂ ಬರುವ ಮೃಷ್ಟಾನ್ನವೇ ನಿತ್ಯ ಭೋಜನಕ್ಕೆ! ಪವಡಿಸಲು ಹಂಸ ತೂಲಿಕಾತಲ್ಪ! ಉಡಲು ಪೀತಾಂಬರ, ಅಂಗಾಂಗಗಳಿಗೆ ನವರತ್ನದ ಆಭರಣಗಳು! ತನ್ನ ನರಳಿನಂತೆ ಹಿಂಬಾಲಿಸುವ, ಸೇವೆಗೈದು ಸೇವಿಸಲೆಳಸುವ ಮಹಾರಾಜ!

ಹಳ್ಳಿಗಾಡಿನ ಮರದಡಿಯ ಅರೆಹಂಡೆಯಲ್ಲಿ ಏನು ಸುಖವಿದೆ? ಏನು ಸೊಬಗಿದೆ? ಆದರೆ ಸೌಗಂಧವನ್ನು ಬೀರುವ ವಲ್ಲಿಗೆಯ ಹೂವಿನ ಮಂದೆ ನವರತ್ನದಿಂದ ಝಗಝಗಿಸುವ ಹೂವು ಎಲ್ಲಿಯ ಹಾಟೆ? ಯಾವುದು ಹಿಂದು!

ಶ್ಯಾಮಲೆಗಾಗಿ ತವಳ ಚರಣತಲದಲ್ಲಿ ಪ್ರಾಣ ಪಣಗೈವುದಕ್ಕೂ ಅರಸ ಸಿದ್ಧನಿದ್ದಾನೆ ಅರಿಗಳಿಗೆಯೂ ಅವಳ ಬೆನ್ನು ಬಿಡದೆ ಅವಳ ದಾಸನಂತೆ ಸೇವೆಗೈಯಲು ರಾಜ್ಯಾಧೀಶ್ವರ ಸಿದ್ಧನಾಗಿದ್ದಾನೆ ಸುಲಲಿತವಾದ ದಿವ್ಯ ಸಂಗೀತದೊಂದಿಗೆ ಅವಳ ಸಹಿಸುಖಕ್ಕಾಗಿ ಹಾತೊರೆದಿದ್ದಾನೆ ಗುಲಾಬಿಯ ಕಂಪನ್ನು ಸೇವಿಸಲು ಹಾತೊರೆದು ಬಳಿಕ ಅದನ್ನೊಮ್ಮೆ ಮೂಸಲೂ, ಕಾತರಿಸುವಂತೆ ಅರಸ ಕಾತರಿಸುತ್ತಿದ್ದಾನೆ!

ಶ್ಯಾಮಲೆಯು ಮೊದಲೇ ಮೌನಿ! ಈಗ ನಿತ್ಯ ಮೌನಿ! ಒಂದು ನುಡಿ ನುಡಿಯೋಣವೆಂದರೆ ಹೃದಯಕ್ಕೆ ಹತ್ತಿರದ ಒಂಧುಗಳಿಲ್ಲ ದಿನದಿಂದ ದಿನಕ್ಕೆ ಅವಳು ಸೊರಗಿ ಕಡ್ಡಿಯಾದಳು ಇಹದ, ತನ್ನಿರವಿನ ಪರಿವೆಯಿಲ್ಲದೆ ನಿರ್ಲಿಪ್ತಳಾಗಿ ಯಾವುದೋ ಭಾವಲೋಕದಲ್ಲಿದ್ದಂತೆ ಅವಳು ವರ್ತಿಸುತ್ತಿದ್ದಳು ಮೊದಲಿನಂತೆ ಹೆಚ್ಚಾಗಿ ಹಾಡುತ್ತಲೂ ಇರಲಿಲ್ಲ ಆಗಾಗ ಯೋಗಿಯಂತೆ ಧ್ಯಾನಿಯಾಗಿ ಕುಳಿತು ಬಿಡುವಳು!

"ಬೆ! ಇಂತಹ ಸುಂದರವಾದ ಹೂಗಿಡ ಮಣ್ಣಲ್ಲಿ ಬೆಳೆಯಬೇಕೆ?" ಎಂದು ಹೊನ್ನಿನ ಬಟ್ಟಲಲ್ಲಿಟ್ಟು ಉಪಚರಿಸಿದಂತಾಯಿತು ಅತ್ತಿಯು ಯಾವಾಗ ಹೂಬಿಡುವುದೆಂದು ಕಾದು ಕುಳಿತಂತಾಯಿತು ಅರಸನಿಗೆ ಶ್ಯಾಮಲೆಯ ಹಾಡು ಬಲಾತ್ಕಾರದಿಂದ ಹಾಡು ಬರುವುದೆ? ಒತ್ತಾಯದ ಹಾಡಿಗೆ ಮಾಧುರ್ಯ ವಿರುವುದೆ? ಹಾಡಿ "ಹಾಡು! ಹಾಡು!" ಎಂಬ ಪ್ರಚೋದನೆ ಬೇಕೆ ಅದು ತಾನಾಗಿ ಹರಿಯಬೇಕು! ಅರಸ ಅನ್ನಾಹಾರಗಳನ್ನು ಬಿಟ್ಟಾದರೂ ಶ್ಯಾಮಲೆಯ ಗಾನಕ್ಕಾಗಿ ಕಾದಿರಲು ಸಿದ್ಧನಾಗಿದ್ದಾನೆ! ಆದರೆ ಶ್ಯಾಮಲೆಗೆ ಸೃಷ್ಟಿ ಸೌಂದರ್ಯದ ಬೀಡಾದ, ಹಳ್ಳಿಗಾಡಿನ ತೊರೆಯ ಬಡದ ಕಲ್ಲು ಬಂಡೆಯನ್ನು ಈ ನಮ್ಮ ವೃಂದಾವನ, ಭವ್ಯ ಭವನ ಹಿಡಿಸುವುದೆ? "ಹೀಗೇಕಾಯಿತು? ಏನು ಈ ವಿಚಿತ್ರ ರೀತಿ?" ಎಂದು ಅರಸ ಪರಿತಪಿಸಿದ.

೦೦ ೦೦ ೦೦

ಒಂದು ದಿನ, ಮಧುಮಾಸದ ಹುಣ್ಣಿಮೆಯ ಮಧ್ಯ ರಾತ್ರಿ ಎಲ್ಲರೂ ನಿದ್ರೆಯಲ್ಲಿ ಮಲುಗಿದ್ದಾರೆ ಮಹಲಿನ ಮುಂದಿನ ವೃಂದಾವನದ ಮಧ್ಯದ ಶಿಲಾ ಪೀಠದಲ್ಲಿ ಕುಳಿತು ಶ್ಯಾಮಲೆ ಹಾಡುತ್ತಿದ್ದಾಳೆ ಎಂತಹ ದಿವ್ಯ ಗಾನ! ವಿಶ್ವವೇ ಉಯ್ಯಾಲೆಯಾಡುತ್ತಿರುವಂತೆ ಭಾಸವಾಗುತ್ತಿತ್ತು ಸಕಲ ಮಧುರ ಧ್ವನಿಗಳೊಂದಾಗಿ ಹಿಮ್ಮೇಳವನ್ನು ನುಡಿಸುತ್ತಿರುವಂತೆನಿಸಿತು! ಭಾವ-ಜೀವವೆಲ್ಲವನ್ನು ಸೆಳೆದು ನವ್ಯ ಲೋಕದಲ್ಲಿ ಓಲಾಟವಾಡಿಸಿತು! ಇದ್ದ ಸ್ಥಿತಿಯಲ್ಲಿಯೇ ಚರಾಚರಗಳೂ ಮೌನವಾಗಿ ಆಲಿಸುತ್ತಿದ್ದುವು!

ಅರಮನೆಯಲ್ಲಿ ಅರಿವಿದ್ದೆಯಲ್ಲಿ ಮಲಗಿದ ಅರಸನಿಗೆಚ್ಚರವಾಯಿತು ಅಂದು ಆ ಹಳ್ಳಿಯಲ್ಲಿ ಅದ ಅನುಭವಗಳೆಲ್ಲವೂ ಅವನಿಗೆ ಏಕ ಕಾಲದಲ್ಲಿ ಉಂಟಾದುವು ಮಂಜುಳನಾದ ಲೀಲೆಗೆ ಮರುಳಾಗಿ ಕನಸಿನೊಳಿರುವಂತೆ ಆಲಿಸಿದ ಅರಸ! ತಾನೇ ತಾನಾಗಿ ಮೈಮರೆತ! ತನ್ನ ಹೃದಯವೆಲ್ಲೋ ಗಾಳಿಗೆ ಹಾರಿ ಹೋಗುತ್ತಿರುವಂತೆ ಭಾಸವ ಯಿತು ಅವನಿಗೆ! ಎನಿತು ಕಾಲ ಆಲಿಸಿದನೋ ಅರಿಯದು ಅಂತೂ ಯಾವುದೋ ನಿದ್ರೆ ಆವನನ್ನಾವರಿಸಿತು ಅರುಣೋದಯವಾದಾಗ ಅರಸನಿಗೆಚ್ಚರವಾಯಿತು ತಾನು ಯಾವಾಗ ನಿದ್ರಿಸಿದ್ದೇನೆಂದು ಅವನರಿಯನು ಸೆಟ್ಟಿಗೆ ಎಂದಿನಂತೆ ಆತ ಶ್ಯಾಮಲೆಯ ಮಹಲಿಗೆ ಬಂದ ಅಲ್ಲಿ ಯಾರೂ ಇಲ್ಲ ಅಲ್ಲಿಂದ ವೃಂದಾವನಕ್ಕೆ ಬಂದ ಹೌದು! ಶ್ಯಾಮಲೆ ಅಲ್ಲೇ ಆತಿಲಾಪೀರದಲ್ಲೇ ಕುಳಿತೇ ಇದ್ದಾಳೆ. ಅರಸ ಮುಂದಿರಿದು ಅವಳ ಬಳಿ ಬಂದ. ಗಂಭೀರವಾದ ಮುಖಮುದ್ರೆಯಿಂದ ಅಲೌಕಿಕ ತೇಜಸ್ಸಿನಿಂದ ದಿವ್ಯಾನಂದವನ್ನು ಅನುಭವಿಸುವಂತೆ ಕುಳಿತಿದ್ದಾಳೆ ಶ್ಯಾಮಲಾ

ಅರಸ ಹತ್ತಿರ ಬಂದು "ಶ್ಯಾಮಲಾ!" ಅಂದ ಎಲ್ಲಿ ಶ್ಯಾಮಲಾ? ಅವಳ ಹಾಡೂ, ಅವಳೂ ಅನಂತ ವಿಶ್ವದಲ್ಲಿ ವಿಲೀನವಾದ ದಿವ್ಯ ದೃಶ್ಯವೊಂದೇ ಅಲ್ಲಿ ಕಾಣುತ್ತಿತ್ತು!

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ, ಎಲ್‌ಎಲ್ ಬಿ, ವಕೀಲ ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವನೆಂಬುದು ಕಥಾರಹಸ್ಯದ ಮೂಲಕ ವ್ಯಕ್ತವಾಡಲ್ಪಟ್ಟಿವೆ ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ ಬೆಲೆ ರೂ 1—12—0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಮ್ ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ- ಐದಾಣೆ ಮಾತ್ರ ಬೆ. ಪ್ರತ್ಯೇಕ

ನವಯುಗ ಪ್ರೆಸ್, ಉಡುಪಿ.

ವಾರದ ಮಹಾನುಭಾವ-

ಡಾ. ಮಾಧವ ಅನಂತ ಪೈ

ಮೊನ್ನೆ. ಎಪ್ರಿಲ್ ದಿನಾಂಕ ೩೦ರಂದು ಉಡುಪಿ ನಗರದ ಇತಿಹಾಸದಲ್ಲೊಂದು ಹೊಸ ಸುಟವು ಬರೆಯಲ್ಪಟ್ಟಿತು. ಅಂದು ಉಡುಪಿ ನಾಗರಿಕರು ಒಂದುಸೇರಿ, ತಮ್ಮ ಹಾಗೂ ತಮ್ಮೂರಿನ ಅಭಿವೃದ್ಧಿ ಕಾರ್ಯದಲ್ಲಿಯೇ ತಮ್ಮ ಆಯುಷ್ಯವನ್ನು ಸವೆಸಿದ ಒಬ್ಬ ಸುರುಷನನ್ನು ಸಾರ್ವಜನಿಕ ಸಭೆ, ಉಪಾಹಾರಕೂಟ, ಮಾನಪತ್ರಗಳ ಅರ್ಪಣೆ ನಿಧಿ ಸಮರ್ಪಣೆ ಇತ್ಯಾದಿ ಲೌಕಿಕರೂಪದಲ್ಲಿ ಗೌರವಾರ್ಪಣೆಯನ್ನು ಸಲ್ಲಿಸಿ ಕೃತಜ್ಞರಾದರು. ಇಂತಹ ಅಪರೂಪದ ಗೌರವವನ್ನು ಪಡೆದ ಮಹಾವ್ಯಕ್ತಿ ಎಂದರೆ, ಡಾ. ಮಾಧವ ಅನಂತ ಪೈಯವರು.

ಡಾ. ಮಾಧವ ಅನಂತ ಪೈ ಎಂದರೆ, ದಕ್ಷಿಣ ಭಾರತ ಕೀರ್ತಿಶಾಲಿಗಳಾಗಿರುವವರು. ಪ್ರಾಯಶಃ ಇವರು ತಾವು ಮೊದಲು ಕೈಗೊಂಡಿದ್ದ ಅಧ್ಯಾಪನ ವೃತ್ತಿಯಲ್ಲಾಗಲೀ, ಮುಂದೆ ಕೈಹಾಕಿದ ವೈದ್ಯಕೀಯ ವೃತ್ತಿಯಲ್ಲಾಗಲೀ ಉಳಿಯುತಿದ್ದರೆ, ಅವರಿಗೆ ಇಂತಹ ಮನ್ನಣೆಯು ಲಭಿಸುತಿತ್ತೋ ಇಲ್ಲವೋ ನಿರ್ದಿಷ್ಟಗೊಳಿಸುವುದು ಸಾಧ್ಯವಿಲ್ಲ. ಆದರೆ, ಡಾ. ಪೈಗಳು ಇಂದು ಜನ ಸಾಮಾನ್ಯರ ದೃಷ್ಟಿಯಿಂದ ಮಹಾ ವ್ಯಕ್ತಿಗಳಾಗಿ ಪರಿಣಮಿಸಿರುವುದಕ್ಕೆ ಅವರು ಕೈಗೊಂಡಿದ್ದ ಮೊದಲಿನೆರಡು ಉದ್ಯೋಗಗಳೂ ಮೂಲಕಾರಣವೆಂದು ಧೈರ್ಯದಿಂದ ಹೇಳಬಹುದು. ದಿ ಕೆನರಾ ಇಂಡಸ್ಟ್ರೀಯಲ್ ಅಂಡ್ ಬೇಂಕಿಂಗ್ ಸಿಂಡಿಕೇಟ್ ಎಂಬ ಗ್ರಾಮಾಂತರ ಮಾದರಿಯ ಬೇಂಕನ್ನು ಅವರ ಅಣ್ಣ ದಿವಂಗತ ಉಪೇಂದ್ರ ಅನಂತ ಪೈಯವರು ಸ್ಥಾಪಿಸಿದರೂ ಅದರ ಸರ್ವಾಂಗೀಣ ಅಭಿವೃದ್ಧಿಗೆ ನೆರವಾದವರು, ಪರಿಶ್ರಮಿಸಿದವರು ಡಾ. ಪೈ. ದಿ ಕೆನರಾ ಮ್ಯೂಚುವಲ್ ಅಶ್ಯೂರೆನ್ಸ್ ಕಂಪೆನಿಯನ್ನು ಸ್ಥಾಪಿಸಿ ಸುಮಾರು ಇಪ್ಪತ್ತು ವರ್ಷಗಳ ಕಾಲ, ಅದರ ವ್ಯವಹಾರ, ಆಡಳಿತೆಯ ಬಗ್ಗೆ ಸಲಹೆ ಸೂಚನೆಗಳನ್ನಿತ್ತು ಡಾ. ಪೈ, ಅ ಮೇಲೆ, ಅದು ರಾಷ್ಟ್ರೀಕರಣಗೊಳ್ಳುವಂತಾದರೂ ಬೆಳೆದು ನಿಂತ ಮಗಳಿಗೆ ಮದುವೆ ಮಾಡಿಕೊಟ್ಟ ಪುಣ್ಯವನ್ನು ಕಟ್ಟಿಕೊಂಡಿದ್ದಾರೆ ಹಾಗೆಯೇ ಮಣಿಪಾಲ ಮತ್ತು ಉಡುಪಿಗಳಲ್ಲಿ ಹತ್ತು ಹಲವಾರು ನ್ಯಾಯಾಹಾರಿಕ, ಆರ್ಥಿಕ ಸಂಸ್ಥೆಗಳನ್ನು ಕಟ್ಟಿ, ಬೆಳಗಿಸಿದ ಕೀರ್ತಿಗೆ ಡಾ. ಪೈಯವರೇ ಆಧಾರಸ್ತಂಭರು.

ಡಾ. ಪೈಯವರು ಅತಿ ಕುಲೀನ ವಂಶದೊಂದರಲ್ಲಿ ಅತಿ ದರಿದ್ರರಾಗಿಯೇ ಜನಿಸಿದರು; ಬಳೆದರು. ಎಳೆತನದಲ್ಲಿಯೇ ಡಾ. ಪೈ ತಮ್ಮ ಧೈರ್ಯಪ್ರದರ್ಶನವನ್ನು ಮಾಡುತಿದ್ದರಂತೆ. ಉಡುಪಿಯಿಂದ ಳ ವೈಲು ಬಡಗಲಿರುವ ಕಲ್ಯಾಣಪುರದಲ್ಲಿ ಇವರು ಜನಿಸಿ, ಅಲ್ಲಿಯೇ ಬೆಳೆದು, ಕಲಿತು, ಅಲ್ಲಿಯ ಒಂದು ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ಕೆಲಕಾಲ ದುಡಿದರು. ಮುಂದೆ ವೈದ್ಯಕೀಯ ಅಭ್ಯಾಸವನ್ನು ಮಾಡಿದರು. ತಾನು ಕಲಿತ ಶಾಲೆಯ ಅಭಿವೃದ್ಧಿಗಾಗಿ ನಿಧಿಕೂಡಿಸುವ ಕೃತಿಯನ್ನು ಕೈಗೊಂಡಂದಿನಿಂದ ಡಾ. ಪೈಯವರ ಸಮಾಜ ಸೇವೆಯು ವ್ಯಕ್ತಪಡತೊಡಗಿತು ಅಂದಿನಿಂದಲೂ ಡಾ. ಪೈ ತಮ್ಮ ಧೈರ್ಯ ಸಾಹಸ ಪರಿಶ್ರಮಗಳಿಂದಾಗಿ, ಅಸಾಧ್ಯವೆಂದೆನಿಸಿದ ಹತ್ತು ಹಲವಾರು ಕಾರ್ಯಗಳನ್ನು, ಎಡತಾಕಿದ ಅಡೆತಡೆಗಳನ್ನು ಗಣಿಸದೆ, ಮುಂಬರಿದು, ಮಾಡಿ ತೋರಿಸಿದ್ದಾರೆ. ಕಾರ್ಯದ ಬಗ್ಗೆ ಯೋಜನೆಯನ್ನು ರೂಪಿಸುವ ವೇಳೆ ಸಭೆಯಲ್ಲಿ ಸಂತೋಷದಿಂದ ಕೈ ಚಪ್ಪಾಳೆ ಬಡಿದವರು, ಹೊರಬಂದು, ಮಾಧವಪೈಯವರ 'ಹುಚ್ಚು ಸಾಹಸ'ದ ಬಗ್ಗೆ ತಿರಸ್ಕಾರ ಕೈಬಡಿದರೂ, ಕೈಗೊಂಡ ಕಾರ್ಯವನ್ನು ಪೂರ್ಣಗೊಳಿಸಿದ ಮೇಲೆ ಮೂಗಿನ ಮೇಲೆ ಬೆರಳಿರಿಸುವಂತಾಗಿ ಪರಿಣಮಿಸಿದೆ — ಡಾ. ಪೈಯವರ ಸಾಹಸ ಶೀಲತೆ. ವಿಶಾಲವಾದ ಸಮುದ್ರವನ್ನು ದಾಟುವುದೆಂತೆಂದು ದಡದಲ್ಲಿ ನಿಂತು ವೃಥಾ ಯೋಚಿಸುತ್ತಾ ಕೂರುವುದಕ್ಕಿಂತ, ಎದೆಗಟ್ಟಿಮಾಡಿ, ಧೈರ್ಯದಿಂದ ಹಾರಿದರೆ ಪರಿಶ್ರಮದಿಂದ ಸಾಗಿದರೆ, ಆಗ ಜಯ ದೊರೆಯದೆಲ್ಲಿಗೆ ಹೋಗುತ್ತದೆ ಎಂದೇ ಡಾ. ಪೈಯವರ ಆದರ್ಶ. ತಮ್ಮೊಡನೆ ಮಾತಾಡುವ ವೇಳೆ, ಅವರು ತಮ್ಮ ಕಥೆಯನ್ನು ಹೇಳುತ್ತಾರೆ-ಕೈಕಟ್ಟಿ ಕೂತರೆ ಮುಂದೆಹೋಗುವಂತಿಲ್ಲ. ಧೈರ್ಯವನ್ನವಲಂಬಿಸಿ, ಪರಮಾತ್ಮನ ಮೇಲೆ ಭಾರವನ್ನು ಹಾಕಿ ಗುರುಹಿರಿಯರ ಹರಕೆ ಪಡೆದು ಕೆಲಸ ಪ್ರಾರಂಭಿಸಿದರೆ, ಅದು ಕೊನೆಗೊಂಡೇ ಗೊಳ್ಳುವುದು — ಎಂದು. ತಾವು ತಮ್ಮ ಯೋಜನೆಗಳನ್ನು ರೂಪಿಸುವಾಗ ಬಂಡವಳವಿದ್ದು ರೂಪಿಸಿದ್ದಿಲ್ಲ; ಒಳ್ಳೆಯ ಕೆಲಸವೊಂದು ಬಂಡವಳವಿಲ್ಲದೆ ಎಂದಿಗೂ ನಿಂತುಹೋಗುವುದಿಲ್ಲ ಎನ್ನುತ್ತಾರೆ ಡಾ. ಪೈ.

ತಮ್ಮ ಅನುಭವಕ್ಕೆ ಉದಾಹರಣೆಯಾಗಿ ಅವರು ಮುಖ್ಯವಾಗಿ ಈಗ ತಮ್ಮ ರಜಿಸ್ಟ್ರಾರತನದಲ್ಲಿರುವ ಎಕೆಡೆಮಿ ಆಫ್ ಜನರಲ್ ಎಜುಕೇಶನಿನ ಪತಿಯಿಂದ ನಡೆಯುತ್ತಿರುವ ನಾಲ್ಕು ಕಾಲೇಜುಗಳ ಕಥೆಯನ್ನು ಹೇಳುತ್ತಾರೆ—ಉಡುಪಿಯು ಒಂದು ದೊಡ್ಡ ನಗರವಾಗುತ್ತ ಬಂದರೂ, ನಿಶ್ಚವಿದ್ಯಾಲಯ ಶಿಕ್ಷಣವನ್ನು ಕೊಡುವ ಕಾಲೇಜು ಇಲ್ಲದಿರಲಿಲ್ಲ. ಕೇವಲ ಪ್ರಾಚ್ಯ ವಿದ್ಯೆಯಲ್ಲಿ ಉಚ್ಚ ಶಿಕ್ಷಣವೀಯುವ ಸಂಸ್ಕೃತ ಕಾಲೇಜೊಂದು ಮಾತ್ರ ಉಡುಪಿ ಅಷ್ಟ ಮಠಗಳ ಯತಿವರೇಣ್ಯರಿಂದ ಸ್ಥಾಪಿತವಾಗಿತ್ತು. ಈ ಕೊರತೆಯನ್ನು ಕಂಡು, ನಮ್ಮ ಊರಿನ ಹಾಗೂ ಅಸುಪಾಸಿನ ವಿದ್ಯಾರ್ಥಿಗಳು ಮಂಗಳೂರಿಗೆ ಹೋಗಿ ಅಲ್ಲಿ ವಿಪರೀತ ಖರ್ಚನ್ನು ವಹಿಸಿ ವಿದ್ಯೆ ಪಡೆಯಬೇಕೆ? ಎಂಬ ಪ್ರಶ್ನೆ ಎದ್ದು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜ್ ನಿರ್ಮಿಸಲ್ಪಟ್ಟಿತು. ಹಾಗೆಯೇ ಭಾರತದ ದೊಡ್ಡ ಕೊರತೆಯನ್ನು ನೀಗಿಸಿ, ತಾವು ಜನತೆಗಾಗಿ ಮಡಿಯುವೆವೆಂದು ಪ್ರತಿಜ್ಞೆ ಮಾಡಿ ಪ್ರವೇಶಿಸುವಂತಹ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಅತ್ಯಂತ ಪ್ರಯಾಸ ಮತ್ತು ಸಾಹಸದಿಂದ ಮೊದಲಾಯಿತು. ಹಾಗೆಯೇ ಮಣಿಪಾಲ ಎಂಜಿನಿಯರಿಂಗ್ ಮತ್ತು ಉಡುಪಿ ಲಾ ಕಾಲೇಜುಗಳೂ ಮೊದಲಾಗಿವೆ. ಈ ವಿದ್ಯಾಲಯಗಳ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರಿದ್ದಾರೆ; ಅದೂ ಇವುಗಳ ಸ್ಥಾಪನೆಯಿಂದ ಊರಿಗೆ, ರಾಜ್ಯಕ್ಕೆ, ದೇಶಕ್ಕೆ ಎಂತಹ ಉಪಕಾರವಾಗಿದೆ ಎಂಬುದನ್ನು ನಾವು ಗಮನಿಸಬೇಕು.

ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲೂ ಡಾ. ಪೈಯವರ ಕೈ ಸುರತಿದೆ. ವ್ಯಾಪಾರೀ ಕ್ಷೇತ್ರದಲ್ಲಿಯೂ ಅವರ ತಲೆ ಕೆಲಸ ಮಾಡಿದೆ. ದೇಶಸೇವೆ, ಜನಸೇವೆ. ಈಶ ಸೇವೆಗಳಲ್ಲೂ ಅವರ ಮಳಲ ಸೇವೆ ಸಂದಿದೆ. ಡಾ. ಪೈ ಕೈಹಾಕದ ಕ್ಷೇತ್ರವಿಲ್ಲ; ಅವರ ತಲೆಯಲ್ಲಿ ಸುಳಿಯದ ಯೋಜನೆಯಿಲ್ಲ. ಅವರ ಶರೀರಕ್ಕೆ ಅರುವತ್ತು ವರ್ಷ ಸಂದರೂ, ಅವರ ಮೆದುಳು ತೀಕ್ಷ್ಣ ವಿಚಾರಗಳಲ್ಲಿಯೇ ತಲ್ಲೀನವಾಗಿದೆ. ದಿನನಿತ್ಯವೂ ಹತ್ತು ಹಲವಾರು ಸಭೆಗಳು, ಬೇಂಕಿನ ಆಡಳಿತೆಯ ಕಾರ್ಯಭಾರ, ಸಹಸಂಸ್ಥೆಗಳ ಅಭಿವೃದ್ಧಿಗಾಗಿ ಸಲಹೆ ಸೂಚನೆ, ಮೇಲಾಗಿ ಕಾಲೇಜುಗಳ ಆಡಳಿತೆ ಇನ್ನೂ 'ಏನೇನೋ—ಇವೆಲ್ಲವುಗಳ ನಡುವೆ ಅವರು ಅವಿಶ್ರಾಂತರಾಗಿರುವರು — ಆದರೆ, ಡಾ. ಪೈ ತಮ್ಮ ಶ್ರಮವನ್ನು ಗಣಿಸುವುದಿಲ್ಲ; ಶಕ್ತಿಯಿರುವಾಗ ದುಡಿದದ್ದೇ ಬಂತು ಎಂಬುದಕ್ಕೆ ಡಾ. ಪೈ ಒಂದು ಉತ್ತಮ ನಿದರ್ಶನವಾಗಿದ್ದಾರೆ. ಡಾ. ಮಾಧವ ಪೈಯವರ ಸಂಸಾರ ದೊಡ್ಡದು. ಹೀಗಿದ್ದರೂ ಅವರಿಗೆ ಅದರ ತಾಪತ್ರಯದ ಯೋಚನೆಗಿಂತ ತನ್ನ ಯೋಜನೆಗಳ ಯೋಚನೆಯೇ ಹೆಚ್ಚು. ಆಚ್ಚುಕಟ್ಟಾಗಿ, ಹೊಂದಾಣಿಕೆಯಿಂದ ಬಾಳು ನಡೆಯಿಸುವ ಪತಿಯ ಸೇವೆಯಲ್ಲಿ ಅಸಕ್ತಿಯಿಂದ ಪಾತ್ರ ವಹಿಸುವ ಮಡದಿ ಶ್ರೀಮತಿ ಶಾರದಾ ದೇವಿ. ಆ ಶಾರದೆಯ ಕೈಹಿಡಿದಂದಿನಿಂದಲೇ ಡಾ. ಪೈಯವರ ತಲೆಯಲ್ಲಿ ಇಂತಹ ಶಾರದಾ ದೇವಿಯ ಆವಾಸ ಸ್ಥಾನವಾದ ವಿದ್ಯಾಲಯಗಳ ಯೋಚನೆಯೂ ಬಲವಾಗಿ ಬೇರೂರಿರಬಹುದು.

ಡಾ. ಮಾಧವ ಪೈ ನಿಜವಾಗಿಯೂ ಒಬ್ಬ ಸಾಹಸಿ, ಧೀರಯೋಧ. ಅವರು ಸರಕಾರದಿಂದಲೂ ಆಗಲಾರದ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಆದರೂ, ಇನ್ನೂ ಅವರಿಂದ ಹಲವು ಕಾರ್ಯಗಳನ್ನು ಜನತೆ ನಿರೀಕ್ಷಿಸುತ್ತದೆ. ಡಾ. ಪೈಯವರೂ ಹಲವಾರು ಯೋಜನೆಗಳನ್ನಿಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ, ಜನತೆಯ ನಿತ್ಯೋಪಯೋಗಿತೆಗೆ ನೆರವಾಗಬಹುದಾದ ಸಾಮಾನ್ಯ ಕಾರ್ಯಗಳಿಗೆ ಡಾ. ಪೈ ಕೈಹಾಕಬೇಕು. ನಿರುದ್ಯೋಗ ಸಮಸ್ಯೆಯು ಹೆಚ್ಚುತ್ತಿರುವ ಈ ಸಮಯದಲ್ಲಿ ಇದನ್ನು ನಿರ್ವಾಹಮಾಡಬಹುದಾದ ಕೆಲಸಗಳನ್ನು ಡಾ. ಪೈ ಈಗಾಗಲೇ ಮಾಡಿದ್ದಾರೆ. ಇಂದು ಅವರ ಸಾಹಸದಿಂದ ನಿರ್ಮಿತವಾದ ಸಂಘ ಸಂಸ್ಥೆಗಳಿಂದ ಸಹಸ್ರ ಸಂಖ್ಯೆಯ ಕುಟುಂಬಗಳು ಜೀವನ ನಿರ್ವಾಹ ಮಾಡುತ್ತವೆ. ಇದೇ ರೀತಿಯಲ್ಲಿ ಇನ್ನೂ ಅವರು ಜನತೆಗಾಗಿ ದುಡಿಯಲೆಂದು ಜನತೆ ಬಯಸುತ್ತದೆ. ಮತ್ತು ಇದಕ್ಕಾಗಿ, ಡಾ. ಪೈಯವರಿಗೆ ಆಯುರಾರೋಗ್ಯಗಳನ್ನೂ, ಅವರ ಧೀಶಕ್ತಿಗೆ ನವಪ್ರಚೋದನೆಯನ್ನೂ ಸರ್ವಶಕ್ತನಾದ ಪರಮಾತ್ಮನೀಯಲೆಂದು ಹಾರೈಸುತ್ತದೆ. ಜನಂತೆಯೂ ತಮ್ಮ ನಾಯಕನಿಗೆ ಹೃತ್ಪೂರ್ವಕ ಸಹಾಯವೀಯುವ ನಿಶ್ಚಯವಾಡುತ್ತದೆ. ಡಾ. ಪೈಯವರ ಸಾಹಸಕೃತ್ಯಗಳೆಲ್ಲವರ್ಧಿಸಿ ಧನಿಕ ಬಡವರೆನ್ನದೆ, ಎಲ್ಲರೂ ತಂತಮ್ಮ ಶಕ್ತ್ಯಾನುಸಾರವಾಗಿ ಅವರಿಗೆ ನೆರವಿತ್ತಿದ್ದಾರೆ. ಅದೇ ರೀತಿಯ ಸಹಾಯ ಮುಂದೆಯೂ ದೊರೆಯುವುದು ಖಂಡಿತ.

ನೆಹರೂ ಚಿರಕಾಲ ಉಳಿಯಬೇಕು

(ನಿನೇ ಸುಟದಿಂದ)

ಮಾಡಬೇಕು ಎಂದು ಕೇಳಿಕೊಂಡರು. ಈ ಉಪದೇಶ ವಿನಂತಿಗಳ ಪರಿಣಾಮ ವೆಷ್ಟಾಗುವುದೆಂದು ಮುಂದೆ ತಾನೇ ನೋಡಬೇಕಾಗಿದೆ. ಅಂತೂ ಪಂಡಿತ ನೆಹರೂರವರಿಗೆ ಅಧಿಕಾರದಲ್ಲುಳಿದುಕೊಂಡೇ ವಿಶ್ರಾಂತಿ ದೊರೆಯುವ ಮಾರ್ಗವನ್ನು ಕಂಡುಕೊಳ್ಳಬೇಕು. ಈ ಬಗ್ಗೆ ಪ್ರಧಾನಿಯವರ ಕೆಲಸವನ್ನು ಲಘು ಮಾಡುವಲ್ಲಿ ಗೃಹಮಂತ್ರಿ ಪಂಡಿತ ಪಂತರೂ ಸಂರಕ್ಷಣಾ ಮಂತ್ರಿ ಕೃಷ್ಣ ಮೆನನರೂ ಅವರಿಗೆ ನೆರವಾಗುವರೆಂಬ ವದಂತಿಯಿದೆ.

ಪಂಡಿತ ನೆಹರೂ ಜನನಾಯಕರಾಗಿ ಬಹುಕಾಲ ಬಾಳುವಂತಾಗಲಿ. ಅವರ ಭಾರತಾಭಿವೃದ್ಧಿಯ ಯೋಜನೆಗಳು ಸಂಪೂರ್ಣ ಕಾರ್ಯರೂಪಕ್ಕೆ ಬಂದು ಭಾರತೀಯರು ನಕ್ಕುನಲಿದಾಡುವಂತಾಗಲಿ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ-
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಶ್ರೀ ಶಿವರಾಮ ಕಾರಂತರ
ಪುಸ್ತಕಗಳು

ನಂಬಿದವರ ನಾಕ,ನರಕ	3=00
ಪಂಚಮಿತು	2=50
ಮಂಗಳಾರತಿ	1=50
ನಮ್ಮ ಸುತ್ತಲಿಗ ಕಡಲು	1=75
ಪರಮಾಣು ಇಂದು ನಾಳೆ	3=00
ಸಮಿಷ್ಟೆ	2=50
ಮೈಲುಕಲ್ಲಿನೊಡನೆ ಮಾತುಕತೆ	1=50
ಗಳು	
ಕಿದಾರ್ಯದ ಊರುಳಲ್ಲಿ	7=00

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

15—5—1958

ಸಂಚಿಕೆ ೩೬
NO. 36

ಕೇರಳದಲ್ಲಿ ಕಮ್ಯುನಿಸ್ಟರು ಸಾಧಿಸಿದ್ದೇನು?

ಕಮ್ಯುನಿಸ್ಟರು ಇಂದ್ರಜಾಲ ಮಾಡಲಿಲ್ಲ

೧೯೫೭ ಎಪ್ರಿಲ್ ತಿಂಗಳಲ್ಲಿ ಇಡಿ ಜಗತ್ತಿನ ದೃಷ್ಟಿ ಆವರೆಗೆ ಅಜ್ಞಾತಪ್ರಾಯವಾಗಿದ್ದ ಕೇರಳ ರಾಜ್ಯದತ್ತ ತಿರುಗಿತು. ಅಲ್ಲಿ ಅಭೂತಪೂರ್ವವಾದ ಒಂದು ಸಂಗತಿ ಘಟಿಸಿತ್ತು. ಕಮ್ಯುನಿಜಂನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಕಮ್ಯುನಿಸ್ಟರು ಚುನಾವಣೆಯಲ್ಲಿ ಗೆದ್ದು ಬಹುಮತ ಗಳಿಸಿದ್ದರು.

ಈ ಜಯ ಕಮ್ಯುನಿಸ್ಟರಿಗೇ ವಿಸ್ಮಯವನ್ನುಂಟುಮಾಡಿತು. ಆದರೆ ಅವರು ಪಳಗಿದ ನಾಯಕರಾದ ಇ ಎಂ ಎಸ್ ನಂಬೂದ್ರಿಪಾದರ ನೇತೃತ್ವದಲ್ಲಿ ೧೧ ಜನರ ಮಂತ್ರಿಮಂಡಳ ರಚಿಸಿದಾಗ, ಜಗತ್ತು ಚಿಂತಾಕುಲ ಕುತೂಹಲದಿಂದ ಅವರು ಏನು ಮಾಡಬಹುದೆಂದು ಪ್ರಶ್ನಿಸಿತು ಇದು ನಡೆದು ಈಗ ಒಂದು ವರ್ಷವಾಗಿದೆ. ತಕ್ಕ ಮಟ್ಟಿಗೆ ಪ್ರಶ್ನೆಗೆ ಉತ್ತರವೂ ಬಂದಂತಾಗಿದೆ. ಅವೆಂದರೆ, ಕಮ್ಯುನಿಸ್ಟರು ಯಾವ ಜಾದುವನ್ನೂ ಮಾಡಿ ತೋರಿಸಲಾರರು ಎಂದು. ಅಧಿಕಾರಕ್ಕೆ ಬರುತ್ತಲೇ ಕೇರಳ ಕಮ್ಯುನಿಸ್ಟ್ ಧುರೀಣರು ತಮ್ಮ ಕ್ರಾಂತಿಕಾರಿ ಸೋಗನ್ನು ಬಿಚ್ಚಿಟ್ಟು ವಸ್ತುಸ್ಥಿತಿಯಂತೆ ವರ್ತಿಸಬೇಕಾಯಿತು. ಅವರು ತಮ್ಮ ಚುನಾವಣೆ ಘೋಷಣೆಯಲ್ಲಿ ಜನತೆಗೆ ೯೪ ವಚನಗಳನ್ನಿತ್ತಿದ್ದರು. ಅಧಿಕಾರ ಸ್ವೀಕರಿಸಿದ ಮೇಲೆ ಆ ಧಾಟಿಯಲ್ಲಿ ಮಾತಾಡುವುದನ್ನು ಅವರು ಬಿಟ್ಟರು. "ಸ್ಥಿರ ಕಾರ್ಯಕ್ಷಮ ಆಡಳಿತವನ್ನು ಒದಗಿಸುವ ಮತ್ತು ಸದ್ಯದ ಪಂಚವಾರ್ಷಿಕ ಯೋಜನೆಯನ್ನು ಹೆಚ್ಚು ಶೀಘ್ರದಲ್ಲಿ ಮತ್ತು ಕಾರ್ಯಕ್ಷಮ ರೀತಿಯಲ್ಲಿ ಆಚರಣೆಗೆ ತರುವ" ಮಾತನ್ನು ಅವರು ಕೇರಳದ ಜನತೆಗೆ ಹೇಳ ತೊಡಗಿದರು.

ಅಂತೆಯೇ ಕೇರಳ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ "ಇಲ್ಲಿ ನಾವೇನೂ ಕ್ರಾಂತೀಯ ಯೋಜನೆಯನ್ನು ಇಟ್ಟುಕೊಂಡಿಲ್ಲ" ಎಂದರು. ಅವರು ತಮ್ಮ ಪಕ್ಷದ ಮಂತ್ರಿ ಮಂಡಳವನ್ನು ಕಮ್ಯುನಿಸ್ಟ ಮಂತ್ರಿಮಂಡಳವೆಂದು ಕೂಡ ಕರೆಯಲಿಲ್ಲ. ಪತ್ರಿಕಾ ಪರಿಷತ್ತೊಂದರಲ್ಲಿ "ಇದು ಕಮ್ಯುನಿಸ್ಟರ ನೇತೃತ್ವದಲ್ಲಿರುವ ಸಾಮಾನ್ಯ ಜನರ ಮಂತ್ರಿಮಂಡಳ" ಎಂದು ನುಡಿದರು.

ಕಮ್ಯುನಿಸ್ಟ ಮಂತ್ರಿಮಂಡಳವು ತನ್ನ ಹಿಂದಿನ ಮಂತ್ರಿಮಂಡಳಗಳಿಗಿಂತ ಯಾವ ವಿಚಾರದಲ್ಲೂ ಅಪ್ರತಿಮವೆನ್ನಿಸಿಕೊಂಡಿಲ್ಲ. ಹಾಗೆ ನೋಡಿದರೆ ಅವುಗಳಿಗಿಂತ ಇದು ಕನಿಷ್ಠವೇ ಎನ್ನಬಹುದು. ಆಡಳಿತವನ್ನು ಬಲಗೊಳಿಸಲು ಅದು ಸಮರ್ಥವಾಗಿಲ್ಲ. ಕಮ್ಯುನಿಸ್ಟ ಪಕ್ಷದ ಕೇರಳ ರಾಜ್ಯ ಸಮಿತಿಯೇ ಅದಕ್ಕಾಗಿ ಮಂತ್ರಿಮಂಡಳವನ್ನು ಟೀಕಿಸಿಯೂ ಇದೆ

"ಪಂಚವಾರ್ಷಿಕ ಯೋಜನೆಯಲ್ಲಿ ಕೇರಳದ ಪಾಲಿಗೆ ಗೊತ್ತುಪಡಿಸಿದಂತೆ ಕೋಟಿ ರೂಪಾಯಿ ಸಾಲದು ಅದನ್ನು ೨೦೦ ಕೋಟಿಗೇರಿಸಲು ನಾವು ಒತ್ತಾಯಪಡಿಸುವೆವು" ಎಂದು ಪ್ರಾರಂಭದಲ್ಲಿ ಕಮ್ಯುನಿಸ್ಟರು ಕೊಚ್ಚಿಕೊಂಡಿದ್ದರು. ಆದರೆ ಪಂಚವಾರ್ಷಿಕ ಯೋಜನೆಯ ಎರಡನೆ ವರ್ಷಕ್ಕಾಗಿ ಕೇರಳಕ್ಕೆ ಕೆಗೆದಿಟ್ಟ ೧೭೯೦ ಕೋಟಿ ರೂಪಾಯಿಗಳಲ್ಲಿ ಮೊದಲಿನ ೨ ವರ್ಷ ತಿಂಗಳುಗಳಲ್ಲಿ ೪೨೧ ಕೋಟಿ ರೂಪಾಯಿಗಳಿಗಿಂತ ಹೆಚ್ಚನ್ನು ಬಳಸಿಕೊಳ್ಳುವುದು ಕಷ್ಟಸಾಧ್ಯವಾಗಿಲ್ಲವೆಂದು ಮುಖ್ಯಮಂತ್ರಿ ನಂಬೂದ್ರಿಪಾದರು ವಿಧಾನ ಸಭೆಯಲ್ಲಿ ಒಪ್ಪಿಕೊಳ್ಳಬೇಕಾಯಿತು ರಾಜ್ಯಪಾಲರ ಭಾಷಣದಲ್ಲಿ "ಕೇರಳದಲ್ಲಿ ದ್ವೇಷಕ್ಕೂ ಸಿದ್ಧಿಗೂ ಇರುವ ಅಂತರ ವಿಷಾದಕರವಾಗಿದೆ" ಎಂದ ಹೇಳಬೇಕಾಯಿತು

ಇದೊಂದೇ ಮಂತ್ರಿಮಂಡಲದ ತಪ್ಪಲ್ಲ ಬುದ್ಧಿಪೂರ್ವಕವಾಗಿ ಪೂರ್ವ ಯೋಜನೆಯಂತೆ ಅವರು ದುರಾಡಳಿತಕ್ಕೆ ಎಡೆ ಮಾಡಿಕೊಟ್ಟಿದ್ದಾರೆ

ಕಮ್ಯುನಿಸ್ಟರು ಅಧಿಕಾರಕ್ಕೆ ಬಂದೊಡನೆ ಕೇರಳದ ಕಮ್ಯುನಿಸ್ಟ ಪತ್ರಿಕೆಗಳು ಪೋಲೀಸರ ಮೇಲೂ ಇನ್ಸ್‌ಪೆಕ್ಟರ ಜನರಲ್ ಚಂದ್ರಶೇಖರ ನಾಯರರ ಮೇಲೂ ಅಪಪ್ರಚಾರದ ಸತ್ರವನ್ನೇ ಆರಂಭಿಸಿದುವು ಮಂತ್ರಿಗಳು ಕೂಡ ಪೋಲೀಸರನ್ನು ಸಾರ್ವಜನಿಕ ಸಭೆಯಲ್ಲಿ ಖಂಡಿಸಿ "ಪೋಲೀಸ ಪಡೆ ಇದುವರೆಗಿನಂತೆ ಸ್ವದೇಶಗಳ ಸೇವೆಮಾಡುವ ಪಡೆಯಾಗದೆ ಜನತೆಯ ಸೇವೆಮಾಡ ವ ಜನತಾ ಪಡೆಯಾಗುವ" ಅಗತ್ಯವನ್ನು ಸಾರಿದರು ಎಲ್ಲೆಡೆಗಳಿಂದ ಪಾತಿಸಲ್ಪಟ್ಟ ಪೋಲೀಸರು ಕಾಯದೆ ಸುವ್ಯವಸ್ಥೆಗಳ ರಕ್ಷಣೆಗಾಗಿ ಮಾಡಬೇಕಾದ ದೈನಂದಿನ ಸಾಮಾನ್ಯ ಕರ್ತವ್ಯಗಳನ್ನೂ ನೆರವೇರಿಸಲು ಅಸಮರ್ಥರಾಗುವಂದ ಪರಿಸ್ಥಿತಿಯುಂಟಾಯಿತು. ಕಮ್ಯುನಿಸ್ಟರು ಅವರ ಅಧಿಕಾರವನ್ನು ಕೈಗೆ ತೆಗೆದುಕೊಂಡರು ಸಮಾಜ ವಿರೋಧಿ ಪುಂಡರಿಗೆ ತಾಂಡವವಾಡಲು ಅವಕಾಶ ಸಿಕ್ಕಿತು. ನಾಡಿನಲ್ಲಿ ಹಾಹಾಕಾರವೆದ್ದಿತು ಕೊನೆಗೆ ಕೇರಳ ಕಮ್ಯುನಿಸ್ಟ ರಾಜ್ಯಸಮಿತಿಯ ಕಾರ್ಯದರ್ಶಿಯೇ ಪೋಲೀಸರ ದೌರ್ಬಲ್ಯವನ್ನು ಖಂಡಿಸುವ ಪ್ರಸಂಗ ಬಂತು ಅದರೆ ಅವರು ಈ ಮಾತಿಗೆ ಬಣ್ಣ ಬಳಿದು ಪೋಲೀಸರು ಕಮ್ಯುನಿಸ್ಟರನ್ನು ಅಧಿಕಾರಚ್ಯುತರನ್ನಾಗಿ ಮಾಡಲು ಬೇಕೆಂದೇ ಹೀಗೆ ಮಾಡುತ್ತಿದ್ದಾರೆಂದು ಆರೋಪಿಸಿದರು ಈ ಪರಿಸ್ಥಿತಿಯನ್ನು ಸಹಿಸಲಾರದೆ ಕೇರಳದ ಪೋಲೀಸ ಇನ್ಸ್‌ಪೆಕ್ಟರ ಜನರಲ್ಲರು ನಿವೃತ್ತಿ ಪೂರ್ವದ ರಜೆ ತೆಗೆದುಕೊಂಡು ಹೋದರು

ಕೂಡಲೆ ಕಮ್ಯುನಿಸ್ಟ ಸರಕಾರ ಇಬ್ಬರು ಪೋಲೀಸ ಇನ್ಸ್‌ಪೆಕ್ಟರ ಜನರಲ್ಲರನ್ನು ನೇಮಿಸಿತು "ಆಡಳಿತದಲ್ಲಿ ದಕ್ಷತೆ ಹೆಚ್ಚುವಂತೆ ಮಾಡಲು" ಹೀಗೆ ಇಬ್ಬರನ್ನು ನೇಮಿಸಿದ್ದಾಗಿದೆ ಎಂದು ಅವರು ಹೇಳಿದರೂ ಕಮ್ಯುನಿಸ್ಟರ ಹಸ್ತಕ್ಷೇಪಕ್ಕೆ ಡೆ ಮಾಡಿಕೊಡುವುದೇ ಇದರ ಒಳಉದ್ದೇಶವೆಂದು 'ಮಾತೃ ಭೂಮಿ'ಯಂಥ ಕಮ್ಯುನಿಸ್ಟ ಪರವಾಗಿದ್ದ ಪತ್ರಿಕೆಯೇ ಆಕ್ಷೇಪಿಸಿದೆ ಒಂದೇ ಶಾಖೆಗೆ ಇಬ್ಬರು ವರಿಷ್ಠಾಧಿಕಾರಿಗಳಿರುವುದು ಕೇರಳವೊಂದರಲ್ಲೇ ಪ್ರತಿಯೊಂದು ಶಾಖೆಯಲ್ಲೂ ಈ ಬಗೆಯಾಗಿ ಎರಡು ಅಥವಾ ಹೆಚ್ಚಿಗೆ ವರಿಷ್ಠರ ಸ್ಥಾನ ಕಲ್ಪಿಸಲಾಯಿತು. ಮೊದಲು ಶಿಕ್ಷಣ ಶಾಖೆಯಲ್ಲಿ ಒಬ್ಬ ಡೈರೆಕ್ಟರಿದ್ದರೆ ಈಗ ಆರು ಜನರಿದ್ದಾರೆ

ಆಡಳಿತದಲ್ಲಿ ಕಮ್ಯುನಿಸ್ಟರ ಹಸ್ತಕ್ಷೇಪ ದಿನದಿನಕ್ಕೆ ಹೆಚ್ಚುತ್ತಿದೆ ಒಬ್ಬ ಮೆಜಿಸ್ಟ್ರೇಟನಿಗೆ ಅವರು ಬೆದರಿಕೆ ಹಾಕಿದರು. ಕಮ್ಯುನಿಸ್ಟ ಎಂ ಎಲ್ ಎ ಒಬ್ಬನು ಅನೇಕ ಕಮ್ಯುನಿಸ್ಟರೊಡನೆ ಹೋಗಿ ಡ್ಯೂಟಿಗೆ ಹೊರಟಿದ್ದ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ ಸಹಿತ ಪೋಲೀಸರನ್ನು ತಡೆದು ನಿಲ್ಲಿಸಿದರು ಕಮ್ಯುನಿಸ್ಟರು ನ್ಯಾಯಸ್ಥಾನದ ಆಜ್ಞೆಗಳನ್ನು ಧಿಕ್ಕರಿಸಿದರು ಎಂಬ ವರದಿಗಳು ಬರುತ್ತಿವೆ. ಇಂಥವರ ಮೇಲೆ ಪೋಲೀಸರು ಖಟ್ಟೆ ಹಾಕಿದರೆ ಸರಕಾರ ಅದನ್ನು ಹಿಂತೆಗೆದ ಕೊಳ್ಳುತ್ತದೆ!

ಆಡಳಿತದ ಅನೇಕ ಶಾಖೆಗಳಲ್ಲಿ ಕಮ್ಯುನಿಸ್ಟರು ಇನ್ನೂಂದು ಗತ್ತು ಕಲ್ಪಿಸಿದ್ದಾರೆ. ಎಲ್ಲವನ್ನು ಸಮಿತಿಗಳ ಮೂಲಕ ಮಾಡುವುದೇ ಅದು. ಇದು ಲಂಚಗುಳಿತನ, ಸರ್ವಾಧಿಕಾರಿತ್ವ ಮೊದಲಾದುವನ್ನು ಅಳಿಸಿ ಸಾರ್ವಜನಿಕ ಸಹಕಾರವನ್ನು ಹೆಚ್ಚಿಸುವುದಕ್ಕಾಗಿ ಎಂದು ಹೇಳಿದರೂ ಗಂಭೀರವಾದ ಆಡಳಿತದ ಮೇಲೆ ಕಮ್ಯುನಿಸ್ಟರ ಹಿಡಿತವನ್ನು ಬಲಪಡಿಸುವಂತಾಗಿದೆ ಇಂತಹ ೧೧೦೦ ಸಮಿತಿಗಳಲ್ಲಿ ಒಟ್ಟು ೧೫,೦೦೦ ಜನರಿದ್ದಾರೆ ಇವರಲ್ಲಿ ೧೦,೦೦೦ ಜನರು ಕಮ್ಯುನಿಸ್ಟರಾಗಲಿ ಅವರ ಸಹವಾಸಿಗಳಾಗಲಿ ಆಗಿದ್ದಾರೆ

ಈ ಬಗೆಯ ಅಸಂಖ್ಯ ಸಮಿತಿಗಳು ಮತ್ತು ಶಾಖೆಯ ವರಿಷ್ಠರ ಸ್ಥಳಗಳನ್ನು ಹೆಚ್ಚಿಸಿರುವುದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಬಹು ಭಾರಬಿದ್ದಿದೆ. ವಿತ್ತನ್ಯಯಕ್ಕಾಗಿ ಸರಕಾರ ಪ್ರಾರಂಭಿಸಿದ ಕ್ರಮಗಳು ಅರ್ಥಹೀನವಾದಂತಿವೆ ರಾಜ್ಯದ ಉತ್ಪನ್ನದಲ್ಲಿ ನೂರಕ್ಕೆ ೫೨ರಷ್ಟು ಸರಕಾರಿ ನೌಕರರ ಸಂಬಳ ಮತ್ತು ಭತ್ತೆಗಳಿಗಾಗಿ ವ್ಯಯವಾಗುತ್ತಿದೆ ರಾಜ್ಯಪಾಲರ ಆಡಳಿತವಿದ್ದಾಗ ಆಡಳಿತ ವೆಚ್ಚ ರೂ ೯೫ ಲಿಲಕ್ಷಗಳಷ್ಟಿದ್ದುದು ೧೯೫೭ ಜನವರಿಯಲ್ಲಿ ೧೫೫ ಲಕ್ಷ ರೂಪಾಯಿಗಳಷ್ಟಾಗಿ ಫೆಬ್ರವರಿಯಲ್ಲಿ ೧೫೮ ಲಕ್ಷ ರೂಪಾಯಿಗಳಿಗೆ ಮುಟ್ಟುವುದ ಇದರಿಂದ

(೧೦ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd **1931.**

BRANCHES

Bombay, Bangalore, Mysore Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ-

ಅದೃಷ್ಟದ ವಕ್ರದೃಷ್ಟಿ

ಶ್ರೀ. ಪಿ. ಜನಾರ್ಧನ ಆಚಾರ್ಯ

"ಪರಮಾತ್ಮ! ಈ ಬಾರಿಯಾದರೂ ಒಂದು ಗಂಡುಕೂಸನ್ನು ನೀನು ಕರುಣಿಸಲಾರೆಯ? ಹೆಣ್ಣು-ಹೆಣ್ಣು-ಹೆಣ್ಣು — ಇನ್ನೆಷ್ಟು ಹೆಣ್ಣು ಮಕ್ಕಳನ್ನು ನೀನು ಅವಳ ಹೊಟ್ಟೆಯಲ್ಲಿ ಇಟ್ಟಿರುವೆ? ಉದರ ಪೋಷಣೆಯೇ ದುಸ್ಸಾಧ್ಯವಾದ ನನ್ನೀ ಹೆಣ್ಣು ಸಂಸಾರಕ್ಕೆ ನೀನಲ್ಲದೆ ಬೇರಾರು ಗತಿ ಇದ್ದಾರೆ? ಕಡೆಗಾದರೂ ನೀನೊಂದು ಗಂಡುಕೂಸನ್ನು ಕೊಡ. ದೇವಾ."

ರಾಮರಾಯರ ದೃಷ್ಟಿಯು ಗೋಡೆಯ ಮೇಲೆ ತೂಗಹಾಕಿದ್ದ ಪಾರ್ವತಿ-ಪರಮೇಶ್ವರರ ಚಿತ್ರದಲ್ಲಿ ನಟ್ಟುಹೋಗಿತ್ತು. ಮನಸ್ಸಿನಲ್ಲಿ ಅಡಗಿದ್ದ ದೈನ್ಯ ಕಣ್ಣೀರ ಹನಿಯಾಗಿ ಹೊರಹೊಮ್ಮಿತು. ರಾಯರು ಬಾಯಿಯಲ್ಲಿ ಏನೇನೋ ಮಂತ್ರಗಳನ್ನು ಗುಣುಗುಟ್ಟುತ್ತ ಶಥಪಥ ತಿರುಗುತಿದ್ದರು ಭಕ್ತಿಸೂರಿತವಾದ ದೈನ್ಯ ಜಗನ್ಮಾತೆಯಿಂದೊಡಗೂಡಿ ನೃತ್ಯ ವನ್ನೆಸಗುತಿದ್ದ ಪರಮೇಶ್ವರನ ಚಿತ್ರವನ್ನು ಕಂಡು ಅಸೂಯೆಯಾಗಿ ಪರಿಣಮಿಸಿತು. ಅಪಾರವಾದ ಸಂಸಾರ ಸಾಗರದಲ್ಲಿ ತೊಳಲಾಡುವ ತನ್ನ ಜೀವನವನ್ನು ಪರಶಿವನ ವಿಲಾಸ ಜೀವನಕ್ಕೆ ಹೋಲಿಸಿಕೊಂಡರು ರಾಯರು.

"ದೇವಾ! ನೀನೆಷ್ಟು ಸ್ವಾರ್ಥಿ....."

ಭಾವತರಂಗಗಳು ಎಲ್ಲೆಮೀರಿ ಹೊರಹರಿದುವು. ಆಗಲೆ ಒಳಗಿನಿಂದ ಶಂಕರಮ್ಮ ಪ್ರಸವವೇದನೆಯನ್ನು ಸಹಿಸಲಾರದೆ ನರಳುವ ಸದ್ದು ಅವರ ಕಿವಿಗೆ ಬಿತ್ತು. ಮರುಕ್ಷಣವೇ ನರಳಿಕೆಯೊಂದಿಗೆ ಮಗುವಿನ ಕೂಗೂ ಸೇರಿಕೊಂಡಿತ್ತು. ರಾಯರು ಒಮ್ಮೆಲೆ ಎಚ್ಚೆತ್ತವರಂತೆ ಬಾಗಿಲನ್ನು ಒಳಗೆ ದೂಡಿ, "ಮಗೂ....." ಎಂದಾಗಲೆ ಅವರ ಕಿವಿಗೆ ಬಿದ್ದುದು ಅವೇ ಎರಡಕ್ಷರಗಳು: "ಹೆಣ್ಣು".

ಕ್ಷಣಾರ್ಧ ಪರ್ವತದ ಶಿಖರದೊಂದು ಜರಿದು ತಲೆಗುರುಳಿದಂತಾಯ್ತು ರಾಯರಿಗೆ. 'ಹೆಣ್ಣು', 'ಹೆಣ್ಣು'— ಇಡೀ ಪ್ರಪಂಚವೇ ಹೆಣ್ಣಾಗಿ ಪರಿಣಮಿಸಿತು. ಆನೊಂದೆಡೆಗೆ. ಆದರೆ ಮರುಕ್ಷಣವೇ ಮನಸ್ಸಿನ ಅಂತರಾಳದಲ್ಲಿ ಅಡಗಿದ್ದ ಸುಪ್ತ ಚೇತನವೊಂದು ಅವರಿಗೆ ಧೈರ್ಯವನ್ನು ತ್ತಿತು. 'ಹುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು.....'— ಆ ಪಂಕ್ತಿಯೊಂದು ಮನಸ್ಸಾಗರದಲ್ಲಿ ತೇಲಿಹೋಯಿತು. ರಾಯರ ಮನಸ್ಸು ಕಲ್ಲಾಯಿತು. ಧೀರ ಯೋಧನು ರಣರಂಗದಲ್ಲಿ ಕಾದಾಡಲು ಸಿದ್ಧನಾಗುವಂತೆ ರಾಯರು ಜೀವನ ಹೋರಾಟದಲ್ಲಿ ಕಾಲಿಟ್ಟರು—ಕುಂದಿದ ಚೇತನವನ್ನು ಶೇಖರಿಸಿ, ಆದರೂ ಒಮ್ಮಿಂದೊಮ್ಮೆ ಆ ಮುದಿ ದೇಹವು ನಿರಾಶೆಯಿಂದ ಕಂಪಿಸುತಿತ್ತು. ಆ ಬಡ ಶರೀರವು ಬಾಳಯಾತನೆಯಿಂದ ನರಳಿತು. ರಾಯರು ಜೀವನ ಹೋರಾಟದಿಂದ ಹಿಮ್ಮೆಟ್ಟಿದರು. ಯಾಂತ್ರಿಕವಾಗಿ ಅವರ ಕಾಲುಗಳು ಅವರನ್ನು ಅಂಗಳದ ತನಕ ಕೊಂಡೊಯ್ದುವು. ಸಣ್ಣ ಮಗುವೊಂದು 'ಅಪ್ಪಾ' ಎಂದು ಕೂಗುತ್ತ ಅಂಗಳಕ್ಕೆ ಓಡಿಬಂದಿತು. ಆದರೆ ರಾಯರು ಆಗಲೆ ಅಲ್ಲಿಂದ ಕಣ್ಮರೆಯಾಗಿದ್ದರು.

ಂ ಂ ಂ

ಶಾಮರಾಯರು ತನ್ನ ಊರಿನ ಜಮೀನ್ದಾರನ ಕೈಕೆಳಗೆ ಕಾರಕೂನನಾಗಿ ದುಡಿದು ತನ್ನ ಸಂಸಾರದ ಪಥವನ್ನು ಸಾಗಿಸುತಿದ್ದರು. ಪತ್ನಿ ಶಂಕರಮ್ಮ ಜೀವನದ ಸುಖ ದುಃಖಗಳಲ್ಲಿ ಸಮಭಾಗಿಯಾಗಿ ತನ್ನ ಪತಿಗೆ ಸಹಾಯಕಳಾಗಿದ್ದಳು. ಆದರೆ ಆಕೆ ಏಳು ಹೆಣ್ಣು ಮಕ್ಕಳಿಗೆ ಜನ್ಮವೀಯಲು ಮೊದಲೇ ಬಡತನದ ಬೇಗೆಯಿಂದ ಬಳಲಿದ್ದ ಆ ಬಡ ಸಂಸಾರವು ಜೀವನ ಹೋರಾಟದಲ್ಲಿ ಅಪಜಯವನ್ನೇ ಕಾಣ ತೊಡಗಿತು. ದಿನದಿಂದ ದಿನಕ್ಕೆ ಬಾಳು ಅಸಾಧ್ಯವಾಯಿತು. ರಾಯರಿಗೆ ಸಿಗುತಿದ್ದ ೫೦ ರೂಪಾಯಿ ಅವರ ಕುಟುಂಬದ ಉದರ ಪೋಷಣೆಗೂ ಸಾಲುತ್ತಿರಲಿಲ್ಲ. ಮುಪ್ಪಿಗೆ ಕಾಲಿಟ್ಟ ಶಾಮರಾಯರಿಗೆ ಬಳುದಿನಗಳ ನಂತರ ಆದ ಒಂದು ಸಂತಾನ—ಅದೂ 'ಹೆಣ್ಣು', ಶಾಮರಾಯರ ಎಂಟನೆಯ ಮಗು. ಆ ಮುದಿ ದೇಹವು ತನ್ನ ಸಂಸಾರದ ಭವಿಷ್ಯತ್ತನ್ನು ನೆನೆದು ನಡುಗಿತು. ಅದೇ ಮನೋ ವೇದನೆಯು ಪ್ರತಿಕ್ಷಣವೂ ಅವರನ್ನು ಕುಕ್ಕಲಾರಂಭಿಸಿತು.

ಂ ಂ ಂ

ಮಿಣುಕು ದೀಪವೊಂದು ಶಾಮರಾಯರ ಹರಕು ಮನೆಯಲ್ಲಿ ಉರಿಯುತಿತ್ತು. ಮಧ್ಯ ರಾತ್ರಿ ಸಮಯವಾಗಿರಬಹುದಾದುದರಿಂದ ಸ್ಮಶಾನ ಮೌನವು ಎಲ್ಲೆಲ್ಲೂ ವ್ಯಾಪಿಸಿತ್ತು. ಶಾಮರಾಯರು ಮಲಗಿದ್ದ ಜಾಪೆಯ ಬಳಿಯಲ್ಲಿ ತಲೆಗೆ ಒಂದು ಕೈಯನ್ನಿಟ್ಟುಕೊಂಡು ಭಾವನಾಲೋಕದಲ್ಲಿ ಸಂಚರಿಸುತಿದ್ದಳು ಶಂಕರಮ್ಮ. ರಾಯರ ಹಿರಿಯ ಮಗಳು ಸರೋಜಾ ತಾಯಿಯ ಬಳಿಯಲ್ಲೇ ಕುಳಿತು ಆಗಾಗ್ಯೆ ತಂದೆಯ ಮೈಯನ್ನಲುಗಿಸಿ 'ಅಪ್ಪಾ', ಅಪ್ಪಾ' ಎಂದು ಕರೆಯುತಿದ್ದಳು. ಚಿಂತೆಯಿಂದ ಬೆಂದು ಬೇಸತ್ತ ರಾಯರು ತನ್ನ ಮನಶ್ಶಾಂತಿಗಾಗಿ ಸಾವನ್ನು ಇದಿರು ನೋಡುತಿದ್ದರು. ರಾಯರ ಪರಿಸ್ಥಿತಿಯು ವಿಷಮತೆಗೆ ಎರಿತು. ಅವರ ಬೆಂದೆಯು ಶಾಂತಿಗಾಗಿ ಹಾತೊರೆಯುತಿತ್ತು. ಸಮಯ ಕಳೆದಂತೆ ಪರಿಸ್ಥಿತಿಯು ಮತ್ತಷ್ಟು ವಿಷಮತೆಗೆ ಕಾಲಿರಿಸಿತು.

"ಶಂಕರಿ....ಸರೋಜಾ....."

—ರಾಯರ ಧ್ವನಿಯು ಕಂಪಿಸುತಿತ್ತು.

'ನಾನಿನ್ನು ಬದುಳುವ ಹಾಗಿಲ್ಲ ಶಂಕರಿ.... ನಿಮ್ಮಗಳನ್ನು ನಿರ್ಗತಿಕರನ್ನಾಗಿ ಬಿಟ್ಟು ಕೊಳ್ಳುವ ಭಾಗ್ಯವನ್ನು ವಿಧಾತನು ನನಗಿತ್ತನು. ಆದರೆ.....ಈ ನನ್ನ ಕಂದಮ್ಮಗಳನ್ನು ಪರರನ್ನಕ್ಕೆ ತೊತ್ತಾಗುವಂತೆ ಮಾಡಬೇಡ ಶಂಕರಿ. ನಿಮ್ಮೊಡನಿರುವ ಭಾಗ್ಯವು ನನಗಿನ್ನಿಲ್ಲ.'

ದುಃಖದಿಂದ, ಬಿಗಿದ ಕಂಠದಿಂದಾಗಿ ಶಂಕರಮ್ಮ ಗಂಡನನ್ನು ಸಮಾಧಾನಪಡಿಸಲು ಚಡಪಡಿಸಿದಳು. ಆದರೆ ಮಾತುಗಳೇ ಅವಳ ಬಾಯಿಯಿಂದ ಹೊರಡದಾದುವು.

'ಸರೋಜಾ..... ನಿಮ್ಮನ್ನು ಇನ್ನು ಮುಂದೆ ನೋಡುವ ಭಾಗ್ಯವು ನನಗಿಲ್ಲ ಮಗೂ....."

— ರಾಯರು ಮುಂದುವರಿಸಿದರು. ದುಃಖದಿಂದ ತೊಯ್ದ ಆ ಎಳೆಯ ಮನಸ್ಸಿಗೆ ಶೂಲವನಾದುವು ಆ ಮಾತುಗಳು. ಆಕೆ 'ಅಪ್ಪಾ" ಎನ್ನುತ್ತ ಅವರ ದೇಹವನ್ನು ತಬ್ಬಿ ಕೊಂಡಳು.

"ಶಂಕರಿ.....ಸರೋ ...ಜಾ...."

ಆ ಕಡೆಯಕ್ಷರದೊಂದಿಗೆ ಅವರ ಪ್ರಾಣಪಕ್ಷಿಯೂ ಹಾರಿ ಹೋಯಿತು. ರಾಯರು ಬಡ ಸಂಸಾರವನ್ನು ಬಾಳಕೋಟಲೆಯಲ್ಲಿರಿಸಿ ಕಣ್ಮರೆಯಾದರು.

ದಿನಗಳುರುಳಿದುವು. ಶಂಕರಮ್ಮ ತನ್ನ ಸಂಸಾರದ ಪೋಷಣೆಗೆ ಸೊಂಟಕಟ್ಟಿದಳು. ಆದರೆ ಬಳುಕುತ್ತ ಮುಂದೆ ಸಾಗತೊಡಗಿತು ಬಾಳು. ತಾನಿರುವ ಮನೆಯ ಧನಿ ಶಂಭುರಾಯರ ಮನೆಗೆ ಹೋಗಿ ಕೆಲಸಮಾಡಿ ಅದರಿಂದ ತನ್ನ ಕುಟುಂಬದ ಪೋಷಣೆಗೆ ತೊಡಗಿದರು ಶಂಕರಮ್ಮ. ಸರೋಜಾ ತಾನೂ ತಾಯಿಯೊಂದಿಗೆ ಕೆಲಸಕ್ಕೆ ಹೋಗುತಿದ್ದಳು.

ಆದರೆ ದುರ್ವಿಧಿಗೆ ಇದೂ ಸರಿಬೀಳಲಿಲ್ಲ ಒಮ್ಮೆ ಕಟ್ಟಿಗೆಯೊಡೆಯುತಿದ್ದ ಶಂಕರಮ್ಮನ ಬಲಕಾಲಿಗೆ ಕೊಡಲಿ ಜಾರಿ ಬಿದ್ದು ಆಕೆ ಮೂಲೆಪಾಲಾದಳು. ಜಾಪೆಯಿಂದೆದ್ದು ಅತ್ತಿತ್ತ ತಿರುಗುವ ಚೇತನವೂ ಆಕೆಗಿದ್ದಿಲ್ಲ. ಆಯಿತು-ಆ ಬಾಳ ನೌಕೆಯು ಬಿರುಗಾಳಿಯು ಸುಳಿಗೆ ಸಿಲುಕಿತು.

ಸರೋಜಾ ಈಗಾಗಲೇ ಇಪ್ಪತ್ತರ ಗಡುವನ್ನು ಉತ್ತರಿಸಿದ್ದಳು. ಯೌವನಕ್ಕೆ ಕಾಲಿರಿಸುತಿದ್ದ ಆಕೆಯ ಶರೀರವು ತುಂಬಿಕೊಂಡಿತ್ತು. ಅದುತನಕ ಸುಪ್ತವಾಗಿದ್ದ ಚೆಲುವು ಸ್ಪುಟವಾಗಿ ಆಕೆಯ ಅಂಗಾಂಗಗಳಿಂದ ಹೊರಹೊಮ್ಮತೊಡಗಿತು. ಇದ್ದಕ್ಕಿದ್ದಂತೆ ಜಗದ ಕಣ್ಣು ಆಕೆಯೆಡೆಗೆ ಹೊರಳಿತು ಮಧುಭರಿತ ಸುಮದೆಡೆಗೆ ಭ್ರಮರವು ಓಡೋಡಿ ಬರುವುದು ಸಹಜವಲ್ಲವೆ?

ಅಬಲೆಯೋರ್ವಳು ಜೀವನದಲ್ಲಿ ಸತತ ಬೇನೆಯನ್ನನುಭವಿಸುತಿದ್ದರೂ ಪ್ರಪಂಚವು ಸ್ವಲಾಭಕ್ಕಾಗಿ ಆಕೆಯ ಬಾಳನ್ನು ಇನ್ನಷ್ಟು ಕಷ್ಟಕ್ಕೆ ಸಿಲುಕಿಸಲು ಹೇಸುವುದಿಲ್ಲ. ಶಂಭುರಾಯರ ಮಗ ನರಸಿಂಹ-ಅಡಿ ಇಡುವ ಕುಡಿ ಮೀಸೆಯ ಜಕ್ಕಜವ್ವನಿಗೆ ಹಾಗೂ ತಂದೆಯ ಅಪಾರ ಸಂಪತ್ತಿನಿಂದಾಗಿ ಕೊಬ್ಬಿದ "ಮದಕರಿ" ಆತನ ದೃಷ್ಟಿಯು ಸರೋಜಳತ್ತ ಹರಿಯಿತು. ತನ್ನ ಕಾರ್ಯಸಾಧನೆಗಾಗಿ ಶಂಕರಮ್ಮನಿಗೆ ತನ್ನ ಅಪಾರ ಐಶ್ವರ್ಯದ ಆಸೆ ತೋರಿಸಿ ಆಕೆಯ ಮಗಳ ಬಾಳನ್ನು ಬೀದಿಗಿಳಿಯಲು ಹವಣಿಸಿದ ನರಸಿಂಹ. ಆ ಮುದಿಮನದಲ್ಲಡಗಿದ್ದ ಸ್ವಾಭಿಮಾನ ಮರ್ಯಾದೆಗಳು ನರಸಿಂಹನಿಂದ ಹರಿದ ಆಶಾಕಿರಣದೆದುರು ನೀರಾಗಿ ಹೋದುವು. ಮೊಸ, ಹೆತ್ತ ತಾಯಿಯೇ ತನಗೆ ದುರ್ಭೋಧನೆಗೆ ತೊಡಗಲು ಆ ಎಳೆಯ ಮನಸ್ಸು ಹೇಗೆತಾನೆ ಆತ್ಮರಕ್ಷಣೆ ಮಾಡಿಕೊಂಡೀತು? ಒಂದೆಡೆ ತನ್ನ ಜೀವನಕ್ಕೆ ತಗಲಿದ ದಾರಿದ್ರ್ಯದ ಸೀಡೆ, ಇನ್ನೊಂದೆಡೆ ತಾನಾಗಿಯೇ ತನ್ನನ್ನು ಕುಕ್ಕುವ ಆಶಾಕಿರಣ—ಇವುಗಳೆಡೆಯಲ್ಲಿ ಆ ಎಳೆಯ ಮನಸ್ಸು ಚಡಪಡಿಸಿತು. ಎರಡನೆಯದಕ್ಕೆ ತನ್ನನ್ನು ಹೆತ್ತಾತಕೆಯೇ ಪೋಷಕಳಾಗಿರಲು ಸರೋಜಾ ಸುಲಭವಾಗಿ ನರಸಿಂಹನ ಬಲೆಗೆ ಬಿದ್ದಳು.

ಕಾಲವು ಗತಿಸಿತು. ಶಂಕರಮ್ಮನ ಪರಿ

(೧೧ನೇ ಪುಟ ನೋಡಿರಿ.)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; ½ ರಾತಲಿಗೆ ರೂ. 2/0

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಶೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಸಾಮಾಜಿಕ ಜೀವನದ ವಿಹಂಗಮ ನೋಟ—

ಶಿಲಾಯುಗದಿಂದ ಹರ್ಷನ ವರೆಗೆ

ಶ್ರೀ ಕೆ. ವಿ ತಿರುಮಲೇಶ

ಶಿಲಾಯುಗ

ಅತಿ ಪುರಾತನ ಕಾಲದಲ್ಲಿ ಹಿಂದೂ ದೇಶದಲ್ಲಿ ವಾಸಿಸುತ್ತಿದ್ದ ಜನರು ಆರ್ಯರೂ ಅಲ್ಲ, ದ್ರಾವಿಡರೂ ಅಲ್ಲ ಈ ಎರಡು ಜನಾಂಗಗಳಿಗಿಂತ ತೀರ ಭಿನ್ನವಾಗಿದ್ದ ಮೂಲ ಜನಾಂಗವೊಂದು ಪಶುಗಳಿಗೆ ಸಮಾನವಾದ ಜೀವನವನ್ನು ಸಾಗಿಸುತ್ತಿತ್ತು. ಈ ಜನರಿಗೆ ಧರ್ಮದ ಅರಿವು ಇದ್ದಂತೆ ತೋರುವುದಿಲ್ಲ ಮಥುರೆ, ತಿರುಚಿರಪಳ್ಳಿ, ತಂಜಾವೂರು, ಕಡಪ, ಬಳ್ಳಾರಿ ಮೊದಲಾದೆಡೆಗಳಲ್ಲಿ ಇವರ ಕುರುಹುಗಳು ದೊರೆತಿವೆ ಆ ಮೂಲಕ ಇವರು ನಾಡಾಡಿ ಜೀವನವನ್ನು ಅನುಸರಿಸುತ್ತಿದ್ದರೆಂದೂ, ಪ್ರಕೃತಿಯಲ್ಲಿ ಸದಾಕಾಲ ದೊರಕುವ ಹಣ್ಣು ಹಂಪಲುಗಳನ್ನೂ, ಗಡ್ಡೆ ಗೆಣಸುಗಳನ್ನೂ ಬೇಟೆಯಾಡಿ ದೊರೆತ ಮೃಗಗಳ ಮಾಂಸಗಳನ್ನು ತಿಂದು ಬದುಕುತಿದ್ದರು ಎಂದೂ ತಿಳಿಯುತ್ತದೆ ಇವರಿಗೆ ದೇವರ ಕುರಿತಾದ ಜ್ಞಾನವಿರಲಿಲ್ಲ ಮೃತ ಶರೀರಕ್ಕೆ ಶವ ಸಂಸ್ಕಾರ ಮಾಡುತ್ತಿರಲಿಲ್ಲ. ಬೆಂಕಿಯ ಅರಿವೂ ಈ ಜನಕ್ಕೆ ಇದ್ದಿಲ್ಲ. ಮೈಗೆ ನೊಸ್ಸಿನಿಂದ ಹೆಣೆಯಲ್ಪಟ್ಟ ಸಾದನಗಳನ್ನೋ, ಚರ್ಮಗಳನ್ನೋ ಹೊದ್ದುಕೊಳ್ಳುತ್ತಿದ್ದರು ಬೇಟೆಯಾಡಲು ಕಲ್ಲಿನ ಸಾಧನಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರು ಪುರಾತನ ಶಿಲಾಯುಗದಲ್ಲಿ ಈ ತೆರದ ಕಲ್ಲಿನ ಆಯುಧಗಳು ನಾಜೂಕಾಗಿರಲಿಲ್ಲ. ಕಾಲಕ್ರಮೇಣ ನೂತನ ಶಿಲಾಯುಗದಲ್ಲಿ ಇವು ನಾಜೂಕಾಗುತ್ತ ಬಂದುವು. ಕಲ್ಲಿನಿಂದ ಆಯುದಗಳನ್ನಲ್ಲದೆ ವಿವಿಧ ಉಪಕರಣಗಳನ್ನು ಕ್ರಮೇಣ ತಯಾರಿಸುತ್ತಿದ್ದರು. ಮೊದಲಿನ ಕಾಲವನ್ನು ಪುರಾತನ ಶಿಲಾಯುಗವೆಂದೂ, ಅನಂತರದ ಕಾಲವನ್ನು ನೂತನ ಶಿಲಾಯುಗವೆಂದೂ ವಿಭಾಗಿಸುತ್ತಾರೆ.

ದ್ರಾವಿಡರ ಕಾಲ

ಮೂಲ ಜನಾಂಗದ ಅನಂತರ ದ್ರಾವಿಡರು ಕಾಣಿಸಿಕೊಂಡು ಪ್ರಬಲರಾದರು ಇವರು ನಗರ ಯೋಜನೆಯಲ್ಲಿ ಮುಂದುವರಿದಿದ್ದರು. ಆರೋಗ್ಯ ನಿಯಮಗಳಲ್ಲಿ ಆಸಕ್ತಿಯುಳ್ಳವರಾಗಿದ್ದರು ಸೌಂದರ್ಯಾಭಿರುಚಿಯಿತ್ತು. ಲಿಪಿಗಳ ಜ್ಞಾನ ಇವರಲ್ಲಿತ್ತು. ಆದರೆ ಈ ಲಿಪಿಗಳನ್ನು ಈಗ ಓದಲಾಗ ವುದಿಲ್ಲ. ಗೋದಿ, ಬಾರ್ಲಿ, ಮೀನು, ಮಾಂಸ ಇವರ ಆಹಾರ ವಸ್ತುಗಳಾಗಿದ್ದುವು. ಹತ್ತಿ ಒಟ್ಟೆಯನ್ನು ನೇಯಲೂ ಅರಿತಿದ್ದರು. ಕ್ಷೌರ ಮಾಡಿಕೊಳ್ಳುತ್ತಿದ್ದರು. ದಂತ, ತಾಮ್ರ, ಚಿನ್ನ, ಚಿಪ್ಪುಗಳಿಂದ ಮಾಡಿದ ಬಳೆ, ತೋಳಿಕಟ್ಟು, ಹಾರ ಮೊದಲಾದ ಆಭರಣಗಳನ್ನು ಧರಿಸುತ್ತಿದ್ದರು ಇವರು ಅಂದವಾದ ಚಿತ್ರಗಳನ್ನು ಬರೆಯಲು ಅರಿತಿದ್ದರು ಮೀನು ಗಾಳಕ್ಕೆ, ಬೇಟೆ ಇವರ ಮುಖ್ಯ ವಿನೋದಗಳಾಗಿದ್ದುವು. ಕೃಷಿ ಮತ್ತು ವ್ಯಾಪಾರ ಮುಖ್ಯ ವೃತ್ತಿಗಳಾಗಿದ್ದುವು ಎತ್ತು ನಾಯಿ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದರು ಪಟ್ಟಣಗಳ ಆಡಳಿತೆಗೆ ಸಕ್ರಮವಾದ ಕ್ರಮಗಳನ್ನು ಕೈಗೊಂಡಿದ್ದರು.

ಆರ್ಯರ ಕಾಲ

ಮಧ್ಯ ಏಸ್ಯಾದಿಂದ ಭಾರತಕ್ಕೆ ಬಂದ ಆರ್ಯರು ದ್ರಾವಿಡರನ್ನು ಹಿಮ್ಮೆಟ್ಟಿಸಿ ಪ್ರಬಲರಾದರು. ವೇದಕಾಲದ ಆರ್ಯರ ಪ್ರಧಾನ ವೃತ್ತಿಯು ಕೃಷಿಯಾಗಿದ್ದಿತು. ಗೋದಿ, ಬಾರ್ಲಿಗಳನ್ನು ಬೆಳೆಸುತ್ತಿದ್ದರು. ಕುರಿ, ದನ, ನಾಯಿಗಳನ್ನು ಸಾಕಿ, ಅವುಗಳ ಉಪಯೋಗವನ್ನು ಪಡೆಯುತ್ತಿದ್ದರು. ಚಿನ್ನ, ಕಬ್ಬಿಣಗಳನ್ನು ಉಪಯೋಗಿಸಲು ಅರಿತಿದ್ದರು ರೊಟ್ಟಿ, ಹಾಲು, ತುಪ್ಪ, ಮಾಂಸಗಳು ಇವರ ಪ್ರಧಾನ ಆಹಾರಗಳಾಗಿದ್ದುವು. ಬೇಟೆ, ಜೂಜು, ರಥಸವಾರಿ, ವಾದ್ಯ ಬಾರಿಸುವುದು ಮತ್ತು ನೃತ್ಯಗಳು ಇವರ ವಿನೋದಗಳಾಗಿದ್ದುವು ಉಣ್ಣೆ ಮತ್ತು ಹತ್ತಿಬಟ್ಟೆಗಳನ್ನು ಧರಿಸುತ್ತಿದ್ದರು. ಕೂದಲುಗಳನ್ನು ಅಲಂಕರಿಸುತ್ತಿದ್ದರು

ಆರ್ಯರಲ್ಲಿ ಪೈತೃಕ ಸಮಾಜ ಪದ್ಧತಿಯು ಆಚರಣೆಯಲ್ಲಿತ್ತು. ಸ್ತ್ರೀಯರು ಸರ ನೈವಾಹಿಕ ಜೀವನವು ಪವಿತ್ರವೆಂದು ತಿಳಿಯಲಾಗುತ್ತಿತ್ತು ಹೆಂಗಸರ ಗಂಡಸಿಗೆ ವಿಧೇಯಳಾಗಿರಬೇಕಿತ್ತು ಹದಿನಾರು ಅಥವಾ ಹದಿನೇಳು, ಸ್ತ್ರೀಯರ ವಿವಾಹದ ಪ್ರಾಯವನ್ನಾಗಿ ಇರಿಸಿದ್ದರು. ಸ್ತ್ರೀಯರಿಗೆ ಉತ್ತಮ ವಿದ್ಯಾಭ್ಯಾಸ ದೊರೆಯುತ್ತಿತ್ತು. ಸತಿಸಹಗಮನ ಪದ್ಧತಿಯಿರಲಿಲ್ಲ. ನಿಯೋಗವು ಕೆಲವೊಮ್ಮೆ ಆಚರಿಸಲ್ಪಡುತ್ತಿತ್ತು

ವರ್ಣಾಶ್ರಮಗಳು ಆಚರಣೆಯಲ್ಲಿದ್ದು ಒಂದು ತರದ ಶ್ರಮವಿಭಾಗವಿತ್ತು. ಜಾತಿಗಳಲ್ಲಿ ಮೇಲು ಕೀಳುಗಳೆಂಬ ಭಾವನೆಯಿರಲಿಲ್ಲ. ಕಳವು, ಕೊಲೆ, ಭ್ರೂಣ ಹತ್ಯೆ ಮೊದಲಾದುವುಗಳು ಅಪರಾಧಗಳೆಂದು ಗಣಿಸಲ್ಪಡುತ್ತಿದ್ದುವು. ಸುವರ್ಣಸ್ತೇಯ, ಬ್ರಹ್ಮಹತ್ಯೆ ಮೊದಲಾದುವುಗಳಿಗೆ ಕಾದ ಕೊಡಲಿಯನ್ನು ಕೈಯಲ್ಲಿ ಹಿಡಿಸುವುದೇ ಮೊದಲಾದ ಶಿಕ್ಷೆಗಳೇಯಲ್ಪಡುತ್ತಿದ್ದುವು.

ಇತಿಹಾಸ ಕಾಲ

ದೇಶವು ಸಂಪತ್ಸಮೃದ್ಧವಾಗಿತ್ತು. ಜಾತಿ ನಿರ್ಬಂಧಗಳಿರಲಿಲ್ಲ. ಆದರೆ ಚತುರ್ವರ್ಣ್ಯಗಳು ಸರಿಯಾಗಿ ಆಚರಣೆಯಲ್ಲಿದ್ದುವು. ಜನರು ಕುಲಕ್ಕಿಂತಲೂ ಶೀಲವೇ ಪ್ರಧಾನವೆಂದು ತಿಳಿದಿದ್ದರು ಬ್ರಾಹ್ಮಣ ಕುಲೋತ್ಪನ್ನನಾದ ರಾವಣನು ದುಷ್ಟ ವರ್ತನೆಗಾಗಿ ಶಿಕ್ಷಿಸಲ್ಪಟ್ಟನು ಶೂದ್ರಜನಾದ ವಿದುರನು ಕೃಷ್ಣನಿಂದ ಪರಿಗ್ರಹಿಸಲ್ಪಟ್ಟನು.

ಸ್ತ್ರೀಯರಿಗೆ ವಿದ್ಯಾಭ್ಯಾಸವು ಕೊಡಲ್ಪಡುತ್ತಿದ್ದರೂ, ವೈದಿಕ ಕಾಲದ ಮಟ್ಟಿಗಿರಲಿಲ್ಲ ಬಾಲ್ಯ ವಿವಾಹವು ಆಚರಣೆಯಲ್ಲಿರಲಿಲ್ಲ ಸತಿಸಹಗಮನ ಪದ್ಧತಿಯು ಆಚರಣೆಯಲ್ಲಿತ್ತು ಆದರೆ ಅದು ಒತ್ತಾಯ ಪೂರ್ವಕವಾಗಿರಲಿಲ್ಲ ವಿಧವೆಯರು ಈಗಿನಂತೆ ಸಮಾಜದಲ್ಲಿ ಹೀನರೆಂದು ಗಣಿಸಲ್ಪಡುತ್ತಿರಲಿಲ್ಲ.

ಸಂಗಂ ಕಾಲ

ಸಂಗಂ ಕಾಲ (ಕ್ರಿ ಶ ಒಂದನೆಯ ಶತಮಾನದಿಂದ ಮೂರನೆಯ ಶತಮಾನದ ಮಧ್ಯಕಾಲ) ದ ಭಾರತದ ಜನಜೀವನ ಕ್ರಮವು ಕ್ರಿ ಶ ಮೂರನೆ ಶತಮಾನದಲ್ಲಿದ್ದ ಕಾಮಸೂತ್ರಗಾರನಾದ ವಾತ್ಸ್ಯಾಯನನಿಂದ ತಿಳಿದುಬರುತ್ತದೆ ಪರಕೀಯರ ಅಳ್ವಿಕೆಯೇ ಹೆಚ್ಚಾಗಿದ್ದ ಈ ಕಾಲದಲ್ಲಿಯುದ್ದ ಮತ್ತು ವರ್ಣ ಸಂಕರಗಳ ಪರಿಣಾಮವಾಗಿ ನೈತಿಕ ಮಟ್ಟವು ಕೆಳಗಿಳಿಯಿತು ಆದರೆ ಮಧ್ಯದೇಶ ಮತ್ತು ಪೂರ್ವ ಭಾಗತವು ನೈತಿಕ ಮಟ್ಟದಲ್ಲಿ ಮುಂದುವರಿದು ನೀತಿಯ ತವಸು ಮನೆಯಾಗಿತ್ತು. ಅಲ್ಲಿಯ ಜನರು ನೀತಿವಂತರಾಗಿದ್ದು ಶಿಷ್ಟರೆಂದು ಕರೆಯಲ್ಪಡುತ್ತಿದ್ದರು ಜಿಕ್ಕಿಯಾವ ಸ್ತ್ರೀಯರು ಬಹುಪತಿತ್ವವನ್ನಾಚರಿಸುತ್ತಿದ್ದು ಗಂಡಸರನ್ನು ಅಂತಃಪುರದ ಸ್ತ್ರೀಯರ ಮಟ್ಟಕ್ಕಿಳಿಸುತ್ತಿದ್ದರು ಸಿಂಧ್, ಕಾಥಿಯಾವಾಡ ಗುಜರಾತ್ ಮತ್ತು ಉತ್ತರ ಕೊಂಕಣ, ವಿದರ್ಭಗಳಲ್ಲಿ ಯೂ ರಾಜರ ಅಂತಃಪುರಗಳಲ್ಲಿಯೂ ಅತ್ಯಾಚಾರಗಳು ಪಡೆಯುತ್ತಿದ್ದುವು ದಾಕ್ಷಿಣಾತ್ಯರಲ್ಲಿ ಸೋದರ ಮಾವನ ಮಗಳನ್ನು ಮದುವೆಯಾಗುವ ಕ್ರಮವಿತ್ತು ಅಲ್ಲದೆ ತುಂಬು ಕರೆಯದ ಗಂಡನವರು ಚಿಕ್ಕ ಬಾಲೆಯರನ್ನು ಮದುವೆಯಾಗುತ್ತಿದ್ದರು.

ವಾತ್ಸ್ಯಾಯನನ ಕಲ್ಪನೆಯ ನಾಗರಿಕ ಆಧವಾ ಪೌರನು ಬಳಿಕ ಸುಸಂಸ್ಕೃತ ಮತ್ತು ಶೀಲವಿನ ನಾಗರಿಕನಾಗಿದ್ದನು. ಅವನು ವಾರದಲ್ಲಿ ಎರಡು ಸಲ ಕ್ಷೌರ ಮಾಡಿಕೊಳ್ಳುತ್ತಿದ್ದನು. ಸಾಹಿತ್ಯ ಮತ್ತು ಸೌಂದರ್ಯಾಭಿರುಚಿಯುಳ್ಳ ನಾಗರಿಕನು ವಿದ್ಯಾವಂತನಾಗಿದ್ದನು ವಿಹಾರ ಭವನಗಳಿದ್ದುವು ಆದರೆ ಅವನ ಪತ್ನಿಯು ಸ್ವಲ್ಪವೇ ವಿದ್ಯಾವಂತೆಯಾಗಿದ್ದಳಲ್ಲದೆ ಹೆಚ್ಚಿನ ಲೌಕಿಕ ಜ್ಞಾನವುಳ್ಳ ಆದರ್ಶ ಗೃಹಿಣಿಯಾಗಿದ್ದಳು ವಾತ್ಸ್ಯಾಯನನ ಕಾಮಸೂತ್ರದಿಂದ ಇದು ತಿಳಿಯುತ್ತದೆ.

ಗುಪ್ತಕಾಲ

ಕ್ಷಾತ್ರಪರೇ ಮೊದಲಾದ ಪರಕೀಯ ಜನಾಂಗಗಳು ಹಿಂದೂ ಮತವನ್ನು ಸೇರಿದ ಬಳಿಕ ಸಾಮಾಜಿಕ ಮನರ್ವ್ಯವಸ್ಥೆಯಾಯಿತು. ಜಾತಿ ನಿರ್ಬಂಧಗಳು ಹೆಚ್ಚಾಗಿ, ಬ್ರಾಹ್ಮಣರು ಸಮಾಜದ ಮುಖಂಡರೆಂದು ಪರಿಗ್ರಹಿಸಲ್ಪಟ್ಟರು. ಪುರಾಣಗಳು-ಮತ್ತು ಜಾತಿ ನಿರ್ಬಂಧಗಳನು ವಿಮರಿದವರಿಗೆ ನರಕದಲ್ಲಿ ದೊರೆಯುವ ಶಿಕ್ಷೆಗಳನ್ನು ಭಯಾನಕವಾಗಿ ಚಿತ್ರಿಸುವ ಕತೆಗಳು ಬರೆಯಲ್ಪಟ್ಟು ಜನರು ಜಾತಿ ಧರ್ಮಗಳನ್ನು ಮೀರದಂತೆ ಮಾಡಲು ಸಹಾಯಕವಾದುವು. ಎಲ್ಲ ಜಾತಿಯವರೂ ಅನುಸರಿಸುತ್ತಿದ್ದ ಅಹಿಂಸೆಯನ್ನು ನೋಡಿ ಫಾಹಿಯಾನನು ಆಶ್ಚರ್ಯಪಟ್ಟನು "ಯಾರೂ ಪ್ರಾಣಿ ಹಿಂಸೆಯನ್ನು ಮಾಡುವುದಿಲ್ಲ—ಮದ್ಯವನ್ನು ಸೇವಿಸುವುದಿಲ್ಲ—ಈರುಳ್ಳಿಯನ್ನು ತಿನ್ನುವುದಿಲ್ಲ ಕುರಿ ಕೋಳಿಗಳನ್ನು ಸಾಕುವುದಿಲ್ಲ—ಪಟ್ಟಣಗಳ ಹೊರಗೆ ವಾಸಿಸುವ ಚಂಡಾಲರು ಮಾತ್ರ ಬೇಟೆಯಾಡುತ್ತಾರೆ ಮಾಂಸವನ್ನು ತಿನ್ನುತ್ತಾರೆ." ಎಂದು ಅವನು ಬರೆಯುತ್ತಾನೆ.

ಸ್ತ್ರೀಯರ ಪಾತಿವ್ರತ್ಯವು ಈ ಕಾಲದಲ್ಲಿ ಸಂಪೂರ್ಣವಾಗಿ ಹೋಯಿತು ಗಂಡ—ಹೇಗೆ ಹಿಂಸಿಸಿದರೂ ಅವನನ್ನು ಪತ್ನಿಯು ಪೂಜಿಸಬೇಕಿತ್ತು. ಧ

(೧೦ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ರಾಮತೀರ್ಥ ಬ್ರಾಹ್ಮೀ ತೈಲ

ಪೈಶ್ಚಲ್ ನಂ ೧] [ಸೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ), ಮುಂಬಯಿ, ೧೪

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಲೇಖಕರು- ಎಸ್. ರಘುನಂದನ ರಾವ್, ತಲ್ಲೂರು)
ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು,
ಬೆಲೆ. ಐವತ್ತು ಮಾತ್ರ ಟಿ. ಪ ಪ್ರತ್ಯೇಕ
ನವಯುಗ ಪ್ರೆಸ್, ಉಡುಪಿ

ಪದವೀಧರರಿಗೆ ಅಧಿಕಾರಾವಕಾಶ—

ಲಂಡನಿನಲ್ಲಿ ಸನದಿನ ಶತಮಾನೋತ್ಸವ

ಇಂಗ್ಲೆಂಡಿನ ರಾಜಧಾನಿ ಲಂಡನ್ನಿನ ವಿಶ್ವವಿದ್ಯಾನಿಲಯದ ಕುಲಪತ್ನಿಯರಾಗಿರುವ ಬ್ರಿಟಿಷ ಚಕ್ರವರ್ತಿನಿ ರಾಣಿ ಎಲಿಜಬೆತರು.

ಲಂಡನ್ ಬ್ರಿಟಿಷ ದ್ವೀಪಗಳ ರಾಜಧಾನಿಯಾಗಿದ್ದರೂ ಆಕ್ಸ್‌ಫರ್ಡ ಮತ್ತು ಕೇಂಬ್ರಿಜ್‌ಗಳೆಂಬ ಹಳೆಯ ವಿಶ್ವವಿದ್ಯಾಲಯಗಳಿದ್ದರೂ ಸ್ವತಃ ಲಂಡನದಲ್ಲಿ ಒಂದು ವಿಶ್ವವಿದ್ಯಾಲಯವಿರಲಿಲ್ಲ. ಮಧ್ಯಕಾಲದಲ್ಲಿ ಲಂಡನ್ನ ನಗರದಲ್ಲಿ ಕೆಲವಾರು ಶಿಕ್ಷಣಾಲಯಗಳಿದ್ದುವು. ಅವುಗಳೆಲ್ಲವೂ ಕೆಲಮಟ್ಟಿಗೆ ಒಂದರೊಡನೆಯೊಂದು ಹೊಂದಿಕೊಂಡಿದ್ದರೂ ಏಕತ್ರಿತವಾಗುವಷ್ಟು ಬೆಳೆದು ಬರಲಿಲ್ಲ.

೧೮೨೭ರಲ್ಲಿ ಈ ದಿಸೆಯಲ್ಲೊಂದು ಮಹತ್ವದ ಪ್ರಯತ್ನ ಮಾಡಲಾಯಿತು. ಈ ವರ್ಷ ೧೬೦ ಸಾವಿರ ಪವನುಗಳ ನಿಧಿಯನ್ನು ಸಂಗ್ರಹಿಸಿ ಗೋವರ ಬೀದಿಯಲ್ಲಿ ಒಂದು ನೂತನ ಭವನ ನಿರ್ಮಾಣಕ್ಕಾಗಿ ಅಡಿಗಲ್ಲನ್ನು ಹಾಕಲಾಯಿತು. ಲಂಡನ ವಿಶ್ವವಿದ್ಯಾನಿಲಯದ ಪ್ರಮುಖಾಂಗವಾದ ವಿಶ್ವವಿದ್ಯಾನಿಲಯದ ತೈಕ್ಷಣಿಕ ಸಂಸ್ಥೆಯಾದ ವಿಶ್ವವಿದ್ಯಾನಿಲಯ ಕಾಲೇಜು ಈಗ ಇಲ್ಲಿ ನಡೆಯುತ್ತಿದೆ. ಕೆಲವರ್ಷಾನಂತರ ಕಿಂಗ್ಸ್ ಕಾಲೇಜ್ ಎಂಬ ಹೆಸರಿನ ಇನ್ನೊಂದು ಪ್ರಖ್ಯಾತ ಶಾಲೆಯು ಸ್ಟ್ರಾಂಡಿನ ವರಾಂಡದಲ್ಲಿ ಕಟ್ಟಲ್ಪಟ್ಟಿತು ೧೮೩೭ರಲ್ಲಿ ನಾಲ್ವನೆಯ ವಿಲಿಯಮನು ಇದನ್ನು ಪದವೀದಾನವಾಡುವ ಅಧಿಕಾರವಿರುವ ವಿಶ್ವವಿದ್ಯಾಲಯವೆಂದು ಮನ್ನಿಸುವ ಸನದನ್ನು ಮಾಡಿದನಲ್ಲದೆ ಮರುವರ್ಷವೇ ರಾಣಿ ವಿಕ್ಟೋರಿಯಾಳು ಇದನ್ನು ಮನ್ನಿಸಿದಳು.

೧೮೫೮ರಲ್ಲಿ ವಿಶ್ವವಿದ್ಯಾನಿಲಯದ ಘಟನೆಯಲ್ಲಿ ತನ್ನ ಪದವೀಧರರಿಗೆ ಅವಕಾಶವನ್ನು ಕೊಡುವ ಸನದೊಂದು ದಯವಾಲಿಸಲ್ಪಟ್ಟಿತು.

ಪದವಿ ತರಗತಿಗಳಿಗೆ ಮಹಿಳಾ ಅಭ್ಯರ್ಥಿನಿಗಳಿಗೆ ಪ್ರವೇಶಕೊಟ್ಟ ಸಂಯುಕ್ತ ರಾಜ್ಯಗಳ ತೈಕ್ಷಣಿಕ ಸಂಸ್ಥೆಗಳಲ್ಲಿ ಲಂಡನ್ ವಿಶ್ವವಿದ್ಯಾಲಯವು ಮೊತ್ತಮೊದಲನೆಯದಾಗಿದೆ. ೧೮೭೭ರಷ್ಟು ಶೀಘ್ರದಲ್ಲಿಯೇ ಮಹಿಳಾ ಉಮೇದ್ವಾರರಿಗಾಗಿ ಒಂದು ವಿಶೇಷ ಪರೀಕ್ಷೆಯನ್ನು ನಡೆಸಲಾಯಿತು. ಮತ್ತು ಹನ್ನೊಂದು ವರ್ಷಗಳನಂತರ, ಪುರುಷರು ಹಾಗೂ ಸ್ತ್ರೀಯರು ಪದವಿ, ಗೌರವ ಮತ್ತು ಪಾರಿತೋಷಕಗಳಿಗೆ ಸಮಾನ ನಿಯಮಾವಳಿಗಳ ಮೇರೆಗೆ ಸ್ಪರ್ಧಿಸಬಹುದಾಯಿತು.

ಲಂಡನ್ ವಿಶ್ವವಿದ್ಯಾನಿಲಯವು ಆಕ್ಸ್‌ಫರ್ಡ ಮತ್ತು ಕೇಂಬ್ರಿಜ್‌ಗಳಿಗಿಂತ ಭಿನ್ನವಾಗಿದ್ದು ಇದು ಸ್ವತಂತ್ರವಾಗಿ ಕಾರ್ಯಪ್ರವೃತ್ತವಾಗುವ ಅನೇಕತೈಕ್ಷಣಿಕಸಂಸ್ಥೆಗಳ ಸಂಯೋಜಕ ಸಂಘವಾಗಿದೆ. ಆದರೆ ಇವೆಲ್ಲವುಗಳಿಗೂ ವಿಶ್ವವಿದ್ಯಾನಿಲಯವು ಪ್ರಧಾನಾಧಿಕಾರಿಯಾಗಿರುವುದು. ಈಗ ಸುಮಾರು ೪೦ ಇಂತಹ ಅಧೀನ ಸಂಸ್ಥೆ ಶಾಲೆಗಳಿರುತ್ತವೆ. ಇವುಗಳಲ್ಲಿ ೧೨ ವೈದ್ಯಕೀಯ ಶಾಲೆ ಅಥವಾ ಕಾಲೇಜುಗಳು ಕಿಂಗ್ಸ್‌ಕಾಲೇಜು, ವಿಶ್ವವಿದ್ಯಾನಿಲಯ-ದಂತೆಯೇ ಪ್ರಸಿದ್ಧವಾದ ಸಂಸ್ಥೆಗಳು. ಹೊರತೋವೇ ಮತ್ತು ಬೆಡ್‌ಫೋರ್ಡ್‌ಗಳ ಮಹಿಳಾ ಕಾಲೇಜುಗಳು, ಇಂಪೀರಿಯಲ್ ಕಾಲೇಜು ಮತ್ತು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ಗಳು ಸೇರಿಕೊಂಡಿವೆ.

ಲಂಡನ್ ವಿಶ್ವವಿದ್ಯಾನಿಲಯದ್ದು ಸೇರಿಕೆಯಾದ ಸ್ಕೂಲ್ ಆಫ್ ಇಕನಾಮಿಕ್ಸ್ ಮತ್ತು ರಾಜಕೀಯ ವಿಜ್ಞಾನದಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳು ಉಪಾಹಾರ ತೆಗೆದುಕೊಳ್ಳುವುದರಲ್ಲಿ ನಿರತರಾಗಿರುವುದನ್ನು ಕಾಣಬಹುದು

ವಿಶ್ವವಿದ್ಯಾನಿಲಯದ ವರಿಷ್ಠ ಆಡಳಿತ ಮಂಡಳವು ಕುಲಪತಿ, ಉಪಕುಲಪತಿ, ಘಟಕೋತ್ಸವಾಧ್ಯಕ್ಷ, ಪ್ರಿನ್ಸಿಪಲ್ ಮತ್ತಿತರರಿಂದ ಕೂಡಿದ ಸಿನೇಟು ಆಗಿದೆ. ಸಿನೇಟು ಭವನವು ಆಡಳಿತೆಯ ಮತ್ತು ಆರ್ಥಿಕ ವಿಷಯದ ಕೇಂದ್ರ. ಕಾರ್ಯಾಲಯವಾಗಿದ್ದು ಲಂಡನ್ನಿನ ಪ್ರೌಢ್ಯಾಲಯ ಆಧುನಿಕ ಆದರ್ಶಮಂದಿರಗಳಲ್ಲಿಒಂದಾಗಿದೆ.

ಸಂಪೂರ್ಣಾವಧಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ದಟ್ಟಣಿಸಿದೆ ಇತ್ತೀಚಿನ ವರ್ಷಗಳಲ್ಲಿ ಸರಾಸರಿ ಇಪ್ಪತ್ತು ಸಾವಿರ ವಿದ್ಯಾರ್ಥಿಗಳಿದ್ದು ಅವರಲ್ಲಿ ಕಾಲಂಶಕ್ಕಿಂತಲೂ ಹೆಚ್ಚು ಮಹಿಳೆಯರಿದ್ದಾರೆ. ಬ್ರಿಟನ್ ಹೊರತಾದ ಅನ್ಯದೇಶಗಳಿಂದ, ಎಂದರೆ ಜಗತ್ತಿನ ಸುಮಾರು ೭೦ ರಾಷ್ಟ್ರಗಳ ವಿದ್ಯಾರ್ಥಿಗಳು ಇಲ್ಲಿ ಕಲಿಯುತಿದ್ದು ಇಂತಹ ಸಂಖ್ಯೆಯು ಒಟ್ಟು ಸಂಖ್ಯೆಯಲ್ಲಿ ಸೇಕಡಾ ಇಪ್ಪತ್ತೈದಿದೆ. ಈಗ ಇಲ್ಲಿರುವ ಅನ್ಯದೇಶ್ಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಭಾರತ ಮತ್ತು ಪಾಕಿಸ್ತಾನದವರಿದ್ದಾರೆ.

೧೯೫೮ನೆ ಮೇ ೧೫ಕ್ಕೆ ಪದವೀಧರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಘಟನೆಯಲ್ಲಿ ಅವಕಾಶವನ್ನೀಯುವ ಸನದನ್ನು ಪಡೆದು ೧೦೦ ವರ್ಷಗಳಾದುವು. ಈ ಶತಮಾನೋತ್ಸವವನ್ನು ವಿಜೃಂಭಣೆಯಿಂದ ರಾಣಿಯಾತೆ ರಾಣಿ ಎಲಿಜಬೆತರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಮಹಾರಾಣಿಯವರು ವಿಶ್ವವಿದ್ಯಾನಿಲಯ "ಕುಲಪತ್ನಿ"ಯರಿರುವರು.



ಮೇ ೧೫ರಂದು ಲಂಡನ್ ವಿಶ್ವವಿದ್ಯಾನಿಲಯದ ವಿಶೇಷ ಘಟಕೋತ್ಸವ ಹಾಗೂ ಪದವೀಧರರಿಗೆ ವಿಶ್ವವಿದ್ಯಾನಿಲಯದ ಘಟನೆಯಲ್ಲಿ ಅವಕಾಶವೀಯುವ ಸನದಿನ ಶತಮಾನೋತ್ಸವಗಳು ನಡೆದುವು ವಿಶ್ವವಿದ್ಯಾನಿಲಯದ ಸಿನೇಟ್ ಭವನದ ಚಿತ್ರವಿದು. ಈ ಭವನವು ೧೯೩೭ರಲ್ಲಿ ಪೂರ್ಣಗೊಂಡಿತು.

ಓದಿ ನಗಬಹುದು!

ಅಧ್ಯಾಪಕ—(ತಡವಾಗಿ ಬಂದ ಸುರೇಶನೊಡನೆ) ಇಂದು ಶಾಲೆಗೆ ಬರುವಾಗ ಏನು ತಡವಾಯಿತು?

ಸುರೇಶ— ಸರ್, ಸೆಕೆಗಾಲದಲ್ಲಿ ವಸ್ತುಗಳು ಹಿಗ್ಗುತ್ತವೆ ಎಂದು ತಾವು ವಿಜ್ಞಾನ ಪಾಠದಲ್ಲಿ ಕಲಿಸಿರುತ್ತೀರಿ. ಇಂದು ಆದರ ಅನುಭವವಾಯಿತು.

ಅಧ್ಯಾಪಕ—ಹೇಗೆ? ಎಸ್ಲಿ?

ಸುರೇಶ—ನಾನು ಶಾಲೆಗೆ ಮನೆಯಿಂದ ಬರುತ್ತ ಇರುವಾಗ ಮಾರ್ಗವು ಉದ್ದವಾಗುತ್ತ ಬಂತು. ಆದುದರಿಂದ, ಶಾಲೆಗೆ ಮುಟ್ಟುವಾಗ, ಸ್ವಲ್ಪ ತಡವಾಯಿತು

ನಿಮ್ಮ ಹಣದ ಸುರಕ್ಷಿತತೆ ಮತ್ತು ಭದ್ರತೆಗಳಲ್ಲಿ ನಿಮ್ಮ ಮನೆಗಿಂತಲೂ ಮಿಗಿಲಾಗಿ, ಯಾವ ಮನೆಯಲ್ಲೂ ಎಂದೂ ಇರದ ಹೆಚ್ಚಿನ ಸೌಲಭ್ಯವಾದ ಬಡ್ಡಿ ಸಂಪಾದನೆಯನ್ನು ನಿಮ್ಮ ಹಣವು ಮಾಡಿ ಅದು ಸತತ ವೃದ್ಧಿಗೊಳ್ಳಲು ಸಹಕರಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

52 ವರುಷಗಳಿಗೂ ಮೀರಿದ ಬೇಂಕು ಅನುಭವವೂ, ಒಟ್ಟು 53 ಶಾಖೆಗಳೂ, ದೇಶದಾದ್ಯಂತ ವಿಜನ್ಸಿ ವಿಸ್ತಾರುಗಳೂ ನಮ್ಮ ಬೇಂಕಿಗಿವೆ.

ಜೀವನದಲ್ಲಿ ಸ್ವಾರಸ್ಯವೇ ಇಲ್ಲವೆನ್ನುತ್ತೀರಾ?

ನಿಮ್ಮ ಜೀವನವನ್ನು ನೀವೇ ರೂಪಿಸುತ್ತಿದ್ದೀರಿ!

ಶ್ರೀ ಎಸ್ ಗೋಪೀಚಂದರಾವ್, ವಿದ್ವಾನ್, ವಿಶಾರದ

ಜನರು ತಮ್ಮ ಅಸಫಲತೆಗೆ ತಮ್ಮನ್ನೇ ದೂಷಿಕೊಳ್ಳುತ್ತಿದ್ದ ಕಾಲವೊಂದಿದ್ದರೂ ಇಂದು ಮಾತ್ರ ಸಾಧಾರಣವಾಗಿ ತಮ್ಮ ಹತ್ತವರನ್ನೋ ರಕ್ಷಕರನ್ನೋ ಅದ್ಭುತ ಕಾರಣರೆಂದು ದೂರುವ ಸ್ವಭಾವ ಬೆಳೆಯುತ್ತಿದೆ ಅಲಸ್ಯದಿಂದ ಹಿಡಿದು ತಮ್ಮದ ನಗಡತೆಗಳವರೆಗೂ ಇಂತಹ ಹಿರಿಯರೇ ಕಾರಣರಾಗಿ ಪರಿಣಮಿಸಿದ್ದಾರೆ ದುಂದುವೆಚ್ಚ ಮಾಡುವವರು ತಮ್ಮ ಹೆತ್ತವರು ತಮಗೆ ಉಳಿತಾಯದ ಬಗ್ಗೆ ಕಲಿಸಿ ಕೊಡಲಿಲ್ಲವೆಂದು ಆರೋಪಿಸುವರು ಇಷ್ಟೇ ಅಲ್ಲದೆ, ಹೀಗೆ ಹೇಳತ್ತ ತಮ್ಮ ಅಧ್ಯಾಸವನ್ನು ಮತ್ತಷ್ಟು ಹೆಚ್ಚುಮಾಡುತ್ತಾರೆ. ಆತ್ಮವಿಶ್ವಾಸದ ಅಭಾವದಿಂದ ನರಳುವವರೂ ತಮ್ಮ ತಂದೆತಾಯಿಗಳು ಬಾಲ್ಯದಲ್ಲಿ ಸ್ವತಂತ್ರವಾಗಿ ವಿಚಾರಿಸುವ ಅವಸರವನ್ನೇ ಕಲ್ಪಿಸಲಿಲ್ಲವೆಂದು ಅದುತ್ತಾರೆ

ತಮ್ಮ ವೇಶಭೂಷಣ ಮತ್ತು ಸೌಂದರ್ಯ ಹೀನತೆಗಾಗಿ ಪರಿಸ್ಥಿತಿಗಳನ್ನಾಗಲೀ ಪ್ರಕೃತಿಯನ್ನಾಗಲೀ ದೂಷಿಸದೆ ಅದರ ತಪ್ಪನ್ನು ತಮ್ಮ ಮಾತಾಪಿತರ ತಲೆಯ ಮೇಲೆ ಹೊರಿಸುವ ಮೇಧಾವೀ ಮಹಿಳೆಯರಿದ್ದಾರೆ ಈ ರೀತಿ ಅಡಿಕೂಳ್ಳುತ್ತಿದ್ದ ಒಬ್ಬಾಕೆಯು 'ನನ್ನ ತಾಯಿಯು ನಾನು ಎಳೆಯಳಿರುವಾಗ, ನಾನು ಹೇಗಿದ್ದರೂ ಸುಂದರಿಯಲ್ಲ ಎನ್ನುತಿದ್ದಳೆಂದು ಹೇಳುತ್ತಾಳೆ ಈ ಮಾತು ಆಕೆಯ ಮೆದುಳಿನಲ್ಲಿ ಘನಸ್ಪರ್ಧಾವನ್ನು ಬೀರಿ, ಆಕೆ ಇಂದಿಗೂ ತನ್ನನ್ನು ಅಸುಂದರಿ ಎಂದು ಬಗೆಯುತ್ತಾಳೆ ಕೇವಲ ಇಷ್ಟೇ ಅದರೆ ಚಿಂತೆಯಿರಲಿಲ್ಲ ಅದರೆ, ಈ ಮಹಿಳೆ ತನ್ನ ಕಲ್ಪನೆಯಿಂದಾಗಿಯೇ ಇಂದಿಗೂ ಬಟ್ಟೆ ಉಡುವುದರಲ್ಲಾಗಲೀ ವಿಶೇಷಾಸಕ್ತಿಯನ್ನು ವಹಿಸುತ್ತಿಲ್ಲ!

ಬಾಲಕರು ಬಹಳ ಭಾವುಕರಾಗಿರುವುದು ಇಂದು ಅತ್ಯಂತ ಪ್ರಚಲಿತವಾಗಿದೆ, ಅವರ ಸಂಪೂರ್ಣ ಜೀವನವನ್ನು ರೂಪಿಸುವ ಅಥವಾ ಕೆಡಹುವ ಕಾರ್ಯವನ್ನು ಈ ಸಮಯದಲ್ಲಿ ಮಾಡಬಹುದಾಗಿದೆ ಪ್ರತಿ ವರ್ಗವೂ ಮನೋವೈಜ್ಞಾನಿಕ ಹಾಗೂ ಶಾರೀರಿಕ ರೂಪಗಳಲ್ಲಿ ಶಕ್ತವಿರುತ್ತದೆ ನಮ್ಮ ಶರೀರದಲ್ಲಿ ಕೀಟಾಣುಗಳು ಸಂಘರ್ಷ ನಡೆಸುವಂತೆಯೇ ಬಾಲಕರ ಮನಸ್ಸಿನಲ್ಲಿ ಮಾತಾಪಿತರ ದುರ್ವ್ಯವಹಾರವು ವಿದ್ರೋಹವನ್ನೆಬ್ಬಿಸುತ್ತದೆ.

ಅದರೆ, ಇತಿಹಾಸದ ಉದಾಹರಣೆಗಳು ಇದಕ್ಕೆ ವ್ಯತಿರೇಕವಾಗಿದ ಕೆಲವಾರು ಮಹಾಪುರುಷರು ಬಾಲ್ಯಕಾಲದಲ್ಲಿ ಯಾವುದೇ ಸುಖವನ್ನು ಪಡೆಯದಿದ್ದರೂ ತಂದೆತಾಯಿಗಳ ಪ್ರೇಮಕ್ಕೆ ಪಾತ್ರರಾಗದಿದ್ದರೂ ತಮ್ಮ ಬುದ್ಧಿಶಕ್ತಿಯಿಂದಲೇ ಸಾಫಲ್ಯ ಮತ್ತು ಸುಖವನ್ನು ಹೊಂದಿದುದು ಮಾತ್ರವಲ್ಲ ಬೇರೆಯವರಿಗೂ ಮಾರ್ಗದರ್ಶನ ಮಾಡಿದ ಸಂದರ್ಭಗಳು ಅನೇಕವಿವೆ ಸಿ ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಜಾನ್ ಸ್ಟ್ಯೂವರ್ಟ್‌ಮಿಲ್‌ರು ಬಾಲ್ಯದಲ್ಲಿ ತಮ್ಮ ಹೆತ್ತವರಿಂದ ಮೂರ್ಖನೆಂಬ ಉಗ್ರನಾಮವನ್ನು ಪಡೆದಿದ್ದರೂ ಮುಂದೆ ಪ್ರತಿಭಾಶಾಲಿ ವಿಚಾರಕರಾದರು ತಮ್ಮ ಅರ್ಥಶಾಸ್ತ್ರದ ಸಿದ್ಧಾಂತಗಳು ಇಂದು ವಿಶ್ವವಿಡಿ ಪ್ರಸಿದ್ಧವಾಗಿವೆ ಫ್ಲಾರೆನ್ಸ್ ನೈಟಿಂಗೇಲಳಿಗೂ ಇದೇ ಪರಿಸ್ಥಿತಿಯೊದಗಿತ್ತು ಮಾನವರ ಸೇವೆ ಮಾಡುವುದಕ್ಕೆ ಆಕೆ ಮುಂದಿರುವಾಗ ಆಕೆಯ ಮಾತಾಪಿತರು ಅಕಾಲದ ವಿಕ್ಟೋರಿಯನ್ ಸಮಾಜದಂತೆಯೇ ಆಕೆಯನ್ನು ತಿರಸ್ಕರಿಸಿ ಬಹಿಷ್ಕರಿಸಿದರು ಆದರೆ ಮಾನವತೆಯ ಸೇವಾಕಾಂಕ್ಷಿಯಾಗಿ ಹಗಲಿರುಳು ಪರಿಶ್ರಮಿಸಿದ ಈಕೆ ದೀಪದ ಮಹಿಳೆ ಎಂಬ ಕೀರ್ತಿವಂತೆಯಾಗಿ ಪರಿಣಮಿಸಿದಳು ಆಕೆಯ ಹೆತ್ತವರೂ ಅಮರರಾದರು ಆದರೆ, ಅವರು ಕೀರ್ತಿ ಪಡೆಯಲು ಸ್ವಮಂಶಕ್ತರಾಗಲಿಲ್ಲ, ಬದಲು ಸೇವೆಗೆ ಸೊಂಟಕಟ್ಟಿದಾಗ ತಾವು ತಡೆದ, ತಿರಸ್ಕರಿಸಿದ ತಮ್ಮ ಮಕ್ಕಳಿಂದಾಗಿಯೇ ಅವರ ಹೆಸರು ಆ ಚಂದ್ರಾರ್ಕಸ್ಥಾಯಿಯಾಯಿತು

ಹೀಗೆ ಸಾಮಾನ್ಯ ಜನರಲ್ಲಿ ಮನೋವೈಜ್ಞಾನಿಕ ಪ್ರತಿರೋಧಕ್ಕೆ ವಿರುದ್ಧವಾಗಿಯೇ ತಮ್ಮ ಜೀವನ ಸಿದ್ಧಿಸಿಕೊಳ್ಳುವ ಶಕ್ತಿಯಿರುತ್ತದೆ ಕೆಲವರಿಗೆ ತಮ್ಮ ತಾಯ್ತಂದೆಗಳ ಅನ್ಯಾಯಾಚಾರವು ಜೀವನದಲ್ಲಿ ಮುಂದುವಡಿಯಿಡಲು ಆತಂಕವನೂಡ್ಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ ಆದರೂ ಹೀಗಿರುವ ಬಾಲಕರು ತಮ್ಮ ದಿನೆಯನ್ನು ಬದಲಿಸುವುದು ಸಾಧ್ಯವಿಲ್ಲವೇ ಎಂಬುದು ವಿಚಾರಣೀಯಾಂಶವಾಗಿದೆ ವನ ನ್ಯಸನು ಬಯಸುವಾಗ ಎಲ್ಲ ಪರಿಸ್ಥಿತಿಯಲ್ಲಿಯೂ ಅದರ ಲಾಭವನ್ನು ಅಧಿಕಾಧಿಕವಾಗಿ ಪಡೆಯುವುದು ಅಗತ್ಯ ಎನ್ನುವ ಮನೆಯ ಸಮೀಪದಲ್ಲಿ ಜೀವನದ ಸಂಪೂರ್ಣ ಹತಾಶನಾದ ಒಬ್ಬ ಮನುಷ್ಯನಿದ್ದನು ಆತನೊಂದುದಿನ ಒಂದು ವರ್ತಮಾನ ಪತ್ರಿಕೆಯಲ್ಲಿ ಅನ್ಯ ಹೆತ್ತವರು ಆತ್ಮಹತ್ಯೆಮಾಡಿಕೊಂಡ ಸಮಾಚಾರವನ್ನು ಓದಿ ಅದನ್ನು ಕತ್ತರಿಸಿಟ್ಟುಕೊಂಡನು ಆ ತುಂಡನ್ನು ಸದಾ ಕಾಲವೂ ಆತನು ತನ್ನೊಂದಿಗೆ ಹಿಡಿದುಕೊಂಡೇ ತಿರುಗಾಡುತ್ತಿದ್ದನ ಆತನಿಗ ಜೀವನದಲ್ಲಿ ವೈರಾಗ್ಯವುತ್ಪನ್ನವಾಗಲು, ನಿಂತಿಯ ಕಾರ್ಯೋಗಡಗಳು ಕಮಿಯಲು, ಅವನ ಹೆತ್ತವರ ಚಿರಸ್ಮರಣೆಯು ಕಾರಣವಾಗದೇ ಆ ಪಟ್ಟಣಿಯನ್ನ ಒಂದು ವಿಶಿಷ್ಟ ರೀತಿಯಲ್ಲಿ ನೋಡತ್ತಿರುವುದೇ ಕಾರಣವಂದು ತಿಳಿಯುತ್ತದೆ"ಎಂದೂಬ್ಬಡಾಕ್ಟರರು ಹೇಳುತ್ತಾರೆ

ಯಾವುದಾದರೊಂದು ಆಕಸ್ಮಿಕ ದುರ್ಘಟನೆ ಒಂದರಿಂದಾಗಿಯೇ ಮನುಷ್ಯದಲ್ಲಿ ಅಸ್ವಾಸ್ಥ್ಯವು ಹುಟ್ಟುವುದೆಂಬುದ ಬಗಯಿರುವುದಾದರೂ ಇದೊಂದು ಸತ್ಯ ಸಂಗತಿಯಲ್ಲ ದುರ್ಘಟನಾಗ್ರಸ್ತ ವ್ಯಕ್ತಿಯ ದೃಷ್ಟಿಕೋಣದಲ್ಲಿಯೇ ಅದನ ಪ್ರಭಾವವು ಅಧಾರಿತವಾಗಿದೆ ಆತನ ಮನಸ್ಸಿನದಲ್ಲಿ ಒಂದು ವಿಶೇಷ ಪ್ರಕಾರದ ಭಾವನೆಯ ಮೊದಲೇ ಇದ್ದಿದ್ದರೆ, ಅದು ಆ ದುರ್ಘಟನೆಯ ಕಾರಣದಿಂದಾಗಿ ಒಂದೇ ಬಾರಿ ಎದ್ದು ಹೋರುವುದಲ್ಲದೇ, ತನ್ನಯಾಸವಾಗಿ ಕಾಣಿಸಲಾರದು. ಬಾಲ್ಯ ಕಾಲದ ಪರಿಸ್ಥಿತಿಗಳು ಮಾನವ ಜೀವನದ ಮೇಲೆ ಸದೈವ ಪ್ರಭಾವ ಬೀರುತ್ತವೆಯೆಂಬ ಸಿದ್ಧಾಂತ ಪಕ್ಷದಲ್ಲಿ ನಾವೆಲ್ಲರೂ ಪ್ರಾಯಃ ಒಂದಲ್ಲ ಒಂದು ಮಾನಸಿಕ ರೋಗಕ್ಕೆ ಪ್ರತ್ಯಾಗಿರಲೇಬೇಕು ಸತ್ಯಸಂಗತಿಯೇನಂದರೆ, ಮನುಷ್ಯನ ಪ್ರಯತ್ನ ಏರುತ್ತ ಹೋದಂತೆ ಆತನು ತನ್ನ ಬಾಲ್ಯದ ಅನುಭವಗಳಿಂದ ದೂರವಾಗುತ್ತ ಬಂದ ವೇಲೇರುತ್ತಿರುತ್ತಾನೆ

ಮಾನಸಿಕರೂಪದಿಂದ ಅವಿಕಲಂಶ ಬಾಲಕರು ಮಾತಾಪಿತರ ವಿಚಿತ್ರ ವ್ಯವಹಾರದ ಉಚಿತ ಪ್ರತ್ಯುತ್ತರವನ್ನು ಕೊಟ್ಟುಬಿಡತ್ತಾರೆ ಅವರ ಮೇಲೆ ಬಲಾತ್ಕಾರ ಇಲ್ಲದೆ ಭೇದೋಪಾಯಗಳಿಂದ ಒಂದು ವಿಷಯವನ್ನು ಹೊರಿಸಿದಲ್ಲಿ ಅದರ ಪ್ರತಿಕಾರವನ್ನ ಹಿಂದಿಲ್ಲೊಂದು ರೂಪದಿಂದ ಆತ್ಯವಾಗಿ ಅವರ ಮೂಡಿಯೇ ತೀರುತ್ತಾರೆ ಬಾಲಿಷಪ್ರಾಯದಲ್ಲಿ ಒಂದು ಅನುಭವವೇ ಮನುಷ್ಯ ಜೀವನ ಪ್ರವಾಹವನ್ನ ಯಾವುದಾದರೊಂದು ದಿಕ್ಕಿಗೆ ತಿರುಗಿಸುವುದಕ್ಕೆ ಸಮರ್ಥವಾಗುವುದು. ಒಬ್ಬರದ ಒಂದು ಅನುಭವವೇ ಮನುಷ್ಯನನ್ನು ಜೀವನ ಪರ್ಯಂತ ವಿಶೇಷ ರೀತಿಯಲ್ಲಿ ನಡೆಸುವುದಕ್ಕೆ ಸಮರ್ಥವಾಗುತ್ತದೆ ಎನ್ನುವುದು ಒಂದು ನಿರ್ದರ್ಶಕವಾಗಿದೆ ವಿಮರ್ಶಕನ ಗುಣದ ಕೈ ಮಾಡುವ ಬೀದಿಯಿಕ ರಿಯಂತಿದ್ದವನೆ ಬ್ಬಮಹಾಂದಕ್ಕೆ ಅತ್ಯುತ್ತಮ ರೀತಿಯಲ್ಲಿ ಗೃಹಸ್ಥನಾಗಿ ಮಹಾನ್ಮರಿಯ ಜೀವನವನ್ನು ಬಾಳುವುದನ್ನು ನಾವು ಕಾಣಬಹುದು ಹಾಗಾಯ್ ಘಟನೆ ಮೇಲೆಯೂ ಆಧಿಕಾರದಿಕ ಸ್ವಾತಂತ್ರ್ಯವನ್ನು ಒಯಸುತ್ತಿರ ವದು ವತೆಯ ತಾನೆ ತಾಯಿಯಾದ ವೇಳ ಬಾಲ್ಯಾಡಂಬರಗಳನ್ನ ಮರೆತು ಬಿಟ್ಟ ಉದಾಹರಣೆಗಳವೆ

ಇತ್ತೀಚೆಗಿನ ವರೆಗೆ ಮಕ್ಕಳೆಂದರೆ ಒಂದು ಸಮಸ್ಯ ಎಂಬ ವಿಚಾರದಾರಯಿತ್ತು ಆದರೆ, ಈಗಿಗ ಈ ಬಗೆಯ ಒಗೆ ಹರಿಸಲ್ಪಟ್ಟ ಒಂದು ಕೊಷ ದೃಷ್ಟಿಯೇ ಎದ್ದು ಕೋರುವ ಲಕ್ಷಣಗಳು ಮಾಯವಾಗುತ್ತಿವೆ—ತಾಯ್ತಂದೆಯರೇ ಒಂದು ಸಮಸ್ಯೆಯಲ್ಲವೆ? ಆದರೆ ಒಂದು ಕೈ ಬಡಿದರೆ ಸದ್ದಾಗುವುದಿಲ್ಲ ಹೆಂಡಯು ಹೆಡಗನ ಮೇಲೆ ಬಲಾತ್ಕಾರವನ್ನು ಹೇರಿದರು, ಆತನು ಮಗುವಿನಿಂದ ಮಾಡಲ್ಪಟ್ಟ ಒಂದು ವಿಶೇಷ ವ್ಯವಹಾರದಿಂದಾಗಿಯೇ ಹಾಗೆ ಮಾಡುತಿದ್ದಾನೆಂದು ಹೇಳಬಹುದು ಪತ್ರ ಪುತ್ರಿಯರು ಮೊಡ್ಡಪರಾಧವೇನೆಯೂ ತಂದೆ ತಾಯಂದಿರ ತಮ್ಮ ಬಾಲಕರನ್ನು ಪಕ್ಷಕ್ಕೆಂದು ತಿಳಿದುಕೊಂಡೇ ವ್ಯವಹರಿಸುತ್ತಿರುವುದರ ಅವರು ಮಕ್ಕಳ ಸಂರಕ್ಷಣೆಯ ಭಾವನೆಯಿಂದ ಈ ರೀತಿ ಮಾಡುತ್ತಿರುವರನ್ನಬಹುದು ಮಕ್ಕಳೆಂದರು, ಎತ್ತ ಬೇಕಲ್ಲಿಗೆ ಸುಳಿದಾಡುವುದಿಲ್ಲ ಮಕ್ಕಳ ಗೆಳೆಯರೆಲ್ಲ ತಾಯ್ತಂದೆಯರು ಮಕ್ಕಳ ಜೀವನ ನಾಟಕದ ರಂಗಭೂಮಿಯನ್ನ ತುಂಬಿರಬಲ್ಲರು ಅದರೆ ಭೂಮಿಕೆಯ ಮಾತ್ರ ಮಕ್ಕಳಿಂದಲೇ ಎಗಲೇಕಾದ ದು ಇದಕ್ಕಿಂತಲೂ ಸ್ವಲ್ಪ ಮುಂದರಿದು ಮಾತಾಪಿತರು ತಮ್ಮ ಮಕ್ಕಳಿಂದ ಒಂದು ಅದರ್ಶ ಉದಾಹರಣೆಯ ನಿಡಬಲ್ಲರು ಆದರೆ, ಇಂತಹ ಉದಾಹರಣೆಯನ್ನು ಸ್ವೀಕರಿಸುವ ಇಚ್ಛೆಯೇ ತಿರಸ್ಕರಿಸುವ ಕಾರ್ಯವು ಹುಡುಗರ ಸ್ವಭಾವವನ್ನು ಸಂಪೂರ್ಣವಾಗಿ ಹೊಂದಿಕೊಂಡಿದ ಎಂಬುದು ಧ್ರುವಸತ್ಯವಾಗಿದೆ ಒಂದ ಸಲ ತಾಯ್ತಂದೆಯರು ಹಾಕಿಕೊಟ್ಟ ಮಾರ್ಗವು ಮಗುವಿಗೆ ಸರಿಬಾರದೆಹೋದರೆ ಅತನು ಆಸೂಚನೆಯನ್ನು ಸಂಪೂರ್ಣತೆಯಿಂದ ಬಿಡುವ ಸಂಭವವಿದೆ ಅದುದರಿಂದಲೇ ಹಿರಿಯರೇ ಆಗಲಿ, ತಮ್ಮ ಜೀವನದಲ್ಲಿ ತಾವು ಪಡೆಯಲಿರದ ಜಯಾಪಜಯಗಳಿಗ ತಮ್ಮ ಹೆತ್ತವರನ್ನು ದೂರಿ ಪ್ರಯೋಜನವಿಲ್ಲ. ತಮ್ಮ ಸಫಲತಾಸಫಲತೆಗಳನ್ನು ತಾವಾಗಿಯೇ ರೂಪಿಸಿಕೊಳ್ಳಬಲ್ಲ ಶಕ್ತಿ ಪ್ರತಿಯೊಬ್ಬನಲ್ಲಿಯೂ ಇದೆ. ಬೇರೆಯವರಿಂದ ಈ ಬಗ್ಗೆ ಏನು ಮಾಡುವುದೂ ಸಾಧ್ಯವಾಗುವುದಿಲ್ಲ ನಮ್ಮಲ್ಲಿ ಆತ್ಮವಿಶ್ವಾಸ ಪರಿಶ್ರಮ ಮನೋಭಾವನೆ, ಧೈರ್ಯ ಹಾಗೂ ಧೈರ್ಯ, ಶಕ್ತಿಗಳಿದ್ದರೆ, ನಾವು ಕೈಗೊಂಡ ಯಾವ ಕಲಸವನ್ನೂ ಪೂರೈಸಿಕೊಳ್ಳುವ ಅವಕಾಶಗಳು ಹೆಚ್ಚು. ಜತೆಗೆ ದೈವಾನುಗ್ರಹ, ಹಿರಿಯರಾದವರದಗಳು ಬೇಕಾದಂತ ಆಸ್ತಿಕ ಮಹಾಶಯರ ಅಭಿಪ್ರಾಯ

(ಮೂಲ: ಕನ್ನಡ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಪ್ರಧಾನ ಕಚೇರಿ ಉಡುಪಿ ಸ್ಥಾಪನೆ 1925

ಹಳ್ಳಿದ್ದಾಗಲೇ ಹುರಿಗಡಲೆ! ಹಣವಿದ್ದಾಗಲೇ ಉಳಿತಾಯ!

ನಮ್ಮ
ಲಕ್ಕಿ ಕೇಶ್
ಒಳ್ಳೆ
ಸರ್ಟಿಫಿಕೇಟುಗಳು

ನಿಮ್ಮ 8 ರೂಗಳನ್ನು ಐದು ವರುಷಗಳಲ್ಲಿ ರೂ ಹತ್ತಾಗಿ,
,, 80 ರೂಗಳನ್ನು ಐದು ವರುಷಗಳಲ್ಲಿ ರೂ ನೂರಾಗಿ,
, 800 ರೂಗಳನ್ನು ಐದು ವರುಷಗಳಲ್ಲಿ ರೂ ಸಹಸ್ರವಾಗಿ
ಅಭಿವೃದ್ಧಿಗೊಳಿಸುವುದು

ಹೆಚ್ಚಿನ ಮಾಹಿತಿಗೆ ನಮ್ಮ ಯಾವದೇ 110 ಶಾಖೆಗಳಲ್ಲಿ ವಿಚಾರಿಸಿರಿ

ಟಿ ಎ ಪೈ, ಬಿ ಕಾಂ.(ಹೊಂ)
ಎ ಐ ಐ ಬಿ ಯಿಂದ ಆರ್ ಇ ಯಸ್ (ಲಂಡನ್)
ಜನರಲ್ ಮೆನೇಜರ್.

ಡಾ॥ ಟಿ ಮಾಧವ ಪೈ,
ಎಂ ಬಿ ಬಿ ಎಸ್.
ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೫-೫-೧೯೫೮	೩೬

ಪರಿಹಾರವಾಯಿತೆ?

ಸಾಮಾನ್ಯ ಎರಡು ತಿಂಗಳುಗಳಿಂದ ಹೊಗೆಯಾಡುತಿದ್ದ ಮೈಸೂರಿನ ಕಾಂಗ್ರೆಸ್ ಶಾಸಕ ಪಕ್ಷದ ಬಿಕ್ಕಟ್ಟು ಶ್ರೀ ಬಿ. ಡಿ. ಜತ್ತಿಯವರನ್ನು ನಾಯಕರನ್ನಾಗಿ ಆರಿಸುವ ಮೂಲಕವಾಗಿ ಸದ್ಯಕ್ಕೆ ಹರಿಯತೆನ್ನಬಹುದು. ನೂತನ ನಾಯಕರ ಆಯ್ಕೆಯೊಂದಿಗೆ ಶ್ರೀ ನಿಜಲಿಂಗಪ್ಪನವರೂ ಅವರ ಸಹಮಂತ್ರಿಗಳೂ 'ಮಾಜಿ" ಎಂಬ ಎರಡಕ್ಷರದ ಬಿರುದನ್ನು ಹೊಂದಬೇಕಾಯಿತು. ಶ್ರೀ ನಿಜಲಿಂಗಪ್ಪನವರ ನಾಯಕತನವು ಕೊನೆಗೊಂಡು, ಮುಂದೆ, ಶ್ರೀ ಜತ್ತಿಯವರು ಅವರ ಉತ್ತರಾಧಿಕಾರಿಯಾಗಿ ಅಧಿಕಾರ ಸೀತಾರೋಹಣವನ್ನು ಮಾಡುವಂತಾದುದೂ ಒಂದು ಆಶ್ಚರ್ಯದ ಸಂಗತಿಯೇ ಸರಿ. ಭಿನ್ನಾಭಿಪ್ರಾಯ ಸಂಗತದವರಿಂದ ಅಧಿಕಾರಪಡೆದ ಪಂಚ ಸದಸ್ಯ ಮಂಡಳಿಯ ನಿರ್ಣಯವು ತಳ್ಳಿ ಹೋಗಿ ಅಕಸ್ಮಾತ್ತಾಗಿ ಶ್ರೀ ಜತ್ತಿಯವರ ಬೆಸರು ಮುಂದೆ ಬಂದುದನ್ನು ಗಮನಿಸುವಾಗ, "ಏನಾದರೂ ಆಗಲಿ, ನಿಜಲಿಂಗಪ್ಪನವರುಳಿಲಿ" ಎಂಬ ನೀತಿಯು ಭಿನ್ನಾಭಿಪ್ರಾಯ ಸಂಗತದವರಲ್ಲಿತ್ತೆಂದು ಊಹಿಸುವುದು ಸಾಧ್ಯವಿದೆ. ಆಗ, ಮೈಸೂರಿನ ಮಂತ್ರಿಮಂಡಳಿಯಲ್ಲಿರುವ ಗಂಭೀರವಾದ ಹುಳುಕುಗಳಿಂದಾಗಿ ಮೈಮನಸ್ಯವೆದ್ದಿಲ್ಲ; ತೀರ ಸಾಮಾನ್ಯ ಆರೋಪಗಳನ್ನೆ ಮಂತ್ರಿಮಂಡಳದ ಮೇಲೆ ಮಾಡಲಾಗಿದೆ ಎಂಬ ಕಾಂಗ್ರೆಸ್ ವರಿಷ್ಠರ ಮಾತಿಗೂ ಬಲದೊರೆತು ವೈಯಕ್ತಿಕ ದ್ವೇಷ ಸ್ವಾರ್ಥಗಳೇ ಈ ಬಿಕ್ಕಟ್ಟಿಗೆ ಕಾರಣವೆಂದು ಕಂಡುಬರುತ್ತಿದೆ. ಇದೇನೂ ಮೈಸೂರಿನ ರಾಜಕಾರಣಕ್ಕೆ ಅಪರಿಚಿತವಾದ ಸಂಗತಿಯಲ್ಲ.

ಶ್ರೀ ನಿಜಲಿಂಗಪ್ಪನವರು ಜನಪ್ರಿಯರಾಗಿದ್ದು, ತಮ್ಮ ಶಕ್ತಿಯೋಟ, ಹಳೆ ವಿಲೀನಗೊಂಡ ಎಂಬ ಭೇದ ಭಾವನೆಯಿಲ್ಲದೆ, ಮೈಸೂರಿನ ಎಲ್ಲ ಭಾಗಗಳಿಗೂ ನ್ಯಾಯವನ್ನೊದಗಿಸಲು ಹೆಣಗುವಲ್ಲಿ ಪ್ರಯತ್ನಶೀಲರಾಗಿದ್ದಾರೆ. ಆದರೆ, ಅವರ ಯತ್ನದಲ್ಲಿ ಸಂಪೂರ್ಣ ಜಯಶಾಲಿಯಾಗಿದ್ದಾರೆನ್ನುವುದು ಅಸಾಧ್ಯವಾದರೂ, ಜನರ ಪ್ರೀತಿಗೆ ಪಾತ್ರರಾಗಿದ್ದಾರೆನ್ನಲು ಆಡ್ಡಿಯಿಲ್ಲ. ದೃಢ ಮನಸ್ಸನ್ನು ಮಾಡಿದ್ದರೆ ಅವರಿಂದ ರಾಜ್ಯದ ಸಮಸ್ಯೆಗಳು ಸರಳವಾಗಿ ಬಗೆಹರಿಯುತಿದ್ದುವು. ಆದರೆ, ಅವನನ್ನು ಕಾಡುತಿದ್ದ ಅವರ್ಣನೀಯ ದುರ್ಬಲತೆಯ ಪರಿಣಾಮವಾಗಿ ಅವರ ಸರಕಾರ ರಾಜೀನಾಮೆ ಕೊಟ್ಟಿತು. ನಿಜವಾದ ಸಮಾಜ ಸೇವೆ ಮಾಡಬೇಕೆಂದಿರುವವರಿಗೆ ಸರಕಾರೀ ಬಲಯಗಳಿಂದ ದೊರಗಿದ್ದರೇನೇ ಸ್ವಾತಂತ್ರ್ಯ ಅಧಿಕ. ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗುವುದಕ್ಕೆ ಮೊದಲು ಬಹುಮುಖ ಸೇವೆ ಸಲ್ಲಿಸಿದ್ದಾರೆ. ಮುಂದಕ್ಕೂ ಅಂತಹ ಗುರಿಯನ್ನು ಇಟ್ಟುಕೊಂಡಿದ್ದಾರೆ. ಶ್ರೀ ನಿಜಲಿಂಗಪ್ಪನವರಂತಹ ನಿಸ್ಪೃಹ ವ್ಯಕ್ತಿಗಳಿಗೆ ಸರಕಾರದೊಳಗಿರಬೇಕಾದ ಅವಶ್ಯಕತೆಯಿಲ್ಲ. ಎಂತಲೇ ಜನತೆ ಅವರು ಇದು ವರೆಗೆ ಮಾಡಿದ ಸೇವೆಗೆ ಕೃತಜ್ಞತೆಯನ್ನರ್ಪಿಸಿ, ಮುಂದಕ್ಕೆ ಇದಕ್ಕಿಂತಲೂ ಹೆಚ್ಚಿನ ಸೇವೆ ಮಾಡಲೆಂದು ಹಾರೈಸುತ್ತದೆ.

ನೂತನ ನಾಯಕ ಶ್ರೀ ಜತ್ತಿಯವರ ಬಗ್ಗೆ ವಿಶೇಷ ಹೇಳುವುದು ಸಾಧ್ಯವಿಲ್ಲ. ಶ್ರೀ. ಜತ್ತಿ ಮೊದಲು ಜಮಖಂಡಿಯ ಮುಖ್ಯ ಮಂತ್ರಿಗಳೂ ಮುಂಬಯಿಯ ಉಪಮಂತ್ರಿಗಳೂ ಆಗಿದ್ದು ಆಡಳಿತೆಯ ಅನುಭವವುಳ್ಳವರಾದುದರಿಂದಲೂ ಶ್ರೀ ಮುರಾರ್ಜಿಯವರ ನೇತೃತ್ವದಲ್ಲಿ ಪಳಗಿದವರಿರುವುದರಿಂದಲೂ ಆಡಳಿತೆಯು ಬಿಗಿಯಾಗಬಹುದೆಂಬ ನಿರೀಕ್ಷೆಯಿದೆ. ಆದರೆ, ಇವರ ನಾಯಕತನ ಅದೆಷ್ಟುದಿನ ಎಂಬ ಪ್ರಶ್ನೆಯೂ ಎದುರು ನಿಲ್ಲುತ್ತದೆ. ಶ್ರೀ ಜತ್ತಿಯವರು ನಿಜಲಿಂಗಪ್ಪ ಹನುಮಂತಯ್ಯನವರಷ್ಟು ಜನತೆಗೆ ಪರಿಚಿತರಲ್ಲವಾದರೂ, ಅವರು ತಯಾರಿಸಿದ ಭೂಸುಧಾರಣಾ ಸಂಬಂಧದ ವರದಿಯು ಅವರ ಹೆಸರನ್ನು ಎಲ್ಲರ ಕಿವಿಗೂ ಬೀಳಿಸಿದೆ. ಶ್ರೀ ಜತ್ತಿಯವರ ಮುಂದೆ ಬಹಳ ಪ್ರಮುಖ ಸಮಸ್ಯೆಗಳು ನಿಂತಿವೆ. ಮೊದಲನೆಯದಾಗಿ ಅವರು ಆರಿಸಿ ಬಂದ ಗಳಿಗೆ. ಭಿನ್ನಾಭಿಪ್ರಾಯವಿರುವವರ ವರಿಷ್ಠರ ದೃಷ್ಟಿಯಿಂದ ಕ್ಷುಲ್ಲಕವೆನಿಸಿದ ಕಾರಣಗಳಿಂದಲೇ ಇವರು ಆರಿಸಿ ಬಂದಿದ್ದಾರೆಂಬುದನ್ನು ಮರೆಯಬಾರದು. ಹಾಗಿರುವಾಗ ಇಂತಹ ಸಾಮಾನ್ಯ ದೂರುಗಳು ಇವರ ಮೇಲೆಯೂ ಬರಲಾರವು ಎಂದು ಧೈರ್ಯದಿಂದ ಹೇಳಬರುವಂತಿಲ್ಲ. ಕಾಂಗ್ರೆಸ್ ಭಿನ್ನಾಭಿಪ್ರಾಯ ಸಂಗತದಲ್ಲಿಯೇ ನಾಲ್ಕಾರು ಒಳಸಂಗತಿಗಳು ಹಾಗೂ ಹಿಂದಿನ ಮಂತ್ರಿಮಂಡಳದ ಸಮರ್ಥಕರು- ಹೀಗೆ ಒಟ್ಟು ಆರೇಳು ವರ್ಗದ ಜನರ ಬೆಂಬಲವನ್ನು ಪಡೆಯುವುದು ಅವಶ್ಯಕವಾಗಿರುವುದಾದರೂ, ಅಂತಹ ವರ್ಗಗಳನ್ನು ಆಕರ್ಷಿಸಿಕೊಳ್ಳುವುದಕ್ಕಾಗಿ ಮಂತ್ರಿಗಳ ಸಂಖ್ಯೆಯನ್ನು ವರ್ಗಮೂಲದಿಂದ ವಿಭಾಗಿಸುವ ಕಾರ್ಯದಿಂದ ಇವರು ದೂರವಿರುವುದು ಎಂದಿಗೂ ಸಾಧ್ಯವಾಗುವುದಿಲ್ಲವೆಂಬುದು ನಿಶ್ಚಯ- ಹಾಗಿರುವಾಗ, ಎಲ್ಲರನ್ನೂ ತೃಪ್ತಿಪಡಿಸುವುದು ಸಾಧ್ಯವೆ? ಕಳೆದ ವರ್ಷ ಶ್ರೀ ನಿಜಲಿಂಗಪ್ಪನವರು ಎದುರಿಸಿದ ಸಮಸ್ಯೆಗೆ ಇಂದು ಶ್ರೀ ಜತ್ತಿಯವರು ಎಡೆಕೊಡಬೇಕಾಗಿ ಬಂದಿದೆ ಅಷ್ಟೆ. ಮೈಸೂರು ಕಾಂಗ್ರೆಸಿನಲ್ಲಿ ಸರಕಾರದ ವಿರುದ್ಧ ವಿರೋಧಾಭಿಪ್ರಾಯ ಬೆಳೆಯಲು ಈ ಒಂದು ಕಾರಣವೇ ಸಾಕಾಗಬಹುದು. ಒಂದು ವೇಳೆ, ಈ ಪ್ರಶ್ನೆಯೊಂದನ್ನು ಸದ್ಯಕ್ಕೆ ಜಾತುರ್ಯದಿಂದ ಎದುರಿಸಿದರೂ, ಮುಂದಕ್ಕೆ ಬರಲಿರುವುದು—ಅವರ ಅಧ್ಯಕ್ಷತನದಲ್ಲಿ ತಯಾರಾದ ಭೂಸುಧಾರಣಾ ಸಂಬಂಧದ ವರದಿ-ಮತ್ತು ತತ್ಸಂಬಂಧಿತ ವಿಧೇಯಕಗಳು. ಮೈಸೂರ ಕಾಂಗ್ರೆಸ್ಸಿಗರಲ್ಲಿ ಈ ವರದಿಯ ಬಗ್ಗೆ ಮೂಲಭೂತ ಭಿನ್ನಾಭಿಪ್ರಾಯಗಳಿರುವುದು ಕಂಡು ಬರುತ್ತದೆ. ಭಾರತದಂತಹ ದೇಶದಲ್ಲಿ ಈ ವರದಿಯ ಕಾರ್ಯಾಚರಣೆಯು ಭೂಸಮಸ್ಯೆಯನ್ನು ನೀಗಿಸಲು ತಾರಕವೆಂದಿದ್ದರೂ, ಕಾಂಗ್ರೆಸ್ ಶಾಸಕರಿಗೆ ಅವಿರೋಧವಾಗಿ ಎಂದಿಗೂ ಒಪ್ಪಿಗೆ ಯಾಗುವುದು ಸಾಧ್ಯವಿಲ್ಲ. ಹಾಗಿರುವಾಗಿ ತಾನು ನೆಟ್ಟ ಮರದ ಗೆಲ್ಲುಗಳನ್ನು ತಾನೇ ಕಡಿಯಬೇಕಾದ ಸಂಭವ ಶ್ರೀ ಜತ್ತಿಯವರಿಗೆ ಬರಬಹುದು. ಅಷ್ಟೇ ಅಲ್ಲದೆ, ಆಡಳಿತದಲ್ಲಿ ಧಕ್ಷತೆ, ಕಾರ್ಯಾಚರಣೆಯಲ್ಲಿ ತೀವ್ರತೆ ಇತ್ಯಾದಿಗಳಲ್ಲೂ ತಕ್ಕ ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವುದೂ ಅವಶ್ಯಕವೆಂದು ಹೇಳಬಹುದು. ಇದೆಲ್ಲವನ್ನೂ ಪರಿಶೀಲಿಸಿದರೆ, ಶ್ರೀ ಜತ್ತಿಯವರ ಮಂತ್ರಿಮಂಡಳಿಯ ಆಯುಷ್ಯದ ಬಗ್ಗೆ ಸಂದೇಹವೇ ಹುಟ್ಟುವುದಲ್ಲದೆ ಬೇರೆ ಇಲ್ಲ. ಕಳೆದ ೫೨-೫೭ರ ಅವಧಿಯಲ್ಲಿ ಮೂರು ಬಾರಿ ಬದಲಾವಣೆಹೊಂದಿದ ಮೈಸೂರಿನ ಕಾಂಗ್ರೆಸ್ ಮಂತ್ರಿಸಂಘಟನೆ ಈ ೫೭-೬೨ರ ಅವಧಿಯಲ್ಲಿ ಅದೆಷ್ಟು ಬಾರಿಯಾಗಬಹುದು ಎಂದು ಕಾದು ನೋಡಬೇಕು.

ರಾಜ್ಯದ ಹಿತದೃಷ್ಟಿಯಿಂದ ಇಲ್ಲಿ ಒಂದು ಮಾತನ್ನು ಹೇಳಬಹುದು. ಪಕ್ಷದೊಳಗೆ ಹಲವಾರು ವಿಚಾರಧಾರೆಯ ತಟೆಗಳಿರುವಾಗ ಭಿನ್ನಾಭಿಪ್ರಾಯವೇಳುವುದು ಸಹಜವಾದರೂ, ಅವೆಲ್ಲವನ್ನೂ ತಮ್ಮೊಳಗೆ ವಿಮರ್ಶಿಸಿ ಜನತೆಯ ಪ್ರೀತಿ ವಿಶ್ವಾಸಗಳನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಯೋಗ್ಯ ನಿರ್ಣಯವನ್ನು ಕೈಗೊಳ್ಳುವತ್ತ ಕಾಂಗ್ರೆಸ್ ಗಮನ ಹರಿಸಬೇಕು. ಪಕ್ಷದೊಳಗಡೆ ವೈಯಕ್ತಿಕ ಹಿತಾಸಕ್ತಿಗಳಿಗೆ ಅಧಿಕಾರ ಲಾಲಸೆಗಳಿಗೆ ಅವಕಾಶವೀಯುವಂತಾಗಬಾರದು. ಇದಕ್ಕೆ ತಪ್ಪಿದರೆ, ಜನತೆಯ ವಿಶ್ವಾಸಕ್ಕೆ ಎರವಾಗುವ ಸಂದರ್ಭ ಕಾಂಗ್ರೆಸ್ಸಿಗೆ ಬರುತ್ತದೆ-ಪ್ರತಿಪಕ್ಷದವರ ಬೇಳೆಯೂ ಬೇಯುತ್ತದೆ. ನಮ್ಮ ಶಾಸಕರು ಹಾಗೂ ಕಾಂಗ್ರೆಸಿಗರು ಇದನ್ನು ಅವಶ್ಯ ಗಮನಿಸಬೇಕು ಮತ್ತು ಸೂಕ್ತ ಕ್ರಮ ಕೈಗೊಳ್ಳಬೇಕು.

ಸಂಕ್ಷಿಪ್ತ ಸುದ್ದಿಗಳು

ಮೆಹತಾಬರ ರಾಜೀನಾಮೆ

ಮೈಸೂರ ಮುಖ್ಯ ಮಂತ್ರಿ ಪಕ್ಷದೊಳಗಿನ ಭಿನ್ನಾಭಿಪ್ರಾಯ ದೂರಣಿಗಳಿಂದಾಗಿ ತಮ್ಮ ರಾಜಿನಾಮೆಯೊಪ್ಪಿಸಿದರೆ, ಒಡಿಸ್ಸದ ಮುಖ್ಯ ಮಂತ್ರಿ ಡಾ. ಹರಿಕೃಷ್ಣ ಮೆಹತಾಬರ ವಿರೋಧೀ ಪಕ್ಷದ ಕುಚೇಷ್ಟೆಗಳಿಂದ "ಮಾಜಿ" ಯಾಗ ಬೇಕಾದ ಸಂದರ್ಭ ಒದಗಿ ಬಂತು. ಕಾಂಗ್ರೆಸ್ಸು ತನಗೆ ಸಾಕಷ್ಟು ಸಂಖ್ಯಾಬಲವಿಲ್ಲದೆಯೂ, ತನ್ನ ಅವಸ್ಥೆಯೂ ಬೆಕ್ಕಿನ ತಲೆಯ ಮೇಲಿಟ್ಟ ದೀಪದಂತೆ ಇರುವಾಗಲೂ ಅದು ಅಧಿಕಾರಕ್ಕೆ ಅಂಟಿ ಕೂರಲು ಹವಣಿಸುತ್ತದೆ ಎಂಬ ದೂರಿಗೆ ಅಜ್ಞಾನರೂಪವಾಗಿ ಈ ತ್ಯಾಗಪತ್ರವನ್ನು ಅವರು ಅರ್ಪಿಸಿದ್ದಾರೆ. ಕಾಂಗ್ರೆಸ್ಸಿಗೆ ಜಾರಖಂಡಿ ಪಕ್ಷದ ೫೫ ಜನರ ಬೆಂಬಲವಿದ್ದು ಸದ್ಯವೇ ಆಗಲಿರುವ ಉಪಚುನಾವಣೆಯಲ್ಲಿಯೂ ಒಂದೆರಡು ಸ್ಥಳಗಳು ದೊರೆಯಬಹುದಾಗಿದ್ದು ಸಾಮಾನ್ಯ ಬಹುಮತ ಸಿಗಬಹುದಾದರೂ, ಕಾಂಗ್ರೆಸ್ ಇಂತಹ ಪರಿಸ್ಥಿತಿಯಲ್ಲಿ ರಾಜಿನಾಮೆಕೊಡಲೂ ಹಿಂಜರಿಯಲಾರದೆಂದು ಅದು ತೋರಿಸಿಕೊಟ್ಟಿದೆ. ಇವೀಗ ಅಲ್ಲಿ ವಿರೋಧೀ ಪಕ್ಷಗಳ ಇಮ್ಮಿಳನದಿಂದ ಸರಕಾರ ರಚಿಸುವ ಸಾಧ್ಯಾಸಾಧ್ಯತೆಗಳು ಪರಿಶೀಲಿಸಲ್ಪಡುತ್ತಿವೆ. ಆದರೆ, ಅದೆಷ್ಟು ಸಾಧಿಸೀತೆಂದೂ, ಧೃವವಾದೀತೆಂದೂ ಹೇಳಬಾರದು. ಅಂತೂ ಕೊನೆಯಲ್ಲಿ ಅಧ್ಯಕ್ಷರಾಳಿಕೆಯೇ ಗತಿಯಾಗಿ ಬರಬಹುದೆ? ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಹೀಗಾಗುವುದೇನೂ ತೀರ ಅಸಂಭವವೆಂದು ಎಂದಿಗೂ ಹೇಳಬರುವಂತಿಲ್ಲ.

ಕಾಂಗ್ರೆಸಿನ ಸತ್ವಪರೀಕ್ಷೆ

ಕೇರಳದ ಕಮ್ಯುನಿಸ್ಟರ ಸರಕಾರವೂ ಗೋಡೆಯ ಮೇಲಿನ ಹೆಣ್ಣಿನಂತಿದ್ದರೂ, ಅಲ್ಪಬಹುಮತವಿದ್ದರೂ ಇದುವರೆಗೆ ನಡೆದುಬಂದಿದೆ. ಆದರೆ ದೇವಿಕ ಖಂಡಲ್ಲಿ ದಿನಾಂಕ ೧೭ರಂದು ನಡೆಯಲಿರುವ ಉಪಚುನಾವಣೆಯೊಂದು ಅದರ ಭವಿಷ್ಯವನ್ನು ಸೇಕಡ ೫೦ರಷ್ಟು ನಿರ್ಧರಿಸುವಷ್ಟು ಪ್ರಭಾವಶಾಲಿಯಾಗಿದೆ. ಸುಮಾರು ೦೦ ದೂರವರೆ ಲಕ್ಷಕ್ಕಿಂತಲೂ ಹೆಚ್ಚು ಮತದಾರರಿರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್-ಕಮ್ಯುನಿಸ್ಟರೊಳಗೆ ನೇರವಾದ ಹೋರಾಟ ನಡೆಯುತ್ತಿದೆ. ಸ್ವತಂತ್ರ ಹುರಿಯಾಳುಗಳಿದ್ದಾರೆ ಇಕ್ಕಡೆಯವರೂ ತಮಗೇ ಗೇಲಿಯಿರ ನಂಬಿ, ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಿ ಪ್ರಚಾರಕಾರ್ಯ ನಡೆಸುತಿದ್ದಾರೆ. ಭಾರತದಎಲ್ಲಮೂಲೆಯ ಜನರ ದೃಷ್ಟಿಯೂ ಈ ಉಪಚುನಾವಣೆಯ ಪರಿಣಾಮದತ್ತ ಹಾಯ್ದಿದೆ. ಇದು ಒಂದು ಸರಕಾರವನ್ನು ಉಳಿಸುವ ಇಲ್ಲವೇ ಅಳಿಸುವ ಶಕ್ತಿಪೂರ್ಣ ಚುನಾವಣೆಯೆಂಬ ಅಭಿಪ್ರಾಯಪಡಲಾಗುತ್ತಿದೆ.

ಆತ್ಮ ನಿರೀಕ್ಷಣೆಯ ಕಾಲ

ಅಖಿಲಭಾರತ ಕಾಂಗ್ರೆಸ್ ಸಮಿತಿಯ ಮೂರು ದಿನಗಳ ಅಧಿವೇಶನವು ದಿನಾಂಕ ೧೭ರಂದು ಮುಕ್ತಾಯಗೊಂಡಿತು. ಈ ಅಧಿವೇಶನವಲ್ಲಿ ಈ ಬಾರಿ ಯಾವ ವಿಶೇಷ ಗೊತ್ತುವಳಿಗೂ ಮಂಡಿಸಲ್ಪಟ್ಟು ಸ್ವೀಕೃತವಾಗಲಿಲ್ಲ. ಪಂಡಿತ ನೆಹರೂರವರು ತಾವು ಸ್ವಧಾನಿಸನದಿಂದ ನಿವೃತ್ತರಾಗುವರೆಂಬುದಕ್ಕೆ ಬಲವಾದ ಕಾರಣಗಳ ವಿವರಣೆಯು ಇಲ್ಲಿ ಆಯಿತು. ಭಾಷಾವಾದ, ಪ್ರಾಂತೀಯ ವಾದಗಳು, ಜಾತೀಯತಾವಾದಗಳು, ಸ್ವಾರ್ಥಾಭಿಲಾಷೆಗಳು ಸೇವಾಭಾವನೆಯ ಅಭಾವ ಮೊದಲ ದ ಹಲವಾರು ಪ್ರಮುಖ ಪ್ರಶ್ನೆಗಳನ್ನೇ ಸಮಸ್ಯೆಗಳನ್ನಾಗಿಸಿಕೊಂಡು ಕಾಂಗ್ರೆಸಿಗರು ತಮ್ಮ ಕರ್ತೃತ್ವ ಶಕ್ತಿಯ ಅಪವ್ಯಯವನ್ನು ಮಾಡುವುದನ್ನು ವಿರೋಧಿಸಿ ಕಾಂಗ್ರೆಸಿನ ಆತ್ಮ ನಿರೀಕ್ಷಣೆಮಾಡಿಕೊಳ್ಳುವ ಕಾಲವಿದು ಎಂಬ ಗಂಭೀರ ಎಚ್ಚರಿಕೆಯನ್ನು ಸದಸ್ಯರಿಗೆ ಕೊಡಲಾಯಿತು. ರಾಜ್ಯಗಳಲ್ಲಿ ಕಾಂಗ್ರೆಸ್ ಕಾರ್ಯನಿಮಗ್ನವಾಗುವುದರಲ್ಲಿ ತಪ್ಪಿದರೆ ಅದಕ್ಕೆ ವರಿಷ್ಠರೇ ಕಾರಣರೆಂದು ಕೆಲ ಸದಸ್ಯರು ಅಭಿಪ್ರಾಯಪಟ್ಟರೆಂದು ವರದಿಯಾಗಿದೆ. ಹೀಗಾಗಿ ಪರಸ್ಪರ ದೋಷಾರೋಪಣೆಯೇ ಈ ಅಧಿವೇಶನದ ಫಲಶ್ರುತಿಯೇ? ಎಂಬ ಸಂದೇಹ ಬರುವಂತಾಗಿದೆ.

ಶಿವಾಜಿಯ ಕೈಬರಹವೇ?

ಛತ್ರಪತಿ ಶಿವಾಜಿಯ ಸ್ವತಃ ಬರೆದ ಪತ್ರವೊಂದು ದೊರೆತಿದೆಯೆಂದು ಪೈಠಣದ ಸಂಶೋಧನಾಸಂಘವು ಹೇಳಿದೆ. ಈ

ಪತ್ರವು ಶಿವಾಜಿಯದ್ದಾದರೆ, ನಿಜವಾಗಿಯೂ ಐತಿಹಾಸಿಕ ಮಹತ್ವವುಳ್ಳದ್ದೆನಿಸುವುದು ಇದುವರೆಗೆ ನಡೆದ ಶೋಧಗಳಲ್ಲಿ ಇಂತಹ ಪತ್ರಗಳು ದೊರಕಿರಲಿಲ್ಲ. ಈ ಪತ್ರವು ಮೋಡಿ ಬರಹದಲ್ಲಿದ್ದು ಪೈಠಣದಲ್ಲಿಯ ಭೋಸಲೆ ಕೌಟುಂಬಿಕರಾಗಿದ್ದ ಒಬ್ಬ ಆಚಾರ್ಯರಿಗೆ ಬರೆಯಲ್ಪಟ್ಟಿದೆ ಶಿವಾಜಿಯ ಸಹಿಯ ಕೆಳಗೆ ಆತನ ರಾಜಮುದ್ರೆಯು ಸ್ಪಷ್ಟವಾಗಿ ತೋರಿಬಂದಿದ ಕೈಬರಹವು ಆತನದೇ ಆಗಿರಬಹುದೇ ಎಂಬ ಶೋಧ ಈಗ ಅಗತ್ಯವಾಗಿದೆ.

ಗ್ರಾಮ ಸಹಾಯಕರ ತರಬೇತಿ

ಭಾರತ ಸರಕಾರದ ಸಾಮುದಾಯಿಕ ಅಭಿವೃದ್ಧಿ ಮಂತ್ರಿಶಾಖೆಯವರು ೧೯೫೭ರ ಅಕ್ಟೋಬರದಲ್ಲಿ ತಯಾರಿಸಿದ ವಿಶೇಷ ತರಬೇತಿ ಕಾರ್ಯಕ್ರಮದ ಪ್ರಕಾರ ಮೊದಲ ನಾಲ್ಕು ತಿಂಗಳಲ್ಲಿ ೧ ಲಕ್ಷದ ತಿಳಸಾವಿರ ಮಂದಿ ಗ್ರಾಮಸೇವಾಸಿಗಳು ಗ್ರಾಮಸಹಾಯಕರಾಗಿ ತರಬೇತಿಪಡೆದರು. ಈ ವರ್ಷ ಉತ್ತಮ ಬೇಸಾಯಕ್ರಮ, ಮತ್ತು ಅದಕ್ಕೆ ಸಂಬಂಧಪಟ್ಟಿಂತೆ ಪಶುಸಂಗೋಪನೆ ಹಾಗೂ ಸಣ್ಣ ಪ್ರಮಾಣದ ನೀರಾವರೀ ವಿಧಾನಗಳಲ್ಲಿ ತರಬೇತಿಯೊಯಲಾಗುತ್ತಿದೆ ಗ್ರಾಮಸಹಾಯಕರು ಈ ತರಬೇತಿಯಲ್ಲಿ ತಾವು ಕಲಿತ ನವವಿಧಾನಗಳನ್ನು ತಮ್ಮ ಜವಾಬಿನುಗಳಲ್ಲಿ ತೊಡಗಿಸುವುದಲ್ಲದೆ ಇದೇ ತಂತ್ರಗಳನ್ನು ಅಕ್ಕ ಪಕ್ಕದವರೂ ಅನುಸರಿಸುವಂತೆ ಪ್ರೇರೈಸುವರು.

ನೆಹರೂರವರ ವಿಶ್ರಾಂತಿ

ಪ್ರಧಾನಿ ನೆಹರೂರವರು ಮೇ ೩೦ರಿಂದ ಅಲ್ಪಾವಧಿಯ ವಿಶ್ರಾಂತಿಗಾಗಿ ತೆರಳಿ ಹತ್ತು ದಿನಗಳ ನಂತರ ರಾಜಧಾನಿಗೆ ಮರಳಿ ಐದು ದಿನ ತಂಗಿ, ಮತ್ತೆ ಹಿಮಾಲಯದ ಲಾಹೋಲ್‌ನಲ್ಲಿ ಸುಮಾರು ನಾಲ್ಕು ವಾರಗಳ ವಿಶ್ರಾಂತಿ ಪಡೆಯುವರಂದೂ, ಆ ಸಮಯದಲ್ಲಿ ಅವರ ಕಾರ್ಯಭಾರವನ್ನು ಪಂಡಿತ ಪಂತರು ನಿರ್ವಹಿಸುವರೆಂದೂ, ವಿಶೇಷ ಸಂದರ್ಭಗಳಲ್ಲಿ ನೆಹರೂರೊಡನೆ ವ್ಯವಹಾರ ನಡೆಸಲಾಗುವುದೆಂದೂ ತಿಳಿದು ಬಂದಿದೆ.

ಲಂಡನಿನಲ್ಲಿ ಸಂಪು

ಲಂಡನ್ನಿನಲ್ಲಿ ಬಸ್ ಕೆಲಸಗಾರರು ಸಂಪನ್ನು ನಡೆಸಿದ್ದು ಇದೀಗ ಎರಡನೆಯ ವಾರದಲ್ಲಿ ಮೂಂಸದ ಕೆಲಸಗಾರರೂ ಇದಕ್ಕೆ ಸೇರಿದ್ದಾರೆ. ಇವರೆಲ್ಲರೂ ಅಧಿಕ ವೇತನವನ್ನು ಬೇಡಿ ಸಂಪಿಗೆ ಆರಂಭ ಮಾಡಿರುತ್ತಾರೆ

ಡಾ. ಮೋದಿಯವರಿಗೆ ಮಾನಪತ್ರ—ಮಂಗಳೂರು ನಗರ ಸಭೆಯ ಕಡೆಯಿಂದ ಅದರ ಅಧ್ಯಕ್ಷ ಶ್ರೀ ಕೆ ಸೂರ್ಯನಾರಾಯಣ ಅಡಿಗರು ತಾ ೧೩ರಂದು ಸಂಜೆ ಪದ್ಮಶ್ರೀ ಡಾ| ಎಸ್. ಪಿ. ಮೋದಿಯವರಿಗೆ ಮಾನಪತ್ರವಿತ್ತು ಗೌರವಿಸಿದರು ಸಮಾರಂಭವು ಸೆಂಟ್ರಲ್ ವಾರ್ಡ್ ಮುನಿಸಿಪಲ್ ಶಾಲೆಯ ಕಲಾಮಂದಿರದಲ್ಲಿ ಜರಗಿತು ಡಾ| ಮೋದಿಯವರು ಉತ್ತರಿಸುತ್ತಾ, ಭಾರತದಂತಹ ಒಂದು ದೊಡ್ಡ ದೇಶದಲ್ಲಿ ಹೆಚ್ಚಿನ ರೋಗಗಳಿದ್ದು ಅದನ್ನು ಗುಣಪಡಿಸುವಂತಹ ವೈದ್ಯರ ಸಂಖ್ಯೆ ಮತ್ತು ಇತರ ಸವಲತ್ತುಗಳು ಕಡಿಮೆ ಯಾಗಿರುವ ಈ ದೇಶದಲ್ಲಿ ವೈದ್ಯರುಗಳೇ ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ರೋಗಗಳಿದ್ದವರಿಗೆಲ್ಲೇ ಹೋಗಿ ಔಷಧಿಯನ್ನೊದಗಿಸುವುದು ಅತೀ ಅಗತ್ಯವಿದೆ ಎಂದರು.

ಉಡುಪಿ

ಕೆನರಾ ಜೊಗೆ ಸೊಪ್ಪು ಕುಶಲ ಕೈಗಾರಿಕಾ ಕೆಲಸಗಾರರ ಸಂಘವನ್ನು ತಾ ೧೯ರಂದು ಇಂಡಸ್ಟ್ರೀಸ್ ಇನ್ಸ್‌ಪೆಕ್ಟರ್ ಶ್ರೀ ಎ ಲಕ್ಷ್ಮೀ ನಾರಾಯಣ ಭಟ್ಟರು ಸ್ಥಳೀಯ ಹಾಲು ಸರಬರಾಯಿ ಸಂಘದ ಕಾರ್ಯಾಲಯದಲ್ಲಿ ಉದ್ಘಾಟಿಸಿದರು ಪಂಡಿತ ಕೇಳು ನಂಬಿಯಾರರು ಸಭಾಧ್ಯಕ್ಷತೆ ವಹಿಸಿದ್ದರು

ಸಂಘದ ಕಾರ್ಯವಾಹೀ ಸಮಿತಿಗೆ ಶ್ರೀಗಳಾದ ಟಿ ಎಸ್ ಕೇಳು ನಂಬಿಯಾರ್ (ಅಧ್ಯಕ್ಷ) ಎಸ್ ವಾಮನ ಭಟ್ಟರ್ (ಕಾರ್ಯದರ್ಶಿ), ಟಿ ಎ ವಾಸು ದೇವನ್, ಕೆ. ರಾಮದಾಸ ಭಟ್ಟರ್, ಪಿ ರವೀಂದ್ರ ನಾಯಕ್, ಎ ತ್ರಿವಿಕ್ರಮ ನಾಯಕ್ ಪಿ ಎನ್. ಕೃಷ್ಣ ಮೂರ್ತಿರಾವ್, ಟಿ ರಮೇಶ ಪೈ ಮತ್ತು ಕೊಚ್ಚಿಕಾರ್ ಪಾಂಡುರಂಗ ಪೈ (ಇತರ ಸದಸ್ಯರು) ಆರಿಸಲ್ಪಟ್ಟರು ಶ್ರೀ ಎಸ್ ವಾಮನ ಭಟ್ಟರು ಧನ್ಯವಾದವಿತ್ತರು

ಉಡುಪಿ ತಾಲೂಕು ರೈತ ಸಮ್ಮೇಳನವು—ತಾ ೧೧ರಂದು ಅಜ್ಜರಕಾಡು ಮೈದಾನದಲ್ಲಿ ಶ್ರೀ ಎ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಸಂಜೀವ ರೈಗಳು ಸಮ್ಮೇಳನವನ್ನು ಉದ್ಘಾಟಿಸಿದರು ಶ್ರೀ ಟಿ ರಾಮಮೋಪಸ ಹೆಗ್ಡೆಯವರು ಸ್ವಾಗತಿಸಿದರು ಶ್ರೀ ಕೆ ದಾಸ ಸೇರಿಗಾರರು ವರದಿವಾಚನ ಮಾಡಿದರು ಜಿಲ್ಲೆ ವರದಿಗೆ ಸಂಬಂಧಿಸಿದ ವಿಷಯಗಳಲ್ಲಿ ಠರಾವುಗಳಾದುವು

ಮುನಿಸಿಪಲ್ ಕೌನ್ಸಿಲು ಸಭೆಯು ತಾ. ೧೨ರಂದು ಸಂಜೆ ಉಪಾಧ್ಯಕ್ಷ ಶ್ರೀ ಪಿ ವಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಸ್ಥಳೀಯ ಲಲಿತಾ ಕ್ಲಿನಿಕ್ ಸಂಸ್ಥೆಯ ಡಾ| ಬಿ ಬಿ ಶೆಟ್ಟಿರು ಅಜ್ಜರಕಾಡಿನ ತಮ್ಮ ಸರಿಗ್ ಹೋಟೆಲ್ ಕಟ್ಟಡವನ್ನು ಟೇಕ್ಸಿಂದ ಕೊರತುಗೊಳಿಸಬೇಕೆಂದು ಸಾಡಿಸಿ ಅರ್ಜಿ ಅಟ್ಟಿರು ತೀರ್ಮಾನಕ್ಕೆ ಮುಂದಿನ ಸಭೆಗೆ ಬಾಕಿಯಿಡಲಾಯಿತು ಶ್ರೀ ಎಸ್ ವೆಂಕಟೇಶ ನಾಯ್ಕರ ಸೂಚನೆಯಂತೆ ವಿಶಾಲೂ ಜಿಲ್ಲೆಗಿನ ಜನರಲ್ಲಿ ೩ ಗಂಟೆಯಿಂದ ರಸ್ತೆಗಳಲ್ಲಿ ವಿಶ್ಮಾರ್ಪಿಸಗಳನ್ನೆ ಉರಿಸಲು ಪ್ರಾರಂಭಿಸಿ ಸೂರ್ಯಾಸ್ತಮಯಕ್ಕೆ ಅರ್ಧಗಂಟೆ ಮೊದಲು ಕೊನೆಗೊಳಿಸಬೇಕೆಂದು ನಿರ್ಣಯಿಸಲಾಯಿತು

ಶೋಚನೀಯ ನಿಧನ—ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೆಂಕಿಂಗ್ ಸಿಂಡಿಕೇಟಿನ ಜನರಲ್ ಮೆನೇಜರ್ ಶ್ರೀ ಟಿ ಎ ವೈಗಳ ತಾಯಿ ಶ್ರೀಮತಿ ಪಾರ್ವತಿ ಬಾಯಿಯವರು ಇದೇ ತಾ ೩ರಂದು ರಾತ್ರಿ ೩ ಗಂಟೆಗೆ ಪರಲೋಕವಾಸಿಗಳಾದರೆಂದು ವಿಷಾದಿಸುತ್ತೇವೆ ಮರಣ ಕಾಲಕ್ಕೆ ಶ್ರೀಮತಿಯವರಿಗೆ ೨೯ ವರ್ಷ ಪ್ರಾಯವಾಗಿತ್ತು ದಿವಂಗತೆಯರು ಧರ್ಮಾಸ್ಥೆಯರೂ ಸದ್ಗುಣ ಸಂಪನ್ನೆಯೂ ಆಗಿದ್ದು ಜನಾನುರಾಗವನ್ನು ಗಳಿಸಿದ್ದರು ದಿವಂಗತೆಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ದುಃಖೀ ಕುಟುಂಬದಲ್ಲಿ ಸಹನಂತಾಪವನ್ನು ಸೂಚಿಸುವೆವು

ಖಾನ ಸಾಹೇಬರ ಪರಲೋಕಯಾತ್ರೆ—

ಸ್ಥಿತ ಮುತ್ತದಿಯೊಬ್ಬನ ಕಣ್ಮರೆ

ಸುಪ್ರಸಿದ್ಧ ರಾಜಕಾರಣ ಮುತ್ಸದ್ದಿ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಧೀರ ಸೇನಾಪತಿ ಡಾ ಖಾನ ಸಾಹೇಬರು ತಮ್ಮ ಇಹಲೋಕ ಯಾತ್ರೆಯನ್ನು ಅಮಾನುಷ ರೀತಿಯಲ್ಲಿ ಕೈಗೂಳ್ಳಬೇಕಾಗಿ ಬಂದಿತು ಡಾ. ಖಾನರು ಪಶ್ಚಿಮ ಪಾಕಿಸ್ತಾನದ ಮುಖ್ಯಮಂತ್ರಿಯಾಗಿದ್ದಾಗ, ಲಂಚ ಸ್ವೀಕರಿಸಿದ ಆರೋಪದ ಮೇಲೆ ನಿವೃತ್ತಿಹೊಂದಿದ ಕಂದಾಯ ಶಾಖೆಯಲ್ಲಿನ ಕಾರಕೂನನಾಗಿದ್ದ ಶ್ರೀ ಅತ್ತಾ ಮಹಮ್ಮದನೆಂಬ ೩೦ರ ಯುವಕನು ತನ್ನ ಸೇಡನ್ನು ತೀರಿಸುವ ಸಲುವಾಗಿಯೋ ಎಂಬಂತೆ ಚೂರಿಯಿಂದ ಇರಿದು ಅವರನ್ನು ಕೊಂದನೆಂಬ ವರದಿಗಳು ಬಂದಿವೆ

ಡಾ ಖಾನ ಸಾಹೇಬರು ೧೮೮೨ರಲ್ಲಿ ಪೇಶಾವರದ ಸಮೀಪ ಹುಟ್ಟಿ, ಪ್ರಾಥಮಿಕ ವಿದ್ಯಾಭ್ಯಾಸಾನಂತರ ಇಂಗ್ಲೆಂಡಿನಲ್ಲಿ ವೈದ್ಯಕೀಯವನ್ನು ಅಭ್ಯಸಿಸಿದರು ಅಲ್ಲಿ ಅಭ್ಯಾಸವಾಡುತಿದ್ದ ಯುವಕ ಜವಾಹರಲಾಲರ ಮೈತಿ ಅವರಿಗೆ ದೊರೆಯಿತು ೧೯೩೦ರಲ್ಲಿ ಖಾನಸಾಹೇಬರ ಕುಟುಂಬದವರೆಲ್ಲರೂ ಸವಿನಯ ಕಾಯದೆ ಭಂಗ ಚಳವಳಿಯಲ್ಲಿ ಸೇರಿ ಸೆರೆಮನೆಗೆ ಹೋಗಿದ್ದರು ಡಾ ಖಾನರು ತಮ್ಮೂರಲ್ಲಿ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿ ರಾಷ್ಟ್ರೀಯ ಶಿಕ್ಷಣ ಪ್ರಸಾರ ಮಾಡಿದರು ಇವರ ತಮ್ಮ ಗಡಿನಾಡ ಗಾಂಧಿ ಎಂದು ಹೆಸರಾಗಿದ್ದಾರೆ ೧೯೩೦ರಲ್ಲಿ ಅಣ್ಣ ತಮ್ಮಂದಿರಿಬ್ಬರೂ ಸ್ವಾತಂತ್ರ್ಯ ಚಳವಳಿಯಲ್ಲಿ ದುಮುಕಿದರು. ೧೯೩೭ರಲ್ಲಿ ಅವಿಭಕ್ತ ಭಾರತದಲ್ಲಿ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದಾಗ, ವಾಯವ್ಯ ಗಡಿಪ್ರಾಂತದಲ್ಲಿ ಮುಖ್ಯಮಂತ್ರಿಯಾದರು ಅತಿರ ಭಾರತದಿಂದ ತೊಲಗಿರಿ ಸತ್ಯಾಗ್ರಹದಲ್ಲಿಯೂ ಇವರು ಭಾಗವಹಿಸಿದ್ದರು

೧೯೪೬ರಲ್ಲಿ ಮುನಃ ಅಧಿಕಾರವನ್ನು ಕಾಂಗ್ರೆಸ್ ಸ್ವೀಕರಿಸಿದಾಗ, ಪೇಶಾವರದ ಪ್ರಧಾನರು ದೆಹಲಿ. ಆದರೆ, ಪಾಕಿಸ್ತಾನ ಪ್ರತ್ಯೇಕವಾದಾಗ ಇವರ ಅಧಿಕಾರವೂ ಹೋಯಿತು. ಆರು ವರ್ಷ ಸ್ಥಾನಬದ್ಧತೆಯಲ್ಲಿಯೂ ಇವರು ಇರಬೇಕಾಯಿತು. ಮುಂದೆ, ೧೯೫೫ರಲ್ಲಿ ಖಾನ ಸಾಹೇಬರು ಪಾಕಿಸ್ತಾನದ ಕೇಂದ್ರ ಸರಕಾರದ ಮಂತ್ರಿಯಾದರು ೫೫ರಲ್ಲಿ ಪಶ್ಚಿಮ ಪಾಕಿಸ್ತಾನದ ಮುಖ್ಯಮಂತ್ರಿಯಾಗಿ ದುಡಿದರು. ಆದರೆ, ಒಂದು ವರ್ಷದ ನಂತರ, ಅವರ ಸರಕಾರವನ್ನು ಪದಚ್ಯುತಗೊಳಿಸಲಾಯಿತು ಡಾ. ಖಾನ ಸಾಹೇಬರು ರಿಪಬ್ಲಿಕನ್ ಪಕ್ಷದ ನೇತಾರರಾಗಿದ್ದು, ಮಂತ್ರಿ ಪದವಿ ಹೋದನೆಂಬ ಪಕ್ಷದ ಸೇವೆಯಲ್ಲಿ ವ್ರತಸ್ಥರಾಗಿ ಉಳಿದಿದ್ದರು.

ಡಾ. ಖಾನ ಸಾಹೇಬರ ತಮ್ಮ ಅಂತ್ಯಕಾಲದಲ್ಲಿ ಪಾಕಿಸ್ತಾನಕ್ಕೆ ಸೇರಿದವರಾದರೂ, ಅವರು ಭಾರತಕ್ಕೆ ಸಲ್ಲಿಸಿದ ಸೇವೆಯು ಪ್ರಶಂಸಾರ್ಹವಾಗಿದೆ. ಅವರೀಗ ೭೭ ವರ್ಷದ ವೃದ್ಧರಾದರೂ ತಮ್ಮ ಕರ್ತವ್ಯವನ್ನು ಕ್ರಮಬದ್ಧವಾಗಿ ನಿರ್ವಹಿಸುವ ಕರ್ತೃತ್ವ ಶಕ್ತಿ ಅವರಲ್ಲಿತ್ತು. ಲಾಹೋರದಲ್ಲಿ ತಮ್ಮ ಮಗನ ಮನೆಯಂಗಳದಲ್ಲಿ ವರ್ತಮಾನ ಪತ್ರಿಕೆಗಳನ್ನು ಓದುತ್ತಿರುವಾಗಲೇ ಅವರ ಮೈಮೇಲೆ ಚೂರಿಯಿರಿತ ಬಿದ್ದಾಗ ಅವರು ಅತನನ್ನೋಡಿಸಿಕೊಂಡು ೩೦ ಗಜ ಧಾವಿಸಿದರೆಂಬ ವರದಿಯನ್ನು ನೋಡುವಾಗ, ಖಾನ ಸಾಹೇಬರ ಶಕ್ತಿ ಧೈರ್ಯ ಸಾಹಸಗಳ ಅರಿವಾಗುತ್ತದೆ.

ಖಾನ ಸಾಹೇಬರು ಪೈಗಂಬರ ವಾಸಿಗಳಾದುದರಿಂದ, ಕೇವಲ ಪಾಕಿಸ್ತಾನಕ್ಕೆ ಮಾತ್ರ ಹಾನಿಯೊದಗಿತೆಂದು ಹೇಳುವಂತಿಲ್ಲ ಭಾರತದ ಸ್ನೇಹಿತನೊಬ್ಬನೂ ಕಣ್ಮರೆಯಾದನೆನ್ನಬಹುದು ಎಂತಲೇ ಇಲ್ಲಿನ ಲೋಕ ಸಭೆಯಲ್ಲಿ ತನ್ನ ಹಳೆಯ ಸದಸ್ಯನಿಗೆ ಗೌರವಾರ್ಪಣೆಯನ್ನು ಮಾಡಲಾಯಿತು

ಖಾನಸಾಹೇಬರ ಕೊಲೆಯಾದ ಕಾರಣವೊಂದು ಕುತೂಹಲ ಹುಟ್ಟಿಸುವದ್ದಿದೆ ಭ್ರಷ್ಟಾಚಾರದ ಅಪಂಚಧದಿಂದ ಇವರು ಮುಖ್ಯಮಂತ್ರಿಯಾಗಿದ್ದಾಗ, ಉದ್ಯೋಗ ಕಳೆದುಕೊಂಡ ಪಟ್ವಾರಿಯು ಇದೀಗ ಖಾನರ ಮಧ್ಯಸ್ಥಿಕೆಯಿಂದ ತನ್ನ ಹೋದ ಉದ್ಯೋಗವನ್ನು ಮರಳಿ ಪಡೆಯುವ ಪ್ರಯತ್ನಮಾಡಿದನೆಂದೂ, ಅದರೆ, ಇದರಲ್ಲಿ ಆತನು ಅಸಫಲನಾಗಲು, ಸ್ವಲ್ಪ ಸಮಯಾನಂತರ ಮುನಃ ಬಂದು ಇರಿದನೆಂದೂ ಪಟವಾರಿಯು ಪೋಲೀಸರಿಗೆ ನುಡಿದಿದ್ದಾನೆ ಈ ಘಟನೆಯ ಪ್ರತಿಕ್ರಿಯೆ ಏನೆಂದು ನೋಡಬೇಕು

ಡಾ. ಖಾನಸಾಹೇಬರು ಸಿದ್ಧಸಾಹಸ್ಥರಾಗಿದ್ದರಲ್ಲದೇ ವೀರಯೋಧರೂ ಹೌದು. ಇವರಂತಹ ಪ್ರಾಮಾಣಿಕ ಹಾಗೂ ನಿರಾಡಂಬರ ವ್ಯಕ್ತಿಗಳು ಬೆರಳೆಣಿಕೆಯದ್ದು ಮಾತ್ರ ಇಂತಹ ಸ್ವಾತಂತ್ರ್ಯವೀರನು ಈ ರೀತಿಯಲ್ಲಿ ಅಮಾನುಷವಾಗಿ ಕೊಲೆಗೀಡಾದುದು ದುರ್ದೈವವೆನ್ನದೆ ಗತ್ಯಂತರವಿಲ್ಲ. ಮೃತರ ಆತ್ಮಕ್ಕೆ ಶಾಂತಿಯಿರಲಿ.

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ' ವಾರಪತ್ರಿಕೆ

ಉಡುಪಿ

ವಾರ್ಷಿಕ ಚಂದಾ—

ರೂ 5-12-0 (5=75)

6 ತಿಂಗಳಿಗೆ— ರೂ. 3-0-0

ಮುಂಗಡವಾಗಿ ಕಳಿಸಬೇಕು.

ಮಂಗಳೂರು

ಸತ್ಕಾರ ಕೂಟ— ದ. ಕ. ಜಿಲ್ಲೆಯ ಡಿಪ್ಯುಟಿ ಕಮಿಶನರ್ ಶ್ರೀ ವೈ. ಸಿ. ಹೊಂಬಾಳಯ್ಯನವರು, ತನ್ನ ಪುತ್ರಿ ಚಿ| ಸೌ| ಸಿ. ಎಚ್ ಶೇಷಾವತಿಯ ವಿವಾಹದ ಶಿವ ಮೊಗ್ಗಾದ ಅಸಿಸ್ಟಾಂಟ್ ಎಂಜಿನಿಯರ್ ಶ್ರೀ ಎಲ್. ಶಿವರಿಂಗಯ್ಯನವರೊಡನೆ ಜರಗಿದ ಸಮಿ ನೆನಪಿಗಾಗಿ ತಾ. 9ರಂದು ಸತ್ಕಾರಕೂಟ ಪೊಂದನ್ನೇರ್ಪಡಿಸಿದ್ದರು. ನಗರದ ಪ್ರತಿಷ್ಠಿತರೆ ನೇಕರು ಆಗಮಿಸಿ ವಧೂವರರನ್ನು ಆಶೀರ್ವ ದಿಸಿದರು. ಸತ್ಕಾರ ಸಮಾರಂಭದಲ್ಲಿ ಸಂಗೀತ ಕಾರ್ಯಕ್ರಮವೂ ಇದ್ದಿತು.

ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು—ತಾ. 9ರಂದು ಬೋರ್ಡಿನ ಸಭಾಭವನದಲ್ಲಿ ಶ್ರೀ ಎಸ್. ಎಸ್. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿಯ ಎಸ್. ಜಿ. ಒ ಗಳಿಗೆ ಮದ್ರಾಸು ಸರಕಾರವು ನೀಡಿದ್ದ ವೈದ್ಯಕೀಯ ಸವಲತ್ತು ಗಳನ್ನು ಕೊಡುವಂತೆ ಮೈಸೂರು ಸರಕಾರ ವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಈ ದಿನ ಬೆಳಿಗ್ಗೆ ಕೂಲಿ ಮಾಡಲ್ಪಟ್ಟ ಪಾಕಿ ಸ್ಥಾನದ ಡಾ. ಪಾಸ್ ಸಾಹೇಬರ ಸಿಫಾರಸ್ಸಿ ಗಾಗಿ ಸಂತಾಪಸೂಚಕ ನಿರ್ಣಯವಾಗಿ ಸಭಾ ಕಾರ್ಯ ಕೆಲಕಾಲ ಮುಂದೂಡಲಾಯಿತು. ಕೊಲ್ಲೂರು ಪ್ರವಾಸಿ ಬಂಗ್ಲೆಗೆ ಹೆಚ್ಚಿನ ಸಲ ಕರಣಗಳನ್ನು ಒದಗಿಸುವುದಕ್ಕಾಗಿ ರೂಪಾಯಿ 500 ಮಂಜೂರುಮಾಡಲಾಯಿತು. ಸುಳ್ಯ ಬೋರ್ಡು ಹೈಸ್ಕೂಲ್ ಕಟ್ಟಡ ಕಾರ್ಯಕ್ಕೆ ಅಂದಾಜು ವೆಚ್ಚಗಳನ್ನು ಮಂಜೂರುಮಾಡ ಲಾಯಿತು. ಸಾಧಾರಣ ರೂ. 76050 ಬಜೆಟ್ ನಿಂದ ಕಟ್ಟಿಸಲ್ಪಡುವ ಈ ಶಾಲಾ ಕಟ್ಟಡಕ್ಕೆ ಸರಕಾರದ ಸಹಾಯಧನ ರೂ. 32,820 ಸಿಗುವುದು ಅಗತ್ಯವಿದ್ದಷ್ಟು ವಿದ್ಯಾಯೋಗ್ಯತೆ ಯಿದ್ದು ಹೈಸ್ಕೂಲು ತರಗತಿಗಳಲ್ಲಿ ಕಲಿಸುವ ಭಾಷಾ ಪಂಡಿತರನ್ನು ರೂ. 75-5-90-6-150 10-180 ಸಂಬಳವುಳ್ಳ ಗ್ರೇಡಾ I ಎಂದು ಪರಿಗಣಿಸಬೇಕೆಂದು ನಿರ್ಧಾರವಾ ಯಿತು.

ದ. ಕ. ಜಿಲ್ಲಾ ಲೈಬ್ರೆರಿ ಎಸೋಸಿಯನ್ ಉದ್ಘಾಟನೆ— ಯನ್ನು ತಾ. 8ರಂದು ಪದ್ಮಶ್ರೀ ಎಸ್. ಆರ್. ರಂಗನಾಥನ್‌ರವರು ಉದ್ಘಾಟಿಸಿದರು. ಇದೇ ಸಂದ ಭದಲ್ಲಿ ದೇಶಭಕ್ತ ದಿ. ಕಾರ್ನಾಡು ಸದಾಶಿ ವರಾಯರ ತೈಲಚಿತ್ರವನ್ನು ಮಾಣಿಮುಂತ್ರಿ ಶ್ರೀ ಎ. ಬಿ. ಶೆಟ್ಟರು ಅನಾವರಣಮಾಡಿದರು. ಶ್ರೀಗಳಾದ ವಿ. ಎಸ್. ಕುಡ್ಲ, ಎಂ. ಮಹಾಬಲ ಭಟ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಲೋಕಲ್ ಲೈಬ್ರೆರಿ ಅಥೋರಿಟಿಯ ಅಧ್ಯಕ್ಷ ಶ್ರೀ ಎಸ್. ಎಸ್. ಏಕಾಂಬರಯಾಯರು ಧನ್ಯವಾದವಿತ್ತರು.

ಜಿಲ್ಲಾ ಬೋರ್ಡು ಕಾಮುಗಾರೀ ಸಮಿತಿ—ತಾ. 9ರಂದು ಶ್ರೀ ಎಸ್. ಎಸ್. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರ ಗಿದ ದ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯಲ್ಲಿ ಶ್ರೀ ಎ ನಾರಾಯಣ ಹೆಗ್ಗಡೆಯ ವರನ್ನು ಜಿಲ್ಲಾಬೋರ್ಡು ಕಾಮುಗಾರೀ ಸಮಿತಿಯ ಸದಸ್ಯರಾಗಿ ಪುನಃ ಆರಿಸಲಾಯಿತು.

ಸತ್ಕಾರಕೂಟ— ದ. ಕ. ಜಿಲ್ಲಾ ವೈದ್ಯಸಂಘದವರು ತಾ. 10ರಂದು ಡಾ. ಎಮ್. ಸಿ. ಮೋದಿಯವರಿಗೆ ಸತ್ಕಾರಕೂಟವನ್ನೇರ್ಪ ಡಿಸಿ ಗೌರವಿಸಿದರು. ಮುಖ್ಯ ಅತಿಥಿಗಳು ಮಾತನಾಡುತ್ತಾ ವೈದ್ಯಕೀಯ ಕ್ಷೇತ್ರದಲ್ಲಿಯ ಸಂಶೋಧನಾ ಕಾರ್ಯಗಳು ನಡೆಯಬೇಕೆಂ ದರು. ಡಾ. ಟಿ. ಎಸ್. ಎ. ವೈಗಳು ವೈದ್ಯ ಕೀಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯ ನ್ನು ಪ್ರಶಂಸಿಸಿದರಲ್ಲದೆ ಅವರ ಮಾದರಿಯ ನ್ನು ಇತರರು ಅನುಸರಿಸುವಂತಾಗಬೇಕೆಂದರು ಆರಂಭದಲ್ಲಿ ವೈದ್ಯ ಸಂಘದ ಅಧ್ಯಕ್ಷ ಡಾ. ಎಮ್. ಸಿ. ಶಾಸ್ತ್ರಿಗಳು ಸ್ವಾಗತಮಾಡುಗಳ ನ್ನಾಡಿದರು. ಕೊನೆಯಲ್ಲಿ ಡಾ. ಬಿ. ಆರ್. ಹರಿದಾಸರು ಧನ್ಯವಾದವಿತ್ತರು. ನೇತ್ರ ಶಸ್ತ್ರ ಶಿಬಿರ ಸಮಿತಿ ಕಡೆಯಿಂದಲೂ ಭೋಜನ ಸತ್ಕಾರ ನಡೆಯಿತು

ಕರ್ನಾಟಕ ಬೇಂಕನ—ಶಾಖೆಯೊಂ ದು ತಾ. 9ರಂದು ಸುಂಠಿಕೊಪ್ಪದಲ್ಲಿ ಶ್ರೀ ಆರ್. ಸಿ. ಪೆಟರ್‌ಸನ್, ಅವರಿಂದ ಉದ್ಘಾ ಟಿಸಲ್ಪಟ್ಟಿತು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಬೇಂಕಿನ ಡೈರೆಕ್ಟರ್ ಮಂಡಳಿಯ ಪರಿಚಯನೂಡಿಕೊಟ್ಟರು. ಶ್ರೀ ಜಿ. ಎಸ್. ಮಂಜುನಾಥಯ್ಯನವರು ಧನ್ಯವಾದವಿತ್ತರು.

ಅಂಚೆ ತಂತಿ ಸಮಿತಿಗಳ ವಾರ್ಷಿಕ ಸಮ್ಮೇಳನವನ್ನು—ತಾ. 11ರಂದು ಗಣ ಪತಿ ಹಾಸ್ಕೂಲಿನಲ್ಲಿ ಮೈಸೂರು ರಾಜ್ಯ ಪ್ರಜಾಸೋಶಲಿಸ್ಟ್ ಪಕ್ಷದ ಶ್ರೀ ಕೆ. ಆರ್. ಕಾರಂತರು ಉದ್ಘಾಟಿಸುತ್ತಾ, ದೇಶದಲ್ಲಿ ಅ ಪ್ರಮಾಣಿಕತೆಯ ಹೆಚ್ಚಳಕ್ಕೆ ಏರುತ್ತಿರುವ ಬೆಲೆಗಳೇ ಕಾರಣವೆಂದು ಹೇಳಿದರು

ಅಖಿಲ ಭಾರತ ಎ. ಐ. ಟಿ. ಯು ಉಪಾ ಧ್ಯಕ್ಷರಾದ ಶ್ರೀ ಕೆ. ರಾಮಮೂರ್ತಿಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ ಎಸ್. ಭಾಸ್ಕರ ರೈಗಳು ಸ್ವಾಗತಭಾಷಣಮಾಡಿದರು. ದ. ಕ. ಜಿಲ್ಲಾ ಪೋಸ್ಟಲ್ ಸಾಂಘಿಂಟೆಂಟ್ ಶ್ರೀ ಎಮ್. ಕೆ ಅಪ್ಪಾದೊರೈ, ಶ್ರೀಗಳಾದ ಎಮ್. ವೆಂಕಟಸ್ವಾಮಿ, ಸಿ. ಎ. ಸಾಲ್ಡಾನಾ ಮೊದಲಾದವರು ಕಾಲೋಚಿತ ಭಾಷಣಮಾ ಡಿದ್ದರು.

ಬೊಂಬಾಯಿ

ಬಂಟರ ಯಾನೆ ನಾಡವರ ಸಂಘ, ಬೊಂಬಾಯಿ—ಇದರ 30ನೇ ವಾರ್ಷಿಕ ಮಹಾ ಸಭೆ ಮತ್ತು ಚತುರ್ಥ ಸ್ನೇಹ ಕೂಟ ಸಮಾರಂಭಗಳು ಕಳೆದ ತಾ. 27ರಂದು ಸಂ ಘದ ಉಪಾಧ್ಯಕ್ಷ ಶ್ರೀ ಶ್ಯಾಮ ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಗೌ| ಕಾರ್ಯದ ರ್ಶಿ ಶ್ರೀ ಎಮ್. ಗಂಗಯ್ಯ ಶೆಟ್ಟರು ಗತ ವರ್ಷದ ವರದಿಯನ್ನೋದಿದರು.

ಹೊಸ ವರ್ಷಕ್ಕೆ ಶ್ರೀಗಳಾದ ಕೆ. ಕೆ. ಅಜಿಲ (ಅಧ್ಯಕ್ಷ), ಕೆ. ವೆಂಕಪ್ಪ ಹೆಗ್ಡೆ (ಉಪಾಧ್ಯಕ್ಷ), ಚಿಂಬರ ಶೆಟ್ಟಿ (ಗೌ. ಪ್ರ. ಕಾರ್ಯದರ್ಶಿ), ಕೆ. ಕರುಣಾಕರ ಶೆಟ್ಟಿ (ಗೌ. ಉಪಕಾರ್ಯದರ್ಶಿ), ಬಿ. ಗೋಪಾಲ ಕೃಷ್ಣ ರೈ (ಗೌ. ಕೋಶಾಧಿಕಾರಿ), ಎಸ್. ಗೋಪಾಲ ಶೆಟ್ಟಿ (ಗೌ. ಉಪಕೋಶಾಧಿಕಾರಿ) ಮತ್ತು 29 ಮಂದಿ ಇತರರು ಕಾರ್ಯನಿರ್ವಾಹಕ ಸಮಿತಿಗೆ ಆರಿಸಲ್ಪಟ್ಟರು.

ಸ್ಕೂಲ್ ಕಮಿಟಿಗೆ ಶ್ರೀಗಳಾದ ಕೆ. ದಾಟ ಶೆಟ್ಟಿ(ಚೆಲ್‌ಮೆನ್), ಮುತ್ತಯ್ಯ ಕೆ. ಶೆಟ್ಟಿ ಮತ್ತು ಟಿ. ಶ್ಯಾಮರಾಯ ಶೆಟ್ಟಿ(ಗೌ| ಕಾರ್ಯದ ರ್ಶಿಗಳು), ಸುಂದರ ಬಿ. ಶೆಟ್ಟಿ (ಗೌ| ಕೋಶಾ ಧಿಕಾರಿ) ಮಹಾಬಲ ಎಸ್. ಶೆಟ್ಟಿ (ಗೌ| ವಾಜನಾಲಯಾಧಿಕಾರಿ) ಮತ್ತಿತರ 7 ಮಂದಿ ಆರಿಸಲ್ಪಟ್ಟರು.

ಮುಂಬಯ ದ. ಕ. ಬ್ರಾಹ್ಮಣರ ಸಂಘ—ದ ಆಶ್ರಯದಲ್ಲಿ ತಾ 4ರಲ್ಲು ಶಂ ಕರ ಜಯಂತಿ ಉತ್ಸವವನ್ನು ಆಚರಿಸಲಾ ಯಿತು. ಸ್ವಾಮಿ ಭಾಸ್ಕರಾನಂದ ಸ್ವಾಮಿಜೀ ಯವರು ಶ್ರೀ ಶಂಕರಾಚಾರ್ಯರ ಜೀವನ ಹಾಗೂ ಅವರ ಪ್ರಚಾರ ಕಾರ್ಯದ ಕುರಿತು ಉಪನ್ಯಾಸ ಮಾಡಿದರು. ಸಂಘದ ಅಧ್ಯಕ್ಷ ಶ್ರೀ ಕೆ ಭಾಜಗರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಮೈಸೂರು ಸರಕಾರದ ಬಹು ಮಾನ ಪಡೆದ ಕನ್ನಡ ಸಾಹಿತಿಗಳಾದ ಶ್ರೀ ಎನ್. ವ್ಯಾಸರಾಯ ಬಲ್ಲಾಳರನ್ನು ಈ ಸಂ ದರ್ಭದಲ್ಲಿ ಗೌರವಿಸಲಾಯಿತು.

ಸೂರತ— ಸ್ಥಳೀಯ ಶ್ರೀ ಸುಬ್ರಹ್ಮಣ್ಯ ಹಾ| ಎ| ಬಿಲೆ ಮತ್ತು ಸೂಡಾ ಬೋರ್ಡು ಎಲಿಮೆಂಟರಿ ಶಾಲೆಗಳ ವರ್ಷಾಂತ್ಯ ಸಮಾರಂ ಭವು ತಾ. 8ರಂದು ಅಧಿಮಾರು ಮಠದ ಶ್ರೀ ಸಿದ್ಧಾಧೇರತೀರ್ಥ ಸ್ವಾಮಿಗಳವರ ಅಧ್ಯಕ್ಷತೆ ಯಲ್ಲಿ ಜರಗಿತು. ಪಟೇಲ್ ಶ್ರೀ ಎಸ್. ಶೀನಪ್ಪ ಹೆಗ್ಡೆಯವರು ಸ್ವಾಮಿಗಳವರಿಗೆ ಮಾನಪತ್ರ ಅರ್ಪಿಸಿದರು. ಕಾರ್ಕಳ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಶಾಲು ಭಟ್ಟರು ಬಹುಮಾನ ವಿತರಣೆ ಮಾಡಿದರು. ಅಂದು ಬೆಳಿಗ್ಗೆ ಸೂಡಾ ಪಂಚಾಯತದ ಅಧ್ಯ ಕ್ಷ ಎಸ್. ಮುದ್ದಣ್ಣ ಹೆಗ್ಡೆಯವರ ನಾಯ ಕತ್ವದಲ್ಲಿ ಧ್ವಜಾರೋಹಣ ಕಾರ್ಯಕ್ರಮ ವಾಯಿತು.

ಕಡಿರುದ್ಯಾವರ—ಇಲ್ಲಿಯ ಪಂಚಾಯ ತ ಪ್ರೆಸಿಡೆಂಟ್ ಶ್ರೀ ವಿ. ಎ. ಗಾಡರು ಬೆಂಗಿಳ್ಳೆ ರವಾಗಿ ಕಟ್ಟಿಸಿದ ಪ್ರಾಥಮಿಕ ಶಾಲಾ ಕಟ್ಟಡ ದ ಉದ್ಘಾಟನೆಯನ್ನು ತಾ 3ರಂದು ಬೆಳ್ತಂಗ ಡಿ ತಾಲೂಕು ತಹಶಿಲ್ದಾರರು ನೆರವೇರಿಸಿ ದರು. ಬೆಳ್ತಂಗಡಿ ಬೋರ್ಡು ಹೈಸ್ಕೂಲಿನ ಪ್ರಾಧ್ಯಾಪಕ ಶ್ರೀ ಎಮ್. ರಾಮ ಭಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜನ ಮನರಂಜನ ಕಾರ್ಯಕ್ರಮಗಳಿದ್ದುವು.

ಬಂಟ್ವಾಳ— ಸ್ಥಳೀಯ ಎಸ್. ಪಿ. ಎಸ್. ಹೈಸ್ಕೂಲಿನಲ್ಲಿ ನಡೆದ ವ್ಯಾಕರಣ ಗೋಷ್ಠಿಯ ಅಂಗವಾಗಿ ತಾ. 6ರಲ್ಲು ಕನ್ನಡ ವ್ಯಾಕರಣ ಗೋಷ್ಠಿಯಲ್ಲಿ ಶ್ರೀಮತಿ ಕೃಷ್ಣಿ ವೇಣಿಯವರು "ಕನ್ನಡ ಪಠ್ಯ ಪುಸ್ತಕಗಳು" ಎಂಬ ವಿಷಯದ ಮೇಲೆ ಉಪನ್ಯಾಸವಿತ್ತರು, ಗೋಷ್ಠಿಯ ನಿರ್ದೇಶಕರಾದ ಶ್ರೀ ಬಿ. ವಿ. ತಮಣಿಯವರು ಹಲವಾರು ಸಲಹೆಗಳನ್ನಿತ್ತ ರು. ಶ್ರೀ ಬಿ. ಭಾಸ್ಕರಾಯಯರು ಧನ್ಯವಾದ ವಿತ್ತರು.

ಕಾರ್ಕಳ—ಕಲ್ಲಗುಪ್ಪೆ ಬೋರ್ಡು ಎಲಿ ಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ತಾ. 11ರಂದು ಕಾರ್ಕಳ ಡಿ| ಮುನ್ಸಿಫ್ ಶ್ರೀ ಎಚ್. ಲಕ್ಷ್ಮಣ ಸಾಲಿಯಾನರು ಉದ್ಘಾಟಿ ಸಿದರು ಶ್ರೀ ಬಿ. ಎಸ್. ಭಾಸ್ಕರ ರೈಗಳು ಧ್ವಜಾರೋಹಣ ಮಾಡಿದರು. ಶ್ರೀ ಸೋಮ ನಾಥ ಗೋಪಾಲಯವರು ಸ್ವಾಗತ ಮಾತುಗಳ ನ್ನಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಕೃಷ್ಣ ಹೆಗ್ಡೆಯವರು ಶಾಲಾ ವರದಿಯನ್ನೂ ಶಾಲಾ ಕಟ್ಟಡ ಸಮಿತಿ ವರದಿಯನ್ನು ಶ್ರೀ ಬಿ. ಗಣಪತಿರಾಯರೂ ಓದಿದರು. ಶ್ರೀಗಳಾ ದ ಇ. ಕೃಷ್ಣಮೂರ್ತಿ ಹಿ. ಎಚ್. ರಘುರಾ ಮರಾವ್, ಎಸ್. ಆರ್. ಆಚಾರ್, ಟಿ. ಅನಂತರಾಮ ಭಟ್ಟ ಮೊದಲಾದವರು ಕಾ ಲೋಚಿತ ಮಾತುಗಳನ್ನಾಡಿದರು.

ಕುಂದಾಪುರ— ಸ್ಥಳೀಯ ಶಾಲಾ ಲೋಕಲ್ ಲೈಬ್ರೆರಿಯಲ್ಲಿ ಗ್ರಂಥಾಲಯ ಸಪ್ತಾಹ ಮತ್ತು ಪುಸ್ತಕ ಪ್ರದರ್ಶನ ಸಮಾ ರಂಭವು ತಾ 7ರಂದು ಶ್ರೀ ಎಸ್. ಎಸ್. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರ ಗಿತು. ಶ್ರೀ ಕೆ ಎಲ್. ಕಾರಂತರು ಕಾಲೋಚಿತ ಭಾಷಣಮಾಡಿದರು. ಶ್ರೀ ಕೆ. ಸಂಜೀವ ಶೆಟ್ಟರು ಧನ್ಯವಾದಗಳನ್ನಿತ್ತರು.

ಕುಂದಾಪುರ— ಉಡುಪಿ ತಾಲೂಕು ಕು ಂದಾಪುರದಲ್ಲಿ ಶ್ರೀ ಕೆಮ್ಮೂರು ಲಕ್ಷ್ಮಣ ಶೆಟ್ಟರು ಕಟ್ಟಿಸಿದ ನೂತನ ಗೃಹ ಪ್ರವೇಶ ಸಮಾರಂ ಭವು ತಾ. 9ರಂದು ವಿಧಿಪೂರ್ವಕ ವೈಭವ ದಿಂದ ನಡೆಯಿತು.

ದೇವಲ್ಕುಂದ- ಸ್ಥಳೀಯ ಶ್ರೀ ವಿಜಯಾ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ವು ತಾ. 11ರಂದು ಕುಂದಾಪುರ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎ. ನರ ಶಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ವಿವಿ ಧ ಕಾರ್ಯಕ್ರಮಗಳಾದುವು.

ವಿವಾಹ ಸಮಾರಂಭಗಳು -ಕುಂ ದಾಪುರದ ಶ್ರೀ ಎಸ್. ಎಸ್. ಕೊಳ್ಳೆಬೈಲರ ಪುತ್ರಿ ಸೌ| ವಸಂತಿಯು ದಿ. ಬಿ. ಸಂಜೀವ ರೈಗಳ ಪುತ್ರ ಶ್ರೀ ಚಿತ್ತರಂಜನ ರೈಗಳನ್ನು ತಾ. 9ರಂದು ಮುಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ವಿವಾಹವಾದರು.

ಮೂಲ್ಕಿಯ ದಿ| ಎಮ್ ಆರ್. ಪೂಂಜರ ಪುತ್ರಿ ಸೌ| ಕುಸುಮ ಇವರ ವಿವಾಹವು ಬೆಂಗಳೂರಿನ ದಿ| ಬಿ ಜಿ ಅಪ್ಪಾದೊರೈ ಮುದಲಿಯಾರರ ಪುತ್ರ ಶ್ರೀ ಚಂದ್ರಸೇಖರಾದಿಗೆ ತಾ 9ರಂದು ಮದ್ರಾಸಿನಲ್ಲಿ ಜರಗಿತು.

ಶ್ರೀ ಎಮ್. ಪದ್ಮನಾಭ ಕಾಮತರ ಪುತ್ರ ಶ್ರೀ ಶ್ರೀನಿವಾಸ ಕಾಮತರು ಶ್ರೀ ಯು. ಸುಂದರ ಕಾಮತರ ಪುತ್ರಿ ಸೌ. ವಸಂತಿಯ ನ್ನು ಕಳೆದ ತಾ. 28ರಂದು ಗುಂಡಿಬೈಲಿನ ವಧುವಿನ ಗೃಹದಲ್ಲಿ ವಿವಾಹವಾದರು.

ಶ್ರೀ ಕೊಚ್ಚಿಕಾರ್ ನರಶಿಂಹ ಪೈಗಳ ಪುತ್ರ ಶ್ರೀ ವೆಂಕಟ್ರಾಯ ಪೈಗಳು ಶ್ರೀ ಎಮ್. ಜಿ. ಅನಂತ ಪೈಗಳ ಪುತ್ರಿ ಸೌ. ಶಾಂತಳನ್ನು ತಾ. 5ರಂದು ಮಂಗಳೂರಿನ ವಧುವಿನ ಗೃಹದಲ್ಲಿ ವಿವಾಹವಾಗಿರುವರು.

ದಿ. ಕೆ. ಸಿ. ಅಳ್ವರ ಪುತ್ರಿ ಸೌ. ಪ್ರಭಾ ವತಿ ಮತ್ತು ಶ್ರೀ ಎಸ್. ಶೀನಪ್ಪ ಶೆಟ್ಟರ ಪುತ್ರ ಶ್ರೀ ಶೇಖರ-ಇವರ ವಿವಾಹ ಸಮಾ ರಂಭವು ತಾ. 5ರಂದು ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ನಡೆಯಿತು.

ಶ್ರೀ ಮುಂಡಾಜಿ ಕೊರಗಪ್ಪ ರೈಗಳ ಪುತ್ರ ಶ್ರೀ ವಿಠಲ ರೈಗಳು ದಿ ಎಮ್. ಐತಪ್ಪ ಶೆಟ್ಟರ ಪುತ್ರಿ ಕುಮಾರಿ ಸುನಂದಳನ್ನು ತಾ. 5ರಲ್ಲು ಪುತ್ತೂರಿನ ಅರುಣ ಥಿಯೇಟರಿನಲ್ಲಿ ವಿವಾಹವಾದರು.

ಶ್ರೀ ಬಿ ಮಂಜಯ್ಯ ಹೆಗ್ಗೆರ ಪುತ್ರಿ ಸೌ. ಕೃಷ್ಣಕುಮಾರಿ ಮತ್ತು ಶ್ರೀ ಕೆ. ವಿ. ಶೀನಪ್ಪ ಶೆಟ್ಟರ ಪುತ್ರಶ್ರೀ ಸದಾಶಿವ ನವರ ವಿವಾಹಮಹೋತ್ಸವವು ತಾ 8ರಂದು ಮಂಗಳೂರಿನ ಡೋನ್ ಬೋಸ್ಕೊ ಹಾಲಿನಲ್ಲಿ ಜರಗಿತು.

ಶ್ರೀ ಪಿ. ಪದ್ಮನಾಭಯಾಯರ ಪುತ್ರಿ ಕು ಮಾರಿ ರಮಾದೇವಿ ಮತ್ತು ಶ್ರೀ ಪಿ. ರಾಘ ವೇಂದ್ರರಾಯರ ಪುತ್ರ ಶ್ರೀ ಪಿ. ಶ್ರೀನಿವಾಸ ರಾವ ಇವರ ವಿವಾಹ ಸಮಾರಂಭವು ತಾ. 5ರಂದು ವಧುವಿನ ಉಡುಪಿ ನಿವಾಸದಲ್ಲಿ ಸಾಂ ಗವಾಯಿತು.

ನೂತನ ದಂಪತಿಗಳಿಗೆ ಸೇವಯುಗದ ಶು ಭಾಶಯಗಳು.



ಶ್ರೀ ಹೆರಾಲ್ಡ್ ವಾಟ್ಸನ್ (ಬ್ರಿಟನ್) ಮತ್ತು ಸಿನೇಟರ್ ಜೇನ್ ಬಾಲ್ಟಿಜ್ (ಆಸ್ಟ್ರೇಲಿಯಾ) ಇವರು ಬ್ರಿಟನ್ ಮತ್ತು ಆಸ್ಟ್ರೇಲಿಯಾಗಳ ನಡುವೆ ವಾಯುಮಾರ್ಗಗಳ ಸಲು ವಾಗಿ ಒಪ್ಪಂದಕ್ಕೆ ಸಹಿಹಾಕುತ್ತಿದ್ದಾರೆ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿನ್ಸರು: ಷಾ ಕಂಪೆನಿ, ಮಂಗಳೂರು—1.

ವಾರದ ಮಹಾನುಭಾವ—

ಆಚಾರ್ಯ ಕೃಪಲಾನಿ

ಭಾರತೀಯ ಲೋಕಸಭೆಯಲ್ಲಿ ಎದ್ದು ತೋರುವ ಒಂದು ಕೊರತೆಯೆಂದರೆ, ಸಂವಿಧಾನರೂಪವಾಗಿ ವಿರೋಧೀಪಕ್ಷವೆಂದು ಮಾನ್ಯತೆಯನ್ನು ಪಡೆಯುವ ಅಧಿಕಾರಸಹಿತವಾದ ಪಕ್ಷ ಮಾತ್ರ. ಆದರೂ ಕೆಲವು ವಿರೋಧೀದೆಳಗಳ ನಾಯಕರೆಲ್ಲರೂ ಒಂದುಸೇರಿ ಸಾಕಷ್ಟು ಶಕ್ತಿಯುಕ್ತವಾದ ವಿರೋಧೀ ಪಕ್ಷವೆಂದು ಮಾನ್ಯತೆಯನ್ನು ಪಡೆಯಲು ಸಮರ್ಥವಾದ ಒಂದು ಸಂಯುಕ್ತದಳವನ್ನು ಕಟ್ಟಿಕೊಳ್ಳಲು ನಿಶ್ಚಯಿಸಿದರು ಹೀಗಿಂಗಿ ಪ್ರಜಾಸಮಾಜವಾದಿ, ಸಂಯುಕ್ತ ಪ್ರಗತಿಶೀಲ ಪಕ್ಷಗಳು ಮತ್ತು ಗಣತಂತ್ರ ಪರಿಷತ್ತುಗಳು ಒಂದುಸೇರಿ ಇತ್ತೀಚೆಗೆ ಒಂದು ನೂತನ ವಿರೋಧೀ ಪಕ್ಷವನ್ನು ಕಟ್ಟಿದವು ಈಗ ಈ ಸಂಯುಕ್ತರಂಗದಲ್ಲಿ ೦೦ ಸದಸ್ಯರಿದ್ದು, ಕಲಸಮಯದನಂತರ ಇನ್ನೂ ಕೆಲವು ಸದಸ್ಯರು ಇದನ್ನು ಸೇರಲಿರುವರು ಆಗಕಡಿಮೆಯೆಂದರೆ ೫೦ ಸದಸ್ಯರಾದರೂ ಒಂದುಸೇರುವಂತಾಗಬಹುದು, ಮತ್ತು ಇದು ಸಾಂವಿಧಾನಿಕ ರೂಪದಲ್ಲಿ ವಿರೋಧೀ ಪಕ್ಷವೆಂದು ಮಾನ್ಯತೆಯನ್ನು ಪಡೆಯುವ ಸಾಮರ್ಥ್ಯವನ್ನು ಪಡೆಯುವುದು ಈ ಸಂಯುಕ್ತರಂಗದ ನಾಯಕರಾಗಿ ಆಚಾರ್ಯ ಕೃಪಲಾನಿಯವರು ಆರಿಸಲ್ಪಟ್ಟಿದ್ದಾರೆ.

ಆಚಾರ್ಯ ಕೃಪಲಾನಿಯವರು ಭಾರತೀಯ ವಯೋವೃದ್ಧ ನೇತಾರರಲ್ಲೊಬ್ಬರು. ಅವರಿಗೆ ದೇಶದಲ್ಲಿ ಮಹತ್ವಪೂರ್ಣವಾದ ಸ್ಥಾನವಿದೆ. ಅವರು ಭಾರತೀಯ ಸ್ವಾತಂತ್ರ್ಯಸಂಗ್ರಾಮದಲ್ಲಿ ಕರ್ಣಧಾರನ ಕಾರ್ಯವನ್ನು ನಿರ್ವಹಿಸಿರುವರು ಅವರ ತ್ಯಾಗ, ಬಲಿದಾನ, ನಿಸ್ವಾರ್ಥಸೇವೆ ಮತ್ತು ಪ್ರತಿಭೆಯಲ್ಲಿ ಸಂದೇಹಪಡುವ ಅಂಶವೊಂದೂ ಇರುವುದಿಲ್ಲ, ಆರಂಭದಿಂದಲೂ ಗಾಂಧೀಜಿಯವರೊಡನೆ ಅವರ ಸಂಪರ್ಕ ಅತ್ಯಂತ ನಿಕಟವಾಗಿತ್ತು. ಇಂದಿಗೂ ಗಾಂಧೀವಾದದಲ್ಲಿ ಆಚಾರ್ಯ ಕೃಪಲಾನಿಯವರಿಗಿರುವ ನಿಷ್ಠೆಯು ಅತಿ ದೃಢವಾಗಿದೆ ಪತ್ತು ಗಹನವಾಗಿದೆ ಅವರ ಜೀವನದ ಒಂದು ವಿರೋಧಾಭಾಸವೆಂದರೆ, ಅವರು ಗಾಂಧೀವಾದದ ನಿಷ್ಠಾವಂತರಾಗಿದ್ದರೂ, ಪ್ರಜಾಸಮಾಜವಾದಿ ಪಕ್ಷದ ಸ್ಥಾಪಕರೂ ಇಂದಿನ ನಾಯಕರೂ ಆಗಿದ್ದಾರೆ ಪ್ರಜಾಸಮಾಜವಾದಿ ಪಕ್ಷದಲ್ಲಿದ್ದರೂ [ಅವರು ಗಾಂಧೀವಾದಿ ಸಿದ್ಧಾಂತಗಳಲ್ಲಿ ತಮಗಿರುವ ಆಸ್ಥೆಯನ್ನು ವ್ಯಕ್ತಪಡಿಸುವುದರಲ್ಲಿ ಎಳ್ಳಷ್ಟೂ ಸಂದೇಹವ್ಯಕ್ತಪಡುವುದಿಲ್ಲ ಸೈದ್ಧಾಂತಿಕ ಮತಭೇದವಿದ್ದರೂ ಪಕ್ಷದ ಶಾಸನಶಾಸನವನ್ನು ಪಾಲಿಸುವುದರಲ್ಲಿ ತಾನು ಆದರ್ಶವಾದುದು ಅನ್ಯರನ್ನು ಅಂತೆಯೇ ನಡೆಯಬೇಕೆಂದು ಹೇಳುತ್ತಿರುವುದು ಆಚಾರ್ಯರಲ್ಲಿರುವ ಒಂದು ಪರಮ ವೈಶಿಷ್ಟ್ಯ

ಶ್ರೀ ಕೃಪಲಾನಿಯವರ ಆಲೋಚನೆಯು ಅತ್ಯಂತ ತೀವ್ರವೂ ತೀಕ್ಷ್ಣವೂ ಪ್ರಭಾವಶಾಲಿಯೂ ಆಗಿದೆ. ಲೋಕಸಭೆಯಲ್ಲವರು ವ್ಯಾಯ. ತೀರ ಕಡಿಮೆ ಮಾತಾಡುತ್ತಾರೆ; ಆದರೆ, ಅವರಿಗೆ ಮಾತಾಡುವ ಅವಕಾಶವು ದೊರೆತಾಗ, ಸಂಸತ್ಸದಸ್ಯರು ಒಳ್ಳೆ ಕೂತೂಹಲ ಮತ್ತು ಆಸ್ಥೆಯಿಂದ ಅವರ ಮಾತುಗಳನ್ನು ಪ್ರತೀಕ್ಷಿಸುತ್ತಾರೆ ಹಾಗೆಯೇ ಅನ್ಯಜನರಿಗೂ ಅವರ ಭಾಷಣಗಳಲ್ಲಿ ಅಭಿರುಚಿಯಿದೆ ಇಂತಹರ ನೇತೃತ್ವದಲ್ಲಿ ನಿರ್ವಿಕಲ್ಪವಾದ ನೂತನ ವಿರೋಧೀ ಸಂಯುಕ್ತರಂಗವು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿನ ವಿರೋಧೀ ಪಕ್ಷಗಳ ನಿಜಕರ್ತವ್ಯವನ್ನು ಸಂಪೂರ್ಣವಾಗಿ ಸೂರೈಸುವುದರಲ್ಲಿ ಸಂದೇಹಪಡದೀಲು ಸಾಧ್ಯವಿದೆ ಹಾಗೆಯೇ ಆಗಲೆಂದು ಹಾರೈಸುತ್ತೇನೆ

ಲೋಕ ತಂತ್ರದಲ್ಲಿ ಸರಕಾರೀ ಪಕ್ಷದ ಮಹತ್ವಿಕೆಯಂತೆಯೇ ವಿರೋಧೀ ಪಕ್ಷದ ಪಾತ್ರವೂ ಇದೆ. ವಿರೋಧೀ ಪಕ್ಷವು ಪ್ರಬಲವಾಗಿದ್ದು, ಸರಕಾರೀ ಪಕ್ಷದ ಹುಳುಕುಗಳನ್ನು ಎತ್ತಿ ತೋರಿಸಿದೇನೇ

ದಕ್ಷಿಣ ಧ್ರುವ ಪ್ರತೀಕ್ಷಕನ್ನು ಕಂಡುಹಿಡಿಯಲೇ ಸೇರಿದ ಡಾ ವಿವಿಯನ್ ಫಚಾರು (ಎಡಗಡೆ) ಸ್ಕಾಟ್ ಬೇಸಿಂದ ನ್ಯೂಜಿಲೇಂದಿಗೆ ಹೊರಡುವ ವೇಳೆಯಲ್ಲಿ ಎಡ್ಮಂಡ್ ಹಿಲಾರಿ (ಬಲಗಡೆ) ಯವರೊಡನೆ ಮೋಟಾರು ಕಾರಿನಲ್ಲಿ ಕೂತ ದೃಶ್ಯ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ ವ)

ಪ್ರಪಂಚ ಜ್ಞಾನ—

(ರೊಕಡ ವಿಪುಲ ವೈವಿಧ್ಯದ ಒಂದು ಅಪೂರ್ವ ಸಂಗ್ರಹ) ಸಂಪಾದಕರು ಸಾಲಿಲ ಪುಟ್ಟಪ್ಪ, ಎಂ ಎಸ್ ಸಿ (ಕ್ಯಾಲಿಫೋರ್ನಿಯಾ) ಎಲ್ ಎಲ್ ಬಿ. ಪ್ರಕಾಶಕರು ಪ್ರಪಂಚ ಪ್ರಕಾಶನ, ಪುಟ್ಟಳ್ಳಿ ಪುಟಿಗಳು ೧೨೬ ಬೆಲೆ ರೂ ೧ ೫೦

ಮಾನವನಾದುದು ಅವಿತ ಜ್ಞಾನಸಂಪನ್ನನಾಗುವ ಉನ್ನತಶ್ಚೇಯಸ್ಸನ್ನಿಟ್ಟುಕೊಂಡಿದ್ದಾನೆ ಕೂಡಾಸುಂದರ ಸ್ಕಾಯನನ್ನು ತ್ಯಜಿಸಿ ಹಕ್ಕಿಯಂತೆ ವಿವಿಧ ದೇಶಗಳ ಪರಿಚಯವನ್ನು ಬೆಳೆಸಿಕೊಳ್ಳಲ ಅಬಲಷಿಸುತ್ತಾನೆ, ಅಲ್ಲಿನ ಚಿತ್ರ ವಿಚಿತ್ರ ಸಂಗತಿಗಳನ್ನು ತಿಳಿಯಲು ಹವಣಿಸುತ್ತಾನೆ ಆದರೆ, ಅದೇನೋ ಪ್ರಬಲ ಆಸಕ್ತಿಯಂತೆ ಪರಿಣಾಮವಾಗಿ ತನ್ನ ಕೈಗೆ ಸಿಕ್ಕುವರಲ್ಲೇ ತೃಪ್ತಿಪಟ್ಟುಕೊಂಡು ಸುಲಿಗೆ ಒಂದಕ್ಕೆ ಪಂಚಾಮೃತವೆಂದು ಭಾವಿಸಿ ಇಟ್ಟುಸುರು ಬಿಡುವ ಜ್ಞಾನಾರ್ಥಿಗಳೇ ನಮ್ಮ ಕನ್ನಡ ನಾಡಿನಲ್ಲಿ ಅನೇಕ ಇಂತಹ ಉತ್ಸಾಹ ಅಭಿಲಷಿತರು ಸುಸೂತ್ರವಾಗಿ ನಾಗುವುದು ಸಾಧ್ಯವಾಗಬಹುದು ಆಚಾರ್ಯ ಕೃಪಲಾನಿಯವರು ಈ ದಿನೆಯಲ್ಲಿ ಕಾರ್ಯ ಪ್ರವೃತ್ತರಾಗಬೇಕಿಯಲಾರರು

ಭಂಗಿತರಾದ ಜ್ಞಾನಪಿಪಾಸುಗಳಿಗೆ ಪ್ರಪಂಚದ ವಿವಿಧತೆಯನ್ನು ಅಲ್ಪ ಪ್ರಮಾಣದಲ್ಲಿಯಾದರೂ ತಿಳಿಸಿ, ಅವರ ಅಭಿರುಚಿಯನ್ನು ಕೆರಳಿಸುವ ಯತ್ನ ಇಲ್ಲಿ ಕಂಡುಬರುತ್ತದೆ ನಮಗೆ ತಿಳಿದ, ಕೇಳಿದ, ಓದಿದ ವಿಷಯಗಳೇ ತಿಳಿಯದ, ಕೇಳದ, ಓದದ ವಿಚಿತ್ರ, ಸತ್ಯ ಸಂಗತಿಗಳನ್ನು ಕರೆ ಹಾಕುವ ಪ್ರಯತ್ನವನ್ನು ಸುಪ್ರಸಿದ್ಧ ಪತ್ರಿಕೋದ್ಯಮಿ ಶ್ರೀ ಪಾಟೀಲ ಪುಟ್ಟಪ್ಪನವರು ಕೈಗೊಂಡು ಕನ್ನಡಿಗರಿಗೆ ತುಂಬ ಉಪಕಾರ ಮಾಡಿದ್ದಾರೆ ಅವರು ಕಳದ ನಾಲ್ಕು ವರುಷಗಳಲ್ಲಿ ಪ್ರತಿವಾರವೂ ನಾಲ್ಕು ತಾಸುಗಳ ಸಮಯವನ್ನು ವಿನಿಯೋಗಿಸಿ ಈ ಸಂಗ್ರಹವನ್ನು ಮಾಡಿದ್ದಾರೆ ಇವುಗಳಲ್ಲಿ ಕೆಲವು ಶ್ರೀ ಪುಟ್ಟಪ್ಪನವರ ಸಂಪಾದಕತನದಲ್ಲಿರುವ ಪ್ರಪಂಚ ಪತ್ರಿಕೆಯಲ್ಲಿಯೇ ಬೆಳಕು ಕಂಡಿದ್ದರೂ ಇದೀಗ ಅವೆಲ್ಲವೂ ಸುಸ್ತಕ ರೂಪದಲ್ಲಿ ಬೆಳಕು ಕಂಡುಬರುವ ಸ್ವಾತಂತ್ರ್ಯವಾಗಿದೆ ಈ ಉಸಯುಕ್ತ ಉತ್ತಕವು ಪ್ರಪಂಚದನ್ನರಿಯಬೇಕೆಂದಿರುವವರು ಸೃಷ್ಟಿಯ ವೈಚಿತ್ರ್ಯ, ಮಾನವನ ಸಾಹಸಾದಿಗಳನ್ನು ತಿಳಿಯಬಯಸುವವರು ಶಿಕ್ಷಣವನ್ನೂಯ ಪ ಮತ್ತು ಪಡೆಯುವ ಅಧ್ಯಾಪಕ ಹಾಗೂ ವಿದ್ಯಾರ್ಥಿಗಳು ಅವಶ್ಯ ಸಂಗ್ರಹಿಸಬೇಕಾದುದೆಂದು ಹೇಳಬಹುದು

ಈ ಪುಸ್ತಕದಲ್ಲಿರುವ ಅಲಂಕಾರವೆಂದರೆ, ಒಂದು ವಿಷಯವನ್ನು ಸುರಾರು ನಾಲ್ಕು ಜಾರಿ ಪುನರಾವರ್ತನೆ ಹೇಳುವ ಕೆಲವು ವಿಷಯಗಳು ಉದಾಹರಣೆಗೆ (ಗಿನಿ ಪುಟ) ಭಾರತದ ಪೆಂಗಲನೆಯ ಬೆಂಕಿಪಟ್ಟಿಗೆಯ ಕಾರಖಾನೆಯು ೧೮೮೦ರಲ್ಲಿ ಅಹಮ್ಮದಾಬಾದದಲ್ಲಿ ಆರಂಭವಾಯಿತು (ಪುಟ ೧೧೧ರಲ್ಲಿ) ಭಾರತದ ಮೊಟ್ಟ ಮೊದಲನೆಯ ಬೆಂಕಿ ಕಡ್ಡಿಯ ಕಾರಖಾನೆಯು ೧೮೮೦ರಲ್ಲಿ ಆರಂಭವಾಯಿತು ಎಂದಿದೆ ಅವುಗಳಲ್ಲಿ ಬೆಂಕಿ ಪಟ್ಟಿಗೆ ಬೆಂಕಿ ಕಡ್ಡಿ ಎಂಬ ಬೇರೆ ಪದಗಳು ಅರ್ಥವಾಗಿದ್ದರೂ ಮೂಲತಃ ವಿಷಯವೊಂದೇ ಎಂದು ತಿಳಿಯುತ್ತೇನೆ. ಇಂತಹ ಪುನರುಕ್ತಿ ಮೋಡಗಳು ಹತ್ತು ಸಲವಾರೆಗೆ ಬಂದಿದೆ ಇವನ್ನು ನುಂದಿನ ಆವೃತ್ತಿಯಲ್ಲಿ ಸಂದರ್ಭಬಂದಲ್ಲಿ ತಿದ್ದಿಕೊಳ್ಳಬೇಕು ಇಲ್ಲವಾದರೆ ಜನರಲ್ಲಿ ಅಭಿರುಚಿ ಕೆಡುವುದು ಇಷ್ಟಗಳೂಕ್ಷಣೆಂಬ ತಲೆಬರೆಹದಡಿಯಲ್ಲಿ ಇಷ್ಟಗಳ ಸಂಬಂಧಿ ವಿಷಯಗಳಿರದೆ ಬಿಗೋಲಕ್ಕೆ ಹೊಂದಿಕೆಯಾದುವೆಗಳಿವೆ ಕೆಲವೊಂದು ವಿಷಯಗಳು ಅಸಂಬದ್ಧಗೊಂದಂತೆ ಭಾಸವಾಗುತ್ತವೆ ಎಲ್ಲಿ ಕ್ರಿಸ್ತಿಯರೂ ಕ್ರಿಸ್‌ಮಸ್ ಪಟ್ಟವನ್ನು ಡಿಸೆಂಬರ್ ೨೫ರಂದು ಆಚರಿಸುವುದಿಲ್ಲ (ಪುಟ ೧೧೬) ಇಲ್ಲಿ ಮತ್ತೊಂದು? ಎಂಬ, ಜೀರ್ಣಿಗೆ ಬಾಯಿಯೇ ಇಲ್ಲ) ಪುಟ ೧೧೪) ಎಂಬಲ್ಲಿ ಎಲರ ಆಹಾರ ಸೇವನೆ ಹೇಗೆ? ಎಂಬ ಅಕಂಕ್ಷೆಗಳೇಳುತ್ತವೆ ಇಂತಹ ಕೆಲವೊಂದು ಕೊರತೆಗಳಿರುವುದಾದರೂ ಸಂಗ್ರಹದ ಕಾರ್ಯ ಮಹತ್ವದ್ದಿದೆ. ಶ್ರೀ ಪುಟ್ಟಪ್ಪನವರು ಕನ್ನಡಿಗರ ಕೃತಜ್ಞತೆಗೆ ಅರ್ಹರಾಗಿದ್ದಾರೆ ರೂ ೧-೫೦ ಬೆಲೆಯ ಸುಸ್ತಕದ ತಾಗಿದ ಅಂದಚಂದಗಳತ್ತ ಸ್ವಲ್ಪ ಗಮನವೀಯುತ್ತಿದ್ದರೆ ಒಳ್ಳೆಯದಿತ್ತು

—ಗೋರಾ

ಕುಂದಾಪುರ ಡಿ ಮುನ್ಸ೿ಫ್ ಕೋರ್ಟಿನಲ್ಲಿ

S C 125/1958.

ಪ್ಲೇಂಟಿಫ್ N S ಪನಮೇಶ್ವರಯ್ಯ-ವಾದಿ

1 ಅಬ್ಬಾಮಸೆ ಗೋವಿಂದ ಸೆಟ್ಟಿ

2 ಬೆಂಕಣ್ಣ ಸೆಟ್ಟಿ — ಪ್ರತಿವಾದಿರು

ಕುಂದಾಪುರ ತಾಲ್ಲೂ ಕಿರಿಮಂಜೇಶ್ವರ ಗ್ರಾಮದಲ್ಲಿರುವ ನಾಗಮ್ಮ ಸೆಟ್ಟಿ ಮಗ ಅಬ್ಬಾಮಸೆ ಗೋವಿಂದ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳದಾಯ, ಪಾನ್ಯಥಿ ದುಮ್ಮಾಬಿಟ ಸಂಬ್ಬಾರಗಳ ಗೇಣಿ ಬರೆಯಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಕ್ಲಾ ಮಾಡಿದ ಮೇಲಿನ ದಾವೆಯು ತಾ 7—6—58ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿಗೆ ಇಟ್ಟಿರುತ್ತದೆ ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಬಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿದೆ

G. A Aithala
Advocate for Plaintiff
Coondapoor, 1—5—1958

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ. ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸ್ಸಲ ಬಡ್ಡಿಯನ್ನು ಈ ವರೆಗೆ ಕೊಡದೆ ಬಾಕಿ ಮಾಡಿಕೊಂಡಿರುವರೆಂದಲೂ, ಇನ್ನು ಕೆಲವರಿಗೆ ರಿಜಿಸ್ಟ್ರಿ ನೋಟೀಸುಗಳು ಕೆಲವರು ಮೃತ ಪಟ್ಟಿರುವರೆಂಬುವಾಗಿಯೂ, ಕೆಲವರು ವಾಸ್ತಾಪದಲ್ಲಿ ಇಲ್ಲ ಎಂಬುವಾಗಿಯೂ ನಮಗೆ ನೇರ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗೆಗಳನ್ನು ಇದೇ ತಾರೀಕು 22 5-1958ನೇ ಗುರುವಾರ ಅಪರಾನ್ನ ಗಂಟೆ 4ಕ್ಕೆ ಕುಂದಾಪುರ, ಯಾ ಬೇಂಕಿನ ಆಸ್ತಿಯಿಂದ ಯಾವುದೇ ಇತರ ದಿನಗಳಲ್ಲಿ ಮುನ್ನ ನೋಟೀಸು ಕೊಡದೆಯೇ ಬೇಂಕಿನ ಗೋದಾಮಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31 3 58ರ ವರೆಗಿ ಬಡ್ಡಿ ಸೇರಿ ಸೊಬಲಗು N P
151/55	ಬಿ ಸಾಂಬಶಿವ ಸೆಟ್ಟಿ, ವೆಂಕಪ್ಪ ಸೆಟ್ಟಿ ಅಳಿಯ, ಕಾಳಾವರ ನಾಯ್ಕ ಮನೆ, ಪೋಸ್ಟ್ ಸೆಲ್ಕಾಡಿ, ದ ಕ	60 75
303/55	ಎಚ್ ನಾರಾಯಣ, ಗೋವಿಂದನ ಅಳಿಯ, ಸೇಂದಿ ಮಡಿವ ಮನೆ, ಹಟ್ಟಿಯಂಗಡಿ ಗ್ರಾಮ, ಪೋಸ್ಟ್ ಹಟ್ಟಿಯಂಗಡಿ, ದ. ಕ	209 80
656,55	ಮುತ್ತಯ್ಯ ಸೆಟ್ಟಿ, ಚಿಕ್ಕಯ್ಯ ಸೆಟ್ಟಿ ಅಳಿಯ, ಅಲೂರು ಗ್ರಾಮ, ಪೋಸ್ಟ್ ಗಂಗೊಳ್ಳಿ, ದ. ಕ	57 15

Office of the Vijaya Bank, Ltd
Coondapoor, 7—5—1958

B. R Adyanthaya,
Agent Coondapoor

ಶಿಲಾಯುಗದಿಂದ ಹರ್ಷನ ವರೆಗೆ

(೩ನೇ ಸುಟದಿಂದ)

ಮಿಕ ಗ್ರಂಥಗಳ ಅಭ್ಯಾಸವು ಸ್ತ್ರೀಯರಿಗೆ ನಿಷಿದ್ಧವಾಗಿತ್ತು. ನಿಯೋಗವನ್ನು ನಿಷೇಧಿಸಲಾಯಿತು. ಅನುರೂಪನಾದ ವರನು ದೊರೆಯದಿದ್ದಲ್ಲಿ ವಾತ್ರ ಸ್ತ್ರೀಯರು ಬ್ರಹ್ಮಚರ್ಯವನ್ನು ಪಾಲಿಸುವುದು ಸಮತವಾಗಿತ್ತು.

ಹರ್ಷನ ಕಾಲ

ದೇಶವು ಸಂಪತ್ಸಮೃದ್ಧವಾಗಿತ್ತು. ನಾಲ್ಕು ವರ್ಣದವರೂ ಅನ್ಯೋನ್ಯ ಹೊಂದಿಕೆಯ ಜೀವನವನ್ನು ನಡೆಸುತ್ತಿದ್ದರು. ಸರಳ ಜೀವನವನ್ನು ನಡೆಸುತ್ತಿದ್ದ ಈ ಜನರು ನೀತಿ ಮತ್ತು ಧರ್ಮನಿಷ್ಠೆಯುಳ್ಳವರಾಗಿದ್ದರು ಚಂಡಾಲರೇ ಮೊದಲಾದವರು ಪಟ್ಟಣದ ಹೊರಗಡೆ ಜೀವಿಸುತ್ತಿದ್ದರು. ಪುನರ್ವಿವಾಹವು ನಿಷೇಧಿಸಲ್ಪಟ್ಟಿತ್ತು. ಸಮಾಜ ದ್ರೋಹಿಗಳ ಸಂಖ್ಯೆ ಕಡಿಮೆಯಾಗಿತ್ತು. ಮತ್ತು ಇಂತಹ ದ್ರೋಹಿಗಳಿಗೆ ಕಠಿಣವಾದ ಶಿಕ್ಷೆಯೊಯಲಾಗುತ್ತಿತ್ತು. ಕೈಕಾಲುಗಳನ್ನು ಕಡಿಯುವುದು, ಜೀವಾವಧಿ ಶಿಕ್ಷೆ, ಜುಲ್ಮಾನೆ ಇತ್ಯಾದಿ ಶಿಕ್ಷೆಗಳ. ವಿಧಿಸಲ್ಪಡುತ್ತಿದ್ದುವು. ಈ ಕಾಲದ ವಿಷಯಗಳು ಚೀನೀ ಯಾತ್ರಿಕನಾದ ಹ್ಯೂವೆನ್‌ತ್ಸಾಂಗನಿಂದ ತಿಳಿಯುತ್ತದೆ.

ಸಾಮಾಜಿಕ ಜೀವನದ ರೀತಿನೀತಿಗಳು– ಜೋಳದ ಏಳಿಗೆಯ ಕಾಲ. ನಾಲ್ಕು ವರ್ಣಗಳಲ್ಲದೆ ಅವುಗಳೊಳಗೆ ಅಸಂಖ್ಯ ಜಾತಿಗಳು ಹುಟ್ಟಾಗಿದ್ದುವು. ಬೇರೆಬೇರೆ ಜೀವನವನ್ನು-ಉದ್ಯೋಗವನ್ನು ಅವಲಂಬಿಸುವ ಜನರನ್ನು ಬೇರೆಬೇರೆ ಜಾತಿಯವರನ್ನಾಗಿ ಪರಿಗಣಿಸಲಾಗುತ್ತಿತ್ತು. ಜಾತಿಗಳೊಳಗೆ ನಿರ್ಬಂಧಗಳು ಬಿಗಿಯಾಗಿದ್ದು ಅಂತರ್ಜಾತೀಯ ವಿವಾಹ ಸಂಬಂಧವು ನಿಷೇಧಿಸಲ್ಪಟ್ಟಿತ್ತು. ಅನುಲೋಮ ವಿವಾಹವೂ ಕೂಡ ಆಚರಿಸಲಾಗುತ್ತಿರಲಿಲ್ಲ. ಈ ಭೇದಗಳಿದ್ದರೂ ಜನರು ಪರಸ್ಪರ ಸೌಹಾರ್ದತೆಯಿಂದ ಜೀವನವನ್ನು ನಿರ್ವಹಿಸುತ್ತಿದ್ದರು. ಜಾತಿಭ್ರಷ್ಟರಾದವರನ್ನು ಸಂಸ್ಕರಿಸಿ ಪುನಃ ಜಾತಿಗೆ ಸೇರಿಸಿಕೊಳ್ಳುವ ಪದ್ಧತಿಯಿರಲಿಲ್ಲ. ಇದರಿಂದಾಗಿ ಜಾತಿ ಕಳೆದುಕೊಂಡವರಿಗೆ ಪುನಃ ಜಾತಿಗೆ ಸೇರುವ ಆಸೆಯಿರಲಿಲ್ಲ.

ಸ್ತ್ರೀಯರಿಗೆ ಯಾವುದೇ ತರದ ಸ್ವಾತಂತ್ರ್ಯವೂ ಇರಲಿಲ್ಲ. ವಿಧವೆಯರಿಗೆ ಅಶನಾರ್ಥವು ವಿಧಿಸಲಾಗಿದ್ದು ಅವರ ಜೀವನದ ಆರ್ಥಿಕ ಸ್ಥಿತಿಯು ಸುಧಾರಿಸಲ್ಪಟ್ಟಿದ್ದರೂ ಸಮಾಜದಲ್ಲಿ ಅವರ ಸ್ಥಾನಮಾನಗಳು ತೋಚನೀಯವಾಗಿತ್ತು. ಸತೀ ಪದ್ಧತಿಯು ಬೆಳೆದುಬಂದಿತ್ತು.

(ವಿವಿಧ ಆಧಾರಗ್ರಂಥಗಳ ಸಹಾಯದಿಂದ)

ಆಕಾಶವಾಣಿ ಸಾಹಿತ್ಯ ಸಮಾರೋಹ—

ಇಂದಿನ ತೆಲುಗು ನಾಟಕಗಳು

ಶ್ರೀ ಎ. ರಾಮಕೃಷ್ಣರಾವ್

ಆಧುನಿಕ ತೆಲುಗು ನಾಟಕವು ಅಕಸ್ಮಿಕ ಬೆಳವಣಿಗೆಯನ್ನು ಪಡೆದಿದೆ. ಭಾರತೀಯ ನಾಟಕದಲ್ಲಿನ ಸಂಸ್ಕೃತ ಪರಂಪರೆಯೊಂದಿಗೆ ತೆಲುಗು ನಾಟಕವೇನೂ ಸಂಬಂಧವನ್ನು ಪಡೆದಿರುವುದಿಲ್ಲ. ಅದು ದೇಶದಲ್ಲಿ ನೆಲೆಸಿದ ಆರಂಭದ ಐರೋಪ್ಯರು ಬಿಟ್ಟುಕೊಟ್ಟ ಅಸ್ತಿಯಾಗಿರುವುದು. ಅವರು ತಮ್ಮ ಮನರಂಜನೆಗಾಗಿ ಕೆಲವು ಹಳೆ ಕಾಲದ ಪ್ರಹಸನಗಳನ್ನು ಸ್ಥಳದಲ್ಲಿಯೇ ಅನುಗೊಳಿಸಿದ ರಂಗಭೂಮಿಯ ಮೇಲೆ ಕೇಳುಮಟ್ಟದ ಅಭಿರುಚಿಯ ರಂಗಸಜ್ಜಿಕೆಗಳು ಮತ್ತು ವೇಷಭೂಷಣಗಳೊಂದಿಗೆ ಅಭಿನಯಿಸುತ್ತಿದ್ದರು.

ಪ್ರಾಚೀನ ಪರಂಪರೆಯ ಹಾಗೂ ಉತ್ಕೃಷ್ಟ ಪಾಶ್ಚಾತ್ಯ ನಾಟಕದ ಪ್ರಭಾವ ರಹಿತ ವಾತಾವರಣದಲ್ಲಿ ಖ್ಯಾತಿಪೆತ್ತ ನಟರೂ ನಾಟಕ ಕರ್ತೃಗಳೂ ಆದ ಶ್ರೀ ಕೃಷ್ಣಮಾಚಾರ್ಯ ಅವರು ಮೊದ ಹಾದಿಯನ್ನು ಹಿಡಿದರು. ಅವರು ಅಂಕ್ಯಾ ಹೆಚ್ಚಿನ ನಾಟಕಗಳನ್ನು ರಚಿಸಿರುವರು. ಈ ನಾಟಕಗಳಲ್ಲಿ ಕನಿಷ್ಠ ಸಂಖ್ಯೆ ಆರು ನಾಟಕಗಳು ಕಳೆದ ಐವತ್ತು ವರ್ಷಗಳಿಂದಲೂ ತೆಲುಗು ನಾಟಕಕಾಭಿಮಾನಿಗಳಲ್ಲಿ ಸರ್ವಾದರಣೀಯ ವಾಗಿವೆ. ಸಂಸ್ಕೃತ ಹಾಗೂ ತೆಲುಗು ಭಾಷೆಗಳಲ್ಲಿ ಪಾರಂಗತರಾದ ಶ್ರೀ ಕೃಷ್ಣಮಾಚಾರ್ಯರು ಸಂಸ್ಕೃತ ನಾಟಕವನ್ನು ಅನುಸರಿಸಿ ತಮ್ಮ ನಾಟಕಗಳಲ್ಲಿ ಗಹನವಾದ ಪದ್ಯಗಳನ್ನೂ ಸೇರಿಸಿರುವರು. ಅವರು ಗೀತೆಗಳನ್ನು ಯಕ್ಷಗಾನದ ಧಾಟಿಯಲ್ಲಿ ರಚಿಸಿರುವರು. ಅವರು ಸ್ವತಃ ಶ್ರೇಷ್ಠದರ್ಜೆಯ ನಟರಾಗಿದ್ದರಿಂದ ತಮ್ಮ ನಾಟಕಗಳನ್ನು ಅಭಿನಯಯೋಗ್ಯವನ್ನಾಗಿ ಮಾಡುವ ಸಾಮರ್ಥ್ಯವನ್ನು ಪಡೆದಿದ್ದರು. ಅವರು ರಚಿಸಿರುವ ತೆಲುಗಿನ ವ್ರಥಮ ದುಃಖಾಂತ ನಾಟಕವಾದ "ವಿಷಾದ ಸಾರಂಗಧರ"ವು ಉಲ್ಲೇಖಾರ್ಹವಾಗಿದೆ.

ಅವರ ಸಹೋದ್ಯೋಗಿಯೂ ಸಮಕಾಲೀನರೂ ಆದ ಕೋಲಾಚಲಂ ಶ್ರೀನಿವಾಸರಾವ್ ರಚಿಸಿರುವ "ಅಳಿಯ ರಾಮರಾಯಲು" ವಿಜಯನಗರದ ಅವನತಿಯನ್ನು ನಿರೂಪಿಸಿತ್ತದೆ. ಈ ನಾಟಕವು ತೆಲುಗು ರಂಗಭೂಮಿಯಲ್ಲಿ ಸರ್ವಾದರಣೀಯವಾಗಿದೆ. ಚಿಲಕ ಮಾರತಿಯವರ "ಗಾಯೋಪಾಖ್ಯಾನಂ" ನಾಟಕವು ಜೀನಿನಂತೆ ಇಂಪಾದ ಗೀತೆಗಳು ಮತ್ತು ಬುದ್ಧಿವಂತಿಕೆಯ ಸಂಭಾಷಣೆಗಳಿಂದಲೂ ಕೂಡಿದೆ. ಈ ನಾಟಕವು ಹೆಚ್ಚು ಹೆಚ್ಚಾಗಿ ಅಭಿನಯಿಸಲ್ಪಡುತ್ತಿದೆ. ಮರ್ಮಭೇದಕ ಹಾಸ್ಯಕ್ಕೆ ಹೆಸರುವಾಸಿಯಾದ ಸನುಗಂಟಿ ರಚಿಸಿರುವ ಅನೇಕ ನಾಟಕಗಳಲ್ಲಿ "ಕಂಠಾ ಭರಣಂ" ಅತ್ಯುತ್ತಮ ಸಾಮಾಜಿಕ ನಾಟಕವಾಗಿದೆ. ಇತಿಹಾಸದ ಆಧಾರದ ಮೇಲೆ ವೇದಂ ವೆಂಕಟರಾಯ ಶಾಸ್ತ್ರಿಗಳು ರಚಿಸಿರುವ "ಪ್ರತಾಪ ರುದ್ರೀಯಂ" ನಾಟಕವು ತನ್ನದೇ ಆದ ಸ್ಥಾನವನ್ನು ಪಡೆದಿದೆ

ರಂಗಭೂಮಿಯ ಮೇಲೆ ಇದು ಜನಪ್ರಿಯವಾಗಿದೆ. ಈ ನಾಟಕದಲ್ಲಿ ಚಿತ್ರಿಸಿರುವ ಯೌಗಂಧರಣನ ಪಾತ್ರವು ಭಾಸನ "ಪ್ರತಿಜ್ಞಾ ಯೌಗಂಧರಾಯಣ"ದಲ್ಲಿನ ಹಾಗೂ ಗಂಧರಾಯಣನ ಪಾತ್ರವನ್ನೇ ಹೋಲುವುದು. ಭಾಸನ ನಾಟಕಗಳನ್ನು ಹತ್ತಿ ಹಚ್ಚುವುದಕ್ಕೆ ಪೂರ್ವದಲ್ಲಿಯೇ 'ಪ್ರತಾಪ ರುದ್ರೀಯಂ' ನಾಟಕವು ಜನಪ್ರಿಯತೆಯನ್ನು ಗಳಿಸಿದ್ದು ಈ ನಾಟಕದ ಪ್ರಾಮುಖ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಗುರಜಾದ ಅಪ್ಪಾರಾವ್ ಅವರು ರಚಿಸಿರುವ "ಕನ್ಯಾಶುಲ್ಕಂ" ಎಂಬ ಸಾಮಾಜಿಕ ಪ್ರಹಸನವು ಇಂದಿಗೂ ರಂಗಭೂಮಿಯ ಮೇಲೆ ಆದರಣೀಯವಾಗಿದೆ.

ವಿಜಯವಾಡದ ನ್ಯೆಲಾತರಂ ನಾಟಕ ಮಂಡಲಿ, ರಾಜಮಹೇಂದ್ರಿಯ ಗುನ್ನೇಶ್ವರ ರಾವ್ ಕಂಪನಿ ಮತ್ತು ಗುಂಟೂರಿನ ಮೊದಲು ಮತ್ತು ಎರಡನೆಯ ನಾಟಕದ ಕಂಪನಿಗಳು ಮುಂತಾದ ಪ್ರಸಿದ್ಧ ನಾಟಕ ಕಂಪನಿಗಳು ತಮ್ಮದೇ ಆದ ನಾಟಕ ಕರ್ತೃಗಳನ್ನು ಪಡೆದಿದ್ದವು. ಈ ನಾಟಕಕಾರರು ರಚಿಸಿರುವ ನಾಟಕಗಳು ರಂಗಭೂಮಿಯ ಮೇಲೆ ಹೆಸರು ವಾಸಿಯಾದಾಗ್ಯೂ ಇವುಗಳು ಸಾಹಿತ್ಯ ಪರಂಪರೆಯಲ್ಲಿ ಐಕ್ಯಗೊಂಡಿಲ್ಲ. ನಾಟಕಗಳನ್ನು ಬರೆದು ಖ್ಯಾತಿ ಗಳಿಸಿದ ನಾಟಕಕಾರರು ಇತರ ವೃತ್ತಿಗಳಲ್ಲಿ ನಿರತರಾಗಿದ್ದು ರಂಗಭೂಮಿಯಿಂದ ದೂರವಿದ್ದರು. ಅವರು ಬರೆದ ನಾಟಕಗಳನ್ನು ನಟರುಗಳು ಮತ್ತು ನಿರ್ಮಾತೃಕರುಗಳು ರಂಗಭೂಮಿಗಾಯ ಅಗತ್ಯಗಳಿಗೆ ಅನುಗುಣವಾಗಿ ಮಾರ್ಪಡಿಸಿಕೊಂಡಿರುವರು. ಹೀಗಾಗಿ ನಾಟಕಕಾರರು ಮತ್ತು ರಂಗಭೂಮಿಯ ಕಲಾವಿದರುಗಳ ನಡುವೆ ನಿರಂತರವಾದ ಹಾಗೂ ಪರಿಣಾಮಕಾರಿಯಾದ ಸಂಬಂಧವು ಏರ್ಪಟ್ಟಿಲ್ಲ.

ಸಮಕಾಲೀನ ಚಿತ್ರವು ಆಶಾಭಂಗವಾಗಿದೆ. ಅನೇಕ ಕಲಾವಿಲಾಸಿ ನಾಟಕ ಸಂಸ್ಥೆಗಳು ನೂರಾರು ನಾಟಕಗಳನ್ನು ಅವುಗಳಲ್ಲಿಯೂ ಮುಖ್ಯವಾಗಿ ಏಕಾಂಕ ನಾಟಕಗಳನ್ನು ಅಭಿನಯಿಸುತ್ತಿವೆ. ತೆಲುಗು ರಂಗಭೂಮಿ ಮತ್ತು ನಾಟಕರಂಗವು ತೀವ್ರಗತಿಯಲ್ಲಿ ವೃದ್ಧಿಗೊಳ್ಳುತ್ತಿದೆ. ಕಳೆದ ಶತಮಾನದಲ್ಲಿ ಪಾಶ್ಚಾತ್ಯ ನಾಟಕವು ಗಳಿಸಿದ ಮಹತ್ವರವಾದ ಮುನ್ನಡೆಯನ್ನು ಸಂಪೂರ್ಣವಾಗಿ ಮನಗಂಡು ಭಾರತೀಯ ಹಾಗೂ ಐರೋಪ್ಯ ನಾಟಕ ರಚನೆ ಹಾಗೂ ನಿರ್ಮಾಣ ವಿಧಾನಗಳನ್ನು ಐಕ್ಯಗೊಳಿಸಲು ಯತ್ನಿಸಲಾಗುತ್ತಿದೆ.

ಇಂದಿನ ಪ್ರವೃತ್ತಿಯು ಒಂದೇ ಗುರಿಯನ್ನು ಮುಟ್ಟುವ ಎರಡು ಹಾದಿಗಳನ್ನು ಸೂಚಿಸುವುದು. ಬಹುತೇಕ ರಾಷ್ಟ್ರಗಳಲ್ಲಿ ನಾಟಕವು ಕರ್ಮ ಪದ್ಧತಿಯಾಗಿಯೇ ಆರಂಭಗೊಂಡಿತು. ಅದು ಸಾಮಾಜಿಕ ಜೀವನದ ಸಮಗ್ರ ಭಾಗವೆಂದೇ ಪರಿಗಣಿತವಾಯಿತು. ನಮ್ಮ ದೇಶದಲ್ಲಿ ನಾಟಕ ಕ್ಷೇತ್ರದಲ್ಲಿ ಆಗಿರುವ ಗತಕಾಲದ ಕೊರತೆಯನ್ನು ಸರಿಪಡಿಸಿಕೊಂಡಲ್ಲಿ ಈ ಸಾಮಾಜಿಕ ಪದ್ಧತಿಯನ್ನು ಪುನರುಜ್ಜೀವನಗೊಳಿಸಿಕೊಳ್ಳಬಹುದೆಂಬುದನ್ನು ಅರಿಯಲಾಗಿದೆ. ಬೈಲು ರಂಗಭೂಮಿಯು ಕಡೆಗೆ ಧಾವಿಸುವ ಪ್ರವೃತ್ತಿಯನ್ನು ಇದು ವಿವರಿಸುತ್ತದೆ. ಕಾಲಕಾಲದಿಂದಲೂ ಅತ್ಯುತ್ತಮ ನಾಟಕವೂ ಅತ್ಯುತ್ತಮ ಪದ್ಯವೂ ಆಗಿತ್ತು. ವಿಸ್ತೃತವಾದ ರಂಗ ಸಜ್ಜಿಕೆಯಿಲ್ಲದೆ ಬೈಲು ರಂಗಭೂಮಿಯಲ್ಲಿ ಅವುಗಳನ್ನು ಯಶಸ್ವಿಯಾಗಿ ಪ್ರಯೋಗಿಸಬಹುದಾಗಿತ್ತು. ಆಂಧ್ರದಲ್ಲಿ ಸುಸಜ್ಜಿತರಂಗ ಸ್ಥಳ ಮತ್ತು ಬಯಲು ರಂಗಭೂಮಿ-ಇವು ಎರಡಕ್ಕೂ ಸಮಾನವಾದ ಪ್ರೋತ್ಸಾಹ ದೊರೆಯುತ್ತಿರುವುದು ಒಂದು ಶುಭ ಸೂಚನೆಯಾಗಿದೆ. ರಂಗಸ್ಥಳವನ್ನು ಯಂತ್ರೋಪಕರಣಗಳ ಸಹಾಯದಿಂದ ಸುಸಜ್ಜಿತ ಗೊಳಿಸುವಿಕೆ ಹಾಗೂ ಚಲನ ಚಿತ್ರದ ಅನ್ವೇಷಣೆಯು ಪರಿಣಾಮವಾಗಿ ನಾಟಕವು ವಿಶ್ವವಿದ್ಯಾಸಿಲಯ ಮತ್ತು ಇತರ ವೈದ್ಯಕೀಯ ಸಂಸ್ಥೆಗಳಲ್ಲಿ ಮಾತ್ರ ಪ್ರಯೋಗಿಸಲ್ಪಡುತ್ತಿದೆ. ಆದಾಗ್ಯೂ, ಈ ವಿದ್ವತ್ಸಭೆಯಂದಾಯದಲ್ಲಿ ಪ್ರಯೋಗಿಸಿದ ನಾಟಕವು ಮಹತ್ವರವಾದ ಸಾಮಾಜಿಕ ಬಲವಾಗಬಹುದು.

—ಆಕಾಶವಾಣಿಯವರ ಸೌಜನ್ಯದಿಂದ.

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗೇಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರವರ ರಕ್ಷಿತ್ತಯಗಳು

ಟ್ರೇಡ್ ಮಾರ್ಕ್

ಸಂ|| A. R. ಅಯ್ಯಂಗಾರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಯೋಗುವುದನ್ನು ನಿವಾರಿಸಿ, **ಸಪುಂಸಕತೆಯನ್ನು** ಹೋಗಲಾಡಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ಶಾಸ್ತ್ರುಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಪ್ರಿಂಟ್ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ., (ನ. ಯು)

628, ಅಂಬಳಿ ಅಣ್ಣಯ್ಯ ಪಂಡಿತ್ ವರ್ಕ್ಸ್ ಸೌತ್ ಕ್ರಾಸ್, ಮೈಸೂರು-1 (S.I.)

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ಯೋಜನೆಯ ಮೂಲೋದ್ದೇಶವೇನು?

ನಿರ್ಧನರನ್ನು ಎತ್ತರಿಸಬೇಕು.

ಭಾರತೀಯ ಪ್ರಧಾನಿ ಪಂಡಿತ ಜವಾಹರಲಾಲ ನೆಹರೂರವರು ಇತ್ತೀಚೆಗೆ ನವದೆಹಲಿಯಲ್ಲಿ ನೇರಿದ ಅಖಿಲ ಭಾರತೀಯ ಇನ್ಸಾರ್ಟ್‌ಗಳ ಸಾಹಿತ್ಯ ಗಿಲನೆ ಅಧಿವೇಶನದಲ್ಲಿ ಮಾಡಿದ ಉದ್ಘಾಟನಾ ಭಾಷಣವು ಮಹತ್ವಪೂರ್ಣವಿದೆ.

ಒಂದು ಯೋಜನೆಯನ್ನು ಸಫಲತಾಪೂರ್ಣವಾಗಿ ಕಾರ್ಯರೂಪಕ್ಕೆ ತರಲು ಒಂದು ನೀತಿ ಮತ್ತು ದೃಷ್ಟಿಕೋಣಗಳಿರಬೇಕು. ಒಂದು ವೇಳೆ ಯೋಜನೆಯ ಮಧ್ಯಾವಧಿಯಲ್ಲಿ ತಮ್ಮ ದೃಷ್ಟಿಕೋಣದಲ್ಲಿ ಪರಿವರ್ತನೆಯನ್ನು ಮಾಡಿಕೊಂಡರೆ; ಅವರು ಪ್ರಗತಿ ಪಡೆಯುವುದು ಎಂದಿಗೂ ಸಾಧ್ಯವಿಲ್ಲ.

ಜನರು ಆ ಯೋಜನೆಯ ವಿಷಯದಲ್ಲಿ ಬಹುವಾಗಿ ಚರ್ಚಿಸುತಿದ್ದಾರೆ. ಆದರೆ, ಈ ರೀತಿಯ ಪ್ರತಿಯೊಂದು ಮಾತು ಆ ಯೋಜನೆಯೆಂದರೇನೆಂದು ತಿಳಿಯದೆ ಆಡುತ್ತಿರುವುದರಿಂದ, ಹಾಸ್ಯವೊದಗುತ್ತದೆ. ಆದುದರಿಂದ ಆ ಯೋಜನೆಯ ಕುರಿತಾಗಿ ಸ್ಪಷ್ಟ ಜ್ಞಾನವನ್ನು ಪಡೆದ ನಂತರವೇ ಆ ಕುರಿತು ಚರ್ಚೆ ನಡೆಸಬೇಕು. ದೃಢತೆಯಿಂದ ಮತ್ತು ಯಥಾರ್ಥ ಆಶಾವಾದದಿಂದ ಈ ಸಂಬಂಧದಲ್ಲಿ ಎದ್ದುತೋರುವ ಸಮಸ್ಯೆಗಳನ್ನು ಎದುರಿಸಬೇಕು.

ನಮ್ಮ ನೆಚ್ಚಿನ ಭಗವದ್ಗೀತೆಯು ನಮಗೆ ಮನಃಪೂರ್ವಕವಾಗಿ ಕೆಲಸಮಾಡಬೇಕೆಂದು ಉಪದೇಶಿಸುತ್ತದೆ. ಹಾಗೆಯೇ ನಮ್ಮ ಕರ್ತವ್ಯವೆಂದು ತಿಳಿದು ಕೈಗೊಂಡ ಕಾರ್ಯವನ್ನು ಮಾಡಿ, ಅದರ ಫಲಾಫಲ ಪರಿಣಾಮವನ್ನು ಚಿಂತಿಸಬಾರದು. ನೈಜ ಜೀವನ, ವ್ಯಾಪಾರಿಕ ಜೀವನ ಅಥವಾ ರಾಷ್ಟ್ರೀಯ ಜೀವನಗಳಲ್ಲಿ ಅನೇಕ ಪ್ರಕಾರದ ಆಯೋಜನೆಗಳಿರುತ್ತವೆ. ನಾವು ಆ ಯೋಜನೆ ಮತ್ತು ರಾಷ್ಟ್ರೀಯ ವಿಕಾಸಗಳ ಕುರಿತಾಗಿ ಮಾತಾಡುತ್ತಿರುವಾಗ, ನಮ್ಮ ಅಭಿಪ್ರಾಯಗಳು ಸಂದಿಗ್ಧ ದೃಷ್ಟಿಕೋಣಕ್ಕಿಂತ ಅಧಿಕವಾಗಿರುವುದಿಲ್ಲ. ನಾವೊಂದು ಸೀಳಿಗೆಯ ವಿಕಾಸವನ್ನು ಮಾಡಬಯಸುವುದಾದರೆ, ಸಮಾಜದ ನಿಜವಾದ ಚಿತ್ರವನ್ನು ನಮ್ಮೆದುರಿಟ್ಟುಕೊಳ್ಳಬೇಕು.

ಸಾಮಾಜಿಕ ಸ್ತರಗಳಲ್ಲಿ ಮಾನವರ ಗುಣಗಳನ್ನು ಸಮುನ್ನತಗೊಳಿಸುವುದು ಸಾಧ್ಯವೆನಿಸಿದಾಗ ಮಾತ್ರವೇ ಭಾರತದ ಉದ್ಧಾರವಾಗಬಹುದು. ಮಾನವೀಯ ಗುಣಗಳನ್ನು ನಾವು ಎತ್ತರಿಸದೆ ಹೋದರೆ, ಈ ಕಾರಣದಿಂದ ವ್ಯಕ್ತಿಗಳ ಗುಣ ಮತ್ತು ಮೂಲ್ಯಾಂಕನವು ಮತ್ತಷ್ಟು ನಿಮ್ನತರವಾಗುವುದು. ಹಿರಿಯ ಕಾರ್ಯಾಲಯಗಳಲ್ಲಿ ನೇಮಿಸಲ್ಪಟ್ಟಿರುವ ಅಧಿಕಾರಿಗಳೊಡನೆ ಅಳುಗಳೂ ಸಿಪಾಯಿಗಳೂ ಕುರುಗುತ್ತಿರುತ್ತಾರೆ. ಇಂತಹ ಮಧ್ಯಯುಗದ ಪೃಥವನ್ನು ನಾವು ಪರಿವರ್ತಿಸಬೇಕು. ಇವರೊಂದು ತಪ್ಪು ಕಾರ್ಯಸ್ರಣಾಲಿಯ ಪ್ರತೀಕವಾಗಿದ್ದಾರೆ. ಯಾವನೇ ಒಬ್ಬ ಒಳ್ಳೆಯ ಮನುಷ್ಯನು ಜೀವದ ಕೂಲಿಯಾಳನ್ನಿಟ್ಟುಕೊಳ್ಳಬೇಕಾಗಿಲ್ಲ ಅವನೊಬ್ಬ ಸಂದೇಶವಾಹಕ ಬಾಲಕ ಅಥವಾ ಯಾರಾದರೊಬ್ಬನನ್ನಿಟ್ಟುಕೊಳ್ಳಬಹುದು. ಜೀವದಾಳನ್ನಿಟ್ಟುಕೊಳ್ಳುವ ಪದ್ಧತಿಯು ಪರಿವರ್ತನೆ ಹೊಂದಬೇಕು.

ಆ ಯೋಜನೆಯೊಂದು ನಿರಂತರವಾಗಿ ಸಾಗುತ್ತಿರುವ ಪ್ರಕ್ರಿಯೆಯಾಗಿದೆ. ದೇಶದಲ್ಲಿ ಎಷ್ಟು ದುರ್ಗಂಧವುಯು ವಸತಿಗಳಿವೆ, ಭಾರತದಲ್ಲಿ ಅಧಿಕ ಸಂಖ್ಯಾಕ ಬಡಜನರ ಪರಿಸ್ಥಿತಿಗಳು ಹೇಗಿವೆ ಎಂಬುದರ ಅಧಾರದ ಮೇಲೆ ಇದರ ಅಂತಿಮ ವಿಶ್ಲೇಷಣೆಯಾಗುತ್ತದೆ. ನಿರ್ಧನವಂತರನ್ನು ನಾವು ಹೇಗೆ ಲಾಭಾನ್ವಿತರನ್ನಾಗಿ ಮಾಡುತ್ತಿರುವೆವೆನ್ನುವುದನ್ನು ವಿಚಾರಿಸುವುದು ಅಗತ್ಯವಿದೆ. ನಾವು ಹರಿಜನರೇ ಮೊದಲಾದವರ ಕುರಿತಾಗಿ ವಿಚಾರಮಾಡುತ್ತಿರುವೆವಾದರೂ ಬಡಜನರ ವಿಷಯವಾಗಿ ಯಾವ ಮಾತನ್ನೂ ಎತ್ತುವುದಿಲ್ಲ. ಉತ್ಪಾದನೆಯನ್ನು ಮಾಡುವ ಪ್ರಸಾದನಗಳನ್ನು ಹೆಚ್ಚಿಸುವುದು ಅತ್ಯಾವಶ್ಯಕವಾಗಿದೆ.

ನಿರ್ಧನರ ಸಂಖ್ಯೆಯು ಅಧಿಕವಾಗಿರುವುದರಿಂದ, ನಾವು ಅವರನ್ನು ಮರೆತು ಬಿಡುತ್ತೇವೆ. ವ್ಯಾವಹಾರಿಕ ದೃಷ್ಟಿಯಿಂದ ಹೀಗೆ ಅಲಕ್ಷಿಸುವುದು ನಮ್ಮ ಪ್ರಗತಿ ಪಥದಲ್ಲಿನ ಒಂದು ದೊಡ್ಡ ತಡೆಯಾಗಿದೆ. ನಾವು ಒಂದು ರಾಷ್ಟ್ರದ ರೂಪದಲ್ಲಿ ಪ್ರಗತಿಪಡೆಯಲಿಚ್ಛಿಸುವುದಾದರೆ, ಸಾಮಾಜಿಕಸ್ತರಗಳ ಆಧಾರದ ಮೇಲೆ ಮಾನವೀಯ ಗುಣಗಳನ್ನು ಅಜ್ಞೈಸುವುದು ಅಗತ್ಯವಾಗಿದೆ. ಗ್ರಾಮದಲ್ಲಿ ಸಾಮಾಜಿಕ ಸ್ತರದ ಅಧಾರವಾದ ಪಂಚಾಯತುಗಳಿರಬೇಕು; ಗ್ರಾಮ ಸಹಕಾರೀ ಸಮಿತಿ ಮತ್ತು ಗ್ರಾಮಶಾಲೆಯಿರಬೇಕು. ಈ ವರ್ಗದ ಜನರಿಗೆ ಸ್ವಾವಲಂಬೀ ಮತ್ತು ಸ್ವಪ್ರತಿಷ್ಠೆಯ ಬಗ್ಗೆ ಆಸಕ್ತಿ ಹುಟ್ಟುವಂತೆ ಮಾಡಲು ಅವರಿಗೆ ಪ್ರಾರಂಭಿಕ ಪ್ರಶಿಕ್ಷಣವೀಯುವುದು ಅಗತ್ಯ. ನಿರಂತರ ಸರಕಾರೀ ಕಸ್ತಕ್ಷೇಪದ ಕೂರತಾಗಿ ಯಥಾ ಸಂಭವ ಸ್ವಕಾರ್ಯರತರಾಗಿರುವ ವ್ಯಕ್ತಿಗಳಿಗೆ ಪ್ರೋತ್ಸಾಹವೀಯಬೇಕು. ಸರಕಾರಿ ವಲಯಗಳ ಮೂಲಕ ಸಹಕಾರೀ ಸಮಿತಿಗಳ ಕಾರ್ಯಗಳು ನಡೆಯಬೇಕೆಂದು ಬಯಸಬಾರದು.

ಸಣ್ಣ ಹಾಗೂ ಗೃಹಕೈಗಾರಿಕೆಗಳಿಗೆ ಮಹತ್ವದ ಸ್ಥಾನವಿದೆ. ಸಣ್ಣ ಉದ್ದಿಮೆಗಳು ವಿಕಾಸಗೊಳ್ಳುತ್ತ ಹೋಗುತ್ತಿವೆಯಾದರೂ ಆವು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಗೊಳ್ಳುತ್ತಿಲ್ಲ. ಆದರೆ, ಭಾವೀ ಅರ್ಥ ವ್ಯವಸ್ಥೆಯು ಅಧಿಕ ಕೃಷಿಕ ಉತ್ಪಾದನೆ ಹಾಗೂ ಅಧಿಕ ಆಹಾರೋತ್ಪಾದನೆಯನ್ನೇ ಅವಲಂಬಿಸಿದೆ ಎಂಬುದು ನಿಶ್ಚಯ. ನಾವಿಂದು ಈ ವಿಷಯದಲ್ಲಿ ಪ್ರಗತಿ ಪಡೆಯುತಿದ್ದೇವೆ ಅಲ್ಲದೇ ಮುಂದಿನ ೧೦ ವರ್ಷಗಳಲ್ಲಿ ದ್ರುತಗತಿಯಲ್ಲಿ ಸಾಗುವೆವೆಂದು ನಂಬಬಹುದು.

ಭಾರತವಿಂದು ದ್ವಿತೀಯ ಯೋಜನೆಯ ಮಧ್ಯಕಾಲದಲ್ಲಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯು ಆ ಯೋಜನಾ ಮಾರ್ಗದ ಮೈಲಿಕಲ್ಲು. ಅದು ಆ ಯೋಜನದ ಸಂಪೂರ್ಣ ಸ್ವರೂಪವಲ್ಲ. ಸರಳ ಮಾರ್ಗದಲ್ಲಿ ಆವಶ್ಯಕ ಕಾರ್ಯಗಳು ಈಗ ನಡೆದುವು. ನಾವೀದೆಸೆಯಲ್ಲಿ ಸಫಲರಾಗಿದ್ದೇವೆ. ಅದರ ಸಂಪೂರ್ಣತೆಯ ನಂತರ ಆ ಯೋಜನೆಯ ವಿಷಯದಲ್ಲಿ ಅಧಿಕ ಸುಸಂಗತಿಕವಾಗಿರುವ ದ್ವಿತೀಯ ಯೋಜನೆಯನ್ನು ಸಿದ್ಧಪಡಿಸಿರುವೆವು. ಅದರಂತೆ ಕಾರ್ಯಗಳೂ ಸಂಚಾಲಿತವಾಗುತ್ತಿವೆ ಇದೊಂದು ಮಹತ್ವ ಕಾಂಕ್ಷಾಯುತ ಯೋಜನೆಯಾಗಿರುವುದೆಂದು ಜನರಾಡಿಕೊಳ್ಳುತಿದ್ದಾರೆ. ನಿಜವಾಗಿಯೂ ಈ ದ್ವಿತೀಯ ಯೋಜನೆಯು ನಮ್ಮ ಪ್ರಥಮ ಯೋಜನೆಯಿಂದ ಬಹಳ ಮುಂದುವರಿದ ದ್ವಿದೆ.

ಒಂದು ಪ್ರಜಾಪ್ರಭುತ್ವ ಆಡಳಿತೆಯ ದೇಶದಲ್ಲಿ ಒಂದು ಅರ್ಥವಿಕಸಿತ ದೇಶದಲ್ಲಿ, ಒಂದು ವಿಕಾಸೋನ್ಮುಖ ದೇಶದಲ್ಲಿ ಅತ್ಯಧಿಕ ಪ್ರಮಾಣದ ಆತಂಕಗಳ ತವರುಮನೆಯಾದ ದೇಶದಲ್ಲಿ ಈ ಆಯೋಜನಾ ಕಾರ್ಯವು ನಡೆಯುತ್ತಿದೆಯೆಂಬುದನ್ನು ಮರೆಯಬಾರದು. ನಾವು ಈ ಅಡೆತಡೆಗಳನ್ನು ಧೈರ್ಯದಿಂದ ಎದುರಿಸುತ್ತೇವೆ; ಮತ್ತು ಮುಂದಕ್ಕೂ ಅವನ್ನು ಸಹಿಸಿಕೊಳ್ಳಬೇಕಾಗಿದೆ. ಕ್ರಮಶಃ ನಾವು ಈ ಆತಂಕಗಳನ್ನು ಸೋಲಿಸಿ ವಿಜಯಿಯಾಗುತ್ತಿದ್ದೇವೆ. ಜನರು ಆಯೋಜನಾ ವಿಚಾರದಲ್ಲಿ ಮಾತಾಡುತ್ತಾರಾದರೂ ಆಯೋಜನಕ್ಕೆ ವಿರುದ್ಧ ಫಲವೀಯುವಂತಹ ಪ್ರಸ್ತಾಪಗಳನ್ನು ಮಾಡುತ್ತಿರುವುದು ಮಾತ್ರ ನಿಂದಾರ್ಹವಾಗಿದೆ.

ಉಚಿತ ರೂಪದಲ್ಲಿ ಭಾರತದಲ್ಲಿ ಜನತೆಗೆ ಶಿಕ್ಷಣವೀಯುವ ಆವಶ್ಯಕತೆಯಿದೆ. ಔದ್ಯೋಗಿಕ ಸಮಾಜಸ್ಥಾಪನೆಗಿದು ಅಧಾರಶಿಲೆಯಾಗಿದೆ. ನಾವು ಈ ಸುದೃಢ ಶೈಕ್ಷಣಿಕ ಅಧಾರದ ಕಡೆಗೆ ಸಾಕಷ್ಟು ಲಕ್ಷ್ಯ ಸೂಚಿಸುವುದಿಲ್ಲವೆಂದು ಧೈರ್ಯದಿಂದ ಹೇಳಬಹುದು. ಪ್ರೌಢಶಾಲೆ ಹಾಗೂ ಉಚ್ಚ ವಿದ್ಯಾಲಯಗಳ ಅಧಾರಸ್ತಂಭಗಳಾದ ಮಾಧ್ಯಮಿಕ ಹಾಗೂ ಪ್ರಾಥಮಿಕ ಶಿಕ್ಷಣಾಲಯಗಳನ್ನು ವಿಕಾಸಗೊಳಿಸಬೇಕು. ಏಕೆಂದರೆ, ಉದ್ಯೋಗಗಳಲ್ಲಿ ಪ್ರಶಿಕ್ಷಣ ಹೊಂದುವವರಿಗೂ ನಿಶ್ಚಿತ ರೂಪದ ಸಾಕ್ಷರತೆಯ ಆವಶ್ಯಕತೆಯಿರುವುದು.

(ಪ್ರಧಾನಿ ನೆಹರೂರವರ ಭಾಷಣದಿಂದ)

ಎಸ್. ಆರ್.
ಬೀಡಿಗಳನ್ನು
ಕೊಂಡುಕೊಳ್ಳುವ
ಮೊದಲು
ರಿಜಿಸ್ಟರ್ಡ್
ಟ್ರೇಡ್ ಮಾರ್ಕನ್ನು
ಪರೀಕ್ಷಿಸಿ ಕೊಂಡುಕೊಳ್ಳಲು
ಮರೆಯದಿರಿ.
SR REGD.
REGD. NO 143136.
S.R.BEEDI WORKS, UDIPI, S.K.

ಅದೃಷ್ಟದ ವಕ್ರದೃಷ್ಟಿ

(೨ನೇ ಪುಟದಿಂದ)

ಸ್ಥಿತಿಯೂ ದಿನೇ ದಿನೇ ವಿಪರೀತತೆಗೆ ಕಾಲಿರಿಸಿತು. ತನ್ನಧೈರ್ಯ ಪ್ರಸಂಜವು ಸರೋಜಳತ್ತ ಓಡಿನೋಟವನ್ನು ಬೀರತೊಡಗಿತು. ಹೌದು, ಆಕೆಗೂ ಅದರ ಕಾರಣವು ತಿಳಿದಿತ್ತು. ಇಷ್ಟರಲ್ಲೇ ಆಕೆಯ ಗರ್ಭಕ್ಕೆ ಐದು ತಿಂಗಳು ತುಂಬಿತ್ತು. ಸರೋಜಾ ಮನೋವೇದನೆಯಿಂದ ಬಳಲಿ ಬೆಂಡಾದಳು. ಆದರೆ...ತಾನು ಮಾಡಿದ ಪಾಪ ತನ್ನನ್ನು ಬಿಟ್ಟು ಅನ್ಯರನ್ನು ಕಾಡೀತೆ? ಆ ಮುದಿ ಜೀವವೂ ಇದೇ ವೇದನೆಯಿಂದ ಬಳಲಿತು. ಆದರೆ ಇದಕ್ಕೆ ಯಾರು ಕಾರಣ? ಹೌದು, ಶಂಕರಮ್ಮ ಕಾರಣಳಲ್ಲ; ಸರೋಜಳೂ ಅಲ್ಲ. ಮತ್ತಾರು?—"ದಾರಿದ್ರ್ಯ" ಶಂಕರಮ್ಮನ ಬೆಂದೆದೆಯು ಮತ್ತಷ್ಟು ಕೊರಗಿತು. ಮತ್ತೊಂದೆಡೆ "ಶಂಕರಿ, ನಿನ್ನ ಮಗಳ ಜೀವನವನ್ನು ಹಾಳುಗೆಡಹಲು ನೀನೇ ಕಾರಣ, ಮತ್ತಾರಲ್ಲ"—ಅಂತರಾತ್ಮವು ಆಕೆಯನ್ನು ಕುಕ್ಕುತಿತ್ತು. ಪಶ್ಚಾತ್ತಾಪದ ಬೇಗೆಯು ಆ ಮುದಿ ದೇಹವನ್ನು ಸುಡಲಾರಂಭಿಸಿತು. ಕೂಡಲೆ ನವಚೇತನವೊಂದು ದೇಹದಲ್ಲಿ ಸಂಚಾರವಾದಂತೆ ಆಕೆ ಮೆಲ್ಲನೆ ಎದ್ದಳು. ಹದಿನಾಡುತ್ತ ಅಂಗಳಕ್ಕೆ ಇಳಿದಳು. ಮಕ್ಕಳಾರೂ ಇಲ್ಲದುದನ್ನು ಕಂಡು ತನ್ನ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತವನ್ನು ಪಡೆಯಲು ಆಕೆ ಬಯಸಿದಳು. ತನ್ನಧೈರ್ಯ ತನ್ನ ಮಕ್ಕಳ ಭವಿಷ್ಯತ್ತನ್ನು ನೆನೆದು ಕೊರಗಿದಳು. ಆದರೆ ಇನ್ನು ಕಾನು ಬದುಕಿದ್ದರೂ ಅವರಿಗೇನೂ ಸ್ರಯೋಜನವು ತನ್ನಿಂದ ಸಿಗಲಾರದೆಂಬು ತನ್ನ ನಿಶ್ಚಯವನ್ನು ದೃಢಗೊಳಿಸಿದಳು. ಆ ದೃಢತೆಯೇ ಮೈವೆತ್ತು ಆ ಮುದಿ ದೇಹವನ್ನು ಹತ್ತಿರವಿದ್ದ ಬಾವಿಯೊಂದಕ್ಕೆ ತಳ್ಳಿಬಿಟ್ಟಿತು.

"ಐಯಾ! ಯಾರು ಗತಿ?" [ಎಂದು ಹಾಕುತ್ತ ಪಕ್ಕೆಗಣವೊಂದು ಆಕಾಶದಲ್ಲಿ ಹಾರಿಹೋಯಿತು. ಬಡ ದಂಪತಿಗಳು ಆ ಕಮ್ಮಕ್ಕಳನ್ನು ಧರೆಯ ಮಡಿಲಲ್ಲಿರಿಸಿ ಹೊರಟುಹೋದರು.

ಕಮ್ಯುನಿಸ್ಟರು ಇಂದ್ರಜಾಲ ಮಾಡಲಿಲ್ಲ

(೧ನೇ ಪುಟದಿಂದ)

ಕಳೆದ ವರ್ಷ ರೂ. ೨೦ಲಕ್ಷ ಉಳಿತಾಯ ತೋರಿಸಿದ್ದ ಮುಂಗಡ ಪತ್ರಿಕೆ ವಾಸ್ತವದಲ್ಲಿ ರೂ. ೨೦ ಲಕ್ಷಗಳ ಕೊರತೆಯಲ್ಲಿ ಪರಿಣಮಿಸಿದ್ದೇನೂ ಆಶ್ಚರ್ಯವೆನ್ನಿಸುವುದಿಲ್ಲ.

ಕಮ್ಯುನಿಸ್ಟ ಆಡಳಿತದಲ್ಲಿ ಕನಿಷ್ಠಪಕ್ಷಕ್ಕೆ ಲಂಚಗುಳಿತನ ಇರಲಿಕ್ಕಿಲ್ಲ, ಪ್ರಾಮಾಣಿಕ ಆಡಳಿತೆ ನಡೆದೀತು ಎಂದು ಜನ ಹಾರಯಿಸಿದ್ದರು. ಹಿಂದಿನ ಆಡಳಿತದಲ್ಲಿ ಲಂಚಗುಳಿತನ, ಅಪ್ರಾಮಾಣಿಕತನ ಮನೆಮಾಡಿದ್ದವೆಂದೇ ಕಮ್ಯುನಿಸ್ಟರು ಅಧಿಕಾರಕ್ಕೆ ಬರಲು ಅನುಕೂಲವಾಯಿತು. ಆದರೆ ಒಂದೇ ಒಂದು ವರ್ಷ ಆಡಳಿತ ನಡೆಸುವಷ್ಟರಲ್ಲಿ ಕಮ್ಯುನಿಸ್ಟ ಪಕ್ಷದ ಮತ್ತು ವೈಯಕ್ತಿಕ ಮಟ್ಟದಲ್ಲಿ ಲಂಚಗುಳಿತನ ಮತ್ತು ಅಪ್ರಾಮಾಣಿಕತೆಗಳಲ್ಲಿ ತಾವು ಯಾರಿಗೂ ಹಿಂದುಳಿದವರಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

ತಾವೇ ತಯಾರಿಸುತ್ತಿರುವ ಭೂಕಾಯದೆಯ ಹಿಡಿತದಿಂದ ಪಾರಾಗಲು ಆ ಕಾಯದೆಯ ಆರಡನ್ನು ತಯಾರಿಸುತ್ತಿರುವಾಗಲೇ ಕಾಯದೆಮಂತ್ರಿಗಳು ತಮ್ಮ ಆಸ್ತಿಯಲ್ಲಿ ಬಹುಭಾಗವನ್ನು ಮಾರಾಟ ಮಾಡಿಕೊಂಡರು. ಆಂಧ್ರದಿಂದ ಸುಮಾರು ರೂ. ೩೦ ಲಕ್ಷದ ಅಕ್ಕಿಯನ್ನು ಪೇಟೆಯ ಧಾರಣೆ ಮಣಕ್ಕೆ ರೂ. ೩೪ ಇದ್ದಾಗ ರೂ. ೩೭ರಂತೆ ಕೊಳ್ಳಲಾಯಿತು. ಖರೀದಿಯ ಕಾಲದಲ್ಲಿ ಟೆಂಡರು ಕರೆಯಲಿಲ್ಲ. ಕಾಸ್ರೋಡ ಪಿ. ಸುಂದರಯ್ಯನವರ ಬಂಧುಗಳಿಗೆ ಸಂಬಂಧವಿದ್ದ ಕಂಪೆನಿಯಿಂದ ಅಕ್ಕಿ ಕೊಳ್ಳಲಾಯಿತು. ಈ ಕಂಪೆನಿಗೆ ಈ ಅಕ್ಕಿ ವ್ಯವಹಾರದಲ್ಲಿ ಜೀಲಕ್ಕೆ ೩೧ ನಯೇ ಪೈಸೆ ಕಮಿಶನ್ ಕೊಡಲಾಯಿತು. ಅದೇ ಕಂಪೆನಿ ಹಿಂದುಗಡೆ ಟೆಂಡರು ಕರೆದಾಗ ೭ ನೆ. ಪೈ. ಕಮಿಶನ್ನಿಗೆ ಒಪ್ಪಿತು. ಈ ಬಗ್ಗೆ ಕಮ್ಯುನಿಸ್ಟ ಸರಕಾರ ಇತ್ತ ಮೂರು ಪ್ರಕಟನೆಗಳಲ್ಲಿ ಮೊದಲನೆಯದರಲ್ಲಿ ೫,೦೦೦ ಟನ್ ಅಕ್ಕಿ ಮಾತ್ರ ಕೊಂಡಿತು, ಎಂದರೆ ಎರಡನೆಯದರಲ್ಲಿ ೧೫,೦೦೦ ಟನ್ ಎಂದೂ ಮತ್ತೆ ಮೂರನೆಯದರಲ್ಲಿ ೩೧,೦೦೦ ಟನ್ ಎಂದೂ ಒಪ್ಪಿದೆ.

ಕಮ್ಯುನಿಸ್ಟ ಲೋಕಸಭಾ ಸದಸ್ಯ ಈಶ್ವರ ಐಯರರು ಹಿಂದೆ ಪ್ರಜಾಸಮಾಜವಾದಿ ಮಂತ್ರಿಮಂಡಳವಿದ್ದಾಗ, ಸರಕಾರಕ್ಕೆ ರೂ. ೫೦,೦೦೦ಕ್ಕೆ ಮಾರಲು ಒಪ್ಪಿದ ಭೂಮಿಯನ್ನು ಕಮ್ಯುನಿಸ್ಟ ಸರಕಾರ ಈಗ ರೂ. ೩ ಲಕ್ಷಕ್ಕೆ ಕೊಂಡಿದೆ. ಶಿಕ್ಷಣ ಮಂತ್ರಿಗಳ ಮಗನಿಗೆ ಟೆಂಡರ್ ಕರೆಯದೆ ರೂ. ೧ ಲಕ್ಷದ ಸುಸ್ತಕ ಪೂರೈಸುವ ಗುತ್ತಿಗೆ ಕೊಡಲ್ಪಟ್ಟಿದೆ ಎಂದೂ ದೂರುಂಟು.

ಕಮ್ಯುನಿಸ್ಟ ಪಕ್ಷವು ಸರಕಾರಿ ರಸ್ತೆ ಸಾರಿಗೆ ಸಂಸ್ಥೆಯ ಕೆಲಸಗಾರ ಸಂಘದ ಸಹಕಾರದಿಂದ ಹೊಟ್ಟೆ ತಿಕೇಟುಗಳನ್ನು ಮಾರಿ ಹಣಗಳಿಸುತ್ತಿದೆಯೆಂದೂ ವದಂತಿ ಇದೆ. ಬಸ್ ಸಾರಿಗೆಯ ಉತ್ಪನ್ನ ಹಿಂದಿಗಿಂತ ೬೫% ಕುಗ್ಗಲು ಇದೇ ಕಾರಣವೆಂದು ಹೇಳಬಹುದು. ಈ ಹಣವನ್ನೆಲ್ಲ ವೈಯಕ್ತಿಕವಾಗಿ ಈ ಜನರು ಎತ್ತಿಹಾಕಿದ್ದಾರೆಂದು ಹೇಳಲಾಗಿಲ್ಲ. ಕಮ್ಯುನಿಸ್ಟ ಪಕ್ಷದ ನಿಧಿಯನ್ನು ಹೆಚ್ಚಿಸಿ ಹಿಂದುಗಡೆ ಈ ಹಣದಿಂದ ದೇಶದಲ್ಲಿ ಕೋಲಾಹಲ ಎಬ್ಬಿಸುವ ಹಂಚಿಕೆ ಇದ್ದಿದ್ದರೂ ಇರಬಹುದು.

ಕಮ್ಯುನಿಸ್ಟ ಆಡಳಿತದ ಅವ್ಯಾಪಾರದ ಕೆಲ ಉದಾಹರಣೆಗಳಿವು. ಹೇಳುತ್ತ ಹೋದರೆ ಇಂತಹ ಇನ್ನೂ ನೂರಾರು ದೃಷ್ಟಾಂತಗಳನ್ನು ಕೊಡಬಹುದು. ಕಮ್ಯುನಿಸ್ಟ ಆಡಳಿತದಿಂದ ಆ ಪಕ್ಷದವರ ಹೇಳಿಗೆ ತುಪ್ಪದಲ್ಲಿ ಬಿದ್ದಿದೆ. ವಿಧಾನ ಸಭಾ ಸದಸ್ಯರನೇಕರು ಬಂಗಲೆ ಕಟ್ಟಿಸುತ್ತಿದ್ದಾರೆ. ಲೋಕ ಸಭೆಯ ಕಮ್ಯುನಿಸ್ಟ ಪಕ್ಷದ ಉಪಧುರೀಣರಾದ ಎ. ಕೆ. ಗೋಪಾಲನ್ನರು ಕನ್ನಾನೂರ ಜಿಲ್ಲೆಯ ವಾಲಮ್ ಎಮ್ಸನ್‌ದಲ್ಲಿ ೩೦೦ ಎಕರೆ ಭೂಮಿಗೆ ಒಡೆಯರಾಗಿದ್ದಾರೆ.

ಕೇರಳದ ಯಾವ ಸರಕಾರವೂ ಕಡೆಗಣಿಸಲಾರದ ಎರಡು ಮುಖ್ಯ ಸಮಸ್ಯೆಗಳೆಂದರೆ, ಆಹಾರ ಕೊರತೆ ಮತ್ತು ಸುಶಿಕ್ಷಿತರ ನಿರುದ್ಯೋಗ—ಇವು—ಆದರೆ ಕಮ್ಯುನಿಸ್ಟ ಸರಕಾರ ಈ ಒಂದು ವರ್ಷದಲ್ಲಿ ಆ ಬಗ್ಗೆ ಏನನ್ನೂ ಮಾಡಿಲ್ಲ. ಆಹಾರದ ವಿಚಾರದಲ್ಲಿ ಕೇಂದ್ರ ಸರಕಾರ ಸಹಕರಿಸುತ್ತಿಲ್ಲವೆಂದು ಕಮ್ಯುನಿಸ್ಟ ಸರಕಾರ ಹೇಳುತ್ತಿದೆ. ಆದರೆ ಕಳೆದ ವರ್ಷ ಇಡಿ ಭಾರತದ ರಾಜ್ಯಗಳಿಗೆ ಕೊಡಮಾಡಿದ ೫,೪೫,೦೦೦ ಟನ್ ಆಹಾರ ಧಾನ್ಯದಲ್ಲಿ ಕೇರಳವೊಂದಕ್ಕೇ ೨,೨೫,೦೦೦ ಟನ್ನುಗಳನ್ನೂ ಸಹಾಯಧನವೆಂದು ರೂ. ೩ ಕೋಟಿಯನ್ನೂ ಕೇಂದ್ರ ಸರಕಾರ ಕೊಟ್ಟಿದೆ ಎಂಬುದನ್ನು ಮರೆಯಲಾಗದು.

ನಿರುದ್ಯೋಗ ಸಮಸ್ಯೆಯ ಕಣೇಬರಹವೂ ಇದೇ. ಕಳೆದ ವರ್ಷ ರಾಜ್ಯದಲ್ಲಿ ಒಂದು ವರ್ಷದೊಳಗಾಗಿ ಎಂಟು ಹೊಸ ಉದ್ದಿಮೆಗಳನ್ನು ಸ್ಥಾಪಿಸುವುದಾಗಿ ವಚನವಿತ್ತ ಸರಕಾರಕ್ಕೆ ಒಂದನ್ನೂ ಪ್ರಾರಂಭಿಸುವುದಾಗಲಿಲ್ಲ. "ಅನೇಕ ವ್ಯಾವಹಾರಿಕ ತೊಡಕುಗಳಿವೆ" ಎಂದೇ ಇದಕ್ಕೆ ಕೇರಳ ಅರ್ಥಮಂತ್ರಿಗಳ ಉತ್ತರ. ನಿರುದ್ಯೋಗಿಗಳ ಸಂಖ್ಯೆ ೬೧ ಸಾವಿರದಿಂದ ೬೮ ಸಾವಿರಕ್ಕೇರಿದೆ;

ರಾಜ್ಯದಲ್ಲಿ ಅಸುರಕ್ಷಿತತೆಯಿದೆಯೆಂದು ಸರಕಾರ ಒಪ್ಪುವುದಿಲ್ಲ. ವಿರೋಧಿ ಪಕ್ಷದವರು ಆಡಳಿತ ಹದಗೆಡಿಸಲು ಉದ್ದಿಮೆಗಳಿಗಾಗಿ ಬಂಡವಳ ಮುಂದೆ ಬರದಂತೆ ಮಾಡಲು ಯತ್ನಿಸುತ್ತಾರೆಂದ ಹೇಳುತ್ತದೆ.

ಕಳೆದ ವರ್ಷ ಅನೇಕ ಕಡೆ ಮತ್ತು ಈ ವರ್ಷ ಮಾರ್ಚದಲ್ಲಿ ಪೋಲೀಸರ ಲಾಠಿ ಚಾರ್ಜುಗಳು ಸಂಭವಿಸಿವೆ. ಆದರೆ ಇವು ಲಾಠಿ ಚಾರ್ಜುಗಳು ಎಂದು ಒಪ್ಪಲು ಕಾಯದೆ ಮಂತ್ರಿಗಳು ಸಿದ್ಧರಿಲ್ಲ. ಈ ಸಂಬಂಧದಲ್ಲಿ ಸರಕಾರದ ನೀತಿ ನಗುಬರಿಸುವಂತಹದಿದೆ. ಕಿಲ್ಲಿ ಕೊಲ್ಲೂರಿನಲ್ಲಿ ಲಾಠಿ ಚಾರ್ಜು ನಡೆಯಲಿಲ್ಲ. ಎಂದು ಪ್ರಕಟನೆ ಹೊರಡಿಸಿದ ಬಳಿಕ ಸರಕಾರ ಅಲ್ಲಿಯ ಲಾಠಿ ಚಾರ್ಜಿನ ಬಗ್ಗೆ ವಿಚಾರಣೆ ನಡೆಸಬೇಕೆಂದು ಅಪ್ಪಣೆ ವಿಧಿಸಿತು. ಲಾಠಿಯಿಂದ ಹೊಡೆದಾಕ್ಷಣ ಲಾಠಿ ಚಾರ್ಜಾಗಲಿಲ್ಲ ಎಂದು ನ್ಯಾಯ ಮಂತ್ರಿಗಳ ಹೇಳಿಕೆ.

ಕಳೆದೆರಡು ತಿಂಗಳಲ್ಲಿ ನಡೆದ ಕೆಲವು ಸ್ಥಾನಿಕ ಚುನಾವಣೆಗಳ ಪರಿಣಾಮ ಗಮನಾರ್ಹವಾಗಿದೆ. ಅವುಗಳಲ್ಲೆಲ್ಲ ಕಮ್ಯುನಿಸ್ಟ ಹುರಿಯಾಳುಗಳು ಪ್ರಚಂಡ ಪರಾಭವ ಹೊಂದಿರುವರು.

ಕಮ್ಯುನಿಸ್ಟ ಮಂತ್ರಿಗಳು ಅಧಿಕಾರ ಸ್ವೀಕರಿಸಿದ ಬಳಿಕ ಈ ಮಂತ್ರಿಗಳು ಸಾದಾ ಜೀವನ ನಡೆಸುತ್ತಾರೆ. ಜನಸೇವೆ ಮಾಡುತ್ತಾರೆ. ಎಂದು ಜಗತ್ತಿಗೆ ಸಾರಲಾಯಿತು. ಅವರು ಸಿರಾಡಂಬರ ಜೀವನ ನಡೆಸಿ ಸೈಕಲ್ ಮೇಲೆ ಪ್ರವಾಸ ಮಾಡುತ್ತಾರೆ, ಕಾಂಗ್ರೆಸ್ ಮಂತ್ರಿಗಳಂತೆ ಅವಾಢವ್ಯ ಸಂಬಳ ಪಡೆಯದೆ ಕೇವಲ ರೂ. ೩೫೦ ಸಂಬಳ ತೆಗೆದುಕೊಳ್ಳುತ್ತಾರೆ ಎಂದು ಹೇಳಲಾಯಿತು.

೧೯೫೭ರ ಸಂಬಳ ಭತ್ತೆ ತಿದ್ದುಪಡಿ ಮಸೂದೆಯಂತೆ ಮಂತ್ರಿಗಳ ಸಂಬಳವನ್ನು ರೂ ೭೦೦ರಿಂದ ರೂ ೫೦೦ಕ್ಕೆ ಇಳಿಸಲಾಯಿತು. ಪೆಟ್ರೋಲ್ ಭತ್ತೆಯನ್ನು ೨೫೦ ರೂ. ಗಳಿಂದ ೧೦೦ ರೂ. ಗಳಿಗಿಳಿಸಲಾಯಿತು. ಆದರೆ ಈಗ ಅವರಿಗೆ ರೂ. ೬೫ ಹುಟ್ಟಿಭತ್ತೆ ಸಿಗುತ್ತದೆ. ಮೊದಲು ಮಂತ್ರಿಗಳಿಗೆ ಸಂಚಾರದಲ್ಲಿ ವಸತಿ ಭತ್ತೆ ಕೊಡುತಿದ್ದರು. ಅದರ ಬದಲು ಮೈಲೇಜ ಭತ್ತೆ ಕೊಡುವುದು ಹಿತಕರ ಎಂದು ಕಮ್ಯುನಿಸ್ಟರು ಯೋಚಿಸಿದರು. ಈಗ ಮಂತ್ರಿಗಳಿಗೆ ವಸತಿ ಭತ್ತೆಯ ಬದಲು ಸರಕಾರ ಕಾರಿನಲ್ಲಿ ಅಡ್ಡಾಡುವಾಗ ಮೈಲಿಗೆ ಎಂಟಾಣೆ ಮತ್ತು ಖಾಸಗಿ ಕಾರಿನಲ್ಲಿ ಅಡ್ಡಾಡುವಾಗ ಒಂದು ರೂಪಾಯಿ ಭತ್ತೆ ಸಿಗುತ್ತದೆ. ಒಟ್ಟಿನಲ್ಲಿ ಲೆಕ್ಕಹಾಕಿದಾಗ ಹಿಂದಿನ ಮಂತ್ರಿಗಳಿಗೆ ಎಲ್ಲ ಸೇರಿ ತಿಂಗಳ ಕೊನೆಗೆ ಸಿಗುತ್ತಿದ್ದುದಕ್ಕಿಂತಲೂ ಈಗಿನವರಿಗೆ ಹೆಚ್ಚಿಗೆ ಸಿಗುತ್ತದೆ. ಕಮ್ಯುನಿಸ್ಟ ಮಂತ್ರಿಗೆ ಸರಾಸರಿ ತಿಂಗಳಿಗೆ ರೂ. ೧೫೫೫ ಸಿಗುತ್ತದೆ.

ಸಂಯುಕ್ತ ರಾಷ್ಟ್ರದಲ್ಲಿ ಅಮೆರಿಕೆಯ ರಾಯಭಾರಿಯಾದ ಶ್ರೀ. ಹೆನ್ರಿ ಕಾಬೆಟ್ ಲಾಜ್.

ಕಾಂಗ್ರೆಸ್ ಮತ್ತು ಪ್ರಸವಾ ಮಂತ್ರಿಗಳ ಹಾಗೂ ಕಮ್ಯುನಿಸ್ಟ ಮಂತ್ರಿಗಳ ಸಂಬಳದ ತುಲನೆ ಮಾಡುವುದು ಕುತೂಹಲದ್ದೆನಿಸುವಂತಿದೆ. ಕಾಂಗ್ರೆಸ್ ಮಂತ್ರಿಗೆ ರೂ. ೭೦೦ ಸಂಬಳ, ರೂ. ೭೫ ಹುಟ್ಟಿಭತ್ತೆ, ರೂ. ೨೫೦ ಸಂಚಾರ ಭತ್ತೆ, ರೂ. ೧೨೦ ವಸತಿ ಭತ್ತೆ—ಹೀಗೆ ರೂ. ೧೧೫೫ ಸಿಗುತಿದ್ದುವು. ಪ್ರಸವಾ ಮಂತ್ರಿಗೆ ರೂ. ೫೦೦ ಸಂಬಳ, ರೂ. ೬೫ ಹುಟ್ಟಿಭತ್ತೆ, ವಸತಿ ಭತ್ತೆ ೧೫೦ ರೂ. ಸಂಚಾರ ಭತ್ತೆ ರೂ. ೨೫೦ ಹೀಗೆ ರೂ. ೯೫೫ ಸಿಗುತಿದ್ದುವು. ಆದರೆ ಕಮ್ಯುನಿಸ್ಟ ಮಂತ್ರಿಗೆ ರೂ. ೧೧೫೫ ಸಿಗುತ್ತದೆ ಎಂದರೆ ಏನು ಹೇಳಬೇಕು?

೧೯೫೭—೫೮ರಲ್ಲಿ ಮಂತ್ರಿಗಳ ವೆಚ್ಚ ೨.೫೦ ಲಕ್ಷ ರೂಪಾಯಿಗಳೆಂದು ಮುಂಗಡಪತ್ರಿಕೆಯಲ್ಲಿ ಹೇಳತ್ತು. ಆದರೆ ನಿಜವಾದ ಮಶಿತ ಅಂದಾಜಿನಂತೆ ಅದು ೪.೩೬ ಲಕ್ಷ ರೂಪಾಯಿಗಳಷ್ಟಾಯಿತು. ಮುಂದಿನ ವರ್ಷದಲ್ಲಿ ಅದು ೪.೯೮ ಲಕ್ಷ ರೂಪಾಯಿಗಳಷ್ಟಾಗಲಿದೆ! ಹಣದ ಅಪವ್ಯಯ ಮಾಡಿತೆನ್ನುವ ಕಾಂಗ್ರೆಸ್ ಮಂತ್ರಿಮಂಡಳ ಕೂಡ ೧೯೫೫-೫೬ರಲ್ಲಿ ಕೇವಲ ೨.೪೭ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿತ್ತು. ಈಗ ಕೇರಳದ ೧೧ ಜನ ಕಮ್ಯುನಿಸ್ಟ ಮಂತ್ರಿಗಳಿಗೆ ೪.೯೮ ಲಕ್ಷ ರೂಪಾಯಿ ವೆಚ್ಚಬರುವುದು ಅಂದರೆ ಪ್ರತಿಮಂತ್ರಿಗೆ ವರ್ಷಕ್ಕೆ ೪೫,೨೭೨ ರೂಪಾಯಿಗಳ ವೆಚ್ಚ ಬರುವುದೆಂದಾಯಿತು.

ಅಲ್ಲದೆ ಕೇರಳ ರಾಜ್ಯ ಅಸ್ತಿತ್ವಕ್ಕೆ ಬಂದ ಬಳಿಕ ರಚಿತವಾದ ಮಂತ್ರಿಮಂಡಳಗಳಲ್ಲಿ ಕಮ್ಯುನಿಸ್ಟ ಮಂತ್ರಿಮಂಡಳವೇ ದೊಡ್ಡದು. ಹಿಂದಿನ ಮಂತ್ರಿಮಂಡಳದಲ್ಲಿ ೫ ಜನ ಮಂತ್ರಿಗಳು ಮಾತ್ರ ಇದ್ದರು. ಕಮ್ಯುನಿಸ್ಟ್ ಪಕ್ಷಕ್ಕೆ ಅದರ ಇಮ್ಮಡಿಗಿಂತ ಹೆಚ್ಚು ಅಂದರೆ, ೧೧ ಮಂತ್ರಿಗಳ ಅವಶ್ಯಕತೆ ಉಂಟಾಗಿದೆ. ತನ್ನ ಬೇಡಿಕೆಯನ್ನು ಪ್ರಭಾವಿಯಾಗಿ ಮುಂದೊತ್ತಲಿಲ್ಲ. ಪಕ್ಷದ ಪ್ರತಿಯೊಬ್ಬ ಧುರೀಣನನ್ನೂ ಸಮಾಧಾನಪಡಿಸುವುದಕ್ಕಾಗಿ ಹೀಗಾಗಿದೆಯಲ್ಲದೆ ಮತ್ತೇನಿರಬಹುದು?

(೧ನೇ ಪುಟದಿಂದ)

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

22—5—1958

ಸಂಚಿಕೆ ೩೭
NO. 37

ಕೊರಗಿ ಸೊರಗಿದ ವರ್ಣಚಿತ್ರಕಲೆ—

ಕಲಾಪ್ರಿಯರ ಮುಚ್ಚಿದ ಕಣ್ಣು ತೆರೆಯಬೇಕು

ಕಲೆಗಳು ಜನಪ್ರಿಯವಾಗಿದ್ದೊಂದು ಕಾಲವಿತ್ತು. ಶಿಲ್ಪಸಂಗೀತಗಳಂತೆಯೇ ವರ್ಣಚಿತ್ರವೂ ಒಂದು ಕುಶಲಕಲೆಯಾಗಿದೆ. ವರ್ಣಚಿತ್ರಗಳನ್ನು ಮೂಡಿಸುವುದೂ ಸಾಮಾನ್ಯವಾದ ಕೆಲಸವೆಂದು ಭಾವಿಸಿದರೆ, ಅದು ಶುದ್ಧ ತಪ್ಪಾದೀತು ಆ ದೇನೇ ಇರಲಿ, ನಮ್ಮ ದೇಶದಲ್ಲಿ ಇತರ ಕಲೆಗಳಂತೆಯೇ ಚಿತ್ರಕಲೆಯೂ ಅರಮನೆ ಗುರುಮನೆಗಳಲ್ಲಿಯಲ್ಲದೆ ಮನೆಮನೆಯಲ್ಲೂ ಮೆರೆದಾಡಿದ್ದ ಒಂದು ಕಾಲವಿತ್ತು. ಕವಿಯು ತನ್ನ ಕಲ್ಪನೆಗೆ ಶಾಬ್ದಿಕ ರೂಪವನ್ನೀಯುವಂತೆ ಶಿಲ್ಪಿ ತನ್ನ ಕಲ್ಪನೆಯನ್ನು ಕಲ್ಲಿನಲ್ಲಿ ಕಡೆಯುವಂತೆ ಬಣ್ಣ ಮತ್ತು ಕುಂಚಗಳ ಸಹಾಯದಿಂದ ತನ್ನ ಭಾವನೆಗಳನ್ನು, ಕಲ್ಪನೆಯನ್ನು ಬಲ್ಲವರ ಎದೆಗೊಳ್ಳುವಂತೆ ಒರೆಯಬಲ್ಲ ಚಾಕಚಕ್ಯತೆ ಚಿತ್ರಗಾರನಲ್ಲಿದೆ ಎಂತಲೇ ಕವಿ, ಶಿಲ್ಪಿಗಳಂತೆಯೇ ಚಿತ್ರಗಾರನೂ ಒಬ್ಬ ಸಮಾಜ ಶಿಲ್ಪಕನೆನ್ನುವುದು. ಅತಿಶಯೋಕ್ತಿಯಲ್ಲ.

ಪಾಶ್ಚಾತ್ಯ ರಾಷ್ಟ್ರಗಳ ವಿಚಾರವೇನೇ ಇರಲಿ, ನಮ್ಮ ಭಾರತದಲ್ಲಿ ಅತಿಪೂರ್ವ ಕಾಲದಿಂದಲೂ ಚಿತ್ರಕಲೆ ಪ್ರಚಾರದಲ್ಲಿತ್ತು, ಜನಪ್ರಿಯವಾಗಿತ್ತು ಎಂಬುದು ಸರ್ವವಿದಿತವಿದ. ವಿಂಧ್ಯ ಪರ್ವತದ ಗವಿಗಳು, ಮಧ್ಯ ಪ್ರಾಂತದ ಗವಿಗಳು ಬಹಳ ಪ್ರಾಚೀನವಿವೆ ಅಜಂತ, ಎಲ್ಲೋರಗಳಲ್ಲಿರುವ ಗವಿಗಳಲ್ಲಿ ಸುಂದರ ಮನಾಕರ್ಷಕ ವರ್ಣಲೇಖ್ಯಗಳು ಇಂದಿಗೂ ದೃಗ್ಗೋಚರವಾಗುತ್ತಿವೆ ಅವುಗಳನ್ನು ಪ್ರತಿದಿನ ವೆಂಬಂತೆ ಅನ್ಯದೇಶೀಯರು ಬಂದು ನೋಡಿ ಆನಂದಿಸಿ ನಿರ್ಮಿಸಿದ ಚಿತ್ರಗಾರನ ಕಲಾ ಕೌಶಲವನ್ನು ಮನಸಾರೆ ಹೊಗಳುತ್ತಿರುವುದನ್ನು ಕೇಳುತ್ತೇವೆ. ನಮ್ಮಲ್ಲಿ ಬೇರೆ ಬೇರೆ ಕಾಲದಲ್ಲಿ ಆಳಿದ ಮಹಾರಾಜರು ತಮ್ಮ ರಸಿಕತನವನ್ನೂ ಕಲಾಪ್ರಿಯತೆಯನ್ನೂ ವ್ಯಕ್ತಪಡಿಸುವುದಕ್ಕಾಗಿ ನಾಡಿನ ಬೇರೆ ಬೇರೆ ಕಲಾವಿದರ ಉತ್ತಮ ಚಿತ್ರಗಳನ್ನು ಕೊಂಡುಕೊಳ್ಳುತಿದ್ದರು. ತಮ್ಮಾಸ್ಥಾನದಲ್ಲಿ ಕವಿಗಳಂತೆಯೇ ಚಿತ್ರಗಾರರಿಗೂ ಪ್ರೋತ್ಸಾಹವೀಯುವುದಕ್ಕಾಗಿ ಆ ಸ್ಥಾನ ಚಿತ್ರಗಾರರನ್ನು ಇಟ್ಟುಕೊಳ್ಳುತಿದ್ದರು. ಇದರಿಂದ ಚಿತ್ರಕಲಾಭಿವೃದ್ಧಿಯೂ ಚಿತ್ರಗಾರರಿಗೆ ಉತ್ತೇಜನವೂ ಏಕ ಕಾಲದಲ್ಲಿ ಲಭಿಸುವಂತಾಗುತಿತ್ತು.

ಪ್ರಾಚೀನ ಕಾವ್ಯಾಖ್ಯಾನಗಳಂತೆ ಬರೆಯಲ್ಪಟ್ಟ ನಾಟಕಗಳಲ್ಲಿ ಶೃಂಗಾರರಸವನ್ನು ಪ್ರಧಾನವಾಗಿ ಗಣಿಸಲಾಗಿ, ನಾಯಕ ನಾಯಕಿಯರ ವಿರಹವು ಕಂಡಾಬರುತ್ತದೆ ಆ ಸಮಯದಲ್ಲಿ ನಾಯಕನು ನಾಯಕಿಯ ಚಿತ್ರವನ್ನು ಬರೆದ, ಆಕೆಗಾಗಿ ಹಲುಬುತ್ತಿರುವ ಸನ್ನಿವೇಶವು ಚಿತ್ರಿಸಲ್ಪಡುತ್ತದೆ ಸಾಮಾನ್ಯವಾಗಿ ನಾಟಕಗಳ ನಾಯಕನು ರಾಜವಂಶಸ್ಥನಿರುವಾಗ, ರಾಜನೇ ತನ್ನ ಪ್ರಿಯತಮೆಯ ಚಿತ್ರವನ್ನು ನಾನಾ ತರದ ಬಣ್ಣಗಳಿಂದ ಕರಕೌಶಲದಿಂದ ರೂಪಿಸದಿರಲಾರನು. ಸ್ವತಃ ರಾಜನೂ ಉತ್ತಮ ಮಟ್ಟದ ಕಲಾಗಾರನಾಗಿರುತ್ತಿದ್ದನು ಕಾಳಿದಾಸ ಕವಿಯ ಶಾಕುಂತಲಾ ನಾಟಕದಲ್ಲಿ ದುಷ್ಯಂತನು ಒರೆದ ಶಕುಂತಲೆಯ ಚಿತ್ರದ ಶಾಬ್ದಿಕ ರೂಪವನ್ನು ನೋಡಿರಿ ಸಡಿಲಿದ ಎಣೆಗಂಟಿನ ದೆಸೆಯಿಂದ ಜಾರಿದ ಕುಸುಮಗಳುಳ್ಳ ಮುಡಿಯಿಂದಲೂ, ಹೂಮ್ಮಿದ ಬೆವರಿನ ಹನಿಗಳುಳ್ಳ ಮುಖದಿಂದಲೂ ಆಯಾಸವಿಂದ ನೀಡಿರುವ ಬಾಹುಗಳಿಂದಲೂ ಕೂಡಿ, ಜಲಸೇಚನೆಯಿಂದ ಮನೋಹರವಾದ ಎಳೆಯ ಚಿಗುರುಗಳುಳ್ಳ ಮಾವಿನ ಮರದ ಪಕ್ಕದಲ್ಲಿ ಸ್ವಲ್ಪ ಒಳಲಿದವಳಂತೆ ಬರೆಯಲ್ಪಟ್ಟಿರುವ ಈಕೆ ಪೂಜ್ಯಳಾದ ಶಕುಂತಲೆ ಉಳಿದವರು ಆಕೆಯ ಸಖಿಯರು" ಎಂಬ ವಿದೂಷಕನ ಮಾತು ಮತ್ತು "ಮರಗಳಲ್ಲಿ ಆತುವ ಹಂಸಗಳಿಂದ ಕೂಡಿದ ಮಾಲಿನೀ ನದಿಯನ್ನು, ಅದರ ಇಕ್ಕೆಡೆಗಳಲ್ಲಿಯೂ ನಿಸರ್ಗಭೀರುಗಳಾದ ಹುಲ್ಲೆಗಳಿಂದ ಕೂಡಿದ ಪವಿತ್ರ ಹಿಮಾಲಯವನ್ನು ಚಿತ್ರಿಸಬೇಕು ತಮ್ಮ ಶಾಖೆಗಳಲ್ಲಿ ಕಟ್ಟಲ್ಪಟ್ಟ ನಾರುಬಟ್ಟೆಗಳುಳ್ಳ ಮರಗಳನ್ನೂ ಅವುಗಳಡಿಯಲ್ಲಿ ಕೃಷ್ಣಮೃಗದ ಕೊಂಬಿನಿಂದ ತನ್ನ ಎಡಗಣ್ಣನ್ನು ತುರಿಸಿಕೊಳ್ಳುತ್ತಿರುವ ಮೃಗಿಯನ್ನೂ ರೂಪಿಸಬೇಕು ಎಂಬಿತ್ಯಾದಿ ರಾಜನ ನುಡಿಗಳಿಂದಲೂ ಚಿತ್ರಕಲೆಯ ಒಗ್ಗೆ ರಾಜ ಧುರಂಧರರಿಗೂ ಇರುವಿದ್ದ ಕುಶಲತೆಯ ತರವಾಗುವುದು ಈ ನುಡಿಗಳ ಆಧಾರದಿಂದ ಇಂದಿಗೂ ಒಂದು ಚಿತ್ರವನ್ನು ಬರೆಯುವುದು ಸಾಧ್ಯವಿದ.

ಇಂತಹ ಜಾತ್ಯಾ ಸಂಬಂಧಿಯ ಉಲ್ಲೇಖಗಳು ನಮ್ಮ ಸಾಹಿತ್ಯದಲ್ಲಿ ಮಾತ್ರವಲ್ಲದೆ ಪರದೇಶಗಳಲ್ಲೂ ಕಂಡು ಬರುತ್ತವೆ ಆದರೆ, ನಮ್ಮ ಜನತೆ ಕಲೆಗಳತ್ತ ಗಮನ ಹರಿಸುವುದನ್ನು ಕಡಿಮೆ ಮಾಡುತ್ತ ವಿಲಾಸ ಆಲಸ್ಯ ಹಾಗೂ ರಾಜಕಾರಣಗಳ ಗುಂಗಿನಲ್ಲಿಯೇ ತಲೆ ಕೆಡಿಸಿಕೊಳ್ಳುವತ್ತ ಅಧಿಕಾಸಕ್ತಿ ವಹಿಸುತ್ತ ಬಂದಂತೆ ಇತರ ಕಲೆಗಳ ಜೊತೆಗೆ ಚಿತ್ರಕಲೆಯೂ ಪಾತಾಳದೊಳು ಮುಳುಗೆಯನ್ನು ಸೇರಿತು ಭಾರತದಲ್ಲಿ ಪಾಶ್ಚಾತ್ಯರು ಕಾಲಿರಿಸಿದ ಮೇಲೆ ನಮ್ಮಲ್ಲಿ ಅಳಿದುಳಿದ ತಲೆಗೂ ಸಾಮಾನ್ಯ ಶೇಷವಾಗಿ ಹೋಗಿ, ಇಂದು ಒಂದು ಪ್ರಾಚೀನವನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸಬಹುದೆ ದು ಯಾರಾದರೂ ಹೇಳಿದರೆ, ಅದನ್ನು ನಂಬುವುದಕ್ಕೂ ಅಂಜಬೇಕಾದ ಪ್ರಮೇಯ ಬಂದಿದೆ ಇಂದು ಹಿಂದಿನಂತಹ ಅನುಭವಿಕುಶಲ ಚಿತ್ರಗಾರರೂ ಅತಿ ಕಡಿಮೆಯ ದ್ದಾರೆ, ಇದ್ದ ಕೆಲವರಿಗಾದರೂ ಪ್ರೋತ್ಸಾಹವೀಯುವಷ್ಟು ಉದಾರತೆ ನಮ್ಮ ಜನರಲ್ಲಿಲ್ಲ

'ಆಯೋಗ್ರಹಣ'ವು ಅತಿ ಕಡಿಮೆ ವೆಚ್ಚದಲ್ಲಿ ನಮಗೆ ಬೇಕಾದಂತಹ ವಸ್ತುವಿನ ಚಿತ್ರವನ್ನು ತನ್ನ ಸ್ವಭಾವಕ್ಕನುಸಾರವಾಗಿ ಇದ್ದಕ್ಕಿದ್ದಂತೆ ರೂಪಿಸಿಕೊಡುವಾಗ, ಯಾರೋ ಒಬ್ಬ ಕೈಕೆಲಸಗಾರನು ಬಣ್ಣ ಲೇಪಿಸಿ ಬರೆದುಕೊಟ್ಟ ತುಟ್ಟಿಯ ಚಿತ್ರವೇಕ? ಅತನು ಚಿತ್ರವನ್ನು ಸಕಜವಾಗಿ ರೂಪಿಸಲು ಒಕ್ಕುಮನಲ್ಲ ತಾನೇ! ಹಾಗೆಯೇ ಛಾಯಾಚಿತ್ರಕ್ಕೇನೇ ನಾನಾ ತರದ ಬಣ್ಣಗಳನ್ನು ಬಳಿದು ಸೌಂದರ್ಯವನ್ನು ಹೆಚ್ಚಿಸುವುದೂ ಸಾಧ್ಯವಿದೆ ಆದರೆ, ಇದೇ ಕೆಲಸವನ್ನು ಕಲಾವಿದನೊಬ್ಬನಿಂದ ಮಾಡಿಸುವುದಾದರೆ ವೆಚ್ಚ ನಾಲ್ಕಾರು ಪಟ್ಟು ಬೀಳುವುದು. ಎಂತಲೇ ಇಂದು ಎಲ್ಲೆಲ್ಲಿಯೂ ಛಾಯಾಚಿತ್ರಗಳ ರಾಶಿಗಳೇ ಕಂಡುಬರುತ್ತವೆಯಲ್ಲದೆ, ಕೈಕೆಲಸವು ಅಪವಾದಕ್ಕಾದರೂ ಗೋಚರಕ್ಕೆ ಬರುವುದು ಅಪರೂಪವಾಗಿದೆ

ಕೈಕೆಲಸವು ತುಟ್ಟಿಯದಾದರೂ ಈ ಕೃತಿಯು ಛಾಯಾಚಿತ್ರಗಳಷ್ಟು ನಶ್ವರವಲ್ಲವೆಂಬುದು ಮಾತ್ರ ಯಾರಿಗೂ ತಿಳಿದಂತೆ ಕಂಡುಬರುತ್ತಿಲ್ಲ ಇಷ್ಟೇ ಅಲ್ಲದೆ ಇಂದು ಸ್ವದೇಶೀ ಪ್ರೇಮಿಗಳೆನ್ನಿಸಿಕೊಂಡಿರುವವರು, ಚಿತ್ರಪ್ರೇಮಿಗಳಾಗಿರುವವರೆಲ್ಲರೂ ವಿದೇಶಗಳಿಂದ ಆಮದಾಗುವ ವಸ್ತುಗಳಿಂದ ರಚಿತವಾಗಿರುವ ಛಾಯಾ ಚಿತ್ರಗಳಿಗೆ ತಮ್ಮ ಇಡೀ ಜೀವಮಾನದಲ್ಲಿ ನೂರುಗಟ್ಟಲೆ ರೂಪಾಯಿಗಳನ್ನು ಸುರಿಸುವವರಿದ್ದಾರೆ! 'ವಿದೇಶೀ ಬಹಿಷ್ಕಾರಕ್ಕಾಗಿ ವಿದೇಶೀಯ ಸಿಗರೇಟುಗಳನ್ನು ಸೇದುತ್ತಿರುವೆ'ನೆಂಬ ಸ್ವದೇಶಾಭಿಮಾನಿಗೆ ಸಲ್ಲಬೇಕಾದ ಗೌರವವೇ ಇಂತಹರೂಗೂ ವಿಸಲಾಗಬೇಕು. ಅದರೆ, ತಮ್ಮ ಮನೆತುಂಬ ಜರ್ಮನಿ, ಇಂಗ್ಲೆಂಡ್, ಜಪಾನ್, ಭಾರತ ಮೊದಲಾದ ವಿವಿಧ ರಾಷ್ಟ್ರಗಳ ಬೇರೆ ಬೇರೆ ಛಾಯಾ ಚಿತ್ರಪಟಗಳನ್ನು ನೂರುಗಟ್ಟಲೆಯಲ್ಲಿ ತೂಗಹಾಕುವ ಮಹಾ ವ್ಯಕ್ತಿಗಳು ತಮ್ಮೂರಿನ ಅಥವಾ ತವರಿಗೆ ಮೆಚ್ಚುಗೆಯಾದೆಡೆಯ ಒಂದು ವರ್ಣಚಿತ್ರವನ್ನು ಕೈಯಿಂದ ಮಾಡಿಸುವಷ್ಟು ದೊಡ್ಡ ಮನಸ್ಸು ಮಾಡುತ್ತಿರೆಯೆ? ವಿದೇಶೀಯರನ್ನು ಪ್ರೋತ್ಸಾಹಿಸುವ ಅಪ್ರತ್ಯಕ್ಷ ಕರ್ಮವೊಂದನ್ನು ತಾವು ಮಾಡುತಿದ್ದೇವೆಂಬ ಅರಿವು ಅವರಲ್ಲಿಲ್ಲ

ಇಂತಹ ಶೋಚನೀಯ ಪರಿಸ್ಥಿತಿಗೆ ಕಾರಣವೆಂದರೆ, ಕಲಾವಿದರ ಅನುರೂಪ ತನವಾದರೂ ವನಸುಮದಂತೆ ಇರುವ ಕಲಾವಿದರು ಬೆಳಕಿಗೆ ಬರುವಂತಿಲ್ಲ ಈಗ ಅಲ್ಲಲ್ಲಿರುವ ಕೆಲವರೂ ಸರಿಯಾದ

(ಉಳಿದ ಪುಟನೋಡಿರಿ.)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd **1931.**

BRANCHES

Bombay, Bangalore Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಅನುಭೂತಿಯ ಅಂತಃಕರಣ

ಶ್ರೀ ಬಿ. ಎಸ್. ಅಬ್ದುಲ್ ಗಫೂರ್.

ನಡುಮಧ್ಯಾಹ್ನದ ಉರಿಬಿಸಿಲು ಬೇಗೆಯನ್ನು ತಾಳಲಾರದೆ ಉಷಾ ಲಗುಬಗೆಯಿಂದ ಹೆಜ್ಜೆ ಹಾಕುತ್ತಿದ್ದಳು. ದಾರಿಯಲ್ಲಿ ಒಂದು ನರ ಪ್ರಾಣಿಯ ಸಂಚಾರವಾದರೂ ಇರಲಿಲ್ಲ. ಸೂರ್ಯದೇವನ ಕಠಿಣ ಬಿಸಿಲ ತಾಪದ ಕಿರಣಗಳು ನೆಲವನ್ನು ಸುಡುತ್ತಿದ್ದವು. ಭೂಮಿಯ ವೇಲೆ ಕಾಲಿಡುವುದೇ ಅಸಾಧ್ಯವಾಗಿತ್ತು. ಆದರೂ ಉಷಾ ಅದಾವುದನ್ನೂ ಗಮನಿಸದೆ ತನ್ನ ಶಾಲೆಯಿಂದ ಹೊರಬಿದ್ದವಳು, ಅದಾವುದೋ ಒಂದು ಆಲೋಚನೆಯಲ್ಲಿದ್ದಳು. ಶಾಲೆಯ ಜೀವನದಲ್ಲಿ ಸದಾ ಗೆಳತಿಯರೊಡನೆ ಜತೆಗೂಡಿ ಮನೆಗೆ ಬರುತ್ತಿದ್ದ ಉಷಾ—ಈಗ ಏಕಾಕಿಯಾಗಿ, ನಿರಾಳಳಾಗಿ ಹೆಜ್ಜೆ ಇಡುತ್ತಿದ್ದಳು. ಪತ್ರನಲಿವು ಒಲವುಗಳಿಗೆ ಆಗರವೆನಿಸಿದ್ದ ಉಷಾಳಿಗೆ ಸತ್ವಹೀನನೆಂತೆ ಕಾಣುತ್ತಿದ್ದಳು. ಕೆಲವೆಲ್ಲ ಅರ್ಥಗರ್ಭಿತ ವಿಚಾರಗಳು ಆಕೆಯ ಕುಸುಮಕೋಮಲ ಹೃದಯವನ್ನು ನುಡುತ್ತಿದ್ದುವೆಂದವಳ ಅಪ್ರಸನ್ನ ಮುಖವೇ ತಿಳಿಸುವಂತಿತ್ತು. ಅವಳ ಸಂದರ ಪೆಟ್ಟಿಕೆಯ ಮುಖಕ್ಕೆ ಸರಿಯಾಗಿ ಹಾಕಿದ್ದ ಜಡೆಯೆರಡು ಗಂಟಿನವರೆವಿಲ್ಲದೆ ಬಿಡುವಾಗಿದ್ದವು. ಮುಡಿದುಕೊಂಡ ಹೂವು ಒಂದೊಂದೇ ದಾರಿಯುದ್ದಕ್ಕೂ ಕೆಳಕ್ಕೆ ಬೀಳುತ್ತಲೇ ಇತ್ತು. ಹಿಡುಕೊಂಡ ಲೇಡಿಸ್ ಕೊಡೆಯಂತೂ ತನಗೆ ಬೇಕಿಲ್ಲವೆಂದವಳೆ ತಿಳಿಸುತ್ತಿದ್ದಳು. ಹೊವಿನ ಸುಂದರ ಪರಾಗವನ್ನು ಸವಿಯಲು ಬಂದ ಭ್ರಮರಗಣದಂತೆ ಅವಳ ಕಮಲದಂತೆ ಕಣ್ಣುಳ್ಳ ಮುಖದ ಮೇಲೆ ಬೆವರ ಹನಿಗಳು ತೋರುತ್ತಿದ್ದುವು. ಉಷಾ ಕೆಲವೊಮ್ಮೆ ತಡೆಯಲಾರದ ದುಃಖಾತಿಶಯದಿಂದ ಹೆಜ್ಜೆಯಿಡುತ್ತಿದ್ದಳು—

ಉಷಾ ಮನೆ ಮುಟ್ಟಿ, ಪೆಟ್ಟಿಗೆಯ ಹತ್ತಲು, ಒಳಗಿಂದೊಂದು ಶಬ್ದ ಕೇಳಲು. ಅವಳಿಗೆ ಪಿಡಿಯ ಬಡಿದಂತಾಯಿತು. ಅವಳ ಹೃದಯ ಕಂಪಿಸಿತು. ಮೈ ನಡುಗಿತು. ಕಿವಿಯು ಹಿಸುಕಿದಂತಾಯ್ತು. ಉಷಾಳ ಮನದ ನೋವು ಮತ್ತೆ ನಿವೇದನವಾದಂತಾಯಿತು. ಒಂದು ಸರಿ ಮತ್ತೆ ಹೆಜ್ಜೆ ಮಂದೆ ಇಡುತ್ತಲೇ ಅವೇನೋ ಮಾತುಗಳ ಸುರಿಮಳೆ ಉಷಾಳಿಗೆ ಸ್ಪಷ್ಟವಾಗಿ ಕೇಳಿಸಿದವು. ಅವಳಂದುತ್ತ, ತಳಮಳದಿಂದ ಕಣ್ಣನ ಮಾತಿಯಂತೆ, ಕಿವಿಗೊಟ್ಟು ನಿಂತು ಕೇಳಲಾರಂಭಮಾಡಿದಳು—

"ಏನೋ, ಎಷ್ಟು ಸಾರಿ ನಿನಗೆ ಹೇಳಬೇಕೊ, ಮರ್ಯಾಳ"

"...."

"ಹ್ಯೂಂ. ನಿನ್ನಪ್ಪನ ಗಂಟೇನು ಇಲ್ಲಿ ಕೊಡ್ತಿದಿ? ಮೂರು ಹೊತ್ತು ಮುಕ್ಕಿ, ನೆಲ ಕಾಡ್ತಿಯಲ್ಲೊನಾಯಿ-ಮರಿ." ಅಪರ ಮೇಲೆ ಬಲವಾದ ಗುದ್ದು!

"ಇಷ್ಟಿಷ್ಟಾಯ್ತ, ಇನ್ನೆಂದಿಗೂ ತಡವಾಡೊಲ್ಲ. ದಯ." ಎನ್ನುವಷ್ಟರಲ್ಲೇ,

"ಹೌದೌದು. ನನಗೆಲ್ಲ ತಿಂದಿಸಿ, ನಿನ್ನ ವರ್ತನೆ-ವಿಹಾಟು. ನೀಗೆಗ ಮಾಡುತ್ತಿರುವ ವಿಷಯದಲ್ಲಿ ನನ್ನಂತಹವಳಿಗಾದುದರಿಂದ ಸುಮನಿದ್ದಾಳೆ. ಬೇರೆಯವಳಾಗಿರುತಿದ್ದರೆ....ನಿನ್ನ...."

ಮತ್ತೆ ಉಷಾಳಿಗೆ ಅಲ್ಲಿ ನಿಲ್ಲಲಿಚ್ಛೇವನಸ್ಸೇ ಬರಲಿಲ್ಲ. ಮೊದಲೇ ನೊಂದ ಅವಳ ಮನಸ್ಸು ಮತ್ತೆ ಬೆಂಕಿಗೆ ತುಪ್ಪ ಎರೆದ ರೀತಿಯಲ್ಲಿ ಉರಿಯಲಾರಂಭಿಸಿತು. ಕಳವಳದಿಂದ ಉಷಾ ತನ್ನ ಕೋಣೆಗೆ ಹೋಗಿ ಹಾಸಿಗೆಯ ಮೇಲೆ ಯಾವ ಆಲೋಚನೆಯೂ ಇಲ್ಲದೆ ಬಿದ್ದುಕೊಂಡಳು. ಈ ಮುಂಚೆಯೂ ಉಷಾ ತನ್ನ ತಾಯಿಯ ಈ ರೀತಿಯ ವರ್ತನೆ ಕಂಡೂ ಸುಮ್ಮನಿದ್ದಳು ಕೇಳಿ ಕುಳಿತಿದ್ದಳು. ಆದರೆ ಅಂದಿನ ಕೇಳಿಯ ಈ ಅತಿ ಮಾನುಷ ರೀತಿ ಅವಳಿಗೆ ಸಹಿಸದಾಯಿತು. ತಾಯಿಯಾದವರೇನು, ತಂದೆಯಾದವರೇನು? ಅನ್ಯಾಯವಾಗಿ, ಕ್ರೂರವಾಗಿ ವರ್ತಿಸಬಹುದೇ? ಎಂದವಳ ನ್ಯಾಯದ ಮನ ಪ್ರಶ್ನಿಸಿತು. ನೆಂಟರಿರಲಿ, ಅಕ್ಕತಂಗಿಯಿರಲಿ, ಅಥವಾ ಯಾರೇ ಆಗಲೀ, ಅವರಿಂದ ಹಡಿಸಿಕೊಂಡು ಅವರನ್ನು ಬಲಾತ್ಕಾರವಾಗಿ ಹೊಡೆಯುವುದೆಂದರೆ ಯಾವ ನ್ಯಾಯ? ಎಂದವಳ ಮುಗ್ಧ ಮನ ಮೌನಿಸಿತು. ಈ ಪರಿಯಾಗಿ ವಿಧವಿಧದ ಸಮಸ್ಯೆಗಳು ಅವಳ ಸ್ಮೃತಿ ಪಟಲದಲ್ಲಿ ಅವಳನ್ನು ಕಾಡಿ ದಾಟುತಿದ್ದವು ಆದರೆ ಉಷಾಳೇನು ಮಾಡಿಯಾಳು? ಅವಳಿನ್ನೂ ಹದಿಮೂರು ಹದಿನಾಲ್ಕು ವರ್ಷದ ಬಾಲೆ!

"ಉಷಾ--ಲೇ ಉಷಾ" ಉದ್ವೇಗದ ಪ್ರಶ್ನೆ

"ಒಂದೆಯಮ್ಮಾ..." ಬೇಸರದ ಉತ್ತರ.

ಂಂ ಂಂ

ರಾಮ ರಾಯರೂ ಶಿವ ರಾಯರೂ ಅಣ್ಣತಮ್ಮಂದಿರು. ರಾಮರಾಯರು ತಮ್ಮ ಏಕೈಕ ಪುತ್ರ ಸುರೇಶ ಜನಿಸಿದ ಬಳಿಕ ಧರ್ಮಪತ್ನಿ ಜಯಲಕ್ಷ್ಮಮ್ಮಳನ್ನು ಕಳಕೊಂಡ ಕಲ್ಪತರುವಾಗಿದ್ದರು ದಾನಧರ್ಮಾರ್ಥಿಗಳಲ್ಲಿ ಎತ್ತಿದ ಕೈಯಂತಿದ್ದ ರಾಮರಾಯರು ಹೆಂಡತಿ ತೀರಿಕೊಂಡ ಬಳಿಕ ಬಹ ವರ್ಷಗಳ ವರೆಗೆ ಬಾಳಿಲ್ಲಿ ತನ್ನ ಜೀವಿತ ಕಾಲದಲ್ಲಿ ರಾಮರಾಯರು ತಮ್ಮ ಶಿವರಾಯನಿಗಾದ ಅದಾವುದೋ ವ್ಯಾಜ್ಯದಲ್ಲಿನ ನಷ್ಟಕ್ಕೆ ಭರ್ತಿಮಾಡಿ ಕೊಟ್ಟಿದ್ದರು. ತಮ್ಮನ ಮದುವೆಗೆ ಮುಂದಾಗಿ ಬಂದು ಮಾಡಿದ್ದರು. ತನ್ನ ಜಾನೀ ಯೋಜನೆಗೆ ಮಾಡದೆ ಮನುತೆಯಲ್ಲಿ ಬೆಳೆದ ಬಂದ ತಮ್ಮನ ಮಗಳ ವಿದ್ಯಾರ್ಜನೆಗೂ ಸ್ವಲ್ಪ ಹಣ ಕೊಟ್ಟಿದ್ದರು ಇದೆಲ್ಲವೂ ಅವರು ತಮ್ಮ ಶಿವರಾಯನ ಬಗ್ಗೆ ಮಾಡಿದ್ದ ಅಪೂರ್ವ ಸಹಾಯ ದಾನಗಳು. ಮರೆಯಲಾರದ ಘಟನೆಗಳು.

ರಾಮರಾಯರು ಹೆಂಡತಿಯ ಅವಸಾನದ ಬೇಸರದಿಂದ ಬೇಗನೇ ಹಾಸಿಗೆ ಹಿಡಿದು ಮನೆಯಲ್ಲಿನ ಉಪಚಾರ ಸಾಲದೆ ಆಸ್ಪತ್ರೆ ಸೇರುವಂತಾಯಿತು, ಕೆಲವು ತಿಂಗಳು ಆಸ್ಪತ್ರೆಯ ಮರಣ ಶಯ್ಯೆಯಲ್ಲಿ ಮಲಗಿ ತನ್ನ ಕೊನೆಯ ಗಳಿಗೆಯಲ್ಲಿ ತಮ್ಮ ಶಿವರಾಯರನ್ನು ಕರೆದು ಈ ರೀತಿ ಹೇಳಿದರು.

"ಶಿವಾ, ಇನ್ನು ನಾನು ನಿಮ್ಮೊಡನೆ ಇರುವ ಭರವಸೆಯಿಂದ ದೂರವಿದ್ದೇನೆ. ನನ್ನ ಜೀವಾನ ಕಾಲದಲ್ಲೆ ನಿನಗೆ ಕಷ್ಟ ಕೊಡುವುದರಲ್ಲೇ ಕಳೆಯಿತು. ನನ್ನೊಂದು ಬೇಡಿಕೆಗೆ ಸಮ್ಮತಿಸುವೆಯಾ....?"

"ಅವಳು" ಕಣ್ಣಿನಲ್ಲಿ ನೀರೊರಸಿಕೊಳ್ಳುತ್ತ ಮುಂದುವರಿಸಿದರು, "ನಾಯುವಾಗ ನಮ್ಮ ಸುರೇಶನ ವಿಷಯದಲ್ಲಿ ಹೇಳಿದ್ದು ನಿನಗೆ ತಿಳಿದಿರಬಹುದು. ನನ್ನ ಕಾಲದಲ್ಲಂತೂ ಅವನ ಪಾಲಿಗೆ ಬರೇ ಕಷ್ಟತಿನ್ನುವಂತಾಯಿತು ಶಿವಾ. ನೀನಾದರೂ ಅವನನ್ನು ಓದಿಸಿ, ಎಂಡ. ತುತ್ತು ಅನ್ನ ಸಿಗುವಂತೆ ಮಾಡುವಿಯೆಂದು ನಂಬುತ್ತೇನೆ. ಇದೇ ನನ್ನ ಬೇಡಿ."

ಮತ್ತೆ ರಾಮರಾಯರು ಮಾತನಾಡಿದ್ದಿಲ್ಲ. ಅವರ ಪೂರ್ತಿ ಆಶೆಗಳೆಲ್ಲವೂ ತಮ್ಮ ನಂದರ ಕುಡಿಯಾಗಿದ್ದ ಸುರೇಶನ ಮೇಲೆಯೇ ಬಿದ್ದಿದ್ದವು. ಅವರಲ್ಲಿ ಆಗ ಕಣಪು ಹೆಚ್ಚಿಗೆ ಇರಲಿಲ್ಲ. ಇದ್ದದ್ದೆಲ್ಲವನ್ನೂ ಅಪ್ಪನ್ನೆಗೆ ಕೊಟ್ಟು ಸುಮಗಿ, ಅಲ್ಲೇ ಪ್ರಾಣ ಬಿಟ್ಟರು. ಅಂದಿನ ಬಳಿಕ ಸುರೇಶ ತನ್ನ ಇದನೇ ಕ್ಲಾಸಿನ ಓದುವಿಕೆಗೆ ತಿಲಾಂಜಲಿಯ ನ್ನೀಯಬೇಕಾಯಿತು! ತನ್ನ ಎಳೇ ವಯಸ್ಸಿನಲ್ಲಿ ತಾಯಿ ಮಡಿಲಲ್ಲಿ ಮಲಗಬೇಕಾಗಿದ್ದ ಮಗುವಿನಂತಿದ್ದ ಸುರೇಶ ಶಿವರಾಯರ ಮನೆಗೆ ಸೇರಿ ಮತ್ತೆ ಕಷ್ಟದ ಕಬ್ಬಿಣದ ಕಡಲೆಗಳನ್ನು ಜಗಿಯಬೇಕಾಗಿ ಬಂತು.

ಸುರೇಶ ನಿಜವಾಗಿಯೂ ಸೌಮ್ಯ ಸ್ವಭಾವಿಯಾಗಿದ್ದ. ಸರಳತನದ ಬಾಳ್ವೆಯಲ್ಲಿ ಆತನಿಗೆ ಅಧಿಕ ಆದರ. ರಾಯರ ಮಂಡಲದಲ್ಲೇ ಅದು ತನಕ ಹುಟ್ಟಿದ ಹುಡುಗ ಸುರೇಶನಾಗಿದ್ದ. ಏನೋವಿಧಿ ಅವನ ಪಾಲಿಗೆ ತಂದೆ ತಾಯಿಗಳನ್ನು ಕಳಕೊಳ್ಳುವಂತೆ ಮಾಡಿತು. ಆದರೂ ಸುರೇಶನನ್ನು, ತನ್ನ ನಾದ ಶಿವರಾಯರು ತಮ್ಮಣ್ಣನ ಪ್ರತೀಕವೆಂದರಿತುಕೊಂಡು ಆತನನ್ನು ಕಾಪಾಡುವ ಜವಾಬ್ದಾರಿ ವಹಿಸಿಕೊಂಡರು. ಮಾತಾಪಿತೃಗಳ ಮಮತೆ ಬೆಳೆಯಲು ಶಿವರಾಯರು ಬಹುವಾಗಿ ಶ್ರಮಿಸುತ್ತಲೇ ಇದ್ದರು. ಆದರೆ ಅದೆಲ್ಲವೂ ಬೋರ್ಕಲ್ಲಮೇಲೆ ಬೀಳೆರೆದಂತಾಗಿತ್ತು—ಎಲ್ಲವೂ ಅವರ ಪತ್ನಿ ಪದ್ಮಮ್ಮ ಎಂದಾಗಿ! ಅಕ್ಷರ ತನಕ ಏಕಾಂಗಿಯಾಗಿದ್ದ ಸುರೇಶ ತನ್ನ ಚಿಕ್ಕಪ್ಪನ ಮನೆಗೆ ಬಂದು ತನಗೋರ್ವಳು ಸಂಗಾತಿ ದೊರಕಿದೆಳೆಂದು ಸಂತೋಷಿಸಿದ! ಉಷಾ ಸುರೇಶರ ಪ್ರೀತಿ ದಿನೇ ದಿನೇ ಬೆಳೆಯುತ್ತಲೇ ಇತ್ತು. ಎಂತಹ ದುಃಖವಾದರೂ ಅವರು ತಮ್ಮ ಸಹೃದಯದ ಸವಿನುಡಿಗಳಲ್ಲೇ ತೇಲಿಬಿಡಲು ಸಮರ್ಥರಾಗಿದ್ದರು.

ಸುರೇಶನ ವಾಲಿಗೆ ಮುಂದೆ ವಿದ್ಯೆಯಂತೂ ಸಿಗಲೇ ಇಲ್ಲ. ಚಿಕ್ಕಪ್ಪನ ಮನೆಗೆಲಸವೇ ಅವನಿಗೆ ಪರಮ ಕರ್ತವ್ಯವಾಯಿತು. ಚಿಕ್ಕಪ್ಪನ ಧರ್ಮಪತ್ನಿ ಪದ್ಮಮ್ಮನ ನುಡಿಯೇ ವೇದವಾಣಿಯಾಯಿತು. ಅವಳು ಅನುಸರಿಸುವ ನಡೆಯೇ ಅವನಿಗೂ ಮಾರ್ಗವಾಯಿತು. ತಪ್ಪಿದರೆ ಹುಲಿ ನರಿಯನ್ನು ಅಟ್ಟುವಂತಹ ಪರಿಸ್ಥಿತಿ ಸುರೇಶನಂತಹ ತಂದೆ ತಾಯಿಗಳನ್ನು ಕಳಕೊಂಡ ತಬ್ಬಲಿಗೆ ಬಂದಿತು.

ಆದರೂ ಸುರೇಶ ಹೆದರುವವನಲ್ಲ. ಬಂದದ್ದು ಬರಲಿ ಎಂದು ಮೆಚ್ಚಿಗೆ ವ್ಯಕ್ತಪಡಿಸುವವ ತಕ್ಕ ಬಲಾಢ್ಯನಾಗಿದ್ದ ಸುರೇಶ ಎಂದಿಗೂ ಯಾವ ಕೆಲಸಕ್ಕೂ ಹೇಸುತ್ತಿರಲಿಲ್ಲ. ಅವನಿಗೆ ಆಡಂಬರದ ಜೀವನ ಬೇಕಿರಲಿಲ್ಲ. ಅಥವಾ ಅಂದ ಚೆಂದ ಮಾಡಿಕೊಂಡು ವಾಗಾಡಂಬರ ಪೋರಿಸುವ ನಡೆ ಬೇಕಾಗಿರಲಿಲ್ಲ. ಅವನಿಗೆ ಬೇಕಾಗಿದ್ದದು ಎರಡುತುತ್ತು ಅನ್ನ! ಜರ ಬೇಗೆ ತಣಿಸುವ ಕೂಳ!

ಶಿವರಾಯರು ನಿಜಕ್ಕೂ ಸುಗುಣ ಶೀಲ ಪ್ರವೃತ್ತಿ ಉಳ್ಳವರಾಗಿದ್ದರು. ಪದ್ಮಕ್ಕ ಕೈಹಿಡಿದಂದಿನಿಂದ ಅವರಿಗೆ ಶಾಂತಿ ಎಂಬುದು ಇರಲಿಲ್ಲ. ಕಾರಣವಿಲ್ಲದೆ ಕಿರುಕುಳ ಕೊಡುವಂತಹ ಪತ್ನಿಯನ್ನು ಪರು ಎದುರೆದುರಾಗಿ ಬೈಯುವ ಹವ್ಯಾಸವನ್ನೆಂದಿಗೂ ಮಾಡಿದವರಲ್ಲ! ಮಾಡಿದರೆ ಏನಾಗುತ್ತದೋ ಎಂಬ ಭಯ ಅವರನ್ನು ಹುಚ್ಚುತ್ತಿತ್ತು! ಅವರ ಪತ್ನಿ ಪದ್ಮಮ್ಮಳಂತೂ

(೧೧ನೇ ಪುಟ ನೋಡಿರಿ)

ಗುಟ್ಟಾಗಿ ಸರಳ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು
ಟ್ರೇಡ್ ಮಾರ್ಕ್
ಸಂತಾನ ಸಿಂದೂರ (ಸ್ತ್ರೀಯರಿಗೆ. ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ: ಗುಳಿಗೆ)
ಈ ಭಸ್ಮವು ಬಹುಸ್ಥೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.
"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶರೀರನಮಾಡಿ, ಸ್ಪಷ್ಟ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರವೆಲ್ಲ ಧಾತು ಹೋಗುವುದನ್ನು ತಡೆಗಟ್ಟಿ, ನಪುಂಸಕತೆಯನ್ನು ಹೋಗಲಡಿಸುತ್ತದೆ.
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ
ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 1 ಆಣೆ (25 N.P.) ಅಂಚೆಯ ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಪ್ರಶಸ್ತಿಪತ್ರಿಕೆಗಳ ಪಟ್ಟಿ.
ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ, (ನಂ. ಯು)
೬೪೩, ಅಂಬಳೆ ಅಣ್ಣಯ್ಯ ಹಂಡಿಕ್ಯಾ ಮಾರ್ಕ್ ಸಾಲ್ ಕ್ರಾಸ್, ಮೈಸೂರು-1 (S.I.)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.
ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.
ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.
ನಮ್ಮ ಬಡ್ಡಿ ದರಗಳು.
ಸ್ಥಿರಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%
ಕರೆಂಟ್ ಎಕೌಂಟು ½%
The Moolky Bank, Ltd.

ಎಲ್ಲರೂ ತಿನ್ನುವ ಉಪ್ಪು—

ಆಹಾರವನ್ನು ಸ್ವಾದಿಷ್ಟಗೊಳಿಸುವ ಲವಣ

ಉಪ್ಪು ಇಲ್ಲದ ಪಾಕ ರುಚಿಸುದಿ ಉಪ್ಪಿನಾಸವಿ ಬೆಲ್ಲದಿ || ಒಪ್ಪಿ ಬರುವುದೆ ಎಂದಿಗಾದರು | ತುಪ್ಪೆ ಬಿಟ್ಟರು ಪಾಕದಿ|| ಎಂಬುಕ್ತಿ ಪ್ರಚಲಿತವಿದೆ ಅಂತೆಯೇ ‘‘ಉಪ್ಪರಿಗೆಯ ಮನೆಯವನಿಗಾದರೂ ಉಪ್ಪಿಲ್ಲದಿ ಆಗದು’’ ಎಂಬ ಗಾದೆಯೂ ಜನಜನಿತವಾಗಿದೆ. ‘ಇದೇನು ಊಟ ಸಪ್ಪೆಯಾಗಿದೆ, ಉಪ್ಪು ಹಾಕಿಲ್ಲವೆ?’ ಎಂದು ಕೇಳುತ್ತಾರೆ ಜನ ಭೂಮಿಯು ಫಲವತಿಯಾಗಬೇಕಾದರೆ ಅದಕ್ಕೆ ಉಪ್ಪನ್ನು ಕಾಕಬೇಕಂತೆ. ಎಂದರೆ, ‘ಉಪ್ಪು’ ಎಂಬುದು ಬಹಳ ಉಪಯೋಗಕರವಾದ ಅತ್ಯಂತಾವಶ್ಯಕವಾದ ಪದಾರ್ಥ ಎಂದಂತಾಯಿತು.

ಈ ‘ವಸ್ತು’ವನ್ನು ಸಾಮಾನ್ಯ ಜನರು ತಮ್ಮ ಭಾಷೆಯಲ್ಲಿ ‘ಉಪ್ಪು” ಎಂದು ಕರೆದರೆ, ರಾಸಾಯನಿಕ ಶಾಸ್ತ್ರಜ್ಞರ ಬಾಯಲ್ಲಿ ಅದು ‘‘ಸೋಡಿಯಂ ಕ್ಲೋರೈಡ್” ಎಂಬ ಅದ್ಭುತ ವಸ್ತುವಾಗಿ ಹೊರಬರುತ್ತದೆ. ಈ ಉಪ್ಪು ನಮ್ಮ ಜೀವನದ ಒಂದು ಪ್ರಧಾನಾಂಗವಾಗಿ ಪರಿಣಮಿಸಿ ಸಹಸ್ರಾರು ವರ್ಷಗಳು ಕಳೆದುವು. ಅದರಿಂದ ನಾವು ಉಣ್ಣುವ ಆಹಾರವು ರುಚಿಕರವೂ ಸ್ವಾದಿಷ್ಟವೂ ಆಗುವುದಲ್ಲದೇ ನಮ್ಮ ಶರೀರದ ರಕ್ಷಣೆ ಹಾಗೂ ನಿರ್ಮಾಣ ಕಾರ್ಯಗಳಿಗೂ ಇದು ಅಗತ್ಯವೆಂದು ವಿಜ್ಞಾನ ಶಾಸ್ತ್ರ ಸಾರುತ್ತದೆ. ಕ್ಲಾರೀಯ ಸೋಡ, ಸೋಡಾಂಶಾಖ, ಹೈಡ್ರೊಕ್ಲೋರಿಕ್ ಆಮ್ಲ, ಕ್ಲೋರಿನ್, ಸೋಡಿಯಂ, ಸಲ್ಫೇಟ್ ಇತ್ಯಾದಿಗಳನ್ನು ಸಿದ್ಧಪಡಿಸುವಲ್ಲಿಯೂ ಅನಿಷ್ಟ ವಸ್ತುವಿನ ರೂಪವಲ್ಲಿ ಉಪ್ಪನ್ನು ಬಳಸಿಕೊಳ್ಳಲಾಗುತ್ತದೆ. ಇಂದು ನಮ್ಮ ದೇಶದಲ್ಲಿ ವರ್ಷವೊಂದರಲ್ಲಿ ಸಾಮಾನ್ಯವಾಗಿ ಮೂವತ್ತೆರಡು ಲಕ್ಷ ಟನ್ನುಗಳಷ್ಟು ಉಪ್ಪು ತಯಾರಾಗುತ್ತದೆ ಇದರಲ್ಲಿ ಕೈಗಾರಿಕೆಗಳಿಗಾಗಿ ನಾಲ್ಕು ಲಕ್ಷ, ನಿರ್ಯಾತಕ್ಕಾಗಿ ಇಪ್ಪತ್ತು ಲಕ್ಷ ಟನ್ನುಗಳನ್ನು ಕಳೆದುಳಿದ ಎಂಟು ಲಕ್ಷ ಟನ್ನುಗಳಷ್ಟು ಉಪ್ಪು ಭಾರತೀಯರ ದೈನಂದಿನ ಜೀವನದಲ್ಲಿ ಆಹಾರದೊಡನೆ ಬೆರೆಸಿಕೊಳ್ಳುವುದಕ್ಕಾಗಿ ಖರ್ಚಾಗುತ್ತದೆ.

ಇದುವರೆಗೂ ಭಾರತದಲ್ಲಿ ಉಪ್ಪನ್ನು ಗನಿಗಳಿಂದ ಅಗೆದು ಪಡೆಯುವುದು ಅತ್ಯಲ್ಪ ಪ್ರಮಾಣದಷ್ಟು ಮಾತ್ರ. ಹೆಚ್ಚಿನಂಶವು ಸಮುದ್ರದ ನೀರನ್ನು ಒಣಗಿಸಿ, ಆದರಲ್ಲಿರುವ ಉಪ್ಪನ್ನು ಪ್ರತ್ಯೇಕಿಸಿ ನಿರ್ಮಿಸಲಾಗುತ್ತದೆ. ಹೀಗೆ ನೀರೊಣಗಿಸಿ ಉಪ್ಪು ಪಡೆಯಲು ಭಾರತದ ಸಮುದ್ರ ತೀರಗಳು ಅತ್ಯಂತ ದೀರ್ಘವಿರುವುದು ಮತ್ತು ಸೂರ್ಯ ತಾಪಸಹಿತವಾದ ಬೇಸಿಗೆ ಕಾಲವು ಬಹಳ ದೀರ್ಘ ಕಾಲವಿರುವುದು ಕಾರಣವೆಂದು ಹೇಳಬಹುದು ಸಾಮಾನ್ಯವಾಗಿ ವರ್ಷದ ಹನ್ನೆರಡು ತಿಂಗಳುಗಳಲ್ಲಿಯೂ ಭಾರತದ ಒಂದಿಲ್ಲೊಂದು ಮೂಲೆಯಲ್ಲಿ ಸಮುದ್ರನೀರನ್ನು ಸೂರ್ಯತಾಪದಿಂದ ಆವಿಯಾಗಿಸಿ ಉಪ್ಪು ಪಡೆಯುವ ಪ್ರಕೃತಿದತ್ತ ಸೌಲಭ್ಯವಿರುವುದನ್ನು ಗಮನಿಸಬಹುದು

ಉಪ್ಪು ತಯಾರಿಸುವ ವಿಧಾನವು ಅತ್ಯಂತ ಪ್ರಾಚೀನವಾಗಿದೆ ಉಪ್ಪು ಪಡೆಯುವುದಕ್ಕೆ ಪೂರ್ವಭಾವಿಯಾಗಿ ನೀರನ್ನು ಜಲಾಶಯಗಳಲ್ಲಿ ಶೇಖರಿಸಿಡುತ್ತಾರೆ. ಅದನ್ನು ೧೦ ಡಿಗ್ರಿಗಳಷ್ಟು ಬಿಸಿಮಾಡಿ ದಪ್ಪವಾಡಿಸುತ್ತಾರೆ ಆಗ ಈ ನೀರಿನಿಂದ ಕೇಲ್ಶಿಯಮ್ ಕಾರ್ಬೊನೇಟನ್ನು ಹೊಂಗೆ ತೆಗೆಯಲಾಗುತ್ತದೆ. ಇದರನಂತರ ತನ್ನನ್ನು ಮತ್ತಷ್ಟು ದಪ್ಪವಾಗಿಸುವ ಮೂರು ಬೇರೆಬೇರೆ ಅವಸ್ಥೆಗಳನ್ನು ಇದು ಕಳೆಯಬೇಕಾಗುತ್ತದೆ. ಕೇಲ್ಶಿಯಂ ಸಲ್ಫೇಟನ್ನು ಇಲ್ಲಿ ಪ್ರತ್ಯೇಕಿಸಲಾಗುತ್ತದೆ. ಇದನ್ನು ಹೆರಳುಗಳನ್ನಾಗಿಸುವುದಕ್ಕೆ ತಳರಿಂದ ೨೯ ಡಿಗ್ರಿಗಳಷ್ಟು ಬಿಸಿಯಲ್ಲಡಲಾಗುತ್ತದೆ. ಈ ವಿಧಾನದಲ್ಲಿ ಉತ್ತಮ ವಿಧದ ಉಪ್ಪನ್ನು ಪಡೆಯಬಹುದು.

ಭಾರತದಲ್ಲಿ ಉಪ್ಪು ಪ್ರಧಾನವಾಗಿ ಮದ್ರಾಸು, ಬೊಂಬಯಿ, ಮಂಡಿ, ಕಲಕತ್ತೆ ಮತ್ತು ಆರ್ ಎಸ್ ಎಸ್. ಡಿವಿಜನ್‌ಗಳ ಪ್ರದೇಶಗಳಲ್ಲಿ ತಯಾರಿಸಲಾಗುತ್ತದೆ. ಮಂಡಿಯನ್ನುಳಿದ ನಾಲ್ಕು ಸ್ಥಳಗಳಲ್ಲಿಯೂ ಸಮುದ್ರದ ನೀರನ್ನು ಒಣಗಿಸಿಯೇ ಉಪ್ಪನ್ನು ಸಿದ್ಧಪಡಿಸುತ್ತಾರೆ. ಈ ಸ್ಥಳಗಳಲ್ಲಿ ಉಪ್ಪು ತಯಾರಿಸುವ ಅನೇಕ ಕೇಂದ್ರಗಳು ಹರಡಿಕೊಂಡಿವೆ

ತಿನ್ನುವ ಸತ್ತು ರಾಸಾಯನಿಕ ಉದ್ಯೋಗಗಳಿಗೆ ಬೇಕಾಗುವ ಉಪ್ಪು ಉತ್ತಮ ತೆರದ್ದಿರಬೇಕಾಗುವುದು ಉಪ್ಪಿನಲ್ಲಿಯೂ ಅನೇಕ ವಿಧದವುಗಳಿವೆ ಉಪಯೋಗಿಸುವ ನೀರು ಮತ್ತು ಪ್ರತ್ಯೇಕಿಸುವ ವಿಧಾನಗಳೇ ಉಪ್ಪಿನಲ್ಲಿ ಒಪ್ಪುತೆರವಿರಲು ಕಾರಣವಾಗಿವೆ ಕೆಲವು ಕೇಂದ್ರಗಳಲ್ಲಿ ತಯಾರಿಸುವ ಉಪ್ಪು ಇಂದಿಗೂ ನಿನ್ನ ವರ್ಗದ್ದಿವೆ ಇವುಗಳಲ್ಲಿ ಕೊಳೆಯು ಅತ್ಯಂತಾಧಿಕ ಪ್ರಮಾಣದಲ್ಲಿವೆ ವೈಜ್ಞಾನಿಕ ಪದ್ಧತಿಯನ್ನು ಉಪ್ಪನ್ನು ತಯಾರಿಸುವುದಕ್ಕಾಗಿ ಕೈಗೊಳ್ಳದಿರುವುದೇ ಇದಕ್ಕೆ ಕಾರಣವೆನ್ನಬಹುದು ಆದುದರಿಂದ ಇದನ್ನು ಸುಧಾರಣೆಮಾಡುವ ಅವಶ್ಯಕತೆ ಬಿತ್ತು ಭಾರತದಲ್ಲಿ ಉಪ್ಪಿನ ತಯಾರಿಯ ಸಧಾರಣೆಯು ೧೯೫೦ರಲ್ಲಿ ಆಯಿತು. ಇದರಲ್ಲಿ ಉಣ್ಣುವ ಉಪ್ಪಿನಲ್ಲಿ ೯೬ ಸೇಕಡಾದಷ್ಟು ಸೋಡಿಯಂ ಕ್ಲೋರೈಡ್ ಉಳಿಯಿತು ಮಂಡಕ್ಕೂ ಈಕಡೆಯಲ್ಲಿ ಪ್ರಯತ್ನವು ನಡೆದು, ೧೯೫೧ರಲ್ಲಿ ಸರಕಾರೀ ವಿಭಾಗದಿಂದ ತಯಾರಿಸಲಾದ ಉಪ್ಪಿನಲ್ಲಿ ೯೨ ಸೇಕಡಾ ಸೋಡಿಯಂ ಕ್ಲೋರೈಡ್ ಉಳಿದಿತ್ತು. ಇದರಿಂದ ಇದನ್ನು ಹೆಚ್ಚಿಸಿ ನೂರಕ್ಕೆ ೯೩ರಷ್ಟು ೫೪ರಲ್ಲಿ ೯೪ರಷ್ಟು ಹೆಚ್ಚಿಸಲಾಯಿತು. ಇದರ ವರೆಗೆ ೪ ವರ್ಷಗಳ ಉಳಿದಿತ್ತು. ೧೯೫೭ ಜನವರಿಗಿಂದ ೯೫ರಷ್ಟು ಉಳಿಸಿಕೊಳ್ಳಲಾಯಿತು ೧೯೫೮ರಲ್ಲಿ ಅದನ್ನು ೯೫ರಷ್ಟು ಸೋಡಿಯಮ್ ಕ್ಲೋರೈಡಿರುವಂತೆ ಪ್ರಯತ್ನಿಸುವ ಆಶೆಯಿದೆ.

ರಾಸಾಯನಿಕ ಉದ್ಯೋಗಗಳಲ್ಲಿ ಬಳಸಲಾಗುವ ಉಪ್ಪಿನಲ್ಲಿ ಸೋಡಿಯಂ ಕ್ಲೋರೈಡ್ ಮತ್ತೂ ಅಧಿಕ ಪ್ರಮಾಣದಲ್ಲಿರಬೇಕು. ರಾಸಾಯನ ಉದ್ಯೋಗದ ಸಾಮಾನ್ಯ ಉಪ್ಪಿನಲ್ಲಿ ಅದರ ೯೬ ಸೇಕಡಾವನ್ನು ಇಳಿಸಲಾಯಿತು. ಭಾರತದಲ್ಲಿ ಇಂತಹ ಉಪ್ಪು ಇಂದಿಗೂ ತಯಾರಿಸಲ್ಪಡುವುದಿಲ್ಲ ನಿನ್ನ ವರ್ಗದ ಉಪ್ಪನ್ನು ಚರ್ಮ ಶುದ್ಧೀಕರಿಸಲು, ಬಿನ್ನನ್ನು ಕೊಳೆಯದಂತಿಡಲು ಬಹಳಷ್ಟು ಉಪಯೋಗಿಸುತ್ತಾರೆ

ಉತ್ತಮ ಜಾತಿಯ ಉಪ್ಪನ್ನು ತಯಾರಿಸುವುದಕ್ಕಾಗಿ ಕಾರಖಾನೆಗಳನ್ನು ಉತ್ತಮ ರೀತಿಯಲ್ಲಿ ಆಯೋಜಿಸುವುದು ಅವಶ್ಯಕವಾಗಿದೆ. ಉತ್ತಮ ರೀತಿಯ ಉಪ್ಪನ್ನು ತಯಾರಿಸುವುದಕ್ಕೆ ತಕ್ಕ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವುದೂ ಅತ್ಯೇ ಪ್ರಮುಖವಾದುದು

ಉಪ್ಪು ತಯಾರಾಗುತ್ತಿರುವಾಗ, ಎಲ್ಲ ಸಮಯಗಳಲ್ಲಿಯೂ ತೀವ್ರ ಪರೀಕ್ಷೆ ನಡೆಸುತ್ತಿರುವುದು ಅವಶ್ಯಕವಾಗಿದೆ ಆದರೆ, ಇಂದು ನಮ್ಮ ಉಪ್ಪಿನ ಕಾರಖಾನೆಗಳಲ್ಲಿ ತೆಗೆದುಕೊಳ್ಳಲಾಗುತ್ತಿರುವ ಎಚ್ಚರಿಕೆಗಳು ವಿಶೇಷ ಸಾಲದು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ದೇಶದ ವಿವಿಧೆಡೆಗಳಲ್ಲಿ ಸರ್ವ ವಿಧದ ಪ್ರತೀಕ್ಷಣಾ ಸಹಿತವಾದ ಅನೇಕ ಪ್ರಯೋಗಶಾಲೆಗಳು ನಿರ್ಮಾಣಗೊಳ್ಳುವ ವ್ಯವಸ್ಥೆ ಮಾಡಲಾಗಿದೆ ಈ ಯೋಜನಾಂತ್ಯದಲ್ಲಿ ಮದ್ರಾಸ ಪ್ರದೇಶದಲ್ಲಿ ೨೨, ಬೊಂಬಯಿ ವಿಭಾಗದಲ್ಲಿ ೮ ಮಂಡಿ ಮತ್ತು ಕಲಕತ್ತೆಯ ಕ್ಷೇತ್ರಗಳಲ್ಲಿ ಎರಡೆರಡು ಹಾಗೂ ಆರ್. ಎಸ್ ಎಸ್ ವಿಭಾಗದಲ್ಲಿ ಮೂರು ಪ್ರಯೋಗ ಶಾಲೆಗಳು ಸ್ಥಾಪಿತವಾಗುವುವು.

ಉಪ್ಪು ತಯಾರಿಸುವವರಿಗೆ ವೈಜ್ಞಾನಿಕರೀತಿಯ ಶಿಕ್ಷಣ ಕೊಡುವುದಕ್ಕಾಗಿ ಆದರ್ಶಕ್ಷೇತ್ರವು ಅವಶ್ಯವಿದೆ ಇಂತಹ ಮೂರು ಕ್ಷೇತ್ರಗಳನ್ನು ಮಾಡ್ಲ (ಬೊಂಬಯಿ) ಸುಮಾದಿ (ಒಡಿಸ್ಸಾ) ಮತ್ತು ಲಿಮಿಂಗಿಸ ರಂ (ಮದ್ರಾಸ) ಗಳಲ್ಲಿ ಈಗಾಗಲೇ ತೆರೆಯಲಾಗಿದೆ ಮದ್ರಾಸು ಮತ್ತು ಬೊಂಬಾಯಿಯ ಕ್ಷೇತ್ರಗಳಲ್ಲಿ ಇನ್ನೂ ಇಂತಹ ಆದರ್ಶ ಕೇಂದ್ರಗಳನ್ನು ತೆರೆಯಲಾಗುತ್ತದೆ.

ಇಂದು ಮೂರುಕಟ್ಟೆಯಲ್ಲಿ ದೊರೆಯುವ ಉಪ್ಪಿನಲ್ಲಿ ಅಧಿಕತರವು ನಿಮ್ನವರ್ಗಕ್ಕೆ ಸೇರಿದುದಾಗಿದೆ. ಆದರೆ, ಈ ಕ್ಷೇತ್ರದಲ್ಲಿ ಅತ್ಯುತ್ತಮ ರೀತಿಯ ಮಲರಹಿತವಾದ ಲವಣ ನಿರ್ಮಾಣ ಕಾರ್ಯದಲ್ಲಿ ಈಗೀಗ ಪ್ರಯತ್ನಗಳು ನಡೆಯುತ್ತಿವೆ. ಉಪ್ಪನ್ನು ತಯಾರಿಸುವುದಕ್ಕೆ ವೈಜ್ಞಾನಿಕ ವಿಧಾನಗಳನ್ನೂ ತಯಾರಿಸುವ ಕರ್ಮಚಾರಿಗೆ ತಕ್ಕ ತರಬೇತಿಯನ್ನೂ ಕೊಡುವಲ್ಲಿ ವಿಶೇಷ ಲಕ್ಷ್ಯವನ್ನು ಪೂರೈಸಲಾಗುತ್ತದೆ. ಆದರೆ, ಈ ದಿಸೆಯಲ್ಲಿ ನಡೆದ ಕೆಲಸಗಳಿಗಿಂತಲೂ ಇನ್ನು ಮುಂದಕ್ಕೆ ನಡೆಯಬೇಕಾದುದುಗಳೇ ಅಧಿಕವಾಗಿರುವುದೆಂಬುದನ್ನು ಮರೆಯಬಾರದು ಇದೇ ರೀತಿಯಲ್ಲಿ ಕಾರ್ಯಗಳು ಮುಂದುವರಿದು ತೀವ್ರವಾಗಿ ನಮಗೆ ಬೇಕಾದ ಸರ್ವ ವಿಧದ ಉಪ್ಪು ಸಾಕಷ್ಟು ಸಿಗುವಂತಾಗಲೆಂದು ಬಯಸಲಾಗಿದೆ.

ನಮ್ಮ ಜೀವನದಲ್ಲಿ ಅತ್ಯಂತಾವಶ್ಯಕವೆನಿಸಿದ ಕೆಲವೇ ಪದಾರ್ಥಗಳಲ್ಲಿ ಉಪ್ಪು ಒಂದಾಗಿದೆ. ಉಪ್ಪಿಲ್ಲದ ಅಡುಗೆ ಸತ್ವಹೀನವಾಗಿ ಅಸ್ವಾದಿಷ್ಟವಾಗಿ ಕಾಣಿಸುತ್ತದು ಅಲ್ಲದೇ ಉಪ್ಪನ್ನು ಬಳಸಿಕೊಳ್ಳುವುದರಲ್ಲಿ ಕೊರತೆಯು ಕಂಡುಬಂದರೆ ಅದರಿಂದ ದೇಹದಲ್ಲಿ ಎಲುಬುಗಳು ಸಂಕಷ್ಟ ಪ್ರಮಾಣದಲ್ಲಿ ಬೆಳೆಯದೆ, ಶರೀರ ಸಾಸ್ಥವು ಕುಂದುವುದು ಆದ್ದರಿಂದ ಉಪ್ಪು ಮಾನವನ ಮೇಲೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಪರಿಣಾಮವನ್ನು ಮಾಡಬಲ್ಲ ಒಂದು ಲವಣ.

ಉಪ್ಪಿನ ಇತಿಹಾಸವು ಮಾನವನ ಇತಿಹಾಸದಷ್ಟೇ ಪ್ರಾಚೀನವಿರಲಾರದುದರೂ ಅದಕ್ಕಿಂತ ಹೆಚ್ಚು ಅಧಿಕವಲ್ಲವೆನ್ನುವುದು ನಿಶ್ಚಯ ಸಮುದ್ರದ ನೀರನ್ನು ಇಂಗಿಸಿ ಉಪ್ಪನ್ನು ಪಡೆಯುವ ವಿಧಾನವು ಹಿಂದಿನಿಂದಲೂ ವ್ಯವಹಾರದಲ್ಲಿತ್ತು ಮಾನವರು ಪ್ರತ್ಯಕ್ಷವಾಗಿ ಉಪ್ಪನ್ನು ಬಳಸುವುದಕ್ಕಿಂತ ಉಪ್ಪಿನ ಸತ್ವವುಳ್ಳ ಪದಾರ್ಥಗಳನ್ನು ತಿಂದು ಹೆಚ್ಚು ಉಪ್ಪನ್ನು ಪಡೆಯುತ್ತಾರೆ; ಹಾಗೆಯೇ ಸಶು ಪ್ರಾಣಿಗಳೂ ಇತರ ಪ್ರಾಣಿಗಳ ಮೈಯಲ್ಲಿ ಒಸರುವ ಬೆವರನ್ನು ನೆಕ್ಕಿಯೂ ಉಪ್ಪನ್ನು ಪಡೆಯುತ್ತವೆ. ಜೀವನದಲ್ಲಿ ಉಪ್ಪಿಗೆ ಇಂತಹ ಪ್ರಾಮುಖ್ಯ ಸ್ಥಾನವಿರುವುದರಿಂದಲೇ ಉಪ್ಪಿನ ಋಣವನ್ನಿಟ್ಟುಕೊಳ್ಳಬಾರದು ಎಂಬ ಗಾದೆ ಮಾತು ಹುಟ್ಟಿಕೊಂಡಿರಬಹುದೆ?

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಪ್ರಧಾನ ಕಚೇರಿ, ಉಡುಪಿ ಸ್ಥಾಪನೆ 1925

ಹಲ್ಲಿದ್ದಾಗಲೇ ಹುರಿಗಡಲೆ! ಹಣವಿದ್ದಾಗಲೇ ಉಳಿತಾಯ!

ನಮ್ಮ
ಲಕ್ಕಿ ಕೇಶ್
ಯೋಜನೆ
ಸರ್ಟಿಫಿಕೇಟುಗಳು

ನಿಮ್ಮ 8 ರೂ.ಗಳನ್ನು ಐದು ವರುಷಗಳಲ್ಲಿ ರೂ. ಹತ್ತಾಗಿ,
,, 80 ರೂ ಗಳನ್ನು ಐದು ವರುಷಗಳಲ್ಲಿ ರೂ ನೂರಾಗಿ,
,, 800 ರೂ ಗಳನ್ನು ಐದು ವರುಷಗಳಲ್ಲಿ ರೂ. ಸಹಸ್ರವಾಗಿ
ಅಭಿವೃದ್ಧಿಗೊಳಿಸುವುದು.

ಹೆಚ್ಚಿನ ಮಾಹಿತಿಗೆ ನಮ್ಮ ಯಾವದೇ 110 ಶಾಖೆಗಳಲ್ಲಿ ವಿಚಾರಿಸಿರಿ.

ಟಿ ಎ ಪೈ, ಬಿ.ಕಾಂ.(ಬೊಂ)
ಎ ಎ ಐ ಬಿ ಯಸ್ ಆರ್ ಇ.ಯಸ್ (ಲಂಡನ್)
ಜನರಲ್ ಮೆನೇಜರ್

ಡಾ ಟಿ ಮಾಧವ ಪೈ,
ಎಂ.ಬಿ.ಬಿ ಎಸ್.
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ಭಾರತೀಯ ಸಂಸ್ಕೃತಿಯ ಪ್ರತೀಕ—

ತಾಂಬೂಲ ಚರ್ವಣದ ಪ್ರಾಚೀನಕಲೆ

ಶ್ರೀ ಎಸ್ ಗೋಪೀಚಂದರಾವ್, ವಿದ್ವಾನ್, ವಿಶಾರದ.

ಭಾರತೀಯರ ಜೀವನದಲ್ಲಿ ಜನ್ಮದಾರಭ್ಯ ಮೃತ್ಯುವಿನ ವರೆಗೆ ನಡೆಯಲೇ ಬೇಕಾದ ಷೋಡಶ ಸಂಸ್ಕಾರಗಳಲ್ಲಿವುಗಳಿಗೂ ತಾಂಬೂಲ ಪತ್ರವು ಅತ್ಯಗತ್ಯವೆಂದಾಗಿ, ಈ ಪತ್ರಕ್ಕೆ ಭಾರತದಲ್ಲಿ ಅದೆಷ್ಟು ಮಹತ್ವವಿದೆಯೆಂಬುದನ್ನು ವ್ಯಕ್ತವಾಗಿ ಹೇಳುವ ಆವಶ್ಯಕತೆಯಿಲ್ಲ. ರಣರಂಗದಲ್ಲಿಯೂ ವೀಳ್ಯ ಕೆಳಸುವುದು ಪ್ರಾಚೀನ ಪದ್ಧತಿಯಾಗಿತ್ತು. ಪಲು, ಹುಷ್ಪ, ಅಕ್ಷತ, ಚಂದನ, ದೂಪ ಮೊದಲಾದುವುಗಳಂತೆಯೇ ತಾಂಬೂಲವೂ ಪ್ರತ್ಯೇಕ ದೇವಿ ದೇವತೆಗೆ ಅತಿಪ್ರಿಯಕರವಾದ ವಸ್ತುವಾಗಿದೆ. ವಿದೇಶೀಯರಿಗೆ ಈ ವೀಳ್ಯದೆಲೆಯ ಸಂಬಂಧದಲ್ಲಿದ್ದ ಆಶ್ಚರ್ಯಕರ ವಿಚಾರವು ಒಂದು ಬಾರಿ ಭಾರತ ದರ್ಶನವನ್ನು ಮಾಡಿದಾಗ ಲಾರ್ಡ್ ಮೆಕಾಲೆಯವರ ಸ್ವಾನುಭವದಿಂದ ತಿಳಿಯುತ್ತದೆ. ಭಾರತೀಯರು ಒಂದು ತೆರದ ಎಲೆಯನ್ನು ತಿನ್ನುತ್ತ ಬಾಯಿಂದ ಕೆನ್ನೀರನ್ನು ಉಗುಳುತ್ತಿರುವುದನ್ನು ಕಂಡು ಬಾಯಿಯನ್ನು ಕೊರೆದು ರಕ್ತಸುರಿಯುವಂತೆ ಮಾಡುವ ಈ ಎಲೆಯ ಶಕ್ತಿಯ ಬಗ್ಗೆ ಅವರು ಆಶ್ಚರ್ಯಚಕಿತರಾಗಿ ಹೋದರಂತೆ. ಇತ್ತೀಚೆಗೆ ಒಬ್ಬನವನಲ್ಲಿ ವೀಳ್ಯ ಸಂಬಂಧದಲ್ಲಿ ಒಂದು ಕುತೂಹಲಜನಕ ಘಟನೆ ನಡೆಯಿತು. ಒಬ್ಬಾಕೆ ಮಾಳಿಗೆಯ ಕಿಟಕಿಯಲ್ಲಿ ವೀಳ್ಯತಿಂದು ಕೆನ್ನೀರನ್ನು ಉಗುಳಿದಾಗ, ಅದು ಮಾರ್ಗದಲ್ಲಿ ನಡೆಯುತ್ತಿದ್ದ ಒಬ್ಬನ ತಲೆಯ ಮೇಲೆ ಎರಚಿ ಬಿಟ್ಟಿತು. ಆತನು ನೇರವಾಗಿ ಪೋಲೀಸ್ ಸ್ಟೇಶನ್ನಿಗೆ ತೆರಳಿ ಆ ಮನೆಯ ಕಿಟಕಿಯಿಂದ ಇಟ್ಟಿಗೆಯು ಎಸೆಯಲ್ಪಟ್ಟಿತೆಂದು ದೂರು ಕೊಟ್ಟನು. ಪೋಲೀಸರ ತಪಾಸಣೆ ಸುರುವಾಯಿತು. ಕೆಲ ದಿನಗಳ ನಂತರ ಪರೀಕ್ಷಾಣೆಯ ಸಮಯದಲ್ಲಿ ಸತ್ಯ ಸಂಗತಿ ಹೊರಬಿತ್ತು. ಆದರೆ, ಆ ಮೇಲೆ ಬಹು ದಿನಗಳ ತನಕವೂ ಈ ವಿನೋದಪೂರ್ಣ ಚರ್ಚೆಯೇ ನಗರವಾಸಿಗಳ ಚಕ್ಕಂದದ ವಿಷಯವಾಗಿ ಪರಿಣಮಿಸಿತ್ತು.

ನಮ್ಮಲ್ಲಿ ವೀಳ್ಯ ತಿನ್ನುವ ಪರಂಪರೆಯು ಬಹಳ ಕಾಲದಿಂದಲೂ ಬೆಳೆದು ಬಂದುದು. ಸಂಸ್ಕೃತ ಆಧ-ಕೋಶಗಳಲ್ಲಿಯೂ ವೀಳ್ಯದೆಲೆಗೆ ಅನೇಕ ಪರ್ಯಾಯ ಪದಗಳಿವೆ. ನಾಗಿನೀ, ನಾಗವಲ್ಲರೀ, ನಾಗವಲ್ಲೀ, ತಾಂಬೂಲವಲ್ಲೀ, ತಾಂಬೂಲೀ, ಸತ್ಪತ್ರಿಕಾ, ಸರ್ಪಲತಾ, ಫಣಿವಲ್ಲೀ, ಪರ್ಣಲತಾ, ಭುಜಗಲತಾ, ಭದ್ರಪತ್ರಾ, ಪರ್ಣವಲ್ಲೀ ಇವುಗಳು ಇದರ ಪರ್ಯಾಯ ವಾಚಿಗಳು.

ತಾಂಬೂಲದ ಉತ್ಪತ್ತಿಸಂಬಂಧದಲ್ಲಿ ಅನೇಕ ದಂತ ಕಥೆಗಳಿವೆ. ನಾಗವಲ್ಲೀ, ನಾಗಿನೀ, ನಾಗವಲ್ಲರೀ ಮೊದಲಾದ ನಾಮಧೇಯಗಳನ್ನು ನೋಡುವಾಗ, 'ನಾಗ' ಜಾತಿಗೂ ಈ ಸತ್ಪತ್ರಕ್ಕೂ ನಿಕಟ ಸಂಬಂಧವಿದ್ದಂತೆ ತೋರುತ್ತದೆ. ರಾಜಶೇಖರ ಸೂರಿಯ 'ಪ್ರಬಂಧ ಕೋಶ' ಎಂಬ ಗ್ರಂಥದಲ್ಲಿ ನಾಗರಾಜನಾದ ವಾಸುಕಿಯು ತನ್ನ ಮಗಳು ವಾಸುಶ್ರೀಕೆಯ ವಿವಾಹ ಸಮಯದಲ್ಲಿ ವರದಕ್ಷಿಣೆಯ ರೂಪದಲ್ಲಿತ್ತ ಅಮೂಲ್ಯ ವಸ್ತುಗಳಲ್ಲಿ ತಾಂಬೂಲವೂ ಒಂದೆಂದು ಶ್ರುತಪಡಿಸಿದೆ. ಹೀಗೆ ಪಾತಾಳ ಲೋಕದಿಂದ ವೀಳ್ಯದೆಲೆ ಭೂಲೋಕಕ್ಕೆ ಬಂದಿತು.

ಈ ಸಂಬಂಧದಲ್ಲಿ ಕಥಾ ಸರಿತ್ಸಾಗರದ ಉಲ್ಲೇಖದಂತೆ, ಒಬ್ಬ ಬೇಡನಿಂದ ವಾಸುಕಿಯು ತನ್ನ ವಸುನೇಮಿಯನ್ನು ಉಳಿಸಿದ ದರ ಪ್ರತಿಫಲ ರೂಪವಾಗಿ ಸರ್ವರಾಜಾನುಜನು ಸಹಸ್ರಾಸೀಕನೆಂಬ ರಾಜನ ಕುಮಾರ ಉದಯನನಿಗೆ ವೀಣೆ ತಿಲಕಯುಕ್ತಿ, ಅಮ್ಲಾನ ಮಾಲೆ ಮತ್ತು ಜೊತೆಗೆ ತಾಂಬೂಲವಲ್ಲಿಯನ್ನಿತ್ತನು ಎಂದು ತಿಳಿಯುತ್ತದೆ.

ತಾಂಬೂಲವನ್ನು ಬೆಳೆಸುವಂತಹ ವಿದ್ಧತಿಯೊಂದು ವಿಚಿತ್ರವಾಗಿದೆ. ಇದನ್ನು 'ವರಿಯೊ' ಎಂಬ ಜಾತಿಯವರು ಬೆಳೆಸುತ್ತಿದ್ದರು. ಆದರೆ, ಇವರಿಗೆ ತಾಂಬೂಲ ಹೇಗೆ ದೊರೆಯಿತು ಎಂದು ಯಾರಿಗೂ ತಿಳಿದಿರಲಾರದು. ಕೌರವ ಪಾಂಡವರ ಯುದ್ಧವು ಪೂರ್ಣಗೊಂಡ ನಂತರ, ಪಾಂಡವರು ಅಶ್ವಮೇಧ ಯಾಗ ಮಾಡಿದರು. ಯಜ್ಞಕ್ಕೆ ಅವರಿಗೆ ತಾಂಬೂಲದ ಅವಶ್ಯಕತೆ ಬಿತ್ತು. ಅವರು ಪಾತಾಳ ಲೋಕಕ್ಕೆ ತಮ್ಮ ದೂತರನ್ನಟ್ಟಿದರು. ದೂತರು ವಾಸುಕಿಯೊಡನೆ ಎಲ್ಲವನ್ನೂ ತಿಳಿಸಿ ವೀಳ್ಯದೆಲೆಯಿಲ್ಲದೆ ಯಜ್ಞ ಪೂರ್ತಿಯಾಗುವುದಿಲ್ಲವೆಂದು ನುಡಿದರು. ವಾಸುಕಿಯು, "ನನ್ನ ಕನಿಷ್ಟಿಕೆಯ ಒಂದು ತುಂಡನ್ನು ಖಂಡಿಸೀಯುತ್ತೇನೆ. ಅದನ್ನು ನೀವು ಭೂಮಿಯಲ್ಲಿ ನೆಟ್ಟುಬಿಡಿ. ಅದರಿಂದ ಒಂದು ವಿಧದ ಲತೆ ಹುಟ್ಟುವುದು. ಅದೇ ತಾಂಬೂಲದ ರೂಪಧಾರಣೆ ಮಾಡುವುದು" ಎಂದನು.

ಇಂದಿಗೂ ಆ ಬಳ್ಳಿಯಿಂದಲೇ ಎಲೆ ಹುಟ್ಟುವುದು" ಉದಯನನು ಯಮದಗ್ನಿ ಎಂಬ ಋಷಿಯ ಆಶ್ರಮದಲ್ಲಿ ಬೆಳೆದಿದ್ದುದನ್ನೂ, ಯಮದಗ್ನಿಯ ಆಶ್ರಮವು ಒಡಿಶಾ ರಾಜ್ಯದಲ್ಲಿದ್ದುದನ್ನೂ ಈ ರಾಜ್ಯದಲ್ಲಿಯೇ ಈಗ ಅಧಿಕಾಧಿಕ ತಾಂಬೂಲಪತ್ರಗಳು ದೊರೆಯುವುದನ್ನೂ ನಾವು ಗಮನಿಸಬಹುದು.

ತಾಂಬೂಲದ ಬಳಕೆಯು ಭಾರತದಲ್ಲಿ ಯಷ್ಟೆ ಅಲ್ಲ ಮಲಯ, ಬರ್ಮಾ, ಸಯಾಮ, ಚೀನ, ಜಿಬೇಟು, ನ್ಯೂಗಿನಿ ಮೊದಲಾದ ದೇಶಗಳಲ್ಲಿಯೂ ಇದೆ. ಸಂಸ್ಕೃತಿಯ ಪ್ರತೀಕದ ಸ್ಥಾನವನ್ನೂ ಪಡೆದಿದೆ. ಅಲ್ಲಿಯವರೂ ಎಲೆಯನ್ನು ಆಸಕ್ತಿಯಿಂದ ಮೆಲ್ಲುತ್ತಾರೆ. ಮೊತ್ತಮೊದಲು ಯಾವ ದೇಶದಲ್ಲಿ ಇದನ್ನು ಜಗಿಯಲಾರಂಭಿಸಿದರು ಎಂದು ಇದು ತನಕವೂ ತಿಳಿದು ಬಂದಿಲ್ಲ. ಆದರೆ, ಭಾರತದಲ್ಲಿಯೇ ಈ ಕಲೆ ಪ್ರಾರಂಭಿಸಿದೆನ್ನುವ ಸಂದೇಹವಿದೆ. ರಾಮಾಯಣ, ಮಹಾಭಾರತ, ಬೌದ್ಧಜಾತಕ ಇತ್ಯಾದಿಗಳಲ್ಲಿ ಇದರ ಉಲ್ಲೇಖವಿದೆ. ವ್ರಾಯಃ ಭಾರತದಿಂದಲೇ ಬೇರೆ ಬೇರೆ ದೇಶಗಳಿಗೆ ಹೋಗಿ, ಅಲ್ಲಿಯೂ ಬಳಕೆಯಲ್ಲಿ ಬಂದಿದೆ.

ವೀಳ್ಯದಲೆಯಲ್ಲಿ ೧೩ ವಿಧದ ಗುಣಗಳಿವೆ. "ತಾಂಬೂಲಸ್ಯ ಸದೋ ತ್ರಯೋದಶ ಗುಣಾಃ ಸ್ವರ್ಗೇಪ್ಯಮೀ ದುರ್ಲಭಾಃ" ಎಂದು ಉಕ್ತಿ. ಇದೆ. ಕಟು, ತಿಕ್ತ, ಕಷಾಯ, ವಾತಘ್ನ, ಕಫಹರ, ಕೃಮಿನಾಶಕ, ದುರ್ಗಂಧ ನಾಶಕ, ಕ್ಷಾರ, ಮಾರ, ಕಾಮಾಗ್ನಿ ಸಂದೀಪನ ಪಕ್ಕವಿನ ಅಮರಣ ಮತ್ತು ವಿಶುದ್ಧಿಕಾರಕಗಳೇ ಆ ಗುಣಗಳು. ರಜನಿಘಂಟುವಿನಲ್ಲಿ ತಾಂಬೂಲವನ್ನು ತಿನ್ನುವಾಗ, ಅದರ ಚೂರ್ಣ, ಮೂಲ, ಅಗ್ರಭಾಗ ಮತ್ತು ಶಿರವನ್ನು ದೂರೀಕರಿಸಬೇಕೆಂದು ಹೇಳಿದೆ. ಅಗ್ರಭಾಗದಲ್ಲಿ ವಾತಪಂಚಯವಾಗಿರುತ್ತದೆ, ಮೂಲ, ವ್ಯಾಧಿಯನ್ನು ಹೆಚ್ಚಿಸುತ್ತದೆ, ಚೂರ್ಣವು ಆಯುವನ್ನು ಕ್ಷೀಣಿಸುತ್ತದೆ, ಮತ್ತು ಶಿರವು ಬುದ್ಧಿನಾಶಕವಾಗಿದೆ. ಇಷ್ಟನ್ನು ಹೇಳಿ ನಂದಕ್ಕೆ ಈಗಾಗಲೇ ಕೊಟ್ಟುಬಿಸಿದ ಎಲೆಗಳನ್ನು ತಿನ್ನಬಾರದೆಂದು ಸೂಚಿಸಿದ್ದಾನೆ. ಒಂದು ವೇಳೆ ಹೀಗೆ ತಿಂದರೆ, ಅದರಿಂದ ರೋಗ ಬರುವುದೆಂದು ಎಚ್ಚರಿಸಿದ್ದಾನೆ. ವೀಳ್ಯದಲೆಯಲ್ಲಿದೇನೇ ಅಡಿಕೆ ತಿಂದರೆ, ಬುದ್ಧಿನಾಶವಾಗುವುದೆಂದೂ ಹೇಳಿದ್ದಾನೆ.

ವೀಳ್ಯದೆಲೆಯು ಕಫವನ್ನು ನಾಶಮಾಡುತ್ತದೆ, ಮುಖಕ್ಕೆ ಸೌಂದರ್ಯವನ್ನು ಕೊಡುತ್ತದೆ. ಕಣ್ಣುಗಳ ಉರಿಗೆ, ಶೀತದಿಂದ ಕಣ್ಣು ಉರಿದರೆ, ಇದು ಸಂಜೀವಿನಿಯಾಗಿದೆ. ಅನೇಕಾನೇಕ ಔಷಧಗಳಲ್ಲಿ ಇದನ್ನು ಒಳಸಿಕೊಳ್ಳಲಾಗುತ್ತದೆ.

ವೀಳ್ಯದಲೆ ತಿನ್ನುವುದರಲ್ಲಿಯೂ ಒಂದು ವಿಶಿಷ್ಟ ಪದ್ಧತಿ ಇದೆ. ಕೈಗೆ ದೊರೆತೊಡನೆಯೇ ತಾಂಬೂಲ ದೆಲೆಯನ್ನು ತಿನ್ನುವುದಿಲ್ಲ. ಯಾವಾಗಲೂ ತಾಂಬೂಲವನ್ನು ಮಡಚಿ, ಎಂದರೆ, 'ಬೀಡಾ' ಕಟ್ಟಿಯೇ ತಿನ್ನಬೇಕು. ಸುಣ್ಣ, ಅಡಿಕೆ ಲವಂಗ ಮೊದಲಾದ ಕೆಲವು ಅವಶ್ಯಕ ಪದಾರ್ಥಗಳೂ ಬೀಡಾ ಕಟ್ಟುವುದಕ್ಕೆ ಬೇಕು. ಇವುಗಳೊಂದಿಗೆ ಕೆಲವು ಸುಗಂಧಿತ ವಸ್ತುಗಳನ್ನೂ ಸೇರಿಸಿದರೆ, ಒಳ್ಳೆ ಒಳ್ಳೆಯದು. ಬೀಡಕ್ಕೆ ಈ ವಸ್ತುಗಳನ್ನು ಬಿಟ್ಟು ಬೇರೆ ಯವನ್ನೇನೂ ಹಾಕ ಬಾರದೆಂದು ನೀವು ಕೇಳಬಹುದು. ಕಾಳಿದಾಸ ಮಹಾಕವಿಯು ಕ್ಷಾರ ಮತ್ತು ಖದಿರುವಿಲ್ಲದೆ ಅನುರಾಗ ಮತ್ತು ರಾಗ ಉತ್ಪತ್ತಿಯಾಗುವುದಿಲ್ಲ ಎನ್ನುತ್ತಾನೆ. ಮಂಜಾನೆ ಅಧಿಕ ಅಡಿಕೆ, ಮಧ್ಯಾಹ್ನ ಅಧಿಕ ಲವಂಗ, ಮತ್ತು ರಾತ್ರಿ ತುಂಬ ಸುಣ್ಣ ಬಳಸಿಕೊಳ್ಳಬೇಕೆಂಬ ಮಾತೂ ಉಲ್ಲಿಖಿತವಾಗಿದೆ. "ಅಖಿಲಷಿತಾರ್ಥ ಚಿಂತಾಮಣಿ"ಯಲ್ಲಿ ವೀಳ್ಯದೆಲೆಯೊಂದಿಗೆ "ಕತ್ಥಾ"ವನ್ನು ಅಧಿಕ ಬಳಸಬೇಕೆಂದು ಸೂಚಿಸಿದೆ. ಸುಣ್ಣ



ಅಮೇರಿಕೆಯ ನೌಕಾದಳವು ತನ್ನ ಪೆನ್ ಗಾರ್ಡ್ ಸಬ್‌ಮೆರೈನ್ ಕಾರ್ಯಕ್ಕೆ ಮೊದಲನ್ನು ಮೂರ್ತಾ ಗಿರಿಂದು ಮೊತ್ತ ಮೊದಲಿಗೆ ಪ್ರಾರಂಭಿಸಿತು. ಇದೊಂದು ಎಳೆಯ ಉಪಗ್ರಹದ ಕೆಲಸವನ್ನು ಮಾಡುತ್ತಲಿದೆ

ನಿಮ್ಮ ಹಣದ ಸುರಕ್ಷಿತತೆ ಮತ್ತು ಭದ್ರತೆಗಳಲ್ಲಿ ನಿಮ್ಮ ಮನೆಗಿಂತಲೂ ಮಿಗಿಲಾಗಿ, ಯಾವ ಮನೆಯಲ್ಲೂ ಎಂದೂ ಇರದ ಹೆಚ್ಚಿನ ಸೌಲಭ್ಯವಾದ ಬಡ್ಡಿ ಸಂಪಾದನೆಯನ್ನು ನಿಮ್ಮ ಹಣವು ಮಾಡಿ ಅದು ಸತತ ವೃದ್ಧಿಗೊಳ್ಳಲು ಸಹಕರಿಸುತ್ತಿರುವ ಬೇಂಕು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ. 1906] [ಪ್ರಧಾನ ಕಚೇರಿ. ಉಡುಪಿ, ದ ಭಾರತ

52 ವರುಷಗಳಿಗೂ ಮೀರಿದ ಬೇಂಕು ಅನುಭವವೂ, ಒಟ್ಟು 53 ಶಾಖೆಗಳೂ ದೇಶದಾದ್ಯಂತ ವಿಜಯಿ ವರ್ಷಾಡುಗಳೂ ನಮ್ಮ ಬೇಂಕಿಗಿವೆ.

ಮತ್ತು ಅಡಿಕೆಗಳನ್ನು ಗುಣಕಾರಿಗಳೆಂದು ಪರಿಗಣಿಸಿದೆ

ಎಲೆಯಿಂದ ಬೀಡ ಕಟ್ಟುವುದೂ ಒಂದು ಕಲೆ. ಕಟ್ಟುವಾಗ ಎಲೆಯ ಕಪ್ಪು ಭಾಗ ಹೊರ ಬಹಿಗೇನೇ ಬರುವುದು ಅಗತ್ಯ ಶುದ್ಧವರ್ಣ ಒಳಗಡೆಗೆ ಪ್ರಾಚೀನ ಕಾಲದಲ್ಲಿ ನಮ್ಮ ದೇಶದಲ್ಲಿ ಬೀಡ ಕಟ್ಟುತಿದ್ದಾಗ ಸುಗಂಧಿತ ವಸ್ತುಗಳಿಂದ ಚಿತ್ರವನ್ನೂ ಅವುಗಳ ಬಾಹ್ಯ ಪ್ರದೇಶದಲ್ಲಿ ಬರೆಯುತಿದ್ದರು. ಶ್ರೀ ಹರ್ಷ ಮಹಾಕವಿ ತನ್ನ ನೈಷಧೀಯ ಚರಿತ್ರೆಯಲ್ಲಿ ದಮಯಂತಿಯು ನಳನನ್ನು ವಿವಾಹವಾದಾಗ ನಳನ ಅನುಚರರು ಅನ್ಯರಾಜರನ್ನು ನೀಳ್ಯವಿತ್ತು ಸತ್ಕರಿಸಿದರು ಆ ವೀಳ್ಯದ ಮೇಲೆ ಖದಿರು ಮತ್ತು ಕಸ್ತೂರಿ ಮೊದಲಾದ ವಸ್ತುಗಳಿಂದ ನಾನಾ ಜಂತುಗಳ ಚಿತ್ರಗಳನ್ನು ಚಿತ್ರಿಸುತಿದ್ದರು ಅದನ್ನು ನೋಡಿ ಒಳಗಿನ ಅಡಿಕೆಯನ್ನು ಮಾತ್ರ ನುಂಗಿ ಎಲೆಯನ್ನು ದೂರಕ್ಕೆಸೆಯುತಿದ್ದರು ಆ ಕಾಲದಲ್ಲಿ ಎಲ್ಲ ರಾಜರೂ ನೆಗಾಡುತಿದ್ದರೆಂದು ರಂಜಕವಾಗಿ ವರ್ಣಿಸಿದ್ದಾನೆ.

ದಿಗ್ವಿಜಯ ಕಾಲದಲ್ಲಿಯೂ ವೀಳ್ಯ ತಿನ್ನುವ ಕ್ರಮವಿತ್ತು. ಚಂದ್ರಾಪೀಡನ ದಿಗ್ವಿಜಯಕಾಲದಲ್ಲಿ ತಾಂಬೂಲ ಮೆದ್ದ ಉಲ್ಲೇಖವು ಬಾಣಬಟ್ಟನ ಕಾದಂಬರೀಯಲ್ಲಿ ಬಂದಿದೆ. ಬೇತಾಳ ಪಂಚವಿಂಶತಿಯಲ್ಲಿ ರಾಜನು ದಿಗಂಬರ ಶಾಂತಿಶೀಲ ಭಿಕ್ಷುವನ್ನು ವೀಳ್ಯ ಮತ್ತು ಆಸನವನ್ನು ಕೊಟ್ಟು ಸತ್ಕರಿಸಿದನೆಂದು ಹೇಳಿದೆ.

ಕಾದಂಬರಿಯು, ಚಂದ್ರಾಪೀಡನ ಪ್ರಥಮ ದರ್ಶನ ಮಾಡುವಾಗ ವೀಳ್ಯದ ಮೂಲಕವೇ ಸತ್ಕರಿಸಿ ಆದರಿಸಿದಳೆಂದು ಹೇಳಿದೆ ಹಾಗೆಯೇ ದಂತೋದ್ಭಾಟಕದ ಕನ್ಯೆ ಪದ್ಮಾವತಿಯ ವಿಷಯದಲ್ಲಿಯೂ ಇಂತಹುದೇ ಉಲ್ಲೇಖ ದೊರೆಯುತ್ತದೆ

ಸ್ತ್ರೀಯರು ಶೃಂಗಾರಕ್ಕಾಗಿಯೂ ವೀಳ್ಯದ ಉಪಯೋಗವನ್ನು ಮಾಡುತ್ತಾರೆ ವೀಳ್ಯ ಮೆಲ್ಲುವುದರಿಂದ ಬಾಯಿಯ ದುರ್ವಾಸನೆ ದೂರವಾಗುವುದು. ದಂತ ಮತ್ತು ಅಧರಗಳನ್ನು ರಕ್ತವಾಗಿರಿಸಲೂ ಇದನ್ನು ಬಳಸುತ್ತಾರೆ ಕಾಲೀದಾಸನ ಋತು ಸಂಹಾರ ನಾಟಕದಲ್ಲಿ ಬಹಳ ಮೋಹಕವಾದ ತಾಂಬೂಲದ ವರ್ಣನೆಯಿದೆ. ಕಾಮಸೂತ್ರದಲ್ಲಿ ಅಲ್ಲಲ್ಲಿ ಇದರ ಹೆಸರು ಕಾಣಿಸುತ್ತದೆ.

ವೀಳ್ಯ ತಿನ್ನುವವರು ತಿಂದು ಉಗುಳನ್ನು ಸಿಕ್ಕಿಸಿಕ್ಕಿದಲ್ಲಿ ಉಗುಳದಂತೆ ಪೀಕದಾನಿಯನ್ನು (ಉಗುಳುಚಟ್ಟಿ) ಇಟ್ಟು ಕೊಳ್ಳುತ್ತಾರೆ ರಾಜ ಭೋಜನು ತನ್ನ ಅಳಿಯನಿಗೆ ರತ್ನದ ಉಗುಳುಚಟ್ಟಿಯನ್ನಿತ್ತನೆಂತೆ ಸಂಸ್ಕೃತ ಸಾಹಿತ್ಯದಲ್ಲಿ ಉಗುಳುದಟ್ಟಿಯನ್ನು "ಸ್ಥಗಿಕಾ" ಅಥವಾ "ಕರಕ" ಎಂದು ಕರೆದು ಅಲ್ಲಲ್ಲಿ ವರ್ಣಿಸಿದೆ ಕೆಲವು ವೇಳೆ ಇವುಗಳನ್ನು ಚರ್ವಣದಿಂದಲೂ ಮಾಡುತಿದ್ದರು ಇದಕ್ಕೆ "ಉಪಹಸ್ತಿಕಾ" ಎಂದು ಹೇಳುತ್ತಾರೆ

ಭಾರತೀಯ ಜೀವನದಲ್ಲಿ ತಾಂಬೂಲ ಪತ್ರದ ಅಸಾಧಾರಣ ಮಹತ್ವವನ್ನು ನೋಡುವಾಗ, ಅದನ್ನು "ಭಾರತೀಯ ಸಂಸ್ಕೃತಿಯ ಪ್ರತೀಕ" ಎಂದು ಕರೆದರೂ ಅತ್ಯುಕ್ತಿಯಾಗದು ಇದರೊಂದಿಗೆ ತಾಂಬೂಲ ಚರ್ವಣ ಕೇವಲ ಭಾರತದ್ದು ಮಾತ್ರವಲ್ಲ ಆಫ್ರಿಕ ಏಶಿಯಾದ ಒಂದು ವೈಶಿಷ್ಟ್ಯವಾಗಿದೆ ಎಂದು ಹೇಳಬೇಕು.

ತಾಂಬೂಲ ಪತ್ರೇ | ಗುಣ ಸುಸ್ಸಿ ಸರ್ವಂ
ಚರ್ವಂತಿ ಲೋಕೇ | ಧನಿಕಃ ದರಿದ್ರಾಃ ||
(ಆದಾರ: ಕರುಣಾಶಂಕರ ಶುಕ್ಲ)

ವಾರದ ಮಹಾನುಭಾವ—

ಶ್ರೀ ಬಸಪ್ಪ ದಾನಪ್ಪ ಜತ್ತಿ

ಮೈಸೂರಿನ ರಾಜಕಾರಣದಲ್ಲಿ ಒಂದು ಬಲವಾದ ತೆರೆಯೆದ್ದ ಶ್ರೀ ನಿಜಲಿಂಗಪ್ಪ ನವರ ಮುಖ್ಯ ಮಂತ್ರಿ ಸ್ಥಾನದಲ್ಲಿ ಶ್ರೀ ಬಸಪ್ಪದಾನಪ್ಪ ಜತ್ತಿಯವರನ್ನು ಕುಳ್ಳಿರಿಸಿತು ಭಿನ್ನಾಭಿಪ್ರಾಯ ಕಾಂಗ್ರೆಸಿಗರ ಈ ನಿರ್ಧಾರದಿಂದ ಅಸಂತುಷ್ಟ ಕರ್ನಾಟಕದ ನಾಲ್ಕು ಜಿಲ್ಲೆಗಳ ಜನರು ಪ್ರಸನ್ನವದನರಾಗಿದ್ದಾರೆಂದು ಹೇಳಲಾಗುತ್ತದೆ. ಏಕೆಂದರೆ, ಬಿಜಾಪುರ ಕ್ಷೇತ್ರದಿಂದ ರಾಜ್ಯ ಸರಕಾರದಲ್ಲಿ ಇದು ವರೆಗೂ ಯಾವ ಪ್ರತಿನಿಧಿಯೂ ಇದ್ದಿರಲಿಲ್ಲ ಕರ್ನಾಟಕದ ಇತರ ಭಾಗದ ಜನರೂ ಸಾಮಾನ್ಯವಾಗಿ ಈ ಆಯ್ಕೆಯಿಂದ ವಿವಂಚನೆ ಪಟ್ಟುಕೊಂಡಂತೆ ತೋರುವುದಿಲ್ಲ

ಶ್ರೀ ಜತ್ತಿಯವರಿಗೆ ಆತಳಕದ ಅನುಭವವಿದೆ. ಕಳೆದ ಹತ್ತು ವರ್ಷಗಳಲ್ಲಿ (೧೯೫೬ನೆ ನವಂಬರ ೧ನೆ ದಿನಾಂಕಕ್ಕೆ ಮೊದಲು) ಅವರು ಮುಖ್ಯವಾಗಿ ಎರಡು ಪ್ರಧಾನ ಮಹತ್ವ ಭರಿತ ಪದವಿಗಳಲ್ಲಿದ್ದರು ಅವರು ಬಿ ಎ ಎಲ್ ಎಲ್ ಬಿ ಪದವೀದರರು ಬಿಜಾಪುರ ಜಿಲ್ಲೆಯ ಸಾವಳಗಿ ಎಂಬ ಊರಲ್ಲಿ ಜನಿಸಿದವರು ಅವರಿಗೀಗ ಸುಮಾರು ೪೬ ವರ್ಷ ವಯಸ್ಸು ೧೯೪೦ರಲ್ಲಿ ಎಲ್ ಎಲ್ ಬಿ ತೇರ್ಗಡೆ ಹೊಂದಿದ ಮೇಲೆ ಶ್ರೀ ಜತ್ತಿಯವರು ಒಂದೈದು ವರ್ಷ ಜಮಖಂಡಿಯಲ್ಲಿ ವಕೀಲಿ ವೃತ್ತಿಯನ್ನು ಮಾಡುತಿದ್ದರು ಆಗ ಅವರ ಮನಸ್ಸು ಕಾಂಗ್ರೆಸಿನತ್ತ ಆಕರ್ಷಿಸಲ್ಪಟ್ಟಿತು ಅವರು ಹಿಂದಿನ ಜಮಖಂಡಿ ಸಂಸ್ಥಾನದಲ್ಲಿ ಶ್ರೀ ಸಾಬಡೆಯವರ ಮುಂದಾಳುತನದಲ್ಲಿ ಆ ರಾಜ್ಯದ ಪ್ರಜಾಪರಿಷತ್ತಿನ ಸಂಘಟನೆಗಾಗಿ ದುಡಿದು ಅದರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು ಅವರಲ್ಲಿ ಮಂತ್ರಿಗಳಾಗಿಯೂ ಲೋಕಸಮ್ಮತಿಯುಕ್ತ ಸರಕಾರ ಸ್ಥಾಪನೆಯಾದ ಮೇಲೆ ಮುಖ್ಯ ಮಂತ್ರಿಯಾಗಿಯೂ ದುಡಿದಿದ್ದರು

೧೯೫೮ರಲ್ಲಿ ಜಮಖಂಡಿ ಸಂಸ್ಥಾನವು ಬೊಂಬಯಿ ರಾಜ್ಯದಲ್ಲಿ ವಿಲೀನಗೊಂಡ ನಂತರ ಸುನಃ ತಮ್ಮ ಮೊದಲಿನ ವಕೀಲಿ ವೃತ್ತಿಯನ್ನಾರಂಭ ಮಾಡಿದರು ಮುಂದಕ್ಕೆ ಅವರು ವಿಲೀನಗೊಂಡ ಪ್ರದೇಶಗಳ ಪರವಾಗಿ ವಿಧಾನ ಸಭೆಗೆ ಆರಿಸಿ ಬಂದು ಆಗ ಮುಖ್ಯಮಂತ್ರಿಯಾಗಿದ್ದ ದಿವಂಗತ ಬಿ ಜಿ ಖೇರರ ಸಾರ್ಥಮೆಂಬರೀ ಕಾರ್ಯದರ್ಶಿಯಾಗಿ ನೇಮಕಹೊಂದಿದರು ಮುರಾರ್ಜಿ ದೇಸಾಯಿಯವರ ಮಂತ್ರಿಮಂಡಲದಲ್ಲಿ ಆರೋಗ್ಯ ಮತ್ತು ಕೂಲಿಗಾರ ಶಾಖೆಯ ಉಪಮಂತ್ರಿಗಳಾಗಿ ದುಡಿದರು. ಶ್ರೀ ಜತ್ತಿಯವರಿಗೆ ಜಮಖಂಡಿ ಮುನಿಸಿಪಾಲಿಟಿಯ ಅಧ್ಯಕ್ಷತನ ಮತ್ತು ಪಕ್ಕರೆಯ ಕಾರಖಾನೆ ಹಾಗೂ ಬೇಂಕಿಂಗ್ ವ್ಯವಹಾರಗಳಲ್ಲಿಯೂ ಸಾಕಷ್ಟು ಅನುಭವ ಸಂಬಂಧಗಳಿದ್ದವು

ಆರಂಭದಲ್ಲಿಯೇ ಶ್ರೀ ಜತ್ತಿಯವರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಜಮಖಂಡಿಯ ಹೊರಗಿನ ರಾಜನೀತಿಯಲ್ಲಿ ಭಾಗವಹಿಸಲಾರಂಭಿಸಿದ್ದರು ಅವರು ಕೌನ್ಸಿಲಿನ ಸದಸ್ಯರೂ ಆಗಿದ್ದರು ಸ್ವಾತಂತ್ರ್ಯ ಹೋರಾಟದಲ್ಲಿಯೂ ಅವರು ಭಾಗವಹಿಸಿದ್ದರು

ಹೀಗೆ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ, ಬೇಂಕಿಂಗ್ ವ್ಯವಹಾರಸ್ಥರಾಗಿ, ಕಿರಿಯ ಸಂಸ್ಥಾನದ ಮುಖ್ಯಮಂತ್ರಿಗಳಾಗಿ, ಹಿರಿಯ ರಾಜ್ಯದ ಸಂಸದೀಯ ಮಂತ್ರಿ ಹಾಗೂ ಆರೋಗ್ಯ ಕೂಲಿಗಾರೋಪಮಂತ್ರಿಯಾಗಿ ದುಡಿದು ಇವರು ಆತಳಕದ ಅನುಭವವನ್ನು ಪಡೆದಿದ್ದಾರೆ. ಅಲ್ಲದೇ, ಮೈಸೂರು ಸಂಸ್ಥಾನವು ವಿಶಾಲಗೊಂಡ ಮೇಲೆ ಇಡಿ ರಾಜ್ಯವನ್ನು ಅತ್ಯಲ್ಪ ಕಾಲಾವಧಿಯಲ್ಲಿ ಸಂಚರಿಸಿ, ವಿವರಗಳನ್ನು ಕಲೆಹಾಕಿ, ಸಂಸ್ಥಿತಿಯನ್ನು ಅಭ್ಯಸಿಸಿ ಭೂಸುಧಾರಣಾ ಸಂಬಂಧದ ವರದಿಯನ್ನು ಸರಕಾರಕ್ಕೊಪ್ಪಿಸಿದ್ದಾರೆ ಇವೆಲ್ಲವುಗಳಿಂದ ಶ್ರೀ ಜತ್ತಿಯವರು ಪರಿಶ್ರಮಿಗಳು, ಹಿಡಿದ ಕೆಲಸವನ್ನು ನಿರ್ವಂಚನೆಯಿಂದ ಪೂರೈಸಬಲ್ಲ ಶಕ್ತಿಸಂಪನ್ನರು ಶಾಸನಾತ್ಮಕ ಭವಿಗಳೆಂದು ಒಪ್ಪಿಕೊಳ್ಳಲೇಬೇಕು ಇಂತಹ ವ್ಯಕ್ತಿ (ವಿಶಾಲ) ಮೈಸೂರಿನ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ

ಆದರೆ, ಶ್ರೀ ಜತ್ತಿಯವರ ಸತ್ವ ಪರೀಕ್ಷೆಯೂ ಇಷ್ಟರಲ್ಲಿಯೇ ಆಗಲಿದೆ. ಮಂತ್ರಿಗಳ ಆಯ್ಕೆಯಲ್ಲಿ ಅವರು ತುಂಬ ಜಾಗರೂಕರಾಗಿದ್ದುದು ಕಂಡು ಬರುತ್ತದೆ ಆದಷ್ಟೇ ಜಾಣ್ಮೆಯಿಂದಿದ್ದರೂ ಸಮೂಹ ಮನೋವೃತ್ತಿಯು ಮೈಸೂರಿನ ರಾಜಕಾರಣದಲ್ಲಿ ಶ್ರೀ ಜತ್ತಿಯವರಿಷ್ಟು ದಿನ ಪುಳಿಯಬಲ್ಲರೆಂದು ಕಾದು ನೋಡಬೇಕು. ಶ್ರೀ ಹನುಮಂತಯ್ಯನವರೆನ್ನುವಂತೆ "ಆದರೆ ನಾನು ಆಗಬೇಕು, ಇಲ್ಲವಾದರೆ ನಿಜಲಿಂಗಪ್ಪನವರಾಗಬೇಕು ಎಂದು ಸೊಂಟಕಟ್ಟಿದರೆ, ಅವರೇ ಮುಂದುವರಿಸಿದಂತೆ 'ಈಗಾದುದು ಕೇವಲ ಮೂರ್ಖತಿಂಗಳ ವ್ಯವಸ್ಥೆ ಮಾತ್ರ" ಎಂಬುದು ಖಂಡಿತ. ಶ್ರೀ ಜತ್ತಿಯವರು ಅಧಿಕಾರಸ್ವೀಕರಿಸಿದ ಕಾಲವೇನೂ ಸುರಕ್ಷಿತವಾಗಿಲ್ಲ. ಬಿರುಗಾಳಿಯೆದ್ದು ರಾಜಕಾರಣ ಭಟರು ಸಿಕ್ಕೆಡೆ ನೆಗೆಯುತ್ತಿರುವಾಗ ಶ್ರೀ ಜತ್ತಿಯವರು ತಮ್ಮ ಕರ್ತವ್ಯಕ್ಕೆ ಬಲವಾಗಿ ಅಂಟಿಕೊಂಡು ಬರಲಿರುವ ಅಡೆತಡೆಗಳಿಗೆ ಎದೆಗೊಟ್ಟು ನಿಲ್ಲಬಹುದೆ ದಕೆಚ್ಚು, ಸಾಹಸಗಳಿಂದ ಕಾಡಿರುವರೆ? ಈಚರ ಮೆಟ್ಟಿಲಲ್ಲಿ ಕಾಲಿತ್ತಿರುವ ಈ 'ನವವೃದ್ಧ' ರಲ್ಲಿ ಇಂತಹ ಶಕ್ತಿಯೂ ಇದೆ

ಶ್ರೀ ಜತ್ತಿಯವರು ಹೆರಿಹುಚಾದ ಕಾಂಗ್ರೆಸ್ ಶಾಸನಪಕ್ಷವನ್ನೊಂದುಗೂಡಿಸಿ ರಾಜ್ಯದಲ್ಲಿ ಸುಸ್ಥಿರವಾದ ಭದ್ರ ಸರಕಾರವನ್ನು ಸ್ಥಾಪಿಸುವಲ್ಲಿ ಸಮರ್ಥರಾಗಲಿ ಎಂದು ಜನತೆ ಹಾರೈಸುತ್ತದೆಯಷ್ಟೇ ಶ್ರೀ ನಿಜಲಿಂಗಪ್ಪನವರ ಮಂತ್ರಿಸಂಪುಟದಂತೆ ಅಸಮೃತ್ಯುವಿಗೆ ತುತ್ತಾಗದಿರಲೆಂದು ಪ್ರಾರ್ಥಿಸುತ್ತದೆ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು ೧೨೮ ಬೆಲೆ ರೂ ೧ ೫೦

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ

ಪ್ರಕಾಶಕರು ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ ಭಾ

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA WEEKLY

ADVERTISEMENT RATES

Display Advertisements:— Rs 2 8/ per column inch for contracts of 50" or more and Rs. 3/ per column inch for casual advertisements.

Classified Advertisements:— As 8/ per line (minimum 8 lines).

For rates for advertising in colours and special positions, please write to

ADVERTISEMENT MANAGER,

'NAVAYUGA'

Post Box No 22, UDIPI, S K

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೨-೫-೫೮	೩೪

ಕಾಂಗ್ರೆಸ್ಸಿನ ಶಕ್ತಿಸಂವರ್ಧನೆ

ಭಾರತವು ಸ್ವಾತಂತ್ರ್ಯ ಪಡೆಯುವುದಕ್ಕೆ ಮೊದಲು ವಿದೇಶೀಯ ರಾಜ್ಯಭಾರದಿಂದ ಭಾರತೀಯರನ್ನು ಮುಕ್ತರಾಗಿಸುವುದಕ್ಕೆ ಅವರೆಲ್ಲರಲ್ಲಿಯೂ ಒಗ್ಗಟ್ಟನ್ನುಂಟುಮಾಡಿ ರಾಷ್ಟ್ರೀಯ ಐಕ್ಯವನ್ನು ನಿರ್ಮಿಸಿ ತಮ್ಮ ಉದ್ದೇಶವನ್ನೀಡೇರಿಸಿಕೊಳ್ಳುವ ಹೊಣೆಗಾರಿಕೆ ಮಾತ್ರ ಕಾಂಗ್ರೆಸ್ ಪಕ್ಷ ಪಡೆದಿದ್ದರೆ, ಇಂದು ದೇಶವು ಸ್ವತಂತ್ರವಾಗಿರುವಾಗ, ಭಾರತೀಯ ಸರ್ವಾಂಗೀಣ ಅಭಿವೃದ್ಧಿಗಾಗಿ ಸೊಂಟಕಟ್ಟಿ ಪ್ರಗತಿಪಥದತ್ತ ಕೊಂಡೊಯ್ಯುವುದು, ಭಿನ್ನಾಭಿಪ್ರಾಯಗಳನ್ನು ದೂರಮಾಡಿ ರಾಷ್ಟ್ರದ ಏಕತೆಯನ್ನು ರಕ್ಷಿಸಿಕೊಳ್ಳುವಂತಹ ಗುರುತರ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಇದರಿಂದ ಹಿಂದಿನ ಕರ್ತವ್ಯಗಳಿಗಿಂತಲೂ ಇಂದಿನವು ಅತಿ ಮಹತ್ವದ್ದಾಗಿವೆಯೆನ್ನಬಹುದು. ಆದುದರಿಂದ ಕಾಂಗ್ರೆಸ್ಸು ಆಂತರಿಕವಾಗಿಯೂ ಬಾಹಿರವಾಗಿಯೂ ಐಕ್ಯದ ತವರುಮನೆಯಂತಿದ್ದು, ತನ್ಮೂಲಕ ತನ್ನ ಧ್ಯೇಯ ಸಾಧನೆಯನ್ನು ಮಾಡಿಕೊಳ್ಳಬೇಕಾದುದು ಅಗತ್ಯವಾಗಿದೆ. ಆದರೆ, 'ದೇಶದ ಹಿರಿಯ ರಾಜಕೀಯ ಪಕ್ಷವಾದ ಕಾಂಗ್ರೆಸ್ಸು ತನ್ನೊಳಗಿನ ದುರ್ಬಲತೆಯಿಂದಾಗಿಯೇ ಕೇಳವನ್ನು ಕಳೆದ ಮಹಾ ಚುನಾವಣೆಯಲ್ಲಿ ಕಳೆದುಕೊಂಡಿತ್ತು; ಇದೀಗ 'ದೇವಿಕುಲಂ' ಕ್ಷೇತ್ರದಲ್ಲಿಯೂ, ಜಯದೊರೆಯಬಹುದೆಂಬಾಸೆ ಕಟ್ಟಿಕೊಂಡಿದ್ದರೂ ಸೋಲನ್ನೇ ಪಡೆಯಬೇಕಾಯಿತು. ಮೈಸೂರಿನಲ್ಲಿ ಕಾಂಗ್ರೆಸಿಗರೊಳಗೆ ಭಿನ್ನಾಭಿಪ್ರಾಯವೆದ್ದು ನಾಯಕತನವು ಪರಿವರ್ತನೆಯಾಯಿತು. ಒಡಿಸ್ಸದಲ್ಲಿ ಕೆರುಕುಳಗಳ ಗುಂಗಿನಲ್ಲಿ ಮುಖ್ಯಮಂತ್ರಿ ಮೆಹತಾಬರು ರಾಜಿನಾಮೆಯಿತ್ತರು; ಸಂಜಾಬದಲ್ಲಿ ಮುಖ್ಯಮಂತ್ರಿ ಕೈರಾನರು ತಮ್ಮ ಪಕ್ಷದವರಿಂದ ವಿಶ್ವಾಸಯಾಚನೆ ಮಾಡಬೇಕಾಗಿ ಬಂದಿದೆ. ಹೀಗೆಯೇ ಅಸ್ಸಾಮದಲ್ಲಿಯೂ ಆತಂಕ ತೋರಿಬರುತ್ತಿದೆ. ಇವೆಲ್ಲ ಉದ್ಭವಿಸುವುದು ಕಾಂಗ್ರೆಸ್ ಸಂಸ್ಥೆಗೆ ಭೂಷಣವೆಂದು ಯಾವನೂ ಹೇಳಲಾರನು. ಅಧಿಕಾರಕ್ಕೆ ದೃಢವಾಗಿ ಅಂಟಿಕೊಳ್ಳುವ ದೃಢ ನಿಶ್ಚಯ ಕೆಲವರಲ್ಲಿದ್ದರೆ, ಅಧಿಕಾರವನ್ನು ಬಯಸುವವರು ಹಲವರು. ಇಂತಹ ವಾತಾವರಣದಲ್ಲಿ ಅಧಿಕಾರದಾಹದಿಂದಾಗಿ ಭಿನ್ನಾಭಿಪ್ರಾಯವೆದ್ದು ಅವಿಶ್ವಾಸ ಮೂಡಿ, ಅಂತರ್ಯುದ್ಧಗಳು ನಡೆದು ಕಾಂಗ್ರೆಸ್ ತನ್ನ ಚೇತನವನ್ನು ಕಳೆದುಕೊಳ್ಳುತ್ತಿದೆ. ಕಾಂಗ್ರೆಸ್ಸಿನಲ್ಲಿ ಕೆಲವು ಮಂತರು ಸೇರಿಕೊಂಡು ಅದನ್ನು ಕಲುಷಿತಗೊಳಿಸುತಿದ್ದಾರೆಂಬ ಆರೋಪವೂ ಕೇಳಿ ಬರುತ್ತಿದೆ. ಆದರೆ, ಇದೆಲ್ಲಕ್ಕಿಂತಲೂ ಕಾಂಗ್ರೆಸಿಗರಲ್ಲಿ ಏಕ ಮತವಿಲ್ಲದಿರುವುದೇ ಅದರ ದುರ್ಬಲತೆಯ ಮೂಲ ಕಾರಣವೆನ್ನಲಾಗಿದೆ. ಈ ವಿಕಟತೆಯನ್ನುಳಿಸಿಕೊಳ್ಳುವುದು ತೀರ ಅವಶ್ಯಕವಾದರೂ ಸುಲಭ ಸಾಧ್ಯವಾದ ಕೆಲಸವಲ್ಲ. ಈ ಬಗ್ಗೆ ಇತ್ತೀಚೆಗೆ ನವದೆಹಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ಗಮನವನ್ನು ಹರಿಸಿ ಅದರತ್ತ ವಿಶೇಷ ಲಕ್ಷ್ಯವಿತ್ತುದು ಮಾತ್ರ ಸ್ತುತ್ಯರ್ಹವಾಗಿದೆ.

ಕಾಂಗ್ರೆಸಿನ ಬಲವನ್ನು ಹೆಚ್ಚಿಸಲು ಮತ್ತು ರಾಷ್ಟ್ರೀಯ ಸಂಘಟನೆಯನ್ನು ಬಲಗೊಳಿಸಲು ಈ ಕಾಂಗ್ರೆಸ್ ಸಭೆಯು ಕೆಲವಂಶಗಳಿಂದಡಕವಾಗಿರುವ ಗೊತ್ತುವಳಿಯೊಂದನ್ನು ಸ್ವೀಕರಿಸುವುದು. ಜಾತೀಯತೆಯ ಉಚ್ಚಾಟನೆ, ಜಿಲ್ಲಾ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಾರ್ಯದರ್ಶಿಯರ ಪೂರ್ಣಾವಧಿಯ ಕೆಲಸಗಾರತನ, ವಿಧಾನಮಂಡಲ ಮತ್ತು ಸಂಸತ್ತಿಗೆ ಪ್ರತಿನಿಧಿಗಳ ಆಯ್ಕೆಯ ಕ್ರಮ ಮತ್ತು ಸಾರ್ವಜನಿಕ ದೂರುಗಳ ನಿವಾರಣೆಗಳೆಂದು ಇವನ್ನು ನಾಲ್ಕು ಮುಖ್ಯ ವಿಧವಾಗಿ ವಿಭಾಗಿಸಬಹುದು. ಹಿಂದುಳಿದ ವರ್ಗದವರನ್ನು ಮುಂತರುವುದೇ ದೇಶದ ಐಕ್ಯ ಮತ್ತು ಅಭಿವೃದ್ಧಿಗೆ ತಾರಕವೆಂದು ಮನಗಂಡು, ಈ ಬಗ್ಗೆ ಈಗಾಗಲೇ ತಕ್ಕ ಕ್ರಮಗಳು ಕೈಗೊಳ್ಳಲ್ಪಡುತ್ತಿವೆ. ಆದರೆ, ಹಿಂದುಳಿದವರೆಂದರೆ ಯಾರು ಎಂಬ ಪ್ರಶ್ನೆಯೆದ್ದು ಅದೇ ಕಾಂಗ್ರೆಸ್ಸಿನಲ್ಲಿ ಒಡಕನ್ನು ಹುಟ್ಟಿಸಲು ಸಾಕಾಗಿದೆ. ಈ ವಿಚಾರವನ್ನು ನಾವು ಈ ಮೊದಲೇ ಈ ಪುಟಗಳಲ್ಲಿ ಚರ್ಚಿಸಿದ್ದೇವೆ ಆದುದರಿಂದ ಪುನಃ ವಿವರಿಸಹೊರಡುವುದಿಲ್ಲ. ಜಾತ್ಯತೀತ ಭಾರತದಲ್ಲಿ ಜಾತಿ ಮತಗಳ ಪ್ರಶ್ನೆಯೇಳಬಾರದು; ಉದ್ಯೋಗಾವಕಾಶ ಮತ್ತು ಶಿಕ್ಷಣ ಸೌಕರ್ಯಗಳಲ್ಲಿ ಇದು ಇಂದು ತೀವ್ರ ಪರಿಣಾಮಮಾಡುತ್ತಿದೆ. ಆರ್ಥಿಕ ಸ್ಥಿತಿಗತಿಯನ್ನವಲಂಬಿಸಿದ ಆರ್ಥಿಕ ದೃಷ್ಟಿಯಿಂದ ಹಿಂದುಳಿದವರನ್ನು ಮುಂದೆತರುವುದು ಇಂದು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲಿರುವ ಹೊತ್ತಿನಲ್ಲಿ ಒಂದು ಮಹತ್ವಾಧಿನೆಯೆನ್ನುವುದು ಕಟುಸತ್ಯ. ಈ ಬಗ್ಗೆ ರಾಜ್ಯಸರಕಾರಗಳಿಗೆ ತಕ್ಕ ಸೂಚನೆಯನ್ನಿತ್ತುದು ಸ್ವಾಗತಾರ್ಹವಿದೆ. ಆದರೆ, ವಿವಿಧ ರಾಜ್ಯಗಳಲ್ಲಿದು ಯಾವ ಪರಿಣಾಮಗಳನ್ನು ಗೈಯುತ್ತವೆ ಎಂದು ಈಗ ಹೇಳುವುದು ಅಸಾಧ್ಯ. ಜಿಲ್ಲೆ ಮತ್ತು ಪ್ರಾದೇಶಿಕ ಕಾಂಗ್ರೆಸ್‌ಗಳ ಪ್ರಧಾನಾಧಿಕಾರಿಗಳು ತಮ್ಮ ಮನಸ್ಸನ್ನು ಕಾಂಗ್ರೆಸ್ಸಿನ ಸಂಘಟನೆಯಲ್ಲಿ ಕೇಂದ್ರೀಕರಿಸಲನುವಾಗುವಂತೆ ಪೂರ್ಣಾವಧಿಯ ನೌಕರರಾಗಬೇಕೆಂಬುದು ಅಗತ್ಯವಾದರೂ ಅಲ್ಪಕಾಲ ಇಂತಹ ಒಂದು ಹುದ್ದೆಯಲ್ಲಿರುವ ಪ್ರಸಂಗವಿರುವುದರಿಂದ ನಿಯೋಜಿತ ಫಲ ಬರುವುದು ಕಷ್ಟವೇ ಸರಿ. ವಿಧಾನ ಸಭೆ ಮತ್ತು ಸಂಸತ್ತುಗಳಿಗೆ ಪ್ರತಿನಿಧಿಗಳನ್ನು ಆರಿಸುವಾಗ ಆಯಾ ಮತದಾರ ಕ್ಷೇತ್ರದ ಜನರ ಸಾಮಾನ್ಯ ಅಭಿಮತ ಕೇಳಬೇಕು, ಯೋಗ್ಯ ವ್ಯಕ್ತಿಗಳನ್ನೇ ಆಂಸಬೇಕಾದುದು ಅಗತ್ಯ. ಆದರೆ, 'ಜನತೆಯ ಅಭಿಪ್ರಾಯ' ವೆಂದರೆ ಯಾರದು? ಎಲ್ಲರಿಂದಲೂ ಈ ತೆರದ ಮತ ಕೇಳುವುದು ಸಾಧ್ಯವಿಲ್ಲ. ಜಾಗಾಗಿ ಕೇವಲ ಕೆಲವೇ ಪ್ರತಿಷ್ಠಿತ ವ್ಯಕ್ತಿಗಳೆನಿಸುವವರ ಅಭಿಪ್ರಾಯಗಳನ್ನು ತಿಳಿದು ಪ್ರತಿನಿಧಿಯ ಆಯ್ಕೆಯಾಗಬಹುದಷ್ಟೆ. ಆಗ, ಪ್ರತಿಷ್ಠಿತ—ಅಪ್ರತಿಷ್ಠಿತರೊಳಗೆ ಭೇದವೇಳುವುದು ಸ್ವಾಭಾವಿಕ. ಆದುದರಿಂದ, ಈ ದಿಸೆಯಲ್ಲಿ ಅದೆಷ್ಟು ಜಾಗರೂಕರಾಗಿದ್ದರೂ ಸಾಲದು. ಇಂತಹ ಪ್ರತಿನಿಧಿ ಆಯ್ಕೆಗೊಳ್ಳುವುದಕ್ಕೆ ಮೊದಲು ಆ ಕ್ಷೇತ್ರದಲ್ಲಿ ನಾಯಕೊಡೆಯಂತೆ ಕಾಣಿಸುತ್ತಾನೆ; ಅತನ ಕೆಲಸವಾದ ಮೇಲೆ, ಮತದಾರರನ್ನು ಕಣ್ಣೆತ್ತಿಯೂ ನೋಡದಿರುವ ಪರಿಪಾಟ ನಮ್ಮ ಪ್ರತಿನಿಧಿಗಳಲ್ಲಿರುವುದರಿಂದಲೇ ಕಾಂಗ್ರೆಸ್ ಜನಬೆಂಬಲವನ್ನು ಕಳೆದುಕೊಳ್ಳುತ್ತಿದೆ. ಅದಕ್ಕಾಗಿ ಜನತೆಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು, ಜನತೆಯ ಬೇಡಿಕೆ ಕೇಳಿಕೆಗಳನ್ನು ಅರ್ಥವಿಸಿಕೊಂಡು, ಜನತೆಯ ಸೇವಕ ತಾನು ಎಂಬಂತೆ ನಡೆಯಬಲ್ಲನಾದರೆ, ಆಗ ಕಾಂಗ್ರೆಸ್ ತನ್ನ ಶಕ್ತಿಯನ್ನುಳಿಸಿಕೊಳ್ಳುವುದು ಸಾಧ್ಯ. ಸಾರ್ವಜನಿಕರ ದೂರುಗಳನ್ನು ಸರಕಾರವು ಇಂದು ಗಮನಿಸುವುದು ತೀರ ಅವರೂಪವಾಗಿದೆ. ಕಾರ್ಯಾಂಗವಿರಲಿ, ನ್ಯಾಯಾಂಗವಿರಲಿ, ಕೆಲಸವು ಆಮೆಯ ನಡಿಗೆಯಂದಲೂ ನಿಧಾನವಾಗಿ ಸಾಗುತ್ತದೆ. ಅರ್ಜಿ ದೂರು ಪತ್ರಗಳು ಹೋದರೆ, ಅದು ಸರಕಾರಕ್ಕೆ ತಲಪುದೇ ಇಲ್ಲವೇ ಎಂಬ ಸಂದೇಹವೂ ಜನತೆಯಲ್ಲಿ ಮನೆಮಾಡಿದೆ. "Apply Apply no reply" ಎಂಬುದೇ ನಮ್ಮ ಜನತೆಯ ಇಂದಿನ ಸೊಲ್ಲು. ಹೀಗಾಗಿ ಈ ಕಾಂಗ್ರೆಸ್ ಸಮಿತಿಯು ಪಕ್ಷದ ನಿಜವಾದ ದೌರ್ಬಲ್ಯಗಳನ್ನು ಹೋಗಲಾಡಿಸಿ ನವ ಚೈತನ್ಯವನ್ನು ನೀತಲು ಉತ್ಸುಕವಾಗಿರುವಂತೆ ಕಂಡುಬಂದಿದೆ; ಆ ಬಗ್ಗೆ ತಕ್ಕ ಗೊತ್ತುವಳಿಯನ್ನು ಸ್ವೀಕರಿಸಿದೆ.

ಕೇವಲ ಗೊತ್ತುವಳಿಯ ಸ್ವೀಕಾರದಿಂದಲೇ ಕಾರ್ಯ ಈಡೇರುವುದಿಲ್ಲ. ಆದುದರಿಂದ ಪ್ರತಿಯೊಬ್ಬ ಕಾಂಗ್ರೆಸಿಗನೂ, ಕಾಂಗ್ರೆಸ್ಸಿನಲ್ಲಿ ಆಸ್ಥೆವಹಿಸುತ್ತಿರುವವನೂ ಕಾಂಗ್ರೆಸ್ ಸರಕಾರಗಳೂ ಈ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ತಮ್ಮ ಸಹಾಯವನ್ನು ನಿಶ್ಚಲ ಮನಸ್ಸಿನಿಂದ ನೀಡಬೇಕು. ಕಾಂಗ್ರೆಸ್ ಮುಖಂಡರು ತಮ್ಮ ಪಕ್ಷದ ದೌರ್ಬಲ್ಯ ನಿವಾರಣೆಯನ್ನು ಮಾಡುವಲ್ಲಿ ಪರಿಶ್ರಮಿಸಿ ಉದ್ದೇಶವನ್ನು ಸಾಧಿಸುವತ್ತ ಪ್ರಯತ್ನಶೀಲರಾಗಬೇಕು ಕಾಂಗ್ರೆಸ್ ದೇಶದ ಜನರೆಲ್ಲರನ್ನೂ ಆಕರ್ಷಿಸುವಂತೆ ಶಕ್ತಿಸಂಪನ್ನ ಪಕ್ಷವಾಗಿ ಬೆಳೆದು ಬರಬೇಕು. ಹಾಗಾಗಲೆಂದು ನಾವೂ ಬಯಸುತ್ತೇವೆ.

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ ಬೆಂಗಳೂರು—೨

ಕನ್ನಡ ಅಧಿಕೃತ ಭಾಷೆಯ ಸಮಿತಿ ರಚನೆಯ ಬಗ್ಗೆ ಸರಕಾರದ ಅನಾದರ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಬಿ. ಶಿವಮೂರ್ತಿ ಶಾಸ್ತ್ರಿಗಳ ಹೇಳಿಕೆ—

ಭಾಷಾವಾರು ರಾಜ್ಯ ರಚನೆಯ ತಳಹಿಡಿಯ ಮೇಲೆ ಸ್ವಾರು ೫೦ ವರ್ಷಗಳಿಂದ ಭಾರತದಲ್ಲಿ ನಡೆದ ಚಳುವಳಿಯ ಫಲವಾಗಿ ರಾಜ್ಯಪುನರ್ವಿಂಗಡಣಾ ಸಮಿತಿಯ ತೀರ್ಮಾನದಂತೆ ಭಾರತ ದೇಶದಲ್ಲಿ ವಿಶಾಲ ಮೈಸೂರು ಅಥವಾ ಕರ್ನಾಟಕ, ಕೇರಳ, ಆಂಧ್ರ, ಮದರಾಸು ಅಥವಾ ತಮಿಳು ನಾಡು ಮೊದಲಾದ ಭಾಷಾವಾರು ರಾಜ್ಯಗಳು ೧೯೫೬ರ ನವೆಂಬರ್ ೧ರಲ್ಲಿ ಸ್ಥಾಪನೆ ಯಾದವು. ಅಂದಿನಿಂದ ಆಯಾ ರಾಜ್ಯಗಳಲ್ಲಿ ಆಯಾ ಪ್ರಾಂತದ ಭಾಷೆಗಳು ಸರಕಾರದ ಅಧಿಕೃತ ಭಾಷೆಗಳಾಗಬೇಕೆಂಬ ಕೂಗು ಸಾರ್ವಜನಿಕ ಸಭೆಗಳಲ್ಲಿ, ಶಾಸನ ಸಭೆಗಳಲ್ಲಿ, ಮೇಲಿಂದ ಮೇಲೆ ಕೇಳಿ ಬರುತ್ತಿದೆ. ಇದೇ ವರ್ಷ ಜನವರಿಯಲ್ಲಿ ಬಳ್ಳಾರಿಯಲ್ಲಿ ಸೇರಿದ್ದ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡವು ಮೈಸೂರು ಪ್ರಭುತ್ವದ ಅಧಿಕೃತ ಭಾಷೆಯಾಗಬೇಕೆಂಬ ನಿರ್ಣಯವನ್ನು ಮಂಜೂರು ಮಾಡಿದೆ.

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳ ರಕ್ಷಣೆಗಾಗಿ ಅಖಿಲ ಕರ್ನಾಟಕದ ಮುಂದಾಳುಗಳ ಪ್ರಯತ್ನದ ಫಲವಾಗಿ ಮಹಾಜನಗಳ ಹಾಗೂ ಪ್ರಭುತ್ವದ ಬೆಂಬಲದ ಫಲವಾಗಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿದೆ (೧೯೧೫) ಇದು ಪರಿಗೆ ಕನ್ನಡಕ್ಕಾಗಿ ಈ ಪರಿಷತ್ತು ಬಹಳವಾಗಿ ಶ್ರಮಿಸಿದೆ. ಕರ್ನಾಟಕ ರಾಜ್ಯ ನಿರ್ಮಾಣ ಅಥವಾ ವಿಶಾಲ ಮೈಸೂರಿನ ಸ್ಥಾಪನೆಗೆ ಸಾಹಿತ್ಯ ಪರಿಷತ್ತು ಅಪಾರವಾಗಿ ಶ್ರಮಿಸಿದೆ ಎಂಬ ಮಾತನ್ನು ಆಗ ಮುಖ್ಯ ಮಂತ್ರಿಯಾಗಿದ್ದ ಶ್ರೀ ನಿಜಲಿಂಗಪ್ಪನವರೇ ಆದಿಯಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ.

ಎರಡು ಕೋಟಿ ಕನ್ನಡ ಜನರ ಪ್ರತಿನಿಧಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡಿನ ಅತ್ಯಂತ ಹಿರಿಯ ಸಂಸ್ಥೆ ಎಂಬುದನ್ನು ಕಣ್ಣು ಕಿವಿಗಳುಳ್ಳವರೆಲ್ಲರೂ ಒಪ್ಪಿಕೊಳ್ಳುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ. ಪರಿಸ್ಥಿತಿ ಹೀಗೆ ನಿಚ್ಚಳವಾಗಿರುವಾಗ ಪ್ರಭುತ್ವವಾಗಲೀ ಸಾರ್ವಜನಿಕರಾಗಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡ ಭಾಷೆಗೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸುವಾಗ ಉಪೇಕ್ಷಿಸುವುದು ಸಾಧುವೆ?

ಮೈಸೂರು ಸರಕಾರದವರು "ಕರ್ನಾಟಕದಲ್ಲಿ ಕನ್ನಡ ಅಧಿಕೃತ ಭಾಷೆ" ಆಗುವ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಿಸಿದ್ದಾರೆ ಅದರಲ್ಲಿ ಗಣ್ಯರಾದ ಮಹನೀಯರ ಜೊತೆಯಲ್ಲಿ ಕನ್ನಡ ಜ್ಞಾನ್ನಾಗಿ ಆಡಲು ಬರದೇ ಇರುವವರನ್ನು ಕೂಡ ಸದಸ್ಯರನ್ನಾಗಿ ಮಾಡಿ ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದ್ದಾರೆ. ಅದರೆ ಈ ಮಹತ್ವದ ಸಂಸ್ಥೆಯಲ್ಲಿ ಕನ್ನಡನಾಡಿನ ಹಿರಿಯ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತನ್ನು ಉಪೇಕ್ಷಿಸಿದ್ದಾರೆ. ಪ್ರಜಾಪ್ರಭುತ್ವ ತತ್ವಗಳನ್ನು ಪರಿಪಾಲಿಸಬೇಕಾದ ಪ್ರಜಾಸರ್ಕಾರ ಕನ್ನಡ ಪ್ರಜೆಗಳಿಂದ ಇಷ್ಟಪಿಸಲ್ಪಟ್ಟ ೪೩ ವರ್ಷಗಳಷ್ಟು ಹಿರಿಯದೆನಿಸಿದ ಅಖಿಲ ಕರ್ನಾಟಕದ ಏಕೈಕ ವಾಙ್ಮಯಾತ್ಮಕ ಸಂಸ್ಥೆಯೆನಿಸಿದ ಕನ್ನ

ಡ ಸಾಹಿತ್ಯ ಪರಿಷತ್ತನ್ನು ಉಜ್ಜೀವಿಸಲು ಕಾರಣವೇನು? ಈ ಸಂಸ್ಥೆಯ ಸಲಹೆ ಸಹಕಾರಗಳಿಲ್ಲದೆ ಕನ್ನಡದ ಬಗ್ಗೆ ಮಾಡುವ ತೀರ್ಮಾನವು ಎಲ್ಲರ ಒಪ್ಪಿಗೆಗೂ ಅರ್ಹವಾಗುವುದೆಂದು ಸರಕಾರ ಭಾವಿಸಿದೆಯೆ?

ಇಂತಹ ರಾಷ್ಟ್ರೀಯ ಭಾವನೆಯಿಂದ ಕೂಡಿದ ಭಾಷಾ ಸಮಸ್ಯೆಗೆ ಸಂಬಂಧಪಟ್ಟ ಇಡಿ ಪ್ರಾಂತಕ್ಕೆ ಅನ್ವಯಿಸುವ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳುವ ಸಮಿತಿಗೆ ಸರಕಾರದ ಶ್ರೇಷ್ಠ ಕಾರ್ಯದರ್ಶಿಗಳನ್ನು ಅಧ್ಯಕ್ಷರನ್ನಾಗಿ ನೇಮಿಸುವುದಕ್ಕಿಂತ ಕನ್ನಡದ ಅಭಿಮಾನಿಗಳಾಗಿ ನಿವೃತ್ತರಾದ ಹೈಕೋರ್ಟ್ ನ್ಯಾಯಾಧೀಶರನ್ನೂ ಅಥವಾ ಜನಪ್ರಿಯರಾದ ಮಾಜೀ ಮಂತ್ರಿಗಳನ್ನೂ ಅಧ್ಯಕ್ಷರನ್ನಾಗಿ ನೇಮಿಸಿದ್ದಲ್ಲಿ ಸರಕಾರವು ಹೆಚ್ಚು ದೂರದೃಷ್ಟಿಯನ್ನೂ ಔಚಿತ್ಯವನ್ನೂ ತೋರಿಸಿದಂತಾಗುತ್ತಿತ್ತೆಂದು ಇಲ್ಲಿ ಹೇಳಬಯಸುತ್ತೇನೆ. ಕನ್ನಡಕ್ಕಾಗಿಯೇ ತಮ್ಮ ಜೀವನವನ್ನು ಮೀಸಲುಮಾಡಿದ್ದ ಜಯಕರ್ನಾಟಕ ದುಂದುಭಿಯನ್ನು ದಶದಿಕ್ಕುಗಳಲ್ಲಿ ಮೊಳಗಿಸಿದ ಪೂಜ್ಯ ಆಲೂರು ವೆಂಕಟರಾಯರು ಈ ಸಮಿತಿಯ ಸದಸ್ಯರಾಗುವುದು ಅನೇಕ ಕಾರಣಗಳಿಂದ ಅಗತ್ಯವಾಗಿತ್ತು. ಮೇಲಿಂದ ಮೇಲೆ ಬಂದುಹೋಗುವ ಮಂತ್ರಿಮಂಡಲಗಳು ನಂದಾದೀಪದಂತೆ ನಾಡಿನಲ್ಲಿ ಸದಾ ಕಂಗೊಳಿಸುವ ಸಾಹಿತ್ಯ ಪರಿಷತ್ತಿನಂತಹ ಮಹಾಸಂಸ್ಥೆಗಳನ್ನು ಕಡೆಗಣಿಸುವುದು ಯಾವ ದೃಷ್ಟಿಯಿಂದಲೂ ಸಾಧುವಲ್ಲವೆಂದು ಇಲ್ಲಿ ಹೇಳಬಯಸುತ್ತೇನೆ.

"ಸಿರಿಗನ್ನಡಂ ಬಾಳ್ಗೆ!"

[ರಾಜಕಾರಣಿಗಳಿಗೆ ಸಾಹಿತ್ಯವು ಅತ್ಯಗತ್ಯವಾದರೂ ಅವರಿಗೂ ಅದಕ್ಕೂ ಹರದಾರಿಯ ದೂರವಿರುವುದು ನಮ್ಮಲ್ಲಿ ಕಂಡುಬರುತ್ತದೆ. ಅದುದರಿಂದ ಸರಕಾರದ ಕನ್ನಡ ಕಣ್ಣಿಗೆ ಸಾಹಿತ್ಯ ಪರಿಷತ್ತು ತೋರಲೇ ಇಲ್ಲ; ರಾಜಕಾರಣದ ಗುಂಗಿನಲ್ಲಿಯೇ ಮೈಮರೆತವರಿಗೆ ಸಾಹಿತ್ಯ ಸುಧೆಯ ಸವಿ ಹೇಗೆ ಗೊತ್ತಾಗವೇಕು? ಅದೇನೂ ಇನ್ನೂ ಕಾಲವಿಳಂಬವಾಗಲಿಲ್ಲ; ಸರಕಾರ—ಬಿ. ಡಿ. ಜತ್ತಿಯವರೆ ನೂತನ ಸರಕಾರ—ಇನ್ನಾದರೂ ಮುಚ್ಚಿದ ಕಣ್ಣನ್ನು ತೆರೆದು ಪ್ರಕೃತ ಕನ್ನಡ ಸಾಹಿತ್ಯ ಪರಿಷತ್ತಿಗೆ ತೋರಿದ ಅನಾದರವನ್ನು ಸರಿಪಡಿಸಬೇಕು ಮತ್ತು ಅನುಭವೀ ಸಾಹಿತಿಗಳಿಗೂ ಭಾಷೆಯ ಬಗ್ಗೆ ಅತುಲ ಜ್ಞಾನವಿದ್ದವರಿಗೂ ಅವಕಾಶ ಕೊಡಬೇಕು. ಈಗ ಸಾಹಿತ್ಯ ಪರಿಷತ್ತಿಗಾದ ಅನ್ಯಾಯ ತುಳು ಗೊತ್ತಿರುವವರೆಂದು, ಶ್ರೀ ಮರಿಯಪ್ಪ ಭಟ್ಟರನ್ನು ಕನ್ನಡ ನಿಘಂಟುವಿನ ಸಂಪಾದಕ ಮಂಡಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಆರಿಸಿದಂತೆಯೇ ಆಗಿದೆ. ಇಂತಹ ತಪ್ಪುಗಳು ನಿಷ್ಪ್ರಯೋಜಕಂಡು. ನಾವು ಬಯಸುತ್ತೇವೆ. ಸಂಬಂಧಿತರು ನೇತ್ರ ಇನ್ನಾದರೂ ನಿಮೀಲನ ಗೊಳ್ಳಲಿ.

—ಸಂ. ನ.]

ಉಡುಪಿ

ಪಾಂಗಾಳ ನಾಯಕ್ ಬೇಂಕಿನ- ಶಿವಮೊಗ್ಗ ಶಾಖೆಯು ತಾ.10ರಂದು ಗಾಂಧಿ ಬಜಾರಿನ ಶಾಖಾ ಕಚೇರಿಯಲ್ಲಿ ಪ್ರಾರಂಭಿಸಲ್ಪಟ್ಟಿತು. ಶ್ರೀ ಪುತ್ತಿಗೆ ಮಠದ ಸ್ವಾಮಿಗಳವರು ಈ ಸಮಾರಂಭಕ್ಕೆ ಆಗಮಿಸಿ ಬೇಂಕಿನ ಶಾಖೆಗೆ ಶುಭವನ್ನು ಬಯಸಿದರು.

ಸಂಜೆ ಶಾಖಾ ಆರಂಭೋತ್ಸವದ ಸಲುವಾಗಿ ಸತ್ಕಾರಕೂಟ ಜರಗಿತು. ನಗರದ ಅಧ್ಯಕ್ಷರೆ ಸೇಕರು ಆಗಮಿಸಿದ್ದರು. ಬೇಂಕಿನ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತರು ಮತ್ತು ಶಾಖಾ ಏಜಂಟ್ ಶ್ರೀ ಎಚ್. ಜಿ. ಕೆಳ್ಳೆಯವರು ಸ್ವಾಗತ ನೀಡಿದರು.

ಸಂತಾಪ ಸೂಚಕ ಸಭೆ- ಉಡುಪಿ ಸರಕಾರಿ ತರಬೇತಿ ಶಾಲೆಯ ನಿವೃತ್ತ ದೈಹಿಕಾಧ್ಯಾಯ ಶ್ರೀ ಉಗ್ರಾಣ ಕೃಷ್ಣರಾಯರು ತಾ. 15ರಂದು ಹೃದಯಸ್ತಂಭನದಿಂದ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ಸ್ಥಳೀಯ ಕಲಾವೃಂದದವರು ತಾ. 16ರಂದು ಶ್ರೀ ಶ್ರೀಪತಿರಾವ್ ಫಲಿಮಾರ್ ಕರ್‌ರವರ ಅಧ್ಯಕ್ಷತೆಯಲ್ಲಿ ಸಂತಾಪ ಸೂಚಕ ಸಭೆಯನ್ನು ಜರಗಿಸಿದರು. ಶ್ರೀಗಳಾದ ಸುಶೀಲೇಂದ್ರಾಚಾರ್ಯ ಮತ್ತು ಯಾದವ ಸರಳಾಯರು ದಿವಂಗತರ ಗುಣಗಾನಮಾಡಿದರು.

ಜನ್ಮವರ್ಧಂತಿ- ಶ್ರೀ ಮಧ್ವಾಚಾರ್ಯರ ಶುದ್ಧ ಸಂಪ್ರದಾಯಗಳಿಗನುಗುಣವಾಗಿ ಶಿಸ್ತಿನಿಂದ ಶ್ರೀ ಕೃಷ್ಣನ ಪೂಜಾದಿಗಳನ್ನು ನೆರವೇರಿಸುತ್ತ, ಪರ್ಯಾಯ ಪೀಠದಲ್ಲಿ ರಾರಾಜಿಸುತ್ತಿರುವ ಶ್ರೀಕೃಷ್ಣಾಪುರ ಮಠದ ಶ್ರೀವಿದ್ಯಾಕೃತೀರ್ಥಸ್ವಾಮಿಗಳವರು ತಮ್ಮ ಜನ್ಮವರ್ಧಂತಿ ಸಮಾರಂಭವನ್ನು ತಾ 19 ರಂದು ಶ್ರೀ ಕೃಷ್ಣನ ಸನ್ನಿಧಿಯಲ್ಲಿ ಸಾಂಗವೊಳಿಸಿದರು. ಅಂದು ಮಧ್ಯಾಹ್ನ ದಾನದಕ್ಷಿಣೆ, ವಿಶೇಷ ಅನ್ನದಾನಗಳಾಗಿ ರಾತ್ರಿಯಲ್ಲಿ ಶ್ರೀಕೃಷ್ಣ ಹಾಗೂ ವೀರ ಆಂಜನೇಯ ಸ್ವಾಮಿಗೆ ಹೂವಿನಪೂಜೆ ಮತ್ತು ಸುವರ್ಣಪಾಲಕಿಯುತ್ಸವಗಳಾದುವು.

ಶಾಲಾವರ್ಧಂತಿ- ಸಟ್ಲೋಕೇಮನ್ಸ್ ಕಿಲಕ ಹಾ|ಎಶಾಲೆಯ ಸಾರ್ಸಿಕೋತ್ಸವವು ತಾ15 ರಂದು ಡಾ|ಬಿ. ಚಂದಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಪೀಠಕ ಶ್ರೀ ಎಸ್ ಗೋವಿಂದಪಟ್ಟರು ಸ್ವಾಗತ ಬಯಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ವಾಸುದೇವಭಟ್ಟರು ಶಾಲಾ ವರದಿಯನ್ನೋದಿದರು. ಡಾ| ನಿಧಿರಾಯರು ಛತ್ರಪತಿ ಶಿವಾಜಿಯ ಭಾವಚಿತ್ರವನ್ನೂ ಶ್ರೀ ಎಸ್ ರಾಧಾಕೃಷ್ಣರಾಯರು ಗಾಂಧಿಜೀಯವರ ಭಾವಚಿತ್ರವನ್ನೂ ಅನಾವರಣಮಾಡಿದರು. ಶ್ರೀ ಪಿ. ಎಸ್ ಶ್ಯಾಮಭಾಗರು ಬಹುಮಾನ ವಿತರಣೆಮಾಡಿದರು. ಅಂದು ಪೂರ್ವಾಹ್ನ ಪರ್ಕಳ ಪಂಚಾಯತ ಬೋರ್ಡಿನ ಅಧ್ಯಕ್ಷೆ ಶ್ರೀ ಎಚ್. ಸದಾಶಿವ ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಶ್ರೀ ಕೆ. ರಾಮಯ್ಯ ಪ್ರಭುಗಳು ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು.

ಸಂಕ್ಷಿಪ್ತ ಸುದ್ದಿಗಳು

ಮೈಸೂರು ಮಂತ್ರಿಮಂಡಲ

ಇದೇ ತಾ. ೨೦ರಂದು ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಶ್ರೀಗಳಾದ ಕಡಿದಾಳ ಮಂಜಪ್ಪ, ಟಿ. ಸುಬ್ರಹ್ಮಣ್ಯ, ಟಿ. ಮರಿಯಪ್ಪ. ಎಚ್. ಎಂ. ಚನ್ನಬಸಪ್ಪ, ಕೆ. ಎಫ್. ಪಾಟೀಲ, ಮತ್ತು ಮಾಲಿ ಮರಿಯಪ್ಪ ಇವರನ್ನು ಮಂತ್ರಿಗಳಾಗಿಯೂ ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ, ಜಿ. ಎಚ್. ಶಮ್ಸುದ್ದೀನ್ ಮತ್ತು ಎಂ. ಎನ್. ನಾಗನೂರ—ಇವರನ್ನು ಉಪಮಂತ್ರಿಗಳಾಗಿಯೂ ಆರಿಸಿರುವರು. ಇನ್ನೂ ಕೆಲವು ಮಂತ್ರಿಗಳು ಮತ್ತು ಉಪಮಂತ್ರಿಗಳನ್ನು ಆರಿಸಲಿರುವರೆಂದು ತಿಳಿಸಿರುವರು.

ನಾಗಾಜನರ ವಿಧ್ವಂಸಕ ಕಾರ್ಯ

ಅಸ್ಸಾಮು ಮತ್ತು ಈಶಾನ್ಯ ಸರಹದ್ದು ಪ್ರಾಂತಗಳ ಕೆಲಭಾಗಗಳಲ್ಲಿ ನಾಗಾ ಬಾಡುಗಾರರು ನಡೆಸಿದ ಚಟುವಟಿಕೆಗಳಿಂದ ಉದ್ಭವಿಸಿದ ಪರಿಸ್ಥಿತಿಯ ಕುರಿತು ಚರ್ಚಿಸುವುದಕ್ಕಾಗಿ ಭಾರತೀಯ ವರಿಷ್ಠ ಸರಕಾರಿ ಮತ್ತು ಸೈನ್ಯಾಧಿಕಾರಿಗಳು ಗೌಹಾತಿಯಲ್ಲಿ ಸಭೆ ಸೇರಿದ್ದರು. ನಾಗಾ ಜನರ ವಿಧ್ವಂಸಕ ಚಟುವಟಿಕೆಗಳನ್ನು ತಡೆಹಿಡಿಯುವುದಕ್ಕಾಗಿ ಈಗಾಗಲೇ ಕೈಕೊಂಡಿದ್ದ ಕ್ರಮಗಳ ಬಗ್ಗೆ ಸಭೆಯಲ್ಲಿ ಸಮಾಧಾನವನ್ನು ವ್ಯಕ್ತಪಡಿಸಲಾಯಿತು. ಭಾರತೀಯ ಸೈನ್ಯದ ಪೂರ್ವ ಕಮಾಂಡದ ವರಿಷ್ಠರಾದ ಜನರಲ್ ಥೋರಾತರು ಮಾತನಾಡುತ್ತ ನಾಗಾ ವಿಧ್ವಂಸಕರು ಎಲ್ಲಿಯೇ ತಮ್ಮ ಚಟುವಟಿಕೆಗಳನ್ನು ನಡೆಸಲಿ ಅವನ್ನು ಪ್ರಾದೇಶಿಕ ಘಟನೆಯೆಂದು ಬಗೆಯದೆ ಅಖಂಡ ನಾಗಾ ಸಮಸ್ಯೆಯ ಒಂದಂಗವೆಂದು ಗಣಿಸಿ ನಿರೋಧ ಕಾರ್ಯ ನಡೆಯಬೇಕು ಎಂದು ಅಭಿಪ್ರಾಯಪಟ್ಟರು. ನಾಗಾ ಜನರ ಅಪೇಕ್ಷೆಯಂತೆ ಅವರಿಗೆ ಒಂದು ಪ್ರತ್ಯೇಕ ಕೇಂದ್ರಾಡಳಿತದ ರಾಜ್ಯವನ್ನು ಕಲ್ಪಿಸಿಕೊಟ್ಟಿದ್ದರೂ ನಾಗಾಜನರು ತಮ್ಮ ಕ್ರೂರ ಕೃತ್ಯಗಳನ್ನು ತ್ಯಜಿಸದಿರುವುದು ಶೋಚನೀಯ.

ಫ್ರಾನ್ಸಿನಲ್ಲಿ ಅಂತರ್ಯುದ್ಧ

ಫ್ರಾನ್ಸಿನಲ್ಲಿ ಪತನಗೊಂಡ ಮಂತ್ರಿಮಂಡಳದ ಸ್ಥಾನದಲ್ಲಿ ಶ್ರೀ ಪೀರೆ ಫ್ಲಿಮಲಿನರ ಪ್ರಧಾನತ್ವದಲ್ಲಿ ನೂತನ ಸಂಪುಟವು ನೇಮಿಸಲ್ಪಟ್ಟಿದೆ. ಆದರೆ, ನವ ಪ್ರಧಾನಿಯವರ ಆಯ್ಕೆಯನ್ನು ವಿರೋಧಿಸಿ ಆಲ್ಜೀರಿಯಾದ ಫ್ರೆಂಚರು ಮತಪ್ರದರ್ಶನ ನಡೆಸಿದ್ದು ಗುಲ್ಲೆಬ್ಬಿಸುತ್ತಿದ್ದಾರೆ. ಈ ಗಲಭೆಯನ್ನು ಹತ್ತಿಕ್ಕುವ ಸರ್ವಪ್ರಯತ್ನಗಳನ್ನು ಫ್ರೆಂಚ ಸರಕಾರ ಕೈಗೊಳ್ಳುತ್ತಿದೆ. ಇಡಿ ಆಲ್ಜೀರಿಯಕ್ಕೆ ಸಾರ್ವಜನಿಕ ಸುರಕ್ಷಿತತೆಯ ಸಮಿತಿಯೊಂದನ್ನು ಸ್ಥಾಪಿಸಲಾಗುವುದು. ಇಲ್ಲೀರಿಯದ ನಿಯಂತ್ರಣದ ಬಗ್ಗೆ ಸರ್ವಾಧಿಕಾರವನ್ನು ಜ. ಡಿಗಾಲೆಯವರ ಅಪ್ತರಾದ ಜಾಕ್ಸ್ ಸೌಸ್ಟೆಲೆಯವರಿಗೆ ಕೊಡಲಾಗುವುದೆಂದು ತಿಳಿದುಬಂದಿದೆ. ಫ್ರೆಂಚ ಸರಕಾರವು ಜನರಲ್ ಸಾಲನ್ನರಿಗೆ ಆಲ್ಜೀರಿಯದ ಮಟ್ಟಿಗೆ ಸಂಪೂರ್ಣ ನಾಗರಿಕ ಹಾಗೂ ಮಿಲಿಟರಿ ಅಧಿಕಾರವನ್ನು ಕೊಟ್ಟಿರುತ್ತದೆ. ನವಪ್ರಧಾನಿಗಳು ಆಲ್ಜೀರಿಯದ ಜನತೆಯನ್ನೆಚ್ಚರಿಸುತ್ತ ರಾಷ್ಟ್ರೀಯ ಐಕ್ಯಕ್ಕೆ ಗಂಡಾಂತರ ಶರಬಾರದೆಂದು ನುಡಿದಿದ್ದಾರೆ. ಸಾರ್ವಜನಿಕ ಸುರಕ್ಷಿತತೆಯನ್ನು ಕೆಡಿಸಲೆಳೆಸುವವರನ್ನು ಬಂಧಿಸುವುದಕ್ಕಾಗಿ ಹೊಸತಾಗಿ ಪಡೆದ ಅವಸರದ ಅಧಿಕಾರವನ್ನು ಸರಕಾರವು ಉಪಯೋಗಿಸಲಿದೆಯೆಂದೂ ಶ್ರೀ ಫ್ಲಿಮಿಲನರು ಬಹಿರಂಗಪಡಿಸಿದರು.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿರುವವರು ಸದ್ರಿ ಬೇಂಕಿನಲ್ಲಿ, ನಮಗೆ ಈಡಿನ ಮೇಲೆ ಸಾಲ ಪಡೆಕೊಂಡು ಕ್ಲಪ್ತ ವಾಯಿದೆಗೆ ಅಸ್ಲು ಬಡ್ಡಿ ಬಗ್ಗೆರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವದೇ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಿದ್ದಲೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗಬೇಕೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 30—5—1958ನೇ ಶುಕ್ರವಾರ ಮಧ್ಯಾಹ್ನ ಗಂಟೆ 3ಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಮುನ್ನ ನೋಟೀಸು ಕೊಡದೇನೆ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂಮಿನಲ್ಲಿ ಹುಟ್ಟಿಬಂದ ಖರ್ಚೆಲು ಸಾಲದ ಮೊಬಲಗಿಗೆ ಕಡಿಸಿಯೂಪಲ್ಲಿ ಸಂಭಂದಪಟ್ಟವರ ವೇಚ ಜವಾಬ್ದಾರಿಯಿಂದ ಬೇಂಕಿಗೆ ಬರ ಖರ್ಚೆಲನ್ನು ವಸೂಲುಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿಯಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 30—3—58ಕ್ಕೆ ಬರತಕ್ಕ ಮೊಬಲಗು.
469/56	ಶ್ರೀ ಸುಂದರ ಸೆಟ್ಟಿ, ಪಿಜಿನ ಸೆಟ್ಟಿ ಮಗ ಜೆನ್ನ ಬೆಟ್ಟು, ಅತ್ತೂರು, ಪಿಟ್ಟೆ ಪೋಸ್ಟು.	50—81
555 56	ಶ್ರೀ ಕೆ. ಅಬ್ದುಲ್ ಲತೀಫ್, ಡಿ. ಎ. ಬಾದರರ ಮಗ, ಪೇಟೆ, ಕಮ್ಯುನಿಟಿ ಪ್ರೊಜೆಕ್ಟ್, ಕಾರ್ಕಳ.	24—94
586/56	ಶ್ರೀ ಮಹಮ್ಮದ್ ಅಮ್ಮ ಸಾಹೇಬ, ಮಹಮ್ಮದ್ ಅಬ್ದುಲ್ ಖಾದರರ ಮಗ, ಹಿಲ್ಸ್ ಚರ್ಚ್ ರೋಡು ಚೋಲ್ಪಾಡಿ, ಕಾರ್ಕಳ.	188—81
653/56	do. do.	176—69
630/56	ಶ್ರೀ ಶಾಮ ಚಂದು ಸೆಟ್ಟಿ, ಚಂದು ಸೆಟ್ಟಿ ಮಗ ಹೊಟೇಲು ಸ್ಟ್ರಾಸ್ಪ್ರಾಟರ್, ಸಡಮಜಲ್ ಗುತ್ತು, ನಂದಳಿಕೆ ಗ್ರಾಮ, ಪೋಸ್ಟು ಬೆಳ್ಮಣ್ಣು.	760—68
689/56	ಶ್ರೀ ತಿಮ್ಮಪ್ಪನಾಡ, ಕಾಂತಪ್ಪ ಮೂಡರ ಪೊಮ್ಮಗ ಎಲಿಯಾಲ್ ಮನೆ, ಕಾಡೂರು, ಪೋಸ್ಟು ಪೀರೆದೈಲೂರು.	25—25
728/56	ಶ್ರೀ ಗೈಗೋರಿ ಪಿರೇರಾ, ಸೆಬೆಸ್ಟಿನ್ ಪಿರೇರರ ಮಗ ಟೀಚರ್, ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆ ಕುಕ್ಕುಂದೂರು.	36—30
909/56	Mrs. ಮಟ್ಟಿ ಡಿಸೋಜ, ಗಿಲ್ಬರ್ಟ್ ಕೋಣ್ರರ ಹೆಂಡತಿ ತಾಲೂಕು ಆಫೀಸಿನ ಬಳಿ, ಕಾರ್ಕಳ.	86—75

Th Vijaya Bank Ltd., KARKALA. Date 20—5—1958

B. S. S. Hegde, *Agent.*

ಪ್ರೆಸಿಡೆಂಟ್

ಫೌಂಟನ್ ಪೆನ್ನುಗಳು
ದುಂಡಗೆ ಚುಕ್ಕೆಯುಳ್ಳ ಪೆನ್ಸಿಲುಗಳು
ಶಾಯಿಗಳು

ಮಂಗಳೂರು

ನೇಮಕ—ದ. ಕ. ಜಿಲ್ಲೆಯ ಪಬ್ಲಿಕ್ ಪ್ರೊಸಿಕ್ಯೂಟರಾಗಿ ಮೈಸೂರು ಸರಕಾರವು ಶ್ರೀ ಎಮ್. ಎಮ್. ಪ್ರಭುಗಳನ್ನು ತಾ. 1-4-58ರಿಂದ ಮೂರು ವರ್ಷಗಳ ಅವಧಿಗೆ ನೇಮಕಮಾಡಿರುವುದು.

ಮಹಾ ಮೈಸೂರು ಮಿನುಗಾರರ ಪರಿಷತ್ತಿನ-ಕಾರ್ಯನಿರ್ವಾಹಕ ಸಮಿತಿಯ ಸಭೆಯು ಡಾ. ಎಸ್. ಚಂದ್ರಾರವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬಯಿ ಯುವಕ ಸಂಘದವರಿಂದ ಒಂದು ಪತ್ರವನ್ನು ಓದಿ ರಿಕಾರ್ಡು ಮಾಡಲಾಯಿತು. ಫಿಶರೀಸ್ ಶಾಲೆಗಳನ್ನು ಫಿಶರೀಸ್ ಇಲಾಖೆಯ ಮೂಲಕವೇ ನಡೆಸುವಂತೆ ಕೇಳಿಕೊಳ್ಳುವ ನಿರ್ಣಯವಾಯಿತು. ಮುಂಬಯಿಯಲ್ಲಿ ಜರಗಿದ ರಾಜ್ಯ ಮಂತ್ರಿಗಳ ಪರಿಷತ್ತಿನಲ್ಲಿ ಖಾಸಗಿ ವ್ಯಕ್ತಿಗಳಿಗೆ ಸರಕಾರದ ಸಹಾಯ ಕೊಡುವ ಕುರಿತು ಮಾಡಿದ ನಿರ್ಣಯವನ್ನು ಪ್ರತಿಭಟಿಸಿ ಮಾಡಿದ ನಿರ್ಣಯಕ್ಕೆ ಸಮಿತಿಯು ಒಪ್ಪಿಗೆ ಸೂಚಿಸಿ, ಅದನ್ನು ಅನುಸರಿಸುವ ಪ್ರತ್ಯೇಕ ನಿರ್ಣಯವನ್ನು ಮಾಡಿಕಳುಹಿಸಬೇಕೆಂದಾಯಿತು. ಈ ನಿರ್ಣಯಗಳನ್ನು ತಯಾರಿಸಲು ಶ್ರೀ ಎಮ್. ಮಧ್ವರಾಜರಿಗೆ ಅಧಿಕಾರ ಕೊಡಲಾಯಿತು. ಪರಿಷತ್ತಿನ ಮಹಾ ಸಭೆ ಮತ್ತು ವಾರ್ಷಿಕೋತ್ಸವವನ್ನು ಜುಲಾಯಿ ತಿಂಗಳ ತಾ. 6ರಂದು ಜರಗಿಸಲು ನಿರ್ಣಯವಾಯಿತು.

ಕುಲಾಲ ಸಮಾಜೋದ್ಧಾರಕ ಸಂಘದ ಅಧಿವೇಶನವು— ತಾ. 11 ರಂದು ಸಂಜೆ ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಶಾಂತಾರಾಮ ಪೈ, ಸುಬ್ಬಯ್ಯ ಕೊಟ್ಯಾನ್, ಬಿ. ಕೆ. ಚಂದಪ್ಪ ಶ್ಯಾನುಭಾಗರು ಕಾಲೋಚಿತ ಭಾಷಣವಿತ್ತರು. ಅಧ್ಯಕ್ಷರು, ಕುಲಾಲ ಸಮಾಜವು ಈ ಜಿಲ್ಲೆಯಲ್ಲಿ ವಿದ್ಯೆಯಲ್ಲಿಯೂ ಆರ್ಥಿಕ ಸ್ಥಿತಿಯಲ್ಲೂ ಬಹಳ ಹಿಂದುಳಿದ ಸಮಾಜವಿದ್ದು ನಂದಿಂದ ಸಮಾಜದ ಅಭಿವೃದ್ಧಿಗೆ ಪ್ರತಿಯೊಬ್ಬನೂ ಪುಡಿಯಬೇಕೆಂದರು.

ಅಂಚೆ ತಂತಿ ನೌಕರರ ಕ್ಲಾಸ್ III ಸಂಘದ—ಜಿಲ್ಲಾ ಶಾಖೆಯ ವಿಷಯ ನಿಯಾಮಕ ಸಮಿತಿ ಸಭೆಯು ತಾ. 11ರಂದು ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ರಾಜ್ಯಕ್ಕೆ ಪ್ರತ್ಯೇಕ ಅಂಚೆ ಸರ್ಕಲಿನ ರಚನೆಯಾಗಬೇಕೆನ್ನುವ, ಸರಕಾರಿ ನೌಕರರ ನಡತೆಯ ನಿಯಮಗಳ 4 (A) ಮತ್ತು 4 (B) ನಿಬಂಧನೆಗಳನ್ನು ಹಿಂತೆಗೆಯಬೇಕೆನ್ನುವ, ಸುಂಕ ವ್ಯಾಜ್ಯಿ ಹುದ್ದೆಗಳಿಗೆ ಸಾರ್ವಜನಿಕರಿಂದಲೇ ಅಭ್ಯರ್ಥಿಗಳನ್ನು ಪಡೆಕೊಳ್ಳುವುದಕ್ಕೆ ನಿಷೇಧ ಸೂಚಿಸುವ, ಎಲ್. ಎಸ್. ಜಿ ಹುದ್ದೆಗಳ ಪೈಕಿ ಶೇ ಅಂಶವನ್ನು ಬರೇ ಸಿನಿಯೋರಿಟಿ ಮತ್ತು ಯೋಗ್ಯತೆಯ ಮೇಲೆಯೇ ತೆಗೆದುಕೊಳ್ಳುವುದಕ್ಕೆ ನಿಷೇಧ ಸೂಚಿಸುವ ಮತ್ತು ಉಡುಪಿಯ ಅಂಚೆ ನೌಕರರಿಗೆ ಪಸಕಿ ಸೌಕರ್ಯ ಒದಗಿಸಬೇಕೆನ್ನುವ ಕುರಿತು ನಿರ್ಣಯಗಳಾದುವು. ಹೊಸ ವರ್ಷದ ಅಧಿಕಾರಿ ವರ್ಗಕ್ಕೆ ಶ್ರೀಗಳಾದ ಬಿ. ಗಂಗಾಧರದಾಸ್, ಅಧ್ಯಕ್ಷ ಆರ್. ಆರ್. ಶ್ಯಾನಭಾಗ್ ಮತ್ತು ಬಿ ಆರ್. ಕಾಮತ್, ಉಪಾಧ್ಯಕ್ಷರು, ಕೆ. ಪಿ ಅಚಾರ್, ಕಾರ್ಯದರ್ಶಿ, ಕೆ. ಆರ್ ಶೆಟ್ಟಿ, ವಿ. ಎಸ್. ಹೊಳ್ಳ ಮತ್ತು ಕೆ. ಜಿ. ಎನ್. ಶರ್ಮ ಉಪಕಾರ್ಯದರ್ಶಿಗಳು, ಬಿ. ಜಗನ್ನಾಥಧಾರ್ ಖಜಾಂಚಿ, ಕೆ. ಎಲ್. ನಾಯಕ್, ಲೆಖ್ಖ ಪರಿಶೋಧಕರಾಗಿ ಆರಿಸಲ್ಪಟ್ಟರು. ಮೈಸೂರಲ್ಲಿ ಜೂನ್ ಎರಡನೆ ವಾರದಲ್ಲಿ ನಡೆಯುವ ಸರ್ಕಲ್ ಸಮ್ಮೇಳನಕ್ಕೆ ಶ್ರೀಗಳಾದ ಕೆ. ಆರ್. ಶೆಟ್ಟಿ, ಪಿ. ಎಸ್ ಹೊಳ್ಳ ಮತ್ತು ಎಚ್. ಜಿ. ಟೋಬೋರವರು ಪ್ರತಿನಿಧಿಗಳಾಗಿ ಆಯ್ಕೆ ಹೊಂದಿದರು.

ವಾರ್ಷಿಕ ಮಹಾ ಸಭೆ- ದ ಕ. ಜಿಲ್ಲಾ ಒಟೋಮೊಬೈಲ್ ಎಂಡ್ ಇಂಜಿನಿಯರಿಂಗ್ ಕೆಲಸಗಾರರ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ತಾ. 11ರಂದು ಶ್ರೀ ಟಿ. ಎವಿ. ಎನ್. ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷದ ಆಡಳಿತ ಮಂಡಳಿಗೆ ಶ್ರೀಗಳಾದ ಪಿ. ಎಮ್. ಎನ್. ಮೂರ್ತಿ, (ಅಧ್ಯಕ್ಷ), ಎ. ಶಾಂತಾರಾಮ ಪೈ ಮತ್ತು ರಾಮಣ್ಣ ಸೆಟ್ಟಿ (ಉಪಾಧ್ಯಕ್ಷರು) ಡೇವಿಡ್ ಕರ್ಕಡ (ಪ್ರಧಾನ ಕಾರ್ಯದರ್ಶಿ ಅಲ್ಬರ್ಟ್ ಸಿಕೇರ ಮತ್ತು ಎಮ್. ಜೋನಪ್ಪ (ಜತೆಕಾರ್ಯದರ್ಶಿ) ಎ. ಬಾಬು (ಕೋಶಾಧಿಕಾರಿ)ಯಾಗಿ ಆರಿಸಲ್ಪಟ್ಟರು. ಕೆಲಸಗಾರರಿಗೆ ಸಂಬಂಧಪಟ್ಟ ಕೆಲವು ನಿರ್ಣಯಗಳಾದುವಲ್ಲದೆ ಮುಂಬಯಿಯ ಶ್ರೀ ಪಿ. ದಿಮೆಲ್ಲೊ ಮತ್ತು ಶ್ರೀ ದಯಾನಂದ ಸುವರ್ಣರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ವಿದಾಯ ಸತ್ಕಾರ ಮಂಗಳೂರಿನ ಪ್ರಮುಖ ಕೈಗಾರಿಕೋದ್ಯಮಿಗಳಲ್ಲೊಬ್ಬರಾದ ಶ್ರೀ ಎಚ್. ಆರ್. ಕಾಮತರು ಮುಂಬಯಿಗೆ ತೆರಳುವ ನಿಮಿತ್ತ, ಅವರಿಗೆ ರೋಟರಿ ಕ್ಲಬ್ಬಿನವರು ತಾ. 15ರಂದು ಭೋಜನ ಸತ್ಕಾರವಿತ್ತರು. ಶ್ರೀ ನಿ. ಎಸ್. ಕುಡ್ವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀಗಳಾದ ಎಮ್. ಎಸ್. ಕಾಮತ್, ಕೆ. ವಿಶ್ವನಾಥ ಕಾಮತ್, ವಿ. ಎಮ್. ಎಸ್. ರಾವ್ ತಾಳಿತ್ತಾಯರು ಮುಖ್ಯ ಅತಿಥಿಯ ಕುರಿತು ಮಾತನಾಡಿದರು. ಅಧ್ಯಕ್ಷರ ಸಮಯೋಚಿತ ಮಾತುಗಳಾದ ಬಳಿಕ ಶ್ರೀ ಕೆ. ಪಿ. ಕಸ್ತೂರಿಯವರು ಧನ್ಯವಾದಗಳನ್ನಿತ್ತರು.

ಅಧಿಕಾರ ಸ್ವೀಕಾರ—ಈ ಸರೆಗೆ ದಕ್ಷಿಣ ಕನ್ನಡ ಮೂರ್ಕೆಟು ಕಮಿಟಿಯ ಕಾರ್ಯದರ್ಶಿಯಾಗಿದ್ದ ಶ್ರೀ ಕೆ. ತೇಜಪ್ಪ ಸೆಟ್ಟರು ಮೈಸೂರು ರಾಜ್ಯದ ಗೇರು ಕೃಷಿ ಅಭಿವೃದ್ಧಿ ಅಧಿಕಾರಿಯಾಗಿ ನೇಮಕಗೊಂಡು ತಾ. 16ರಂದು ಹೊಸ ಅಧಿಕಾರ ಸ್ವೀಕರಿಸಿರುವರು.

ಗೇರು ಕೃಷಿಗಾರರಿಗೆ ಒಂದು ಎಕ್ರೆಗೆ ಸೆಟ್ಟಿಂದರೆ ರೂ. 150/ ರಂತೆ ಸಾಲ ದೊರೆಯುವುದು. ಹೆಚ್ಚಿನ ಮಾಹಿತಿಯನ್ನು ಗೇರು ಕೃಷಿ ಅಭಿವೃದ್ಧಿ ಅಧಿಕಾರಿ, ಕದ್ರಿ, ಮಂಗಳೂರು-2, ಇವರಿಂದ ಪಡೆಯಬಹುದು.

ಶಾಲಾ ವರ್ಧಂತಿ-ಸೆಮಾರ್ಡ ಸ್ಕೆಂಟ್ ಪ್ರಾಸ್ಪಿಸ್ ಕ್ವೇಮಿಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 14ರಂದು ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಸಾಲ್ವಡೋರ್ ಡಿ'ಸೋಜರು ಶಾಲಾ ವರದಿಯನ್ನೋದಿದರು. ಶ್ರೀ ಪಿ ರಾಮಮೂರ್ತಿಯವರು ಸ್ವಸ್ತಿವಾಚನವಾಡಿದರು. ಸಭಿಕರ ಪರವಾಗಿ ಶ್ರೀ ಜೆಪ್ರಿ ಡಿ'ಸೋಜ ಮತ್ತು ನಿಸಾರ ಜಲಿಯಾನ್ ಸಫುರತ್‌ರವರು ಕಾಲೋಚಿತ ಮಾತುಗಳನ್ನಾಡಿದರು. ಸಮಾರಂಭಕ್ಕೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ ಡಾ. ಯು. ಪಿ ಮಲ್ಯ, ಶ್ರೀಮತಿ ಸರಸ್ವತಿ ಪಿ. ಮಲ್ಯ ಮೊದಲಾದವರು ಬಂದಿದ್ದರು.

ಕಂಕನಾಡಿ ರೈತ ಮುಂದಾಳುಗಳ ಶಿಬಿರ— ಮಂಗಳೂರು ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ಷೇತ್ರಕ್ಕೆ ಒಳಪಟ್ಟ ಕಂಕನಾಡಿ ಬಿ, ಜಪ್ಪಿನಮೊಗರು ಬಿ, ಅಳಿಪೆ, ಕಣ್ಣೂರು, ಅಡ್ಯಾರ ಮತ್ತು ಅಕ್ಕಾಳ ಗ್ರಾಮಗಳ ರೈತ ಮುಂದಾಳುಗಳ ತರಬೇತಿ ಶಿಬಿರವು ಕಂಕನಾಡಿ ಹಿಂದೂ ಹಾ. ಎ ಶಾಲೆಯಲ್ಲಿ ತಾ. 14 ರಿಂದ 16ರ ತನಕ ಜರಗಿತು. ಶ್ರೀ ನಯಂಪಳ್ಳಿ ರಾಮರಾಯರು ಶಿಬಿರವನ್ನು ಉದ್ಘಾಟಿಸಿದರು. ಶಿಬಿರದ ಸಮಾರೋಪವು ರಾಜ್ಯ ಅಭಿವೃದ್ಧಿ ಕೌನ್ಸಿಲಿನ ಸದಸ್ಯ ಶ್ರೀ ಬಿ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕೊನೆಯಲ್ಲಿ ಸ್ವಾಗತ ಸಮಿತಿ ಪರವಾಗಿ ಶ್ರೀ ಎನ್. ವಿಶ್ವನಾಥ ಅಳ್ವರು ಧನ್ಯವಾದವಿತ್ತರು.

ವಾರ್ಷಿಕೋತ್ಸವ—ಸ್ಥಳೀಯ ಸರ್ವೋದಯ ಕಲಾವೃಂದದ ದ್ವಿತೀಯ ವಾರ್ಷಿಕೋತ್ಸವವು ತಾ. 17ರಂದು ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವೃಂದದ ಅಧ್ಯಕ್ಷ ಶ್ರೀ ಬಿ. ಸಿ. ಭಟ್ಟರು ಸ್ವಾಗತಿಸಿದರು. ಕೋಶಾಧಿಕಾರಿ ಶ್ರೀ ರಾಧಾಕೃಷ್ಣ ರಾಯರು ವರದಿಯನ್ನೋದಿದರು. ಶ್ರೀ ಸೇವನಸಿಂಗಾಜಮಲ್ಲರು ಭಾಷಣವಿತ್ತರು. ನಾಟಕ, ಸಂಗೀತ ಇತ್ಯಾದಿ ಮನರಂಜನ ಕಾರ್ಯಕ್ರಮಗಳಿಂದ ಉತ್ಸವವು ಕೊನೆಗೊಂಡಿತು.

ಅಧ್ಯಯನ ಗೋಷ್ಠಿ ಉದ್ಘಾಟನೆ-ಬಾಪೂಜೀಯವರ ತತ್ವಗಳನ್ನು ಪ್ರತಿಯೊಬ್ಬನೂ ತಿಳಿದುಕೊಂಡು ಅವುಗಳನ್ನು ಅನುಸರಿಸುವಂತೆ ಮಾಡುವ ಉದ್ದೇಶದಿಂದ ಗಾಂಧೀ ತತ್ವ ಅಧ್ಯಯನ ಗೋಷ್ಠಿಯನ್ನು ತಾ. 17 ರಂದು ಡಾ. ಪಿ. ಜಿ ಗೊಲ್ಲರ ಕೇರಿಯವರು ಉದ್ಘಾಟಿಸಿದರು.

ಆರಂಭದಲ್ಲಿ ಶ್ರೀ ಯು. ಯು. ರಾಮಚಂದ್ರ ರಾಯರು ಸ್ವಾಗತ ಭಾಷಣಮಾಡಿದರು. ಶ್ರೀ ಕೆ. ವಿಶ್ವನಾಥ ಕಾಮತರು ಅಧ್ಯಯನ ಗೋಷ್ಠಿಗಳ ಮಹತ್ವ ಹಾಗೂ ಅವಶ್ಯಕತೆ ಕುರಿತು ಮಾತನಾಡಿದರು. ಅಧ್ಯಯನ ಗೋಷ್ಠಿಗಳ ಡಾ. ಪಿ. ಜಿ. ಗೊಲ್ಲರ ಕೇರಿಯವರು ಅಧ್ಯಕ್ಷರಾಗಿಯೂ ಶ್ರೀ ಎಸ್. ಯು ರಾಮಚಂದ್ರ ರಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಯುವಕ ಕಾಂಗ್ರೆಸ್— ಸ್ಥಳೀಯ ಯುವಕ ಕಾಂಗ್ರೆಸಿನ ಸಭೆಯು ತಾ. 18ರಂದು ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಎಮ್. ಅಳ್ವರು ಮುಖ್ಯ ಭಾಷಣಕರ್ತರಿದ್ದು ವಿಜ್ಞಾನದ ಭಾಷಾ ಜ್ಞಾನದಿಂದ ಮಾತ್ರ ಮುಂದುವರಿಯಬೇಕೆಂದರು. ಶ್ರೀ ಎಮ್. ಎ ಬಾವರ್‌ರವರು ಧನ್ಯವಾದವಿತ್ತರು.

ಅಂಜಾರು.— ಸ್ಥಳೀಯ ಬೋರ್ಡು ಶಾಲೆಯ ಅಧ್ಯಾಪಕರಾಗಿದ್ದ ಶ್ರೀ ಎಮ್. ಭೋಜರಾಜ ಹೆಗ್ಡೆಯವರಿಗೆ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವ ಸಮಾರಂಭವು ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎ ಜಗಂಜೀವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕೆಂಜೂರು—ಇಲ್ಲಿಯ ಪ್ರೌಢ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ತಾ. 10 ರಂದು ಬ್ರಹ್ಮಾವರ ಹಾಸ್ಕೂಲ್ ಹೆಡ್ಮಾಸ್ಟರ್ ಶ್ರೀ ರಾಮಕೃಷ್ಣ ಹಂದೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರು ವರದಿಯನ್ನು ಓದಿದ ಬಳಿಕ ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರ ಸಂದರ್ಭೋಚಿತ ಭಾಷಣವಾಯಿತು. ಶ್ರೀ ಕೆ. ನಾರಾಯಣ ಪೈಗಳು ಮಕ್ಕಳಿಗೆ ತಿಂಡಿ ವಿತರಣೆಮಾಡಿದರು. ಜನಮನರಂಜನ ಕಾರ್ಯಕ್ರಮಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಕೊರ್ಗಿ— ಕುಂದಾಪುರ ತಾಲೂಕು ಕೊರ್ಗಿ ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 4ರಂದು ಸುತ್ತೂರು ದಿ ಮುನ್ಸಿಫ್ ಶ್ರೀ ಕೆ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಸದಾಶಿವ ಹೆಗ್ಡೆಯವರು ವರದಿಯನ್ನೋದಿದರು. ಶ್ರೀ ಎಚ್. ಶಂಕರ ಸೆಟ್ಟರು ಸ್ವಸ್ತಿವಾಚನ ಮಾಡಿದರು. ನಂತರ ವಿನೋದಾವಳಿಗಳಾದುವು.

ಕುದಿಯೂರು—ಇಲ್ಲಿಯ ಪ್ರೌಢ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ತಾ. 12ರಂದು ಉಡುಪಿ ಉತ್ತರ ಶ್ರೇಣಿಯ ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ ಶ್ರೀ ಎನ್. ವಿಶ್ವನಾಥ್, ಅವರ ಅಧ್ಯಕ್ಷತೆಯಲ್ಲಿ ಜರಗಿತು, ಶಾಲಾ ಮೆನೇಜರ್ ಶ್ರೀ ಎ ನಾರಾಯಣ ತಂತ್ರಿಗಳು ಸ್ವಾಗತ ಭಾಷಣಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಪದ್ಮನಾಭ ಭಟ್ಟರು ವರದಿಯನ್ನೋದಿದರು. ಶ್ರೀ ಕೆ. ರಾಮ ಭಟ್ಟರು ಶಾಲಾ ಸ್ವಸ್ತಿವಾಚನವಾಡಿದರು. ಡಾ. ಕೆ. ರಾಮಕೃಷ್ಣ ಭಾಗವತ್, ಶ್ರೀಗಳಾದ ಎನ್. ಕಾಳಪ್ಪ ಜತ್ತನ್ನ ಮತ್ತು ಎ. ವರದರಾಜ ಬಲ್ಲಾಳರು ಕಾಲೋಚಿತ ಮಾತುಗಳನ್ನಾಡಿದರು.

ಮರುದಿವಸ ತಾ. 13ರಂದು ಶಾಲೆಯ ಸಲಿವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಮುಂಬಯಿಯ ರಾಮನಾರಾಯಣ ರೂಯಾ ಕಾಲೇಜ್ ಪ್ರಿನ್ಸಿಪಾಲ್ ಡಾ. ಸಿ. ನ. ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ಪದ್ಮನಾಭ ಭಟ್ಟರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಶ್ರೀಧರ ಸೆಟ್ಟರು ಸಂಘದ ವರದಿಯನ್ನೋದಿದರು. ಶ್ರೀಗಳಾದ ವರದರಾಜ ಬಲ್ಲಾಳ್, ಕೆ. ಕೃಷ್ಣ ತಂತ್ರಿ ಮತ್ತು ಡಾ. ಕೆ. ರಾಮಕೃಷ್ಣ ಭಾಗವತರು ಸಂದರ್ಭೋಚಿತ ಭಾಷಣಮಾಡಿದರು. ನಂತರ ಮನರಂಜನ ಕಾರ್ಯಕ್ರಮಗಳಾದುವು.

ರಂಜಾಳ— ಕಾರ್ಕಳ ತಾಲೂಕು ರಂಜಾಳ ಬೋರ್ಡು ಹಾ ಎ ಶಾಲೆಗೆ ರೂಪಾಯಿ 9000 ವೆಚ್ಚದಿಂದ ಕಟ್ಟಿಸಲಾದ ಹೊಸ ಕಟ್ಟಡವನ್ನು ತಾ. 18ರಂದು ಸಲ್ಲಾ ದಿಕ್ಕುಟಿ ಕಮಿಶನರ್ ಶ್ರೀ ವೈ. ಸಿ. ಹೊಂಬಾಳಯ್ಯರು ಅವರು ಉದ್ಘಾಟಿಸುತ್ತಾ, ಕಟ್ಟಡ ನಿರ್ಮಾಣಕ್ಕೆ ಕಾರಣೀಭೂತರಾದ ಶ್ರೀ ಗೋಪಾಲಕೃಷ್ಣ ಪ್ರಭುಗಳ ಆದರ್ಶ ಸೇವೆಯನ್ನು ಪ್ರಶಂಸಿಸಿದರು.

ಸಮಾರಂಭದ ಅಧ್ಯಕ್ಷತೆವಹಿಸಿದ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಸಿ ಮಂಜಯ್ಯ ಹೆಗ್ಡೆಯವರು ಮಾತನಾಡುತ್ತಾ, ಶಾಲಾ ಕಟ್ಟಡಗಳು ಶಿಕ್ಷಣ ಕಾರ್ಯಕ್ಕೆ ಮಾತ್ರವಲ್ಲದೆ ಸಮಾಜ ಉನ್ನತಿ ಮತ್ತು ಅಭಿವೃದ್ಧಿ ಕಾರ್ಯಗಳ ಕೇಂದ್ರವಾಗಿಯೂ ಇರಬೇಕೆಂದರು. ಆರಂಭದಲ್ಲಿ ಶ್ರೀ ಎಸ್. ಶ್ರೀಧರ ಪಡಿಯಾಳರು ಸ್ವಾಗತಿಸಿದರು. ಶ್ರೀ ಎಮ್. ನೇಮಿರಾಜ ಬಲಿಪರು ಧ್ವಜಾರೋಹಣ ಮಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಎನ್. ಶೇಖರ ಸೆಟ್ಟರು ವರದಿಯನ್ನೋದಿದರು. ಕಾರ್ಕಳ ಪಂಚಾಯತ ಅಧ್ಯಕ್ಷ ಶ್ರೀ ಪಿ. ಎಚ್. ರಘುರಾಮ ರಾವ್, ಶ್ರೀ ಎಸ್. ಜಿ. ಸಾಮ್ರಾಜ್ಯ, ಮತ್ತು ಶ್ರೀ ಬಿ. ಎಸ್. ಭಾಸ್ಕರ ರೈಗಳು ಅನುಕ್ರಮವಾಗಿ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಸ್ವಾಮಿ ವಿವೇಕಾನಂದ ಮತ್ತು ಶ್ರೀ ಎಮ್. ಗೊಪಾಲಕೃಷ್ಣ ಪ್ರಭುಗಳ ಭಾವಚಿತ್ರಗಳನ್ನು ಅನಾವರಣಮಾಡಿದರು.

ಅಂಜಾರು ಹಿರಿಯಡ್ಕ—ಅಂಜಾರು ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 10ರಂದು ಉಡುಪಿ ಬೋರ್ಡು ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಬಿ. ಅನಂತಕೃಷ್ಣ ಶಾಮಕರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಿಗ್ಗೆ ಅಂಜಾರು ಪಟೇಲ್ ಶ್ರೀ ಕೆ. ಶಂಕರ ಹೆಗ್ಡೆರು ರಾಷ್ಟ್ರ ಧ್ವಜನ ಸ್ವೀಕರಿಸಿದರು. ನಂತರ ಶ್ರೀ ರಾಜನ್ ಎಚ್. ಸೆಟ್ಟರ ನೇತೃತ್ವದಲ್ಲಿ ಪಂಚಾಟಿ ಮತ್ತು ಛದ್ಮವೇಷ ಸ್ಪರ್ಧೆಗಳು ಜರಗಿದುವು, ಬಳಿಕ ಶ್ರೀ ಮಂಚಟ್ಟು ವಿಠಲ ಹೆಗ್ಡೆರು ಮಕ್ಕಳಿಗೆ ಸಿಹಿತಿಂಡಿ ಹಂಚಿದರು.

ಸಭಾಧ್ಯಕ್ಷರು ಶಾಲೆಗೆ ನೂತನವಾಗಿ ಕಟ್ಟಿಸಿದ ಸ್ನೇಹಸ್ಥಿ ಉದ್ಘಾಟಿಸಿದರು. ಶ್ರೀ ಎ ವಿಠಲ ಹೆಗ್ಡೆಯವರು ಸ್ವಾಗತ ಭಾಷಣಮಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಜಿ. ಗುರುಪ್ಪನವರು ವರದಿಯನ್ನೋದಿದರು. ಹಿರಿಯಡಕ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎ. ಜಗಂಜೀವ ಹೆಗ್ಡೆಯವರು ಸ್ವಸ್ತಿವಾಚನಮಾಡಿದರು. ಸಭಿಕರ ಪರವಾಗಿ ಶ್ರೀಗಳಾದ ಎಮ್. ಭೋಜ ಹೆಗ್ಡೆ, ಯು. ಸಂಜೀವ ರಾವ್ ಮತ್ತು ಅಪ್ಪಾಜಿ ಪಟೇಲ್ ಎ. ಜೋಗಪ್ಪ ಹೆಗ್ಡೆಯವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷ ಭಾಷಣ ಮನರಂಜನ ಕಾರ್ಯಕ್ರಮಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಕಡೇಶ್ವಾಲ್ಯ— ಕಡೇಶ್ವಾಲ್ಯ ಯುವಕ ಸಂಘದ ಆಶ್ರಯದಲ್ಲಿ ತಾ. 10 ಮತ್ತು 11 ರಂದು ದಕ್ಷಿಣ ಕನ್ನಡ ಜಿಲ್ಲಾ ಕೃಷಿಕ ತರುಣರ ಸಮ್ಮೇಳನವು ಜಿಲ್ಲಾ ಕೃಷಿ ಅಧಿಕಾರಿಗಳ ಸರ್ಸನಲ್ ಅಸಿಸ್ಟಾಂಟ್ ಶ್ರೀ ಕೃಷ್ಣ ಅಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ರಾಜ್ಯತರುಣ ಕೃಷಿಕ ಸಮಾಜದ ಉಪಾಧ್ಯಾಯರ ಹಾಗೂ ರಾಜ್ಯ ಕೃಷಿಕ ಸಮಾಜದ ಗೌರವ ಕಾರ್ಯದರ್ಶಿ ಶ್ರೀ ನರಸಿಂಹಯ್ಯನವರು ಸಮ್ಮೇಳನವನ್ನು ಉದ್ಘಾಟಿಸಿದರು.

ಶ್ರೀ ಕೆ. ಎಮ್. ಮಹಾಬಲ ಸೆಟ್ಟರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಪಿ. ಟಿ ಅಳ್ವ, ಎಚ್. ಸುಬ್ರಹ್ಮಣ್ಯ ಸೆಟ್ಟಿ, ಎಮ್. ಆರ್. ನಾರಾಯಣ್ ಬಿ ಎಸ್. ಕೊಳ್ಳೆ ಮತ್ತು ಆರ್. ಎಮ್.

ಭಾರತೀಯ ಸಂಸ್ಕೃತಿಯ ನವಜಾಗೃತಿ—

ಪ್ರಾದೇಶಿಕ ಭಾಷೆಗಳ ಅಮೂಲ್ಯ ಪರಂಪರೆ

ಪಂಡಿತ ಗೋವಿಂದ ವಲ್ಲಭ ಪಂತ
(ಭಾರತ ಸರಕಾರದ ಗೃಹಮಂತ್ರಿ)

ನಮ್ಮ ಸಂಸ್ಕೃತಿ ಬಹಳ ಸಮೃದ್ಧವಾದದು. ಅದರಲ್ಲಿ ಅಗಾಧವಾದ ವೈವಿಧ್ಯ ಇರುವುದಾದರೂ ಇದರ ಜೊತೆಯಲ್ಲಿಯೇ ಅಧಾರಭೂತವಾದ ಐಕ್ಯ ಹಾಗೂ ಏಕರೂಪತೆಯೂ ಇರುವುದು. ಇತಿಹಾಸದ ಪ್ರತಿಕೂಲಗತಿಯು ನಮ್ಮ ದೃಷ್ಟಿಕೋಣದಲ್ಲಿ ಕೊಂಚಮಟ್ಟಿನ ಸಂಕುಚಿತ ಭಾವನೆಯನ್ನು ತಂದಿತು. ಇದರ ಪರಿಣಾಮವಾಗಿ, ನಮ್ಮ ಸಂಸ್ಕೃತಿಯ ಕಾಂತಿಯು ಕೊಂಚ ಮಟ್ಟಿಗೆ ಕಡಿಮೆಯಾಯಿತು, ಅದರ ಆತ್ಮವೂ ಕೆಲಮಟ್ಟಿಗೆ ದಮನಗೊಂಡಿತ್ತು.

ಸ್ವಾತಂತ್ರ್ಯ ಪ್ರಾಪ್ತವಾದ ನಂತರ, ನಮ್ಮ ಸಂಸ್ಕೃತಿಯಲ್ಲಿ ಆಗಿರುವ ನವಜಾಗೃತಿ ಹಾಗೂ ಅಭಿವೃದ್ಧಿಯು, ಕಳೆದ ಹತ್ತು ವರ್ಷಗಳಲ್ಲಿ ಆದ ಮಹತ್ಸಾಧನೆಗಳಲ್ಲೊಂದು ಎಂದು ನಿಃಸಂದೇಹವಾಗಿ ಹೇಳಬಹುದು. ಆದರೆ ಆಗ ಬೇಕಾದ್ದು ಇನ್ನೂ ಬಹಳವಿದೆ. ಈ ಹಾದಿಯಲ್ಲಿ ನಡೆದ ಆರಂಭ ಕಾರ್ಯಗಳಲ್ಲಿ ದೊರೆತಿರುವ ಸಫಲತೆಯಿಂದ ನಮಗೆ ಪ್ರೋತ್ಸಾಹ ದೊರೆಯುತ್ತಿದೆ

ಪ್ರಾದೇಶಿಕ ಭಾಷೆಗಳು ನಮ್ಮ ಅಮೂಲ್ಯ ಪರಂಪರೆಗಳಾಗಿವೆ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ವೃದ್ಧಿ, ಸಮೃದ್ಧಿ ಹಾಗೂ ರಾಷ್ಟ್ರೀಯ ಐಕ್ಯಕ್ಕಾಗಿ ನಾವು ಈ ಎಲ್ಲಾ ಭಾಷೆಗಳ ಅಭಿವೃದ್ಧಿಯನ್ನು ಮಾಡಬೇಕು ಅವೆಲ್ಲವೂ ಅಭಿವೃದ್ಧಿದಿರೆ ಅವುಗಳಲ್ಲಿ ಅನೇಕ ಒಂದೇ ಮಾತೆಯ ಮಕ್ಕಳಾಗಿರುವುವು ಈ ಪರಿಸ್ಥಿತಿಯಲ್ಲಿ ಯಾವುದೇ ಒಂದು ಭಾಷೆಯನ್ನು ಸಮರ್ಥಿಸುವವರು, ಇತರ ಭಾಷೆಯವರ ವಿರುದ್ಧ ಪ್ರತಿದ್ವಂದ್ವಿಯಷ್ಟೇ—ಅಲ್ಲದೆ ಶತ್ರುತ್ವ ಭಾವವನ್ನು ತಳೆದರೆ ಅದು ಬಹಳ ವಿಷಾದಕರವೆನಿಸುವುದು

ಭಾಷೆಯು ಭೇದಭಾವವನ್ನು ತೊಡೆದು ಹಾಕುವ ಸಾಧನವಾಗಿರುವುದು ಅದು ಯಾವುದೇ ಮಿತಿಗೂ ಒಳಗಾಗಿರುವುದಿಲ್ಲ. ಜ್ಞಾನದ ಮಾತು ಕೇವಲ ಒಬ್ಬರದೇ ಅಲ್ಲ, ಸರ್ವರ ಸ್ವತ್ತಾಗುತ್ತದೆ. ಆದ್ದರಿಂದ ನಾವು ಎಲ್ಲಾ ಭಾಷೆಗಳನ್ನು ಉನ್ನತಗೊಳಿಸಬೇಕು ಈ ರೀತಿಯಲ್ಲಿ ಒಂದು ಭಾಷೆಯಲ್ಲಿನ ಶಕ್ತಿಯು ನ ತ್ತೊಂದು ಭಾಷೆಯನ್ನು ಸಶಕ್ತವನ್ನಾಗಿ ಮಾಡಬಲ್ಲುದು ಈ ವಿಷಯವನ್ನು ನಾವು ತಿಳಿದುಕೊಂಡರೆ, ಯಾರಿಗೂ ಯಾವಾಗಲೂ, ಪರಸ್ಪರ ಭೀತಿ, ಈರ್ಷ್ಯೆ, ಹಾಗೂ ದ್ವೇಷಭಾವನೆ ಬರುವುದಿಲ್ಲ

ಪ್ರತ್ಯಕ್ಷ ರೂಪದಲ್ಲಿ ನಮ್ಮ ಒಂದೊಂದು ಭಾಷೆಯೂ ಇನ್ನೊಂದರಿಂದ ಭಿನ್ನವಾಗಿ ಗೋಚರಿಸುವುದು. ಆದರೆ ಎಲ್ಲ ಭಾಷೆಗಳಲ್ಲಿಯೂ ಒಂದು ವಿಶಿಷ್ಟ ಭಾರತೀಯ ಪ್ರಕೃತಿ ಇರುವುದು. ಭಾಷೆಗಳ ಅಧ್ಯಯನವನ್ನು ಮಾಡುವ ಒಬ್ಬ ವಿದ್ಯಾರ್ಥಿಯು ಹೇಳಿದ ಒಂದು ಮಾತು ನನ್ನ ನೆನಪಿಗೆ ಬರುತ್ತದೆ—ಯಾರಾದರೂ ಮಣಿಪುರದಿಂದ ತಿರುವನಂತಪುರದ ವರೆಗೆ ಒಂದು ಯಾತ್ರೆ ಮಾಡಿದರೆ, ಆಗ ಅವರಿಗೆ ಯಾವುದೇ ಒಂದು ಭಾಷೆಯು ಎಲ್ಲಿ ಮುಕ್ತಾಯಗೊಳ್ಳುತ್ತದೆ ಹಾಗೂ ಇನ್ನೊಂದು ಭಾಷೆ ಎಲ್ಲಿ ಆರಂಭವಾಗುತ್ತದೆ ಎಂಬುದು ತಿಳಿಯುವುದಿಲ್ಲ ಎಂದು ಆ ವಿದ್ಯಾರ್ಥಿ ಹೇಳಿದರು

ಅಂದರೆ, ನಮ್ಮ ಭಾಷೆಗಳ ವಿಕಾಸವು ಒಂದು ಸಮಾನವಾದ ಆಕರದಿಂದ ಆಗಿರುವುದು ಆದ್ದರಿಂದ ನಾವು ಅವುಗಳ ವಿಶೇಷತೆಯನ್ನು ಅಚ್ಚಳಿಯದಂತಿಟ್ಟುಕೊಳ್ಳುವಾಗ, ಸಾದೃಶ್ಯವಾದಷ್ಟು ಒಂದು ಭಾಷೆಯ ಸೌಂದರ್ಯಾನುಭೂತಿಯನ್ನು ಇತರ ಭಾಷೆಯ ಜನರು ಸಹ ಹೊಂದುವಂತೆ ಮಾಡಬೇಕು ಅಭಿವ್ಯಕ್ತಿಯ ರೂಪ ಹಾಗೂ ಸಾಧನೆಯನ್ನು ಬಿಟ್ಟರೆ ನಮ್ಮ ದೇಶದ ಮೂಲಭೂತ ಸಂಸ್ಕೃತಿ ಒಂದೇ ಆಗಿರುವುದು. ನಮ್ಮ ಪರಂಪರೆ, ನಮ್ಮ ಕಥಾನಕಗಳು, ಕಾದಂಬರಿಗಳು, ನಮ್ಮ ಗೀತೆಗಳು, ಸಿದ್ಧಾಂತಗಳು ಇವೆಲ್ಲವೂ ಬಹುಮಟ್ಟಿಗೆ ಒಂದೇ ಲಕ್ಷಣವನ್ನು ಹೊಂದಿರುವುವು. ಇಂತಹ ಸ್ಥಿತಿಯಲ್ಲಿ ಒಂದು ಭಾಷೆಯಲ್ಲಿ ಪ್ರಕಟಗೊಂಡ ಬಾವನೆ ಹಾಗೂ ವಿಚಾರಗಳನ್ನು ಇತರ ಭಾಷೆಯವರು ಯಾವ ತೊಂದರೆಯೂ ಇಲ್ಲದೆ ಗ್ರಹಿಸುತ್ತಾರೆ

ನಮ್ಮ ದೇಶದಲ್ಲಿ ಸ್ರತಿಯೊಬ್ಬ ವ್ಯಕ್ತಿಯೂ ಮೂರು ಭಾಷೆಗಳನ್ನು ಕಲಿಯಬಾರದೇಕೆ? ಎಂಬುದಕ್ಕೆ ಕಾರಣವೇನೂ ನನಗೆ ತಿಳಿಯದು ಬಾಲಕರು ಯುವಕರು ಹಾಗೂ ವೃದ್ಧರು ಎಲ್ಲರೂ ತಮ್ಮ ಪ್ರಾದೇಶಿಕ ಭಾಷೆಯನ್ನು ಪೂರ್ಣವಾಗಿ ಕಲಿತಿರಬೇಕು. ಹಿಂದಿ ಭಾಷೆಯ ಕ್ಷೇತ್ರದಲ್ಲಿರದವರು ಹಿಂದಿಯನ್ನು ಕಲಿಯಬೇಕು. ಅದರಂತೆ ಹಿಂದಿ ಭಾಷಾ ಕ್ಷೇತ್ರದಲ್ಲಿರುವವರೆಲ್ಲರೂ ಆಧುನಿಕ ಭಾರತೀಯ ಭಾಷೆಯೊಂದನ್ನು ಕಲಿಯಬೇಕು ಇದಲ್ಲದೆ, ಅವರೆಲ್ಲರೂ, ಒಂದು ವಿದೇಶೀ ಭಾಷೆಯನ್ನೂ ಕಲಿಯಬೇಕು ಏಕಂದರೆ, ವಿಶ್ವವು ಒಂದೇ ಕೇಂದ್ರವಾಗಿ ಬೆಳೆಯುತ್ತಿದೆ, ನಾವು ಭೂಮಂಡಲಕವಾಗಿರಲು ಅವೇಕ್ಷಿಸುವುದಿಲ್ಲ

ಪ್ರಪಂಚದ ಇತರ ಆಧುನಿಕ ಭಾಷೆಗಳಲ್ಲಿ ಲಕ್ಷಾಂತರ ಪುಸ್ತಕಗಳಿರುವುವು ಸಾವಿರಾರು ಲೇಖಕರಿರುವರು. ಅವರೆಲ್ಲ ಈ ಎಲ್ಲೂ ಕೃತಿಗಳ ಮೂಲಕ ಬಾಷೆಯ ಕೋಶವನ್ನು ತುಂಬುತ್ತಿರುವರು ನಾವು ಇದುವರೆಗೂ ಈ ಕೊರತೆಯನ್ನು ನಿವಾರಿಸಬೇಕಾಗಿದೆ ಗ್ರಂಥ ಭಂಡಾರದ ಸಂಪುಟಗಳನ್ನು ಹಚ್ಚಿಸುವುದರಿಂದ ಸಾಧ್ಯವೆಂಬುದು ನಿಜ ಆದರೆ ಕೇವಲ ಸಂಪುಟ ಹಚ್ಚುವುದರಿಂದಲೇ ಎಲ್ಲವೂ ಆಗಲಾರದು ಗುಣ ಸಂವರ್ಧನೆಯ ಮಾರ್ಗ ವರೆವಿಗೂ ನಮ್ಮ ಲೇಖಕರು ಮತ್ತು ಅವರ ವಿಧಾಯಕ ಶಕ್ತಿ ಹೇಗೆ ಅಧಿಕಗೊಳ್ಳಬಹುದು ಈ ಸಂಬಂಧವಾಗಿ, ರವೀಂದ್ರ ಬಾಬುಗಳ ಹೆಸರು ಉಲ್ಲೇಖನೀಯವಾಗಿದೆ. ಆದ್ದರಿಂದ ನಾವು ಸಂಪುಟದ ಜೊತೆಗೇ ಗುಣಾಂಶ ಸಂವರ್ಧನೆಯ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ನಾವು ಕೇವಲ ಸಹಕಾರದಿಂದಲೇ ಮುಂದೆ ಸರಿಯಬಲ್ಲೆವು. ಈ ರೀತಿಯಲ್ಲಿ ಒಂದು ಭಾಷೆಯಲ್ಲಿ ಆದ ಪ್ರಗತಿಯ ಪ್ರಭಾವವು ನ ತ್ತೊಂದು ಭಾಷೆಯ ಮೇಲೆ ಬೀರದೆ ಇರದು ಒಂದು ಭಾರತೀಯ ಭಾಷೆಯಿಂದ, ಇನ್ನೊಂದು ಭಾರತೀಯ ಭಾಷೆಗೆ ಅನುವಾದ ಮಾಡುವುದು ವಿದೇಶೀ ಭಾಷೆಯಿಂದ ಅನುವಾದ ಮಾಡುವದಕ್ಕಿಂತ ಸುಲಭವಾದುದು ಇದೇ ರೀತಿ ವಿದೇಶೀ ಭಾಷೆಗಳನ್ನು ಕಲಿಯುವುದಕ್ಕಿಂತ ನಮ್ಮ ದೇಶದ ಇತರ ಭಾಷೆಗಳನ್ನು ಕಲಿಯುವುದು ಸುಲಭವಾದುದು

ನಾವು ಇಂಗ್ಲೀಷನ್ನು ಹೆಚ್ಚಿನ ಗಮನದಿಂದ ಕಲಿತಿದ್ದೇವೆ ಇದನ್ನು ಕಲಿಯತೊಡಗಿ ಎಷ್ಟೋ ವರ್ಷಗಳಾಗಿವೆ. ಅದಾಗ್ಯೂ ಸಹ ಇದರಲ್ಲಿ ನಾವು ಅನೇಕ ತಪ್ಪುಗಳನ್ನು ಮಾಡುತ್ತೇವೆ ಆ ರೀತಿ ಯಾರೂ ಮಾಡದಿದ್ದರೆ ಅದು ಆಶ್ಚರ್ಯವೇ ಆದೀತು. ಇದಕ್ಕೆ ಕಾರಣ ನಾವು ವಿದೇಶೀ ಭಾಷೆಯ ಸಂಬಂಧವಿರುವ ವರೆಗೂ ಆ ಭಾಷೆಯ ನಿಯಮಗಳಿಗೆ ಬದ್ಧರಾಗಿರುತ್ತೇವೆ ಆ ಬಾಷೆಯವರೇ ಆ ನಿಯಮಗಳನ್ನು ರಚಿಸಿರುವರು ಆದರೆ ನಮ್ಮ ಭಾಷೆಯಲ್ಲಿ ನಾವು ನಮಗೆ ಬೇಕಾದ ಹಾಗೆ ಮಾತನಾಡಬಹುದು ಅದರಲ್ಲಿ ತಪ್ಪಾಗುವುದಿಲ್ಲ. ನಮ್ಮ ಭಾಷೆಯ ಜಿಜ್ಞಾಸವನ್ನು ಅಭಿವೃದ್ಧಿಪಡಿಸುವುದು ಸುಲಭ. ನಮ್ಮ ಭಾಷೆಯಲ್ಲಿಯೇ ಸಂಸ್ಕೃತಿಯ ಮೂಲಭೂತ ಮಾತುಗಳನ್ನು ಗ್ರಹಿಸುವುದು ಮತ್ತು ಆಡುವುದು, ವಿದೇಶೀ ಭಾಷೆಗಳಿಗಿಂತ ಸುಲಭವಾದುದು.

ಆದ್ದರಿಂದ ನಾವು ಭಾರತೀಯ ಭಾಷೆಗಳಿಜ್ಞಾನನ್ನು ನಮ್ಮವರಿಗೆಗೊಳಿಸಬೇಕು ಅವೆಲ್ಲವನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸಬೇಕು ಅಂತಹ ಸಮಯಗಳಲ್ಲಿ ನಮ್ಮ ಈ ಕಾರ್ಯದಿಂದ ದೇಶದ ಐಕ್ಯವು ವೃದ್ಧಿಯಾಗುವುದೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡಿರಬೇಕು.

ಭಾರತದ ವಿಶ್ವವಿದ್ಯಾಲಯ ಕಾಂಚೇಜಿನ ಪ್ರಿನ್ಸಿಪಾಲ್ ಡಾ. ಆರ್ ಎಚ್. ಸ್ಪೈಗ್ಲನ (ಎಡಕಕ್ಕೆ) ರು ಲಂಡನ್ ವಿಶ್ವವಿದ್ಯಾಲಯದ ಯುಸ ರಿಜಿಸ್ಟ್ರಾರ್ ಡಬ್ಲ್ಯೂ ಜಿ ಸೆವಲ್ (ಬಲಕಕ್ಕೆ)ರೊಡನೆ ೧೯೫೮ರ ಅಕ್ಟೋಬರದಿಂದ ಭಾರತದಲ್ಲಿ ತೆರೆಯಬೇಕೆಂದಿರುವ ನ್ಯಾಯಶಾಸ್ತ್ರ ಕಾಲೇಜಿನ ಕುರಿತು ವಿಚಾರವಿನಿಮಯ ನಡೆಸುತಿದ್ದಾರೆ

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ, ಎಲ್‌ಎಲ್ ಬಿ, ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ತೃಪೆಯಿಂದ ಹಾಗು ಸತ್ಯ ವರ್ತನೆಯಿಂದ ಪರಿಹಾರವಾಗುವವೆಂಬದು ಕಥಾರಹಸ್ಯದ ಮೂಲಕ ವ್ಯಕ್ತಪಾಡಲ್ಪಟ್ಟಿವೆ ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ-ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿವೆ ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರೂಢ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ ಬೆಲೆ ರೂ 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

How Ayurveda is Misconstrued in the Land — Author and the Publisher: Dr. I. K. P. Sharma, A. M. A C., Mangalore-3. Pages: 30 Price: Rs. 0·25.

ಭಾರತೀಯ ಆಯುರ್ವೇದ ಪ್ರಕಾಶನ ಮಾಲೆಯ ಐದನೆಯ ಪುಷ್ಪವಾಗಿ ಈ ಪುಸ್ತಕವು ಪ್ರಕಾಶಗೊಂಡಿದೆ. ನುರಿತ ಹಲವಾರು ವರ್ಷಗಳಿಂದ ವೈದ್ಯಕೀಯ ವೃತ್ತಿಯಲ್ಲಿ ಬಳಕೆಗಿದೆ ಡಾ. ಶರ್ಮರು ಆಯುರ್ವೇದಕ್ಕೆ ಸಂಬಂಧಿಸಿದ ಸಾಲ್ಕು ಗ್ರಂಥಗಳನ್ನು ಕನ್ನಡದಲ್ಲಿ ಬರೆದಿದ್ದು ಇದೀಗ ಅಂತಯದೇ ಒಂದನ್ನು ಆಂಗ್ಲ ಭಾಷೆಯಲ್ಲಿ ರಚಿಸಿದ್ದಾರೆ. ಆಯುರ್ವೇದದ ಬಗ್ಗೆ ಜನತೆಯಲ್ಲಿ ತಿರಸ್ಕಾರದ ಭಾವನೆಯು ಮೂಡಲಿರುವ ಕಾರಣ, ಆಯುರ್ವೇದದ ಹಿರಿಮೆ ಮತ್ತು ಪ್ರಾಚೀನತೆಗಳು ವೈದ್ಯಕೀಯ ಪದ್ಧತಿಗಳಲ್ಲಿ ಶುದ್ಧಾಯುರ್ವೇದದ ಸ್ಥಾನಮಾನಗಳಲ್ಲವನ್ನೂ ಪ್ರತ್ಯೋತ್ತರ ವಿಧಾನದಲ್ಲಿ ಇಲ್ಲಿ ಚರ್ಚಿಸಲಾಗಿದೆ. ಅಲ್ಲದೇ ಆಯುರ್ವೇದವು ನಿರ್ಲಕ್ಷಿಸಲ್ಪಡುವುದಕ್ಕೆ ಮೂಲಕಾರಣವನ್ನು ನಿವೇದಿಸುತ್ತ ಸರಕಾರವು ಈ ದಿಸೆಯಂತ್ತ ಮಂಲತಾಯಿ ಧೋರಣೆಯನ್ನು ತೋರಿಸುತ್ತಿರುವುದೆಂದೂ, ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ 'ಆಯುರ್ವೇದ'ದ ಬಗ್ಗೆ ಪ್ರತ್ಯೇಕ ಮಂತ್ರಿ ಖಾತೆಗಳಿಲ್ಲದಿರುವುದು, ಆಯುರ್ವೇದವೆಂದರೆ ಮೂಗು ಮುರಿಯುವ ಅಲೋಪಥಿ ವೈದ್ಯ ಪ್ರಮುಖರ ಸಲಹೆ ಹಾಗೂ ಮಾರ್ಗದರ್ಶನದಂತೆ ಈ ಮಂತ್ರಿಗಳು ನಡೆಯುತ್ತಿರುವುದೇ ಕಾರಣವೆಂದು ಸಿದ್ಧಾಂತಿಸಿ, ಹೀಗಾದಲ್ಲಿ ಕೆಲವೇ ದಶಕಗಳಲ್ಲಿ ಆಯುರ್ವೇದ ವೈದ್ಯಕೀಯ ಕೃಷುವು ನಾಮಾವಶೇಷವಾಗುವುದೆಂದು ಎಚ್ಚರಿಸಿದ್ದಾರೆ. ಸರ್ವ ವಿಧದಲ್ಲೂ ಈ ಪದ್ಧತಿಯು ಗೌರವಾರ್ಹವೆಂದೂ, ಆಧುನಿಕ ವೈಜ್ಞಾನಿಕ ಸಂಶೋಧನೆಗಳಲ್ಲಿ ವೈದ್ಯಕೀಯುವಾದುವು ಕೇವಲ ಅಲೋಪಥಿಗೆ ನಿರಸಲಾದುವಲ್ಲವೆಂದೂ ನೂತನ ಸಂಶೋಧನೆಗಳನ್ನು ಮಾಡುವುದಕ್ಕೆ ವೈದ್ಯರಿಗೆ ಸ್ವಯಂಶಕ್ತಿಯಿಲ್ಲವಾದುದರಿಂದ ಸರಕಾರವೇ ಇದಕ್ಕೆ ಪ್ರೋತ್ಸಾಹ ನೀಡಬೇಕೆಂಬುದನ್ನೂ ಯಥೋಚಿತವಾಗಿ ನ್ಯಾಯನ್ಯಾಗಿ ಸಾಧಿಸಿದ್ದಾರೆ. ಈ ವಿಷಯಗಳಲ್ಲವನ್ನೂ ತೆರಳಿಸುವ ಒಟ್ಟು ೧೩ ಪ್ರಶ್ನೆಗಳಿದ್ದು, ಅವುಗಳಿಗೆ ಸಮರ್ಪಕವಾದ ಉತ್ತರಗಳನ್ನು ಇಲ್ಲಿ ಕೊಟ್ಟಿದ್ದಾರೆ.

ಡಾ. ಶರ್ಮರು ಆಯುರ್ವೇದದ ಪತಿತ ಸ್ಥಾನವನ್ನು ಅದಕ್ಕೆ ಮುನ್ನ ಒದಗಿಸಿಕೊಡಲು ಈ ವಿಷಯದತ್ತ ಜನರ ಗಮನವನ್ನು ಸೆಳೆಯಲು ಬದ್ಧ ಕಂಕಣರಾಗಿರುವಂತೆ ಕಂಡುಬರುತ್ತದೆ. ಅವರ ವಿದ್ವತ್ಪೂರ್ಣವಾದ ಪ್ರತಿವಾದಗಳು ಗ್ರಂಥವನ್ನು ಓದುವ ಆತುರವನ್ನು ಹೆಚ್ಚಿಸುತ್ತವೆ. ಡಾ. ಶರ್ಮರವರು ಈ ಗ್ರಂಥದಲ್ಲಿ ಸೂಚಿಸಿದ ವಿಷಯಗಳು ಸತ್ಯತೆಗೆ ದೂರವಾಗಿರುವುದಿಲ್ಲ. ಆಸವ ಮತ್ತು ಅರಿಷ್ಟಗಳ ಸಂಬಂಧದಲ್ಲಿನ ನಿರ್ಬಂಧನೆಗಳ ಸುರಿಯಾದ ವಿವಾದಗಳು ಈಗಾಗಲೇ ನಡೆದಿದ್ದರೂ ಆ ಕಡೆಗೆ ಸಂಬಂಧಿಸಿದವರ ದೃಷ್ಟಿ ಹರಿದಿರುವಂತೆ ತೋರಿಬರುತ್ತಿಲ್ಲ. ಇದನ್ನು ನೆನೆಯುವಾಗ ಇಂತಹ ಗ್ರಂಥಗಳ ಪ್ರಕಟಣೆ-ಸತ್ಯ ಸಂಗತಿಗಳ ವಿವೇಚನೆ-ಘೋಷಣೆಗಳು ಅಗಣ್ಯ ದೋಷದೆನದಂತೆಯೇ ಆಗಬಹುದು? ಎಂಬ ಸಂದೇಹವೇಳುತ್ತದೆ. ಆದರೂ ಇಂತಹ 'ಚಳವಳಿ'ಯಿಂದಲಾದರೂ ಜನತೆ ಎಚ್ಚತ್ತಿತೆ ಎಂದು ಒಂದಲ್ಲ ಒಂದು ದಿನ ಅಧಿಕಾರಿಗಳ ಕರ್ಣಪಟಲಗಳಿಗೂ ಬಿದ್ದು ಆಯುರ್ವೇದ ತನ್ನ ಉನ್ನತ ಸ್ಥಾನವನ್ನು ಪಡೆಯಬಹುದೆಂಬ ಆಸೆ ಮತ್ತು ಅಭಿಲಾಷೆಯಿಂದ ಡಾ. ಶರ್ಮರ ಈ ಸುಟ್ಟ ಅಮೂಲ್ಯ ಗ್ರಂಥವನ್ನು ಸ್ವಾಗತಿಸುತ್ತೇವೆ. ಡಾ. ಶರ್ಮರು ತಾವು ಕೈಗೊಂಡ ಮಹತ್ಕಾರ್ಯದಲ್ಲಿ ಕೃತಕಾರ್ಯರಾಗಲಿಯೆಂದು ಪ್ರಾರ್ಥಿಸುತ್ತೇವೆ.

The Udipi Low College Magazine (Annual Number, 1958; Vol· I) Editor: Sri K· B· Ramakrishna Rao. Pages: 105+21.

ಉಡುಪಿಯಲ್ಲಿ ಕಳೆದ ವರ್ಷ ತಾನೇ ಸ್ಥಾಪಿತವಾದ ಲಾ ಕಾಲೇಜಿನ ಪತ್ರಿಕೆಯ ಪ್ರಥಮ ಸಂಪುಟವನ್ನು ಸ್ವಾಗತಿಸಿಲು ಸಂತೋಷವೆನಿಸುತ್ತದೆ. ಬಾಹ್ಯ ಸೌಂದರ್ಯದೊಂದಿಗೆ ಅಂತರಿಕ ಮಾಧುರ್ಯದಿಂದ ಕೂಡಿದ ಈ ಸಂಪುಟವನ್ನವಲೋಕಿಸುವಾಗ ಮಧುರ ಸಮಯದಂತೆಯೇ ಭಾಸವಾಗುತ್ತದೆ. ಕಾಲೇಜಿನ ಪ್ರಾಧ್ಯಾಪಕರು ಹಾಗೂ ಇತರ ನ್ಯಾಯಶಾಸ್ತ್ರ ಜಿಜ್ಞಾಸುಗರು ಲೇಖನಗಳೊಂದಿಗೆ ಅಭ್ಯಾಸಿಗಳ ಕೃತಿಗಳೂ ಇಲ್ಲಿ ಬೆಳಕು ಕಂಡಿವೆ. ಕೇವಲ ಆಂಗ್ಲ ಭಾಷೆಯಲ್ಲದೇ ಪ್ರಾದೇಶಿಕ ಭಾಷೆಯಾದ ಕನ್ನಡವೂ ಈ ಸಂಪುಟದಲ್ಲಿ ಸ್ಥಾನವನ್ನು ಪಡೆದುದು ಸ್ವಾಗತಾರ್ಹವೇ ಆಗಿದೆ. ನ್ಯಾಯ ಶಾಸ್ತ್ರವನ್ನು ಬೋಧಿಸುವ ಕಲಾಶಾಲೆಯ ಪತ್ರಿಕೆಯಲ್ಲಿ ಕೇವಲ ನ್ಯಾಯ ಶಾಸ್ತ್ರಕ್ಕೆ ಸಂಬಂಧಿಸದ ಕೃತಿಗಳಲ್ಲದೇ ಪ್ಲೇಟೋನ ತತ್ತ್ವನಾದ, ಅಳಿಯ ಸಂತಾನ ಪದ್ಧತಿ, ಭಾರತವು ಸಂಘಟಿತ ರಾಜ್ಯವೇ, 'ಬಂಟ' ಜಾತಿಯ ವೈಶಿಷ್ಟ್ಯ, ಭಾರತದಲ್ಲಿ ಭಾಷಾ ಸಮಸ್ಯೆ ಮೊದಲಾದ ವಿಷಯಗಳ ಬಗ್ಗೆಯೂ ಇಂಗ್ಲಿಷ್ ಭಾಷೆಯಲ್ಲಿ ಲೇಖನಗಳು ಇವೆ. ಕನ್ನಡ ವಿಭಾಗದಲ್ಲಿ ಕೇವಲ ಸಾಲ್ಕು ಲೇಖನಗಳಿದ್ದು ಅವೂ ಮಾಹಿತಿಯನಿವೆ. ಹೀಗೆ ನಾನಾ ವಿಭಾಗ ಲೇಖನಗಳೊಂದಿಗೆ ಕಾಲೇಜಿನ ಸದಸ್ಯರು ಮತ್ತು ಸ್ನೇಹಿತರ ಚಿತ್ರಗಳನ್ನೂ ಕಲಾಶಾಲೆಗಳ ಪಟ್ಟಗಳೂ ಸೇರಿವೆ. ಕಾಲೇಜಿನ ಪ್ರಧಾನರು ಹಾಗೂ ಜಟುಪಟುಕಗಳ ಹಲವು ಚಿತ್ರಗಳೂ ಇದರಲ್ಲಿವೆ. ಈ ಸಂಗ್ರಹದಲ್ಲಿ ಪದ್ಯಕೃತಿಯೊಂದೇ ಇರುವುದನ್ನೂ, ಕನ್ನಡದಲ್ಲಿ ಕವಿತೆಗಳೇ ಇಲ್ಲದೆ ಇರುವುದನ್ನೂ ಗಮನಿಸದೆ ಬಿಡುವಂತಿಲ್ಲ. ಕಾಲೇಜಿನ ಪ್ರಧಾನ ಸಂಪುಟವಾದ ಇದನ್ನು ಕಾಲೇಜಿನ ಪ್ರವರ್ತಕರಾದ ಎಳೆಹೆಮ್ಮಾಡಿ ಶ್ರೀಸ್ವಾರ ಡಾ. ಮಾಧವ ವೈಯೆಂಗಾರಿ ಅವರ ಪಕ್ಷ್ಯಬ್ದಿ ಪೂರ್ತಿಯ ನೆನಪಿಗಾಗಿ ಅರ್ಪಿಸಿದುದು ನ್ಯಾಯೋಚಿತವೇ ಆಗಿದೆ. ಈ ಸಂಪುಟವನ್ನು ಸರ್ವಾಂಗ ಸುಂದರವಾಗಿ ಸಂಯಾದಿಸಿದ ಸಂಪಾದಕ ಶ್ರೀ ಕೆ. ಬಿ. ಯವರ ಕಲಾ ಪ್ರಿಯತೆಯನ್ನು ಸಂಪುಟದ ಒಳಗೂ ಹೊರಗೂ ನೋಡಬಹುದು. ಪತ್ರಿಕಾ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷರು ಹಾಗೂ ಇತರ ಸದಸ್ಯರನ್ನು ನಾವು ಪೂರ್ವಾಪರಕವಾಗಿ ಅಭಿನಂದಿಸಿ ಮುಂದಿನ ವರ್ಷಗಳಲ್ಲಿ ಇದಕ್ಕಿಂತಲೂ ಆದರ್ಶಸಹಿತವಾದ ಸಂಪುಟಗಳನ್ನು ನಿರೀಕ್ಷಿಸಿಗೊದಗಿಸಲೆಂದು ಹಾರೈಸುತ್ತೇವೆ.

—ಗೋರಾ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಮೊಗಲಸಾಮ್ರಾಟರು ಕಲಾವಿದರಿದ್ದರು!

ಸಾಹಿತ್ಯ ಕಲೆಗಳ ಅಮರ ಕೃತಿಗಳು

(ಶ್ರೀ ಉ. ನಾರಾಯಣ ಬಲ್ಲಾಳ.

ಮೊಗಲ ಸಾಮ್ರಾಟರು ಮತ್ತು ರಾಜಕುಮಾರರು ಜನ್ಮದಿಂದಲೇ ಸಾಹಿತ್ಯ ಮತ್ತು ಕಲೆಯ ಮರ್ಮಜ್ಞರಾಗಿದ್ದರು. ಅವರು ಉಚ್ಚ ಕೋಟಿಯದಾದ ಸಂಗೀತ, ಕಾವ್ಯ, ನಾಟಕಾದಿಗಳ ಪ್ರಶಂಸೆಯನ್ನಷ್ಟೇ ಅಲ್ಲದೆ, ಅವುಗಳ ಮೂಲ್ಯಾಂಕನವನ್ನು ಕೂಡಾ ಮಾಡುತ್ತಿದ್ದರು. ಕುರಾಣ ಕಂಠಸ್ಥವಿರುವ ಮುಸಲ್ಮಾನರನ್ನು, ಪ್ರಾಯಸ್ಥರಾದವರನ್ನು, ವಿವಾಹಿತರನ್ನು, ತುರ್ಕಿಸ್ಥಾನದವರನ್ನು ಇವರು ಯಾವಾಗಲೂ ಆದರಿಸುತಿದ್ದರು. ಪ್ರತಿಯೊಬ್ಬ ವಿದ್ಯಾಪ್ರೇಮಿಯು-ಆತ ವೈಜ್ಞಾನಿಕನಾಗಿರಲಿ, ಕಲಾಕಾರನಾಕಲಿ—ದಾರ್ಶನಿಕನಾಗಿರಲಿ, ಪದಾರ್ಥ ವಿಜ್ಞಾನಿಯಾಗಿರಲಿ— ಮೊಗಲ ದರ್ಬಾರನ್ನು ಬಹಳ ಸುಲಿಭದಲ್ಲಿ ಪ್ರವೇಶಿಸುತ್ತಿದ್ದ.

ಮೊಗಲ ಸಾಮ್ರಾಟರಾದ ಬಾಬರ, ಹುಮಾಯೊನ್ ಮತ್ತು ಜಹಾಂಗೀರ್— ಇವರು ಕವಿಗಳಾಗಿದ್ದರು. ಬಾಬರನು ತುರ್ಕಿ ಹಾಗೂ ಫಾರಸಿ ಭಾಷೆಯಲ್ಲಿ ಉತ್ತಮ ರೀತಿಯ ಕೃತಿಗಳನ್ನು ರಚಿಸಿದ್ದಾನೆ. ಸಂಗೀತದಲ್ಲಿ ಆತ ನಿಪುಣನಾಗಿದ್ದ-ಅಲ್ಲದೆ ಸುಲೇಖದ ಪ್ರೇಮಿಯಾಗಿದ್ದ. ಆತನು 'ಖತೇ-ಬಾಬರೀ' ಎಂಬ ಹೆಸರಿನ ಹಸ್ತಲೇಖದ ಒಂದು ವಿಶಿಷ್ಟ ಶೈಲಿಯನ್ನು ಕೂಡಾ ಜ್ಯಾರಿಗೆ ತಂದನು.

ಹುಮಾಯೂನನ ಕಾವ್ಯ ರಚನೆಗಳು ಅಕ್ಬರನ ರಾಜ್ಯ ಪುಸ್ತಕಾಲಯದಲ್ಲಿ ಸುರಕ್ಷಿತವಾಗಿದ್ದುವು. ಹುಮಾಯೂನನು ಕೇವಲ ಕವಿಯಷ್ಟೇ ಅಲ್ಲ. ಆತನು ಜ್ಯೋತಿಷ, ಗಣಿತ ಮತ್ತು ಪದಾರ್ಥ ವಿಜ್ಞಾನದಂತಹ ಕಠಿಣ ವಿಷಯಗಳಲ್ಲಿ ಪಾರಂಗತನಾಗಿದ್ದನು. ಪವಿತಯಿಂದ ಹುಟ್ಟಿದ ಈತನ ಸಹೋದರನಾದ ರಾಜಕುಮಾರ ಕಾಮರಾನ್ ಓರ್ವ ಉಚ್ಚ ಶ್ರೇಣಿಯ ಕಲಾಕಾರನಾಗಿದ್ದ. ಈತನ ರಚನೆಗಳು ಪಾಟ್ನಾದ 'ಖುದಾ ಬಕ್ಷ್ ಪುಸ್ತಕಾಲಯ'ದಲ್ಲಿ ಸುರಕ್ಷಿತವಾಗಿವೆ.

ಸಾಮ್ರಾಟ್ ಅಕ್ಬರನು ಕಲೆ ಮತ್ತು ಸಾಹಿತ್ಯದ ಉತ್ತಮ ಉಪಾಸಕನಾಗಿದ್ದನು. ಉಮರ ಖಯ್ಯಾಂನ ಕಾವ್ಯಗಳ ಕುರಿತು ಈತನ ಭಾವನೆ ಬಹಳ ಮೇಲ್ಮಟ್ಟದಾಗಿತ್ತು.

ಅಬುಲ್ ಫಜಲ್, ನಿಜಾಮುದ್ದೀನ್—ಮೊದಲಾದ ಪ್ರಮುಖ ಜೀವನ ಚರಿತ್ರೆ ಲೇಖಕರು ಫಾರಸಿಯಲ್ಲಿ ತಮ್ಮ ಸಮಯದ ಅನೇಕ ಪ್ರಾಮಾಣಿಕ ವಿವರಣೆಗಳನ್ನು ಬರೆದರು. ಅಕ್ಬರೀ ದರ್ಬಾರ್ನ-ಈ ಮಹಾಕಾವಿ ತನ್ನ ಕಾವ್ಯ ಮರ್ಮಜ್ಞತೆಗಾಗಿ ಪ್ರಸಿದ್ಧನಾಗಿದ್ದ ಸಾಹಿತ್ಯದ ಅಮರ ಕೃತಿಯಾದ "ಐನೀ ಅಕ್ಬರಿ" ಎಂಬ ಗ್ರಂಥವನ್ನು ಏಳು ವರ್ಷಗಳ ಅಧಿಕ ಪರಿಶ್ರಮದ ಬಳಿಕ ಅಬುಲ್ ಫಜಲನು ಬರೆದುದಾಗಿದೆ.

ಅಕ್ಬರನ ಕಾಲವನ್ನು "ಸಾಹಿತ್ಯ ಮತ್ತು ಕಲೆಯ ಸುನರುತ್ಥಾನದ ಯುಗ" ವೆಂದು ಕೇಳಬಹುದು. ಆತನ ದರ್ಬಾರಿನ ನವರತ್ನ ಪಂಡಿತರು ಈ ಮಾತಿಗೆ ಪ್ರಮಾಣಂಗಾಗಿದ್ದಾರೆ.

ಸಾಮ್ರಾಟ ಅಕ್ಬರನು ತನ್ನ ಅಶಿಕ್ಷಿತತೆಯ ಕುರಿತು ಲಜ್ಜಿತನಾಗಿರಲಿಲ್ಲ. ಆತನ ಅದ್ಭುತ ಸ್ಮರಣಶಕ್ತಿ ಹಾಗೂ ಅನುಭವಜನ್ಯ ಜ್ಞಾನದಿಂದ ಆತನ ಓದುವಿಕೆ-ಬರೆಯುವಿಕೆ ಪೂರ್ತಿಯಾಗುತ್ತಿತ್ತು. 'ಪ್ರತಿಯೊಬ್ಬ ಪೈಗಂಬರನೂ ಅಶಿಕ್ಷಿತನಾಗಿದ್ದ' ಎಂಬ ದು ಆತನ ಸಿದ್ಧಾಂತ. ಇದು ಆತನ ಉಲ್ಲಾಸಕ್ತ ಭಾವನೆಗೆ ಪುಷ್ಟಿ ಕೊಡುತ್ತದೆ. ಶಾಸ್ತ್ರದ ಸಾಮಾನ್ಯ ಅರ್ಥದಲ್ಲಿ ಅಶಿಕ್ಷಿತನಾಗಿದ್ದರೂ ಅಕ್ಬರನ. ತನ್ನ ಸಮಯದ ಧರ್ಮಾಚಾರ್ಯರುಗಳಿಗಿಂತ ಅಧಿಕ ವಿದ್ವಾಂಸನಾಗಿದ್ದ. ಕೆಲವೊಮ್ಮೆ ಆತನು ಪ್ರದರ್ಶಿಸುತ್ತಿದ್ದ ಉತ್ತಮ ಸೌಂದರ್ಯ ವೃತ್ತಿಯನ್ನು ನೋಡಿ, ಆತನ ದರ್ಬಾರಿನ ಪ್ರತಿಭಾಶಾಲಿ ವಿದ್ವಾಂಸರು ಕೂಡಾ ದಂಗುಬಡಿದವರಾಗುತ್ತಿದ್ದರು. ಪುಸ್ತಕಗಳ ಮೇಲೆ ಆತನಿಗೆ ಹಾರ್ದಿಕ ಪ್ರೇಮವಿತ್ತು. ಆತನ ಪುಸ್ತಕಾಲಯದಲ್ಲಿ 24 ಸಾವಿರ ಸುಂದರ ಪುಸ್ತಕಗಳು ಮತ್ತು ಚಿತ್ರ ಸಂಕೇತಾತ್ಮಕ ಹಸ್ತಲಿಪಿಗಳಿದ್ದುದೇ ಇದಕ್ಕೆ ಉದಾಹರಣೆಯಾಗಿದೆ.

ಅಕ್ಬರನ ಸಂಗೀತ ಜ್ಞಾನವು ವ್ಯಾಪಕವಾಗಿತ್ತು. ಈತನು ಸಂಗೀತ ಪ್ರಾಧ್ಯಾಪಕರ-ಕಲಾಕಾರರ ಸಂರಕ್ಷಕ ಹಾಗೂ ಪ್ರಸಂಸಕ ಕೂಡಾ ಆಗಿದ್ದನು.

ಆ ಯುಗದ ಸರ್ವಶ್ರೇಷ್ಠ ಸಂಗೀತ ವಿದ್ವಾಂಸನಾದ ತಾನಸೇನನು ಈತನ ದರ್ಬಾರಿನ ಗೌರವಾರ್ಹ ವ್ಯಕ್ತಿಯಾಗಿದ್ದನು. ಅಕ್ಬರನು ಒಂದು ಕಡೆ ಸೈನಿಕ ಕುಶಲತೆ ಹಾಗೂ ಶೌರ್ಯದಲ್ಲಿ ಅದ್ವಿತೀಯ ಸೇನಾನಾಯಕನಾಗಿದ್ದರೆ, ಮತ್ತೊಂದು ಕಡೆ ಚಿತ್ರಕಲೆಯಲ್ಲಿ ಆತನನ್ನು ಸರಿ

(೧೨ನೇ ಪುಟ ನೋಡಿರಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ಶ್ರೀ. ಕೊರಪ್ಪಲ್ಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭೂತಿಯ ಅಂತಃಕರಣ

(೨೩ನೇ ಸುಟದಿಂದ)

ಸಾಕ್ಷಾತ್ ಮಾರಿಯಮ್ಮಳೇ ಆಗಿದ್ದಳು. ಉಷಾಳನ್ನು ಹೆತ್ತಬಳಿಕದ ಮಗುವೊಂದು ತೀರಿಕೊಂಡದ್ದರಿಂದ, ಸುರೇಶನೇ ಶನಿಯಾಗಿ ಬಂದದ್ದರಿಂದ ಅದು ಸಂಭವಿಸಿತ್ತೆಂದವಳು ತಳಿಲೂ ಹಿಂಜರಿಯಲಿಲ್ಲ! ಅಂದಿನಿಂದ ಮತ್ತೆ ಸುರೇಶನಮೇಲಿನ ತಿರಸ್ಕಾರಭಾವನೆಗೆ ಹೆಚ್ಚಾಯಿತು!

ಮೆಟ್ರಿಕ್ ಪರೀಕ್ಷೆಗೆ ಓದುತ್ತಿದ್ದ ಉಷಾಳಿಗೆ ಸಿಲೆಕ್ಷನ್ ಸಿಗಲಿಲ್ಲ. ಆದರೆ ಉಷಾ ಓದುವುದರಲ್ಲಂತೂ ಕಡಿಮೆಯವಳಲ್ಲ. ತಕ್ಕಮಟ್ಟಿಗೆ ಉತ್ತಮ ಅಂಕಗಳಿಂದ ಕೆಲವುಬಾರಿ ತನ್ನ ಗೆಳತಿಯರನ್ನೂ ದಂಗುಬಡಿಸಿದ್ದಳು. ಮೊದಲನೇ ದರ್ಜೆಯಿಂದಲೂ ಅದುತನಕ ಉತ್ತಮ ಅಂಕಗಳನ್ನೇ ಗಳಿಸುತ್ತಿದ್ದವಳಿಗೆ ಈಗೇನಾಯಿತೆಂದು ಎಲ್ಲರಂತೆ ಅವಳ ತಂದೆ—ತಾಯಿಗಳಿಗೆ ಅಧಿಕ ನೈರಾಶ್ಯಕ್ಕೆಡೆಯಾಗತೊಡಗಿತು. ಉಷಾ ಪಡೆಯುವ ಅಂಕ—ಅರ್ಹತೆಗಳನ್ನು ಪಡೆಯುವುದರಲ್ಲಿ ತನ್ನ ದೃಷ್ಟಿಯನ್ನಿಟ್ಟುಕೊಳ್ಳುತ್ತಿದ್ದ ಶಿವರಾಯರು ಅವಳಿಗೆ ಸಿಲೆಕ್ಷನ್ ಸಿಗದಿದ್ದುದರಿಂದ ಹೆಂಡತಿಯ ಬಾಯಿಗೆ, ತನ್ನ ಬಾಯಿಯನ್ನು ಕೂಡಿಸಿ, ಸುರೇಶನ ಮೇಲೆ ಕಣ್ಣು ಕೆಂಪಗೆ ಮಾಡಲು ಆರಂಭಿಸಿದರು. ಆದರೆ ಅವರ ಪ್ರಕೋಪ ಒಮ್ಮೆಲೇ ಉದ್ರೇಕಗೊಂಡರೂ ಮತ್ತೆ ತನಗೆ ತಾನಾಗಿಯೇ ಶಾಂತವಾಗುತಿತ್ತು. ಎಷ್ಟಾದರೂ ಅನುಜನ ಮಗನಲ್ಲವೇ?

ಉಷಾಳಿಗಂತೂ ಅವಳ ಪಾಡು ಹೇಳತೀರದು. ಸುರೇಶನೂ ತನ್ನ ಓದುವಿಕೆಯ ಬಗ್ಗೆ ಮೆಚ್ಚಿಕೆ ತಳಿದಿದ್ದ. ತಾನು ಓದುವಾಗ ಬಂದು ತನ್ನ ಕೆಲ್ಲುಬೀರಿ ನಗುತ್ತಿದ್ದ. ಆದರೆ ಅದೆಲ್ಲ ಈಗಿರಲಿಲ್ಲ. ಅವನಿಗಂತೂ ಈಗವಳ ಕೋಣೆಗೆ ಹೋಗುವುದಕ್ಕೆ ಪದ್ಮಮ್ಮ ತಡೆಯನ್ನೇ ಹಾಕಿದ್ದಳು! ಅಣ್ಣ—ತಂಗಿಯರ ಮಧುರ ಬಾಂಧವ್ಯಕ್ಕೆ ಮಣ್ಣೆರೆಚಲು ಹವಣಿಸಿದ್ದಳು! ಉಷಾಳಿಗಂತೂ ತಂದೆಗಿಂತಲೂ ತಾಯಿಯ ಹೆದರಿಕೆ ಬಹಳವಾಗಿತ್ತು! ಅವಳ ಶೋಕಕ್ಕೆ ದಯ ಶಂಕಿಸುತಿತ್ತು.

ಪದ್ಮಮ್ಮಳಿಗೆ ಈಗ ಹೋಗಿ ಬಯಸಿದುದು ಹಾಲು ಅನ್ನ, ವೈದ್ಯ ನುಡಿದದ್ದೂ ಹಾಲು ಅನ್ನ ಎನ್ನುವಂತಾಯಿತು. ಸರಿ, ಸುರೇಶನ ಮೇಲೆ ಬಲಪ್ರಯೋಗಕ್ಕೆ ಶುರುವಾಯಿತು! ಅದುತನಕವೂ ಸಹಿಸದಂತಹ ಕಟು ಕಷ್ಟಗಳ ದಿನಗಳನ್ನು ನಿರೀಕ್ಷಿಸಲಾಂದೆ ಉಪಾಯವಿಲ್ಲದಾಯಿತು! ಪದ್ಮಳಿಗೆ ಮತ್ತೊಂದು ಬಲವಾದ ಆಕ್ಷೇಪ ದೊರಕಿದಂತಾಯಿತು!

ಉಷಾ—ಸುರೇಶ ಎಲ್ಲಾಪದ ಪದನುಡಿ ಆಡಿದರೆ, ಅದೂ ಪದ್ಮಮ್ಮನ ಕಣ್ಣಿಗೆ ಬಿತ್ತೆಂದರೆ ಇಬ್ಬರಿಗೂ ಚಡೀ ಬೀಳದೆ ಇಲ್ಲ. ಸುರೇಶನ ವಾಡಂತೂ ಆ ದಿನ ಹೇಳತೀರದು. ತಂದೆ – ತಾಯಿಗಳನ್ನು ಕಳಕೊಂಡು, ಮನೆಗೆ ಮಾರಿಯಾಗಿ, ಈಗ ನನ್ನ ಮನೆಯನ್ನು ದೋಚಿಕೊಳ್ಳಬೇಕೆಂದು ನೋಡುತ್ತಾನೆ, ಎಂದವರ ಈ ನಂಬಿಗೆ ತೃಪ್ತಿಯ ತೇಗು ಎಂಬುದು ಇರಲೇ ಇಲ್ಲ. ಮತ್ತೆ ಮತ್ತೆ ಅದೇ ಮಾತನ್ನು ಆಡುತಿದ್ದರು ಪದ್ಮಮ್ಮ.

ಅದೊಂದು ಸಾಯಂಕಾಲ ಪದ್ಮಮ್ಮ, ಸುರೇಶನಿಗೆ ನೀರು ಕುಡಿಯುವ ಗ್ಲಾಸನ್ನು ಒಡೆದನೆಂಬ ಕಾರಣದಿಂದ ತೊಡೆಯಲು ಹವಣಿಸುತಿದ್ದಾಗ, ಶಿವರಾಯರು ಬಂದೇ ಬಿಟ್ಟರು. ಹೆಂಡತಿಯ ಈ ರೀತಿಯ ರಾಕ್ಷಸೀ ವರ್ತನೆ ಅವರಿಗೆ ಸಹಿಸಲಾರದಾಯಿತು. ಅವರು ಹೇಳಿಯೇ ಬಿಟ್ಟರು!

"ಏನೇ ಅಲ್ಲಾ ನೀನು ಹೀಗೆಲ್ಲಾ ಏಕೆ ರೀಗಾಡುತ್ತಿಯಾ?"

"ಹೌದೌದು ನಿಮಗೇನು ತಿಳಿದಿದೆ. ಈ ಮಾಯಾ ಮುರ್ಕ್ಯಾಳನ ಪಂಗ್ತಿ. ಬೆಳಗ್ಗೆ ಹೋದರೆ ಸಂಜೆ ಬರ್ತೀರಿ. ಇವನ್ನ ಕಂಡರೆ ಕೂಳುಸಿಗೊಲ್ಲ ನಿಮ್ಮ ಮುದ್ದು, ಅಣ್ಣನ ಸುಮುತ್ರ! ಅಲ್ಲವೇ?

"ಅಲ್ಲಾ ಕಣೇ!....."

"ಅಲ್ಲ ಭಿಲ್ಲಾ ಎಲ್ಲಾ ನನಗೆ ಗೊತ್ತಿದೆ. ಅಲ್ಲಾ, ಹನ್ನೊಂದುವರ್ಷವೂ ಒಂದೇ ಸವನೇ ಎಾಸಾಗುತ್ತಿದ್ದ ಉಷಾ, ಮೊನ್ನೆ ...ಇವನೇನು ಬೆಲ್ಲರೆಯವನೆಂದು ತಿಳಿದಿರೋ?"

ಅದರೆ ಮತ್ತೆ ಶಿವರಾಯರು ಏಾದಕ್ಕೆ ದೆಗೊಡಲು ಮನಸ್ಸು ಮಾಡಲಿಲ್ಲ. ಸುರೇಶನನ್ನು ಹೆಂಡತಿಯ ಹಿಡಿತದಿಂದ ತಪ್ಪಿಸಿ, ತಮ್ಮ ಪತ್ರಾ ಬದಲಾಯಿಸಲು ತೆರಳಿದರು. ಅವರ ಆಲೋಚನೆಯಲ್ಲಿ ಸುರೇಶನ ಬಗ್ಗೆ ಚಿಂತೆ ಮೂಡಿತ್ತು. ಕನಿಕರ ತುಂಬಿತ್ತು. ಸಕ್ಕದಯ ಬೆಳೆದಿತ್ತು. ಆದರೆ ಎಲ್ಲವೂ ಭಾಗ್ಯಹೀನ ಸುರೇಶನಿಗೆ ದೊರಕದಾಗಿತ್ತು!

ಉಷಾ ನಿಜವಾಗಿಯೂ ಸಿಲೆಕ್ಷನ್ ಕಳಕೊಂಡ ಕಾರಣ ಬೇರೆಯಾಗಿತ್ತು. ಅವಳಿಗೆ ಇತ್ತೀಚೆಗೆ ಅಧಿಕ ಮನಸ್ಸು ಬಾರದಿಂದ ಆಟಕ್ಕೆ ಹಾಯ್ದುದು ಎಲ್ಲರಿಗೂ ತಿಳಿದಂತಹ ವಿಷಯವೇ ಆಗಿತ್ತು. ಇದರಿಂದ ಶಾಲೆಯ ಕೀರ್ತಿಯೂ ಅವಳಿಂದಾಗಿಯೇ ಹೆಚ್ಚಾಗಿತ್ತೆಂದರೆ ಅತ್ಯುಕ್ತಿಯಾಗಲಾರದು. "ಅಣ್ಣಾ" ಎಂದು ಕರೆಯಬೇಕಾಗಿದ್ದ ಸುರೇಶನ ಸುಳಿವಂತೂ ಈಗೀಗ ಉಷಾಳಿಗೆ ಕಡಿಮೆಯೇ ಆಗಿತ್ತು. ಆದರೆ ಸುರೇಶ ಉಷಾಳ ತಾಯಿಯ ಬಗ್ಗೆ ಯಾವ ರೀತಿ ಸುನೋವ್ಯಥೆಯನ್ನು ತಾಳಿದವನಲ್ಲ. ಎಲ್ಲರ ರೀತಿಯಲ್ಲಿ ತಾವಿಲ್ಲವನಲ್ಲಾ ಎಂದೂ ವ್ಯಥಿಸಿದವನಲ್ಲ! ಶಾಲೆ ತಪ್ಪಿತ್ತಲ್ಲಾ ಎಂದೂ ಹಲುಬದವನಲ್ಲ! ಉಷಾಳಂತೂ ಇನ್ನೆಷ್ಟು ಮಂದಿ ಭಾರತದಲ್ಲಿ ಈ ರೀತಿ ಇರುವರೋ ಎಂದು ವ್ಯಥಿಸುತ್ತಿದ್ದಳು. ಅವರ ಸ್ಥಿತಿಯೂ ಹೀಗೆಯೇ ಇಲ್ಲವೇ ಎಂದು ಬೇಸರಿಸುತ್ತಿದ್ದಳು.

ಶಿವರಾಯರು ರಾಮ ರಾಯರಿಂದ ಪಡೆದ ಸಹಾಯ ಅಗಾಧವಿತ್ತು. ಅವರು ಅದಕ್ಕಾಗಿ ಸುರೇಶನಿಗೆ ನಿಜಕ್ಕೂ ಓದುಕರಿಸಿ ಉತ್ತಮವಂತನಾಗಿ ಮಾಡಬೇಕಾಗಿತ್ತು. ತನ್ನ ವಂಶವನ್ನು ಲೆಕ್ಕಿಸದೆ ತಮ್ಮನ ಉದ್ಧಾರಕ್ಕೊಸ್ಕರ ಸಹಕರಿಸಿದ ಅಣ್ಣನನ್ನು ಕೊಂಡಾಡಿ, ಅವನ ಮಗ ಸುರೇಶನನ್ನು ಶಿವರಾಯರು ಬೆಳಸಬೇಕಿತ್ತು. ಆದರೆ ಕೇವಲ ಹೆಣ್ಣಿನ ಅಧಿಕಾರಕ್ಕೊಳಗಾಗಿ, ಹೆದರಿ, ಸ್ತ್ರೀ ಸ್ವಾತಂತ್ರ್ಯಕ್ಕೆ ಸಮ್ಮತಿ ಕೊಟ್ಟನ್ದರಿಂದಲೇ ಈ ರೀತಿ ಅವರು ಸುರೇಶನನ್ನು ನರಕ ಯಾತನೆಗೆ ಗುರಿಪಡಿಸಬೇಕಾಯ್ತು! ಸುರೇಶ ನಂತಹ ಮುತ್ತನ್ನು ಕಳೆದುಕೊಳ್ಳುವಂತೆ, ಅವನ ಬಾಳಿಗೆ ಕಗ್ಗತ್ತಲೆ ಕವಿಸಲು ಹವಣಿಸುತ್ತಿದ್ದರು ಶಿವರಾಯರು. ಎಂತಹ ಹೇಡಿ ಗಂಡರು! ಸುರೇಶನ ಪಾಡನ್ನು ಈಗ ಯಾರು ಕೇಳಬೇಕು? ಪದ್ಮಮ್ಮಳ ಉಪದ್ರವ ನಿರ್ವಿಘ್ನವಾಗಿ ನೆರವೇರುತಿತ್ತು.

ಅದರೆ ಮತ್ತೆ ಮತ್ತೆ ಸುರೇಶನ ಹೃದಯ ಗಂಗಾ ಜಲದಂತೆ ನಿರ್ಮಲವೇ ಆಗುತಿತ್ತು. ಕೆಲವೊಮ್ಮೆ ಉಷಾಳು ಕರುಣಪೂರ್ಣ ದೃಷ್ಟಿಯಿಂದ ದುರ್ದೈವಿ ಸುರೇಶನ ಬಾಡಿದ ಕೆಂಪು ನಗೆಯ ಮೊಗ ಕಂಡು ಪಶ್ಚಾತ್ತಾಪ ತಾಳುತಿದ್ದಳು. ಅವನು ಮಾಡುತ್ತಿದ್ದ ಕೆಲಸ ಕಂಡು ಮಮ್ಮಲ ಮರುಗುತ್ತಿದ್ದಳು!

ಂಂ ಂಂ ಂಂ

ಮಳೆಗಾಲದ ದಿನಗಳು ಬರತೊಡಗಿದುವು. ಮಳೆ ಸುರಿಯಲು ಪ್ರಾರಂಭವಾಯ್ತು. ಕೆರೆ ಕುಂಟಗಳಲ್ಲಿ ನೀರು ಉಕ್ಕಿ ಹರಯಲಾರಂಭಿಸಿತು. ತೋಡು ರಸ್ತೆಗಳ್ಳು ನೀರಿನ ರಭಸಕ್ಕೇನೂ ಕಡಿಮೆ ಇರಲೇ ಇಲ್ಲ. ಗುಡುಗು ಸಿಡಿಲುಗಳಿಗೆ ಕೊರತೆಯಿರಲಿಲ್ಲ. ಸುರೇಶ ಅವಾವುದೋ ಕೆಲಸದ ನಿಮಿತ್ತ ಹೊರ ಹೋದವನು ಮಧ್ಯಾಹ್ನದ ಬಳಿಕ ಇದು ತನಕವೂ ಮನೆಗೆ ಬಂದಿರಲಿಲ್ಲ. ಸಂಜೆ ಗಂಟೆ ಎಂಟುದರೂ ಸುರೇಶನ ಸುಳಿವಿಲ್ಲ. ಉಷಾಳಿಗೆ ಮರುಕ ಬಹಳಲಾರಂಭಿಸಿತು! ಕಿಟಕಿ ತೆರೆದು ನೋಡಿದಳು! ಹೊರಗೆ ಗಾಢಾಂಧಕಾರ ತುಂಬಿತ್ತು. ಶಿವರಾಯರಾದರು ಸುರೇಶನ ಹಾದಿಯನ್ನೇ ನೋಡುತ್ತ ಹೊರಗೆ ಇಣುಕುತ್ತಲೇ ಕುಳಿತ್ತಿದ್ದರು. ಪದ್ಮಮ್ಮಳಿಗೇನೂ ವ್ಯಥೆ ಇರುವಂತೆ ತೋರುತ್ತಿರಲಿಲ್ಲ, ಎಷ್ಟಾದರೂ ಪ್ರಾಯಕ್ಕೆ ಬಂದ ಮುಡುಗನಲ್ಲವೇ, ಬಂದಾನೆಂದು ಅವರು ಆಗಾಗ್ಗೆ ಒಳಗಿನಿಂದ ಗುಣುಗುಟ್ಟುತ್ತಿದ್ದರು.

ಗಡಿಯಾರ ಹನ್ನೊಂದು ಬಾರಿಸಿತು. ನಿಜಕ್ಕೂ ಶಿವರಾಯರಿಗೆ ದಿಗ್ಭ್ರಾಂತಿಯಾಯಿತು. ಉಷಾಳಿಗಂತೂ ಊಟದಗೊಡವೆಯೇ ಇರಲಿಲ್ಲ. ಹೊರ ಹೋಗಿ ನೋಡೋಣವೆಂದರೆ ದಾರಿಯಲ್ಲಿ ಕಾಲಿಟುವಂತಿಲ್ಲ. ಆಕಾಶವೇ ತೂತಾಗಿದೆಯೋ ಎನ್ನುವಂತೆ ಮಳೆ ಸುರಿಯುತ್ತಿತ್ತು.

ಅನಿತರೊಳಗೆ ಉಷಾ ಒಳ ಹೋಗಿ ಬಂದವಳೇ, "ಅಪ್ಪಾ ಕಾಗದವಪ್ಪಾ" ಎಂದು ಕೂಗುತ್ತ ಶಿವರಾಯರ ಕೈಗೆ ಕೊಟ್ಟಳು. ಶಿವರಾಯರು ಅವಕ್ಕಾದರು. ಉಷಾ ಬೆಚ್ಚಿದರು. ಪದ್ಮಮ್ಮ ಎಲ್ಲಾ "ನಮ್ಮ ವಿಧಿ" ಎಂದು ಕಿಮಿನಗೆ ಕಿಸಿದಳು. ಮತ್ತೆ ತಂದೆ ಮಗಳಿಬ್ಬರೂ ಪತ್ರದ ಕಡೆಗೆ ಗಮನವಿತ್ತರು. ಉಷಾ ಓದ ಹತ್ತಿದಳು –

ನನ್ನ ಪ್ರೀತಿಯ ತಂಗಿ ಉಷಾ,

ನಿನ್ನ ಮನೆಯಿಂದೀಗ ನಾನು ದೂರವಾಗುತ್ತಿದ್ದೇನೆ ನಿನ್ನ ತಂದೆ ತಾಯಿಗಳಿಗೆ ನನ್ನ ಕಡೆಯ ಪ್ರಣಾಮಗಳನ್ನು ತಿಳಿಸು. ನಾನಿನ್ನು ನಿಮ್ಮ ಮನೆಗೆ ಹಿಂತಿರುಗುವನೆಂದು ಹೇಳಲಾರೆ. ನಿನ್ನ ತಂದೆ ತಾಯಿಂದಿರು ನನಗಿತ್ತ ಪಾಲನೆಗಾಗಿ ನಾನು ಸದಾ ಅವರನ್ನು ನೆನೆಸುವವನಾಗಿದ್ದೇನೆ. ಅವರ ಬಗ್ಗೆ ನಾನೆಷ್ಟು ಅಭಿಮಾನ ತಾಳಿದರೂ ಅದು ಅಲ್ಪವೇ ಉಷಾ. ನಿಮ್ಮನ್ನೆಲ್ಲಾ ಅಗಲುವಾಗ ನನ್ನ ಮನಸ್ಸೆಷ್ಟು ನೋಯುವುದೆಂದು ಪ್ರತ್ಯೇಕವಾಗಿ ನಾನು ನುಡಿಯಲಾರೆ. ಉಷಾ, ನನ್ನ ತಂಗಿ, ನೀನೇನೂ ನನ್ನ ಕುರಿತು ಚಿಂತಿಸಬೇಕಾಗಿಲ್ಲ. ನಿನ್ನೋರ್ವ ತಮ್ಮನಂತೇಯೇ ನಾನೂ ನಿನಗಿನ್ನು ಇಲ್ಲವೆಂದು ತಿಳಿ. ನಿನ್ನ ಸಹಾಯ ಸೌಲಭ್ಯಗಳನ್ನೆಂದಿಗೂ ನಾನು ಎಂದೂ ಉಪೇಕ್ಷಿಸಲಾರೆ ಇಷ್ಟು ದಿನ ನಾವು ಸಂತಸದಿಂದಿದ್ದೆವು. ಈಗ ಮಾತ್ರ ಏಾವುದೋ ಹಲವು ಕಾರಣಗಳಿಂದ ನನಗೆ ನಿಮ್ಮ ಮುಖ ನೋಡಲು ಬಯಕೆಯಿಲ್ಲ. ನನಗೆ ಬದುಕುವ ಆಸೆಯಿರುತ್ತಿದ್ದರೆ ನಿನ್ನೊಡನೆ ಸೂತನಾಡುತ್ತಲೂ ಇರುತಿದ್ದಿಲ್ಲ ಈ ವಿಷಯ ಪಕ್ಕದ ಮನೆಯ ನಿರಂಜನನಿಗೂ ತಿಳಿಸು—ನನ್ನನ್ನು ಹುಡುಕುವುದು ಅನಗತ್ಯ ಉಷಾ.

ಇತಿ ನಿನ್ನ,
ಸುರೇಶ ಅಣ್ಣ.

ಮತ್ತೆ ಉಷಾ ಮಾತೆತ್ತಲಿಲ್ಲ!

ಕುಮಾರಿ ಬಿಳ್ಳಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ಸಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಸ್. ರಘುನಂದನ ರಾವ್, ತಲ್ಲೂರು)

ವಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು,

ಬೆಲೆ- ಏಕಾಣೆ ಮಾತ್ರ ಟಿ. ಜಿ. ಪ್ರತ್ಯೇಕ.

ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕಲಾಪ್ರಿಯರ ಮುಚ್ಚಿದ ಕಣ್ಣು ತೆರೆಯಬೇಕು

(೧೯ನೇ ಪುಟದಿಂದ)

ಪ್ರೋತ್ಸಾಹ ದೊರೆಯದೆ ಹೋದರೆ ಈ ಕಾರ್ಯವನ್ನೇ ಬಿಟ್ಟುಬಿಡಬೇಕಾಗುವುದು. ಕಲಾವಿದನು ತನ್ನ ಚಾತುರ್ಯವನ್ನು ಪ್ರದರ್ಶಿಸಿಬೇಕು. ಉತ್ತಮ ಚಿತ್ರಗಳನ್ನು ನೀಡಬೇಕೆನ್ನುವ ಉದಾರಿ ಕಲಾಪ್ರಿಯರುಗಳು ಕಲಾವಿದರಿಗೂ ಒಂದು ಸಂಸಾರವಿದೆ ಸಂಸಾರದವರಿಲ್ಲದಿರಿಗೂ ಉದರವಿದೆ ಎಂಬ ಕಠೋರ ಸತ್ಯವನ್ನು ತಿಳಿಯುವುದಿಲ್ಲ. ಹೀಗಾದಲ್ಲಿ ಇನ್ನು ಕೆಲ ವರ್ಷಗಳುರುಳುವಷ್ಟರಲ್ಲಿ ಈ ವರ್ಣಚಿತ್ರಲೇಖನ ಕಲೆಯೂ ನೆಲಸಮವಾಗುವುದಾದರೆ, ಅದರಲ್ಲಿ ಅತ್ಯುಕ್ತಿಯಿಲ್ಲ.

ಒಂದು ಕಾಲದಲ್ಲಿ ಜಯಭೇರಿಯನ್ನು ಮೊಳಗಿಸಿ ಮನೆ ಮನೆಯಲ್ಲಿ ಗುಡಿ ಗುಡಿಯಲ್ಲಿ ಆದರದ ಸ್ವಾಗತವನ್ನು ಪಡೆಯುತಿದ್ದ ಉನ್ನತ ಸ್ಥಾನವನ್ನು ಅಲಂಕರಿಸಿದ್ದ ಚಿತ್ರಕಲೆಯನ್ನು ನಾವು ಉಳಿಸಿಕೊಳ್ಳುವುದು ಅಗತ್ಯವಿದೆ. ಅದಕ್ಕಾಗಿ ನಾವು ಕೆಲವೊಂದು ಕ್ರಮಗಳನ್ನು ಕೈಗೊಳ್ಳಬೇಕಾಗುವುದು. ನಮ್ಮ ಮನೆಯ ಹಿರಿಯರ ಚಿತ್ರಗಳನ್ನು ನಾವು 'ಫೊಟೋ ಎನ್‌ಲಾರ್ಜ್' ಮಾಡಿಸುವುದುಂಟು. ಅಂಥಹ ಸಂದರ್ಭದಲ್ಲಿ ನಾವು ಸುರಿಯುವ ಹಣವೆಲ್ಲವೂ ನಿರರ್ಥಕವೆಂದೇ ಹೇಳಬೇಕು. ಅಲ್ಲದೆ ಹೀಗೆ ಮಾಡುವುದರಲ್ಲಿಯೂ ಕಲೆಯೆಳ್ಳನಿತಿಲ್ಲ. ಮಸ್ತಕದಲ್ಲಿದ್ದ ಪಾರವನ್ನು ವಿದ್ಯಾರ್ಥಿ ಗೀಟುಹಾಕಿ ಕೋಪಿ ಬರೆಯುವುದ್ಕಿಂತಲೂ ಕೀಳು ಆದುದರಿಂದ, ಇಂತಹ ಕೆಲಸವನ್ನು ಇಚ್ಛಿಸುವ ಕೆಲವರಾದರೂ ಕೈಕೆಲಸಗಾರರಿಂದ ಮಾಡಿಸಬೇಕು. ಶಾಲೆ ಕಾಲೇಜುಗಳಲ್ಲಿ ಭಾರತಚಿತ್ರ ಅನಾವರಣ ಕಾರ್ಯಕ್ರಮಗಳನ್ನು ಕಡಿಮೆಮಾಡಿ ಹಸ್ತಕೃತ (ಕೈಯಿಂದ ಮಾಡಿದ) ವರ್ಣಚಿತ್ರ ಅನಾವರಣ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬೇಕು ಸಂಘ ಸಂಸ್ಥೆಗಳಲ್ಲಿ ಅಭಿಮಾನಿಗಳ ಭಾವಾಚಿತ್ರಪಟವನ್ನಿಡದೆ ಚಿತ್ರಗಾರರು ಬರೆದ ವರ್ಣಚಿತ್ರಗಳನ್ನಿಡಬಹುದು. ವಿದ್ಯಾಲಯಗಳಲ್ಲಿ ತಂತಮ್ಮ ಗುರುಗಳ ವರ್ಣಚಿತ್ರವನ್ನು ಮಾಡಿಸಿ ಕಲಾವಿದರಿಗೆ ಪ್ರೋತ್ಸಾಹ ನೀಡಬಹುದು ಹೀಗೆ, ಇನ್ನೂ ಅನೇಕಾನೇಕ ವಿಧಗಳಿಂದ ನಾವು ಕೈಕೆಲಸಗಾರರನ್ನು ಪ್ರೋತ್ಸಾಹಿಸಬಹುದು. ಯಂತ್ರಗಳಲ್ಲಿ ತಯಾರಾಗುವ ಒಟ್ಟೆಗಳ ಬದಲು ಖಾದಿ, ಕೈಮಗ್ಗಗಳ ಬಟ್ಟೆಗಳನ್ನು ನಾವು ಕೊಂಡು ಸ್ವದೇಶಾಭಿಮಾನವನ್ನು ತೋರಿಸುವಂತೆಯೇ ಚಿತ್ರದ ಕೈಕೆಲಸಗಾರರಿಗೆ ಪ್ರೋತ್ಸಾಹ ಕೊಟ್ಟು ನಮ್ಮ ಕಲೆಯನ್ನುಳಿಸಬೇಕಲ್ಲದೆ ಯಾಂತ್ರಿಕವಾದ ಭಾವಾ ಚಿತ್ರಗಳಿಗೆ ಕಡಿಮೆ ಪ್ರೋತ್ಸಾಹ ಕೊಡಬೇಕು.

ವಿಶ್ವವಿದ್ಯಾಲಯಗಳಲ್ಲಿ ವರ್ಣಚಿತ್ರವನ್ನೂ ಒಂದು ವಿಶೇಷ ವಿಷಯವನ್ನಾಗಿ ಕೆಲವೆಡೆ ಇಟ್ಟಿದ್ದರೂ, ಅದನ್ನು ಕಲಿಸುವ ಬಗ್ಗೆ ಕಾಲೇಜುಗಳು ಮುಂದೆ ಬರುತ್ತಿಲ್ಲ. ಮದ್ರಾಸ್ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಈ ವರ್ಗವಿದೆಯಂತೆ. ಪಂಜಾಬ ರಾಜ್ಯದಲ್ಲಿದೆ ಆದರೆ ನಮ್ಮ ಮೈಸೂರಿನಲ್ಲಂತೂ ಇದ್ದಂತೆ ತೋರುವುದಿಲ್ಲ. ಚಿನ್ನದನಾಡು, ಇತರರಿಗೆ ಮಾದರಿಯಾದ ಕಲಾ ಪ್ರೇಮಿಗಳ ತವರೂರಾದ ಈ ಮೈಸೂರು ರಾಜ್ಯದಲ್ಲಿ ಅನೇಕ ಕಾಲೇಜುಗಳಿದ್ದರೂ, ಅದಾವುದರಲ್ಲಿಯೂ ಚಿತ್ರಕಲೆಯ ಬಗ್ಗೆ ಪ್ರೋತ್ಸಾಹವೇ ಇಲ್ಲದಿರುವುದು ಶೋಚನೀಯ. ವಿಶ್ವವಿದ್ಯಾಲಯದಲ್ಲಿ ಈ ವಿಶಯವೇ ಇಲ್ಲವಾದರೆ, ಈ ಬಗ್ಗೆ ಆಸಕ್ತಿ, ಕಾಲೇಜುಗಳಿಗಿದ್ದರೆ, ಸಂಬಂಧಪಟ್ಟವರು ಅಧಿಕಾರಿಗಳಿಗೆ ವಿನಂತಿ ಮಾಡಿಕೊಳ್ಳಬೇಕು. ಕೇವಲ ಯಾಂತ್ರಿಕವಾಗಿ ಒಂದಷ್ಟು ನಿರ-ದ್ಯೋಗೀ ವದವೀಧರರನ್ನು ನಿರ್ಮಿಸುತ್ತಿರುವ ಈ ಶಾಲೆ ಕಾಲೇಜುಗಳು ವಿದ್ಯಾರ್ಥಿಗಳು ಕುಶಲ ಕಲೆಗಳಲ್ಲಿ ಪದವೀಧರರಾಗಿ ಮುಂದಕ್ಕೆ ತಮ್ಮ ಜೀವನವನ್ನು ಸರಕಾರದ ಆಧಾರ ಅನ್ಯರ ಅವಲಂಬನೆಯಿಲ್ಲದೇನೇ ಸ್ವಾಶ್ರಯವಾಗಿ ಸಾಗಿಸುವಂತೆ ಅಥವಾ ಬಿಡುವ ಸಮಯದ ಅಭ್ಯಾಸವಾಗಿಟ್ಟು ಕೊಳ್ಳುವಂತೆ ಒಕ್ಕ ಕಾರ್ಯಕ್ರಮ ಕೈಗೊಳ್ಳಬೇಕು. ಇತ್ತ ನಮ್ಮ ಸ್ವದೇಶಾಭಿಮಾನಿಗಳಾದ ಕಲಾ ಪ್ರೇಮಿಗಳು ಅವಶ್ಯಗಮನವೀಯಬೇಕು; ನಮ್ಮ ಅತ್ಯಂತ ಮಹತ್ವಪೂರಿತ ಅಮೂಲ್ಯ ಆಕರ್ಷಕ ಕಲೆಯಾದ ಚಿತ್ರಕಲೆಯನ್ನು ಉಳಿಸಿಕೊಂಡು ಕಲಾವಿದರಿಗೆ ಪ್ರೋತ್ಸಾಹ ಕೊಡಬೇಕು. ಭಾವಾಗ್ರಾಹಿಯಲ್ಲಿ ಭಾವಾಗ್ರಹಣ ಕಾರನ ಕುಶಲತೆಯೇನಿಲ್ಲ. ಆದರೆ ಕೈಯಲ್ಲಿ ಚಿತ್ರ ಬಳಿಯುವವನು ಕುಶಲನಲ್ಲದೆ ಇಲ್ಲ. ಎಂತಲೇ ಈ ಕಲೆಯೊಂದನ್ನು ಉಳಿಸುವುದು ಕಲಾವಿದರ ಹೆಚ್ಚಾಗಿ ಜನತೆಯ ಮತ್ತು ವಿದ್ಯಾಲಯಗಳ ಕಾರ್ಯನಿರ್ವಾಹಕರು ಇತ್ತ ಗಮನಿಸಲೆಂದು ಹಾರೈಕೆ.

(ಬರೆದು ಬಂದುದು)

ಸಾಹಿತ್ಯ ಕಲೆಗಳ ಅಮರ ಕೃತಿಗಳು

(೧೦ನೇ ಪುಟದಿಂದ)

ಗಿಟ್ಟುವವರು ಯಾರೂ ಇಲ್ಲ. ಆತನು ಸೈನಿಕರ ಪೋಷಾಕು ಹಾಗೂ ಸಾಧನಗಳ ಅವಿಷ್ಕಾರಕನಾಗಿದ್ದನು. ಈತನಿಗೆ ಕಲೆಯ ಕುರಿತು ಇರುವ ಅಭಿರುಚಿಯನ್ನು ನಾವು ಪತ್ತೇಸುರಸಿಕ್ಕಿಯ ರಾಜ ಕಟ್ಟಡಗಳಲ್ಲಿ ಸಾಕಾರವಾಗಿ ಕಾಣಬಹುದು.

ಯಾವ ಒಂದು ವಿಶ್ವದ ಆದರ್ಶ ಸೂತ್ರದಲ್ಲಿ ಆತನು ಹಿಂದೂ—ಮುಸಲ್ಮಾನರನ್ನು ಒಟ್ಟುಗೂಡಿಸಲು ಇಚ್ಛಿಸುತ್ತಿದ್ದನೋ, ಆ ವಿಶ್ವದ ಛಾಯೆ ತತ್ಕಾಲೀನ ಕಲೆಗಳಲ್ಲಿ ಎದ್ದು ತೋರುತ್ತಿದೆ.

ಅಕ್ಬರನು ಸ್ವಯಂ ಜೀವನದ ಕುರಿತು ಉಚ್ಚ ದಾರ್ಶನಿಕ ದೃಷ್ಟಿಕೋನವುಳ್ಳವನಾಗಿದ್ದನು. ಈತನ ಪ್ರಯತ್ನದಿಂದಲೇ ಮಹಾಭಾರತ, ರಾಮಾಯಣ—ಮೊದಲಾದಂತಹ ಸಂಸ್ಕೃತ ಪುಸ್ತಕಗಳು ಫಾರಸಿ ಭಾಷೆಗೆ ಅನುವಾದಿತವಾದುವು.

ಜಹಾಂಗೀರ್ ಓರ್ವ ಉತ್ತಮ ಕವಿಯಾಗಿದ್ದನು. ಆತನ ಆತ್ಮಚರಿತ್ರೆಯಲ್ಲಿ ನಮಗೆ ಕಾವ್ಯದ ಸುಂದರ ಉದಾಹರಣೆಗಳು ಸಿಗುತ್ತವೆ. ಆತನು ಅಲಂಕಾರ, ಸಾಹಿತ್ಯ ವಸ್ತು ಸಂಗೀತ - ಮೊದಲಾದ ಕಲೆಗಳ ಪ್ರಶಂಸಕ ಹಾಗೂ ಜ್ಞಾತನಾಗಿದ್ದ. ಆಗ್ರಾದ ರಾಜಮಹಲುಗಳ ಕೆಲವು ಭಿತ್ತಿ ಚಿತ್ರಗಳು ವಿಶ್ವಿತವಾಗಿಯೂ ಆತನ ಕುಂಚದ ಕಾಣಿಕೆಗಳಾಗಿವೆ. ಆತನೋರ್ವ ಉತ್ತಮ ಶಿಲ್ಪಕಾರನಾಗಿದ್ದನು. ಆತನೇ ಸ್ವತಃ ಅಕ್ಬರನ ಸಮಾಧಿಯ ನಕ್ಷೆಯನ್ನು ತಯಾರಿಸಿದನೆಂದು ಹೇಳುತ್ತಾರೆ.

ಜಹಾಂಗೀರನ ಪುತ್ರ ಶಾಹಜಾನನು ಪುಸ್ತಕಗಳ ಹಾಗೂ ವಿದ್ಯೆಯ ಪ್ರೇಮಿಯಾಗಿದ್ದ. ಕಾವ್ಯ, ಸಂಗೀತ, ಹಾಗೂ ಸಾಹಿತ್ಯದ ಕುರಿತು ಆತನಿಗೆ ವಿಶೇಷ ಪ್ರೇಮವಿತ್ತು. ಈತನ ಶಾಸನ ಕಾಲದಲ್ಲಿ ಶಿಲ್ಪ ಹಾಗೂ ಅಲಂಕರಣ ಕಲೆಗಳ ವಿಶೇಷ ಉನ್ನತಿಯಾಯಿತು. ತಾಜಮಹಾಲು ಆತನ ಅಮರಕೃತಿಯಾಗಿದೆ. ಶಾಹಜಾನನ ಜ್ಯೇಷ್ಠ ಪುತ್ರ ದಾರಾ ಮಹಾ ಪಂಡಿತನಾಗಿದ್ದ. ಆತನು ಅರಬೀ, ಫಾರಸೀ ಮತ್ತು ಸಂಸ್ಕೃತದ ವಿದ್ವಾಂಸನಲ್ಲದೆ, ಸೂಫೀ ಧರ್ಮದ ಸಂರಕ್ಷಕ ಕೂಡಾ ಆಗಿದ್ದ. ವಿಶ್ವಪ್ರೇಮ ಹಾಗೂ ಎಲ್ಲಾ ಜಾತಿಗಳ ಧರ್ಮಗಳ ಸಹಿಷ್ಣುತೆಯ ತತ್ವಗಳ ಮೇಲೆ ಈ ಧರ್ಮವು ನಿಂತಿದೆ. ಈತನು ಉಪನಿಷತ್ತುಗಳನ್ನು ಚೆನ್ನಾಗಿ ತಿಳಿದಿದ್ದನು. ಮಾತ್ರವಲ್ಲದೆ ಫಾರ್ಸಿಯಲ್ಲಿ ಕೆಲವು ಉಪನಿಷತ್ತುಗಳ ಅನುವಾದವನ್ನು ಕೂಡಾ ಮಾಡಿದ. 'ಮಜನಾ-ಉಲ್-ಬಹರೀನ್'—ಅರ್ಥಾತ್ 'ಎರಡು ಮಹಾಸಾಗರಗಳ ಮಿಲನ'—ಎಂಬ ಹೆಸರಿನ ಒಂದು ಪುಸ್ತಕವನ್ನು ಕೂಡಾ ಈತ ಬರೆದಿದ್ದ. ಈ ಗ್ರಂಥವು ಹಿಂದೂ-ಮುಸಲ್ಮಾನರನ್ನು ಗುರಿಯಾಗಿಟ್ಟುಕೊಂಡು, ಭಗವದ್ಗೀತೆ ಹಾಗೂ ಅನ್ಯ ಹಿಂದೂ ಧರ್ಮ ಗ್ರಂಥಗಳ ಆಧಾರದ ಮೇಲೆ ಬರೆಯಲ್ಪಟ್ಟಿದೆ.

ಸಾಹಿತ್ಯ ಹಾಗೂ ಕಲೆಯ ಕುರಿತು ಔರಂಗಜೇಬನ ದೃಷ್ಟಿಕೋನವು ಆತನ ತಂದೆಯ ದೃಷ್ಟಿಕೋನಕ್ಕಿಂತ ಭಿನ್ನವಾಗಿತ್ತು. ಈತನ ಶಾಸನ ಕಾಲದಲ್ಲಿ ಸುಖ, ವಿಲಾಸ, ನೃತ್ಯಗಳು ಮೂಲದಿಂದಲೇ ನಾಶವಾದುವು. ಸಂಗೀತ ಕಲಾಕಾರರು ದರ್ಬಾರಿನಿಂದ ಹೊರ ಹಾಕಲ್ಪಟ್ಟರು. ಸಂಗೀತ ಕಲಾಕಾರರು ರಾಜಮಹಲಿನ ಕೆಳಗಡೆಯಿಂದ ಸಿಡಿಗಿ (ಕಿಣ ಒಯ್ಯುವ ಸಾಧನ) ಕೊಂಡೊಯ್ಯುತ್ತಿದ್ದಾಗ, ಔರಂಗಜೇಬನು ಅದು ಯಾರ ಸಿಡಿಗಿ ಎಂದು ವಿನಂತಿ, ಅದಕ್ಕವರು "ಸಂಗೀತ ವಿದ್ಯೆಯ ಸತ್ತ ಹೋಯಿತು. ಅದಕ್ಕಾಗಿ ನಾವು ಅದನ್ನು ಈಗ ಹೂಳಲು ತೆಗೆದುಕೊಂಡು ಹೋಗುತ್ತಿದ್ದೇವೆ", ಎಂದರಂತೆ ಅದಕ್ಕಾತನು "ಇನ್ನೆಂದಿಗೂ ಆದರ ತಲೆ ಮೇಲೆ ಬರದಂತೆ ಜೆನ್ನಾಗಿ ಆಳವಾಡಿ ಅದನ್ನು ಹೂತು ಬಿಡಿ", ಎಂದು ಹೇಳಿದನೆಂದು ಪ್ರತೀತಿಯಿದೆ.

ಇಷ್ಟಾದರೂ ಔರಂಗಜೇಬನು ಅಧ್ಯಯನ ಶೀಲ ವ್ಯಕ್ತಿಯಾಗಿದ್ದ. ಜೊತೆಗೇ ಗಂಭೀರ ಸಾಹಿತ್ಯದ ಸಂರಕ್ಷಣೆನೂ ಕೂಡಾ. ಆತನ ಪತ್ರಗಳು ಸಾಹಿತ್ಯದ ಉತ್ತಮ ಮಾದರಿಗಳಾಗಿವೆ. ಇದರಿಂದ ಆತನು ಪ್ರಖರ ಬುದ್ಧಿಯವನೂ, ಚಿಂತನ ಶೀಲನೂ ಎಂದು ನಮಗೆ ತಿಳಿದು ಬರುತ್ತದೆ. ಔರಂಗಜೇಬನ ನಿಧನದ ಬಳಿಕ ಮೊಗಲ ಸಾಮ್ರಾಜ್ಯವು ಛಿನ್ನಭಿನ್ನವಾಯಿತು. ಜೊತೆಗೇ ಮೊಗಲ ಕಾಲೀನ ಕಲೆ ಮತ್ತು ಸಾಹಿತ್ಯಗಳಿಗೆ ಕೂಡಾ ಕ್ಷಯ ಹಿಡಿಯಿತು.

ಅನಂತರದ ಸಾಮ್ರಾಟರು ಕೇವಲ ಕೆಸರಿಗೆ ಮಾತ್ರ ಸಾಮ್ರಾಟರಾಗಿದ್ದರು. ಇವರಲ್ಲಿ ಎರಡನೇ ಶಾಹ್ ಆಲಮನು ಸಾಹಿತ್ಯ ಮತ್ತು ಕಲೆಯ ಉಪಾಸಕನಾಗಿದ್ದ. ಆತನು ಪ್ರಾಚ್ಯ ಭಾಷೆಗಳ ಆಚಾರ್ಯನಾಗಿದ್ದ. ಆತನ ಲೇಖನ ಕಲೆಯು ಬಹಳ ಪ್ರಾಥಮಿಕವಾಗಿತ್ತು. ಆತನಷ್ಟು ಪ್ರಾಥಮಿಕತೆಯನ್ನು ಆ ಕ್ಷೇತ್ರದಲ್ಲಿ ಬೇರೆ ಯಾವ ಸಾಮ್ರಾಟನೂ ಪಡೆಯಲಿಲ್ಲವೆಂದರೆ ಅತ್ಯುಕ್ತಿ ಎನಿಸದು. ಆತನ ಶಾಸನ ಕಾಲವು ದೀರ್ಘವಾಗಿದ್ದರೂ, ಅನಿಶ್ಚಿತತೆಯುದ್ದಾಗಿತ್ತು. ಈ ಕಾಲದಲ್ಲಿ ದೇಶದ ಅನ್ಯ ಶಾಸಕರೊಡನೆ ಆತನು ನಡೆಸಿದ ಪತ್ರ ವ್ಯವಹಾರಗಳಿಂದ ಆತನ ಬುದ್ಧಿಯು ಸುಸಂಸ್ಕೃತವಾಗಿತ್ತೆಂದು ತಿಳಿದು ಬರುತ್ತದೆ. ನೇತ್ರ ಹೀನನಾದ ಬಳಿಕ ಆತನು ಕೆಲವು ಶೋಕ ನಿಬಂಧಗಳನ್ನು ಬರೆದನು. ಸಾಮ್ರಾಟನಲ್ಲಿ ಕರುಣಾರಸ ಪೂರ್ಣವಾದ ರಚನೆಯನ್ನು ಮಾಡುವ ಅದ್ವಿತೀಯ ಕ್ಷಮತೆ ಈತನಿಗಿತ್ತೆಂದು ಇವನ್ನು ನೋಡುವಾಗ ನಮಗೆ ವ್ಯಕ್ತವಾಗುತ್ತದೆ

(ಸಾಧಾರ)

ಓದಿ ನಗಬಹುದು!

ಒಬ್ಬ ಸಾಮಾನ್ಯ ಲೇಖಕ ಒಂದು ಸುಪ್ರಸಿದ್ಧ ಪತ್ರಿಕಾ ಸಂವಾದಕರೊಡನೆ ತನ್ನ ಲೇಖನವೊಂದನ್ನು ಪ್ರಕಾರಪಡಿಸುವಂತೆ ವಿನಂತಿಸಿದ. ಆಗ ಸಂವಾದಕರು ಗಂಭೀರವಾಗಿಯೇ ಉತ್ತರವಿತ್ತರು— ನೋಡಿ ಮಹಾಶಯರೇ, ನಮ್ಮ ಪತ್ರಿಕೆಯಲ್ಲಿ ಯಾವಾಗಲೂ ಕೇವಲ ಪ್ರಸಿದ್ಧ ವ್ಯಕ್ತಿಗಳ ಕೃತಿಗಳು ಮಾತ್ರ ಬೆಳಕು ಕಾಣುತ್ತವೆ.

ಆಗ ಆ ಲೇಖಕ ಹಸನ್ಮುಖದಿಂದ ಹೇಳಿದ – ಹೌದು ಸ್ವಾಮಿ, ನನ್ನ ಹೆಸರು ಮುರಲೀಧರನೆಂದು. ಮುರಲೀಧರ ನನ್ನು ಯಾರು ತಿಳಿದಿಲ್ಲ? ಅವನು ಭಾಗವತದಲ್ಲೆಲ್ಲ ಸರ್ವಪ್ರಸಿದ್ಧನಾಗಿದ್ದಾನೆ!

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜೀನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

29—5—1958

ಸಂಚಿಕೆ ೩೮
NO. 38

ಕೇರಳದ ಶಿಕ್ಷಣ ವಿಧೇಯಕ—

ಅಲ್ಪಸಂಖ್ಯಾಕರ ಹಿತಕ್ಕೆ ಆತಂಕ

ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರವು ಪ್ರಗತಿಪರವೆನಿಸಿದ ವಿದ್ಯಾಮಸೂದೆಯೊಂದನ್ನು ೧೯೫೭ನೆ ಸಪ್ಟಂಬರ ತಿಂಗಳ ಎರಡನೆಯ ದಿನಾಂಕದಂದು ವಿಧಾನ ಸಭೆಯಲ್ಲಿ ಮಂಜೂರು ಮಾಡಿಸಿಕೊಂಡು ರಾಜ್ಯಪಾಲರಿಗೊಪ್ಪಿಸಿತ್ತು. ಅದನ್ನು ರಾಜ್ಯಪಾಲರು ಭಾರತೀಯ ಸಂವಿಧಾನದಂತೆ ರಾಷ್ಟ್ರಪತಿಯವರ ವಿಚಾರಾರ್ಥವಾಗಿ ಸುರಕ್ಷಿತವಾಗಿಟ್ಟಿದ್ದರು. ರಾಷ್ಟ್ರಪತಿಯವರ ಈ ಕಾಯಿದೆಯ ಸಾಂವಿಧಾನಿಕ ಮೌಲ್ಯವನ್ನು ನೋಡುವುದಕ್ಕಾಗಿ ಶ್ರೇಷ್ಠ ನ್ಯಾಯಾಲಯಕ್ಕೆ ಅದರ ಸಲಹೆಗಾಗಿ ಕೆಲವೊಂದು ಪ್ರಶ್ನೆಗಳನ್ನು ಕೇಳಿ ಒಪ್ಪಿಸಿಕೊಟ್ಟಿದ್ದರು.

ಮಾನ್ಯ ರಾಷ್ಟ್ರಾಧ್ಯಕ್ಷರು ಕೇಳಿದ ಪ್ರಶ್ನೆಗಳು ನಾಲ್ಕು- ಅವು (೧) ಈ ವಿಧೇಯಕದ ೩೯ನೇ ಅನುಚ್ಛೇದದ ೫೧ನೆ ಉಪಅನುಚ್ಛೇದವು ೩೬ನೆ ಅನುಚ್ಛೇದದೊಡನೆ ಓದಿದಾಗ ಸಂವಿಧಾನದ ೧೪ನೆ ಅನುಚ್ಛೇದದ ಉಲ್ಲಂಘನೆಯಾಗುವುದಿಲ್ಲವೆ? (೨) ಅನುಚ್ಛೇದ ೩(೫), ೮(೩) ಮತ್ತು ೯ರಿಂದ ೧೩ ಇವು ಸಂವಿಧಾನದ ೩೦ (೧) ಅನುಚ್ಛೇದವನ್ನು ಉಲ್ಲಂಘಿಸುವುವೆ? ೮ (೩)ನೇ ಅನುಚ್ಛೇದವನ್ನು ಸಹಾಯಧನ ಪಡೆವ ಶಾಲೆಗಳ ಮೇನೇಜರರಿಗೆ ಕೊಡಬೇಕಾದ ಹಣದ ವಸೂಲಿ ವಿಷಯವನ್ನು ೯ರಿಂದ ೧೩ರ ವರೆಗಿನ ೯ ಅನುಚ್ಛೇದಗಳಲ್ಲಿ ಶಿಕ್ಷಕರ ವೇತನ, ಸೇವೆಯ ಪರಿಸ್ಥಿತಿ, ಆಯ್ಕೆಯ ಪದ್ಧತಿ ಮುಂತಾದುವುಗಳ ವಿಷಯವನ್ನು ಉಲ್ಲೇಖಿಸಲಾಗಿದೆ.) (೩) ೧೫ನೆ ಅನುಚ್ಛೇದ ಸಂವಿಧಾನದ ೧೪ನೆ ಅನುಚ್ಛೇದವನ್ನು ಉಲ್ಲಂಘಿಸುವುದೆ? (ಶಿಕ್ಷಣದ-ಮಟ್ಟದ ಸುಧಾರಣೆಗಾಗಿ ಅವಶ್ಯವೆನಿಸಿದರೆ ಸರಕಾರವು ಬೇಕಾದ ಸಹಾಯಧನ ಪಡೆಯುವ ಶಾಲೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದೆಂದು ಈ ಅನುಚ್ಛೇದದಲ್ಲಿ ಹೇಳಲಾಗಿದೆ.) ೪. ೩೩ನೆಯ ಅನುಚ್ಛೇದವು ಸಂವಿಧಾನದ ೨೬೭ನೆಯ ಅನುಚ್ಛೇದವನ್ನು ಉಲ್ಲಂಘಿಸುವುದೆ? (ಈ ಮಸೂದೆಯನ್ವಯ ಕ್ರಮಕೈಕೊಳ್ಳುವುದನ್ನು ತಡೆಹಿಡಿಯುವಂತೆ ನ್ಯಾಯಾಲಯಗಳು ಆಜ್ಞೆವಿಧಿಸುವುದೆಂದು ಈ ಅನುಚ್ಛೇದದಲ್ಲಿ ಹೇಳಿದೆ.)

ರಾಷ್ಟ್ರಪತಿಯವರು ಕೇಳಿದ ಮೇಲಿನ ಪ್ರಶ್ನೆಗಳಲ್ಲಿ ಮಿಷ್ಟ ನ್ಯಾಯಾಲಯವು ಮೊದಲನೆಯ ಮತ್ತು ಮೂರನೆಯ ಪ್ರಶ್ನೆಗಳಿಗೆ ನಿಷೇಧಾತ್ಮಕವಾದ ಉತ್ತರವನ್ನಿತ್ತು ಕೇರಳ ಶಿಕ್ಷಣ ವಿಧೇಯಕದ ಅನುಚ್ಛೇದಗಳು ಸಂವಿಧಾನದ ಅನುಚ್ಛೇದಗಳಿಗೆ ವಿರುದ್ಧವಾಗಿರುವುದಿಲ್ಲವೆಂದು ಅಭಿಪ್ರಾಯವಿತ್ತಿದೆ ಎರಡನೆಯ ಪ್ರಶ್ನೆಯನ್ನು ತ್ತರಿಸುತ್ತ ಅದೂ ವಿರೋಧವಾಗಿಲ್ಲವೆಂದು ತಿಳಿಸಿದೆ ಆದರೆ ಎರಡನೆಯ ಪ್ರಶ್ನೆಯನ್ನು ಮಾತ್ರ ಎತ್ತಿ ಹಿಡಿದು, ೩(೫), ೮(೩) ಮತ್ತು ೯ರಿಂದ ೧೩ ಮತ್ತು ಅನುಚ್ಛೇದ ೧೫ ಮತ್ತದರ ಉಪ ಅನುಚ್ಛೇದಗಳು ಇವು ೩೦೭ನೆ ಅನುಚ್ಛೇದದನ್ವಯ ಸಹಾಯ ಧನಪಡೆಯಲು ಅರ್ಹವಾದ ಆಂಗ್ಲ ಭಾರತೀಯರ ಶಿಕ್ಷಣ ಸಂಸ್ಥೆಗಳ ಮಟ್ಟಿಗೆ ಮಾತ್ರ ಉಲ್ಲಂಘಿಸುವುದು ಎಂದು ಅಭಿಮತ ವ್ಯಕ್ತಪಡಿಸಿದ್ದಾರೆ

ಅನುಚ್ಛೇದ ೧೪ (ಶಾಲೆಗಳ ಆಡಳಿತೆಯನ್ನು ತೆಗೆದುಕೊಳ್ಳುವುದು) ಮತ್ತು ೧೫ (ಯಾವುದೇ ವಿಧದ ಶಾಲೆಗಳನ್ನು ತೆಗೆದುಕೊಳ್ಳುವುದು) ಮಸೂದೆಯಲ್ಲಿ ಅನುಚ್ಛೇದಗಳಾಗಿರದೆ, ಈ ಅನುಚ್ಛೇದಗಳು ಸಂವಿಧಾನದ ೩೦(೧) ಅನುಚ್ಛೇದವನ್ನು ವಿರುದ್ಧವೆ ೩೦(೧)ನೆ ಅನುಚ್ಛೇದದಲ್ಲಿ ಸಹಾಯಧನದ ಕುರಿತಾಗಿ ಏನೂ ಹೇಳಿಲ್ಲವಾದರೂ ಸಹಾಯಧನವನ್ನು ಕೊಡಲಿರುವ ಶರ್ತಗಳನ್ನು ಈ ಕಾಯಿದೆಯ ಅನುಚ್ಛೇದಗಳು ಹೇಳುವುದರಿಂದ ಸಂವಿಧಾನದ ೩೦(೧)ನ್ನು ಉಲ್ಲಂಘಿಸುತ್ತವೆ.

ನಮ್ಮ ಸಂವಿಧಾನ ರಚಿಕರು ಅಲ್ಪಸಂಖ್ಯಾಕರ ಕೇಳಿಕೆ ಮತ್ತು ಅವರಲ್ಲಿದ್ದ ಮೂಲಭೂತ ಹಕ್ಕುಗಳ ಬಗ್ಗೆ ಭಯವನ್ನು ಹೋಗಲಾಡಿಸುವುದನ್ನು ಮನ್ನಿಸಿರುವುದನ್ನು ನಿರೂಪಿಸುತ್ತ ಭಾಷೆ, ಲಿಪಿ ಮತ್ತು ಸಂಸ್ಕೃತಿಗಳನ್ನು ಮಾತ್ರ ಉಳಿಸಿಕೊಳ್ಳುವುದು ಅಲ್ಪಸಂಖ್ಯಾಕ ಸಮಾಜಕ್ಕೆ ಅವಕಾಶವಲ್ಲದೇ ತಮ್ಮ ವಿದ್ಯಾ ಸಂಸ್ಥೆಗಳ ಮೇಧಾವಿಗಳು ಪ್ರಪಂಚದ ಹೊರಗೆ ಹೋಗಬೇಕು ಸಾಮಾನ್ಯೋದ್ಯೋಗಕ್ಕೆ ಬೇಕಾಗುವಷ್ಟು ವಿದ್ಯಾ ಸಂಪನ್ನರಿರಬೇಕು ಎಂಬುದೂ ಒಂದು. ಆದುದರಿಂದ ತಮ್ಮ ಅವಕಾಶಕ್ಕೊದಗಿದ ಅಲ್ಪ ಸಂಖ್ಯಾಕರ ಉದ್ದೇಶವು ಶಿಕ್ಷಣಾಲಯಗಳು ಮನ್ನಣೆ ಪಡೆಯದೆ ಎಂದಿಗೂ ಈಡೇರುವುದಿಲ್ಲವಾದುದರಿಂದ ಸಂವಿಧಾನದ ೩೦(೧)ನೆಯ ಅನುಚ್ಛೇದವನ್ನಿದು ಸರಿಯಾಗಿ ಕಾರ್ಯಪ್ರವರ್ತನವಾಗಿ ಮಾಡುವಂತಿಲ್ಲ ಸರಕಾರದ ಅಧಿಕಾರವು ಮೂಲಭೂತ ಅಧಿಕಾರಕ್ಕಿಂತ ಹೊರಗಿರ ವುದರಿಂದ, ತಮ್ಮ ಪಟನಾತ್ಮಕಾಧಿಕಾರವನ್ನು ತ್ಯಜಿಸಿ ಬಿಡುವಂತೆ ಮಾಡುವ ಈ ಅನುಚ್ಛೇದವು ನಿಜವಾಗಿಯೂ ಸಂವಿಧಾನವನ್ನು ವಿರುದ್ಧವೆ ಎಂದು ಮಿಷ್ಟ ನ್ಯಾಯಾಲಯವು ತಿಳಿಸಿದೆ.

ನ್ಯಾಯಮೂರ್ತಿ ವೆಂಕಟರಾಮಣ ಐಯ್ಯರು ತನ್ನ ಪ್ರತ್ಯೇಕ ಟಿಪ್ಪಣಿಯಲ್ಲಿ ೧, ೩ ಮತ್ತು ೪ನೆಯ ಪ್ರಶ್ನೆಗಳಲ್ಲಿ ಬಹುಸಂಖ್ಯೆಯ ನ್ಯಾಯಮೂರ್ತಿಗಳೊಡನೆ ಸಹಮತವುಳ್ಳವರಾದರೂ ತಾನು ಸಂವಿಧಾನದ ೩೦ (೧) ನ್ನು ಉಲ್ಲಂಘಿಸುವ ಪ್ರಾಥಮಿಕ ಶಿಕ್ಷಣಗಳಲ್ಲಿ ರಿಲ್ಯವನ್ನು ಹೇರಬಾರದೆಂದು ವಿದ್ಯಾಸಂಸ್ಥೆಗಳನ್ನು ನಿರ್ಬಂಧಿಸುವ ಮಸೂದೆಯ ೨೦ನೆ ಅನುಚ್ಛೇದವನ್ನು ಮನ್ನಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

ಈ ವಿಧೇಯಕದ ಬಗ್ಗೆ ಕೇರಳ ಹಾಗೂ ಇನ್ನಿತರ ಹಲವಾರು ಪ್ರದೇಶಗಳಲ್ಲಿ ವಿರೋಧವು ವ್ಯಕ್ತಪಟ್ಟಿತ್ತು. ಈ ವಿಧೇಯಕದ ಬಗ್ಗೆ ಕಳೆದ ನ್ಯಾಯಾಲಯದಲ್ಲಿ ಎಪ್ರಿಲ್ ೨೯ರಂದು ವಿಚಾರಣೆಯು ಆರಂಭವಾಗಿದ್ದು ಭಾರತದ ರಾಷ್ಟ್ರಾಧ್ಯಕ್ಷರ ಪರವಾಗಿ ಅಟರ್ನಿ ಜನರಲ್ ಎಂ ಸಿ. ಸೆಟಲ್ವಾಡರೂ, ಕೇರಳ ಸರಕಾರದ ಪರವಾಗಿ ಶ್ರೀ ಡಿ. ಎನ್ ಪ್ರಿಟ್ಟ ಕ್ಯೂ ಸಿ. ಇವರೂ ವಾದಿಸಿದರು. ಅಲ್ಲದೇ ಅಖಿಲ ಭಾರತ ಆಂಗ್ಲ ಭಾರತೀಯ ಸಂಘ, ಕೇರಳದ ಎರಡು ಆಂಗ್ಲ ಭಾರತೀಯ ಶಾಲೆಗಳು ಕೇರಳ ಕ್ರಿಶ್ಚಿಯನ ವಿದ್ಯಾ ಕ್ರಿಯಾಸಮಿತಿ, ಕೇರಳ ಖಾಸಗಿ ಅಧ್ಯಾಪಕರ ಮಹಾಮಂಡಳ, ಕೇರಳ ಶಾಲಾಧ್ಯಾಪಕರ ಸಂಘ, ಅಖಿಲ ಭಾರತ ಜಮಿಯತ್-ಉಲ್-ಉಲೇಮಾ-ಐ-ಹಿಂದ್, ಕೇರಳ ಮುಸ್ಲಿಂ ಲೀಗು ಮತ್ತು ಉತ್ತರ ಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳು ಈ ಮಸೂದೆಯ ಬಗ್ಗೆ ಭಿನ್ನಾಭಿಪ್ರಾಯಪಟ್ಟಿದ್ದುವು

ಈ ವಿಧೇಯಕದ ಒಂದು ಅನುಚ್ಛೇದವು ಪಟನೆಗೆ ವಿರುದ್ಧವಾಗಿರುವುದೆಂದು ಮಿಷ್ಠ ನ್ಯಾಯಾಲಯವು ಅಭಿಪ್ರಾಯಪಟ್ಟುದರಿಂದಾಗಿ ರಾಷ್ಟ್ರಾಧ್ಯಕ್ಷರು ಈ ತೀರ್ಪಿನ ಅಧಿಕೃತ ಪಾಠವು ದೊರೆತನಂತರ ಅದನ್ನು ಪರಿಶೀಲನೆ ಮತ್ತು ಸಲಹೆಗಾಗಿ ಕಾಯಿದೆ ಶಾಖೆಗೆ ಕಳುಹಿಸುವರು ಮುಂದೆ, ರಾಜ್ಯಸರಕಾರಕ್ಕೆ ತಕ್ಕ ನಿರ್ದೇಶನವಿತ್ತು ಸೂಕ್ತ ಬದಲಾವಣೆಗಳನ್ನು ಮಾಡುವಂತೆ ಮಸೂದೆಯನ್ನು ಹಿಂತಿರುಗಿಸುವರು. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ಮಿಷ್ಠ ನ್ಯಾಯಾಲಯದ ತೀರ್ಮಾನವನ್ನನುಸರಿಸಿ ರಾಜ್ಯ ಸರಕಾರವು ಕಾಯಿದೆಯಲ್ಲಿ ತಿದ್ದುಪಡಿಯನ್ನು ಮಾಡುವುದು ಸಂಪ್ರದಾಯವಾಗಿದೆ. ಈ ತಿದ್ದುಪಡಿಯನ್ನು ಮಾಡುವುದಕ್ಕೆ ಕೇರಳ ಸಂಸ್ಕಾರವು ಸಿದ್ಧವಿದೆ ಎಂದು ಶಿಕ್ಷಣ ಮಂತ್ರಿ ಶ್ರೀ ಜೋಸೆಫ ಮುಂಡಾಸರಿಯವರ ಮಾತುಗಳಿಂದ ತಿಳಿದುಬರುತ್ತದೆ.

ಕೇರಳದ ಈ ವಿಧೇಯಕವನ್ನು ಮಿಷ್ಠ ನ್ಯಾಯಾಲಯದ ಅಭಿಪ್ರಾಯ ತಿಳಿಯಲು ಕಳುಹಿಸಿಕೊಟ್ಟ ಘಟನೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊತ್ತಮೊದಲನೆಯದಾಗಿದೆ ಅಂತೆಯೇ ಆ ಸಮಯದಲ್ಲಿ ಇದರ ಬಗ್ಗೆ ವಾದವಿವಾದ ಮಾಡಿದವರು, ಆಕ್ಷೇಪವೆತ್ತಿದವರು ಈ ತೀರ್ಪಿ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H O **MANGALORE.** Estd. **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ದುರ್ದಿನದ ಗಳಿಗೆಯಲ್ಲಿ

ಲೇ" ಗಿರಿಜಾಪ್ರಿಯ"

ಕೊ ಕ್ಕೋ ಕ್ಕೋ. ಕೊ ಕ್ಕೊ ಕೋ' ಎಲರಾಂ ಗಂಟೆಯಂತೆ, ಕೋಳಿ ಒಂದೇ ಸವನೆ ಕೂಗತೊಡಗಿತು. ಕುಕ್ಕುಟಗಳ ಈ ಎಚ್ಚರಿಕೆಯ ವಾಣಿಯಿಂದ ಎಚ್ಚರಗೊಂಡ ತುಕ್ರ ಗಡಿಬಿಡಿಯಿಂದಲೇ ಎದ್ದು ಹೊರಬಂದ. ಮಳೆಗಾಲದ ಕರಿ ಮುಗಿಲೆಡೆಯಿಂದ ಮೂಡಿ ಬಂದ ಬೆಳ್ಳಿ ನಸು ಪ್ರಕಾಶ ಬೀರಿ, ಕಿಸಕ್ಕನೆ ನಗುವಂತೆ ಮಿನುಗುತಿತ್ತು.

"ನಿನ್ನೆಯಿಂದ ಹೊತ್ತೇ ಗೊತ್ತಾಗಲಿಲ್ಲ ನರ್ಸಿ, ಬೇಗ ಹೊರಟುಬಿಡುತ್ತೇನೆ. ಕಾಳಣ್ಣನೂ ಇಷ್ಟರಲ್ಲೇ ಬಂದುಬಿಡಬಹುದು" ಎನ್ನುತ್ತಾ ತುಕ್ರ ಮುಖ ತೊಳೆದು ತಲೆಗಳನ್ನ ಮೆಲ್ಲಲು ಒಳ ನುಸುಳಿದ.

ತುಂಬು ಗರ್ಭಿಣಿ ನರ್ಸಿ ರಾತ್ರಿಯಿಡೀ ಹೊಟ್ಟೆನೋವೆಂದು ನರಳುತ್ತಲೇ ಬಿದ್ದುದರಿಂದ, ತುಕ್ರನಿಗೆ ಮಧ್ಯರಾತ್ರಿಯ ತನಕ ನಿದ್ದೆಯಿರಲಿಲ್ಲ. ಹೀಗಾಗಿ ಬೆಳಗ್ಗಿನ ಝಾವಕ್ಕೆ ಗಾಢನಿದ್ರೆ ಹತ್ತಿಬಿಟ್ಟಿತು. ಆದರೆ ಎಲ್ಲರಂತೆ ಬೇಕಾದಾಗ ರಜೆ ಪಡೆದು ಮನೆಯಲ್ಲಿ ಕುಳಿತುಕೊಳ್ಳುವ ಭಾಗ್ಯ ತುಕ್ರನಿಗಿರಲಿಲ್ಲ. ಮಿನುಗಾರಿಕೆ ಅವನ ಜಾತಿಯ ಕಸುಬು. ಮುಂಜಾವಿನಲ್ಲೇ ತಂಗಳೂಟ ಮಾಡಿ ಗೆಳೆಯನೊಂದಿಗೆ ಹೊರಟನೆಂದರೆ, ಅವನು ಹಿಂತಿರುಗುತಿದ್ದುದು ಸಂಜೆಗೇ. ಈ ಮಧ್ಯೆ ನರ್ಸಿ ಮಧ್ಯಾಹ್ನದ ಬುತ್ತಿ ಕಡಲ ದಂಡೆಗೆ ಕೊಂಡೊಯ್ದು, ಗಂಡನ ಹಸಿವು ತಣಿಸಿ ಹಿಂದಿರುಗುತಿದ್ದಳು.

ಮಿನುಗಾರಿಗೆ ತುಕ್ರನ ಕುಲಕಸುಬು. ತುಕ್ರನಂತೂ ಈ ಕೆಲಸದಲ್ಲಿ ಇತರರಿಗಿಂತಲೂ ಮುಂದೆ. ಅದರಲ್ಲೂ ಎಲ್ಲರಿಂದಲೂ ಆಗದ ಬೀಸುವ ಕೆಲಸ ತುಕ್ರನಿಗೇ ಮೀಸಲು. ಇದಕ್ಕಾಗಿಯೇ, ಗೆಳೆಯರೆಲ್ಲ ಅವನನ್ನು ಬೀಸಣದ ತುಕ್ರಣ್ಣ ಎನ್ನುತಿದ್ದರು. ಸೆಕೆಗಾಲದ ಕಡಲು ತುಕ್ರನ ವಾಲಿಗೆ ನೆಲಕ್ಕಿಂತಲೂ ಕಡೆ. ಆದರೆ ಮಳೆಗಾಲದ ಸಮುದ್ರ ಎಂದಾಗ ಮಾತ್ರ ಎಲ್ಲರಂತೆ ಅವನ ಎದೆಯೂ ಝಲ್ಲೆನ್ನುತಿತ್ತು. ಬೆಳ್ಳೊರೆ ಕಾರಿ, ಭೂತಾಕಾರದಲ್ಲಿ ಹಾರಿಬರುವ ತೆರೆಯ ನಡುವೆ, ತಮ್ಮ ದೋಣಿ ನುಸುಳಿ ಹೋಗುವಾಗ, ಅರ್ಧ ಜೀವವೇ ಹೋದಂತಾಗುತ್ತಿತ್ತು ಅವನಿಗೆ. ಆದರೆ ಹಾಳುಹೊಟ್ಟೆ ಕೇಳಬೇಕಲ್ಲ?

ಹೀಗಾಗಿ, ಆ ಮಳೆಗಾಲದಲ್ಲೂ ಕೈ ಬಲೆಯಲ್ಲಿ ಮೀನುಹಿಡಿಯಲು ತುಕ್ರನ ಬಳಗ ಹೋಗುತಿತ್ತು.

"ತುಕ್ರಣ್ಣಾ, ಓ ತುಕ್ರಣ್ಣಾ" ಎಂದು ಊಟ ಮುಗಿಯುವ ಮೊದಲೇ ಗೆಳೆಯರ ಕೂಗೂ ಕೇಳಸತೊಡಗಿದುದರಿಂದ, ತುಕ್ರ ಅವಸರವಸರವಾಗಿ ಊಟ ಮುಗಿಸಿ, ಮಡದಿಯನ್ನು ಹತ್ತಿರ ಕರೆದು, "ಹೋಗಿ ಬರ್ತೇನೆ ನರ್ಸಿ, ಏನೂ ಹೆದರಿಕೊಳ್ಳಬೇಕಾಗಿಲ್ಲ. ಹೊಟ್ಟೆ ನೋವು ಹೆಚ್ಚಾಯ್ತಾಂದ್ರೆ, ಆಚೆ ಮನೆ ವೀರಪ್ಪನನ್ನು ಕಳುಹಿಸಿಬಿಡು. ಹೂಂ!" ಎಂದು ಕಿರುನಗೆ ಸೂಸಿ, ಆಕೆಯ ಗಲ್ಲ ಸೇವರಿಸಿದ.

ನರ್ಸಿಯ ಕಣ್ಣುಗಳಿಂದ ನೀರು ಒರತೆಯ ಬುಗ್ಗೆಯಂತೆ ಹನಿ ಹನಿಯಾಗಿ ಜಿನುಗುತಿತ್ತು "ಛೀ ಹುಚ್ಚಿ, ಮಕ್ಕಳಂತೆ ಅಳುವುದೇ. ನೀನೆತ್ತರೆ ನನ್ನ ಪ್ರಾಣ ಹೋದಂತಾಗುತ್ತೆ. ಬೇಗ ಬಂದುಬಿಡುತ್ತೇನೆ." ಎಂದು ಇನಿಯಳಿಗೆ ಸಮಾಧಾನ ಹೇಳಿದ ತುಕ್ರ. ಆ ಮುಂಜಾವಿನಲ್ಲಿ, ಹನಿಯಾಗಿ ಸುರಿಯುತಿದ್ದ ಮಳೆಯಲ್ಲೇ ಹೊರಟೇ ಬಿಟ್ಟ. ಆದರೆ ಅವನ ಮನಸ್ಸು ಮಾತ್ರ ನರ್ಸಿಯ ಬಳಿಯೇ ಸುತ್ತಾಡುತಿತ್ತು.

ಇನ್ನೂ ಮಗನ ಬಳಿಯಲ್ಲೇ ಇದ್ದರೆ, ಸೊಸೆಯ ಬಾಣಂತಿತನದ ಹೊಣೆಗಾರಿಕೆ ತನ್ನ ಮೇಲೆ ಬೀಳಬಹುದೆಂದು ಹೆದರಿದ ಆಕೆಯ ಅತ್ತೆಯೂ ತನ್ನ ಮಗಳ ಮನೆ ಸೇರಿದ್ದುದರಿಂದ, ಮನೆಯಲ್ಲಿ ನರ್ಸಿಯೊಬ್ಬಳೇ ಉಳಿಯಬೇಕಾಗಿತ್ತು. ಮೇಲಾಗಿ ಮೊದಲ ಬಸುರು. ಗಂಡನೂ ಹೋದುದರಿಂದ ಆಕೆಯನ್ನು ಎಲ್ಲಿಲ್ಲದ ಭೀತಿ ಆವರಿಸಿಕೊಂಡಿತು, ಯೋಚಿಸುತಿದ್ದಂತೆ ಆಕಾಶ ಕಪ್ಪೇರಿ, ಗಾಳಿಯೂ ಬಲವಾಗಿ ಬೀಸತೊಡಗಿತು.

"ಅಯ್ಯೋ ದೇವರೆ', ಕಡ್ಲಿಗೋದ ಅವರಿಗೇನಾದ್ರೂ...." ನರ್ಸಿ ತನ್ನ ಮನಸ್ಸಿನಲ್ಲಿ ಸುಳಿದ ಕೆಟ್ಟ ಯೋಚನೆಗಾಗಿ ನಾಲಗೆ ಕಚ್ಚಿಕೊಂಡಳು. ಊರ ದೈವ ಜಾರಂದಾಯನಿಗೆ ಹತ್ತಾರು ಬಾರಿ ವಂದಿಸಿದಳು. ಆದರೆ ಗಾಳಿ ಬಲವಾಯಿತು. ನರ್ಸಿಯ ಎದೆಯಲ್ಲೂ ಭಯಂಕರ ಹೊಯ್ದಾಟವಾಗತೊಡಗಿತು.

ಅಷ್ಟರಲ್ಲೇ, ಆಕೆಯ ಹೊಟ್ಟೆನೋವೂ ಕಾಣಿಸಿಕೊಂಡಿತು. ಗಾಳಿ ರೊಯ್ಯನೇ ಬೀಸುತ್ತಲೇ ಇತ್ತು. ಗುಡಿಸಲಿನ ಸುತ್ತಲಿದ್ದ ತೆಂಗಿನ ಮರಗಳು ಬಿರುಗಾಳಿಯ ಕ್ರೂರ ವರ್ತನೆಯಿಂದ ಸಿಟ್ಟಾದುವೋ ಎಂಬಂತೆ, ವಿಚಿತ್ರಾಕಾರದಲ್ಲಿ ತಲೆಯಲ್ಲಾಡಿಸುತಿದ್ದುವು.

ನರ್ಸಿಯ ಎದೆ, ಧಡ್, ಧಡ್, ಧಡ್, ಎಂದು, ಜೋರಾಗಿ ಬಡಿಯುತಿತ್ತು. ಜತೆಗೆ ತಡೆಯಲಸಾಧ್ಯವಾದ ಹೆರಿಗೆಯ ಸಂಕಟ. ಮಿಂಚು ಝಗ್ಗನೆ ಹಾರುತಿದ್ದಂತೆ, ಆವಳ ಎದೆಗೆ ಕಾದ ಸಲಾಕೆಯಿಂದ ಬರೆಯೆಳೆದಂತಾಗುತಿತ್ತು. ಪ್ರಸವ ವೇದನೆಯಿಂದ, ಪ್ರಾಣವೇ ಹೋದಷ್ಟು ಸಂಕಟವಾಗುತಿದ್ದರೂ, ಮೈ ಕೊರೆಯುವ ಚಳಿಗಾಳಿಗೆ, ಗುಡಿಸಲನ್ನೇ ತೇಲಿಸುವಂತಹ ರಭಸದ ಮಳೆಗೆ ಹೊರಹೋಗಿ, ನೆರೆಮನೆಯ ವೀರಪ್ಪನೊಡನೆ ತಿಳಿಸುವ ಶಕ್ತಿಯೂ ಅವಳಲ್ಲಿರಲಿಲ್ಲ. ಬಿರುಗಾಳಿಯ ಭಯಂಕರ ಕಿರಿಚಾಟದಿಂದಾಗಿ, ಆ ಅನಾಥೆಯ ಕೂಗು ಹೊರಗಿನ ಜನರಿಗೂ ಕೇಳಿಸಲೇ ಇಲ್ಲ. ಜಾರಂದಾಯನ ಮೇಲೆ ಪೂರ್ಣ ಭಾರಹಾಕಿ, ಆಕೆ ನರಳುತ್ತಲೇ ಇದ್ದಳು.

ತುಕ್ರನಿಗೂ, ತುಂಬಿದ ಬಸರಿಯನ್ನು ಬಿಟ್ಟು ಬಂದುದು ಸರಿಯೆನಿಸಿರಲಿಲ್ಲ. ಆದರೆ ಹಾಳು ಹೊಟ್ಟೆಗಾಗಿ, ತನ್ನ ಮುದ್ದು ಮಡದಿ ನರ್ಸಿ, ಭಾವೀ ಮಗು, ಇವರ ರಕ್ಷಣೆಗಾಗಿಯಾದರೂ ದುಡಿಯಬೇಡ್ವೇ? ಹೀಗೆಂದೇ, ಅತ, ಅರೆಮನಸ್ಸಿನಿಂದ ಅಂದುಬಂದಿದ್ದ. ದೋಣಿ ಸಮುದ್ರಮಧ್ಯಕ್ಕೆ ಹೋದಂತೆ, ಬಿರುಗಾಳಿ ಬೀಸತೊಡಗಿದುದರಿಂದ ಆ ಗಂಡಾತರದಲ್ಲಿ ಅವರೆಲ್ಲ ಕಾಲನ ದವಡೆಯ ಆಹಾರವಾಗಿ, ಜಾರಂದಾಯನ ಮರೆಹೊಕ್ಕಿದ್ದರು. ಅವನ ದಯೆಯಿದ್ದರೆ ಮಾತ್ರ ಹೆಂಡತಿಮಕ್ಕಳನ್ನು ಕಾಣುವ ಭಾಗ್ಯ ತಮಗೆ ಎಂದು ಅವರು ಯೋಚಿಸಿದ್ದರು.

ಬಿರುಗಾಳಿ ರುಂಯ್ಯನೇ ಬೀಸುತಿತ್ತು. ಅಷ್ಟರಲ್ಲಿ ಝಳಂ ಎಂದೇನೋ ಸದ್ದು. ಎಲ್ಲರೂ ಭೀತಿಯಿಂದ ಮುಖ ಮುಖ ನೋಡುತಿದ್ದರು. ಮಾತಾಡುವ ಧೈರ್ಯ ಅವರಿಗಿರಲಿಲ್ಲ. ತುಕ್ರ, ದೋಣಿಯಲ್ಲಿರಲಿಲ್ಲ! ಎಲ್ಲರೂ ಗರಬಡಿದಂತೆ, ಮೂಕರಾಗಿದ್ದರು. ಉಳಿದವರೇನೋ, ಹೇಗೂ, ದಡಸೇರಿದರು. ಆದರೆ ತುಕ್ರನ ಸುತ್ತೆಯೂ ಸಿಕ್ಕಲಿಲ್ಲ.

ಗೆಳೆಯರು, ತುಕ್ರನ ಮನೆ ಸೇರಿದಾಗ, ಸಂಜೆಯಾಗಿತ್ತು. ಒಳಗೆ ರೌದ್ರ ಭಯಾನಕ ದೃಶ್ಯ! ರಕ್ತ ಅಲ್ಲಲ್ಲಿ ಹೆಪ್ಪು ಗಟ್ಟಿತ್ತು. ತುಂಬು ಗರ್ಭಿಣಿ ನರ್ಸಿ, ಹೆರುಕುಚಾವೆಯಲ್ಲಿ, ಮರದ ಕೊರಡಿನಂತೆ ಬಿದ್ದಿದ್ದಳು. ಹತ್ತಿರದಲ್ಲೇ ಒಂದು ಮಾಂಸದ ಮುದ್ದೆ!

ಜನ, ಒಂದೇ ಸವನೆ ನೆರೆಯಿತು. ನರ್ಸಿಯ ಪ್ರಾಣಪಕ್ಷಿ ಹಾರಿ ಹೋಗಿತ್ತು. ಬಳಿಯಲ್ಲೇ ಇನ್ನೂ ಜೀವ ಹಿಡಿದು, ಬಿದ್ದಿದ್ದ, ಎಳೆಗೂಸಿನ ದಾರುಣ ದೃಶ್ಯ! ಒಬ್ಬರ ಬಾಯಿಯಿಂದಲೂ ಮಾತೇಹೊರಡುವಂತಿರಲಿಲ್ಲ ವಾತಾವರಣ ವಿಡೀ ಗಂಭೀರ ಮೌನ ಆವರಿಸಿತ್ತು!

ತುಕ್ರ ಕಡಲ ಹಾವಿಗೆಯಲ್ಲಿ ಮಲಗಿದ್ದ!

ನರ್ಸಿ, ಅವನ ಪ್ರತಿನಿಧಿಯನ್ನು ಜಗಕಿತ್ತು, ಗುಡಿಸಲಲ್ಲೇ ಹಾವಿಗೆ ಹಿಡಿದಿದ್ದಳು! ಎಂತಹ ದುರ್ದಿನ!

ವಿಮಾನಪಕ್ಷ (ರೆಕ್ಕೆ)ದೊಳಗಿನ ಸೂಕ್ಷ್ಮರಚನೆಯನ್ನು ಗ್ರೇಟ ಬ್ರಿಟನ್ನಿನಲ್ಲಿ ವಿದ್ಯಾರ್ಥಿಗಳು ಅಭ್ಯಸಿಸುತ್ತಾರೆ. ಈ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಎಪ್ಪತ್ತೈದರಷು ವಿದೇಶೀಯರಿರುವರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ|ಶ್ರೀ. ಕೊರಡ್ಲು ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ' ವಾರಪತ್ರಿಕೆ
ಉ ಡು ಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

ಭಾರತ ಕಲಾನಿಧಿ—

ಆಶುತೋಷ ಕಲಾ ಸಂಗ್ರಹಾಲಯ

ಆಶುತೋಷ ಕಲಾ ವಸ್ತು ಸಂಗ್ರಹಾಲಯವನ್ನು ೧೯೩೭ರಲ್ಲಿ ಕಲ್ಕತ್ತಾದಲ್ಲಿ ಸ್ಥಾಪಿಸಲಾಯಿತು. ಭಾರತದ ಖ್ಯಾತಿವೆತ್ತ ಶಿಕ್ಷಣ ತಜ್ಞರಾದ ಸರ್ ಆಶುತೋಷ ಮುಖರ್ಜಿ ಅವರ ಹೆಸರನ್ನೇ ಈ ಕಲಾ ಸಂಗ್ರಹಾಲಯಕ್ಕೆ ಇಡಲಾಯಿತು. ಈ ಸಂಗ್ರಹಾಲಯವು ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಅಂತರ್ಗತವಾಗಿದೆ. ೧೯೩೭ಕ್ಕೆ ಪೂರ್ವದಲ್ಲಿ ಯಾವ ವಿಶ್ವವಿದ್ಯಾನಿಲಯದಲ್ಲಿಯೂ ಸಂಗ್ರಹಾಲಯವೇ ಇರಲಿಲ್ಲ. ಕಲ್ಕತ್ತಾ ವಿಶ್ವವಿದ್ಯಾನಿಲಯವೇ ಸಂಗ್ರಹಾಲಯವೊಂದನ್ನು ಸ್ಥಾಪಿಸಿ ಖ್ಯಾತಿಗಳಿಸಿತು. ಈ ಕಲಾ ಸಂಗ್ರಹಾಲಯದ ಸ್ಥಾಪನೆಯ ಉದ್ದೇಶವು ಭಾರತೀಯ ಕಲೆಯ ಅದರಲ್ಲಿಯೂ ವಿಶೇಷವಾಗಿ ಬಂಗಾಳಿ ಕಲೆಗೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸುವುದೇ ಆಗಿದೆ.

ಬಾಂಕುರ, ಬಾನಗರ ಮತ್ತು ತಾಮಲುಕ್‌ಗಳಲ್ಲಿ ದೊರೆತ ತಿಲಾಯುಗದ ಆಯುಧಗಳನ್ನು ಈ ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಆಯುಧಗಳು ಬಂಗಾಳದ ಪ್ರಾಚೀನ ಸಾಂಸ್ಕೃತಿಕ ಇತಿಹಾಸವನ್ನು ಪರಿಚಯ ಮಾಡಿಸುವುವು. ಈ ಸಂಗ್ರಹಾಲಯದಲ್ಲಿ ಬಂಗಾಳ ಹಾಗೂ ಒರಿಸ್ಸಾದ ಜಾನಪದ ಕಲಾಕೃತಿಗಳ ಅತ್ಯುತ್ತಮ ಸಂಗ್ರಹವಿರುವುದು. ಈ ವಿಚಾರದಲ್ಲಿ ಈ ಸಂಗ್ರಾಲಯವು ಭಾರತದಲ್ಲಿಯೇ ಅಪೂರ್ವವಾಗಿರುವುದು. ಜಾನಪದ ಕಲಾಕೃತಿಗಳು ಕಳೆದ ಎರಡು ಸಾವಿರ ವರ್ಷಗಳ ಪೂರ್ವ ಭಾರತದ ಕಲಾಪರಂಪರೆಯನ್ನು ಪರಿಚಯ ಮಾಡಿಸುತ್ತವೆ.

ಆಶುತೋಷ ಸಂಗ್ರಹಾಲಯದಲ್ಲಿ ಭಾರತದ ವಿವಿಧ ಭಾಗಗಳಿಗೆ ಸೇರಿದ ಪ್ರಾಚೀನ ಕಲಾಕೃತಿಗಳನ್ನು ಕಾಣಬಹುದು. ಹೆಚ್ಚು ಹಣಕಾಸಿನ ನೆರವಿಲ್ಲದೆ ನಮ್ಮ ದೇಶದಲ್ಲಿ ಸಹಿ ವಸ್ತು ಸಂಗ್ರಹಾಲಯವೊಂದನ್ನು ಅಭಿವೃದ್ಧಿಪಡಿಸಲು ಸಾಧ್ಯ ಎಂಬ ವಿಷಯಕ್ಕೆ ಆಶುತೋಷ ಸಂಗ್ರಹಾಲಯವೇ ನಿದರ್ಶನವಾಗಿದೆ.

ಕಲ್ಕತ್ತ ವಿಶ್ವವಿದ್ಯಾನಿಲಯವು ಕಳೆದ ೨೦ ವರ್ಷಗಳ ಅವಧಿಯಲ್ಲಿ ಕಲಾವಸ್ತುಗಳನ್ನು ಕೊಳ್ಳುವುದಕ್ಕಾಗಿ ಸುಮಾರು ೩೦,೦೦೦ ರೂ.ಗಳ ಹಣವನ್ನು ವೆಚ್ಚ ಮಾಡಿದೆ. ಆದರೆ ಈ ಸಂಗ್ರಹಾಲಯದಲ್ಲಿರುವ ಕಲಾವಸ್ತುಗಳ ಒಟ್ಟು ಮೌಲ್ಯವು ೩೦ ಲಕ್ಷ ರೂಗಳಿಗೂ ಹೆಚ್ಚಾಗಿದೆ.

ಸಂಗ್ರಹಾಲಯದ ಸ್ಥಾಪನೆಯ ಸಮಯದಲ್ಲಿ ಕೇವಲ ೫೦ ಕಲಾವಸ್ತುಗಳಿದ್ದವು. ೧೯೩೭ರ ವರ್ಷಾಂತ್ಯದಲ್ಲಿ ಕೃತಿಗಳ ಸಂಖ್ಯೆ ೧,೫೨೮ಕ್ಕೆ ಹೆಚ್ಚಿತು. ೧೯೩೮ರಲ್ಲಿ ಈ ವಸ್ತು ಸಂಗ್ರಹಾಲಯದಲ್ಲಿ ೨,೪೫೩ ಕಲಾವಸ್ತುಗಳಿದ್ದುವು. ೧೯೫೫ರ ಮಧ್ಯಭಾಗದ ವೇಳೆಗೆ ಕಲಾವಸ್ತುಗಳ ಸಂಖ್ಯೆ ೧೫,೦೦೦ಕ್ಕೆ ಹೆಚ್ಚಿತು. ಹೀಗೆ ಸಂಗ್ರಹಗೊಂಡ ಕಲಾವಸ್ತುಗಳಲ್ಲಿ ಶಿಲಾಮೂರ್ತಿಗಳು, ಗಟ್ಟಿಮಣ್ಣಿನ ವಸ್ತುಗಳು, ವರ್ಣಚಿತ್ರಗಳು, ಜಾನಪದ ಕಲಾಕೃತಿಗಳು, ಲೋಹ ಮತ್ತು ದಂತದ ವಸ್ತುಗಳು, ಮರದ ಕೆತ್ತನೆಯ ವಸ್ತುಗಳು, ಓಲೆಗರಿಗಳು, ಚಿತ್ರಿತ ಗ್ರಂಥಗಳು, ಹಸ್ತಪ್ರತಿಗಳು, ಸುವರ್ಣಾಭರಣಗಳು, ವಸ್ತ್ರಗಳು, ನಾಣ್ಯಗಳು ಮತ್ತು ಭೂಮಿಯಿಂದ ಹೊರಕ್ಕೆ ತರಲಾದ ಉತ್ಕೃಷ್ಟ ಕೃತಿಗಳು ಇರುವುವು. ಈ ಸಂಗ್ರಹಾಲಯವು ಅಭಿವೃದ್ಧಿಹೊಂದುತ್ತಿದೆ.

ಅನೇಕ ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಕಲಾಕಾರರು ಬಂಗಾಳದ ವಿವಿಧ ಸ್ಥಳಗಳಲ್ಲಿ ಶ್ರಮವಹಿಸಿ ಸಂಗ್ರಹಿಸಿರುವ ಕಲಾಕೃತಿಗಳು ಈ ಸಂಗ್ರಹಾಲಯವನ್ನು ಅಲಂಕರಿಸಿವೆ. ಈ ಸಂಗ್ರಹಾಲಯದ ಕಾರ್ಯದರ್ಶಿಗಳು ಅವರು ಬಂಗಾಳ, ಬಿಹಾರ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಪ್ರವಾಸ ಕೈಗೊಂಡು ಅಪೂರ್ವ ಕಲಾಕೃತಿಗಳನ್ನು ಸಂಗ್ರಹಿಸಿರುವರು.

ಸಂಗ್ರಹಾಲಯದವರು ಪ್ರಾಚೀನ ಇತಿಹಾಸ ಪ್ರಸಿದ್ಧ ಸ್ಥಳಗಳಲ್ಲಿ ಭೂಶೋಧನಾ ಕಾರ್ಯ ನಡೆಸುತ್ತಿರುವರು ಈ ಭೂಶೋಧನೆಗಳ ಫಲಸ್ವರೂಪವಾಗಿ ಸಂಗ್ರಹಾಲಯವು ಅಪೂರ್ವ ಕಲಾಕೃತಿಗಳಿಂದ ಸಂಪದ್ಭರಿತವಾಗಿದೆ. ೧೯೩೮ರಲ್ಲಿ ಬಾನಗಡದಲ್ಲಿ ಭೂಶೋಧನಾ ಕಾರ್ಯಗಳನ್ನು ಪ್ರಾರಂಭಿಸಲಾಯಿತು. ಈ ಭೂಶೋಧನೆಗಳು ಬಂಗಾಳದ ಇತಿಹಾಸದ ಕಗ್ಗತ್ತಲೆಯ ಅವಧಿಯ ಮೇಲೆ ಬೆಳಕು ಚೆಲ್ಲಿವೆ. ಬಾನಗಡದಲ್ಲಿ ಶುಂಗ ಕಾಲಕ್ಕೆ ಸಂಬಂಧಿಸಿದ (ಕ್ರಿ. ಪೂ. ಒಂದನೆಯ ಶತಮಾನ) ಅಸಂಖ್ಯಾತ ಸ್ಮಾರಕ ವಸ್ತುಗಳು, ಕಟ್ಟಡಗಳು, ಇತ್ಯಾದಿ ದೊರೆತಿವೆ. ಗಟ್ಟಿಮಣ್ಣಿನ ವಿಗ್ರಹಗಳು, ಮುದ್ರೆಗಳು, ಮಣ್ಣಿನ ಪಾತ್ರೆಗಳು ರಂಧ್ರವಿರುವ ಬೆಳ್ಳಿಯ ನಾಣ್ಯಗಳು ಮತ್ತು ಸುವರ್ಣಾಭರಣಗಳು ಲಭ್ಯವಾಗಿವೆ. ೧೯೫೫ರಲ್ಲಿ ತಿಲ್ಡಾ (ಮಿಡ್ನಾಪುರ) ಮತ್ತು ತಾಮಲುಕ್‌ಗಳಲ್ಲಿ ಭೂಶೋಧನಾ ಕಾರ್ಯವನ್ನು ಕೈಗೊಳ್ಳಲಾಯಿತು.

ಸಂಗ್ರಹಾಲಯದವರಿಂದ ಇತ್ತೀಚೆಗೆ ಚಂದ್ರಕೇತು ಗಡವು ಕಲ್ಕತ್ತಾ ನಗರಕ್ಕೆ ಕೇವಲ ೫೫ ಮೈಲಿಗಳ ದೂರದಲ್ಲಿರುವ ಪ್ರಾಚೀನ ರೇವು ಪಟ್ಟಣವಾಗಿದೆ. ಈ ಸ್ಥಳದಲ್ಲಿ ಮೌರ್ಯರಿಂದ ಹಿಡಿದು ಗುಪ್ತರ ಕಾಲದವರೆಗಿನ ವಸ್ತುಗಳು ಪ್ರಾಪ್ತವಾಗಿವೆ. ರಂಧ್ರವಿರುವ ಸುಮಾರು ನೂರು ಬೆಳ್ಳಿ ನಾಣ್ಯಗಳು, ಮೌರ್ಯ, ಶುಂಗ ಮತ್ತು ಕುಶಾನರ ಕಾಲದ ಗಟ್ಟಿಮಣ್ಣಿನ ವಿಗ್ರಹಗಳು, ಪ್ರಾಚೀನ ಬ್ರಾಹ್ಮಿ ಮತ್ತು ಗ್ರೀಕ್ ಲಿಪಿಗಳಲ್ಲಿನ ಶಾಸನಗಳು. ರೋಮನ್ ಕಾಲದ ಮಣ್ಣಿನ ಪಾತ್ರೆಗಳು, ಗ್ರೀಕ್ ವಿಗ್ರಹಗಳು, ಚಂದ್ರಗುಪ್ತನ ಕಾಲದ ಅಪೂರ್ಣ ಸುವರ್ಣ ನಾಣ್ಯ ಇವುಗಳು ಚಂದ್ರಕೇತುಗಡದಲ್ಲಿ ಲಭ್ಯವಾಗಿವೆ.

ಕಳೆದ ಮೂರು ವರ್ಷಗಳಲ್ಲಿ ಈ ಸಂಗ್ರಹಾಲಯದವರು ಕಲ್ಕತ್ತಾಕ್ಕೆ ೫೦ ಮೈಲಿಗಳ ಫಾಸಲೆಯಲ್ಲಿ ಸುಮಾರು ಹನ್ನೆರಡು ಪ್ರಾಚೀನ ಐತಿಹಾಸಿಕ ಸ್ಥಳಗಳನ್ನು ಪತ್ತೆಹಚ್ಚಿರುವರು ಈ ಸ್ಥಳಗಳು ಇಲ್ಲಿಯವರೆಗೂ ಅಜ್ಞಾತವಾಗಿ ಉಳಿದಿದ್ದವು ಮಿಡ್ನಾಪುರ ಜಿಲ್ಲೆಯಲ್ಲಿ ಐದು, ೨೪ ಪರಗಣ ಜಿಲ್ಲೆಯಲ್ಲಿ ಐದು ಮತ್ತು ಹೌರಾ ಜಿಲ್ಲೆಯಲ್ಲಿ ಎರಡು ನಿವೇಶನಗಳು ಪತ್ತೆಹಚ್ಚಲ್ಪಟ್ಟಿವೆ. ಸುಮಾರು ೨,೦೦೦ ವರ್ಷಗಳ ಹಿಂದೆ ಪ್ರಖ್ಯಾತ ತಾಮ್ರಲಿಪ್ತ ರೇವು ಪಟ್ಟಣದ ಜೊತೆಗೆ ಸಮುದ್ರತೀರದಲ್ಲಿ ಅಸಂಖ್ಯಾತ ನಗರಗಳೂ ಬಂದರುಗಳೂ ಇದ್ದವೆಂದು ಈ ಭೂಶೋಧನೆಗಳಿಂದ ವ್ಯಕ್ತಪಟ್ಟಿದೆ ವಿದ್ಯಾಧಾರಿ ನಾಲೆಯು ಹಿಂದೆ ವಿದೇಶೀ ವ್ಯಾಪಾರದ ಮಹತ್ವಪೂರ್ಣ ಜಲಮಾರ್ಗವಾಗಿತ್ತು.

ಈ ವಸ್ತು ಸಂಗ್ರಹಾಲಯಕ್ಕೆ ಉಚಾರವಾಗಿ ನೀಡಲಾಗಿರುವ ಕಲಾ ವಸ್ತುಗಳಲ್ಲಿ ಬಿಜಯ ಸಿಂಗ್‌ನಹರ್ ಅವರ ತಂದೆ ದಿವಂಗತ ಪೂರಣ್‌ಚಂದ್‌ನಹರ್ ಸಂಗ್ರಹಿಸಿದ್ದ ಅತ್ಯಮೂಲ್ಯ ಕಲಾಕೃತಿಗಳೂ ಸೇರಿವೆ. ದಿವಂಗತ ಪೂರಣ್‌ಚಂದನಹರ್ ಅವರು ೧,೦೦೦ಕ್ಕೂ ಹೆಚ್ಚು ಸಂಖ್ಯೆಯ ಅಪೂರ್ವ ಕಲಾಕೃತಿಗಳನ್ನು ಸಂಗ್ರಹಿಸಿದ್ದರು. ದಿವಂಗತ ರಾಯ್ ಬಹಾದೂರ್ ದೀನೇಶ ಚಂದ್ರಸೇನ್ ಅವರೂ ಸಹ ಈ ಸಂಗ್ರಹಾಲಯಕ್ಕೆ ಬಂಗಾಳಿ ಹಾಗೂ ಅಸ್ಸಾಮಿ ಕಲಾವಸ್ತುಗಳನ್ನು ಅರ್ಪಿಸಿದರು. ೧೯೫೯ರಲ್ಲಿ ಬೀರೇನ್ ರಾಯ್ ಅವರು ಸಂಗ್ರಹಿಸಿದ್ದ ಒಂಬತ್ತು ಕಲೆಯ ೧೫೦೦ ಕಲಾ ವಸ್ತುಗಳನ್ನು ಕೊಳ್ಳಲಾಯಿತು. ಇದೇ ರೀತಿಯಾಗಿ ಮಜಲಿಪುರದ ದತ್ತಾ ಅವರು ಸಂಗ್ರಹಿಸಿದ ಪಾಲ ಮತ್ತು ಸೇನಾ ಕಾಲಗಳ ಕಲಾ ವಸ್ತುಗಳನ್ನೂ ಕೊಳ್ಳಲಾಯಿತು. ೧೯೫೫ರಲ್ಲಿ ದಿವಂಗತ ಎ. ಸಿ. ಗುಪ್ತಾ ಅವರ ಸಂಗ್ರಹಣೆಯಲ್ಲಿದ್ದ ರಜಪೂತ ಮತ್ತು ಪಹಡಿ ಶೈಲಿಯ ಅತ್ಯಮೂಲ್ಯವಾದ ವರ್ಣಚಿತ್ರಗಳನ್ನೂ ನೇಪಾಳೀ ಕಂಚಿನ ಪ್ರತಿಮಗಳನ್ನೂ ಪಡೆಯಲಾಯಿತು.

ಆಶುತೋಷ ಸಂಗ್ರಹಾಲಯದ ಸ್ಥಾಪನೆಗೆ ಪೂರ್ವದಲ್ಲಿ ಗುಪ್ತರ ಕಾಲಕ್ಕೆ ಹಿಂದಿನ ಅವಧಿಯ ಕಲಾವಸ್ತುಗಳಾವುವೂ ದೊರೆತಿರಲಿಲ್ಲ. ಈ ಸಂಗ್ರಹಾಲಯದ ಸ್ಥಾಪನೆ ೨ ನಂತರದ ೨೦ ವರ್ಷಗಳ ಅವಧಿಯಲ್ಲಿ ಕ್ರಿ. ಪೂ ೩ನೆಯ ಶತಮಾನದಿಂದ ಹಿಡಿದು ಆಧುನಿಕ ಕಾಲದ ವರೆಗಿನ ಕಲಾಕೃತಿಗಳು ಉಪಲಬ್ಧವಾಗಿವೆ.

ಸಂಗ್ರಹಾಲಯದಲ್ಲಿ ಸುಂದರ ವನಗಳಲ್ಲಿ ಪ್ರಾಪ್ತವಾದ ಕ್ರಿ. ಶ. ೧೧೯೮ಕ್ಕೆ ಸಂಬಂಧಪಟ್ಟ ತಾಮ್ರ ಪಟವೊಂದನ್ನು ಪ್ರದರ್ಶಿಸಲಾಗಿದೆ. ಈ ತಾಮ್ರದ ಪಟದಲ್ಲಿ ಪೀಠಸ್ಥನಾಗಿರುವ ಶ್ರೀ ಮನ್ಮಹಾವಿಷ್ಣು ಮೂರ್ತಿಯ ಅಂಕಿತ ಹಾಗೂ ಬಾರಿಸಾಲ್‌ನಲ್ಲಿ ವಿಖ್ಯಾತವಾದ ೧೧ನೆಯ ಶತಮಾನದ ಶಿವಲೋಕೇಶ್ವರನ ಒಂದು ಕಂಚಿನ ವಿಗ್ರಹ ಇವುಗಳು ಆಗ್ನೇಯ ಏಷಿಯಾದ ಮೂರ್ತಿ ಕಲೆಯ ಒಂದು ಅಂಶವಾಗಿರುವುವು ಸುಂದರ ವನಗಳಲ್ಲಿ ಪ್ರಾಪ್ತವಾದ ಒಂದು ಶಿಲಾ ಚಕ್ರದಲ್ಲಿ ನಟರಾಜನ ರೂಪದ ವಿಷ್ಣುವನ್ನು ಕಾಣಬಹುದಾಗಿದೆ. ನೇಪಾಳದಲ್ಲಿ ಪ್ರಾಪ್ತವಾದ ೧೧೦೫ರ ಹಸ್ತಪ್ರತಿಯು ಮಹಾಯಾನ ಬೌದ್ಧ ಧರ್ಮ ಗ್ರಂಥವಾಗಿದೆ. ಈ ಗ್ರಂಥದಲ್ಲಿ ಬೌದ್ಧ ದೇವತೆಗಳ ಎಂಟು ಸುಂದರ ಚಿತ್ರಗಳಿರುವುವು.

ಈ ಸಂಗ್ರಹಾಲಯವು ಅಧ್ಯಾಪಕರು ಹಾಗೂ ಕಲಾಪ್ರೇಮಿಗಳ ತರಬೇತಿಗಾಗಿ ಉಪನ್ಯಾಸ ಯೋಜನೆಯೊಂದನ್ನು ವ್ಯವಸ್ಥೆಗೊಳಿಸಿ ಉಪಯುಕ್ತವೆನಿಸಿದೆ.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1925.

ಹಲ್ಲಿದ್ದಾಗಲೇ ಹುರಿಗಡಲೆ! ಹಣವಿದ್ದಾಗಲೇ ಉಳಿತಾಯ!

ನಮ್ಮ
ಲಕ್ಕಿ ಕೇಶ್
೩ಮ
ಸರ್ಟಿಫಿಕೇಟುಗಳು

ನಮ್ಮ 8 ರೂ.ಗಳನ್ನು ಐದು ವರುಷಗಳಲ್ಲಿ ರೂ. ಹತ್ತಾಗಿ,
,, 80 ರೂ ಗಳನ್ನು ಐದು ವರುಷಗಳಲ್ಲಿ ರೂ. ನೂರಾಗಿ,
,, 800 ರೂ ಗಳನ್ನು ಐದು ವರುಷಗಳಲ್ಲಿ ರೂ. ಸಹಸ್ರವಾಗಿ
ಅಭಿವೃದ್ಧಿಗೊಳಿಸುವುದು.

ಹೆಚ್ಚಿನ ಮಾಹಿತಿಗೆ ನಮ್ಮ ಯಾವದೇ 110 ಶಾಖೆಗಳಲ್ಲಿ ವಿಚಾರಿಸಿರಿ.

ಟಿ. ಎ ಸ್ಟೈ. ಬಿ.ಕಾಂ.(ಟೊರಂ) ಎ ಎ. ಐ. ಬಿ ಯಸ್ ಆರ್ ಇ.ಯಸ್.(ಲಂಡನ್) ಜನರಲ್ ಮೆನೇಜರ್.
ಡಾ। ಟಿ ಮಾಧವ ಸ್ಟೈ, ಎಂ.ಬಿ & ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಭಾರತದ ಯೋಜನೆಗಳ ಯಶಸ್ಸು–

ವ್ಯವಸಾಯ ವಸ್ತುಗಳ ಅಧಿಕೋತ್ಪಾದನೆ

"ಸಾಮುದಾಯಿಕ ಅಭಿವೃದ್ಧಿ ಚಳವಳಿಯನ್ನು ಮಾನವೀಯ ಮೌಲ್ಯಗಳ ದೃಷ್ಟಿಯಿಂದ ತೀರ್ಮಾನಿಸಬೇಕು. ಅದರ ಗುರಿಯು ಸ್ತ್ರೀ ಪುರುಷರು ವೈಯಕ್ತಿಕವಾಗಿ ತುಂಬು ಜೀವನವನ್ನು ಪಡೆಯಲು ಹಾಗೂ ಒಟ್ಟಾಗಿ ಪೂರ್ಣ ಸಾಮಾಜಿಕ ಜೀವನವನ್ನು ಪಡೆಯಲು ಸಾಧ್ಯವಾಗುವಂತೆ ಅವರಲ್ಲಿ ವೈಯಕ್ತಿಕ ಹಾಗೂ ಸಂಯುಕ್ತ ಹೊಣೆಗಾರಿಕೆಯ ಮನೋಭಾವವನ್ನು ಮೂಡಿಸಬೇಕಾಗುವುದು. ಈ ಮಾರ್ಗದಿಂದಲೆ ಗ್ರಾಮಾಂತರ ಜನಜೀವನವು, ಸಾಮಾಜಿಕ ಹಾಗೂ ನೈತಿಕ ಸಂಬದ್ಧತೆಯ ಸಾಧ್ಯ ಮತ್ತು ಇದೇ ರಾಷ್ಟ್ರೀಯ ಏಕಮತ್ಯದ ಆಧಾರವಾಗಿರುವುದು."

ಹೀಗೆಂದು ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ವಿ. ಟಿ. ಕೃಷ್ಣಮಾಚಾರಿ ಅವರು ಸಾಮುದಾಯಿಕ ಅಭಿವೃದ್ಧಿ ಸಂಬಂಧವಾದ ವಾರ್ಷಿಕ ಸಮ್ಮೇಳನವನ್ನು ದ್ವೇಶಿಸಿ ಮಾಡಿದ್ದ ಭಾಷಣದಲ್ಲಿ ತಿಳಿಸಿದರು. ಭಾರತದ ಯೋಜನೆಗಳ ಯಶಸ್ಸಿಗೆ ವ್ಯವಸಾಯ ವಸ್ತುಗಳ ಅಧಿಕ ಉತ್ಪಾದನೆ ಅಗತ್ಯವೆಂಬುದನ್ನು ಒತ್ತಿ ಸೂಚಿಸಿ ನಮ್ಮ ಯೋಜನೆಗಳ ಧ್ಯೇಯಗಳನ್ನು ಸಾಧಿಸುವ ವಿಚಾರದಲ್ಲಿ ಸಾಮುದಾಯಿಕ ಅಭಿವೃದ್ಧಿ ಚಳವಳಿಯು ವಹಿಸಿರುವ ಪಾತ್ರವನ್ನು ತಿಳಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿರುವ ಆರು ಕೋಟಿ ಕುಟುಂಬಗಳು ಸ್ವಸಹಾಯ ಹಾಗೂ ಸಹಕಾರ ಆಧಾರದ ಮೇಲೆ ವ್ಯವಸ್ಥಿತಗೊಂಡಿರುವ ಗ್ರಾಮ ಸಂಘಟನೆಗಳ ಮೂಲಕ ಸಮಸ್ತ ಶೀಲರಾಗುವಂತೆ ಮಾಡುವುದೇ ಸಾಮುದಾಯಿಕ ಅಭಿವೃದ್ಧಿ ಚಳವಳಿಯ ಕಾರ್ಯವಾಗಿರಬೇಕೆಂದು ಶ್ರೀ ಕೃಷ್ಣಮಾಚಾರಿಯವರು ನುಡಿದರು.

ಯೋಜನೆಗಳಲ್ಲಿ ವ್ಯವಸಾಯ ವಸ್ತುಗಳ ಅಧಿಕ ಉತ್ಪಾದನೆಗೆ ಸಂಬಂಧಿಸಿದ ಕಾರ್ಯಕ್ರಮಗಳ ಮೂಲಭೂತ ಗುರಿಯು ಗ್ರಾಮಾಂತರ ಪ್ರದೇಶಗಳ ಕುಟುಂಬಗಳು ಪಂಚವಾರ್ಷಿಕ ಯೋಜನೆಗಳ ಪ್ರಕಾರ ಲಭ್ಯವಾಗುವ ಜೀವನಮಟ್ಟಗಳ ಏರಿಕೆಯಲ್ಲಿ ಪಾಲುಗೊಳ್ಳುವಂತೆ ಮಾಡುವುದೇ ಆಗಿದೆ ಎಂದು ಯೋಜನಾ ಆಯೋಗದ ಉಪಾಧ್ಯಕ್ಷರು ಹೇಳಿದರು ಕೆಲವು ಸಂದರ್ಭಗಳಲ್ಲಿ ವ್ಯವಸಾಯ ಹಾಗೂ ಕೈಗಾರಿಕಾ ಆಸಕ್ತಿಗಳನಡುವೆ ತರಲಾಗುವ ವ್ಯತ್ಯಾಸವನ್ನು ಅವರು ಖಂಡಿಸಿದರು. ಸಮುದಾಯದ ಎಲ್ಲ ವರ್ಗಗಳಿಗೂ ಪ್ರಯೋಜನ ಲಭ್ಯವಾಗುವ ರೀತಿಯಲ್ಲಿ ಸಮತೋಲದ ಅಭಿವೃದ್ಧಿಯು ನಮ್ಮ ಗುರಿಯಾಗಿರಬೇಕೆಂದರು.

ತಮ್ಮ ಭಾಷಣವನ್ನು ಮುಂದುವರಿಸುತ್ತಾ ಶ್ರೀ ಕೃಷ್ಣಮಾಚಾರಿಯವರು ೧೯೫೬ರಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ನಡೆದ ಸಮತೋಲತೆಗಳನ್ನು ಸ್ಮರಣೆಗೆ ತಂದರು. ಈ ಮಾತುಕತೆಗಳ ಫಲಸ್ವರೂಪವಾಗಿ ವ್ಯವಸಾಯ ವಸ್ತುಗಳ ಉತ್ಪಾದನೆಯ ಗುರಿಗಳನ್ನು ಪರಿಷ್ಕರಿಸಲಾಯಿತು. ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಅಗತ್ಯತೆಗಳನ್ನು ಪೂರೈಸುವಂತಹ, ವ್ಯಾವಸಾಯಿಕ ವರಮಾನಗಳಲ್ಲಿ ಗಮನಾರ್ಹವಾದ ಏರಿಕೆಯನ್ನು ತರುವಂತಹ ಹಾಗೂ ವ್ಯಾವಸಾಯಿಕ ಮತ್ತು ವ್ಯಾವಸಾಯಿಕೇತರ ವರಮಾನಗಳ ನಡುವೆ ಇರುವ ಅಂತರವನ್ನು ತಗ್ಗಿಸುವಂತಹ" ಕಾರ್ಯಕ್ರಮವನ್ನು ಆಗ ಒತ್ತಿ ಸೂಚಿಸಲಾಗಿತ್ತು ಆ ಕಾರ್ಯಕ್ರಮದ ಪ್ರಕಾರ ಕತ್ತು ವರ್ಷಗಳಲ್ಲಿ ವ್ಯವಸಾಯ ವಸ್ತುಗಳ ಉತ್ಪಾದನೆಯನ್ನು ದ್ವಿಗುಣಗೊಳಿಸಬೇಕಾಗುವುದು. ಗ್ರಾಮಾಂತರ ಹಾಗೂ ನಗರ ಕ್ಷೇತ್ರಗಳಿಗೆ ಸಂಬಂಧಿಸಿದ ವರಮಾನಗಳ ನಡುವೆಯ ಅಂತರವೆ ಹೆಚ್ಚಾಗಬಾರದಿದ್ದರೆ, ಗ್ರಾಮಾಂತರ ದೇಶಗಳಲ್ಲಿ ತಲಾ ಒಬ್ಬಬ್ಬ ವ್ಯಕ್ತಿಯ ವರಮಾನವು ೧೯೫೬ರ ವೇಳೆಗೆ ಕನಿಷ್ಠ ಪಕ್ಷ ದ್ವಿಗುಣಗೊಳ್ಳಬೇಕಾಗುವುದೆಂದು ಅವರು ನುಡಿದರು.

ಈ ಸಂದರ್ಭದಲ್ಲಿ ಅವರು ೨೦ ವರ್ಷಗಳ ಅವಧಿಯಲ್ಲಿ ವ್ಯವಸಾಯ ಉತ್ಪಾದನೆಯನ್ನು ಉತ್ತಮಗೊಳಿಸಲು ಸಾಧ್ಯವಾಗುವಂತಹ ಕಾರ್ಯಕ್ರಮಗಳನ್ನು ತಿಳಿಸಿದರು.

ನೀರಾವರಿ ಸೌಲಭ್ಯಗಳನ್ನು ಬಳಸಿಕೊಳ್ಳುವ ಸಮಸ್ಯೆಯನ್ನು ಹಾಗೂ ನಮ್ಮ ನೀರಾವರಿ, ಕಾರ್ಯನೀತಿ ಮತ್ತು ಕಾರ್ಯಕ್ರಮಗಳಲ್ಲಿ ಉಂಟಾಗಿರುವ ಕ್ರಾಂತಿಕಾರಕ ಬದಲಾವಣೆಗಳನ್ನು ಪ್ರಸ್ತಾಪಿಸಿ, ಶ್ರೀ ಕೃಷ್ಣಮಾಚಾರಿ ಅವರು ಹಿಂದೆ ಸರಕಾರದವರು ಅಣೆಕಟ್ಟು ಮತ್ತು ನಾಲಾ ವ್ಯೂಹಗಳನ್ನು ನಿರ್ಮಿಸುತ್ತಿದ್ದರೆಂದೂ, ಜನರು ಕ್ರಮೇಣ ತಮ್ಮ ಪ್ರಯತ್ನಗಳಿಂದ ನಾಲೆಗಳನ್ನು ನಿರ್ಮಿಸಿ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳಬೇಕಾಗಿತ್ತೆಂದೂ ನುಡಿದರು. ಪ್ರಥಮ ಯೋಜನೆಯೊಂದಿಗೆ ಸರಕಾರದವರ ಕಾರ್ಯನೀತಿ ಪರಿವರ್ತನೆಗೊಂಡಿತು

ನಮ್ಮ ಯೋಜನೆಗಳಲ್ಲಿ ಆಳವಡಿಸಿಕೊಳ್ಳಲಾಗಿರುವ ಅಶಾಭರಿತ ನೀರಾವರಿ ಕಾರ್ಯಕ್ರಮಕ್ಕೆ ಪುರಾತನ ತಂತ್ರ ವಿಧಾನಗಳು ಸೂಕ್ತವಾಗಿರುವುದಿಲ್ಲವೆಂದು ಅವರು ನುಡಿದರು. ನಮ್ಮ ಮನೋಭಾವವೇ ಬದಲಾಗಬೇಕೆಂದರು. ಪ್ರಥಮ ಯೋಜನಾವಧಿಯಲ್ಲಿ ನೀರಾವರಿ ಕಾರ್ಯಗಳಿಗಾಗಿ ೪೦೭ ಕೋಟಿ ರೂಪಾಯಿಗಳ ಹಣವನ್ನು ವೆಚ್ಚ ಮಾಡಲಾಯಿತು. ಮೊದಲನೆಯ ಎರಡು ಯೋಜನೆಗಳಲ್ಲಿ ಸುಮಾರು ೭೭೮ ಕೋಟಿ ರೂಪಾಯಿಗಳ ಹಣ ವೆಚ್ಚವಾಗಿದೆ. ಹಿಂದಿನ ವಿಧಾನಗಳ ಪ್ರಕಾರ ನೀರಾವರಿ ಸೌಲಭ್ಯಗಳನ್ನು ಬಳಸಿದ್ದಾದಲ್ಲಿ ಪ್ರಯೋಜನ ಪ್ರಾಪ್ತಿಯಾಗಲು ೧೦—೧೫ ವರ್ಷಗಳು ಬೇಕಾಗುವುದು. ದೇಶವು ವರ್ಷಕ್ಕೆ ೩೦೦ರಿಂದ ೪೦ ಕೋಟಿ ರೂಪಾಯಿಗಳ ಹಣವನ್ನು ಬಡ್ಡಿಯ ರೂಪದಲ್ಲಿ ಕಳೆದುಕೊಳ್ಳುವುದು. ಈ ಹಿಂದಿನ ಆಧಾರದ ಮೇಲೆ ಯಾವ ಭಾರಿ ಪ್ರಮಾಣದ ನೀರಾವರಿಅಭಿವೃದ್ಧಿ ಕಾರ್ಯಕ್ರಮವೂ ಸಾಧ್ಯವಾಗುವುದಿಲ್ಲವೆಂದು ಶ್ರೀ ಕೃಷ್ಣಮಾಚಾರಿ ಅವರು ನುಡಿದರು. ಪ್ರತಿ ಘಟ್ಟದಲ್ಲಿಯೂ ಹೆಚ್ಚಿನ ಉತ್ಪಾದನೆಯ ರೂಪದಲ್ಲಿ ಪರಮಾವಧಿ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುವ ರೀತಿಯಲ್ಲಿ ನೀರಾವರಿ ಕಾರ್ಯಗಳನ್ನು ಕೈಗೊಳ್ಳದ ಹೊರತು ಭಾರಿ ಪ್ರಮಾಣದಲ್ಲಿ ಹಣ ತೊಡಗಿಸುವ ವಿಚಾರವನ್ನು ಆಲೋಚಿಸುವಂತಿಲ್ಲ.

ತಮ್ಮ ಭಾಷಣವನ್ನು ಮುಂದುವರಿಸುತ್ತಾ ಶ್ರೀ ಕೃಷ್ಣಮಾಚಾರಿ ಅವರು, ದ್ವಿತೀಯ ಯೋಜನಾವಧಿಯಲ್ಲಿ ವಿವಿಧೋದ್ದೇಶದ, ಭಾರಿ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಕಾರ್ಯಗಳಿಂದ ಸುಮಾರು ೧೬೦ ಲಕ್ಷ ಎಕರೆಗಳ ಜಮೀನುಗಳನ್ನು ಸಾಗುವಳಿಗೆ ತರಬೇಕಾಗುವುದೆಂದು ಹೇಳಿದರು. ೧೯೫೦ ರಿಂದ ೧೫ ವರ್ಷಗಳ ಅವಧಿಯಲ್ಲಿ ಹೆಚ್ಚಿನ ನೀರಾವರಿಗಾಗಿ ಅವಕಾಶವಿರುವುದನ್ನು ಅವರು ವಿವರಿಸಿದರು. ೧೯೫೬ರ ವೇಳೆಗೆ ವಿವಿಧೋದ್ದೇಶದ, ಭಾರಿ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಪ್ರಾಜೆಕ್ಟುಗಳಿಂದ ಸುಮಾರು ೯ ಕೋಟಿ ಎಕರೆಗಳ ಭೂಮಿಯನ್ನು ನೀರಾವರಿಗೆ ಒಳಪಡುವ ನಿರೀಕ್ಷೆಯಿದೆ.

ಅನಂತರ ಶ್ರೀ ಕೃಷ್ಣಮಾಚಾರಿ ಅವರು ವ್ಯವಸಾಯ ತಂತ್ರ ವಿಧಾನಗಳನ್ನು ಉತ್ತಮಪಡಿಸುವ ಸಂಬಂಧವಾದ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿದರು. ಈ ಕಾರ್ಯಕ್ರಮಗಳಲ್ಲಿ ಮೊದಲನೆಯದು ಉತ್ತಮ ಜಾತಿಯ ಬೀಜದ ಧಾನ್ಯಗಳನ್ನು ಪೂರೈಸುವುದು. ಇದಕ್ಕಾಗಿ ದ್ವಿತೀಯ ಯೋಜನೆಯು ೪,೧೮೫ ಬೀಜದ 'ಫಾರಂ'ಗಳನ್ನು ಒದಗಿಸಿದೆ ಈ ಕಾರ್ಯಕ್ರಮದ ಅಂಗವಾಗಿ ಪ್ರತಿ ಗ್ರಾಮವೂ ತನಗೆ ಅಗತ್ಯವಾದ ಸುಧಾರಿಸಿದ ಜಾತಿಯ ಬೀಜದ ಧಾನ್ಯಗಳನ್ನು ಉತ್ಪಾದಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ನುಡಿದರು. ೧೯೫೮–೫೯ರಲ್ಲಿ ೧೫೬೦ ಬೀಜದ ಫಾರಂಗಳನ್ನು ತೆರೆಯಬೇಕಾಗುವುದು. ಈ ಕಾರ್ಯಕ್ರಮದ ಮತ್ತೊಂದು ಭಾಗವಾಗಿ ಪ್ರತಿ ಗ್ರಾಮವೂ ತನಗೆ ಅಗತ್ಯವಾದ ಕಾಂಪೋಸ್ಟ್ ಹಾಗೂ ಹಸಿರು ಗೊಬ್ಬರವನ್ನು ಸಿದ್ಧಗೊಳಿಸಬೇಕಾಗುವುದು ದ್ವಿತೀಯ ಯೋಜನಾವಧಿಯಲ್ಲಿ ೩೦, ೮೮ ಲಕ್ಷ ಎಕರೆಯ ಭೂಮಿಯಲ್ಲಿ ಜಪಾನೀ ಸಾಗುವಳಿ ವಿಧಾನವನ್ನು ಅಚರಣೆಗೆ ತರುವ ನಿರೀಕ್ಷೆಯಿದೆ

ಗ್ರಾಮಾಂತರ ಭಾರತದಲ್ಲಿ ಸಣ್ಣ ಸಣ್ಣ ಗ್ರಾಮ ಸಮುದಾಯಗಳಾಗಿ ವ್ಯವಸ್ಥೆಗೊಂಡಿರುವ ೬೦೦ ಲಕ್ಷ ಕುಟುಂಬಗಳು ಕೈಗೊಳ್ಳಬೇಕಾದ ದೀರ್ಘಾವಧಿಯ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮದ ಪರಿಣಾಮವನ್ನು ಶ್ರೀ ಕೃಷ್ಣಮಾಚಾರಿ ಅವರು ವಿವರಿಸಿದರು. ಪ್ರತಿ ಗ್ರಾಮದಲ್ಲಿಯೂ ಗ್ರಾಮ ಪಂಚಾಯತಿ ಹಾಗೂ ಗ್ರಾಮ ವಿವಿಧೋದ್ದೇಶ ಸಹಕಾರ ಸಂಘವು ಈ ಕಾರ್ಯಕ್ರಮಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ಅವರು ನುಡಿದರು. ಗ್ರಾಮ ಪಂಚಾಯತಿಗಳು ತೆರಿಗೆ ವಿಧಿಸುವ ಅಧಿಕಾರವನ್ನು ಪಡೆದಿರಬೇಕು. ಎಲ್ಲ ಕಾರ್ಯಕ್ರಮಗಳನ್ನು ಸಹಕಾರ ಸಂಘದ ಮೂಲಕವೇ ನಡೆಸಬೇಕು. ಈ ಸಹಕಾರ ಸಂಘದಲ್ಲಿ ಪ್ರತಿ ಕುಟುಂಬವೂ ಪ್ರಾತಿನಿಧ್ಯ ಪಡೆದಿರಬೇಕು

ಪ್ರತಿ ಗ್ರಾಮದ ಪಂಚಾಯತಿ ಹಾಗೂ ಸಹಕಾರ ಸಂಘವೂ ಗ್ರಾಮಕ್ಕಾಗಿ ಸಂಚಿತ ವಾರ್ಷಿಕ ಕಾರ್ಯಕ್ರಮವೊಂದನ್ನು ರೂಪಿಸಿಕೊಳ್ಳಬೇಕು. ಇದು ಗ್ರಾಮದ ಈ

ಪ್ರಾಥಮಿಕ ಶಾಲೆಯಲ್ಲಿ ಸಾಯನ್ಸ್ ತರಗತಿಯ ವಿದ್ಯಾರ್ಥಿಗಳು ಹತ್ತಿಯಿಂದ ಬಟ್ಟೆತಯಾರಾಗುವ ಮುಂಚೆ ಯಾವ ರೂಪಾಂತರಗಳನ್ನು ಹೊಂದುತ್ತವೆ ಎಂಬುದನ್ನು ಪ್ರದರ್ಶಿಸುತ್ತಿರುವ ನೋಟ.

ಬೇಂಕು ವ್ಯವಹಾರಗಳಲ್ಲಿ ಉತ್ತಮವಾದುವುಗಳೆಲ್ಲವೂ ಒಂದೇಕಡೆ ಸಿಗುವ ಸಂಸ್ಥೆಗಳಲ್ಲೆಲ್ಲಾ "ಕೊರ್ಪೊರೇಶನ್" ಬೇಂಕೂ ಒಂದಾಗಿದೆ.
ಅಂತಲೇ, ನೀವು ಈ ಬೇಂಕಿನಲ್ಲಿ ಅತಿ ಹೆಚ್ಚಿನ ಸೌಕರ್ಯಗಳನ್ನೆಲ್ಲಾ ಅತಿ ಕಡಿಮೆ ಸಮಯದಲ್ಲಿ ಧಾರಾಳವಾಗಿ ಪಡೆಯಬಹುದು. ಅಂದಬಳಿಕ, ನೀವೇಕೆ ಈ ಬೇಂಕಿಗೂ ನಿಮ್ಮ ಸೇವೆಗೆಯ್ಯುವ ಸಂಧರ್ಭವೊಂದನ್ನು ಕೊಡಕೂಡದು?

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಪ್ರಧಾನ ಕಚೇರಿ : ಉಡುಪಿ, (ದ. ಭಾರತ).

ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ಸಿದ್ಧವಿರಬೇಕು ಈ ಕಾರ್ಯಕ್ರಮವು ವಿವಿಧೋದ್ದೇಶದ ಬಾರಿ ಹಾಗೂ ಮಧ್ಯಮ ಪ್ರಾಜೆಕ್ಟುಗಳು, ತೂಬು ಬಾವಿಗಳೂ ಸೇರಿ ಅಪ್ರಧಾನ ನೀರಾವರಿ ಕಾರ್ಯಗಳು, ಏರಿಗಳು ಮತ್ತು ಮಣ್ಣಿನ ಸಂರಕ್ಷಣೆ ಮುಂತಾದ ಕಾರ್ಯಗಳು, ವೈಜ್ಞಾನಿಕ ರೀತಿಯ ಕಾರ್ಯಕ್ರಮ, ಕೃತಕ ಗೊಬ್ಬರಗಳ ಹಂಚಿಕೆ, ಜಪಾನೀ ವಿಧಾನದ ಸಾಗುವಳಿ, ಗೃಹ ಮತ್ತು ಅಲ್ಪ ಪ್ರಮಾಣದ ಉದ್ಯಮಗಳು ಹಿಡುವಳಿಗಳ ಕ್ರೂಡೀಕರಣ, ಈ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಿದೆ

ಭೂ ಸುಧಾರಣೆ ಹಾಗೂ ಸಾಮುದಾಯಿಕ ಅಭಿವೃದ್ಧಿ ಕಾರ್ಯ ಇವರಡು ಪರಸ್ಪರ ಸಂಬಂಧಪಡೆದಿವೆ. ಈ ಎರಡರಿಂದಲೂ ಸಾಮಾಜಿಕ ಬದಲಾವಣೆಯನ್ನು ತರಬಹುದಾಗಿದೆ ಇವೆರಡನ್ನೂ ಪ್ರತ್ಯೇಕವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ ಗ್ರಾಮಸಹಕಾರ ಸಂಸ್ಥೆಯಲ್ಲಿರುವ ಸದಸ್ಯರಲ್ಲಿ ನೂರಕ್ಕೆ ೩೦ರಿಂದ ೪೦ರಷ್ಟು ಸದಸ್ಯರು ಸಾಲ ಸೌಲಭ್ಯಗಳನ್ನು ಪಡೆಯಲು ಅರ್ಹತೆ ಪಡೆದಿರುವರು. ಆವು, ನಗದು ಅಥವಾ ಸಾಮಗ್ರಿಗಳ ರೂಪದಲ್ಲಿ ಸಾಲಗಳನ್ನು ಅಪೇಕ್ಷಿಸುವ ನೂರಕ್ಕೆ ೩೦ ರಿಂದ ೪೦ರಷ್ಟು ಸಂಖ್ಯೆಯ ಸದಸ್ಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಈ ಸಾಲ ಸೌಲಭ್ಯಗಳಿಗೆ ಅರ್ಹರಾದ ಸದಸ್ಯರು ಸಾಲ ಪಡೆದದರಿಂದ ಹಣವನ್ನು ಮರುಪಾವತಿಮಾಡುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಗಣಿ ಮತ್ತಿತರ ಶಾಸನಗಳ ಸೌಲಭ್ಯಗಳು ಶಾಸನಗಳ ದೀರ್ಘ ಸೌಲಭ್ಯಗಳನ್ನು ಪಡೆಯಲು ಅರ್ಹರಾದ ವ್ಯಕ್ತಿಗಳಿಗೆ ದೊರಕುವಂತೆ ಮಾಡುವುದ ಈ ಸದಸ್ಯರ ಕರ್ತವ್ಯವಾಗಿರುವುದು ಈ ವಿಚಾರದಲ್ಲಿ ಗ್ರಾಮದ ಪ್ರಬಲ ಅಭಿಪ್ರಾಯವು ಫಲದಾಯಕವಾಗಿರುವುದು

ಸರಕಾರವು ಈ ಗ್ರಾಮ ಸಂಪದಕಾರ್ಯ ಚಟುವಟಿಕೆಗಳಿಗೆ ನೆರವೀಯುವ ವಿಚಾರದಲ್ಲಿ ಮಹತ್ವಪೂರ್ಣ ಪತ್ರ ವಹಿಸಿರಯೆಂದು ಶ್ರೀ ಕೃಷ್ಣಮಾಚಾರಿಯವರು ನುಡಿದರು ಶ್ರೀಯುತರು ಸರಕಾರದವರು ಕೈಗೊಳ್ಳಬೇಕಾದ ಪ್ರಮುಖ ಕ್ರಮಗಳನ್ನು ವಿವರಿಸಿದರು.

ಗ್ರಾಮಾಂತರ ಬಾರತದ ೫೦ ಕೋಟಿ ಜನರ ವ ನೋಭಾವವನ್ನು ಬದಲಾಯಿಸುವ ಹಾಗೂ ಜನರು ಜೀವನ ವಿಧಾನವನ್ನು ಅರಿತು ಕೊಳ್ಳವ ಅಸೆ ಆಕಾಂಕ್ಷೆಗಳ ಸಂಬಂಧವಾದ ಸಾಮಾಜಿಕ ಬದಲಾವಣೆಯಲ್ಲಿ ಅಡಗಿರುವ ತೊಂದರಗಳನ್ನು ಕಡಿಮೆ ಅಂದಾಜು ಮಾಡುವಂತಿಲ್ಲವೆಂದು ಶ್ರೀ ಕೃಷ್ಣಮಾಚಾರಿ ಅವರು ಎಚ್ಚರಿಸಿದರು ಸೋಲಿನ ಮನೋಭಾವಕ್ಕೆ ಕಾರಣವಿಲ್ಲವೆಂದು ತಾವು ಘೋಷಿಸುವುದಾಗಿ ನುಡಿದರು ನಾವು ಅಪೇಕ್ಷಿಸುವ ಪ್ರಮಾಣದಲ್ಲಿ ಈ ಸಾಮಾಜಿಕ ಬದಲಾವಣೆಯನ್ನು ತರಲು ಸಾಧ್ಯವಿದೆಯೆಂಬುದಕ್ಕೆ ಹಾಗೂ ನಾಯಕತ್ವವು ಗ್ರಾಮಗಳಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಉದಯ ಸುವುದೆಂಬುದಕ್ಕೆ ಸೂಚನೆಗಳಿವ ಎಂದರು

ಈ ಗ್ರಾಮ ಪಂಚಾಯಿತಿಗಳನ್ನು ಉನ್ನತ ಮಟ್ಟಗಳಲ್ಲಿರುವ ಅಂತಹದೇ ಅದ ಸಂಸ್ಥೆಗಳೊಂದಿಗೆ ಸಂಬಂಧ ಕಲ್ಪಿಸಬೇಕಾಗುವುದು ಅಭಿವೃದ್ಧಿಕಾರ್ಯಗಳಿಗಾಗಿ ಪಂಚಾಯಿತಿಗಳನ್ನು ಜಿಲ್ಲೆ, ತಾಲೂಕು ಅಥವಾ ಬ್ಲಾಕ್ ಮಟ್ಟಗಳಲ್ಲಿ ಒಗ್ಗಿಸುವ ವಿಚಾರವು ರಾಜ್ಯಗಳ ಪರಿಶೀಲನೆಯಲ್ಲಿದೆ ಗ್ರಾಮ ಸಹಕಾರ ಸಂಘಗಳನ್ನು ಒಟ್ಟುಗೂಡಿಸಿ, ಅವುಗಳ ಮೂಲಕ ಒಂದೂಕಡೆ ಕೇಂದ್ರ ಬ್ಯಾಂಕ್‌ಗಳನ್ನು, ಇನ್ನೊಂದು ಕಡೆ ಮಾರಾಟ, ಮತ್ತಿತರ ಸಂಘಗಳನ್ನೂ ರೂಪಿಸಬೇಕಾಗುವುದು

ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮ ಸಹಕಾರ ಸಂಘಗಳ ಸ್ಥಾಪನೆಗೆ ಈಗ ಆಗ್ರಪ್ರಾಧಾನ್ಯವೀಯಲಾಗಿದೆಯೆಂದು ಶ್ರೀ ಕೃಷ್ಣಮಾಚಾರಿಯವರು ನುಡಿದರ ಎರಡು ಮೂರು ವರ್ಷಗಳ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಇವುಗಳನ್ನು ಸ್ಥಾಪಿಸುವ ಉದ್ದೇಶವಿದೆಯೆಂದರು

ವಿದೇಶವಿನಿಮಯ ಸಂಪಾದನೆ—

ತೆಂಗಿನನಾರಿನ ವಸ್ತುಗಳ ಮಹತ್ವ

ತೆಂಗು ಉಷ್ಣವಲಯದ ಕಲ್ಪವೃಕ್ಷವೆಂದು ಹೆಸರಾದ ಮರ ಇದರಿಂದ ಹಲವಾರು ತರದ ಕೈಗಾರಿಕೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಅವುಗಳಲ್ಲಿ ತೆಂಗಿನ ನಾರಿನ ಉದ್ಯಮವೂ ಒಂದಾಗಿದೆ ತೆಂಗಿನಕಾಯಿಯ ಒಳಗೊರಟೆಯ ಹೊರಭಾಗದಲ್ಲಿ ಜಟೆಯಿರುವುದಷ್ಟೆ ಇದನ್ನೇ ಕಾಯಕತ್ತ ಅಥವಾ ತೆಂಗಿನ ನಾರು ಎನ್ನುತ್ತಾರೆ

ತೆಂಗಿನನಾರಿನ ಉದ್ಯಮದ ಅಭಿವೃದ್ಧಿಗಾಗಿ ದ್ವಿತೀಯ ಪಂಚವರ್ಷಿಕ ಯೋಜನೆಯಲ್ಲಿ ಮೂಲತಃ ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಈ ಮೊತ್ತದಲ್ಲಿ ತೆಂಗಿನನಾರಿನ ಮಂಡಲಿಯು ಕೈಗೊಳ್ಳಬೇಕಾದ ನೇರವಾದ ಕೇಂದ್ರ ಕಾರ್ಯ ಯೋಜನೆಗಳಿಗೆ ಮೂವತ್ತು ಲಕ್ಷ ರೂಪಾಯಿಗಳು ಮತ್ತು ತೆಂಗನ್ನು ಉತ್ಪಾದಿಸುವ ರಾಜ್ಯಗಳು ಕೈಗೊಳ್ಳುವ ಕಾರ್ಯಯೋಜನೆಗಳಿಗೆ ಎಪ್ಪತ್ತು ಲಕ್ಷ ರೂಪಾಯಿಗಳನ್ನೂ ತೆಗೆದಿರಿಸಲಾಗಿತ್ತು.

ಆದರೆ, ತೆಂಗಿನನಾರಿನ ಉದ್ಯಮವು ಬಾರತದ ಮಟ್ಟಿಗೆ ವಿದೇಶ ವಿನಿಮಯ ನಾಣ್ಯಗಳನ್ನು ಗಳಿಸುವ ಪ್ರಾಮುಖ್ಯವನ್ನು ಪಡೆದಿದೆ ಆದುದರಿಂದ, ವಿದೇಶ ವಿನಿಮಯಗಳ ಕೊರತೆಯ ಈ ಕಾಲದಲ್ಲಿ ಅಧಿಕಾಧಿಕ ವಿನಿಮಯ ನಾಣ್ಯಗಳನ್ನು ಸಂಪಾದಿಸುವ ದೃಷ್ಟಿಯಿಂದ ದ್ವಿತೀಯ ಯೋಜನೆಯಲ್ಲಿ ಮೂಲತಃ ಒದಗಿಸಲಾದ ಹಣವನ್ನು ೧೭೦ ಲಕ್ಷ ರೂಪಾಯಿಗಳಾಗಿ ಪರಿವರ್ತಿಸಿರುವರು ರಾಜ್ಯಗಳಿಗೆ ಹಣದ ಹಂಚಿಕೆಯನ್ನು ಮೊದಲು ೭೦ ಲಕ್ಷವಿದ್ದುದನ್ನು ೧೪೦ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿರುವರು

ಕಳೆದ ವರ್ಷ ಭಾರತದಲ್ಲಿ ೪೨೨ ಕೋಟಿ ರೂಪಾಯಿ ಬೆಲೆಯ ೩೫೩೭೦ ಟನ್ನುಗಳಷ್ಟು ತೆಂಗಿನ ನಾರಿನ ವಸ್ತುಗಳನ್ನು ರಪ್ತುಮಾಡಲು ಒದಗಿಸಲಾಗಿದೆ ೧೯೫೬ರಲ್ಲಿ ೪೨೧ ಕೋಟಿ ರೂಪಾಯಿಗಳ ಮೌಲ್ಯದ ೩೬೮೭೭ ಟನ್ನುಗಳಷ್ಟನ್ನು ನಿರ್ಯಾತ ಮಾಡಲಾಗಿತ್ತು. ಈ ಅಂಕಿಗಳನ್ನು ಕಳೆದ ವರ್ಷದೊಡನೆ ಹೋಲಿಸಿದಾಗ ನಿರ್ಯಾತವು ಸ್ವಲ್ಪ ಇಳಿಮುಖವಾಯಿತೆಂದು ತಿಳಿಯುತ್ತದೆ

ಭಾರತ ಸರಕಾರವು ಈ ತೆಂಗಿನನಾರಿನ ಉದ್ಯಮದ ಪ್ರಗತಿಗಾಗಿ ಕೇರಳದ ಅಲಪ್ಪೆಯಲ್ಲಿ ಬಳಿ ೨೦ ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ತೆಂಗಿನ ನಾರಿನ ಸಂಬಂಧದ ಸಂಶೋಧನಾ ಸಂಸ್ಥೆ ಹಾಗೂ ಕಲ್ಕತ್ತದಲ್ಲಿ ಉಪಸಂಸ್ಥೆಯೊಂದನ್ನು ಸ್ಥಾಪಿಸುವ ತೆಂಗಿನನಾರಿನ ಮಂಡಲಿಯ ಕಾರ್ಯಯೋಜನೆಯೊಂದನ್ನು ಮಂಜೂರು ಮಾಡಿರುವರು ಇದರಿಂದಾಗಿ ತೆಂಗಿನನಾರಿನಿಂದ ಈಗ ತಯಾರಾಗುತ್ತಿರುವ ಒಡವೆವಸ್ತುಗಳಲ್ಲದೇ ನೂತನ ವಿಧಾನದ ವಸ್ತುಗಳೂ ಉತ್ಪಾದಿತಗೊಳ್ಳವ ನಿರೀಕ್ಷೆಯಿದೆ

ಭಾರತ ಮತ್ತು ಭಾರತೇತರ ದೇಶಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಭಾಗವಹಿಸುವ ಅಭ್ಯಾಸವನ್ನು ಈ ತೆಂಗಿನ ನಾರಿನ ಮಂಡಲಿಯು ಇಟ್ಟುಕೊಂಡಿದ್ದು ಕಳೆದ ವರ್ಷ ಭಾರತದಲ್ಲಿ ನಾಲ್ಕು ಮತ್ತು ವಿದೇಶಗಳಲ್ಲಿ ಐದು ಪ್ರದರ್ಶನಗಳಲ್ಲಿ ಭಾಗವಹಿಸಿದೆ ಇಂತಹ ಪ್ರದರ್ಶನಗಳಲ್ಲಿ ತೆಂಗಿನನಾರಿನ ವಸ್ತುಗಳ ಪ್ರದರ್ಶನಕ್ಕಾಗಿ ಅನೇಕ ಬಹುಮಾನಗಳನ್ನು ಇದು ಪಡೆದಿದ, ಇದರ ಫಲಸ್ವರೂಪವಾಗಿ ಒಳಪ್ರದೇಶದ ಹಾಗೂ ವಿದೇಶಗಳಲ್ಲಿನ ವಾರಾಂಟುಗಾರರಿಂದ ಮಂಡಲಿಗೆ ವಿಶೇಷ ವಿಚಾರಣೆಗಳು ಬಂದಿವೆ ಈ ವಿಚಾರಣೆಗಳಿಗೆ ಈ ಮಂಡಲಿಯು ಅತ್ಯಂತ ಶ್ರದ್ಧೆಯಿಂದ ಗಮನವೀಯುತ್ತದೆ.

೧೯೫೭ರ ಕೊನೆಯಲ್ಲಿ ನವದೆಹಲಿಯಲ್ಲಿ ಪ್ರದರ್ಶನ ಹಾಗೂ ವಾರಾಂಟದ ಡಿಪೋಗಳನ್ನು ತೆರೆದಿದ್ದರೂ ಈ ಮಂಡಲಿಯು ೧೯೫೭ರ ನವಂಬರ ತಿಂಗಳ ಕೊನೆಯ ವರೆಗೆ ರೂ ೫೪,೫೭೯ ಬೆಲೆಯ ತೆಂಗಿನ ನಾರಿನ ವಸ್ತುಗಳನ್ನು ಮಾರಿದೆ. ದೆಹಲಿ ಕ್ಷೇತ್ರಗಳಲ್ಲಿ ತೆಂಗಿನ ನಾರಿನ ವಸ್ತುಗಳ ಪ್ರಚಾರಕ್ಕಾಗಿ ಈ ಪ್ರದರ್ಶನ ಡಿಪೋವಿಗೆ ಒಂದು ಸಂಚಾರೀ ಪ್ರಚಾರ ಗಾಡಿಯನ್ನೂ ಒದಗಿಸಲಾಗಿದೆ.

ತೆಂಗಿನನಾರಿನ ವಸ್ತುಗಳು ಜನಪ್ರಿಯವೆನಿಸಬೇಕಾದರೆ, ಅವುಗಳು ಎಲ್ಲರ ದೃಷ್ಟಿಗೂ ಬಿಳಬೇಕು ಹಾಗಾಗಿ ಈ ವರ್ಷವೂ ಕಲ್ಕತ್ತ ಮುಂಬಯಿ ಮತ್ತು ಮದರಾಸುಗಳಲ್ಲಿ ಮತ್ತೆ ಮೂರು ಪ್ರದರ್ಶನ ಹಾಗೂ ವಾರಾಂಟ ಡಿಪೋವನ್ನು ತೆರೆಯಬೇಕೆಂದು ಮಂಡಳಿಯು ಉದ್ದೇಶವಿಟ್ಟುಕೊಂಡಿದೆ. ಅಲ್ಲದೇ ೧೯೫೮-೫೯ರಲ್ಲಿ ಬೆಂಗಳೂರು ಹಾಗೂ ಜಲಂಧರಗಳಲ್ಲಿಯೂ ಇಂತಹುದೇ ಒಂದು ಡಿಪೋವನ್ನು ಪ್ರಾರಂಭಿಸಿಲು ಅವಕಾಶವನ್ನು ಮಾಡಿಕೊಳ್ಳಲಾಗಿದೆ

ತೆಂಗು ಬಹು ಪ್ರಯೋಜನಕ್ಕೆ ಸಿಗುವಂತೆ ತೆಂಗಿನ ನಾರೂ ಅನೇಕ ಕೆಲಸಗಳಿಗೆ ಬರುತ್ತದೆ ತೆಂಗಿನನಾರು ಬಹಳ ಗಟ್ಟಿಯಾಗಿರುವುದರಿಂದ, ಅದರಿಂದ ತಯಾರಿತವಾದ ವಸ್ತುಗಳೂ ಗಟ್ಟಿಯಾಗಿರುವುವು ಹಾಗಾಗಿ, ತೆಂಗಿನನಾರಿಗೆ ಇಂದು ವಿಶೇಷ ಬೆಲೆಯಿದೆ, ಪರದೇಶಗಳಲ್ಲಿಯೂ ತಕ್ಕ ಬೇಡಿಕೆಯಿದೆ. ವಿದೇಶ ವಿನಿಮಯದ ಕೊರತೆಯಿಂದಾಗಿ ಭಾರತವು ಅಭಿವೃದ್ಧಿಪದದಲ್ಲಿ ಕುಂಟುತ್ತ ಸಾಗುತ್ತಿರುವಾಗ ಅಧಿಕಾಧಿಕ ವಿನಿಮಯ ನಾಣ್ಯಗಳನ್ನು ಗಳಿಸುವುದು ಅಪೇಕ್ಷಣೀಯವಾಗಿದೆ ಆದಕ್ಕಾಗಿ ವಿದೇಶಗಳಲ್ಲಿ ಬೇಡಿಕೆಯಿರುವ ಈ ತೆಂಗಿನನಾರಿನ ವಸ್ತುಗಳನ್ನು ಹೆಚ್ಚಹೆಚ್ಚಾಗಿ ನಾವು ಉತ್ಪಾದಿಸಬೇಕು, ಅದನ್ನು ವಿದೇಶಗಳಿಗೆ ಮಾರಬೇಕು ಆಗ ನಮ್ಮ ವಿನಿಮಯದ ನಾಣ್ಯಗಳ ಕೊರತೆಯೂ ಕಡಿಮೆಯಾಯಿತು

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು
NAVAYUGA PRESS, UDIPI.


ಪ್ರೆಸಿಡೆಂಟ್
ಫೌಂಟನ್ ಪೆನ್ನುಗಳು
ತರಹೆವಾರು ಮತ್ತು ನಾನಾ ಬಣ್ಣಗಳಲ್ಲಿ
ಸಿಗುವುವು

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೯-೫-೧೯೫೮	೩೫

ಮೈಸೂರಿನ ಮಂತ್ರಿ ಮಂಡಳ

ಕಳೆದವಾರ ನೊಡಲು ಅಸ್ಥಿರವಾಗಿದ್ದ ಮೈಸೂರು ಮಂತ್ರಿ ಮಂಡಳದ ಆಯ್ಕೆಯು ಪೂರ್ಣವಾಗಿ ಈ ವಾರಾರಂಭದಲ್ಲಿ ಶಾಖೆಗಳ ಹಂಚಿಕೆಯೂ ಸಂಪೂರ್ಣಗೊಂಡಿದೆ. ನೂತನ ಮಂತ್ರಿ ಮಂಡಳವೊಂದು ಅಧಿಕಾರಾರೂಢವಾಗುವ ವೇಳೆ ಅದನ್ನು ಸ್ವಾಗತಿಸುವುದು ಸಂಪ್ರದಾಯವಾಗಿ ಪರಿಣಮಿಸಿದೆ ಹಾಗೆಯೇ ಶ್ರೀ ಬಸಪ್ಪ ದಾನಪ್ಪ ಜತ್ತಿಯವರ ಈ ಹೊಸ ಹುರುಪಿನ ನವಕಾಲದ ನೂತನ ಮಂತ್ರಿ ಮಂಡಳವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಹಿಂದಿನ ಹಲವಾರು ಮಂತ್ರಿ ಮಂಡಳಿಯು ನಿರ್ವಹಿಸಿರುವುದಕ್ಕಿಂತಲೂ ಉನ್ನತ ರೀತಿಯಲ್ಲಿ ಇದು ಕಾರ್ಯಪ್ರವೃತ್ತವಾಗಲೆಂದು ಹಾರೈಸುತ್ತೇವೆ. ಶ್ರೀ ಜತ್ತಿಯವರು ನಾವು ಮೊದಲೇ ಈ ಪುಟಗಳಲ್ಲಿ ಸೂಚಿಸಿದಂತೆ ಒಂದು ಗಂಭಾಂತರಮಯ ಸರಿಸ್ಥಿತಿಯಲ್ಲಿಯೇ ಅಧಿಕಾರದ ಗದ್ದುಗೆಯನ್ನು ಏರಿದ್ದಾರೆ. ಹಿಂದಿನ ಮಂತ್ರಿ ಮಂಡಳದ ಉದಾಸೀನತೆಯ ಅಲಸ್ಯದ ಹಾಗೂ, ಕಾರ್ಯನಿರ್ವಹಣೆಯಲ್ಲಿ ಅಯಶಸ್ವಿತೆಯ ದೆಸೆಯಿಂದಾಗಿ ಹಾಗೂ ಇನ್ನಿತರ ತಮ್ಮ ಮಾನವಸಹಜ ಗುಣಗಳಿಂದಾಗಿ ಜನತೆಯ ಪ್ರತಿನಿಧಿಗಳು ರೋಸಿ ಹೋಗಿ, ಧುರೀಣತ್ವದಲ್ಲಿ ಬದಲಾವಣೆಯನ್ನು ಬಯಸಿ ಪಡೆದ ಭಾಗ್ಯದ ಜ್ಯೋತಿಯಿದು. ಹಿಂದೆ, ಶ್ರೀ ನಿಜಲಿಂಗಪ್ಪನವರ ನಾಯಕತನದ ಸಮಯ ಆಡಳಿತೆಯು ದಕ್ಷವಾಗಿಲ್ಲ, ಕಾರ್ಯದಲ್ಲಿ ಕ್ಷಮತೆಯಿಲ್ಲವೆಂದು ಆರೋಪ ಹೊರಿಸಿದವರು ಶ್ರೀ ಜತ್ತಿಯವರ ಮುಖಂಡತನದಲ್ಲಿ ಹೇಗುಳಿಯುವರೆಂದು ಹೇಳಬರುವುದಿಲ್ಲವಾದರೂ ಕ್ಷುಲ್ಲಕ ಕಾರಣಗಳಿಂದ ಭಿನ್ನಾಭಿಪ್ರಾಯವೇರುವ ಮೈಸೂರಿನಲ್ಲಿ ದಕ್ಷ ಆಡಳಿತಗಾರರೂ ಕಾರ್ಯಕ್ಷಮತಾ ಹೀನರಾಗುವುದು ಅಸಂಭವವಲ್ಲ. ಆದರೂ ಆಡಳಿತದ ಅನುಭವವಿರುವ ಶ್ರೀ ಜತ್ತಿಯವರು ತಮ್ಮ ಅನುಭವನಿಧಿಯನ್ನು ಪೂರ್ಣವಾಗಿ ಬಳಸಿ ಅಸ್ಥಿರವೆನಿಸಿದ ಮೈಸೂರಿನ ರಾಜಕಾರಣದಲ್ಲಿ ಒಂದು ಸ್ಥಿಮಿತತೆಯನ್ನುಂಟುಮಾಡುವರೆಂದು ನಂಬಬಹುದು.

ಶ್ರೀ ಜತ್ತಿಯವರು ತಮ್ಮ ಸಹಾಯಕರನ್ನು ಆರಿಸಿಕೊಳ್ಳಲು ಸ್ವತಂತ್ರರಿರುವರೆಂದು ಮೊದಲಬಾರಿ ಘೋಷಿಸಿದ್ದರೂ ಮುಂದೆ ಮಂತ್ರಿಮಂಡಳಿಯ ಸದಸ್ಯರ ಹೆಸರುಗಳನ್ನು ಘೋಷಿಸುವಾಗ ಮಾತ್ರ ವಿಭಿನ್ನ ಮನೋವೃತ್ತಿಯ ಪರಿಚಯ ಜನತೆಗಾಯಿತು. ಇದರಿಂದಾಗಿಯೇ ಹೆಸರುಗಳನ್ನು ಮೂರು ನಾಲ್ಕು ಬಾರಿಯಾಗಿ ಹಂಚಿ ತನ್ನ ಮಂತ್ರಿಮಂಡಳಿಯನ್ನು ಘೋಷಿಸುವ ಪ್ರಸಂಗ ಶ್ರೀ ಜತ್ತಿಯವರಿಗೊದಗಿತು. ಈ ಸನ್ನಿವೇಶಕ್ಕೆ ಶ್ರೀ ಜತ್ತಿಯವರು ಅನ್ಯರೂಪವನ್ನು ಕೊಡಲು ಯತ್ನಿಸಿರ-ವಾದರೂ ಅದು ಸತ್ಯಕ್ಕೆ ವಿರೋಧವೆಂಬುದು ವರದಿಗಳಿಂದ ತಿಳಿಯುತ್ತದೆ ರಿಕ್ತಸ್ಥಾನವನ್ನು ತುಂಬುವಾಗ ತಾನು ಮೇಲ ತಾನು ಮೇಲೆಂದು ನಿರುದ್ಯೋಗಿಗಳು ಮೇಲೆ ಬೀಳುವಂತೆ ೧೦ ಮಂತ್ರಿಗಳ ಸ್ಥಾನಕ್ಕೆ ಮುಮ್ಮಡಿ ನಾಲ್ಮಡಿ ಸಂಖ್ಯೆಯ ಎಂ. ಎಲ್. ಎ.ಗಳು ಎಂ ಎಲ್ ಸಿ. ಗಳು ಅಪೇಕ್ಷಿತರಾಗಿದ್ದುದು, ಈ ಬಗ್ಗೆ ನಾಹುಕಾರ ಚೆನ್ನಯ್ಯನವರಂತಹ ಸುಪ್ರಭಾವಿಗಳು "ಇನ್‌ಫ್ಲೂಯೆನ್ಸ್" ಮಾಡಲು ತೊಡಗಿದುದು ಮುಖ್ಯ ಮಂತ್ರಿಗಳವರಿಗೆ ತಲೆಯೆನ್ನೇ ಕೆಡಿಸಿರಬೇಕು. 'ಯಾರಿಗೆ ಕೊಡಲಿ?' ಎಂಬುದೇ ಒಂದು ಸಮಸ್ಯೆಯಾಯಿತು. ವರ್ಗ ಹಾಗೂ ಪ್ರದೇಶ ವಿಭಾಗ ಪದ್ಧತಿಯ ಮೇಲೆ ತಮ್ಮ ಮಂತ್ರಿಮಂಡಳಿಯ ಸ್ಥಾನವನ್ನು ಹಂಚಿಕೊಳ್ಳುವಾಗಲೂ ಹರಿಜನರು ಇಬ್ಬರು ಮಂತ್ರಿಗಳನ್ನೂ ಹಳೆಯ ಮೈಸೂರಿಗರು ಸೇಕಡಾ ೫೦ ಸ್ಥಾನಗಳನ್ನು ಕೇಳಿದರಂತೆ. ಹಾಗಾಗಿ ಮಂತ್ರಿಮಂಡಳದ ರಚನೆಯಲ್ಲಿಯೇ ಬಿಕ್ಕಟ್ಟು-ವಾದವಿವಾದಗಳು ಹುಟ್ಟಿಕೊಂಡಿದ್ದುವೆಂಬುದು ಕಾಂಗ್ರೆಸ್ ವರಿಷ್ಠರಿಂದ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚೆನ್ನಯ್ಯನವರಿಗೆ ಮಂತ್ರಿಮಂಡಲ ರಚನೆಯಲ್ಲಿ ಜತ್ತಿಯವರ ನಡುವೆ ಪ್ರವೇಶಿಸಬಾರದು ಎಂಬ ಆದೇಶ ಬಂದಿರುವುದೆಂಬ ವತ್ರಿಕಾವರದಿಯೇ ಸಾಕು. ಆದರೂ ರಚನೆಯಲ್ಲಿ ವಿಲಂಬ-ಅಭಿಪ್ರಾಯ ಭೇದವಿದ್ದರೂ ಶಾಖೆಗಳ ಹಂಚಿಕೆಯಲ್ಲಿ ಹೀಗಾಗದಿರುವುದೊಂದು ಆಶೆಯ ದ್ಯೋತಕ.

ಮೈಸೂರಿನ ನೂತನ ಮಂತ್ರಿಮಂಡದ ಸದಸ್ಯರು ಹಾಗೂ ಉಪಮಂತ್ರಿಗಳ ಹೆಸರುಗಳನ್ನೂ ಅವರವರ ಶಾಖೆಗಳನ್ನೂ ಬೇರೆ ಪುಟದಲ್ಲಿ ಕೊಟ್ಟಿದ್ದೇವೆ. ಈ ಪಟ್ಟಿಯನ್ನು ಗಮನಿಸುವಾಗ, ಸಾಮಾನ್ಯವಾಗಿ ಅವರವರಿಗೆ ಅಭಿರುಚಿಯಿರುವ ಶಾಖೆಗಳನ್ನೇ ಕೊಡಲಾಗಿರುವುದಲ್ಲದೆ, ಪ್ರತಿಯೊಬ್ಬರಿಗೂ ಸಮಾನಕಾರ್ಯವೇಲೆಯಿರುವಂತೆ ವಿಭಾಗಿಸಲಾಗಿದೆ. ಆದರೂ ಮುಖ್ಯ ಮಂತ್ರಿಗಳು ತಾವಿಟ್ಟುಕೊಂಡಿದ್ದ ಶಾಖೆಗಳನ್ನು ನೋಡಿಕೊಂಡು ಆಡಳಿತೆಯ ಮೇಲ್ವಿಚಾರಣೆಯನ್ನು ಮಾಡುವಷ್ಟು ಸಮಯಾವಕಾಶ ದೊರೆಯುವುದು. ಕಷ್ಟ-ಮಯಂದಕ್ಕೆ ಹರಿಜನರ ಹಾಗೂ ಕೈದರಾಬಾದ ಕರ್ನಾಟಕದವರ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಒಂದೆರಡು ಮಂತ್ರಿ ಸ್ಥಾನಗಳನ್ನು ಹೆಚ್ಚಿಸುವಾಗ ಅಂತಹಂಗೆ ಅವುಗಳಲ್ಲಿ ಕೆಲವನ್ನು ಹಂಚಿಕೊಡುವರೆಂಬ ನಿರೀಕ್ಷೆಯಿದೆ ಮಂತ್ರಿಮಂಡಳದಲ್ಲಿ ಇಬ್ಬರು ಹರಿಜನರು, ಇಬ್ಬರು ಮುಸ್ಲಿಮರು ಮತ್ತಿಬ್ಬರು ಮಹಿಳೆಯವರು ಸೇರಿಕೊಂಡಿರುವುದು ಈ ಮಂಡಳಿಯ ವೈಶಿಷ್ಟ್ಯ. ಶ್ರೀ ಮರಿಯಪ್ಪನವರಂತಹ ಅನುಭವಿಕರು ಕಡಿದಾಳ ಮಂಜಪ್ಪನವರಂತಹ ಉತ್ಸಾಹಿಗಳು ಸುಬ್ರಹ್ಮಣ್ಯಮ ಡಾ. ಹೆಗ್ಡೆಯವರಂತಹ ದಕ್ಷ ಆಡಳಿತೆಗಾರರು, ಗಣಮುಖಿಯವರಂತಹ ಉತ್ತಮ ಮನೋವೃತ್ತಿ—ವಿಚಾರ ಧಾರೆಯವರು ಇಲ್ಲಿ ಸೇರಿಕೊಂಡಿದ್ದಾರೆ. ಇದನ್ನು ಗಮನಿಸುವಾಗ, ಆದಿಯಲ್ಲಿ ಸಾಕಷ್ಟು ಬಿಕ್ಕಟ್ಟು ಒದಗಿದರೂ ಮಂತ್ರಿ ಮಂಡಳದ ಸದಸ್ಯರು ಯೋಗ್ಯರಿದ್ದಾರೆಂದು ಹೇಳಬಹುದು.

ಮಂತ್ರಿಗಳಾಗಬೇಕೆಂಬಾಸೆ ಅನೇಕರಿಗಿರುವಾಗ, ಮಂತ್ರಿಗಳ ಸಂಖ್ಯೆ ಪರಿಮಿತವಿರುವುದರಿಂದ ಉಳಿದ ಅರ್ಥಿಗಳಿಗೆ ನಿರಾಸೆಯಾಗಿರಬಹುದು. ಆದುದರಿಂದ ಅಂತಹರಲ್ಲಿ ಈ ಮಂತ್ರಿಮಂಡಳದ ಬಗ್ಗೆ ಯಾವ ಅಭಿಪ್ರಾಯವಿದೆಯೆನ್ನಬರುವುದಿಲ್ಲ. ಆದರೂ ಶ್ರೀ ಚೆನ್ನಯ್ಯನವರಿಗೆ ಈ ಆಯ್ಕೆ ಸರಿಹೊಂದಿರುವಂತೆ ಕಾಣುವುದಿಲ್ಲ. ಎಷ್ಟು ಉತ್ತಮರೀತಿಯಲ್ಲಿ ಆಡಳಿತೆಯನ್ನು ನಿರ್ವಹಿಸುವರೆಂಬುದು ಗೌಣವಾಗಿ, ಎಷ್ಟು ಕಾಲದವರೆಗೆ ನಿರಾಸೆಯಿಂದ ಕಂಗೆಟ್ಟು ಸಿಟ್ಟಿಗೆದ್ದವರನ್ನು ಸಂತೈಸಬಲ್ಲರು ಎಂಬ ಪ್ರಶ್ನೆ ಮುಖ್ಯವಾಗಿರುವಂತೆ ತೋರುತ್ತದೆ. ಅಂತೂ ಶ್ರೀ ಜತ್ತಿಯವರು ಆಡಳಿತೆಯ ಕ್ರಮದಲ್ಲಿ ಕಾರ್ಯಕ್ಷಮತೆಯಲ್ಲಿ ಪ್ರಮುಖಾಸ್ಥೆಯಜಸುವರಲ್ಲದೇ ಅದಕ್ಕೆ ಬೇಕಾದ ಸೂಚನೆಗಳನ್ನೂ ತಮ್ಮ ಸಹೋದ್ಯೋಗಿಗಳಿಗೆ ಕೊಟ್ಟು ಈ ಗಾಗಲೇ ಕಾರ್ಯ ತತ್ಪರರಾಗಿದ್ದಾರೆ. ಅವರು ಮೈಸೂರಿನ ಆಡಳಿತೆಯ ಯಂತ್ರವನ್ನು ಸಂಸ್ಕರಿಸಿ ಉತ್ತಮರೀತಿಯಲ್ಲಿ ಜನತೆಯ ಬೇಡಿಕೆಗಳನ್ನು ಪೂರೈಸಿ ಸಚಿವೋತ್ತಮರೆನಿಸಲೆಂದೂ, ಜನತೆಯ ಆಶೆ ಆಕಾಂಕ್ಷೆಗಳು ಹೂರ್ಯಸಲ್ಪಡಲೆಂದೂ ಹಾರೈಸುತ್ತೇವೆ. ಅಧಿಕಾರಕ್ಕೆ ಅಂಟಿಕೊಳ್ಳುವ ಧೋರಣೆಯನ್ನು ಬಿಟ್ಟು ಕಾರ್ಯಕ್ರಮಗಳನ್ನು ಸುವ್ಯಸ್ಥಿತ ರೀತಿಯಲ್ಲಿ ಜನರಿಗೆ ಕ್ಷೇಮಕರವಾಗಿ ಮುಂದುವರಿಸುವ ಪ್ರೇರಣೆಯು ನೂತನ ಮಂತ್ರಿ ಸಂಪುಟಕ್ಕೆ ಬರಲಿ.

ಉಡುಪಿ

ಶ್ರೀಮತಿ ಆಳ್ವಾ— ಕೇಂದ್ರ ಗೃಹ ಶಾಖೆಯ ಉಪಮಂತ್ರಿ ಶ್ರೀಮತಿ ವಾಯಿಲೆಟ್ ಆಳ್ವಾರು ತಾ. 30ರಂದು ಉಡುಪಿಗೆ ಆಗಮಿಸಿ ಜೂನ್ ತಾ. 9ರ ತನಕ ಇಲ್ಲಿಯೇ ಉಳಿದುಕೊಂಡು ತಾ 10ರಂದು ಧಟ್ಟಳಕ್ಕೆ ತೆರಳುವರು.

ನಗರಸಭೆ ಜರಗಲಿಲ್ಲ— ಉಡುಪಿ ನಗರಸಭೆಯು ತಾ. 26ರಂದು ಉಪಾಧ್ಯಕ್ಷ ಶ್ರೀ ಸಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಪ್ರಶ್ನೋತ್ತರಗಳಾದ ಬಳಿಕ, ಶ್ರೀ ವಿ. ವಾಸುದೇವ ರಾಯರು ತಮಗೆ ಕಾಲ ವಿಳಂಬವಾಗಿ ನೋಟೀಸು ಸಿಕ್ಕಿದುದರಿಂದ ಸಭೆ ಜರಗಿಸಲಸಾಧ್ಯವೆಂದು ಆಕ್ಷೇಪಿಸಿದರು. ಸಭೆಯ ಎಜಂಡದಲ್ಲಿ ಕೆಲವು ವಿಷಯಗಳು ಕೀರ್ಮಾನವಾದಬಳಿಕ, ಸಭೆಯ ಕುರಿತು ಆಕ್ಷೇಪವೆತ್ತುವುದು ಸರಿಯೇ ಎಂದು ಡಾ. ಪಿ. ಜೆ. ಆಚಾರ್ಯರು ಪ್ರಶ್ನಿಸಿದರು. ಸಭಾಧ್ಯಕ್ಷರು ಶ್ರೀ ವಾಸುದೇವರಾಯರ ಆಕ್ಷೇಪಗಳನ್ನು ಎತ್ತಿ ಹಿಡಿದು ಸಭೆಯನ್ನು ಕೊನೆಗೊಳಿಸಿದರು.

ತಾಳಿಬೆಲ್ಲ ತಯಾರಕರ ಸಭೆ— ಉಡುಪಿ ತಾಲೂಕಿನ ತಾಳಿಬೆಲ್ಲ ತಯಾರಿಸುವ ಸಹಕಾರಿ ಸಂಘಗಳ ಪ್ರತಿನಿಧಿಗಳ ಮಹಾಸಭೆಯೊಂದು ತಾ 25ರಂದು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲೆಯ ಉತ್ತರ ವಿಭಾಗದ ಸಹಕಾರಿ ಸಂಘಗಳ ಆಸ್ಸಾಂಟ್ ರಿಜಿಸ್ಟ್ರಾರ್ ಶ್ರೀ ಕಾಳಪ್ಪ ಸೆಟ್ಟರು ಸ್ವಾಗತಿಸಿ, ಸಂಘಗಳ ಚಟುವಟಿಕೆಗಳನ್ನು ವಿವರಿಸಿದರು. ಜಿಲ್ಲಾ ಡಿಪ್ಯುಟಿ ಕಮಿಶನರ್ ಶ್ರೀ ವೈ. ಸಿ ಹೊಂಬಾಳಿಯ್ಯನವರು ಮಹಾಸಭೆಯನ್ನು ಉದ್ಘಾಟಿಸುತ್ತಾ, ನಿರಾ ಅಂಗಡಿಮತ್ತು ಬೆಲ್ಲ ತಯಾರಿಕೆಯ ಸಂಘಗಳ ಮೇಲೆ ಇರುವ ಸಾರ್ವಜನಿಕ ಟೀಕೆಗಳನ್ನು ಇನ್ನಾದರೂ ಸಿಲ್ಲಿಸಿ ಪರಮೇಶ್ವರನ ಸಾಕ್ಷಾತ್ಕಾರ ಸೇವೆಗೆ ಸಿದ್ಧರಾಗಬೇಕೆಂದರು. ಅಂತಹ ಸಮನೋವೃತ್ತಿಯನ್ನು ಪಕ್ಕದಲ್ಲಿರುವ ಶ್ರೀಕೃಷ್ಣನು ಅನುಗ್ರಹಿಸಲೆಂದು ಪ್ರಾರ್ಥಿಸಿದರು.

ಬಳಿಕ ಮುಂಬಯಿಯ ಶ್ರೀ ಗಜಾನನ ನಾಯಕ್, ಶ್ರೀಗಳಾದ ಎಚ್. ನಾರಾಯಣ ರಾವ್, ದೇವೇಂದ್ರ ಮತ್ತು ವೈ. ಲಕ್ಷ್ಮಣನವರು ಸಮಯಕ್ಕುಚಿತವಾದ ಭಾಷಣಮಾಡಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ, ಬೆಲ್ಲ ತಯಾರಿಸುವ ಸಂಘಗಳ ದೋಷಗಳನ್ನು ಪತ್ತೆಹಚ್ಚಿ ಹೋಗಲಾಡಿಸಲು ಸಂಘಗಳಿಗೆ ಹೆಚ್ಚಿನ ಅಧಿಕಾರ ಸೌಲಭ್ಯ ದೊರೆಯಬೇಕೆಂದರು.



ಹಿಂಬದಿಯಲ್ಲಿ ಯಂತ್ರವಿರುವ ಬ್ರಿಟನ್ನಿನ ಜೆಟ್ ವಿಮಾನವಿದು. ಇದನ್ನು ಎರಡು ಅಂತಸ್ತುಗಳಿರುವಂತೆ ಕಟ್ಟಲಾಗುವುದು ಮೇಲಿನಂತಸ್ತೊಂದರಲ್ಲಿಯೇ ೧೫೬ ಪ್ರಯಾಣಿಕರು ಕೂರುವ ಅನುಕೂಲತೆ ಇದರಲ್ಲಿರುವುದು.

ಸಂಕ್ಷಿಪ್ತ ಸುದ್ದಿಗಳು

ವೇಶ್ಯೆಗಳ ಕಾಯಿದೆ ಕ್ರಮಬದ್ಧ

ಈ ತಿಂಗಳ ಮೊದಲನೆಯ ದಿನಾಂಕದಿಂದ ಭಾರತದಾದ್ಯಂತ ವ್ಯವಹಾರಕ್ಕೆ ಒಂದು ರಾಜ್ಯದ ವೇಶ್ಯಾವೃತ್ತಿ ಪ್ರತಿಬಂಧಕ ಕಾಯಿದೆಯ ಕ್ರಮಬದ್ಧತೆಯನ್ನು ಪ್ರಶ್ನಿಸಿ ಅಹಮದಾಬಾದಿನ ಹುಸನಾಬಾಯಿಯೆಂಬ ವೇಶ್ಯೆಯೋರ್ವಳು ಮಾಡಿದ ತಡೆಯಾರ್ಜಿಯನ್ನು ಉಚ್ಚ ನ್ಯಾಯಾಲಯವು ತಿರಸ್ಕರಿಸಿತು ಈ ಕಾಯಿದೆಯ ೨೦ ಮತ್ತು ೪(ಅ) ಅನುಚ್ಛೇದಗಳನ್ನು ಬಿಟ್ಟು ಉಳಿದೆಲ್ಲವೂ ವೇಶ್ಯಾ ವೃತ್ತಿಯ ಮೇಲೆ ಸಮಂಜಸ ನಿರ್ಬಂಧಗಳನ್ನು ಹೇರಲೆತ್ನಿಸುತ್ತಿರುವುದರಿಂದ ಅವೆಲ್ಲವೂ ಕ್ರಮಬದ್ಧವಿವೆ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು. ಆದರೆ, ಆ ಎರಡು ಕಲಮುಗಳು ಅಸಮಂಜಸ ನಿರ್ಬಂಧಗಳನ್ನು ಹೇರುತ್ತಿವೆಯಾದುದರಿಂದ ಅವು ಸಂವಿಧಾನದ ೧೪ ಮತ್ತು ೧೯ನೆಯ ಅನುಚ್ಛೇದಗಳನ್ನು ಭಂಗಿಸುತ್ತವೆಯೆಂದವರು ಹೇಳಿದರೂ ಆ ಬಗೆ ಅವರು ತಮ್ಮ ತೀರ್ಪನ್ನು ಉಚ್ಚರಿಸಲಿಲ್ಲ ಈ ಕಾಯಿದೆಯು ವೇಶ್ಯಾವೃತ್ತಿಯನ್ನು ಪ್ರತಿಬಂಧಿಸದೆ ಅವರ ಮೇಲೆ ಸಮಂಜಸ ನಿರ್ಬಂಧ ಹೇರಲೆತ್ನಿಸುತ್ತಿದೆಯೆಂದವರು ಕೊನೆಗೆ ನುಡಿದರು

ಅಲ್ಜೀರಿಯಾದಲ್ಲಿ ಕದನವೆ?

ಫ್ರಾನ್ಸ್‌ನಲ್ಲಿ ಉದ್ಭವಿಸಿದ ರಾಜಕೀಯ ಬಿಕ್ಕಟ್ಟು ಮತ್ತಷ್ಟು ಜಟಿಲವಾಗುತ್ತಿದೆ. ಟ್ಯೂನೀಶಿಯಾ ಮತ್ತು ಫ್ರೆಂಚರ ನಡುವೆಯೂ ಸಾಕಷ್ಟು ಕದನಗಳು ನಡೆಯುತ್ತಿವೆ ಅಲ್ಜೀರಿಯಾದಲ್ಲಿ ಸಾರ್ವಜನಿಕ ಸುರಕ್ಷಿತತಾ ಸಮಿತಿಯು ಸ್ಥಾಪಿತವಾಗಿದ್ದು, ಫ್ರಾನ್ಸ ಸರಕಾರವನ್ನು ಹತ್ತಿಕ್ಕಲು ಬಯಸುತ್ತಿದೆ ಈ ಬಂಡಾಯವು ಕಾರ್ಸಿಕಾಕ್ಕೂ ಹರಡಿದ್ದು, ಈ ಬಂಡಾಯವು ಫ್ರಾನ್ಸಿನಲ್ಲಿಯೂ ಏಳುವುದು ಸಾಧ್ಯವೆಂದು ಪ್ರಧಾನಿ ಪ್ಲಿಮ್ಲೆನರು ಅಭಿಪ್ರಾಯಪಟ್ಟಿದ್ದಾರೆ. ಸರಕಾರವಾದರೂ, ವಂಚಕರಿಂದ ದೂರವಿದ್ದು ದೇಶರಕ್ಷಣೆಗಾಗಿ ಮುಂದೆ ಬರುವಂತೆ ಜನತೆಯನ್ನು ಎಚ್ಚರಿಸಿದ್ದಾರೆ ಈ ಮಧ್ಯೆ ಅಲ್ಜೀರಿಯಾದಲ್ಲಿ ಫ್ರೆಂಚ್ ಸೇನಾಪತಿಗಳಾದ ಜ. ಸಾಲೆನ್ನರು ಫ್ರೆಂಚ್ ಅಧ್ಯಕ್ಷರೆನೆ ಕೋಟಿಯವರಲ್ಲಿಗೊಬ್ಬ ವಿಶೇಷದೂತನನ್ನಟ್ಟಿ ಫ್ರಾನ್ಸಿನಲ್ಲಿ ಕೂಡಲೆ ಜನರಲ್ ಡಿಗಾಲೆಯವರ ಸರಕಾರ ರಚಿಸಲ್ಪಡಲು ಕ್ರಮಕೈಗೊಳ್ಳಬೇಕೆಂದು ಕೇಳಿಕೊಂಡಿರುವರೆಂದು ಸಾರ್ವಜನಿಕ ಸುರಕ್ಷಿತತಾ ಸಮಿತಿಯ ಪಕ್ಷಾಂತರೋರ್ವನು ಬಹಿರಂಗಪಡಿಸಿದನು

ದೇಶದ ಸಮಸ್ಯಾಭ್ಯಾಸ

ದೇಶದಲ್ಲಿ ಒಳ್ಳೆಯ ಸರಕಾರವನ್ನು ಸ್ಥಾಪಿಸುವ ಉದ್ದೇಶದಿಂದ, ಯುವಕರು ದೇಶದ ಸಮಸ್ಯೆಗಳನ್ನು ಚೆನ್ನಾಗಿ ಅಭ್ಯಸಿಸಬೇಕಲ್ಲದೇ ವ್ಯಕ್ತಿಗಳು ಮತ್ತು ಘಟನೆಗಳ ಬಗೆಗೆ ಸಹ ಆಶೆ ಆಕಾಂಕ್ಷೆಗಳಿಂದ ವಿಚಾರ ಮಾಡಬೇಕು ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿರದೆ, ಇಂದು ಕಲ್ಯಾಣಕಾರಿ ರಾಜ್ಯದಲ್ಲಿದ್ದು ಸರಕಾರವೂ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆದುದರಿಂದ ಯುವಕರು ಇಂತಹ ಸಮಸ್ಯೆಗಳನ್ನು ಯೋಗ್ಯರೀತಿಯಲ್ಲಿ ಅಭ್ಯಸಿಸಬೇಕೆಂದು ಶ್ರೀ ರಾಜಾಜಿಯವರು ಬೆಂಗಳೂರಿನ ಗೋಖಲೆ ಇನ್ಸ್ಟಿಟ್ಯೂಟಿನ ಟೆಸಟಾರಿಕ ಸಮಾರಂಭದಲ್ಲಿ ಹೇಳಿದ್ದರೆ

ಅಖಿಲಭಾರತ ಪ್ರದರ್ಶನ

ಈ ವರ್ಷದ ಅಕ್ಟೋಬರ–ನವಂಬರ ತಿಂಗಳುಗಳಲ್ಲಿ ಹೊಸದಿಲ್ಲಿಯಲ್ಲಿ "ಅಖಿಲ ಭಾರತ" ಎಂಬ ಹೆಸರಿನ ಅಖಿಲ ಭಾರತ ಪ್ರದರ್ಶನವೊಂದು ನಡೆಯುವುದು ಸರಕಾರಿ ಹಾಗೂ ಖಾಸಗಿ ರಂಗಗಳೆರಡರಲ್ಲಿಯ ಬೇರೆಬೇರೆಬೆಳವಣಿಕೆ ಹಾಗೂ ಅಭಿವೃದ್ಧಿ ಪ್ರಯತ್ನಗಳಿಗೆ ಧೃಢ ಪ್ರಚಾರವನ್ನೊದಗಿಸುವುದು ಹಾಗೂ ಭಾರತೀಯ ವಾಣಿಜ್ಯ ಉತ್ಪಾದನೆಗಳ ನಿರ್ಯಾತಾಭಿವೃದ್ಧಿಗೆ ಸಹಾಯ ಮಾಡುವುದು. ಆ ಪ್ರದರ್ಶನದ ಉದ್ದೇಶವಾಗಿದೆ ಸಂಯುಕ್ತ ರಾಷ್ಟ್ರ ಸಂಘದ ಆಗಂ ಸಂಸ್ಥೆಗಳಿಂದ ಅಂತಾರಾಷ್ಟ್ರೀಯ ಪುನಾರಚನೆ ಹಾಗೂ ಅಭಿವೃದ್ಧಿ ಬೇಂಕ, ಅಂತಾರಾಷ್ಟ್ರೀಯ ಹಣಕಾಸಿನ ನಿಧಿ, ಅಂತರಾಷ್ಟ್ರೀಯ ಹಣಕಾಸಿನ ಮಹಾಮಂಡಲ ಮತ್ತು ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಘಗಳ ಪರಿಷತ್ತುಗಳು ಅಕ್ಟೋಬರ ತಿಂಗಳಲ್ಲಿ ನವದೆಹಲಿಯಲ್ಲಿ ನಡೆಯಲಿದ್ದು ಅವುಗಳಿಗೆ ಸರಿಹೋಗುವಂತೆ ಈ ಪ್ರದರ್ಶನವನ್ನು ಏರ್ಪಡಿಸಲಾಗುವುದು

ಕೇರಳದಲ್ಲಿ ಬಿರ್ಲಾ ಕಂಪೆನಿ

ಮಲಬಾರು ಜಿಲ್ಲೆಯಲ್ಲಿ ರಿಯಾನ್ ಪಲ್ಪ್ ಕಾರಖಾನೆಯೊಂದನ್ನು ಸ್ಥಾಪಿಸುವ ಬ್ಗ್ಗೆ ಬಿರ್ಲಾ ಕಂಪೆನಿ ಮತ್ತು ಕೇರಳ ಸರಕಾರದೊಡನೆ ಒಂದು ಒಪ್ಪಂದವಾಗಿರುವುದೆಂದು ತಿಳಿದು ಬಂದಿದೆ ಭಾರತದ ಸುಪ್ರಸಿದ್ಧ ಉದ್ಯಮಿಗಳಾದ ಬಿರ್ಲಾ ಈ ಒಪ್ಪಂದದ ಸ್ವಯೋಜಕರೆಯಾನ್ ಪಲ್ಪ ಕಾರಖಾನೆಯನ್ನು ಸ್ಥಾಪಿಸಲಿರುವರು ಔದ್ಯಮಿಕ ಶಾಂತಿ ಸಂಬಂಧದಲ್ಲಿ ಬಂದು ಮತ್ತು ಬಿದಿರು ಮುಂತಾದ ಕಚ್ಚಾ ವಸ್ತುಗಳ ಪೂರೈಕೆಯ ಬಗೆಯ ಮತ್ತೂಂದು ಒಪ್ಪಂದಕ್ಕೆ ಬಿರ್ಲಾ ಕಂಪೆನಿ ಮತ್ತು ಕೇರಳ ಸರಕಾರಗಳು ಸಹಿ ಮಾಡಿರುವ ಸುದ್ದಿ ಬಂದಿದೆ ಸುಮಾರು ೯ ಕೋಟಿ ರೂ



ಹೈದರಬಾದಿನಲ್ಲಿರುವ ಸಾಲಾರಜಂಗ ವಸ್ತು ಸಂಗ್ರಹಾಲಯವು ಭಾರತದಲ್ಲಿಯೇ ಅಮೂಲ್ಯವೆನಿಸಿದೆ. ಇದನ್ನು ನೋಡಲು ದೇಶ ವಿದೇಶಗಳಿಂದ ಪ್ರೇಕ್ಷಕರು ಆಗಮಿಸುತ್ತಾರೆ ಈ ಹಿಂದೆ ಕರ್ನಾಟಕದಲ್ಲಿರುವ ಕೊಪ್ಪಳದ ಜಹಗೀರದಾರರಾಗಿದ್ದ ನವಾಬ್ ಮೀರ ಯುಸಫ್ ಅಲಿಖಾನ ಸಾಲಾರ ಜಂಗರು ತಮ್ಮ ಜೀವಾವಧಿಯಲ್ಲಿ ಬಹು ಪರಿಶ್ರಮಪಟ್ಟು ಜಗತ್ತಿನ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿದ್ದರು ಅವರ ಮರಣಾನಂತರ ಸರಕಾರವು ಅದನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಮೇಲೆ ನೋರುತ್ತಿರುವುದು ಈ ಸಂಗ್ರಹಾಲಯದಲ್ಲಿರುವ "ದೀಪಾವಳಿ" ಹಬ್ಬವನ್ನು ಸೂಚಿಸುವ ಚಿತ್ರ

ವಿವಾಹ ಸಮಾರಂಭಗಳು—

ಕಿಂಗಲಬೀಡು ಶ್ರೀ ಚಂದಯ್ಯ ಸೆಟ್ಟರ ಸೊಸೆ ಕುಮಾರಿ ಸರೋಜಿನಿಯಮ್ಮ ಕಾಪು ಬೈರೆಗೌತ್ತು ಶ್ರೀ ಮಂಜಪ್ಪ ಸೆಟ್ಟರ ಅಳಿಯ ಶ್ರೀ ಬಿ ಸಂಜೀವನವರು ತಾ ೨೦ರಂದು ಕೂಡ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಸನ್ನಿಧಿಯಲ್ಲಿ ವಿವಾಹವಾದರು

ಇನ್ನ ಬ್ಗ್ಗರಾಮತ್ತು ಶ್ರೀ ಅಂತಯ್ಯ ಸೆಟ್ಟರ ಸೊಸೆ ಕುಮಾರಿ ಪ್ರೇಮಲತೆಯು ಸಟ್ಟಿ ಪಾಡಿಮನೆ ಶ್ರೀ ಗುಂಡಣ್ಣ ಸೆಟ್ಟರ ಅಳಿಯ ಶ್ರೀ ಶ್ರೀನಿವಾಸನವರನ್ನು ತಾ ೩ರಂದು ಮಂಗಳೂರು ಶ್ರೀ ಗಣಪತಿ ಸೇವಾಶ್ರಮದಲ್ಲಿ ವಿವಾಹವಾಗಿಕೊಂಡರು

ಶ್ರೀ ಅಲಂಗಾರು ಸಾಂಬಿಲ ಹೆಗ್ಗೇರ ಪುತ್ರಿ ಕುಮಾರಿ ಲಿಲಾವತಿ ಮತ್ತು ಶ್ರೀ ಕೆ ವೆಂಕಪ್ಪ ಸೆಟ್ಟರ ಪುತ್ರ ಶ್ರೀ ಸುಂದರ— ಇವರ ವಿವಾಹವು ತಾ. ೨೦ರಂದು ಮಂಗಳೂರಿನ ಜ್ಯೋತಿ ಟಾಕೀಸಲ್ಲಿ ಸಂಪನ್ನಗೊಂಡಿತು

ಶ್ರೀ ಕೆ ವಾಸುದೇವ ಬೈಪಾಡಿತ್ತಾಯರ ಪುತ್ರಿ ಚಿ ಕೃಷ್ಣಸ್ವಾಮಿಯು ದಿ ಪೂನಾ ವರ ಶ್ರೀನಿವಾಸ ಪೆಜತ್ತಾಯರ ಪುತ್ರಿ ಕುಮಾರಿ ಯಶೋದಾ ದೇವಿಯನ್ನು ತಾ ೨೬ ರಂದು ಫಲಿಮಾರು ಗ್ರಾಮದ ಶ್ರೀ ಫಲಿಮಾರು ಮಠದಲ್ಲಿ ವಿವಾಹವಾದರು

ಆಡೆಕಾರು ಪರೇಲ್ ಶ್ರೀ ಮುದ್ದಣ್ಣ ಸೆಟ್ಟರ ಮೊಮ್ಮಗ ಶ್ರೀ ಬಾಬರ ಮತ್ತು ಶ್ರೀ ಬಾಳ್ಳಪ್ಪಾಡಿ ಭೋಜರಾಜ ಹೆಗ್ಗೇರ ಸೊಸೆ ಚಿ ಸೌ ಸಾವಿತ್ರಿ ಇವರ ವಿವಾಹವು ತಾ ೨೮ರಂದು ಉಡುಪಿ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿತು

ಡಾ ಬಿ ಆರ್ ಹೆಗ್ಗೇರ ಪುತ್ರಿ ಕುಮಾರಿ ಸುಫಲಚಂದ್ರಿ ಮತ್ತು ದಿ ಹೆ ರೂರು ರಾಮಯ್ಯ ನಾಯ್ಕರ ಪುತ್ರ ಶ್ರೀ ನರಸಿಂಹ ನಾಯ್ಕ ಇವರ ವಿವಾಹ ಸಮಾರಂಭವು ತಾ ೨೭ರಂದು ಮಂಗಳೂರಿನ ಎಸ್ ಆರ್ ಎಸ್, ಹೊಟೇಲಿನಲ್ಲಿ ಜರಗಿತು

ಡಾ ಎಸ್ ಆರ್, ಸೆಟ್ಟರ ಪುತ್ರ ಶ್ರೀ ರಮೇಂದ್ರನಾಥರು ಶ್ರೀ ಕೆ ವೈ. ಅಜಿಲರ ಪುತ್ರಿ ಕುಮಾರಿ ಶಾಲಿನಿಯನ್ನು ತಾ. ೨೫ರಂದು ಮಂಗಳೂರು ಎಸ್. ಆರ್ ಎಸ್. ಹೋಟೆಲಿನಲ್ಲಿ ವಿವಾಹವಾದರು

ಕೂಡಮಣ್ಣು ಗುತ್ತು ಶ್ರೀ ಮಂಜಯ್ಯ ಸೆಟ್ಟರ ಪುತ್ರಿ ಕುಮಾರಿ ಸಳಿನಿಯವರ ವಿವಾಹವು ಕೊಡಿಯಾಲಗುತ್ತು ಡಾ. ಸಂಜೀವ ಹೆಗ್ಗೇರ ಪುತ್ರ ಶ್ರೀ ಸುಬ್ಬಯ್ಯ ಹೆಗ್ಗೇರ ಯವರೊಡನೆ ತಾ ೩೧ರಂದು ಮಂಗಳೂರು ಜ್ಯೋತಿ ಟಾಕೀಸಿನಲ್ಲಿ ಜರಗಿತು

ಕಾರ್ಕಳದ ದಿವಂಗತ ವಕೀಲ ಶ್ರೀ ಕೆ ಮಹಾಬಲ ಹೆಗ್ಗೇರ ಪ್ರಥಮ ಪುತ್ರಿ ಕುಮಾರಿ ಹಿರಿಯಳನ್ನು ಮೂಲ್ಕಿಯ ದಿವಂಗತ ಶ್ರೀ ಎ ತಿಮ್ಮಪ್ಪ ಪೂಂಜರ ಪುತ್ರ ಶ್ರೀ ಸದಾನಂದ ಪೂಂಜರು ತಾ ೩೧ರಂದು ಕಾರ್ಕಳದ ಜೈಹಿಂದ್ ಸಿನೇಮ ಮಂದಿರದಲ್ಲಿ ವಿವಾಹವಾದರು

ಮೈಸೂರು ಮಂತ್ರಿ ಶ್ರೀ ಟಿ ಮರಿಯಪ್ಪಯ್ಯನವರ ಪುತ್ರಿ ಕುಮಾರಿ ಮಿನಾಕ್ಷಿಯ ಮತ್ತು ಶಿವಮೊಗ್ಗದ ಅಸಿಸ್ಟಾಂಟ್ ಕಮಿಶನರ್ ಶ್ರೀ ಟಿ ಸಿ. ದಾಸಪ್ಪನವರ ಪುತ್ರ ಶ್ರೀ ಟಿ ಡಿ ಶ್ರೀನಿವಾಸ್ ಇವರ ವಿವಾಹವು ತಾ ೨೩ರಂದು ಬೆಂಗಳೂರು ಸಿಟಿ ವಿಶ್ವೇಶ್ವರ ಪುರದಲ್ಲಿರುವ ಸಜ್ಜ ರಾಯರ ಕಲ್ಯಾಣ ಮಂದಿರದಲ್ಲಿ ಜರಗಿತು

ಕಂಜಿಬೆಟ್ಟು ಕಲ್ಲಂಕ ಶ್ರೀ ಕೆ ನಾರಾಯಣ ಸೆಟ್ಟರ ಅನುಜ ಶ್ರೀ ಕೆ ವಿಠಲ ಸೆಟ್ಟರು ಸಾಯಿಬಿದ್ದ ಶ್ರೀ ಬಾಬು ಸೆಟ್ಟರ ಸೊಸೆ ಚಿ ಸೌ ಲೀಲಾವತಿಯನ್ನು ತಾ ೧೬ರಂದು ಉಡುಪಿ ಕಡಿಯಾಳಿ ಶ್ರೀ ಮಹಿಷಮರ್ಧಿನಿ ದೇವಸ್ಥಾನದಲ್ಲಿ ವಿವಾಹವಾದರು

ದಿ ಕಾಪು ಉಳಿಯೂರಗೊಳಿ ಮುದ್ದಣ್ಣ ಸೆಟ್ಟರ ಪುತ್ರಿ ಚಿ ಸೌ ಹೇಮಾವತಿಯನ್ನು ಬಾಳ್ಳುಪ್ಪು ಶ್ರೀ ತೇಜಪ್ಪ ಹೆಗ್ಗೇರ ಪುತ್ರ ಶ್ರೀ ನಾರಾಯಣನವರೂ, ಶ್ರೀ ಎಸ್ ಸಚ್ಚಿದಾನಂದ ಬಲ್ಲಾಳರ ಪುತ್ರಿ ಕುಮಾರಿ ಜಯಂತಿಮಾರೆಬೆಸ್ತು ಬಾಳ್ಳುಪ್ಪು ಶ್ರೀ ತೇಜಪ್ಪ ಹೆಗ್ಗೇರ ಪುತ್ರ ಶ್ರೀ ಶ್ರೀಪಾಂಡುರಂಗನವರೂ ತಾ. ೨೭ರಂದು ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಇಷ್ಟ ಪ್ರತಿಫಲ ಪಡೆಯಿರಿ.

ವಾಯು ವೆಚ್ಚದ ಈ ಕಾರಖಾನೆಯು ಸುಮಾರು ೬ ಸಾವಿರ ಜನರಿಗೆ ಕೆಲಸಗೊಡುವುದು. ದಿನವೊಂದಕ್ಕೆ ೧೦೦ ಟನ್ ಪಲ್ಪನ್ನು ತಯಾರಿಸುವ ಈ ಕಾರಖಾನೆಗೆ ೧೫,೦೦೦ ಟನ್ನು ಬಿದಿರು ಒಂದು ವರ್ಷಕ್ಕೆ ಬೇಕಾಗುವುದು.

ಮಂಗಳೂರು

ದ. ಕ. ಜಿಲ್ಲಾ ನೇಕಾರರ ಸಂಘದ ಮಹಾ ಸಭೆಯು— ತಾ. 19ರಂದು ಜಪ್ಪು ಸ್ಪೆಂಟ್ ಜಾನ್ಸ್ ಹಾ. ಎ. ಶಾಲೆಯಲ್ಲಿ ಶ್ರೀ ಜೆ. ವೀರಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಪಿ. ಸಾಲ್ಯಾನರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಕೆ. ಮಾರಪ್ಪನವರು ವರದಿಯನ್ನೋದಿದರು. ಶ್ರೀ ತೋಮಸ್ ಬ್ಯಾಸರು ಲೆಟ್ಟಿಪತ್ರಗಳನ್ನೋದಿಸಿದರು. ನಂತರ ನೇಕಾರ ಮಜೂರರಿಗೆ ಸಂಬಂಧಿಸಿದ ನಿರ್ಣಯಗಳಾದುವು. ಹೊಸ ವರ್ಷಕ್ಕೆ ಶ್ರೀಗಳಾದ ವಾಸುನ ಕೊಡಿಯಾಲಬೈಲ್, ಅಧ್ಯಕ್ಷ ಜೆ. ವೀರಪ್ಪ ಮತ್ತು ಬಿ. ರಾಮಪ್ಪ ಸುವರ್ಣ ಉಪಾಧ್ಯಕ್ಷರು; ಕೆ. ಸೂಬಪ್ಪ ಸಾಲಿಯಾನ್ ಪ್ರಧಾನ ಕಾರ್ಯದರ್ಶಿ; ಬಿ ಚಂದ್ರಶೇಖರ ಮತ್ತು ಕೆ. ಮಾರಪ್ಪ ಉಪಕಾರ್ಯದರ್ಶಿಗಳು; ತೋಮಸ್ ಬ್ಯಾಸ್, ಖಜಾಂಚಿಯಾಗಿರುವ 21 ಮಂದಿಯ ಕಾರ್ಯನಿರ್ವಾಹಕ ಮಂಡಳಿ ರಚಿಸಲ್ಪಟ್ಟಿತು.

ಹೆಸರಾಂತ ಆಟಗಾರರ ನಿಧನ— ದ. ಕ. ಜಿಲ್ಲೆಯ ಹಾಗೂ ಕಾಸರಗೋಡಿನ ಹೆಸರಾಂತ ಆಟಗಾರರಲ್ಲೊಬ್ಬರಾಗಿದ್ದ ಶ್ರೀ ಎನ್. ಎಲ್. ಸುಬ್ರಹ್ಮಣ್ಯರು ತಾ 17 ರಂದು ಬೆಳಿಗ್ಗೆ ತಮ್ಮ 44ನೆ ವಯಸ್ಸಿನಲ್ಲಿ ಮಂಗಳೂರು ಜಪ್ಪಿನಲ್ಲಿರುವ ತಮ್ಮ ಗೃಹದಲ್ಲಿ ಪರಲೋಕವಾಸಿಗಳಾದರು.

ಹರಿಜನರ ಸಭೆಯು— ತಾ. 18 ರಂದು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಬೋಳೂರು ಬೇಂಗ್ರೆ ಪಿರೋಬಾ ಭಜನಾ ಮಂದಿರದಲ್ಲಿ ಜರಗಿತು. ಶ್ರೀ ಈಶ್ವರನವರು ಸ್ವಾಗತಿಸಿದರು. ಡಾ. ಯು. ಸಿ. ಮಲ್ಯ, ಶ್ರೀಗಳಾದ ಮಂಗಳೂರು ಜಾರಪ್ಪ, ಕೆ. ವಾಸುದೇವನ್, ಆನಂದ, ಪಿ. ಕೆರುಣಾಕರನ್, ಯು. ಮಂಜಪ್ಪ, ಎಮ್. ಎಲ್. ಎ. ಮತ್ತು ಶ್ರೀಮತಿ ಚಿನ್ನಮ್ಮನವರು ಕಾರ್ಯೋಚಿತ ಭಾಷಣಮಾಡಿದರು

ದ. ಕ. ಮುನಿಸಿಪಲ್ ಲೋಕಲ್ ಬೋರ್ಡು ವರ್ಕರ್ಸ್ ಯೂನಿಯನಿನ ಮಹಾ ಸಭೆಯು ತಾ. 21ರಂದು ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಮೋನಪ್ಪ ಸೆಟ್ಟರು ವರದಿಯನ್ನೋದಿದರು ಸಂಬಳ, ತುಟ್ಟಿಭತ್ತೆ ಮತ್ತು ಮನೆ ಬಾಡಿಗೆ ಭತ್ತೆ ಸೇರಿತಿಂಗಳಿಗೆ ರೂಪಾಯಿ 55 ಸಂಬಳ ಸಿಗಬೇಕೆಂಬ ಹಿಂದಿನ ಕೇಳಿಕೆಗಳನ್ನು ನಗರ ಸಭೆಯು ಕೂಡಲೇ ಮಾನ್ಯಮಾಡುವಂತೆ ಯೋಗ್ಯ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಿರ್ಣಯಿಸಲಾಯಿತು. ಹೊಸ ವರ್ಷಕ್ಕೆ 21 ಮಂದಿ ಸದಸ್ಯರುಳ್ಳ ಕಾರ್ಯಕಾರೀ ಮಂಡಳಿ ರಚಿಸಲಾಯಿತು.

ಸತ್ಕಾರ— ಮೈಸೂರು ವಿಧಾನ ಪರಿಷತ್ತಿಗೆ ಉಪಾಧ್ಯಾಯ ಮತದಾನ ಕ್ಷೇತ್ರದಿಂದ ಚುನಾಯಿತರಾದ ಶ್ರೀ ಎಸ್. ಮುಕುಂದರಾಯರನ್ನು ತಾ 19ರಂದು ಮಂಗಳೂರು ಪ್ರಶ್ರಿಕೋದ್ಯೋಗಿ ಸಂಘದವರು ಸ್ವಾಗತಿಸಿ ಸತ್ಕರಿಸಿದರು. ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಆನರು ಅಧ್ಯಕ್ಷತೆ ವಹಿಸಿದ್ದರು.

ದಿ| ಡಾ| ಎಚ್. ವಿ ಅಡೆಪ್ಪ ಸ್ಮಾರಕ ಮಂದಿರದ ಉದ್ಘಾಟನೆ— ಸ್ಥಳೀಯ ಎಸ್. ಆರ್. ಎಸ್. ಹೋಮಿನಲ್ಲಿ ದಿ| ಡಾ| ಎಚ್. ವಿ ಅಡಪ್ಪರ ಸ್ಮಾರಕಾರ್ಥವಾಗಿ ಅವರ ಬಂಧುಗಳು ಮತ್ತು ಕೆಲವು ಸ್ನೇಹಿತರು ಕಟ್ಟಿಸಿದ ಸ್ಮಾರಕ ರಂಗಮಂಟಪವನ್ನು ತಾ. 25ರಂದು ಸಂಜೆ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ ಕೆ. ಸದಾನಂದ ಹೆಗ್ಡೆಯವರು ಉದ್ಘಾಟಿಸಿ ದಿವಂಗತರ ಗುಣಗಾನಮಾಡಿದರು. ಅರಂಭಪಟ್ಟ ಶ್ರೀ ಕೆ. ಟಿ. ಅಳ್ವರು ಸ್ವಾಗತಿಸಿದರು. ಶ್ರೀ ಕೆ. ಸುಂದರರಾಯ ಸೆಟ್ಟರು ಸ್ಮಾರಕ ಸಮಿತಿಯ ಲೆಟ್ಟಿಪತ್ರಗಳನ್ನೋದಿಸಿದರು ಶ್ರೀ ಎ. ಶಂಕರ ಅಳ್ವರು ಧನ್ಯವಾದವಿತ್ತರು.

ಶ್ರೀ ಬಿ. ವೈಕುಂಠ ಬಾಳಿಗರು— ಮೈಸೂರಿನ ನೂತನ ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ತಾ 25ರಂದು ಬೆಂಗಳೂರಿನಿಂದ ಮಂಗಳೂರಿಗೆ ಬಂದಿರುವರು.

ಸಮಾಜ ಅಧ್ಯಯನ ಗೋಷ್ಠಿ— ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ಸ್ಥಾಪಿಸಲಾದ ಡಿಪಾರ್ಟ್‌ಮೆಂಟ್ ಆಫ್ ಎಕ್ಸ್‌ಟೆನ್‌ಶನ್ ಸರ್ವಿಸಿನ ಆಶ್ರಯದಲ್ಲಿ ತಾ. 20 ರಿಂದ 21ರ ತನಕ ಸಮಾಜ ಅಧ್ಯಯನ ಅಭ್ಯಾಸ ಗೋಷ್ಠಿ ಜರಗಿತು. ದ. ಕ. ಜಿಲ್ಲೆಯ 26 ಹೈಸ್ಕೂಲುಗಳ ಸಾಮಾಜಿಕ ಅಧ್ಯಯನ ಪಾಠದ ಅಧ್ಯಾಪಕರು ಗೋಷ್ಠಿಯಲ್ಲಿ ಭಾಗವಹಿಸಿದ್ದರು ಕೊನೆಯ ದಿನದ ಪಾಠ್ಯಾಂಶ ಹೆಂಗಸರ ಕಾಲೇಜಿನ ಪ್ರಿನ್ಸಿಪಾಲ್ ಸಿಸ್ಟರ್ ಲೂಸಿಲಾರೆಯರು ಭಾಷಣಮಾಡುತ್ತ ಮಕ್ಕಳಲ್ಲಿ ಸಹೋದರರ ಭಾವವನ್ನು, ದೈವ ಭಕ್ತಿಯನ್ನು ಸಹಾನುಭೂತಿಯನ್ನು ಬೆಳಸುವುದಲ್ಲದೆ ವ್ಯಕ್ತಿತ್ವದ ಬೆಳವಣಿಗೆಗೆ ಹೆಚ್ಚಿನ ಗಮನ ಕೊಡಬೇಕೆಂದರು.

ಮೊಗವೀರ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು— ತಾ. 25ರಂದು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಬಿ. ವಾಸುನ ಕೋಟ್ಯಾನರು ಸ್ವಾಗತಿಸಿದರು. ಶ್ರೀ ಪಿ. ಜೆ. ಪ್ರಭಾಕರನವರು ಸಂಘದ ಚಟುವಟಿಕೆಗಳನ್ನು ವಿವರಿಸಿದರು, ಅಸಿಸ್ಟಾಂಟ್ ಡೈರೆಕ್ಟರ್ ಆಫ್ ಫಿಶರೀಸ್ ಶ್ರೀ ಬೈರಾಜ್, ಶ್ರೀ ಬಿ. ಎ. ಪುತ್ರನ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಯುವಕ ಕಾಂಗ್ರೆಸ್ ಸಾಪ್ತಾಹಿಕ ಸಭೆಯು— ತಾ. 26ರಂದು ಜಿಲ್ಲಾ ಬೋರ್ಡ ಸದಸ್ಯ ಡಾಗೂ ಪ್ರಮುಖ ಸಾಮಾಜಿಕ ಸೇವಾ ಕಾರ್ಯಕರ್ತೆಯಾದ ಶ್ರೀಮತಿ ಉಮಾ ಪಿ. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ, ಕೆ. ಕೆ. ಸೆಟ್ಟಿ, ಎನ್. ಎಲ್. ಸಿ, ಎ. ರಂಗಶಾಲ್ಯ, ಕೆ. ವಿಶ್ವನಾಥ ಕಾಮತ್, ಜೆ. ಎ. ಬ್ರಿಟೊ, ಪಿ. ಕೆ. ಶೆಟ್ಟಿ,ಎಸ್. ಆರ್. ಹೊಳ್ಳ ಮೊದಲಾದವರು ವಿವಿಧ ವಿಷಯಗಳನ್ನೆತ್ತಿ ಮಾತನಾಡಿದರು. ಶ್ರೀ ಎಮ್. ಅಬ್ದುಲ್ ಖಾದರರು ಧನ್ಯವಾದವಿತ್ತರು.

ಬಹುಸಂಖ್ಯೆಯಲ್ಲಿ ಮೀನು ದೊರೆಯಿತು— ಮಂಗಳೂರು ಸಮುದ್ರ ಕಿನಾರೆಯ ಮೀನುಗಾರಿಕೆಯ ಇತಿಹಾಸದಲ್ಲಿ ಗಣನೀಯ ದಿನವೆನ್ನಲಾದ ತಾ. 23ರಂದು 30,000 ದೊಡ್ಡ ಜಾತಿಯ ಸೀಗೆ ಮೀನುಗಳು ದೊರೆತಿವೆ.

ಹತಯೋಗಿ ಪ್ರದರ್ಶನ— ಕುಮಟೂರಿನ 19 ವರ್ಷ ಪ್ರಾಯದ ತರುಣ ಪರಯೋಗಿ ಶ್ರೀ ಎಲ್. ಜೆ. ಕೃಷ್ಣಮೂರ್ತಿಯವರು ತಾ. 24ರಂದು ಪರಯೋಗ ಪ್ರದರ್ಶನವನ್ನು ಸ್ಥಳೀಯ ರಘುನಾಥಯ್ಯ ಸ್ಮಾರಕ ವಾಚನಾಲಯದಲ್ಲಿ ಯಶಸ್ವಿಯಾಗಿ ಜರಗಿಸಿದರು.

ಕೇಂದ್ರ ಸಚಿವರ ಆಗಮನ— ಕೇಂದ್ರ ಸರಕಾರದ ಕಂದಾಯ ಮತ್ತು ನಾಗರಿಕ ವೆಚ್ಚ ಖಾತೆಗಳ ಸಚಿವರಾದ ಶ್ರೀ ಬಿ. ಗೋಪಾಲ ರೆಡ್ಡಿಯವರು ತಾ. 31ರಂದು ಬೊಂಬಾಯಿಯಿಂದ ವಿಮಾನ ಮೂಲಕ ಮಂಗಳೂರಿಗೆ ಆಗಮಿಸಿ ಅದೇ ದಿನ ಸಂಜೆ ಸಿಂದಿಕೇಟ್ ಬೇಂಕಿನ ಹೊಸ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು ತಾ. 1ರಂದು ಬೆಳಿಗ್ಗೆ ಸಚಿವರು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಯುವಕ ಕಾಂಗ್ರೆಸ್ ಸಭೆಯಲ್ಲಿ ಭಾಷಣಮಾಡಲಿರುವರು.

ಪೆಡೂರು—ಸ್ಥಳೀಯ ಬಿ ಇ. ಎಮ್. ಹಾಲಿ ಎ| ಶಾಲೆಯ ವರ್ಧಂತಿ ಸಮಾರಂಭವು ತಾ 17ರಂದು ಉಡುಪಿ ನಗರಸಭಾ ಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಎನ್. ಪದ್ಮನಾಭ ಸೆಟ್ಟರು ಧ್ವಜಾರೋಹಣಮಾಡಿದರು. ಶ್ರೀ ಎ. ವೀರಣ್ಣ ಸೂಡರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಬಿ. ಜಗನ್ನಾಥ ಸೆಟ್ಟರು ಸಂದೇಶ ವಾಚನಮಾಡಿದರು. ಶ್ರೀ ಗೋಪಾಲ ಕೃಷ್ಣ ತೆಂಗಿಯರು ಸ್ವಾಗತಾಚನ ಮಾಡಿದರು. ಶ್ರೀ ಎ. ಸಿ. ಕಲ್ಯಾಣಯವರು ಧನ್ಯವಾದವಿತ್ತರು.

ಹಂದಾಡಿ—ಇಲ್ಲಿಯ ಎ.ಸಿ. ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 15 ರಂದು ಶ್ರೀ ಕೆ. ರಾಮಕೃಷ್ಣ ಹಂದೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಟಿ. ಎಲ್. ವೈಗಳು ಸ್ವಾಗತಿಸಿದರು, ರೆ| ಫಾ| ಅಲ್ಫ್ರೆಡ್, ಶ್ರೀ ಎಚ್. ಸುಬ್ರಹ್ಮಣ್ಯ ಭಟ್ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು.

ಬೆಳ್ಳೆ—ಜರ್ಜ್ ಹಾ| ಎ| ಶಾಲೆಯ ವರ್ಧಂತ್ಯುತ್ಸವವು ತಾ. 18ರಂದು ಶ್ರೀ ಧೀರಾನಂದ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಪಿ. ಶೆಡ್ಡೆಯವರು ಧ್ವಜಾರೋಹಣ ಮಾಡಿದರು. ಶಾಲಾ ಮೆನೇಜರ್ ರೆ| ಫಾ| ಎ. ಎಫ್. ಡಿಸೋಜರು ಸ್ವಾಗತಿಸಿದರು. ಶ್ರೀ ರಮಾನಂದರಾಯರು ಸ್ವಸ್ತಿವಾಚನಮಾಡಿದರು

ಸುರತ್ಕಲ್—ಮುಕ್ಕಮಿತ್ರ ಪಟ್ಟಣ ಗಂಗಯ್ಯ ಸ್ಮಾರಕ ಹಿಂದಿನ ವಾರ್ಷಿಕೋತ್ಸವವು ತಾ. 19ರಂದು ಶ್ರೀ ಮಣೇಲ್ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ವಿ ಶ್ಯಾನುಭೋಗರು ಸ್ವಾಗತ ಭಾಷಣ ಮಾಡಿದರು ಶ್ರೀ ದೊಮಪ್ಪ ಗುರಿಕಾರರು ವರದಿಯನ್ನೋದಿದರು. ಶ್ರೀಗಳಾದ ಲಕ್ಷ್ಮಿನಾರಾಣಪ್ಪಯ್ಯ, ಕೆ. ಕೆ. ಸುಬಣ, ಗೋಪಾಲ ಮಾಸ್ತರ್, ಟಿ. ನಾರಾಯಣ ರಾವ್, ಕೆ. ಟಿ. ಕರ್ಕೇರ, ತ್ಯಾಂಪಣ್ಣ ಮಾಸ್ತರ್, ಪಿ. ಎಮ್. ಅಂಚನ್, ಚಂದಯ್ಯ ಮಾಸ್ತರ್ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು.

ದೇಲಂಪಾಡಿ—ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 17 ರಂದು 'ದೇವಿ ಮಹಾತ್ಮೆ' ಎಂಬ ಪುಣ್ಯ ಕಥೆಯ ನಾಟಕ ಪ್ರದರ್ಶನವು ಶ್ರೀ ಕೆರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ನಿರ್ದೇಶನದಿಂದ ನುರಿತ ಅಭಿನಯಗಾರರ ಕೂಡುವಿಕೆಯಿಂದ ಪ್ರದರ್ಶಿಸಲ್ಪಟ್ಟಿತು. ಕೊನೆಯಲ್ಲಿ ಶ್ರೀ ರಮಾನಂದ ಬನಾರಿಯವರು ಧನ್ಯವಾದವಿತ್ತರು.

ಹಳ್ಳಿಹೊಳೆ— ಕುಂದಾಪುರ ತಾಲೂಕು ಹಳ್ಳಿಹೊಳೆ ಬೋರ್ಡು ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 16ರಂದು ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎಮ್. ಎಮ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಕುಕಲ ಸೆಟ್ಟರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಚ್. ಪಟೂನಂದ ಮಲ್ಯರು ವರದಿಯನ್ನೋದಿದರು. ಅಧ್ಯಕ್ಷ ಭಾಷಣ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಿಗಾಗಿ ಸಮಾರಂಭ ಕೊನೆಗೊಂಡಿತು.

ಬೆಳ್ಳಾರೆ—ತಾ. 19ರಂದು ಬೆಳ್ಳಾರೆ ಪಂಚಾಯತ ಬೋರ್ಡು ಚುನಾವಣೆ ನಡೆದು ಶ್ರೀ ಬಿ. ಕಿಟ್ಟಣ್ಣರೈಗಳು ಅಧ್ಯಕ್ಷರಾಗಿಯೂ ಶ್ರೀಗಳಾದ ಬಿ. ಗೋವಿಂದ ಶೆಣೈ, ಎನ್. ಸುಬ್ರಾಯ ಭಟ್, ಬಿ. ವಿಶ್ವನಾಥ ಶೆಟ್ಟಿ, ಪಿ. ಆನಂದ, ಬಿ. ಪರಿಯಪ್ಪ ಮತ್ತು ಅಂದುಂಞಿ ಬ್ಯಾರಿಗಳು ಮೆಂಬರರಾಗಿಯೂ ಆರಿಸಲ್ಪಟ್ಟಿರುವರು.

ಪುತ್ತೂರು— ಪುತ್ತೂರು ತಾಲೂಕು ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಘವನ್ನು ತಾ. 22ರಂದು ಪುತ್ತೂರು ಡಿಪಿಜನ್ಸರ ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎಸ್. ಶಿಮ್ಶಿಪ್ಪ ಶೆಟ್ಟರು ಉದ್ಘಾಟಿಸಿದರು. ಕೈಗಾರಿಕಾ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಎ. ಎಲ್. ಭಟ್ಟರು ಸಂಘದ ಧ್ಯೇಯಗಳನ್ನು ವಿವರಿಸಿದರು.

ಪರ್ಕಳ—ಸ್ಥಳೀಯ ಪಂಚಾಯತ ಬೋರ್ಡಿನ ಚುನಾವಣೆಯು ತಾ. 21ರಂದು ಜರಗಿ ಶ್ರೀಗಳಾದ ಎಚ್. ರಾಮಚಂದ್ರ ಹೆಗ್ಡೆ, ಅಧ್ಯಕ್ಷ; ಎಚ್. ವಾಸುದೇವ ತಂತ್ರಿ, ಎಮ್. ನಾಗಪ್ಪ ಶ್ಯಾನುಭಾಗ, ಎಚ್. ಸದಾಶಿವ ಶೆಟ್ಟಿ, ಪಿ. ಕೋಚಪ್ಪ, ಬಿ. ಭುಜಂಗ ಹೆಗ್ಡೆ, ವಿಠಲ ಕ್ರಭು, ಬಿ. ಸದಾನಂದ ಹೆಗ್ಡೆ, ರಾಮವರ್ಮನ್, ಎ. ಶಕಿಶಿ ಹೆಗ್ಡೆ ಮತ್ತು ಜಾಣು ನಾಯ್ಕರು ಇವರ ಸದಸ್ಯರಾಗಿಯೂ ಆರಿಸಲ್ಪಟ್ಟಿರುವರು.

ಬೆಳ್ಳೆ—ಇಲ್ಲಿಯ ಮಂಡಲ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ತಾ. 17ರಂದು ಶ್ರೀ ಎ. ಶಂಕರ ಅಳ್ವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಡಾ. ಯು. ಸಿ ಮಲ್ಯರು ಆರಂಭದಲ್ಲಿ ಗಾಂಧೀಜಿಯವರ ಭಾವಚಿತ್ರಅನಾವರಣಮಾಡಿದರು. ಶ್ರೀಗಳಾದ ಪುರುಷೋತ್ತಮ ಸೆಟ್ಟಿ, ಎಸ್. ಕೋಟ್ಯಾನ್ಸ್, ಪಿ. ಆನಂತ ರೈ, ಶ್ರೀಲಾತಿಯವರಾದ ಸರಸ್ವತಿ, ಯು. ಪಿ. ಮಲ್ಯ, ಜೆ. ಎ. ಬ್ರಿಟೊ, ಮಿಸ್. ಜುಲಿಯಾನ ನಝರೆತ್ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು.

ಬೆಳ್ಳಣ್ಣು—ಸ್ಥಳೀಯ ಯುವಕ ಸಂಘದ ಸದಸ್ಯರು, ಗ್ರಾಮಸ್ಥರೇ, ಮಹಿಳೆಯರು ಕೂಡಿಕೊಂಡು ಬೆಳ್ಳಣ್ಣಿನಲ್ಲಿ ಕಟ್ಟಲಾಗುತ್ತಿರುವ ಬೋರ್ಡು ಹೈಸ್ಕೂಲು ಕಟ್ಟಡ ಕೆಲಸದಲ್ಲಿ ಶ್ರಮದಾನ ನೀಡುತ್ತಿರುವುದು ಅಭಿನಂದನೀಯವಿದೆ. ಡಾ| ಕೊರೆಡ್ಕಲ್ ವೆಂಕಟ್ರಾಯರು ಕಟ್ಟಡ ಕೆಲಸ ಪೂರ್ಣವಾಗಲು ಶ್ರಮಿಸುತ್ತಿರುವರು.

ಸಿಂಗಪಾಲ—ಉಡುಪಿ ತಾಲೂಕು ಸಹಕಾರಿ ಸಂಘಗಳ ಪ್ರತಿನಿಧಿಗಳ ಪರಿಷತ್ತು ಮಣಿಪಾಲ ಹೈಸ್ಕೂಲಿನಲ್ಲಿ ತಾ. 25ರಂದು ಲೋಕಲ್ ಕಾಸರೇಟಿವ್ ಯೂನಿಯನ್ ಅಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಸಹಕಾರಿ ಸಂಘಗಳಿಗೆ ಸಂಬಂಧಿಸಿದ ಹಲವು ನಿರ್ಣಯಗಳು ಸ್ವೀಕರಿಸಲ್ಪಟ್ಟವು. ಸಹಕಾರಿ ಸಂಘಗಳ ಅಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ ಕಾಳಿಪ್ಪ ಸೆಟ್ಟಿ, ಬೇಂಕಿನ ಕಾರ್ಯದರ್ಶಿ ಶ್ರೀ ಶಾಂತಾರಾಮರಾವ್, ಡೈರೆಕ್ಟರ್ ಶ್ರೀ ಸಿ. ಬಿ. ಸೆಟ್ಟಿ, ಬೇಂಕಿನ ಎಕ್ಸ್‌ಕ್ಯೂಟಿವ್ ಆಫೀಸರ್ ಶ್ರೀ ಬೆಳಿಯಾಯ್, ಜಿಲ್ಲಾ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಕೆ. ವಿ. ರಾಮಾಚಾರ್ ಮೊದಲಾದವರು ಪಾಲ್ಗೊಂಡಿದ್ದರು. ಕೊನೆಯಲ್ಲಿ ಯೂನಿಯನ್ ಡೈರೆಕ್ಟರ್ ಶ್ರೀ ಕುಂಞಾಲು ಗಣಪಯ್ಯ ಸೆಟ್ಟರು ಧನ್ಯವಾದಗಳನ್ನಿತ್ತರು.

ವಾರ್ಷಿಕ ಮಹಾಸಭೆ— ದ. ಕ. ಜಿಲ್ಲಾ ಮರಾಠಿ ಸಮಾಜ ಸೇವಾ ಸಂಘದ ವಾರ್ಷಿಕ ಮಹಾ ಸಭೆಯು ತಾ. 25ರಂದು ಮಣಿಪಾಲದ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಆರ್. ಆಚಾರ್, ಎಂ. ಪಿ. ಆವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಟಿ. ಎ. ವೈ, ಸುಬ್ರಯ್ಯ ನಾಯಿಕ್, ಎಮ್. ಎಲ್. ಎ. ಮೊದಲಾದವರು ವಿಶೇಷತ ಹಾಜರಿದ್ದರು.

ಪ್ರಕಟಣೆ

ಕುಂದಾಪುರ-ಸೇನಾಪುರ: - ತಾ. 10—5—1958ರಲ್ಲಿ ನಾನು ಮತ್ತು ನನ್ನ ಹೆಂಡ್ತಿ ಲಕ್ಷ್ಮೀ ಶೆಟ್ಟಿರ ಮಗಳು ವಂಕಮ್ಮ ಶೆಡ್ತಿಯು ಅವಳ ಕಾಲದ ಗೇಣಿಯನ್ನು ಬಳಿಗಿನ ಮನೆಗೆ ಹೋಗಿ ಪಸೂಲು ಮಾಡಿಕೊಂಡು ವಾಸ್ತಿ ಆಲೂರಿಗೆ ಬರುವಾಗ್ಗೆ ಬಂಟ್ವಾಡಿ ಸಮೀಪ ಮಾರ್ಗ ಮಧ್ಯ ೧೩ಜರಸ್ತೆಯಲ್ಲಿ ಗುಡ್ಡಂಮಾಡಿ ಸುಬ್ರಣ್ಣ ಶೆಟ್ಟಿ ಮತ್ತು ಅವನ ಸಂಗಡಿಗರು (ಅನುಯಾಯಿಗಳು) ಕೂಡಿ 27-2-1958ರ ಹರ್ಕೂರು ಗೋವೆ ಕೂಪಿನ ಎಲಾಂನಲ್ಲಿ ನಾನು ನಿಂತಿದ್ದಕ್ಕೆ ನನ್ನ ಮುಂದೆ ವಾರಿ ಬಾಕಿದ್ದು ಏಕಿಂತ ತುಳ್ಳೇಕರಿಸಿ ಲೈಸನ್ಸ್ ಕೋಪಿ ಮತ್ತು ಕತ್ತಿ ಮೂಲ್ಲ ನನ್ನನ್ನು ಕೆಲ್ಲುತ್ತೇನೆಂತ ತನ್ನ ಕೈಯಲ್ಲಿರುವ ಕೊಡಲಿಯನ್ನು ನನ್ನ ಮುಖಕ್ಕೆ ಹಿಡಿದು ನನ್ನನ್ನು ತಳ್ಳುವಾಗ್ಗೆ ಕೆಲವು ಗ್ರಹಸ್ತರು ಇದ್ದು ಸಮಾಧಾನಪಡ್ಸಿದರು. ಆದರೂ ಇವತ್ತಿಗೆ ನಿನ್ನನ್ನು ಜೀವಸಹಿತ ಬಿಟ್ಟಿರುತ್ತೇನೆಂತ ಬೆದರಿಸಿ ನಾನು ಇಂದ ಬಾಡಿಗೆ ಸೈಕಲನ್ನು ಪಡಿಮಾಡಿರುತ್ತಾನೆ. ಶಿವ್ವಾ ಕಳೆದ ಸೋಣೆ ತಿಂಗಳ ಸುಮಾರಿನಲ್ಲಿ ಇವನ ಸತ್ರೂರಿ ಮೂಲ್ಲ ನನ್ನ ಹೆಂಡ್ತಿ ವಾಯಸಾದಿ ಈಸ್ಟಯ್ಯ ಶೆಟ್ಟಿಯಿಂದ ನನಗೆ ಕತ್ತಿಯಿಂದ ಇರ್ದುದಕ್ಕೆ ತಕ್ಷೀರು ನಡೆದು ಸದ್ರಿ ಮುದ್ದೆ ಆಲಿಗೆ ಶಿಕ್ಷೆ ಆಗಿರುತ್ತೆ. ಹೀಗಿರುತ್ತೆ ನನ್ನ ಮೇಲೆ ಪ್ರಬಲ ದ್ವೇಷಸಾಧನೆಯಿಂದ ನನ್ನ ಪ್ರಾಣಹಾನಿಯಾಗದಂತೆಯೂ ಸದ್ರಿಯವನಿಗೆ ಸರಕಾರವು ಅವನ ಮೇಲೆಕ್ರಮ ಕೈಗೊಳ್ಳುವಂತೆ ಈ ಮೂಲ್ಲ ಹಾರೈಸುತ್ತೇನೆ.

ಸೀನಪ್ಪ ಶೆಟ್ಟಿ ರುಜು

ಆಲೂರು, ತಾ. 18—5—1958.

**ನವಯುಗಕ್ಕೆ ಚಂದಾದಾರರಾಗಿ ಪ್ರ

ಕರ್ಣಾಟಕಾಂಧ್ರಲಿಪಿಸಮನ್ವಯ—

ಏಕಲಿಪಿಯ ಆವಶ್ಯಕತೆ

ಬೆ

ವಿದ್ವಾನ್ ಕೆ ಸುಬ್ಬರಾಮಪ್ಪ

ಆಂಧ್ರರಿಗೂ ಕನ್ನಡಿಗರಿಗೂ ಒಂದೇ ಲಿಪಿ ಇರಬೇಕೆಂದು ಶ್ರೀ ಆಚಾರ್ಯ ವಿನೋಬಾ ಭಾವೆ ಮಂತಾದ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರಾಧ್ಯಕ್ಷರಾದ ಡಾಕ್ಟರ ರಾಜೇಂದ್ರ ಪ್ರಸಾದರು ಭಾರತದ ಭಾಷೆಗಳಿಗೆಲ್ಲಾ ಒಂದೇ ಲಿಪಿಯನ್ನು ಸೂಚಿಸಿದ್ದುದನ್ನು ಅನೇಕರು ತಿಳಿದಿರಬಹುದು ಇದು ಕಷ್ಟವೆಂದು ತೋರಬಹುದಾದರೂ ಆಂಧ್ರ ಕನ್ನಡಿಗರು ಸುಲಭವಾಗಿ ಒಂದೇ ಲಿಪಿಯನ್ನು ಮಾಡಿಕೊಳ್ಳಬಹುದು. ಇದು ಸಮಂಜಸವೇ ಇದೆ ಆಂಧ್ರ ಕನ್ನಡಿಗರು ಒಂದೇ ಸಂಸ್ಕೃತಿಗೆ ಸೇರಿದವರು ಆಚಾರ ವ್ಯವಹಾರಗಳಲ್ಲಿ ಸಹ ಇಬ್ಬರಿಗೂ ಒಂದೇ ವಿಧವಾದ ಅನುಸರಣೆ ಹಿಂದೆ ಆಂಧ್ರ ರಾಜ್ಯವು ಚಾಳುಕ್ಯ ಸಾಮ್ರಾಜ್ಯದಲ್ಲಿದ್ದಿತು ಚಾಳುಕ್ಯರು ಕನ್ನಡಿಗರು ಸಂಬಂಧಿಗಳು ತೆಲುಗಿನಲ್ಲಿ ೧೧ನೆಯ ಶತಮಾನದಲ್ಲಿ ಕಾವ್ಯರಚನೆ ಆರಂಭವಾಯಿತು ಅದಕ್ಕೆ ಹಿಂದೆ ಜನಪದ ಸಾಹಿತ್ಯವಾದ ಜೋಗುಳ ಹಾಡುಗಳು, ಗರತಿಯ ಹಾಡುಗಳು ಮತ್ತು ಸ್ತ್ರೀಯರ ಹಾಡುಗಳ ರೂಪದಲ್ಲಿ ತೆಲುಗು ಸಾಹಿತ್ಯ ಇತ್ತು ಬರೆಯುವುದಕ್ಕೆ ಎಂತಹ ಲಿಪಿಯಿತ್ತು ಎನ್ನುವುದಕ್ಕೆ ತಕ್ಕ ಆಧಾರಗಳಿಲ್ಲ ಆದುದರಿಂದ ತೆಲಂಗಿನಲ್ಲಿ ಕಾವ್ಯರಚನೆಗಿಂತ ಹಿಂದೆಯೇ ಕನ್ನಡದಲ್ಲಿ ಕಾವ್ಯರಚನೆ ಆಗಿರುವುದರಿಂದ ಕನ್ನಡಕ್ಕೆ ಒಂದು ನಿರ್ದಿಷ್ಟವಾದ ಲಿಪಿಯಿತ್ತೆಂದೂ ತೆಲುಗಿಗೆ ಹಾಗೆಯೇ ಗೊತ್ತಾದ ಒಂದು ಲಿಪಿ ಇರಲಿಲ್ಲವೆಂದೂ ತೋರುತ್ತದೆ. ಆದ್ದರಿಂದ ತೆಲುಗರು ಕೂಡ ಕನ್ನಡ ಲಿಪಿಯನ್ನೇ ಅನುಸರಿಸುತಿದ್ದರೆಂದು ತೋರುತ್ತದೆ

ಹೀಗೆ ಹೇಳುವುದಕ್ಕೆ ಕಾರಣವಿದೆ ತೆಲುಗು ಕನ್ನಡ ಲಿಪಿಗಳಲ್ಲಿ ಹೆಚ್ಚಿನ ಸಾಮ್ಯವಿದೆ. ಈ ಎರಡು ಭಾಷೆಗಳಿಗೂ ಸಂಸ್ಕೃತವು ಮೂಲ ಬಾಷೆಯಾಗಿದೆ ಛಂದಸ್ಸಿನಲ್ಲಿಯ ಗ ಅನುಕರಣೆಯಿದೆ ಕನ್ನಡದಲ್ಲಿ ಕಾವ್ಯರಚನೆ ತೆಲುಗಿಗಿಂತ ಮುಂಚೆಯೇ ಆಗಿರುವುದರಿಂದ ತೆಲುಗಿನಲ್ಲಿ ಆದಿಕಾವ್ಯವಾದ ನನ್ನಯ ಭಟ್ಟಾರಕನ ಭಾರತದಲ್ಲಿರುವ ಶೈಲಿಯ ಕೆಲವು ಅನುಕರಣೆಗಳೂ ರಚನಾಸಂಪ್ರದಾಯವೂ ಅಕ್ಷರಸಂತಾದ ಕೆಲವು ಛಂದೋರೂಪಗಳೂ ಕನ್ನಡದಿಂದ ಬಂದಿರುವ ಸಂಪ್ರದಾಯವೇ ಆಗಿದೆ ಕನ್ನಡ ಕವಿಯಾದ ನಾರಾಯಣ ಭಟ್ಟನು ತೆಲುಗಿನ ಆದಿ ಕವಿಯಾದ ನನ್ನಯ ಭಟ್ಟನಿಗೆ ಆಪ್ತಮಿತ್ರ ಮತ್ತು ಸಹಾಧ್ಯಾಯಿ ಇವನು ತನಗೆ ಶ್ರೀ ಕೃಷ್ಣನು ಅರ್ಜುನನಿಗೆ ಹೇಗೆ ಸಹಾಯ ಮಾಡಿದನೋ ಹಾಗೆಯೇ ಭಾರತ ರಚನೆಯಲ್ಲಿ ತನಗೆ ಸಹಾಯಕನಾಗಿದ್ದನೆಂದು ತೆಲುಗು ಭಾರತದ ಆದಿಯಲ್ಲಿ ನನ್ನಯ ಭಟ್ಟನು ಹೇಳಿಕೊಂಡಿದ್ದಾನೆ ನಾರಾಯಣ ಭಟ್ಟನು ಕರ್ಣಾಟಕ ಚಕ್ರವರ್ತಿಯಾದ ಆಹವಮಲ್ಲ ಸೋಮೇಶ್ವರನ ಮಂತ್ರಿಯಾಗಿದ್ದನು ಇವನು ವಾಣಸ ವಂಶೀಯನಾದ ಕರ್ಣಾಟಕ ಬ್ರಾಹ್ಮಣನು ೧೧ನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ಜೈನ ಮತವು ಪ್ರಬಲವಾದುದರಿಂದ ವೈದಿಕ ಮತಾವಲಂಬಿಯಾದ ನಾರಾಯಣ ಭಟ್ಟನು ಆಂಧ್ರಕ್ಕೆ ಹೋಗಿರಬಹುದು (ನಾರಾಯಣ ಭಟ್ಟನ ವಿಚಾರವನ್ನು ಕುರಿತು ತೆಲುಗಿನಲ್ಲಿ ಸೂರಿ ನರಸಿಂಹ ಶಾಸ್ತ್ರಿಗಳು ಒಂದು ದೊಡ್ಡ ಕಾದಂಬರಿಯನ್ನು ಬರೆದಿದ್ದಾರೆ) ಇದೇ ರೀತಿಯಲ್ಲಿ ತೆಲುಗು ದೇಶವಾದ ವೆಂಗಿ ಮಂಡಳದ ವೆಂಗಿಪಳುವಿನಿಂದ ಪಂಪನು ಆಂಧ್ರವನ್ನು ಬಿಟ್ಟು ಕನ್ನಡ ದೇಶಕ್ಕೆ ಬರುವುದಕ್ಕೆ ಮತ ಪ್ರಾಬಲ್ಯವೇ ಕಾರಣವಿರಬಹುದು ಆಂಧ್ರದಲ್ಲಿ ಆಗ ವೈದಿಕ ಮತವು ವಿಜೃಂಭಿಸುತಿತ್ತು ಪಂಪನು ಜೈನಮತಾವಲಂಬಿ ಆದುದರಿಂದ ಕನ್ನಡ ದೇಶಕ್ಕೆ ಬಂದನು ಹೀಗೆಯೇ ಕನ್ನಡದ ಅರಸರು ತೆಲುಗು ದೇಶವನ್ನಾಳಿದರು ಶ್ರೀಕೃಷ್ಣದೇವರಾಯನು ೧೬ನೆಯ ಶತಮಾನದಲ್ಲಿ ತೆಲುಗು ದೇಶವನ್ನಾಳಿದಾಗ ಅವನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂಬ ಎಂಟು ಜನ ತೆಲುಗು ಕವಿಗಳಿದ್ದರು ಆದುದರಿಂದ ಕರ್ಣಾಟಕ ಆಂಧ್ರ ಸಂಸ್ಕೃತಿಗಳು ಹೆಚ್ಚೂಕಡಿಮೆ ಹೆಣೆದುಕೊಂಡಿದ್ದು ಭಾಷೆಯಲ್ಲಿ ವ್ಯತ್ಯಾಸವಿದ್ದರೂ ಲಿಪಿಯಲ್ಲಿ ಅಂತಹ ವಿಶೇಷ ವ್ಯತ್ಯಾಸಗಳು ಕಾಣಬರದಿರುವುದರಿಂದ ಒಂದು ಲಿಪಿ ಸಂಸ್ಕರಣವು ವಸ್ತು ಉಭಯ ಭಾಷೆಗಳಿಗೆ ಒಂದೇ ಲಿಪಿಯು ಅದಲ್ಲಿ ಉಭಯತಃ ಇನ್ನೂ ಸಾಮಿಪ್ಯವು ಹಚ್ಚಿ ಪೂರ್ಣರೂಪದಲ್ಲಿ ಸಂಸ್ಕೃತಿಯು ವಿಕಸಿಸಲು ಸಹಾಯಕವಾಗುವುದು

ಕನ್ನಡ ತೆಲುಗು ಲಿಪಿಗಳಲ್ಲಿ ಸಾಮ್ಯವಾಗಿರುವ ಅಕ್ಷರಗಳನ್ನು ನೋಡುವ

ಸ್ವರಗಳು

ತೆಲುಗಿನಲ್ಲಿ— ಅ, ಆ, ಇ, ಈ, ಉ, ಊ (ಉ ಮತ್ತು ಊ ಗಳಿಗೆ ಆಂಧ್ರಲಿಪಿ ಬೇರೆಯಿದೆ-ಸಂ ನ), ಋ, ೠ, ಎ, ಏ, ಐ ಒ, ಓ ಔ, ಅಂ, ಅಃ

ಕನ್ನಡಲ್ಲಿ— ಅ ಆ, ಇ, ಈ, ಉ, ಊ, ಋ, ೠ, ಎ, ಏ, ಐ, ಒ ಓ ಔ, ಅಂ, ಅಃ

ವ್ಯತ್ಯಾಸಗಳು— ಉ, ಊ, ಮತ್ತು ಋ (ಋ) ೠ (ೠ)

ವ್ಯಂಜನಗಳು

ತೆಲುಗಿನಲ್ಲಿ— ಕ, ಖ, ಗ ಘ, ಙ, ಚ, ಛ ಜ, ಝ, ಞ, ಟ, ಠ, ಡ, ಢ, ಣ, ತ, ಥ, ದ, ಧ, ನ, ಪ, ಫ, ಬ, ಭ ಮ ಯ, ರ, ಲ ಶಕಟರೇಫ, ಲ, ಳ, ವ, ಶ, ಷ, ಸ, ಹ (ಇವುಗಳಲ್ಲಿ ಕ, ಬ, ಞ ಚ, ತ, ಹ ಈ ಅಕ್ಷರಗಳ ಲಿಪಿಗಳು ಬೇರೆಯವೆ ಸಂ ನ.)

ಕನ್ನಡದಲ್ಲಿ— ಕ, ಖ, ಗ, ಘ, ಙ ಚ, ಛ, ಜ, ಝ, ಞ, ಟ, ಠ, ಡ, ಢ, ಣ, ತ, ಥ, ದ, ಧ, ನ ಪ ಫ, ಬ, ಭ, ಮ, ಯ, ರ, (ಶಕಟರೇಫ) ಲ ಳ, ವ, ಶ, ಷ, ಸ, ಹ

ವ್ಯತ್ಯಾಸಗಳು ಕ, ಙ, ಞ, ಚ, ತ, ಹ

ಮೇಲೆ ಸೂಚಿಸಿರುವ ಅಕ್ಷರಗಳನ್ನು ನೋಡಿದರೆ ಹೆಚ್ಚಿನ ವ್ಯತ್ಯಾಸಗಳು ಅಷ್ಟೇನೂ ಕಂಡುಬರುವುದಿಲ್ಲ ಕೇವಲ ಎಂಟು ಹತ್ತು ಅಕ್ಷರಗಳಲ್ಲಿ ಸಣ್ಣಪುಟ್ಟ ಮಾರ್ಪಾಡುಗಳನ್ನು ಮಾಡಿಕೊಂಡರೆ ಎರಡು ಭಾಷೆಗಳಿಗೂ ಒಂದೇ ಲಿಪಿಯು ಸರಿಹೋಗುತ್ತದೆ ಅಂಕಗಳಲ್ಲಿ ಕೂಡಾ ಒಂದೇ ಸಮನಾಗಿದೆ ನೋಡಿ

ತೆಲುಗಿನಲ್ಲಿ— ೧, ೨ 3, ೪, ೫, ೬, ೭, ೮, ೯, ೧೦

ಕನ್ನಡದಲ್ಲಿ— ೧, ೨, ೩, ೪, ೫, ೬ ೭ ೮, ೯, ೧೦

ವ್ಯತ್ಯಾಸ— 3 (೩) ಮಾತ್ರ

ವ್ಯಂಜನಗಳ ಒತ್ತುಗಳಲ್ಲಿ ಏನೂ ವ್ಯತ್ಯಾಸಗಳಿಲ್ಲ 'ಕ' ಗಣಿತಗಳಲ್ಲಿ ಮಾತ್ರ ಕೆಲವು ವ್ಯತ್ಯಾಸಗಳುಂಟು

ಎರಡು ಭಾಷೆಗಳ ಪ್ರತಿನಿಧಿಗಳೂ ಸಮಾವೇಶಗೊಂಡು ಟೈಪ್‌ರೈಟಿಂಗ್ ಲಿನೋಟೈಪ್ ಅನುಕೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತಕ್ಕ ಮಾರ್ಪಾಡುಗಳನ್ನು ಮಾಡಬಹುದು ಬೇಕಾದರೆ, ಎರಡು ಭಾಷೆಗಳಲ್ಲಿಯೂ ಬಳಕೆಯಲ್ಲಿಲ್ಲದ ಕೆಲವು ಅಕ್ಷರಗಳನ್ನು ನಾವು ಬಿಡಬಹುದು ಒತ್ತುಗಳಿಗೆ ಕೆಲವು ಸಂಕೇತಗಳನ್ನು ಮಾಡಬಹುದು ಸಮಿಳರ ಹಾಗೆ ಇದರ ಮೂಲಕ ಕನ್ನಡಾಂಧ್ರರ ಸೌಹಾರ್ದವು ಇನ್ನೂ ಹೆಚ್ಚುತ್ತದೆ ಅನೇಕ ಸಂಸ್ಕೃತ ಕಾವ್ಯಗಳನ್ನು ತೆಲುಗು ಲಿಪಿಯಲ್ಲಿಯೇ ಈಗಲೂ ಅನೇಕ ಕನ್ನಡಿಗರು ಓದುತಿದ್ದಾರೆ ಕನ್ನಡ ಪತ್ರಿಕೆಗಳನ್ನು ದೂರದಿಂದ ನೋಡಿದರೆ ತೆಲುಗು ಪತ್ರಿಕೆಗಳ ಹಾಗೆ ಕಾಣುತ್ತವೆ ಹಾಗೆಯೇ ತೆಲುಗು ಪತ್ರಿಕೆಗಳೂ ಕಂಡು ಬರುತ್ತವೆ ಪುಸ್ತಕ ಪ್ರಕಟಣೆ ಮತ್ತು ಟೈಪ್ ಫೌಂಡ್ರೀ ವ್ಯಾಪಾರದಲ್ಲಿ ತುಂಬ ಅನುಕೂಲವಾಗುತ್ತದೆ ಸುಲಭ ಬೆಲೆಯಲ್ಲಿಯೂ ಸಿಗುತ್ತವೆ

ಬಳ್ಳಾರಿಯಲ್ಲಿ ೨೦-೧-೫೦ರಲ್ಲಿ ಸೇರಿದ್ದ ಕನ್ನಡ ಸಾಹಿತ್ಯ ಸಮ್ಮೇಳನವು ತೆಲುಗು ಕನ್ನಡ ಭಾಷೆಗಳಿಗೆ ಒಂದೇ ಲಿಪಿ ಇರಬೇಕೆಂದು ಹೇಳಿ ಒಂದು ನಿರ್ಣಯವನ್ನು ಅನುಮೋದಿಸಿತು ಪ್ರೊ ದ ರಾ ಬೇಂದ್ರೆ ಮಂತಾದವರು ಇದಕ್ಕೆ ಬೆಂಬಲ ಕೊಟ್ಟು ಮಾತಾಡಿದರು

ಆಂಧ್ರದಲ್ಲಿ ಅತ್ಯಧಿಕ ಪ್ರಚಾರವುಳ್ಳ 'ಆಂಧ್ರಪ್ರಭ' ಎಂಬ ತೆಲುಗು ದಿನ ಪತ್ರಿಕೆ ೨೪ ೧-೫೦ರಲ್ಲಿ ಈ ನಿರ್ಣಯವನ್ನು ಸ್ವಾಗತಿಸಿ ಅಗ್ರಲೇಖನವನ್ನು ಬರೆದಿತ್ತು

ರಾಯಲ ಸೀಮೆಯ ಅನಂತಪುರದಲ್ಲಿ ೨೦—೩—೧೯೫೦ರಲ್ಲಿ ನಡೆದ ಆಂಧ್ರರಾಷ್ಟ್ರ ಪಂಡಿತ ಪರಿಷತ್ತಿನವರು ಕನ್ನಡ ಸಾಹಿತ್ಯ ಸಮ್ಮೇಳನದವರು ಈ ಬಗ್ಗೆ ಮಾಡಿರುವ ನಿರ್ಣಯವನ್ನು ಸ್ವಾಗತಿಸಿ ಏಕಲಿಪಿ ಆಗುವುದಕ್ಕೆ ಬೇಕಾದ ಸಹಕಾರವನ್ನು ನೀಡುತ್ತೇವೆಂದು ಹೇಳಿ ಒಂದು ನಿರ್ಣಯವನ್ನು ಮಾಡಿದರು ನಿರ್ಣಯದ ಮೇಲೆ ನಾನು ವಿವರಿಸಿದೆ ಇವರ ಸಾಮ್ಯತೆಯನ್ನು ವಿವರಿಸಿದೆ

ಉಭಯ ಭಾಷೆಗಳ ಪಂಡಿತೋತ್ತಮರೂ ಕಲೆತು ಒಂದು ನಿರ್ದಿಷ್ಟರೂಪವನ್ನು ಕೊಟ್ಟಲ್ಲಿ ಕರ್ಣಾಟಕ-ಆಂಧ್ರದ ಸಂಸ್ಕೃತಿಯ ಬಾಂಧವ್ಯ ಹೆಚ್ಚುವುದೇ ಅಲ್ಲದೆ ದಕ್ಷಿಣ ಭಾರತದ ಈ ವಿಶಾಲ ಭಾಗವು ಹೊಸ ಭಾರತದ ಸಂಸ್ಕೃತಿಯ ಮೇಲೆ ಇನ್ನೂ ಪ್ರಭಾವಶಾಲಿಯಾದ ಪರಿಣಾಮವನ್ನು ಉಂಟುಮಾಡುವುದೆಂದು ಆಶಿಸಬೇಕಾಗಿದೆ

(ಪ್ರಬುದ್ಧ ಕರ್ಣಾಟಕದ ಸಾಹಸ್ಯದಿಂದ)

ಪ್ರತಿಯೊಂದು ಕೋಣೆಯಲ್ಲೂ ಶ್ರೇಷ್ಠತೆಯನ್ನು ಗಳಿಸಿದ ಈ ಯಂತ್ರವನ್ನೇ ಕೊಂಡುಕೊಳ್ಳಿರಿ



ಉಷಾ ಹೊಲಿಗೆ ಯಂತ್ರ
ನಮ್ಮದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾಗುವ ಯಂತ್ರ.
ಶ್ರೇಷ್ಠ ವಿಕ್ರಯ ಏಜಂಟರು
ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
120, ಆರ್ಮೇನಿಯನ್ ಸ್ಟ್ರೀಟ್,
ಮದ್ರಾಸು—1
ಗ್ರಾಮ್ಸ್ "USHAKO" ಫೋನ್: 2278.

NAVAYUGA WEEKLY

ADVERTISEMENT RATES

Display Advertisements — Rs 2 8/ per column inch for contracts of 50" or more and Rs. 3/ per column inch for casual advertisements

Classified Advertisements — As 8/ per line (minimum 8 lines).

For rates for advertising in colours and special positions, please write to
ADVERTISEMENT MANAGER,
'NAVAYUGA'
Post Box No 22, UDIPI, S K

ನೌಕಾಂಗಣ ಪರಿಶೀಲನಾ ಸಮಿತಿಯ ವರದಿ—

ಮೈಸೂರಿನ ಬಂದರಗಳಿಗೆ ಸಾನವಿಲ!

ಭಾರತದಲ್ಲಿ ಸ್ಥಾಪಿತವಾಗಲಿರುವ ದ್ವಿತೀಯ ನೌಕಾಂಗಣವನ್ನು ಸ್ಥಾಪಿಸಲು ಎನಾರ್ಕುಲಮಿನ ಸಮೀಪದಲ್ಲಿನ ಕೊಚ್ಚಿ ಸ್ಥಳವೊಂದನ್ನು ಬ್ರಿಟಿಷ ತಜ್ಞರ ಸಮಿತಿಯು ಶಿಫಾರಸು ಮಾಡಿದೆ. ಈ ಸ್ಥಳದಲ್ಲಿ ನಿರ್ಮಿಸಲಿರುವ ನೌಕಾಂಗಣದ ಮಾದರಿಯನ್ನೂ ಆ ಸಮಿತಿಯು ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಪ್ರಾಶಸ್ತ್ಯಕ್ಕನುಸಾರವಾಗಿ ಕಾಂಡ್ಲ,ಟ್ರಾಂಬೆ,ಗ್ರಾಮಖಾಲಿ ಮತ್ತು ಮಜಗಾಂ ಈವುಮತರ ಸ್ಥಳಗಳನ್ನದು ಸೂಚಿಸಿದೆ ಸಮಿತಿಯ ಅಭಿಪ್ರಾಯದಂತೆ ಅದು ಪರಿಶೀಲಿಸಿದ ಸ್ಥಳಗಳಲ್ಲಿ ಎನಾರ್ಕುಲಮ್‌ಗೆ ಅಗ್ರಸ್ಥಾನವು ಸಲ್ಲುತ್ತದೆ. ಇಲ್ಲಿ ಮುಂದಕ್ಕೆ ಅಭಿವೃದ್ಧಿಗೊಳ್ಳಲು ಅನುಕೂಲವಾದ ಅದೃಷ್ಟವಿದೆ. ಅದು ಬೆಳೆಯುತ್ತಿರುವ ಬಂದರವಾಗಿರುವುದಲ್ಲದೇ ಅಲ್ಲಿ ಹೆಚ್ಚು ಕಟ್ಟುವದಕ್ಕೆ ಅಗತ್ಯವಾದ ಕೆಲವಾರು ವಸ್ತುಗಳನ್ನು ಉತ್ಪಾದಿಸುವ ಕಾರಖಾನೆಗಳು ಈಗಾಗಲೇ ಸ್ಥಾಪಿತವಾಗಿವೆ. ರೇಲ್ವೆ ಸೌಲಭ್ಯ ಮತ್ತಿತರ ಸಂಚಾರಾನುಕೂಲತೆಗಳು ಉತ್ತಮವಿವೆ. ಕೊಚ್ಚಿಯು ಈಗಾಗಲೇ ವಿಸ್ತಾರಗೊಂಡಿರುವುದರಿಂದ ಸದ್ಯದ ಕೆಲಸಕ್ಕೆ ಉಪಯುಕ್ತವಾಗಿದೆ.

ಕಲ್ಕತ್ತದ ವಜ್ರ ಬಂದರ, ಗಾವ್‌ಖಾಲಿಗಳನ್ನು, ಒರಿಸ್ಸದ ಪ್ರದೀಪ, ಮದರಾಸಿನ ಟ್ಯುಟಿಕೋರಿನು (೩ ಸ್ಥಳಗಳು) ಕೇರಳದ ಕೊಚ್ಚಿ (೪ ಸ್ಥಳಗಳು), ಮೈಸೂರಿನ ಮಂಗಳೂರು (೨ ಸ್ಥಳಗಳು), ಭಟಕಳ, ಕಾರವಾರ (೨ ಸ್ಥಳಗಳು) ಬೊಂಬಾಯಿಯ ಟ್ರೋಂಬೆ, ಮಜಗಾವ್ ಮತ್ತು ಖಾಂಡ್ಲಗಳನ್ನು ತಜ್ಞ ಸಮಿತಿಯು ಸಂದರ್ಶಿಸಿತು. ಮಜಗಾವ್ ಬಂದರವನ್ನು ಈ ಸಮಿತಿಗೆ ತೋರಲಾಗಿ, ಸಂದರ್ಶಿಸಲು ಸೂಚಿಸಿರಲಿಲ್ಲ. ಆದರೆ, ಸಮಿತಿಯು ಸಂಚಾರದ ಸಮಯದಲ್ಲಿ ಅದನ್ನು ನೋಡುವ ಸಂದರ್ಭವೊದಗಿ ಬಂತು.

ಉತ್ತಮ ನೌಕಾಂಗಣವೊಂದನ್ನು ಸ್ಥಾಪಿಸಲು ಆವಶ್ಯಕವಾಗಿರುವ ಸೌಲಭ್ಯಗಳು ಇರುವುದು ಅಗತ್ಯ ಇವುಗಳೆಂದರೆ, (೧) ತೆರೆಗಳಿಂದ ಹಾನಿಯೊದಗದಂತೆ ಆಗಲು ಆಳವಾದ ಸಮುದ್ರ. (೨) ಸಮುದ್ರ ಕಿನಾರೆಯಿಂದ ಉತ್ತಮ ನೀರಿನ ಕಾಲುವೆಗಳು. (೩) ಬಿರುಗಾಳಿಯಿಂದ ರಕ್ಷಿಸಬಲ್ಲ ಸನ್ನಿವೇಶ ಮತ್ತು ಬಂದರದ ಹಿಂದೆ ಮುಂದಿನ ಅಭಿವೃದ್ಧಿಗಾಗಿ ವಿಶಾಲವಾದ ಸ್ಥಳ. (೪) ಯೋಜಿತವಾದ ಪ್ರಬುದ್ಧ ಬಂದರಗಳು ಮತ್ತು ಔದ್ಯೋಗಿಕ ದೃಷ್ಟಿಯಿಂದ ಮುಂದುವರಿವ ಸನ್ನಿವೇಶಗಳು (೫) ವಿದ್ಯುಚ್ಛಕ್ತಿ, ನೀರಿನ ಸೌಕರ್ಯ, ಮಗರ್ಗ ಮತ್ತು ರೈಲ್ವೆಗಳು ದೊರೆಯುವಿಕೆ.

ಈ ದೃಷ್ಟಿಯಿಂದ ಪರೀಕ್ಷಿಸಿದ ಯಾವುದೇ ಸ್ಥಳವು ಉತ್ತಮವೆಂದು ಕಂಡು ಬಂದಿಲ್ಲವಾದರೂ ಮೇಲೆ ಸೂಚಿಸಿದ ಐದು ಸ್ಥಳಗಳು ಮುಂದಿನ ಪರಿಶೀಲನೆಗೆ ಅರ್ಹವಾಗಿವೆ ಎಂದು ವರದಿಯು ಹೇಳಿದೆ.

ಒಂದು ನೌಕಾಂಗಣವು ಸಂಪೂರ್ಣ ಅಭಿವೃದ್ಧಿಯಾಗಬೇಕಾದರೆ, ಕಡಿಮೆ ಪಕ್ಷಕ್ಕೆ ನೂರು ಎಕ್ರೆ ಸ್ಥಳವಾದರೂ ಬೇಕು. ಕೊಚ್ಚಿ (ಎನಾರ್ಕುಲಮ್‌ನ ಬಳಿ) ಬಂದರದಲ್ಲಿ ನೌಕಾಂಗಣ ಸ್ಥಾಪಿಸಲು ರೂ. ೧೯೦೧ ಕೋಟಿ, ಖಾಂಡ್ಲ ರೂ ೨೦೩೧ ಕೋಟಿ, ಟ್ರಾಂಬೆ ರೂ. ೧೭೩೮ ಕೋಟಿ, ಗಾವ್‌ಖಾಲಿ ರೂ. ೨೦೮೮ ಕೋಟಿ, ಗಳ ವೆಚ್ಚವು ಹುಟ್ಟುವುದು ಮಜಗಾವ್ ಡಕ್ಕಿಗೆ ಕೇವಲ ರೂ. ೭.೦೪ ಕೋಟಿಗಳು ಖರ್ಚಾಗುವುವು ಎಂದು ಅಂದಾಜು ಮಾಡಲಾಗಿದೆ. ಒಣಡಕ್ಕೆ ಹಾಗೂ ರಿಪೇರಿ ಕೆಲಸಗಳು ಇನ್ನು ಮೂರು ವರ್ಷಗಳಲ್ಲಿ ಪೂರ್ಣಗೊಳ್ಳುವ ದೃಷ್ಟಿಯಿಂದ ಈ ಅಂದಾಜನ್ನು ಮಾಡಲಾಗಿದೆ. ಸಮಿತಿಯು ಸಲಹೆಗಳಿಗೆ ಹೊರಗಾದ ರೇಲ್ವೆ, ಮಗರ್ಗರಚನೆ ಮತ್ತು ಪಾರಖನ ಮೊದಲಾದುವುಗಳ ವೆಚ್ಚವನ್ನು ಈ ಅಂದಾಜಿನಲ್ಲಿ ಸೇರಿಸಿಲ್ಲ.

ಪರದೇಶಗಳಿಂದ ಆವಶ್ಯಕ ಉಪಕರಣಗಳನ್ನು ಕೊಂಡುಕೊಳ್ಳಲು ರೂ. ೨,೫೫,೬೬,೦೦೦ ಗಳು ಅಗತ್ಯವಾಗಿವೆ. ಮಜಗಾವ್ ಡಕ್ಕೆಗೆ ಮಾತ್ರ ಈ ವೆಚ್ಚವು ರೂ. ೧,೩೦, ೬೭,೦೦೦ವಾಗುವುದು. ಈ ಬಂದರದಲ್ಲಿ ೧೨ ಸಾವಿರ ಟನ್ನುಗಳ ಳ ನೌಕೆಗಳನ್ನು ಕಟ್ಟಬಹುದು. ಆದರೆ, ಈ ಸಂಖ್ಯೆಯು ದ್ವಿತೀಯ ನೌಕಾಂಗಣಕ್ಕೆ ವಿರೂಪಲಾಗಿಟ್ಟ ಟನ್ನೇಜಿಗಿಂತ ಕಡಿಮೆಯಾಗಿದೆ- ಈ ಬಂದರದಲ್ಲಿ ದೊರೆವ ಲಾಭವೆಂದರೆ, ಅತಿ ತೀವ್ರವಾಗಿ ನ್ಯಾಯ ವ್ಯಯದಲ್ಲಿ ಇದರ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಹುದೆಂಬುದು ವಾಸ್ತವ.-ಇಲ್ಲಿ ಅಲ್ಲದೇ ಈಗಾಗಲೇ ಹಡಗನ್ನು ಕಟ್ಟುವ ಮತ್ತು ಸುಧಾರಿಸುವ ಕಾರ್ಯಗಳಲ್ಲಿ ನುರಿತ ಸಂಸ್ಥೆಗಳಿರುತ್ತವೆ.

ಔದ್ಯೋಗಿಕ ಕ್ಷೇತ್ರಕ್ಕಿಂತ ದೂರವಿರದಿದ್ದರೆ, ನೌಕಾಂಗಣಕ್ಕೆ ಯೋಗ್ಯವಾದ ಸ್ಥಳ ಖಾಂಡ್ಲ ಎಂದು ತಜ್ಞರ ವರದಿ ಹೇಳಿದೆ. ಇಲ್ಲಿ ಅನುಭವಿಕ ತಂತ್ರಜ್ಞರನ್ನು ಮತ್ತು ನುರಿತ ಕೆಲಸಗಾರರನ್ನು ಪಡೆಯುವುದು ಕಷ್ಟ. ಟ್ರಾಂಬೆಯಲ್ಲಿ ಕೆಲವನುಕೂಲತೆಗಳಿದ್ದರೂ ಆಳ ಸಮುದ್ರದ ಅಭಾವದಿಂದ ವ್ಯಯ ಪ್ರದವಾಗಿ ಪರಿಣಮಿಸುವುದು. ಕಲ್ಕತ್ತದಲ್ಲಿನ ಎರಡು ಸ್ಥಳಗಳಲ್ಲಿ ಗಾವ್‌ಖಾಲಿಯು ಉತ್ತಮವಾದುದು. ಆದರೆ ಹೂಗ್ಲಿ ನದಿಯ ರಕ್ಷಣೆಯ ಬಗ್ಗೆ ನಿಶ್ಚಿತವಲ್ಲವಾದ ದರಿಂದ ಬುನಾದಿ ಕೆಲಸಕ್ಕೇನೇ ಗಂಡಾಂತರವನ್ನು ತಂದಿಯಬಹುದು.

ನೌಕಾಂಗಣದಲ್ಲಿ ಕಾರ್ಯತತ್ಪರರಾಗಲು ಅನುಭವಿಕ ಮತ್ತು ಉತ್ತಮ ಗುಣಭರಿತ ಹಾಗೂ ಸುಶಿಕ್ಷಿತ ನೌಕರರ ಆವಶ್ಯಕತೆಯಿದೆ. ಭಾರತೀಯ ಕೂಲಿಗಾರರ ತೃಪ್ತಿಯು ಯುರೋಪಿನ ದೇಶಗಳಿಗಿಂತ ಹೆಚ್ಚಾಗಿದೆ. ಆದುದರಿಂದ ಆರ್ಥಿಕ ದೃಷ್ಟಿಯಿಂದಲೂ ಅತ್ಯಂತ ಜಾಗರೂಕತೆಯಿಂದ ಈ ನೌಕಾಂಗಣದ ಕೆಲಸವನ್ನು ಮುಂದುವರಿಸಬೇಕಾಗಿದೆ ಎಂದು ಈ ವರದಿ ಹೇಳಿದೆ.

ಭಟಕಳ, ಮಂಗಳೂರು ಮತ್ತು ಕಾರವಾರಗಳ ಉಲ್ಲೇಖನನ್ನೇ ಈ ಸಮಿತಿಯು ಮಾಡಿಲ್ಲ. ಇವು ಬಂದರಗಳಾಗಲಿ, ಉದ್ಯಮಶೀಲ ನಗರವಾಗಲಿ ಅಲ್ಲವೆಂದು ಭಾವಿಸಿರಬಹುದು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವದು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಬಿರುದಿನ ಕುದುರೆಯ ಹಿಂದೆ—

(ಜೈಮಿನಿ ಭಾರತದ ಕಥೆಗಳು ಲಕ್ಷ್ಮೀಶ ಹೇಳಿದಂತೆ ಮಲ್ಲಾರಿ ಹೇಳಿದುದು. ಪ್ರಕಾಶಕರು: ಸನಾಜ ಪುಸ್ತಕಾಲಯ, ಧಾರವಾಡ. ಪುಟಗಳು ೨೩೦. ಬೆಲೆ: ರೂ. ೨.

ಕನ್ನಡ ಕಾವ್ಯರಾಮದಲ್ಲಿ ನಳನಳಿಸುವ ಸಂಡಿತ ಸಾಮರ್ಥ ಮನೋರಂಜಕವಾದ ಕೃತಿಗಳಲ್ಲಿ ಕರ್ನಾಟಕ ಜೈಮಿನಿ ಭಾರತವೂ ಒಂದೆಂದು ಧೈರ್ಯದಿಂದ ಹೇಳಬಹುದು. ಕನ್ನಡಿಗರೆನಿಸಿ ಕೊಳ್ಳುವ ಎಲ್ಲರಿಗೂ ಈ ಮಹಾ ಮೇರುಕೃತಿಯ ಕೆಲವು ಚರಣಗಳಾದರೂ ಕಂಠಗತವಾಗಿರುವುದೆಂದಾಗಿ, ಈ ಕಾವ್ಯದ ಮಹತ್ತಿಕೆಯ ಅರಿವಾಗುವುದು. ಮೈಸೂರು ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಶಾಖೆಯು ಒಂದೊಂದರ ವರ್ಷಕ್ಕೆ ಮೊದಲು ಲಕ್ಷ್ಮೀಶನ ಈ ಉತ್ತಮ ಏಕಮಾತ್ರ ಕೃತಿಯನ್ನು ಆಮೂಲಾಗ್ರವಾಗಿ ಅಚ್ಚು ಹಾಕಿಸಿ ಸುಲಭ ದರದಲ್ಲಿ ಎಲ್ಲರಿಗೂ ದೊರಕುವಂತೆ ಮಾಡಿತ್ತು. ಆದರೆ, ಮೂಲಗ್ರಂಥವು ಕವಿಯ ಪ್ರತಿಭೆ, ಅಭ್ಯಾಸ ಮತ್ತು ವೃತ್ತಿಯ ಕುಲುಮೆಯಲ್ಲಿ ಕುದಿದು, ಛಂದಸ್ಸು ಮತ್ತು ವ್ಯಾಕರಣಗಳ ಎರೆತದಲ್ಲಿ ಹೊಯ್ದು ಶ್ರೀಕೃಷ್ಣಭಕ್ತಿ ಪ್ರವಾಸ ಸೋನೆಯಾಗಿರುವುದರಿಂದ ಸಾಮಾನ್ಯರಿಗೆ ಅದನ್ನು ವಿದ್ವಜ್ಜನರ ಮುಖದಿಂದ ಪ್ರಸಿದ ತಿಳಿಯುವುದು ಸ್ವಲ್ಪ ಅಯಾಸಪಡಿಸುತ್ತದೆ. ಶ್ರೀ ಮೇವುಂಡಿ ಮಲ್ಲಾರಿಯವರು ಜೈಮಿನಿ ಭಾರತದ ಕಥೆಯನ್ನು ಬಿರುದಿನ ಕುದುರೆಯ ಹಿಂದೆ ಎಂಬ ನಾಮಧೇಯವನ್ನಿಟ್ಟು ಗದ್ಯದಲ್ಲಿ ನಿರೂಪಿಸಿದ್ದಾರೆ.

ಕರ್ನಾಟಕ ಜೈಮಿನಿ ಭಾರತವೂ ಆದರ ಮೂಲವಾದ ಸಂಸ್ಕೃತ ಜೈಮಿನಿ ಭಾರತವೂ ಸಣ್ಣ ಕಥೆಗಳ ಒಂದು ತೊಗಲು. ಇಲ್ಲಿ ನಾನಾ ರಾಜ ಮಹಾ ರಾಜರ ಕಥೆಗಳು ಬರುತ್ತವೆ ಚಿತ್ರ ವಿಚಿತ್ರವಾದ ಸನ್ನಿವೇಶಗಳು ತಲೆದೋರುತ್ತವೆ ಇವೆಲ್ಲವುಗಳಿಗೆ ಅನುರೂಪವಾಗಿ ಕಥೆ ಬೇರೆ ಬೇರೆ ರೀತಿಯಲ್ಲಿ ಮುಂದುವರಿಯುತ್ತವೆ ಅದ್ಭುತ ಭಯಾಗ ಮಾಡುವುದಕ್ಕಾಗಿ ದಿಗ್ವಿಜಯಕ್ಕೆ ಹೊರಟ ಕುದುರೆಯನ್ನು ಕಟ್ಟಿದ ಆರಕರೊಡನೆ ಹೋರಾಡುವುದು ಎಲ್ಲೆಲ್ಲಿಯೂ ಒಂದೇ ರೀತಿಯಾದರೂ ಅದನ್ನೇ ಸೋಲುತ್ತ ಹೋದರೆ ಪಾತ್ರಕರಿಗೆ ಬೇಸರ ಬಂದೀತು! ಲಕ್ಷ್ಮೀಶನು ಕಲಾ ಕುಶಲ ಹಾಗೂ ಕೂರಲ ಮತಿಗಳು ಅಂತಹ ಕಥೆಗಳನ್ನು ಮೂಲಕ್ಕಿಂತ ಹಿಗ್ಗಿಸಿ ಕುಗ್ಗಿಸಿ ಸ್ವಿಮತಕ್ಕೆ ತಂದು ಮುಟ್ಟಿಸಿವೆ. ಆದುದರಿಂದಲೇ ಅದ್ಭುತೇಳ ಹಿಂದು ಸೆಸಮಾತ್ರ; ಸಣ್ಣ ಕಥೆಗಳ ಸಂಕಲನವೇ ಈ ಭಾರತ -ಶ್ರೀಕೃಷ್ಣ ಭಕ್ತಿ ಮಹಿಮೆಗಳೇ ಇಲ್ಲಿನ ಪ್ರಾಣವಾದಕ ವಿಷಯ.

ಜೈಮಿನಿ ಭಾರತದ ಕಥೆಗಳನ್ನು ಇದ್ದುದ್ದಕ್ಕಿದ್ದಂತೆಯೇ ಈ ಗದ್ಯ ಪುಸ್ತಕದಲ್ಲಿ ಮೇವುಂಡಿ ಹೇಳಿದ್ದಾರೆ. ಇಲ್ಲಿ ವರ್ಣನೆ, ಅಲಂಕಾರ, ಭಾವ ಗುಣಗಳು ಮುಖ್ಯವಲ್ಲ; ಹೊಸಗನ್ನಡದ ಕಥೆಗಳಂತೆಯೇ ವಿಷಯ-ವಸ್ತು-ಪ್ರಧಾನ. ಎಂತಲೇ ಮೂಲದ ಬಹಳಷ್ಟು ಭಾಗಗಳು ಗದ್ಯ ಸಂಗ್ರಹದಲ್ಲಿ ಲುಪ್ತವಾಗಿವೆ. ರೇಖಿಸಿರೇ ಹೇಳುವಂತೆ ಇದನ್ನೊಂದು ಆಧುನಿಕ ಕಾದಂಬರಿಯಂತೆ ಅರ್ಜುನನನ್ನೋ ಶ್ರೀಕೃಷ್ಣನನ್ನೋ ಅಥವಾ ಮತ್ತಿತರನ್ನಾದರೂ ನಾಯಕರನ್ನಾಗಿ ಮಾಡಿ ಬರೆಯಬಹುದಿತ್ತು. ಆದರೆ, ಅವರು ಹೀಗೆ ಮಾಡದೆ, ಕಥಾಸಂಕಲನದ ಆಕಾರಕ್ಕೆ ತಂದಿದ್ದಾರೆ. ಇದಕ್ಕೆ ಜೈಮಿನಿ ಭಾರತವು ಶ್ರೀಕೃಷ್ಣ ಮಹಿಮಾವರ್ಣಕವಾದ ಸಣ್ಣ ಕಥೆಗಳ ಗೊಂಚಲೆಂದು ಜನಪ್ರಿಯವಾಗಿರುವುದೇ ಕಾರಣವೆಂದೂಹಿಸಬಹುದು. ಇಲ್ಲಿನ ಕಥೆಗಳಲ್ಲಿ -ಎಲ್ಲಿ ಹೋದರೂ ಕೃಷ್ಣ ಮಹಾತ್ಮೆಯು ತಾನೇ ತಾನಾಗಿ ಬಂದಿದೆ.

ಮೇವುಂಡಿಯವರು ಈ ಗ್ರಂಥದಲ್ಲಿ ಲಕ್ಷ್ಮೀಶನ ಮೂಲಗಳಲ್ಲಿಯೇ ಕಥೆಯನ್ನು ಹೇಳುವ ಪ್ರಯತ್ನವನ್ನು ಮಾಡಿ ಆ ಕಾಲದ ಅಧಿಕ ಹಿಂದಿನ ಪದಗಳ ಪ್ರಯೋಗಗಳನ್ನು ಉಳಿಸಿಕೊಂಡಿದ್ದಾರೆ. ಆದರೆ, ಅವುಗಳು ಇಂದಿನ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿರುವ ಜನರಿಗೆ ಅರ್ಥವಾಗಲಾರದೆಂದು ಕಠಿಣ ಪದಗಳ ಅರ್ಥವನ್ನೂ ಕೊನೆಯಲ್ಲಿ ಕೊಟ್ಟಿದ್ದಾರೆ. ಈ ಪಟ್ಟಿಯು ಪರಿಪೂರ್ಣವಾಗಿದೆ ಎಂದು ಹೇಳುವುದು ಅಸಾಧ್ಯವಾದರೂ ತೃಪ್ತಿಕರವಿದೆ. ಹಳೆಯ ಕಥೆಗಳನ್ನು ಪೂರ್ಣ ರೀತಿಯಲ್ಲಿ, ಆಧುನಿಕರ ಮನಸ್ಸಿಗೊಪ್ಪುವಂತೆ ಇಂದಿನ ಜನರ ಭಾಷೆಯಲ್ಲಿ ಹೇಳುವ ಪ್ರಯತ್ನ ಇಲ್ಲಿ ತೋರಿಬರುತ್ತದೆ ಮತ್ತು ಅವರು ಈ ಸಾಹಸದಲ್ಲಿ ಕೃತಕೃತ್ಯರೂ ಆಗಿದ್ದಾರೆ. ಲಕ್ಷ್ಮೀಶನ ಪದ್ಯಗಳಲ್ಲಿ ಕೆಲವೊಂದನ್ನು ಇಪ್ಪತ್ತೆರಡು ತೆಯ ಸರಳನೆಳಿಸಿದ್ದಾರೆ. ಹಿಂದಿನಕಾಲದ ಮೆಚ್ಚುಗೆಯ ಅಲಂಕಾರಗಳ ಬೆಡಗನ್ನೂ ವರ್ಣನೆಗಳ ವಿವರಣೆಗಳನ್ನೂ ಕೆಲವೆಡೆ ಕೈಬಿಟ್ಟಿದ್ದಾರೆ. ಕಥಾ ಸರಣಿಗೆ ಕುಂದೊದಗದಂತೆ, ರಸಕ್ಕೆ ಭಂಗವಿರದಂತೆ, ಮೂರೋಡ್ಡೇರಕ್ಕೆ ಧಕ್ಕೆ ಬರದಂತೆ ಕಥೆಯನ್ನು ಸಂಗ್ರಹಿಸಿದ್ದು ಸಂಗ್ರಹಕಾರರು ಜಯಶೀಲರಾಗಿದ್ದಾರೆ. ಇಂತಹ ಕೃತಿಯನ್ನು ಸಂಪಾದಿಸಿದ ಮೇವುಂಡಿಯವರು ಕನ್ನಡಿಗರೆಲ್ಲರಿಗೂ ಜೈಮಿನಿ ಭಾರತದ ಕೃಷ್ಣ ಚರಿತ್ರೆಯನ್ನು ಮುಟ್ಟಿಸಿದ್ದಾರೆ. ಈ

(೧೨ನೇ ಪುಟ ನೋಡಿರಿ)

ಗುಟ್ಟಾಗಿ ಸರಸ್ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಪಂ! A. R. ಅಯ್ಯಂ

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತವೆ. ಬೆಲೆ. ರೂ. 7-1-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N.P.) ಸ್ಟಾಂಪು ಕಳಿಸಿ, ಸಲಹೆಯೊಡನೆ ಕ್ರಿಮಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ., (ನ. ಯು.)

648, ಅಂಬಳಿ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I.)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗೆ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಘಂಟು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ರೈಲ್ವೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಂಧಕಾರದಿಂದ ಸುಪ್ರಭೆಯೆಡೆಗೆ—

ರಾಜಸ್ತಾನದ ವಿಶಾಲ ಮರುಭೂಮಿ

ಯಾರೋ ಒಬ್ಬರು ಸ್ವಾಮಿ ಕೇಶವಾನಂದರೊಡನೆ ಕೇಳಿದರು. "ತಾವು ರಾಜಸ್ತಾನದಲ್ಲಿ ಸಮಾಜಸೇವಾ ಕಾರ್ಯದಲ್ಲಿ ತತ್ಪರರಾಗಿದ್ದೀರಿ. ಆದರೆ, ತಮಗೆ ರಾಜಸ್ತಾನದ ಕೊರತೆಯೇನೆಂಬುದು ತಿಳಿದಿದೆಯೇ? ಶಿಕ್ಷಣದ ಅಭಾವ ಇಲ್ಲಿದೆ ಇಲ್ಲಿನ ಭೂಮಿಯಲ್ಲಿ ಹಸುರಾದ ಗಡ್ಡೆಗಳು ನಕ್ಕು ನಗಿಸುವುದಿಲ್ಲ; ಇಲ್ಲಿನ ಪಶುಗಳ ಕೆಚ್ಚಲಲ್ಲಿ ಹಾಲೇ ಇರುವುದಿಲ್ಲ. ಇಲ್ಲಿಯ ಅಧಿಕಾಂಶ ಜನರು ಧರ್ಮಭೀರುಗಳೂ ಅಂಧವಿಶ್ವಾಸಿಗಳೂ ಆಗಿದ್ದಾರೆ. ಹಾಗಿರುವಾಗ ರಾಜಸ್ತಾನದ ಉದ್ಧಾರವಾದರೂ ಎಂತಾದೀತು?"

ಸ್ವಾಮಿಜಿ ಸರಳ ಹಾಗೂ ಸಹಜ ಭಾವದಿಂದ ಉತ್ತರಿಸಿದರು: "ರಾಜಸ್ತಾನಕ್ಕೆ ನೀರನ್ನು ದಾನಮಾಡಿರಿ. ಅದರಿಂದ ಅಲ್ಲಿನ ಎಲ್ಲ ಸಮಸ್ಯೆಗಳೂ ದೂರವಾಗುವುವು."

ನಮ್ಮ ದೇಶದಲ್ಲಿ ಐದು ಕೋಟಿ ಎಕ್ರೆಗಳಷ್ಟು ವಿಸ್ತಾರಕ್ಕೆ ಹರಡಿದ ಮರುಭೂಮಿ ಪ್ರದೇಶವಿದ್ದು, ಅದು ವರ್ಷವರ್ಷವೂ ಒಂದಷ್ಟು ಬೆಳೆಯುತ್ತ ಹೋಗುವುದು ರಾಜಸ್ತಾನದಲ್ಲಿ ವಾಸಿಸುವ ಜನರು ಬಹಳ ಪಂಶ್ರಮಶೀಲರಾಗಿದ್ದರೂ ಅಲ್ಲಿ ಪ್ರಕೃತಿದೇವಿಯು ಅವರಿಗೆಂದೂ ಒಲಿದಿಲ್ಲ. ಬಿಸಿಲಿನ ಬಾಹುಳ್ಯವು ಅಲ್ಲಿನ ಮಣ್ಣೆಲ್ಲವನ್ನೂ ಮಣಲನ್ನಾಗಿ ಮಾಡಿಬಿಟ್ಟಿದೆ. ಅಧಿಕಾಂಶ ಭೂಮಿ ಕೃಷಿಗಾಗಿ ಅಯೋಗ್ಯವಾಗಿರುತ್ತದೆ. ಪಶ್ಚಿಮದ ಜಿಲ್ಲೆಗಳಲ್ಲಿ ಹೊಯ್ಗೆಯ ರಾಶಿರಾಶಿಗಳೇ ಕಂಡು ಬರುತ್ತವೆ.

ಮರುಭೂಮಿ ಪ್ರದೇಶದಲ್ಲಿ ಅನೇಕ ಸಮಸ್ಯೆಗಳು ಒಂದರೊಡನೆನ್ನೊಂದು ಹೊಂದಿಕೊಂಡಿರುತ್ತವೆ. ನೀರಿನ ಅಭಾವದಿಂದ ವನಸ್ಪತಿಯು ನಾಮ ಮಾತ್ರವಿರುತ್ತದೆ. ಕುಡಿಯುವುದಕ್ಕಾಗಿ ಅತ್ಯಂತ ಆಳದಿಂದ ನೀರು ಸೇದ ಬೇಕಾಗುತ್ತದೆ. ಆಳದಿಂದ ನೀರು ಸೇದುವುದಕ್ಕೆ ಮತ್ತು ಉದ್ಯೋಗಗಳನ್ನು ಸ್ಥಾಪಿಸುವುದಕ್ಕೆ ವಿದ್ಯುತ್ತಿನ ಅವಶ್ಯಕತೆಯಿದೆ. ಜನರಿಗೆ ತಮ್ಮ ಮನೆಯ ಕೆಲಸಗಳನ್ನು ಸಾಗಿಸುವುದಕ್ಕೂ ವಿದ್ಯುತ್ತು ದೊರೆಯುವುದಿಲ್ಲ. ಸಾಗಿಸುವಾಗ ಕಾರ ಜಾನೆಗಳು ಎಲ್ಲಿಂದ ಬರಬೇಕು? ನದಿಗಳ ನೀರನ್ನು ಅಡ್ಡಕಟ್ಟಿ ಅದನ್ನೆತ್ತರದಿಂದ ಹಾಯಿಸಿ ವಿದ್ಯುಜ್ಜನಕಗಳ ಮೂಲಕ ವಿದ್ಯುತ್ತನ್ನು ಪಡೆಯಬಹುದು ಆದರೆ, ರಾಜಸ್ತಾನದ ಹೆಚ್ಚಿನ ಪ್ರದೇಶಗಳಲ್ಲಿರುವ ಜನರಿಗೆ ಆಸರನ್ನು ನೀಗಿಸುವುದಕ್ಕಾಗಿಯೂ ನೀರಿನ ದರ್ಶನವಿಲ್ಲದಿರುವಾಗ ವಿದ್ಯುದುತ್ಪಾದನೆಯಾದರೂ ಹೇಗೆ? ಬಿಕಾನೀರ ಮತ್ತು ಜೋಧಪುರಗಳಿಗೆ ಕೆಲ ವರ್ಷಗಳ ಪೂರ್ವದವರೆಗೆ ದಿನಕ್ಕೊಂದು ಬಾರಿ ರೈಲ್ವೆ ಗಾಡಿಯ ಮೂಲಕ ಕುಡಿಯುವ ನೀರನ್ನು ತರಿಸಿಕೊಳ್ಳುತಿದ್ದರು. ಜನರಿಗೆ ಒಂದೆಂಡು ಗಡಿಗೆ ನೀರು ಸಿಗುತ್ತಿತ್ತು. ಗಾಡಿಯು ಬಾರದ ದಿನ ಜನರಿಗೂ ನೀರು ಸಿಗುತ್ತಿರಲಿಲ್ಲ. ಆದರೆ, ಕೆಲವಾರು ದಾನ ವೀರರ ಸಹಾಯದಿಂದ ಅಲ್ಲಲ್ಲಿ ನೀರಿನ ಕೇಂದ್ರಗಳು ತೆರೆಯಲ್ಪಟ್ಟವು—ಒಂದರಿಂದೊಂದಕ್ಕೆ ಬಹಳ ಅಂತರವಿತ್ತು.

ಸಮುದ್ರದ ಸಮೀಪದಲ್ಲಿರುವ ಮರುಭೂಮಿಯ ಅವಸ್ಥೆ ನೋಡಿರಿ: ಒಂದೆಡೆ ಅನಂತ ಜಲಲಹರಿಗಳು ಒಂದರ ಹಿಂದೊಂದು ಹೊಡೆದು ಅಪ್ಪಳಿಸುತ್ತವೆ! ಆದರೆ, ಇನ್ನೊಂದೆಡೆಯಲ್ಲಿ ಜನರಿಗೆ ಕುಡಿಯುವುದಕ್ಕಾಗಿ ನೀರಿನ ಆಸರಿಲ್ಲ!

ಪೃಥ್ವಿಯ ನಾಲ್ಕಂಶಗಳಲ್ಲಿ ಒಂದು ಮರುಭೂಮಿಯಾಗಿದೆ. ಅತ್ಲಾಂತಿಕ ಮಹಾಸಾಗರದಿಂದ ಜೀನದ ವರೆಗೆ ವಿಶಾಲವಾಗಿ ಇದು ಹರಡಿರುವುದನ್ನು ಭೂಪರದಲ್ಲಿ ಕಾಣಬಹುದು ಉತ್ತರ ಆಫ್ರಿಕದಲ್ಲಿನ ಸಹರ ಮರಳುಗಾಡು ಪ್ರಪಂಚದಲ್ಲಿಯೇ ಹಿರಿದಾದುದು. ಇದು ಆಫ್ರಿಕದ ಪೂರ್ವ ಪಶ್ಚಿಮ ಸಮುದ್ರ ತೀರದ ವರೆಗೆ ಪಸರಿಸಿದೆ. ಇನ್ನೊಂದೆಡೆ, ಉತ್ತರ ಅಮೆರಿಕೆಯ ಅಲಾಸ್ಕಾದಿಂದ ಹಿಡಿದು ದಕ್ಷಿಣ ಅಮೆರಿಕಾದ ವರೆಗಿನ ಶಾಂತ ಸಾಗರದ ಕಿನಾರೆಯ ಎಲ್ಲ ಭಾಗವೂ ಬಂಜರು ಭೂಮಿಯದೆ ಕೇವಲ ಅಮೆರಿಕೆಯ ಸಂಯುಕ್ತ ರಾಷ್ಟ್ರಕ್ಕೆ ಸೇರಿದ ಭಾಗದಲ್ಲಿ ಮಾತ್ರ ಸಸ್ಯಗಳು ಗೋಚರಿಸುತ್ತವೆ ದಕ್ಷಿಣ ಆಫ್ರಿಕದ ಬಹುತೇಕ ಮರುಭೂಮಿಯಾಗಿದೆ. ಮಾರ್ವಭಾಗವೊಂದನ್ನು ಬಿಟ್ಟುಳಿದ ಆಸ್ಟ್ರೇಲಿಯಾ ಮಹಾದ್ವೀಪವಿಡಿ ಮರುಳುಗಾಡು ಆಗಿರುವುದು

ಮರುಭೂಮಿಯನ್ನು ಸಸ್ಯಾಮಲಗೊಳಿಸುವ ಅಗತ್ಯ ಬಹಳವಿದೆ. ಅಭಿವೃದ್ಧಿಕಾರ್ಯ ಮಾಡಿದರೇನೇ ಮಾನವನು ಅಲ್ಲಿ ವಾಸಿಸಬಹುದು. ಈಗ ಸುಮಾರು ಅನೇಕ ದೇಶಗಳಲ್ಲಿ ಮರುಭೂಮಿಗಳನ್ನು ಫಲವತ್ತಾಗಿಸುವ ಕಾರ್ಯಗಳು ನಡೆಯುತ್ತಿವೆಯಲ್ಲದೆ ಒಂದು ನೂರು ಸಂಸ್ಥೆಗಳು ಈ ಕೆಲಸದಲ್ಲಿ ಪ್ರಯತ್ನ ನಡೆಸುತ್ತಿವೆ ಭಾರತದೂ ತನ್ನಲ್ಲಿರುವ ಮರಳುಗಾಡುಗಳನ್ನು ನಿರ್ಮೂಲಗೊಳಿಸುವತ್ತ ಚೈತನ್ಯದ ಪ್ರಯತ್ನವನ್ನು ಕೈಗೊಳ್ಳುತ್ತಿದೆ.

ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಮಸ್ಯೆಯನ್ನೆದುರಿಸುವ ಮಹಾಪ್ರಶ್ನೆಯನ್ನು ಎತ್ತಿಕೊಂಡು ಅದಕ್ಕೆ ವಿಶೇಷ ಗಮನವೀಯಲಾಗಿದೆ. ಪ್ರಥಮ ಯೋಜನಾಕಾಲದಲ್ಲಿಯೇ ಬಹಳ ಗಂಭೀರವಾಗಿ ಈ ದಿಸೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರತಿ ವರ್ಷವೂ ನಮ್ಮಲ್ಲಿ ಆಚರಿಸಲಾಗುತ್ತಿರುವ ವನಮಹೋತ್ಸವದ ಉದ್ದೇಶಗಳಲ್ಲಿ ಭೂಮಿಯನ್ನು ಫಲವತ್ತಾಗಿಸಿ ಮರುಳುಗಾಡು ಇನ್ನೂ ವಿಸ್ತಾರಕ್ಕೆ ಹರಡದಂತೆ ತಡೆಹಿಡಿಯುವುದೂ ಒಂದು. ಪ್ರಥಮ ಯೋಜನೆಯ ಕಾಲದಲ್ಲಿ ಮರುಭೂಮಿಗಳಲ್ಲಿ ಪಶ್ಯಗಳನ್ನು ನೆಡುವ ಕುರಿತಾದ ಶೋಧನೆ, ಅರಸುವಿಕೆ, ಪರೀಕ್ಷೆ ಮೊದಲಾದುವನ್ನು ಮಾಡುವುದಕ್ಕಾಗಿ ಜೋಧಪುರದಲ್ಲಿ ಒಂದು ಅನುಸಂಧಾನ ಕೇಂದ್ರವನ್ನು ಸ್ಥಾಪಿಸಲಾಗಿದೆ ಇದಲ್ಲದೆ, ಐದು ಕೇಂದ್ರಗಳನ್ನು ತೆರೆದು, ಈ ಶೋಧನೆಗಳೊಂದಿಗೆ ಕಾರ್ಯಕರ್ತರ ಪ್ರಶಿಕ್ಷಣದ ಕೆಲಸವನ್ನೂ ಕೈಗೊಳ್ಳಲಾಗಿದೆ. ಬೊಂಬಾಯಿ, ಆಂಧ್ರ, ಮದ್ರಾಸ, ಪಶ್ಚಿಮ ಬಂಗಾಳ, ಪಂಜಾಬ, ಸೌರಾಷ್ಟ್ರ, ಕೇರಳ, ಕಚ್ಛ, ಅಜಮೀರ ಮತ್ತು ಮಣಿಪುರಗಳಲ್ಲಿ ಪ್ರಶಿಕ್ಷಣಾತ್ಮಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಸ್ಥಾನೀಯ ಪರಿಸ್ಥಿತಿಗಳನ್ನು ಮುಂದಿಟ್ಟುಕೊಂಡು ಪ್ರಯೋಗಗಳನ್ನು ಆರಂಭಿಸಲಾಗಿದೆ. ರಾಜಸ್ತಾನದ ಮರುಭೂಮಿ ಹರಡುವುದನ್ನು ತಡೆಯುವುದಕ್ಕೆ ವಿಶೇಷ ಅನುಸಂಧಾನಗಳನ್ನು ಮಾಡಲಾಗಿದೆ. ಪಶ್ಚಿಮ ರಾಜಸ್ತಾನದಲ್ಲಿ ೧೫೦ ಮೈಲುದ್ದಕ್ಕೆ ವಿಶೇಷ ರೂಪದ ಮರಗಳನ್ನು ನೆಡಲಾಗಿದೆ ೧೦೦ ವರ್ಗ ಮೈಲು ವಿಸ್ತಾರದಲ್ಲಿ ಜೀರಾವು ಮಾಡುವುದಕ್ಕಾಗಿ ಹುಲ್ಲು ನೆಡಲು ಬೇಕಾದ ಕರ್ಮವನ್ನು ಕೈಗೊಳ್ಳಲಾಗಿದೆ.

ಮಾನವನು ಬಿಕಾನೀರಿನ ಮರುಭೂಮಿಗೆ ನೀರನ್ನುಣಿಸಿದರೆ, ಪ್ರಕೃತಿಯು ಅವನಿಗೆ ಹಾಲು ಮತ್ತು ರೊಟ್ಟಿಯನ್ನುತಿನ್ನಿಸುವುದು ಎಂಬ ಗಾದೆ ಮಾತು ರಾಜಸ್ತಾನದಲ್ಲಿ ಪ್ರಚಾರದಲ್ಲಿದೆ. ಮನುಷ್ಯನು ಈ ಕಟಕಿಯನ್ನು ಸ್ವೀಕರಿಸಿ, ಪಂಜಾಬದ ಸಟ್ಲೆಜ್ ನದಿಯ ನೀರನ್ನು ಜೋಧಪುರ ವಿಭಾಗದಲ್ಲಿ ರಾಜಗಡದ ವರೆಗೆ ೪೫೫ ಮೈಲುದ್ದದ ನೀರಾವರಿ ಕಾಲುವೆಯನ್ನು ನಿರ್ಮಿಸುವ ಕಾರ್ಯವನ್ನು ಮೊನ್ನೆ ಮಾರ್ಚಿ ತಿಂಗಳಿಂದ ಮೊದಲು ಮಾಡಿದನು. ಈ ಕಾಲುವೆಯು ಸುಮಾರು ೧೧೦ ಮೈಲು ಪಂಜಾಬದಲ್ಲಿಯೂ ೧೩೦ ಮೈಲು ಪಂಜಾಬ—ರಾಜಸ್ತಾನ ಸೀಮೆಯಲ್ಲಿಯೂ ಉಳಿದುದು ರಾಜಸ್ತಾನದಲ್ಲಿಯೂ ಹರಿಯುವುದು.

ರಾಜಸ್ತಾನ ಕಾಲುವೆಯ ಮುಖ್ಯ ಪ್ರವಾಹ ಕ್ಷೇತ್ರ ಬೀಕಾನೀರ ವತ್ತು ಜೋಧಪುರ ವಿಭಾಗದ ಪಶ್ಚಿಮ ಭಾಗ. ಈ ಕಾಲುವೆಯು ಬಿಕಾನೀರ ವಿಭಾಗದ ಹನುಮಗಾರ್‌ಗಡ, ಸೂರತಗಡ, ಅನೂಪಗಡ ರಾಯಸಿಂಹನಗರ ಮತ್ತು ಬಿಕಾನೀರ ತಾಲೂಕುಗಳಿಗೂ ಜೋಧಪುರದ ನಾಗೌರ, ಜೈಸಲಮೇರು, ರಾಮಗಡ ತಾಲೂಕುಗಳಿಗೂ ನೀರನ್ನು ಒದಗಿಸುವುದ.

ಈ ಕಾಲುವೆ ಸಂಪೂರ್ಣಗೊಳ್ಳಲು ೧೦ ವರ್ಷಗಳು ಬೇಕಾಗುವುವು. ಮೂರು ವರ್ಷಗಳಂತರ ಇದರಲ್ಲಿ ನೀರು ಹರಿಯುವುದು ಸಾಧ್ಯವಾಗುವುದು. ಪ್ರಪಂಚದ ಕಾಲುವೆಗಳಲ್ಲಿಯೇ ಇದು ಅತ್ಯಂತ ದೀರ್ಘವಾದುದಾಗುವುದು ರಾಜಸ್ತಾನದ ಮರುಭೂಮಿಯನ್ನು ಫಲಸಮೃದ್ಧ ಭೂಮಿಯನ್ನಾಗಿಯೂ ಮಾಡುವುದು.

ರಾಜಸ್ತಾನ ಕಾಲುವೆಯ ಶಾಖೆಗಳು ೫೦೦ ಮೈಲುದ್ದವಾಗುವುವು. ಕೊಳವೆಗಳನ್ನು ನೀರೆತ್ತಲು ಬಳಸಲಾಗುವುದು. ಈ ಕೊಳವೆಗಳ ಉದ್ದ ೨೫೦೦ ಮೈಲುಗಳಾಗುವುವು. ಕಾಲುವೆ ಮತ್ತು ಉಪಕಾಲುವೆಗಳನ್ನು ಉತ್ತಮ ರೀತಿ ಎತ್ತಿಡಲು ಸಿಮೆಂಟು ಮತ್ತು ಇಟ್ಟಿಗೆಗಳಿಂದ ಅವನ್ನು ಕಟ್ಟಲಾಗುವುದು. ಇದರಿಂದಾಗಿ ನೀರು ಮರಳಿನಲ್ಲಿ ಇಂಗಿ ಹೋಗಿ ಸೋಲಾಗುವುದಿಲ್ಲ.

ಮುಖ್ಯ ಕಾಲುವೆಯಲ್ಲಿ ದೊಡ್ಡ ದೋಣಿಗಳನ್ನು ಕೊಂಡು ಹೋಗಲು ಸಾಧ್ಯವಾಗುವಂತೆ ನೋಡಲಾಗುವುದು. ಹೀಗಾದ ಪಕ್ಷದಲ್ಲಿ ಕಟ್ಟಿಗೆ, ಧಾನ್ಯಾದಿಗಳು ಒಂದೆಡೆಯಿಂದ ಬೇರೊಂದೆಡೆಗೆ ತೀವ್ರವಾಗಿ ಸುಲಭವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ಸಾಗಿಸುವುದು ಸಾಧ್ಯವಾದಂತಾಗುವುದು.

ರಾಜಸ್ತಾನ ಕಾಲುವೆಯನ್ನು ಎರಡು ಘಟ್ಟಗಳಲ್ಲಿ ಕೊನೆಗೊಳಿಸಲಾಗುವುದು. ಮೊದಲನೆಯದರಲ್ಲಿ ೧೦ ಲಕ್ಷ ಎಕ್ರೆ ಭೂಮಿಗೆ ವರ್ಷವಿಡಿ ನೀರು ಉಣಲಿಟ್ಟಷ್ಟವಂತೆ ನೋಡಲಾಗುವುದು. ಉಳಿದ ೫೫ ಲಕ್ಷ ಎಕ್ರೆ ಜಮೀನಿಗೆ ನೀರನ್ನೊದಗಿಸಲು ರಾವಿನದಿ ಮತ್ತು ವ್ಯಾಸನದಿಗಳಲ್ಲಿ ದೊಡ್ಡ ಸರೋವರಗಳನ್ನು ಕಟ್ಟಲಾಗುವುದು. ಈ ಯೋಜನೆಗಾಗಿ ಈಗಾಗಲೇ ೬೬ ಕೋಟಿ ೨೭ ಲಕ್ಷ ರೂಪಾಯಿಗಳನ್ನು ಮಂಜೂರುಮಾಡಲಾಗಿದೆ.

ಈ ಕಾಲುವೆಯ ಸೂರತಗಡ ಶಾಖೆಯಲ್ಲಿ ಎಂಡು ವಿದ್ಯುದಾಲಯಗಳನ್ನು ಕಟ್ಟಿ ನಾಲ್ಕು ಸಾವಿರ ಕಿಲೋವಾಟಗಳಷ್ಟು ಶಕ್ತಿಯನ್ನು ಸಂಪಾದಿಸಬಹುದು. ಹತ್ತಿ ಮತ್ತು ಎಣ್ಣೆಯ ಕಾರಖಾನೆಗಳಿಗೆ ಇದು ಸಹಾಯಮಾಡುವುದಲ್ಲದೇ ಎತ್ತರಕ್ಕೆ ನೀರನ್ನು ಏರಿಸಿ ಹರಿಸಲಿಕ್ಕೂ ವಿದ್ಯುತ್ತು ಅತ್ಯಗತ್ಯವಾಗಿ ಪರಿಣಮಿಸಿದೆ.

ಕಾಲುವೆಯು ಪೂರ್ಣವಾಗುತ್ತ ಬಂದಂತೆ ಈ ಭಾಗದ ಮರುಭೂಮಿಯೂ ಕೊನೆಗೊಳ್ಳುತ್ತ ಬರುವುದು. ನೀರಾವರಿಯ ಕೆಲಸವು ಅಂತ್ಯವಾದಾಗ, ಖನಿಜ ಪದಾರ್ಥಗಳನ್ನೂ ಇಲ್ಲಿ ಆಗಿಯಬಹುದು. ರಾಜಸ್ತಾನದಲ್ಲಿ ಈಗ ಕಾಣುವ ಮರಳು ಭಂಡಾರವು ಬಾದಾಗಿ ಅನ್ನಭಂಡಾರವು ನೆಲೆಗೊಳ್ಳುವುದು. ಇಲ್ಲಿ ಜನರಿಗೆ ನೀರಿನಾಸರೆ ದೊರೆತಿತೆಂತರ ಜನರು ಹೊಸ ಹೊಸ ನಗರಗಳನ್ನು ಕಟ್ಟುವರು, ಹೊಸ ಹೊಸ ಕಾರಖಾನೆಗಳನ್ನು ತೆರೆಯುವರು. ಜನರಿಗೆ ಉದ್ಯೋಗ ದೊರೆಯುವುದು; ತತ್ಪರಿಣಾಮವಾಗಿ ನಿರುದ್ಯೋಗ ದೂರಾಗುವುದು. ರಾಜಸ್ತಾನದ ಜನರಿಗೆ ನೀರು ದೊರಕಿತೆಂದರೆ ಅವರ ಕಾಯ ಪಲ್ಲಟಿಸಿ ಹೋಗುವುದು. ಇದರಂತೆಯೇ ಉಳಿದ ರಾಜ್ಯಗಳೂ ಅಭಿವೃದ್ಧಿಯಾದಾಗ ಭಾರತವಲ್ಲಿ ಸುಭಿಕ್ಷೆಯೂ ನೆಲೆಗೊಳ್ಳುವುದು.

ಕರ ಮೊರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಳೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ವರು: ಷಾ ಕಂಪೆನಿ, ಮಂಗಳೂರು—1.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರದ ಮಹಾನುಭಾವ—

ಜನರಲ್ ಡಿಗಾಲೆ

ಫ್ರಾನ್ಸಿನ ಆಂತರಿಕ ರಾಜಕಾರಣದಂತೆಯೇ ಆಲ್ಜೀರಿಯದ ಘಟನೆಗಳಿಂದಲೂ ಫ್ರಾನ್ಸು ಪ್ರಭಾವಿತವಾಗುತ್ತಿದೆ. ಕೆಲವು ದಿನಗಳಿಂದ ಫ್ರಾನ್ಸಿನನೇತಾರ ಸಮೂಹದೊಳಗೆ ಆಲ್ಜೀರಿಯಾವೊಂದು ಬಿರುತೆರೆಯನ್ನೇ ಎಬ್ಬಿಸಿದೆ. ಫ್ರೆಂಚರು ಈ ಬಿರುತೆರೆಯಿಂದಾಗಿ ತಮ್ಮಲ್ಲಿಯೇ ಆಂತರಿಕಯುದ್ಧವಾಗುವುದೇ ಎಂಬ ಆತಂಕೆಯಿಂದ ಭಯಭೀತರಾಗಿರುವರು. ಆಲ್ಜೀರಿಯಾದಲ್ಲಿರುವ ಫ್ರೆಂಚ ನಾಗರಿಕರು ರಾಷ್ಟ್ರದ ನಾಯಕತ್ವವನ್ನು ಯುದ್ಧ ಕಾಲದಲ್ಲಿ ಪ್ರಸಿದ್ಧರಾದ ಡಿಗಾಲೆಯವರಿಗೇಕೆ ಕೊಡಬಾರದು ಎಂದು ಕೇಳುತಿದ್ದಾರೆ.

ಅಮೆರಿಕೆಯಲ್ಲಿ ಐಸನ್ ಹಾವರರು, ಬ್ರಿಟನ್ನಿನಲ್ಲಿ ಚರ್ಚಿಲರು ಪ್ರಸಿದ್ಧರಾಗಿರುವಂತೆಯೇ ಜನರಲ್ ಡಿಗಾಲೆಯವರು ಫ್ರಾನ್ಸಿನಲ್ಲಿ ಸುಪ್ರತಿಷ್ಠರಾಗಿರುವರು. ದ್ವಿತೀಯ ಲೋಕ ಯುದ್ಧದ ಸಮಯದಲ್ಲಿ ಸಂಕಟಗ್ರಸ್ತ ಫ್ರಾನ್ಸಿನಕಡಿವಾಣವನ್ನು ಹಿಡಿದುಕೊಂಡು ತನ್ನ ರಾಷ್ಟ್ರದಲ್ಲಿ ಒಬ್ಬ ಅತ್ಯಂತೋನ್ನತ ವ್ಯಕ್ತಿಯಾಗಿದ್ದಾರಲ್ಲದೇ ಈ ಸಮಯದ ರಾಜಕಾರಣಪಟುವೆನಿಸಿಕೊಂಡಿದ್ದಾರೆ. ಯುದ್ಧಸಮಯದಲ್ಲಿ ಒಂದು ಪರಾಜಿತ ಸ್ಥಿತಿಯಲ್ಲಿದ್ದ ರಾಷ್ಟ್ರದ ನೇತೃತ್ವವನ್ನು ವಹಿಸಿದ ವ್ಯಕ್ತಿಯ ನೀತಿಯು ನಿಜವಾಗಿಯೂ ಸಾಹಸಿಕ ಮತ್ತು ಉದಾರವಾಗಿರಲೇಬೇಕು. ಸಾಹಸದಿಂದಾಗಿ ಸಂಕಷ್ಟಗ್ರಸ್ತವಾಗಿರುವ ದೇಶವು ಮುಕ್ತವಾಗುವುದು; ಮತ್ತು ಉದಾರ ನೀತಿಯಿಂದ ಶತ್ರುಗಳಾಗಿರುವವರು, ಅಥವಾ ಅಸಂತುಷ್ಟರಾಗಿರುವ ಜನರು ಮಿತ್ರರಾಗುವುದೂ ಸಾಧ್ಯವಾಗುವುದು. ಜನರಲ್ ಡಿಗಾಲೆಯವರು ಯುದ್ಧಕಾಲದಲ್ಲಿ ಎರಡು ಪ್ರಕಾರದ ನೀತಿಗಳನ್ನು ಅನುಸರಿಸಿದರು. ಅದರ ನಂತರ ಅವರ ಹೆಸ್ತದಲ್ಲಿಯೇ ರಾಜ್ಯಭಾರ ನಡೆಯಿತು; ಆಗ ಅವರ ಮೇಲೆ ಹೇಳಿದ ಎರಡೂ ಗುಣಗಳ ಮೂಲಕ ಪ್ರಸ್ಥಾಪಿತ ಜನಪ್ರಿಯತೆಯು ವ್ಯಕ್ತವಾಯಿತು. ಇಂದು, ಆ ಲೋಕಪ್ರಿಯತೆಯ ಆಧಾರಸ್ವರೂಪವಾಗಿ ಎರಡೂ ಗುಣಗಳ ಸ್ಮರಣೆಗಳು ಫ್ರೆಂಚರಿಗೆ ಆಗುತ್ತವೆ.

೧೯೪೦ರ ಮಾತಾಗಿತ್ತು. ಜೂನ್ ಮಾಸದಲ್ಲಿ ಫ್ರಾನ್ಸಿನ ತತ್ಕಾಲೀನ ಸರಕಾರವು ಅವರನ್ನು ರಕ್ಷಣಾ ಮಂತ್ರಿಪಲಯಕ್ಕೆ ಕಳಿಸಿತು. ಈ ವರ್ತಮಾನವು ಲಂಡನ್ನಿನ ಪತ್ರಿಕೆಗಳಲ್ಲಿ ಪ್ರಕಾಶಿತವಾಗಿತ್ತು. ಒಬ್ಬನು ಡಿಗಾಲೆ ಎಂದರಾರು ಎಂದು ಪ್ರಶ್ನಿಸಿದನು. ಇನ್ನೊಬ್ಬನು ಸಮೀಪದಲ್ಲಿ ನಿಂತಿದ್ದ ಒಬ್ಬ ಫ್ರೆಂಚ ನಾಗರಿಕನೊಡನೆ ಆಡುತಿದ್ದ ಮಾತನ್ನು ಕೇಳಿ ಹಿಂದಿರುಗಿಸಿದನು ಆ ಫ್ರೆಂಚನೊಡನೆ ಕೇಳಿದಾಗ, ಅವನು ಶ್ರೀ ಡಿಗಾಲೆಯವರನ್ನು ಅವರೊಟ್ಟು ಉದ್ದನೆಯ ಮನುಷ್ಯ. ಈಗ, ಫ್ರಾನ್ಸಿಗೆ ಇಂಗ್ಲಿಷ್ ಕಾಲುವೆಯ ದಡದಲ್ಲಿ ನಿಂತುಕೊಂಡು, ಇಂಗ್ಲೆಂಡ್ ತನಗೇನು ಮಾಡುತ್ತಿದೆಯೆಂದು ನೋಡಬಲ್ಲ ಇಂತಹ ಒಬ್ಬ ಮನುಷ್ಯನ ಅಗತ್ಯವಿದೆ ಎಂದು ಮಾತ್ರ ಬಲ್ಲೆವು" ಎಂದು ವರ್ಣಿಸಿದನು. ಈ ಪ್ರಶ್ನೋತ್ತರದಿಂದ ಫ್ರಾನ್ಸ್ ಇಂಗ್ಲೆಂಡನ್ನು ಎಷ್ಟು ಹೊಂದಿಕೊಂಡಿತ್ತು ಎಂಬುದರ ಅರಿವಾಗುವುದಲ್ಲದೇ ಆ ಸಮಯದಲ್ಲಿ ಡಿಗಾಲೆಯವರಿಗೆ ರಕ್ಷಣೆಯ ಭಾರವನ್ನು ಹೊರಿಸಿದಾಗ, ಅವರು ಅವರ ದೇಶವಾಸಿ ಮತ್ತು ನೆರೆರಾಷ್ಟ್ರ ಇಂಗ್ಲೆಂಡಿನ ಜನರಿಗೆ ಎಷ್ಟು ಪರಿಚಿತರಾಗಿದ್ದಾರೆಂಬುದರ ಅರಿವಾಗುವುದು.

ಜನರಲ್ ಡಿಗಾಲೆಯವರು ಪ್ರಥಮ ಮಹಾಯುದ್ಧದಲ್ಲಿಯೂ ಸೈನಿಕ ಕರ್ತವ್ಯವನ್ನು ನಿರ್ವಹಿಸಿದ್ದರು. ೧೯೧೪ರ ಆಗಸ್ಟ್ ೧೫ರಂದು ಜನರಲ್ ಡಿಗಾಲೆಯವರು ೩೩ನೆಯ ಪಂಗಡದ ಕಮಾಂಡರನ ದೆಸೆಯಿಂದ ವಿವರೀತ ಗಾಯಗೊಂಡರು. ೧೯೧೬ರಲ್ಲಿ ಅವರು ಯುದ್ಧಕೈದಿಯಾದರು. ಯುದ್ಧಾನಂತರ ಜನರಲ್ ಡಿಗಾಲೆಯವರಿಗೆ ಮಾರ್ಶಲ್ ಪೇತಾನ ರೊಡನೆ ಕಾರ್ಯನಿರ್ವಹಿಸುವ ಸಂದರ್ಭವೊದಗಿತು. ಇದರ ನಂತರ ಅವರಿಗೆ ಸರಕಾರೀಯಂತ್ರಲ್ಲಿ ಓರ್ವ ಪ್ರಭಾವಶಾಲಿ ಕರ್ಮಚಾರಿಯಾಗುವ ಅವಸರ ದೊರೆಯಿತು. ಅವರನ್ನು ರಕ್ಷಣಾ ವಿಭಾಗದ ಮಹತ್ವಪೂರ್ಣ ಪದವಿಯಲ್ಲಿರಿಸಲಾಯಿತು. ಆ ಸಮಯದವರೆಗೆ ಡಿಗಾಲೆಯವರಿಗೆ ಕೇವಲ ರಕ್ಷಣಾ ವಿಭಾಗದಲ್ಲಿ ಸಂಬಂಧವಿತ್ತಲ್ಲದೇ ರಾಜಕಾರಣದಲ್ಲಿರಲಿಲ್ಲ. ಅವರೊಂದು ಟೇಂಕ್ ವಿಭಾಗದ ಕಮಾಂಡರರಾಗಿದ್ದರು. ಆ ಸಮಯದಿಂದ ಜನರಲ್ ಡಿಗಾಲೆಯವರನ್ನು ಫ್ರಾನ್ಸಿನ ಟೇಂಕ್ ಸೇನೆಯ ಸಂಘಟಕರೆಂದು ಹೇಳ ತೊಡಗಿದರು.

ಪ್ರಥಮ ಲೋಕ ಯುದ್ಧಾನಂತರವೇ ಜನರಲ್ ಡಿಗಾಲೆಯವರಿಗೆ ಫ್ರಾನ್ಸ್ ಸೇನೆಯ ಯಂತ್ರೀಕರಣದ ಅವಶ್ಯಕತೆಯ ಅರಿವಾಯಿತೆನ್ನುವುದರಲ್ಲಿ ಸಂದೇಹವಿಲ್ಲ. ದ್ವಿತೀಯ ಜಾಗತಿಕ ಯುದ್ಧಾನಂತರವೇ ದೇಶದ ಉನ್ನತಪದಾಧಿಕಾರಿಯೆಂದು ನೇಮಿತವಾಗಲು ಈ ವಿಶೇಷತೆಯೂ ಒಂದು ಕಾರಣವಾಗಿ ಪರಿಣಮಿಸಿತ್ತು.

ಆರಡಿ ನಾಲ್ಕಿಂಚು ಉತ್ತರದ ಜನರಲ್ ಡಿಗಾಲೆಯವರು ೧೯೪೬ರ ಜೂನ್ ೧೮ರಂದು ವಿರಾಮ ಗ್ರಹಣ ಮಾಡಿದ್ದರು. ಅನಂತರ ಅವರು ತಮ್ಮ ಪುಟ್ಟ ಹಳ್ಳಿಯಲ್ಲಿ ವಾಸಿಸುತಿದ್ದರು. ಜನತೆಯೂ ಅವರನ್ನು ಮರೆಯಲಾರಂಭ ಮಾಡಿತ್ತು. ಅವರೊಂದು ರಾಜಕೀಯ ಪಕ್ಷವನ್ನೂ ಸಂಘಟಿಸಿದರು. ಈ ಪಕ್ಷದ ಹೆಸರಿನ ಸ್ಪೆಂಚಿ ಭಾಷೆಯ ಅರ್ಥ — ಜನತಾ ಪುನರ್ಘಟನೆ ಎಂದು! ಒಂದು ವರ್ಷದವರೆಗೆ ಶ್ರೀ ಡಿಗಾಲೆಯವರ ಈ ಪಕ್ಷವು ಫ್ರಾನ್ಸಿನ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಒಂದೆಂದು ಗಣಿಸಲ್ಪಟ್ಟಿತ್ತು. ಕಮ್ಯುನಿಸ್ಟರ ವಿರುದ್ಧ ಪ್ರಚಾರ, ಸ್ವತಂತ್ರ ನ್ಯಾಯ, ಸೈನ್ಯದ ಪುನರ್ಘಟನೆ, ಸಮಕಾಲೀನ ಶ್ರಮಿಕ ವ್ಯವಸ್ಥೆಯಲ್ಲಿ ಮೂಲ ಪರಿವರ್ತನೆ ಮತ್ತು ವಿದೇಶೀಯ ನೀತಿಯಲ್ಲಿ ಅಂತರ್ದೇಶೀಯ ಗಾಢತೆಗಳೇ ಈ ದಳದ ಜನಪ್ರಿಯ ಉದ್ದೇಶಗಳಾಗಿದ್ದುವು. ಈ ಪಕ್ಷದ ಧ್ಯೇಯ ಸಾಫಲ್ಯಕ್ಕಾಗಿ ಫ್ರಾನ್ಸಿನ ಸಿಕ್ಕ ಗೋಡೆಗಳಲ್ಲಿ ಭಿತ್ತಿ ಪತ್ರಗಳನ್ನು ಅಂಟಿಸಲಾಯಿತು. ಅವುಗಳಲ್ಲಿ ದೊಡ್ಡ ದಪ್ಪಕ್ಷರಗಳಲ್ಲಿ ಶ್ರೀ ಡಿಗಾಲೆಯವರ ಹೆಸರಿನಲ್ಲಿ 'ಫ್ರಾನ್ಸಿನ ಯುವಕರೇ ಮತ್ತು ಯುವತಿಯರೇ, ನಾನು ತಮ್ಮ ನೆರವನ್ನು ಬಯಸುತ್ತೇನೆ; ಏಕೆಂದರೆ ದೇಶದ ಭದ್ರತೆಗಾಗಿ ನಾನು ದೇಶದ ನೇತೃತ್ವವನ್ನು ವಹಿಸಬೇಕೆಂದು ಘಟನೆಗಳು ನನ್ನ ಮೇಲೆ ಕರ್ತವ್ಯ ಭಾರವನ್ನು ಹೊರಿಸಿವೆ" ಎಂದು ಅಚ್ಚು ಹಾಕಲ್ಪಟ್ಟಿತ್ತು.

ಜನರಲ್ ಡಿಗಾಲರು ದೇಶವ್ಯಾಪೀ ಪ್ರಚಾರವನ್ನು ಮಾಡಿದರು. ಅವರು ಸದಾ ಕಡಿಮೆ ಉಣ್ಣುವವರ ಪಕ್ಷಪಾತಿಗಳಾಗಿದ್ದಾರೆ. ಪ್ರಚಾರದ ಸಮಯದಲ್ಲಿ ಸರಿಯಾಗಿ ಊಟವನ್ನೂ ಮಾಡುವುದಿಲ್ಲ ಮತ್ತು ಈ ಕಾರಣದಿಂದಲೇ ಅವರು ಅತೀವ ದುರ್ಬಲರಾಗಿದ್ದಾರೆಂದು ಹೇಳುತ್ತಾರೆ. ಅವರು ಈ ರೀತಿಯಲ್ಲಿ ಬಹಳ ಪ್ರಯಾಸಪಟ್ಟರು; ಆದರೆ, ಅವರು ರಾಷ್ಟ್ರದ ನೇತಾರರಾಗಲಿಲ್ಲ. ಅಂದಿನಿಂದ ಅವರು ರಾಜಕೀಯ ಸನ್ಯಾಸಿಯಂತೆ ಜೀವಿಸಿದರು. ಈಗ, ಒಂದು ಕಾಲದಲ್ಲಿ ತಾವು ಕೊಂಡಾಡಿದ್ದ ಆದರೆ, ಇಂದು ದೂರ ನೂಕಿದ್ದ ಒಬ್ಬ ಅನುಭವಿಕ ಮುಂದಾಳುವನ್ನು ಪುನಃ ಸ್ಮರಿಸಿಕೊಳ್ಳುವ ಸಮಯ ಸಂದರ್ಭಗಳು ಫ್ರೆಂಚ ಜನರಿಗೆ ಒದಗಿ ಬಂದಿದೆ. ಪರಿಣಾಮವನ್ನು ಮಾತ್ರ ಕಾದು ನೋಡಬೇಕಾಗಿದೆ, ಅಷ್ಟೆ.

ಅಲ್ಪಸಂಖ್ಯಾಕರ ಹಿತಕ್ಕೆ ಆತಂಕ

(೧೧ನೇ ಪುಟದಿಂದ)

ನಿಂದ ನೊಂದಿರಲೂಬಹುದು. ಆದರೂ ರಾಷ್ಟ್ರಪತಿಗಳಿಗಿದ್ದ ನಾಲ್ಕು ಸಂದೇಶಗಳು ಮೂಲರಹಿತವಲ್ಲವೆಂದು ಪರಿಶ್ಯ ನ್ಯಾಯಾಲಯದ ತೀರ್ಮಾನದಿಂದ ವ್ಯಕ್ತವಾಗುವುದು. ಅಲ್ಪಸಂಖ್ಯಾಕರ ಹಿತರಕ್ಷಣೆಯು ಭಾರತವಲ್ಲಿ ಎಷ್ಟು ಜಾಗರೂಕತೆಯಿಂದ ಪಾಲಿಸಲ್ಪಡುತ್ತಿದೆ ಎಂಬುದನ್ನು ಪ್ರಪಂಚಕ್ಕೆ ಎತ್ತಿ ತೋರಿಸಲು ಈ ಪ್ರಚಲಿತ ವಿದ್ಯಮಾನವೊಂದೇ ಸಾಕು.

(೧೧ನೇ ಪುಟದಿಂದ)

ಕೃತಿಯು ನಿಜವಾಗಿಯೂ ಸ್ವಾಗತಾರ್ಹವಿದೆ.

ಪ್ರಾಚೀನ ಕಾವ್ಯಗಳ ಬಗ್ಗೆ ಅಭಿಮಾನ ಕುಂದುತ್ತಿರುವಾಗ, ಅವುಗಳ ಪುನರ್ಮುದ್ರಣ ಕಾರ್ಯ ಮಾತ್ರ ಸಾಗಿದರೆ ಪ್ರಯೋಜನವಲ್ಲ. ಆದಕ್ಕಾಗಿ, ಕಾವ್ಯಗಳ ಮೂಲನೊಡನೆ ಅವುಗಳ ಸಂಕ್ಷಿಪ್ತ ವ್ಯಾಖ್ಯಾನ ರೂಪಗಳೂ ಪ್ರಕಾಶಕ್ಕೆ ಬರುವುದರಿಂದ ಸಾಹಿತ್ಯದ ಕಡೆಗಿರುವ ಜಿಗುಪ್ಸೆಯು ಕೊಂಚವಾದರೂ ಕಡಿಮೆಯಾಗಬಹುದೋ ಏನೋ! ಜೈಮಿನಿ ಭಾರತಕ್ಕೆ ಇಂತಹ ಹಲವಾರು ವ್ಯಾಖ್ಯಾನಗಳಿದ್ದರೂ ಅವು ಪ್ರತಿ ಪದಾರ್ಥಗಳನ್ನು ಹೇಳುತ್ತ ಹೋಗುತ್ತವೆ, ಅನೇಕ ಪ್ರಸ್ತಿಗಳಿದ್ದರೂ ಕವಿ ಕಾವ್ಯ ಮಹತ್ವ ವಿದೇಶನೆಯಲ್ಲಿ ತಲ್ಲೀನವಾಗಿವೆ. ಆದರೆ ಈ ಪುಸ್ತಕದಲ್ಲಿ ಕಳೆಯ ಓಟ ಸಾಗುತ್ತದೆ. ಮೂಲದ ಮಧ್ಯದಲ್ಲಿ ಭಾರತಕ್ಕೆ ಹೊರಕಳಾಗಿ ಬಂದ ಚಂದ್ರಹಾಸೋಪಾಖ್ಯಾನ ಮತ್ತು ಉತ್ತರ ರಾಮಚರಿತೆಗಳನ್ನು ಕೊನೆಯಲ್ಲಿ ಕೊಡಲಾಗಿದೆ. ಇವು ಕಥಾದೃಷ್ಟಿಯಿಂದ ಉತ್ತಮವೇ ಆಗಿದೆ. ಇಂತಹ ಕೃತಿಗಳು ಅಧಿಕಾಧಿಕ ಸಂಖ್ಯೆಯಲ್ಲಿ ಹೊರ ಬಂದು, ತಮ್ಮ ಪ್ರಾಚೀನ ಕಾವ್ಯಗಳ ಕಡೆಗೆ ಕನ್ನಡಿಗರ ಅಭಿಮಾನ ಕೂಡಿ ಪರಿಮಳಬರಲೆಂದು ಆಶಿಸುತ್ತೇವೆ.

ನವನೀತ—

(ಮೇ, ೧೯೫೮) ಸಂಪಾದಕರು, ಶ್ರೀ ಮೊಹಿನೀ ಹಾಜೆ ಕಾಸಿಂ, ಕಾಸ್ಗುದ. ಕನ್ನಡ. ವಾರ್ಷಿಕ ಚಂದಾ ರೂ. ೩-೨೫ (ಅಂಚೆವೆಚ್ಚ ಸೇರಿ) ಬಿಡಿ ಪ್ರತಿ ೨೫ ನಯೇ ಪೈಸೆ.

ಕಾಸರವಿನಲ್ಲಿ ಜೊಸತಾಗಿ ನಿಲಿಳನಗೊಂಡ ನವನೀತದ ಮೂರನೆಯ ಸಂಚಿಕೆಯು ಹಸ್ತಗತವಾಗಿದೆ. ಈ ಸಂಚಿಕೆಯಲ್ಲಿ ಶ್ರೀಗಳಾದ ಎಸ್. ತಿರುಮಲೇಶ್ವರ ಭಟ್, ಬಳ್ಳೂರು ಸುಬ್ರಾಯ ಆದಿಗ, ಜಿ. ಸುಬ್ಬರಾಯ, ಡಾ. ಬಿ. ಶ್ಯಾಮ ಸೆಟ್ಟಿ ಮೊದಲಾದವರ ಲೇಖನಗಳೂ ಮಾಸ ಭವಿಷ್ಯವೂ ಕೂಡಿಕೊಂಡಿದೆ. ಕಟಪಾಡಿ ಜನಾರ್ಧನ ನಾಯಕರು "ಅಯುರ್ವೇದದ ಕುರಿತು ನೀವು ತಿಳಿಯಬೇಕಾದ್ದೇನು?" ಎಂಬ ಲೇಖನವನ್ನು ಬರೆದಿದ್ದಾರೆ. ಹೀಗೆ ಸಾಮಾನ್ಯವಾಗಿ ಸುಂದರವಾಗಿಯೇ ಹೊರಬಂದಿರುವ ಈ ಪತ್ರಿಕೆಯನ್ನೂ ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

—ಗೋರಾ.

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

5—6—1958

ಸಂಚಿಕೆ ೩೯
NO. 39

ಧರ್ಮನಿರಪೇಕ್ಷೆಯ ಮುಖವಾಡ—

ನಮ್ಮ ದೇಶವೆತ್ತ ಸಾಗುತ್ತಿದೆ?

ಶತಮಾನಗಳ ಕಾಲದಾಸ್ಯತನದಿಂದ ಬಾಳಿದ ಮೇಲೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ. ಇತರ ರಾಷ್ಟ್ರಗಳಂತೆಯೇ ನಾವೂ ನಮ್ಮ ರಾಷ್ಟ್ರದ ಭಾಗ್ಯವಿಧಾತರಾಗಿದ್ದೇವೆ. ಆದರೆ, ಗತ ದಶವರ್ಷಗಳಲ್ಲಿ ನಾವು ಸ್ವಾತಂತ್ರ್ಯದ ಪಥದಲ್ಲಿ ಉನ್ನತಿಯ ಶಿಖರದತ್ತಪಾದವಿಡುತ್ತಿದ್ದೇವೆಯೇ ಅಥವಾ ಅವನತಿಯ ಕೂಪದಲ್ಲಿ ತೊಳಲಾಡುತಿದ್ದೇವೆಯೇ ಎಂಬುದನ್ನು ಸರ್ಯಾಲೋಚಿಸುವಾಗ ದೇಶವೆತ್ತ ಸಾಗುತ್ತಿದೆ ಎಂಬುದು ಮನವರಿಕೆಯಾಗುವುದು.

ದೇಶೀಯ ರಾಜಮಹಾರಾಜರ ನಿರಂಕುಶ ರಾಜ್ಯಭಾರವನ್ನು ಸಮಾಪ್ತಗೊಳಿಸಿದುದರಿಂದ ನಮ್ಮ ರಾಷ್ಟ್ರವು ಹಿಮಾಲಯದಿಂದ ಕನ್ಯಾಕುಮಾರಿ ವರೆಗೆ ವಿಸ್ತರಿಸಿದೆ. ಜಮೀನುದಾರರ ಕೌಂಕುಳಿನಿಂದ ಜನತೆಯನ್ನು ಮುಕ್ತಗೊಳಿಸಿ ಸ್ವತಂತ್ರವಾಯುವಿನಲ್ಲಿ ಉಸಿರಾಡುವಂತೆಮಾಡಿದ್ದೇವೆ. ಗ್ರಾಮ ಗ್ರಾಮದಲ್ಲಿ ಪಂಚಾಯತ ರಾಜ್ಯ ಸ್ಥಾಪನೆಯಾಗಿದೆ. ನಮ್ಮ ಮುಂದೆ ನಿತ್ಯವೂ ನವನೂತನ ಯೋಜನೆಗಳ ಕಂಡು ಬರುತ್ತಿವೆ. ನಾವು ನಮ್ಮ ಪ್ರಥಮ ಪಂಚವರ್ಷಿಕ ಯೋಜನೆಯನ್ನು ಪೂರ್ತಿಗೊಳಿಸಿ ದ್ವಿತೀಯ ಯೋಜನೆಯನ್ನು ಸಫಲಗೊಳಿಸುವಸಲುವಾಗಿ ಉಸಿರುಕಟ್ಟಿ ದುಡಿಯುತಿದ್ದೇವೆ. ಹೀಗಿರುವಾಗ ನಾವು ಪ್ರಗತಿ ಪಥದಲ್ಲಿಯೇ ಸಾಗುತ್ತೇವೆ ಎಂಬುದರಲ್ಲಿ ಸಂದೇಹವೇಕೆ? ಆದರೂ ಕಳೆದ ಹತ್ತು ವರ್ಷಗಳ ಸಿಂಹಾವಲೋಕನ ಮಾಡುವುದರಿಂದ ಹಾನಿಯೇನು?

ಇತ್ತೀಚೆಗಿನವರೆಗೆ ನಮ್ಮ ಉನ್ನತಿಗೆ ಆಂಗ್ಲರು ಭಾದಕರಾಗಿದ್ದರೆಂದು ಕರೆದು ನಮ್ಮ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುತಿದ್ದೆವು. ಆದರೆ, ಸ್ವಾತಂತ್ರ್ಯಪ್ರಾಪ್ತಿಯಾಗಿ ಇಷ್ಟು ಸಮಯ ಕಳೆದ ಮೇಲೂ ನಾವು ಆ ಮಾತುಗಳನ್ನೇ ಆಡುವುದಾದರೆ, ಅದರಿಂದ ಪ್ರಯೋಜನವೇನು? ನಮ್ಮ ಒಳಿತು ಕೆಡುಕುಗಳಿಗೆ ನಾವೇ ಬಾಧ್ಯರು; ಆದುದರಿಂದ ನಮ್ಮ ಭಾರವನ್ನು ಹೊರುವುದರಲ್ಲಿ ನಾವೇನು ಮಾಡಿದ್ದೇವೆ?

ನಮ್ಮ ದೇಶವು ಧರ್ಮಪ್ರಾಣ ದೇಶವೆಂದು ಕರೆಯಲ್ಪಡುತ್ತದೆ. ನಾವು ಧರ್ಮ ಮತ್ತು ರೂಢಿಗಳ ದಾಸರು ಮಾತ್ರವಲ್ಲ; ದಾಸಾನುದಾಸರಾಗಿ ಬದುಕಿದ್ದೇವೆ ಎಂದರೆ ಅರ್ಥ. ಮೋಸ ಮತ್ತು ವಂಚನೆಗಳನ್ನು ಅಧಿಕಾಧಿಕ ಪ್ರಮಾಣದಲ್ಲಿ ಮಾಡಬಲ್ಲ ವ್ಯಕ್ತಿಯೇ ಮಹಾತ್ಮನೆಂದು ಗೌರವಿಸಲ್ಪಡುತ್ತಾನೆ. ಧರ್ಮದ ಹೆಸರಿನಲ್ಲಿ ಅಧರ್ಮಾಚರಣೆಯನ್ನು ಮಾಡುವಷ್ಟು ಧರ್ಮರೂಪೀಕ್ರಿಮಿಯ ನಮ್ಮ ಸಮಾಜವನ್ನು ಕೂರೆದು ತೂತಾಗಿಸಿದೆ. ಆದುದರಿಂದಲೇ ನಾವು ಸ್ವಾತಂತ್ರ್ಯವನ್ನು ಪಡೆದೂಡನೆಯೇ ಒಂದು ಮಹಾ ಸತ್ಕಾರ್ಯವನ್ನು ಮಾಡಿದೆವು—ಅದೇ ನಮ್ಮ ಮುಂದಾಳುವಿನ ಕೊಲೆ! ಧರ್ಮರೂಪೀ ವಿಷಮವು ಗೋಡಸೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಲಕ್ಷಾಂತರ ಜನರ ಜೀವನದಾತನ ಜೀವವನ್ನು ನುಂಗಿಬಿಟ್ಟಿತು. ಉನ್ನತಿಯ ಕಡೆಗೆ ನಾವಿಟ್ಟ ಮೊದಲನೆಯ ಹೆಜ್ಜೆಯೆಂದರೆ ಇದೇ ನಾವು ಪ್ರಗತಿಹೊಂದುತ್ತಿಲ್ಲ ಎಂದು ಇನ್ನೂ ಯಾರಾದರೂ ಸಂದೇಹಪಡುತ್ತಾರೆಯೇ?

ಧರ್ಮವು ಪ್ರಪಂಚದಲ್ಲಿ ಎಷ್ಟು ರಕ್ತವಾಹಿನಿಯನ್ನು ಹರಿಸಿದೆ ಮತ್ತು ಎಂತಹ ಪಾಶವಿಕ ಅತ್ಯಾಚಾರಗಳನ್ನು ಮಾಡಿದೆ ಎಂಬುದಕ್ಕೆ ಇತಿಮಿತಿ ಎಂಬುದಿಲ್ಲ. ವಿಶ್ವದ ಇತಿಹಾಸವನ್ನು ಬಿಟ್ಟು ನಮ್ಮ ದೇಶದ ಚರಿತ್ರೆಯನ್ನೇ ನೋಡುವುದಾದರೂ ಧರ್ಮಾಂಧತೆಯ ಕಾರಣದಿಂದ ಎಷ್ಟು ಹತ್ಯಾಕಾಂಡಗಳಾಗಿವೆ ಎಂಬುದನ್ನು ತಿಳಿದರೆ, ಆಗ ನಮ್ಮ ಶಿರಸ್ಸು ಲಜ್ಜಾವನತವಾಗದಿರದು. ನಮ್ಮ ಸ್ವಾತಂತ್ರ್ಯದ ಹತ್ತು ವರ್ಷಗಳ ಕಾಲಾವಧಿಯಲ್ಲಿಯೇ ದೇಶದ ಸ್ವತಂತ್ರ ವಾತಾವರಣವು ವಿಷಪೂರಿತವಾಗುವುತಿರುತ್ತದೆ.

ಶಾಲಾಕಾಲೇಜುಗಳು ಧರ್ಮವನ್ನು ಅಭೀಮಿನೊಡನೆ ಹೋಲಿಸಿದ್ದವು. ಅದರೂ ಈ ದರ್ಮವನ್ನು ಶರಾಬೆಂದು ಕರೆಯುವುದೇ ಯುಕ್ತವೆಂದು ತೋರುವುದು. ಬೇರೆ ಬೇರೆ ವಿಧದ ಶರಾಬುಗಳಂತೆ ಬೇರೆ ಬೇರೆ ಧರ್ಮಗಳ ಮದವಿರುತ್ತದೆ. ಮನುಷ್ಯನನ್ನು ಅಚೇತನನನ್ನಾಗಿಸಿ ಅತನ ವಾಸನಿಕ ಸ್ವಾತಂತ್ರ್ಯಗಳನ್ನು ಅಪಹರಿಸಿ ಅವನನ್ನು ರೂಢಿಯ ದಾಸನಾಗಿಸುವುದೇ ಧರ್ಮದ ಲಕ್ಷ್ಯವಾಗಿದೆ. ಧರ್ಮದ ಶರಾಬನ್ನು ಕುಡಿದು ಮಾನವನು ಪ್ರಾಣಿಗಿಂತಲೂ ಕೀಳಾಗುದನ್ನು ಕಾಣುತ್ತೇವೆ ಲಕ್ಷಾಂತರ ಅಸಹಾಯ ಅಬಾಲ ವೃದ್ಧರು ಸುಳಿಗಾಲದ ಕೀಟಗಳಂತೆ ಕೊಲ್ಲಲ್ಪಟ್ಟುದನ್ನು ನೋಡುತ್ತೇವೆ. ಧರ್ಮದ ಹೆಸರಿನಲ್ಲಿ ಅದೆಷ್ಟು ಮಾನವೀಯ ಸ್ತ್ರೀಯ ರೊಡನೆ ಅತ್ಯಾಚಾರ ನಡೆಯಿತೆಂದು ಕೇಳುತ್ತೇವೆ. ಇಂತಹ ಅಮಾನುಷ ಕೃತ್ಯಗಳನ್ನೆಸಗಿದವರು ಯಾರು? ಈ ಸತ್ಕಾರ್ಯಕರ್ತರು ಧರ್ಮಾನುಯಾಯಿಗಳು!

ಪ್ರಾಚೀನ ಕಾಲದ ಋಷಿಗಳಾದರೂ ಸೋಮರಸದ ರುಚಿಯನ್ನು ಬಿಡಲಿಲ್ಲ. ಇದರಿಂದಾಗಿ ಅವರು ಸಮುದ್ರದ ನೀರಿನಿಂದರೂ ತೊಳೆದು ಹೋಗದ ಕರಿಯನ್ನು ಹಚ್ಚುವ ಮಹಾಕಾರ್ಯವನ್ನು ಮಾಡಿಹೋದರು. ಅವರು ರಾಷ್ಟ್ರೀಯತೆಯನ್ನು ಹತನಾಗಿಸಿ ನಮ್ಮ ಧರ್ಮರಕ್ಷಣೆಯನ್ನು ಮಾಡಿದರು. ಇಲ್ಲವಾದರೆ, ನಾಲ್ಕು ವೇದಗಳೂ ಪುರಾಣಗಳ ಮಹಾಸೃಷ್ಟಿಕೆಗಳೂ ಲುಪ್ತವಾಗಿ ಹೋಗುತಿದ್ದವು. ಇದರಿಂದಾಗಿಯೇ ನಮ್ಮ ದೇಶದ ಎರಡು ಪ್ರಮುಖ ಜಾತಿಗಳು ತಂತಮ್ಮ ಧರ್ಮ ಮತ್ತು ಸಂಸ್ಕೃತಿಗಳರಕ್ಷಣೆಗಾಗಿಯೇ ತಮ್ಮ ಮೊದಲ ಹೆಜ್ಜೆಯನ್ನಿಟ್ಟರು.

ಇಂದು ಪರುವನ್ನು ನಮ್ಮ ಸರ್ವಜರೆಂದು ತಿಳಿಯುವುದು ಅಥವಾ ಮಾನವನನ್ನು ಪಶುವಿಗೆ ಸಮಾನನೆಂದು ಗಣಿಸುವುದು ನಮ್ಮ ಕರ್ತವ್ಯವಲ್ಲ. ಸ್ತ್ರೀಯರನ್ನು ಅಪ್ರಾಕೃತಿಕ ವಿವಾಹವಾಗಿಸಿ ಅವರನ್ನು ಸತ್ಕೀರ್ತಿ ಮತ್ತು ಪತಿಸೇವೆಯ ಪಾರದಲ್ಲಿ ನಿಷ್ಠಾವಂತರಾಗಿಸಿ ಗುಲಾಮಗಿರಿಗೆ ದೂಡುವುದಾಗಲಿ, ಅನ್ನಕ್ಕಾಗಿ ಹಂಬಲಿಸಿ ಸಾಯುವಂತೆ ಸಗುವುದಾಗಲೀ ಓದುಬರಹವನ್ನು ಕಲಿತು ಒಬ್ಬ ಕಲ್ಪಿತ ಈಶ್ವರನೆದುರು ಮೂಗು ಮುರಿಸಿ ಭಿಕ್ಷೆಬೇಡುವಂತೆ ಮಾಡುವುದಾಗಲೀ ನಮ್ಮ ಕೆಲಸವಲ್ಲ

ಬ್ರಿಟಿಷರ ಕಾಲದಲ್ಲಿ ರೇಲ್ವೆ, ತಂತಿ, ಶಾಲೆ ಮೊದಲಾದುವುಗಳನ್ನು ತೋರಿಸಿ ಅವರ ಪ್ರಶಂಸಕರು ದೇಶದ ಉನ್ನತಿಯಾಯಿತೆಂದು ಹೇಳುತಿದ್ದಂತೆ ಇಂದು ಶಾಲುವೆ, ಆಣೆಕಟ್ಟು, ಸೇತುವೆ, ಮಾರ್ಗ ಆದಿಗಳನ್ನು ತೋರಿಸಿ ದೇಶವು ಉನ್ನತಿಪಡೆಯುತ್ತಿದೆ ಎಂದು ಹೇಳಲಾಗುತ್ತದೆ. ದೇಶವು ಯಾವ ವಿಭಾಗದಲ್ಲೂ ಉನ್ನತವಾಗಿಲ್ಲವೆಂದು ಹೇಳಬಾರದು. ನಾವು ಆತೆಯನ್ನಿಟ್ಟುಕೊಳ್ಳದಂತಹ ಕ್ಷೇತ್ರದಲ್ಲಿ ದೇಶವು ಉನ್ನತವಾಗುತ್ತದೆ. ಈ ಉನ್ನತಿಯು ಬಹುಮುಖಿಯಾಗಿರದೆ ಕೇವಲ ನಿರ್ಮಾಣಾದಿ ಯೋಜನೆಗಳಲ್ಲಿಯೇ ಪರಿಮಿತವಾಗಿದೆ. ಎಷ್ಟೋ ವೈಲುದ್ದದ ಸಿಮೆಂಟು ರಸ್ತೆಗಳಾದುವು, ಸಾವಿರಾರು ಶಾಲೆಗಳು ತೆರೆಯಲ್ಪಟ್ಟುವು, ನೂರಾರು ಆಣೆಕಟ್ಟುಗಳು ಕಟ್ಟಲ್ಪಟ್ಟುವು, ಗ್ರಾಮ ಗ್ರಾಮಗಳಿಗೆ ವಿದ್ಯುತ್ತು ಹರಿಯಿತು, ಸರಿಯೇ. ಆದರೆ, ನಾವು ನಮ್ಮ ಮಾನಸಿಕ ಉನ್ನತಿಗಾಗಿ ಏನು ಮಾಡಿದೆವು? ಈ ಕುರಿತು ಎಂದಾದರೂ ನಾವು ವಿಚಾರ ಮಾಡಿದ್ದಿದೆಯೆ? ಇಂತಹ ಭೌತಿಕ ಉಪಾದಾನಗಳನ್ನಷ್ಟೇ ಜನರಿಗೊದಗಿಸುವುದನ್ನು ಮಾತ್ರ ನಮ್ಮ ಗುರಿಯಾಗಿಟ್ಟುಕೊಂಡಿರುವೆವೆ? ನಮ್ಮ ರೂಢಿ ಮತ್ತು ಕುತ್ಸಿತ ಸಂಸ್ಕಾರಗಳನ್ನೂ ದೂರಮಾಡುವತ್ತ ಯೋಜನಾ ನಿರ್ಮಾಣ ಮಾಡಿದ್ದೇವೆಯೆ? ಶತಮಾನಗಳಾದಿಯಿಂದ ದೇವೀ ದೇವತೆಗಳ ಪೀಠ ಸೈಗಂಬರರ ಹಾಗೂ ಮುಲ್ಲಾ ಮತ್ತು ಪಂಡಿತರ ದಾಸ್ಯವನ್ನು ಬಿಡುವ ಯೋಜನೆ ನಮಗಿಲ್ಲವೆ?

ಆರ್ಥಿಕ ಸ್ವಾತಂತ್ರ್ಯವನ್ನೇ ಪೂರ್ಣ ಸ್ವಾತ ತ್ರ್ಯವೆಂದು ನಾವು ತಿಳಿದಿರುವುದಾದರೆ, ಸ್ವಾತಂತ್ರ್ಯದ ಮರ್ಮವನ್ನೇ ನಾವು ಅರಿಯಲಿಲ್ಲವೆನ್ನಬೆಕು. ಸ್ವಾತಂ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. **MANGALORE.** Estd: **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ನಿರಾಸೆಯ ನಿಟ್ಟುಸಿರು

ಲೇ "ನರೇಂದ್ರ".

ನಿರಾಸೆಯಾಗಿತ್ತು....

ನಿಜಕ್ಕೂ ಅವರಿಗೆ ನಿರಾಸೆಯಾಗಿತ್ತು. ತಮ್ಮ ಇತ್ತೀಚೆಗಿನ ೧೦—೧೫ ವರ್ಷದ ಬಾಳಿನಲ್ಲಿ ಅಷ್ಟು ನಿರಾಸೆ ಅವರಿಗೆಂದೂ ಆಗಿರಲಿಲ್ಲ.

ಅನ್ನಕ್ಕೆ ಅಕ್ಕಿ ಇಲ್ಲದೆ ರಾಗಿ ಅಂಬಲಿ ಮಾಡಿ ಕುಡಿದಂದೂ ಅವರಿಗಂತಹ ದುಃಖವಾಗಿರಲಿಲ್ಲ...ತನ್ನ ಹೆಂಡತಿ ಹರಕು ಸೀರೆಯನ್ನು ಮತ್ತೆ ಮತ್ತೆ ಹೊಲಿದು ಉಟ್ಟಾಗಲೂ ಅವರಿಗೆ ಅಂತಹ ದುಃಖವಾಗಿರಲಿಲ್ಲ.

ಆದರೆ ಇಂದು...ಅವರ ನಯನಗಳೆರಡು ತುಂಬಿದ್ದವು....

ಹೊರಗೊಮ್ಮೆ ಇಣಿಕಿ ನೋಡಿದರು. ಅಂಚೆಯವನ ಸುಳಿವಿಲ್ಲ. ದೂರದಲ್ಲಿ ಯಾರೋ "ಕಾಕಿ" ಉಡುಪನ್ನು ಧರಿಸಿ ಬರುತ್ತಿದ್ದುದು ಗೋಚರಿಸಿತು.....ನಿರಾಸೆಯ ಕಗ್ಗತ್ತಲಿನಿಂದ ತುಂಬಿದ ಆ ಮನದಾಗಸದಲ್ಲಿ ಆಸೆಯ ಎಂಚು ಸುಳಿಯಿತು ..ಆದರೆ ತಕ್ಷಣವೇ ಅದು ಮಾಯವಾಗಿ ಕಗ್ಗತ್ತಲು ತಾನೇ ತಾನಾಯಿತು.... ಕಾರಣ ಆತ ಪೋಸ್ಟ್‌ಮ್ಯಾನ್ ಅಲ್ಲ.. ಊರಿನ ಕಾಡನ್ನು ಕಾಯುವ ಚೆನ್ನ....

ನಿಡಿದಾದ ಬಿಸಿಯುಸಿರೊಂದು ಅವರ ವದನದಿಂದ ಹೊರಬಂತು....ಮೆಲ್ಲನೆ ಎಂದು "ಈಸಿಚೇರ್"ನಲ್ಲಿ ಒರಗಿದರು.....

ಬೇಡ ಬೇಡವೆಂದರೂ ಮನಹತ್ತು ವರ್ಷದ ಇತ್ತೀಚೆಗಿನ ಬಾಳಿಕಗ್ಗವಿಯಲ್ಲಿ ಇಣಿಕಿ ನೋಡಿತು.

೦೦ ೦೦ ೦೦

ಹೋರಾಟದ ಬಿರುಗಾಳಿ ದೇಶದಲ್ಲೆಲ್ಲಾ ಬೀಸಿ ಸ್ವಾತಂತ್ರ್ಯ ಕಸ್ತೂರಿಯ ಪರಿಮಳವನ್ನು ಹೊತ್ತತೆಂದಂತಹ ಕಾಲವದು....

ಆದರೆ ಶಾಮರಾಯರ ಮನೆಯಲ್ಲಿ ಆಗ ತಾನೆ ಸಂತಸದ ಸೂರ್ಯ ಅಸ್ತಮಿಸಿ ದುಃಖದ ಇರುಳು ಕವಿಯ ತೊಡಗಿತ್ತು...

ಇಬ್ಬರೇ ಹುಡುಗರು...

ಮುದ್ದುಮುದ್ದಾದ ಎರಡೇ ಮಕ್ಕಳು..

ಒಬ್ಬನಿಗೆ ಹತ್ತು ವರ್ಷ....ಮತ್ತೊಬ್ಬನಿಗೆ ಏಳು ವರ್ಷ...

ಶ್ರೀಪತಿ.... .... ಶ್ರೀಧರ.....ಎರಡೇ ಮಕ್ಕಳು.

ಇಬ್ಬರೂ ಶ್ರೀಯ ಒಡೆಯರೇ...ಆದರೆ ಶಾಮರಾಯರ ಮನೆಯ ಶ್ರೀ ಎಲ್ಲೋ ಮುಖ ಮರೆಯಿಸಿಕೊಂಡಿದ್ದಳು...

ಶ್ರೀಪತಿ.... ... ಶ್ರೀಧರ.... ....ಎರಡೇ ಮಕ್ಕಳು.... .

ಆದರೆ....ವಿಧಿಯ ಕೂರಲಗು ಹಿಂದಿನಿಂದಲೇ ಹೊಂಚು ಹಾಕಿ ಕೊಂಡಿತ್ತು.... ಒಮ್ಮೆ ಕೆರೆಗೆ ಈಜಲು ಇಬ್ಬರೂ ಹೋಗಿದ್ದರು...

ಆಳವಾದ ಕೆರೆ...

ದಂಡೆಯಲ್ಲಿರುವ ಎತ್ತರ ಮರದ ತುದಿಯಲ್ಲಿ ನಿಂತುಕೊಂಡು ಕೆರೆಯ ಮಧ್ಯಕ್ಕೆ ಹಾರಿದ ಶ್ರೀಪತಿ...ಶ್ರೀಧರನೂ ಧುಮುಕಿದ.....ಶ್ರೀಪತಿ ಮೇಲೆ ಬಂದ ಶ್ರೀಧರ ಮೇಲೆ ಬರಲಿಲ್ಲ.....

ಮಾರನೆಯ ದಿನ ಅವನ ಹೆಣಮಾತ್ರ ಮೇಲೆ ಬಂತು.....

ಬಾಳಿನ ಅನಂತಯಾತನೆಗಳಿಂದ ಹೊರಗಾಗಿ ಶ್ರೀಧರ ಮೇಲೆ ಬಂದಿದ್ದ....

ಹಿಂದಿನ ದಿನ ಕೆರೆಯಲ್ಲಿ ಈಜಾಡುತಿದ್ದ ಹತ್ತಾರು ಜನರ ಉದಾಸೀನದ ಪ್ರತಿಫಲದ ಪ್ರತೀಕವಾಗಿ ಶ್ರೀಧರನ ಶವ ಮೇಲೆ ಬಂದಿತ್ತು.....

ರಾಯರ ಮನೆಯ ದುಃಖದ ವಾತಾವರಣದಲ್ಲಿ ಸಂತಸದ ಬೆಳಕನ್ನು ಬೀರುತ್ತಾ ಉರಿಯುತಿದ್ದ ಎಂಟು ದೀಪಗಳಲ್ಲಿ ಒಂದು ವಿಧಿಯ ಪ್ರಹಾರಕ್ಕೆ ಸಿಕ್ಕಿ ಆರಿತ್ತು.....

ಂ ಂ

ಶ್ರೀಪತಿಯ ಪಾಲಿಗೆ ರಾಯರ ಪ್ರೀತಿಯೆಲ್ಲಾ ಮೊಸರಾಯಿತು—ಶ್ರೀಧರನ ಸಾವಿನ ತರುವಾಯ.....

ಶ್ರೀಪತಿಯನ್ನು ನೋಡಿದೊಡನೆ ರಾಯರಿಗೆ ದುಃಖ—ಕ್ರೋಧಗಳೆರಡೂ ಉಂಟಾಗುತಿತ್ತು. ಆದರೂ ಇದ್ದೊಬ್ಬ ಮಗ.....

ಮೂರು ಜನರ ಸಂಸಾರ ಅವರದು....

ರಾಯರು....ರುಕ್ಮಿಣಿ...ಶ್ರೀಪತಿ...

ಅದರೂ ಹೊಟ್ಟೆಗೆ ಅನ್ನವಿಲ್ಲ...ಮೈಗೆ ಬಟ್ಟೆಯಿಲ್ಲ....

ಇದ್ದದ್ದು ಒಂದು ಸಣ್ಣ ಮನೆ..... ನಾಲ್ಕೈದು ಮುಡಿ ಗದ್ದೆ....ತಾಯಿಯ ಮನೆಯಲ್ಲಿ ರುಕ್ಮಿಣಿಗೆ ಹಾಕಿದ್ದ ಎಂಟು ಸವನ್ ಚಿನ್ನ.....

ಂ ಂ

ಎಂಟನೇ ಕ್ಲಾಸ್ ಮುಗಿಸಿದ್ದ ಶ್ರೀಪತಿ ಹೈಸ್ಕೂಲು ಸೇರಿದ....ತರಗತಿಯಲ್ಲಿ ಮೊದಲನೆಯ ಸ್ಥಾನಗಳಿಸುತಿದ್ದ ಆ ವಿದ್ಯಾರ್ಥಿಯನ್ನು ಹೈಸ್ಕೂಲಿಗೆ ಸೇರಿಸಲೇಬೇಕೆಂದು ಆ ಊರಿನ ಹೈಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರ ಹೆಚ್ಚಿನಿಂದ ಶ್ರೀಪತಿ ಹೈಸ್ಕೂಲು ಸೇರಿದ....

ಹೈಸ್ಕೂಲಿನಲ್ಲಿ ಶ್ರೀಪತಿಗೆ ಅರ್ಧಸಂಬಳವಾಯಿತು....

ಆದರೂ ವರ್ಷಕ್ಕೆ ೫೦—೬೦ ರೂಪಾಯಿ ಬೇಕಾಗುತಿತ್ತು....

ಕಾಡಿ ಬೇಡಿ S. S. L. C. ಮುಗಿಯಿತು...

ಮುಂದೆ...???....

ಆ ಸಂಸಾರದ ಮುಂದೆ ಇದ್ದುದು ಬಡತನದ ಭೀಕರ ಕಗ್ಗತ್ತಲು....

ಮಾಡಿದ ಸಾಲ ಮುನ್ನೂರಕ್ಕೂ ಮಿಕ್ಕಿತ್ತು...

ಇರುವು ೨ ನಾಲ್ಕೈದು ಮುಡಿ ಆಸ್ತಿ ...ಎಂಟು ಸವನು ಚಿನ್ನ....ಒಂದು ಸಣ್ಣ ಮನೆ...

ಆದರೂ ಶ್ರೀಪತಿಗೆ ಕಾಲೇಜು ಸೇರಲು ಆಸೆ...

ರಾಯರೂ ಹಲುಬಿದರು....ಹಂಬಲಿಸಿದರು...

ಶ್ರೀಧರನ ಸಾವು....ಈ ಬಡತನ... ಇವೆಲ್ಲವುಗಳಿಂದ ರಾಯರ ಮನ ರೋಸಿ ಹೋಗಿತ್ತು.

ರಾಯರ ಸಂಬಂಧಿಕರನೇಕ ೨ ಲಕ್ಷಾಧಿಪತಿಗಳಾಗಿದ್ದರು....

ಎಲ್ಲರಿಗೂ ಕಾಗದ ಬರೆದ-ಶ್ರೀಪತಿ....

"ಹಣ ಸಹಾಯಕ್ಕಾಗಿ...."

ಎಲ್ಲರೂ ಆತನ ಚುರುಕು ಬುದ್ಧಿಯನ್ನು ಪ್ರಶಂಸಿಸಿದರು.... ಮುಂದೆ ಕಲಿಯಬೇಕೆಂದು ಸೂಚಿಸಿದರು....ಆದರೆ ಹಣ ಸಹಾಯ ಮಾಡಲು ಅಸಾಧ್ಯವಾದುದಕ್ಕೆ ಶೋಕಿಸಿದರು....

ಶ್ರೀಪತಿಗೆ ಸಿಟ್ಟು ಬಂದಿತ್ತು....ಈ ಜನ ....ಇಂದು ಈ ಶ್ರೀಪತಿ ಸಹಾಯ ಕೇಳಿದ್ದಕ್ಕೆ "ಸಾಧ್ಯವಿಲ್ಲ" ಎಂದು ಕಠೋರವಾಗಿ ಹೇಳಿದರು....ಇದೇ ಶ್ರೀಪತಿ ನಾಳೆ ಡಿಗ್ರಿ ಪಡೆದುಕೊಂಡು ಬಂದರೆ ಎಷ್ಟು ಜನ ಬೇಕು ಹೆಣ್ಣು ಕೊಡೋಕೆ...." ಪ್ರತೀಕಾರ ತೃಷೆಯಲ್ಲಿ ಶ್ರೀಪತಿ ಗುಡುಗಿದ್ದ...

"ನೀಯೂ ಕಾಲೇಜಿಗೆ ಹೋಗ್ಲೇಬೇಕೆಂದು ಹಠ ಹಿಡಿದು ಕೂಳಿತುಕೊಂಡಿದ್ದಾನೆ...ನನ್ನ ಚಿನ್ನನಾದ್ರೂ ಮಾರಿ...."

"ಚಿನ್ನ ಮಾರಿದ್ರೆ ೩೦೦—೪೦೦ ಸಿಗಬಹುದು....ಅದೆಲ್ಲಿ ಸಾಕಾಗುತ್ತೆ....ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ..."

"ಸದ್ಯಕ್ಕೆ ಸಾಕಾಗುತ್ತಲ್ಲಾ...."ರುಕ್ಮಿಣಿ ಹೇಳಿದಳು....

"ಹೂಂ....ಹಾಗೇ ಮಾಡೋಣ...." ಎಂದರು ರಾಯರು...

ಚಿನ್ನ ಸರಾಫ್ ಸುಬ್ಬರಾಯನ ಅಂಗಡಿ ಸೇರಿತು...ರಾಯರ ಕೈಗೆ ೩೫೦ ರೂಪಾಯಿ ಬಂದಿತು....ಮೂನ್ನೂರ ಐವತ್ತು ರೂಪಾಯಿ ತೆಗೆದುಕೊಂಡು ಕಾಲೇಜಿಗೆ ಸೇರಿದ ಶ್ರೀಪತಿ....

ಆತನ ಚುರುಕು ಬುದ್ಧಿಗೆ ಮೆಚ್ಚಿದ ಪ್ರಿನ್ಸಿಪಾಲರು ಪೂರ್ತಾವೇತನವನ್ನು ಮಾಫಿ ಮಾಡಿಸಿದರು....ಅಲ್ಲದೆ ಸ್ಕಾಲರ್‌ಷಿಪ್ ಬೇರೆ ಬಂತು....

ಅಂತೂ ೩೫೦ ರೂಪಾಯಿಯಲ್ಲಿ ಎರಡು ವರ್ಷದ ಕಾಲೇಜು ಬಾಳು ಸಾಗಿತು.

ಇಂಟರ್ ಮುಗಿಸಿದ ಶ್ರೀಪತಿ....

ಮುಂದೆ B. A.

ಆದರೆ ಹಣ....?

ಮತ್ತೆ ಕಾಂಚನದ ಭೂತ ತಲೆ ಎತ್ತಿತು?

೦೦ ೦೦ ೦೦

"ನಮ್ಮ ಮಗಳು ವಿಶಾಲಳ ಜಾತಕನಿ ಮ್ಮ ಶ್ರೀಪತಿ ಜಾತಕದೊಡನೆ ಹೇಗೆ ಕೂಡುತ್ತದೆ—ಅಂತೀರ...." ದಾರಿಯಲ್ಲಿ ಸಿಕ್ಕಿದ ನರಸಿಂಹಯ್ಯ ಹೇಳಿದ.

"ಯಾವುದಕ್ಕೂ ಶ್ರೀಪತೀನಕೇಳ್ಬೇಕು" ಅಂದಿದ್ದರು ಶಾಮರಾಯರು.

ಆದರೂ "ಅಂತಹ ಲಕ್ಷಾಧಿಪತಿಯೇ ಮುಂದೆ ಬರುವಾಗ ಏಕೆ ಬಿಡಬೇಕು" ಅನ್ನಿಸಿತು ಅವರಿಗೆ....

"ಹಣ ಎಲ್ಲಿಂದ ತರೋದು ಸೀಯೂ ....ವಿಶಾಲಳನ್ನ ಮದುವೆ ಆದ್ರೆ ಹೆಣದ ಜವಾಬ್ದಾರಿ ನರಸಿಂಹಯ್ಯನೇ ವಹಿಸ್ಕೋತಾನೆ...." ಶಾಮರಾಯರು ಮಗನೊಡನೆ ಮದುವೆ ಪ್ರಸ್ತಾಪ ತೆಗೆದರು....

"ಹಣ....ಹಣ....ಅವನ ಹಣದಿಂದ ನಾನೇನು ವಿದ್ಯೆ ಕಲಿಯಬೇಕಾಗಿಲ್ಲಪ್ಪ.... ಆಸ್ತೀ ಮಾರಿದ್ರೂ ಅಡ್ಡಿಯಿಲ್ಲ...ಅವನ ಹಣವೂ ಬೇಡ....ಮಗಳೂ ಬೇಡ..." ಖಂಡತುಂಡವಾಗಿ ಹೇಳಿದ್ದ ಶ್ರೀಪತಿ....

ಐದು ಮುಡಿ ಆಸ್ತಿ ಹೋಯಿತು.... ಬಂದದ್ದು ೧೫೦೦ ರೂಪಾಯಿ...

ಆಸ್ತಿ ಹೋಯಿತು....ಚಿನ್ನ ಹೋಯಿತು....ಉಳಿದದ್ದು ಮನೆ ಮಾತ್ರ..... ಹೊಟ್ಟೆಗಿಲ್ಲದೆ, ಬಟ್ಟೆಗಿಲ್ಲದೆ ರಾಯರು ಜೀವಿಸುತಿದ್ದರು...

ಂ ಂ

B.A. ಮುಗಿಸಿ ಬಂದಿದ್ದ ಶ್ರೀಧರ.... ಊರಿನ ಪ್ರಥಮ ಪದವೀಧರ ಆತ...

"ಹೂ....ಬೀದಿ ನಾಯಿಯಂತೆ ಯಾರ್ಯಾರ ಎಂಜಲು ತಿಂದ್ಕೊಂಡು ಬದುಕೋನು...." ಅಂತ ರಾಯರನ್ನ ಮುಖಾಮುಖಿ ದೂರಲು ಹಿಂಜರಿಯದವರು

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.		
3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಸನಾತನ ಸಂಸ್ಕೃತಿಯ ಪುನರುಜ್ಜೀವನ—

ಸಮಾಜ ಶಿಕ್ಷಣಕಲೆ - ಯಕ್ಷಗಾನ

ಶ್ರೀ. ಎಸ್ ಕೇಶವ ಭಟ್, ಬಿ ಎ, ಬಿ ಎಲ್.

ಇತರ ಯಾವುದೇ ಭಾಷೆಯನ್ನಾಡುವ ಜನತೆಗೂ ಸಿಗಲಾರದ ಅನುಪಮ ಆನಂದವೂ, ಉತ್ಸಾಹವೂ, ಜ್ಞಾನ ಭೋದೆಯೂ ದಕ್ಷಿಣ ಕನ್ನಡದ ಜನರಿಗೆ ಯಕ್ಷಗಾನದ ಮೂಲಕ ದೊರೆಯುತ್ತಿದೆಯೆಂಬುದು ಅಭಿಮಾನದ ವಿಚಾರವಾಗಿದೆ. ನೂರಾರು ವರ್ಷಗಳ ಹಿಂದೆ ನೃಪತುಂಗ ನಾಗವರ್ಮ ಮೊದಲಾದವರ ಕಾಲದಲ್ಲೂ ಯಕ್ಷಗಾನವು ಬಳಕೆಯಲ್ಲಿತ್ತೆಂಬ ಅಭಿಪ್ರಾಯವಿದೆಯಾದರೂ ಯಕ್ಷಗಾನಕ್ಕೆ ಸರಿಯಾದ ಹಾಗೂ ಸ್ಪಷ್ಟವಾದ ಸ್ವರೂಪವು ಸಮನಿಸಿದುದು ಪಾರ್ತಿ ಸುಬ್ಬನ ನಂತರವೇ ಸರಿ! ಅವನು ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಪಂಡಿತೋತ್ತಮರಿಗೇ ಮಿಸಲಾಗಿದ್ದ ವೇದಪುರಾಣಗಳ ಅರ್ಥವನ್ನು ಸಾಮಾನ್ಯರಿಗೂ ಸುಲಭದಲ್ಲಿ ತಿಳಿಯುವಂತೆ ಮಾಡಿ ನೂತನ ಪಥವೊಂದನ್ನು ದಿಗ್ದರ್ಶಿಸಿದನು ಈ ದೃಷ್ಟಿಯಿಂದ ಕನ್ನಡ ನಾಡಿಗಾದ ಖಾತಿ ಸುಬ್ಬನ ನೇಪಸದಾ ಸ್ಮರಣೀಯ

ಯಕ್ಷಗಾನದ ಮಹತ್ವವು ಅವರ್ಣನೀಯವಾದುದು. ಇದು ಸಾಹಿತ್ಯ ಸಂಗೀತಗಳ ಸಮರಸ ಸಮ್ಮಿಲನ! ಭಾಷೆ, ರಸ ಮತ್ತು ಪುರಾಣ ಜ್ಞಾನಗಳ ಬಿತ್ತರಣೆಗೆ ಏಕ ವೇದ ಸಾಧನ! ಒಳಿತು ಕೆಡುಕುಗಳ ಸಹಾ ಸಮ್ಮಿಶ್ರಣದಿಂದ ಒಳಿತನ್ನು ಆರಿಸಿ ನ್ಯಾಯ ಮಾರ್ಗದಲ್ಲಿ ಜೀವಿಸುವುದಕ್ಕು ಪ್ರೇರಕವಾಗುವಂತೆ ಮನುಷ್ಯನಿಗೆ ಆದರ್ಶ ಜೀವಿಗಳ ನಿತ್ಯ ಜೀವನದ ಸತ್ಯ ಚಿತ್ರಣವನ್ನು ನೀಡಬಲ್ಲ-ತನ್ಮೂಲಕ ನೀತಿಯ ನಿರ್ದೇಶನವನ್ನು ಮಾಡಬಲ್ಲ ಮಹಶ್ಶಕ್ತಿ ಯಕ್ಷಗಾನಕ್ಕಿರುವುದರಿಂದಲೇ ಜನಜೀವನದಲ್ಲಿ ಅದರ ಪಾತ್ರವಾರ್ಸ್ಯ ಹೆಚ್ಚಿದೆ. ಕಾಲೇಜು ವಿದ್ಯಾಭ್ಯಾಸದಿಂದಲೋ ಎಂಬಂತೆ ನಮ್ಮಯುವ ಜನಾಂಗವು ಪುರಾಣ ಪುಣ್ಯ ಪುರುಷರ ಪವಿತ್ರ ಜೀವನವನ್ನು ಮರೆತು ಪಾಶ್ಚಾತ್ಯ ಜನತೆಯ ಅಂಧಾನುಕರಣೆಗೆ ತೊಡಗಿ ಹಿಂದೂ ಸಂಸ್ಕೃತಿಯು ಗ್ಲಾನಿ ಹೊಂದುತ್ತಿರುವ ಈ ಕಾಲದಲ್ಲಿ ಜನಜಾಗೃತಿಯನ್ನಿತ್ತು ನಮ್ಮ ಸನಾತನ ಸಂಸ್ಕೃತಿಯ ಪುನರ್ಜೀವನವನ್ನು ಸಾಧಿಸುವುದು ಯಕ್ಷಗಾನದಂತಹ ಜಾನಪದವೂ, ಜ್ಞಾನಪ್ರದವೂ ಆದ ಕಲೆಯಿಂದಲೇ ಸಾಧ್ಯವೆಂಬುದು ವಿರಿಯಲಾರದ ಮಹತ್ವದ ವಿಚಾರವಾಗಿದೆ

ಯುಗಮರುಷರು ಎತ್ತಿ ಅಡಿದ ಬೇರೆ ಬೇರೆ ತತ್ವಸ್ತ್ರಣಾಲಿಗಳನ್ನು ಜನರು ಹಿಂಬಾಲಿಸುವಂತೆಸಗಿ, ಸನರಸಿ ಸತ್ಯಯುಗದ ಕನಸು ನನಸಾಗುವಂತೆ ಮಾಡುವುದು ಯಕ್ಷಗಾನದಿಂದ ಮಾತ್ರವೇ ಸಾಧ್ಯವೆಂದು ಹೇಳಿದರೆ ಕಿಚ್ಚಾಗಲಾರದು

ಯಕ್ಷಗಾನದಲ್ಲಿ ಮುಖ್ಯವಾಗಿ ತಾಳಮದ್ದಳೆ, ನಾಟಕ, ಬಯಲಾಟಗಳೆಂಬ ಮೂರು ವಿಭಾಗಗಳಿವೆ ಇವು ಒಂದೊಂದೂ, ಒಂದಲ್ಲೊಂದು ರೀತಿಯಿಂದ ಜನತೆಗೆ ನೀತಿಬೋಧೆಯನ್ನು ಮಾಡುತ್ತವೆ ಮೂರರಲ್ಲಿಯೂ ಸಾಹಿತ್ಯ ಸಂಗೀತಗಳ ಸಮಾವೇಶಗೊಂಡಿವೆ ಕಾದಂಬರಿ ಕಾವ್ಯಗಳಂತೆ, ವಿಷಯವನ್ನು ಕೇವಲ ಶಬ್ದಗಳಿಂದ ಮಾತ್ರ ನಿರೂಪಿಸದೆ ಹಾವ ಭಾವ ತಾಳ ಮೇಳಗಳೊಂದಿಗೆ, ಪ್ರದರ್ಶಿಸಿ, ಕಣ್ಣಿದಿರು ಕಂಡಿರಿಸಿ ತಾಣಿಸುವುದೇ ಯಕ್ಷಗಾನದ ಈ ಮೂರೂ ವಿಭಾಗಗಳಲ್ಲಿ ಕಂಡುಬರುವ ವೈಶಿಷ್ಟ್ಯವಾಗಿದೆ ಇನ್ನೂ ಸರಳವಾಗಿ ಹೇಳುವುದಿದ್ದರೆ ಯಕ್ಷಗಾನವು ಕಥೆ ಕಾದಂಬರಿಗಳಗಿಂತಲೂ ಹೆಚ್ಚು ಹೃದಯಸ್ಪರ್ಶಿಯಾಗಿದೆ ಎಂತಲೇ ಅದು ಬೀರುವ ಪರಿಣಾಮವು ಅಬೋಧ ಪೂರ್ವಕವೂ ಅದ್ಭುತವೂ ಆಗಿದೆ

ಆದರೆ ಪಟ್ಟದ ಯೋಗ್ಯತೆಯು ಅದನ್ನು ಉಪಯೋಗಿಸುವ ಕೈಯಲ್ಲಿದೆ— ಎಂಬ ಮಾತು ನಿಜಕ್ಕೂ ಸತ್ಯ. ಯಕ್ಷಗಾನದ ಸದುದ್ದೇಶವು ಸಾರ್ಥಕವಾಗಬೇಕಾದರೆ ಪಾತ್ರಧಾರಿಗಳು ಒಳ್ಳೆಯ ಪ್ರವೀಣರಾಗಿರಬೇಕು ತಮ್ಮ ಆತ್ಮ ತೃಪ್ತಿಯೊಂದಿಗೆ ಶ್ರೋತೃವೃಂದದ ತೃಪ್ತಿಯೂ ಅವರ ಗುರಿಯಾಗಿರಬೇಕು ಕೇವಲ ಪಂಡಿತರಿಗೆ ಪಾತ್ರ ಅರ್ಥವಾಗುವಂತೆ ಕಾವ್ಯಮಯ ಶೈಲಿಯಿಂದ ಸಾಗತನಾಡುವುದಕ್ಕಿಂತಲೂ, ಸರಳವಾಗಿ—ಸಾಮಾನ್ಯರಿಗೂ ತಿಳಿಯುವಂತೆ ಅರ್ಥ ವಿವರಣೆ ಮಾಡುವುದು ಯೋಗ್ಯ ಎಂದಮಾತ್ರಕ್ಕೆ ಮನೆಮಾತಿನ ಅಧಸಾ ಗ್ರಾಮ್ಯ ಶಬ್ದಗಳನ್ನು ಉಪಯೋಗಿಸಿ, ಅರ್ಥದ ಘನತೆಗೆ ಕುಂದನ್ನೀಯಬೇಕೆಂದು ಅರ್ಥವಲ್ಲ ಗಮನೀಯ ವಿಚಾರವೆಂದರೆ, ಆಯಾ ಪಾತ್ರಕ್ಕನುಗುಣವಾಗಿ ರಸಸೃಷ್ಟಿಯೂ, ಪಾತ್ರ ಸೃಷ್ಟಿಯೂ ಆಗುವಂತಿರಬೇಕು ಪಾತ್ರ ಗೌರವವನ್ನು ಕಾಯ್ದುಕೊಳ್ಳುವುದು, ಪಾತ್ರಧಾರಿಯ ಪ್ರಮುಖ ಕರ್ತವ್ಯವಾಗಿದೆ ಭೀಮನೊಡನೆ ಭೀಮನಾಗಿ—ರಾಮನೊಡನೆ ರಾಮನಾಗಿ ಅರ್ಥ ಹೇಳುವ ಅಂತಃ ಚೈತನ್ಯ ಕಲಾವಿದರಿಗಿದ್ದರೇನೇ ಕಲೆಯು ಕಳೆಯೇರಬಹುದು ಹೊರತು, ವಾದದ ಬರದಲ್ಲಿ ಪಾತ್ರದ ಹಾದಿ ತಪ್ಪಿ ಮಾತನಾಡುವುದಿದ್ದರೆ, ಅದು ಕಲೆಯ ಕೊಲೆಯೇ ಸರಿ! ಪೌರಾಣಿಕ ತತ್ವ ವಿಚಾರಗಳನ್ನು ಪಾತ್ರಧಾರಿಯು ಚೆನ್ನಾಗಿ ತಿಳಿದಿರಬೇಕು. ಸಂದರ್ಭ ಸನ್ನಿವೇಶಗಳನ್ನು ಸಜೀವವಾಗಿ ಸೃಷ್ಟಿಸುವ ಸಾಮರ್ಥ್ಯವೂ ಅವನಿಗಿರಬೇಕು. ವೈಯಕ್ತಿಕ ವಾದವು ಸಾಧುವಲ್ಲದಿದ್ದರೂ, ಕಲಾವಿದನಲ್ಲಿ ವಿಮರ್ಶಾತ್ಮಕವಾದ ವಿಚಾರ ವಿನಿಮಯ ಮಾಡಲ್ಲಿ ವಿವೇಕವಿಲ್ಲದಿದ್ದರೆ, ಪ್ರಯೋಜನವಿಲ್ಲ ಇವೆಲ್ಲಕ್ಕಿಂತಲೂ ಮುಖ್ಯವಾಗಿ ಹಳೆ ಜೀವನದಲ್ಲಿ ಹೊಸ ಭಾವವನ್ನು ತುಂಬುವ ಕಲಾತ್ಮಕ ಪ್ರತಿಭೆ ಕಲಾವಿದನಿಗೆ—ಅಗತ್ಯ ಪೌರಾಣಿಕ ವಿಚಾರಗಳೊಂದಿಗೆ ಆಧುನಿಕ ವಿಚಾರಗಳನ್ನು ಅಳವಡಿಸಿಕೊಂಡು ವಿಚಾರ ಮಥನವನ್ನೆಸಗುವುದರಲ್ಲೇ ಪಾತ್ರದಾರಿಯ ಹಿರಿಮೆಯಡಗಿದೆ ಕೇವಲ ಹಳಸಿದ ಹಳತನ್ನೇ ಇಟ್ಟಕ್ಕಿದ್ದಂತೆ ಜನತೆಯು ಮುಂದಿಡುವವನು ಬಂಡಿತವಾಗಿಯೂ ಯೋಗ್ಯ ಕಲಾವಿದನೆಂದು ಕರೆಸಿಕೊಳ್ಳಲಾರ ನಿಜವಾದ ಕಲಾವಿದನಲ್ಲಿ ಹೊಸ ವಿಚಾರಗಳೆಡೆಗೆ ಕ್ಷಾತ್ರಿರಣವನ್ನು ಬೀರಬಲ್ಲ ಸ್ವಯಂ ಸ್ಫೂರ್ತಿಯಿರಬೇಕು ಆಧುನಿಕ ವಿಚಾರಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಮಾತ್ರ ತುಂಬಾ ಜಾಗ್ರತೆ ಅಗತ್ಯ ಏಕೆಂದರೆ ಪುರಾಣ ವಿಚಾರಗಳ ಮೂಲ ಸ್ವರೂಪಕ್ಕೇ ಧಕ್ಕೆ ತರುವ ಕಾರ್ಯಕ್ಕೆ ಅದು ಎಂದೂ ಪ್ರೇರಕವಾಗಿರಬಾರದು

ಯಕ್ಷಗಾನದಲ್ಲಿ ಸುಧಾರಣೆಯೆಂಬುದೊಂದು ವಿವಾದಾಸ್ಪದವಾದ ವಿಷಯ ಕಾಲಗತಿಗೆ ತಲ್ಲಯಿಸಿ ಆಗುತ್ತಿರುವ ಕೆಲ ಸುಧಾರಣೆಗಳೇನೋ ಸ್ವಾಗತಾರ್ಹವೇ! ಆದರೆ ಯಾವ ಸುಧಾರಣೆಯಾದರೂ, ಇದು ಮೊದಲೇ ಸೂಚಿಸಿದಂತೆ, ಯಕ್ಷಗಾನದ ಮೂಲ ಸ್ವರೂಪವನ್ನು ಮರೆಮಾಡುವಂತಿರಬಾರದು ಉದಾಹರಣೆಗೆ ಯಕ್ಷಗಾನದ್ದೇ ಆದ ಧಾಟಿಯಲ್ಲಿ ಹಾಡುತ್ತಿದ್ದ ಹಾಡುವಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಸಂಗೀತವು ಸೇರಿಕೊಂಡುದು ಮೆಚ್ಚತಕ್ಕದ್ದೇ ಹಾಗೆಂದು ಅದು ಸಂಪೂರ್ಣ ಸಂಗೀತವೇ ಆದರೆ, ಸಹನೀಯವಲ್ಲ—ಭೂಷಣವೂ ಅಲ್ಲ. ಈ ದಿಶೆಯಲ್ಲಿ ಜೆನ್ನಾಗಿ ವಿಮರ್ಶಿಸಿ, ಸಂಚಾರಕರು ಮುಂದುವರಿದರೇನೇ ಯಕ್ಷಗಾನದ ಮೇಲ್ಮೈ ಉಳಿದೀತು

ನಮಗಿಂದು ಸುಧಾರಕರಂತೆ, ಸಂಶೋಧಕರೂ ಅಗತ್ಯ ನಿಯಮಿತವಾದ ರೀತಿಯಿಂದಾಗುವ ವೈಜ್ಞಾನಿಕ ಸುಧಾರಣೆಯೊಂದಿಗೆ, ಯಕ್ಷಗಾನದಲ್ಲಿ ಇತಿಹಾಸ ಶೋಧನೆಯೂ ಆಗಬೇಕಾಗಿದೆ. ಹಳೆಯ ಪುರಾಣಗಳನ್ನೂ ಪ್ರಸಂಗಗಳನ್ನೂ, ಹುಡುಕಿತೆಗೆದುದಾದರೆ, ಯಕ್ಷಗಾನ ಪ್ರಪಂಚದ ವಿಸ್ತಾರವೂ ಮಹತ್ವವೂ ಹೆಚ್ಚಾಗದಿರದು.

ಕಾಸರಗೋಡಿನ ಕನ್ನಡಿಗರಾದ ನಾವು ದುರ್ದೈವದಿಂದ ಕೇರಳಕ್ಕೆ ಸೇರಬೇಕಾಗಿಬಂದಿದೆ ಇಂದು ಕೇರಳದಲ್ಲಿ ಕನ್ನಡದ ಕೇತನವನ್ನು ಎತ್ತಿಹಿಡಿಯುವುಲ್ಲಿ ಕಲೆಯೊಂದಿದ್ದರೆ—ಅದು ಯಕ್ಷಗಾನ ಎಂತಲೇ ಯಕ್ಷಗಾನದ ಔಚಿತ್ಯ ಹೆಚ್ಚಿದೆ. ಇಂದು 'ಜಂಗಸಂಘ'ದ ಸೆರೆಮನೆಯಲ್ಲಿದ್ದ ಎಂಭತ್ತಾರುನುಂದಿ ಕೃಷ್ಣಯ್ಯ ಕುಲೋತ್ತಂಸರಂತೆ, ಕನ್ನಡಿಗರಾದ ನಾವು ಕೇರಳಿಗರ ಒಲ್ಲದ ಒಡೆತನದ ಬಂಧನದಲ್ಲಿರಬೇಕಾಗಿದೆ ಆದರೆ ಶ್ರೀಕೃಷ್ಣನ ಮುರಲಿಕ ಅಂದು ಅನ್ಯಾಯದ ಅಂತ್ಯವಾದಂತೆ, ಇಂದಾದರೂ ನಮಗೆ ನ್ಯಾಯದ ದೊರೆಯಲಾರದು ಎಂದೆನ್ನಲು ಸಾಧ್ಯವಿಲ್ಲ — ಹೇಗೂ ಇರಲಿ, ಒಂದುವೇಳೆ ಕೇರಳಿಗರು ಕಾಸರಗೋಡಿನಲ್ಲಿ ಕನ್ನಡಕ್ಕೆ ಪ್ರಾಧಾನ್ಯವನ್ನೇ ನೀಡುವುದಿಲ್ಲವಾದರೂ, ಯಕ್ಷಗಾನದ ಮೂಲಕ ಕನ್ನಡ ತನವನ್ನು ನಮಗೆ ಉಳಿಸಿಕೊಳ್ಳುವುದು ಸಾಧ್ಯವಿದೆ. ಆದುದರಿಂದಲೇ ಕನ್ನಡ ನುಡಿ ಬೆಳೆಯಬೇಕಾದರೆ,—ಕನ್ನಡದ ಕುಡಿ ಚಿಗುರಬೇಕಾದರೆ ನಾವು ಯಕ್ಷಗಾನಕ್ಕೆ ಪ್ರೋತ್ಸಾಹವನ್ನು ನೀಡಬೇಕು.

(ಬನಾರಿ ಯಕ್ಷಗಾನ ಸಂಘದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಾರ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗಿ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಸಂಡು ಪುಸ್ತಕ, ರಶೀದಿಗಳು, ಕೋರ್ಟ್‌ಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು. ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಪ್ರಧಾನ ಕಚೇರಿ ಉಡುಪಿ ಸ್ಥಾಪನೆ 1925

ಯೋಜನೆಯ ಆವಶ್ಯಕತೆ

ಒಂದು ರಾಷ್ಟ್ರದ ಅಭಿವೃದ್ಧಿಯನ್ನು ಕ್ರಮಬದ್ಧವಾಗಿ, ಸುವ್ಯವಸ್ಥಿತವಾಗಿ, ಸಕಾಲಿಕವಾಗಿ ಸಾಧಿಸಲು ಯೋಜನೆಯನ್ನು ರೂಪಿಸಿಕೊಳ್ಳುವಂತೆ—

ಒಂದು ವ್ಯಕ್ತಿಯು ತನ್ನ ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೂ ಒಂದು ಆರ್ಥಿಕ ಯೋಜನೆಯನ್ನು ಅನುಸರಿಸಬೇಕು

ನೀವು ತಿಂಗಳಿಗೊಮ್ಮೆ ಆದಾಯವನ್ನೋ ಸಂಬಳವನ್ನೋ ಪಡೆಯುವವರಾದರೆ

ನಿಮಗಾಗಿ ಸಿಂಡಿಕೇಟ್ ಬೇಂಕಿನಲ್ಲಿ

ಕ್ಯುಮುಲೇಟಿವ್

ರೇವಣಾತಿ ಯೋಜನೆಯಿದೆ.

ತಿಂಗಳಿಗೆ ನಿಮ್ಮ ಶಕ್ತ್ಯಾನುಸಾರ ಸ್ವಲ್ಪ ಮೊತ್ತವನ್ನು ಉಳಿಸಿ, ನಿಮ್ಮ ಆರ್ಥಿಕ ಯೋಜನೆಯಿಂದ ಪ್ರಗತಿಯನ್ನು ಪಡೆಯಿರಿ.

The Canara Industrial & Banking Syndicate Ltd., Udipi.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ ಎ.)

ಸಾಮಾನ್ಯ ರೋಗಗಳು
(ಡಾ ಕೆ ಎಲ್ ಪಿತಾಳ, ಎಂ ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್ ಎಲ್.ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸನಾತನ ಸಂಸ್ಕೃತಿಯ ಪುನರುಜ್ಜೀವನ—

ಸಮಾಜ ಶಿಕ್ಷಣಕಲೆ - ಯಕ್ಷಗಾನ

ಶ್ರೀ. ಎಸ್. ಕೇಶವ ಭಟ್, ಬಿ. ಎ, ಬಿ ಎಲ್.

ಇತರ ಯಾವುದೇ ಭಾಷೆಯನ್ನಾಡುವ ಜನತೆಗೂ ಸಿಗಲಾರದ ಅನುಪಮ ಆನಂದವೂ, ಉತ್ಸಾಹವೂ, ಜ್ಞಾನ ಭೋಧೆಯೂ ದಕ್ಷಿಣ ಕನ್ನಡದ ಜನರಿಗೆ ಯಕ್ಷಗಾನದ ಮೂಲಕ ದೊರೆಯುತ್ತಿದೆಯೆಂಬುದು ಅಭಿಮಾನದ ವಿಚಾರವಾಗಿದೆ. ನೂರಾರು ವರ್ಷಗಳ ಹಿಂದೆ-ನೃಪತುಂಗ ನಾಗವರ್ಮ ಮೊದಲಾದವರ ಕಾಲದಲ್ಲೂ ಯಕ್ಷಗಾನವು ಬಳಕೆಯಲ್ಲಿತ್ತೆಂಬ ಅಭಿಪ್ರಾಯವಿದೆಯಾದರೂ ಯಕ್ಷಗಾನಕ್ಕೆ ಸರಿಯಾದ ಹಾಗೂ ಸ್ಪಷ್ಟವಾದ ಸ್ವರೂಪವು ಗಮನಿಸಿದುದು ಪಾರ್ತಿ ಸುಬ್ಬನ ನಂತರವೇ ಸರಿ! ಅವನು ಯಕ್ಷಗಾನ ಪ್ರಸಂಗಗಳನ್ನು ರಚಿಸಿ ಪಂಡಿತೋತ್ತಮರಿಗೇ ಮೀಸಲಾಗಿದ್ದ ವೇದಪುರಾಣಗಳ ಅರ್ಥವನ್ನು ಸಾಮಾನ್ಯರಿಗೂ ಸುಲಭದಲ್ಲಿ ತಿಳಿಯುವಂತೆ ಮಾಡಿ ನೂತನ ಪಥವೊಂದನ್ನು ದಿಗ್ದರ್ಶಿಸಿದನು. ಈ ಸೃಷ್ಟಿಯಿಂದ ಕನ್ನಡ ನಾಡಿಗಾದ ಪಾರ್ತಿಸುಬ್ಬನ ಸೇವೆ ಸದಾ ಸ್ಮರಣೀಯ.

ಯಕ್ಷಗಾನದ ಮಹತ್ವವು ಅವರ್ಣನೀಯವಾದುದು. ಇದು ಸಾಹಿತ್ಯ ಸಂಗೀತಗಳ ಸಮರಸ ಸಮ್ಮಿಲನ! ಭಾಷೆ, ರಸ ಮತ್ತು ಪುರಾಣ ಜ್ಞಾನಗಳ ಬಿತ್ತರಣೆಗೆ ಏಕ ಮೇವ ಸಾಧನ! ಒಳಿತು ಕೆಡುಕುಗಳ ಮಿಶ್ರಣದಿಂದ ಒಳಿತನ್ನು ಅರಿಸಿ ನ್ಯಾಯ ಮಾರ್ಗದಲ್ಲಿ ಜೀವಿಸುವುದಕ್ಕೆ ಪ್ರೇರಕವಾಗುವಂತೆ ಮನುಷ್ಯರಿಗೆ ಆದರ್ಶ ಜೀವಿಗಳ ನಿತ್ಯ ಜೀವನದ ಸತ್ಯ ಚಿತ್ರಣವನ್ನು ನೀಡಬಲ್ಲ-ತನ್ಮೂಲಕ ನೀತಿಯ ನಿರ್ದೇಶನವನ್ನು ಮಾಡಬಲ್ಲ ಮಹತ್ಶಕ್ತಿ ಯಕ್ಷಗಾನಕ್ಕಿರುವುದರಿಂದಲೇ ಜನಜೀವನದಲ್ಲಿ ಅದರ ಪಾತ್ರವಿಸ್ತಾರ ಹೆಚ್ಚಿದೆ. ಶಾಲೇಜು ವಿದ್ಯಾಭ್ಯಾಸದಿಂದಲೋ ಎಂಬಂತೆ ನಮ್ಮ ಯುವ ಜನಾಂಗವು ಪುರಾಣ ಪುಣ್ಯ ಪುರುಷರ ಪವಿತ್ರ ಜೀವನವನ್ನು ಮರೆತು ಪಾಶ್ಚಾತ್ಯ ಜನತೆಯ ಅಂಧಾನುಕರಣೆಗೆ ತೊಡಗಿ ಹಿಂದೂ ಸಂಸ್ಕೃತಿಯು ಗ್ಲಾನಿ ಹೊಂದುತ್ತಿರುವ ಈ ಕಾಲದಲ್ಲಿ ಜನಜಾಗೃತಿಯ ನಿತ್ತು ನಮ್ಮ ಸನಾತನ ಸಂಸ್ಕೃತಿಯ ಪುನರ್ಜೀವನವನ್ನು ಸಾಧಿಸುವುದು ಯಕ್ಷಗಾನದಂತಹ ಜಾನಪದವೂ, ಜ್ಞಾನಪ್ರದವೂ ಆದ ಕಲೆಯಿಂದಲೇ ಸಾಧ್ಯವೆಂಬುದು ಮರೆಯಲಾರದ ಮಹತ್ವದ ವಿಚಾರವಾಗಿದೆ. ಯುಗಪುರುಷರು ಎತ್ತಿ ಆಡಿದ ಬೇರೆ ಬೇರೆ ತತ್ವಪ್ರಣಾಳಿಗಳನ್ನು ಜನರು ಹಿಂಬಾಲಿಸುವಂತೆಸಗಿ, ಪುನರಪಿ ಸತ್ಯಯುಗದ ಕನಸು ನನಸಾಗುವಂತೆ ಮಾಡುವುದು ಯಕ್ಷಗಾನದಿಂದ ಪಾತ್ರವೇ ಸಾಧ್ಯವೆಂದು ಹೇಳಿದರೆ ಹೆಚ್ಚಾಗಲಾರದು

ಯಕ್ಷಗಾನದಲ್ಲಿ ಮುಖ್ಯವಾಗಿ ಶಾಳ ಮದ್ದ , ನಾಟಕ, ಬಯಲಾಟಗಳೆಂಬ ಮೂರು ವಿಭಾಗಗಳಿವೆ. ಇವು ಒಂದೊಂದೂ, ಒಂದಲ್ಲೊಂದು ರೀತಿಯಿಂದ ಜನತೆಗೆ ನೀತಿಬೋಧೆಯನ್ನು ಮಾಡುತ್ತವೆ ಮೂರರಲ್ಲಿಯೂ ಸಾಹಿತ್ಯ ಸಂಗೀತಗಳ ಸಮಾವೇಶಗೊಂಡಿವೆ. ಕಾದಂಬರಿ ಕಾವ್ಯಗಳಂತೆ, ವಿಷಯವನ್ನು ಕೇವಲ ಶಬ್ದಗಳಿಂದ ಮಾತ್ರ ನಿರೂಪಿಸದೆ ಹಾವ ಭಾವ ತಾಳಮೇಳಗಳೊಂದಿಗೆ, ಪ್ರದರ್ಶನ, ಕಣ್ಣಿದಿರು ಕಂಡಿರಿಸಿ ಕಾಣಿಸುವುದೇ ಯಕ್ಷಗಾನದ ಈ ಮೂರೂ ವಿಭಾಗಗಳಲ್ಲಿ ಕಂಡುಬರುವ ವೈಶಿಷ್ಟ್ಯವಾಗಿದೆ ಇನ್ನೂ ಸರಳವಾಗಿ ಹೇಳುವುದಿದ್ದರೆ ಯಕ್ಷಗಾನವು ಕಥೆ ಕಾದಂಬರಿಗಳಿಗಿಂತಲೂ ಹೆಚ್ಚು ಹೃದಯ ಸ್ಪರ್ಶಿಯಾಗಿದೆ ಎಂತಲೇ ಅದು ಬೀರುವ ಪರಿಣಾಮವು ಅಚೋಧ ಸೂರ್ಯಕವೂ ಅದ್ಭುತವೂ ಆಗಿದೆ.

ಆದರೆ ಪಡ್ಡದ ಯೋಗ್ಯತೆಯು ಅದನ್ನು ಉಪಯೋಗಿಸುವ ಕೈಯಲ್ಲಿದೆ—ಎಂಬ ಮಾತು ನಿಜಕ್ಕೂ ಸತ್ಯ. ಯಕ್ಷಗಾನದ ಸದುದ್ದೇಶವು ಸಾರ್ಥಕವಾಗಬೇಕಾದರೆ ಪಾತ್ರದಾರಿಗಳು ಒಳ್ಳೆಯ ಪ್ರವೀಣರಾಗಿರಬೇಕು ತಮ್ಮ ಆತ್ಮ ತೃಪ್ತಿಯೊಂದಿಗೆ ಶ್ರೋತೃವೃಂದದ ತೃಪ್ತಿಯೂ ಅವರ ಗುರಿಯಾಗಿರಬೇಕು ಕೇವಲ ಪಂಡಿತರಿಗೆ ಮಾತ್ರ ಅರ್ಥವಾಗುವಂತೆ ಕಾವ್ಯಮಯ ಶೈಲಿಯಿಂದ ಮಾತನಾಡುವುದಕ್ಕಿಂತಲೂ, ಸರಳವಾಗಿ—ಸಾಮಾನ್ಯರಿಗೂ ತಿಳಿಯುವಂತೆ ಅರ್ಥ ವಿವರಣೆ ಮಾಡುವುದು ಯೋಗ್ಯ ಎಂದಮಾತ್ರಕ್ಕೆ ಮನೆಮಾತಿನ ಅಥವಾ ಗ್ರಾಮ್ಯ ಶಬ್ದಗಳನ್ನು ಉಪಯೋಗಿಸಿ, ಅರ್ಥದ ಘನತೆಗೆ ಕುಂದನ್ನೀಯಬೇಕೆಂದು ಅರ್ಥವಲ್ಲ. ಗಮನೀಯ ವಿಚಾರವೆಂದರೆ, ಆಯಾ ಪಾತ್ರಕ್ಕನುಗುಣವಾಗಿ ರಸಸೃಷ್ಟಿಯೂ, ಪಾತ್ರ ಪುಷ್ಟಿಯೂ ಆಗುವಂತಿರಬೇಕು. ಪಾತ್ರ ಗೌರವವನ್ನು ಕಾಯ್ದುಕೊಳ್ಳುವುದು, ಪಾತ್ರಧಾರಿಯ ಪ್ರಮುಖ ಕರ್ತವ್ಯವಾಗಿದೆ ಭೀಮನೊಡನೆ ಭೀಮನಾಗಿ—ರಾಮನೊಡನೆ ರಾಮನಾಗಿ ಅರ್ಥ ಹೇಳುವ ಅಂತಃ ಚೈತನ್ಯ ಕಲಾವಿದರಿಗಿದ್ದರೇನೇ ಕಲೆಯ ಕಳೆಯೇರಬಹುದು ದೊರತು, ವಾದದ ಭರದಲ್ಲಿ ಪಾತ್ರದ ಹಾದಿ ತಪ್ಪಿ ಮಾತನಾಡುವುದಿದ್ದರೆ, ಅದು ಕಲೆಯ ಕೊಲೆಯೇ ಸರಿ! ಪೌರಾಣಿಕ ತತ್ವ ವಿಚಾರಗಳನ್ನು ಪಾತ್ರಧಾರಿಯು ಚೆನ್ನಾಗಿ ತಿಳಿದಿರಬೇಕು. ಸಂದರ್ಭ ಸನ್ನಿವೇಶಗಳನ್ನು ಸಜೀವವಾಗಿ ಸೃಷ್ಟಿಸುವ ಸಾಮರ್ಥ್ಯವೂ ಅವನಿಗಿರಬೇಕು. ವೈಯ್ಯಕ್ತಿಕ ವಾದವು ಸಾಧುವಲ್ಲದಿದ್ದರೂ, ಕಲಾವಿದನಲ್ಲಿ ವಿಮರ್ಶಾತ್ಮಕವಾದ ವಿಚಾರ ವಿನಿಮಯ ಮಾಡಬಲ್ಲ ವಿವೇಕವಿಲ್ಲದಿದ್ದರೆ, ಪ್ರಯೋಜನವಿಲ್ಲ ಇವೆಲ್ಲಕ್ಕಿಂತಲೂ ಮುಖ್ಯವಾಗಿ ಹಳೆ ಜೀವನದಲ್ಲಿ ಹೊಸ ಬಾಳವನ್ನು ತುಂಬುವ ಕಲಾತ್ಮಕ ಪ್ರತಿಭೆ ಕಲಾವಿದನಿಗೆ—ಅಗತ್ಯ ಪೌರಾಣಿಕ ವಿಚಾರಗಳೊಂದಿಗೆ ಆಧುನಿಕ ವಿಚಾರಗಳನ್ನು ಅಳವಡಿಸಿಕೊಂಡು ವಿಚಾರ ಮಥನವನ್ನೆಸಗುವುದರಲ್ಲೇ ಪಾತ್ರಧಾರಿಯ ಹಿರಿಮೆಯಡಗಿದೆ ಕೇವಲ ಹಳಸಿದ ಹಳತನ್ನೇ ಇದ್ದಕ್ಕಿದ್ದಂತೆ ಜನತೆಯ ಮುಂದಿಡುವವನು ಖಂಡಿತವಾಗಿಯೂ ಯೋಗ್ಯ ಕಲಾವಿದನೆಂದು ಕರೆಸಿಕೊಳ್ಳಲಾರ ನಿಜವಾದ ಕಲಾವಿದನಲ್ಲಿ ಹೊಸ ವಿಚಾರಗಳೆಡೆಗೆ ಕ್ಷಕಿರಣವನ್ನು ಬೀರಬಲ್ಲ ಸ್ವಯಂ ಸ್ಫೂರ್ತಿಯಿರಬೇಕು. ಆಧುನಿಕ ವಿಚಾರಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಪಾತ್ರ ಶುದ್ಧಾ ಜಾಗ್ರತೆ ಅಗತ್ಯ ಏಕೆಂದರೆ ಪುರಾಣ ವಿಚಾರಗಳ ಮೂಲ ಸ್ವರೂಪಕ್ಕೇ ದಕ್ಕೆ ತರುವ ಕಾರ್ಯಕ್ಕೆ ಅದು ಎಂದೂ ಪ್ರೇರಕವಾಗಿರಬಾರದು.

'ಯಕ್ಷಗಾನದಲ್ಲಿ ಸುಧಾರಣೆ'ಯೆಂಬುದೊಂದು ವಿವಾದಾಸ್ಪದವಾದ ವಿಷಯ ಕಾಲಗತಿಗೆ ತಕ್ಕಂತೆ ಸುಧಾರಣೆಗಳೇನೋ ಸ್ವಾಗತಾರ್ಹವೇ! ಆದರೆ ಯಾವ ಸುಧಾರಣೆಯಾದರೂ, ಇದು ಮೊದಲೇ ಸೂಚಿಸಿದಂತೆ, ಯಕ್ಷಗಾನದ ಮೂಲ ಸ್ವರೂಪವನ್ನು ಮರೆಮಾಡುವಂತಿರಬಾರದು ಉದಾಹರಣೆಗೆ ಯಕ್ಷಗಾನದ್ದೇ ಆದ ಧಾಟಿಯಲ್ಲಿ ಹಾಡುತಿದ್ದ ಹಾಡುಗಳೆಯಲ್ಲಿ ಸ್ವಲ್ಪ ಮಟ್ಟಿಗೆ ಸಂಗೀತವು ಸೇರಿಕೊಂಡುದು ಮೆಚ್ಚತಕ್ಕದ್ದೇ. ಹಾಗೆಂದು ಅದು ಸಂಪೂರ್ಣ ಸಂಗೀತವೇ ಆದರೆ, ಸಜೀವಿಯು ವಲ್ಲ—ಭೂಷಣವೂ ಅಲ್ಲ. ಈ ದಿಶೆಯಲ್ಲಿ ಚೆನ್ನಾಗಿ ವಿಮರ್ಶಿಸಿ, ಸುಧಾರಕರು ಮುಂದುವರಿದರೇನೇ ಯಕ್ಷಗಾನದ ಮೇಲ್ಮೈ ಉಳಿದೀತು.

ನಮಗಿಂದು ಸುಧಾರಕರಂತೆ, ಸಂಶೋಧಕರೂ ಅಗತ್ಯ ನಿಮಿತ್ತವಾದ ರೀತಿಯಿಂದಾಗುವ 'ವೈಜ್ಞಾನಿಕ ಸುಧಾರಣೆ'ಯೊಂದಿಗೆ, ಯಕ್ಷಗಾನದಲ್ಲಿ ಇತಿಹಾಸ ಶೋಧನೆಯೂ ಆಗಬೇಕಾಗಿದೆ. ಹಳೆಯ ಪುರಾಣಗಳನ್ನೂ ಪ್ರಸಂಗಗಳನ್ನೂ, ಹುಡುಕಿ ತೆಗೆದುಹಾದರೆ, ಯಕ್ಷಗಾನ ಪ್ರಸಂಚದ ವಿಸ್ತಾರವೂ ಮಹತ್ವವೂ ಹೆಚ್ಚಾಗದಿರದು.

ಕಾಸರಗೋಡಿನ ಕನ್ನಡಿಗರಾದ ನಾವು ದುರ್ದೈವದಿಂದ ಕೇರಳಕ್ಕೆ ಸೇರಬೇಕಾಗಿ ಬಂದಿದೆ ಇಂದು ಕೇರಳದಲ್ಲಿ ಕನ್ನಡದ ಕೇತನವನ್ನು ಎತ್ತಿಹಿಡಿಯಬಲ್ಲ ಕಲೆಯೊಂದಿದ್ದರೆ—ಅದು ಯಕ್ಷಗಾನ ಎಂತಲೇ ಯಕ್ಷಗಾನದ ಔಚಿತ್ಯ ಹೆಚ್ಚಿದೆ. ಇಂದು 'ಜನಸಂಘ'ನ ಸೆರೆಮನೆಯಲ್ಲಿದ್ದ ಎಂಭತ್ತೈದು ಮಂದಿ ಕ್ಷತ್ರಿಯರು ಕುಲೋತ್ತಂಸರಂತೆ, ಕನ್ನಡಿಗರಾದ ನಾವು ಕೇರಳಿಗರ ಒಟ್ಟಿದ ಒಡೆತನದ ಬಂಧನದಲ್ಲಿರಬೇಕಾಗಿದೆ. ಆದರೆ ಶ್ರೀಕೃಷ್ಣನ ಮೂಲಕ ಅಂದು ಅನ್ಯಾಯದ ಅಂತ್ಯವಾದಂತೆ, ಇಂದಾದರೂ ನಮಗೆ ನ್ಯಾಯವನ್ನು ದೊರೆಯಲಾರದು ಎಂದೆನ್ನಲು ಸಾಧ್ಯವಿಲ್ಲ.—ಹೇಗೂ ಇರಲಿ; ಒಂದುವೇಳೆ ಕೇರಳಿಗರು ಕಾಸರಗೋಡಿನಲ್ಲಿ ಕನ್ನಡಕ್ಕೆ ಪ್ರಾಧಾನ್ಯವನ್ನೇ ನೀಡುವುದಿಲ್ಲವಾದರೂ, ಯಕ್ಷಗಾನದ ಮೂಲಕ ಕನ್ನಡ ತನವನ್ನು ನಮಗೆ ಉಳಿಸಿಕೊಳ್ಳುವುದು ಸಾಧ್ಯವಿದೆ. ಆದುದರಿಂದಲೇ ಕನ್ನಡ ನುಡಿ ಬೆಳೆಯಬೇಕಾದರೆ,—ಕನ್ನಡದ ಕುಡಿ ಚಿಗುರಬೇಕಾದರೆ, ನಾವು ಯಕ್ಷಗಾನಕ್ಕೆ ಪ್ರೋತ್ಸಾಹವನ್ನು ನೀಡಬೇಕು

(ಬಸರಿ ಯಕ್ಷಗಾನ ಸಂಘದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಾರ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗಣಿ ಬೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಪ್ರಧಾನ ಕಚೇರಿ. ಉಡುಪಿ. ಸ್ಥಾಪನೆ 1925.

ಯೋಜನೆಯ ಆವಶ್ಯಕತೆ

ಒಂದು ರಾಷ್ಟ್ರದ ಅಭಿವೃದ್ಧಿಯನ್ನು ಕ್ರಮಬದ್ಧವಾಗಿ, ಸುವ್ಯವಸ್ಥಿತವಾಗಿ, ಸಕಾಲಿಕವಾಗಿ ಸಾಧಿಸಲು ಯೋಜನೆಯನ್ನು ರೂಪಿಸಿಕೊಳ್ಳುವಂತೆ—

ಒಂದು ವ್ಯಕ್ತಿಯು ತನ್ನ ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೂ ಒಂದು ಆರ್ಥಿಕ ಯೋಜನೆಯನ್ನು ಅನುಸರಿಸಬೇಕು.

ನೀವು ತಿಂಗಳಿಗೊಮ್ಮೆ ಆದಾಯವನ್ನೋ ಸಂಬಳವನ್ನೋ ಪಡೆಯುವವರಾದರೆ

ನಿಮಗಾಗಿ ಸಿಂಡಿಕೇಟ್ ಬೇಂಕಿನಲ್ಲಿ

ಕ್ಯುಮುಲೇಟಿವ್

ರೇವಣಾತಿ ಯೋಜನೆಯಿದೆ

ತಿಂಗಳಿಗೆ ನಿಮ್ಮ ಪರಿಸ್ಥಿತ್ಯನುಸಾರ ಸ್ವಲ್ಪ ಮೊತ್ತವನ್ನು ಉಳಿಸಿ, ನಿಮ್ಮ ಆರ್ಥಿಕ ಯೋಜನೆಯಿಂದ ಪ್ರಗತಿಯನ್ನು ಪಡೆಯಿರಿ.

The Canara Industrial & Banking Syndicate Ltd., Udipi.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ ಎ.)

ಸಾಮಾನ್ಯ ರೋಗಗಳು
(ಡಾ. ಕೆ ಎಲ್ ಪಿತಾಳ, ಎಂ. ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಂ. ಎಲ್. ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಹಿತ್ಯದ ಸಿಂಹಾವಲೋಕನ–

ಕನ್ನಡದಲ್ಲಿ ಅಲಂಕಾರ ಶಾಸ್ತ್ರಗಳು

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾಖಪಟ್ಟಣ.

ಅಲಂಕಾರ ಶಾಸ್ತ್ರ

ಸಾಹಿತ್ಯ ಕೃತಿಗಳಿಗೆ ವ್ಯಾಕರಣ ಶಾಸ್ತ್ರವೊಂದು ಶೃಂಖಲೆಯಂತಿದ್ದರೆ ಅಲಂಕಾರ ಶಾಸ್ತ್ರವು ಆಲಂಕಾರವಾಗಿದೆ. ಕೃತಿಗಳಿಗೆ ಇಬ್ಬಗೆಯ ಅಲಂಕಾರಗಳಿವೆಯೆನ್ನುತ್ತಾರೆ. ಶಬ್ದಾಲಂಕಾರಗಳು ಕಾಲಕಡಗ, ಕೈಯ ಬಳೆಗಳಂತೆ ಕೇವಲ ಶಬ್ದವನ್ನು ಮಾಡುವಂತಹವು ಮತ್ತು ತನ್ಮೂಲಕ ಅಲಂಕಾರವಿದೆ ಎಂದು ತಿಳಿಸಿ ಹೇಳುವುವು. ಇನ್ನು ಕೃತಿಯನ್ನು ಓದಿದರ ಅರ್ಥವನ್ನು ತಿಳಿಯದೆ ಅಲಂಕಾರಗಳನ್ನು ಗುರುತಿಸಲಾರದೆಡೆಗಳಲ್ಲಿ ಹುದುಗಿರುವ ಅಲಂಕಾರಗಳಿಗೆ ಅರ್ಥಾಲಂಕಾರಗಳೆಂದು ಹೇಳುತ್ತಾರೆ. ಇವು ಕಾವ್ಯನಾರಿಯ ಕಂಠಾಭರಣದಂತೆಯಿರುವುದು. ಸಾಮಾನ್ಯವಾಗಿ ಒಂದು ಉತ್ತಮ ಕೃತಿಯಲ್ಲಿ ಶಬ್ದಾಲಂಕಾರಗಳೆಲ್ಲವೂ ಮಿತಪ್ರಮಾಣದಲ್ಲಿ ಅಳವಡಿಸಿಕೊಂಡಿರುತ್ತವೆ. ಆದರೂ ಆಯಾಯಾ ಕವಿಯ ವ್ಯಕ್ತಿತ್ವ, ಅಭಿರುಚಿ ಮತ್ತು ವ್ಯುತ್ಪತ್ತಿಗಳಿಗನುಸಾರವಾಗಿ ಒಂದೊಂದು ಕೃತಿಯಲ್ಲಿ ಒಂದೊಂದು ಬಗೆಯ ಪ್ರಾಧಾನ್ಯವನ್ನು ಪಡೆಯುವುದು ಸ್ವಾಭಾವಿಕವೆ ಸರಿ.

ಶಬ್ದಾಲಂಕಾರಗಳ ಸಂಖ್ಯೆ ಹೇಗಿದ್ದರೂ ಮಿತಿಯನ್ನು ಮೀರಿ ಹೋಗಿಲ್ಲ. ಆದರೆ, ಅರ್ಥಾಲಂಕಾರಗಳು ೧೦೦ಕ್ಕೂ ಮಿಕ್ಕಿಹೋಗಿವೆ. ಇವುಗಳೊಂದಿಗೆ ರಸವದಲಂಕಾರಗಳೂ ಸೇರಿದರೆ, ಆಗ ಒಟ್ಟು ಉಪಭೇದಗಳು ಸೇರಿ ಸುಮಾರು ೨೦೦ಕ್ಕೂ ಮಿಕ್ಕಿದ ಅಲಂಕಾರಗಳಿರುವುವು.

ಕಾವ್ಯಗಳಿಗೆ ಸೌಂದರ್ಯವನ್ನು ತಂದೀಯುವ ಅರ್ಥ ಹಾಗೂ ಶಬ್ದಗುಣಗಳು, ರೀತಿ ಅಥವಾ ಮಾರ್ಗಗಳು, ಶಯ್ಯೆ ಮತ್ತು ಪಾಕಗಳೂ ಈ ಅಲಂಕಾರ ಶಾಸ್ತ್ರದಲ್ಲಿಯೇ ಸೇರಿರುತ್ತವೆ. ಕಾವ್ಯಗಳಲ್ಲಿ ಕುಂದನ್ನು ಹೊತ್ತುತರುವ ದೋಷಗಳೂ ವಿದೂರವಿರಬೇಕಾಗಿದ್ದು ಇವುಗಳನ್ನು ಎತ್ತಿ ಹೇಳುವ ಪ್ರಕರಣವೂ ಈ ಶಾಸ್ತ್ರದಲ್ಲಿ ಸೇರಿರುತ್ತದೆ.

ಕವಿರಾಜ ಮಾರ್ಗ

ಕನ್ನಡದಲ್ಲಿ ಅತ್ಯಂತ ಪ್ರಾಚೀನವಾದ ಅಲಂಕಾರ ಶಾಸ್ತ್ರವೆಂದರೆ, ಕವಿರಾಜ ಮಾರ್ಗ. ಕವಿಗಳು ಕಾವ್ಯ ಶ್ರೀಯದೇಗುಲವನ್ನು ಮುಟ್ಟಲು ದಾಟಬೇಕಾದ ರಾಜ ಮಾರ್ಗವನ್ನು ಇದು ಪ್ರದರ್ಶಿಸುತ್ತದೆ. ಈ ಕವಿರಾಜ ಮಾರ್ಗವನ್ನು ಕವೀಶ್ವರ, ಸಾಮಪಡಯಾಳ್ವ, ನೃಪತುಂಗ ದೊರೆ—ಈ ಮೂವರಲ್ಲಿ ಯಾಂದರೊಬ್ಬನು ಬರೆದಿರಬೇಕೆಂದು ಭಿನ್ನಾಭಿಪ್ರಾಯವೇ ಉಳಿದಿದೆ. ಈ ಗ್ರಂಥವು ದಂಡಿಯ ಕಾವ್ಯಾದರ್ಶದ ಅನುವಾದವಾಗಿದೆ. ಇದರಲ್ಲಿ ದೋಷಗಳು, ಗುಣ ಮತ್ತು ಮಾರ್ಗಗಳು, ಶಬ್ದಾಲಂಕಾರಗಳು ಮತ್ತು ಅರ್ಥಾಲಂಕಾರಗಳು ಹೇಳಲ್ಪಟ್ಟಿವೆ. ಈತನುಸುರುವ ಮೂವತ್ತಾರು ಅಲಂಕಾರಗಳಲ್ಲಿಯೇ ನವೀನರು ಹೇಳುವ ನೂರಾರು ಅಲಂಕಾರಗಳು ಅಡಕವಾಗಿನೆಯೆಂದಾಗ, ಈ ಅಲಂಕಾರ ಗ್ರಂಥವು ಎಷ್ಟು ಸಂಗ್ರಹಿತವಾಗಿದೆ ಎನ್ನುವುದು ತಿಳಿಯದಿರದು. ಕನ್ನಡದ ಹೆಚ್ಚಿನ ಶಾಸ್ತ್ರಗಳು ಸಂಸ್ಕೃತದ ಪ್ರಭಾವಕ್ಕೊಳಪಟ್ಟುದರಿಂದ ಇತರ ದ್ರಾವಿಡ ವರ್ಗದ ಭಾಷೆಗಳಂತೆಯೇ ಕನ್ನಡದಲ್ಲಿ ಯೂ ಸಂಸ್ಕೃತ ಶಾಸ್ತ್ರ ಗ್ರಂಥವನ್ನವಲಂಬಿಸಿದ ಹೊತ್ತಗೆಗಳು ಹೊರ ಬಂದುವು.

ಕವಿರಾಜ ಮಾರ್ಗವು ಕಾವ್ಯಾದರ್ಶದ ಅನುವಾದವಾದರೂ ಅದರಲ್ಲಿ ಕೆಲವೊಂದು ವ್ಯತ್ಯಾಸವಿದೆ. ಮಾರ್ಗವಿಭೇದ ಕ್ರಮದಲ್ಲಿ ವೈದರ್ಭೀ ಪಾಂಚಾಲಿ ರೀತಿಗಳನ್ನೆ ದಕ್ಷಿಣೋತ್ತರ ಮಾರ್ಗವೆಂದು ಗಣಿಸಿದನೆಂದರೂ, 'ಧ್ವನಿ'ಯನ್ನು ಅಲಂಕಾರವೆಂದು ಮೊತ್ತಮೊದಲಿಗೆ ಘೋಷಿಸಿದ ಕೀರ್ತಿಯು ಕವಿರಾಜ ಮಾರ್ಗಕಾರನಿಗೆ ಸೇರಬೇಕು. ಆನಂದ ವರ್ಧನಾಚಾರ್ಯರು ಧ್ವನಿಗೆ ಮಹತ್ವಿಕೆ ಕೊಡುವುದಕ್ಕೆ ಮೊದಲೇ ಧ್ವನಿಯ ಉಲ್ಲೇಖ ದೊರೆಯುವುದು ಕನ್ನಡನಾಡಿನಲ್ಲಿ ಹಾಗೆಯೇ ರಸಗಳಲ್ಲಿಯೂ ಒಂಭತ್ತನೆಯ ಶಾಂತರಸವನ್ನು ಸೇರಿಸಿ ಈತ ಹೇಳಿದ್ದಾನೆ. ಇವೆರಡು ಉಲ್ಲೇಖಗಳಿಗೆ ಕರ್ತೃ ಅನ್ಯೆ ಅಧಾರವನ್ನಿಟ್ಟುಕೊಂಡಿದ್ದನೆಂದು ಖಂಡಿತವಾಗಿ ಹೇಳುವುದು ಅಸಾಧ್ಯವಾದುದರಿಂದ ಕವಿರಾಜ ಮಾರ್ಗಕ್ಕೊಂದು ಮಹತ್ವದ ಸ್ಥಾನವಿದೆ. ಅದರ ಲಿಖಿತರೂಪವು ಸರಿಯಾಗಿ ಅರ್ಥವಾಗುವಂತಿಲ್ಲವಾದರೂ, ಆ ಗ್ರಂಥದ ಒಂದೊಂದೂ ಪದ್ಯದ ಅರ್ಥವಿದೇ ಎಂದು ನಿರ್ದಿಷ್ಟಗೊಳಿಸಲು ಪಂಡಿತರು ಪ್ರಯತ್ನಿಸಬೇಕು. ಈಗಿನ್ನುವಂತೆ ಒಬ್ಬೊಬ್ಬರೊಂದೊಂದು ಅರ್ಥಮಾಡುತ್ತ ಹೋದರೆ ಸತ್ಯ ಬಯಲಾಗುವುದಿಲ್ಲ.

ಕವಿರಾಜಮಾರ್ಗಕಾರನದು ಪ್ರಾಚೀನ ಉಪಲಬ್ಧ ಗ್ರಂಥವಾದುದರಿಂದ ಅದರಲ್ಲಿ ಹಲವಾರು ಉಪಯುಕ್ತ ವಿಷಯಗಳಿವೆ. ಕನ್ನಡಿಗರ ಹಿರಿಮೆ, ಪೂರ್ವಕವಿಗಳ ನಾಮಾವಳಿ ಇತ್ಯಾದಿ ಸಂಬಂಧದಲ್ಲಿ ಇಲ್ಲಿ ಉಲ್ಲೇಖಗಳಿವೆ. ಈ ಗ್ರಂಥವು ೯ನೆಯ ಶತಮಾನದ ಮಧ್ಯಾವಧಿಯಲ್ಲಿ ಹುಟ್ಟಿದ್ದೆಂಬುದು ನಿಶ್ಚಯವಿರುವುದರಿಂದ, ಆ ಕಾಲದ ಹಾಗೂ ಅದಕ್ಕೆ ಹಿಂದಿನ ಇತಿಹಾಸ ಮತ್ತು ಸಾಹಿತ್ಯಕ್ಷೇತ್ರಗಳಿಗೆ ಸಂಬಂಧಿಸಿದ ಸಲವಾರು ವಿಷಯಗಳು ನಮಗೆ ತಿಳಿಯುತ್ತವೆ. ಕವಿಯು ಕೇವಲ ದಂಡಿಯ ಅನುವಾದವನ್ನು ಮಾತ್ರ ಮಾಡದೆ ಕೆಲವೆಡೆ ಸ್ವತಂತ್ರ ಧೋರಣೆಯನ್ನೂ ವಹಿಸಿರುವುದುಂಟು.

ಕಾವ್ಯಾವಲೋಕನ

ಎರಡನೆಯ ನಾಗವರ್ಮನು ಕಾವ್ಯಾವಲೋಕನವನ್ನು ಬರೆದಿದ್ದಾನೆ. ಈತನು ಗಿಳಿಯರ ಸುಮಾರಿಗೆ ಜಗದೇಕನೆಂಬ ಆರಸನಲ್ಲಿ ಕಟಕೋಪಾಧ್ಯಾಯನಾಗಿದ್ದನು. ಪ್ರಸಿದ್ಧ ಕವಿ ಜನ್ನನಿಗೂ ಉಪಾಧ್ಯಾಯನಾಗಿದ್ದನು. ಕಾವ್ಯಾವಲೋಕನದಲ್ಲಿ ಐದು ಅಧಿಕರಣಗಳಿವೆ. ಶಬ್ದಸ್ಮೃತಿಯೆಂಬುದು ಕನ್ನಡ ವ್ಯಾಕರಣವನ್ನು ಸಂಕ್ಷೇಪವಾಗಿ ಕಂದ ಸೂತ್ರಗಳಿಂದ ನಿರೂಪಿಸಿರುವುದು. ಕಾವ್ಯಮಲವ್ಯಾವೃತ್ತಿ ನಿರ್ಣಯ ಪ್ರಕರಣದಲ್ಲಿ ಕಾವ್ಯದೋಷಗಳು ಹೇಳಲ್ಪಟ್ಟಿವೆ, ಮೂರನೆಯದಾದ ಗುಣವಿವೇಕಾಧಿಕರಣದಲ್ಲಿ ಹತ್ತು ಗುಣಗಳು, ಶಬ್ದಾಲಂಕಾರ ಮತ್ತು ಅರ್ಥಾಲಂಕಾರ (೬೦)ಗಳನ್ನೂ ರೀತಿ ಕ್ರಮ ರಸನಿರೂಪಣೆಯಲ್ಲಿ ಮೂರು ರೀತಿಗಳು, ಒಂಭತ್ತು ರಸಗಳನ್ನು ಹೇಳುತ್ತಾನೆ. ಕೊನೆಯದಾದ ಕವಿಸಮಯಾಧಿಕರಣದಲ್ಲಿ ಅಸದಖ್ಯಾತಿ, ಸದಕೀರ್ತನ, ನಿಯಮ ಮತ್ತು ಐಕ್ಯಗಳೆಂಬ ನಾಲ್ಕು ವಿಭಾಗಗಳನ್ನು ತಿಳಿಸುತ್ತಾನೆ. ಕವಿಸಮಯವನ್ನು ತಿಳಿಸುವ ಮೊತ್ತಮೊದಲಿನ ಸಂಸ್ಕೃತ ಅಲಂಕಾರ ಶಾಸ್ತ್ರಗ್ರಂಥವು ಕೇವಲ ಚಂದ್ರನ ಕಾವ್ಯಾನುಶಾಸನ. ಇದು ೧೧೪೦ರಲ್ಲಿ ಬರೆಯಲ್ಪಟ್ಟಿರುವುದರಿಂದ, ನಾಗವರ್ಮನು ಅತನಿಂದ ಸ್ಫೂರ್ತಿಪಡೆದನೆಂದು ಹೇಳುವುದು ಸಮಂಜಸವಲ್ಲ. ಹಾಗಾಗಿ, ಕನ್ನಡ ಅಲಂಕಾರ ಶಾಸ್ತ್ರಕ್ಕೇನೇ ನಾಗವರ್ಮನದು ಒಂದು ಹೊಸ ಕಾಣಿಕೆ. ಈತನ ನಂತರದವರಾರೂ ಕವಿಸಮಯವನ್ನು ವಿವೇಚಿಸಿಲ್ಲ. ಈ ಕವಿಸಮಯಗಳಿಗೆ ಅಲಂಕಾರಗಳೇ ಮೂಲವೆಂಬ ಭಾವನೆಯಿಂದ ಮುಂದಿನವರು ಅದನ್ನು ಕೈಬಿಟ್ಟಿದ್ದರೂ ಇರಬಹುದು

ನಾಗವರ್ಮನದು ತೀರ ಸ್ವತಂತ್ರಕೃತಿಯೆನ್ನಲಾರುವುದಿಲ್ಲ. ವಾಮನ, ರುದ್ರಟ, ಭಾಮಹ, ದಂಡಿ—ಇವರು ತನ್ನ ಪರಿಚಿತರಾಗಿದ್ದು, ಅವರ ಗ್ರಂಥಗಳ ಆಧಾರದಿಂದ ಈ ಗ್ರಂಥವನ್ನು ಹೇಳಿದ್ದಾನೆ. 'ರೀತಿವಿನಿಯತನ ವಸ್ತು ಕೃತಿಗೊಪ್ಪುವ ಮೆಯ್' ಎಂದು ಕಾವ್ಯದ ಶರೀರವೇ ರೀತಿ ಎಂದು ಈತನು ಮೊದಲ ಬಾರಿಗೆ ಸಾರಿದ್ದಾನೆ. ಈತನ ಪರಿಚಿತನಾದ ವಾಮನನು 'ರೀತಿರಾತ್ಮಾ ಕಾವ್ಯಸ್ಯ' ಎಂದು ಘೋಷಿಸಿದ್ದರೂ ಅದನ್ನು ನಾಗವರ್ಮನು ಒಪ್ಪಿದಂತೆ ತೋರುವುದಿಲ್ಲ. ರೀತಿಯು ಕಾವ್ಯದ ಶರೀರವಾದರೆ, ಆತ್ಮವೇ ಧ್ವನಿಯಾಗುವುದು. ಆದರೆ, ನಾಗವರ್ಮನ ಮತಾನುಸಾರ 'ರಸಭಾವ ವ್ಯಕ್ತಿನಿಬಂಧನೆಯೆ ಜೀವ.' ರಸವುಕ್ಕುವಂತೆ ಕಾವ್ಯರಚನೆ ಮಾಡಬೇಕು; ಅಲಂಕಾರಾದಿಗಳಿಗೆ ಮಣಿಸ್ಸುಕೊಡಬಾರದೆನ್ನುವುದು ನಾಗವರ್ಮನ ಅಭಿಪ್ರಾಯ

ಇತರ ಗ್ರಂಥಗಳು

ದಂಡಿಯ ಕಾವ್ಯಾದರ್ಶದ ಅಧಾರದಿಂದ ಉದಯಾದಿತ್ಯಾಲಂಕಾರವನ್ನು ರಾಜವಂಶಕ್ಕೆ ಸೇರಿದ ಉದಯಾದಿತ್ಯನು ೧೧೫೦ರ ಸುಮಾರಿಗೆ ಬರೆದಿರುವನು. ಈತನು ರೀತಿ ನಿರೂಪಣೆಯಲ್ಲಿ ಮಾತ್ರ ರುದ್ರಟನ ಅಭಿಮತವನ್ನವಲಂಬಿಸಿದ್ದಾನೆ

ಕವಿಕಾಮದೇವನ (೧೨೦೦) ಶೃಂಗಾರ ರತ್ನಾಕರವು ರಸವಿವರಣೆಗಾಗಿಯೇ ಮೀಸಲಿಟ್ಟ ಗ್ರಂಥ. ಇದರಲ್ಲಿ ಶೃಂಗಾರ ರಸ, ನಾಯಕ ನಾಯಿಕೆಯರ ವಿಧಗಳು, ಚೇಷ್ಟೆಗಳು, ಹಾಗೂ ಇತರ ಎಂಟು ರಸಗಳನ್ನು ವಿವರಿಸಲಾಗಿದೆ. ಇಲ್ಲಿ ಉದಾಹರಣೆಗಾಗಿ ಕೊಟ್ಟ ಪದ್ಯಗಳೆಲ್ಲವೂ ಕವಿಕಾಮನಿಂದಲೇ ರಚಿತವಾಗಿರುವಂತೆ ತೋರುತ್ತದೆ. ಈತನು ಸ್ವನಶಕ್ತಿಯೆಂಬ ಇನ್ನೊಂದು ಗ್ರಂಥವನ್ನೂ ಬರೆದಿದ್ದಾನೆಂದು ತಿಳಿಯುತ್ತದೆ. ಇದರಲ್ಲಿ ವರ್ಣಿತವಾಗಿರುವ ವಿಷಯಗಳು ಮಾತ್ರ ತಿಳಿದಿಲ್ಲ.

ರಸರತ್ನಾಕರ

೧೫೦೦ರಲ್ಲಿದ್ದನೆಂದು ತಿಳಿಯಲಾದ ಸಾಳ್ವನು ದಂಡಿಯ ಸಂಪೂರ್ಣ ಕಾವ್ಯಾದರ್ಶನವನ್ನು ಕನ್ನಡಕ್ಕೆ ಅನುವಾದಿಸಿದನು. ಇದರಲ್ಲಿ ಹೊಸ ಸಂಗತಿಗಳೇನೂ ಇರುವುದಿಲ್ಲ. ಸಾಳ್ವನು (೧೫೫೦) ದೊರೆಯ ವಂಶಕ್ಕೆ ಸೇರಿದವನಾಗಿದ್ದು ರಸರತ್ನಾಕರನೆಂಬ ರಸನಿರೂಪಣಾಗ್ರಂಥವನ್ನೂ ಶಾರದಾವಿಳಾಸವೆಂಬ ಧ್ವನಿ ವರ್ಣನಾಗ್ರಂಥವನ್ನೂ ಬರೆದಿದ್ದಾನೆ. ಇವುಗಳಲ್ಲಿ ರಸರತ್ನಾಕರವು ರಸಗಳನ್ನು ವಿಸ್ತಾರವಾಗಿ ಪ್ರತಿಪಾದಿಸುವುದು. ಅದುವರೆಗೆ ಕನ್ನಡದಲ್ಲಿ ಧ್ವನಿಯ ಪ್ರಸ್ತಾಪವೇ ಇರಲಿಲ್ಲ. ಕವಿರಾಜ ಮಾರ್ಗದಲ್ಲಿದ್ದರೂ ಅದನ್ನು ಹತ್ತರೊಡನೆ ಹನ್ನೊಂದನೆಯ ಅಲಂಕಾರವೆಂದುಮಾತ್ರ ಒಪ್ಪಿದಂತೆ ಕಾಣುತ್ತದೆ. ಹಾಗಾಗಿ ಸಾಳ್ವನ ಶಾರದಾವಿಳಾಸದ ಕಾಲಕ್ಕೇ ಕನ್ನಡಿಗರಿಗೆ ಧ್ವನಿಯ ಕುರಿತಾದ ಅಚಲ ಶ್ರದ್ಧೆಯು ಹುಟ್ಟಿರಬಹುದು. ಆದರೆ, ಈಗ ಶಾರದಾ ವಿಳಾಸದ ದ್ವಿತೀಯ ಪ್ರಕರಣವೊಂದು ಮಾತ್ರ ನಮಗೆ ದೊರೆತಿದ್ದು ಅದು ಅಚ್ಚಾಗಿದೆ. ಉಳಿದುವು ಕಾಲಗರ್ಭದಲ್ಲಿ ಅಡಗಿ ಹೋಗಿವೆ. ಹಾಗಾಗಿ ಈ ಗ್ರಂಥವೂ ಅಪೂರ್ಣವೆ ಮತ್ತು ಅಲ್ಪೋಪಯೋಗಿಯಾದರೂ ಮಹತ್ವಪೂರ್ಣವಾದುದು.

ರಸರತ್ನಾಕರದಲ್ಲಿ ಕವಿ ತನ್ನ ಪೂರ್ವದ ಅನೇಕಾಲಂಕಾರಿಕರ ಅಧಾರಗಳಿಂದ ಅವರ ಅಭಿಪ್ರಾಯವನ್ನು ಹೇಳಿದ್ದಾನೆ. ಸಾಮಾನ್ಯವಾಗಿ ಅವನ್ನು ಹೊಂದಿಕೊಂಡೇ ಮುಂದುವರಿದಿದ್ದಾನೆ, ಈ ಸಂದರ್ಭದಲ್ಲಿ ಗಣೇಶ್ವರಾಗ್ನಿಯ ಸಾಹಿತ್ಯ ಸಂಜೀವನದ ಉಲ್ಲೇಖ ಬರುತ್ತದೆ. ಆದರೆ, ಈ ಗ್ರಂಥವಿರುವುದಕ್ಕೆ ಸಾಳ್ವನ ಉಲ್ಲೇಖ ಮಾತ್ರ ಆಧಾರ.

(೧೯ನೇ ಪುಟ ನೋಡಿರಿ)

ಬೇಂಕು ವ್ಯವಹಾರಗಳಲ್ಲಿ ಉತ್ತಮವಾದುವುಗಳೆಲ್ಲವೂ ಒಂದೇಕಡೆ ಸಿಗುವ ಸಂಸ್ಥೆಗಳಲ್ಲಿ "ಕೊರ್ಪೊರೇಶನ್" ಬೇಂಕೂ ಒಂದಾಗಿದೆ. ಅಂತಲೇ, ನೀವು ಈ ಬೇಂಕಿನಲ್ಲಿ ಅತಿ ಹೆಚ್ಚಿನ ಸೌಕರ್ಯಗಳನ್ನೆಲ್ಲಾ ಅತಿ ಕಡಿಮೆ ಸಮಯದಲ್ಲಿ ಧಾರಾಳವಾಗಿ ಪಡೆಯಬಹುದು. ಅಂದಬಳಿಕ, ನೀವೇಕೆ ಈ ಬೇಂಕಿಗೂ ನಿಮ್ಮ ಸೇವೆಗೆಯ್ಯುವ ಸಂದರ್ಭವೊಂದನ್ನು ಕೊಡಕೂಡದು?

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಪ್ರಧಾನ ಕಚೇರಿ : ಉಡುಪಿ (ದ. ಭಾರತ).

ನೀವಿದನ್ನು ಉತ್ತರಿಸಬಲ್ಲಿರಾ?

ಜಗತ್ತು ಹೇಗೆ ನಡೆಯುತ್ತದೆ?

ಶ್ರೀ ಕೆ. ತಿಮ್ಮಪ್ಪ ಗಟ್ಟಿ.

ಹೌದು, ಜಗತ್ತು ಹೇಗೆ ನಡೆಯುತ್ತದೆ? "ವಿಧಿಯ ಕೈವಾಡವಂತೆ, ದೈವ ಪಾಲನೆಯಂತೆ, ಹರಿಯುವ ನೀರಿನಂತೆ" ಎಂದು ಹೇಳಿಬಿಡಬಹುದು. ಹೌದು, ಹಾಗೆಂದೇ ಒಪ್ಪಿಕೊಳ್ಳೋಣ ಆದರೆ ಅದು ಹೇಗೆ?

ನೈಜದಿಂದ ಕೃತಕವೂ, ಜಡದಲ್ಲಿ ಚೇತನವೂ ಹುಟ್ಟುತ್ತದೆ. ಪರಸ್ಪರ ವಿರುದ್ಧ ಶಕ್ತಿಗಳ ಹೋರಾಟದಿಂದ ಘರ್ಷಣೆಯಿಂದ ವಿಶ್ವ ಕಥನ-ಮಾನವ ಜೀವನ ಸಾಗುತ್ತದೆ ಸತ್ಯ—ಅಸತ್ಯ, ಶಾಂತಿ-ಕ್ರಾಂತಿ, ಹಿಂಸೆ-ಅಹಿಂಸೆ, ಧರ್ಮ-ಅಧರ್ಮಗಳ ಜಂಜಾಟದಿಂದಲೇ ಕಾಲಚಕ್ರ ಉರುಳುತ್ತದೆ. ಸುಖಸೂರ್ಣವೂ, ನಿತ್ಯ ನವೀನವೂ ಆಗಿರುವಂತೆಯೇ, ಕ್ರಾಂತಿಯುಕ್ತವೂ ಸುಖಾಂತಿಕವೂ ಆಗಿದೆ.

ಕಲ್ಲಿಗೆ ಕಲ್ಲನ್ನು ಹೊಡೆದಾಗಲೇ ಬೆಂಕಿ ಹುಟ್ಟುವುದು ಕೈಗೆ ಕೈ ಬಡೆದಾಗಲೇ ಚಪ್ಪಾಳೆಯಾಗುವುದು. ಒಬ್ಬ ವ್ಯಕ್ತಿಗೆ ಮರಾಗಿ ಮತ್ತೊಬ್ಬ ವ್ಯಕ್ತಿ; ಅವರ ಕಡೆಗಿನ್ನೆಷ್ಟೋ ವ್ಯಕ್ತಿಗಳು ಸಾಗುತ್ತಿರುವಂತೆಯೇ ಮನುಷ್ಯ ಜೀವನ ನಡೆದಿರುವುದು. "ಈ ನಾಡಿನಲ್ಲಿರುವ ಜನರೆಲ್ಲರನ್ನೂ ಸಂಹರಿಸಿ ಈ ನೆಲ,ಈ ಸಂಪತ್ತು-ಸೌಭಾಗ್ಯಗಳನ್ನು ಅನುಭವಿಸಿ ಚಕ್ರವರ್ತಿ ಎನ್ನಿಸಿಕೊಳ್ಳುವೆ" ಎಂದು ಒಬ್ಬನು ಆಲೋಚಿಸಬಹುದು. ಆದರೆ ಅದು ಅಸಾಧ್ಯ. ಅನ್ನಿಸಿಕೊಳ್ಳಬೇಕಾದರೆ ಅನ್ನುವವನೊಬ್ಬ ಬೇಕು 'ನಾನು!' ಎಂಬುದು ಹುಟ್ಟಬೇಕಿದ್ದರೆ ಇನ್ನೊಬ್ಬ ಬೇಕು ಹೀಗಿರುವಾಗ ಅವನು ಚಕ್ರವರ್ತಿ ಹೇಗಾದಾನು? ಆದರೂ ಏನಾಯಿತು? ಅದಂತಾಯಿತೆಂದು ಅನ್ನುವ ಮಾತೆಲ್ಲಿ ಹುಟ್ಟುವುದು? ಅದುದರಿಂದಲೇ ಕೊಡುವವನೊಬ್ಬ ಬೇಕು, ಕೊಳ್ಳುವವನೊಬ್ಬ ಬೇಕು ಶಕ್ತಿಶಾಲಿಯೊಬ್ಬನಿರಬೇಕು. ಶಕ್ತಿಹೀನನೊಬ್ಬನಿರಬೇಕು. ಧನಿಕ-ಬಡವ, ಜ್ಞಾನಿ-ಅಜ್ಞಾನಿಗಳಿರಬೇಕು. ಸಂಪತ್ತು-ದಾರಿದ್ರ್ಯ, ಸುಖ-ದುಃಖಗಳಿರಬೇಕು ಹಾಗಿದ್ದರೆ ಮಾತ್ರ ಅಲ್ಲಿ ವಿವೇಚನೆಗೆ ದಾರಿ. ವಿಜ್ಞಾನಕ್ಕೂ ದಾರಿ ಅಭಿವೃದ್ಧಿಗೆ ಸ್ಪರ್ಧೆ ಹುಟ್ಟುವುದು ಜೀವನ ಸಾಧ್ಯವಾಗುವುದು. ಜಗತ್ತು ಬಾಳುವುದು.

ಜೀವರಾಶಿಗಳೊಂದೂ ಸೃಷ್ಟಿಸಲ್ಪಡದಿದ್ದರೆ ಜಗತ್ತು ನಡೆಯುತ್ತಿರಲಿಲ್ಲ. ಹುಟ್ಟದ ಜೀವರಾಶಿಗಳೆಲ್ಲವೂ ಒಂದೇ ಗುಣ, ರೂಪ, ಒಂದೇ ಬುದ್ಧಿಯುಳ್ಳವಾಗುತ್ತಿದ್ದರೆ ಜಗತ್ತು ನಡೆಯುವಂತಿಲ್ಲ. ಅದಕ್ಕಾಗಿಯೇ ಮನುಷ್ಯ, ಹಸು, ಪಕ್ಷಿ, ಕ್ರಿಮಿ, ಕೀಟಗಳು ಸೃಷ್ಟಿಸಲ್ಪಟ್ಟಿವೆ ಸರಿ. ಮುಂದೆ... ಮಾನವರೆಲ್ಲರೂ ಒಂದೇ ಮನೋಭಾವ, ಏಕರೀತಿಯವರಾಗಿರುತ್ತಿದ್ದರೆ ಜಗತ್ತು ನಿಂತ ನೀರಿನಂತೆ ನಿಶ್ಚಲವಾಗುತ್ತಿತ್ತು. ಒಬ್ಬನು ಶಾಂತಿ ಬೇಕೆಂದರೆ ಇನ್ನೊಬ್ಬನು ಕ್ರಾಂತಿ ಬೇಕೆನ್ನುವನು. ಒಬ್ಬನು ಆಸ್ತಿಕ ಮತ್ತೊಬ್ಬನು ನಾಸ್ತಿಕ. ಊರನ್ನು ನಡೆದು ದಾಟುವೆನೆಂದರೆ, ಗಗನದಲ್ಲಿ ಹಾರಿ ದಾಟುವೆನೆನ್ನುವವನೊಬ್ಬ. ಜಲವನ್ನು ಕೈಯಿಂದ ತೆಗೆಯುವವನೊಬ್ಬ, ಪಾತ್ರೆಯಲ್ಲಿ ತುಂಬಿಸುವವನೊಬ್ಬ ಯಂತ್ರದಿಂದ ಎತ್ತುವವನು ಮಗುದೊಬ್ಬ ಹೀಗೆ ನಡೆಯುತ್ತದೆ ಬಾಳು!

ಎಲ್ಲರೂ ರಾಜರಾದರೆ ದೇಶ ನಡೆಯಲಾರದು ರಾಜರು ಕೆಲರು ಪ್ರಜೆಗಳು ಕೆಲವರು ವಿವಿಧ ವರ್ಗಗಳು ಅವರೆಲ್ಲರಲ್ಲಿಯೂ ಇದ್ದೇ ಇದೆ. ಆ ಮಾರ್ಗದಲ್ಲಿಯೇ ಅವರು ಮುಂದೆ ಸಾಗಿದರು ವಿವಿಧ ಮನೋಭಾವದಿಂದ ವಿವಿಧ ರೀತಿಯ ಜೀವನ, ವಿವಿಧ ಜ್ಞಾನಮಾರ್ಗಗಳು ಹುಟ್ಟಿದುವು. ಸ್ಪರ್ಧೆ ಹುಟ್ಟಿತು. ಪಂಥ ಬದಲಾಯಿತು. ವಿಜ್ಞಾನ, ಸಾಹಿತ್ಯ, ವಿವಿಧ ಕಲೆಗಳು ಅಭಿವೃದ್ಧಿ ಹೊಂದಿದುವು. ಆ ದಾರಿಯಲ್ಲಿಯೂ ಸ್ಪರ್ಧೆಯುಂಟಾಯಿತ. ಹೀಗೆಯೇ ಕಾಲಚಕ್ರ ಉರುಳಿತು. ವಿಚಾರಕ್ಕೆ ಬೆಲೆಯಿತು ಜೀವನ ಸುಧಾರಿಸಿತು ಜಗತ್ತು ಬದಲಾಯಿತು.

ರಾಮನೊಬ್ಬನಿದ್ದನು....ಆದರೆ ರಾವಣನಿದ್ದುದರಿಂದಲೇ ರಾಮಾಯಣ ನಡೆಯಿತು ಪಾಂಡವರಿದ್ದರು ಧರ್ಮ ಪಕ್ಷಪಾತಿಗಳು! ಅಧರ್ಮಗಳಾದ ಕೌರವರಿದ್ದುದರಿಂದಲೇ ಮಹಾಭಾರತ ನಡೆಯಿತು. ಇತ್ಯರ್ಥಕ್ಕಾಗಿ ಪ ಮಾತ್ಮನವತರಿಸಿದನು ಮಹಾಕಾರ್ಯ ನಡೆಸಿದನು ಕಾಲವುರುಳುವಂತೆ ಕಥೆ ನಡೆಯುತಿದನು. ಹಾಗೆಯೇ ಯುಗ ಯುಗಗಳುರುಳಿದುವು

ನಾವು ಅಧಿಕಾರಿಗಳಾಗಬೇಕು-ನಮ್ಮದು ಪ್ರಬಲ ಪಕ್ಷವೆಂದು ಕೆಲವರು ಮುಂದೆ ಬಂದರು ಅವರಿಗೆ ವಿರುದ್ಧವಾಗಿ ಇನ್ನೊಂದು ಪಕ್ಷ ಬಲಿಯಿತು. ಹಾಗೆಯೇ ಜಗಜೀವನ ನಡೆಯಿತು. ಇಲ್ಲದಿದ್ದರೆ ವಿಶ್ವಜಡವಾಗಿರುತ್ತಿತ್ತು! ಅಲ್ಲಿ ಕ್ರಾಂತಿಯೂ ಬೇಕು; ಶಾಂತಿಯೂ ಬೇಕು ಎಲ್ಲರೂ ಜ್ಞಾನಿಗಳಾಗಿದ್ದರೆ ಅಲ್ಲಿ ಜ್ಞಾನಕ್ಕೆ ಬೆಲೆಯಿಲ್ಲ ಅಜ್ಞಾನಿಗಳ ತಂಡವೂ ಅಗತ್ಯ ಇಲ್ಲದಿದ್ದರೆ ಜ್ಞಾನದ ಉಪಯೋಗವಿಲ್ಲ. ಎಲ್ಲವೂ ಒಂದೇರೀತಿಯಾದರೆ ಹೊಸದಕ್ಕಾಗಿ ಸ್ಪರ್ಧೆಯಿಲ್ಲ ವಿಶ್ವಸೃಷ್ಟಿಯಲ್ಲಿ ಮನುಷ್ಯರು ಮಾತ್ರ, ಅಥವಾ ಸ್ತ್ರೀಮಾತ್ರವಾಗಲೀ ಸೃಷ್ಟಿಸಲ್ಪಡಲಿಲ್ಲ. ಅಲ್ಲಿ ಎರಡೂ ಬೇಕು ಆದುದರಿಂದಲೇ ವಿಶ್ವ—ಮಾನವ ಜೀವನ ನಡೆಯಿತು. ಹುಟ್ಟಿತು; ಬಾಳಿತು, ಅಳಿಯಿತು ಇದೇ ವಿಧಿಯ ವಿಶ್ವಸೃಷ್ಟಿಯ ಮೂಲ ಮಂತ್ರ. ವಿರುದ್ಧ ಸೃಷ್ಟಿಗಳಿಂದಲೇ ವಿಶ್ವಕಥನ ಆರಂಭ.

ಎಲ್ಲರೂ ರೈತರಾಗಿ ಹುಟ್ಟಿಬಿಡುತ್ತಿದ್ದರೆ...ಆದುದರಿಂದಲೇ ಎಲ್ಲರೂ ಹಾಗಾಗಲಿಲ್ಲ ಒಬ್ಬ ರೈತ, ಒಬ್ಬ ವ್ಯಾಪಾರಿ, ಇನ್ನೊಬ್ಬ ಅಧಿಕಾರಿ ಮತ್ತೊಬ್ಬ ತತ್ವಜ್ಞಾನಿ, ಮಗುದೊಬ್ಬ ಮಂಡಾಡಿ ಅಳುವವರು, ಅಳಿಸಿಕೊಳ್ಳುವವರು... ಇದರಿಂದಾಗಿಯೇ ಬಾಳು ನಡೆಯಿತು ಅಲ್ಲೂ ಬಂತು ಸ್ಪರ್ಧೆ! ಒಬ್ಬನ ಸಂಥಕ್ಕೆ ಸರಿಯಾಗಿ ಅದೇ ಸಂಥದಲ್ಲಿ ಮುಂದರಿಯುವ ಮತ್ತೊಬ್ಬ ಜನಿಸಿದನು ಅಲ್ಲಿಂದಲೇ ಹುಟ್ಟಿತು ಸ್ಪರ್ಧೆ, ತನ್ಮೂಲಕ ಅಭಿವೃದ್ಧಿ!

ವಿವಿಧ ಮನೋ ವರ್ಗದ ಮಾನವನ ಬುದ್ಧಿ ಮುಂದರಿದಂತೆ ಸಾಹಿತ್ಯ, ವಿಜ್ಞಾನ, ವೇದಾಂತ ಇತ್ಯಾದಿಗಳು ಒಂದೊಂದೇ ಹುಟ್ಟಿಕೊಂಡಂತೆ ಅವುಗಳಲ್ಲಿಯೂ ವಿವಿಧ ಮಾರ್ಗ, ವಿವಿಧ ವರ್ಗಗಳು ಉಂಟಾದುವು ತಾರ್ಕಿಕ, ವೇದಾಂತಿ, ಸಾಹಿತಿ, ವಿಜ್ಞಾನಿ, ಚಿತ್ರಗಾರರು ಮುಂದೆ ಕಾಣಿಸಿಕೊಂಡರು. ಮಾನವ-ವರ್ಗದಲ್ಲಿ ಜೀವನ ಕ್ರಾಂತಿ. ವಿಚಾರ ಕ್ರಾಂತಿಗಳನ್ನುಂಟು ಮಾಡಿದರು

ಎಲ್ಲರೂ ಮನುಷ್ಯರಾಗಿದ್ದು ಅವರನ್ನು ಗುರುತಿಸಲು ರಾಮ, ಕೃಷ್ಣ, ಗೋವಿಂದ ಎಂಬಂತೆ ಹೆಸರುಗಳು ಬೇಕಾದುವು ಪ್ರತೀ ವಸ್ತು ಕಾಲ, ದೇಶಕ್ಕೂ ಏಕೆ ಸಕಲಕ್ಕೂ ನಾಮಕರಣವಾಯಿತು. ಅದು ಮರ, ಇದು ಕಲ್ಲು, ಅದು ಕೀಟ, ಇದು ಕ್ರಿಮಿಯೆಂದು ನಿರ್ಣಯಿಸಲ್ಪಟ್ಟಿತು. ಹೊಸ ಹೊಸ ಶಬ್ದಗಳು ಭಾಷೆಗಳು ಹುಟ್ಟಿ ಬೇಕಾಯಿತು. ಸಾಹಿತ್ಯ, ಭಾಷೆ, ಜೀವನ ಉತ್ಕರ್ಷ ಹೊಂದಿತು

ದೇಶ-ರಾಷ್ಟ್ರ ಎಂದೊಡನೆ ರಾಜಕೀಯವೆಂಬುದೊಂದು ಕಾಣಿಸಿಕೊಂಡಿತು ಅಲ್ಲಿ ವಿವಿಧ ಪಂಥಗಳು-ಪಕ್ಷಗಳು, ವಿವಿಧ ವ್ಯೂಹಗಳು ಏರ್ಪಟ್ಟುವು ಅದನ್ನು ಪ್ರಚಾರಿಸುವ, ಆ ದಾರಿಯಲ್ಲಿ ಹೋಗುವ ಕೆಲವು ವ್ಯಕ್ತಿಗಳು, ಬಳಿಕ ಪಕ್ಷಗಳು ಉದಯವಾಯಿತು.

ಒಂದರ ಹೆದರಿಕೆಯಿಂದಲೋ ಅಥವಾ ಅದಕ್ಕಿಂತ ಉನ್ನತಿಯನ್ನು ಹೊಂದಬೇಕೆಂದೋ ವಿರುದ್ಧ ಪಕ್ಷ ಹೆಣಗಾಡಿತು. ಅದಕ್ಕೆ ಬೆದರಿ ಉನ್ನತ ಸ್ಥಾನದಲ್ಲಿದ್ದ ಪಕ್ಷ ಮತ್ತೂ ಹೆಣಗಾಡಿತು ಒಮ್ಮೆ ಗೆದ್ದಿತ. ಒಮ್ಮೆ ಪತನ ಹೊಂದಿತು. ಹೀಗೆಯೇ ರಾಜಕೀಯ ಬೆಳೆಯಿತು. ದೇಶದ ಏಳಿಗೆ ನಾಗರಿಕತೆ ವಿಚಾರ—ಘೋರಣೆ, ಗುರಿ ಸಾಧನೆಯಾಯಿತು. ರಾಜಕೀಯದ ದಾರಿ ಕಡಿಯಲ್ಪಟ್ಟಿತು.

ಉದಾಹರಣೆಗಾಗಿ ಒಂದು ದೇಶದಲ್ಲಿ ಯುದ್ಧವೇ ಇಲ್ಲ. ನಿತ್ಯ ಶಾಂತಿಯೆಂದು ಆಲೋಚಿಸೋಣ. ಆಗ ಅದು ಹಳ್ಳದ ನೀರಿನಂತೆ ಅಲ್ಲಿಯೊಂದು ಯುದ್ಧವೋ ಕ್ರಾಂತಿಯೋ ನಡದರೆ ಮಾತ್ರ ಜನಂತರ ಶಾಂತಿಗೊಂದು ಪ್ರಯತ್ನ ಪಂಥ, ಸ್ಪರ್ಧೆ ಉನ್ನತಿ, ಕಾಲ ಚಕ್ರದ ಉರುಳಾಟ!

ಮನುಷ್ಯನು ನಿಂತಲ್ಲೇ ನಿಂತರೆ ಅಲ್ಲಿ ಏನು ನಡೆದಂತಾಯಿತು? ಆಲೋಚಿಸಿದುದನ್ನೇ ಆಲೋಚಿಸಿದರೆ ಅಲ್ಲಿ ವಿಚಾರ ಕ್ರಾಂತಿಯಿಲ್ಲ ಕೊಳಕ್ಕೆ ಹೊಸ ನೀರು ಬರಬೇಕು; ಹೆಚ್ಚಿನಂಶ ಹರಿದು ಹೋಗಬೇಕು. ನಡೆಯುವುದು ಸಹಜವೊ? ನಿಲ್ಲುವುದು ಸಹಜವೂ? ನಿರೀಕ್ಷಣೆತೆ ಸಹಜವೊ? ವಿದ್ಯೆ ಸಹಜವೂ? ವೇಷ ಭೂಷಣಗಳು, ನಾಗರಿಕತೆ ಒಂದೂ ಸಹಜವಲ್ಲ. ಆದರೆ ಇಂದು ಮಾತ್ರ ಅದು ಸಹಜ. ಕೃತಕವೇ ಮುಂದೆ ಸಹಜವಾಗುವುದು. ಸಹಜವಿಂದ ಮತ್ತೂ ಕೃತಕ ಹುಟ್ಟಿ ಅದೂ ಕಾಲಕ್ರಮೇಣ ಸಹಜವಾಗುತ್ತಿರುವಾಗ ಏನಾಗುವುದು? ಬಾಳು—ಜಗತ್ತು ಸುಸಂಸ್ಕೃತವಾಗುವುದು. ಸುಧಾರಿಸುವುದು.

ನೀರು, ಗಾಳಿ, ಬೆಂಕಿಗಳು ಇದ್ದಂತೆ ಇರುತ್ತಿದ್ದರೆ ಏನು ಶಕ್ತಿಯು ಉಗಮವಾಯಿತು? ಅದನ್ನು ಮಥಿಸಿ, ಮರ್ದಿಸಿ ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಿದರೆ ಮಾತ್ರ ಹೊಸ ಶಕ್ತಿ ಹುಟ್ಟುವುದು. ಇಂದು ಇದೇ ಯಂತ್ರ ಯುಗವೇ, ವಿದ್ಯುಚ್ಛಕ್ತಿ, ರಾಸಾಯನಿಕ ದ್ರವ್ಯಗಳ ಅದ್ಭುತ ಶಕ್ತಿಯೇ ನೀರು, ಗಾಳಿ, ಬೆಂಕಿಗಳ ಮೇಲೆ ನಿಂತಿದೆ. ಅದರ ವಿವಿಧ ಪ್ರಯೋಗ, ಉಪಯೋಗಗಳಿಂದಲೇ ಇಂದು ಯಂತ್ರ ವಿಜ್ಞಾನ ಮುಂಬರಿದು ಹೋಗುತ್ತಿದೆ.

ಜಗತ್ತಿನಲ್ಲಿರುವ ಪ್ರತಿಯೊಂದು ಪ್ರಾಣಿ, ಸಸ್ಯ ಇತ್ಯಾದಿ ಜೀವ—ಅಜೀವ, ಚರ-ಅಚರಗಳನ್ನು, ಪ್ರತಿಯೊಂದು ವಸ್ತುವನ್ನೂ ನೋಡಿದರೆ ಒಂದರಿಂದ ಒಂದು ಬೆಳೆಯಿತು; ಹೇಗೆ? ಸ್ವಾಭಾವಿಕವಾಗಿ ಜಗನ್ನಿಯಮದಂತೆ, ದೈವಶಕ್ತಿಯಂತೆ ಎಂಬುದೊಂದು ನಿರಾಯಾಸ ಸಿದ್ಧ ಉತ್ತರ. ಆದರೆ ಪ್ರಥಮದಲ್ಲಿ 'ಇದ್ದ" ವಸ್ತುಗಳು ಹೇಗೆ ವ್ಯಾಹಾರೋಪಾಂತರ ಹೊಂದಿ ಜಗತ್ತು ಇಂದು ಈ ನೆಲೆಗೆ ಬಂತು? ಎಂದರೆ ಅದು ವಿಚಾರ ಕ್ರಾಂತಿಯ ಪ್ರಶ್ನೆಯೇ ಸರಿ. ಇದು ಹೀಗೆಯೇ ಆಗಬೇಕಿತ್ತೆಂಬ ನಿಯಮವೇನು? ಅದರ ಹಿಂದೆ ಆಡಗಿರುವ ಶಕ್ತಿಯೇನು? ಕಾಲ ಉರುಳಿದಂತೆ ಜಗತ್ತು ಹೇಗೆ ಬದಲಾಯಿತು? ಅಭಿವೃದ್ಧಿಯೊಂದೆಕ್ಕಿಂದ ಬಂತು? ಒಂದರಿಂದ ಒಂದು ಹುಟ್ಟಿ ಬೆಳೆಯಿತು. ಒಂದರ ಬಲದಿಂದ ಒಂದು ಬಲಿಯಿತು. ವಿರುದ್ಧ ಶಕ್ತಿಗಳ ಸಾಧನೆಯಿಂದಲೇ ಹೀಗೆ ಯಿತು ಪ್ರತಿಯೊಂದು ಶಕ್ತಿಯನ್ನು ಎದುರಿಸುವ ಮತ್ತು ಪ್ರತಿವಾದಿಸುವ ಹಲವು ಶಕ್ತಿಗಳಿಂದಲೇ ಹೀಗೆ ನಡೆಯಿತು

ಪರಸ್ಪರ ವಿರುದ್ಧ ಶಕ್ತಿಗಳ ಹೋರಾಟದಿಂದಲೇ ಜಗತ್ತು ನಡೆಯುತ್ತದೆ.

ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಲಿ

ಝೂಂಡು
ಬಾಲಶೂಲಾರ್ಕ
ಉಪಯೋಗಿಸುವುದರಿಂದ
ಮಕ್ಕಳ ಉದರ ದೋಷಗಳೆಲ್ಲಾ
ಖಾತ್ರಿಯಾಗಿ ಗುಣಹೊಂದುವುದು.
ಝೂಂಡು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂಬ್ರ 7015, ಬೊಂಬಾಯಿ.
ಮದ್ರಾಸ್ ಸ್ಟೇಟಿನಲ್ಲೆಲ್ಲಾ ಸ್ವಾತಿಕ್ಸ್‌ರಿಯವರು.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೫-೬-೫೮	ಸಂಚಿಕೆ ೩೯

ಫ್ರಾನ್ಸಿನ ಅಂತಸ್ಸತ್ವ

ಸಾಮ್ರಾಜ್ಯಶಾಹಿಯನ್ನು ವಿರೋಧಿಸಿ ಸ್ವಾತಂತ್ರ್ಯವನ್ನು ಪಡೆದು ಪ್ರಜಾಸತ್ತಾತ್ಮಕ ಸರಕಾರವನ್ನು ಸ್ಥಾಪಿಸಿಕೊಳ್ಳುವ ಇರಾದೆಯಿಂದ ಇಂದು ಅನ್ಯ ರಾಷ್ಟ್ರಗಳ ವಸಾಹತುಗಳು ತಮ್ಮ ಒಡೆಯ ದೇಶಗಳೊಡನೆ ಹೋರಾಡುತ್ತಿರುವುದು ಸರ್ವಶ್ರುತವಿರುವುದು. ನಮ್ಮ ದೇಶವೂ ಬ್ರಿಟಿಷರನ್ನು ಕಾಡಿಬೇಡಿ ಅಹಿಂಸಾತ್ಮಕ ವಿಧಾನದಲ್ಲಿಯೇ ಸ್ವಾತಂತ್ರ್ಯವನ್ನು ಪಡೆದು ತನ್ನ ಉತ್ಕರ್ಷವನ್ನು ಸಾಧಿಸಿಕೊಳ್ಳುತ್ತಿದೆ. ಭಾರತದಲ್ಲಿದ್ದ ಫ್ರೆಂಚ ವಸಾಹತುಗಳನ್ನೂ ಫ್ರೆಂಚ ಸರಕಾರವು ಆಡಳಿತ ಹಸ್ತಾಂತರಗೊಳಿಸಿರುತ್ತದೆ. ಆದರೆ, ಸಹರಾ ಮರುಭೂಮಿಯ ಸಂಪತ್ಸಮೃದ್ಧ ಪ್ರದೇಶವಾದ ಅಲ್ಜೀರಿಯಾವನ್ನು ಮಾತ್ರ ಫ್ರಾನ್ಸ್ ತನ್ನ ಗೊಡವೆಗೆ ಬಿಟ್ಟುಕೊಡಲು ನಿರಾಕರಿಸುತ್ತದೆ. ಇದರಿಂದಾಗಿಯೇ ಅಲ್ಜೀರಿಯಾವು ಒಂದು ಸಮಸ್ಯೆಯ ರೂಪವನ್ನು ತಾಳಿ ಫ್ರೆಂಚರ ವಿವಂಚನೆಗೆ ಕಾರಣವಾಗಿದೆ. ಜಗತ್ತಿನ ಪ್ರಜಾಪ್ರಭುತ್ವವಾದೀ ರಾಷ್ಟ್ರಗಳಲ್ಲಿ ಫ್ರಾನ್ಸು ಒಂದು ಉನ್ನತವಾದ ಸ್ಥಾನವನ್ನು ಗಳಿಸಿದೆ. ಅಲ್ಲಿನ ಜನರಲ್ಲಿ ರಾಷ್ಟ್ರಪ್ರೇಮವು ಉಕ್ಕಿ ಹರಿಯುತ್ತಿರುವ ಕಾರಣದಿಂದಲೇ ವರ್ಷದಲ್ಲಿ ಹಲವು ಬಾರಿ ಮಂತ್ರಿ ಮಂಡಳಿಗಳುರುಳಿದರೂ ಅಲ್ಲಿನ ಸರಕಾರದ ಧ್ಯೇಯ ಧೋರಣೆಗಳಲ್ಲಿ ಮೂಲತಃ ವ್ಯತ್ಯಾಸವಾಗುವುದಿಲ್ಲ ಎಂತಲೇ ಫ್ರೆಂಚ ಪ್ರಜಾಪ್ರಭುತ್ವವು ಅಭೇದ್ಯವಾಗಿತ್ತು. ಆದರೆ, ಇದೀಗ ಫ್ರಾನ್ಸಿನಲ್ಲಿ ನಡೆದ ವಿದ್ಯಮಾನಗಳನ್ನವಲೋಕಿಸುವಾಗ, ಅಲ್ಲಿನ ಪ್ರಜಾಪ್ರಭುತ್ವವು ಅಂತ್ಯವಾಯಿತೆ? ಎಂಬ ಸಂದೇಹವು ಉದ್ಭವಿಸುವುದು. ಜನರಲ್ ಚಾರ್ಲ್ಸ್ ಡಿಗಾಲೆಯವರಿಗೆ ತಮ್ಮ ಸರಕಾರದ ಸಹಾಯದಿಂದ ಫ್ರಾನ್ಸಿನಲ್ಲಿ ಶಾಂತಿಯನ್ನು ಸ್ಥಾಪಿಸುವ ಸಲುವಾಗಿ ಆರು ತಿಂಗಳ ಕಾಲ ಸರ್ವಾಧಿಕಾರವನ್ನು ಕೊಡುವ ಗೊತ್ತುವಳಿಯೊಂದನ್ನು ಫ್ರೆಂಚ ರಾಷ್ಟ್ರೀಯ ಸಭೆಯು ಸ್ವೀಕರಿಸಿದೆ. ಇದರಿಂದ, ಜನರಲ್ ಡಿಗಾಲೆಯವರು ತಮ್ಮ ಸರ್ವಾಧಿಕಾರಿ ಮನೋವೃತ್ತಿಯಿಂದ ಸೈನಿಕ ಆಡಳಿತೆಯನ್ನು ನಡೆಸುವುದೂ ಸಾಧ್ಯವಿದೆ. ಫ್ರೆಂಚ ಇತಿಹಾಸದಲ್ಲಿ ಇಂತಹ ಮಹತ್ವದ ಘಟನೆ ನಡೆದುದು ದ್ವಿತೀಯ ಲೋಕ ಯುದ್ಧದ ಕಾಲದಲ್ಲಿ ಮಾತ್ರ. ಈಗ ಮತ್ತೆ ಅದು ಕಾಣಿಸಿಕೊಂಡಿದೆ.

ಪ್ರಜಾಪ್ರಭುತ್ವವಾದೀ ರಾಷ್ಟ್ರದಲ್ಲಿ ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಅಪೇಕ್ಷೆಯಂತೆ ಆಡಳಿತೆಯು ನಡೆಯುತ್ತದೆ. ಆದರೆ, ಸದ್ಯ ಫ್ರೆಂಚ ರಾಷ್ಟ್ರೀಯ ಸಭೆಯು ಅಧ್ಯಕ್ಷ ಕೋಟಿಯವರ ಒತ್ತಾಯದಿಂದಲೇ ಈ ವಿಧದ ಗೊತ್ತುವಳಿಯನ್ನು ಸ್ವೀಕರಿಸಿತೆಂಬ ವಾರ್ತೆ ಬಂದಿದೆ. ಅಲ್ಜೀರಿಯಾದಲ್ಲಿ ಸೈನಿಕರು ಫ್ರೆಂಚ ಸರಕಾರದ ವಿರುದ್ಧ ಬಂಡೆದ್ದು ಸುರಕ್ಷತಾ ಸಮಿತಿಗಳನ್ನು ರಚಿಸಿಕೊಂಡಿದ್ದು ಫ್ರೆಂಚ ಸರಕಾರದೊಡನೆ ಹೋರಾಡುವ ದೃಢ ನಿಶ್ಚಯ ಮಾಡಿದ್ದಾರೆ. ಹಾಗಾಗಿ, ಅಲ್ಜೀರಿಯಾದ ಸೇನಾಧಿಪತಿ ಜನರಲ್ ಸಾಲೆನ್ಸ್ರು ಜನರಲ್ ಡಿಗಾಲೆಯವರು ಹೇಗಾದರೂ ಮಾಡಿ ಅಧಿಕಾರ ಸ್ವೀಕರಿಸುವ ವ್ಯವಸ್ಥೆ ಮಾಡಬೇಕೆಂದೂ ಅದರಿಂದ ಶಾಂತಿಯೊಡಗಬಹುದೆಂದೂ ಅಧ್ಯಕ್ಷರಿಗೆ ತಿಳಿಸಿದ್ದರು. ಅದರಂತೆ ರಾಷ್ಟ್ರೀಯ ಸಭೆಯಲ್ಲಿ ಅಧ್ಯಕ್ಷ ಕೋಟಿಯವರು ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಪ್ರತಿನಿಧಿಗಳ ವಿರೋಧವನ್ನು ಗಣಿಸಿ, ಜನರಲ್ ಡಿಗಾಲೆಯವರನ್ನು ಪ್ರಧಾನಿಗಳಾಗಿ ಮಾಡದೆ ಹೋದರೆ, ತಾನೂ ರಾಜೀನಾಮೆ ಕೊಡುವೆನೆಂದು ಬೆದರಿಸಿದ ವಾರ್ತೆಯೆನ್ನು ನಂಬಬಹುದಾದರೆ, ಅಲ್ಜೀರಿಯಾದ ಪರಿಸ್ಥಿತಿ ಏನಾಗಿದೆಯೆಂಬುದರ ಅರಿವಾಗುವುದು. ಕೇವಲ ಅಲ್ಜೀರಿಯಾದ ವಸಾಹತೊಂದನ್ನು ತನ್ನಂಕಿತದಲ್ಲಿಟ್ಟುಕೊಳ್ಳಲು ಹವಣಿಸಿ ಈ ತೆರದ ಸರ್ವಾಧಿಕಾರಿಯನ್ನು ನೇಮಿಸುವುದು ಪ್ರಜಾಪ್ರಭುತ್ವದ ಅವಮಾನವೆಂದು ಬೇರೆ ಹೇಳಬೇಕಾಗಿಲ್ಲ. ಜನರಲ್ ಡಿಗಾಲೆಯವರು ಅಲ್ಜೀರಿಯಾದ ಬಗ್ಗೆ ಅವಸರದ ಅಧಿಕಾರವನ್ನೂ ಆರು ತಿಂಗಳ ವರೆಗೆ ಪಾರ್ಲಿಮೆಂಟಿನ ಸಹಾಯವಿಲ್ಲದೆ ಫ್ರೆಂಚ ಸರಕಾರವನ್ನು ನಡೆಯಿಸುವ ಅಧಿಕಾರವನ್ನೂ ಕೇಳಿದ್ದು ಅದನ್ನವರಿಗೆ ಒಪ್ಪಿಸಲಾಗಿದೆ. ಈ ಅವಧಿಯಲ್ಲಿ ಅವರು ಕಾರ್ಯಾಂಗವೇ ಸರ್ವಾಧಿಕಾರಿಯಾಗಿರುವ ಆಳ್ವಿಕೆಯ ಮಾರ್ಗವು ಒಂದು ಹೊಸ ಘಟನೆಯನ್ನೂ ತಯಾರಿಸಿ, ಜನತೆಯ ಅಭಿಪ್ರಾಯಕ್ಕೆ ಮುಂಡಿಸಲಿರುವರು. ಆದರೆ, ಈ ಘಟನೆಯು ಪ್ರಜಾಪ್ರಭುತ್ವಕ್ಕೆ ತೀರ ಹೊಂದಿಕೆಯಾಗುವುದು ಅಸಂಭವವೆಂದೂ ಹೇಳಲಾಗುತ್ತದೆ.

ಜನರಲ್ ಚಾರ್ಲ್ಸ್ ಡಿಗಾಲೆಯವರು ಹಿಂದಿನ ಮಹಾಯುದ್ಧ ಕಾಲದಲ್ಲಿ ಫ್ರಾನ್ಸನ್ನುಳಿಸಿದವರು. ಡಿಗಾಲೆಯವರನ್ನು ಫ್ರಾನ್ಸಿನ ರಕ್ಷಕ; ಫ್ರೆಂಚರ ಕ್ರಾಮವೆಲ್ ಹಾಗೂ ಮಾರ್ಶಲ್ ಪೇತಾಮರ ಅವತಾರವೆಂದು ಹೇಳುವವರಿದ್ದಾರೆ ಇದೇನೋ ಸಹಜವೆನಿಸಿದರೂ ಕ್ರಾಮವೆಲ್ಲ್ ಮತ್ತು ಪೇತಾಮರು ತಮ್ಮ ಮಾತೃಭೂಮಿಯನ್ನುಳಿಸಲು ಹೆಣಗಿದ್ದರೆ, ಈಗ ಜನರಲ್ ಡಿಗಾಲೆಯವರು ಮಾತೃಭೂಮಿಯ ಪ್ರಜಾಪ್ರಭುತ್ವವಾದ ತಳಹದಿಯನ್ನು ಮೆಟ್ಟಿ ತುಳಿದು ವಸಾಹತುವಾದ ಅಲ್ಜೀರಿಯಾವನ್ನು ಪಾದಾಕ್ರಾಂತವಾಗಿಸಲು ಹವಣಿಸುತಿದ್ದಾರೆ. ವಸಾಹತು ವಾದವು ಜನಪ್ರಿಯತೆಯನ್ನು ಕಳೆದುಕೊಂಡು ಪ್ರಜಾಪ್ರಭುತ್ವವಾದವು ಬೆಳೆಯುತ್ತಿರುವ ಈ ಕಾಲದಲ್ಲಿ ಜನರಲ್ ಡಿಗಾಲೆಯವರು ಅಧಿಕಾರಕ್ಕೆ ಬರುವುದಕ್ಕೆ ಮೊದಲೇ ಪ್ರಜಾಪ್ರಭುತ್ವವನ್ನು ಕಿತ್ತುಹಾಕಿ ಜುಲುಮೆಯಿಂದಲೇ ಸರಕಾರ ರಚನೆ ಮಾಡಿದರು. ಇನ್ನು ಅಲ್ಜೀರಿಯಾವನ್ನೂ ನೋಡಿಕೊಳ್ಳುವರು. ಆದರೆ, ಜನರಲರ ಕಾರ್ಯದಾಹವೆಷ್ಟು ಶಮಿಸುವುದೋ ಹೇಳಬರುವಂತಿಲ್ಲ ಮುಂದಿನ ಆಗು ಹೋಗುಗಳು ಹೇಗೆ ಘಟಿಸುವುವೋ ಕಾದು ನೋಡಬೇಕು. ಆದರೂ ಫ್ರೆಂಚರ ಈ ತೆರದ ವಸಾಹತು ಪ್ರೇಮವು ಮಾತ್ರ ಸರ್ವಥಾ ಖಂಡನೀಯ. ತಮ್ಮ ಕೃತಿಗಳಿಗಾಗಿ, ತಮ್ಮ ಅವಿವೇಕತನಕ್ಕಾಗಿ ಹಂಬಲಿಸುವ ದಿನವು ಫ್ರೆಂಚರಿಗೆ ಬಾರದೆ ಹೋದರೆ ಅದವರ ಪುಣ್ಯವೆಂದು ಹೇಳಬೇಕು. ವಸಾಹತು ವಾದವನ್ನು ಇನ್ನಾದರೂ ಫ್ರಾನ್ಸು ಕೊನೆಗೊಳಿಸಿಕೊಂಡರೇನೇ ಅದರ ಕ್ಷೇಮವಿದೆ; ಇದಕ್ಕೆ ತಪ್ಪಿದರೆ, ಫ್ರಾನ್ಸಿ ಶಾಂತಿಯಿಲ್ಲವೆಂಬುದು ಸತ್ಯ. ರಾಜಕಾರಣ ಸಟುಗಳಾದ ಫ್ರೆಂಚರ ಮನವತ್ತ ಓಲಾಡುವುದೆಂದು ಮುಂದೆ ನೋಡಬೇಕು.

ಸಂಕ್ಷಿಪ್ತ ಸುದ್ದಿಗಳು

ಸಿಂಗಾಪುರಕ್ಕೆ ಆಂತರಿಕ ಸ್ವರಾಜ್ಯ

ಸಿಂಗಾಪುರಕ್ಕೆ ಸ್ವರಾಜ್ಯವನ್ನೀಯುವ ಕುರಿತಾದ ಮಾತುಕತೆಗಳ ಸಾರಾಂಶಕ್ಕೆ ಬ್ರಿಟಿಷ ಮತ್ತು ಸಿಂಗಾಪುರದ ಪ್ರತಿನಿಧಿಗಳು ಏಕಾಭಿಪ್ರಾಯಕ್ಕೆ ಬಂದರು. ಈ ಬಗ್ಗೆ ತಯಾರಿಸಲಾದ ಘಟನೆಯು ಅಂತಿಮ ಕರಡಿಗೆ ಸಿಂಗಾಪುರದ ಅಖಿಲ, ಪಕ್ಷೀಯ ಪಂಚಪ್ರತಿನಿಧಿಗಳು ಸಂತೋಷದಿಂದ ಒಪ್ಪಿಗೆಯಿತ್ತರೆಂದು ತಿಳಿಯುತ್ತದೆ. ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಸಿಂಗಾಪುರಕ್ಕೆ ಸ್ವರಾಜ್ಯವನ್ನೀಯುವ ಮಸೂದೆಯು ಸ್ವೀಕಾರವಾಗುವ ದಿನವನ್ನವಲಂಬಿಸಿ ಸ್ವರಾಜ್ಯವು ವ್ಯವಹಾರದಲ್ಲಿ ಬರುವುದೆಂದೂ, ಜುಲೈ ತಿಂಗಳಲ್ಲಿ ಮುಗಿಯುವ ಬೇಸಿಗೆ ಕಾಲದ ಅಧಿವೇಶನದೊಳಗೇನೆ ಈ ವಿಧೇಯಕವು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಮುಂಬರುವ ನಿರೀಕ್ಷೆಯಿದೆ ಎಂದೂ ತಿಳಿಯುತ್ತದೆ.

ಸಿಂಗಾಪುರದ ಪ್ರಧಾನಿಯವರು, ಸಿಂಗಾಪುರ ವಿಧಾನ ಸಭೆಯು ಮೊದಲನೆಯ ಚುನಾವಣೆಯು ಎಂದು ನಡೆಯುವುದು ಎಂಬುದನ್ನು ನಿಶ್ಚಯಿಸುವುದನ್ನು ಹೊಂದಿಕೊಂಡು ರಾಜ್ಯ ಘಟನೆಯು ವ್ಯವಹಾರದಲ್ಲಿ ಬರುವುದೆಂದೂ ಈ ಕಾರ್ಯವು ಸಾಮಾನ್ಯವಾಗಿ ಮುಂದಿನ ವರ್ಷದಲ್ಲಿ ಒದಗಿಬರಬಹುದೆಂದೂ ತಿಳಿಸಿದರು.

೧೩ ಲಕ್ಷ ಜನಸಂಖ್ಯೆಯಿರುವ ಸಿಂಗಾಪುರಕ್ಕೆ ಈ ನೂತನ ಘಟನೆಯನ್ವಯ ಆಂತರಿಕ ಸ್ವರಾಜ್ಯವು ದೊರೆಯುವುದು. ಆದರೆ ಬ್ರಿಟನ್ನು ಆಗ್ನೇಯ ಏಶ್ಯದ ನೌಕಾ ಸೇನೆ, ಬಾಹ್ಯ ರಕ್ಷಣೆ ಮತ್ತು ದ್ವೀಪದ ವಿದೇಶೀಯ ವ್ಯವಹಾರಗಳನ್ನು ಮಾತ್ರ ನೋಡಿಕೊಳ್ಳುತ್ತದೆ.

ಅನಾನಾಸು ಸಂಶೋಧನಾ ಕೇಂದ್ರ

ಬೆಂಗಳೂರಿನಲ್ಲಿರುವ ಮೈಸೂರು ರಾಜ್ಯ ಸರಕಾರದ ಸಿಂಗಾಣಿ ಕಾರಖಾನೆಯಲ್ಲಿ ವಿವಿಧ ರೀತಿಯ ಚೇಡಿ ಮಣ್ಣಿನ ವಿಚಾರದಲ್ಲಿ ಸಂಶೋಧನೆ ಹಾಗೂ ಪ್ರಯೋಗಗಳನ್ನು ನಡೆಸುವುದಕ್ಕಾಗಿ ಅಖಿಲ ಭಾರತ ಕುಶಲ ವಸ್ತುಗಳ ಮಂಡಲಿಯವರು ಸುಮಾರು ಸುಮಾರು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುವರು. ಪ್ಯಾಕಿಂಗ್ ತಂತ್ರವಿಧಾನಗಳಲ್ಲಿ ತರಬೇತಿ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿ ಮೈಸೂರಿನಲ್ಲಿ ನೂತನ ಪ್ರಾಯೋಗಿಕ ಕೇಂದ್ರವೊಂದನ್ನು ಸ್ಥಾಪಿಸಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನಾನಸು ನಾರಿನ ಉದ್ಯಮದ ಬಗ್ಗೆ ಸ್ಥಾಪಿಸಿರುವ ಪ್ರಾಯೋಗಿಕ ಕೇಂದ್ರವನ್ನು ಮುಂದುವರಿಸಿಕೊಂಡು ಬರಲಾಗುವುದು. ವಿವಿಧ ಕುಶಲ ವಸ್ತುಗಳ ಅಭಿವೃದ್ಧಿಗಾಗಿ ಹೊಸತಾಗಿ ಒಂದು ಪ್ರಾಯೋಗಿಕ ಕೇಂದ್ರ ಸ್ಥಾಪನೆಗೂ ಈಗಾಗಲೇ ಸ್ಥಾಪನೆಗೊಂಡಿರುವ ೧೧ ಪ್ರಾಯೋಗಿಕ ಕೇಂದ್ರಗಳನ್ನು ಮುಂದುವರಿಸಲೂ ಮುಂಜೂರಾತಿಯಿತ್ತಿರುವರು. ಇವೆಲ್ಲವುಗಳಿಗಾಗಿ ೬೪೫ ಲಕ್ಷ ರೂಪಾಯಿಗಳು ವೆಚ್ಚವಾಗಲಿದ್ದು ಅಖಿಲ ಭಾರತ ಕುಶಲ ವಸ್ತುಗಳ ಮಂಡಲಿಯ ನೇರವಾದ ಹತೋಟಿಯಲ್ಲಿರುವುವು.

ಆಡಳಿತೆಯನ್ನು ಸುಧಾರಿಸುವೆವು

ಮೈಸೂರಿನ ಮುಖ್ಯಮಂತ್ರಿ ಶ್ರೀ ಬಸಪ್ಪ ದಾನಪ್ಪ ಜತ್ತಿಯವರು ಮೈಸೂರಿನ ಆಡಳಿತೆಯಲ್ಲಿ ಸುಧಾರಣೆಯನ್ನು ತೀವ್ರವಾಗಿ ಸಾಧಿಸುವ ಭರವಸೆಯನ್ನು ಇತ್ತಿದ್ದಾರೆ. ತಾವು ಕನಿಷ್ಟಪಕ್ಷ ಆರು ತಿಂಗಳ ಕಾಲ ಈ ದೆಸೆಯಿಂದಾಗಿ ರಾಜಧಾನಿಯನ್ನು ಬಿಟ್ಟು ಕದಲಬಾರದೆಂದು ನಿರ್ಧರಿಸಿರುವುದಾಗಿ ಅವರು ಹೇಳಿದರಲ್ಲದೇ ತಾವು ಮತ್ತು ತಮ್ಮ ಮಂತ್ರಿಮಂಡಳಿಯ ಇನ್ನಿತರ ಸದಸ್ಯರು ಅತ್ಯಾವಶ್ಯಕ ಪ್ರಸಂಗ ಹೊರತದೆ ಎಲ್ಲಿಯೂ ಪ್ರವಾಸ ಕೈಗೊಳ್ಳಬಾರದೆಂದು ನಿರ್ಣಯಿಸಿರುವುದಾಗಿಯೂ ಅವರು ತಿಳಿಸಿದರು. "ಇಡೀ ರಾಜ್ಯದ ಆಡಳಿತ ಪದ್ಧತಿಯನ್ನು ಸಮೀಕರಿಸುವುದು ಮತ್ತು ಅದನ್ನು ಸುಧಾರಿಸುವುದು—ಇವೆರಡು ಸ್ಪರ್ಧೆಗಳನ್ನು ನಾವು ಬಿಡಿಸಿಯೇ ತೀರುವೆವು" ಎಂದವರು ಭರ

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರ. ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಜೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦(ಟಿ- ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಸೆಯನ್ನಿತ್ತರಲ್ಲದೇ ಅದಕ್ಕೆ ಕೆಲಸಮಯದ ಅವಧಿಯು ಬೇಕಾಗಬಹುದೆಂದು ಅಭಿಪ್ರಾಯಪಟ್ಟರು.

ದೇಶದ್ರೋಹಿಗಳೇ ದೇಶಭಕ್ತರು!

ಕಾಶ್ಮೀರ ಪ್ರಶ್ನೆಯನ್ನು ಎಂದೋ ಬಿಡಿಸಬಹುದಾಗಿತ್ತು ಎಂದು ರಾಷ್ಟ್ರೀಯ ಅವಾಮಿ ಲೀಗಿನ ಧುರೀಣ ಶ್ರೀ ಖಾನ ಅಬ್ದುಲ್ ಗಫರ ಖಾನರು ಕರಾಚಿಯ ಸಾರ್ವಜನಿಕ ಸಭೆಯಲ್ಲಿ ಹೇಳಿದರು. ಶ್ರೀ ಖಾನರು ಜೇಲಿನಲ್ಲಿದ್ದಾಗ ಶ್ರೀ ಜಿನ್ನಾರವರು ತಮ್ಮೊಡನೆ ಕಾಶ್ಮೀರ ತಂಟೆಯಲ್ಲಿ ಸಹಾಯವನ್ನು ಯಾಚಿಸಿದರೆಂದೂ ಆಗ ತಾನು ಈ ಕೆಲಸಕ್ಕೆಕೈಹಾಕುವ ಮೊದಲು ಪಾಕಿಸ್ಥಾನದಲ್ಲಿ ಪ್ರಜಾಪ್ರಭುತ್ವ ಸಮ್ಮತ ಸರಕಾರವು ಅಸ್ತಿತ್ವದಲ್ಲಿ ಬರಬೇಕೆಂದೂ ಇದು ಕೈಗೂಡಿದರೆ, ಪಾಕಿಸ್ತಾನದಲ್ಲಿ ಪಠಾಣರು, ಪಂಜಾಬಿಗಳು, ಸಿಂಧಿಗಳು, ಬಲೂಚಿಗಳು, ಬಂಗಾಲಿಗಳು ಹೀಗೆ ಎವರು ಬಾಂಧವರಂತಾಗಿ ಆರನೆಯವರಾದ ಕಾಶ್ಮೀರಿಗಳು ಅವರೊಡನೆ ಕೂಡಿಕೊಳ್ಳಬೇಕೆಂದು ಕೇಳಲು ತನಗೆ ಬಲಬರುತಿತ್ತೆಂದೂ ಆದರೆ, ಆಗ ಪಾಕಿಸ್ತಾನದಲ್ಲಿ ಅಧಿಕಾರದಲ್ಲಿದ್ದವರು ಪಾಕಿಸ್ತಾನವು ತಮ್ಮ ಆಸ್ತಿಯೆಂದು ಬಾವಿಸಿ ತನ್ನ ಸೂಚನೆಯನ್ನು ಗಮನಿಸದಿದ್ದುದರಿಂದ ಹಾಗೂ ಮುಂದಿನ ಅಧಿಕಾರಿಗಳು ಕಾಶ್ಮೀರ ತಂಟೆಯನ್ನು ಹರಿದ ಕೀರ್ತಿ ತನಗೆ ಬರಬಾರದೆಂಬ ಮಾತ್ಸರ್ಯಯುಕ್ತರಾದುದರಿಂದ ಈ ಸಮಸ್ಯೆ ಇಂದಿಗೂ ಉಳಿದಿದೆ ಎಂದೂ ದೂರಿದರು. ಇಂದು ಪಾಕಿಸ್ತಾನದಲ್ಲಿ ದೇಶದ್ರೋಹಿಗಳೇ ದೇಶಭಕ್ತರೆಂದು ಗೌರವಿಸಲ್ಪಡುತ್ತಿರುವರಲ್ಲದೇ ನಿಜವಾದ ದೇಶಭಕ್ತರನ್ನು ದೇಶದ್ರೋಹಿಗಳೆಂಬ ಹೆಸರಿಟ್ಟು ಜೀವಾಳಿಸಲಾಗುತ್ತದೆ. ಎಂದವರು ನುಡಿದರು.

ಉತ್ತರ ಕನ್ನಡಕ್ಕೆ ವಿದ್ಯುತ್

ಜೋಗ ವಿದ್ಯುತ್ತನ್ನು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಿಂದ ಉತ್ತರ ಕನ್ನಡ ಜಿಲ್ಲೆಯ ಭಟಕಳದವರೆಗೆ ವಿಸ್ತರಿಸಲು ಮೈಸೂರು ರಾಜ್ಯ ವಿದ್ಯುತ್ ಮಂಡಲವು ನಿರ್ಧರಿಸಿದೆ. ಇದಕ್ಕಾಗಿ ೧೬ ಇಳಿ ಲಕ್ಷ ರೂಪಾಯಿ ವೆಚ್ಚ ಬರುವ ಅಂದಾಜಿದ್ದು ಅದರಲ್ಲಿ ಈ ವರ್ಷ ೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುವುದು. ಈ ಯೋಜನೆಯು ಪೂರ್ತಿಯಾದಾಗ

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕ,ನರಕ	3=00
ಪಂಚಮಿತು	2=50
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=50
ಮೈಬುಕಲ್ಲಿನೊಡನೆ ಮಾತುಕತೆ	1=50
ಬಿಡಾರ್ಯದ ಅರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ

'ನವಯುಗ' ವಾರಪತ್ರಿಕೆ

ಉಡುಪಿ.

ವಾರ್ಷಿಕ ಚಂದಾ—

ರೂ 5-12-0 (5=75)

6 ತಿಂಗಳಿಗೆ— ರೂ. 3-0-0

ಮುಂಗಡವಾಗಿ ಕಳಿಸಬೇಕು.

ಉಡುಪಿ

ಕೇಂದ್ರ ಸಚಿವ ಶ್ರೀ ಗೋಪಾಲ ರೆಡ್ಡಿಯವರ ಹಿತೋಪದೇಶ—ಕೇಂದ್ರ ಸರಕಾರದ ಕಂದಾಯ ಮತ್ತು ನಾಗರಿಕ ಖಾತೆಯ ಸಚಿವ ಶ್ರೀ ಪಿ. ಗೋಪಾಲ ರೆಡ್ಡಿಯವರು ತಾ. 2ರಂದು ಬೆಳಿಗ್ಗೆ ಉಡುಪಿ ತಾಲೂಕು ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಮಾತನಾಡುತ್ತಾ, ಕಾಂಗ್ರೆಸು ಜೀವಂತವಿದೆಯೆಂದರೆ ಕಾಂಗ್ರೆಸಿನ ಪ್ರಚಾರ ಕಾರ್ಯದ ಅಭಾವ ಮಾತ್ರವಿದೆಯೆಂದುದರಿಂದ ಹಳ್ಳಿಗಳಲ್ಲಿ ಕಾಂಗ್ರೆಸ್ ಕೆಲಸಗಾರರು ಜನತೆಯ ಸಂಪರ್ಕವಿಟ್ಟು ಜನಜಾಗೃತಿಯನ್ನುಂಟುಮಾಡಬೇಕೆಂದು ಕೇಳಿಕೊಂಡರು. ಕಾಂಗ್ರೆಸ್ ಮಂಡಲ ಸಮಿತಿಗಳು ಭದ್ರವಾಗಿರಬೇಕು ಹಾಗಾದ್ದಲ್ಲಿ ಮಾತ್ರ ಮೇಲಿನ ಸಂಸ್ಥೆಗಳು ಸರಿಯಾಗಿ ನಡೆಯಬಲ್ಲುವು ಎಂದರು ಸಮಾಜವಾದಿ ಸಮಾಜ ರಚನೆಯ ಗುರಿ ಮುಟ್ಟುವುದಕ್ಕೆ ಭೂಸುಧಾರಣೆ ಪ್ರಥಮ ಮೆಟ್ಟಲಾಗಿರುವುದು ಎಂದು ಸೂಚಿಸಿದರು. ಕಾಂಗ್ರೆಸಿಗರು ಆಗಾಗ್ಗೆ ಒಟ್ಟುಗೂಡಿ ದೇಶದ ಸ್ಥಿತಿಗತಿಗಳನ್ನು ಚರ್ಚಿಸಿ ಜನಸಾಮಾನ್ಯರಿಗೆ ಪ್ರಚಾರ ಪಡಿಸಿದರೆ ಕಾಂಗ್ರೆಸ್ ಅಥವಾ ಕಾಂಗ್ರೆಸ್ ಸರಕಾರದ ಬೇಲಣ ಬೇಕೆಗಳು ಕಡಿಮೆಯಾಗುವುದು ಎಂದರು.

ಕೇಂದ್ರ ಸರಕಾರದ ಉಪಸಚಿವೆ ಶ್ರೀಮತಿ ವಾಯಲೆಟ್ ಅಳ್ವರು ಮಾತನಾಡುತ್ತಾ, ಕಾಂಗ್ರೆಸಿಗರಲ್ಲಿ ಒಕ್ಕಟ್ಟು, ಶಿಸ್ತು ಅಗತ್ಯವಾಗಿರಬೇಕೆಂದರು ಹೊಟ್ಟೆಯೊಳಗೊಂದು, ಮನತಿನಲ್ಲೊಂದು ಎಂಬ ದ್ವಿಮುಖ ಧೋರಣೆ ಕಾಂಗ್ರೆಸಿಗರಲ್ಲಿ ಎಂದೂ ಇರಕೂಡದು ಕಾಂಗ್ರೆಸು ಹಣಂತರ ಸಂಸ್ಥೆ ಎಂಬ ಅಪವಾದ ಹೋಗಲು ಕೂಲಿಕಾರ ಮಜೂರರಿಂದ ಒಂದೊಂದು ನಯಾ ಪೈಸೆ ಕಾಂಗ್ರೆಸಿನ ನಿಧಿಗೆ ಕೂಡಿಸುವ ಕಾರ್ಯಕ್ರಮ ಕಾರ್ಯರೂಪಕ್ಕೆ ಬರಬೇಕು ಆಗ ತಾನೆ ಕೂಲಿಕಾರರು, ಮಜೂರರು ಕಾಂಗ್ರೆಸ್ ಸಂಸ್ಥೆಗೆ ಅನಾಯಾಸವಾಗಿ ಸೇರುವಂತಾಗುವುದು ಎಂದು ಮುಂತಾಗಿ ಹೇಳಿದರು. ರೋಕ ಸಭೆಯ ಸದಸ್ಯ ಶ್ರೀ ಜೋಕಿಂ ಅಳ್ವರು ಮಾತನಾಡಿ ಕೆಳದೆಯ ಜನರ ಉದ್ಧಾರ ಆಗತ್ಯ ಆಗ ದೇಶಕಾಗಿದೆ ಎಂದರು ಕೇರಳದ ಪ್ರಯೋಗ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಗೋವಿಂದನ್ ನಾಯರರು ಕೇರಳದ ಪರಿಸ್ಥಿತಿಯನ್ನು ಚಿತ್ರಿಸಿ ಕಮ್ಯೂನಿಸ್ಟರು ವಿಜಯಗಳಾಗಲು ಕಾಂಗ್ರೆಸಿಗರಲ್ಲಿರುವ ದುರ್ಬಲತೆಗಳೇನೆಂಬುದನ್ನು ಚಿತ್ರಿಸಿದರು

ಸಭಾರಂಭದಲ್ಲಿ ಶ್ರೀ ಟಿ ಎ ಪೈಗಳು ಸ್ವಾಗತ ಭಾಷಣಮಾಡಿ ಕಾಂಗ್ರೆಸಿನ ವಿದ್ಯಮಾನಗಳನ್ನು ವಿವರಿಸಿದರು ಸಭಾಂತ್ಯದಲ್ಲಿ ಶ್ರೀ ಎ. ಜಿ ಅಳ್ವೆಯವರು ಧನ್ಯವಾದಗಳನ್ನಿತ್ತರು

ಶ್ರೀ ರೆಡ್ಡಿಯವರು ಶ್ರೀಕೃಷ್ಣ ಮಠದನ್ನು ಸಂದರ್ಶಿಸಿ ಸರ್ಯಾಯ ಕೃಷ್ಣಪುರ ಮಠದ ಶ್ರೀ ವಿದ್ಯಾಧೀಶ ತೀರ್ಥಸ್ವಾಮಿಗಳವರಿಂದ ಫಲಮಂತ್ರಾಕ್ಷತೆ ಸ್ವೀಕರಿಸಿದರು. ಸ್ಥಳೀಯ ಸಂಸ್ಕೃತ ಕಾಲೇಜನ್ನು ಸಂದರ್ಶಿಸಿದಾಗ ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯರು ಸ್ವಾಗತಿಸಿದರು. ಕಾಲೇಜು ಚಟುವಟಿಕೆಗಳನ್ನು ಕಂಡು ಹರ್ಷಚಿತ್ತರಾದ ಸಚಿವರು ತಾಂತ್ರಿಕ ಶಿಕ್ಷಣವಿಲ್ಲದಿರುವ ಉಪಕ್ರಮದ ಬಗ್ಗೆ ಸಲಹೆಗಳನ್ನಿತ್ತರು ಮಣಿಪಾಲ ಮಣಿಪಾಲದಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮತ್ತು ಎಂಜಿನಿಯರಿಂಗ್ ಕಾಲೇಜ ಗಳಿಗೆ ಭೇಟಿಯಿತ್ತು ಬಜ್ಪೆಗೆ ಪ್ರಯಾಣ ಬೆಳಸಿ ಅಲ್ಲಿಂದ ಮುಂಬಯಿಗೆ ಹೊರಟರು

ನಗರ ಸಭೆ—ಉಡುಪಿ ನಗರ ಸಭೆಯು ತಾ 2ರಂದು ನಗರ ಸಭಾಪತಿ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಮುನಿಸಿಪಲ್ ಆಫೀಸು ಪೇಟೆಯವರಿಗೂ ಇತರ ಕೆಳ ನಾಕರರಿಗೂ ಸಮವಸ್ತ್ರವೀಯಲು ರೂಪಾಯಿ 390/- ಸೆನಿಟರಿ ಇನ್ಸ್‌ಪೆಕ್ಟರರಿಗೆ ಯೂನಿಫಾರ್ಮ್ ಡ್ರೆಸ್ಸಿಗಾಗಿ ತಲಾ ರೂಪಾಯಿ 50/- ಸೆಂಕ್ಷನ್ ಮಾಡಲಾಯಿತು ಮುನಿಸಿಪಲ್ ಚೆರ್ಮನೇನ್ ವೆಸ್ ಚಿರ ಮನ್ನರ ಭಾವ ಚಿತ್ರಗಳ, ಮೆಂಬರರ ಗ್ರೂಪ್ ಫೋಟೋಗಳು ಉಚಿತವಾಗಿ ಕೌನ್ಸಿಲಿಗೆ ಕೊಟ್ಟಲ್ಲಿ ಅವನ್ನು ಕೌನ್ಸಿಲು ಹಾಲಿನಲ್ಲಿರಿಸಲಾಹುದೆಂದು ಸಭೆಯಲ್ಲಿ ನಿರ್ಣಯಿಲಾಯಿತು ಸಿ ಬಿ. ಸಿ ಜಿ ಎಸ್ ಎಲಿಪೆಂಟರ್ ಹಾರೆಯಲ್ಲಿ ಅಶೋಕ ಸ್ತಂಭ ನಿರ್ಮಿಸಲು ರೂಪಾ 250/- ದಾನವಿತ್ತ ಬಗ್ಗೆ ಶ್ರೀ ಎ ತ್ರಿವಿಕ್ರಮ ನಾಯ್ಕರನ್ನು ಅಭಿನಂದಿಸಲಾಯಿತು

ರಿಕ್ರಿಯೇಶನ್ ಕ್ಲಬ್ ಉದ್ಘಾಟನೆ—ಉಡುಪಿಯ ಲೈಫ್ ಇನ್ಶೂರೆನ್ಸ್ ಕಾರ್ಪೋರೇಶನ್ನಿನ ಸ್ಟಾಫ್ ರಿಕ್ರಿಯೇಶನ್ ಕ್ಲಬ್ಬಿನ ಉದ್ಘಾಟನೆಯನ್ನು ತಾ 2ರಂದು ಸಂಜೆ, ಎಕೆಡೆಮಿ ರಿಜಿಸ್ಟ್ರಾರ್ ಡಾ ಟಿ ನಾಥವ ಪೈಗಳು ನೆರವೇರಿಸಿದರು ಯಲ್ ಐ ಸಿ ಉಡುಪಿ ಡಿವಿಜನಿನ ಮೆನೇಜರ್ ಶ್ರೀ ಕೆ. ಆರ್ ಕೆ ಭಟ್ಟರು ಸಮಾರಂಭ ಅಧ್ಯಕ್ಷತೆ ವಹಿಸಿದ್ದರು

ಶ್ರೀ ಯು. ಕೆ ಕಿಣಿಯರು ಶ್ರೀ ಭಟ್ಟರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿದರು ಶ್ರೀ ಇ ಯು. ಜಾಕೋಟಿಯರು ಸ್ವಾಗತಿಸಿದರು. ಸಭಾಧ್ಯಕ್ಷರು ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಅನಾವರಣಮಾಡಿದರು. ಕ್ಲಬ್ಬಿನ ಕಾರ್ಯದರ್ಶಿಗಳಿಗಾದ ಶ್ರೀ ಆರ್ ಜಿ ಭಟ್ಟರು ಧನ್ಯವಾದಗಳನ್ನಿತ್ತರು ಅಫಾಉಸಾಹಾರ, ಜನಗಣಮನ ಗೀತೆಯಾಗಿ ಸಮಾರಂಭ ಕೊನೆಗೊಂಡಿತು

ನಗರ ಸಭೆಯ ಮಾನಪತ್ರ—ಕೇಂದ್ರ ಸರಕಾರದ ಗೃಹ ಶಾಖೆಯ ಉಪಸಚಿವೆ ಶ್ರೀಮತಿ ವಾಯಲೆಟ್ ಅಳ್ವರಿಗೆ ತಾ 3ರಂದು ಸಂಜೆ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಉಡುಪಿ ನಗರ ಸಭೆಯ ಕಡೆಯಿಂದ ಅವರ ಅಧ್ಯಕ್ಷ ಶ್ರೀ ಕೆ ಕೆ ಪೈಗಳು ಮಾನಪತ್ರವನ್ನರ್ಪಿಸಿದರು. ಡಾ. ಎಸ್ ಆರ್. ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಾನಪತ್ರಕ್ಕೆ ಉತ್ತರವೀಯುತಾ ಉಪಸಚಿವೆಯರು ಸ್ಥಾನಿಕ ಸಂಸ್ಥೆಗಳಲ್ಲಿ ಪಕ್ಷಪಂಗಡಗಳಿರುವುದು ಅಪೇಕ್ಷಿತವೆಂದರು ಶ್ರೀ ಜೋಕಿಂ ಅಳ್ವ, ಎಮ್ ಪಿ ಯವರು ಕೂಡಾ ತನ್ನ ವಿದೇಶ ಪ್ರವಾಸದ ಅನುಭವಗಳನ್ನು ವಿವರಿಸಿ ಮಾತನಾಡಿದರು. ಶ್ರೀ ಟಿ ಎ. ಪೈಗಳು ಧನ್ಯವಾದವಿತ್ತರು

ನಿಂಜೂರು— ಶ್ರೀ ವಿವೇಕಾನಂದ ಸೇವಾಸಂಘದ ಮಹಾ ಸಭೆಯು ತಾ. 3ರಂದು ಶ್ರೀ ಉಮಾನಾಥ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿ ಶ್ರೀ ಎನ್. ಹಿರಿಯಣ್ಣ ಶೆಟ್ಟಿರು ವರದಿಯನ್ನೋದಿದರು ಶ್ರೀಗಳಾದ ಎಸ್ ಪಿ ಶ್ರೀನಿವಾಸ ಆಚಾರ್ಯ (ಅಧ್ಯಕ್ಷ), ವೈ ಕೊರಗ ಶೆಟ್ಟಿ (ಉಪಾಧ್ಯಕ್ಷ) ಎನ್ ಹಿರಿಯಣ್ಣ ಶೆಟ್ಟಿ (ಕಾರ್ಯದರ್ಶಿ), ಜಗನ್ನಾಥ ಶೆಟ್ಟಿ (ಕೋಶಾಧಿಕಾರಿ) ಅಧಿಕಾರಿಗಳಾಗಿರುವ ಕಾರ್ಯನಿರ್ವಾಹಕ ಸಮಿತಿ ರಚಿಸಲಾಯಿತು

ಸೂಡಾ— ಸ್ಥಳೀಯ ಯುವಕ ಕೃಷಿಕ ಸಮಾಜದ ಪ್ರಥಮ ಸಭೆಯು ತಾ 2ರಂದು ಶ್ರೀ ಎಸ್ ದಾಮೋದರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ದಾಮೋದರ ಶೆಟ್ಟಿ, ಪಾವಲ್ ಅಸ್ತ್ರಿಲಿನೋ, ಎಸ್ ಜಯರಾಮ ಶೆಟ್ಟಿ, ಎಸ್ ಜಗನ್ನಾಥ ಶೆಟ್ಟಿರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ವಿವಾಹ ಸಮಾರಂಭಗಳು—

ದಿ ಚೆತ್ರೊತ್ತು ಚೆನ್ನು ಶೆಟ್ಟರ ಪುತ್ರಿ ಡಾ ಕೆ ರಾಮಕೃಷ್ಣ ಶೆಟ್ಟರು ಮೂಡಿಗೆರೆಯ ಡಾ ಪಿ ಎ ಅಕ್ಕಂತಾಯರ ಪುತ್ರಿ ಸೌ. ವಸಂತಿ ಕುಮಾರಿಯನ್ನು ಕಳದ ತಾ 30 ರಂದು ಮಂಗಳೂರಿನ ಪ್ರಭಾತ ಚಾಕೀಸಿನಲ್ಲಿ ವಿವಾಹವಾದರು

ಶೆಟ್ಟಿಬೆಟ್ಟು ಶ್ರೀ ಹಿರಿಯಣ್ಣ ಹೆಗ್ಡೆರ ಪುತ್ರಿ ಕುಸುಮಾಕೇಶಮಲತಾಳನ್ನು ಅಂಬ್ಲಾಡಿ ದಿ ಬೂದ ಶೆಟ್ಟರ ಪುತ್ರ ಶ್ರೀ ಜಗನ್ನಾಥ ಶೆಟ್ಟರು ಕಳದ ತಾ 30ರಂದು ಉಡುಪಿಯ ಶ್ರೀ ವರದೆಂದ್ರ ಕಲಾಮಂದಿರದಲ್ಲಿ ವಿವಾಹವಾದರು

ಕಾಪು ಕನ್ಯಾನಗುತ್ತು ಶ್ರೀ ಕಾಂತಪ್ಪ ಶೆಟ್ಟರ ಪುತ್ರಿ ಸೌ ಚಂದ್ರಕಲಾ ಮತ್ತು ಕುಂದಾಪುರದ ಆಟೊ ಕೇಟ್ ದಿ ವಿ ರಾಮಣ್ಣ ಶೆಟ್ಟರ ಪುತ್ರ ಶ್ರೀ ಗೋವರ್ಧನರ ವಿವಾಹವು ತಾ. 1ರಂದು ಬೊಂಬಾಯಿಯ ಸರ್ ಕೆವಾಸ್ಜಿ ಜಹಂಗೀರ್ ಹಾಲಿನಲ್ಲಿ ಸಾಂಗವಾಯಿತು



ಪ್ರೆಸಿಡೆಂಟ್

ಫೌಂಟೆನ್ ಪೆನ್ನುಗಳು

ತರಹೆವಾರು ಮತ್ತು ನಾನಾ ಬಣ್ಣಗಳಲ್ಲಿ ಸಿಗುವುವು.

ದಾರಿಯಲ್ಲಿಯ ಒಂಭತ್ತು ಹಳ್ಳಿಗಳಿಗೂ ವಿದ್ಯುತ್ ದೊರೆಯುವುದು

ಸರ್ವೋದಯದ ಸಮ್ಮೇಳನ

ಶಂಕರ ಪುರದಲ್ಲಿ ಸರ್ವೋದಯ ಸಮ್ಮೇಳನವು ಯಶಸ್ವಿಯಾಗಿ ನಡೆಯಿತು ಈ ಸಮ್ಮೇಳನದಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಬಾರತವು ತನ್ನ ಸಂಸ್ಕೃತಿ ಮತ್ತು ಬುದ್ಧಿಮತ್ತೆಯ ತಳಹದಿಯ ಮೇಲೆ ಸಮಾಜವನ್ನು ರಚಿಸಬೇಕು. ಇದರೊಂದಿಗೆ ಅವಿ ಭೌತಿಕ ಸಮೃದ್ಧಿಯನ್ನು ಸಾಧಿಸಲು ವೈಜ್ಞಾನಿಕ ಪ್ರಗತಿಯಾಲಾವನ್ನೂ ಬಳಸಿಕೊಳ್ಳಬೇಕು ಎಂದೂ ಸರ್ವೋದಯ ತತ್ವಜ್ಞಾನವು ಇಂಥಹ ವಿಚಾರದ ತಳಹದಿಯನ್ನೇ ಆಧರಿಸಿದೆ ಎಂದೂ ಹೇಳಿದರು. ಆಚಾರ್ಯ ವಿನೋಬಾರವರು ಗ್ರಾಮದಾನದ ಪ್ರಚಾರ ಕಾರ್ಯವನ್ನು ತೀವ್ರವಾಗಿಸುವುದು, ಹಳ್ಳಿ ಹಳ್ಳಿಗಳಲ್ಲಿ ಜನರನ್ನು ಸಾಕಷ್ಟು ಜ್ಞಾನಸಂಪನ್ನರನ್ನಾಗಿ ಮಾಡುವುದು—ದೊಡಲಾದುವುಗಳ ಮಹತ್ವಗಳನ್ನು ನಿದರ್ಶನ ಸಹಿತವಾಗಿ ಉಲ್ಲೇಖಿಸಿ ಮಾತಾಡಿದರು.

ಹಿಂದೀ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ

ಹಿಂದ್ಯೇತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಭಾರತ ಸರಕಾರವು ೧೧೦ ಶಿಷ್ಯವೃತ್ತಿಗಳನ್ನು ಕೊಡಮಾಡಿದೆ ಇವುಗಳನ್ನು ಪಡೆಯಬಯಸುವವರು ಜೂನ್೧೫ರ ಒಳಗಾಗಿ ಅರ್ಜಿಮಾಡಿಕೊಳ್ಳಬೇಕೆಂದು ಮೈಸೂರು ಸರಕಾರವು ಪ್ರಕಟಿಸಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಹಾಗೂ ಅರ್ಜಿಯ ಮಾದರಿಗಳನ್ನು ಕಾರ್ಯದರ್ಶಿ, ಶಿಕ್ಷಣ ಶಾಖೆ, ವಿಧಾನ ಸೌಧ, ಬೆಂಗಳೂರು ಈ ವಿಳಾಸಕ್ಕೆ ಬರೆದು ಪಡೆಯಬಹುದೆಂದೂ ಅದರಲ್ಲಿ ಹೇಳಲಾಗಿದೆ. ಮೈಸೂರು ರಾಜ್ಯದ ಮುಂಬಯಿ ಹಾಗೂ ಹೈದರಾಬಾದ ಕರ್ನಾಟಕ ಪ್ರದೇಶಗಳು ಮಂಜೂರಾಗಿವೆ ಎಂದು ತಿಳಿಯುತ್ತದೆ

ಮಂಗಳೂರು

ಅಂಚೆ ತಂತಿ ನೌಕರರ ಸಮಿತಿ— ಅಂಚೆ ಮತ್ತು ತಂತಿ ನೌಕರರ ರಾಷ್ಟ್ರೀಯ ಫೆಡರೇಶನ್ನಿನ ಮಂಗಳೂರು ಶಾಖೆಗಳ ಸಂಯೋಜನಾ ಸಮಿತಿಯ ಸಭೆಯು ತಾ. 26 ರಂದು ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ ಇತ್ಯಾದಿ ಕಾರ್ಯಕ್ರಮಗಳಾದ ಬಳಿಕ ಹೊಸ ವರ್ಷಕ್ಕೆ ಶ್ರೀಗಳಾದ ಬಿ. ಎಸ್. ಭಾಸ್ಕರರೈ, ಅಧ್ಯಕ್ಷ; ಜಿ. ವರ್ಗಿಸ್ ಮತ್ತು ಎ. ಬಾಬು, ಉಪಾಧ್ಯಕ್ಷರು; ಬಿ. ಸದಾಶಿವ ರಾವ್, ಕಾರ್ಯದರ್ಶಿ; ಎಮ್. ಎ. ಬಾವಾ ಮತ್ತು ಕೆ. ಆರ್. ಸೆಟ್ಟಿ, ಜತೆಕಾರ್ಯದರ್ಶಿಗಳು; ಜಿ ಲಕ್ಷ್ಮೀನಾರಾಯಣ ರಾವ್, ಅಧಿಕಾರಿಗಳಾಗಿ ಆರಿಸಲ್ಪಟ್ಟರು.

ಕೇಂದ್ರ ಉಪಸಚಿವೆ ಶ್ರೀಮತಿ ವಾಯಲೆಟ್ ಆಳ್ವ— ಕೇಂದ್ರ ಸರಕಾರದ ಉಪಗೃಹ ಸಚಿವೆ ಶ್ರೀಮತಿ ವಾಯಲೆಟ್ ಆಳ್ವ ಮತ್ತು ಅವರ ಪತಿ ಶ್ರೀ ಜೋಕಿಂ ಆಳ್ವ, ಎಮ್. ಪಿ ಅವರು ತಾ 28ರಂದು ಮಧ್ಯಾಹ್ನ ಕಡೂರಿನಿಂದ ಮಂಗಳೂರಿಗೆ ಆಗಮಿಸಿದರು. ಕದ್ರಿ ಪ್ರವಾಸಿ ಬಂಗ್ಲೆಯಲ್ಲಿ ಅಧಿಕಾರಿ ಹಾಗೂ ಇತರ ಪ್ರತಿಷ್ಠಾನಗಳವರು ಸ್ವಾಗತಿಸಿದರು.

ತಾ. 29ರಂದು ಉಪಸಚಿವೆಯರು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಉಪದೇಶಪರ ಭಾಷಣ ಮಾಡಿದರು. ದೇಶವನ್ನು ಪ್ರಗತಿಪಥದಲ್ಲಿ ಮುನ್ನಡೆಸುವ ಕಾರ್ಯದಲ್ಲಿ ಮಹಿಳೆಯರೆ ಹೊಣೆಗಾರಿಕೆಯೂ ಇರುವುದು. ಆದುದರಿಂದ ಮಹಿಳೆಯರು ಜಾಗೃತರಾಗಬೇಕಾದ ಸಮಯ ವೀಗ ಬಂದಿದೆ ಎಂದು ಹೇಳಿದರು. ದೇಶದಲ್ಲಿ ಈಗ ತಲೆದೋರಿರುವ ಜಾತೀಯತೆ ನಾಶವಾಗಬೇಕು, ಹಿಂದೀ ಭಾಷೆಯನ್ನು ಸರ್ವರೂ ಕಲಿಯಬೇಕು ಎಂದು ಮಂತ್ರಿಗಳು ನುಡಿದರು.

ಡಾ. ಯು. ಪಿ. ಮಲ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎ. ರಂಕರ ಆಳ್ವರು ಸ್ವಾಗತಿಸಿದರು. ಶ್ರೀ ಜೋಕಿಮ್. ಆಳ್ವ, ಎಮ್. ಪಿ ಯವರೂ ಮಾತನಾಡಿದರು. ಕೊನೆಯಲ್ಲಿ ಡಾ. ಕೆ. ಬಿ ಸೆಟ್ಟರು ಧನ್ಯವಾದ ವಿತ್ತರು.

ಪತ್ರಿಕಾ ಕರ್ತರ ಸಭೆಯಲ್ಲಿ— ಶ್ರೀಮತಿ ಆಳ್ವರು ಮಾತನಾಡುತ್ತಾ, ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯವನ್ನು ಸರಿಯಾಗಿ ರೂಪಿಸಬಲ್ಲಂತಹ ಸಣ್ಣ ಪತ್ರಿಕೆಗಳಿಗೆ ಸರಿಯಾದ ಬೆಂಬಲ್ಗಳು ಮತ್ತು ಕಾಗದವನ್ನು ಕೊಂಡುಕೊಳ್ಳುವ ಸಹಾಯ ನೀಡುವುದಕ್ಕಾಗಿ ದೇಶದಲ್ಲಿ ಸರಕಾರವು ಆರ್ಥಿಕ ಕೋಪೊರೇಶನುಗಳನ್ನು ತೆರೆಯಬೇಕೆಂದು ಹೇಳಿದರು. ಕಾರ್ಯಾನಿರತ ಪತ್ರಿಕೋದ್ಯಮಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಲು ಸರಕಾರವು ಪ್ರಯತ್ನಿಸಬೇಕೆಂದರು. ಶ್ರೀ ಜೋಕಿಮ್ ಆಳ್ವ, ಎಮ್. ಪಿ. ಅವರು ಮಾತನಾಡುತ್ತಾ, ಭಾರತದಲ್ಲಿ ಇನ್ನು ಮುಂದೆ ಭಾಷಾ ಪತ್ರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಗುವುದೆಂಬುದಾಗಿ ಅಭಿಪ್ರಾಯಪಟ್ಟು ಅವುಗಳ ಬೆಳವಣಿಗೆಗೆ ಸರಕಾರವು ಯೋಗ್ಯ ಸಹಾಯ ನೀಡಬೇಕೆಂದರು ಆರಂಭಗೊಳ್ಳಿ ಮಂಗಳೂರು ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಕೆ ಆರ್ ಆಚಾರ್, ಎಮ್. ಪಿ. ಯವರು ಸ್ವಾಗತವಾಡಿದರು ಶ್ರೀ ಕೆ. ಎಸ್. ಉಪಾಧ್ಯಾಯರು ವಂದನೆಗಳನ್ನಿತ್ತರು.

ಸಹಕಾರಿ ಸಂಘದ ಉದ್ಘಾಟನೆ— ಸಚಿವೆಯರು ಡಿ. ಸಿ. ಸಿಸರ್ ಶಾಲೆಯಲ್ಲಿದ ಕ. ಜಿಲ್ಲಾ ಪರಿಶಿಷ್ಟ ವರ್ಗದ ಕುಶಲ ಕೈಗಾರಿಕಾ ಕೆಲಸಗಾರರ ಸಹಕಾರಿ ಸಂಘವನ್ನು ಉದ್ಘಾಟಿಸಿದರು, ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಯವರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಯು. ಲಕ್ಷ್ಮಣನವರು ಸ್ವಾಗತಿಸಿದರು. ಶ್ರೀ ಪಿ ಕಮಲಾಕ್ಷನವರು ಧನ್ಯವಾದವಿತ್ತರು.

ಮಹಿಳಾ ಹಿತಚಿಂತನಾ ಕೇಂದ್ರಕ್ಕೆ— ಶ್ರೀ ಆಳ್ವ ದಂಪತಿಗಳು ಭೇಟಿಯಿತ್ತರು. ಅವರು ತಮ್ಮ ಭಾಷಣದಲ್ಲಿ, ಮಂಗಳೂರಿನಂತಹ ಮುಂದುರಿದ ಪಟ್ಟಣದಲ್ಲಿ, ತಲೆಯ ಮೇಲೆ ಮಲವನ್ನು ಹೇರಿಕೊಂಡು ಹೋಗುವ ಪದ್ಧತಿಯಿರುವುದನ್ನು ಖಂಡಿಸಿದರು.

ಸಿಂಡಿಕೇಟ್ ಬೇಂಕಿನ ಹೊಸ ಕಟ್ಟಡ ಉದ್ಘಾಟನೆ- ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮಂಗಳೂರು ಶಾಖೆಯ ಹೊಸ ಕಟ್ಟಡವನ್ನು ತಾ. 31ರಂದು ಸಂಜೆ ಕೇಂದ್ರ ಸರಕಾರದ ಕಂದಾಯ ಮತ್ತು ನಾಗರಿಕ ಪೆಡ್ಡಗಳ ಖಾತೆಯ ಸಚಿವರಾದ ಶ್ರೀ ಬಿ. ಗೋಪಾಲ ರೆಡ್ಡಿಯವರು ಉದ್ಘಾಟಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಮಂತ್ರಿ ಶ್ರೀ ಸೈಕುಂಠ ಬಾಳಿಗರು ವಹಿಸಿದ್ದರು. ಆರಂಭದಲ್ಲಿ ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ ಪೈಗಳು ಅತಿಥಿಗಳಿಗೆ ಹಾರಾರ್ಪಣ ಮಾಡಿದರು ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ. ಟಿ. ಎಂ. ಎ ಪೈಗಳು ಸ್ವಾಗತ ಭಾಷಣ ಮಾಡುತ್ತಾ, ಬೇಂಕಿನ ಪ್ರಗತಿಯನ್ನು ವಿವರಿಸಿ, ಬೇಂಕು ಮಹಿಳೆಯರಿಗಾಗಿ ಪ್ರತ್ಯೇಕ ವಿಭಾಗವನ್ನು ಬೇಗನೆ ತೆರೆಯಲಿರುವುದಾಗಿ ತಿಳಿಸಿದರು

ಸಚಿವರು ಉದ್ಘಾಟನಾ ಭಾಷಣದಲ್ಲಿ, ಕೈಗಾರಿಕೆಗಳ ಬೆಳವಣಿಗೆಗೆ ಅವಶ್ಯವಾದ ಭಂಡವಾಳವನ್ನು ದೀರ್ಘಾವಧಿ ಮತ್ತು ಮಾಧ್ಯಮಾವಧಿಯ ಸಾಲರೂಪದಲ್ಲಿ ಒದಗಿಸುವುದಕ್ಕೆ ಶೆಡ್ಯೂಲ್ಡ್ ಬೇಂಕುಗಳಿಗೆ ಸಾಧ್ಯವಾಗುವಂತೆ ದೇಶದಲ್ಲಿನ ಶೆಡ್ಯೂಲ್ಡ್ ಬೇಂಕುಗಳು ಸಾಲುಗಾರರಾಗಿರುವ ರೀಸ್ಟ್ರಾಕ್ಚರಿಂಗ್ ಕಾರ್ಪೊರೇಶನ್ನು ಬೇಗನೆ ತೆರೆಯಲ್ಪಟ್ಟು ಅದರ ಮುಖ್ಯ ಕಚೇರಿಯನ್ನು ಬೊಂಬಾಯಿಯಲ್ಲಿ ನಿಲಾಗುವುದೆಂದರು. ಈ ತನಕ ಕೈಗಾರಿಕೆಗಳಿಗೆ ದೀರ್ಘಾವಧಿ ಮತ್ತು ಮಧ್ಯಾವಧಿ ಸಾಲವನ್ನು ಒದಗಿಸುವುದಕ್ಕೆ ಶೆಡ್ಯೂಲ್ಡ್ ಬೇಂಕುಗಳಿಗೆ ರಿಜರ್ವ್ ಬೇಂಕಿನ ಅಕ್ಷೇಪವಿದ್ದಿತು ಈ ಕಾರ್ಪೊರೇಶನ್ನನ ರಚನೆಯಿಂದಾಗಿ ಕೈಗಾರಿಕೆಗಳಿಗೆ ಭಂಡವಾಳವು ಸರಿಯಾಗಿ ಮತ್ತು ಸುಲಭದಲ್ಲಿ ಒದಗಿ ಬರುವುದೆಂದರು. ಶ್ರೀ ಟಿ. ಎ. ಪೈಗಳು ಧನ್ಯವಾದವಿತ್ತರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ— ಕಾಂಗ್ರೆಸ್ ಕಾರ್ಯಕರ್ತರನ್ನೇ ಕುರಿತು ಶ್ರೀ ರೆಡ್ಡಿಯವರು ಮಾತನಾಡುತ್ತಾ, ಸರಕಾರವು ಕೈಕೊಳ್ಳುವ ಸಲವು ಉತ್ತಮ ಕಾರ್ಯಗಳ ಜ್ಞಾನವನ್ನು ಕಾಂಗ್ರೆಸ್ ಕೆಲಸಗಾರರು ಪಡೆಕೊಂಡು ಅದನ್ನೇ ಜನತೆಯಲ್ಲಿ ಪ್ರಚಾರಗೊಳಿಸಬೇಕಾಗಿದೆ ಎಂದರು ಸಭಾಧ್ಯಕ್ಷತೆ ವಹಿಸಿದ ಶ್ರೀ ಎ ಬಿ. ಸೆಟ್ಟಿರು ಮಾತನಾಡುತ್ತಾ, ದೇಶದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದಲ್ಲಿ ಪ್ರತಿಪಕ್ಷಗಳ ಬೆಳವಣಿಗೆಗೆ ಅವಕಾಶ ನೀಡಬೇಕೆಂಬುದಾಗಿ ಹೇಳಿದರು. ಆರಂಭದಲ್ಲಿ ಶ್ರೀ ಎ. ಶಂಕರ ಆಳ್ವರು ಸ್ವಾಗತಿಸಿದರು ಡಾ| ಕೆ. ಬಿ. ಸೆಟ್ಟರು ಆತಿಥಿಗಳಿಗೆ ಹಾರ ಅರ್ಪಿಸಿದರು. ಶ್ರೀ ಎಮ್. ರಮಾನಾಥರು ಧನ್ಯವಾದವಿತ್ತರು.

ಕೆನರಾ ಚೇಂಬರ್ ಆಫ್ ಕಾಮರ್ಸ್— ಸದಸ್ಯರ ಸಭೆಯಲ್ಲಿ ಸಚಿವರು ಮಾತನಾಡುತ್ತಾ, ಜನತೆಯ ಅಭಿಪ್ರಾಯಗಳನ್ನು ಸರಿಯಾಗಿ ಬಿಂಬಿಸಲು ಚೇಂಬರುಗಳನ್ನು ಬಲಪಡಿಸಬೇಕೆಂದರು. ಸರಕಾರವು ಕೈಕೊಂಡ ಹಲವಾರು ಯೋಜನೆಗಳಿಗೆ ಹಣವನ್ನು ಒದಗಿಸಲು ಸರಕಾರದ ಸಣ್ಣ ಉಳಿತಾಯ ಯೋಜನೆಗೆ ಜನತೆಯ ಬೆಂಬಲವನ್ನು ಅಪೇಕ್ಷಿಸಿದರು. ಆರಂಭದಲ್ಲಿ ಚೇಂಬರಿನ ಅಧ್ಯಕ್ಷ ಶ್ರೀ ಕೆ ಶ್ರೀನಿವಾಸ ಶೆಣೈಯವರು ಸಚಿವರಿಗೆ ಹಾರ ಅರ್ಪಿಸಿದರು. ಶ್ರೀ ಮಣೇಲ್ ಶ್ರೀನಿವಾಸ ನಾಯ್ಕರು ಸ್ವಾಗತಿಸಿ, ಮಂಗಳೂರು ಹಾಸನ ರೈಲ್ವೆಯನ್ನು ಬೇಗನೆ ಕೈಕೊಳ್ಳಬೇಕು, ಮಂಗಳೂರು ಬಂದರಿನ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವೀಯಬೇಕೆಂದರು ಕಾರ್ಯದರ್ಶಿ ಶ್ರೀ ಪಿ. ನರಶಿಂಗ ರಾಯರು ಸೆಂಟ್ರಲ್ ಎಕ್ಸೈಜ್ ಮತ್ತು ಆದಾಯ ತೆರಿಗೆಗೆ ಸಂಬಂಧಪಟ್ಟ ಜಿಲ್ಲೆಯ ಸಮಸ್ಯೆಗಳನ್ನು ವಿವರಿಸುವ ಮಾನಪತ್ರ ಅರ್ಪಿಸಿದರು.

ಸಚಿವರು ವೆಸ್ಟೋಕ್ ಅಸ್ಪತ್ರೆಗೆ ಭೇಟಿಯಿತ್ತಾಗ ಜಿಲ್ಲಾ ವೈದ್ಯಾಧಿಕಾರಿ ಡಾ ಎ. ತಿಮ್ಮಪ್ಪಯ್ಯನವರು ಸ್ವಾಗತಿಸಿದರು. ಮಧ್ಯಾಹ್ನದ ಕ. ಕ. ಜಿಲ್ಲಾ ಅಭಿವೃದ್ಧಿ ಮತ್ತು ಉತ್ತಿಂತನಾ ಬೋರ್ಡಿನ ಕಚೆಯಿಂದಲೂ ರಾತ್ರಿ ಸಿಂಡಿಕೇಟ್ ಬೇಂಕಿನ ಕಚೆಯಿಂದಲೂ ಸಚಿವರಿಗೆ ಬೋಜನ ಸತ್ಕಾರಗಳಾದವು.

ಚಾಗತಿಕ ಆರೋಗ್ಯ ಸಂಸ್ಥೆಯು— ಈ ತನಕ ಗ್ರಾಮೀಣ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಮಾತ್ರ ಸಹಾಯ ಕೋರುತಿದ್ದಿತು. ಇನ್ನು ಮುಂದೆ ಪಟ್ಟಣಗಳಲ್ಲೂ ಇಂತಹ ಆರೋಗ್ಯ ಕೇಂದ್ರಗಳನ್ನು ತೆರೆಯುವ ಯೋಜನೆ ನಡೆದಿದೆ. ಅದಕ್ಕಾಗಿ ಮಂಗಳೂರಲ್ಲಿ ಪ್ರಥಮವಾಗಿ ಒಂದು ಪ್ರಾಯೋಗಿಕ ಕೇಂದ್ರವನ್ನು ತೆರೆಯುವುದಾಗಿ ತಿಳಿದುಬರುತ್ತದೆ. ಈ ಕಾರ್ಯದ ಸಲುವಾಗಿ ಅಮೇರಿಕದ (ಇಂಡಿಯಾದ) ಶ್ರೀಮತಿ ಅಬಾಸ್ ಸಿಟ್ಟರಿ ಯೋರವರು ಮಂಗಳೂರಿಗೆ ಬಂದಿದ್ದರು.

ನಗರಸಭೆ— ಮಂಗಳೂರು ನಗರ ಸಭೆಯ ಸಾಮಾನ್ಯ ಸಭೆಯು ತಾ. 30ರಂದು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಭಗಿನೀ ಸಮಾಜಕ್ಕೆ ವರ್ಷಂಪ್ರತಿ ಕೊಡುವ ರೂಪಾಯಿ 1200/ರ ಸಹಾಯಧನವನ್ನು ಈ ವರ್ಷವೂ ಕೊಡಬಹುದೆಂದು ನಿರ್ಧರಿಸಲಾಯಿತು. ಗಿಲ್ಡ್ ಆಫ್ ಸರ್ವಿಸಿಗೆ ರೂ. 300/- ಸಹಾಯಧನ ಮಂಜೂರು ಮಾಡಲಾಯಿತು.

ಪೊಳಲಿ— ಕಲಿಯಂಗಳ ಗ್ರಾಮದ ಪೊಳಲಿ ಪಂಚಾಯತ ಬೋರ್ಡಿಗೆ ಶ್ರೀಗಳಾದ ಎ. ನಾರಾಣ್ಣ ಬಲ್ಲಾಳರು ಅಧ್ಯಕ್ಷರಾಗಿಯೂ, ಬಿ. ತಿಮ್ಮಂಪಣ ಬಲ್ಲಾಳ್, ಎನ್. ಎ. ಶೀನಪ್ಪ ಹೆಗ್ಡೆ, ಬೆಂಕಟ್ಟಮಣಿ ಭಟ್ಟ್, ಎಮ್. ಮಂಜಪ್ಪ ಪೂಜಾರಿ, ಮಮಿಂಗ್ ಪಿರೇರ, ಬಿ. ವಿಠಲ ಶೈ, ಮತ್ತು ಕೆ. ಮಾಮೂದು ಬ್ಯಾರಿಗಳು ಸದಸ್ಯರಾಗಿಯೂ ಆರಿಸಲ್ಪಟ್ಟರು

ದೇಲಂಪಾಡಿ— ಬಸಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಸದಿನಾಲ್ಕನೇ ವಾರ್ಷಿಕೋತ್ಸವವು ಕಳೆದ ತಾ. 24ರಂದು ಶ್ರೀ ಎಸ್. ಕೇಶವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಮಾನಂದ ಬನಾರಿಯ-ರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಯು. ಬಿ ಸೋಮಿಂದ ಭಟ್ಟರು ವರದಿಯನ್ನೋದಿದರು ಬಳಿಕ ಭೀಮ ಪ್ರತಾಪ್‌ರ್ಜುನ ಪ್ರಸಂಗದ ಯಕ್ಷಗಾನ ಕೂಟವು ನುರಿತ ಅರ್ಥವಾದಿಗಳ ಕೂಡುವಿಕೆಯಿಂದ ಜರಗಿತು ಅಂತಿಯೇ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ಶ್ರೀಕೃಷ್ಣ ವಿಜಯ ನಾಟಕವೂ ಅಭಿನಯಿಸಲ್ಪಟ್ಟಿತು ಶ್ರೀ ಕೇ. ವ ಕೇಶವ ನವರು ಧನ್ಯವಾದವಿತ್ತರು

ಹಿಲಿಯಾಣ— ಸ್ಥಳೀಯ ಬೋರ್ಡು ಹಾಗೂ ಎ ಶಾಲೆಯ ಅಧ್ಯಾಪಕರುಗಳಾಗಿದ್ದ ಶ್ರೀಗಳಾದ ಬಿ. ಎಸ್ ಹಾಂಬ್ಲ್ ಮತ್ತು ನರಶಿಂಹ ಸೆಟ್ಟರಿಗೆ ಬೇರೆ ಶಾಲೆಗಳಿಗೆ ವರ್ಗವಾದ ಪ್ರಯುಕ್ತ, ಅವರನ್ನು ಬೀಳ್ಕೊಡುವ ಸಮಾರಂಭವು ಈಚೆಗೆ ಶ್ರೀ ಎಚ್. ನಾರಾಯಣ ಸೂಡರವರ ಅಧ್ಯಕ್ಷತೆಯಲ್ಲೂ ಜರಗಿತು ಮುಖ್ಯೋಪಾಧ್ಯಾಯ ಶ್ರೀ ಬಿ. ಅನಂತ ಹೆಗ್ಡೆರು ಸ್ವಾಗತಿಸಿದರು. ಡಾ ಸಂಜೀವ ಸೆಟ್ಟಿ, ಶ್ರೀ ಎಚ್ ರಾಜೀವ ಸೆಟ್ಟಿ ನೊದಲಾದವರು ಕಾಲೋಚಿತ ಮಾತುಗಳನ್ನಾಡಿದರು,

ಉದಕ ಮಂಡಲ ದಾಸ ಪ್ರಕಾಶದಲ್ಲಿ ಮಕ್ಕಳ ಕೂಟ— ಕಳದ ತಾ. 17 ಮತ್ತು 18ರಂದು ಉದಕ ಮಂಡಲದ ದಾಸ ಪ್ರಕಾಶ ವಟಾರದಲ್ಲಿ 15ನೆ ವಾರ್ಷಿಕ ಮಕ್ಕಳ ಕೂಟವು ಮದ್ರಾಸುರಾಜ್ಯಸಾಲಗಾರ ಶ್ರೀ ಬಸ್ಟ್ಲೂರಾಮ ಮೇಥಿಯವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಈ ಮಕ್ಕಳ ಕೂಟದಲ್ಲಿ 280ಕ್ಕೂ ಮಿಕ್ಕಿ ಬಾಲಕ ಬಾಲಕಿಯರು ಭಾಗವಹಿಸಿದ್ದರು. ಮದ್ರಾಸಿನ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ, ಮದ್ರಾಸಿನ ಮೇಯರ್ ಶ್ರೀಮತಿ ತಾರಾ ಚೆರಿಯನ್, ಡಾ. ಕೆ. ಎಸ್. ರೈ, ಶ್ರೀಮತಿ ಪಕ್ಕಪಸ್ಸಲಂ, ನೀಲಗಿರಿ ಜಿಲ್ಲಾ ಕಲೆಕ್ಟರ್ ಶ್ರೀ ಲೋಬೊ ಪ್ರಭು ಮೊದಲಾದ ಅಧ್ಯರು ಉಪಸ್ಥಿತರಿದ್ದರು.

ದಾಸಪ್ರಕಾಶ ಹೊಟೆಲುಗಳ ಒಡೆಯರಾದ ಶ್ರೀ ಕೆ. ನೀತಾರಾಮರಾಯರು ಸ್ವಾಗತ ಭಾಷಣಮಾಡಿ, ಮಕ್ಕಳ ಕೂಟಗಳ ಗತ ಸಾರಂಭಗಳ ಚಟುವಟಿಕೆಗಳನ್ನು ವಿವರಿಸಿದರು. ಮಕ್ಕಳಕೂಟ ಸಮಿತಿಯ ಅಧ್ಯಕ್ಷ ಡಾ. ಕೆ. ಎಮ್. ರೈಗಳು ಮಕ್ಕಳಿಗೆ ಆಟ ಸ್ಪರ್ಧೆಗಳ ನ್ನಾಡುವುದರ ಮಹತ್ವವನ್ನು ವಿವರಿಸಿದರು. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಾರ್ವಜನಿಕ ಸಂಸ್ಥೆಗಳು ಸರ ಸ್ಥಳೀಯರಿಗೆ ಸ್ವಾಧೀನಗಳಾಗಿವೆ ಎಂದು ಸಂತೋಷ ಸೂಚಿಸಿದರು. ಶ್ರೀಮತಿ ಮೇಥಿಯವರು ಪಾರಿತೋಷ ವಿತರಣೆಮಾಡಿದರು. ತಾ 23, 24, 25 ರಲ್ಲಿ ದಾಸ ಪ್ರಕಾಶದ ನೀತಾರಾಮಂದಿರದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆ ಕಾರ್ಯಕ್ರಮಗಳಾದುವು.

ಮಿಲಿಯಗಟ್ಟಲೆ ಜನರು ಉಪಯೋಗಿಸಿ ತೃಪ್ತಿಪಡೆದ ಯಂತ್ರ



ಉ ಷಾ

ಇಡೀ ಕುಟುಂಬದ ಉಪಯೋಗ
ಕ್ಕಾಗುವ ಹೊಲಿಯುವ ಯಂತ್ರ
ಏಕಮೇವ ಮಾರಾಟ ಸಂಸ್ಥೆಯವರು:
ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
120, ಆರ್ಮೆನಿಯನ್ ಸ್ಟ್ರೀಟ್,
ಮದ್ರಾಸು—1.
ಗ್ರಾಮ್ಸ್:"USHAKO". ಫೋನ್: 2278.

Approved by the Text Book Committee of Madras, for non detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಮಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ V ನೇ ಫಾರ್ಮುಗಳಿಗೆ ಉಪಸ್ಥಿತ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ. ರೂ. ೧ : ೨೫

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ವಾರದ ಮಹಾನುಭಾವ—

ಶ್ರೀ ಗುಲಾಮ ಮಹಮ್ಮದ ಸಾದಿಕ

ಡೆಮೊಕ್ರೆಟಿಕ್ ನೇಶನಲ್ ಕಾನ್ಫರೆನ್ಸಿನ ಮುಂದಾಳುಗಳೂ ಕಾಶ್ಮೀರಿಗಳೂ ಆದ ಶ್ರೀ ಗುಲಾಮ ಮಹಮ್ಮದ ಸಾದಿಕರು ಶೇಖ ಅಬ್ದುಲ್ಲಾರವರ ಬಂಧನದ ವಿರುದ್ಧವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. 'ಹೀಗಾಗಬಾರದಿತ್ತು' ಎಂದವರ ಮತ. ಈ ವಿಚಾರದಿಂದ ಶ್ರೀ ಸಾದಿಕರ ಬಗ್ಗೆ ಈ ದೇಶದ ರಾಜನೀತಿಜ್ಞರು ಇಟ್ಟುಕೊಂಡ ಗೌರವಾದರಗಳಲ್ಲಿ ಸ್ವಲ್ಪಮಟ್ಟಿನ ಅಂತರವೇಳುವ ಸಂಭವವಿದೆ. ಪ್ರಾಮಾಣಿಕ ರೂಪದಲ್ಲಿ ಪಾಕಿಸ್ತಾನಿಯಾಗಿ ಹೋಗುತ್ತಿರುವ ಒಬ್ಬ ವ್ಯಕ್ತಿಯ ಬಂಧನಕ್ಕೆ ವಿರೋಧಾಭಿಪ್ರಾಯವನ್ನವರು ವ್ಯಕ್ತಪಡಿಸಿದ್ದಾರೆ. ಶ್ರೀ ಸಾದಿಕರ ತಲೆಯೂ ಅತ್ತ ಮಾಲಿರುವುದೇ ಎಂಬ ಶಂಕೆಯೇಳುವುದೂ ಸ್ವಾಭಾವಿಕವೇ. ಆದರೂ ಅವರ ವಿಚಾರಗಳನ್ನು ಪರಿಶೀಲಿಸಿದರೆ ಮತ್ತು ಅವರ ಜೀವನ ಪ್ರವಾಹವನ್ನು ನೋಡಿದರೆ ಉಕ್ತ ವಿಚಾರವನ್ನು ಮಾಡುವ ಆವಶ್ಯಕತೆಯಿರುವುದಿಲ್ಲ.

೪೭ ವರ್ಷ ಪ್ರಾಯದ ಶ್ರೀ ಸಾದಿಕರು ಕಾಶ್ಮೀರದಲ್ಲಿ ಪ್ರಸಿದ್ಧ ವಕೀಲರೆಂಬ ಹೆಸರಿನಿಂದ ಸರ್ವಶ್ರುತರಾಗಿದ್ದರು. ಅವರು ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟಾಗ, ಅವರ ಹೆಸರು ಬಿರುಗಾಳಿಯ ತೆರದಲ್ಲಿ ಕಾಶ್ಮೀರದ ಮೂಲೆ ಮೂಲೆಗೆ ಹೆಂಡಿತು. ಶ್ರೀ ಸಾದಿಕರ ಪರಿವಾರವು ರಾಷ್ಟ್ರೀಯ ಭಾವನೆಯ ಪರಿಚಯವನ್ನು ಅನೇಕಬಾರಿ ತೋರಿಸಿದೆ. ಮತ್ತು ಇದನ್ನು ನೋಡಿಯೇ ಶ್ರೀ ಸಾದಿಕರಿಗೆ ಸಂವಿಧಾನ ನಿರ್ಮಾಣಮಾಡುವ ಸಮಿತಿಯ ಅಧ್ಯಕ್ಷಸ್ಥಾನವನ್ನೂ ಕೊಡಲಾಗಿತ್ತು.

೧೯೩೧ ಮಾತು. ಆ ಸಮಯದಲ್ಲಿ ಶೇಖ ಅಬ್ದುಲ್ಲರೊಡನೆ ಕಾಶ್ಮೀರದಲ್ಲಿ ಬ್ರಿಟಿಷ ರಾಜ ಹಾಗೂ ರಾಜಶಾಹೀಯ ವಿರುದ್ಧ ಗುಡಿಯೆತ್ತುವ ಜನರು ಸೇರಿರೊಳ್ಳುತ್ತಿರಲಿಲ್ಲ. ಆಗ, ಶ್ರೀ ಸಾದಿಕರ ಪರಿವಾರವು ಶ್ರೀ ಶೇಖ ಅಬ್ದುಲ್ಲರಿಗೆ ಸಹಾಯ ಮಾಡಿತು. ಇದಕ್ಕೆ ಎರಡು ವರ್ಷಗಳ ಪೂರ್ವದಲ್ಲಿಯೇ ಶೇಖ—ಸಾದಿಕರ ಪರಿಚಯ ಬೆಳೆದಿತ್ತು. ಆ ಸಮಯದಿಂದಲೇ ನೇಶನಲ್ ಕಾನ್ಫರೆನ್ಸಿನ ಕಾರ್ಯಗಳಲ್ಲಿ ಶ್ರೀ ಸಾದಿಕರ ಸಹಯೋಗಕ್ಕೆ ಮೊದಲಾಗಿತ್ತು.

ಶ್ರೀ ಸಾದಿಕರು ಜನ್ಮದಿಂದಲೂ ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಯಾಗಿದ್ದರು. ಗಾಂಧೀಯವರ ಕಡೆಗೆ ಶ್ರದ್ಧೆಯನ್ನಿಟ್ಟು ಕಷ್ಟಪಡುತಿದ್ದ ಸಮಯದಲ್ಲಿ ಅವರು ೧೨ ವರ್ಷದವರಾಗಿದ್ದರೂ ಈ ಸಂಕಷ್ಟವನ್ನು ಸಹಿಸಲು ಹಿಂದೆಮುಂದೆ ನೋಡಲಿಲ್ಲ. ಅಲ್ಲದೇ ಅವರು ಶಾಲೆಯ ಆಂಗ್ಲ ಪ್ರಿನ್ಸಿಪಾಲರನ್ನೂ ಬಲವಾಗಿ ಎದುರಿಸಿದ್ದರು. ಗಾಂಧೀಯವರ ಬಂಧನದ ವಿರುದ್ಧವಾಗಿಯೂ ತಮ್ಮ ವಿದ್ಯಾಭ್ಯಾಸಾವಧಿಯಲ್ಲಿಯೇ ಎಂದರೆ ೧೯೩೦ರಲ್ಲಿ ಪ್ರಥಮ ವಿದ್ಯಾರ್ಥಿ ಸಂಗಡದ ನೇತೃತ್ವವನ್ನು ವಹಿಸಿದ್ದರು.

೧೯೩೧ರಲ್ಲಿ ರಾಜ್ಯದ ತತ್ಕಾಲೀನ ಸರಕಾರವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಆರೋಪವನ್ನು ಅವರ ಮೇಲೆ ಹೊರಿಸಿ ದಾವೆ ದಾಖಲು ಮಾಡಿದರು. ಅವರು ಪ್ರಜೆಗಳಲ್ಲಿ ಶಾಸನಕ್ಕೆ ಪ್ರತಿಭಾವನೆಯನ್ನು ಕೆಟ್ಟಿಸಿ ಅಸಂತೋಷವನ್ನು ಹರಡಿಸುತ್ತಿರುವರು ಎಂಬುದೇ ಅಪವಾದವಾಗಿತ್ತು. ಆದರೆ ಈ ದಾವೆಯು ಶರ್ಕಗಳಲ್ಲದೇನೇ ಕಾರಣಾಂತರದಿಂದ ಹಿಂತೆಗೆಯಲ್ಪಟ್ಟಿತು.

೧೯೩೨ರಲ್ಲಿ ಅವರನ್ನು ಡಂಗಿ ಸಂಶೋಧಕ ಆಯೋಗದ ಸದಸ್ಯರಾಗಿ ಮಾಡಲಾಯಿತು. ಈ ಸಮಯವು ಅವರಿಗೆ ರಾಜಕೀಯ ಉತ್ಥಾನದ ಕಾಲವಾಗಿತ್ತು. ಎರಡು ವರ್ಷಾನಂತರ ಅವರು ಕಾಶ್ಮೀರ ವಿಧಾನ ಸಭೆಗೆ ಆರಿಸಲ್ಪಟ್ಟರು. ಆ ಕಾಲದಲ್ಲಿ ಅವರು ಮುಸ್ಲಿಮ್ ಕಾನ್ಫರೆನ್ಸಿನ ಟಿಕೇಟಿನಲ್ಲಿ ಚುನಾವಣೆಗೆ ನಿಂತಿದ್ದರು. ೧೯೩೮ರವರೆಗೆ ಅವರು ಸದಸ್ಯರಾಗುಳಿದರು. ಆನಂತರ ಉತ್ತರದಾಯಿ ಸರಕಾರದ ಸ್ಥಾಪನೆಗಾಗಿ ಆಂದೋಲನವು ಆರಂಭವಾಯಿತು. ಶ್ರೀ ಸಾದಿಕರು ಅವರಲ್ಲಿ ಸಿಕ್ಕಿಬಿದ್ದರು. ವಿಧಾನಸಭೆಯ ಸದಸ್ಯತನವನ್ನು ಅಪಹರಿಸಲಾಯಿತು. ಆ ಮೇಲೆ ೧೯೪೭ರಲ್ಲಿ ಪುನಃ ಸದಸ್ಯರಾಗಿ ಚುನಾಯಿತರಾದರು.

ಈ ಮುಸ್ಲಿಮ್ ಕಾನ್ಫರೆನ್ಸು ಆಗ ಕಾಶ್ಮೀರದಲ್ಲಿ ಉತ್ತರದಾಯಿ ಸರಕಾರ ಸ್ಥಾಪನೆಯ ಬೇಡಿಕೆಯನ್ನು ಮುಂದಿಡುತಿತ್ತು. ಅಲ್ಲದೇ ಜನತೆಯಲ್ಲಿಯೂ ರಾಷ್ಟ್ರೀಯ ಭಾವನೆಗಳನ್ನು ಹರಡಿಸುತಿತ್ತು. ಭಾರತದಲ್ಲಿ ಸಾಂಪ್ರದಾಯಿಕತೆಯ 'ಜನತೆ'ಯ ಪ್ರಚಾರವನ್ನು ಕಂಡು, ಕಾಶ್ಮೀರದ ರಾಷ್ಟ್ರೀಯ ವಿಚಾರಧಾರೆಯ ಮುಸ್ಲಿಮರು ಕಾನ್ಫರೆನ್ಸ್‌ನ ಮುಸ್ಲಿಮ್ ಶಬ್ದವನ್ನು ಹೊರದೂಡಲು ಬಯಸಿ ೧೯೪೫ರಲ್ಲಿ ಐತಿಹಾಸಿಕ ಮಹತ್ತಿಕೆಯ ಅಧಿವೇಶನವನ್ನು ಕರೆದು ಪಕ್ಷದ ಹೆಸರನ್ನು ನೇಶನಲ್ ಕಾನ್ಫರೆನ್ಸ್ ಎಂದಿಟ್ಟರು. ಈ ಅಧಿವೇಶನದ ಅಧ್ಯಕ್ಷನು ಶ್ರೀ ಸಾದಿಕರೇ ಆಗಿದ್ದರು.

ಇದರನಂತರ ಚುನಾವಣೆ ನಡೆಯಿತು. ನೇಶನಲ್ ಕಾನ್ಫರೆನ್ಸಿನ ಜನರು ವಿಧಾನ ಸಭೆಯನ್ನು ಸೇರಿದರು. ವಿಧಾನಸಭೆಯಲ್ಲಿ ಕಾನ್ಫರೆನ್ಸ್ ಒಂದು ವಿರೋಧೀಪಕ್ಷವಾಗಿದ್ದು ಅದರ ಉಸಸಾಯಕತ್ವವು ಶ್ರೀ ಸಾದಿಕರಿಗೆ ದೊರೆಯಿತು. ಮುಂದೆ ೧೯೪೬ರಲ್ಲಿ "ಕಾಶ್ಮೀರವನ್ನು ತ್ಯಜಿಸಿರಿ" ಆಂದೋಲನವು ಮೊದಲಾಯಿತು. ಶ್ರೀ ಸಾದಿಕರು ಈಗಿನ ಪ್ರಧಾನಮಂತ್ರಿ ಶ್ರೀ ಬಕ್ಷಿ ಗುಲಾಂ ಮಹಮ್ಮದರೊಡನೆ ಓಡಿಹೋದರು. ಅವರಿಬ್ಬರೂ ರಾಷ್ಟ್ರದಿಂದ ಹೊರಬಂದು ರಾಷ್ಟ್ರೀಯ ಆಂದೋಲನದ ನೇತಾರರಾದರು.

೧೯೪೮ರಲ್ಲಿ ಶ್ರೀ ಸಾದಿಕರು ಕಾಶ್ಮೀರಕ್ಕೆ ಮರಳಿದರು. ಆ ಸಮಯದಲ್ಲಿ ಪಾಕಿಸ್ತಾನ ಮತ್ತು ಭಾರತಗಳ ನಡುವೆ ಕಾಶ್ಮೀರವು ಜೊಯ್ದಾಡುತಿತ್ತು. ಕಾಶ್ಮೀರಿಗಳ ವಿಚಾರಧಾರೆಯನ್ನು ಪಾಕಿಸ್ತಾನಕ್ಕೆ ತಿಳಿಸುವುದಕ್ಕಾಗಿ ಕಳುಹಿಸಲ್ಪಟ್ಟ ಪ್ರತಿನಿಧಿ ಮಂಡಳದ ನಾಯಕರೂ ಶ್ರೀ ಸಾದಿಕರಾದರು. ಕಾಶ್ಮೀರದಲ್ಲಿ ಆಕ್ರಮಣ ನಡೆದ ಸಮಯದಲ್ಲವರು ಮರಳಿದರು.

ಆನಂತರ ಶೇಖ ಅಬ್ದುಲ್ಲರು ಸಂಕಟ ಕಾಲೀನ ಮಧ್ಯಾವಧಿ ಸರಕಾರವನ್ನು ರಚಿಸಿದರು. ಅದರಲ್ಲಿ ಶ್ರೀ ಸಾದಿಕರಿಗೆ ಗೃಹ ಮಂತ್ರಿ ಪದವನ್ನು ಕೊಡಲಾಯಿತು. ಶ್ರೀ ಶೇಖ ಅಬ್ದುಲ್ಲರು ಭಾರತದ ಕಡೆಯಿಂದ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಗೆ ಕಳುಹಿಸಲ್ಪಟ್ಟಾಗ ಶ್ರೀ ಸಾದಿಕರೇ ಅವರ ಸ್ಥಾನದ ಹೊಣೆಯನ್ನು ನಿರ್ವಹಿಸಿದರು. ೧೯೪೪ರಲ್ಲಿ ಪುನಃ ಸರಕಾರ ಸ್ಥಾಪನೆಯಾಯಿತು; ಆಗ ಅವರು ನಿರ್ಮಾಣ ಮಂತ್ರಿಗಳಾದರು. ಅಲ್ಲದೆ ಮೂರು ವರ್ಷಗಳ ಕಾಲ ಅದರಲ್ಲುಳಿದರು. ಆ ಮೇಲೆ ಅವರು ವಿಧಾನಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮುಂದಕ್ಕೆ ಅವರು ಕಾಶ್ಮೀರದ ಭಾರತದ ಅಂಗವೆಂಬ ಪಾಠವನ್ನೇ ಬೆಂಬಲಿಸುತ್ತ ಬಂದಿದ್ದಾರೆ. ಹಾಗಿರುವಾಗ, ಶೇಖ ಅಬ್ದುಲ್ಲರ ಬಂಧನದ ವಿರುದ್ಧ ತುಟಿ ಬಿಚ್ಚಿದ ಮಹಾನುಭಾವನು ಭಾರತ ವಿರೋಧಿಯಾದನೇ ಎಂಬ ಸಂದೇಹಕ್ಕೆ ಆಸ್ಪದವಿರುವುದು ತೀರ ಕಡಿಮೆಯೇ ಆಗಿದೆ.

ಕನ್ನಡದಲ್ಲಿ ಅಲಂಕಾರ ಶಾಸ್ತ್ರಗಳು

(೪ನೇ ಪುಟದಿಂದ)

ಮೈಸೂರರಸರ ಕಾಲ

ಶಿಮ್ಮನನವರಾಲಂಕಾರ (೧೬೦೦) ರಸವಿವರಣೆಗಾಗಿಯೇ ವಿರಸಲಾದ ಮೂರನೆ ಗ್ರಂಥ. ಇದರಲ್ಲಿ ಸೂತ್ರ ವೃತ್ತಿಗಳನ್ನು ಅನ್ಯ ಕನ್ನಡ ಸಂಸ್ಕೃತ ಗ್ರಂಥಗಳಿಂದ ಆರಿಸಿದ್ದಾರೆ. ಸ್ವೋಪಜ್ಞ ಭಾಗವು ಮಾತ್ರ ಇದರಲ್ಲಿ ತೀರ ಕಡಿಮೆ. ಅಲ್ಲಲ್ಲಿ ಕೆಲವು ಉದಾಹರಣೆಗಳು ತ್ರಿಪದಿ ಮತ್ತು ಷಟ್ಪದಿಗಳಲ್ಲಿರುವುದು ಗಮನೀಯವಾಗಿದೆ.

ಮೈಸೂರು ಚಿಕದೇವ ರಾಜರ ಕಾಲದಲ್ಲಿ ತಿರುಮಲೆಯಾರ್ಯನು ಅಪ್ರತಿಮ ವೀರ ಚರಿತವನ್ನು ಬರೆದನೆ. ಇದರಲ್ಲಿ ಕಾವ್ಯಲಕ್ಷಣ, ರೀತಿ, ಗುಣಗಳು, ಶಯ್ಯ, ಪಾಕ, ಶಬ್ದಾಲಂಕಾರ ಮತ್ತು ೧೦೦ ಅರ್ಥಾಲಂಕಾರ ಮತ್ತು ೧೫ ರಸವದಲಂಕಾರಗಳನ್ನು ನಿರೂಪಿಸಿದ್ದಾನೆ ವಿದ್ಯಾನಾಥ, ಮಮ್ಮಟ, ವಾಮನ ಮತ್ತು ಅಪ್ಪಯ್ಯ ದೀಕ್ಷಿತರ ಲಕ್ಷಣಗಳನ್ನು ಕ್ರಮವಾಗಿ, ಶಯ್ಯ ಪಾಕ ಶಬ್ದಾಲಂಕಾರಗಳು, ಕಾವ್ಯಲಕ್ಷಣ ಶಬ್ದಾಪದ ಗುಣಗಳು, ಅರ್ಥಾಲಂಕಾರಗಳು ಕೊಂಡಿಕೊಂಡಿವೆ. ಆದರೂ ರಸಗಳಾಗಲೀ ಧ್ವನಿಯಾಗಲೀ ಕವಿಸಮಯವಾಗಲೀ ಇಲ್ಲಿ ಸ್ಥಾನ ಪಡೆದಿಲ್ಲ. ದೋಷನಿರೂಪಣೆಯನ್ನೂ ಮಾಡಿಲ್ಲ. ಪೂರ್ವಕರ ಲಕ್ಷಣಗಳನ್ನು ಇದ್ದಕ್ಕಿದ್ದಂತೆ ಕೊಟ್ಟು ಅದಕ್ಕೆ ಕನ್ನಡ ವೃತ್ತಿಯನ್ನು ಬರೆದು, ತನ್ನ ಒಡೆಯ ಚಿಕದೇವರಾಯನ ಸ್ತುತಿರೂಪದ ಪದ್ಯಗಳನ್ನು ಸ್ವತಃ ವಿರಚಿಸಿ ಉದಾಹರಿಸಿದ್ದಾನೆ. ಕನ್ನಡದಲ್ಲಿ ಅಲಂಕಾರಗಳನ್ನು ಸವಿಸ್ತಾರವಾಗಿ ವಿವರಿಸುವ ಗ್ರಂಥವೆಂದು ಇದಕ್ಕೆ ಗಣ್ಯಸ್ಥಾನವಿದೆ.

ಜಾಯೇಂದ್ರನು 'ಕುವಲಯಾನಂದಾಲಂಕಾರ ಶಾಸ್ತ್ರ'ವೆಂಬ ಹೆಸರಿನಲ್ಲಿ ಕುವಲಯಾನಂದವನ್ನು ಕನ್ನಡಕ್ಕೆ ಪರಿವರ್ತಿಸಿದನು. ಈತನು ೧೬೬೦ರಲ್ಲಿ ದೈವಾಧೀನನಾದನೆಂದು ತಿಳಿಯುತ್ತದೆ. ಚಿತ್ರ ವಿಮಾಂಸೆಯ ಧ್ವನಿ, ವ್ಯಂಗ್ಯ ವಿಭಾಗವನ್ನೂ ಸ್ವಲ್ಪ ಮಟ್ಟಿಗೆ ಸಂಗ್ರಹಿಸಿ, ರಸವದಲಂಕಾರಗಳನ್ನು ಕೈಬಿಟ್ಟಿದ್ದಾನೆ. ಈ ಜಾಯೇಂದ್ರನು ಭಾನುದತ್ತನ ರಸಮಂಜರಿಯಲ್ಲಿ ಹೇಳಿದ ರಸನಿರೂಪಣೆಯನ್ನು ಸಂಕ್ಷಿಪ್ತವಾಗಿ ಬರೆದ 'ಕರ್ನಾಟಕ ರಸಮಂಜರಿ'ಯನ್ನೂ ಬರೆದಿದ್ದಾನೆ.

೧೮೬೧ರಲ್ಲಿ 'ನರಪತಿ ವಿಜಯ'ವೆಂಬ ಹೆಸರಿನಲ್ಲಿ ಕುವಲಯಾನಂದದ ಅನುಸರಣೆಯಂತೆ ನೂರು ಅರ್ಥಾಲಂಕಾರಗಳನ್ನೂ ಕೆಲವು ಶಬ್ದಾಲಂಕಾರಗಳನ್ನೂ ಅಳಿಯ ಲಿಂಗರಾಜ ಹೇಳಿದ್ದಾನೆ. ಇದರಲ್ಲಿ ಮೈಸೂರ ಅರಸ ಕೃಷ್ಣರಾಜರ ಗುಣಗಳನ್ನು ವರ್ಣಿಸುವ ಪದ್ಯಗಳು ಉದಾಹೃತವಾಗಿವೆ ಅಲ್ಲದೇ ಅವು ಲಿಂಗರಾಜಕೃತವೇ ಆಗಿವೆ.

ಮುಂದಕ್ಕೆ ಹೊಸ ಗ್ರಂಥಗಳ ಸುಟ್ಟು ಕಡಿಮೆಯಾಗಿ ಪಠ್ಯ ಪುಸ್ತಕಗಳಿಗಾಗಿ ಅಲ್ಲಲ್ಲಿ ಸಂಗ್ರಹಗಳಾಗತೊಡಗಿದುವು. ಚನ್ನಪಟ್ಟಣದ ಜಾವಳಿ ರಾಮಸ್ವಾಮಿ ಶಾಸ್ತ್ರಿಯ 'ಕರ್ನಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹ'ವನ್ನು ಈ ಪೈಕಿ ಎತ್ತಿ ಹೇಳಬಹುದು. ಇದು ೧೯೨೯ ಶತಮಾನದ ಕೊನೆಯಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆಯಲ್ಪಟ್ಟದ್ದು, ಕಾವ್ಯಶಾಸ್ತ್ರ ಸಂಬಂಧವಾದ ಎಲ್ಲ ವಿಷಯಗಳನ್ನೂ ಬಳಗೊಂಡಿದೆ.

ಹೀಗೆ ಕನ್ನಡದಲ್ಲಿ ಶಾಸ್ತ್ರ ಗ್ರಂಥಗಳು ಹೇರಳವಿದ್ದರೂ ಅವು ಸಂಸ್ಕೃತದಿಂದ ಸ್ಫೂರ್ತಿಪಡೆದು ಹುಟ್ಟಿ ಬಂದವೆಂಬುದನ್ನು ಮರೆಯಬಾರದು. ಹೀಗಿದ್ದರೂ ಕೆಲವಲ್ಲಿ ಸ್ವೋಪಜ್ಞತೆಯೂ ಕಾಣಿಸುತ್ತದೆ.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ರೋಗ ನಿರೋಧಕ ಔಷಧಿಗಳು—

ಅಧಿಕೋತ್ತಿಯ ಕಾರ್ಯಕ್ರಮ

ಭಾರತ ಸರಕಾರದವರು, ದೇಶದಲ್ಲಿ ಔಷಧ ವಸ್ತುಗಳ ತಯಾರಿಕೆಯ ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನೇಕ ಕ್ರಮಗಳನ್ನು ಕೈಗೊಂಡಿರುವರು.

ಈಗಿನ ತಯಾರಕರು ಮೂಲ ರಾಸಾಯನಿಕ ವಸ್ತುಗಳಿಗೆ ಸಂಬಂಧಿಸಿದ ಮಧ್ಯವರ್ತಿ ವಸ್ತುಗಳಿಂದ ಔಷಧ ವಸ್ತುಗಳ ಉತ್ಪಾದನೆಯನ್ನು ಕೈಗೊಳ್ಳಲು ಪ್ರೋತ್ಸಾಹ ನೀಡಲಾಗುತ್ತಿದೆ ಸರಕಾರದವರು ಅಂಗೀಕರಿಸಿರುವ ಕಾರ್ಯಕ್ರಮಗಳ ಅನುಸಾರವಾಗಿ ಆದಷ್ಟು ಶೀಘ್ರವಾಗಿ ಮೂಲ ಔಷಧ ವಸ್ತುಗಳ ಉತ್ಪಾದನೆಯನ್ನು ಕೈಗೊಳ್ಳುವುದಕ್ಕಾಗಿ ಆಶ್ವಾಸನೆ ನೀಡುವ ಹೊಸ ತಯಾರಿಕರಿಗೂ ಅವಕಾಶ ಕಲ್ಪಿಸಲಾಗುವುದು.

ಮಧ್ಯವರ್ತಿ ವಸ್ತುಗಳ ಅಗತ್ಯತೆಯನ್ನು ಪೂರೈಸುವುದಕ್ಕಾಗಿ ಯಂತ್ರಾಗಾರವೊಂದನ್ನು ಸ್ಥಾಪಿಸುವ ಸಂಬಂಧವಾದ ಕಾರ್ಯಸೂಚನೆಯು ಪರಿಶೀಲನೆಯಲ್ಲಿದೆ. ಈ ಕಾರ್ಯಸೂಚನೆಯು ದ್ವಿತೀಯ ಯೋಜನಾವಧಿಯಲ್ಲಿ ಕಾರ್ಯರೂಪಕ್ಕೆ ತರಲ್ಪಡುವ ನಿರೀಕ್ಷೆಯಿದೆ.

ಪೆಂಸಿಲಿನ್ ಔಷಧಿಯ ತಯಾರಿಕೆಯನ್ನು ಹೆಚ್ಚಿಸುವ ಬಗ್ಗೆ ಹಾಗೂ ಸ್ಟ್ರೆಪ್ಟೊ—ಮೈಸಿನ್ ಔಷಧಿಯ ಉತ್ಪಾದನೆಯನ್ನು ಕೈಗೊಳ್ಳುವುದಕ್ಕಾಗಿ ಯಂತ್ರವನ್ನು ಸ್ಥಾಪಿಸುವ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಪೆಸಿಸಿಲಿನ್, ಕ್ಷಯ ರೋಗ ನಿವಾರಕ ಔಷಧಿ ವಸ್ತುಗಳಾದ "ಐ. ಎನ್. ಎಚ್.", ಮತ್ತು "ಪಿ. ಎ. ಎಸ್", ಆಮಶಂಕೆ ನಿವಾರಕ ಔಷಧಿ ಈ ಮುಂತಾದ ಔಷಧಿ ವಸ್ತುಗಳ ಉತ್ಪಾದನೆಯು ಗಮನಾರ್ಹವಾದ ಪ್ರಮಾಣದಲ್ಲಿ ಹೆಚ್ಚಿದೆ, ವಿಟಮಿನ್ 'ಎ', ಕಾರ್ಟಿಸೋನ್ ಮುಂತಾದ ಅಗತ್ಯ ವಸ್ತುಗಳ ಉತ್ಪಾದನೆಗಾಗಿ ಲೈಸೆನ್ಸುಗಳು ನೀಡಲ್ಪಟ್ಟಿವೆ.

ಪೆಸಿಸಿಲಿನ ಉತ್ಪಾದನೆಯು ೧೯೫೬ರಲ್ಲಿ ೧೪೦೦ ಲಕ್ಷ ಮೇಗಾ ಯುನಿಟ್‌ಗಳಷ್ಟಿದ್ದು, ೧೯೫೭ರಲ್ಲಿ ೨೩೫ ಲಕ್ಷ ಮೇಗಾ ಯೂನಿಟ್‌ಗಳಗೆ ಹೆಚ್ಚಿದೆ. ೧೯೫೬ರಲ್ಲಿ ಉತ್ಪಾದನೆ ಯಾದ ಐ. ಎನ್. ಎಚ್. ಔಷಧಿಯು ಮೂರರಷ್ಟನ್ನು ೧೯೫೭ರಲ್ಲಿ ಉತ್ಪಾದಿಸಲಾಗಿದೆ. ೧೯೫೬ ಕ್ಕಿಂತ ೧೯೫೭ರಲ್ಲಿ ಪಿ. ಎ. ಎಸ್. ಔಷಧಿಯ ಉತ್ಪಾದನೆಯು ಹತ್ತರಷ್ಟು ಹೆಚ್ಚಿತ್ತು. ಆಮಶಂಕೆ ನಿವಾರಕ ಔಷಧಿ ವಸ್ತುಗಳ ಉತ್ಪಾದನೆಯು ದ್ವಿಗುಣಗೊಂಡಿತ್ತು. ೧೯೫೭ರಲ್ಲಿ ಕೀಟ ನಾಶಕ ಹಾಗೂ ಸಲ್ಫಾ ಔಷಧ ವಸ್ತುಗಳ ಉತ್ಪಾದನೆಯು ದ್ವಿಗುಣಗೊಂಡಿತೆ.

೧೯೫೭ರ ಆದಿಭಾಗದಲ್ಲಿ ಔಷಧ ವಸ್ತುಗಳ ಮತ್ತು ಮೂಲ ಔಷಧ ವಸ್ತುಗಳ ಸಂಬಂಧವಾದ (ಫಾರ್ಮ ಸ್ಯೂಟಿಕಲ್ಸ್ ಎಂಡ್ ಡ್ರಗ್ಸ್) ಅಭಿವೃದ್ಧಿ ಪರಿಷತ್ತನ್ನು ಪುನಾರಚಿಸಲಾಯಿತು. ಈ ಪರಿಷತ್ತು ಉತ್ಪಾದನಾ ಗುರಿಗಳನ್ನು ವಿಚಾರಣೆ ಮಾಡುವುದಲ್ಲದೆ ಉತ್ಪಾದನಾ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದು.

ಮೂಲ ಔಷಧ ವಸ್ತುಗಳ ತಯಾರಿಕೆಗಾಗಿ ಪರಿಷತ್ತು ದ್ವಿತೀಯ ಯೋಜನಾವಧಿಗೆಂದು ಉತ್ಪಾದನಾ ಗುರಿಗಳನ್ನು ಮಂಜೂರುಮಾಡಿದೆ.

ವರ್ಷಕ್ಕೆ ೪೦೦ ಲಕ್ಷ ಮೇಗಾಯೂನಿಟ್‌ಗಳಷ್ಟು ಪೆನಿಸಿಲಿನ್ ಔಷಧಿಯನ್ನು ಉತ್ಪಾದಿಸುವ ಗುರಿಯನ್ನು ಕೊಂದಲಾಗಿತ್ತು. ಈಗ ಮಂಜೂರುಮಾಡಿರುವ ಗುರಿಯು ಪ್ರಕಾರ ೪೬೬ ಲಕ್ಷ ಮೇಗಾಯೂನಿಟ್‌ಗಳಷ್ಟು ಪೆನಿಸಿಲಿನ್ ಔಷಧಿಯನ್ನು ಉತ್ಪಾದಿಸಬೇಕಾಗಿದೆ ೧೯೫೦-೫೧ರ ವೇಳೆಗೆ ವರ್ಷಕ್ಕೆ ೮೫೦ ಟನ್ನುಗಳಷ್ಟು ಸಲ್ಫಾ ಔಷಧ ವಸ್ತುವನ್ನು ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ. ಈಗ ಮಂಜೂರುಮಾಡಲ್ಪಟ್ಟಿರುವ ಉತ್ಪಾದನಾ ಸಾಮರ್ಥ್ಯವು ೫೫೦ರಿಂದ ೫೦೦ ಟನ್ನುಗಳು ಮಾತ್ರ. ೨೮ ಟನ್ನುಗಳಷ್ಟು ಐ. ಎನ್. ಎಚ್. ಔಷಧವಸ್ತುವನ್ನು ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ. ಮುಂಚೆ ೧೦ ಟನ್ನುಗಳಷ್ಟು ಐ. ಎನ್. ಎಚ್. ಔಷಧವಸ್ತುವಿನ ಉತ್ಪಾದನಾ ಗುರಿಯನ್ನು ಹೊಂದಲಾಗಿತ್ತು.

ಮೂಲ ಕಚ್ಚಾ ಪದಾರ್ಥಗಳಿಂದ ಮೂಲ ಔಷಧ ವಸ್ತುಗಳನ್ನು ತಯಾರಿಸುವ ಸಂಬಂಧವಾದ ಯೋಜನೆಗಳನ್ನು ಅಂತಿಮವಾಗಿ ಸಿದ್ಧಗೊಳಿಸುವ ವಿಚಾರದಲ್ಲಿ ರಷ್ಯಾದ ತಜ್ಞರ ತಂಡವೊಂದು ನಡುವೆ ಸಮಾಲೋಚನೆ ನಡೆಯುತ್ತಿದೆ. ಭಾರತೀಯ ನಿಯೋಗವೊಂದು ರಷ್ಯಾ, ಇಟಲಿ, ಸ್ವಿಜರ್‌ಲೆಂಡ್, ಪಶ್ಚಿಮ ಜರ್ಮನಿ ಮತ್ತು ಪೂರ್ವ ಜರ್ಮನಿಗಳಿಗೆ ಭೇಟಿಯ ನಂತರವೇ ಈ ಮಾತುಕತೆಗಳು ನಡೆಯುತ್ತಿವೆ.

ವಿಶ್ವಬೇಂಕಿನ ಪ್ರಸಂಚ ಸೇವೆ—

ಭಾರತಕ್ಕೆ ಅತ್ಯಧಿಕ ಮೊತ್ತದ ಸಾಲ

ವಿಶ್ವಬೇಂಕು ವಿಶ್ವದ ರಾಷ್ಟ್ರಗಳಿಗೆ ವಿಶೇಷ ಧನಸಹಾಯವನ್ನು ಮಾಡುತ್ತಿದೆ. ಇತ್ತೀಚೆಗೆ ಭಾರತಕ್ಕೆ ಈ ಬೇಂಕು ಎರಡು ಸಾಲಗಳನ್ನು ಮಂಜೂರು ಮಾಡಿದೆ. ಅಲ್ಲದೇ ಜಪಾನಿನಲ್ಲಿ ಎರಡು ವಿದ್ಯುಚ್ಛಕ್ತಿ ಸಾಲಗಳ ಬಗ್ಗೆ ಮಾತುಕತೆಗಳನ್ನು ಮುಂದುವರಿಸುತ್ತಿದೆ. ಇವುಗಳು ಪೂರ್ಣಗೊಂಡಾಗ, ವಿಶ್ವಭೂಖಂಡಕ್ಕೆ ವಿಶ್ವಬೇಂಕು ಕೊಟ್ಟ ಸಾಲಗಳು ಒಂದು ಸಾವಿರ ದಶಲಕ್ಷದ ಮೊತ್ತವನ್ನು ಮುಟ್ಟುವುವು.

ವಿಶ್ವಬೇಂಕಿನ ಅಂಕೆಸಂಖ್ಯೆಗಳ ಮೇರೆಗೆ ಈ ವರ್ಷದ ಮೇ ತಿಂಗಳಾರಂಭದವರೆಗೆ ವಿಶ್ವದಲ್ಲಿ ಅತ್ಯಧಿಕ ಸಾಲವನ್ನು ಪಡೆದ ದೇಶವೆಂದರೆ ಭಾರತ. ಭಾರತಕ್ಕೆ ನೀಡಲಾದ ಸಾಲವು ೩೭೫,೧೦,೦೦೦ ಡಾಲರುಗಳು. ಭಾರತದ ನೆರೆ ರಾಷ್ಟ್ರವಾದ ಪಾಕಿಸ್ತಾನಕ್ಕೆ ಇತ್ತ ಸಾಲದ ಮೊತ್ತ ೧೨, ೩೪,೫೦,೦೦೦ ಡಾಲರ್‌ಗಳು.

ಕಲಕತ್ತೆಯ ಬಂದರವನ್ನು ಉತ್ತಮಗೊಳಿಸುವ ಕಾರ್ಯಕ್ಕಾಗಿ ೬೦ ಲಕ್ಷ ಡಾಲರಿನ ಮತ್ತು ಮದರಾಸಿನಲ್ಲಿ ಇದೇ ರೀತಿಯ ಕಾರ್ಯಗಳಿಗಾಗಿ ೧೪೦ ಲಕ್ಷ ಡಾಲರಿನ ಎರಡು ಸಾಲಗಳು ಇತ್ತೀಚೆಗೆ ಮಂಜೂರಾಗಿವೆ ಇವುಗಳಿಂದ ವಿಶ್ವಬೇಂಕು ವಿಶ್ವದ ರಾಷ್ಟ್ರಗಳಿಗೆ ಒಟ್ಟು ೮೮೦ ಲಕ್ಷ ಸಾಲವನ್ನು ಕೊಟ್ಟಂತಾಯಿತು. ವಿಶ್ವದ ರಾಷ್ಟ್ರಗಳಿಗೆ ಪ್ರಸಂಚ ಬೇಂಕಿನ ಸಾಲ ನೀಡಿಕೆಯು ಈಗ ದಾಖಲೆಯ ಮಟ್ಟವನ್ನು ತಲುಪಿದೆ ಈ ಹಣಕಾಸಿನ ವರ್ಷದಲ್ಲಿ ಕೆಲವೇ ವಾರಗಳು ಉಳಿದಿದ್ದರೂ ವಿಶ್ವದ ರಾಷ್ಟ್ರಗಳ ಹೊಸ ಸಾಲ ೨೭೪೦ ಲಕ್ಷ ಡಾಲರನ್ನು ಮುಟ್ಟಿವೆ. ಈ ಸಂಖ್ಯೆಯು ಈ ಮೊದಲಿನ ಹಣಕಾಸಿನ ವರ್ಷಗಳಿಗಿಂತ ೧,೦೦೦ ಲಕ್ಷ ಡಾಲರುಗಳನ್ನು ಹೆಚ್ಚಾಗಿದೆ.

ವಿಶ್ವದ ಸದಸ್ಯರಾಷ್ಟ್ರಗಳು ಪ್ರಸಂಚ ಬೇಂಕಿನ ಸಾಲಗಳಲ್ಲಿ ಅತ್ಯಧಿಕ ಸಾಲ ಪಡೆದ ಹಣಕಾಸಿನ ವರ್ಷಗಳಲ್ಲಿ ಅನುಕ್ರಮವಾಗಿ ಇದು ಮೂರನೆಯ ವರ್ಷವಾಗಿರುತ್ತದೆ. ಈ ವರ್ಷದ ಪ್ರಮಾಣವು ಈ ಸ ದೇಶಕ್ಕೆ ಈ ಹಿಂದೆ ನೀಡಿರುವ ಸಾಲಗಳನ್ನೂ ಮೀರಿರುತ್ತದೆ. ವಿಶ್ವಕ್ಕೆ ಬೇಂಕು ಸಾಲನೀಡಿಕೆಯು ಆಯಾ ದೇಶಗಳನ್ನ ಅಭಿವೃದ್ಧಿಯ ಅವಶ್ಯಕತೆಗಳನ್ನು ಮತ್ತು ಅಭಿವೃದ್ಧಿಯ ರೀತಿಗಳನ್ನು ಅವಲಂಬಿಸಿರುತ್ತದೆ. ಸ ಚಲಿತ ವರ್ಷದಲ್ಲಿ ಭಾರತಕ್ಕೆ ನೀಡಲಾದ ಸಾಲುಗಳು— ಪ್ರತಿಯೊಂದು ಸಾಲವೂ ಬೇರೆ ಬೇರೆ ಚಲಾವಣೆ ನಾಣ್ಯಗಳಲ್ಲಿದ್ದುವು— ಬೇಂಕು ಸಾಲನೀಡುವ ಉದ್ದೇಶಗಳಿಗೊಂದು ಉತ್ತಮ ನಿದರ್ಶನವಾಗಿದೆ.

ಒಟ್ಟು ೯೦೦ ಲಕ್ಷ ಡಾಲರ್‌ನಷ್ಟು ಬೆಲೆಬಾಳುವ ಈ ಸಾಲಗಳು ಭಾರತದ ರೇಲ್ವೆಗಳಿಗೆ ಅವುಗಳ ಬೃಹದ್ಗಾತ್ರದ ಸಂಚವಾರ್ಷಿಕ ವಿದೇಶೀ ವಿನಿಮಯ ವೆಚ್ಚಗಳನ್ನು ನಿರ್ವಹಿಸಲು ಸಹಾಯಕವಾಗುತ್ತವೆ. ಈ ಕಾರ್ಯಕ್ರಮವು ಎರಡು ಆವಶ್ಯಕತೆಗಳನ್ನು ಪೂರೈಸುವುದೆಂದು ನಿರೀಕ್ಷಿಸಲಾಗಿದೆ ಇದು ಪ್ರಥಮ ಪಂಚವರ್ಷಿಕ ಯೋಜನೆಯಲ್ಲಿ ಭಾರತ ಸಾಗಿಸುವುದರಲ್ಲಿ ಉಂಟಾದ ಸೇಕಡಾ ೨೦ರ ಹೆಚ್ಚಳ ನ್ನು ರೇಲ್ವೆ ವ್ಯವಸ್ಥೆಗೆ ನಿರ್ವಹಿಸಲು ಸಾಧ್ಯವಾಗುವಂತೆ ಮಾಡುವುದು ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಯ ರೇಲ್ವೆ ವಿಸ್ತರಣಾ ಕಾರ್ಯಗಳಿಂದ ರೇಲ್ವೆಗೆ ವರ್ಷಪೊಂದಕ್ಕೆ ೧೬೦ ಲಕ್ಷ ಟನ್ನುಗಳಷ್ಟು ಭಾರವನ್ನು ಸಾಗಿಸಲು ಸಾಧ್ಯವಾಗಬಹುದೆಂದು ನಿರೀಕ್ಷಿಸಲಾಗಿದೆ.

ಪ್ರಪಂಚ ಬೇಂಕು ಏಶ್ಯದಲ್ಲಿ ನೇರವಾಗಿ ಖಾಸಗಿ ಸಾಹಸೋದ್ಯಮಗಳಿಗೆ ಸಾಲ ನೀಡುವ ಅಧಿಕೃತ ಪ್ರತಿನಿಧಿಗಳಿಗೆ ಒಟ್ಟು ೨೨೦ ಲಕ್ಷ ಡಾಲರು ಬೆಲೆಯ ೧೭ ಸಾಲಗಳಷ್ಟಿತ್ತಿದೆ. ಭಾರತದಲ್ಲಿ ಬೇಂಕು ಇಂತಹ ಖಾಸಗಿ ಉದ್ಯಮಗಳಿಗೆ ೧೯೫೦ ಲಕ್ಷ ಡಾಲರುಗಳನ್ನು ಸಾಲ ನೀಡಿದೆ. ಅತಿ ಹೆಚ್ಚಿನ ಸಾಲ ಪಡೆದ ವಿಭಾಗವು ದೇಶದ ಖಾಸಗಿ ಕ್ಷೇತ್ರದಲ್ಲಿರುವ ಉಕ್ಕಿನ ಕೈಗಾರಿಕೆ—ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ ಮತ್ತು ಬಾರತೀಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು. ಈ ಕಾರಖಾನೆಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಇಮ್ಮಡಿಗೊಳಿಸಲು ಅವಶ್ಯವಿರುವ ಸಲಕರಣೆಗಳ ಮತ್ತು ಸೇವೆಗಳ ಆಮದುಗಳಿಗೆ ಬೇಕಾದ ಹಣಕ್ಕಾಗಿ ಬೇಂಕಿನಿಂದ ೧೫೦ ಲಕ್ಷ ಡಾಲರ್‌ಗಳ ಸಾಲವನ್ನು ಪಡೆದುವು. ಟ್ರಾಂಬೇ ವಿದ್ಯುಚ್ಛೇಂದ್ರ ಪ್ರಾರಂಭದ ರಚನೆ ಮತ್ತು ಅನಂತರದ ವಿಸ್ತರಣೆಗೆ ಬೇಕಾದ ಹಣ ನಿರ್ವಹಣೆಗೆ ಸಹಾಯಮಾಡಲು ತಾತಾ ವಿದ್ಯುತ್ ಕಂಪೆನಿಗಳಿಗೆ ಒಟ್ಟು ೨೭೦ ಲಕ್ಷ ಡಾಲರುಗಳ ಎರಡು ಸಾಲಗಳನ್ನು ಹೆಚ್ಚಿಗೆ ನೀಡಲಾಯಿತು. ಆರಂಭದ ಕಾರಖಾನೆಯು ಈಗ ಬೊಂಬಾಯಿ ನಗರಕ್ಕೆ ೧೫೫ ಸಾವಿರ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಪೂರೈಸಲು ಶಕ್ತವಾಗಿದೆ ಮತ್ತು ಈ ಪ್ರದೇಶದಲ್ಲಿ ೧೯೬೦ನೆ ವರ್ಷದೊಳಗೆ ಇನ್ನೂ ೬೫೦ ಕಿಲೋವಾಟ್‌ಗಳ ಅಧಿಕ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಮರ್ಥವಾಗುವುದು.

ಹೀಗೆಯೇ ವಿಶ್ವಬೇಂಕು ಪಾಕಿಸ್ತಾನ, ಬ್ರಹ್ಮ, ಸಿಂಹಳ, ಇರಾನ್, ಇರಾಕ್, ಜಪಾನ್, ಲೆಬೆನಾನ್, ಪಿಲಿಪ್ಪೈನ್ಸ್ ದ್ವೀಪಗಳು, ಥೈಲೆಂಡ್‌ಗಳಿಗೂ ಆಯಾ ದೇಶಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಸಾಲವನ್ನು ನೀಡುತ್ತಿದೆ. ಈ ಸಾಲಗಳಿಂದಾಗಿ ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಈ ರಾಷ್ಟ್ರಗಳು ತಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆಳಿಸಿ ಔದ್ಯೋಗೀಕರಣದತ್ತ ಧಾವಿಸಿ ತಮ್ಮ ಆರ್ಥಿಕ ಮಟ್ಟವನ್ನು ಏತ್ತರಿಸಿಕೊಳ್ಳಲು ಸಮರ್ಥವಾಗುತ್ತಿವೆ. ಈ ಉದ್ದೇಶದಿಂದಲೇ ಸ್ಥಾಪಿತವಾದ ಈ ಪ್ರಪಂಚಬೇಂಕು ತನ್ನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ ಎಂಬುದು ಅದರ ಮೂಲ ಸಂಸ್ಥೆಯಾದ ಯುಕ್ತ ರಾಷ್ಟ್ರ ಸಂಘಕ್ಕೂ ಈ ಸಂಘದ ಸದಸ್ಯ ರಾಷ್ಟ್ರಗಳಿಗೂ ಒಂದು ಗೌರವಾಭಿಮಾನದ ಸಂಗತಿಯಾಗಿದೆ,

ನೋವುಗಳ ಅತ್ಯುತ್ತಮ ಸಹಾಯಿಣಿ.



ಅಮೃತಾಂಜನ

ಗುಟ್ಟಾಗಿ ಸರಸಿ, ಸಂತೋಷದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಾ || ಅಂಬಳಿ ರಾಮಸ್ವಾಮಿ ಅಯ್ಯಂಗಾರವರ ರತ್ನದ್ರವ್ಯಗಳು

ಟ್ರೇಡ್ ಮಾರ್ಕ್



ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್)

ಮದನ ನಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹುಷ್ಟೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ನಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಕಾರಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ಸಪುಂಸಕತೆಯನ್ನು ಹೋಗಲಾಡಿಸುತ್ತದೆ.

ಸಂ: A. R. ಅಯ್ಯರ್

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಶ್ರೀನಗರ ಕ್ಯಾಟಲಾಗ್ ಮತ್ತು ಪತ್ರಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ. (ನ. ಯು.)

628, ಅಂಬಳಿ ಅಣ್ಣಯ್ಯ ಸಂಡಿತ್ ವರ್ಕ್ಸ್ ಸೌತ್ ಕ್ರಾಸ್, ಮೈಸೂರು-1 (S.I.)

ನಿರಾಸೆಯ ನಿಟ್ಟುಸಿರು

(೨ನೇ ಪುಟದಿಂದ)

'ನಿಮ್ಮ ಮಗನ ಜಾತಕ ಕೊಡ್ತೀರ ..." ಎಂದುಕೊಂಡು ಮುಂದೆ ಬರುತಿದ್ದರು

'ಕೆಲಸ ಸಿಗದೆ ಮದುವೆ ಬೇಡ" ಎಂದು ಶ್ರೀಪತಿ ಹೆರಹಿಡಿದು ಕುಳಿತಿದ್ದ ಕೆಲಸ ಸಿಕ್ಕಿತು. B A. ಯಲ್ಲಿ ಫಸ್ಟ್ ಕ್ಲಾಸ್ ತೆಗೆದ ಆತನಿಗೆ ಕೆಲಸ ಸಿಗಲು ಕಷ್ಟವಾಗಲಿಲ್ಲ .

ತಿಂಗಳಿಗೆ ೩೫೦ ರೂಪಾಯಿಯ ಕೆಲಸ ಬೆಂಗಳೂರಿನಲ್ಲಿ ಸಿಕ್ಕಿತ್ತು .ಎರಡು ತಿಂಗಳಾಗಿತ್ತು ಆತ ಬೆಂಗಳೂರಿಗೆ ಹೋಗಿ ಪ್ರಭಾವ ತಿಂಗಳು ೨೦೦ ರೂಪಾಯಿ ಮನಿಯಾರ್ಡರ್ ಬಂದಿತ್ತು ..

ಈ ತಿಂಗಳು ತಾ ೨೦ ಆದರೂ ಹಣ ಇಲ್ಲ .. "ಕೂಡಲೆ ಹಣ ಕಳುಹಿಸು " ಎಂದು ತಂತಿ ಕೊಟ್ಟಿದ್ದರೂ ಅದಕ್ಕೂ ಉತ್ತರವಿಲ್ಲ .

ರಾಯರಿಗೆ ಅದೇ ಯೋಚನೆ .. "ಏನು? ಆತನಿಗೆ ಏನಾಗಿದೆ? ಇಷ್ಟು ಜೇಗ ತಂದೆಯನ್ನು ಮರೆತನೇ?" "ಛೇ . ಹಾಗಿಲ್ಲ "

"ಮತ್ತೇಕೆ ಹಣವಿಲ್ಲ " ರಾಯರ ತಲೆ ಚಿಟ್ಟುಹಿಡಿದುಹೋಯಿತು ...

"ಇಂದು ಬಂದೀತು ನಾಳೆ ಬಂದೀತು ..." ಆಂತ ದಿನವೂ ಪೋಸ್ಟ್‌ಮ್ಯಾನ್‌ನ ದಾರಿ ಕಾಯುತಿದ್ದರು ..

ಆದರೆ ಪೋಸ್ಟ್‌ಮ್ಯಾನ್ ಬರಲಿಲ್ಲ....

ಬರುತಿದ್ದ. ಬಂದು ಆಚೆ ಈಚೆಯ ಮನೆಯವರಿಗೆಲ್ಲಾ ಕಾಗದ ಕೊಟ್ಟು ಹೋಗುತಿದ್ದ .

ಇಂದೂ ದಾರಿ ಕಾದರು ಆದರೆ ಪೋಸ್ಟ್‌ಮ್ಯಾನ್ ಇಲ್ಲ ..

'ಅಯ್ಯೋ ಸೀಯೂ ." ಎಂದು ಆ ರಾಮ ಕುರ್ಚಿಯಲ್ಲಿ ಒರಗಿಕೊಂಡು ನಿಡುಸುಯ್ದರು—ರಾಯರು

ಎರಡು ಗಂಟೆಯ ಬಿಸಿಲು ಜೋರಾಗಿಯೇ ಇತ್ತು

ಹೊರಗೆ "ರಣ" ಬಡಿಯುತಿತ್ತು... ಉರಿ ಮೈಯೆಲ್ಲಾ ಉರಿ .

ರಾಯರು "ಪೋಸ್ಟ್‌ಮ್ಯಾನ್" ಬಂದನೇ ಎಂದುಕೊಂಡು ಜಗಲಿಯಲ್ಲಿ ನಿಂತುಕೊಂಡ ಇಣಿಕಿದರು...

ಬಂದ . ಪೋಸ್ಟ್‌ಮ್ಯಾನ್ ಬಂದ . ಅದೇಕಾಕಿ ಉಡುಪು .

"ಅಬ್ಬಾ . . ಕಡೆಗಾದರೂ ಬಂತಲ್ಲ..." ಎಂದುಕೊಂಡು ರಾಯರು ಒಳಗೆಹೋದರು....

"ಏ! ರುಕ್ಮಾ ಪೋಸ್ಟ್‌ಮ್ಯಾನ್ ಬಂದ .ನಿನ್ನ ಮಗನ ಮನಿಯಾರ್ಡರ್ ಬಂತು " ಎಂದು ಕೂಗಿದರು ..

ಒಳಗಿನಿಂದ ಪೆನ್ ತಂದು ಮೇಜಿನ ಮೇಲಿಟ್ಟರು—ಪಾರ್ಮಿಗೆ ಸಹಿಮಾಡಲು ಪೆನ್ನು ಸರಿಯಾಗಿ ಒರೆಯುತ್ತದೆಯೋ, ಇಲ್ಲವೋ ಎಂದು ನೋಡಿದರು.

ಬಂದ ಕಡೆಗೂ ಪೋಸ್ಟ್ ಮ್ಯಾನ್ ಬಂದ

ಆದರೆ ಆತ ನಿತ್ಯವೂ ಬರುವವನಲ್ಲ..

"ಹೂಂ .ಯಾರೋ ಹೊಸಬ ಇರಬಹುದು" ಎಂದು ಕೊಂಡರು ರಾಯರು

'ಬನ್ನಿ ಬನ್ನಿ ..ಬಾಯಾರಿಕೆಬೇಕೇನು ..."

"ಬೇಡ ನಿಮಗೊಂದು ..."

"ಮನಿಯಾರ್ಡರ್ ಇದೆ ತಾನೆ "

"ಇಲ್ಲ ಟೆಲಿಗ್ರಾಂ ಇದೆ ."

"ಆಂ ಟೆಲಿಗ್ರಾಂ ಮನಿಯಾರ್ಡರೋ ಅಥವಾ ಬರಿಯ ಟೆಲಿಗ್ರಾಂ!!!

"ಬರಿಯ ಟೆಲಿಗ್ರಾಂ "

"ಅಯ್ಯೋ . ಅದೇನಪ್ಪ " ಎಂದುಕೊಂಡು ರುಕ್ಮಿಣಿ ಹೊರ ಬಂದಳು.

'ಎಲ್ಲಿಂದಪ್ಪ ಟೆಲಿಗ್ರಾಂ ." ರಾಯರು ಅಳುಕುವ ದನಿಯಲ್ಲಿ ಕೇಳಿದರು ಆತ ಜೇಬಿನಿಂದ ಕವರನ್ನು ತೆಗೆದು, ರಾಯರ ಸಹಿ ತೆಗೆದುಕೊಂಡು, ಅವರ ಕೈಗಿತ್ತು ಹೊರಡಲನುವಾದ..

"ಅಯ್ಯೋ .ನನಗೆ ಇಂಗ್ಲೀಷ್ ಬರೊಲ್ಲ ಸ್ವಲ್ಪ ಓದಿ ಹೇಳು ಸಾಯಿ"

"ಶ್ರೀಪತಿ ಪಾಸ್ ಎವೇ. ಸ್ಟಾರ್ಟ ಇಮೀಡಿಯಟ್ಲಿ " ಆ ಟೆಲಿಗ್ರಾಂ ಓದಿ ಹೇಳುವಾಗ ಆತನ ಸ್ವರವೂ ನಡುಗಿತು.

"ಅಂದರೆ .."

"ಶ್ರೀಪತಿ ತೀರಿ ಹೋದ .ಕೂಡಲೆ ಹೊರಡಿ "

'ಅಯ್ಯೊ " ರಾಯರು ಕುಸಿದು ಬಿದ್ದರು ಆ ದುಃಖವನ್ನು ಕಾಣಲಾರದೆ ಪೋಸ್ಟ್‌ಮ್ಯಾನ್ ಹೊರಟು ಹೋದ ..

"ಅಯ್ಯೋ ." ಅತ್ತ ಅಪಸ್ವರದಲ್ಲಿ ಕೂಗ ತ್ತಾ ರುಕ್ಮಿಣಿ ಅಳುತಿದ್ದಳು ಹೆಣ ಹಣೆ ಚಚ್ಚಿಕೊಂಡಳು "ಏ ದೇವರೇ . ನನ್ನನ್ನಯಾಕೆ ತೆಗೆದ ಕೊಂಡು ಹೊಗಿಲ್ಲ . ಅಯ್ಯೋ . ಅವನ ಸಾವು ನನಗಾದರೂ ಯಾಕ ಬರಲಿಲ್ಲ .ಏ ದೇವರೆ "

ಶಾಮರಾಯರು ಮೇಲೆದ್ದರು ಕೈಯ ಮುಷ್ಟಿ ಗಿದಿತ್ತು ...ಮುಖದಲ್ಲಿ ಕ್ರೋಧ ತುಂಬಿ ..

"ದೇವರು ದೇವರು .ದೇವರು ನ ಮಗಿಲ್ಲರುಕ್ಕೂ .ಬಡ ಜನರ ರಕ್ತಹೀರಿ ಬೆಳೆಯುವ ನರಸಿಂಹಯ್ಯನಂತಹ ಜಗಣಿಗಳಿಗೆ ದೇವರು . ದೇವರು. ದೇವರು

ದೇವರಲ್ಲ ಅದು ಬಡ ಜನರನ್ನು ಹಿಡಿದು ಕಾಡುವ ದೆವ್ವ " ರಾಯರು ಕ್ರೋಧೋನ್ಮತ್ತರಾಗಿ ಗುಡುಗಿದರು. . ಅವರ ಹೃದಯವನ್ನು ಕಿತ್ತು. ಹರಿತವಾದ ಚೂರಿಯಲ್ಲಿ 'ಚಕಚಕ"ನೇ ಕೊಯ್ಯುವಂತೆ ಅವರಿಗೆ ಭಾಸವಾಗುತಿತ್ತು ..

ಅಮೆರಿಕೆಯ ಕೊರೆರೆಡೊ ನದಿಗೆ ಹಾಕಿದ ಹೂವರ್ ಎಂಬ ಆಣೆಕಟ್ಟು ಇದರಿಂದ ಸಾರಿಗೆ, ವಿದ್ಯುಚ್ಛಕ್ತಿ, ನೀರಾವರಿ, ನೆರೆಯ ನಿಯಂತ್ರಣಗಳು ಸಾಧ್ಯವಾಗಿಸುತ್ತವೆ.

ರಾಯರ ಮನ ತುಡುಕಿತು ಹೃದಯದ ದುಃಖ ತುಳುಕಿತು!!!

ದೂರದಲ್ಲಿ ಆ "ಕಾಕಿ" ದಾರಿಯನ್ನು ಕಂಡಾಗ ಅವರ ಮನ ಎಂತಹ ಸಂತಸ ಸಾಗರದಲ್ಲಿ ಈಜಿತ್ತು!

ಆದರೆ

ಪೋಸ್ಟ್‌ಮ್ಯಾನ್ ಬಂದಿದ್ದ

ರಾಯರ ಬಡತನದ ಗೂಡಿಗೆ ಹಣ ತುಂಬಲಿಲ್ಲ

ಬಾಳನ ಚೀಲಕ್ಕೆ ದುಃಖದ ಸರಕನ್ನು ತುಂಬಿ ಹೋಗಿದ್ದ

. ಛತ್, ದೇವರು, ದಿಂಡರು .ಎಲ್ಲಾ ಎಲ್ಲಾ ಸುಮ್ಮನೆ ರುಕ್ಕಾ ಎಲ್ಲಾ ಸುಮ್ಮನೆ ಬಗ್ಗದವನಿಗೆ ಎರಡು ಸುತ್ತು ಹೆಚ್ಚು ರಾಯರು ಗುಡುಗಿದರು

'ನಮ್ಮ ಪಾರ್ಕ್ಕೆ ದೇವರನ್ನು ಯಾಕೆ ಮೊರ್ತೀರ ನಾವು ಮಾಡಿದ ಕರ್ಮ . ಪೂರ್ವ ಜನ್ಮದಲ್ಲಿ ಯಾರ ಮಗನ ಹಾಳು ಹಾರಯಿಸಿದ್ದೇನೆಯೋ " ರುಕ್ಮಿಣಿ ದಃಖಪೂರಿತ ದ್ವನಿಯಲ್ಲಿ ನುಡಿದಳು.

'ಅಯ್ಯೋ ದೇವರೇ ಧೂ ಮತ್ತೆ ದೇವರದ್ದೇ ನನಪು "ಎಂದುಕೊಳ್ಳುತ್ತಾ ರಾಯರು ಇಸಿಚೇರಿಯಲ್ಲಿ ಒರಗಿದರು

.ಎಲ್ಲಾ ಸುಖ ದುಃಖಗಳಲ್ಲೂ ಅವರು ಬಂದು ಒರಗುತ್ತಿದ್ದುದು ಆ ಅರಾಮ ಕುರ್ಚಿಯಲ್ಲಿಯೇ ಅದಕ್ಕೆ ಬಾಯಿ ಇದ್ದಿದ್ದರೆ ರಾಯರ ಗತ ಬಾಳಿನ ದುಃಖ ಪೂರಿತ ಇತಿಹಾಸವನ್ನು ಹೇಳುತಿದ್ದಿತೋ ಏನೋ .

"ಸೀಯೂ ." ರಾಯರು ನಿಧಾನವಾಗಿ ಅಂದುಕೊಂಡರು ಬಿಸಿಯುಸಿರೊಂದು ಅವರ ಹೃದಯಗಹ್ವರದಿಂದ ಮೇಲೆದ್ದುಬಂತು. .ಅವರು ತಮ್ಮ ಬಾಳಿನಲ್ಲಿ ಸಡೆದ ನಿರಾಸೆಯೆಲ್ಲಾ ಆ ನಿಟ್ಟುಸಿರಿನಲ್ಲಿ ಬೆರೆತಿತ್ತು .

'ನಮ್ಮ ವಿಶಾಲಳನ್ನ ಅವನಿಗೆ ಕೊಡದಿದ್ದದಲ್ಲೆ ದಾಯಿತು ." ಪರರದು ಬಿಸನ್ನು ಕಂಡು ಸಂಬಪಡುವ ಆ ನರಸಿಂಹಯ್ಯ ರಾಯರಿಗೆ ಕೇಳಲೆಂದೇ ಗಟ್ಟಿಯಾಗಿ ಕೂಗಿ ಹೇಳಿದ ..

ಅವರಿಗೂ ದುಃಖದ ನದಿಗೆ ಸಂಯಮದ ಕಟ್ಟೆಯನ್ನು ಕಟ್ಟಿದ್ದರು....ಆದರೆ ನರಸಿಂಹಯ್ಯನ ಮಾತಿನ ಕ್ರೂರ ಹೊಡೆತಕ್ಕೆ ಕಟ್ಟೆ ಒಡೆಯಿತು ..ನೀರು ಕಣ್ಣಿನ ಮೂಲಕ ಹೊರ ಹರಿಯಿತು ..

'ನನ್ನಿಂದ ಮತ್ತೇನೂ ಸಾಧ್ಯವಿಲ್ಲ ... ನಿನ್ನ ದುಃಖವನ್ನು ಮಾತ್ರ ನನ್ನ ಒಡಲಲ್ಲಿ ಸೇರಿಸಿಕೊಳ್ಳಬಲ್ಲೆ" ಎನ್ನುವಂತೆ ಆ ಕಣ್ಣೀರನ್ನು ಭೂಮಿತಾಯಿ ಕುಡಿದಳು....

ಇಂತಹ ನಿರಾಸೆ ಜೀವಿಗಳ ಎಷ್ಟು ಕಂಬನಿಗಳನ್ನು ಆ ತ್ಯಾಗಮಯಿ ತನ್ನ ಒಡಲಲ್ಲಿ ಸೇರಿಸಿಕೊಂಡಿದ್ದಾಳೊ ? .

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಸ್. ರಘುನಂದನ ಅಯ್ಯರ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಕ್ಕೆಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ ಐವತ್ತು ಮಾತ್ರ ಟಿ. ಪಿ ಪ್ರತ್ಯೇಕ

ನವಯುಗ ಪ್ರೆಸ್ ಉಡುಪಿ

ವಿಶಾಲ ಪ್ರಚಾರವಲ್ಲಿರುವ 'ನವಯುಗ' ವಾಂ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ

PHONE 203 ESTD 1926

FOUNDATION STONE

Engraved

MARBLE TABLETS

(GOLD FILLED & LEAD FILLED)

Crown RUBBER STAMP CO.

BALMATTA ROAD, MANGALORE.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ಪಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!

P. DEVEE & Co. (N. J.) CALCUTTA—40

ಸ್ವಾಸ್ತಿಕ್ಸರು ಫಾ ಕಂಪೆನಿ, ಮಂಗಳೂರು—1.

ನಮ್ಮ ದೇಶವೆತ್ತ ಸಾಗುತ್ತಿದೆ

(ಗಿನೇ ಸುಟದಿಂದ)

ತ್ರ್ಯದ ಅರ್ಥ ಆರ್ಥಿಕ ಮತ್ತು ಮಾನಸಿಕ ಸ್ವಾತಂತ್ರ್ಯವೆಂದು ತಿಳಿಯಬೇಕು. ಏಕೆಂದರೆ, ಮಾನಸಿಕ ಸ್ವಾತಂತ್ರ್ಯವಿಲ್ಲದೆ ಹೋದರೆ, ನಾವು ಸ್ವತಂತ್ರರಾಗಿದ್ದರೂ ಗುಲಾಮರಾಗುತ್ತೇವೆ; ಬಂದೋ ರೂಢಿಯ ಇಲ್ಲವೆ ಅರ್ಥದ ಪಾಸರಾಗುಳಿಯ ಬೇಕಾಗುತ್ತದೆ.

ಯಾವ ದೇಶದಲ್ಲಿ ಧರ್ಮದ ಹೆಸರಿನಲ್ಲಿ ದೇಶವನ್ನು ಸ್ವತಂತ್ರಗೊಳಿಸಿದ ಮಹಾಪುರುಷನ ಹತ್ಯೆಯಾಯಿತೋ, ಎಲ್ಲಿ ಮಾನವನನ್ನು ನಾಯಿಬೆಕ್ಕುಗಳಿಗಿಂತಲೂ ಹೀನವೆಂದು ಪರಿಗಣಿಸಿ ಅವನನ್ನು ಮುಟ್ಟುವುದೂ ಪಾಪವೆಂದು ತಿಳಿಯಲಾಗುತ್ತಿದೆಯೋ, ಎಲ್ಲಿ ಪ್ರಾಯಪ್ರಬುದ್ಧವಿಧವೆಯರು ಸಮಾಜದ ಏಟನ್ನು ತಿನ್ನುತ್ತಾರೆಯೋ, ಎಲ್ಲಿ ಮಂಗನ ಬಾಲದೊಡನೆ ತಮ್ಮ ಪೂರ್ವಜರ ಸಂಬಂಧವನ್ನು ಕಲ್ಪಿಸಿಕೊಳ್ಳಲಾಗುತ್ತದೆಯೋ, ಎಲ್ಲಿ ಧಾರ್ಮಿಕ ಭಾವನೆಗಳಿಂದ ಕಾಡುಪ್ರಾಣಿಗಳಂದ ತಮ್ಮ ಗದ್ದೆಗಳನ್ನು ಮೇಯಿಸಿ ತಮ್ಮ ಸಹೋದರರನ್ನು ತುತ್ತುಕೊಳಿಗಾಗಿ ಒದ್ದಾಡಿಸಲಾಗುತ್ತದೆಯೋ ಅಲ್ಲಿ ವಿದೇಶೀ ಆಡಳಿತೆ ಹೋದ ಮಾತ್ರಕ್ಕೆ ಸ್ವಾತಂತ್ರ್ಯ ಜ್ಯೋತಿಯು ದಿಸಿತೆನ್ನಬಹುದೆ? ಮೂವತ್ತುಮೂರು ಕೋಟಿ ದೇವೀದೇವತೆಯರು ನಮ್ಮ ಎದೆಯ ಮೇಲೆ ಸವಾರಿ ಮಾಡುತ್ತಿರುವಾಗ ನಾವು ಕಣವಿಲ್ಲದೆ ಗುಲಾಮಗಿರಿಯನ್ನು ಮುಂದುವರಿಸುತ್ತಿರುವಾಗ, ಬ್ರಿಟಿಷ ಮಹಾ ಪ್ರಭುಗಳು ಆಡಳಿತೆಯನ್ನು ನೋಡುತಿದ್ದ ಕಾಲಕ್ಕಿಂತ ವ್ಯತ್ಯಾಸವೇನು ಬಂತು?

ಮಹಾತ್ಮಾಗಾಂಧಿಯಂಶಹ ದೇಶವನ್ನು ಬಂಧಮುಕ್ತಗೊಳಿಸಿದ ಮಹಾಪುರುಷನು ನಮಗಿದ್ದನೆಂಬುದು ನಮ್ಮ ಭಾಗ್ಯ. ಮಾನಸಿಕ ದಾಸ್ಯದಿಂದ ಮುಕ್ತರಾಗುವ ಮಾರ್ಗವನ್ನೂ ನಮಗಾಗಿ ತೋರಿಸಿದ್ದ, ನೆಹರೂರವರಂತಹ ವಿಶಾಲ ದೃಷ್ಟಿಕೋಣವಿರುವ ಮಹಾಪುರುಷನ ಕೈಯಲ್ಲಿ ನಮ್ಮ ದೇಶದ ಸೂತ್ರವು ದೊರೆತುದೂ ಪುಣ್ಯ. ಇಲ್ಲವಾದರೆ, ಪಾಕಿಸ್ತಾನದಂತೆ ಸ್ವತಂತ್ರರಾಗಿದ್ದೂ ಅನ್ಯರ ಸೂತ್ರದ ಗೊಂಬೆಗಳಾಗಬೇಕಾಗುತಿತ್ತು. ಆದರೆ, ನೆಹರೂ ಏಕಾಕಿಯಾಗಿ ಬೇಕಾದ ಸುಧಾರಣೆಗಳನ್ನು ಹೇಗೆ ಮಾಡಬಲ್ಲರು? ನೆಹರೂರಂತಹ ವಿಶಾಲದೃಷ್ಟಿಕೋಣಯುಕ್ತರಾದ ನಮ್ಮ ಪ್ರಜೆಗಳಿಂದ ಮಾತ್ರ ಈ ಕೆಲಸ ಸಾಧ್ಯವಾದೀತು.

ನಿಜವಾದ ಮಾನಸಿಕ ಸ್ವಾತಂತ್ರ್ಯವನ್ನುಳಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಹಳೆಯ ಸಮಾಜವನ್ನು ಮೂಲಚ್ಛೇದಗೊಳಿಸಿ ಹೊಸ ಸಮಾಜವನ್ನು ಸ್ಥಾಪಿಸಬೇಕು. ತಾನು ವಿದ್ಯೆ ಮತ್ತು ಬುದ್ಧಿಗಳ ಬಲದಿಂದ ಗೌರವದಿಂದ ಜನಕಲ್ಯಾಣ ಕಾರ್ಯದಲ್ಲಿ ಕ್ರಿಯಾಶೀಲನಾಗಬಹುದೆಂಬ ಆತ್ಮವಿಶ್ವಾಸವನ್ನು ಹುಟ್ಟಿಸಬೇಕು. ನಾವಿಂತಹ ಸ್ವತಂತ್ರ ವಾತಾವರಣದಲ್ಲಿರುವ ಸಮಾಜವನ್ನು ಸೃಷ್ಟಿಸಿದೆವೆಂದಾದರೆ, ಆಗ ನಾವು ವಿದೇಶೀಯರಿಂದ ಮುಕ್ತರಾದುದು ಸಾರ್ಥಕವಾಗುವುದು. ಅಲ್ಲದೇ ನಾವೂ ನಿರ್ಮಲ ಹೃದಯದಿಂದ 'ನಾವು ಸ್ವತಂತ್ರರು' ಎಂದು ಹೇಳಬಹುದು.

ನೆಹರೂರವರ ದೂರದರ್ಶತೆಯಿಂದ ನಮ್ಮ ದೇಶವು ಧರ್ಮ ನಿರಪೇಕ್ಷ ರಾಷ್ಟ್ರವೆಂದು ಘೋಷಿಸಲ್ಪಟ್ಟಿದೆ. ಆದರೆ, ಈ ಜಾತ್ಯತೀತ ರಾಷ್ಟ್ರದ ಮಾದರಿಯು ನಮಗೆ ದಿನದಿನವೂ ತೋರುತ್ತದೆ. ಕಳೆದ ಕುಂಭ ಮೇಳಗಳವಸರದಲ್ಲಿ ಪ್ರಯಾಗದಲ್ಲಿ ನಾಗಾಜನರ ಉತ್ಸವವನ್ನು ನೋಡುವುದಕ್ಕಾಗಿ ಹೋಗುವ ನೂರಾರು ಭಕ್ತರನ್ನು ಇರುವೆಗಳಂತೆ ಆ ಮಹಾಜನ ಸಮುದಾಯದ ಕಾಲ ಬುಡದಲ್ಲಿ ಕುಳಿಕುಳಿದು ಕೊಂದರು! ಹೀಗೆ ಮಾಡಿದವರಿಲ್ಲರೂ ತಮ್ಮ ಪಾಪಗಳನ್ನು ತೊಳೆದುಕೊಳ್ಳುವುದಕ್ಕಾಗಿಯೇ ಅಲ್ಲಿಗೆ ಬಂದಿದ್ದರಲ್ಲವೆ? ಇಂದಿಗೂ ಆಚರಿಸಲ್ಪಡುವ ಬುದ್ಧ ಜಯಂತಿಯ ಅವಸರದಲ್ಲಿ ಜಾತ್ಯತೀತ ರಾಷ್ಟ್ರವಾದ ಭಾರತದ ಆಕಾಶವಾಣಿಯ ಕೇಂದ್ರಗಳಲ್ಲಿ ವಾರ ವಾರಗಳ ವರೆಗೆ "ಬುದ್ಧಂ ಶರಣಂಗಚ್ಛಾಮಿ| ಧರ್ಮಂ ಶರಣಂಗಚ್ಛಾಮಿ | ಸಂಘಂ ಶರಣಂಗಚ್ಛಾಮಿ||"ಯ ಪಾಠ ಕೇಳಿ ಬರುತ್ತಿದೆ! ಇದೆಂತಹ ತಮಾಷೆಯಾಗಿದೆ! ಇದನ್ನೇ ಧರ್ಮನಿರಪೇಕ್ಷತೆ' ಎಂದು ಕರೆಯುತ್ತಾರೆಯೆ? ಭಗವಾನ್ ಬುದ್ಧನು ಕೇವಲ ಭಾರತದಷ್ಟೇ ಅಲ್ಲ ಪ್ರಪಂಚದ ಮಹಾಮಾನವನೆನಿಸಿದ್ದಾನೆ. ಆತನ ಜಯಂತಿಯನ್ನು ಆಚರಿಸಿ ಆತನಿಗೆ ಸನ್ಮಾನ ಪ್ರದರ್ಶಿಸುವುದರಲ್ಲಿಯೂ ಆಪತ್ತೆಂದು ತಿಳಿಯಬಾರದು. ಆದರೆ, "ಬುದ್ಧಂ ಶರಣಂ ಗಚ್ಛಾಮಿ....." ಈ ವಾಕ್ಯವು ಬುದ್ಧನ ಧರ್ಮದ ಪ್ರಮುಖಾಂಗವಾಗಿದ್ದು ಅದನ್ನು ಧರ್ಮ ನಿರಪೇಕ್ಷತೆಯ ಸರಕಾರದಡಿಯಲ್ಲಿರುವ ಆಕಾಶವಾಣಿಯು ಗಟ್ಟಿಯಾಗಿ ಪ್ರಚಾರ ಮಾಡುವುದರ ಅರ್ಥವೇನು? ಆಣಕಟ್ಟು, ಕಟ್ಟಲು, ಉದ್ಘಾಟನೆಮಾಡಲು ಪೂಜೆ ಪುರಸ್ಕಾರ, ಮುಹೂರ್ತಾದಿಗಳನ್ನು ಮಾಡಿನೋಡುವುದಾದರೆ,ಧರ್ಮನಿರಪೇಕ್ಷತೆ' ಎಂಬುದು ಕೇವಲ ಕಾಗದದಲ್ಲಿ ಮಾತ್ರವಿರುವುದೆ? ವಿದ್ಯಾಲಯಗಳಿಗೆ ಪ್ರವೇಶಕೊಡುವಾಗ, ಸರಕಾರೀ ಉದ್ಯೋಗಾವಕಾಶಗಳನ್ನು ತುಂಬಿಸುವಾಗ ವಿದ್ಯಾರ್ಹತೆಗೆ ಪ್ರಾಧಾನ್ಯವೀಯದೆ ಜಾತಿಮತಗಳಿಗೆ ಪ್ರಾಧಾನ್ಯವೀಯುವ ಈ ಸರಕಾರದ ಆಡಳಿತೆಯಲ್ಲಿರುವ ದೇಶವು ಧರ್ಮನಿರಪೇಕ್ಷ ರಾಷ್ಟ್ರವಾಗುವುದಾದರೂ ಹೇಗೆ? ಇದೊಂದು "ಧರ್ಮನಿರಪೇಕ್ಷತೆ"ಯೆಂಬ ನಾಟಕವಲ್ಲದೆ ಮತ್ತೇನು? ಎಂತಲೇ ಧರ್ಮದಾಸ್ಯ ನಮ್ಮಲ್ಲಿ ಬಲವಾಗಿ ಅಂಟಿಕೊಂಡಿದೆ.

ಆದುದರಿಂದ ನನ್ನದು ಕೇವಲ 'ಧರ್ಮನಿರಪೇಕ್ಷ ರಾಷ್ಟ್ರ'ವೆಂದೂ ನಾವದರ ರಾಷ್ಟ್ರೀಯರೆಂದೂ ಕರೆದುಕೊಂಡ ಮಾತ್ರಕ್ಕೆ ಪ್ರಯೋಜನವಿಲ್ಲ. ಧರ್ಮಸ್ವಾತಂತ್ರ್ಯವಿದ್ದರೆ, ಅದು ಅವರವರ ವ್ಯಕ್ತಿಗತ ವಿಷಯವಷ್ಟೆ. ಸಮಾಜದಲ್ಲಿ ಈ ಧರ್ಮವು ಸಮಾಜ ಕಲ್ಯಾಣಕ್ಕೆ ಅಡ್ಡಿ ಬರಬಾರದು. ಧರ್ಮನಿರಪೇಕ್ಷ ರಾಷ್ಟ್ರದಲ್ಲಿ ಧರ್ಮದಾಸ್ಯವಿರಬಾರದು.

—ಯೋಜನಾ.

ಹಿಂದುಸ್ತಾನ ವಿಮಾನ ಕಾರಖಾನೆ-
ನೂತನ ಜನರಲ್ ಮೆನೇಜರ್

ಏರ್ ವೈಸ್ ಮಾರ್ಷಲ್ ಎ. ಎಂ. ಎಂಜನಿಯರ್, ಡಿ. ಎಫ್. ಸಿ ಯವರು ಇಲ್ಲಿರುವ, ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಅಧಿಕಾರವನ್ನು,ಗಿಳಿಜರ ಮೇ ೨೮ನೆಯ ಬುಧವಾರದಂದು, ಶ್ರೀ ಜೆ. ಎಂ. ಶ್ರೀ ನಾಗೇಶ್, ಐ. ಸಿ. ಎಸ್.ರವರಿಂದ, ಸ್ವೀಕರಿಸುವರು.

ಭಾರತ ವಿಮಾನ ಬಲವು ಏರ್ ವೈಸ್ ಮಾರ್ಷಲ್ ಎಂಜನಿಯರ ಸೇವೆಯನ್ನು, ಹಿಂದೂಸ್ಥಾನ ವಿಮಾನ ಕಾರ್ಖಾನೆಗೆ, ಮೂರು ವರ್ಷಗಳ ಕಾಲ ಎರವಲು ನೀಡಿದೆ. ಏರ್ ವೈಸ್ ಮಾರ್ಷಲ್ ಎಂಜನಿಯರ್ ಗಿಳಿಜರಿಂದಲೂ ವಿಮಾನ ಬಲದ ಪ್ರಧಾನ ಕಛೇರಿಯ ವಿಮಾನ ಸಿಬ್ಬಂದಿಯ ಉಪ ಮುಖ್ಯಾಧಿಕಾರಿಗಳಾಗಿದ್ದರು. ಭಾರತದ ವಿಮಾನ ಬಲದಲ್ಲಿನ ಹಿರಿಯ ಅಧಿಕಾರಿಗಳಲ್ಲಿ ಇವರು ಎರಡನೆಯವರು.

ಏರ್ ವೈಸ್ ಮಾರ್ಷಲ್ ಎಂಜನಿಯರ್ ತಮ್ಮ ಸ್ವಂತ ಊರಾದ ಮುಂಬೈಗೆ ಸಮೀಪದಲ್ಲಿರುವ ಪಂಚಾಗರಿ ಎಂಬ ಪರ್ವತ ಧಾಮದಲ್ಲಿ ಆರಂಭ ಶಿಕ್ಷಣವನ್ನು ಪಡೆದರು. ಅನಂತರ, ಕರಾಚಿಯ ಡಿ. ಜೆ. ಸಿಂಧ್ ಕಾಲೇಜ್‌ದಲ್ಲಿ ಅವರು ತಮ್ಮ ಶಿಕ್ಷಣವನ್ನು ಮುಂದುವರಿಸಿದರು. ಗಿಳಿಜರಲ್ಲಿ ಏರ್ ವೈಸ್ ಮಾರ್ಷಲ್ ಎಂಜನಿಯರು ಕ್ರಾಸ್‌ವೆಲ್ಲನಲ್ಲಿ ವಿಮಾನ ಯಾನ ಸೇವೆಯಲ್ಲಿ ತರಬೇತಿಯನ್ನು ಪಡೆದರು. ಈ ಪ್ರಮುಖ ರಾಯಲ್ ಏರ್ ಫೋರ್ಸ್ ಫ್ಲಯಿಂಗ್ ಅಕಾಡೆಮಿಯಲ್ಲಿ ಪದವಿಯನ್ನು ಪಡೆಯುವ ವೇಳೆಗೆ, ಏರ್ ವೈಸ್ ಮಾರ್ಷಲ್ ಎಂಜನಿಯರು, ಆ ಅವಧಿಯಲ್ಲಿ ತರಬೇತಿ ಪಡೆದ ವಿಮಾನ ಚಾಲಕರಲ್ಲೆಲ್ಲಾ ಅತ್ಯುತ್ತಮರೆನ್ನಿಸಿಕೊಂಡು ಗ್ರೋವ್ಸ್ ಸ್ಮಾರಕ ಬಹುಮಾನವನ್ನು ಪಡೆದರು. ಅನಂತರ, ಸೇನೆಯ ಸಹಕಾರ ವ್ಯಾಸಂಗ ಶ್ರೇಣಿಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ, ಬ್ರಿಟನ್ನಿನ ಒಲ್ಡ್ ಸೀರಂನಲ್ಲಿ ಈ ವ್ಯಾಸಂಗವನ್ನು ಮುಗಿಸಿದರು. ಭಾರತಕ್ಕೆ ಹಿಂತಿರುಗಿದ ಏರ್ ವೈಸ್ ಮಾರ್ಷಲ್ ಎಂಜನಿಯರು ಭಾರತ ವಿಮಾನ ಬಲದಲ್ಲಿ ಹೊಸದಾಗಿ ರೂಪಗೊಂಡ ಒಂದನೆಯ ಸ್ಕ್ವಾಡ್ರನ್ ಸೇರಿದರು.

ಏರ್ ವೈಸ್ ಮಾರ್ಷಲ್ ಅವರು, ವಿಮಾನಯಾನದೊಂದಿಗೆ ತಮ್ಮ ಸಂಪರ್ಕವನ್ನು ತಾವು ವಿಮಾನ ಬಲದ ವಿಂಗ್ಸ್‌ಗಳನ್ನು ಪಡೆಯುವುದಕ್ಕಿಂತ ಮೊದಲಿನಿಂದಲೇ ಇಟ್ಟುಕೊಂಡಿದ್ದರು. ತಮ್ಮ ೧೭ನೆಯ ವರ್ಷದಲ್ಲಿ ಏರ್ ವೈಸ್ ಮಾರ್ಷಲ್ ಎಂಜನಿಯರು ಭಾರತದಲ್ಲಿ ವಿಮಾನಯಾನವು ಶೈಶವಾವಸ್ಥೆಯಲ್ಲಿದ್ದಾಗಲೆ, ಅಂತರಾಷ್ಟ್ರೀಯ ವಿಮಾನ ಮಾರ್ಗಗಳು ಮತ್ತಿತರ ಯಾನ ಸಾಧನ ಸೌಲಭ್ಯಗಳು ಅಷ್ಟಾಗಿ ಅಭಿವೃದ್ಧಿಗೊಂಡಿರದಿದ್ದ ಸಮಯದಲ್ಲಿ, "ಜಿಪ್ಸಿ-ಮಾಲ್" ಎಂಬ ವಿಮಾನದಲ್ಲಿ ತಾವೊಬ್ಬರೇ ಕುಳಿತು, ಇಂಗ್ಲೆಂಡ್ ಮತ್ತು ಭಾರತಗಳ ನಡುವೆ ವಿಮಾನ ಚಾಲನೆ ಮಾಡಿದ ಪ್ರಥಮ ಭಾರತೀಯರೆನ್ನಿಸಿಕೊಂಡು ಅಭಾಖಾನ್ ಬಹುಮಾನವನ್ನು ಗಳಿಸಿದರು.

ವಜೀರ್‌ಸ್ಥಾನದಲ್ಲಿ ವಿಮಾನ ಬಲದ ಒಂದನೆಯ ಸ್ಕ್ವಾಡ್ರನ್‌ನಲ್ಲಿ (ಅಗ ಅದರಲ್ಲಿ ಒಂದೇ ಫ್ಲೈಟ್ ಇದ್ದಿತು) ಅವರು ಸೇವೆ ಸಲ್ಲಿಸುತ್ತಿದ್ದಾಗ, ಅವರ ಹೆಸರು ಪತ್ರ ವ್ಯವಹಾರಗಳಲ್ಲಿ ಹಲವು ಬಾರಿ ಬಂದಿತ್ತು. ವಾಯವ್ಯ ಸರಹದ್ದಿನ ಪ್ರಾಂತ್ಯಗಳ ಕಾರ್ಯಾಚರಣೆಗಳಲ್ಲಿ ತೋರಿದ ಸಾಹಸ ಹಾಗೂ ಮುಂದಾಳುತನಕ್ಕಾಗಿ, ಅವರಿಗೆ ಗಿಳಿಜರಲ್ಲಿ 'ಫ್ಲಯಿಂಗ್ ಕ್ರಾಸ್' ಬಿರುದನ್ನು ಕೊಡಲಾಯಿತು.

ವಿಮಾನಬಲದ ಪ್ರಧಾನಕಛೇರಿಯಲ್ಲಿ ಅನೇಕ ಮುಖ್ಯ ಸ್ಥಾನಗಳಲ್ಲಿದ್ದು ಅವರು ಸೇವೆ ಸಲ್ಲಿಸಿದ ನಂತರ, ಗಿಳಿಜರಲ್ಲಿ ಏರ್ ವೈಸ್‌ಮಾರ್ಷಲ್ ಎಂಜನಿಯರಿಗೆ ಕೊಹಾಟ್‌ನಲ್ಲಿರುವ ವಿಮಾನ ನಿಲ್ದಾಣದ "ಕಮ್ಯಾಂಡ್" ಪದವಿಯನ್ನು ಕೊಡಲಾಯಿತು. ಅವರಿಗೆ 'ಗ್ರೂಪ್ ಕ್ಯಾಪ್ಟನ್' ದರ್ಜೆಗೂ, ಅನಂತರ ಏರ್ ಕಮೋಡರ್ ದರ್ಜೆಗೂ ಬಡ್ತಿಯಿತ್ತು. ಅವರನ್ನು ವಿಮಾನ ಬಲದ ಕಛೇರಿಯಲ್ಲಿ ಆಡಳಿತ ವಿಭಾಗದ ಮುಖ್ಯಾಧಿಕಾರಿಯನ್ನಾಗಿ ನೇಮಿಸಲಾಯಿತು. ಗಿಳಿಜ ಸೆಪ್ಟೆಂಬರ್‌ನಲ್ಲಿ ಅವರು ಒಂದನೆಯ 'ಆಪರೇಷನ್ ಗ್ರೂಪ್‌ನ (ಈಗ ಆಪರೇಷನಲ್ ಕಮ್ಯಾಂಡ್) ಕಮ್ಯಾಂಡರಾದರು. ವಿಮಾನ ಬಲದ ಈ ಪ್ರಧಾನ ಕಮ್ಯಾಂಡ್, ವಿಮಾನ ಬಲದ ಎಲ್ಲಾ ಪ್ರಥಮ ಪಂಕ್ತಿಯ ಯೂನಿಟ್‌ಗಳ ಮೇಲೂ ಹತೋಟಿಯನ್ನು ಪಡೆದಿರುವುದು.

ಏರ್‌ವೈಸ್ ಮಾರ್ಷಲ್‌ರವರು ಇಂಪೀರಿಯಲ್ ಡಿಫೆನ್ಸ್ ಕಾಲೇಜನಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸಿದ ಮೇಲೆ ಅವರನ್ನು ವಿಮಾನ ಬಲದ ಪ್ರಧಾನ ಕಛೇರಿಯಲ್ಲಿ ವಿಮಾನ ಬಲದ ತಾಂತ್ರಿಕ ಹಾಲೂ ಸಲಕರಣೆಗಳ ವಿಭಾಗದ ಮುಖ್ಯಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಗಿಳಿಜರಲ್ಲಿ, ವಿಮಾನಬಲದ ಸಿಬ್ಬಂದಿಯ ಡೆಪ್ಯುಟಿ ಮುಖ್ಯಾಧಿಕಾರಿಗಳಾಗಿ ಅವರು ಅಧಿಕಾರ ಸ್ವೀಕರಿಸಿದರು.

ಗಿಳಿಜರಲ್ಲಿ ಏರ್ ವೈಸ್ ಮಾರ್ಷಲ್ ಎಂಜನಿಯರು ಇಂಡೋನೇಷಿಯಾಕ್ಕೆ ಹೋಗಿದ್ದ ವಿಮಾನ ಬಲ ನಿಯೋಗದ ನಾಯಕತ್ವ ವಹಿಸಿದ್ದರು.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ-
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ನೆರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

Edited Printed & Published by K. H. Shetty, at the Navayuga press, Udipi S. India

REGD. NO. M. 3618

ಸಿಂಡಿಕೇಟ್ ಪುರವಣಿಯೊಂದಿಗೆ

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭.
VOL. 37

12—6—1958

ಸಂಚಿಕೆ ೪೦
NO. 40

ನೆಹರೂ ಕಡಿವಾಣ ಸಡಿಲಾಯಿತೆ?

ಕಾಂಗ್ರೆಸಿನ ದುರ್ಬಲತೆ ದೂರವಾಗಲಿ

ಪಂಡಿತ ನೆಹರೂರವರ ನಿವೃತ್ತಿ ಬಯಕೆಯ ಬಗ್ಗೆ ಅನೇಕಾನೇಕ ಊಹಾಪೋಹಗಳು ವ್ಯಕ್ತಪಟ್ಟಿವೆ. ನೆಹರೂರವರು ತನ್ನಲ್ಲಿ ಹೊಸತನವಿಲ್ಲದೇ ತನ್ನ ಭಾವನೆ ಹಾಗೂ ವಿಚಾರಗಳು ಹಳಸಿಹೋಗಿವೆಯಾದುದರಿಂದ, ಪ್ರಧಾನಿ ಪಟ್ಟದಿಂದಿಳಿದು, ಬೇರೆಯವರಿಗೆ ಸ್ಥಾನ ಕಲ್ಪಿಸಿಕೊಡುವ ಉದ್ದೇಶದಿಂದ ಹಾಗೂ ಸರಕಾರೇತರ ವ್ಯಕ್ತಿಯಾಗಿ ಸಾಮಾನ್ಯ ಪ್ರಜೆಯಂತೆ ದೇಶದ ಸ್ಥಿತಿಗತಿಗಳನ್ನು ಅರಿತು ದೇಶದ ಪ್ರಗತಿಗಾಗಿ ಪುನಃ ಕಾರ್ಯಕ್ರಮಗಳನ್ನು ರೂಪಿಸಿ ನಾಯಕತ್ವವನ್ನು ವಹಿಸುವ ಇರಾದೆಯಿಂದ ಈ ಮಧ್ಯೆ ಸುಮಾರು ೪೦ ವರ್ಷಗಳ ಅವಿರತ ಶ್ರಮದಿಂದ ಬೆಂದ ಮನಕ್ಕೆ ಸ್ವಲ್ಪ ವಿಶ್ರಾಂತಿಯನ್ನು ಕೊಡುವ ಬಯಕೆಯಿಂದ, ಈ ಸೂಚನೆಯನ್ನು ಮುಂದಿಟ್ಟಿದ್ದಾರೆಂಬುದು ಒಂದ ಅಭಿಪ್ರಾಯವಾದರೆ, ಇತ್ತೀಚೆಗೆ ಕಾಂಗ್ರೆಸ್ಸಿನಲ್ಲಿ ಐಕ್ಯವೂ ಸೇವಾಭಾವನೆಯೂ ಕಡಿಮೆಯಾಗುತ್ತ ಬಂದು, ಒಂದು ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿ ಸಂಪೂರ್ಣ ಪ್ರಭಾವ ಬೀರಿ ತನ್ನತ್ತ ಕಾಂಗ್ರೆಸಿಗರನ್ನು ಆಕರ್ಷಿಸಬಲ್ಲ ವ್ಯಕ್ತಿತ್ವದಿಂದಿದ್ದ ಪಂಡಿತ ನೆಹರೂರವರೀಗ ಅಂತಹ ಬಲವನ್ನು ಕಳೆದುಕೊಳ್ಳುತ್ತಿದ್ದುದರಿಂದ ಕಾಂಗ್ರೆಸ್ ಸಂಸ್ಥೆ ಅವರ ಹಿಡಿತದಿಂದ ತಪ್ಪಿಹೋಗಿ ಚಲ್ಲಾಪಿಲ್ಲಿಯಾಗಿ ಹರಿಹಂಚಾಗಿ ಹೋಗಿದೆ ಆದುದರಿಂದ ನೆಹರೂ ಮಟ್ಟಿಗೆ ಬೇಸರವುಂಟಾಗಿ ಈ ಸೂಚನೆಯನ್ನು ಮಾಡಿದರು ಎನ್ನುವವರೂ ಇದ್ದಾರೆ ಈ ಎರಡು ಅಭಿಪ್ರಾಯಗಳ ಜೊತೆಗೆ ಮೂರನೆಯದೊಂದು ವ್ಯಕ್ತವಾಗುತ್ತಿದೆ—ಇದು ಬಹಳ ಸೋಜಿಗವೂ ಹೌದು.

ಹಿಂದೊಮ್ಮೆ ಮಂತ್ರಿಗಳ ವೇತನವು ಕಡಿಮೆಯಾಗಬೇಕು; ಮಿತವ್ಯಯ ಸಾಧಿಸುವಲ್ಲಿ ಇದೊಂದು ಪ್ರಮುಖಾಂಗವಾಗಿದೆ ಎಂಬ ಅಭಿಪ್ರಾಯವು ವ್ಯಾಪಿಸಿ ಒಂದಿತ್ತು. ಆ ಸಮಯದಲ್ಲಿ ಪಂಡಿತ ನೆಹರೂರವರು ತಮ್ಮ ಸ್ವವಿಷಯವನ್ನು ಸಂಪೂರ್ಣವಾಗಿ ಬಹಿರಂಗಪಡಿಸಿ, ತನ್ನಂತಹವರಿಗೇನೇ ತಾನು ಹಿಂದೆ ಬರೆದ ಪುಸ್ತಕಗಳ ಪುನರ್ಮುದ್ರಣದಿಂದಾಗಿ ಸಲ್ಲುವ ಗೌರವಧನವನ್ನವಲಂಬಿಸಬೇಕಾಗಿ ಬರುವಾಗ ಇತರ ಮಂತ್ರಿಗಳ ಅವಸ್ಥೆಯೇನೆಂದು ಕೇಳಿ, ಸಂಬಳವನ್ನು ಕಡಿಮೆಮಾಡುವುದು ಸರಿಯಲ್ಲವೆಂಬ ಅಭಿಪ್ರಾಯವನ್ನು ಪಟ್ಟಿದ್ದರಷ್ಟೆ. ಈಗ ಲಾಕೋಲ ಕಣೆವಯಲ್ಲಿ ಕುಳಿತು ನೆಹರೂ ತನ್ನ ಹಿಂದಿನ ಪತ್ರವ್ಯವಹಾರದ ಕಂತೆಯನ್ನು ಬಿಚ್ಚಿ ಅವುಗಳಿಂದ ಸುಮಾರು ೪೦೦ ಪತ್ರಗಳನ್ನು ಪ್ರಕಟಣೆಗೆ ಸಿದ್ಧಪಡಿಸುತ್ತಿರುವರೆಂಬ ವಾರ್ತೆ ಒರಹತ್ತಿರುವುದರಿಂದ, ಈ ಮಾತೂ ನೆಹರೂ ತನ್ನ ಅಧಿಕ ಸ್ಥಿತಿಯನು ಬಲಪಡಿಸಲು ನಿವೃತ್ತಿ ಸೂಚನೆ ಮಾಡಿದ್ದಾರೆಂಬ ಕಪಿತಕಾರಣವನ್ನೂ ಅಲ್ಲಗಳೆಯಬರುವುದಿಲ್ಲ

ಮೇಲೆ ಸೂಚಿಸಿದ ಪ್ರತಿ ಕಾರಣಗಳೂ ಆಯಾದೃಷ್ಟಿಯಿಂದ ಪರ್ಯಾಲೋಚಿಸಿದರೆ ಇರಬಹುದೆಂದು ತೋರುತ್ತವೆ. ಅದೇನೇ ಇರಲಿ, ಈಗ ನೆಹರೂಗಳಿಗೆ ದೊರೆತುದು ಕೇವಲ ಕೆಲದಿನಗಳ ಅವಕಾಶವಾತ್ರ ಅದರ ನಡುವೆ ಅವರು ಒಹುಮೂಲ್ಯ ವ್ಯವಹಾರಗಳನ್ನೂ ನೋಡಿಕೊಳ್ಳಬೇಕು, ರಾಷ್ಟ್ರಾಧ್ಯಾಸಿಯೊಡನೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕು. ಈ ಜಂಜಾಟದಲ್ಲಿ ನೆಹರೂ ಮನಸ್ಸು ಎಷ್ಟು ಸಮಾಧಾನಗೊಂಡೀತು, ವ್ಯಾಕುಲಚಿತ್ತವು ಎಷ್ಟು ಮೋದಹೊಂದೀತು ಎಂದು ಹೇಳಬಾರದು ನೆಹರೂಗಳಿಗೆ ಈ ಅವಕಾಶವು ಅಲ್ಪಮಟ್ಟಿಗಾದರೂ ಸಮಾಧಾನಕರವಾದೀತೆಂದು ಹಾರೈಸುವುದು ಉತ್ತಮ

ಆದರೆ, ನೆಹರೂ ಕಾಂಗ್ರೆಸ್ಸಿನಲ್ಲಿ ತಮ್ಮ ಶಕ್ತಿಯನ್ನು ಕಳೆದುಕೊಳ್ಳಲು ಕಾರಣವೇನೆಂಬುದು ಮಾತ್ರ ಮುಖ್ಯ, ಪ್ರಜಾಸ್ವಭುತ್ವ ರಾಷ್ಟ್ರದ ಒಂದು ಪಕ್ಷವಾದ ಕಾಂಗ್ರೆಸ್ಸು ಪಂಡಿತ ನೆಹರೂರವರ ಕೈಕೆಳಗಿರಬೇಕು ಎಂದೂ ಅವರೆಂದುದನ್ನೇ ಕಣ್ಣುಮುಚ್ಚಿ ಒಪ್ಪಿಕೊಳ್ಳಬೇಕೆಂದೂ ಹೇಳಿದರೆ, ಆಗ ಪಕ್ಷವು ಸರ್ವಾಧಿಕಾರಿಯ ಕೈಕೆಳಗಿನದಾಗುವುದು ಅದು ಜನತಾಭಿಪ್ರಾಯಕ್ಕೆ ಮನ್ನಣೆ ಸಿಗುವುದು ಅಸಾಧ್ಯ ಆದರೆ, ನಾಯಕನ ಮಾತಿಗೆ ಬೆಲೆಕೊಡುವ ಮನೋವೃತ್ತಿ ಅತನ ಹಿಂಬಾಲಕರಲ್ಲಿರುವುದು ಅಗತ್ಯ ಅತನೆಂದ ವಿಷಯಗಳನ್ನು ಗಂಭೀರವಾಗಿ ಪರ್ಯಾಲೋಚಿಸುವ ಮತ್ತು ಆ ಬಗ್ಗೆ ಯೋಗ್ಯ ನಿರ್ಧಾರಕ್ಕೆ ಬರುವ ಮನೋವೃತ್ತಿ, ಬಹುಜನರ ಅಭಿಪ್ರಾಯವನ್ನು ಮನ್ನಿಸುವ ಮನಸ್ಸು, ಜನತೆಯ ಹಿತವನ್ನೇ ತನ್ನ ಮೂಲೋದ್ದೇಶವಾಗಿರುವ ಕಾರ್ಯಕ್ರಮಗಳ ರೂಪಣೆ—ಇತ್ತ ತಮ್ಮ ಗಮನವನ್ನು ಹರಿಸುವುದು ಕ್ಷಿಪ್ರದ ಸದ್ಯದ, ಪ್ರಜಾಪ್ರತಿನಿಧಿಗಳ ಕರ್ತವ್ಯಗಳು.

ಆದರೆ, ನಮ್ಮ ಪ್ರತಿನಿಧಿಗಳಲ್ಲಿ ಇಂದು ಜನಸೇವಾ ಭಾವನೆಗಿಂತಲೂ ಸ್ವಾರ್ಥವೇ ಎಲ್ಲೆಯೇ ತುಂಬಿಕೊಂಡಿರುವುದು ಕಂಡುಬರುತ್ತದೆ ರಾಜ್ಯಗಳಲ್ಲಿನ ಮಂತ್ರಿಮಂಡಲಗಳಲ್ಲಿ ಅನಾವಶ್ಯಕ ವ್ಯವಹಾರಗಳು ನಡೆಯುತ್ತಿವೆ ಜನತೆಯ ನ್ಯಾಯವಾದ ಬೇಡಿಕೆಗಳು ಸಕಾಲದಲ್ಲಿ ಮನ್ನಿಸಲ್ಪಡದ ಪ್ರಸಂಗ, ಜನತಾ ಪ್ರತಿನಿಧಿಗಳ ತಾವು ಆರಿಸಿಹೋದ ಕ್ಷೇತ್ರಗಳ ಸುಖದುಃಖ, ಅಭಿವೃದ್ಧಿಗೆಡೆತ್ತ ಗಮನ ಕೊಡುವುದಿಲ್ಲ—ಅಭಿವೃದ್ಧಿ ಯೋಜನೆಗಳನ್ನು ಕಾರ್ಯಾಚರಣೆಗೆ ತರುವಲ್ಲಿ ವಿಳಂಬವಾಗುತ್ತದೆ ಇತ್ಯಾದಿ ದೂರುಗಳು ಸರ್ವಸಾಮಾನ್ಯವಾಗಿವೆ ಇಂತಹ ದೂರುಗಳು ಕಾಂಗ್ರೆಸ್ ಪಕ್ಷಕ್ಕೂ ತಟ್ಟದಿರುವುದು ಅಸಾಧ್ಯ. ಕಾಂಗ್ರೆಸ್ ತನ್ನಲ್ಲಿ ಅಸಹಾಯತೆಗೆ ಮತ್ತು ಅಲಸ್ಯಕ್ಕೆ ಸ್ಥಳಾವಕಾಶ ಕಲ್ಪಿಸಿಕೊಟ್ಟಿರುತ್ತದೆ ಕಾಣುತ್ತದೆ

ಇತ್ತೀಚೆಗೆ ಕೇರಳ ವಿಧಾನ ಸಭೆಗೆ ನಡೆದ ದೇವಿಕ ಲಂಚ-ನಾಯಣಿಯ ಸತ್ವಪರೀಕ್ಷೆ ಎಂದು ದೇಶದ ಎಲ್ಲರ ದೃಷ್ಟಿಯೂ ಇತ್ತ ಹರಿದಿತ್ತು. ಕಾಂಗ್ರೆಸ್ ತಾನು ವಿಜಯಿಯಾಗುವೆನೆಂಬ ವಿಶ್ವಾಸದಿಂದಿದ್ದರೂ ಅದರ ಪರಿಣಾಮವು ತಿರುವುವುದುರುವಾಯಿತು. ಇಲ್ಲಿ ಕಮ್ಯುನಿಸ್ಟರೇ ಬೇಕೆಂದು ಮತದಾರರು ಮತ ಹಾಕಲಿಲ್ಲ, ಆದರೆ, ಕಾಂಗ್ರೆಸ್ಸಿನಲ್ಲಿನ ಕೆಲವು ಕೊರತೆಗಳಿಂದಾಗಿಯೇ ಹೀಗಾಯಿತು. ಕಾಂಗ್ರೆಸ್ ಆಡಳಿತೆಯಿಂದ ಬೇಸತ್ತ ಮತದಾರರು ಬದಲಾವಣೆಯನ್ನು ಅಪೇಕ್ಷಿಸಿದರಷ್ಟೆ. ಇನ್ನಾದರೂ ಕಾಂಗ್ರೆಸ್ ತನ್ನ ಧ್ಯೇಯ ಧೋರಣೆಗಳಿಗನುಸಾರವಾಗಿ ನಡೆದು ಜನಸೇವೆಯನ್ನೇ ತನ್ನ ಪ್ರಧಾನ ಕರ್ತವ್ಯವನ್ನಾಗಿಸಿ ಸ್ವಿಪ್ರಹತೆಯಿಂದ ಕಾರ್ಯಧಕ್ಷತೆಯಿಂದ ಮುನ್ನಡೆದರೆ, ಕೇರಳದಲ್ಲಿ ಮನಃಪರಿವರ್ತನೆ ರಚಿಸುವ ಅವಕಾಶವನ್ನು ಪಡೆಯುವುದ ಸಾಧ್ಯವಿದೆ. ಕಮ್ಯುನಿಸ್ಟರು ತಮ್ಮನ್ನು ಸ್ವರ್ಗದ್ವಾರಿಸುತ್ತಾರೆಂಬ ಭಾವನೆಯಿಂದ ಮತದಾರರು ಮತವೀಯಲಿಲ್ಲ. ಹೀಗಾಗಿ ಕಾಂಗ್ರೆಸ್ಸು ದೇಶದಲ್ಲಿ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವುದು ನಿಜವಾದರೆ, ಅದಕ್ಕೆ ಆಂತರಿಕ ಭಿನ್ನಾಭಿಪ್ರಾಯ ಮತ್ತು ಅಲಸೀ ಮನೋವೃತ್ತಿಯೇ ಕಾರಣ ಉದ್ರೇಕದಿಂದಾಗಲೀ ಉದ್ರೇಕಿಸುವುದರಿಂದಾಗಲೀ ಯಾವ ಪ್ರಯೋಜನವಿಲ್ಲ ತಮ್ಮತ್ತ ಲಕ್ಷ್ಯವೀಯುವವರನ್ನು ಜನತೆ ಎಂದಿಗೂ ಮರೆಯದು ಆದುದರಿಂದ ಕಾಂಗ್ರೆಸ್ಸು ಜನಹಿತವನ್ನು ತನ್ನ ಧ್ಯೇಯವಾಗಿಟ್ಟುಕೊಂಡಿರಬೇಕಲ್ಲದೇ ಅಧಿಕಾರಕ್ಕೆ ಅಂಟಿಕೊಳ್ಳುವುದನ್ನಲ್ಲ ಹೀಗೆ ಕಾಂಗ್ರೆಸಿಗರು ಸೇವಾಭಾವನಾಯುಕ್ತರಾದರೆ, ಪಂಡಿತ ನೆಹರೂರಂತಹ ಜನಸೇವಾದುರಂಧರರಿಗೂ ಕೂಚಮಟ್ಟಿನ ತ್ರಾಸ ಕಡಿಮೆಯಾದೀತು. ಕಾಂಗ್ರೆಸ್ಸು ಬಲಿಷ್ಠ, ಸುದೃಢ ಹಾಗೂ ಸತ್ವಶಾಲೀ ಪಕ್ಷವಾಗಿ ಮೆರೆದೀತು. ಇತ್ತ ಪ್ರತಿ ಕಾಂಗ್ರೆಸಿಗನೂ ಲಕ್ಷಿಸುವನೆಂದು ಹಾರೈಸ ಬಹುದೆ? ಭೂರೀಣರ ಮಾತುಗಳನ್ನು ಒಮ್ಮೆ ಕಾಹಕದ ಕುಲುಮೆಯಲ್ಲಿ ಕುದಿಸಿ ಅವಾರ್ಥವನ್ನು ಕಟ್ಟಿಕೊಳ್ಳದೆ ಅವನ್ನು ಸರಿಯಾಗಿ ಅರ್ಥವಿಸಿಕೊಂಡು ಜನಸೇವಕರೆಂಬ ಬಿರುದಿನಿಂದ ಮಾತ್ರ ತೃಪ್ತಿಪಡದೆ ಕರ್ತವ್ಯ ಪಾಲನೆಯಿಂದ ಆತ್ಮತೃಪ್ತಿ ಪಡೆದುಕೊಳ್ಳಲಿ. ಎಂಬುದೇ ಕಾಂಗ್ರೆಸ್ ಅಭಿಮಾನಿಗಳೆಲ್ಲರ ಅಪೇಕ್ಷೆ.

(ಒಳಿದು ಬಂದುದು)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಅದೃಷ್ಟದ ಕೈವಾಡ

ಶ್ರೀ ಕೀ. ವ. ಕೇಶವ

ಕನ್ನಡಿಯ ಮುಂದೆ—ಹೆಣಿಗೆ ಕುಂಕುಮದ ತಿಲಕವಿಡಲೆಂದು:—ನಿಂತಿದ್ದ ಸುನಂದೆ ಒಂದು ನಿಮಿಷ ಬೆರಗಾಗಿ ನೋಡಿದಳು ತನ್ನ ರೂಪವನು. 'ಏನೇ ಸುನಂದಾ....ಅಪ್ಸರೆಯಂತೆ ತೋರುತ್ತೀಯಾ! ನಿನ್ನ ಕೈಹಿಡಿಯಲು 'ಮಾರ'ನೇ ನೇರಾಗಿ ಬರಬೇಕು ನೋಡು'—ಎಂದು ಎರಡು ವರ್ಷಗಳಿಗೆ ಮೊದಲು ಹಾಸ್ಯಮಾಡಿದ ಗೆಳತಿ ನಿರ್ಮಲೆಯ ಮಾತು ಈಗವಳಿಗೆ ನೆನಪಾಗದಿರಲಿಲ್ಲ. ಹೌದು; ಸುನಂದಾ ಸುಂದರಿ; ಐದಡಿ ಎರಡಿಂಚು ಎತ್ತರದ ಆ ತೆಳ್ಳಿಗಿನ ಶರೀರ; ಒಪ್ಪವಿಟ್ಟಂತಿರುವ ದುಂಡಗಾದ ಪೂರ್ಣ ಚಂದ್ರಮನಂತಹ ಮುಖ; ನಾಚಿದಾಗ ಕೆಂಪೇರಿ, ಸಕ್ಕಾಗಗುಳಿಬಿದ್ದ ಕಣ್ಣಿಗೆ ಶಬ್ದವನ್ನುಂಟುಮಾಡುತ್ತಿರುವ ಆ ಎರಡು ಕೆನ್ನೆಗಳು; ಗಿಳಿಯ ಕೊಕ್ಕಿನಂತಿರುವ—ಉದ್ದವಲ್ಲದಿದ್ದರೂ ಎದ್ದುಕಾಣುವ ನಾಸಿಕ; ಮುಖಭಂಗಿಗನುಸಾರವಾಗಿ ಅತ್ತಿತ್ತ ತಿರುಗುವ ನಯನಗಳು; ಬೆಂಡು ಲೋಲಾಕುಗಳಿಂದ ಜೋತಾಡುತ್ತಿರುವ ಸಣ್ಣ ಕಿವಿಗಳು; ನಡುಬಗತಲೆ ತೆಗೆದು, ಇಳಿಬಿಟ್ಟಿರುವ ಉದ್ದನೆಯ ಜಡೆ; ಒಂದೆಳೆಯ ಚಿನ್ನದ ಮಾಂಗಲ್ಯ ಹಾರವು ಮಿನುಗುತ್ತಿರುವ ಅಂದವಾಗಿ ತೋರುವ ಕೊರಳು; ಉಬ್ಬಿನಿಂತಿರುವ ಕುಚದ್ವಯಕ್ಕೊಪ್ಪುವಂತಹ ತಂಪು ಕೊಟ್ಟಿದಂತಿರುವ ತೋಳುಗಳು; ಕೋಗಿಲೆಯಂತಹ ಕಂಠಸ್ವರ—ಎಂದ೮ೀಲೆ ಸುನಂದಾ ಸುರ ಸುಂದರಿಯಂತೆ ತೋರುವಳೆಂಬುದರಲ್ಲಿ ಅತಿಶಯೋಕ್ತಿಯಾದರೂ ಏನು!

ಕಾಪ್ಪನ ಬದಲಾಯಿಸುತ್ತಿದ್ದಂತೆಯೇ ಅವಳಿಗೆ ನೆನಪಾದುದು—ಅದೇ—ತನ್ನ ಮದುವೆ ಮಂಟಪದಲ್ಲಿ ಮಹೂರ್ತ ತಪ್ಪಿಹೋಗುವುದೆಂದು ಭಟ್ಟರು ಅವಸರಪಡಿಸುತ್ತಿರಲು, ಮಾಂಗಲ್ಯವನ್ನು ಕಟ್ಟಲು ಚಡಪಡಿಸಿದ—ತನ್ನ ಇನಿಯ,—ಇದೀಗ ದೂರ ದೇಶದಲ್ಲಿರುವ ತನ್ನ ಪತಿ—; ಆ ಸಮಯದಲ್ಲಿ ಆ ಸುಂದರ ಮೂರ್ತಿಯ ಕರಗಳ ಬಳಸುವಿಕೆಯಿಂದ ತನಗಾದ—ಅದೇನೋ ಒಂದು ಹೇಳಲಾರದ ಆನಂದ.... ಈಗಲು ಅವಳಿಗೆ ಮರೆತಿಲ್ಲದು. ಆ ನೆನಪಿನಿಂದಲೆಯು ಅವಳ ಪತಿ ಸುಂದರನ ರೂಪವನ್ನು ಕಣ್ಣಮುಂದೆ ತಂದಿತು. ಪೇಂಟು, ಕೋಟುಗಳಿಂದ ಅಲಂಕೃತನಾದ, ಸುಂದರನು ಕನ್ನಡಿಯಲ್ಲಿ ಕಂಡಂತಾಗಿ— 'ಸ್ವಾಮಿ' ಅಂದಳು ಸುನಂದ. ಆದರೆ ಹಿಂದಿರುಗಲು ಯಾರೂ ಕಾಣಲಿಲ್ಲ. ತನ್ನ ಪ್ರತಿರೂಪ ಮಾತ್ರ ತನ್ನನ್ನು ಅಣಕಿಸುವಂತೆ ಕನ್ನಡಿಯಲ್ಲಿ ಕಾಣಿಸಿತು. ಈಗವಳಿಗೆ ಅದು ತನ್ನ ಮನಭ್ರಾಂತಿಯೆಂದು ತಿಳಿಯಿತು. ಆದರೊಂದಿಗೆ ನಿಟ್ಟುಸಿರಿನ ಸದ್ದು!

ಏಕೆ ಈ ಸಿಡಿದುಸಿರು?

ನಿಜ; ವಿವಾಹವಾಗಿ ವರ್ಷವೆರಡು ಕಳೆದಿದ್ದರೂ, ಮದುವೆಯ ಸುಮಧುರ ಸವಿಯನ್ನವಳು ಉಂಡಿಲ್ಲ. ಮಂಗಲಸೂತ್ರ ಕಟ್ಟಿದ ಮಾರಣೆಯ ದಿನವೇ ಅತ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲೇಂಡಿಗೆ ತೆರಳಿದ್ದ. ಇನ್ನೂ ಆತ ಬಂದಿಲ್ಲ. ಹೊರಡುವ ಮುನ್ನ ತನ್ನ ಪತಿಯೊಡನೆ ಮಾತನಾಡಬೇಕೆಂಬ ಕಾಂಕ್ಷೆ ಬಲವಾಗಿದ್ದರೂ, ಸುನಂದಳಿಗೆ ಸಮಯ ಸಂದರ್ಭಗಳೊದಗಿ ಬರಲಿಲ್ಲ. 'ಹೋಗಿ ಬರ್ತೇನೆ ಮಾವಾ' ಎಂದು ತಂದೆಯೊಡನೆ ಹೇಳಿದ ಮಾತು 'ಹೋಗಿ ಬರ್ತೇನೆ ಸುನಂದಾ'. ಎಂದು ತನ್ನನ್ನೇ ಕುರಿತು ಹೇಳಿದಂತೆ ಭಾಸವಾಗಿತ್ತು. "ಅಲ್ಲಾ, ಈ ಗಂಡಸರಿಗೂ. ಎಷ್ಟು ನಾಚಿಕೇ ಎಂತ! ಮದುವೆ ಮಂಟಪದಲ್ಲಿ 'ಅವರು' ನನ್ನನ್ನು ನೇರವಾಗಿ ನೋಡಲೂ ನಾಚುತ್ತಿದ್ದರು. ಇರಲಿ—ಅವರು ಇಂಗ್ಲೇಂಡಿನಿಂದ ಬರಲಿ; 'ಯಾಕೆ ನೀವು ಒಂದು ಕಾಗದವೂ ನನಗೆ ಬರಿಯಲಿಲ್ಲ? ಒಂದು ಹೆಣ್ಣನ್ನು ಮದುವೆಯಾಗಿದ್ದೇನೆಂಬ ನೆನಪಾದರೂ ಇಲ್ಲವೇ?'—ಕೇಳಿಬಿಡ್ತೇನೆ ಹೂಂ, ನೋಡುವೆ...." ಕೋಲು ಬೆರಳಿನಿಂದ ತನ್ನ ಸ್ಮೃತಿಬಿಂಬಕ್ಕೇ ತೋರಿಸಿ ತನ್ನಲ್ಲೇ ನುಡಿದುಕೊಂಡಳು ಸುನಂದಾ.

"ಅಮ್ಮಾ, ಅಮ್ಮಾ, ಇಲ್ಲಿ ನೋಡಮ್ಮಾ....ಸುನಂದಕ್ಕ ಸಿನಿಮಾಕ್ಕೆ ಸೇರ್ತಾಳಂತ ಕಾಣುತ್ತೆ. ಯೇಗೆ ಅಭಿನಯಿಸ್ತಾಳೆ....ಏನಕ್ಕಾ...."-ಅಷ್ಟರಲ್ಲಿ ಎಂಟು ವರ್ಷದ ಆಕೆಯ ತಂಗಿ ಜಯಲಕ್ಷ್ಮಿ ಒಂದೇ ಉಸುರಿಗೆ ನುಡಿದಳು.

"ಹೋಗೇ.....ನಾನೇನು ಮಾಡ್ತಾ ಇದ್ದೇಯೇನೇ? ಸಿನಿಮಾ ಅಂತೆ, ಸಿನಿಮಾ..."

"ಇಲ್ಲಸ್ವಾಮಿ ಏನೂ ನಾಡ್ಲಿಲ್ಲ.... ಮೊನ್ನೆ ಭಾವನ ಪತ ಎದುರಿಗಿಟ್ಟು ಸ್ವಾಮಿ...ಎಂದೆಲ್ಲಾ ಹೇಳ್ತಾ ಆಡ್ಡ ಬೀಳ್ತಿದ್ದಿಯಲ್ಲಾ. ನಂಗೆ ಗೊತ್ತಿಲ್ಲೇನು, ಅದೆಲ್ಲಾ ಸಿನಿಮಾಕ್ಕೆ ಸೇರ್ಲಿಕ್ಕೆ 'ಪ್ರೇಕ್ಟೀಸು' ಅಂತೆ. ನಿಲ್ಲು....ನಿನಗೆ ಭಾವ ಬಂದ್ಮೇಲೆ ಎಲ್ಲಾ ಹೇಳ್ತೀ...."

"ಏಽಽ ಜಯಾ.....ಹಾಗೇನೂ ಮಾಡ್ಬೇಡ ಸದ್ಯ; ಭಾವ ತುಂಬಾ ಸಾಮಾನು ನಿಂಗೆ ತಂತ್ತಾರೆ. ಹ್ಹಾ."

"ಏನೇ ಇದು! ಹತ್ತು ಹೊಡೆದು ಗಳಿಗೆ ಒಂದಾಗಿ ಹೋಯ್ತು. ಇನ್ನೂ ನಿನ್ನ ಶೃಂಗಾರ ಮುಗಿಯಲಿಲ್ವೇ?"-ಅನ್ನುತ್ತಾ ಅಷ್ಟರಲ್ಲಿ ತಾಯಿ ಪಾರ್ವತಿ ಒಳ ಬಂದಳು.

ತಮ್ಮಿಬ್ಬರ ಮಾತುಕತೆ ತಾಯಿಗೆ ಅರಿಯುವುದು ಬೇಡವೆಂದು ಬೇರೇ ಮಾತು ತೆಗೆದಳು. ಪಾರ್ವತಿ ಒಳಗಿಂದಲೇ ಈ ಅಕ್ಕತಂಗಿಯಂದಿರ ಮಾತುಕತೆಗಳನ್ನು ಕೇಳಿದ್ದಳು.

ಸುನಂದಾಳ ತುಂಬು ಜವ್ವನವನ್ನು ಕಂಡು ಪಾರ್ವತಿಗೂ ಏನೇನೋ ಅಯಿತು. ಪಾಪ, ಹುಡುಗಿ ಗಂಡನ ಕುರಿತೇ ಯೋಚಿಸುತಿದ್ದಾಳೆ! ಥೂ, ಏನು ಹುಡುಗರಪ್ಪಾ ಈಗಿನವರು? ಮನೆಯಲ್ಲಿರುವ ಪತ್ನಿಗೆ ಒಂದು ಕಾಗದವಾದರೂ ಬರೆಯಬೇಡವೇ? ಇದು ಏನೂ ಇಲ್ಲ. ಅವರಿಗಿಷ್ಟು ಬರಿಯುತ್ತಾನೆ—ತಿಂಗಳಿಗೊಮ್ಮೆ ಎರಡು ಸಾಲು! ಅಂತೂ ಈ ಇಂಗ್ಲೇಂಡೋ—ಜರ್ಮನಿಯೋ— ಎಲ್ಲಿಂದ ಪ್ರಿ ಒಮ್ಮೆ ಬಂದ್ರೆ ಸಾಕಿತ್ತು ಸೌಖ್ಯವಾಗಿ—ಅಂದು ಕೊಂಡಳು. ಎಷ್ಟಾದರೂ ತಾಯಿಯ ಹೃದಯವಲ್ಲವೇ? ಮಗಳ ಮನಸ್ಸನ್ನು ಸಂತೋಷಗೊಳಿಸಲಿಕ್ಕಾಗಿ ಪಾರ್ವತಿ ಬೇರೆ ವಿಷಯವನ್ನೆತ್ತಿದಳು. ಪಾಪ ತಾಯಿಗೆ ತಿಳಿಯಲಿಲ್ಲವಲ್ಲಾ ಎಂದು ಸುನಂದಳೂ ಮಾತಿಗೆ ಮಾತು ಸೇರಿಸಿದಳು. ಜಯಲಕ್ಷ್ಮಿ ಇದರೆಡೆಯಲ್ಲಿ ನುಸುಳಿ ನೆರೆಮನೆಯ ವಿಜಯಳೊಡನೆ ಆಡಲೆಂದು ತೆರಳಿದುದು ಅವರಿಬ್ಬರಿಗೆ ಅರಿಯಲಿಲ್ಲ. ಸಮೀಪದ ಮನೆಯಲ್ಲಿ ಗ್ರಾಮಫೋನ್ ರಿಕಾರ್ಡು ಯಾವುದೋ ಹಳೆಯ ಪದ್ಯವನ್ನು ಪ್ರಸರಿಸ ತೊಡಗಿತ್ತು.

— ೨ —

ಸಂಜೆಯ ತೀತಲಗಾಳಿ ಬೀಸತೊಡಗಿದೆ. ಅದರೊಂದಿಗೇ ಜಲಧಾರೆ ಸುರಿಯುವ ನಿರೀಕ್ಷಣೆ. ಮೋಡಗಳು ಪರಸ್ಪರ ಡಿಕ್ಕಿ ಹೊಡೆದು, ಗುಡುಗು ಕಿವಿ ಒಡೆಯುವಂತೆ ಗುಡುಗುತಿತ್ತು. ಮಿಂಚಿನ ಮಿಂಚುವಿಕೆಯಿಂದ ಹೊರಗೆ ದೃಷ್ಟಿಸಲಾಗುತ್ತಿರಲಿಲ್ಲ. ನಿರೀಕ್ಷಿಸಿತ್ತಿದ್ದಂತೆ ಸುರಿಯುತೇ ಸುರಿಯಿತು ಮೇಘರಾಶಿ ನೀರಾಗಿ;—ಇದಾವುದನ್ನೂ ಲೆಕ್ಕಿಸದೆ, ಆ ಪ್ರಯಾಣಿಕರ ಬಂಡಿ ವೇಗವಾಗಿ ಮುಂದೋಡುತ್ತಿತ್ತು. ಅಂದೇಕೋ ಆ ಬಂಡಿಯಲ್ಲಿ ಸಾಕಷ್ಟು ಜನರಿರಲಿಲ್ಲ ಇದರಿಂದಾಗಿ ಪ್ರಯಾಣಿಕರು ಹಾಯಾಗಿ ಕುಳಿತಿದ್ದರು. ಎರಡನೇ ದರ್ಜೆಯ ಕಂಪಾರ್ಟ್‌ಮೆಂಟಿನಲ್ಲಿ—ಕಿಟಕಿಯ ಬಳಿ ವ್ಯಕ್ತಿಯೊಬ್ಬ ಕುಳಿತಿದ್ದ. ಅದರೊಳಗೆ ಹೆಚ್ಚು ಜನರಿರಲಿಲ್ಲ. ಆದ್ದರಿಂದ ಆ ವ್ಯಕ್ತಿ ಕಾಲು ಚಾಚಿಯೇ ಕುಳಿತಿತ್ತು. ತೀತಗಾಳಿ ಬೀಸುತ್ತಿದ್ದರಿಂದ—ನೀರು ಒಳಕ್ಕೆ ಬರುತ್ತಿದ್ದುದರಿಂದ—ಕಿಟಕಿಯ ಗಾಜಿನ ಹಲಗೆಯನ್ನು ಇಳಿಬಿಟ್ಟಿದ್ದನು. ಕೈಯಲ್ಲೊಂದು 'ಪ್ರಪಂಚ' ಪತ್ರಿಕೆಯಿತ್ತು. ಇದರಿಂದ ಅತ ಕನ್ನಡಿಗನೆಂಬುದಕ್ಕೆ ಅಡ್ಡಿಯಿರಲಿಲ್ಲ. ಆತನ ವೇಷಭೂಷಣ ಆಧುನಿಕ ನಾಗರಿಕತೆಯ ಲಕ್ಷಣಗಳಿಗನ್ವಯಿಸಿದ್ದರಿಂದ ಆತ ಸೋರ್ವ ಪದವೀಧರನೆಂದು ಹೇಳಲು ಕಷ್ಟವಿರಲಿಲ್ಲ. ಕೈಯಲ್ಲೊಂದು 'ಪೇಂಡ್ ಬೇಗ್' ಪದಡಿಸಿದ್ದು, ಅದರಲ್ಲಾತನ ಹೆಸರಿರುವ ಚೀಟು ಹೊರಕಾಣುತಿತ್ತು. ಡಾ! ಸುಂದರ ರಾವ್, ಎಂದು ಅದರಲ್ಲಿ ಬರೆದಿತ್ತು. ಹೌದು; ಸುಂದರನೇ ಅವನು. ತನ್ನ ಎರಡು ವರ್ಷದ ವಿಶೇಷ ತರಬೇತಿಯನ್ನು ಮುಗಿಸಿ ಇದೀಗ ತನ್ನ ಮಾತೃಭೂಮಿಗೆ ಮರಳುತ್ತಿದ್ದಾನೆ. ಇನ್ನೇನು—ಬೆಳಗಾಗುವಾಗ ಆತ ತನ್ನ ತಾಯಿನಾಡಿಗೆ ತಲಪುತ್ತಾನೆ. ಆದರೆ.... ಅದೇನೋ ಯೋಚನೆಯಲ್ಲಿ ಆತ ತಲ್ಲೀನನಾಗಿದ್ದಾನೆ. 'ಪ್ರಪಂಚ' ಪತ್ರಿಕೆಯು ಕೈಯಲ್ಲಿದ್ದು, ಬಂಡಿಯಲ್ಲಿರುವ ಇತರರ ದೃಷ್ಟಿಗೆ ಈತ ಓದುವಂತೆ ಕಂಡರೂ, ಸುಂದರನ ಮನಸ್ಸು ಮಾತ್ರ ಅವುದೋ ವಿಷಯವನ್ನು ನೆನೆಸುತಿತ್ತು. ಅದೇ—ಆ ಘಟನೆ—ಇನ್ನೂ ಆತನ ಮನದಲ್ಲಿ ನೆನಪನ್ನುಂಟುಮಾಡುತ್ತಿತ್ತು. ಸಿನಿಮಾದಲ್ಲಿ ದೃಶ್ಯಗಳಹಿಂದೆ ದೃಶ್ಯಗಳು ಕಾಣಿಸುವಂತೆ ಆತನಿಗೆ ಒಂದೊಂದೇ ವಿಷಯ ಕಣ್ಣಮುಂದೆ ದೃಶ್ಯವಾಗಿ ಕಾಣತೊಡಗಿತು.

....ಇಂದಿನಂತೆ ಅಂದೂ ಸುಂದರನನ್ನು ಇದೇ ರೈಲು ಹೊತ್ತುತಂದಿತ್ತು. ಅದು ಮದ್ರಾಸಿನಿಂದ. ಅಂದು ಯಂ. ಬಿ. ಬಿ. ಎಸ್. ಕೋರ್ಸನ್ನು ಸಂಪೂರ್ಣಗೊಳಿಸಿ, ಆತ ಇದೇ ರೈಲಲ್ಲಿ ಹಿಂತಿರುಗಿ ತನ್ನ ಊರಿಗೆ ಬರುತಿದ್ದ. ಅವನೊಬ್ಬನೇ ಅಲ್ಲ-ಹಲವರು ಗೆಳೆಯರೂ ಅವನೊಂದಿಗಿದ್ದರು. ಎಂತಲೇ ಆತ ಸುಖವಾಗಿ ಬಂದಿದ್ದ ಎನ್ನಬಹುದು. ಸ್ಟೇಷನಿನಲ್ಲಿ ರೈಲು ನಿಲ್ಲುತ್ತಲೇ ಆತನ ಅಣ್ಣ ಅರವಿಂದನು ತಮ್ಮನನ್ನು ಇದಿರುನೋಡುತ್ತಿದ್ದನು. ನಂತರ, ಮೋಟಾರು ಹತ್ತಿ ಮನೆಗೂ ಬಂದುದಾಯಿತು.

ಮನೆಗೆ ಬಂದ ಎರಡನೇ ದಿನ ಮಾತಾಡುತ್ತಿದ್ದಂತೆಯೇ ಅರವಿಂದನು ಸಹೋದರನ ಮದುವೆಯ ಕುರಿತು ಪ್ರಸ್ತಾಪವೆತ್ತಿದನು.

"ಅದೆಲ್ಲಾ ಇರಲಿ, ಸುಂದರೂ, ತಂದೆ ಹಾಗೂ ನಾವೆಲ್ಲರೂ ಸೇರಿ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಇನ್ನು ನಿನ್ನಲ್ಲಿ ಕೇಳುವುದು ಮಾತ್ರ ಬಾಕಿ ಉಳಿದುದು."

"ಏನಣ್ಣಾ ಅಂತಹ ವಿಷಯ?"

"ಮತ್ತಾವುದು ತಮ್ಮಾ, ನಿನ್ನ ಮದುವೆಯ ವಿಷಯವೇ. ನೋಡು, ತಂದೆ ತಾಯಿಗಳಿಗೂ ವಯಸ್ಸಾಗುತ್ತಾ ಬಂತು. ನಿನಗೊಂದು ಮದುವೆ ಮಾಡಬೇಕೆಂದು ಹಂಬಲಿಸುತ್ತಿರುವರು. ಅಂತೆಯೇ ಹೆಣ್ಣನ್ನೂ ನೋಡಿಟ್ಟಿರುವರು...

"ನಿಲ್ಲಿಸಣ್ಣಾ, ನನಗೆ ಈಗ ಮದುವೆಯಾಗುವ ಬಯಕೆಯೇ ಇಲ್ಲಣ್ಣಾ, ಅಂದ ಮೇಲೆ ಆ ಮಾತೇಕೆ ಮತ್ತೆ"

"ಇರಲಿ, ಬಿಡು, ನನ್ನ ಮಾತು ಪೂರಾ ಕೇಳಬಿಡು. ಹೆಣ್ಣನ್ನು ನೀನು ನೋಡಿರಲೂ ಸಾಕು, ಪುರುಷೋತ್ತಮರಾಯರು—ಶಿವಳಳ್ಳಿ ಬಲ್ಲೆಯಾ, ಅವರ ಮಗಳು. ಪ್ರಾಯ ಹದಿನಾರು. ಸುಂದರಿಯೂ ಹೌದು. ಅಲ್ಲದೆ—"

(೧೧ನೇ ಪುಟ ನೋಡಿರಿ)

ಗಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳಿ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು
ಟ್ರೇಡ್ ಮಾರ್ಕ್
ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ: ಗಳಿಗೆ)
ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು, ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.
"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ಸಪುಂಸಕತೆಯನ್ನು ಹೋಗಲಾಡಿಸುತ್ತವೆ.
ಪಂ|| A. R. ಅಯ್ಯರ್
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಶ್ರೀವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.
ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)
628, ಅಂಬಳಿ ಅಣ್ಣಯ್ಯ ಪಂಡಿತ್ ಸ್ಟ್ರೀಟ್ ಸೌತ್ ಕ್ರಾಸ್, ಮೈಸೂರು-1 (S.I.)

ರಾಷ್ಟ್ರೀಯ ಸಮಾಜ ಸ್ಥಾಪನೆ–೧

ಬಭುಕಿತಃ ಕಿಂ ನಕರೋತಿ ಪಾಪಮ್?

"ಯೋಗಾರೂಢನಾಗುವುದಕ್ಕೆ ಕರ್ಮವೇ ಸಾಧನೆಯಾಗಿದೆ, ಇಂಥದ ಯೋಗಾರೂಢನಾಗಿರುವವನಿಗೆ ಶಾಂತಿ ಲಭಿಸುತ್ತದೆ" ಎಂಬರ್ಥದ ಶ್ಲೋಕವೊಂದು ಭಗವದ್ಗೀತೆಯಲ್ಲಿದೆ. ಸಾಧ್ಯವೆಂದರೆ ಸಾಧನೆಯೆಂತಾಗುವುದು? ಈ ವಿಷಯದಲ್ಲಿ ವಿಚಾರ ಮಾಡುವುದಾದರೆ, ಶಾಂತಿಯ ಸಾಧ್ಯವೇ ಹೊಗತು ಸಾಧನೆಯಲ್ಲ ಪ್ರತಿಯೊಬ್ಬರೂ ಶಾಂತಿ ಪ್ರಾಪ್ತಿಗಾಗಿ ಹಂಬಲಿಸುತ್ತಾರೆ. ಇದು ಸಾಧನೆಯಾಗಿ ಮಾರ್ಪಡುವುದು ಹೇಗೆ?

ವಿಚಾರ ಮಾಡಿದರೆ, ವಾಸ್ತವವಾಗಿ ಸಾಧನ ವತ್ತು ಸಾಧ್ಯಗಳಲ್ಲಿ ಯಾವ ಅಂತರವೂ ಇಲ್ಲ ಒಂದು ವಸ್ತುವು ಒಂದೆಡೆ ಸಾಧ್ಯವಾಗಿದ್ದರೆ, ಅದೇ ವಸ್ತು ಮತ್ತೊಂದು ಸಂದರ್ಭದಲ್ಲಿ ಸಾಧನೆಯಾಗುವುದು ದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸುವುದು. ನಮಗೆ ಸಾಧ್ಯವಾಗಿತ್ತು ಆದರೆ, ಗಾಂಧೀಜಿಯವರಿಗದೇ ಸಾಧನೆಯಾಗಿ ಪರಿಣಮಿಸಿತ್ತು

ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಬಂದಾಗ ಮತ್ತು ಇಲ್ಲಿನ ರಾಜಕಾರಣದಲ್ಲಿ ಅವರು ಪಾದಾರ್ಪಣ ಮಾಡಲಾರಂಭಿಸಿದಾಗ ಅವರು ಮೊತ್ತಮೊದಲಿಗೆ ಚಂಪಾರಣ್ಯದಲ್ಲಿ ಕಾರ್ಯಮಗ್ನರಾದರು ಇಲ್ಲಿ ಅವರಿಗೆ ಭಾರತದ ರೈತರ ನಿವ್ವ ವರ್ಗ ಜೀವಧಾರಣೆ ಮತ್ತವರ ಬಡತನ ಹಾಗೂ ಅಸಹಾಯಕತೆಯ ಅರಿವಾಯಿತು. ಚಂಪಾರಣ್ಯದಿಂದವರು ಅಹಮದಾಬಾದಿಗೆ ತೆರಳಿದರು ಅಲ್ಲಿ ಮಜೂರ ರೊಡನೆ ಕೆಲಸ ಮಾಡಿ ಭಾರತದ ಕಾರ್ಮಿಕರ ದರ್ದಶೆಯ ಅನುಭವವನ್ನು ಮಾಡಿಕೊಂಡರು ವಿದೇಶೀಯ ಪ್ರಭುಗಳ ೧೫೦ ವರ್ಷಗಳ ಶಾಸನಕ್ಕೆ ಒಳಪಟ್ಟ ದೇಶವು ಅತೀವ ದರಿದ್ರವತ್ತ ನಿರುಪಯೋಗಿಯಾಗಿ ಪರಿಣಮಿಸಿದೆಯೆಂದೂ ಅನ್ಯ ದೇಶೀಯ ರಾಜ್ಯಭಾರವನ್ನು ದೂರೀಕರಿಸದ ವಿನಹ ದೇಶವುದ್ಧಾರವಾಗುವುದ ಅಸಾಧ್ಯವೆಂದು ಅವರು ಕಂಡ ಕೊಂಡರು ಸ್ವತಂತ್ರಾರಣದಿಂದ ಅವರು ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಕದನವನ್ನಾರಂಭಿಸಿದರು. ಮತ್ತು ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಡುವುದನ್ನು ತಮ್ಮ ಸಾಧ್ಯವನ್ನಾಗಿಸಿಕೊಂಡರು ದೇಶದ ನಿವಾಸಿಗಳೆಲ್ಲರಿಗೆ ಅದು ಸಾಧ್ಯವಾಗಿದ್ದರೂ ಗಾಂಧೀಜಿಯವರಿಗೆ ಅದುವೇ ಸಾಧನೆಯೂ ಆಯಿತು. ಅವರ ನಿಜವಾದ ಸಾಧ್ಯ ದೇಶದ ದಾರಿದ್ರ್ಯ ಮತ್ತು ನಿರುಪಯೋಗಿತನವನ್ನು ದೂರಮಾಡುವುದಾಗಿತ್ತು. ಏಕೆಂದರೆ, ಅವರು ವಿದೇಶೀ ಪ್ರಭುವರ್ಯರನ್ನು ದೇಶದಿಂದ ಉಚ್ಚಾಟಿಸದೆ ಇವುಗಳು ಈಡೇರುವಂತಿಲ್ಲವೆಂದು ತಿಳಿದಿದ್ದರು.

ನಾವು ಸಾಧ್ಯವೆಂದಿಟ್ಟುಕೊಂಡಿದ್ದ ಸ್ವಾತಂತ್ರ್ಯವು ನಮಗೆ ಲಭಿಸಿತು, ಆದರೆ, ಗಾಂಧೀಜಿಯವರು ಸಾಧ್ಯವನ್ನಾಗಿಟ್ಟುಕೊಂಡ ದಾರಿದ್ರ್ಯ ವತ್ತು ನಿರುಪಯೋಗಿತನಗಳು ಮಾತ್ರ ದೂರವಾಗಿ ಆದು ಸಾಧ್ಯವಾಗಿಲ್ಲ. ದೇಶವು ಸ್ವಾತಂತ್ರ್ಯ ಪಡೆದ ಮೇಲೆ ಜನತೆ ಸಂತೋಷದಿಂದ ಕುಣಿಯುಬಹುದು; ಆದರೆ, ಅವರು ನಿಜವಾದ ಸಂಗ್ರಾಮ ವಾಪೇಲೆ ಪ್ರಾರಂಭವಾಗಬೇಕಾಗಿದೆಯೆಂಬುದನ್ನು ಅರಿತಿಲ್ಲ ನಮ್ಮ ಬಡತನ ಮತ್ತು ನಿರುಪಯೋಗಿತನಗಳೊಡನೆ ಕದನದೋರಿ ಇವನ್ನು ದೇಶದಿಂದ ಓಡಿಸಬೇಕಾಗಿದೆ. ಆಗಲೇ ನಮ್ಮ ದೇಶವು ಉತ್ತಮ ಮಟ್ಟದಲ್ಲಿ ಸ್ವತಂತ್ರವಾಗುವುದು ಮತ್ತು ಗಾಂಧೀಜಿಯವರ ಸಾಧ್ಯವೂ ಪೂರ್ಣಗೊಳ್ಳುವುದು.

ದಾರಿದ್ರ್ಯ ಮತ್ತು ನಿರುಪಯೋಗಿತೆಯಿಂದ ಮುಕ್ತವಾಗುವುದಕ್ಕಾಗಿ ರೂಪಿಸಲ್ಪಟ್ಟ ಪಂಚವರ್ಷಿಕ ಯೋಜನೆಗಳ ಕಾರ್ಯಕ್ರಮವು ನಿರ್ಧಾರಿತವಾಗಿದೆ ದಿನದಿನಕ್ಕೂ ಅಧಿಕ ಸ್ವಾವಲಂಬ್ಯದ ಸಮಾಜಕ್ಕೆ ನಮ್ಮನ್ನ ಕೊಂಡೊಯ್ಯುವುದರಿಂದ ಪುನಃ ನಮ್ಮ ದೇಶವನ್ನು ಸಮೃದ್ಧ ಶಾಲಿಯನ್ನಾಗಿ ಮಾಡುವುದರಿಂದ, ಇದುವೇ ನಮ್ಮ ಸಾಧನೆಯಾಗಿದೆ

ದೇಶದ ಚರಿತ್ರೆಯ ದಿನೇ ದಿನೇ ಕುಸಿಯುತ್ತಿದೆ, ಅನಾಚಾರ, ಭ್ರಷ್ಟಾಚಾರ ಮತ್ತು ವ್ಯಭಿಚಾರಗಳು ಬೆಳೆಯುತ್ತಿವೆ ಎಂದು ಜನರು ಹೇಳ ತ್ತಿರುತ್ತಾರೆ ಕರಿಯೇ ಆದರೆ, ಅಂತಹವರು "ಬಭುಕ್ಷಿತಃ ಕಿಂ ನಕರೋತಿ ಪಾಪಮ್" (ಹಸಿವನು ಯಾವ ಪಾಪವನ್ನು ಮಾಡಲಾರನು?) ಎಂಬ ಉಕ್ತಿಯನ್ನು ಮರೆತುಬಿಡುತ್ತಾರೆ ಯಾರೊಬ್ಬನ ಮೇಲಾದರೂ ದೋಷಾರೋಪಣೆ ಮಾಡುವುದು ಸುಲಭ, ಆದರೆ, ಮನೆಯಲ್ಲಿ ಮಕ್ಕಳು ಹಸಿದಿರುವ ಹೊತ್ತಿನಲ್ಲಿ, ಮನೆಯಲ್ಲಿ ಧಾನ್ಯದ ಕಳೆ ಇಲ್ಲದ ಸಮಯದಲ್ಲಿ, ಶರೀರವನ್ನು ಮುಚ್ಚಿಕೊಳ್ಳಲು ಚಿಂದಿಬಟ್ಟೆಯೂ ದೊರೆಯದ ವೇಳೆಯಲ್ಲಿ, ತಲೆಯನ್ನೆತ್ತಿಲೂ ಅವಕಾಶವಿದಿರುವ ಪ್ರಾಣಿಕತನ ಮಾಯವಾದರೆ ಅದಾವುದೋ? ಒಂದು ಕಥೆ ನನಗೆ ಎರತ್ತದ—ದೇಶಲ್ಲೂ ಮೈಕ್ಕಂತ ಎಲವಾದದ ಭಿಕ್ಷೆ ಒಂತ ವಸಿಷ್ಠ ನು ನಿರ್ಯಾಣ ಕಸಿನಿಸಿಂಗಂಗಾಲಾದರು ಅವರಿಗೆ ನಾಯಿ ಮಾಂಸ ತಿನ್ನಬೇಕಾದ ಸಂದರ್ಭ ಬಂತು! ಅದನ್ನು ಕಂಡು, ಒಬ್ಬ ವ್ಯಾಧ ಅವರಿಗೆ ಧರ್ಮ ತಿಳಿಸಲು ತೊಡಗಿದನು ಆಗ ಮುನಿಸುಂಗವರು ಆತನನ್ನ ಜರೆದು ನುಡಿದರು—ನನಗೆ ದೇಹಪದೇಶಗೈಯುವ ನೀನು ಯಾರು? ಧರ್ಮವೇನೆಂಬುದನ್ನು ನಾನರಿತಿದ್ದೆನೆನು. ಧರ್ಮದ ರಕ್ಷಣೆಯು ದೇಹರಕ್ಷಣೆಯಿಂದಲೇ ಕೈಗೂಡುವುದು ಶರೀರವೇ ಉಳಿಯದ ಹೋದರೆ ಧರ್ಮದ ರಕ್ಷಣೆಯಾದರೂ ಹೇಗಾಗಬೇಕು?

ಇದರಿಂದವೇ ಸಂತರು ಹೇಳಿದ್ದಾರೆ – "ಶರೀರ ಮಾದ್ಯಂ ಖಲುಧರ್ಮ ಸಾಧನಂ" ಎಂದು

ಯಾವುದಾದರೊಂದು ದೇಶದ ಸಂಸ್ಕೃತಿ ಮತ್ತು ಸಭ್ಯತೆಯು ಹೇಗೆ ಬೆಳೆಯುತ್ತಿದೆಂದು ಅದರ ಇತಿಹಾಸವನ್ನು ತೆಗೆದು ನೋಡಿದಾಗ, ಜನರಿಗೆ ಅನ್ನ ಸಂಪಾದಿಸುವ ಚಿಂತೆಯಿಲ್ಲದಿರುವಾಗ ಅವರ ವಿಚಾರಗಳಿಗೆ ಆತಂಕವಿಲ್ಲದಿರುವಾಗ ಇವುಗಳು ಉನ್ನತವಾದುವೆಂದು ತಿಳಿಯುವುದು ಒಂದು ಬಾರಿ ಜನರು ಒಬ್ಬ ಋಷಿಯಲ್ಲಿಗೆ ಹೋದರು ಆತನೊಡನೆ "ಬ್ರಹ್ಮ ನೆಂದರೇನು?" ಎಂದು ಪ್ರಶ್ನಿಸಿದರು ಋಷಿಯು ಎಲ್ಲಕ್ಕೂ ಮೊದಲಿಗಿತ್ತ ಉತ್ತರ "ಅನ್ನಂ ಬ್ರಹ್ಮೆ" ಎಂದು ಆರ್ಥಾತ್ ಅನ್ನವೇ ಬ್ರಹ್ಮ ಎಂದ ಆದುದರಿಂದ ದೇಶವನ್ನು ಸಮೃದ್ಧಶಾಲಿಯನ್ನಾಗಿಸಲು ಮತ್ತು ಇಲ್ಲಿಯ ಸಭ್ಯತೆ ಹಾಗೂ ಸಂಸ್ಕೃತಿಗಳನ್ನು ವಿಕಾಸಪಡಿಸಲು ದೇಶದ ನಿರುದ್ಯೋಗಿತನ ಹಾಗೂ ದಾರಿದ್ರ್ಯಗಳು ದೂರವಾಗಬೇಕು. ಪ್ರತ್ಯೇಕ ಪ್ರಜೆಗೂ ಮುಂದುವರಿಯ ಸಮಾನ ಅವಕಾಶ ಮತ್ತು ಸಮಾನ ಅಧಿಕಾರಗಳನ್ನು ಕಲ್ಪಿಸಿಕೊಡುವ ಸಮಾಜವನ್ನು ನಿರ್ಮಾಣ ಮಾಡಬೇಕು ಅದರಾಗ್ರಾಮವನ್ನು ಶಮಿಸಲು ತನ್ನ ಶರೀರವನ್ನು ಪ ಚ್ಚಿಕೆಳ್ಳಲು ಬಟೆ, ನಿರ್ಮಾಣಾಗಿ ವ ನೆ ಸುಸಂಸ್ಕೃತವಾಗಲು ಶಿಕ್ಷಣ ಮತ್ತು ಸಿರೋಗಿಯಾಗಿರಲು ಸ್ವಚ್ಛತೆ ಸಾಧನಗಳು ಎಲ್ಲರಿಗೂ ಉಪಲಬ್ಧವಾಗಬೇಕು

ಇಂತಹ ಬಡತನ ಮತ್ತು ನಿರುಪಯೋಗಿತನಗಳನ್ನು ದೂರಮಾಡಲು ನಮ್ಮ ಮುಂದಾಳುಗಳು ಪಂಚವರ್ಷಿಕ ಯೋಜನೆಗಳನ್ನು ಕಾರ್ಯಾಚರಣೆಗೆ ತರುತಿದ್ದಾರೆ ಮತ್ತು ಎಲ್ಲ ನರ—ನಾರಿ, ಬಾಲ—ವೃದ್ಧರಿಗೆ ಅವರು ಸಹಯೋಗಿಯಾಗಲು ವಿನಂತಿಸಿದ್ದಾರೆ—ಇದರಿಂದ ಉನ್ನತಗೆಳಿಸುವ ಎಲ್ಲ ದ್ವಾರಗಳು ಉದ್ಘಾಟಿತವಾಗಬೇಕು ಮತ್ತು ತನ್ನ ಶಕ್ತಿ ಹಾಗೂ ಯೋಗ್ಯತೆಗಳಿಗನುಸಾರವಾಗಿ ಪ್ರತಿಯೊಬ್ಬರೂ ಅದರಲ್ಲಿ ಪ್ರವೇಶಿಸಬೇಕು ಎಂಬ ಆಶಯವನ್ನು ನಾಯಕರು ವ್ಯಕ್ತಪಡಿಸಿರುವುದು ಸರ್ವಶ್ರೇಷ್ಠವಿರುತ್ತದೆ

ಯೋಜನೆಯು ಇಡಿ ದೇಶ ಮತ್ತು ಎಲ್ಲ ಸಮಾಜಕ್ಕೆ ಸಂಬಂಧಿಸಿದುದೇ ಅಥವಾ ಒಬ್ಬ ವ್ಯಕ್ತಿಗೆ ಇಲ್ಲವೇ ವಿಶೇಷವಾಗಿ ಒಂದು ಸಂಗಡಕ್ಕೆ ಸೇರಿದುದೆ, ಎಂಬ ಪ್ರಶ್ನೆ ಈಗ ಹುಟ್ಟಿತ್ತದೆ ಅದರೆ ಯೋಜನೆಗಳು ವ್ಯಕ್ತಿಗತವಾಗಿದ್ದರೆ, ಅದರಿಂದ ರಾಷ್ಟ್ರದ ನೆಮ್ಮದಿಯಾಗಲಾರದ ಮತ್ತು ಅದು ಸಂಗಡನುನೋವ್ಯತ್ತಿಯನ್ನು ಬೆಳೆಯಿಸಿ ರಾಷ್ಟ್ರೀಯತೆಗೆ ಚ್ಯುತಿಯನ್ನು ತರುವುದ ಆದುದರಿಂದ, ಶ್ರೇಷ್ಠ ರಾಷ್ಟ್ರೀಯ ಸ್ವರೂಪವಿರುವ ಒಂದು ಸಂಸ್ಥೆ ಅವಶ್ಯಕತೆಯಿರುವುದನ್ನನುಲಕ್ಷಿಸಿ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಸಂಲಗ್ನವಾಗಲಿಚ್ಛಿಸುವ ಅಬಾಲ ವೃದ್ಧರನ್ನ ಪುರುಷ ನಾರಿಯರನ್ನು ಒಂದುಗೂಡಿಸುವ ಸಂಸ್ಥೆಯೊಂದು ಅಗತ್ಯವಿತ್ತು. ಇಲ್ಲಿ ಜಾತಿಭೇದ, ಧರ್ಮಭೇದ ಸಾಂಪ್ರದಾಯಿಕ ಭೇದ ಸರಕಾರಿ–ಸರಕಾರೇತರ ಭೇದಗಳೂ ಯಾವೂ ಇರಬಾರದು

ಇದಕ್ಕಾಗಿ ೩೦೦ರಲ್ಲಿ ಭಾರತ ಸೇವಕ ಸಮಾಜವು ಜನ್ಮತಾಳಿತು. ಶ್ರೀ ಗಳ್ಳರ್‌ಲಾಲ್ ಎಂದಾಂ ಇದರ ಜನ್ಮದಾತರಾಗಿದ್ದರು ಪಂಡಿತ ಜವಾಹರಲಾಲ ನೆಹರೂ ಇದರ ಧರ್ಮಪತ್ನಿಯಾಗಿದ್ದಾರೆ. ಶ್ರೀ ಸಂಜಯ ಈ ಸಮಾಜದ ಅಧ್ಯಕ್ಷರಾಗಿದ್ದಾರೆ ನೆಹರೂ ಪ್ರಧಾನವಾಗಿದ್ದರೆ ಸಣ್ಣ ರೂಪದ ಬೀಜವು ಆರು ವರ್ಷಗಳ ಸರ್ವದಲ್ಲಿ ಬೃಹತ್ತಾಗಿ ಅದರಲ್ಲಿ ಅಂಕುರಪೊಡೆಯಿತ್ತು, ಕಂಗೊಳಿಸುವುದು. ಈಗ ದೇಶದ ಎಲ್ಲ ಪ್ರಾಂತಗಳ ಜಿಲ್ಲೆಜಿಲ್ಲೆಗಳಲ್ಲಿ ಅದರ ಶಾಖೆಗಳು ಹಬ್ಬಿರುತ್ತವೆ ಚುನಾವಣೆಯ ದಿನಗಳ ಇಗಾಗಲೇ ಅಧಿಕ ರದ ಲಾಭ ಸೆಯಾಗಲೀ ವೇತನ ಪಡೆಯುವ ಅದವಾ ಪಡೆಯದಿರುವಂಥ ಭೇದವಾಗಲೀ ಇದರಲ್ಲಿ ಸಮಾನರೂಪದಿಂದ ಇದರ ವರ್ಗಣೆಯಾಗಿದೆ ಈ ದೇಶದಲ್ಲಿನ ಅನ್ನನ್ನುಣ್ಣುವ ವತ್ತು ಜಲವನ್ನುಣ್ಣುವ ಸೇವೆಯ ಪ್ರತಿಯೊಬ್ಬ ಸ್ತ್ರೀ ಪುರುಷರೂ ತಮ್ಮತಳಿ ತಾಪಗಳಲ್ಲಿ ಒಂದಂಶವನ್ನುಳಿಸಿ ಉಚಿತಸಾಧನ ಪ್ರಾಪ್ತವಾಗದೆ ಕಂಗಾಲು ಮತ್ತು ಅಸಹಾಯಕರಾದ ಭಾರತ ಮಾತೆಯ ಮಕ್ಕಳ ಸೇವೆಯನ್ನು ಮಾಡಬೇಕು— ಎಂಬುದೇ ಈ ಭಾರತ ಸೇವಕ ಸಮಾಜದ ಕೇಳಿಕೆಯಾಗಿದೆ.

(ಸಚೇಸ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.

ಪ್ರಧಾನ ಕಚೇರಿ ಉಡುಪಿ ಸ್ಥಾಪನೆ 1925

ಯೋಜನೆಯ ಅವಶ್ಯಕತೆ

ಒಂದು ರಾಷ್ಟ್ರದ ಅಭಿವೃದ್ಧಿಯನ್ನು ಶ್ರೀಮಂತವಾಗಿ, ಸ್ವಯಸ್ಥಿತವಾಗಿ, ಸಕಾಲಿಕವಾಗಿ ಸಾಧಿಸಲು ಯೋಜನೆಯನ್ನು ರೂಪಿಸಿಕೊಳ್ಳುವಂತೆ—

ಒಂದು ವ್ಯಕ್ತಿಯು ತನ್ನ ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೂ ಒಂದು ಆರ್ಥಿಕ ಯೋಜನೆಯನ್ನು ಅನುಸರಿಸಬೇಕು

ನೀವು ತಿಂಗಳಿಗೊಮ್ಮೆ ಆದಾಯವನ್ನೋ ಸಂಬಳವನ್ನೋ ಪಡೆಯುವವರಾದರೆ

ನಿಮಗಾಗಿ ಸಿಂಡಿಕೇಟ್ ಬೇಂಕಿನಲ್ಲಿ

ಕ್ಯುಮುಲೇಟಿವ್

ಠೇವಣಾತಿ ಯೋಜನೆಯದೆ

ತಿಂಗಳಿಗೆ ನಿಮ್ಮ ಶಕ್ತ್ಯಾನುಸಾರ ಸ್ವಲ್ಪ ಮೊತ್ತವನ್ನು ಉಳಿಸಿ, ನಿಮ್ಮ ಆರ್ಥಿಕ ಯೋಜನೆಯಿಂದ ಪ್ರಗತಿಯನ್ನು ಪಡೆಯಿರಿ.

The Canara Industrial & Banking Syndicate Ltd., Udipi.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಭಾರತದ ಹಿರಿಯ ವಿವಿಧೋದ್ದೇಶ ಯೋಜನೆ–

ತುಂಗಭದ್ರಾ ಬಹುಮುಖ ಯೋಜನೆ

ಶ್ರೀ ಜಿ. ವಿ. ರಾವ್

ಮೈಸೂರು ರಾಜ್ಯದಲ್ಲಿ, ಹೊಸಪೇಟೆಯ ಹತ್ತಿರ ತುಂಗಭದ್ರಾ ಬಹುಮುಖ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ ಯೋಜನೆಯ ಪ್ರಕಾರ ಅಲ್ಲಿ ಒಂದೂವರೆ ಮೈಲಿ ಉದ್ದದ ಹಾಗೂ ೧೬೨ ಅಡಿಗಳ ಎತ್ತರದ ಗಾರೆಯ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟಿನ ಬಲಭಾಗದಿಂದ ಎರಡು ಕಾಲುವೆಗಳೂ, ಎಡಭಾಗದಿಂದ ಒಂದು ಕಾಲುವೆಯೂ ಆರಂಭವಾಗುವುವು. ಈ ಕಾಲುವೆಗಳು ಆಂಧ್ರ ಪ್ರದೇಶ ಮತ್ತು ಮೈಸೂರು ರಾಜ್ಯಗಳಲ್ಲಿ ಅಧಿಕ ಪ್ರಮಾಣದ ಶುಷ್ಕ ಭೂಭಾಗಗಳಿಗೆ, ನೀರಾವರಿ ಸೌಕರ್ಯಗಳನ್ನೊದಗಿಸುವುವು. ಅಣೆಕಟ್ಟಿನ ಕೆಳಗಡೆಯಲ್ಲಿ ಬಲಜನಿತ ವಿದ್ಯುದಾಗಾರಗಳು, ಬಲದಂಡೆಯ ಕಾಲುವೆಯ ಮೇಲೆ ಒಂದು ವಿದ್ಯುಚ್ಛಕ್ತಿ ಉತ್ಪಾದನಾಕೇಂದ್ರ, ಎಡದಂಡೆಯ ಕಾಲುವೆಯ ಮೇಲೆ ೪ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳನ್ನು ಈ ಯೋಜನೆಯ ಪ್ರಕಾರ ನಿರ್ಮಿಸಲಾಗುವುವು. ಬಲದಂಡೆಯ ಕೆಳಕಾಲುವೆ ಮತ್ತು ಎಡದಂಡೆಯ ಕಾಲುವೆಯಿಂದ ೮೩ ಲಕ್ಷ ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಲಭ್ಯ ಒದಗುವುದು. ಬಲಗಡೆ ಕಾಲುವೆಯ ವಿದ್ಯುದುತ್ಪಾದನಾ ಕೇಂದ್ರಗಳು ಈಗ ೩೬,೦೦೦ ಕಿಲೋವ್ಯಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುವು.

ಈ ಯೋಜನೆಯನ್ನು ೧೯೪೫ರ ಫೆಬ್ರುವರಿ ತಿಂಗಳಲ್ಲಿ ಮದರಾಸು ಮತ್ತು ಹೈದರಾಬಾದು ರಾಜ್ಯ ಸರ್ಕಾರಗಳು ಆರಂಭಿಸಿದವು. ಅಂತಾರಾಜ್ಯಗಳ ಸಹಕಾರದ ಫಲಸ್ವರೂಪವಾಗಿ ಈ ಅಣೆಕಟ್ಟೆಯು ೧೯೫೫ರಲ್ಲಿ ಸಿದ್ಧಗೊಂಡು, ನೀರಾವರಿ ಸೌಲಭ್ಯವನ್ನೂ ನೀಡುತ್ತಿದೆ.

ಎಡಗಡೆಯಿಂದ ಹೊರಬೀಳುವ ಕೆಳಮಟ್ಟದ ೨೧೭ ಮೈಲಿಗಳ ಉದ್ದದ ಕಾಲುವೆಯಿದೆ. ಈ ಕಾಲುವೆಯು ಹಂಪಿಯಲ್ಲಿ ಕಾಲುವೆಯ ಮೇಲಿರುವ ವಿದ್ಯುದುತ್ಪಾದನಾ ಕೇಂದ್ರಕ್ಕೆ ನೀರನ್ನೊದಗಿಸುತ್ತದೆ. ಆಂಧ್ರ ಪ್ರದೇಶದಲ್ಲಿ ಬಹುಭಾಗ ಭೂಮಿಗೆ ನೀರಾವರಿಯನ್ನೊದಗಿಸುತ್ತದೆ. ಈ ಕಾಲುವೆಯ ವ್ಯಾಪ್ತಿ ೮.೬ ಲಕ್ಷ ಎಕರೆಗಳು. ಅದರಲ್ಲಿ ೨.೫ ಲಕ್ಷ ಎಕರೆಗಳಷ್ಟು ಭೂಮಿ ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆ ಮತ್ತು ಆಂಧ್ರದ ಕರ್ನೂಲ್ ಜಿಲ್ಲೆಗೂ ಸೇರಿರುವುದು. ಎಡದಂಡೆ ಕಾಲುವೆಯ ನೀರಾವರಿ ಹಾಗೂ ವಿದ್ಯುಚ್ಛಕ್ತಿ ತೂಬುಗಳು ಮುನಿರಾಬಾದಿನ ಕಡೆಯಿಂದ ಹೊರಬೀಳುತ್ತವೆ. ಅವು ಮೈಸೂರು ರಾಜ್ಯದಲ್ಲಿ ೫.೮ ಲಕ್ಷ ಎಕರೆಗಳನ್ನು ನೀರಾವರಿಗೆ ಒಳಪಡಿಸುವುದು. ಈ ಕಾಲುವೆಯು ೨೪ ಮೈಲಿಗಳನಂತರ ದೋಣಿ ಸಂಚಾರಕ್ಕೂ ಅನುಕೂಲವಾಗಿರುವುದು.

೧೯೫೫ರಿಂದೀಚೆಗೆ ಈ ಯೋಜನೆಯು ನೀರಾವರಿ ಸೌಲಭ್ಯಗಳನ್ನು ನೀಡಲು ಆರಂಭಿಸಿದೆ. ಆಂಧ್ರ ಪ್ರದೇಶದಲ್ಲಿ ಕೆಳಮಟ್ಟದ ಕಾಲುವೆ, ಅದರ ಉಪಕಾಲುವೆಗಳು ಮತ್ತು ನಾಲೆಗಳ ಕೆಲಸ ಮುಗಿದಿದೆ. ಮೈಸೂರು ರಾಜ್ಯದಲ್ಲಿ ದೊಡ್ಡ ದೊಡ್ಡ ನಾಲೆಗಳ ಕೆಲಸ ಮುಗಿದಿದೆ. ಸಣ್ಣ ಸಣ್ಣ ನಾಲೆಗಳ ಬಗೆಗೆ ಈಗ ಕೆಲಸ ನಡೆಯುತ್ತಿದೆ ಎಡದಂಡೆ ಕಾಲುವೆಯ ಮೊದಲ ೧೧೩ ಮೈಲಿಗಳು ಸಿದ್ಧವಾಗಿದೆ.

ನೀರಾವರಿ ಕಾಮಗಾರಿ ಮುಗಿದ ಕೂಡಲೆ ಮುಂಗಾರು ಮಳೆ ಚೆನ್ನಾಗಿ ನಡೆಯಿತು. ಆದ್ದರಿಂದ ನೀರಾವರಿಯ ಸೌಲಭ್ಯಗಳನ್ನು ತಡೆಯುವುದು ಅನಿವಾರ್ಯವಾಯಿತು. ಅದರ ಜೊತೆಗೆ, ಆರ್ಥಿಕವಾಗಿ ಹಿಂದುಳಿದಿದ್ದ ರೈತರಿಗೆ, ಅವರು ಕರಿ ಬೆಳೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಹಣಕಾಸಿನ ಅಗತ್ಯವಾಯಿತು. ಈ ತೊಂದರೆಯನ್ನು ಕಡಿಮೆ ಮಾಡುವುದಕ್ಕಾಗಿ ಸರ್ಕಾರದವರು, ಗದ್ದೆಗಳಲ್ಲಿ ನಾಲೆಗಳನ್ನು ಸರ್ಕಾರದ ವೆಚ್ಚದಲ್ಲಿಯೇ ತೋಡಿಸಲು ಶಕ್ತಾವಿ ನಾಲೆಗಳನ್ನು ನೀಡಿದರು, ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಇಲ್ಲಿನ ಅಯಕಟ್ಟಿನ ಕ್ಷೇತ್ರವು ಮೈಸೂರು ರಾಜ್ಯದಲ್ಲಿ ೫೬,೦೦೦ ಎಕರೆಗಳಿಗೂ, ಆಂಧ್ರ ಪ್ರದೇಶದಲ್ಲಿ ೩೪,೫೫೬ ಎಕರೆಗಳಿಗೂ ವಿಸ್ತರಿಸಿ, ೧೯೬೧ರ ಸೇಳೆಗೆ ಅಯಕಟ್ಟು ಪೂರ್ಣವಾಗುವ ನಿರೀಕ್ಷೆಯಿದೆ.

ತುಂಗಭದ್ರಾ ಜಲಾಶಯದಲ್ಲಿ ಉಪಯೋಗಿಸದೆ ಇರುವ ನೀರನ್ನು ಹಾಗೆಯೇ ಬಿಡಲಾಗುವುದಿಲ್ಲ. ಆ ನೀರನ್ನು, ವಿಜಯವಾಡದ ಹತ್ತಿರ ಅಣೆಕಟ್ಟಿಗೆ ಹೋಗಿ, ಅಲ್ಲಿಂದ ಕೃಷ್ಣಾ ನದಿಗೆ ಬಂದು ಸೇರುವಂತೆ ವ್ಯವಸ್ಥೆ ಮಾಡಲಾಗಿದೆ. ಆ ನೀರು ಕೃಷ್ಣಾ ಮುಖಜ ಭೂಮಿಯಲ್ಲಿ ಎರಡನೆಯ ಬೆಳೆಯನ್ನು ತೆಗೆಯಲು ಅನುಕೂಲವಾಗುವುದು. ಕಳೆದ ವರ್ಷ ೭೯,೦೦೦ ಎಕರೆಗಳಷ್ಟು ಭೂಮಿತಿಯು ಈ ರೀತಿಯ ಸೌಲಭ್ಯಗಳನ್ನು ಪಡೆಯಿತು.

ತುಂಗಭದ್ರಾ ಯೋಜನೆಯ ಒಂದು ಮುಖ್ಯವಾದ ಅಂಗವೆಂದರೆ ಉನ್ನತ ಮಟ್ಟದ ನಾಲೆಯ ನಿರ್ಮಾಣ ಸಂಬಂಧವಾದ ಕಾರ್ಯಯೋಜನೆ. ಈ ಕಾರ್ಯಯೋಜನೆಯನ್ನು ದ್ವಿತೀಯ ಪಂಚವರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಮುಖ್ಯ ನಾಲೆಯೊಂದನ್ನು ನಿರ್ಮಿಸುವುದನ್ನೂ ಪೆನ್ನಾರ್ ನದಿಗೆ ಅಡ್ಡವಾಗಿ ರೆಗ್ಯುಲೇಟರ್‌ವೊಂದನ್ನು ಸ್ಥಾಪಿಸುವುದನ್ನೂ, ಈ ನದಿಯ ಎರಡು ದಂಡೆಗಳಿಂದ ನಾಲೆಗಳನ್ನು ತೋಡುವುದನ್ನೂ ಈ ಯೋಜನೆಯು ಒಳಗೊಂಡಿದೆ. ಗುಂದಿ ಕೋಟೆಯಲ್ಲಿ ಪೆನ್ನಾರ್ ನದಿದೆ ಅಡ್ಡವಾಗಿ ಅಡ್ಡಕಟ್ಟೆಯು ನಿರ್ಮಿತವಾಗುವುದು. ತುಂಗಭದ್ರಾ ಉನ್ನತ ಮಟ್ಟದ ನಾಲೆಯು ಆಂಧ್ರ ಪ್ರದೇಶದ ಬೆಂಗಾಡಾದ ರಾಯಲಸೀಮಾ ಜಿಲ್ಲೆಗಳಲ್ಲಿ ನವಜೀವನವನ್ನು ತರಲಿದೆ. ಈ ನಾಲೆಯು ಆಂಧ್ರ ಪ್ರದೇಶ ಹಾಗೂ ಮೈಸೂರು ರಾಜ್ಯ ಸರ್ಕಾರಗಳ ಸಂಯುಕ್ತ ಸಾಹಸೋದ್ಯಮವಾಗಿದೆ. ಈ ನಾಲೆಯ ನೀರಿನಿಂದ ಮೈಸೂರು ರಾಜ್ಯದ ಬೆಳ್ಳಾರಿ, ಆಂಧ್ರ ಪ್ರದೇಶ ರಾಜ್ಯದ ಅನಂತಪುರ, ಕಡಪ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ೩.೮೩ ಲಕ್ಷ ಎಕರೆಗಳಷ್ಟು ವಿಸ್ತೀರ್ಣವನ್ನು ನೀರಾವರಿಗೊಳಪಡಿಸಬಹುದಾಗಿದೆ.

ವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಂಬಂಧಿಸಿದ ಕಾರ್ಯಯೋಜನೆಯು ಈ ರೀತಿ ಇರುವುದು:—

(೧) ಅಣೆಕಟ್ಟೆಯ ಕೆಳಭಾವದಲ್ಲಿ ಒಂದೊಂದೂ ೯,೦೦೦ ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ಎರಡು ಉತ್ಪಾದಕ ಯಂತ್ರಗಳನ್ನೊಳಗೊಂಡ ವಿದ್ಯುದ್ದಾಗಾರವನ್ನು ಸ್ಥಾಪಿಸುವುದು. ಇಲ್ಲಿ ಮತ್ತೆರಡು ಉತ್ಪಾದಕ ಯಂತ್ರಗಳನ್ನು ಸ್ಥಾಪಿಸಲು ಅವಕಾಶವಿರುವುದು; (೨) ಅಣೆಕಟ್ಟಿನ ವಿದ್ಯುದ್ದಾಗಾರದಿಂದ ಸುಮಾರು ೧೪ ಮೈಲಿಗಳ ದೂರದಲ್ಲಿ ಐತಿಹಾಸಿಕ ಪ್ರಸಿದ್ಧ ಸ್ಥಳವಾದ ಹಂಪೆಗೆ ಸಮೀಪದಲ್ಲಿ ವಿದ್ಯುದ್ದಾಗಾರವೊಂದನ್ನು ಸ್ಥಾಪಿಸುವುದು. ಇಲ್ಲಿ ಒಂದೊಂದೂ ೯,೦೦೦ ಕಿ. ವಾ.ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯವಿರುವ ಮೂರು ಉತ್ಪಾದಕ ಯಂತ್ರಗಳನ್ನು ಸ್ಥಾಪಿಸುವುದು. ಮತ್ತೊಂದು ೪ ತ್ಪಾದಕ ಯಂತ್ರವನ್ನು ಇಲ್ಲಿ ಸ್ಥಾಪಿಸುವ ಬಗ್ಗೆ ಅವಕಾಶವಿರುವುದು; (೩) ಬಳ್ಳಾರಿ, ಕರ್ನೂಲು, ಅನಂತಪುರ, ಮತ್ತು ಕಡಪಾ ಜಿಲ್ಲೆಗಳಲ್ಲಿರುವ "ಲೋಡ್" ಕೇಂದ್ರಗಳಿಗೆ ೬೬ ಕಿಲೋವೋಲ್ಟ್, ೩೩ ಕಿಲೋವೋಲ್ಟ್ ಮತ್ತು ೧೧ ಕಿಲೋವೋಲ್ಟ್ ವಿದ್ಯುತ್ ಮಾರ್ಗಗಳ ಜಾಲಬಂಧವನ್ನು ವ್ಯವಸ್ಥೆಗೊಳಿಸುವುದು ಮತ್ತು (೪) ಅಣೆಕಟ್ಟೆ

(೧ನೇ ಪುಟ ನೋಡಿರಿ)

ಅಂತಾರಾಷ್ಟ್ರೀಯ ಭೂಭೌತಿಕ ವರ್ಷದ ಅಮೆರಿಕೆಯ ರಾಷ್ಟ್ರೀಯ ಸಮಿತಿಯ ತಾಂತ್ರಿಕ ವಿಭಾಗದ ಅಧ್ಯಕ್ಷ ಡಾ. ರಿಚಾರ್ಡ್ ಡಬ್ಲ್ಯೂ. ಪೋಟರ್‌ರವು ಅಮೆರಿಕೆಯು ಹಾರಿಸಿದ ಭೂ ಉಪಗ್ರಹಗಳ ಕುರಿತು ಪತ್ರಿಕಾ ಪ್ರತಿನಿಧಿಗಳೊಡನೆ ಇತ್ತೀಚೆಗೆ ಒಂದು ಚರ್ಚೆ ನಡೆಸಿದರು. ಹನ್ನೆಲೆಯಲ್ಲಿರುವುದು ಮೂರನೆ ಉಪಗ್ರಹದಲ್ಲಿಟ್ಟು ಮಾದರಿಯ ಟೇಪ್ ರಿಕಾರ್ಡರ್.

ಮದುನೆಯ ಅದರ್ಶ ಉಡುಗೊರೆ



ಉಷಾ ಹೊಲಿಗೆ ಯಂತ್ರ

ನಮ್ಮ ದೇಶದಲ್ಲಿ ವಿಶೇಷ ಮಾರಾಟವಾಗುವ ಯಂತ್ರ

ಏಕಮೇವ ಮಾರಾಟ ಮಾಡುವ ಏಜಂಟರು:

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್,
120, ಅರ್ಮೇನಿಯನ್ ಸ್ಟ್ರೀಟ್,
ಮದ್ರಾಸು—1

ಗ್ರಾಮ್ಸ್: "USHAKO". ಫೋನ್: 2278.

ಬೇಂಕು ವ್ಯವಹಾರಗಳಲ್ಲಿ ಉತ್ತಮವಾದುವುಗಳೆಲ್ಲವೂ ಒಂದೇಕಡೆ ಸಿಗುವ ಸಂಸ್ಥೆಗಳಲ್ಲಿ "ಕೊರ್ಪೊರೇಶನ್", ಬೇಂಕೂ ಒಂದಾಗಿದೆ. ಅಂತಲೇ, ನೀವು ಈ ಬೇಂಕಿನಲ್ಲಿ ಅತಿ ಹೆಚ್ಚಿನ ಸೌಕರ್ಯಗಳನ್ನೆಲ್ಲಾ ಅತಿ ಕಡಿಮೆ ಸಮಯದಲ್ಲಿ ಧಾರಾಳವಾಗಿ ಪಡೆಯಬಹುದು. ಅಂದಬಳಿಕ, ನೀವೇಕೆ ಈ ಬೇಂಕಿಗೂ ನಿಮ್ಮ ಸೇವೆಗೆಯ್ಯುವ ಸಂದರ್ಭವೊಂದನ್ನು ಕೊಡಕೂಡದು?

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಪ್ರಧಾನ ಕಚೇರಿ : ಉಡುಪಿ (ದ. ಭಾರತ).

ನೀವು ಕುರೂಪಿಯಾಗ ಬಯಸುವಿರಾ?

ಶೃಂಗಾರ ಸಾಧನಗಳ ವಿಚಿತ್ರ ಕಥೆಗಳು

ಶ್ರೀ ಎಸ್. ಗೋಪೀಚಂದರಾವ್, ಸಿದ್ಧಾಂತಿ, ವಿಶಾರದ.

ತಮ್ಮ ಶರೀರವನ್ನು ಸುಂದರವಾಗಿ ರಕ್ಷಿಸಿಕೊಳ್ಳಲು ಕೃತಕ ಶೃಂಗಾರ ಸಾಧನಗಳನ್ನು ಬಳಸಿಕೊಳ್ಳುವ ಪ್ರವೃತ್ತಿಯು ಇತಿಹಾಸ ಪೂರ್ವಕಾಲದ ಸ್ತ್ರೀಯರಲ್ಲಿಯೂ ಕಂಡು ಬರುತ್ತದೆ. ೧೯೫೮ರಲ್ಲಿ ಪ್ರೊಫೆಸರ ಫ್ಲೆಂಡ್ಸ್ ಸೀಟರರು ಈಜಿಪ್ಟ್ ದೇಶದಲ್ಲಿ ಕ್ರಿಸ್ತಪೂರ್ವ ೧೦ ಸಾವಿರ ವರ್ಷಗಳನ್ನು ಪೂರ್ವದ ಶೃಂಗಾರಿಕ ವಸ್ತುಗಳನ್ನು ಶೋಧಿಸಿದರು. ಈ ವಸ್ತುಗಳು ಐಗುಪ್ತ ಅರಸರ ವಿಲಾಸ ಸಾಮಗ್ರಿಗಳಿಂದ ಪ್ರಾಪ್ತಿಸಿದ್ದುವು. ಇವುಗಳಲ್ಲಿ ಬೆಳ್ಳಿಯ ಬೆತ್ತ, ಕಾಡಿಗೆ, ಕೂದಲು ಬಾಚುವ ಸಾಧನ ಇತ್ಯಾದಿಗಳೂ ಇದ್ದುವು.

ಕ್ರಿಸ್ತಪೂರ್ವ ೬೫ ವರ್ಷಗಳ ಕಾಲದಲ್ಲಿದ್ದ ರೋಮನ್ ಕವಿಯಾದ ಹೋರೇಸನು ತನ್ನ ಕವಿತೆಯೊಂದರಲ್ಲಿ ಶೃಂಗಾರ ಸಂಬಂಧಿಯಾದ ಒಂದು ವಸ್ತುವನ್ನು ಉಲ್ಲೇಖಿಸಿದ್ದಾನೆ. ಈ ವಸ್ತುವು ಮೀನಿನ ಶರೀರದಿಂದ ಹೊರಬರುತ್ತದೆಯಂತೆ. ಹೋರೇಸನು ಈ ಕಡೆಗೆ ವಿಶೇಷ ಪ್ರಕಾಶ ಚೆಲ್ಲದಿರುವುದರಿಂದ, ಈ ವಸ್ತುವಿನ ಸಂಪೂರ್ಣ ಶೋಧನೆಯಾಗುವುದು ಅಸಾಧ್ಯವೆನಿಸಿದೆ. ಈ ವಸ್ತು ಎಲ್ಲಿ ಮತ್ತು ಹೇಗೆ ಉಪಲಬ್ಧವಾಗುತ್ತದೆ ಎಂದು ಸರಿಯಾದ ಹೇಳಿಕೆಯೇ ದೊರೆಯುವುದಿಲ್ಲ. ಆ ಸಮಯದಲ್ಲಿಯೂ ರೋಮನ್ ಮಹಿಳೆಯರು ಸೌಂದರ್ಯ ಸಾಧನೆಯಲ್ಲಿ ಜಗತ್ತಿನ ಇತರ ದೇಶಗಳಿಗಿಂತ ಬಹಳ ಮುಂದುವರಿದಿದ್ದರು.

ಕ್ರಿಸ್ತಶಕ ಮೊದಲನೆ ಶತಮಾನದಲ್ಲಿ ರೋಮಿನ ಮಹಾ ರಾಣಿ ಪೋಪಿಯಾಳು ತನ್ನ ಶರೀರವನ್ನು ಅಧಿಕಾಧಿಕ ಕಾಂತಿಮಯ ವಾಗಿಸುವುದಕ್ಕಾಗಿ "ಗದಹಿ" ಜಾತಿಯ ಪ್ರಾಣಿಗಳ ಹಾಲಿನಿಂದ ಮಜ್ಜನವನ್ನು ಮಾಡುತಿದ್ದಳು. ಆಕೆಯು ರಾಜಧಾನಿಯಿಂದ ಕದಲಿ ಎಲ್ಲಿಯಾದರೂ ಯಾತ್ರೆ ಮಾಡುವಳೆಂದರೆ, ಆಕೆಯ ಹಿಂದೆ ಈ ಪ್ರಾಣಿಗಳ ಹಿಂಡುಹಿಂಡೇ ನಡೆಯುತಿತ್ತು. ಇದನ್ನು ಕಂಡು, ಸೌಂದರ್ಯ ಸಾಧನೆಯ ಈ ಒಂದು ಅಧ್ಯಾಯವು ಅಜ್ಞನ ಸರದಾರರು, ಜಹಗೀರದಾರರು ಮೊದಲಾದ ಪ್ರತಿಷ್ಠಿತರಿಂದ ಆರಂಭಿಸಿ ಜನಸಾಮಾನ್ಯರವರೆಗೂ ಹರಡಿತು. ಫಲಸ್ವರೂಪವಾಗಿ 'ಗದಹಿ'ಗಳ ಬೆಲೆಯು ಕುದುರೆಗಳ ಬೆಲೆಗಿಂತ ಸೇಕಡಾ ಮೂವತ್ತರಷ್ಟು ಹೆಚ್ಚಿತು! ಇದರಿಂದಾಗಿ, ಮುಂದೆ, ಜನಸಾಮಾನ್ಯರಿಗಿದ್ದ ಈ ಅಧಿಕಾರವನ್ನು ಒಂದು ಶಾಸನದ ಮೂಲಕ ಅಪಹರಿಸಬೇಕಾಯಿತಲ್ಲದೇ ಕೃತ್ರಿಮಾಮುವಾಗಿ ಕೇವಲಮಹಾರಾಣಿ ಮಾತ್ರವೇ ಗದಹಿಗಳ ಹಾಲಿನಲ್ಲಿ ಸ್ನಾನಮಾಡುವ ಅಧಿಕಾರಿಣಿಯಾಗಿ ಉಳಿದಳು.

ಆಂಗ್ಲ ಇತಿಹಾಸದಲ್ಲಿ ವರ್ಣಿತಳಾಗಿರುವ ಸುಪ್ರಸಿದ್ಧ ಸ್ಯಾಟಿಕ್ ರಾಣಿ ಮೇರಿ ಸ್ಟ್ಯೂಅರ್ಟಳು ತನ್ನ ಮಜ್ಜನ ಗೃಹದಲ್ಲಿ ತನ್ನ ಸ್ನಾನಕ್ಕಾಗಿ ಉತ್ತಮಸ್ತರದ ಮದಿರೆಯು ತುಂಬಿಕೊಳ್ಳುತ್ತಿರುವಂತಹ ಏಳು ಕೊಳಗಳನ್ನು ನಿರ್ಮಿಸಿದ್ದಳು. ಇವುಗಳಲ್ಲಿ ಈಕೆ ಪ್ರತಿದಿನವೂ ನಿಯಮಿತ ರೂಪದಲ್ಲಿ ಮುಳುಗು ಹಾಕುತ್ತಿದ್ದಳು. ಇದೊಂದು ಗುಣಕಾರೀ ಕೃತ್ಯವೆಂದು ಹೇಳಲಾಗದೆ ಇದ್ದರೂ ಮೇರಿಯ ಚರ್ಮದ ಪಾರದರ್ಶಿತೆಯು ಕಾರಣವು ಇದೇ ಆಗಿರುವುದು ಅಸಂಭವವಲ್ಲ. ಆಕೆಯು ಕೆಂಪು ಮದಿರೆಯನ್ನು ಕುಡಿಯುವಾಗ, ಆಕೆಯ ಗಲ್ಲದಲ್ಲಿ ಗುಲಾಬಿಯು ಚಿತ್ರಿತವಾಗುವಂತೆ, ಆಕೆಯ ಶರೀರವು ಶರಾಬಿನಂತೆ ಕೆಂಪಾಗಿಯೇ ಕಾಣುವಂತೆ ಆಕೆಯ ಚರ್ಮವು ಪಾರದರ್ಶಕತೆಯನ್ನು ಹೊಂದಿತ್ತು ಎಂದು ಹೇಳುತ್ತಾರೆ.

ಇತಿಹಾಸವು ಒಂದೆಡೆ ಬಿರುಕು ಬಿಡ್ದರೆ, ಅದನ್ನು ಕಲ್ಪನೆಯ ಸಹಾಯದಿಂದ ಜೋಡಿಸಲಾಗುತ್ತದೆ. ಇಂತಹ ಕಲ್ಪನಾ ಶಕ್ತಿಯು ಕಣೋಲ ಕಲ್ಪಿತವಾಗಿರುವುದಲ್ಲದೇ ಸ್ವಲ್ಪ ಐತಿಹಾಸಿಕ ತಥ್ಯ ಹಾಗೂ ಸೂಕ್ಷ್ಮ ಪುರಾತತ್ವೀಯ ಶೋಧನೆಗಳಂದಲೂ ಆಧಾರಿತವಿರುತ್ತದೆ. ಗುಲಾಬಿ ನೀರಿನ ಅತ್ತರಿನಲ್ಲಿ ಕೇಳಿಯಾಡುತಿದ್ದ ಮೊಗಲ ಸುಂದರಿಯರ ಶೃಂಗಾರ ಕೌಶಲವು ಪೋಪಿಯಳ ಪಥವಾ ಮೇರಿ ಸ್ಟ್ಯೂಅರ್ಟಳಿಗಿಂತ ಯಾವ ವಿಷಯದಲ್ಲಿಯೂ ಕಡಿಮೆಯಿಲ್ಲವೆಂದು ಹೇಳಬಹುದು. ಮೊಗಲ ಸಾಮ್ರಾಜ್ಞಿಯರ ರತ್ನಖಚಿತ ಸ್ನಾನಾಗಾರಗಳನ್ನು ನೋಡಿ ಎಂತಹ ಸಾಮಾನ್ಯ ವ್ಯಕ್ತಿಯಾದರೂ ಅವರ ಸೌಂದರ್ಯಪ್ರಿಯತೆಯ ಅರಿವನ್ನು ಮಾಡಿಕೊಳ್ಳಬಹುದು. ಅವರ ಕೃತಕ ಶೃಂಗಾರ ಮತ್ತು ಅಲಂಕಾರ ವಸ್ತುಗಳ ಸಾಧನಗಳು ಅಮೂಲ್ಯವಾಗಿದ್ದುವು ಮತ್ತು ಉನ್ನತವಾಗಿದ್ದುವು. ಮೊಗಲ ಸಾಮ್ರಾಜ್ಯರಂತೆಯೆ ರಾಣಿಯರೂ ಕಲೆ ಮತ್ತು ಸೌಂದರ್ಯಪ್ರಿಯರಾಗಿದ್ದುದ- ಇದರಿಂದ ವ್ಯಕ್ತಪಡುತ್ತದೆ. ಭಾರತದ ಪ್ರಸಿದ್ಧ ಮೊಗಲ ಸಾಮ್ರಾಜ್ಞಿ ನೂರ್‌ಜಹಾನ್‌ಳ ಸೌಂದರ್ಯಪ್ರಿಯತೆಯ ಸಂಬಂಧದಲ್ಲಿ ಕೆಲವಾರು ಕಿಂವದಂತಿಗಳು ಪ್ರಚಲಿತವಿವೆ. ನೂರ್‌ಜಹಾನಳು ಪ್ರತಿದಿನವೂ ಹೂಗಳ ರಸದಲ್ಲಿ ಸ್ನಾನಮಾಡಿ ತೋಟದಲ್ಲಿ ಹೂವಿನ ಹಾಸಿಗೆಯಲ್ಲಿ ಪವಡಿಸುತಿದ್ದಳಂತೆ!

ಪುರಾತನ ಕಾಲದಲ್ಲಿ ಸೌಂದರ್ಯ ಸಾಧನೆಯ ಹೆಸರಿನಲ್ಲಿ ಬೇರೆ ಬೇರೆ ಪ್ರಕಾರದ ಕುಕೃತ್ಯಗಳೂ ನಡೆಯುತಿದ್ದುವು. ಇವುಗಳನ್ನು ಓದಿ ಅಥವಾ ಕೇಳಿದೊಡನೆಯೇ ನಗು ಬರುತ್ತದೆಯಲ್ಲದೇ ನಂಬುವುದೂ ಕಷ್ಟವೆನಿಸುತ್ತದೆ. ಆದರೆ, ಕೃತಕ ಶೃಂಗಾರದೊಡನೆ ಚರ್ಮದ ಕೋಮಲತೆ ಮತ್ತು ಸುಂದರತೆಯ ಬಗ್ಗೆ ಸ್ತ್ರೀಯರು, ಕಲ್ಪನಾ ಮಾತ್ರದಿಂದ ಕೃದಯದಲ್ಲಿ ತಿರಸ್ಕಾರ ಮತ್ತು ವಿಸ್ಮಯವು ಹುಟ್ಟುವಂತಹ ವಿಚಿತ್ರ ಉಪಾಯಗಳನ್ನು ಕೈಕೊಳ್ಳುತಿದ್ದರು ಎಂಬುದು ಮಾತ್ರ ಸತ್ಯ.

ಪ್ರಸಿದ್ಧ ಗ್ರೀಕ ಸುಂದರಿಯಾದ ಮಾರ್ಗಿಂಡಾ ಸೇಲಿಯಾಳು ತನ್ನ ಪ್ರೇಮಿಯಾದ ಆ ಕಾಲದ ಬಾದಶಹನಿಂದ ತನ್ನ ರಾಜ್ಯದ ಸುಂದರ ಹುಡುಗಿಯರನ್ನು ಕರೆಯಿಸಿ ಅವರ ಮೈದು ಅಂದಗಳಿಂದ ಕ್ರೂರತಾಪೂರ್ವಕವಾಗಿ ರಕ್ತವನ್ನು ಹೊರತೆಗೆದು ತನ್ನ ಶೃಂಗಾರಕ್ಕಾಗಿ ತುಟಿಗಳಿಗೆ ಹಚ್ಚುವ ಕೆಂಬಣ್ಣವನ್ನು ತಯಾರಿಸುತಿದ್ದಳಂತೆ! ಇದರಿಂದಾಗಿ ರಾಜನ ಪ್ರೇಯಸಿಯ ಸೌಂದರ್ಯವೂ ಅಧಿಕಾಧಿಕವಾಗಬೇಕೆಂದಾತ ಆತಿಸಿದ್ದನಂತೆ!

ಇಂತಹ ಇನ್ನೊಂದು ಉದಾಹರಣೆಯನ್ನು ನೋಡಿರಿ. ಐಗುಪ್ತದ ರಾಣಿ ಆ ಕಾಲದ ವಿಶ್ವಸುಂದರಿಯಾದ ಕ್ಲೆಯೋಪಾತ್ರಳ ಇಚ್ಛಾನುಸಾರ ಆಕೆಯ ಪ್ರೇಮಿ ಅಂತೋನಿಯು ರಾಜಮಹಲಿನ ಎಲ್ಲ ಸುಂದರಿಯರಲ್ಲದಾಸಿಯರನ್ನು ಕ್ಲೆಯೋಪಾತ್ರಳು ಕುರೂಪಿಯರನ್ನು ಸ್ತ್ರೀ ಜಾತಿಗೇ ಸೇರಿದ ಕಳಂಕ ಮತ್ತು ಈಜಿಪ್ಟಿನ ಕೆಟ್ಟ ದೇವತೆಯಾದ ಓಸಿರಿಸ್‌ನ ರೂಪವೆಂದು ತಿಳಿಯುತಿದ್ದುದರಿಂದ, ಕೆಲಸದಿಂದ ತೆಗೆದು ಹಾಕಿದನಂತೆ!

ಅರಬ ದೇಶದ ಶಾಹಜಾದಿಯವರ ಕೃತಕ ಶೃಂಗಾರ ಮತ್ತು ಸೌಂದರ್ಯದ ಕುರಿತಾದ ಮಾತನ್ನು ಕೇಳಿರಿ. ಅತನು ನಗರದಲ್ಲಿ ಸಂಚಾರಕ್ಕೆ ಹೊರಡುವಾಗ ಎಲ್ಲ ಜನರೂ ತಮ್ಮ ನೆಲೆಯಲ್ಲಿ ಅಡಗಿಕೊಂಡಿರಬೇಕಾಗಿತ್ತಂತೆ! ಒಂದು ವೇಳೆ ಯಾರಾದರೂ ಇದಕ್ಕೆ ತಪ್ಪಿದರೆ, ಆಗ ಅಂತಕರನ್ನು ಹಿಡಿದು ಶಾಹಜಾದಿಯ ಸೌಂದರ್ಯವನ್ನು ನೋಡಿದ ಅಪರಾಧವನ್ನು ಹೊರಿಸಿ ಆ ಕೂಡಲೇ ಮೃತ್ಯು ದಂಡಕ್ಕೇರಿಸುತಿದ್ದರಂತೆ!

ಪ್ರಾಚೀನ ಕಾಲದ ಈ ಉದಾಹರಣೆಗಳನ್ನು ನೋಡುವಾಗ, ಆ ಯುಗದಲ್ಲಿ ಪ್ರಾಯಃ ಶೃಂಗಾರಕಲೆಯಲ್ಲಿ ಪ್ರಯತ್ನ ಮಾಡದೆಯಿರುವ ಸಹಭಾಗಿನಿ ಯಾರೊಬ್ಬಳೂ ಇರಲಿಲ್ಲವೆಂದು ತಿಳಿಯುತ್ತದೆ.

ಯಾವುದೇ ಒಂದು ವಸ್ತುವನ್ನು ಸ್ಥಾಯಿರೂಪದಲ್ಲಿ ನೋಡಿದರೆ, ಸಾಧಾರಣವಾಗಿ ಮಾನವನ ಪ್ರಕೃತಿಗೆ ಅದು ಸರ್ವಥಾ ಪ್ರತಿಕೂಲವೆಂದು ಸಿದ್ಧವಾಗುವುದು. ಪ್ರತ್ಯೇಕ ವಸ್ತುವನ್ನೂ ನವನೂತನ ರೂಪದಿಂದ ಉಕ್ಕಿಸುವುದು ಪ್ರಿಯವಾಗಿರುವುದು. ಮಾನವನ ಅಭಿರುಚಿ ಬದಲಾಗುವುದಕ್ಕೆ ಕಾರಣವೇ ಇದು. ಆತನು ತನ್ನ ಜೀವನಕ್ಕೆ ಹೊಸರೂಪವನ್ನು ಕೊಡಲು ಬಯಸುತ್ತಾನೆ. ಒಂದು ಕಾಲದಲ್ಲಿ ನೀಲ ಬಳೆಯುವುದು, ಬೊಟ್ಟಿಡುವುದು ಸೌಂದರ್ಯ ವೃದ್ಧಿಯ ಉತ್ತಮ ಸಾಧನಗಳಾಗಿದ್ದರೂ ಇಂದವು ಕ್ಷೀಣಿಸುತ್ತ ಬಂದಿ

(ಅನೇ ಪುಟ ನೋಡಿರಿ)

ಜಾಗತಿಕ ರೆಡ್‌ಕ್ರಾಸ್ ದಿನಾಚರಣೆಯಂದು ಬ್ರಿಟಿಷ ಸಮಿತಿಯ ಅಧ್ಯಕ್ಷ ಲಾರ್ಡ್‌ಪೂಲ್ವ್ಹಿಸರು ಮಲಯದ ಹೈಕಮಿಶನರ್ ಶ್ರೀ ತುಂಕ. ಯಾಕೋಬರೊಡನೆ ಮಾತಾಡುತಿದ್ದಾರೆ. ಬಲ ಕೊನೆಯಲ್ಲಿ ಬ್ರಿಟಿಷ ರೆಡ್‌ಕ್ರಾಸ್‌ನ ಉಪಾಧ್ಯಕ್ಷ ಲಿಮರಿಕ್‌ರನ್ನು ಕಾಣಬಹುದು.

LIFE INSURANCE CORPORATION OF INDIA
DIVISIONAL OFFICE: UDIPI.

TENDER NOTICE.

Sealed tenders will be received upto 2 P. M. on 30th June 1958 for repairing the compound wall and fixing up a gate at our Divisional Office premises at Udipi, the estimate amount being Rs. 550/-. For further particulars please apply to the undersigned.

Udipi.
2—6—'58.

K. R. K. Bhat.
Divisional Manager.

NAVAYUGA ENTERPRISE LTD., UDIPI.
NOTICE

The register of members and share transfer books of the Company will remain closed from 30th June to 15th July, 1958 (both days inclusive).

(By order of the Board)

Office of the Company, Palukote, Udipi.
Date, 30—5—1958.

K. Honnayya Shetty,
Managing Director.

NAVAYUGA

Popular Kannada Weekly

Founder.—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೧೨-೬-೧೯೫೮	ಸಂಚಿಕೆ ೪೦

ಆಡಳಿತ ಪುನರ್ಘಟನೆ

ಭಾರತದಲ್ಲಿ ಅಂಟುರೋಗದಂತೆ ಹರಡಿದ ಹವ್ಯಾಸಗಳಲ್ಲಿ ಕೆಲವು ಕಾಲದಿಂದ ಮಿತವ್ಯಯದ ತತ್ವವೂ ಒಂದು. ಸರಕಾರಿ ವಲಯಗಳಲ್ಲಿ ಆದು ಕೇಂದ್ರೀಯವಿರಲಿ ರಾಜ್ಯವಿಭಾಗದ್ದಿರಲಿ, ಈ ಬಗ್ಗೆ ಆಸಕ್ತಿ ಹೆಚ್ಚತ್ತಿರುವುದು ಕೋಭನೀಯವೆಂದೇ ಹೇಳಬೇಕು. ಎಲ್ಲೆಡೆಗಳಲ್ಲಿ ಮಿತವ್ಯಯವನ್ನು ಸಾಧಿಸುವ ಕ್ರಮಗಳನ್ನು ತ್ವರಿತಗತಿಯಿಂದ ಪಾಲಿಸಬೇಕೆಂಬ ಮನೋಭಾವ ವ್ಯಕ್ತಪಡುತ್ತದೆ. ಆದರೆ, ಈ ಮಿತವ್ಯಯವು ಎಷ್ಟರ ಮಟ್ಟಿಗೆ ಫಲಕಾರಿಯಾದೀತೆಂದು ಮಾತ್ರ ಹೇಳುವುದು ದುಸ್ತರ. ಎದುರಲ್ಲಿ ಇರುವೆಯೂ ಹೋಗಬಾರದು, ಹಿಂದುಗಡೆ ಆನೆ ಹೋದರೂ ಆದರ ಅರಿವಿಲ್ಲ ಎಂಬಂತಾಗದೆ ಹೋದರೆ, ಆಗ ಮಾತ್ರ ಈ ಯೋಜನೆಗಳು ಯಶಸ್ವಿಯಾದಾವು. ಇಲ್ಲವಾದರೆ ಮಿತವ್ಯಯವೆನ್ನುವುದೂ ಕೇವಲ ಕಾಗದ ಪತ್ರಗಳಲ್ಲಿ ಮಾತ್ರ ಎದ್ದು ತೋರುವ ಕಾಯಕ್ರಮವಾಗುತ್ತದೆ ಹಾಗಾಗಬಾರದೆಂಬುದೇ ಜನತೆಯ ಆಶಯ.

ಸದ್ಯ, ಮೈಸೂರು ಸರಕಾರದಲ್ಲಿ ಆಡಳಿತ ದಕ್ಷತೆಯು ಹೆಚ್ಚಬೇಕು ಹಾಗೂ ಆಡಳಿತದಲ್ಲಿ ಮಿತವ್ಯಯವನ್ನು ಸಾಧಿಸಬೇಕು—ಎಂಬೆರಡು ಗುರಿಗಳನ್ನಿಟ್ಟುಕೊಂಡು ಆಡಳಿತದ ಪುನರ್ಘಟನೆಯನ್ನು ಯಾವ ರೀತಿ ಮಾಡಬಹುದೆಂದು ಪರಿಶೀಲಿಸಿ ವರದಿಯನ್ನೊಪ್ಪಿಸಲು ನೇಮಿಸಿದ ವಿಶೇಷಾಧಿಕಾರಿಯಾದ ಶ್ರೀ ಎ. ಡಿ. ಗೋರವಾಲಾರವರು ಸುಮಾರು ಒಂಭತ್ತು ತಿಂಗಳು ಈ ಬಗ್ಗೆ ಪರಿಶೀಲಿಸಿ ಇದೀಗ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಈ ವರದಿಯು ಅಧಿಕೃತವಾಗಿ ಪ್ರಕಟವಾಗದೆ ಹೋದರೂ ಅದರ ಮುಖ್ಯಾಂಶಗಳು ಈಗಾಗಲೇ ಬೆಳಕಿಗೆ ಬಂದಿವೆ ತಮ್ಮ ಸುದೀರ್ಘವಾದ ಮತ್ತು ಯುಕ್ತಿಯುಕ್ತವಾದ ಈವರದಿಯನ್ನು ಶ್ರೀ ಗೋರವಾಲರು ಅಲ್ಪಾವಧಿಯಲ್ಲಿಯೇಒಪ್ಪಿಸಿದುದು ಮೆಚ್ಚತಕ್ಕ ವಿಷಯವಾಗಿದೆ. ಶ್ರೀ ಗೋರವಾಲಾರವರು ಮಾಡಿದ ಎಲ್ಲ ಶಿಫಾರಸುಗಳನ್ನು ಕಾರ್ಯರೂಪದಲ್ಲಿ ತಂದಲ್ಲಿ ಸುಮಾರು ಹತ್ತು ಲಕ್ಷ ಆದಾಯ ವೆಚ್ಚವೂ ಎರಡೂವರೆ ಕೋಟಿ ಬಂಡವಳ ವೆಚ್ಚವೂ ಉಳಿತಾಯವಾಗುವುದೆಂದು ತಿಳಿದುಬಂದಿದೆ. ಈ ಮೊತ್ತವೇನೂ ಪ್ರಮಾಣದಲ್ಲಿ ಅಲ್ಪವಲ್ಲ. ಮಿತವ್ಯಯವನ್ನು ಸಾಧಿಸಲೆಳಸುವ ಸರಕಾರವು ಈ ವರದಿಯ ಮುಖ್ಯಾಂಶಗಳನ್ನು ಕಾರ್ಯಗತಗೊಳಿಸಿದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯೂ ಉನ್ನತವಾಗದಿರದು; ಭಧ್ರವಾಗಿದುಳಿಯದು. ಈ ವರದಿಯಲ್ಲಿ ಆಡಳಿತೆಯಲ್ಲಿ ದಕ್ಷತೆ ಬೆಳೆಯಬೇಕಾದರೆ, ಪ್ರಾಮಾಣಿಕತೆ, ಸಚ್ಚೀಲಗಳು ಅವಶ್ಯಕವೆಂದು ಒತ್ತಿಹೇಳಿರುವರೆಂದು ತಿಳಿದುಬಂದಿದೆ. ಮೈಸೂರು ರಾಜ್ಯದ ಆಡಳಿತೆಯಲ್ಲಿರುವ ಮುಖ್ಯ ಕೊರತೆಯಾದರೂ ಇದೇ ಎಂಬುದು ಬಹುಕಾಲದಿಂದಲೂ ಸರ್ವಶ್ರುತವಾದ ಸಂಗತಿ. ಆದುದರಿಂದ ಸರಕಾರಿ ಆಡಳಿತೆಯಲ್ಲಿ ಕ್ಷಮತೆಯನ್ನು ತರ ಬಯಸಬೇಕಾದರೆ, ಮೊದಲು ಅಧಿಕಾರಿ ಮತ್ತು ನೌಕರರಲ್ಲಿ ಪ್ರಾಮಾಣಿಕತೆ ಮತ್ತು ಸಚ್ಚೀಲ ಜತೆಗೆ ಸೌಜನ್ಯಗಳನ್ನು ತುಂಬಿಸಬೇಕು. ಇದು ನೆರವೇರದೆ ಹೋದರೆ, ಆಡಳಿತೆಯು ಬಿಗಿ ತಪ್ಪುವುದು, ನಂದಾಯಿನ ಆಡಳಿತೆಯಾಗುವುದು.

ಮಿತವ್ಯಯವನ್ನು ಸಾಧಿಸಲು ಶ್ರೀ ಗೋರವಾಲಾರವರು ಹಲವಾರು ಸೂಚನೆಗಳನ್ನು ಮಾಡಿದ್ದಾರೆ ಇವೆಲ್ಲವನ್ನು ಕಾರ್ಯರೂಪಕ್ಕೆ ತರುವಲ್ಲಿ ಕೆಲವೆಡೆಯಿಂದ ವಿರೋಧ ಪ್ರತಿಘಟನೆಗಳು ತಲೆದೋರಬಹುದು. ಇಂತಹ ಸೂಚನೆಗಳಲ್ಲಿ, ರಾಜ್ಯದಲ್ಲಿ ಈಗ ಇರುವ ೧೯ ಜಿಲ್ಲೆಗಳನ್ನು ೧೫ ಜಿಲ್ಲೆಗಳಾಗಿ ಪುನಾರಚಿಸುವುದು. ಈ ವಿಷಯದಲ್ಲಿಯೂ ಕೆಲವೊಂದು ಸಲಹೆಯನ್ನು ಶ್ರೀ ಗೋರವಾಲಾರು ಮಾಡಿದ್ದಾರೆ. ಕೂಡಗನ್ನು ದಕ್ಷಿಣ ಕನ್ನಡದೊಡನೆ, ಬೀದರವನ್ನು ಕುಲಬರ್ಗಿಯೊಡನೆ, ಚಿಕ್ಕ ಮಗಳೂರವನ್ನು ಶಿವಮೊಗ್ಗೆಯೊಡನೆ ಸೇರಿಸುವುದು, ಮೈಸೂರು ಮಂಡ್ಯ ಮತ್ತು ಹಾಸನಗಳನ್ನು ಎಡರಲ್ಲಿ ಕಂಟಿ ಹಾಕುವುದು—ಇವೇ ಈ ಸಲಹೆಗಳು. ಹೀಗಾದಲ್ಲಿ ಜಿಲ್ಲೆಗಳೂ ೧೫ ಆಗುವುವು ಜಿಲ್ಲೆಗಳನ್ನು ಪುನರ್ಘಟಿಸುವಾಗ ಆಯಾ ವಿಭಾಗದ ವೈಶಿಷ್ಟ್ಯ, ಭೂಪದ್ಧತಿ, ಜನಜೀವನ ಮೊದಲಾದುವನ್ನೂ ಗಮನಿಸುವುದು ಆಗತ್ಯವಿದೆ. ಆಡಳಿತೆಯ ದೃಷ್ಟಿಯಿಂದ ಕೇವಲ ಮಿತವ್ಯಯವನ್ನೇ ಸಾಧಿಸುವುದನ್ನು ಗುರಿಯಾಗಿಟ್ಟುಕೊಳ್ಳದೆ, ಆಯಾ ಎಡೆಗಳ ಭೌಗೋಲಿಕ ಪರಿಸ್ಥಿತಿಗೆ ಮನ್ನಣೆ ಕೊಡಬೇಕಾದುದೂ ಅಗತ್ಯವೆಂದು ಸೂಚಿಸಬಹುದು. ಜಿಲ್ಲೆಗಳ ಸಂಖ್ಯೆಯನ್ನು ಇಳಿಸುವುದರಿಂದ ಜಿಲ್ಲಾ ಕಚೇರಿಗಳು ಕಡಿಮೆಯಾಗಿ ವ್ಯಯವು ತಗ್ಗುವುದು ಸಹಜ. ಆದರೂ ಒಂದು ಜಿಲ್ಲೆಯ ಕೇಂದ್ರವು ಕೇಂದ್ರಸ್ಥಲದಲ್ಲಿರುವುದು ಸಮಂಜಸವೆಂದು ಒಪ್ಪುವುದಾದರೆ, ಆಗ, ಹಲವಾರು ಅಡಚಣೆಗಳು ಎಡತಾಕುವುವು. ಜನತೆಯೂ ತಮ್ಮ ತಮ್ಮ ಮೂಲ ಜಿಲ್ಲಾ ರಾಜಧಾನಿಗಳ ಬಗ್ಗೆ ಪಟ್ಟು ಹಿಡಿಯಬಹುದು. ಆದರೂ ಸರಕಾರವು ಜನತೆಯಲ್ಲಿ ತಮ್ಮ ಉದ್ಯಮಗಳನ್ನು ತಿಳುಹಳಿಕೆಯೊಡನೆ ಸಮರ್ಥಿಸಿ ಸದಭಿಪ್ರಾಯವನ್ನು ಮೂಡಿಸಿದ್ದಾದರೆ, ಆಗ ಇದು ಫಲಕಾರಿಯಾಗಬಹುದು ಆದರೆ, ಇದೇ ರೀತಿ ಈಗ ಇರುವ ನಾಲ್ಕು ಡಿವಿಜನ್‌ಗಳನ್ನು ಮೂರರಲ್ಲಿ ಪರ್ಯಾವಸಾನ ಹೊಂದುವಂತೆ ಮಾಡುವುದಕ್ಕೆ ವಿಶೇಷ ವಿರೋಧವಿರಲಾರದು.

ಯೋಜನಾ ಶಾಖೆಯನ್ನು ಕಂದಾಯ ಶಾಖೆಯಲ್ಲಿ ಅಂತರ್ಗತಗೊಳಿಸುವುದು; ಆರೋಗ್ಯ ಮತ್ತು ವೈದ್ಯ ವಿಭಾಗಗಳನ್ನು ಪ್ರತ್ಯೇಕಿಸುವುದು, ಮನುಷ್ಯ ಕಾರ್ಯದರ್ಶಿಯ ಕೆಲಸಗಳನ್ನು ಉಳಿದ ಕಾರ್ಯದರ್ಶಿಗಳಲ್ಲಿ ಹಂಚಿಹಾಕುವುದು; ಕಂದಾಯ ವಸೂಲಿ ಕಾರ್ಯವನ್ನು ತೀವ್ರಗೊಳಿಸುವುದು; ಅತಿಥಿ ಗೃಹಗಳನ್ನು ಮುಚ್ಚಿಬಿಡುವುದು ಮೊದಲಾದ ಸೂಚನೆಗಳು ಸ್ವಾಗತಾರ್ಹವಾಗಿಯೇ ಇವೆ. ಇಂತಹ ಹಲವಾರು ಸೂಚನೆಗಳನ್ನು ಪರಿಶೀಲಿಸಿ ಕಾರ್ಯಗತಗೊಳಿಸುವಲ್ಲಿ ಅರಂಭದ ಸಮಯ ತುಸು ಪ್ರಯಾಸವೆನಿಸಿದರೂ ಅದರಿಂದ ಮುಂದಕ್ಕೆ ಲಾಭವಿದೆಯೆನ್ನುವುದು ಯಾರಿಗೂ ಹೊಳೆಯದಿರದು. ಆದರೆ, ಪಾನ ಪ್ರತಿಬಂಧದ ಕುರಿತು ಉಲ್ಲೇಖಿಸುತ್ತ, ಮಾದಕ ಪಾನೀಯಗಳ ಬೆಲೆ ಹೆಚ್ಚುವಂತೆ ಮಾಡಿ, ಅದು ಪ್ರತಿಬಂಧಿಸದೆ ಇರುವೆಡೆಗಳಲ್ಲಿ ಅಧಿಕ ಸುಂಕ ಹೇರಿ, ಸಾಮಾನ್ಯರ ಕೈಗೆ ಸಿಲುಕದಂತೆ ಮಾಡಬೇಕೆಂದಿರುವ ಸಲಹೆ ಮಾತ್ರ ಯೋಗ್ಯವೆನ್ನಲು ಬರುವುದಿಲ್ಲ. ಹೀಗೆ ಮಾಡಿದರೆ, ಶ್ರೀಮಂತರು ಮಾತ್ರ ಕುಡಿಯಬಹುದು ಉಳಿದವರಿಗಿಲ್ಲ- ಒಂದು ಕಣ್ಣಿಗೆ ಬಣ್ಣ ಇನ್ನೊಂದಕ್ಕೆ ಎಣ್ಣೆ ಸುರಿದಂತಾಯಿತು! ಮಾದಕ ದ್ರವ್ಯಗಳನ್ನು ಯಾರೇ ಆಗಲೀ ಸೇವಿಸಬಾರದೆನ್ನುವಾಗ, ಒಂದು ವರ್ಗದವರಿಗೆ ಮಾತ್ರ ಆ ಸವಲತ್ತು ನೀಡುವಂತೆ ಮಾಡುವುದು ನ್ಯಾಯವಲ್ಲ. ಒಂದು ವೇಳೆ ಸಾಮಾನ್ಯನಾದರೂ ಕುಡಿಯಲೇಬೇಕೆಂದು ತನ್ನ ಸಂಪಾದನೆಯನ್ನೆಲ್ಲಾ ಅದಕ್ಕಾಗಿಯೇ ವೆಚ್ಚ ಮಾಡತೊಡಗಿದರೆ, ಅದರಿಂದ ಸಾಧಿಸಬಹುದಾದ ಉತ್ಕರ್ಷವೇನು? ಆದುದರಿಂದ ಸಂಪೂರ್ಣ ಪಾನನಿರೋಧವನ್ನೇ ಈ ಕೂಡಲೇ ಎಲ್ಲೆಡೆಯೂ ಘೋಷಿಸಿ, ಅದನ್ನು ಕಾಯ್ದುಕೊಂಡು ಬರುವುದು ಸರಕಾರದ ಆದ್ಯಕರ್ತವ್ಯ

ರಾಜ್ಯದ ಆರ್ಥಿಕ ಪರಿಸ್ಥಿತಿಯ ಸ್ಥಿರೀಕರಣ, ಪತ್ರಿಕಾ ಪ್ರಕಟಣೆಗಳು, ಭೂಕಂದಾಯ ವಸೂಲಿ, ಶಿಕ್ಷಣ ಸಂಸ್ಥೆಗಳ ಆಡಳಿತೆ ನಡೆಸುವುದ, ಒಕ್ಕಲುತನದಲ್ಲಿ ಅನಾವ್ಯಯ-ಮೊದಲಾದುವುಗಳ ಬಗ್ಗೆ ವರದಿಯನ್ನು ಮಾಡಿದ ಸಲಹೆಗಳು ಪರಿಶೀಲನಾರ್ಹವಿವೆ ಹೀಗಾಗಿ ಶ್ರೀ ಗೋರವಾಲಾರ ಈ ವರದಿಯನ್ನು ಅವಶ್ಯವಿದ್ದಲ್ಲಿ ಮಾತ್ರ ಅಲ್ಪ ಸ್ವಲ್ಪಾಣದ ತಿದ್ದುಪಡಿ ಮಾಡಿಕೊಂಡು ಕಟ್ಟುನಿಟ್ಟಿನಿಂದ ಕಾರ್ಯರೂಪಕ್ಕೆಳಿಸಿದರೆ, ಆಗ, ಸರಕಾರದ ವ್ಯಯದಲ್ಲಿ ನಿಜವಾಗಿಯೂ ಕಡಿತವಾಗುವುದು ಮತ್ತು ಆಡಳಿತದಲ್ಲಿ ದಕ್ಷತೆಯೂ ಹೆಚ್ಚುವುದು. ಹಾಗಾಗಲೆಂದೇ ಎಲ್ಲರ ಅಪೇಕ್ಷೆ.

ಸಂಕ್ಷಿಪ್ತ ಸುದ್ದಿಗಳು

ಮಿಡಿತೆಯ ಮಾರಣಕ್ಕೆ ಸನ್ನಾಹ

ಮಿಡತೆಗಳ ಹಾವಳಿಯನ್ನು ನಿರೋಧಿಸುವುದಕ್ಕಾಗಿ ಭಾರತ ಮತ್ತು ಇರಾನ ಸರಕಾರಗಳ ನಡುವೆ ೧೯೫೮ರ ಜುಲೈ ಮಾಸದಲ್ಲಿ ಒಂದು ಒಪ್ಪಂದವಾಗಿತ್ತು. ಅದನ್ನು ಈಗ ಪುನಃ ಸಂಪುಷ್ಟಿಗೊಳಿಸಲಾಗಿದೆ. ಟೆಹರಾನಿನಲ್ಲಿ ನಡೆದ ಒಂದು ಸಾಧಾರಣ ಸಮ್ಮೇಳನದಲ್ಲಿ ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಈ ಒಪ್ಪಂದ ಸಂಬಂಧದ ಕಾಗದ ಪತ್ರಗಳನ್ನು ವಿನಿಮಯಮಾಡಿಕೊಂಡರು. ಇರಾನಿನಲ್ಲಿ ಮಿಡತೆಗಳ ಹಾವಳಿಯು ವಿಶೇಷವಾಗಿರುವ ಈ ಸಮಯದಲ್ಲಿ ಈ ಒಪ್ಪಂದವನ್ನು ಮತ್ತಷ್ಟು ಬಲಪಡಿಸುವುದು ಅತ್ಯಂತ ಸೂಕ್ತವೆಂದು ಇರಾನಿನ ವಿದೇಶಾಂಗ ಮಂತ್ರಿಗಳು ತಿಳಿಸಿದರು. ಮಿಡತೆಗಳ ಹಾವಳಿಯು ಈ ಎರಡು ರಾಷ್ಟ್ರಗಳಲ್ಲಿ ಪ್ರತಿ ವರ್ಷವೆಂಬಂತೆ ವಿಪರೀತ ನಾಶಕ್ಕೆ ಕಾರಣವಾಗಿರುತ್ತದೆ.

ವಿಚಾರಣೆಗೆ ಪ್ರಾರಂಭಿಸಿತು

ಇತ್ತೀಚೆಗೆ ಕೇರಳ ಮತ್ತು ಮದರಾಸು ರಾಜ್ಯಗಳ ವಿವಿಧೆಡೆಗಳಲ್ಲಿ ಸಂಭವಿಸಿದ ವಿಷಮಿಶ್ರಿತ ಆಹಾರದ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಭಾರತ ಸರಕಾರದವರು ಸಮಿತಿಯೊಂದನ್ನು ನೇಮಿಸಿರುವರು. ಮುಂಬಯಿಯ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಯಾದ ಶ್ರೀ ಜೆ. ಸಿ ಶಹರು ಈ ಸಮಿತಿಯ ಅಧ್ಯಕ್ಷರಿರುವರು. ಪ್ರಾನಾದ ಸಶಸ್ತ್ರ ದಳಗಳ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲರಾದ ಮೇ. ಜ. ಸ್ವರೂಪ ನಾರಾಯಣ ಮತ್ತು ಮುಂಬಯಿಯಲ್ಲಿ ಭಾರತ ಸರಕಾರದ ಸಾರಿಗೆ ಮಂತ್ರಿ ಶಾಖೆಯ ಮರ್ಕೆಂಟೈಲ್ ಮೆರೀನ್ ವಿಭಾಗದ ಮುಖ್ಯ ಸರ್ವೆಯರರಾದ ಕ್ಯಾಪ್ಟನ್ ಟಿ ಬಿ. ಜೋಸ್ ಇವರೀರ್ವರು ಈ ಕಮಿಶನ್ನಿನ ಸದಸ್ಯರಾಗಿರುವರು. ಈ ಸಮಿತಿಯು ಕಳೆದ ವಾರ ವಿಷಪೂರಿತ ಆಹಾರದ ಬಗ್ಗೆ ತನ್ನ ವಿಚಾರಣೆಯನ್ನಾರಂಭಿಸಿದೆ.

ಉದ್ರಿಕ್ತ ಧೋರಣೆ ವಹಿಸಬೇಡಿರಿ

ಪಾಕ್ ಮುಸ್ಲಿಂ ಲೀಗದ ಅಧ್ಯಕ್ಷ ಶ್ರೀ ಖಾನ ಅಬ್ದುಲ್ ಕ್ವಯಾಂ ಖಾನರು ಕಾಶ್ಮೀರಕ್ಕಾಗಿ ಭಾರತದೊಡನೆ ಯುದ್ಧ ಹೂಡಲೇಬೇಕು ಎಂದು ಪಾಕಿಸ್ತಾನವನ್ನು ಒತ್ತಾಯಿಸುವಂತಹ ಹೇಳಿಕೆಗಳನ್ನೀಯುತ್ತಿರುವುದರಿಂದಲೇ ಭಾರತವು ಪಾಕಿಸ್ತಾನದ ಕಡೆಗೆ ದೌರ್ಜನ್ಯ ಯುಕ್ತವಾದ ಮತ್ತು ಒರಟು ಧೋರಣೆಯನ್ನು ಅನುಸರಿಸುವಂತೆ ಪ್ರೋತ್ಸಾಹಿಸುತ್ತಿದೆಯೆಂದೂ, ಇಂಥ ಮುಸ್ಲಿಂ ಲೀಗದ ಧುರೀಣರ ಹೇಳಿಕೆಗಳಿಂದ ಭಾರತವು ನೊಂದುಕೊಳ್ಳದೆ ಅವರ ಬಡಬಡಿಕೆಗಳನ್ನುಗಣಿಸಬಾರದೆಂದೂ ಪಾಕ ರಿಪಬ್ಲಿಕನ್ ಪಕ್ಷದ ಜತೆಕಾರ್ಯದರ್ಶಿಗಳಾದ ಯೆದ್ ಫಿದಾ ಹುಸೇನ ನಾಲ್ವಿಯವರು ಕೇಳಿಕೊಂಡಿದ್ದಾರೆ. ಕಾಶ್ಮೀರದ ಗಡಿಯಾಚೆಯಿಂದ ಪಾಕಿಸ್ತಾನಕ್ಕೆ ಏನಾದರೂ ಅಹ್ವಾನ ಬಂದ ಪಕ್ಷದಲ್ಲಿ ಅದನ್ನು ಸರ್ವಶಕ್ತಿಯಿಂದೆದುರಿಸಲು ಸಮಗ್ರ ದೇಶವೇ ಸರ್ಕಾರಕ್ಕೆ ಬೆಂಬಲ ನೀಡುವುದೆಂದೂ ಅವರು ಒಂದು ಪ್ರಕಟಣೆಯಲ್ಲಿ ಹೇಳಿದ್ದಾರೆ

ಪಾಕಿಸ್ತಾನಕ್ಕೆ ನೀರು ಇಲ್ಲ

೧೯೬೨ರ ನಂತರ ಪಾಕಿಸ್ತಾನಕ್ಕೆ ಭಾರತೀಯ ನದಿಗಳ ನೀರು ದೊರೆಯಲಾರದು. ಈ ಹೊತ್ತಿನಲ್ಲಿ ಭಾರತವು ರಚಿಸುತ್ತಿರುವ ಬಾಕ್ರಾ ಅಣೆಕಟ್ಟು ರಾಜಸ್ಥಾನ ಹಾಗೂ ಸರಹಿಂದ ಕಾಲುವೆಗಳು ಪೂರ್ತಿಯಾಗುತ್ತವೆ. ಭಾರತೀಯರಿಗೆ ಇಂದು ನೀರಿನ ಕೃಷಿ ಅಧಿಕವಾಗುತ್ತಿದೆ. ದೇಶದ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಭಾರತಕ್ಕೆ ನೀರು ಬೇಕಾಗಿದೆ. ಪಾಕಿಸ್ತಾನವು ಈಗಾಗಲೇ ತಮಗಾಗಿ ೫೦ ಲಕ್ಷ ಎಕರೆ ನೀರನ್ನು ಒದಗಿಸಿಕೊಂಡಿದ್ದು ಮತ್ತಷ್ಟು ನೀರಿನ ಏರ್ಪಾಡನ್ನು ಮಾಡಿಕೊಳ್ಳಬೇಕು ಎಂದು ಶ್ರೀ ಎಂ. ಪಿ ಪಾಟೀ

ಸಿಂಡಿಕೇಟ್ ಕಟ್ಟಡದ ಉದ್ಘಾಟನೆ

ನವಯುಗ ಪುರವಣಿ

ತಾ. 12--6—1958

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸಿಂಡಿಕೇಟ್ ಬ್ಯಾಂಕಿನ ಆದರ್ಶ

ಮೂವತ್ತಮೂರು ವರ್ಷಗಳ ಉಜ್ವಲ ಹಿನ್ನೆಲೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಎಂಬ ಹೆಸರಿನಿಂದ ಉಡುಪಿಯಲ್ಲಿ 1925ರಲ್ಲಿ ಇಂಥದೊಂದು ಸಂಸ್ಥೆ ಸ್ಥಾಪನೆಗೊಂಡಾಗ ಈ ಬ್ಯಾಂಕು ಕೇವಲ 33 ವರ್ಷಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆದೀತೆಂದು ಯಾರೂ ಎಣಿಸಲು ಸಾಧ್ಯವಿರಲಿಲ್ಲ. ಶ್ರೀ ದಿವಂ. ಉಸೇಂದ್ರ ಅನಂತ ಪೈ, ಶ್ರೀ ಸಿ. ಎ. ಪೈ. ಶ್ರೀ ವಿ. ಎಸ್. ಕುಡ್ವ ಮತ್ತು ಶ್ರೀ ಟಿ. ಮಾಧವ ಪೈ ಇವರು ಸಿಂಡಿಕೇಟಿನ ಸ್ಥಾಪಕ ಡಾಯರೆಕ್ಟರರಾಗಿದ್ದರು. ಉಡುಪಿಯ ಅಸುಪಾಸಿನ ಮಧ್ಯಮ ವರ್ಗದ ಜನರಿಗೆ ಉದ್ಯೋಗದ ಅವಕಾಶಗಳನ್ನೂ, ಅಂಥ ಸಂದರ್ಭದಲ್ಲಿ ಹಣದ ಅಡಚಣೆ ಬಂದಲ್ಲಿ ಬೇಕಾದ ಸಹಾಯವನ್ನೂ ಮಾಡಲೆಂದೇ ಬ್ಯಾಂಕು ಜನ್ಮವೆತ್ತಿದುದಾಗಿದೆ. ಪ್ರಥಮ ವರ್ಷದ ಅಂತ್ಯದಲ್ಲಿ ತೆತ್ತ ಬಂಡವಾಳ: ರೂ. 8000/-, ಡಿಪಾಸಿಟುಗಳು ರೂ. 6000, ಸಾಲಗಳು ರೂ. 11,000/- ಲಾಭ: ರೂ. 978 ಮಾತ್ರವಾಗಿತ್ತು. ಅಲ್ಲಿಂದ ಸಿಂಡಿಕೇಟಿನ ಇತಿಹಾಸ ಆರಂಭವಾಯಿತು. ಮುಂದಿನ ವರ್ಷಗಳಲ್ಲಿ ಇದಿರಾದ ಎಡರು ತೊಡರುಗಳನ್ನು ನಿರಿಳತೆಗಳನ್ನು ಗೆದ್ದು ಬ್ಯಾಂಕು ಮುನ್ನಡೆಯಲು ಡಾಯರೆಕ್ಟರ ಮಂಡಳಿಯವರು ವಹಿಸಿದ ಜಾಗರೂಕತೆ, ಅಡಳಿತೆವರ್ಗದ ಪ್ರಾಮಾಣಿಕ ಸೇವಾಭಾವ ಮತ್ತು ಬ್ಯಾಂಕಿನ ಗಿರಾಕಿಗಳ ವಿಶ್ವಾಸ ಸೌಹಾರ್ದಗಳು ಕಾರಣವೆಂದು ಹೇಳಬೇಕು. ಆ ಕಾಲವಾದರೂ ಎಂಥದ್ದು! 1930ರಂದಿನ ವ್ಯಾಪಾರ ವಹಿವಾಟಿನ ಮಂದಿಯ ದುಸ್ಥಾಲ, 1938ನೆಯ ಇಸವಿಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಒದಗಿದ ಸಂಕಟಕಾಲ, ದ್ವಿತೀಯ ಮಹಾಯುದ್ಧದ ವೇದನೆ—ಇವುಗಳ ಆಘಾತವನ್ನೆಲ್ಲ ಮೇಲಿಂದ ಮೇಲೆ ಸಹಿಸಿಕೊಂಡೇ ಬ್ಯಾಂಕಿನ ವ್ಯವಹಾರ ನಡೆಯಬೇಕಾಗಿತ್ತು. ಸಿಂಡಿಕೇಟು ಈ ಯಾವ ಸನ್ನಿವೇಶಕ್ಕೂ ಅಂಜಲಿಲ್ಲ, ಅಳುಕಲಿಲ್ಲ. ಧೈರ್ಯದಿಂದ ಮುಂದಡಿಯಿಡುವಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಯಾವುದೇ ರೀತಿಯಲ್ಲಿ ಪ್ರಮಾಣವಲ್ಲ ಸೇವೆ ಸಲ್ಲಿಸುತ್ತ, ಸಂಸ್ಥೆಯನ್ನು ತಮ್ಮದೆಂದು ತಿಳಿದು ವಿಶ್ವಾಸತೋರಿಸಿದ ಮಹನೀಯರೆಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ.

ಒಂದು ಪ್ರಗತಿಪರ ವರ್ಷ

1957ರ ದಶಂಬರ 31ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ಬ್ಯಾಂಕಿನ ಡಿಪಾಸಿಟು 10 ಕೋಟಿ ರೂಪಾಯಿಗೂ ಮೇಲ್ಪಟ್ಟು ಬೆಳೆಯಿತು. ಒಟ್ಟು ಆಸ್ತಿ 12 ಕೋಟಿಯಷ್ಟಾಯಿತು. ತೆತ್ತ ಬಂಡವಾಳ ರೂ. 28·5 ಲಕ್ಷ ಮತ್ತು ಕ್ಷೇಮನಿಧಿ ರೂ. 22 ಲಕ್ಷ—ಆಗಿದ್ದು. 1930ರಿಂದ ಬ್ಯಾಂಕು ಪ್ರಗತಿ ಹೊಂದಿದ ಬಗೆಯನ್ನು ಕೆಳಗಿರುವ ಯಾದಿಯಿಂದ ತಿಳಿಯಬಹುದು.

ಸೇವಾಕ್ಷೇತ್ರದ ವಿಸ್ತರಣೆ

1937ರಲ್ಲಿ ಸಿಂಡಿಕೇಟು ಕೆಮ್ಯೂಲ್ಡ್ ಬ್ಯಾಂಕೆಂದು ಪರಿಗಣಿತವಾಯಿತು. ಮುಂಬಯಿ, ಮದರಾಸು ಮುಂತಾದ ಕೇಂದ್ರ ಸ್ಥಾನಗಳ ಕ್ಲಿಯರಿಂಗ್ ಹೌಸಿನ ಸದಸ್ಯತನವನ್ನೂ ಇದು ಇಂದು ಪಡೆದಿದೆ. ಹೊಸ ಹೊಸ ಪ್ರದೇಶಗಳಿಗೆ ಬ್ಯಾಂಕ್ ಸೇವೆಯನ್ನು ಸಲ್ಲಿಸಲು ಸಿಂಡಿಕೇಟು ಮುಂದಾಯಿತು. ಉಡುಪಿಯಂಥ ಗ್ರಾಮಾಂತರ ಪ್ರದೇಶದಲ್ಲಿ ಮೂಲ ಪ್ರೇರಣೆಯನ್ನು ಪಡೆದ ಸಿಂಡಿಕೇಟ್ ಬ್ಯಾಂಕು ಗ್ರಾಮಾಂತರಗಳಿಗೆ ಹರಡುವ ಪ್ರಯತ್ನವನ್ನು ನಡೆಸಿದ್ದು ಸ್ವಾಭಾವಿಕವೇ ಆಗಿದೆ. ಸರ್ಕಾರದವರು ಜನರಲ್ಲಿ ಬ್ಯಾಂಕಿಂಗ್ ಅಭ್ಯಾಸವನ್ನು ಬೆಳೆಸಬೇಕೆಂದು ನಿರ್ಣಯಿಸುವ ಎಷ್ಟೋ ವರ್ಷ ಮೊದಲು. ಸಿಂಡಿಕೇಟ್ ಬ್ಯಾಂಕ್ ತನ್ನ ಸೇವೆಯನ್ನು ಗ್ರಾಮಗಳಿಗೆ ವಿಸ್ತರಿಸುವ ಸಲುವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದೆಷ್ಟೋ ಗ್ರಾಮಾಂತರ ಶಾಖೆಗಳನ್ನು ನಿರ್ಮಾಣಮಾಡಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಈಗ ಸುಮಾರು 23 ಶಾಖೆಗಳು ಈಗಲೂ ಕಾರ್ಯಪ್ರವೃತ್ತವಾಗಿವೆ. ಶಾಖೆಗಳನ್ನು ರಚಿಸುವಾಗಲೂ ಕಾರ್ಯಕಾರಿ ಮಂಡಳಿಯು ವಹಿಸಿದ ಧೋರಣೆ ಸ್ತುತ್ಯರ್ಹವೆನ್ನಬೇಕು.

ಡಾ| ಟಿ. ಮಾಧವ ಪೈಯವರು.
(ಸಿಂಡಿಕೇಟ್ ಬೇಂಕಿನ ಸ್ಥಾಪಕ ಡಾಯರೆಕ್ಟರರು ಮತ್ತು ಮೆನೇಜಿಂಗ್ ಡೈರೆಕ್ಟರರು.)

* * *

ಮೈಸೂರು, ಮದ್ರಾಸು, ಮುಂಬಯಿ ಆಂಧ್ರ, ಕೇರಳ ಹೀಗೆ ಪಂಚ ರಾಜ್ಯಗಳಲ್ಲಿ ಬ್ಯಾಂಕಿನ ಶಾಖೋಪಶಾಖೆಗಳು ಹರಡಿವೆ. ಇವುಗಳಲ್ಲಿ ಹೆಚ್ಚಿನವು ಒಂದು ಲಕ್ಷಕ್ಕಿಂತ ಕಡಮೆ ಜನಸಂಖ್ಯೆ ಇರುವ ಸಣ್ಣಪುಟ್ಟ ಪಟ್ಟಣಗಳಲ್ಲಿಯೇ ಹರಡಿರುವುದು ಸಿಂಡಿಕೇಟ್ ಬ್ಯಾಂಕಿನ ವೈಶಿಷ್ಟ್ಯ. 1957ನೆಯ ಇಸವಿಯ ಅಕ್ಟೋಬರ ವರೆಗೆ ಬ್ಯಾಂಕು ಸ್ಥಾಪಿಸಿ ನಡೆಸಿ ಬರುತಿದ್ದ 98 ಶಾಖೆಗಳ (ಈಗ ಶಾಖೆಗಳು 110 ಆಗಿವೆ) ಜನಸಂಖ್ಯಾವಾರು ವಿತರಣೆಯನ್ನು ನೋಡಿದರೆ ಸಿಂಡಿಕೇಟು ಮಹಾನಗರಗಳನ್ನಷ್ಟು ಆಶ್ರಯಿಸದೆ ಗ್ರಾಮಾಂತರ ವಾಸಿಗಳ ಸೌಕರ್ಯವನ್ನು ನದರದಲ್ಲಿಟ್ಟಿರುವುದು ಸ್ಪಷ್ಟವಾಗುವುದು.

ಊರಿನ ಜನಸಂಖ್ಯೆ	ಶಾಖೆಗಳ ಸಂಖ್ಯೆ
5000ಕ್ಕಿಂತ ಕಡಿಮೆ ಇರುವಲ್ಲಿ	13
5000ದಿಂದ 10,000ದ ವರೆಗೆ ಇರುವಲ್ಲಿ	16
10,000ದಿಂದ 25,000ದ ವರೆಗಿರುವಲ್ಲಿ	24
25,000ದಿಂದ 1 ಲಕ್ಷ ಇರುವಲ್ಲಿ	27
1 ಲಕ್ಷಕ್ಕೆ ಮೇಲ್ಪಟ್ಟಿರುವಲ್ಲಿ	18

ಶಾಖೆಗಳ ಸ್ಥಾಪನೆಯಲ್ಲಿ ಬ್ಯಾಂಕಿನ ಧೋರಣೆ ಏನೆಂದರೆ: ಒಂದನೆಯದಾಗಿ ಬ್ಯಾಂಕುಗಳು ಇಲ್ಲದಿರುವಲ್ಲಿಗೆ ಬ್ಯಾಂಕಿನ ಸೇವೆಯನ್ನು ವಿಸ್ತರಿಸುವುದು, ಎರಡನೆಯದಾಗಿ ಮೊದಲೇ ಸ್ಥಾಪಿತವಾದ ಶಾಖೆಗಳನ್ನು ಹೊಸ ಸ್ಥಳಗಳಿಗೆ ಜೋಡಿಸಿ ವ್ಯಾಪಾರೋದ್ಯಮಕ್ಕೆ ಅನುಕೂಲತೆ ಒದಗಿಸುವುದು. ಆಗ 25 ವರ್ಷಗಳ ಹಿಂದೆ ಸಿಂಡಿಕೇಟಿಗೆ ಆರೇ ಆರು ಶಾಖೆಗಳು; ಈಗ ನೂರಕ್ಕೆ ಮೇಲ್ಪಟ್ಟ ಶಾಖೆಗಳಿವೆ. 1957ರಲ್ಲಿ ಒಂದೇ ವರ್ಷದಲ್ಲಿ ಬಾದಾಮಿ



ಸಿಂಡಿಕೇಟ್ ಬೇಂಕಿನ ಮಂಗಳೂರಿನ ಹೊಸ ಕಟ್ಟಡ—ತಾ. ೩೦-೫-೫೮ರಲ್ಲಿ ಕೇಂದ್ರದ ಸಚಿವ ಶ್ರೀ ಬಿ. ಗೋಪಾಲ ರೆಡ್ಡಿಯವರು ಉದ್ಘಾಟಿಸಿದರು.

ಇಳಕಲ್ಲ, ಗುಳೇದಗುಡ್ಡ, ಜಮಖಂಡಿ, ಶೃಂಗೇರಿ, ಕೊಪ್ಪಳ, ಮಣಿಪಾಲ ಮತ್ತು ಗುಂಟೂರು ಹೀಗೆ ಎಂಟು ಶಾಖೆಗಳನ್ನು ತೆರೆಯಲಾಯಿತು. ಈ ವರ್ಷ ಇನ್ನೂ 11 ಶಾಖೆಗಳನ್ನು ಸ್ಥಾಪಿಸಲು ರಿಸರ್ವ್ ಬ್ಯಾಂಕಿನಿಂದ ಅನುಮತಿ ದೊರಕಿದೆ. ಆ ಪ್ರಕಾರ ಬೆಳಗಾಂವಿಯಲ್ಲಿ ಎರಡು, ಬರೋಡದಲ್ಲೊಂದು ತಿರುಚಿನಾಪಲ್ಲಿಯಲ್ಲೊಂದು ಶಾಖೆ ಈಗಾಗಲೇ ಕೆಲಸ ತೊಡಗಿವೆ. ಅಂತೂ ಎಲ್ಲಾ ಶಾಖಾ ವಿಸ್ತರಣೆಯಾದ ಬಳಿಕ ಸಿಂಡಿಕೇಟ್ ಬ್ಯಾಂಕಿನ ಶಾಖೆಗಳ ಸಂಖ್ಯೆ 115ಕ್ಕೆ ಏರುವುದು.

ಮೈಸೂರು ರಾಜ್ಯ	76
ಆಂಧ್ರ	15
ಕೇರಳ	13
ಮದ್ರಾಸು ಮತ್ತು ಮುಂಬಯಿ	11
	115

ಜನರ ಉಳಿತಾಯವನ್ನು ಸಂಗ್ರಹಿಸುವ ಸಲುವಾಗಿ ತೆರೆಯಲಾದ ಈ ಶಾಖೆಗಳಿದೆಸೆಯಿಂದ ದೇಶದ ಮೂಲೆ ಮೂಲೆಗಳಲ್ಲಿ ಅಡಗಿರುವ ಸಂಪತ್ತಿನ ಸದ್ವಿನಿಯೋಗವಾಗುವುದು. ಉಳಿತಾಯವನ್ನು ಬ್ಯಾಂಕಿನಲ್ಲಿರಿಸಿದ ಗಿರಾಕಿಗೆ ದೊರೆಯುವ ಬಡ್ಡಿ ಲಾಭವಾದರೆ, ಬ್ಯಾಂಕು ಹೂಡುವ ಇನ್ವೆಸ್ಟ್‌ಮೆಂಟ್‌ಗಳಿಂದ ಸರ್ಕಾರಕ್ಕೂ ತನ್ನೂಲಕ ಪಂಚವಾರ್ಷಿಕ ಯೋಜನೆಯ ಸಾರ್ವಜನಿಕ ವಿಭಾಗಕ್ಕೂ, ಕೊಡುವ ಸಾಲ ಮತ್ತು ಮುಂಗಡಗಳ ಮೂಲಕ ಖಾಸಗಿ ವಿಭಾಗಕ್ಕೂ ಪ್ರಯೋಜನವು ದೊರೆಯುವುದು. ಬ್ಯಾಂಕಿನಲ್ಲಿ ಹಣ ಇಡುವ ಮತ್ತು ಬ್ಯಾಂಕಿನೊಡನೆ ವ್ಯವಹಾರ ಮಾಡುವ ಪರಿಪಾಟ ನಮ್ಮ ದೇಶದಲ್ಲಿ ಇನ್ನೂ ಎಷ್ಟೋ ಗಾತ್ರ ಬೆಳೆಯ ಬೇಕಾಗಿದೆ. ನಮ್ಮ ದೇಶದ ಜನರ ಶಲಾ ಒಟ್ಟು ಪರಮಾನವು ಅತ್ಯಂತ ನಿಕೃಷ್ಟವಾಗಿರುವುದರಿಂದ ಬೇರೆ ದೇಶಗಳ ಪ್ರಗತಿಯೊಡನೆ ಹೋಲಿಸುವುದು ಅಷ್ಟೊಂದು ಸಮಂಜಸವಲ್ಲವಾದರೂ, ದೇಶದಲ್ಲಿ ಚಲಾವಣೆಯಲ್ಲಿರುವ ಹಣಕ್ಕೂ, ಬ್ಯಾಂಕ್ ಡಿಪಾಸಿಟಿಗೂ ಇರತಕ್ಕ ದಾಮಾಶಯವನ್ನು ನೋಡಿದರೆ ನಮ್ಮಲ್ಲಿನ ಮಂದಗತಿ ಸ್ವಯಂ ವೇದ್ಯವಾಗಬಹುದು. ಇಂಡಿಯದಲ್ಲಿ ಪರಾಸರಿ ಡಿಪಾಸಿಟು ಕೇವಲ 16 ರೂಪಾಯಿ. ಇಂಗ್ಲೆಂಡಿನಲ್ಲಿ 1636 ರೂಪಾಯಿ, ಅಮೇರಿಕದಲ್ಲಿ 4,493 ರೂಪಾಯಿ ಚಲಾವಣೆಯ ಹಣಕ್ಕೂ ಬ್ಯಾಂಕ್ ಡಿಪಾಸಿಟಿಗೂ ಇರುವ ದಾಮಾಶಯು: ಇಂಡಿಯಾ: 0.76, ಇಂಗ್ಲೆಂಡ್: 4.26, ಅಮೇರಿಕ: 5.17, ಜಪಾನು 3.63. ಬ್ಯಾಂಕ್ ಸೇವೆಯನ್ನು ವಿಸ್ತರಿಸುವ ಸಮಸ್ಯೆ ಸರಳವಾದುದು ಅಲ್ಲ. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ತಾತ್ಕೇತು ಮಾಡಿರುವ ಗುರಿಯನ್ನು ಬ್ಯಾಂಕುಗಳು ಮುಟ್ಟಬೇಕಾದರೆ ಶಾಖಾವಿಸ್ತರಣೆಯು ವಿಶಾಲವಾಗಿ ಹರಡಬೇಕಾದ್ದು ನ್ಯಾಯೋಚಿತವಾಗಿದೆ. ಈ ವಿಷಯದಲ್ಲಿ ಸಿಂಡಿಕೇಟನ ಉದಾರ ಧೋರಣೆ ಪ್ರಯೋಜನಕರವೂ, ಅನುಕರಣೀಯವೂ ಎಂಬುದರಲ್ಲಿ ಸಂದೇಹವಿಲ್ಲ.

ಸಮರ್ಥ ನೌಕರವರ್ಗದ ಯೋಜನೆ

ಹೀಗೆ ಮೇಲಿಂದ ಮೇಲೆ ಶಾಖೆಗಳನ್ನು ಬಡಾಯಿಸುತ್ತಿರುವಾಗ ಯೋಗ್ಯ ನೌಕರರನ್ನು ಸೇವಿಸಿಕೊಳ್ಳುವುದೇ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಏನಾದರೂ ತಪ್ಪುಗಳಾದರೆ ದಂತನೆ ಕೂಡಲೇ ಸಿದ್ಧವಾಗಿ ಪರಿಣಾಮದಲ್ಲಿ ಪ್ರಕಟವಾಗಿಯೆ ತೀರುವುದರಿಂದ ನೌಕರರ ಕಾರ್ಯಸಾಮರ್ಥ್ಯದ ವಿಷಯದಲ್ಲಿ ಎಷ್ಟು ಎಚ್ಚರವಾಗಿದ್ದರೂ ಸಾಲದಾಗುವುದು. ಸಿಂಡಿಕೇಟ್ ಬ್ಯಾಂಕು ಈ ವಿಷಯವನ್ನು ಗಮನಸಿಯೇ ಬ್ಯಾಂಕಿನ ಗುಮಾಸ್ತವರ್ಗಕ್ಕೂ ಮೇಲಣ ಅಧಿಕಾರಿ ವರ್ಗಕ್ಕೂ ಸರಿಯಾದ ತರಬೇತಿಯನ್ನು ಕೊಡಿಸಲು ಕಾತರವಾಗಿರುವುದು. ಬ್ಯಾಂಕಿನ ಅನೇಕ ಹಿರಿಯ ಅಧಿಕಾರಿಗಳು ರಿಸರ್ವ್ ಬ್ಯಾಂಕ್ ನಡೆಸುವ ಬ್ಯಾಂಕರ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ತರಬೇತಿ ಪಡೆದಿರುವರು. ಸಿಂಡಿಕೇಟನ ಪ್ರಧಾನ ಕಾರ್ಯಾಲಯದಲ್ಲಿ ಈಗಿಕೆಲವು ವರ್ಷಗಳಿಂದ ಎಕೌಂಟೆಂಟರಿಗಾಗಿ ಆರು ತಿಂಗಳ ತರಬೇತಿಯ ವರ್ಗಗಳನ್ನು ನಡೆಸಲಾಗುತ್ತಿದೆ ಈ ವರ್ಗಗಳಲ್ಲಿ ಬ್ಯಾಂಕಿಂಗಿನ ತತ್ವಗಳನ್ನು ಮಾತ್ರವಲ್ಲದೆ ಅನುಷ್ಠಾನವನ್ನು ಕೂಡ ಪ್ರತ್ಯಕ್ಷ ರೀತಿಯಲ್ಲು ಅವರಿಗೆ ಕಲಿಸಲಾಗುವುದು. ಕಳೆದ ದಶಂಬರದಲ್ಲಿ ಬ್ಯಾಂಕಿನ ಆಶ್ರಯದಲ್ಲಿ ಒಂದು ಸ್ಟಾಫ್ ಟ್ರೈನಿಂಗ್ ಕಾಲೇಜನ್ನು ಸ್ಥಾಪಿಸಲಾಗಿದೆ. ಬ್ಯಾಂಕಿನಲ್ಲಿ ಉದ್ಯೋಗ ಕಲಿಸುವ ತರುಣ ತರುಣಿಯರಿಗೆ ಈ ಕಾಲೇಜಿನ ಆರು ವಾರಗಳ ಅಧ್ಯಯನವನ್ನು ಏರ್ಪಡಿಸಲಾಗಿದೆ. ಈ ಆರು ವಾರ ಅವರ ಪ್ರಗತಿಯನ್ನು ಪರೀಕ್ಷಿಸಲಾಗಿ ಯಾರಿಗೆ ಬ್ಯಾಂಕ್‌ಉದ್ಯೋಗದಲ್ಲಿ ಉತ್ಸಾಹವೂ, ಯೋಗ್ಯತೆಯೂ, ಚಾರಿತ್ರ್ಯವೂ ಜನಸೇವಾಮನೋಭಾವವೂ ಇರುತ್ತದೆಯೋ ಅಂಥವರನ್ನು ಬ್ಯಾಂಕಿನ ನೌಕರವರ್ಗಕ್ಕೆ ಸೇರಿಸಿಕೊಳ್ಳಲಾಗುವುದು. ಬ್ಯಾಂಕು ವೇಗವಾಗಿ ವಿಸ್ತರಿಸುತ್ತಿರುವ ಈ ಸಮಯದಲ್ಲಿ ಬ್ಯಾಂಕಿಗೆ ಹೆಚ್ಚು ಜನ ನೌಕರರ ಅವಶ್ಯಕತೆ ಇರುವುದರಿಂದ ಯೋಗ್ಯರಾದವರನ್ನೇ ಆಯ್ದು ಕೊಳ್ಳಲು ಈ ಕಾಲೇಜಿನ ಏರ್ಪಾಟನ್ನು ಮಾಡಿ ಪ್ರಿನ್ಸಿಪಾಲರಾಗಿ ಬ್ಯಾಂಕಿನ ಹಿರಿಯ ಅಧಿಕಾರಿಗಳೊಬ್ಬರನ್ನು ನೇಮಿಸಲಾಗಿದೆ. ಇಷ್ಟೇ ಅಲ್ಲದೆ ಕಳೆದ ವರ್ಷ ಬ್ಯಾಂಕಿನ ಜನರಲ್ ಮ್ಯಾನೇಜರಾದ ಶ್ರೀ ಟಿ. ಎ. ವೈ ಅವರು ಬ್ಯಾಂಕ್ ವ್ಯವಹಾರದ ಪ್ರತ್ಯಕ್ಷ ಅನುಭವವನ್ನು ಪಡೆಯುವ ಸಲುವಾಗಿ ಯೂರೋಪ್ ಖಂಡದ ಹಲವು ದೇಶಗಳಿಗೆ ಪ್ರವಾಸ ಮಾಡಿದರು. ಜರ್ಮನಿಯಲ್ಲಿ ನಡೆದ ಇಂಟರ್‌ನ್ಯಾಶನಲ್ ಕಮ್ಯರ್ಸ್ ಸ್ಕೂಲ್ ಆಫ್ ಬ್ಯಾಂಕಿಂಗ್‌ನ ಅಧಿವೇಶನದಲ್ಲಿ ವಿವಿಧ ದೇಶಗಳ ಬ್ಯಾಂಕರರೊಡನೆ ಪರಿಚಯ ಮತ್ತು ವಿಚಾರವಿನಿಮಯ ನಡೆಸಿದ ಮೇಲೆ ಶ್ರೀ ವೈ ಅವರು ಇಂಗ್ಲೆಂಡಿನ ಪಂಚಮಹಾ ಬ್ಯಾಂಕುಗಳಲ್ಲಿ ಒಂದಾದ ಮಿಡ್‌ಲ್ಯಾಂಡ್ ಬ್ಯಾಂಕಿನಲ್ಲಿ ಒಂದು ತಿಂಗಳಕಾಲ ಅಧ್ಯಯನ ನಡೆಸಿದರು. ಅತ್ತಣಿಂದ ವರಳದ ಮೇಲೆ ಸಿಂಡಿಕೇಟನ ಒಳಆಡಳಿತದಲ್ಲಿ ಅನೇಕ ಪ್ರಗತಿಪರ ಬದಲಾವಣೆಗಳನ್ನು ಮಾಡಿ ಬ್ಯಾಂಕಿನ ಸೇವೆಯ ಶಕ್ತಿ ವೃದ್ಧಿಯನ್ನು ಸಾಧಿಸಲು ಅವರು ಹೋಗುತ್ತಿದ್ದಾರೆ.

	31.12.1930	31.12.1940	31.12.1950	31.12.1957
ಅಧಿಕೃತ ಭಂಡವಾಳ	1,00,000	50,00,000	56,00,000	56,00,000
ಚಂದಾ ಕೆತ್ತಿದ ಭಂಡವಾಳ	1,00,000	12,54,000	32,11,000	32,11,000
ತೆತ್ತ ಭಂಡವಾಳ	20,000	5,21,000	23,56,000	28,47,000
ಕ್ಷೇಮನಿಧಿ	6,000	2,02,000	9,00,000	22,00,000
ಡಿಪಾಸಿಟು	2,03,000	23,14,000	3,68,99,000	10,00,00,000
ಅಡ್ವಾನ್ಸು	2,08,000	21,44,000	2,38,01,000	6,30,00,000
ಇನ್ವೆಸ್ಟ್‌ಮೆಂಟ್ಸ್	—	8,70,000	1,33,34,000	3,84,00,000
ಕ್ಯಾಶ್ ಮತ್ತು ಬೇರೆ ಬೇಂಕುಗಳಲ್ಲಿರುವ ಹಣ	6,000	3,63,000	93,05,000	1,15,45,000
ಶಾಖೆಗಳ ಸಂಖ್ಯೆ	3	32	79	101

ನಮ್ಮ ಬೇಂಕಿಂಗ್ ಸೇವೆಗಳು

ಠೇವಣಾತಿ ಯೋಜನೆಗಳು

ಸಿಂಡಿಕೇಟು ಬ್ಯಾಂಕು ಬಡವರಿಗೂ ದುಡ್ಡಿದ್ದವರಿಗೂ ಅನುಕೂಲವಾಗುವಂತೆ ಹಲವಾರು ಠೇವಣಿ ಯೋಜನೆಗಳನ್ನು ಸಿದ್ಧಪಡಿಸಿದೆ. ಇದರಿಂದ ಪ್ರತಿಯೊಬ್ಬರೂ ತಮ್ಮ ಶಕ್ತಿಗೊಪ್ಪುವಂತೆ ಸುಂದಿನ ಹಿತಕ್ಕಾಗಿ ಹಣ ಉಳಿಸಿಕೊಂಡು ಕೂಡಿಡಬಹುದಾಗಿದೆ. (ಹಣವನ್ನು ಸಂಗ್ರಹಿಸಿದಬಹುದಾಗಿದೆ.)

ಕರೆಂಟು ಮತ್ತು ಸೇವಿಂಗ್ಸ್ ಬ್ಯಾಂಕ್ ಖಾತೆಗಳನ್ನು ತೆರೆದು ಚೆಕ್ಕುಗಳ ಮೂಲಕ ವ್ಯವಹಾರ ನಡೆಸಬಹುದು. ಲಘು ಕಾಲಾವಧಿಯ ಮತ್ತು ನಿಶ್ಚಿತ ಠೇವಣಾತಿಗಳನ್ನು ಆಕರ್ಷಕ ಬಡ್ಡಿಯಲ್ಲಿ ಸ್ವೀಕರಿಸಲಾಗುವುದು.

ದಿನವೂ ಕೂಡಿಡಲು ಅನುಕೂಲವಾಗುವಂತೆ "ಪಿಗ್ಮಿ ಡಿಪೋಸಿಟ್" ಯೋಜನೆಯನ್ನು ಸಿಂಡಿಕೇಟ್ ಬ್ಯಾಂಕೇ ಭಾರತದಲ್ಲಿ ಪ್ರಥಮವಾಗಿ 1928ರಲ್ಲಿಯೇ ಬಳಕೆಗೆ ತಂದಿದೆ. ಸಾಮಾನ್ಯರಿಗೂ ಇದರ ಪ್ರಯೋಜನದ ಕದ ತೆರೆದಿದೆ. ಈ ಉಪಯುಕ್ತವಾದ ಸಣ್ಣ ಉಳಿತಾಯವನ್ನು ದಿನವೂ ಠೇವಣಿಯಾಗಿ ಮನೆಬಾಗಿಲಿಗೆ ಬಂದು ಸಂಗ್ರಹಿಸಲಾಗುವುದು. ಕಮ್ಮಿ ಎಂದರೆ ದಿನಕ್ಕೆ 25 ನಯೇ ಪೈಸೆಗಳನ್ನು ಕೂಡಾ ಸಂಗ್ರಹಿಸಲಾಗುವುದು. ಈ ಯೋಜನೆಯಂತೆ ಕೂಲಿವಾಡುವ ಸಾಮಾನ್ಯರು ಕೂಡಾ ಕ್ರಮವಾಗಿ ಸ್ವಲ್ಪ ಸ್ವಲ್ಪ ಉಳಿತಾಯ ಮಾಡಬಹುದಾಗಿದೆ. ಏಕೆಂದರೆ ಇದು ಎಲ್ಲರ ಬೇಕು.

ನಮ್ಮ ಗುಣಕ ಕ್ರಮದ (ಕ್ಯುಮ್ಯುಲೆಟಿವ್) ಠೇವಣಿ ಪದ್ಧತಿಯು ಮಾಸಿಕಾದಾಯ ತುಳ್ಳವರಿಗೆ ಅತ್ಯುಪಯುಕ್ತವಾಗಿದೆ. ಬಡ್ಡಿಯೂ ಆಕರ್ಷಕವಾಗಿದ್ದು ಪ್ರತಿ ತಿಂಗಳಿಗೂ ನಿಶ್ಚಿತ ಸಂಖ್ಯೆಯ ಹಣದನ್ನು 12, 24, 18 ಮತ್ತು 60 ತಿಂಗಳ ಅವಧಿಗಳಿಗೆ ಕ್ರಮದಲ್ಲಿ ಠೇವಣಿ ಇಡಬಹುದಾಗಿದೆ.

ಕ್ಯಾಶ್ ಸರ್ಟಿಫಿಕೇಟುಗಳು

ನಮ್ಮ ಐದು ವರ್ಷಗಳ ಅವಧಿಯ "ಲಕ್ಷ್ಮಿ ಕೇಶ್ ಸರ್ಟಿಫಿಕೇಟು" ಗಳು ಮತ್ತು ಮೂರು ವರ್ಷಗಳ "ಜುಬ್ಲಿ ಕೇಶ್ ಸರ್ಟಿಫಿಕೇಟು"ಗಳು ಒಳ್ಳೆಯ ಲಾಭಕರವಾದ ಬಡ್ಡಿ ಕೊಡುವುದರಲ್ಲದೆ ಅಗತ್ಯವೆನಿಸಿದಾಗ ಕೇಶ್ ಪಡೆಕೊಳ್ಳುವ ಸೌಕರ್ಯವನ್ನೂ ಒಳಗೊಂಡಿವೆ.

ಈ ಹಲವಾರು ಯೋಜನೆಗಳ ಮೂಲಕ ಸಿಂಡಿಕೇಟ್ ಬ್ಯಾಂಕು ಹಣವನ್ನು ಕೂಡಿಡಬಯಸುವ ಎಲ್ಲರಿಗೂ ಯುಕ್ತವಾದ ನೆರವನ್ನು ನೀಡಿದೆ.

ಸಾಲಗಳು ಮತ್ತು ಮುಂಗಡಗಳು

ಬಂಗಾರ, ಸರಕಾರಿ ಸಾಲಪತ್ರ, ಜ್ಯೂಂಟ್ ಸ್ಟಾಕ್ ಕಂಪನಿಗಳ ಶೇರುಗಳು, ಕೃಷಿ, ಧಾನ್ಯಾದಿ ಕೃಷ್ಟೋತ್ಪತ್ತಿಗಳು, ವಿನಾಶತ್ರಗಳೂ ಸುಂಕಾದಿಯುಗಳ ಭದ್ರತೆಯ ಮೇಲೆ ಯೋಗ್ಯ ಬಡ್ಡಿಯಲ್ಲಿ ವ್ಯಾಪಕರೀತಿಯ ಸುಂಗಡಗಳನ್ನು ಕೊಡುವ ಏರ್ಪಾಡಿದೆ

ವಸೂಲು ಮಾಡಿಕೊಡುವ ಸೌಕರ್ಯಗಳು

ಮೈಸೂರು, ಆಂಧ್ರ, ಕೇರಳ, ಮುಂಬಾಯಿ ಮತ್ತು ಮದ್ರಾಸು ರಾಜ್ಯಗಳಲ್ಲಿ ಪ್ರಧಾನ ವ್ಯಾಪಾರ ಕೇಂದ್ರಗಳಲ್ಲಿರುವ ನಮ್ಮ 110 ಶಾಖೆಗಳ ಸಂಪರ್ಕ ಸೌಕರ್ಯದಿಂದಾಗಿ ನಾವು ಚೆಕ್ಕು, ಬಿಲ್ಲು ಮುಂತಾದುವನ್ನು ಅಲ್ಪ ವ್ಯಯದಲ್ಲಿ ವಸೂಲುಮಾಡಿಕೊಡಬಲ್ಲವರಾಗಿದ್ದೇವೆ. ವ್ಯಾಪಾರಿ ಸಂಸ್ಥೆಗಳು, ಅವು ದೊಡ್ಡವೇ ಅಗಿರಲಿ ಸಣ್ಣವೇ ಆಗಿರಲಿ ನಮ್ಮೀ ಸೇವೆಯ ಪ್ರಯೋಜನವನ್ನು ಪಡೆಯಬಲ್ಲವು. ನಮ್ಮ ಎಲ್ಲಾ ಶಾಖೆಗಳಲ್ಲಿರುವ ಸುರಿತ ಶಿಬಂದಿಯವರು ಈ ಕುರಿತು ಸುಯೋಗ್ಯವೂ ಸಕಾಲಿಕವೂ ಆದ ಸೇವೆಯನ್ನಲ್ಲಿಸಲು ಆತುರರಾಗಿರುತ್ತಾರೆ.

ಪರದೇಶದ ಪಾವತಿಗಳು

ಸಿಂಡಿಕೇಟನ ಅಸಂಖ್ಯ ಶಾಖೆಗಳ ಮೂಲಕ ನಾವು "ಟೆಲಿಗ್ರಾಫಿಕ್ ಟ್ರಾನ್ಸ್‌ಫರ್" "ಮೈಲು ಟ್ರಾನ್ಸ್‌ಫರ್" ಡಿಮಾಂಡ್ ಡ್ರಾಫ್ಟುಗಳನ್ನು ಕೊಡುವುದರ ಮೂಲಕವಾಗಿ ಭಾರತದ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲಿ ಹಣ ಪಾವತಿಯ ಸೌಕರ್ಯವನ್ನು ನೀಡಬಲ್ಲವರಾಗಿದ್ದೇವೆ. ವ್ಯಾಪಾರ-ವಹಿವಾಟುಗಳಲ್ಲಿ ತೊಡಗಿದ ವ್ಯಕ್ತಿಗಳಿಗೂ ಸಂಸ್ಥೆಗಳಿಗೂ ಈ ಸೌಕರ್ಯದಿಂದ ಧಾರಾಳವಾದ ಪ್ರಯೋಜನ ದೊರೆಯುತ್ತಿದೆ. ಇಲ್ಲಿಯೂ ಕಾಲನಿಷ್ಠೆ ಮತ್ತು ದಕ್ಷತೆಗಳೇ ನಮ್ಮ ವ್ಯವಹಾರ ಸೂತ್ರಗಳಾಗಿವೆ.

ವಿದ್ಯಾರ್ಥಿಗಳಿಗೆ ವಿಶೇಷ ಪಾವತಿ ಸೌಕರ್ಯಗಳು

ಬೊಂಬಾಯಿ, ಮದ್ರಾಸ್, ಬೆಂಗಳೂರುಗಳಂಥ ದೊಡ್ಡ ದೊಡ್ಡ ನಗರಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಯಾವ ಚಾರ್ಜನ್ನೂ ತೆಗೆದುಕೊಳ್ಳದೆ ನಮ್ಮ ಯಾವ ಶಾಖೆಯಿಂದಾದರೂ ಹಣ ಪಾವತಿಮಾಡುವ ಅವಕಾಶವಿದೆ. ಇದು ವಸ್ತುತಃ ವಿದ್ಯಾರ್ಥಿಗಳ ಪಾಲಕರ ಪಾಲಿಗೆ ಒಂದು ವರದಾನವಂತಿದೆ.

ಸೇಫ್ ಕಸ್ಟಡಿ ಸೇವೆ

ಸಿಂಡಿಕೇಟ್ ತನ್ನ ಅನೇಕ ಶಾಖೆಗಳಲ್ಲಿ ಬಂಗಾರ, ಆಭರಣ ಭದ್ರತಾ ಪತ್ರ ಮುಂತಾದುವುಗಳನ್ನು "ಸೇಫ್ ಕಸ್ಟಡಿ"ಯಲ್ಲಿರಿಸಲು ಸ್ವೀಕರಿಸುವುದು. ಇದಕ್ಕೆ ತಗಲುವ ವೆಚ್ಚ ತೀರ ಸಾಮಾನ್ಯವಾಗಿದೆ. ಪ್ರಧಾನ ಕಾರ್ಯಾಲಯದಲಿರುವ ಉಡುಪಿಯಲ್ಲಿ ಇದರ ಬಗ್ಗೆಯೇ ಒಂದು "ಸೇಫ್ ಡಿಪಾಜಿಟ್ ವಾಲ್ಟ್‌ನ್ನು" ಇದಕ್ಕಾಗಿಯೇ ನಿರ್ಮಿಸಲಾಗಿದೆ. ಇಂಥಾದ್ದೇ ಡಿಪಾಜಿಟ್ ವಾಲ್ಟ್‌ಗಳನ್ನು ಬೊಂಬಾಯಿ ಮತ್ತು ಮಂಗಳೂರು ಶಾಖೆಗಳಲ್ಲಿಯೂ ನಿರ್ಮಿಸಲಾಗುತ್ತಿದೆ.

ಪಂಚ ವಾರ್ಷಿಕ ಯೋಜನೆಗೆ ಸಿಂಡಿಕೇಟನ ನೆರವು

ನಮ್ಮ ಪಂಚವಾರ್ಷಿಕ ಯೋಜನೆಗೆ ವಿದೇಶೀ ವಿನಿಮಯದ ತೊಡಕುಂಟಾಗಿರುವುದನ್ನು ಈಗ ಕೆಲವು ವಾರಗಳಿಂದ ನಾವು ಅನುಭವಿಸಿಬಲ್ಲೆವು. ಇದರಿಂದ ನಮ್ಮಲ್ಲಿ ಯೋಜನೆಯ ಯಶಸ್ಸಿಗೆ ಇನ್ನು ಮಾತ್ರವೇ ತೊಡಕೆನ್ನಲಾಗದು. ನಮ್ಮಲ್ಲಿ ತಂತ್ರಜ್ಞರ ಅಭಾವವಿದೆ, ವ್ಯವಸ್ಥಾಕ

(ಉಳಿದುದು ನೋಡಿರಿ.)

ನಮ್ಮ ಜಿಲ್ಲೆಯ ಬ್ಯಾಂಕಿಂಗ್ ವ್ಯವಹಾರದ ಅಭಿವೃದ್ಧಿ

ಬೇಂಕಿಂಗ್ ವ್ಯವಹಾರದಲ್ಲಿ ನಮ್ಮ ಜಿಲ್ಲೆ ಭಾರತದಲ್ಲೇ ಅಸಾಧಾರಣವೆನ್ನಬಹುದು!

ಲೇಖಕರು: ಶ್ರೀ| ಟಿ. ಎ. ಪೈ, ಜನರಲ್ ಮ್ಯಾನೇಜರ್, ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್

ಶ್ರೀ ಟಿ. ಎ. ಪೈ

* * *

ನಮ್ಮ ಜಿಲ್ಲೆಯು ಬೇಸಾಯ ಮತ್ತು ಉದ್ಯಮ ಈ ಎರಡರಲ್ಲಿಯೂ ವಿಶೇಷವಾಗಿ ಹೇಳಿಕೊಳ್ಳುವಂಥ ಪ್ರಗತಿಯನ್ನು ಪಡೆದಿದೆ ಎಂದು ಹೆಮ್ಮೆ ಪಡುವಂತಿಲ್ಲ. ಸ್ವಾತಂತ್ರ್ಯಾನಂತರನ ಈ ಹತ್ತು ವರ್ಷಗಳಲ್ಲಿ ನಮ್ಮ ಸಾರಿಗೆ ಸಂಪರ್ಕದ ಪರಿಸ್ಥಿತಿಯು ಉತ್ತಮಗೊಂಡಿದೆ ಎನೋ ನಿಜ; ಆದರೆ ಅದೇ ಪ್ರಮಾಣದಲ್ಲಿ ಉದ್ಯೋಗ-ಉದ್ಯಮ ಬೆಳೆದಂತೆ ತೋರುವುದಿಲ್ಲ. ಆದಾಗಲೂ ಜನರಲ್ಲಿ ಬ್ಯಾಂಕು ವ್ಯವಹಾರ ಮಾಡುವ ಪ್ರಗತಿಶೀಲ ದೃಷ್ಟಿಕೋನವು ಸುದೈವದಿಂದ ಚೆನ್ನಾಗಿ ವಿಕಾಸ ಹೊಂದಿದೆ ಎನ್ನಲು ಸಂತೋಷವೆನಿಸುವುದು. ಈಗೊಂದೆರಡು ವರ್ಷಗಳ ಹಿಂದೆ ರಿಸರ್ವ್ ಬ್ಯಾಂಕಿನ ಗವರ್ನರರಾದ ಶ್ರೀ. ಬೆನೆಗಲ್ ರಾಮರಾಯರು ಇಲ್ಲಿಗೆ ಬಂದಾಗ ಇದೇ ಮಾತನ್ನು ಹೇಳಿದರು. ನಮ್ಮ ಜಿಲ್ಲೆ ಈ ದೃಷ್ಟಿಯಿಂದ ಭಾರತದಲ್ಲಿಯೇ ಅಪೂರ್ವವೆಂದು ಹೇಳಬಹುದೋ ಏನೋ. ನಮ್ಮಲ್ಲಿ ಸಾಮಾನ್ಯವಾಗಿ 5000 ಕ್ಕೆ ಮೇಲ್ಪಟ್ಟ ಜನಸಂಖ್ಯೆ ಇರುವ ಪ್ರತಿಯೊಂದು ಊರಿನಲ್ಲಿ ಯಾವುದಾದರೊಂದು ಬ್ಯಾಂಕಿನ ಶಾಖೆ ಇದ್ದೇ ಇರುವುದು. ಅಷ್ಟೇ ಏಕೆ, ಕೆಲವೊಮ್ಮೆ 5000ಕ್ಕೆ ಕಡಿಮೆ ಜನಸಿಬಿಡವಾದ ಊರಿಗೂ ಒಂದು ಬ್ಯಾಂಕಿರುವುದುಂಟು. ಬ್ಯಾಂಕು ವ್ಯವಹಾರದ ಸಂದೇಶವನ್ನು ಹೀಗೆ ಹಳ್ಳಿ ಹಳ್ಳಿಗೂ ಮುಟ್ಟಿಸಿದ ಶ್ರೇಯಸ್ಸು ಸಿಂಡಿಕೇಟ್ ಬ್ಯಾಂಕಿಗೆ ಸಲ್ಲತಕ್ಕದ್ದು ನ್ಯಾಯವಾಗಿದೆ. ಸಿಂಡಿಕೇಟಿನ ಪಥದಲ್ಲಿ ಇತರ ಬ್ಯಾಂಕುಗಳೂ ಮುನ್ನಡೆದು ಜಿಲ್ಲೆಯ ಆದ್ಯಂತ ಬ್ಯಾಂಕು ಚಟುವಟಿಕೆಯನ್ನು ಪ್ರಸಾರ ಮಾಡುವ ಕೆಲಸದಲ್ಲಿ ಯಶಸ್ವಿಯಾಗಿರುವುದು.

ಇಲ್ಲಿ ನಾವು ಒಂದು ಮಾತನ್ನು ಮುಖ್ಯವಾಗಿ ಜ್ಞಾಪಕದಲ್ಲಿರಿಸಬೇಕು. ಈ ರೀತಿ ಬ್ಯಾಂಕು ವ್ಯವಹಾರದ ಬೆಳವಣಿಗೆಗೆ ಬ್ಯಾಂಕುಗಳಿಗಿಂತಲೂ ಹೆಚ್ಚಾಗಿ ಬ್ಯಾಂಕಿಗೆ ಬರತಕ್ಕ ಜನರ ದೃಷ್ಟಿಕೋನವು ಪ್ರಧಾನ ಕಾರಣವೆಂದು ನನಗೆನಿಸುತ್ತದೆ. ಆಧುನಿಕ ಆರ್ಥಮಂಡಲದಲ್ಲಿ ಬ್ಯಾಂಕುಗಳು ನಿರ್ವಹಿಸುವ ಪಾತ್ರವೇನೆಂದು ಜನರಿಗೆ ಸರಿಯಾಗಿ ಅರಿವಾದರೆ ಸಾಕು, ಬ್ಯಾಂಕಿನ ಕೆಲಸ ಸುಲಭವಾಗಿ ಬಿಡುವುದು. ಆರ್ಥಿಕ ಅಭಿವೃದ್ಧಿಗೆ ಉಪಯೋಗವಾಗದೆ ವ್ಯರ್ಥವಾಗುವ ರೀತಿ ಹಣವನ್ನು ಚೆನ್ನಾಗಿ ರೂಪಾಂತರಿಸುವುದು ಅಥವಾ ನೆಲದಲ್ಲಿ ಹುಗಿದಿಡುವುದು ಭಾರತೀಯರಾದ ನಮಗೆ ಪರಂಪರಾಗತವಾಗಿ ಬಂದ ದುರಭ್ಯಾಸ, ರೂಢಿಮೂಲವಾದ ಸಂಪ್ರದಾಯ. ಈ ಸಂಪ್ರದಾಯವನ್ನು ಮುರಿದು ಜನರಲ್ಲಿ ನವೀನ ಆರ್ಥಿಕ ದೃಷ್ಟಿಕೋನ ಮೂಡಿದರೇನೆ ದೇಶದ ಕಲ್ಯಾಣ ಸಾಧನೆ. ಬ್ಯಾಂಕಿನಲ್ಲಿ ಹಣವನ್ನಿಟ್ಟರೆ ಸಾಕಷ್ಟು ಪ್ರತಿಫಲ ದೊರೆಯುವುದೊಂದೇ ಅಲ್ಲ, ಕೃಷಿ ಮತ್ತು ಉದ್ಯಮಕ್ಕೆ ಈ ಹಣವು ಬೇಕು ಬೇಕಾದಂತೆ ಸೂರೈಸಲ್ಪಡುವುದರಿಂದ ರಾಷ್ಟ್ರದ ಹಿತವನ್ನೂ ವಿಕಾಸದಲ್ಲಿ ನಿರ್ಧಿಸಿದಂತಾಗುವುದೆಂಬ ತಿಳಿವಳಿಕೆ ಭಾರತದಲ್ಲಿ ಇನ್ನಷ್ಟು ಪ್ರಚಾರವಾಗಬೇಕು. ದಿವಾಳಿತನ ಮಾಯಾಂತರಿಲಿ, ಸಾಲಕೊಳ್ಳುವಾಗಲೂ ಕೂಡ ಸುಲಭದಲ್ಲಿ 'ಕರಕರೆ ಇಲ್ಲದೆ' ಸಿಗುತ್ತದೆಂದು ಖಂಡಗೀ ಸಾಹುಕಾರ ಮಹಾಜನಗಳಂಥ ಸಾಲಪಡೆಯುವುದಕ್ಕಿಂತ ಬ್ಯಾಂಕಿನಲ್ಲಿ ಪಡೆಯುವುದು ಮೇಲು. ಏಕೆಂದರೆ ಕೊಳ್ಳುವಾಗ 'ಮೇಲೋಗರುಂದಂತೆ' ಕಂಡರೂ ಶೂಲದ ಅನುಭವವುಂಟಾಗುವುದೆಂದು ಸರ್ವಜ್ಞ ಕವಿ ಸುಮಾರು ಇಂಥ ಸಾಲದ ವಿಷಯವೇ ಸರಿ. ಏಕೆಂದರೆ ಬ್ಯಾಂಕಿನಲ್ಲಿ ಸಾಲ ಪಡೆಯಬೇಕಾದರೆ ಮೊದಲು ನಿಮ್ಮ ಸ್ವಂತ ಆರ್ಥಿಕ ಸರಿಸ್ಥಿತಿಯ, ಸದ್ಯದ ಅವಶ್ಯಕತೆಯ, ಅದರ ಫಲಾಫಲಗಳ ವಿಮರ್ಶೆ ನಡೆಯುತ್ತದೆ; ನಿಮ್ಮ ಸ್ಥಿತಿಚಿತ್ರ ನಿಮಗೆ ಸ್ಪಷ್ಟವಾಗುತ್ತದೆ; ಆ ಮೇಲೆ ಉಳಿದ ವಿವರಗಳಿಗೆಲ್ಲಾ ಜವಾಬು ಕೊಟ್ಟ ಬಳಿಕ ಹಣ ದೊರೆಯುತ್ತದೆ; ಅದರ ಪಾವತಿಯ ಕಾಲದಲ್ಲಿ ನಿಯಮಗಳು, ಕಾಲಾವಧಿ ಸೂಚನೆಗಳು ಇರುತ್ತವೆ. ನೀವು ಈ ನಿಯಮಗಳನ್ನೆಲ್ಲ ಪಾಲಿಸಿದರೆ ನಿಮ್ಮ ಜೀವನದಲ್ಲಿಯ ಒಂದು ಶಿಸ್ತನ್ನು ರೂಢಿಸಿಕೊಂಡಂತಾಗುವುದು. ಕ್ಲಿಷ್ಟಕಾಲದಲ್ಲಿ ಮಾಡುವೆನೆಂದುದನ್ನು ಮಾಡಿ, ಕೊಡುವೆನೆಂದುದನ್ನು ಕೊಡುವುದರಲ್ಲಿ ಒಂದು ಸವಿ, ಆನಂದ ಅಡಕವಾಗಿದೆ ಅದರಿಂದ ಬ್ಯಾಂಕಿನ ನಿಯಮಗಳನ್ನು ಪಾಲಿಸಿದರೆ ಜೀವನಕ್ಕೇ ಒಂದು ಸೊಗಸು ಮೂಡುವುದು. ಇಂಥ ಸೊಗಸು ನಮ್ಮ ಜಿಲ್ಲೆಯ ಜನರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಂಡುಕೊಂಡಿರುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಸಾಲಿಗ ವ್ಯಕ್ತಿಗಳು ಸೇಳೆಪಡಿಸಿಲ್ಲದಂತಾಗಿರುವುದು ಸಾಕ್ಷಿ. ಇದೇ ಜಿಲ್ಲೆಯಲ್ಲಿ ಕಣ್ಣಿಗೆ ಎಣ್ಣೆ ಹಚ್ಚಿ ಕುಡುಕಿದರೂ ಒಬ್ಬನೇ ಒಬ್ಬ ಮಾರವಾಡಿ ಅಥವಾ ಮುಲ್ತಾನಿ ಸಾಹುಕಾರ ಕಾಣಸಿಗಲಾರ.

ನಮ್ಮ ಜಿಲ್ಲೆಯ ನಾಗರಿಕರು ಹಣವನ್ನು ಇಡುವಾಗಲೂ, ಕೊಳ್ಳುವಾಗಲೂ, ಬೇರೆ ಊರಿಗೆ ಅದನ್ನು ಪಾವತಿ ಮಾಡುವ ಪ್ರಸಂಗ ಬಂದಾಗಲೂ ಮಾತ್ರವೇ ಬ್ಯಾಂಕಿಗೆ ಬರುವವರಲ್ಲ. ಈಚೀಚೆಗೆ ಟ್ರಸ್ಟಿ ಆಗಿ ಅಥವಾ ಎಕ್ಸಿಕ್ಯೂಟರ್ ಆಗಿ, ಕೊಲ ನಾಗುವಳಿಯ ಗೇಣಿ ವಸೂಲಿನ ಕೆಲಸಕ್ಕೂ ಕೂಡ ಬ್ಯಾಂಕುಗಳನ್ನು ನೇಮಿಸುವ ಸತ್ಸಂಪ್ರದಾಯವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಇದು ಆಯಾ ಜನಂಗೆ ವಾತ್ಸಲ್ಯವಲ್ಲ ನಾಡಿಗೇ ಶುಭೋದಯದ ಚಿಹ್ನೆಯೆಂದು ನಾನು ಒತ್ತಿ ಹೇಳಬಲ್ಲೆ. ಇಂಥ ಪ್ರಗತಿಶೀಲ ಮನೋಭಾವದಿಂದ ಬ್ಯಾಂಕು ವ್ಯವಹಾರವು ಸಮಾಜಕ್ಕೆ ಇನ್ನೂ ಅತಿಶಯವಾಗಿ ವಿಧವಿಧವಾದ ಸೇವೆಗಳನ್ನು ಸಲ್ಲಿಸಲು ಸಾಧ್ಯವಾಗುವುದೆಂದು ನಾನು ನಂಬಿದ್ದೇನೆ. ಈ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಹಾಜನರು-ಮೊತ್ತವರು ಸಣ್ಣವರೆಂಬ ಭೇದವಿಲ್ಲದೆ, ಹಳ್ಳಿಗರೋ ಪಟ್ಟಣಿಗರೋ ಎನ್ನದೆ ಎಲ್ಲರೂ-ಬ್ಯಾಂಕುಗಳೊಡನೆ ಸಹಕರಿಸುತ್ತಿರುವ ರೀತಿ ದೇಶಕ್ಕೊಂದು ಮಾದರಿ. ಇಂಥ ದೃಷ್ಟಿಕೋನವಿಲ್ಲದಿರುತ್ತಿದ್ದರೆ ನಮ್ಮ ಬ್ಯಾಂಕು ವ್ಯವಹಾರದ ಸಂಸ್ಥೆಗಳು ಜಿಲ್ಲೆಯ ಒಳಗೂ ಹೊರಗೂ ವ್ಯಾಪಿಸಿ ಜನಾನುರಾಗವನ್ನು ಗಳಿಸಿ ಆರ್ಥಿಕ ಅಭಿವೃದ್ಧಿಯ ಮುನ್ಸೂಚನೆಯನ್ನು ನೀಡಲಾಗುತ್ತಿತ್ತೇ ಎನ್ನುವುದು ಸಂದೇಹಾಸ್ಪದ. ಆದುದರಿಂದ ಈ ನವೀನ ದೃಷ್ಟಿಕೋನವುಳ್ಳ ಜನಸಮುದಾಯಕ್ಕೆ ನಾವು ಕೃತಜ್ಞರಾಗಿರತಕ್ಕದ್ದು.

ನಮ್ಮ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ ನಮ್ಮ ಜನಜೀವನದ ಉದ್ಧಾರವನ್ನೂ ಉನ್ನತಿಯನ್ನೂ ಚಿರಿತಾರ್ಥಗೊಳಿಸುವ ಅರ್ಥಶಕ್ತಿ ನಮ್ಮಲ್ಲಿ ಬೇಕಷ್ಟು ಸಂಚಯವಾಗಿರುವುದನ್ನು ನಾವು ಮನನ ಮಾಡಬೇಕು. ಆಗ ನಮಗೆ ಇಷ್ಟೊಂದು ಸಂಪದ್ಯಕ್ತವಾದ ಜಿಲ್ಲೆ ಇನ್ನೂ ಉದ್ಯಮಗಳ ಮನೋಭಿವೃದ್ಧಿಯ ವಿಷಯದಲ್ಲಿ ಹಿಂದುಳಿದಿರುವುದನ್ನು ಕಂಡು ಸಂತಾಪವಾಗಬಹುದು. ನಮ್ಮ ಜಿಲ್ಲೆ ಮತ್ತು ಅದರ ಆಸುಪಾಸಿನ ಜಿಲ್ಲೆಗಳಲ್ಲಿರುವ ಮೂಲ ಸಂಪತ್ತಿನಷ್ಟು ವಿಶುಲವಾದ ಐಶ್ವರ್ಯವಿಲ್ಲದ ಎಷ್ಟೋ ಪಡುವಣ ದೇಶಗಳು ನಮಗಿಂತ ಹೆಚ್ಚಿನ ಆರ್ಥಿಕ ಉನ್ನತಿಯನ್ನು ವೈಗೂಡಿಸಿಕೊಂಡಿರುವಾಗ ನಾವು ನಮ್ಮಲ್ಲಿಯೇ ಸಂಘಟನೆಯನ್ನೂ, ವಿಶ್ವಾಸವನ್ನೂ ಬೆಳೆಸಿಕೊಂಡು ಸಂಪದಭಿವೃದ್ಧಿಯ ಪ್ರಯತ್ನವನ್ನು ಮಾಡಲಾರದೆ, ಮಾಡಬಾರದೆ? ಎಂದು ನನಗನಿಸುತ್ತದೆ. ಅಂಥ ಪ್ರಯತ್ನಕ್ಕೆ ನಮ್ಮ ಜನ ಮನವೆಸಿದರೆ ಸಾಕು ಅದು ಸಫಲನಾಗುವುದೆಂದು ನನಗೆ ವಿಶ್ವಾಸವಿದೆ.

ಸಿಂಡಿಕೇಟ್ ಬೇಂಕಿನ ಡೈರೆಕ್ಟರ್ ಮಂಡಳಿ: ಎಡದಿಂದ ಬಲಕ್ಕೆ—ಶ್ರೀಗಳಾದ ಟಿ. ಎ. ಪೈ (ಜನರಲ್ ಮೆನೇಜರ್); ಕೆ. ಗುರುರಾಜ ರಾವ್; ಎಂ. ಎನ್. ಪ್ರಭು ಶಿರೂರ್‌ಕರ್; ಎಲ್. ಎಚ್. ಪ್ರಭು; ಕೆ. ವಿ. ಎಂ. ಕಾಮತ್; ಡಾ| ಟಿ. ಎಂ. ಎ. ಪೈ (ಮೇನೇಜಿಂಗ್ ಡೈರೆಕ್ಟರ್); ಆರೂರು ಲಕ್ಷ್ಮೀನಾರಾಯಣ ರಾವ್; ವಿ. ವಿ. ಶ್ಯಾನುಭಾಗ್; ಬಿ. ಪದ್ಮನಾಭ ಪೈ; ಪಿ. ಪದ್ಮನಾಭ ರಾವ್.

ಸಿಂಡಿಕೇಟ್ ಬೇಂಕಿನ ಉದ್ಯೋಗಸರಿಗೆ ತರಬೇತಿ

ಶ್ರೀ ಎಚ್. ಕೆ. ಪೈ, ಸಿ. ಎ. ಐ. ಐ. ಬಿ, ಪ್ರಿನ್ಸಿಪಾಲ್, ಸ್ಟಾಫ್ ಟ್ರೈನಿಂಗ್ ಕಾಲೇಜ್, ಉಡುಪಿ.

ಈ ಅನುಬಂಧದಲ್ಲಿ ಪ್ರಾರಂಭದ ವರ್ಷಗಳಿಂದ ಪ್ರಕೃತದವರೆಗಿನ ನಮ್ಮ ಸಂಸ್ಥೆಯ ಶಿಬಂದಿ ತರಬೇತಿಯ ಸಂಕ್ಷಿಪ್ತ ವಿವರವು ಅಪ್ರಸ್ತುತವಾಗಲಾರದು.

ನಮ್ಮಲ್ಲಿ ಹೆಚ್ಚಿನವರು ಮೊದಲ ತರಬೇತಿಯನ್ನು ನಮ್ಮ ಪ್ರೀತಿಯ ಚೆಯರ್‌ಮನ್ ಹಾಗೂ ಮೆನೇಜಿಂಗ್ ಡೈರೆಕ್ಟರಿಂದ ಪಡೆದುದು ನಮಗೆ ಅಭಿಮಾನದ ಸಂಗತಿಯಾಗಿದೆ. ಮೂವತ್ತರಲ್ಲಿ ಸಿಂಡಿಕೇಟನ್ನು ಸೇರಿದ ಪ್ರತಿಯೊಬ್ಬನೂ ತಾನು ಪಡೆದ ವೈಯಕ್ತಿಕ ತರಬೇತಿಯನ್ನು ಮರೆಯಲಾರನು. ಜೀವನದ ಎಲ್ಲಾ ಸಮಸ್ಯೆಗಳಿಗೂ ಅತೀವವಾಗಿ ವ್ಯಾವಹಾರಿಕವೂ ಆ ಸಮಸ್ಯೆಗಳಿಗೆ ಅವರ ಪರಿಹಾರವು ಕ್ರಿಯಾತ್ಮಕವೂ ಆಗಿತ್ತು. ಇದು ಅವರ ಪ್ರತಿಭಾನ್ವಿತ ಬಹುಮುಖ ವ್ಯಕ್ತಿತ್ವದ ಒಂದು ರೂಪ ಮಾತ್ರ. ಪ್ರತಿಯೋರ್ವ ಬ್ಯಾಂಕ್ ನೌಕರನಲ್ಲಿಯೂ ಇರಬೇಕಾದ ಕೆಲವೊಂದು ಅವಶ್ಯಕ ಗುಣಗಳನ್ನವರು ಒತ್ತಿಹೇಳುತ್ತಿದ್ದರು. ಪ್ರಾಮಾಣಿಕತೆ, ವಿಶ್ವಾಸ ಮತ್ತು ಅತಿ ಶ್ರದ್ಧಾಪೂರ್ವಕವಾಗಿ ಮಾಡುವ ಕೆಲಸದ ಕರ್ತೃತ್ವ ಶಕ್ತಿಗಳೇ ಈ ಗುಣಗಳಾಗಿದ್ದುವು. ಅಂದಿನ ದಿನಗಳಲ್ಲಿ ಅವರಿಗೆ ಬಿಡುವಿದ್ದಾಗ ನಮ್ಮ ಬ್ಯಾಂಕ್ ವ್ಯವಹಾರಗಳ ಬೆಳವಣಿಗೆಗೆ ಬೇಕಾದ ಸೂಚನೆಗಳನ್ನು ಕೊಡಲು ಅವರು ನಮ್ಮನ್ನು ಕರೆದುಕೊಳ್ಳುತ್ತಿದ್ದರು. ದೃಢನಂಬಿಕೆಯವರಾದ ಅವರು ನಾವು ತಪ್ಪು ಆಲೋಚನೆಗಳಿಗೊಳಗಾದಾಗ ಯಾವಾಗಲೂ ನಮಗೆ ನಿರ್ದೇಶನ ಮಾಡುತ್ತಿದ್ದರು. ಆ ದಿನಗಳಲ್ಲಿ ನಮ್ಮನ್ನೆದುರಿಸುತ್ತಿದ್ದ ವ್ಯಾಪಾರ ಸಮಸ್ಯೆಗಳ ಬಗ್ಗೆ ನಮ್ಮಲ್ಲಿ ಎಂತಹ ನಿರ್ಬಲ ಮನಸ್ಸಿನವನಾದರೂ ಅವರೊಡನೆ ಬಿಚ್ಚು ಹೃದಯದ ಮಾತುಕತೆ ಮಾಡಿದ ಬಳಿಕ ತುಂಬು ವಿಶ್ವಾಸದಿಂದ ಮರಳುತ್ತಿದ್ದನು. ಅದು ಹಾಗೆ ವಿಶೇಷ ಆವಶ್ಯಕತೆಗಳಿಗಾಗಿದ್ದ ವೈಯಕ್ತಿಕ ತರಬೇತಿಯಾಗಿತ್ತು. ಗಾತ್ರ ಹಾಗೂ ವ್ಯಾಪಾರದ ಬೆಳವಣಿಗೆಯೊಂದಿಗೆ ಈ ಸಂಸ್ಥೆಯ ವೈಯಕ್ತಿಕ ನೌಕರರ ತರಬೇತಿ ಪದ್ಧತಿಯು ಸಾಮೂಹಿಕ ತರಬೇತಿಗೆ ತೆರವು ಮಾಡಿತು.

1938ರಲ್ಲಿ ಅನೇಕ ಯೋಗ್ಯ ಶೈಕ್ಷಣಿಕ ಪದವೀಧರ ತರುಣರನ್ನು ನಾವೇ ಆಫೀಸರರ ತರಬೇತಿಗೆ ತೆಗೆದುಕೊಂಡೆವು. ಸ್ಥಳೀಕ ನ್ಯಾಯಾಲಯದ ಪ್ರಸಿದ್ಧ ವಕೀಲರ ಸಹಾಯ ಮತ್ತು ಸಹಕಾರದಿಂದ ನಾವು ನ್ಯಾಯಶಾಸ್ತ್ರದ ಮುಖ್ಯ ವಿಭಾಗಗಳ ಕುರಿತಾದ ಭಾಷಣಮಾಲೆಗಳನ್ನು ನಮ್ಮ ಕೇಂದ್ರ ಆಫೀಸಿನಲ್ಲಿ ಏರ್ಪಡಿಸಿದೆವು. ಅದೂ ಅಲ್ಲದೆ ತರಬೇತಿ ಪಡೆಯುವ ಈ ಆಫೀಸರರು ಬ್ಯಾಂಕಿನ ಪ್ರಳೀಯ ಶಾಖೆಯಲ್ಲಿ ಪ್ರಾಯೋಗಿಕ ಕೆಲಸವನ್ನು ನಡೆಸಲು ಅವಕಾಶವನ್ನೊದಗಿಸಿದೆವು. ಆಗಾಗ್ಗೆ ನಮ್ಮ ಮೆನೇಜಿಂಗ್ ಡೈರೆಕ್ಟರರು ಈ ತರಬೇತಿ ಪಡೆಯುವ ನೌಕರರಿಗೆ ಉಪದೇಶಗಳನ್ನೀಯುತ್ತಿದ್ದರು. ಒಳ್ಳೆಯ ಗಿರಾಕಿ ಸಂಪರ್ಕವನ್ನು ಬೆಳೆಸುವ ಬಗ್ಗೆಯೂ ಬ್ಯಾಂಕಿನ ವ್ಯಾಪಾರವನ್ನು ವೃದ್ಧಿಗೊಳಿಸುವ ಕುರಿತಾಗಿಯೂ ಅವರು ಸಲಹೆಗಳನ್ನು ಕೊಡುತ್ತಿದ್ದರು. ತರಬೇತಿ ಪಡೆದವರಲ್ಲಿ ಅನೇಕ ಮಂದಿ ಅನಂತರದ ವರ್ಷಗಳಲ್ಲಿ ಪ್ರಸಿದ್ಧಿ ಪಡೆದಿರುತ್ತಾರೆ. ಅವರ ಪ್ರಾಮಾಣಿಕತೆ ಹಾಗೂ ಪರಿಶ್ರಮ ಈ ಸಂಸ್ಥೆಯ ಸಮೃದ್ಧಿಗೆ ತುಂಬಾ ಸಹಾಯಕವಾಗಿದೆ.

1942ರಲ್ಲಿ ನಮ್ಮ ಮೆನೇಜಿಂಗ್ ಡೈರೆಕ್ಟರರಿಂದ ಮಣಿಪಾಲದ ಎಕಾಡಮಿ ಓಫ್ ಜನರಲ್ ಎಜುಕೇಶನ್ ಸ್ಥಾಪಿಸಲ್ಪಟ್ಟಾಗ ಶೈಕ್ಷಣಿಕ ಸಂಸ್ಥೆಯು ಬ್ಯಾಂಕಿಂಗ್ ಇನ್ಶೂರೆನ್ಸ್ ಮತ್ತಿತರ ಉಪಯುಕ್ತ ವಿಷಯಗಳ ಕುರಿತು ವಿಶೇಷ ಅಭ್ಯಾಸದ ಅನುಕೂಲತೆಗಳನ್ನೊದಗಿಸಿತು. ನಮ್ಮ ಅನೇಕ ಜೂನಿಯರ್ ನೌಕರರು ಅಯ್ಕೆ ಮಾಡಲ್ಪಟ್ಟು, ಕೇಂದ್ರ ಆಫೀಸಿನಲ್ಲಿ ನ್ಯಾಯಶಾಸ್ತ್ರ, ಬ್ಯಾಂಕಿಂಗ್ ವ್ಯವಹಾರ ಅರ್ಥಶಾಸ್ತ್ರ, ಇಂಗ್ಲಿಷ್ ವ್ಯಾಕರಣ ಮತ್ತು ಪ್ರಬಂಧ, ಬುಕ್‌ಕೀಪಿಂಗ್, ವಾಣಿಜ್ಯಗಣಿತ ಮುಂತಾದುವುಗಳನ್ನೊಳಗೊಂಡ ಆರು ತಿಂಗಳ ಅಧ್ಯಯನ ಮಾಡುವ ಸೌಕರ್ಯವನ್ನು ಪಡೆದರು. ಕೇಂದ್ರ ಆಫೀಸಿನ ಸೀನಿಯರ್ ಆಫೀಸರರಿಂದ ಮುಖ್ಯತಃ ಈ ತರಬೇತಿಯು ಕೊಡಲ್ಪಡುತ್ತಿತ್ತು. ಅನಂತರದ ಕೆಲವು ವರ್ಷಗಳವರೆಗೆ ತರಬೇತಿಯ ಈ ಪದ್ಧತಿಯು ಮುಂದುವರಿಸಲ್ಪಟ್ಟಿತು.

1957ರಲ್ಲಿ ಗಾತ್ರ ವ್ಯವಹಾರ ಹಾಗೂ ಶಾಖೆಗಳ ಸಂಖ್ಯೆಯಲ್ಲಿ ಸಂಸ್ಥೆಯು ಬೃಹತ್ತಾಗಿ ಬೆಳೆದಾಗ ಸುಪರ್‌ವೈಸರಿ ಸಿಬಂದಿಗಳಿಗೆ ಆರು ತಿಂಗಳ ಅವಧಿಯ ತರಬೇತಿ ಶಿಕ್ಷಣವನ್ನೊದಗಿಸಲಾಯಿತು. ತರಬೇತಿಕೊಡಬೇಕಾದವರನ್ನು ಸಂಸ್ಥೆಯಲ್ಲಿರುವ ನೌಕರವರ್ಗದವರಿಂದ ಆಯ್ಕೆ ಮಾಡಲಾಯಿತು. ಸುಮಾರು 13 ಮಂದಿ ಸೀನಿಯರ್ ಕ್ಲಾರ್ಕರು ಆರಿಸಲ್ಪಟ್ಟು ನಮ್ಮ ಶಾಖೆಗಳಲ್ಲಿ ಎಕೌಂಟೆಂಟರ ಕೆಲಸ ಹಾಗೂ ಜವಾಬ್ದಾರಿಗಳನ್ನು ಪಡೆಯಲು ಬೇಕಾದ ತರಬೇತಿಹೊಂದಿದರು. ಅವರಲ್ಲಿ ನಿಜವಾಗಿಯೂ ಹೆಚ್ಚು ಯೋಗ್ಯರಾದವರಿಗೆ ಪ್ರಮೋಶನ್ ಕೊಡಲಾಯಿತು. ಅವರು ನಮ್ಮ ಇತರ ಶಾಖೆಗಳಿಗೆ ಕಳುಹಿಸಲ್ಪಟ್ಟರು.

ವಿದೇಶ ಪ್ರಯಾಣದಿಂದ ನಮ್ಮ ಜನರಲ್ ಮೆನೇಜರ್‌ರು ಮಂಳಿದ ಬಳಿಕ ಸಿಬಂದಿ ತರಬೇತಿ ಯೋಜನೆಯು ಅದರ ಅಂತಿಮ ರೂಪವನ್ನು ಪಡೆಯಿತು. ಪಶ್ಚಿಮ ಜರ್ಮನಿ, ಬ್ರಿಟನ್ ಮತ್ತಿತರ ಯುರೋಪಿಯನ್ ರಾಷ್ಟ್ರಗಳಲ್ಲಿನ ಅವರ ಸಂದರ್ಶನಗಳು ಅವರಿಗೆ ಬ್ಯಾಂಕುಗಳಲ್ಲಿ ಶಿಬಂದಿ ತರಬೇತಿಯ ಬಗ್ಗೆ ನಿರ್ದಿಷ್ಟ ಅಭಿಪ್ರಾಯಗಳನ್ನು ಕೊಟ್ಟವು. ಅವರು ಇಂಗ್ಲೆಂಡಿನಲ್ಲಿರುವಾಗ ಮಿಡ್‌ಲಾಂಡ್ ಬ್ಯಾಂಕ್ ಲಿಮಿಟೆಡ್ ಅದರ ತರುಣ ಸ್ತ್ರೀ ಪುರುಷ ನೌಕರರಿಗಾಗಿ ನಡೆಸುತ್ತಿರುವ ಸ್ಟಾಫ್ ಟ್ರೈನಿಂಗ್ ಕಾಲೇಜನ್ನು ಸಂದರ್ಶಿಸಿದ್ದರು. ಆದುದರಿಂದ ಭಾರತಕ್ಕೆ ಹಿಂದಿರುಗಿದಾಗ ನಮ್ಮ ಬ್ಯಾಂಕಿನಲ್ಲಿ ಅವರು ಸ್ಟಾಫ್ ಟ್ರೈನಿಂಗ್ ಕಾಲೇಜನ್ನು ಸ್ಥಾಪಿಸಿದುದು ಆಶ್ಚರ್ಯದ ಸಂಗತಿಯಲ್ಲ. ಈ ಕಾಲೇಜು ಡಿಸೆಂಬರ್ 16, 1957ರಲ್ಲಿ ನಮ್ಮ ಜನಪ್ರಿಯ ಮಂತ್ರಿಗಳಾಗಿದ್ದ ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲೇರ್ಪಡಿಸಿದ ಸಭೆಯಲ್ಲಿ ಬೆಂಗಳೂರಿನ ಮೇಯರರಾಗಿದ್ದ ಶ್ರೀ ಜಿನಾಭಾಯಿ ದೇವಿದಾಸರಿಂದ ಉದ್ಘಾಟಿಸಲ್ಪಟ್ಟಿತು. ಪ್ರಕೃತ ಈ ಕಾಲೇಜು, ಹೊಸವಾಗಿ ಸೇರಿದ ನೌಕರರಿಗೆ ಬ್ಯಾಂಕಿಂಗ್ ವ್ಯವಹಾರಗಳ ಕುರಿತಾದ ತರಬೇತಿಯನ್ನು ಪ್ರಾರಂಭಿಸಿದೆ. ಲಿಖಿತ ಪ್ರತಿಪ್ರಥೆಯ ಫಲಿತಾಂಶಗಳನ್ನು ಹೊಂದಿ ತರುಣ ತರುಣಿಯರನ್ನು ತರಬೇತಿಗಾಗಿ ಆಯ್ಕೆ ಮಾಡುವರು ಸ್ಟಾಫ್ ಕೋರ್ಸಿಗೆ ಹಾಜರಾಗುತ್ತಿರುವ ಹೊಸ ಶಾಖೆಗಳ ಮೂಲಕ ಇನ್ನೂ ಹೆಚ್ಚಿನ ಸೇವೆ ನೀಡುವ ಭರವಸೆಯನ್ನು ನೀಡುತ್ತಿದೆ.

ಸೈದು ಯೂ ಅದಕ್ಕಿಂತ ಕಡಿಮೆ ಮಂದಿಗಳ ಪಂಗಡದವರನ್ನು ತರಬೇತಿಗೆ ತೆಗೆದುಕೊಳ್ಳಲಾಗುವುದು. ಅದಲ್ಲದೆ ಈ ವಿದ್ಯಾರ್ಥಿಗಳಿಗೆ, ಅವರು ಬ್ಯಾಂಕಿನ ಶಾಖೆಗಳಲ್ಲಿ ಅನುಸರಿಸುತ್ತಿರುವ ವ್ಯವಹಾರ ವಿಧಾನಗಳ ಪರಿಚಯಮಾಡಲು ಅವರಿಗೆ ಬ್ಯಾಂಕಿಂಗ್ ಮತ್ತು ಎಕೌಂಟ್‌ಗಳ ವ್ಯಾವಹಾರಿಕ ಅಭ್ಯಾಸಗಳ ಕುರಿತಾಗಿ ಲಘು ಉಪನ್ಯಾಸಗಳನ್ನು ಕೊಡಲಾಗುವುದು. ಇದೂ ಅಲ್ಲದೆ ವಿದ್ಯಾರ್ಥಿಗಳು ವೃತ್ತಿಪರ ಸಲಹೆಯನ್ನೂ ಪಡೆಯುವರು. ಜೀವನದ ಮೂಲ ಮೌಲ್ಯ ಮತ್ತು ಸಮರ್ಪಕ ಉದ್ಯೋಗದ ದೃಷ್ಟಿಯನ್ನೂ ಅವರು ಗಳಿಸುವರು. ಬ್ಯಾಂಕಿಂಗ್ ವೃತ್ತಿಯನ್ನು ಜೀವನೋಪಾಯವಾಗಿ ಮಾಡಲಿಚ್ಛಿಸುವ ಪ್ರತಿಯೊಬ್ಬ ಸುಹೃತ್ಪ್ರಾಂತ್ಯಕ್ಷಿಯುಳ್ಳ ತರುಣ ತರುಣಿಗೂ ಸೂಕ್ತ ಸಲಹೆಯನ್ನೀಡುವುದೇ ಈ ಕಾಲೇಜು ತನ್ನ ಮುಂದೆ ಇಟ್ಟುಕೊಂಡಿರುವ ಘನ ಆದರ್ಶವಾಗಿದೆ. ಇನ್ನು ಮುಂದೆ ಮೇಲ್ವಿಚಾರಕರಿಗೂ ಮತ್ತಿತರರಿಗೂ ಈ ಕಾಲೇಜಿನಲ್ಲಿ ಸರಿಯಾದ ತರಬೇತಿಯನ್ನು ಕೊಡುವ ಯೋಚನೆಯಿದೆ.

ಸಿಂಡಿಕೇಟ್ ಬ್ಯಾಂಕಿನ ಆದರ್ಶ

(ಹಿಂದೆ ಪುಟದಿಂದ)

ವರ್ಗದ ಅಭಾವವಿದೆ, ಧನಾಭಾವವೂ ಇದೆ. ಹಿಂದೆಳಿದ ದೇಶಗಳಲ್ಲಿ ಧನಸಂಚಯವು ಅತ್ಯಲ್ಪವಾಗಿರುವುದರಿಂದ ಇರುವಷ್ಟನ್ನು ವಿವೇಚನೆಯಿಂದಲೂ, ಜಾಣ್ಮೆಯಿಂದಲೂ ವಿನಿಯೋಗಿಸುವ ಕಲೆಯನ್ನು ನಾವು ಸಾಧಿಸಿಕೊಳ್ಳಬೇಕಾಗಿದೆ. ಹನಿ ಹನಿಯಾಗಿ ಜನರಿಂದ ಸಂಗ್ರಹಿಸಿದ ಉಳಿತಾಯದ ಸದ್ವಿನಿಯೋಗ ನಡೆಯುವಂತೆ ನೋಡಿಕೊಳ್ಳುವ ಪರಮ ಕರ್ತವ್ಯವು ಬ್ಯಾಂಕುಗಳಿಗೆ ಸೇರಿದ್ದಾಗಿದೆ. ಕೇವಲ ಲಾಭವೊಂದನ್ನೇ ದೃಷ್ಟಿಯಲ್ಲಿರಿಸದೆ ಬ್ಯಾಂಕು ಎಲ್ಲಿ ಎಲ್ಲಿ ವ್ಯವಹರಿಸುವುದೋ ಆ ಪ್ರದೇಶಗಳ ಉತ್ಪಾದನೆಯನ್ನು ಅಧಿಕವಾಗುವಂಥ ಯೋಜನೆಗಳಲ್ಲಿ ಅದು ಭಾಗವಹಿಸುವುದು ನ್ಯಾಯೋಚಿತವಾಗಿದೆ. ಸಿಂಡಿಕೇಟು ಯಾವಾಗಲೂ ಈ ಅಂಶವನ್ನು ಗಮನದಲ್ಲಿರಿಸಿ ನಡೆದಿರುವುದಕ್ಕೆ ಅದರ ಒಟ್ಟು ಡಿಪಾಜಿಟನ ೫೫% ಸರ್ಕಾರ ಮತ್ತು ಇತರ ಟ್ರಸ್ಟಿ ಸೆಕ್ಯೂರಿಟಿಗಳಲ್ಲಿ ಹೂಡಲ್ಪಟ್ಟಿರುವುದೇ ಸಾಕ್ಷಿ. 1957ರಲ್ಲಿ ಸರ್ಕಾರವು ಎತ್ತಿದ ಸಾಲದಲ್ಲಿ ಸಿಂಡಿಕೇಟು 65 ಲಕ್ಷ ರೂಪಾಯಿಗಳನ್ನು ತೊಡಗಿಸಿದೆ. ಅಲ್ಲದೆ ಹಲವಾರು ನಗರಸಭೆಗಳ ಅಭಿವೃದ್ಧಿ ಯೋಜನೆಗಳಲ್ಲಿಯೂ ಅದು ಪಾಲ್ಗೊಂಡಿದ್ದು ಮಂಗಳೂರು ನಗರಸಭೆಯು ನಳ್ಳಿ ನೀರಿನ ಯೋಜನೆಗೆಂದು ಸಾಲ ತೆಗೆಯಲು ಹೊರಟಾಗ ನಾವು ಅಪ್ಪಕ್ಕೂ ತಯಾರಾಗಿದ್ದು ಅದರ ಒಂದು ದೊಡ್ಡ ಅಂಶವನ್ನು ಆ ಮೇಲೆ ಸಾಲವಾಗಿ ಕೊಟ್ಟದ್ದನ್ನು ಇಲ್ಲಿ ಸ್ಮರಿಸಬಹುದು. ಖಾಸಗೀ ವಿಭಾಗಕ್ಕೆ ನಾವು ಸುಮಾರು 6-3 ಕೋಟಿ ರೂಪಾಯಿಗಳಷ್ಟು ಸಾಲವನ್ನು ಕೊಟ್ಟಿದ್ದೇವೆ. (31-12-1957ರ ಸಂಖ್ಯೆ) ಬ್ಯಾಂಕಿನ ಸಂಸ್ಥಾಪಕರ ಉದ್ದೇಶ ಪ್ರಕಾರ ಈ ಪೈಕಿ ಒಂದಿಂದರಷ್ಟು ಸಣ್ಣ ಪಟ್ಟ ಉದ್ದಿಮೆಗಳಿಗೆ ಕೊಡ ಮಾಡಲಾಗಿದೆ. ಒಟ್ಟಿನಲ್ಲಿ ಸಿಂಡಿಕೇಟು ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಇನ್ನ ಸೇವೆಯನ್ನು ಎಂದಿನಿಂದಲೂ ಸಲ್ಲಿಸುತ್ತಿದೆ. ಈಗ ತೆಗೆಯಲಾ

ಅತ್ಯುತ್ತಮ ಬ್ಯಾಂಕಿಂಗ್ ಸೇವೆ ಮಂಗಳೂರಿನಲ್ಲಿ ಸಿಂಡಿಕೇಟು

ಮಂಗಳೂರಲ್ಲಿ ಸಿಂಡಿಕೇಟ್ ಬ್ಯಾಂಕು ತನ್ನ 'ಅತ್ಯುತ್ತಮ ಬ್ಯಾಂಕಿಂಗ್ ಸೇವೆ'ಯ ಆದರ್ಶವನ್ನು ಕಾರ್ಯಗತಗೊಳಿಸಲು ಯತ್ನಿಸಲು ತೊಡಗಿ 25 ವರ್ಷಗಳು ಸಂದಿವೆ. ಮಂಗಳೂರಿನ ಹೊಸ ಕಟ್ಟಡದ ಪ್ರವೇಶೋತ್ಸವ ಸಮಾರಂಭದ ದಿನ ನಮ್ಮ ಕಷ್ಟ ಸುಖಗಳಲ್ಲಿ ಭಾಗಿಯಾದ ಕೆಲವರನ್ನು ಸ್ಮರಿಸುವುದು ಅಗತ್ಯವಾಗಿದೆ. ನ್ಯಾಯವಾದಿಗಳಾದ ಶ್ರೀ ಎ. ಎಚ್. ಎ. ಎಫ್. ಸಿ. ಎ. ಚಾರ್ಟರ್ಡ್ ಎಕೌಂಟೆಂಟ್ ಇವರು ನಮ್ಮ ಆಡಿಟರ್ ಆಗಿಯೂ ನಮಗೆ ಸಮೀಪದ ಸೇವೆ ಸಲ್ಲಿಸಿ ನಮ್ಮನ್ನು ಚಿರಋಣಿಗಳಾಗಿ ಮಾಡಿದ್ದಾರೆ. ಮಂಗಳೂರಿನ ಸಕಲ ನಾಗರಿಕರೂ ಸಿಂಡಿಕೇಟನ್ನು ವಿಶ್ವಾಸದಿಂದ ಕಂಡು ಒಲುಮೆಯಿಂದ ಬೆಳೆಸಿದ್ದಾರೆ. ಇವರೆಲ್ಲರಿಗೂ ಬ್ಯಾಂಕು ಕೃತಜ್ಞವಾಗಿದೆ.

ಕೇಂದ್ರ ಸರಕಾರದ ಕಂದಾಯ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಯವರು ತಾ. ೩೦-೫-೫೮ರಲ್ಲಿ ಸಿಂಡಿಕೇಟಿನ ಮಂಗಳೂರು ಶಾಖೆಯ ಕಟ್ಟಡವನ್ನು ಉದ್ಘಾಟಿಸಿದರು.

ಲರು ತಾವು ನೀಂಬಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳಾದಾಗ ಹೇಳಿದ ಮಾತುಗಳ ಬಗ್ಗೆ ಪಾಕಿಸ್ತಾನವು ವಿವಂಚನೆಯನ್ನು ತಾಳಿ ಜಾಗತಿಕ ಬೇಂಕಿಗೆ ದೂರಿಡಲು, ಅಲ್ಲಿಂದ ಭಾರತಕ್ಕೊಂದು ಸ್ಪಷ್ಟೀಕರಣ ಬೇಡಿಕೆಯ ಪತ್ರ ಬಂದಿತ್ತು. ಈ ಪತ್ರಕ್ಕೆ ಉತ್ತರ ಬರೆಯುತ್ತ ಪ್ರಧಾನಿ ನೆಹರೂರವರು ಈ ಮಾತುಗಳನ್ನು ಒತ್ತಿ ಹೇಳಿ, ೧೯೬೨ರ ಅನಂತರ ಪಾಕಿಸ್ತಾನಕ್ಕೆ ನೀರು ದೊರೆಯಲಾರದು ಎಂಬುದನ್ನು ಸುಂದರ ಚ್ಚರಿಸಿದ್ದಾರೆ.

ಭಾರತೀಯ ಲೆಕ್ಕಪತ್ರ ಕ್ರಮ

ಜಯಪುರದಲ್ಲಿ ಸೇರಿದ ಭಾರತೀಯ ಹಿಸಾಬ ಪದ್ಧತಿ ಪರಿಷತ್ತಿನ ಪ್ರಥಮಾಧಿವೇಶನದಲ್ಲಿ, ಭಾರತದಲ್ಲಿ ಲೆಕ್ಕಪತ್ರಗಳನ್ನು ಭಾರತೀಯ ಪದ್ಧತಿಯಂತೆ ಇಡಬೇಕು ಎಂಬುದೊಂದು ಗೊತ್ತುವಳಿಯನ್ನು ಅಂಗೀಕರಿಸಿ ಕೇಂದ್ರ ರಾಜ್ಯ ಸರಕಾರಗಳನ್ನು ಕೇಳಿಕೊಂಡಿದೆ. ಅಷ್ಟಲ್ಲದೇ ದೇಶದ ವ್ಯಾಪಾರೋದ್ಯಮಗಳುಭರದಿಂದಬೆಳೆಯಬೇಕಾದರೆ, ಇನ್ನೂ ಉತ್ತಮ ರೀತಿಯಲ್ಲಿ ಲೆಕ್ಕಪತ್ರಗಳನ್ನು ಇಡಬೇಕಾದ ಪದ್ಧತಿಯನ್ನು ಹುಡುಕಬೇಕು ಮತ್ತು ಭಾರತೀಯ ಲೆಕ್ಕ ಪದ್ಧತಿ ಕ್ರಮವನ್ನು ಪ್ರೋತ್ಸಾಹಿಸಬೇಕೆಂದು ಸರಕಾರವನ್ನೂ ವಾಣಿಜ್ಯ ಸಂಸ್ಥೆಗಳನ್ನೂ ಕೇಳಿಕೊಂಡಿದೆ. ಲೆಕ್ಕಪತ್ರಗಳನ್ನಿಡುವುದು ಮತ್ತು ಅವುಗಳ ತಪಾಸಣೆ ಪದ್ಧತಿಯನ್ನು ಬೆಳೆಸಿಕೊಂಡು ಬರುವುದಕ್ಕಾಗಿ "ಭಾರತೀಯ ಲೇಖಾ ಪದ್ಧತಿ ಸಂಸ್ಥಾನ"ವೊಂದನ್ನು ಪ್ರಾರಂಭಿಸಲು ಈ ಪರಿಷತ್ತು ನಿರ್ಧರಿಸಿದೆ.

ಅಸ್ಪೃಶ್ಯತಾ ನಿವಾರಣೆ

ಅಸ್ಪೃಶ್ಯತಾ ನಿವಾರಣೆಯ ಕಾಯದೆಯನ್ನು ಪರಿಣಾಮಕರವಾಗಿ ವ್ಯವಹಾರದಲ್ಲಿ ತರಲು ಹರಿಜನ—ಗಿರಿಜನರ ಸಾಮಾಜಿಕ ಶೋಷಣೆಯ ಇತರ ರೀತಿಗಳನ್ನು ತಡೆಹಿಡಿಯಲು ಲಂಚ ನಿರೋಧೀ ಶಾಖೆಯಂತಹ ಒಂದು ವಿಶೇಷ ಪೋಲೀಸ ಶಾಖೆಯನ್ನು ರಚಿಸಲು ಮೈಸೂರು ಸರಕಾರವು ನಿರ್ಧರಿಸಿದೆ. ಅಂತಹ ವರ್ಗದವರೊಡನೆ ಅಂತರ್ಜಾತೀಯ ವಿವಾಹವಾಗಿ ಬಯಸುವವರಿಗೆ ಹಣ ಸಹಾಯ ಹಾಗೂ ನೌಕರಿಗಳನ್ನು ಕೊಡಲು ಯೋಜಿಸಲಾಗಿರುವುದೆಂದೂ ಮೈಸೂರಿನ ಪಾನ ನಿರೋಧ ಮಂತ್ರಿ ಶ್ರೀ ಎನ್. ರಾಚಯ್ಯನವರು ತಿಳಿಸಿದ್ದಾರೆ.

ಸರಕಾರಿ ಪಕ್ಷದ ವಿಜಯ

ಪೋರ್ಚುಗೀಸರ ಅಧ್ಯಕ್ಷಸ್ಥಾನಕ್ಕೆ ಶ್ರೀ ರಿಯಾಂ ಎಡ್ಮಿರಲ್ ಅಮೆರಿಕೊ ತೋಮಸರು ಗೆದ್ದುಬಂದರೆಂದು ತಿಳಿದು ಬಂದಿದೆ. ಇವರು ೧೯೫೮ರಲ್ಲಿ ಅಧಿಕಾರಕ್ಕೆ ಬಂದ ಡಾ. ಅಂತೋನಿಯೋ ಸಾಲಝಾರರ ಸರಕಾರದ್ದು ೧೯೪೪ರಿಂದ ನೌಕಾ ಮಂತ್ರಿಯಾಗಿದ್ದರು. ಡಾ. ಸಾಲಝಾರರು ಈ ಬಾರಿ ಚುನಾವಣೆಗೆ ನಿಲ್ಲದೆ ಕಮ್ಮ ಉತ್ತರಾಧಿಕಾರಿಯೋ ಎಂಬಂತೆ ಶ್ರೀ ತೋಮಸರನ್ನು ನಿಲ್ಲಿಸಿದ್ದರು. ಇವರ ವಿರೋಧಿಯಾಗಿದ್ದ ಜನರಲ್ ಹುಂಬರ್ಟೋ ಡೆಲ್ಗಾಡೋರವರು ತಮ್ಮ ಪಾಲಿಗರಲ್ಲಿ ಅನೇಕ ಹೆಸರುಗಳನ್ನು ಯಾವುದೇ ಕಾರಣವಿಲ್ಲದೆ ಮತದಾರರ ಯಾದಿಯಿಂದ ಹೊಡೆದುಹಾಕಲಾಗಿದೆಯೆಂದೂ ಕೆಲವರನ್ನು ಬಂಧಿಸಲಾಗಿದೆಯೆಂದೂ ಆರೋಪಿಸಿರುತ್ತಾರೆ

ದ್ರುವಪ್ರದೇಶದಲ್ಲಿ ಪರ್ವತಶ್ರೇಣಿ

ದಕ್ಷಿಣ ಧ್ರುವದಲ್ಲಿರುವ ಸೋವಿಯೆಟ್ ವಿಜ್ಞಾನಿಗಳು ಹಿಮದಡಿಯಲ್ಲಿ ಸಮುದ್ರ ಮಟ್ಟದಿಂದ ಸುಮಾರು ೩೮೫೫ ಅಡಿ ಎತ್ತರದ ಶಿಖರಗಳಿರುವ ಪರ್ವತ ಶ್ರೇಣಿಯನ್ನು ಶೋಧಿಸಿರುವರೆಂದು ವರದಿ ಬಂದಿದೆ. ಪ್ಯೋನರ್ ಸ್ಕ್ಯಾಯಾದ ಸಮೀಪ ಹಿಮವು ೨ ಲಂಬ ಮೀಟರು ದಪ್ಪವಿದೆಯೆಂದೂ ವೋಸ್ಟಕ್ ಮತ್ತು ಸೋವಿಯೆಟ್ ಸ್ಟೇಷನಗಳ ಸಮೀಪ ಅದು ೩೦೦ ಮೀಟರುಗಳಷ್ಟಿದೆ ಎಂದೂ ಸೋವಿಯೆಟ್ ಅಂಟಾರ್ಕಟಿಕಾ ಸಂಶೋಧನಾ ತಂಡದ ನಾಯಕ ಶ್ರೀ ಅಲೆಕ್ಸಿ ಟ್ರೆಶ್ನಿಕೋವರು ತಿಳಿಸಿದ್ದಾರೆ.

ಉಡುಪಿ

ಉಡುಪಿ ಲಾ ಕಾಲೇಜಿಗೆ ಉತ್ತಮ ಫಲಿತಾಂಶ—

ಲಾ ಪ್ರಿಲಿಮಿನಿಯರಲ್ಲಿ ೨೦ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು ಅವರಲ್ಲಿ ೧೩ ಮಂದಿ ಪಾಸಾಗಿದ್ದಾರೆ ಇವರಲ್ಲಿ ಶ್ರೀ ಎರಿಕ್ ಪಿಕಾರ್ಡೋ ಎಂಬ ವಿದ್ಯಾರ್ಥಿ ನಿಷ್ಠ ವಿದ್ಯಾಲಯದಲ್ಲಿ ಸರ್ವ ಪ್ರಥಮ ಸ್ಥಾನವನ್ನು ಪಡೆದಿದ್ದಾನೆ.

ಅಂತೆಯೇ ಪ್ರಥಮ ಎಲ್. ಎಲ್. ಬಿ. ಪರೀಕ್ಷೆಗೆ ಕುಳಿತ ೪೬ ವಿದ್ಯಾರ್ಥಿಗಳಲ್ಲಿ ೩೬ ಜನರು ಉತ್ತೀರ್ಣರಾಗಿದ್ದಾರೆ ೩ ಜನರ ಫಲಿತಾಂಶವನ್ನು ತಡೆಹಿಡಿಯಲಾಗಿದೆ ಪಾಸಾದವರಲ್ಲಿ ಶ್ರೀ ಯು. ಎಂ ಕೀಯವರು ನಿಷ್ಠವಿದ್ಯಾಲಯದಲ್ಲಿ ಸರ್ವ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ

ಸಂಕಗಳ ಉದ್ಘಾಟನೆ— ಉದಿಯಾವರ ಮತ್ತು ಮೂಳಿ ಹೊಳೆಗಳ ಸೇತುವೆ ಉದ್ಘಾಟನೆಯನ್ನು ಕೇಂದ್ರ ಸಂಸ್ಕೃತಿ ಶಾಖೆಯ ಮಂತ್ರಿಗಳಾದ ಶ್ರೀ ಎಸ್ ಕೆ. ಪಾಟೀಲರು ಜೂನ್ ೧೮ರಂದು ನೆರವೇರಿಸುವವರಾಗಿ ತಿಳಿದು ಬರುತ್ತದೆ

ಸಚಿವ ಶ್ರೀ ರಾಚಯ್ಯನವರು— ಮೈಸೂರು ರಾಜ್ಯದ ಅಧಿಕಾರಿ ಸಚಿವ ಶ್ರೀ ಎನ್ ರಾಚಯ್ಯನವರು ತಾ. ೩ರಂದು ಉಡುಪಿಗೆ ಆಗಮಿಸಿದರು. ಕೇಂದ್ರ ಉಪ ಸಚಿವ ಶ್ರೀಮತಿ ವಿಯಲೆಟ್ ಆಳ್ವರೊಂದಿಗೆ ಸಮಾಜಾಭಿವೃದ್ಧಿ ಕುರಿತು ವಿಚಾರ ವಿನಿಮಯ ಮಾಡಿ ಹರಿಜನರ ಕೇರಿ, ಪೋಲೀಸ್ ಲೈನ್ ಸಂದರ್ಶಿಸಿದರು. ಪಿಂಟ್‌ಲೇಂಡ್ ಬಂಗ್ಲೆಯಲ್ಲಿ ಸ್ಥಳೀಯ ಅಯುರ್ವೇದ ವೈದ್ಯ ಸಂಘದ ಅಧ್ಯಕ್ಷ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಮೊದಲಾದವರು ಸಚಿವರನ್ನು ಕಂಡು ಆಸ್ಪತ್ರೆಗಳ ಮೇಲಣ ಸರಕಾರಿ ಕಾನೂನುಗಳನ್ನು ಸಡಿಲಿಸಬೇಕೆಂದು ಕೇಳಿಕೊಂಡರು ಮಂತ್ರಿಗಳೂ ಸಹಾನುಭೂತಿಯಿಂದ ವಿಚಾರಿಸುವುದಾಗಿ ತಿಳಿಸಿದರು.

ವಿದಾಯ ಸತ್ಕಾರ—ಲ್ಯಾಸ್ ಇನ್ಸ್ಟ್ರೆಸ್ಟ್ ಕಾರ್ಪೋರೇಶನ್, ಉಡುಪಿ ಡಿವಿಜನಿನ ಅಸಿಸ್ಟಾಂಟ್ ಡಿವಿಜನಲ್ ಮೆನೇಜರ್ ಶ್ರೀ ಎ. ವೈದ್ಯನಾಥನ್ನರಿಗೆ ಮಂಗಳಾಪುರಿಗೆ ವರ್ಗವಾದ ನಿಮಿತ್ತ, ಉಡುಪಿ ಅಭೀಸಿನ ನೌಕರರು ಅವರಿಗೆ ತಾ ೧೯ರಂದು ವಿದಾಯ ಸತ್ಕಾರವಿತ್ತು ಗೌರವಿಸಿದರು ಶ್ರೀ ಇ. ಯು ಜಾಕೋಬರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಬಿ. ಸುಬ್ಬರಾಯರು ಸ್ವಾಗತಿಸಿದರು. ಸಭಿಕರ ಮಾತುಗಳಾಗಿ ಶ್ರೀ ಕುಮಾರ ಸ್ವಾಮಿಯವರು ಧನ್ಯವಾದಗಳನ್ನಿತ್ತರು

ನಗರಸಭೆ ಉಡುಪಿ ನಗರ ಸಭೆಯು ತಾ. ೨೮ರಂದು ಉಪಾಧ್ಯಕ್ಷ ಶ್ರೀ ಸಿ ವಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಡಾ. ಬಿ ಬಾಲಕೃಷ್ಣ ಸೆಟ್ಟರ ಅಲಿತಾ ಕ್ಲಿನಿಕ್ ಕಟ್ಟಡದಲ್ಲಿ ಜಾಗವಿಲ್ಲದೇನೇ ರೋಗಿಗಳು ತಂಗುವುದರಿಂದ, ಆ ಕಟ್ಟಡಕ್ಕೆ ಟೇಕ್ಸ್ ರಿಯಾಯತಿ ಮಾಡಬೇಕೆನ್ನುವ ಅರ್ಜಿ ಕುರಿತು ಪರಿಶೀಲಿಸಿ, ಅದನ್ನು ತೀರ್ಮಾನಕ್ಕೆ ಬಾಕಿಯಿಡಲಾಯಿತು ನಗರದಲ್ಲಿ ಸೊಳ್ಳೆಕಾಟವನ್ನು ನಿಲ್ಲಿಸಲು ಬೇಕಾಗುವ ಔಷಧಿ ಪಡೆಕೊಳ್ಳಲು ರೂಪಾಯಿ 1500/- ಸೆಂಕ್ಷನ್ ಮಾಡಬೇಕೆನ್ನುವ ವಿಚಾರದಲ್ಲಿ ತುಂಬಾ ಚರ್ಚೆ ನಡೆದು ಅದನ್ನು ಬಾಕಿಯಿಡಲಾಯಿತು ನಗರದಲ್ಲಿ ಆರೋಗ್ಯಪಾಲನೆಯ ಕ್ರಮಗಳು ಸರಿಯಾಗಿ ನಡೆಯುತ್ತಿಲ್ಲವೆಂದೇ ಸರ್ವಸಾಧಾರಣ ಎಲ್ಲಾ ಸದಸ್ಯರುಗಳು ಟೀಕೆಮಾಡಿ ಹಣವನ್ನು ಬಿಕ್ಕಟ್ಟಾಯಿಸಬೇಕೆಂದು ಪ್ರಶ್ನಿಸಿದರು ಅಜ್ಜರಕಾಡಿನ ಕೆಲವೊಂದು ಜಾಗಗಳನ್ನು ನಗರಸಭೆಯ ನೌಕರರಿಗೆ ಮನೆಕಟ್ಟಿಸಲು ಕಾದಿಡಬೇಕೆಂದು ನಗರಸಭೆಯು ಅಭಿಪ್ರಾಯ ಪಡುವುದರಿಂದ ಸದ್ರಿ ಸ್ಥಳವನ್ನು ಎನ್ ಜಿ. ಒಗಳ ಉಪಯೋಗಕ್ಕೆ ಕೊಡಲು ನಗರ ಸಭೆಯ ಒಪ್ಪಿಗೆಯಿಲ್ಲವೆಂದು ತಹಶೀಲ್ದಾರರಿಗೆ ತಿಳಿಸಬೇಕೆನ್ನುವ ನಿರ್ಣಯವಾಯಿತು. ಮೂಡನಡೆಂಬೂರು ಗ್ರಾಮದಲ್ಲಿರುವ ಕೆಲ ಸಂಕಾರಿ ಜಾಗದ ಮೇಲಣ ಟೇಕ್ಸ್ ವಸೂಲಾಮಾಡಲು ದಾಖಾ ದಾಖಲುಮಾಡಬೇಕೆಂದಾಯಿತು

ಸಂಜೆ ಎರಡು ಗಂಟೆಗ ಪ್ರಾರಂಭವಾದ ಸಭೆಯು ರಾತ್ರಿ ೩½ ಗಂಟೆ ತನಕ ನಡೆಯಿತು ಅಧ್ಯಕ್ಷರಲ್ಲಿ ಶ್ರೀ ಕೆ. ದೇವೇಂದ್ರ ಪೈಯವರು ಸಭೆಗನ್ನು ಸಂಯಮದಿಸಬೇಕೆಂದು ಕೇಳಿಕೊಂಡರು ಶ್ರೀ ಸೀತಾರಾಮ ಕಾಮತರು ವಿಶೇಷ ಧಿಸಿದರು ಪೋಲೀಸ ಹಾಕಲಾಗಿ ಅಧ್ಯಕ್ಷರ ಕಾಸ್ಟಿಂಗ್ ವೋಟಿನ ಸಹಾಯದಿಂದ ಸಭೆ ಮುಂದಿರಿಸಬೇಕೆಂದಾಯಿತು.

ಹಿಂದೂ ಮಹಾ ಸಭೆಯ ರಾಜೆ- ಜಿಲ್ಲಾ ಹಿಂದೂ ಮಹಾ ಸಭಾ ಸಂಘಟಿಕ ಶ್ರೀ ಪಾಸನ ರಾಮ ಶೇಟಿ, ಅವರ ಆಮಂತ್ರಣದ ಮೇರೆಗೆ ಶ್ರೀ ಕೆ ದಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಹಿಂದೂ ಧರ್ಮಾಭಿಮಾನಿಗಳ ಸಭೆಯು ತಾ ೮ರಂದು ಕಲ್ಯಾಣಪುರ ಮಹಾಪಟ್ಟಣದ ಭವನದಲ್ಲಿ ಜರಗಿತು. ಉಡುಪಿಯಲ್ಲಿ ದಕ ಜಿಲ್ಲಾ ಹಿಂದೂ ಮಹಾ ಸಭಾ ಶಾಖೆಯನ್ನು ಸ್ಥಾಪಿಸಲಾಯಿತು ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ಬಿ ವಿ ಮಾಧವ ರಾವ್ ಅಧ್ಯಕ್ಷರಾಗಿಯೂ, ಕೆ ರಂಗಾಂಚಾರ್, ಕೆ ನರಹರಿ ಪೈ, ಆರ್ ಸೂರ್ಯರಾವ್, ಎನ್. ಗೋಪಾಲ ಶೇಟರು ಇತರ ಸದಸ್ಯರಾಗಿಯೂ ಆರಿಸಲ್ಪಟ್ಟರು

ಉದಿಯಾವರ— ಮೊಗವೀರ ಸಮಾಜದ ಹಿರಿಯ ಮುಂದಾಳು ದಿ. ಉದಿಯಾವರ ಸದಿಯ ಸಾಹುಕಾರರ ಗೋರಿಯ ಉದ್ಘಾಟನೆಯನ್ನು ಶ್ರೀ ಟಿ ಎ. ಪೈಗಳು ನೆರವೇರಿಸಿದರು, ಡಾ ಎಸ್ ಆರ್ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಉದಿಯಾವರ ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಭಾಸ್ಕರ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು, ಶ್ರೀಗಳಾದ ಯು ಎಸ್ ನಾಯಕ್, ಎಮ್. ಎಲ್ ಎ, ಎ ಜೆ ಅಲ್ಲೆ ಮೊದಲಾದವರ ಕಾಲೋಚಿತ ಭಾಷಣವಾದ ಬಳಿಕ ಅಧ್ಯಕ್ಷರ ಸಮಯೋಚಿತ ಮಾತುಗಳಾದುವು ಶ್ರೀ ಆರ್ ಸಿ ಕರ್ಕೇರರು ಧನ್ಯವಾದವಿತ್ತರು

ಕಟಪಾಡಿ— ಸ್ಥಳೀಯ ಎಸ್ ಪಿ. ಎಸ್ ಹಾಸ್ಟೂಲಿನ ಕಟ್ಟಡದ ಹೊಸ ದ್ವಾರಕ್ಕೆ ತಾ ೩ರಂದು ಕೇಂದ್ರ ಸರಕಾರದ ಗೃಹ ಖಾತೆಯ ಉಪ ಸಚಿವ ಶ್ರೀಮತಿ ವಯಲೆಟ್ ಆಳ್ವರು ಉದ್ಘಾಟಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಜೋಕಿಂ ಆಳ್ವ ಎಮ್ ಪಿ ಅವರು ವಹಿಸಿದ್ದರು

ಶಾಲಾ ಬಾಲಿಕೆಯರಿಂದ ಪ್ರಾರ್ಥನೆಯಾದೊಡನೆ, ಶ್ರೀ ಕೆ ಶಂಕರನಾರಾಯಣ ಶೆಣೈಯವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು ಶ್ರೀ ಕೆ ಆರ್ ಶೆಣೈಯವರು ಶಾಲೆಯ ಪ್ರಗತಿವರ ವರದಿಯನ್ನೋದಿದರು ಶ್ರೀ ಯು ಎಸ್ ನಾಯಕ್ ಎಮ್ ಎಲ್ ಎ ಅವರು ಸ್ವಾಗತ ಭಾಷಣಮಾಡಿ ವಿದ್ಯಾವರ್ಧಕ ಸಂಘದ ಗ್ರಾಮಾಂತರಗಳಲ್ಲಿ ವಿದ್ಯಾಪ್ರಚಾರ ಸೇವೆ ಮಾಡುತ್ತಿರುವುದನ್ನು ಚಿತ್ರಿಸಿ ಜನತೆಯ ಸಹಕಾರ ಬೇಕೆಂದರು.

ಶ್ರೀಮತಿ ಆಳ್ವರು ಮಾತನಾಡುತ್ತಾ, ಇಂದು ಚಿಕ್ಕ ಮಕ್ಕಳನ್ನೂ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ ಪರಿಚಿತ ವ್ಯಕ್ತಿಗಳನ್ನೂ ನೋಡುವ ಸಂದರ್ಭವೊದಗಿದುದಕ್ಕಾಗಿ ಸಂತೋಷಪಟ್ಟರು. ನಾಳಿನ ಜನಾಂಗವಾದ ಮಕ್ಕಳಿಗೆ ಎಂತಹ ಮಾನಸಿಕ ಶಿಕ್ಷಣ ದೊರೆಯಬೇಕಾಗಿದೆ ಎಂಬುದನ್ನು ವಿವರಿಸಿ ಅಧ್ಯಾಪಕರ ಹೊಣೆಗಾರಿಕೆ ಬಹು ದೊಡ್ಡದಾದುದೆಂದರು. ಜನತೆ ಕೂಡಾ ಶಿಕ್ಷಕರ ಸ್ಥಾನಮಾನಗಳನ್ನು ಅರಿತು, ಅವರಿಗೆ ಸೂಕ್ತ ಸೌಲಭ್ಯಗಳು ದೊರೆಯ ತಂತೆ ಮನಸ್ಸುಳ್ಳವರಾಗಬೇಕೆಂದರು.

ಶ್ರೀ ಜೋಕಿಂ ಆಳ್ವರು ಶಾಲೆಗೆ ನೂತನವಾಗಿ ಕಟ್ಟಿಸಿರಿಕ್ಕಿರುವ ಪ್ರಾರ್ಥನಾ ಹಾಗೂ ಕಲಾಮಂದಿರದ ಶಿಲಾನ್ಯಾಸವನ್ನೆಸಗಿದರು ಶ್ರೀ ಗೋಪಾಲಕೃಷ್ಣ ನಾಯ್ಕರು ಧನ್ಯವಾದಗಳನ್ನಿತ್ತರು

ಪಿಲಿಯಾಣ—ಸ್ಥಳೀಯ ಯುವಕ ಸಂಘದ ಮಹಾ ಸಭೆಯು ತಾ ೨೦ರಂದು ಗೋಳಿ ಅಂಗಡಿಯಲ್ಲಿ ಶ್ರೀ ವಿ ಆನಂದ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಚ್ ನಾರಿಂಜ ಸೆಟ್ಟರು ಗತ ಸಭೆಯ ವರದಿಯನ್ನೋದಿದರು. ಶ್ರೀ ಬಿ ಆನಂದ ಹೆಗ್ಡೆಯವರು ಸಂಘದ ಚಟುವಟಿಕೆಗಳ ವರದಿಯನ್ನೋದಿದರು. ಶ್ರೀ ಇಂದ ಎಮ್ ಕರುಣಾಕರ ಸೂಡ ಎಚ್ ದಿವಾಕರ ಸೂಡ ಎಸ್. ಸೀತಾರಾಮರಾವ್ ಮೊದಲಾದವರು ಸಂಘದ ಬೆಳವಣಿಗೆ ಬಗ್ಗೆ ಕೆಲವು ಸಲಹೆಗಳನ್ನಿತ್ತು ಮಾತನಾಡಿದರು.

ಶಿರ್ವ—ಸ್ಥಳೀಯ ಪಂಚಾಯತ ಬೋರ್ಡಿನ ಚುನಾವಣೆಯು ತಾ ೧೦ರಂದು ನಡೆದು ಡಾ. ಯು ಕೆ ಆಚಾರ್ಯರು ಅಧ್ಯಕ್ಷಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಗೊಂಡರು ಶ್ರೀ ಗಳಾದ ಎಮ್. ವಾಸುದೇವ ಅಮಿತ್, ಯೋಕಯ್ಯ ಸೆಟ್ಟಿ, ಎಮ್ ಸದಾಶಿವ ಹೆಗ್ಡೆ, ಎಮ್ ಚಂದ್ರ ಸಂಯ್ಯ, ಶ್ಯಾಮ ನಾಯ್ಕ, ಶೇಕ್ ಹುಸೇನ್ ಸಾಹೇಬ್, ಪಿ. ಗೋಪಾಲಕೃಷ್ಣ ಶಾಸ್ತ್ರಿ, ರೂಪೆಸ್ಸಾ ಡೇಸಾ, ಗ್ರೆಗರಿ ಮಿನೇಜಸ್ ಮತ್ತು ವಲೇರಿಯನ್ ಫರ್ನಾಂಡೂ, ಅವರು ಬೋರ್ಡಿನ ಸದಸ್ಯರಾಗಿ ಆರಿಸಲ್ಪಟ್ಟರು

ತಿದ್ದುಪಡಿ—ಈವಾರದ ಪತ್ರಿಕೆಯ ಮೂರನೆಯ ಪುಟದಲ್ಲಿ ಅಚ್ಚಾದ "ಬುಭುಕ್ಷಿತಃ ಕಿಂ ನ ಕರೋತಿ ಪಾಪಮ್?" ಎಂಬ ಲೇಖನದ ಶೀರ್ಷಿಕೆಯು 'ಬಭುಕ್ಷಿತಃ ಕಿಂ ನ ಕರೋತಿ ಪಾಪಮ್? ಎಂದು ತಪ್ಪಾಗಿ ಅಚ್ಚಾಗಿದೆ ವಾಚಕರು ತಿದ್ದಿಕೊಂಡು ಓದಬೇಕಾಗಿ ವಿನಂತಿ—ಸಂ ನ

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ ಕೆ ಹೂನ್ನಯ್ಯ ಶೆಟ್ಟರ

ಮು ಗು ಳು

ಬಿ| ಶ್ರೀ. ಕಡೆಕಾರ್. ರಾಜಗೋಪಾಲ ಕೃಷ್ಣರಾಯರ ಮುನ್ನುಡಿ
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಜೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿಪುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ ೦-೬-೦(ಟಿ ಖರ್ಚು ಬೇರೆ)

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ

ನವಭಾರತ ಪುಸ್ತಕ ಭಂಡಾರ, ಉಡುಪಿ.

ದಯವಿಟ್ಟು ನಿಮ್ಮ ಬಾಕಿ ಚಂದಾಹಣವನ್ನು ಮನಿಯಾರ್ಡರು ಮಾಡಿರಿ.

ಶೃಂಗಾರ ಸಾಧನಗಳ ವಿಚಿತ್ರ ಕಥೆಗಳು

(೫ನೇ ಪುಟದಿಂದ)

ವೆ. ಇದೇ ರೀತಿಯಲ್ಲಿ ಇನ್ನೂರು ವರ್ಷಗಳ ಹಿಂದೆ ಬೆರೋಸ್ಯ ಮಹಿಳೆಯರು ಶೃಂಗಾರ ಸಾಧನಗಳೆಂದು ಮೆಚ್ಚಿದುವನ್ನು ಇಂದು ಲಾಂಛನಾಸ್ಪದವೆಂದ ವ್ಯಂಗದಿಂದ ಪರಿಭಾವಿಸುತ್ತಾರೆ. ಒಂದು ಕಾಲದಲ್ಲಿ ಸೊಂಟದ ಸುತ್ತಳತೆಯನ್ನು ಹದಿನಾರು ಇಂಚುಗಳಿಗಿಂತ ಅಧಿಕ ಬೆಳೆಯಗೊಡದಿರುವುದು ಸೌಂದರ್ಯೋತಕವಾಗಿದ್ದರೆ, ಇಂದು ಫೇಶನಿಗೆ ವಿರುದ್ಧವೆಂದು ತಿಳಿಯಲಾಗುತ್ತದೆ. ಈಗಿನ ಅಭಿರುಚಿಯಂತೆ ಶರೀರದ ಯಾವುದೇ ಅಂಗವು ಅವಶ್ಯಕತೆಗಿಂತ ಅಧಿಕ ದಪ್ಪ ಯಾ ತೆಳ್ಳನಾಗುವುದು ಸುಂದರತೆಗೆ ಯೋಗ್ಯವಲ್ಲ. ಆಧುನಿಕ ಯುಗದಲ್ಲಿ ಸೌಂದರ್ಯರಚನೆಯ ಅಧಿಕಾಧಿಕ ಸಾಮಗ್ರಿಗಳನ್ನು ಉಪಯೋಗಕ್ಕೆ ತರುವ ಹೊಣೆಯು ಮಹಿಳೆಯರಲ್ಲಿ ಅಭಿನೇತ್ರಿಯರ ಮೇಲೆ ಇದೆ.

ಎಲಾಯಿಸ್ ಗ್ರೈಡಿ ಎಂಬ ಹೆಸರಿನ ಆಂಗ್ಲ ಅಭಿನೇತ್ರಿಯು ಸೌಂದರ್ಯವೃದ್ಧಿಗಾಗಿ ಆಗುತಿದ್ದ ವ್ಯಯದ ಕಥೆಯು ಅತ್ಯಂತ ರೋಚಕವಾಗಿದೆ. ಆಕೆ ಪ್ರತಿವರ್ಷ ಕೃತಕ ಶೃಂಗಾರ ಸಾಮಗ್ರಿಗಳಿಗಾಗಿ ಒಂಬತ್ತೂವರೆ ಸಾವಿರ ರೂಪಾಯಿ ಕರ್ಚು ಮಾಡುತ್ತಾಳೆ! ಆಯಕರ ತೆರುವ ಸವ್ವಯದಲ್ಲಿ ಈಕೆ ಈ ಪೊತ್ತವನ್ನು ತನ್ನ ಸ್ವಂತ ಪೆಚ್ಚವೆಂದು ಹೇಳಿ ಆಯದಲ್ಲಿ ಕಳೆದು ಬಿಡುವ ಪ್ರಯತ್ನ ಮಾಡಿದಳು. ಆದರೆ ಆಯಕರ ಅಧಿಕಾರಿಯು ಇದನ್ನೊಪ್ಪಲಿಲ್ಲ. ಆತನಂಜೋಣದಂತೆ ಈ ಹಣವು ಆಕೆಯ ಸ್ವನ್ಯಯವಲ್ಲ. ಮಿಸ್ ಗ್ರೈಡಿಯ ಕೇಳಿಕೆಯಂತೆ ಒಬ್ಬ ಅಭಿನೇತ್ರಿಗೆ ಮುಖದ ಸೌಂದರ್ಯವೇ ದೊಡ್ಡ ನಿಧಿ. ಒಬ್ಬ ಅಂಗಡಿಗಾರನ್ನು ತನ್ನ ಅಂಗಡಿ ಮತ್ತು ಅದರ ಸಾಮಾನ್ಯಗಳ ರಕ್ಷಣೆಯನ್ನು ಮಾಡುವಂತೆ ಒಬ್ಬ ಅಭಿನೇತ್ರಿಯಾದವಳು ತನ್ನ ಸೌಂದರ್ಯ ಮತ್ತು ಯೌವನವನ್ನು ರಕ್ಷಿಸಿಕೊಳ್ಳಬೇಕು. ಆದುದರಿಂದ ಆ ಪೆಚ್ಚನ್ನು ತನ್ನ ಆಯದಿಂದ ಪ್ರತ್ಯೇಕಿಸಲು ಆಕೆಗೆ ಸಂಪೂರ್ಣಾಧಿಕಾರವಿದೆ. ನಿಜವಾಗಿಯೂ ರಂಗಭೂಮಿಯಲ್ಲಿನ ಸುಂದರಿಯ ಸೌಂದರ್ಯದಲ್ಲಿ ಏನಾದರೂ ಕೊರತೆಯಾದರೆ, ಸಮುದ್ರ ನಡುವಲ್ಲಿ ನಾಗುವ ಹಡಗಿನಲ್ಲಿ ಬರುಕು ಬಿದ್ದಾಗ್ಯ ಅಪಾಯವು ಬರುತ್ತದೆ.

ಜನರಲ್ಲಿ ಸೌಂದರ್ಯಪ್ರಿಯತೆ ಅಳವಾಗಿ ಪ್ರಭಾವ ಬೀರಿದೆ. ಯಾರೂ ತಾವು ಕುರೂಪಿಯಾಗಲು ಬಯಸುವುದಿಲ್ಲ. ದೇಶದ ದೇಶಗಳ ಪತ್ರಿಕೆಗಳಲ್ಲಿ ನಿತ್ಯ ಲಕ್ಷ ಸಂಖ್ಯೆಯಲ್ಲಿ ಆವಶ್ಯಕತೆಗಳು ಬೆಳಕು ಕಾಣುತ್ತವೆ. ಆದರೆ, ಅವುಗಳಲ್ಲಿ ಎಲ್ಲವುಗಳಿಗಿಂತ ಹೆಚ್ಚು ಕೋರುವುದೆಂದರೆ, ನೌಕರಪಡೆಯಲಿರುವವರು ನವಯುವತಿ ಹಾಗೂ ಸುಂದರಿಯಾಗಿರುವುದು ಅನಿವಾರ್ಯ ಎಂಬುದಾಗಿದೆ. ಪೆಚ್ಚಿನ ಜಾಹೀರಾತುಗಳಲ್ಲಿ ಈ ವಿಷಯವು ಮತ್ತೂ ಸ್ಪಷ್ಟವಾಗಿ ಉಲ್ಲೇಖಿತವಾಗುತ್ತದೆ—"ಸುಂದರಿ ಮತ್ತು ಇಷ್ಟಶ್ರೈದುವರ್ಷ ಪ್ರಾಯ-ವನ್ನು ಮೀರದಾಕೆಯಾಗಿರುವುದು ಅವಶ್ಯಕ" ಎಂದು!

ಜಗತ್ತಿನ ಸೌಂದರ್ಯೋಪಾಸನೆಯ ಒಂದು ವ್ಯಕ್ತರೂಪವೆಂದು ಈ ಜಾಹೀರಾತುಗಳನ್ನು ಕರೆಯಲು ಆತಂಕವೇನು?

(ಆಧಾರ—ಅಕ್ಷಯ ಕುಮಾರ ಜೈನ)

ದ. ಭಾ. ಚಲನಚಿತ್ರ ಕೈಗಾರಿಕೆ-

ಕಚ್ಚಾ ಫಿಲ್ಮಿನಲ್ಲಿ ಕಡಿತ ಕೂಡದು

ದಕ್ಷಿಣ ಭಾರತದಲ್ಲಿ ಚಲನಚಿತ್ರ ಕೈಗಾರಿಕೆಯು ಅತ್ಯಂತ ಮಹತ್ವದ ಸ್ಥಾನವನ್ನು ಗಳಿಸಿದೆ. ಹಿಂದಿ, ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳ ಭಾಷೆಗಳ ಚಿತ್ರವನ್ನು ತಯಾರಿಸುತ್ತಿರುವ ಈ ಉದ್ಯಮ ಪ್ರಾಸಗಿ ಕ್ಷೇತ್ರದ ಉದ್ಯಮಗಳಲ್ಲಿ ಪ್ರಥಮಸ್ಥಾನ ಪಡೆದಿದೆ. ಎಂದು ಕಚ್ಚಾ ಫಿಲಂ ಪೋತ ವಿರುದ್ಧ ಸಮಿತಿಯ ಸದಸ್ಯ ಶ್ರೀ ಬಿ ನಾಗಿರೆಡ್ಡಿಯವರು ಪತ್ರಿಕಾ ಪ್ರತಿನಿಧಿಗಳನ್ನುದ್ದೇಶಿಸಿ ಸುದಿದರು.

ದಕ್ಷಿಣ ಭಾರತದಲ್ಲಿ ಇಂದು ೨೮ ಸ್ಟುಡಿಯೋಗಳಿವೆ. ಇವುಗಳಲ್ಲಿ ಒಟ್ಟು ೬೨ ಚಿತ್ರ ರಚನಾ ರಂಗಸ್ಥಳ [ಫ್ಲೋರ್] ಗಳಿದ್ದು ಸುಮಾರು ಒಂಭತ್ತು ಸಾವಿರ ಮಂದಿ ವಿವಿಧ ಶಾಖೆಗಳಲ್ಲಿ ದುಡಿಯುತ್ತಿದ್ದಾರೆ, ಸುಮಾರು ಹತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಸ್ಟುಡಿಯೋಗಳು ತಯಾರಾಗಿವೆ.

ಕಳೆದ ಎರಡು ವರ್ಷಗಳಲ್ಲಿ ಚಲನಚಿತ್ರ ಪ್ರದರ್ಶನ ಕೇಂದ್ರಗಳ ಸಂಖ್ಯೆ ೧೫೦೪ರಿಂದ ೨೨೮೫ಕ್ಕೆ ಏರಿದ್ದು ಸುಮಾರು ೫೦ ಸಾವಿರ ಮಂದಿಗೆ ಉದ್ಯೋಗ ಒದಗಿಸಿರುವ ಈ ಕೇಂದ್ರಗಳಲ್ಲಿ ಸುಮಾರು ೪೦೦೦ರಿಂದ ೪೫ ಕೋಟಿ ರೂಗಳು ಬಂಡವಾಳ ವಿನಿಯೋಗವಾಗಿದೆ. ಈ ಪ್ರದರ್ಶನ ಕೇಂದ್ರಗಳಲ್ಲಿ ಸುಮಾರು ೮೦೦ ಸಂಚಾರಿ (ಟೂರಿಂಗ್ ಸಿನೆಮಾ) ಪ್ರದರ್ಶನ ಕೇಂದ್ರಗಳು.

ಚಿತ್ರ ಹಂಚಿಕೆಯ ಉದ್ಯಮವೂ ಬಿರುಸಾಗಿ ಬೆಳೆದಿದೆ. ಇಂದು ಈ ಉದ್ಯಮದಲ್ಲಿ ವಿನಿಯೋಗವಾದ ಹಣ ಸುಮಾರು ೨೦೦೦ರಿಂದ ೨೫ ಕೋಟಿ ರೂಗಳು. ದಕ್ಷಿಣ ಭಾರತದಲ್ಲಿ ಇಂದು ಸುಮಾರು ೨೬೦ ಚಿತ್ರ ಹಂಚಿಕೆಯ ಸಂಸ್ಥೆಗಳಿದ್ದು ಅವುಗಳ ಅಶ್ರಯದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಸುಮಾರು ೫೨೦೦ ಸಾವಿರದ ಮೇಗೆ.

ಅಲ್ಲದೆ ಚಲನಚಿತ್ರ ಕೈಗಾರಿಕೆಗೆ ಹೊಂದಿಕೊಂಡು ಅದರ ಅಭಿವೃದ್ಧಿಯಿಂದ ಜೀವನ ನಡೆಸುತ್ತಿರುವ ಕಲಾವಿದರು, ಸಂಗೀತಗಾರರು, ನಾಟಕಗಾರರು, ಸಾಹಿತಿಗಳು, ಕವಿಗಳು ಸಟ-ನಟಿಯರು ಮುಂತಾದವರ ಸಂಖ್ಯೆ ಸುಮಾರು ೫೫ ಸಾವಿರ.

ದಕ್ಷಿಣಭಾರತದ ಪ್ರಾಸಗಿ ಉದ್ಯಮಗಳಲ್ಲಿ ಪ್ರಥಮಸ್ಥಾನ ಗಳಿಸಿದ ಚಲನಚಿತ್ರ ಉದ್ಯಮದಲ್ಲಿ ವಿನಿಯೋಗವಾದ ಮೂಲಧನ ಸುಮಾರು ೮೦ ಕೋಟಿಗೂ ಹೆಚ್ಚು.

ದಕ್ಷಿಣ ಭಾರತದಲ್ಲಿ ವರ್ಷಕ್ಕೆ ಸುಮಾರು ೨೦೦ ಚಿತ್ರಗಳನ್ನು ತಯಾರಿಸಲು ಸಾಧ್ಯವಿದೆ. ಅದಕ್ಕೆ ಬೇಕಾದ ಮೂಲಧನ ಸುಮಾರು ೬ ಕೋಟಿ ರೂಪಾಯಿಗಳು. ಹಾಗೇ ಈ ಬೆಳವಣಿಗೆಯಿಂದ ಜನತೆಗಾಗುವ ಲಾಭವೂ ಹೆಚ್ಚಿನದೆಂದು ಬೇರೆ ಬೇಳಬೇಕಾಗಿಲ್ಲ.

ಧನಿಕರೂ ಬಡವರೂ ಇಬ್ಬರಿಗೂ ಲಾಭವಾಗುತ್ತಿರುವ ಈ ಉದ್ಯಮ ವಿದೇಶೀ ಹಣವನ್ನೂ ಗಾಳಿಸುವದನ್ನೂ ಭಾರತಕ್ಕೆ ತಂದುಕೊಡುತ್ತಿದೆ.

ಸರ್ಕಾರವನ್ನು ನಾನೆಸೂ ಧನ ಸಹಾಯ ಮಾಡಿ, ಈ ಕೈಗಾರಿಕೆಗೆ ಬೆಂಬಲ ನೀಡಿ ಎಂದು ಕೇಳುತ್ತಿಲ್ಲ. ಈ ಕೈಗಾರಿಕೆಯನ್ನು ಕೊಲ್ಲಬೇಡಿ, ಕಚ್ಚಾ ಫಿಲಮ್ ಆಮದಿಗೆ ಪರ್ಣ ಅವಕಾಶ ನೀಡಿ ಎಂದಿಷ್ಟೇ ವಿನಂತಿಸುತ್ತಿದ್ದೇವೆ. ಇಂದು ದೇಶಕ್ಕೆ ಸುಮಾರು ಎರಡು ಕೋಟಿ ರೂ. ಬೆಲೆಯ ಕಚ್ಚಾ ಫಿಲಮ್ ಅಮದಿಗೆ ಅವಕಾಶವಿದೆಯಾದರೂ ಅದು ನಮ್ಮ ದೇಶದ ಕೈಗಾರಿಕೆಗೆ ಅತ್ಯಂತವಾದ ಕಚ್ಚಾ ಫಿಲಮ್‌ನ ಕಾಲು ಭಾಗದಷ್ಟು ಮಾತ್ರವೇ ಆಗಿದೆ. ಈ ಕಾಲು ಭಾಗದಲ್ಲಿ ನಮ್ಮ ಕೈಗಾರಿಕೆ ಬದುಕಬೇಕಾಗಿದೆ. ಈ ಎರಡು ಕೋಟಿ ರೂ. ಬೆಲೆಯ ಕಚ್ಚಾ ಫಿಲಮ್ ಅಮದಿನಲ್ಲಿ ಸರಕಾರವೇ ಸುಮಾರು ೫೦ ಲಕ್ಷದ ಫಿಲಮ್ ಬಳಸಿಕೊಂಡು ಮಿಕ್ಕುದನ್ನು ಜೊಂಬಾಯಿ, ಕಲ್ಕತ್ತ ಮತ್ತು ಮದ್ರಾಸ್‌ಗಳಿಗೆ ಹಂಚುತ್ತಿದೆ ಎಂದು ಶ್ರೀ ನಾಗಿರೆಡ್ಡಿಯವರು ತಿಳಿಸಿ ದಕ್ಷಿಣ ಭಾರತದ ಚಲನಚಿತ್ರ ಉದ್ಯಮದ ಪ್ರಾಮುಖ್ಯತೆ ಹಾಗೂ ಅದಕ್ಕೆ ಇಂದು ಬಂದೊದಗಿದ ಆಘಾತಗಳನ್ನು ವಿವರಿಸಿದರು.

ದಕ್ಷಿಣ ಭಾರತದ ಫಿಲಮ್ ಚೇಂಬರ್ ಆಫ್. ಕಾಮರ್ಸ್‌ನ ಅಧ್ಯಕ್ಷ ಶ್ರೀ ವಿ. ರಾಮಯ್ಯನವರೂ ಮಾತನಾಡಿ ಕಳೆದ ವರ್ಷದಲ್ಲಿ ದಕ್ಷಿಣ ಭಾರತದಲ್ಲಿ ೧೮೦ ಚಿತ್ರಗಳು ತಯಾರಾಗಿವೆಯೆಂದು ತಿಳಿಸಿದೇಶಕ್ಕೆ ಅಮದಾಗುವ ಕಚ್ಚಾ ಫಿಲಮ್ ಪೋತವಾಗಿರುವುದರಿಂದ ಲೂ, ದೇಶದ ಇತರ ಕೇಂದ್ರಗಳ ಅವಶ್ಯಕತೆ ಹಿರಿಪಾಗಿರುವುದರಿಂದಲೂ ದಕ್ಷಿಣ ಭಾರತದ ಚಿತ್ರ ತಯಾರಿಕೆಗೆ ಹೆಚ್ಚಿನ ಆಘಾತವಾಗಿದೆ ಎಂದರು.

ಚಲನಚಿತ್ರ ನಟನಟಿಯರ ಸಂಘದ ಅಧ್ಯಕ್ಷ ಶ್ರೀ ಎಂ. ಜಿ. ರಾಮಚಂದ್ರನ್, ಸಿನೆಟಿಕ್ನಿಷಿಯನ್ ಸಂಘದ ಕಾರ್ಯದರ್ಶಿ ಕೃಷ್ಣಸ್ವಾಮಿ ಮತ್ತು ಚಿತ್ರ ತಯಾರಕರೂ ದಕ್ಷಿಣ ಭಾರತದ ಫಿಲಮ್ ಚೇಂಬರ್ ಆಫ್ ಕಾಮರ್ಸ್‌ನ ಕಾರ್ಯ ಸಮಿತಿಯ ಸದಸ್ಯರೂ ಆದ ಶ್ರೀ ಡಿ. ಕೊಂಬರಾಜ್ ಅವರೂ ಕಚ್ಚಾ ಫಿಲಮ್ ಅಮದಿನ ಪೋತವನ್ನು ಖಂಡಿಸಿ ಮಾತನಾಡಿದರು.

ಚಲನಚಿತ್ರ ಕೈಗಾರಿಕೆಯ ವಿನಂತಿಯನ್ನು ಮನ್ನಿಸಿ, ಕಚ್ಚಾ ಫಿಲಮ್ ಅಮದಿನ ಹೆಚ್ಚಿನ ಪೋತಾದಲ್ಲಿ ಶೇಕಡಾ ೨೦ನ್ನು ಮನ್ನಾ ಮಾಡಿ ಸಹಕರಿಸಿದ ಬಗೆಗೆ ಸರಕಾರಕ್ಕೆ ಕೃತಜ್ಞರಾಗಿದ್ದೇವೆ. ಆದರೆ ಇನ್ನೂ ಮುಂದರಿಸಲಾದ ಶೇಕಡಾ ೪೦ರ ಪೋತವನ್ನು ಪರಾಮಾಡಿ ಎಂದು ವಿನ್ನವಿಸಿಕೊಳ್ಳಲು ನೈಜ ಪರಿಸ್ಥಿತಿಯನ್ನು ತಮ್ಮ ಮುಂದಿಡುತ್ತಿದ್ದೇವೆ. ಎಂದು ದಕ್ಷಿಣ ಭಾರತದ ಫಿಲ್ಮಮ್ ಚೇಂಬರ್ ಆಫ್ ಕಾಮರ್ಸ್‌ನವರು ಕೇಂದ್ರ ಸರಕಾರದ ವಾಣಿಜ್ಯ ಸಚಿವ ಶ್ರೀ ಅಲ್ ಬದರ್ದೂರ್ ಶಾಸ್ತ್ರಿಗಳಿಗೆ ಅರ್ಪಿಸಿದ ವಿನ್ನವತ್ತಳೆಯಲ್ಲಿ ವಿನಂತಿಸಿಕೊಂಡಿದ್ದಾರೆ

ಮೇ ತಾ. ೨೧ರಂದು ಮದ್ರಾಸಿನಲ್ಲಿ ಅರ್ಪಿಸಿದ ಈ ವಿನ್ನವತ್ತಳೆಯಲ್ಲಿ, ಕಚ್ಚಾ ಫಿಲಮ್ ಅಮದಿನಲ್ಲಾದ ಪೋತಾದಿಂದಾಗಿ ಚಿತ್ರತಯಾರಕರು ಭೀತರಾಗಿದ್ದಾರೆ, ನಿರಾಶರಾಗಿದ್ದಾರೆ ಎಂದು ತಿಳಿಸಿ ೧೯೩೬ರ ನಂತರದ ಎರಡು ವರ್ಷಗಳಲ್ಲಿ ಈ ಕೈಗಾರಿಕೆ ಇಮ್ಮಡಿಯಾಗಿ ಬೆಳೆದಿದೆ. ಸ್ಟುಡಿಯೋ, ಥಿಯೇಟರ್ ಹಾಗೂ ಚಿತ್ರಗಳ ಸಂಖ್ಯೆ ದ್ವಿಗುಣವಾಗಿ ಇದ್ದ ವಿನಿಯೋಗವಾದ ಬಂಡವಾಳವೂ ಇಮ್ಮಡಿಯಾಗಿದ್ದು, ಸರಕಾರಕ್ಕೆ ಜೊರೆನ ಲಾಭವೂ ಇದೇ ರೀತಿ ಹೆಚ್ಚಿದೆ ಎಂದು ತಿಳಿಸಲಾಗಿದೆ.

ಇಂಥ ಬೆಳವಣಿಗೆಯ ಪರಿಣಾಮವಾಗಿ ಸಾಮಾನ್ಯವಾಗಿ ತರಿಸಲಾಗುತ್ತಿದ್ದ ಕಚ್ಚಾ ಫಿಲಮ್ ಕೂಡಾ ಸಾಕಾಗುತ್ತಿರಲಿಲ್ಲ. ಹೀಗಿರುವಾಗ ಅಮದಿನಲ್ಲಿ ಶೇ. ೪೦ರಷ್ಟು ಪೋತ ಮಾಡಲಾಗಿದೆ. ಕೈಗಾರಿಕೆಯ ಬೆಳವಣಿಗೆಯೊಡನೆ ಈ ಪೋತಾವನ್ನು ತುಲನೆಮಾಡಿದರೆ ವಾಸ್ತವವಾಗಿ ಅದು ಶೇ. ೧೪೦ರಷ್ಟು ಪೋತಾ ಎನಿಸುವಂತಾಗಿದೆ. ಎಂದು ತಿಳಿಸುತ್ತ ಭಾರತದಲ್ಲಿ ದ್ವಿತೀಯ ಸ್ಥಾನಗಳಿಸಿದ ಕೈಗಾರಿಕೆಗಳಿಗೆ ಕಚ್ಚಾ ಫಿಲಮ್ ಭಾರತದಲ್ಲಿ ತಯಾರಾಗುತ್ತಿಲ್ಲ. ಆದರೆ ದೇಶದ ಒಟ್ಟು ಅಮದಿನಲ್ಲಿ ಈ ಫಿಲಮ್‌ನ ಅಮದು ಕೇವಲ ಶೇ. ಕಾಲುಭಾಗದಷ್ಟು ಮಾತ್ರವೇ ಆಗಿದೆ. ಈಗ ಪೋತಾ ತೆಗೆಯದಿದ್ದರೆ ಸುಮಾರು ೫೦ ವರ್ಷಗಳಿಂದ ಬೆಳೆದು ಬಂದ ಈ ಕೈಗಾರಿಕೆ ವಿನಾಶದ ಹಾದಿ ತುಳಿದೀತು ಎಂದು ಎಚ್ಚರಿಸಿ; ಕೈಗಾರಿಕೆಯು ಕಚ್ಚಾ ಫಿಲಮ್‌ನ ಬಳಕೆ ಮಿತವಾಗುವಂತೆ ಎಲ್ಲ ಯತ್ನಗಳನ್ನೂ ಮಾಡುತ್ತಿರುವುದಾಗಿಯೂ ಆದರೂ ಸರಕಾರ ಕೈಗಾರಿಕೆಯ ನೆರವಿಗೆ ಬಾರದಿದ್ದಲ್ಲಿ ಪರಿಸ್ಥಿತಿ ಹದಗೆಡಬಹುದೆಂದೂ ತಿಳಿಸಿ ಸರಕಾರದ ಸಹಾಸಂಪೂತಿಯನ್ನು ಯಾಚಿಸಲಾಗಿದೆ.

ಮಂಗಳೂರು

ಭಾಷಣ — ಶ್ರೀ ಜೋಕಿಮ್ ಆಳ್ವ, ಎಂ. ಸಿ. ಅವರು ತಾ. ೨ರಂದು ಸ್ಥಳೀಯ ಕೀರ್ತಿಮಹಲಿನಲ್ಲಿ ಸೇರಿದ ಸಭೆಯಲ್ಲಿ ಭಾಷಣ ಬೀಯುತ್ತಾ, ಸರಕಾರವೇ ಮೂಲಕರಾಗಿರುವ ಸಾರ್ವಜನಿಕ ವಿಭಾಗದಲ್ಲಿನ ಮಜೂರ ನೀತಿಯ ಇತರ ಕೈಗಾರಿಕಾ ವಿಭಾಗದವರಿಗೆಂದು ಮಾದರಿಯಾಗಿರಬೇಕು. ಈ ಸಾರ್ವಜನಿಕ ವಿಭಾಗದಲ್ಲಿನ ಮಜೂರರಿಗೆ ಹೆಚ್ಚಿನ ಸವಲತ್ತುಗಳನ್ನು ಸರಕಾರವು ನೀಡಿ ಇತರರಿಗೊಂದು ಮಾರ್ಗದರ್ಶನವನ್ನಿತ್ತಬೇಕು ಎಂಬುದಾಗಿ ಹೇಳಿದರು. ಯಾವುದೇ ಬೇರೆದಲ್ಲಿ ಕೈಗಾರಿಕೆಗಳು ಪ್ರಗತಿಹೊಂದಬೇಕಾದಲ್ಲಿ ಅಲ್ಲಿ ಭದ್ರತೆ ಮತ್ತು ಶಾಂತಿ ಇರಬೇಕಾದುದು ಅವಶ್ಯವೆಂದೂ ಹೇಳಿದರು.

ಅಂದು ಸಂಜೆ ಕೆಥೋಲಿಕ್ ಕ್ಲಬ್ಬಿನಲ್ಲಿ ಕೇಂದ್ರ ಉಪಸಚಿವೆ ಶ್ರೀಮತಿ ವಿಯಾರೆಟ್ ಆಳ್ವರು ಭಾಷಣವಾಡಿ ಹಿಂದಿ ಭಾಷೆಯನ್ನು ಕಲಿಯುವ ಅವಶ್ಯಕತೆಯಿದೆ ಎಂದರು. ಶ್ರೀ ಜೋಕಿಮ್ ಆಳ್ವರು ಸಂಸ್ಕೃತ ಭಾಷೆಯನ್ನು ಕಲಿಯಬೇಕೆಂದರು.

ಉಸಸಚಿವೆಯವರು ರೋಟರಿ ಕ್ಲಬ್ಬಿನಲ್ಲಿಯೂ ಭಾಷಣವಿತ್ತು ಮಹಿಳೆಯರಿಗೂ ರೋಟರಿ ಸದಸ್ಯೆಯರಾಗುವ ಅನುಕೂಲತೆಗಳು ಬೇಕೆಂದರು. ಶ್ರೀ ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು

ದ.ಕ ಜಿಲ್ಲಾ ರಾಜಕೀಯ ಸಂಸ್ಥರ ಸಭೆಯು ತಾ. ೧ರಂದು ಶ್ರೀ ಜಿ. ವೆಂಕಟ್ರಾಯ ಪ್ರಭುಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜರಗಿತು. ಶ್ರೀ. ಸಿ. ಎಸ್. ಶಲಬೇರಿಕೆರವು ಪೂರ್ವಸೂರಿಕಾ ಭಾಷಣ ಮಾಡಿದರು. ಶ್ರೀಗಳಾದ ಬಿ. ವಿಠಲದಾಸ ಶೆಟ್ಟಿ, ಎ. ಆನಂದ ರೈ, ಎಚ್. ಕೆ. ತಿಂಗಳಾಯ ಮೊದಲಾದವರು ರಾಜಕೀಯ ಸಂಸ್ಥರ ಕುರಿತು ಮಾತನಾಡಿದರು. ಈ ಮೊದಲು ಮದ್ರಾಸು ಸರಕಾರವು ರಾಜಕೀಯ ಸಂಸ್ಥರ್ಸ್ತರಿಗೆ ದಾನವಾಗಿ ಕೊಟ್ಟ ಭೂಮಿಯನ್ನು ಅವರಿಗೇನೇ ಕಾಯುವಾಗಿ ಕೊಡುವಂತೆ ಮೈಸೂರು ಸರಕಾರವನ್ನು ವಿನಂತಿಸಬೇಕೆನ್ನುವ ನಿರ್ಣಯವಾಯಿತು.

ದ. ಕ. ಜಿಲ್ಲಾ ರಜಕ ಕುಲೋದ್ಧಾರಕ ಸಂಘದ ಮಹಾ ಸಭೆಯು— ತಾ. ೧೦ರಂದು ಥಿಯೋಸೋಫಿಕಲ್ ಲಾಜಿನಲ್ಲಿ ಶ್ರೀ ಡಿ. ಪುಟ್ಟುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಎ. ಬಿ. ನಾರಾಯಣನವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಕೆ. ವಾಮನ ಅವರು ವರದಿಮನ್ನೋದಿದರು. ಶ್ರೀಗಳಾದ ಬಿ. ಚಂದ್ರಶೇಖರ ಪೈಯ್ಯ, ಬಿ. ದಾಸಪ್ಪ, ಕೆ. ಸಿ ಸಾಲಿಯಾನ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಹೊಸ ವರ್ಷಕ್ಕೆ ಅಧಿಕಾರಿಗಳ ಚುನಾವಣೆ ನಡೆದು ಸಭಾಂತ್ಯವಾಯಿತು.

ಹತೆಯೋಗ ಪ್ರದರ್ಶನ—ತುಮಕೂರಿನ 19 ವರ್ಷದ ತರುಣ ಹತೆಯೋಗಿ ಪ್ರೊ. ಎಲ. ಜೆ. ಕೃಷ್ಣಮೂರ್ತಿಯವರ ಹತೆಯೋಗ ಪ್ರದರ್ಶನವೊಂದು ತಾ ೮ರಂದು ಸ್ಥಳೀಯ ಗಣಪತಿ ಹೈಸ್ಕೂಲಿನ ಶಾದಾ ಭವನದಲ್ಲಿ ಶ್ರೀ ಬಿ. ಸೈಕಂಕ ಬಾಳಿಗ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅದರ ಭಾಗದಲ್ಲಿ ಶ್ರೀ ವಿ. ರಘುರಾಮ ಸೆಟ್ಟಿಯ ಸ್ವಾಗತ ಮಾತುಗಳನ್ನಾಡಿದರು. ಕೊನೆಯಲ್ಲಿ ಶ್ರೀ ಪ್ರಭಾಕರ ಭಾಟೆಯವರು ಧನ್ಯವಾದವಿತ್ತರು.

ವಾರ್ಷಿಕೋತ್ಸವ— ಮಂಗಳೂರು ಪೋರ್ಟ್ ಎಂಡ್ ಡೋಕ್‌ವರ್ಕರ್ಸ್ ಯೂನಿಯನ್ನಿನ ವಾರ್ಷಿಕೋತ್ಸವವು ತಾ 7ರಂದು ಶ್ರೀ ವಿ. ಶ್ರೀನಿವಾಸ ಸೆಟ್ಟಿ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಉಪಾಧ್ಯಕ್ಷ ಶ್ರೀ ಎಚ್. ಮಹಾಬಲ ರೈಗಳು ಸ್ವಾಗತಿಸಿದರು. ಶ್ರೀ ಡಿ. ಮೋಹನರಾಯರು ಯೂನಿಯನ್ನಿನ ಚಟುವಟಿಕೆಗಳನ್ನು ವಿವರಿಸಿದರು. ಮಂಗಳೂರು ಪೋರ್ಟ್ ಟ್ರಸ್ಟಿನ ಅಧ್ಯಕ್ಷರಾದ ಜಿಲ್ಲಾಧಿಕಾರಿ ಶ್ರೀ ಪೈ. ಸಿ. ಹೊಂಬಾಳಯ್ಯನವರು ಉಪದೇಶಪರ ಭಾಷಣಗಾಯ್ದರು. ಶ್ರೀ ಸಿ. ಮಹೇಶ್ವರಪ್ಪರವರು ಧನ್ಯವಾದವಿತ್ತರು

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ತುಂಗಭದ್ರಾ ಬಹುಮುಖ ಯೋಜನೆ

(೪ನೇ ಪುಟದಿಂದ)

ಯ ಎಡಭಾಗದಲ್ಲಿರುವ ಮುನಿರಾಬಾದ್ ಒಂದೊಂದೂ ೯,೦೦೦ ಕಿ. ವಾ.ಗಳನ್ನು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ಮೂರ ವಿದ್ಯುಜ್ಜನಕ ಯಂತ್ರಗಳನ್ನೊಳಗೊಂಡ ವಿದ್ಯುದ್ದಾಗಾರವನ್ನು ಸ್ಥಾಪಿಸುವುದು.

ಅಣೆಕಟ್ಟೆಯ ಬಲಭಾಗದಲ್ಲಿ ಈಗ ಒಂದೊಂದೂ ೯,೦೦೦ ಕಿ. ವಾ.ಗಳನ್ನು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ಎರಡು ಉತ್ಪಾದಕ ಯಂತ್ರಗಳು ಸ್ಥಾಪಿಸಲ್ಪಟ್ಟಿವೆ. ನಾಲ್ಕು ಉತ್ಪಾದಕ ಯಂತ್ರಗಳ ಸ್ಥಾಪನೆಗೆ ಅವಕಾಶವಿರುವಂತೆ ವಿದ್ಯುದ್ದಾಗಾರವು ನಿರ್ಮಿಸಲ್ಪಟ್ಟಿದೆ.

ಮುನಿರಾಬಾದ್ ವಿಭಾಗದಲ್ಲಿ ಅಣೆಕಟ್ಟೆಯನ್ನೂ ಎಡದಂಡೆಯ ನೀರಾವರಿ ನಾಲೆಯ ಉದ್ದಕ್ಕೂ ನಾಲ್ಕು ಜಲಸಾಗಗಳಲ್ಲಿಯೂ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾಗಿದೆ. ಮೊದಲನೆಯ ಘಟ್ಟದಲ್ಲಿ ಒಂದೊಂದೂ ೯,೦೦೦ ಕಿ. ವಾ.ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ಎರಡು ಉತ್ಪಾದಕ ಯಂತ್ರಗಳನ್ನೊಳಗೊಂಡ ವಿದ್ಯುದ್ದಾಗಾರದ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಯಿತು. ಎರಡನೆಯ ಘಟ್ಟದಲ್ಲಿ ಇಂಥಕುದೇ ಇನ್ನೊಂದು ವಿದ್ಯುಜ್ಜನಕ ಯಂತ್ರವನ್ನು ಮಾತ್ರ ಸೇರಿಸಿಕೊಳ್ಳಲಾಗಿದೆ. ಈ ವಿದ್ಯುದ್ದಾಗಾರವು ಈಗ ಮೈಸೂರು ರಾಜ್ಯದ ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿರುವ ರಾಯಚೂರು ಕಲಬುರಗಿ ನಾರಾಯಣ ಪೇಟೆ, ಶಾಹಾಬಾದ್, ಸಿಂಧನೂರು, ಹಟ್ಟಿ, ಗಂಗಾವತಿ, ತಾಂಡೂರು ಮತ್ತು ಯಾದಗೀರ ಸ್ಥಳಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವುದು. ಈ ವಿದ್ಯುದ್ದಾಗಾರವು ೧೯೬೦ ರ ವೇಳೆಗೆ ಕಾರ್ಯಾಚರಣೆಗೆ ತೊಡಗುವ ನಿರೀಕ್ಷೆಯಿದೆ.

ವಿದ್ಯುದ್ದಾಗಾರದಿಂದ ಹಾಗೂ ಕಳವಟ್ಟದ ನೀರಾವರಿ ತೂಬುಗಳಿಂದ ಬಿಡಲ್ಪಟ್ಟ ನೀರು ೧೪ ಮೈಲಿಗಳ ಉದ್ದವಿರುವ ವಿದ್ಯುತ್ ನಾಲೆಯ ಮೂಲಕ ಹರಿಸಲ್ಪಟ್ಟು ಹಂಪೆ ವಿದ್ಯುದ್ದಾಗಾರಕ್ಕೆ ಸೇರಿದಂತಿರುವ ಜಲಾಶಯದಲ್ಲಿ ಸಂಗ್ರಹವಾಗುವುದು. ಈ ಜಲಾಶಯವು ೪೫ ಅಡಿಗಳ ಎತ್ತರದ ಮಣ್ಣಿನ ಏರಿಯನ್ನು ಪಡೆದಿರುವುದು.

ತುಂಗಭದ್ರಾ ಯೋಜನೆಯ ವರ್ಕ್‌ಶಾಪ್‌ಗಳು ಮತ್ತು ಯಂತ್ರೋಪಕರಣಗಳ ವಿಭಾಗದಲ್ಲಿ ಇಲಾಖೆಯವರೇ ವಿದ್ಯುದ್ದಾಗಾರಕ್ಕೆ ಅಗತ್ಯವಾಗುವ ಸಲಕರಣೆಗಳನ್ನು ಸಿದ್ಧಗೊಳಿಸುವರು.

ಬ್ರಿಟಿಷ ವಿಮಾನ ಪಡೆಯ ನಲುವತ್ತನೆಯ ವಾರ್ಷಿಕೋತ್ಸವದಂದು, ರಾಣಿ ಎಲಿಜಬೆತರು ಫೈಟರ್ ಕಮಾಂಡಿನ ಪ್ರಧಾನ ಕಾರ್ಯಾಲಯದಲ್ಲಿ ಉಪಾಹಾರ ಕೂಟದೊಂದರಲ್ಲಿ ಭಾಗವಹಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ತುಂಗಭದ್ರಾ ಅಣೆಕಟ್ಟು ಮತ್ತು ಹಂಪೆ ವಿದ್ಯುದ್ದಾಗಾರಗಳಲ್ಲಿ ಉತ್ಪಾದಿಸಲ್ಪಟ್ಟ ವಿದ್ಯುಚ್ಛಕ್ತಿಯಲ್ಲಿ ಹೆಚ್ಚಿನ ಪ್ರಮಾಣವು ೬೬ ಕಿ. ವೋ. ಲೈನುಗಳ ಮೂಲಕ ಬಳ್ಳಾರಿ ಉಪಕೇಂದ್ರಕ್ಕೆ ರವಾನಿಸಲ್ಪಡುವುದು. ಈ ವಿದ್ಯುತ್ ಮಾರ್ಗಗಳು ಅಣೆಕಟ್ಟೆಯಲ್ಲಿರುವ ವಿದ್ಯುದ್ದಾಗಾರ, ಹಂಪೆ ವಿದ್ಯುದ್ದಾಗಾರ ಮತ್ತು ಬಳ್ಳಾರಿ ಉಪಕೇಂದ್ರಗಳಿಗೆ ಸಂಬಂಧ ಕಲ್ಪಿಸುತ್ತವೆ. ಅಲ್ಲದೆ ಅಣೆಕಟ್ಟೆ ಮತ್ತು ಹಂಪೆ ವಿದ್ಯುದ್ದಾಗಾರಗಳಲ್ಲಿ ಉತ್ಪಾದಿಸಲ್ಪಡುವ ವಿದ್ಯುಚ್ಛಕ್ತಿಯನ್ನು ೬೬ ಕಿ. ವೋ. ಸಿಂಗಲ್ ಸರ್ಕ್ಯೂಟ್ ಲೈನಿನ ಮೂಲಕ ಅಣೆಕಟ್ಟೆಯಿಂದ ಬಳ್ಳಾರಿಗೆ ಪೂರೈಸಲಾಗುವುದು. ೬೬ ಕಿ. ವೋ. ಗಳ ಸಾಮರ್ಥ್ಯ ಪಡೆದಿರುವ ಬಳ್ಳಾರಿ ಉಪಕೇಂದ್ರವು ೩೩ ಕಿ. ವೋ. ಮತ್ತು ೧೧ ಕಿ. ವೋ. ಗಳ ಸಾಮರ್ಥ್ಯ ಪಡೆದಿರುವ ಎಲ್ಲ ಲೈನುಗಳಿಗೂ ವಿದ್ಯುಚ್ಛಕ್ತಿಯನ್ನು ಪೂರೈಸುವುದು.

ತುಂಗಭದ್ರಾ ಬೋರ್ಡಿನ ಹತೋಟಿಯಲ್ಲಿರುವ ನಿರ್ಮಾಣಕಾರ್ಯಗಳಿಗಾಗಿ ಮೂಲತಃ ೫೦೫೦ ಲಕ್ಷ ರೂಗಳ ಹಣದ ವೆಚ್ಚವನ್ನು ಮಂಜೂರುಮಾಡಲಾಗುತ್ತದೆ. ವಸ್ತುಗಳ ಬೆಲೆ ಮತ್ತು ಮಜೂರಿಯು ಹೆಚ್ಚಿದ್ದರಿಂದ, ಹಾಗೂ ವಿನ್ಯಾಸ ಬದಲಾವಣೆಗೊಂಡಿದ್ದರಿಂದ, ಈ ನಿರ್ಮಾಣ ಕಾರ್ಯಗಳಿಗಾಗಿ ೭೨೧೧ ಲಕ್ಷ ರೂಗಳ ಹಣ ವೆಚ್ಚವಾಗುವುದೆಂದು ಅಂದಾಜುಮಾಡಲಾಗಿದೆ. ಈ ವೆಚ್ಚಕ್ಕೆ ಸಂಬಂಧಿಸಿದ ಮಂಜೂರಾತಿಗಾಗಿ ಕಾಯುತ್ತಿರುವುದಾಗುತ್ತಿದೆ.

ಅಣೆಕಟ್ಟೆಯ ಬಲಭಾಗದಲ್ಲಿರುವ ವಿದ್ಯುದ್ದಾಗಾರದಲ್ಲಿ ಒಂದೊಂದೂ ೯೦೦೦ ಕಿ. ವಾ. ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ಎರಡು ಉತ್ಪಾದಕ ಯಂತ್ರಗಳನ್ನು, ಒಂದನ್ನು ೫೬೨ ಜನವರಿ ತಿಂಗಳಲ್ಲಿಯೂ ಇನ್ನೊಂದನ್ನು ಅದೇ ವರ್ಷದ ಮೇ ತಿಂಗಳಲ್ಲಿಯೂ ಕಾರ್ಯಾಚರಣೆಗೆ ತರಲಾಯಿತು. ವಿದ್ಯುಚ್ಛಕ್ತಿಯನ್ನು ಆಂಧ್ರ ಮತ್ತು ಮೈಸೂರು ರಾಜ್ಯಗಳೆರಡಕ್ಕೂ ಪೂರೈಸಲಾಗುತ್ತಿದೆ.

ಹಂಪೆಯ ವಿದ್ಯುದ್ದಾಗಾರಕ್ಕಾಗಿ ವಿದ್ಯುತ್ ನಾಲೆ, ಜಲಾಶಯ ಹಾಗೂ ಕಡಿಮೆ ಒತ್ತಡದ ಪೈಪ್‌ಲೈನ್, ಪೆನ್‌ಸ್ಟಾಕ್‌ಗಳು ಇತ್ಯಾದಿಗಳ ಸ್ಥಾಪನಾಕಾರ್ಯ ಮುಕ್ತಾಯಗೊಂಡಿದೆ. ೧೯೫೮ ಜನವರಿ ೨೭ರಂದು ೯,೦೦೦ ಕಿ. ವಾ. ಗಳ ಸಾಮರ್ಥ್ಯದ ಮೊದಲನೆಯ ಉತ್ಪಾದಕ ಯಂತ್ರವು ಕಾರ್ಯಾಚರಣೆಗೆ ತೊಡಗಿತು. ಎರಡನೆಯ ಉತ್ಪಾದಕ ಕೇಂದ್ರವು ಇತ್ತೀಚೆಗೆ ಕಾರ್ಯಾಚರಣೆಗೆ ತೊಡಗಿತು. ಅಣೆಕಟ್ಟೆಯ ವಿದ್ಯುದ್ದಾಗಾರದಿಂದ ಬಳ್ಳಾರಿಗೂ ಅಲ್ಲಿಂದ ಬಳ್ಳಾರಿ ಉಪಕೇಂದ್ರಕ್ಕೂ ವಿದ್ಯುತ್ ರವಾನೆಯ ಲೈನುಗಳನ್ನು ಹಾಕಲಾಗಿದೆ.

ಮೈಸೂರು ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿ ವಿದ್ಯುಚ್ಛಕ್ತಿಯ ಉತ್ಕಟ ಅಭಾವವಿರುವುದರಿಂದಾಗಿ ಉಳಿದ ನಾಲ್ಕು ಉತ್ಪಾದಕ ಯಂತ್ರಗಳ ನಿರ್ಮಾಣ ಕಾರ್ಯವನ್ನು ತಕ್ಷಣವೇ ತೆಗೆದುಕೊಂಡು ದ್ವಿತೀಯ ಯೋಜನಾವಧಿಯ ಆರಂಭದೊಳಗಾಗಿ ಮುಕ್ತಾಯಗೊಳಿಸಬೇಕೆಂಬುದಾಗಿ ಉದ್ದೇಶಿಸಿದೆ.

(ಭಗೀರಥದ ಕೃಪೆಯಿಂದ)

ನೋವುಗಳ ಅತ್ಯುತ್ತಮ ಸಹಾಯಿಣಿ.

ಅಮೃತಾಂಜನ

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಸುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಮತ್ತು Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೫೫

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಪ್ರೆಸಿಡೆಂಟ್

ಪೌಂಟನ್ ಪೆನ್ನುಗಳು

ದುಂಡಗೆ ಚುಕ್ಕೆಯುಳ್ಳ ಪೆನ್ಸಿಲುಗಳು

ಶಾಯಿಗಳು



ಕಿತ್ತಾನಾರಿನ ಉದ್ಯಮ—

ಅದರ ವ್ಯಾಪಾರ ಮತ್ತು ವರ್ಗೀಕರಣ

ಭಾರತದಲ್ಲಿ ಪ್ರತಿ ವರ್ಷವೂ ಸುಮಾರು ೧,೨೦,೦೦೦ ಟನ್ನುಗಳಷ್ಟು ಕಿತ್ತಾನಾರಿನ ಬೆಳೆಯಾಗುತ್ತಿದೆ. ನಾವು ಈ ಕಿತ್ತಾನಾರಿನಿಂದ ಹಗ್ಗಗಳು, ದಾರ, ಹುರಿ, ಮೀನು ಹಿಡಿಯುವ ಬಲೆಗಳು, ಕಾಲೊರಸುವ ಜಾಪೆಗಳು, ಚೀಲಗಳು ಮತ್ತು ಸಿಗರೇಟ್ ಕಾಗದ—ಇವುಗಳನ್ನು ತಯಾರಿಸುತ್ತಿದ್ದೇವೆ. ಭಾರತಕ್ಕಿಂದ ಈ ಅಮೂಲ್ಯ ಪದಾರ್ಥವನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳಾವುವೆಂದರೆ:— ಬ್ರಿಟನ್, ಅಮೇರಿಕಾ, ಫ್ರಾನ್ಸ್ ಮತ್ತು ಇಟಲಿ

ಮೂರು ತರಹದ ಕಿತ್ತಾನಾರು ಇರುವುದು:—ಬಿಳಿಯದು, ಗಂಜಾಂ ಅಥವಾ ಹಸಿರು ಮತ್ತ ದೇವಗಡಿ. ಒಟ್ಟು ಉತ್ಪಾದನೆಯಲ್ಲಿ ನೂರಕ್ಕೆ ೫೦ರಷ್ಟು ಪ್ರಮಾಣದ ಬಿಳಿಯ ತರಹದ ಕಿತ್ತಾನಾರನ್ನು ಉತ್ಪಾದಿಸಲಾಗುತ್ತಿದೆ. ಬಿಳಿಯ ತರಹದ ಕಿತ್ತಾನಾರನ್ನು ವ್ಯಾಪಾರ ಕ್ಷೇತ್ರದಲ್ಲಿ ನಾಲ್ಕು ವಿಭಾಗಗಳನ್ನಾಗಿ—ಅಂದರೆ ಬನಾರಸ, ಛತ್ರಿ, ಬಂಗಾಳ ಮತ್ತು ಗೋಪಾಲಪುರ—ಮಾಡಲಾಗಿದೆ. ಮುಖ್ಯತಃ ಬಿಳಿಯ ತರಹದ ಕಿತ್ತಾನಾರನು ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶದ ಪೂರ್ವ ಹಾಗೂ ಮಧ್ಯ ಜಿಲ್ಲೆಗಳು ಒರಿಸ್ಸಾದ ಕೆಲವು ಭಾಗಗಳಲ್ಲಿ ಬೆಳೆಯಲಾಗುತ್ತಿದೆ. ಇದರಲ್ಲಿ ಬನಾರಸ ತರಹದ ಕಿತ್ತಾನಾರಿನ ಬೆಳೆಯೇ ನೂರಕ್ಕೆ ಸುಮಾರು ೫೦ರಷ್ಟಿರುವುದು.

ಗಂಜಾಂ ಅಥವಾ ಹಸಿರು ತರಹದ ಕಿತ್ತಾನಾರನ್ನು ಮುಖ್ಯತಃ ಮಧ್ಯ ಪ್ರದೇಶ ಮತ್ತು ಪಂಜಾಬ್, ಉತ್ತರ ಪ್ರದೇಶದ ಸೀತಾಪುರ್ ಮತ್ತು ಮುರಾದಾಬಾದ್ ಜಿಲ್ಲೆಗಳು, ಒರಿಸ್ಸಾ ಮತ್ತು ಮೈಸೂರು ರಾಜ್ಯಗಳ ಕೆಲವು ಭಾಗಗಳಲ್ಲಿ ಬೆಳೆಯಲಾಗುತ್ತಿದೆ. ಈ ತರಹದ ಕಿತ್ತಾನಾರು ದೇಶದ ಒಟ್ಟು ಉತ್ಪಾದನೆಯಲ್ಲಿ ನೂರಕ್ಕೆ ಸುಮಾರು ೪೩ರಷ್ಟಿರುವುದು.

ದೇವಗಡಿ ವಿಧದ ಕಿತ್ತಾನಾರನ್ನು ಸುಂಬೈ ರಾಜ್ಯದ ರತ್ನಾಗಿರಿ ಜಿಲ್ಲೆಯಲ್ಲಿ ಮಾತ್ರ ಬೆಳೆಯಲಾಗುತ್ತಿದೆ. ಒಟ್ಟು ಉತ್ಪಾದನೆಯಲ್ಲಿ ಈ ವಿಧದ ಕಿತ್ತಾನಾರಿನ ಉತ್ಪಾದನೆಯು ನೂರಕ್ಕೆ ಒಂದಕ್ಕಿಂತಲೂ ಕಡಿಮೆ ಇರುವುದು

ಕಿತ್ತಾನಾರಿನ ವರ್ಗೀಕರಣ

ವಿವಿಧ ಮಾರುಕಟ್ಟೆಗಳಿಂದ ಸ್ವೀಕರಿಸಲಾದ ಕಿತ್ತಾನಾರನ್ನು ಸ್ವಚ್ಛಗೊಳಿಸಿ, ವರ್ಗೀಕರಿಸಲಾಗುವುದು. ಅನಂತರ ಬೇಲುಗಳಲ್ಲಿ ಪ್ಯಾಕ್ ಮಾಡಲಾಗುವುದು ಕಿತ್ತಾನಾರನ್ನು ಸ್ವಚ್ಛಗೊಳಿಸಿ, ವರ್ಗೀಕರಿಸಿ ಹಾಗೂ ಬೇಲುಗಳಲ್ಲಿ ಪ್ಯಾಕ್ ಮಾಡುವ ಮುಖ್ಯವಾದ ಕೇಂದ್ರಗಳಾವುವೆಂದರೆ: ಉತ್ತರ ಪ್ರದೇಶದಲ್ಲಿ ವಾರಣಾಸಿಗೆ ಸಮೀಪವಿದ್ದಿರುವ ಶಿವಪುರ, ಆಂಧ್ರ ಪ್ರದೇಶದಲ್ಲಿ ವಿಜಯನಗರಂ ಮತ್ತು ಭೀಮುನಿಪಟ್ನ ಮತ್ತು ಕಲ್ಕತ್ತ ಹಾಗೂ ಮುಂಬೈ. ಶಿವಪುರವೇ ಮುಖ್ಯ ಕೇಂದ್ರವಾಗಿದೆ ಇಲ್ಲಿ ಬನಾರಸ ಹಾಗೂ ಛತ್ರಿ ವಿಧದ ಕಿತ್ತಾನಾರನ್ನು ಮಾರುಕಟ್ಟೆಗಳಿಗಾಗಿ ಸಿದ್ಧಗೊಳಿಸಲಾಗುತ್ತಿದೆ.

ರಫ್ತು

ಬ್ರಿಟನ್‌ಗೆ ಭಾರತದ ಕಿತ್ತಾನಾರನ್ನು ಅಧಿಕ ಪ್ರಮಾಣದಲ್ಲಿ ರಫ್ತುಮಾಡಲಾಗುತ್ತಿದೆ. ಅಮೇರಿಕಾ, ಫ್ರಾನ್ಸ್ ಹಾಗೂ ಇಟಲಿ ರಾಷ್ಟ್ರಗಳೂ ಸಹ ಹೆಚ್ಚು ಪ್ರಮಾಣದಲ್ಲಿ ಕಿತ್ತಾನಾರನ್ನು ಆಮದು ಮಾಡಿಕೊಳ್ಳುತ್ತಿವೆ. ೧೯೫೬—೫೭ರಲ್ಲಿ ಈ ರಾಷ್ಟ್ರಗಳು ಭಾರತದಿಂದ ೧೯ ಲಕ್ಷ ರೂಗಳ ಬೆಲೆಬಾಳುವ ೩೬೦೪ ಟನ್‌ಗಳಷ್ಟು ಕಿತ್ತಾನಾರನ್ನು ಆಮದು ಮಾಡಿಕೊಂಡಿವೆ.

ಹೊರದೇಶಗಳಿಗೆ ರಫ್ತಾಗುವ ಕಿತ್ತಾನಾರಿನ ಗುಣಾಂಶವು ಅತ್ಯುತ್ತಮವಾಗಿರುವಂತೆ ಮಾಡುವ ದೃಷ್ಟಿಯಿಂದ ಭಾರತ ಸರಕಾರದವರು ೧೯೫೮ರ ಸಮುದ್ರ ಸೀಮಾ ಶುಲ್ಕ ಕಾನೂನಿನ ಪ್ರಕಾರ ಕಿತ್ತಾನಾರಿನ ವರ್ಗೀಕರಣ ಹಾಗೂ ಅಂಕನವನ್ನು ಕಡ್ಡಾಯಗೊಳಿಸಿದ್ದಾರೆ. ೧೯೩೭ರ ವ್ಯವಸಾಯ ವಸ್ತುಗಳ (ವರ್ಗೀಕರಣ ಮತ್ತು ಅಂಕನ) ಕಾನೂನಿನ 'ಎಸ್‌ಮಾರ್ಕ್' ನಿಯಮಗಳ ಅನುಸಾರ ವರ್ಗೀಕರಿಸಲ್ಪಡದೆ ಕಿತ್ತಾನಾರನ್ನು ಯಾವ ರಫ್ತುಗಾರನೇ ಆಗಲಿ ರಫ್ತು ಮಾಡುವಂತಿಲ್ಲ

ಭಾರತ ಸರಕಾರದ ಕೃಷಿ ವಸ್ತುಗಳ ಮಾರಾಟ ವ್ಯವಸ್ಥಾ ಸಲಹಾಗಾರರು "ಭಾರತದಲ್ಲಿ ಕಿತ್ತಾನಾರಿನ ವರ್ಗೀಕರಣ"ವೆಂಬ ಕೈಪಿಡಿಯೊಂದನ್ನು ಹೊರಡಿಸಿರುವರು ಈ ಕೈಪಿಡಿಯಲ್ಲಿ ಕಿತ್ತಾನಾರಿನ ವರ್ಗೀಕರಣ, ಪ್ಯಾಕಿಂಗ್ ಮತ್ತು ಅಂಕನ ಸಂಬಂಧವಾದ ವಿವರಗಳಿರುವುವು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಮೊಗವೀರ— (ಸಾಂವತ್ಸರಿಕ) ಸಂಪಾದಕರು. ರಾಮಚಂದ್ರ ಉಚ್ಚಿಲ ಮತ್ತು ಎಸ್. ಜಿ ಪುತ್ರನ್. ಪ್ರಕಾಶಕರು: ದಿ ಮೊಗವೀರ ಯುವಕ ಸಂಘ, ಬೊಂಬಾಯಿ, ೧. ಪುಟಗಳು: ೮೬. ಬೆಲೆ ರೂ. ೦.೫೦

'ಮೊಗವೀರ' ಪತ್ರಿಕೆಯು ೧೯೫೭-೫೮ರ ಈ ಸಾಂವತ್ಸರಿಕ ಸಂಚಿಕೆಯನ್ನು ಸ್ವಾಗತಿಸುತ್ತೇವೆ. ಇದರಲ್ಲಿ ಶ್ರೀಗಳಾದ ಮೋಹನದಾಸ ತಿಂಗಳಾಯ, ಸದಾನಂದ ಅಮೀನ, ಕೆ. ವಾಸುದೇವರಾವ್, ವಿ. ಸತ್ಯಾರ್ಥಿ, ವ್ಯಾಸರಾಯ ಬಲ್ಲಾಳ, ಸಿರಂಜನ, ಎಸ್. ಆರ್ ಎಕ್ಕುಂಡಿ ಹಾಗೂ ಶ್ರೀಮತಿಯರಾದ ಅನುಪಮಾ, ಸಾರಾ ಅಮೀನ್, ಭಾರತೀಸುತಿ ಮೊದಲಾದವರ ಲೇಖನ, ಕಥೆ, ವಿಮರ್ಶೆ ಹಾಗೂ ಕವನಗಳು ಬೆಳಕುಕಂಡಿವೆ. ಮೊಗವೀರ ಯುವಕ ಸಂಘದ ವಾರ್ಷಿಕೋತ್ಸವಕ್ಕೆ ಸಂಬಂಧಿಸಿದ ಕೆಲವಾರು ಚಿತ್ರಗಳೂ ಇಲ್ಲಿವೆ. ಬೊಂಬಾಯಿಯಲ್ಲಿದ್ದುಕೊಂಡು ತಮ್ಮ ಬಂಧುಗಳ ಹಿತಕ್ಕಾಗಿ ಸಂಘವನ್ನು ಕಟ್ಟಿಕೊಂಡು ಹೋರಾಡುತ್ತಿರುವ ಮೊಗವೀರ ಯುವಕ ಸಂಘದ ಕಾರ್ಯಕ್ರಮಗಳು ಸ್ತುತ್ಯರ್ಹವೆನಿಸಿವೆ.

ಕನ್ನಡ ಸಹಕಾರಿ— (ಸಹಕಾರ ಮತ್ತು ಗ್ರಾಮಾಭಿವೃದ್ಧಿಯ ಮಾಸಪತ್ರಿಕೆ) ಸಂಪಾದಕರು: ಎಸ್. ಮಂಕುಂದ ರಾವ್, ವಾಚಂದಾ. ೪-೦೦ ಬಿಡಿಸಂಚಿಕೆ ೦.೬೦.

'ಹಿಂದೂ ದೇಶದಲ್ಲಿ 'ಸಹಕಾರಿ ಸಾಗುವಳಿ'ಯನ್ನು ಅನುಸರಿಸುವುದು ಸಾಧ್ಯವಿಲ್ಲ' 'ಸಹಕಾರ ಸಂಘಗಳ ಮೂಲಕ ಆಡಳಿತಗಳನ್ನು ಮಾರಾಟ ಮಾಡುವುದು" ಮೊದಲಾದ ಈ ಸಂಚಿಕೆಯಲ್ಲಿ ಪ್ರಕಾಶಗೊಂಡ ಲೇಖನಗಳು ಉತ್ತರಾವಿಯ ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘಕ್ಕೆ ಸಂಬಂಧಿಸಿದ ವಿಚಾರಗಳು ಯೋಗ್ಯವಾಗಿವೆ. ಗ್ರಾಮಾಭಿವೃದ್ಧಿ ಮತ್ತು ಸಹಕಾರ ಕ್ರಮಗಳ ಪ್ರಚಾರಕ್ಕಾಗಿ ಅವನ್ನು ಜನಪ್ರಿಯಗೊಳಿಸುವುದಕ್ಕಾಗಿ, ಹೋರಾಡುವ ಈ ಪತ್ರಿಕೆಯು ಮತ್ತಷ್ಟು ಅಭಿವೃದ್ಧಿಹೊಂದುವ ಅಗತ್ಯಕತೆಯಿದೆ.

ಬಂಟರ ಯಾನೆ ನಾಡವರ ಸಂಘ

—(ಮೂವತ್ತನೆಯ ವಾರ್ಷಿಕ ವರದಿ) ಮುಂಬಯಿ.

ಮುಂಬಯಿಯ ಬಂಟರ ಯಾನೆ ನಾಡವರ ಸಂಘದ ೧೯೫೭ನೆಯ ವರ್ಷದ ವರದಿಯನ್ನು ಆವರೋಕಿಸಿದ್ದೇವೆ. ಸಮಾಜದ ಉನ್ನತಿಯ ಉದ್ದೇಶವನ್ನಿಟ್ಟುಕೊಂಡು ಮೂವತ್ತು ವರ್ಷಗಳ ಸೇವೆಯನ್ನು ಈ ಸಂಘವು ಸಲ್ಲಿಸಿದೆ. ೧೯೫೭ರಲ್ಲಿ ರೂ. ೫೦೦೦ರನ್ನು ವಿದ್ಯಾರ್ಥಿವೇತನವಾಗಿ ಸಂಘವು ಕೊಡಮಾಡಿದೆ. ಸಂಘದಲ್ಲಿ ೭೮ ಜನ ಆಜೀವ ಸದಸ್ಯರೂ ೧೬೮೦ ಸಾಮಾನ್ಯ ಸದಸ್ಯರೂ ಇದ್ದು ಸಂಘವು ಬಲಿಷ್ಠವಾಗಿದೆ. ಮುಂಬಯಿಯಲ್ಲಿ ಕರ್ನಾಟಕ ಫ್ರೀನೈಟ್ ಹೈಸ್ಕೂಲನ್ನು ಈ ಸಂಘವುಯಶಸ್ವಿಯಾಗಿ ನಡೆಸಿಕೊಂಡುಬರುತ್ತಿದೆ. ವರದಿ ವರ್ಷದಲ್ಲಿ ೨೫೪೬ ರೂ. ಅಧಿಕವಾಗಿದ್ದು ವ್ಯಯವು ಸುಮಾರು ರೂ. ೩೦೦೦ದಷ್ಟು ಕಡಿಮೆಯಿರುವುದು. ಆಜೀವ ಸದಸ್ಯರು ಹಾಗೂ ವಿಶೇಷ ಸಹಾಯಕರ ನಾಮಾವಳಿಯನ್ನು ಈ ವರದಿಯಲ್ಲಿ ಸೇರಿಸಿದ್ದಾರೆ ಅಂತೂ ಸಂಘದ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಿರಬೇಕೆ. ಸ್ವಜಾತಿ ಬಂಧುಗಳ ಉನ್ನತಿಗಾಗಿ ಈ ಸಂಘವು ಹೋರಾಡುವಲ್ಲಿ ಬಂಧುಗಳ ನೆರವು ಇತೋಪಾತಿಶಯವಾಗಿ ದೊರೆಯಬೇಂದು ಹಾರೈಸುತ್ತೇವೆ. ಹಾಗೂ ಸಂಘವು ಇನ್ನೂ ಬೆಳೆದುಬರಬೇಂದು ಬಯಸುತ್ತೇವೆ.

—ಗೋರಾ

ಗಾಂಧಿಜೀಯವರು, ಅನೇಕಕಲೆ, ಅಗತ್ಯವಾದದನ್ನು ಪಡೆಯುವ ತಮ್ಮ ಕುಶಲತೆಯಿಂದ, ಸರಳವಾದ ಹಾಗೂ ವಿಸ್ತೃತಾಂತ ತಿಳಿಸುವಂತಹ ಸಾಂಕೇತಿಕ ಭಾಷೆಯ ಮೂಲಕ ಮಾತನಾಡುವ ಮಾರ್ಗವನ್ನಾರಿಸಿಕೊಂಡರು. ಅವರು ಸ್ವಜನಿಸಿದ ಸಂಕೇತಗಳಲ್ಲಿ ಇದು ವರೆಗೆ ಅತ್ಯಂತ ಮುಖ್ಯವೂ ಪ್ರಭಾವ ಶಾಲಿಯೂ ಆನುದು ಚರಕ. ಲಕ್ಷಾಂತರ ಭಾರತೀಯರಿಗೆ ಇಂದಿಗೂ ಚರಕವು ಕೇವಲ ಸಂಕೇತವೇ ಅಲ್ಲ. ಅದಕ್ಕೂ ಹೆಚ್ಚಿನದಾಗಿದೆ ಬಹುಮುಖ ಕ್ರಿಯಾಶೀಲತೆ ಹಾಗೂ ಸ್ವಧರ್ಮ ಭಾವವನ್ನು ತಳೆಯ ಶಕ್ತಿರುವ ಸಮಾಜದಲ್ಲಿ ಆರ್ಥಿಕ ಸ್ವಾತಂತ್ರ್ಯದ ಭರವಸೆಯನ್ನು ನೀಡುವ ಉಪಕರಣವೆಂದರೆ ಚರಕ.

ಅಲ್ಮೋರ್‌ನ ಹತ್ತಿರದಲ್ಲಿರುವ ಗ್ರಾಮದಲ್ಲಿ ಈ ಚಿಕ್ಕ ಬಾಲಕ ಬಾಲಕಿಯರು, ಗ್ರಾಮಾಂತರ ಭಾರತದಲ್ಲಿ ೫೦ ಲಕ್ಷಕ್ಕೂ ಹೆಚ್ಚು ಮಂದಿಗೆ ವಿರಾಮಕಾಲದ ಉದ್ಯೋಗ ಹಾಗೂ ಪೂರ್ಣ ಉದ್ಯೋಗಗಳನ್ನು ನೀಡುವ ಈ ಚರಕವನ್ನು ಉಪಯೋಗಿಸುವ ವಿಷಯದಲ್ಲಿ ತರಬೇತಿ ಪಡೆಯಲಾರಂಭಿಸಿರುವರು

ಅದೃಷ್ಟದ ಕೈವಾಡ

(೨ನೇ ಪುಟದಿಂದ)

"ಅಲ್ಲದೆ ಏನೂ—ಹೇಳಣ್ಣಾ"

"ಪುರುಷೋತ್ತಮರಾಯರು, ನಿನ್ನ ಮುಂದಿನ ವಿದ್ಯಾಭ್ಯಾಸದ ವಿಚಾರನ್ನೂ ನೋಡಿಕೊಳ್ಳುವರಂತೆ. ನಮ್ಮ ಆರ್ಥಿಕ ಸ್ಥಿತಿಯೂ ನಿನಗೆ ತಿಳಿದದ್ದೇ ನಿನ್ನ ಉದ್ದೇಶದಂತೆ ಇಂಗ್ಲೇಂಡಿಗೂ ಹೋಗಬಹುದು ಹಾಗೆ—ನಿನಗೆ ಹುಡುಗಿ ಒಪ್ಪಿಗೆಯಾದರೆ, ಎಲ್ಲವೂ ಸರಿಯಾಗುವುದು. ತಂದೆಯವರಿಗೂ ಈ ಸಂಬಂಧ ಆಗಬಹುದೆಂಬ ಅಭಿಪ್ರಾಯವಿದೆ— ನೀನೀಗ ಏನು ಹೇಳುವಿ'—ಅರವಿಂದ ಸುಂದರನ ಉತ್ತರಕ್ಕಾಗಿ ಎದುರು ನೋಡುತ್ತಾ ಮಾತು ಮುಗಿಸಿದ

ಐದು ನಿಮಿಷ ಸುಂದರ ಮಾತಾಡಲಿಲ್ಲ

'ಆಂತೂ, ಎಲ್ಲವನ್ನು ನಿಶ್ಚೈಸಿ ಬಿಟ್ಟಿದ್ದೀರಿ, ಇರಲಿ—ಯೋಚಿಸಿ ಹೇಳುವೆ"—ಅಂದಿನ ಮದುವೆಯ ವಿಷಯ ಅಷ್ಟಕ್ಕೇ ಮುಗಿದಿತ್ತು

ಹೆಣ್ಣನ್ನು ನೋಡಿದ ಮೇಲೆ, ತನ್ನ ಭವಿಷ್ಯ ಉತ್ತಮವಾಗುವ ಈ ಸಂದರ್ಭ ಬಿಡಬಾರದೆಂದು ಸುಂದರನೂ ನಿಶ್ಚೈಸಿದ

ಅದೊಂದು ಸುಮುಹೂರ್ತದಲ್ಲಿ ಸುನಂದ—ಸುಂದರರ ವಿವಾಹವೂ ನೇರವೇರಿತು.

ಮಾರನೇಯ ದಿನವೇ ಆತ ಇಂಗ್ಲೇಂಡಿಗೆ ಹೋಗಬೇಕಾಗಿತ್ತು ಸುನಂದಳನ್ನು ತಾಯಿಮನೆಯಲ್ಲೇ ಉಳಿಯಗೊಡಿಸಿ ತಾನು ಇಂಗ್ಲೇಂಡಿಗೆ ಪಯಣಿಸಿದ್ದ.

ಎರಡು ವರ್ಷ ಎರಡು ನಿಮಿಷದಂತೆ ಕಳೆದು ಹೋಗಿ—ಇದೀಗ ತನ್ನ ತವರೂರಿಗೆ ಮರಳುತ್ತಿದ್ದಾನೆ. ..

ಮಿಂಚೊಂದು ಕಣ್ಣು ಕೋರೈಸುವಂತೆ ಮಿಂಚಿತು ಅದರೊಂದಿಗೇ ಕಿವಿ ಕಿವುಡಾಗುವ ಗುಡುಗಿನ ಬ

ಸುಂದರ ಭಾವನಾಲೋಕದಿಂದ ಎಚ್ಚೆತ್ತ ರೈಲು ಸೋಗುತ್ತಲೇ ಇದೆ ಆ ಕತ್ತಲ ಅರೆಬೆಳಕಲ್ಲಿ ತಾನು. ಯಾವ ಸಿಲ್ಕಾಣ ದಾಟಿದೆನೆಂಬ ಅರಿವೂ ಆತನಿಗಾಗಿರಲಿಲ್ಲ. ತಿಳಿಯುವ ಕುತೂಹಲವೂ ಆತನಿಗಿದ್ದಂತಿರಲಿಲ್ಲ. ಒಮ್ಮೆ ಕಣ್ಣರಳಿಸಿ ಬಂಡಿ ತುಂಬಾ ನೋಡಿಕೊಂಡ ಜನರು ಹೆಚ್ಚೇನೂ ಇರಲಿಲ್ಲ, ಇದ್ದ ನಾಲ್ಕಾರು ಜನರೂ ಏನೋ ಹೊಂಗನಸು ಕಾಣುತ್ತಿದ್ದರು.

"ಕೈ ಗಡಿಯಾರ ನೋಡಿದರೆ—ಗಂಟೆ ಎರಡೂ ಕಾಲು'

ಸುಂದರನ ಯೋಚನೆ ಮತ್ತೂ ಮುಂದುವರಿಯಿತು –

. ಸುನಂದಳಿಗೆ ಒಂದು ಕಾಗದ ಬರೆಯಲು ನಾಚಿಕೆಯಾಗುತ್ತಿದ್ದ ತಾನು ನಾಳೆ ಆಕೆಯನ್ನು ಮಾತಾಡಿಸುವುದಾದರೂ ಎಂತ! ಡಾಕ್ಟರನಾಗುವ ನಾನು ಈ ರೀತಿ ವರ್ತಿಸಿದರೆ ಜನರು ಏನೆಂದುಕೊಂಡಾರು? ಛೇ, ನಾನು ತಪ್ಪು ಮಾಡಿದೆ ಆಕೆಗ ಎರಡು ಸಾಲಿನ ಕಾಗದವಾದರೂ ಹಾಕಬೇಕಿತ್ತು ಈಗ ಆಕೆ ಹೇಗಿರುವಳೋ ಎಷ್ಟು ಸುಂದರಿಯಾಗಿರುವಳೋ . "—ಎಂದೆಲ್ಲಾ ಯೋಚಿಸುತ್ತಿದ್ದಂತೆ ಅಲ್ಲಿಗೇ ಜೊಂಪು ಹಿಡಿಯಿತು.

— ೩ —

ಸುನಂದಾಳ ಆನಂದವೇ ಆನಂದ "ಈಗತಾನೇ ತಂದೆಯವರು 'ಅವರನ್ನು ಕರಕೊಂಡು ಬರಬಹುದು . ಇಷ್ಟರಲ್ಲಿ ರೈಲು ನಿಲ್ದಾಣ ತಲಪಿರಬೇಕು ಹೋ ಎಂಟೂವರವಾಗಿ ಹೋಯ್ತು ನಾನು ಹೇಗೆ ತಾನೇ ಅವರೊಡನೆ ಮಾತು ಪ್ರಾರಂಭಿಸಬೇಕು? ಅವರೇ ಮಾತಾಡಿಸದೆ ನಾನು ಮಾತಾಡೋದಿಲ್ಲ ಅವರೀಗ ಹೇಗಿರಬಹುದು? ಗುಂಡಗ ತೋರವಾಗಿದ್ದಾರು ಅಲ್ಲ ಇಳಿದು ಹೋಗಿದ್ದಾರೋ ಏನೋ ಎಷ್ಟಾದರೂ ಸರದೇಶ —ಮೈಗ ಹಿಡಿಯಬೇಕಲ್ಲ "— ಆಡೆ ನೆಯ್ಯುತ್ತಾ, ಶೃಂಗಾರ ಮಾಡುತ್ತಾ ಊಹನಾರಾಜ್ಯದಲ್ಲಿ ವಿಹರಿಸುತ್ತಿದ್ದಳು—ಆಕೆ

ಮೂವತ್ತು ನಿಮಿಷ ಕಳೆಯುವಷ್ಟರಲ್ಲಿ ಸುಂದರನೊಂದಿಗೆ ಪುರುಷೋತ್ತಮ ರಾಯರು ಮನೆಯೊಳಕ್ಕೆ ಕಾಲಿರಿಸಿದ್ದರು

ಸುಂದರನಿಗೆ ಕೆಲಸ ಬಂಡಿತವಾಗುವ ತನಕವಾದರೂ ತವ್ಮಲ್ಲೇ ಇರಬೇಕೆಂದರು ಪುರುಷೋತ್ತಮರಾಯರು ಅದೇ ಊರಲ್ಲಿ 'ಕೋರ್ಟ' ಇರಿಸಬಹುದೆಂದೂ, ಸಲಹೆಕೂಟ್ಟರು ಈಗ ತಾನೇ ಕಲಿತು ಬಂದುದಷ್ಟೆ, ಅವಸರವೇಕೆ—ನಾಲ್ಕು ದಿನ ತಡೆಯಲಿ ಎಂದು ಸುಂದರನ ಇಚ್ಛೆ

ಅದೂ ಹೌದು, ನಾಲ್ಕು ದಿವಸ ಯಾವ ರಗಳೆಯೂ ಇಲ್ಲದೆ ದಿನಗಳು ಸಖವಾಗಿರಲಿ— ಎಂದುಕೊಂಡರು ರಾಯರು

ತಿಂಗಳರಡೇ ಕಳೆಯಿತ. ಸುಂದರ—ಸುನಂದಯರು ನಾಕಷ್ಟು ಪರಿಚಿತರೇ ಆಗಿದ್ದರು ಆದರೂ, ಅದೇನೋ ಸುನಂದಳಿಗೆ ಹೇಳಲಾಗದ ಕೊರಗೊಂದು ಮನದಲ್ಲಿ ಅವಳು ಸುಂದರಿಯಾಗಿದ್ದರೂ, ಅದೇ ಕೋ ಸುಂದರ ಒಂದು ತರ್ಕನಾಗಿದ್ದ ಅವಳ ಬಗೆಗೆ ಹೀಗಿದ್ದರೂ ಕಾಣುವವರ ಕಣ್ಣಿಗೆ ಅವರ ಸುಖವಾಗಿಯೇ ಇದ್ದರು

ಇಷ್ಟರಲ್ಲಿ ಮದ್ರಾಸಿನ ಸರಕಾರೀ ಆಸ್ಪತ್ರೆಯಿಂದ ಸುಂದರನ ಅಜ್ಞೆಯ ಪ್ರಕಾರ 'ಗವರ್ಮೆಂಟ್ ಡಾಕ್ಟರನಾಗಲು, ಆತನಿಗೆ ಹುಕುಂ ಬಂತು ತಾನು ಮದ್ರಾಸಿಗೆ ಹೋಗುವೆನೆಂದೂ, ಒಲವೇ ದಿನಗಳಲ್ಲಿ ಮರಳಿ ಬಂದು, ಸುನಂದಳನ್ನು ಕರಕೊಂಡು ಹೋಗುವೆನೆಂದೂ ಆತ ತಿಳಿಸಿ ಮದ್ರಾಸಿಗೆ ತೆರಳಿದನು ಸುನಂದಾ ಸುರಿವ ಕಣ್ಣೀರಿನಿಂದ ಆತನನ್ನು ಬೀಳ್ಕೊಟ್ಟಳು

ದಿನಗಳು ಒಂದರ ಮೇಲೊಂದುರುಳಿದವು ಸುಂದರ ಬಂದಿರಲಿಲ್ಲ ಸದ್ಯ ಬರಲಾಗುವುದಿಲ್ಲವೆಂದೂ, ಬಿಡಾರಕ್ಕೆ ಯೋಗ್ಯ ಸ್ಥಳ ದೊರಕಿಲ್ಲವೆಂದೂ —ಒಲೆಯ ತ್ತಿದ್ದನು

ಇದೇ ರೀತಿ ತಿಂಗಳು ಆರು ಸಂದುವು' ಮತ್ತೆರಡು ತಿಂಗಳುಗಳುರುಳಿದವು

ಆಗತಾನೇ ಊಟ ಮುಗಿಸಿ ಪುಸ್ತಕ ವೊಂದನ್ನು ಕೈಯಲ್ಲಿ ಹಿಡಿದು ಕೂತಿದ್ದಳಾಕೆ ಅಷ್ಟರಲ್ಲಿ ಪೋಸ್ಟ್ಮೇನ್ ಕವರೊಂದನ್ನು ಕೈಗಿಟ್ಟು ಹೋದನು.

ವಿಚಾರ ಮಾಡಿದಳು, ಅದು ತನಗೇ ಇರುವ ಕಾಗದ ಹೌದು, ಸುಂಗರನದೆ ಕಣ್ಣಿಗೊತ್ತಿಕೊಂಡು ಒಡೆದು ಓದಿದಳು

"ಸುತೀಲೆ, ಸುನಂದಾ, ನನ್ನ ವರ್ತನೆ ನಿನಗೆ, ಅಚ್ಚರಿಯನ್ನುಂಟುಮಾಡಿರಬಹುದು, ಅಷ್ಟೇ, ನಿಜವಾಗಿಯೂ ನೀನು ನನ್ನ ಕೈಹಿಡಿಯಬಾರದಾಗಿತ್ತು ನಿನ್ನನ್ನು ವಿವಾಹವಾಗಿ ವರ್ಷ ಮೂರಕ್ಕೆ ಸಮಿಸಿದರೂ, ನಿನಗೆ ನಾನು ಸುಖವುಂಟುಮಾಡಿಲ್ಲ ಅದಕ್ಕೆ ನನ್ನನ್ನು ದೂರುವೆಯೇನು? ನಿನ್ನಲ್ಲಿ ಈ ತನಕ ಹೇಳದೇ ಇರುವಂತಹ ವಿಷಯವೊಂದಿದೆ ಅದನ್ನೀಗ ಹೇಳಲೇಬೇಕಾಗಿದೆ ನಾನು ಡಾಕ್ಟರನಾಗಿದ್ದರೂ, ಈ ವಿಷಯ ನನಗೇ ಅರಿವಾಗಿರಲಿಲ್ಲ ಇಂಗ್ಲೇಂಡಿಗೆ ಹೋಗುವ ಮುನ್ನ ಇದೀಗ ನಾನದನ್ನು ತಿಳಿದವನಾಗಿದ್ದೇನೆ ನಾನು ಗಂಡಾಗಿದ್ದರೂ, ನಿನ್ನ ಪತಿಯನಿಸಿದ್ದರೂ, ನಿನಗೆ ಸುಖನೀಡಲಾರದವನಾಗಿದ್ದೇನೆ, ಅಂದರೆ ಅರ್ಥವಾಯಿತೇ,—ಪುರುಷತ್ವವಿಲ್ಲದವನಾಗಿದ್ದೇನೆ ಹೀಗಿಂತಲೇ ನಾನು ನಿನ್ನನ್ನಿಲ್ಲಿಗೆ ಕರಕೊಂಡು ಬರಲು ನೆವನೆಗಳನ್ನು ತಿಳಿಸಿದೆ ಆದರೆ ಸುನಂದಾ ಬಾಳು ನಿಸ್ಸಾರವಾದುದಲ್ಲ, ಅದು ತುಂಬಾ ತಿರುಳಿನಿಂದ ಕೂಡಿದೆ (ಈ ಪುಸ್ತಕವನ್ನು ಸಂಪೂರ್ಣ ಓದುವ ಮೊದಲು ಯಾವ ನಿರ್ಣಯಕ್ಕೂ ಬರಬೇಡ.) ಮನುಷ್ಯನಿಗೆ ಯಾವರೀತಿಯ ಕಷ್ಟ ಸುಖಗಳು ಬರುತ್ತವೆಂದುದಕ್ಕೆ ನಮ್ಮಿಬ್ಬರ ಈ ರೀತಿಯ ಜೋಡಿ ಒಂದು ಉದಾಹರಣೆ ನಿನ್ನನ್ನು ಕೂಡಿ ಸುಖಿಸಬೇಕು ನಿನ್ನೊಂದಿಗೆ ಬೆರೆಯಬೇಕು, ನಮ್ಮ ಬಾಳು ಆನಂದಮಯವಾಗಬೇಕು—ಎಂಬ ಬಯಕೆ ನನಗಿದೆ ಸುನಂದಾ! ಆದರೆ ವಿಧಿ ಈತನಕವೂ ಅದಕ್ಕಿಡ್ಡಿಯನ್ನು ಬಗೆಯಿತು ಹೀಗಿದ್ದರೂ ಕೆಲವು ಸಮಯ ನಾವು ಕಾದು ಕಳೆತರೆ ಮುಂದಾದರೂ ಸುಖಪಡೆಯಬಹುದು ಹೀಗೆ ಅಲ್ಲವೆಯಾ? ನೊನ್ನೆ ತಾನೇ ಮಹಾತ್ಮರೊಬ್ಬರ ದರ್ಶನವಾಯಿತು ಅವರಲ್ಲಿ ನಾನು ನನ್ನ ವಿಷಯ ಹೇಳಿಕೊಂಡೆ ಸುನಂದಾ! ಅವರೇನಂದರು ಗೊತ್ತೇ! 'ನಿನ್ನನ್ನು ಸುಖವನ್ನಾಗಿ ಮಾಡಬಲ್ಲೆ ಆದರೆ,ನನ್ನೊಂದಿಗೆ ಹಿಮಾಲಯಕ್ಕೆ ಬರಬೇಕು'—ಎಂದ ಅಂತೆಯೇ ಸುನಂದಾ, ನನಗಾಗಿ ಅಲ್ಲವಾದರೂ, ನಿನಗಾಗಿ ಈ ಪ್ರಯತ್ನ ಮಾಡುತ್ತಿರುವೆ ಇದು ನನ್ನ ಕೊನೆಯ ಯತ್ನ ಸಿದ್ಧಿಸಿದರೆ ನಾನು ನಿನ್ನ ಮುಖದರ್ಶನ ಮಾಡುವೆ—ಇಲ್ಲವಾದಲ್ಲಿ ಇದೇ ನನ್ನ ಕೊನೆಯ ದರ್ಶನವಂದು ತಿಳಿ —ಆದರೆ ಸುನಂದಾ, ನೀನು ಆತ್ಮಹತ್ಯಾದಿ ಕಾರ್ಯಗಳಿಗೆಯದ್ದು ಕ್ತಳಾಗಬೇಕು; ಅದು ಮಹಾ ಪಾಪ, ಲೋಕ ಸೇವೆಮಾಡಿ ಜೀವನವನ್ನು ಸಾರ್ಥಕಗೊಳಿಸಲು ಪ್ರಯತ್ನಿಸು. ನಾವು ಮನರಿಸಿ ಒಂದು ಗೂಡುವಂತಾಗಲೆಂದು ದೀನ ದಯಾಳವಿನಲ್ಲಿ ಪ್ರಾರ್ಥಿಸು, ನಿನಗೆ ಆಶೀರ್ವಾದ ಕೋರುತ್ತೇನೆ ಇತೀ, ನಿನ್ನ ಪ್ರೀತಿಗೆ ಸಮಾನನಲ್ಲದ ನಿನ್ನ ಪತಿಯೆಂದೆ ನಿಸಿದ—ಸುಂದರ

—ಚಿಠ್ಠಿನೆ ಚೀರಿ ಕೆಳಕ್ಕೆ ಬಿದ್ದಳು ಸುನಂದಾ ತಾಯಿ ಐ ವರ್ತಿಯೇನೆಂದು ನೋಡಲು ಒಳಬಂದಳು ಪುರುಷೋತ್ತಮ ರಾಯರೂ ವಿಷಯ ತಿಳಿಯಲು, ಧಾವಿಸಿದರು ಕೆಳಗೆ ಬಿದ್ದ ಪತ್ರವೇ ಅವರಿಗೆ ವಿಷಯ ತಿಳಿಸಿತು ಪಾರ್ವತಿಯು ನೀರು ತಂದು ಮಗಳ ಮುಖಕ್ಕೆ ಸುರಿದಳು.

ಸುನಂದಾ ಮೂರ್ಛೆ ತಿಳಿದಿದ್ದಳು. ತಂದೆತಾಯಂದಿರ ಮುಖ ಕಂದಿ ಹೋಗಿತ್ತು ಸುನಂದಾ ಕೇಳಿದಳು—

"ಒಪ್ಪಾ, ಅವರು ಸುಖವಾಗಿ ಮನೆ ತಲಪಿದರು, ಇದು ನನ್ನ ವ ನೋದೇವ ತೆಂ ಸೂಚನೆ"

"ಹಾಗೇ ಆಗಲಿ ಮಗಳೇ!' ತಂದೆ ತಾಯಂದಿರು ದೇ ರಿಗೆ ಕೈ ಮುಗಿದು ನುಡಿದರು.

— ೪ —

ಸುನಂದಾ ಈಗ ಒಬ್ಬ ಆದರ್ಶ ಉಪಾಧ್ಯಾಯಿನಿ. ಮನೆಯೇ ಪಾಠಶಾಲೆ, ಸುತ್ತಮುತ್ತಲಿನ ಹಲವು ಬಾಲಕ ಬಾಲಕಿಯರು ಆಕೆಯ ವಿದ್ಯಾರ್ಥಿಯಾಗಿದ್ದಾರೆ ಆಕೆಗೆ ಅದರಲ್ಲಿ, ಮನಸ್ಸಿಗೆ ಶಾಂತಿಯಿತ್ತು, ನಾಡಿನ ಏಳಿಗೆಗೆ ಕಿಂಚಿತ್ ಸಹಾಯವಾದರೂ ತನ್ನಿಂದ ಸಲ್ಲುತ್ತಿದೆಯೆಂಬ ಆತ್ಮತೃಪ್ತಿಯಿತ್ತು ಮಗಳ ಜೀವನ ನಾವೆ ಅಸಫಾತದಲ್ಲಿ ಸಿಲುಕಿದುದು ಪುರುಷೋತ್ತಮ ರಾಯರಿಗೆ ಅಪಾರವಾದ ವ್ಯಥೆಯನ್ನುಂಟುಮಾಡಿತ್ತು ತನ್ನ ಮಗಳಿಗಾಗಿ ತಾನಿಷ್ಟು ವೆಚ್ಚಮಾಡಿದ್ದರೂ —ಆಕೆ ಹೆಣ್ಣಾದದ ಬಾಳಿಗೆ ಸ್ಫೂರ್ತಿ ಕೂಲಲಾಗಿರಬೇಕಾದುದಕ್ಕಾಗಿ ಅವರ ಹೃದಯ ನೊಂದಿತ್ತು ಆದರೇನ—ಎಲ್ಲವೂ ವಿಧಿನಿಯಮ ಎಂತಲೇ ಅವರು ಮಗಳ ದುಃಖವಾರಣೆಗಾಗಿ ಪ ರಾಲೆಯ ಏರ್ಪಾಡಿಗೆ ಉತ್ಸಾಹಿತರಿದ್ದರು

ಸುನಂದಳಿಗ ಆಗಾಗ ಪತಿಯ ನೆನೆ

(೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ		
3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರಂಟ್ ಎಕೌಂಟು		½%

The Moolky Bank, Ltd.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತವಿಂತವಾದ ಆರೋಗ್ಯ ಸಾಧನೆಗೂ ಅವರಲ್ಲ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ವಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಥಾಪಕರು ಪಾ ಕಂಪೆನಿ, ಮಂಗಳೂರು—1.

ನಾರದ ಮಹಾನುಭಾವ-

ಡಾ. ಮೈತ್ರೇಯಿ ಬೋಸ್

ದೇಶವು ಒಂದೆಡೆ ವಿಪನ್ನಾವಸ್ಥೆಯಲ್ಲಿ ದಿನಗಳೆಯುತ್ತಿರುವಂತೆ ಮತ್ತೊಂದೆಡೆ ದೇಶದ ಆರ್ಥಿಕ ವಿಕಾಸ ಮತ್ತು ಜೀವನ ಮಟ್ಟವನ್ನು ಎತ್ತರಿಸುವ ಕಾರ್ಯ ಸ್ವಹಸ್ತಕ್ಕೆ ಬರತ್ತಿರುವಾಗ, ಬೇರೆ ಬೇರೆ ಶ್ರಮಿಕ ಸಂಘಗಳಲ್ಲಿನ ಅಂತಃ ಪ್ರತಿದ್ವಂದ್ವಿತೆಯು ಸಮಾಪ್ತವಾಗುವುದು ಅತ್ಯಂತಾವಶ್ಯಕವಾಗಿದೆ. ಕಳೆದ ತಿಂಗಳಂತ್ಯದಲ್ಲಿ ನೈನಿತಾಲಿನ ಶ್ರಮಸಮ್ಮೇಳನದಲ್ಲಿ ಈ ಕಡೆಗೆ ಸ್ವಲ್ಪ ಗಮನವನ್ನು ಕೊಡಲಾಯಿತು. ಈ ಸಮ್ಮೇಳನದಲ್ಲಿ ಈ ದೃಷ್ಟಿಯಿಂದ ಸ್ವೀಕೃತವಾದ ಅಸ್ಪೃಶ್ಯತಾ ಸೂತ್ರಗಳ ಆಚರಣ ಸಂಹಿತೆಯು ಕೇವಲ ಪತ್ರದಲ್ಲಿ ಮಾತ್ರವಿರುವುದೆ? 'ಇಂಟಕ್'ನ ಕಾರ್ಯ ಸಮಿತಿ ಮತ್ತು ಸಂಘದ ಬಂಗಾಳ ಶಾಖೆಯ ಅಧ್ಯಕ್ಷ ಪದದಿಂದ ಕಳೆದ ಜೂನ್ ಇರಂದು ಡಾ. ಮೈತ್ರೇಯಿ ಬೋಸರು ತ್ಯಾಗಪತ್ರವನ್ನು ಕೊಟ್ಟ ಪರಿಣಾಮ ಸ್ವರೂಪವಾಗಿ ಶ್ರಮಿಕ ಸಂಗರಸೆಗಳಲ್ಲಿನ ಐಕ್ಯಕ್ಕಾಗಿ ಪ್ರಯತ್ನಪಡುವ ಮುಖಂಡರು ತಮ್ಮ ಧ್ಯೇಯೋದ್ದೇಶಗಳಲ್ಲಿ ಸಫಲರಾಗುವುದು. ಸಂದೇಹಾಸ್ಪದವಾಗಿಯೇ ಪರಿಣಮಿಸಿದೆ.

ಬಿಹಾರಿನ ಸುಪ್ರಸಿದ್ಧ ಕಲ್ಲಿದ್ದಲಕ್ಷೇತ್ರ ಗಿರಿಡೀಹದಲ್ಲಿ ಶ್ರೀಮತಿ ಮೈತ್ರೇಯಿಯವರ ಜನ್ಮವಾಯಿತು. ಮೆಟ್ರಿಕ್‌ವರೆಗಿನ ಶಿಕ್ಷಣವನ್ನು ಅವರು ಅಲ್ಲಿಯೇ ಪಡೆದರು. ಈ ಅವಧಿಯಲ್ಲಿಯೇ ತಮ್ಮ ಸ್ವಾಭಾವಿಕಾನಲೋಕನಾಶಕ್ತಿಯಿಂದ ಇದ್ದಲಕ್ಷೇತ್ರದ ಶ್ರಮಿಕರ ತ್ರಿಶಂಕುಸ್ವರ್ಗದ ಅವಸ್ಥೆಯನ್ನು ಚೆನ್ನಾಗಿ ತಿಳಿದುಕೊಂಡರು. ಅವರು ಗ್ರಾಮಗಳಲ್ಲಿ ಶ್ರಮಿಕ ಸಂಘಗಳಲ್ಲಿ ಸೇರಿಕೊಂಡಿದ್ದರೂ ಅವರ ಪೂರ್ವ ಸಿದ್ಧತಾ ಸ್ವರೂಪ, ಅವರ ಶಿಕ್ಷಣ, ಸ್ವಾಸ್ಥ್ಯ ಹಾಗೂ ಜೀವನದ ಅನ್ಯಕ್ಷೇತ್ರಗಳಲ್ಲಿ ಅವರು ಗೆಯ್ದ ಸಪಟ್ಟರ್ಯಗಳನ್ನೂ ಗಮನಿಸುವುದು ಅಗತ್ಯ.

ಮೆಟ್ರಿಕ್ ಪರೀಕ್ಷೋತ್ತೀರ್ಣರಾದ ಮೇಲೆ ಕಲಕತ್ತೆಯ ವೈದ್ಯಕೀಯ ಕಾಲೇಜಿನಲ್ಲಿ ಮೈತ್ರೇಯಿ ಬೋಸರು ಅಭ್ಯಸಿಸತೊಡಗಿದರು. ಇಲ್ಲಿ ಪದವಿ ಪಡೆದ ಮೇಲೆ ಕೇಲ ದಿನಗಳವರೆಗೆ ಅಲ್ಲಿನ ಚಿತ್ತರಂಜನ ಸೇವಾ ಸದನದಲಿ ಗೃಹ ವೈದ್ಯರಾಗಿ ದುಡಿದರು. ಮುಂದೆ ಸ್ವಾಸ್ಥ್ಯ ಚಿಕಿತ್ಸೆಯಲ್ಲಿ ಉಚ್ಚ ಶಿಕ್ಷಣ ಹೊಂದುವುದಕ್ಕೋಸ್ಕರ ಗ್ರಾಮಗಿರಲ್ಲಿ ಜರ್ಮನಿಗೆ ತೆರಳಿದರು. ಎರಡು ವರುಷಾನಂತರ ಬಾಲರೋಗ ವಿಶೇಷಜ್ಞರ ರೂಪದಲ್ಲಿ ಮ್ಯೂನಿಖ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಗಳಿಸಿಕೊಂಡು ಅವರು ಸ್ವದೇಶಕ್ಕೆ ಹಿಂತಿರುಗಿ ಬಂದರು. ಸುನಃ ಎರಡು ವರ್ಷಗಳವರೆಗೆ ಡಾ. ಮೈತ್ರೇಯಿಯವರು ಚಿತ್ತರಂಜನ ಸೇವಾ ಸದನದಲ್ಲಿ ಮತ್ತು ಮುಂದೆ ಕಲಕತ್ತೆಯ ಕೈಂಬೇಲ್ ಆಸ್ಪತ್ರೆ ಹಾಗೂ ಸೀಲರತನ್ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸಕರಾಗಿ ಕೆಲಸಮಾಡಿದರು. ಗ್ರಾಮಿಣ ವರ್ಷದಲ್ಲಿ ಒಬ್ಬ ಸಫಲ ಚಿಕಿತ್ಸಕ, ಡಾಕ್ಟರ್ ಸ್ವದೇಶ್ ಕುಮಾರ ಬಸುಗಳೊಡನೆ ಅವರ ವಿವಾಹವು ನೆರವೇರಿತು.

ಚಿಕಿತ್ಸಾ ಕ್ಷೇತ್ರದಲ್ಲಿಯಲ್ಲದೇ ಡಾ. ಮೈತ್ರೇಯಿಯವರು ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ತಮ್ಮ ಸೇವಾಭಾವನೆಯನ್ನು ಪ್ರದರ್ಶಿಸಿದರು. ಬಂಗಾಲ ಬರಗಾಲ ನಿವಾರಣನಿಧಿ ಮತ್ತು ಅಖಿಲಭಾರತೀಯ ಶಿಶು ಸಂರಕ್ಷಣಾ ಸಮಿತಿಗಳಲ್ಲಿಯೂ ಅವರು ತಮ್ಮ ಕೈತೋರಿಸಿದರು. ಶಿಶು ಕಲ್ಯಾಣವು ಅವರ ಸರ್ವಾಧಿಕ ಪ್ರಿಯ ಕಾರ್ಯವಾಗಿದೆ ಮತ್ತು ಅದರ ಪೂರ್ತಿಗಾಗಿ ಅವರು ಬಂಗಲಾದಲ್ಲಿ ದೇವಾನಾಮ್ ಪ್ರಿಯಾ ಎಂಬ ತ್ರೈಮಾಸಿಕ ಪತ್ರಿಕೆಯ ಪ್ರಕಾಶನ ಕಾರ್ಯವನ್ನೂ ಮೊದಲು ಮಾಡಿದರು. ಬಾಲಕ ಬಾಲಿಕೆಯರ ಸರ್ವಾಂಗೀಣ ಉನ್ನತಿಗಾಗಿ ದುಡಿಯುವಲ್ಲಿ 'ದೇವಾನಾಮ್ ಪ್ರಿಯಾ'ವು ಏಕಮಾತ್ರ ಪತ್ರಿಕೆಯೆಂದು ಹೇಳಬಹುದು.

ಗ್ರಾಮಗಿರಲ್ಲಿ ಒಂದು ಲಕ್ಷದಷ್ಟು ಸದಸ್ಯರಿರುವ ಪ್ರತಿರಕ್ಷಾ ಶ್ರಮಿಕಸಂಘದ ಅಧ್ಯಕ್ಷೆಯರಾಗಿ ಚುನಾಯಿತರಾದರು. ಬಂದರ ಕೆಲಸಗಾರರ ಸಮಿತಿಯ ಸದಸ್ಯರೂ ಆದರು. ಜಿನೇವಾದಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಶ್ರಮ ಸಮ್ಮೇಳನದಲ್ಲಿ ಅವರು ಎರಡು ಬಾರಿ ಭಾರತೀಯ ಶ್ರಮಿಕರ ಪರವಾಗಿ ಪ್ರತಿನಿಧಿತ್ವವನ್ನು ವಹಿಸಿ ಭಾಗವಹಿಸಿದ್ದರು.

ಗ್ರಾಮಗಿರ ಸಾರ್ವತ್ರಿಕ ಚುನಾವಣೆಯಲ್ಲಿ ಅವರುತಮ್ಮ ಸಾಮ್ಯವಾದೀ ಪ್ರತಿಸ್ಪರ್ಧಿಯೆದುರಲ್ಲಿ ಸೋಲನ್ನುಣ್ಣಬೇಕಾಗಿ ಬಂದರೂ ಆ ನಂತರ ಪಶ್ಚಿಮ ಬಂಗಾಲದ ವಿಧಾನ ಸಭೆಗೆ ಜರಗಿದ ಒಂದು ಉಪಚುನಾವಣೆಯಲ್ಲಿ ಅದರ ಸೇಡನ್ನು ತೀರಿಸಿಕೊಂಡರು. ಕಲಕತ್ತೆಯ ಚೌರಂಗಿ ರಸ್ತೆಯಲ್ಲಿರುವ ಡಾ. ಮೈತ್ರೇಯಿ ಬೋಸರ ನಿವಾಸಸ್ಥಾನವು ಅತಿಥ್ಯಕ್ಕಾಗಿ ಪ್ರಸಿದ್ಧವಿದೆ. ಇಲ್ಲಿ ಎಲ್ಲ ಪ್ರಕಾರದ ವ್ಯಕ್ತಿಗಳ ಮತ್ತು ಪಕ್ಷಗತ ಭೇದಭಾವಗಳ ಮರೆತು ಡಾ. ಮೈತ್ರೇಯಿಯವರು ಎಲ್ಲರನ್ನೂ ಹೃದ್ಭಾವಕವಾಗಿ ಸ್ವಾಗತಿಸುತ್ತಾರೆ.

ಇಂತಹ ಒಬ್ಬಾಕೆ ನಿಷ್ಪೃಹಳಾಗಿರುವ ಅಧ್ಯಕ್ಷೆಯು ತನ್ನ ರಾಜೀನಾಮೆಯನ್ನು ವಿಭಿನ್ನ ಶ್ರಮಿಕ ಸಂಘಗಳಲ್ಲಿನ ಘನಾಭಿಪ್ರಾಯಗಳನ್ನು ಪರಿಪಡಿಸಲು ಅಸಾಧ್ಯೆಯಾಗಿ ಈಯಬೇಕಾಗಿ ಬಂದದು ಶ್ರಮಿಕ ಸಂಘಗಳ ದುರದೃಷ್ಟವೆನ್ನಬೇಕು ಈ ಮಹತ್ವಪೂರ್ಣ ಘಟನೆಯಿಂದ ಶ್ರಮಿಕ ಸಂಘಗಳ ನಡುವೆ ಮೈತ್ರಿಸಾಧಿಸುವುದು ಅಸಾಧ್ಯವೆಂಬ ಕಲ್ಪನೆ ಜನತೆಯಲ್ಲಿ ಅಂಕುರಿಸಿದರೆ, ಅದರಿಂದ ಅಚ್ಚರ್ಯಪಡುವ ಆವಶ್ಯಕತೆಯಿಲ್ಲ.

ನಲುವತ್ತು ವರ್ಷ ಪೂರ್ವದಲ್ಲಿ ರೆಬನಾಷನಿಂದ ಇಬ್ಬರು ದಂಪತಿಗಳು ಅಮೆರಿಕದಲ್ಲಿ ವಾಸಿಸತೊಡಗಿದರು. ಇವರ ೧೩ ಮಕ್ಕಳಲ್ಲಿ ಕಿರಿಯನಾದ ಈಕೆಗೆ ಈಗ ೨೫ ನಡೆಯುತ್ತದೆ. ಅವಿವಾಹಿತೆಯಾದ ಈಕೆಯ ಹೆಸರು ರೋಸಲಿಂಡ್ ಎಲಿಯಾಸ್. ಎಲಿಯಾಸಳು ನ್ಯೂಯಾರ್ಕಿನ ಮೆಟ್ರೊಪೊಲಿಟನ್ ಒಪೆರಾದ ನವೋದಿತ ಹಾಗೂ ಆಕರ್ಷಕ ತಾರೆಯರಲ್ಲಿ ಒಬ್ಬಳಾಗಿದ್ದಾಳೆ.

ಅದೃಷ್ಟದ ಕೈವಾಡ

(೧೧ನೇ ಪುಟದಿಂದ)

ಪಾಗುತ್ತಿತ್ತು. ತನಗೆ ಪತಿಸಮಾಗವನ್ನು ಕೊಡು ಎಂದು ಆಕೆ ಪ್ರತಿನಿತ್ಯ ಆದಿಶಕ್ತಿಯನ್ನು ಪ್ರಾರ್ಥಿಸುತಿದ್ದಳು. ಕಡೆಗೂ ಆತ ತನ್ನನ್ನು ಕೂಡುವನೆಂದು ಆಕೆ ನಂಬಿದ್ದಳು.

ದಿನಕ್ಕೆ ದಿನ ಸೇರಿ—ಎರಡು ವರ್ಷಕಳೆದು ಹೋಯ್ತು. ಈ ಅವಧಿಯಲ್ಲಿ ಸುಂದರನ ಸುಳಿವೇ ತಿಳಿಯಲಿಲ್ಲ.

ಅಂದು ಗುರುವಾರ; ಕತ್ತು ಗಂಟೆಯ ಸಮಯ. ಹೊರಗೆ ಪುರುಷೋತ್ತಮ ರಾಯರು ಅರಲ್ಲೋ ಮಾತನಾಡುತ್ತಿರುವುದನ್ನು ಕೇಳಿ ಸುನಂದಾ ಯಾರೆಂದು ಹೊರಬಂದು ನೋಡಿದಳು.

ದೃಷ್ಟಿಗಳು ಪರಸ್ಪರ ಕೂಡಿದವು.

'ಸ್ವಾಮಿ'—ಸುನಂದಾ ಆ ಸನ್ಯಾಸಿಯ—ಅಲ್ಲ—ಆಕೆಯ ಪತಿ ಸುಂದರನ ಕಾಲಿಗೆ ಬಿದ್ದು ಹೇಳಿದಳು.

ಈಗ ಪುರುಷೋತ್ತಮ ರಾಯರಿಗೂ ಗುರುತು ಸಿಕ್ಕಿತು. ಸನ್ಯಾಸಿ ಎಂತೆ ಗಡ್ಡ ಬೆಳಸಿದ್ದರಿಂದ ಅವರಿಗೆ ಗುರುತು ಮೊಲು ಸಿಕ್ಕಿರಲಿಲ್ಲ. ಸುನಂದಳಿಗೆ ಸ್ವರದಲ್ಲೇ ಪರಿಚಯ ಸಿಕ್ಕಿತು.

"ಸುನಂದಾ ...ನೀನು ತುಂಬಾ ಭಾಗ್ಯವಂತಳು. ನಿನ್ನ ಕೈಹಿಡಿದವರಿಂದಲೇ ನಾನು ನಿಜವಾದ ಮನುಷ್ಯನಾದೆ. ಇನ್ನು ನಿನಗೆ ಯಾವ ಕಷ್ಟವನ್ನೂ ಕೊಡಲಾರೆ. ಪರಮ ಶ್ರೇಷ್ಠರಾದ ಆ ಮುನಿವರ್ಯರ ಪ್ರಯತ್ನ ಹಾಗೂ ದರವಾಷ್ಟನ ಕರುಣೆಯೇ ನನ್ನ ನಿನ್ನ ಪುನರ್ಮಿಲನಕ್ಕೆ ಕಾರಣ"—ಎಂದು ತಾನು ಅನುಭವಿಸಿದ ಕಷ್ಟ—ಹಾಗೂ ತನಗಾಗಿ ಪ್ರಯತ್ನಿಸಿದ ಯೋಗಿವರ್ಯರ ಅದ್ಭುತ ಮೂಲಿಕಾ ಪ್ರಯೋಗದ ಮಹತ್ವವನ್ನು ಸುಂದರ ತಿಳಿಸಿದಾಗ — ಅವರೆಲ್ಲಾ ಅಚ್ಚರಿಗೊಂಡರು.

ಸುನಂದಾ ನಾಚುಗೆಯಿಂದ ಎಳೆಯ ಹುಡುಗಿಯರಂತೆ ಒಳಕ್ಕೋಡಿದಳು.

ಪುರುಷೋತ್ತಮರಾಯರು ಅಂದೇ ನೆರೆಕರೆಯವರಿಗೆಲ್ಲಾ ಊಟಕ್ಕೆ ಆಮಂತ್ರಣ ಕೂಟ್ಟರು.

ಸುನಂದಾ ಬೇಗನೇ ಗಂಡುಮಗುವನ್ನು 'ಹೆರಲಿ' ಎಂದು ಆಶೀರ್ವದಿಸಲು ಪಾರ್ವತಿ ಮರೆಯಲಿಲ್ಲ.

ನಮ್ಮ ಬೇಂಕಿನ

ಬೆಂಗಳೂರು ಶಾಖೆ

ಶೀಘ್ರದಲ್ಲೆ 181, ಬಳೆಪೇಟೆ, ಬೆಂಗಳೂರು-2

ಈ ವಿಳಾಸದಲ್ಲಿ ತೆರೆಯಲ್ಪಡುವುದು.

ನಮ್ಮ ಶಿವಮೊಗ್ಗ ಶಾಖೆಯು ತಾ 9-5-'58ರಲ್ಲೂ, ಬೇಲೂರು ಶಾಖೆಯು ತಾ. 23 5-'58ರಲ್ಲೂ ತೆರೆಯಲ್ಪಟ್ಟು ಯಾವತ್ತೂ ಬೇಂಕು ವ್ಯವಹಾರಗಳನ್ನು ನಡೆಸುತ್ತಿವೆ.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್,

ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1920.

Edited Printed & Published by K H. Shetty, at the Navayuga pre.., Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

19—6—1958

ಸಂಚಿಕೆ ೪೧
NO. 41

ಎಲ್ಲರಲ್ಲೂ ಮನೆಮಾಡಿದ ಚಟ—

ಪರೋಪದೇಶ ಪಾಂಡಿತ್ಯ

ಹಿಂಸೆಯನ್ನು ಮಾಡದೆ ಅಹಿಂಸೆಯೇ ಪರಮ ಧರ್ಮವೆಂದು ಬಗೆಯುವುದು, ಪರರ ವಸ್ತುಗಳನ್ನು ಎಂದೂ ಆಶಿಸದೆ ಅವನ್ನು ಅವುಗಳೊಡೆಯರು ಯುಕ್ತ ಹಸ್ತದಿಂದೆತ್ತಿಕೊಟ್ಟಾಗ ಮಾತ್ರ ಅವನ್ನು ಸಂತೋಷದಿಂದ ಸ್ವೀಕರಿಸುವುದು, ಪರಸ್ತ್ರೀಯರನ್ನು ಅಕ್ಕತಂಗಿಯರಿಗೆ ಸಮಾನವಾಗಿ ಭಾವಿಸುವುದು; ಸತ್ಯನಿಷ್ಠರಾಗಿದ್ದು ಅಸತ್ಯವನ್ನು ದ್ವೇಷಿಸುವುದು ಮತ್ತು ಮದ್ಯಸೇವನೆಯನ್ನು ಯಾವ ಸಂದರ್ಭದಲ್ಲಿಯೂ ಮಾಡದಿರುವುದು- ಇವು ಸುಮಾರು ಎರಡೂವರೆ ಸಾವಿರ ವರ್ಷಗಳ ಪೂರ್ವದಲ್ಲಿ ಗೌತಮ ಬುದ್ಧನು ಉಪದೇಶಿಸಿದ ಪಂಚಶೀಲ ತತ್ವಗಳು ಮಾನವರು ಇಂದಿಗೂ ಈ ಐದು ತತ್ವಗಳನ್ನು ತಮ್ಮ ದಿನನಿತ್ಯದ ಅನುಷ್ಠಾನಗಳಲ್ಲಿ ಸರಿಯಾಗಿ ಅಳವಡಿಸಿಕೊಂಡು ಆಚರಿಸಿಕೆನಡೆದರೆ, ಪ್ರಪಂಚವು ಸುಖಮಯವಾಗುವುದು ಮತ್ತು ಮಾನವನ ಜೀವಿತ ಪರಾಂಥೆಯೂ ಸಲಿಸಿ ಆತನಿಗೆ ಶಾಶ್ವತ ಸುಖವೂ ದೊರೆಯುವುದು.

ಭಾರತದ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನರು ಒಡಿಸ್ಸ ರಾಜ್ಯದ ಪುರಿ ಕೋಟೆಯಲ್ಲಿ ಒಂದು ಸಂದರ್ಭದಲ್ಲಿ ಮಾತನಾಡುತ್ತ ಮಹಾತ್ಮಾ ಬುದ್ಧನು ನಿರೂಪಿಸಿರುವ ಪಂಚಶೀಲ ತತ್ವಗಳ ಪ್ರಕಾರ ಮಾನವರೆಲ್ಲರೂ ತಮ್ಮ ಜೀವನವನ್ನು ರೂಪಿಸಿಕೊಂಡು ರಾಷ್ಟ್ರವು ಈಗ ನಡೆಸುತ್ತಿರುವ ಸುನಾರಚನಾ ಕಾರ್ಯದಲ್ಲಿ ಪರಿಶ್ರಮವಹಿಸಬೇಕೆಂಬುದಾಗಿ ಸೂಚಿಸಿದರು ಇಂತಹ ಸೂಚನೆಗಳು ಹಲವಾರು ವರ್ಷಗಳಿಂದಲೂ ಬರುತ್ತಿವೆ ಭಾರತದ ನಿರ್ದೇಶಿಯ ನೀತಿಯಾದರೂ ಗೌತಮ ಬುದ್ಧನ ಈ ಮೇಲೆ ನಿರೂಪಿಸಿದ ಪಂಚಶೀಲ ತತ್ವಗಳನ್ನೇ ಆಧರಿಸಿಕೊಂಡಿದೆ ಆದರೆ, ಈ ತತ್ವಗಳನ್ನು ಕಾರ್ಯಾಚರಣೆಗೆ ತರುವಲ್ಲಿ ಅದೆಷ್ಟು ಸಹನೆಯ ಅಗತ್ಯವಿದೆ!

ಗೌತಮ ಬುದ್ಧನಾದರೂ ಸಂಸಾರ ಬಂಧನವನ್ನು ಕಡಿದುಕೊಂಡ ಮಹಾತ್ಮ ಆತನನ್ನು ಯಾವ ದುಷ್ಟ ಗ್ರಹವೂ ಕಾಡಲಿಲ್ಲ; ತತ್ಪರಿಣಾಮವಾಗಿ ಆತ ಸತ್ಯವನ್ನು ಕಂಡುಕೊಂಡು ಜನತೆಗೆ ಶಾಶ್ವತ ಸುಖದ ಹೆದ್ದಾರಿಯ ಮೈಲುಗಲ್ಲುಗಳೆಂದು ಪಂಚಶೀಲಗಳನ್ನು ಉಪದೇಶಿಸಿದನು ಸುಪ್ರಸಿದ್ಧ ದಾರ್ಶನಿಕರಾದ ರಾಧಾಕೃಷ್ಣನರು ಅವುಗಳನ್ನು ಸುನರ್ಸ್ಮರಿಸಿದರು. ತತ್ವೋಪದೇಶ ಮಾಡುವವರು ಅನ್ನು ತಾವು ಕಟ್ಟುನಿಟ್ಟಾಗಿ ಅನುಸರಿಸಲೇಬೇಕೆಂದು ಪಟ್ಟುಹಿಡಿಯುವುದು ಇಂದಿನ ದಿನಗಳಲ್ಲಿ ಕಷ್ಟವಾದೀತು ಆದರೆ, ಡಾ ರಾಧಾಕೃಷ್ಣನರದೊಂದು ವಿಚಿತ್ರಾಭ್ಯಾಸ ತಾವು ಆಚರಿಸದಿರುವುದನ್ನು ಅವರು ಇನ್ನೊಬ್ಬರಿಗೆ ಮಾಡಿರೆಂದು ಹೇಳುವುದಿಲ್ಲ ಎಂತಲೇ ಅವರು ಮಾಡಿದ ಉಪದೇಶ ಸಾರ್ಥಕವಾದುದು.

ಆದರೆ, ನಮ್ಮ ಜನತೆಯಲ್ಲಿ ಈ ಪಂಚಶೀಲಗಳನ್ನು ಆ ಚರಣೆಯಲ್ಲಿ ತರುವ ಸಾಧ್ಯಾಸಾಧ್ಯತೆಗಳನ್ನು ಗಮನಿಸಿದರೆ ನಾವಿಂದು ಈ ತತ್ವಗಳಿಂದ ಯೋಜನ ದೂರದಲ್ಲಿರುವುದು ಕಂಡು ಬರುತ್ತದೆ ಪ್ರಾಮಾಣಿಕತೆ, ಸತ್ಯಸಂಧನೆಗಳಿರದನ್ನೂ ನಾವು ಸಂಪೂರ್ಣ ಮರೆತು ಬಿಡುತ್ತೇವೆ. ಇಂದಿನ ಪ್ರಸಂಜ ನಡೆಯ ತ್ತಿರುವುದ ಕೇವಲ ಹಣದ ಬಲದಿಂದ. ಪ್ರಾಮಾಣಿಕನಾದ ವನಿಗೆ ಸಮಾಜದಲ್ಲಿ ಸ್ಥಾನಮಾನವಿಲ್ಲದಂತಾಗಿದೆ ಸತ್ಯಸಂಧತೆಗೆ ತಿಲಾಂಜಲಿ ಬಿಟ್ಟು ಸತ್ಯ ಹೇಳಿದವನು ಸತ್ತೇ ಹೋದಾನು ಎಂಬಂತಹ ಪರಿಸ್ಥಿತಿ ಇಂದು ಕಾಣಿಸಿಕೊಂಡಿದೆ ಎಲ್ಲೆಲ್ಲಿಯೂ ಸ್ವಾರ್ಥಸ್ವರೂಪವು ಎದ್ದು ಬಿಡದಾವರಿಸಿ ಮಾನವನನ್ನು ತನ ಕೈವಾರಿಯನ್ನಾಗಿಸಿಕೊಂಡಿದೆ ಪಾನ ಸ್ರತಿಬಂಧ ಶಾಸನವಿದ್ದರೂ ಅದು ಬೇಲಿಯೇ ಹೊಲ ಮೇದಂತಾಗಿದೆ ಇಂತಹ ಕಲುಷಿತ ವಾತಾವರಣದ ನಡುವೆ ಇರುವ ಮಾನವನು ಪ್ರಾಮಾಣಿಕತೆಯನ್ನುಲಸಿಕೊಂಡು ಪಂಚಶೀಲಗಳನ್ನು ಆಚರಿಸುತ್ತ ಕುಳಿತರೆ, ಆತನ ಉದರಪೋಷಣೆಯು ಯಾವ ರೀತಿಯಿಂದಾಗಬೇಕು?

ಹೀಗಿದ್ದರೂ ಅಲ್ಲಲ್ಲಿ ಕಲವೆಡೆ ಸಜ್ಜನರು ಇರುತ್ತಾರೆ, ಎಂತಲೇ ಇಂದು ಕೆಸರಿಗಾದರೂ ಪಂಚಶೀಲಗಳು ಉಳಿದಿವೆ. ಪ್ರಾಮಾಣಿಕತೆಗೆ ಸ್ಥಾನವಿದೆ ಮಾನವನು ತನ್ನನ್ನು ಅರಿಯದೆ ತನ್ನ ಸ್ವಾರ್ಥ ಸಾಧನೆಯನ್ನೇ ಮೂಲ ಧ್ಯೇಯವಾಗಿಟ್ಟುಕೊಂಡು ಬಾಳುವವರೆಗೆ ಈ ಪಂಚಶೀಲಗಳು ಪ್ರಚಾರಕ್ಕೆ ಬರಲಾರವು ಆದರೆ, ಒಬ್ಬನು ಇದನ್ನು ತಿಳಿದುಕೊಳ್ಳುವುದಾದರೂಹೇಗೆ?

ನಾವಿಂದು ನಮ್ಮ ಉನ್ನತಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುತ್ತಿದ್ದೇವೆ ನಮ್ಮ ದೇಶದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕಾಗಿ ಬೇರೆ ಬೇರೆ ಕಾರ್ಯಕ್ರಮಗಳನ್ನಿಟ್ಟುಕೊಂಡಿದ್ದೇವೆ ನೂತನ ಮಾರ್ಗಗಳನ್ನು ರಚಿಸಿ ಸಂಪರ್ಕಹಚ್ಚಿಸುವುದು ನೂತನ ಒಡ್ಡುಗಳನ್ನೊಡ್ಡಿ ಹಸನು ಭೂಮಿಯ ಪ್ರಮಾಣ ಹೆಚ್ಚಿಸುವುದು, ವಿದ್ಯುಚ್ಛಕ್ತಿ ಮೂಡಲಾದ ಅಮೂಲಿಕೋಪಯೋಗಿ ಶಕ್ತಿಗಳನ್ನು ಉತ್ಪಾದಿಸುವುದು ನಿರಿಗ-ಮೇಲೆ ಸಂಕಗಳನ್ನು ಕಟ್ಟಿಸುವುದು ಇಂತಹ ನೂರಾರು ಕಾರ್ಯಕ್ರಮಗಳು ನಮ್ಮ ಯೋಜನೆಗಳಲ್ಲಿ ಅಡಕವಾಗಿವೆ ಇವುಗಳಲ್ಲಿ ಕೆಲವೊಂದು ಕಾರ್ಯರೂಪಕ್ಕೂ ಬಂದಿವೆ ಆದರೂ ನಮ್ಮ ಪ್ರಗತಿಯಾಗಿದೆಯೆ? ನಾವು ಜೀವಿಸುವ ಮಟ್ಟ ಉನ್ನತಗೊಂಡಿದೆಯೆ? ಹತ್ತು ವರ್ಷಗಳ ಹಿಂದೆ ಮತ್ತು ಇಂದು- ನಮ್ಮ ಸಮಾಜದಲ್ಲಿ ಪ್ರಗತಿಯ ತಿಲಾಂಶವಾದರೂ ತೋರಿಬಂದಿದೆಯೆ? ರಾಜಕೀಯ ರಣಗಳು ಇದಕ್ಕೆ ಪರಿಹಾರವಾಗಿ ಬೇರೆ ಬೇರೆ ನೆಪವನ್ನು ಎತ್ತುತ್ತಾರೆ ಆದರೆ, ಸ್ವಾಭಾವಿಕವಾಗಿ ಅವರಿಗೂ ಗೊತ್ತು— ಯೋಜನೆಗಳ ಕಾರ್ಯಾಚರಣೆ ಪ್ರಾಮಾಣಿಕವಾಗಿ ನಡೆದಿಲ್ಲ ಎಂದ ಪ್ರತಿ ಕಾರ್ಯಕ್ರಮಗಳು ರೂಪಿಸುವ ಗಲಗೆಯಿಂದ ಅವು ಕೂ ನಗೊಳ್ಳುವವರಗೆ—ಕೆಲವೊಮ್ಮೆ ಅನಂತರವು- ಅಲ್ಲಿ ಪಂಚನೆಗಳು ಹೇಳಲ ರೆದ ಪ್ರಜ್ಞೆ ಪಡೆಯುತ್ತಿವೆ ಬುದ್ಧನನ್ನೇ ಶ್ರೇಷ್ಠ ಪುರುಷನೆಂದು, ಆತನುಪದೇಶವನ್ನೇ ಸದುಪದೇಶವೆಂದು ಗಣಿಸುವಂತಹ ಪ್ರದಾನಿ ನೆಹರುವಿನಿಗೂ ತನ್ನ ಪಕ್ಷದಲ್ಲಿ ಪ್ರಾಮಾಣಿಕತೆ ಹಾಗೂ ಸ್ವಾರ್ಥತ್ಯಾಗವಿರುವ ಮಟ್ಟಿಗೆ ವಿಶ್ವಾಸವಿದೆ ಈ ಪ್ರಾಮಾಣಿಕತೆಯು ದೂರವಾದಂದೆ, ದೇಶದ ಉದ್ಧಾರವು ಗುರುವು ಸಾಧ್ಯವೆಂಬುದು ಸರಕಾರದ ಯೋಜನೆಗಳ ಕಾರ್ಯರೂಪಕ್ಕೆ ಒಗುವುದರಿಂದಲ್ಲವೆಂದು ಡಾ ರಾಧಾಕೃಷ್ಣನ್ ನುಡಿದಿದ್ದು ಒತ್ತಾಯವಾಗಿದೆ

ಸರಕಾರೀ ಕಚೇರಿಗಳಲ್ಲಿ ಹಿಡಿದ ಒಂದು ಲಂಚ್ಚದ ಮೇಲೆ ಎಲ್ಲ ವರ್ಗದ ಜನರು ಸಮಯ ಒಂದಾಗ ತಮ್ಮ ತಿ ಪ್ರಾಮಾಣಿಕತೆಯನ್ನು ಮರೆತೆದ್ದು ಕಾರ್ಯರೂಪಕ್ಕೆ ತಂದೇ ಕರುತ್ತಾರೆ ಸರಕಾರಿ ಬಲಯ ದಲ್ಲಿ ಕಟ್ಟಿದ ಕಂಟ್ರಾಕ್ಟೆನೀಡುವುದು ದಿನನಿತ್ಯ ಸತ್ಯ ಸಂಗತಿ ಜನರ ಕಂತುಕೊಂಡ ಸಂಗತಿ ಪ್ರಜಾಸ್ರಭುತ್ವ ರಾಷ್ಟ್ರದ ಜನತಾ ಸರಕಾರದ ಸೇವಕರು ಈ ರೀತಿಯ ಸತ್ಯ ಸಂದರಾಗಿದ್ದರೆ ಜನತೆಯಾದರೂ ಏನು ಮಾಡಬೇಕು? ಕಾಲು ಪರೋಪದೇಶ ಪಾಂಡಿತ್ಯದಿಂದ ತಮ್ಮ ನಾಲಗೆಯ ಚುರುವನ್ನು ತೀರಿಸಿ ಸೀವೆಲ್ಲರೂ ಉನ್ನತರಾಗಬೇಕು ಪ್ರಾಮಾಣಿಕರಾಗಬೇಕು, ನಿಸ್ವಾರ್ಥ ದೃಷ್ಟಿಯಿಂದ ಜನಸೇವೆಮಾಡಬೇಕು ಎಂದು ಹೇಳಿದರೆ, ಅವರ ಉಪಯೋಗವಾದರೂ ಏನು?

ತರಗತಿಯಲ್ಲಿ ಒಬ್ಬ ಉಪಾಧ್ಯಾಯರು ಸಿಟ್ಟುಮಾಡಿಬಾರದೆಂದೆ ವಿದ್ಯಾರ್ಥಿಗಳಿಗೆ ಹೇಳಿದರಂತೆ ಆಗ ಒಬ್ಬ ಹುಡುಗನೆದ್ದು, ಸ್ವಾಮಿ, ನಿಮಗೆ ಸಿಟ್ಟು ಬರುವುದಿಲ್ಲವೆ? ಎಂದು ಆಡ್ಡ ಸವಾಲು ಕೇಳಿದನಂತೆ ಅಧ್ಯಾಪಕರು ಇಲ್ಲವೆಂದರು ಹುಡುಗ ಖಂಡಿತಕ್ಕೂ? ಎಂದು ಪ್ರಶ್ನಿಸಿದ ಹೀಗೆಯೇ ಪಂಚಾಯಿತಿ ಮಾತು-ಮರುಮಾತು ಕೊನೆಗೆ ಉಪಾಧ್ಯಾಯರು ತಾನೆಷ್ಟು ಬಗೆಯಿಂದ ಇಲ್ಲವೆಂದರೂ ಕೇಳದ ತುಂಟ ಹುಡುಗನನ್ನು ದುರದುರನೆ ನೋಡಿ, ನಿನಗೆಷ್ಟು ಹೇಳಬೇಕೋ ನನಗೆ ಸಿಟ್ಟು ಬರುವುದಿಲ್ಲವೆಂದು? ಎಂದು ಗರ್ಜಿಸಿ ಕೆಂಗಣ್ಣು

(ಸಂ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಕವಿವರ್ಯ ಆನಂದ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ.

ಪ್ರೆಸ್ ಎಂಬ ಭವ್ಯ ಕಾವ್ಯಾಲಯದಿಂದ ಕಾದಂಬರಿಯ ಮಹಾ ಪ್ರವಾಹ ಹೊರಟಾಗ ಎನಿತೆನಿತೋ ನವ್ಯ ಕಾದಂಬರಿಗಳನ್ನೋದಿ ಅದ ಎಷ್ಟೋ ಸಾಹಿತಿಗಳಂತೆ ಅದ ಸಾಹಿತಿ ನಮ್ಮ ಆನಂದನೆಂದು ತಿಳಿಯಬೇಡಿ. ಅಂಥ ಸಹಸ್ರ ಕಾದಂಬರಿಗಳನ್ನು ಮಥನಮಾಡಿ, ವಿಷಯವನ್ನು ಅರೆದು, ಗುದ್ದಿ, ಚೂರ್ಣವಾಗಿಸಿ ಸಾಹಿತ್ಯ ಚೂರ್ಣವೆಂದು ಆಮೋಷಿಸಿ ಮೆದುಳನ್ನೇ ಸಾಹಿತ್ಯಸಾಗರವಾಗಿಸಿದ ಸಾಹಿತ್ಯವಾರಿಧಿಯೇ ಕವಿವರ್ಯ ಆನಂದ.

ಆನಂದ ಸಾಹಿತ್ಯ ಕಾರ್ಯವೇಂಬ ರಾಜಮಾರ್ಗದಲ್ಲಿ ಕಾಲಿಟ್ಟಾಗ, ಅವನಿಗೆ ಪತ್ರಿಕಾ ಪ್ರಪಂಚದಲ್ಲಿ ಎದುರಾದ ವಾರಪತ್ರಿಕೆಯೇ "ಪ್ರೇಮದೂತ". ಅಂದಿನಿಂದ ಅದೇ ಅವನಿಗೆ ಸಾಹಿತ್ಯ ದೂತ! ಅಂದು ಆರಂಭಿಸಿದ್ದಾನೆ, ಪ್ರೇಮದೂತದಸಂಪಾದಕರಿಗೆ ಕೃತಿಗಳನ್ನು ಕಳುಹಿಸಲು. ಇಂದಿನವರೆಗೆ ೩೪ ಚಿಕ್ಕ ಕತೆಗಳು, ೨೬ ಕವಿತೆಗಳು, ೧೮ ಲೇಖನಗಳನ್ನು ಕಳುಹಿಸಿದ್ದಾನೆ. ಇಂದಿನ ತನಕ ಒಂದೂ ಪ್ರಕಟವಾಗಿಲ್ಲ. ಆದಾಯವಿಲ್ಲದಿದ್ದರೂ ಅವನ ತಿಂಗಳ ಸ್ಟಾಂಪು ಖರ್ಚೇ ಸೆಂಟ್ರಲ್ ಗವರ್ಮೆಂಟಿಗೆ ಧಾರಾಳವೆನಿಸುವಷ್ಟಾಗುತ್ತಿತ್ತು. ಅಲ್ಲದೆ ಇತರ ಪತ್ರಿಕೆಗಳೊಡನೆಯೂ ಸಾಕಷ್ಟು ಹೆಣಗಾಡುತ್ತಿದ್ದ.

S. S. L. C. ಓದಿ ಪಾಸಾಗಿ, ಬಳಿಕ ನಿರುದ್ಯೋಗಿಯಾಗಿ ಮನೆಯಲ್ಲಿ ಕುಳಿತು, ಲೈಬ್ರರಿಯಿಂದ ಕಾದಂಬರಿಗಳನ್ನು ತಂದು, ಓದಿ ನಿರುದ್ಯೋಗದ ನಿವಾರಣೆಯೊಂದಿಗೆ ಸಾಹಿತ್ಯ ಸಾಮ್ರಾಟನಾಗಲು ಹೊರಟ ಕವಿ ನಮ್ಮ ಆನಂದ. ನಿರುದ್ಯೋಗಿಗಳಿಗೇ ಹೆಚ್ಚಾಗಿ ಕಾವ್ಯ ಪ್ರತಿಭೆ ಒಡಮೂಡುವುದೆಂಬುದಕ್ಕೆ, ನಿರುದ್ಯೋಗಿಗಳೇ ಹೆಚ್ಚೆಚ್ಚು ಕವಿಗಳಾಗುವುದು ಎಂಬುದಕ್ಕೆ ಆನಂದನೇ ಸಾಕ್ಷಿ. ಕವಿಗಳೆಲ್ಲಾ ನಿರುದ್ಯೋಗಿಗಳೆಂದು ಮಾತ್ರ ಆನಂದ ಹೇಳಲಾರ.

ಸ್ವಾಭಾವಿಕ ಜೀವನ, ನೈಜತೆ ತುಂಬಿ ತುಳುಕುವ, ಸ್ವೇಚ್ಛಾರಸ ಚಿಮ್ಮುವ ಅಶ್ಲೀಲವೆಂಬ 'ಅಶವಾದ'ವನ್ನು ಹೊತ್ತರೂ, ನವ್ಯಾದರ್ಶಭರಿತವಾದ, ನಮ್ಮ ನಿಮ್ಮ ಎಲ್ಲರದೂ ಆದ, ನಿತ್ಯ ನವೀನ, ಸುಂದರ ಸುಲಲಿತ, ಮೋಹಕ ಮಧುರ, ಸಾಮಾಜಿಕ ಜೀವನದ ಸಾಮಾಜಿಕ ಕಾದಂಬರಿಗಳು ಆನಂದನ ಮನಸೆಳೆಸುವು. ಅವುಗಳ ಸುಲಭರಚನೆ, ಸುಲಭ ಶೈಲಿಗಳನ್ನು ಕಂಡು, ಆನಂದ ಹಿಗ್ಗಿದ. ಅಂತಹ ಅಪಾರ ಕಾದಂಬರಿಗಳನ್ನು "ಚಿರಂಜೀವಿ" ಗ್ರಂಥಗಳನ್ನು ಸೃಷ್ಟಿಸಿ, ಜನರಿಗೊಂದು ಕಣ್ಣಾಗಿ ಮೆರೆವ ದಿನಗಳನ್ನು ತನ್ನ ಆಕಾಶಮಂದಿರದ ಚಲಚ್ಚಿತ್ರದ ಪರದೆಯ ಮೇಲೆ ಫಿಲ್ಮುಗಳಾಗಿಸಿ ನೆಕುಂಡಿಗೆ ಖಳರಂತೆ ಓಡಿಸಿದ.

ಅದೊ, ಆ ವಾರದ 'ಪ್ರೇಮದೂತ'ದ ಕಾಪಿ ಆನಂದನ ವಿಳಾಸಕ್ಕೆ ಬಂದಿತೆ! ಬಡೆವ, ಹೊಡೆವ, ನಲಿವ, ಮಿಡಿವ ಎದೆಯಿಂದ ಪತ್ರಿಕೆಯನ್ನು ನೋದಿದ ಆನಂದ. ರೋಮಾಂಚನಗೊಂಡು ಮೈ ಪುಳಕಗೊಳ್ಳುತ್ತಿರಲು ತನ್ನ ಹೆಸರಿನಿಂದ ಪ್ರಕಟವಾದ ಚಿಕ್ಕಕತೆ "ಪ್ರೇಮಿಯ ಮಿಲನ"ವನ್ನು ಕಂಡು heart fail ಆಗುವಷ್ಟು ಆನಂದದಿಂದ ಆನಂದ ಕಂಡು ಆನಂದಿಸಿದ.

ಹಿಂದಿನ ಶ್ರೇಷ್ಠ ಕವಿಗಳಾದ ಷೇಕ್ಸ್‌ಪಿಯರ್, ಬರ್ನಾಡ್ ಷಾಹ, ಐನ್‌ಸ್ಟೀನ್, ಬಳಿಕ ಶರಚ್ಚಂದ್ರ, ಕವಿ ರವೀಂದ್ರ ಇತ್ಯಾದಿ ಇತ್ಯಾದಿ ಅಲ್ಲದೆ ಪ್ರಖ್ಯಾತ ಫ್ರೆಂಚ್ ಕಾದಂಬರಿಕಾರ ಗಾಯ್ 'ಡಿ' ಮೋಪಾಸ ಮೊದಲಾದವರು ಆನಂದನ ಕಣ್ಮುಂದೆ ಹಾದುಹೋದರು. ಇಂದಿನ ಹೆಸರಾಂತ ಕನ್ನಡ ಕಾದಂಬರಿಕಾರರಾದ "ಜಾ. ಜಾ. ಮಲ್ಲಿಗೆ ಮನೆ, ಬಿ. ಡಿ ಬಳ್ಳಿಪ್ಪ ರಾವ್, "ವನಿತಾಪ್ರಿಯ," ಜೋ. ಕ. ಬಂಡಿಮಠ, ಬದನೆ ಶಂಕರಾಚಾರ್ಯ" ಮೊದಲಾದವರು ಆನನ ಕಣ್ಮುಂದೆ ನಲಿದು ಕಣ್ಮರೆಯಾದರು.

೨೦ನೇ ಮಹಾಯುದ್ಧದಲ್ಲಿ ಜಗತ್ತನ್ನೇ ಗದಗುಟ್ಟಿ ನಡುಗಿಸಿದ ಹಿಟ್ಲರನಂತೆ ೨೦ನೇ ಶತಮಾನದಲ್ಲಿ ವಿಶ್ವವನ್ನೇ ಬೆಚ್ಚುಬೆರಗಾಗಿಸುವ ಮಹಾಕವಿ ನಾನಾಗಲೆಂದು ಆನಂದ ಕನಸು ಕಂಡ.

ಈ ಕಥೆ ಪ್ರಕಟವಾದಂದಿನಿಂದ ಎಲ್ಲಿಯಾಗಾಗ ನೋಡಿದರೂ ಆನಂದನ ಕೈಯಲ್ಲಿ ಒಂದು ಎಕ್ಸರ್‌ಸೈಸ್ ಪುಸ್ತಕ, ಒಂದು ಪೆನ್, ಅವನ ಕೃತಿ ಪ್ರಕಟವಾದ ಪ್ರೇಮದೂತದ ಪ್ರತಿ ಇವಿಷ್ಟನ್ನು ಕಾಣಬಹುದಾಗಿತ್ತು. ಅವನ ಕೋಣೆಗೆ ಹೋದರೆ ಅವನ ಮೇಜಿನ ಮೇಲೆ ಇರುವುದು ಅದೇ ಪ್ರೇಮ ದೂತ ಹೋಟಲಲ್ಲಿ ಕಾಫಿ ಕುಡಿಯಲು ಕುಳಿತಾಗ ಟೇಬಲಿನ ಮೇಲೆ ಎದ್ದು ತೋರುವುದು ಪ್ರೇಮದೂತ! ಗೆಳೆಯರದುರು ಮಾತನಾಡಲು ನಿಂತಾಗ ಆನಂದನ ಕೈಯಲ್ಲಿ ಕಣ್ಣಿಗೆ ಬೀಳುವುದು ಆ ಪ್ರೇಮದೂತ! ಆನಂದ ಮಾತನಾಡುವ ವಿಷಯವೇ ಸಾಹಿತ್ಯ. ಬೇರೆ ವಿಷಯ ಅವನಿಗೆ ರುಚಿಸದು. ಇದರೊಂದಿಗೆ ಅವನ ಕೃತಿ ಪ್ರಕಟವಾದ ವಿಷಯವೂ ಸೇರಿದೆ.

ಆ ಊರಿನಲ್ಲೊಂದು ವಾಚನಾಲಯವಿದೆ. ಅಲ್ಲಿಗೆ ಪ್ರೇಮದೂತ ಬರುತ್ತಿಲ್ಲ. ಆನಂದ ತನ್ನ ಕೃತಿ ಪ್ರಕಟವಾದ ಪ್ರೇಮದೂತ ಸಂಚಿಕೆಯೊಂದನ್ನು ಬೆಲೆತೆತ್ತು ಸಂಪಾದಿಸಿ ವಾಚನಾಲಯಕ್ಕೆ ಉಚಿತವಾಗಿ ಕೊಟ್ಟಿದ್ದಾನೆ, ಜನರು ವಾಚನ ಮಾಡಿ ತಿಳಿದುಕೊಳ್ಳಲೆಂದು ಅಲ್ಲಿ ಹೋಗುವವರೆಲ್ಲಾ ತನ್ನ ಕೃತಿಯನ್ನೇ ಓದಲು ಹೋಗುವರೆಂದು ಆನಂದ ಭಾವಿಸಿದ.

ಆನಂದನ ಕೋಣೆಗೆ ಹೋದರೆ ಗೋಡೆಯಲ್ಲೆಲ್ಲಾ ಪ್ರಖ್ಯಾತ ಕವಿಗಳ ಭಾವಚಿತ್ರಗಳನ್ನು ಕಾಣಬಹುದಾಗಿತ್ತು. ಅಂದಿನ ಎಲ್ಲಾ ಕವಿಗಳು, ಅವರ ಪ್ರಾಯ, ಜೀವನ ವಿವರ ಅವನಿಗೆ ತಿಳಿದಿತ್ತು. ಬೇರೆದಲ್ಲಿ ಎಲ್ಲೆಲ್ಲಿ ಕವಿ ಸಮ್ಮೇಳನ, ಸಾಹಿತ್ಯ ಸಂಘಗಳಿವೆಯೆಂದು ಆನಂದನಿಗೆ ಗೊತ್ತು. 'ಸಾಹಿತ್ಯ'ವೆಂದೊಡನೆ ಆನಂದನ ಕಿವಿ ನೆಟ್ಟಗಾಗುತ್ತಿತ್ತು. ಕೂಡಲೇ ಅಲ್ಲಿ ಬಾಯಿಹಾಕಿ ತನ್ನ ವಿದ್ವತ್—ಪ್ರಾಧಿನ್ಯವನ್ನು ಮರೆಯಿಸಿ ಬಿಡುವನು.

—ಆನಂದನ ತಂದೆ—

ನಿವೃತ್ತ ಅಮಾಲ್ದಾರರು ಆನಂದನ ತಂದೆ. ನಿರುದ್ಯೋಗಿಯಾಗಿ ಆನಂದ ಮನೆಯಲ್ಲಿ ಕುಳಿತಂದಿನಿಂದ ಅವನ ಖರ್ಚು ಅವರಿಗೆ ಗೋವಾ ಸಮಸ್ಯೆಯಂತೆ ತಲೆಬೇನೆಯಾಗಿತ್ತು.

ಒಂದು ದಿನ ಮಧ್ಯಾಹ್ನ. ಆನಂದ ಸ್ನಾನಕ್ಕೆ ಹೋಗಿದ್ದ. ತಂದೆ ರಾಧಾಶಂಕರರು ಊಟ ತೀರಿಸಿ ಆನಂದನ ಕೋಣೆಯತ್ತ ಬಂದರು. ಮೇಜಿನ ಮೇಲೆ 'ಪ್ರೇಮದೂತ' ಇತ್ತು. ತೆಗೆದು ನೋಡಿ, ಆನಂದನ ಹೆಸರನ್ನು ಕಂಡು ಕುತೂಹಲದಿಂದ ಓದಿ ಮುಖ ಮುರಿದು ಕೊಂಡರು. "ಸಾಹಿತ್ಯವೆಂದರೆ ಕಸ; ಸಾಹಿತಿಯೆಂದರೆ ಬೀದಿ ಗುಡಿಸುವ ಝಾಡು ಮಾಲಿ". ಎಂದೇ ಅವರ ಅಭಿಪ್ರಾಯ. ನನ್ನಂತಹ ಹೆಸರುವಾಸಿಯಾದ ಅಮಾಲ್ದಾರನ ಮಗನಾಗಿ ಸುಟ್ಟ ಈ ಕೆಲಸ ಮಾಡಿದನಲ್ಲಾ ಎಂದು ಕಿಡಿಕಿಡಿಯಾದರು. ಸ್ನಾನಮಾಡಿ, ಒಳ ಬರುತ್ತಿದ್ದ ಆನಂದನ ಮುಖದ ಮೇಲೆ ಪೇಪರನ್ನು ಎಸೆದು "ಥೂ ಹಾಳು ಪೋರಿಯವನೇ, ಯಾಕೋ ಈ ಕೇಸೀ ಕೆಲಸ? ಸುಮ್ಮಸುಮ್ಮನೆ ಹಣ ನಿನ್ನಪ್ಪನ ಮನೆಯಿಂದ ಇದಕ್ಕೆಲ್ಲಾ ಖರ್ಚುಮಾಡಲು ಬರುತ್ತದೆಯೇ? ನಿನ್ನ ಮತಿ ಹಾಳಾಗಿದೆ. ಮನೆಯನ್ನು ಹಾಳುಮಾಡುತ್ತೀಯಾ? ಮೂರ್ಖ!" ಎಂದು ಛೀ ಹಾಕಿದರು. ಆನಂದನಿಗೆ ತಂದೆಯ ಬಾಯಿಯಿಂದ ಹೊರಡುತ್ತಿದ್ದ ಶಾಲಂಕಾರ ಪೂರಿತ ಶಬ್ದಗಂಗೆಯಲ್ಲಿ ಇನ್ನೊಮ್ಮೆ ಮಿಂದಂತಾಯಿತು. ಅಂದಿನಿಂದ ಮಗ 'ಕವಿ ಆನಂದ'ನನ್ನು ಕಂಡರೆ ಕಸಿಯನ್ನು ಕಂಡಂತೆ ಮಾಡಲಾರಂಭಿಸಿದರು ತಂದೆ ರಾಧಾ ಶಂಕರರು.

—ಸಿನಿಮಾ ಥಿಯೇಟರ್—

ಆನಂದ ಸಿನಿಮಾ ನೋಡುತ್ತಿದ್ದಾನೆ. ಪಕ್ಕನೆ ಪೆನ್ನು ತೆಗೆದು ಪುಸ್ತಕ ಓದಿ ಏನನ್ನೋ ಬರೆದುಕೊಳ್ಳುತ್ತಿದ್ದಾನೆ. ಸ್ವಲ್ಪ ದೂರದ ಆಸನದಲ್ಲಿ ಇಬ್ಬರು ಕರುಣರು ಕುಳಿತಿದ್ದರು. ಇವರೂ ಆನಂದನ ಹಳೆಗೆಳೆಯರೇ. ಆನಂದನೆಂದರೆ ಇವರಿಗೆಲ್ಲಾ ಒಂದು ಹಾಸ್ಯದ ಸಾಮಾಗ್ರಿ. ಅವರಲ್ಲಿ ಒಬ್ಬನೆಂದ:

"ಅಲ್ಲಾ, ಪ್ರಭಾಕರ್, ಆನಂದ ಈ ಸಿನಿಮಾ ನೋಡುವ ಮಧ್ಯದಲ್ಲೇ ಏನು ಬರೆದುಕೊಳ್ಳುತ್ತಿದ್ದಾನೆ? ಸಿನಿಮಾ ಸಾರಾಂಶವೇನು ಕಡೆಗೆ?"

ಪ್ರಭಾಕರ ಹೇಳಿದ: "ಇರಬಹುದು ಕಣೊ, ಅಂದ ಹಾಗೆ ಅವನೇ ಹೇಳುತ್ತಿದ್ದನಲ್ಲಾ ಆಗಾಗ "ಹೃದಯದಲ್ಲಿ ಕಾವ್ಯ ಭಾವನೆಗಳು ಪಕ್ಕನೆ ಉದಿಸಿದಾಗಲೆಲ್ಲಾ, ಕೂಡಲೇ ಅದನ್ನು note ಮಾಡಿಕೊಳ್ಳಬೇಕು. ಬಳಿಕ ಅದರ ರಸವು ಇಂಗಿಹೋಗುವುದು. ಅಲ್ಲದೆ ಸಾವಿರಾರು ಮಧುರ, ದಿವ್ಯ, ಉಚ್ಚ ಕಾವ್ಯಭಾವನೆಗಳು, ನವ್ಯ ವಿಚಾರಗಳು ಹುಟ್ಟುತ್ತಿರುವಾಗ ಎಲ್ಲವನ್ನು ನೆನಪಿಸಲ್ಪಿಟ್ಟುಕೊಳ್ಳುವುದೂ ಪ್ರಯಾಸ" ಎಂದು".

"ಅಬ್ಬಬ್ಬಾ, ಕವಿಯೆಂದರೆ ಹೀಗಿರಬೇಕು! ವಿಲಕ್ಷಣಕವಿ!"

"ವಿಲಕ್ಷಣ ಮಾತ್ರವಲ್ಲಾ, ವಿಪರೀತ, ವಿಭ್ರಮೆ ಕಣೊ, ಅಥವಾ ಇದೊಂದು ಹಿಸ್ಟೀರಿಯಾದಂತಹ ರೋಗವಾಗಿರಲೂ ಬಹುದು!"

"ಮತ್ತೇನು? ಸಾಹಿತ್ಯವೆಂದರೆ ಅದೊಂದು ರೋಗವೇ."

"ಈ ಕುಚ್ಚೆಗೆ ಮದ್ದೂ ಇಲ್ಲ ಸುಂದರ್, ಇದೊಂದು ಭೀಕರ ಉನ್ಮಾದ!"

ಇದು ಕಿವಿಗೆ ಬಿದ್ದೊಡನೆ ಆನಂದನ ಸಿನಿಮಾ ಮಧ್ಯದ ಕಾವ್ಯಪ್ರಪಂಚ ಅದೃಶ್ಯವಾಗಿ ಇಂಜಕ್ಷನ್‌ಗಳನ್ನು ಚುಚ್ಚಿದ ಹಾಗಾಯಿತು.

ಹಿಂದಿನ ಸೀಟಿನಲ್ಲಿ ಇಬ್ಬರು ತರುಣಿಯರು ಕುಳಿತಿದ್ದರು. ಒಬ್ಬಳು ಮೆಲ್ಲನೆ ಇನ್ನೊಬ್ಬಳನ್ನು ಕೈಯಿಂದ ತಿವಿದು:

"ನೋಡೆ, ಈ ಮುಂದಿನ ಸೀಟಿನಲ್ಲಿ ಕುಳಿತ ಮಹಾ ವಿಲಕ್ಷಣ ವ್ಯಕ್ತಿ ಯಾರು?"

"ಓ ನೀನು ತಿಳಿದೇ ಇಲ್ಲವೆ? ಮೊನ್ನೆ ಪ್ರೇಮದೂತದಲ್ಲಿ ಕಥೆ ಬಂತಲ್ಲಾ, ಪ್ರೇಮಿಯ ಮಿಲನ! ಅದನ್ನು ಬರೆದವರಲ್ಲಾ ಆನಂದ ಅಂತ; ಅವರೇ ಇವರು! ಊರಿಗೆಲ್ಲಾ ಇವರು ತುಂಬಾ ಪ್ರಸಿದ್ಧರ!" ಎಂದು ನಕ್ಕಳು. ಆ ಎರಡನೆಯ ಯುವತಿ!

ಇದನ್ನು ಕೇಳಿದ ಆನಂದ ಹಿಗ್ಗಿ ಹೀರೇ ಹೂವಾದ. ಆ ತರುಣಿಯ ಪ್ರೇಮದೃಷ್ಟಿ ನನ್ನ ಮೇಲೆ ಬಿದ್ದಿರಬಹುದೆ?

(೧೦ನೇ ಪುಟ ನೋಡಿರಿ)

ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಲಿ

ಝೂಂಡು
ಬಾಲಶೂಲಾರ್ಕ
ಉಪಯೋಗಿಸುವುದರಿಂದ
ಮಕ್ಕಳ ಉದರ ರೋಗಗಳೆಲ್ಲಾ
ಖಾತ್ರಿಯಾಗಿ ಗುಣಹೊಂದುವುದು.
ಝೂಂಡು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂಬ್ರ 7015, ಬೊಂಬಾಯಿ.
ಮದ್ರಾಸ್ ಸ್ಟೇಟಿನಲ್ಲೆಲ್ಲಾ ಸ್ವಾಕಿಸ್ಟರಿರುವರು.

ರಾಷ್ಟ್ರೀಯ ಸಮಾಜ ಸ್ಥಾಪನೆ–೨

ಭಾರತ ಸೇವಕ ಸಮಾಜ

ಭಾರತ ಸೇವಕ ಸಮಾಜದಲ್ಲಿ ಸಂಚಮುಖೀ ಕಾರ್ಯಕ್ರಮವಿರುವುದು ಇದರಲ್ಲಿ ಅನೇಕ ಭಾಗವಿಭಾಗಗಳಿವೆ. ದೇಶದಲ್ಲಿ ಸಂಪೂರ್ಣವಾಗಿ ಐಕ್ಯವು ನೆಲೆಗೊಳ್ಳದೆ ಹೋದರೆ, ದೇಶವು ಆಂತರಿಕವಾಗಿ ಪ್ರಗತಿಯನ್ನು ಹೊಂದುವಂತಿಲ್ಲ ಅಲ್ಲದೇ ಬಾಹ್ಯಾಪಾಯಗಳಿಂದ ಸುರಕ್ಷಿತವಾಗಿರುವುದೂ ಅಸಾಧ್ಯವಾದುದರಿಂದ ಎಲ್ಲವುಗಳಿಗಿಂತಲೂ ಮುಖ್ಯ ಉದ್ದೇಶವು ರಾಷ್ಟ್ರೀಯ ಐಕ್ಯವನ್ನು ಬೆಳೆಸುವುದಾಗಿದೆ. ಇಂದು ಅನೇಕ ಭೇದಭಾವನೆಗಳಿಂದಿದುಗ್ಗಾನಿಗೊಂಡಿದೆ ಪ್ರಾಂತಭೇದ, ಜಾತಿಭೇದ, ಭಾಷಾಭೇದ ಮತ್ತು ಇಂತಹ ಇನ್ನೆಷ್ಟು ಭೇದಗಳಲ್ಲಿವೆಯೆಂದು ಹೇಳಬರುವುದಿಲ್ಲ. ಇಂತಹ ಭೇದಭಾವನೆಗಳೇ ನಮ್ಮನ್ನು ದಾಸ್ಯಕೂಪದಲ್ಲಿ ಕೆಡಹಿದುವು. ಕಲವಾರು ವರ್ಷಗಳ ಗುಲಾಮಿತನದಿಂದ ತಪ್ಪಿಸಿಕೊಂಡು ಸುಖಪರತಂತ್ರರಾಗಲು ಯಾರೂ ಒಪ್ಪಲಾರರು. ಆದುದರಿಂದ ರಾಷ್ಟ್ರದ ಶಕ್ತಿಯನ್ನು ಹೆಚ್ಚಿಸುವುದು ಮತ್ತು ಶಾಶ್ವತವಾಗಿ ಅದನ್ನುಳಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಇದರಲ್ಲಿ ಎಲ್ಲರೂ ಭಾಗವಹಿಸಬೇಕಾಗಿದೆ

ದೇಶದ ಧಾನ್ಯ ಸಂಪತ್ತನ್ನು ಹೆಚ್ಚಿಸುವುದು ಮತ್ತು ಅಪವ್ಯಯವನ್ನು ತಡೆಹಿಡಿಯುವುದು ಎರಡನೆಯ ಅಂಗವಾಗಿದೆ. ರೈತ ಮತ್ತು ಕಾರ್ಮಿಕರ ದೇಶವೆಂದು ಕರೆಯಲಾಗುವ ನಮ್ಮ ದೇಶದಲ್ಲಿ ಇಂದು ನಮ್ಮ ಜೀವನಾವಶ್ಯಕತೆಗಳಿಗೆ ಪರರೆದುರು ಕೈಚಾಚಿಡಬೇಕಾದ ದುಸ್ಥಿತಿ ತಲೆದೋರಿದೆ ನಾವು ಸ್ವತಂತ್ರರಾದ ಮೇಲೆ ಕಳೆದ ಹತ್ತು ವರ್ಷಗಳಲ್ಲಿ ಜವರು ಸುಮಾರು ಸಂಸ್ಥಾಪಿಸಿದ ಹಣದಲ್ಲಿ ಸುಮಾರು ೭೦೦ ಕೋಟಿ ರೂಪಾಯಿಗಳನ್ನು ವಿದೇಶಗಳಿಂದ ಬೇಡಿ ತಂದ ಆಹಾರ ಧಾನ್ಯಗಳಿಗಾಗಿ ಕೆತ್ತಿದ್ದೇವೆ ಕೃಷಿ ಪ್ರಧಾನ ದೇಶವಿದ್ದರೂ ನಾವು ಪ್ರತಿ ವರ್ಷವು ಇಷ್ಟೊಂದು ಹಣವನ್ನು ಆಹಾರ ಧಾನ್ಯಗಳಿಗಾಗಿ ವ್ಯಯಿಸುತ್ತಿರುವುದು ಲಜ್ಜಾಸ್ಪದವಾದ ಸಂಗತಿ ಅರುವತ್ತು ಕೋಟಿ ರೂಪಾಯಿಗಳ ವಿದೇಶೀ ವಸ್ತ್ರದ ಆಮದನ್ನು ತಡೆಯಲು ಗಾಂಧೀಜೀ ವಿದೇಶೀ ಬಟ್ಟೆಯನ್ನು ಬಹಿಷ್ಕರಿಸಿ ಚರಕಗಳಲ್ಲಿ ನೂಲು ತೆಗೆದು ಬಟ್ಟೆ ತಯಾರಿಸುವ ಕಾರ್ಯವಾರಂಭಿಸಿ ಬ್ರಿಟಿಷರೊಡನೆ ಎದುರಾಡಿದರು ಆಹಾರಾಧಾನ್ಯಗಳಿಗಾಗಿ ನಾವು ಪರದೇಶೀಯರನ್ನು ದೀನನಾದನದಿಂದ ಬೇಡಬೇಕಾಗಿದೆ ಎಂಬ ದರ ಪರಿವೆಯೇ ನಮ್ಮಲ್ಲಿ ನೇಕರಿಗಿರುತ್ತಾದಿಲ್ಲ. ವಿದೇಶಗಳಿಂದ ನಾವು ಬೆಡಿಯಬೇಕಾಗುವ ಆಹಾರ ಧಾನ್ಯಗಳು ಮಾತ್ರವಲ್ಲದೇ ಇತರ ಎಲ್ಲ ವಸ್ತುಗಳನ್ನೂ ನಮ್ಮಲ್ಲಿಯೇ ಉತ್ಪಾದಿಸಿ ಅವನ್ನು ಅಧಿಕಾಧಿಕಗೊಳಿಸುವುದ ಇಂದು ಭಾರತೀಯರೆಲ್ಲರ ಕರ್ತವ್ಯವೆಂದು ಹೇಳಬೇಕಾಗಿದೆ ನಮ್ಮ ಆವಶ್ಯಕತೆಗಳನ್ನು ನಾವೇ ಪೂರೈಸಿಕೊಂಡು ಸ್ವಾವಲಂಬಿಗಳಾಗಬೇಕೆಂಬುದೇ ನಮ್ಮ ಇಂದಿನ ಪ್ರಧಾನ ಧರ್ಮ. ಕೇವಲ ಉತ್ಪಾದನೆಯನ್ನು ಹೆಚ್ಚಿಸುವುದಲ್ಲದೇ ಅನಾವಶ್ಯಕ ವ್ಯಯಗಳನ್ನೂ ತಡೆಗಟ್ಟಿ, ಉಳಿಸಿ ಈ ಉಳಿಕೆಯ ಹಣವನ್ನು ದೇಶದ ಉತ್ಪಾದನಾ ಸಾಧನೆಗಳಲ್ಲಿ ತೊಡಗಿಸುವುದೂ ಅಷ್ಟೇ ಅಗತ್ಯವೆನಿಸಿದೆ ಉತ್ಪಾದನಾವೃದ್ಧಿ ಮತ್ತು ಮಿತವ್ಯಯ- ಇವೆರಡೂ ನಮ್ಮ ಉನ್ನತಿಯ ರಥದೆರಡು ಚಕ್ರಗಳಂತಿದ್ದು, ಇವುಗಳ ಸಹಾಯದಿಂದಲೇ ನಾವು ನಮ್ಮ ಗುರಿಯನ್ನು ಸೇರಬಹುದು.

ನಿರ್ಮಲತೆ ಮತ್ತು ದುರ್ಗಂಧಗಳ ಸಂಧಾರಣೆಯೇ ಭಾರತ ಸೇವಕ ಸಮಾಜದ ಮೂರನೆಯ ಅಂಗ ನಮ್ಮ ದೇಶದಲ್ಲಿ ಐದು ಲಕ್ಷ ಹಳ್ಳಿಗಳಿವೆ ದೊಡ್ಡ ನಗರಗಳಾದರೋ ಕೈ ಬೆರಳಿಣಿಕೆಯಷ್ಟು ಮಾತ್ರ. ಗಾಂಧೀಜಿಯವರ ಮಾತಿನಲ್ಲಿ ಹೇಳುವುದಾದರೆ, ಶಿಕ್ಷಿತ ಮತ್ತು ಬುದ್ಧಿಶಾಲೀ ವರ್ಗವು ಹಳ್ಳಿಗಳನ್ನು ತ್ಯಜಿಸಿ ನಗರಗಳಲ್ಲಿ ನೆಲಸಿದರೆ ಮತ್ತು ನಗರದ ಕಾರ್ಮಿಕ ಜೀವನದಿಂದ ಗಿ ದುರ್ಗಂಧ ಪೂರಿತ ಗೃಹಗಳು ಬೆಳೆಯುವು— ಹೀಗಾಗಿ ವಿದೇಶೀಯ ಆಳಿಕೆಯಲ್ಲಿ ಇವರ ಪ್ರಭಾವದಿಂದಾಗಿ ಹಳ್ಳಿಗಳು ಮಲದ ತವರ್ಮನೆಯಾಗಿ ಪರಿಣಮಿಸುವುವು ವಿಸ್ತಾರವಾದ ನಗರಗಳು ಬಾಹ್ಯದೃಷ್ಟಿಯಿಂದ ನೋಡುವಾಗ ಅತ್ಯಂತ ಭವ್ಯವಾಗಿಯೂ ಮಹಾ ವಿಸ್ತಾರವಾದ ಮಹಲು ಸಹಿತವಾಗಿಯೂ ವಿಶಾಲ ಮಾರ್ಗಯುಕ್ತವಾಗಿಯೂ ಕಂಡಬರುವುವಾದರೂ ಹಣ ಯಾ ಶಕ್ತಿಯ ಬಲದಿಂದ ದೊಡ್ಡ ಮತ್ತು ಸ್ವತಂತ್ರ ಗೃಹಗಳಲ್ಲಿ ವಾಸಿಸುವ ಸೌಭಾಗ್ಯ ಪಡೆದ ಕೆಲವೇ ಜನರನ್ನು ಹೊರತುಪಡಿಸಿದರೆ, ಅಧಿಕಾಂಶ ಜನರು ಕ್ರಿಮಿಕೀಟಗಳಂತೆ ದುರ್ಗಂಧಮಯ ವಾಯುವಿನ ಕೊಳಕು ಮನೆಗಳಲ್ಲಿನ್ನುಕೊಂಡು ರೋಗಗ್ರಸ್ಥರಾಗಿ ತಮ್ಮ ಜೀವನವನ್ನು ದೂಡುತ್ತಿರುವರು ಕೇವಲ ಹಳೆದಿಲ್ಲಿಯ ಒಂದು ಭಾಗವನ್ನೇ ತೆಗೆದುಕೊಂಡರೆ ಅದರಲ್ಲಿ ಸುಮಾರು ೧೮೦೦ ಕೊಳಕು ವಸತಿಗಳಿದ್ದು ಅವುಗಳಲ್ಲಿ ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನರು ವಾಸಿಸುತಿದ್ದಾರೆ! ಡಿಲ್ಲಿಯ ಒಟ್ಟು ಜನಸಂಖ್ಯೆಯಲ್ಲಿ ಇದೊಂದು ಅಧಿಕಾಂಶವಾಗಿದೆ ಈ ದುರ್ಗಂಧೀ ವಸತಿಗಳ ಸುಧಾರಣೆಯು ಅಲ್ಲಿ ವಾಸಿಸುವವರ ಸ್ಥಿತಿ ಮತ್ತು ಅಭ್ಯಾಸಗಳನ್ನು ಬದಲಾಯಿಸಲು ಮತ್ತು ಅವನ್ನು ಸಭ್ಯ ನಾಗರಿಕರನ್ನಾಗಿ ಮಾಡಲು ಸಮರ್ಥವಾಗಿದೆ ಅವರ ನಿರುದ್ಯೋಗ, ಅಶಿಕ್ಷಣ ಮತ್ತು ದ ವ್ಯಸನಗಳನ್ನೆಲ್ಲ ದೂರೀಕರಿಸುವುದು ಮತ್ತು ನಗರಗಳನ್ನು ಸ್ವಚ್ಛ ಮತ್ತು ನಿರ್ಮಲವಾಗಿಡುವುದು ಭಾರತಸೇವಕಸಮಾಜದ ಕಾರ್ಯಗಳಲ್ಲಿ ಅತ್ಯಂತ ಮಹತ್ವದಂಕವಾಗಿರುವುದ ಕೊಳಕು ತುಂಬಿದ ಮನೆಗಳನ್ನು ಬೀಳಿಸುವುದರ ಅರ್ಥ ಬಡತನವನ್ನು ದೂರಮಾಡುವುದು ಎಂದು' ಎಂದೊಬ್ಬ ವ್ಯಕ್ತಿ ಉದ್ಗರಿಸಿದ್ದಾನೆ

ಕಾರ್ಯಕ್ರಮದ ನಾಲ್ಕನೆಯಂಗವು ಆರೋಗ್ಯ ಮತ್ತು ಯೋಗವ್ಯಾಯಾಮ ಮಾನವನಿಗೆ ಧನಾಡಂಬರವೆನ್ನೇ ಇರಲಿ, ಸೌಲಭ್ಯಗಳು ಬೇಕಾದಷ್ಟೆಲ್ಲವೂ ಇರಲಿ, ಎಲ್ಲ ಸಾಧನಗಳೂ ಪ್ರಾಪ್ತವಾಗಿರಲಿ ಶರೀರವು ಅಸ್ವಸ್ಥವಾಗಿದ್ದರೆ ಅವನಿಗೆ ಎಲ್ಲವೂ ನಿರರ್ಥಕವಾಗಿ ಪರಿಣಮಿಸುವುವು ಸಮಾಜದ ಆರೋಗ್ಯವನ್ನು ಸರಿಯಾಗಿರಿಸುವುದು ಮಹತ್ವದ ಕರ್ತವ್ಯವಾಗಿದೆ ಇಂದು ನಿತ್ಯ ನೂತನ ಸಂಖ್ಯೆಯೊಡನೆ ನವನವರೋಗಗಳ ಆವಿಷ್ಕಾರವೂ ಆಗಿದೆ ಅದರ ಚಿಕಿತ್ಸೆಯು ನಮ್ಮಂತಹ ಬಡ ದೇಶೀಯರಿಂದ ಸಹಿಸಲಾರದಷ್ಟು ತುಟ್ಟಿಯಾಗಿ ಪರಿಣಮಿಸಿದೆ ಆದುದರಿಂದ ನಮ್ಮ ದೇಶವು ಅನಾರೋಗ್ಯಕ್ಕೆ ತುತ್ತಾಗದಂತಹ ಅಥವಾ ಒಂದು ವೇಳೆ ಈಡಾದರೂ ಸುಲಭವಾಗಿ ಗುಣಮುಖವಾಗುವಂತಹ ಉಪಾಯಗಳು ನಮಗಿರಬೇಕಾಗಿವೆ ನಮ್ಮ ಪ್ರಾಚೀನ ಯೋಗ ಪದ್ಧತಿಯು ಶರೀರವನ್ನು ರೋಗಗಳಿಂದ ಸುರಕ್ಷಿತವಾಗಿಡುವ ಮತ್ತು ಶರೀರದ ದೋಷಗಳನ್ನು ದೂರವಾಗಿರಿಸುವ ಒಂದು ಸಾಧನವಾಗಿದ ಇದರಲ್ಲಿ ಯಾವುದೇ ವೆಚ್ಚದ ಪ್ರಶ್ನೆಯೂ ಇರುವುದಿಲ್ಲ ಶುದ್ಧ ಮತ್ತು ಸರಳ ಭೋಜನ, ತೆರೆದ ಗಾಳಿ ಸಂಚರಿಸುವಲ್ಲಿ ವಾಸ ಮತ್ತು ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಯೋಗಾಸನ ಮಾಡುವುದು— ಇವು ದಿನನಿತ್ಯದ ಕರ್ತವ್ಯಗಳಲ್ಲಿ ಸಹಾಯಕವಾಗುತ್ತವೆ, ಶರೀರವೂ ರೋಗಗಳಿಂದ ವಿಮುಕ್ತವಾಗಿ ಅದರಲ್ಲಿ ಸ್ಫೂರ್ತಿ ಮತ್ತು ಸ್ವಾಭಾವಿಕತೆಯನ್ನು ಸ್ಫುರಿಸುತ್ತವೆ ಆದುದರಿಂದ ಭಾರತ ಸೇವಕ ಸಮಾಜದ ಯುವಕರಿಂದ ಪ್ರಾರಂಭವಾದ ಈ ಯೋಗಾಸನ ಪದ್ಧತಿಯ ಪ್ರಚಾರ ಮಾಡುತ್ತಿದೆ ಇದಂದಾಗಿ ಮಕ್ಕಳು, ಮುದುಕರು ಸ್ತ್ರೀಯರು ಮತ್ತು ಪುರುಷರು—ಹೀಗೆ ಎಲ್ಲರೂ ಲಾಭಪಡೆಯಬಹುದು ಮತ್ತು ತಮ್ಮ ಆರೋಗ್ಯವನ್ನು ಸರಿಯಾಗಿಟ್ಟುಕೊಂಡು ದೇಶಸೇವೆಯನ್ನು ಮಾಡಬಹುದು

ಆಪತ್ತಿ ಸೇವೆಯು ಕೊನೆಯಂಗವಾಗಿರುವುದು ದೇಶದ ಮೇಲೆ ಆಂತರಿಕ ಮತ್ತು ಬಾಹ್ಯವಾಗಿ ಅನೇಕ ಆಪತ್ತುಗಳು ಅಪಾಯಗಳು ಸದಾ ಬರುತ್ತಿವೆ ಇವುಗಳಿಂದ ನಾವು ಸುರಕ್ಷಿತರಾಗಬೇಕಾಗಿದೆ ಸೈನ್ಯ ಮತ್ತು ಪೋಲೀಸರೇ ನಮ್ಮ ರಕ್ಷಣೆಗೆಯ್ವುದೆಂದು ನಂಬುವುದು ತಪ್ಪಾಗುತ್ತದೆ. ಸ್ವತಂತ್ರರಾಷ್ಟ್ರದ ಪ್ರತಿ ನರನಾರಿಯೂ ದೇಶದ ಸೈನಿಕನಾಗಿದ್ದಾನೆ ದೇಶದ ಮೇಲೆ ಯಾವುದೇ ಪ್ರಕಾರದ ಆಪತ್ತು ಬಂದ ಸಮಯದಲ್ಲಿ ಅದನ್ನು ಎದುರಿಸುವುದಕ್ಕಾಗಿ ಸ್ವಯಂಸೇವಕನಾಗಿರುತ್ತಾನೆ ದೇಶದಲ್ಲಿ ಕೆಲವೊಮ್ಮೆ ನೆರೆಗಳು ಬರುತ್ತವೆ, ಕೆಲವೊಮ್ಮೆ ಅಗ್ನಿರಾಜನು ವಿಕೋಪಗೊಳ್ಳುತ್ತಾನೆ, ಕೆಲವೊಮ್ಮೆ ಅನಾರೋಗ್ಯ ಮತ್ತು ಮಹಾಮಾರಿ ಹರಡುತ್ತದೆ ಅನೇಕ ಪ್ರಕಾರದ ಘಟನೆ ಮತ್ತು ದುರ್ಘಟನೆಗಳು ಪ್ರತಿದಿನ ಘಟಿಸುತ್ತಿರುತ್ತವೆ ಪ್ರತಿಯೊಬ್ಬನ ದುಃಖದಲ್ಲಿ ಸಹಾಯಕನಾಗುವುದು ಮತ್ತು ಆಪತ್ತಿನಕಾಲದಲ್ಲಿ ನೆರವಾಗುವುದು ಪ್ರತ್ಯೇಕ ದೇಶಭಕ್ತರ ಕರ್ತವ್ಯವಾಗಿದೆ. ಇದಕ್ಕಾಗಿ ಗ್ರಾಮ ಮತ್ತು ನಗರಗಳಲ್ಲಿ ಶಾಂತಿ ಸೇನೆಯು ಸ್ಥಾಪನೆಯಾಗಬೇಕು ಮತ್ತದರಿಂದ ಎಲ್ಲ ವಿಧದ ವಿಪತ್ತುಗಳನ್ನು ಎದುರಿಸುವಂತಾಗಬೇಕು

(ನಂತರ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ವಿದ್ಯಾರ್ಥಿಗಳಿಗೆ ಮಾತ್ರ.....!

ಶಾಲೆಗಳ ಹೊಸ ವರ್ಷ ಪ್ರಾರಂಭವಾಗಿದೆ ನಿಮ್ಮ ಮಕ್ಕಳ ವಿದ್ಯಾರ್ಜನೆಗೋಸ್ಕರ ಉಚಿತ ಯೋಜನೆಯನ್ನು ಸೇವ ರೂಪಿಸಿರಬಹುದು. ನಿಮ್ಮ ಯೋಜನೆಯ ಸಂಪೂರ್ಣತೆಗೆ ಸಿಂಡಿಕೇಟ್ ಬೇಂಕೂ ಸರವಾಗುವುದು

(1) ವಿದ್ಯಾರ್ಥಿಗಳ ಸೇವಿಂಗ್ಸ್ ಬೇಂಕ್ ಖಾತೆಗೆ ಶೇಕಡಾ ಒಂದರಷ್ಟು ಬಡ್ಡಿಯನ್ನು ಹೆಚ್ಚಿಗೆ ಕೊಡಲಾಗುವುದು (2) ವಿದ್ಯಾರ್ಥಿಗಳ ಯಸ್ ಬಿ ಖಾತೆಯಿಂದ ಎಷ್ಟು ಸಲವೂ ಹಣವನ್ನು ತೆಗೆಯಬಹುದು (3) ನಮ್ಮ 112 ಶಾಖೆಗಳಲ್ಲಿ ಕಮಿಶನ್ ಇಲ್ಲದೆ ವಿದ್ಯಾರ್ಥಿಗಳ ಯಸ್ ಬಿ ಖಾತೆಗೆ ರೂ 500/- ವರೆಗೆ ಹಣವನ್ನು ಜಮೆ ಮಾಡಬಹುದು

ವಿದ್ಯಾರ್ಥಿಗಳಿಗೆ ಮಾತ್ರ ವಿಶೇಷವಾಗಿರಿಸಿದ ಕೆಲವು ಸೌಕರ್ಯಗಳನ್ನು ಸದ ಉಪಯೋಗಗೊಳಿಸಲು ಮರೆಯಬೇಡಿರಿ

ಸಿಂಡಿಕೇಟ್ ಬೇಂಕಿನ ವಿಶೇಷ ಅನುಕೂಲತೆಗಳು

ಹೆಚ್ಚಿನ ವಿವರಗಳಿಗೆ ನಮ್ಮ ಯಾವುದೇ 112 ಶಾಖೆಗಳಲ್ಲಿ ವಿಚಾರಿಸಿರಿ.

ಟಿ ಎ ಪೈ, ಬಿ ಕಂ (ಲಂಡನ್) ಎಂ ಐ ಐ ಬಿ ಯಿಂದ್ ಆರ್ ಇ ಎಸ್ (ಲಂಡನ್) ಜನರಲ್ ಮೆನೇಜರ್

ಡಾ ಟಿ ನಾಗಾಧವ ಪೈ, ಎಂ ಬಿ ಹಿ ಬಿ ಎಸ್ ಮೆನೇಜಿಂಗ್ ಡೈರೆಕ್ಟರ್

THE CANARA INDUSTRIAL & BANKING SYNDICATE LTD, UDIPI.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಟ ಪುಸ್ತಕಗಳು, ಸೊಸೈಟಿ ರಶೀದಿ ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುಟುಂಬದ ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ

ವಿದೇಶಗಳಿಂದ ಅಪ್ರತ್ಯಕ್ಷ ಸಾಲ—

ಆರ್ಥಿಕ ಮಹಾಮಂಡಳದ ಕಾರ್ಯಕ್ರಮ

ಭಾರತೀಯ ಔದ್ಯಮಿಕ ಆರ್ಥಿಕ ಮಹಾ ಮಂಡಳವು ಭಾರತದಲ್ಲಿ ಪ್ರಚಲಿತವಿರುವ ವಿದೇಶೀ ವಿನಿಮಯ ನಾಣ್ಯಗಳ ಕೊರತೆಯನ್ನು ಹೋಗಲಾಡಿಸಿ ಇಲ್ಲಿನ ಉದ್ಯಮಗಳ ಅಭಿವೃದ್ಧಿಗಾಗಿ ಧನ ಸಹಾಯವನ್ನೀಯಲು ವಿದೇಶಗಳಲ್ಲಿ ಸಾಲವನ್ನೆತ್ತುವುದೆಂದು ತಿಳಿದು ಬಂದಿದೆ.

೧೯೪೮ರಲ್ಲಿ ಐದು ಕೋಟಿ ರೂಪಾಯಿಗಳ ತೆತ್ತ ಬಂಡವಳದಿಂದ ಅಸ್ತಿತ್ವಕ್ಕೆ ಬಂದ ಈ ಆರ್ಥಿಕ ಮಹಾಮಂಡಳವು ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ಉದ್ಯಮಗಳ ಅಭಿವೃದ್ಧಿಗಾಗಿ ಇಪತ್ತೆಂಟು ಕೋಟಿ ರೂಪಾಯಿಗಳ ಸಾಲಗಳನ್ನು ಮಂಜೂರು ಮಾಡಿರುವುದಲ್ಲದೇ ಇನ್ನೂ ಸುಮಾರು ೧೮ಳ ಕೋಟಿ ರೂಪಾಯಿಗಳ ಸಾಲದ ಅರ್ಜಿಗಳು ಕೈಯಲ್ಲಿ ಉಳಿದಿವೆ. ಮಹಾಮಂಡಳವು ಸುಮಾರು ಹದಿಮೂರು ಕೋಟಿ ರೂಪಾಯಿಗಳಷ್ಟನ್ನು ದೇಶದ ಆಂತರಿಕ ಮಾರುಕಟ್ಟೆಗಳಲ್ಲಿ ದೃಢಪತ್ರಗಳನ್ನು ಮಾರಿ ಒಂದುಗೂಡಿಸಿತಲ್ಲದೇ ಭಾರತ ಸರಕಾರದಿಂದಲೂ ಸಾಲವನ್ನು ಪಡೆದಿರುತ್ತದೆ. ಹೀಗೆ ಭಾರತ ಸರಕಾರದಿಂದ ಈ ಆರ್ಥಿಕ ಮಹಾಮಂಡಳವು ದ್ವಿತೀಯ ಪಂಚವಾರ್ಷಿಕ ಯೋಜನಾಂತ್ಯದೊಳಗೆ ಸುಮಾರು ೨೨ ಕೋಟಿ ರೂಪಾಯಿಗಳಷ್ಟು ಸಾಲ ಪಡೆಯಬಹುದೆಂಬ ನಿರೀಕ್ಷೆಯಿದೆ.

ಮುಂದಿನೆರಡು ವರ್ಷಗಳ ಕಾಲದಲ್ಲಿ ದೇಶದಲ್ಲಿ ಖಾಸಗಿ ಕ್ಷೇತ್ರಗಳಲ್ಲಿ ಹಲವಾರು ಉದ್ಯಮಗಳು ಅಭಿವೃದ್ಧವಾಗಲಿರುವುದರಿಂದ, ಇವುಗಳಿಂದ ಬರುವ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಬಹಳಷ್ಟು ಹೊಸ ಬಂಡವಳವು ಆರ್ಥಿಕ ಮಹಾಮಂಡಲಕ್ಕೆ ಬೇಕಾಗುವುದು. ಜೀವವಿಮಾ ಮಹಾಮಂಡಳವನ್ನು ಆರ್ಥಿಕ ಮಹಾಮಂಡಳವು ದೊಡ್ಡ ಮೊತ್ತದ ಸಾಲಕಾಗಿ ಪ್ರಸ್ತಾಪಿಸುವ ಆಲೋಚನೆಯಲ್ಲಿದೆ. ದೇಶದಲ್ಲಿ ವಿದೇಶ ವಿನಿಮಯ ನಾಣ್ಯಗಳ ಕೊರತೆಯಿರುವುದರಿಂದ, ವಿದೇಶೀಯ ಚಲಾವಣೆಯ ನಾಣ್ಯಗಳಲ್ಲಿಯೂ ಸಾಲಕ್ಕಾಗಿ ಎದುರು ನೋಡುವ ಕಾಲವೀಗ ಸನ್ನಿಹಿತವಾಗಿದೆ.

ಮಹಾ ಮಂಡಳದ ಅಧ್ಯಕ್ಷರಾದ ಶ್ರೀ ಕೆ. ಆರ್. ಕೆ. ಮೆನೊನರು ಕಳೆದ ತಿಂಗಳಲ್ಲಿ ವಾಶಿಂಗಟನ್ ನಗರದಲ್ಲಿ ವಿಶ್ವ ಬೇಂಕಿನ ಆಶ್ರಯದಲ್ಲಿ ಅಭಿವೃದ್ಧಿ ಹೊಂದದ ಪ್ರದೇಶಗಳ ಉನ್ನತೀಕರಣಕ್ಕಾಗಿ ಸಹಾಯ ನೀಡುವ ಕುರಿತಾಗಿ ಚರ್ಚಿಸಲು ಸೇರಿದ ಸಭೆಯಲ್ಲಿ ಭಾಗವಹಿಸಲು ತೆರಳಿದ ಸಂದರ್ಭದಲ್ಲಿ ವಿದೇಶಗಳಲ್ಲಿಯೂ ಮಹಾಮಂಡಳವು ಸಾಲವೆತ್ತುವ ಸಾಧ್ಯಾಸಾಧ್ಯತೆಗಳನ್ನು ಹೊರಗೆಡಹಿಸಿದರು. ಅವರು ವಿಶ್ವಬೇಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನೂ ಅಭಿವೃದ್ಧಿ ಸಾಲನಿಧಿಯ ಉಚ್ಚಾಧಿಕಾರಿಗಳನ್ನೂ ವಾಶಿಂಗಟನ್ನಿನ ಅಂತಾರಾಷ್ಟ್ರೀಯ ಸಹಕಾರ ಆಡಳಿತೆಯನ್ನು ಭೆಟ್ಟಿಯಾಗಿ, ಅವರಿಗೆ ಮಹಾಮಂಡಳದ ಘಟನೆ ಮತ್ತು ಕಾರ್ಯಕಲಾಪಗಳನ್ನು ವಿವರಿಸಿದರು. ಅವರು ನ್ಯೂಯಾರ್ಕಿನ ಬೇಂಕಿಂಗ್ ಸಂಸ್ಥೆಗಳು ಮತ್ತು ಆರ್ಥಿಕ ಸಂಸ್ಥೆಗಳ ಮುಖ್ಯಾಧಿಕಾರಿಗಳನ್ನೂ ಕಂಡು, ಕಂತುಗಳಲ್ಲಿ ಸಂದಾಯಿಸುವ ಶರ್ತದ ಮೇಲೆ ಭಾರತಕ್ಕೆ ಬಂಡವಳ ವಸ್ತುಗಳನ್ನು ಪೂರೈಸುವ ಅದೇಶದ ನಿರ್ಯಾತಗಾರರಿಗೆ ಸಾಲ ನೀಡುವ ಕುರಿತಾಗಿ ಬಹುಚರ್ಚೆಯನ್ನು ನಡೆಸಿದರು.

ಮಹಾಮಂಡಳವು ವಿದೇಶೀಯ ಪೂರೈಕೆಗಾರರಿಗೆ ಕೊಡುವ ಇಂತಹ ಸಾಲಧನಕ್ಕೆ ತಕ್ಕ ಭದ್ರತೆಯನ್ನೀಯುತ್ತದೆ. ದೇಶದಲ್ಲಿ ವಿದೇಶವಿನಿಮಯಗಳ ಕೊರತೆಯಿರುವುದಾದರೂ ಈ ವಿಧಾನವನ್ನಂಗೀಕರಿಸುವುದರಿಂದ ಭಾರತದಲ್ಲಿ ಔದ್ಯೋಗಿಕಾಭಿವೃದ್ಧಿಯನ್ನು ಸಾಧಿಸುವ ಮಾರ್ಗವು ಸುಗಮವಾಗುವುದು. ಭಾರತದಲ್ಲಿ ಪ್ರಾರಂಭಿಸಲಿರುವ ನೂತನೋದ್ಯಮಗಳಲ್ಲಿ ತೊಡಗಿಸಲಾಗುವ ಅಮೆರಿಕೆಯ ಬಂಡವಳದ ಕುರಿತಾಗಿಯೂ ಕೆಲವೊಂದು ಮಾತುಕತೆಗಳು ನಡೆದುವೆಂದು ತಿಳಿಯುತ್ತದೆ.

ವಾಶಿಂಗಟನ್ನಿನಿಂದ ಭಾರತಕ್ಕೆ ಮರಳುವಾಗ ಶ್ರೀ ಮೆನೊನರು ಪಾರಿಯಲ್ಲಿ ಲಂಡನ್ ಮತ್ತು ರೋಮ್‌ಗಳಲ್ಲಿ ತಂಗಿ, ಇದೇರೀತಿಯ ಮಾತುಕತೆಗಳನ್ನು ಅಲ್ಲಿನ ಬೇರೆ ಬೇರೆ ಆರ್ಥಿಕ ಸಂಸ್ಥೆಗಳ ಪರಿಣ್ಯಾಧಿಕಾರಿಗಳೊಡನೆ ಮತ್ತಿತರ ಸಂಘ ಸಂಸ್ಥೆಗಳೊಡನೆ ನಡೆಸಿದರು. ಈ ಸಂಸ್ಥೆಗಳು ಭಾರತಕ್ಕೆ ಬಂಡವಾಳ ವಸ್ತುಗಳನ್ನು ಹಾಗೂ ಔದ್ಯೋಗಿಕ ಕಚ್ಚಾ ವಸ್ತುಗಳನ್ನು ಪೂರೈಸುವುದರಲ್ಲಿ ಆಸಕ್ತಿವಹಿಸಿದ್ದುವು. ಶ್ರೀ ಮೆನೊನರು ತಮ್ಮ ಇತ್ತೀಚೆಗಿನ ವಿದೇಶೀಯ ಪ್ರವಾಸಕಾಲದಲ್ಲಿ ಮಾಡಿದ ಮಾತುಕತೆಗಳು ಭಾರತೀಯ ಔದ್ಯೋಗಿಕ ಆರ್ಥಿಕ ಮಹಾಮಂಡಳದ ಭಾವಿ ಭವಿಷ್ಯದ ಕಾರ್ಯಕಲಾಪಗಳಿಗೆ ಸಾಕಷ್ಟು ಸಹಾಯಕವಾಗುವುವು ಎಂಬ ವಿಶ್ವಾಸವಿದೆ. ವಿದೇಶೀಯ ಸಾಲಗಳು ಎಷ್ಟು ಹುಟ್ಟಬಹುದೆಂದು ಮಾತ್ರ ಇನ್ನೂ ಊಹಿಸಲ್ಪಡಲಿಲ್ಲ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಬೌದ್ಧಕಾಲದ ನಾಗರಿಕತೆ—

ಉಜ್ಜಯನಿಯ ಬಳಿ ಭೂಸಂಶೋಧನೆ

ಭಾರತ ಸರ್ಕಾರದ ಪ್ರಾಚೀನ ವಸ್ತು ಸಂಶೋಧನಾ ಶಾಖೆಯವರು ಕಳೆದ ವರ್ಷ ಉಜ್ಜಯನಿಯ ಗಿರ್‌ದಿಣ್ಣೆ ಪ್ರದೇಶದಲ್ಲಿ ಭೂ ಶೋಧನಾ ಕಾರ್ಯವನ್ನು ಕೈಗೊಂಡಿದ್ದರು. ಈ ಭೂಶೋಧನೆಗಳ ಫಲಸ್ವರೂಪವಾಗಿ ಮಾಳವದಲ್ಲಿ ಕ್ರಿ. ಪೂ. ೫೦೦ಕ್ಕಿಂತ ಹಿಂದಿನಕಾಲದಿಂದ ಹಿಡಿದು ಮುಸಲ್ಮಾನರ ಆಳ್ವಿಕೆಯವರೆಗೆ ನಾಲ್ಕು ಪ್ರಮುಖ ನಾಗರಿಕತೆಗಳು ಅಸ್ತಿತ್ವದಲ್ಲಿದ್ದುವೆಂಬುದು ವ್ಯಕ್ತಪಟ್ಟಿದೆ.

ಭಗವಾನ್ ಬುದ್ಧನ ಸಮಕಾಲೀನನೂ ಅವಂತಿದೇಶದ ಅರಸನೂ ಆದ ಪ್ರದ್ಯೋತನ ರಾಜಧಾನಿಯಾದ ಉಜ್ಜಯನಿಯ ಕೋಟೆ ಕೊತ್ತಲಗಳ ವಿನ್ಯಾಸ ಸಂಬಂಧವಾದ ದತ್ತಾಂಶಗಳು ಹಾಗೂ ಕೆಲವು ಅಮೂಲ್ಯ ವಸ್ತುಗಳು ಭೂ ಶೋಧನೆಗಳ ಸಮಯದಲ್ಲಿ ದೊರೆತವು.

ಇಲ್ಲಿ ದೊರೆತಿರುವ ಅಮೂಲ್ಯವಾದ ವಸ್ತುಗಳಲ್ಲಿ ಒಂದು ಗಟ್ಟಿಮಣ್ಣಿನ ಗುಂಡಿಯೂ ಸೇರಿದೆ. ಬಹುಶಃ ಈ ಗುಂಡಿಯು ಸಂದೂಕವೊಂದಕ್ಕೆ ಸಂಬಂಧಿಸಿರಬಹುದು. ಹಾಗೆಯೇ ದಂತದ ಮೊಹರೊಂದು ದೊರೆತಿದೆ. ಈ ಗುಂಡಿಯ ಮೇಲೆ ಪ್ರಾಚೀನ ಬ್ರಾಹ್ಮಿ ಲಿಪಿಯಲ್ಲಿ "ನಾಗಬುಧಿ ಸಾ ಪ್ರವಜಿತಾಸ" ಎಂಬ ಪದಗಳು ಬರೆಯಲ್ಪಟ್ಟಿವೆ. ಇದು ಕ್ರಿ. ಪೂ. ಒಂದನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಲಾಗಿದೆ. ಮೊಹರಿನ ಮೇಲೆ ಬ್ರಾಹ್ಮಿ ಲಿಪಿಯಲ್ಲಿ "ಗೋಧಜಸತಿಕಸ" ಎಂಬ ಪದಗಳು ಬರೆಯಲ್ಪಟ್ಟಿವೆ. ಈ ಲಿಪಿಯು ಕ್ರಿ. ಪೂ. ಮೂರು ಅಥವಾ ಎರಡನೆಯ ಶತಮಾನಕ್ಕೆ ಸಂಬಂಧಿಸಿದ್ದು ಎಂದು ತಿಳಿಯಲಾಗಿದೆ.

ಒಂದು ಮೈಲಿಯ ಉದ್ದ, ಮುಕ್ಕಾಲು ಮೈಲಿ ಅಗಲದ ವಿಸ್ತೀರ್ಣದಲ್ಲಿ ಕೋಟೆ ನಿರ್ಮಿಸಲ್ಪಟ್ಟಿತ್ತು. ಇಲ್ಲಿ ಮಣ್ಣಿನ ಸವೆತ ವಿದ್ಯಾಗ್ಯೂ ಪದೇ ಪದೇ ಕೋಟೆ ನಿರ್ಮಿತವಾಗಿದೆ. ಪ್ರಾಚೀನ ಉಜ್ಜಯನಿಯ ಸುರಕ್ಷಿತೆಗಾಗಿ ಕೋಟೆ ಕೊತ್ತಲಗಳು ಮಹತ್ವಪೂರ್ಣವಾಗಿದ್ದವು ಎಂಬುದು ಭೂಶೋಧನೆಗಳಿಂದ ವ್ಯಕ್ತಪಡುತ್ತದೆ.

ಉಜ್ಜಯನಿ ನಗರ ದುರ್ಗದ ಉತ್ತರದಲ್ಲಿ ಹಾಗೂ ಚಂಬಲ್ ನದಿಯ ಉಪನದಿಯಾದ ಶಿಪ್ರಾ ನದಿಯ ತಟಾಕದಲ್ಲಿ ಒಂದು ವಿಶಾಲವಾದ ಕಡೆಗಾಮ (ಸಿಟಾಡೆಲ್) ಇದ್ದಿತು. ಪ್ರವಾಹಗಳಿಂದಾಗಿ ಪದೇ ಪದೇ ಭೂಮಿಯು ಸವೆಯುವುದನ್ನು ತಡೆಗಟ್ಟುವ ಉದ್ದೇಶದಿಂದ ನದಿಯ ಪಕ್ಕದಲ್ಲಿ ನಗರದುರ್ಗವನ್ನು ಆದಷ್ಟು ವಿಶಾಲವಾಗಿ ನಿರ್ಮಿಸಲಾಗಿತ್ತು.

ದುರ್ಗದ ಪಶ್ಚಿಮ ಭಾಗದಲ್ಲಿ ಮರದ ತೊಲೆಗಳನ್ನು ನೆಟ್ಟು ಪ್ರವಾಹಗಳಿಂದ ಭೂ ಸವೆಯುವುದನ್ನು ತಡೆಗಟ್ಟುವ ಕ್ರಮ ಕೈಗೊಳ್ಳಲಾಗಿತ್ತು.

ಅತ್ಯಂತ ಪ್ರಾಚೀನ ನಾಗರಿಕತೆಯು ಜನರು ೨೮ ಅಡಿಗಳ ಆಳ ಮತ್ತು ೧೫೦ ಅಡಿಗಳ ಅಗಲದ ಕಂಧಕವನ್ನು ತೋಡಿದ್ದರೆಂದು ಕಂಡು ಬರುತ್ತದೆ. ಅನಂತರ ಬಂದ ಜನರು ಗೋಡೆಗಳನ್ನು ಕಟ್ಟಿದರಲ್ಲದೆ ಕಂದಕಗಳ ಅಗಲವನ್ನು ೧೫೦ ಅಡಿಗಳಿಗೆ ಇಳಿಸಿದರು.

ಕೋಟೆಯ ಆಚೆಯ ಕಡೆ ನಡೆಸಿದ ಭೂಶೋಧನೆಗಳಿಂದ ಇನ್ನೂ ಹಿಂದಿನ ಕಾಲದ ನಾಗರಿಕತೆಯು ಕುರುಹುಗಳು ಕಂಡು ಬಂದಿವೆ. ಆ ಕಾಲದ ಜನರು ಉಜ್ಜಯನಿಯಲ್ಲಿ ಅತಿ ಪ್ರಾಚೀನವಾದ ಕೋಟೆಯನ್ನು ಕಟ್ಟಿದರೆಂದು ಕಂಡು ಬಂದಿದೆ. ಈ ನಾಗರಿಕತೆಯ ಜನರು ಬಳಸುತ್ತಿದ್ದ ಮಣ್ಣಿನ ನೆಲದ ಮಣ್ಣಿನ ಗುಡಿಸಲುಗಳು, ಅಂದಚಂದವಿಲ್ಲದ ಮಣ್ಣಿನ ಪಾತ್ರೆಗಳು ಮತ್ತು ಸರಳ ರೀತಿಯ ಗೃಹೋಪಯೋಗಿ ವಸ್ತುಗಳು ದೊರೆತಿವೆ.

ಇಲ್ಲಿಯ ವರೆಗೆ ನಡೆಸಿರುವ ಭೂಶೋಧನೆಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ಆಧುನಿಕ ರಸ್ತೆಗಳಿಗಿಂತ ಉತ್ತಮವಾಗಿರುವ ರಸ್ತೆಗಳು ಕಂಡು ಹಿಡಿಯಲ್ಪಟ್ಟಿವೆ.

ಕ್ರಿ. ಪೂ. ೫೦೦ರಿಂದ ೨೦೦ರ ಅವಧಿಯಲ್ಲಿ ಆಪತ್ಕಾಲದಲ್ಲಿ ಉಪಯೋಗಿಸುವುದಕ್ಕಾಗಿ ನಿರ್ಮಿಸಿದ ಕೆರೆಯೊಂದನ್ನು ಈಗ ಪತ್ತೆ ಹಚ್ಚಲಾಗಿದೆ. ಜೊತೆಗೆ, ಎಂಟು ಅಡಿಗಳ ಅಳವದ ಬತ್ತಿರುವ ನಾಲೆಯೊಂದನ್ನು ಸಹ ಕಂಡು ಹಿಡಿಯಲಾಗಿದೆ. ಈ ನಾಲೆಯು ಇಟ್ಟಿಗೆಯಿಂದ ಕಟ್ಟಲ್ಪಟ್ಟಿದೆ. ಈ ನಾಲೆಯ ಮೇಲ್ಭಾಗದಲ್ಲಿ ದೊರೆತ ಭಗ್ನದಲ್ಲಿ ಸುಟ್ಟ ಮಣ್ಣು, ಕಟ್ಟಿಣದ ಕಿಟ್ಟ, ಅಮೊನೈಟ್, ಸುಣ್ಣ ಕಲ್ಲು, ಹೊಳಪುಳ್ಳ ನಯವಾದ ಇಟ್ಟಿಗೆಗಳು ಮುಂತಾದವು ಹೆಚ್ಚು ಪ್ರಮಾಣದಲ್ಲಿ ದೊರೆತಿವೆ. ಆ ಅವಧಿಯಲ್ಲಿ ಕಬ್ಬಿಣ ಉದ್ಯಮವು ಅಸ್ತಿತ್ವದಲ್ಲಿತ್ತೆಂಬುದನ್ನು ಈ ವಸ್ತುಗಳು ವ್ಯಕ್ತಪಡಿಸುತ್ತವೆ. ಸಲಕರಣೆಗಳು ಮತ್ತು ಆಯುಧಗಳನ್ನು ತಯಾರಿಸುವುದಕ್ಕಾಗಿ ಕಬ್ಬಿಣವನ್ನು ಉಪಯೋಗಿಸಲಾಗುತ್ತಿತ್ತು. ಕ್ರಿ. ಪೂ. ೨೦೦ರಿಂದ ಕ್ರಿ. ಶ. ೧೩೦೦ರ ಅವಧಿಯಲ್ಲಿ ಮಣಿಗಳನ್ನು ತಯಾರಿಸುವ ಉದ್ಯಮಗಳು ಉಚ್ಚಾಯ ಸ್ಥಿತಿಯಲ್ಲಿದ್ದುವೆಂಬುದಕ್ಕೆ ಸಾಕಷ್ಟು ಪ್ರಮಾಣಗಳು ದೊರೆತಿವೆ.

ಆನೆಯ ದಂತದಲ್ಲಿ ಮಾಡಲ್ಪಟ್ಟ ಕನ್ನಡಿಯ ಹಿಡಿಗಳು, ಕೂದಲು ಸೂಜಿ(ಹೇರ್ ಪಿನ್)ಗಳು, ಬಾಚಣಿಗೆಗಳು, ನಕಾಸೆ ಮಾಡಲ್ಪಟ್ಟ ಕಪ್ಪೆ ಚಿಪ್ಪಿನ, ಗಟ್ಟಿ ಮಣ್ಣಿನ ಮತ್ತು ಗಾಜಿನ ಬಳೆಗಳು ಮತ್ತು ತಾವ್ರದ ನಾಣ್ಯಗಳು ಭೂಶೋಧನೆಗಳ ಸಮಯದಲ್ಲಿ ದೊರೆತವು.

ಉಳಿತಾಯಗಳೇ ಜನತೆಯ ಜೀವಾಳ
ಜನತೆಯೇ ಬೇಂಕುಗಳ ಜೀವಾಳ
ಬೇಂಕುಗಳೇ ರಾಷ್ಟ್ರದ ಜೀವಾಳ
ಅಂದ ಮೇಲೆ
ಉಳಿತಾಯಗಳಿದ್ದರೇನೇ ನಮ್ಮೆಲ್ಲರ ಉಳಿವು
ಅವುಗಳಲ್ಲದಿದ್ದಲ್ಲಿ ನಮ್ಮೆಲ್ಲರ ಅಳಿವು
ಆದುದರಿಂದ
ಹಣವನ್ನು ಉಳಿಸಿರಿ; ಬೇಂಕುಗಳಲ್ಲಿ ಶೇಖರಿಸಿರಿ!
ನೆನಪಿರಲಿ,
ಉಳಿತಾಯಗಳು ಊರ್ಜಿತಗೊಳ್ಳಲು ಉತ್ತಮ
ಬೇಂಕು
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಎಲ್ಲರೂ ಇದನ್ನು ಆತುರದಿಂದ ಪ್ರತೀಕ್ಷಿಸಿದ್ದರು!

ವಿಲಿಯಂ ಮಿಲರನ ಭವಿಷ್ಯವಾಣಿ

● ಎಸ್ ಗೋಪೀಚಂದರಾವ್, ವಿದ್ವಾನ್ ವಿಶಾರದ

೧೯೪೪ರ ಅಕ್ಟೋಬರ ೨೨ನೆಯ ಮಧ್ಯ ರಾತ್ರಿ!

ಅಮೆರಿಕೆಯ ೧೦—೧೫ ಲಕ್ಷ ಬಿಳಿ ವಸ್ತ್ರ ಧರಿಸಿದ ಸ್ತ್ರೀ ಪುರುಷರು ಏನು ವಿಚಿತ್ರ ನಡೆದು ಹೋಗುವುದು ಉಸಿರು ಹಿಡಿದುಕೊಂಡು ಪ್ರತೀಕ್ಷಿಸುತಿದ್ದರು. ಕೆಲವರು ಪರಮಾತ್ಮನ ಮಹಿಮೆಯನ್ನು ಹಾಡುತಿದ್ದರು; ಅಥವಾ ಕುಣಿದು ಹಾಡುತಿದ್ದರು; ಇಲ್ಲವೇ ಕೂಗಾಡುತಿದ್ದರು. ಮನಪೂರ್ವಕವಾಗಿ ಪರಮಾತ್ಮನನ್ನು ವಂದಿಸುತ್ತ ಆಕಾಶದ ಕಡೆಗೆ ನೋಡುತಿದ್ದರು. ಕೆಲವರು ತಮ್ಮ ಮನೆಯನ್ನು, ಅಂಗಡಿಯನ್ನು, ಕೆಲಸವನು ಬಿಟ್ಟು ಓಡಿ ಬಂದಿದ್ದರು.

ಇವರೆಲ್ಲರೂ ವಿಲಿಯಂ ಮಿಲರ್‌ನೆಂಬ ಧರ್ಮೋಪದೇಶಕನ ಭವಿಷ್ಯ ವಾಣಿಯಲ್ಲಿ ವಿಶ್ವಾಸವಿಡುವ ಜನರು. ಮಿಲರನ ಆಕರ್ಷಕ ವ್ಯಕ್ತಿತ್ವದ ಶಿಕಾರಿಗಳು ೧೮೫೦ರಿಂದಲೂ ಮಿಲರನು ಜನತೆಗೆ ಯೇಸುಕ್ರಿಸ್ತನು ಪುನರ್ಜನ್ಮ ಪಡೆದು ಬರುತ್ತಾನೆ, ಆತನ ಆಗಮನವನ್ನು ಆಕಾಶದಲ್ಲಿ ಕಾದು ನೋಡಿರಿ ಎಂದು ಉಪದೇಶಿಸುವುದೇ ತನ್ನ ಕೆಲಸವನ್ನಾಗಿಸಿಕೊಂಡಿದ್ದನು ಈತನ ಈ ಪ್ರಚಾರ ಕಾರ್ಯಚ್ಛಿನಂತೆ ಅಮೆರಿಕೆಯ ತುಂಬ ಹರಡಿತ್ತು.

ಬೈಬಲಿನ ಕೆಲವು ಭಾಗಗಳನ್ನು ಗಹನವಾಗಿ ಅಭ್ಯಸಿಸಿದನಂತರ ಮಿಲರನು ೧೮೪೩ನೆ ಮಾರ್ಚಿ ೨೧ ಮತ್ತು ೧೮೪೪ನೆ ಮಾರ್ಚಿ ೨೦ರ ನಡುವೆ ಪ್ರಪಂಚವು ಅಂತ್ಯಗೊಳ್ಳುವುದು ಎಂಬ ನಿರ್ಧಾರಕ್ಕೆ ಬಂದನು. ೧೮೪೩ನೆ ನವಂಬರ ೧೫ರ ಪ್ರಾತಃಕಾಲದಲ್ಲಿ ಆತನ ಕಥನಾನುಸಾರವಾಗಿ ಆಕಾಶದಲ್ಲಿ ಲಕ್ಷಣಗಳು ತೋರಿಬಂದುವು. ಅರ್ಥಾತ್ ಆಕಾಶದಿಂದ ಪ್ರಕಾಶ ಕಿರಣಗಳು ಪೃಥ್ವಿಯೆಡೆಗೆ ಬರುತ್ತಿರುವುದು ತೋರಿಬಂತು. ಆಗ ಜನರು ಭಾವಾವೇಶದಿಂದ ಪ್ರಪಂಚದ ಅಂತ್ಯಕಾಲ ಸಮೀಪಿಸಿತೆಂದುಕೊಂಡರು. ಆದರೆ, ೧೮೪೪ರ ಮಾರ್ಚಿ ಬಂದಿತು; ಹಾಗೆಯೇ ಕಳೆದು ಹೋಯಿತು. ಮಿಲರನು ತನ್ನ ತಪ್ಪನ್ನೊಪ್ಪಿಕೊಂಡು, ತನಗೆ ಅಕ್ಟೋಬರನಲ್ಲಿ ಈ ದಿನ ಬರುವುದೆಂದು ತಿಳಿದುಬಂತು ಎಂದು ಯೇಸು ಸ್ವಯಂ ತೋರಿಬಂದು ನನಗೆ ಎಲ್ಲರಿಗೂ ಆಶೀರ್ವಾದ ಕೊಡುವನು ನಾನು ಆತನನ್ನು ನೋಡಬಲ್ಲೆನು ಮತ್ತು ಸದಾ ಆತನ ಅನುಚರನಾಗುವೆನು ಎಂದು ಪ್ರಚಾರಮಾಡಿದ ತಿಂಗಳ ಅಕ್ಟೋಬರದಂದು ಯೇಸು ಪ್ರತ್ಯಕ್ಷವಾಗುವುದಲ್ಲದೇ ಜಗತ್ತು ಅಗ್ನಿಯಿಂದ ನಾಶವಾಗುವುದು ಎಂದ ಮಿಲರ್ ಮತ್ತು ಆತನ ೭೦೦ ಅನ್ಯ ಸಹಚರರು ಜನರನ್ನು ತಮ್ಮ ಧರ್ಮದೀಕ್ಷೆಗೆ ಗುರಿಮಾಡಿದರು. ಅಮೆರಿಕವಿಡಿ ಈ ರೀತಿಯ ಆಶಯದ ಪುಸ್ತಕ ಮತ್ತು ಪತ್ರಗಳ ನೆರೆ ಹರಿಯಿತು. ಗಾಡಿ ಪತ್ರ, ಹಡಗುಗಳನ್ನಾ ಇದು ಮುಟ್ಟದಿರಲಿಲ್ಲ. ದಿನ ವಾರಗಳು ಕಳೆಯುತಿದ್ದಂತೆ ಜನರ ಕುತೂಹಲ ಹೆಚ್ಚುತ್ತ ಬಂತು. ಜನರಲ್ಲಿ ಕೆಲವರು ಭಾವಾವೇಶದಿಂದ ಆತ್ಮಹತ್ಯೆ ಮಾಡಿಕೊಂಡರು, ಮನೆ ಮನೆಗೆ ಹೋಗಿ ಉಪದೇಶಕರು ದೀಕ್ಷೆ ಕೊಡತೊಡಗಿದರು, ಜನರು ತಮ್ಮ ವ ನೆವಾರಗಳನ್ನು ಯಾರಾರಿಗೋ ದಾನವಿತ್ತರು, ಅಂಗಡಿಗಾರರು ಧರ್ಮಾರ್ಥವಾಗಿ ಸಾಮಾನನ್ನು ಹಂಚಿದರ, ಕಾರಖಾನೆಗಳ ಗಡಿಬಿಡಿಯೂ ಸ್ತಬ್ಧವಾಯಿತು!

ಎಲ್ಲರೂ ನಿರೀಕ್ಷಿಸುತಿದ್ದ ಆ ದಿನ ಕಾಣಿಸಿಕೊಂಡಿತು ಫಿಲಡೆಲ್ಫಿಯಾದಲ್ಲಿ ಒಬ್ಬನು ತನ್ನ ಮೂರಂತಸ್ತಿನ ಮನೆಯ ಕಿಟಕಿಯಿಂದ ಕೆಳಗೆ ಹಾರಿ ನೇರವಾಗಿ ಸ್ವರ್ಗ ಸೇರಲು ಶಾಂತಿಪೂರ್ವಕವಾಗಿ ಕಾದುಕೊಂಡಿದ್ದನು ಮೆಸಚಿಟ್ಸ್‌ನಲ್ಲಿ ಒಬ್ಬನು ಒಂದು ಮರವನ್ನೇರಿ ಹಾರುವ ಪ್ರಯತ್ನದಲ್ಲಿ ಕೊಂಬೆಯಿಂದ ಕೆಳಗೆ ಬಿದ್ದನು ಪೆನ್ಸಿಲ್ವೇನಿಯಾದ ಒಬ್ಬ ಕೃಷಿಕನು ತನ್ನ ಕುಟುಂಬವನ್ನು ಕೊಂದು ತಾನು ಆತ್ಮಹತ್ಯ ಮಾಡಿಕೊಂಡನು. ನ್ಯೂಯಾರ್ಕಿನಲ್ಲಿ ಒಬ್ಬ ಯುವಕನು ಸ್ವರ್ಗ ಸೇರುವ ಅವಸರದಲ್ಲಿ ಶಂಕದಿಂದ ನದಿಗೆ ದುಮುಕಿದನು ನಯಾಗರ ಜಲಪಾತದ ನೀರಿನಲ್ಲಿ ತನ್ನ ಇತರ ಸಂಗಾತಿಗಳಿಗಿಂತ ಮೊದಲು ಸ್ವರ್ಗಸೇರುವ ಬಯಕೆಯಿಂದ ಒಬ್ಬಳೆ ಸುಳಿಯ ಹಾರಿಬಿಟ್ಟಿದ್ದಳು. ಹೀಗೆಯೇ ಎಲ್ಲೆಲ್ಲಿಯೂ ಗದ್ದಲವೇ ಗದ್ದಲ ನಡೆದಿತ್ತು.

ಅಕ್ಟೋಬರ ೨೨ರ ರಾತ್ರಿ ಬಂದಿತು ಮಿಲರನ ಅನುಯಾಯಿಗಳು ಮನೆಯನ್ನು ಬಿಟ್ಟು ಗದ್ದೆ ಹಾಗೂ ಮೈದಾನಗಳಲ್ಲಿ ಗುಂಪುಸೇರಿದರು. ಬೋಸ್ಟನ್, ನ್ಯೂ ಯಾರ್ಕ್, ಫಿಲಡೆಲ್ಫಿಯಾ ಮೊದಲಾದ ದೊಡ್ಡ ನಗರಗಳಗಳ ಮಿಲರನ ಭವಿಷ್ಯ ವಾಣಿಯನ್ನು ನಂಬಿದವರು ತಂತಮ್ಮ ಗೃಹಗಳನ್ನು ತ್ಯಜಿಸಿ ತೆರೆದ ಮೈದಾನ ಮತ್ತು ಕಾಡುಗಳತ್ತ ಓಡ ತೊಡಗಿದರು ಅದು ವಿಚಿತ್ರ ದೃಶ್ಯವಾಗಿತ್ತು. ಅನೇಕರು ಮುದುಕ ಮುದುಕಿಯರನ್ನೂ ಮಕ್ಕಳನ್ನೂ ತಮ್ಮ ಬೆನ್ನ ಮೇಲೆ ಹೇರಿಕೊಂಡು ಓಡುತಿದ್ದರು ಎಲ್ಲೆಲ್ಲಿಯೂ ಜನರು ಎತ್ತರವಾದ ಮನೆ, ಗೋಪುರ, ಮರ,ಸೇತುವೆಗಳನ್ನು ಹತ್ತಿ ಹಾರಿ ಆತ್ಮಹತ್ಯಮಾಡಿಕೊಂಡರು; ಎಲ್ಲರೂ ಸ್ವರ್ಗ ಸೇರುವ ತವಕ ಮತ್ತು ಗಡಿಬಿಡಿಯ ದ್ದರು ಆರಾಮವಾಗಿ ಕುಳಿತುಕೊಂಡೇ ಸ್ವರ್ಗಸೇರ ಬಯಸುವವರೂ ಕೆಲವರಿದ್ದರು ಇಂತಹರು ಆರಾಮ ಕುರ್ಚಿಯಲ್ಲಿ ಒರಗಿದ್ದರು, ಅಥವಾ ಸ್ನಾನದ ಹಟ್ಟಿಯಲ್ಲಿ ಕುಳಿತು ಉಸಿರು ಕಟ್ಟಿಕೊಂಡು ಅಂತಿಮಕ್ಷಣವನ್ನ ಎದುರು ನೋಡುತಿದ್ದರು

ಸಾಧಾರಣವಾಗಿ ರಾತ್ರಿ ೧೨ ತಾಸಿನ ಹೊತ್ತಿಗೆ ಅಂತಹ ಮುಹೂರ್ತ ಬರುವುದೆಂದು ತಿಳಿದುಬಂದಿತ್ತು ಆ ಸಮಯ ಸಮೀಪಿಸುತಿದ್ದಂತೆ ಜನರು ಸಂತೋಷದಿಂದ ಹಾಡಿ ನಲಿಯತೊಡಗಿದರು ೧೨ ಬಡೆಯಲಿರ ವ ಕೆಲ ಕ್ಷಣದಲ್ಲಿ ಎಲ್ಲರೂ ಕೋಲಾಹಲದಿಂದ ಮೃತ್ಯುವಿನ ಭಯಯನ್ನೇ ಸೋಡುತಿದ್ದರು. ಅವರ ದೃಷ್ಟಿಗಳು ಗಡಿಯಾರದ ಸೂಜಿಗಳ ಮೇಲೆ ಕೇಂದ್ರೀಕೃತವಾಗಿದ್ದವು. ಆದರೆ ಗಡಿಯಾರದ ಮುಳ್ಳುಗಳು ಅವಿರಾಮವಾಗಿ ಮುಂದೆ ಸಾಗುತ್ತಲೇ ಇದ್ದುವು —ಅರ್ಧರಾತ್ರಿಯವೇಳೆ ಬಂದಿತು—ಬಂದ ಹಾಗೆಯೇ ಹೋಯಿತು. ಈಗ ಜನರ ಧೈರ್ಯ ಹಾರಿಹೋಯಿತು ಸ್ವಲ್ಪ ತರ್ಕವಿತರ್ಕಗಳೂ ನಡೆದುವು ವ್ಯಾಯಶಃ ಅವರ ಧೈರ್ಯಪರೀಕ್ಷೆಯಾಗುತ್ತಿದೆ. ಆ ಅದ್ಭುತಪೂರ್ವ ಘಟನೆಯು ಪ್ರಾತಃಕಾಲವಾಗಬಹುದು — ವಿಲರನ ಭವಿಷ್ಯವಾಣಿ ಅದೆಂತು ಸುಳ್ಳಾಯಿತು! ಪ್ರಾತಃಕಾಲದ ವರೆಗ ಎಲ್ಲರೂ ಶ್ವಾಸಹಿಡಿದುಕೊಂಡು ಆಕಾಶದ ಕಡೆಗೆ ನೋಡತೊಡಗಿದರು ಎಲ್ಲಿ ಯಾದರೂ ಬೆಂಕಿಯ ಹೊಗೆಯು ಕಾಣಿಸಿಕೊಂಡಿದ್ದರೆ, ಅವರ ಪಾದಗಳು ಬೊಮಿಯಿಂದ ಸ್ವರ್ಗದೆಡೆಗೆ ನಡೆಯಲು ಪ್ರಾರಂಭ ಮಾಡುತಿದ್ದವು!

ಆದರೆ, ಪ್ರಾತಃಕಾಲವಾದೊಡನೆಯೇ ಎಂದಿನಂತೆ ಪೂರ್ವದಲ್ಲಿ ಸೂರ್ಯೋದಯವಾಯಿತು ಎಂದಿನಂತೆನಾಯಿಗಳ ಬೌಬೌ ಕೋಳಿಗಳ ಕೂ ಕ್ಕೊ ಕೋಕೋ ಕೇಳಿ ಬಂದಿತು ಮಿಲರನ ಕೆಲವು ಅನುಯಾಯಿಗಳಿಗೆ ಈಗ ಕ್ರೋಧ ಕಾಣಿಸಿತು. ಕೆಲವರು ಮುಂದುವರಿದರು ಕಣ್ಣುಗಳನ್ನು ಕೆಳಗೆ ಮಾಡುತ್ತ ವೈಲಿಗೆಯಾದ ಚಿಂದಿ ಬಟ್ಟೆಯೊಡನೆ ಅವರು ತಂತಮ್ಮ ಮನೆಗಳಿಗೆ ತೆರಳ ತೊಡಗಿದರು. ಕೆಲವರ ಮನೆಯೆಲ್ಲವೂ ಖಾಲಿಯಾಗಿತ್ತು ವ್ಯಾಪಾರಿಗಳ ಅಂಗಡಿಯ ಸಾಮಾನು, ರೈತರ ಉಗ್ರಾಣದ ಧಾನ್ಯ ನಷ್ಟವಾಗಿದ್ದುವು ಕಾರಖಾನೆಗಳ ನೌಕರರು ಕೈ ಖಾಲಿಯಾಗಿತ್ತು

ತನ್ನ ಮನೆಯಲ್ಲಿ ಉಸಿರುವಿನ ಪ್ರತೀಕ್ಷೆ ಮಾಡುತಿದ್ದ ವಿಲಿಯಮ್ ಮಿಲರನು ಮಕ್ಕಳಂತೆ ಅಳತೊಡಗಿದ ಆತನು ತನ್ನ ಅನುಯಾಯಿಗಳಿಗೆ ಅಳಿಯ ಹೊಸ ಕಿರಣವನ್ನು ತೋರಿಸಲು ಮತ್ತು ಅವಗಿನ್ನೊಂದು ಅವಕಾಶವನ್ನು ಒದಗಿಸಲು ತನ್ನ ಭವಿಷ್ಯವಾಣಿಯಲ್ಲಿ ದೋಷನಿರಲಿ ಎಂದು ಪ್ರಾರ್ಥಿಸಿ ಪುನಃ ಪುನಃ ಸರಿ ನೋಡಿದನು ಆದರೆ ಆತನ ಶಂಕೆ ವಾಸ್ತವಿಕವಾಗಿತ್ತು!

ವಿಲಿಯಂ ಮಿಲರನಿಗೆ ತನ್ನ ಧರ್ಮದಲ್ಲಿದ್ದಂತೆಯೇ ಈ ವಿಶ್ವಾಸದಲ್ಲಿಯೂ ಆನ್ಥೆಯಿತ್ತು ಆತನ ಯಾವನೇ ಅನುಯಾಯಿಯು ಆತನ ವೇಲೆ ಮೋಸಗಾರನೆಂಬ ಅಪವಾದವನ್ನು ಕೊರಿಸಲಿಲ್ಲ. ಮತ್ತೂ ಮತ್ತೂ ಆತನು ಪರೀಕ್ಷಿಸಿ ನೋಡಿದನು, ಅನೇಕಸಾರಿ ಗಣಿಸಿನೋಡಿದನು—ಎಲ್ಲಿಯಾದರೂ ತಪ್ಪು ಕಂಡು ಬಂದೀತು ಎಂದು. ಆದರೆ ಎಲ್ಲವೂ ವ್ಯರ್ಥ! ತಾನು ತನ್ನ ವಿಶ್ವಾಸವನ್ನು ಇಮ್ಮಡಿಯಾಗಿಸಿ ತನ್ನ ಅಸಫಲತೆಯನ್ನು ಆತ ಒಪ್ಪಿಕೊಳ್ಳಬೇಕಾಯಿತು' ಅಂತೂ ಆತನ ಕಣ್ಣುಗಳ ಜ್ಯೋತಿಯು ಮಾಯವಾಗುತ್ತ ಬಂತು—ಲೆಕ್ಕ ಗಣಿಸುತ್ತ ಬಂದುದರಿಂದ.

ಕೊನೆಗೆ, ತನ್ನ ಭವಿಷ್ಯವಾಣಿಯಂತೆ ಪ್ರಪಂಚವು ನಾಶವಾಗಿ ಐದು ವರ್ಷಗಳ ನಂತರ ಎಂದರೆ ೧೮೪೯ರಲ್ಲಿ ವಿಲಿಯಮ್ ಮಿಲರನು ಮೃತ್ಯುವುಂ ಎನಿಸಾದ!

(ಸಾಧಾರ)

ಗೋವಿಜಯ

(ಗೋವಿನಕಥೆ)

ಶ್ರೀ ಮುಕ್ಕುಶ್ರಾಣ ಉಬಾಧ್ಯಾಯರಿಂದ ರಚಿತವಾದ್ದ ಮಕ್ಕಳಿಗೂ ವಯಸ್ಕರಿಗೆ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥಸಂಭಾವನೆ, ವಿಷಯ ಜ್ಞಾನ, ಸಾಗುಶಾರೀರಿಕ ಶಿಕ್ಷಣ ಮೊದಲಾದವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

80 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ

ಉಡುಪಿ ಡಿ ಮುನ್ಸೀಫ್ ಕೋರ್ಟಿನಲ್ಲಿ

O P 24/1958

1 ನರ್ಲಿ ಬ್ಯಾಯಿ ಜಿ ಬಂಗೇರ, ಗೋಪಾಲ ಯಂ ಬಂಗೇರನ ವಿಧವೆ

2 ಶ್ರೀಧರ 3ನಾರಾಯಣ 4 ಶೀಲ 5 ಯಶೋದಾ ಮೈನರರು ಪಕ್ಷಕಳು. ಸಾಯಿ 1ನೆ ಯನಳು —ಅರ್ಜಿದಾರರು

ಮೇಲ್ಕಂಡ ಗೋಪಾಲ ಯಂ ಬಂಗೇರನ ಹೆಸರಿನ ಬಾಬ್ತು New India Assurance Company Bombay ಯವರ ನಂಬ್ರ 208868ನೆ ಪೋಲಿಸಿಸ್ಕಾರ ಸಿಗತಕ್ಕ ರೂಪಾಯಿ 1200/ ವಸೂಲು ಮಾಡುವ ಹಾಗೆ 1ನೆ ಅರ್ಜಿದಾರಳ ಹೆಸರಿಗೆ ಜಾರಿಸಿ ಸರ್ಟಿಫಿಕೇಟು ಕೊಡಿಸಬೇಕಂತ ದಾಖಲುಮಾಡಿದ ಸದರಿ ಅರ್ಜಿಯು ತಾರೀಕು 27—6—1958ರಂದು ತನಿಕೆಯಿಟ್ಟರುತ್ತದೆ ಅಕ್ಟೋಬರಳ್ಳವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟುಮುಂದೆ ಕರದಾಗ್ಗೆ ಹಾಜರ್ಾಗತಕ್ಕದ್ದೆಂದು ಸಂಗ್ತಿ ಈ ಮೂಲಕ ತಿಳಿಸಿಯದೆ.

R Laxminarayana Aithal,
Vakil for Plff

ತಾರೀಕು 16—6—1958 ಉಡ್ಪಿ

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೯-೬-೧೯೫೮	೪೧

ಕೊಟ್ಟು ತಣಿಸಬಹುದೆ?

"ತೃಪ್ತಿಯೇ ಸುಖ" ಎಂಬ ಮಾತು ಒಂದು ಕಾಲದಲ್ಲಿ ಎಲ್ಲರಂಥಲೂ ಮನ್ನಣೆ ಪಡೆದಿತ್ತು. ಆದರೆ ಇಂದು ಮಾತ್ರ ತೃಪ್ತಿ ಎಂಬ ಪದವೇ ನಮ್ಮ ದೇಶದಿಂದ ದೂರವೋಡಿಹೆ ಗಿರುತ್ತಿರುವುದು ದಿನೇ ದಿನೇ ಅಧಿಕಾಧಿಕವಾಗಿ ಗೋಚರವಾಗುತ್ತದೆ. ತೃಪ್ತಿಯಿಂದಿರಬೇಕೆಂದು ಯಾರಿಗಾದರೂ ಉಪದೇಶಿಸ ಹೊರಟರೆ, ಅದು ಅವರಿಗೆ ಎಂದಿಗೂ ಪಥ್ಯವಾಗಿ ತೋರಲಾರದು. ಅದರಲ್ಲಿಯೂ ಒಂದು ಸ್ವತಂತ್ರ ರಾಷ್ಟ್ರದಲ್ಲಿ ತೃಪ್ತಿಯ ಸುಳಿವೇ ಇಲ್ಲವೇನೋ ಎನಿಸುತ್ತದೆ. ಇದಕ್ಕೆ ಉದಾಹರಣೆ ಮೊನ್ನೆಯಿಂದಾರಂಭಿಸಿದ ಬಂದರ ದಕ್ಕೆ ಕೆಲಸಗಾರರ ಮುಷ್ಕರವೂ ಒಂದು. ಅವರು ತಮ್ಮ ಬೇಡಿಕೆಗಳಿಗೆ ಪಟ್ಟುಹಿಡಿದು ಸಂಧಾನದ ಮಾತುಕತೆಗಳಲ್ಲಿ ಅಸಹನೆಯಿಂದ ವರ್ತಿಸಿ ತಮ್ಮ ಮುಷ್ಕರದ ನಿರ್ಧಾರವನ್ನು ಕಾರ್ಯರೂಪಕ್ಕೆಳಿಸಿಯೇ ಬಿಟ್ಟರು. ಯಾರು ಯಾವ ರೀತಿಯಲ್ಲಿ ಸಂಧಾನ ಹೇಳಿದರೂ ಅವನ್ನೊಪ್ಪಲವರು ಸಿದ್ಧರಿಲ್ಲ. ಇಂತಹ ದೇಶದ ಒಂದು ಪ್ರಮುಖ ವಿಭಾಗದ ಕೆಲಸಗಾರರು ತಮಗೀಗ ದೊರೆಯುತ್ತಿರುವ ಸೌಲಭ್ಯಗಳನ್ನು ಕಡೆಗಣಿಸಿ, ಇನ್ನೂ ಹೆಚ್ಚಿನವು ದೊರೆಯಬೇಕೆಂದು ಕೇಳಿಕೊಳ್ಳುವುದೆಂದರೆ, ಅಂತಹರು ಕೇವಲ ತಮ್ಮನ್ನು ಮಾತ್ರ ನೋಡಿಕೊಳ್ಳುತ್ತಿರುವರಲ್ಲದೆ ಬೇರೆಯವರ ಕಡೆಗೆ ಕಣ್ಣಿತ್ತಿಯೂ ದೃಷ್ಟಿಸುವ ಗೋಜಿಗೆ ಹೋಗಲಾರರೆಂಬುದು ಸ್ವಯಂಸಿದ್ಧ. ಸರಕಾರದ ನಾನಾ ಸೇವಾ ವಿಭಾಗಗಳಲ್ಲಿ ಈ ಬಂದರ ದಕ್ಕೆಯ ಕೆಲಸಗಾರರಂಗಿಂತಲೂ ನಿಷ್ಕೃಷ್ಟ ಜೀವನ ವೇತನವನ್ನೂ ಸೌಲಭ್ಯಗಳನ್ನೂ ಪಡೆಯುವ ಅನೇಕ ನೌಕರರಿದ್ದಾರೆ. ಸರಕಾರದಬೇರೆ ಬೇರೆ ವಿಭಾಗಗಳಲ್ಲಿ ಒಂದೇ ವರ್ಗದ ಕೆಲಸಗಾರರಿಗೆ ಬೇರೆ ಬೇರೆ ರೀತಿಯವೇತನ,ಸೌಕರ್ಯಗಳು ಇರುವುದು ತೋಳ್ಪನೀಯವೂ ಅಲ್ಲ. ಹಾಗಾಗಿಇಂದು ಬಂದರ ಕೆಲಸಗಾರರ ಮುಷ್ಕರವು ಅಕಾಲಿಕವಾದುದು ಮತ್ತು ಅನಪೇಕ್ಷಿತವಾದುದು ಎಂದು ಹೇಳಬೇಕಾಗಿದೆ.

ಇಂದು ಭಾರತದಲ್ಲಿ ಒಂದಲ್ಲ ಒಂದು ಮುಷ್ಕರ ನಡೆಯುತ್ತಿರುತ್ತದೆ. ಸಾರಿಗೆ ಮತ್ತು ಸಂಪರ್ಕ ಮಂತ್ರಿ ಶ್ರೀ ಪಾಟೀಲರು ಹೇಳುವಂತೆ ಪ್ರತಿವಾರವೂ ಮುಷ್ಕರಗಳು ನಡೆದೇ ತೀರುತ್ತವೆ. ಆದರೆ, ಇಂತಹ ಮುಷ್ಕರಗಳೆಂದರೆ ಅಪ್ರಯೋಜಕವಾದುವುಗಳು. ಈಗ, ಬಂದರದ ಕೆಲಸಗಾರರು ಚೌಧರಿ ಸಮಿತಿಯ ವರದಿಯನ್ನು ಸರಕಾರವು ಗಮನಿಸಲಿಲ್ಲವೆಂಬ ಆರೋಪವನ್ನು ಹೊರಿಸಿ ಈ ಸಂಪನ್ನು ಮುಂದೆ ತಂದಿದ್ದಾರೆ. ಭಾರತದ ಸುಪ್ರಸಿದ್ಧ ಬೃಹತ್ ಬಂದರಗಳಲ್ಲಿ ಹೆಚ್ಚಿನೆಡೆ ಸಂಪು ಬಲವಾಗಿ ನಡೆದಿರುತ್ತದೆ. ಎಲ್ಲ ಬಂದರಗಳಲ್ಲಿಯೂ ಹಲವಾರು ಕೆಡಗುಗಳು ಸಾಮಾನು ಇಳಿಸುವುದಕ್ಕಾಗಿ ಕಾದು ನಿಂತಿವೆ. ಅದರಲ್ಲಿಯೂ ಆಹಾರದ ಧಾನ್ಯಗಳನ್ನು ಹೊತ್ತು ತಂದುವುಗಳೂ ಇರುತ್ತವೆ; ಯಾಂತ್ರಿಕೋಪಕರಣಗಳನ್ನು ತಂದುವೂ ಇರಬಹುದು. ದೇಶದ ಜನರೆಲ್ಲರಿಗೆ ಸುರ್ಯಕೆಯು ಸರಿಯಾಗಿ ನಡೆದರೆ ಮಾತ್ರ ದೇಶದ ಶಾಂತಿ ಭದ್ರವಾಗುವುದು. ಇದರಲ್ಲಿ ಸ್ವಲ್ಪ ತಡೆ ಕಾಣಿಸಿಕೊಂಡರೆ, ಆಗ, ಹಾಹಾಕಾರವೇಳುವುದು. ಹಾಗಿರುವಾಗ, ಸರಕಾರವು ಚೌಧರಿಯವರ ವರದಿಯ ಬಗ್ಗೆ ಮುಂದಿನ ತಿಂಗಳು ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿರುವುದರಿಂದ, ಅದುವರೆಗೆ ತಡೆಯಬೇಕಿದರೂ ಕೇಳದೆ, ತಮ್ಮ ಒಂಟುಸ್ವಭಾವವನ್ನೇ ಮುಂದೂಡಿ ಹೊಡಿದ ಈ ಮುಷ್ಕರ ಸಾರ್ವಜನಿಕರಿಗೆ ಬಗೆದ ದೊಡ್ಡ ಕೇಡು. ಬಂದರಗಳಲ್ಲಿ ಕೆಲವೆಡೆ ಸ್ವಯಂಸೇವಕರು, ನೌಕಾ ದಳದವರು ಹಾಗೂ ಮಂತ್ರಿತರರಿಂದ ಕೆಲಸ ನಿಧಾನವಾಗಿ ಮುಂದುವರಿಯುತ್ತಿದೆ. ಆದರೆ, ಮದ್ರಾಸಿನಲ್ಲಿ ಮಾತ್ರ ನಡೆದ ಹಿಂಸೆಯು ಖೇದನೀಯವಾಗಿದೆ. ಮಾತು ಮಾತಿಗೆ ಮುಷ್ಕರ ಹೂಡಿ, ಕೆರಳಿ, ಉದ್ರೇಕಗೊಂಡು ಅನ್ಯಾಯದ ಮಾರ್ಗಕ್ಕೆ ಇಳಿಯುವುದರಿಂದ ಯಾರೊಬ್ಬರಿಗೂ ಲಾಭವಿಲ್ಲ. ಕಾರ್ಮಿಕ ಬಂಧುಗಳು "ಮುಷ್ಕರಂ ಸರ್ವಾರ್ಥ ಸಾಧನಂ" ಎಂದು ದೃಢವಾಗಿ ನಂಬಿರುವಂತೆ ಕಂಡುಬರುತ್ತದೆ. ಆದರೆ, ಇಂತಹ ಮುಷ್ಕರಗಳು ಮುಷ್ಕರವಾಗಿ, ಅಪರೂಪವಾಗಿದ್ದರೆ, ಅವಕ್ಕೆ ಅರ್ಥವಿದೆ. ವಿದ್ಯಾರ್ಥಿಯು ಶಾಲೆಗೆ ಹೋಗುವುದರ ವಿರುದ್ಧ ಸಂಪು ಹೂಡಿದರೆ, ಅಧ್ಯಾಪಕರು ಆತ ಶಾಲೆಗೆ ಬರಲೇಬೇಕೆಂದು ರಂಪಾಟ ಮಾಡುತ್ತಾ ಕುಳಿತರೆ, ಅದರಿಂದ ಕ್ಷೇಮ ಯಾರಿಗೆ? ಜಯಶ್ರೀಯು ಯಾರಿಗೆ?

ಕಳೆದ ವರ್ಷವೂ ಇದೇ ರೀತಿಯಲ್ಲಿ ಹಲವಾರು ವಿಭಾಗಗಳ ನೌಕರರಿಂದ ಸಂಪಿನ ಸೂಚನೆ ಬಂದಿತ್ತು. ಆದರೆ, ಸುದೈವವಶದಿಂದ ಬೆಟ್ಟದಂತೆ ಕಾಣದ ಕವೋಡಗಳು ಮಂಜಿನಂತೆ ಕರಗಿ ಹೋದುವು. ಆದರೆ, ಈ ಬಾರಿ ಮಾತ್ರ ಮಾಡಿದ ಪ್ರಯತ್ನಗಳೆಲ್ಲವೂ ಅಯಶಸ್ವಿಯಾದುದುಕ್ಕೆ ವಿಷಾದಿಸಬೇಕಾಗಿ ಬಂದಿದೆ. ಸರಕಾರೀ ಸೇವಾ ವಿಭಾಗಗಳಲ್ಲಿ ಈ ರೀತಿಯ ಮುಷ್ಕರಗಳು ಪದೇ ಪದೇ ಎದ್ದು ಸರಕಾರದ ಹಾಗೂ ಅಪ್ರತ್ಯಕ್ಷವಾಗಿ ಜನತೆಯ ದೈನಿಕ ಕಾರ್ಯಕ್ರಮಗಳಿಗೆ ಅಡಂಕ ತಂದೊಡ್ಡುವಂತಾಗಲು ಆ ವಿಭಾಗದಲ್ಲಿರುವ ಜನಬಲವೇ ಕಾರಣವೆಂದು ತೋರುತ್ತದೆ. ತಾವು ಸಂಪು ಹೂಡಿದರೆ, ಆಗ ಸರಕಾರವು ತಲೆ ಬಗ್ಗಿಸಲೇಬೇಕಾಗುತ್ತದೆ ಎಂದೀ ವರ್ಗಗಳು ಸದೃಢವಿಟ್ಟಂತೆ ವ್ಯಕ್ತವಾಗುತ್ತದೆ ಆದರೆ, ನಿಜವಾಗಿಯೂ ಸರಕಾರವು ಅನ್ಯಾಯವಾದ ಮತ್ತು ಅಧಿಕವೆಂದು ತೋರಬಹುದಾದ ಕಾರಣಗಳಿಗೆ ಬೆದರಿ ಅಂತಹ ಉತ್ತಮ ಪಟ್ಟಿಯಲ್ಲಿರುವ ಕೆಲಸಗಾರರ ಮಾತನ್ನು ಒಪ್ಪಿಕೊಳ್ಳುವುದು ಅದಕ್ಕೆ ಶ್ರೇಯಸ್ಕರವಲ್ಲ. "ಕೊಟ್ಟು ತಣಿಸಬಹುದೆ?"ಎಂಬ ಮಾತನ್ನು ನೆನಪಿಸಿ ಎಷ್ಟು ಕೊಟ್ಟರೂ ಮತ್ತೂ ಕೊಡಬೇಕೆನ್ನುವ ಇಂತಹ ಸೇವಾವರ್ಗಗಳ ಗಲಭೆಯನ್ನು ಗಣಿಸದೆ ಸರಕಾರವು ನ್ಯಾಯ ಪಕ್ಷಪಾತಿಯಾಗಿ ನಡೆದುಕೊಳ್ಳಬೇಕು. 'ತಂಬಿಸಿದವನಿಗೇನೇ ಮತ್ತೂ ತಂಬಿಸುವ' ಧೋರಣೆಯನ್ನು ಬಿಟ್ಟು ದೇಶದ ಎಲ್ಲ ಸರಕಾರೀ ವರ್ಗಗಳಿಗೂ ದೇಶದ ಇತರ ನಿವಾಸಿಗಳ ಸ್ಥಿತಿಗತಿಗಳನ್ನು ನೋಡಿ ಸೌಕರ್ಯಗಳನ್ನು ಕಲ್ಪಿಸಬೇಕಲ್ಲದೆ ಅನ್ಯಥಾ ಬಾರದು. ಹೀಗೆ ಈಗ ಜನರೆಲ್ಲರೂ ಅಕ್ರಮ ಮತ್ತು ನ್ಯಾಯ ಬಾಹಿರವೆಂದು ಘೋಷಿಸಬಹುದಾದ ಬಂದರ ಮುಷ್ಕರಗಾರರು ತಮ್ಮ ಮಹದಪರಾಧವನ್ನು ಇನ್ನಾದರೂ ಅರಿತು ಸಂಪನ್ನು ಹಿಂತೆಗೆಯಲಿ. ತನ್ನಂತೆಯೇ ಪರರನ್ನೂ ಬಗೆಯುವ ವಿಶಾಲಭಾವನೆ ಅವರಿಗೊದಗಿಬರಲಿ; ದೇಶದ ಸಾಮಾಜಿಕಸ್ತರ ಸಂಗಾಲಾಗದುಳಿಯಲಿ.

ವಾರದ ಮಹಾನುಭಾವ—

ಶ್ರೀ ಭದ್ರ ತೈಯಬಜಿ

ಪ್ರಸಿದ್ಧ ಇತಿಹಾಸಕಾರನಾದ ಶ್ರೀ ಎಮಿಲ್ ಲುದಬಿಗ್‌ನು ತನ್ನೊಂದು ಪುಸ್ತಕದಲ್ಲಿ ಜರ್ಮನಿ ಮತ್ತು ಭಾರತಗಳ ನಡುವಿನ ಸ್ನೇಹಪೂರ್ಣ ಸಂಬಂಧದ ಒಂದು ಉತ್ತಮ ಉದಾಹರಣೆಯನ್ನು ಕೊಟ್ಟಿದ್ದಾನೆ. ೧೧೪೨ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಬಿಸ್ಮಾರ್ಕನನ್ನು ಭಾರತದಲ್ಲಿ ಒಂದು ಉಚ್ಚ ಪದವಿಯಲ್ಲಿ ನಿಯುಕ್ತಿಗೊಳಿಸುವ ಅಪೇಕ್ಷೆಯನ್ನು ಪ್ರಕಟಗೊಳಿಸುವಾಗ, ಬಿಸ್ಮಾರ್ಕನು ಈ ಕೊಡುಗೆಯನ್ನು "ಭಾರತೀಯರು, ನಾನು ಅವರ ದೇಶಕ್ಕೆ ಹೋಗಿ ಅವರ ಮೇಲೆ ಅಧಿಕಾರ ತೋರಿಸುವಂತಹ ಯಾವ ಅಪರಾಧವನ್ನು ಮಾಡಿದ್ದಾರೆ? ಎಂಬ ಪ್ರಶ್ನೆಯನ್ನೆತ್ತಿ ನಿರಾಕರಿಸಿದನು" ಎಂದು ಶ್ರೀ ಲುದಬಿಗನು ಉಲ್ಲೇಖಿಸಿದ್ದಾನೆ.

ಸುಮಾರು ಮೂರು ಶತಮಾನಗಳಿಂದ ಭಾರತದೊಡನೆ ಜರ್ಮನಿಯು ಸಾಹಿತ್ಯಕ, ಸಾಂಸ್ಕೃತಿಕ ಮತ್ತು ರಾಜನೈತಿಕ ಸಂಬಂಧವು ಸೌಹಾರ್ದಪೂರ್ಣವಾಗಿತ್ತು ಎಂದು ಇತಿಹಾಸವು ಸಾಕ್ಷಿ ನುಡಿಯುತ್ತದೆ. ಜರ್ಮನಿಯ ಶಾನಹಾರ, ಗಯಟೆ ಮತ್ತು ಮೆಕ್ಸ್‌ಮೂಲರರು ಭಾರತದ ರಾಜಾ ಮಹೇಂದ್ರ ಪ್ರತಾಪ, ನೇತಾಜಿ ಸುಭಾಸಚಂದ್ರ ಬೋಸ್ ಮತ್ತು ಕಳೆದ ಕೆಲವು ಸಮಯಗಳಿಂದ ನಮ್ಮ ಪ್ರಧಾನಿ ಶ್ರೀ ನೆಹರೂರವರು ಈ ಎರಡು ರಾಷ್ಟ್ರಗಳ ನಡುವೆ ಇರುವ ಸ್ನೇಹ ಬಂಧವನ್ನು ಮತ್ತಷ್ಟು ಬಿಗಿಗೊಳಿಸಲು ತಮ್ಮ ಶಕ್ತಿಯನ್ನು ಬಳಸಿಕೊಂಡಿರುವರು.

ಪಶ್ಚಿಮ ಜರ್ಮನಿಯಲ್ಲಿನ ಭಾರತದ ರಾಜದೂತ ಶ್ರೀ. ಬಿ. ಎಫ್. ಎಚ್. ಬ. ತೈಯಬಜಿಯವರು ಭಾರತ—ಜರ್ಮನಿಗಳ ಪ್ರಾಚೀನ ಸಂಬಂಧಗಳನ್ನು ಸುದೃಢಗೊಳಿಸುವ ಕೆಲಸದಲ್ಲಿ ಅತ್ಯಂತ ಸಹಾಯಕರಾಗುವರೆಂದು ನಂಬಬಹುದು. ಕಳೆದವಾರ ಬೊಂಬಾಯಿಯಲ್ಲಿ ಇಂಡೋ ಜರ್ಮನ್ ವ್ಯಾಪಾರ ಸಂಘದಲ್ಲಿ ಅವರ ಸಮ್ಮಾನಕ್ಕಾಗಿ ಸೇರಿದ್ದ ಸಭೆಯಲ್ಲಿ ಅವರು "ಪಶ್ಚಿಮ ಜರ್ಮನಿಯ ರಾಜಧಾನಿ ಬಾನ್‌ನ ಔದ್ಯೋಗಿಕ ವಿಸ್ತಾರದ ಆಕಾಂಕ್ಷೆಗಳಿಗೆ ಭಾರತದಲ್ಲಿ ಅವಕಾಶ ದೊರೆಯುತ್ತದೆ." ಎಂದರು. ಶ್ರೀ ತೈಯಬಜೀಯವರು ವಿಶೇಷರೂಪದಿಂದ ಬಾನ್‌ನ ಉಲ್ಲೇಖ ಮಾಡಿದರೆಂಬುದನ್ನು ಗಮನಿಸಬೇಕು. ಹದಿಮೂರನೆಯ ಶತಾಬ್ದಿಯಿಂದಾರಂಭಿಸಿ ಈ ಶತಮಾನದ ಪ್ರಥಮ ಪಾದದವರೆಗೆ ಹಲವಾರು ಬಾರಿ ಬಾನ್ ತಲೆಯೆತ್ತಿತು; ಹಾಗೆಯೇ ಕುಸಿಯಿತು. "ಫೋನಿಕ್ಸ್" ಎಂಬ ಜಾತಿಯ ಪಕ್ಷಿಯು ಪದೇ ಪದೇ ಮೃತವಾಗಿ ಜನ್ಮಪಡೆಯುವಂತೆ "ಬಾನ್ಸ್" ಉತ್ಥಾನ ಮತ್ತು ಪತನಗಳ ದಿನಗಳನ್ನು ನೋಡಿರುತ್ತದೆ.

೫೩ ವರ್ಷ ಪ್ರಾಯದ ಶ್ರೀ ತೈಯಬಜಿಯವರು ವಿದೇಶ ಮಂತ್ರಾಲಯದ ಒಂದು ಉಚ್ಚ ಅಧಿಕಾರಿ ಹಾಗೂ ಬೇರೆ ಬೇರೆ ದೇಶಗಳಲ್ಲಿ ಭಾರತೀಯ ರಾಯಭಾರಿಯಾಗಿದ್ದು ತಮ್ಮ ನೂತನ ಪದವಿಗಾಗಿ ಅವಶ್ಯಕವಾದ ಅನುಭವವನ್ನು ಪಡೆದಿದ್ದಾರೆ. ಇವರ ಈ ಅನುಭವವು ರಾಷ್ಟ್ರೀಯ ದೃಷ್ಟಿಕೋಣದಲ್ಲಿಯೂ ಯುಕ್ತವಾಗಿದೆ. ಶ್ರೀ ತೈಯಬಜಿಯವರು ಒಬ್ಬ ನಿಷ್ಠಾವಂತ ಕಾಂಗ್ರೆಸಿಗರು. ಮದ್ರಾಸಿನಲ್ಲಿ ಸೇರಿದ್ದ ಅಖಿಲ ಭಾರತೀಯ ಕಾಂಗ್ರೆಸ್‌ನ ದ್ವಿತೀಯಾಧಿವೇಶನದ ಅಧ್ಯಕ್ಷರಾಗಿಯೂ ಅವರು ಸಮ್ಮಾನಿಸಲ್ಪಟ್ಟಿದ್ದರು.

ಕಾಲೇಜಿನವರೆಗಿನ ವಿದ್ಯಾಭ್ಯಾಸವನ್ನು ಶ್ರೀ ತೈಯಬಜಿಯವರು ಬೊಂಬಾಯಿಯಲ್ಲಿ ಪಡೆದಿದ್ದರು. ಆ ಮೇಲೆ ಉಚ್ಚ ವಿದ್ಯಾಧ್ಯಯನಕ್ಕಾಗಿ ಆಕ್ಸ್‌ಫರ್ಡಿನ ಸುಪ್ರಸಿದ್ಧ ಬಾಲಿಯೋಲ್ ಕಾಲೇಜಿನಲ್ಲಿ ಸೇರಿಕೊಂಡರು. ೧೯೩೨ರಲ್ಲಿ ಇವರು ಪಂಜಾಬದಲ್ಲಿ ಸಹಾಯಕ ಕಮಿಶನರರ ಪದವಿಯನ್ನು ಸ್ವೀಕರಿಸಿ ಸರಕಾರೀ ನೌಕರಿಯನ್ನು ಪ್ರವೇಶಿಸಿದರು. ಅಂದಿನಿಂದ

MAHATMA GANDHI MEMORIAL COLLEGE,

UDIPI.

The College has reopened for admissions to the Pre-University and the three-year and two-year degree courses of the Mysore University. Full details in the College Prospectus. Students seeking admission should apply early.

Comfortable residential facilities are available for Men-Students in SRI VADIRAJA VIDYARTHI NILAYA and for Women-students in the ASHA K. R. K. BHAT GIRLS' HOSTEL at moderate rates.

H. Sunder Rao,
PRINCIPAL.

ಪುತ್ತೂರು, ಮಂಗಳೂರು, ಉಡುಪಿಯಲ್ಲಿ ಮೈಸೂರು ಕಾಮಗಾರೀ ಸಚಿವರು

ಮೂಲ್ಕಿ, ಉದ್ಯಾವರ ಸಂಕಗಳ ಉದ್ಘಾಟನೆ

ಮೈಸೂರು ರಾಜ್ಯದ ಕಾಮಗಾರೀ ಸಚಿವರಾದ ಶ್ರೀ ಚೆನ್ನಬಸಪ್ಪನವರು ಕಾಮಗಾರೀ ಶಾಖೆಯ ಉಪಸಚಿವ ಶ್ರೀ ನಾಗನೂರ್‌ರವರೊಂದಿಗೆ ತಾ 16ರಂದು ಬೆಳಿಗ್ಗೆ ಮಡಿಕೇರಿಯಿಂದ ಪುತ್ತೂರಿಗೆ ಆಗಮಿಸಿದಾಗ ಶ್ರೀಗಳಾದ ಕೆ. ಕೆ ಸೆಟ್ಟಿ, ಎಮ್ ಎಲ್. ಸಿ ಕೆ ವಿ ಗೌಡ, ಎಮ್. ಎಲ್. ಎ, ಎ. ಭೀಮಭಟ್ಟ, ಬಿ ವಿಠಲದಾಸ ಸೆಟ್ಟಿ, ಅಸಿಸ್ಟಾಂಟ್ ಕಮಿಶನರ್, ಸಿ ಎಸ್ ತಿಮ್ಮಪ್ಪ ಸೆಟ್ಟಿ ಮೊದಲಾದವರು ಸ್ವಾಗತ ನೀಡಿದರು. ನಂತರ ಮಂತ್ರಿಗಳು ಪುತ್ತೂರು ಕಾಂಗ್ರೆಸ್ ಕಾರ್ಯಕರ್ತರನ್ನು ದ್ವೇಶಿಸಿ ಭಾಷಣ ಮಾಡುತ್ತಾ, ಸರಕಾರ ಮತ್ತು ಜನತೆಗಳಿಗೆಗೆ ಸಹಕಾರ ಅತ್ಯಗತ್ಯವಿರಬೇಕಾಗಿದೆ ಎಂದರು. ಕುಡಿಯುವುದು, ಲಂಚ ಕೋರಿಕೆನ ಮುಂತಾದ ದುಷ್ಟಟಗಳನ್ನು ನಿರ್ಮೂಲಗೊಳಿಸಲು ಸರಕಾರಕ್ಕೆ ಜನತೆಯ ಸಹಕಾರ ಬೇಕಾಗಿದೆ ಎಂದರು. ಬಳಿಕ ಮಂಗಳೂರಿಗೆ ಬರುವಾಗ ದಾರಿಯಲ್ಲಿ ಬೊಳಾರು ಸೇತುವೆಯನ್ನು ಉದ್ಘಾಟಿಸಿದರು. ತುಂಬೆ ನೀರು ಸರಬರಾಜು ಕೇಂದ್ರವನ್ನು ನೋಡಿದರು.

ಮಧ್ಯಾಹ್ನ ಮಂಗಳೂರಿಗೆ ಸಚಿವರು ಆಗಮಿಸಿ ವೆನ್‌ಲೋಕ್ ಆಸ್ಪತ್ರೆಗೆ ಸಂದರ್ಶನವಿತ್ತರು ಜಿಲ್ಲಾ ವೈದ್ಯಾಧಿಕಾರಿ ಡಾ|| ತಿಮ್ಮಪ್ಪನವರು ಸ್ವಾಗತಿಸಿದರು ನಂತರ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡಿದರು ಶ್ರೀಗಳಾದ ಬಿ. ವಿ ಬಾಳಿಗ, ಎಮ್ ಎಲ್ ಎ ಕೆ ಅಣ್ಣಾಚಾರ್, ಎಮ್. ಸಿ ಕೆ ವಾಸುದೇವಾಚಾರ್, ಮಾರಪ್ಪ ಸೆಟ್ಟಿ, ಉಗ್ಗಪ್ಪ ಸೆಟ್ಟಿ, ಡಾ| ಬಾಲಪ್ಪ ಸೆಟ್ಟಿ ಮೊದಲಾದವರು ಸ್ಥಳೀಯ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದರು. ಡಾ|| ಕೆ ಬಿ ಸೆಟ್ಟರು ಧನ್ಯವಾದನಿತ್ತರು

ಮೂಲ್ಕಿ ಸಂಕದ ಉದ್ಘಾಟನೆ— ಸಚಿವರು ಅಪರಾಹ್ನವಲ್ಲಿ ಮೂಲ್ಕಿಗೆ ಒಂದು ಅಲ್ಲಿಯ ಸಂಕದ ಉದ್ಘಾಟನೆಯನ್ನು ನೆರವೇರಿಸುತ್ತ, ಈ ಸಂಕದ ಉದ್ಘಾಟನೆಯಿಂದಾಗಿ ಜಿಲ್ಲೆಯ ಗ್ರಾಮಾಂತರ ಸಾಗಿಯ ಪ್ರಗತಿಯಲ್ಲಿ ಮಹತ್ವದ ಒಂದು ಹೆಜ್ಜೆ ಕಿಟ್ಟಂತಾಯಿತೆಂದರು ಶ್ರೀ. ಬಿ ಮಂಜಯ್ಯ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು ಮೈಸೂರು ಚೀಫ್ ಇಂಜಿನಿಯರರಾದ ಶ್ರೀ ಜಿ ಎಸ್ ಗಣಪತಿಯವರು ಪರಿಚಯ ನೀಡಿದರು, ಈ ಸಂಕವು 585 ಅಡಿ ಉದ್ದವಾಗಿದ್ದೂ ರೂ 11 5ಕ್ಕೆ ಲಕ್ಷ ಖರ್ಚಿನಿಂದ ಕಟ್ಟಿಸಲ್ಪಟ್ಟಿದೆ ಎಂದು ಹೇಳಿದರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ ಕೆ ಸೆಟ್ಟಿ, ಎಮ್ ಎಲ್ ಸಿ ಯವರು, ದೇಶದ ಸಾರಿಗೆ ಅಭಿವೃದ್ಧಿಯಲ್ಲಿ ಇತ್ತೀಚಿನಾದ ಪ್ರಗತಿಯನ್ನು ಶ್ಲಾಘಿಸಿ, ಈ ಸಾರಿಗೆಗಳ ಅಭಿವೃದ್ಧಿಯಿಂದ ಗ್ರಾಮಾಂತರ ಪ್ರದೇಶಗಳು ಪ್ರಗತಿ ಹೊಂದುವುದು ಸುಲಭವಾಗುವುದೆಂದರು ಸುಪರಿಂಟೆಂಡಿಂಗ್ ಇಂಜಿನಿಯರ್ ಡಾ ಎ. ಎಸ್ ಆಡ್ಯೆಯವರು ಧನ್ಯವಾದನಿತ್ತರು

ಉದ್ಯಾವರ ಸಂಕ ಉದ್ಘಾಟನೆ— ಸಚಿವ ಶ್ರೀ ಚೆನ್ನಬಸಪ್ಪನವರು ಉಪ ಸಚಿವ ಶ್ರೀ ನಾಗನೂರ್ ಮೊದಲಾದವರೊಂದಿಗೆ ಸಂಜೆ ಹೊತ್ತಿಗೆ ಮೂಲ್ಕಿಯಿಂದ ಉದ್ಯಾವರಕ್ಕೆ ಆಗಮಿಸಿ ಉದ್ಯಾವರ ಸಂಕ ಉದ್ಘಾಟನೆಯನ್ನು ನೆರವೇರಿಸಿದರು ಶ್ರೀ ಬಿ ವೈಕುಂಠ ಬಾಳಿಗ, ಎಮ್ ಎಲ್. ಎ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಆರಂಭದಲ್ಲಿ ಕಾಸು ಫಿಕರ್‌ದ ಕೆಲವು ಪಂಚಾಯತ ಬೋರ್ಡುಗಳ ಪರವಾಗಿ ಸಚಿವರಿಗೆ ಪುಷ್ಪಾಹಾರ ಅರ್ಪಿಸಲ್ಪಟ್ಟಿತು ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಟಿ. ವಿ ಪೈಗಳವರು ಸಚಿವರಿಗೆ ಹೂಮಾಲೆ ಅರ್ಪಿಸಿ ಸ್ವಾಗತ ಭಾಷಣಮಾಡುತ್ತಾ, ಮೂಲ್ಕಿ ಮತ್ತು ಉದ್ಯಾವರ ಹೊಳೆಗಳಿಗೆ ಸಂಕ ಮಾಡುದರಿಂದ ಜನತೆಗೆ ದೊರೆಯುವಂತಾಗುವ ಪ್ರಯೋಜನಗಳನ್ನು ವಿವರಿಸಿ, ಸಂಕಗಳ ನಿರ್ಮಾಣ ಕಾರ್ಯವು ಬೇಗನೆ ಆಗುವಂತೆ ಪ್ರಮಿಸಿದ ಹೃದಯೇ ಅಧಿಕಾರಿಗಳನ್ನು ಕೇಂದ್ರ ಸರಕಾರದ ಗ್ರಾಂಟು ಸಿಗುವುದರಲ್ಲಿ ಪ್ರಮಿಸಿದ ಶ್ರೀಯ ಶ್ರೀನಿವಾಸ ಮಲ್ಯ, ಎಮ್ ಪಿ ಅವರನ್ನು ಅಭಿನಂದಿಸಿದರು ಮೈಸೂರು ಚೀಫ್ ಇಂಜಿನಿಯರ್ ಶ್ರೀ ಜಿ ಎಸ್ ಗಣಪತಿಯವರು ಉದ್ಯಾವರ ಸಂಕ ರಚನೆಯನ್ನು ವಿವರಿಸಿದರು ನೇತ್ರಾವತಿ ಸಂಕದ ಕಾರ್ಯವು ಈಗಾಗಲೇ ಮುಂಜೂರಾಗಿದ್ದು ಕಾರ್ಯವು ಬೇಗನೆ ಆರಂಭವಾಗಲಿರುವುದು ಕಲ್ಯಾಣಪುರ ನಾಮಬಳಿಕ, ಉಪ್ಪುಂದ ಸಂಕಗಳ ಕಾರ್ಯವು ಬೇಗನೆ ಆರಂಭಗೊಳ್ಳುವುದು ಪಾಂಗಾಳ ಸಂಕಕ್ಕೂ ಎಸ್ಟಿಮೇಟ್ ತಯಾರಿಸಲಾಗಿದೆ ಎಂದು ತಿಳಿಸಿ ಉದ್ಯಾವರ ಸಂಕಕ್ಕೆ ಸುಮಾರು ಹದಿನೂರು ಲಕ್ಷ ರೂಪಾಯಿ ವೆಚ್ಚವಾಗಿದೆ ಎಂದರು

ಸಚಿವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ದೇಶವು ಸ್ವತಂತ್ರವಾದ ಬಳಿಕ ಅದ್ಭುತ ಪ್ರಗತಿಯನ್ನು ಸಾಧಿಸಿದೆ ಜನಜೀವನ ಸುಖಪೂರ್ಣವಾಗಿದೆ ದೇಶದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಸಾಧಿಸಲು ತಕ್ಕ ಯೋಜನೆಗಳು ತಯಾರಿಸಲಾಗಿವೆ ಎಂದು ಹೇಳಿದರು

ಉತ್ಪಾದನೆ ವತ್ತು ಹಂಚಿಕೆ ಕುರಿತು ಮಾತನಾಡುತ್ತಾ, ದೇಶದಲ್ಲಿ ಪ್ರಥಮತ ಉತ್ಪಾದನೆ ಹೆಚ್ಚಾಗಬೇಕು ನಂತರ ಅವನ್ನು ಸಮಾನರೀತಿಯಲ್ಲಿ ಹಂಚುವ ಕಾರ್ಯಕ್ಕಿಳಿಯಬೇಕು ಸಂಪತ್ತು ಇದ್ದವರಿಂದ ತೆಗೆದುಕೊಂಡು ಅವರ್ಗ ಇಲ್ಲದಿದ್ದವರಿಗೆ ಹಂಚುವುದು ಸಮಾಜವಾದೀ ಮಾದರಿಯ ಸಮಾಜದ ರಚನೆ ಎಂದು ಅರ್ಥಮಾಡಿಕೊಳ್ಳುವುದು ತಪ್ಪು ಎಂದರು ಅನ್ಯದೇಶಗಳು ಬಹುಬೇಗನೆ ಪ್ರಗತಿಹೊಂದಿದ ಮಾರ್ಗವನ್ನು ಅನುಸರಿಸುವುದು ಸರಿಯಲ್ಲ ಕಾರಣ ನಮ್ಮ ದೇಶದ ಜನರ ಆರ್ಥಿಕ ಸ್ಥಿತಿ, ದೇಶದ ಪರಿಸ್ಥಿತಿಗಳನ್ನು ಹೊಂದಿಕೊಂಡೆ ನಾವು ಪ್ರಗತಿ ಮಾರ್ಗದಲ್ಲಿ ಹೋಗಬೇಕಾಗಿದೆ ಎಂದರು. ಸರಕಾರದ ಜನಹಿತ ಯೋಜನೆಗಳ ಸಫಲತೆಗಾಗಿ ಸರ್ವರೂ ಶಕ್ತಿಮೀರಿ ಮಾಡಿಯಬೇಕೆಂದು ಆಶಿಸಿದರು

ಅಧ್ಯಕ್ಷ ಶ್ರೀ ಬಾಳಿಗರು ಮಾತನಾಡುತ್ತಾ ರಾಜ್ಯ ಸರಕಾರವು ಎತ್ತಲಿಯವ ಸಾಲಕ್ಕೆ ದೆಕ ಜಿಲ್ಲೆಯ ಜನತೆ ಸಂಪೂರ್ಣ ಬೆಂಬಲವೀಯಬೇಕೆಂದು ವಿನಂತಿ ಮಾಡಿದರು ಕೊನೆಯಲ್ಲಿ ಸುಪರಿಂಟೆಂಡಿಂಗ್ ಇಂಜಿನಿಯರ್ ಡಾ ಎ ಎಸ್. ಆಡ್ಯೆಯವರು ಧನ್ಯವಾದನಿತ್ತರು.

ಬಳಿಕ ಮಂತ್ರಿಗಳು ಕಟಪಾಡಿಗೆ ಹೋಗಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ ಹಲವಾರು ವಿಷಯಗಳಲ್ಲಿ ವಿಚಾರ ವಿನಿಮಯ ನಡೆಸಿದರು.

ಕಣ್ಣು ಎಷ್ಟು ಮುಚ್ಚುವೊ ಹಿಂದಿಯೂ ಅಷ್ಟೇ!— ಒಂದು ಸ್ವಾಗಗೆ ಕಣ್ಣು ಎಷ್ಟು ಮುಚ್ಚುವೋ ಹಾಗೆಯೇ ಭಾರತದ ಪ್ರಜೆಗೆ ಹಿಂದಿಯೂ ಅಷ್ಟೇ ಕ್ರಮುಖವಾದುದು ಈಗತೀಳೆ ಬದರಿ ನಾರಾಯಣ ಕ್ಷೇತ್ರ ಹಾಗೂ ಕಾಶ್ಮೀರದಲ್ಲಿ ಪ್ರವಾಸಮಾಡಿದ ನನಗೆ ಹಿಂದಿಯ ಆವಶ್ಯಕತೆ ಭಾರತದಲ್ಲಿ ಸಕಲರಿಗೂ ಅತ್ಯಾವಶ್ಯಕವೆಂದು ಒತ್ತಿ ಹೇಳುತ್ತೇನೆ. ಹಾಗೂ ಹಿಂದಿಯ ಬಗ್ಗೆ ಅಪಪ್ರಚಾರ ಮಾಡುವವರು ಹಿಂದಿ ಹಾಗೂ ಹಿಂದೀವಾಜ್ಮಯ ಕಂಟಕರೆಂದು ಹೇಳಬಲ್ಲೆ ಎಂಬುದಾಗಿ ಶೋಳಸೇವಾನಿರತ ಶ್ರೀ ಡಿ ಯಸ್ ಕೃಷ್ಣಯ್ಯ ಸೆಟ್ಟಿರವರು ನಿನ್ನೆಯ ದಿವಸ ಬಕ್ತಪೆಟಿಯಲ್ಲಿರುವ ಹಿಂದಿ ಟೈನ್ ವಾಚನಾಲಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷ ಸ್ಥಾನದಿಂದ ನುಡಿದರು ಸಭೆಗೆ ಶ್ರೀ ಮಿಸ್ರಿಲಾಲ್ ಮಾರ್ಸಮಲ್, ಶ್ರೀನಿವಾಸ ರಾವ್, ಮೊದಲಾದ ಮಹನೀಯರು ಆಗಮಿಸಿದ್ದರು ಸಭೆಯ ಪ್ರಾರಂಭದಲ್ಲಿ ಹಿಂದಿಯ ನಾಟಕ, ಅಧ್ಯಕ್ಷರ ಹಸ್ತದಿಂದ ಬಹುಮಾನ ವಿನಿಯೋಗ ನಡೆದು ಶ್ರೀಮತಿ ಬಿಜಬಲಯ್ಯನವರು ಸ್ವಾಗತ ಮಾಡಿ ವಾರ್ಷಿಕತೆಯ ವರದಿಯನ್ನು ಓದಿದರು

ಶ್ರೀ ಬಿಜಬಲಯ್ಯನವರ ವಂದನಾರ್ಪಣೆ ರಾಷ್ಟ್ರಗೀತೆಯಿಂದ ಸಭೆ ಮೂರ್ಯಸಿತು.

ಸಂಕ್ಷಿಪ್ತ ಸುದ್ದಿಗಳು

ನಡು ಗುಡ್ಡೆಯಲ್ಲಿ ವಿದ್ಯಾಭ್ಯಾಸ

ಲಕ್ಷದಿವಿ ಮತ್ತು ಮಿನಿಕೈ ನಡುಗಡ್ಡೆಗಳಲ್ಲಿರುವ ಶಾಲಾ ಪ್ರಾಯದ ಎಲ್ಲ ಮಕ್ಕಳಿಗೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಒದಗಿಸುವ ಸೂಚನೆಯೊಂದನ್ನು ದ್ವೀಪಿಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿದೆ ಸುಮಾರು ೨೨ ಸಾವಿರ ಜನ ವಸತಿಯುಳ್ಳ ಲಕ್ಷದಿವಿ ದ್ವೀಪಗಳಲ್ಲಿ ಕೇವಲ ಒಂಬತ್ತು ಪ್ರಾಥಮಿಕ ಶಾಲೆಗಳಿವೆ ಈ ಜನರಲ್ಲಿ ಕೇವಲ ಸೇಕಡಾ ಏಳರಷ್ಟು ಮಾತ್ರ ಓದು ಬರಹವನ್ನರಿತವರಾಗಿದ್ದಾರೆ ಭಾರತದ ಸಪ್ಟಿವದಲ್ಲಿ ಅರಬಿ ಸಮುದ್ರದಲ್ಲಿ ಲಕ್ಕದಿವಿ, ಮಿನಿಕೈ ಮತ್ತು ಅಮಿನಿ ದಿವಿ ದ್ವೀಪ ಸಮೂಹಗಳಿವೆ. ಇವು ೪ ಚದರ ಮೈಲುಗಳಷ್ಟು ವಿಸ್ತಾರವಾಗಿದ್ದು ಕೊಯಿಕೋಡು ಇವುಗಳ ರಾಜಧಾನಿಯಾಗಿರುತ್ತದೆ

ಪರೀಕ್ಷೆಗಳಲ್ಲಿ ಸುಧಾರಣೆ

ವಿಶ್ವವಿದ್ಯಾನಿಲಯ ಮತ್ತು ಮಾಧ್ಯಮಿಕ ವಿದ್ಯಾಮಟ್ಟದಲ್ಲಿನ ಮುಂಬರುವ ಪರೀಕ್ಷೆಗಳಲ್ಲಿ ಚಿಕಾಗೋ ವಿಶ್ವವಿದ್ಯಾನಿಲಯದ ಪರೀಕ್ಷಾ ಪದ್ಧತಿಯ ತಜ್ಞರಾದ ಡಾ ಬ್ಲೂಮರ ಸಹಾಯದಿಂದ ಭಾರತದಲ್ಲಿ ಹೊಸ ಸ್ರಣಾಲಿಯನ್ನು ತರಲಾಗುವುದು. ಡಾ ಬ್ಲೂಮರನ್ನು ಮಾಧ್ಯಮಿಕ ಶಿಕ್ಷಣ ಮಂಡಳವು ಆಮಂತ್ರಿಸಿದ್ದರೂ ಅವರ ಸೇವೆಯನ್ನು ವಿಶ್ವವಿದ್ಯಾಲಯಗಳ ಸಹಾಯಧನ ಆಯೋಗಕ್ಕೂ ಪರೀಕ್ಷಾ ಸುಧಾರಣಾ ಗೋಷ್ಠಿಗಳನ್ನು ನಡೆಸಲು ಒದಗಿಸಲಾಗುವುದು ಸುಮಾರು ಎರಡು ತಿಂಗಳ ಅವಕಾಶ ಮಾಡಿಕೊಂಡು ಡಾ ಬ್ಲೂಮರು ಭಾರತಕ್ಕೆ ಜುಲೈ ಮಾಸದಾರಂಭದಲ್ಲಿ ಆಗಮಿಸುವ ನಿರೀಕ್ಷೆಯಿದೆ ವಿಶ್ವವಿದ್ಯಾನಿಲಯಗಳ ಸಹಾಯ ಧನಾಯೋಗವು ಪರೀಕ್ಷಾ ಸುಧಾರಣೆಯ ಬಗ್ಗೆ ಒಂದು ಉತ್ಕೃಷ್ಟ ಯೋಜನೆಯನ್ನು ರೂಪಿಸಲು ಉಚ್ಚಮಟ್ಟದ ಸಮಿತಿಯೊಂದನ್ನು ನೇಮಿಸಿಯತ್ತದೆ ಈ ಸಮಿತಿಯು ಕೆಲವು ಬಾರಿ ಸಭೆ ಸೇರಿತ್ತಲ್ಲದೇ ವಿಶ್ವವಿದ್ಯಾಲಯಗಳಿಂದ ಹೆಚ್ಚಿನ ಮಾಹಿತಿಗಳನ್ನು ಕೇಳಿಕೊಂಡಿದೆ. ಡಾ ಬ್ಲೂಮರು ಈ ಸಮಿತಿಗೆ ಅಲ್ಪಕಾಲ ಸಹಾಯಮಾಡಲಿರುವರು

ಶಾಸನವನ್ನು ವಿನೋಬಾ ಸ್ವಾಗತಿಸಿರುವರು

ಬೂಸ್ವಾಮಿತ್ವವನ್ನು ನಾಶಮಾಡುವ ಕಾಯಿದೆಯನ್ನು ತಾನು ಸ್ವಾಗತಿಸುವುದಾಗಿ ಆಚಾರ್ಯ ವಿನೋಬಾ ಭಾವೆಯವರು ಉಸ್ಮಾನಾ ಬಾದಿನಲ್ಲಿ ನುಡಿದರು. ಜನತೆಯ ಸಹಕಾರದಿಂದಲೇ ಈ ಶಾಸನವು ಜಯಪ್ರದವಾಗಬೇಕಾದುದೆಂದು ತಾನು ಕೈಗೊಂಡಿರುವ ಭೂದಾನ ಕಾರ್ಯಕ್ರಮಗಳನ್ನು ನಿಲ್ಲಿಸಲಾರೆನೆಂದವರು ಘೋಷಿಸಿದರು ಭೂದಾನದಂತಹ ನೀತಿಯುಕ್ತ ಚಳವಳಗಳಿಗೆ, ಜನತೆಗೆ ಸಹಾಯನೀಡುವ ತನ್ನ ಅಧಿಕಾರವನ್ನು ತ್ಯಜಿಸಿ ಸರಕಾರವು ನೆರವೀಯಲು ಮುಂದೆ ಬರುವುದೆಂದವರು ಹೇಳಿದರು ಶ್ರೀಮಂತರಿಗೆ ಆಚಾರ್ಯರು, ಮುಂದೆಬಂದು ತಮ್ಮ ಸೊತ್ತುಗಳನ್ನು ಗ್ರಾಮದ ಕೈಗೊಪ್ಪಿಸಿದರೆ, ಗ್ರಾಮದ ಮುಂದಾಳುತನವನ್ನು ಪಡೆಯುವಿರಿ ಎಂದು ಕರೆಯಿತ್ತರು. ಅವರು ಮುಂದುವರೆದು, ತಮ್ಮ ಭೂಮಿಯನ್ನು ಬಿಟ್ಟುಕೊಟ್ಟು ಜನತೆಯ ಪ್ರೀತಿಯನ್ನೂ ಅವರಿಂದ ಗೌರವವನ್ನೂ ಪಡೆದ ಉದಾಹರಣೆಗಳನ್ನು ತಿಳಿಸಿ ಅವರೇನೂ ಕಳೆದುಕೊಂಡಂತಾಗಲಿಲ್ಲ ಎಂದರು

ವಿಸ್ತೃತ ವಿದ್ಯಾಭ್ಯಾಸಯೋಜನೆ

ದೇಶವಲ್ಲಿ ಸಶಿಕ್ಷಿತರ ನಿರುದ್ಯೋಗನಿವಾರಣೆಯನ್ನೂ ಪ್ರಾಥಮಿಕ ಶಿಕ್ಷಣದ ವಿಸ್ತರಣೆಯನ್ನೂ ಏಕಕಾಲದಲ್ಲಿ ಸಾಧಿಸುವ ಯೋಜನೆಯೊಂದನ್ನು ಭಾರತ ಸರಕಾರವು ಮನ್ನಿಸಿದೆ. ಈ ಯೋಜನೆ ಸಂವತ್ಸರ ೨೦—೫೯ ವರ್ಷದಲ್ಲಿ ೧೫ ಸಾವಿರ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದು ಸದ್ಯಕ್ಕೆ ಶಾಲೆಗಳಿಲ್ಲದಿರುವ ಹಳ್ಳಿಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದಕ್ಕಾಗಿ ಈ ಶಿಕ್ಷಕರ ಪ್ರಯೋಜನಗಳ ಸೌಲಭ್ಯ ಪಡೆಯಲಾಗುವುದು. ಈ ಯೋಜನೆಯ ಪ್ರಕಾರ ನೇಮಿಸಲ್ಪಡುವ ಶಿಕ್ಷಕರ ಕೆಲಸದ ಮೇಲ್ವಿಚಾರಣೆಗಾಗಿ ಈ ವರ್ಷ ೧,೨೦೦ ಪರಿಶೀಲನಾಧಿಕಾರಿಗಳನ್ನೂ ನೇಮಿಸಲಾಗುವುದು ಈಗಿನ ವೇತನ ಪ್ರಮಾಣಗಳಂತೆ ನೇಮಿಸಿಕೊಳ್ಳಲಾಗುವ ಈ ಅಧಿಕಾರಿಗಳ ವೇತನ ಸೌಕರ್ಯಕ್ಕಾಗಿ ಕೇಂದ್ರ ಸರಕಾರವು ಪ್ರಾರಂಭದ ಮೂರು ವರ್ಷಗಳ ವರೆಗೆ ನೂರಕ್ಕೆ ನೂರರಷ್ಟು ಸಹಾಯಧನವೀಯುವುದು ಆಮೇಲೆ ಮಾತ್ರ ಅಧಿಕಾರಿಗಳನ್ನೂಶಿಕ್ಷಕರನ್ನೂ ನೌಕರಿಯಲ್ಲಿ ಮುಂದುವರಿಸಿಕೊಂಡು ಹೋಗುವ ಹೊಣೆಗಾರಿಕೆಯು ರಾಜ್ಯ ಸರಕಾರಕ್ಕೆ ಸೇರುತ್ತದೆ. ಭಾರತದಲ್ಲಿ ಸದ್ಯ ಅರವಂದ ಹದಿನಾಲ್ಕು ವರ್ಷದ ವಯಸ್ಸಿನ ಮಕ್ಕಳ ಸಂಖ್ಯೆ ೨೪೯ ಲಕ್ಷ ಮಕ್ಕಳು ಮಾತ್ರ ವಿದ್ಯಾಭ್ಯಾಸ ಪಡೆಯುತ್ತಿರುವರೆಂದೂ ಊಹಿಸಲಾಗಿದೆ

ಮಕ್ಕಳ ಮಗ್ಗಿಪುಸ್ತಕ

(ನಯೋ ಪೈಸೆ ಕೊಂಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ

ಮಂಗಳೂರು

ಸಪ್ತಾಹಿಕ ಸಭೆ—ಮಂಗಳೂರು ಯುವಕ ಕಾಂಗ್ರೆಸಿನ ಸಪ್ತಾಹಿಕ ಸಭೆಯು ತಾ. 8ರಂದು. ಶ್ರೀ ಯು. ಮಂಜಪ್ಪ, ಎಂ ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ದಾಮೋದರ ಬಂಗೇರರು ಮಾತನಾಡಿ ಸೆಮಗಿನ್ನೂ ಆರ್ಥಿಕ ಸ್ವಾತಂತ್ರ್ಯ ಬಂದಿಲ್ಲ ವೆಂದರು

ವಿದಾಯ ಸತ್ಕಾರ—ಲ್ಯಾಪ್ ಇನ್ಸ್ಟ್ರೂಮೆಂಟ್ಸ್ ಕಾರ್ಪೊರೇಶನ್, ಉಡುಪಿ ಡಿವಿಜನ್ ಅಸಿಸ್ಟಾಂಟ್ ಮೆನೇಜರ್ ಶ್ರೀ ಎ ವೈದ್ಯನಾಥನವರಿಗೆ ಮದ್ರಾಸಿನ ಝೋನಲ್ ಆಫೀಸಿಗೆ ವರ್ಗವಾದ ನಿಮಿತ್ತ ಅವರಿಗೆ ಸ್ಥಳೀಯ ಬ್ರಾಂಚಿನ ನೌಕರರು ತಾ. 12ರಂದು ಸತ್ಕಾರವಿತ್ತು ಗೌರವಿಸಿದರು. ಶ್ರೀ ಎಲ್ ಕೊಯಿಯೋರವರು ಸ್ವಾಗತಿಸಿದರು. ಶ್ರೀಗಳಾದ ಬಿ ಬಾಬುರಾವ್ ಮತ್ತು ಎಮ್. ಲೋಕಯ್ಯ ಸೆಟ್ಟಿರು ಕಾಲೋಚಿತ ಮಾತುಗಳನ್ನಾಡಿದರು.

ನಗರಸಭೆ—ಮಂಗಳೂರು ನಗರಸಭೆಯು ತಾ. 13ರಂದು ಶ್ರೀ ಕೆ ವಿಶ್ವನಾಥ ಶಾಮುತರ ಅಧ್ಯಕ್ಷತೆಯಲ್ಲಿ ಜರಗಿತು ಕೆಲವೊಂದು ವಿಷಯಗಳು ಇತ್ಯರ್ಥವಾಗುವಾಗ ಕಾಂಗ್ರೆಸ್ ಸಕ್ಷದ ಸದಸ್ಯರು ಹೊರಟುಹೋದುದರಿಂದ, ಪ್ರತಿಪಕ್ಷದ ಸದಸ್ಯರು ಮಾತ್ರ ಉಳಿದು ಕೋರಮಿನ ಕೊರತೆಯುಂಟಾಗಿ ಸಭೆಯು ಮುಂದುವರಿಸಲ್ಪಟ್ಟಿತು

ಯಂತ್ರಸಜ್ಜಿತ ಮೀನುಗಾರಿಕೆ ತರಬೇತಿ ಕೇಂದ್ರವನ್ನು – ತಾ. 13 ರಂದು ಬೆಳಿಗ್ಗೆ ಸ್ಥಳೀಯ ರುಜಾರಿಯೋ ಹೈಸ್ಕೂಲಿನ ಬಳಿಯ ಡಾ ನೆರಿ ಕಂಪಾಂಡಿನಲ್ಲಿ ಜರಗಿದ ಸಭೆಯಲ್ಲಿ ಮೈಸೂರು ಸರಕಾರದ ಫಿಶರೀಸ್ ಡೈರೆಕ್ಟರ್ ಶ್ರೀ ವಿ ವಿ ಕಲ್ಯಾಣಯವರು ಉದ್ಘಾಟಿಸಿದರು ಈ ಕೇಂದ್ರದಲ್ಲಿ ಆರು ತಿಂಗಳ ತರಬೇತಿಯನ್ನು ಪಡೆದ ಬಳಿಕ ಯುವಕರಿಗೆ ಮೀನುಗಾರಿಕೆ ವಿಭಾಗದಿಂದ ಒಂದೊಂದು ಯಂತ್ರಸಜ್ಜಿತ ದೋಣಿಯನ್ನು ಕೊಡಲಾಗುವುದು ಇದರ ಹಣವನ್ನು ಅವರು ಅದರ ಮೂಲಕ ಆದಾಯಗಳಿಸಿ ಕಂತುಗಳ ಮೂಲಕ ಮರುಪಾವತಿ ಮಾಡಬೇಕೆಂದು ಶ್ರೀ ಕಲ್ಯಾಣಯವರು ಹೇಳಿದರು. ಶ್ರೀಗಳಾದ ಎನ್. ಡಿ ಕಮ್ಮೊರು ಮತ್ತು ಎಚ್. ಕೆ ಕಿಂಗಳಾಯನವರು ಕಾಲೋಚಿತ ಮಾತುಗಳನ್ನಾಡಿದರು ಮೈಸೂರು ರಾಜ್ಯದಲ್ಲಿ ಪ್ರಥಮವಾಗಿ ತೆರೆಯಲ್ಪಟ್ಟ ಈ ಕೇಂದ್ರದಲ್ಲಿ 20 ಮಂದಿ ಬಿಸ್ಟ ಯುವಕರು ತರಬೇತಿ ಹೊಂದುವರು

ಸತ್ಕಾರಕೂಟ—ಮೈಸೂರು ವಿಧಾನ ಪರಿಷತ್ತಿಗೆ ಆರಿಸಲ್ಪಟ್ಟ ಶ್ರೀ ಎಸ್ ಮುಕುಂದಾಚಾರರನ್ನು ಗೌರವಿಸುವ ಸತ್ಕಾರಕೂಟ ಒಂದು ತಾ 14ರಂದು ಮೋಹಿನಿ ವಿಲಾಸ ದಲ್ಲಿ ಜರಗಿತು ದ ಕ ಜಿಲ್ಲಾ ಲಲಿತಕಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಶ್ರೀ ಪದ್ಮನಾಭಾಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಪಿ. ವೆಂಕಟರಾಯರು ಸ್ವಾಗತಿಸಿದರು ಶ್ರೀ ಶ್ರೀನಿವಾಸ ಉಡುಪರು ಲಲಿತಕಲಾ ಅಧ್ಯಾಪಕರ ಸಂಕಷ್ಟಗಳನ್ನು ವಿವರಿಸಿ ಮಾತನಾಡಿದರು ಮೈಸೂರು ಸರಕಾರವು ಮದ್ರಾಸ ಸರಕಾರದಂತೆ ಲಲಿತಕಲೆಗಳಿಗೆ ವಿನ್ಯಾಸ್ಯಾಸದಲ್ಲಿ ಪ್ರಮುಖಸ್ಥಾನ ಕಲ್ಪಿಸಿಕೊಡುವುದಾಗಿ ಆಶಿಸಿದರು.

ವಿದಾಯ ಕೊಟಿ—ರುಜಾರಿಯೋ ಇಗರ್ಜಿಯ ಸಹಾಯಕ ಗುರುಗಳೂ ರುಜಾರಿಯೋ ಹೈಸ್ಕೂಲಿನ ಸಹಾಯಕ ಮುಖ್ಯೋಪಾಧ್ಯಾಯರೂ ಆಗಿದ್ದ ರೆ| ಫ್ರಾ| ಫ್ರಾನ್ಸಿಸ್ ಪಿ ಸೆಂಂಂಂ, ಅವರಿಗೆ ಪುತ್ತೂರಿನ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ವರ್ಗವಾದುದರಿಂದ ಅವರಿಗೆ ವಿದಾಯವೀಯುವ ಸಮಾರಂಭವು ತಾ 8ರಂದು ಇಗರ್ಜಿ ಗುರುಗಳಾದ ವೆರಿ ರೆವರೆಂಡ್ ಎಮ್ ಎಫ್. ಜೆ ಎಸ್ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು ಮರುದಿವಸ ರುಜಾರಿಯೋ ಇಗರ್ಜಿಗೆ ಸಂಬಂಧಿಸಿದ ಕ್ರೈಸ್ತ ಸಮುದಾಯದವರು ವಿದಾಯವನ್ನು ಬಯಸಿ ಯಾಚಿಸಿದ ಕಾಣಿಕೆ ಆರ್ಪಿಸಿದರು. ರೆ| ಫ್ರಾ| ಸೆಂಂಂ ರವರು ತಮಗರ್ಪಿಸಿದ ಕಾಣಿಕೆಯನ್ನು ಈ ವರ್ಷ ಆಚರಿಸಲ್ಪಡುವ ರುಜಾರಿಯೋ ಹೈಸ್ಕೂಲಿನ ಸತಾಬ್ದಿ ಸಮಾರಂಭದ ವೇಳೆ ಬಹುಮಾನಗಳನ್ನು ಕೊಡುವ ಬಗ್ಗೆ ಉಪಯೋಗಿಸಬೇಕೆಂದು ಮರಳಿ ವಾಪಾಸುಕೊಟ್ಟರು.

ನಾಯಕ ಮಂಡಳಿ ಸಭೆ—ದ ಕ. ಜಿಲ್ಲಾ ಶಾರೀರಿಕ ಸಮಾಜಾಭಿವೃದ್ಧಿ ಸಭಾ, ಮಂಗಳೂರು, ಇದರ ನಾಯಕ ಮಂಡಳಿ ಸಭೆಯು ತಾ. 8ರಂದು ಶ್ರೀ. ಯು. ಚಂದ್ರಸೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ದಲಿತ ವರ್ಗ ಮತ್ತು ಗುಡ್ಡಗಾಡು ಜನರಿಗೆ ಮನೆ ಕಟ್ಟಲು ಜರಗಿಸುವ ಹಣವನ್ನು, ದ ಕ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳುವುದರಿಂದ ಕನಿಷ್ಠ ರೂಪಾಯಿ 750ಕ್ಕೆ ಏರಿಸಬೇಕೆಂದೂ, ಈ ಹಣವನ್ನು ಈ ವರ್ಷದಿಂದಲೇ ಕೊಡಲು ಸರ್ಕಾರಿಸಬೇಕೆಂದೂ, ಈ ಜಿಲ್ಲೆಯಲ್ಲಿ ವೆಲ್‌ಫೇರ್ ಶಾಖೆಯ ಅಡಳಿತೆಯಲ್ಲಿರುವ ದಲಿತ ವರ್ಗದವರ ಎಲ್ಲಾ ಶಾಲೆ, ಹಾಸ್ಟೆಲುಗಳನ್ನು ಹಳೆ ಮೈಸೂರಿನಲ್ಲಿದ್ದಂತೆಯೇ ವಿದ್ಯಾ ಖಾತೆಯವರಿಗೆ ಬಿಟ್ಟು ಕೊಡಬೇಕಾಗಿಯೂ ಸಭೆಯು ತೀರ್ಮಾನಿಸಿತು.

ಕೆಳಾರ್ಕಳಬೆಟ್ಟು— ಕಲ್ಯಾಣಪುರ ಸಮೀಪದ ಕೆಳಾರ್ಕಳಬೆಟ್ಟುನಲ್ಲಿ ತಾ 7ರಂದು ಶ್ರೀ ಎ ಜೆ ಅಲ್ಫೆಯವರ ಅಧ್ಯಕ್ಷತೆಯಲ್ಲಿ ಸಪ್ತೋತ್ಸವದ ಸಮಾಜದ ಸಭೆಯು ಜರಗಿತು ಶ್ರೀಮತಿ ಮೀರಾ ಬಾಯಿಯವರಿಂದ ಪೂರ್ವಸಿದ್ಧಿಕಾ ಮಾತುಗಳಾದ ಬಳಿಕ ಶ್ರೀಗಳಾದ ಎಮ್ ಕೃಷ್ಣಯ್ಯ ಸೆಟ್ಟಿ, ಪಿ ಶೀನ ಸೆಟ್ಟಿ, ಬನ್ನಂಜೆ ರಾಮಾಚಾರ್ಯ, ಪದ್ಮನಾಭ ಆಚಾರ್ಯ ಮತ್ತು ರಮೇಶರಾಯರು ಸಮಯ ಸಂದರ್ಭಕ್ಕುಚಿತವಾದ ಮಾತುಗಳನ್ನಾಡಿದರು ಸಪ್ತೋತ್ಸವದ ತತ್ವಗಳು ಕಾರ್ಯಾಚರಣೆಯಲ್ಲಿ ಬರುವಂತಾದರೆ ಎಲ್ಲವೂ ಸರಿಹೋಗಿ ವಿರೋಧಿ ಗುಂಪುಗಳ ಶಕ್ತಿ ಕುಗ್ಗುವುದೆಂದು ಅಧ್ಯಕ್ಷರು ನುಡಿದರು

ಮಣಿಪಾಲ— ರೋಟರಿ ಕ್ಲಬ್ಬಿನ ಸಪ್ತಾಹಿಕ ಸಭೆಯು ತಾ 7ರಂದು ಡಾ ಟಿ ಎಮ್ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಎಲ್ಲೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ನೂರ್ಕಿ ಕೃಷ್ಣರಾಯರು ರೋಟರಿ ಸಂಸ್ಥೆಗಳ ಪ್ರಯೋಜನಗಳೇನೆಂಬುದನ್ನು ವಿವರಿಸಿ ಭಾಷಣವಿತ್ತರು. ರೋಟರಿ ಕ್ಲಬ್ಬಿನ ಸದಸ್ಯರಾಗಿದ್ದ ಶ್ರೀ ಎ ವೈದ್ಯನಾಥಸೆಟ್ಟಿರವರು ಮದ್ರಾಸಿಗೆ ಹೋಗುವ ನಿಮಿತ್ತ ಅವರಿಗೂ ಇದೇ ಸಂದರ್ಭದಲ್ಲಿ ಎದಾಯವೀಯಲಾಯಿತು ರೊಟೇರಿಯನ್ ಶ್ರೀ ಟಿ ರಮೇಶ ಪೈಗಳು ಧನ್ಯವಾದವಿತ್ತರು

ಮೂಲ್ಕಿ—ಸ್ಥಳೀಯ ಬಿಲ್ಲವ ಸಮಾಜ ಸೇವಾಸಂಘದ ಕಾರ್ಯಕಾರೀ ಸಮಿತಿಯ ಸಭೆಯು ತಾ 8ರಂದು ಶ್ರೀ ಹೂವಯ್ಯ ಮಾಸ್ತರರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ವರನ್ನು ಅಧಿಕಾರಿಗಳನ್ನಾಗಿ ಆರಿಸಲಾಯಿತು ಶ್ರೀಗಳಾದ ಎಸ್ ಟಿ ಸುವರ್ಣ (ಅಧ್ಯಕ್ಷ), ಕೆ. ಗೋಪಾಲ (ಉಪಾಧ್ಯಕ್ಷ), ಕೆ ಸೋಮಪ್ಪ ಸುವರ್ಣ (ಗೌ. ಪ್ರ ಕಾರ್ಯದರ್ಶಿ), ಎಚ್ ಭುಜಂಗ (ಸಹಕಾರ್ಯದರ್ಶಿ) ಕೆ ಸಿದ್ದು ಸುವರ್ಣ (ಕೋಶಾಧಿಕಾರಿ)

ದ ಕ. ಜಿಲ್ಲೆಯ ಬೋರ್ಡು ಹಾ ಎ. ಶಾಲಾ ಮುಖ್ಯೋಪಾಧ್ಯಾಯರ ಸಭೆಯೊಂದು ತಾ 9ರಂದು ಮೂಲ್ಕಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಸ್. ಮುಕುಂದ ರಾವ್, ಎಮ್ ಎಲ್. ಸಿ ಅವರ ಅಧ್ಯಕ್ಷತೆಯಲ್ಲಿ ಸೇರಿ ಜಿಲ್ಲಾ ಹಾ ,ಎ. ಶಾಲಾ ಮುಖ್ಯೋಪಾಧ್ಯಾಯರ ಸಂಘ ಸ್ಥಾಪಿಸಲ್ಪಟ್ಟಿತು. ಸಂಘದ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಸಿ ಮಹಾಲಿಂಗ ಸೆಟ್ಟಿ (ಅಧ್ಯಕ್ಷ), ಸತ್ಯನಾರಾಯಣ ರಾವ್ (ಉಪಾಧ್ಯಕ್ಷ), ಬಿ ಗೋವಿಂದ ಸೆಟ್ಟಿ (ಖಜಾಂಚಿ), ಎಚ್ ಎ. ಪಿ. ಕೆಮ್ಮಾಯ (ಕಾರ್ಯದರ್ಶಿ), ಪದ್ಮನಾಭ ರೈ ಮತ್ತು ನಾರಾಯಣ ಸೆಟ್ಟಿ (ಸದಸ್ಯರು) ಆರಿಸಲ್ಪಟ್ಟರು ಮುಖ್ಯೋಪಾಧ್ಯಾಯರ ಬಗ್ಗೆ ಪ್ರತ್ಯೇಕ ಕೇಡರ್ ರಚಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು

ಕುಂದಾಪುರ ಕುಂದಾಪುರ ತಾಲೂಕು ಹರಿಜನರ ಸಭೆಯೊಂದು ಶ್ರೀ ಯು ಮಂಜಪ್ಪ, ಎಮ್ ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿ ಕುಂದಾಪುರದಲ್ಲಿ ಒಂದು ಕಾಯಂ ಹರಿಜನ ವಿದ್ಯಾರ್ಥಿ ಭವನವನ್ನು ತೆರೆಯುವ ಅವಶ್ಯಕತೆ ಕುರಿತು ವಿಚಾರವಿನಿಮಯ ನಡೆಯಿತು.

ಬೆಳ್ತಂಗಡಿ— ಬೆಳ್ತಂಗಡಿ ಮತ್ತು ಬಂಟ್ವಾಳ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯಕರ್ತರ ಸಭೆಯೊಂದು ತಾ 9ರಂದು ಜರಗಿತು. ಮೈಸೂರು ರಾಜ್ಯದ ಕರಿಮೆಣಸು ಬೆಳೆ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕೆ. ಸಂಜೀವ ಸೆಟ್ಟರು ಮೈಸೂರು ರಾಜ್ಯದಲ್ಲಿ ಕರಿಮೆಣಸು ಬೆಳೆಯನ್ನು ಅಭಿವೃದ್ಧಿಗೊಳಿಸಲು ಕೈಕೊಳ್ಳಲಿರುವ ಯೋಜನೆಗಳನ್ನು ವಿವರಿಸಿದರು. ರೈತರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸರಕಾರವು ಕೊಡುವ ಸವಲತ್ತುಗಳನ್ನು ಸಮರ್ಪಕೋಪಯೋಗಪಡಿಸಿಕೊಂಡು ತಮ್ಮ ಮನೆ ಹಿತ್ತಲಲ್ಲಿ ಇತರ ಬೆಳೆಗಳೊಂದಿಗೆ ಕರಿಮೆಣಸಿನ ಬೆಳೆಯನ್ನು ಬೆಳೆಸಬೇಕೆಂದು ಕರೆಕೊಟ್ಟರು

ಸೂಡ— ಸ್ಥಳೀಯ ಬೋರ್ಡು ಶಾಲಾ ವಿದ್ಯಾರ್ಥಿಗಳಿಗೆ ಸರಕಾರದಿಂದ ಸಿಕ್ಕಿದ ವಿದ್ಯಾರ್ಥಿ ವೇತನಗಳನ್ನು ವಿತರಣೆಗೈಯುವ ಸಮಾರಂಭವು ತಾ 12ರಂದು ಸ್ಥಳೀಯ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎಸ್. ಮುದ್ದಣ್ಣ ಹೆಗ್ಡೆಯವರ ನೇತೃತ್ವದಲ್ಲಿ ಜರಗಿತು ಶ್ರೀ ಕೆ ರಘುರಾಮ ಸೆಟ್ಟಿರು ಈ ಸಂದರ್ಭದಲ್ಲಿ ಕಾಲೋಚಿತ ಮಾತುಗಳನ್ನಾಡಿದರು ಕೊನೆಯಲ್ಲಿ ಮುಖ್ಯೋಪಾಧ್ಯಾಯ ಶ್ರೀ ಕೆ. ತ್ಯಾಗಂಣ್ಣ ಸೆಟ್ಟರು ಧನ್ಯವಾದವಿತ್ತರು.

ಹಿರಿಗಾನ—ಕಾರ್ಕಳ ತಾಲೂಕು ಹಿರಿಗಾನ ಗ್ರಾಮದ ಚಿಕ್ಕಳಬೆಟ್ಟು ಸೆಂಟರಿನಲ್ಲಿದ ದ ಕ ಜಿಲ್ಲಾ ಬೋರ್ಡು ಯೇಕೋಪಾಧ್ಯಾಯ ಶಾಲೆಗಾಗಿ ಹಿರಿಗಾನ ಗ್ರಾಮದ ಕಡೇಲ ಸುಬ್ಬಯ್ಯ ಶೆಟ್ಟಿ ಕಟ್ಟಿಸಿದ ಹಂಚು ಚಾವಣಿಯ ಕಟ್ಟೋಣವನ್ನು ಕಳೆದ ತಾರೀಕು 25-9-1954ರಲ್ಲು ಬಾಡಿಗೆ ವಗೈರೆ ಯೇನೊಂದು ಪ್ರತಿಫಲ ಇಲ್ಲದೆನೇ ಜಿಲ್ಲಾ ಬೋರ್ಡಿಗೆ ಬಿಟ್ಟುಕೊಟ್ಟಿರುತ್ತಾರೆ ಸದ್ರಿ ಶಾಲೆಯಲ್ಲಿ ಯೆರಡು ಜನ ಉಪಾಧ್ಯಾಯರಿಗೂ ಮಿಕ್ಕಿ ಶಾಲಾ ಮಕ್ಕಳು ಜಾಸ್ತಿ ಬಂದದ್ದಿಂದ ಈ ಸಂಗತಿ ತಿಳಿದು ಬೋರ್ಡಿನವರು ಸದ್ರಿ ಸುಬ್ಬಯ್ಯ ಶೆಟ್ಟಿಗೆ ಮೊದ್ಲಿನ ಕಟ್ಟೋಣ ದುರುಸ್ತು ಮಾಡಿ ಸದ್ರಿ ಕಟ್ಟೋಣಕ್ಕೆ ಕೂಡ್ಸಿ ಮಕ್ಕಳಿಗೆ ಬೇಕಾದ ಹೊಸ ಕಟ್ಟೋಣ ಕಟ್ಟಿಸಿಕೊಡಬೇಕಾಗಿ ಬೋರ್ಡಿನಿಂದ ಬಂದ ಹುಕುಂ ಮೇರೆಗೆ ಸದ್ರಿ ಸುಬ್ಬಯ್ಯ ಶೆಟ್ಟಿ ರೂಪಾಯಿ ಮೂರು ಸಾವಿರ (3000-0-0) ಮಿಕ್ಕಿ ಅವರ ಸ್ವಂತ ಖರ್ಚಿನಿಂದ ಮೊದಲಿನ ಕಟ್ಟೋಣ ದುರುಸ್ತು ಮಾಡಿ ಸದ್ರಿ ಕಟ್ಟೋಣಕ್ಕೆ ಕೂಡ್ಸಿ ಹೊಸ ಹಂಚು ಚಾವಣಿ ಕಟ್ಟಿಸಿ ತಾರೀಕು 31 1 1957ರಲ್ಲು ಬಾಡಿಗೆ ವಗೈರೆ ಯೇನೊಂದು ಪ್ರತಿಫಲ ಇಲ್ಲದೆನೇ ನೂತ್ನ ಜಿಲ್ಲಾ ಬೋರ್ಡಿಗೆ ಬಿಟ್ಟುಕೊಟ್ಟಿರುವ ಕಟ್ಟೋಣ ಬಾವಿ ಕಂಪೌಂಡು ಕೂಡಾ ಇರುವ ಸುಮಾರು ಅರ್ಧ ಯೆಕ್ರೆ ಸ್ಥಳ ಕೂಡಾ ಶಾಲೆಗಾಗಿ ಬೋರ್ಡಿನ ಅಪೇಕ್ಷೆ ಮೇರೆಗೆ ಸದ್ರಿ ಸುಬ್ಬಯ್ಯ ಶೆಟ್ಟಿ ಸ್ವಂತ ಖರ್ಚಿನಿಂದ ತಾ. 29.5.58 ರಲ್ಲು ರಿಜಿಸ್ಟ್ರೆಶನಿಕ (Gift) ದಾನ ಪತ್ರ ಮಾಡಿ ಜಿಲ್ಲಾ ಬೋರ್ಡಿಗೆ ಉದಾರ ದಾನಮಾಡಿರುವುದು ಅಭಿನಂದನೀಯವಿದೆ

ದಿ ಬಿಶೋಫ್ ಪೇರಿಸರ ಸಮಾಧಿ-ಮಂಗಳೂರಿನ ಬಿಶೋಪರಾದ ದಿವಂಗತ ರೈಟರೆರೆಂಡ್ ಡಾ ಬೆಸಿಲ್ ಎಮ್. ಪೇರಿಸರ ಸಮಾಧಿಯು ತಾ 15ರಂದು ನಡೆಯಿತು ರುಜಾರಿಯೋ ಇಗರ್ಜಿಯಲ್ಲಿನ ಉತ್ತರಕ್ರಿಯಾ ವಿಧಿಗಳು ಮೈಸೂರಿನ ಬಿಶೋಪಾಡ್ ರೈಟ್ ರೆ ಡಾ ಆರ್ ಫ್ಲೋಗಾರವರ ನೇತೃತ್ವದಲ್ಲಿ ನಡೆದುವು ಕಲ್ಲಿಕೋಟೆ, ತಲಚೇರಿ ಮತ್ತು ಉಡಪಿಯಿಂದಲೂ ಬಿಶೋಪರೂ ಮಂಗಳೂರಿನ ವಿಕಾರ್ ಕೆಪಿಟ್ಯುಲರ್ ಎಮ್. ಎ ವಿ ಡಿಸೋಜರೂ ಕಾಜಾದ್ದರು. ದಿವಂಗತರ ಆತ್ಮಶಾಂತಿಗಾಗಿ ಪ್ರಾರ್ಥನೆ, ಹ್ಯಾಮಾಸ್ ನೆರವೇರಿಸಲಾಯಿತು

ಮೈಸೂರು

ಬೆಂಗಳೂರಲ್ಲಿ ಕಳೆದ ಮಾರ್ಚ ತಿಂಗಳಲ್ಲಿ ಜರಗಿದ ಮೈಸೂರು ಬಾರ್ ಕೌನ್ಸಿಲ್ ಪರೀಕ್ಷೆಯಲ್ಲಿ ಶ್ರೀ ಏಕಲ ಜಗನ್ನಾಥ ಸೆಟ್ಟಿ, ಎಂ ಎ, ಎಲ್. ಎಲ್ ಬಿ. ಮತ್ತು ಶ್ರೀಮತಿ ಸರೋಜಿನಿ ಮಹಿಷಿಯವರು ಪ್ರಥಮ ಸ್ಥಾನಗಳಿಸಿದ್ದಾರೆ

ದಯವಿಟ್ಟು ನಿಮ್ಮ ಬಾಕಿ ಚಂದಾಹಣವನ್ನು ಮನಿಯಾರ್ಡರು ಮಾಡಿರಿ

ಗುಟ್ಟಾಗಿ ಸರಿಪಡಿಸಿ ಸಂತೋಷದಿಂದ ಕೊರಗಿ, ಜೀವನದಲ್ಲಿ ನಿರಾಶಾಗಬೇಡಿ

100 ವರ್ಷಗಳಿಂದ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರಕ್ಷಿತ್ವದಿಂದ

ಟ್ರೇಡ್ ಮಾರ್ಕ್

ಪಂ| A R ಅಯ್ಯಂಗಾರ್

ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಟೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ ರೂ. 7-4-0

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು, ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತವೆ

ದಂಪತಿಗಳಿಗಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ

ರೋಗಿಯ ವಯಸ್ಸು ಎತ್ತರ ಮೂಲಿಯ ವಿವರಗಳನ್ನು ಬರೆದು 4 ಆಣೆ (35 N P) ಸ್ಟಾಂಪು ಕಳಿಸಿರಿ ಸಲಹೆಯೊಡನೆ ತ್ರಿವರ್ಣ ಕ್ಯಾಪ್ಸುಲಾಗಿ ಮತ್ತು ಹಸ್ತಪತ್ರಿಕೆಗಳ ರವಾನೆ

ಎ ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ, (ಸ ಯು)

628, ಅಂಬಳೆ ಅಣ್ಣಯ್ಯ ಸಂದಿತ್ ಬಿಲ್ಡಿಂಗ್ ಸೌತ್ ಕ್ರಾಸ್, ಮೈಸೂರು-1 (S I)

ಲಂಡನ್‌ನಲ್ಲಿ ಜರಗಿದ ಕಾಮನ್‌ವೆಲ್ತ್ ಅಧಿವೇಶನದ ಅಂಗವಾಗಿ ಏರ್ಪಡಿಸಲಾದ ಪ್ರದರ್ಶನದಲ್ಲಿ ಭಾರತೀಯ ಮೂವರು ರೆಮಣಿಯರು ನೃತ್ಯ ಪ್ರದರ್ಶಿಸುತ್ತಿರುವುದು.

ಪರೋಪದೇಶ ವಾಂಡಿತ್ಯ

(೧೧ನೇ ಪುಟದಿಂದ)

ಮಾಡಿಕೊಂಡು ನಾಲ್ಕು ಬಾರಿಸಿದರಂತೆ! ನಮ್ಮ ಹೆಚ್ಚಿನ ಉಪದೇಶಕ ತಂಡವು ಈಗ ಹೀಗೆಯೇ ಇದೆ. ಮೊತ್ತಮೊದಲು ಈ ಉಪದೇಶಕರು ತಾವು ಉಪದೇಶಿಸುವುದನ್ನು ತಾವು ಆಚರಣೆಯಲ್ಲಿ ತಂದು, ಮುಂದೆ ಪರರಿಗೆ ಬೋಧಿಸಬೇಗಬೇಕು ಆದರೆ, ನಮ್ಮ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿದೆ. ಪಂಡಿತ ನೆಹರೂ, ಡಾ. ರಾಧಾಕೃಷ್ಣನ್, ಬಾಬು ರಾಜೇಂದ್ರ ಪ್ರಸಾದ ಮೊದಲಾದ ಮಹಾತ್ಮರು "ಸನಾತನದಲ್ಲಿ ವಂಚನೆ, ಭ್ರಷ್ಟಾಚಾರ, ಅಪ್ರಾಮಾಣಿಕತನಗಳು ಹೆಚ್ಚಿವೆ ಅವುಗಳನ್ನು ತಕ್ಷಣ ದೂರಮಾಡದೆ ಹೋದರೆ, ನಮ್ಮ ಪ್ರಗತಿಯಾಗಲಾರದು' ಎಂದು ಉಸದೇಶಿಸಿದರೆ, ನಮ್ಮೂರ ಮಾದನೂ ಅವನ್ನೇ ಮೆಲುಕುಹಾಕುತ್ತಿರುತ್ತಾನೆ! ಆದರೆ, ತಾನೇ ಅಪ್ರಾಮಾಣಿಕ, ತಾನೇ ಲಂಚಗುಳಿ, ತಾನೇ ವಂಚಕನೆಂದು ತಿಳಿ ತಿಳಿದೂ ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿಯುವಂತೆ ವರಿಷ್ಠರ ಉಪದೇಶಾವೃತವನ್ನು ಜನಜನಕ್ಕೆ ಒಯ್ಯುತ್ತಾನೆ! ಇದೇ ನಮಗೂ ಪ್ರಗತಿಪರ ರಾಷ್ಟ್ರೀಯರಿಗೂ ಇರುವ ಅಂತರ! ಮಾತು ಕಡಿಮೆಯಾಗಿ ಕೃತಿ ಹೆಚ್ಚಾಗುವುದು. ಉದ್ಧಾರ—ಪ್ರಗತಿಯ ದ್ಯೋತಕವಾದರೆ, ಮಾತು ಹೆಚ್ಚು ಕೃತಿ ಕಡಿಮೆಯಾಗುವುದು ಅವನತಿಯತ್ತ ಧಾವಿಸುವ ಮುನ್ಸೂಚನೆ! ನಮ್ಮ ಜನತೆ ಪರರಿಗೆ ಉಪದೇಶಿಸುವುದನ್ನು ಬಿಟ್ಟು ಪರರು ತನಗೆ ಹೇಗಾಗಬೇಕೆಂದು ಭಾವಿಸುವರೋ ಹಾಗೆ ಮೊದಲು ತಾನಿರಬೇಕಂಬುದನ್ನು ಅರಿಯಲಿ. ನಿನ್ನನ್ನು ಪರರು ಹೇಗೆ ಕಾಣಬೇಕೋ ಹಾಗೆ ನೀನು ಪರರನ್ನು ಮೊದಲು ಕಾಣು' ಎಂಬ ಮಹಾತ್ಮರೊಬ್ಬರ ವಚನವನ್ನು ನೆನಪಿಗೆ ತಂದುಕೊಳ್ಳಬೇಕು

ಉಪರಾಷ್ಟ್ರಪತಿಯವರು ಸ್ವಯಂ ಅನುಭಾವಿಗಳು ತಾನು ಆಚರಿಸದುದನ್ನು ಅವರು ಪರರಿಗೆ ಉಪದೇಶಿಸುವುದಿಲ್ಲ ಇಂದು ಭಾರತದಲ್ಲಿ ಉಪದೇಶವೀಯುವ ಅಧಿಕಾರವಿರುವ ಕೆಲವೇ ಸಂತಪುರುಷರಲ್ಲಿ ರಾಧಾಕೃಷ್ಣನರೊಬ್ಬರು ಆದರೆ, ಅವರೊಂದುವನ್ನು ಕೇಳಿ ಓದಿ ಅನುಕರಿಸುವವರು ಮಾತ್ರ ತಮ್ಮನ್ನು ಮೊದಲು ಕಂಡುಕೊಳ್ಳಬೇಕು; ಅಷ್ಟೆ. ಆಗ ಮಾತು ಸಫಲಲ ಜೊರೆಕು ಕಾರ್ಯೋದ್ದೇಶ ಪೂರ್ಣಗೊಂಡೀತು, ಹಾಗಾಗದೆ ಹೋದರೆ, ಸದಾಚಾರಾದಿ ಸಂಚಿತೀಲಗಳು ಪರೋಪದೇಶಕ್ಕಾಗಿ ಮಾತ್ರ ಆಚರಣೆಗಲ್ಲ ಎಂದಂದರೆ ಆಶ್ಚರ್ಯಪಡಬೇಕಾಗಿಲ್ಲ

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕನರಕ	೨=00
ಸಂಜೆಮತ್ತು	2=50
ಮಂಗಳಾರತಿ	1=00
ನಮ್ಮ ಸಿನ್ತ್ರಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=00
ಮೈಲುಕಲ್ಲಿನೊಡನೆ ಮಾತುಕತೆಗಳು	1=00
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವಾಗ ಎರಡು ಪ್ರತಿಗಳನ್ನು ಕಳಿಸಬೇಕು. ಸಂ ನ)

ಸಸ್ಯ ವಿಜ್ಞಾನಿಗಳ ಕತೆಗಳು— ಲೇಖಕರು ಶ್ರೀ ಎಂ ಎಸ್ ರಾವ್, ಎಸ್ ಸಿ ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ ಪುಟಗಳು, ೧೪೨+೨೪. ಬೆಲೆ. ರೂ ೧ ೭೫

ದೇಶೀಯ ಭಾಷೆಗಳಲ್ಲಿ ಕಥಾ ಸಂಕಲನ, ಕಾದಂಬರಿ ಮೊದಲಾದ ಸಾಹಿತ್ಯ ಪ್ರಕಾರಗಳು ಸಾಮಾನ್ಯವಾಗಿ ಹುಟ್ಟಿಕೊಳ್ಳುತ್ತಿದ್ದರೂ, ಶಾಸ್ತ್ರ ಗ್ರಂಥಗಳು ಅಪರೂಪವಾಗಿ ಬೆಳಕು ಕಾಣುತ್ತಿವೆ ದಿನಮಾನರಂಜನೆಯತ್ತೇ ತಮ್ಮ ಮುಖ್ಯ ಗುರಿಯನ್ನಾಗಿ ಬರೆಗಾರರು ಇಟ್ಟುಕೊಂಡು ಅದ್ಭುತರಮ್ಯ ಪತ್ತೆದಾರಿ ಕಾದಂಬರಿಗಳನ್ನಷ್ಟೇ ಬರೆಯುತ್ತ ಹೊಸದ ಮಾತ್ರಕ್ಕೆ ಸಾಹಿತ್ಯದ ಬೆಳವಣಿಗೆಯಾಯಿತೆಂದು ತಿಳಿಯದಾರದು ಇಂದು ಮನೋರಂಜನೆಯೊಡನೆ ಯೇ ಜನತೆಗೆ ಅರಿಯದಿರುವ ವಿಷಯಗಳನ್ನೂ ಅವರಿಗೆ ತಿಳಿಯುವಂತೆ ಮಾಡಿ ಅವರ ಜ್ಞಾನವನ್ನು ಹೆಚ್ಚಿಸುವ ಕೆಲಸವು ತೀವ್ರವಾಗಿ ಆಗಬೇಕಾಗಿದೆ ಕನ್ನಡ ಭಾಷೆಯಲ್ಲಿ ಇಂತಹ ಶಾಸ್ತ್ರ ಸಂಬಂಧದ, ವಿಮರ್ಶೆಯ, ಜೀವನ ಚರಿತ್ರೆಯ ಗ್ರಂಥಗಳು ಅಪರೂಪವಾಗಿವೆ—ಹೀಗಾಗಿ ಬದಲಾಗುತ್ತಿರುವ ವೈಜ್ಞಾನಿಕೇತ್ಯ ಪರಿಸ್ಥಿತಿಗಳನ್ನು ನಾವರಿತುಕೊಂಡು ಅನಕ್ಕೆ ಹೊಂದಿಕೊಂಡು ಹೋಗುವಂತಹ ಘಟ್ಟಕ್ಕೆ ನಾವು ಬಂದು ನುಟ್ಟಿಲ್ಲ ವಿಜ್ಞಾನ ಗ್ರಂಥಗಳ ಅಭಾವವು ಎಲ್ಲೆಲ್ಲಿಯೂ ಕಾಣುತ್ತಿರುವಾಗ, ಆ ಶಾಸ್ತ್ರದ ಒಂದಂಗವಾದ ಸಸ್ಯ ವಿಜ್ಞಾನದಲ್ಲಿ ಬೇರೆ ಬೇರೆ ಸಂಶೋಧನೆಗಳನ್ನು ನಡೆಸಿದ ಮಹಾನುಭಾವರ ಜೀವನಚಿತ್ರಗಳನ್ನು ಬಾಗಿಲುತೆಗೆದಿವೆ. ಬನವೇಶ್ವರ ಕಾಲೇಜಿನ ಸಸ್ಯಶಾಸ್ತ್ರ ವಿದ್ಯಾಪಕರಾದ ಶ್ರೀ ರಾವ್ ಅವರು ಸಂಗ್ರಹಿಸಿ ಕನ್ನಡಿಸಿರುತ್ತಿದ್ದಾರೆ.

ಜನತೆಯಲ್ಲಿ ಇತಿಹಾಸದ ಬಗ್ಗೆ ಆಸಕ್ತಿ ಹುಟ್ಟಿದುದು ಕೆಲಕಾಲದಿಂದೀಚೆಗೆ ಅದರಲ್ಲೂ ಒಬ್ಬ ವ್ಯಕ್ತಿಯ ಜೀವನೇತಿಹಾಸವು ಅತನ ಮರಣಾನಂತರವೇ ಬೆಳಕಿಗೆ ಬರುವುದು ಹೆಚ್ಚು ಹಾಗಿರುವಾಗ, ಈ ಗ್ರಂಥದಲ್ಲಿ ಕೂಡಿಸಲಾದ ಸಸ್ಯವಿಜ್ಞಾನಿಗಳ ಇತಿಹಾಸವನ್ನು ಅತ್ಯಂತ ಪರಿಶ್ರಮಪೂರ್ವಕವಾಗಿ ಸಲವಾರು ಅಧಾರಗ್ರಂಥಗಳ ಸಹಾಯದಿಂದ (ಇವುಗಳ ಪಟ್ಟಿ ಗ್ರಂಥಾಂತ್ಯದಲ್ಲಿ ಕೊಡಲಾಗಿದೆ) ಮಾನ್ಯ ಲೇಖಕರು ಸಂಗ್ರಹಿಸಿರುವುದು ಸ್ತುತ್ಯರ್ಹವೆನಿಸುವ ಪ್ರಕೃತದ ಗ್ರಂಥದಲ್ಲಿ ಜಾನ್‌ಟೇ, ಜೆ. ಡಿ ಹೂಕರ್, ವಿಲಿಯಮ್ ಹಾಪ್‌ಕಿಯನ್ಸ್, ಲ್ಯೂಥರ್‌ಬರ್ಬ್ಯಾಂಕ್, ಜೆ. ಎಚ್ ಕಾಲ್ಪರ್ ವಾನ್‌ಗೋಟೆಲ್, ಡಿ ಎಚ್ ಕ್ಯಾಂಬೆಲ್, ಇ ಸಿ ಜೆಪ್ಸಿ, ಎಸ್ ಎಫ್ ಬ್ಲಾಕ್‌ಮನ್, ಎ ಎಸ್ ಬ್ಲಾಕ್‌ಮ್ಯಾನ್ ಜಯಾಗ್ ಬಿಟ್ಸ್‌ಲರ್, ಎಸ್. ಇ ಫ್ರಿಟ್ಸ್ ಎಂಬ ವಿದೇಶೀಯ ಸಸ್ಯಶಾಸ್ತ್ರಜ್ಞರ ಮತ್ತು ಜೆ. ಸಿ. ಬೋಸ್, ಎಸ್ ಆರ್ ಕಾಶ್ಯಪ, ಬೀರಬಲ್ ಸಹಾನಿ ಮೊದಲಾದ ಎಂಬ ಭಾರತೀಯ ವಿಜ್ಞಾನಿಗಳ ಚರಿತ್ರೆಗಳನ್ನು ಸಂಗ್ರಹಿಸಲಾಗಿದೆ ಸಸ್ಯ ಶಾಸ್ತ್ರವನ್ನು ಅಭ್ಯಾಸ ಮಾಡುವವರು ಇವರೆಲ್ಲರ ಹೆಸರುಗಳನ್ನೂ ಅವರ ಸಂಕ್ಷಿಪ್ತ ಚರಿತ್ರೆಯನ್ನೂ ತಿಳಿದುಕೊಳ್ಳುವ ಅವಶ್ಯಕತೆಯಿದ್ದರೂ, ಅವು ಅಷ್ಟೊಂದು ಸರಿಯಾಗಿ ಅವರಿಗೆ ದೊರೆಯಲಾರವು ಇಂತಹ ಮಹಾಮೇಧಾವಿಗಳಿಗೆ ಸಂಬಂಧಿಸಿದ ಎಲ್ಲ ವೃತ್ತಾಂತಗಳೂ ಮುಖ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿರುವುದರಿಂದ ಸಾಮಾನ್ಯ ಜನರಿಗೆ ಇವುಗಳನ್ನರಿತುಕೊಳ್ಳುವ ತಹತಹವಿದ್ದರೂ ಅವರು ಹಾಗೆ ಮಾಡಲಾರರು ಆದುದರಿಂದ ದೇಶೀಯ ಭಾಷೆಗಳಲ್ಲಿ ಇಂತಹ ಹೊತ್ತಗೆಗಳು ಹೆಚ್ಚುಹೆಚ್ಚಾಗಿ ಬೆಳಕು ಕಾಣುವಂತಾಗಬೇಕು

ಈ ಪುಸ್ತಕದಲ್ಲಿ ವರ್ಣಿಸಲಾದ ಸಸ್ಯ ವಿಜ್ಞಾನಿಗಳ ಕಥೆಗಳು ಕೇವಲ ಕಲ್ಪಿತ ಆಗಿರದೆ ಅವರ ಸಂಶೋಧನೆಗಳನ್ನೂ ಸ್ವಲ್ಪ ಮಟ್ಟಿಗೆ ತಿಳಿಸುತ್ತವೆ ಆದರೆ, ಸಸ್ಯಗಳ ಬಗೆಗೆ ಯಾವುದೇ ವಿಜ್ಞಾರಗಳು ತಿಳಿಯದಿರುವವರಿಗೆ ಇಂತಹ ಸಂಶೋಧನೆಗಳ ವಿಷಯ ಓದುವಾಗ ಅವುಗಳನ್ನು ಹಿಂಬಾಲಿಸಿಕೊಂಡು ಹೋಗುವುದು ಅಸಾಧ್ಯವೆನಿಸುತ್ತದೆ ಇಂತಹ ಅಂಶಗಳು ಮುಖ್ಯವಾಗಿ ವಿಜ್ಞಾನ ಸಂಬಂಧದಲ್ಲಿರುವುದು ಅನಿವಾರ್ಯವೆನಿಸುವುದು ಹೇಳಬಹುದು ಅದರೂ ಸಸ್ಯವಿಜ್ಞಾನವನ್ನು ಅಲ್ಪಸ್ವಲ್ಪ ತಿಳಿದುಕೊಂಡಿರುವವರು ಮಾತ್ರ ಇದರ ಸಂಪೂರ್ಣ ಪ್ರಯೋಜನವನ್ನು ಕಾಣಬಹುದು ಪ್ರತ್ಯಕ್ಷವಾಗಿ ವಿವರಿಸಬೇಕಾದ ವಿಷಯಗಳನ್ನು ಲಿಖಿತರೂಪಕ್ಕಿಳಿಸಿದರೆ, ಅದರಿಂದ ಯಾವ ಕಲ್ಪನೆಯೂ ಹುಟ್ಟದೆ ಹೋದರೆ, ಆಶ್ಚರ್ಯವಿಲ್ಲ

ಇಲ್ಲಿ ಬರುವಂಥ ವಿಜ್ಞಾನಿಗಳ ಕೆಲಸಗಳು ಬೇರೆಬೇರೆಯಾದರೂ ಪ್ರಾಸಂಗಿಕವೆ, ಮುಂದುವರಿಸಿದ ಹಾಗೂ ಕೊನೆಗೊಳಿಸಿದ ವಿಧಾನಗಳಲ್ಲಿ ವೈಶಿಷ್ಟ್ಯವಿರುವುದಿಲ್ಲ (ಆಲ್ಬರ್ಟ್ ಫ್ರಾಯ್ಸ್ ಬ್ಲಾಕ್ ಸ್ಲೀಯು ೧೮೬೯ರಲ್ಲಿ ನ್ಯೂಯಾರ್ಕಿನ ಜೆನೆವೋ ಎಂಬ ಸ್ಥಳದಲ್ಲಿ ಜನಿಸಿದನು" (ಪುಟ ೭೧), "ಕರಮ್‌ಚಂದ್ ಮೆಹತಾ ಪಂಜಾಬದ ಅಮೃತಸರ್ ಎಂಬ ಸ್ಥಳದಲ್ಲಿ ೧೮೯೨ರ ಜೂನ್ ೨೦ನೇ ದಿನಾಂಕ ಜನ್ಮವೆತ್ತಿದನು —ಹೀಗೆಯೇ ಹೆಚ್ಚಿನ ಒಂದೇ ವಿಧಶಾಸ್ತ್ರ ಭಾಷೆಯಲ್ಲಿ ಮುಂದುವರಿಯುವುದರಿಂದ ವಿಜ್ಞಾನದ ಕಡೆಗೆ ಅನಾಸಕ್ತಿ ಧೋರಣೆಯಿಂದಿರುವವರಲ್ಲಿ ಈ ಗ್ರಂಥವನ್ನು ಓದುವ ಕುತೂಹಲವನ್ನೂ ಕೆರಳಿಸುವಂತಿಲ್ಲ ವಿಜ್ಞಾನದ ಪಾಠಗಳನ್ನು ಕಥೆ ಹೇಳುವ ರೀತಿಯಲ್ಲಿ ಹೇಳುತ್ತ ಹೋಗಿ ಮುಖ್ಯಾಂಶವನ್ನು ತಿಳಿಸುವುದರಿಂದ ಜನತೆಗೆ ಅವು ಇಷ್ಟವಾಗಿ ಪಠಣಮಾಡಬಹುದು ಕೊನೆಗೆ, ಹೇಳುವ ತಂತ್ರದಲ್ಲಾದರೂ ಶೈಲಿಯ ಲ್ಲಾದರೂ ಒಂದರಿನ್ನೊಂದು ಅಂತರಕ್ಕಿರುವುದು ಅನಿವಾರ್ಯವೆನಿಸುವುದಿಲ್ಲವೆಂದರೆ, ಸರಿಸವಾಗದ ಸಂಭವವಿರುವುದು

ಗ್ರಂಥದಲ್ಲಿ ಮಾರಿಭಾಷಿಕ ಅರ್ಥಕೋಶವೊಂದನ್ನು ಕೊನೆಯಲ್ಲಿ ಕೊಡಲಾಗಿರುವುದರಿಂದ ಇಂಗ್ಲಿಷ್ ತಿಳಿದಸಸ್ಯವಿಜ್ಞಾನಿಗಳಿಗೆ ಕನ್ನಡದಲ್ಲಿ ಲರ್ಯಾಯ ಪದವು ತಿಳಿಯಬಹುದು ಆದರೆ, Pollination ಅನ್ನು ಪರಾಗಸ್ಪರ್ಶವೆಂದು ಹೇಳಿದ ಶ್ರೀ ರಾಯರು Cross Pollination ಅನ್ನು ಪರಕೀಯ ರೇಣು ಸ್ಪರ್ಶವೆನ್ನುವುದಕ್ಕಿಂತ ಪರಕೀಯ ಪರಾಗಸ್ಪರ್ಶವೆಂದೇ ಇರಿಸಬಹುದಾಗಿತ್ತು Oxygen ಅನ್ನು ಅನ್ನಜನಕವೆಂದು ಉಲ್ಲೇಖಿಸಿದ ಪ್ರಾಣವಾಯುವೆಂದು ಹೆಸರಿಸಿದುದು Chlorophyll ನ್ನು ಪತ್ರ ಹರಿತ್ತು ಮತ್ತು ಹರಿತ್ತು ಎಂದು ಬೇರೆಬೇರೆಯಿಟ್ಟು ಉಲ್ಲೇಖಿಸಿದುದರ ಔಚಿತ್ಯ ತಿಳಿಯುವುದಿಲ್ಲ ಇಂತಹ ಹಲವಾರು ಕೊರತೆ ಹಾಗೂ ದೋಷಗಳು ಪ್ರಾರಂಭದಲ್ಲಿ ಎದ್ದುತೋರದೆ ಗತ್ಯಂತರವಿಲ್ಲ.

ಇಲ್ಲಿ ವಿವರಿಸಲಾದ ವಿಜ್ಞಾನಿಗಳೆಲ್ಲರೂ ಬಾವಚಿತ್ರಗಳನ್ನು ಅಲ್ಲಲ್ಲಿಯೇ ಕೊಟ್ಟಿರುವುದು ಯುಕ್ತವೆನಿಸಿ ಹೊದಿಕೆಯ ಚಿತ್ರವನ್ನು ಇನ್ನೂ ಸಂಸ್ಕರಿಸಬಹುದಿತ್ತು ವಿಜ್ಞಾನದ ಕಡೆಗೆ ಜನತೆಯಲ್ಲಿ ಆಸಕ್ತಿಯನ್ನು ಕೆರಳಿಸುವಲ್ಲಿ ಸಹಾಯವಾದೀತೆಂಬ ವಿಶ್ವಾಸದಿಂದ ದೇಶಿಕ ಹಾಗೂ ಪ್ರಕಾಶಕರನ್ನು ಅಭಿನಂದಿಸುತ್ತೇವೆ

ಸುರತ್ಕಲ್ ಕುಲಾಲ ಹರಸ್ಪರ ಸಹಾಯಕ ಸಭಾ, ಮುಂಬಯಿ — ೧೯೫೦ರಲ್ಲಿ ಸ್ಥಾಪನೆಗೊಂಡ ಮೇಲಿನ ಸಭೆಯು ಏಳನೆ ವರ್ಷದ ವರದಿ ಮತ್ತು ರೌಕ್ಯಸತ್ರಗಳ ವರದಿಯನ್ನು ಕೈಸೇರಿದ ಈ ಸಭೆಯು ಸುರತ್ಕಲ್ ಧರ್ಮಾರ್ಥ ಔಷಧಾಲಯ, ಮತ್ತು ಪುಸ್ತಕ ಭಂಡಾರ ಮತ್ತು ಶ್ರೀ ಶಾರದಾ ಭಜನ ಮಂಡಳಿಗಳು ನಡೆಸಿಕೊಂಡುಬರುತ್ತಿರುವುದು ಅಭಿನಂದನೀಯ ಈ ಸಭೆಯು ಕಳೆದ ವರ್ಷ (೩೭) ತನ್ನ ಸಿಲೆಸಿಯ ಮಧ್ಯಸ್ಥಿನಲ್ಲಿ ಸಂಸ್ಥೆಗಳ ರಿಜಿಸ್ಟ್ರೇಷನ್ ಕಾಯದೆಯಾಗಿ ರಿಜಿಸ್ಟರಾಗಿದ್ದು ತನ್ನ ಸ್ವಂತ ಕಟ್ಟಡವೊಂದನ್ನು ಕಟ್ಟಿಸುವ ಇರಾದೆಯಿಂದ ಕೂಡಿದೆ ಸಭೆಯ ಮೂಲಧನವು ರೂ ೪೦೦೦ ೪೬ ಇದ್ದು ಕಟ್ಟಡದ ನಿಧಿಯು ೩೦೫೦ ೦೭, ವಿದ್ಯಾನಿಧಿಯು ರೂ. ೧೪೦೦ ೦೦ ಇರುವುದು ಆರ್ಥಿಕ ಸ್ಥಿತಿಗತಿಗಳು ಸಾಮಾನ್ಯ ತೃಪ್ತಿಕರವಿದೆ ಈ ವರದಿಯಲ್ಲಿ ಸಭೆಯ ಸದಸ್ಯರ ಮತ್ತು ವಾರ್ಷಿಕ ಹೆಸರುಗಳನ್ನೂ ಅಚ್ಚಹಾಕಲಾಗಿದೆ ಸಭೆಯು ಇನ್ನೂ ಪ್ರವರ್ಧಮಾನವಾಗಿ ಬೆಳೆಯಲಿ

ಗೋರಾ —

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಒರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರೈಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಪ್ರೆಸಿಡೆಂಟ್

ಪೌಂಟನ್ ಪೆನ್ನುಗಳು
ತರಹೆವಾರು ಮತ್ತು ನಾನಾ ಬಣ್ಣಗಳಲ್ಲಿ ಸಿಗುವುವು

ಭಾರತ ಸೇವಕ ಸಮಾಜ

(೩ನೇ ಪುಟದಿಂದ)

ಮೇಲೆ ವಿವರಿತವಾಗಿರುವ ಐದು ಅಂಗಗಳು ಭಾರತ ಸೇವಕ ಸಮಾಜದ ಪ್ರಧಾನಾಂಗಗಳಾಗಿವೆ. ಆದರೆ, ಇವುಗಳಲ್ಲಿ ಅನೇಕ ಭಾಗವಿಭಾಗಗಳನ್ನು ಮಾಡಿ ದೇಶನಿರ್ಮಾಣ ಕಾರ್ಯದಲ್ಲಿ ತಮ್ಮ ನೆರವೀಯಲು ಅನುಕೂಲತೆಯನ್ನು ಕಲ್ಪಿಸಲಾಗಿದೆ. ಆದುದರಿಂದ ಎಲ್ಲ ಪ್ರಾಂತವೂ ತಂತಮ್ಮ ಕಾರ್ಯಕ್ರಮಗಳನ್ನು ತಮ್ಮಿಚ್ಛೆಯನುಕೂಲತೆ ಮತ್ತು ಸಾಮರ್ಥ್ಯಕ್ಕನುಸಾರವಾಗಿ ನಡೆಸಲು ಸ್ವತಂತ್ರವಿದೆ. ಅಲ್ಲಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜನರಿಗೆ ತಿಳಿಹೇಳಲು- ಜನಸಹಯೋಗ ಕೇಂದ್ರಗಳನ್ನು ತೆರೆಯಲಾಗಿದೆ. ಹಳ್ಳಿಗಳಲ್ಲಿ ಯುವಕ ಮತ್ತು ಯುವತಿಯರ ಶಿಬಿರಗಳನ್ನೇರ್ಪಡಿಸಿ ಅವರೂ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸುವಂತೆ ಮಾಡಲಾಗುತ್ತಿದೆ. ಓದು ಬರಹದ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ. ಮಕ್ಕಳಿಗಾಗಿ ಶಿಕ್ಷಣ ಕೇಂದ್ರ, ಯುವಕರಿಗೆ ಸಮಾಜ, ವಾಚನಾಲಯ ಮತ್ತು ಪುಸ್ತಕಾಲಯಗಳು ಸ್ಥಾಪಿತವಾಗಿವೆ. ಮನೋರಂಜನಾ ಕಾರ್ಯಕ್ರಮಗಳನ್ನೂ ಇಟ್ಟುಕೊಳ್ಳಲಾಗಿದೆ. ಬಡವರಲ್ಲಿ ಎಳೆಯ ಮಕ್ಕಳಿಗೆ ಹಾಲನ್ನು ವಿತರಿಸಲಾಗುತ್ತಿದೆ. ಚರಿತ್ರ ನಿರ್ಮಾಣ ಮತ್ತು ಸಾಮಾಜಿಕ ಸ್ತರದನ್ನತಿಗಾಗಿ ಭ್ರಷ್ಟಾಚಾರ ನಿವಾರಣೆ, ಲಂಚ ನಿರೋಧ ಮತ್ತು ಮದ್ಯ ಪ್ರತಿಬಂಧದ ಕಾರ್ಯಕ್ರಮಗಳೂ. ಇವುಗಳೊಂದಿಗೆ ಹಜರ ಕಡಾಯ ಗೈಯುವುದಕ್ಕಾಗಿಯೂ ಕೃಷಿಗನ್ನು ಕೈಗೊಳ್ಳಲಾಗುತ್ತಿದೆ.

ಈ ಎಲ್ಲ ಕೆಲಸಗಳನ್ನು ನಡೆಸಲು ಒಂದು ಕೇಂದ್ರೀಯ ವಿಭಾಗವಿದೆ. ಇದಕ್ಕೊಂದು ಪರಿಷತ್ತು ಹಾಗೂ ವ್ಯವಸ್ಥಾಪಕ ಸಮಿತಿ ಇದೆ. ಇದೇ ವಿಧದ ಪ್ರಣಾಳಿಯನ್ನು ಎಲ್ಲ ಪ್ರಾಂತ್ರಗಳಲ್ಲಿಯೂ ಇಡಲಾಗಿದೆ. ಭಾರತ ಸೇವಕ ಸಮಾಜದ ಕರ್ಣಧಾರರಾದ ನಮ್ಮ ಪ್ರಧಾನ ಮಂತ್ರಿಯವರ ಆಶಯ—ಈ ಸಂಸ್ಥೆಯು ಪಂಚವಾರ್ಷಿಕ ಯೋಜನೆಗಳನ್ನು ಸಫಲವಾಗಿಸುವ ಸಾಧನಗಳಾಗಬೇಕು. ಇದರಿಂದ ದೇಶದ ದಾರಿದ್ರ್ಯ ಹಾಗೂ ನಿರುದ್ಯೋಗಿತೆಗಳು ದೂರವಾಗಿ ಭಾರತವು ತನ್ನ ಸಂಪತ್ಸಮೃದ್ಧಿ ಶಿಖರಸನ್ನು ಮುಟ್ಟಬೇಕು. ಮತ್ತು ಗಾಂಧೀಜಿಯವರು ಸಾಧ್ಯವಾಗಿಟ್ಟು ಕೊಂಡಿದ್ದುದನ್ನು ನಾವು ಸಾಧಿಸಿದೆಯಾಗಿಸಿ ಅವರ ಕಲ್ಪನೆಯ ರಾಮರಾಜ್ಯವನ್ನು ನಿಜವಾಗಿ ಸ್ಥಾಪನೆ ಮಾಡಬೇಕು—ಎಂದು. ಹೀಗಾಗುವಂತೆ ದುಡಿಯುವ ದೃಢ ಮನೋನಿರ್ಧಾರವನ್ನು ನಾವು ಮಾಡೋಣವೆ?

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಪ್ರಕೃತಿ ಸೌಂದರ್ಯದ ಬೆಡಗಿನೂರು—

ದಕ್ಷಿಣದ ಕಾಶ್ಮೀರ - ಮಡಿಕೇರಿ

ಶ್ರೀ. ಎಂ. ರಘುನಂದನ ರಾವ್.

ಕೊಡಗು, ಭಾರತದ 'ದಕ್ಷಿಣ ಕಾಶ್ಮೀರ'ವೆಂದು ಪ್ರಸಿದ್ಧವಾಗಿದೆ. ಈ ಕಾಶ್ಮೀರದ 'ಶ್ರೀನಗರ'—ಮಡಿಕೇರಿ. ಹಿಂದಿನಿಂದ ಮಡಿಕೇರಿ ಕೊಡಗು ರಾಜ್ಯದ ರಾಜಧಾನಿಯಾಗಿತ್ತು. ಇಲ್ಲಿ ಹಿಂದೆ ಲಿಂಗಾಯತ ರಾಜರು ಪ್ರಜ ರಂಜನೆಯನ್ನೈಸಿ ಗುತ್ತಿದ್ದರು ಅನಂತರ ಭಾರತ ಸರಕಾರದ ಆಡಳಿತಕ್ಕುಳ್ಳಿ ಕೊಡಗು ಪ್ರತ್ಯೇಕ ಪ್ರಾಂತ್ಯವಾಗದ್ದಾಗಲೂ ಮಡಿಕೇರಿಯೇ ಅದರ ಮುಖ್ಯ ಪಟ್ಟಣವಾಗಿತ್ತು. ನವರಾಜ್ಯೋದಯದನಂತರ ಕೊಡಗು ಪ್ರಾಂತ ಜಿಲ್ಲೆಯ ರೂಪದಲ್ಲಿ ನವಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ಈಗ ಮಡಿಕೇರಿ ಕೊಡಗು ಜಿಲ್ಲೆಯ ಮುಖ್ಯ ಪಟ್ಟಣವಾಗಿದೆ.

ಮಡಿಕೇರಿ—ಹೆಸರು ಗುಡ್ಡ ಬೆಟ್ಟಗಳಿಂದಾವೃತವಾಗಿ ಶೋಭಿಸುತ್ತಿರುವ ಪ್ರಕೃತಿ ಮಾತೆಯ ತವರೂರೆ. ಸುತ್ತಲಿನ ಪ್ರದೇಶವೆಲ್ಲ ಹಸುರಿನಿಂದ ತುಂಬಿದೆ ನಿಸರ್ಗದ ತಾಯ್ನೆಲವಾದ ಈ ಪಟ್ಟಣ ಹಿಂದೆ ಲಿಂಗಾಯತ ರಾಜರ ರಾಜಧಾನಿಯಾಗಿತ್ತು. ಲಿಂಗರಾಜನೆಂಬ ಅರಸು ಇವರಲ್ಲಿ ಪ್ರಖ್ಯಾತನು. ಇತಿಹಾಸದೃಷ್ಟಿಯಿಂದ ಮಡಿಕೇರಿ ಇತರ ಪಟ್ಟಣಗಳಿಗೆ ಹಿಂದುಳಿದಿಲ್ಲ. ಇತಿಹಾಸದ ಸಿಂಹಾವಲೋಕನ ಗೈಯುವುದಾದರೆ, ಈ ಪಟ್ಟಣಕ್ಕೆ ಅದ್ಭುತ ರಮ್ಯವಾದ ಇತಿಹಾಸವಿದೆ. ಹಿಂದೆ ಇಲ್ಲಿ ಆಳುತ್ತಿದ್ದ ಲಿಂಗ ರಾಜನು ಬಹು ಉದಾರಿಯಾಗಿದ್ದರೂ, ಆಸ್ಥೆ ಕ್ರೂರಿಯಾಗಿದ್ದನು. ಅವನೊಮ್ಮೆ ವಿಹಾರಕ್ಕಾಗಿ ತೆರಳಿದಾಗ ಸಣ್ಣ ಹುಡುಗಯೊಬ್ಬಳನ್ನು ಕಂಡು, ತನಗೆ ಕನ್ಯಾ ಸಂತತಿಯಿಲ್ಲದ್ದುದನ್ನು ನೆನೆದು, ಆ ಹುಡುಗಿಗೆ ಆಚದ ಸಾಮಾನಿನ ಆಶೆ ತೋರಿಸಿ, ತನ್ನರಮನೆಗೆ ಕೊಂಡೊಯ್ದನಂತೆ. ಅವಳಿನ್ನಾರೂ ಅಗಿಂದೇ ಅವನ ಆಸ್ಥಾನದ ಕರ್ಣಿಕರ ಮಂತ್ರಿಯೇ ಆಗಿದ್ದಳು! ರಾಜನು ಮಗಳನ್ನು ಕರೆದುಕೊಂಡು ಹೋದ ಸುದ್ದಿ ಕೇಳಿದ ಕರ್ಣಿಕರಿಗೆ ಸಿಡಿಲೆರಗಿದಂತಾಯಿತು. ಆದರೆ ಎದುರಾಡುವಂತಿರಲಿಲ್ಲ. ಆದರೂ ಹೇಗಾದರೂ ಮಾಡಿ ಮಗಳನ್ನು ಮನೆಗೆ ಹಿಂದೆ ಕರೆಸಬೇಕೆಂಬ ಆಕಾಂಕ್ಷೆಯಿಂದ ರಾಜಪುರೋಹಿತನಿಂದ ಹೇಳಿಸಿ ನೋಡಿದನು. ಆದರೆ ಅಟದ ಸಾಮಾನಿನ ಆಸೆಯಿಂದ ವ್ಯತಿಳಾಗಿದ್ದ ಆ ಹುಳಿಗೆ ತನ್ನಪ್ಪನ ಮನೆಗೆ ಹಿಂದಿರುಗಲು ಒಲ್ಲೆನೆಂದಳು. ಪುರೋಹಿತರ ದುರದೃಷ್ಟವಶಾತ್ ಅವರ ಈ ಯತ್ನವನ್ನು ಅರಸು ಕಣ್ಣಾರೆ ಕಂಡನು. ಅವನ ಸಿಟ್ಟಿಗೆ ಪಾರವೆಲ್ಲ! ಕೂಡಲೇ ಪುರೋಹಿತನನ್ನು ಎತ್ತರದ ಸ್ಥಳದಿಂದ ಕೆಳಕ್ಕೆ ನೂಕುವಂತೆ ರಾಜಾಜ್ಞೆಯಾಯಿತು. ಇಂತು ಬ್ರಹ್ಮಹತ್ಯೆಗೈದ ರಾಜನಿಗೆ ಬ್ರಹ್ಮರಾಕ್ಷಸನ ಬಾಧೆಗೆ ಮೊದಲಾಯಿತು. ಮಂತ್ರವಾದಿಗಳನ್ನು ಕರೆಸಿ ಕೇಳಿದಾಗ ಬ್ರಹ್ಮಹತ್ಯ ದೋಷದ ಪರಿಹಾರಾರ್ಥ ದೇವಾಲಯವನ್ನು ಸ್ಥಾಪಿಸಿ, ಅದರಲ್ಲಿ ಆ ಬ್ರಹ್ಮರಾಕ್ಷಸನಿಗೆ ಸ್ಥಾನ ಕೊಡುವಂತೆ ಸೂಚನೆಯಾಯಿತು, ಮಂತ್ರವಾದಿಗಳಂತೆ. ಕಾಶಿಯಿಂದ ಶಿವಲಿಂಗವನ್ನು ತಂದು ಅದನ್ನು ಸ್ಥಾಪಿಸಲಾಯಿತು. ಅಲ್ಲೊಂದು ಸುಂದರ ದೇವಮಂದಿರವು ತಲೆಎತ್ತಿತು. ಇದು ಇಲ್ಲಿನ ಸಂಕ್ಷಿಪ್ತ ಸೂರ್ವೇತಿಹಾಸವೆಂದು ಕೆಲವರು ಹೇಳುತ್ತಾರೆ.

ಭಾರತವು ಸ್ವತಂತ್ರವಾದನಂತರ ಕೊಡಗು 'ಸಿ' ವಿಭಾಗದ ಪ್ರಾಂತ್ಯವಾದಾಗ ಕೇಂದ್ರ ಸರಕಾರದಿಂದ ನೇಮಿತನಾದ ಚೀಫ್ ಕಮಿಶನರನೊಬ್ಬನ ಕೈಕೆಳಗೆ ರಚಿತವಾದ ಮಂತ್ರಿಸಂಪುಟವೊಂದು ಈ ಚಿಕ್ಕ ಪ್ರಾಂತ್ಯದ ಆಡಳಿತದ ಹೊರೆಯನ್ನು ಹೊತ್ತುಕೊಂಡು ಮುನ್ನಡೆಯುತ್ತಿತ್ತು. ಕೊಡಗು ಪ್ರಾಂತ್ಯದ ಮುಖ್ಯಪಟ್ಟಣ ಮಡಿಕೇರಿಯಲ್ಲಿ ವಿಧಾನ ಸಭೆ ಹಾಗೂ ಈರ್ವರು ಮಂತ್ರಿಗಳು ದೊತಗೂಡಿದ ಸಂಪುಟವೊಂದು ರಚನೆಯಾಗಿತ್ತು. ಮುಖ್ಯಸಚಿವರಾಗಿದ್ದ ಶ್ರೀ. ಸಿ. ಎಮ್. ಪೂಣಚ್ಚ ಹಾಗೂ ಗೃಹ ಮಂತ್ರಿ ಶ್ರೀ ಕೆ. ಮಲ್ಲಪ್ಪ—ಇವರು ಸಮರ್ಥ ಮುಂದಾಳುಗಳಾಗಿದ್ದು, ಆಡಳಿತಯನ್ನು ಯೋಗ್ಯರೀತಿಯಲ್ಲಿ ಮುನ್ನಡೆಯ ಸಿಕೊಂಡು ಹೋದರು ಮಡಿಕೇರಿ ಅದರಲ್ಲೂ (ಹಿಂದಿನ ಕೊಡಗು ಪ್ರಾಂತ್ಯ) ಕೊಡಗು ನಾಕಷ್ಟು ಮುಂದುವರಿದಿರುವುದಾದರೆ ಅದು ಈ ಮೊದಲು ಇಲ್ಲಿದ್ದ ಸರಕಾರದ ಪರಿಶ್ರಮದ ಪ್ರತಿಫಲ. ಈ ಪರಿಶ್ರಮದಲ್ಲಿ ಶ್ರೀಗಳಾದ ಪೂಣಚ್ಚ ಹಾಗೂ ಮಲ್ಲಪ್ಪನವರೂ ಪ್ರಮುಖಪಾತ್ರಧಾರಿಗಳು ೧೯೫೬ ರಲ್ಲಿನವರಾಜ್ಯೋದಯವಾಯಿತು, ತತ್ಪಲವಾಗಿ ವಿಶಾಲ ನವಮೈಸೂರು ಜನನಕ್ಕೆ ಬಂದಿತು. ಆಗ ಇಲ್ಲಿನ ಕೆಲವು ಮುಂದಾಳುಗಳ ವಿರೋಧವಿದ್ದರೂ, ಕೊಡಗನ್ನು ಮೈಸೂರಿಗೆ ಸೇರಿಸಿಕೊಳ್ಳಲಾಯಿತು ಅಂದಿನಿಂದ ಮಡಿಕೇರಿ ಕೊಡಗು ಜಿಲ್ಲೆಯ ಮುಖ್ಯಪಟ್ಟಣವಾಯಿತು.

ಮಡಿಕೇರಿಯಲ್ಲಿ ಪ್ರೇಕ್ಷಣೀಯ ಸ್ಥಳಗಳೇನೂ ಕೊರತೆಯಿಲ್ಲ. ಮೊದಲನೆಯದಾಗಿ ಕೇಳುವುದಾದರೆ, ಹಿಂದಿನ ಅರಸರ ಕೋಟೆ. ಇದನ್ನು ಎತ್ತರ ಸ್ಥಳದಲ್ಲಿ ಕಟ್ಟಲಾಗಿದ್ದು, ಇಲ್ಲಿಂದ ಮಡಿಕೇರಿ ಪಟ್ಟಣವನ್ನು ನೋಡಬೇಕುದ್ದೇ ಸುತ್ತಲಿನ ನಿಸರ್ಗದ ಸೊಬಗಿನ ಸವಿಯನ್ನುಣ್ಣಬಹುದು. ಈ ಕೋಟೆಯ ಲ್ಲೇ ಈ ಮೊದಲು ವಿಧಾನ ಸಭಾ ಭವನವಿದ್ದುದು. ಈ ಭವನವೇ ಹಿಂದೆ ಲಿಂಗರಾಜನ ಅರಮನೆಯಾಗಿತ್ತಂತೆ. ಈಗ ಈ ಅರಮನೆಯಲ್ಲಿ—ಸ್ಟೇಟ್ ಬೇಂಕ್ ಆಫ್ ಇಂಡಿಯಾ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೆಜಿಸ್ಟ್ರೇಟ್ ಕೋರ್ಟು, ಇತರ ಸರಕಾರಿ ಕಚೇರಿಗಳು, ಸರಕಾರಿ ಮುದ್ರಣಾಲಯವೂ ಇವೆ. ಅಲ್ಲದೇ ಈ ಅರಮನೆಯ ಹತ್ತಿರ, (ಕೋಟೆಯ ಒಳಭಾಗದಲ್ಲೇ) ಸಿಮೆಂಟಿನಿಂದಲೇ ತಯಾರಿಸಿದ ಎರಡು ಆನೆಗಳಿವೆ. ಇವುಗಳಿಗೂ ಚಾರಿತ್ರಿಕ ಹಿನ್ನೆಲೆಯಿದೆಯೆನ್ನಲಾಗುತ್ತದೆ.

ನೋಡತಕ್ಕ ಇನ್ನೊಂದು ಸ್ಥಳವೆಂದರೆ ರಾಜಸೀಟ, ಇದು ಎತ್ತರದ ಸ್ಥಳದಲ್ಲಿದ್ದು ಪ್ರಕೃತಿಯ ಮಡಿಲಲ್ಲಿ ಕಂಗೊಳಿಸುತ್ತಿದೆ. ಇಲ್ಲಿ ನಿಂತುಕೊಂಡು, ಕಣ್ಣಾನುಂದೆ ನಲಿಯುವ ಗುಡ್ಡ ಬೆಟ್ಟಗಳಲ್ಲಿ ರಕ್ಕಸರಂತೆ ನಿಂತಿರುವ ಮರಗಳನ್ನೂ, ಹಸುರು ಗದ್ದೆಗಳನ್ನೂ ನೋಡಿದರೆ ಮೈಮರೆತು, ಇನ್ನೊಂದು ಲೋಕದಲ್ಲಿ ವಿಹರಿಸುವಂತೆ

(೨ನೇ ಪುಟ ನೋಡಿರಿ)

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ದೊಸ ಬಗೆಯ ಗ್ರಂಥ

ಉಮಾಜಿ ಬಿಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೨೫

ವ್ಯಕ್ತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. 189/58

ಸುಬ್ಬಣ್ಣ ಉಪಾಧ್ಯ— ವಾದಿ.

ಸುಬ್ಬಣ್ಣ ಉಪಾಧ್ಯ— ಪ್ರತಿವಾದಿ.

ಕುಂದಾಪುರ ತಾಲ್ಲೂ ಗೋಪಾಡಿ ಗ್ರಾಮದಲ್ಲಿರುವ ನಾರಾಯಣ ಉಪಾಧ್ಯರ ಮಗ ಸುಬ್ಬಣ್ಣ ಉಪಾಧ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಪ್ರತಿವಾದಿಯು ವಾದಿಗೆ ತಾ. 24-11-56 ರಲ್ಲು ರೂ. 200.00ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಜಂಟ್ರು ಹಣ ಬಡ್ಡಿ ಬರ ಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 2-7-58ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಖಾಜ್ರಾಗಿ ಜ್ಞಾಪಿಸಿರುಮಾಡಿಕೊಳಿತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗಿದೆ.

N. S. Parameshwariah.
Advocate for Plff.

Goondapoor, Date 9-6-58.

ಕವಿವರ್ಯ ಆನಂದ

(೨ನೇ ಸುಟದಿಂದ)

ಆಗ ಮೊದಲನೆಯವಳು: "ಈ ಮಹಾಕವಿಗಳು, ಅದೂ ಈ ಸಿನೆಮಾ ನೋಡುತ್ತಿರುವಂತೆಯೇ ಏನು ಬರೆದುಕೊಳ್ಳುತ್ತಿದ್ದಾರಪ್ಪಾ? ಬಹಳ ಪ್ರತಿಭಾವಂತರೆಂದೇ ತೋರುತ್ತದೆ."

"ಬಹುಶಃ ಚಿತ್ರಗ್ರಹಣ ಮಾಡುತ್ತಿರಬೇಕು!"

"ಅಥವಾ ಚಿತ್ರದ ಭಾವಗ್ರಹಣವಾಗಿರಬಹುದು!"

"ಭಾವಗ್ರಹಣವೋ, ವಾಣಿಗ್ರಹಣವೋ ಅಂತೂ ಏನೋ ಒಂದು ಗ್ರಹಣ!"

"ಇದು ಗ್ರಹಣವಲ್ಲ ಕಣೆ, ಬುದ್ಧಿ ಭ್ರಮಣ, ಅಥವಾ ಮೂರ್ಖಗ್ರಹಣ ಅರ್ಥಾತ್ ಹುಚ್ಚು!" ಇಬ್ಬರೂ ಕಿಲಕಿಲನೆ ನಕ್ಕರು.

ಆನಂದನ ಮೈ ಜುಂ ಎಂದಿತು.

ಹೋಟೆಲ್

ಆನಂದ ರಂಭಾ ಭವನ (ಅವನು ದಿನವೂ ಕಾಫಿ ಕುಡಿಯುವ ಹೋಟೆಲ್‌ದಲ್ಲಿ ಕಾಫಿ ಕುಡಿಯುತಿದ್ದಾನೆ. ಮೇಲೆ "ಆ" ಪ್ರೇಮದೂತ ಇದೆ! ಹಕ್ಕನೆ ಗ್ಲಾಸನ್ನು ಮೇಜಿನ ಮೇಲಿಟ್ಟು ಪುಸ್ತಕದಲ್ಲಿ ಏನೋ ಬರೆದುಕೊಳ್ಳುತ್ತಿದ್ದಾನೆ.

ಸ್ವಲ್ಪ ದೂರ ಒಂದು ಟೇಬಲಿನ ಸುತ್ತ ನಾಲ್ಕು ಮಂದಿ ಯುವಕರು ಕಾಫಿ ಕುಡಿಯುತ್ತಿದ್ದರು. ಆನಂದನ ಪರಿಚಯ ಅವರಿಗೆ ಸಾಕಷ್ಟಿತ್ತು. ಅಲ್ಲದೆ ಇಬ್ಬರು ಸಜಾಭ್ಯಾಸಿ ಅರ್ಥಾತ್ ಕ್ಲಾಸ್‌ಮೇಟ್ ಗಳು. ಅವರಲ್ಲಿ ಒಬ್ಬನೆಂದ:

"ನೋಡಿ, ನೋಡಿ ಆನಂದ ಏನೊ ನೋಟ್ ಮಾಡಿಕೊಳ್ಳುತ್ತಿದ್ದಾನೆ! ಬೀದಿಯಲ್ಲಿ ಹೋಗುವ ಕಾರಿನ ನಂಬ್ರವೋ ಏನೊ?"

"ಕಾರಿನ ನಂಬ್ರ ನೋಟ್ ಯಾಕೆ ಮಾಡಿಯಾನು? ಕವಿಯಲ್ಲವೇ ಆನಂದ? ಅಂದೊಮ್ಮೆ ಪ್ರೇಮಿಯ ಮಿಲನವಾಗಿತ್ತು ಈಗ ಯಾರ ಮಿಲನವಾಗುತ್ತಿದೆಯೋ ಏನೋ? ಮತಿಗೆ ಉನ್ಮಾದ ಮಿಲನವಾಗಿದೆಯೋ ಯಾರುಬಲ್ಲರು?"

ಮತ್ತೊಬ್ಬ ಆನಂದನ್ನು ಕಟಿಕು ನೋಟದಿಂದ ನೋಡಿ ಸ್ವಲ್ಪ ಗಟ್ಟಿಯಾಗಿ "ಕಾಫಿ ಹೀರುತ್ತಿದ್ದಾನೋ ಕಾವ್ಯ ರಸಾಯನವನ್ನು ಹೀರುತ್ತಿದ್ದಾನೊ?" ಎಂದ.

"ಭೂ, ಭೂ ಸುಮ್ಮನಿರು! ಕವಿಯಲ್ಲವೆ ಅತ? ಗಟ್ಟಿಯಾಗಿ ಮಾತನಾಡಿದರೆ ನಮ್ಮ ಮಾತಿನಲ್ಲಿರುವ ರಸವನ್ನು ಹೀರಿಬಿಟ್ಟಾನು, ತನ್ನ ಗ್ರಂಥದಲ್ಲಿ ಬರೆದುಬಿಟ್ಟಾನು".

ಎಲ್ಲರೂ ಗಟ್ಟಿಯಾಗಿ ನಕ್ಕರು. ಆನಂದನ ತಲೆಗೆ ತಣ್ಣೀರೆರಚಿದಂತಾಯಿತು.

"ಎಲ್ಲೆಡೆಯಲ್ಲಿಯೂ ತನಗೆ ಅವಹೇಳನ, ಗೇಲಿಮಾಡಲೆಂದೇ ಎಲ್ಲರೂ ನೋಡುತ್ತಿದ್ದಾರೆ" ಎಂದುಕೊಂಡ. ಅಷ್ಟರಲ್ಲಿ ಹಿಂದಿನ ಗುಂಪಿನಿಂದ:

"ಬನ್ನಿ ಕವಿಮಹಾಶಯರೊಡನೆ ಒಂದೆರಡು ರಸಸಮಿಷಗಳನ್ನಾದರೂ ಕಳೆಯೋಣ" ಎಂದ ಒಬ್ಬ ಪುಣ್ಯಾತ್ಮ. ಆನಂದನಿಗೆ ಬೆವರಲಾರಂಭಿಸಿತು. ಎಲ್ಲರೂ ಆನಂದನ ಬಳಿ ಬಂದು ಅತ್ತ ಇತ್ತ ಕುಳಿತರು. "ನಮಸ್ಕಾರ!" ಎಂದರು ಎಲ್ಲರೂ ಪೆನ್ನು ಪುಸ್ತಕಗಳನ್ನು ಯಾರೂ ಕೈಗೆತ್ತಿಕೊಳ್ಳದಂತೆ ಭದ್ರವಾಗಿಸಿ ಪ್ರಯತ್ನದಿಂದ ಮುಗುಳ್ನಕ್ಕು "ನಮಸ್ಕಾರ!" ಎಂದ. ಎಲ್ಲರಂತೆ ಇರುವ ವ್ಯಕ್ತಿಗೂ ತನ್ನ ಗೆಳೆಯರ ಕಿರುಕುಳದ ಅನುಭವಗಳು ಚೆನ್ನಾಗಿ ತಿಳಿದಿರುತ್ತವೆ. ಅದರಲ್ಲಿ ಎಲ್ಲರಂತೆ ಅಕ್ಕದ ವಿಶಿಷ್ಟ ವ್ಯಕ್ತಿ ಆನಂದನನ್ನು ಈ ಗೆಳೆಯರು ಬಹಳ ಸಂಭ್ರಮದಿಂದ ಉಪಚರಿಸಲಾರಂಭಿಸಿದರು.

ಓರ್ವ ಪ್ರೇಮದೂತ ಕೈಗೆ ತೆಗೆದುಕೊಂಡು: "ಓ, ಆನಂದ! ಪ್ರೇಮಿಯ ಮಿಲನ!" ಎಂದು ಇದುವರೆಗೆ ಅರಿಯದವರಂತೆ ಕಣ್ಣರಳಿಸಿ, ಉಳಿದವರಿಗೆ ತೋರಿಸುತ್ತಾ "ಪೆರಿಗುಡ್, ಆನಂದ ಪೊಯೆಟ್ ಆಗುತ್ತಿದ್ದಾನೆ ಮಿ| ಆನಂದ ಕಂಗ್ರಾಚ್ಯುಲೇಶನ್ಸ್!" ಎಂದು ಶೇಕ್ ಹೇಂಡ್ ಕೊಟ್ಟ ಆನಂದನಿಗೆ ಆನಂದನ ಶರೀರವೇ ಶೇಕ್ ಆಗಲಾರಂಭಿಸಿತ್ತು. ಅಷ್ಟರಲ್ಲೊಬ್ಬ:

"ಇದು ಏನು ಇವರೀಗ ಬರೆಯುತ್ತಿದ್ದುದು?" ಎಂದ.

"ನೋಡುವ, ಇತ್ತ ತಾ ಆನಂದ, ಏನದು?" ಎಂದು ಒಬ್ಬ ಆನಂದ ಭಾವಚಿಗಳ ಸಂಗ್ರಹಾಲಯಕ್ಕೆ ಕೈಕೊಟ್ಟ. ಆನಂದ ಮಾತ್ರ ಮಗು ಗೊಂಬೆಯನ್ನು ಹಿಡಿದುಕೊಳ್ಳುವಂತೆ ಭದ್ರವಾಗಿ ಹಿಡಿದುಕೊಂಡ. "ಏನೂ ಇಲ್ಲಪ್ಪ ಹೀಗೇ" ಎಂದು ಜಾರಿಸಿಕೊಂಡ.

"ಅಂದಹಾಗೆ ನೀವು ಈ ಕಥೆ, ಕವಿತೆಗಳನ್ನು ಹೇಗೆ ಗಚಿಸುತ್ತೀರಿ?" ಎಂದ ಒಬ್ಬ ಕವಿಯಾಗಲೆಳಸುವ ಕುತೂಹಲಿಯಂತೆ. ಆನಂದ ಉತ್ತರಕೊಡುವ ಸ್ಥಿತಿಯಲ್ಲಿರಲಿಲ್ಲ ಅಷ್ಟರಲ್ಲೆ ಒಬ್ಬ ಸುಜ್ಞಾನಿ ಬಣ್ಣಿಸಿಬಿಟ್ಟ.

"ಮುಳುಗುವ ಸೂರ್ಯ, ಬೆಳಗುವ ಚಂದ್ರ, ಅಸ್ತೋದಯ ದೃಶ್ಯಗಳನ್ನು ಕಂಡಾಗ, ಹಾಡುವ ಕೋಗಿಲೆ, ಹಾರುವ ಚಿಟ್ಟೆ, ವಸಂತಮಾಸದ ಮಧುರ ದೃಶ್ಯಗಳನ್ನು ಕಂಡಾಗ ಅಲ್ಲದೆ ತಮ್ಮ ಭಾವನಾ ಸಾಮ್ರಾಜ್ಯದಲ್ಲಿ ಕಲ್ಪನವಿಲಾಸದಲ್ಲಿ ಸುಂದರ ಕಲ್ಪಿತ ದೃಶ್ಯಗಳನ್ನು ಕಂಡಾಗ ಕಾವ್ಯರಸ ಚಿಮ್ಮಿ, ಕವಿಗಳ ಹೃದಯದಿಂದ ಧಾರೆಧಾರೆಯಾಗಿ ಇಳಿದು ಲೇಖನಿಯೊಳಗೆ ತುಂಬಿ ಕಾಗದಕ್ಕೆಳಿದು ಅಮರ ಕಾವ್ಯಗಳಾಗುವುವು! ಅಲ್ಲವೇ ಆನಂದ," ಆನಂದನ ಧ್ವನಿಯೇ ಇಂಗಿಹೋಗಿತ್ತು. ಎಲ್ಲರೂ ಗಟ್ಟಿಯಾಗಿ ನಕ್ಕರು. ಹೋಟೆಲ್ ಮೆನೇಜರರೂ ಅವರ ಸಾಹಿತ್ಯಗೋಷ್ಠಿಯಲ್ಲಿ ಭಾಗಿಯಾದರು. "ನನಗೆ ಅಗತ್ಯವಾದ ಕೆಲಸವಿದೆ" ಯೆಂದು ಆನಂದ ಹೊರ ಜಾರಿದ. ಅವನು ಹೋಗುತ್ತಿರುವಂತೆಯೇ ಹೊಟೇಲಿಂದ ಕೇಳಿದ ಗುಲ್ಲಿಗೆ ಆನಂದ ನಡುಗಿಬಿಟ್ಟ.

—ಊರ ಜಾತ್ರೆ—

ಊರ ಜಾತ್ರೆ ಬಂತು. ಇಷ್ಟರಲ್ಲಿ ಆನಂದ ಸರ್ವರಿಗೂ ಕಾವ್ಯಾನಂದನಾಗಿಬಿಟ್ಟಿದ್ದಾನೆ. ಊರಿನ ಪುಂಡರ ತಂಡ, ತುಂಟರ ಬಳಗದ ಮಕ್ಕಳಿಗೆ ಆನಂದ ಬಹು ಪರಿಚಿತನಾಗಿಬಿಟ್ಟಿದ್ದಾನೆ. ಆನಂದ ದೇವಸ್ಥಾನದ ಬಳಿ ಬರುತ್ತಿರುವುದನ್ನು ಕಂಡ ಓರ್ವ ಪುಟಾಣಿ ಹುಡುಗ:"ಅದೋ ಕಾವ್ಯಾನಂದರು ಬಂದರು!" ಎಂದು ತನ್ನವರಿಗೆ ತಿಳಿಸಿದ.

"ಏನೋ, ಕಾವ್ಯಾನಂದರೇ! ಅದೋ, ಕಾವ್ಯ ಬಂದು ಇದುರುತ್ತಿದೆ; ಹೀರಿಕೊಳ್ಳಿ" ಎಂದ ಒಬ್ಬ ತುಂಟರ ಅಗ್ರೇಸರ ದೂರದಿಂದಲೇ ಆನಂದನಿಗೆ ಕೇಳಿಸುವಂತೆ ಇವನ ಬೊಬ್ಬೆಯನ್ನು ಕೇಳಿ ಕೆಲವು ಶಾಲಾ ಮಕ್ಕಳು ಗುಂಪು ಸೇರಿಬಿಟ್ಟರು.

"ಹಿಪ್ ಹಿಪ್ ಹುರ್ರೇ ಕಾವ್ಯಾನಂದರಿಗೆ ಜಯವಾಗಲಿ" ಎಂದು ಕೂಗುತಾಕಿ, ಚಿಗ ರೆಗ ಂತೆ ಚಿಗಿದು ಆನಂದನಣಿಯಲ್ಲಿ ಕಣ್ಣರೆಯಾದರು. ಆ ದಿನ ಜಾತ್ರೆಗೆ ಬಂದವರೆಲ್ಲರೂ ಕೈಯಲ್ಲಿ ಪೆನ್ನು ಕಾಗದಗಳನ್ನು ಹಿಡಿದ ಕಾವ್ಯಾನಂದನನ್ನು ನೋಡಬಹುದಾಗಿತ್ತು. ಅಪರಿಚಿತರೂ ಕೆಲವರು 'ಇವನ್ಯಾರೋ ಪಂಚಾಯತ್ ಬೋರ್ಡುವತಿಯಿಂದ ಬಂದ ಬಿಲ್ ಕಲೆಕ್ಟರನಾಗಿರಬಹುದು' ಎಂದು ಕೊಂಡರು. ಕನ್ಯಾಮಣಿಗಳ ತಂಡವಿರುವ ಕಡೆಯಿಂದ ಹಾದು ಹೋದರೆ ಆನಂದನಿಗೆ ಸೆಕೆಯಾಗುವಂತಿತ್ತು. ಯುವತಿಯರೇನೋ ಗುಸುಗುಸು ಮಾತನಾಡಿ, ಆನಂದನನ್ನೇ ಅಣಕಿಸಲೆಂಬಂತೆ ಕಿಲಕಿಲನೆ ನಗುತ್ತಿದ್ದರು. 'ಅಷ್ಟಾದರೂ ಅವರ ಗಮನವನ್ನು ಸೆಳೆದು, ಅವರ ಕಣ್ಣಿಗೆ ಬಿದ್ದೆನಲ್ಲಾ' ಎಂದು ಆನಂದನಿಗೆ ಹಿಗ್ಗು. ಕನ್ನೆಯರನ್ನು ಅವರ ಬಣ್ಣದ ಮೊಗವನ್ನು ಕಂಡಾಗ ಆನಂದನಲ್ಲಿ ಕಾವ್ಯಭಾವವು ಹೆಚ್ಚು ಹೆಚ್ಚಾಗಿ ಒಡಮೂಡಿ ನವ್ಯತರವಾದ ಸುಂದರ ಸುಂದರ 'ಭಾವ'ಗಳು ಉದಿಸುವುವು.

—ವಿಹಾರ ಕೇಂದ್ರ—

ಜುಹು, ವೃಂದಾವನ, ಮತ್ತಿತರ ವಿಹಾರ ಕೇಂದ್ರಗಳಲ್ಲಿಯೂ ಆನಂದನ ಕಾವ್ಯರಚನೆಯ ಮೂರ್ತಿಯನ್ನು ನೋಡಬಹುದಾಗಿತ್ತು. ಅಂತಹ ವಿಹಾರ ಕೇಂದ್ರಗಳಲ್ಲಿ ಅವನ ಪರಿಚಿತಗೆಳೆಯರು ಅವನನ್ನು ಯಾವುದಾದರೂ ಒಂದು ರೀತಿಯಲ್ಲಿ ಗೇಲಿಮಾಡದಿರುತ್ತಿರಲಿಲ್ಲ.

"ಓಹೊ ಕಾವ್ಯಾನಂದರು ಏನು ಮಾಡುತ್ತಿರಬಹುದು?"

"ಮತ್ತೇನು ಕಾವ್ಯಾವಲೋಕನವಾಗಿರಬಹುದು."

"ಹುಂ, ಕಾವ್ಯಾವಲೋಕನವೋ ಕನ್ಯಾವಲೋಕನವೋ?" ಇದು ಸಾಧಾರಣವಾಗಿ ಆನಂದನನ್ನು ಕಂಡರೆ ವಿಹಾರೀ ಗೆಳೆಯರು ಆಡಿಕೊಳ್ಳುವ ಸಾಧಾರಣ ಮಾತು. ಇಂತಹ ಮಾತುಗಳನ್ನು ಕೇಳುತ್ತಿದ್ದಾಗಲೆಲ್ಲಾ ಆನಂದನ ಕಿವಿಗೆ ಸೀಸ ಕರಗಿಸಿ ಹೊಯ್ದಂತಾಗುತ್ತಿತ್ತು. "ಕಾವ್ಯಾವಲೋಕನಕಲ್ಲದಿದ್ದರೂ ಕನ್ನೆಯರ ಗಮನ, ಆಕರ್ಷಣಕ್ಕಾಗಿರಬಹುದೆಂದು" ಕೆಲವರ ದೃಷ್ಟಾಭಿಪ್ರಾಯ. ಮನಸ್ವೀಯಾಗಿ ಆನಂದ ಇದನ್ನು ಸಂಪೂರ್ಣ ಅಲ್ಲಗಳೆಯಲಾರ. ಆದರೆ ಅವನಿಗೆ ದೊರಕುವುದು ಯುವತಿಯರ ಹಾಸ್ಯ. ಜೇಷ್ಟೆಯ ದೃಷ್ಟಿ ಮತ್ತು, ಗೇಲಿ ಕುಚೇಷ್ಟೆಯ ಅಪಸ್ವರ! ಅದಕ್ಕೂ ಭಾಗ್ಯಬೇಕು! ಎಲ್ಲರಿಗೂ ದೊರಕುವುದೆ?

—ಎಲ್ಲೆಲ್ಲಿಯೂ ಕಾವ್ಯ ರಚನೆ—

ಒಟ್ಟಿನಲ್ಲಿ ಎಲ್ಲೆಲ್ಲಿಯು ಆನಂದ ಸಾಹಿತ್ಯದಲ್ಲಿ ಮುಳುಗಿಯೇ ಇರುವನು ದಾರಿಯಲ್ಲಿ ಓಡುತ್ತಾ ಹೋಗುತ್ತಿದ್ದ ರೈಲ ಪ್ರಯಾಣದಲ್ಲಿ ಕಥೆ ಕವನ ಲೇಖನಗಳನ್ನು ರಚಿಸುವುದು ಇವು ಅವನ ನಿತ್ಯಭ್ಯಾಸಗಳು ಬಸ್ಸಿನಲ್ಲಿ ನಿಜವಾಗಿ ಸಾದರೂ ಬರೆಯುವುದು ಬಹಳ ಪ್ರಯಾಸ. ಆದರೂ ಆನಂದ ಬರೆಯುತ್ತಿದ್ದ. ಅತ್ತಿತ್ತ ಕುಳಿತ ಜನರಿಗೆ ಅಚ್ಚರಿಯಾಗುವಂತೆ, ಟಿಕೇಟುಗಳನ್ನು ಬರೆದು ಅಭ್ಯಾಸವಾದ ಕಂಡಕ್ಟರನಿಗಿಂತಲೂ ಭಾವನಗಳನ್ನು ಲೇಖನಿಯಿಂದ ಕಾಗದಕ್ಕೆ ಇಳಿಸಿ, ಲೀಲಾಜಾಲವಾಗಿ ಬರೆಯುತ್ತಿದ್ದ.

ನಿಂಬಲ್ಲಿ ಕುಳಿತಲ್ಲಿ ಆನಂದನಿಗೆ ಕಾವ್ಯದಾಹ ರಾತ್ರಿ ನಿದ್ದೆ ಮಾಡುವಾಗಲೂ ಪೆನ್ನು ಕಾಗದಗಳನ್ನು ತಲೆಯ ಬಳಿತ್ತಿರ ವಿರಿಸಿಕೊಳ್ಳುವನು. ನಿದ್ರೆ ಬರುವ ವರೆಗೆ ಮನಸಿಲ್ಲುದಿಸಿದ ಭಾವನೆಗಳನ್ನು ಕತ್ತಲಲ್ಲೇ ಕಾಗದದಲ್ಲಿ ಗೀಚಿಕೊಳ್ಳುವನು. (ಇದೇ ರೀತಿ ಮಾಡುತ್ತಿದ್ದ ಒಬ್ಬ ಪ್ರಖ್ಯಾ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ವರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು

ಸೀರಿಯ ತೇವಣಾತಿ.		
3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ತ ಕವಿಯ ವೃತ್ತಾಂತ ಆನಂದ.ಚೆನ್ನಾಗಿ ಬಲ್ಲ!)

ಅಃ! ಆದೋ, ಆವಾರದ ಪ್ರೇಮ ದೂತದಲ್ಲಿ ಆನಂದ.

"ಪ್ರೇಮದ ಒರತೆ ಚಿಮ್ಮಿದಾಗ...." ಪ್ರಕಟವಾಗಿತ್ತು! ಆನಂದ ತಾನೊಂದು ಮಹಾಕವಿಯಾದೆನೆಂದು ಭಾವಿಸಿ ಭಾವ ಲೋಕವೆಂಬ ದೇವಲೋಕದಲ್ಲಿ ವಿಹರಿಸಿದ. 'ಈ ಊರಿನಲ್ಲಿರುವವರಿಗೆ ನಾನು ಪ್ರಸಿದ್ಧ ಅಲ್ಲದೆ ಪರಿಚಿತನಾಗಿಬಿಟ್ಟೆ. ಪರವೂರಿನಲ್ಲಾಗಲೇ ನನ್ನ ಹೆಸರು ಕೀರ್ತಿ ಶಿಖರಕ್ಕೇರಿರಬಹುದು' ಎಂದು ಆನಂದ ಆನಂದಿಸಿಕೊಂಡ. ಆ ಊರಿನ ಒಬ್ಬ ಪ್ರಸಿದ್ಧ ಕವಿ ಆಗಲೇ; "ಇದೆಲ್ಲಾ ನನ್ನ ಅನುಕರಣೆ" ಎಂದು ಹೇಳುತಿದ್ದನಂತೆ! ಅವನನ್ನು ಮೀರಿಸಿ, ಮಹಾಕಾವ್ಯ ರಚನೆಯಲ್ಲಿ ತೊಡಗಿ, ಈಗಾಗಲೇ ಬರೆದಿರಿಸಿದ ಮೂರು ಸಾಮಾಜಿಕ ಕಾದಂಬರಿಗಳನ್ನು ಪ್ರಕಟಿಸಿ, ಹೆಸರುವಾಸಿಯಾಗಿ ಆ ಊರಿನ ಇನ್ನೊಬ್ಬ ಹಿರಿಯ ಕವಿ 'ಕೋಮಲಾಸುತ"ರನ್ನು ಹಿಮ್ಮೆಟ್ಟಿಸುವೆನೆಂದು ಕೊಂಡ.

ನಂತರದ ವಾರದ ಪ್ರೇಮದೂತ ಊರಿಗೆ ಬಂತು. ಅದರ ಶೀರ್ಷಿಕೆಯಲ್ಲಿ 'ಓದುಗರ ಓಲೆಗಳು" ವಿಭಾಗದಲ್ಲಿ 'ಹಿರೇಮನೆ ಹಂಚಣ್ಣ' ಎಂಬವರು ಸಂವಾದಕರಿಗೆ ಬರೆದ ಒಂದು ಪತ್ರ ಹೀಗಿತ್ತು:

"ಕಳೆದ ವಾರ ಪ್ರೇಮದೂತದಲ್ಲಿ ಶ್ರೀ ಆನಂದರ ಹೆಸರಿನಿಂದ ಪ್ರಕಟವಾದ ಕವಿತೆ "ಪ್ರೇಮದೊರತೆ ಚಿಮ್ಮಿದಾಗ..." ಬಹಳ ಚೆನ್ನಾಗಿದೆ. ಆದರೆ ಆ ಕವನವನ್ನು ಬರೆದ ಮೂಲ ಲೇಖಕಂದ ಎ. ಟಿ. ಬಸವರಾಯರು (ನನ್ನ ಮಾವ) ಜೀವಂತರಾಗಿದ್ದಾರೆ. ಅದರ ಕರ್ತೃಗಳು ಅವರು. ಇದನ್ನೇ ಶ್ರೀ ಆನಂದರು ತನ್ನ ಹೆಸರಿನಿಂದ ಪ್ರಕಟಿಸಿದ್ದಾರೆ. ಕಾವ್ಯರಚನೆ ಮಾಡಬೇಕೆಂದಿರುವ ಇಂತಹ ಹೊಸ ಹುಮ್ಮಸ್ಸಿನ, ಹೊಸ ಸಾಹಿತಿಗಳಿಗೆ ಈ ನೀಚ ಕಾರ್ಯ ಹೇಳಿದ್ದಲ್ಲ. ಈ ಕೃತಿ ಚೌರ್ಯದ ಕಸಬು ಅಯೋಗ್ಯತೆಯ ಪರಮಾವಧಿ! ಈಗ ಶ್ರೀ ಆನಂದರು ಮಾಡಿದ ಕೆಲಸಕ್ಕಾಗಿ ನಾವು ಅವರ ಮೇಲೆ ಕನಿಕರವಿರಿಸಿ ಬಿಟ್ಟುಬಿಟ್ಟಿದ್ದೇವೆ. ಇನ್ನು ಮುಂದೆ ಹೀಗಾಗದಂತೆ ಅವರನ್ನು ಎಚ್ಚರಿಸುತ್ತೇವೆ."

ಈ ಸುದ್ದಿ ಊರಿಗೇ ಹರಡಿತು. ಜನರೆಲ್ಲರೂ ಇದನ್ನು ಓದಿದರು! ಆನಂದನ ಸಮಾಜಜೀವನ ಹುಚ್ಚು ನಾಯಿಯ ಬಾಳಿನಂತಾಯಿತು. ಮನೆಯಿಂದ ಹೊರಗೆ ಕಾಲಿಡುವಂತಿಲ್ಲ. ಮನೆಯಲ್ಲಿ ತಂದೆಯ ಭರ್ತ್ಸನೆ! ಊರಲ್ಲಿ ತಿರುಗಲು ಮುಖವಿಲ್ಲ. ಮುಂದೆ ಕಾವ್ಯರಚನೆಯೂ ಅಸಾಧ್ಯ. ಎಲ್ಲರಿಗೂ ತನ್ನ ಹಣೆಬರಹ ಗೊತ್ತಾದುದರಿಂದ ಯಾವ ಪತ್ರಿಕೆಯ ಸಂಪಾದಕರೂ ತನ್ನ ಹೆಸರನ್ನು ಕಂಡೊಡನೆ ದೂರ ಮಾಡುವರು. ಆನಂದನ ಕಾವ್ಯ ಭಾವವೂ ಕಾವ್ಯ ವಾರಿಧಿಯೂ ಇಂಗಿ ಹೋಯಿತು. 'ಕವಿತ್ವವನ್ನು, ಸಾಹಿತ್ಯ ಲಕ್ಷಣವನ್ನು ಹುಟ್ಟುವಾಗಲೇ ಪಡೆದು ಬರಬೇಕೆಂ'ದು ಆನಂದ ಭಾವಿಸಿದ. ಜೀವನಕ್ಕೇನಾದರೂ ಉದ್ಯೋಗ, ಯೋಗ್ಯ ಮಾರ್ಗ ಹುಡುಕಲೆಂದು ಆಂದೇ ಮುಂಬೈ ಸೇರಿದ.

(ಕಾಲ್ಪನಿಕ)

ದಕ್ಷಿಣದ ಕಾಶ್ಮೀರ— ಮಡಿಕೇರಿ

(ಂಂನೇ ಪುಟದಿಂದ)

ಭಾವವಾಗುತ್ತದೆ. ಕ್ಷಣಕ್ಷಣಕ್ಕೆ ವಿವಿಧಾಕೃತಿಗಳನ್ನು ಹೊಂದಿ, ಅಗಸದಲ್ಲಿ ತೇಲುವ ಮೋಡಗಳನ್ನು ನೋಡಿದರಂತೂ ಇಹಲೋಕದ ದುಃಖಗಳೆಲ್ಲವೂ ಮರೆತು ಹೋಗುತ್ತದೆ! ರಾಜಸೀಟದ ಈ ಅನುಪಮ ಸೌಂದರ್ಯದ ಹಿಂದೆ ಭಯಾನಕವಾದ ಗಂಭೀರ ವಿಷಯವೂ ಮನಸ್ಸಿನ ಕಣ್ಣಮುಂದೆ ನಲಿಯುತ್ತಿದೆ. ಹಿಂದೆ ಪೂರ್ವೇತಿಹಾಸವನ್ನು ಹೇಳಿದಾಗ ಬ್ರಾಹ್ಮಣನನ್ನು ಎತ್ತರದ ಸ್ಥಳದಿಂದ ದೂಡಿದ ಘಟನೆ ವಾಚಕರ ಮನೋಪಟಲದಲ್ಲಿರಬಹುದು. ಆ ತಾಣವೇ ರಾಜಸೀಟದ ಎತ್ತರದ ಗುಡ್ಡ. ಗುಡ್ಡದ ಕೆಳಗೆ ನೋಡಿದರೆ ಭಯಾನಕ ದೃಶ್ಯ ಕಣ್ಣಿಗೆ ಗೋಚರವಾಗುತ್ತದೆ. ಅತೀ ಆಳದಲ್ಲಿ ದೊಡ್ಡ ದೊಡ್ಡ ಮರಗಳಿಂದಲೂ ಮುಳ್ಳು ಪೊದೆಗಳಿಂದಲೂ ಕೂಡಿದ ಸಣ್ಣ ಕಾನನವದು! ರಾಜಸೀಟದೆಂದರೆ ಬೇರೇನೂ ವಿಶೇಷವಿಲ್ಲ. ಹಿಂದೆ ಲಿಂಗರಾಜನು ವಿಹಾರಕ್ಕಾಗಿ ಬಂದು ಪ್ರಕೃತಿ ಸೌಂದರ್ಯ ನೋಡುತ್ತ ಮೈಸೂರಿನತ ಕೂಡ್ರುತಿದ್ದ ಒಂದು ಪೀಠ. ಮೋಜಿಗಾಗಿ, ಕೆಲವರು ಇದಕ್ಕೆ 'Retired Officers Seat' ಎನ್ನುವುದುಂಟು!

ನಗರ ಹೃದಯದಲ್ಲಿನ ಮಂದಿರದಿಂದ ಶ್ರೀ ಓಂಕಾರೇಶ್ವರನು ಲೋಕ ಕಲ್ಯಾಣವೆಸಗುತ್ತಿದ್ದಾನೆ. ದೇವ ಮಂದಿರದೊಳಕ್ಕೆ ಹೊಕ್ಕರೆ, ಎಂತಹ ನಾಸ್ತಿಕನಿಗೂ ಭಕ್ತ್ಯುತ್ಪತ್ತಿವಾಗುತ್ತದೆ. ಈ ಮಾತು ಬರೇ ಅತಿಶಯೋಕ್ತಿಯಲ್ಲ. ಅನುಭವದ ಮಾತೇ ಆಗದೆ. ಈ ದೇಗುಲಕ್ಕೆ ಸರಕಾರದ ಉಂಬಳಿ ದೊರೆಯುತ್ತಿದೆ. ಬ್ರಹ್ಮಹತ್ಯಾದೋಷ ಪರಿಹಾರಾರ್ಥ ಲಿಂಗರಾಜನು ಕಟ್ಟಿಸಿದ ದೇವ ಮಂದಿರವಿದು. ಶಿಲ್ಪಕಲೆಯ ವೈವಿಧ್ಯವನ್ನು ನೇವ ಮಂದಿರದ ಗೋಡೆಯ ಕಿಟಕಿಗಳಲ್ಲಿಮಾಡಿರುವ ಕೆತ್ತನೆಯ ಕೆಲಸ ಒಂದೇ ನೋಡಬಹುದು. ದೇವಾಲಯದ ಕೆಳ ಅಂಗಣದಲ್ಲಿ ಕೊಳವಿದೆ. ಕೊಳದ ಮಧ್ಯ ಭಾಗದಲ್ಲಿ 'ಕುಶಲ ಮಂಟಪ'ವಿದೆ. ಕೊಳವು ಈಜಲನುಕೂಲವಾಗಿದೆ. ದೇವಾಲಯದ ವಾತಾವರಣ ಶಾಂತವಾಗಿದ್ದು, ಇಲ್ಲಿಗೆ ಬಂದ ಭಕ್ತಾದಿಗಳಲ್ಲಿ ಮನಶ್ಶಾಂತಿಯನ್ನೂ, ಧೈರ್ಯವನ್ನೂ ತುಂಬಿ, ದುಃಖದ ಹೊರೆಯನ್ನಿಳುಹಿ ಹರಸಿ ಕಳುಹಿಸುತ್ತಿದ್ದಾನೆ, ದೇವನಲ್ಲಿ ನಂಬಿದವರನ್ನು ಸಲಹುವ ಹೊಣೆ ಹೊತ್ತಿದ್ದಾನೆ, ಆತ.

ಇನ್ನು ನೋಡತಕ್ಕುದೆಂದರೆ ಹಿಂದಿನ ರಾಜರಾದ ಲಿಂಗರಾಜ ಹಾಗೂ ವೀರರಾಜರ ಸಮಾಧಿಗಳು. ಸಾಮಾನ್ಯವಾಗಿ ಇವುಗಳನ್ನು ಶ್ರೀ ಓಂಕಾರೇಶ್ವ ದೇವಾಲಯದ ಮಾದರಿಯಲ್ಲೇ ಕಟ್ಟಲಾಗಿದೆ. ಈ ಸಮಾಧಿಗಳಲ್ಲಿ ಹಿಂದಿನ ರಾಜರ ಶವ ಪೆಟ್ಟಿಗೆಗಳೂ ಇವೆ.

ಹಿಂದೆ ಲೋರ್ಡ್ ಇರ್ವಿನ್ನರು ವೈಸರಾಯಿಯಾಗಿದ್ದಾಗ, ಇಲ್ಲಿಗೆ ಬಂದು ದರ್ಬಾರು ನಡೆಸಿದ ಸ್ಮರಣಾರ್ಥವಾಗಿ ರಾಜಸೀಟದ ಹತ್ತಿರದ ಗುಡ್ಡವೊಂದರಲ್ಲಿ ಸ್ತಂಭವೊಂದನ್ನು ರಚಿಸಲಾಗಿದೆ.

ಈ ನೇಲೆ ಹೇಳಿದವುಗಳು ಇಲ್ಲಿನ ನೋಡಲೇ ಬೇಕಾದ ಮುಖ್ಯ ಸ್ಥಳಗಳು.

ಮಡಿಕೇರಿ ವ್ಯಾಪಾರ ವ್ಯವಹಾರಗಳಲ್ಲೂ ಮುಂದುವರಿದ ಪಟ್ಟಣ. ದಕ್ಷಿಣ ಕನ್ನಡ, ಬೆಂಗಳೂರು, ಮೈಸೂರು, ಕಣ್ಣಾನೂರು—ಮುಂತಾದ ವಾಣಿಜ್ಯ ಕೇಂದ್ರಗಳಿಗೂ ಇಲ್ಲಿಂದ ಸಾರಿಗೆ ಸೌಕರ್ಯವಿದೆ. ದಕ್ಷಿಣ ಕನ್ನಡದ ಕೆನರಾ ಬೇಂಕು, ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಹಾಗೂ ವಿಜಯಾ ಬೇಂಕು—ಇವುಗಳ ಶಾಖೆಗಳು ಇಲ್ಲಿವೆ. ಕೊಡಗು ಸಹಕಾರಿ ಚಳವಳದಲ್ಲಿ ಮುಂದುವರಿದ ಪ್ರದೇಶ. ಭಾರತದಲ್ಲೇ ಸಹಕಾರಿ ಚಳವಳದಲ್ಲಿ ಈ ಪ್ರದೇಶ ದ್ವಿತೀಯ ಸ್ಥಾನಗಳಿಸಿದೆಯೆನ್ನಲಾಗುತ್ತದೆ. ಈ ಜಿಲ್ಲೆ ದಕ್ಷಿಣ ಕನ್ನಡದ ಸುತ್ತೂರು ತಾಲೂಕಿಗಿಂತಲೂ ಚಿಕ್ಕದೆನಿಸಿದರೂ, ಈ ಜಿಲ್ಲೆಯಲ್ಲಿ ಸುಮಾರು ಇಷ್ಟ ಸಹಕಾರಿ ಸಂಸ್ಥೆಗಳಿವೆ. 'ಮಡಿಕೇರಿಯಲ್ಲಿರುವ "ಕೊಡಗು ರಾಜ್ಯ ಸಹಕಾರಿ ಬೇಂಕು" ಈ ಸಂಸ್ಥೆಗಳಿಗೆಲ್ಲ ಮುಖ್ಯವಾಗಿದ್ದು, ಇವುಗಳಿಗೆ ಬೇಕಾದ ಆರ್ಥಿಕ ಸೌಲಭ್ಯವನ್ನೊದಗಿಸುತ್ತದೆ. ದ್ವಿತೀಯ ಯೋಜನೆಯಲ್ಲಿ ಸಹಕಾರ ಚಳವಳವನ್ನು ತುಂಬಾ ಉನ್ನತಿಗೇರಿಸಬೇಕೆಂಬ ಸರಕಾರದ ಯೋಜನೆಯನ್ನು ಸಾಧಿಸಲೋಸುಗ ಮೈಸೂರು ರಾಜ್ಯದಲ್ಲಿ ತೆರೆಯಲ್ಪಟ್ಟ ಮೂರು ತರಬೇತಿ ಸಂಸ್ಥೆಗಳಲ್ಲಿ, ಇಲ್ಲಿನ ಸಹಕಾರಿ ಬೇಂಕಿನ ಕಟ್ಟಡದಲ್ಲಿನ "ಸರಕಾರಿ ಸಹಕಾರಿ ತರಬೇತಿ ಶಾಲೆ" (Govt. Co-op. Training Institute) ಯೂ ಒಂದು. ಇಲ್ಲೀಗ ಸುಮಾರು ಮೂವತ್ತೈದು ಮಂದಿ ಸಹಕಾರಿ ಶಿಕ್ಷಣಾಭ್ಯರ್ಥಿಗಳು ತರಬೇತಿ ಪಡೆಯುತ್ತಲಿದ್ದಾರೆ.

ಮಡಿಕೇರಿಯಲ್ಲಿ ಸರಕಾರಿ ಕಾಲೇಜೊಂದಿದೆ. ಅಲ್ಲದೇ ಇಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯೂ ಇದೆ.

ಕಾಫಿ, ಯಾಲಕ್ಕಿ, ಕಿತ್ತಳೆ ಮುಂತಾದುವುಗಳು ಕೊಡಗಿನ ಮುಖ್ಯ ಬೆಳೆಗಳು. ಇಲ್ಲಿನ ಜನಸಂಖ್ಯೆಯಲ್ಲಿ ಹೆಚ್ಚಿನವರಿಲ್ಲದೂ ಹಿಡುವಳಿದಾರರೇ ಜೆನ್ನಾಗಿ ದುಡಿದು ದುಡಿಮೆಯ ಫಲವನ್ನುಣ್ಣುತ್ತ ಸುಖದಿಂದ ಕಾಲಕಳೆಯುತ್ತಿದ್ದಾರೆ, ಇಲ್ಲಿನವಿವಾಸಿಗಳು ಇಲ್ಲಿನ ಯಾಲಕ್ಕಿ ಬೇರೆಡೆಗಳಿಗೆ ರಫ್ತಾಗುತ್ತದೆ. ಜೇನು ಕೊಡಗಿನ ಒಂದುವೈಶಿಷ್ಟ್ಯ. ಜೇನು ಮತ್ತು ಮಯಣ ಉತ್ಪಾದಕ ಸಂಘ (ವಿರಾಜಪೇಟೆಯಲ್ಲಿದೆ)ವು ಇದೆ. ಭಾರತದಲ್ಲೇ ಮೊದಲನೆಯದಾಗಿ ಸ್ಥಾಪಿಸಲ್ಪಟ್ಟದ್ದು. ಇಲ್ಲಿನಂತಹ ಸವಿ ಜೇನು ಭಾರತದಲ್ಲೆಲ್ಲೂ ದೊರೆಯುವುದಿಲ್ಲವೆನ್ನಲಾಗುತ್ತದೆ.

ಕೊಡಗಿನ ಜನರ ಸಂಸ್ಕೃತಿ ದ. ಕ. ದವರಿಗಿಂತ ಭಿನ್ನವೆನ್ನಬಹುದು ಅವರ ನಡೆನುಡಿ, ಆಚಾರ ವಿಚಾರ, ಉಡುಪು ಭಾಷೆ—ಪ್ರತಿಯೊಂದರಲ್ಲೂ ದ. ಕ. ಗಿಂತ ಪ್ರತ್ಯೇಕತೆ ಕಾಣಿಸುತ್ತದೆ. ಕೊಡಗು ವೀರರ ನಾಡು. ಮಡಿಕೇರಿ ಭಾರತಕ್ಕೆ ತನ್ನಿಬ್ಬರು ವೀರ ಪುತ್ರರನ್ನು ಸೇನಾನಿಗಳಾಗಿ ಕಾಣಿಕೆಯಿತ್ತಿದೆ. ಜ. ಕೆ. ಎಂ. ಕಾರ್ಯಪ್ಪ ಹಾಗೂ ಜ. ಕೆ. ಎನ್. ತಿಮ್ಮಯ್ಯ—ಇವರೀರ್ವರೂ ಮಡಿಕೇರಿಯವರೇ, ಇವರಿಂದಾಗಿ ಭಾರತೀಯ ಸೇನೆಗೆ ಒಳ್ಳೆಯ ಪ್ರಶಂಸೆ ದೊರೆತಿದೆ.

ಭಾರತದ ವಿಳ್ಳೆಯ ಪ್ರತಿಯೊಂದು ಕಾರ್ಯಕ್ರಮದಲ್ಲೂ ಕೊಡಗು ತನ್ನಿಂದಾದಷ್ಟು ಸಹಕಾರ ನೀಡುತ್ತಲೇ ಇದೆ. ಮಡಿಕೇರಿ ಕೊಡಗಿನ ಮುಖ್ಯ ಪಟ್ಟಣವಾಗಿ ವಾಣಿಜ್ಯ, ಕೈಗಾರಿಕೆ ಹಾಗೂ ಸಹಕಾರ ಇವುಗಳ ಕೇಂದ್ರವಾಗಿ ಜನರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಲಿದೆ.



ಹಾರಾಡುವ ತಟ್ಟೆಗಳ ಮಾದರಿಯಲ್ಲಿ ನಿರ್ಮಿಸಲ್ಪಟ್ಟಿರುವ ವಾಹಕ ಆಧಾರವುಳ್ಳ ರಾಡಾರ್ ವಿಮಾನ. ರಾಡಾರ್ ವಿಮಾನಗಳು ಅಂತರಿಕ್ಷದಲ್ಲಿ ಸಂಚರಿಸುತ್ತ ತಿರುಗುತಿದ್ದು ಶತ್ರು ದಾಳಿ ಸಂಭವಿಸಬಹುದಾದರೆ ಮೊದಲೇ ಮುನ್ಸೆಚ್ಚರಿಕೆ ನೀಡುತ್ತವೆ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

26—6—1958

ಸಂಚಿಕೆ ೪೨
NO. 42

ಓದುವುದರ ಬಗ್ಗೆ ಚಿಂತಿಸುತ್ತೀರಾ?

ಸದಾಕಾಲವೂ ತಪ್ಪದೆ ಓದಬಹುದು!

ಒಂದು ಪುಸ್ತಕವನ್ನೋದಲು ಅತ್ಯುತ್ತಮ ಸಮಯವಾವುದು? ಒಬ್ಬ ಉತ್ತಮಮಟ್ಟದ ಓದುಗನು ಮಾತ್ರ 'ಯಾವುದೇ ಸಮಯ' ಎಂದುತ್ತರಿಸಿಯಾನು. ನಮ್ಮಲ್ಲಿ ಹೆಚ್ಚಿನವರು ಹೊತ್ತುಗೊತ್ತುಗಳನ್ನೂ ಸ್ಥಳ-ಸಂದರ್ಭಗಳನ್ನೂ ಆಧರಿಸಿಕೊಂಡು ತಮ್ಮದೇ ಆದ ಒಂದು ವೇಳೆಯನ್ನು ಓದುವುದಕ್ಕಾಗಿ ಮೀಸಲಿಡಬಹುದು. ಮುದಿತನದ ಸಮಯದಲ್ಲಿಯೇ, ಏಳೆತನದ ಉತ್ಸಾಹದಲ್ಲಿಯೆ? ಚಳಿಗಾಲದಲ್ಲಿಯೆ ಸೆಖೆಗಾಲದಲ್ಲಿಯೇ? ಹಗಲಿನಲ್ಲಿಯೇ ಇರುಳಲ್ಲಿಯೆ?—ಈ ಎಲ್ಲವುಗಳಿಗೂ ಕೆಲವಾರು ಹಿಂಬಾಲಕರಿರುತ್ತಾರೆ. ಪುಸ್ತಕದ ರೋಚಕತೆಯಿಂದಾಗಿ ಹಗಲಿರುಳೂ ಓದುವ ಸಂದರ್ಭವೂ ಇಲ್ಲವೆಂದಿಲ್ಲ.

ಅತಿ ಎಳೆಯ ಪ್ರಾಯದಲ್ಲಿಯೇ ಓದುವ ಅಭ್ಯಾಸವನ್ನಿಟ್ಟುಕೊಂಡವನೇ ನಿಜವಾದ ಫಲ ಪ್ರಾಪ್ತನಾಗುವ ಓದುಗನೆನ್ನಬಹುದು. ಏಕೆಂದರೆ, ಏನಿಲ್ಲೆಂದರೂ ಅವನಿಗೆ ಸಾಕಷ್ಟು ಪುಸ್ತಕಗಳನ್ನು ತಿರುವಿ ಹಾಕಲು ವೇಳೆ ಸಿಗುವುದು. ನೀವು ಈ ರೀತಿ ಮಾಡಿರದಿದ್ದರೆ, ನಿರಾಶರಾಗಬೇಡಿ, ಇನ್ನೂ ಓದನ್ನು ಪ್ರಾರಂಭಿಸಲು ಸಮಯವಿಂಚಿ ಹೋಗಿಲ್ಲ. ಈಗಿಂದೀಗಲೇ ಮೊದಲು ಮಾಡಬಹುದು. ಆದರೆ ಕಾಲವಾವುದು? ಚಾರ್ಲ್ಸ್ ಲೇಂಬ್ ಎಂಬವನು ಬೇಸಗೆಯಲ್ಲಿ ಹೆಚ್ಚು ಓದುವುದಕ್ಕಾಗುವುದಿಲ್ಲವೆಂದು ದೂರಿಕೊಂಡಿದ್ದನು. ಚಳಿಗಾಲದಲ್ಲಿ ಓದು ಒಳ್ಳೆಯದೆಂದೂ ಕೆಲವರನ್ನುತ್ತಾರೆ. ಹೀಗೆಯೇ ಇನ್ನು ಕೆಲವರು ಸೆಖೆಗಾಲದಲ್ಲಿ ಓದುವುದೇ ಹಿತಕರವೆಂದು ನುಡಿದಿದ್ದಾರೆ. ಲೈಹಂಟ್ ಎಂಬವನ ಅಭಿಪ್ರಾಯಯದಂತೆ "ಅರೇಬಿಯನ್ ನೈಟ್ಸ್" ಎಂಬ ಪುಸ್ತಕವು ಎಲ್ಲ ಕಾಲದಲ್ಲಿಯೂ ಓದಬಹುದಾದುದು.

ಇಂದಿನ ದಿನಗಳಲ್ಲಿ ನೋಡುವುದಾದರೆ, ಮುಂಜಾನೆ ಪುಸ್ತಕ ಸ್ಪರ್ಶಮಾಡುವುದಕ್ಕಿಂತ ದಿನಾಂತ್ಯದಲ್ಲಿ ಓದುವ ಅಭ್ಯಾಸವೇ ಬಹಳ ಜನಪ್ರಿಯವಾಗಿರುವುದು ಕಂಡುಬರುತ್ತದೆ. ಹೀಗಿದ್ದರೂ ಮುಂಜಾನೆಯೇ ಪುಸ್ತಕ ಓದುವವರಿದ್ದಾರೆ ಜಾನ್ ಮಿಲ್ಟನನು ಉತ್ತಮ ಬರಹಗಾರರ ಕೃತಿಗಳನ್ನು ಓದುವಸಲುವಾಗಿ ಬೇರೆಯವರ ರೆಚ್ಚೆಗೊಳ್ಳುವುದಕ್ಕಿಂತ ಮೊದಲೇ ಎಳುತಿದ್ದನು. ಸೆಕಾರೊವಿನ ಸೆಕೆಂಡ್ ಒರೇಶನ್ ಅನ್ನು ಓದಲು, ಸಾಮುವೆಲ್ ಪೆಪೀಸ್ ಎಂಬವನು ಮುಂಜಾವಳ ತಾಸಿಗೆ ಎಳುತಿದ್ದನಂತೆ! ಭಾರತದಲ್ಲಿರುವಾಗ ಲಾರ್ಡ್ ಮೆಕಾಲೆಯವರು ಪ್ರಾಚೀನ ಸಾಹಿತ್ಯವನ್ನು ಬೆಳಗ್ಗೆ ಗರಿಂದ ೯ ತಾಸುಗಳ ವರೆಗೆ ಪರಿಶಿಸುತಿದ್ದರಂತೆ! ರಾಬರ್ಟ್ ಲೂಯಿಸ್ ಸ್ಟಿವನ್ಸನ್ ಎಂಬವನು ಮುಂಜಾವದ ಹೊತ್ತಿನಲ್ಲಿ ಓದುವ ಅಭ್ಯಾಸವುಳ್ಳವನು ಆದರೆ, ಇವನಿಗೆ ವಿಲ್ಲಿಯನ ಕೃತಿಗಳು ಬರಿ ಹೊಟ್ಟೆಗೆ ಉತ್ತಮ ತಮಾಷೆಯಾಗಿಂಲಿಲ್ಲ. ಆದರೆ ಡಾ. ಜಾನ್ಸನರದು ಕದ್ವಿರುದ್ಧ ಆಕ್ಸ್‌ಫರ್ಡನ್ನು ಬಿಟ್ಟು ಹೋಗುವಾಗ ಅವರು ನುಡಿದಿದ್ದರು. "ನಾನು ಎಷ್ಟು ಗಂಟೆಗೆ ತಾಸುಗೆ ಬಿಟ್ಟೆನೆಂದೂ ಅರ್ಧಕ ಒತ್ತಡದಿಂದಿರುವಾಗ ಹೇಗೆ ಉಳಿಸಿದೆನೆಂದೂ ಹೇಳಬಾರದು" "ರಾಂಬ್ಲರೇ ಇದಕ್ಕೆ ಕಾರಣ" ತಾನು ಎಚ್ಚರಗೊಳ್ಳಬೇಕೆಂದು ನಿಶ್ಚಯಿಸಿದ ಹೊತ್ತಿಗಿಂತ "ಬೋಸ್ವೆಲನನ್ನು' 'ದಿ ಅನೆಟೊಮಿ ಆಫ್ ಮೆಲಂಕೊಲಿ'ಯು ಎರಡು ತಾಸು ಮುಂಚೆಶವಾಗಿ ಎಳಿಸುತಿತ್ತಂತೆ!

ನಮ್ಮಲ್ಲಿ ಹೆಚ್ಚಿನವರಂತೆ ಡಾ. ಜಾನ್ಸನರು ರಾತ್ರೆ ಬಹು ಹೊತ್ತಿನವರೆಗೆ ಓದಿ ಕೂಗುತಿದ್ದರು. ಲಾರ್ಡ್ ಚೆಸ್ಟರ್‌ಫೀಲ್ಡನು ತನ್ನ ಪತ್ರವೊಂದರಲ್ಲಿ ತಾನು ರಾತ್ರಿಯಿಡಿ ಓದುತ್ತಾ ಇದ್ದು ಬೆಳಗ್ಗೆ ಆರು ತಾಸಿಗೆ ತಾಸಿಗೆ ಹಿಡಿಯುವುದೂ ಇತ್ತೆಂದು ಒಪ್ಪಿಕೊಂಡಿದ್ದಾನೆ ಇಪ್ಪತ್ತು ಮತ್ತು ನಲ್ವತ್ತು ವರ್ಷಗಳ ನಡುವೆ ತನ್ನ ಸಹಪಾಠಿಗಳು ತಾಸಿಗೆಯಲ್ಲೊರಗಿರುವಾಗಲೇ ತಾನೇಳದೆ ಹೋಗಿದ್ದರೆ, ನಿಜವಾಗಿಯೂ ಅಲ್ಪಭಾಗವನ್ನೆಷ್ಟೇ ಓದಬೇಕಾಗುತ್ತಿತ್ತು ಎಂದು ನುಡಿದಿದ್ದಾನೆ. ಜೆಸ್ ಎಸ್ಟಿಂಟೇಸ್ ರಾತ್ರಿಯಿಡಿ ಲೇಟಿನ್ ಕಾವ್ಯಗಳನ್ನು ಗಮನಿಸುತ್ತ ಕುಳಿತಿದ್ದರೆ, ಪ್ರಖ್ಯಾತ ಜ್ಞಾನಿಯಾಗಿದ್ದ ಮಗ್ಲಿಯಾಬೀಚೆ ಎಂಬವನು ತನ್ನ ಭಂಡಾರದಲ್ಲಿ ರಾತ್ರೆ ಕೂರುತ್ತ ಆಗಾಗ ನಿದ್ರಿಸುತಿದ್ದರೂ ಆದಷ್ಟು ಹೊತ್ತು ಓದುತಿದ್ದನು.

ರಿಂಕ್ರೆಯೋದುವ ಅಭ್ಯಾಸವೇ ಉಳಿದ ಸಮಯದ ಓದಿಗಿಂತ ಹೆಚ್ಚಾಗಿದೆ ಈ ಸಮಯದಲ್ಲಿ ನಿದ್ರೆ ಬಾರದಂತೆ ಮಾಡುವ ಉಪಾಯಗಳನ್ನೂ ಕೆಲವರು ಪ್ರಯೋಗರೂಪದಲ್ಲಿ ತರುತ್ತಾರೆ ಕಪ್ಪು ಕಾಫಿಯ ಸೇವನೆ, ಒದ್ದೆ ಬಟ್ಟೆಯ ಉಪಯೋಗ, ಒರಟು ಕುರ್ಚಿಯಲ್ಲಿ ಆಸೀನರಾಗುವುದು ಇತ್ಯಾದಿ ಚೀನಾದ ಒಬ್ಬ ಬುದ್ಧಿವಂತನು-ಸನ್ ಚೆಂಗ್ ಎಂದಾತನ ಹೆಸರು-ತಾನು ಓದುತ್ತಿರುವಾಗ ನಿದ್ರೆಯಿಂದ ತಲೆದೂಗಬಾರದೆಂದು ತನ್ನ ಜುಟ್ಟನ್ನು ಜಂತಿಗೆ ಹಗ್ಗದ ಮೂಲಕ ಕಟ್ಟುತಿದ್ದನಂತೆ! ಆದರೂ, ನಿದ್ದೆ ಬಾರದಂತೆ ತಡೆಹಿಡಿಯುವ ಏಕಮೇವ ಸಾಧನವೆಂದರೆ ಒಂದು ಅತ್ಯುತ್ತಮ ಪುಸ್ತಕ

ಪ್ರಯಾಣಕಾಲದಲ್ಲಿನ ಬೇಕರವನ್ನು ಕಳೆಯುವುದಕ್ಕಾಗಿ ಪುಸ್ತಕಗಳನ್ನು ಓದುವ ಅಭ್ಯಾಸವಿತ್ತು. ಪ್ಲಿನಿ ಎಂಬವನು ಆತನ ಗಾಡಿಯಲ್ಲಿ ನೆಪೋಲಿಯನನು ಪುಸ್ತಕಗಳ ಕವಾಟನಿಂದ ಕೂಡಿದ ಬಂಡಿಯಲ್ಲಿ, ಲಾರೆನ್ಸನು ಬೆಡುವಿನ್ ಅರಬರೊಡನೆ ಒಂಟೆಯ ಮೇಲೆ ಅರೇಬಿಯಾ ಭೂಮಿಯಲ್ಲಿ ಸವಾರಿ ಮಾಡುತ್ತಿರುವಾಗ ಓದುತಿದ್ದರು. ಇಂದಿನ ವಿಮಾನ ಯಾತ್ರಿಕರೂ ದೂರ ಪ್ರಯಾಣದಲ್ಲಿ ಅವನ್ನೋದುತ್ತಾರೆ. ರೇಲ್ವೆ ಸ್ಟೇಶನ್ನುಗಳಲ್ಲಿರುವ ಪುಸ್ತಕ ಸ್ಟಾಲುಗಳನ್ನೀಕ್ಷಿಸಿದರೆ, ರೇಲ್ವೆ ಗಾಡಿಗಳೇ ಓದುವುದನ್ನು ಪ್ರೋತ್ಸಹಿಸುತ್ತವೆಯೆನ್ನಬಹುದು. ನಿಷ್ಕ್ರಾಂಟ್ ಗ್ರೇಯೆನ್ನುವಂತೆ ಉದ್ದ ರೇಲ್ವೆ ಪ್ರಯಾಣವು ಓದಲು ಕೊಡುವ ಉತ್ತಮಾವಕಾಶವಾಗಿದೆ ಒಂದು ಯಾತ್ರಾರ್ಥಿ ಪುಸ್ತಕವೇ ನಾವು ಎಲ್ಲೆಲ್ಲಿಯೂ ತೆರೆಯಬಹುದಾದ ನಿರಾತಂಕ ಲಕ್ಷ್ಯವೀಯಬೇಕಾಗಿರದ ಅಭಿರುಚಿಪೂರ್ಣ ವಿಷಯವಿರುವ ವಸ್ತು" ಎಂದು ಅಲ್ಡಸಾ ಹೆಕ್ಸ್ಲೇ ಹೇಳುತ್ತಾನೆ

ಬೇರೆ ಯಾವ ಸಮಯದಲ್ಲಿ ನಾವು ಓದಬಹುದು? ಪ್ರಾಚೀನ ಸಂಪ್ರದಾಯವಾಗಿ ಬಂದಿರುವಂತೆ ಕ್ಷೌರಿಕನ ಬಳಿ ನಾವು ಹೋದಾಗ ಅಲ್ಲಿ ನಮ್ಮ ಪಾಳಿಯನ್ನು ಕಾಯುತ್ತಿರುವಾಗ ಧಾರಾಳವಾಗಿ ಓದಬಹುದು ಹಿಂದಿನ ಕಾಲದಲ್ಲಿ ಕ್ಷೌರಿಕನು ತನ್ನ ಕೆಲಸಮಾಡುತ್ತಿರುವಾಗಲೂ ಓದುತಿದ್ದರಂತೆ! ಪ್ಲಿನಿಯು ತನ್ನನ್ನು ನೀರಿನಿಂದ ತೊಳೆಯುತ್ತಿರುವಾಗಲೂ ಪುಸ್ತಕ ಓದುತಿದ್ದನೆಂದು ಹೇಳುತ್ತಾನೆ. ಪೆಪಿಯು ತನ್ನ ಮಡದಿ ಅಂಗಿ ತೊಡಿಸುವಾಗ, ತಲೆ ಬಾಚುವಾಗ ಓದುತಿದ್ದನು! ಜಾರ್ಜ್ ವಿಂಡಮ್‌ನು ಗಡ್ಡ ತೆಗೆಯುತ್ತಿರುವಾಗ ಮೊಣಗಂಟಿನ ಪುಸ್ತಕವಿಟ್ಟು ಶೇಕ್ಸ್‌ಪಿಯರನ ಸೊನೆಟ್‌ಗಳನ್ನು ಕಂಠಪಾಠ ಮಾಡುತಿದ್ದನು!

ರಣರಂಗದಲ್ಲಿ, ಸೆರೆಮನೆಯಲ್ಲಿ, ಖುಗ್ಗಳಯ್ಯೆಯಲ್ಲಿ ಜನದಟ್ಟಣೆಯ ಮಾರ್ಗದಲ್ಲಿ ಇಲ್ಲವೇ ಜನರಿಲ್ಲದ ಒಣಿಯಲ್ಲಿ ಎಲ್ಲಿಯೇ ಆಗಲಿ, ಒಂದು ಪುಸ್ತಕವು ಹೊತ್ತುಗೊತ್ತುಗಳನ್ನು ಅಪಹರಿಸಬಲ್ಲುದು ಓದುವುದಕ್ಕೆ ಸಮಯ ಸ್ಥಳಗಳ ನಿಯಮವಾಗಲೀ ಸಾಧನವಾಗಲಿ ಅಗತ್ಯವಿಲ್ಲ. ಅಭಿರುಚಿಯಿದ್ದರೆ, ವಿಣಕು ಬೆಳಕಿದ್ದರೆ, ರಾತ್ರಿ ಹಗಲೆನ್ನದೆ ಯಾವಾಗಲೂ ಆರಾಧಿಸಬಹುದಾದ ಕಲೆಯೆ ದರೆ ಪುಸ್ತಕ ಓದುವಿಕೆ.

ಕಾಫಿ ಕುಡಿಯುವಾಗ, ಮುಖ ಶೃಂಗರಿಸುವಾಗ, ಬೂಟುಪಾಲಿಶ್ ಮಾಡುವಾಗ—ಈ ಸಂದರ್ಭದಲ್ಲಿಯೂ ಓದುತ್ತಿರುವುದುಂಟು ಆದರೆ, ಹೋಲ್ಬ್ರೂಕ್ ಜಾಕನ್ಸನ ಮಾತಿನಲ್ಲಿ ಹೇಳುವುದಾದರೆ, "ಓದುವ ಸಮಯವೆಂದರೆ ಈಗಲೇ—ಆನಂತರವಲ್ಲ. ನಾವು ನಮ್ಮ ಆನಂದವನ್ನುಳಿಸಬೇಕು; ಇಲ್ಲವೇ ಕಳೆದುಕೊಳ್ಳಬೇಕು. ಇಂದು ಓದುತ್ತಿರುವ ಪುಸ್ತಕ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H O MANGALORE. Estd 1931.

BRANCHES
Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರ್ಷಿಕ ಚಂದಾ: ರೂ. 5-75 NAVAYUGA WEEKLY. UDIPI. ಬಿಡಿ ಸಂಚಿಕೆ 13 ನ. ಪೈಸೆ

ವಾರದ ಸಣ್ಣ ಕಥೆ—

ಪತ್ರ ಪ್ರಮಾದ

ಶ್ರೀ ಕೆ. ವಾಸುದೇವ ಆಚಾರ್ಯ, ವಿದ್ವಾನ್

"ಲೇ ಚಿನ್ನಾಽಽ....ಲೇ ಚಿನ್ನಾಽಽ....!"

"ಸ್ವಲ್ಪ ಮೆತ್ತಗೆ ಕರೀರಿ; ಕೇಳಿಸುತ್ತೆ ಕೇಳಿಸುತ್ತೆ"

"ನನ್ನ ಸ್ವರ ನಿನಗೆ ಕೇಳಿಸದೆ ಇದ್ದರೆ ಮತ್ತೆ ಯಾರಿಗೆ ತಾನೇ ಕೇಳಿಸಬೇಕು ಹೇಳು"

"ಮತ್ತೇನು ನಿಮ್ಮ ಹಾಗೆ ಅಂತ ತಿಳಿದುಕೊಂಡಿದ್ದೀರಾ. ಎಲ್ಲರು ಹಾಗಿರೋದಿಲ್ಲ ದೇವರು ಕೊಟ್ಟ ಕಿವಿ ಚೆನ್ನಾಗಿಯೇ ಕೇಳಿಸುತ್ತೆ"

"ನಿನಗೆ ಕೇಳಿಸಿದ್ದು ನನಗೆ ಗೊತ್ತಾಗಬೇಕೇ ಬೇಡವೆ. ಒಮ್ಮೆ ಕರೀಬೇಕಾದರೆ ಹೊಟ್ಟೆಯಲ್ಲಾ ತಣ್ಣಗಾಗಿ ಬಿಡುತ್ತೆ. ಆಮೇಲೆ ಹೊಟ್ಟೆಬಾಕ ಅಂತ ನಾಮಕರಣ ಮಾಡಿಬಿಡ್ತಿಯಲ್ಲ! ಆ ಶನಿ ಬ್ರಹ್ಮ ಸೇಗಣ್ಣಾ ನಮ್ಮನ್ನ ಕೂಡಿಸಿಬಿಟ್ಟಾ ಅಂತ"

"ಅದೇ ನಾನೂ ಯೋಚನೆ ಮಾಡುತ್ತಾ ಇದ್ದೇನೆ"

"ಏನು?... ನಿನಗೂ...ಯೋಚನೆ.... ಅಂದ್ರೆ!"

"ಅಂದ್ರೆ...ಅದೇ ಯಾವಾಗ ನೋಡಿದ್ರೂ ಒಂದೇ ಸಾಕಾಗಿದೆ. ಆಡಗೆಯ ಮನೆಯೊಳಗೆ ಬಂದು ಒಂದು ಮೈಲು ದೂರದವರೆಗೆ ಕೇಳಿಸುವ ಹಾಗೆ ಕೂಗಿ ಕರೀರಿ. ಕೇಳಿಸುತ್ತೆ ಎಲ್ಲರ ಮನೆಗೂ ಕೇಳಿಸುತ್ತೆ ಗಾರ್ದಭಗಾಯನ"

"ಅಲ್ವೇನೇ ಕೋಪಿಸಬೇಡ, ನಿನ್ನ ಕಂಠದೊಳಗಿನ ನಾದಾ ಆಲಿಸೋಣಾ ಅಂತ ಹಾಗೆ ಕರೆದೇ ಅನ್ನು. ಇಲ್ಲವಾದರೆ ನೀನಾದರೂ ಮಾತನಾಡಿಸಬೇಕೇ ಬೇಡವೇ, ಗಟ್ಟಿಯಾಗಿ ಕರೆದರೇ ತಾನೇ ಕೋಪಿಸಿಕೊಂಡಾದ್ರೂ ಮಾತನಾಡ್ತಿ."

"ಸಾಕು ಹತ್ತು ಮನೆಗೂ ಕೇಳಿಸುತ್ತೆ ನಿಮ್ಮ ಬಾಯಿ. ತುಂಬಾ ಪ್ರಜಾರ ಆಗ್ತೀರಿ"

"ಅಲ್ವೇನೇ, ಸ್ವರ ರಣ್ ಠಣಾಂತ ಕಿವಿಗೆ ಕೇಳ್ಬೇಕಾದರೆ ಸ್ವಲ್ಪ ಗಟ್ಟಿಯಾಗಿಯೇ ಅನ್ನಬೇಕು. ಬರೇ ಮೆತ್ತಗೆ ಕರೆದರೆ ಏನು ಮಾಧುರ್ಯ ಇರುತ್ತದೆ ಹೇಳು"

"ಹಾಗಂದ್ರೇನು, ನಾನೂ ಕೆರುಚಬೇಕು ಅಂತೀರ! ಸಾಕು! ನಿಮಗೆ ಬೇಕು ರಾತ್ರಿ ಅರಚೋ ಕತ್ತೆ ನಂಟು, ಅದರೊಂದಿಗೆ ಬೇಕಾದ ಹಾಗೆ ಸರಸವಾಗಿ ಮಾತನಾಡಬಹುದು.

"ಅಲ್ವೇನೇ ಸ್ವಲ್ಪ ಸಮಾಧಾನವಾಗಿ ಕೂತಿರು. ಏಕೋ ಒಂದು ತರಾ ಆಗಿದೆಯಲ್ಲಾ. ನಿನ್ನ ಮಾಕಾಳೀ ಮುಖದೊಳಗೆ ಒಂದು ಸಗುವಾದರೂ ಬೇಡವೇ ನಮ್ಮಾ!"

"ಅಮ್ಮ....ಜೊಮ್ಮ....ಸಾಕು! ದೂರ ಸರೀರಿ ಮತ್ತೆ ನಾಚುಗೆಯಾಗೋದಿಲ್ವೇ ನಿಮಗೆ"

"ನಿನ್ನ ಕತ್ತೆ ಮಾತನಾಡೋದಕ್ಕೆ ನಾಚುಗೆಯೇನೇ? ನಾನು ಅಮ್ಮ ಅಂತ ಅಂದ್ರೂನೂ ನೀನು ನನ್ನ ರನ್ನೆ ಅಲ್ವೆನೋ? ಓ ನನ್ನ ಮುತ್ತಿನ ದೊನ್ನೆ! ... ನಿನಗಾಗಿ ತಾನೇ ಈ ಎಲ್ಲಾ ಸನ್ನೆ!"

"ಸಾಕು ನಿಮ್ಮ ಈ ವೈಯ್ಯಾರ. ಮೈಮೇಲೆ ಬಿಳ್ತೀರೋದು ಸುಳ್ಳು ಮಾತು ಅನ್ನುತ್ತಿರೋದು"

"ಸುಳ್ಳು ಮಾತು....! ನಾನು ಅನ್ನುತ್ತಿರೋದು...ನಿನ್ನ ಮುಂದೆ. ಛೀ! ಛೀ!, ಎಂಥ ಕತ್ತೆಕೆಟ್ಟುಕೊಂಡು ಬಿಡ್ತಲ್ಲಪ್ಪಾ!"

"ಏನಿದು! ಮೈಮೇಲೆ ಬಂದವರ ಹಾಗೆ ಮಾತ್ನಾಡ್ತೀರಿ"

"ನನಗೇನು ಗೊತ್ತು ಬಂದವರಗೇನೇ ಗೊತ್ತು"

"ಸಾಕುಮಾಡಿ ಈ ಹುಚ್ಚು ಮಾತು ನನಗೆ ಹೊತ್ತಾಗುತ್ತೆ"

"ಹೊತ್ತಾಗುತ್ತೆ....ಎಲ್ಲಿಗೋ ಹೊರಟಂತಿದೆಯಲ್ಲಾ ಸಿನೇಮಾ ನೋಡೋದಕ್ಕೆ ಅಂತ ಕಾಣುತ್ತೆ"

"ಸಿನೇಮಾ ತೆಗೆಯೋದಕ್ಕೆ, ನಟಿಸೋದಕ್ಕೆ!"

"ಆಹಾ ಏನಿದು ಸಿಂಗಾರ! ಎಷ್ಟು ಚೆನ್ನಾಗಿ ಕಾಣ್ತೀಯಾ. ನಾವಿಬ್ಬರೂ ಕೂಡಿ ಫೋಟೋ ತೆಗೆಸೋಣವೇನೇ?"

"ಓಹೋಹೋ ಬಹಳ ಚಲೋದಾಗಿರುತ್ತೆ ದೃಷ್ಟಿ ತೆಗೆಯೋದಕ್ಕೆ ಬೇರೆ ಕಪ್ಪು ಹಚ್ಚೋದು ಬೇಡ"

"ಅದೇನು ಮಾತ್ನಾಡ್ತೀ ನಿನ್ನ ಮಾತು ಮಾತ್ರ ನಿನಗೆ ಹುಚ್ಚಾಗಿ ಕಾಣೋದಿಲ್ವೇ"

"ಮತ್ತಲ್ಲವಾದರೆ ತಿದ್ದಿ ತೀಡಿ ಸೊಟ್ಟವಾಗಿ ಕಾಣೋ ಮುಸುಡು ಎಷ್ಟು ಚೆನ್ನಾಗಿದೆ ಅಂತೀರ!"

"ನಿನ್ನಂಥ ರಂಭೆ ಒಲಿದಿದ್ದಾಳೆ ಅಂದ ಮೇಲೆ ಯಾವ ದೇವಲೋಕದ ಗಂಡಿಗೆ ಋಣ ಇಲ್ಲ ಹೇಳು"

"ದೇವಲೋಕದ ಗಂಡು! ಒಲೀತಾಳೆ! ಯಾರು ತಡೆಯುತ್ತಾರೆ ನೋಡ್ತೇನೀಗ"

ಅಂದ್ರೆ....ಅದೇನು ಮಾತು! ಬಹಳ ವಿಚಿತ್ರವಾಗಿ ಕಾಣ್ತಾ ಇದೆಯಲ್ಲಾ"

"ಗಂಡಸರಿಗೆ ಎಲ್ಲವೂ ವಿಚಿತ್ರವಾಗಿ ಕಾಣಿಸುತ್ತೆ ಮನೆಯಲ್ಲೆಲ್ಲಾ ವಿನಯ, ವೈಯ್ಯಾರ, ಹೊರಗೆಲ್ಲಾ ಶೃಂಗಾರ! ಎಷ್ಟು ದಿನ ಅಂತ ಮುಚ್ಚಿಟ್ಟಿರುತ್ತೀರಿ"

"ಅಯ್ಯೋ ಚಿನ್ನಾ ಬುದ್ಧಿ ಗಿದ್ದಿ ಕೆಟ್ಟು ಹೋಯ್ತೇನೆ. ನಿನ್ನ ಮಾತಿಗೆ ಅರ್ಥವಾದರೂ ಬೇಡವೇ"

"ಸಾವಕಾಶವಾಗಿ ಅರ್ಥವಾಗುತ್ತೆ ಮನೆಗೆ ಬಂದು ರಂಭೆ ಮೇನಕೆ ಅಂತ ಅನ್ನಿ. ಹೊರಗೆ ಹೋಗಿ ಯಾವಳೋ ಊರ್ವಶಿಗೆ ಶೃಂಗಾರವಾಗಿ ಪೂಜೆಮಾಡಿ. ನೀವು ಹೂಡೋ ನಾಟಕ ಬಹಳ ದಿಲ್ ಖುಶ್ ಆಗಿರುತ್ತೆ"

"ಚಲೋದಾಗಿ ಮಾತನಾಡುತ್ತಲೇ ಯಕಾಯಕ್ ಹೀಗೆ ತಿರುಗಿಬಿಟ್ಟೆಯಲ್ಲಾ! ಮೈ ಬೆಪ್ಪಾಗಿ ಹೋಗೋ ಹಾಗೆ ಖುಷಾಲ್ ಮಾಡ್ತಾ ಇದ್ದೀಯಲ್ಲಾ ಚಿನ್ನಾ ಸಾಕುಮಾಡೇ ಈ ತಮಾಷೆ ತಡೆಯೋಕಾಗೋಲ್ಲಾ ನನಗೆ"

"ಖಾಸ! ಹೇಗೆ ತಡೆಯೋಕೆ ಆಗುತ್ತೆ ನಿಮಗೆ. ಈ ಮನೆಯೆಲ್ಲಾ ಅವಳಿಗೇ ಕೊಟ್ಟುಬಿಡಿ: ಸುಖವಾಗಿರಬಹುದಲ್ಲಾ ಮತ್ತೆ. ನಿಮ್ಮ ನಟನೆ ಗಿಟನೆ ತಿಳಿಯೋದಿಲ್ಲಾ ಅಂತ ಭಾವಿಸಿದಿರಾ? ಹೆಂಗಸರ ಮುಖಕ್ಕೆ ಮಣ್ಣೆರಚೋದು ಅಷ್ಟು ಸುಲಭಾ ಅಂತ ತಿಳೀಬೇಡಿ"

"ಏನೇ ಅದು ನೀನು ಹೇಳೋದು ಯಾರೇ ಅವಳು? ಒಂದೂ ಅರ್ಥವೇ ಆಗೋದಿಲ್ವಲ್ಲಾ? ಸುಮ್ಮಗೆ ಬಸ ಬಡಾಂತಿಯಲ್ಲಾ!"

"ಹೇಗೆ ಅರ್ಥವಾಗುತ್ತೆ ನಿಮಗೆ.... ಸಾಕು ನಿನ್ನ ಸೋಗು! ನಾನು ಎಲ್ಲಾದ್ರೂ ಹೋಗ್ತೇನೆ ಸಮಯಸಿಕ್ಕರೆ ಹೇಗಾದ್ರೂ ಇರ್ತೇನೆ"

"ಹೇಗಾದ್ರೂ ಇರ್ತೇನೆ. ಥೂ ಎಂಥಾ ಮಾತಾಡ್ತಾ ಇದ್ದೀ ದೇವನಂಥ ಪತಿ ಮುಂದೆ! ಸ್ವಲ್ಪ ಸರಿಯಾಗಿ ಹೇಳು. ಯಾರನ್ನು ಕಂಡು ಏನು ತಿಳಿದುಕೊಂಡೆ"

"ನಾನು ಹೇಳ್ತಿರೋದು ಖಡಾಖಡೀ ಮಾತು. ಅದರವೇಲೂ ಸರಿಯಾಗಿ ಹೇಳೋದು ಏನು. ನಿಮಗೂ ಗೊತ್ತಿದೆ ನನಗೂ ಗೊತ್ತಿದೆ. ನಿಮ್ಮ ಪಾಡಿಗೆ ನೀವು ನನ್ನ ಪಾಡಿಗೆ ನಾನು."

"ಮನೇ ಅದೇ ಚಂಡಿ ಹಿಡೀತಿದ್ದಿ ವಿಷಯವಾದ್ರೂ ಗೊತ್ತಾಗೋದ್ಬೇಡ್ವೇ"

"ಅದೇನೂ ನನಗೆ ಗೊತ್ತಿಲ್ಲ. ಯಾರ ಹತ್ತಿರ ಬೇಕಾದ್ರೂ ಕೇಳ್ಕೊಳ್ಳಿ. ಡಾರೀ ಹಣ ಐನೂರು ವರಹ; ಬಳವಳೀ ಕೊಟ್ಟ ದೆಳ್ಳೀ ತಂಬಿಗೆ, ಪಾತ್ರೆ ಪರಡಿ ಎಲ್ಲವನ್ನೂ ಸಾಗಿಸಿಬಿಡ್ತೇನೆ. ಹೊಸ ಜೀವನ ಆರಂಭಿಸಿಬಿಡ್ತೇನೆ."

"ಓಗೆಲ್ಲ ಹೇಳಿದರೆ ಚೆನ್ನಾಗಿ ಅಟ್ಟು ಬಿಟ್ಟೇನು. ಮತ್ತೆ ಸ್ವಲ್ಪ ಸಮಾಧಾನವಾಗಿರು. ಏನೇನೋ ಹಟ್ಟಕೊಂಡು ತಲೆ ಕೆಡಿಸಿಕೊಳ್ಳಬೇಡ."

(೧೧ನೇ ಪುಟ ನೋಡಿರಿ)



ಬ್ರಸಲ್ಸ್‌ನಲ್ಲಿ ಸೇರಿದ ವ್ಯಾರ್ತನದ ವೇಳೆ ಪ್ರದರ್ಶನಾಕ್ಷೇತ್ರದ ಸಮೀಪದಲ್ಲಿ ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ಧ್ವಜಗಳು ಗಂಭೀರವಾಗಿ ಹಾರಾಡುತ್ತಿವೆ. ಧ್ವಜಸ್ತಂಭದ ಬುಡದಲ್ಲಿ ಆಯಾ ದೇಶಗಳ ವೈಶಿಷ್ಟ್ಯಪೂರ್ಣ ದೃಶ್ಯಗಳನ್ನು ಚಿತ್ರಿಸಿದ್ದಾರೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮು ಗು ಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಸುಂದರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪಟ, ಇಷ್ಟಾದರೂ ಬೆಲೆ: ೧-೬-೦(ಟಿ- ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಿಕ್ಷಣದ ಮೇಲೊಂದು ಕ್ಷ-ಕಿರಣ-

ಸ್ವತಂತ್ರ ವಾತಾವರಣದ ಆವಶ್ಯಕತೆ.

ಶ್ರೀ ಎಸ್ ಗೋಪೀಚಂದರಾವ್, ವಿದ್ವಾನ್, ವಿಶಾರದ

ಶಿಕ್ಷಣ ಮತ್ತು ಶಿಕ್ಷಕರೊಳಗಿನ ಸಂಬಂಧ ಅತ್ಯಂತ ನಿಕಟವಾದುದು. ಯಾವುದೇ ದೇಶದ ಶಿಕ್ಷಣವು ಶಿಕ್ಷಕರ ದಕ್ಷತೆಯನ್ನೇ ಹೊಂದಿಕೊಂಡಿದೆ. ಆದುದರಿಂದಲೇ ಶಿಕ್ಷಕರೇ ದೇಶನಿರ್ಮಾತೃಗಳೆಂದು ಹೇಳುತ್ತಾರೆ ಆದರೆ, ಇಂದಿನ ಕಾಲದಲ್ಲಿ ಇದೆಷ್ಟು ಮಟ್ಟಿಗೆ ಸತ್ಯ? ಗಂಭೀರ ದೃಷ್ಟಿಯಿಂದ ವಿಚಾರಿಸಿದರೆ, ಇಂದು ಶಿಕ್ಷಕರಿಗೆ ಅಷ್ಟು ಮಹತ್ವದ ಸ್ಥಾನವನ್ನು ಕೊಟ್ಟಂತೆ ಕಾಣುವುದಿಲ್ಲ ಯಾವುದೋ ಒಂದು ಕಾಲದಲ್ಲಿ ಶಿಕ್ಷಕರ ಸ್ಥಾನಮಾನಗಳು ಅಷ್ಟು ಉನ್ನತವಾಗಿರಬಹುದಾದರೂ ಇಂದಿಲ್ಲವೆಂಬುದು ನೂರಕ್ಕೆ ನೂರು ಮಾನವನ ಮಸ್ತಿಷ್ಕ ವಿಕಾಸವೇ ಶಿಕ್ಷಣದ ಪ್ರಧಾನೋದ್ದೇಶ. ಮಸ್ತಿಷ್ಕದ ಸರ್ವತೋಮುಖ ವಿಕಾಸವು ಸ್ವತಂತ್ರ ವಾತಾವರಣದಲ್ಲಿಯಷ್ಟೇ ಸಾಧ್ಯ ಆದರೆ ಇಂದು ಯಾವುದೇ ದೇಶದ ಶಿಕ್ಷಣ ಕಾರ್ಯವು ಸ್ವತಂತ್ರ ವಾತಾವರಣದಲ್ಲಿ ನಡೆಯುವುದಿಲ್ಲ ಆಧುನಿಕಯುಗದ ಶಿಕ್ಷಣ ಸರಕಾರದ ಕೈಗೊಂಬೆಯಂತಿದೆ ಅದರ ನೆರಳಡಿಯಲ್ಲಿ ಅದು ಶೃಂಗರಿಸಲ್ಪಡುತ್ತದೆ ಶಿಕ್ಷಕನು ಸರಕಾರದ ನಿರ್ದೇಶನವನ್ನು ಕಾಯಾ ಆ ಗೊಂಬೆಯನ್ನು ಶೃಂಗರಿಸುತ್ತಾನೆ, ಅಷ್ಟೆ.

ಇಂದು ಪ್ರತಿಸ್ಪರ್ಧೆಯು ಯುಗವಾಗಿದೆ ಪ್ರತಿ ಕ್ಷಣವೂ ಪ್ರತಿ ಕ್ಷೇತ್ರದಲ್ಲಿಯೂ ಪ್ರತಿಸ್ಪರ್ಧೆ ತೋರಿಬರುತ್ತದೆ ಪ್ರತಿಯೊಬ್ಬರೂ ಬೇರೆಯವರನ್ನು ಸಮ್ಮಾನಿಸಲು ತಿಳಿಯುವುದಿಲ್ಲ ಸಮಾಜದ ಎಲ್ಲ ಅಂಗಗಳಲ್ಲಿಯೂ ಪ್ರತಿ ಮಸ್ತಿಷ್ಕದಲ್ಲಿಯೂ ಮುಂದುವರಿಯುವ ಲಾಲಸೆ ಬೆಳೆದಿದೆ- ಆದರೆ, ಒಬ್ಬರೊಡನೆ ಹೊಂದಿಕೊಂಡಲ್ಲಿ; ಇನ್ನೊಬ್ಬರನ್ನು ನಾಶಮಾಡಿ ಸಹಯೋಗವೆಂಬ ಪಕ್ಷಿ ಸಮಾಜದಿಂದ ದೂರವೋಡಿದೆ. ಇದರ ಪ್ರಭಾವ ಎಲ್ಲರಲ್ಲಿಯೂ ತೋರಿಬರುತ್ತದೆ ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕನು ಶಿಕ್ಷಣದ್ವಾರಾ ಸ್ವತಂತ್ರ ವಾತಾವರಣದಲ್ಲಿ ವೈಶಿಷ್ಟನಿರ್ಮಾಣದ ಕಾರ್ಯದಲ್ಲಿ ತನ್ನ ಸಹಯೋಗವನ್ನೀಯುವ ಸಂಭವವಾದರೂ ಎಲ್ಲಿಂದ ಬರಬೇಕು?

ಇಂದು ಪ್ರತ್ಯೇಕ ದೇಶದಲ್ಲಿಯೂ ಶಿಕ್ಷಣದ ಮೇಲೆ ಸರಕಾರದ ಅಧಿಕಾರ ನಡೆಯುತ್ತದೆ ಸರಕಾರವು ತನ್ನ ರಕ್ಷಣೆಗಾಗಿ ಸಮಯ ಸಮಯದಲ್ಲಿ ಶಿಕ್ಷಣ ಪದ್ಧತಿಯ ಮೇಲೆ ಪ್ರಭಾವ ಬೀರುತ್ತದೆ ಶಿಕ್ಷಕನು ಕೇವಲ ಯಂತ್ರ ಮಾತ್ರ! ಸರಕಾರವು ತನ್ನ ವರ್ಗವಿಶೇಷದ ಸ್ವಾರ್ಥರಕ್ಷಣೆಗಾಗಿ ಶಿಕ್ಷಣಕ್ರಮವನ್ನು ಸಿದ್ಧಗೊಳಿಸುತ್ತದೆ ಶಿಕ್ಷಕನು ತದನುಸಾರ ಕಾರ್ಯಮಾಡಿ ಸಮಾಜದಿಂದ ಸರಕಾರೀ ಸ್ವಾರ್ಥಗಳ ರಕ್ಷಕರನ್ನು ನಿರ್ಮಿಸುತ್ತಾನೆ. ಪ್ರಪಂಚದ ಹೆಚ್ಚಿನ ಸರಕಾರಗಳು ತಮ್ಮನ್ನು ಜನತಾ ಸರಕಾರಗಳೆಂದು ಕರೆದುಕೊಳ್ಳುತ್ತಿದ್ದರೂ ಜನತೆಯ ಹಿತಗಳನ್ನು ಸರಿಯಾಗಿ ರಕ್ಷಿಸುವುದೇ ಸರಕಾರದ ಕರ್ತವ್ಯವೆಂದೂ ಘಟನೆಯ ಪ್ರಧಾನಾಂಗವೆಂದೂ ಹೇಳಲಾಗುತ್ತದೆ ವಿಶ್ವದಲ್ಲಿ ಸರಕಾರಗಳೂ ಜನಹಿತಕ್ಕಾಗಿಯೇ ಉಸಿರು ಕಟ್ಟಿಕೊಂಡಿರುವಾಗ, ರಕ್ಷಣಾವ್ಯೂಹವು ಯಾರ ರಕ್ಷಣೆಗಾಗಿರುವುದು? ಪ್ರಜಾಪ್ರಭುತ್ವದ ಹೆಸರಿನಲ್ಲಿ ಇಂದು ಬೇರೆ ಬೇರೆ ದೇಶಗಳಲ್ಲಿಯೂ ಅಧಿಕಾರಲೋಲುಪ ಸ್ವಾರ್ಥಿಗಳ ಮೂಲಕ ತಂತಮ್ಮ ವರ್ಗವಿಶೇಷಗಳ ಸ್ವಾರ್ಥರಕ್ಷಣೆಯ ಪ್ರಯತ್ನಗಳು ನಡೆಯುವುದಿಲ್ಲವೆ? ಶಿಕ್ಷಣಕ್ರಮವೂ ಅಂತಹ ಸ್ವಾರ್ಥಿಗಳ ಉದ್ಧಾರಕ್ಕಾಗಿ ರಚಿಸಲ್ಪಡುವುದಿಲ್ಲವೆ? ಹಾಗಿರುವಾಗ ಶಿಕ್ಷಕರಿಗೆ ಸ್ವತಂತ್ರ ಅಸ್ತಿತ್ವ ಎಲ್ಲಿಂದ ಬರಬೇಕು? ಇಂದಿನ ಶಿಕ್ಷಕರು ದೇಶದ ನವಯುವಕರಿಗೆ ಉಚಿತ ಶಿಕ್ಷಣವಿತ್ತು ದೇಶದ ಮಾರ್ಗದರ್ಶನ ಮಾಡುವುದಿಲ್ಲ, ಬದಲು ಅವರು ತಮ್ಮ ಜೀವನನಿರ್ವಹಣೆಯನ್ನೇ ಶಿಕ್ಷಣದ ಮುಖ್ಯೋದ್ದೇಶವನ್ನಾಗಿಟ್ಟುಕೊಂಡಿದ್ದಾರೆ ಆದರೆ, ಈ ಅಪರಾಧವನ್ನು ಶಿಕ್ಷಕರ ಮೇಲೆ ಹಾಕುವುದು ಅವಿವೇಕ. ಜನಹಿತದ ಧೋರಣೆಯುಕ್ತವಾದ ಆಧುನಿಕ ಸರಕಾರದ ಮೇಲೆ ಮಾತ್ರ ಇದನ್ನು ಹೇರಬೇಕು

ಇಂದು ನಮ್ಮ ಮೇಲೆ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸರಕಾರಗಳ ಸಂಬಂಧಗಳು ಆಧುನಿಕ ಶಿಕ್ಷಣ ಪದ್ಧತಿಗಳಲ್ಲಿ ದೇಶದ ಭವಿಷ್ಯ ಸಮಾಜದ ನಿರ್ಮಾತರೆಂದು ತಿಳಿಯಲ್ಪಡುವ ಇಂದಿನ ಯುವಕರ ಚರಿತ್ರನಿರ್ಮಾಣದ ಹೊಣೆಗಾರಿಕೆಯನ್ನು ಹೊತ್ತಿವೆಯೋ ಇಲ್ಲವೋ ಎಂಬುದನ್ನು ವಿಚಾರಿಸುವ ಅಗತ್ಯಬದ್ಧಿಗೆ ಇಂದು ವಿದ್ಯೆಯು ಸ್ವತಂತ್ರ ವಾತಾವರಣದಲ್ಲಿ ಅಧ್ಯಾಪಕರಿಂದ ಕೊಡಲ್ಪಡುತ್ತಿದೆಯೇ ಎಂಬುದನ್ನು ಆದುನಿಕ ಮತ್ತು ಪ್ರಾಚೀನ ವಿದ್ಯಾಪದ್ಧತಿಗಳ ತುಲನಾತ್ಮಕ ಅಧ್ಯಯನದಿಂದ ತಿಳಿಯುವ ಪ್ರಯತ್ನ ಮಾಡಬಹುದು ಭಾರತದ ಅತಿ ಪ್ರಾಚೀನ ಕಾಲದ ಶಿಕ್ಷಣವು ಗುರುಕುಲ ಪದ್ಧತಿಯೆಂದು ಕರೆಯಲ್ಪಡುತ್ತದೆ ವಿದ್ಯಾರ್ಥಿಗಳು ಗುರುಕುಲಗಳಿಗೆ ಸಮರ್ಪಿಸಲ್ಪಡುತ್ತಿದ್ದರು ಗುರುಕುಲಗಳು ರಾಜಶಾಸನದ ಅಂಕಿತದಲ್ಲಿ ನಡೆಯುತ್ತಿದ್ದಿಲ್ಲ. ಅವುಗಳೆಲ್ಲ ಸ್ವವ್ಯವಸ್ಥೆಯೂ ಗುರುಗಳ ಮೂಲಕವಾಗಿಯೇ ನಡೆಯುತ್ತಿತ್ತು ರಾಜರಿಂದೇನಾದರೂ ಗುರುಕುಲಗಳಿಗೆ ಸಹಾಯ ದೊರೆತರೆ, ಅದು ಅಭಾರ ಪ್ರದರ್ಶನಕ್ಕಾಗಿಯಲ್ಲ, ಪ್ರತಿಬಂಧ ರೂಪವಾಗಿಯಲ್ಲ, ಆದರೆ, ಸ್ವೇಚ್ಛಾಪೂರ್ವಕ ದಾನಸ್ವರೂಪವಾಗಿತ್ತು. ಆದರೆ, ಇಂದಿನ ರಾಜಕೀಯ ಸಹಾಯವು ಶಿಕ್ಷಣ ಸಂಸ್ಥೆಗಳಿಗೆ ಈ ರೀತಿ ದೊರೆಯುವುದೆ?

ಗುರುಕುಲಗಳ ಶಿಕ್ಷಣ ಪದ್ಧತಿಯ ಮೇಲೆ ರಾಜಶಾಸನದ ನಿಯಂತ್ರಣವಿರಲಿಲ್ಲ ಅಲ್ಲಿನ ಶಿಕ್ಷಕನು ವಿದ್ಯಾರ್ಥಿಗಳನ್ನು ಪೂರ್ಣರೂಪದಿಂದ ನಿರ್ಮಿಸುವುದು ತನ್ನ ಕರ್ತವ್ಯವೆಂದು ತಿಳಿಯಬೇಕಿದ್ದನು ಅಧ್ಯಾಪಕರಾತ್ರಿಹಗಲು ವಿದ್ಯಾರ್ಥಿಗಳ ಸಹವಾಸದಲ್ಲಿದ್ದುಕೊಂಡು ಅವರನ್ನು ನಿರ್ಮಿಸುತ್ತಿದ್ದರು ಗುರುಕುಲವಾಸ ಮುಗಿಯುವವರೆಗೆ ಗುರುವೇ ಅವರ ತಾಯಿ, ತಂದೆ ಎಲ್ಲವೂ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಶೀಲ ಧ್ಯಾನ ಮತ್ತು ಶಾಸ್ತ್ರ ಶಿಕ್ಷಣವನ್ನು ಕೂಟ್ಟು ಅವನನ್ನೊಬ್ಬ ಮಾನವನನ್ನಾಗಿ ಮಾಡುವ ಕಷ್ಟವನ್ನು ಹೊರತಿದ್ದನು ಶಿಷ್ಯನ ಪೂರ್ಣ ವಿದ್ಯೆಯನ್ನು ಹೊಂದಿ, ಯಾವಾಯೋಗ್ಯ ಗುರುದಕ್ಷಿಣೆಯನ್ನಿತ್ತು ಗುರುವಿನ ಆಶೀರ್ವಾದ ಪಡೆದು, ಗೃಹಸ್ಥ ಜೀವನರೂಪದ ಪ್ರಯೋಗ ಶಾಲೆಯನ್ನು ಪ್ರವೇಶಿಸುತ್ತಿದ್ದನು ಶಿಷ್ಯನು ತನ್ನ ಜೀವನವಿಡೀ ತನ್ನ ಗುರು ಮತ್ತು ಗುರುಕುಲಗಳ ಸಮ್ಮಾನದ ದೃಷ್ಟಿಯನ್ನಿಟ್ಟುಕೊಳ್ಳುತ್ತಿದ್ದನು. ಇಂತಹುದೇ ವಿದ್ಯಾಕ್ರಮ ಗ್ರೀಸ್, ಐಗುಪ್ತ, ಚೀನ ಮೊದಲಾದ ಅತಿ ಪ್ರಾಚೀನ ಸುಸಂಸ್ಕೃತ ದೇಶಗಳಲ್ಲಿತ್ತು ಆದರೆ, ಇಂದು ಆರ್ಥಸಂಪಾದನೆಯ ಶಿಕ್ಷಣ ಪದ್ಧತಿಯಲ್ಲಿ ಚರಿತ್ರ ನಿರ್ಮಾಣದಂತಹ ವಸ್ತುವಿರುವುದಿಲ್ಲ ವಿದ್ಯಾರ್ಥಿಯು ಶಾಲೆಗೆ ಹೋದನು ಸುಸ್ತಕ ಓದಿದನು, ಮನೆಗೆ ಹಿಂತೆರಳಿದನು ಕುಸಂಸ್ಕಾರಗಳನ್ನು ಸುಸಂಸ್ಕಾರಗಳಿಗಿಂತ ಬೇರೆಯೇ ಗ್ರಹಿಸುವುದು ಮಾನವ ಸಹಜ ಗುಣ. ವಿಷಯಗಳ ಅದರ್ಶತೆಯ ಪಾಠವನ್ನು ಹೇಳಬೇಕಾದರೆ ತಮ್ಮಲ್ಲಿದಿರಬೇಕೆಂದು ಶಿಕ್ಷಕರು ಈ ವಿಷಯದಲ್ಲಿ ಉದಾಸೀನರಾಗಿರುತ್ತಾರೆ ಇದರ ಪರಿಣಾಮವಾಗಿ ಸಮಾಜವು ಕುಸಂಸ್ಕಾರಗಳಿಂದ ಕೂಡಿ ಕೊಂಡಿರುತ್ತದೆ

ಮುಂದುವರಿದು ನೋಡಿದಾಗ, ಬುದ್ಧಯುಗದ ಪ್ರಪಂಚದ ಶಿಕ್ಷಣ ಕ್ರಮವು ಕೊಂಚ ಪರಿವರ್ತಿತವಾಗಿರುವುದು ಕಂಡುಬಂದರೂ ಇಂದಿಗಿಂತ ಆದರ್ಶವಾಗಿತ್ತು ವಿದ್ಯಾಭ್ಯಾಸ ಕ್ರಮ ದಲ್ಲಿಧಾರ್ಮಿಕತೆಯು ಕಾಣಿಸಿಕೊಂಡಿತ್ತು.ಗುರುಕುಲಗಳು ವಿಶ್ವವಿದ್ಯಾಲಯಗಳ ರೂಪವನ್ನು ತಳೆದುವು ಅವುಗಳ ಉದ್ದೇಶಗಳಲ್ಲಿ ಕೆಲವು ಪರಿವರ್ತನೆಗಳಾದುವು. ಧರ್ಮಪ್ರಚಾರದ ಲೋಭವನ್ನವರು ತಡೆಹಿಡಿಯದಾದರು. ಬುದ್ಧಕಾಲೀನ ಭಾರತದಲ್ಲಿ ಹಲವಾರು ವಿಶ್ವವಿದ್ಯಾಲಯಗಳಿದ್ದುವು ವಿಶ್ವದ ಬೇರೆ ಭಾಗಗಳಲ್ಲಿಯೂ ಧಾರ್ಮಿಕ ಸಂಸ್ಥೆಗಳು ಶಿಕ್ಷಣಕ್ಕೆ ಯೋಗ್ಯ ವ್ಯವಸ್ಥೆ ಮಾಡುತ್ತಿದ್ದುವು ಜಿಜ್ಞಾಸುಗಳಿಗಾಗಿಯೇ ಈ ವಿಶ್ವವಿದ್ಯಾಲಯಗಳಿರುತಿದ್ದುವು. ಇಂದಿನ ವಿಶ್ವವಿದ್ಯಾಲಯಗಳಂತೆ ಹಣದ ರಾಶಿಗಳಿಂದ ಪ್ರವೇಶ ಕೊಡದೆ ವಿದ್ವಾಂಸರಾದ ಪಂಡಿತರೇ ಜಿಜ್ಞಾಸುಗಳಿಗೆ ಪ್ರವೇಶವೀಯುತಿದ್ದರು ಜಿಜ್ಞಾಸುಗಳಿಗೆ ಅವ ಬಡತನವು ಅಭ್ಯಾಸಕಂಟಕವಾಗಿ ಪರಿಣಮಿಸುತ್ತಿರಲಿಲ್ಲ. ಪ್ರವೇಶಪಡೆದ ಮೇಲೆ ಶ್ರೀಮಂತ-ದರಿದ್ರರೆಲ್ಲರೂ ಸಮಾನರಾಗಿ ಕಾಣಲ್ಪಡುತಿದ್ದರು. ಜ್ಞಾನಗಳ ಉಪಾಸನೆಯನ್ನು ಶಾಂತ ಮಾಡುವುದು ಮತ್ತು ಸ್ವಚರಿತ್ರೆಯನ್ನು ನಿರ್ಮಿಸುವುದೇ ಅಲ್ಲಿನ ವಿದ್ಯಾರ್ಥಿಗಳ ಪ್ರಧಾನೋದ್ದೇಶವಾಗಿತ್ತು ಆಚಾರ್ಯಗಣವೂ ತಮ್ಮ ಮೇಲಿನ ಉತ್ತರದಾಯಿತ್ವವನ್ನು ಪೂರ್ಣರೂಪದಿಂದ ಮಹಿಸುತಿದ್ದರು. ಆ ವಿಶ್ವವಿದ್ಯಾಲಯಗಳಲ್ಲಿ ಆಚಾರ್ಯರೇ ಸರ್ವಾಧಿಕಾರಿಗಳಾಗಿರುತಿದ್ದರು.

ರಾಜಕಾರಣವರ್ಗವೂ ಆ ಆಚಾರ್ಯರನ್ನು ಸಮ್ಮಾನಿಸಿತ್ತು ಯಾವುದೇ ಪ್ರಚಾರದ ಪ್ರತಿಬಂಧಕ ರೂಪದಲ್ಲಿ ರಾಜಕೀಯಾನುದಾನವಿರಲಿಲ್ಲ. ಆ ಕಾಲದಲ್ಲಿಯೂ ಮಸ್ತಿಷ್ಕವಿಕಾಸಕ್ಕಿಂತ ಚರಿತ್ರನಿರ್ಮಾಣಗಳೇ ಶಿಕ್ಷಣದ ಉದ್ದೇಶವಾಗಿದ್ದುವು ಆ ಕಾಲದಲ್ಲಿ ಆಚಾರ್ಯರಲ್ಲಿ ಧರ್ಮಪ್ರಚಾರದ ಲೋಭರೂಪೀ ಅವಗುಣವೇನೇ ಇತ್ತು,ಆದರೆ, ಶಿಕ್ಷಣಾರ್ಥಿಗಳಜ್ಞಾನ ತೃಷೆಯನ್ನು ಹೋಗಲಾಡಿಸುವುದು, ಅವರ ಚರಿತ್ರ ನಿರ್ಮಾಣದ ಕಾರ್ಯ ಮಾಡುವುದು—ಇವುಗಳ ಪೂರ್ಣ ಹೊಣೆಗಾರಿಕೆ ಅವರ ಮೇಲಿತ್ತು. ಶಿಕ್ಷಣ ಕಾಲದಲ್ಲಿ ಆಚಾರ್ಯಗಣವೇ ಅವರ ತಂದೆತಾಯಿ ಮತ್ತು ಗುರುಗಳಾಗಿರುತಿದ್ದರು. ಆಕಾಲದ ರಾಜರ ಶಿಕ್ಷಣದ ಮೇಲೆ

(ನಂತರ ಪುಟ ನೋಡಿರಿ)

(ತಾ 25 5-'58)

ಬೊಂಬಾಯಿಯ ಮಾಂಡ್ವಿಯಲ್ಲಿ

ಸಿಂಡಿಕೇಟಿನ

ಹೊಸ ಶಾಖೆಯು ತೆರೆಯಲ್ಪಟ್ಟಿತು.

ಹೊಸ ಶಾಖೆಯ ವಿಳಾಸ -

83/85, KAZI SAVE STREET
MANDVI,
BOMBAY-3.

ಎಲ್ಲ ತರದ ಬೇಂಕಿಂಗ್ ವಿಹಿವಾಟುಗಳನ್ನು ಈ ಹೊಸ ಶಾಖೆಯಲ್ಲಿಯೂ ನಡೆಸಲಾಗುವುದು

ಒಟ್ಟು ಚಲಾವಣಾ ನಿಧಿ ರೂ 13-25 ಕೋಟಿಗೂ ಮಿಕ್ಕಿದೆ

ಟಿ. ಎ ಸ್ಟೈ, ಬಿ ಕಾಂ.(ಜೊಂ)
ಎ ಐ ಐ ಬಿ ಯುಫ್ ಆರ್ ಇ.ಎಸ್.(ಲಂಡನ್)
ಜನರಲ್ ಮೆನೇಜರ್

ಡಾ ಟಿ ಮಾಧವ ಸ್ಟೈ,
ಎಂ ಬಿ & ಬಿ ಎಸ್.
ಮನೇಜಿಂಗ್ ಡೈರೆಕ್ಟರ್

THE CANARA INDUSTRIAL & BANKING SYNDICATE LTD, UDIPI

ನೋವುಗಳ ಅತ್ಯುತ್ತಮ ಸಂಜೀವಿನಿ



ಅಮೃತಾಂಜನ

ರಾಜ್ಯಭಾರಗಳ ಮೇಲೆ ವಿಹಂಗಮೇಕ್ಷಣ—

ವೇದಕಾಲದಿಂದ ಹರ್ಷನ ವರೆಗೆ

ಶ್ರೀ ಕೆ. ವಿ. ತಿರುಮಲೇಶ.

ವೇದ ಕಾಲದ ರಾಜ್ಯಾಡಳಿತೆ

ವೇದ ಕಾಲದಲ್ಲಿದ್ದ ಹೆಚ್ಚಿನ ರಾಜ್ಯಗಳು ಅರಸರಿಂದ ಆಳಲ್ಪಡುತ್ತಿದ್ದುವು. ಕೆಲವೆಡೆಗಳಲ್ಲಿ ಪ್ರಜಾಪ್ರಭುತ್ವ ರಾಜ್ಯಗಳೂ ಇದ್ದುವು. ರಾಜ್ಯಾಧಿಕಾರವು ಪಾರಂಪರ್ಯವಾಗಿದ್ದಿತು. ಆದರೆ ರಾಜನು ನಿರಂಕುಶ ಅಧಿಕಾರಕ್ಕೆ ಆಸ್ಪದವೀಯಲಾಗುತ್ತಿರಲಿಲ್ಲ. ಪುರೋಹಿತನ ಪ್ರಧಾನ ಮಂತ್ರಿತ್ವದಲ್ಲಿ ಅರಸನಿಗೆ ಸಲಹೆಗಳನ್ನು ಕೊಡಲು ಒಂದು ಸಲಹಾ ಮಂಡಳಿಯಿತ್ತು. ಪ್ರಧಾನ ಸೇನಾನಿ ಮತ್ತು ಗ್ರಾಮ ಮುಖ್ಯಸ್ಥ (ಗ್ರಾಮಣಿ)ನು ರಾಜನಿಗೆ ಯುದ್ಧದಲ್ಲಿ ಸಹಾಯ ಮಾಡಬೇಕಿತ್ತು. "ಸಮಿತಿ" ಮತ್ತು "ಸಭಾ" ಎಂಬ ಎರಡು ಸಂಸ್ಥೆಗಳು ರಾಜ್ಯಾಧಿಕಾರದ ಚಲಾವಣೆಗಾಗಿ ನೇಮಿಸಲ್ಪಟ್ಟಿದ್ದುವು. ರಾಜ್ಯ ವಿಸ್ತಾರವಾದಂತೆ ರಾಜನ ಅಧಿಕಾರ ಹೆಚ್ಚುತ್ತಾ ಹೋಗಿ ವಾಜಸೇಯ, ರಾಜಸೂಯ, ಅಶ್ವಮೇಧ ಯಾಗಗಳನ್ನು ಮಾಡಿದ ಅರಸರ ರಾಜ್ಯಗಳು ಕ್ರಮವಾಗಿ ರಾಜ್ಯ, ವೈರಾಜ್ಯ, ಸಾಮ್ರಾಜ್ಯಗಳೆಂದು ಕರೆಯಲ್ಪಡುತ್ತಿದ್ದುವು. ಆದರೆ ರಾಜನ ಸಮಿತಿಯಲ್ಲಿ ಪುರೋಹಿತನ ಪ್ರಾಮುಖ್ಯವು ಕಡಿಮೆಯಾಗಿರದೆ ಅವನಿಗೊಂದು ಪ್ರತ್ಯೇಕ ಗೌರವ ಸಲ್ಲುತ್ತಿತ್ತು.

ಮೌರ್ಯರ ರಾಜ್ಯಾಡಳಿತೆ

ಸಾಮ್ರಾಜ್ಯವನ್ನು ಹಲವು ಪ್ರಾಂತಗಳನ್ನಾಗಿ ವಿಂಗಡಿಸಲಾಗಿತ್ತು. ಈ ಪ್ರಾಂತಗಳು ರಾಜ ಕುಟುಂಬಕ್ಕೆ ಸೇರಿದವರಿಂದ ಅಥವಾ ರಾಜನ ಅತ್ಯಂತ ವಿಶ್ವಾಸಾರ್ಹ ಅಧಿಕಾರಿಗಳಿಂದ ಆಳಲ್ಪಡುತ್ತಿದ್ದುವು. ರಾಜಧಾನಿಗೆ ದೂರವಾದ ಪ್ರಾಂತ್ಯಗಳ ಅಧಿಪತಿಗಳು "ವೈಸರಾಯ"ರೆಂದೂ ಕತ್ತಿರದ ಪ್ರಾಂತ್ಯಾಧಿಕಾರಿಗಳು "ಗವರ್ನರ್"ರೆಂದೂ ಪರಿಗಣಿಸಲ್ಪಟ್ಟಿದ್ದರು. ಇವರು ರಜ್ಜುಕಾಸ್ (ಕಮಿಶನರ್) ಮತ್ತು ಪ್ರಾದೇಶಿಕ (ಜಿಲ್ಲಾಧಿಕಾರಿ)ರನ್ನು ಸಹಾಯಕ್ಕಾಗಿ ನೇಮಿಸಿಕೊಳ್ಳುವ ಕ್ರಮವಿತ್ತು. ಕಂದಾಯವೆತ್ತುವುದು — ಶಾಂತಿಯನ್ನು ರಕ್ಷಿಸುವುದು—ರಾಜನ ಅಪ್ಪಣೆಗಳನ್ನು ಪಾಲಿಸುವುದು ಪ್ರಾಂತಾಧಿಕಾರಿಗಳ ಕೆಲಸ.

ಅಂತರ್ದೇಶೀಯ ಆಡಳಿತೆಗೆ ಹಲವು ಇಲಾಖೆಗಳಿದ್ದುವು. ನೀರಾವರಿ ಇಲಾಖೆಯು ಕೆರೆ, ಕಾಲುವೆ, ಅಣೆಕಟ್ಟುಗಳನ್ನು ನಿರ್ಮಿಸಿ, ಕೃಷಿಗೆ ನೀರಿನ ಪೂರೈಕೆಯನ್ನು ಮಾಡುತ್ತಿತ್ತು. ಮಾರ್ಗಗಳನ್ನು ಕಡಿಸುವುದು, ಬದಿಗಳಲ್ಲಿ ಸಾಲು ಮರಗಳನ್ನು ನೆಡುವುದು, ಬಾವಿಗಳನ್ನು ತೋಡಿಸುವುದು ಸಾರ್ವಜನಿಕ ಕಾಮಗಾರಿ ಇಲಾಖೆಯ ಕೆಲಸ ಆರ್ಥಿಕ ಇಲಾಖೆಯು ಕಂದಾಯವನ್ನೆತ್ತುವುದು. ಸೈನ್ಯದ ಆಡಳಿತೆಗೆ ಪ್ರತ್ಯೇಕ ಸಮಿತಿಯಿತ್ತು.

ಈಗಿನ ನಗರಗಳ ಮುನಿಸಿಪಾಲಿಟಿಗಳಂತೆ ನಗರಗಳ ಆಡಳಿತೆಗೆ ಮೂವತ್ತು ಜನರ ಒಂದು ಕೂಟವಿತ್ತು. ಈ ಸದಸ್ಯರನ್ನು ಸಮವಾಗಿ ಆರು ಸಮಿತಿಗಳಿಗೆ ವಿಭಾಗಿಸಲಾಗಿತ್ತು. ಬೇರೆ ಬೇರೆ ಸಮಿತಿಗಳು ಕೈಗಾರಿಕೆಯ ಕುರಿತು—ವಿದೇಶೀಯರ ಸತ್ಕಾರದ ಕುರಿತು—ಜನನ ಮರಣಗಳ ಅಂಕೆ ಸಂಖ್ಯೆಗಳ ಕುರಿತು—ವ್ಯಾಪಾರಿಗಳ ತೂಕ ಅಳತೆಗಳ ಕುರಿತು—ಸಿದ್ಧ ವಸ್ತುಗಳ ಮಾರಾಟದ ಕುರಿತು-ನೋಡಿಕೊಳ್ಳುತ್ತಿದ್ದುವು. ಆರನೇ ಸಮಿತಿಯು ತೆರಿಗೆ ವಸೂಲಿ ಮಾಡುತ್ತಿತ್ತು. ರಾಜನಿಂದ ನೇಮಿಸಲ್ಪಟ್ಟ ನಗರಕನೆಂಬ ಅಧಿಕಾರಿಯು ಶಾಂತಿ ರಕ್ಷಣೆಯ ಮೇಲ್ವಿಚಾರಣೆ ಮಾಡುತ್ತಿದ್ದನು.

ಗ್ರಾಮಗಳಲ್ಲಿ ಪ್ರಜಾಪ್ರಭುತ್ವದ ಆಚರಣೆಯಿತ್ತು. ಗ್ರಾಮವು ಸ್ವತಂತ್ರವಾಗಿದ್ದು "ಗ್ರಾಮನಿ" ಎಂಬ ಮುಖ್ಯಸ್ಥನಿಂದ ವಿಚಾರಿಸಲ್ಪಡುತ್ತಿತ್ತು. ಕೆಲವು ಗ್ರಾಮಗಳು "ಗೋಪಾ" ಎಂಬ ಅಧಿಕಾರಿಯ ಆಳ್ವಿಕೆಗೊಳಪಟ್ಟಿದ್ದುವು! ಈ ಅಧಿಕಾರಿಯು ಭೂಕಂದಾಯ ವಸೂಲಿ ಮಾಡಿ ಸಂಬಂಧಿಸಿದ ಲೆಕ್ಕಪತ್ರ ಬರೆಯುತ್ತಿದನು. ರಾಜನಿಗೆ ಸಲಹೆ ಕೊಡಲು "ಮಹಾಮಂತ್ರಿ"ರು ಎಂಬ ಮಂತ್ರಿ ಮಂಡಳಿಯಿತ್ತು. ಧರ್ಮಾರ್ಥ ಆಸ್ಪತ್ರೆಗಳು ನಡೆಸಲ್ಪಡುತ್ತಿದ್ದುವು. ಭೂಕಂದಾಯ, ಸುಂಕ ತೆರಿಗೆ, ನಾಣ್ಯ ಲಾಭ, ಲೈಸೆನ್ಸ್ ಫೀಸ್, ಜುಲ್ಮಾನೆಗಳಿಂದ ಖಜಾನೆಗೆ ಹಣ ಬರುತ್ತಿತ್ತು.

ಚೋಳರ ಆದರ್ಶ ರಾಜ್ಯಭಾರ

ಮಂತ್ರಿಮಂಡಲವಿಲ್ಲದ ಚೋಳ ಅರಸರು ನಿರಂಕುಶರಾಗಿದ್ದರು. ಸುಶಿಕ್ಷಿತ ಮತ್ತು ಯೋಗ್ಯ ಅಧಿಕಾರಿ ವರ್ಗಗಳಿಂದ ಉತ್ತಮ ಆಡಳಿತೆಯು ನಡೆಸಲ್ಪಡುತ್ತಿತ್ತು. ರಾಜನು ಆಗಾಗ ರಾಜ್ಯದ ಬೇರೆ ಬೇರೆ ಪ್ರಾಂತ್ಯಗಳನ್ನು ಸಂದರ್ಶಿಸಿ ಆಡಳಿತೆಯು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದನು. ಉತ್ಪತ್ತಿಯ ಮೂರನೆ ಒಂದಂಶವನ್ನು ತೆರಿಗೆಯ ರೂಪದಲ್ಲಿ ಎತ್ತಲಾಗುತ್ತಿತ್ತು. ಕಂದಾಯವು ಭೂಮಿಯನ್ನು ಪರಿಶೀಲನೆಮಾಡಿ ನಿಶ್ಚೈಸಲ್ಪಡುತ್ತಿತ್ತು. ಅಲ್ಲದೆ ಆಗಾಗ ಭೂಪರಿಶೀಲನೆ ಮಾಡುತ್ತಿದ್ದರು. ಗ್ರಾಮ ಸಮಿತಿಗಳಿಗೆ ತೆರಿಗೆಯನ್ನು ವಸೂಲು ಮಾಡುವ ಅಧಿಕಾರವಿತ್ತು. ಈ ಸಮಿತಿಯು ತೆರಿಗೆಯನ್ನು ಧಾನ್ಯ ಯಾ ಹಣದ ರೂಪದಲ್ಲಿ ವಸೂಲುಮಾಡಿ ಸರಕಾರಕ್ಕೆ ಒಪ್ಪಿಸುತ್ತಿತ್ತು. ಕ್ಷಾಮಬಂದ ಕಾಲಗಳಲ್ಲಿ ತೆರಿಗೆಯನ್ನು ಕಡಿಮೆಮಾಡಲಾಗುತ್ತಿತ್ತು. ತೆರಿಗೆಯು ಇತರ ವೃತ್ತಿಗಳ ಮೇಲೂ ಹೇರಲಾಗುತ್ತಿತ್ತು. ಈ ರೀತಿಯಾಗಿ ಬಂದ ತೆರಿಗೆಯನ್ನು ಅರಮನೆ, ಅಧಿಕಾರಿ ವರ್ಗ, ಸೈನ್ಯ ಮೊದಲಾದುವುಗಳಿಗೆ, ಕಾಲುವೆ, ಮಾರ್ಗ, ಕೊಳಗಳನ್ನು ನಿರ್ಮಿಸಲು ಉಪಯೋಗಿಸುತ್ತಿದ್ದರು.

ಚೋಳ ಸಾಮ್ರಾಜ್ಯವು ಎಂಟು ಮಂಡಲ (ಪ್ರಾಂತ) ಗಳಾಗಿಯೂ, ಮಂಡಲಗಳು ನಾಡು ಮತ್ತು ವಳನಾಡುಗಳಾಗಿಯೂ, ನಾಡುಗಳು "ಕುರ್ರಂ" ಅಥವಾ "ಕೊಟ್ಟಂ"ಗಳಾಗಿಯೂ ಆಡಳಿತೆಯ ಸೌಕರ್ಯಕ್ಕಾಗಿ ವಿಭಾಗಿಸಲ್ಪಟ್ಟಿತ್ತು. ಕುರ್ರಂ ಅಥವಾ ಕೊಟ್ಟಂ ಗಳೆಂದು ಕರೆಯಲ್ಪಡುತ್ತಿದ್ದ ಗ್ರಾಮಗಳಿಗೆ ಆಡಳಿತೆಯ ಸ್ವಾತಂತ್ರ್ಯವನ್ನು ಕೊಡಲಾಗಿತ್ತು. ಗ್ರಾಮಾಡಳಿತೆಯು ಚೋಳ ರಾಜ್ಯಾಡಳಿತೆಯ ವೈಶಿಷ್ಟ್ಯವಾಗಿರುತ್ತದೆ. ಮಂಡಲಗಳು ರಾಜವಂಶಕ್ಕೆ ಸೇರಿದವರಿಂದ ಆಳಲ್ಪಡುತ್ತಿದ್ದುವು. ಗ್ರಾಮಗಳ ಆಡಳಿತೆಗೆ "ಸಭಾ" ಎಂದು ಕರೆಯಲ್ಪಡುತ್ತಿದ್ದ ಸಮಿತಿಯಿತ್ತು. (ಪ್ರತಿ ಗ್ರಾಮಗಳಿಗೂ ಬೇರೆ ಬೇರೆ "ಸಭೆ"ಗಳು.) ಈ ಸಮಿತಿಯ ಕಾರ್ಯಕಲಾಪಗಳು, ಅದರ ಸದಸ್ಯರಿಗಿರಬೇಕಾದ ಯೋಗ್ಯತೆಗಳು, "ಪರಾಂತಕ"ನಿಂದ ನಿಶ್ಚಯಿಸಲ್ಪಟ್ಟು ಉತ್ತರ ಮೇರೂರ್ ಶಾಸನದಲ್ಲಿ ಕೆತ್ತಲ್ಪಟ್ಟಿವೆ.

"ಸಭೆ"ಯ ಸದಸ್ಯರಿಗಿರಬೇಕಾದ ಯೋಗ್ಯತೆ: ಸದಸ್ಯರು ಮೂವತ್ತೈದು ವರ್ಷ ದಾಟಿದವರಾಗಿರಬೇಕು. ಸದಸ್ಯನಿಗೆ ಒಂದೂವರೆ ಎಕ್ರೆಯಷ್ಟಾದರೂ ಸ್ವಂತ ಭೂಮಿಯಿದ್ದು ಅದರಲ್ಲಿ ವಾಸಿಸುತ್ತಿರಬೇಕು. ಇಷ್ಟು ಮಾತ್ರವಲ್ಲದೆ ವೇದ, ಬ್ರಾಹ್ಮಣ್ಯಗಳ ಸರಿಯಾದ ಪರಿಜ್ಞಾನವಿರಬೇಕು. ಈ ಎಲ್ಲ ಯೋಗ್ಯತೆಗಳಿದ್ದರೂ ವೇಶ್ಯಾ ಸಹವಾಸ ಮಾಡಿದವನು—ಕಳವು ಮಾಡಿದವನು—ಜಾತಿ ಧರ್ಮಗಳನ್ನು ಮೀರಿದವನು—ಮೂರು ವರ್ಷಗಳ ವರೆಗೆ ಹಿಂದೆ ಸದಸ್ಯನಾಗಿದ್ದವನು ಮತ್ತು ಸದಸ್ಯನಾಗಿದ್ದು ಲೆಕ್ಕ ಪತ್ರಗಳನ್ನೊಪ್ಪಿಸದಿದ್ದವನು ಸದಸ್ಯತನಕ್ಕೆ ಅನರ್ಹನಾಗಿರುತ್ತಾನೆ.

ಸಭೆಯು ಈ ಯೋಗ್ಯತೆಗಳನ್ನೊಳಗೊಂಡ—ಗ್ರಾಮಗಳ ಭಾಗಗಳಿಂದ ಆರಿಸಿ ಕಳುಹಿಸಲ್ಪಟ್ಟ ಮೂವತ್ತು ಜನರಿಂದ ಒಳಗೊಂಡಿದೆ. ಸೋತತಿ ಚೀಟುಗಳ ಮೂಲಕ ಈ ಜನರನ್ನು ೫ ಸಮಿತಿಗಳಿಗೆ ಸರಿಯಾಗಿ ವಿಭಾಗಿಸಲಾಗುವುದು. ಈ ೫ ಸಮಿತಿಗಳು ಗ್ರಾಮಾಡಳಿತೆಯ ಬೇರೆ ಬೇರೆ ಕಾರ್ಯಗಳನ್ನು ತಮ್ಮೊಳಗೆ ಹಂಚಿಕೊಳ್ಳುತ್ತವೆ. ಸಭೆಯ ಸದಸ್ಯತನವು ನಿಸ್ವಾರ್ಥ ಸೇವೆಯಾಗಿದ್ದು ಗೌರವದ ಸ್ಥಾನವಾಗಿದೆ.

ಗ್ರಾಮ ಸಮಿತಿಗಳಿಗೆ ಹೆಚ್ಚಿನ ಸ್ವಾತಂತ್ರ್ಯವಿತ್ತು. ಶತ್ರುಗಳಿಂದ ದೇಶರಕ್ಷಣೆ-ರಾಜ್ಯದಲ್ಲಿ ಶಾಂತಿಯನ್ನುಳಿಸುವುದು—ಸಾರ್ವಜನಿಕ ಹಿತಕಾರ್ಯಗಳು ಮತ್ತು ಧಾರ್ಮಿಕ ಅಭಿವೃದ್ಧಿ ಕಾರ್ಯಗಳು ಕೇಂದ್ರಸರಕಾರದ ಅಧೀನವಿದ್ದುವು. ಉಳಿದೆಲ್ಲ ಅಧಿಕಾರಗಳ "ಮಹಾ ಸಭೆ"(ಗ್ರಾಮ ಸಭೆ) ಗಿತ್ತು. ಸಾರ್ವಜನಿಕ ಆಸ್ತಿಯ ರಕ್ಷಣೆ—ಸಾರಿಗೆ ಸೌಕರ್ಯಗಳನ್ನೊದಗಿಸುವುದು—ಕಾಡು ಪ್ರದೇಶಗಳನ್ನು ಮತ್ತು ಬಂಜರು ಭೂಮಿಗಳನ್ನು ಕೃಷಿಯೋಗ್ಯವನ್ನಾಗಿ ಮಾಡುವುದು—ಭೂಕಂದಾಯ ನಿರ್ಣಯ ಮತ್ತು ವಸೂಲಿ ಇವು ಮಹಾಸಭೆಯ ಮುಖ್ಯ ಕಾರ್ಯಕಲಾಪಗಳು. ಮಾರ್ಗಗಳ ನಿರ್ಮಾಣ—ದುರಸ್ತಿ—ನೀರಾವರಿ ಕೆಲಸಗಳು—ಧಾರ್ಮಿಕ ಸಂಸ್ಥೆ—ಆಸ್ಪತ್ರೆ—ವಿದ್ಯಾಲಯಗಳ ಮೇಲ್ವಿಚಾರಣೆ ಕೂಡಾ ಮಹಾಸಭೆಯ ಕಾರ್ಯಕಲಾಪಗಳಾಗಿದ್ದುವು. ಇಂತಹ ವ್ಯವಸ್ಥೆಯಿಂದ ಕೃಷಿ ಕೈಗಾರಿಕೆಗಳು ಹೆಚ್ಚಿ ದೇಶದಲ್ಲಿ ಸುಭಿಕ್ಷೆಯಿತ್ತು.

ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಗ್ರಾಮಾಧಿಕಾರಿಗಳು ಕಳ್ಳರನ್ನು ಹಾಗೂ ಸಮಾಜದ್ರೋಹಿಗಳನ್ನು ಪತ್ತೆಹಚ್ಚಿ ಸರಕಾರದಿಂದ ನಿಯಮಿಸಲ್ಪಟ್ಟ ನ್ಯಾಯಾಧೀಶರ ಮುಂದೆ ಹಾಜರುಪಡಿಸುತ್ತಿದ್ದರು ತಪ್ಪಿಸ್ಥರನ್ನು ವಿಚಾರಣೆಗೊಳಪಡಿಸಿ ಶಿಕ್ಷೆಸಲಾಗುತ್ತಿತ್ತು. ಶಿಕ್ಷೆಯು ಬಹಳ ಸೌಮ್ಯಕರದ್ದಾಗಿದ್ದಿತು. ಕಠಿಣ ಶಿಕ್ಷೆಗಳನ್ನು ವಿಧಿಸಿದ ಉಲ್ಲೇಖಗಳು ಕಂಡುಬರುವುದಿಲ್ಲ. ಜುಲ್ಮಾನೆ, ಕತ್ತೆಯ ಮೇಲೆ ಸವಾರಿ, ಕೊಲೆಗಡುಕರು ದೇವಾಲಯಗಳಲ್ಲಿ ನಂದಾದೀಪವನ್ನುರಿಸುವುದು ಮೊದಲಾದ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಚೋಳ ಅರಸರು ವಿದ್ಯೆಗೆ ಪ್ರೋತ್ಸಾಹ ಕೊಟ್ಟಿದ್ದರು.

ಗುಪ್ತರ ರಾಜ್ಯಭರಣ

ವಿಶಾಲ ಸಾಮ್ರಾಜ್ಯವನ್ನು "ಭುಕ್ತಿ"ಯನ್ನು "ದೇಶ"ಗಳನ್ನಾಗಿ ವಿಂಗಡಿಸಿದ್ದರು. ಈ ವಿಭಾಗಗಳು "ವಿಷಯ" ಮತ್ತು "ಗೋಪ್ತಿ" ಎಂಬ ಅಧಿಕಾರಿಗಳಿಂದ ಆಳಲ್ಪಡುತ್ತಿದ್ದುವು. ಜಿಲ್ಲೆಗಳನ್ನು "ವಿಷಯ" ಮತ್ತು "ಪ್ರದೇಶ"ಗಳೆಂದು ಕರೆಯುತ್ತಿದ್ದರು. "ವಿಷಯಪತಿ"ಗಳು ಅತ್ರಿಗಳ ಅಧಿಕಾರಿಗಳಾಗಿದ್ದರು. ಜಿಲ್ಲೆಗಳನ್ನು ಗ್ರಾಮಗಳನ್ನಾಗಿ ವಿಭಾಗಿಸಿದ್ದರು. ಅವುಗಳು ಗ್ರಾಮಮುಖಂಡನಿಂದ ಆಳಲ್ಪಡುತ್ತಿದ್ದುವು. ರಾಜನು ಆಡಳಿತೆಯಲ್ಲಿ ಮಂತ್ರಿಮಂಡಲದ ಸಲಹೆಯನ್ನು ಸಡೆಯುತ್ತಿದ್ದನು.

ವ್ಯಾಪಾರದಿಂದಾಗಿ ದೇಶವು ಸಂಪತ್ಸಮೃದ್ಧವಾಗಿತ್ತು. ಬಡವರಿಗಾಗಿ ಧರ್ಮಾರ್ಥ ಆಸ್ಪತ್ರೆಗಳು ನಡೆಸಲ್ಪಡುತ್ತಿದ್ದುವು. ಭೂತರಿಂದ ಕಡಿಮೆ ಭೂಕಂದಾಯವೆತ್ತಲ್ಪಡುತ್ತಿತ್ತು. ಎಲ್ಲ ಅಧಿಕಾರಿಗಳಿಗೂ ನಿಶ್ಚಿತ ಸಂಬಳವು ನಿಶ್ಚಿತ ಸಮಯದಲ್ಲಿ ಕೊಡಲಾಗುತ್ತಿತ್ತು. ರಾಜನು ದೈಹಿಕ ಶಿಕ್ಷೆಯನ್ನು ವಿಧಿಸುತ್ತಿರಲಿಲ್ಲ. ಕೊಲೆಗಡುಕರಿಂದ ಜುಲ್ಮಾನೆಯನ್ನು ವಸೂಲು ಮಾಡುತ್ತಿದ್ದನು. ಆದರೂ ದೇಶದಲ್ಲಿ ಕಳ್ಳತನ ಕಡಿಗಲಿಲ್ಲ.

(ಇನ್ನೂ ಮುಂದಿನ)

ಉಳಿತಾಯಗಳೇ ಜನತೆಯ ಜೀವಾಳ
ಜನತೆಯೇ ಬೇಂಕುಗಳ ಜೀವಾಳ
ಬೇಂಕುಗಳೇ ರಾಷ್ಟ್ರದ ಜೀವಾಳ
ಅಂದ ಮೇಲೆ
ಉಳಿತಾಯಗಳಿದ್ದರೇನೇ ನಮ್ಮೆಲ್ಲರ ಉಳಿವು
ಅವುಗಳಿಲ್ಲದಿದ್ದಲ್ಲಿ ನಮ್ಮೆಲ್ಲರ ಅಳಿವು
ಆದುದರಿಂದ
ಹಣವನ್ನು ಉಳಿಸಿರಿ; ಬೇಂಕುಗಳಲ್ಲಿ ಠೇವಿಸಿರಿ!
ನೆನಪಿರಲಿ,
ಉಳಿತಾಯಗಳು ಊರ್ಜಿತಗೊಳ್ಳಲು ಉತ್ತಮ
ಬೇಂಕು
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಮಲೇರಿಯಾ ನಿರೋಧ ಕಾರ್ಯಕ್ರಮ—

ಭಾರತದಲ್ಲಿ ಯಶಸ್ಸೇ ಮುನ್ನಡೆ

ಇಂದು ಮಾರ್ಗನಿರ್ಮಾಣ, ಆಯುರ್ವೇದ ರೋಗ ಚಿಕಿತ್ಸೆ, ಅಣುವಿಜ್ಞಾನ, ಮಲೇರಿಯಾ ನಿರ್ಮೂಲನೆ— ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಸಂಶೋಧನೆಯು ಅಗ್ರಗಣ್ಯ ಸ್ಥಾನವನ್ನು ಗಳಿಸಿದೆ ಎಂದರೆ ಅಲ್ಲಗಳೆಯಬರುವುದಿಲ್ಲ. ಮಲೇರಿಯಾ ರೋಗಕ್ಕೆ ಕಾರಣವೇನು, ಅದು ಯಾವ ರೀತಿಯಲ್ಲಿ ಹರಡುತ್ತಿದೆ ಎಂಬುದನ್ನು ಅರಿಯುವ ಮೊದಲು ಈ ರೋಗವನ್ನು ತಡೆಹಿಡಿಯಬೇಕೆಂಬ ಕಲ್ಪನೆಯು ಕೇವಲ ಭ್ರಾಮಕವಾಗಿತ್ತು.

ಸುಮಾರು ಎಂಬತ್ತು ವರ್ಷಗಳಿಗೆ ಮೊದಲು ಮಲೇರಿಯಾ ರೋಗಕ್ಕೆ ಕಾರಣೀಭೂತವಾದ ಪರತಂತ್ರ ಜೀವಿಯನ್ನು ಸಂಶೋಧಿಸಲಾಯಿತು. ಅಲ್ಲಿಂದ ಮುಂದೆ, ಆ ವಿಷಯದಲ್ಲಿ ಅಗಾಧವಾದ ಸಂಶೋಧನೆ ನಡೆಯುತ್ತಿದೆ. ಭೂಲೋಕದ ಮುಖ್ಯ ರೋಗಗಳಲ್ಲಿ ಮಲೇರಿಯಾವು ಒಂದಾಗಿರುವುದರಿಂದ, ಕಾಲವನ್ನು ದುರ್ವಿನಿಯೋಗ ಮಾಡಲಾಗಲಿಲ್ಲ.

ಭಾರತವು ಈ ರೋಗದ ರಹಸ್ಯವನ್ನು ಭೇದಿಸುವ ಕೆಲಸದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಶ್ರೀ ರೋನಾಲ್ಡ್ ರಾಸ್‌ರವರು ಈ ಸಮಸ್ಯೆಯನ್ನು ಪರಿಶೀಲಿಸಲಾರಂಭಿಸಿದರು. ಅವರ ಸಂಶೋಧನೆಯು ಅದ್ಭುತ ಫಲಿತಾಂಶವನ್ನು ನೀಡಿತು. ಶ್ರೀ ರಾಸ್‌ರವರು ಮಲೇರಿಯಾ ರೋಗಾಣು ಅನಾಫಲೀಸ್ ಸೊಳ್ಳೆಗಳ ಮೂಲಕವಾಗಿ ಜನರಿಗೆ ಹರಡುತ್ತದೆಯೆಂದು ತಿಳಿದುಕೊಂಡರು. ಶ್ರೀ ರಾಸ್‌ರವರ ಈ ಸಿದ್ಧಾಂತಗಳು ಇತರ ಮಲೇರಿಯಾ ತಜ್ಞರು ಈ ವಿಷಯದಲ್ಲಿ ವಿಶೇಷ ಸಂಶೋಧನೆ ನಡೆಸುವಂತೆ ಪ್ರೇರಣೆಯಿತ್ತುವು"

ಶ್ರೀ ಕ್ರಿಸ್ಟೋಫರ್ ಎಂಬವರು ಜನಸಂಖ್ಯೆಯ ಮೇಲೆ ಮಲೇರಿಯಾದ ಉಗ್ರ ಪ್ರಭಾವವೇನೆಂಬುದನ್ನು ಮೊದಲು ಕಂಡುಹಿಡಿದು ತೋರಿಸಿಕೊಟ್ಟರು. ಆರಂಭದಲ್ಲಿ ಮಲೇರಿಯಾ ನಿರೋಧಕ್ಕಾಗಿ ಸೊಳ್ಳೆಗಳ ಮೊಟ್ಟೆಗಳನ್ನು ನಾಶಮಾಡುವ ಕಾರ್ಯವನ್ನು ಮಾತ್ರ ಕೈಗೊಳ್ಳಲಾಗಿತ್ತು. ೧೯೨೦ರಲ್ಲಿ ಶ್ರೀ ಜೇಮ್ಸ್ ಬ್ರೂಕರವರು ಸೊಳ್ಳೆಯ ಮೊಟ್ಟೆಗಳಿಗಿಂತ ಸೊಳ್ಳೆಗಳನ್ನೇ ನಾಶಮಾಡುವುದು ಲಾಭಕರವೆಂದು ತೋರಿಸಿಕೊಟ್ಟರು. ಶ್ರೀ ಐಯಂಗಾರ ಮತ್ತು ಶ್ರೀ ಪುರಿಯವರು ಬೇರೆಯವರೊಂದಿಗೆ ಅನೇಕ ವರ್ಷ ಮಲೇರಿಯಾ ಸೊಳ್ಳೆಗಳ ಕುರಿತು ಸಂಶೋಧನೆ ನಡೆಸಿದರು. ಅವರ ಪರಿಶ್ರಮ ಪ್ರತೀಕವಾಗಿ ಸೊಳ್ಳೆಗಳನ್ನು ನಿರ್ಮೂಲನಗೊಳಿಸುವ ಅಮೂಲ್ಯ ವಿಧಾನಗಳು ಗೊತ್ತಾದುವು.

ಶ್ರೀಗಳಾದ ಯಶವಂತ ಸಿಂಹ ಮತ್ತು ಮುಲಿಗನ್ ಮೊದಲಾದವರ ಪ್ರಯತ್ನದಿಂದ ಸೊಳ್ಳೆಗಳನ್ನು ನಾಶಗೈಯುವ ಔಷಧಿಗಳನ್ನು ಕಂಡುಹಿಡಿಯಲಾಯಿತು. ಶರೀರದೊಳಗಡೆ ರೋಗಾಣುಗಳೇನು ಮಾಡುವುವೆಂದು ಅವರು ತಿಳಿದುಕೊಂಡರು. ಮಲೇರಿಯಾ ರೋಗಾಣುವು ಮೊದಲು ರಕ್ತಕ್ಕಲ್ಲದೆ ಗುಲ್ಮಕ್ಕೆ ಪ್ರವೇಶಿಸುವುದೆಂದವರು ಸಿದ್ಧಪಡಿಸಿದರು. ಅದಕ್ಕಾಗಿ ಮಲೇರಿಯಾ ರೋಗಗ್ರಸ್ತ ವ್ಯಕ್ತಿಯ ಚಿಕಿತ್ಸೆಗಾಗಿ ಆ ರೋಗಿಯ ಗುಲ್ಮದಲ್ಲಿರುವ ರೋಗಾಣುಗಳನ್ನು ನಾಶಪಡಿಸಬೇಕೆಂದು ನಿರ್ಣಯಿಸಲಾಯಿತು.

ಮುಂದಕ್ಕೆ, ಭಾರತದ ವಿವಿಧೆಡೆಗಳಲ್ಲಿ ಮಲೇರಿಯಾ ನಿವಾರಣೆಯ ಉಪಾಯಗಳು ಕೈಗೆಳ್ಳಲ್ಪಟ್ಟುವು. ಕೋವೆಲ್, ವಿಶ್ವನಾಥ್, ರೇಡೊ ಬೈಲಿ, ಸೆನ್ ಮೊದಲಾದವರು ತಮ್ಮ ಶಕ್ತಿ ಮೀರಿ ದುಡಿದು ಮಾಡಿದ ಸಂಶೋಧನೆಗಳಿಂದ ಅನೇಕ ಉಪಯುಕ್ತ ವಿಷಯಗಳು ದೊರೆತಿವೆ. ಆದರೆ, ಭಾರತದಲ್ಲಿ ಮಲೇರಿಯಾ ಸಂಸ್ಥೆಯ ಸ್ಥಾಪನೆಯೊಂದಿಗೆ ಈ ಕಾರ್ಯವು ಪ್ರಾಮುಖ್ಯ ಗಳಿಸಿತು.

ಮಲೇರಿಯಾ ರೋಗಾಣುಗಳು ಶರೀರದಲ್ಲಿ ಹೇಗೆ ಪ್ರವೇಶ ಪಡೆಯುತ್ತವೆ, ರೋಗಿಯ ಶರೀರದ ಮೇಲೆ ಯಾವ ಪ್ರಭಾವವನ್ನು ಬೀರುತ್ತವೆ, ಯಾವ ಔಷಧಿಯು ಎಷ್ಟರಮಟ್ಟಿಗೆಗುಣತರುವುದು ಮೊದಲಾದ ವಿಷಯಗಳ ಪ್ರಯೋಗಗಳನ್ನು ರ್ಯಾಸಸ್ ಜಾತಿಯ ಕೋತಿಗಳ ಮೇಲೆ ಪ್ರಯೋಗಿಸಲಾಯಿತು. ಇದರಿಂದಾಗಿ ರೋಗದ ಹೆಸರಿನೊಂದಿಗೆ ಈ ಕೋತಿಗಳ ಹೆಸರೂ ಚಿರಸ್ಮರಣೀಯವಾಯಿತು.

ದ್ವಿತೀಯ ಮಹಾಯುದ್ಧದವರೆಗೆ ಮಲೇರಿಯಾ ನಿವಾರಣೆಯ ಕೆಲಸ ಪ್ರಾಚೀನ ಪದ್ಧತಿಯಂತೆ ನಡೆಯುತ್ತಿತ್ತು. ಅದರಲ್ಲಿ ಗಮನಾರ್ಹವಾದ ಪ್ರಗತಿಯಾಗಿರಲಿಲ್ಲ. ಅಲ್ಲದೇ ಇದಕ್ಕೆ ನೂತನ ವಿಧಾನಗಳ ಆವಶ್ಯಕತೆಯೂ ಇತ್ತು. ಹೊಸ ರೋಗಾಣುನಾಶಕ ಔಷಧಿಗಳ ಸಹಾಯದಿಂದ ಮಲೇರಿಯಾ ರೋಗದ ನಿರ್ಮೂಲನಕ್ಕೆ ಅನುಕೂಲವೊದಗಿತು. ಕಳೆದ ಹತ್ತು ವರ್ಷಗಳಲ್ಲಿ ಈ ಔಷಧಿಗಳು ನಡೆಸಿದ ಕೆಲಸದಿಂದಾಗಿ ಈಗ ದೇಶಾದ್ಯಂತ ಮಲೇರಿಯಾದ ಭಯಾನಕ ರೋಗವನ್ನು ದೂರೀಕರಿಸುವ ಕಾರ್ಯವು ಸಂಭವನೀಯವೆನಿಸಿತು.

ಆದರೆ, ಈ ಕೆಲಸವು ಸುಲಭಸಾಧ್ಯವಲ್ಲ. ಅದಕ್ಕಾಗಿ, ಆತ್ಮುತ್ಸಾಹ ಹಾಗೂ ಅತಿಜಾಗ್ರತೆಯಿಂದ ಕೆಲಸಮಾಡುವ ಆವಶ್ಯಕತೆಯಿರುವುದು. ವೈಜ್ಞಾನಿಕ ಸಂ

ಪೈರು ನುಂಗುವ ಮಹಾಮಾರಿ—

ಮಿಡಿತೆಗಳ ಹಾವಳಿ

ಸಮೀಪ ಪ್ರಾಚ್ಯ ಮತ್ತು ಆಫ್ರಿಕಾ ಭೂಕಂಪದಲ್ಲಿ ಮರುಭೂಮಿಯ ಮಿಡಿತೆಗಳ ಪೀಡೆಯು ಸರ್ವಸಾಮಾನ್ಯವಾಗಿದೆ. ಈಗ, ಈ ಲಾಂಪಟಳವು ಕಳೆದ ವರ್ಷ ಇದ್ದುದಕ್ಕಿಂತಲೂ ಹೆಚ್ಚು ಉಗ್ರವಾಗಿದೆ. ಅಲ್ಲದೆ ಮಿಡಿತೆಗಳ ಹಾವಳಿಯು ಬೇಗನೆ ಕೊನೆಗೊಳ್ಳಬಹುದೆಂದು ನಿರೀಕ್ಷಿಸುವುದಕ್ಕೂ ಅವಕಾಶವಿಲ್ಲದೆ ಹೋಗಿದೆ—ಇದು ಮರುಭೂಮಿಯ ಮಿಡಿತೆ ನಿಯಂತ್ರಣದ ತಾಂತ್ರಿಕ ಸಲಹೆಗಾರ ಸಮಿತಿಯು ನಾಲ್ಕು ದಿನಗಳಷ್ಟು ಕಾಲ ಸಭೆಸೇರಿ ಚರ್ಚಿಸಿ ಕೊಟ್ಟ ಎಚ್ಚರಿಕೆ.

ಯುಕ್ತ ರಾಷ್ಟ್ರಸಂಘದ ಆಹಾರ ಮತ್ತು ವ್ಯವಸಾಯಸಂಘವು ಘಟಿಸಿದ ಈ ಸಮಿತಿಯಲ್ಲಿ ಫ್ರಾನ್ಸ್, ಭಾರತ, ಇರಾನ್, ಪಾಕಿಸ್ತಾನ, ಸಂಯುಕ್ತ ಅರಬ್ ಗಣರಾಜ್ಯ, ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳಿವೆ. ಸೌದಿ ಅರೇಬಿಯಾ ಮತ್ತು ಯುಕ್ತ ರಾಷ್ಟ್ರಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘವು ವೀಕ್ಷಕರನ್ನು ಕಳುಹಿಸಿದ್ದುವು.

ಈ ಸಮಿತಿಯು ಒಂದು ವರ್ಷದ ಹಿಂದೆ ಸಭೆ ಸೇರಿದ್ದಾಗ ಮಿಡಿತೆಗಳ ಹಾವಳಿಯು ವಿಕೋಪಕ್ಕೆ ಹೋಗುವ ನಿರೀಕ್ಷೆಯಿತ್ತೆಂದು ಕಂಡುಕೊಂಡಿದ್ದು ಅದೀಗ ನೂರಕ್ಕೆ ನೂರರಷ್ಟು ಸರಿಯಾಗಿ ಪರಿಣಮಿಸಿದೆ. ಆ ಸಮಯದಲ್ಲಿ ಈ ಸಮಿತಿಯು ಬಾದೆಗೊಳಗಾಗುವ ಸಂಭವವಿದ್ದ ಎಲ್ಲ ದೇಶಗಳ ಸರಕಾರಗಳಿಗೆ ಈ ಪೀಡೆಯ ಹೆಚ್ಚಳವನ್ನು ನಿರೀಕ್ಷಿಸಬೇಕೆಂದು ಕೇಬಲ್ ಮೂಲಕ ಎಚ್ಚರಿಕೆಗಳನ್ನು ಕಳುಹಿಸಿತ್ತು.

ಅರೇಬಿಯಾ ಪರ್ಯಾಯ ದ್ವೀಪದ ವಸಂತಕಾಲದ ಸಂತಾನಾಭಿವೃದ್ಧಿ ಪ್ರದೇಶಗಳಿಂದ ಮಿಡಿತೆಗಳ ಹಿಂಡುಗಳು ಈಗಾಗಲೇ ಗಣನೀಯ ಪ್ರಮಾಣದಲ್ಲಿ ಹೊರಟಿವೆ ಮತ್ತು ಜೂನ್ ಹಾಗೂ ಜೂಲೈ ತಿಂಗಳುಗಳಲ್ಲಿ ಅರೇಬಿಯಾದ ಉತ್ತರಕ್ಕಿರುವ ಪ್ರದೇಶಗಳಲ್ಲಿ ಮತ್ತು ಇರಾನಿನಲ್ಲಿ ಮಿಡಿತೆ ಮರಿಗಳ ಗುಂಪು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುವ ಸಂಭವವಿದೆಯೆಂದು ಸಮಿತಿಯು ತನ್ನ ಪ್ರಕಟದ ಮುನ್ನೋಟದಲ್ಲಿ ಎಚ್ಚರಿಕೆ ನೀಡಿತು. ಪಾಕಿಸ್ತಾನದಲ್ಲಿಯೂ ಇಂತಹುದೇ ಪರಿಸ್ಥಿತಿಯಿದ್ದು, ಜುಲೈ ಮಾಸದ ವರೆಗೆ ಮಿಡಿತೆಮರಿಗಳ ನಿರ್ಮಾಣವು ಮುಂದುವರಿಯುತ್ತಿರುವುದು ಸಂಭವವಿದೆ. ಅಷ್ಟೇ ಅಲ್ಲದೇ ಸಹರಾ ಮರುಭೂಮಿಯ ದಕ್ಷಿಣಕ್ಕಿರುವ ಮತ್ತು ಸೂಡಾನ್ ಹಾಗೂ ಇಥಿಯೋಪಿಯಾಗಳಲ್ಲಿನ ಬೇಸಗೆ ಕಾಲದ ಸಂತಾನಾಭಿವೃದ್ಧಿ ಪ್ರದೇಶಗಳಿಗೆ ನಸಂತದ ಮಿಡಿತೆಗಳ ಗುಂಪುಗಳಿಂದ ಆಕ್ರಮಣವಾಗುವ ಸಂಭವವಿದೆಯೆಂದು ಪರಿಶೀಲಕ ಸಮಿತಿಯು ಹೇಳಿತು. ೧೯೫೫ರ ನಂತರ ಮೊದಲ ಬಾರಿಗೆ ಪಾಕಿಸ್ತಾನ್ ಮತ್ತು ಭಾರತಗಳ ಮೇಲೆ ಮಿಡಿತೆಗಳಿಂದ ಪುನಃ ಅಮಾನುಷ ಆಕ್ರಮಣವಾಗುವ ಭಯವನ್ನೂ ಈ ಸಮಿತಿಯು ಉಲ್ಲೇಖಿಸಿತು.

ತಾಂತ್ರಿಕ ಸಲಹೆಗಾರ ಸಮಿತಿಯು ಸಭೆ ಸೇರಿ ಒಪ್ಪಿಸಿದ ಮೇಲಣ ಸಾರಾಂಶವುಳ್ಳ ವರದಿಯನ್ನು ಆಹಾರ ಮತ್ತು ವ್ಯವಸಾಯ ವಿಭಾಗದ ಮಿಡಿತೆ ನಿಯಂತ್ರಣ ಸಮಿತಿಯು ಅಭ್ಯಸಿಸುವುದು ಇದು ತನ್ನ ಒಂದು ವಾರದ ಸಭೆಯನ್ನು ಸೇರಿದ್ದು ೧೯೫೮-೫೯ರಲ್ಲಿ ಮರುಭೂಮಿಯ ಮಿಡಿತೆಗಳ ವಿರುದ್ಧ ಕೈಗೊಳ್ಳಬೇಕಾದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರಮಗಳನ್ನು ಯೋಚಿಸಲಾಗುವುದು. ಇಥಿಯೋಪಿಯಾ, ಫ್ರಾನ್ಸ್, ಭಾರತ, ಇರಾನ್, ಇರಾಕ್, ತುರ್ಕಿ, ಇಟಲಿ, ಅರೇಬಿಯಾ, ಮೊರಕ್ಕೊ, ಪಾಕಿಸ್ತಾನ, ಸೌದಿ ಅರೇಬಿಯಾ, ಸ್ಪೆನ್, ಟ್ಯೂನಿಸಿಯಾ, ತುರ್ಕಿ, ಸಂಯುಕ್ತ ಅರಬ್ ಗಣರಾಜ್ಯ, ಇಂಗ್ಲೆಂಡ್ ಮತ್ತು ಅಮೆರಿಕೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿತ್ತಿದ್ದರು.

ಮಿಡಿತೆಗಳ ಹಾವಳಿಯನ್ನು ತಡೆಗಟ್ಟುವ ಕಾರ್ಯಕ್ರಮಗಳು ತೀವ್ರವಾಗಿ ಕಾರ್ಯರೂಪಕ್ಕೆ ಬರಬೇಕಾಗಿದೆ. ಇವುಗಳು ಕೋಟಿಗಟ್ಟಲೆಯಲ್ಲಿ ಆಕಾಶದಲ್ಲಿ ಹಾರಾಡುತ್ತ, ಬಂದು ಪೈರುಪಚ್ಚೆಗಳ ಮೇಲೆರಗಿ ಅವನ್ನು ಧ್ವಂಸಮಾಡುತ್ತವೆ ಈ ಮಹಾಮಾರಿಯನ್ನು ದೂರೀಕರಿಸುವ ಹಲವಾರು ಯೋಜನೆಗಳನ್ನು ಆಯಾದೇಶದ ಸರಕಾರಗಳೂ, ಅಂತಾರಾಷ್ಟ್ರೀಯ ಯೋಜನೆಗಳನ್ನು ಯುಕ್ತರಾಷ್ಟ್ರ ಸಂಘವೂ ಕೈಗೊಳ್ಳುವುವು. ಬೇಗಿದ್ದರೂ ಪ್ರತಿ ವರ್ಷವೆಂಬಂತೆ ಸಮೀಪ ಪ್ರಾಚ್ಯ ಹಾಗೂ ಆಫ್ರಿಕಾದ ಹೆಚ್ಚಿನ ದೇಶಗಳ ಮರುಭೂಮಿ ಪ್ರದೇಶದಲ್ಲಿ ಜನ್ಮವಿತ್ತು, ಅಲ್ಲಿಂದ ಪೇರೆಪೇರೆ ದೇಶಗಳಿಗೆ ಸಾಗಿ ಅಲ್ಲಿ ಅಪಾರ ಹಾನಿಯನ್ನು ತಂದಿತ್ತು. ಸಷ್ಟಕ್ಕೆ ಕಾರಣವಾದ ಈ ಮಿಡಿತೆಗಳನ್ನು ಸಂಪೂರ್ಣ ನಾಶಮಾಡುವುದು ಅದ್ಯಕರ್ತವ್ಯಗಳಲ್ಲಿ ಒಂದಾಗಿದೆ.

Mahathima Gandhi Memorial College, Udipi

IMPORTANT ANNOUNCEMENT

Students seeking admission to **the First-Year of the Three-Year B. A. degree course** are informed that the College offers the following combinations under Part III of the courses.—

(1) (Economics and History (Major) and Political Science Minor)
(2) English and Economics (Major) and Political Science (Minor)
(3) English and Kannada (Major) and History (Minor)

Group (3) above will be taught only if there is a sufficient number of students taking it.

Admissions are in full swing. Apply early after obtaining Prospectus and applications forms from the Principal.

H. Sunder Rao,
Principal.

NAVAYUGA

Popular Kannada Weekly

Founder:—

A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೬-೬-೧೯೫೮	೪೨

ಲಿಪಿಸಮನ್ವಯದ ಸೂಚನೆ

ಮೊನ್ನೆ ದಿನಾಂಕ ೨೧ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸೇರಿದ ವಾರ್ಷಿಕ ವಸಂತೋತ್ಸವದ ಸಂದರ್ಭದಲ್ಲಿ "ಕನ್ನಡ ತೆಲುಗುಗಳಿಗೆ ಏಕ ಲಿಪಿ" ಎಂಬ ವಿಷಯವಾಗಿ ವಿಚಾರ ಸಂಕಿರಣವು ನಡೆಯಿತು. ತೆಲುಗು ಮತ್ತು ಕನ್ನಡಗಳಿಗೆ ಏಕಲಿಪಿಯಿರುವುದರಿಂದ ತೆಲುಗರು ಮತ್ತು ಕನ್ನಡಿಗರೊಡನಿರುವ ಸಂಬಂಧವು ಬೆಳೆಯುವುದೆಂದೂ ಅದನ್ನು ಪ್ರಜಾಸತ್ತಾತ್ಮಕ ವಿಧಾನದಲ್ಲಿ ಕಾರ್ಯಗತ ಗೊಳಿಸಬೇಕೆಂದೂ ಈ ಉತ್ಸವದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಮೈಸೂರಿನ ಅರ್ಥ ಮಂತ್ರಿ ಶ್ರೀ ಮರಿಯಪ್ಪನವರು ಹೇಳಿದರು.

ವಾಸ್ತವಿಕವಾಗಿ ಲಿಪಿಯ ಮಟ್ಟಿಗೆ ಕನ್ನಡ ಮತ್ತು ತೆಲುಗುಗಳೊಳಗೆ ಕೆಲವೊಂದು ಸಾಮ್ಯವಿದೆಯೆಂಬುದನ್ನು ಒಪ್ಪಬೇಕು. ಹಾಗೆಂದಮಾತ್ರಕ್ಕೆ ಉಭಯ ಭಾಷೆಗಳಿಗೂ ಏಕಲಿಪಿಯಿರಬೇಕೆಂದು ಭಾವಿಸುವುದು ಸಮಂಜಸವೆಂದು ಹೇಳಬಾರದು. ಕನ್ನಡ ಸಾಹಿತ್ಯದಿಂದ ತೆಲುಗು ಸಾಹಿತ್ಯ ಸ್ಫೂರ್ತಿಪಡೆಯಿತು; ಸಂಸ್ಕೃತ ಪದಗಳ ಉಪಯೋಗದ ವಿಚಾರದಲ್ಲಿ ಎರಡು ಭಾಷೆಗಳೂ ಒಂದನ್ನೊಂದು ಬಿಟ್ಟಿಲ್ಲ; ಮುಖ್ಯವಾಗಿ ಎರಡೂ ಭಾಷೆಗಳು ದ್ರಾವಿಡ ಮೂಲ ಭಾಷೆಯಿಂದ ಸಿಡಿದು ಬಂದುವುಗಳೆ. ಎಂಬುದರಲ್ಲಿ ಶಥ್ಯಾಶನಿದೆ. ಅಲ್ಲದೇ ತೆಲುಗರು ನಮ್ಮ ನೆರೆಯವರು ಎಂಬುದೂ ಸತ್ಯ. ಆದರೆ, ಇವೆಲ್ಲವುಗಳಿಂದ ಎರಡು ಭಾಷೆಗಳ ಲಿಪಿಯೂ ಒಂದಾಗಬೇಕೆಂದು ಹೇಳುವುದು ಮಾತ್ರ ಎಂದಿಗೂ ಸಾಧುವಲ್ಲ.

ಆಯಾ ಭಾಷೆಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯವಿರುತ್ತವೆ; ಅಂತೆಯೇ ಲಿಪಿಗಳಲ್ಲೂ. ಲಿಪಿಗಳನ್ನು ಏಕರೀತಿಯಾಗಿಮಾಡುವುದರಿಂದ ಒದಗುವ ಲಾಭವೆಂದರೆ, ಕೇವಲ ಟೈಪ್ ಫ್ರೌಂಡ್ರಿ ಮತ್ತು ಟೈಪ್‌ರೈಟರ್‌ಗಳ ನಿರ್ಮಾಣಗಳಲ್ಲಿ ಮಾತ್ರ. ಮತ್ತೆ ಯಾವುದೇ ದೃಷ್ಟಿಯಿಂದಲೂ ಉಪಕಾರ, ಲಾಭವಾಗುವುದೆಂಬುದು ಬರೇ ಜೊಳ್ಳು ಮಾತು. ಕನ್ನಡಿಗ ಆಂಧ್ರರು ನೆರೆ ರಾಷ್ಟ್ರಗಳವರಾದ ಮಾತ್ರಕ್ಕೆ, ಈ ಎರಡು ಭಾಷೆಗಳ ಲಿಪಿಗಳಲ್ಲಿ ಸಾಮಾನ್ಯ ಹೋಲಿಕೆಯಿದ್ದ ಮಾತ್ರಕ್ಕೆ ಅವನ್ನು ಸಮನ್ವಯಗೊಳಿಸಬೇಕೆಂಬ ಸೂಚನೆ ನರಿ ಮತ್ತು ನಾಯಿಗಳನ್ನು ಒಂದುಗೂಡಿಸಬೇಕೆಂಬಷ್ಟೇ ಅರ್ಥವುಳ್ಳದು. ಭಾಷಾ ಲಿಪಿಗಳು ಸಮಾನವಾದೊಡನೆ ಭಾಷೆ ಅರ್ಥವಾಗುವಂತಿಲ್ಲ. ಆಯಾ ಭಾಷೆಗಳನ್ನು ಅರ್ಥವಿಸಿಕೊಳ್ಳಬೇಕಾದರೆ, ಭಾಷೆ ಕಲಿಯಬೇಕೇ ಹೊರತು, ಲಿಪಿಯನ್ನಲ್ಲ. ಏಕ ಲಿಪಿಯನ್ನು ಅಂಗೀಕರಿಸಿದ ಮಾತ್ರಕ್ಕೆ ಪ್ರಾದೇಶಿಕ ಭಾವನೆಯು ದೂರವಾಗುವುದೆಂದು ಭಾವಿಸುವುದು ಶುದ್ಧ ಅವಿವೇಕ. ಈ ಸಂದರ್ಭದಲ್ಲಿ ಆಚಾರ್ಯ ವಿನೋಬಾ ಭಾವೆ, ಅಧ್ಯಕ್ಷ ರಾಜೇಂದ್ರ ಪ್ರಸಾದರಂತಹ ಮಹಾಪುರುಷರೂ ಏಕ ಲಿಪಿಯಿಂದ ಭಾಷಾಭಿನ್ನತೆಯಳಿದು ಐಕ್ಯಸಾಧನೆಯಾಗುವುದೆಂದು ನಂಬಿರುವುದೂ ಆಧಾರರಹಿತ ಕಲ್ಪನೆಯೆನ್ನಬೇಕು. ಏಕೆಂದರೆ, ಲಿಪಿ ಒಂದಾದ ಮಾತ್ರಕ್ಕೆ ಭಾಷೆ ಒಂದಾಗಲಿಲ್ಲ; ಮನಸ್ಸು ಒಂದಾಗಲಿಲ್ಲ. ಮೊದಲು ಮನಸ್ಸು ಒಂದಾಗಬೇಕು; ಅದಕ್ಕೆ ಬೇಕಾದ ವಾತಾವರಣವನ್ನು ನಿರ್ಮಿಸಲು ಅಸಾಧ್ಯವಾಗಿ ಆಗ ಲಿಪಿ ಒಂದಾದರೆ, ಎಲ್ಲಾ ಸಾಧಿಸಿದಂತಾಗುವುದೆಂದರೆ, ಬೆಲೆಯಿಲ್ಲದ ಮಾತು. ಹಾಗಾಗಿ ಭಾರತೀಯ ಭಾಷೆಗಳಿಗೆಲ್ಲಾ ದೇವನಾಗರಿ ಲಿಪಿಯಿರಬೇಕೆಂದು ಬಯಸುವುದು ಅರಣ್ಯವಾಸಿ ಪ್ರಾಣಿಗಳೆಲ್ಲಾ ಒಂದೇ ರೀತಿ ಗರ್ಜಿಸಬೇಕು ಎಂದಾದೇಶಿಸಿದಂತೆ ಅಸಾಧುವಾದುದೇ ಸರಿ.

ಕನ್ನಡ-ತೆಲುಗು ಲಿಪಿಗಳಲ್ಲಿ ಯಾವುದರ ಲಿಪಿಯು ಸುಧಾರಣೆಯ ಸುತ್ತಿಗೆಯಡಿಗೆ ಬರಬೇಕೆಂದು ಇನ್ನೂ ನಿರ್ಧಾರವಾಗಿಲ್ಲ. ಹೆಚ್ಚಿಗೆಹೇಳುವುದಾದರೆ, ಈ ವಿಷಯದಲ್ಲಿ ಕನ್ನಡ ಸಾಹಿತ್ಯಪರಿಷತ್ತಿಗಿರುವಷ್ಟು ಕುತೂಹಲ ಆಂಧ್ರರಿಗಿರುವಂತೆಯೂ ತೋರಿಬರುವುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಮಾತ್ರ ತನ್ನ ಕಳೆದ ಸಮ್ಮೇಳನದಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. ಈಗ ಆ ಬಗ್ಗೆ ವಿಚಾರ ಸಂಕಿರಣ ನಡೆಸಿತು. ಈ ಸುಧಾರಣೆಯು ಕೇವಲ ಪ್ರದರ್ಶನಮಾತ್ರಕ್ಕಾದೀತೇ ಹೊರತು ಮತ್ತಾವುದಕ್ಕೂ ಅಲ್ಲ. ಕನ್ನಡಿಗರು ಐದು ಬೇರೆ ಬೇರೆ ರಾಜ್ಯಗಳಲ್ಲಿ ಹರಿಹಂಚಾಗಿ ಹೋಗಿದ್ದವರು ಮೊನ್ನೆ ಮೊನ್ನೆಯೆಂಬಂತೆ ಒಂದು ಸರಕಾರದಡಿಯಲ್ಲಿ ಬಂದಿದ್ದಾರೆ. ಇನ್ನೂ ಈ ಬೇರೆ ಬೇರೆ 'ವಿಲೀನಗೊಂಡ ಪ್ರದೇಶ'ಗಳ ಹಾಗೂ ಹಳೆಯ ಮೈಸೂರಿನ ಸಂಬಂಧ ವ್ಯಾವಹಾರಿಕ ಮತ್ತು ಮಾನಸಿಕವಾಗಿ ಒಂದಾಗಿ ಬಲವಾಗಬೇಕಾಗಿದೆ. ನಮ್ಮೊಳಗೇನೇ ಭೇದ ಭಾವನೆಗಳಿದ್ದು ನಾವು ಕಟ್ಟಿಕೊಂಡಿದ್ದ ಆಶೆ ಆಕಾಂಕ್ಷೆಗಳನ್ನು ಪೂರೈಸುವುದಕ್ಕೆ ಮೊದಲು, ನಮ್ಮ ಸಾಹಿತ್ಯ ಪರಿಷತ್ತು ಕೈಗೊಳ್ಳಬೇಕಾದ ಹಲವಾರು ಕಾರ್ಯಭಾರಗಳಲ್ಲಿ ಮಂದಗತಿಯಿಂದ ಮುಂದುವರಿಯುತ್ತಿರುವಾಗ ಈ ಒಂದು ಹೊಸ ಸಮಸ್ಯೆಯನ್ನು ಎಬ್ಬಿಸುವ ಅವಶ್ಯಕತೆಯಾದರೂ ಗೋಚರಿಸುವುದಿಲ್ಲ. ಲಿಪಿ ಸಮನ್ವಯ, ಧರ್ಮ ಸಮನ್ವಯ, ಮನಸಮನ್ವಯ, ಶಿಕ್ಷಣ ಸಮನ್ವಯ— ಇತ್ಯಾದಿ ಸಮನ್ವಯಗಳನ್ನು ಕೈಗೊಳ್ಳುವಾಗ ಮಹತ್ತರ ವಿಚಾರ ಕ್ರಾಂತಿಯೇಳುತ್ತದೆ. ಇಂತಹ ಕ್ರಾಂತಿಯಿಂದ ನಾವು ಸದ್ಯ ಸಾಧಿಸಬಹುದಾದ ಪುರುಷಾರ್ಥವಾದರೂ ಏನು?

ನಮ್ಮ ಜಿಲ್ಲೆಯಲ್ಲಿ ತುಳು ಭಾಷೆಯಾಡುವವರು ಧಾರಾಳವಿದ್ದಾರೆ. ಒಂದು ಕಾಲದಲ್ಲಿ ಈ 'ತುಳು' ಲಿಪಿಯೂ ಇತ್ತು. ಆದರೆ, ಈಗ ಅದು ವ್ಯವಹಾರದಲ್ಲಿಲ್ಲದೆ ಅಡಗಿದೆ. ಹಾಗಾಗಿ ಅದನ್ನು ಕನ್ನಡ ಲಿಪಿಯಲ್ಲಿಯೇ ಬರೆಯುವ, ಅಚ್ಚು ಹಾಕುವ ಪ್ರಸಂಗ ಆಗಾಗ ನಡೆಯುತ್ತದೆ. ಇದರ ಅವಸ್ಥೆ ನೋಡುವಾಗ ಆಯಾ ಭಾಷೆಗಳಿಗೆ ಅನುವುಗಳ ಲಿಪಿಯೇ ಬೇಕು ಎಂದೆನಿಸುತ್ತದೆ. ಸಂಸ್ಕೃತ ಮತ್ತು ಹಿಂದೀ ಭಾಷೆಯ ಪದಗಳನ್ನು ಚ್ಚರಿಸುವಾಗ ಎಷ್ಟು ಕಷ್ಟ ಒದಗುತ್ತದೆ! ಹೀಗೆಯೇ ಕನ್ನಡ—ಆಂಧ್ರ ಲಿಪಿಗಳ ಸಮನ್ವಯವೂ ಅಲ್ಲದೆ, ಕರ್ನಾಟಕಾಂಧ್ರಗಳು ನೆರೆರಾಜ್ಯಗಳು, ಒಂದೇ ಮೂಲ ಭಾಷೆಯ ಕವಲುಗಳು— ಆದುದರಿಂದ ಲಿಪಿ ಒಂದಾಗಬೇಕಾದರೆ, ತಮಿಳು, ಮಲೆಯಾಳಗಳಿಗೂ ಒಂದೇ ಲಿಪಿಯಿರಬೇಕು. ಇವೆಲ್ಲಾ ಜನರಲ್ಲಿ ಬಳಕೆಗೆ ಬರಬೇಕಾದರೆ ಹಲವು ದಶಕಗಳೇ ಬೇಕಾದಾವು. ಏಕೆಂದರೆ, ನಮ್ಮ ಶಾಲೆಗಳಲ್ಲಿ ಕಲಿಸಲ್ಪಡುವ ಪುಸ್ತಕಗಳಲ್ಲಿ ಬ್ರಿಟಿಷ ರಾಜಕಾರಣಿಗಳ ತಪ್ಪು ವರದಿಗಳವೆಯೆಂದು ಹೇಳಿದರೂ ಅವನ್ನು ಸರಿಪಡಿಸಲು ನಮಗೆ ಕಳೆದ ಹನ್ನೊಂದು ವರ್ಷ ಸಾಕಾಗಲಿಲ್ಲ. ನಯೇಪೈಸೆಯ ನಾಣ್ಯಪದ್ಧತಿ ಬಂದರೂ ಅದನ್ನು ಸಂಪೂರ್ಣರೂಪದಲ್ಲಿ ಕಾರ್ಯಕಾರೀಗೊಳಿಸಲಾಗಲಿಲ್ಲ. ಶಾಲೆಗಳ ಪಾಠ್ಯಕ್ರಮ ಬದಲಾಗದಿರುವುದರಿಂದ ರೂ. ಆ. ಪೈಗಳೇ ಮುಂದುವರಿಯುತ್ತಿವೆ! ಹೊಸ ಮಾಸ, ವರ್ಷ ಗಣನೆಯನ್ನು ಯಾರೂ ಗಮನಿಸುವಂತೆ ತೋರುವುದಿಲ್ಲ! ಹೀಗೆ ನಮ್ಮ ಕಾರ್ಯನಿರ್ವಹಣೆ ಸಾಗುತ್ತ ಬಂದು ಕರ್ನಾಟಕಾಂಧ್ರ ಲಿಪಿಗಳು ತಂತಮ್ಮ ಸಂಸ್ಕೃತಿಯನ್ನೂ ಮೂಲವನ್ನೂ ಕಳೆದುಕೊಂಡು ಒಂದು ನೂತನ ಲಿಪಿಯಾಗಿ ತಯಾರಾಗುವಾಗ, ದ್ರಾವಿಡಭಾಷೆಗಳಿಗೊಂದು ಸಮಾನ ಲಿಪಿ ಬೇಕು; ಭಾರತಕ್ಕೆ ಒಂದು ಸಮಾನ ಲಿಪಿಯಿರಬೇಕು ಎಂದು ಮುಂತಾದ ಚಳವಳಿ ಮೊದಲಾದರೆ, ಅಲ್ಲಿಗೆ ತೀರಿತು! ನಮ್ಮ ರಾಷ್ಟ್ರಘಟನೆಯಲ್ಲಿಯೂ ದೇವನಾಗರೀ ಲಿಪಿ ಮತ್ತು ಇಂಗ್ಲಿಷ್ ಅಂಕೆಗಳನ್ನು ಮನ್ನಿಸಲಾಗಿದೆ. ದೇವನಾಗರಿಯಲ್ಲಿ ಅಂಕೆಗಳಿದ್ದರೂ ಅವನ್ನು ಬಿಟ್ಟುಬಿಡಲಾಗಿದೆ. ಕೆಲವಾರು ಭಾಷೆಗಳಿಂದ ಒಂದೊಂದು ನಾಮ, ಧಾತುವನ್ನು ಹೆಕ್ಕಿತೆಗೆದರೆ, ಬೇರೆ ಒಂದು ಭಾಷೆಯಾಗಬಹುದು; ಆದರೆ, ಅನಾರಿಗೆ ಅರ್ಥವಾಗಬೇಕು? ಅಂತೆಯೇ ಎರಡು ಯಾ ಹೆಚ್ಚು ಭಾಷೆಗಳ ಲಿಪಿ ಸಮನ್ವಯ ಎಂಬುದು ಬರೇ ಬಾಯಿಯಲ್ಲಿ ಹೇಳಲಾದೀತೇ ಹೊರತು, ಕಾರ್ಯರೂಪಕ್ಕೆ ತರುವುದರಿಂದ ಯಾವ ಮಹತ್ತರ ಪ್ರಯೋಜನವೂ ಇಲ್ಲ. ಕನ್ನಡಿಗರು ಈ ಸಂದರ್ಭದಲ್ಲಿ ಮೌನತಾಳಿದರೆ, ಇದುವರೆಗೆ ಹರಿಹಂಚಾಗಿ ಹೋಗಿದ್ದು ಬೇರೆ ಬೇರೆಯವರ ನೆರೆಯಲ್ಲಿದ್ದವರು ಇನ್ನು ಆಂಧ್ರರ ಕೈಕೆಳಗೆ ಬರುವಂತಾಗಬಹುದು—ಲಿಪಿಯ ಮಟ್ಟಿಗೆ—ಏಕೆಂದರೆ, ಆಂಧ್ರರ ಸಂಖ್ಯಾಬಲ ಕನ್ನಡಿಗರಿಗಿಂತ ಒಂದು ಕೋಟಿಗೂ ಹೆಚ್ಚು!

ಕನ್ನಡವು ತನ್ನ ಸಂಸ್ಕೃತಿಯನ್ನು, ಪ್ರಾಚೀನತೆಯನ್ನು ಉಳಿಸಿಕೊಳ್ಳಬೇಕಾದರೆ, ಇಂತಹ ಸಮನ್ವಯವನ್ನು ನಡೆಯಗೊಡಬಾರದು. ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆನ್ನುವವರು ಲಿಪಿ ಕನ್ನಡವೆಂದು ಹೇಳಲು ಹಿಂದೆ ಮುಂದೆ ನೋಡ ಕೂಡದು. ಭಾಷಾಭೇದ, ಪ್ರಾಂತ ಭೇದಗಳಿಗೆ ಏಕ ಭಾಷೆ ಯಾದರೂ ಒಂದು ವೇಳೆ ಪರಿಹಾರವಾಗಬಹುದು (ಆದರೆ ಇದು ಸರ್ವತಾ ಅವ್ಯವಹಾರ್ಯ ಮತ್ತು ಅಕಾರ್ಯಕಾರಿ) ಆದರೆ, ಏಕ ಲಿಪಿಯು ಎಂದಿಗೂ ಪರಿಹಾರ ಸೂಚಕವಾಗಲಾರದು. ಆದುದರಿಂದ, ಮಾನ್ಯ ಅರ್ಥಮಂತ್ರಿಯವರೆಂದಂತೆ "ಸ್ನೇಹದ ಸೂಚನೆ" ಯಾದರೆ, ಅದನ್ನು ಅಲ್ಲಿಯೇ ಬಿಟ್ಟು ಪರಿಷತ್ತು ಅಗತ್ಯ ಕರ್ತವ್ಯಗಳಿಗೆ ಗಮನ ಕೊಡಬೇಕು. ಅಲ್ಲದೆ, ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾದರೆ, ಕನ್ನಡಿಗರು ಒಕ್ಕೊರಲಿನಿಂದ ವಿರೋಧಿಸದೆಗತ್ಯಂತರವಿಲ್ಲ. ಇಂತಹ ಸಂದರ್ಭಬಾರದಿರಲೆಂದೇ ಆಶೆಯೆ.

ಅಕ್ಟೋಬರ ತಿಂಗಳಲ್ಲಿ ಜರಗುವ ಎಸ್. ಎಸ್. ಎಲ್. ಸಿ. ಪರೀಕ್ಷೆ ಮುಂಟರಿ ಪರೀಕ್ಷೆ ಕುರಿತು ಸೂಚನೆ—

1958ನೇ ಅಕ್ಟೋಬರ ತಿಂಗಳಲ್ಲಿ ಜರಗುವ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಕಳುಹಿಸುವ ಕೊನೆಯ ದಿನವು ತಾ. 10-7-58 ಆಗಿರುವುದೆಂದೂ ಪಠ್ಯಪುಸ್ತಕಗಳು ಕಳೆದ ಎಪ್ರಿಲ್ ತಿಂಗಳ ಪರೀಕ್ಷೆಗೆ ಇಡಲ್ಪಟ್ಟುವುಗಳೇ ಆಗಿರುವುವೆಂದೂ, ಅರ್ಜಿ ಫಾರ್ಮುಗಳನ್ನು ಟ್ರಿಬಾರಗಳಿಂದಾಗಲೀ ವಿಧ್ಯಾಧಿಕಾರಿಗಳಿಂದಾಗಲೀ ಪಡೆಯಬಹುದೆಂದೂ ಪರೀಕ್ಷಾ ಕಮಿಶನರ್ 'ವಿಕ್ಟರಿ ಹಾಲ್' ಬೆಂಗಳೂರು-1 ಇವರು ಪ್ರಕಟಿಸಿದ್ದಾರೆ. ಈ ಪ್ರಕಟಣೆಯು ದ. ಕ. ಜಿಲ್ಲೆ ಮತ್ತು ಕೊಡಗು ಪ್ರದೇಶಗಳಿಗೆ ಮಾತ್ರ ಅನ್ವಯಿಸುವುದು.

ಬ್ರಹ್ಮಾವರ—ಸಾರಂಬಳ್ಳಿ ಸಂಜಾಯ ತರೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಬಿ. ಹಿರಿಯಣ್ಣ ಸೆಟ್ಟರನ್ನು ತಾ. 10ರಂದು ಶ್ರೀ ಬಿ. ವೆಂಕಟ್ರಮಣ ಆಚಾರ್ಯರು ಸತ್ಕರಿಸಿತ್ತು ಗೌರವಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಬ್ರಹ್ಮಾವರ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೆ. ಆರ್. ಹಂದೆಯವರು ವಹಿಸಿದ್ದರು. ಶ್ರೀಗಳಾದ ಬಿ. ವಿಠಲ ಸೆಟ್ಟಿ, ಯು. ಜಗನ್ನಾಥ ಸೆಟ್ಟಿ, ಬಿ. ಗೋವಿಂದ ಪೈಯವರು ಕಾಲೋಚಿತ ಮಾತುಗಳನ್ನಾಡಿದರು. ಆರಂಭದಲ್ಲಿ ಸ್ವಾಗತಿಸಿದ ಶ್ರೀ ಬಿ. ವೆಂಕಟರಮಣಾಚಾರ್ಯರು ಕೊನೆಯಲ್ಲಿ ಧನ್ಯವಾದಗಳನ್ನಿತ್ತರು.

ನಮ್ಮ ಬೇಂಕಿನ ಹಂಪನಕಟ್ಟೆ—ಮಂಗಳೂರು ಶಾಖೆಯು ತಾ. 1-7-1958ಕ್ಕೆ ಹಂಪನಕಟ್ಟೆಯಲ್ಲೇ ಇರುವ ಕೆತೊಲಿಕ್ ಕ್ಲಬ್ ಎಕ್ಸ್‌ಟೆನ್‌ಶನ್ ಕಟ್ಟಿಡದ ಪೂರ್ವ ಪಾರ್ಶ್ವದ ವಿಶಾಲವಾದ ಮಾಳಿಗೆಗೆ ವರ್ಗಾಯಿಸಲ್ಪಟ್ಟು ಅಂದಿನಿಂದ ಸದ್ರಿ ಸ್ಥಳದಲ್ಲಿ ಬೇಂಕು ವ್ಯವಹಾರಗಳನ್ನು ಕೈಕೊಳ್ಳುವುದು.

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1920.

ವಿದ್ಯಾರ್ಥಿ ಹಾಗೂ ರಕ್ಷಕರ ಗೋಳು—

ನಮ್ಮ ಶಾಸಕರು ಜಾಗ್ರತರಾಗಲಿ

ಸುಮಾರು ಒಂದು ವರ್ಷ ಪೂರ್ವದಲ್ಲಿ ನಮ್ಮ ಜಿಲ್ಲೆಯ ಕಾಲೇಜುಗಳು ಯಾವ ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಯಾಗಬೇಕೆಂಬುದರ ಬಗ್ಗೆ ವಾದವಿವಾದಗಳಾಗುವುದಕ್ಕೆ ಮೊದಲೇ ಕಾಲೇಜುಗಳ ಅಧಿಕಾರಿಗಳೊಂದಾಗಿ ಒಮ್ಮನಸ್ಸಿನಿಂದ ಕರ್ನಾಟಕ ವಿಶ್ವವಿದ್ಯಾಲಯದಿಂದ ಮನ್ನಣೆಯನ್ನು ಪಡೆದುಕೊಳ್ಳಲು ಹವಣಿಸಿದಂತೆ ಸರಕಾರವೂ ತನ್ನೊಪ್ಪಿಗೆಯ ಮುದ್ರೆಯೊತ್ತಿದುದರಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದುವು. ಆದರೆ, ಮುಂದೆ, ನಮ್ಮ ಜಿಲ್ಲೆಯ ಎಂ. ಎಲ್. ಎ.ಗಳಲ್ಲಿ ಹೆಚ್ಚಿನವರು ನಿದ್ರೆಯಿಂದೆದ್ದೆತ್ತು ಸಜೀವರಾಗಿ, ಕೆಲವಾರು ಕಾರಣಗಳನ್ನು ನಮೂದಿಸಿ ನಮ್ಮ ಜಿಲ್ಲೆಯ ಕಾಲೇಜುಗಳು ಆಗ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಜೋಡಿಸಲ್ಪಟ್ಟುದನ್ನು ವಿರೋಧಿಸಿ, ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಬೇಕೆಂಬುದಾಗಿ ಒಂದು ಮನವಿಯನ್ನರ್ಪಿಸಿದರು ಈ ಬದಲಾವಣೆಯ ಬಗ್ಗೆ ನಮ್ಮ ಜಿಲ್ಲೆಯ ಪತ್ರಿಕೆಗಳಲ್ಲಿ ಆಯಾ ಪತ್ರಿಕೆಗಳ ಹಾಗೂ ಜನತೆಯ ಅಭಿಪ್ರಾಯಗಳು ಕೆಲವು ಕಾಲ ಪ್ರಕಾಶಗೊಂಡು, ಒಂದು ಕುತೂಹಲಪೂರ್ಣ ವಾತಾವರಣವು ನಿರ್ಮಿತವಾದುದನ್ನು ಯಾರೂ ಮರೆತಿರಲಾರರು. ಆದರೆ, ಜನಾಭಿಪ್ರಾಯಕ್ಕೆ ಮನ್ನಣೆ ದೊರೆಯದೆ ಅವರ ಕೂಗು ಅರಣ್ಯರೋದನವಾದಂತೆ, ನಮ್ಮ ಶಾಸಕರ ಮನವಿಗೆ ಬೆಲೆಬಂದು, ಕರ್ನಾಟಕ ವಿಶ್ವವಿದ್ಯಾಲಯದ ಸಂಬಂಧವನ್ನು ಕಡಿದುಕೊಂಡು, ಮೈಸೂರು ವಿಶ್ವವಿದ್ಯಾಲಯಕ್ಕೆ ಜೋಡಿಸಲ ಯಿತು ಆಗ, ಈ ಸಂಬಂಧದಲ್ಲಿ ಜನತೆಯ ಆಶಯವನ್ನು ಕಡೆಗಣಿಸಿ ಜಯಭೇರಿಯನ್ನು ಬಾರಿಸಿದ ಶಾಸಕರು, ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಯಾಗುವುದರಿಂದಲೇ ತಮ್ಮ ಜಿಲ್ಲೆಯ ವಿದ್ಯಾರ್ಥಿಗಳ ಹಿತಸಾಧಿಸಬಹುದೆಂಬ ದೃಢಾಭಿಪ್ರಾಯವನ್ನು ಕಟ್ಟಿಕೊಂಡಿದ್ದವರು ಈಗ ನಮ್ಮ ವಿದ್ಯಾರ್ಥಿಗಳಿಗೆಗೊದಗಿದ ತೊಂದರೆ ಹಾಗೂ ಅನಿಷ್ಟ ಪರಂಪರೆಗಳ ಕುರಿತು ಯಾವುದೇ ಕಾರ್ಯಕ್ರಮಗಳನ್ನು ಕೈಗೊಳ್ಳದಿರುವುದನ್ನು ಕಾಣುವಾಗ, ಆಶ್ಚರ್ಯವೆನಿಸುತ್ತದೆ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಪದವೀ ಪರೀಕ್ಷೆಯ ಪ್ರಥಮ ವರ್ಷದಲ್ಲಿ ವಿದ್ಯಾರ್ಥಿಯು ಒಂದು ನೇಳೆ ಅನುತ್ತೀರ್ಣನಾದರೆ, ಆತನು ಮುಂದಿನ ಓದನ್ನು ಮಾಡಬಹುದು, ಆದರೆ ಆ ವರ್ಷದೊಳಗೆ ಆತನು ಅನುತ್ತೀರ್ಣನಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾಗಿದೆ ಈ ಸೌಲಭ್ಯದಿಂದಾಗಿ, ಇಂತಹ ಅನುತ್ತೀರ್ಣನಾದ ಹತಭಾಗ್ಯ ವಿದ್ಯಾರ್ಥಿಗಳಿಗೆ ಒಂದು ವರ್ಷವೇ ನಿರರ್ಥಕವಾಗುವ ಸಂಭವವು ಕಡಿಮೆಯಿತ್ತು ಆದರೆ ಸದ್ಯ ನಮ್ಮ ಕಾಲೇಜುಗಳ ಸೇರ್ಪಡೆಯ ಬದಲಾವಣೆಯಿಂದಾಗಿ ಇಂತಹ ಒಂದು ಅನುಕೂಲ ಸಂದರ್ಭವನ್ನು ನಮ್ಮ ವಿದ್ಯಾರ್ಥಿಗಳು ಕಳೆದುಕೊಳ್ಳಬೇಕಾಯಿತು. ಪ್ರಿಯುನಿವರ್ಸಿಟಿ ಪರೀಕ್ಷೆಯಲ್ಲೂ ಇದೇ ತರದ ಸೌಲಭ್ಯ ಕರ್ನಾಟಕ ವಿಶ್ವವಿದ್ಯಾಲಯದಲ್ಲಿದೆ ಎಂದು ಕೇಳಿಬರುತ್ತೆ

ನಮ್ಮ ವಿದ್ಯಾರ್ಥಿಗಳಿಗಾದ ಈ ವಿಷಮಯ ಹಾಗೂ ಅನಪೇಕ್ಷಿತ ಉಪಟಳದಿಂದ ಗಿ, ತಮ್ಮ ವಿದ್ಯಾಬ್ಯಾಸವನ್ನು ಮುಂದುವರಿಸಿ, ಒಂದು ವರ್ಷವನ್ನು ಪಾಳುಗೆಡಹದಿರಲು ಬಯಸುವವರು ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯೊಳಗಿನ ಕಾಲೇಜುಗಳಿಗೆ ಹೋಗಿ ಸೇರಬೇಕಾಗುವುದು. ಅಲ್ಲದೇ ಒಂದು ವರ್ಷ ವ್ಯರ್ಥವಾದರೂ ಚಿಂತೆಯಿಲ್ಲ; ಪುರವಣಿ ಪರೀಕ್ಷೆಗಾದರೂ ಸ್ವತ್ಯಕ್ಷರಾಗಿ ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಎಂಬ ಮನೋಭಾವವಲ್ಲಿರುವವರೂ ನಮ್ಮ ಜಿಲ್ಲೆಯಿಂದ ಹೊರಗೆ, ಕರ್ನಾಟಕ ವಿಶ್ವವಿದ್ಯಾಲಯದ ಕ್ಷೇತ್ರದೊಳಗಿನ ಪರೀಕ್ಷಾ ಕೇಂದ್ರಗಳಿಗೆ ತೆರಳಬೇಕಾಗಿದೆ—ಈ ಎಲ್ಲವಕ್ಕೂ ಅಧಿಕ ಧನ ಬೇಕಾಗುವುದು, ವಿದ್ಯಾಭ್ಯಾಸದಿಂದಲೇ ಜೀವನೋಪಾಯವನ್ನು ಕೈಕೊಳ್ಳಬೇಕಾಗಿರುವ ನಮ್ಮ ಹೆಚ್ಚಿನ ನಿಮ್ನ ಅಥವಾ ಮಾಧ್ಯಮ ಮಟ್ಟದ ಕುಟುಂಬಗಳು ವ್ಯರ್ಥವಾಗಿ ಇಂತಹ ಸಂಕಷ್ಟಕ್ಕೆ ಗುರಿಯಾಗಬೇಕಾಗಿ ಬಂದುದನ್ನು ನೋಡುವಾಗ, ಕನಿಕರವೆನಿಸುತ್ತದೆ ಮೈಸೂರು ವಿಶ್ವವಿದ್ಯಾಲಯದಲ್ಲಿಯೂ ಇಂತಹ ಕೆಲವೊಂದು ಸೌಕರ್ಯಗಳು ಬೇಕೆಂಬುದಾಗಿ ಪ್ರಾರ್ಥಿಸಿಕೊಂಡಾಗ ಈ ಕೇಳಿಕೆಗಳು ಸಂಪೂರ್ಣ ನಿರಾಕರಿಸಲ್ಪಡುವುದೆಂದು ತಿಳಿದು ಬರುತ್ತದೆ

ಮುಂಬಯಿ ಸರಕಾರವು ಇದ ವರೆಗೆ ಮೈಸೂರಿನ ವಿದ್ಯಾರ್ಥಿಗಳಿಗೆ ಒದಗಿಸುತ್ತಿದ್ದ ವೈದ್ಯಕೀಯ ಕಾಲೇಜುಗಳ ೬೪ ಸ್ಥಾನಗಳನ್ನೂ ಈ ವರ್ಷದಿಂದ ನಿಲ್ಲಿಸಿಬಿಡುವ ನಿರ್ಧಾರ ಮಾಡಿದೆಯೆಂದು ವರದಿಯಾಗಿದೆ ಮೈಸೂರು ಸರಕಾರದ ಆಡಳಿತದಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ಈ ೬೪ ಸ್ಥಾನಗಳನ್ನು ಹೆಚ್ಚಿಗೆ ದೊರಕಿಸಿಕೊಳ್ಳುವುದು ತೀರ ಅಸಾಧ್ಯವೆಂದೇ ಹೇಳಬಹುದು. ನಮ್ಮ ಶಾಸಕರು ಹಿಂದು ಮುಂದು ನೋಡದೆ ಏನೋ ಒಂದು ಕ್ಷುಲ್ಲಕವೆಂದು ಹೇಳಲೇಬೇಕಾದ ಕಾರಣವನ್ನು ಮುಂದೂಡಿ ತಮ್ಮ ಬಯಕೆಯನ್ನು ಈಡೇರಿಸಿಕೊಂಡು, ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು, ತೃಪ್ತಿಯ ನಿಡಿದುಸುರನ್ನು ಬಿಡುವಂತಾದರೂ ಜನತೆಯ ಸಂಕಷ್ಟ ಅವರ್ಣನೀಯವಾಗಿದೆ ರಾಜಕಾರಣಿಗಳ ಕೈಯಲ್ಲಿ ಶಿಕ್ಷಣ ವಿಭಾಗವಿರುವುದರಿಂದ ತಟ್ಟಬಹುದಾದ ಅನಿಷ್ಟ ಸಂಕಟಗಳು ನಮಗಿಂದು. ಕಣ್ಣಿಗೆ ಕಟ್ಟುವಂತಿದೆ. ಇಂತಹ ಕಷ್ಟ ನಷ್ಟಗಳಿಗೆ ಕಾರಣೀಭೂತರಾದ ನಮ್ಮ ಶಾಸನ ಸಭಾ ಸದಸ್ಯರು ಈಗ ತುಟಿಯೆತ್ತದೆ ಮೌನಿಗಳಾಗಿದ್ದಾರೆ ಇದರರ್ಥವೇನೆಂದು ತಿಳಿಯುವುದಿಲ್ಲ. ಇನ್ನೂ ಸಮಯ ಮಿಂಚಿ ಹೋಗಿಲ್ಲ ಹಿಂದೊಮ್ಮೆ ನಮ್ಮ ಕಾಲೇಜುಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಯಾಗಬೇಕೆಂದು ಸೊಂಟ ಕಟ್ಟಿ ಬಹುಪರಿಯಾಗಿ ಅತ್ಯಂತ ಪ್ರಯಾಸಪಟ್ಟು ಜಯಶೀಲರಾದ ನಮ್ಮ ಶಾಸನ ಸಭಾಸದಸ್ಯರು ಈಗಲಾದರೂ ತಮ್ಮ ರಾಜಕೀಯ ಭೇದಭಾವನೆ, ಪಂಗಡ ಮನೋ ವೃತ್ತಿಯನ್ನು ತೊರೆದು, ಜಿಲ್ಲೆಯ ಹಲವಾರು ವಿದ್ಯಾರ್ಥಿಗಳಿಗೂ ಅವರ ಹೆತ್ತವರಿಗೂ ಅನಪೇಕ್ಷಿತವಾಗಿ ಒದಗಿ ಬಂದ ಸಂಕಷ್ಟಗಳನ್ನು ಪರಿಹರಿಸಲು ಮುಂದೆ ಬಂದು, ಅದರಲ್ಲಿ ಯಶಸ್ಸನ್ನು ಪಡೆಯಲು ಪ್ರಯತ್ನಿಸುವರೆಗೆ ಈ ಬಗೆಯ ಕಷ್ಟಗಳು ಬಂದೇ ತೀರಬೇಕೆಂದು ಹರಯೋಗ ಸಾಧಕರಾಗಿ ಜನತೆಯ ಕೇಳಿಕೆಯನ್ನು ಅಲ್ಲಗಳೆದು ಮೌನಿಗಳಾಗಿಯೇ ಕೂರುವುದು ಅವರಿಗೆ ಶೋಭೆಯಾದುದಲ್ಲ ನಮ್ಮ ಎಂ ಎಲ್ ಎ ಗಳು ತಮ್ಮ ಗಂಭೀರ ನಿರ್ಧಾಯಿಂದ ಎಚ್ಚತ್ತು ಕರ್ತವ್ಯೋನ್ಮುಖರಾಗುವ ಉದಾರ ಮನಸ್ಸನ್ನು ದಯಪಾಲಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ

—ವಿದ್ಯಾರ್ಥಿಪ್ರೇಮಿ

[ವಿಶ್ವವಿದ್ಯಾಲಯ ಸಮಸ್ಯೆಯಲ್ಲಿ ನಮ್ಮ ಜಿಲ್ಲೆಯ ಕಾಲೇಜುಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೇ ಉಳಿಯಬೇಕೆಂದು ಬಲವಾಗಿ ಪ್ರತಿಪಾದಿಸುವುದರಲ್ಲಿ ನಮ್ಮ ಪತ್ರಿಕೆಯೂ ತನ್ನ ಕರ್ತವ್ಯವನ್ನು ಪೂರೈಸಿದೆ ಆದರೆ, ಜನಮತವನ್ನು ಅತ್ತಿಕ್ಕಿ ಶಾಸನ ಸಭಾಸದಸ್ಯರ ಕೈಮೇಲಾಗಿ ಈ ಪರಿಸ್ಥಿತಿಯೊದಗಿ ಬಂಗು ಇನ್ನಾದರೂ ಶಾಸಕರು ಇತ್ತ ಗಮನವಿತ್ತು ಒದಗಿ ಬಂದ ಅನಸುಕೂಲಗಳನ್ನು ಸರಿಪಡಿಸುವತ್ತ ಮನಸ್ಸುಕೊಡಬೇಕೆಂದು ಕೇಳಿಕೊಳ್ಳುತ್ತೇವೆ—ಸಂ ನ]

ಮೈಸೂರು ಹಿಂದೀ ಪ್ರಚಾರ ಪರಿಷತ್ತು—ಮುಂಬರುವ ಹಿಂದೀ ಪರೀಕ್ಷೆಗಳು ಸಪ್ಟಂಬರ, ೧೩,೧೪ ಮತ್ತು ೧೫ರಂದು ನಡೆಯಲಿರುವುವು. ಈ ಪರಿಷತ್ತಿನ ಉತ್ತಮ ಉತ್ತೀರ್ಣರಾದವರು ಮಿಡ್ಲ್ ಸ್ಕೂಲ್‌ಗಳಲ್ಲಿಯೂ ರತ್ನ ಪದವೀಧರರು ಹೈಸ್ಕೂಲುಗಳಲ್ಲಿಯೂ ಶಿಕ್ಷಕರಾಗಬಹುದು ಅಲ್ಲದೇ ಅಖಿಲಭಾರತ ಮಂಜೂರಾತಿ ಪಡೆದ ಅಲಹಾಬಾದಿನ ಸಾಹಿತ್ಯ ಸಮ್ಮೇಳನದ ರತ್ನ ಪರೀಕ್ಷೆಗೆ ಕೂರಲು ಅನುಮತಿಯಿದೆ **ಉಡುಪಿ**ಯಲ್ಲಿ ಪ್ರಥಮಾ, ಮಧ್ಯಮಾ, ಪ್ರವೇಶ, ಉತ್ತಮಾ ಮತ್ತು ರತ್ನ ಪರೀಕ್ಷೆಗಳ ಕೇಂದ್ರವಿದ್ದು, ಅಭ್ಯರ್ಥಿಗಳು ಜುಲೈ ದಿನಾಂಕ ೮ರ ಒಳಗೆ ತಮ್ಮ ಅರ್ಜಿಗಳು ಪತ್ರಗಳನ್ನು ಸರ್ದಿಷ್ಟ ಶುಲ್ಕದೊಡನೆ ಕಾರ್ಯದರ್ಶಿ, ಗೀತಾ ಭವನಂ, ಅಂಬಲಪಾಡಿ ಉಡುಪಿ ಯವರಿಗೆ ಕಳುಹಿಸಬೇಕಾಗಿದೆ. ಅಲ್ಲದೇ ಉಳಿದೆಲ್ಲಾ ವಿಚಾರಗಳನ್ನು ಅವರಿಂದಲೇ ತಿಳಿದುಕೊಳ್ಳಬಹುದು. ಉಡುಪಿ ನಗರದಲ್ಲಿ ತರಗತಿಗಳ ವ್ಯವಸ್ಥೆಯೂ ನಡೆದಿದೆ.

ಕಾರ್ಕಳ— ಸ್ಥಳೀಯ ದಿವಂಗತ ಡಾ. ಎಸ್. ಮಹಾಬಲ ಅಡ್ಯಂತಾಯರ ಸ್ಮಾರಕ ಸಮಾಧಿಯ ಉದ್ಘಾಟನೆಯು ತಾ 20ರಂದು ಧಾರ್ಮಿಕರೀತ್ಯಾ ನಡೆಯಿತು ಶ್ರೀಗಳಾದ ಎಸ್. ಆರ್. ಆಚಾರ್ ಮತ್ತು ಕೆ ಸಿ ಮುಕುಂದ ಪ್ರಭುಗಳು ಕೀರ್ತಿಶೇಷರ ಗುಣಗಾನ ಮಾಡಿದರು. ಬಳಿಕ ದಿವಂಗತರ ಆತ್ಮಶಾಂತಿಗಾಗಿ ಮೌನ ಪ್ರಾರ್ಥನೆಯಾಯಿತು ಶ್ರೀ ಎಸ್. ಎಸ್ ಅಡ್ಯಂತಾಯರು ಧನ್ಯವಾದ ವಿತ್ತರು

ಮಣಿಪಾಲ— ಇಲ್ಲಿಯ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ರೀಡರರೂ, ಕಸ್ತೂರ್‌ಬಾ ಹೆರಿಗೆ ಆಸ್ಪತ್ರೆಯ ಪ್ರಧಾನ ವೈದ್ಯಾಧಿಕಾರಿಗಳೂ ಆಗಿರುವ ಡಾ. ಶ್ರೀಮತಿ ಎ. ಪದ್ಮರಾವ್, ಅವರು ಹೆಮ್ಮಕ್ಕಳ ರೋಗಗಳ ಚಿಕಿತ್ಸೆಯಲ್ಲಿ ಆಂಧ್ರ ವಿಶ್ವವಿದ್ಯಾಲಯದ ಎಮ್ ಡಿ ಪರೀಕ್ಷೆಯಲ್ಲಿ ಪ್ರಥಮ ಬಾರಿಯಲ್ಲಿಯೇ ತೇರ್ಗಡೆ ಹೊಂದಿರುವರು

ಕುಂದಾಪುರ-ಸ್ಥಳೀಯಶ್ರೀಕೃಷ್ಣಾಸ್ಟ್ರ ವಿದ್ಯಾರ್ಥಿ ಭವನದ ಆರು ಮಂದಿ ವಿದ್ಯಾರ್ಥಿಗಳು ಈಗಿದ ಎಸ್. ಎಸ್. ಎಲ್ ಸಿ ಪರೀಕ್ಷೆಗೆ ಕುಳಿತಿದ್ದು ಅವರೆಲ್ಲರೂ ತೇರ್ಗಡೆ ಹೊಂದಿಕುಸರು ಈಗ ತರಗತಿಯಲ್ಲಿ ಕಲಿಯುವ ಇತರ ವಿದ್ಯಾರ್ಥಿಗಳೆಲ್ಲರೂ ಕೂಡಾ ವಾಸಾಗಿದ್ದು ಭವನಕ್ಕೆ ಕೀರ್ತಿ ತಂದಿರುತ್ತಾರೆ.

ಪಡುಬಿದ್ರೆ— ಸ್ಥಳೀಯ ಸಂಜಾಯತ ಬೋರ್ಡಿಗೆ ಶ್ರೀಗಳಾದ ಪಿ. ಸುಹಾಬಲ ಸೆಟ್ಟಿ (ಅಧ್ಯಕ್ಷ), ಲಕ್ಷ್ಮೀನಾರಾಯಣ ರಾವ್, ಸಾಂಡ್ಕಾರು ಮಹಾಬಲ ಸೆಟ್ಟಿ, ಪಿ ಭೋಜರಾವ್, ಸಡ್ಪಲಗುತ್ತು ಸದಾಶಿವ ಹೆಗ್ಡೆ, ಪಿ ಪದ್ಮನಾಭಪ್ರಭು, ಆನಂದ ಪಿ. ಕರ್ಕೇರ, ಪಿ ಪಾಸೇನ ಬ್ಯಾರಿ, ತೋಮಸ್ ಅಂಥ್ರಾಪೆ, ಸದಾಶಿವ ಪೂಜಾರಿ ಮತ್ತು ಕಾಂಚ ಮುಖಾರಿಯವರು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಮೊಲ್ಕಿ— ಮಂಗಳೂರು ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯಕ್ರಮದಂತೆ ತಾ 14ರಂದು ಮೊಲ್ಕಿಯಲ್ಲಿ ಮಂಡಲ ಕಾಂಗ್ರೆಸ್ ಸಭೆಯೊಂದು ಮಂಗಳೂರು ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಎ ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು ಡಾ ರಾಯಪ್ಪ ನಾಯಕ್, ಶ್ರೀ ಎಸ್. ಆರ್. ಎಚ್. ಸೂಂಜ ಮೊದಲಾದವರು ಮಾತನಾಡಿದ ಬಳಿಕ ಮಂಡಲ ಕಾಂಗ್ರೆಸ್ ಕೆಲಸಗಾರರು ಜನರ ಸಂಪರ್ಕವನ್ನಿಟ್ಟುಕೊಂಡು ರೈತರು, ಕೂಲಿಗಾರರಿಗೆ ಕಾಂಗ್ರೆಸಿನ ಉದಾತ್ತ ಧ್ಯೇಯಗಳನ್ನು ತಿಳಿಸಬೇಕು ಎಂದು ಮುಂತಾದ ವಿಧಾಯಕ ಕಾರ್ಯಕ್ರಮ ಗೊತ್ತು ಮಾಡಲಾಯಿತು

ಮೊಲ್ಕಿಯಲ್ಲಿ ಸಭೆ ಮುಗಿದ ಬಳಿಕ ಶ್ರೀಗಳಾದ ಎ ಶಂಕರ ಆಳ್ವ, ಬಿ ಆರ್ ಶೆಟ್ಟಿ, ಎಮ್. ಎಲ್ ಎ ಮೊದಲಾದವರು ಕಿನ್ನಿಗೋಳಿಗೆ ಹೋಗಿ ಅಲ್ಲಿಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಕೆ. ಶ್ರೀಧರ ಶೆಟ್ಟಿ, ಡಾ. ಎಸ್ ಜಂಜ, ಎಮ್ ಎಲ್ ಸಿ, ಶ್ರೀ ಗೋಪಾಲಕೃಷ್ಣ ಭಟ್ಟ, ಮೊದಲಾದವರೊಡನೆ ಅ ಕ್ಷೇತ್ರಕ್ಕೆ ಸಂಬಂಧಿಸಿದ ಪಾಲ ಹವಾಲೆಗಳ ಕುರಿತು ಚರ್ಚಿಸಿದರು.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ವಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಸೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

In the Court of the Dtstrict Munsif of Udipi

O P No 28/1958

K Krishna Bai and others

—Petitioners

The Petitioners in the above petition have applied under sec 372 of Act 39/1925 for grant of a succession certificate in favour of 1st petitioner alone on behalf of all the petitioners, authorising her to collect the debts and have the shares etc transferred in her name, appertaining to the estofe of late-K. Vittal Nayak, Vakil, Udipi who died in sestofe on 7—1—58 in his residence in Udipi Town. If anybody has objection he may fil his abjection at 11 A M on 9—7—1958, to which date the above petition has been posted

P R. Shenoy,

Advocate for Petrs

Udipi, 24—6—58.

ಮಂಗಳೂರು

ಗೇರು ಬೆಳೆಯ ಅಭಿವೃದ್ಧಿ — ಮೈಸೂರು ಸರಕಾರವು ಗೇರು ಬೆಳೆಯ ಅಭಿವೃದ್ಧಿ ಯೋಜನೆಯನ್ನು ದ. ಕನ್ನಡ, ಉತ್ತರ ಕನ್ನಡ, ಶಿವಮೊಗ್ಗಾ, ಚಿಕ್ಕ ಮಂಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಕಾರ್ಯರೂಪಕ್ಕೆ ತರಹತ್ತಿದೆ ಗೇರು ಬೆಳೆಯ ಅಭಿವೃದ್ಧಿಗಾಗಿ ಓರ್ವ ವಿಶೇಷ ಅಧಿಕಾರಿಗಳ ನೇಮಕವೂ ಆಗಿದೆ.

ದ. ಕ. ಜಿಲ್ಲೆಯಲ್ಲಿ ಪುತ್ತೂರು, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳಲ್ಲಿ ಈ ಬೆಳೆಯ ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲಾಗಿದೆ. ಗೇರುಬೀಜದ ಉತ್ತಮ ಬೀಜಗಳು, ಸಸಿಗಳು ಆಯಾಯಾ ಅಭಿವೃದ್ಧಿ ಕೇಂದ್ರಗಳಲ್ಲಿ ದೊರಕುತ್ತವೆ. ಗೇರು ಸಸಿಗಳನ್ನು ನೆಟ್ಟು ಉತ್ಪಾದನೆ ಜಾಸ್ತಿಮಾಡಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮನಸ್ಸಿರುವ ರೈತರಿಗೆ ದರಕಾಸ್ತು ಸ್ಥಳಗಳನ್ನು ಕೊಡಲಾಗುವುದಲ್ಲದೆ, ರೂಪಾಯಿ 1500/-ರ ಶಸಕ ಸಾಲ ಕೂಡ ದೊರೆಯುವುದು. ಅರ್ಜಿಮಾಡತಕ್ಕವರು ಆಯಾಯಾ ತಹಶೀಲ್ದಾರರಿಗಾಗಲೀ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರಿಗಾಗಲೀ ಬರೆಯಬೇಕು ಎಂದು ದ. ಕ. ಜಿಲ್ಲಾ ಗೇರು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಿಸಿದ್ದಾರೆ.

ಯುವಕ ಕಾಂಗ್ರೆಸ್— ಸಮ್ಮಾಹಿಕ ಸಭೆಯು ತಾ. 15ರಂದು ಶ್ರೀ ಜೆ. ಎ. ಪ್ರಿಟೋರವರ ಅಧ್ಯಕ್ಷತೆಯಲ್ಲಿ ಜರಗಿತು ಯುವಕರು ಜನತಾಸೇವೆ ಗೈಯುವ ಆವಶ್ಯಕತೆ ಕುರಿತು ಶ್ರೀ ಬಿ. ಜಗನ್ನಾಥ ರೈಗಳು ಭಾಷಣ ಮಾಡಿದರು. ಶ್ರೀ ಎಮ್. ಸಂಜೀವನವರು ಧನ್ಯವಾದವಿತ್ತರು.

ಬೀಳ್ಕೊಡುವ ಸಮಾರಂಭ ಕಳೆದ ಆರು ವಾರಗಳಿಂದ ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಜರಗುತ್ತಿದ್ದ ಟೆಕ್ನಿಕಲ್ ಟೀಚರ್ಸ್ ಟ್ರೈನಿಂಗ್ ಕೋರ್ಸಿನಲ್ಲಿ ತರಬೇತಿ ಪಡೆದ ಅಧ್ಯಾಪಕರನ್ನು ಬೀಳ್ಕೊಡುವ ಸಮಾರಂಭವು ತಾ 20ರಂದು ಸಂಜೆ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಸ್. ಕುಡುಬಿಯವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿನಾಯಕ ಶ್ರೀ ಯು. ಸುಂದರಾಚಾರ್ಯರು ಅಧ್ಯಕ್ಷರಿಗೆ ಪೂಮಾಲೆ ಹಾಕಿ ಟ್ರೈನಿಂಗ್ ಕೋರ್ಸಿನ ಕಾರ್ಯಕಲಾಪಗಳ ವಿವರಗಳನ್ನಿತ್ತರು.

ಕೋರ್ಸಿನ ಮೇಲ್ವಿಚಾರಕರಾದ ಶ್ರೀ ಕೆ. ಪಿ. ಸೂರ್ಯನಾರಾಯಣ ರಾಯರು ಸ್ವಾಗತ ಭಾಷಣ ಮಾಡುತ್ತಾ, ಈ ಕೋರ್ಸಿಗೆ ತರಬೇತಿ ಹೊಂದಿದ ಅಧ್ಯಾಪಕರಿಂದ ಹೆಚ್ಚಿನ ಪ್ರೋತ್ಸಾಹ ದೊರಕಿಲ್ಲವೆಂಬುದಾಗಿ ಹೇಳಿದರು. ಪ್ರಕೃತದ ಕೋರ್ಸಿನಲ್ಲಿ 29 ಮಂದಿ ಅಧ್ಯಾಪಕರು ತರಬೇತಿಯನ್ನು ಪಡೆದಿರುವರಾಗಿ ತಿಳಿಸಿದರು.

ವಿದ್ಯಾರ್ಥಿಗಳ ಕಡೆಯಿಂದ ಶ್ರೀಗಳಾದ ಬಿ. ಮಂಜುನಾಥ ಭಟ್, ಹಸನ್ ಕೊಲ್ಲಾಡ್, ಶಬ್ದನಾಥ ನಾವಡ ಮತ್ತು ಶ್ರೀಮತಿ ಗಿರಿಜಾ ಬಾಯಿಯವರು ತರಬೇತಿ ಅವಧಿಯಲ್ಲಿ ತಾವು ಪಡೆದ ಅನುಭವಗಳನ್ನು ವಿವರಿಸಿದರು. ಅಧ್ಯಾಪಕವೃಂದದ ಪರವಾಗಿ ಶ್ರೀ ಶ್ರೀನಿವಾಸ ಉಡುಪರು ಮಾತನಾಡಿ, ಈ ಕೋರ್ಸಿನಲ್ಲಿ ತರಬೇತಿ ಹೊಂದಿದವರು ತಮ್ಮ ತರಬೇತಿಯ ಅನುಭವವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೇಳಿಕೊಂಡರು.

ತರಬೇತಿ ಅಧ್ಯಾಪಕರಿಂದಲೇ ತಯಾರಿಸಲ್ಪಟ್ಟ ವಸ್ತುಗಳ ಪ್ರದರ್ಶನವನ್ನು ಜಿಲ್ಲಾ ವಿದ್ಯಾಧಿಕಾರಿಗಳು ಉದ್ಘಾಟಿಸಿದರು. ನಂತರ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮೈಸೂರು ರಾಜ್ಯದ ವಿದ್ಯಾಭ್ಯಾಸ ಪ್ರಗತಿಯ ನಿಯೋಜಿತ ಪುನರ್ರಚನೆಯಲ್ಲಿ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಸ್ಥಾನವನ್ನು ಕೊಡಲಾಗುವುದು ಎಂದು ಹೇಳಿ ಅಧ್ಯಾಪಕರೂ ವಿದ್ಯಾರ್ಥಿಗಳೂ ಈ ವೃತ್ತಿ ಶಿಕ್ಷಣವನ್ನು ಸದುಪಯೋಗಗೊಳಿಸಬೇಕೆಂದರು. ಶಾಲೆಗಳ ವೃತ್ತಿಪರ ಶಿಕ್ಷಣದ ವಿಭಾಗದಲ್ಲಿ ಓರ್ವ ವಿದ್ಯಾರ್ಥಿಗಳಿಗೆ ಇಂತಿಷ್ಟೇ ಉತ್ಪಾದನೆಯನ್ನು ಮಾಡಬೇಕೆಂಬ ನಿಯಮವನ್ನು ಸರಕಾರವು ಬರುವ ವರ್ಷದಿಂದ ಕಾರ್ಯರೂಪಕ್ಕೆ ತರಲಿರುವುದಾಗಿಯೂ ಹೇಳಿದರು. ವಿದ್ಯಾರ್ಥಿಗಳು ಮನಃಪೂರ್ವಕವಾಗಿ ಯಾವುದೇ ವೃತ್ತಿಯನ್ನು ಕಲಿಯಲು ಅನುಕೂಲವಾಗುವಂತೆ ಅವರ ಮನಸ್ಸನ್ನು ಅಕಡೆಗೆ ಒಲಿಸುವಲ್ಲಿ ವೃತ್ತಿಪರ ಶಿಕ್ಷಕರ ಜವಾಬ್ದಾರಿ ಮಹತ್ತರವಾಗಿದೆ ಎಂದೂ ಶ್ರೀ ಕುಡುಬಿಯವರು ಹೇಳಿದರು.

ಸತ್ಕಾರ ಕೂಟ— ಉಜಿರಾಡ್ಯಾಯರ ಮತ್ತಾರ ಕ್ಷೇತ್ರದಿಂದ ಮೈಸೂರು ವಿಧಾನ ಪರಿಷತ್ತಿಗೆ ಆಯಸ್ಕಟ್ಟಿ ಕನ್ನಡ ಸಹಕಾರಿಯ ಸಂಪಾದಕ ಶ್ರೀ ಎಸ್. ಮುಕುಂದರಾಯರು ಸತ್ಕರಿಸುವ ಸಮಾರಂಭವು ತಾ. 20ರಂದು ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಸಭಾಭವನದಲ್ಲಿ ಶ್ರೀ ಎಮ್. ಎಸ್. ಜಾಟರ ಅಧ್ಯಕ್ಷತೆಯಲ್ಲಿ ಜರಗಿತು.

ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ಸ್ವಾಗತ ಮಾತುಗಳನ್ನಾಡಿದರು. ಶ್ರೀಗಳಾದ ಜಿ. ಮಂಜಯ್ಯ ಹೆಗ್ಡೆ, ಎಸ್. ನರಸಿಂಹ, ಎಮ್. ಎಸ್. ಏಕಾಂಬರ ರಾವ್, ಎಮ್. ಸಿ. ಅಬ್ದುಲ್ಲಾ ಮೊದಲಾದವರು ಮುಖ್ಯ ಅತಿಥಿಯ ಕುರಿತು ಕಾಲೋಚಿತ ಮಾತುಗಳನ್ನಾಡಿದರು ಜಿಲ್ಲೆಯ ಏಳಿಗೆಗಾಗಿ ತಾನು ಶ್ರಮಿಸುವೆನೆಂದು ಶ್ರೀ ಮುಕುಂದರಾಯರು ಉತ್ತರವಿತ್ತರು.

ಶ್ಯಾನುಭಾಗರ ಸಭೆ— ಮಂಗಳೂರು ಶ್ಯಾನುಭಾಗರ ಸಭೆಯು ತಾ 21ರಂದು ಶ್ರೀ ಡಿ. ಮೋಹನ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಮೈಸೂರು ಸಂಸ್ಥಾನದಲ್ಲಿಯೂ ಇನ್ನಿತರ ನೆರೆರಾಜ್ಯಗಳಲ್ಲಿಯೂ ಕೆಳಮಟ್ಟದ ನೌಕರರಿಗೆ ಸಂಬಳ ಪರಿಷಲ್ಪಟ್ಟಿದೆಯಾದರೂ ಶ್ಯಾನುಭಾಗರ ಸಂಬಳ ಏರದೆ ಇರುವುದು. ಆದುದರಿಂದ ಶ್ಯಾನುಭಾಗರಿಗೆ ಕಡಿಮೆಪಕ್ಷ ಒಬ್ಬ ರೋವರ್ ಡಿವಿಜನ್ ಗುಮಾಸ್ತರಿಗೆ ಕೊಡುವ ರೂಪಾಯಿ 80/-ರಷ್ಟಾದರೂ ಮಾಸಿಕ ವೇತನ ಸಿಗಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ತಾಲೂಕು ಕೇಂದ್ರಕ್ಕೆ ಅಫೀಸು ಕೆಲಸದ ನಿಮಿತ್ತ ಬಂದಾಗ ನ್ಯಾಯವಾದ ಭತ್ತೆ ದೊರೆಯಬೇಕು, ತಾಲೂಕು ಕೇಂದ್ರದ ಐದು ಮೈಲು ವಿಸ್ತೀರ್ಣದೊಳಗಿರುವ ಶ್ಯಾನುಭಾಗರಿಗೆ ಮನೆಬಾಡಿಗೆ ದೊರೆಯಬೇಕು, ಕೆಳತರಗತಿಯ ಸರಕಾರಿ ನೌಕರರಿಗೆ ಈಗ ಸಿಗುತ್ತಿರುವ ಶಾಲಾ ಮತ್ತು ಆಸ್ಪತ್ರೆಯ ಸೌಕರ್ಯಗಳು ಶ್ಯಾನುಭಾಗರಿಗೂ ದೊರೆಯಬೇಕು. ಈಗ ಹೊಸತಾಗಿ ತಯಾರಿಸಬೇಕೆಂದು ಹೆಸರು ಮಾಡಲ್ಪಟ್ಟ ಟೆನೆಸ್ಸಿ ಮತ್ತು ಕ್ರೋಸ್ ಡಿಜಸ್ಟರನ್ನು ಸರಿಯಾಗಿ ನ್ಯಾಯವಾದ ರೀತಿಯಲ್ಲಿ ತಯಾರಿಸಲು ಪ್ರತಿಯೋರ್ವ ಶ್ಯಾನುಭಾಗರಿಗೂ ಒಬ್ಬೊಬ್ಬ ಸಹಾಯಕನನ್ನು ಕೊಡಬೇಕು ಎನ್ನುವ ಕುರಿತು ನಿರ್ಣಯಗಳಾದುವು.

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ಸ್ಟೈಟ್ ಹಾಸ್ಟೆಲಿನ ಸಂಚಾಲಕರಾದ ಮುಂಬಯಿಯ ಬಂಟರ ಯಾನೆ ನಾಡವರ ಸಂಘದವರು ಇಲ್ಲಿಯ ಕಾಲೇಜುಗಳಲ್ಲಿ ಕಲಿಯುವ ಯಾ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿವೇತನ ರೂಪದಿಂದ ಸಾಲ ಕೊಡುವುದರಿಂದ ಧನಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ತಾ. 31.6.58ರೊಳಗೆ ಅರ್ಜಿ ಮಾಡಬೇಕಾಗಿ ಅಪೇಕ್ಷಿಸಲಾಗಿದೆ.

Hon General Secretary
Bunt Alias Nadava Sangha
17 Kumta Street Bombay

ದಿ ವಿಜಯಾಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸುಜನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಊಡಿನ ಮೇಲೆ ಪಡೆದ ಸಾಲವನ್ನು ಮರುಸಾವತಿಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ವಟ್ಟಿನ್ ಯಾವುವನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಅಲ್ಲದೆ ಇನ್ನೂ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೆನೇ ಖಾವಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗವನ್ನು ಇದೇ ಜುಲೈ ತಿಂಗಳ ತಾರೀಕು 4ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ-ಯಾ-ಬೇಂತಿಗೆ ಯಃಕ್ತಕಂಡ ಇತರ ದಿನಗಳಲ್ಲಿ ಮುನಃ ನೋಟೀಸು ಕೊಡಬೇನೇ ಬೇಂಕಿನ ಪರಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು ತಿಳಿದಿರಲಿ.

ಸಾಲದ ಜಂಜ್ಯಾ ಸಂಖ್ಯೆ	ಹೆಸರು ಮತ್ತು ವಿಳಾಸ	ಮೊಬಲಗು ರೂ.	ನ.ಪೈ.
58/56	ಶ್ರೀಮತಿ ಸುಬ್ಬಮ್ಮ, ಹವಾಲ್ದಾರ್ ಸುಬ್ರಾಯ ಸೇರುಗಾರರ ಹೆಂಡತಿ, ಬೀಯಾರ್ ಬೈಂದೂರು.	11	25
681/57	—do—	11	—
592/56	ಶ್ರೀ. ಯು. ಸುಬ್ರಹ್ಮಣ್ಯ ಬ್ಯಾರಿ. ಮಂಜುನಾಥ ಬ್ಯಾರಿಯವರ ಮಗ, ಉಳ್ಳೂರು ಗ್ರಾಮ ಕಿರಿಮಂಜೇಶ್ವರ	246	87
593/56	—do—	527	19
602/56	ಶ್ರೀ. ಮದ್ದೋಡಿ ರಾಮಕೃಷ್ಣ ಸೇರುಗಾರ. ಹನುಮಂತ ಸೇರುಗಾರರ ಮಗ. ಮಯ್ಯಾಡಿ. P. O.	30	25
1158/56	—do—	23	44
657/56	ಶ್ರೀ. ಮದ್ದೋಡಿ ಮಂಜುನಾಥ ಸೇರುಗಾರ. ಗಣಪಯ್ಯ ಸೇರುಗಾರರ ಮಗ, ಮಯ್ಯಾಡಿ. P. O.	65	75
1160/56	ಶ್ರೀ. ಪಿಣ್ಣಿ ಕೋಟಿದಾರ. ನಾಗಿಯ ಮಗ, ಕ್ಷಬಾ. ಬೈಂದೂರು.	14	19
1291/56	ಶ್ರೀ. ಹೊನ್ನಯ್ಯನ ಮಂಜುನಾಥ ಸೇರುಗಾರ. ಅಣ್ಣಪ್ಪ ಸೇರುಗಾರರ ಮಗ ಪಡುವರಿ.	51	25
1300/56	ಶ್ರೀ. ಬೀಳನಮಕ್ಕಿ ಸುಬ್ಬಣ್ಣ ಸೆಟ್ಟಿ, ಮಾದಯ್ಯ ಸೆಟ್ಟರ ಅಳಿಯ, ಯರುಕೋಣೆ ನಾವುಂದ. P. O.	192	94
594/56	ಶ್ರೀ. ನಾಕಟ್ಟೆ ಶೇಷ ಸೆಟ್ಟಿ, ದಾರ ಸೆಟ್ಟರ ಅಳಿಯ, ಬೈಂದೂರು.	231	—
1077/56	ಶ್ರೀ ಮಂಜಯ್ಯ ಸೆಟ್ಟಿ. ಗೋವಿಂದ ಸೆಟ್ಟರ ಅಳಿಯ, ಮಯ್ಯಾಡಿಯನೆ ಸೂಕುರಿಂದ, ಬೈಂದೂರು.	85	—
1281/56	ಶ್ರೀ. ಸುಬ್ಬಯ್ಯ ದೇವಡಿಗ. ಕಾಯಿಸಿ ಸುಬ್ಬನ ಅಳಿಯ, ಬಾಯಮ್ಮನ ಹಿಂಡ್ಲು ಉಪ್ಪುಂದ.	52	94
49/57	ಶ್ರೀ ಮದ್ದೋಡಿ ಶೇಷಯ್ಯ ಸೇರುಗಾರ. ಬಿನುಮಂತ ಸೇರುಗಾರರ ಮಗ, ರಿಟಾಯರ್ಡ್ ಫೋರೆಸ್ಟರ್, ಮಯ್ಯಾಡಿ P. O.	13	75
50/57	ಶ್ರೀ. ಸುಬ್ಬ ಮೊಗೇರ. ವೆಂಕ್ಟನ ಅಳಿಯ, ದಳ್ಳಾಯಿ ಹಿತ್ತಿಲು ಶಿರೂರು.	221	44
259/57	ಶ್ರೀ. ಬಿ. ದೇವಪ್ಪ ಸೇರುಗಾರ. ಭದ್ರಯ್ಯನ ವೆಂಕಟ್ರಮಣ ಸೇರುಗಾರರ ಮಗ, ಬಾತ, ಬೈಂದೂರು P. O.	26	06
321/57	ಶ್ರೀ. ಪಾಂಡುರಂಗ ಸೇರುಗಾರ. ದಾಸ ಸೇರುಗಾರರ ಮಗ, ಬಿಜೂರು.	44	50
344/57	ಶ್ರೀ. ಮಹ್ಮದ್ ಮೀರಾ ಸಾಹೇಬ್. ಮಹ್ಮದ್ ಹುಸೇನ್ ಸಾಹೇಬರ ಮಗ, ಕೇರಿ ಬೈಂದೂರು.	197	—
402 57	ಶ್ರೀ. ಇಸ್ಮಾಯಿಲ್ ಮಹ್ಮದ್ ಅಕ್ಬರ್. ಅಬೂಬಕರ್ ಮಗ, ಕಲಿಫಾಂಸ್ಟ್ರೆ, ಬಟ್ಟೆಕಳ.	90	50
590/57	ಶ್ರೀ. ಅಪ್ಪಯ್ಯನ ತಿಮ್ಮಪ್ಪ ಸೇರುಗಾರ. ನಾಗಪ್ಪ ಸೇರುಗಾರರ ಮಗ ಪಡುವರಿ.	199	81
687/57	ಶ್ರೀ. ಸುಬ್ಬಗಣಪಕಾರ್ವಿ. ಮಂಜನಮಗ. ತಾರಾಪತಿ, ಪಡುವರಿ.	54	25
927/57	ಶ್ರೀ. ಹೆಬ್ಬಾಗಿಲು ಶಂಕರ ಸೇರುಗಾರ. ಮಂಜಯ್ಯ ಸೇರುಗಾರರ ಮಗ, ಮಯ್ಯಾಡಿ. P. O.	43	—
470/57	ಶ್ರೀ. ರಾಮ ಬಿಲ್ಲವ. ಸಸಿಹಿತ್ಲು ಮಲ್ಲು ಅಳಿಯ, ಮಯ್ಯಾಡಿ P. O.	106	37

ಬೈಂದೂರು,
20—6—1958.

ಎಚ್. ರಾಜೀವ ಸೆಟ್ಟಿ,
ಮೆನೇಜರ್.

ವೇದಕಾಲದಿಂದ ಹರ್ಷನ ವರೆಗೆ

(ಅನೇ ಮುಂದಿಂದ)

ಹರ್ಷನ ರಾಜ್ಯಭಾರ

ವಿಶಾಲವಾದ ಸಾಮ್ರಾಜ್ಯವನ್ನು ಹರ್ಷನು ದಕ್ಷತೆಯಿಂದಲೂ, ಶ್ರದ್ಧೆಯಿಂದಲೂ ಪರಿಪಾಲಿಸುತ್ತಿದ್ದನು. ದೇಶರಕ್ಷಣೆಗಾಗಿ ಬಲವಾದ ಚತುರಂಗ ಬಲವಿತ್ತು. ಹರ್ಷನ ರಾಜ್ಯಭಾರ ಕ್ರಮವು ಗುಪ್ತರ ಕ್ರಮವನ್ನು ಹೋಲುತ್ತದೆ. ಪ್ರಾಂತ್ಯ, ಜಿಲ್ಲೆ, ಗ್ರಾಮಗಳ ಆಡಳಿತೆಯನ್ನು ಆಯಾ ಪ್ರದೇಶದ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರಲ್ಲದೆ ಹರ್ಷನು ಸ್ವತಃ ದೇಶದ ಪ್ರತಿಯೊಂದು ವಿಭಾಗಗಳನ್ನೂ ಸಂದರ್ಶಿಸುತ್ತಿದ್ದನು. ರೈತರು ತಮ್ಮ ಆದಾಯದ ಆರನೆ ಒಂದು. ಅಂಶವನ್ನು ಕಂದಾಯದ ರೂಪದಲ್ಲಿ ತೆರಬೇಕಾಗಿತ್ತು. ಕರಿಣ ತೆರಿಗೆಯು ಹೇರಲ್ಪಡುತ್ತಿರಲಿಲ್ಲ. ರಾಜ್ಯದ ಆದಾಯದ ಕಾಲಂಶ ಸರಕಾರದ ಖರ್ಚಿಗೂ, ಇನ್ನೊಂದು ಅಂಶ ಅಧಿಕಾರಿಗಳ ಸಂಬಳಕ್ಕೂ, ಮತ್ತೊಂದು ಅಂಶ ಸಾಹಿತ್ಯ, ಕಲೆಗಳ ಪ್ರೋತ್ಸಾಹಕ್ಕೂ, ಉಳಿದಂಶ ವಿವಿಧ ಧರ್ಮಗಳ ಪ್ರಚಾರಕ್ಕಾಗಿಯೂ ಉಪಯೋಗಿಸಲ್ಪಡುತ್ತಿತ್ತು.

ತಪ್ಪಿತಸ್ಥರು ಕಠಿಣವಾಗಿ ಶಿಕ್ಷಿಸಲ್ಪಡುತ್ತಿದ್ದರು. ಸಮಾಜದ ಹಿತಕ್ಕೆ ಭಂಗವನ್ನುಂಟುಮಾಡಿದವರಿಗೆ ಜುಲ್ಮಾನೆ, ಅವರ ಕೈಕಾಲುಗಳನ್ನು ಕಡಿಯುವುದು ಅಥವಾ ಜೀವಾವಧಿ ಶಿಕ್ಷೆಗಳನ್ನೀಯುವುದು ಆಚರಣೆಯಲ್ಲಿತ್ತು. ಉತ್ತಮ ರೀತಿಯ ಆಳುಕೆಯು ನಡೆಸಲ್ಪಡುತ್ತಿದ್ದುದರಿಂದ ಅಥವಾ ಸಮಾಜ ದ್ರೋಹಿಗಳ ಸಂಖ್ಯೆ ಕಡಿಮೆಯಾಗಿದ್ದುದರಿಂದ ರಾಜ್ಯವು ಉತ್ತಮ ಸ್ಥಿತಿಯಲ್ಲಿತ್ತೆಂದು ಹ್ಯೂಎನ್ ತ್ಸಾಂಗನು ಬರೆಯುತ್ತಾನೆ.

(ವಿವಿಧ ಆಧಾರ ಗ್ರಂಥಗಳ ಸಹಾಯದಿಂದ)

ನಮ್ಮ ನಿಮ್ಮ ಅದೃಷ್ಟ ಪರೀಕ್ಷೆ—

ಜನತೆಯಲ್ಲಿ ಆತ್ಮವಿಶ್ವಾಸವಿರಬೇಡವೆ?

ರಾಜಸ್ಥಾನದ ಸುಪ್ರಸಿದ್ಧ ಕಳ್ಳ ಕಲ್ಯಾಣಸಿಂಹನು ಹನ್ನೆರಡು ತಾಸುಗಳವರೆಗೆ ಪೋಲೀಸರೊಡನೆ ಹೊಡೆದಾಗಿ ಸತ್ತು ಹೋಯಿದನಲ್ಲದೇ ತಾನು ಮರಣ ಹೊಂದುವ ಗಳಲ್ಲಿ ಪೋಲೀಸು ಅಧಿಕಾರಿಯೊಬ್ಬನ ಪ್ರಾಣವನ್ನೂ ತೆಗದುಕೊಂಡು ಹೋದನು

ಆತನು ಮರಣ ಗೊಂಡನಂತರ ಅವನೊಡನೆ ದೊರೆತ ವಸ್ತುಗಳಲ್ಲಿ ಒಂದು ಪತ್ರವಿತ್ತು ಆ ಪತ್ರವು ಒಬ್ಬ ಜ್ಯೋತಿಷಿಯ ಬರಹದಲ್ಲಿದ್ದು, ಅದು ಕಲ್ಯಾಣಸಿಂಹನು ಮಾಡಿದ ದಿನವು ಆತನಿಗೆ ಶುಭಪ್ರದವಾಗಿಲ್ಲವೆಂದು ಮೊದಲೇ ಬರೆದ ಭವಿಷ್ಯವಾಣಿಯಾಗಿತ್ತು ಎಂದು ಹೇಳಲಂಗಿದೆ

ಈಗ ಮಧ್ಯ ಪ್ರದೇಶಕ್ಕೆ ಸೇರಿದ ಮಧ್ಯಭಾರತದ ಚೋರನಾದ ಮಾನಸಿಂಹನನ್ನೂ ಪೋಲೀಸರು ಇದೇ ರೀತಿಯಲ್ಲಿ ಕೊಂದಿದ್ದರು ಮಾನಸಿಂಹನು ಕಲ್ಯಾಣಸಿಂಹನಿಗಿಂತಲೂ ಹೆಚ್ಚಾಗಿ ಉತ್ತರ ಪ್ರದೇಶ ಮತ್ತು ಮಧ್ಯಭಾರತಗಳಲ್ಲಿ ಅಧಿಕ ಅನಿಯ ಮತ್ತು ಭಯಂಕರನ್ನು ಕಟ್ಟಿಸುತಿದ್ದನು ವರ್ಷಗಟ್ಟಲೆಯಲ್ಲಿ ಪೋಲೀಸರು ಅವನನ್ನು ಹಿಂಬಾಲಿಸುತಿದ್ದರೂ ಅವನವರ ಕೈಗೆ ಸಿಗಲಿಲ್ಲ ಆತನ ವೀರತೆ ಮತ್ತು ಸಾಹಸಕೃತ್ಯಗಳ ಕಥೆಯು ಹಳ್ಳಿಗಳಲ್ಲೆಲ್ಲಾ ಪ್ರಚಾರದಲ್ಲಿತ್ತು ಅವನು ಬಡವರಿಗೆಯೂ ಮತ್ತು ಸಹಾಯ ಕನಂದು ಹೇಳುತ್ತಾರೆ ಆದುದರಿಂದಲೇ ಪೋಲೀಸರು ಬಹುಕಾಲದವರೆಗೆ ಆತನ ಮೇಲೆ ಕೈಮಾಡಲು ಅಸಮರ್ಥರಾದರು ಆದರೆ, ಕೊನೆಗೊಂದೆಡೆ ಅವನು ಕೊಲ್ಲಲ್ಪಟ್ಟನು ಆತನ ಹತಯಾದ ಮೇಲೆ, ಮಧ್ಯಭಾರತದ ಆ ಸಮಯದ ಒಬ್ಬ ಉನ್ನತಾಧಿಕಾರಿಯು ಒಂದು ಕೂಟವನ್ನೇರ್ಪಡಿಸಿದನು ಜನರು ಹರ್ಷ ಧ್ವನಿಯನ್ನು ಗೆಯ್ಯುತ್ತ ಅದರಲ್ಲಿ ಭಾಗವಹಿಸಿದರು

ಈ ಕೂಟದಲ್ಲಿ ಅಧಿಕಾರಿಯು ತಮ್ಮ ಕಾಶ್ಮೀರ ಸಾಹಸ್ರಿಯ ವರ್ಣನೆ ಮಾಡುತ್ತ ತಾವು ತಮಂ ಕಂದಕಕ್ಕೆ ಹೋದ ಗ ಅಲ್ಲಿ ಭಗವಂತ ಶಿವನಿದ ಜೋರರಾಜ ಮಾನಸಿಂಹನನ್ನು ಕೊಲ್ಲುವ ಶಕ್ತಿಯೊಯವ ವರವನ್ನು ಪಡೆದಿದ್ದೇವೆ ಎಂದರು ಮಾನಸಿಂಹನ ಮರಣಕ್ಕೆ ಮೊದಲವರು ಈ ಮಾತನ್ನು ಎಲ್ಲಿಯೂ ಪ್ರಚಾರಮಾಡದಿರುವುದು ಒಂದು ಆಶ್ಚರ್ಯದ ಮಾತಾಗಿದ

ಒಬ್ಬ ಜ್ಯೋತಿಷಿಯ ಭವಿಷ್ಯವಾಣಿಯಲ್ಲಿ ವಿಶ್ವಾಸವಿಟ್ಟು ಒಬ್ಬ ಕಳ್ಳ ಮತ್ತು ಆಮರ ಕಂಟಕದಲ್ಲಿ ದೇವರಿಂದ ವರದಾನ ಪಡೆದ ದರಲ್ಲಿ ನಂಬಿಕೆಯಿಂದಿದ್ದ ಒಬ್ಬ ಅಧಿಕಾರಿಗಳ ಬುದ್ಧಿಯಲ್ಲಿ ಯಾವ ಅಂತರವಿದೆ ಎಂಬ ಪ್ರಶ್ನೆಯೇಳುತ್ತದೆ

ಈ ಎರಡೂ ಘಟನೆಗಳು ಏಕಾಂಯಲ್ಲಿ ಆ ಜ್ಯೋತಿಷಿ ಮತ್ತು ವರದಾನಗಳ ಆವರ್ತದಲ್ಲಿಯೇ ನಮ್ಮ ದೇಶವು ಸಿಕ್ಕಿಬಿದ್ದಿದೆ ಕೇವಲ ಏನೂ ತಿಳಿಯದ ಅಜ್ಞರಲ್ಲಿ, ಬುದ್ಧಿವಂತರೆಂದು ಕರೆಯಲ್ಪಡುವ ವ್ಯಾಪಾರಿಗಳು, ಓದುಬರಹ ಕಲಿತ ರಾಯ'ರು, ಆದಳತೆ ನಿರ್ವಹಿಸುವ ನಮ್ಮ ಸಣ್ಣ ದೊಡ್ಡ ಮಂತ್ರಿವರ್ಯರು-ಎಲ್ಲರೂ ತಂತಮ್ಮ ಅದೃಷ್ಟವನ್ನು ಅವರ ಕೈಗೊಪ್ಪಿಸಿ ಬಿತ್ತಾರೆ ಉನ್ನತೋನ್ನತ ಅಧಿಕಾರಿವರ್ತ್ತು ಕರ್ಮಚಾರಿಗಳ ಸಂಗತಿಯಲ್ಲಿ ಈ ಸಮಾಚಾರ ಕೇಳುವಾಗ ನಾ ತ್ರ ವಿಚಿತ್ರವೆನಿಸುತ್ತದ ಧರ್ಮ ಕರ್ಮಗಳಲ್ಲಿ ಅಂದ ವಿಶ್ವಾಸ, ರೂಢಿ ಮತ್ತು ಪರಂಪರೆಗಳಲ್ಲಿ ಮೂಢಧಾರಣೆ ಮತ್ತು ಕಪೋಕಲ್ಪಿತ ಸಾಮಾಜಿಕ ಮರ್ಯಾದೆಗಳು ಅನ್ಯರಿಗ ಶಿಕ್ಷೆಯೊಯ ಲು ಸಂಕಂಗುವುದಾದರೂ ಈ ಜನರಿಗಾಗಿ ಸೂ ಇದ್ದತ್ತವೆ ಸೇಟೆ ಪಟ್ಟಣ ಮತ್ತು ಹಳ್ಳಿಗಳ ಜನರ ಪಾದ ತೊಳೆದ ಸಮಾಚಾರ ಕೇಳಿದರೂ ಬೇರೆಯವರು ಇದರಿಂದ ಪಾಠ ಕಲಿಯುವುದಿಲ್ಲ ಅಂದ ಜನರ ಹಿಂದ ತಾವೂ ಹಿಂಬಾಲಿಸಿ ನಡೆದು ಹೋಗುತ್ತಾರೆ

ಯಾರೇ ಆಗಲಿ ನಾಲ್ಕರು ಚೇಲರನ್ನು ತನ್ನ ಹಿಂದ ಕಟ್ಟಿಕೊಂಡರೆ ನಮ್ಮ ದೇಶದಲ್ಲಿ ಸಿದ್ಧನಂಗಿ ಹೋಗುತ್ತಾನೆ ಯಾರೊಬ್ಬನಂದರೂ ಕಂಕಳಲ್ಲಿ ಒರಳೆತಿಂದ ಹಳೆಯ ಪುಸ್ತಕವನ್ನಿಟ್ಟುಕೊಂಡ ಮಾಸ್ತಕ್ಕ ಜ್ಯೋತಿಷಿಯೆಂದು ಹೆಸರಿಟ್ಟುಕೊಳ್ಳಲು ಅರ್ಹನಾಗುತ್ತಾನೆ ಕೊಂಚ ಓದುಬರಹ ತಿಳಿಯದೆ ತಿಳಿಯದೆ ಇರಲಿ, ಕೈಯಲ್ಲಿಯ ರೇಖೆಗಳನ್ನು ನೋಡಿ ಆಕಾಶ ಪಾತಾಳಗಳ ನಡುವೆ ಏಣಿ ಕಟ್ಟಲು ಸಮರ್ಥನಂದವನು ಬೂತ ಭವಿಷ್ಯಗಳನ್ನು ಆಡುವಲ್ಲಿ ಜಿಜ್ಞಾಸಿಯಾಗಿ ಹೋಗುತ್ತಾನೆ ಗ್ರಹ ಉಪಗ್ರಹ ವಕ್ರ ನಕ್ಷತ್ರಗಳ ವಿಷಯದಲ್ಲಿ ಏನೂ ತಿಳಿಯದಿರುವವನೂ ಗುರು ಇಲ್ಲದೇ ಊಹಾಧ್ಯಯನಾಗಿದ್ದಲ್ಲದೆ ಜನತೆಯ ಪೂಜೆಗ ಅರ್ಹನಾಗುವನು—ಆದುದರಿಂದಲೇ ಎಂದೇ ಹೇ ಶನಿಯ ಪ್ರಕೋಪದಿಂದ ಮುಕ್ತನಾಗಿಸುವ ಆಡಂಬರವನ್ನು ಮಾಡಿ ಇನ್ನೊಬ್ಬರನ್ನು ಮೂರ್ಖರನ್ನಾಗಿಸುತ್ತಾರೆ ವಿದ್ಯಾವಂತ ಮತ್ತು ಬುದ್ಧಿವಂತ ಜನತೆಯಿರುವ ದೇಶದ ಜನರು ಅದೃಷ್ಟವನ್ನು ಇಂತಹ ಜನರ ಕೈಯಲ್ಲಿ ಕೊಟ್ಟಿರೆ, ಯಾವುದೇ ರೀತಿಯ ಸುಧಾರಣೆಯು ಹೇಗ ಗಬೇಕು? ದೇಶದ ಸುಧಾರಣೆಯ ಪ್ರತಿ ಹೆಜ್ಜೆಯಲ್ಲೂ ಅಂತಹ ಜನರು ತಮ್ಮ ಪಾದಗಳಿಂದ ಮಟ್ಟಿ ತುಳಿಯಲು ಸಿದ್ಧರಿರುತ್ತಾರೆ ಜನತೆಯು ಸ್ವಾತಂತ್ರ್ಯದೆದುರು ಅವರ ಈ ವಿಧ್ಯ ವ್ಯಾಪಾರವು ನಡೆಯಲಾರದು ಆದುದರಿಂದ ಅವರ ಹೃದಯ ಅಜ್ಞಾನ ಬುದ್ಧಿಗಳು ಸ್ವತಂತ್ರವಿರಲು ಇಂತಹ ದ್ರೋಹಿಗಳು ಒಪ್ಪುವುದಿಲ್ಲ ಇದಕ್ಕಾಗಿ ಜನರನ್ನು ಮೂಢರನ್ನಾಗಿ ಮಾಡಿ ತಮ್ಮ ಮೋಸಜಾಲಕ್ಕೆ ಸಿಕ್ಕಿಸಿಹಾಕುವ ಪ್ರಯತ್ನ ಮಾಡುತ್ತಿರುತ್ತಾರೆ

ರಿಪ್ಬ್ಲಿಕ್ಕು ಎಂದು ಕರೆಯಲ್ಪಡುವ ಪತ್ರಿಕೆಗಳೂ ಜನತೆಯನ್ನು ಈ ಸಮುದ್ರದಲ್ಲಿ ಮುಳುಗಿಸುವುದನ್ನು ಕಾಣುವಾಗ ಆಶ್ಚರ್ಯಕ್ಕೆ ಸೀಮೆಯಿರುವುದಿ ಜನತೆಗೆ ಸರಿಯಾದ ಮಾರ್ಗವನ್ನು ತೋರಿಸುವುದೇ ಇವುಗಳ ಕರ್ತವ್ಯ ಇವುಗಳಲ್ಲಿ 'ಭವಿಷ್ಯ'ವೆಂಬ ಹೆಸರಿನಲ್ಲಿ ಪ್ರಕಟವಾಗುವ ವಿಷಯಗಳಲ್ಲಿ ನಿರಾಧಾರವಾದುವುಗಳೇ ಹೆಚ್ಚು ಇದರಿಂದಾಗಿ ಜನರು ಮೂರ್ಖರಾಗುತ್ತಾರೆ ಬೇರೆ ಬೇರೆ ಪತ್ರಿಕಗಳಲ್ಲಿ ಬರುವ ಭವಿಷ್ಯವೆಲ್ಲವನ್ನೂ ಒಂದ ಸೇರಿಸಿ ಓದಿದರೆ, ಒಂದರೊತನೆಂದು ಎಂದಿಗೂ ಹೊಂದಿಕೆಗಾಂದಿರ ವು ಒ ಅದುದರಿಂದಲೇ ಇವು ಮೋಸ ಭವಿಷ್ಯವಾಗಿದ್ದ ಅವಿಶ್ವಾಸಾರ್ಹವಾಗಿವೆ

ಹೀಗಿದ್ದರೂ ಜನರು ಅವುಗಳಲ್ಲಿ ವಿಶ್ವಾಸವಿಟ್ಟು ಮೂರ್ಖರಾಗುತ್ತಾರೆ ರಾಷ್ಟ್ರೀಯ ಪತ್ರಿಕಗಳ ಅವಸ್ಥೆಯೇ ಹೀಗಿರುವಾಗ ಬೆರೆಯುವುಗಳ ಸಂಗತಿ ಹೇಗೆ?

ಮನುಷ್ಯನು ಸ್ವಾಭಾವಿಕವಾಗಿಯೇ ಲೋಭಿಯೂ ಅಲಸಿಯುಳ್ಳವನೂ ಆಗಿದ್ದಾನೆ ಪ್ರಯಾಸವಿಲ್ಲದೆ, ಕಾಯಕಷ್ಟಪಡದೆ ದನ ಸಂಪಾದನೆ ಮಾಡುವ ಅಭಿಲಾಶಾಯುಕ್ತನಾಗಿದ್ದಾನೆ ಧನವಾದರೂ ತನ್ನ ಕೈಯಿಂದ ತಪ್ಪಿಸಿಕೊಂಡು ಹೋಗಬಾರದೆಂದು ಬಯಸುತ್ತಾನೆ. ಹೀಗಾಗಿ ಏನಾದರೊಂದ ಮುಖವ ಡವನ್ನು ಹಾಕಿಕೊಂಡು ಅದೃಷ್ಟವನ್ನು ಮುಂದಿಟ್ಟುಕೊಂಡು ಬರತ್ತನ ಕೆಲವರು ಸಿದ್ಧರಾಗುತ್ತಾರೆ ಬಂಗಾರದ ತಟ್ಟೆಯಿದ್ದರ ಅದನ್ನು ಎರಡು ಮಾಡುವನ ದು ಹೇಳುತ್ತಾರೆ! ಭಾಗ್ಯದಲ್ಲಿ ವಿಶ್ವಾಸವುಳ್ಳವರು ತಮ್ಮ ಅದೃಷ್ಟವನ್ನು ಪರೀಕ್ಷಿಸಲು ತಯಾರಾಗುತ್ತಾರೆ ಕೆಲವರು ತಮ್ಮ ಹಣವನ್ನು ಇಮ್ಮಡಿ ಮಮ್ಮಡಿಗೊಳಿಸುವ ಆಶೆಯಿಂದ ಹಣದ ಗಂಟನ್ನೇ ಅವರ ಕೈಗೀಯುತ್ತಾರೆ

ಪರಮಾತ್ಮನ ದರ್ಶನ ಮಾಡಿಸುವರ ಕುರಿತು ಏನು ಹೇಳಬಹುದು? ಇಂದಿನ ಕಾಲದಲ್ಲಿ ಯಾರಾ ಅತವನ್ನು ಕಂಡಿದ್ದಾಗಿದ್ದರೂ ಇ ತಹ ವ್ಯವಹಾರ ನಡೆಯೇ ಇರುತ್ತದೆ

ಈ ವಿಧ ಜ ಒದ ಅಂಶ ನ್ನು ಯಾರು ಮತ್ತು ಹೇಗ ಮಾಡಬೇಕು ಎಂಬ ಪ್ರಶ್ನೆ ಏಳುವುದು ಶ್ರೀಮಂತರು ತುಳಿದ ದಾರಿಯನ್ನು ತುಳಿದವರು ನಡೆಯುವರೆಂದು ಹೇಳಲಾಗುತ್ತದೆ ದೈನಂದಿನ ವ್ಯಾಪಾರದಲ್ಲಿಯೂ ನಾವಿದನ್ನು ನೋಡಬಹುದು ಆದರೆ ನಮ್ಮಲ್ಲಿ 'ದೊಡ್ಡವರು' ಎನ್ನಿಸಿಕೊಳ್ಳುವವರೂ ಈ ಸಾಯಾಟಾಲದಲ್ಲಿ ಚಿಡಪಡಿಸುತ್ತಾರೆ ಸಾಮಾನ್ಯ ಜನರಿಂದಲೂ ಅವರಲ್ಲಿ ಹೆಚ್ಚು ವಿಶ್ವಾಸತಾಳಿದ್ದಾರೆ ಈ ಲೇಖನಾರಂಭದಲ್ಲಿ ಕೊಟ್ಟ ಚೋರ ಹಾಗೂ ಅಧಿಕಾರಿಗಳ ಉದಾಹರಣೆಯಿಂದ, ನಮ್ಮಲ್ಲಿ ಅತ್ಯುಚ್ಚ ಮತ್ತು ಅತಿ ನೀಚ ವರ್ಗಗಳವರಿಗಿನ ಎಲ್ಲ ವ್ಯಕ್ತಿಗಳೂ ಏಕಪ್ರಕಾರವಾಗಿ ಇದಕ್ಕೆ ಆಂಟಿಕೊಂಡಿರುವುದನ್ನು ಕಾಣಬಹುದು ಆದರೆ, ಈ ಪರದೆಯ ಯಾವಾಗಲೂ ಇಳಿಬಿಡುತ್ತಲಿದ್ದರೆ, ದೇಶೋದ್ಧಾರವಾಗದ ದೇಶವು ಸ್ವತಂತ್ರವಾದ ಮೇಲೆ ನಾವು ನಮ್ಮ ಪ್ರಗತಿಕಾರ್ಯಗಳನ್ನು ಕೈಗೊಂಡಿದ್ದೇವೆ ಇದಕ್ಕೆ ನಮ್ಮಲ್ಲಿ ಆತ್ಮವಿಶ್ವಾಸದ ಅಭಾವವಿದೆ. ಗ್ರಹ ನಕ್ಷತ್ರಗಳ ಪ್ರಭಾವದಲ್ಲಿ ಹಸ್ತರೇಖೆಗಳ ಎಣಿಕೆಯಲ್ಲಿ, ಜನ್ಮಕುಂಡಲಿಯ ಗಣನೆಯಲ್ಲಿ, ಬರೆಯಿಡಿದ ಪುಸ್ತಕಗಳಲ್ಲಿ ವಿಶ್ವಾಸವಿಡುವ ವ್ಯಕ್ತಿಗಳು ತಮ್ಮ ಭಾಗ್ಯವನ್ನರಸುತ್ತ ನಡೆಯಬೇಕ್ಕದ ಕೇವಲ ಇದರಿಂದ ಪ್ರಯೋಜನವಿಲ್ಲ ಇಂತಹವರಲ್ಲಿ ಆತ್ಮವಿಶ್ವಾಸವು ಕೊರೆಯಾಗಿ ಪರವಿಶ್ವಾಸದಿಂದ ನಿರಪಯೋಗಿಯಾಗುವನು.

ದೇಶದಲ್ಲಿ ಕೆಲವೊಂದು ಸತ್ಯಜ್ಯೋತಿಷಿಗಳಿರಬಹುದು, ಆದರೆ, ಎಲ್ಲೆಲ್ಲೂ ಕಂಚರಿಸುವ ಕಪಟ ಜ್ಯೋತಿಷಿ, ರಾವಣ ಸನ್ಯಾಸಿಗಳಿಂದ ಅವರ ಮುಖಕ್ಕೆ ಕರಿ ಬಳೆದಂತಾಗಿದೆ ಎನ್ನಿದ್ದರೂ ಆತ್ಮವಿಶ್ವಾಸ ರಹಿತನಾದ ಮನುಷ್ಯನನ್ನು ಯಾರೂ ಏನೂ ಉನ್ನತಗೊಳಿಸಲಾರರು ಇದಿದ್ದ ಪಕ್ಷದಲ್ಲಿ ಆತನು ತನ್ನುದ್ಧಾರವನ್ನಾದರೂ ಮಾಡಿಕೊಳ್ಳುವ ಪ್ರಯತ್ನ ನಡೆಸಿದರೆ, ಜಯಶೀಲನಾಗಬಹುದು ಜಗದ ಪರಮಾತ್ಮನ ಆಶೀರ್ವಾದವೂ ಇರಲಿ ಆದರೆ ಮುಖ್ಯವಾಗಿ ತನು ಮಂದೆ, ತನ್ನ ಹಂದೆ ಅದೃಷ್ಟ" ಎಂದಾಗಬೇಕ್ಕದೆ ಅದೃಷ್ಟದ ಬಾಲ ಹಿಡಿದು ನಾವು ನಡೆಯುವುದು ಶ್ರೇಯಸ್ಕರವಲ್ಲ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/ ದೀರ್ಘಕಾಲದ ಬಾಧೆಗ ರೂ 8/- (ಏ ಸಿ ಪ್ರತ್ಯೇಕ) ಎಲ್ಲೆಲ್ಲೂ ಸೂರಾಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಸ್ಟರು ಷಾ ಕಂಪೆನಿ, ಮಂಗಳೂರು—1.

ಪ್ರೆಸಿಡೆಂಟ್

ಪೌಂಟನ್ ಪೆನ್ನುಗಳು

ದುಂಡಗೆ ಚುಚ್ಚಯುಳ್ಳ ಪೆನ್ಸಿಲುಗಳು

ಶಾಯಿಗಳು



ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಸ್ವತಂತ್ರ ವಾತಾವರಣದ ಆವಶ್ಯಕತೆ

(೩ನೇ ಪುಟದಿಂದ)

ಅಧಿಕಾರ ನಡೆಸುತ್ತಿರಲಿಲ್ಲ. ಈ ಶಿಕ್ಷಣ ಕ್ರಮವು ಭಾರತದಲ್ಲಿ ಸುಮಾಯು ಹತ್ತನೆಯ ಶತಾಬ್ಧಿಯ ವರೆಗೆ ಕೆಲವೊಂದು ಆದರ್ಶಗಳೊಡನೆ ನಡೆದುಕೊಂಡು ಬರುತಿತ್ತು.

ಪ್ರಾಚೀನ ಚೀನದಂತಹ ಸುಸಂಸ್ಕೃತ ದೇಶಗಳಲ್ಲಿಯೂ ಶಿಕ್ಷಣ ಪದ್ಧತಿಯು ಸ್ವತಂತ್ರ ವಾತಾವರಣದಲ್ಲಿ ನಡೆಯುತಿತ್ತು. ಬೌದ್ಧ ಧರ್ಮಪ್ರಚಾರಾನಂತರ ಈ ಪೂರ್ವೀ ಮತ್ತು ಪಾಶ್ಚಾತ್ಯ ಬೌದ್ಧ ಧರ್ಮಾನುಯಾಯೀ ದೇಶಗ ಶಿಕ್ಷಣ ವ್ಯವಸ್ಥೆಯು ಹೆಚ್ಚಾಗಿ ಬುದ್ಧಸಂಘಗಳ ಆರಾಮ ಮತ್ತು ವಿಹಾರಗಳಲ್ಲಿ ಕೇಂದ್ರಿತವಾಯಿತು. ಆದರೆ, ಇಲ್ಲಿಯೂ ಭಾರತೀಯ ವಿಶ್ವವಿದ್ಯಾಲಯಗಳ ಧ್ಯೇಯವೇ ಇತ್ತು ಆ ಕಾಲದ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಕರ ಜೀವನವು ಸ್ವತಂತ್ರವಾಯು ಮಂಡಲದಲ್ಲಿ ಕಳೆಯಲ್ಪಡುತಿತ್ತು. ತಮ್ಮ ವಿಚಾರಾನುಸಾರ ಶಿಷ್ಯನ ಆದರ್ಶ ನಿರ್ಮಾಣವನ್ನವರು ಮಾಡುತಿದ್ದರು. ಇದನ್ನನುಸರಿಸಿ ವಿದ್ಯಾರ್ಥಿಗಳು ಯೋಗ್ಯ ಮಾನವರಾಗಿ ಸಂಸಾರರೂಪೀ ಪ್ರಯೋಗ ಶಾಲೆಗೆ ಬರುತಿದ್ದರು. ಅವರ ನಿರ್ಮಾಣದಲ್ಲಿ ಗುರುಗಳ ಇಚ್ಛೆಯೇ ಶಾಸಕ ವರ್ಗದ ಯಾವುದೇ ವಿಶೇಷ ಸ್ವಾರ್ಥವಿರುತ್ತಿರಲಿಲ್ಲ. ಸಮಾಜದ ವಿಶಾಸವೇ ಅವರ ಪರಮ ಧ್ಯೇಯವಾಗಿರುತಿತ್ತು.

ಇವರನಂತರ ಎರಡು ಪ್ರಮುಖ ಘಟನೆಗಳು ವಿಶ್ವದ ಆ ಪ್ರಾಚೀನ ಆದರ್ಶ ಶಿಕ್ಷಣ ಪದ್ಧತಿ ಮತ್ತು ಶಿಕ್ಷಣ ಸಂಸ್ಥೆಗಳ ವಿನಾಶವನ್ನು ಸದಾ ಮಾಡತೊಡಗಿದುವು ಒಂದನೆಯದಾಗಿ ಕ್ರಿಸ್ತ ಹಾಗೂ ಇಸ್ಲಾಮೀ ಧರ್ಮಾಧಿಕಾರಿಗಳು ಧರ್ಮಪ್ರಚಾರ ಕಾರ್ಯದೊಡನೆ ಹಸ್ತದಲ್ಲಿ ಖಡ್ಗ ಮತ್ತು ದಂಡ ಪಾಶಗಳನ್ನು ಧರಿಸಿ ಶಾಸಕರಾಗುವ ಪ್ರಯತ್ನ ನಡೆಸಿದರು. ಎರಡನೆಯದಾಗಿ ಮಧ್ಯ ಏಶಿಯಾ ಮತ್ತು ಉತ್ತರ ಯುರೋಪಿನ ಕಾಡುಜಾತಿಗಳು ರಾಜ್ಯಸ್ಥಾಪಿಸುವ ಉದ್ದೇಶದಿಂದ ಅಲ್ಲಲ್ಲಿ ಆಕ್ರಮಣ ನಡೆಸಿದರು ಈ ಎರಡು ಘಟನೆಗಳಿಂದಾಗಿ ಆ ಸಮಯದಿಂದ ಇಂದಿನವರೆಗೂ ವಿಶ್ವವು ಆಕ್ರಮಣಕಾರೀ ಶಕ್ತಿಗಳ ಆಘಾತದಿಂದ ಬಳಲಿಕೊಂಡಿದೆ. ವಿಶ್ವದ ಸಾಮಾಜಿಕ ಗತಿ ಮತ್ತದರ ಶಿಕ್ಷಣ ವ್ಯವಸ್ಥೆಗಳು ಶೃಂಖಲಾಬದ್ಧವಾದುವು ಶಿಕ್ಷಣ ಪದ್ಧತಿಯು ವಿಶೃಂಖಲೆಯಾದಂದಿನಿಂದ ಯಾವುದೇ ವಿಶೇಷ ಸುವ್ಯವಸ್ಥಿತ ಶಿಕ್ಷಣ ವ್ಯವಸ್ಥೆಯಾಗಲಿಲ್ಲ. ಧಾರ್ಮಿಕ ಸಂಸ್ಥೆಗಳು ಅಲ್ಲಲ್ಲಿ ಸೀಮಿತ ಪ್ರದೇಶಗಳಲ್ಲಿ ಶಿಕ್ಷಣ ಪ್ರಚಾರ ಮಾಡುತ್ತ ಬಂದುವು

ದೇಶವನ್ನಾಳುವುದು ಕರ್ತವ್ಯ ಭಾವನೆಯೆಂಬುದು ಮರೆತು ಹೋಗಿ ಅಧಿಕಾರ ನಡೆಸಲು ನೊದಲಾಯಿತು. ರಾಜವಂಶ ಮತ್ತು ದೆರ್ಮಗುರುಗಳ ನಡುವೆ ಸಾಮ್ರಾಜ್ಯ ರಕ್ಷಣೆಗಾಗಿ ಅನೇಕ ಸಂಘರ್ಷಣೆಗಳಾದುವು ಅವರು ದೊಡ್ಡದೊಡ್ಡ ರಾಜ್ಯಗಳನ್ನು ಕಟ್ಟಿಕೊಂಡರು ಅವರಿಗೆ ತಮ್ಮ ಸಾಮ್ರಾಜ್ಯ ರಕ್ಷಣೆಗಾಗಿ ಮನುಷ್ಯ ಬಲದ ಶ್ರೀಮಂತ ಸಾಮಂತರನ್ನು ಆಶ್ರಯಿಸಬೇಕಾಯಿತು ಧಾರ್ಮಿಕ ಸಂಸ್ಥೆಗಳೂ ರಾಜ್ಯಪ್ರಾಪ್ತಿಯ ಘರ್ಷಣೆಯಲ್ಲಿ ಬಿದ್ದು ಶಿಕ್ಷಣ ಸಂಬಂಧಿ ಕರ್ತವ್ಯಗಳನ್ನು ಮರೆತು ಬಿಟ್ಟುವು. ಮುಂದೆಮುಂದೆ ವ್ಯಾವಸಾಯಿಕ ಕ್ರಾಂತಿಯು ಗ್ರಾಮ ಸಮೂಹಗಳನ್ನು ತುಳಿದು ನಗರಗಳನ್ನು ನಿರ್ಮಿಸಿತು ಸಾಮಂತರ ಶಕ್ತಿ ಕ್ಷೀಣಿಸತೊಡಗಿತು. ರಾಜಪ್ರಭುತ್ವ ಮತ್ತು ದೆರ್ಮ ಪೀಠಗಳ ಅಂತ್ಯ ಕಾಲ ಕಾಣಿಸಿತು. ಪ್ರಜಾಪ್ರಭುತ್ವದ ಹೆಸರಿನಲ್ಲಿ ವ್ಯವಸಾಯಿಕ ಕ್ರಾಂತಿಯ ಮುಖಂಡರು ರಾಜಸತ್ತೆಯನ್ನು ಹಸ್ತಗತ ಮಾಡಿಕೊಳ್ಳ ತೊಡಗಿದರು "ಶಿಕ್ಷಣ ವ್ಯವಸ್ಥೆಯೂ ಸರಕಾರದ ಒಂದು ಅತ್ಯಾವಶ್ಯಕ ಕಾರ್ಯ" ಎಂಬುದು ಆ ವ್ಯವಸಾಯಿಕ ಮಸ್ತಿಷ್ಕಗಳಲ್ಲಿ ಬಿತ್ತಿದ ಬೀಜವಾಗಿತ್ತು ಏಕೆಂದರೆ, ಅವರು ಜನತಾಂತ್ರಿಕತೆಯ ಹೆಸರಿನಲ್ಲಿ ಸತ್ತಾರೂಢರಾಗಿದ್ದರು. ಜನಬಲವು ಬದಲಾಗಿ ಕೆಡೆಗೆದೆ ಎಂಬ ಶಂಕೆಯಿಂದ ಆ ಜನರು ಈ ಹಣ ಪ್ರಪಂಚದ ಶಿಕ್ಷಣಕ್ರಮವನ್ನು ರಚಿಸಿದರು ಮತ್ತು ತಮ್ಮ ಸ್ವಾರ್ಥವನ್ನೆಸಗಿಕೊಳ್ಳಲು ಅದರ ಮೇಲೆ ಸರಕಾರದ ನಿಯಂತ್ರಣವನ್ನು ಶಾಶ್ವತಗೊಳಿಸಿದರು. ಮುಂದುವರಿದಂತೆ ಶಿಕ್ಷಣದ ಉದ್ದೇಶವು ಧನ ಸಂಪಾದನೆ ಎಂಬುದಾಗಿ ಮಾಡಿ ಬಿಟ್ಟರು ಶಿಕ್ಷಣ ಸಂಸ್ಥೆಗಳನ್ನು ಸುವರ್ಣ ಶೃಂಖಲೆಯಲ್ಲಿ ಬಂಧಿಸಿಬಿಟ್ಟರು, ಅವುಗಳ ಬಾಗಿಲನ್ನು ಸರಕಾರೀ ಮುದ್ರೆಗಳಿಂದ ಮುಚ್ಚಿಬಿಟ್ಟರು ಇಂದುಜಿಜ್ಞಾಸುಗಳಿಗಲ್ಲಿ ಸ್ಥಾನವಿಲ್ಲ ಸರಕಾರೀ ಕೃಪಾಪಾತ್ರ ಸುವರ್ಣ ಚೀಲವೃಳ್ಳವರ ಪರಿವಾರ ಮಾತ್ರ ಶಿಕ್ಷಣ ಸಂಸ್ಥೆಗಳಿಗೆ ಹೋಗಿ ಅಲ್ಲಿ ಅಧ್ಯಯನ ಮಾಡಬಲ್ಲರು. ಅದರೇನು? ಅದೇ ಹಣ ಸಂಪಾದನೆಯ ಪದ್ಧತಿಯೇ,

ಭಾರತೀಯ ಶುಂದರಿಯರು ಬ್ರಿಟಿಷ ವಿಮಾನ ಸಂಸ್ಥೆಯಲ್ಲಿ ತರಬೇತಿಗೊಳ್ಳುತಿದ್ದಾರೆ ವಿಮಾನದಲ್ಲಿ ಆಹಾರ ಪೂರೈಕೆ ಮಾಡುವುದು ಇತ್ಯಾದಿಗಳನ್ನವರು ಮಾಡಬಲ್ಲರು. ಚಿತ್ರದಲ್ಲಿ ಆಹಾರತಟ್ಟೆಯೊಂದನ್ನು ಸಮತೂಕದಲ್ಲಿ ಹಿಡಿಯಲು ಅಭ್ಯಸಿಸುತಿದ್ದಾರೆ.

ಪರಿವರ್ತನೆ ಸೃಷ್ಟಿಯ ಅಪರಿವರ್ತನೀಯ ವಿಧಾನವಾಗಿದೆ ಬಹಳ ಶತಮಾನಗಳಿಂದ ಸುತಂತ್ರ ಸರತಂತ್ರ ಭಾರತವಿಂದು ಸ್ವತಂತ್ರವಾಗಿದೆ. ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ವಿಶ್ವದ ಸಂತಪ್ತ ಮಾನವತೆಯನ್ನು ಶಾಂತಿ ಪಥಕ್ಕೆ ಕರೆತರುವುದೇ ಇಂದು ಭಾರತದ ಕರ್ತವ್ಯವಾಗಿದೆ. ಇದಕ್ಕಾಗಿ ಕರ್ತವ್ಯಭಾವನೋನ್ಮುಖ ಭಾರತೀಯರ ಆವಶ್ಯಕತೆಯಿದೆ ಅಧಿಕಾರ ಪ್ರಾಧಾನ್ಯ ವಿಷಮಯೀ ಪ್ರಪಂಚದಲ್ಲಿ ಅಧಿಕಾರರೋಷ ಜೀವೀ ಸರಕಾರದ ನೆರಳಿನಲ್ಲಿ ಪಾಲಿಸಲ್ಪಡುವ ಅರ್ಥ ಪ್ರಧಾನ ಶಿಕ್ಷಣ ಪದ್ಧತಿಯಿಂದ ಕರ್ತವ್ಯ ಪರಾಯಣ ನಾಗರಿಕರ ನಿರ್ಮಾಣ ಅಸಂಭವವಾಗಿದೆ. ಆದುದರಿಂದ ಶಿಕ್ಷಣ ಪದ್ಧತಿಯಲ್ಲಿ ಆಮೂಲ ಪರಿವರ್ತನೆಯಾಗುವುದು ಅವಶ್ಯಕ. ಶಿಕ್ಷಣ ಪದ್ಧತಿ ನಿರ್ಮಾಣದ ಅಧಿಕಾರ ದೇಶದ ಉಚ್ಚಪ್ರತರದ ಖ್ಯಾತಿವಂತ ಶಿಕ್ಷಣ ತಜ್ಞರಿಗಿರಬೇಕು ಶಿಕ್ಷಣ ಸಂಸ್ಥೆಗಳು ಪೂರ್ಣ ಸ್ವತಂತ್ರವಾಗಿರಬೇಕು ಅವುಗಳ ನಿಯಂತ್ರಣ ಶಿಕ್ಷಕರ ಪ್ರತಿನಿಧಿ ಸ್ವರೂಪದ ದೇಶದ ಶಿಕ್ಷಣ ವಿಶೇಷಜ್ಞರ ಸಮಿತಿಯ ಅಧೀನವಿರಬೇಕು ವೇತನ ನಡೆವ ಸರಕಾರೀ ಉದ್ಯೋಗಸ್ಥರ ಅಧೀನವಿಂಬಾರದು ಅವರಿಗೂ ಶಿಕ್ಷಣಕ್ಕೂ ಯೋಜನ ದೂರವಿದೆ. ಯಾವುದೇ ಪ್ರತಿಬಂಧವಿಲ್ಲದೆ ಶಿಕ್ಷಣ ಸಂಸ್ಥೆಗಳ ಪೂರ್ಣ ಖರ್ಚನ್ನು ಸರಕಾರವೇ ತನ್ನ ಕರ್ತವ್ಯವೆಂದು ತಿಳಿದು ಸಹಾಯ ರೂಪದಲ್ಲಿ ಕೊಡುತ್ತ ಬರಬೇಕು. ಶಿಕ್ಷಣವು ನಿಃಶುಲ್ಕವಾಗಿದ್ದು ಶಿಕ್ಷಣ ಕಾಲದ ವರೆಗೆ ವಿದ್ಯಾರ್ಥಿಗಳ ಪೂರ್ಣ ಖರ್ಚನ್ನು ಶಿಕ್ಷಣ ಸಂಸ್ಥೆಗಳೇ ವಹಿಸಬೇಕು. ಇದರಿಂದ, ದೇಶದ ಎಲ್ಲ ನಾಗರಿಕನಿಗೂ ವಿಕಾಸದ ಅವಸರ ಸಮಾನವಾಗಿ ಸಿಗುವಂತಾಗುವುದು; ಶಿಕ್ಷಣಾರ್ಥಿಯ ಚರಿತ್ರ ನಿರ್ಮಾಣ ಸಂಬಂಧಿ ಕರ್ತವ್ಯಗಳನ್ನು ಶಿಕ್ಷಕರು ಪೂರ್ಣರೂಪದಿಂದ ನಿರ್ವಹಿಸಲು ಸಮರ್ಥರಾಗುವರು. ಅಧ್ಯಾಪಕರು ಕರ್ತವ್ಯೋನ್ಮುಖೀಸರ್ವಾಂಗೀಣ ಸುವಿಕಸಿತ ಶಿಕ್ಷಣ ಪದ್ಧತಿಯ ಸ್ವತಂತ್ರ ವಾತಾವರಣದಲ್ಲಿ ಕರ್ತವ್ಯಪರಾಯಣ ಯುವಕರ ನಿರ್ಮಾಣಮಾಡಿ ದೇಶದ ಕಾಯಪಲ್ಲಟಮಾಡಬಲ್ಲರು. ಭಾರತೀಯ ಶಿಕ್ಷಕರು ಪುನಃ ತಮ್ಮ ಆ ಪ್ರಾಚೀನ ಪ್ರತಿಷ್ಠೆಯನ್ನು ಸಂಪಾದಿಸಿಕೊಳ್ಳುವುದರಲ್ಲಿ ಅಣು ಮಾತ್ರ ಸಂದೇಹವಿರುವುದಿಲ್ಲ ಮಾನನೀಯ ಮನುವು ಭಾರತೀಯ ಅಧ್ಯಾಪಕರ ಪ್ರಾಚೀನ ಪ್ರತಿಷ್ಠೆಯನ್ನು ಹೀಗೆ ವರ್ಣಿಸಿದ್ದಾನೆ—

ಏತದ್ದೇಶ ಪ್ರಸೂತಸ್ಯ | ಸಕಾಶಾದಗ್ರ ಜನ್ಮನಃ
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ |
ಪೃಥಿವ್ಯಾಂ ಸರ್ವಮಾನವಾ ||

"ಈ ಆರ್ಯಾವರ್ತ ದೇಶದಲ್ಲಿ ಹುಟ್ಟಿದ ಅಗ್ರಜನ್ಮ ಪಂಡಿತರಿಂದ ವಿಶ್ವದ ಎಲ್ಲೆಡೆಯ ಎಲ್ಲ ಮಾನವರೂ ತಮ್ಮ ಆಚರಣೆಯು ಕೇಗಿರಬೇಕೆಂಬುದನ್ನು ತಿಳಿಯಲಿ'.

(ವಿವಿಧ ಮೂಲಗಳಿಂದ)

PHONE 203 ESTD 1926

FOUNDATION STONE
Engraved
MARBLE TABLETS
(GOLD FILLED & LEAD FILLED)
BONE
Cream RUBBER STAMP CO.
BALMATTA ROAD, MANGALORE.

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ.

ಬಾದುಕು ಬಂಗಾರ

(ಬರೆದವರು. ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಸಂಮಂತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಅರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ. ರೂ ೧ ೨೫

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಪತ್ರ ಪ್ರಮಾದ

(೨ನೇ ಪುಟದಿಂದ)

"ತಲೆ ಕೆಟ್ಟರೋದು ಯಾರಿಗೆ ಅಂತ ತಾನಾಗಿಯೇ ತಿಳಿಯುತ್ತದೆ. ಹೆಂಗಸರನ್ನು ವಂಚಿಸುವುದು ಅಷ್ಟು ಸುಲಭಾ ಅಂತ ಭಾವಿಸಿದಿರಾ. ಏನೂ ತಿಳಿಯದ ಗೊಡ್ಡು ಹೆಣ್ಣು ಅಂತ ಅಂದ್ಕೊಂಡ್ರೇನೆ?"

"ಯಾರೋ ನಿನ್ನ ಕಿವಿಯಾಗೆ ಏನೇನೋ ಗಾಳಿಯೂದಿರಬೇಕು. ಇರೋ ವಿಷಯ ಖರೆಯಾಗಿ ಹೇಳಿಬಿಡು. ವಿಚಾರ ಮಾಡ್ತೀನಿ"

"ವಿಚಾರ ಮಾಡಿ ಏನು ಮಾಡೋ ಹಾಗಿದೆ ಮನೆಗೆ ಬಂದು ಪತಿವ್ರತೆ ಹಾಂಗಿರಬೇಕು ಹೀಂಗಿರಬೇಕು ಅಂತ ಕತೆಹೇಳಿ ಎರಡೆರಡು ದಿನ ಊರುಬಿಟ್ಟು ಗಲ್ಲೀ ಮೇಲೆ ದರ್ಬಾರ್ ಮಾಡಿ ನನ್ನ ನಂಬಿಸೋದಕ್ಕೆ ಬರ್ತೀರಾ"

"ಮಹಾರಾಯ್ತಿ ಯಾವ ವಿಚಾರ, ಯಾವಾಗ, ಎಲ್ಲಿ? ಅನ್ನೋದನ್ನೆ ಕೇಳು'

"ತಿಂಗಳಾ ಎರಡುದಿನ ಊರುಬಿಟ್ಟು ಹೋಗ್ತಿರ್ತೀರಲ್ಲಾ, ಯಾವುದಕ್ಕೇ ಅಂತ ತಿಳೀತು ಮನೆಯ ವಿಷಯ ಯೋಚನೆ ಮಾಡ್ತೀರಾ? ನಾನು ನಿಮಗೆ ಮನೆ ಕಸಾ ಇನ್ನೊಬ್ಬಳು ಒಡತಿ ಹೆಲ್ಲಮಾಡಿದ ಮೇಲೆ ನಾವ್ಯಾಕೆ ಮತ್ತೆ ಈ ಮನೇಲಿ ಎಲ್ಲಾದ್ರು ಹೊರಟುಹೋಗ್ತೇನೆ"

"ಅಲ್ಲೇ ಸ್ವಲ್ಪ ತಾಳು ಅದಕ್ಕೇನೇ ಇಷ್ಟೆಲ್ಲಾ ರಂಪಾಟ? ಆಪೀಸಿನ ವ್ಯವಹಾರದ ಸಂಬಂಧ ತಾನೇ ಹೋಗ್ತಿರೋದು"

"ತಿಂಗಳಾ ವ್ಯವಹಾರ ಇರುತ್ತೆ ನಿಮಗೆ, ಹೇಳೋದಕ್ಕೆ ಚೆನ್ನಾಗಿರುತ್ತೇ ವ್ಯವಹಾರ! ಮಾಡೋಕಸುಬೆಲ್ಲ ವ್ಯಭಿಚಾರ!

"ಹಾಗೆಂದ್ರೇನೇ! ಗಂಡಸಿನ ವ್ಯವಹಾರ ಹೆಂಗಸಿಗೆ ಹೇಗೆ ತಿಳಿಯಬೇಕು ಹೇಳು ಏನೂ ಯೋಚನೆಮಾಡದೆಯೇ ಮನೆ ಕುಂಬ ರಂಪಾಟ ಮಾಡಿಬಿಡ್ತೀರಿ'

'ಇಲ್ಲ ತಿಳಿಯೋದಿಲ್ಲ! ಗಂಡಸರಿಗೇ ಮಾರಿಕೊಳ್ಳಿರೋದು ಬುದ್ಧಿ ಹೆಂಗಸರು ಎಲೆ ಮುಂದಿನ ಕೊಳ್ಳಿ! ಆ ಕಾಲ ಹಾರಿ ಹೋಯ್ತು ತಿಳಕೊಳ್ಳಿ'

'ತಿಳಿಕೊಂಡೆ ಚೆನ್ನಾಗಿ ತಿಳಕೊಂಡೆ, ಸ್ವಲ್ಪ ಸಮಾಧಾನವಾಗಿರು ವಿಷಯ ಏನಾದರೂ ಕೇಳು ಆಫೀಸಿನ ಲೆಕ್ಕ ಒಪ್ಪಿಸುವುದಕ್ಕೆ ಡೈರೆಕ್ಟರಲ್ಲಿಗೆ ಹೋಗಬೇಕಾಗಿತ್ತು ಹೋದ ಮೇಲೆ ನಮ್ಮ ಮನಸ್ಸಿಗೆ ಬಂದ ಹಾಗೆ ಒರೋದಕ್ಕೆ ಆಗುತ್ತದೆಯೇ ಅವರ ಸಮಯವನ್ನು ಕಾದು ಅವರಿಗೆ ತಗ್ಗೀ ಬಗ್ಗೀ ಅವರನ್ನ ಪ್ರಸನ್ನೀಕರಿಸಬೇಕಾದರೆ ಜೀವ ಮೇಲೆ ಕಳಚಾಗುತ್ತೆ ಅದೆಲ್ಲ ನಿಮಗೆ ಹೇಗೆ ತಿಳಿಯಬೇಕು.

'ಗಂಡಸರು ಬಹಳ ಕದೀಮರಪ್ಪಾ! ಹೆಂಡರನ್ನು ನಂಬಿಸೋ ಉಪಾಯ ಚೆನ್ನಾಗಿ ಕಲಿತಿರುತ್ತಾರೆ ಅದೆಲ್ಲ ನನ್ನತ್ರ ನಡೆಯೋಹಾಗಿಲ್ಲ'

'ಒಳ್ಳೆ ಗ್ರಹಚಾರಕಟ್ಕೊಂಡು ಬಿದ್ದಲ್ಲಾ'

"ಹೌದು ಗ್ರಾಚಾರಿ! ಇದೇನು ನೋಡಿ! ನಿಮ್ಮಮುಖದ ಮಂಗಳಾರತಿ!

"ನನ್ನ ಮುಖದ ಮಂಗಳಾರತಿ, ನಿನ್ನ ಕೈಯೆಗೇ! ಇದೇನೇ ಚೆನ್ನ ಹುಲಿಯ ಹಾಗೆ ನೋಡ್ತಾ ಇದ್ದೀ'

'ಹುಲಿಯಂಹ ಗಲ್ಲ ಇನ್ನೊಂದು ಕ್ಷಣದಲ್ಲಿ ಸಿಂಹದಹಾಗ ಕಾಣಿಸುತ್ತೇನೆ ಇದೇನು ನೋಟೇಸ ಗೂತ್ತೇ'

'ನೋಟೇಸ್!! ನನಗ ! ಏದೆ ಡಬ ಡಬಾಂತಿದೆಯಲ್ಲಾ ಚೆನ್ನ! ಇನ್ನೆಲ್ಲಿಗೆ ಹೋಗೋದೇ ನ ವು ಪೊರಾಜು ಗಿರಾಜು ನೋಟೀಸ ಬಂತೇನೋ'

'ಇನ್ನು ಆಗೋದೇನು ಹೆಂಗಾ! ಎಲ್ಲಮುಗಿ ದೆ ಇನ್ನೀ ಮನೆಯಲ್ಲಿ ನಿಲ್ಲಿಲಾರೆ ಈ ಕ್ಷಣ ಹೊಂಟೆ'

'ಅಂತಾದರೆ ನ ನೂ ಹೊರಡಬೇಕಲ್ವೇ! ನೋಟೀಸ ದ್ರೂ ಒಮ್ಮೇ ನೋಡಿಬಿಡ್ತೇನೆ ಈಬೆಗೆ ಕೊಡೇ'

'ನೋಟೀಸು ನೀವು ನೋಡೋ ಅಗತ್ಯನೂ ಇಲ್ಲ ಹೊರಡುವ ಅಗತ್ಯನೂ ಇಲ್ಲ ನೀವು ಚಂದವಾಗಿರಿ ಈ ಮನೇಲಿ'

'ಇದೇನೋ ಹೆಂಗಾ ಲಿಲಾವು ನೋಟೀಸ ಅಂದೆ ಲ್ಲಾ ಮತ್ತೆ

"ಹೌದು ಹೊರಾಜು ನೋಟೀಸು ಹಂಗಾಗಿರೋದು ನೀವು"

'ಇದೇನು ಅನ್ನುತ್ತೀ? ನಾನ ಹೊರಾಜು ಆಗಿರೋದಾ?"

"ಯಾವಳೋ ಮಹಾರಾಣಿ ಎರೀದಿ ಮಾಡಿಕೊಂಡಿದ್ದಾಳಲ್ಲಾ ನಿಮ್ಮನ್ನ!"

ನನ್ನ ಅಭಿಪ್ರಾಯ ಕೇಳದೇನೇ ನನ್ನನ್ನ ಮಾರಿಬಿಟ್ಟಯೇನೇ ನೀನು

ಹೌದು ವಾರಿದೆ! ಅದೇ ತಾನೇ ಈ ಚೆನ್ನಾ ಎಲ್ಲಾ ಹಾಕಿಕೊಂಡಿರೋದು! ನನಗೂ ನಿನ ಗೂ ಖ ಣಾನುಬಂಧ ಇಲ್ಲ! ಇಲ್ಲಿಗೇ ತೀರಿತು ನಡಿತೀನಿ'

"ನಿಲ್ಲೆ! ನಿಲ್ಲೆ! ಸ್ವಲ್ಪ ತಾಳೇ! ಆ ಪತ್ರ ಸ್ವಲ್ಪ ಈಬೆಗೆ ಕೊಡು ಅದನ್ನಾದ್ರೂ ಸ್ವಲ್ಪ ಓದಿಕೊ ಳ್ತೇನೆ"

'ನೀವು ನನ್ನ ಸ್ವಾಮ್ಯಬೇಡಿ ನೀ ವ್ಯಾರೋ ನಾನ್ಯಾರೋ ಓದ್ಕೊಳ್ಳಿ ಚೆನ್ನಾಗಿ ಓದ್ಕೊಳ್ಳಿ ಕನ್ನಡ್ಕನೂ ಕೊಡ್ತೇನೆ ಓ ದ್ರಾ! ಮ ಖ ತೋರಿಸಬೇಡಿ!"

ಹ್ಹ ಹ್ಹ ಹ್ಹ ಹ್ಹ! ನೋಟೀಸು ! ಇದು ಪತ್ರ ತತ್ವೇನೇ, ಗುಂಡಾಗೆ ಅವನ ಹೆಂಡತಿ ಬರೆದ ಪತ್ರ ಒಡೆದು ಓದಿಬಿಟ್ಟಯಲ್ವೆ'

"ಹೌದು ನಿಮಗೆ ಬಂದ ಪತ್ರ ತಾನೇ"

"ಅಲ್ವೇ ಗುಂಡೂರಾಯ್ರನಿಗೆ"

"ನಿಮ್ಮ ಹೆಸರೇನು ಮತ್ತೆ

"ಅಯ್ಯೋ ನನ್ನ ಹೆಸರೂ ಕೇಳ್ತಿಯೇನೇ ನಾನು ಗುಂಡಣ್ಣ ಅಲ್ವೇನೇ'

"ಅಂದಮೇಲೆ ನಿಮಗೇ ತಾನೇ"

"ನನಗಲ್ವೇ, ನಾವಿಬ್ರೂ 'ಗುಂಡೂ' ಅದ್ರನೂ ಅವನು ರಾಯ' ನಾನು 'ಅಣ್ಣ' ಈಗಲಾದರೂ ನ ನಸ್ಸಿಗೆ ಬಂತೇ ವಿಳಾಸದಲ್ಲಿ ಗುಂಡೂರಾಯ ಅಂತ ಸ್ಪಷ್ಟ ವಿದೆಯಲ್ವೇ"

"ಹೌದು ನಮ್ಮನ್ನ ಪ್ರೀತಿಯಿಂದ ರಾಯ ಅಂತ ಕರೆದಿರುವಾರದೇಕೆ"

'ಏನು ಹುಚ್ಚ ಹುಚ್ಚು ತನ್ನುತ್ತಿಯೆ! ನ್ಮ ಆಫೀಸಿನ ಗುಂಡೂರಾಯನಿಗೆ ಬಂದಿರೋದು ಸ್ವಲ್ಪ ಸಮಯ ನಮ್ಮಲ್ಲೇ ಬಿಡಾರ ಮಾಡಿಕೊಂಡಿದ್ದಲ್ಲಷ್ಟೆ! ಅವನ ವ್ಯಾಮೋಹ ಹೊಸ ಬಿಜಾರದ ವಿಳಾಸ ಕೊಟ್ಟಲ್ಲ ಅಂತ ಕಾಣ ತ್ತೆ ಅದಕ್ಕೇನೇ ಇಲ್ಲಿಗೆ ಬಂದಿರಬೇಕು ಅನ್ಯಾಯವಾಗಿ ಒಡೆದು ಬಿಟ್ಟೆ"

'ನಾನದನ್ನೆಲ್ಲಾ ಹೇಗೆ ನಂಬಲಿ! ನನ್ನ ನಂಬಿಸುವುದಕ್ಕೆ ತಾನೇ ಇದೆಲ್ಲಾ ಪುಸಲಾಟ

"ಎಷ್ಟು ಚಂಚಲಬಪ್ಪಾ ಈ ಹೆಂಗಸರು! ಇನ್ನು ಹೇಗೆ ಹೇಳಬೇಕು? ಅವನನ್ನಾದ್ರೂ ಕರೆದ ಕೊಂಡ ಬಂದ್ರೆ ನಂಬ್ತಿಯೇನೇ

ನೀವು ಯಾರನ್ನೂ ಕರೆದ ಕೊಂಡು ಬಂದೀರಿ! ನಿವ ಗೇನು ಜನಕ್ಕೆ ಕಡಿವೆ! ನಾನಿನ್ನು ನಿಲ್ಲೋಹಾಗಿಲ್ಲ ಕಡೀಬೇಡಿ ನಡಿತೇನೆ"

'ಸ್ವಲ್ಪ ತಡಿಯೇ, ಅವನರ ಬೇಡ ನೋಡೇ ಅವನೇ ಬಂದ್ಬಿಟ್ಟಿಲ್ಲಾ ನಮ್ಮ ಮನೇ ಚೆನ್ನಾ ಹೊರಟು ಹೋಗೋ ಕಾಲಕ್ಕೆ ದೇವರು ಬಂದ ಹಾಗ ಬಂದ್ಬಿಟ್ಟಿಯಲ್ಲಾ ಗುಂಡೂರಾಯಾ'

"ಅದೇನು ಆಗಿರೋದು ಪ್ರಮಾದಾ ಗುಂಡಣ್ಣ"

'ಇನ್ನೇನು ನಮ್ಮೋಟ್ಟರ ಹೆಸರು ಒಂದೇ ಆಗಿರೋದೆ ಪ್ರಮಾದ"

"ಹಾಗಂದ್ರೇನು ಗುಂಡಣ್ಣ'

'ನಿನ್ನ ಹೆಂಡತಿ ಬರೆದ ಪತ್ರ ನಿನ್ನ ಹೆಸರಿಗೆ (ಅಂದರೆ ನನ್ನ ಹೆಸರಿಗೆ) ಇಲ್ಲಿಗೆ ಬಂದಿದೆ ಮಹಾ ರಾಯಾ ಅದನ್ನ ಓದಿಕೊಂಡು ನಮ್ಮ ಮನೇ ಆಕೆಗಾಬರಿಯಾಗಿ ಬಿಟ್ಟಿದ್ದಾಳೆ ಸ್ವಲ್ಪ ಹೊತ್ತಾಗಿದ್ದಿದ್ರೆ ನಮ್ಮ ಮನೇ ಲಕ್ಷ್ಮಿ ಹೊರಟು ಹೋಗಿಬಿಡ್ತಿದ್ದಳು"

"ಅಯ್ಯೋ, ನಗು ಬರತ್ತೆ ಗುಂಡಣ್ಣ. ನಗ್ತಿದ್ದೇನೆ ಅಂತ ಸಿಟ್ಟಾಗಬೇಡ ನನಗೆ ಮನೆಯಿಂದ ಕಾಗದಾ ಇಲ್ಲದೇ ಕೆಲವು ದಿನಗಳಾಯಿತು ಹೊಸ ವಿಳಾಸ ಕೊಟ್ಟಿದ್ದೆ ಅದ್ರೂ ಒಂದಿಲ್ಲ ಅದರೆ ಅದರ ಮೊದಲೇ ಬರೆದಿದ್ದರೆ ನಿಮ್ಮ ಮನೆಗೆ ಬಂದಿರಬಹುದು ಊಹಿಸಿ ಈ ಕಡೆ ಬಂದೆ"

"ಅಂತೂ ಸದ್ಯ ಬಂದೆಯಲ್ಲಾ ಮಹಾರಾಯಾ' ಇಲ್ಲವಾದ್ರು ನಾನೇನು ಮಾಡಬೇಕಿತ್ತು ಹೇಳು ಪತ್ರ ಒಡೆದು ಓದಿದೆವು ಅಂತ ಬೇಸರ ಮಾಡಿಕೊಳ್ಳಬೇಡಯ್ಯಾ"

"ಅದಕ್ಕೇನಯ್ಯ ಬೇಸರ' ನನ್ನ ಪತ್ರ ದಿಂದಲೇ ತಾನೇ ಇಷ್ಟೆಲ್ಲ ಪ್ರಮಾದವಾಗಿರೋದು'

"ಇದೇನಯ್ಯಾ ಪ್ರಮಾದ? ಒಳ್ಳೇ ಪುಣ್ಯ ಕಲಕಿ ಅನ್ನು ಅಂತೂ ನನ್ನಾಗ ಗಂಡನಿಗೆ ಹೇಗೆ ಪತ್ರ ಬರೆಯಬೇಕು ಅಂತ ತಿಳಿದಿರಲಿಲ್ಲ ಇನ್ನು ಬೇಕಾದ ಹಾಗೆ ಪತ್ರ ಬರೀತಾಳೆ ಬಿಡು"

"ನನ್ನವಳಿಗೆ ಈ ವಿಚಾರ ತಿಳಿದ್ರೆ ಬಿದ್ದು ಬಿದ್ದು ನಗ್ತಾಳೆ'

"ಒಂದೇ ಹೆಸರಿನವರು ಈ ರೀತಿ ಒಟ್ಟಾಗಿ ಇದ್ದರೆ ಬಾರೀ ಸಜ್ಜನಿಯೆ ಸರಿ. ಅಂತೂ ಈ ದಿನ ಮರೆಯೋಕ್ಕಾಗಲ್ಲ!

"ನಿಜಕ್ಕು ಸ್ಮರಣೀಯ ದಿನ ಹಾಗಾದರೆ ಬರ್ತೇನೆ ಗುಂಡಣ್ಣ ಬಹಳ ತೊಂದರೆ ಕೊಟ್ಟು ಬಿಟ್ಟೆ"

"ಅಯ್ಯೋ ಗುಂಡೂರಾಯ! ಸ್ವಲ್ಪ ಕಾಫೀನಾದ್ರು ಕುಡಿದುಕೊಂಡು ಹೋಗೋ ಲೇ ಚೆನ್ನಾಽಽ ಹ್ಹ ಹ್ಹ!

"ಬಾಕು ನಿಮ್ಮ ನಗು'

"ಲೇ ಚೆನ್ನಾಽಽ

"ಕೇಳಿಸುತ್ತೆ ಕೇಳಿಸುತ್ತೆ ಕೇಳಿಸುತ್ತೆ"

ಇವತ್ತಿಗೆ, ನಾಳೆಗೆ, ಎಂದೆಂದಿಗೂ



ಉಷಾ ಹೊಲಿಗೆ ಯಂತ್ರ

ಕಣ ರೇವಣಾತಿಯ ಉತ್ತಮ ಸಾಧನ!
ವಿಳಾಸಮಾತ್ರ ಮಾರಾಟದ ಏಜಂಟರು
ವಿಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್
ಪ್ರೈವೇಟ್ ಲಿಮಿಟೆಡ್,
120, ಆರ್ಮೆನಿಯನ್ ಸ್ಟ್ರೀಟ್
ಮದ್ರಾಸು—1
ಪ್ರಿಯ "USHAKO" ಫೋನ್: 2278

ಗುಟ್ಟಿಗೆ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಪ್ರತಿಷ್ಠೆಗಳಿಸಿದ ಕಂ|| ಅಂಬಳಿ ರಾಮಸ್ವಾಮಿ ಅಯ್ಯರ್‌ರವರ ರತ್ನಪ್ರಭೆಗಳು

ಟ್ರೇಡ್ ಮಾರ್ಕ್

ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್)

ಮದನ ವಿಲಾಸ (ಪುರುಷರಿಗೆ ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿವಾರಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ ಬೆಲೆ ರೂ 7-4 0.

'ಮದನ ವಿಲಾಸ' ಗುಳಿಗೆಗಳು ಅತ್ಯುತ್ಕೃಷ್ಟ ಶಮನಮಾಡಿ, ಸ್ವಪ್ನ ವಿತ್ತು ಶೀಘ್ರ ಸ್ಖಲನಗಳನ್ನ ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತವೆ

ಸಂ| A R ಅಯ್ಯರ್

ಸಂತತಿಗಾಗಿ 16 15 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳುಹಿರಿ ಸಲಹೆಯೊಡನೆ ಕ್ರಿಮಿಣಾಶಕ ಕ್ಯಾಟಲಾಗ್ ಮತ್ತು ಪ್ರಶಸ್ತಿಪತ್ರಿಕೆಗಳ ರವಾನೆ.

ಎ ರಾಮಸ್ವಾಮಿ ಅಯ್ಯರ್ ಸನ್ & ಕಂ, (ಸ ಯು)
628, ಅಂಬಳಿ ಅಣ್ಣಯ್ಯ ಪಂಡಿತ್ ಪಾರ್ಕ್ ಸಾಸ್ ಕ್ರಾಸ್, ಮೈಸೂರು-1 (S I)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು

ನಿರಖು ರೇವಣಾತಿ		
3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ವಾರದ ಮಹಾನುಭಾವ—

ಶ್ರೀ ಕಮಾಲ ಜಂಬಲಾತ

'ಭಾರತ ಮತ್ತದರ ಆತ್ಮ' ಎಂಬುದು ಗಾಂಧಿ, ನೆಹರು ಹಾಗೂ ಟಾಗೋರರ ಲೇಖನ ಸಂಗ್ರಹವಾಗಿದ್ದು ಲೆಬನಾನಿನ ಸರಕಾರ ವಿರೋಧೀ ಪ್ರಗತಿಶೀಲ ರಾಷ್ಟ್ರೀಯ ಸಮಾಜವಾದಿ ಪಕ್ಷದ ಮುಖಂಡ ಕಮಾಲ ಜಂಬಲಾತರ ಹಸ್ತಗಳಲ್ಲಿ ಲೆಬನಾನಿನ 'ಮುಖತರಾ' ಎಂಬ ಪರ್ವತೀಯ ಸ್ಥಾನದಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ತೋರಿಬಂದಿತು. ವೇದಾಂತದರ್ಶನ ಪ್ರೇಮಿಯಾಗಿದ್ದ ಶ್ರೀ ಕಮಾಲರು ರ್ಗಜತರಿಂದ ಇದುವರೆಗೆ ಐದು ಬಾರಿ ಭಾರತ ಯಾತ್ರೆಯನ್ನು ಮುಗಿಸಿದ್ದಾರೆ ದರ್ಶನ ಶಾಸ್ತ್ರಾಭ್ಯಾಸವೇ ಈ ಯಾತ್ರೆಯ ಹಿಂದಿರುವ ಅವರ ಏಕಮಾತ್ರ ಉದ್ದೇಶ. ತಮ್ಮ ಸ್ವೀಕೃತ ಕಾರ್ಯಸಂಬಂಧದಲ್ಲಿ ಒಬ್ಬ ದರ್ಶನ ಶಾಸ್ತ್ರೀಯ ವಿಚಾರವು ಎಷ್ಟು ಪ್ರಯೋಜನಕ್ಕೆ ಬಂದೀತೆಂಬುದನ್ನು ಸುಲಭದಲ್ಲಿ ತಿಳಿಯಬಹುದು

ಬೀರತ್‌ನ ದಕ್ಷಿಣದಲ್ಲಿರುವ ಸಿಡೋನ್ ಎಂಬಲ್ಲಿಂದ ಮೋಟರುಗಳ ಮೂಲಕ ಒಂದು ತಾಸಿನಲ್ಲಿ ಜೇಸ್ಮಿನ್ ನಗರವನ್ನು ತಲಪಬಹುದು. ಜಂಬಲಾತರಿಂದ ಅಧಿಕೃತ ಕ್ಷೇತ್ರವನ್ನು ಉಳಿದ ಲೆಬನಾನಿನಿಂದ ಬೇರೆಯಾಗಿಸಿರುವ ಸೀಮಾ ಪ್ರದೇಶವಿದು. ಎಂದಾದರೂ ಸರಕಾರದ ಸೈನಿಕರು ಜಂಬಲಾತರ ಗುಪ್ತ ಆಶ್ರಯಸ್ಥಾನವನ್ನು ಮುಟ್ಟಿಬಾರದೆಂದು ಅವರ ಅನುಯಾಯಿಗಳು ಜೇಸ್ಮಿನ್‌ನ ಕೆಲವು ಮೈಲು ಉತ್ತರಕ್ಕಿರುವ ಮಹತ್ವಪೂರ್ಣ ಸೇತುವೆಯೊಂದನ್ನು ಮುರಿದುಬಿಟ್ಟಿದ್ದಾರೆ ಆ ಸೇತುವೆಯಿದ್ದೆಡೆಯಲ್ಲಿ ಶ್ರೀ ಜಂಬಲಾತರ ಸೈನಿಕರು ಹಗಲಿರುಳು ಕಾವಲು ಮಾಡುತಿದ್ದಾರೆ

ಕಳೆದ ಜೂನ್ ೧೪ರಂದು, ಲೆಬನಾನಿಗೆ ಸಂಯುಕ್ತ ರಾಷ್ಟ್ರ ಸಂಘದ ಪ್ರೇಕ್ಷಕದಳವು ಬರುವುದಕ್ಕೆ ಒಂದು ದಿನಕ್ಕೆ ಮೊದಲು ಲೆಬಾನೀ ಸರಕಾರವು ಕಮಾಲ ಜಂಬಲಾತರ ಹಾಗೂ ಎರಡು ಇತರ ವಿರೋಧೀ ಪಕ್ಷಗಳ ಆಚರಣೆಯ ವಿರುದ್ಧ ಪ ದವನ್ನೆತ್ತಿ ಈ ವಿದ್ರೋಹಿಗಳ ಕಾರ್ಯಕ್ರಮಗಳು ಚಲನವಲನಾದಿಗಳು ದೇಶ ವಿದೇಶಗಳ ಸಮಾಚಾರ ಪತ್ರಿಕೆಯಲ್ಲಿ ಪ್ರಕಾಶಗೊಳ್ಳದಂತೆ ಮಾಡಿದರು. ಇಷ್ಟೆಲ್ಲಾ ಅಡೆಗಳಿದ್ದರೂ ಶ್ರೀ ಜಂಬಲಾತರು ತಮ್ಮ ಶಕ್ತಿಯನ್ನು ತೋರಿಸಿದರು.

ಲೆಬನಾನಿನ ಈಗಿನ ರಾಷ್ಟ್ರಾಧ್ಯಕ್ಷ ಶ್ರೀ ಕಾಮಿಲ್ಲೇ ಚಮೂರವರು ಪಾಶ್ಚಾತ್ಯ ಸಂಸ್ಕೃತಿ ಮತ್ತು ಸಭ್ಯತೆಗಳ ಉಪಾಸಕರಾಗಿದ್ದರು, ಅವರ ಕಟು ವಿರೋಧಿಯಾಗಿ ಕಮಾಲರು ಲೆಬನಾನಿನ ಆದಿವಾಸಿ ಸಂಸ್ಕೃತಿಯನ್ನು ಮನ್ನಿಸುತ್ತ ಮುನ್ನಡೆಯುತ್ತಾರೆ. ಪ್ರಾಯಶಃ ಈ ಕಾರಣದಿಂದಾಗಿಯೇ ಶ್ರೀ ಕಮಾಲರಿಗೆ ತಮ್ಮ ಈಗಿನ ಚಟುವಟಿಕೆಗಳಲ್ಲಿ ಲೆಬನಾನಿನ ಆದಿವಾಸಿಗಳಾದ 'ಹ್ರೂಜ್'ಗಳ ಸಹಕಾರವು ಪೂರ್ಣರೂಪದಲ್ಲಿ ದೊರೆಯುತ್ತದೆ ಮೂರು ಸಾವಿರ ಹ್ರೂಜ್ ಜಾತಿಯ ಸೈನಿಕರು ಶ್ರೀ ಕಮಾಲರ ನೇತೃತ್ವದಲ್ಲಿ ಸಂಘಟಿತರಾಗಿ ರಾಷ್ಟ್ರಾಧ್ಯಕ್ಷ ಚಮೂರವರ ಸೇನೆಗಳ ಅಧಿಕೃತ ಪ್ರದೇಶಗಳ ಮೇಲೆ ಹಲ್ಲೆನಡೆಸಲು ಸಿದ್ಧರಾಗಿದ್ದಾರೆ

ಕಳೆದ ಎಂಟು ವಾರಗಳಿಂದ ಅವ್ಯಾಹತವಾಗಿ ನಡೆದುಬಂದ ಸಂಘರ್ಷಣೆಯಿಂದಾಗಿ ರಾಷ್ಟ್ರೀಯ ಜನಧನಹಾನಿಯೆ ಡನೆ ಅಂತಾರಾಷ್ಟ್ರೀಯ ವ್ಯಾಪಾರದ ಮೇಲೂ ಬಲವಾದೊಂದು ಏಟುಬಿದ್ದಿತು ಲೆಬನಾನಿನ ರಾಜಧಾನಿ ಬೀರತ್ ಅಂತಾರಾಷ್ಟ್ರೀಯ ವ್ಯಾಪಾರ ಮಾರ್ಗದ ಸಿಲ್ಕಾಣವಾಗಿದೆ ಏಶ್ಯಾ, ಆಫ್ರಿಕಾ ಮತ್ತು ಯುರೋಪುಗಳ ನಡುವೆ ಪರಸ್ಪರ ಸಂಬಂಧ ಸ್ಥಾಪಿಸುವಲ್ಲಿ ಭೀರತ್ತಿನ ಕೈ ಶಕ್ತಿವಂತವಾಗಿದೆ ಸಿರಿಯಾ, ಇರಾಕ್, ಜೋರ್ಡನ್, ಇರಾನ್ ಹಾಗೂ ಸೌದಿ ಅರೆಬಿಯಾಗಳ ಒಡೆದ ಸಂಬಂಧ ಪುನಃ ಒಂದಾಗುವಂತೆ ಮಾಡಲು ಹೆಚ್ಚುಕಡಿಮೆ ಕಮಾಲ ಜಂಬಲಾತರು ಶಕ್ತರಿದ್ದಾರೆ

ಶ್ರೀ ಕಮಾಲರ ನಾಯಕತ್ವದಲ್ಲಿ ಸ್ಥಾಪಿತವಾದ ಅಸ್ಥಾಯಿ ಕ್ರಾಂತಿಕಾರೀ ಪರಿಷತ್ತು ಸುಮಾರು ಒಂದೂವರೆ ಸಾವಿರ ಹಳ್ಳಿಗಳನ್ನು ತನ್ನಂಕಿತದಲ್ಲಿಟ್ಟುಕೊಂಡಿದೆ ಶೀಘ್ರದಲ್ಲಿಯೇ ಈ ಪರಿಷತ್ತಿನ ವಿಸ್ತೃತ ಯೋಜನೆಯನ್ನು ವಿಚಾರಿಸಲಿರುವರು. ತಮ್ಮ ಮುತ್ತಜ್ಜನವರಿಂದ ಕಟ್ಟಲ್ಪಟ್ಟ ಎರಡು ನೂರು ವರ್ಷ ಹಳೆಯದಾದ ಮನೆಯೊಂದರಲ್ಲಿ ವಾಸಿಸುತ್ತಿರುವ ಕಮಾಲ ಜಂಬಲಾತರು ಒಂದು ಬಾರಿ ನುಡಿದಿದ್ದರು—ನಮ್ಮ ಶಾಸನ ಪರಿಷತ್ತು ಇನ್ನೂ ಪ್ರಾರಂಭಿಕ ಅವಸ್ಥೆಯಲ್ಲಿದೆ ಆದರೂ ನಾವು ಆದಷ್ಟು ಬೇಗನೇ ನಮ್ಮ ಸೇನಾವಿಭಾಗವನ್ನುಳಿದು ಶಿಕ್ಷಣ, ಆರೋಗ್ಯ, ನಾಗರಿಕ ಪೂರೈಕೆ ಹಾಗೂ ರಕ್ಷಣಾ ವಿಭಾಗಗಳಿಗೆ ಮಟ್ಟಿಗೂ ಸಂಘಟಿತರಾಗುವೆವು.

ಅವರು ಮುಂದುವರಿಯುತ್ತ ಹೋಗಿ ಸತ್ಪಾರೂಢವಾದ ಮೇಲೆ ಈಗಿನ ಸರಕಾರದ ವಿರೋಧೀ ಪಕ್ಷಗಳ ಕರ್ತವ್ಯವೇನೆಂಬುದನ್ನು ತಿಳಿಸಿದರು — ನಾವು ಸರ್ವಪ್ರಥಮವಾಗಿ ಅರಬ ರಾಷ್ಟ್ರಗಳ ಏಕತೆಗಾಗಿ ದುಡಿಯುವೆವು. ಲೆಬನಾನಿನ ಸ್ವಾಧೀನತೆಯನ್ನು ಅಬಾಧಿತವಾಗಿಟ್ಟುಕೊಂಡು, ಪಾಶ್ಚಾತ್ಯ ರಾಷ್ಟ್ರಗಳೊಡನೆ ಲೆಬನಾನಿನ ಉತ್ತಮ ಸಂಬಂಧವಿಟ್ಟುಕೊಳ್ಳಲು ನಮ್ಮ ಪ್ರೇಕ್ಷೆಯಿದೆ. ಆದರೆ, ಅದನ್ನು ಪೂರ್ತಿಗೊಳಿಸಲು ನಾವು ಆ ರಾಷ್ಟ್ರಗಳ ಏಜಂಟರಾಗಲು ಎಂದೂ ಸಿದ್ಧರಾಗಿಲ್ಲ.

ಶ್ರೀ ಕಮಾಲರು ಮುಂದಿನ ಹತ್ತು ಯಾ ಹದಿನೈದು ವರ್ಷಗಳಲ್ಲಿ ಈ ಎಲ್ಲವನ್ನೂ ಪೂರ್ಣ ಕಾರ್ಯಕಾರೀಗೊಳಿಸಲು ಸಾಧ್ಯವೆಂದು ನಂಬುತ್ತಿದ್ದಾರೆ.

ಯುನ್ಯಾಟೆಡ್ ಸ್ಟೇಟ್ಸಿನ ಕೆಲವು ಪ್ರದೇಶಗಳಲ್ಲಿ "ಯುನ್ಯಾಟೆಡ್ ಗೀವರ್ಸ್ ಪಂಡಿ"ಗೆ ಹಣ ಶೇಖರಿಸುವ ಹೈಸ್ಕೂಲುಗಳ ರಾಣಿಯರು

ಸದಾಕಾಲವೂ ತಪ್ಪದೆ ಓದಬಹುದು!

(೧ನೇ ಪುಟದಿಂದ)

ಗಳನ್ನು ನಾಳೆಗೆಂದು ಮುಂದಿಡುವ ಗೊಡವೆಗೆ ಹೋಗಬೇಡಿರಿ."

ಓದುವುದಕ್ಕೆ ಯಾವ ಸಮಯ ಉತ್ತಮವೆಂದು ಆಲೋಚಿಸುತ್ತ ಕೂರಬೇಡಿ ಯೋಚಿಸುತ್ತ ಕಾಲಹರಣ ಮಾಡಿದರೆ, ಸಮಯ ಮಾತ್ರ ಕಳೆದು ಹೋದೀತು, ನಿಮ್ಮ ಯೋಜನೆ ಯೋಚನೆಯಲ್ಲೇ ಕಳೆದೀತು. ಏಕೆಂದರೆ ಓದಲು ಯಾವುದೇ ಪ್ರಾಯ, ಹೊತ್ತು, ತಾಸುಗಳ ನಿಯಮವಿಲ್ಲ, ಯಾವ ಕಾಲದಲ್ಲೂ ಓದಬಹುದು, ಆದರೆ, ಅತ್ಯುತ್ತಮ-ಕಾಲವೆಂದರೆ, ಈಗಲೇ. ಇಂದು ನಾಳೆಯೆನ್ನದೆ ಈಗಲೇ ಓದುವವ ಕಡು ಜಾಣ! ಹೊತ್ತನ್ನೆ ಕೊಂದು ಹುಸಿವವನಿಗಿಂತಲೂ ಸತ್ಪಾತ್ರ ಲೇಸು' ಎಂದು ಸರ್ವಜ್ಞ ಆಡಿದ್ದಾನೆ ತಾನೆ?

(ವಿವಿಧ ಮೂಲಗಳಿಂದ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ನಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತ ಭಂಡಾರ, ಉಡುಪಿ.

ಓದಿ ನಗಬಹುದು!

ಪೇಟೆಯ ಒಂದು ಮೂಲೆಯಲ್ಲಿ ಒಬ್ಬ ನಗರವಾಸಿಗೆ ಗ್ರಾಮವಾಸಿಯೊಬ್ಬನ ಭೇಟಿಯಾಯಿತು. ಆ ಮಾತು ಈ ಮಾತೆಲ್ಲ ಮುಗಿದ ಮೇಲೆ, ಹಳ್ಳಿಯವನೊಡನೆ ನಗರವಾಸಿ ಕೇಳಿದ— ಸರಿ, ನಿಮ್ಮ ಕೈಯೇ ಹೆಚ್ಚೆಂದು ಹೇಳುವಿಯಲ್ಲ? ಇರಲಿ, ನಿಮ್ಮಲ್ಲಿ ಇಂದು ವರೆಗೆ ಯಾವಾದರೊಬ್ಬ ದೊಡ್ಡ ವ್ಯಕ್ತಿ ಜನಿಸಿದ್ದಿದೆಯೆ?

ಗ್ರಾಮವಾಸಿ ದುಃಖದಿಂದ ಉತ್ತರಿಸಿದ— ಇಲ್ಲ ಸ್ವಾಮಿ, ನಮ್ಮ ಗ್ರಾಮದಲ್ಲಿ ಹುಟ್ಟುವುದೆಲ್ಲ ತೀರ ಚಿಕ್ಕ ಮಕ್ಕಳು ಮಾತ್ರ

೦೦ ೦೦

ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿ ಪ್ರಾಧ್ಯಾಪಕನನ್ನು ಅಪಾಹ್ಯಯರು ಕರೆದು ಗದರಿಸಿದರು—ಏನಪ್ಪ ಇದು? ಗಣಿತದ ಪ್ರಶ್ನೆಗಳೆಲ್ಲ ಸರಳವಾಗಿದ್ದವು. ಹಾಗಿದ್ದರೂ ನೀನೇಕೆ ಹೀಗಾದೆ?

ವಿದ್ಯಾರ್ಥಿ— ನಾನೇನು ಮಾಡಲಿ ಸರ್, ಪ್ರಶ್ನೆಗಳೇನೋ ತೀರ ಸುಲಭವಾಗಿದ್ದವು. ಆದರೆ, ಅವುಗಳ ಉತ್ತರಗಳು ಮಾತ್ರ ಬಹಳ ಕಷ್ಟವಿದ್ದುವಲ್ಲ ಸರ?

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

3—7—1958

ಸಂಚಿಕೆ ೪೩
NO. 43

ತಿಳಿದವರು ಮಾಡುವ ತಪ್ಪು—

ಅಭಿಪ್ರಾಯ ಪರಿವರ್ತನೆಯ ಸ್ವಭಾವ

ಮಾನವನು ತನ್ನ ಜೀವನಕ್ಕೊಂದು ನಿಶ್ಚಿತ ಗುರಿಯನ್ನಿಟ್ಟುಕೊಳ್ಳಬೇಕು; ಅಲ್ಲದೆ, ಮುಂದೆ ನಿತ್ಯ ಜೀವನದಲ್ಲಿ ಈ ಲಕ್ಷ್ಯದತ್ತ ಕೊಂಡೊಯ್ಯುವ ಪರಿಸ್ಥಿತಿಗಳನ್ನು ನಿರ್ಮಿಸಿಕೊಳ್ಳಬೇಕು ಎಂದು ಪಾಠಿಸುವವರಿದ್ದಾರೆ. ಇದನ್ನು ಪೂರ್ಣ ನಿಷ್ಪ್ರಯೋಜಕವೆಂದು ಹೇಳಬರುವುದಿಲ್ಲ. ಪ್ರತಿಯೊಬ್ಬರೂ ಬಯಸುವುದು ನೆಮ್ಮದಿಯ ಬಾಳನ್ನು. ಆದುದರಿಂದ ಅದಕ್ಕೆ ಪರಿಪೋಷಕವಾಗುವಂತೆ ತನ್ನ ಕಾರ್ಯಕ್ರಮಗಳನ್ನು ರೂಪಿಸುವುದರಿಂದ, ಮಾನವ ತನ್ನ ಗುರಿಯನ್ನು ಸಾಧಿಸಿಯಾನು. ಆದರೆ, ತನ್ನ ಜೀವನದ ಧ್ಯೇಯಗಳನ್ನು ಸಂಪೂರ್ಣವಾಗಿ ಮುಟ್ಟಿದವರ ಸಂಖ್ಯೆ ತೀರ ಕಡಿಮೆಯೆ

ಜೀವನಕ್ಕೊಂದು ನಿಶ್ಚಿತ ಗುರಿಯಿರುವಂತೆ, ಮಾನವನಿಗೊಂದು ಅಭಿಪ್ರಾಯ ವಿರಬೇಕು. ಒಮ್ಮೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಅತನು ತನ್ನ ಕೊನೆಯುಸಿರು ಇರುವನಕವೂ ಅದಕ್ಕೆ ವಿರೋಧಿಯಾಗುವ ಮಾತನ್ನಾಡಬಾರದು, ಪದೇ ಪದೇ ಅಭಿಪ್ರಾಯಗಳನ್ನು, ಧ್ಯೇಯಗಳನ್ನು ಪರಿವರ್ತಿಸಿಕೊಳ್ಳಬಾರದು—ಎಂದು ಆಡುವವರೂ ಇದ್ದಾರೆ. ಆದರೆ, ಒಂದು ಅಭಿಪ್ರಾಯವನ್ನು ಬಹುರಂಗಗೊಳಿಸಿ ಮತ್ತೊಂದು ಸಂದರ್ಭದಲ್ಲಿ ಅದಕ್ಕೆ ವ್ಯತಿರಿಕ್ತವಾಗಿರುವ ಅಭಿಪ್ರಾಯ ತಾಳದಿರುವುದು ಎಲ್ಲ ಸಂದರ್ಭ ಲ್ಲಿಯೂ ಸಾಧ್ಯವಿಲ್ಲ.

ಮದ್ರಾಸದ ಒಂದು ಪತ್ರಿಕಾ ಸಂಪಾದಕತ್ವದಲ್ಲಿ ಒಬ್ಬ ಮಹಾ ವ್ಯಕ್ತಿ ಶ್ರೀ ರಾಜಾಜೀಯವರ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ "ಅವರ ಮೇಲೆ ನನಗೆ ಪೂಜ್ಯ ಗೌರವವಿದೆ. ಆದರೆ, ರಾಜಾಜೀಯವರ ಜೀವನದಲ್ಲಿ ಒಂದು ಬೇಸರದ ಸಂಗತಿಯೆಂದರೆ, ಅವರ ಅಭಿಪ್ರಾಯ ಬದಲಾಗುತ್ತಿರುವುದಾಗಿದೆ" ಎಂದು ನುಡಿದು ಒಂದು ಕಾಲದಲ್ಲಿ ಹಿಂದಿಗೆ ಪ್ರೋತ್ಸಾಹ ನೀಡಿದ್ದ ರಾಜಾಜಿ ಈಗ ಅದನ್ನು ವಿರೋಧಿಸುತ್ತಿರುವುದನ್ನು (ಉದಾಹರಿಸಿ, ಅವರು ತಮ್ಮ ಈ ಹಿಂದೀ ವಿರೋಧೀ ಅಭಿಪ್ರಾಯವನ್ನು ಬಹು ಬೇಗ ಬದಲಾಯಿಸುವರೆಂದು" ಅರಿಸಿದರು.

ಲೋಕ ಸಭೆಯ ರಾಷ್ಟ್ರಭಾಷಾ ಸಮಿತಿಯ ಸದಸ್ಯರಾದ ಹಿಂದೀ ಭಾಷೆಯ ಪ್ರಬಲಸಮರ್ಥಕರಾದ, ಹಿಂದೀ ಭಾಷೆಯಲ್ಲಿ ಮೂರು ಒಂದುನೂರು ನಾಟಕಗಳನ್ನು ಬರೆದವರಾದ ಲೋಕಸಭೆಯ ಸದಸ್ಯರಾದ ಸೇಠ ಗೋವಿಂದದಾಸರು ರಾಜಾಜೀಯ ಅಭಿಪ್ರಾಯ ಬದಲಾವಣೆಯ ಬಗ್ಗೆ ಆಡಿದ ಮಾತುಗಳು ವಿವಾದಕಾರಕಗಳಾಗಿವೆ ಇದುವರೆಗೆ ಹಿಂದಿಯನ್ನೇ ಎತ್ತಿ ಕಟ್ಟಿ ಹಿಂದೀ ಸಮರ್ಥಕರೆಂದು ಕೀರ್ತಿಪಡೆದ ಶ್ರೀ ಗೋವಿಂದದ ಸೇಠ ತಮ್ಮ ಮದ್ರಾಸ ಯಾತ್ರಾನಂತರ, ಇಂಗ್ಲಿಷ್ ಭಾಷೆಯ ಪಕ್ಷವಹಿಸಿ, ಮದ್ರಾಸ ರಾಜ್ಯದ ಪರಿಹಾರೋಪಾಯವನ್ನು ಒಪ್ಪಿ ತಮ್ಮ ಅನುಯಾಯಿಗಳಿಗೆ ಸಭೇಪಾರ್ಟಿಯ ಕೆಲಸಗಳನ್ನು ಹುಟ್ಟಿಸಿದ್ದಾರೆಂದು ಹೇಳುವುದಾದರೆ, ರಾಜಾಜೀಯನ್ನು ಬಣ್ಣ ಬದಲಾಯಿಸುವ ಓತಿಯೊಂದು ಪರ್ಯಾಯವಾಗಿ ಕರೆದ ಶ್ರೀ ಸೇಠ ಗೋವಿಂದದಾಸರೇ ತಮ್ಮ ಕೆಲವು ತಿಂಗಳ ಹಿಂದಿನ ಅಭಿಪ್ರಾಯವನ್ನು ಬದಲಾಯಿಸಿ, ಇತ್ತೀಚೆಗೆ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಸ್ವೀಕರಿಸಿದ ಮೇಲೆಯೂ ಅನಿಶ್ಚಿತ ಅವಧಿಯವರೆಗೆ ಇಂಗ್ಲಿಷ್ ಅಡಳಿತ ಭಾಷೆಯಾಗಿ ಮುಂದುವರಿಸಲು ಒಪ್ಪಿರುವುದು ಸರಿಯೆ? ಎಂಬ ಪ್ರಶ್ನೆ ಯೇಳುವುದು ಸಂಭವನೀಯ.

ಒಂದು ಬಾರಿ ತಿಳಿಸಿದ ಅಭಿಪ್ರಾಯವನ್ನು ಬದಲಾಯಿಸಲೇ ಬಾರದೆಂದು ಹೇಳುವುದು ಲೋಕನೀಯವಲ್ಲ, ಹಾಂಗೆ ಪರಿವರ್ತನೆ ಮಾಡಿಕೊಳ್ಳುವ ನಿರ್ವಾಹವೂ ಕೆಲವೊಮ್ಮೆ ಇರುವುದಿಲ್ಲ. ಆದೇ ರಾಜಾಜೀಯವರಲ್ಲಿ ಅಭಿಪ್ರಾಯ ಬದಲಾಯಿಸುವ ದೋಷವೊಂದು ಅಂಟಿಕೊಂಡಿದೆ ಎಂಬುದು ನಿಜ. ಅವರ ಜೀವನದಲ್ಲಿ ಇದಕ್ಕೆ ತುಂಬ ಉದಾಹರಣೆಗಳು ದೊರೆಯಬಹುದು ಮೊನ್ನೆ ಮೊನ್ನೆ ತಾವು ಮದ್ರಾಸಿನ ಮುಖ್ಯ ಮಂತ್ರಿಯಾಗಿದ್ದಾಗ ಶತ್ರು ನಂಬ್ರ ೧ ಎಂದು ಕರೆದ ಕಮ್ಯೂನಿಸ್ಟರ ಕೇರಳದ ಮುಖ್ಯ ಮಂತ್ರಿ ನಂಬೂದರಿಪಾದರೊಡನೆ ಸಮಾನ ವೇದಿಕೆಯಲ್ಲಿ ಮಂಡಿಸಿ, ತಮ್ಮ ಸ್ನೇಹಿತನೆಂದವರನ್ನು ಕರೆದುದೂ ಈ ಅಭಿಪ್ರಾಯ ಬದಲಾವಣೆಯ ಪರಾಕಾಷ್ಠೆಯಲ್ಲವೆ?

ಭಾರತದ ಕಾಂಗ್ರೆಸ್ಸು ಕಮ್ಯೂನಿಸ್ಟ ವಿರೋಧಿಯೆಂಬುದೂ, ಅದು ದೇಶದಲ್ಲಿ ಕಮ್ಯೂನಿಸ್ಟ್ ತತ್ವ ಹರಡದಂತೆ ಪ್ರಯತ್ನಿಸುತ್ತಿದೆಯೆಂಬುದೂ ಸತ್ಯ ಆದರೆ, ಕಮ್ಯೂನಿಸ್ಟ ವಿರೋಧಿ ಕಾಂಗ್ರೆಸ್ ಸರಕಾರದ ಪ್ರಧಾನಿ ಕಮ್ಯೂನಿಸ್ಟರ ರಥವನ್ನು ಸಂಚರಿಸಿ, ಅಲ್ಲಿ ಸ್ನೇಹದಿಂದಿರುವುದು ಸರಿಯೆ? ತಲ್ಲಿ ಭಾರತದ ಕಮ್ಯೂನಿಸ್ಟರ ಬಗ್ಗೆ ತಾಳಿದ ಅಭಿಪ್ರಾಯವನ್ನು ಬದಿಗೊತ್ತಿ ಸದಭಿಪ್ರಾಯ ತಾಳುವುದು ಯೋಗ್ಯವೆ? ಮಂತ್ರಿ ಸ್ವದೇಶೀ ಬ್ಲೇಡುಗಳ ಒಗ್ಗೆ ವ್ಯಕ್ತ ಪಡಿಸಿದ ಎರಡು ಅಭಿಪ್ರಾಯಗಳು ನ್ಯಾಯೋಚಿತವೆ?

ಕಾಂಗ್ರೆಸ್ಸು ತನ್ನ ಘೋರಣೆಗಳಲ್ಲಿ, ಮೊದಲು, ಭಾರತೀಯರ ಸಮಸ್ಯೆಗಳನ್ನು ಬ್ರಿಟಿಷ್ ಶಾಸಕರಿಗೆ ತಿಳಿಸುವುದನ್ನು, ಸಾಧ್ಯವಾದರೆ ಅವನ್ನು ಹೋಗಲಾಡಿಸಲು ಪ್ರಯತ್ನಿಸುವುದನ್ನು ಗುರಿಯಾಗಿಟ್ಟು ಸ್ಥಾಪನೆ ಹೊಂದಿತು ಆದರೆ, ಈ ಧ್ಯೇಯಗಳು ಬದಲಾಗುತ್ತ ಒಂದು, ಪೂರ್ಣಸ್ವಾತಂತ್ರ್ಯ ತನ್ನ ಧ್ಯೇಯವೆಂಬ ಅಭಿಪ್ರಾಯ ತಾಳಿತು ಅದೂ ಪೂರ್ತಿಯಾದ ಮೇಲೆ, ದೇಶದ ಹಿತವನ್ನೂ, ಮುಂದೆ ಸಮಾಜವಾದೀ ಮಾದರಿಯ ಕಲ್ಯಾಣರಾಷ್ಟ್ರವನ್ನೂ ಕಟ್ಟುವ ಗುರಿಯನ್ನಿಟ್ಟುಕೊಳ್ಳುವ ಅಭಿಪ್ರಾಯದಿಂದ ಕೂಡಿದೆ ಹೀಗೆಯೇ ಎಲ್ಲ ಪಕ್ಷಗಳೂ, ಸಂಸ್ಥೆಗಳೂ ಆಯಾ ಕಾಲದ ಸಂದರ್ಭ, ಪರಿಸ್ಥಿತಿಗಳನ್ನು ಹೊಂದಿಕೊಂಡು ತಂತಮ್ಮ ಗುರಿ ಉದ್ದೇಶ ಅಭಿಪ್ರಾಯಗಳನ್ನು ಬದಲಾಯಿಸುತ್ತಿರುವಾಗ, ಒಬ್ಬ ವ್ಯಕ್ತಿ ಅಭಿಪ್ರಾಯ ಬದಲಾವಣೆಯನ್ನೇ ತನ್ನ ಧ್ಯೇಯವನ್ನಾಗಿಟ್ಟುಕೊಂಡಂತಿದೆಯನ್ನುವುದು ಆಶ್ಚರ್ಯದ ವಾತಾವೀತು

ಅಮೃತಸರದ ಸಂಸ್ಥೇಳನದಲ್ಲಿ ಕಮ್ಯೂನಿಸ್ಟರು ಆಡಿದ ನಾಟಕಪ್ರಯೋಗ ಇದೇ ಪರಿವರ್ತನೆಯ ಒಂದು ಉದಾಹರಣೆ ಒಂದು ಕಾರ್ಯವನ್ನು ಸಾಧಿಸುವಾಗ, ಯಾವುದಾದರೂ ಒಂದೇ ವಿಧಾನವನ್ನು ಅವಲಂಬಿಸುವುದು ಅಸಾಧ್ಯವಾದರೆ, ಆಗ ಸಂದರ್ಭಕ್ಕನುಸಾರ ಅಭಿಪ್ರಾಯ ಬದಲಾಯಿಸಿ ಅನ್ಯವಿಧಾನವನ್ನು ಬಳಸಲೇಬೇಕು. ಇಲ್ಲದೆ ಹೋದರೆ, ಕುರುಡ ಹಿಡಿದದ್ದೇ ಬಡಿಗೆಯೆಂಬಂತಾಗುವುದು ತಾನು ಆಡಿದ ದನ್ನೇ ಸರಿಯೆಂದು ಕೊನೆಯವರೆಗೂ ಸಾಧಿಸುವುದೇ ಮಾನವನ ಗುರಿಯಾಗಬೇಕಾದರೆ, ಪಾಕಿಸ್ತಾನವು ಕಾಶ್ಮೀರದ ಸಮಸ್ಯೆ, ಕಾಲುವೆನೀರಿನ ತಂಟೆ ಯಿತ್ಯಾದಿಗಳ ಬಗಗೆ ತಳೆದ ಧೋರಣೆ ಹೇಗೆಬದಲಾಗಬೇಕು? ರಾಜ್ಯ ಪುನರ್ಸಂಘಟನಾ ಮಸೂದೆಗೆ ಒಮ್ಮೆ ಒಪ್ಪಿಗೆಕೊಟ್ಟ ಮೇಲೆ, ಇದು ಗಡಿ ಪ್ರದೇಶಗಳ ಒಗ್ಗೆ ವಿವಂಚನೆಯನ್ನೇಕೆ ಪಟ್ಟುಕೊಳ್ಳಬೇಕು? ಹೆಚ್ಚಿಗೆ ಏಕೆ, ಕಲವು ವರ್ಷಗಳ ಒಳಗೆ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವ ನಿರ್ಧಾರವು ಕಾರ್ಯರೂಪಕ್ಕೆ ಬರಲು ಮತ್ತೂ ಸಮಯವೇಕೆ ಬೇಕೆಂಬ ಅಭಿಪ್ರಾಯ ಬಂತೆ? ನಮ್ಮ ಯೋಜನೆಗಳು ದಿನಕ್ಕೊಂದು ರೀತಿಯಂತೆ ಪರಿವರ್ತನೆ ಹೊಂದುವುದೇಕೆ? ಸರಕಾರ ಪ್ರತಿ ವರ್ಷವೆಂಬಂತೆ ಕರಾಕರಣೆಯಲ್ಲಿ, ಆಮದು ರಫ್ತುಗಳಲ್ಲಿ ಬೇರೆ ಬೇರೆ ಧೋರಣೆಗಳನ್ನು ವಹಿಸುವುದೇಕೆ? ಕೇರಳದ ಜನತೆಯ ಮೊದಲನೆಯ ಚುನಾವಣಾ ಕಾಲದ ಅಭಿಪ್ರಾಯವೇ ಬದಲಾಗಿ ದ್ವಿತೀಯ ಚುನಾವಣೆಯಲ್ಲಿ ಕಮ್ಯೂನಿಸ್ಟರು ಗೆದ್ದು ಒಂದರೇಕೆ? ಮಜೂರರು ಮುಷ್ಕರಗಳು ನಡೆಸುವುದು—ಯಾವುದೋ ಉದ್ದೇಶವಿಟ್ಟುಕೊಂಡು-ಆದರೆ, ಅರ್ಧದಲ್ಲಿಯೇ, ಏನೋ ಅಲ್ಪ ಪರಿಹಾರದಿಂದ ತಮ್ಮ ನಿರ್ಧಾರವನ್ನು ಬದಲಾಯಿಸುವುದು-ಇದು ಏಕೆ? ಮನುಷ್ಯನಿಗೆ ಒಬ್ಬ ವ್ಯಕ್ತಿಯ

(ಈದೇ ಪುಟನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H O MANGALORE. Estd. 1931.

BRANCHES

Bombay, Bangalore, Mysore Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಮರಳಿ ಮನೆಗೆ ಬಂದಾಗ....

ಲೇ "ಭರೇಂದ್ರ."

ಕತ್ತಲ ಪರೆಯಿಂದ ಜಗವಿನ್ನೂ ಸಂಪೂರ್ಣವಾಗಿ ಹೊರಬಂದಿರಲಿಲ್ಲ; ಮೂಡಲಿನಿಂದ, ಜಡಜೀವನದಲ್ಲಿ ಹೊಸ ಜೀವನ ಹುಟ್ಟಿಸುವ ಮಂದಮಾರುತ ತೀಡುತ್ತಲಿತ್ತು. ಪ್ರಶಾಂತತೆ ಆ ಮುಂಜಾವಿನಲ್ಲಿ ಆವಿರ್ಭವಿಸಿತ್ತು.

ಕೋಳಿಯ ಕೂಗು ನಾಗನನ್ನು ಎಚ್ಚರಿಸಿತು... "ಓ...ಆಗಲೇ ಬೆಳ್ಳಿ ಮೂಡಿ ಬಹು ಹೊತ್ತಾಯಿತು. ಇನ್ನು ಒಂದು ಸಿಂಗಲ್ ಚಾ ಹೊಟ್ಟೆಗೆ ಹೊಯ್ದುಕೊಂಡು ಹೊಟೆಗೆ ತೊಡಗಬೇಕು .." ಎಂದುಕೊಂಡು—ತನ್ನ ಹರಕು ಕಂಬಳಿಯನ್ನು ಹೊದೆದುಕೊಂಡು, ಹಳ್ಳಿಯ ಮುರುಕು ಹೋಟೆಲಿನತ್ತ ನಡೆದ ..

ಹೋಟೇಲು ಆಗಲೇ ತೆರೆದಿತ್ತು.... ಒಳಗೆ ನಾಲ್ಕಾರು ಜನರು ನೆರೆದಿದ್ದರು ... ನಾಗ, ತನ್ನ ಜಾತಿಯವರ ಸ್ಥಾನವಾದ, ಹೋಟೆಲಿನ ಹೊರಗೆ ಇಡಲ್ಪಟ್ಟ ಮುರುಕು ಬೆಂಚಿನ ಮೇಲೆ ಕುಳಿತ.

"ಸಣ್ಣ ಒಡೆಯರೇ.. ನಂಗೆ ಒಂದು ಸಿಂಗಲ್ ಚಾ ಹೇಳೀನಿ...." ಎಂದು ಹೊರಬಂದ ಹೋಟೇಲ್ ಮಾಲಕ ಸುಬ್ಬಯ್ಯನ ಮಗನೊಡನೆ ಹೇಳಿದ

"ನಿಂಗೆ ಧಾಡಿ ಬಡಿದಿತ್ತು.... ನಾನೇ ಕಾಫಿ ಕುಡೀಲ್ಲೆ...." ಎಂದು ಆ ಹುಡುಗ ತಾತ್ಸಾರದಿಂದ ನುಡಿದು ಒಳನಡೆದ ..

ತನ್ನ ಕೀಳ್ತನದ ಬಗ್ಗೆ ಮನದಲ್ಲೇ ನೊಂದುಕೊಂಡು ನಾಗ ಸುಮ್ಮನೆ ಕುಳಿತ....

ಒಳಗೆ ನೆರೆದ ಜನರು ಯಾವುದಾವುದೋ ಮಾತು ತೆಗೆದುಕೊಂಡು ಕಡೆಗೊಂದು ರಾಮಪ್ರಸಂಗವನ್ನು ಎತ್ತಿಕೊಂಡರು....

ಊರಿನ ನಿರುದ್ಯೋಗಿ "ಸಿಂಗ" ಏನೋ ಗುಸುಗುಸು ಹೇಳಿ ನಗೆಯಾಡಿದ ....ಅವನ ಮಾತಿನಿಂದ ಚಕಿತನಾದ ಸುಬ್ಬಯ್ಯ "ಆಂ... ಹಾಗೂ ಉಂಟೆ...." ಎಂದ.... ನಾಗನೂ ಕಿವಿನಿಮಿರಿಸಿ ಕೇಳತೊಡಗಿದ... ಆದರೆ ಅವನು ಅಲ್ಲಿರುವುದು ಒಳಗೆ ಯಾರಿಗೂ ತಿಳಿದಿರಲಿಲ್ಲ

'ಅದಾರು ಇರಬಹುದು?" ಸುಬ್ಬಯ್ಯ ಪ್ರಶ್ನಿಸಿದ....

"ಅವರೇ ಮತ್ತಾರು...." ಸಿಂಗ ವಿಕಟವಾಗಿ ನಕ್ಕು ನುಡಿದ ..

"ಅವರೇ ಎಂದರೆ...." ಸಿಂಗನ ಮನದಿಂಗಿತವನ್ನು ಅರಿಯದೆ ಸುಬ್ಬಯ್ಯ ಕೇಳಿದ... ಸಿಂಗ ಅವನ ಕಿವಿಯಲ್ಲಿ ಏನೋ ಹೇಳನಕ್ಕ ...

"ಛೇ.. ಅವರಾಗಿರಲಿಕ್ಕಿಲ್ಲ...." ಸುಬ್ಬಯ್ಯ ಪ್ರತಿಭಟಿಸಿದ....

"ನೀವು ಸುಮ್ಮನಿರಿ....ಅವರ ಮಸಲತ್ತು ನನಗೆ ಗೊತ್ತಿಲ್ಲವೇನು.." ಸಿಂಗ ಉತ್ತರಿಸಿದ.

"ಇದು ನಾಗನಿಗೆ ಗೊತ್ತಿಲ್ಲವೇನು? ಸುಬ್ಬಯ್ಯ ಕೇಳಿದ.

"ಅವನಿಗೆ ಹೇಗೆ ಗೊತ್ತಾಗಬೇಕು... ಕತ್ತಲಾಗುವಾಗ "ನಾಗಾ.... ಸೇಟಿಗೆ ಹೋಗಿ ಬಾ...." ಎಂದು ಏನಾದರೂ ಕೆಲಸ ಹೇಳಿ ಪೇಟೆಗೆ ಕಳುಹಿಸುವುದು....ಹೇಗಿದ್ದರೂ ನಾಗನಿಗೆ ಅಲ್ಲಿ ಅಕ್ಕನಮನೆಯಿದೆ ...ರಾತ್ರಿ ಅಲ್ಲೇ ಇರುತ್ತಾನೆ....ಅವನು ಬರದಿದ್ದುದನ್ನು ನೋಡುವುದು....ಆಟ ಶುರುವಾಗ ತ್ತೆ—ಇಲ್ಲಿ ರಂಗ—ರಂಗಿಯರದ್ದು ..." ಸಿಂಗಮತ್ತೆ ಕೃತಕವಾಗಿ ನಕ್ಕ.

ಆಟ ಆರಂಭವಾಗುತ್ತೆ-ರಂಗ-ರಂಗಿಯರದ್ದು!

ನಾಗನಿಗೆ ಸಿಡಿಲು ಬಡಿದಂತಾಯಿತು ಆ ಮಾತನ್ನು ಕೇಳಿ...ತಾನಿರುವುದನ್ನು ಅರಿಯದೆ ಅವರೇನು ಮಾತನಾಡುತ್ತಿರುವುದು?

ಹೌದು....ಅವರು ಮಾತನಾಡುತ್ತಿರುವುದು—ತನ್ನಣ್ಣನ ಮದದಿ ರಂಗಿಯ ವಿಷಯವಾಗಿ . .

ಆಕೆ!...ಆಕೆ ವೃಭಿಚಾರಿಣಿ....

ಸಿಂಗನ ಮಾತಿನ ಧಾಟಿಯಲ್ಲಿ ಅವನ್ನು ಕೆಡಿಸಿದವ—ತನ್ನ ಒಡೆಯರು ..ತನಗೆ ಗೆದ್ದೆಕೊಟ್ಟು ಸಲಹಿದ ಒಡೆಯರು....ತನ್ನೊಡನೆ ಪ್ರೇಮದಿಂದ, ಸಲಿಗೆಯಿಂದ ವರ್ತಿಸುತಿದ್ದ ಒಡೆಯರು!

ಛೆ....ಅವರಾಗಿರಲಾರರು!

ಮತ್ತಾರು....??? . .

ಬಗೆಹರಿಯದ ಸವ-ಸ್ಯೆಯಾಯಿತು—ನಾಗನಿಗೆ ನಾಗ ಅಲ್ಲಿಂದದ್ದು ಗುಡಿಸಿಲೆಡೆಗೆ ನೆಡೆದ. ಭಾರವಾದ ಕಾಲು....ಭಾರವಾದ ಹೃದಯ....

ರಂಗಿ ತನ್ನಣ್ಣನನ್ನು ಮದುವೆಯಾದ ಹೆಣ್ಣು....

ಮದುವೆಯಾದ ನಾಲ್ಕಾರು ದಿನಗಳಲ್ಲೇ ತನ್ನಣ್ಣ ಗಟ್ಟಕ್ಕೆ, ಕಾಫಿ ತೋಟದ ಒಡೆಯರಲ್ಲಿ ಮಾಡಿದ ಸಾಲ ತೀರಿಸಲು ಹೋಗಲೇಬೇಕಿತ್ತು. ಸಾಲ ತೀರದೆ ಅವನು ಊರಿಗೆ ಬರುವಂತಿರಲಿಲ್ಲ....

ಒಂದೂವರೆ ವರ್ಷವಾಗಿತ್ತು ಅವನು ಹೋಗಿ ..."ಸಧ್ಯದಲ್ಲೇ ಊರಿಗೆ ಬರುವೆ" ನೆಂದು ಕಾಗದ ಬರೆದಿದ್ದ...

ಅದರೊಳಗೆ ರಂಗಿಯ ಈ ಕೆಟ್ಟ ಕೆಲಸ!!! ತನ್ನಣ್ಣ ಬಂದರೆ ತಾನೇನನ್ನು ಹೇಳಬೇಕು?....

ಚಂತೆಯ ಸಾಗರದ ದೊಡ್ಡ ದೊಡ್ಡ ತರಂಗಗಳು ಮನದ ದಡಕ್ಕೆ ಬಡಿಯುತ್ತಲೇ ಇದ್ದವು. ಆತನ ಮನ ಬಿರುಗಾಳಿಗೆ ಸಿಕ್ಕಿದ ತರಗೆಲೆಯಾಗಿತ್ತು .

ಸೂರ್ಯನೆನ್ನು ಮೋಡ ಮುಚ್ಚಿತ್ತು.... ನಾಗನ ಮನವನ್ನೂ ಚಿಂತೆಯ ಮೋಡ ಆವರಿಸಿತ್ತು...

ಗುಡಿಸಲಿಗೆ ಬಂದವನೇ ಒರಗಿಕೊಂಡ .ದಣಿದ ದೇಹ ವಿಶ್ರಾಂತಿ ಬಯಸಿತ್ತು.

ಂಂ ಂಂ

"ರಂಗೀ...." ನಾಗ ಕೂಗಿದ.

"ಏನು...." ರಂಗಿ ಕೇಳಿದಳು.

"ನಂಗೆ ಒಂದಿಷ್ಟು ತಿಳಿಕೊಡು .. .. ನಂಗೆ ವ್ಯಾಟಿಗೆ ಹೋಪು ಕೆಲಸ ಇತ್ತು....

"ರಾತ್ರಿ ಬತ್ತಿಲ್ಲೆ .." ಎಂದು ನಾಗ ನುಡಿದ.

"ಹಾಂ....ಬೆಳ್ಗ್ಗೇದು ಗಂಜಿ ಉಳಿದಿತ್ತು ...ಅದನ್ನೆ ಒಂಜಿ ಬಿಸಿ ಮಾಡಿಕೊಡ್ತೆ...." ಎಂದು ರಂಗಿ ಮಡಿಕೆಯನ್ನು ಒಲೆಯ ಮೇಲಿಟ್ಟಳು ..

ಬಿಸಿ ಗಂಜಿಯನ್ನಿಷ್ಟು ಉಂಡು, ಹರಕಲು ಅಂಗಿಯನ್ನು ಹಾಕಿಕೊಂಡು, ಗೊರಬನ್ನು ತೆಗೆದುಕೊಂಡು ನಾಗ ಹೊರಟ.

"ಬಪ್ಪುದು ಯಾವಗ?" ರಂಗಿ ಕೇಳಿದಳು.

'ನಾಳೆ ಬೆಳಗ್ಗೆ ಬತ್ತೆ..." ಎಂದು ನಾಗ ನೆಡೆದ.

ಂ ಂ ಂ

ರಾತ್ರಿ ಸುಮಾರು ಹತ್ತು ಗಂಟೆಯಿರಬೇಕು...

ಹೊರಗೆ ಮಳೆಗಾಲದ ಭೀಕರ ಕತ್ತಲು ಆವರಿಸಿತ್ತು...ಗುಡುಗಿಗೆ ಹೆದರಿದ ಚಂದಿರ ಮೋಡಗಳ ಮರೆಯಲ್ಲಿ ಅಡಗಿ ಕುಳಿತಿದ್ದ....???

ಛಟ....ಛಟ.. ಛಟಾಲ್...

ಗುಡುಗು ಗುಡುಗಿತು....ಮಿಂಚು ಸರ್ರನೆ ಸುಳಿಯಿತು...ಒಂದು ಗಳಿಗೆ ಕಣ್ಣು ಕೋರೈಸುವ ಬೆಳಕು ಜಗವನ್ನು ಆವರಿಸಿತು ...ಮರುಗಳಿಗೆ ನಿಶಾ ದೇವಿ ಮತ್ತೆ ಕತ್ತಲ ಸೆರಗನ್ನು ಜಗದ ಮೇಲೆ ಬೀಸಿದಳು .. ಆದರೆ ನಾಗನಿಗೆ ಪರಿವೆಯಿಲ್ಲ....

"ಇಂದು ರಂಗಿಯ ಪರೀಕ್ಷೆ ಮಾಡಬೇಕು..." ಎಂದುಕೊಂಡ ನಾಗ, "ನಾಳೆ ಬೆ'ಗ್ಗೆ ಬರುತ್ತೇನೆಂದು" ಹೇಳಿ ತನ್ನ ಸ್ನೇಹಿತನ ಮನೆಯಲ್ಲಿ ವಿರಮಿಸಿದ್ದ. ..

"ಜೆನ್ನಾ -ಇನ್ನು ಹೋಮೋ....." ಎಂದ ನಾಗ...

'ಹಾಂ ...ಅದ್ಯಾರು ಅಂತ ಕಂಡೆ ಏ ಡಾಕು... ' ಎಂದು ಕೊಂಡು ಇಬ್ಬರೂ, ಗೊರಬನ್ನು ತಲೆಯ ಮೇಲೆ ಹಾಕಿಕೊಂಡು ಕೈಯಲ್ಲಿ ಒಂದೊಂದು ದೊಣ್ಣೆ ಹಿಡಿದು ಕೊಂಡು ನೆಡೆದರು—ನಾಗನ ಗುಡಿಸಿಲಿನ ಎಡೆಗೆ, ರಂಗಿಯ ಸತ್ವಪರೀಕ್ಷೆಗೆ.

"ದೀಪ ಬ್ಯಾಡದಾ..." ಜೆನ್ನ ಕೇಳಿದ.

"ಬ್ಯಾಡ....ಮಿಂಚಿನ ಬೆಳಕೇ ಸಾಕು ..." ಎಂದ ನಾಗ....

ಇಬ್ಬರೂ ನಾಗನ ಆ ಮುರುಕು ಗುಡಿಸಿಲಿನೆಡೆಗೆ ಬಂದರು....

"ಜೆನ್ನಾ.....ಇನ್ನು ಸಧಾನ ಹೋಮೋ...." ಎಂದು ಪಿಸು ದನಿಯಲ್ಲಿ ಉಸುರಿದ ನಾಗ ...

ಇಬ್ಬರೂ ಗುಡಿಸಿಲಿನ ಹಿಂಬಾಗಕ್ಕೆ ಬಂದರು ...ನಾಗನ ಮನದ ಬೇಗುದಿಗೆ ಮರುಗಿದ ಆಗಸದೆಣ್ಣು ತಾನೂ ದುಃಖಿತಳಾಗಿ ಕಣ್ಣೀರು ಸುರಿಸುವಂತೆ ಮಳೆ ಹನಿಯುತಿತ್ತು ...

ಗುಡಿಸಲು ಮಡಲಿನಿಂದ ಮಾಡಲ್ಪಟ್ಟಿತ್ತು...ಅಲ್ಲಲ್ಲಿ ಚಿಕ್ಕ ಸುಟ್ಟ ಹರಕುಗಳಿದ್ದವು ...

(೧೦ನೇ ಪುಟ ನೋಡಿರಿ.)



ಬ್ರಿಟಿಷ ವಿಜ್ಞಾನಿಗಳು ರೇಡಾರ್'ನಲ್ಲಿ ವಿಶೇಷ ಸುಧಾರಣೆಗಳನ್ನು ಮಾಡಿದರು. ಚಿತ್ರದಲ್ಲಿ ಪರೀಕ್ಷಣೆಗಾಗಿ ಸಿದ್ಧಗೊಳಿಸಿರುವ ಇಂತಹ ರೇಡಾರೊಂದನ್ನು ಕಾಣಬಹುದು.

ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ ಪೃಥಕಾಯರಾಗಿಯೂ ಇರಲಿ



ಝೂಂಡು
ಬಾಲಶೂಲಾರ್ಕ

ಉಪಯೋಗಿಸುವುದರಿಂದ
ಮಕ್ಕಳ ಉದರ ಹೋಸಗಳೆಲ್ಲಾ
ಖಾತ್ರಿಯಾಗಿ ಗುಣಹೊಂದುವುದು.

ಝೂಂಡು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂಬ್ರ 7015, ಬೊಂಬಾಯಿ.
ಮದ್ರಾಸ್ ಸ್ಟೇಟಿನಲ್ಲೆಲ್ಲಾ ಸ್ವಾಕಿಸ್ಟರಿರುವರು.

ಸಮಾಜದ ತೊಳೆಯಲಾರದ ಕಲಂಕ—

ವೇಶ್ಯಾವೃತ್ತಿಯ ಪ್ರಾಚೀನ ಪರಂಪರೆ

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ.

ದೇವತೆಗಳನ್ನು ಎಷ್ಟು ಬಗೆಯಾಗಿ ಪ್ರಸನ್ನೀಕರಿಸಲಾಯಿತೋ ಅಷ್ಟು ಪ್ರಮಾಣದಲ್ಲಿ ಮನುಷ್ಯನು ಸುಖ ಪಡೆಯಬಹುದು ಎಂಬ ವಿಶ್ವಾಸ ಒಂದು ಬಾರಿ ಯೂನಾನ್ ದೇಶದ ಜನತೆಯಲ್ಲಿ ಹುಟ್ಟಿ ಹರಡಿತು. ಇದರ ಪರಿಣಾಮವಾಗಿ ದೇವತೆಗಳಿಗಾಗಿ ದೊಡ್ಡ ದೊಡ್ಡ ಭವನಗಳು ನಿರ್ಮಾಣವಾದುವು. ಪ್ರಸಾದ, ವಾದ್ಯ, ಸಂಗೀತಗಳಿಂದ ಅವರನ್ನು ಮೆಚ್ಚಿಸಿಕೊಳ್ಳುವ ಪ್ರಯತ್ನವು ನಡೆಯಿತು. ಮಣ್ಣು ಅಥವಾ ಕಲ್ಲಿನ ದೇವತೆಗಳ ಸೇವೆಗಾಗಿ ಸಶರೀರ ಮನುಷ್ಯರು ಬಂದರು, ಸ್ತ್ರೀಯರು ಕಲೆತರು, ಕುಮಾರಿಯರು ಅಗಮಿಸಿದರು. ಆ ದೇವತೆಗಳು ತಮ್ಮ ಪ್ರತಿನಿಧಿಯಾಗಿರುವ ಪುರೋಹಿತರ ಮೂಲಕ ಹಾಗೆ ಬಂದಿದ್ದ ಸ್ತ್ರೀ ಮತ್ತು ಕುಮಾರಿಯರೊಡನೆ ಶರೀರ ಸಂಪರ್ಕ ಸಾಧಿಸಿಕೊಂಡರು. ಆ ಮೇಲೆ ದೇವಾಲಯಗಳಲ್ಲಿ ಬಂದು ಹೋಗುವ ದೇವತೆಗಳ ಬೇರೆ ಪೂಜಾರಿಗಳಿಗೂ ಅವಸರವೊದಗಿತು. ವೈಕ್ತಿಗತ ಭೋಗದ ಸೀಮೆಯಾಗಿರುವುದರಿಂದ, ಪುರೋಹಿತ ಮತ್ತು ದೇವತೆಗಳ ಇತರ ಪ್ರತಿನಿಧಿಗಳು ಯಥೇಷ್ಟ ಭೋಗಿಸಿದ ನಂತರ ಆ ಸ್ತ್ರೀಯರು ಸಾಮಾನ್ಯ ಜನರ ಅವಶ್ಯಕತೆಗಳನ್ನು ಪೂರೈಸಬೇಕಾಯಿತು. ಅದರಿಂದ ಸಂಪಾದನೆಯಾಗುವ ಹಣವು ದೇವತೆಗಳಿಗೆ ಅರ್ಪಿಸಲ್ಪಡುತಿತ್ತು. ಇಂತಹ ಸ್ತ್ರೀಯರಿಗೆ ದೇವದಾಸಿಗಳೆಂದು ಕರೆಯುತಿದ್ದರು. ಅಲ್ಲಿ ಅವರನ್ನು ಬಹು ವಿಧವಾಗಿ ಸಂಮಾನಿಸುತಿದ್ದರು.

ಪೂರ್ವ ಕಾಲದಲ್ಲಿ ಯುದ್ಧದಲ್ಲಿ ವಿಜಯಿಯಾದ ರಾಜ, ಮಹಾರಾಜ ಮತ್ತು ಸಾಮ್ರಾಟರು ಪರಾಜಿತ ಪ್ರದೇಶಗಳ ಅತುಲ ಧನರಾಶಿ, ರತ್ನಗಳು ಅನೆ ಕುದುರೆಗಳು ಹಾಗೂ ಸೇವಕರನ್ನು ತರುವುದಲ್ಲದೇ ಇವರೊಂದಿಗೆ ಅಲ್ಲಿನ ಚುನಾಯಿಸಿದ ಶ್ರೇಷ್ಠ ಸ್ತ್ರೀಯರನ್ನೂ ಹಾರಿಸಿಕೊಂಡು ಬರುತಿದ್ದರು. ಪದ, ಪ್ರತಿಷ್ಠೆ ಮತ್ತು ಲಾವಣ್ಯಗಳಿಗನುಸಾರವಾಗಿ ಅವರನ್ನು ಸರದಾರರು, ಸಾಮಂತರು ಮತ್ತು ಶ್ರೀಷ್ಠಿಗಣಗಳಿಗೆ ಕೊಡುತಿದ್ದರು ಪರಾಜಿತರ ಸ್ತ್ರೀಯರು ವಿಜೇತರಿಂದ ಪುತ್ರರನ್ನು ಪಡೆಯುತಿದ್ದರು. ಅದರೆ, ಅವರಿಗೆ ಪತ್ನಿ ಅಥವಾ ಸಹಯೋಗಿನಿಯಸ್ತರವು ಎಂದಿಗೂ ದೊರೆಯುತ್ತಿರಲಿಲ್ಲ. ಇದರಿಂದಾಗಿ ಇಂತಹರು ತಮ್ಮ ಸ್ವಾಮಿಯ ಕೃಪೆಯಿಂದ ದೂರವಾದಾಗ, ಸಾಧಾರಣ ಜನತೆಗೆ ತಮ್ಮ ಶರೀರವನ್ನು ಮಾರಿಕೊಳ್ಳುವ ಅವಸ್ಥೆಗೆ ಬಂದಿಳಿಯುತಿದ್ದರು.

ನಾಗರಿಕ ಸಭ್ಯತೆಯ ಪ್ರಾದುರ್ಭಾವ ಮತ್ತು ವ್ಯಾಪಾರಿಕ ವೇಶ್ಯಾವೃತ್ತಿಗಳೊಳಗೆ ನಿಕಟ ಸಂಬಂಧವಿದೆ. ಜನಸಂಖ್ಯೆಯು ಬೆಳೆಯುತ್ತ ಬಂದುದರಿಂದ ಎಲ್ಲರಿಗೂ ಕೆಲಸ ದೊರೆಯುವುದು ಅಸಂಭವವಾಯಿತು. ನಗರಗಳಲ್ಲಿ ದೊಡ್ಡ ದೊಡ್ಡ ಉದ್ಯೋಗಗಳು ಜನ್ಮಸಿದುವು. ಫಲಕ ಹಳ್ಳಿಗಳಲ್ಲಿ ಹೆಚ್ಚುತ್ತಿರುವ ಜನರಿಗೆ ಒಂದು ನಿಶ್ಚಿತ ಧ್ಯೇಯ ಇದಿರು ತೋರಿತು. ಅವರು ನಗರಗಳಿಗೆ ಬಂದಿರತೊಡಗಿದರು. ಅವರಿಗೆ ಜೀವನ ಸಾಗಿಸಲು ಅಲ್ಪ ವೇತನ ದೇನೋ ದೊರೆಯುತಿತ್ತು; ಆದರೆ, ತಮ್ಮ ಪರಿವಾರವನ್ನು ಕಟ್ಟಿಕೊಂಡು ನೆಲಸುವುದು ಮಾತ್ರ ಅಸಾಧ್ಯದ ಮಾತಾಗಿತ್ತು. ಈ ನಿಮ್ನ ವರ್ಗದ ಶಾರೀರಿಕಾವಶ್ಯಕತೆಗಳನ್ನು ಪೂರೈಸಲು ನಿಮ್ನ ವರ್ಗದ ವೇಶ್ಯೆಯರು ನಗರಗಳನ್ನು ಹೊಕ್ಕರು; ಆದರೆ, ಇನ್ನೊಂದಿಗೆ ಇನ್ನೊಂದು ಸಮಸ್ಯೆಯೂ ಉದ್ಭವಿಸಿತು.

ತಂದೆ ಅಥವಾ ಗಂಡನು ಅತ್ಯಂತ ಬಡವನಾಗಿರುವುದರಿಂದ ಅನೇಕ ಹುಡುಗಿಯರಿಗೆ ಇಂತಹ ಪತಿತ ಜೀವನ ಸಾಗಿಸಬೇಕಾಗುತ್ತದೆ. ಪತಿಯಿಂದ ಸಂತಪ್ತೆಯಾದ ಅಥವಾ ಸಮಾಜದಿಂದ ತಿರಸ್ಕೃತೆಯಾದವರ ಸಂಖ್ಯೆ ಬಹಳ ಕಡಿಮೆಯೇ. ಕಾಡು ಇಲ್ಲವೆ ಅದಿವಾಸಿ ವಂಶಗಳಲ್ಲಿ ಬಡ ಹುಡುಗಿಯರು ಹೆಚ್ಚಾಗಿ ತಮ್ಮ ಮಾತಾಪಿತರಿಂದ ಇಲ್ಲವೇ ಪತಿಯಿಂದ ಹಣಾಪಾಸಿಗಾಗಿ ಮಾರಲ್ಪಡುತಿದ್ದರು. ಈಗ ದೊರೆವ ಅಂಕೆ ಸಂಖ್ಯೆಗಳ ಮೇರೆಗೆ ಅಧಿಕಾಂಶ ವೇಶ್ಯೆಯರು ವಿವಾಹಿತರು ಇಲ್ಲವೇ ವಿಧವೆಯರು. ಇವರಲ್ಲಿ ಪುರುಷರಿಂದ ಮೋಸಗೊಳಿಸಲ್ಪಟ್ಟ ಅಥವಾ ತೊರೆಯಲ್ಪಟ್ಟವರು ಹೆಚ್ಚಿನವರು. ಮತ್ತು ಬಡತನದ ಕಾರಣದಿಂದ ಕುಲಟೆಯರಿಂದ ಕರೆದು ತರಲ್ಪಟ್ಟವರು ಎರಡನೆಯ ಸ್ಥಾನಗಳಿಸುವರು. ಮೂರನೆಯದಾಗಿ ವೇಶ್ಯೆಯರ ಪುತ್ರಿಯರು, ವಿಮಾತೆಯರಿಂದ ಸಹಾಯಿಸಲ್ಪಟ್ಟವರೂ ಕೆಲವರಿರುವರು.

ಪ್ರಸಿದ್ಧ ಇತಿಹಾಸಗಾರ ವಿಲಿಯಂ ಲೈಕಿಯು ಬರೆಯುತ್ತಾನೆ. ಕಲುಷ ಮತ್ತು ಪತನದ ಪ್ರತೀಕವಾದ ಆಪೊಂದು ನಾರಿಯ ಮೇಲೆ ಮಾನವರಿಗೆ ಒಂದು ಭಾರವನ್ನು ಹೊರಿಸಲಾಗಿದೆ; ಈ ಭಾರವು ಹೊರಳದರೆ, ಜಗತ್ತು ಲಜ್ಜೆಯಿಂದ ತುಂಬಿ ಹೋಗುವುದು. ಧರ್ಮಗಳು ಹುಟ್ಟುತ್ತವೆ, ಸಾಯುತ್ತವೆ. ಸಂಸ್ಕೃತಿಗಳು ಅರಳುತ್ತವೆ, ಮಣಿಯುತ್ತವೆ; ಆದರೆ, ಕರುಣೆಯ ಸಾಕಾರ ಮೂರ್ತಿಯಾದ, ಮಾನವತೆಯ ಅಮರ ಪೂಜಾರಿಣಿಯಾದ ವೇಶ್ಯೆ ಪುರುಷರ ಕಾಮಲಿಪ್ಸೆಯ ದವಡೆಗಳಿಡೆಯಲ್ಲಿ ಯುಗಯುಗಗಳಿಂದ ಇದ್ದಂತೆ ಜೀವಿಸಿದ್ದು ಉರಿಯುತಿದ್ದಾಳೆ.

ಮಾನವೇತಿಹಾಸದ ಪ್ರಾಚೀನ ಸುಟಿಗಳನ್ನು ಮಗುಚಿಹಾಕಿದರೆ, ಆಗ, ಯುಗಯುಗದಲ್ಲಿ ನಗರಗಳಲ್ಲಿ ವೇಶ್ಯೆಯರಿದ್ದರೆಂದೂ, ಸಮಾಜದ ಈ ಕಲಂಕವನ್ನು ದೂರವಾಡುವ ಪ್ರಯತ್ನಗಳು ಅಗಾಗ ನಡೆಯುತಿದ್ದುವು ಎಂದೂ ತೋರಿಬರುತ್ತದೆ. ಇವುಗಳಲ್ಲಿ ಕೆಲವೊಮ್ಮೆ ಸಫಲತೆ ದೊರೆತಿತ್ತು; ಕೆಲವೊಮ್ಮೆ ದೊರೆಯಲಿಲ್ಲ. ಈ ಸಫಲತೆಯು ಸಮಾಜದ ಈ ದೋಷವನ್ನು ಕಂಡು ಸಂತಪ್ತರಾಗಿ, ಈ ವಾಸನೆಯನ್ನು ತೊಳೆದು ಕೊಳ್ಳಲು ಕಾಯಾವಾಚಾಮನಸಾಮಾಜಾ ಕಾಯಾಮಗ್ನರಾದ ಕೆಲವರ ಪ್ರಯತ್ನದ ಪ್ರತೀಕವಾಗಿದೆ.

ಒಮ್ಮೆ ಭಗವಾನ್ ಬುದ್ಧನು ಸ್ವಚ್ಛಜೀವನದ ಉದ್ದೇಶಗಳ ಪ್ರಚಾರ ಮಾಡುತ್ತ ವೈಶಾಲಿಗೆ ಬಂದನು. ವೈಶಾಲಿಯ ನಗರವಧು ಅಂಬಪಾಲಿಗಿದು ತಿಳಿದು ಆಕೆ ಓಡಿ ಹೋಗಿ ಬುದ್ಧನಲ್ಲಿಗೆ ಬಂದು ಸೇರಿದಳು.

"ನಾಳೆಯ ಭೋಜನವನ್ನು ನನ್ನ ಮನೆಯಲ್ಲಿ ಸ್ವೀಕರಿಸುವ ಕೃಪೆಮಾಡಬೇಕು" ಎಂದಳು. ಬುದ್ಧನು ಒಪ್ಪಿದನು. ಆದರೆ, ಶಿಷ್ಯರು ಶಂಕಿಸಿದರು. "ಭಗವನ್, ಅಂಬಪಾಲಿಯೊಬ್ಬಳು ವೇಶ್ಯೆ. ಮಹಾ ಆರ್ಯಕುಮಾರ ಲಿಚ್ಛವಿಯ ವರ್ಗವೂ ತಮ್ಮ ಸೇವೆಯಲ್ಲಿರುವಾಗ, ತಾಪೊಟ್ಟು ವೇಶ್ಯೆಯ ಮನೆಯ ಭೋಜನವನ್ನು ಸ್ವೀಕರಿಸಿದಿರಿ". ಅವರು ಹೇಳಿದರು.

"ಲಿಚ್ಛಾವಿಗಳ ಹೃದಯದಿಂದ ಅಹಂಕಾರವು ಕರಗಿ ಹೋಗುವಹಾಗೆ ಸ [illegible]

ಪಂಜಾಬದ ಸೈದಾಪುರದಲ್ಲಿ ಸೇರಿದ ಒಂದು ಸಮ್ಮೇಳನದಲ್ಲಿ ಸರಕಾರವು ಹಳ್ಳಿಯ ಜನರೇ ದೊರೆವ ಬಣ್ಣ ಮತ್ತು ಹಳ್ಳಿಗಳಲ್ಲಿಯೇ ಇರುವ ಕುಶಲವಿದರ ಕಲಾಭಿವೃದ್ಧಿಪಡಿಸಿ ಚಿತ್ರಕಲೆಯನ್ನುಳಿಸಲು ಒಂದು ಯೋಜನೆಯನ್ನು ತಯಾರಿಸಿದೆ. ಮೇಲಿನ ಚಿತ್ರದಲ್ಲಿ ಸೈದಾಪುರದ ಮನೆಮನೆಗಳ ಮುಂಭಾಗದ ಗೋಡೆಗಳಲ್ಲಿ ಬಿಡಿಸಿದ ಚಿತ್ರಗಳನ್ನು ಕಾಣಬಹುದು. ಇದಕ್ಕುಪಯೋಗಿಸಿದ ಬಣ್ಣ ಮತ್ತು ಕುಂಚಗಳು ಅಲ್ಲಿಯ ಸುಲಭದಲ್ಲಿತಯಾರಿಸಬಹುದಾದುವು.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ಸೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಮಲೇರಿಯಾ ನಿರ್ಮೂಲನ ಸಪ್ತಾಹ—

ಮಲೇರಿಯಾದ ನಿರ್ಮೂಲನವೇಕೆ?

ಡಾ. ಸಿ. ಮಣಿ.

ಮಲೇರಿಯಾ ರೋಗವನ್ನು ಪ್ರಾಚೀನಕಾಲದ ರೋಮನರು ಮಾರಕ ಸ್ವರೂಪದ ಅನಿಲವೆಂದು ಕರೆಯುತ್ತಿದ್ದರು ಜೌಗು ಪ್ರದೇಶಗಳಲ್ಲಿ ಚರಂಡಿಗಳನ್ನು ತೋಡಿ ನೀರನ್ನು ಬೇರೆಕಡೆ ಹರಿಸುವುದರಿಂದ ಈ ವಿನಾಶಕಾರಕ ಅನಿಲಗಳನ್ನು ತೊಲಗಿಸಬಹುದೆಂದು ಅವರು ಭಾವಿಸಿದ್ದರು. ಇಂದಾದರೋ ಸುವ್ಯವಸ್ಥಿತ ರೀತಿಯಲ್ಲಿ ಕೀಟನಾಶಕ ಔಷಧ ವಸ್ತುಗಳನ್ನು ಸಿಂಪಿಸುವುದರಿಂದ ರೋಗವನ್ನು ಮೂಲೋತ್ಪಾಟನ ಮಾಡಬಹುದಾಗಿದೆ. ಶತಮಾನಗಳಿಂದ ಈ ರೋಗದ ಲಕ್ಷಣಗಳ ಬಗ್ಗೆ ಅರ್ಜಿಸಲಾದ ಜ್ಞಾನದಿಂದ ಈ ರೋಗವನ್ನು ಮೂಲೋತ್ಪಾಟನ ಮಾಡಬಹುದೆಂದು ಖಚಿತಗೊಂಡಿದೆ. ಈ ರೋಗದೊಂದಿಗೆ ಸೆಣಸುತ್ತಿರುವ ಹೋರಾಟದ ವಿವಿಧ ಹೆಗ್ಗುರುತುಗಳ ಸಿಂಹಾವಲೋಕನ ಮಾಡುವುದು ಅಸಕ್ತಿಯುತವಾಗಿದೆ. ಮಲೇರಿಯಾ ರೋಗ ಮೂಲೋತ್ಪಾಟನತ್ತ ಇಂದು ವಿಶಕ್ಯಾಗಿ ಅತ್ಯಗತ್ಯ ವಿಷಯವಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಸೂಕ್ತವಾಗಿದೆ.

ಕ್ವಿನೈನಿನ ಉಪಯೋಗ

ಇತಿಹಾಸದ ಅದಿಯಂದಲೂ ಮಲೇರಿಯಾ ರೋಗವನ್ನು ಜನಾಂಗದ ಶಾಪವೆಂದು ಪರಿಗಣಿಸಲಾಗಿದೆ. ೧೭ನೆಯ ಶತಮಾನದಲ್ಲಿ ಮೊಟ್ಟಮೊದಲನೆಯ ಸಲ ಈ ರೋಗಕ್ಕೆ ಒಂದು ಪರಿಣಾಮಕಾರಿಯಾದ ಔಷಧಿಯನ್ನು ಕಂಡುಹಿಡಿಯಲಾಯಿತು. ಸಿಂಕೋನಾ ಮರದ ತೊಗಟೆಯನ್ನು ಪುಡಿಮಾಡಿ ಮಲೇರಿಯಾ ರೋಗದಿಂದ ನರಳುತ್ತಿರುವ ರೋಗಿಗೆ ಕೊಟ್ಟಲ್ಲಿ ವಾಸಿಯಾಗುವುದೆಂಬುದು ಕಂಡುಬಂದಿತು. ೧೯೦೪ರಲ್ಲಿ ಕ್ವಿನೈನನ್ನು ಸಿಂಕೋನ ತೊಗಟೆಯಿಂದ ಬೇರ್ಪಡಿಸಲಾಯಿತು. ಬಹುಕಾಲದವರೆಗೆ ಕ್ವಿನೈನ್ ಪರಿಣಾಮಕಾರಿಯಾದ ಮಲೇರಿಯಾ ನಿವಾರಕ ಔಷಧಿಯೆಂದು ಪರಿಗಣಿಸಲ್ಪಟ್ಟಿತ್ತು. ಆದರೆ ಮಲೇರಿಯಾ ರೋಗವನ್ನು ಹತೋಟಿಗೆ ತರಲು ಕ್ವಿನೈನ್ ಅತ್ಯಂತ ಪರಿಣಾಮಕಾರಿ ಎಂಬ ಆಲೆಯು ನಿವಾರೆಯಾಯಿತು ಜಗತ್ತಿನ ಎಲ್ಲ ಭಾಗಗಳಲ್ಲಿಯೂ ವ್ಯಾಪಕವಾಗಿ ಹರಡುವ, ಪ್ರತಿ ವರ್ಷವೂ ಕೋಟ್ಯಂತರ ಜನರಿಗೆ ತಗಲುವ ಈ ರೋಗವನ್ನು ಕೇವಲ ಔಷಧಿಯಿಂದ ಮಾತ್ರ ತಡೆಗಟ್ಟುವುದು ಸಾಧ್ಯವಿಲ್ಲವಾಯಿತು.

ಸೊಳ್ಳೆಯೊಂದಿಗೆ ಸಮರ

ಮಲೇರಿಯಾ ರೋಗದ ಕಾರಣಗಳು ಹಾಗೂ ಆ ರೋಗವು ಹರಡುವ ವಿಧಾನಗಳ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳಲಾಯಿತು. ೧೮೮೮ರಲ್ಲಿ ಡಾ. ರಾಸ್ ಅವರು ಮಲೇರಿಯಾ ರೋಗ ಹಂಡುವುದಕ್ಕೆ ಅನಾಫಿಲಿಸ್ ಸೊಳ್ಳೆಯೇ ಕಾರಣವೆಂದೂ, ಈ ಸೊಳ್ಳೆಯು ಮಲೇರಿಯಾ ರೋಗ ವಾಹಕವೆಂದೂ ಸಾರಿದರು. ಮಹತ್ವಪೂರ್ಣ ಶೋಧನೆಯ ಫಲಸ್ವರೂಪವಾಗಿ ಆರೋಗ್ಯ ಅಧಿಕಾರಿಗಳು ಸೊಳ್ಳೆಗಳನ್ನು ನಾಶಪಡಿಸುವ ಯೋಜನೆಗಳ ಕೆಲಸ ಹೇಳಿ ನೇಟಿಗೆ ಕೆಳುಹಿಸುವುದನ್ನು (ಆಚರಣೆಗೆ ತರಲಾರಂಭಿಸಿದವು. ಸೊಳ್ಳೆಗಳು ಜನ್ಮ ತಾಳುವ ಜೌಗು ಪ್ರದೇಶಗಳಲ್ಲಿ ಚರಂಡಿಗಳನ್ನು ತೋಡಿ ನೀರು ಹರಿದು ಹೋಗುವಂತೆ ಮಾಡಲು ಹಾಗೂ ಅಂತರ ಪ್ರದೇಶಗಳಲ್ಲಿ ಮಣ್ಣು ಹಾಕಿ ಮುಚ್ಚಲು ಹೆಚ್ಚು ಹಣ ವೆಚ್ಚವಾಗುವುದರಿಂದ, ಇಂತಹ ಜೌಗು ಪ್ರದೇಶಗಳು ಹುಳುಕೊಳ್ಳಗಳಲ್ಲಿ ಕೀಟನಾಶಕ ಔಷಧ ವಸ್ತುಗಳನ್ನು ಚೆಲ್ಲಿ ಸೊಳ್ಳೆಮರಿಗಳನ್ನು ನಾಶಪಡಿಸುವುದು ಅವಶ್ಯಕವೆಂದು ಭಾವಿಸಲಾಯಿತು. ಮೊದಲನೆಯ ಹಾಗೂ ಎರಡನೆಯ ಮಹಾ ಯುದ್ಧಗಳ ನಡುವೆ ಅಶುದ್ಧ ತೈಲವನ್ನು ಸೊಳ್ಳೆ ಹುಟ್ಟುವ ಸ್ಥಳಗಳಲ್ಲಿ ಚೆಲ್ಲಿ ಸೊಳ್ಳೆಯನ್ನು ನಾಶಪಡಿಸಲಾಗುತ್ತಿತ್ತು. ಹಲವಾರು ರಾಷ್ಟ್ರಗಳು ಸೊಳ್ಳೆ ಮರಿಗಳನ್ನು ಭಕ್ಷಿಸುವ ಗಾಂಬೂಸಿಯಾ ಜಾತಿಯ ಮೀನುಗಳನ್ನು ನಾಶುವ ವಿಧಾನವನ್ನು ಆಚರಣೆಗೆ ತಂದವು. ಸೊಳ್ಳೆ ಮರಿಗಳನ್ನು ನಾಶಪಡಿಸುವ ವಿಧಾನವು ಮಿತಿಗೊಳಪಟ್ಟಿದೆಯೆಂಬುದು ಶೀಘ್ರದಲ್ಲಿಯೇ ಮನವರಿಕೆಯಾಯಿತು. ಭಾರಿ ಪ್ರಮಾಣದಲ್ಲಿ ಈ ವಿಧಾನಗಳನ್ನು ಕೈಗೊಳ್ಳುವುದರಿಂದ ಅಪಾರ ಹಣ ವೆಚ್ಚವಾಗುವುದೆಂಬುದು ಕಂಡು ಬಂದಿತು.

ಡಿ. ಡಿ. ಟಿ ಪುಡಿಯ ಪ್ರಯೋಗ

ಕಳೆದ ಪ್ರಪಂಚ ಯುದ್ಧದ ಸಮಯದಲ್ಲಿ ಸ್ವಿಟ್ಜರ್‌ಲೆಂಡಿನ ನೋಬೆಲ್ ಬಹುಮಾನಿತ ಪಾಲ್ ಮುಲ್ಲರ್ ಡಿ. ಡಿ. ಟಿ. ಪುಡಿಯು ಕೀಟ ನಾಶಕ ಗುಣಾಂಶವನ್ನು ಪತ್ತೆಹಚ್ಚಿದೆ ಎಂಬುದನ್ನು ಕಂಡು ಹಿಡಿದರು. ಈ ಪುಡಿಯು ತಿಂಗಳು ಗಟ್ಟಲೆ ಪರಿಣಾಮಕಾರಿಯಾಗಿರುವುದೆಂದು ಕಂಡು ಬಂದಿದೆ.

ಪ್ರಪಂಚ ಆರೋಗ್ಯ ಸಂಸ್ಥೆ

೧೯೪೮ರಲ್ಲಿ ಪ್ರಪಂಚ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆಗ ಮಲೇರಿಯಾ ರೋಗ ನಿಯಂತ್ರಣ ಕಾರ್ಯಕ್ರಮಕ್ಕೆ ಅಗ್ರ ಪ್ರಾಧಾನ್ಯವನ್ನೀಯಲಾಯಿತು. ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿರುವ ಮಲೇರಿಯಾ ರೋಗವನ್ನು ಪ್ರಪಂಚದಿಂದಲೇ ಮೂಲೋತ್ಪಾಟನ ಮಾಡುವುದು ಈ ಕಾರ್ಯಕ್ರಮದ ಗುರಿಯಾಗಿತ್ತು.

ಪ್ರಪಂಚ ಆರೋಗ್ಯ ಸಂಸ್ಥೆಯ ನೆರವನ್ನು ಪೊಟ್ಟ ಮೊದಲು ಪಡೆದ ದಕ್ಷಿಣ ಏಷಿಯಾದ ರಾಷ್ಟ್ರಗಳಲ್ಲಿ ಭಾರತ ಮತ್ತು ಥೈಲೆಂಡ್‌ಗಳೂ ಸೇರಿವೆ. ಡಿ. ಡಿ. ಟಿ. ಪುಡಿಯನ್ನು ಮನೆ ಮನೆಗಳಲ್ಲಿಯೂ ಸಿಂಪಿಸಿ ರೋಗವನ್ನು ತಡೆಗಟ್ಟುವ ಬಗ್ಗೆ ಚಳವಳಿಯನ್ನು ನಡೆಸುವ ವಿಚಾರದಲ್ಲಿ ಪ್ರಪಂಚ ಆರೋಗ್ಯ ಸಂಸ್ಥೆಯು ಅಚಲ ವಿಶ್ವಾಸವನ್ನು ಹೊಂದಿತು. ೧೯೪೯ರಲ್ಲಿ ಭಾರತ ಸರ್ಕಾರದವರು ನಾಲ್ಕು ಪ್ರತ್ಯಕ್ಷ ಪ್ರದರ್ಶನ ಹಾಗೂ ತರಬೇತಿ ಯೋಜನೆಗಳನ್ನು ಸ್ಥಾಪಿಸಿದರು. ಈ ಯೋಜನೆಗಳಿಂದ ಡಿ. ಡಿ. ಟಿ. ಪುಡಿಯನ್ನು ಸಿಂಪಿಸಿ ಮಲೇರಿಯಾ ರೋಗವನ್ನು ನಿಯಂತ್ರಿಸುವ ಕಾರ್ಯವು ಪರಿಣಾಮಕಾರಿಯೆಂಬುದು ವ್ಯಕ್ತಪಟ್ಟಿತು. ಅದರಲ್ಲಿಯೂ ಮಲೇರಿಯಾ ರೋಗವು ಅತ್ಯುಗ್ರ ಸ್ವರೂಪ ತಾಳಿರುವ ಉತ್ತರ ಪ್ರದೇಶದ ತೆರಾಯಿ ಜಿಲ್ಲೆಗಳಲ್ಲಿ ಡಿ. ಡಿ. ಟಿ. ಸಿಂಪಿಸುವ ಕಾರ್ಯಕ್ರಮವು ಯಶಸ್ವಿಯಾಯಿತು. ಡಿ ಡಿ. ಟಿ. ಪುಡಿ ಸಿಂಪನೆ ಕಾರ್ಯದಿಂದ ಅನೇಕ ರಾಷ್ಟ್ರಗಳಲ್ಲಿ ಮಲೇರಿಯಾ ರೋಗವು ತಹಬಂದಿಗೆ ಬಂದಿತು. ಅಮೇರಿಕಾದ ಸಂಯುಕ್ತ ಸಂಸ್ಥಾನಗಳು ಈ ಮಲೇರಿಯಾ ರೋಗ ನಿಯಂತ್ರಣ ಚಳವಳಿಯನ್ನು ಸೇರಿ ಯೂನಿಸೆಫ್ ಸಂಸ್ಥೆಯು ಉದಾರವಾಗಿ ಡಿಡಿಟಿ ಪುಡಿ, ಮೋಟಾರು ವಾಹನಗಳು ಮುಂತಾದುವನ್ನು ಒದಗಿಸಿತು.

ಅಪಾಯ ಸೂಚಕ ಸಂಕೇತ

ಮಲೇರಿಯಾ ನಿವಾರಕ ಕ್ರಮಗಳು ಅವ್ಯಾಹತವಾಗಿ ಸಾಗುತಿದ್ದವು. ಆ ಸಮಯದಲ್ಲಿ ಮೊದಲನೆಯ ಬಾರಿ ಎಚ್ಚರಿಕೆಯನ್ನೀಯಲಾಯಿತು. ೧೯೫೧ರಲ್ಲಿ ಒಂದು ಜಾತಿಯ ಮಲೇರಿಯಾ ಸೊಳ್ಳೆಯು ಡಿಡಿಟಿಪುಡಿಯ ಸಿಂಪನದಿಂದಲೂ ಸಾಯಲಿಲ್ಲ ಹೀಗೆ ಮತ್ತೊಂದು ಜಾತಿಯ ಸೊಳ್ಳೆ ಡಿಡಿಟಿ ಪುಡಿಯ ಸಿಂಪನಕ್ಕೆ ಜಗ್ಗಲಿಲ್ಲ. ಡಿಡಿಟಿ ನಿರೋಧ ಶಕ್ತಿಯು ಸೊಳ್ಳೆಗಳಲ್ಲಿ ಕಂಡುಬಂದಿತು. ಮಲೇರಿಯಾ ರೋಗವನ್ನು ಮೂಲೋತ್ಪಾಟನ ಮಾಡಲು ಅತ್ಯುತ್ತಮ ಆಸ್ತ್ರವೆನಿಸಿದ ಡಿಡಿಟಿಯನ್ನು ನಿಷ್ಪ್ರಯೋಜಕವೆನ್ನುವ ಪರಿಸ್ಥಿತಿ ಒದಗಿತು.

ಅನೇಕ ರಾಷ್ಟ್ರಗಳು ಡಿಡಿಟಿ ಸಿಂಪನದಿಂದ ಮಲೇರಿಯಾ ರೋಗವನ್ನು ಹತೋಟಿಗೆ ತರುವ ಯೋಜನೆಗಳನ್ನು ಸಿದ್ಧಪಡಿಸಿಕೊಂಡಿದ್ದರು. ಹೊಸ ಸಮಸ್ಯೆಯು ಉದ್ಭವಿಸಿದ್ದರಿಂದ ಬೇರೆ ರೀತಿಯಲ್ಲಿ ಈ ಮಲೇರಿಯ ನಿಯಂತ್ರಣವನ್ನು ಕೈಗೊಳ್ಳಬೇಕಾಯಿತು. ೧೯೫೫ರಲ್ಲಿ ರೋಗ ನಿರ್ಮೂಲನ ಕಾರ್ಯ ಕೈಗೊಳ್ಳಬೇಕೆಂದು ನಿರ್ಧಾರ ಕೈಗೊಳ್ಳಲಾಯಿತು.

ನಿರ್ಮೂಲನವೇ ಅಂತಿಮ ಗುರಿ

೧೯೫೫ರಲ್ಲಿ ಪ್ರಪಂಚ ಆರೋಗ್ಯ ಸಂಸ್ಥೆಯು ಮೆಕ್ಸಿಕೋದಲ್ಲಿ ಸಮಾವೇಶಗೊಂಡು ಸೊಳ್ಳೆಗಳು ವಿವಿಧ ಕೀಟನಾಶಕಗಳ ಬಗ್ಗೆ ನಿರೋಧ ಶಕ್ತಿಯನ್ನು ಪಡೆಯುವುದಕ್ಕೆ ಮುಂಚಿತವಾಗಿಯೇ ಮಲೇರಿಯಾ ರೋಗವನ್ನು ನಿರ್ಮೂಲಮಾಡಬೇಕೆಂಬ ಸಂಕಲ್ಪ ಕೈಗೊಂಡಿತು ಈ ವಿಚಾರದಲ್ಲಿ ಚಳವಳಿಯನ್ನು ಕೈಗೊಳ್ಳುವ ಬಗ್ಗೆ ಹಣಕಾಸಿನ ನೆರವನ್ನು ನೀಡುವುದಕ್ಕಾಗಿ ಪ್ರಪಂಚ ಮಲೇರಿಯಾ ನಿಧಿಯನ್ನು ಸ್ಥಾಪಿಸಿತು.

ಮಾನವನ ದೇಹದಲ್ಲಿರುವ ರಕ್ತ ಸಂಬಂಧ ಪರೋಪಜೀವಿಗಳು, ಚಿಕಿತ್ಸೆ ಇಲ್ಲದೆಯೇ ಮೂರು ವರ್ಷಗಳಲ್ಲಿ ತಾವಾಗಿಯೇ ಸಾಯುವುದರಿಂದ, ಮಲೇರಿಯಾ ರೋಗವನ್ನು ಮೂಲೋತ್ಪಾಟನ ಮಾಡಲು ಸಾಧ್ಯವಿದೆ. ಮೂರುವರ್ಷಗಳವರೆಗೆ ಮಾನವನಿಂದ ಸೊಳ್ಳೆ ಮತ್ತು ಸೊಳ್ಳೆಯಿಂದ ಮಾನವನಿಗೆ ರೋಗ ಹರಡುವುದನ್ನು ತಪ್ಪಿಸಿದ ನಂತರ, ಸಿಂಪನ ಚಳವಳಿಯನ್ನು ನಿಲ್ಲಿಸಬಹುದಾಗಿದೆ. ಸೊಳ್ಳೆಗಳು ಇದ್ದೇ ಇರುವುವು. ಆದರೆ ರೋಗ ಹರಡಲು ಸಾಧ್ಯವಾಗುವಂತಹ ರೋಗಿಗಳು ಇರುವುದಿಲ್ಲ.

ರೋಗ ನಿರ್ಮೂಲನವನ್ನು ಬಹುಮಟ್ಟಿಗೆ ಸಾಧಿಸಲಾಗಿದೆ. ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಮೋಟೋರಿಕೋ, ಚಿಲಿ, ಸೈಪ್ರಸ್, ಕಾರ್ಸಿಕ, ಇಟಲಿಗಳಂತಹ ರಾಷ್ಟ್ರಗಳಲ್ಲಿ ಈ ನಿರ್ಮೂಲನ ಕಾರ್ಯಕ್ರಮವು ಯಶಸ್ವಿಯಾಗುತ್ತಿದೆ. ಉಳಿದ ರಾಷ್ಟ್ರಗಳಲ್ಲಿ ಈ ಕಾರ್ಯಕ್ರಮವು ಯಶಸ್ವಿಗಳಿಸಲಿದೆ. ದಕ್ಷಿಣ ಯುರೋಪಿನಲ್ಲಿ ವರ್ಷಕ್ಕೆ ೪೦ ಲಕ್ಷ ಜನರು ಮಲೇರಿಯಾ ರೋಗದಿಂದ ನರಳುತ್ತಿದ್ದರು. ಈಗ ಈ ಸಂಖ್ಯೆ ೧೮೦೦೦ಕ್ಕೆ ಇಳಿದಿದೆ. ಜಗತ್ತಿನಲ್ಲಿ ೧೯೪೦ರಲ್ಲಿ ಮಲೇರಿಯಾ ರೋಗಕ್ಕೆ ಬಲಿಯಾದವರ ಸಂಖ್ಯೆ ೩೦ ಲಕ್ಷ ಇತ್ತು. ೧೯೫೫ರಲ್ಲಿ ಈ ಸಂಖ್ಯೆ ೨೦ ಲಕ್ಷಕ್ಕೆ ಇಳಿಯಿತು. ಬಹುಶಃ ೧೯೫೭ರಲ್ಲಿ ೧೦ ಲಕ್ಷಕ್ಕೆ ಇಳಿದಿರಬಹುದು.

ಭಾರತದಲ್ಲಿ

ಉಳಿದ ರಾಷ್ಟ್ರಗಳ ಅನುಭವದ ಮೇಲೆ ಭಾರತದಲ್ಲಿ ಸಹ ಮಲೇರಿಯಾವನ್ನು ಮೂಲೋತ್ಪಾಟನ ಮಾಡಲು ಸಾಧ್ಯವಿದೆಯೆಂಬುದು ಖಚಿತಪಟ್ಟಿದೆ. ೨೦ ವರ್ಷಗಳ ಹಿಂದೆ ಈ ರೋಗವನ್ನು ಮೂಲೋತ್ಪಾಟನ ಮಾಡುವುದು ಅಸಾಧ್ಯವೆಂದು ಪರಿಗಣಿಸಲಾಗಿತ್ತು. ಈಗ ಈ ರೋಗ ನಿಯಂತ್ರಣವು ನಮ್ಮ ಶಕ್ತಿಗೆ ಮೀರಿದ್ದೇನಲ್ಲ.

(೧೩ನೇ ಪುಟ ನೋಡಿರಿ)
(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಖಚೇರಿ: ಮುಕುಂದ ನಿವಾಸ, ಉಡುಪಿ.

ಮಳೆಗಾಲ ಪ್ರಾರಂಭವಾಗಿದೆ.....!

ದಿನಗಳು ಉರುಳುತ್ತವೆ. ಕಾಲಗಳು ಕಳೆಯುತ್ತಿವೆ. ಒಂದರ ನಂತರ ಮತ್ತೊಂದು, ಕಾಲಚಕ್ರ, ಸಮಯದ ವ್ಯೂಹ ತಿರುಗುತ್ತಾ ಇರುತ್ತದೆ.

ಅಂತೆಯೇ ನೀವು ಸಿಂಡಿಕೇಟ್ ಬೇಂಕಿನಲ್ಲಿ ಜಮೆಯಾಗಿರಿಸಿದ ಮೊತ್ತ ವೃದ್ಧಿಯಾಗುತ್ತಾ ಇರುತ್ತದೆ. ನೀವು ಸಿಗ್ಗಿ ಕೇನರಾತಿದಾರರಾಗಿ, ಅಥವಾ ಇನ್ನಾವುದೇ ಉಳಿತಾಯ ಯೋಜಕರಾಗಿ, ಕೂಡಿಹುತ್ತಿರುವ ಹಣ ಬೆಳೆಯುತ್ತಾ ಇರುತ್ತದೆ. ಮತ್ತು ಆಸಕ್ತಾಲದಲ್ಲಿ ನಿಮ್ಮ ನೆರವಿಗೆ ಬಂದೇ ಬರುತ್ತದೆ.

ನಮ್ಮ 113 ಶಾಖೆಗಳು ನಿಮ್ಮ ಸೇವೆಗೆ ಸದಾ ಸಿದ್ಧವಿವೆ.

ಟಿ. ಎ. ಪೈ, ಬಿ.ಕಾಂ.(ಹೊಂ.)
ಎ.ಐ.ಐ.ಬಿ.ಯಸ್.ಆರ್.ಇ.ಎಸ್.(ಲಂಡನ್)
ಜನರಲ್ ಮೆನೇಜರ್.

ಡಾ. ಟಿ. ಮಾಧವ ಪೈ,
ಎಂ.ಡಿ. & ಬಿ.ಎಸ್.
ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD., UDIPI.

ಮದ್ರಾಸ್ ಸ್ಟೇಟಿನಲ್ಲೆಲ್ಲಾ ಸ್ವಾಕೃತಿರುವುದು

ಇಮ್ರೆನಾಗಿ ಕೊಲೆಯ ಪ್ರಕರಣ ಸಾಧಿಸಿದ್ದೇನು?

ಕಮ್ಯುನಿಸ್ಟರ ನಿಜಬಣ್ಣ ಬಯಲಾಯಿತು!

ಬೂದಿ ಮುಚ್ಚಿದ ಕೆಂಡದಂತೆ ಒಳಗೊಳಗೇನೇ ತಮ್ಮ ಹಿಂಸ್ರ ಮನೋವೃತ್ತಿಯನ್ನಿಟ್ಟುಕೊಂಡು ಹೊರಗಡೆ ಶಾಂತಿ-ಸೌಹಾರ್ದಗಳ ಕೈವಾಗಿಗಳು ತಾವೆಂದು ಹೇಳಿಕೊಳ್ಳುತ್ತಿದ್ದ ರಶ್ಯನ್ ಕಮ್ಯುನಿಸ್ಟರು ಸ್ವಾರ್ಥ ಸ್ವಪ್ರಶಸ್ತಿಯಾಗಾಗ್ಗಾಗಿ ನರಬಲಿಯನ್ನಿತ್ತುದು ನಿಜವಾಗಿಯೂ ಜಗತ್ತಿನ ಎಲ್ಲ ನಾಗರಿಕರನ್ನು ದಂಗುಬಡಿಸಿದೆ. ಸೋವಿಯತ್ತಿನಲ್ಲಿ ಲೆನಿನ್ ಸ್ಟಾಲಿನರ ಕಾಲದಲ್ಲಿ ಮಾತ್ರ ಹಿಂಸೆ ಹಾಗೂ ಬಲಾತ್ಕಾರಗಳು ನಡೆದುವೆಂದೂ ಆಗ ಅನೇಕ ನಿರಪರಾಧಿಗಳ ಪ್ರಾಣಹರಣವಾಗಿತ್ತೆಂದೂ ಈಗ ಪರಿಸ್ಥಿತಿ ಬದಲಾಗಿದ್ದು, ಪ್ರಪಂಚದ ಇತರ ಪ್ರಜಾಪ್ರಭುತ್ವ ರಾಷ್ಟ್ರಗಳಂತೆಯೇ ಸೋವಿಯತ್ತೆಂದೂ ಅಲ್ಲಿ ಸರ್ವಾಧಿಕಾರೀ ಮನೋವೃತ್ತಿ ಹಿಂಸಾಪ್ರಯೋಗದನೆ, ಬಲಾತ್ಕಾರ—ಇವಾವುದೂ ನಡೆಯುದೆ, ನಿಶ್ಚಿತ ಇತರ ರಾಷ್ಟ್ರಗಳೊಡನೆ ಸಹಯೋಗದಿಂದಿರಲು, ವಿಶ್ವಶಾಂತಿಯನ್ನು ಸಂಸ್ಥಾಪಿಸಲು ತಾನು ಶಕ್ತಿಮೀರಿ ದುಡಿಯುತ್ತಿರುವೆನೆಂದೂ ರಶ್ಯ ಆಡಿದ ಮಾತು, ಮಾಡಿದ ಪ್ರಚಾರ, ಮೊಳಗಿಸಿದ ಭೇರಿ—ಇವಾವುದಕ್ಕೂ ಇಂದು ಕಾಸಿನ ಬೆಲೆಯುಳಿದಿಲ್ಲ ಪರದೆಯೊಳಗಡೆಯೇನು ನಡೆಯುತ್ತಿದೆ ಎಂಬುದು ಇದೀಗ ಸುವ್ಯಕ್ತವಾಯಿತು ಇದರಿಂದ ಮಾನವೀಯ ಹಕ್ಕು ಬಾಧ್ಯತೆಗಳನ್ನು ಮನ್ನಿಸುವವರು ಕಮ್ಯುನಿಸ್ಟರ ನಿಜಬಣ್ಣವನ್ನು ತಿಳಿದುಕೊಳ್ಳುವುದೊಳಿತು.

ಸುಮಾರು ಎರಡು ವರ್ಷ ಪೂರ್ವದಲ್ಲಿ ಈಜಿಪ್ತಿನಲ್ಲಿ ಪಾಶ್ಚಾತ್ಯರ ಗೊಂದಲವೆದ್ದಾಗ, ಹಂಗೆರಿಯಲ್ಲಿಯೂ ಒಂದು ದೊಂಬಿಯೆದ್ದಿತ್ತು ಈ ದೊಂಬಿಯು 'ಅಂಶರಿಕ'ವಾಗಿ ಪರಿಣಮಿಸಿತ್ತು. ಹಂಗೆರಿಜನತೆ ತನ್ನ ಅಪ್ರಿಯತೆಗೆ ಕಾರಣವಾದ ಒಂದು ಸರಕಾರವನ್ನು ರುಳಿಸಿ ಇಮ್ರೆನಾಗಿಯವರ ನೇತೃತ್ವದಲ್ಲಿ ಹೊಸ ಸರಕಾರವನ್ನು ರಚಿಸಿಕೊಂಡಿತು. ಆದರೆ ತಮ್ಮ ಪ್ರಭಾವಕ್ಕೆ ಅಡ್ಡಬರುವ ಈ ಸ್ವಧಾನಿ ನಾಗಿಯವರ ಆಯ್ಕೆ ಸೋವಿಯತ್ತಿನ ಮನಸ್ಸಿಗೆ ಬಾರದೆ ಅದು ಈಜಿಪ್ತಿನ ಮೇಲೆ ಫ್ರೆಂಚರು ಮಾಡಿದಂತೆಯೇ ಆಕ್ರಮಣಗೈದು, ಬಲಾತ್ಕಾರದಿಂದ ತಮ್ಮ ಜೇಲುವಾದ ಕಾಡಾರರನ್ನು ಅಧ್ಯಾನದಲ್ಲಿರಿಸಿದರು. ನಾಗಿಯವರು ಜೀವರಕ್ಷಣೆಗಾಗಿ ಯುಗೊಸ್ಲಾವಿಯಾ ರಾಯಭಾರಿ ಕಚೇರಿಯಲ್ಲಿ ಆಶ್ರಯಹೊಂದಿ ಮರೆಯಾದರು.

ಆದರೆ, ಸೋವಿಯತ್ತಿನ ಸ್ವಾರ್ಥಿ ಕಮ್ಯುನಿಸ್ಟ್ ಸರಕಾರಕ್ಕೆ ನಾಗಿಯವರನ್ನು ಹಾಗೇನೇ ಬಿಟ್ಟಲ್ಲಿ ತಮ್ಮ ಮನಸ್ಸಿಗೆ ನೆಮ್ಮದಿ ಸಿಗಲಾರದು ಆದುದರಿಂದ, ಆರರನ್ನೂ ಅವರ ಮೂರು ಜನ ಸಹಚರರನ್ನೂ ಎಂತಾದರೂ ಪಾಡಿ ಜೀವಂತಗೊಳಿಸಬೇಕೆಂಬ ಇರಾದೆ ಹುಟ್ಟಿರಬೇಕು ಕೊಡುವವಳೆಯನ್ನ ಮಾತು ಕೊಟ್ಟ ಬಳಿಕ ನಿನ್ನ ಮಾತೆಂಬ ಇರಾದೆಯಂತೆ, ಮರ ಕೊಟ್ಟಿದ್ದನಾಗಿಯವರ ಜೀವಕ್ಕೆ ಯಾವ ಹಾನಿಯನ್ನುಂಟು ಮಾಡ ವುದೂ ಸೋವಿಯತ್ತಿನ ಇಚ್ಛೆಯಲ್ಲ. ಪರಿಸ್ಥಿತಿಯು ಅರಿವನ್ನೂ ಕ್ಷಮಾ ಭಿಕ್ಷೆಯನ್ನೂ ಗಮನದಲ್ಲಿಡಲಾಗುವುದು. ನಾಗಿಯವರ ವಿರುದ್ಧ ಯಾವ ಸೇಡಿನ ಕ್ರಮವನ್ನೂ ಕೈಗೊಳ್ಳುವುದಿಲ್ಲ, ಹಂಗೇರಿಯನ್ ಸರಕಾರವು ಇಮ್ರೆನಾಗಿ ಮತ್ತವರ ಸಂಗಾತಿಗಳ ಹಿಂದಿನ ಕಾರ್ಯಕಲಾಪಗಳಿಗಾಗಿ ಅವರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವುದಿಲ್ಲ, ಅವರು ತಾವಾಗಿಯೇ ಯುಗೊಸ್ಲಾವ್ ರಾಯಭಾರಿ ಕಚೇರಿಯಿಂದ ತಂತಮ್ಮ ಮನೆಗಳಿಗೆ ತೆರಳಲು ಸ್ವತಂತ್ರರಿರುವರು ಎಂದು ಮುಂತಾದ ಅಭಯಪ್ರದಾನಗಳು ಮಹಾಶಯ ಶಾಂತಪ್ರಿಯ ಕ್ರುಶ್ಚೇವರಿಂದಲೂ ಅವರ ಕೈಗೊಂಬೆಗಳಿಂದಲೂ ದೊರೆತುವು.

ಆದರೆ, ಶಾಸ್ತ್ರ ಓದಿದವರೇ ಗಾಳ ಹಾಕಲು ಹೊರಟಂತೆ, ಈ ಬರವಸೆಗಳಿಂದ ಧೈರ್ಯಗೊಂಡು ಮರೆಯಿಂದ ಹೊರಬಂದ ನಾಗಿ ಮತ್ತು ಸಹಚರರನ್ನು ಅಜ್ಞಾತವಾಗಿ ಬಂಧಿಸಿ, ಅವರನ್ನು ಅಜ್ಞಾತ ಸ್ಥಳಕ್ಕೆ ಕೊಂಡೊಯ್ಯಲಾಯಿತು. ಇಮ್ರೆ ನಾಗಿ ಅವರ ವಿರುದ್ಧ ಹಿಂಸಾತ್ಮಕ ಕ್ರಮ ಕೈಗೊಳ್ಳುವ ಯೋಜನೆಯಾವುದೂ ನಮ್ಮಲ್ಲಿಲ್ಲ ಈ ವಾಗ್ದಾನವನ್ನು ನಾವು ನಡೆಸಿ ಕೊಡುತ್ತೇವೆ— ಎಂಬ ವಿಶ್ವಾಸಪ್ರದವಾದ ಮಾತುಗಳನ್ನು ಉಚ್ಚರಿಸುವುದನ್ನು ಈ ಕಪಟ ಸನ್ಯಾಸಿಗಳು ಎಂದಿಗೂ ಕಡಿಮೆ ಮಾಡಲಿಲ್ಲ

ಇಮ್ರೆನಾಗಿಯವರ ಹಾಗೂ ಅವರತರ ಸಹಚರರ ಮೇಲೆ "ಪ್ರತಿಕ್ರಾಂತಿ ಚಟುವಟಿಕೆ"ಯ ಆರೋಪವನ್ನು ಹೊರಿಸಲಾದ ಶ್ವೇತಪತ್ರ ಜೂನ್ ೨೬ ರಂದು ಪ್ರಕಟವಾಯಿತು. ಬಣ್ಣಬಣ್ಣದ ಮಾತುಗಳನ್ನಾಡಿ ಮಂಕುಬೂದಿಯೆರಚಿ ಹಿಂದಿನಿಂದ ಚೂರಿಯಿರಿದು ಕೊಲ್ಲುವ ಆ ಸ್ಟಾಲಿನರ ಕಾಲ ಹೋಗಿ, ಈ ಸೋವಿಯತ್ತೆ ಅವನ್ನೆಲ್ಲ ತ್ಯಜಿಸಿದೆಯೆಂದು ತಿಳಿದುಕೊಂಡವರಿಗೆ ಆಗಲೇ ಈ ಬೆಕ್ಕು ಸನ್ಯಾಸಿಯಾದ ಕಥೆ ನೆನಪಿಗೆ ಬಂದಿತ್ತು ಆದರೂ ಒಂದು ಸಿರಪರಾಧಿ ಇಲಿಯನ್ನಾದರೂ ನುಂಗದ ವರೆಗೆ ಇದನ್ನ ಬಾಯಿಬಿಟ್ಟು ಕೇಳಬರುತ್ತದೆ.? ಅಂತೆಯೇ ಇದೀಗ, ಕಮ್ಯೂನಿಸ್ಟರಿಗೆ ಸಂಪೂರ್ಣ ದ್ರೋಹವೆಸಗಿದ ಮಹಾಪರಾಧ—ರಾಜದ್ರೋಹ, ದೇಶದ್ರೋಹ'—ಎನ್ನುವ ಮಾತಿನ ಶ್ರೀ ಇಮ್ರೆನಾಗಿಮತ್ತವರ ಅನುಯಾಯಿಗಳನ್ನು—ಒಟ್ಟು ನಾಲ್ವರನ್ನು-ಗಲ್ಲಿಗೇರಿಸಲಾಯಿತು ಎಂಬ ವಾರ್ತೆ ಬಂದಾಗ ತಮ್ಮ ಕಿವಿಯನ್ನೇ ಕಿತ್ತಿನವರು ನಂಬಲಿಲ್ಲ! ಆದರೆ, ಅವನ್ನು "ಸ್ವಾಗತಾರ್ಹ ವರ್ತಮಾನ'ವೆಂಬುದಾಗಿ ಕವ್ಯನಿಸ್ಟ್ ಪಲಯಗಳಲ್ಲಿ ಸ್ವಾಗತಿಸಲಾಯಿತು ತಲೆ ಅಲ್ಲಾಡುವಾಗ ಕಾದಲೂ ಕಂಸಿಸಬೇಡವೆ? ಹಾಗೆ.

ಇಮ್ರೆನಾಗಿಯವರ ಮೇಲೆ ಹೊರಿಸಿದ ಈ ಒಂದು ಅಪರಾಧ ಕೇವಲ ಅಲ್ಪತಮವಾದುದಲ್ಲ ಸ್ವರಾಷ್ಟ್ರದಲ್ಲಿ ಅನ್ಯದೇಶೀಯರಾದ ಸೋವಿಯೆತ್ ರಶ್ಯನರು ಆಕ್ರಮಣ ನಡೆಸಿದಾಗ, ಅದನ್ನು ವಿರೋಧಿಸಿದ ಮಹಾಪರಾಧ ಶ್ರೀ ನಾಗಿಯವರದು. ಅದಕ್ಕಿಂತಲೂ ಸೆಹ್ಟಾಗಿ, ಸೋವಿಯೆತ್ ಕೊಟ್ಟ ವರದ ಹಸ್ತವನ್ನು ನಂಬಿ ಮೋಸಕ್ಕೊಳಗಾದುದು ಶತಾಪರಾಧ. ಈ ಅಪರಾಧಗಳಿಗೆ ಶ್ರೀ ನಾಗಿಯವರು ಈ ಒಂದು ಜನ್ಮದಲ್ಲಿ ಸಾಕಷ್ಟು ಶಿಕ್ಷೆಯನ್ನನುಭವಿಸಿದರೆನ್ನಬರುವುದಿಲ್ಲ—ಅವರು ಮುಂದಿನ ಜನ್ಮಗಳಲ್ಲಿ ಸೋವಿಯತ್ತಿನ ನಾಗರಿಕರಾಗಿಯೇ ಜನಿಸಿ ಉಳಿದ ಶಿಕ್ಷೆಗಳನ್ನು ಕ್ರಮವಾಗಿ ಅನುಭವಿಸಬೇಕಾದೀತು!

ಏನೇ ಆಗಲಿ, ಇಮ್ರೆನಾಗಿ ಪಾಲ್ ನೊಲೆಟ ಹಾಗೂ ಇಬ್ಬರು ಸಹಚರರಿಗೆ ರಶ್ಯತ್ವ ಕೊಟ್ಟ ಈ ಶಿಕ್ಷೆ ಸೋವಿಯತ್ತಿನಲ್ಲಿ ಕೆಲವಾಲ ಅಡಗಿಕೊಂಡಿದ್ದ ಸ್ಟಾಲಿನ್ ಎಂದದ ದ್ವಿತೀಯಾವತಾರವೆಂದು ತಿಳಿಯುವಂತಾಗಿದೆ ಪರಿಗೆ ಅನಾಕ್ರಮಣೋಪ ಕ್ರಿಯಾವ ರಶ್ಯ, ಇಂದಿಗೂ ಹಂಗೆರಿಯ ವಿಷಯದಲ್ಲಿ ಮೌನತಾಳಿದೆ ಗೋಮುಖ ವ್ಯಾಘ್ರನಂತಿರುವ ಈ ಬೃಹದ್ದೇಶ ಸೋವಿಯತ್ತಿನ ಮಾತುಗಳನ್ನು ಇನ್ನುಮುಂದೆ ನಂಬುವುದಂದರೂ ಸೆಗೆ? ನಂಬಿ ಕೆಟ್ಟುಹೋದ ಈ ದೇಶಪ್ರೇಮಿಗಳ ಇತಿಹಾಸವು ಒನಮನದಲ್ಲಿ ಅಚ್ಚಳಿಯದುಳಿದಿದೆ ಸೋವಿಯತ್ತನ್ನು ನಂಬುವ ಸಿದ್ಧಾಂತ ಗೈದವರಿಗೆ—ಈ ನಾಗಿ ಮತ್ತು ಸಹಚರರು ಒಂದು ಪಾಠ ಕಲಿಸುವುದಕ್ಕಾಗಿಯೇ ತಮ್ಮ ಆತ್ಮಾರ್ಪಣೆಗೈದರು ಇಂತಹ ಉಜ್ವಲ ಸೇವರ ಆತ್ಮಗಳಿಗೆ ಶಾಂತಿಯುಂಟಾಗಲಿ ರಶ್ಯನ್ ಕ್ರಾಂತಿ ದಿನಾಚರಣೆಗೆ ಪ್ರತಿಯಾಗಿ ರಶ್ಯನ್ ವಿರೋಧೀ ಕ್ರಾಂತಿಯ ದಿನ ಬಂದಾಗಲಿ

ಈ ಪ್ರಕರಣದ ಕಡೆಗೆ ವಿಶ್ವ ಹೇಗೆ ನೋಡುತ್ತಿದೆ ಎಂಬುದು ಈಗಾಗಲೇ ಅಲ್ಲಲ್ಲಿ ತೋರಿ ಬಂದಿದೆ ಅಂತಾರಾಷ್ಟ್ರೀಯ ಕಾಮಿಕ ಸಂಘದ ಸದಸ್ಯತ್ವದಿಂದ ಹಂಗೆರಿಯನ್ನು ಹೊರಗಡಲಾಯಿತು ಈ ಮೂವತ್ತೊಂಬತ್ತು ವರ್ಷ ಪ್ರಾಯದ ಸಂಘದ ಇತಿಹಾಸದಲ್ಲಿ ಒಂದು ರಾಷ್ಟ್ರದ ಸದಸ್ಯತ್ವವನ್ನು ರದ್ದು ಪಡಿಸಿದ ಘಟನೆಯೊಗ ಮೊತ್ತ ಮೊದಲನೆಯ ಬಾರಿಗೆ ನಡೆಯಿತು ಅಲ್ಲಲ್ಲಿ ಸಂತಾಪಗಳು ವ್ಯಕ್ತಪಟ್ಟವೆ. ಖಾರತದ ಪ್ರಧಾನಿಯವರು ಈ ವಿಷಯದಲ್ಲಿ ನೊಂದಿರುವವರು ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರು ವಿಪರೀತ ಆಘಾತಕ್ಕೀಡಾಗಿ, ಶೃಂಗ ಸಮ್ಮೇಳನದಂತಹ ಮಹತ್ವದ ಸಭೆಗಳನ್ನು ನಡೆಸುವ ವಿಷಯದಲ್ಲಿ ಜನಾಸಕ್ತಿ ಭಾವನೆಯಿಂದಿರುವರು—ಏಕೆಂದರೆ, ರಶ್ಯ ತಾನು ಒಪ್ಪಿಕೊಂಡು, ಮಾಡಿಕೊಡುವೆನೆಂದು ವಿಶ್ವಾಸವೀಯಬಹುದಾದ ಘಟನೆ ನಡೆದರೆ ಸೋವಿಯತ್ತನ್ನು ನಂಬುವುದು ಹೇಗೆ? ಆಡಿದಂತೆ ನಡೆಯುವ ಈ ಹಿಂಸ್ರಪ್ರಾಣಿಯೊಡನೆ ಸ್ನೇಹಾಚಾರದಿಂದಿರುವುದು, ಅದರ ಮಾತನ್ನು ವಿಶ್ವಾಸವಿಡುವುದೇ ಅಸಾಧ್ಯವಾಗಿರುವಾಗ ಮಾತುಕತೆ ನಡೆಸುವುದು ವ್ಯರ್ಥವಲ್ಲವೆ?

ಇಮ್ರೆನಾಗಿಯವರ ಹತ್ಯೆ ಅಮಾನುಷ ಕೊಲೆ ಕಮ್ಯುನಿಸ್ಟರನ್ನು ನಂಬಿದವರಿಗೆ ಇದೊಂದು ಎಚ್ಚರಿಕೆ ಮಾರ್ಕಸ್ಲೆನಿನ್ ಮೇಲೇ ಕಮ್ಯುನಿಸ್ಟರ ಮುಂದಿನ ಗುರಿಯಿಂದೂ ಹೇಳಲಾಗುತ್ತದೆ. ಕಮ್ಯೂನಿಸ್ಟ ಕ್ಷೇತ್ರದಲ್ಲಿ ವ್ಯಕ್ತಿತ್ವಕ್ಕೆ ವ್ಯಕ್ತಿತ್ವದ ವಿಕಾಸಕ್ಕೆ ವ್ಯಕ್ತಿ ಸ್ವಾತಂತ್ರ್ಯ ಅಭಿಪ್ರಾಯಗಳಿಗೆ ಎಂದಿಗೂ ಮನ್ನಣೆಯಿರುವುದಿಲ್ಲ ಸಣ್ಣ ಎರೆಹುಳವನ್ನು ಕಟ್ಟಿ ಸೀರಿಗಿಳಿಬಿಟ್ಟು ದೊಡ್ಡ ಮೀನನ್ನು ಹಿಡಿಯುವ ಗಾಳಗಾರನಂತೆ ಮೊಣಕೈ ಗಂಟಿಗೆ ಬೆಲ್ಲ ಹಚ್ಚಿ ಆಸೆ ತೋರಿಸುವ ಈ ಕಮ್ಯುನಿಸ್ಟರ ಒಂದೊಂದು ಮಾತನ್ನೂ ನೂರಾರು ಸಲ ಯೋಚಿಸುವಂತಹ ಪರಿಸ್ಥಿತಿ ಈ ಕೊಲೆಯಿಂದ— ಜೀವಾಪಹರಣದಿಂದ ಮಾನವೀಯ ಶಕ್ತಿಗಳಿಗೆ ಒಂದು ಮಹತ್ವದ ಪಂಗನ್ನು ಕಮ್ಯುನಿಸ್ಟರು ಕಲಿಸಿದ್ದಾರೆ ಈ ಪಂಗನ್ನು ಕಲಿತೂ ನಾವು ಕಮ್ಯುನಿಸ್ಟರಿಗೆ ಒಲಯುವುದಾದರೆ, ಕೈ ಸುಟ್ಟುಕೊಂಡ ಕೀಲೆ ಕೆಂಡವನ್ನು ದೂರಿಟ್ಟಂತೆ! ಆದುದರಿಂದ ಮಾನವೀಯ ಶಕ್ತಿಗಳನ್ನು ಹತ್ತಿಕ್ಕುವ ಈ ಘಟನೆಯು ಕಮ್ಯುನಿಸ್ಟರ ನಿಜಬಣ್ಣವನ್ನು ಹೊರಗಡಹಿತು! ಆದ ದನದ ಚರ್ಮ ಹೊದ್ದ ಕಟ್ಟ ಹುಲಿಯೆಂದು ಒಗತ್ತಿಗೇನೇ ತೋರಿಬಂತು! ಇನ್ನಾದರೂ ನಾವು ಎಚ್ಚರಾಗಿರಬೇಡವ? ಕಮ್ಯುನಿಸ್ಟರ ಮಾಯಾ ಜಾಲಕ್ಕೆ ಮಾತಿನ ರಂಗಿಗೆ ನಾವಿನ್ನೂ ಬಲಿಯಾಗಬೇಕೆ?

ಬುದ್ಧಿವಂತರು ಬಲು ಬುದ್ಧಿವಂತಿಕೆಯಿಂದ ತಮ್ಮ ಹಣವನ್ನು ಚಲಾಯಿಸುತ್ತಾರೆ ಇದಕ್ಕಾಗಿ ಅವರು ಬೇಂಕುಗಳನ್ನೇ ಹೆಚ್ಚಾಗಿ ಆಶ್ರಯಿಸುತ್ತಾರೆ. ತಮ್ಮ ಹಣವನ್ನು ಬೇಂಕುಗಳ ಮೂಲಕ ಚಲಾಯಿಸುವುದರಿಂದ ತಮ್ಮ ಸುತ್ತ ತಮ್ಮ ರಾಷ್ಟ್ರದ ಸರ್ವಾಂಗೀಣ ಬೆಳವಣಿಗೆಯು ಬಹ ಬೇಗನೆ ಆಗುವುದೆಂದು ಅವರಿಗೆ ಚೆನ್ನಾಗಿ ಗೊತ್ತು

ಅದುಕಾರಣ ಯಾವ ಬೇಂಕಾದರೂ ಸರಿಯೇ—ನಿಮ್ಮ ಹಣವನ್ನು ಯಾವಾಗಲೂ ಬೇಂಕುಗಳ ಮೂಲಕವೇ ಚಲಾವಣೆಗೆ ಹಾಕಿರಿ ಆಗಲೇ ನಿಮ್ಮ ಮತ್ತು ನಿಮ್ಮ ರಾಷ್ಟ್ರದ ಶೀಘ್ರ ಅಭ್ಯುದಯಕ್ಕೆ ನೀವು ನಾಂದಿಯಿಟ್ಟಂತಾಗುವುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ 1906] [ಪ್ರಧಾನ ಕಚೇರಿ ಉಡುಪಿ (ದ ಭಾರತ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಗಿಗ ಪುಸ್ತಕಗಳು, ಸೂಸ್ಯಟ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಸಂತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟ್ ಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ಪಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ

ನವಯುಗ ಪ್ರೆಸ್, ಉಡುಪಿ

NAVAYUGA

Popular Kannada Weekly

Founder:—

A. B. SHETTY,
Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೩-೭-೧೯೫೮	ಸಂಚಿಕೆ ೪೩

ಸುಶಿಕ್ಷಿತ ಸಮಾಜ ಸ್ಥಾಪನೆ

"ತೊಟ್ಟಿಲು ತೂಗುವ ಕೈಯೇ ಸಾಮ್ರಾಜ್ಯವನ್ನಾಳುವ ಕೈ" ಎಂಬ ಉಕ್ತಿ ಹಳೆಯದಾದರೂ ಅದರ ಸ್ವಾರಸ್ಯ ಕೇವಲ ಹಳೆಯ ಕಾಲಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ತಾಯ್ತನದಷ್ಟು ಹೊಣೆಗಾರಿಕೆಯ ಕರ್ತವ್ಯ ಪ್ರಪಂಚದಲ್ಲಿ ಬೇರೆಯಿರುವುದಿಲ್ಲವೆಂದೂ ಹೇಳಬಹುದು. ಇಂತಹ ಗುರುತರದ ಹೊರೆಯನ್ನು ಹೊರುವ ಶಕ್ತಿಯಿಲ್ಲದ ಅಬಲೆಯರು ಮಾತ್ರ ತಾಯಂದಿರಾಗಲು ಹಂಬರಿಯುವರೆಂದೂಹಿಸಿದರೆ ಶಪ್ಪಾಗದು. ಅದೇನೇ ಇರಲಿ, ತಾಯಂದಿರು ಸುಶಿಕ್ಷಿತರೂ, ಯೋಗ್ಯರೂ, ಸತ್ಯಸಂಧೆಯರೂ ವಿವೇಕಿಗಳೂ ಆತ್ಮವಿಶ್ವಾಸವುಳ್ಳವರೂ ಆಗಿದ್ದರೆ ಮಾತ್ರ ಅವರ ಅಂಕಗಳಲ್ಲಿ ಬೆಡಾಡಿ ಅವರಿಂದಲೇ ಜೀವನದ ಪ್ರಥಮ ಪಾಠವನ್ನು ಅಭ್ಯಸಿಸುವ ಮಗುವಿನಲ್ಲೂ ಈ ಗುಣಗಳು ಮೊಳೆದೋರಿ ಇಂತಹ ಮಕ್ಕಳು ಬೆಳೆದು ನಾಗರಿಕರಾಗುವಾಗ, ಉಚ್ಚ ವರ್ಗದವರಾಗಿ ತಮಗೂ ದೇಶಕ್ಕೂ ಗೌರವಾದರಗಳನ್ನು ತರುವರೆಂಬುದು ನಿಶ್ಚಯ. ಆದುದರಿಂದ,ನಮ್ಮ ಸಮಾಜವು ಪ್ರಾಮಾಣಿಕವೂ ಸತ್ಯನಿಷ್ಠವೂ ಸುಯೋಗ್ಯವೂ ಸುದೃಢವೂ ಆಗಬೇಕೆಂದು ವಾದಿಸುವವರು ಇನ್ನು ಮುಂದಾದರೂ ಭಾವಿ ಸಮಾಜ ನಿರ್ಮಾಣದ ಶಿಲ್ಪಿಯಾದ ಇಂದಿನ ಹೆಮ್ಮಕ್ಕಳ ಶಿಕ್ಷಣಾದಿ ವಿಚಾರಗಳಲ್ಲಿ ಆಸಕ್ತಿಯಿಂದ ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯವೆಂದು ಒತ್ತಿ ಹೇಳಬಹುದು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ತ್ರೀ ವಿದ್ಯಾಭ್ಯಾಸವು ತೀರ ಸಾಮಾನ್ಯವಾಗಿದೆ. ಆದರೆ, ನಮ್ಮ ದೇಶದಲ್ಲಿ ಅದಿನ್ನೂ ಬಾಲ್ಯಾವಸ್ಥೆಯಲ್ಲಿದೆ. ಧರ್ಮದಲ್ಲಿ ವಿಶ್ವಾಸವಿಡುವ ಭಾರತೀಯರು, ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸಿದ ಮಾತ್ರಕ್ಕೆ ಅವರ ಭವಿಷ್ಯಕ್ಕೆ ಕರಿ ಬರೆದಂತಾಗುವುದೆಂದು ಇಂದಿಗೂ ನಂಬುವವರಿರುತ್ತಾರೆ. ಆದರೆ, ಸ್ತ್ರೀ ಶಿಕ್ಷಣದ ಚಳವಳಿ ಸಾಕಷ್ಟು ಬಲಿತಿಲ್ಲವಾದರೂ ಸಾಮಾನ್ಯಮಟ್ಟಿಗೆ ಪೇಟೆ ಸಟ್ಟಣಗಳಲ್ಲಿ ಪ್ರಾಥಾವಸ್ಥೆಗೆ ಬಂದಿದೆ. ಹಳ್ಳಿಗಳಲ್ಲಿ ಸ್ತ್ರೀ ಶಿಕ್ಷಣವು ಏನೇನೂ ತೃಪ್ತಿಕರವಾಗಿ ನಡೆದಿರುವುದಿಲ್ಲ. ಇದಕ್ಕೆ ಕಾರಣಗಳೂ ಹಲವಾರಿರಬಹುದು. ಮುಖ್ಯವಾಗಿ ಹೆಮ್ಮಕ್ಕಳು ಮನೆನಾಗಿಸುವ ಹೊಣೆ ಹೊತ್ತ ತಾಯಿಗೆ ಮನೆಗೆಲಸದಲ್ಲಿ ನೆರವಾಗುತ್ತಾರೆ. ಬಹುಸಂಖ್ಯಾತವುಳ್ಳ ಭಾರತೀಯ ಕುಟುಂಬಗಳಲ್ಲಿ ಎಳೆಯ ಮಕ್ಕಳನ್ನು ಸಾಕುವ ಜವಾಬುದಾರಿಯೂ ಆ ಮನೆಯ ಹಿರಿಯ ಮಗಳ ಪಾಲಿಗೇನೇ ಬರುತ್ತದೆ. ಚೊಚ್ಚಲ ಹೆರಿಗೆ ಗಂಡಾದರೆ ತಂದೆಯಾದವನಿಗೆ, ಹೆಣ್ಣಾದರೆ ತಾಯಿಯಾಪತವಳಿಗೆ ಪರಮಾನಂದ—ಎಂಬ ಮಾತಿನಲ್ಲಿಯೂ ಅರ್ಥವಿದೆ. ದಿನ ರಾತ್ರಿ ದುಡಿದರೂ ತನ್ನ ಹಾಗೂ ತನ್ನ ಕುಟುಂಬದ ಹೊಟ್ಟೆ ಹೊರಲು ಸಾಧ್ಯವಾಗದೆ ಸದಾ ಸಾಲಭಾದೆಯಿಂದಲೋ ಕಾಯಿಲೆ ಕಸಾರೆಯಿಂದಲೋ, ಶಾಂತಿರಹಿತ ಜೀವನವನ್ನು ಬಾಳುವ ಭಾರತೀಯ ಕೌಟುಂಬಿಕ ಯಜಮಾನರು ಊರ ಉಪಾಧ್ಯಾಯರ ಒತ್ತಾಯಕ್ಕಾಗಿಯಾದರೂ ಗಂಡುಮಕ್ಕಳನ್ನು ಶಾಲೆಗೆ ಕಳಹಿಸಲು ಹಿಂದಿರಿಯುವಾಗ, ಹೆಣ್ಣುಮಕ್ಕಳ ಶಿಕ್ಷಣದತ್ತ ಗಮನಹರಿಸುವುದೆಂತು? ಹೆಮ್ಮಕ್ಕಳ ವಿದ್ಯಾಭ್ಯಾಸ ನಡೆಯದೆ ನಾಗರಿಕ ಜನಾಂಗ ಜನಿಸುವುದೆಂತು? ಮನೆಕೆಲಸ ಮಾಡಲೇಬೇಕಾದಾಕೆಯೆಂದು ಹುಟ್ಟಿದೊಡನೆಯೇ ಬಟ್ಟಲನ್ನು ಬಡೆದು ಅಸಶಬ್ದವೆಬ್ಬಿಸುವ ಅಭ್ಯಾಸವುಳ್ಳ ಭಾರತದಲ್ಲಿ, ಸ್ತ್ರೀಸ್ವಾತಂತ್ರ್ಯಕ್ಕೆ ಆನರ್ಹಳೆಂಬ ಸಿದ್ಧಾಂತದಲ್ಲಿಯೇ ದೃಢ ವಿಶ್ವಾಸವನ್ನಿಟ್ಟ ಈ ಮನು ಮಹರ್ಷಿಯ ಜನ್ಮಸ್ಥಳದಲ್ಲಿ ಸ್ತ್ರೀ ವಿದ್ಯಾಭ್ಯಾಸವು ತೀರ ಹಿಂದುಳಿದಿದ್ದರೆ ಆದರಿಂದ ಆಶ್ಚರಿಪಡಬೇಕಾದುದಿಲ್ಲ.

ಆದರೆ, ಇಂದು ಕಾಲವೇ ಪರಿವರ್ತನೆಗೊಂದಿದೆ. ಹಿಂದೆ ಸ್ತ್ರೀಯರು ಮನೆಗಳಲ್ಲಿಯೇ ಅವಶ್ಯಕವಾಗಿ ಗೃಹೋಪಯೋಗಿ ವಿದ್ಯೆಗಳನ್ನೂ ಪುರಾಣಾದಿಗಳನ್ನು ಕಲಿತುಕೊಳ್ಳುತಿದ್ದರು. ಆದರೆ, ಇಂದು ಹಳೆಯ ಅಂಗಿಯು ಬೇಡವೆಂದು ಹರಿದು ಹಾಕಿ ಹೊಸದೊಂದನ್ನು ಹಾಕೈಸಿ ಪಡೆಯದಿರುವವರಂತೆ ನಮ್ಮ ಸ್ಥಿತಿ ಬಂದು ನಿಂತಿದೆ. ಆಂದಿನ ವಿದ್ಯೆ ನಮಗಿಂದು ಬೇಡವಾಗಿ ಮರೆತಿದ್ದೇವೆ—ಆದರೆ ಹೊಸತನ್ನು ಕಲಿತುಕೊಳ್ಳದಿರುವುದರಿಂದಲೇ ನಮ್ಮ ಸಮಾಜ ಇಂದಿನ್ನು ಅಧೋಗತಿಗಿಳಿದಿದೆಯೆಂದರೆ, ಅತಿಶಯೋಕ್ತಿಯಲ್ಲ. ಆದರೆ, ನಾವು ಇನ್ನೂ ಕೈಕಟ್ಟಿ ಮಿಟಮಿಟನೆ ನೋಡುತ್ತ ಕುಳಿತರೆ, ನಮ್ಮ ಸಮಾಜ ಮತ್ತಷ್ಟು ಕೆಟ್ಟು ಹೋದೀತು. ಆದುದರಿಂದ ಉತ್ತಮ ಸಮಾಜದ ಸ್ಥಾಪನೆಗಾಗಿ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದೂ ಅದಷ್ಟು ಬೇಗನೇ ದೇಶದ ಎಲ್ಲ ಬಾಲಿಕೆಯರಿಗೂ ವಿದ್ಯಾಭ್ಯಾಸದ ಸೌಕರ್ಯವೊದಗುವಂತೆ ಕಾರ್ಯಕ್ರಮಗಳನ್ನು ರೂಪಿಸುವುದೂ ತೀರ ಅಗತ್ಯವಾಗಿದೆ. ಇಂದು ಸ್ತ್ರೀ ವಿದ್ಯಾಭ್ಯಾಸಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಲೇಬೇಕು. ಸ್ತ್ರೀಯರಿಗೆ ಉಳಿದ ಪುರುಷರಿಗೆ ಸಮಾನವಾದ ವಿದ್ಯಾಪದ್ಧತಿಯಲ್ಲಿಯೇ ಶಿಕ್ಷಣವೀಯಲಾಗುತ್ತದೆ. ಆದರೆ, ಸ್ತ್ರೀಯರು ಪುರುಷರಿಗಿಂತ ಯಾವ ದೃಷ್ಟಿಯಲ್ಲೂ ಕಡಿಮೆಯವರಲ್ಲ; ಒಂದು ದೃಷ್ಟಿಯಿಂದ, ಪುರುಷರಿಗೇನೇ 'ತಾಯಿ' ಯಾಗುವ ಸೌಭಾಗ್ಯವಿರುವುದಿಲ್ಲ; ಗೃಹವನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು "ಗೃಹಿಣಿ" ಯೆಂಬ ಬಿರುದಿಗೆ ಪಾತ್ರಳಾಗಿ, ಸಂಸಾರದ ಚುಕ್ಕಾಣಿಯನ್ನು ಹಿಡಿದು ನಡೆಸುವ ಭಾರ ಸ್ತ್ರೀ ಜಾತಿಗೆ ಸೇರಿದುದು. ಆದುದರಿಂದ ಸ್ತ್ರೀಯರಿಗೆ ಮುಖ್ಯವಾಗಿ, 'ಗೃಹಿಣೀವಿದ್ಯೆ' ಯನ್ನೀಯುವುದರಿಂದ ಸಮಾಜ ಕಲ್ಯಾಣವಾಗಬಹುದು. ಸ್ತ್ರೀ ವಿದ್ಯಾಭ್ಯಾಸವೆಂದಾಡಿ ಅದಷ್ಟು ಮಹಿಳೆಯರನ್ನು ಪದವೀಧರೆಯರನ್ನಾಗಿಸಿ ಶಾಲೆಕಾಲೇಜುಗಳಲ್ಲೂ ಸರಕಾರದ ಇಲಾಖೆಗಳಲ್ಲೂ ಮತ್ತೆಲ್ಲಿಯೋ ಕೆಲಸಕ್ಕೆ ಹಚ್ಚಿದ ಮಾತ್ರಕ್ಕೆ ಅವರ ಕೆಲಸವಾಗಲಿಲ್ಲ. ತಮ್ಮ ಮಕ್ಕಳನ್ನು ಯೋಗ್ಯ ದಾರಿಯಲ್ಲಿ, ದೇಶದ ಕಲ್ಯಾಣಪಥದಲ್ಲಿ ಸಾಗಿಸಲು ಅವಶ್ಯಕವಾದ ಮತ್ತು ಕುಟುಂಬ ಸಾಮಂಜಸ್ಯದಿಂದ ಶಾಂತತೆಯಿಂದ ತೃಪ್ತಿಸಹಿತ ಜೀವನವನ್ನು ಸಾಗಿಸಬಲ್ಲ ಶಿಕ್ಷಣವನ್ನೂ ಅವರಿಗೆ ದೊರೆಯುವಂತೆ ಮಾಡಬೇಕಾಗಿದೆ. ಸ್ತ್ರೀಯು ಪುರುಷನ ಕೈಗೊಂಬೆಯಲ್ಲ; ಆಕೆಗೂ ಒಂದು ಸ್ವತಂತ್ರ ವ್ಯಕ್ತಿತ್ವವಿದೆ. ಆದರೆ, ಈ ವ್ಯಕ್ತಿತ್ವವು ಸ್ವಚ್ಛಂದತೆಯಿಂದ ಕೆಟ್ಟುಹೋಗದೆ, ಸಮರಸದಿಂದ ಪುಷ್ಟಿಗೊಳ್ಳಬೇಕಾಗಿದೆ.

ಮಹಿಳೆಯರ ಶಾಲೆಗಳ ಸಂಖ್ಯೆ ಬೆಳೆಯುತ್ತ ಬರುತ್ತಿವೆ. ಅಲ್ಲಲ್ಲಿ ಗೃಹಿಣೀ ವಿದ್ಯಾಲಯಗಳು ತೆರೆಯಲ್ಪಡುತ್ತಿವೆ. ತೀರ ಬಡವರ ಹೆಮ್ಮಕ್ಕಳಲ್ಲಿ ವಿದ್ಯಾಭ್ಯಾಸದ ಕಡೆಗೆ ಆಸಕ್ತಿ ಹುಟ್ಟಿಸುವಂತೆ ಮಾಡಲು ಉಚಿತ ಬಟ್ಟೆ, ಪುಸ್ತಕ ವಗೈರೆಗಳನ್ನೂ ಹಂಚಲಾಗುತ್ತದೆ. ಅಲ್ಲದೇ ಇನ್ನಿತರ ಸೌಲಭ್ಯಗಳೂ ಕೆಲವಿವೆ ಆದರೆ, ಹೀಗೆ ದೊರೆಯುವ ಸೌಲಭ್ಯ ಅವಶ್ಯಕತೆಯಿರುವ ಎಲ್ಲ ಹೆಮ್ಮಕ್ಕಳಿಗೂ ದೊರೆಯುವಂತಾಗಬೇಕು ಧರ್ಮಾರ್ಥ ಶಿಕ್ಷಣದೊಡನೆ ಖಡ್ಡಾಯ ಶಿಕ್ಷಣದೊಡನೆ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲ್ಲ ಸಾಕರ್ಯಗಳೂ ದೊರೆಯುವಂತೆ ಮಾಡಬೇಕು. ಹೆಮ್ಮಕ್ಕಳನ್ನು ಶಾಲೆಗೆ ಕೋಗುವುದರಿಂದ ತಡೆದು ಹಿಡಿಯುವ ಕಾರಣಗಳನ್ನು ಕಂಡು ಹಿಡಿದು, ಅವಕ್ಕೆ ಪರಿಣಾಮಕಾರಕವಾದ ನಿವಾರಣೋಪಾಯಗಳನ್ನು ಕೈಗೊಳ್ಳಬೇಕು. ಸ್ತ್ರೀ ವಿದ್ಯಾಭ್ಯಾಸಕ್ಕೊಂದು ಸುಯೋಜಿತ ಪ್ರಯತ್ನ ನಡೆದು,ಮೂಲೆ ಮೂಲೆಯಲ್ಲೂ ಶಿಕ್ಷಣದ ಉಪಯೋಗಿತೆಯನ್ನು ಮಂದಟ್ಟಾಗಿಸಿ ಅವರನ್ನು ವಿದ್ಯಾವತಿಯರನ್ನಾಗಿಸಲು ಪ್ರಯತ್ನಿಸಬೇಕು. ಇಂದು ಜನಸಂಖ್ಯೆಯಲ್ಲಿ ಪುರುಷರಿಗೆ ಸರಿಸಮಾನರಾಗಿರುವ ಸ್ತ್ರೀಯರು, ಅಕ್ಷರಸ್ಥರಾಗುವಂತೆ, ತನ್ಮೂಲಕ ಅವರ, ದೇಶದ ರಕ್ಷಣೆಯಾಗುವಂತೆ ದುಡಿಯಬೇಕಾದುದು ಕಲ್ಯಾಣ ರಾಷ್ಟ್ರ ನಿರ್ಮಾಣಾಕಾಂಕ್ಷಿಗಳ ಆದ್ಯ ಕರ್ತವ್ಯ ರಾಷ್ಟ್ರೀಯ ಮಹಿಳಾ ಶಿಕ್ಷಣ ಸಮಿತಿಯು ಈಗಾಗಲೇ ಹೊರಡಿಸಿದ ಪ್ರಶ್ನಾವಳಿಯ ಉತ್ತರಗಳನ್ನು ಚೆನ್ನಾಗಿ ಕೂಲಂಕಷವಾಗಿ ಅಭ್ಯಸಿಸಿ ಈ ಕೊರತೆಯನ್ನು ತುಂಬಲು ಸರಿಯಾದ ಮಾರ್ಗವನ್ನು ಒದಗಿಸುವಂತಾಗಲೆಂದೂ, ಸುಶಿಕ್ಷಿತ ತಾಯಂದಿರಿಂದ ತರಬೇತಿಹೊಂದಿದ ಜನಾಂಗದಿಂದ ಭಾರತವು ಕೀರ್ತಿಶಾಲಿಯಾಗುವಂತಾಗಲೆಂದೂ ಹಾರೈಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಆಂಧ್ರಕ್ಕೆ ಮೇಲ್ಮನೆ

ಆಂಧ್ರ ಪ್ರದೇಶಕ್ಕೆ ಹೊಸದಾಗಿ ಸ್ಥಾಪನೆಹೊಂದಲಿರುವ ಮೇಲ್ಮನೆಯಲ್ಲಿ ೯೦ ಜನ ಸದಸ್ಯರಿರುವರು. ಇವರಲ್ಲಿ ೧೨ ಸ್ಥಳಗಳನ್ನು ರಾಜ್ಯಪಾಲರು ನಾಮಕರಣದ ಮೂಲಕ ತುಂಬಿಸುವರು. ಉಳಿದ ೭೮ ಸ್ಥಳಗಳಿಗೆ ನಡೆದ ಚುನಾವಣೆಯಲ್ಲಿ ಆಳುವ ಪಕ್ಷ ಕಾಂಗ್ರೆಸ್ಸಿಗೆ ೪೧, ಕಮ್ಯುನಿಸ್ಟರಿಗೆ ೧೧, ಸೋಶಿಯಲಿಸ್ಟರಿಗೆ ೨ ಮತ್ತು ಸ್ವತಂತ್ರರಿಗೆ ೨೪ ಸ್ಥಳಗಳು ದೊರೆತಿವೆ. ಈ ವಿಧಾನ ಪರಿಷತ್ತನ್ನು ಜುಲೈ ತಿಂಗಳ ೭ನೆ ದಿನಾಂಕದಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಉದ್ಘಾಟಿಸುವರು.

ಪಾಕ್ ಕಪಟ ಕಾರಸ್ಥಾನ

ನಾಗಾ ಜನರು ಬಂಡು ಮುಂದುವರಿಸಲಿರುವ ಕಾರಣವನ್ನು ಅಸ್ಸಾಮದ ಪೋಲೀಸರು ಕಂಡುಹಿಡಿದಿದ್ದಾರೆ. ಪಾಕಿಸ್ತಾನದ ಕೆಲವು ಉಚ್ಚಮಟ್ಟದ ಅಧಿಕಾರಿಗಳು ನಾಗಾ ಬಂಡುಗಾರರ ಹಿನ್ನೆಲೆಯಲ್ಲಿದ್ದು ವಿದ್ರೋಹವನ್ನು ಪ್ರೋತ್ಸಾಹಿಸುತ್ತಿರುವುದಾಗಿ ಆವರು ಸೆರೆಹಿಡಿದ ದಾಲಿನಾಮೊ ಬಾಯಿಬಿಟ್ಟಿದ್ದಾನೆ. ಆತನೊಡನೆ ನಾಗಾ ಬಂಡುಗಾರ ಹಾಗೂ ಪಾಕಿಸ್ತಾನದ ಉನ್ನತಾಧಿಕಾರಿಗಳೊಳಗಿನ ಕೆಲವು ದಾಖಲೆಗಳು ದೊರೆತಿವೆ. ಈ ಮನುಷ್ಯನು ಎರಡೂ ಕಡೆಯ ಮಾತುಕತೆಗಳನ್ನು ಅವರವರಿಗೆ ತಿಳಿಸುತಿದ್ದನೆಂದೂ, ಪಾಕಿಸ್ತಾನವು ನಾಗಾ ಜನರಿಗೆ ಸಾಧ್ಯವಿದ್ದ ಆರ್ಥಿಕ ಹಾಗೂ ಇನ್ನಿತರ ಸಹಾಯವನ್ನು ನೀಡಲು ಸಿದ್ಧರಿರುವುದೆಂದು ಉಚ್ಚ ಅಧಿಕಾರಿಗಳು ತಿಳಿಸಿರುವರೆಂದೂ ಈತನು ನುಡಿದಿದ್ದಾನೆ. ಅಲ್ಲದೆ, ತಾನು ಸೆರೆಸಿಗುವುದಕ್ಕೆ ಕೆಲವೇ ಸಮಯದ ಹಿಂದೆ ಪಾಕ್ ಅಧಿಕಾರಿಯೊಬ್ಬನೊಡನೆ ಈ ಕುರಿತು ಕೊನೆಯ ಮಾತುಕತೆ ನಡೆಯಿಸಿದೆನೆಂದೂ ಹೇಳಿದ್ದಾನೆ!

ಕಾಶ್ಮೀರ ವಿಮೋಚನಾ ಚಳವಳಿ

ಕಾಶ್ಮೀರ ವಿಮೋಚನಾ ಚಳವಳಿಯ ಧುರೀಣರಾದ ಭೌದರಿ ಗುಲಾಮ ಅಬ್ಬಾಸರನ್ನು ಬಂಧಿಸಲಾಗಿತ್ತು. ಆದರೆ, ಅವನ್ನು ಕೆಲವೊಂದು ಕಾರಣಗಳಿಂದ ಬಿಟ್ಟುಬಿಡಲಾಯಿತು. ಹೀಗಾದರೂ ಬಂಧಮುಕ್ತರಾದ ಕೆಲವೇ ತಾಸುಗಳಲ್ಲಿ ಪಾಕಿಸ್ತಾನೀ ಮೋಲೀಕರು, ಅವರು ಆಜಾದ ಕಾಶ್ಮೀರದ ರಾಜಧಾನಿಯಾದ ಮುಝಫರಾಬಾದಕ್ಕೆ ಹೊರಟಿದ್ದಾಗ, ಕೋಹಲಾ ಸಂಕದ ಸಮೀಪ ಮನಃ ಸಾರ್ವಜನಿಕ ಹಿತಾಸಕ್ತಿಯಿಂದ ಬಂಧಿಸಿ ಲಾಹೋರಕ್ಕೆ ತಂದರು. ಯುದ್ಧವಿರಾಮ ರೇಖೆಯನ್ನು ಉಲ್ಲಂಘಿಸುವ ನಿರ್ಧಾರದಿಂದ ಇವರು ಮುನ್ನಡೆದಿದ್ದರು.

ರೂಪಾಯಿಯ ಬೆಲೆ ಭದ್ರವಿದೆ

ದೇಶದ ಅಂತರಿಕ ಆರ್ಥಿಕ ಬರದ ದೃಷ್ಟಿಯಿಂದ ಭಾರತದ ರೂಪಾಯಿಯ

Mahatma Gandhi Memorial College, Udipi.

It is hereby announced that regular classes for Pre-University course will commence from Monday, the 7th July, 1958.

H. Sunder Rao,
Principal.

ಇಂದು ಎಂದಿನಷ್ಟೇ ಭದ್ರವಾಗಿದೆ. ವಿವಿಧ ವಿಷಯಗಳನ್ನು ಸೇರಿಸಿಗೊಂಡಲವನ್ನುಂಟು ಮಾಡಿಕೊಂಡು ನಮ್ಮ ನಾಣ್ಯ ಚಲಾವಣೆಯ ಬಗ್ಗೆ ಹೆದರಿಕೊಳ್ಳಬೇಕಾದ ಅಗತ್ಯವಿಲ್ಲ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ತಳಹದಿಯು ಕ್ರಮೇಣ ಬಲಶಾಲಿಯಾಗ ತೊಡಗಿದೆ ಎಂದು ರಿಸರ್ವ್ ಬೇಂಕಿನ ಗವರ್ನರರಾದ ಶ್ರೀ ಎಚ್. ವಿ. ಆರ್. ಐಯಂಗಾರರು ಮುಂಬಯಿಯಲ್ಲೊಂದು ಸಭೆಯಲ್ಲಿ ವಿದೇಶ ವಿನಿಮಯ ನಾಣ್ಯಗಳ ಸರಿಸ್ಥಿಯ ಬಗ್ಗೆ ಮಾತನಾಡುವಾಗ ಹೇಳಿದರು.

ಜಾಗತಿಕ ಬೇಂಕಿನ ಸಾಲ

ಮದ್ರಾಸು ಮತ್ತು ಕಲಕತ್ತೆಯ ಬಂದರುಗಳ ಅಭಿವೃದ್ಧಿಗಾಗಿ ಜಾಗತಿಕ ಬೇಂಕು ಕೊಡಮಾಡಿದ ೪೩ ಮಿಲಿಯ ಡಾಲರ್ ಸಾಲದ ಪತ್ರಕ್ಕೆ ಸಹಿಹಾಕಲಾಗಿದೆ. ಕಲಕತ್ತೆಯ ಬಂದರದ ಕಮಿಶನರ ಹೆಸರಿನಲ್ಲಿ ೯೯ ಮಿಲಿಯ ಹಾಗೂ ಮದ್ರಾಸ ಬಂದರ ಟ್ರಸ್ಟಿಗಳ ಹೆಸರಿನಲ್ಲಿ ೧೪ ಮಿಲಿಯ ಡಾಲರ್‌ಗಳಿರುವುವು. ಈ ಸಾಲಗಳನ್ನು ಕೊಡಲಾಗುವುದೆಂದು ಜಾಗತಿಕ ಬೇಂಕಿನ ಸಭೆಯು ಎಪ್ರಿಲ್ ೧೬ ರಂದು ಸೇರಿದಾಗ ಘೋಷಿಸಲಾಗಿತ್ತು. ಈ ಎರಡೂ ಸಾಲಗಳ ಅವಧಿ ಇಪ್ಪತ್ತು ವರ್ಷವಿದ್ದು ಸಾಲಿಯಾನ್ ಸೇಕಡಾ ಐದೂವರೆಯ ಸಲೆಯಲ್ಲಿ ಬಡ್ಡಿ ಗಳಿಸುವುವು.

ಮೈಸೂರ್ ಸರಕಾರದ ನಿರ್ಧಾರ

ಲಂಚಗುಳಿತನ, ಸ್ವಜನ ಪಕ್ಷಪಾತತನ ಮತ್ತು ಪತೀಲಿಬಾಜಿಗಳನ್ನು ತಡೆಹಿಡಿಯಲು ಸರಕಾರವು ದೃಢ ನಿಶ್ಚಯ ಮಾಡಿರುವುದಾಗಿಯೂ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೋಸ್ಕರ ಕೆಲವೊಂದು ಅಧಿಕಾರಿಗಳನ್ನು ಕೆತ್ತು ಹಾಕಬೇಕಾಗಿ ಬಂದರೆ ಹಾಗೆಯೇ ಮಾಡಲಾಗುವುದೆಂದೂ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. No 25/1958.

ಅಮ್ಮಣ್ಣಿ ಯಾನೆ ಸತ್ಯಮ್ಮ. B ಜನಾರ್ದನ ಶರ್ಮರಿಗೆ ನಿಡವೆ ಪುತ್ತೂರು ತಾಲೂಕು ಪುಣಚಾ ಗ್ರಾಮದಲ್ಲಿ -ಅರ್ಜಿದಾರರ

ಮತ್ತು

1 B ಪಂಕಪ್ಪ ನ್ಯಾಕ, 2 B ರಾಮಣ್ಣ ನ್ಯಾಕ, 3 B. ನಾರಾಯಣ ರಾಮ್ ಯಾನೆ ನ್ಯಾಕ ತಿಮ್ಮಣ್ಣ ನಾಯ್ಕರ ಮಕ್ಕಳು. 1ನೇ ಎದ್ರಿ ಪುತ್ತೂರು ತಾಲೂಕು ಪುಣಚಾ ಗ್ರಾಮದ ಬರೆಗೈ ಎಂದಲ್ಲಿ 2ನೇ ಎದ್ರಿ ಸಿಟ್ಟ ಕ್ಷಬಾ ಗ್ರಾಮದ ಸೆತ್ತಕೆರೆ ಎಂದಲ್ಲಿ 3ನೇ ಎದ್ರಿ ಮೈಸೂರು ಸಂಸ್ಥಾನದ ಸಿಯಿಪಟ್ಟ ಸಂತೆ ಮಾಳ ಎಂದಲ್ಲಿ ಹೊಟೇಲ್ ಕೀಪರ್ -ಎದ್ರಿರು

ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದರೆ ಅರ್ಜಿದಾರಳ ಗಂಡ ಜಾಲಿ ಮೃತಪಟ್ಟ B ಜನಾರ್ದನ ಶರ್ಮರ ಹೆಸರಲ್ಲಿರುವ ರೂ. 3000/-ದ ನೇಶನಲ್‌ಸೇವಿಂಗ್ಸ್ ಸರ್ಟಿಫಿಕೇಟಿನ ಹಣಗಳ ವಸೂಲಿ ಕುರಿತು ಅರ್ಜಿದಾರಳಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 21-7-1958ಕ್ಕೆ ಇಟ್ಟಿರುವುದರಿಂದ, ಅದ್ಯೆ ಅಕ್ಷೇಪಣೆಗಳಿದ್ದವರು ಸದ್ರಿ ದಿನ ಸುಬ್ಬೂರು ಕೋರ್ಟು ಮುಂದೆ ಸ್ವತಹ ವ, ವಕೀಲರ ದ್ವಾರಾಹಾಜರಾಗಿ ಉದಸರಿಸತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿರುತ್ತದೆ.

(Sd) C S Shastry,
Vakil for Petitioner

ಪುತ್ತೂರು ತಾ. 20.6.1958.

ಉಡುಪಿ

ಕಲಾ ಮಂಟಪದ ಉದ್ಘಾಟನೆ—

ಮುತ್ತಿಗೆ ಮಠದ ವೃಂದಾವನಸ್ಥ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರ ಸ್ಮಾರಕಾರ್ಥವಾಗಿ ಅವರ ಶಿಷ್ಯ ಶ್ರೀ ಸುಜ್ಞಾನೇಂದ್ರತೀರ್ಥ ವಿದ್ಯಾವಲ್ಲಭ ಸ್ವಾಮಿಗಳವರು ಕುಂಜಿಬೆಟ್ಟುದಲ್ಲಿ ಕಟ್ಟಿಸಿದ ನೂತನ ಕಲ್ಯಾಣ ಮಂಟಪವನ್ನು ತಾ. 25ರಂದು ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರು ಉದ್ಘಾಟಿಸಿದರು ಮಠದಿಂದ, ಉಪಸಮಿತಿಗಳ, ಭಜನೆ ಮುಂತಾದ ಮಂಗಲ ಕಾರ್ಯಗಳಿಗಾಗಿ ನಿರ್ಮಿಸಲ್ಪಟ್ಟ ಈ ಮಂದಿರವನ್ನು ಶ್ರೀ ಸೋದೆ ಮತ್ತು ಶ್ರೀ ಕಾಣಿಯೂರು ಸ್ವಾಮಿಗಳವರು ಹರಸಿ ಭಾಷಣಮಾಡಿದರು ಸಭಿಕರ ಕಡೆಯಿಂದ ಡಾ. ಟಿ. ಎಸ್. ಎ. ಪೈ, ಶ್ರೀಗಳಾದ ಈ ಶಿ ಹರಿದಾಸ ಭಟ್ಟ, ಎಸ್. ಎಲ್. ನಾರಾಯಣ ಬಟ್ಟ, ಕೆ. ಸುಬ್ರಾಯ ಪುರಾಣಿಕ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಆರಂಭದಲ್ಲಿ ಶ್ರೀ ಅರ್. ನರಶಿಂಹಾಚಾರ್ಯರು ಸ್ವಾಗತವನಾಡುಗಳನ್ನಾಡಿದರು. ಕೊನೆಯಲ್ಲಿ ಶ್ರೀ ಸಿ. ಕೆ ಆಚಾರ್ಯರು ಧನ್ಯವಾದಗಳನ್ನಿತ್ತರು. ಶ್ರೀಪುತಿ ಕಾತ್ಯಾಯಿನೀ ಬಾಯಿ, ಭಿಡ್ಲರ್ ಶ್ರೀ ಕೆ ಮಂಜುನಾಥಯ್ಯ ಮತ್ತು ಶ್ರೀ ಮಾಧವಾಚಾರ್ಯರಿಂ ಸಂಗೀತ ಕಚೇರಿ ನಡೆದು ಫಲಮಂತ್ರಾಕ್ಷತೆ ವಿತರಣೆಯಾಯಿತು

ನಗರ ಸಭೆಯು—

ತಾ. 25ರಂದು ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ನಗರ ಸಭೆಯ ಕಂಪೂಸ್ಟ್ ಗೊಬ್ಬರ ಇಲಾಖೆಯ ಆಗ್ಗು ಜಗ್ಗುಗಳು, ಲೋಕೋಪಯೋಗಿಗಳ ವಿಚಾರದಲ್ಲಿ ಡಾ. ಎ ಜಿ ಆಚಾರ್ಯರು ಕೇಳಿದಪ್ರಶ್ನೆಗಳಿಗೆ ಉತ್ತರವೀಯಲಾಯಿತು. ನಗರ ಸಭೆಯ ಉಪಾಧ್ಯಾಯರು ಮತ್ತು ತೋಟಿ ಹಾಗೂ ಕಸಗುಡಿಸುವ ಇಲಾಖೆಗಳ ಶಿಬಂಧಿಯನ್ನು ಬಿಟ್ಟು ಇತರ ಎಲ್ಲಾ ನೌಕರರಿಗೆ ತಾ. 1.1.1957ರಿಂದ ಹೊಸ ವೇತನ ಸ್ಕೇಲಿನಂತೆ ಸಂಬಳ ಕೊಡುವುದೆಂದು ನಿರ್ಣಯವಾಯಿತು

ಶ್ರೀಕೃಷ್ಣ ಮಠದಲ್ಲಿ—

ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶತೀರ್ಥ ಸ್ವಾಮಿಗಳವರ ಹಿರಿತನದಲ್ಲಿ ಶ್ರೀ ಕಾಣಿಯೂರು ಮತ್ತು ಶ್ರೀ ಶೀರೂರು ಸ್ವಾಮಿಗಳವರ ಕೂಡುವಿಕೆಯಿಂದ ತಾ. ೩೦ರಂದು ವರ್ಷಾವಧಿ ಮಹಾಭಿಷೇಕವೂ ತಾ 27ರಂದು ಮುದ್ರಾಧಾರಣ ಸಮಾರಂಭವೂ ವಿಧಿ ಪೂರ್ವಕವಾಗಿ ಸಾಗಿತವಾಯಿತು

ಡಾ ಪೈಗಳ ಪತ್ರಿಕಾ ಗೋಷ್ಠಿ—

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ ಟಿ. ಮಾಧವ ಪೈಗಳು ತಾ 27ರಂದು ತಮ್ಮ ಮಣಿಪಾಲದ ನಿವಾಸದಲ್ಲಿ ಅಪರಾಹ್ನ ಪತ್ರಿಕಾ ಗೋಷ್ಠಿಯೊಂದನ್ನು ಕರೆದು ಎಕೆಡೆಮಿಯ ದ ಕ. ಜಿಲ್ಲೆಯ ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಕಾರ್ಯರೂಪಕ್ಕೆ ತರಲಿರುವ ಹೊಸ ಯೋಜನೆಯನ್ನು ವಿವರಿಸಿದರು ಈ ಯೋಜನೆಯಂತೆ ಎಕೆಡೆಮಿಯ ಒಂದು ಪ್ರಶ್ನೆ ಪತ್ರವನ್ನು ಮುದ್ರಿಸಿ ಎಲ್ಲಾ ಶಾಲೆಗಳಿಗೂ ಕಳುಹಿಸುವುದು ಆ ಯಾಯಾ ಶಾಲೆಗಳ ಮುಖ್ಯೋಪಾಧ್ಯಾಯರು ಅವನ್ನು ಬರಮಾಡಿಸಿ ಇಡುವುದು ಅದನ್ನು, ಎಕೆಡೆಮಿಯ ಇಬ್ಬರು ಸದಸ್ಯರೂ, ಆಯಾಯಾ ಸ್ಥಳದ ಸ್ಥಾನಿಕ ಸಂಸ್ಥೆಗಳ ಮುಖ್ಯಸ್ಥರೂ ಸ್ಥಳೀಯ ಶಾಸನ ಸಭಾ ಸದಸ್ಯರೂ, ಆಯಾಯಾ ರೇಂಜಿನ ಶಾಲಾ ವಿಸ್ಯುಟ ಇನ್ಸ್‌ಪೆಕ್ಟರರೂ ಇರುವ ಸಮಿತಿಯು ಆಯಾಯಾ ಶಾಲೆಗೆ ಭೇಟಿಕೊಟ್ಟು ಪ್ರಶ್ನ ಪತ್ರಕ್ಕೆ ಮೊದಿಯುವ ಉತ್ತರಗಳನ್ನು ಪರಿಶೀಲಿಸುವುದು ಶಾಲೆಗೆ ಬರುವ ಮಕ್ಕಳ ಉಡುಪು, ಆರೋಗ್ಯ ಸ್ಥಿತಿ, ದೃಷ್ಟಿ, ಶಿಸ್ತು, ಸಾಮಾನ್ಯ ತಿಳುವಳಿಕೆ ಮುಂತಾದುವುಗಳ ವಿಚಾರವಾಗಿ ಮಾಹಿತಿಯನ್ನು ಸಂಗ್ರಹಿಸಿ ಕುಂದುಕೊರತೆಗಳು ಏನಾದರೂ ಕಂಡುಬಂದಲ್ಲಿ ಅವನ್ನು ಸರಿಪಡಿಸಲು ಸಾಧ್ಯ ನೀಗುವುದು ಸಮಿತಿಯ ಮುಖ್ಯ ಉದ್ದೇಶವಿದು ಎಂಬುದೇ ಡಾ. ಪೈಗಳ ಹೊಸ ಯೋಜನೆಯ ಸಾರಾಂಶ

ಸುತ್ತೂರಿನಲ್ಲಿ ಸೈಂಟ್ ಫಿಲೋಮಿನಾ ಕಾಲೇಜಿನ ಉದ್ಘಾಟನೆಯು—

ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಗುರುಗಳಾದ ಪದ್ಮ ವಿಭೂಷಣ ಡಾ ಕೆ. ವಿ. ಪುಟ್ಟಸ್ವಾಮಿಯ ಅಧ್ಯಕ್ಷತೆಯಲ್ಲಿ ಮೈಸೂರಿನ ವಿದ್ಯಾಮಂತ್ರಿ ಶ್ರೀ. ಅನ್ನಾರಾವ್ ಗಣಮುಖಿಯವರಿಂದ ತಾ. 1ರಂದು ನೆರವೇರಿಸಲ್ಪಟ್ಟಿತು

ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ—

ವಿವಿಧ ಪರೀಕ್ಷೆಗಳ ಶಿಕ್ಷಣ ಕೇಂದ್ರವು ಉಡುಪಿ ಸಂತೆಕಟ್ಟೆಯಲ್ಲಿ ದಿನಾಂಕ ೧೧ರಂದು ಅಂಬಲಪಾಡಿ ಗೀತಾಭವನದ ಮತಿಯಿಂದ ಪ್ರಾರಂಭವಾಯಿತು. ಕಾರ್ಯವೆಚಿತ್ರ ಶ್ರೀ ಎಸ್ ಗೋಪಿಚಂದರಾಯರು ಸ್ವಾಗತ ಸೂತ್ರ ಈ ಪರೀಕ್ಷೆಗಳು ಮೈಸೂರು ಸರಕಾರದಿಂದ ಸಂಜೂರಾತಿಯನ್ನು ಪಡೆದಿರುವುದರಿಂದ ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಏಕರೂಪದ ಶಿಕ್ಷಣವು ರಾಜ್ಯದಲ್ಲಿ ಬರುವ ದೃಢನಿರ್ಧಾರವಿರುವುದರಿಂದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಮಾಣ ಪತ್ರಗಳಿಗೆಷ್ಟೆ ಮಾನ್ಯತೆಯ ಈ ಪರಿಸ್ಥಿತಿನ ಪ್ರಮಾಣಪತ್ರಗಳಿಗೂ ಇರುವುದರಿಂದ ಎಲ್ಲರೂ ಸಹಕರಿಸಬೇಕಾಗಿ ಕೇಳಿಕೊಂಡರು ಶ್ರೀಗಳಾದ ಕೆ ಎ. ಉಡುಪ ಮತ್ತು ಕೆ. ವಿ. ಆಚಾರ್ಯರು ಸಂದರ್ಭೋಚಿತವಾಗಿ ಮಾತನಾಡಿದರು. ಆ ಮೇಲೆ, "ಪ್ರಥಮಾ" ತರಗತಿಗಳು ಕ್ರಮವತ್ತಾಗಿ ಪ್ರಾರಂಭವಾದುವು ತರಗತಿಗಳು ನಡೆಯುವ ಸಮಯ ಸಾಯಂ. ತಾಸು ೫-೭ರ ವರೆಗಿರುವುದು

ಪ್ರಕಟಣೆ

ದ. ಕ ಜಿಲ್ಲೆಯಲ್ಲಿ ಗೇರುಬೀಜ ಬೆಳೆಸಲು ೩೦ ವರ್ಷದ ವ್ಯಾದಿ ಗೇಣಿಗೆ ಜಾಗ ಕೊಡಲಾಗುವುದು. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಜಾಗದ ವಿವರ ಕೊಡತಕ್ಕಲ್ಲವಾದುದರಿಂದ ತಕ್ಕಮಟಿಯ ಬಗ್ಗೆ ಹೆಚ್ಚು ವಿಳಂಬವಾಗುತ್ತಿದೆ. ಆದುದರಿಂದ ಈ ಕೆಳಗಿನ ಫಾರ್ಮಿನಲ್ಲಿ ಜಾಗ ಅಪೇಕ್ಷಿಸುವವರು ಅರ್ಜಿಕೊಡಬೇಕಾಗಿ ಸ್ಥಳೀಯ ತಹಶೀಲ್ದಾರರು ಅಪೇಕ್ಷಿಸುತ್ತಾರೆ.

ಗೇರುಬೀಜ ವ್ಯವಸಾಯದ ಬಗ್ಗೆ ಗೇಣಿಗೆ ಜಾಗ ಪಡೆಯಲು ಅರ್ಜಿಯ ಫಾರ್ಮು

1 ಅರ್ಜಿದಾರನ ಹೆಸರು
2 ವಿಳಾಸ ಮತ್ತು ಗ್ರಾಮ ಮತ್ತು ವಾಸ್ತವ್ಯ
3. ಸ್ವಂತ ಆಸ್ತಿ ಇದೆಯೇ? ಇದ್ದರೆ ಅದರ ವಿವರ
(a) ಆಸ್ತಿ ಇರುವ ಗ್ರಾಮ
(b) ಒಟ್ಟು ವಿಸ್ತೀರ್ಣ
(c) ತೀರ್ವೆ
(d) ಅರ್ಜಿ ಬಾಬ್ತು ಜಾಗದ ತಪಸೀಲು
(e) ವಿಸ್ತೀರ್ಣ

ಅರ್ಜಿದಾರನ ದಸ್ತಖತ

ಸಾರ್ವಜನಿಕರಿಗೆ ಎಚ್ಚರಿಗೆ—

ಸಾರ್ವಜನಿಕ ಸ್ಥಳಗಳಲ್ಲಿ ಆಟದ ಪುಗ್ಗಗಳ ಬಗ್ಗೆ ಅಯೋಗ್ಯ ಮಾರಕರಣಗಳ ಮೂಲಕ ಎಚ್ಚರಿಗೆ ಡ್ರೋಜನ್ ಗೇಸನ್ನು ಉತ್ಪತ್ತಿ ಮಾಡುವಾಗ ಅನೇಕ ಕಡೆಗಳಲ್ಲಿ ಪ್ರಾಣಹಾನಿಯಾಗುವುದು ಸರಕಾರದ ಗಮನಕ್ಕೆ ಬಂದಿರುವುದು ಎಲುಮಿನಿಯಮ್ ಪೌಡರ್ ಮತ್ತು ಅಲ್ಕಾಲಿ ದ್ರಾವಕವನ್ನು ಅಥವಾ ಇನ್ನಿತರ ಮಿಶ್ರವನ್ನು ಲೋಹದ ಅಂಚೆಯಲ್ಲಿ ಹಾಕಿ ಹೈಡ್ರೋಜನ್ ಗ್ಯಾಸ್ ತಯಾರಿಸಿ ಪುಗ್ಗೆಯನ್ನು ತುಂಬಿಸುವ ಈ ಪದ್ಧತಿಯಿಂದ ಏನು ಗಂಡಾಂತರ ಉಂಟಾಗುವುದೆಂಬುದನ್ನು ಆ ವ್ಯಾಪಾರಿಯೂ ತಿಳಿದಿಲ್ಲ. ಪುಗ್ಗೆಗಳನ್ನು ಕೊಂಡುಕೊಳ್ಳಲು ಅಲ್ಲಿಗೆ ಹೋಗುವ ಚಿಕ್ಕ ಮಕ್ಕಳಿಗೂ ತಿಳಿಯುವುದಿಲ್ಲ ಗೇಸಿನ ಒತ್ತಡದಲ್ಲಿ ಯೋಗ್ಯ ವ್ಯವಸ್ಥೆಯಿಲ್ಲದೆ ಅ ಅಂಚೆ ಸಿಡಿಯುತ್ತಿದೆ. ಮುಂಬಯಿ, ಅಮರಾವತಿ, ಚಿದಂಬರಂ ಮೊದಲಾದೆಡೆಗಳಲ್ಲಿ ಇಂತಹ ಸಿಡಿತದಿಂದ ತುಂಬಾ ಪ್ರಾಣಹಾನಿಯಾಗಿರುವುದು ಈ ರೀತಿಯ ಉತ್ಪತ್ತಿತನ್ನೆಲ್ಲಾ ಮಾಡುವ ಉತ್ಪಾದಕರು ತಪ್ಪಿನ ಗೆಗುರಿಯಾಗುತ್ತಾರೆಂದುಅರಿತಿರಬೇಕು. ಸಾರ್ವಜನಿಕರು ಎಲ್ಲಾ ವಿಷಯಗಳನ್ನು ಗಮನಿಸಬೇಕೆಂದು ಸರಕಾರಿ ಪ್ರಕಟಣೆ ಎಚ್ಚರವಿತ್ತಿದೆ.

ನೋಟೀಸು

ಉಡುಪಿ ತಾಲೂಕು ಕೆಂಜೂರು ಗ್ರಾಮದಲ್ಲಿರುವ ಸಂಕಮ್ಮ ಶೆಟ್ಟಿರ ಮಕ್ಕಳು ಅಕ್ಕಮ್ಮ ಶೆಟ್ತಿ, ರಾಮಣ್ಣ ಶೆಟ್ಟಿ, ಮತ್ತು ಸಂಕಮ್ಮ ಶೆಟ್ತಿರ ಮಗ ಕೃಷ್ಣಯ್ಯ ಶೆಟ್ಟಿ, ಸದ್ರಿಯವರ ಹೆಂಡ್ತಿ ಜಾಣಿ ಶೆಟ್ತಿ ಕೂಡಾ ನಾಲ್ವರು ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ಉಡುಪಿ ತಾಲೂಕು ಕೆಂಜೂರು ಗ್ರಾಮದ ನಾಯಕರ ಮನೆ ಸುಬ್ಬಕ್ಕ ಶೆಟ್ತಿರ ಮಗಳು ದಾರನ್ನು ಶೆಟ್ತಿರ ಬಾಬ್ತು ನೀವು ಚಾಲಗೇಡಿಗೆ ಅನುಭವಿಸುವ ಆಸ್ತಿಗಳನ್ನು ಸ್ವಾಧೀನತೆ ಕೇಳಿ ಕುಂದಾಪುರ ಅಸಿಸ್ಟಾಂಟ್ ಕಮಿಶನರ್‌ರವರ ಕೋರ್ಟಿನಲ್ಲಿ ಅರ್ಜಿದಾರಳು ದಾಖಲು ಮಾಡಿರುವ ಅರ್ಜಿಗಳನ್ನು ತಾರೀಕು 9-7-58ಕ್ಕೆ ಇಟ್ಟಿರುತ್ತದೆ ಉದಾ ಹರಿಸುವಂಥಾದ್ದಿದ್ದರೆ ಆ ದಿನ್ಸ ಅಪರಾಹ್ನ 1 ಘಂಟೆಗೆ ಉಡ್ಪಿ ಕೇಂಪಿನಲ್ಲಿ ಸದ್ರಿ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ

K. Ramakrishna Rao,
Vakil for Petitioner

Udipi Dated 30—6—1958

ವಾರದ ಮಹಾನುಭಾವ—

ಅಬೂ ಹುಸೇನ್ ಸರಕಾರ

ಪಾಕಿಸ್ತಾನದ ರಾಷ್ಟ್ರಾಧ್ಯಕ್ಷರಿಗೆ ಪೂರ್ವ ಪಾಕಿಸ್ತಾನವೆಂಬುದು ಸದಾ ಕಾಡುವ ಶಿರೋವೇದನೆಯಾಗಿ ಪರಿಣಮಿಸಿದೆ. ಈ ಕ್ಷೇತ್ರದ ಜನತೆ ಪಶ್ಚಿಮ ಪಾಕಿಸ್ತಾನೀ ಶಾಸಕರನ್ನು ಎಂದಿಗೂ ಮನ್ನಿಸಿಕೊಂಡು ಬಂದಿರುವ ದಾಖಲೆಯಿಲ್ಲ; ಏಕೆಂದರೆ, ಬಂಗಾಳೀ ಸ್ವಭಾವದಿಂದಾಗಿ ಅವರು ಅಂಧ ಶ್ರದ್ಧಾಳುಗಳಾಗಲಾರರಲ್ಲದೇ ಭಾಷಾ ಪ್ರಶ್ನೆಯಲ್ಲಿ ಅವರು ಯಾರದೇ ಪ್ರಭುತ್ವವನ್ನು ಒಪ್ಪಿಕೊಳ್ಳಲು ಎಂದಿಗೂ ಸಿದ್ಧರಿಲ್ಲ.

ಡಾಕಾದಲ್ಲಿ ಪ್ರಜಾಪ್ರಭುತ್ವವು ಕೊನೆಗೊಂಡು ಇಂದಿನಂತೆ ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ಸಾರುವ ಸಂದರ್ಭ ಹಿಂದೊಮ್ಮೆ ಗಣಾಚರಲ್ಲಿಯೂ ಉದ್ಭವಿಸಿತ್ತು. ಆ ಸಮಯದಲ್ಲಿ ಆರೋಗ್ಯ ಮಂತ್ರಿಯಾಗಿದ್ದ ಅಬೂ ಹುಸೇನ್ ಸರಕಾರರ ವಿರೋಧದಿಂದಾಗಿಯೇ ಈ ಸ್ಥಿತಿ ಒದಗಿತ್ತು. ಆದರೆ, ಆ ಮೇಲೆ ಅವರೇ ಪೂರ್ವ ಪಾಕಿಸ್ತಾನದ ಮುಖ್ಯಮಂತ್ರಿಯಾದರು.

ಪೂರ್ವ ಪಾಕಿಸ್ತಾನದಲ್ಲಿ ಚುನಾವಣೆಯಾದಾಗ, ವಿರೋಧೀ ಪಕ್ಷದೆಲ್ಲಾ ಜನರು ಸಂಯುಕ್ತ ರಂಗವನ್ನೇರ್ಪಡಿಸಿ ಮುಸ್ಲಿಂ ಲೀಗಿನ ಪ್ರಭುತ್ವವನ್ನು ಮೊಸರು ಕಡೆದು ಬೆಣ್ಣೆ ಹೊರಗೆಡಹುವಂತೆ ಕಡೆದು ಹೊರತಳ್ಳಿದರು. ಕೆಲವು ದಿನಗಳ ವರೆಗೆ ಪರಿಸ್ಥಿತಿ ಸುಧಾರಿಸಿತ್ತು; ಆದರೆ, ಒಂದು ವರ್ಷ ಕಳೆಯುವುದರೊಳಗೇನೇ ಅಧಿಕಾರ ಪೀಠ ಕಂಪನತೊಡಗಿತು. ಭಾಷಾನುಮತಿಯವರ ಕಿರುಕುಳಗಳಿಂದ ಸಂಯುಕ್ತ ಸರಕಾರ ವಿಘಟಿತವಾಯಿತು.

ಆಗ, ವಯೋವೃದ್ಧ ರಾಜನೀತಿಜ್ಞ ಶ್ರೀ ಫಜಲುಲ್ ಹಕ್ಕರೇ ಮುಖಂಡರಾಗಿ ಕಂಡುಬಂದುದರಿಂದ ಅವರ ಕೈಗೆ ಅಧಿಕಾರ ದೊರೆಯಿತು. ಆದರೆ, ನುಂದೆ, ಪರಿಸ್ಥಿತಿಗಳು ಅವರಿಗೆ ವಿರೋಧವಾಗಿ ಪರಿಣಮಿಸಿ ೩೩ ವರ್ಷದ ಸರಕಾರರು ಪ್ರಕಾಶಕ್ಕೆ ಬರತೊಡಗಿದರು. ಶ್ರೀ ಸರಕಾರರು ಪೂರ್ವ ಪಾಕಿಸ್ತಾನದ ಪೂರ್ವದ ಪ್ರಸಿದ್ಧ ವಕೀಲರಾಗಿದ್ದು ತಮ್ಮ ಔದ್ಯಮದಲ್ಲಿ ಯಶಸ್ವಿಯಾದವರು. ಅವರಿಗೆ ರಾಜಕಾರಣ ಪಟುವಾಗಲು ವಿಧಾನವಾಗಲಿಲ್ಲ; ಏಕೆಂದರೆ, ಸಂದರ್ಭವು ಪನ್ನೆರಡು ಕೈಗಳನ್ನೂ ಚಾಚಿ, ಅವರನ್ನು ಕರೆಯುತಿತ್ತು. ಅದರಿಂದಾಗಿ ಅವರೇ ಮುಖ್ಯಮಂತ್ರಿಯಾದರು.

ಇದಾದನಂತರ ಸಾಮಾನ್ಯ ಜಟಿರ ಕೊನೆಯ ವರೆಗೆ ಪರಿಸ್ಥಿತಿಗಳು ನೆಟ್ಟಗಿದ್ದುವು. ಆದರೆ, ತದನಂತರ ಶ್ರೀ ಸರಕಾರರ ಸಾಹಸ ನಿಷ್ಫಲವಾಗತೊಡಗಿತು. ಆಗ, ಶ್ರದ್ಧಾಪಾತ್ರರಾಗಿದ್ದ ಸರಕಾರರು ಆಲೋಚಕ ಲಕ್ಷ್ಯರಾಗಿ ಪರಿಣಮಿಸಿದರು. ಶ್ರೀ ಸರಕಾರರು ತನ್ನ ಚುನಾವಣಾಘೋಷಣೆಯಲ್ಲಿ, ಪಶ್ಚಿಮ ಪಾಕಿಸ್ತಾನದ ಸಂಬಂಧವನ್ನು ಕಡಿದುಕೊಳ್ಳುವ, ಅವಶ್ಯವೆಂದು ಕಂಡುಬಂದರೆ, ಪೂರ್ವ ಪಾಕಿಸ್ತಾನವು ಹೆಚ್ಚು ಕಡಿಮೆ ಸ್ವತಂತ್ರವಾಗಿರಲು ತಕ್ಕ ವಾತಾವರಣವನ್ನು ನಿರ್ಮಿಸುವುದಾಗಿ ಅವರು ಹೇಳಿದ್ದರು. ಇದರ ಪರಿಣಾಮವಾಗಿಯೇ ಶ್ರೀ ಸರಕಾರರ ಕೈಯಿಂದ ಸರಕಾರವನ್ನು ಕಿತ್ತುಕೊಂಡು ರಾಷ್ಟ್ರಪತಿಯವರ ಆಡಳಿತೆಯನ್ನು ಸಾರಲಾಯಿತು.

ಶ್ರೀ ಸರಕಾರರು ಶ್ರೀಮಂತ ಮನೆತನದಲ್ಲಿ ಜನ್ಮವಿತ್ತಿದ್ದರು. ಅವರ ಶಿಕ್ಷಣ ರಕ್ಷಣೆಗಳೂ ಸಂಪನ್ನರೀತಿಯಲ್ಲಿಯೇ ನಡೆದುವು. ಅವರ ಸ್ವಭಾವ ಹಾಗೂ ವೈಯಕ್ತಿಗತ ಜೀವನವೂ ಶ್ರೀಮಂತಿಕೆಗೆ ಸರಿಯಾಗಿಯೇ ಬೆಳೆಯಿತು. ಅವರು ಪರರಿಗೆ ಕಷ್ಟಕೊಟ್ಟಿದ್ದಾರೆಂದು ಹೇಳುವುದು ಅಷ್ಟು ಸುಲಭವಲ್ಲ. ಆದರೂ ಅವರ ಹೃದಯವು ಬಡವರೆಂದರೆ ಸ್ವಲ್ಪ ಹಿಂದುಳಿದಂತೆ ತೋರಿ ಬರುತಿತ್ತು.

ತಮ್ಮ ಮಿತ್ರ ವರ್ಗದಿಂದ ಲಾಭಗಳಿಸುವ ಅಭ್ಯಾಸ ಶ್ರೀ ಸರಕಾರರ ಮೈಗೂಡಿತ್ತು. ಈ ಕಲೆಯಲ್ಲಿ ಅವರು ಅದ್ವಿತೀಯರು. ಮಿತ್ರರನ್ನು ತನ್ನೊಂದಿಗಿರಿಸುವುದು, ಅವರೊಂದಿಗೆ ತನ್ನ ಪ್ರತಿಷ್ಠೆಯನ್ನು ಮೆರೆಸುವುದು, ಅವರ ಪ್ರತಿಷ್ಠೆಯ ಪೂರ್ಣ ಉಪಯೋಗವನ್ನು ಪಡೆಯುವುದು, ಅವರ ಸಹಕಾರದಿಂದಲೇ ಸಂಧಿಗ್ಧಪರಿಸ್ಥಿತಿಯಿಂದ ಪಾರಾಗುವುದು—ಇವು ಶ್ರೀ ಸರಕಾರರ ಸ್ವಭಾವಗಳಲ್ಲಿ ಕೆಲವು. ಈ ಗುಣಗಳಿಂದಲೇ ಅವರು ವಕೀಲರಾದರಂತೆ; ಈ ಗುಣಗಳಿಂದಲೇ ಅವರು ಮುಖ್ಯಮಂತ್ರಿಯೂ ಆದರಂತೆ! ಇಷ್ಟೊಂದು ಸಫಲತೆಗಳನ್ನು ಪಡೆದ ಬಳಿಕ, ಮುಖ್ಯಮಂತ್ರಿ ಸರಕಾರರ ಬಣ್ಣ ಅವರ ಬೆಂಬಲಕರಿಗೆ ತಿಳಿದು ಬಂದಾಗ, ಅವರ ಪ್ರಭುತ್ವವು ಕೊನೆಗೊಳ್ಳುವ ಪರಿಸ್ಥಿತಿ ಕಾಣಿಸಿಕೊಂಡು, ಅವರೊಬ್ಬ ಸಾಮಾನ್ಯ ವ್ಯಕ್ತಿಯಾಗಿ ಪರಿಣಮಿಸಿದರು.

ಶ್ರೀ ಸರಕಾರರ ಸರಕಾರ ಪತನಗೊಳ್ಳುವಲ್ಲಿ ಶ್ರೀ ಸುಹ್ರೆವರ್ದಿಯವರ ಕೈವಾಡವೂ ಕಡಿಮೆಯಿರಲಿಲ್ಲವೆಂದು ಪೂರ್ವ ಪಾಕಿಸ್ತಾನದ ರಾಜಕಾರಣಿಗಳು ಹೇಳುತ್ತಾರೆ. ಅಲ್ಲದೇ ಸ್ವಯಂ ರಾಷ್ಟ್ರಪತಿ ಇಸ್ಕಾಂದರ ಮಿರ್ಜಾರವರೇ ಈ 'ಶಾಂತ ವಿದ್ರೋಹೀ' ಸರಕಾರವು ಒಮ್ಮೆಗೆ ಪರ್ಯವಸಾನಗೊಂಡರೆ ಸಾಕೆನ್ನುತಿದ್ದರಂತೆ!

ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಡುವ ರಾಜಕಾರಣಿಗಳ ಪಜ್ರಯಲ್ಲಿ ಶ್ರೀ ಇಸ್ಕಾಂದರರು ಕಟ್ಟಕಡೆಗೆ ನಿಲ್ಲುತ್ತಾರೆ. ಶ್ರೀ ಮಿರ್ಜಾ, ಪಾಕಿಸ್ತಾನದ ಜನತೆ ನೂರಕ್ಕೆ ನೂರರಷ್ಟು ಸುಶಿಕ್ಷಿತರಾಗುವ ವರೆಗೆ, ಪಾಕಿಸ್ತಾನವು ಪ್ರಜಾತಂತ್ರಕ್ಕೆ ಯೋಗ್ಯವಲ್ಲವೆಂದು ಅನೇಕಬಾರಿ ಉದ್ಗರಿಸಿದ್ದರು. ತಮ್ಮ ಈ ವಿಚಾರಗಳಿಂದ, ಅವರು, ಪೂರ್ವ ಅಥವಾ ಪಶ್ಚಿಮ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಸರಕಾರವನ್ನಿರಗೊಟ್ಟು ತಮ್ಮ ನಿರಂಕುಶ ಪ್ರಭುತ್ವದ ಮೇಲೆ ಮಿತಿಯಿಡಲು ಇಚ್ಛಿಸುವುದಿಲ್ಲ ನೆಂಬುದು ಸ್ವಯಂಸಿದ್ಧ.

ಪೂರ್ವ ಪಾಕಿಸ್ತಾನದ ರಾಜಕೀಯ ಪಕ್ಷಗಳು ಒಂದಾಗಿ ವಿದ್ರೋಹೀ ಪಕ್ಷಗಳಾಗಿ ಕಾಣಿಸಿಕೊಂಡರೆ, ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇಂತಹ ವಿದ್ರೋಹದಿಂದ ರಾಜ್ಯವನ್ನುಳಿಸಲು ರಾಷ್ಟ್ರಾಧ್ಯಕ್ಷ ಶ್ರೀ ಮಿರ್ಜಾರವರಿಗೆ ಅಲ್ಲಿ ಪ್ರಜಾಪ್ರಭುತ್ವದ ಬಾಗಿಲನ್ನು ಮುಚ್ಚಿ ಬಿಡುವ ಉಪಾಯವೇ ಒಂದಾಗಿತ್ತು. ಏನೇ ಆದರೂ, ಶ್ರೀ ಸರಕಾರರು ಸುಮ್ಮನೆ ಬಾಯಿ ಕಟ್ಟಿಕೊಂಡು ಕೂರುವ ವ್ಯಕ್ತಿಯಲ್ಲ. ಅವರು ತಮ್ಮ ಮಿತ್ರರಿಂದ ಪುನಃ ಲಾಭ ಪಡೆಯುವ ಸಮಯವೀಗ ಬಂದಿದೆ; ಅಲ್ಲದೇ ಅವರ ಸನ್ಮಿತ್ರರೂ ಶ್ರೀ ಸರಕಾರರು ಈ ತಮ್ಮ 'ಪ್ರಯತ್ನ'ದಲ್ಲಿ ಜಯಶೀಲರಾಗುವರೆಂದು ವಿಶ್ವಾಸದಿಂದಿದ್ದಾರೆ.

ಬೆಕ್ಕಿನ ಶುತ್ತಿಗೆಗೆ ಗಂಟೆ ಕಟ್ಟುವ ಕಾರ್ಯದಲ್ಲಿ ಸಫಲತೆ ಯಾರಿಗೆಯೆಂದು ಕಾದು ನೋಡಬೇಕಷ್ಟೆ.

ಮಂಗಳೂರು

ರೋಟರಿ ಕ್ಲಬ್ಬಿನಲ್ಲಿ ಭಾಷಣ— ಮಂಗಳೂರಿನ ರೋಟರಿ ಕ್ಲಬ್ಬಿನ ಸಭೆಯು ತಾ. 26ರಂದು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಂಕನಾಡಿ ಫಾದರ್ ಮುಲ್ಲರ್ಸ್ ಆಸ್ಪತ್ರೆಯ ಡಾ. ಪಿ. ವೆಂಕಟ್ರಾಯರು ಕೇನ್ಸರ್ ರೋಗ ಹಾಗೂ ಅದರ ನಿವಾರಣೆ ಕುರಿತು ಭಾಷಣವಿತ್ತರು. ಹೆಚ್ಚಾಗಿ ಹೊಗೆಸೊಪ್ಪು ತಿನ್ನುವುದು, ಬೀಡಿ ಸಿಗರೇಟುಗಳನ್ನು ಸೇವಿಸುವುದು ಇದರಿಂದಾಗಿ ಕೇನ್ಸರ್ ರೋಗವು ಬರುವುದೆಂದು ಅವರು ತಿಳಿಸಿದರು.

ಜನ್ಮ ದಿನಾಚರಣೆ— ದಿವಂಗತ ಕುದ್ಮುಲ್ ರಂಗರಾಯರ (ಸ್ವಾಮಿ ಈಶ್ವರಾನಂದಜೀ) 99ನೇ ಜನ್ಮ ದಿನೋತ್ಸವವು ತಾ. 29ರಂದು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಶ್ರೀ ಎಸ್. ಎಸ್. ಏಕಾಂಬರೆ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಟಿ. ಕೃಷ್ಣನವರು ಸ್ವಾಗತ ಮಾತುಗಳನ್ನಾಡಿದರು. ಸಭಿಕರ ಹಾಗೂ ಅಧ್ಯಕ್ಷರ ಭಾಷಣಗಳಾಗಿ ಸಭಾಕೃತ್ಯವಾಯಿತು.

ಸಹಾಯಾರ್ಥ ನಾಟಕ— ಜಿಲ್ಲಾ ಮಂಡಲ ಕಾಂಗ್ರೆಸಿನವರು, ಬಡಮಕ್ಕಳಿಗೆ ನಿದ್ಯಾಧನವೇತನ ಕೊಡುವುದಕ್ಕಾಗಿ ತೆರೆದಿರುವ ವಿದ್ಯಾನಿಧಿಯ ಸಹಾಯಾರ್ಥವಾಗಿ ತಾ. 29ರಂದು ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ (ಸುಮಂಗಲಾ) ಎಂಬ ನಾಟಕ ಪ್ರದರ್ಶನದ ವ್ಯವಸ್ಥೆಮಾಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ನರೋಜಿನಿ ಅಡಿಗರು ವಹಿಸಿದ್ದರು. ಆರಂಭದಲ್ಲಿ ಮಂಡಲ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಜೆ. ಬಿ. ಸೆಟ್ಟಿರು ಸ್ವಾಗತಿಸಿದರು.

ನಗರ ಸಭೆಯು— ತಾ. 27ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಪ್ಟಂಬರ್ ತಿಂಗಳಲ್ಲಿ ಆಗಬೇಕಾದ ನಗರ ಸಭಾ ಚುನಾವಣೆಯನ್ನು ಮತದಾರರ ಪಟ್ಟಿ ಸರಿಯಾಗಿಲ್ಲದಿರುವುದರಿಂದಲೂ, ಮೈಸೂರು ಕಾಯಿದೆಯಂತೆ ಚುನಾವಣೆಯಾಗುವುದನ್ನು ಸರಕಾರವು ಸರ್ಯಾಲೋಚಿಸುವುದು ಅಗತ್ಯವಿರುವುದರಿಂದಲೂ, ಮುಂದುವರಿಸಬೇಕೆಂಬ ಅಭಿಪ್ರಾಯಣ ನಿರ್ಣಯವಾಯಿತು. ಶ್ರೀಗಳಾದ ಎಮ್. ಶಾಂತಾರಾಮ ಶೈ, ಎಸ್. ಜಿ. ಸಾಲೆನ್ನ ಮೊದಲಾದವರು ವಿರೋಧಿಸಿದರು. ನಗರಸಭಾ ಕ್ಷೇತ್ರದಲ್ಲಿಯ ರಸ್ತೆಗಳ ದುರುಸ್ತಿಗಾಗಿ ರೂಪಾಯಿ ೧,೪೦,೦೦೦ ಮಂಜೂರುಮಾಡಲಾಯಿತು.

ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿ ಸಭೆಯು ತಾ. 25 ಮತ್ತು 26ರಲ್ಲು ಜರಗಿ, ನಗರಸಭಾ ಚುನಾವಣೆಯನ್ನು ಮುಂದರಿಸಬಾರದೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಈ ಸಂದರ್ಭದಲ್ಲಿ ಶ್ರೀಗಳಾದ ಎ. ಕೃಷ್ಣ ಸೆಟ್ಟಿ, ಬಿ. ವಿ. ಕಕ್ಕಿಲ್ಲಾಯ ಮೊದಲಾದವರು ಮಾತನಾಡಿದರು.

ಕೊಯಮುತ್ತೂರು

ವಾರ್ಷಿಕ ಚುನಾವಣೆ— ಕೊಯಮುತ್ತೂರು ಕರ್ನಾಟಕ ಸಂಘದ ವಾರ್ಷಿಕ ಚುನಾವಣೆಯು ತಾ. 22ರಂದು ಜರಗಿ ಈ ಕೆಳಗಿನವರು ಆರಿಸಲ್ಪಟ್ಟರು. ಶ್ರೀಗಳಾದ ವಿ. ಆರ್. ಕೂಳೂರು (ಅಧ್ಯಕ್ಷ), ಉಚ್ಚಿಲ ಶ್ರೀನಿವಾಸ ಮತ್ತು ಕೆ. ಎಸ್. ಸೆಟ್ಟಿ (ಉಪಾಧ್ಯಕ್ಷರು), ಡಾ. ಸಿ. ವಿ. ರಾಮರಾವ್ (ಕಾರ್ಯದರ್ಶಿ), ಕೆ. ಪಿ. ವಿ. ರಾವ್, (ಜತೆಕಾರ್ಯದರ್ಶಿ), ಎಮ್. ಎ. ಆರ್. ಅಣ್ಣಯ್ಯ (ಕೋಶಾಧಿಕಾರಿ), ಕೆ. ಎಸ್. ನಾರಾಯಣ ಭಟ್, ಎಚ್. ಸಿ. ಕುಲಾಸೊ, ಟಿ. ಉಮೇಶ ರಾವ್, ಕೆ. ಕೆ. ರೈ, ಡಾ. ಯು. ವಿ. ಶ್ರೀನಿವಾಸ ರಾವ್, ಭಾಸ್ಕರ ಡಿ. ಪಂಡಿತ್, ಕೃಷ್ಣ ಬಲ್ಲಾಳ, ಶ್ರೀಮತಿ ಆನಂದ ರಾವ್ ಮತ್ತು ಶ್ರೀಮತಿ ಕೆ. ರತ್ನಾ ಪ್ರಭು, (ಇತರ ಸಮಿತಿ ಸದಸ್ಯರು).

ಡಾ. ಕೆ. ಸಿ. ನಾಯಕ್, ಶ್ರೀ ಎಮ್. ಜನಾರ್ಧನ ಶೇಟ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿ ಸಂಘದ ಕಟ್ಟಡ ನಿಧಿಯ ಕುರಿತು ಸಭಿಕರಲ್ಲಿ ಜಾಗೃತಿಯನ್ನುಂಟುಮಾಡಿದರು. ಸಂಘದ ಸದಸ್ಯರ ಮಕ್ಕಳ ಸಂಗೀತ ಸ್ಪರ್ಧೆ ನಡೆದು ಬಹುಮಾನ ವಿತರಣೆಯಾಯಿತು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಕೊನೆಗೊಂಡಿತು.

ಬ್ರಹ್ಮಾವರ— ಸ್ಥಳೀಯ ಪಂಚಾಯತ ಬೋರ್ಡಿನ ಚುನಾವಣೆಯು ತಾ. 23ರಂದು ಜರಗಿ ಶ್ರೀಗಳಾದ ಪಿ. ವೆಂಕಟ್ರಾಮ್ (ಅಧ್ಯಕ್ಷ), ಕೆ. ಲಕ್ಷ್ಮೀನಾರಾಯಣ ಕಾಮತ್, ಡಾ. ಮೋಹನ ರಾವ್, ಸಿ. ರಾಮಣ್ಣ ಸೆಟ್ಟಿ, ಸಿ. ಅನಂತಯ್ಯ ಅಡಿಗ, ಎಮ್. ಸುಬ್ಬಣ್ಣ ಸೆಟ್ಟಿ, ಎಮ್. ಅಮುಜಾ ಜ್ಯಾರಿ ಮತ್ತು ಗೋಪಾಲನವರು ಆಯ್ಕೆ ಹೊಂದಿದರು.

ಕನ್ಯಾನ— ಪುತ್ತೂರು ತಾಲೂಕು ಕನ್ಯಾನ ಬೋರ್ಡು ಹೈಸ್ಕೂಲಿನ ಉದ್ಘಾಟನೆಯನ್ನು ತಾ. 25ರಂದು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಸಂಜಯ್ಯ ಹೆಗ್ಡೆಯವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಅವರು ವಹಿಸಿದ್ದರು.

ಬೆಳ್ಳಾರೆ— ಸ್ಥಳೀಯ ಬೋರ್ಡು ಹಾ. ಎ. ಶಾಲೆಯ ಹೆಡ್ಮಾಸ್ಟರ್ ಶ್ರೀ ನಾರಾಯಣ ರಾಯರು ಕೆಲಸದಿಂದ ನಿವೃತ್ತರಾದ ನಿಮಿತ್ತ ಅವರನ್ನು ಬೀಳ್ಕೊಡುವ ಸಮಾರಂಭವು ತಾ. 21ರಂದು ಶ್ರೀ ಬಿ. ನಾರಾಯಣ ಶೇಖರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರು ಮುಖ್ಯ ಅತಿಥಿಗಳು ಗುಣಗಾನಮಾಡಿದರು.

NOTICE.

Notice is hereby given that Share Certificate Nos. 23, 426 & 1488 issued by the Vijaya Bank Limited, in respect of 4 shares numbered 343, 2352 to 2353 & 10030 now standing in the name of late Sri. Kariangala Muthaya Shetty, Landholder, Post Belloor, are reported to be lost and an application has been received from his widow Mrs. Kamalakshi, for the issue of a fresh Share Certificate in the place of the originals for the purpose of transmission of the said shares to her name. Any person having any objection whatsoever for the issue of a fresh Share Certificate or for the transmission of the said shares to the name of the applicant should communicate immediately the same to the undersigned. If objection is not filed with the undersigned within 15 days from this date, a fresh Share Certificate in the place of the said original Share Certificate Nos. 23, 426 & 1488 for the total number of 4 shares, will be issued and the transmission of the said shares to the name of the applicant Mrs. Kamalakshi, will be registered in the books of the Bank.

The Vijaya Bank Limited,
Head Office, Mangalore—3.
Dated: 27—6—1958.

(Sd.) P. Jayarama Shetty,
Secretary.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ನವೋದಯ— ವಿದ್ಯಾದಾಯಿನೀ ಹೈಸ್ಕೂಲ್, ಸುರತ್ಕಲ್ಲಿನ ವಿದ್ಯಾರ್ಥಿ ಸಂಸ್ಥೆಯ ಪತ್ರಿಕೆಯ ಒಂಭತ್ತನೆಯ ವಾರ್ಷಿಕಾಂಕ (೧೯೫೮). ಪುಟಗಳು. ೫೯.

ದಕ್ಷಿಣ ಕನ್ನಡದ ಉತ್ತಮ ಪ್ರೌಢ ಶಾಲೆಗಳಲ್ಲಿ ಒಂದಾದ ವಿದ್ಯಾದಾಯಿನೀ ಪ್ರೌಢ ಶಾಲೆಯ ಪತ್ರಿಕೆಯ ವಾರ್ಷಿಕಾಂಕ 'ನವೋದಯ'ವನ್ನು ಸ್ವಾಗತಿಸುತ್ತೇವೆ. ಇಂದು ಶಾಲೆಗಳಲ್ಲಿ ಕಲಿಸಬೇಕಾದ, ಕಲಿಯಬೇಕಾದ ವಿಷಯಗಳು ಹಿಂದಿಗಿಂತ ಅಧಿಕವಾಗುತ್ತ ಬರುತ್ತಿವೆ ಅವುಗಳಲ್ಲಿ, ಮಕ್ಕಳು ಎಳೆತನದಲ್ಲಿರುವಾಗಲೇ ಅವರಲ್ಲಿ ಲೇಖನ ಮತ್ತು ವಾಕ್ಶಕ್ತಿಯನ್ನು ಕೆರಳಿಸಿ ಮುಂದಕ್ಕೆ ಉದಯೋನ್ಮುಖ ಲೇಖಕರೂ ವಾಗ್ಮಿಗಳೂ ಆಗುವಂತೆ ಅವಕಾಶವನ್ನು ಕಲ್ಪಿಸಿಕೊಡುವುದೂ ಒಂದಾಗಿದೆ. 'ನವೋದಯ'ವು ಇಂತಹ ದಿಸೆಯಲ್ಲಿ ಒಂದು ಲಘು ಪ್ರಯತ್ನ.

ಈ ವಾರ್ಷಿಕಾಂಕವು ಶಾಲೆಯ ಬೇರೆ ವರ್ಗಗಳ ಹಸ್ತಲಿಖಿತ ಪತ್ರಿಕೆಗಳಿಂದ ಆರಿಸಿದ ಲೇಖನ ಮುಖ್ಯಗಳ ಹಾರವಾಗಿದೆ. ಇದರಲ್ಲಿ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಲೇಖನಗಳು ವಿವಿಧ ವಿಷಯಗಳ ಮೇಲೆ ಬರೆಯಲ್ಪಟ್ಟಿರುತ್ತವೆ. ಹಿಂದಿ ಮತ್ತು ಸಂಸ್ಕೃತ ಭಾಷೆಯವುಗಳು ಕೇವಲ ಸಣ್ಣ ಪ್ರಬಂಧಗಳಾಗಿವೆ "ಕಡ್ಡಿಗರ ಬಲ್ಲಹಂ ಮುದ್ದಣಂ" ಎಂಬ ಲೇಖನದಲ್ಲಿ ಹಳೆಗನ್ನಡದ ಶೈಲಿಯಲ್ಲಿ ಬರೆಯುವ ಪ್ರಯತ್ನವನ್ನು ತೋರಿಸಿದ್ದರೂ, ಅದರಲ್ಲಿ ಜಯಶೀಲತೆಯನ್ನು ಪಡೆದಿಲ್ಲವೆಂದೇ ಹೇಳಬೇಕು ಈ ಲೇಖನದಲ್ಲಿ ವ್ಯಾಕರಣ ಶಾಸ್ತ್ರವನ್ನು ಗಮನಿಸದಿರುತ್ತೆ ತೋರುವುದಿಲ್ಲ. ದಕ್ಷಸಲಹೆಗಾರ ಮಂಡಳಿಯು ಈ ವಾರ್ಷಿಕಾಂಕವನ್ನು ಅಚ್ಚುಕಟ್ಟಾಗಿ ಹೊರಡಿಸಿದೆ ಶ್ರೀ ಎಚ್. ಗಣೇಶ್‌ರವರ Some Thoughts on Teacherships ಎಂಬ ಇಂಗ್ಲಿ ಲೇಖನವು ಉತ್ತಮವಿದೆ. ಒಟ್ಟಿನಲ್ಲಿ ಸಂಸ್ಕೃತ ಭಾಷೆಯ ಲೇಖನವೊಂದೇ ಇರುವ, ಅದೂ ಅರ್ಧ ಪುಟದಲ್ಲಿಯೇ ಕೊನೆಗೊಳ್ಳುವ ಕೊರತೆಯು ಕಾಣಿಸುತ್ತದೆ. ಶಾಲೆಯ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿದ ಚಿತ್ರ ಪಟಗಳೂ ಸಂಚಿಕೆಯಲ್ಲಿ ಕೂಡಿರುವುದು ಪ್ರಶಂಸನೀಯ. ಕಿರಿಯ ಸೋದರ ಸೋದರಿಯರ ಪ್ರಯತ್ನವು ಹೆಚ್ಚೆಚ್ಚು ಬಿರುಸಾಗಿ ನಡೆದು ಮುಂದಿನ ವರ್ಷಗಳಲ್ಲಿ ಇನ್ನೂ ಉತ್ತಮವಾದ ಲೇಖನ ಸುಕ್ತಾವಳಿಗಳಿಂದ 'ನವೋದಯ'ವು ಉದಯವಾಗಲೆಂದು ಹಾರೈಕೆ

I The Police in India— Published by the Publications Division, Ministry of Informations and Broadcasting, Govt of India, New Delhi: Pages; 24. Price 40 nP.

ದೇಶದಲ್ಲಿ ಶಾಂತಿ ಸುರಕ್ಷೆಗಳನ್ನು ಕಾಪಾಡುವುದು ಇಂದು ಅಗತ್ಯವಾದ ನಾಗರಿಕ ಸೇವೆಗಳಲ್ಲಿ ಒಂದಾಗಿದೆ. ಇದಕ್ಕಾಗಿ ಪ್ರತಿ ಕ್ಷೇತ್ರದಲ್ಲಿಯೂ 'ಪೋಲೀಸ್' ವಿಭಾಗದ ಕೇಂದ್ರವಿರುತ್ತದೆ. ಜನತೆಗೆ ಒದಗಿದ ವಿಪತ್ತುಗಳಲ್ಲಿ, ಕೆಲವು ಸುಲಿಗೆಗಳಲ್ಲಿ ಈ ಪೋಲೀಸರು ಸೇವೆಸಲ್ಲಿಸುವರು. ಹೀಗಾಗಿ. ಈ ಕೆಲಸಗಳಲ್ಲಿಯೇ ಸಾಕಷ್ಟು ತರಬೇತಿ ಹೊಂದಿ, ಆಯಕ ಸೇವಾವಿಭಾಗಗಳಲ್ಲಿ ಒಂದಾಗಿ, ಜನತೆಗಾಗಿ ಪ್ರಾಣ ಭಯವನ್ನೂ ತೊರೆದು ದುಡಿಯುವ ಪೋಲೀಸರ ಬಗ್ಗೆ ನಮಗೇನು ಗೊತ್ತಿದೆ? ನಾವು ತಿಳಿಯದೆ ಇರುವ ಅವರಿಗೆ ಸಂಬಂಧಿಸಿದ ವಿಚಾರಗಳನ್ನು ಸಚಿತ್ರವಾಗಿ ಈ ಕಿರಿ ಹೊತ್ತಗೆಯಲ್ಲಿ ವಿವರಿಸಲಾಗಿದೆ. ಭಾರತದಲ್ಲಿ ಪೋಲೀಸು ದಳದ ಸ್ಥಾಪನೆಯ ಪೂರ್ವಾಪರ ವಿವೇಚನೆಯಿಂದ ಆರಂಭವಾಗುವ ಈ ಪುಸ್ತಕದಲ್ಲಿ ಪೋಲೀಸು ದಳದ ವಿವಿಧ ಭಾಗಗಳು—ಅವುಗಳ ಕಾರ್ಯಕ್ಷೇತ್ರಗಳು, ಪೋಲೀಸು ದಳಕ್ಕೆ ಸೇರಬೇಕೆ ಮತ್ತು ತರಬೇತಿ ಮೊದಲಾದುವುಗಳ ಬಗ್ಗೆ ನಿಜಸ್ವರೂಪವನ್ನು ತೋರಿಸುತ್ತದೆ. ೧೯೪೪ರಿಂದ ೫೫ರ ವರೆಗಿನ ವರ್ಷಗಳಲ್ಲಿ ಭಾರತದಲ್ಲಿ ನಡೆದ ಅಪರಾಧಗಳ ತುಲನೆಯನ್ನೂ ಪೋಲೀಸರಿಗಿತ್ತ ಬಹುಮಾನಗಳ ಹಾಗೂ ಅವರ ಸ್ಪರ್ಧೆಗಳ ವಿಷಯವನ್ನೂ ತಿಳಿಸಿ ಪೋಲೀಸರು ಮತ್ತು ಜನತೆಗಿರುವ ನಿಕಟ ಸಂಪರ್ಕವನ್ನು ಪ್ರಧಾನ ನೆಹರೂರವರ ಮಾತುಗಳಲ್ಲಿ ಉಲ್ಲೇಖಿಸುತ್ತ ಈ ಪುಸ್ತಕವು ಕೊನೆಗೊಳ್ಳುವುದು. ಈ ಬಗ್ಗೆ ಕುತೂಹಲಿಗಳಾದವರು ಅವಶ್ಯ ಸಂಗ್ರಹಿಸಲೇಬೇಕಾದ ಪುಸ್ತಕಗಳಲ್ಲಿ ಇದೊಂದೆಂದು ಧೈರ್ಯದಿಂದ ಹೇಳಬಹುದು. ಸುಲಭ ಭಾಷಾಶೈಲಿಯಲ್ಲಿ ಸರಳವಾಗಿ ಬರೆಯಲ್ಪಟ್ಟ ಪುಸ್ತಕದ ಉಪಯೋಗವನ್ನು ಜಿಜ್ಞಾಸುಗಳು ಪಡೆದುಕೊಳ್ಳಲಿ.

Mangalore—A Souvenir Published by the Canara Industrial & Banking Syndicate, Ltd Udipi. Editor: Sri K. S. Haridasa Bhat, M A. Pages 200

ನಮ್ಮ ಜಿಲ್ಲೆಯ ಶೆಡ್ಯೂಲ್ಡ್ ಬೇಂಕುಗಳಲ್ಲಿ ಒಂದಾದ ಪ್ರಗತಿಯ ಶಿಖರವನ್ನೇರುತ್ತಿರುವ ಸಿಂಡಿಕೇಟ್ ಬೇಂಕಿನವರು ಹೊಸತಾಗಿ ಕಟ್ಟಿಸಿದ ತಮ್ಮ ಮಂಗಳೂರಿನ ಕಟ್ಟಿಡದ ಉದ್ಘಾಟನಾ ಸಮಾರಂಭದವಸರದಲ್ಲಿ ಹೊರಡಿಸಿದ ಈ ಪರಿಚಯಾತ್ಮಕ ಸ್ಮಾರಕ ಸಂಚಿಕೆಯು ಸರ್ವಾಂಗ ಸುಂದರವಾಗಿ ಹೊರಬಂದಿದೆ. ಇದರಲ್ಲಿ ತೌಳವರ ಪೈಬವನ್ನು ಅನಾದಿಯಿಂದ ಇಂದಿನವರೆಗೆ ವರ್ಣಿಸುವ ಇತಿಹಾಸ, ಮಂಗಳೂರಿನ ಚರಿತ್ರೆ ಹಾಗೂ ಮಹತ್ವ ಇಂದಿನ ಮಂಗಳೂರು, ಮಂಗಳೂರಿನ ಸೊಬಗಾನಾದಿ, ಕನ್ನಡ ಜಿಲ್ಲೆಯ ಸಂಸ್ಕೃತಿ ಪರಂಪರೆ, ಮಂಗಳೂರು ವಿದ್ಯಾಕ್ಷೇತ್ರವಾದ ಬಗೆ, ಮಂಗಳೂರಿನ ಕನ್ನಡ ಪತ್ರಿಕೆಗಳ ಸಂಕ್ಷಿಪ್ತ ಇತ್ಯಾದಿ ವಿಷಯಗಳಲ್ಲಿ ಅಭ್ಯಾಸಪೂರ್ಣ ಲೇಖನಗಳನ್ನು ಅಧಿಕಾರಿಕವಾಗಿ ಬರೆಯುವ ಶಕ್ತಿವಂತ ಬರೆಹಗಾರರು ಬರೆದಿದ್ದಾರೆ. ಜೊತೆಗೆ ತೌಳವ ವೀರರಾದ ಕೋಟಿ ಚೆನ್ನಯರ ಕಥೆಯನ್ನೂ ಇಲ್ಲಿ ಕೊಡಲಾಗಿದೆ. ಮಂಗಳೂರು ನಗರದ ಉದ್ಯಮ ಮತ್ತು ವ್ಯಾಪಾರಗಳಿಗೆ ಸಂಬಂಧಿಸಿದ ಪಟ್ಟಿ ವಿವರ ಸಾಕ್ಷ್ಯಚಿತ್ರ ಲೇಖನ, ವಿವಿಧ ವ್ಯಾಪಾರಸ್ಥರ ಸೂಚಿ, ನುತ್ತಿತರ ಅಂಶಗಳನ್ನೂ ಅಲ್ಲಿ ಕಾಣಬಹುದು. ಸಿಂಡಿಕೇಟ್ ಬೇಂಕಿನ ಮಂಗಳೂರು ಶಾಖೆಯ ರಜತ ಮಹೋತ್ಸವದ ಸಂದರ್ಭದ ಕೆಲವು ವಿವರಗಳೂ ಸಚಿತ್ರವಾಗಿ ಕೊನೆಯಲ್ಲಿ ಬಂದಿವೆ. ಈ ಸ್ಮಾರಕ ಸಂಚಿಕೆಯಲ್ಲಿನ ಹೆಚ್ಚಿನ ಲೇಖನಗಳು ಸಚಿತ್ರವಾಗಿದ್ದು, ಬೇಂಕಿಗೆ ಸಂಬಂಧಿಸಿದ ಅಧಿಕಾರಿ ವರ್ಗದ ಛಾಯಾ ಚಿತ್ರಗಳೂ ಇಲ್ಲಿವೆ. ಒಟ್ಟಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ನಗರ ಮಂಗಳೂರಿನ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳ ಒಂದು ಸುಂದರ ನೈಜ ಚಿತ್ರವನ್ನು ಈ ಸಂಚಿಕೆಯು ಮಾಡಿಕೊಡುತ್ತದೆ ಸಂಚಿಕೆಯ ಆರಂಭದಿಂದ ಅಂತ್ಯದ ವರೆಗೂ ಸಂಪಾದಕರ ಹೊಣೆಯು ಯಶಸ್ವಿಯಾಗಿ ಪೂರೈಸಲ್ಪಟ್ಟಿರುವುದು ಅಭಿನಂದನೀಯ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ (ವಿ. ಪಿ ಪ್ರತ್ಯೇಕ). ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ವರು. ಪಾ ಕಂಪೆನಿ, ಮಂಗಳೂರು—1.

ಅಭಿಪ್ರಾಯ ಪರಿವರ್ತನೆಯ ಸ್ವಭಾವ

(೧ನೇ ಪುಟದಿಂದ)

ಮೇಲೆ ಕೆಲವೊಮ್ಮೆ ಸಿಟ್ಟು, ಇನ್ನು ಕೆಲವೊಮ್ಮೆ ಪ್ರಸನ್ನತೆ ಕಾಣಿಸುವುದೇಕೆ? ಗೋವಿಂದದಾಸರಿಗೆ ಮದ್ರಾಸ ಸರಕಾರದ ನಿರ್ಣಯ ಮನಮುಟ್ಟದುದೇಕೆ?—ಇತ್ಯಾದಿ ಸಮಸ್ಯೆಗಳು ಒಂದರ ಹಿಂದೊಂದರಂತೆ ಸುಳಿಯುವುದಿಲ್ಲವೆ?

ಇಂತಹ ಸಮಸ್ಯೆಗಳು ಏಳದಿರಬೇಕಾದರೆ, ಅಭಿಪ್ರಾಯ ಬದಲಾವಣೆ' ಎನ್ನುವುದಕ್ಕೆ ನಿರ್ಬಂಧವಿರಬಾರದು. ಒಮ್ಮೆ ಅಜ್ಞತೆಯಿಂದ ಮಾಡಿದ ದುರಭಿಪ್ರಾಯವನ್ನು ಮುಂದೆ ತಿದ್ದಿಕೊಳ್ಳಬಾರದೆಂದಿಲ್ಲ. ಹೊರಗೊಂದು,—ಒಳಗೊಂದು ಬಣ್ಣಗಳಿಂದ ಮೆರೆಯುವ ಇಂದಿನ ಯುಗದಲ್ಲಿ ಖಚಿತಾಭಿಪ್ರಾಯವನ್ನೇ ಇಟ್ಟುಕೊಂಡು ರಕ್ಷಿಸುವುದು ಯಾರಿಗೂ ಸಾಧ್ಯವಿಲ್ಲ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ, ಆಯಾ ಸಂದರ್ಭ, ಸನ್ನಿವೇಶ, ಪರಿಸ್ಥಿತಿ, ಪೂರ್ವಾಪರ ವಿವೇಚನೆಗಳ ಅರಿವನ್ನು ಮಾಡಿಕೊಳ್ಳಬೇಕು ಇವುಗಳು ಬದಲಾದಾಗ ಅಭಿಪ್ರಾಯವು ಬದಲಾಗುವುದು ಸ್ವಾಭಾವಿಕ.

ಒಂದು ಕಾಲದಲ್ಲಿ ಭಾರತೀಯರು ಸಮುದ್ರಪ್ರಯಾಣ ಮಾಡಬಾರದು, ಅಸ್ಪೃಶ್ಯರನ್ನು ಮುಟ್ಟಬಾರದು, ಸ್ತ್ರೀಗೆ ಸ್ವಾತಂತ್ರ್ಯವೇಬೇಡಬಾರದು, ಇಂಗ್ಲಿಷ್ ವಿದ್ಯೆ ಕಲಿಯಬಾರದು ಎಂಬ ಅಭಿಪ್ರಾಯವಿಂದ ಕೂಡಿದ್ದಿರಬಹುದು. ಆದರೆ, ಇಂದು ಅಂತಹ ಅಭಿಪ್ರಾಯವಿದೆಯೆ? ಎಲ್ಲರೂ ಸಹೋದರರೆಂದು ಹೇಳಿಕೊಂಡು, ತಮ್ಮ ಅಭಿಪ್ರಾಯವನ್ನು ಬದಲಿಸಿಲಿಲ್ಲವೆ? ಅಂಥಶ್ರದ್ಧೆಗಳನ್ನು ತೊರೆಯಿರಿ, ಅಧಿಕ ಉ' ಸಿರಿ, ಹೆಚ್ಚು ಬೆಳೆಸಿರಿ; ಸಂತಾನ ಮಿತಿಯಾಗಿರಿಸಿರಿ—ಇತ್ಯಾದಿ ಚಳವಳಗಳು ಏತಕ್ಕೆ? ಅಭಿಪ್ರಾಯ ಬದಲಾಯಿಸುವುದು ತೋಸವೆಂದಾದರೆ, ನೀನೋ ಬಾ ಕಾಲಿ ಕೈಯಲ್ಲಿ ಬೇಡಿ ತಿನ್ನಬೇಕಾದ ಪರಿಸ್ಥಿತಿ ಬರುತತ್ತೋ ಏನೋ.

ಹಿಂದಿ ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿಲ್ಲದಾಗ ರಾಜಾಜಿ ಸ್ವದೇಶೀ ಚಳವಳದ ಪುರಸ್ಕರ್ತರಾಗಿ ಹಿಂದಿಯನ್ನು ಉತ್ತೇಜಿಸಿದರು. ಆದರೆ ಇಂದು ಇಂತಹ ಉತ್ತೇಜನದ ಅವಶ್ಯಕತೆಯಿಲ್ಲ ರಾಜಾಜೀ ಯಾವ ರಾಜ ಕಾರಣದ ಕಾರ್ಯದಲ್ಲೂ ಇಂದು ದುಡಿಯುತ್ತಿಲ್ಲ. ಹಿಂದಿಯ ಅಭ್ಯಾಸವೂ ತನ್ನಂತೆ ತಾನೇ ನಡೆಯುತ್ತಿದೆ. ಹಿಂದಿ ರಾಷ್ಟ್ರ ಭಾಷೆಯಾಗುವುದೇ ಬೇಡ ಕಲಿಯುವುದೇ ಬೇಡ ಎಂದವರು ಎಂದೂ ಹೇಳಿಲ್ಲ. ಅದನ್ನು ರಾಷ್ಟ್ರ ಭಾಷೆಯಾಗಿ ಸ್ವೀಕರಿಸಲು ಸಮಯ ಪಕ್ವವಾಗಿಲ್ಲ, ಇಂಗ್ಲಿಷ್ ಭಾಷೆಯೇ ಅದ್ಯ ವರೆಗೆ, ಆ ಮೇಲೆ ಅನಂತರೊಂದಿಗೆ ಕೆಲಕಾಲ ರಾಷ್ಟ್ರ ಭಾಷೆಗಳಾಗುಳಿಯಬೇಕೆಂದವರು ಹೇಳುತ್ತಾರೆ ಈಗೀಗ ಅನರಿಗೆ ಮಾತೃಭಾಷೆತಮಿಳಿನ ಬಗ್ಗೆ ಪ್ರೇಮಬೆಳೆದಿರಬಹುದಾದರೂ, ಹಿಂದಿಯನ್ನು ಖಡ್ಡಾಯವಾಗಿ ಕಲಿಯಬೇಕೆಂಬುದನ್ನು ಮಾತ್ರ ವಿರೋಧಿಸುತ್ತಾರೆ ಅಷ್ಟೆ. ಹಿಂದಿಯನ್ನು ಎಲ್ಲರೂ ಕಲಿಯುವ ಮನೋವೃತ್ತಿ ತಾನಾಗಿ ಬೆಳೆಯಬೇಕು, ಆಗ ಹಿಂದೀ ರಾಷ್ಟ್ರಭಾಷೆಯಾಗಬೇಕು ಎಂದರೆ, ಅದು ಅಭಿಪ್ರಾಯ ವಿರೋಧವೆನ್ನಲಾಗುವುದಿಲ್ಲ ಅಂದು ಹಿಂದಿ ಕಲಿಯಲೇ ಬೇಕೆಂದವರು ಇಂದು ಕಲಿಯಲೇ ಬಾರದು ಎಂಬ ವಿರೋಧೀ ಅಭಿಪ್ರಾಯ ತಾಳಿದ್ದರೆ, ಅವರೂ ನಾಯ್ಕರಂತೆ ಹಿಂದಿ ಪುಸ್ತಕ ಸುಡುವ, ತರಗತಿಗಳ ಮನೆಗಳಿಗೆ ಬೆಂಕಿಕೊಡುವ ಬೋರ್ಡುಗಳಿಗೆ ಮಸಿಬಳಿಯುವ—ಇತ್ಯಾದಿ ಚಳವಳಿಯನ್ನು ಪ್ರೋತ್ಸಾಹಿಸದಿರುವರೆ? ಅದರೆ, ಇಂದು ಹಾಗಿದೆಯೆ? ಹಾಗಾದರೆ, ರಾಜಾಜಿಯವರ ಅಭಿಪ್ರಾಯದಲ್ಲಿ ವಿಶೇಷ ಬದಲಾವಣೆ ನಡೆದಿಲ್ಲ. ನಡೆದಿದ್ದರೂ ಅದು ಇಂದಿನ ಕಾಲವಾನ, ಜನತೆ, ಪರಿಸ್ಥಿತಿಗಳಿಗನುಸಾರವಾಗಿ, ರಾಷ್ಟ್ರ ಘಟನೆಗೆ ಚಿಕ್ಕ ತಿದ್ದುಪಡಿಯಾದಂತೆ ರಾಜಾಜೀ ಅಭಿಪ್ರಾಯಕ್ಕೆ ಒಂದು ಚಿಕ್ಕ ತಿದ್ದುಪಡಿ. ಹಾಗೆಯೇ ಈಗ ನಡೆದುದೂ ಸೇರಿ ಗೋವಿಂದದಾಸರ ಅಭಿಪ್ರಾಯಕ್ಕೆ ಅಂತಹುದೇ ಒಂದು ತಿದ್ದುಪಡಿ, ಅಷ್ಟೆ. ಇದರಿಂದ ಯಾರೂ ಕಳವಳ ಪಡುವ ಅವಶ್ಯಕತೆಯಿಲ್ಲ. ಪರಿವರ್ತನೆಯು ಸಮಾಜದ ಸ್ವಭಾವವಷ್ಟೆ? ಇದಿಲ್ಲದೆ ಗಂಟೆಗೊಂದೇ ಸ್ವರವಾದರೆ ಜೀವಿಸುವುದೂ ಕಷ್ಟ.

ಮಲೇರಿಯಾದ ನಿರ್ಮೂಲನವೇಕೆ?

(೪ನೇ ಪುಟದಿಂದ)

ಭಾರತದಲ್ಲಿ ರೋಗ ನಿರ್ಮೂಲನ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದು ಅಷ್ಟೇನು ಸುಯಾಸಕರವಲ್ಲ. ಏಕೆಂದರೆ ಈ ರೋಗದ ವಿಚಾರದಲ್ಲಿ ಹಾಗೂ ಸೊಳ್ಳೆಗಳ ವಿಚಾರದಲ್ಲಿ ಮೂಲಭೂತ ಸಂಶೋಧನೆಗಳನ್ನು ನಡೆಸಲಾಗಿದೆ. ಅಲ್ಲದೆ ಆಧುನಿಕ ನಿಯಂತ್ರಣ ವಿಧಾನಗಳನ್ನು ಉಪಯುಕ್ತ ರೀತಿಯಲ್ಲಿ ಆಚರಣೆಗೆ ತರಲು ಅಗತ್ಯವಾದ ನುರಿತ ಸಿಬ್ಬಂದಿಯ ತಾಂತ್ರಿಕ ಜ್ಞಾನವೂ ಭಾರತದಲ್ಲಿದೆ.

ಇಷ್ಟು ಹೇಳಿದ ಮಾತ್ರಕ್ಕೆ ಈ ರೋಗವನ್ನು ಮೂಲೋತ್ಪಾಟನೆ ಮಾಡಲು ಸುಲಭಸಾಧ್ಯವೆಂದು ಅರ್ಥವಲ್ಲ. ಈ ರೋಗವು ಶತಮಾನಗಳಿಂದ ಈ ದೇಶವನ್ನು ತನ್ನ ಆವಾಸಸ್ಥಾನವನ್ನಾಗಿ ಹೊಂದಿದೆ. ಅಲ್ಲದೆ ದೇಶವು ವಿಶಾಲವಾಗಿರುವುದೇ ದೊಡ್ಡ ಸಮಸ್ಯೆಯಾಗಿದೆ.

ಈ ಚಳವಳಿಯ ನಾಯಕರು ಯಾವುದೊಂದು ಸ್ಥಳವನ್ನೂ ಬಿಡದೆ ಎಚ್ಚರಿಕೆಯಿಂದ ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಬೇಕು. ಅವರು ಕೆಲವು ಸ್ಥಳಗಳನ್ನು ನಿರ್ಲಕ್ಷಿಸಿದ್ದಲ್ಲಿ, ಇಲ್ಲಿಯವರೆಗೆ ಗಳಿಸಿರುವ ಪ್ರಗತಿಯು ನಿಷ್ಪ್ರಯೋಜನವಾಗುವುದು. ಕೆಲವು ಜಾಗೆಯ ಮಲೇರಿಯಾ ಸೊಳ್ಳೆಗಳು ಕೀಟನಾಶಕ ಔಷಧಿಗಳಿಗೆ ನಿರೋಧಕ ಶಕ್ತಿಯನ್ನು ಪಡೆಯುವ ಅಪಾಯವಿರುವುದು. ಆದ್ದರಿಂದ ಈ ನಿರ್ಮೂಲನ ಕಾರ್ಯಕ್ರಮವನ್ನು ಅದಷ್ಟು ಜಾಗ್ರತೆಯಾಗಿ ಕೈಗೊಳ್ಳುವುದು ಅವಶ್ಯಕವಾಗಿದೆ.

ವೇಶ್ಯಾವೃತ್ತಿಯ ಪ್ರಾಚೀನ ಪರಂಪರೆ

(೩ನೇ ಪುಟದಿಂದ)

ವಿತ್ರತೆಯ ಕಲಂಕವೂ ದೂರವಾಗುವುದು" ಬುದ್ಧನು ಶಾಂತನಾಗಿಯೇ ಉತ್ತರಿಸಿದನು.

ಶಿಷ್ಯರು ಶಂಕೆಯಿಂದಲೇ ಮನಃ ಪ್ರಶ್ನಿಸಿದರು: "ಏನು, ವೇಶ್ಯೆಯೂ ಮನೀ ತಳಗಾಗಬಲ್ಲಳೆ?".

ಗಂಭೀರವಾದ ಉತ್ತರ ದೊರೆಯಿತು: "ಹೌದು, ಪುರುಷರ ಕಾಮವಾಸನೆಯಿಂದ ಅಭಿಶಪ್ತನಾರಿಯನ್ನು ಸರಿಯಾದ ಕರ್ಮಮಾರ್ಗಗಳಲ್ಲಿ ತೊಡಗಿಸಿದರೆ, ಅವಳ ಉದ್ಧಾರ ಮಾಡಿದಂತಾಗುವುದು."

ಯೇಸುವಿನ ಕಾಲದಲ್ಲಿ, ಆತನ ಮುಂದೆ ವ್ಯಭಿಚಾರದ ಆರೋಪವನ್ನು ಹೊರಿಸಲಾದ ಒಬ್ಬಾಕೆಯನ್ನು ತಂದು ನಿಲ್ಲಿಸಲಾಯಿತು. ಆಕೆಯ ಹಿಂದೊಂದು ದೊಡ್ಡ ಸಂತೆಯೇ ಸೇರಿದಂತಿತ್ತು. ಕಲ್ಲು ಹೊಡೆದು ಆ ವ್ಯಭಿಚಾರಿಣಿಯನ್ನು ಪೂರೈಸಿಬಿಡಬೇಕೆಂದು ಜನರು ಬಯಸಿದರು. ಆದರೂ ಯೇಸುವಿನ ಮಾತನ್ನವರು ಕೇಳತೊಡಗಿದರು.

ಆ ಸಮಯದ ವಿಧಾನದಂತೆ ಪುರುಷನ ಮೇಲೆ ವ್ಯಭಿಚಾರದ ಅಪರಾಧ ತೋರಿದರೆ, ಆತನು ಐದು ದೀನಾರಗಳನ್ನು ದಂಡರೂಪದಲ್ಲಿ ಕೊಡಬೇಕಾಗಿತ್ತು; ಆದರೆ, ಸ್ತ್ರೀಯ ಮೇಲೆ ಹೊರಿಸಲ್ಪಟ್ಟರೆ, ಆಕೆಯನ್ನು ಕಲ್ಲುಹೊಡೆದು ಕೊಲ್ಲಬೇಕಾಗಿತ್ತು; ಅಥವಾ ಆಕೆಯು ಜೀವನ ಪರಿಯಂತ ವೇಶ್ಯೆಯಾಗಿಯೇ ಇರಲು ಬಾಧ್ಯಳಾಗುತಿದ್ದಳು. ಕ್ಷಮೆಯ ವ್ಯವಸ್ಥೆಯು ಆಕೆಯ ಮಟ್ಟಿಗಿರಲಿಲ್ಲ.

ಯೇಸುವು ಯೋಚಿಸತೊಡಗಿದನು. ಜನರಗುಂಪು ಹೆಚ್ಚಾಗುತ್ತಬಂತು. ಸಮಯ ದೂಡುವುದೂ ಸಾಧ್ಯವಿರಲಿಲ್ಲ. "ಯಾರು ಎಂದಾದರೂ ಕಾಯಾ ಮನಸಾವಾಚಾ ವ್ಯಭಿಚಾರ ಮಾಡಿಲ್ಲ, ಅಂತಹನು ಆಕೆಗೆ ಮೊದಲಾಗಿ ಕಲ್ಲೆಸೆಯಲಿ" ಯೇಸುವಿನ ನಿರ್ಣಯ ಹೊರಬಂತು. ಹೀಗೆ ಹೇಳಿ ಆತನು ಕಣ್ಣು ಮುಚ್ಚಿಕೊಂಡನು.

ಅವನು ಕಣ್ಣು ತೆರೆದಾಗ ಕಲ್ಲು ಕೊಡೆಯುವವರು ಅಲ್ಲಿಂದ ಅಗಲಿದ್ದರು. ಅಲ್ಲಿದ್ದವರ ಕೈಗಳಿಂದ ಕಲ್ಲುಗಳು ನೆಲಕ್ಕುರುಳಿದ್ದುವು.

ಯೂನಾನಿನ ಮಹಾದಾರ್ಶನಿಕ ಸಂತ ಅಫಲ್ತಾನನೊಡನೆ ಯಾರೋ ಕೇಳಿದರು: "ಸಮಾಜದಲ್ಲಿ ನಾರಿಯ ಸ್ಥಾನ ಮತ್ತು ಮಹತ್ವವೇನು?"

"ಪುರುಷನಷ್ಟೇ ಆಗಿರುವುದು. ಕಡಿಮೆಯಿರುವುದಿಲ್ಲ; ಹೆಚ್ಚಿರುವುದೂ ಇಲ್ಲ ಸ್ತ್ರೀ ಮತ್ತು ಪುರುಷರಿಬ್ಬರೂ ರಥದ ಚಕ್ರಗಳಂತೆ. ಒಂದು ಕಿತ್ತುಹೋದರೆ, ಸಮಾಜದ ರಥ ನಿರ್ವಿಘ್ನವಾಗಿ ಮುಂದುವರಿಯಲಾರದು. ಸ್ತ್ರೀ ಮತ್ತು ಪುರುಷರು ಆಕಾಶದಲ್ಲಿ ಹಾರಾಡುವ ಪಕ್ಷಿಯ ಎರಡು ರೆಕ್ಕೆಗಳಂತಿದ್ದಾರೆ. ಒಂದು ರೆಕ್ಕೆಯು ಎಳೆಯದಾದರೆ, ಅಥವಾ ಅಶಕ್ತವಾದರೆ, ಪಕ್ಷಿಯು ಆಕಾಶದಲ್ಲಿ ಸಂಚರಿಸುವುದೇ?" ದಾರ್ಶನಿಕರ ಉತ್ತರ ಬಂದಿತು.

ಪಂಡಿತ ನೆಹರೂ ಅಲ್ಲಹಾಬಾದಿನ ನಗರ ಸಭೆಯ ಅಧ್ಯಕ್ಷರಾಗಿದ್ದಾಗ ನುಡಿದಿದ್ದರು: "ವೇಶ್ಯಾವೃತ್ತಿಗೆ ಆರ್ಥಿಕ ಮತ್ತು ಮಾನವೀಯ ದುರ್ಬಲತೆಯೆಂಬ ಆರ್ಥಿಕ ದೃಷ್ಟಿಯಿಂದ ತಮ್ಮ ಪಾದಗಳ ಮೇಲೆ ತಾವು ನಿಲ್ಲುವಂತೆ ಮಾಡಿದರೆ, ಯಾವುದೇ ಶಾಸನಸಭೆಯಮಗಳ ಸಹಾಯಕ್ಕಿಂತ ಅಧಿಕ ಸಫಲತಾ ಪೂರ್ವಕವಾಗಿ ಇದನ್ನು ನಿರ್ಮೂಲಿಸಿಬಿಡಲು ಸಹಾಯ ಮಾಡಿದಂತಾಗುವುದು ಮಾನವೀಯ ದುರ್ಬಲತೆಯನ್ನು ದೂರವಾಡುವುದು ಬಹಳ ಕಠಿನ; ಆದರೂ ಸ್ತ್ರೀ ಪುರುಷರನ್ನು ಸಮಾನದೃಷ್ಟಿಯಿಂದ ನೋಡುವುದು ಸಮಸ್ಯೆಯನ್ನು ಬಗೆಹರಿಸಲು ನೆರವಾಗುವುದು. ನಮ್ಮ ನಡುವೆ ವೇಶ್ಯೆಯರನ್ನು ಇಟ್ಟುಕೊಂಡರೆ ನಮಗೆ ಅಪಕೀರ್ತಿ ಬರುವುದೆಂದು ಹೆದರುತ್ತೇವೆ. ಆದರೆ, ವೇಶ್ಯೆಯರಿಗೆ ತಮ್ಮ ಜೀವನದ ಉದ್ಯೋಗವನ್ನು ಏಕಾಕಿಯಾಗಿ ಗೈಯುವುದು ಸಾಧ್ಯವಾಗುವುದಿಲ್ಲ. ವೇಶ್ಯಾಗಮನದ ಅವರಾಧದ ಒಂದು ಪಕ್ಷ ಅವರು. ಎರಡನೆಯ ಪಕ್ಷದ ಕೆಟ್ಟ ಜನರು ಎಲ್ಲಿಯೂ ಕೇಳಿ ಬರುತ್ತಿಲ್ಲ. ಅಸಹಾಯ ಸ್ತ್ರೀಯರನ್ನು ಕೆಡಿಸುವ ಪುರುಷರೇ ದ್ವಿತೀಯಪಕ್ಷದವರು. ನಾವು ವೇಶ್ಯಾವೃತ್ತಿಯನ್ನು ಮುಕ್ತಾಯಗೊಳಿಸಲೆಳಸುವುದಾದರೆ, ವೇಶ್ಯೆಯರ ಮೇಲೆ ಹೊರಿಸುವಷ್ಟೇ ದೋಷವನ್ನು ವೇಶ್ಯಾಗಾಮಿ ಪುರುಷರ ಮೇಲೂ ಹೇರಬೇಕು."

ಭಾರತೀಯ ರಾಜ್ಯಗಳಲ್ಲಿ ಹುಡುಗಿರ ಮೇಲೆ ಅನೈತಿಕ ವ್ಯಾಪಾರವನ್ನು ತಡೆಯುವುದಕ್ಕಾಗಿ ಬೇರೆ ಬೇರೆ ಕಾಯದೆಗಳಿರುತ್ತವೆ. ೧೯೩೪ರಲ್ಲಿ ಬೊಂಬಾಯಿ ದೇವದಾಸಿ ಕಾಯದೆ ಮತ್ತು ೪೭ರ ಮದ್ರಾಸ ದೇವದಾಸಿ ಕಾಯದೆಗಳ ಮೂಲಕ ಹುಡುಗಿಯರನ್ನು ದೇವಾರ್ಪಣ ಮಾಡಿ ದೇವದಾಸಿಯರನ್ನಾಗಿ ಮಾಡುವ ಪದ್ಧತಿಯನ್ನು ತಡೆಹಿಡಿಯಲಾಯಿತು. ೧೯೫೫ರಲ್ಲಿ ಲೋಕಸಭೆಯಲ್ಲಿಯೂ ಎರಡು ಮಹತ್ವಪೂರ್ಣ ಕಾಯದೆಗಳು ಸ್ವೀಕರಿಸಲ್ಪಟ್ಟವು.

ಸಂಯುಕ್ತ ರಾಷ್ಟ್ರದ ಮಾನವ ಅಧಿಕಾರ ಆಯೋಗವು ೧೯೫೦ರ ಮಾರ್ಚಿಯಲ್ಲಿ ವೇಶ್ಯಾವೃತ್ತಿಯು ಕೊನೆಗೊಳ್ಳಬೇಕೆಂದು ಘೋಷಿಸಿತು. ಭಾರತವೂ ಈ ಘೋಷಣೆಯನ್ನು ಆಗ ಸಮರ್ಥಿಸಿತು. ಆಜೆಂಟೀನ, ಇಸ್ರಾಯೆಲ್, ಮೆಕ್ಸಿಕೋ, ನಾರ್ವೇ, ಪೋಲೇಂಡ್, ದಕ್ಷಿಣ ಆಫ್ರಿಕಾ, ರಶ್ಯ, ಯುಗೊಸ್ಲಾವಿಯಾ ಮತ್ತು ಜಪಾನುಗಳೂ ತಮ್ಮ ಅನುಮೋದನೆಯನ್ನಿತ್ತುವು.

ಯೋಜನಾ ಆಯೋಗದ ಉದ್ದೇಶದಂತೆ ಕೇಂದ್ರೀಯ ಸಮಾಜ ಕಲ್ಯಾಣ ಮಂಡಳವು ಭಾರತದಲ್ಲಿ ವೇಶ್ಯೆಗಳ ಕೆಲಸ ಮತ್ತು ಸ್ಥಿತಿಗಳ ಪರಿಶೀಲನೆಗಾಗಿ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಸಿಂಗಾಪುರದಂತೆ ಕೆಲವು ರಾಜ್ಯಗಳಲ್ಲಿ ವೇಶ್ಯಾಸ್ತ್ರೀಯರ ಭದ್ರತೆಗೆ ಮತ್ತು ಆರೈಕೆಗಾಗಿ ಕೇಂದ್ರಗಳು ತೆರೆಯಲಾಗುವುವು. ಇದರ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಪಡಿಸುವುವು. ಕಳೆದ ಕೆಲ ವರ್ಷಗಳಿಂದ ಈ ಕೇಂದ್ರಗಳನ್ನು ನಡೆಯಿಸಲು ಅವಶ್ಯಕ ಶಿಕ್ಷಣವನ್ನೂ ಕೊಡಲಾಗುತ್ತಿದೆ.

ಮೊನ್ನೆ ಮೇ ಮೊದಲನೆ ತಾರೀಕಿನಂದು ವೇಶ್ಯಾ ಪ್ರತಿ ಬಂಧಕದ ಆದೇಶವನ್ನು ಕೊಡಲಾಯಿತು. ಆದರೆ, ಇಂದಿಗೂ ಹೆಚ್ಚಿನ ಹೆಂಗಸರು ಜಡಗಿದ್ದು ಈ ಉದ್ಯೋಗವನ್ನು ಸ್ವೀಕರಿಸುತ್ತ ಇದ್ದಾರೆ. ಕೆಲವರು ತಮ್ಮ ನಾಮ ಫಲಕವನ್ನು ಬದಲಾಯಿಸಿದರು; ಇನ್ನು ಕೆಲವರು ತಮ್ಮನ್ನು 'ಗಾಯಿಕೆ ಮತ್ತು ನರ್ತಕಿ'ಯರೆಂದು ಕರೆದುಕೊಳ್ಳುತ್ತಾರೆ. ಹೆಚ್ಚಿನ ವೇಶ್ಯೆಯರು ಶರಣಾರ್ಥಿಗಳ ಮನೆಗಳಲ್ಲಿ ವಾಸಿಸ ಕೊಡಗಿದ್ದಾರೆ ಅವರು ನಾರೀಯ ಜೀವನವನ್ನು ಕೈಗೊಳ್ಳಲು ಕಾರಣವಾದ ಆರ್ಥಿಕ ಅಭಾವವೆ ಕುರಿತು ಈ ಕಾಯದೆ ಏನು ಪರಿವರ್ತನೆ ಮಾಡಿದೆ ಎಂಬ ಪ್ರಶ್ನೆ ಯೇಳುತ್ತದೆ. ಸಮಾಜದ ಈ ಶೋಷಿತ, ದಲಿತ, ಪೀಡಿತ, ಸತಿತ ಮತ್ತು ತಿರಸ್ಕೃತ ನಾರಿಯರ ಜೀವನದಲ್ಲಿ ಅವರು ಬೇರೆ ಉದ್ಯೋಗವನ್ನು ಕೈಗೊಳ್ಳುವಂತೆ ಮಾಡುವ ಯಾವ ಕ್ರಾಂತಿಯು ಕಾಣಿಸಿಕೊಂಡಿದೆ? ಸಮಾಜದ ವಿಚಾರಧಾರೆಯಲ್ಲಿ ಪುರುಷರ ಸೈತಿಕಸ್ತರದಲ್ಲಿ ರಾತಾರಾತ್ರಿ ಯೇನಾದರೂ ಪರಿವರ್ತನೆಯಾಗಿರುವುದೆ? ಚೀನ ದೇಶದಲ್ಲಿ ವೇಶ್ಯಾವೃತ್ತಿಯನ್ನು ಉನ್ಮೂಲನಗೈವಾಗ ಅಲ್ಲಿನ ಆ ಸ್ತ್ರೀಯರಿಗೆ ಜೀವನೋಪಾಯವನ್ನು ಕಲ್ಪಿಸಲಾಯಿತು. ಇಟಲಿ ದೇಶದಲ್ಲಿ ಕಾಯದೆದ್ವಾರಾ ವೇಶ್ಯಾವೃತ್ತಿಯನ್ನು ತೆಗೆದಾಗ ಅಲ್ಲಿನ ಸಂಸದ್ಸದಸ್ಯನೊಬ್ಬ ಹೇಳಿದ್ದನಂತೆ: "ನಾವು ವೇಶ್ಯಾ ವೃತ್ತಿಯ ಸ್ನೇನೋ ನಿರ್ಮೂಲ ಮಾಡಿದೆವು. ಇನ್ನು ನಾವು ರಸ್ತೆ ಮತ್ತು ಓಣಿಗಳನ್ನು ಅಗಲ ಮಾಡಬೇಕಾಗಿದೆ" ಎಂದು. ಈ ಮಾತುಗಳಿಂದ ಸವ ಸ್ಯೆಯ ಜಟಿಲತೆ, ಗಂಭೀರತೆ ಮತ್ತು ಗುರುತನ ರೂಪತೆಯು ಎದ್ದು ಕಾಣುತ್ತೆದೆ. ಆರ್ಥಿಕ ದೃಷ್ಟಿಯಿಂದ ಹಿಂದುಳಿದಿರುವ ಭಾರತದಲ್ಲಿ ಈ ವೇಶ್ಯೆಯರು ಇಂಗ್ಲೆಂಡಿನ "ಸೊಸಾಯಿಟಿ ಗರ್ಲ್" ಮತ್ತು ಅಮೆರಿಕೆಯ "ಕಾಲ್ ಗರ್ಲ್" ಆಗಿದ್ದುಕೊಂಡು ಜೀವಿಸುವುದಿಲ್ಲ ಎಂಬುವುದಕ್ಕೆ ಪ್ರಮಾಣವೇನು? ಹಾಗಾದರೆ, ನಾವು ಈ ಕಾಯದೆಯಿಂದ ಸಾಧಿಸಿದ್ದಾದರೂ ಏನು?

(ಪ್ರೇಮಜಿಂದ ಭಾರದ್ವಾಜರ ಲೇಖನದ ಪೂರ್ವದ ಆಧಾರದಿಂದ)

ಅಮೆರಿಕೆಯ ರಕ್ಷಣಾಸಿಬಾಗದ ಮುಂದೆ ನಡೆದ ಸಂಕೀರ್ತನಾಯೋಜನೆಗಳ ಡೈರೆಕ್ಟರರಾಗಿ ನೇಮಿಸಲ್ಪಟ್ಟಿರುವ ಶ್ರೀ ರೋಯ್ ಜೋನ್ಸ್‌ರವರು. ಬಾಹ್ಯ ಅಣು ಸ್ಫೋಟನವು ಈ ವಿಭಾಗದ ಕಕ್ಷೆಯಲ್ಲಿ ಬರುವುದು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O P. 16/58.

ಅರ್ಜಿದಾರರು—

1 ಲಿಲಿ ಡೇಸ್, 2 ರೆಸಿ ಡೇಸ್, 3 ಪ್ರಸಿಲಾ ಡೇಸ್, 4 ಜುಲಿಯಾನಾ ಡೇಸ್, 5 ಮೇರಿ ಡೇಸ್, 6 ಜೇಮ್ಸ್ ಡೇಸ್, 7 ಹೆನ್ರಿ ಡೇಸ್, 8 ಮಿಲ್ಡಾ ಡೇಸ್, 9 ಫ್ಲಿಫೋರ್ಡ್ ಡೇಸ್, 10 ಸಿಸಿಲಿಯಾ ಡೇಸ್.

ಸರ್ವ ಜನರಿಗೆ ಈ ಮೂಲಕ ತಿಳಿಸುವದೇನೆಂದರೆ,

10ಂದ 9ನೆ ಪ್ರತಿವಾದಿ ಅರ್ಜಿದಾರರ ತಂದೆ ವ, 10ನೇ ಅರ್ಜಿದಾರಳ ಗಂಡ ಪ್ರಾನ್ಸಿಸ್ ಡೇಸರು ತಾರೀಕು 11—8—1951ರಲ್ಲಿ ಮೃತ ಪಟ್ಟಿದ್ದರಿಂದ ಅವರಿಗೆ ಬರತಕ್ಕ ಹೊಗಿನ ಸಾಲವನ್ನು ವಸೂಲುಮಾಡುವರಿ ಅವರ ಮಾಡಿಸುವಾರರಾದ ಅರ್ಜಿದಾರರು ಹಕ್ಕುದಾರರಾಗಿರುವದರಿಂದ ಅರ್ಜಿಯಲ್ಲಿ ಕಾಣಿಸಿದ ಸಾಲಗಳನ್ನು ವಸೂಲು ಮಾಡುವರೆ ನಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಅರ್ಜಿ ದಾಕಲುಮಾಡಿರುತ್ತಾರೆ. ಸದ್ರಿ ಅರ್ಜಿಯು ತಾ. 25—7—1958ಕ್ಕೆ ತನ್ನಿಗೆ ಇಟ್ಟಿರುವದ್ರಿಂದ ಅ ಕಾರಿತು ಯಾರವ್ವಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರು ಆಗಿ ಜ್ಞಾಪಿಸಿರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

M. Ananthaya
Advocate for Petitioners

ತಾ. 25—6—58. ಮೊಕ್ಕಾಂ ಕುಂದಾಪುರ

'ನವಯುಗ' ವಾರಪತ್ರಿಕೆ
ಉ ಡು ಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0

ಮರಳಿ ಮನೆಗೆ ಬಂದಾಗ. .

(೨ನೇ ಪುಟದಿಂದ)

ಒಂದು ಹರಕಿನಲ್ಲಿ ಕಣ್ಣಿಟ್ಟು ನಾಗ ಒಳನೋಡಿದ....

ರಂಗಿಯ ದುಷ್ಕೃತ್ಯವನ್ನು ಬಯಲಿಗೆಳೆಯಲೆಂದು ಮಿಂಚು ಮಿಂಚಿತು—

ಆ ಮಿಂಚಿನ ಬೆಳಕಿನಲ್ಲಿ ನಾಗ ನೋಡಿದ....

ಏನನ್ನ....??? ...

ಒಂದೇ ಚಾಪೆಯ ಮೇಲೆ ಮಲಗಿದ್ದ ರಂಗಿ ಮತ್ತು ಒಡೆಯರನ್ನು! ತಾನು ನಂಬದ ಕಠೋರ ಸತ್ಯವನ್ನು!! ತನ್ನಣ್ಣನಿಗೆ ರಂಗಿ ಎಸಗುತ್ತಿದ್ದ ಮಹಾದ್ರೋಹವನ್ನು!!!

ಉಗುಳು ನುಂಗಿಕೊಂಡು ನಾಗ ಹಿಂದೆ ಸರಿದ...

"ಯಾರದು...ಜೀವ ಹೋದ್ಮೆ ಒಂದು ರೋಮ ಹೋದಂಗೆ...ಹೆಣ ಮಲಗ್ಸಿ ಬಿಡುವ..." ಎಂದು ಕ್ಷೀಣ ಸ್ವರದಲ್ಲಿ ಹೇಳಿದ ಜೆನ್ನ....

"ಸುಮ್ಮನೆ ಬಾ....ಎಲ್ಲಾ ಕಡೆಗೆ ಹೇಳ್ತೆ..." ಎಂದ ನಾಗ ಮುಂದೆ ನಡೆದ... ಜೆನ್ನ ಅವನನ್ನು ಮೂಕನಾಗಿ ಹಿಂಬಾಲಿಸಿದ. .

ಜೆನ್ನನ ಗುಡಿಸಲಿಗೆ ಬಂದ ನಾಗ ಸುಮ್ಮನೆ ಮಲಗಿಕೊಂಡ. .

"ಯಾರು? ಏನು?" ಎಂದು ಜೆನ್ನನೂ ಕೇಳಲಿಲ್ಲ...

"ಒಂದೇ ಚಾಪೆಯಲ್ಲಿ, ಒಟ್ಟಿಗೆ ಪವಡಿಸಿದ್ದ ರಂಗಿ ಮತ್ತು ಒಡೆಯರು"....ನಿದ್ರಿಸಲೆಂದು ಮಲಗಿದ್ದ ನಾಗನ ಮನೋಭಿತ್ತಿಯಲ್ಲಿ ಅದೇ ಕರಾಳ ಚಿತ್ರ ಸುಳಿಯುತಿತ್ತು...

ರಂಗಿ...

ಅವಳು ಕೂಸ....

ಒಡೆಯರು ತನಗಿಂತ ಮೇಲು ಜಾತಿಯವರು...

ಅವರು ತನ್ನನ್ನು ಮುಟ್ಟುವುದಿಲ್ಲ...

ಆದರೆ ತನ್ನ ಜಾತಿಯ ಹೆಣ್ಣಿನೊಡನೆ ಸುಖಿಸುವರು...ಸಮಾಜ ಇದಕ್ಕೇನೆಂದು ನಿರ್ಧರಿಸಿಲ್ಲ....

"ಮರೆ....ಅದನ್ನು ಮರೆ...." ಶಾಂತಿಯನ್ನು ಬಯಸುತಿದ್ದ ನಾಗನ ಹೃದಯ ಕೂಗಿತು....

"ಛೇ.... ಈ ದ್ರೋಹವನ್ನು ಎಂತು ಮರೆಯಲಿ..." ಅಶಾಂತ ಕ್ಷೇತ್ರದಲ್ಲಿ ತಾಂಡವಮಾಡುತಿದ್ದ ಮನ ಹೇಳಿತು...

"ರಂಗಿ ವ್ಯಭಿಚಾರಿಣಿಯಲ್ಲವೇ...."

ತನ್ನಣ್ಣನ ಹೆಂಡತಿ ವ್ಯಭಿಚಾರಿಣಿ.... ಹಳ್ಳಿಯ ಜನ ಹೇಳುವುದಾದರೆ ಸಾಳೆ....

ಅವಳದೇನು ತಪ್ಪು... ಅಣ್ಣನೇ ತಪ್ಪು ಮಾಡಿದ...ಆಕೆಯನ್ನೂ ಗಟ್ಟಕ್ಕೆ ಕರೆದುಕೊಂಡು ಹೋಗಬೇಕಾಗಿತ್ತು.... ಮೈಯ ಕರೆಯನ್ನು ಆಕೆ ಮೀರಲಾರದಾದಳು....

ಯೋಚನಾಸಾಗರದಲ್ಲಿ ಮನಮುಳುಗಿತು....ಹೈದ ಮ 'ಅಯ್ಯೋ" ಎಂದಿತು.

೦೦ ೦೦

ನಿದ್ರೆ ಕಳೆಯಿತು...ಮಳೆಗಾಲದ ಇರುಳುಗಳು ಕಳೆದು ವೈಶಾಖದ ಬೆಳಗು ಕಾಲ ಬಾಗಿಲದಲ್ಲಿ ಮೂಡಿತು....ಆದರೆ ನಾಗನ ಮನದಾಗಸದ ಕತ್ತಲು ಕಳೆಯಲೇ ಇಲ್ಲ...ರಂಗಿಗೂ ಅರಿವಾಗಿತ್ತು—"ತನ್ನ ಗುಟ್ಟು ರಟ್ಟಾಗಿದೆಯೆಂದು...."

ಅದರೂ ಜೀವದಾಸೆಯಿಂದ ಭಂಡ ಬಾಳನ್ನು ಸಾಗಿಸುತಿದ್ದಳು....

ದುಃಖದ ಆಲೆಯಲ್ಲಿ ಹಿಂಡಲ್ಪಟ್ಟ ಕಸವಾಗಿದ್ದನಾಗ....

"ತಾನೂ ಮದುವೆಯಾಗಬೇಕು... ಹತ್ತು ಜನರಂತೆ ಸಂಸಾರ ವಂದಿಗನಾಗಿ ಬಾಳಬೇಕೆಂ"ದುಕೊಂಡು ನಾಗ ಆಶಿಸಿದ್ದ....

ಆದರೆ ಆತನ ಆಶಾ ಸೌಧಕ್ಕೆ ತನ್ನ ದುಷ್ಕೃತ್ಯದ ಬೆಂಕಿ ಹೆಚ್ಚಿದ್ದಳು-ರಂಗಿ...

೦೦ ೦೦

ಅದೊಂದು ದಿನ....ಸೂರ್ಯ ಪ್ರಖರನಾಗಿಯೇ ಇದ್ದ....

ನಾಗ ನಿಧಾನವಾಗಿ ಎದ್ದ....ಹೊರಗೆ ಹೋಗಿ ಮೊಗ ತೊಳೆದುಕೊಂಡು ಬಂದು ಬಟ್ಟಲಿಟ್ಟು ಕುಳಿತುಕೊಂಡ. ರಾತ್ರಿ ಉಳಿದಿದ್ದ ಗಂಜಿಯನ್ನು ಸುರಿದುಕೊಂಡು ಗಂಜಿ ಊಟದ ಶಾಸ್ತ್ರ ಮುಗಿಸಿದ. ಅಷ್ಟರಲ್ಲಿ ಜೆನ್ನನೂ ಇವನನ್ನರಸಿ ಬಾಗಿಲ ಸಮೀಪ ಬಂದು ನಿಂತ.

"ರಂಗೀ....ರಂಗೀ...." ಕೆಲಸಕ್ಕೆ ಹೊರಟಿದ್ದನಾಗ, ಇನ್ನೂ ಮಲಗಿಕೊಂಡಿದ್ದ ರಂಗಿಯನ್ನು ಕೂಗಿದ....

ಆದರೆ ರಂಗಿ ಏಳಲಿಲ್ಲ....

ರಂಗಿ ಮಲಗಿದ್ದಲ್ಲಿಗೆ ಧಾವಿಸಿದನಾಗ..

ಆತ ನೋಡಿದ್ದೇನು....?...

ಒಂದೆಡೆ ರಂಗಿ ಬರಗಿದ್ದಳು...ಅವಳ ಪಕ್ಕದಲ್ಲೊಂದು ಮಾಸದ ಮುದ್ದೆ.... ಪೆಸ್ಸುಗಟ್ಟಿದ್ದ ಒಂದು ಕೊಡ ನೆತ್ತರು....

ನಾಗನಿಗೆ ಅದೇನೆಂದು ತಿಳಿಯಿತು....

ತನ್ನ ಗರ್ಭವನ್ನು ತೆಗೆದುಕೊಳ್ಳಲು, ತನ್ನ ದುಷ್ಕೃತ್ಯವನ್ನು ಮುಚ್ಚಿಕೊಳ್ಳಲು, ರಂಗಿ ಏನೋ ಔಷಧಿ ತೆಗೆದುಕೊಂಡಿದ್ದ ಳು....ಆದರೆ ತೆಗೆದುಕೊಂಡ ಔಷಧಿ ತುಸು ಹೆಚ್ಚಾಗಿ ಅವಳ ಪ್ರಾಣವನ್ನೇ ತೆಗೆದುಕೊಂಡಿತ್ತು...

"ರಂಗೀ...." ನಡುಗುವ ದನಿಯಲ್ಲಿ ನಾಗ ಕೂಗಿದ...ಆದರೆ ಆತನಿಗೆ ಉತ್ತರ ವಿತ್ತುದು ಆ ಘೋರ ದೃಶ್ಯಮಾತ್ರ....

ನಾಗ ಜೆನ್ನನ ಮನೆಗೋಡಿದ—ಮುಂದಿನ ಕೆಲಸ ನೆರವೇರಿಸಲು....

ನಾಗ—ಜೆನ್ನರು ಸೇರಿ ರಂಗಿಯ ಅಂತಿಮಸಂಸ್ಕಾರ ನೆರವೇರಿಸಿದರು.

೦೦ ೦೦

ತನ್ನ ಹರಕು ಪೆಟ್ಟಿಗೆಯನ್ನು ನಾಗ ಅದೇಕೋ ಅಡಿ ಮೇಲು ಮಾಡಿದ ಒಂದು ದಿನ—ನೊಂದ ಮನದಲ್ಲಿ.

ಆತನಿಗೆ ಸಿಕ್ಕಿದ್ದು—ಸುಮಾರು ಎರಡು ಪವನಿನ ಒಂದೆಳೆ ಚಿನ್ನದ ಸರ....ತನ್ನಂತಹರ ಮನೆಯಲ್ಲಿ ಚಿನ್ನದ ಸರ!

"ಅದೇನು? ಎಲ್ಲಿಂದ ಬಂದುದು? ಎಂಬುದೆಲ್ಲಾ ನಾಗನಿಗೆ ತಕ್ಷಣ ತಿಳಿಯಿತು. ಹೆಪ್ಪು ಗಟ್ಟಿದ ಹಳೆಯ ನೆನಪುಗಳು ಹುನಃ ಹೀರಾಗಿ ಕಣ್ಣುಗಳ ಮೂಲಕ ಕರೆದು ಬಂದುವು....

"ಛೇ! ಈ ಒಂದು ಸರಕ್ಕೆ ತನ್ನ ಜೀವ ಕೊಟ್ಟಳೇ ರಂಗಿ?" ಎಂದು ಕೊಂಡನಾಗ

ಆತನಿಗೆ ಆ ಸರವಾಗಲಿ, ಆ ನೆನಪಾಗಲಿ ಬೇಕಾಗಿರಲಿಲ್ಲ...

ಸರ ತೆಗೆದುಕೊಂಡು ಒಡೆಯರ ಮನೆಗೆ ಹೋದ....

ರಂಗಿಯ ಸಾವನ್ನು ರಾಯರು ಕೇಳಿದ್ದರು....ನಾಗನ ಆಗಮನ ಅವರಿಗೆ ತುಸು ಹೆಸರಿಕೆಯನ್ನೂ ಹುಟ್ಟಿಸಿತು. ..

"ಒಡೆಯರೇ..." ನಾಗ ಕೂಗಿದ. .

"ಏನು...ನಾಗನ ಸುಳಿವೇ ಇಲ್ಲ...." ಎಂದರು ರಾಯರು.

"ನಿಮ್ಮ ಮಗು ತೀರಿ ಹೋಯಿತು ಒಡೆಯರೇ....ಅದು ಬದುಕಿದ್ದರೆ ಈ ಸರ ಬೇಕಿತ್ತು....ಇನ್ನು ನಂಗೆ ಬೇಡ....ನೀವು ಮೇಲ್ಜಾತಿಯವರು....ಹಿಂಗೆ ಮಾಡೂಕೆ ಆಗ...ಅದ್ರೆ ನಾವು ಬಡವರು.....ನೀವು ಸಂಭಾವಿತರು....ತಕಣ್ಣಿ ಈ ಸರ....." ಇನ್ನಾರಿಗಾದ್ರೂ ಕೊಡೋಕೆ ಆತ್ತು... ಎಂದು ಆ ಸರವನ್ನು ರಾಯರ ಬಳಿಯಿಟ್ಟು ನಾಗ ತನ್ನ ಗುಡಿಸಲಿಗೆ ನಡೆದ...

ನಾಗ ಗುಡಿಸಲಿಗೆ ಬಂದಾಗ ಅಲ್ಲಾರೋ ಅಪರಿಚಿತನೊಬ್ಬ ಕುಳಿತಿದ್ದ....ಅವನೊಡನೆ ಜೆನ್ನ...

ನಾಗ ದಿಟ್ಟಿಸಿ ನೋಡಿದ...

ಛೇ! ಅವನು ಅಪರಿಚಿತನೇ!....

ಅಲ್ಲ...ಅವನು ನಾಗನ ಅಣ್ಣ ತಿಮ್ಮ... ಅವನೇ, ರಂಗಿಯ ಗಂಡ...

"ಸಾಲ ತೀರಿತೇನಣ್ಣ" ನಡುಗುವ ದನಿಯಲ್ಲಿ ನಾಗ ಕೇಳಿದ...

ತಿಮ್ಮ ಉತ್ತರಿಸಲಿಲ್ಲ...

ಹೌದು...ಅಲ್ಲಿನ ಸಾಲ ತೀರಿತ್ತು.... ಆದರೆ ಇಲ್ಲಿನ ಶೋಕದ ಶೂಲ ಅನನ ಹೃದಯಕ್ಕೆ ನಾಟಿತ್ತು.



ಪ್ರಟ್ನಾನ ಸಿಟಿ ಎರ್‌ವೇಸ್ ಎಂಬ ಸಂಸ್ಥೆಯ ವಾಹನವೊಂದು ಸಾಮಾನು ಸರಂಜಾಮುಗಳಿಂದ ತುಂಬಿಸಲ್ಪಟ್ಟಿದೆ. ಸಾಯು ಮಾರ್ಗದಲ್ಲಿ ಸಾಮಾನು ಸಾಗಾಟ ಮಾಡುವುದು ಆಗ್ಗ ಮತ್ತು ಸಮಯದುಳಿತಾಯಗಳ ದೃಷ್ಟಿಯಿಂದ ಲಾಭದಾಯಕವಾದರೂ, ಈ ನೋಟಾರುಗಳಲ್ಲಿಯೂ ಸಾಗಾಟ ನಡೆಯುತ್ತಿರುವುದು ಕಡಿಮೆಯಾಗಿಲ್ಲ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%

ಕರೆಂಟ್ ಎಕೌಂಟು ½%

The Moolky Bank, Ltd.

ಗುಟ್ಟಾಗಿ ಸರಳ, ಸಂಕೋಚದಿಂದ ಕೂಡಿದ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಬ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಸಂತಾನ ಸಿಂದೂರ (ಸ್ತ್ರೀಯರಿಗೆ: ಬ್ಯಾಕೆಟ್)

ಮದನ ವಿಲಾಸ (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಕೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಆತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಪಂ|| A. R. ಅಯ್ಯರ್ ಪುತ್ರರು, ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ಔಷಧಿಯ ಮಹತ್ವ ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿದ, ಸಲಹೆಯೊಡನೆ ಶ್ರೀಮಣಿ ಕ್ಯಾಟಲಾಗ್ ಮತ್ತು ಹತ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನೆ. ಯು.)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I.)

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬದವರ ನಾಕ,ನರಕ	3=00
ಪಂಚಮಿತು	2=50
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=50
ಮೈಲುಕಲ್ಲಿನೊಡನೆ ಮಾತುಕತೆಗಳು	1=50
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಜ್ಞಾತ ಗಾಳಿಗಳ ಬಗ್ಗೆ ಸ್ವಾನುಭವ ೧—

ದೆವ್ವ, ಭೂತ ಮತ್ತು ಪಿಶಾಚಿ!

● "ನವಗಿರಿನಂದ"

ದೆವ್ವ, ಭೂತ

ದೆವ್ವ, ಭೂತ, ಪಿಶಾಚಿ, ಯಕ್ಷಿಣಿ, ಮೋಹಿನಿ, ಬ್ರಹ್ಮರಾಕ್ಷಸ ಮೊದಲಾದ ಹೆಸರುಗಳನ್ನು ಕೇಳದವರಿಲ್ಲ; ಈ ಹೆಸರುಗಳನ್ನು ಹೇಳಿಕೊಳ್ಳಲಿಕ್ಕೂ ಹಲವರು ಹೆದರುತ್ತಾರೆ. ಇವುಗಳಲ್ಲಿ ಕೆಲವುಗಳನ್ನು ಕಂಡವರೂ ಇದ್ದಾರೆ. ಕಂಡು ಹೆದರಿ ಹಾಸಿಗೆ ಹಿಡಿದವರೂ ಇದ್ದಾರೆ. ಸತ್ತವರೂ ಇದ್ದಾರೆ. ಇಂಥವರಲ್ಲಿ ನಾನೂ ಒಬ್ಬ. ಹೌದು, ನಾನೂ ಕಂಡಿದ್ದೇನೆ. ಸಾಯದೆ ಬದುಕಿ ಅವುಗಳ ವಿಷಯವಾಗಿಯೇ ಬರೆಯಲಿಕ್ಕೂ ಪ್ರಾರಂಭಿಸಿದ್ದೇನೆ.

ಬಹು ಕಾಲದ ಹಿಂದಿನ ಮಾತು; ಆಗ ನಾನು ೯ ವರ್ಷದ ಹುಡುಗ. ಮಾಹೆಯಲ್ಲಿದ್ದ ಕುಂಬಳೆಯರಸುಗಳ ಮನೆಯಲ್ಲಿ ಆಗ ನಾನಿದ್ದೆ. ಒಂದು ದಿನ ಬೆಳಗ್ಗೆ ನಾನು ಮಾವನ ಯೆಲೆಯಿಂದ ಹಲ್ಲುಜ್ಜುತ್ತಾ ತೋಟದಲ್ಲಿ ನಿಂತಿದ್ದೆ. ಆ ಸಮಯದಲ್ಲಿ ಬ್ರಹ್ಮಾಂಡದಂತಹ ಎರಡು ಕಾಲುಗಳು ನನ್ನನ್ನು ದಾಟಿ ಹೋದುದು ಕಂಡುಬಂತು. ನಾನು ಹೆದರಿ ನೋಡಿದಾಗ ಆಕಾಶದಲ್ಲಿ ಬರೀ ಎರಡು ಕಾಲುಗಳೇ ಕಂಡು ಬಂದುವಲ್ಲದೆ ದೇಹವು ಗೋಚರಿಸಲಿಲ್ಲ. ದಾಟಿದ ಕೂಡಲೇ ಆ ಕಾಲುಗಳು ಮಾಯವಾಗಿ ಹೋದುವು. ನಾನು ಮರಗಟ್ಟಿದವನ ಹಾಗೆ ನಿಂತಿದ್ದೆ. ಮತ್ತೆ ಯಾರೋ ಕರೆದರು. ನಾನು ಹೇಳಿದ ಸಂಗತಿ ಕೇಳಿ ಅವರೆಲ್ಲಾ 'ಏನೋ ಭ್ರಾಂತಿ' ಎಂದು ನಕ್ಕರು.

ಅನಂತರ ಎಲ್ಲರಿಗೂ ಒಂದು ಹೊಸ ಸುದ್ದಿ ಕೇಳಿಬಂತು. ಅಲ್ಲಿಗೆ ಸಮೀಪದಲ್ಲಿ ಸಮುದ್ರದಲ್ಲಿ ಜಾಟೀ ಕುರ್ಚಿಪಳ್ಳನೆಂಬ ಭೂಮುಖವಿದೆ. ಅದೊಂದು ಭೂತಗಳ ಗ್ರಾಮ. ಅಲ್ಲಿ ಅನೇಕ ಭೂತಗಳಿಗೆ ಗುಡಿ ಕಟ್ಟಿ ಇಟ್ಟಿದ್ದಾರೆ. ಅಲ್ಲಿ ಜನರು ನಡೆದಾಡಲು ಸಾಧ್ಯವಾಗದಂತೆ ರೊಂಯ್ಯೆಂದು ಕಲ್ಲುಗಳು ಬರುತ್ತಿವೆಯಂತೆ. ಕಿವಿಯ ಹತ್ತಿರವೇ ಕಲ್ಲುಗಳು ಹಾರುತ್ತಿವೆಯಂತೆ ಗ್ರಾಮಸ್ಥರು ಹೆದರಿ ಇದು ಏಕೆಂದು ಬಲಿಮೆ ಇಟ್ಟು ನೋಡಿದರು. ಗುಳಿಗ ಎಂಬ ಹೊಸ ಭೂತವು ಅಲ್ಲಿಗೆ ಬಂದಿದೆಯೆಂದೂ ಅಲ್ಲಿರುವ ಇತರ ಭೂತಗಳು ಆ ಗುಳಿಗನಿಗೆ ಕಲ್ಲು ಹೊಡೆದು ಓಡಿಸುತ್ತಿವೆಯೆಂದೂ ಗುಳಿಗನೂ ಪ್ರತಿಯಾಗಿ ಕಲ್ಲು ಹೊಡೆದು ಯುದ್ಧ ಮಾಡುತ್ತಿದ್ದಾನೆಂದೂ ತಿಳಿದುಬಂತು. ಅನಂತರ ಹತ್ತು ಸಮಸ್ತರು ಸೇರಿ ಗುಳಿಗನಿಗೆ ಒಂದು ಗುಡಿ ಕಟ್ಟುವುದಾಗಿ ನಿಶ್ಚಯಮಾಡಿದರು. ಮತ್ತೆ ಅಲ್ಲಿ ಮಾಯದ ಯುದ್ಧ ಶಾಂತವಾಯಿತು. ಅನೇಕ ಭೂತಗಳ ಆಸ್ಥಾನವಾದ ಆ ಕುರ್ಚಿಪಳ್ಳಕ್ಕೆ ನಾನೂ ಹೋಗಿದ್ದೇನೆ. ನಿಜಕ್ಕೂ ಅದ್ಭುತವೇ. ನಿಗಿನಿಗಿ ಕೆಂಡದ ಮೇಲೆ ಕುಳಿತುಕೊಳ್ಳುವುದು, ಕೆಂಡವನ್ನು ಎರಡು ಕೈಗಳಿಂದಲೂ ಬಾಚಿ ಮೈ ಮೇಲೆ ಸುರಿದುಕೊಳ್ಳುವುದು, ದೇಹದ ಸುತ್ತಲೂ ಕೊಳ್ಳಿ ಹಚ್ಚಿಸಿಕೊಂಡು ಕುಣಿಯುವುದು ಮುಂತಾದ ಅದ್ಭುತ ಭೂತ ಶಕ್ತಿಯ ಆಟಗಳು ಆ ಉತ್ಸವದ ಅಂಗವಾಗಿ ನಡೆಯುತ್ತಲಿವೆ.

ಆಗಿನಿಂದಲೇ ನಾನು ಭೂತಗಳ ವಿಷಯವಾಗಿ ವಿಚಾರ ಮಾಡಲು ಪ್ರಾರಂಭಿಸಿದ್ದೇನೆ. ಈಗ ನಾನು ಮಾಡಿಕೊಂಡಿರುವ ವಿಚಾರದ ಫಲಿತಾಂಶವಾಗಿ ತಿಳಿಸುವ ಮೊದಲು ನನ್ನ ಇನ್ನೆರಡು ಪಿಶಾಚಿಗಳ ನಿದರ್ಶನಗಳನ್ನು ಕೂಡಾ ತಿಳಿಸಿಬಿಡುವುದೊಳ್ಳೆಯದು.

ಪಿಶಾಚಿ

ಇದೂ ಮೂವತ್ತು ವರ್ಷಗಳ ಹಿಂದಿನ ಮಾತು. ಆಗ ನಾನು ಮನ್ನಾರ ಫಾಟು ಎಂಬ ಊರಿನಲ್ಲಿದ್ದೆ. ಮಲೆ ಪ್ರದೇಶ. ನಾವು ಬಿಡಾರ ಮಾಡಿಕೊಂಡ ಮನೆ ಆ ಊರಿನಲ್ಲೆ ಕಡಮೆ ಬಾಡಿಗೆಯದಾಗಿತ್ತು. ಬಹುಶಃ ನನ್ನ ಯಜಮಾನರು ಡಾಕ್ಟರರಾದುದರಿಂದ ಅಷ್ಟು ಕಡಮೆ ಬಾಡಿಗೆಗೆ ಮನೆ ಸಿಕ್ಕಿರಬೇಕೆಂದು ನಾವೆಲ್ಲಾ ಅಂದುಕೊಂಡೆವು. ಆ ಕಾಲದಲ್ಲಿ ಡಾಕ್ಟರರಿಗೆ ಬಹಳ ಗೌರವವಿತ್ತು. ಅದರೆ ನನ್ನಮ್ಮಳಿಗೆ ನಂಬುಗೆ ಸುಳ್ಳೆಂದು ಬಹು ಬೇಗನೇ ಗೊತ್ತಾಯಿತು.

ಆಗಲೂ ನಾನು ಹುಡುಗ. ರಾತ್ರಿ ನಾನು ಕೆಲಸ ಮುಗಿಸಿಕೊಂಡು ಜಗಲಿಯಲ್ಲಿ ಒಬ್ಬನೇ ಮಲಗುತಿದ್ದೆ. ಕೇರಳ ದೇಶದಲ್ಲಿ ಪ್ರತಿ ಮನೆಗೂ ಜಗಲಿಯಲ್ಲಿ 'ಇರಿಕೆ ಪಲಗೆ' ಎಂಬೊಂದು ದಂಡೆಯಿರುತ್ತದೆ. ನಾನು ದಂಡೆಯ ಬುಡದಲ್ಲಿ ಮಲಗುತಿದ್ದೆ. ಮಲಗುವ ಮೊದಲು ಲಾಂದರ ಇಟ್ಟುಕೊಂಡು 'ಹಿಂದೂ, ಇಲಸ್ಟ್ರೇಟೆಡ್ ವೀಕ್ಲಿ' ಮುಂತಾದ ಪುಸ್ತಕಗಳನ್ನು ನೋಡುತ್ತಾ ಕಣ್ಣೆನಲ್ಲಿ ನಿದ್ರೆ ತುಂಬಿ ಬಂದಾಗ ದೀಪವಾರಿಸಿಗೊಂಡು ಮಲಗುತಿದ್ದೆ. ನನಗೆ ನಿದ್ರೆ ಹಿಡಿದ ಮೇಲೆ 'ಚರ್ರ ಚರ್ರ' ಎಂದು ಅಂಗಳದಲ್ಲಿ ಚಿಪ್ಪರಿಗಳ ಶಬ್ದವು ಜೋರಾಗಿ ಕೇಳಿಬರುತಿತ್ತು. ಕೆಲವುಬಾರಿ ಎಚ್ಚೆತ್ತು ಅಂಗಳವನ್ನು ನೋಡುತ್ತೇನೆ, ಆಗ ಏನೂ ಇರದು. ಕೆಲವುಬಾರಿ ನನಗೆ ಎಚ್ಚರವೇ ಆಗುವುದಿಲ್ಲ. ಆದರೂ ಬೆಳಗ್ಗೆ ಎದ್ದ ಮೇಲೆ ರಾತ್ರಿ ಅಂಗಳದಲ್ಲಿ ಯಾರೋ ಓಡಾಡಿದಂತೆಯೂ ಚಿಪ್ಪಲಿ ಶಬ್ದ ಕೇಳಿದಂತೆಯೂ ಯಾರೋ ಇರಿಕೆ ಪಲಗೆಯಿಂದ ಬಾಗಿ ನಾನು ಮಲಗಿರುವುದನ್ನು ಸಿಳಿಸಿಳಿ ನೋಡಿದಂತೆಯೂ ಆ ಕಣ್ಣುಗಳು ಜಜ್ವಾಲಕವಾಗಿ ಕೆಂಪಗೆ ಕೆಂಡದ ಹಾಗೆ ಹೊಳೆಯುತಿದ್ದಂತೆಯೂ ನನಗೆ ಕಾಣುತಿತ್ತು. ಇದು ಭ್ರಮೆಯೇ ಕನಸೋ ಎಂದು ಅಂದುಕೊಂಡರೂ ಪ್ರತಿ ದಿನವೂ ಹಾಗೇ ಆಗತಿತ್ತು. ಮನೆಯವರೊಡನೆ ಹೇಳಿದರೆ ಅವರು ಗಲಗಲ ನಕ್ಕು 'ಏಲ್ಲಾ ಬರೀ ಭ್ರಾಂತಿ. ಯಾರೋ ಹೇಳಿದ ಭೂತ ಪಿಶಾಚಿಗಳ ಕತೆ ಕೇಳಿ ಕೇಳಿ ಅದೇ ಕನಸು ಬೀಳುತ್ತೆ. ದೇವರ ಧ್ಯಾನಮಾಡಿ ಒಳಗೆ ಕೋಣೆಯಲ್ಲಿ ಮಲಕ್ಕೊ" ಎಂದರು.

ಕೋಣೆಯಲ್ಲಿ ಮಲಗಿದರೆ ಇನ್ನಷ್ಟು ಭಯವಾಗುತಿತ್ತು. ಆಕಾಶ ಕಾಣಿಸುವಂತೆ ಜಗಲಿಯಲ್ಲಿ ಮಲಗುವುದೇ ನಿರ್ಧಾಯವೆನಿಸಿ, ಜಗಲಿಯಲ್ಲೇ ಮಲಗುತಿದ್ದೆ.

ಒಂದು ದಿನ ಬೆಳದಿಂಗಳ ರಾತ್ರಿ. ನಡುರಾತ್ರಿಯಲ್ಲಿ ನಾನು ಎಚ್ಚೆತ್ತು ಅಂಗಳದ ಬದಿಗೆ ಹೋಗಿ ಮತ್ತೆ ಬಂದು ಚಾಪೆಯಲ್ಲಿ ಕುಳಿತೆನಷ್ಟೆ. ಅಷ್ಟರಲ್ಲಿ ಬೇಲಿಯ ಬದಿಯಲ್ಲಿ 'ಕರಕ್' ಎಂಬ ಶಬ್ದವಾಯಿತು. ಏನೇಂದು ಕುಳಿತಲ್ಲೇ ಬಗ್ಗಿ ನೋಡಿದೆ. ಬೇಲಿಗೆ ಅಳವಡಿಸಿದ ತಡಿಕೆ ಬಾಗಿಲ ಹತ್ತಿರ ಕುಳ್ಳಗಾದೊಂದು ಮನುಷ್ಯಾಕೃತಿ ಕಂಡಿತು. ಅದು ಬಹಳ ಮೆಲ್ಲನೆ ಮುಂದೆ ಮುಂದೆ ಸರಿದುಕೊಂಡು ಬರುತಿತ್ತು. ಶುಭ್ರವಾದ ಬಿಳೀ ಬಟ್ಟೆಯನ್ನು ನೆತ್ತಿಯಿಂದ ಉಂಗುಷ್ಟದ ತನಕ ಮುಸುಕು ಹಾಕಿತ್ತು. ಎಳ್ಳನಷ್ಟು ಕೂಡ ದೇಹಭಾಗವು ಕಾಣುತಿದ್ದಿಲ್ಲ. ಸರಿಮಾಣ ಎರಡೂವರೆ ಅಡಿಗಿಂತ ಹೆಚ್ಚಿಗಿರದು ಮೆಲ್ಲಮೆಲ್ಲನೆ ಅಲಿ ಮಾಲಿಕೊಂಡು ಬಂದು ಮನೆಯ ಬಾಗಿಲಿಗಿದಿರಾಗಿ ಅಂಗಳದ ಬದಿಯಲ್ಲಿ ನಿಂತಿತು. ಅದರ ಮುಂದೆ ಮನೆಯಿದಿರು ತುಲಸಿಕಟ್ಟೆಯುಂಟು. ಅದು ತುಲಸೀಕಟ್ಟೆಯಾಚೆ ಅಲ್ಲೇ ನಿಂತು, ಮುಖವನ್ನು ತಗ್ಗಿಸಿ ತಗ್ಗಿಸಿ ನನ್ನನೇ ನೋಡುವಂತೆ ಕಂಡಿತು. ನಾನೂ ಇರಿಕೆಪಲಗೆಯ ಮರೆಯಿಂದ ಅದನ್ನೇ ನೋಡುತಿದ್ದೆ. ಅದು ನನ್ನನ್ನು ಕಂಡಿತೆಂದು ಗೊತ್ತಾಗುತ್ತಲೇ ನಾನು 'ಅರಮ'? ಎಂದೆ. ಅದು ಪುನಃ ಬಗ್ಗಿ ನನ್ನನ್ನು ನೋಡಿ "ಮ್ಯಾಂಂ...." ಎಂದು ಬೆಕ್ಕಿನಂತಹ ಸಪೂರವಾದ ಸ್ವರ ಮಾತ್ರ ತೆಗೆಯಿತು. ನಾನು ನಾರಾಯಣ ಸ್ಮರಣೆಗೆ ಪ್ರಾರಂಭ ಮಾಡಿದೆ. ಆಗ ಅದು ಒಂದಷ್ಟೇ ಸಾವಧಾನವಾಗಿ ಹಿಂದಕ್ಕೆ ಸರಿದು ಸರಿದು ಹೋಗತೊಡಗಿತು. ಆದರೆ ಅದೆಯ ಕಡೆಗೆ ಮುಖ ತಿರುಗಿಸಲೇಇಲ್ಲ. ಹಾಗೇ ಆಲಿಮಾಲಿಕೊಂಡೇ ಅ ಬೇಲಿಯ ವರೆಗೂ ಹೋಯಿತು. ಅಲ್ಲಿ 'ಕರಕ' ಅಂತ ಒಂದು ಶಬ್ದ. ಶಬ್ದದೊಂದಿಗೆ ಅದೂ ಮಾಯವಾಗಿತ್ತು.

ಮರುದಿನ ನಾನು ಈ ವಿಷಯನ್ನು ಮನೆಯವರಿಗೆ ಹೇಳಿದ್ದಕ್ಕೆ "ಎಲ್ಲಿಯೋ ದೀಪದ ಪ್ರಕಾಶವೋ ಬೆಳದಿಂಗಳೋ ನಿನಗೆ ಹಾಗೆ ಕಾಣಿಸಿರಬೇಕು" ಎಂದರು.

ಮುಂದೆ ನಾಲ್ಕಾರು ದಿನಗಳ ಮೇಲೆ ಆ ಡಾಕ್ಟರರೇ ನನ್ನನ್ನು ನೋಡಿ—"ಹೌದು ರಂಗ, ನೀನು ಹೇಳಿದ್ದು ನಿಜ. ನಿನ್ನೆ ರಾತ್ರಿ ನಾನೇ ಮಾಳಿಗೆಯ ಕಿಟಕಿಯಿಂದ ಒಂದು ವಿಚಿತ್ರ ನೋಡಿದೆ. ಮಧ್ಯ ರಾತ್ರಿ ಹೊತ್ತಿಗೆ ಆ ತೆಂಗಿನ ಮರಕ್ಕೊಂದು ಕಾಲುಕೊಟ್ಟು ಒಬ್ಬ ಮನುಷ್ಯ ನಿಂತಿದ್ದ. 'ಯಾರದು ಹಂ?' ಎಂದು ನಾನು ಕೂಗಿದೆ. ಕೂಡಲೇ ಅತ ಮಾಯವಾದ. ಈ ವಹಾರದಲ್ಲಿ ವಿಶೇಷವಿದೆ" ಎಂದರು. ಅಂತಹ ಪಿಶಾಚಿಗಳನ್ನು ಕಂಡು ಹೆದರಬಾರದೆಂದೂ, ಅವು ಏನು ಮಾಡಲೂ ಶಕ್ತವಲ್ಲದ ಗಾಳಿಯೆಂದೂ ಧೈರ್ಯ ಹೇಳಿದರು. ಅನಂತರ ಆ ಮನೆಯನ್ನೇ ಬಿಟ್ಟು ಬೇರೆ ಮನೆಗೆ ಹೋದೆವು.

ಇನ್ನೊಂದು

ಅದಾಗಿ ಎಂಟು ವರ್ಷಗಳ ಮೇಲೆ ನಾನು ಹೊಸಪೇಟೆಯಲ್ಲಿದ್ದೆ. ಹೊಸಪೇಟೆ ನಗರದ ಹೊರಗೆ ಸ್ವಲ್ಪ ದೂರ ಹೆಂಚೆ ರಸ್ತೆಯಲ್ಲಿ ಒಂದು ತೋಟದಲ್ಲಿ ತಿಂಗಳಿಗೆ ಒಂದೇ ರೂಪಾಯಿ ಬಾಡಿಗೆಗೆ ನಮಗೆ ಮನೆ ಸಿಕ್ಕಿತ್ತು. ಆ ತೋಟದಲ್ಲಿ ಒಬ್ಬರು ವೀರಶೈವ ಸ್ವಾಮಿಗಳೂ ಇದ್ದರು.

ಹೊಸ ಪೇಟೆಯ ನಗರದಲ್ಲಿ ನನಗೆ ಕೆಲಸ. ಕೆಲಸ ಮುಗಿಸಿ ರಾತ್ರಿ ಒಂಭತ್ತು ವರೆ ಗಂಟೆಯ ಮೇಲೆ ನಾನು ಸೈಕಲಿನಲ್ಲಿ ಬಿಡಾರಕ್ಕೆ ಹೋಗುತಿದ್ದೆ.

ಹಾಗೊಮ್ಮೆ ಚಂದ್ರ ಪ್ರಕಾಶದಲ್ಲಿ ಸೈಕಲುರುಳಿಸಿಕೊಂಡು ತೋಟದ ಮನೆಗೆ ಹೋಗುತ್ತಿರುವಾಗ, ರೈಲ್ವೆ ಕ್ರಾಸ್ ದಾಟಿದ ಮೇಲೆ ಬೀದಿಯಲ್ಲಿ ಜನಸಂಚಾರವೇ ಇರುವುದಿಲ್ಲ. ಸ್ವಲ್ಪ ದೂರ ಒಂದು ಕಾಲುವೆಯುಂಟು. ಮೇಲೆ ಬೀದಿಗೆ ಸಂಕ ಕಟ್ಟಿದ್ದಾರೆ. ನಾನು ಆ ಸಂಕವನ್ನು ಸಮೀಪಿಸುವಾಗ ಕಾಲುವೆಯಲ್ಲಿ ಒಬ್ಬಳು ಸ್ತ್ರೀ ತೊಡೆಯವರೆಗೆ ನೀರಿನಲ್ಲಿದ್ದು ಬಾಗಿಕೊಂಡು ತನ್ನ ಬಿಳೀ ಸೆರಗನ್ನು ನೀರಿಗೆ ಅದ್ದಿ ಅದ್ದಿ ಹಿಂಡುತ್ತಾ, ಮತ್ತೆ ಮತ್ತೆ ಅದ್ದಿ ಹಿಂಡಿ ಆಚೆಕಡೆ ನೋಡದೆ ಅದೇ ಕೆಲಸದಲ್ಲಿ ತಲ್ಲೀನಳಾಗಿದ್ದಳು. ಅವಳ ತಲೆ ಕೂದಲು ಮುಖದ ಎರಡು ಬದಿಯಿಂದಲೂ ನೀರಿನವರೆಗೆ ಇಳಿದಿತ್ತು. ಹೀಗೆ ಸೆರಗು ಮಾತ್ರ ಹಿಂಡುತ್ತಿರುವ ಅವಳು ಯಾರೋ? ಹುಚ್ಚಿಯೋ ಏನೋ ಎಂಬ ಸಂದೇಹದಿಂದ ನಾನು ಸೈಕಲ್ಲನ್ನು ಸಂಕದಂಚಿಗೆ ತಾಗಿಸಿ ನುಸುಸಿಂತೆ. ಕೂಡಲೇ ಅವಳು ತಲೆಎತ್ತಿ ನನ್ನನ್ನು ನೋಡಿ ಹೋಗುವಂತೆ ಕೈಸನ್ನೆ ಮಾಡುತ್ತಾ "ಮ್ಯಾಂಂ...." ಎಂಬ ಶಬ್ದವೊಂದು ಹೊರಡಿಸಿದಳು. ನಾನು ಸೈಕಲ್ಲನ್ನು ಮುಂದಕ್ಕೆ ಸಾಗಿಸಿ ಒಮ್ಮೆ ಹಿಂದಿರುಗಿ ನೋಡಿದೆ. ಆ ಹೆಂಗುಸಿನ ಸ್ಥಳ ಖಾಲಿಯಾಗಿತ್ತು. ಶುಭ್ರ ಚಂದ್ರ ಪ್ರಕಾಶದಲ್ಲಿ ಕಾಲುವೆ ನೀರು ಮಾತ್ರ ಸಳಸಳನೆ ಹೊಳೆಯಿತು. ನಾನು ತೀಕ್ಷ್ಣವಾಗಿ ಸೈಕಲನ್ನು ಮುಂದಕ್ಕೆ ಹೊರಳಿಸಿಕೊಂಡು ಓಡಿದೆ ನಾರಾಯಣ ಸ್ಮರಣೆ ಮಾಡುತ್ತಾ.'

(ಸಶೇಷ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

10—7—1958

ಸಂಚಿಕೆ ೪೪
NO. 44

ವಸಂತೋತ್ಸವದಲ್ಲಿ ವಿಚಾರಗೋಷ್ಠಿ—

ಲಿಪಿಸಮನ್ವಯದ ಉತ್ಸಾಹ ಯಾರಿಗೆ?

೨೧-೬-೫೮ನೆ ಶನಿವಾರ ಬೆಂಗಳೂರು ನಗರದಲ್ಲಿ ಕರ್ಣಾಟಕಾಂಧ್ರ ಏಕಲಿಪಿಯ ಆವಶ್ಯಕತೆಯ ಸಂಬಂಧದಲ್ಲಿ ಸ್ವಾರಸ್ಯಪೂರ್ಣ ವಿಚಾರಗೋಷ್ಠಿ ಕನ್ನಡ ಸಾಹಿತ್ಯ ಪರಿಷತ್ಮಂದಿರದಲ್ಲಿ ವಸಂತ ಸಾಹಿತ್ಯೋತ್ಸವದ ಅಂಗವಾಗಿ ನಡೆಯಿತು.

ವಿಚಾರಗೋಷ್ಠಿಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪ್ರಸಿದ್ಧ ಸಾಹಿತಿಗಳೂ ಪಂಡಿತರೂ ಆದ ಪ್ರೊ. ಶೀ. ನಂ. ಶ್ರೀ ಕಂಠಯ್ಯ, ಸರ್ವಶ್ರೀ ಕೆ. ಸುಬ್ಬರಾಮಪ್ಪ, ಡಿ. ಆರ್. ರಾಮಯ್ಯ, ಕೆ. ವೆಂಕಟರಾಮಪ್ಪ, ಎಂ. ವಿ. ಸೀತಾರಾಮಯ್ಯ, ಡಾ. ಸಿದ್ಧಲಿಂಗಯ್ಯ, ಜಿ ಸುಬ್ಬಯ್ಯ ಶಾಸ್ತ್ರಿ, ಟಿ ಟಿ. ಶರ್ಮ ಮೊದಲಾದವರು ಭಾಗವಹಿಸಿದ್ದರು.

ಗೋಷ್ಠಿಯ ಅಧ್ಯಕ್ಷತೆಯನ್ನು ರಾಜ್ಯದ ಅರ್ಥ ಸಚಿವ ಶ್ರೀ ಟಿ. ಮರಿಯಪ್ಪನವರು ವಹಿಸಿದ್ದರು.

ಭಾಷಣಕಾರರೆಲ್ಲರೂ "ಕನ್ನಡ ಟೈಪ್ ರೈಟರ್ ಬೇಗ ಬರಲಿ. ಅದನ್ನು ತರಲು ಸರಕಾರ ತೀವ್ರ ಕ್ರಮ ಕೈಗೊಳ್ಳಲಿ" ಎಂದು ಸರಕಾರಕ್ಕೆ ಮನವಿಮಾಡಿಕೊಂಡರು.

ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ ಅವರು ಸ್ವಾಗತ ಭಾಷಣಮಾಡಿ "ಜನವರಿ ತಿಂಗಳಲ್ಲಿ ಬಳ್ಳಾರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕರ್ಣಾಟಕ ಆಂಧ್ರ ಏಕಲಿಪಿಯ ಆವಶ್ಯಕತೆಯ ಬಗ್ಗೆ ನಿರ್ಣಯಮಾಡಲಾಗಿತ್ತು. ಆದುದರಿಂದ ವಸಂತ ಸಾಹಿತ್ಯೋತ್ಸವದಲ್ಲಿ ಈ ಗೋಷ್ಠಿಯನ್ನು ಏರ್ಪಾಡಿಸಲಾಗಿದೆ" ಎಂದು ಹೇಳಿದರು.

ವಿದ್ವಾನ್ ಕೆ. ಸುಬ್ಬರಾಮಪ್ಪನವರು ಚರ್ಚೆಯನ್ನಾರಂಭಿಸಿ "ಕನ್ನಡಿಗರಿಗೂ ಆಂಧ್ರರಿಗೂ ಒಂದೇ ಲಿಪಿ ಇರಬೇಕೆಂದು ವಿನೋಬಾಭಾವೆ, ಆಂಧ್ರದ ಮಾಜಿ ಮುಖ್ಯಮಂತ್ರಿ ಶ್ರೀ ಬಿ ಗೋಪಾಲರೆಡ್ಡಿ ಮುಂತಾದವರು ಅಭಿಪ್ರಾಯ ಪಟ್ಟಿದ್ದಾರೆ. ಕನ್ನಡಿಗರೂ ಆಂಧ್ರರೂ ಸುಲಭವಾಗಿ ಒಂದೇ ಲಿಪಿಯನ್ನು ಒಪ್ಪಿಕೊಳ್ಳಬಹುದು ಕನ್ನಡಿಗರೂ ಆಂಧ್ರರೂ ಒಂದೇ ಸಂಸ್ಕೃತಿಗೆ ಸೇರಿದವರು. ಆಚಾರ ವ್ಯವಹಾರಗಳಲ್ಲಿಯೂ ಇಬ್ಬರಿಗೂ ಒಂದೇ ವಿಧವಾದ ಅನುಸರಣೆಯಿದೆ. ತೆಲುಗರು ಸಹ ಕನ್ನಡ ಲಿಪಿಯನ್ನೇ ಅನುಸರಿಸುತ್ತಿದ್ದರೆಂದು ತೋರುತ್ತದೆ

"ತೆಲುಗು, ಕನ್ನಡ ಲಿಪಿಗಳಲ್ಲಿ ಹೆಚ್ಚಿನ ಸಾಮ್ಯವಿದೆ. ಈ ಎರಡು ಭಾಷೆಗಳ ಮೂಲ ದ್ರಾವಿಡ ಭಾಷೆಯಾದರೂ ಇವುಗಳ ಮೇಲೆ ಸಂಸ್ಕೃತದ ಪ್ರಭಾವ ಹೆಚ್ಚಾಗಿದೆ. ಈ ಎರಡು ಭಾಷೆಗಳಲ್ಲೂ ಹಂದಸ್ಸಿನಲ್ಲಿಯೂ ಹೆಚ್ಚಿನ ಅನುಕರಣೆಯಿದೆ. ಕನ್ನಡದಲ್ಲಿ ತೆಲುಗಿಗಿಂತ ಮುಂಚೆಯೇ ಆಗಿರುವುದರಿಂದ ತೆಲುಗಿನಲ್ಲಿ ಆದಿಕಾವ್ಯವಾದ ನನ್ನಯ ಭಟ್ಟನ ಭಾರತದಲ್ಲಿರುವ ಶೈಲಿಯ ಕೆಲವು ಅನುಕರಣೆಗಳೂ ರಚನಾಸಂಪ್ರದಾಯವೂ ಕೆಲವು ಛಂದೋರೂಪಗಳೂ ಕನ್ನಡದಿಂದ ಬಂದಿರುವ ಸಂಪ್ರದಾಯವೇ ಆಗಿದೆ ಕನ್ನಡ ಕವಿಯಾದ ನಾರಾಯಣ ಭಟ್ಟನು ತೆಲುಗಿನ ನನ್ನಯ ಭಟ್ಟನಿಗೆ ಆಪ್ತಮಿತ್ರ ಮತ್ತು ಸಹಾಧ್ಯಾಯಿ. ಇವನು ತನಗೆ ಶ್ರೀಕೃಷ್ಣನು ಅರ್ಜುನನಿಗೆ ಬೇಗ ಸಹಾಯಮಾಡಿದನೋ ಹಾಗೆಯೇ ಭಾರತ ರಚನೆಯಲ್ಲಿ ತನಗೆ ಸಹಾಯಕನಾಗಿದ್ದನೆಂದು ತೆಲುಗು ಭಾರತದಲ್ಲಿ ನನ್ನಯ ಭಟ್ಟನು ಹೇಳಿಕೊಂಡಿದ್ದಾನೆ.

ಶ್ರೀಕೃಷ್ಣ ದೇವರಾಯನು ಒರಿಸ್ಸೆಯ ಪರ್ವತಾನಾದಲ್ಲಿ ತೆಲುಗ ದೇವನನ್ನಾಳುವಾಗ ಅವನ ಆಸ್ಥಾನದಲ್ಲಿ ಅಷ್ಟ ದಿಗ್ಗಜಗಳಂಬಲಿಜನ ತೆಲುಗು ಕವಿಗಳಿದ್ದರು ಆದುದರಿಂದ ಕರ್ಣಾಟಕ—ಆಂಧ್ರ ಸಂಸ್ಕೃತಿಗಳು ಹೆಚ್ಚು ಕಡಿಮೆ ಹಣೆದುಕೊಂಡಿದ್ದು ಭಾಷೆಯಲ್ಲಿ ವ್ಯತ್ಯಾಸಗಳು ಕಾಣಬರದಿರುವುದರಿಂದ ಉಭಯ ಭಾಷೆಗಳಿಗೆ ಒಂದೇ ಲಿಪಿಯು ಅವಲ್ಲಿ ಉಭಯತ ಇನ್ನೂ ಸಾಮಿಪ್ಯ ಹೆಚ್ಚಿ ಪೂರ್ಣರೂಪದಲ್ಲಿ ಸಂಸ್ಕೃತಿಯು ವಿಲಸಿಸಲು ಸಹಾಯವಾಗುವುದು" ಎಂದು ನುಡಿದರು.

"ಈಗ ಮೈಸೂರಿನಲ್ಲಿ ಕನ್ನಡ; ಆಂಧ್ರದಲ್ಲಿ ತೆಲುಗು ಆಡಳಿತ ಭಾಷೆಗಳಾಗಿವೆ. ಆದುದರಿಂದ ಸುಲಭ ರೀತಿಯಲ್ಲಿ ಉಪಯೋಗಕ್ಕೆ ಬರುವಂತೆ ಟೈಪ್‌ರೈಟರ್ ಬೇಕು ಆಂಧ್ರ-ಕನ್ನಡಿಗರಿಗೆ ಇಬ್ಬರಿಗೂ ಒಂದೇ ಟೈಪ್‌ರೈಟರ್ ಆದ ಪಕ್ಷದಲ್ಲಿ ತಯಾರು ಮಾಡುವವರು ಸುಲಭ ಬೆಲೆಯಲ್ಲಿ ತಯಾರು ಮಾಡಿ ಕೊಡುತ್ತಾರೆ. ಏಕಲಿಪಿ ಆದಲ್ಲಿ ಟೈಪ್ ಮಾಂಡ್ರಿ, ಪುಸ್ತಕ ಪ್ರಕಟಣೆ ಮತ್ತು ಪತ್ರಿಕಾ ಪ್ರಕಟಣೆ ಸುಲಭವಾಗುತ್ತದೆ ಕಡಿಮೆ ಬೆಲೆಯಲ್ಲಿ ಬಹುಜನರಿಗೆ ಇವು ಸಿಗುತ್ತವೆ. ಇವುಗಳ ವ್ಯಾಪಾರ ಕ್ಷೇತ್ರವೂ ವಿಸ್ತಾರವಾಗುವುದು. ಉಭಯ ಭಾಷೆಗಳ ಪಂಡಿತೋತ್ತಮರು ಕಲೆತು ಒಂದು ನಿರ್ದಿಷ್ಟ ರೂಪವನ್ನು ಕೊಟ್ಟಲ್ಲಿ ಕರ್ಣಾಟಕಾಂಧ್ರ ಸಂಸ್ಕೃತಿಯ ಬಾಂಧವ್ಯ ಹೆಚ್ಚುವುದೇ ಅಲ್ಲದೆ ದಕ್ಷಿಣ ಭಾರತದ ಈ ವಿಶಾಲ ಪ್ರಾಗಣ್ಯ ಹೊಸ ಭಾರತದ ಸಂಸ್ಕೃತಿಯ ಮೇಲೆ ಇನ್ನೂ ಪ್ರಭಾವಶಾಲಿಯಾದ ಪರಿಣಾಮವನ್ನುಂಟುಮಾಡುವುದೆಂದು ತಿಳಿಸಬಹುದಾಗಿದೆ ಎಂದರು

ಪರಿಷತ್ತಿನ ಕಾರ್ಯದರ್ಶಿ ಶ್ರೀ ಡಿ ಆರ್ ರಾಮಯ್ಯನವರು, ಕಮಿಳರು, ತೆಲುಗಿನವರು ಕನ್ನಡಿಗರೊಂದಿಗೆ ಕನ್ನಡ ಸೇವೆಯನ್ನು ಮಾಡ ತಿದ್ದಾರೆಂದೂ ಹಿಂದೆ ಕನ್ನಡಿಗರಿಗೆ ತೆಲುಗುಭಾಷೆ ಮನೆಮಾತಾಗಿತ್ತೆಂಬ ದನ್ನೂ ವಿವರಿಸಿದರು

"ಎರಡು ಭಾಷೆಗಳ ಲಿಪಿ ಒಂದಾದರೆ ಟೈಪ್‌ರೈಟರ್ ತಯಾರಿಕೆ ವಿಷಯದಲ್ಲಿ ಬಹಳ ಅನುಕೂಲವಾಗುತ್ತದೆ. ತೆಲುಗು ಮತ್ತು ಕನ್ನಡಕ್ಕೂ ಭಾಷೆಯಲ್ಲಿ ವ್ಯತ್ಯಾಸವಿದ್ದರೂ ಬರವಣಿಗೆಯಲ್ಲಿ ಅಷ್ಟೊಂದು ವ್ಯತ್ಯಾಸ ಕಂಡುಬರುವುದಿಲ್ಲ" ಎಂದು ನುಡಿದರು.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರೊಫೆಸರ್ ಶ್ರೀ ಪಂ. ಶ್ರೀ ಕಂಠಯ್ಯನವರು, "ದೇಶದಲ್ಲಿ ಏಕಮತ್ಯ ಸಾಧಿಸುವುದು ಒಳ್ಳೆಯದು. ಸಾಧಿಸಬೇಕೆಂದು ಎಲ್ಲರಿಗೂ ಆಸೆಯಿದೆ. ಇದನ್ನು ಎಷ್ಟರ ಮಟ್ಟಿಗೆ ಸಾಧಿಸಬೇಕೆಂದು ೩೦—೪೦ ವರ್ಷಗಳಿಂದಲೂ ನಮ್ಮ ದೇಶದಲ್ಲಿ ಚರ್ಚೆಯಾಗುತ್ತಿದೆ ಹೀಗಿರುವಾಗ ಕನ್ನಡ—ತೆಲುಗು ಮಾತಾಡುವ ಸವಾರು ಜನ ಕೋಟಿ ಜನ ಒಂದಾಗಿ ಸೇರಿ ಒಂದೇ ಲಿಪಿಯನ್ನಾಗಿ ಮಾಡುವ ವಿಷಯ ಸಹಜವಾಗಿದೇ ಇದೆ

"ಬಹಳ ಹಿಂದಿನಿಂದಲೂ ಕನ್ನಡ ತೆಲುಗು ಭಾಷೆಗಳು ಒಂದೇ ಲಿಪಿಯಲ್ಲಿವೆ. ಆದರೆ ಅಕ್ಷರ ಲಿಪಿಗಳೂ ತಚ್ಚಿನ ಲಿಪಿಗೂ ಕೊಂಚ ವ್ಯತ್ಯಾಸವಿದೆ. ಆದುದರಿಂದ ಕನ್ನಡ, ಆಂಧ್ರದಲ್ಲಿ ರತ್ನ ಮುದ್ರಣ ಶೈಲಿಗಳನ್ನು ಬದಲಾಯಿಸಲು ಸ್ವಲ್ಪ ಕಷ್ಟವೇ ಆಗುವುದು

"ಇದೆಲ್ಲವನ್ನೂ ನಿಧಾನವಾಗಿ ವಿಚಾರ ಮಾಡುತ್ತಾ ಹೋದಂತೆಲ್ಲಾ ಅನೇಕ ತೊಡಕುಗಳು ಉದ್ಭವಿಸುತ್ತವೆ. ಶೈಲಿಯ ಭೇದವಿರುವಾಗ ಎಷ್ಟು ತೊಡಕುಗಳು ಉಂಟಾಗುತ್ತವೆ! ಕಲಸವನ್ನು ಬದಲಾಯಿಸಬಹುದಾದರೂ ಭಾಷೆಯಲ್ಲಿನ ವ್ಯತ್ಯಾಸವನ್ನು ಬದಲಾಯಿಸುವಿರಾ?" ಎಂದು ಪ್ರಶ್ನಿಸಿದರು.

"ಇದು ನಿರ್ಣಯ ಮಾಡಬಹುದು, ಆದರೆ ಟೈಪ್ ಮಾಂಡ್ರಿಯವರು ಒಪ್ಪಲು ಸಾಧ್ಯವೆ? ವ್ಯತ್ಯಾಸ ಸ್ವಲ್ಪ ಹೆಚ್ಚಾದರೆ, ಜನ ಉದ್ರೇಕಗೊಳ್ಳಬಹುದು. ಈಗ ಸಂಯುಕ್ತ ಪ್ರದೇಶದಲ್ಲಿ ಭಾಷೆಯ ಬಗ್ಗೆ ಜನಗಳೆದ್ದಿದೆ. ಅದು ಲಿಪಿಗೇಶ್ವರ ಪೆದ್ದಿರುವ ಜನಗಳ ತಲೆಗಳು ಒಮ್ಮೆ ರಕ್ತ ಹರಿಯ ಸರಕಾರಗಳು ಉರುಳುತ್ತಿರುವುದನ್ನು ನೋಡುತ್ತಿದ್ದೇವೆ.

"ನಾವು ನಿರ್ಣಯ ಮಾಡಿದರೆ ಆಂಧ್ರದವರು ಒಪ್ಪಲು ಸಿದ್ಧರಾಗಿರುವರೆ? ಅಥವಾ ಇಬ್ಬರೂ ಸಿದ್ಧವಾಗಿದ್ದರೆ. ಜನರು ಏಕಲಿಪಿಯನ್ನೊಪ್ಪಲು ಸಿದ್ಧರಾಗಿದ್ದಾರೆಯೇ? ವ್ಯತ್ಯಾಸಗಳನ್ನು ಸರಿಪಡಿಸುತ್ತೇವೆ ಎಂದು ಹೊರಬಂದಾಗ ಅನಾನುಕೂಲತೆಗಳು ಹೆಚ್ಚುತ್ತವೆ" ಎಂದರು.

"ಲಿಪಿ ಒಂದಾಗುವ ಕಾರ್ಯಕ್ಕೂ ಮೊದಲು ಕನ್ನಡ ಟೈಪ್‌ರೈಟರ್ ಬರಲಿ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O MANGALORE. Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಬಯಸದೆ ಬಂದ ಭಾಗ್ಯ

ಶ್ರೀ ಶ್ಯಾಮರಾಯ ಬಿ ಕೋಟ್ಯಾನ್.

ಅಂದು ರವಿವಾರ. ಸಂಜೆ ಸುಮಾರು ನಾಲ್ಕು ಘಂಟೆಯ ಸಮಯ. ನಲ್ಲ ನಲ್ಲೆಯರು ಶೃಂಗಾರಯುಕ್ತವಾಗಿ ಕೈ ಕೈ ಹಿಡಿದುಕೊಂಡು ವೈಯಾರದ ಮಾತುಗಳನ್ನು ಆಡಿಕೊಳ್ಳುತ್ತಾ ಚೌಪಾಟಿಗೋ, ರಾಣಿಬಾಗಿಗೋ, ಮಲಬಾರ್ ಹಿಲ್‌ಗೋ ಹೋಗುವಂಥ ಸಮಯವದು. ನವ ತರುಣರು ಕಂಡದ್ದೆಕೆ ಟೀಕೆ ಮಾಡುತ್ತಾ ನಾಟಕಕ್ಕೋ, ಸಿನೇಮಾಕ್ಕೋ, ಪಂದ್ಯಾಟಕ್ಕೋ ಅಥವಾ ಇನ್ನಿತರ ಮನರಂಜನಾ ಕಾರ್ಯಗಳಿಗೋ ಹಾಜರಾಗುವ ಸುಸಂದರ್ಭವದು.

ಈ ಸಮಯದಲ್ಲಿ ಕೂಡಾ ಶ್ರೀನಿವಾಸನು ಅವೆಲ್ಲಕ್ಕೂ ಸಮಸ್ಕಾರ ಮಾಡಿ, ಆರಾಮ ಕುರ್ಚಿಯ ಮೇಲೆ ಒರಗಿ ಅಂದಿನ ತಾಯಿನಾಡು ಪತ್ರಿಕೆಯನ್ನು ಓದುತಿದ್ದನು. ಓದಿದ್ದನ್ನೇ ಮತ್ತೂ ಓದುತಿದ್ದನು. ತಾನು ಏನು ಓದುತಿದ್ದೇನೆ ಎಂಬುದರ ಅರಿವೆ ಅವನಿಗಿದ್ದಿಲ್ಲ. ಕಣ್ಣು ಪತ್ರಿಕೆಯ ಮೇಲಿದ್ದರೂ ಅವನ ಮನಸ್ಸು ಯಾವುದೋ ಭಾವನಾ ಪ್ರಪಂಚದಲ್ಲಿ ಇತ್ತು. ಆಗಲೇ ಬಿಸಿ ಕಾಫಿಯನ್ನು ಅಡಿಗೆಯವನು ಮೇಜಿಯ ಮೇಲೆ ಇಟ್ಟು "ಕಾಫಿ ಕುಡಿಯಿರಿ" ಎಂದಾಗ — ಭಾವನಾ ಪ್ರಪಂಚದಿಂದ ವಾಸ್ತವಿಕ ಪ್ರಪಂಚಕ್ಕೆ ಬಂದನು.

ಕಾಫಿಯ ಲೋಟವನ್ನು ತುಟಿಯ ಹತ್ತಿರ ತರುವಾಗ....ಹೊರ ಬೀದಿಯಲ್ಲಿ ಡಾಲ್....ರ್!—ರ್!! .. ಎಂಬ ಕಾರು ಅಪಘಾತದ ಕರ್ಕಶ ಸ್ವರಯೊಂದ ಶ್ರೀನಿವಾಸನ ಕರ್ಣವನ್ನು ಛೇದಿಸಿದಂತಾಯಿತು. ತ್ವರಿತದಲ್ಲಿ ಕಾಫಿಯ ಗ್ಲಾಸನ್ನು ಮೇಜಿಯಮೇಲಿಟ್ಟು ಕಿಟಕಿಯೆಡೆಗೆ ಓಡಿಬಂದು ಬೀದಿಯ ಕಡೆಗೆ ನೋಡಿದನು. ಹೌದು! ನಿಜವಾದ ಅಪಘಾತ!!—ಕೆಲವಾರು ಮಂದಿ ಕಾರಿನ ಸುತ್ತು ಮುತ್ತ ನೆರೆದಿದ್ದರು. ಕಾರು ಕಾರಿಗೆ ಡಿಕ್ಕಿಹೊಡೆದದೆ ಅ ದುಷ್ಟಕಾರು ಯಾವುದೋ ಮನುಷ್ಯನ ಮೇಲೆ ತನ್ನ ಶಕ್ತಿಯ ಪ್ರದರ್ಶನವನ್ನು ಮಾಡಿದೆ ಎಂದು ಅರ್ಥಬಾಗುತ್ತಿತ್ತು. ಶ್ರೀನಿವಾಸನು ನಿಮಿಷವೂ ನಿಲ್ಲದೆ ಮೆಟ್ಟಲಿಳಿದು ಬೀದಿ ಎಡೆಗೆ ಧಾವಿಸಿದನು.

ನೋಡುವುದೇನು! ಭೀಕರ ದೃಶ್ಯ.... ತರುಣಿಯೊಬ್ಬಳ ಮೇಲೆ ಕಾರು ತನ್ನ ಬಲವನ್ನು ತೋರಿಸಿತ್ತು. ಅವಳಿಗೆ ಸ್ಮೃತಿ ಇರಲಿಲ್ಲ. ಅವಳ ಸಂಬಂಧಿಕರು ಉಪಚರಿಸುತಿದ್ದರು. ನೋಡೀಸರು ಜನ ಸಂದಣಿಯನ್ನು ಚದರಿಸುತಿದ್ದರು. ಡ್ರೈವರನು ಬಂದಿಯಾಗಿದ್ದನು. ಪ್ರತಿಯೊಬ್ಬರೂ ಹುಡಿಗಿಯೊಬ್ಬಳ ಬಾಳ್ವೆಯು ಹಾಳಾಯಿತು" ಎಂಬ ಕರುಣ ಉದ್ಗಾರವನ್ನು ತೆಗೆಯುತಿದ್ದರು.

ಶ್ರೀನಿವಾಸನು ಈ ಎಲ್ಲಾ ದೃಶ್ಯವನ್ನು ಕಣ್ಣಾರೆ ಬಾ ನೋಡಿದನು. ಅಕ್ಷಿಗಳಿಂದ ಬಲತ್ಕಾರವಾಗಿ ಅಶ್ರು ಬರುತಿತ್ತು ನೋಡಿದವರು ಪಾಸ್ಯಮಾಡಬಹುದೆಂಬ ಭೀತಿಯಿಂದ ಆಗಾಗ ನೀರ ಹನಿಗಳನ್ನು ಒರಸುತಿದ್ದನು. ಇವನ ಮೊಗ ಕಂಡವರಿಗೆ ಇವನ ಕಣ್ಣೀರಿನ ಅರ್ಥವಾಗುತ್ತಿರಲಿಲ್ಲ. ತರುಣಿಯನ್ನು ಅಪ್ಪಿಕೊಂಡು ರೋದಿಸಲೆ? ಎಂದು ಹಲವು ಸಲ ಆಲೋಚಿಸಿದನು. ಮರುಕ್ಷಣದ್ದೆ ಛೆ! ಇದು ಯಾವ ಮಂಕು ಬುದ್ಧಿಯ ನನ್ನನ್ನು ಪೀಡಿಸುತ್ತಿದೆ? ಅವಳಿಗೂ ನನಗೂ ಅದೆಲ್ಲಿಯ ಸಂಬಂಧ ಉಳಿದಿದೆ? ಎಂಬ ಹಲವಾರು ವಿಚಾರಗಳು ಅವನ ಮತಿಯಲ್ಲಿ ಚಕ್ರಾಕಾರವಾಗಿ ತಿರುಗ ಹತ್ತಿದುವು. ಹೆಚ್ಚು ಕಾಲ ಅಲ್ಲಿ ನಿಲ್ಲಲಾಗದೆ ನೇರವಾಗಿ ಕೋಣೆಯೆಡೆಗೆ ಭಾರವಾದ ಹೆಜ್ಜೆಗಳನ್ನು ಇಡುತ್ತಾ ನಡೆದನು.

ಬೀದಿಯನ್ನು ಕಿಟಕಿಯ ಮೂಲಕ ಮನಃ ನೋಡಿದನು. ಬಹುಶಃ ಅವಳನು ಆಸ್ಪತ್ರೆಗೆ ಆಗಲೇ ಕೊಂಡು ಹೋಗಿರಬೇಕು. ದಪ್ಪವಾಗಿ ನೆಲದ ಮೇಲೆ ಬಿದ್ದಿರುವ ರಕ್ತವು ಬಿಸಿಲಿಗೆ ನಾನಾ ರೂಪ ತಾಳಿ ಶ್ರೀನಿವಾಸನನ್ನು ಕೆನೆಕಿಸುತಿತ್ತು. ನೊಂದ ಹೃದಯ ದವನಾಗಿ ಕುರ್ಚಿಯ ಮೇಲೆ ಪೊರಳಾಡಿದನು.

o o o

ಅಪಘಾತಕ್ಕೆ ಬಳಗಾದ ಸ್ತ್ರೀಯು ಬೇರೆ ಯಾರೂ ಆಗಿರದೆ ಶ್ರೀನಿವಾಸನ ಧರ್ಮಪತ್ನಿಯಾಗಿದ್ದಳು. ಅಗ್ನಿ ಸಾಕ್ಷಿಯಾಗಿ ಅವಳನ್ನು ಪಾಣಿಗ್ರಹಣ ಮಾಡಿಕೊಂಡು ಇಂದಿಗೆ ಐದು ವರ್ಷಗಳು ಸಂದುವು. ತನ್ನ ಹಿರಿಯರ ಮಾತಿಗೆ ಬಲಿಬಿದ್ದು ನಿರಪರಾಧಿಯಾದ ಮಾಲತಿಯನ್ನು ತೊರೆದು ಇಂದಿಗೆ ಮೂರು ವರ್ಷಗಳಾದುವು.

ಮಾಲತಿಯ ತಂದೆಗೂ ಶ್ರೀನಿವಾಸನ ತಂದೆಗೂ ಒಂದು ಆಸ್ತಿಯಿಂದ ಮನಸ್ತಾಪ ಉಂಟಾಗಿತ್ತು. ಮಾಲತಿಯ ತಂದೆಯು ಸಂಬಂಧಿಕರಿಗೆ ಆಸ್ತಿಯನ್ನು ಮಾರಿದರೆ ಕಡಿಮೆ ಹಣ ಸಿಗಬಹುದೆಂದು ಅದನ್ನು ಬೇರೆ ಜನರಿಗೆ ಮಾರಿದ್ದನು. ಶ್ರೀನಿವಾಸನ ತಂದೆಗೆ ಇದರಿಂದ ತುಂಬಾ ಸಿಟ್ಟು. ತಾನು ಆಸ್ತಿ ಬೇಕು ಎಂದು ಮೊದಲೇ ಹೇಳಿದ್ದರು ಕೂಡಾ ಆಸ್ತಿಯನ್ನು ಪರರಿಗೆ ಮಾರಿಬಿಟ್ಟನಲ್ಲಾ! ಎಂಬ ಗರ್ವ. ಒಂದು ದಿನ ಇಬ್ಬರೂ ಒಟ್ಟಾಗಾಗ ಆಸ್ತಿಯ ವಿಷಯ ಬಂದು, ಮಾತಿಗೆ ಮಾತು ಬೆಳೆದು ಕೈಗೆ ಕೈತಾಗಿ ಹೋಗಿತ್ತು. ಆಂದಿನಿಂದ ಶ್ರೀನಿವಾಸನ ತಂದೆಯು ಅವನ ಮಗಳನ್ನು ನನ್ನ ಹೊಸಲು ಹತ್ತಲು ಬಿಡಲಿಕ್ಕಿಲ್ಲ ಎಂದು ಹಟತೊಟ್ಟನು. "ಶ್ರೀನಿವಾಸ! ನಿನಗೆ ನಾವು ಬೇಕೆದ್ದರೆ ಮಾಲತಿಯನ್ನು ಬಿಡಬೇಕು". ಎಂದು ಅಲ್ಲಿ ಸಲ್ಲದ ವಿಷಯಗಳನ್ನು ಶ್ರೀನಿವಾಸನಿಗೆ ಬರೆದಿದ್ದನು. ಹಿರಿಯರ ಮಾತಿಗೆ ಹೆಚ್ಚಿನ ಬೆಲೆಯನ್ನು ಕೊಡುತಿದ್ದ ಶ್ರೀನಿವಾಸನು ಪೂರ್ವಾಪರ ವಿಚಾರಮಾಡದೆ ಮಾಲತಿಯನ್ನು ತೊರೆದಿದ್ದನು.

o o

ಆರಾಮ ಕುರ್ಚಿಯಲ್ಲಿ ಶ್ರೀನಿವಾಸನು ಬಹಳ ಹೊತ್ತು ಹೊರಳಾಡಿದನು. ಗತಸ್ಮರಣೆಗಳು ಒಂದರಹಿಂದೆ ಒಂದು ಬರತೊಡಗಿದುವು. ಮಾಲತಿಯು ಮುಂಬಯಿಗೆ ಏಕೆ ಬಂದಳೆಂಬುವುದೇ ಅವನ ಬಿಡಿಸಲಾರದ ಸಮಸ್ಯೆ. ಅವಳ ಅಣ್ಣನು ಮುಂಬಯಿಯಲ್ಲಿರುವುದು ಅವನಿಗೆ ತಿಳಿದಿತ್ತು. ಎಲ್ಲಿಯಾದರೂ ಬೇರೆ ವರನನ್ನು ಹುಡುಕಿ ಮದುವೆಮಾಡಲಿಕ್ಕೆ ಅವಳ ಅಣ್ಣನು ಕರಕೊಂಡು ಬಂದಿರಲೂ ಬಹುದು. ಆದರೆ ಇಂದು ಅವಳ ಸ್ಥಿತಿ?....ಬೀದಿಯಲ್ಲಿ ಜನ ನರಾಡಿಕೊಳ್ಳುತ್ತಿದ್ದುದು ಸತ್ಯ. "ಹುಡಿಗಿಯೊಬ್ಬಳ ಬಾಳ್ವೆಯು ಹಾಳಾಯಿತು" ಶ್ರೀನಿವಾಸನು ಅದನ್ನು ಸುನಃ ಸುನಃ ಉಚ್ಚರಿಸಿದನು....."ಹುಡಿಗಿಯೊಬ್ಬಳ ಬಾಳ್ವೆಯು ಹಾಳಾಯಿತು!"—'ಯಾರಿಂದ?' ಎಂಬ ಪ್ರಶ್ನೆಯನ್ನು ಶ್ರೀನಿವಾಸನ ಅಂತರಾತ್ಮನು ಪ್ರಶ್ನಿಸುತಿದ್ದನು. ಮರುಕ್ಷಣದಲ್ಲಿ "ನನ್ನಿಂದ" ಎಂದು ಅದೇ ಅಂತರಾತ್ಮನು ಉತ್ತರಿಸುತಿದ್ದನು. 'ಹಾಳಾಯಿತು ಈ ಹಾಳು ಸಮಾಜ... ಹಿರಿಯರ ಮಾತಿಗೆ ಬಲಿಬಿದ್ದು ಅಪರಾಧವಿಲ್ಲದ, ಮುಗ್ಧ ಸ್ವಭಾವದ, ನನ್ನ ಮುದ್ದು ಮಾಲತಿಯನ್ನು ಹಾಳುಮಾಡಿದೆ. ಅವಳ ಮನವು ಎಷ್ಟೊಂದು ಬೆಂದಿರಬಹುದು? ನನ್ನನ್ನು ಎಷ್ಟೆಂದು ಹೇಡಿ ಎಂದು ತಿಳಿಯಲಿಕ್ಕಿಲ್ಲ? ಅದು ಕೂಡಾ ಇಂದು ನನ್ನ ಕೋಣೆಯ ಎದುರಿನಲ್ಲಿಯೇ ಅಪಘಾತವಾಗಬೇಕೆ? ಅಗೋ—ಅವಳ ಸುಂದರ ವದನದಿಂದ ಸುರಿದ ಆ ದಪ್ಪ ರಕ್ತವು ನನ್ನನ್ನು ಕೆಣಕಿಸುತ್ತಿದೆ....ನನ್ನನ್ನು ನೋಡಿ ನಗುತ್ತಿದೆ...ಅಯ್ಯೋ! ತಾಳಲಾರೆನು.....ನನ್ನ ಮಾಲತಿ....ನೀನೆಷ್ಟು ಅಸ್ವಸ್ಥೆಯಲ್ಲಿ ಯಾತನೆ ಪಡುತ್ತಿರುವೆ? ಮೃತ್ಯುವಿನ ಪಾಶದಿಂದ ವಿಮುಕ್ತಳಾಗಲು ಎಷ್ಟು ಪ್ರಯತ್ನಪಡುತ್ತಿರುವೆ? ನನ್ನ ನೆನಪು ನಿನಗೆ ಬರಬಹುದೆ? ಬರಲೂ ಬಹುದು, ಬರದಿರಲೂಬಹುದು....ಆದರೆ ನನ್ನ ಸ್ಥಿತಿ ನಿನ್ನಂತಿಲ್ಲ....ನಿನಗಾಗಿ ಕಾತರಿಸುತಿದ್ದೇನೆ....ಆದರೆ ಹೇಗೆ ಈ ಮುಖವನ್ನು ನಿನಗೆ ತೋರಿಸಲಿ?' ಎಂದು ನಾನಾ ತರವಾಗಿ ಗೋಳಾಡಿದನು.

ಮರುಕ್ಷಣದಲ್ಲಿಯೇ ಶ್ರೀನಿವಾಸನ ಆತ್ಮವು ವೀರಾವೇಶವನ್ನು ತಾಳಿತು. ಅವನು ಉಗ್ರನಾಗಿ ಧರಧರನೆ ಮೆಟ್ಟಲುಗಳನ್ನು ಇಳಿದು ಆಸ್ಪತ್ರೆಗೆ ಹೊದನು. ಒಳಗೆ ನೇರವಾಗಿ ಹೋಗಿ ಮಾಲತಿಯ ಹತ್ತಿರ ಕುಳಿತುಕೊಂಡನು. ಅವಳ ಇಡೀ ದೇಹಕ್ಕೆ ಪಟ್ಟಿಯನ್ನು ಹಾಕಿದ್ದರು. ಮಾಲತಿಯು ಡಾಕ್ಟರ್ ಬಂದಿರಬೇಕೆಂದು ಮೆಲ್ಲನೆ ಶ್ರೀನಿವಾಸನ ಮುಖವನ್ನು ನೋಡಿದಳು. ಶ್ರೀನಿವಾಸನು ಕಣ್ಣೀರು ಸುರಿಸುತಿದ್ದನು. ಮೊದಲು ಅವಳಿಗೆ ಪರಿಚಯವಾಗಲಿಲ್ಲ. ಅಪರಿಚಿತ ವ್ಯಕ್ತಿ ಕಣ್ಣೀರೇಕೆ ಸುರಿಸುತ್ತಿದೆ ಎಂದು ಅವಳಿಗೆ ಅರ್ಥವಾಗಲಿಲ್ಲ. ಶ್ರೀನಿವಾಸನು, 'ಮಾಲತೀ ನನ್ನನ್ನು ಗುರುತಿಸಲಾರೆಯಾ....' ಎಂದನು.

ಮಾಲತಿಗೆ ತಿಳಿಯಿತು ಅದು ತನ್ನ ಪತಿ ಎಂದು.

'ಹೋ— ನೀವೇಕೆ ಬಂದಿರಿ? ನಿಮಗೂ ನನಗೂ ಅದೆಲ್ಲಿಯ ಸಂಬಂಧ' ಎಂದು ಕಣ್ಣೀರು ಸುರಿಸಿದಳು.

'ಮಾಲತಿ, ನನ್ನನ್ನು ಕ್ಷಮಿಸು..... ಕ್ಷಮಿಸು ಮಾಲತಿ....ಪ್ರಪಂಚ ತಳಮಳವಾದರೂ ನಿನ್ನನ್ನು ಬಿಡಲಾರನೇನು.' ಎಂದನು ಶ್ರೀನಿವಾಸನು.

'ನನಗೂ ನಿಮ್ಮ ಕೊನೆಯ ದರ್ಶನಬೇಕಿತ್ತು" ಎಂದು ಮಾಲತಿ ತಬ್ಬಿಕೊಂಡಳು. ಐದು ನಿಮಿಷ ಕಳೆದಾಗ ಮಾಲತಿಯ ಕೈಗಳು ದೊಪ್ಪನೆ ಹಾಸಿಗೆಯ ಮೇಲೆ ಬಿದ್ದುವು.

ಶ್ರೀನಿವಾಸನು 'ಮಾಲತೀ..' ಎಂದು ಚೀರಿದಾಗ ಅವಳ ಆತ್ಮವು ಪಂಚಭೂತಗಳಲ್ಲಿ ಲೀನವಾಗಿತ್ತು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಮಿ ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%
ಕರೆಂಟ್ ಎಕೌಂಟು ½%

The Moolky Bank, Ltd.

ಗುಟ್ಟಾಗಿ ಸರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನಪ್ರಯೋಗಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಸ್ಕ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P.) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ಶ್ರೀವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನೆ. ಯು.)
628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಎಕ್ಸ್‌ಟೆನ್, ಮೈಸೂರು-1 (S.I.)

PHONE 203 ESTD 1926

FOUNDATION STONE
Engraved MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಇತಿಹಾಸದ ಘಟನೆಗಳ ಮೇಲೆ ಒಂದು ದೃಷ್ಟಿ—

ರಾಣೀ ಲಕ್ಷೀಬಾಯಿ ಮತ್ತುವನಟಿದಾಗ...

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆಚ್ಚೆದೆಯ ವೀರರಮಣಿಯಾಗಿ ಕಾದಾಡಿ ಕೊನೆಯುಸಿರಿರುವ ವರೆಗೂ ತನ್ನ ಸ್ವಾತಂತ್ರ್ಯಕ್ಕೆ ಆತಂಕ ಬರದಂತೆ ನಡೆದು, ಸರ್ವತಂತ್ರ ಸ್ವತಂತ್ರೆಯಾಗಿ ದೇಶಕ್ಕಾಗಿ ಪ್ರಾಣಾರ್ಪಣೆಗೈದ ವೀರ ನಾರಿಯೆಂದರೆ ಝಾನ್ಸಿಯ ಮಹಾರಾಣಿ ಲಕ್ಷ್ಮಿಬಾಯಿ. ಆಕೆಯ ಮೃತ್ಯುವಾದಾಗ, ದೇಶದ ಪರಿಸ್ಥಿತಿಯು ಒಂದು ವಿವಂಚನಾ ಪ್ರಸಂಚವಾಗಿರುವುದು. ಡಾ. ಸಿಲ್ವೆಸ್ಟರ್ ಎಂಬವರು ಮಾಳವ ಮತ್ತು ಬುಂದೇಲ ಖಂಡಗಳಲ್ಲಿ ಉರಿಯುತಿದ್ದ ಕ್ರಾಂತಿ ಜ್ವಾಲೆಯನ್ನು ಶಾಂತಗೊಳಿಸುವುದಕ್ಕಾಗಿ ದಕ್ಷಿಣದಿಂದ ಕಳುಹಲ್ಪಟ್ಟ ಬ್ರಿಟಿಷ ಸೇನೆಯೊಂದಿಗಿದ್ದರು. ಅವರು ಹೀಗೆ ರವಾನಿಸಲಾದ ಸೇನೆಯಲ್ಲಿ ಆಸಿಸ್ಟೆಂಟ್ ಸಿವಿಲ್ ಸರ್ಜನರಾಗಿದ್ದರು. ತಾವು ಕಣ್ಣಾರೆ ಕಂಡಿದ್ದ ಯುದ್ಧ ವೃತ್ತಾಂತವನ್ನವರು ಬರೆದಿಟ್ಟಿದ್ದರು. ಇದು ೧೮೬೦ರಲ್ಲಿ ಪುಸ್ತಕ ರೂಪದಲ್ಲಿ ಅಚ್ಚಾಗಿದ್ದು ಈ ಲೇಖನವು ಅದರ ಒಂದು ಅಂಶವಾಗಿದೆ.

ಝಾನ್ಸಿಯ ಗಡಿಯೊಳಗೆ ಬ್ರಿಟಿಷ ಸೇನೆಯು ಪ್ರವೇಶಿಸಿದೊಡನೆಯೇ ಒಳಗಿನಲ್ಲಿ ತಮ್ಮನ್ನೆದುರಿಸಲು ತೀವ್ರವಾದ ವ್ಯವಸ್ಥೆಯು ಮಾಡಲ್ಪಟ್ಟಿದೆ ಎಂಬ ಸಮಾಚಾರವು ಈ ಸೇನೆಗೆ ತಿಳಿದು ಬಂತು. ಆದರೆ ತಮ್ಮ ಮಾರ್ಗದ ಇಕ್ಕಡೆಗಳಲ್ಲಿದ್ದ ಹಳ್ಳಿಗಳಲ್ಲಿ ಇಂತಹ ಮುಖಾಮುಖಿಯ ಚಿಹ್ನೆಗಳಾವುವೂ ಗೋಚರಿಸಲಿಲ್ಲ. ಹಳ್ಳಿಗಳೆಲ್ಲಾ ತೊಯ್ದು ಹೋಗಿದ್ದುವು. ಹುಲ್ಲು ಬೆಳೆದಿತ್ತು. ಕೆರೆಗಳಲ್ಲಿ ಏಕಾಂತ ಸ್ತ್ರಿಯ ಬಳಗಳು ಧ್ಯಾನಸ್ಥವಾಗಿ ಕುಳಿತಿದ್ದುವು. ಝಾನ್ಸಿಯ ಕೋಟೆಯು ಮೈದಾನದಲ್ಲಿ ಕಟ್ಟಲ್ಪಟ್ಟಿದ್ದು ಪ್ರಾಚೀನವೂ ಭವ್ಯವೂ ಆಗಿರುವುದು. ನಗರದ ನಾಲ್ಕೆಡೆಗಳಲ್ಲಿಯೂ ೧೧ ಮೈಲುದ್ದವಾಗಿ ಕೋಟೆಯು ಕಡಿದಿದೆ. ಪ್ರತಿಯೊಂದು ಬುರುಜುಗಳಲ್ಲಿಯೂ ತೋಪುಗಳು ಇಡಲ್ಪಟ್ಟಿವೆ. ಆಂಗ್ಲರ ಸೈನ್ಯ ಈ ಕೋಟೆಯ ದಕ್ಷಿಣದ ಮೈದಾನಿನಲ್ಲಿ ಸಾಲೆಯುವೂರಿತ್ತು. ಇದರ ಸಮೀಪದಲ್ಲಿಯೇ ಜೋಖನ್ ಉದ್ಯಾನವಿತ್ತು. ಕ್ರಾಂತಿಜ್ವಾಲೆಯು ಉರಿಯತೊಡಗಿದಾಗ, ಈ ತೋಟವು ಆಂಗ್ಲ ಸ್ತ್ರೀ ಪುರುಷರ ಆಶ್ರಯಸ್ಥಾನವಾಗಿತ್ತು. ಮೇಲ್ಗಡೆಯಿದ್ದ ಮರಗಳನ್ನೂ ಮನೆಗಳನ್ನೂ ವಿದ್ರೋಹಿಗಳು ಹಾಳುಗೆಡವಿದರು. ಆಂಗ್ಲ ಸೇನೆಯು ಈ ಮರ ಅಥವಾ ಮಂದಿರಗಳನ್ನು ಆಶ್ರಯಹೊಂದಬಾರದೆಂಬ ಉದ್ದೇಶದಿಂದ ಹೀಗೆ ಮಾಡಲಾಗಿತ್ತು. ಅಮುದರಿಂದ ಆಂಗ್ಲರು ಹೊಂಡಗಳನ್ನು ತೋಡಿ ಅವುಗಳಲ್ಲಿ ತೋಪುಗಳನ್ನು ಏರಿಸಿದರು. ೧೮೫೮ನೆ ಮಾರ್ಚಿ ೧೩ರಂದು ಕೋಟೆಯ ಮೇಲೆ ಮುತ್ತಿಗೆ ನಡೆಯಿತು. ಜನರು ಒಳಗೆ ಹೊರಗೆ ಸಂಚರಿಸುವುದನ್ನು ತಡೆದು ಹಿಡಿಯಲಾಯಿತು. ರಾಜಭಕ್ತ ರಾಜ್ಯಗಳ ಕೆಲವು ದೇಶೀಯ ಸೈನ್ಯಗಳೂ ಕೋಟೆ ಮುತ್ತುವುದರಲ್ಲಿ ಆಂಗ್ಲರಿಗೆ ನೆರವಾದರು; ಭೋಪಾಲದ ಬೇಗಮಳು ತನ್ನ ತೋಪುಖಾನೆಯನ್ನೂ ಸಹಾಯಕ್ಕಾಗಿ ಕಳುಹಿದ್ದಳು.

ಗುಂಡು ಹಾರಿಸುವುದಕ್ಕೆ ಆಂಗ್ಲರು ಎರಡು ಕೇಂದ್ರಗಳನ್ನು ಆರಿಸಿದ್ದರು. ಅವುಗಳಲ್ಲಿ ಒಂದು ಪಶ್ಚಿಮದಲ್ಲಿನ ಜಲ ಮಂದಿರದ (ಅಂಪಟ್ಟೆಗೆ) ದಿಕ್ಕಿನಲ್ಲಿತ್ತು. ಇಲ್ಲಿಯೊಬ್ಬ ಸನ್ಯಾಸಿಯು ಗುಡಿಸಲಿತ್ತು; ಅಲ್ಲದೇ ಕೆಲವು ವೃಕ್ಷಗಳೂ ಬೆಳೆದಿದ್ದುವು. ಆಂಗ್ಲರು ಇಲ್ಲಿ ತಮ್ಮ ಪೂರ್ವ ತಯಾರಿಕೆಯ ಕೇಂದ್ರವನ್ನು ಸ್ಥಾಪಿಸಿದರು. ಕೋಟೆಗಳಿಗೆ ಮದ್ದು ತುಂಬುವುದು, ಗುಂಡು ತುಂಬುವುದು ಖಡ್ಗ ಈಟಿಗಳನ್ನು ಹರಿತ ಮಾಡುವುದು ಇತ್ಯಾದಿ ಕಾರ್ಯಗಳು ಇಲ್ಲಿ ನೆರವೇರುತಿದ್ದುವು. ಮುತ್ತಿಗೆಯ ಕೆಲವಾರು ಮೈಲು ಹರಡಿತ್ತು. ಸೇನೆಯ ಬೇರೆ ಬೇರೆ ಸ್ಥಳಗಳಿಗೆ ಅವಶ್ಯಕ ಸಮಾಚಾರವನ್ನು ತಿಳಿಸಲು, ಒಂದು ತಂತಿಯಂತ್ರವು ಇಡಲ್ಪಟ್ಟಿತ್ತು. ಇನ್ನೊಂದು ಕೇಂದ್ರದ ಹೆಸರು ಮಾಮೆಲೋನ್ ಎಂದು ಝಾನ್ಸಿಯ ಕೋಟೆಯ ಎದುರಲ್ಲಿ ಕೊಂಚ ದೂರದಲ್ಲಿ ಈ ಕೇಂದ್ರವಿದ್ದು ಶತ್ರುಗಳನ್ನು ನೇರಾಗಿ ಎದುರಿಸಲು ಬೇಕಾದಂತಿತ್ತು.

ತಳನೆ ದಿನಾಂಕದಂದು ಪೂರ್ವನಿಶ್ಚಿತೆಗಳೆಲ್ಲ ನಡೆದು ಮುಗಿದುವು. ಆ ಮೇಲೆ ಗುಂಡುಹಾರಿಸಲು ಪ್ರಾರಂಭಿಸಲಾಯಿತು. ಆಂಗ್ಲರ ತೋಪುಗಳು ನಿರಂತರವಾಗಿ ಕೆಲಸದಲ್ಲಿ ತಲ್ಲೀನವಾಗಿದ್ದುವು ಅವುಗಳಿಗೆ ವಿರಾಮವೆಂಬುದೇ ಇರಲಿಲ್ಲ. ಕೋಟೆಯ ತೋಪುಗಳು ಆಗಾಗ ಸುಮ್ಮನುಳಿಯುತಿದ್ದುವು; ಬುರುಜುಗಳು ಕೆಟ್ಟು ಹೋಗುತಿದ್ದುವು. ಹಾಗಿದ್ದರೂ ಕೋಟೆಯ ರಕ್ಷಕರು ಅವನ್ನು ರಾತ್ರಿ ಹಗಲೆಂದು ಗಮನಿಸದೆ ಸರಿಪಡಿಸುತಿದ್ದರು. ಈ ಸರಿಪಡಿಸುವ ಕಾರ್ಯದಲ್ಲಿ ಸ್ತ್ರೀಯರೂ ನೆರವಾಗುತಿದ್ದುದು ತೋಪಿಬರುತ್ತು. ಈ ರೀತಿಯಾಗಿ ಏಳುದಿನಗಳವರೆಗೆ ಯುದ್ಧ ನಡೆಯುತ್ತ ಬಂದಿತು. ಅಕ್ಷರಲ್ಲಿ, ಕಾಲ್ಪಿಯ ಮುತ್ತಿಗೆಯು ನಿಂತುದರಿಂದಾಗಿ ಪೇಶ್ವೆಯ ಹತ್ತುಸಾವಿರ ಸೈನಿಕರು ಝಾನ್ಸಿಯತ್ತ ಬರುತಿದ್ದಾರೆಂಬ ವರ್ತಮಾನ ಹರಡಿತು. ಆದುದರಿಂದ ರಾತ್ರಿಯಿಡಿಬಲವಾದ ಕಾವಲಿಡಲಾಯಿತು. ಒಂಭತ್ತನೆಯದಿನ, ಮುಂಜಾನೆ ತಾಂತ್ಯಾ ಟೋಪಿಯು ಸೇನೆ ಸಹಿತ ಅಲ್ಲಿಗೆ ಬಂದನು. ಮುತ್ತಿಗೆ ಹಾಕಿದ್ದ ಕೆಲವು ಸೈನಿಕರನ್ನುಳಿದು, ಕಾಲ್ಪಿಯದ ಹಾಗೂ ತೋಪುಖಾನೆಯ ದಳದ ಸೈನಿಕರಲ್ಲಿ ಸುಮಾರು ಎರಡು ಸಾವಿರ ಸೈನಿಕರನ್ನು ಆರಿಸಿ, ಸರ್ ಹ್ಯೂಮ್ ರೋಜನು ತಾಂತ್ಯಾಟೋಪಿಯನ್ನೆದುರಿಸಲು ಕಳಿಸಿದನು. ಝಾನ್ಸಿಯಿಂದ ಸುಮಾರು ಒಂದು ಮೈಲು ದೂರದಲ್ಲಿ ಈ ಎರಡು ಸೇನೆಗಳು ಸಂಧಿಸಿದುವು. ತಾಂತ್ಯಾಟೋಪಿಯ ಸೇನೆಯು ಅತ್ಯಂತ ವೀರತೆಯಿಂದ ಹೋರಾಡಿತು. ಆಕಾಶವಿಡಿ ಧೂಳು ಮತ್ತು ಧೂಮ್ರಗಳಿಂದಾವೃತವಾಯಿತು. ಈ ನಡುವೆ ಶತ್ರುಗಳು ಆಂಗ್ಲರ ಒಂದು ತೋಪನ್ನು ಸುಟ್ಟುಬಿಟ್ಟರು. ಇದರಿದುರು ಇದ್ದ ಜನರು ಒಬ್ಬರಮೇಲೊಬ್ಬರುರುಳಿದರು. ಸರ್ ಹ್ಯೂಮರೋಜನು ನೆಲದಮೇಲೆ ಮಲಗಿಕೊಂಡು ಗುಂಡು ಹಾರಿಸಲು ಆಜ್ಞೆಯಿತ್ತನು. ಕುದುರೆ ಸವಾರರಿಗೆ ಮುಂದೆ ನುಗ್ಗುವ ಆದೇಶವಿತ್ತನು. ಲೆ. ಕ್ಲಾರ್ಕನು ಅಶ್ವಾರೋಹೀ ಸೇನೆಯೊಡನೆ ಮುಂದುವರಿದನು. ಆದರೆ, ತಾಂತ್ಯಾನ ವಿಲಾಯತೀ ಅರಬರು ಅವನ ಮೇಲೆ ಭೀಷಣವಾಗಿ ಗುಂಡುಹಾರಿಸಿ ಮಾರ್ಗವನ್ನು ಕಡೆದುಬಿಟ್ಟರು. ಈ ಅಗ್ನಿವರ್ಷವನ್ನು ತಡೆದುಕೊಳ್ಳುತ್ತ ಕೈ. ಸೋಡನ ಅಶ್ವಾರೋಹೀ ಸೈನ್ಯವು ತನ್ನ ಪರಾಕ್ರಮವನ್ನು ಪ್ರದರ್ಶಿಸುತ್ತ ಶತ್ರುಗಳನ್ನು ಎದುರಿಸಿತು. ಇದರಿಂದ ತಾಂತ್ಯಾನ ಸೇನೆಯು ಗಡಿಬಿಡಿಗೊಂಡಿತು. ಓಡ ತೊಡಗಿತು. ತಾಂತ್ಯಾನು ಇದನ್ನು ಸರಿಪಡಿಸುವ ಪ್ರಯತ್ನ ಮಾಡಿದರೂ ಸಾಧ್ಯವೆನಿಸಲಿಲ್ಲ. ಸೇನೆಯ ವರ್ತುಲವನ್ನು ಬದಲಾಯಿಸಿ ತೋಪುಖಾನೆಗಳನ್ನು ರಕ್ಷಿಸಲು ಸೇನೆಯನ್ನು ಮುಂದೆ ದೂಡುವ ಪ್ರಯತ್ನ ನಡೆಯಿತು. ಆದರೆ, ಅವನ ಸೇನೆ ಧೈರ್ಯವನ್ನು ದೂರವಾಡಿತ್ತು. ಅಂತ್ಯದಲ್ಲಿ ತೋಪುಗಳನ್ನು ರಣಕ್ಷೇತ್ರದಲ್ಲಿಯೇ ಬಿಟ್ಟು ಅವನು ವೇತ್ವಾ ನದಿಯನ್ನು ದಾಟಿದನು. ಆಂಗ್ಲರು ತನ್ನನ್ನು ಹಿಂಬಾಲಿಸುತ್ತಿಲ್ಲವೆಂದು ತಿಳಿದುಕೊಂಡು ಅವನು ಕಾಡುಗಳಲ್ಲಿ ನಡೆದನು. ಈ ಯುದ್ಧದಲ್ಲಿ ಆಂಗ್ಲರಿಗೆ ಅರುತೋಪುಗಳು, ಎರಡು ಆನೆಗಳು, ಅನೇಕ ಒಂಟೆಗಳು, ಕೆಲವು ಗುಂಡುಗಳು ದೊರೆತುವು. ಈ ಸಮರವು ನಡೆಯುತ್ತಿರುವಾಗ ಝಾನ್ಸಿಯ ಎಲ್ಲ ಸ್ತ್ರೀಪುರುಷರು ಇದರ ಅಂತ್ಯ ಹೇಗಾಗುವುದೆಂದು ಉತ್ಸುಕತೆಯಿಂದ ನೋಡುತಿದ್ದರು. ಈ ಸಮಯದಲ್ಲಿ ಕೋಟೆಯೊಳಗಿನ ಸೇನೆಯು ಆಂಗ್ಲರ ಮೇಲೆ ದಾಳಿಯಿಡುತಿದ್ದರೆ, ಎರಡು ಕಡೆಗಳಲ್ಲಿಯೂ ಬ್ರಿಟಿಷರು ಪರಾಜಯವನ್ನೊಪ್ಪಿ ಕೊಳ್ಳಬೇಕಾಗುತಿತ್ತು. ರಾಣೀ ಲಕ್ಷ್ಮೀಬಾಯಿಯು ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಏಕೆ ಆಕ್ರಮಣ ನಡೆಸಲಿಲ್ಲ ಎಂಬುದೇ ಅಂತ್ಯದ ವರೆಗೂ ಗೂಢ ರಹಸ್ಯವಾಗಿಯೇ ಉಳಿದ ವಿಷಯವಾಗಿತ್ತು. ಆಂಗ್ಲಸೇನೆಯ ಸರ್ವನಾಶ ಹಾಗೂ ತನ್ನ ಸೇನೆಯ ವಿಜಯಕಾರಕವಾಗಿದ್ದ ಇಂತಹ ಅಪೂರ್ವ ಸುತಸರವನ್ನು ರಾಣಿಯು ಬಿಟ್ಟು ಬಿಟ್ಟಳು.

ಏಪ್ರಿಲ್ ಎಂಡನೆ ದಿನಾಂಕ ಎರಡೂ ವಿಭಾಗಗಳಿಗೆ ನೂಲಿನ ಏಣಿಗಳನ್ನು ಕಟ್ಟಿ ಝಾನ್ಸಿಯ ಕೋಟೆಯ ಮೇಲೆ ಆಕ್ರಮಣ ನಡೆಸಲಾಗುವುದೆಂದು ಗುಪ್ತವಾಗಿ ಆಜ್ಞೆ ಕೊಡಲಾಯಿತು. ಇದರಂತೆ ಪಶ್ಚಿಮದ ಜಲ ಮಂದಿರದ ಪಶ್ಚಿಮದಲ್ಲಿದ್ದ ಬಾಗಿಲಿನೆಡೆಯಿಂದ ಏಣಿಯಿಡಲು ಎರಡು ದಳಗಳೂ, ದಕ್ಷಿಣ ವಿಭಾಗದಲ್ಲಿ ಏರಲು ಕೆಲವು ದಳಗಳೂ ಬಂದು ಸೇರಿದುವು. ಮೆಟ್ಟಿಲುಗಳು ತಯಾರಾಗುತ್ತಿರುವುದನ್ನು ಕಂಡು, ಮೇಲಿನಿಂದ ಕಲ್ಲು, ಇಟ್ಟಿಗೆ ಮತ್ತು ಬಂದೂಕುಗಳ ಗುಂಡುಗಳು ಉರುಳಲು ಪ್ರಾರಂಭವಾದುವು. ಲೆ. ಡಿಕ್, ಮೆಕಲಿಜನ್ ಮತ್ತು ಫಾರ್ಕ್ಸ್ ಈ ಮೂವರೂ ನೂಲೇಣಿಯ ಆಧಾರದಿಂದ ಮೇಲೆ ಹತ್ತಿದರು. ಆದರೆ, ಅವರಹಿಂದೆ ಎಲ್ಲರೂ ಆ ನೂಲೇಣಿಯಿಂದ ಏರತೊಡಗಿದುದರ ಪರಿಣಾಮವಾಗಿ, ಏಣಿ ತುಂಡಾಗಿ ಮೂವರೂ ನೆಲಕ್ಕುರುಳಿ ತಮ್ಮ ಪ್ರಾಣಕ್ಕೆ ಎರವಾದರು. ಸರ್ವಡೆಗಳಲ್ಲಿ

(೧೦ನೇ ಪುಟ ನೋಡಿರಿ)

ನಿಮ್ಮ ರಾಜ್ಯ ಸರ್ಕಾರದ ಸಾಲಕ್ಕೆ ಧಾರಾಳವಾಗಿ ಚಂದಾ ನೀಡಿರಿ

1970ರ ರಾಜ್ಯ ಸರ್ಕಾರಗಳ ಶೇಕಡಾ 4½ ದರದ ಸಾಲವು ಇದೇ ಜುಲೈ ತಿಂಗಳ ತಾರೀಖು 15ರಿಂದ ಸಾರ್ವಜನಿಕ ಚಂದಾಕ್ಕಾಗಿ ತೆರೆಯಲ್ಪಡುವುದು.

ಕೆನರಾ ಬ್ಯಾಂಕಿನವರು ತಮ್ಮ ಶಾಖೆಗಳಿರುವ ರಾಜ್ಯಗಳಲ್ಲಿ, ಆಯಾ ರಾಜ್ಯ ಸರ್ಕಾರಗಳು ಎತ್ತಲಿರುವ ಸಾಲಗಳಿಗೆ ಧಾರಾಳವಾಗಿ ಚಂದಾ ನೀಡುವರು.

ಕೆನರಾ ಬ್ಯಾಂಕಿನವರು ತಮ್ಮ ಹಿತಚಿಂತಕರಿಗೂ, ಇತರ ಸಾರ್ವಜನಿಕರಿಗೂ ಈ ಸಾಲಕ್ಕೆ ಚಂದಾ ಕೊಡಲು ಅನುಕೂಲವಾಗುವಂತೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುವರು:—

1) ಅತ್ಯಲ್ಪ ಮಾರ್ಜಿನ್ ಇಟ್ಟುಕೊಂಡು ಸಾಲ ಕೊಡಲಾಗುವುದು.
2) ಹಾಗೆ ಕೊಟ್ಟ ಸಾಲದ ಮೇಲೆ ಶೇಕಡಾ 4½ರಂತೆ ಮಾತ್ರ ಬಡ್ಡಿ ವಿಧಿಸುವರು.
3) ಈ ಸಾಲದ ಹಣವನ್ನು 12 ಸಮಾನ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬಹುದು.

ಹೆಚ್ಚಿನ ವಿವರಗಳಿಗೆ ನಿಮ್ಮ ನಗರೆಯ ನಮ್ಮ ಶಾಖೆಯ ಮ್ಯಾನೇಜರನ್ನು ದಯವಿಟ್ಟು ವಿಚಾರಿಸಿರಿ.

ಮೈಸೂರು ರಾಜ್ಯದಲ್ಲಿರುವ ನಮ್ಮ ಶಾಖೆಗಳು:— ಬೆಂಗಳೂರು-ಅವಿನ್ಯೂ ರೋಡ್, ಬನಶಂಕರಿ ಗುಡಿ, ಮಹಾತ್ಮಾ ಗಾಂಧೀ ರೋಡು, ಮಲ್ಲೇಶ್ವರಂ, ನರಸಿಂಹರಾಜ ರೋಡು; ಬಂಟ್ವಾಳ; ಬೆಳಗಾಂ; ಚಿಕ್ಕಮಗಳೂರು; ಕುಂದಾಪುರ; ದಾವಣಗೆರೆ; ಧಾರ್ವಾಡ; ಗಂಗೊಳ್ಳಿ; ಗುಲ್ಬರ್ಗ; ಹುಬ್ಬಳ್ಳಿ; ಕಾರ್ಕಳ; ಕಾರ್ವಾರ; ಮಂಡ್ಯ; ಮುಲ್ಕಿ; ಮಂಗಳೂರು-ಬಂದರ್, ಸಿಟ್ಟಿ ಕಂಪನಿಗಳಿಟ್ಟಿ; ಮಡಿಕೇರಿ; ಮೈಸೂರು; ಪುತ್ತೂರು; ಶಿವಮೊಗ್ಗ; ಸಿರಸಿ; ತುಮಕೂರು; ಉಡುಪಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ ಸೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ಹಿರಿದಾದುದು.

ಸಂಯುಕ್ತ ಸಂಸ್ಥಾನಗಳ ಭಾವೀ ಸದಸ್ಯ ಸಂಸ್ಥಾನ—

ಅಲಾಸ್ಕಾದ ಸರಳ ಪರಿಚಯ

ಉತ್ತರ ಅಮೆರಿಕೆಯ ತೀರ ಪಶ್ಚಿಮೋತ್ತರಗಳಲ್ಲಿ ಹರಡಿರುವ, ಒಂದು ಕಾಲದಲ್ಲಿ ರಶ್ಯದಿಂದ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳು ಕ್ರಯಕ್ಕೆ ಕೊಂಡುಕೊಂಡಿದ್ದ ಅಲಾಸ್ಕಾವು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳೊಂದಿಗೆ ಸೇರಬೇಕೆಂಬ ಬಯಕೆಯನ್ನಿಟ್ಟು ಕೊಂಡಿತು. ಅದರ ಬಹುದಿನದ ಆಕಾಂಕ್ಷೆ ಇದೀಗ ಪೂರ್ಣಗೊಳ್ಳುವ ಅವಸರವು ಒಂದೊದಗಿದೆ. ಈ ಸಂಬಂಧದ ಮಸೂದೆಯೊಂದು ಅಮೆರಿಕೆಯ ಸೆನೇಟಿನಲ್ಲಿ ೬೪ ವಿರುದ್ಧ ೨೦ ಮತಗಳಿಂದ ಜೂನ್ ೩೦ರಂದು ಸ್ವೀಕೃತವಾಯಿತು. ಪ್ರಜಾಪ್ರತಿನಿಧಿ ಸಭೆಯು ಇದನ್ನು ಈ ಮೊದಲೇ ಒಪ್ಪಿಕೊಂಡಿತ್ತು. ಕಾಂಗ್ರೆಸ್ ಈಗ ಅನುಮೋದಿಸಿರುವ ಈ ಮಸೂದೆಯು ಅಧ್ಯಕ್ಷ ಐಸನ್‌ಹಾವರರ ಸಹಿಸಬೇಕು; ಆ ಮೇಲೆ ಈ ಸಂಯುಕ್ತ ಸಂಸ್ಥಾನಗಳೊಂದಿಗೆ ಸೇರುವುದು ಸಮ್ಮತವೆಂದು ಅಲಾಸ್ಕಾದ ಜನತೆ ಸೂಚಿಸಬೇಕು; ಆಗ, ಅದು ೪೯ನೆಯ ಸಂಸ್ಥಾನವಾಗಿ ಅಮೆರಿಕೆಯ ಸಂಯುಕ್ತ ಸಂಸ್ಥಾನದೊಡನೆ ಸೇರ್ಪಡೆಯಾಗುವುದು. ಈ ಜನಾಭಿಪ್ರಾಯವನ್ನು ಪಡೆಯುವುದಕ್ಕಾಗಿ ಪ್ರಾದೇಶಿಕ ಜನಮತಗಣನೆಯು ನಡೆಯುವುದು. ಆತ್ಯಧಿಕ ಬಹುಮತದಿಂದ ಅಲಾಸ್ಕಾ ಜನತೆಯು ತಮ್ಮ ಗುರಿಸೇರುವುದೆಂದು ನಿರೀಕ್ಷೆಸಬಹುದು.

'ಅಲಾಸ್ಕಾ' ಎಂಬ ಪದವು ಎಸ್ಕಿಮೋ ಭಾಷೆಯಿಂದ ಬಂದಿದೆ. ದೊಡ್ಡ ದೇಶ ಎಂದು ಇದರರ್ಥ. ಇದು ೫,೮೬,೦೦೦ ಚದರ ಮೈಲು ವಿಸ್ತೀರ್ಣವಿದ್ದು ಎರಡು ಲಕ್ಷ ಜನಸಂಖ್ಯಾಸಹಿತವಾಗಿದೆ. ಇದು ಅಮೆರಿಕೆಯೊಡನೆ ಸೇರಿದರೆ, ಆಗ ವಿಸ್ತೀರ್ಣದಲ್ಲಿ ಸಂಸ್ಥಾನಗಳಿಗೆ ಹಿರಿಯ ರಾಜ್ಯವಾಗಿಯೂ ಜನಸಂಖ್ಯೆಯಲ್ಲಿ ಕೊನೆಯದಕ್ಕಿಂತ ಹಿಂದಿನ ಸ್ಥಾನವನ್ನೂ ಗಳಿಸುವುದು. ಈಗ ಅಣುಸ್ಫೋಟನಗೊಳಿಸುತ್ತಿರುವ ನೇವಡಾ ಜನಸಂಖ್ಯೆಯಲ್ಲಿ ಅತಿ ಕಿರಿಯದು. ಅಲಾಸ್ಕಾದ ಕರಾವಳಿಯು ಉದ್ದವಾಗಿಯೂ ಓರೆಕೋರೆಯಾಗಿಯೂ ಇರುವುದು. ಈ ಕರಾವಳಿಯ ಉದ್ದ ಸುಮಾರು ೨೫ ಸಾವಿರ ಮೈಲುಗಳು—ಅಲಾಸ್ಕಾದ ಮೂರು ಸುತ್ತಲೂ ಸಮುದ್ರವಿದ್ದು ಅದೊಂದು ಪರ್ಯಾಯದ್ವೀಪವಾಗಿದೆ.

ಸೀಲ್ ಮೊದಲಾದ ಮೀನುಗಳನ್ನು ಹಿಡಿಯುವುದೇ ಅಲಾಸ್ಕಾದ ಹಿರಿಯ ಕೈಗಾರಿಕೆ. ಈಗ ಸಾಲಿಮನ್ ಜಾತಿಯ ಮೀನುಗಳನ್ನು ಹಿಡಿದು ಅವುಗಳ ಕೈಗಾರಿಕೆಯಿಂದಲೇ ಅಲಾಸ್ಕಾವು ಪ್ರತಿವರ್ಷ ಸುಮಾರು ೮೫೦ ಲಕ್ಷ ಡಾಲರುಗಳನ್ನು ಗಳಿಸುವುದು. ೧೮೬೭ರಲ್ಲಿ ರಶ್ಯದಿಂದ ಕೇವಲ ೭,೨೦೦ ಡಾಲರ್‌ಗಳಿಗೆ ಕೊಂಡುಕೊಳ್ಳಲ್ಪಟ್ಟ ಅಲಾಸ್ಕಾ ಇದೀಗ ಅದರ ಹಲವಾರು ಪಾಲು ಗಳಿಸುತ್ತಿದೆ.

೧೯೨೯ದಿಂದ ಬೆಲೆತೆತ್ತು ಕೊಂಡುಕೊಂಡ ನಂತರ ಅದು ಅಮೆರಿಕೆಯ ವ್ಯವಸ್ಥಿತ ಪ್ರದೇಶವಾಗಿದೆ. ಈಗ ೧೬ ಮಂದಿ ಸೆನೆಟರರೂ ೨೪ ಮಂದಿ ಪ್ರತಿನಿಧಿಗಳೂ ಇರುವ ಒಂದು ವಿಧಾನ ಮಂಡಲವು ಅಲಾಸ್ಕಾದ ಆಡಳಿತವನ್ನು ನಿರ್ವಹಿಸುತ್ತಿದೆ. ಎರಡು ವರ್ಷಗಳಿಗೊಮ್ಮೆ ಒಬ್ಬ ಪ್ರತಿನಿಧಿಯನ್ನು ಆರಿಸಿ ಇಲ್ಲಿಂದ ಅಮೆರಿಕೆಯ ಪ್ರತಿನಿಧಿ ಸಭೆಗೆ ಕಳಿಸಲಾಗುತ್ತಿದೆ. ಆದರೆ, ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಸದಸ್ಯ ರಾಜ್ಯವೆಂದು ಪರಿಗಣಿಸಲ್ಪಟ್ಟಷ್ಟರಮಟ್ಟಿಗೆ ಇದಕ್ಕೆ ಪ್ರತಿನಿಧಿ ಸಭೆಯಲ್ಲಿ ಸಂಪೂರ್ಣ ಪ್ರಾತಿನಿಧ್ಯವೂ ಸೆನೆಟಿನಲ್ಲಿ ಎರಡು ಸ್ಥಾನಗಳೂ ದೊರೆಯಲಿವೆ.

ಹಲವಾರು ವರ್ಷಗಳವರೆಗೆ ಅಲಾಸ್ಕಾವು "ಜನಮರೆತ ದೇಶ" ವೆಂದು ಪರಿಗಣಿತವಾಗಿತ್ತು. ಈ ದೇಶದಲ್ಲಿ ಚಿನ್ನ ಸಿಗುವುದೆಂಬಾಗ ಜನರು ಓಡಿ ಓಡಿ ಇಲ್ಲಿಗೆ ಬರತೊಡಗಿದರು. ಆದರೆ, ಇಂದಿನ ಅಲಾಸ್ಕಾದಲ್ಲಿ ಸ್ವರ್ಣೋತ್ಪತ್ತಿಗಿಂತ ರಜತೋತ್ಪತ್ತಿಯೇ ಅಗ್ರಗಣ್ಯ ಸ್ಥಾನವನ್ನು ಪಡೆದಿರುವುದು. ಬೇಸಗೆಯ ಹುಲ್ಲುಗಾವಲುಗಳು ಅಲಾಸ್ಕಾದತುಂಬ ಹರಡಿರುವುವಾದರೂ ಚಳಿಗಾಲದ ಸಮಯದಲ್ಲಿ ಮಾತ್ರ ಅಲ್ಲಿ ಕುಳ್ಳಿನ ಅಭಾವದಿಂದಾಗಿ ಪಶು ಸಾಕಣೆಗೆ ಬಲವಾದ ಆಘಾತ ಕೊಟ್ಟಂತಾಗಿದೆ. ಧಾನ್ಯಗಳ ಉತ್ಪತ್ತಿಯೇನೂ ಹೇಳಿಕೊಳ್ಳುವಷ್ಟು ಇಲ್ಲಿರುವುದಿಲ್ಲ. ಹೀಗಿದ್ದರೂ ಸೈಬೀರಿಯಾ, ಫಿನ್‌ಲೇಂಡ್, ಸ್ವೀಡನ್, ನಾರ್ವೆ, ಉತ್ತರ ಕೆನೆಡ ಮತ್ತು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ವಾಯುವ್ಯದ ಸಂಸ್ಥಾನಗಳಿಂದ ತಂದ ಧಾನ್ಯ ಮತ್ತು ಮೇಲಿನ ಬೀಜಗಳನ್ನು ಅಲಾಸ್ಕಾದ ಹವಾಮಾನಕ್ಕೆ ಒಗ್ಗುವಂತೆ ಮಾಡುವ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ. ಮಿಶ್ರ ಸಸ್ಯಗಳ ಹಾಗೂ ಪಶುಗಳ ಪಳಗನ್ನೂ ಬೆಳೆಸುವ ಪ್ರಯತ್ನಗಳನ್ನೂ ನಡೆಸಲಾಗುತ್ತಿದೆ. ಸೈಬೀರಿಯಾದ ಗೋದಿಯು ಇಲ್ಲಿ ಹುಲಸಾಗಿ ಬೆಳೆಯುತ್ತದೆ.

ಅಲಾಸ್ಕಾವು ಎದುರಿಸಬೇಕಾದ ಒಂದು ದೊಡ್ಡ ಸಮಸ್ಯೆಯೆಂದರೆ, ಬಹುಭಾಗದಲ್ಲಿ ಶಾಶ್ವತವಾಗಿ ಹಿಮವು ಕವಿದಿರುವುದು. ಅಲಾಸ್ಕಾ ಪರ್ವತಶ್ರೇಣಿಯ ಉತ್ತರಕ್ಕಿರುವ ಬಹುಭಾಗ ನೆಲ ಮೇಲ್ಮೈಯನ್ನು ಬಟ್ಟರೆ, ಒಳಕಾದಲ್ಲಿ ೧೦೦೦ದಿಂದ ಅನೇಕ ನೂರು ಅಡಿಗಳ ವರೆಗೆ ಶಾಶ್ವತವಾಗಿ ಗಡ್ಡೆಕಟ್ಟಿರುತ್ತದೆ. ಬೇಸಗೆಯಲ್ಲೂ ಈ ಗಡ್ಡೆಗಳು ಕರಗಿಹೋಗುವಷ್ಟು ಶಾಖ ದೊರೆಯುವುದಿಲ್ಲ. ಈ ಶಾಶ್ವತ ಹಿಮ ಮಂಜುಗಡ್ಡೆಯ ಯುಗದಿಂದಲೂ ಉಳಿದು ಬಂದಿರುವುದು. ಅಲಾಸ್ಕಾದಲ್ಲಿ ಭೂಮಿಯನ್ನು ಶುದ್ಧಗೊಳಿಸುವುದಕ್ಕೆ ವೆಚ್ಚ ಹೆಚ್ಚು. ಇದರಿಂದಾಗಿ ವ್ಯವಸಾಯಕ್ಕೊಂದು ಪರಿಮಿತಿಯಿದೆ. ಗಡ್ಡೆ ಕಟ್ಟಿರಲಿ, ಕಟ್ಟದಿರಲಿ, ಎಲ್ಲ ನೆಲವೂ ಕೊರೆಯುವ ಸ್ವಭಾವದಿಂದಲೇ ಕೂಡಿದೆ. ಮೇಲ್ಮೈಯಿಂದ ಒಂದೆರಡು ಅಡಿಗಳ ಆಳದಲ್ಲಿ ಬೇರು ಬೆಳೆಯಲಾರದಂತಹ ವಿಚಿತ್ರ ಮಣ್ಣಿನ ಗುಣ ಅಲಾಸ್ಕಾದ ನೆಲದ್ದು!

ಹೀಗಿದ್ದರೂ ಅಲ್ಲಿ ಕೆಲವಾದರೂ ಸಸ್ಯಗಳು ಬೆಳೆಯುವುದು ಆಶ್ಚರ್ಯಗಳ ಆಶ್ಚರ್ಯವೆನ್ನಬೇಕು. ಅಲ್ಲಿನ ಕ್ಯಾಬೇಜು ಒಂದು ಕೈಗಾಡಿ ತುಂಬುವಷ್ಟಿರುತ್ತದೆಯೆಂದರೆ, ಮೂಗಿಗೆ ಬೆರಳೇರಿಸಲೇಬೇಕು. ಕಾಲಿಫ್ಲವರ್, ಬ್ರೊಕೋಲಿ, ಬ್ರಸೆಲ್ಸ್ ಸ್ಪ್ರೌಟ್ಸ್, ಸಾಸಿವೆ, ಬೆಳ್ಳುಳ್ಳಿ ಮತ್ತು ಮೋಲಾರಾಬಿಗಳು ಧಾರಾಳವಾಗಿ ಇಲ್ಲಿ ಬೆಳೆಯುತ್ತವೆ. ಮಧ್ಯ ಅಲಾಸ್ಕಾದ ತನಾನಾ ನದಿಯ ಬಯಲಲ್ಲಿ ಅಲೂ ಗೆಡ್ಡೆಯು ವಿಪುಲವಾಗಿ ಬೆಳೆಯುವುದು.

ಅಲಾಸ್ಕಾ ಬಹು ತೀವ್ರಗತಿಯಿಂದ ಅಭಿವೃದ್ಧಿ ಹೊಂದುತ್ತಿರುವ ಒಂದು ಪ್ರದೇಶ. ಇಲ್ಲಿರುವ ವಿಶ್ವವಿದ್ಯಾನಿಲಯವೇ ಪ್ರಾಯಶಃ ಈ ಬೆಳವಣಿಗೆಯ ಅತ್ಯುತ್ತಮ ನಿದರ್ಶನ. ಒಳ ಭಾಗದ ಫೇರ್‌ಬ್ಯಾಂಕ್ಸ್ ಎಂಬ ಒಂದು ಸಣ್ಣ ಪಟ್ಟಣದ ಸಮೀಪದಲ್ಲಿ ಸ್ಥಾಪಿತವಾಗಿರುವ ಈ ವಿಶ್ವವಿದ್ಯಾನಿಲಯವು ೧೯೩೨ರಲ್ಲಿ ಅರುವಂದು ವಿದ್ಯಾರ್ಥಿಗಳೊಡನೆ ಆರಂಭವಾಯಿತು. ಇಂದು ೪೦೦ ಜನರು ಕ್ರಮಬದ್ಧ ವಿದ್ಯಾಭ್ಯಾಸ ಪಡೆಯುತಿದ್ದಾರೆ. ಅಂದಂದಿನ ಹಟ್ಟಿನ ವಿದ್ಯಾರ್ಥಿಗಳು ಅಲಾಸ್ಕಾದ ಸಮಾಜಗಳಲ್ಲಿ ವಿಶೇಷ ಹಾಗೂ ವಿಸ್ತೃತಾಧ್ಯಯನಗಳನ್ನು ನಡೆಸುತಿದ್ದಾರೆ. ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ವಿವಿಧ ಭಾಗಗಳಿಂದ ಆಯ್ಕೆ ಮಾಡಿದ ಗಣನಾರ್ಹ ಅಧ್ಯಾಪಕ ವರ್ಗವು ಇಲ್ಲಿ ಸೇವೆ ಸಲ್ಲಿಸುತ್ತಿದೆ.

ಅಲಾಸ್ಕಾ ವಿಶ್ವವಿದ್ಯಾಲಯವು ಗಣಿಗಾರಿಕೆ, ವ್ಯವಸಾಯ ಮತ್ತು ತಾಂತ್ರಿಕ ವಿಭಾಗಗಳಿಗೆ ಹೆಚ್ಚು ಪ್ರಾಧಾನ್ಯವಿತ್ತಿದೆ. ಹಾಗೆಂದು ಇತರ ಶೈಕ್ಷಣಿಕಾಂತಗಳ ವಿಷಯದಲ್ಲೂ ಎಚ್ಚರಿಕೆಯಿಂದಲೇ ನಡೆದುಕೊಂಡಿದೆ. ಕೇವಲ ಕೆಲವು ಮೈಲುಗಳ ಅಂತರದಿಂದ ಅಲಾಸ್ಕಾವು ಸೈಬೀರಿಯಾದಿಂದ ಬೇರ್ಪಟ್ಟಿರುವುದರಿಂದ, ರಶ್ಯದ ಚರಿತ್ರೆ, ಭಾಷೆ ಮತ್ತು ಸಂಸ್ಕೃತಿಗಳಲ್ಲೂ ಆಧ್ಯಯನ ಕ್ರಮಗಳನ್ನು ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಲಾಗಿದೆ.

ಆಹಾರಕ್ಕಾಗಿ ಬೇಟೆಯಾಡಲ್ಪಡುವ ಮೀನು ಮತ್ತು ಅರಣ್ಯ ಪ್ರಾಣಿಗಳ ಭವಿಷ್ಯದ ವಿಷಯದಲ್ಲಿ ಈ ವಿಶ್ವವಿದ್ಯಾನಿಲಯವು ಹೆಚ್ಚು ಹೆಚ್ಚಾಗಿ ಆಸಕ್ತಿ ವಹಿಸುತ್ತಿದೆ. ಕಾರಿಬೂ, ಮೂಸ್, ಕುರಿ, ಆಡುಗಳ ಸಂಖ್ಯೆಯನ್ನೂ ವ್ಯಾಪ್ತಿಯನ್ನೂ ಕುರಿತು ಜೀವ ಶಾಸ್ತ್ರಜ್ಞರು ಪರಿಶೀಲನೆ ನಡೆಸುತಿದ್ದಾರೆ. ಈ ಪ್ರಾಣಿಗಳ ಸಂಖ್ಯೆ ಹೆಚ್ಚುತ್ತಿದೆಯೇ ಅಥವಾ ಇಳಿಯುತ್ತಿದೆಯೇ? ಅಲಾಸ್ಕಾದ ಅರಣ್ಯ ಪ್ರಾಣಿಗಳನ್ನು, ತುಪ್ಪಳುಳ್ಳ ಪ್ರಾಣಿಗಳನ್ನು ಮತ್ತು ಮೀನನ್ನು ಶಾಶ್ವತ ಉತ್ಪನ್ನ ಪಡೆಯುವ ತತ್ವದ ಆಧಾರದ ಮೇಲೆ ವ್ಯವಸ್ಥೆಗೊಳಿಸುವುದು ಪ್ರಯೋಜನಕರವೇ ಹೇಗೆ?—ಎಂಬುದನ್ನು ಅರಿತುಕೊಳ್ಳುವುದೇ ಈ ಪರಿಶೀಲನೆಗಳ ಉದ್ದೇಶ. ಅಲಾಸ್ಕಾಕ್ಕೆ ಅತಿ ಹೆಚ್ಚಿನ ಆದಾಯತರುವ ಉತ್ಪನ್ನಗಳಲ್ಲಿ ತುಪ್ಪುಳವು ಮೂರನೆಯ ಸ್ಥಾನವನ್ನು ಗಳಿಸುವುದು. ಬೇಟೆಯ ಹಕ್ಕುಗಳೂ ಸನ್ನಿನ ಪ್ರಾಣಿಗಳೂ ವರ್ಷವೊಂದಕ್ಕೆ ೪೫ ಲಕ್ಷ ರಾತಲುಗಳಷ್ಟು ಮೀನನ್ನೊದಗಿಸುವುವೆಂದು ಅಂದಾಜುಮಾಡಲಾಗಿದೆ. ಆಹಾರ ಮತ್ತು ಬಟ್ಟೆಗಳಿಗಾಗಿ ಅಲಾಸ್ಕಾದ ೧೪ ಸಾವಿರಕ್ಕೂ ಮಿಕ್ಕಿದ ಜನರಿಗೆ ದೀಂ ಜಾತಿಯ ಜಿಂಕೆಗಳೇ ಆಧಾರವಾಗಿವೆ.

ಅಲಾಸ್ಕಾವು ಜಗತ್ತಿನ ಉತ್ತರದ ಸಂಧಿಸ್ಥಳ. ಇಲ್ಲಿ ಹಲವಾರು ಮಾರ್ಗಗಳು ಬಂದು ಸೇರುವುವು. ಅಲಾಸ್ಕಾದ ಮೂಲಕ ನ್ಯೂಯಾರ್ಕಿನಿಂದ ಟೋಕಿಯೋಗೆ ವಿಮಾನದಲ್ಲಿ ಹೋದರೆ, ಬೇರೆಲ್ಲಿ, ನೂಯಾರ್ಕ್ ಟೋಕಿಯೋಗಳಿಗಿಂತಲೂ ಒಂದೂವರೆ ಸಾವಿರ ಮೈಲು ಕಡಿಮೆ ದೂರವಾಗುತ್ತದೆ. ಉತ್ತರ ಅಮೆರಿಕದ ವಾಯುವ್ಯದ ತುತ್ತತುದಿಯಲ್ಲಿರುವ ಈ ಪ್ರದೇಶದ ಮಹತ್ವಕ್ಕೆ ಈ ಒಂದು ಸಂಗತಿಯೇ ಸಾಕು.

ಅಲಾಸ್ಕಾವು ಅಮೆರಿಕೆಯ ಸಂಯುಕ್ತ ಸಂಸ್ಥಾನಗಳೊಂದಿಗೆ ಸೇರ್ಪಡೆ ಹೊಂದಿದ ನಂತರ ಅದು ಮತ್ತಷ್ಟು ಅಭಿವೃದ್ಧಿಯನ್ನು ಹೊಂದುವುದು ನಿಶ್ಚಯ. ಆಗ, ಅಮೆರಿಕೆಯ ಇತರ ಸಂಸ್ಥಾನಗಳಂತೆಯೇ ಸ್ಥಾನಮಾನಗಳನ್ನೂ ಇದು ಪಡೆದು ತೀವ್ರ ಪ್ರಗತಿ ಹೊಂದುವುದೆಂದು ಭಾವಿಸಿದರೆ, ತಪ್ಪೇನಿಲ್ಲ.

ಪುತ್ತೂರು ಡಿ. ಮುನ್ಸ೿ಫ್ ಕೋರ್ಟಿನಲ್ಲಿ

O. P. 19/58

1 ಜಿನರಾಜ ಹೆಗ್ಡೆ, 2. ನಿಳಿಕ ಕುಳಾಲಿ, ಅದಿರಾಜಕೊಂಡೆಯವರ ಮಕ್ಕಳು 3. ಸರಸ್ವತಿ ದೇವಿ—ಅದಿರಾಜ ಕೊಂಡೆಯವರ ವಿಧವೆ ಎಲ್ಲರೂ ಕೂಡಬೆಟ್ಟು ಗ್ರಾಮದಲ್ಲಿರುತ್ತಾರೆ, ಬೆಳ್ತಂಗಡಿ ತಾಲ್ಲೂ— ಅರ್ಜಿದಾರರು

ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಪಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯನ್ನು ತಾ. 17—7—58ಕ್ಕೆ ಇಟ್ಟಿರುತ್ತೆ. ಆಕ್ಷೇಪವುಳ್ಳವರು ಆ ದಿನ ಕೋರ್ಟಿಗೆ ಬಂದು ಹಾಜರಾಗಿ ಉದ್ದೇಶಿಸತಕ್ಕದ್ದು.

(Sd) M. Radhakrishna Rao
Advocate for Petitioners'

ಪುತ್ತೂರು ತಾ. 6—7—58.

1958 ಜುಲ್ಯಾ ತೇದಿ 15ರಿಂದ

ರಾಜ್ಯಸರಕಾರಗಳು 1970ರ ಮರುಪಾವ್ತಿ ವ್ಯಾದೆಯ ಸಾ. ಸೇ. 4½ರ ದರದಲ್ಲಿ ಎತ್ತುವ ಸಾಲಗಳಲ್ಲಿ ಚಂದಾ ಆರ್ಪಿಸಿ ರಾಷ್ಟ್ರದ ಬೆಳವಣಿಗೆಯಲ್ಲಿ ಸಹಭಾಗಿಗಳಾಗಿರಿ.

ಮೇಲ್ಕಂಡ ಸಾಲಗಳಲ್ಲಿ ನಾವು ಸಾಧ್ಯವಿದ್ದಷ್ಟು ಚಂದಾ ಆರ್ಪಿಸುವುದಲ್ಲದೆ, ನಮ್ಮ ಪೋಷಕರಿಗೂ, ಗಿರಾಕಿಗಳಿಗೂ, ಇತರರಿಗೂ ಅಂತಹ ಸಾಲಗಳಿಗೆ ಚಂದಾ ಆರ್ಪಿಸಲು ಸಹಾಯವಾಗುವಂತೆ ಆಕರ್ಷಣೀಯ ಶರ್ತಗಳ ಮೇಲೆ ಸಾಲ ರೂಪದಲ್ಲಿ ಮುಂಗಡಗಳನ್ನು ಕೊಡುವ ಸವಲತ್ತನ್ನು ನೀಡುತ್ತೇವೆ. ವಿಶೇಷ ಮಾಹಿತಿಯನ್ನು ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ. 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಪರಿವ್ರಾಜಕರ ಪರಂಪರಾಗತ ಸಂಪ್ರದಾಯ –

ಚಾತುರ್ಮಾಸ್ಯವ್ರತದ ಹಿನ್ನೆಲೆ

ಕಾಮ ಕೋಟಿ ಪೀಠದ ಶ್ರೀ ಶ್ರೀ ಶಂಕರಾಚಾರ್ಯರು ಮೈಲಾಪುರದ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸ ಪೂಜೆ ಮತ್ತು ಚಾತುರ್ಮಾಸ್ಯಗಳ ಮಹತ್ವವನ್ನು ವಿವರಿಸಿದರು. ಸನ್ಯಾಸಿಗಳೆಲ್ಲರೂ ಈ ವರ್ಷಾಲದಲ್ಲಿ ಎಲ್ಲಾದರೊಂದುಗಡೆ ಚಾತುರ್ಮಾಸ್ಯವನ್ನು ಕೂರುವ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದು ಎಂಬುದಕ್ಕೆಂತ ಹೆಚ್ಚೇನನ್ನೂ ನಾವು ಅರಿತು ಕೊಂಡಿಲ್ಲವೆಂದರೆ ತಪ್ಪೆನಿಸದು ಆದರೆ, ಹೀಗೆ ಚಾತುರ್ಮಾಸ್ಯ ವ್ರತವನ್ನು ಕೈಗೊಳ್ಳುವುದು ಧ್ಯಾನ ಮತ್ತು ಆತ್ಮಜ್ಞಾನ ಹಾಗೂ ಅಹಿಂಸಾ ಪಾಲನೆಗಾಗಿ ಎಂದು ಹೇಳುವಾಗ ಅಶ್ಚರ್ಯಪಡಬಹುದು. ಶ್ರೀ ಶ್ರೀ ಶಂಕರಾಚಾರ್ಯರು ವಿವರಿಸಿದ ಇದರ ಅರ್ಥ ಹಾಗೂ ಪ್ರಯೋಜನಗಳನ್ನು ನಾವು ತಿಳಿದುಕೊಂಡರೆ, ಅದರಿಂದ ನಮ್ಮ ಜ್ಞಾನಾಭಿವೃದ್ಧಿಯೂ ಆಗದಿರದು

ಜೀವನದಲ್ಲಿ ಅದೀಗ ಕಾಲಿರಿಸಿದವನಿರಲಿ, ಕೊನೆಗಾಲದಲ್ಲಿ ದಿನ ದೂಡುತ್ತಿರುವವನಿರಲಿ, ಎಲ್ಲರೂ ಎಲ್ಲಆಶ್ರಮದಲ್ಲಿರುವವರೂ ಆಯಾ ಆಶ್ರಮೋಚಿತವಾದ ಕೆಲವು ಧರ್ಮಗಳನ್ನು ಪರಿಪಾಲಿಸಿಕೊಂಡು ಬರಬೇಕು. ಸನ್ಯಾಸಿಯಾದವನು ಯಾವುದೇ ಒಂದೆಡೆಯಲ್ಲಿಯೇ ಸ್ಥಿರವಾಗಿ ನೆಲೆಯೂರಬಾರದೆಂದು ನಿಯಮವಿರುವುದು. ಅನನೊಬ್ಬ ಪರಿವ್ರಾಜಕನಾಗಿರಬೇಕು. ಸನ್ಯಾಸಿಯಾದವನು ಬೇರೆ ಬೇರೆಡೆಯಲ್ಲಿ ನೆಲಸಿರುವ ತನ್ನ ಶಿಷ್ಯ ಸಮುದಾಯದೊಡನೆ ನಿಕಟ ಸಂಪರ್ಕವನ್ನಿಟ್ಟುಕೊಳ್ಳಬೇಕು; ಅವರ ಆಧ್ಯಾತ್ಮಿಕಾವಶ್ಯಕತೆಗಳನ್ನು ಪೂರೈಸಿಕೊಡಬೇಕು ಮತ್ತು ಶಾಸ್ತ್ರಸಮ್ಮತ ವಿಧಾನಗಳಿಂದ ಅವರನ್ನು ಸನ್ಮಾರ್ಗನಿರತರಾಗುವಂತೆಯೂ ಕ್ರಮಾಗತ ಜೀವನವನ್ನು ನಡೆಸುವಂತೆಯೂ ಸಲಹೆಯೀಯಬೇಕು. ರಾಜಕಾರಣದಲ್ಲಿ ಪ್ರವೇಶವೇ ಬರುವ "ಜನತಾಸಂಪರ್ಕ"ವೇ ಇದು. ಸನ್ಯಾಸಿಯು ಯಾವುದಾದರೂ ಒಂದೆಡೆಯಲ್ಲಿ ಬಹುಕಾಲ ನೆಲೆನಿಂತರೆ, ಅವರು ಸ್ನೇಹಲತೆಯಿಂದ ಬಂಧಿಸಲ್ಪಡುವ, ಆ ಊರಿನ ಆತಂಕಗಳೆಲ್ಲವನ್ನೂ ನಿವಾರಿಸಿಕೊಂಡು, ಸುಖಾಕಾಂಕ್ಷಿಯಾಗುವ ಸಂಭವವಿದೆ. ಗುರುತು ಪರಿಚಯಗಳ ದೆಸೆಯಿಂದಾಗಿ ಸನ್ಯಾಸಿಯು ಬಲವಂತಕ್ಕೆ ಸಿಕ್ಕಿಬೀಳಬಹುದು ಆದುದರಿಂದಲೇ ಸನ್ಯಾಸಿಯಾದವನು ಒಂದೆಡೆಯಲ್ಲೇ ನೆಲಸಬಾರದೆಂದು ನಮ್ಮ ಶಾಸ್ತ್ರಗಳು ಸಾರುತ್ತವೆ. ಇದಕ್ಕೆ ವಿಪರೀತವಾದರೆ, ಸನ್ಯಾಸಿಯು ತನ್ನ ಕರ್ತವ್ಯದಿಂದ ವಿಮುಖನಾಗುವ ಸಂಭವವು ಹೆಚ್ಚು ಮತ್ತು ಸುಲಭವಾಗುವುದು.

ಈ ರೀತಿಯ ಅನುದಿನದ ಸಂಚಾರದಿಂದಾಗಿ ಸನ್ಯಾಸಿಗೆ ಧ್ಯಾನ ಹಾಗೂ ಮತ್ತಿತರ ಆಧ್ಯಾತ್ಮಿಕ ಕಾರ್ಯಗಳಿಗೂ ಸತ್ಯಾನ್ವೇಷಣೆಯ ಮೂಲವಾದ ಆತ್ಮಜ್ಞಾನ ಸಂಪಾದನೆಗೂ ಸಾಕಷ್ಟು ಬಿಡು ದೊರೆಯಲಾರದು ಇದಕ್ಕಾಗಿಯೇ ಆಷಾಢ ಪೂರ್ಣಿಮೆಯಿಂದು ಪ್ರಾರಂಭವಾಗುವ ಚಾತುರ್ಮಾಸ್ಯಾವಧಿಯಲ್ಲಿ ಒಂದು ಸ್ಥಳದಲ್ಲಿಯೇ ನೆಲೆನಿಲ್ಲಬಹುದಾಗಿದೆ. ಈ ಕಾಲವೂ 'ಪ್ರಾವೃತ್' ಎಂದು ಕರೆಯಲ್ಪಡುವ ಮಳೆಗಾಲದ ಕೊಡೆತದ ಕಾಲವೂ ಹೌದು.

ಚಾತುರ್ಮಾಸ್ಯಕ್ಕೆ ಈ 'ಪ್ರಾವೃತ್' ಸಮಯವನ್ನು ಆರಿಸಿರುವುದಕ್ಕೂ ಒಂದು ಕಾರಣವಿದೆ ಯಾವುದಕ್ಕೇ ಆಗಲಿ ನೋವನ್ನುಂಟು ಮಾಡದಿರುವ ಅಹಿಂಸಾ ಧರ್ಮವು ಸನ್ಯಾಸಾಶ್ರಮದ ಒಂದು ಪ್ರಧಾನಾಂಗವಾಗಿದೆ. ಇದಕ್ಕಾಗಿಯೇ ಸನ್ಯಾಸಿಯು ಪ ದಯಾತ್ರೆಯನ್ನೇ ಮಾಡಬೇಕೆಂಬ ವಿಧಿಯಿರುವುದು ಒಂದು ವೇಳೆ ನಾವು ನಡೆಯುವಾಗ, ಅಪ್ಪಿತಪ್ಪಿಯಾದರೂ ಭೂಮಿಯ ಮೇಲಿನ ಪ್ರಾಣಿಯ ಮೇಲೆ ಪಾದವಿಟ್ಟರೂ ಸಾಮಾನ್ಯತಃ ಆ ಪ್ರಾಣಿ ಸಾಯುವುದಿಲ್ಲ ಏಕೆಂದರೆ, ನಮ್ಮ ಪಾದಗಳ ಅಡಿಭಾಗದ ರಚನೆ ಅಂತಹ ರೀತಿಯಲ್ಲಿದೆ! ಆ ಪ್ರಾಣಿಯು ಪಾದಗಳ ಮಧ್ಯೆ ಸಂದುಗಳಲ್ಲಿ ತಪ್ಪಿಸಿಕೊಂಡು ಹೋಗುವುದು ಮಳೆಯ ಕಾಲದಲ್ಲಿ ನೂರಾರು ಜಾತಿಯ ಕ್ರಿಮಿಕೀಟಾದಿ ಜೀವಿಗಳು ಹುಟ್ಟಿ ಭೂಭಾಗದಲ್ಲಿ ಸಂಚರಿಸುತ್ತಿರುತ್ತವೆ ಈ ಸಮಯದಲ್ಲಿ ಉಳಿದ ಕಾಲದಲ್ಲಿರುವುದಕ್ಕಿಂತ ಹಿಂಸಾಭಯ ಅಧಿಕವಾಗಿದೆ ಏಕೆಂದರೆ, ಭೂಭಾಗದಲ್ಲಿ ಹೆಚ್ಚು ಪ್ರಾಣಿಗಳು ಇರುವುದರಿಂದ ಅವುಗಳ ದಬ್ಬಣೆಯಿಂದಾಗಿ ಪಾದಗಳಡಿ ಬೀಳುವ ಸಂಭವ ಹೆಚ್ಚು. ಚಾತುರ್ಮಾಸ್ಯ ವ್ರತಕ್ಕೆ ಸಂಕಲ್ಪವನ್ನು ಮಾಡುವಾಗ, ಸನ್ಯಾಸಿಯು ತನ್ನ ಸ್ವತ್ತು ನೆರೆದ ಶಿಷ್ಯಕೋಟಿಯೊಡನೆ "ಪ್ರಾವೃತ ಕಾಲವು ಕಾಲಿರಿಸಿತು, ಎಲ್ಲೆಲ್ಲಿಯೂ ಪ್ರಾಣಿಸಂಕುಲಗಳು ತೋರಿಬರಹತ್ತಿವೆ. ನಿಮಗೆ ಅನುಕೂಲವಿದ್ದಾದರೆ, ನಾನು ಈ ಸ್ಥಳದಲ್ಲಿ ಚಾತುರ್ಮಾಸ್ಯ ವ್ರತವನ್ನಾಚರಿಸುತ್ತೇನೆ" ಎನ್ನುತ್ತಾನೆ ಆಗ ಶಿಷ್ಯರು ಅಪರೂಪವಾಗಿ ತಮಗೆ ಒದಗಿಬಂದ ಗುರುವಿನ ಕೈಂಕರ್ಯದ ಅವಸರವನ್ನು ಕಳೆದುಕೊಳ್ಳಬಯಸದ ಕೆಮ್ಮೊಂದಿಗೆ ಆಂ ಮವಾಗಿ ತಮ್ಮ ವ್ರತವನು ಕೈಗೊಳ್ಳಬೇಕೆಂದೂ, ತಾವು ಸನ್ಯಾಸಿಯ ಸೇವೆಯನ್ನು ಶಕ್ತ್ಯನುಸಾರ ಮಾಡುತ್ತೇವೆ ಎಂದೂ ಅಶ್ವಾಸನೆ ನೀಡುತ್ತಾರೆ

ಸನ್ಯಾಸಿ ಬೇಳುತ್ತಾನೆ:

ಪ್ರಯೋಣ ಪ್ರಾಣಿ ಸಂಕುಲಂ ವರ್ತ್ಮಾದೃಶ್ಯತೇ | ಅದ್ಯೇ ಷಾಂ ಅಹಿಂಸಾರ್ಥಂ ಸಕ್ಷ್ಯ ವೈ ಪ್ರವೃತಿ ಜೋದನಾತ್ ಸ್ಥಾಸ್ಯಾಮ ಚಾತುರ್ಮಾಸ್ಯಮ್ ಅತ್ರೈವ ಸಾಂಪ್ರತಿ ಬಾಳಕೇ ॥

ಜನರು ಉತ್ತರಿಸುತ್ತಾರೆ—

ನಿಸಂತು ಸುಖೇನಾತ್ರ ಗವಿಂಶ್ಯವ ಕೃತಾರ್ಥತಾಮ್ | ಯಾವ ಶಕ್ತಿ ಚ ಶುಶ್ರೂಷಾಂ ಕರಿಷ್ಯಾಮೋನಯಂ ವಯಂ ॥

ಸನ್ಯಾಸಿಗಳು ಸ್ವಯಂ ಅಡಿಗೆ ಮಾಡಿಕೊಳ್ಳಬಾರದೆಂಬ ನಿಯಮವೂ ಅಹಿಂಸಾ ಪಾಲನೆಗಾಗಿರುವುದು ಧಾನ್ಯಗಳಲ್ಲಿರುವ ಜೀವಿತ ವಸ್ತುವಲ್ಲದೇ ನೀರು ಕಟ್ಟಿಗೆ ಇತ್ಯಾದಿಗಳಲ್ಲಿ ಜೀವಂತ ಪ್ರಾಣಿಗಳಿರುವ ಸಂಭವವಿದೆ ಆದುದರಿಂದಲೇ ಸನ್ಯಾಸಿಗಳು ಗೃಹಸ್ಥರು ಇತ್ತುದ ಲ್ಲಿಯೇ ತಾವು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಹಸುರೆಲೆಗಳನ್ನೂ ಸನ್ಯಾಸಿಗಳು ಕೀಳಬಾರದು ಆದರಿಂದ ಜೀವಂತವೃಕ್ಷಕ್ಕೆ ಹಿಂಸೆಯೊದಗಬಾರದು. ನಿಜವಾಗಿಯೂ ಸನ್ಯಾಸಾಶ್ರಮಕ್ಕೆ ಅಗ್ನಿಯಿರುವುದಿಲ್ಲ. ಆದುದರಿಂದಲೇ ಅವರು ಯಾವುದೇ ಹೋಮವನ್ನು ಮಾಡಲಾರರು

ಹಿಂದೂ, ಬೌದ್ಧ ಮತ್ತು ಜೈನ ಸಂಪ್ರದಾಯಗಳಲ್ಲಿ ಚಾತುರ್ಮಾಸ್ಯ ವ್ರತಾಚರಣೆಯು ತೀರ ಸಾಮಾನ್ಯವಾಗಿದೆ. ಸುಮಾರು ತಿ ನಾನಿರ ವರ್ಷಕ್ಕೂ ಪೂರ್ವದ ಅಶೋಕನ ಆಜ್ಞಾಪತ್ರದಲ್ಲಿ ಚಾತುರ್ಮಾಸ್ಯ ವ್ರತವು ನಾಲ್ಕು ತಿಂಗಳುಗಳ ಕಾಲವೆಂದು ಕೇಳಲಾಗಿದೆ ಆದರೆ, ಇದು ಎರಡು ತಿಂಗಳುಗಳಿಗೆ ಎಂದು ಇಳಿಸಲ್ಪಟ್ಟಿತೆಂದು ತಿಳಿದು ಬಂದಿಲ್ಲ ಪಕ್ಷವೇ ಮಾಸವೆಂಬ ನಿಯಮವು ಇದಕ್ಕೆ ಕ್ರಮೇಣ ಅನ್ವಯಿಸಲ್ಪಟ್ಟು ಈಗಿನ ರೂಪಕ್ಕದು ಒಂದಿರಬಹುದು

ಶ್ರೀ ಮದ್ಭಾಗವತದಲ್ಲಿಯೂ ಚಾತುರ್ಮಾಸ್ಯದ ಉಲ್ಲೇಖವಿದೆ ನಾರದನೊಡನೆ ಆತನು ಪ ಹಾ ಚ್ಚಸಿಯಾದುದು ಹೇಗೆಂದು ಪ್ರಶ್ನಿಸಿದಾಗ, ನಾರದನು ತಾನು ತನ್ನ ಬಾಲ್ಯಕಾಲದಲ್ಲಿ ತಾಯಿಯೊಡನೆ ನೆಲಸಿದ್ದ ಊರಲ್ಲಿ ಹಲವಾರು ಸನ್ಯಾಸಿಗಳು ಚಾತುರ್ಮಾಸ್ಯ ವ್ರತವನ್ನು ಕೈಗೊಳ್ಳತಿದ್ದರೆಂದೂ ಆ ಮಹಾ ಮುನಿಗಳಿಗೆ ಭಿಕ್ಷೆ ನೀಡಿ ಉಳಿದ ಆಹಾರವನ್ನು ತಾನುಂಡುದರಿಂದ ಅವರ ಕೃಪೆಯಿಂದ ತಾನು ಜ್ಞಾನಿಯಾದೆನೆಂದೂ ಉತ್ತರಿಸುತ್ತಾನೆ

ಒಬ್ಬ ಸನ್ಯಾಸಿಯು ವ್ಯಾಸಪೂಜೆಯನ್ನು ಮಗಿಸಿದ ಮೇಲೆಯೇ ಆತನು ಚಾತುರ್ಮಾಸ್ಯ ಕೂರಬೇತ್ತಾನೆ ಸನ್ಯಾಸ್ಯೇತರರಿಗೆ ಉಪಾಕರ್ಮವಿದ್ದಂತೆಯೇ ಸನ್ಯಾಸಿಗಳಿಗೆ ವ್ಯಾಸಪೂಜೆ ವಿಧಿವತ್ತಾಗಿ ವ್ಯಾಸಪೂಜೆಯನ್ನು ಪೂರೈಸಿ, ನಿಯಮಾನುಸಾರ ಚಾತುರ್ಮಾಸ ವ್ರತವನ್ನು ಕೈಗೊಳ್ಳುವರು ಈ ಎರಡು ತಿಂಗಳ ಅವಧಿಯು ಮುಕ್ತಾಯಗೊಂಡ ಮೇಲೆ ಯಾತ್ರಾಮನಾಗಿ ತಮ್ಮ ಪರಿವ್ರಾಜಕ ಪದ್ಧತಿಯನ್ನು ಮುಂದುವರಿಸುವರು.

ಚಾತುರ್ಮಾಸ ವ್ರತಾವಧಿಯಲ್ಲಿ ಸನ್ಯಾಸಿಗಳು ಶಿಷ್ಯೋಪದೇಶಕ್ಕಿಂತ ತಮ್ಮ ಆತ್ಮಜ್ಞಾನ, ಸತ್ಯಾನ್ವೇಷಣೆಗೆ ಮಹತ್ವದ ಸ್ಥಾನವನ್ನು ಕಲ್ಪಿಸುವರು ವ್ಯಾಸಪೂಜೆಯು ಗುರ್ವಾರಾಧನೆಯಾಗಿದೆ ನಮ್ಮಲ್ಲಿ ವ್ಯಾಸಪೂರ್ಣಿಮಾ ಎಂದು ಕರೆಯಲ್ಪಡುವ ಹಬ್ಬ ಉತ್ತರಭಾರತದಲ್ಲಿ ಗುರುಪೂರ್ಣಿಮಾ ಎಂದು ಕರೆಯಲ್ಪಡುತ್ತದೆ. ಅಂದು ಗುರುಪೂಜೆಯು ನಡೆಯುವುದು. ಸ್ವಾರ್ಥ ಸನ್ಯಾಸಿಗಳು ತಮ್ಮ ಚಾತುರ್ಮಾಸ್ಯವನ್ನು ವ್ಯಾಸಪೂಜೆಯಿಂದಾರಂಭಿಸಿ ವಿಶ್ವರೂಪ ಯಾತ್ರೆಯಲ್ಲಿ ಕೊನೆಗೊಳಿಸುವರು ವೈಷ್ಣವರು ಸಂಕಲ್ಪದಿಂದಾರಂಭಿಸಿ ಉತ್ಥಾನದಲ್ಲಿ ಮುಗಿಸುವರು.

ಪ್ರತಿಯೊಂದು ಶೋಧನೆಯಲ್ಲೂ ಶ್ರೇಷ್ಠತೆಯನ್ನು ಗಳಿಸಿದ ಯಂತ್ರವನ್ನೇ ಕೊಂಡುಕೊಳ್ಳಿರಿ



ಉಷಾ ಹೊಲಿಗೆ ಯಂತ್ರ

ನಮ್ಮ ದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾದದ್ದು

ಏಕಮೇವ ಮಾರಾಟ ಮಾಡುವ ಏಜಂಟರು

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್,
120, ಆರ್ಮೇನಿಯನ್ ಸ್ಟ್ರೀಟ್,
ಮದ್ರಾಸು—1
ಗ್ರಾಮ್ಸ್ "USHAKO". ಫೋನ್: 2278.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಖಜೇರಿ: ಮುಕುಂದ ನಿವಾಸ, ಉಡುಪಿ

ಮಳೆಗಾಲ ಪ್ರಾರಂಭವಾಗಿದೆ .. !

ದಿನಗಳು ಉರುಳುತ್ತವೆ ಕಾಲಗಳು ಕಳೆಯುತ್ತವೆ. ಒಂದರ ನಂತರ ಮತ್ತೊಂದು, ಕಾಲಚಕ್ರ ಸಮಯದ ವ್ಯೂಹ ತಿರುಗುತ್ತಾ ಇರುತ್ತದೆ.

ಅಂತೆಯೇ ನೀವು ಸಿಂಡಿಕೇಟ್ ಬೇಂಕಿನಲ್ಲಿ ಜಮೆಯಾಗಿರಿಸಿದ ಮೊತ್ತ ವೃದ್ಧಿಯಾಗುತ್ತಾ ಇರುತ್ತದೆ ನೀವು ಸಿಗ್ಮಿ ಠೇವಣಾತಿದಾರರಾಗಿ, ಅದವಾ ಇನ್ನಾವುದೇ ಉಳಿತಾಯ ಯೋಜಕರಾಗಿ, ಕೂಡಿಡುತ್ತಿರುವ ಹಣ ಬೆಳೆಯುತ್ತಾ ಇರುತ್ತದೆ ಮತ್ತು ಅಪತ್ಕಾಲದಲ್ಲಿ ನಿಮ್ಮ ನೆರವಿಗೆ ಬಂದೇ ಬರುತ್ತದೆ

ನಮ್ಮ 113 ಶಾಖೆಗಳು ನಿಮ್ಮ ಸೇವೆಗೆ ಸದಾ ಸಿದ್ಧವಿವೆ

ಟಿ ಎ ಪೈ, ಬಿ ಕಾಂ.(ಲಂಡನ್)
ಎ ಐ ಐ ಬಿ ಯಸ್ ಆರ್ ಇ ಎಸ್ (ಲಂಡನ್)
ಜನರಲ್ ಮೆನೇಜರ್.

ಡಾ ಟಿ ಮಾಧವ ಪೈ,
ಎಂ ಬಿ ಬಿ ಎಸ್,
ಮೆನೇಜಿಂಗ್ ಡೈರೆಕ್ಟರ್

THE CANARA INDUSTRIAL & BANKING SYNDICATE LTD, UDIPI.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೂಟ್ಟು ಲಕ್ಷ ಪ್ರತಿಫಲ ಪಡೆಯಿರಿ

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೧೦-೭-೧೯೫೮	ಸಂಚಿಕೆ ೪೪

ಬೆಕ್ಕು ಸನ್ಯಾಸಿಯಾಯಿತೆ?

"ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ" ಎಂಬ ಸುದೃಢವಾದ ನಿರ್ಧಾರಕ್ಕೆ ಅಂಟಿಕೊಂಡು ಒಂದೆಡೆ ಭಾರತವು ಶಾಂತವಿಧಾನದಿಂದ ಈಗಿರುವ ಪಾಕಿಸ್ತಾನ ಮತ್ತು ತನ್ನೊಳಗಿನ ಸಮಸ್ಯೆಗಳನ್ನು ಬಿಡಿಸಿ, ಉಭಯ ರಾಷ್ಟ್ರಗಳ ಸ್ನೇಹಲತೆಯನ್ನು ಬೆಳೆಸಿಕೊಂಡು ಬರಬೇಕೆಂಬ ಇಚ್ಛೆದೆಯಿಂದ ಸಾಮ್ಯ ಕಾರ್ಯಾಚರಣೆಯಲ್ಲಿಯೇ ತಲ್ಲೀನವಾಗಿರುವಾಗ, "ಕಾಶ್ಮೀರವು ಭಾರತದ ಅಂಗ" ಎಂಬಂಶವನ್ನು ಒಪ್ಪದೆ, ಅಲ್ಲಿ ತನ್ನ ತಪ್ಪುಗಳೇನೇ ನಡೆದಿರಲಿ, ಅವೆಲ್ಲವನ್ನೂ ಮರೆಮಾಜಿ ಜನಮತಗಣನೆಯಾಗಬೇಕು; ತನ್ಮೂಲಕ ಈ ಸಮಸ್ಯೆ ಬಗೆಹರಿಯಬೇಕು; ಆದರೆ, ಈ ಕಾರಣದಿಂದಾಗಿ ಪಾಕಿಸ್ತಾನವು ನೆರೆ ರಾಷ್ಟ್ರ ಭಾರತದೊಡನೆ ಎಂದಿಗೂ ಹೋರಾಡಬಯಸುವುದಿಲ್ಲ ಎಂಬುದಾಗಿ ಪಾಕ್ ಪ್ರಧಾನಿ ಶ್ರೀ ಫಿರೋಜಖಾನ ನೂನರು ತಮ್ಮ ಹಿಂದಿನ ಉಗ್ರ ಕ್ರಮಗಳನ್ನು ಬಿಟ್ಟು ಸೌಮ್ಯತೆಯನ್ನಂಗೀಕರಿಸಿರುವಾಗ, "ಕಾಶ್ಮೀರ ವಿಮೋಚನಾ ಚಳುವಳಿ" ಎಂಬ ನಾಮಧೇಯದಿಂದ ಶ್ರೀ ಚೌಧುರಿ ಗುಲಾಮ ಅಬ್ಬಾಸ ಮಹಾಶಯರು ಭಾರತ-ಪಾಕ ಕಾಶ್ಮೀರ ಯುದ್ಧ ವಿರಾಮ ರೇಖೆಯನ್ನು ಉಲ್ಲಂಘಿಸಿ, ಕಾಶ್ಮೀರ ಜೈತ್ರಯಾತ್ರೆಯನ್ನು ಮಾಡಿ ಒಮ್ಮೆ ಕೈಸುಟ್ಟುಕೊಂಡು ಸೆರೆಮನೆಯಲ್ಲಿರುವಾಗ, ಇದೀಗ ಈ ಚಳುವಳಿಯ ವರಿಷ್ಠಮಂಡಳಿಯು "ಕಾಶ್ಮೀರ ಯುದ್ಧ ವಿರಾಮ ಗಡಿಯ ಪಾವಿತ್ರ್ಯವನ್ನು ಛಿನ್ನ ವಿಚ್ಛಿನ್ನಗೊಳಿಸುವ" ಅಚಲ ನಿರ್ಧಾರವನ್ನು ಕೈಗೊಂಡಿರುವುದು ಸೋಜಿಗವೇ ಸರಿ. ಶ್ರೀ ಗುಲಾಮ ಅಬ್ಬಾಸರು ಉದ್ರೇಕದಿಂದ ಈ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾಗ, ಪಾಕ್ ಸರಕಾರವು ಅವರನ್ನು ಬಂಧಿಸಿತ್ತು. ಕೆಲದಿನಾನಂತರ, ಅವರು ಬಿಡುಗಡೆಹೊಂದಿದ ಕೆಲವು ತಾಸುಗಳಲ್ಲಿಯೇ ಪುನರ್ಬಂಧಿತರಾದರು. ಈಗ ಕಾಶ್ಮೀರ ವಿಮೋಚನಾ ಚಳುವಳಿಯ ವರಿಷ್ಠರು ಪಾಕ್ ಪ್ರಧಾನಿಗಳೊಂದು ಎಚ್ಚರಿಕೆಯನ್ನೂ ಕೊಟ್ಟು, ಅದರಲ್ಲಿ ತಮ್ಮ ದೃಢ ನಿರ್ಧಾರ ಹಾಗೂ "ತೀರ ತಡವೆನಿಸುವ ಪೂರ್ವದಲ್ಲಿಯೇ" ತಾವು ಯುದ್ಧ ವಿರಾಮ ರೇಖೆಯನ್ನು ಭಂಗಗೊಳಿಸುವುದನ್ನು ತಡೆಯಬೇಕೆಂದು ಅಳಿಸಿದ್ದಾರೆ. ಇದು ಪಾಕ್ ಪ್ರಧಾನರಿಗೆ ಅವರ ರಾಷ್ಟ್ರೀಯರೇ ಇತ್ತ ಆಹ್ವಾನವಲ್ಲದೆ ಮತ್ತೇನು?

ಪಾಕ್ ಪ್ರಧಾನರು ಇತ್ತೀಚೆಗೆ ತಾವು ಭಾರತದೊಡನೆ ಎಂದಿಗೂ ಸಮರ ಹೂಡುವುದಿಲ್ಲ; ತಾವು ಸಂಯುಕ್ತ ರಾಷ್ಟ್ರ ಸಂಘದ ತಾಮ್ರಪಟಕ್ಕೆ ಒಪ್ಪಿಗೆ ಇತ್ತಿರುವುದರಿಂದ ಅದಕ್ಕೆ ಸರಿಯಾಗಿಯೇ ನಡೆಯುತ್ತೇವೆ; ಕಾಲುವೆ ನೀರಿನ ತಂಟೆಯನ್ನಾಗಲೀ ಕಾಶ್ಮೀರ ಪ್ರಶ್ನೆಯನ್ನಾಗಲೀ ಮುಂದಿಟ್ಟು ಭಾರತದೊಡನೆ ವೈಷಮ್ಯಕ್ಕಟ್ಟಿಕೊಳ್ಳಲು ತಾವು ಸಿದ್ಧರಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಕೆಲವು ಮಾಸಪೂರ್ವದ ವಿದೇಶಮಂತ್ರಿ ನೂನರಿಗೂ ಈಗಿನ ಪ್ರಧಾನ ಮಂತ್ರಿ ನೂನರಿಗೂ ಅಭಿಪ್ರಾಯ ವ್ಯತ್ಯಾಸವಿರುವುದು ಸ್ವಾಭಾವಿಕವೆ. ಪ್ರಧಾನಿ ನೂನರು ಮತ್ತೂ ಮುಂದುವರಿದು, ಪಾಕಿಸ್ತಾನದ ಲೀಗ ಪಕ್ಷದ ಕುರುಡು ರಾಜಕಾರಣದಿಂದಲೇ ಈ ಸಮಸ್ಯೆಗಳು ಇನ್ನೂ ಪರಿಹಾರಹೊಂದದೆ ನಿಂತಿವೆ. ಆದರೂ ವಿಶ್ವಸಂಸ್ಥೆಯಲ್ಲಿ ವಿಶ್ವಾಸವಿಟ್ಟಿರುವ, ಆಶಾವಾದಿಗಳಾದ ತಾವು ತಮಗೆ ನ್ಯಾಯದಾನವಾಗುವುದು ಎಂದು ನಂಬಿರುವುದಾಗಿ ಅಭಿಪ್ರಾಯಪಟ್ಟರು. ಭಾರತವು ತನ್ನ ಮನೋನಿರ್ಧಾರವನ್ನು ಬದಲಿಸಿದರೆ, ಆಗ ಈ ಸಮಸ್ಯೆಗಳು ಬಗೆಹರಿಯುವುವು ಎಂದು ನುಡಿದರು. ಪಾಕಿಸ್ತಾನದ ಕಡೆಯಿಂದ ಯುದ್ಧವಿರಾಮ ರೇಖೆಯನ್ನು ಭಂಗಿಸದಂತೆ ನೋಡುವುದು ತಮ್ಮ ಕರ್ತವ್ಯವೆಂದೂ ಭಾರತದತ್ತಣಿಂದ ಇಂತಹುದನ್ನು ನಡೆಯಗೊಡದಿರುವುದು ಭಾರತದ ಕೆಲಸವೆಂದೂ ತಾವು ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಲು ತಪ್ಪಲಾರೆವೆಂದೂ ಅವರು ಸ್ಪಷ್ಟಪಡಿಸಿದರು.

ಪ್ರಧಾನಿ ಫಿರೋಜ ಖಾನ ನೂನರ ಹಿಂದಿನ ಮಾತುಗಳೇನೇ ಇರಲಿ, ಇಂದವರು ಪಾಕಿಸ್ತಾನವು ಭಾರತದ ಮೇಲೆ ಕಾಳಗ ಹೂಡುವುದಿಲ್ಲವೆಂದು ಉದ್ಗರಿಸಿರುವುದು ಸ್ತುತ್ಯ. ಆದರೆ, ನಿಮ್ಮ ನೈಸರ್ಗಿಕ ವೆಚ್ಚವನ್ನೇಕೆ ಕಡಿಮೆ ಮಾಡಬಾರದು ಎಂಬ ಪ್ರಶ್ನೆಗೆ ಅವರಿತ್ತ ಉತ್ತರ-(ಒಂದು ವೇಳೆ ಭಾರತವೇ ನಮ್ಮ ಮೇಲೆ ದಾಳಿ ನಡೆಸಿದರೆ? ಎಂದಿದು-) ನನ್ನ ಗಮನಿಸುವಾಗ ಈ ಸಂದೇಹಕ್ಕೆ ಕಾರಣವೇ ತಿಳಿಯುವುದಿಲ್ಲ. ಪಾಕಿಸ್ತಾನದಂತೆಯೇ ಭಾರತವೂ ವಿಶ್ವಸಂಸ್ಥೆಯ ಪ್ರತಿನಿಧಿಯಾಗಿರುವ ರಾಷ್ಟ್ರ; ಅದರ ತಾಮ್ರಪಟದಲ್ಲಿ ಪಾಕಿಸ್ತಾನಕ್ಕೆಂತಲೂ ಅಧಿಕಶ್ರದ್ಧೆಯನ್ನಿಟ್ಟ ರಾಷ್ಟ್ರ; ಹಾಗಿರುವಾಗ, ಭಾರತವು ಪಾಕಿಸ್ತಾನದ ಮೇಲೆಂದೂ ಯುದ್ಧ ಹೂಡಲಾರದೆಂದು ಅವರು ತಿಳಿಯದೆ ಸಂದೇಹ ದೃಷ್ಟಿಯಿಂದ, "ಸ್ನೇಹಿತ ರಾಷ್ಟ್ರ"ವನ್ನು ನೋಡುವ ಅಗತ್ಯವೇನು? ಭಾರತಕ್ಕೆ ಯುದ್ಧವೇ ಬೇಕಾಗಿದ್ದರೆ, ಅದು ಕಾಶ್ಮೀರ ಪ್ರಶ್ನೆಯನ್ನು ಯುಕ್ತ ರಾಷ್ಟ್ರ ಸಂಘಕ್ಕೊಯ್ಯುತ್ತಿರಲಿಲ್ಲ; ತಾಮ್ರ ಪಟವನ್ನು ಮೀರುವ ಮನಸ್ಸಿದ್ದಿದ್ದರೆ, ಪಾಕಿಸ್ತಾನದ ಮೇಲೆ ಎಂದೋ ಯುದ್ಧವನ್ನು ಸಾರಬಹುದಾಗಿತ್ತು. ಆದರೆ, ಭಾರತ ಹಾಗೆ ಮೀರಿ ನಡೆದಿಲ್ಲವೆಂಬುದನ್ನು ನೂನರು ನ್ಯೂನತೆಯಿಲ್ಲದೆ ತಿಳಿದುಕೊಳ್ಳಬೇಕಾಗಿತ್ತು. "ತಾವು ಸಂಭಾವಿತರು; ಇತರರು ಮಾತ್ರ ದ್ರೋಹಿಗಳಿರಬಹುದು" ಎಂದು ಇವರು ತಿಳಿಯುವುದಾದರೆ, "ಕಳ್ಳನ ಮನಸ್ಸು ಹುಳ್ಳಹುಳ್ಳಗೆ" ಎಂಬ ಗಾದೆಯ ಮಾತನ್ನು ಶ್ರೀ ನೂನರಿಗೂ ಅವರ ಪಾಕಿಸ್ತಾನಕ್ಕೂ ಜತೆಯಾಗಿಯೇ ಅನ್ವಯಿಸಬೇಕೆ?

ಪ್ರಧಾನಿ ಶ್ರೀ ನೂನರು ಬಾಯಲ್ಲಿ ಏನೇ ಹೇಳಿಬರುತ್ತಿರಲಿ, ಅದನ್ನು ದೃಢವಾಗಿ ನಂಬಿಕೊಂಡು ಭಾರತವಾಗಲೀ ಭಾರತೀಯರಾಗಲೀ ಕೂರುವುದು ಶ್ರೇಯಸ್ಕರವಲ್ಲ. ಬಣ್ಣ ಬದಲಾಯಿಸುವ ಓತಿಯಂತೆ ಗಳಿಗೆಗೊಂದು ರೀತಿಯ ಮಾತನ್ನಾಡಿ ಭಾರತದೆಡೆಗೆ ಕತ್ತಿಯನ್ನು ಮರೆಯಲ್ಲಿಯೇ ಮಸೆಯುತ್ತಿರುವ ಘಟನೆಗಳು ಆಗಾಗ ನಡೆಯುತ್ತಿರುವುದು ವರದಿಗಳಿಂದ ತಿಳಿದುಬಂದಿದೆ. ಕಾಶ್ಮೀರದಲ್ಲಿ ನಡೆದ ಸ್ಫೋಟಗಳು, ಪದೇ ಪದೇ ಪಾಕ-ಭಾರತ ಗಡಿ ಉಲ್ಲಂಘನೆಗಳಲ್ಲದೇ ಭಾರತದಲ್ಲಿಯೇ ಸೇರಿಕೊಂಡಿರುವ ನಾಗಾ ಜನರನ್ನು ಬಂಡೆಬ್ಬಿಸುವ ಪ್ರೇರಣೆಯನ್ನೂ ಪಾಕಿಸ್ತಾನದ ಉಚ್ಚ ಮಟ್ಟದ ಅಧಿಕಾರಿಗಳು ಮಾಡುತಿದ್ದಾರೆ ಅಲ್ಲದೇ ಸಾಧ್ಯವಿದ್ದ ಸಹಾಯವನ್ನೂ ಆರ್ಥಿಕ ನೆರವನ್ನೂ ದಯಪಾಲಿಸುವ ಉದಾರ ಬುದ್ಧಿಯನ್ನು ತೋರ್ಪಡಿಸಿರುವ ಈ ಪಾಕಿಸ್ತಾನಿಗಳ ಬೆಣ್ಣೆಯಂತಹ ಮಾತಿನಲ್ಲಿ ವಿಶ್ವಾಸವಿಡುವುದಾಗಲೀ ಕಿವಿದೆರೆಗೆ ಬಡಿಯದಂತೆ ಕೈಕಟ್ಟಿ ಕುಳಿತಿರುವುದಾಗಲೀ ಒಳ್ಳೆಯದಲ್ಲ. ಇಂತಹ ವಿರೋಧೀ ಘಟನೆಗಳನ್ನು ಗಮನಿಸುವಾಗ, ಗುಲಾಮ ಅಬ್ಬಾಸರ ಕಾಶ್ಮೀರ ವಿಮೋಚನಾ ಚಳುವಳಿ ಹಾಗೂ ಯುದ್ಧ ವಿರಾಮ ರೇಖೆಯನಿಯಮ ಬಾಹಿರೋಲ್ಲಂಘನೆಗಳೂ ಪಾಕ್ ಅಧಿಕಾರಿಗಳಿಂದಲೇ ಏಕೆ ಪ್ರಚೋದಿತವಾಗಿರಬಾರದು? ಆಗ, ಪ್ರಧಾನಿ ಫಿರೋಜ ಖಾನ ನೂನರ ಈ ಒಣ ಮಾತುಗಳು ಕೇವಲ ಬಯಲಾಡಂಬರ ವೇಕಾಗಬಾರದು? ಭಾರತದ ಬಗ್ಗೆ ಸಹಾನುಭೂತಿಯ, ಸ್ನೇಹ ವರತೆಯ, ಶಾಂತ ವಿಧಾನಗಳಿಂದಲೇ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಈಗಿನ ಅಭಿಪ್ರಾಯಗಳು ನಾಟಕೀಯ ಮುಖವಾಡಗಳೇಕಾಗಬಾರದು? ಇತ್ಯಾದಿ ಸಂದೇಹಗಳು ಏಳುತ್ತವೆ.

"ಸಂಶಯಾತ್ಮಾ ವಿನಶ್ಯತಿ" ಎಂಬ "ವಿಶ್ವಾಸೋ ಫಲದಾಯಕಃ" ಎಂಬ ಮಾತುಗಳು ಪಾಕಿಸ್ತಾನದಂತಹ ಸ್ವಾರ್ಥಿ, ಕುಟಿಲ ಮನೋವೃತ್ತಿಯ ರಾಷ್ಟ್ರಗಳ ಬಗ್ಗೆ ಮಾಡಿದುದಲ್ಲ; ಕುಟಿಲತೆಯೇ ತುಂಬಿರುವ ಇಂದಿನ ರಾಜಕಾರಣದಲ್ಲಿ ಅವುಗಳಿಗೆ ಬೆಲೆಯೂ ಇರುವುದಿಲ್ಲ. ಆದುದರಿಂದ ಈ ಅಬ್ಬಾಸರ "ಸಿನೋಲ್ಲಂಘನೆ"ದ ಪ್ರಶ್ನೆಯನ್ನು ಭಾರತವು ವಿಶೇಷ ದೃಷ್ಟಿಯಿಂದ ಪರಿಶೀಲಿಸಬೇಕು; ಹಾಗೂ ತನ್ನ ನಿಶ್ಚಿತ ಧೋರಣೆಗೆ ವ್ಯತ್ಯಯಬಾರದಂತೆ ನಡೆದುಕೊಳ್ಳಬೇಕು. ಏಕೆಂದರೆ, ನೂನರ ಅಭಯ-ತಾನು ಪ್ರಧಾನಿಯಾಗಿರುವ ವರೆಗೆ ಪಾಕ್—ಭಾರತ ಸಮರವಾಗದು ಎಂದು. ಆದುದರಿಂದ, ಯುದ್ಧ ಪ್ರಾರಂಭವಾಗುವ ಗಳಿಗೆ ಬಂದಾಗ ನೂನರ ಸ್ಥಾನದಲ್ಲಿ ಯಾರು ರಾರಾಜಿಸುವರೆಂದು ಈಗ ಹೇಗೆ ತಾನೇ ಹೇಳುವುದು ಸಾಧ್ಯ?

ಸಂಕ್ಷಿಪ್ತ ಸುದ್ದಿಗಳು

ಚಿಕ್ಕ ನೀರಾವರಿ ಯೋಜನೆಗಳು

ಹೈದರಾಬಾದಿನಲ್ಲಿ ದಕ್ಷಿಣ ರಾಜ್ಯಗಳ ಸಣ್ಣ ನೀರಾವರೀ ಸಮ್ಮೇಳನವು ಕೇಂದ್ರ ಆಹಾರ ಮತ್ತು ಕೃಷಿ ಮಂತ್ರಿಗಳಾದ ಶ್ರೀ ಅಜಿತ ಪ್ರಸಾದ ಜೈನರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರಲ್ಲಿ ಬೊಂಬಾಯಿ, ಮದ್ರಾಸು, ಕೇರಳ ಮತ್ತು ಆಂಧ್ರ ರಾಜ್ಯಗಳ ಮಂತ್ರಿಗಳೂ ಅಧಿಕಾರಿಗಳೂ ಭಾಗವಹಿಸಿದ್ದರೂ ಮೈಸೂರವರು ಅಭಿರುಚಿ ತೋರಿಸಿದಂತೆ ಕಂಡುಬರುವುದಿಲ್ಲ. ಆಂಧ್ರ ಪ್ರದೇಶ, ಮದ್ರಾಸು, ಕೇರಳ, ಮೈಸೂರು ಮತ್ತು ಬೊಂಬಾಯಿ ರಾಜ್ಯಗಳ ಸಣ್ಣ ನೀರಾವರೀ ಕಾರ್ಯಕ್ರಮಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಈಗ ಕೈಗೊಂಡಿರುವ ಇಂತಹ ಯೋಜನೆಗಳನ್ನು ಪೂರ್ಣಗೊಳಿಸಲು ಸಾಕಷ್ಟು ಪ್ರಯತ್ನಿಸಬೇಕೆಂದು ಸಮ್ಮೇಳನದಲ್ಲಿ ನಿರ್ಧರಿಸಲಾಯಿತು. ಅಲ್ಲದೇ ಹೀಗೆ ರಚಿಸಲಾದ ಬಾವಿ, ಕೆರೆಗಳು ದುರುಪಯೋಗವಾಗದಂತೆಯೂ, ಹಾಳಾದುವುಗಳನ್ನು ಉಪಯೋಗಾರ್ಹವಾಗಿ ಮಾಡುವಂತೆಯೂ ನೋಡಿಕೊಳ್ಳಲು ಒಂದು ಸಂಸ್ಥೆಯನ್ನು ರಾಜ್ಯಸರಕಾರವು ಸ್ಥಾಪಿಸಬೇಕೆಂದೂ ತೀರ್ಮಾನಕ್ಕೆ ಬರಲಾಯಿತು. ಇದರ ವೆಚ್ಚವನ್ನು, ಇಂತಹ ನೀರಾವರೀ ಯೋಜನೆಗಳಿಂದ ಪ್ರಯೋಜನ ಪಡೆಯುವ ಭೂಮಿಯ ಮೇಲೆ ಅಧಿಕ ತೆರಿಗೆ ಹೊರಿಸಿಯೂ ಸರಕಾರದ ಸಾಮಾನ್ಯ ಆದಾಯದಿಂದ ಸ್ವಲ್ಪ ತೆಗೆದಿರಿಸಿಯೂ ಎದುರಿಸಬೇಕೆಂದು ಒಪ್ಪಲಾಯಿತು. ಸಾಧ್ಯವಿದ್ದಲ್ಲಿ, ಈ ಯೋಜನೆಗಳನ್ನು ರಕ್ಷಿಸುವ ಹೊಣೆಯನ್ನು ಸಹಕಾರಿ ಇಲ್ಲವೇ ಪಂಚಾಯತ ಸಂಸ್ಥೆಗಳಿಗೆ ಒಪ್ಪಿಸಬೇಕೆಂದು ನಿರ್ಧರಿಸಲಾಯಿತು.

ಜಪಾನದಲ್ಲಿ ಆಕರ್ಷಣೆ

ಭದ್ರತಾ ಸಮಿತಿಯ ತಾತ್ಕಾಲಿಕ ಸದಸ್ಯ ರಾಷ್ಟ್ರವಾಗಿರುವ ಜಪಾನಿನ ವಿದೇಶೀ ಮಂತ್ರಿ ಶಾಖೆಯತ್ತ ಭಾರತ—ಪಾಕ್‌ಗಳಲ್ಲದೇ ಉಳಿದಿತರ ರಾಷ್ಟ್ರಗಳ ದೃಷ್ಟಿಯು ಹರಿದಿದೆ. ಕಾಶ್ಮೀರ ಪ್ರಶ್ನೆಯ ಬಗ್ಗೆ ಜಪಾನದ ಧೋರಣೆಯೇನು ಎಂಬುದಕ್ಕೆ ಉತ್ತರವನ್ನು ಬಯಸುತ್ತಿರುವುದೇ ಈ ಆಕರ್ಷಣೆಯ ಕಾರಣವಾಗಿದೆ. ಆದರೆ, ಜಪಾನವು ಈದೀಗ ಹೊಸತಾಗಿ ಸದಸ್ಯ ರಾಷ್ಟ್ರವಾದುದರಿಂದ, ಅದು ಈ ಪ್ರಶ್ನೆಯನ್ನು ಆಳವಾಗಿ ಅಭ್ಯಸಿಸುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳು, ತಮ್ಮ ನಿಲುಮೆಗೆ ಬೆಂಬಲವನ್ನು ಕೋರಿ, ಜಪಾನಿನ ಮನವೊಲಿಸುವ ಪ್ರಯತ್ನ ಮಾಡುತ್ತಿವೆ. ಪಾಕ್ ಭಾರತಗಳ ರಾಯಭಾರಿಗಳು ಧೋರಣೆಯೇನೆಂದು ತಿಳಿಯಲು ಕುತೂಹಲಿಯಾಗಿದ್ದಾರೆ. ಆದರೆ, ಈ ಬಗ್ಗೆ ವಿಮೋಚನೆಯೂ ಚರ್ಚೆಯೂ ಇನ್ನೂ ಮುಗಿಯದಿರುವುದರಿಂದ ನಿಶ್ಚಿತ ಧೋರಣೆಯನು ರೂಪಿಸಲಾಗಿಲ್ಲವೆಂದೂ, ಹಾಗಿದ್ದರೂ ಇದುವರೆಗಿನ ಹೇಳಿಕೆಯಂತೆ, ಭಾರತವು ಅದಿಯಿಂದಿನವರೆಗೂ ಇಟ್ಟ ಹೆಜ್ಜೆಗಳು "ನ್ಯಾಯಸಮ್ಮತವಾದುವುಗಳೆಂದು" ಜಾಪಾನದ ನಿರ್ಧಾರವಿದೆ ಎಂದು ನಿಕಟ ವರ್ತುಲಗಳು ಅಭಿಪ್ರಾಯಪಟ್ಟಿವೆ. ಈ ಬಗ್ಗೆ ಜಾಪಾನಿನ ನಿಶ್ಚಿತ ಧೋರಣೆಯು ಈ ವರ್ಷಾಂತ್ಯದಲ್ಲಿ ಸೇರಲಿರುವ ಭದ್ರತಾಸಮಿತಿಯ ಸಭೆಯಲ್ಲಿಯೇ ಘೋಷಿಸಲ್ಪಡುವುದೆಂದೂ, ಅದಕ್ಕಿಂತ ಮೊದಲು ಇದಕ್ಕಿಂತ ಹೆಚ್ಚು ಹೇಳುವುದು ಅಸಾಧ್ಯವೆಂದೂ ವರದಿಗಳು ಬಂದಿರುತ್ತವೆ.

ನೂನರ ಆವೇಶದ ಉದ್ಗಾರ

ಪಾಕ ಪ್ರಧಾನಿ ಶ್ರೀ ಮಲಿಕ್ ಫಿರೋಜಖಾನ ನೂನರು ತಾನು ಈ ಹಿಂದೆ ಆಡಿದ್ದ ಮಾತೊಂದನ್ನು ಹಿಂತೆಗೆದುಕೊಂ

ಡರು. ಅಮೆರಿಕೆಯು ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಸಹಾಯವನ್ನು ಮಾಡುತ್ತಿರುವುದನ್ನು ವಿರೋಧಿಸಿ ಅವರು ಮೊದಲೊಮ್ಮೆ "ಪಾಕಿಸ್ತಾನಕ್ಕೆ ಅನಪೇಕ್ಷಿತ ವ್ಯವಹಾರ" ಎಂದಿದನ್ನು ಕರೆದಿದ್ದರು. ಆದರೆ, ಈಗ ಅದೇ ನೂನರು 'ಪಾಕಿಸ್ತಾನಕ್ಕೆ ಒಂದು ಹೊರಗಿನ ರಾಷ್ಟ್ರಕ್ಕೆ ಬೇರೊಂದು ರಾಷ್ಟ್ರವು ಕೊಡುವ ಸಹಾಯ ಮತ್ತು ಇಟ್ಟುಕೊಳ್ಳುವ ಸಂಬಂಧಗಳನ್ನು ದೂರಲು ಅಧಿಕಾರವಿಲ್ಲ" ಎಂದು ತಿದ್ದಿಕೊಂಡರು.

ಘಟನಾಬದ್ಧ ಕಾರ್ಯಕ್ರಮ

ಹೈದರಾಬಾದದಲ್ಲಿ ಸಭೆ ಸೇರಿದ ಸೋಶಿಯಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯಕಾರೀ ಸಮಿತಿಯು ಪ್ರಚಲಿತವಿರುವ ಪಕ್ಷದ ಕಾರ್ಯಕ್ರಮಗಳನ್ನು ಪಕ್ಷದ ಘಟನೆ ಮತ್ತು ತತ್ವಗಳ ಸಳಹದಿಯಿಂದ ಪುನಾರಚಿಸಬೇಕೆಂದು ನಿರ್ಧರಿಸಿದೆ. ಇದಕ್ಕಾಗಿ ಒಂದು ವಿಶೇಷ ಸಮಿತಿಯನ್ನು ಆರಿಸಲಾಯಿತು. ಕಾರ್ಮಿಕ, ಒಕ್ಕಲಿಗ, ಯುವಕ, ಶಾಸನಸಭೆ ಮತ್ತು ಪಕ್ಷಸಂಘಟನಾ ಕ್ಷೇತ್ರಗಳಲ್ಲಿ ಸೋಶಿಯಲಿಸ್ಟ್ ಪಕ್ಷದ ಹೊಸ ಕಾರ್ಯಕ್ರಮಗಳನ್ನು ರೂಪಿಸುವುದು ಈ ಕೆಲಸವು ಆಕ್ಟೋಬರ ತಿಂಗಳ ತಾರೀಕಿನೊಳಗೆ ಮುಗಿಯಬೇಕೆಂದೂ, ಅಂದು ಪುನಃ ಸಭೆ ಸೇರಲಿರುವ ರಾಷ್ಟ್ರೀಯ ಸಮಿತಿಯ ಮುಂದಿನ ಸಭೆಯಲ್ಲಿ ಮಂಜೂರು ಮಾಡಲ್ಪಡುವುದೆಂದೂ ತಿಳಿದುಬರುತ್ತದೆ.

ವಿಧಾನ ಪರಿಷತ್ತಿನ ಉದ್ಘಾಟನೆ

ಆಂಧ್ರ ಪ್ರದೇಶಕ್ಕೆ ಇದೀಗ ಹೊಸತಾಗಿ ರಚಿತವಾಗಿರುವ ವಿಧಾನ ಪರಿಷತ್ತನ್ನು ಹೈದರಬಾದಿನಲ್ಲಿ ರಾಜ್ಯಾಧ್ಯಕ್ಷ ಡಾ ರಾಜೇಂದ್ರ ಪ್ರಸಾದರು ಉದ್ಘಾಟಿಸಿದರು ಜನತೆಯ ಮತಗಳನ್ನು ಪಡೆದು, ಶಾಸನಾಂಗದಲ್ಲಿ ಅಧಿಕಾರಗಳನ್ನು ಪಡೆದುಕೊಂಡಿರುವವರು ಜನ ಸೇವೆಯನ್ನೇ ಮುಖ್ಯ ಗುರಿಯಾಗಿದ್ದುಕೊಂಡು ಅವರ ಅಭ್ಯುದಯಕ್ಕಾಗಿ ಹೋರಾಡಬೇಕು ಇಂದು ಅಧಿಕಾರ ಗ್ರಹಣ ಮಾಡಿದವರು ಕೇವಲ ತೃಪ್ತಿಕರ ಆಡಳಿತೆಯಿಂದ ಸಮಾಧಾನಗೊಳ್ಳದೆ, ಜಾತಿ, ಮತ, ಪಂದಗಳ ಬೇಧಭಾವನೆಯಿಲ್ಲದೆ ಎಲ್ಲರೂ ತಮ್ಮ ಹಿತಸಂಬಂಧಗಳು ಭದ್ರವಿವೆ ಎಂದು ತಿಳಿಯುವಂತಹ ಆದರ್ಶ ಕಲ್ಯಾಣ ರಾಷ್ಟ್ರವನ್ನು ಕಟ್ಟುವಲ್ಲಿ ದುಡಿಯಬೇಕು. ದೇಶದ ಪ್ರತ್ಯೇಕ ನಾಗರಿಕನೆ ಹೊಣೆಗಾರಿಕೆ ಯಿಲ್ಲಿರುವುದಾದರೂ ಮಾರ್ಗದರ್ಶನ ಮಾಡುವ ಗುರುತರವಾದ ಭಾರವು ಶಾಸಕ ತಲೆಯಮೇಲಿದೆ ಎಂದು ರಾಷ್ಟ್ರಪತಿಯವರು ಉಪದೇಶಿಸಿ, ಜನತೆಯ ಮತಗಳನ್ನು ಪಡೆದುದಕ್ಕೆ ಪ್ರತಿಯಾಗಿ ಅವರನ್ನು ಸೇವಿಸಿ, ಅವರ ಮನಸ್ಸಿಗೆ ತೃಪ್ತಿಯನ್ನುಂಟುಮಾಡಬೇಕೆಂದು ಕೇಳಿಕೊಂಡರು. ಆಂಧ್ರ ಪ್ರದೇಶದ ವಿಧಾನ ಪರಿಷತ್ತಿನಲ್ಲಿ ೯೦ ಜನ ಸದಸ್ಯರಿರುವರು.

ಮನವಿಗಳ ಸ್ವೀಕಾರ

ನಾರ್ಸಜನಿಕರಿಂದ ಬರುವ ಮನವಿಗಳನ್ನು ಕ್ರಮಬದ್ಧತೆಯಲ್ಲಿ ಬಗೆಹರಿಸಬೇಕೆಂಬ ಉದ್ದೇಶದಿಂದ ಮೈಸೂರು ಸರಕಾರವು ಒಂದು ವಿಶೇಷ ವ್ಯವಸ್ಥೆಯನ್ನು ಮಾಡಿರುತ್ತದೆ ರಾಜ್ಯದ ಉಪಮಂತ್ರಿಗಳಿಗೆ ಕೆಲವು ಜಿಲ್ಲೆಗಳನ್ನು ಹಂಚಿಹಾಕಿ, ಆಯಾ ಉಪಮಂತ್ರಿಗಳು ಆಯಾ ಜಿಲ್ಲೆಗಳಿಂದ ಬರುವ ಮನವಿಗಳನ್ನು ಸ್ವೀಕರಿಸಿ ಅವುಗಳ ಪರಿಹಾರಕ್ಕೆ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸರಕಾರಿ ಪ್ರಕಟಣೆಯೊಂದು ಹೇಳುತ್ತದೆ. ಈ ಪ್ರಕಟಣೆಯಂತೆ ದಕ್ಷಿಣ ಕನ್ನಡ, ಹಾಸನ ಮತ್ತು ಧಾರವಾಡ ಜಿಲ್ಲೆಗಳಿಗೆ ಹಣಕಾಸಿನ ಉಪಮಂತ್ರಿ ಶ್ರೀ ಜೆ ಎಚ್. ಪಮಸುದ್ದೀನರು ನೇಮಿತರಾಗಿದ್ದಾರೆ

'ಪಾನ ಪ್ರತಿಬಂಧ' ಕೊನೆಗೊಳ್ಳದು

ಪಾನ ಪ್ರತಿಬಂಧ ಶಾಸನವು ಮೈಸೂರಿನಲ್ಲಿ ಅಸಫಲವಾಗಿರುವುದರಿಂದ ಅದನ್ನು ಹಿಂತೆಗೆಯಲಾಗುವುದೇ ಎಂದು ಒಬ್ಬ ಕಾಂಗ್ರೆಸ್ ಕಾರ್ಯಕರ್ತರು ಕೇಳಿದಾಗ, ಹುಬ್ಬಳಿಯಲ್ಲಿ ಅಬಕಾರಿ ಮಂತ್ರಿ ಶ್ರೀ ರಾಚಯ್ಯನವರು ಕಾಂಗ್ರೆಸ್ ಪಾನ ಪ್ರತಿಬಂಧಕ್ಕೆ ಬದ್ಧವಿರುವುದರಿಂದ ರಾಜ್ಯದ ಎಲ್ಲೆಡೆಯಲ್ಲಿಯೂ ಅದಷ್ಟು ಬೇಗನೇ ಕಾಯದೆಯನ್ನು ಅನ್ವಯಿಸುವ ಹಾಗೂ, ಅದನ್ನು ಸಮರ್ಪಕ ರೀತಿಯಲ್ಲಿಯೇ ಕಾರ್ಯಕಾರಿಗೊಳಿಸುವ ಸರಕಾರದ ಅಚಲ ನಿರ್ಧಾರವಿರುವುದೆಂದು ಘೋಷಿಸಿದರು. ಮಾನ್ಯ ಮಂತ್ರಿವರ್ಯರು ಹರಿಜನರಿಗೂ ಹಿಂದುಳಿದ ವರ್ಗಗಳಿಗೂ ಈಗ ಸರಕಾರವು ಒದಗಿಸಿದ ಸಕಲ ಸೌಲಭ್ಯಗಳನ್ನು ಮುಂದೆಬಂದು ಸ್ವೀಕರಿಸಿ ತಮ್ಮ ಉನ್ನತಿಯನ್ನು ಮಾಡಿಕೊಳ್ಳಬೇಕು ಎಂದು ಹೇಳಿದರು.

ಮೈಸೂರು-ಮದ್ರಾಸ-ಆಂಧ್ರ ವಿಲಿಯನ?

ಭಾರತದಲ್ಲಿ ಈಗಿರುವುದಕ್ಕಿಂತಲೂ ದೊಡ್ಡ ದೊಡ್ಡ ರಾಜ್ಯಗಳನ್ನು ಸ್ಥಾಪಿಸಬೇಕೆಂದು ಹೊಸದೆಹಲಿಯಲ್ಲಿ ನಮ್ಮ ದುರೀಣರು ನಡೆಸಿರುವ ವಿಚಾರವು ಕೃತಿರೂಪಕ್ಕೆಳೆದಲ್ಲಿ ಆಂಧ್ರ, ಮದ್ರಾಸ ಮತ್ತು ಮೈಸೂರು ರಾಜ್ಯಗಳು ಒಂದುಗೂಡುವುದನ್ನು ಯಾರೂ ತಡೆಯಲಾರರು ಎಂಬುದಾಗಿ ಆಂಧ್ರ ಪ್ರಧಾನಿ ಶ್ರೀ ಎನ್ ಸಂಜೀವರೆಡ್ಡಿಯವರು ಹೊರನಾಡ ಕನ್ನಡಿಗರ ಸಮ್ಮೇಳನಾವಸರದಲ್ಲಿ ಉಚ್ಚರಿಸಿದರು



ಅಣುಶಕ್ತಿಯಿಂದ ನಡೆಯುವ ಅಮೆರಿಕೆಯ ಜಾಹಾಜಿ ಪಡಗು 'ಸವ್ಹಾನ' ಚಿತ್ರವಿದು. ಈ ರೀತಿಯ ಪಡಗುಗಳಲ್ಲಿ ಇದೇ ಮೊತ್ತಮೊದಲನೆಯದು.

ಉಡುಪಿ

ಉತ್ತಮ ಫಲಿತಾಂಶ— ಸ್ಥಳೀಯ ಬೋರ್ಡು ಹೈಸ್ಕೂಲಿನಿಂದ ಕಳೆದ ಎಪ್ರಿಲ್ ತಿಂಗಳಲ್ಲಿ ಎಸ್. ಎಸ್. ಎಲ್ ಸಿ ಪರೀಕ್ಷೆಗೆ ಕುಳಿತ ೪೩ ವಿದ್ಯಾರ್ಥಿಗಳ ಪೈಕಿ ೩೧ ಮಂದಿ ಉತ್ತೀರ್ಣರಾಗಿ ಸೇಕಡಾ ೭೬.೩೩ ರಷ್ಟು ಉತ್ತಮ ಫಲಿತಾಂಶವನ್ನು ತಂದಿತು ಸಂತೋಷಕರ ಹಾಗೂ ಅಭಿನಂದನೀಯವಿದೆ

ಗೃಹಿಣೀ ವಿದ್ಯಾಲಯದ ಉದ್ಘಾಟನೆ— ಹೆಂಗಸರಿಗೆ ಅಡಿಗೆ ಮಾಡುವುದು, ಗೃಹಕೃತ್ಯ ನಡೆಸಿಕೊಂಡು ಹೋಗುವುದು, ಹುಟ್ಟಿದ ಮಕ್ಕಳನ್ನು ಸಾಕುವುದು, ಗಂಡಸರು ಸಂಪಾದಿಸಿತಂದ ಹಣದಲ್ಲಿ ಮಿತವ್ಯಯದನ್ನು ಮಾಡುವುದು ಇತ್ಯಾದಿ ವಿಷಯಗಳಲ್ಲಿ ಶಿಕ್ಷಣಕೊಟ್ಟು ತರಬೇತಿಗೊಳಿಸುವಷ್ಟೇಯದ ನಿಟ್ಟಿನಲ್ಲಿ ಗೃಹಿಣೀ ವಿದ್ಯಾಲಯವನ್ನು ತಾ. ೬ರಂದು ಮಹಿಳಾ ಸಮಾಜ ಮತ್ತು ಎಕಾಡೆಮಿ ಆಫ್ ಜನರಲ್ ಎಡ್ಯುಕೇಶನ್ ಆಶ್ರಯದಲ್ಲಿ ಶ್ರೀಮತಿ ಶಾರದಾ ರಾಘವ ಪೈಗಳವರು ದೀಪವನ್ನುರಿಸಿ ಉದ್ಘಾಟಿಸಿದರು. ಎಕೆಡೆಮಿ ರಿಜಿಸ್ಟ್ರಾರ್ ಡಾ ಟಿ. ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಅಕಾ ಕೆ. ಅಂಗಿ, ಕೆ ಭಟ್ಟರು ಸ್ವಾಗತ ಭಾಷಣಮಾಡಿ ಮುಖ್ಯ ಅತಿಥಿಗಳಿಗರಿಚಯಮಾಡುತ್ತಾ ಅವರು ಸಾಧಿಸಿದ ಕಾರ್ಯಗಳನ್ನು ವಿವರಿಸಿ, ಎಕೆಡೆಮಿ ಈ ವಿದ್ಯಾಲಯದ ಬಗ್ಗೆ ಹೆಚ್ಚು ನೀತಿಯದ್ದಾಗಿ ಅಭಿನಂದಿಸಿ ಗೃಹಿಣೀ ವಿದ್ಯಾಲಯದ ಉದ್ದೇಶಗಳನ್ನು ವಿವರಿಸಿದರು ಅಧ್ಯಕ್ಷ ಡಾ. ಪೈಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಹಿಳೆಯರು ಯೋಗ್ಯ ಗೃಹಿಣಿಯರಾಗಿ ಅವರಿಂದ ಸಾಧಿಗೆ ಉತ್ತಮ ಸೇವೆಸಲ್ಲಿಸುವ ಕುರಿತು ಈ ವಿದ್ಯಾಲಯದ ಮೂಲಕ ನಡೆಯುವ ಪ್ರಯತ್ನ ಸ್ಪೃಹಣೀಯವೆಂದರು. ಗಂಡಸರೂ ಹೆಂಗಸರೂ ಪ್ರತ್ಯೇಕ ಪ್ರತ್ಯೇಕ ಇರುವಂತಾದ ಪಕ್ಷದಲ್ಲಿ ಇನ್ನು ಎಷ್ಟು ವರುಷಗಳಲ್ಲಿ ಎಲ್ಲವೂ ಅಸ್ತವ್ಯಸ್ತವಾದೀತು ಸಮಾಜ ಕಟ್ಟುವಂತಹ ಜವಾಬ್ದಾರಿಯನ್ನು ಇಬ್ಬರೂ ಹೊರಬೇಕೆಂಬುದು ಪ್ರಕೃತಿಯ ನಿಯಮವೇ ಆಗಿರುವುದು ಎಂದರು ಎಕೆಡೆಮಿಯ ಕಾರ್ಯದರ್ಶಿ ಶ್ರೀ ಎನ್. ಎಸ್. ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು

ಮಹಿಳಾ ಸಮಾಜದ ವಿನಂತಿ— ಅಜ್ಜರ ಕಾಡಿನಲ್ಲಿ ಕಟ್ಟಿಸಲಾದ ಉಡುಪಿ ಮಹಿಳಾ ಸಮಾಜ ಕಟ್ಟಡದ ದೆಚ್ಚಿದಲ್ಲಿ ಇನ್ನೂ 3000 ರೂ ಮಿಕ್ಕಿದ ಹಣವನ್ನು ಕಂಟ್ರಿಬ್ಯೂಟರಿಗೆ ಕೊಡಲು ಬಾಕಿಯಿರುವುದು ಅಲ್ಲದೆ ಕಟ್ಟಡಕ್ಕೆ ಕಂಪೌಂಡು ಗೇಟುಗಳೂ ಆಗಬೇಕಾಗಿದೆ. ಊರ ಉದಾರಿ ದಾನಿಗಳ ಸಹಾಯ ನಿರೀಕ್ಷಿಸಲಾಗಿದೆ ಗೂರು ಸಾಮಗ ಸೊಸಾಯಿಗಳ ಮೇಲ್ಛಪ್ಪು ಪ್ರದಾನ ದೃಷ್ಟಿ ಸಮಾಜ ಮಾಡುವವರ ಪೈಲ ಯತ್ನವನ್ನು ಸಮಾಜ ಕಟ್ಟಡದಲ್ಲಿ ಅನಾವರಣಮಾಡಲಾಗುವುದು ಮಹಿಳಾ ಸಮಾಜವನ್ನು ಆಸರ ಪೆಸರಾಂದ ಕರೆಯಲಾಗುವುದು. ಸೂರು ಹೊಸಯಿಗಳ ಪೇಲ್ಛಪ್ಪು ದಾನಮಾಡಿದವರ ಮತ್ತು ಇನ್ನುಮುಂದೆ ದಾನಮಾಡುವವರ ಪೆಸರುಗಳನ್ನು ಸಮಾಜದ ಗೋಡೆಯಲ್ಲಿರಿಸಲ್ಪಡುವ ಶ್ರೀ ತಿಳಿಯಲ್ಪಟ್ಟ ಕೆತ್ತಿಸಲಾಗ ಪ್ರದು ಅಮೆರಿಕಾದ ಮದಾಜನರೆಲ್ಲರೂ ಉದಾರವಾಗಿ ಧನಸಹಾಯಮಾಡಬೇಕಾಗಿ ಸಮಾಜದ ಶ್ರೀಮತಿಯವರಾದ ಅಕಾ ಕೆ ಅಕಾ ಕೆ ಬಸ್ ಅಕಸೂಯಾ ಬಿ. ಬಿ ಸೆಟ್ಟಿ, ವಾರಿಜಾಕ್ಷಿ ರಾಮರಾವ್, ಅಮ್ಮಣ್ಣಿ ರಾಮಣ್ಣ ಸೆಟ್ಟಿ, ಲಿಲಾ ಪೇಜಾವರ ದಾಸ ಸೈ ಮತ್ತು ಕಾಯಕಾರೀ ಸಮಿತಿಯ ಸದಸ್ಯೆಯರು ಜಾಹೀರ. ವಿನಂತಿ ಹೊರಡಿಸಿದ್ದಾರೆ

ಬೀಡಿ ಮಜೂರರ ಪ್ರತಿನಿಧಿಗಳ ಸಭೆಯು — ತಾ ೮ರಂದು ಶ್ರೀ ಮೋಸಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಿಗಿ ಬೀಡಿ ಕೈಗಾರಿಕೆಗಳ ಸರಕಾರವು ಯೋಗ್ಯ ಕಾನೂನನ್ನು ರಚಿಸಬೇಕು, ಸರಕಾರವು ಕೆಲಸ್ಯ ಕಾಲಿಯನ್ನು ನಿರ್ಣಯಿಸಬೇಕು ಎಂದು ಮೊದಲಾಗಿ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳ ಆಮುವು ಶ್ರೀ ಹಿಂಸ್ಸನ್ ಸೋಜ್ಯಾ ಮೊದಲಾದವರು ಬೀಡಿ ಮಜೂರರ ಸಂಘಟನೆ ಕುರಿತು ಮಾತನಾಡಿದರು

ಕರ್ನಾಟಕ ಆಯುರ್ವೇದ ಸೇವಾ ಸಂಘದ—ಆಡಳಿತ ಮಂಡಳಿಯ ಸಭೆಯು ತಾ. ೧ರಂದು ಸಂಘದ ಅಧ್ಯಕ್ಷ ಶ್ರೀ ಬಿ ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಿಗಿತು. ಉಡುಪಿಯಲ್ಲಿ ಆಯುರ್ವೇದ ಕಾಲೇಜನ್ನು ಈ ತಿಂಗಳಾಂತ್ಯದಲ್ಲಿ ತೆರೆಯುವ ಕುರಿತು ವಿಚಾರ ವಿನಿಮಯ ನಡೆಯಿತು ಶ್ರೀಗಳಾದ ಯು. ಯಸ್ ಕಾಮತ್, ಎನ್ ಎಲ್. ಎ ಬಿ ನಾಸೂರೇನ ಎಂ. ನಿಟ್ಟೂರ ರಾಮಚಂದ್ರಾಚಾರ್ಯ ಮೊದಲಾದವರು ಕಾಲೇಜು ಯೋಜನೆಯ ಕುರಿತು ಮಾತನಾಡಿದರು ಕಾರ್ಯದರ್ಶಿ ಶ್ರೀ ಸಿ ಅಪ್ಪಿಟ್ಟಾಚಾರ್ಯರು ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಡಾ ಮುಖರ್ಜಿ ಸ್ಮಾರಕ ಪ್ರಶ್ನೆ

ಅಂಗವಾಗಿ ತಾ ೨೭ರಂದು ಸಂಜೆ ೮ ಗಂಟೆಯ ಅಶ್ವಿನಿಯಲ್ಲಿ ಅಮ್ಮನವರ ಶ್ರೀ ಯು. ಆರ್ ಕೃಷ್ಣಾಚಾರ್ ಅಧ್ಯಕ್ಷತೆಯಲ್ಲಿ ಜರಿಗಿತು ಶ್ರೀ ಪಿಂಡಿ ಶಿವಮೊಗ್ಗರು ಸ್ವಾಗತ ಭಾಷಣಮಾಡಿದರು ಶ್ರೀ ಕೆ ಪರಿಮಾಣ ಶೆಟ್ಟರು ಪ್ರತಿಂತ್ರ ಭಾರತದ ಆರ್ಥಿಕ ಸಮಸ್ಯೆ ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು ಬೆಂಗಳೂರಿನ ಶ್ರೀ ಟಿ. ಎಸ್ ವಿಶ್ವನಾಥರು ಧರ್ಮ ಮತ್ತು ರಾಜಕೀಯದ ಕುರಿತು ಭಾಷಣಮಾಡಿದರು.

ಶೇಷಮತಗಳು—ಪಾಜಿ ಕೆಲಾಮ್ಮ ಹುಬಲ್ ಇದರ ಪಟ್ಟಿಯ ಆಟೀಸರ ಮತ್ತು ಎಕೌಂಟಿಂಟ್ ಆಗಿದ್ದ ಶ್ರೀ ಎಸ್. ಎಸ್. ಸರ್ಕಾರ್ ಇವರು ಲೈಫ್ ಇನ್ಶೂರೆನ್ಸ್ ಕೊರ್ಪೋರೇಶನ್ ಉಡುಪಿ ಬ್ರಾಂಚ್‌ನ ಜನಾಯಕ ಅಭ್ಯರ್ಥಿಯಾಗಿದ್ದು ಮಾಜಿ ಸಚಿವ ಪೆಂಟ್ ಹ್ಯಾನ್ಸ್‌ರವರ ವಿರುದ್ಧ ಅಭ್ಯರ್ಥಿಯಾಗಿದ್ದ ಶ್ರೀ ಕೆ ಪಿಂಡಿ ಶೆಟ್ಟಿ, ಬಿ ಎ ಎಲ್. ಟಿ ಇವರುಗಳ ಕೆ. ಅಶ್ವಿನಿ ವಿದ್ಯಾವಿಕಾಸಕಾಲಯ ಸೇವಕ ಕೊಂಡಿರುವುದು ಸಂತೋಷಕರ, ಇದೇನೂ ನಮ್ಮ ಅಭಿನಂದನೆಗಳು.

ವೈದ್ಯಕೀಯ ಶಿಕ್ಷಣಕ್ಕೆ ಅಪೂರ್ವ ಯೋಜನೆ— ವಿಶೇಷ ಕಲ ಕ್ಷ ತ ತ್ರಾಗಿ ಜಿಲ್ಲೆಯ ಬಡಮಕ್ಕಳು ದೊಡ್ಡ ಪ್ರಮಾಣದಲ್ಲಿ ತಜ್ಞವಾದ ವೈದ್ಯರ ಕೊರತೆ ಇರುವುದರಿಂದ ಇದನ್ನು ಅಡಚಣೆಯನ್ನು ತಪ್ಪಿಸುವ ದೃಷ್ಟಿಯಿಂದ ಶ್ರೀ ಟಿ. ಎ. ಪೈಗಳ ಒತ್ತಾಯದಿಂದ ಮಣಿಪಾಲ್ ಕೇಂದ್ರದ ಸ್ಟೇಟ್ ಕಾಲೇಜ್ ಸೊಸೈಟಿಯ ವತಿಯಿಂದ ಮಣಿಪಾಲದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲ್ಪಟ್ಟಿದೆ. ಇದರ ಪ್ರಾಂಶುಪಾಲರಾಗಿ ಡಾ ಟಿ ಮಾಧವ ಪೈಗಳವರ ಸಮ್ಮುಖದಲ್ಲಿ ಮಾ ಟಿ ಮಾಧವ ಪೈಗಳವರ ಸಮ್ಮುಖದಲ್ಲಿ ಸ್ಥಾಪಿತವಾಗಿರುವ ಕಾಲೇಜಿಗೆ ಈಗ ಶ್ರೀ ಟಿ ಎ ಪೈಗಳ ಕೃಷ್ಣಾಸ್ಪತ್ರೆ ಮಾಳದಲ್ಲಿ 400 ಬೆಡ್‌ಗಳಿಗೆ ಆಸ್ಪತ್ರೆಯ ನಿರ್ಮಾಣ ಆಗ್ಯಾದಕ್ಕೆ ಬಿಡಿಸಲ್ಪಟ್ಟ ವಿಮಾಪಿಠದ ರೂಪ ಸೊಪವಾದ ಸಂದರ್ಭ ಉತ್ತೇಜಕಗಳನ್ನು ವಿಸ್ತರಿಸಿದ ಶ್ರೀ ಪೈಗಳು ಕಷ್ಟಸಾಕ್ಷರವಾದ ಉದ್ಯೋಗವಾದ ಈ ಆಸ್ಪತ್ರೆಗೆ ಮೊದಲೆಯವರಿಂದ ಇದು ಲೋಕಕ್ಕೆ ಸೇವೆಯಾಗಿ ಸಂಸ್ಥೆಯೆಂದು ಶ್ರೀ ಟಿ. ಎ. ಪೈಗಳ ಪೈಗಳು ಧನ್ಯವಾದಕ್ಕರ್ಹರಾಗಿದ್ದಾರೆ

ಗೋ ವಿಜಯ
(ಗೋವಿನಕಥೆ)

ಶ್ರೀ ಕೃಷ್ಣಾಚಾರ್ಯ ಬಂದಾಚಾರ್ಯರಿಂದ ರಚಿತವಾದ ಸಕ್ಕರೆಯ ಸಮಿತಿಯ ಶಿಕ್ಷಣಕ್ಕೆ ಅಮೋಘವಾದ ಕೊಡುಗೆಯಾಗಿ ಕೊಡಲ್ಪಟ್ಟಿದೆ. ತಮ್ಮಷ್ಟಕ್ಕೆ ತಾವೇ ಕತೆ ಹಾಗು ಇದೊಂದು ಸಂಪೂರ್ಣ ವಿಷಯ ಜ್ಞಾನ ಹಾಗೂ ಶಾರೀರಿಕ ಶಿಕ್ಷಣ ಕೊಡುವಂತಹ ಸಮಗ್ರ ಏಕ ಕಾವ್ಯವಿದು ಕಥೆಯ ಸಂಕ್ಷಿಪ್ತ ಸಾರ ಹಾಗೂ ಪ್ರಾಣಿಗಳ ಕ್ರಿಯೆಗಳ ಸ್ವಾರಸ್ಯ ಪ್ರಸ್ತುತ ಪ್ರಸ್ತುತ ಪ್ರಸ್ತುತ

ಮಂಗಳೂರು

ಶ್ರೀ. ಸಿ. ವಿ ಆರ್. ರಾವ್ — ಮೈಸೂರು ಸರಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಡೆವಲಪ್‌ಮೆಂಟ್ ಕಮಿಶನರ್ ಶ್ರೀ. ಸಿ. ವಿ ಆರ್. ರಾಯರು ತಾ 3ರಂದು ಮಂಗಳೂರಿಗೆ ಆಗಮಿಸಿದರು. ಮರು ದಿವಸ ಬೆಳಿಗ್ಗೆ ಅವರು ಕಂಕನಾಡಿ ಭತ್ತಪರಿಶೋಧನಾಕೇಂದ್ರ, ಪಿಲಿಕುಳಾರಿಕಾ ತರಬೇತಿ ಕೇಂದ್ರ ಮತ್ತು ಶೀತಲೀಕರಣಕೇಂದ್ರ ಮುಂತಾದ ಸ್ಥಳಗಳಿಗೆ ಭೇಟಿಯಿತ್ತು, ಮಧ್ಯಾಹ್ನ ಬೆಂಗಳೂರಿಗೆ ಹಿಂತಿರುಗಿದರು.

ಗೋಡೆ ಜರಿದು ಮರಣ— ಮಂಗಳೂರಿನ ಸಮೀಪದ ಕೊಂಚಾಡಿಯಲ್ಲಿ ತಾ. 1ರಂದು ಬೆಳಗಾಗುವ ಮೊದಲೇ ಒಂದು ಗೇರುಬೀಜ ಕಾರ್ಖಾನೆಯ ಕಲ್ಲಿನ ಪಾಗಾರ ಗೋಡೆಯು ಜರಿದುಬಿದ್ದು ಬಳಿಯ ಮನೆಯಲ್ಲಿರುವ ಎರಡು ಕುಟುಂಬಗಳ ಆರು ಜನ ಮರಣಪಟ್ಟಿರುವರು ಮಂಗಳೂರಿನಿಂದ ಅಗ್ನಿಶಾಮಕ ದಳವು ಹೋಗಿ ಗೋಡೆಯ ಅಲ್ಲನ್ನೆತ್ತಿ ಅವರನ್ನು ಹೊರಕ್ಕೆ ತರುವ ಮೊದಲೇ ಮರಣಗೊಂಡಿದ್ದರು

ಮಂಗಳೂರು ಕಾಂಗ್ರೆಸ್ ಕಮಿಟಿಯ ಸಭೆಯು— ಶ್ರೀ. ಎ. ಶಂಕರ ಅಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಅಕ್ಕಿಯ ಕ್ರಯವು ದಿನದಿಂದ ದಿನಕ್ಕೆ ಏರುತ್ತಿರುವುದರಿಂದ ಸರಕಾರ ಅ ಕಡೆ ಗಮನವಿತ್ತು, ಅಕ್ಕಿಯ ದರ ಕಡಿಮೆಮಾಡಬೇಕೆಂದೂ, ಅಗ್ಗಿಬೆಲೆಯ ಅಕ್ಕಿ ಡಿಪೋಗಳನ್ನು ತೆರೆಯಬೇಕೆಂದೂ ಸಂಬಂಧಪಟ್ಟವರನ್ನು ಕೇಳಿಕೊಳ್ಳುವ ನಿರ್ಣಯವಾಯಿತು

ಟೀಚರ್ಸ್ ಗಿಲ್ಡಿನ ಮಹಾಸಭೆಯು— ಕಳದ ತಾ 29ರಂದು ಗಿಲ್ಡಿನ ಅಧ್ಯಕ್ಷ ಶ್ರೀ ಎಸ್. ಮುಕುಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಗಿಲ್ಡಿನ ಘಟನೆಯಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘ ಮತ್ತು ಜಿಲ್ಲಾ ಸೆಕಂಡರಿ ಶಾಲಾ ಶಿಕ್ಷಕರ ಸಂಘ ಎಂಬ ಎರಡು ಸಂಘಗಳನ್ನೊಳಗೊಂಡ ಹೊಸ ಘಟನೆಯನ್ನು ಸ್ವೀಕರಿಸಲಾಯಿತು

ಹೊಸ ವರ್ಷಕ್ಕೆ ಶ್ರೀಗಳಾದ ಎಸ್. ಮುಕುಂದರಾವ್, ಮತ್ತು ಎ ಎಸ್ ವೆಂಕಟಕೃಷ್ಣರಾಯರು ಗಿಲ್ಡಿನ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಜಿಲ್ಲಾ ಸೆಕಂಡರಿ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಶ್ರೀಗಳಾದ ಭಿ ಭವಾನಿರಾವ್ ಮತ್ತು ಪಿ ರಾಮಚಂದ್ರರಾಯರೂ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಶ್ರೀಗಳಾದ ಬಿ. ಸುಬ್ಬಣ್ಣ ಹೆಗ್ಡೆ ಮತ್ತು ಕೆ ದಾಸಪ್ಪನವರೂ ಆರಿಸಲ್ಪಟ್ಟರು

ಮುನಿಸಿಪಲ್ ಕೌನ್ಸಿಲರುಗಳು— ಕೂಡಾ ಶಾಲೆಗಳಲ್ಲಿ ಸಂಬಳ ರಿಯಾಯತಿ ಬಗ್ಗೆ ಸರ್ಟಿಫಿಕೇಟುಗಳನ್ನೀಯುವ ಅಧಿಕಾರ ಪಡೆದಿರುತ್ತಾರೆ ಅದುದರಿಂದ ಜನರು ಇದರ ಉಪಯೋಗ ಮಾಡಬಹುದಾಗಿದೆ.

ಸೇಕಡಾ 4½ ಸಲೆ ಬಡ್ಡಿಯ 1970 ರ ರಾಜ್ಯ ಸಾಲಗಳು ದಿ ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು— ಇದರ ಡೈರೆಕ್ಟರರು ತಮ್ಮ ಬೇಂಕಿನ ಶಾಖೆಗಳಿರುವ ಎಲ್ಲಾ ರಾಜ್ಯ ಸಾಲಗಳಿಗೆ ಹಣ ತೆರಲು ನಿರ್ಧರಿಸಿರುವರು ಮೈಸೂರು ಸ್ಟೇಟ್ ಸಾಲಕ್ಕೆ ರೂ 1½ ಕೋಟಿ ತೊಡಗಿಸುವರು

ಬೇಂಕಿನ ಅಶ್ರಯದಾತರು, ಪ್ರೋತ್ಸಾಹಕರು ಮತ್ತಿತರ ಸಾರ್ವಜನಿಕ ಗಿರಾಕಿಗಳು ರಾಜ್ಯ ಸರಕಾರಗಳ ಸಾಲಗಳಲ್ಲಿ ಹಣವನ್ನು ತೊಡಗಿಸಲು ಅನುಕೂಲವಾಗುವಂತೆ ಕೆನರಾ ಬೇಂಕು ಉದಾರ ಶರತ್ತುಗಳಿಂದ ಸಾಲಗಳ ಸ್ವೀಕಾರಕ್ಕೆ ನಿರ್ಧರಿಸಿರುವುದೆ ಅಂತಹ ಸಾಲಗಳಮೇಲೆ ಸೇಕಡಾ 1¾ರಂತೆ ಬಡ್ಡಿ ಎಣಿಸಲಾಗುವುದು ಲ ತಿಂಗಳು ಕಂತಿನಿಂದ ಹನ್ನೆರಡು ತಿಂಗಳುಗಳಲ್ಲಿ ಮರುಪಾವತಿ ಮಾಡುವುದು. ಈ ವಿಚಾರ ಯಾ ನತ್ತೂ ಜನರಲ್ಲಿ ಜಾಹೀರು ಮಾಡಲಾಗಿದೆ.

ಮೈಸೂರು ರಾಜ್ಯದ ಸಾಲಗಳಲ್ಲಿ ಕಳದ ನಾಲ್ಕೂರು ವರ್ಷಗಳಲ್ಲಿ ತೊಡಗಿಸಿದ ಹಣದ ವಿವರ.

1955—35 ಲಕ್ಷ 1956—50 ಲಕ್ಷ
1957—60 ಲಕ್ಷ 1958—150 ಲಕ್ಷ

ದ ಕ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ತಾ 7ರಂದು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲಾ ಬೋರ್ಡಿನ ಪ್ರಾಕೃತದ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸರಕಾರದ ಮುಂದಿಡುವುದು ಮತ್ತು ಜಿಲ್ಲಾ ಬೋರ್ಡಿನ ನೌಕರರಿಗೆ ಹೊಸ ವೇತನ ಸಟ್ಟದನ್ನಯ ಸಂಬಳ ಕೊಡಲಾಗುವಂತೆ ಸರಕಾರದ ಸಹಾಯವನ್ನು ಯಾಚಿಸುವುದು ಈ ಉದ್ದೇಶಗಳು ದ. ಕ ಜಿಲ್ಲಾ ಬೋರ್ಡಿನ ಸದಸ್ಯರುಗಳಾದ ಸರ್ವಶ್ರೀ ಬಿ. ಮಂಜಯ್ಯ ಹೆಗ್ಡೆ (ಅಧ್ಯಕ್ಷ), ಸಚಿವ ಜಾ. ಕೆ ಕೆ. ಹೆಗ್ಡೆ, ಬಿ. ಆರ್. ಕರ್ಕೇರ, ಎಮ್. ಎಲ್. ಎ, ಕೆ ಕೆ. ಸೆಟ್ಟಿ, ಎಮ್ ಎಲ್. ಸಿ, ಡಾ ಕೆ ನಾಗಪ್ಪ ಅಳ್ವ ಎಮ್ ಎಲ್ ಎ, ಮತ್ತು ಬಿ ಎಸ್ ಭಾಸ್ಕರ ರೈಯವರನ್ನೊಳಗೊಂಡ ಶಿಷ್ಟಮಂಡಲವೊಂದು ಬೆಂಗಳೂರಿಗೆ ತೆರಳಿ ಮೈಸೂರು ರಾಜ್ಯದ ಮುಖ್ಯ ಮಂತ್ರಿಯವರನ್ನು ಭೇಟಿಯಾಗಬೇಕೆಂದು ನಿರ್ಧಾರವಾಯಿತು

ಆರಂಭದಲ್ಲಿ ಜರಗಿದ ಬೋರ್ಡಿನ ವಿಶೇಷ ಸಭೆಯಲ್ಲಿ ಶ್ರೀ ಎ ಕೃಷ್ಣ ಸೆಟ್ಟರು ಬೋರ್ಡಿನ ಕಾಮಗಾರೀ ಮತ್ತು ಸಾರಿಗೆ ಸಮಿತಿಗೆ ಸುನರಾಯ್ಕೆಗೊಂಡರು.

ಸುತ್ತೂರು— ಮೈಸೂರು ವಿಶ್ವವಿದ್ಯಾಲಯದ ಉಸಕುಲಪತಿ ಪದ್ಮ ವಿಭೂಷಣ ಡಾ ಕೆ. ವಿ ಪುಟ್ಟಪ್ಪನವರು ಸುತ್ತೂರಿನ ಸೈಂಟ್ ಫಿಲೋಮಿನಾ ಕಾಲೇಜು ಉದ್ಘಾಟನಾ ಸಮಾರಂಭದ ಅಧ್ಯಕ್ಷೆ ಸ್ಥಾನದಿಂದ ಮಾತನಾಡುತ್ತಾ ವಿದ್ಯಾಲ್ಯಾಸದಲ್ಲಿ ಜಾತೀಯ ಮನೋಭಾವನೆಯುಬರಬಾರದು ಕನ್ನಡದಲ್ಲಿ ಯುಕ್ತ ಶಬ್ದಗಳು ಬೊರೆಯದಿದ್ದಲ್ಲಿ ಇಂಗ್ಲಿಷ್ ಶಬ್ದವನ್ನೇ ಉಪಯೋಗಿಸಬಹುದು, ವಿಜ್ಞಾನ ಮತ್ತು ಕಲೆಗಳನ್ನು ಕಲಿಯುವುದರಲ್ಲೂ ವಿದ್ಯಾರ್ಥಿಗಳು ಹೆಚ್ಚು ಉತ್ಸಾಹ ತೋರಬೇಕೆಂದು ಹೇಳಿದರು.

ಮೈಸೂರು ವಿದ್ಯಾಮಂತ್ರಿ ಶ್ರೀ ಅಣ್ಣಾ ರಾವ್ ಗಣಮುಖಿಯವರು ಕಾಲೇಜನ್ನು ಉದ್ಘಾಟಿಸುತ್ತಾ ಜಿಲ್ಲೆಯ ವಿದ್ಯಾ ಜಗತ್ತಿಯನ್ನು ಪ್ರಶಂಸಿಸಿದರು ಕಾಲೇಜಿನ ಕರೆಸ್ಪೊಂಡೆಂಟ್ ರಾದ ರೆ ಫಾ ಎ ಪತ್ರಾವೊದವರು ಸ್ವಾಗತಿಸಿ ಕಾಲೇಜಿನ ಸ್ಥಾಪನೆ ನೆರವಾದವರ ಉಪಕಾರ ಸ್ಮರಣೆಮಾಡಿದರು. ಕೊನೆಯಲ್ಲಿ ಶ್ರೀ ಕೆ ವಿ ಗಾಡ್, ಎಮ್ ಎಲ್ ಎ, ಅವರು ಧನ್ಯವಾದವಿತ್ತರು.

ಮಲೇರಿಯಾ ನಿರ್ಮೂಲನ ಸಪ್ತಾಹ ಹೆಬ್ರಿ— ಸ್ಥಳೀಯ ಸಮಾಜ ಮಂದಿರದಲ್ಲಿ ಕಳದ ತಾ 26ರಂದು ಅ. ಭಾ. ಮಲೇರಿಯಾ ನಿರ್ಮೂಲನ ಸಪ್ತಾಹದ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಯು ಎಸ್ ಅಜಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು ಡಾ| ಕೆ ಎನ್. ಕಿಟ್ಟರ ಅಧ್ಯಕ್ಷತೆಯಲ್ಲಿ ನಂರಾವಿಯಲ್ಲೂ, ಪೆಣಾರಿನಲ್ಲಿ ಶ್ರೀ ಕೆ ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲೂ, ವಿಟ್ಲದಲ್ಲಿ ಶ್ರೀ ರಾಮನವಮಿ ರಾಜರ ಅಧ್ಯಕ್ಷತೆಯಲ್ಲೂ ಸಪ್ತಾಹ ಸಮಾರಂಭಗಳು ಜರಗಿದುವು

ಬ್ರಹ್ಮಾವರ— ಕಳದ ತಾ 27ರಂದು ಸ್ಥಳೀಯ ಎಸ್ ಎಮ್. ಎಸ್ ಹೈಸ್ಕೂಲಿನ ವಿದ್ಯಾರ್ಥಿ ಮುಖಂಡರ ಮನೆಯಲ್ಲಿ ನಡೆದು ಶ್ರೀ ಕೆ ನಾರಾಯಣ ಪಾತಾಳರು ವಿದ್ಯಾರ್ಥಿ ಮುಖಂಡರಾಗಿ ಆರಿಸಲ್ಪಟ್ಟರು.

ಬನಾರಿ— ಸ್ಥಳೀಯ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ಕಳದ ತಾ 28ರಂದು ಶ್ರೀಕೃಷ್ಣ ಪೂಜೆ ಮತ್ತು "ದಾನಶೂರ ಕರ್ಣ" ಎಂಬ ಪ್ರಸಂಗದ ಯಕ್ಷಗಾನ ಕೂಟವು ಶ್ರೀ ಬಿ ಶೀನಪ್ಪ ಗೌಡರ ನೃತ್ಯ ಸ್ಥಾಪಕತ್ವದಲ್ಲಿ ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣುಭಟ್ಟರ ಅಧ್ಯಕ್ಷತೆಯಲ್ಲಿ ನುರಿತ ಅರ್ಥಧಾರಿಗಳ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು.

ಹೊಸಬೆಟ್ಟು— ಸ್ಥಳೀಯ ಮೊಗವೀರ ಭಗಿನಿ ಸೇವಾ ಸಮಾಜದ ಆಶ್ರಯದಲ್ಲಿ ತಾ. 1ರಂದು ಮಹಿಳಾ ಕೇಂದ್ರ ಮತ್ತು ಬಾಲ ಮಂದಿರಗಳ ಉದ್ಘಾಟನೆಯನ್ನು ಸಮಾಜ ಶಿಕ್ಷಣ ಸಂಘಟಕಿ ಕುಮಾರಿ ಸುಲೋಚನೆಯವರು ನೆರವೇರಿಸಿದರು. ಡಾ ಎಸ್. ಚಂದ್ರ, ಎಮ್ ಎಲ್ ಸಿ, ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಸಮಾಜದ ಅಧ್ಯಕ್ಷೆ ಶ್ರೀಮತಿ ಇಂದಿರಾ ದೇವಿಯವರು ಸ್ವಾಗತ ಭಾಷಣ ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀಮತಿ ಚಂದ್ರಾದೇವಿಯವರು ವರದಿಯನ್ನೋದಿದರು ಸಭಿಕರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಪೆಜ್ಮಾಡಿಕೋಡಿ— ಇಲ್ಲಿಯ ಫಿಶರೀಸ್ ಹೈಸ್ಕೂಲಿನ ಉದ್ಘಾಟನಾ ಸಮಾರಂಭವನ್ನು ತಾ 3ರಂದು ಶ್ರೀ ಬಿ ಆರ್. ಕರ್ಕೇರ, ಎಮ್ ಎಲ್ ಎ, ಅವರು ನೆರವೇರಿಸಿದರು ಡಾ ಎಸ್. ಚಂದ್ರಾ, ಎಮ್ ಎಲ್ ಸಿ, ಯವರು ಸಭಾಧ್ಯಕ್ಷತೆ ವಹಿಸಿದ್ದರು ಶಾಲಾ ಹೆಡ್ಮಾಸ್ಟರ್ ಶ್ರೀ ಯು ಬಿ ನಾರಾಯಣರಾಯರು ಸ್ವಾಗತ ಭಾಷಣ ಮಾಡಿದರು ಶ್ರೀ ಲಕ್ಷ್ಮೀನಾರಾಯಣರಾಯರು ಸಂದೇಶ ವಾಚನ ಮಾಡಿದರು ಫಿಶರೀಸ್ ಇನ್‌ಸ್ಪೆಕ್ಟರ್ ಶ್ರೀ ಎನ್ ಶ್ರೀನಿವಾಸನ್, ಹೆಜ್ಮಾಡಿ ಹೈಸ್ಕೂಲ ಹೆಡ್ಮಾಸ್ಟರ್ ಶ್ರೀ ಎಚ್ ವಿ ಶೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು ಶ್ರೀ ಕೆ ಸೋಮಪ್ಪ ಸುವರ್ಣನವರು ಧನ್ಯವಾದವಿತ್ತರು

ಓದಲೇಬೇಕಾದ ಕೆಲವು ಪುಸ್ತಕಗಳು

ಒಡುಕು ಬಂಗಾರ (ಕುಮಾರ ಸ್ವಾಮಿ)	1	8	0
ಹಿರೋಶಿಮಾದಿಂದ ಜನೇವಾ (ಯು ಆರ್ ಆಚಾರ್ಯ)	1	8	0
ಇಂದಿನ ನಿಜ್ಞಾನ ಮತ್ತು ಇಂದಿನ ಮಾನವ (ಅನು ಯು. ಲಕ್ಷ್ಮೀನಾರಾಯಣಾಚಾರ್ಯ)	1	8	0
ನಡುಹಗಲಿನ ಕಗ್ಗತ್ತಲೆ (ಅನು ಕು ಶಿ. ಹರಿದಾಸ ಭಟ್)	2	8	0
ತಿಕ್ಷಣದ ಸ್ವೇಯಗಳು (ಅನು. ಯು ಲಕ್ಷ್ಮೀನಾರಾಯಣ ಆಚಾರ್ಯ ಮತ್ತು ಕೆ ಬಿ ರಾಮಕೃಷ್ಣ ರಾವ್)	2	4	0
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು. ಕು. ಶಿ ಹರಿದಾಸ ಭಟ್)	2	0	0
ಎತ್ತಿಯದ ಸಂಪತ್ತು (ಕು ಶಿ ಹರಿದಾಸ ಭಟ್)	2	0	0
ಘಂಟಿಮಾಲಾ (ಅನು. ಕು. ಶಿ. ಹರಿದಾಸ ಭಟ್)	2	0	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12	0
ಭಾರತದ ಅಂಗ-ಕಾಶ್ಮೀರ (ರಘುನಂದನ ರಾವ್)	0	5	0
ಬಾರತೀಯ ಮಹಾಪುರುಷರು (ಎಸ್. ಗೋಪೀಚಂದ ರಾವ್)	1	8	0
ಕಥಾ ಕೌಮುದಿ (ಎಸ್. ಗೋಪೀಚಂದ ರಾವ್)	1	8	0

(ಕೆಟಲಾಗಿಗೆ ಬರೆಯಿರಿ)

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ.



ಅಮೆರಿಕೆಯ ಆಕಾಶಭಾಣ ತಯಾರಿಕೆಯ ಸಂಸ್ಥೆಯು ಹೊಸತಾಗಿ ಸಿದ್ಧಪಡಿಸಿದ ನಾಲ್ಕು ಜನವಾಕಾಶವಿರುವ ನಿಲ್ದಾಣದ ಚಿತ್ರ.

ಹೊಂಬಾಡಿ ಮಂಡಾಡಿ— ಸ್ಥಳೀಯ ವಿವೇಕೋದಯ ಪ್ರೌಢ ಪ್ರಾಥಮಿಕ ಶಾಲೆಯ ಹಿತ್ತು ವಿದ್ಯಾರ್ಥಿನಿಯರಿಗೆ ವಸ್ತ್ರ ಮತ್ತು ಶಾಲಾ ಪುಸ್ತಕಗಳ ರೂಪದಲ್ಲಿ ಕೇಂದ್ರ ಸರಕಾರವು ಕೊಟ್ಟ ವಿದ್ಯಾರ್ಥಿ ವೇತನವನ್ನು ನಿವರಣೆಮಾಡುವ ಸಮಾರಂಭವು ಕುಂದಾಪುರ ರೇಂಜಿನ ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಗೋಪಾಲ ಮೈಲಿಯವರ ನೇತೃತ್ವದಲ್ಲಿ ಶ್ರೀ ಎಸ್ ಕೃಷ್ಣಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಪಿ ರಾಮಾಚಾರ್, ಕಾಮು ಸಂಜೀವ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು

ಮೂಡಬಿದ್ರೆ— ಇಲ್ಲಿನ ಜೈನ್ ಹೈಸ್ಕೂಲಿನ ಶಾಲಾ ನಿಧಿಗಳ ಪಾರ್ಲಿಮೆಂಟಿನ ಚುನಾವಣೆ ನಡೆದು ಶ್ರೀಗಳಾದ ಬಿ. ಪ್ರತಾಪ ಸೆಟ್ಟಿ ಮತ್ತು ಎಸ್ ಶಿವರಾಮ ಸೆಟ್ಟಿ ಇವರು ಅಧ್ಯಕ್ಷನುಸಾಗಿ ಶಾಲಾ ಮಂತ್ರಿಗಳುಮತ್ತು ಪಾರ್ಲಿಮೆಂಟ್‌ಸಭಾಪತಿಗಳಾಗಿ ಆರಿಸಲ್ಪಟ್ಟರು.

ಕಳತ್ತೂರು— ಶಿವಪುರ, ಕಳತ್ತೂರು, ಪಾದೂರು ಮತ್ತು ಅಸುಪಾಸಿನ ಗ್ರಾಮಸ್ಥರ ಸಭೆಯು ಕಳತ್ತೂರು ಶಾಲೆಯಲ್ಲಿ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಂ ಗೋಪಾಲಕೃಷ್ಣ ಪೈಗಳು ಸ್ವಾಗತಿಸಿದರು ಶ್ರೀಗಳಾದ ಲೂಯಿಸ್ ಮೆಂತೋನ್ಸಾ, ನರಸಿಂಹ ತಂತ್ರಿ, ಜಗನ್ನಾಥ ಸೆಟ್ಟಿ, ಕೆ ಎ ಕೃಷ್ಣಯ್ಯ ಮೊದಲಾದವರು ಸಂದರ್ಭೋಚಿತ ಭಾಷಣಮಾಡಿದರು.

ಮಣಿಪಾಲ— ದ ಕ ಜಿಲ್ಲಾ ಮೆಡಿಕಲ್ ರಿಲೀಫ್ ಸೊಸೈಟಿಯ ಮಣಿಪಾಲ ಕೇಂದ್ರವನ್ನು ತಾ 1ರಂದು ಡಾ| ಟಿ ಎಮ್. ಎ. ಪೈಗಳು ಉದ್ಘಾಟಿಸಿದರು ಕಾರ್ಯದರ್ಶಿ ಶ್ರೀ ಟಿ ಎ ಪೈಗಳವರು ಸ್ವಾಗತ ಮಾತುಗಳನ್ನಾಡಿ ಸೊಸೈಟಿಯ ಧ್ಯೇಯಗಳನ್ನು ವಿವರಿಸಿದರು ಅಲ್ಲದೆ ಉತ್ತಮ ಶ್ರೇಣಿಯ ಸಾಸಜ್ಜಿತ ಒಪರೇಶನ್ ಥಿಯೇಟರನ್ನು ಈ ಕೇಂದ್ರದಲ್ಲಿ ಇಟ್ಟಿಸಿ ತನ್ಮೂಲಕ ದೇಶದ ಪ್ರಖ್ಯಾತ ಸರ್ಜನರ ಶಸ್ತ್ರ ಚಿಕಿತ್ಸೆಯ ಸೌಕರ್ಯಗಳನ್ನು ಪಡೆಕೊಳ್ಳುವ ಯೋಜನೆಯೂ ಇದೆಯೆಂದರು ಶ್ರೀ ಟಿ ರಮೇಶ ಪೈಗಳು ಧನ್ಯವಾದವಿತ್ತರು

ಮಂದಾರ್ತಿ— ಸ್ಥಳೀಯ ಶ್ರೀ ಗಣೇಶ ವಾಚನಾಲಯಕ್ಕೆ ಈವರೆಗೆ ಶ್ರೀ ಎ ರಾಘವೇಂದ್ರ ಉಡುಪರು ರೂಪಾಯಿ 60/— ಬೆಲೆಯ ಪುಸ್ತಕಗಳನ್ನೂ ಶ್ರೀ ಎ ಪದ್ಮನಾಭ ಉಡುಪರು ರೂಪಾಯಿ 30/ ಬೆಲೆಯ ಪುಸ್ತಕಗಳನ್ನೂ ದಾನವಿತ್ತಿರುವರು

ದಯವಿಟ್ಟು ನಿಮ್ಮ ಬಾಕಿ ಚಂದಾಹಣವನ್ನು ಮನಿಯಾರ್ಡರು ಮಾಡಿರಿ

ನಾರದ ಮಹಾನುಭಾವ—

ಶ್ರೀ ಶರ್ಮನ್ ಅದಾಮ್ಸ್

ಎರಡು ವರ್ಷ ಪೂರ್ವದಲ್ಲಿ, ಎಂದರೆ, ೧೯೫೬ನೇ ಮೇ ಆರಿಂದು, ಆನೆರಿಕೆಯ ರಾಷ್ಟ್ರಾಧ್ಯಕ್ಷ ಐಸನ್ ಹಾವರರು ಒಂದು ಭಾಷಣದಲ್ಲಿ—"ನನ್ನ ಸರಕಾರದ ಯಾವುದೇ ವಿಭಾಗದಲ್ಲಿ ನನ್ನ ಕಾಟುಂಬಿಕರ, ಅಥವಾ ಸ್ನೇಹಿತರಲ್ಲಿ ಯಾರಾದರೂ ಬ್ಬರು ಇರುವರು ಅಥವಾ "ಶ್ವೇತ ಭವನ"ದೊಡನೆ ಅಂತಹವನೊಬ್ಬನ ಸಂಬಂಧವು ಅಪ್ರತ್ಯಕ್ಷ ಅಥವಾ ಪ್ರತ್ಯಕ್ಷವಾಗಿರುವುದೆಂದು ಯಾರಾದರೂ ತಿಳಿದರೆ, ಅಂತಹ ವ್ಯಕ್ತಿಯನ್ನೆತ್ತಿ ಕಿಟಕಿಯಿಂದ ಎಸೆದು ಬಿಡಲಾಗುವುದು. ನನ್ನ ಅಧಿಕಾರಿಗಳಲ್ಲಿ ಯಾರೂ ಪಕ್ಷಪಾತ ಪೂರ್ಣ ವ್ಯವಹಾರದ ದೋಷವನ್ನು ಮಾಡುತ್ತಾರೆಂದು ನಾನು ನಂಬಲಾರೆನು. ಹಾಗಿದ್ದರೂ ಈ ರೀತಿಯ ಯಾವುದೇ ಘಟನೆಯನ್ನು ನನ್ನ ಸ್ಮರಣೆಗೆ ತಂದುಕೊಟ್ಟರೆ, ನಾನು ಸಂಬಂಧಿತ ವ್ಯಕ್ತಿಯನ್ನು ತಾತ್ಕಾಲದಲ್ಲಿಯೇ ಸದ ಸಂಯುಕ್ತಗೊಳಿಸುವೆನು" ಎಂದು ಘೋಷಿಸಿದರು.

ಆದರೆ, ಐಕರ ಈ ಘೋಷಣೆಯು ಮಾನ್ಯತೆಗೋಸುಗ ಸರಕಾರ ವಿರೋಧೀ ಪಕ್ಷದಿಂದ ದೋಷಿಯೆಂದು ಎದುರು ನಿಲ್ಲಿಸಲಾದ ಶ್ರೀ ಶರ್ಮನ್ ಆದಮ್ಸ್‌ರನ್ನು ಪದಮುಕ್ತಗೊಳಿಸಲು ಐಕರು ಸಿದ್ಧರಿರಲಿಲ್ಲ. "ನನಗೆ ಅವರ ಸೇವೆಯ ಆವಶ್ಯಕತೆಯು ಈಗಲೂ ಇದೆ" ಎಂದಿಷ್ಟೇ ಶ್ರೀ ಐಕರು ಉದ್ಗರಿಸಿದರು

ಶ್ರೀ ಆದಮ್ಸ್ ಯಾರು ಮತ್ತು ಅವರ ವಿರುದ್ಧ ಹೊರಿಸಲಾದ ಆರೋಪಗಳು ಯಾವುವು?

ಶ್ರೀ ಶರ್ಮನ್ ಆದಮ್ಸರನ್ನು ಅಮೆರಿಕೆಯ ಬಹು ಜನರು "ಅಖಂಡಾಷ್ಟ್ರಾಧ್ಯಕ್ಷ" ರೆಂದು ತಿಳಿದಿದ್ದಾರೆ. ನಿಜವಾಗಿಯೂ ಶ್ರೀ ರಿಚರ್ಡ್ ನಿಕ್ಸನರು ಉಕ್ತಪದದಲ್ಲಿ ರಾರಾಜಿಸುತಿದ್ದಾರೆ ಎರಡು ವರ್ಷ ಪೂರ್ವದಲ್ಲಿ ರಾಷ್ಟ್ರಾಧ್ಯಕ್ಷ ಐಸನ್‌ಹಾವರರು ಗಂಭೀರರೂಪದ ಬೇನೆಯಿಂದ್ದನರಳುತಿದ್ದಾಗ, ಶ್ರೀ ಆದಮ್ಸರು ವ್ಯಾಪಕ ಅಧಿಕಾರವನ್ನು ಸ್ವೀಕರಿಸಿ, ಆಡಳಿತೆಯ ಹೊರೆಯನ್ನು ಹೊತ್ತರು. ಈಗ ಸತ್ತಾರೂಢವಾಗಿರುವ ರಿಪಬ್ಲಿಕನ್ ಪಕ್ಷದ ಆಧಾರಸ್ತಂಭಗಳಲ್ಲಿ ಇವರೂ ಒಬ್ಬರೆಂದು ಪರಿಗಣಿತರಾಗಿದ್ದಾರೆ. ಅಮೆರಿಕೆಯಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಯು ಸಮೀಪಿಸುತ್ತಿರುವುದರಿಂದ, ಸರಕಾರೀ ಪಕ್ಷದ ವಿರೋಧಿ ಡೆಮೊಕ್ರೆಟಿಕ್ ಪಕ್ಷ ಹಾಗೂ ಅದರ ನಾಯಕರು, ಭೂತಪೂರ್ವ ರಾಷ್ಟ್ರಾಧ್ಯಕ್ಷ ಶ್ರೀ ಹ್ಯಾರಿ ಟ್ರೂಮನರು ಪ್ರತಿಯೊಂದು ಸಂದರ್ಭವನ್ನೂ ತಮ್ಮ ಲಾಭಾರ್ಥವಾಗಿ ಉಪಯೋಗಿಸಿಕೊಳ್ಳಬಯಸುತಿದ್ದಾರೆ. ಹೀಗಾಗಿ ಈ ಆದಾಮ್ಸ ಪ್ರಕರಣವೂ ಈ ಲಾಭಾರ್ಥದ ಸೋಂಕನ್ನು ಪಡೆಯದಿಲ್ಲ.

ಯಾವುದೇ ಮಂತ್ರಿಯು ಸಂಚಾರದ ಸಮಯದಲ್ಲಿ ಅಥವಾ ತನ್ನ ಬಿಡುಸಮಯದಲ್ಲಿ ಯಾವನೋ ಒಬ್ಬ ಮಿತ್ರನ ಆತಿಥ್ಯವನ್ನು ಪಡೆದು, ಹಿಂದಿನಿಂದ ಸರಕಾರೀ ಸಾಧನಗಳ ಉಪಯೋಗದ ಮೂಲಕ ಈ ತೆರದ ಋಣವನ್ನು ಸಂದಾಯ ಮಾಡುತ್ತಾನೆ—ಎಂಬಂತಹ ಒಂದು ಅಪರಾಧವನ್ನು ಶ್ರೀ ಆದಾಮ್ಸರ ಮೇಲೆ ವಿರೋಧೀ ಪಕ್ಷದವರು ಹೇಳಿದ್ದಾರೆ.

ಅಮೆರಿಕೆಯ ಕಾಂಗ್ರೆಸ್ಸಿನ ಆಡಳಿತ ಸಮಿತಿಯಲ್ಲಿ ರಿಪಬ್ಲಿಕನರ ಮಾತುಕತೆ ಹೀಗಿದೆ—'ಸ್ವಯಂ ಕಾಂಗ್ರೆಸ್ಸಿನ ಮೇಲೆ ಡೆಮೊಕ್ರೆಟಿಕ್ ದಳದ ಪೂರ್ಣ ಅಧಿಪತ್ಯವಿದೆ ಕಳೆದ ನಾಲ್ಕು ವರ್ಷಗಳಲ್ಲಿ ಅವರು ಸಂಚಾರಾರ್ಥ ಹೋದಾಗ, ಅವರ ಹೋಟೇಲಿನ ಬೆಚ್ಚ—ಇದು ಒಟ್ಟು ಎರಡು ಸಾವಿರ ಡಾಲರುಗಳಾಗುತ್ತವೆ—ಅವನ್ನು ಅವರ ವ್ಯಾಪಾರೀ ಮಿತ್ರನೊಬ್ಬನು ಸಲ್ಲಿಸಿದನು. ಇದರ ಬದಲಾಗಿ ಸರಕಾರವು ವಿಶಿಷ್ಟ ವ್ಯಾಪಾರಿಕ ಸೌಲಭ್ಯಗಳನ್ನು ಅವರಿಗೆ ಕೊಟ್ಟಿತು—ಎಂದು ಡೆಮೊಕ್ರೆಟಿಕರು ಆದಾಮ್ಸರ ಮೇಲೆ ಆರೋಪ ಹೊರಿಸಿದ್ದಾರೆ."

ರಾಷ್ಟ್ರಾಧ್ಯಕ್ಷರ ಉಲ್ಲಿಖಿತ ಸ್ಪಷ್ಟೀಕರಣದ ಕಾರಣದಿಂದ, ಈ ಪ್ರಕರಣವು ಈಗ ಮುಕ್ತಾಯಗೊಂಡಂತೆ ತೋರಿಬರುವುದಾದರೂ ಡೆಮೊಕ್ರೆಟಿಕ್ ಪಕ್ಷವು ಈ ಘಟನೆಯ ಉಪಯೋಗವನ್ನು ಮುಂದಿನ ಚುನಾವಣೆಗಳು ನಡೆಯುವ ತನಕವೂ ಮಾಡಿಕೊಳ್ಳುವುದು ಖಂಡಿತ ಕಳೆದ ಜುಲಾಯಿ ತಿಂಗಳು ಶ್ರೀ ಟ್ರೂಮನರು ವೈಟ್ ಹೌಸ್ (ಶ್ವೇತ ಭವನ)ನ್ನು ಭ್ರಷ್ಟಾಚಾರದ ಕೊಳ್ಳವೆಂದು ಉದ್ಘೋಷಿಸಿದ್ದರು. ಆದರೆ, ಟ್ರೂಮನರ ಸಂಸಾರದ ಮೇಲೂ ಹೊರಿಸಲಾದ ಇಂತಹುದೇ ಆರೋಪವು ಇಂದಿಗೂ ಅಮೆರಿಕೆಯಲ್ಲಿ ಪ್ರತಿಧ್ವನಿಗುಟ್ಟುತ್ತಿದೆ ಎಂಬುದನ್ನೂ ಈ ಸಂದರ್ಭದಲ್ಲಿ ಮರೆಯಬಾರದು.

ಶ್ರೀ ಆದಮ್ಸರು ಅಮೆರಿಕೆಗೆ ಒಂದಕ್ಕಿಂತ ಹೆಚ್ಚು ರಾಷ್ಟ್ರಾಧ್ಯಕ್ಷರನ್ನೂ ಕಾರ್ಯಕ್ಷಮ ರಾಯಭಾರಿಗಳನ್ನೂ ಒದಗಿಸಿಕೊಟ್ಟಿರುವ ಬೋಸ್ಟನ್ ನಗರದ ನಿವಾಸಿಗಳಾಗಿದ್ದಾರೆ ಶ್ರೀ ಆದಾಮ್ಸರೇ ಮೊದಲು ಅವರ ಗವರ್ನರರಾಗಿದ್ದರು. ೧೯೫೦ರಲ್ಲಿ ಚುನಾವಣಾಕಾಲದಲ್ಲಿ ಶ್ರೀ ಆದಾಮ್ಸರು ಶ್ರೀ ಐಕರ ದೃಷ್ಟಿಗೆ ಬಿದ್ದದ್ದು ಅವರ ಸಂಬಂಧವು ದೃಢವಾಯಿತು. ಶ್ರೀ ಐಕರ ಚುನಾವಣಾ ಕಾಲದ ಪ್ರಚಾರ ಕಾರ್ಯಮುಖ್ಯಾಧಿಕಾರಿಗಳಾಗಿದ್ದ ಆದಾಮ್ಸರು ಐಕರು ವಿಜಯ ಹೊಂದಿದ ನಂತರ, ಶ್ವೇತ ಭವನದ ಮುಖ್ಯಾಧಿಕಾರಿಯೂ ಆಗಿರುವರು ಇಂದು ಶ್ರೀ ಐಕರು ಬಲಗೈ ಬಂಟನಂತಹ ಒಬ್ಬ ವ್ಯಕ್ತಿಯ ಮೇಲೆ ವಿರೋಧಿಗಳು ಹೊರಿಸಿದ ಆಪಾದನೆಯನ್ನು ಒಪ್ಪಿಕೊಂಡು ಅವರನ್ನು ಪದಮುಕ್ತಗೊಳಿಸಿ ತನ್ನ ವಚನವನ್ನುಳಿಸಲು ಸಿದ್ಧರಿರುವುದಿಲ್ಲ ಅಂತಹ ವ್ಯಕ್ತಿಯನ್ನು ಉಳಿಸಿಕೊಳ್ಳುವುದು ಅವರಿಗೆ ಆವಶ್ಯಕವಾಗಿದೆ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ.ನ.)

ಶಿರ್ವಾಡಿ ಶಿಮುಂಜೆಗುತ್ತು ಶ್ರೀಮತಿ ಲಕ್ಷ್ಮೀಮತಿ ಅಮ್ಮ ಇವರ ಭವ್ಯ ಸ್ಮರಣೆ— ರೇಖಕರು. ಶ್ರೀ ಕೆ. ಭುಜಬಲಿ ಶಾಸ್ತ್ರಿ, ಪ್ರಕಾಶಕರು. ಯಸ್. ಧರ್ಮ ಸಾಮ್ರಾಜ್ಯ, ಶಿರ್ವಾಡಿ. ಪುಟಗಳು 36 ಬೆಲೆ?

ಈ ಗ್ರಂಥದ ಪ್ರಕಾಶಕರಾದ ಶ್ರೀ ಎಸ್. ದರ್ಮಸಾಮ್ರಾಜ್ಯರವರ ಪರಮಪೂಜ್ಯ ಮಾತೆಯವರಾದ ಸ್ವರ್ಗೀಯ ಲಕ್ಷ್ಮೀಮತಿ ಅಮ್ಮನವರ ಚರಿತ್ರೆಯನ್ನು ಈ ಭವ್ಯಸ್ಮರಣೆಯ ಸ್ಮೃತಿಪ್ರಕಾಶಕ್ಕೆ ತರಲಾಗಿದೆ. ಶಿರ್ವಾಡಿ ಶಿಮುಂಜೆ ಗುತ್ತಿನ ಲಕ್ಷ್ಮೀಮತಿ ಅಮ್ಮನವರು ತಮ್ಮ ಧರ್ಮಬುದ್ಧಿಯಿಂದಾಗಿ ಪ್ರಸಿದ್ಧರಾಗಿದ್ದಾರೆ. ಹಾಗೆಯೇ ಅವರ ಹಾಗೂ ಪತಿಯ ಪರಂಪರೆಯೂ ಧಾರ್ಮಿಕ ಗೌರವಾದರಗಳಿಂದ ಅಜ್ಞಾಪಿತವಾಗಿರುವುದು ಇವರಲ್ಲಿ ಸಾಕಷ್ಟು ಪರಿಣಾಮ ಮಾಡಿರುವುದು ತೋರಿಬರುತ್ತದೆ. ಈ ಎಳೆಯ ಪ್ರಕಟಣೆಯಲ್ಲಿ ಲಕ್ಷ್ಮೀಮತಿ ಅಮ್ಮನವರ ಸಂಕ್ಷಿಪ್ತ ಜೀವನಚರಿತ್ರೆಯ ಜೊಗೂ ಅವರ ಧಾರ್ಮಿಕ ಮನೋಭಾವನೆಗಳು ಪರ್ಜನ್ಯವಾಗಿರುವುದಲ್ಲದೇ ಗುರು ಶಿಷ್ಯ ಸಂಬಂಧ ರೂಪದಲ್ಲಿ ಮಾನವನು ಮೋಕ್ಷಗಾಮಿಯಾಗಬೇಕಾದರೆ ಕೈಗೊಳ್ಳಬೇಕಾದ ನಿಯಮಗಳನ್ನೂ ನಿರೂಪಿಸಲಾಗಿದೆ. ಇವುಗಳೊಂದಿಗೆ ದೇವ ಪೂಜೆಮಾಡುವುದರ ಉದ್ದೇಶ ಹಾಗೂ ಕ್ರಮಗಳನ್ನೂ ವಿಗ್ರಹವು ದೇವರಲ್ಲ—ಅದು ದೇವರ ಪ್ರತಿಕೃತಿ ಮಾತ್ರವೆಂದು ತಿಳಿಸಿ ಜೈನರು ಕೇವಲ ಮೋಕ್ಷೇಚ್ಛುಗಳಾಗಿ ದೇವರನ್ನು— ಮುಖ್ಯವಾಗಿ ತೀರ್ಥಂಕರರನ್ನು ಆರಾಧಿಸುತ್ತಾರೆಂಬುದನ್ನು ಪ್ರತಿಪಾದಿಸಲಾಗಿದೆ ಉಕ್ತರೋಪಾಸನೆ ಭಕ್ತಿ ಮಾರ್ಗ ಹಾಗೂ ಸುತ್ತಿಗೆಗೆ ಸಂಬಂಧಿಸಿದ ಮೂರು ಚಿತ್ರ ಪ್ರಬಂಧಗಳೂ ಇಲ್ಲಿವೆ. ಕೊನೆಯಲ್ಲಿ ೧೯೧೩ನೆ ಇಸವಿಯಲ್ಲಿ ಶಿರ್ವಾಡಿಯಲ್ಲಿ ಶ್ರೀಶಿಮುಂಜೆಗುತ್ತು ಲಕ್ಷ್ಮೀಮತಿ ಅಮ್ಮನವರ ಪೂಜ್ಯ ಪತಿದೇವರಾದ ದೇವರಾಜ ಸೇವಿಸಿರು ಕಟ್ಟಿಸಿದ ಜಿನಾಲಯದಲ್ಲಾದ ಪಂಚಕಲ್ಯಾಣೋತ್ಸವಗಳ "ಮಾಡಬಹುದಿರಿಯೆಂಬ ನಾಡಿನವರಿಗೆ ಸಾಸವಾಡುವ ಸುಬ್ರಾಯ"ರು ಅದಿಸ ಚರಿತ್ರೆಯನ್ನು ಕೊಡಲಾಗಿದೆ. ಈ ಚರಿತ್ರೆಯು ಸಾಂಗತ್ಯದಲ್ಲಿದ್ದು ಸಾಮಾನ್ಯ ಮಟ್ಟದಲ್ಲಿಯೇ ಇದೆ. ಹಾಗೂ ಅಂತ್ಯದಲ್ಲಿ ಜೀವನದಲ್ಲಿ ಅಗತ್ಯ ಬೇಕಾದ ಕೆಲವು ಉಪದೇಶಾತ್ಮಕ ಬಿಡುಗಡೆಗಳನ್ನು ಸೋಣಸಲಾಗಿರುವುದು. ಒಟ್ಟಿನಲ್ಲಿ ಸ್ವ. ಲಕ್ಷ್ಮೀಮತಿ ಅಮ್ಮನವರ ಭವ್ಯ ಸ್ಮರಣೆಯೊಡನೆ, ಸರಳ ಶೈಲಿಯಲ್ಲಿ ಜೈನಮತ ತತ್ವಗಳ ಸಾರವನ್ನೂ ಕೊಂಚ ಮಟ್ಟಿಗೆ ಇಲ್ಲಿ ಸಂಗ್ರಹಿಸಲಾಗಿದೆ. ಅಭಿರುಚಿ ಸಹಿತರು ಪಡೆದುಕೊಂಡು ಪ್ರಯೋಜನ ಪಡೆಯಬಹುದು.

ದೆವ್ವದ ಕಥೆಗಳು (ಎರಡು ಇಂಗ್ಲಿಷ್ ಕಥೆಗಳ ಅನುವಾದ) ರೇಖಕರು: ಶ್ರೀ ಎಂ. ಗೋಪಾಲಕೃಷ್ಣ ಅಡಿಗ, ಎಂ. ಎ. ಪ್ರಕಾಶಕರು ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ ಪುಟಗಳು: ೯೦ರಿಂದ ೧೮೨. ಬೆಲೆ: ರೂ. ೦—೮—೦

ಇದು ಎರಡು ಆಂಗ್ಲ ಕಥೆಗಳ ಅನುವಾದವಾಗಿದ್ದು 'ದೆವ್ವದ ಮನೆ' ಎಂಬ ಸುಧೀರ್ಘವಾದ ಮತ್ತು 'ನೆಳಲಿನ ನೆಳಲು' ಎಂಬ ಎಳೆಯ ಕಥೆಗಳಿಂದ ಕೂಡಿದೆ. "ಮೆಸ್ಮರಿಸ್ಮ್"ನ ಅಗಾಧ ಶಕ್ತಿಯ ಪ್ರಭಾವದಿಂದ ಸುಸ್ಥಿತಿಯಲ್ಲಿದ್ದ ಒಂದು ಮನೆಯು ದೆವ್ವದ ಮನೆಯಾಗಿ ಕರುಣಮಿಸಿ, ಜನವಾಸಕ್ಕೆ ಅಯೋಗ್ಯವು ಭಯಾನಕವೂ ಆದ ವಿಧಾನವನ್ನು ಮೊದಲ ಕಥೆಯು ವಿವರಿಸುತ್ತದೆ. ಎರಡನೆಯದರಲ್ಲಿ ವಿವಾಹವಾಗಲಿದ್ದ ಪ್ರೇಮಿಗಳಿಬ್ಬರಲ್ಲಿ ಒಗಲಿಕೆಯಾಗಬೇಕಾಗಿ ಬಂದಾಗ ಇನ್ನೊಬ್ಬನು ಬಂದು ಪ್ರೇಮ ಭಿಕ್ಷೆಯನ್ನು ಕೇಳಲು, ಆಕೆಯು ನಿರಾಕರಿಸಲು ಸುದೈವದಿಂದ ಒಬ್ಬಾಕೆಯಲ್ಲಿ ಅನುರಕ್ತರಾದ ಇಬ್ಬರೂ ಉತ್ತರೆ ಧ್ರುವ ಶೋಧನೆಗೆ ಹೊರಟು ಹೋಗಿ ಆಲ್ಲಿ ಬೇಟೆಯ ನೆವದಿಂದ ಎರಡನೆಯ ಪ್ರೇಮಿಯು ಮೊದಲನೆಯನನನ್ನು ಮೋಸದಿಂದ ಮೃತ್ಯುವಿನ ಬಾಯನ್ನಾಗಿ ಮಾಡಿ, ಹಿಂತಿರುಗಿ ಬಂದು, ಪ್ರೆಮ ಬಿಕ್ಷೆಯನ್ನು ಯಾಚಿಸಲು ಮೊದಲು ಮಾಡಿದ ಕಥೆ ಹಾಗೂ ಈತನ ಬೆನ್ನಹಿಂದೆ, ಮೊದಲನೆ ಪ್ರೇಮಿಯು ನೆಳಲು ಹಿಂಬಾಲಿಸುತ್ತ ಬಂದು ಕೊನೆಗೆ ಈತನ ಜೀವನವನ್ನೇ ಸೂರೆಗೊಂಡ ಘಟನೆ ವರ್ಣಿತವಾಗಿದೆ—ಹೀಗೆ ಎರಡು ದೈವ, ದೊತ್ತ, ಸಿಶಾಚಿಗಳಿಗೆ ಸಂಬಂಧಪಟ್ಟ ಕಥೆಗಳೇ ಆಗಿದ್ದು, ಮಸ್ತಕದ ಹೆಸರು ಅನ್ವರ್ಥವಾಗಿದೆ.

ಅನುವಾದಕನ ಕಾರ್ಯ ತೃಪ್ತಿಕರವಿದೆ. ಕನ್ನಡಿಗರಲ್ಲರಿಗೂ ಚಿರಪರಿಚಿತರಾದ ಶ್ರೀ ಅಡಿಗರ ಭಾಷೆ ಹಾಗೂ ಶೈಲಿಗಳು ಆಕರ್ಷಕವಿದೆ ಕುಗುಟಿಯ ಸುಲಭಸಾಹಿತ್ಯ ಪ್ರಕಾಶನದವರು ಸುಲಭ ಬೆಲೆಗೆ ಈ ಹೊತ್ತಗೆಯನ್ನು ಕೊಡುವ ಹೊಣೆ ಹೊತ್ತುದು ಸ್ತುತ್ಯರ್ಹವೇ ರಿಕ್ಷಾ ಕವಚ ಹಾಗೂ ಮುದ್ರಣಗಳು ತೃಪ್ತಿದಾಯಕವಿವೆ.

—ಗೋರಾ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತನಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೩೪ ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಉಡುಪಿ ಶುದ್ಧಾಯುರ್ವೇದ ಕಾಲೇಜು

ಜುಲೈ ತಿಂಗಳ ಕೊನೆಯ ವಾರದಲ್ಲಿ ಸರ್ವಾಂಗ ಸರ್ವಾಗಾವಾದ ಶುದ್ಧಾಯುರ್ವೇದ ಕಾಲೇಜನ್ನು ಉಡುಪಿಯಲ್ಲಿ ತೆರೆಯುವುದೆಂದು ನಿಶ್ಚಯಿಸಿರುವಂತೆ ಕಾಲೇಜಿಗೆ ಸೇರಿತಕ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಅಪೇಕ್ಷಾ ಪತ್ರವನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳ ಅರ್ಹತೆ

ಎಸ್. ಎಸ್. ಎಲ್. ಸಿ. ಯಾ ತತ್ಸಮವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿರಬೇಕು. ವಯಸ್ಸು ಪದಿನಾರರಕ್ಕೆ ಕಡಿಮೆಯಿರಬಾರದು, ಸಂಸ್ಕೃತವನ್ನು ಅರಿತವರಾಗಿರಬೇಕು.

ಕೊನೆಯ ತಾರೀಕು

ಕಾಲೇಜಿಗೆ ಸೇರಲಪೇಕ್ಷಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಅಪೇಕ್ಷಾ ಪತ್ರವನ್ನು ತಾ. 24-7-58ರೊಳಗಾಗಿ ಕಳುಹಿಸಬೇಕು.

ತಜ್ಞರೂ ಪ್ರತಿಭಾವಂತರೂ ಆಗಿರುವ ಶಿಕ್ಷಕರನ್ನು ಆರಿಸಲಾಗಿರುವದು

ಪ್ರಾಸ್ಪೆಕ್ಟಸ್ ಹಾಗೂ ಅರ್ಜಿ ಫಾರಂಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಕಾರ್ಯದರ್ಶಿ
ಕರ್ನಾಟಕ ಆಯುರ್ವೇದ
ಸೇವಾ ಸಂಘ (ರಿ)
ಚರ್ಚ್‌ರೋಡ್ ಉಡುಪಿ ದ. ಕ.

ರಾಣೀ ಲಕ್ಷ್ಮೀಬಾಯಿ ಮೃತ್ಯುವನ್ನಪ್ಪಿದಾಗ....

(೩ನೇ ಪುಟದಿಂದ)

ಯೂ ಕೋಲಾಹಲವೆದ್ದಿತು. ಅಲ್ಲಿಯೇ ಸಮೀಪ ಒಬ್ಬ ಇಂಜಿನಿಯರನಿದ್ದನು. ಅವನೊಂದು ತೋಪನ್ನು ಬಾಗಿಲಿನೆದುರಿಟ್ಟು ಬಂದೂಕಿನ ಗುಂಡಿನಿಂದ ಉರಿಸಿದನು. ಆಗ ಬಾಗಿಲು ಒಡೆದುಹೋಯಿತು. ಈ ಅವಸರದಲ್ಲಿ ಬ್ರಿಟಿಷ ಸೈನಿಕರು ಬಾಗಿಲ ಮೂಲಕ ಉತ್ಸಾಹದಿಂದ ಒಳನುಗ್ಗಿದರು. ಆದರೆ, ದುರ್ದೈವವು ಅವರನ್ನು ಅಲ್ಲಿಯೂ ಬೆಂಬಿಡಲಿಲ್ಲ. ಅ ಬಾಗಿಲು ಕಲ್ಲು, ಇಟ್ಟಿಗೆ, ಸುಣ್ಣಗಳಿಂದ ಒಳಗಡೆಯಲ್ಲಿ ಮುಚ್ಚಲ್ಪಟ್ಟಿತ್ತು. ಆದುದರಿಂದ ವಿಫಲ ಮನೋರಥರಾಗಿ ಬ್ರಿಟಿಷ ಸೈನಿಕರು ಹಿಂತಿರುಗಿದರು.

ದಕ್ಷಿಣ ದಿಕ್ಕಿನಲ್ಲಿ ಕೈ. ಡಾರ್ಟನೆಲ್ ಮತ್ತು ಅವನ ಸಂಗಾತಿಗಳು ನುಗ್ಗಲೇಣಿಯಿಂದ ಕೋಟೆಯನ್ನು ಹತ್ತಿದರು. ಒಳನುಗ್ಗಿ ಅವರು ಪೇಟೆಯ ನೇರವಾದ ದಾರಿಯನ್ನು ಹಿಡಿದರು. ಅಲ್ಲಿ ಅರಬ ಮತ್ತು ವಿಲಾಯತೀ ಜನರೊಡನೆ ಜಗಳವಾಯಿತು. ಶತ್ರು ಪಕ್ಷದವರು ಗುಂಡು ಹಾರಿಸಿದರು. ಬಡಬಾನಲವು ಸೀರು ಕುಡಿಯುವಂತೆ ಈ ಸೈನಿಕರು ಆಂಗ್ಲರ ಜೀವ ಹೀರಿದರು. ಹೀಗಾಗಿ ಈ ಕದನದಾಟದಲ್ಲಿ ಆಂಗ್ಲಸೇನೆಯ ಶೂರವೀರರೂ ಸೈನಿಕರೂ ಬಹುಸಂಖ್ಯೆಯಲ್ಲಿ ಮರಣಪನ್ನಪ್ಪಿದರು.

ಮರುದಿನ ರಾತ್ರಿ ಕೋಟೆಯಿಂದ ಸುಮಾರು ೪೦೦ ಜನರು "ನಾವು ಯಾತ್ರಿಕರು" ಎಂದು ಕೊಂಡು ಕೋಟೆಯಿಂದ ಹೊರ ಬಿದ್ದರು. ಅದರಲ್ಲಿ ಝಾನ್ಸಿಯ ರಾಣಿ ಮತ್ತು ಆಕೆಯ ಅನುಚರರೂ ಇದ್ದರು. ಕಪಟ ವಿದ್ಯೆಯಿಂದ ರಾಣಿಯು ಆಂಗ್ಲರನ್ನು ಚಕಿತಗೊಳಿಸಿದಳು ಪ್ರಾತಃಕಾಲ ಕೋಟೆಯು ನಿರ್ಜನವಾಗಿರುವುದನ್ನು ಕಂಡು, ರಾಣಿ ಮತ್ತು ಆಕೆಯ ಸಂಗಡಿಗರು ಹೊರಟು ಹೋಗಿರುವರೆಂದು ತಿಳಿದು ಬಂತು.

ಝಾನ್ಸಿಯ ನಗರ ಆಂಗ್ಲರ ಅಧಿಕಾರಕ್ಕೆ ಬಂದಿತು. ಸೈನಿಕ ಕಾಯದೆ ವ್ಯವಹಾರಕ್ಕೆ ಬಂದಿತು. ೪,೦೦೦ ಜನರು ಈ ಕದನದಲ್ಲಿ ಸತ್ತು ಹೋಗಿದ್ದರು. ಹಳ್ಳಿಗಳಲ್ಲಿ ಆನೆ, ಒಂಟೆ, ಮನುಷ್ಯ ಇತ್ಯಾದಿ ಅಸಂಖ್ಯ ಪ್ರಾಣಿಗಳು ಸತ್ತುಬಿದ್ದಿದ್ದುವು. ದುರ್ಗಂಧದಿಂದ ಉಸಿರು ಕಟ್ಟುತಿತ್ತು. ಬದುಕುಳಿದವರು ಜಲನುಂದಿರದ ಸಮೀಪ ಆಶ್ರಯ ಪಡೆದಿದ್ದರು. ಅವರ ರಕ್ಷಣೆಯ ಕಾರ್ಯವನ್ನು ಮೇಜರ್ ರಾಬರ್ಟ್ಸ ನಿಗಿತ್ತು ಸೇನೆಯು ೨೫ನೆ ಎಪ್ರಿಲ್‌ನಂದು ಕಾಲ್ಪಿಯ ಕಡೆಗೆ ಹೋಯಿತು.

ರಸ್ತೆಯಲ್ಲಿ ಬುಜ್ ಮತ್ತು ಮಲೌಲೀ ಗಳಲ್ಲಿ ಭೀಷಣ ಸಂಗ್ರಾಮ ನಡೆಯಿತು. ರಾಣಿಯೊಡನೆ ಆಗ ಪೇಶ್ವೆಯ ಮಂಡಲಿಯಿತ್ತು. ಕಾಲ್ಪಿಯಲ್ಲಿ ಹೋರಾಡುವ ಅನುಕೂಲತೆಯನ್ನು ಗಣಿಸದೆ ಅವರು ಗ್ವಾಲಿಯೋರದತ್ತ ತೆರಳಿದರು. ತಾಂತ್ಯಾ ಟೋಪಿಯು ಅಷ್ಟರಲ್ಲಿಯೇ ಗ್ವಾಲಿಯೋರವನ್ನು ಹಸ್ತಗತಮಾಡಿಕೊಂಡಿದ್ದನು. ಗ್ವಾಲಿಯೋರದ ಕದನವು ಜೀವನ ಮತ್ತು ಮೃತ್ಯುಗಳ ಹೋರಾಟವಾಯಿತು. ಜೂನ್ ೧೭ರಂದು ರೋಜ್ ಹುಜರನ ಸೇನೆಯು ದಾಳಿಮಾಡಿತು. ಈ ಸಂಗ್ರಾಮದಲ್ಲಿ ರಾಣಿ ಲಕ್ಷ್ಮೀಬಾಯಿಗೂ ವೀರಗತಿ ಪ್ರಾಪ್ತವಾಯಿತು. ಆಕೆ ಪುರುಷ ವೇಶದಲ್ಲಿ ಹೋರಾಡಿದ್ದಳು. ಆದುದರಿಂದ ಆಕೆಯ ಸಮಾಚಾರವೇ ಆಂಗ್ಲ ಸೈನಿಕರಿಗೆ ಬಹುದಿನಗಳ ವರೆಗೆ ತಿಳಿದುಬರಲಿಲ್ಲ ಆದರೆ, ಸರ್ ಹೆಮಿಲ್ಟನನು ನಿಸ್ಸಂಶಯ ರೂಪದಿಂದ ಪ್ರಮಾಣಕೊಟ್ಟ ರಾಣಿಯ ಕಥೆಯು ಮುಗಿದಿದೆ ಎಂದು ಹೇಳಿದಾಗ, ಆಂಗ್ಲ ಸೇನೆಗೆ ಈ ಮಾತಿನ ಮೇಲೆ ವಿಶ್ವಾಸಹುಟ್ಟಿ, ಆಕೆ ಮಡಿದಳು ಎಂದು ತಿಳಿದುಕೊಂಡರು. ರಾಣೀ ಲಕ್ಷ್ಮೀ ಬಾಯಿಗೆ ಈ ಕಾಳಗದಲ್ಲಿ ಈ ರೀತಿಯ ವೀರ ಮರಣ ದೊರೆತುದು ನಿಜವಾಗಿಯೂ ಒಳ್ಳೆಯದೇ ಆಯಿತೆನ್ನಬಹುದು; ಏಕೆಂದರೆ, ಒಂದು ವೇಳೆ ಆಕೆ ಜೀವ ಹಿಡಿದಿದ್ದರೆ, ತಾಂತ್ಯಾಟೋಪಿಗೂ ದಗಿದಂತಹ ಕಠಿನ ಅಮಾನುಷ ವಿಚ್ಛೆಯನ್ನೇ ಈಕೆಯೂ ಅನುಭವಿಸಬೇಕಾಗಿ ಬರುತ್ತಿತ್ತೆಂಬುದು ನಿರ್ವಿವಾದ!

ಆಧುನಿಕ ಕಲೆಗಳ ಜೀವನಾಳ—

ಅನುಭೂತಿ ಮತ್ತು ಅನ್ಯೋನ್ಯಾಶ್ರಯ

ಶ್ರೀ ಉಡುಪಿ ನಾರಾಯಣ ಬಲ್ಲಾಳ.

ಸಂಯೋಜನೆಯೇ ಕಲೆಯ ಮುಖ್ಯ ಕ್ರಿಯೆಯಾಗಿದೆ ಅಥವಾ ಸಂಯೋಜನೆಯಿಲ್ಲದೆ ಕಲೆಯ ಕಾರ್ಯವೇ ಆಗಲಾರದು ಎಂದು ಕೂಡಾ ಹೇಳಬಹುದು. ಸಾಹಿತ್ಯದಲ್ಲಿ ಶಬ್ದ ಮತ್ತು ಭಾವದ ಸಂಯೋಜನೆ, ಸಂಗೀತದಲ್ಲಿ ಸ್ವರದ ಸಂಯೋಜನೆ, ನೃತ್ಯದಲ್ಲಿ ಮುದ್ರೆಗಳ ಸಂಯೋಜನೆ ಹಾಗೂ ಅದೇ ರೀತಿ ಚಿತ್ರ ಕಲೆಯಲ್ಲಿ ರೂಪ-ಬಣ್ಣಗಳ ಸಂಯೋಜನೆ ಇರುತ್ತದೆ. ಇದೇ ಸಂಯೋಜನೆಯಿಂದ ಕಲಾಕೃತಿಯ ಸೌಂದರ್ಯ ಅಥವಾ ಅಸೌಂದರ್ಯವು ಆಕಾರಗೊಳ್ಳುತ್ತದೆ. ಸುಂದರ ಸಂಯೋಜನೆಯ ಹೆಸರೇ ಕಲೆ ಎಂದಾಗಿದೆ.

ಸಂಯೋಜನೆಯ ಕೆಲಸ ಕಲೆಯ ಸಿದ್ಧಾಂತಗಳ ಮೇಲೆ ಹೊಂದಿಕೊಂಡಿರುತ್ತದೆ. ಆ ಸಿದ್ಧಾಂತಗಳನ್ನು ತಿಳಿಯದೆ ಅಥವಾ ಅವುಗಳ ಅಭ್ಯಾಸಮಾಡದೆ, ಸುಂದರ ಸಂಯೋಜನೆಯಾಗಲಾರದು. ಹಾಗೆ ನೋಡಿದ್ದುದಾದರೆ ಪ್ರತಿಯೊಬ್ಬ ವ್ಯಕ್ತಿಯೂ ಕಲಾಕಾರ. ಆದರೆ ಆತನು ಎಂದಿನತನಕ ಸಂಯೋಜನೆ ಮಾಡುವುದನ್ನು ತಿಳಿಯನೋ, ಆಂದಿನ ತನಕ ಆತ ಕಲಾಕಾರ ಎನಿಸಿಕೊಳ್ಳಲಾರ. ಪ್ರಸನ್ನತೆ, ದುಃಖ—ಇತ್ಯಾದಿ ಭಾವಗಳು ಎಲ್ಲರ ಮನಸ್ಸಿನಲ್ಲೂ ಏಳುತ್ತವೆ; ಹೊಸ ಹೊಸ ವಿಚಾರಗಳುಂಟಾಗುತ್ತವೆ; ಹೊಸ-ಹೊಸ ವಿಷಯಗಳು, ಕತೆಗಳು ಮನಸ್ಸಿಗೆ ಬರುತ್ತವೆ. ಆದರೆ ಅವುಗಳನ್ನು ವ್ಯಕ್ತಪಡಿಸುವ ಕೌಶಲ್ಯ, ಕಲಾ ಸಂಯೋಜನೆಯ ವಿನಾ ಬರಲಾರದು.

ರಚನೆಯನ್ನು ಮಾಡುವುದರ ಮೊದಲೇ ನಮಗೆ ಸಂಯೋಜನೆಯ ಸಿದ್ಧಾಂತಗಳಜ್ಞಾನ ತಿಳಿದಿರಬೇಕು. ಮನಸ್ಸಿನಲ್ಲಿ ಬಂದುದನ್ನು ಹೇಳಿಬಿಡುವುದು, ಬಾಯಿಯಿಂದ ಹೊರಟಂತಹ ಶಬ್ದವನ್ನು ಆಡಿಬಿಡುವುದು ಅಥವಾ ಕಾಗದದ ಮೇಲೆ ಮನಬಂದಂತೆ ಬಣ್ಣ ಕೊಡುವುದು— ಇವು ಕಲಾಕಾರನ ಕೆಲಸವಲ್ಲ ವಿಭಿನ್ನ ಪ್ರಕಾರದ ಶಬ್ದ, ಭಾವ, ಮುದ್ರೆ, ಸ್ವರ ಅಥವಾ ಸ್ವರೂಪಗಳನ್ನು ಆರಿಸಿ ತೆಗೆದು, ಕತ್ತರಿಸಿ ಕಲಾಕಾರ ಸಂಯೋಜನೆ ಮಾಡುತ್ತಾನೆ, ಅಥವಾ ಕೃತಿ ರಚಿಸುತ್ತಾನೆ. ಒಮ್ಮೆಲೇ ವಿಚಾರವಿಲ್ಲದೆ, ಅಭ್ಯಾಸವಿಲ್ಲದೆ ಕಲೆಯ ಉತ್ತಮ ರಚನೆಯನ್ನು ಮಾಡಲಾಗದುದಿಲ್ಲ.

ಕಲೆಯ ಪ್ರತಿಯೊಂದು ಕೃತಿಯು ತನ್ನ ಮೂಲಭೂತ ಪ್ರೇರಣೆಯಿಂದ ಸ್ವಭಾವಿತವಾಗಿ ಸ್ಫುಟಿತವಾಗುತ್ತದೆ. ರಚನೆಯ ಒಂದೊಂದು ಭಾಗ ಇನ್ನೊಂದು ಭಾಗದೊಂದಿಗೆ ಅನ್ಯೋನ್ಯಾಶ್ರಿತವಾಗಿರುತ್ತದೆ ಮನಸ್ಸಿಗೆ ಬಂದ ಎಲ್ಲ ವಿಚಾರ ಅಥವಾ ಭಾವಗಳು ರಚನೆಗಾಗಿ ಉಪಯುಕ್ತವಾಗಲಾರವು

ಕೃತಿಯ ರಚನೆಯ ಕಾಲದಲ್ಲೇ ಆಗ ಬಹುದಬಹುದಾದ ಕಠಿಣತೆಗಳು ದೂರವಾಗುವುವೆಂದು ಬಹಳ ಜನ ತಿಳಿದಿದ್ದಾರೆ. ಈ ತರದ ವಿಚಾರ ಸುಳ್ಳು ಆಗಿದೆ ಕೃತಿಯ ಪ್ರಸ್ಫುರಣ ತನ್ನ ಪ್ರಾರಂಭಿಕ ಪ್ರಭಾವ ಅಥವಾ ಪ್ರೇರಣೆಯ ಆಧಾರದ ಮೇಲೆಯೇ ಆಗಬೇಕು. ಅದೇ ಪ್ರಕಾರ ನಿಶ್ಚಯಾತ್ಮಕ ರೀತಿಯಿಂದಲೇ ನಡೆಯಬೇಕು. ಉದಾಹರಣೆಗಾಗಿ: —ಒಂದು ಜೀವ ಉತ್ಪನ್ನವಾಗಿ ಜೀವನ ಪರ್ಯಂತ ತನ್ನ ಪ್ರಾರಂಭಿಕ ಪ್ರೇರಣೆಯ ಆಧಾರದ ಮೇಲೆ ಪ್ರಗತಿಹೊಂದುತ್ತಿರುತ್ತದೆ. ಈ ರೀತಿ ಕೃತಿ ಸಂಪೂರ್ಣತೆ ಪಡೆಯುತ್ತದೆ. ಹಾಗೂ ಅದಕ್ಕೆ ಕಾರ್ಯಕೌಶಲ್ಯದಿಂದ ಬಲ ಪ್ರಾಪ್ತವಾಗುತ್ತಿರುತ್ತದೆ. ಕೃತಿಯಲ್ಲಿ ಸಂಪೂರ್ಣತೆ ತರುವಂತೆ ಪ್ರಯತ್ನಿಸಬೇಕು. ಆದರೆ ದುರಾಗ್ರಹದಿಂದಲ್ಲ.

ತುಂಡು-ತುಂಡಾಗಿ, ಮೆಲ್ಲ ಮೆಲ್ಲನೆ ಯಾವ ರಚನೆ ಉಂಟಾಗುತ್ತದೋ, ಅದನ್ನು ನಾವೆಂದಿಗೂ ಕಲೆಯ ಶ್ರೇಣಿಗೆ ಸೇರಿಸಲಾರೆವು. ಅದನ್ನು ನಾವು ಸುಂದರ ಕಲಾಕೃತಿ ಎಂದು ಒಪ್ಪುವುದಿಲ್ಲ. ಕಾರಣ —ಅದು ವಿಭಿನ್ನ ರೀತಿಯ ವಿಕಟ ವಿಚಾರ ಸಮೂಹಗಳ ಯಾನೆ ಸ್ವರೂಪಗಳ ಸಮೂಹವಾಗಿದೆ. ಅದಾದರೋ ಭಾವಾನುಮತಿಯ [ಇಂದ್ರಜಾಲ ವಿದ್ಯೆಯಲ್ಲಿ ನಿಪುಣನಾಗಿದ್ದ ವಿಕ್ರಮಾದಿತ್ಯನ ರಾಣಿ.] ಬಿರಿನ ಪೆಟ್ಟಿಗೆಯ ಸೈ. ಯಾವ ಕೃತಿಗಳು ನಿಶ್ಚಯಾತ್ಮಕ ರೀತಿಯಿಂದ ತಮ್ಮ ಮೂಲಭೂತ ಪ್ರೇರಣೆಯ ಆಧಾರದಿಂದ ಸ್ವಾಭಾವಿಕ ರೀತಿಯ ಪ್ರಗತಿ ಪಡೆದು ನಿರ್ಮಿತವಾಗಿರುತ್ತವೋ ಹಾಗೂ ಯಾವುದೇ ಪ್ರತಿಯೊಂದು ಭಾಗವೂ ತನ್ನ ಮೂಲಭೂತ ಪ್ರೇರಣೆಯ ಪ್ರತೀಕವಾಗಿರುತ್ತದೋ-ಅಂತಹ ಕೃತಿಗಳನ್ನು ನಾವು ಕಲೆಯಲ್ಲಿ ಸೇರಿಸುತ್ತೇವೆ. ಇದೇ ತಾತ್ವಾಲಿಕ ಅನುಭೂತಿ ಮತ್ತು ಅನ್ಯೋನ್ಯಾಶ್ರಿತ ಸಂಬಂಧ, ಕಲಾ ಸಂಯೋಜನೆಯ ಮೂಲ ಮಂತ್ರವಾಗಿದೆ.

ಚಿತ್ರದಲ್ಲಿ ಎಲ್ಲಕ್ಕಿಂತ ಮಹತ್ವಪೂರ್ಣ ಸಂಯೋಜನೆ ಸ್ಥಾನದ್ದಾಗಿರುತ್ತದೆ. ಒಂದು ನಿಶ್ಚಿತ ಪರಿಮಾಣದ ಧರಾತಲದಿಂದ ವಿಭಿನ್ನ ಪ್ರಕಾರದ ಬಣ್ಣ, ರೂಪ ಹಾಗೂ ರೀತಿಗಳಿಂದ ಸ್ಥಾನದ ಸಂಯೋಜನೆ ಮಾಡಬೇಕಾಗುತ್ತದೆ. ಯಾವ ರೀತಿಯ ಆಕಾರ, ರೂಪ, ಬಣ್ಣ ಎಲ್ಲೆಲ್ಲಿ ಹಾಕಬೇಕು ಹಾಗೂ ಅವನ್ನು ಯಾವ ರೀತಿ ವಿಭಾಜಿಸಬೇಕು-ಅವುಗಳೆಲ್ಲೆಲ್ಲಾ ಒಂದು ಪ್ರಕಾರದ ಅನ್ಯೋನ್ಯಾಶ್ರಿತ ಸಂಬಂಧವಿರಬೇಕು. ಈ ಸಂಬಂಧದಲ್ಲಿ ಲಯ ಮತ್ತು ಗತಿ ಇರಬೇಕು ಹಾಗೂ ಅಭಿವ್ಯಕ್ತಿಯಿರಬೇಕು, ಭಾವದ ಉತ್ಪತ್ತಿ ಇರಬೇಕು— ಈ ಎಲ್ಲಾ ವಿಚಾರವನ್ನು ಇದರಲ್ಲಿ ಎಳೆದಿರಬೇಕು.

ಇದೇ ಸ್ಥಾನ ಸಂಯೋಜನೆ ಆಧುನಿಕ ಕಲೆಯ ಎಲ್ಲಕ್ಕಿಂತ ಶ್ರೇಷ್ಠ ಪರಿಶ್ರಮವಾಗಿದೆ. ಈ ಕ್ಷೇತ್ರದಲ್ಲಿ ಈಗ ಆಗಿರುವಷ್ಟು ಪ್ರಯೋಗ ಹಿಂದೆ ಎಂದೂ ಆಗಲಿಲ್ಲ. ಯುರೋಪ್ ಮತ್ತು ಅಮೇರಿಕಾದ ಆಧುನಿಕ ಕಲೆಯ ಮುಖ್ಯ ಆಕರ್ಷಣೆಯೇ ಇಂದು ಸ್ಥಾನ ಸಂಯೋಜನೆಯಾಗಿದೆ. ಪಿಕಾಸೋ, ಬ್ರೇಕ್, ಮಾತಿಸ್, ಜಿನ್ ಗ್ರೀಸ್, ಸೆಜಾನ್—ಮೊದಲಾದ ಕಲಾಕಾರರು ಈ ದೃಷ್ಟಿಯಿಂದಲೇ ಬಹಳ ಮಹತ್ವಪೂರ್ಣರಾಗಿದ್ದಾರೆ. ಅವರ ಪ್ರಭಾವ ಪೌರ್ವಾತ್ಯ ದೇಶಗಳ ಕಲೆಯ ಮೇಲೂ ಬೀಗಿದೆ. ಇಲ್ಲಿಯ ಆಧುನಿಕ ಕಲಾಕಾರರು ಇನ್ನೂ ಸ್ಥಾನ ಸಂಯೋಜನೆಯ ಮಹತ್ವವನ್ನೇ ತಿಳಿಯಲು ಸಾಕಷ್ಟು ಸಮರ್ಥರಾಗಿಲ್ಲ. ಆಧುನಿಕ ಭಾರತೀಯ ಕಲಾಕಾರನು ಕೇವಲ ವಿಕೃತಿಯೇ ತನ್ನ ಮುಖ್ಯ ಧ್ಯೇಯವೆಂದು ತಿಳಿದಿರುವಂತೆ ನಮಗೆ ಒನ್ನೊನ್ನು ಭಾವನೆಯುಂಟಾಗುತ್ತದೆ.

(ಸಾಕಾರ.)

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್. ಎಲ್. ಎ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅವ್ಯಕ್ತ ಗಾಳಿಗಳ ಬಗ್ಗೆ ಪರಿಶೀಲನೆ–

ದೆವ್ವ, ಭೂತ ಮತ್ತು ಪಿಶಾಚಿ!

ಲೇ: 'ನವಗಿರಿನಂದ'

ಮನಸ್ಸಿನ ಶಕ್ತಿ

ಕಳೆದ ಸಂಚಿಕೆಯ ಲೇಖನದಲ್ಲಿ ನಿರೂಪಿಸಿದ ಕೆಲವು ಪ್ರತ್ಯಕ್ಷ ಉದಾಹರಣೆಗಳು ಪಿಶಾಚಿಗಳ ಇರುವಿಕೆಯನ್ನು ಸತ್ಯವೆಂದು ತೋರಿಸ ತ್ತವೆ ಈ ಪಿಶಾಚಿಗಳು ಹೇಗೆ ಹುಟ್ಟುತ್ತವೆ? ಏನು ಮಾಡುತ್ತವೆ? ಎಂಬುದನ್ನು ಕೇಳಬೇಕಾದರೆ ನಾವು ನಮ್ಮನ್ನೇ ಕುರಿತು ಆಲೋಚನೆ ಮಾಡಬೇಕು.

ನಮ್ಮ ದೇಹದಲ್ಲಿ ಹತ್ತು ಇಂದ್ರಿಯಗಳಿವೆಯಷ್ಟೆ? ಹತ್ತು ಇಂದ್ರಿಯಗಳಿಗೂ ಮನಸ್ಸೇ ರಾಜ ಪಂಚ ಜ್ಞಾನೇಂದ್ರಿಯಗಳಿಗೆ ಆಕಾರವಿಲ್ಲದಂತೆಯೇ ಮನಸ್ಸಿಗೂ ಆಕಾರವಿರುವುದಿಲ್ಲ ಅದು ಹತ್ತು ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ದೇಹವನ್ನು ನಡೆಸುತ್ತದೆ ಮಾತ್ರವಲ್ಲ, ಬುದ್ಧಿಯನ್ನು ಕೂಡ ತನ್ನ ಕೈಕೆಳಗೆ ತಂದುಕೊಳ್ಳಲು ಸದಾ ಯತ್ನಿಸುತ್ತಿರುತ್ತದೆ ಮನಸ್ಸಿಗೆ ವಿಶೇಷವಾದ ಕಲ್ಪನಾಶಕ್ತಿಯೂ ಉಂಟು ಮಿದುಳು ಪೂರಾ ಅದರ ಸ್ವಾಧೀನವೇ ತನ್ನ ಕಲ್ಪನಾಶಕ್ತಿಯಿಂದ ಅದು ಬುದ್ಧಿಯನ್ನು ತನ್ನ ಆಡಿಯಾಳಾಗಿ ಮಾಡಿಕೊಳ್ಳಬಲ್ಲುದು ಅಂತೆಯೇ ಮನಸ್ಸನ್ನು ಜಯಿಸಿಕೊಂಡರೆ ಪ್ರಪಂಚವನ್ನು ಜಯಿಸಿಕೊಂಡಂತೆ ಇದೇನೂ ಸಾಮಾನ್ಯ ಕೆಲಸವಲ್ಲ ಎಲ್ಲರಿಗೂ ಸಾಧ್ಯವಿಲ್ಲ ಎಲ್ಲಿಯೋ ಒಬ್ಬಿಬ್ಬರು ಮಹಾತ್ಮರಿಗೆ ಮಾತ್ರವೇ ಅದು ಸಾಧ್ಯ ಉಳಿದವರೆಲ್ಲರೂ ಮನಸ್ಸಿನ ದಾಸರು ಬುದ್ಧಿಯನ್ನು ಮನಸ್ಸಿನ ಕೈಯೊಳಗೆ ಪೂರಾ ಕೊಟ್ಟವರು

ಹೀಗೆ ಮನುಷ್ಯನು ಕಾಮಕ್ರೋಧಾದಿ ಷಡ್ವೈರಿಗಳ ಜಂಜಡತೆಯಲ್ಲಿ ಜೀವನ ಸಾಗಿಸಿ ಒಂದು ದಿನ ನ್ಯಾಯತ್ತಾನೆ ಆಗ ಪಂಚ ಭೂತಾತ್ಮಕವಾದ ಈ ದೇಹ ನಾಶವಾಗುತ್ತದೆ ಭೂಮಿ, ನೀಳಿ ಆಕಾಶ, ಜಿಂಕೆ ಮತ್ತು ನೀರು ಎಂಬ ಈ ಪಂಚಭೂತಗಳಿಂದಲೇ ಪ್ರತಿಯೊಂದು ಸೃಷ್ಟಿಯೂ ಆಗಿರುತ್ತದೆ ಈ ದೇಹವೂ ಈ ದೇಹವೂ ಅಷ್ಟೆ ಸ್ವಾಭಾವಿಕವಾಗಿ ಮರಣದಲ್ಲಿ ಪ್ರಾಣವಾಯು ಮಾತ್ರವೇ ಹೆಚ್ಚಿನ ಶಕ್ತಿಯಿಂದ ಮೇಲೆದ್ದು, ಊರ್ಧ್ವ ಗಮನವುಳ್ಳದಾಗಿ, ಸದಾ ಮೇಲೇರಿ ಮೋಡದ ಪದರುಗಳುಳ್ಳ ವಾತಾವರಣದತ್ತ ಸಾಂದ್ರೀಕರಿಸಿಕೊಳ್ಳುತ್ತದೆ ಹೀಗೆ ಮೇಲೇರುವ ಜೀವಾತ್ಮದೊಂದಿಗೆ ನಿರಾಕಾರವಾದ ಮನಸ್ಸೂ ಸೇರಿಕೊಂಡಿರುತ್ತದೆ ಮನಸ್ಸಿನೊಂದಿಗೆ ಬುದ್ಧಿಯೂ ಇರುತ್ತದೆ ಹೀಗೆ ಮನಸ್ಸಿನ ಆಡಿಯಾಳಾದ ಆ ಜೀವಾತ್ಮಕ್ಕೆ ಮನಸ್ಸಿನ ಅಂಟಿಕೆಯನ್ನು ಬಿಟ್ಟು ಅನಂತಾಕಾಶದಲ್ಲಿ ಲೀನವಾಗಲು ಸಾಧ್ಯವಾಗುವುದಿಲ್ಲ ಅದು ಸುನರ್ಜನ್ಮಕ್ಕೆ ಕಾರಣವಾದ ನೇಪಥ್ಯಮಂಡಲದಲ್ಲೇ ತಂಗಿ ಹೋಗುತ್ತದೆ ಮರಣಕಾಲದಲ್ಲಿ ಯಾವ ಯಾವ ಆಶೆಗಳೇ ಹೆಚ್ಚಾಗಿರುತ್ತವೋ ಆ ದಕ್ಕೆ ತಕ್ಕ ಜನ್ಮವೇ ಮತ್ತೆ ಉಂಟಾಗುತ್ತದೆ ಮನಸ್ಸು ಜೀವಾತ್ಮವನ್ನು ಮೋಡ ಪ್ರಾಂತದಲ್ಲೇ ನಿಲ್ಲಿಸಿ ಮಳೆಯ ಜತೆಯಲ್ಲಿ ಕೆಳಗಿಳಿಸಿ ಆಹಾರ ವಸ್ತುಗಳಲ್ಲಿ ಸೇರಿಸಿಬಿಡುತ್ತದೆ ಮನುಷ್ಯರೂ ಪ್ರಾಣಿಗಳೂ ಅವುಗಳನ್ನು ಸೇವಿಸುವುದರಿಂದ ಆ ಜೀವಾತ್ಮಗಳು ಮತ್ತೆ ಕಟ್ಟುತ್ತವೆ ಮನುಷ್ಯರು ಕೂಡ ಯಾವುದೋ ಪೂರ್ವಜನ್ಮ ವಾಸನೆಯಿಂದ ಹುಟ್ಟುವುದಕ್ಕೆ ಇದೇ ಕಾರಣ ಅದಕ್ಕಾಗಿಯೇ ಒಳ್ಳೆಯ ಯೋಚನೆ ಮಾಡುತ್ತಾ ಇದ್ದರೇನೇ ಒಳ್ಳೆಯ ಜನ್ಮ ಸಿಕ್ಕುತ್ತದೆನ್ನುವುದು ಇನ್ನು ಮನಸ್ಸನ್ನೆ ಜಯಿಸಿದ ಮಹಾತ್ಮರು ಪ್ರಪಂಚದಲ್ಲಿ ನಿರ್ಲಿಪ್ತರಾಗಿರುವುದರಿಂದ ಅವರ ಜೀವಾತ್ಮವು ಕಲ್ಪನಾಶಕ್ತಿಯ ಮನಸ್ಸಿನ ಸಂಪರ್ಕವೇ ಇಲ್ಲದೆ ನೇರಾಗಿ ಪಂಚ ಮಹಾಭೂತಗಳನ್ನು ವಿಶ್ಲೇಷಿಸಿಕೊಂಡು ಆಕಾಶಮಾತ್ರದಲ್ಲೇ ಲೀನವಾಗಿ ಹೋಗುತ್ತದೆ. ಅದೇ ಮೋಕ್ಷ

ಪಿಶಾಚಿಗಳ ಹುಟ್ಟು

ಇದೀಗ ಸರ್ವ ಸಾಧಾರಣವಾದ ಜನ್ಮ ವಿದಾನ ಇನ್ನು ಪಿಶಾಚಿಗಳಿಗೂ ಇದಕ್ಕೂ ಏನು ಸಂಬಂಧವೆಂದು ನೋಡೋಣ! ಯಾವುದೋ ಒಂದು ಆಕಸ್ಮಿಕದಿಂದಲೋ ಆತ್ಮಹತ್ಯದಿಂದಲೋ ಸತ್ತಾಗ ಜೀವಾತ್ಮದೊಂದಿಗೆ ಮನಸ್ಸಿನ ಒಲವು ಅತಿ ಹೆಚ್ಚಾಗಿರುತ್ತದೆ ಯಾವುದೋ ಆತ್ಯಂತ ಆಶಯಗಳಿಂದ ಮನಸ್ಸು ಆ ಜೀವಾತ್ಮವನ್ನು ಕಳಕಡೆಗೇ ಎಳೆಯುವುದರಿಂದ ಜೀವಾತ್ಮವು ನೇರಲೆ ಹೋಗಲಾರದೆ ಆ ಪ್ರದೇಶದಲ್ಲೇ ಸುತ್ತಿಕೊಂಡಿರುತ್ತದೆ ಒರೆಸುತ್ತು ಹಾಕುವುದು ಮಾತ್ರವಲ್ಲ, ಗತ ದೇಹವು ಯಾವ ಯಾವ ಕಲಸಗಳನ್ನು ಮಾಡಿತ್ತೋ ಯಾವುದರ ಮೇಲೆ ಅತೀ ಪ್ರೀತಿಯಿತ್ತೋ ಆ ಕಡೆಗೇ ಎಳೆಯಲ್ಪಡುತ್ತದೆ ಕಲ್ಪನಾ ಶಕ್ತಿಯುಳ್ಳ ಮನಸ್ಸು ತನ್ನ ಅದರ ಕಲ್ಪನೆಗೆ ರೂಪುಕೊಡ ತಂತಹ ಪಂಚ ಭೂತಗಳೂ ಈ ವಾತಾವರಣದಲ್ಲಿ ದೈವೀಕ ಗತಿಸಿದ ದೇಹವಾದರೂ ಆ ಪಂಚ ಭೂತಗಳಿಂದಲೇ ಆದುದನ್ನೆ? ಈ ಮೂಲ ವಸ್ತುಗಳಿಂದ ಜೀವಾತ್ಮದೊಂದಿಗಿರುವ ಆ ಮನಸ್ಸು ಗತದೇಹವನ್ನು ಕಲ್ಪಿಸಿಕೊಳ್ಳುತ್ತಿರುತ್ತದೆ ಆಗ ಆಕಸ್ಮಿಕವಾಗಿ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುವಂತಹ ಗಾಳಿ ರೂಪವೂಂಟಾಗುತ್ತದೆ ತಮ್ಮ ಸ್ವಲ್ಪ ಹೊತ್ತು ಮಾತ್ರ ಕಲ್ಪನೆ ಇದರಿಂದ ಹೋದ ಹಾಗೆ ಮಾಯವಾಗಿ ಏಳುತ್ತದೆ ಈ ಗಾಳಿ ರೂಪವೇ ಪಿಶಾಚಿ

ಒಂದು ಪಿಶಾಚಿ ಎಷ್ಟು ಕಾಲದ ವರೆಗೆ ಹೀಗೆ ಸುತ್ತಿ ಕೊಂಡಿರುತ್ತದೆ? ಇದನ್ನು ಖಂಡಿತವಾಗಿ ಹೇಳಲಾಗುವುದಿಲ್ಲ ಅದರ ಆಶೆಗಳ ತೀವ್ರತೆಯ ಭಾರ ತಗ್ಗುವ ವರೆಗೂ ಇರುತ್ತದೆ ಕಾಲಕ್ರಮೇಣ ನಿರಾಶೆಯನ್ನೆ ಉಂಡಂತು, ಆಶೆಭಗ್ನವಾಗಿ ಬಸತ್ತ ಮನಸ್ಸಿನ ಶಕ್ತಿ ಕುಂದುತ್ತದೆ ಜೀವಾತ್ಮವು ಹಗುರಾದಂತೆ ಮೇಲೆ ಮೇಲೆ ಹೋಗಿ ಮೇಳೆ ಮಂಡಲವನ್ನು ಸೇರಿ, ಅಕ್ಕಂದ ವತ್ತೆ ಯಾವುದಾದರೂ ವಿಕಾರ ಜನ್ಮಕ್ಕೆ ಕಾರಣವಾಗಿ ಭೂಮಿಯಲ್ಲಿ ಹುಟ್ಟುತ್ತದೆ ಪೈಶಾಚಿಕ ವೈಕೃತಿಗಳ ಸಂಪರ್ಕದಿಂದ ಹುಚ್ಚು ಮೂಡಿ, ವಿಕಲಾಂಗವಾಗಿ ಹುಟ್ಟಿದರೂ ಹುಟ್ಟಬಹುದು. ಅದಿವಾ ಪುಣ್ಯ ಕರ್ಮಗಳ ಭಾರದಿಂದ ಪೈಶಾಚಿಕ ವೃಕೃತಿಗಳನ್ನು ಸೂಂಗಿ ಕಳೆದು ಕೂಡು ಉತ್ತಮ ಮಧ್ಯಮ ಜನ್ಮಗಳನ್ನು ಪಡೆದರೂ ಪಡೆಯಬಹುದು

ಈ ರೀತಿಯಾಗಿ ಸಾಮಾನ್ಯ ಪಿಶಾಚಿಗಳಿಗೆ ಒಂದು ಬಗೆಯ ಎಡೆ ಗಡೆಯಿದ್ದರೂ, ಆತ್ಮಹತ್ಯ ಮೂಲಕವಾಗಿ ಉಂಟಾದ ಪಿಶಾಚಿಗೆ ಯಾವ ದಾರಿಯೂ ಸಿಕ್ಕುವುದಿಲ್ಲ ಪೌರಾಣಿಕ ರೀತಿಯಲ್ಲಿ ಹೇಳುವುದಾದರೆ ಅತ್ರಣಿಂದ ಯಮದೂತರೂ ಬರದಿಲ್ಲ, ಇತ್ತಣಿಂದ ಎಲ್ಲಿಗೆ ಹೋಗುವುದೆಂಬ ದಾರಿಯೂ ಗೊತ್ತಿಲ. ತಾನಿದ್ದ ದೇಹವೂ ನಾಶವಾಗಿ, ಆ ಪಿಶಾಚಿ ಲಂತರದಲ್ಲೇ ಭ್ರಮಿಸಿಕೊಂಡಿರುತ್ತದೆ. ಆ ಜೀವಾತ್ಮದೊಂದಿಗಿರುವ ಅತ್ಯಪ್ತ ಮನಸ್ಸು ಪಂಚ ಮಹಾಭೂತಗಳಲ್ಲಿ ಲಯವಾಗಿ ಹೋಗುವ ವರೆಗೂ ಪಿಶಾಚಿಯಾಗಿಯೇ ಇರಬೇಕಾದೀತು ಅದಕ್ಕೇ ಆತ್ಮಹತ್ಯವು ಮಹಾ ಪಾಪ ಎನ್ನುವುದು

ಪಿಶಾಚಿಗಳ ಶಕ್ತಿ

ಈ ಬಗೆಯ ಪಿಶಾಚಿಗಳು ಸ್ವಯಂ ಶಕ್ತಿ ಇಲ್ಲದಿದ್ದರೂ ವಾತಾವರಣವು ನಿತ್ಯ ಜೀವಂತಗಳು, ಆಹಾರವಾದ ಬೆಳದಿಂಗಳು ಒಂದಾಗಿ ಆ ಜೀವಾತ್ಮದ ಕಲ್ಪನೆ ಮಾಸನವೆಂಟಾಗುತ್ತದೆ ಆಗ ಕಲ್ಪನೆ ನಮಗೆ ಕಾಣಿಸುವ ರೂಪಗಳ ಸಕಲೇ ರೂಪಗಳು ಅದಕ್ಕೆ ಯಾವ ಕ್ರಿಯಾಶಕ್ತಿಯೂ ಇರುವುದಿಲ ಅವನ್ನು ನೋಡಿ ಹೆದರಿಕೊಳ್ಳುವುದೇ ನಮಗೆ ಒರುವ ಅಪಾಯ ಹೊರತು ವತ್ತೇನೂ ಇಲ್ಲ ಆದರೆ ಕೆಲವರ ಮೇಲೆ ಪ್ರೀತಿಯಿಟ್ಟವ ಜೀವಾತ್ಮವು ಅವರನ್ನೆ ಎಂಸಿ ಕೂಡುವಂತಿಕೊಳ್ಳುವುದುಂಟು ಅವರಿಸಲ್ಪಡುವವರು ಭಯಂಕರವಾಗಿದ್ದರೆ ಅವರ ದೇಹದೊಳ ಅದು ಗಾಳಿಯ ರೂಪದಲ್ಲ ಪ್ರವೇಶ ಮಾಡಿ ಬಿಡಬಲ್ಲದು ಆಗ ಅವರಿಗೆ ಜಕ್ಕಣ ಹಿಡಿಯಿತೆಂದು ಹೇಳುತ್ತಾರೆ ಅದನ್ನು ಹಿಡಿಸಲು ಮಂತ್ರವಾದಿಗಳಾದಾರಂದೂ, ಅದೆಲ್ಲಾ ಬದುಕಿರ ವವರ ಸಮಾಧಾನಕ್ಕಾಗಿಯೇ ಹೊರತು, ಪ್ರಯೋಜನವೇನೂ ಆಗಲಾರದು. ಮನುಷ್ಯರಾಗಿ ಪಿಶಾಚಿಗಳಿದಿರಿನಲ್ಲಿ ನಮಗಿರಬೇಕಾದುದು ಧೈರ್ಯ ಸಾಧಾರಣವಾಗಿ ಹೆಂಗಸರು ಧೈರ್ಯದಲ್ಲಿ ಹಿಂದಿರುವುದರಿಂದಲೇ ದೆವ್ವಗಳ ಗಾಳಿ ಅವರಿಗೆ ಬಡಿಯುವುದು ಹೆಚ್ಚು

ಹೆಣ್ಣು, ಹೊನ್ನು, ಮಣ್ಣು, ಕಟ್ಟೋಣಗಳ ಪ್ರೀತಿ ಸಂತಾನ ಪ್ರೇಮ, ಅಡಿಗಡಿಗೂ ನೋಲುಂಡಬಳು, ಕೊಲೆ, ಆತ್ಮಹತ್ಯ, ಹಗೆ ಇವೇ ಮೊದಲ ಮುಖ ಪಿಶಾಚಿಗಳ ಜನ್ಮಕ್ಕೆ ಕಾರಣವಾಗುತ್ತವೆ ನಾವು ಪಿಶಾಚಿಗಳಾಗದೆ ಒಳ್ಳೆಯ ಸುನರ್ಜನ್ಮ ಪಡೆಯಲು (ಮೋಕ್ಷದ ಮಾತು ಇಲ್ಲಿ ಬೇಡ) ಆದಷ್ಟು ಲೋಭ ಮೋಹಾದಿಗಳಿಂದ ದೂರವಿದ್ದು ಬಾಳಲು ಕಲಿಯಬೇಕು

ನಂಬುಗೆಯ ಶಕ್ತಿ

ಇನ್ನು ದೆವ್ವಗಳೆಂಬುದು ಬೇರೊಂದು ಶಕ್ತಿಗಳ ಗುಂಪು ಇವುಗಳನ್ನು ದೈವಗಳೆಂದೂ ಭೂತಗಳೆಂದೂ ಹೇಳುತ್ತಾರೆ. ಪಿಶಾಚಿಗಳಂದರೆ ಪ್ರೇತಾತ್ಮಗಳು, ಇವುಗಳಿಗೆ ಸ್ವಯಂ ಶಕ್ತಿಯಿಲ್ಲ ದೈವ ಭೂತಗಳೆಂದರೆ ಜನರ ನಂಬುಗೆಯ ಮಹಿಮೆಯಿಂದ, ಸಾಂದ್ರವಾದ ಪಂಚಮಹಾಭೂತಗಳಿಂದ ಹುಟ್ಟಿದ ಶಕ್ತಿಗಳು

ಪ್ರಾಚೀನ ಮಾನವರು ಕೆಲವು ಶಕ್ತಿಗಳನ್ನು ದೇವತೆಗಳೆಂದು ಭಾವಿಸಿ ಪೂಜಿಸುತ್ತ ಬಂದಿದ್ದಾರೆ ಪಂಚಭೂತಾತ್ಮಕವಾದ ದೇಹಿಗಳ ಸಮೂಹದ ಮಾನಸಿಕ ಶಕ್ತಿಯ ಒತ್ತಡದಿಂದ, ಇದೇ ಪಂಚಭೂತಗಳು ತುಂಬಿದ ಬಹಿರಂಗ ಪ್ರದೇಶದಲ್ಲಿ ಒಂದು ದೈವೀಶಕ್ತಿ ಉದ್ಭವವಾಗುತ್ತದೆ ಹತ್ತು ಜನರ ಮಾತಲ್ಲಿ 'ಅಲ್ಲಾ' ಎಂಬ ಪ್ರತಿ ಧ್ವನಿ ವಾತಾವರಣದಲ್ಲಿ ಹೊರಡುವುದೆಂದು ಹೇಳಬೇಕಾಗಿದೆ? ಹೀಗೆ ಹುಟ್ಟಿದ ನಂಬುಗೆಯ ಶಕ್ತಿಗಳು ಭೂತಗಳಾಗಿವೆ

ಹಿಂಸಾ ದೈವಗಳು

ಅಲ್ಲದೆ ಇನ್ನೊಂದು ರೀತಿಯಾಗಿಯೂ ವಿಕೃತ ಶಕ್ತಿಗಳು ಹುಟ್ಟುವ ಸಂಭವವುಂಟು ಮನಸ್ಸು ಮಾನವಂಗೆ ಮಾತ್ರವೇ ಇರುವ ಇಂದ್ರಿಯವಲ್ಲ ಪ್ರಾಣಿಗಳಿಗೂ ಪಕ್ಷಿಗಳಿಗೂ ಮನಸ್ಸು ಉಂಟೇ ಉಂಟು ಮಿದುಳಿನ ಸಹಾಯ ಕಡಮೆಯಾದುದರಿಂದ ಪ್ರಾಣಿ ಪಕ್ಷಿಗಳಿಗೆ ಮನುಷ್ಯರಿಗಿರುವಷ್ಟು ವಿಚಾರ ಶಕ್ತಿ ಕಲ್ಪನಾ ಶಕ್ತಿಯಿರುವದಿಲ್ಲ ಆದರೇನಾಯಿತು? ಆಡನ್ನೋ ಕುರಿಯನ್ನೋ, ಮೇಕೆಯನ್ನೋ, ಪಶುವನ್ನೋ ಮನುಷ್ಯನು ಕೊಲೆಮಾಡಿದಾಗ ಅವುಗಳ ಮನೋಭಾವನೆ ಹೇಗಿದ್ದೀತು? ಸೇಡು ತೀರಿಸಿಕೊಳ್ಳಬೇಕೆಂಬ ಒತ್ತಡದಿಂದಲೇ ತಮ್ಮ ಸಾಯುತ್ತವೆ ಅವುಗಳ ಮನಸ್ಸು ಆ ಪ್ರಾಂತದಲ್ಲೇ ಸುತ್ತಿಕೊಂಡು ದೆವ್ವಗಳ ರೂಪ ಪಡೆಯುತ್ತವೆ. ರಕ್ತ ಬಲಿಯಿಂದಲೇ ಹುಟ್ಟುವ



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ ೬/- (ವಿ ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಈ ದೆವ್ವಗಳು ರಕ್ತ ಬಲಿಯನ್ನೆ ಬಯಸುವ ಕ್ರೂರ ಭಾವವುಳ್ಳವುಗಳಾದರೆ ಆಶ್ಚರ್ಯವೇನಿದೆ? ಹಿಂಸೆಯಿಂದಲೇ ಹುಟ್ಟಿದ ದೆವ್ವಗಳು ಹಿಂಸೆಯನ್ನೆ ಬಯಸುವ ದೇವತೆಗಳಾಗಿ ಮೆರೆಯುತ್ತವೆ.

ಇಂತಹ ಮಾನಸಿಕ ಶಕ್ತಿಯಿಂದ ಹುಟ್ಟಿದ ದೈವ ಭೂತಗಳು ಬಗೆ ಬಗೆಯಾಗಿವೆ. ಕಲ್ಲುರ್ಟಿ, ಪಂಜುರ್ಲಿ, ಜಾರಂದಾಯ, ಗುಳಿಗ, ಕಲ್ಕುಡ, ಕುಟಿಚಾತನ್, ಸತ್ಯವತಿ, ಮಾರಮ್ಮ ಹೀಗೆ ಅನೇಕ ಕಡೆಗಳಲ್ಲಿ ಅನೇಕ ಹೆಸರುಗಳಿಂದ ಅನೇಕ ವಿಧವಾಗಿವೆ. ಅವುಗಳಿಗೆ ಗುಡಿಗಳಿವೆ, ಕಲ್ಲುಗಳಿವೆ, ಕಟ್ಟೆಗಳಿವೆ, ಕೆಲವು ಕ್ರೂರ, ಕೆಲವು ಸೌಮ್ಯ ಅಂತೂ ನಿಯಮಿತಕಾಲಕ್ಕೆ ಅವುಗಳಿಗೆ ಸಲಿಸಬೇಕಾದ ಕೋಳಿ, ಮಂಜಟ್ಟಿ ಮೊದಲಾದ ಸೇವೆಗಳೂ ಜಾತ್ರೆಗಳೂ, ನೇಮಗಳೂ, ನಿಷ್ಠೆಗಳೂ ಬಲಿಗಳೂ, ಪೂಜೆಗಳೂ ತಪ್ಪದೆ ನಡೆಯುತ್ತವೆ.

ನಂಬಿದವರ ಬೆಂಬಿಡದು

ಈ ಬಗೆಯ ದೆವ್ವಗಳನ್ನು ನಂಬಿದರೆ ಅವುಗಳಿಗೆ ನಡೆಸುವ ಸೇವಾನಿಷ್ಠೆಗಳನ್ನು ಎಳ್ಳಿನಷ್ಟೂ ತಪ್ಪಿಸದೆ ನಡೆಸಲೇಬೇಕು. ಇಲ್ಲದಿದ್ದರೆ ಕೂಡಲೇ ಅವುಗಳ ಪ್ರತೀಕಾರವನ್ನು ನಾನಾ ವಿಧವಾಗಿ ಅನುಭವಿಸಬೇಕಾಗುತ್ತದೆ. ನಂಬಿದವರನ್ನು ಹೊಂದಿಕೊಂಡೇ ತಮ್ಮ ಶಕ್ತಿ ಪ್ರದರ್ಶನ ಮಾಡುವುದರಲ್ಲಿ ಈ ದೆವ್ವಗಳಿಗೆ ದೆವ್ವಗಳೇ ಸಾಟಿ. ನಂಬದವರ ತಂಟೆಗೆ ಮಾತ್ರ ಅವು ಬರುವುದಿಲ್ಲ. ಆದರೆ ಒಂದು ಮನೆತನದಲ್ಲಿ ಅವುಗಳನ್ನು ನಂಬುತ್ತಾ ಬಂದರೆ, ಮುಂದಿನ ತಲೆಮಾರಿನವರು ನಂಬದೆ ಬಿಟ್ಟರೂ ಆ ದೆವ್ವಗಳು ಆ ವಂಶಸ್ಥರ ಕಾಟಕೊಡುವುದನ್ನು ಬಿಡಲಾರದು. ಆದುದರಿಂದ ಅವುಗಳ ನಂಬುಗೆಯನ್ನು ಒಮ್ಮೆಗೇ ಬಿಡುವುದು ಅಪಾಯಕಾರಿ

ಕಾರಣವೇನೆಂದರೆ, ಇವು ಚಿಕ್ಕ ತರಗತಿಯ ದೈವಗಳು. ರಾಜನು ಸುಗಮವಾಗಿ ರಾಜ್ಯಭಾರ ಸಾಗಿಸಲು ಅನೇಕ ಅಧಿಕಾರಿಗಳನ್ನು ನೇಮಿಸಿದ ಹಾಗೆ ದೇವಾಧಿದೇವನೂ ನೇಮಿಸಿದ್ದಾನೆ. ಆಯಾ ತರಗತಿಯ ಜನರಿಗಾಗಿ ಆಯಾ ತರಗತಿಯ ದೆವ್ವಗಳಿವೆಯೆಂದು ತಿಳಿಯಬಹುದು. ದೆವ್ವಗಳಿಂದ ಹಿಡಿದು ದೇವತೆಗಳ ವರೆಗೂ, ಈ ಜಗತ್ತು ಒಪ್ಪಲ್ಪಟ್ಟ ದೇವತೆಗಳೇ ಆಗಿವೆ. ಸಜ್ಜನರ ಹಾಗೆ ದುರ್ಜನರಿಗಾದರೂ ಬಾಳುವ ಹಕ್ಕು ಇದ್ದೇ ಇದೆ. ನಾವು ದೇವಾಧಿದೇವನನ್ನೆ ನಂಬುವಷ್ಟು ನಮ್ಮ ಜ್ಞಾನವನ್ನು ಉನ್ನತಪಡಿಸಿಕೊಂಡರೆ, ದೆವ್ವಗಳೆಲ್ಲಾ ನಮ್ಮನ್ನು ಗೌರವಿಸಿ ಸುಮ್ಮನಿರುತ್ತವೆ. ದೊಡ್ಡ ಅಧಿಕಾರಿಗಳ ಸ್ನೇಹಿತರನ್ನು ಜವಾನರೂ ಗೌರವಿಸುವುದು ಸಹಜ ತಾನೆ? ಆದುದರಿಂದ ಈ ದೆವ್ವಗಳ ಇರುವಿಕೆಯನ್ನು ನಂಬಿ ಅವುಗಳನ್ನು ಮನ್ನಿಸಿಕೊಂಡು, ಉತ್ತಮ ದೇವತ್ವದ ಕಡೆಗೆ ದೃಷ್ಟಿಯನ್ನು ಕೇಂದ್ರೀಕರಿಸಿಕೊಂಡು ನಾವು ಬಾಳುವುದೇ ಲೇಸು. ದೈವವನ್ನೂ ನಂಬದೆ, ದೇವರನ್ನೂ ನಂಬದೆ ಇರುವವರಿಗೆ, ದೆವ್ವ, ಭೂತ, ಪಿಶಾಚಿ, ಇಕ್ಕಿಟ್ಟು, ಬ್ರಹ್ಮರಾಕ್ಷಸ ಮುಂತಾದುವುಗಳ ಭೀತಿಯಾದರೂ ಏಕೆ ಬೇಕು? ಅವರು ನಾಸ್ತಿಕರು, ಅಥವಾ ಎಲ್ಲಕ್ಕೂ ಅತೀತರಾದ ಮಹಾಜ್ಞಾನಿಗಳು.

(ಸಂಪೂರ್ಣ)

ಲಿಪಿಸಮನ್ವಯದ ಉತ್ಸಾಹ ಯಾರಿಗೆ?

(ನಿನೆ ಪುಟದಿಂದ)

ಅದನ್ನು ಒದಗಿಸಲು ಸರಕಾರ ಪ್ರೌಢ್ಯ ಕ್ರಮ ಕೈಗೊಳ್ಳಲಿ" ಎಂದು ಹೇಳಿ ಶ್ರೀ ಕಂಠಯ್ಯನವರು "ಸಣ್ಣ ಸಣ್ಣ ಪುಸ್ತಕಗಳನ್ನು ಅಚ್ಚು ಹಾಕುವಾಗ ತೆಲುಗಿನ ಪದ್ಯವನ್ನೋ ವಾಕ್ಯಗಳನ್ನೋ ಉದಾಹರಣೆಗಾಗಿ ಅಚ್ಚು ಹಾಕಿಸಿ ಅದನ್ನು ಜನ ಯಾವ ರೀತಿಯಲ್ಲಿ ಸ್ವಾಗತಿಸುವರೆಂಬುದನ್ನು ಕಾದು ನೋಡೋಣ.

"ಸುಧಾರಣೆ ಈಗ ಬೇಡ. ಅದನ್ನು ನಿಧಾನವಾಗಿ ಹೆಜ್ಜೆ ಹೆಜ್ಜೆಯಾಗಿಯೇ ಮಾಡುವುದು ಒಳ್ಳೆಯದು ಎಚ್ಚರಿಕೆ ಮತ್ತು ಸಾವಧಾನದಿಂದ ಮುಂದುವರಿಯುವುದು ಉತ್ತಮ" ಎಂದು ಶ್ರೀ ಶ್ರೀಕಂಠಯ್ಯನವರು ಎಚ್ಚರಿಸಿದರು.

ಶ್ರೀ ಕೆ. ವೆಂಕಟರಾಮಪ್ಪನವರು ಮಾತಾಡಿ, "ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಐಕಮತ್ಯವಿದೆ. ಐತ್ವ ಮತ್ತು ಔತ್ವಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ತೆಲುಗು ಮತ್ತು ಕನ್ನಡ ಲಿಪಿ ಒಂದಾದರೆ, ಟೈಪ್ ರೈಟರುಗಳು ಅಗ್ಗವಾಗುತ್ತದೆ ಅಚ್ಚು ಮಾಡಲು ಅನುಕೂಲವಾಗುತ್ತದೆ ಎಂದು ಶ್ರೀ ಸುಬ್ಬರಾಮಪ್ಪನವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಈ ಸುಧಾರಣೆ ಯಾರಿಗೂ ಬೇಗ ಹಿಡಿಸುವುದಿಲ್ಲ. ತಲೆಕಟ್ಟಿನ ವಿಚಾರ ನಿಜವಾಗಿಯೂ ಗೊಂದಲಕ್ಕೆ ಮಾರ್ಗವಾಗುತ್ತದೆ. ಇಂತಹ ವಿಚಾರಗಳನ್ನು ಉದ್ರೇಕಕ್ಕೆ ಎಡೆಗೊಡದಂತೆ ನಡೆಸಬೇಕು.

"ತೆಲುಗು ಲಿಪಿಯನ್ನು ನಾವು ಅಳವಡಿಸಿಕೊಂಡರೆ ಕನ್ನಡ ಲಿಪಿಯ ಸೌಂದರ್ಯವನ್ನು ಕಡಿಮೆ ಮಾಡಿದಂತಾಗುತ್ತದೆ" ಎಂದು ತಿಳಿಸಿದರು.

ಡಾ. ಎಂ. ಸಿದ್ಧಲಿಂಗಯ್ಯನವರು, ಹೊಸದಾದ ಅಚ್ಚುಕೂಟವನ್ನೇರ್ಪಡಿಸಿ ನೂತನ ಪಠ್ಯ ಪುಸ್ತಕಗಳನ್ನು ಅಚ್ಚುಮಾಡಿಸಿ ಅದನ್ನು ಜನರ ಮುಂದೆಯಿಟ್ಟು ಅವರ ಅಭಿಪ್ರಾಯವನ್ನು ಪಡೆಯುವುದರ ಜೊತೆಗೆ ಪ್ರತಿಯೊಬ್ಬರ ಅಭಿಪ್ರಾಯವನ್ನೂ ಪಡೆಯಬೇಕೆಂದರು.

ಶ್ರೀ ಎಂ. ವಿ. ಸೀತಾರಾಮಯ್ಯನವರು, "ಕನ್ನಡ—ಆಂಧ್ರ ಏಕಲಿಪಿಯ ಅವಶ್ಯಕತೆಯ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ ಅದರ ಪರಿಶೀಲನೆಗೆ ಬಿಡಿ. ಅನಂತರ ಇದನ್ನು ಜನರ ಅಭಿಪ್ರಾಯಕ್ಕೆ ಬಿಟ್ಟುಕೊಡಬೇಕು. ಆಗ ನಾನಾ ತೊಡಕುಗಳು ಬರುತ್ತವೆ. ಆಮೇಲೆ ಏಕಲಿಪಿಯ ಸಾಧ್ಯಾಸಾಧ್ಯತೆಗಳನ್ನು ತೀರ್ಮಾನಿಸಬೇಕು. ಇದೆಲ್ಲದಕ್ಕೂ ತಜ್ಞರು ಒಂದು ತೀರ್ಮಾನಕೊಟ್ಟಮೇಲೆ ಸರಕಾರದವರು ಜನಾಭಿಪ್ರಾಯವನ್ನು ಪಡೆದು ಕ್ರಮ ಕ್ರಮವಾಗಿ ಬಾಲಬೋಧೆ ಪುಸ್ತಕಗಳಲ್ಲಿ ತಂದರೆ ಮುಂದಿನ ಜನಾಂಗದವರಿಗೆ ಇದನ್ನು ಸುಲಭವಾಗಿ ಕಲಿಸಬಹುದು. ಈಗ ಸದ್ಯಕ್ಕೆ ಯಾವುದಾದರೊಂದು ಟೈಪ್‌ರೈಟರ್ ಬೇಗ ಬರಲಿ, ಅನಂತರ ಸುಧಾರಣೆಯನ್ನು ನಿಧಾನವಾಗಿ ಮಾಡಿಕೊಳ್ಳೋಣ" ಎಂದರು.

ಸೈಂಟ್ ಜೊಸೆಫ್ ಕಾಲೇಜಿನ ತೆಲುಗು ಪ್ರಾಧ್ಯಾಪಕರಾದ ಶ್ರೀ ಜಿ. ಸುಬ್ಬಯ್ಯ ಶಾಸ್ತ್ರಿಗಳು ತೆಲುಗು ಭಾಷೆಯಲ್ಲಿ ಮಾತನಾಡಿ, "ಏಕಲಿಪಿಯ ಬಗ್ಗೆ ತೆಲುಗಿನವರ ಅಭಿಪ್ರಾಯ ಇನ್ನೂ ತಿಳಿದುಬಂದಿಲ್ಲ. ಈ ಚರ್ಚೆ ಆಂಧ್ರರಿಂದ ಇಲ್ಲಿಗೆ ಬರಬೇಕಾಗಿತ್ತು. ಆಂಧ್ರದಲ್ಲಿ ಲಿಪಿಯ ಸುಧಾರಣೆಯ ಬಗ್ಗೆ ಯಾರೂ ಪ್ರಯತ್ನಿಸುತ್ತಿಲ್ಲವಾದುದರಿಂದ ಈ ಬಗ್ಗೆ ಎಚ್ಚರಿಕೆಯಿಂದ ನಡೆಯಬೇಕು" ಎಂದರು.

ಶ್ರೀ ಟಿ. ಟಿ. ಶರ್ಮ ಅವರು, ೮-೯ನೇ ಶತಮಾನಗಳಿಂದ ೧೬ನೆಯ ಶತಮಾನದ ವರೆಗೂ ಕನ್ನಡ—ತೆಲುಗು ಲಿಪಿ, ಶೈಲಿ ಬೆಳೆದು ಬಂದ ವಿಚಾರವನ್ನು ವಿವರಿಸಿ, ಎಂದಿನಿಂದ ಅಚ್ಚು ಪ್ರಾರಂಭವಾಯಿತೋ ಆಂದಿನಿಂದ ಲಿಪಿಯಲ್ಲಿ ಬದಲಾವಣೆಯಾಗಲು ಪ್ರಾರಂಭವಾಯಿತೆಂದು ತಿಳಿಸಿದರು. ಭಾಷಾಬಾಂಧವ್ಯ, ಸಾಹಿತ್ಯಬಾಂಧವ್ಯ ಇವೆಲ್ಲವೂ ಚನ್ನಾಗಿ ಬೆಳೆಯಲೆಂಬ ಉದ್ದೇಶದಿಂದ ಈ ವಿಚಾರವನ್ನು ಚರ್ಚೆಗೆ ಇಡಲಾಗಿದೆಯೆಂದೂ ಇದನ್ನು ಸಹಾನುಭೂತಿಯಿಂದ, ಸ್ನೇಹ ಪರತೆಯಿಂದ ಇದನ್ನು ನೋಡಬೇಕೆಂದೂ ಶ್ರೀ ಶರ್ಮ ಅವರು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಅರ್ಥ ಸಚಿವ ಶ್ರೀ ಟಿ ಮರಿಯಪ್ಪನವರು, "ಕನ್ನಡ ಮತ್ತು ಆಂಧ್ರರಿಗೆ ಒಂದೇ ಲಿಪಿ ಇರಬೇಕಾದ ವಿಚಾರ ಯೋಗ್ಯವಾದುದು. ಈ ಸುಧಾರಣೆಯನ್ನು ಜಾರಿಗೆ ತರಲು ಪ್ರಜಾಭಿಪ್ರಾಯವನ್ನು ರೂಪಿಸತಕ್ಕ ಎರಡು ರಾಜ್ಯಗಳ ಜನನಾಯಕರು ಚರ್ಚಿಸಿ ಒಪ್ಪಿದರೆ ಜನರು ಅದಕ್ಕೆ ಒಪ್ಪುವರು. ಸುಧಾರಣೆ ವಿಚಾರಗಳನ್ನು ಇನ್ನೂ ಹೆಚ್ಚು ಜನರು ಚರ್ಚೆ ಮಾಡುವುದು ಒಳ್ಳೆಯದು. ಇದನ್ನು ಪ್ರಜಾಭಿಪ್ರಾಯಕ್ಕೆ ಬಿಟ್ಟರೆ, ಅನೇಕ ತೊಂದರೆಗಳು ಉದ್ಭವಿಸುತ್ತವೆ

"ವಿದ್ಯೆಯನ್ನು ಅಭಿವೃದ್ಧಿಗೊಳಿಸಲು ತೀವ್ರವಾಗಿ ಯೋಚಿಸಿ ಸುಧಾರಣೆಗಳನ್ನು ಕೈಗೊಳ್ಳುವ ಈ ಕಾಲದಲ್ಲಿ ಕನ್ನಡ-ಆಂಧ್ರ ರಾಜ್ಯಗಳ ೫ ಕೋಟಿ ಜನಕ್ಕೆ ಒಂದೇ ಲಿಪಿ ರಚಿಸಲು ಜನನಾಯಕರು ಮನಸ್ಸು ಮಾಡಿದರೆ, ಅದನ್ನು ತಜ್ಞರು ಹೆಚ್ಚಾಗಿ ಚರ್ಚಿಸಿ ಜನರಿಗೆ ಪ್ರಚಾರ ಮಾಡಿ ತಿಳಿಸುವುದು ಉತ್ತಮ.

"ಆಂಧ್ರರೂ ಕನ್ನಡಿಗರೂ ಕೂಡಿ ಬಾಳಿಯುವ ಅವಕಾಶವಿತ್ತು. ಆದರೆ ಪಲಯ ಸಮಿತಿಯಿಂದ ಇದು ಬೇರೆಯಾಗಿದೆ. ನಮ್ಮನ್ನು ಪಶ್ಚಿಮ ವಲಯಕ್ಕೆ ಸೇರಿಸಿರುವುದೇ ಇದಕ್ಕೆ ಕಾರಣ. ಆದರೂ ನಾವು ದಕ್ಷಿಣ ವಲಯ ಸಮಿತಿ ಸಭೆಗೆ ಲಕ್ಷ್ಯವಿಟ್ಟ ಮೇಲೆ ಹೋಗುವುದರಿಂದ ಅಲ್ಲಿ ಏಕಲಿಪಿಯ ವಿಚಾರವನ್ನು ಮಾಡಬಹುದು.

"ಈ ಏಕಲಿಪಿ ಸುಧಾರಣೆಯನ್ನು ಜಾರಿಗೆ ತರಬೇಕೆಂಬ ವಿಷಯವನ್ನು ಬುದ್ಧಿವಂತಿಕೆಯಿಂದ ಚರ್ಚಿಸಬೇಕೆಂದು" ಹೇಳಿದ ಶ್ರೀ ಮರಿಯಪ್ಪನವರು, ವಿದ್ವಾಂಸರು ದೇಶದ ಮಕ್ಕಳ ಹಿತದೃಷ್ಟಿಯಿಂದ, ಈಗಿನ ಸೌಲಭ್ಯಗಳನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಆಲೋಚಿಸಬೇಕೆಂದರು.

("ಜನಪ್ರಗತಿ"ಯ ಸಾಜನ್ಯದಿಂದ)

(ವಿ ಸೂ -"ಕರ್ನಾಟಕಾಂಧ್ರ ಏಕಲಿಪಿ"ಯ ಬಗ್ಗೆ ನಾವು ನಮ್ಮ ಅಭಿಪ್ರಾಯವನ್ನು ತಾ. ೨೩-೬-೫೮ರ ಸಂಚಿಕೆಯಲ್ಲಿ ಬರೆದಿದ್ದೇವೆ.—ಸಂ. ನ.)

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಪಿತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮ ೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc No 466 N/50 date 2-12-1950 of the Director of public Instruction, Madras.

Edited Printed & Published by K. H. Shetty, at the Navayuga press, UdipiS. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ VOL. 37

17—7—1958

ಸಂಚಿಕೆ ೪೫ NO. 45

ನಮಗಿಂದು ಏನು ಬೇಕಾಗಿದೆ?

ಲಿಪಿಯ ಬದಲು ಮನಸಮನ್ವಯವಾಗಲಿ

ಕಳೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾರಣಾಂತರಗಳಿಂದ "ಕನ್ನಡ-ತೆಲುಗುಗಳಿಗೆ ಏಕಲಿಪಿ ಇರಬೇಕು ಎಂಬರ್ಥದ ಗೊತ್ತುವಳಿಯೊಂದು ಸ್ವೀಕಾರ ಮಾಡಿ ಈಗ ಅಲ್ಲಸಲ್ಲದ ಹಾಗೂ ಅನಗತ್ಯವಾದ ವಾದವಿವಾದಗಳಿಗೆ ಬೇಕೆಂತಲೇ ಕನ್ನಡಿಗರು ಕಾಲಿಡುವಂತಾಗಿದೆ. ಕನ್ನಡ-ತೆಲುಗುಗಳಿಗೆ ಏಕಲಿಪಿಯಿರಬೇಕೆಂಬ ವಾದವು ಆಲೋಚನಾರ್ಹವೇ ಹೊರತು ವ್ಯಾವಹಾರಿಕವಲ್ಲವೆಂದೂ ಕೆಲವರನ್ನುತ್ತಾರೆ. ಆದರೆ, ಈ ಬಗ್ಗೆ ಅಭಿಪ್ರಾಯಗಳು ಅನುಕೂಲ ಯಾ ಅನನುಕೂಲವಾಗಿ ಪ್ರಕಟವಾಗುವುದು ಅಗತ್ಯ. ಏಕೆಂದರೆ, ಚಿನ್ನವನ್ನು ಒರೆಗೆ ಹಚ್ಚಬೇಕಾದರೆ ಕಷ್ಟೆ? ಕನ್ನಡತನವನ್ನು ಕಳೆದುಕೊಂಡು, ಕನ್ನಡದ ಅಂದ ಚೆಂದಗಳಿಗೆ ಕುಂದನ್ನು ತಂದುಕೊಂಡು ಲಿಪಿ ಸಮನ್ವಯದ ಮಹಾಸಾಹಸಕ್ಕೆಳಿಯುವ ಅಗತ್ಯ ಸದ್ಯ ಏನೂ ಇಲ್ಲವೆಂದೇ ಹೇಳಬೇಕು. ಇಂದು ಕನ್ನಡ ಸಾಹಿತ್ಯ ಪರಿಷತ್ತಾಗಲೀ ಕನ್ನಡಿಗರ ಸರಕಾರವಾಗಲೀ ಕನ್ನಡಿಗರೇ ಆಗಲೀ ಮಾಡಬೇಕಾದ, ಎದುರಿಸಬೇಕಾದ ಹಲವಾರು ತಲೆನೆಡಿಕೆ ಬರುವಂತಹ ಸಮಸ್ಯೆಗಳಿರುವಾಗ, ಇಂತಹುದೊಂದು ಹೊಸ ಸೂಚನೆಯನ್ನು ಸಮಸ್ಯೆಯನ್ನಾಗಿಸಿ, ಅದರ ಜಾಲದಲ್ಲಿಯೇ ಸಿಕ್ಕಿಕೊಂಡು ಹೊರಬರಲಾರದೆ ಅನ್ಯ ಕರ್ತವ್ಯಗಳನ್ನೂ ಹೂಳ್ಳಿಸದೆ ಸುಮ್ಮನುಳಿದು ವಿವಂಚನೆಗೀಡಾಗುವ ಪ್ರಮೇಯ ಬರುವಂತಾಗಬಾರದು.

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸೇರಿದ ಲಿಪಿಸಮನ್ವಯದ ವಿಚಾರಗೋಷ್ಠಿಯಲ್ಲಿ ನಡೆದ ಕಾರ್ಯಕ್ರಮಗಳನ್ನು ಗಮನಿಸುವಾಗ ಶ್ರೀ ಕೆ. ಸುಬ್ಬರಾಮಪ್ಪನವರೊಬ್ಬರಿಗೇನೇ ಈ ಬಗ್ಗೆ ಉತ್ಸಾಹ ತುಂಬಿ ತುಳುಕುತಿತ್ತೆಂದು ತಿಳಿದುಬರುತ್ತದೆ. ಉಳಿದ ಕೆಲವರು "ಸದ್ಯ ಬೇಡ", 'ಪರಿಶೀಲನಾರ್ಹ" ಎಂಬಿತ್ಯಾದಿಯಾಗಿ ಅಭಿಪ್ರಾಯಪಟ್ಟರು. ಆಂಧ್ರದವರೊಬ್ಬರು "ಆಂಧ್ರದ ಅಭಿಪ್ರಾಯ ತಿಳಿಯದೆ ಏನುಮಾಡುವುದೂ ಸರಿಯಲ್ಲ" ಎಂಬ ಅಭಿಪ್ರಾಯದ ಮಾತುಗಳನ್ನಾಡಿದರು ಇವರೆಲ್ಲರ ಅಭಿಪ್ರಾಯಗಳೂ ನಿಜವಾದುವೇ. ಶ್ರೀ ಸುಬ್ಬರಾಮಪ್ಪನವರು ತಮ್ಮ ಅಭಿಪ್ರಾಯ ಕ್ಕೆ ಪುಷ್ಟಿಯೊಯಲು ಕೊಡುವ ಕಾರಣಗಳೆಂದರೆ, ಕನ್ನಡ ಸಾಹಿತ್ಯದಿಂದಲೇ ತೆಲುಗು ಸಾಹಿತ್ಯ ಪುಷ್ಟಿಗೊಂಡಿದೆ, ತೆಲುಗನ್ನು ಪ್ರಾರಂಭದಲ್ಲಿ ಕನ್ನಡ ಲಿಪಿಯಲ್ಲಿಯೇ ಬರೆಯುತಿದ್ದರು ಎರಡೂ ಭಾಷೆಯಾಡುವವರ ಸಂಸ್ಕೃತಿಯು ಹೆಣದುಕೊಂಡೇ ಬೆಳೆದುಬಂದಿದೆ ಸಂಸ್ಕೃತದ ಪ್ರಭಾವ, ಛಂದಶ್ಶಾಸ್ತ್ರ ರಚನೆಗಳು ಪರಸ್ಪರ ತುಲನಾತ್ಮಕವಾಗಿವೆ ಲಿಪಿಗಳಲ್ಲಿಯೂ ಸಾಮ್ಯವಿದೆ" ಎಂಬಿವು ಈ ದೃಷ್ಟಿಯಿಂದ ಇನ್ನೂ ಮುಂದುವರಿದು ನೋಡುವುದಾದರೆ, ಭಾರತೀಯ ಭಾಷೆಗಳ ಲಿಪಿಗಳೆಲ್ಲವುಗಳಿಗೂ ಬ್ರಾಹ್ಮೀ ಲಿಪಿಯೇ ಮೂಲವೆಂದೂ, ಭಾರತದ ಪೆಚ್ಚಿನ ಬಾಷೆಗಳಲ್ಲಿಯೂ ಸಾಕಷ್ಟು ಸಂಸ್ಕೃತ ಪದಗಳು ಸೇರಿಕೊಂಡಿವೆಯೆಂದೂ ವ್ಯಾಕರಣ, ಸಾಹಿತ್ಯಾದಿ ಶಾಸ್ತ್ರವೆಲ್ಲವುಗಳೂ ಸಂಸ್ಕೃತದಿಂದಲೇ ಸ್ಫೂರ್ತಿ ಪಡೆದುವೆಂದೂ ಕರ್ನಾಟಕಾಂಧ್ರಗಳಲ್ಲಿ ಒಂದು ಕಾಲದಲ್ಲಿ ಸಂಸ್ಕೃತವೇ ರಾಜಭಾಷೆಯಾಗಿತ್ತೆಂದೂ ಹೇಳಿ, ಆದುದರಿಂದ ದೇವನಾಗರೀ ಲಿಪಿಯೇ ಇವುಗಳಿಗೂ ಉಳಿದವುಗಳಿಗೂ ಬಳಸಬೇಕು ಎಂದು ನಾದಿಸಬಹುದು ಇಂತಹ ಸೂಚನೆಯನ್ನು ಆಚಾರ್ಯ ವಿನೋಬಾ ಭಾವೆ, ಡಾ ರಾಜೇಂದ್ರಪ್ರಸಾದ, ಈಗೀಗ ಡಾ ಬಿ. ಗೋಪಾಲರೆಡ್ಡಿಯವರೂ ಕೊಡುತಿದ್ದಾರೆ

ಈ ಯೆಲ್ಲ ವಾದಗಳನ್ನು ನೋಡುವಾಗ, ಕಾವೇರಿಯಿಂದ ಗೋದಾವರಿವರೆಗಿನ ಪೂರ್ವಭಾಗ ಕನ್ನಡವಾಗಿತ್ತು ಅದು ಇತ್ತೀಚೆಗೆ ಕಾರಣಾಂತರಗಳಿಂದ ಸಣ್ಣದಾಗಿದೆಯಷ್ಟೆ. ಈಗ ಅನ್ಯಬಾಷಾಪ್ರದೇಶವಾಗಿದ್ದು ಹಿಂದೆ ಈ ಪ್ರದೇಶಕ್ಕೆ ಸೇರಿದ್ದ ಈ ಭಾಗಗಳ ಸಂಸ್ಕೃತಿಯು ಈಗ ಕನ್ನಡದೊಡನೆ ಒಂದಾಗಿಯೇ ಬೆಳೆದು ಬಂದಿತ್ತು, ಕನ್ನಡಿಗರ ಚಿರಸ್ಮರಣೀಯ ಗುಡಿಗಹ್ವರಗಳು ಈ ಪ್ರದೇಶದಲ್ಲಿವೆ, ನುಡಿ ಒಂದಾಗಿತ್ತು ಎಂಬಿತ್ಯಾದಿಯಾಗಿ ಹೇಳಿ, ಅದನ್ನೂ ಕನ್ನಡ ರಾಜ್ಯದೊಡನೆ ಸೇರಿಸಬೇಕು ಎಂದು ವಾದಿಸುವ, ಅಥವಾ ಶ್ರೀ ಶಂ ಬಾ ಜೋಶಿಯವರ ಅಭಿಪ್ರಾಯದಂತೆ 'ಬಾರತದ ತುಂಬ ಹೊತ್ತೊದಲಿಗೆ ನೆಲೆಯಾದನರು ಕಂನಡಿಗರು, ಅವರ ನಾಡನುಡಿಯು ಕನ್ನಡಿ ಈ ಮೂಲದಿಂದ ಭಾರತದ ರಾಷ್ಟ್ರಭಾಷೆ ಕನ್ನಡಿಯೇ ಆಗಬೇಕು ಎಂದು ಹೇಳುವ ಚಳವಳಿ ಪ್ರಾರಂಭಿಸಿದರೆ ಅದಕ್ಕೇನು ಅರ್ಥ ಕಟ್ಟಬೇಕು? ಆದುದರಿಂದ ಆಂಧ್ರ—ತೆಲುಗುಗಳ ಪೂರ್ವ ಸಂಸ್ಕೃತಿಯಾಗಲೀ ಇಂದಿನ ಕಡಿದುಳಿದ ಹೋಲಿಕೆಗಳಾಗಲೀ ಸಮನ್ವಯ ದೃಷ್ಟಿಗೆ ನಿಷ್ಪ್ರಯೋಜಕವಾಗಿವೆ

ಅರ್ಥಮಂತ್ರಿ ಶ್ರೀ ಮರಿಯಪ್ಪನವರು ತಮ್ಮ ಅಧ್ಯಾಕ್ಷ ಭಾಷಣದಲ್ಲಿ ಸಮನ್ವಯ ವಿಚಾರವನ್ನು ಜನನಾಯಕರಿಗೆ ಬಿಟ್ಟುಬಿಡಿರಿ ಎಂದು ಹೇಳಿ, ಜನನಾಯಕರು ಚರ್ಚಿಸಿ, ಒಂದು ನಿರ್ಧಾರಕ್ಕೆ ಬಂದರೇ ಆಗ ಜನರು ಅದನ್ನು ಸ್ವೀಕರಿಸುವರು ಎಂದು ಅಭಿಪ್ರಾಯ ವ್ಯಕ್ತಪಡಿಸಿದರೆಂದು ವರದಿಯಾಗಿದೆ ಈಗ, "ಜನನಾಯಕರು" ಎಂದರೆ ಯಾರು? ಎಂ. ಎಲ್, ಎ ಗಳೇ ಮಂತ್ರಿಗಳೇ ಅಥವಾ ಇನ್ನಿತರರಲ್ಲಿ ಕೆಲವರೇ ಎಂಬ ಪ್ರಶ್ನೆ ಎಳುತ್ತದೆ. ಕಳೆದ ವರ್ಷ, ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳ ನೇಮಕದೆಯ ವಿಷಯದಲ್ಲಿ, ಜನತೆಗೆ ಹಿತವನ್ನು ಬಯಸುವ ಮಹೋದ್ದೇಶದಿಂದ ನಮ್ಮ "ಜನನಾಯಕ"ರ್ ಎಂ. ಎಲ್ ಎ ಗಳು ಕೈಹಾಕಿ, ಚರ್ಚಿಸಿ, ಒಂದು ನಿರ್ಧಾರಕ್ಕೆ ಬಂದು, ಶಾಸನರೂಪವನ್ನಿತ್ತು ನಮ್ಮ ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ಕೆಲವರಿಗೂ ಅವರ ಹೆತ್ತವರಿಗೂ ತುಂಬ ಸಂಕಟವನ್ನು ತಂದು ಹಾಕಿದ್ದಾರೆ. ಅದೇ ರೀತಿಯಲ್ಲಿ 'ಲಿಪಿಸಮನ್ವಯ' ವಿಷಯದಲ್ಲಿಯೂ ತಾವೇ ಎಂದೆಬಂದು ಒಂದು ಮನಾವೆಯನ್ನು ಮಾಡಿ ಶಾಸನಸಭೆ-ಪರಿಷತ್ತುಗಳಲ್ಲಿ ಮಂಜೂರುಮಾಡಿಸಿ ಜನತೆಯ ಮೇಲೆ ಕರ ಹೇರಿ ಅಧ್ಯಾಸವುಳ್ಳ ಮಾನ್ಯ ಅರ್ಥಮಂತ್ರಿಗಳು ಬಲಾತ್ಕಾರದಿಂದ ಹೇರುವ ಆಲೋಚನೆ ಮಾಡಿದ್ದರೆ, ಆ ಅಭಿಪ್ರಾಯವನ್ನವರು ವ್ಯಕ್ತಪಡಿಸಿದ್ದರೆ, ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಹೊರನಾಡ ಕನ್ನಡಿಗರು ಈ ಸಮಸ್ಯೆಯ ಬಗ್ಗೆ ಅನುಕೂಲಾಭಿಪ್ರಾಯ ತಾ

(೬೫ ಪುಟ ನೋಡಿರಿ)

38 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ ಪಾಂಗಾಳ ನಾಯಕ್ ಬೇಂಕ್ ಲಿ.

ಪ್ರಧಾನ ಕಾರ್ಯಾಲಯ. ಉಡುಪಿ, ದ. ಭಾರತ

ನಮ್ಮ ಬೇಂಕಿನ

ಬೆಂಗಳೂರು ಶಾಖೆ

ತಾ. 17—7—'58ಕ್ಕೆ ಸೀತಾ ನಿವಾಸ,
181, ಬಳೇಪೇಟೆ, ಬೆಂಗಳೂರು-2
ಈ ವಿಳಾಸದಲ್ಲಿ ತೆರೆಯಲ್ಪಡುವುದು.

The Pangal Nayak Bank Ltd.
ESTD 1920.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H O MANGALORE. Estd 1931.
BRANCHES
Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ದಿವ್ಯ ದರ್ಶನ ದೊರೆಯಲಿಲ್ಲ!

ಶ್ರೀ ಎಸ್. ಸದಾಶಿವರಾವ್.

ಐಸ್ ಕ್ಯಾಂಡೀ, ಐಸ್ ಕ್ಯಾಂಡೀ, ಐಸ್ ಕ್ಯಾಂಡಿ ಯಾರಿಗೆ? ಅರ್ಧಾಣಿಗೊಂದು. ಅರ್ಧಾಣಿಗೊಂದು! ರೋಸ್ ಕಲರ್ ಕ್ಯಾಂಡೀ, ಯಾರಿಗೆ, ಯಾರಿಗೆ? ಎಂದು ಆ ಚಿಕ್ಕ ಹುಡುಗ ಕೂಗುತ್ತ ರಸ್ತೆಯ ನಡುವೆ ನಡೆಯುತ್ತಿದ್ದಾನೆ ಮಟ ಮಟ ಮಧ್ಯಾಹ್ನ ಹನ್ನೆರಡು ಗಂಟೆ. ಇನ್ನೂ ಇಪ್ಪತ್ತೈದು ಕ್ಯಾಂಡಿಗಳು ಮಾರಿ ಹೋಗಿಲ್ಲ. ದಿನದ ದುಡಿತಕ್ಕಾಗಿ ಇನ್ನೂ ಸುಮಾರು ಐವತ್ತು ಕ್ಯಾಂಡಿಗಳನ್ನು ಮಾರಬೇಕಾಗಿದೆ. ಪಟ್ಟಣದ ರಸ್ತೆ ಸುತ್ತಿ ಸುತ್ತಿ ಆತನ ಕಾಲುಗಳು ಬತ್ತಿ ಹೋಗಿವೆ. ಮುಖ ಕಂದಿದೆ. ಬಿಸಿಲಿನ ತಾಪ ತಡೆಯಲಾರದೆ ರಸ್ತೆಯ ಮಗ್ಗುಲ ನೆರಳಲ್ಲಿ ನಡೆಯುತ್ತಿದ್ದಾನೆ.

"ಇನ್ನೂ ಸುಮಾರು ಐವತ್ತು ಕ್ಯಾಂಡಿಗಳು ಮಾರಿ ಹೋಗಬೇಕು. ಹೇಗೆ?" ಹುಡುಗನ ಮನಸ್ಸಿನಲ್ಲಿ ಹೆಚ್ಚೆಚ್ಚಾಗಿ ದುಃಖವು ಮೂಡಿ ಬಂದಿದೆ. ಮನೆಗೆ ಹೋಗ ಬೇಕು. ಹಾಸಿಗೆಯಲ್ಲಿ ಮಲಗಿರುವ ತನ್ನ ತಾಯಿಯನ್ನು ನೋಡಬೇಕು. ಅವಳ ಶುಶ್ರೂಷೆ ಮಾಡಬೇಕು. ಆದರೆ ತನ್ನ ದಿನದ ದುಡಿತವನ್ನು ಗಳಿಸದೆ ಮನೆಗೆ ಹೋದರೇನು? ಹೋಗದಿದ್ದರೇನು? ಆ ದಿನ ಬೆಳಗ್ಗೆಯ ಘಟನೆಯನ್ನು ನೆನೆದಾಕ್ಷಣ ಹುಡುಗನ ಕಣ್ಣೆದುರಲ್ಲಿ ನೀರು ಕೋಡಿಯಾಗಿ ಹರಿಯಿತು.

ಆ ಒಂದು ಘಟನೆಯಲ್ಲದಿದ್ದರೆ ತಾನು ಯಾವಾಗಲೋ ಮನೆ ಸೇರುತ್ತಿದ್ದೆ. ತನ್ನ ತಾಯಿಯ ಶುಶ್ರೂಷೆ ನಡೆಯುತ್ತಿತ್ತು. ಆದರೆ ಆ ನೀಚ ಅಬ್ದುಲ್ ತನ್ನ ಕ್ಯಾಂಡಿಗಳ ಕುರಿತು ಅಪಪ್ರಚಾರ ಮಾಡಿದ ,'ಅವನದು ಸೇಕ್ರೀನ್ ಹಾಕಿದ ಕ್ಯಾಂಡಿ. ನನ್ನದು. ತಾಜಾ ಸಕ್ಕರೆಯ ಕ್ಯಾಂಡಿ" ಎಂದು ಕೂಗಿ ಹೇಳಿದ. ತನ್ನೆಡೆಗೆ ಬಂದ ಗಿರಾಕಿಗಳನ್ನು ಅವನೆಡೆಗೆ ಸೆಳೆದ. ಏನ ನ್ಯಾಯ? ಎಂದು ಯೋಚಿಸುತ್ತಿದ್ದಾನೆ. ತಾನು ಸುಮಾರು ಎರಡು ಘಂಟೆಗಳ ವರೆಗೆ ಆ ಶಾಲೆಯ ಎದುರು ವಿರಾಮ ಸಮಯಕ್ಕಾಗಿ ಕಾದು ಕೊನೆಗೆ ಆದುದೇನು? ಅದಕ್ಕಿಂತ ರಸ್ತೆಯಲ್ಲಿ ಇದೇ ರೀತಿ ತಿರುಗಿದ್ದರೆ ಅದಕ್ಕಿಂತ ಹೆಚ್ಚಿನ ಉಪಯೋಗವಿತ್ತು. ಹುಡುಗನು ಆ ದಿನದ ಪೂರ್ವ ಘಟನೆಗಳನ್ನು ಮೆಲುಕು ಹಾಕುತ್ತಾ ಮುನ್ನಡಿಯಿಡುತ್ತಿದ್ದಾನೆ. ಐಸ್ ಕ್ಯಾಂಡೀ, ಐಸ್ ಕ್ಯಾಂಡೀ" ಎಂದು ಕೂಗುತ್ತಾ.

"ಏ, ಐಸ್ ಕ್ಯಾಂಡೀ, ಇಲ್ಲಿಗೆ ಬಾರೋ!" ಎಂದು ರಸ್ತೆಯ ಬಳಿ ಆಡುತ್ತಿದ್ದ ಕೆಲವು ಪೋಲಿ ಹುಡುಗರ ತಂಡ ಕರೆಯಿತು. ಹುಡುಗ ತೀರ ಉತ್ಸಾಹದಿಂದ ಅಲ್ಲಿಗೆ ಧಾಮಿಸಿದ.ಅವರಲ್ಲೊಬ್ಬ ತೊಣಪ ,'ಇದು ಯಾವ ಕಂಪೆನಿ ಕ್ಯಾಂಡಿ" ಎಂದ. ,'ಪೇರಿಸ್ ಕ್ಯಾಂಡೀ" ಎಂದುತ್ತರವಿತ್ತ ಹುಡುಗ. "ಓಹೋ ಪೇರಿಸ್ ಕ್ಯಾಂಡಿಯೇ. ಬೇಡ ಬೇಡ. ನಮಗೆ ಸ್ಪೆಶಲ್ ಕೋಲ್ಡ್ ಕ್ಯಾಂಡಿ ಬೇಕು" ಎಂದು ವ್ಯಂಗ್ಯವಾಗಿ ಆಕ್ಷೇಪಣೆ ಉತ್ತರವಿತ್ತ. ನಕ್ಕ. ಹುಡುಗರಿಗೆ ಮೋಜು. ಕ್ಯಾಂಡಿಯ ಹೆಸರು ಕೇಳಿ ಬೇರೆ ಕಂಪೆನಿಯದು ಇದೆಯೇ ಎಂದು ಕೇಳುವುದು ಅವರ ಕ್ರಮ. ಹುಡುಗ ತೀರ ಕುಗ್ಗಿ ಹೋದ. ಆತನ ಆಶೆ ನಿರಾಶೆಯಾಯಿತು.

ಬೇಡದ ಮನಸ್ಸಿನಿಂದ ಮುಂದೆ ಸಾಗುತ್ತಿದ್ದ ಹುಡುಗ. ಮನಸ್ಸಿನಲ್ಲಿ ಕಳವಳ ತಾಯಿಯನ್ನು ಕಾಣಬೇಕೆಂಬ ಹಂಬಲ ಜೋರಾಯಿತು. ಮಧ್ಯಾಹ್ನ ಹೊತ್ತು. ಹೊಟ್ಟೆ ಹಸಿವೆ ಬೇರೆ ಬಾಧಿಸುತ್ತಿದೆ. ಮುಂದೆ ನಡೆದ. ದೂರದಲ್ಲಿ ಶಾಲೆಗೆ ಹೋಗುವ ವಿದ್ಯಾರ್ಥಿಗಳ ತಂಡ ಒಂದು ಬಂತು. ಈತನನ್ನು ಕಂಡು ಮೋಜು ಮಾಡಬೇಕೆಂದೆನಿಸಿತೋ? ಏನೋ! ಹುಡುಗನು ಸಮೀಪವಾದಾಗ "ಏ ಕ್ಯಾಂಡೀ, ನೆಹರೂ ಮೈದಾನಿನಲ್ಲಿ ಈ ದಿನ ಕ್ರಿಕೆಟ್ ಮೇಚಿದೆ. ನೋಡುವುದಿಲ್ಲವೋ?" ಎಂದು ಪ್ರಶ್ನಿಸಿದ. ಹುಡುಗನ ಮನಸ್ಸಿನಲ್ಲಿ ಒಂದು ಆಶಾ ಕಿರಣ ಬೆಳಗಿತು. ತುಂಬಾ ಸಂತೋಷದಿಂದ ಆಕಡೆಗೆ ಓಡಿದ. ಸುಮಾರು ಅರ್ಧ ಮೈಲುಗಳ ದಾರಿ. ಶಕ್ತಿಯನ್ನು ತಂದುಕೊಂಡು ಓಟಕಿತ್ತ. ನೆಹರು ಮೈದಾನು ಸಮೀಪಿಸುತ್ತಿದೆ ಎನ್ನುವಷ್ಟರಲ್ಲೇ ಆತನ ಹೃದಯ ಜೋರಾಗಿ ಬಡಿಯತೊಡಗಿತು. ಸಂತೋಷ ಉಕ್ಕಿ ಬಂದಂತಾಯಿತು. ಜನರ ಕೂಗಿನ ಸ್ವರ ಕೇಳಿಸಿದಂತಾಯಿತು. ತೀರ ಗಟ್ಟಿಯಾದ ಸ್ವರದಿಂದ' ಐಸ್ ಕ್ಯಾಂಡೀ, ಪೇರಿಸ್ ಕ್ಯಾಂಡೀ" ಎಂದು ಗಟ್ಟಿಯಾಗಿ ಕೂಗಿದ. ಏರು ರಸ್ತೆಯ ತುದಿ ತಲುಪಿದಾಕ್ಷಣ ಹುಡುಗನ ಉತ್ಸಾಹಕ್ಕೆ, ಆತನ ಓಟಕ್ಕೆ, ಆ ಕೂಗಿಗೆ ಒಂದೇ ಸಲ ಕಡಿವಾಣ ಹಾಕಿ ಎಳೆದಂತಾಯಿತು. ನೆಹರು ಮೈದಾನು ನಿಸ್ತಬ್ಧವಾಗಿತ್ತು.

ಹುಡುಗನಿಗೆ ಮರುಳ ಬಂತು, ಜೆನ್ನಾಗಿ ಬಿಕ್ಕಿ ಬಿಕ್ಕಿ ಅಳಹತ್ತಿದ. ಇಪ್ಪರ ತನಕ ಮಾರಿದ ಕ್ಯಾಂಡಿಗಳು ಇಪ್ಪತ್ತೈದಕ್ಕಿಂತ ಕಮ್ಮಿ. ಇದಕ್ಕೆ ದೊರೆಯುವ ಕಮಿಶನು ಎರಡಾಣೆಯಷ್ಟಾಗಬಹುದು. ಇದನ್ನು ಮನೆಗೆ ತೆಗೆದುಕೊಂಡು ಹೋಗಿ ಏನು ಮಾಡುವುದು? ತಾಯಿಯ ಚಿಕಿತ್ಸೆಗೆ ಉಪಯೋಗಿಸುವುದೇ? ಆ ದಿನದ ಊಟಕ್ಕೆ ಅಕ್ಕಿ ತೆಗೆದುಕೊಳ್ಳುವುದೇ? ತನ್ನ ತಾಯಿಯು ತನ್ನನ್ನು ಎಷ್ಟು ಕನವರಿಸುತ್ತಿರುವಳೋ? ಬೆಳಗ್ಗೆ ನಿನ್ನೆಯ ಶಂಗಳನ್ನವನ್ನು ಒಂದಿಷ್ಟು ಉಂಡು ಕ್ಯಾಂಡಿ ಮಾರಲು ಹೊರಟಾಗ ಅಂದ ಆ ಮಾತು "ಮಗೂ, ನಾಣೀ, ಆದಷ್ಟು ಬೇಗ ಕ್ಯಾಂಡಿ ಮಾರಿ ಮಧ್ಯಾಹ್ನದೊಳಗೆ ಬಾ ಮಗೂ. ಇಲ್ಲಿ ನನಗೆ ಗಂಜಿ ಮಾಡಿ ಹಾಕುವವರಿಲ್ಲ. ಬಾಯಾರಿಕೆ ಯಾದಾಗ ನೀರು ತರಲು ಶಕ್ತಿಯಿಲ್ಲ, ಬೇಗ ಬಾ ಮಗೂ" ಎಂದು ಕೆಮ್ಮುತ್ತಾ ಹೇಳಿದಾಗ ತಾನಿತ್ತ ಅಭಯ "ಆದಷ್ಟು ಬೇಗನೇ ಬರುತ್ತೇನೆ ಅಮ್ಮಾ" ಎಂದು "ಆ ಅಬ್ದುಲ್ಲನು ತನ್ನ ಗಿರಾಕಿಗಳನ್ನು ಸೆಳೆಯದಿದ್ದಲ್ಲಿ ತನ್ನ ದಿನದ ದುಡಿತ ಎಂದೋ ಆಗಿಹೋಗುತಿತ್ತು. ಈ ಹೊತ್ತಿಗೆ ತಾನು ತನ್ನ ತಾಯಿಯ ಬಳಿಯಲ್ಲಿ ಅವಳ ಶುಶ್ರೂಷೆ ಮಾಡುತ್ತಿದ್ದೆ. ಆದರೆ ಈಗ ಈ ಮೈದಾನಿನ ಮರದ ಅಡಿಯಲ್ಲಿ ಕುಳಿತಿರುವೆ!" ಆತನ ಪೂರ್ವಸ್ಥಿತಿಯನ್ನು ನೆನೆದಾಕ್ಷಣ ಹುಡುಗನಿಗೆ ದುಃಖ ಉಕ್ಕಿ ಬಂತು.

ತಾನು ಯಾವ ಸ್ಥಿತಿಯಲ್ಲಿದ್ದೆ, ತಾನು ಕಳೆದ ಆ ಬಾಲ್ಯದ ದಿನಗಳು ಎಷ್ಟು ಸುಖದವುಗಳು. ತಂದೆಯು ದಿನಾದುಡಿದು ತರುತ್ತಿದ್ದ ಹಣದಲ್ಲಿ ಮೂವರ ಸಂಸಾರ ನಿರ್ವಿಘ್ನವಾಗಿ ಸಾಗುತಿತ್ತು. ಆಗ ಎಷ್ಟು ಸಂತೋಷ, ಎಷ್ಟು ನಗೆ ಆತನ ಮುಖದಲ್ಲಿ! ಶಾಲೆಗೆ ಹೋಗಿ ಬರುವಾಗ ತಾಯಿಯು ಕೊಡುತ್ತಿದ್ದ ತಿಂಡಿ, ಅಡುತ್ತಿದ್ದ ಮುದ್ದು ಮಾತುಗಳು. ತಂದೆ ತನ್ನನ್ನು ರಾತ್ರಿ ತೊಡೆಯಲ್ಲಿರಿಸಿಕೊಂಡು ಆಡಿದ ಆ ಮಾತುಗಳು ಇನ್ನೂ ಆತನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿವೆ. "ಮಗೂ ನಾಣೀ, ನೀನು ಕಲಿತು ಜಾಣನಾಗಬೇಕಪ್ಪ. ಕಲಿತು ದೊಡ್ಡವನಾಗಿ ಸುಖದ ಬಾಳ್ವೆ ಮಾಡಬೇಕಪ್ಪ. ಒಂದು ನೌಕರಿಯನ್ನು ಗಳಿಸಿ ನನ್ನ ಮುದಿತನದಲ್ಲಿ ನನ್ನನ್ನು ಸಾಕಬೇಕಪ್ಪ. ತರಗತಿಯಲ್ಲಿ ಜಾಣನಾಗು. ಪೋಲಿಗಳ ಸಹವಾಸ ಮಾಡಬೇಡ" ಎಂದು ಹೇಳಿದ ಆ ಮಾತುಗಳು! ಆದರೆ ತನಗೆ ಆತನ ಋಣ ತೀರಿಸುವ ಯೋಗ ಇಲ್ಲದಾಯಿತು. ತಂದೆ ನಡು ಪ್ರಾಯದಲ್ಲೇ ಗಿರಣಿಯ ವಿದ್ಯುತ್ ಪ್ರವಾಹಕ್ಕೆ ಸಿಲುಕಿ ಮರಣಹೊಂದಿದ. ಆ ಘಟನೆಯೇ ತನ್ನನ್ನು ಈ ಸ್ಥಿತಿಗೆ ತಂದಿದೆ. ಅನಂತರದ ದಿನಗಳು ಬಹಳ ಕಷ್ಟದವು. ತಾಯಿ ಊರವರ ಮನೆಯಲ್ಲಿ ದುಡಿದು ದುಡಿದು ತನ್ನನ್ನು ಸಾಕುತಿದ್ದಳು. ಶಾಲೆಗೆ ತಪ್ಪದೆ ಕಳುಹಿಸುತ್ತಿದ್ದಳು. ನಾನು ನಿಶ್ಚಿಂತೆಯಿಂದ ಕಾಲಕಳೆಯುತ್ತಿದ್ದೆ. ತಂದೆಯ ಮರಣವು ತನ್ನ ಮನಸ್ಸಿಗೆ ಆ ಸಮಯ ವಿಶೇ

(೧೦ನೇ ಪುಟ ನೋಡಿರಿ)

"ಸ್ಕೋಟಿಶ್ ಪೈಪ್ ಬ್ಯಾಂಡ್ಸ್ ಎಸೋಸಿಯೇಶನ್"ನ "ವರ್ಲ್ಡ್ ಚಾಂಪಿಯನ್‌ಶಿಪ್"ಗಾಗಿ ಜೂನ್ ತಿಂಗಳಂದು ಭಾಗವಹಿಸಲು ಲಂಡನ್ನಿಗೆ ಬಂದ ನ್ಯೂಜಿಲೇಂಡಿನ ಉನ್ನತಪಟ್ಟದ ಕೊಳಲುಗಾರರನ್ನು ಚಿತ್ರದಲ್ಲಿ ಕಾಣಬಹುದು.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರಮ ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಲಿ

ಝೂಂಡು
ಬಾಲಶೂಲಾರ್ಕ

ಉಪಯೋಗಿಸುವುದರಿಂದ
ಮಕ್ಕಳ ಉದರ ದೋಷಗಳೆಲ್ಲಾ
ಖಾತ್ರಿಯಾಗಿ ಗುಣಹೊಂದುವುದು.

ಝೂಂಡು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್,

ಪೋಸ್ಟ್ ಬಾಕ್ಸ್ ನಂಬ್ರ 7015, ಬೊಂಬಾಯಿ.

ಮದ್ರಾಸ್ ಸ್ಟೇಟಿನಲ್ಲೆಲ್ಲಾ ಸ್ವಾಕಿಸ್ಟರಿರುವರು.

ಉತ್ತಮ ಸಾಹಿತ್ಯದ ನಿರ್ಮಾಣ ಹೇತು—

ಗುರುದೇವರ ಋಷಿತುಲ್ಯ ಜೀವನ ಶಕ್ತಿ

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ.

ರವೀಂದ್ರನಾಥ ಟಾಗೋರರು ಮಹಾಕವಿಗಳ ಸಾಲಿನಲ್ಲಿ ಬರುವವರಾದರೂ ಅವರು "ಗುರುದೇವ" ಎಂಬ ನಾಮಧೇಯದಿಂದ ಸುಪ್ರಸಿದ್ಧರಾಗಿದ್ದಾರೆ. ಅವರೆ ಬ್ಬ ಮಹಾಕವಿಯಾಗಿದ್ದರೂ ಶಿಕ್ಷಣದ ವಿಷಯದಲ್ಲಿ ಅತ್ಯಂತಾಸಕ್ತರಾದುದರಿಂದಲೇ ಅವರಿಗೆ ಈ ಹೆಸರು ಬಂದುಮುಂದೆ ವಿಶ್ವಭಾರತಿಯ ರೂಪವನ್ನು ತಳೆದ ಅವರು ಮೊದಲಿಗೆ ಸ್ಥಾಪಿಸಿದ್ದ ಶಾಂತಿನಿಕೇತನವೊಂದು ಶೈಕ್ಷಣಿಕ ಸಂಸ್ಥೆಯಾಗಿದ್ದು, ಅಲ್ಲಿನ ವಾತಾವರಣವೆಲ್ಲ ಋಷಿ ಮುನಿಗಳ ಪ್ರಾಚೀನ ಪದ್ಧತಿಯ ಭವ್ಯಾದರ್ಶಗಳನ್ನು ಅಲ್ಪಸ್ವಲ್ಪ ಹೋಲುತಿತ್ತು. ರವೀಂದ್ರನಾಥ ಟಾಗೋರರಾ ಅವರ ಶಿರಸ್ಸಿನಲ್ಲಿನ ಉದ್ದವಾದ ಕೂದಲು, ಮುಖದಲ್ಲಿನ ಉದ್ದನೆಯ ಗಡ್ಡ ಹಾಗೂ ಮೀಸೆಗಳು ಮತ್ತು ವಿಶ್ವಭಾರತಿಯ ಪ್ರಶಾಂತ ವಾತಾವರಣದ ವಾಸ ಹಾಗೂ ಅಲ್ಲಿ ವಿದ್ಯಾದಾನ ಪದ್ಧತಿಗಳಿಂದಾಗಿ ಪುರಾತನ ಋಷಿ ಮಹರ್ಷಿಗಳೊಂದಿಗೆ ಅವರನ್ನು ತುಲನೆಮಾಡುವುದು ಯೋಗ್ಯವೆಂದು ಕೆಲವರನ್ನುತ್ತಾರೆ. ಆದರೆ, ನಿಜವಾಗಿಯೂ ಅವರನ್ನು ಹೀಗೆ ಹೋಲಿಸುವುದು ಅಪಾರ್ಥವೆನಿಸುವುದು. ರವೀಂದ್ರರ ಸೌಂದರ್ಯಸಹಿತವಾದ ನೇವರಿಸಲ್ಪಟ್ಟ ಕೂದಲುಗಳು ಋಷಿಗಳ ಜಟಾಜೂಟಕ್ಕೆ ಸಮಜೋಡಿಯಲ್ಲ; ಹಾಗೆಯೇ ಗುರುದೇವರ ಸಂವರಿಸಿದ ಗಡ್ಡ ಮೀಸೆಗಳು ಮುನಿಗಳ ಕ್ರಿಮಿಕೀಟಗಳಿಂದ ಕೂಡಿದವುಗಳಿಗೆ ಸರಿಯಾಗುವುದಾದರೂ ಹೇಗೆ? ಅವರ ವೇಷ ಭೂಷಣಗಳೂ ಆ ಕಾಲದ ಋಷಿವರ್ಯರಿಂದ ವ್ಯತಿರಿಕ್ತವಾಗುತಿತ್ತು. ಬಹಳ ಬೆಲೆಬಾಳುವ ಬಟ್ಟೆಗಳನ್ನವರು ತೊಡುತಿದ್ದರು. ಅವರು ಶಿಕ್ಷಕರೂ ಆಗಿದ್ದರೆಂಬುದು ನಿಸ್ಸಂದೇಹ. ಆದರೂ ಮೂಲತಃ ಅವರು ಕವಿಗಳು, ಗಾಯಕರು ಹಾಗೂ ನಟರು. ಶಾಂತಿನಿಕೇತನ, ವಿಶ್ವಭಾರತಿಗಳು ಮುನ್ಯಾಶ್ರಮಗಳನ್ನು ಸ್ವಲ್ಪಮಟ್ಟಿಗೆ ಹೋಲುವುದು ನಿಜ; ಆದರೆ ಅಲ್ಲಿ ತಪಸ್ಸಿನ ವಾತಾವರಣವಿದ್ದರೆ, ಇಲ್ಲಿ ಕಲಾವರಣವು ಕಂಗೊಳಿಸುತ್ತದೆ. ಇಲ್ಲಿನ ವಿದ್ಯಾರ್ಥಿಗಳ ಆಕೃತಿ ಹಾಗೂ ವೇಷಭೂಷಣಗಳೂ ಹಿಂದಿನ ಆಶ್ರಮವಾಸಿಗಳ ವಿದ್ಯಾರ್ಥಿಗಳ ಹಾಗೂ ಬ್ರಹ್ಮಚಾರಿಗಳದ್ದಾಗಿಲ್ಲ. ಆದರೆ, ಇವರ ಆಕಾರ, ವೇಷಭೂಷಣಗಳಲ್ಲಿ ಮುಖ್ಯವಾಗಿ ಕಲಾರಾಧನೆಯು ಕಂಡುಬರುತ್ತದೆ. ರವೀಂದ್ರನಾಥ ಟಾಗೋರರ ಸ್ವರೂಪ, ಅವರ ಉಡುಗೆ ತೊಡುಗೆ, ಅವರ ಕವಿತೆ, ಅವರ ಗಾಯನ ಹಾಗೂ ನಾಟಕಾಭಿನಯಗಳಿಂದ ಪ್ರಾಚೀನ ಕಾಲದ ಯಾವನೋ ಒಬ್ಬ ಮಹಾನ್ ಗಂಧರ್ವ, ಕಿನ್ನರ ಇಲ್ಲವೇ ವಿದ್ಯಾಧರನೊಂದಿಗೆ ಅವರನ್ನು ಹೋಲಿಸಬಹುದು. ಹಾಗೆಯೇ ಇವರ ಶಾಂತಿನಿಕೇತನವನ್ನು ಶಿಕ್ಷಣವೂ ದೊರೆಯುತಿದ್ದ ಗಂಧರ್ವ ಕಿನ್ನರ ವಿದ್ಯಾಧರರ ಒಂದು ರಂಗ ಶಾಲೆಗೆ ಸರಿ ಎನ್ನಬಹುದು.

ರವೀಂದ್ರರ ಭವ್ಯ ಹಾಗೂ ದಿವ್ಯ ಶರೀರರೂಪವು ಬೇರೆಲ್ಲಿಯೂ ನೋಡಸಿಗುವಂತಿರಲಿಲ್ಲ. ಎತ್ತರವಾದ ತುಂಬಿದ ಶರೀರ, ಅಚ್ಚ ಬಿಳಿವರ್ಣ ಅವರದು. ಅವರ ಮುಖದಲ್ಲಿ ಅತ್ಯಂತಾಕರ್ಷಕವಾದ ಕಮಲದಳ ನೇತ್ರ, ಕೂದಲುಗಳ ಬೆಳುಬೆಳು ವೃದ್ಧಾವಸ್ಥೆಯ ದ್ಯೋತಕವಾಗಿತ್ತು. ಮುದುಕು ಸೌಂದರ್ಯವನ್ನು ನಾಶಮಾಡುತ್ತದೆ. ಎನ್ನುತ್ತಾರೆ. ಆದರೆ, ಕವೀಂದ್ರ ರವೀಂದ್ರರ ಶ್ವೇತಕೇಶಗಳು ಅವರ ವಾಸ್ತವಿಕ ಸೌಂದರ್ಯವನ್ನು ಮತ್ತಷ್ಟು ಪುಷ್ಟಿಸಿದ್ದುವು. ಅವರ ತಲೆಯ ಮೇಲಿದ್ದ ಅತಿ ಉದ್ದನೆಯ ಕೂದಲುಗಳೂ ಎದೆಮುಟ್ಟುವ ವರೆಗೂ ಬಳೆದ ಗಡ್ಡ ಮೀಸೆಗಳೂ ರವೀಂದ್ರರ ಸೌಂದರ್ಯಕ್ಕೆ ಮಹಾನ್ ಭವ್ಯತೆಯನ್ನೂ ತಂದಿದ್ದವು ಅವರ ಮಾತುಗಳು ಬಹಳ ಮಧುರವಾಗಿದ್ದುವು; ಕೇವಲ ಕವಿತೆಗಳನ್ನು ಹಾಡುವ ವೇಳೆಯಲ್ಲಿ ಮಾತ್ರವಲ್ಲ ಸಾಮಾನ್ಯ ಮಾತುಕತೆ ನಡೆಯುವಾಗಲೂ ಅತ್ಯಂತ ಮೃದು ಮಧುರ ಭಾಷಿಯಾಗಿರುತಿದ್ದರವರು.

ಕವೀಂದ್ರ ರವೀಂದ್ರರ ಪ್ರತಿಭೆ ಸರ್ವತೋಮುಖವಾಗಿತ್ತು. ಅವರು ಕವಿತೆಗಳನ್ನು ಮಾಡಿದ್ದರು, ಕಥೆಗಳನ್ನು ಬರೆದಿದ್ದರು, ನಾಟಕಗಳನ್ನು ನಿರ್ಮಿಸಿದ್ದರು, ಉಪನ್ಯಾಸಗಳನ್ನು ರಚಿಸಿದ್ದರು; ಅಲ್ಲದೇ ನಿಬಂಧಗಳನ್ನು ಲಿಖಿಸಿದ್ದರು. ಆದರೆ, ಅವರ ಸಾಹಿತ್ಯದ ಪೂರ್ಣ ವಿಕಾಸವು ಕವಿತೆ ಮತ್ತು ಕಥೆಗಳ ಮಾಧ್ಯಮದಿಂದಾಯಿತು. ಅವರ ಸಾಹಿತ್ಯದಲ್ಲಿ ಎಷ್ಟು ವಿಧಗಳಿವೆ! ವ್ಯಾಯಾಮವೇನೇ ಒಬ್ಬ ಸುಪ್ರಸಿದ್ಧ ಲೇಖನ ಪ್ರಜ್ಞಾರಕಾರ್ಯ ಅಷ್ಟು ರೂಪದಲ್ಲಿರಲಾರದು. ರವಿ ಬಾಬುಗಳ ಸಾಹಿತ್ಯ ಯಾವುದೇ ಒಂದು ಕಾಲದ, ಒಂದು ದೇಶದ ಸಾಹಿತ್ಯವಲ್ಲ, ಅದು ಸಮಸ್ತ ವಿಶ್ವದ ಸರ್ವದೇಶದ ಸಾಹಿತ್ಯವಾಗಿದೆ. ಅವರ ಸಾಹಿತ್ಯದಲ್ಲಿ ದೇಶ ಕಾಲಗಳ ಪ್ರಭಾವ ಬಿದ್ದಿಲ್ಲವೆಂದಿದರ ಅರ್ಥವಲ್ಲ; ಹೀಗೆ ಬೀಳದಿರುವುದೂ ಅಸಂಭವವೇ ಸರಿ. ಆದರೂ ಭಾರತೀಯವಾಗಿದ್ದರೂ ಅದು ಪ್ರಪಂಚದ ಮಾನವತೆಯ ಸಂಬಂಧವನ್ನಿಟ್ಟುಕೊಳ್ಳುತ್ತದೆ. ಕರಿ ಜನರಿಂದ ಪ್ರಭಾವಿತವಾಗಿದ್ದರೂ ಚಿರಸಮನ್ವಯಾಂಬಂಧೀ ಸಂಕೇತಗಳನ್ನು ಕೊಡುತ್ತದೆ. ತೃಷಾಭರಿತ ಮಾನವತೆಗೆ ರವೀಂದ್ರರ ಸಾಹಿತ್ಯವು ಉಪ್ಪು ಸಮುದ್ರದಂತಿರದೆ ಕ್ಷೀರ ಸಾಗರದಂತೆ ತೋರಿಬರುತ್ತದೆ. ಮಾನವರ ದುಃಖ ನಿವಾರಣಾರ್ಥವಾಗಿ ಟಾಗೋರರು ಸಮಾಜದ ಬಗ್ಗೆ ಒಂದು ಕಟುವಾದ ತೀಕ್ಷ್ಣವಾದ ಆಲೋಚನೆ ಮಾಡಿ ಸಾಹಿತ್ಯದಲ್ಲಿ ಅವರ ವ್ಯಾಖ್ಯಾನ ಬರೆಯದೆಯಿಲ್ಲ ಆದರೆ, ಮಾನವರ ನಿರ್ಬಲತೆಗಳನ್ನು ಅತ್ಯಂತ ಸಹಾನುಭೂತಿಪೂರ್ವಕ ನೋಡಿ ಕಲಾತ್ಮಕ ವಿಧಾನ ಮತ್ತು ರಸಸ್ರೋತಗಳನ್ನು ಹರಿಯುತ್ತ ಅವರು ನುಡಿಯುತ್ತಾರೆ. ಮಾನವರ ಸಾಮಾಜಿಕ ಬಂಧನಗಳಿಂದ ಸೆರೆಸಿಗದ ದೇವದೂತನ ಅಮೃತ ವಚನಗಳಂತೆ ಇವರ ಕಥನವಿರುವುದು. ಆದರೆ, ದೇವದೂತರಿಗೂ ಇವರಿಗೂ ಸ್ವಲ್ಪ ಅಂತರವಿದೆ. ರವಿ ಬಾಬುಗಳು ನಿಸ್ಪೃಹರು, ಸದಾ ನಿಷ್ಪಕ್ಷಪಾತಿಗಳು, ಲಾಗವ ರಹಿತರು. ಅಳವಾದ ಸಮುದ್ರದ ಅಡಿಗೆ ಮುಳುಗಿ ಮುತ್ತನ್ನು ಪಡೆಯುತ್ತಾರೆ. ರವೀಂದ್ರರು ಮಾನವ ಸಮಾಜರೂಪೀ ಸಮುದ್ರತಾಳದಲ್ಲಿ ಮುಳುಗಿ ತಮ್ಮ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ತಾವು ಹೆಕ್ಕಿತಂದ ಸುಂದರ ಮುಕ್ತಾ ಫಲಗಳನ್ನು ತೊಳೆದು ಜೊಕ್ಕವಾಗಿಸಿ, ಒಪ್ಪಗೊಟ್ಟು ಕಣೆದು ಹಾರವನ್ನಾಗಿ ಮಾಡಿದ್ದಾರೆ. ಅದು ಸರಸ್ವತೀ ಕಂಠಾ ಭೂಷಣವಾಗಿದೆ. ಅವರ ಸಾಹಿತ್ಯದಲ್ಲಿ ಸಣ್ಣ ಶರೀರಿಗಳಾಗಿದ್ದರೂ ತಮ್ಮ ಮನೋಸ್ಥಿತಿಗಳಿಂದ ವ್ಯಾಪ್ತ ವಿಶ್ವದ ಸರ್ವಾಪ್ತ ಜ್ಞಾನ ಸಂಪಾದಿಸಿಕೊಂಡಿರುವವರು ತೋರಿಬರುತ್ತಾರೆ. ಮಹಾನ್ ಸಹಿಷ್ಣುತೆ ಹಾಗೂ ಅದ್ಭುತ ಸಹಾನುಭೂತಿ, ಅನುಪಮ ವ್ಯಾಪಕತೆಗಳೇ ರವಿ ಬಾಬುಗಳ ಸಾಹಿತ್ಯದ ವೈಶಿಷ್ಟ್ಯ. ತರ್ಕಗಳಲ್ಲಿಯೇ ಆಶ್ರಯಸಡೆಯದೆ ಶ್ರದ್ಧೆಯನ್ನಾಶ್ರಯಿಸಿರುವುದು ರವೀಂದ್ರರ ಸಾಹಿತ್ಯ. ಈ ಶ್ರದ್ಧೆಯು ಯಾವುದೇ ಅಂಧವಿಶ್ವಾಸವನ್ನವಲಂಬಿಸಿರದೆ, ಅಭಿತ್ಯ ಮತ್ತು ಅಸ್ಥಾಯಿ ವಸ್ತುಗಳಿಗಿಂತ ಹೆಚ್ಚಾಗಿ ನಿತ್ಯ ಮತ್ತು ಸ್ಥಾಯಿ ವಸ್ತುಗಳನ್ನೇ ಹೊಂದಿಕೊಂಡಿದೆ. ವ್ಯಾಪಕತಾ ಆಕಾಶದಲ್ಲಿ ಬೀಸುತ್ತಿರುವ ಅವರ ಸಾಹಿತ್ಯ ಸಮೀರವು ಕ್ಷುದ್ರತೆಯನ್ನು ಕಿತ್ತೆಸೆಯುತ್ತದೆ. ಇವರ ಸಾಹಿತ್ಯದಲ್ಲಿ ಯಾವುದೇ ಒಂದು ಪ್ರಕಾರದ ಕಹಿ, ಅಥವಾ ಹತ ಇಲ್ಲವೇ ವಾದವಿವಾದವಿರುವುದಿಲ್ಲ. ಅವರ ವಾದ ಯಾವುದೋ ವಸ್ತುವಿನ ನಿರ್ಮಾಣಕ್ಕಾಗಿ, ಪ್ರಚಾರಕ್ಕಾಗಿ ಅಲ್ಲ; ಬದಲು, ಮಾನವನನ್ನು ಸರ್ವದೃಷ್ಟಿಯಲ್ಲೂ ಉತ್ತಮ ಮಾನವನನ್ನಾಗಿ ಮಾಡುವುದಕ್ಕೋಸ್ಕರ; ಆತನನ್ನು ಉತ್ತರಿಸುವುದಕ್ಕೋಸ್ಕರ. ಅವರ ಸ್ಥಿರ ಹಾಗೂ ಆಶಾವಾದೀ ಮನಸ್ಸನ್ನು ಮಾನವನ ನಿರ್ಬಲತೆಗಳು ನಿರಾಶೆಯಿಂದ ಕಳಿಸದಿದ್ದುದರಿಂದ, ಆ ವಿಧದ ಸಾಹಿತ್ಯ ನಿರ್ಮಾಣವಾಯಿತು. ಅವರ ಮನಸ್ಸಿನ ಆಶಾವಾದವೆಂಬ ಅರುಣನು ನಿರಾಶೆಯ ಹೊಂಡಗಳನ್ನು ಸದಾ ನಿರ್ವಾಸಗೊಳಿಸಿದನು. ಅವ

(೧೦ನೇ ಪುಟ ನೋಡಿರಿ)



ಬ್ರಿಟಿಷಿನ ರಾಯಲ್ ಮಿಲಿಟರಿ ಸಂಗೀತ ಶಾಲೆಯಲ್ಲಿ ಮಲಯಾ ಸೈನ್ಯದ ವಾದ್ಯಗಾರರು ಒಂದು ವರ್ಷ ತರಬೇತಿಯನ್ನು ಪಡೆದರು. ಈಗ ಈ ಶಾಲೆಯಲ್ಲಿ ಘಾನಾ, ನೈಜೀರಿಯಾ, ಗಾಂಬಿಯ, ಟ್ರಿನಿಡಾಡ್, ಮಲಯ, ಕೆನಿಯಾ, ಉಗಾಂಡ ಮತ್ತು ಟಿಂಗನ್ಯೀಕಗಳ ಸೇನೆಗಳ ವಾದ್ಯಗಾರರು ಅವಶ್ಯಕತೆ ತರಬೇತಿ ಪಡೆಯುತಿದ್ದಾರೆ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕೃಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ವಿಜ್ಞಾನದ ಪ್ರಗತಿ ಪಥಾಕ್ರಮಣ—

ನೀರನ್ನು ಆವಿಯಾಗಲು ಬಿಡದಿರಿ

ಸೂರ್ಯನ ಶಾಖದಿಂದ ನೀರು ಆವಿಯಾಗುವುದರಿಂದಲೇ ತೊಳ, ಕೆರೆ, ಕುಂಟೆ, ಬಾವಿಗಳು ಬತ್ತುತ್ತವೆ. ಸರೋವರ ಮತ್ತು ಜಲಾಶಯಗಳ ನೀರು ಕಮ್ಮಿಯಾಗುತ್ತದೆ. ಈ ಆವಿಯಾಗುವುದನ್ನು, ಅಥವಾ ಬಾಷ್ಪೀಕರಣವನ್ನು ತಡೆಹಿಡಿದರೆ, ಜಲಕ್ಷಾಮ ವಾಗಲಾರದು ಅದರೆ, ನೀರಿನ ನೆಲೆಗಳಿಗೆ ಕೊಡಿಕೆ ಹೊಡಿಸುವುದಾದರೂ ಹೇಗೆ?

ಇಂಥ ಆವಿಯಾಗುವುದರಿಂದ ಕೋಟ್ಯಂತರ ಗೆಲನ್ ನೀರು ನಷ್ಟವಾಗುತ್ತಿದೆ ಅದನ್ನು ಅಲ್ಪ ವೆಚ್ಚ ಬರುವ ಹಚ್ಚಡಗಳನ್ನು ಹೊದೆಯುವುದರಿಂದ ತಡೆಹಿಡಿಯಬಹುದು ಎಂದು ನ್ಯೂಯೋರ್ಕಿನ ಕೊಲಂಬಿಯಾ ವಿಶ್ವವಿದ್ಯಾನಿಲಯದ ರಾಸಾಯನಿಕ ವಿಜ್ಞಾನಿಗಳನ್ನು ತ್ತಾರೆ.

ನೈಋತ್ಯ ಅಮೆರಿಕೆ ಮತ್ತು ಆಸ್ಟ್ರೇಲಿಯಾಗಳ ಜಲಾಶಯಗಳಿಗೆ ನಿರಪಾಯಕಾರಿಯಾದ ಹೆಕ್ಸಾಡೆಕನಾಲ್ ಎಂಬ ರಾಸಾಯನವನ್ನು ಬಳಸುವ ಪ್ರಯೋಗಗಳು ನಡೆದು ಯಶಸ್ವಿಯಾಗಿದೆ. ಇದರ ಬಳಕೆಯಿಂದ ಬಾಷ್ಪೀಕರಣದ ಪ್ರಮಾಣವು ಸೇಕಡಾ ೫೦ರಿಂದ ೬೫ರಷ್ಟು ಕಡಿಮೆಯಾಗಿರುವುದೆಂದು ತಿಳಿದು ಬಂದಿದೆ. ಇಂತಹ ರಸಾಯನವನ್ನು ಜಲಾಶಯಗಳ ಮೇಲೆ ಲೇಪಿಸಿದಾಗ ಗಾಳಿಯನ್ನು ನೀರಿನಿಂದ ದೂರವಿಡಬಲ್ಲ ಕೇವಲ ಒಂದು ಅಣು ದಪ್ಪದ ಪದರು ಉಂಟಾಗುತ್ತದೆ— ಈ ಪದರು ಬಹಳ ತೆಳ್ಳನೆಯದು. ತೂಕ ಮಾಡಿ ನೋಡುವುದಾದರೆ, ಒಂದು ಪೌಂಡನ್ನು ಈ ಪದರು ತೂಗ ಬೇಕಾದರೆ, ಒಂದು ಎಕ್ರೆ ಪ್ರದೇಶದ ನೀರಿನ ಮೇಲುಂಟಾದ ಭಾಷ್ಪೀಕರಣ ಹೊದಿಕೆಯನ್ನು ಒಂದುಗೂಡಿಸ ಬೇಕಾಗುವುದು!

ಜಲಕ್ಷಾಮವಿರುವ ಎಲ್ಲೆಡೆಗಳಲ್ಲಿಯೂ ಇದೇ ಮಾದರಿಯ ಪ್ರಯೋಜನವು ದೊರೆಯುವುದಾದರೆ, ನೀರನ್ನು ಈ ಮೂಲಕ ಸಂಗ್ರಹಿಸಿ ವರ್ಷಕ್ಕೆ ಲಕ್ಷಾಂತರ ಡಾಲರ್ ಉಳಿಸಬಹುದು.

ಎಕರೆಗೊಂದರಂತೆ ಜೋಡಿಸಿದ ತೇಲುವೆ ಮತ್ತು ತೇಲು ಬುರುಡೆಗಳ ಮೇಲೆ ಹಾಕಿದ ನಾನಾ ಆಕಾರದ ಈ ರಾಸಾಯನಿಕ ಪದಾರ್ಥದ ಗುಳಿಗೆಗಳ ಪರದೆಯಿಂದ ಸಂತಕವಾದ ರಾಸಾಯನಿಕ ಹೊದಿಕೆಯನ್ನು ಒದಗಿಸುವ ಕುರಿತಾಗಿ ಆಸ್ಟ್ರೇಲಿಯಾದ ಯೋಜನೆಯೊಂದರಲ್ಲಿ ಪ್ರಯೋಗಗಳನ್ನು ನಡೆಸಲಾಗುತ್ತಿದೆ.

ಬಾಷ್ಪೀಕರಣ ನಿರೋಧಕ ಏಕಪದರಗಳನ್ನು ವ್ಯಾಪಕ ಪ್ರಮಾಣದಲ್ಲಿ ಬಳಕೆಗೆ ತರಲು ಈಗ ಇರುವ ಅತಂಕವು ವ್ಯಾವಹಾರಿಕವಾದುದು. ಹೆಕ್ಸಾಡೆಕನಾಲ್ ಹೊಳೆಯು ಪರಿಣಾಮಕಾರಿಯಾಗಬೇಕಾದರೆ, ಅದು ದಡದಿಂದ ದಡಕ್ಕೆ ಏರಬೇಕು. ಆದುದರಿಂದ ದೂಳು ಅಥವಾ ಗಾಳಿಯಿಂದ ರಾಸಾಯನಿಕ ತೆರೆಗೆ ಧಕ್ಕೆ ಬಾರದ ರೀತಿಯಲ್ಲಿ ಪುನಃಪುನಃ ರಸಾಯನವನ್ನು ಲೇಪಿಸುವ ಮಾರ್ಗ ಶೋಧನೆಯ ಪ್ರಶ್ನೆ ಅತಂಕವಾಗಿರುವ ದೊಡ್ಡ ಸವಸ್ಯೆಗಳಲ್ಲಿ ಒಂದು ವೇಗವಾಗಿ ಹರಿಯುವ ಪ್ರವಾಹಗಳುಳ್ಳ ನದಿಗಳೂ ಹಳ್ಳಗಳೂ ಏಕ ಪದರವನ್ನು ಛಿದ್ರಿಸಿ ನಿಷ್ಪ್ರಯೋಜಕವನ್ನಾಗಿ ಮಾಡುತ್ತದೆ.

ನೋಬೆಲ್ ಪಾರಿತೋಷಕ ವಿಜೇತರಾದ ದಿವಂಗತ ಡಾ. ಇರ್ವಿಂಗ್‌ರ ಸಂಶೋಧನೆಗಳಿಂದ ಆಸಕ್ತರಾಗಿ ಅಕ್ಷಯವರೇ ಅದ ಡಾ. ಉಮೆರ್ ಈ ಕೆಲಸಕ್ಕೆ ಕೈ ಹಾಕಿದರು ಈಗ ಇವರೂ ಇವರ ಶಿಷ್ಯರಾದ ರಾಬರ್ಟ್ ಆರ್ಚರ್ ಮತ್ತು ಹೆನ್ರಿ ರೊಸಾನಾರು ಈ ಕೆಲಸಗಳನ್ನು ಮುಂದೊತ್ತುತಿದ್ದಾರೆ. ರಾಸಾಯನಿಕ ಸವರದ ಪರಿಣಾಮಕ್ಕೆ ಅಶುದ್ಧ ವಸ್ತುಗಳು ಬಹುದೊಡ್ಡ ಅತಂಕಕಾರಿಗಳಾದುದರಿಂದ ತಮ್ಮ ಏಕಪದರವು ಉಪಯುಕ್ತವಾಗಬೇಕಾದರೆ, ಅದಕ್ಕೆ "ಸ್ವಯಂಗುಣಕಾರಿ" ಚೇತನವಿರಲೇಬೇಕೆಂದು ಅವರು ನಿರ್ಧರಿಸಿದ್ದಾರೆ

ಹೆಕ್ಸಾಡೆಕನಾಲ್ ಒಂದೇ ಇಂತಹ ಸ್ವಯಂಗುಣಕಾರಿ ಲಕ್ಷಣವಿರುವ ರಾಸಾಯನಿಕ ವಸ್ತು. ಇದರ ಉಪಯೋಗದಿಂದ ನೀರು ಆವಿಯಾಗುವುದನ್ನು ತಡೆಗಟ್ಟಬಹುದು ಎಂದವರ ಅಭಿಪ್ರಾಯ.

ಅರ್ಬುದ ರೋಗ ನಿವಾರಣೆ—

ಸುಪಾರಿಯು ಅರ್ಬುದವನ್ನು ತಡೆಯಬಲ್ಲುದು!

ಪ್ರಪಂಚದ ಎಲ್ಲೆಡೆಯ ಜನರನ್ನೂ ತನ್ನ ಬಂದನದಲ್ಲಿಟ್ಟುಕೊಂಡಿರುವ, ಎಲ್ಲರ ಮೇಲೂ ಮಂಕು ಬೂದಿಯೆರಚಿ ತನ್ನತ್ತ ಆಕರ್ಷಿಸುತ್ತಿರುವ ನಿರ್ಜೀವ ವಸ್ತುವೆಂದರೆ, ಕೂಗೆನೊಪ್ಪು! ವಿಶ್ವದ ಮೂಲೆಮೂಲೆಯಲ್ಲಿಯೂ ಇದು ಒಂದಲ್ಲ ಒಂದು ವಿಧಾನದಿಂದ ಉಪಯೋಗಿಸಲ್ಪಡುತ್ತದೆ. ಹಾಗೆಯೇ ತಂಬಾಕಿನ ಸೇವನೆಯಿಂದಾಗಿ ಮಾನವನು ಅರ್ಬುದ (ಕೇನ್ಸರ್) ರೋಗಕ್ಕೆ ತುತ್ತಾಗುತ್ತಾನೆ ಎಂದು ವಿಜ್ಞಾನಿಗಳು ಸಾರಿ ಹೇಳುತ್ತಿದ್ದರು. ಇತ್ತೀಚೆಗೆ ರಶ್ಯ ದೇಶದಲ್ಲಿ ಈ ರೋಗವು ಬಾರದಂತೆ ತಡೆಯುವುದಕ್ಕಾಗಿ ವಿಷರಹಿತವಾದದೂಮ್ರಪತ್ರಗಳನ್ನು ಬೆಳೆಸುವ ಪ್ರಯತ್ನವೂ ನಡೆಯುತ್ತದೆ. ಇಂತಹ ಸಮಯದಲ್ಲಿಭಾರತೀಯ ಪ್ರಖ್ಯಾತ ಕೇನ್ಸರ್ ಸಂಶೋಧಕನೊಬ್ಬನು ವಿಚಿತ್ರವಾದವೊಂದನ್ನು ಜಗತ್ತಿನಮುಂದಿರಿಸಿದ್ದಾನೆ.

ಲಂಡನ್ ನಗರದಲ್ಲಿ ಸಪ್ತಮ ಅಂತಾರಾಷ್ಟ್ರೀಯ ಕೇನ್ಸರ್ ಕಾಂಗ್ರೆಸ್ಸು ಸಭೆ ಸೇರಿತ್ತು. ಈ ಸಭೆಯಲ್ಲಿ ಪ್ರೊ. ವಿ. ಆರ್. ಖಾನೇಲ್ಕರರು ಅಡಿಕೆಯೊಡನೆ ತಂಬಾಕು ಜಗಿದರೆ, ಅದರಿಂದ ಕೇನ್ಸರ್ ಏಳುವುದಿಲ್ಲವೆಂಬ ಅಭಿಪ್ರಾಯವನ್ನು ಮಂಡಿಸಿ ಒಂದು ಬಾರಿ ಎಲ್ಲರನ್ನೂ ದಂಗುಗೊಳಿಸಿದರು ಭಾರತ ಹಿಂದೇಶಿಯಾ, ಹಿಂದೀ ಚೀನ, ಸಯಾಮ, ಫಿಲಿಪ್ಪೈನ್ ಹಾಂಗೂ ಇತರ ದೇಶಗಳಲ್ಲಿ ಕೋಟಿಗಟ್ಟಲೆಯ ಜನರು ಅಡಿಕೆಯೊಂದಿಗೆ ಹೊಗೆಸೊಪ್ಪನ್ನು ಜಗಿಯುತ್ತಾರೆ. ಆದರೆ, ಹೀಗೆ ಜಗಿಯುವವರು ಕೇನ್ಸರ್ ರೋಗದಿಂದ ಮುಕ್ತರಾಗಿದ್ದಾರೆಂದು ಈ ವಿಜ್ಞಾನಿ ತನ್ನ ಸಂಶೋಧನೆಗಳ ಸಹಾಯದಿಂದ ವಾದಿಸುತ್ತಾರೆ ಇನ್ನೂ ಮುಂದುವರಿದು, ಸುಪಾರಿ, ತಿನ್ನುವವರು ತಂಬಾಕನ್ನು ಸೇವಿಸಲಿ ಅಥವಾ ಜಗಿಯಲಿ, ಸುಪಾರಿಯಿಂದಾಗಿ ಅವರ ಮೇಲೆ ತಂಬಾಕು ನಿಷದ ಪರಿಮಾಣವು ಕಡಿಮೆ ಯಾಗುವುದು ಎಂದರು. ತಮ್ಮ ಪ್ರಯೋಗಗಳನ್ನು ವಿವರಿಸುತ್ತ, ಭಾರತದಲ್ಲಿ ಮೂವತ್ತು ಸಾವಿರ ಜನರಿಗಿಂತಲೂ ಹೆಚ್ಚಿನವರು ಅರ್ಬುದ ರೋಗಕ್ಕೆ ಪಕ್ಕಾಗಿದ್ದಾರೆ; ಅವರ ವೈಕ್ತಿಗತ ಅಭ್ಯಾಸಗಳ ಸರ್ವೇಕ್ಷಣಾನಂತರ, ಸುಪಾರಿಯನ್ನು ಈ ದೋಷದಿಂದ ಮುಕ್ತಪಡಿಸಲಾಗಿದೆ ಎಂದರು.

ನಾವು ಅರ್ಬುದ ರೋಗವನ್ನು ನರನಾಡಿಯಿಂದ ದೂರವಿರಿಸಬೇಕಾದರೆ, ಅದರ ಕಾರಣೀಭೂತ ತತ್ವ ಅಥವಾ ಪ್ರತಿನಿಧಿಗಳನ್ನು ದೂರೀಕರಿಸುವ ವಿಧಾನಗಳನ್ನು ಅವಲಂಬಿಸಬೇಕಾಗಿದೆ ನಾವು ಅಭ್ಯಾಸ ವಿಭಿನ್ನ ಜನರ ರೀತಿ ರಿವಾಜುಗಳಿಂದ ಅವರಲ್ಲುಂಟಾದ ಅರ್ಬುದ ರೋಗದ ಕಾರಣವನ್ನು ತಿಳಿದುಕೊಳ್ಳುವುದು ಸಾಧ್ಯ. ಅರ್ಬುದ ರೋಗದಲ್ಲಿಯೂ ನಾನಾ ಪ್ರಕಾರಗಳಿವೆ. ಅದು ಸರಿಗೂ ಅಂಟಿಕೊಳ್ಳುತ್ತದೆ. ಆದುದರಿಂದ, ಅರ್ಬುದದ ರೋಗಿಯ ಜೀವನ ವಿಧಾನದಲ್ಲಿಯೇ ಈ ಮಹಾ ರೋಗದ ಬೀಜವಡಗಿದೆ ಎಂದು ಶ್ರೀ ಖಾನೇಲ್ಕರರು ತಿಳಿಸಿದರು.

ಭಾರತದಲ್ಲಿ ಕಂಠ ಮತ್ತು ಮೂಗಿನ ಅರ್ಬುದ ಅತ್ಯಧಿಕವಾಗಿದ. ಹೆಚ್ಚಿನವರು ತಂಬಾಕನ್ನು ಜಗಿಯುತ್ತಾರೆ, ಇಲ್ಲವೇ ಸೇದುತ್ತಾರಾದರೂ ಅವರ ವಾಸ್ತವಿಕ ಅಭ್ಯಾಸಗಳಲ್ಲಿ ತೀವ್ರ ಭಿನ್ನತೆಯಿದೆ. ಅವುಗಳ ಭಿನ್ನತೆಯಿಂದಲೇ ಜನರು ಮುಖ, ಕಂಠ ಮತ್ತು ಗಲ್ಲಗಳ ಕೇನ್ಸರದಿಂದ ಪೀಡಿತರಾಗುತ್ತಾರೆ ಹಿಂದೇಶಿಯಾದಲ್ಲಿ ಹೊಟ್ಟೆಯ ಕೇನ್ಸರ್ ಅತ್ಯಲ್ಪವಾಗಿದ್ದರೂ ಚೀನದಲ್ಲಿ ಅಧಿಕವಾಗಿದೆ ಚೀನೀಯವರು ತಮಗೆ ದೊರೆಯುವುದನ್ನು ತಿನ್ನುವವರು ಇಷ್ಟು ಮಾತ್ರ ಅವರಿಗೂ ಹಿಂದೇಶಿಯಾದವರಿಗೂ ಇರುವ ಅಂತರ. ಶರೀರದ ಪೌಷ್ಟಿಕ ತತ್ವಗಳಿಗಾಗಿ ಉಪಯುಕ್ತ ಭೋಜನದ ಆವಶ್ಯಕತೆಯಿದೆ. ಉಪಯುಕ್ತ ಪೌಷ್ಟಿಕ ಭೋಜನದಿಂದ ಅರ್ಬುದ ರೋಗವು ದೂರವಾಗಬಲ್ಲುದು - ಎಂದು ಶ್ರೀ. ವಿ. ಆರ್. ಖಾನೇಲ್ಕರರು ಅಭಿಪ್ರಾಯಪಟ್ಟರು.

ಈ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದ ಇತರ ಪ್ರತಿನಿಧಿಗಳು ತಮ್ಮ ಸಕಮತಿಯನ್ನು ವ್ಯಕ್ತಪಡಿಸುತ್ತ ಅರ್ಬುದ ರೋಗವನ್ನು ದೂರವಾಡಲು ಎರಡು ವಿಧದ ಪರಿಹಾರೋಪಾಯಗಳಿವೆಯೆಂದು ತೀರ್ಮಾನಿಸಿದರು— ಮೊದಲನೆಯದಾಗಿ ಔಷಧಿ; ಎರಡನೆಯದಾಗಿ ಅದರ ನಿವಾರಣೆ ಯಾವ ಕಾರಣಗಳಿಂದ ಅರ್ಬುದರೋಗವು ಉತ್ಪನ್ನವಿಸುವುವೆಂದು ತಿಳಿದುಕೊಂಡು ಅಂತಹ ಮೂಲಭೂತ ಹೇತ ಗಳನ್ನು ತೊಡೆದುಹಾಕುವ ಕಾರ್ಯಗಳನ್ನು ಕೈಗೊಳ್ಳುವುದರಿಂದ ಈ ರೋಗದ ಮೂಲೋತ್ಪಾಟನ ಮಾಡಬಹುದು ಎಂದವರು ಅಭಿಪ್ರಾಯಪಟ್ಟರು.

ಹೆಕ್ಸಾಡೆಕನಾಲ್‌ದ ಬೆಲೆ ಒಂದು ಪೌಂಡಿಗೆ ಎಳ್ಳಾಣಿಂಟುಗಳಷ್ಟು ಅಗ್ಗ! ಈಗ ಈ ಪದಾರ್ಥವನ್ನು ಅಮೆರಿಕೆ ಮತ್ತು ಇಂಗ್ಲೆಂಡ್‌ಗಳಲ್ಲಿ ಬೇಕಾದಷ್ಟು ಬೃಹತ್ಪ್ರಮಾಣದಲ್ಲಿ ತಯಾರಿಸಿ ಮಾರಲಾಗುತ್ತಿದೆ. ನಮ್ಮ ದೇಶದಲ್ಲಿಯೂ ಈ ಪದಾರ್ಥದ ಉಪಯೋಗನೇಕಾಗಬಾರದು?

ಮಿಲಿಯಗಟ್ಟಲೆ ಜನರು ಉಪಯೋಗಿಸಿ ತೃಪ್ತಿಪಡೆದ ಯಂತ್ರ



ಉಷಾ

ಇಡೀ ಕುಟುಂಬದ ಉಪಯೋಗಕ್ಕಾಗುವ ಹೊಲಿಯುವ ಯಂತ್ರ

ಏಕಮೇವ ಸಾರಾಟಿ ಮಾಡುವ ಏಜಂಟರು:

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್

ಪ್ರೈವೇಟ್ ಲಿಮಿಟೆಡ್,

120, ಆರ್ಮೇನಿಯನ್ ಸ್ಟ್ರೀಟ್,

ಮದ್ರಾಸು—1

ಗ್ರಾಮ್ಸ್: "USHAKO" ಫೋನ್: 2278.

ಬುದ್ಧಿವಂತರು ಬಲು ಬುದ್ಧಿವಂತಿಕೆಯಿಂದ ತಮ್ಮ ಹಣವನ್ನು ಚಲಾಯಿಸುತ್ತಾರೆ. ಇದಕ್ಕಾಗಿ ಅವರು ಬೇಂಕುಗಳನ್ನೇ ಹೆಚ್ಚಾಗಿ ಆಶ್ರಯಿಸುತ್ತಾರೆ, ತಮ್ಮ ಹಣವನ್ನು ಬೇಂಕುಗಳ ಮೂಲಕ ಚಲಾಯಿಸುವುದರಿಂದ ತಮ್ಮ ಮತ್ತು ತಮ್ಮ ರಾಷ್ಟ್ರದ ಸರ್ವಾಂಗೀಣ ಬೆಳವಣಿಗೆಯು ಬಹು ಬೇಗನೆ ಆಗುವುದೆಂದು ಅವರಿಗೆ ಚೆನ್ನಾಗಿ ಗೊತ್ತು.

ಅದುಕಾರಣ-ಯಾವ ಬೇಂಕಾದರೂ ಸರಿಯೇ-ನಿಮ್ಮ ಹಣವನ್ನು ಯಾವಾಗಲೂ ಬೇಂಕುಗಳ ಮೂಲಕವೇ ಚಲಾವಣೆಗೆ ಹಾಕಿರಿ ಆಗಲೇ ನಿಮ್ಮ ಮತ್ತು ನಿಮ್ಮ ರಾಷ್ಟ್ರದ ಶ್ರೇಷ್ಠ ಅಭ್ಯುದಯಕ್ಕೆ ನೀವು ನಾಂದಿಯಿಟ್ಟಂತಾಗುವುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ. ಉಡುಪಿ (ದ ಭಾರತ)

'ಸಮಯಗ' ವಾರಪತ್ರಿಕೆ

ಉ ಡು ಪಿ.

ವಾರ್ಷಿಕ ಚಂದಾ—

ರೂ. 5-12-0 (5=75)

6 ತಿಂಗಳಿಗೆ— ರೂ. 3-0-0

ಮುಂಗಡವಾಗಿ ಕಳಿಸಬೇಕು.

ಅರ್ಥಮಂತ್ರಿಗಳ ಭಾವಿ ವಿದೇಶಯಾತ್ರೆ—

ಅಪೇಕ್ಷಿತ ಸಹಾಯ ದೊರೆವ ನಿರೀಕ್ಷೆ

ಭಾರತದ ಅರ್ಥ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಸದ್ಯದಲ್ಲಿಯೇ ವಿದೇಶ ಸಂಚಾರವನ್ನು ಕೈಗೆತ್ತಿಕೊಳ್ಳಲಿದ್ದಾರೆ. ಭಾರತಕ್ಕೆ ಈ ಹೊತ್ತಿಗೆ ದೊರೆತ ಸಾಲಗಳಿಗಿಂತ ಬೇರೆ ತೆರನಾದ ಸಾಲಗಳನ್ನು ಇವರು ಗಳಿಸಿ ತರುವ ನಿರೀಕ್ಷೆಯಿರುವುದು. ಭಾರತಕ್ಕೆ ಆರ್ಥಿಕ ಸಹಾಯ ನೀಡುವ ಬಗ್ಗೆ ಕಳೆದ ವರ್ಷವಿದ್ದುದಕ್ಕಿಂತ ವಿದೇಶೀ ವಾತಾವರಣ ಇಂದು ಸ್ವಲ್ಪ ಉತ್ತಮಗೊಂಡಿದ್ದು, ಭಾರತವು ಕೈಗೊಳ್ಳಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಧಿಕ ಪ್ರಶಂಸೆಯು ದೊರೆಯುತ್ತಿದೆಯಲ್ಲದೇ ಅವುಗಳು ಸಂಪೂರ್ಣಗೊಳ್ಳುವಂತೆ ಹಾಗೂ ಜಯಪ್ರದವಾಗುವಂತೆ ಇವು ಪ್ರಯತ್ನಿಸುವ ನಿರೀಕ್ಷೆಯೂ ಇರುತ್ತದೆ

ಇದುವರೆಗೆ ಪಡೆಯಲಾದ ಸಾಲ ಹಾಗೂ ಮುಂಗಡಗಳು ವಿಶಿಷ್ಟ ಯೋಜನೆಗಳಿಗಾಗಿ, ಅದರಲ್ಲಿಯೂ ಉದ್ಯಮಗಳನ್ನು ಸ್ಥಾಪಿಸಲು ಯಾಂತ್ರಿಕ ಉಪಕರಣಗಳನ್ನು ಪಡೆಯುವುದಕ್ಕಾಗಿದೆ ಈಗ ಭಾರತಕ್ಕೆ ಬೇಕಾಗುವ ಸಾಲವು ವಿಶಿಷ್ಟ ಯೋಜನೆಗಳಿಗಾಗಿ ಮಾತ್ರವಲ್ಲದೆ ಸಾಕಷ್ಟು ಕಚ್ಚಾ ಪದಾರ್ಥಗಳನ್ನು ಅಮದುಮಾಡಿ, ಈಗಾಗಲೇ ಸ್ಥಾಪಿಸಿರುವ ಉದ್ದಿಮೆಗಳನ್ನು ಮುಂದುವರಿಸಿಕೊಂಡು ಹೋಗುವ ಸಲುವಾಗಿಯೂ ಇರುತ್ತದೆ

ಮಾನ್ಯ ಅರ್ಥಮಂತ್ರಿಯವರು ಬರುವ ಆಗಸ್ಟ್ ೨೭ರಂದು ಹೊಂಟು ಸಪ್ಟಂಬರ್ ೪ರ ವರೆಗೆ ಲಂಡನ್‌ನಲ್ಲಿ ಉಳಿಯುವರು. ಅಲ್ಲಿಂದ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಹತ್ತು ದಿನ ತಂಗಿದ್ದು ೧೫ನೆ ದಿನಾಂಕ ಕಾಮನ್‌ವೆಲ್ತ್ ವಾಣಿಜ್ಯ ಮತ್ತು ಆರ್ಥಿಕ ಸಮ್ಮೇಳನದಲ್ಲಿ ಭಾಗವಹಿಸಲು ಕೆನೆಡದ ಮೊಂಟ್ರೀಲಿಗೆ ತೆರಳುವರು ಅಲ್ಲಿಂದ ೨೬ ರಂದು ಹೊರಟು ಜಾಗತಿಕ ಬೇಂಕು ಹಾಗೂ ಅಂತಾರಾಷ್ಟ್ರೀಯ ಆರ್ಥಿಕ ಸಮಿತಿಯ ವಾರ್ಷಿಕಾಧಿವೇಶನಕ್ಕೆ ಪೊವಲು ಭಾರತವನ್ನು ಸೆರುವರು.

ಲಂಡನ್‌ನಲ್ಲಿ ಶ್ರೀ ದೇಸಾಯರು, ಪ್ರಧಾನಿ ಶ್ರೀ ಹೆರೋಲ್ಡ್ ಮೆಕ್ಮಿಲನ್ ಹಾಗೂ ಇತರ ಮಂತ್ರಿಗಳೊಡನೆಯೂ, ವಾಣಿಜ್ಯ ಹಾಗೂ ಔದ್ಯಮಿಕ ಕ್ಷೇತ್ರಗಳ ಮುಖಂಡರೊಡನೆಯೂ ಮಾತುಕತೆ ನಡೆಸುವರು. ಅಮೆರಿಕೆಯಲ್ಲೂ ಇದೇ ಬಗೆಯಾಗಿ ಆಡಲಿರುವರು. ಕಳೆದ ಕೆಲವು ತಿಂಗಳುಗಳಿಂದ ಕುಸಿಯುತ್ತಿರುವ ಭಾರತದ ವಿದೇಶವಿನಿಮಯ ನಾಣ್ಯಗಳ ಕೊರತೆಯನ್ನು ತುಂಬಿಸಿಕೊಳ್ಳಲು ಬೇಕಾಗುವಷ್ಟು ವಿದೇಶೀಸಹಾಯವನ್ನು ಪಡೆಯುವ ಕುರಿತಾಗಿ ಮಾತಾಡುವರೆಂದು ನಂಬಲಾಗಿ ಈ ಬಗ್ಗೆ ಬೇಕಾದ ಬುನಾದಿಯನ್ನು ಕೆಲದಿನ ಪೂರ್ವದಲ್ಲಿ ಲಂಡನ್‌ನಲ್ಲಿಯೂ ಈಗ ವಾಶಿಂಗಟನ್ನಿನಲ್ಲಿಯೂ ಇರುವ ಭಾರತದ ಅರ್ಥಸಂಬಂಧಿ ಶಾಖಾ ಕಾರ್ಯದರ್ಶಿ ಶ್ರೀ ಬಿ ಕೆ ನೆಹರು ಇಪ್ಪರಲ್ಲಿಯೇ ಹಾಕಿದ್ದಾರೆ ಅವರು ಇಕ್ಕಡೆಗಳಲ್ಲಿಯೂ ಭಾರತವು ಅಪೇಕ್ಷಿಸುವ ಸಹಾಯದ ವಿಧಾನ ಮತ್ತು ಮೊತ್ತವನ್ನು ವಿವರಿಸಿದ್ದಾರೆ

ಇದುವರೆಗೆ ಭಾರತಕ್ಕೆ ದೊರೆತಿರುವುದು ನೂತನ ಉದ್ಯೋಗಗಳನ್ನು ಸ್ಥಾಪಿಸುವ ಸಲುವಾಗಿ ವಿವಿಧ ಯೋಜನೆಗಳ ಹೆಸರಿನಲ್ಲಿನ ಸಹಾಯ. ಇತ್ತೀಚೆಗೆ ಅಮೆರಿಕೆಯು ಭಾರತಕ್ಕೆ ಕೊಡಮಾಡಿದ ೭೫ ಮಿಲಿಯ ಡಾಲರುಗಳ ಸಾಲದ ಮೊಬಲಗು ಯಾಂತ್ರಿಕೋಪಕರಣಗಳನ್ನು ಕೊಂಡುಕೊಳ್ಳಲು ಮಾತ್ರ ಉಪಯೋಗಿಸಲಾಗುತ್ತದೆ, ಆದೂ ಎಲ್ಲಿಂದ ಗಿಂತಲೂ ಹುಟ್ಟಿಯಿರುವ ಅಮೆರಿಕೆಯ ಮಾರುಕಟ್ಟೆಯಿಂದಲೇ ಪಡೆಯಬೇಕಾಗಿದೆ.

ಆದರೆ, ಭಾರತದ ಇಂದಿನ ಸಮಸ್ಯೆ ಇದು ಮಾತ್ರವಲ್ಲ ಈಗಾಗಲೇ ಸ್ಥಾಪಿತವಾದ ಕಾರಖಾನೆಗಳನ್ನು ನಡೆಯಿಸಲು ಕಚ್ಚಾ ವಸ್ತುಗಳನ್ನೂ ಹೊಸ ಉದ್ಯಮಗಳಿಗಾಗಿ ಯಾಂತ್ರಿಕೋಪಕರಣಗಳನ್ನೂ ಪಡೆದುಕೊಳ್ಳುವ ಅಗತ್ಯವಿದೆ ನಿರ್ಯಾತವು ಕಡಿಮೆಯಾಗಿರುವುದು, ವಿದೇಶೀವಿನಿಮಯದಲ್ಲಿ ಇಳಿತವಾಗಿರುವುದು— ಈ ಗಂಡಾಂತರಗಳಿಂದ ಭಾರತವು ಪಾರಾಗಬೇಕಾದರೆ, ಅದಕ್ಕೆ ವಿದೇಶೀ ಸಹಾಯವು ಅತ್ಯಂತಾವಶ್ಯಕವಾಗಿ ಪರಿಣಮಿಸಿದೆ ಸ್ಟರ್ಲಿಂಗ್ ಮೊಬಲಗು ಬಹಳ ಇಳಿದಿದ್ದು ಜೂನ್ ೨೭ರಂದು ೨೮೭ ಕೋಟಿಯಿದ್ದುದು ಜುಲೈ ೪ರಂದು ೨೧೨ ಕೋಟಿಗಿಳಿದಿದೆ

ಬ್ರಿಟನ್ನಿನಲ್ಲಿ ಭಾರತದ ಆವಶ್ಯಕತೆಗಳ ಬಗ್ಗೆ ವಿಶೇಷ ಜಾಗ್ರತಾವಸ್ಥೆಯು ನಿರ್ಮಾಣವಾಗಿರುವುದಲ್ಲದೇ, ಈಗ ಭಾರತದ ಸಹಾಯಕ್ಕೆ ಮುಂದೆ ಬರದೆ ಹೋದರೆ, ಇಲ್ಲಿನ ಮಾರಕಟ್ಟೆಗಳಲ್ಲಿ ಬ್ರಿಟನ್ನು ಹಿಂದೂಡಲ್ಪಡುವ ಸಂಭವವಿದೆಯೆಂಬುದನ್ನೂ ಅವರು ತಿಳಿದುಕೊಂಡಿದ್ದಾರೆ ಬ್ರಿಟಿಷ ಆರ್ಥಿಕ ಪತ್ರಿಕೆಗಳು ಹಾಗೂ ಲಂಡನ್ ನಗರ ವಲಯಗಳು ಈ ಕಡೆಗೆ ಬ್ರಿಟನ್ನಿನ ಗಮನವನ್ನು ಸೆಳೆದಿವೆ, ಭಾರತಕ್ಕೆ ಸಹಾಯ ನೀಡಬೇಕೆಂದು ಸರಕಾರಕ್ಕೆ ವಿನಂತಿಗಳು ಹೋಗುತ್ತಿವೆ ಭಾರತಕ್ಕೆಂದು ಬೇಕಾಗಿರುವುದು ಮೂರು ಯಾ ಆರು ತಿಂಗಳುಗಳ ವರೆಗಿನ ಸಾಲವೂ, ಈ ಅಲ್ಪಾವಧಿಯಲ್ಲಿ ತನ್ನ ವಿದೇಶ ವಿನಿಮಯಗಳ ಕೊರತೆವನ್ನದು ತುಂಬಿಸುವುದು ಸಾಧ್ಯವಿಲ್ಲವಾದುದರಿಂದ, ಬಹಳ ದೀರ್ಘಾವಧಿಯ ಸಾಲಗಳೇ ಭಾರತಕ್ಕೆ ಬೇಕೆಂಬುದನ್ನೂ ಮನವರಿಕೆ ಮಾಡಿಕೊಡಲಾಗುತ್ತದೆ ಬ್ರಿಟನ್ನು ಭಾರತಕ್ಕೆ ಸಹಾಯ ನೀಡದೆ ಹೋದರೆ, ಭಾರತದ ಸ್ಟರ್ಲಿಂಗ್ ಮೊಬಲಗು ತನ್ನೂ ಇಳಿಯುವುದು ಆದುದರಿಂದ ಮುಂದಿನ ಕೆಲವು ತಿಂಗಳಿಗೆ ಕಾಲ ತನ್ನ ಸ್ಟರ್ಲಿಂಗ್ ಮೊಬಲಗು ಇಳಿಯದಂತೆ ಮಾಡಲು ಬೇಕಾದ ಪ್ರಯತ್ನಾಲವನ್ನು ಬೇಡಬಹುದು ಇಂತಹ ಸಂದರ್ಭವು ಯೋಗ್ಯವಾದ ಭದ್ರತೆಯ ಮೇಲೆ ಸಾಮಾನ್ಯ ಬೇಂಕು ತನ್ನ ಗಿರಾಕಿಗೆ ಕೊಡುವ 'ಓವರ್ ಡ್ರಾಫ್ಟ್' ಪದ್ಧತಿಯನ್ನು ಹೋಲ ವಂತಿರುತ್ತದೆ ಹಾಗಾಗಿ ಕಾಮನ್‌ವೆಲ್ತ್ ರಾಷ್ಟ್ರಗಳ 'ಬೇಂಕರ್' ವಾದ ಬ್ರಿಟನ್ನು ಭಾರತದ ಯೋಜನೆಗಳಿಗೆ ತನ್ನ ಬೊಬಲವನ್ನೂ ಬಹುವಿಧದ ಸಹಾಯವನ್ನೂ ನೀಡುವುದಲ್ಲದೆ, ಓವರ್ ಡ್ರಾಫ್ಟ್ ಮಾದರಿಯಲ್ಲಿ ಭಾರತಕ್ಕೆ ಸಾಕಷ್ಟು ಸಾಲ ನೀಡುವುದು ಅಗತ್ಯವೆಂದೂ, ಈ ಕಾರ್ಯಕ್ರಮದಲ್ಲಿ ಬ್ರಿಟನ್ನಿಗೆ ಯಾವ ನಷ್ಟವೂ ಇಲ್ಲವೆಂದೂ ಲಂಡನ್ ವಲಯಗಳು ಹೇಳುತ್ತಿವೆ

ಕೊಚಿನಕರಾವಳಿಯ ದುರದೃಷ್ಟ—

ಸಮುದ್ರರಾಜನಿಂದ ಭೂಕೊರೆತ

ಕೊಚಿನ್‌ನ ದಕ್ಷಿಣದಲ್ಲಿರುವ ತೀರ ಪ್ರದೇಶವು ಬಹು ಪಲಿವತ್ತಾಗಿರುವುದಲ್ಲದೆ ಜನಬಾಹುಲ್ಯ ಕ್ಷೇತ್ರವಾಗಿದೆ ಈ ತೀರ ಪ್ರದೇಶವು ಈಗ ಸಮುದ್ರದ ಅಲಗುತ್ತಿದೆ. ಕಳೆದ ಐವತ್ತು ವರ್ಷಗಳಲ್ಲಿ ಒಂದು ಫರ್ಲಾಂಗ್‌ನಷ್ಟು ಆಗಲದ ಹಾಗೂ ೧೧ ಮೈಲುಗಳಷ್ಟು ಉದ್ದದ ತುಂಡು ಬೊಮಿಯು ಅರಬ್ಬಿ ಸಮುದ್ರದ ಪಾಲಾಗಿದೆ ತೀರ ಪ್ರದೇಶದ ಹಿಂಬಾಗದಲ್ಲಿರುವ ಸಮುದ್ರದ ಹಿನ್ನೀರಿನಿಂದ ಭೂಸವೆತದ ಅಪಾಯ ಹೆಚ್ಚಿದೆ ಸಮುದ್ರದ ಅಂಚಿನಲ್ಲಿ ಗೋಡೆಗಳನ್ನು ನಿರ್ಮಿಸುವುದರಿಂದ ಭೂಮಿ ಸವೆಯುವುದನ್ನು ತಪ್ಪಿಸಲು ಸಾಧ್ಯವೆಂದು ಬಾವಿಸಿ ೧೯೫೫ರಲ್ಲಿಯೇ ಗೋಡೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು ಆದರೆ ಆ ಪ್ರಯತ್ನಗಳು ವಿಫಲವಾದವು ಎಕೆಂದರೆ ತಡೆಗಟ್ಟುಗಳಿಲ್ಲದ ಸಮುದ್ರದ ಗೋಡೆಗಳು ಭೂಸವೆತವನ್ನು ತಪ್ಪಿಸಲು ಅಶಕ್ತವಾಗಿರುವುವು

ಭೂಸವೆತದ ಹಾವಳಿಗೆ ಕುತ್ತಾಗಿದ್ದ ಕೊಚಿನ್ ಬಂದರಿಗೆ ದಕ್ಷಿಣ ಭಾಗದಲ್ಲಿರುವ ತೀರ ಪ್ರದೇಶವನ್ನು ಭೂಸವೆತದಿಂದ ತಪ್ಪಿಸುವ ಬಗ್ಗೆ ಸೂಕ್ತವಾದ ಕ್ರಮಗಳನ್ನು ತಿಳಿಸುವಂತೆ ೧೯೫೫ರ ಜೂಲೈ ತಿಂಗಳಲ್ಲಿ ಭಾರತ ಸರ್ಕಾರದವರು ಪುಣೆಯಲ್ಲಿರುವ ಕೇಂದ್ರ ಜಲ ಹಾಗೂ ವಿದ್ಯುತ್ ಸಂಶೋಧನಾ ಕೇಂದ್ರಕ್ಕೆ ಸೂಚನೆಯಿತ್ತರು ಸ್ಥಳದ ಪರಿಶೀಲನೆಯ ನಂತರ ಭೂಸವೆತದ ಹಾವಳಿಗೆ ತುತ್ತಾದ ಪ್ರದೇಶದಲ್ಲಿ ಪ್ರಯೋಗಾರ್ಥವಾಗಿ ಒಂದು ಮೈಲಿ ಉದ್ದದ ಗೋಡೆಯನ್ನು ಕಟ್ಟಬೇಕೆಂದೂ ಎರಡು ಪಾರ್ಶ್ವಗಳಲ್ಲಿಯೂ ತಡಗಟ್ಟುಗಳಿರಬೇಕೆಂದೂ ಶಿಫಾರಸು ಮಾಡಲಾಯಿತು ಅದೇ ಕಾಲದಲ್ಲಿ ಪುಣೆಯಲ್ಲಿರುವ ಸಂಶೋಧನಾ ಕೇಂದ್ರದಲ್ಲಿ ಮಾದರಿ ಪರೀಕ್ಷೆಗಳನ್ನು ನಡೆಸಬೇಕೆಂದೂ ಸೂಚಿಸಲಾಯಿತು

ಈಗ ಪುಣೆಯಲ್ಲಿ ಈ ಸಮಸ್ಯೆಯ ಕುರಿತು ಅಧ್ಯಯನ ನಡೆಸಲಾಗುತ್ತಿದೆ ಪ್ರಯೋಗಗಳ ಸಲುವಾಗಿ ತಡೆಗಟ್ಟುಗಳನ್ನು ಹೊಂದಿರದ ಸಮಸ್ಥಿತೀರದ ಗೋಡೆಗಳು ಭೂಸವೆತವನ್ನು ತಪ್ಪಿಸಲು ಸೂಕ್ತವಲ್ಲವೆಂಬ ವಿಷಯವು ತಿಳಿದುಬಂದಿತು

೧೯೫೫ರ ಆನಿಭಾಗದಲ್ಲಿ ತೀರಪ್ರದೇಶದ ಉದ್ದಕ್ಕೂ ಒಂದು ಮೈಲಿ ಉದ್ದ

(ಪಕ್ಕ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಖಜೇರಿ: ಮುಕುಂದ ನಿವಾಸ, ಉಡುಪಿ

ಮಳೆಗಾಲ ಪ್ರಾರಂಭವಾಗಿದೆ . !

ದಿನಗಳು ಉರುಳಿತ್ತವೆ ಕಾಲಗಳು ಕಳೆಯುತ್ತಿವೆ ಒಂದರ ನಂತರ ಮತ್ತೊಂದು, ಕಾಲಚಕ್ರ, ಸಮಯದ ವ್ಯೂಹ ತಿರುಗುತ್ತಾ ಇರುತ್ತದೆ.

ಅಂತೆಯೇ ನೀವು ಸಿಂಡಿಕೇಟ್ ಬೇಂಕಿನಲ್ಲಿ ಜಮೆಯಾಗಿರಿಸಿದ ಮೊತ್ತ ವೃದ್ಧಿಯಾಗುತ್ತಾ ಇರುತ್ತದೆ ನೀವು ಸಿಗ್ಗಿ ನೇವಣಾತಿದಾರರಾಗಿ, ಅದವಾ ಇನ್ನಾವುದೇ ಉಳಿತಾಯ ಯೋಜಕರಾಗಿ. ಕೂಡಿಸುತ್ತಿರುವ ಹಣ ಬೆಳೆಯುತ್ತಾ ಇರುತ್ತದೆ ಮತ್ತು ಆಕಸ್ಮಿಕಾಲದಲ್ಲಿ ನಿಮ್ಮ ನೆರವಿಗೆ ಬಂದೇ ಬರುತ್ತದೆ

ನಮ್ಮ 113 ಶಾಖೆಗಳು ನಿಮ್ಮ ಸೇವೆಗೆ ಸದಾ ಸಿದ್ಧವಿವೆ

ಟಿ ಎ ಪೈ, ಬಿ ಕಾಂ (ಲೊಂ) ಎ ಐ ಐ ಬಿ ಯಸ್ ಆರ್ ಇ ಎಸ್ (ಲಂಡನ್) ಜನರಲ್ ಮೆನೇಜರ್

ಡಾ॥ ಟಿ ಮಾಧವ ಪೈ, ಎಂ ಬಿ ಹಿ ಬಿ ಎಸ್. ಮೆನೇಜಿಂಗ್ ಡೈರೆಕ್ಟರ್

THE CANARA INDUSTRIAL & BANKING SYNDICATE LTD , UDIPI

ಕುಂದಾಪುರ ಡಿವಿಜನಿನ ಅಸಿಸ್ಟಾಂಟ್ ಕಮಿಶನರ್ರ ಕೋರ್ಟಿನಲ್ಲಿ

O P. 242/1958

ಶೀನಪ್ಪ ಕುಂದ ಪೆಡ್ಡೆ ಪುತ್ತು —ಅರ್ಜಿದಾರ

ಗೋಪಪ್ಪ ಶೆಟ್ಟಿ ಕೂಡಾ ಇವರೊಳಿಗೆ —ಎದ್ರಿರು

ಉಪ್ಪಿ ತಾಲೂಕು ಪೆರ್ಡೂರು ಗ್ರಾಮದ ಜೆರೆಕಟ್ಟೆದ ಪಡಿಮನೆ ಸಟ್ಟಪ್ಪು ಶೆಟ್ಟಿಯರ ಮಗ ೩ನೇ ಎದ್ರಿ ಮಹಾಬಲ ಶೆಟ್ಟಿಗೆ.

ಅರ್ಜಿದಾರ ಪ ಎದ್ರಿರು ಕೂಡಾ ರಿ ನಿಶಿ ತಾ 13 3.58ರಲ್ಲು ಮಾಡಿಕೊಂಡ ಮೂಲಗೇಣಿ ಚೀಟಿಗೆ ಕಾರಣವಾದ ಸ್ಟಿರಾಸ್ತಿಗಳ ಬಾಬ್ತು ವಿಜಯ ಸಂಗ್ರಹದ ಲಾಗ್ಯಾತಿನ ಗೇಣಿ ಎದ್ರಿರು ಜಾಕಿಮಾಡಿಕೊಂಡಿರುವುದ್ರಿಂದ ಎದ್ರಿರನ್ನು ಮೂಲಗೇಣಿಗೆ ಕಾರಣವಾದ ಸ್ಥಿರಾಸ್ತಿಗಳಿಂದ evict ಮಾಡಿ ಅರ್ಜಿದಾರನ ಸ್ವಾಧೀನಕ್ಕೆ ಕೊಡಿಸಬೇಕಾಗಿ ಅರ್ಜಿದಾರನು ಪಾಕ್ಷ್ಯಾಧಾರ ಮೇಲಿನ ಅರ್ಜಿಯ ಉಪ್ಪಿ ಮೊಕ್ದಾಮಿನಲ್ಲಿ ತಾ 9-8 1958ಕ್ಕೆ ತನ್ನಿಗೆ ಇತ್ಯರ್ಥಾಗಿಯುವ ತಿನೇ ಎದ್ರಿಯ ಅಕ್ಷೇಪವಿದ್ದರೆ ಅತನು ಆ ದಿನ್ಸ ಹಗಲು ಗಂಟೆ 10ಕ್ಕೆ ಮೇಲಿನ ಉಪ್ಪಿ ಮೊಕ್ದಾಮಿನ ಕೊರ್ಟಿನಲ್ಲಿ ಹಾಜ್ರಾಗಿ ಸ್ಪಷ್ಟೀಕರಣ ಮಾಡಿಕೊಳ್ಳಲಿಕ್ಕೆ ತಪ್ಪಿದ್ರೆ ಅತನ ಗೈರು ಹಾಜ್ರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲ್ಪಡುವುದು.

B S Hegde,
Vakil for Petitioner.

14 – 7 — 1958

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೭-೭-೧೯೫೮	೪೫

ನಿಧಾನ ಕಾರ್ಯ ಪ್ರಣಾಳಿ

ಪುನರ್ನಿರ್ಮಾಣದ ಮಜಲನ್ನು ಮೆಟ್ಟುತ್ತಿರುವಾಗ ಜನತೆ ಸರ್ವವಿಧದ ತ್ಯಾಗಕ್ಕೂ ಸಿದ್ಧವಾಗಿ, ಸರಕಾರವು ಕೊಡುವ ಮಾರ್ಗದರ್ಶನದಂತೆ ನಡೆಯಬೇಕು ಹಾಗೆಯೇ ದೇಶದ ಪ್ರಗತಿಯ ಕಾಂಕ್ಷೆಗಳಾಗಿ ದೇಶಕ್ಕಾಗಿ ದುಡಿಯಬೇಕು—ಎಂಬ ಉಪದೇಶಗಳು ಪ್ರಾಯಃ ಸ್ವತಂತ್ರ ಭಾರತದ ಪ್ರಜೆಗಳಿಗೆ ದೊರೆವಷ್ಟು ಬೇರಾರಿಗೂ ದೊರೆಯುವುದೆಂದು ಖಂಡಿತವಾಗಿ ಹೇಳಬರುವುದಿಲ್ಲ. ಅದರಲ್ಲಿಯೂ ನಮ್ಮ ಮೈಸೂರಿನ ಮಟ್ಟಿಗೆ ಹೇಳುವುದಾದರೆ, ನಮ್ಮ ಯೋಜನೆ, ತ್ಯಾಗ, ಕಾರ್ಯದಕ್ಷತೆ, ಸುಧಾರಣೆ, ಪ್ರಗತಿಪಥವೆಲ್ಲವೂ ನಿಸ್ಸಲಂಕ ಸಾರವತ್ತಾದ ಮಾಣಿಗಳಲ್ಲಿಯೇ ಎಂದು ಈಗೀಗ ಸರಿಯಾಗಿ ವ್ಯಕ್ತವಾಗುತ್ತಬರುತ್ತಿದೆ! ಇದನ್ನು ನ್ಯಾಯೋಚಿತವೆನ್ನಬೇಕೇ? ಅನ್ಯಾಯವೆನ್ನಬೇಕೇ ನಮ್ಮ ರಾಜ್ಯಸರಕಾರದ ಯಾವುದೇ ಕಾರ್ಯವು ಸಮಾಜಕ್ಕೆ ಸರಿಯಾಗಿ ಸುವ್ಯವಸ್ಥಿತರೂಪದಲ್ಲಿ ಎಂದೂ ನಡೆದುದು ಗೋಚರಿಸುವುದಿಲ್ಲ. ಶ್ರೀ. ಜತ್ತಿಯವರು ಮುಖ್ಯ ಮಂತ್ರಿಯಾದ ಕೆಲವು ದಿನಗಳಲ್ಲಿಯೇ 'ವಿಧಾನ ಸಭೆಯಲ್ಲಿ ಹೊಸ ಕಾರ್ಯಮಗ್ನ ಪ್ರವೃತ್ತಿ' ತೋರಿತೆಂದು ಪತ್ರಿಕಾ ವರದಿಗಳನ್ನು ಓದಿದ್ದೆವಲ್ಲದೆ, ಆ ಮೇಲೆ ಕಾರ್ಯರೂಪದಲ್ಲಿ ಮಾತ್ರ ಈ ಪ್ರವೃತ್ತಿ ತೋರಿ ಬಂದಿಲ್ಲ. ಎನ್ನಲೇಬೇಕು. ಮೈಸೂರು ಸರಕಾರವೆಂದರೆ ತನ್ನನ್ನು ತಾನೇ ಮರೆತಿರುವ ಸರಕಾರವೆಂದು ಜನರಾಡಿಕೊಳ್ಳುತಿದ್ದಾರೆ. ಸರಕಾರದ ಕಾರ್ಯಕಲಾಪಗಳಲ್ಲಿ ತೋರಿ ಬರುವ ವಿಳಂಬವನ್ನು ಯಾರೇ ಆಗಲೀ ವಿರೋಧಿಸದೆ ಗತ್ಯಂತರವಿಲ್ಲ. ಜನಹಿತ ಸಾಧನೆ ಮಾಡುವೆನೆಂದು, ಜನತೆಯ ಮತಗಳನ್ನು ಪಡೆದು, ಸ್ಥಾಪಿತವಾದ ಜನತಾ ಸರಕಾರದ ಪ್ರತಿನಿಧಿಗಳಾದ ಮಂತ್ರಿವರ್ಯರು, ಜನತೆಗೆ ತ್ಯಾಗ ಬುದ್ಧಿಯನ್ನು ಪದೇಶಿಸುವರಲ್ಲದೇ ತಾವೂ ತಮ್ಮ ಪಾಲಿನ ಕರ್ತವ್ಯಗಳನ್ನು ತ್ಯಾಗ ಮಾಡಿರುವರೆ ಎಂದು ಕೇಳುವ ಪ್ರಸಂಗ ಬಂದಿದೆ.

ಈ ಸಂದರ್ಭದಲ್ಲಿ ಸರಕಾರದ ಕಾರ್ಯಸಿದ್ಧಾಸತೆಯನ್ನೂ ಅವ್ಯವಸ್ಥಿತ ಕಾರ್ಯಪ್ರಣಾಳಿಯನ್ನೂ ಕೋಚ ಮಟ್ಟಿಗೆ ಉದಾಹರಿಸುವುದು ನ್ಯಾಯೋಚಿತವಾಗಿದೆ. ದೇಶದ ಹಿರಿಯ ರಾಜಕೀಯ ಪಕ್ಷವಾದ ಕಾಂಗ್ರೆಸ್ ಜನತೆಗೆ ಹತ್ತು ವರ್ಷಗಳಿಂದಲೂ ಭೂಸುಧಾರಣೆಯ ಬೆಲ್ಲವನ್ನು ಮೊಣಕೈಗಂಟಿಗೆ ತಾಗಿಸಿದ್ದು ದೇಶದ ಅಭಿವೃದ್ಧಿಗೆ ಮುಖ್ಯ ಕೀಲು ಭೂಸುಧಾರಣೆಯೆಂದು ಅಭಿಪ್ರಾಯಪಟ್ಟು, ರಾಜ್ಯ ಸರಕಾರಗಳೆಲ್ಲವೂ ತಂತಮ್ಮ ಸರಿಸ್ಥಿತಿಗನುಸಾರವಾಗಿ ಭೂಸುಧಾರಣೆಯನ್ನು ತರಬೇಕೆಂದು ಆದೇಶವಿತ್ತಿದೆ. ಅದರಂತೆ ಕೆಲವು ರಾಜ್ಯಗಳು ವಿಧೇಯಕವನ್ನು ಒಂದಲ್ಲ ಒಂದು ವಿಧದಲ್ಲಿ ತಂದಿರುತ್ತವೆ. ಆದರೆ, ನಮ್ಮ ಮೈಸೂರಿನಲ್ಲಿ ರಾಜ್ಯ ಪುನರ್ಘಟನಾ ಪ್ರಾರಂಭದ ಐದು ಪ್ರದೇಶಗಳ ಭೂ ಕಾಯದೆಗಳನ್ನೇ ಮತ್ತೂ ಮತ್ತೂ ಆರಾರು ತಿಂಗಳು ಜೀವದಾನಮಾಡಲಾಗುತ್ತದೆ; ಪ್ರತಿಬಾರಿಯೂ ಭೂಸುಧಾರಣಾ ಮಸೂದೆ ಸದ್ಯವೇ ಬರಲಿದೆ ಎನ್ನಲಾಗುತ್ತದೆ. ಆದರೆ, ಆ 'ಸದ್ಯ' ಇಂದಿಗೂ, ಇನ್ನುಮುಂದೆ ಕೆಲವು ಕಾಲವೂ 'ಅದ್ಯ'ವಾಗಿ ಪರಿಣಮಿಸುವುದಿಲ್ಲ. ಇತ್ತೀಚೆಗೆ ಮಾನ್ಯ ಜತ್ತಿಯವರು ತಾವು ಇನ್ನೊಂದು ಆಯೋಗವನ್ನು ನೇಮಿಸಿ, ಅದರ ವರದಿಯನ್ನು ಆರುತಿಂಗಳಲ್ಲಿ ಹಸ್ತಗತಮಾಡಿಸಿ ಹೊಸ ಕಾಯದೆಯನ್ನು ತರಲಿರುವುದಾಗಿ ಘೋಷಿಸಿದರು. ಜತ್ತಿಯವರು ಅಧಿಕಾರಗ್ರಹಣ ಮಾಡುವಾಗ, 'ಜತ್ತಿಸಮಿತಿಯ ವರದಿ' ಇನ್ನಂ ಅಧಿಕಾರಾವಧಿಯ ಪೂರಕ ಇಲ್ಲವೇ ಮಾರಕವಾಗಬಹುದೆಂದೂ ಹಿಸಲಾಗಿತ್ತು. ಆದರೆ, ತಮ್ಮ ಹೀರವನ್ನು ಭದ್ರಪಡಿಸುವ ಇಲ್ಲವೇ ತಮ್ಮ ವರದಿಗೆ ತಾವೇ ವಿರೋಧವಿರುವ ಅಲ್ಲದೇ ಈ ವರದಿಗೆ ವಿರೋಧಾಭಿಪ್ರಾಯವಿರುವ ಜನರ ಕೈಗೊಂಬೆಯಂತಿರುವ ಸಲುವಾಗಿಯೇ ಈ ರೀತಿ ಕಾಲತಳ್ಳಲಾಗುತ್ತದೆಯೆ? ಜತ್ತಿಯವರು ವರದಿ ಒಪ್ಪಿಸಿ ಬಹುಕಾಲ ಸಂದಿಲ್ಲ; ಈ ಅಲ್ಪಾವಧಿಯಲ್ಲಿ ಮೈಸೂರಿನ ಭೂಸ್ಥಿತಿಯೆಲ್ಲವೂ ವಿಪರ್ಯಾಸ ಕೊಂಡಿತೆ? ಅಥವಾ ಜತ್ತಿಯವರು ತಮ್ಮ ಕರ್ತವ್ಯವನ್ನು ಅಂದು ಯೋಗ್ಯ ರೀತಿಯಲ್ಲಿ ಪೂರೈಸದೆ ಅರ್ಧಂಬರ್ಧ ಮಾಡಿದ್ದಾರೆಯೆ? ಒಂದು ಬೇಳೆ ಈಗ ನೇಮಿಸಲಾಗುವ ಸಮಿತಿಯ ವರದಿಯು ಮುಖ್ಯ ಮಂತ್ರಿ ಜತ್ತಿಯವರ ಕೈಗೇ ದೊರೆತು, ಅವರಿಂದಲೇ ಭೂಸುಧಾರಣಾ ವಿಧೇಯಕವು ವೈವಹಾರಕ್ಕೆ ಬರುವುದೆಂದು ಪದೇಪದೇ ಗುರುಳುತ್ತಿರುವ ಸರಕಾರಗಳ ನೆಲೆವೀಡಾದ ಮೈಸೂರಿನಲ್ಲಿ ಏನು ಭರವಸೆ? ಮೊನ್ನೆ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಈ ಬಗ್ಗೆ ಸುದೀರ್ಘವಾಗಿ ವಿಮರ್ಶಿಸಿ ತಾನು ಜನತೆಗಿತ್ತ ಆಶ್ವಾಸನೆಯನ್ನು ಪೂರ್ಣಗೊಳಿಸುವಂತೆ ನೋಡಲು ಮುರಾರ್ಜಿ, ಸಂಜೀವ ಹಾಗೂ ದೇಬಾರರುಳ್ಳ ಉಪಸಮಿತಿಯನ್ನು ಆರಿಸಿತೆಂದು ವರದಿಯಾಗಿದೆ. ಈ ಸಭೆಯಲ್ಲಿ ಪ್ರಧಾನಿ ಪಂಡಿತ ನೆಹರೂರವರು, ಕಾಂಗ್ರೆಸ್ಸು ಸರಕಾರಗಳು ಈ ಆಶ್ವಾಸನವನ್ನು ಪೂರ್ಣಗೊಳಿಸಲು ಶಕ್ತವಾಗಿಲ್ಲವಾದರೆ, ಅಧಿಕಾರ ತ್ಯಾಗ ಮಾಡಬೇಕೆಂದು ಕರೆಕೊಟ್ಟರೆಂದು ನುಡಿದಿದ್ದಾರೆಂದೂ ತಿಳಿದು ಬಂದಿದೆ. ಆದರೆ, ಭೂಸುಧಾರಣೆಯನ್ನು ತಂದು ಅಧಿಕಾರ ತ್ಯಾಗಮಾಡಲು ಸಿದ್ಧವಿಲ್ಲದೆ, ಅದನ್ನು ಹಿಂದೂಡಿಯೇ ಕಳೆದಷ್ಟು ದಿನ ತಮ್ಮದೆಂದು ಬಳಕ್ಯಾನವಾಡುತ್ತ ಕುಳಿತರೆ, ನೆಹರೂರವರ ಮಾತುಗಳಿತ್ತ ಗಮನ ಹರಿಯುವುದಾದರೂ ದೆಗೇ?

ಏಕರೂಪದ ಶಿಕ್ಷಣಕ್ರಮವನ್ನು ಅಲಹಾರ ವರ್ಷದಲ್ಲಿಯೇ ಜಾರಿಗೊಳಿಸಲಾಗುವುದೆಂಬ ನೊಲ್ಲು ಕಳೆದ ಶಿಕ್ಷಣ ವರ್ಷಾರಂಭದವರೆಗೂ ಅಲ್ಲಲ್ಲಿ ಕೇಳಿಬರುತಿತ್ತು. ಆದರೆ, ಹೊಸ ಶಿಕ್ಷಣ ವರ್ಷ ಪ್ರಾರಂಭವಾಗುವುದರೊಳಗೆ ಏನೂ ಆದೇಶ ಬಾರದಿರುವುದರಿಂದ, ಹಿಂದೆಬಿತ್ತು. ಇತ್ತೀಚೆಗೆ ವಿದ್ಯಾಮಂತ್ರಿಯವರು 'ಮುಂದಿನ ವರ್ಷದಿಂದ' ಎಂಬ ಪಲ್ಲವಿಯನ್ನು ಹಾಡಿದ್ದಾರೆ. ಹೀಗೆಯೇ ಮುಂದಿನ ವರ್ಷವೂ "ಮುಂದಿನ ವರ್ಷ"ಎಂಬ ಉದ್ಗಾರ ಬಾರದೆ ಹೋದರೆ, ಅದು ನಮ್ಮ ಪುಣ್ಯ. ಎಸ್. ಎಸ್. ಎಲ್. ಸಿ ಪರೀಕ್ಷೆಯ ಪರಿಣಾಮಗಳು ಸಾಕಷ್ಟು ತಡವಾಗಿ ಪ್ರಕಟವಾದರೂ, ಸರ್ಟಿಫಿಕೇಟು ಮತ್ತೂ ನಿಧಾನವಾಗಿ ಒಂದೊಂದೋ ಎರಡೆರಡೋ ಬೆಂಗಳೂರಿನಿಂದ ನಮ್ಮೂರಿಗೆ ಉರುಳಿ, ಅಂಚೆಪಾತೆಗೆ ಲಾಭಮಾಡಿಸಿ, ಬಂದರೂ, ಅವುಗಳಲ್ಲಿ ತಪ್ಪು ತಪ್ಪಾಗಿ ಮಾರ್ಕುಗಳು ಬರೆಯಲ್ಪಟ್ಟಿವೆ ಎಂಬ ದೂರು ಕೇಳುತ್ತಿದೆ. ಹಿಂದಿ ಪರೀಕ್ಷೆಯಲ್ಲಿಯೇ ಕೂರದಿದ್ದ ಒಬ್ಬನಿಗೆ ಹಿಂದಿಯಲ್ಲಿ ಒಂದಷ್ಟು ಮಾರ್ಕನ್ನು ಹಾಕಲಾಗಿದೆ! ಹೀಗೆಯೇ ಇನ್ನೂ ಏನೇನೋ! ಇದೀಗ ನಮ್ಮ ಸರಕಾರದ ಕಾರ್ಯಧಕ್ಷತೆ! ದಕ್ಷಿಣ ಕನ್ನಡದ ಪತ್ರಗಳನ್ನು ಶೀಘ್ರದಲ್ಲಿಯೇ ಉತ್ತರಿಸಿ ಪ್ರಕರಣ ಕೊನೆಗೊಳಿಸುವೆವೆಂದು ಹೇಳುವವರಿಂದ ನಮಗೇನೇ ಹೀಗಾಗುವಾಗ, ಉಳಿದೆಡೆಯ ಗತಿಯೇನೋ? ಅರ್ಜಿಗಳನ್ನು ಕರೆಯಲು ನಿಶ್ಚಿತ ದಿನವನ್ನು ಗೊತ್ತುಪಡಿಸಿ, ಆ ದಿನ ಅಥವಾ ಅದಕ್ಕೆ ಒಂದೆರಡು ದಿನಗಳ ಅನಂತರದಲ್ಲಿ ಸಂಬಂಧಪಟ್ಟ ಅರ್ಜಿ ಫಾರ್ಮುಗಳನ್ನು ಕಳಿಸುವುದು ಇಂತಹ ಸಿದ್ಧಾಸತೆಯ ಒಂದು ದೃಷ್ಟಾಂತ.

ಹೀಗೆಯೇ ಸರಕಾರವು ನಿಧಾನವಾಗಿ ಸಾಗುವ ಕತ್ತೆಯ ಸವಾರನಂತೆ ತೋಗುತ್ತಿದೆ. ಮಂತ್ರಿಗಳು ಸಂಚಾರ ಮಾಡಿ ಜನರಿಗೆ ಬೇಕಾದ, ಬೇಡವಾದ ಭರವಸೆಗಳನ್ನು ಕೊಡುತ್ತ ಭತ್ತೆಗಿಟ್ಟಿಸಲು ಕೊಡಗುವಾಗ, ಸರಕಾರೀ ಕಛೇರಿಗಳು ಕೆಲಸ ಮಾಡುತ್ತವೆಯೋ ಇಲ್ಲವೋ ಯಾರಿಗೆ ಗೊತ್ತು? ಸರಕಾರದ ತೀವ್ರವಾದ ಮುನ್ನಡೆ, ವ್ಯವಸ್ಥಿತವಾದ ಧ್ಯೇಯ ಧೋರಣೆ, ಕ್ರಮವತ್ತಾದ ಕಾರ್ಯನೀತಿಗಳಿಲ್ಲದುದೇ ಜನತೆಗೆ ಬೇಸರವನ್ನುಂಟುಮಾಡುವ ವಿಷಯಗಳು. ಬರೇ ಘೋಷಣೆ, ಉದ್ಗಾರ, ಪ್ರಕಟಣೆಗಳಿಂದಷ್ಟೆ ಕೆಲಸ ಸಾಗುವಂತಿದ್ದರೆ, ಬಹಳ ಒಳ್ಳೆಯದಾಗುತಿತ್ತು. ನಮ್ಮ ವಿಧಾನ ಪ್ರವೃತ್ತಿಯ ಸರಕಾರಗಳು ಇನ್ನಾದರೂ ತಮ್ಮ ಕುಂದು ಕೊರತೆಗಳನ್ನು ಸರಿಪಡಿಸಿ ಜನತೆಯ ಪ್ರೀತಿಗೆ ಎರವಾಗದಿರಲೆಂದು ಬಯಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ವಿದ್ಯಾರ್ಥಿಗಳು ಜೇಲು ಕಂಡರು

ಕೇರಳ ನೀರ ಸಾರಿಗೆ ಮಹಾಮಂಡಳದ ದೋಣಿಗಳಲ್ಲಿ ಕಟ್ಟಾನಂದದ ವಿದ್ಯಾರ್ಥಿಗಳಿಗೆ ದೊರೆಯುತಿದ್ದ ರಿಯಾಯತಿಯನ್ನು ಕೊನೆಗೊಳಿಸಿದುದರ ಪರಿಣಾಮವಾಗಿ ವಿದ್ಯಾರ್ಥಿಗಳು ಅಸಮ್ಮತಿಯನ್ನು ವ್ಯಕ್ತಪಡಿಸಿ ಚಳವಳವನ್ನು ಹೂಡಿದ್ದು, ಅದು ತೀರ ವಿಕೋಪಕ್ಕೆ ಹೋಯಿತು. ಒಂದೆರಡು ದಿನಗಳ ವರೆಗೆ ಈ ಚಳವಳವು ಮುಂದುವರಿದು, ಒಮ್ಮೆ ವಿದ್ಯಾರ್ಥಿಗಳಿಗೆ ರಿಯಾಯತಿ ಈಯುವುದು ಅಗತ್ಯವೆಂದು ತಿಳಿದು ಮಹಾಮಂಡಳದ ಅಧ್ಯಕ್ಷರಾದ ಜಿಲ್ಲಾ ಕಲೆಕ್ಟರರು ಇದ ಕೈ ಸಮ್ಮತಿಸಿ ಒಂದಾಣೆಗೊಂದರಂತೆ ಟಿಕೇಟು ಕೊಡಲು ಒಪ್ಪಿದರೂ, ಆ ದನ್ನು ಮಂಡಳದ ಕಮ್ಯುನಿಸ್ಟ್ ಡೈರೆಕ್ಟರರು ವಿರೋಧಿಸಿದುದರಿಂದ ಈ ಸೂಚನೆಯು ಮಾನ್ಯವಾಗಲಿಲ್ಲ. ಹಾಗಾಗಿ ವಿದ್ಯಾರ್ಥಿಗಳು ಪುನಃ ತಮ್ಮ ಚಳವಳವನ್ನು ಮುಂದುವರಿಸಿದರು. ಪಿಕೆಟಿಂಗ್ ನಡೆಸಿದುದರಿಂದಾಗಿ ಪೋಲೀಸರು ಸುಮಾರು ಮೂವತ್ತು ವಿದ್ಯಾರ್ಥಿಗಳನ್ನು ಸೆರೆ ಹಿಡಿದರು. ಈ ವಿದ್ಯಾರ್ಥಿಗಳನ್ನು ಕಬ್ ಡಿವಿಜನಲ್ ಮೆಜಿಸ್ಟ್ರೇಟರೆದುರು ತಂದು ನಿಲ್ಲಿಸಲಾಯಿತು. ಮೆಜಿಸ್ಟ್ರೇಟರು ಈ ಅಪರಾಧಿ ವಿದ್ಯಾರ್ಥಿಗಳಿಗೆ ತಲಾ ರೂ. ೧೦ರಂತೆ ದಂಡ ಇಲ್ಲವೇ ಐದು ದಿನಗಳ ಜೈಲುವಾಸದ ಶಿಕ್ಷೆಯನ್ನಿತ್ತರು. ಆರೋಪಿಗಳಾದ ವಿದ್ಯಾರ್ಥಿಗಳು ಜೇಲುವಾಸವನ್ನೇ ಸಂತೋಷದಿಂದ ಒಪ್ಪಿಕೊಂಡಿರುವರು. ಕಮ್ಯುನಿಸ್ಟರ ಪ್ರಭಾವ ಇಲ್ಲಿ ವರೆಗೂ ಬಂದು ಬಿಟ್ಟಿದೆ!

ಕಾಲುವೆ ನೀರಿನ ತಂಟೆ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಲುವೆ ನೀರಿನ ಬಗ್ಗೆ ಇರುವ ವಿವಾದ ಸಂಬಂಧದ ಮಾತುಕತೆಗಳು ಜಾಗತಿಕ ಬೇಂಕಿನ ಪ್ರತಿನಿಧಿಗಳ ಸಮಮುಖದಲ್ಲಿ ಲಂಡನ್ ನಗರದಲ್ಲಿ ಸೇರಿತ್ತು. ಈ ಸಭೆಯಲ್ಲಾದ ಏರ್ಪಾಯಗಳಾಗಲೀ ಮಾತುಕತೆಗಳ ವಿವರವಾಗಲೀ ಇನ್ನೂ ತಿಳಿದು ಬಂದಿಲ್ಲವಾದರೂ ಜಾಗತಿಕ ಬೇಂಕು ೧೯೫೪ರಲ್ಲಿ ಮುಂದಿಟ್ಟಿದ್ದ ತತ್ವಗಳನ್ನು ಪಾಕಿಸ್ತಾನವು ಈಗ ಒಪ್ಪಿಕೊಂಡಂತೆ ತೋರಬರುತ್ತದೆ. ಈ ತತ್ವವೆಂದರೆ, ಸಂಜಾಬದ ಪೂರ್ವದ ಮೂರು ನದಿಗಳ ನೀರನ್ನು ಭಾರತವೂ ಪಶ್ಚಿಮದ ಮೂರು ನದಿಗಳ ನೀರನ್ನು ಪಾಕಿಸ್ತಾನವೂ ಬಳಸಬೇಕು; ಪಾಕಿಸ್ತಾನಕ್ಕೆ ಹೊಸ ಕಾಲುವೆಗಳನ್ನು ತೋಡಿಸುವರೆ ಭಾರತವು ವೆಚ್ಚವನ್ನು ಕೊಡಬೇಕು ಎಂಬಿವು ಪಾಕಿಸ್ತಾನವು ತಾನು ಕಟ್ಟಲಿರುವ ಹೊಸ ಕಾಲುವೆಯ ಪಕ್ಷಿ ಹಾಗೂ ಅಂದಾಜು ವೆಚ್ಚಗಳ ವಿವರಣೆಯನ್ನು ಕೊಟ್ಟಿರುವುದೆಂದು ತಿಳಿದುಬಂದಿದೆಯಲ್ಲದೇ ಜಾಗತಿಕ ಬೇಂಕು ಇವುಗಳನ್ನು ಅಭ್ಯಸಿಸಿತೆಂದೂ ಇಷ್ಟರಲ್ಲೇ ಅದು ಭಾರತಕ್ಕವನ್ನು ಒಪ್ಪಿಸಿತೆಂದೂ ಗೊತ್ತಾಗಿದೆ. ಈ ಅಂದಾಜುವೆಚ್ಚವು ಸುಮಾರು ಒಂದುನೂರು ಮಿಲಿಯ ಪವನುಗಳು! ಈ ಕಾಲುವೆಯು ಈಗ ಪಾಕಿಸ್ತಾನವು ಪೂರ್ವದ ನದಿಗಳಿಂದ ಪಡೆಯುವುದಕ್ಕಿಂತಲೂ ಹೆಚ್ಚು ನೀರನ್ನು ಅದಕ್ಕೊದ

A Needlework Class will be opened at St. Cecily's High School, Udipi, on 21—7—58. Students will be prepared for the Higher and Lower Grade Government Examinations in Dressmaking and Embroidery. Classes will be held from 9-30 to 12-30 on all week days. Students wishing to learn Needlework, Flowermaking and other types of Home decoration without appearing for the Examination may also join the class. The Nursery Class for children below school age will also reopen on 21—7—58. Please apply to the Mother Superior.

ಗಿಸಬಲ್ಲುದು ಆದುದರಿಂದ, ಭಾರತವು ತಾನು ಈ ಅಂದಾಜು ಮೊತ್ತದ ಒಂದಂಶವನ್ನು ಮಾತ್ರ ತೆರಲು ಬದ್ಧವಿರುವುದೆಂದು (ಎಂದರೆ, ಈಗ ಭಾರತವು ಪಲ್ಲಿಸುವ ನೀರಿನ ಪ್ರಮಾಣದಷ್ಟು ನೀರು ಹರಿಸ ತೋಡುವ ಕಾಲುವೆಯ ವೆಚ್ಚವನ್ನು ಮಾತ್ರ) ವಾದಿಸುವುದೆಂದು ಊಹಿಸಲಾಗಿದೆ.

ಮಾನವತೆಯ ಅಂತ್ಯ

ಇಂಗ್ಲೆಂಡಿನ ಕೇಂಬ್ರಿಂಬರಿಯ ಆರ್ಚ್ ಬಿಷಪರಾದ ಡಾ ಜೋಸೈಹ್ ಫಿಷರರು ಒಂದು ಹೊಸ ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಮಾನವತೆಯು ತನ್ನಷ್ಟಕ್ಕೇ ನೇ ಜಲಜನಕ ಬಾಂಬುಗಳಿಂದ ನಾಶ ಹೊಂದಬೇಕೆಂಬುದೇ ಪರಮಾತ್ಮನ ಆಶಯವಿರಬಹುದೆಂದು ಉದ್ಗರಿಸಿದ್ದಾರೆ "ಭಯಂಕರ ಮರಣ, ಅಣುಶಕ್ತಿದ ಮೇಲೆ ಚರ್ಚ್" ಎಂಬ ಸಂಕಲನಕ್ಕೆ ಕೊಟ್ಟ ಒಂದು ಲೇಖನದಲ್ಲಿ ಮಾನವ ಕುಲವು ಈ ರೀತಿಯಲ್ಲಿ ಚ್ಯುತಿ ಹೊಂದಬೇಕೆಂಬುದು ದೇವರ ಅಧಿಕಾರ ವಾಣಿಯಿರುವಂತೆ ತೋರುತ್ತದೆಯಲ್ಲದೇ ಧರ್ಮಶಾಸ್ತ್ರಗಳೂ ಹೀಗೆಯೇ ಹೇಳುತ್ತವೆ ಹೇಗಿದ್ದರೂ ತತ್ವಗಳು ಅಂಬಿಕೆ ಮತ್ತು ವೇದನೆಗಳನ್ನು ಮಾತ್ರ ಹೊಂದಿಕೊಂಡಿರಬಾರದು ಎಂದಿದ್ದಾರೆ

ಮೈಸೂರು ಸರಕಾರಕ್ಕೆ ಹಿಂದೀ ಗಾಳಿ

ಎರಡು ವರ್ಷದೊಳಗೆ, ಮೈಸೂರು ಸರಕಾರದ ನೌಕರರೆಲ್ಲರೂ ಹಿಂದಿಯನ್ನು ಕಲಿತುಕೊಳ್ಳಬೇಕೆಂದು ಮೈಸೂರು ಸರಕಾರವೊಂದು ಆಜ್ಞೆಯಿತ್ತಿದೆ. ೪೮ ವರ್ಷದ ನೌಕರರು, ೪೫ ವರ್ಷ ಪ್ರಾಯ ಮೀರಿದವರು; ಪ ದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಮಧ್ಯಮಾ ಅಥವಾ ಅದರ ಸಮಾನ ಮಟ್ಟದ ಪರೀಕ್ಷೆ ತೇರ್ಗಡೆಯಾದವರು (ಇದರಲ್ಲಿ ಮೈಸೂರು ಹಿಂದೀ ಪ್ರಚಾರ ಸರಿಷತ್ತಿನ ಮಾಧ್ಯಮವೂ ಬರುತ್ತದೆ ತಾಂತ್ರಿಕ ವಿಭಾಗದ ೧ನೆ ವರ್ಗದವರು—ಇವರಿಗೆ ವಿನಾಯಿತಿ ಇದೆ ಸ್ಥಳೀಯ ಸೇವಾ ಪರೀಕ್ಷಾ ಸಮಿತಿಯು ಈ ಪರೀಕ್ಷೆಗಳನ್ನು ನಡೆಸುವುದಲ್ಲದೇ ಸರಕಾರವೇ ಹಿಂದೀ ತರಗತಿಗಳನ್ನು ನಡೆಸುವುದು ಎರಡು ವರ್ಷದೊಳಗೆ ನೌಕರರು ಈ ಅವಶ್ಯಕತೆಗಳನ್ನು ಪೂರೈಸದೆ ಹೋದರೆ, ಸಾಮಾನ್ಯ ದಂಡನೆಗೆ ಅವರನ್ನು ಗುರಿಮಾಡಲಾಗುವುದು ಶ್ರೀ ಬಿ ಡಿ ಜತ್ತಿಯವರು ಈ ಬಗ್ಗೆ ಮಾತನಾಡುತ್ತ, ಸರಕಾರದ ನೌಕರರೆಲ್ಲರೂ ಹಿಂದಿಯನ್ನು ಕಲಿಯಬೇಕು ಇದೊಂದು ಅದರ ಆರಂಭಕ ಹಂತ ಎಂದು ಹೇಳಿದರು ಸರಕಾರವು ಹಿಂದಿ ಕಲಿಸುವ ವರ್ಗಗಳನ್ನು ನಡೆಸುವುದಲ್ಲದೆ, ಸಾದ್ಯವಿರುವಲ್ಲಿ ಹಿಂದೀ ಶಿಕ್ಷಣ ಕೇಂದ್ರಗಳ ಸಹಾಯವನ್ನು ಪಡೆಯುವುದೆಂದೂ ತಿಳಿದು ಬಂದಿದೆ.

NOTICE

Since the cost of Newsprint has risen up abnormally, we have increased the tariff rates on all advertisements including Court Notices with immediate effect

Manager,

ಉಡುಪಿ

ಪರಮ ಗುರುಗಳ ಆರಾಧನೆ—

ಜಾತುರ್ಮಾಸ್ಯ ದೀಕ್ಷಾಬದ್ಧರಾಗಿರುವ ಸರ್ವಜ್ಞಪೀಠ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ತಾ ೧೪ರಂದು ಶ್ರೀಕೃಷ್ಣ ಮಠದಲ್ಲಿ ತಮ್ಮ ಗುರುಗಳ ಆರಾಧನೆಯನ್ನು ನೆರವೇರಿಸಿದರು

ರಾಷ್ಟ್ರನಾಯಕರಾರು?

ರಾಷ್ಟ್ರದಲ್ಲಿ ನಾಯಕರ ಸಂಖ್ಯೆ ಹೆಚ್ಚುತ್ತ ಹೋಗುವಾಗ, ಯಾರ ಪಟವನ್ನು ತೊಗುಹಾಕಬೇಕೆಂಬ ಸಮಸ್ಯೆಗೆ ಬೊಂಬಾಯಿ ಸರಕಾರದವರು ಒಂದು ಪರಿಹಾರವನ್ನು ಸೂಚಿಸಿದ್ದಾರೆ ಸರಕಾರೀ ಕಚೇರಿಗಳಲ್ಲಿ ವಿಭಾಗದ ಕಛೇರಿಗಳಲ್ಲಿ ಹಾಗೂ ಶಾಲೆಗಳಲ್ಲಿ ನೇತು ಹಾಕುವ ಮಟ್ಟಿಗೆ ಅದೂ ಬೊಂಬಾಯಿ ರಾಜ್ಯದ ಮಟ್ಟಿಗೆ ಮಾತ್ರ, ಇದು ಅನ್ವಯಿಸುವುದು ಈ ನಾಯಕರೆಂದರೆ ಡಾ ರಾಜೇಂದ್ರ ಪ್ರಸಾದ, ಮಹಾತ್ಮಗಾಂದಿ ಛತ್ರಪತಿ ಶಿವಾಜಿ, ಮಹಾರಾಜ, ದಾದಾಭಾಯಿನವರೋಜಿ ಲೋಕಮಾನ್ಯತಿಲಕ, ಸರ್ದಾರ ವಲ್ಲಭಭಾಯಿ ಪಟೇಲ ಹಾಗೂ ಪ್ರಧಾನಿ ನೆಹರೂ—ಎಂಬ ಏಳು ಜನರು ಇವರ ಚಿತ್ರಪಟಗಳ ಎರಡು ಮಾದರಿಗಳನ್ನೂ ಸರಕಾರವು ಮಂಜೂರ ಮಾಡಿರುವುದೆಂದು ತಿಳಿದುಬಂದಿದೆ

ವೈದ್ಯಸಾಯೋತ್ಸವಗಳ ರಕ್ಷಣೆ

ವೈದ್ಯಸಾಯೋತ್ಸವಗಳ ರಕ್ಷಣೆಯನ್ನು ನೀತಿಯಲ್ಲಿ ಕ್ಲುಪ್ತಿಸಿ ಪೆಡ್ ಟೆರಂಟೈನ್ ಎಂಬ ಸೂತ್ರ ಕೀಟ ನಾಶಕ ಔಷಧ ವಸ್ತುವೊಂದನ್ನು ತಯಾರಿಸ ವಿಧಾನವನ್ನು ಹೃದಯವಾದಿರಲ್ಲಿರುವ ಪ್ರಾದೇಶಿಕ ಸಂಶೋಧನಾ ಪ್ರಯೋಗಶಾಲೆಯ ಅಭಿವೃದ್ಧಿ ಪಡಿಸಲಾಗಿದೆ

ಈ ನೂತನ ಕೀಟನಾಶಕ ಔಷಧ ವಸ್ತುವು ಅಗ್ಗವಾಗಿ ದೇವದಲ್ಲದೇ ದೊರೆಯುವ ಕಚ್ಚಾ ಪದಾರ್ಥಗಳಿಂದ ತಯಾರಿಸಲ್ಪಟ್ಟಿದೆ ಈ ಕೀಟನಾಶಕ ಔಷಧ ವಸ್ತುವಿನಲ್ಲಿ ಬಳಸುವ ಕಚ್ಚಾ ಪದಾರ್ಥಗಳಾದ ಕೋರೀನ್ ಮತ್ತು ಟರ್ಪೆಂಟೈನ್ ತೈಲ ಭಾರತದಲ್ಲಿ ಹೇರಳ ಪ್ರಮಾಣದಲ್ಲಿ ದೊರೆಯುತ್ತವೆ

ಕ್ಲೋರಿನೆಟೆಡ್ ಟರ್ಪೆಂಟೈನ್ ವಸ್ತುವು ನೀರಿನಲ್ಲಿ ಕರಗುವುದಿಲ್ಲ ಆದರೆ ಸೀಮೆಎಣ್ಣೆ ಮುಂತಾದ ಜೈವಿಕ ದ್ರಾವಣಗಳಲ್ಲಿ ಸುಲಭವಾಗಿ ಕರಗುವುದು ಅಂಟಂಟಾಗಿ ಹಿಗಿಯದ ಸ್ವಭಾವವುಳ್ಳ ಈ ವಸ್ತುವು ನೊಣಗಳು ನೆಂಜಿ ಮರಿ, ಜಿರಳೆ, ತಿಗಣೆ ಮುಂತಾದವನ್ನು ನಾಶಪಡಿಸುವ ಗುಣ ಸಹಿತವಿರುವುದು

ಆಹಾರ ಧಾನ್ಯಗಳನ್ನು ನಾಶಪಡಿಸುವ ಕ್ರಿಮಿಕೀಟಗಳಿಗಂತೂ ಕ್ಲೋರಿನೇಟೆಡ್ ಟರ್ಪೆಂಟೈನ್ ದೊಡ್ಡ ಶತ್ರುವೇ ಆಗಿರುವುದು

ದೆಹಲಿಯಲ್ಲಿರುವ ಭಾರತದ ಮಲೇರಿಯಾ ಸಂಸ್ಥೆಯ ಪೈರೆಕ್ಟರ್‌ರವರ ವರದಿಯಪ್ರಕಾರ, ಕೆರ್ಲ್ಲರಿ ನೇಟೆಡ್ ಟರ್ಪೆಂಟೈನ್ ಧಿಡಿ ಪಿಗ ಸರಿಸಮನಾದ ಗುಣಾಂಶವನ್ನು ಪಡೆದಿರುವುದು

ಈ ಔಷಧ ವಸ್ತುವಿನ ತಯಾರಿಕೆಯನ್ನು ವಾಣಿಜ್ಯ ಪ್ರಮಾಣದಲ್ಲಿ ಕೈಗೊಳ್ಳಬಯಸುವವರು ಆರ್ಯುರ್ವೆದ—ಭಾರತ ದರ್ಶ್ಶಿಯ ಸಂಶೋಧನಾಭಿವೃದ್ಧಿ ಕಾರ್ಪೊರೇಷನ್, ಮಾಂಡಿ ಭವನ, ಲಿಟ್ಟನ್ ರಸ್ತೆ, ನವದೆಹಲಿ—1. ರ ನಿಗಾಸದೊಂದಿಗೆ ಪತ್ರವ್ಯವಹಾರ ನಡೆಸಬೇಕು

ಕಲಾ ವೃಂದದ — ವಾರ್ಷಿಕೋತ್ಸವ

ತಾ ೧೪ರಂದು ಸಂಜೆ ವೃಂದದ ಕಾರ್ಯಾಲಯದಲ್ಲಿ ಕಾಣಿಯಾರು ಮಠದ ಕಿರಿಯ ಶ್ರೀ ವಿದ್ಯಾವಾರಿಧಿ ತೀರ್ಥರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ ಯಾದವ ಸರಳಾಯರು ಸ್ವಾಗತ ಭಾಷಣಮಾಡಿದರು ಶ್ರೀ ಎ ಪರಿಮಳ ಭಟ್ಟರು ಕವಿತಾವಾಚನಮಾಡಿದರು ಶ್ರೀ ಎಸ್ ವೆಂಕಟರಾಜರು ವೃಂದದ ಸದಸ್ಯರಾಗಿ ಶಕ್ತಿಕೆಯ ಉತ್ಕೃಷ್ಟನೆ ಮಾಡಿದರು ಶ್ರೀಗಳಾದ ಸಿ ಕೃಷ್ಣದಾಸಾಚಾರ್ಯ, ಎಸ್ ಕೆ ಶ್ರೀಪತಿ ಆಚಾರ್ಯರು ಕಲೆಯ ಕುರಿತು ಮಾತನಾಡಿದರು ಅಧ್ಯಕ್ಷರು ಬಾಷಣ ಸ್ವದೀಯಲ್ಲಿ ದ್ದವರಿಗೆ ಪಾರಿತೋಷಕ ವಿತರಣೆ ಮಾಡಿ, ಕಲಾ ವೃಂದವು ಸಾಹಿತ್ಯ ಕ್ಷೇತ್ರದಲ್ಲಿ ಮಾಡುತ್ತಿರುವ ಕಾರ್ಯವನ್ನು ಶ್ಲಾಘಿಸಿದರು ಶ್ರೀ ಎಸ್ ರಾಮಚಂದ್ರ ಭಟ್ಟರು ಧನ್ಯವಾದಗಳನ್ನಿತ್ತರು ಶ್ರೀ ಯು ವಾಸುದೇವ ಭಟ್ಟರ ಜಾಯಿ ಹಾಡ್ಯಾರಿಕೆ, ಶ್ರೀ ಕೆ ಮಂಜುನಾಥಯ್ಯನವರ ಪಿಟೀಲು ವಾದನ ನಡುವೆ ಶ್ರೀ ಕೆ. ಮಾಧವ ಆಚಾರ್ಯರ ಮೃದಂಗವಾದನಯುಕ್ತವಾದ ಸಂಗೀತ ಕಚೇರಿಯು ನಡೆಯಿತು

ನಗರ ಸಭೆಯು

ತಾ ೧೪ರಂದು ಸಂಜೆ ಸಭಾಪತಿ ಶ್ರೀ ಕೆ ಕೈಗರ ಅಧ್ಯಕ್ಷತೆಯಲ್ಲಿ ಜರಗಿತು ಸೊಳ್ಳೆ ಕಾಟ ನಿರೋಧಕ ಕಾರ್ಯಕ್ಕಾಗಿ ರೂಪಾಯಿ ೨೨೦ ಸಂಕ್ಷನ್ ಸಮಾಧಾನಮಾಡಿ ಕಮಿಶನರರ ಅಡಿಯಲ್ಲಿ ವಿರುದ್ಧ ಶ್ರೀ ಎಸ್ ಬೆಲಾಯ್ಯ ಸೆಟ್ಟರು ಮಾಡಿದ ಆಪಾಲನ್ನು ಪರಿಶೀಲಿಸಿ ಅವನ್ನು ತಿರಸ್ಕರಿಸಲಾಯಿತು ಸೆನಿಟರಿ ಇನ್ಸ್‌ಪೆಕ್ಟರ್ ಶ್ರೀ ಎನ್ ರಾಘವ ರಾಯರಿಗೆ ಸಮವೆಸ್ತ್ರ ಎರಿಸುವ ವಿಷಯದಲ್ಲಿ ಮುನಿಸಿಪಲ್ ಹೆಲ್ತ್ ಆಫೀಸರರು ಬರೆದ ನೋಟಿಸ ಕುರಿತು ಸುದೀರ್ಘ ಚರ್ಚೆ ನಡೆದು ಕೊನೆಗೆ ಅದನ್ನು ಒಪ್ಪಿಸಲಾಯಿತು ಸಾಟಲೈಟ್ ಸ್ಕೂಲ್ ಮತ್ತು ಡ್ರೈನೇಜ್ ಫಂಡಿಂದ ರೂ ೧೬,೦೦೦ ವನ್ನು ಮೈಸೂರು ಸರ್ಕಾರವು ಕೊಟ್ಟದ್ದರ ಪಟ್ಟಿಯ ಹಾಕಬೇಕೆಂದು ಸಾಮಾನ್ಯ ಮಾಡಿತು ಆಲ್ಬಾಯ್ ಮಲೆ ಮತ್ತು ಸುಂಪಾಲದ ತನಕ ಮುನಿಸಿಪಲ್ ಗಡಿಗಳನ್ನು ವಿಸ್ತರಿಸುವಿಕೆ ಇತ್ಯಾದಿ ಬಗ್ಗೆ ನಗರ ಸಭೆಯ ತಜ್ಞರಲ್ಲಿ ಮೈಸೂರು ದಿವಾನರ್ ಕಮಿಶನರರಿಗೆ ತಿಳಿಸಬೇಕೆಂದಾಯಿತು ಮುನಿಸಿಪಲ್ ಟ್ರೈಲರ್ಸ್ ಬಂಡಿಯ ಸ್ಥಾಪನೆ ಬಗ್ಗೆ ರೂಪಾಯಿ ೪೫೦/ ಪೆಟ್ಟ ಮಂಜೂರುಮಾಡಲಾಯಿತು ಕೆರೆಂಜಿಲ್ ಪೆಂಷನ ಎದುರು ತೆಯ ಅಕ್ರಮ ಮರದ ಬಣಗಿದ ಕೆಂಪಿಗಳನ್ನು ಮಾತ್ರ ಕಡಿಯುವ ಹೊಣೆಯ ಕಾನ್ಸಿಲಿನ ತೀರ್ಮಾನವಾಯಿತು ಕೆಲವು ಪ್ರಮುಖ ವಿಷಯಗಳನ್ನು ಚರ್ಚಿಸಲು ಕೌನ್ಸಿಲಿನ ವಿಶೇಷ ಸಭೆಯನ್ನು ಕರೆಯಬೇಕೆಂದು ಮುಂದಿನ ಅಭಿಪ್ರಾಯವಾಯಿತು.

ವನಮಹೋತ್ಸವ— ಇದೇ ತಾರೀಕು ೧೮—7—೫೮ರಿಂದ ೨೦ನೆ ವಾರ ವನಮಹೋತ್ಸವನ್ನು ಆಚರಿಸಲಾಗುವುದೆಂದೂ ಈ ಬಗ್ಗೆ ತಾ ೨೧ರಂದು ಉಡುಪಿ ತಾಲೂಕು ಆಫೀಸಿನಲ್ಲಿ ಜರಗಿದ ಕಾರ್ಯಕ್ರಮದಲ್ಲಿ ನಿಲ್ಲಿಗಾ ಭಾಗಿಗಳಾಗಬೇಕೆಂದೂ ಈ ವಾರಾವಧಿಯಲ್ಲಿ ಅವಸ್ಯ ಹೆಚ್ಚು ಉಸಿಯುಕ್ತ ಗಿಡ ಮರಗಳನ್ನು ನೆಟ್ಟು ಈ ಕಾರ್ಯಕ್ರಮವನ್ನು ಸರ್ವರೂ ಯಶಸ್ವಿಯಾಗಿಸಬೇಕೆಂದೂ ಉಡುಪಿ ತಾಲೂಕು ತಹಸಿಲ್ದಾರರು ವಿನಂತಿಸುತ್ತಾರೆ

ದ ಕ ಜಿಲ್ಲಾ ಕಾಂಗ್ರೆಸ್ ಮಹಾಸಭೆ— ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಇದೇ ತಾ ೨೦ನೆ ಆದಿತ್ಯವಾರ ಪೂರ್ವಾಹ್ನ ೧೦ ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜರಗಿ ಮಧ್ಯಾಹ್ನ 1 ಗಂಟೆಗೆ ಅಲ್ಪ ವಿರಾಮವನ್ನು ಕೊಂಡುವುದು ಅಪರಾಹ್ನ 3½ ಗಂಟೆಗೆ ಪುನಃ ಆರಂಭವಾಗಿ ೨ ಗಂಟೆಯ ತನಕ ಜರಗುವುದು

ವನಮಹೋತ್ಸವ ಸಮಾರಂಭ

ತಾ 21 7.58ರಿಂದ ಮಣಿಪಾಲದಲ್ಲಿ ವಿನಂತಿ

ಈ ವರ್ಷ ವನಮಹೋತ್ಸವ ಸಪ್ತಾಹ ಸಮಾರಂಭವು ವಿಭಾಗೀಯ ಕಾರ್ಯಕ್ರಮಗಳು ದಿ ಇದೇ ಜುಲೈ 31ರಿಂದ ಜರಗಲಿರುವುದು. ಕಳೆದ 3 ವರ್ಷಗಳಲ್ಲಿಯೂ ಈ ಮಹೋತ್ಸವವು ಬಹು ಯಶಸ್ವಿಯಿಂದ ಕೊನೆಗೊಂಡಿದೆ. ಅಂತೆಯೇ, ಈ ವರ್ಷವು ಜನರೆಲ್ಲರೂ ಉತ್ಸಾಹಪೂರ್ವಕ ಸಹಿಸಿಕೊಳ್ಳುವ ನೆಟ್ಟ ಸಸ್ಯ ಜಿಲ್ಲೆಯಲ್ಲಿಯೂ ಹೆಚ್ಚು ಹಸುರಾಗಿ ತೋರುವಂತೆ ಮಾಡಿರೆಂದು ನನ್ನ ಕೋರಿಕೆ

ಈ ಉತ್ಸವದ ಅಂಗವಾಗಿ ಜುಲೈ 28, 29, 30ನೇ ತಾರೀಕುಗಳಲ್ಲಿ ಮಂಗಳೂರು ತಾಲೂಕು ಕಛೇರಿಯ ಮುಂಭಾಗದಲ್ಲಿ ಸಸ್ಯ ಪ್ರದರ್ಶನ ನಡೆಯಲಿದೆ ಅಲ್ಲಿ ಬೀಜ ಹಾಗೂ ಸಸಿಗಳನ್ನು ಸುಲಭ ಕ್ರಯಕ್ಕೆ ಪಡೆಯಬಹುದು ಎಲ್ಲರಿಗೂ ಸುಸ್ವಾಗತವಿದೆ

(ಸಹಿ) ವೈ ಸಿ ಹೊಂಬಾಳಯ್ಯ,
ಡಿಪ್ಯುಟಿ ಕಮಿಶನರ್.

ಪೊಲಿಸು— ಪೊಲಿಸು ಗವರ್ನಮೆಂಟ್ ಫಿಶರೀಸ್ ಪ್ರಾಸ್ಕೂಲಿನ ಉದ್ಘಾಟನೆಯನ್ನು ತಾ ೨೦ರಂದು ಜಿಲ್ಲಾ ಕಮಿಶನರ್ ಶ್ರೀ ವೈ ಸಿ ಹೊಂಬಾಳಯ್ಯನವರು ನೆರವೇರಿಸಿದರು ಡಾ ಎಸ್ ಜೆಪ್ಪಾ, ಎಸ್ ಎಲ್ ಸಿ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನಾ ನಂತರ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಜಿ ಸುಬ್ಬರಾಯರು ಸ್ವಾಗತಿಸಿದರು ಶ್ರೀಯುತ ದಯಾನಂದರು ಸಂದೇಶ ಪ್ರಾಪನೆ ಮಾಡಿದರು ಶ್ರೀಗಳಾದ ಎಮ್ ರಮಾನಂದ ಶೆಟ್ಟಿ, ಶಾಂತಾರಾಮ ಪೈ, ಭಾಸ್ಕರ ಸೆಟ್ಟಿ, ಎಚ್ ಕೆ ತಿಂಗಳಾಯ ಮತ್ತು ಅನಂತ ಕಲುಣಾಕರನವರು ಕಾಲೋಚಿತ ಮಾತುಗಳನ್ನಾಡಿದರು ಶ್ರೀ ಎಲ್ ಕೊರಗಪ್ಪನವರು ಧನ್ಯವಾದಗಳನ್ನಿತ್ತರು.

ಕಡಿಯಾಳಿ ಹಿರಿಯ ಬುನಾದಿ ಶಾಲೆ

ಕಡಿಯಾಳಿ ಹಿರಿಯ ಬುನಾದಿ ಶಾಲೆಯ ಹಿರಿಯ ವರ್ಗಗಳ ವಿನೋದಾನಂದ ಸಮಾಜದ ಪ್ರಥಮ ಸಭೆಯು ಕಳೆದ ತಾ 13 7 58 ರಂದು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ವಿ ಗುರುರಾಜ ಭಟ್ಟ ಇವರ ಅಧ್ಯಕ್ಷತೆಯಲ್ಲಿ ಜರಗಿತು ಸಾಂಸ್ಕೃತಿಕ ಮಂತ್ರಿಕುಮಾರಿ ಕೆ ಕಲಾವತಿ ಬ್ಯಾಯರವರು ಗತ ಸಭೆಯ ವರದಿ ಹಿಡಿದರು ಕಾರ್ಯಕ್ರಮಗಳ ಅಂಗವಾಗಿ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಶ್ರೀ ಯು. ಸದಾಶಿವ ರಾಯರು ಅನಾವರಣ ಮಾಡುತ್ತಾ ಭಾರತೀಯ ಧರ್ಮ ಸಂಸ್ಕೃತಿ, ಸಾರ್ವಕಾಲಿಕತೆಗಳನ್ನು ದೇಶ ವಿದೇಶಗಳಲ್ಲಿ ಪಸರಿಸಿದ ಈ ಮಹಾನ ಭಾವರು ಸಾರಿದ ತತ್ವಗಳನ್ನು ಸಮೂಹದ ಸದಸ್ಯರು ಅನುಸರಿಸಬೇಕೆಂದು ಅವಶ್ಯಕತೆಯನ್ನು ಒತ್ತಿ ಹೇಳಿದರು ಶ್ರೀ ಕೃಷ್ಣಮೂರ್ತಿ ಆಚಾರ್ಯರು ಮಹಾತ್ಮಾ ಗಾಂಧೀಜಿಯವರ ಭಾವಚಿತ್ರವನ್ನು ಅನಾವರಣ ಮಾಡುತ್ತಾ ಬುನಾದಿ ಶಿಕ್ಷಣದ ಜನಕ ಬೊಪಾಜಿಯವರ ಆದರ್ಶಗಳನ್ನು ಪಾಲಿಸುವುದು ಆತ್ಮ ಎಂದರು ಪ್ರಾಚಾರ್ಯ ವಿದ್ಯಾಧ್ಯಾಸ ನಮಿಸಿ ವಿದ್ಯಾಭ್ಯಾಸ ಎಂಬ ವಿಷಯದ ಕುರಿತಾದ ಚರ್ಚೆಯಲ್ಲಿ ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ಅಧ್ಯಾಪಕರ ಪರವಾಗಿ ಶ್ರೀ ಕೆ ಗೋಪಾಲ ಸೆಟ್ಟಿಗಾರ್, ಹಾಗೂ ಪಾಸು ಶ್ರೀಗಾರರು ಮಾತನಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿವೇಕಾನಂದ ಸಮಾಜವು ಆದರ್ಶವಾಗಿರಬೇಕು ಹಾಗೂ ಸೂಕ್ತ ಸಲಹೆಗಳನ್ನು ಇತ್ತರು ಕೊನೆಯಲ್ಲಿ ಸಾಂಸ್ಕೃತಿಕ ಮಂತ್ರಿಕುಮಾರಿ ಕಲಾವತಿ ಬ್ಯಾಯರವರು ಧನ್ಯವಾದ ಅರ್ಪಿಸಿದರು

ಗೋ ವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ ಸಮಸ್ತರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥಗಂಭೀರಣೆ, ಏಕಪಾತ್ರ ಜ್ಞಾನ ಹಾಗೂ ಪಾರಿಭಾಷಿಕ ಶಿಕ್ಷಣ ಪೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

69 ಪುಟಗಳು: ಬೆಲೆ 0—3—0

ಸಮಯ ಪ್ರೆಸ್, ಉಡುಪಿ

ಸಮುದ್ರರಾಜನಿಂದ ಭೂಕೊರೆತೆ

(ಜನೇ ಪುಟದಿಂದ)

ದಪ್ಪ ತಡೆಗಟ್ಟು ಸಹಿತವಾದ ಸಮುದ್ರ ಗೋಡೆಗಳನ್ನು ಪ್ರಯೋಗಾರ್ಥವಾಗಿ ನಿರ್ಮಿಸಲಾಯಿತು. ಈ ಗೋಡೆಗಳು ಕಳೆದ ವರ್ಷದ ಮಳೆಗಾಲವನ್ನು ಯಶಸ್ವಿಯಾಗಿ ಎದುರಿಸಿದವು. ತಡೆಗಟ್ಟು ಸಹಿತವಾದ ಸಮುದ್ರದ ಗೋಡೆಗಾಗಿ ತಗಲುವ ಸಂರಕ್ಷಣಾ ವೆಚ್ಚವು ಬಹುಮಟ್ಟಿಗೆ ತಗ್ಗಿದೆ. ತಡೆಗಟ್ಟುಗಳ ಶಿರೋಭಾಗಗಳು ೩೦ ಅಡಿಗಳು ಅಲೆಗಳ ಬಡಿತದಿಂದ ಹಾಳಾದವು ನಷ್ಟಗೊಂಡ ಶಿರೋಭಾಗಗಳ ಸರಾಸರಿ ಉದ್ದವು ೩೦ ಅಡಿಗಳು ಹೀಗೆ ನಷ್ಟವಾದ ಶಿರೋಭಾಗಗಳನ್ನು ದುರುಸ್ತು ಪಡಿಸಬೇಕಾಗಿದೆ.

ಆದ್ದರಿಂದ ಸೂಕ್ತವಾದ ಉದ್ದದ ತಡೆಗಟ್ಟುಗಳನ್ನು ಗೊತ್ತಾದ ಸ್ಥಳಗಳಲ್ಲಿ ಹಾಕುವುದರಿಂದ ಬಹುಮಟ್ಟಿಗೆ ಭೂಸವೆತವನ್ನು ತಪ್ಪಿಸಬಹುದು ಎಂಬ ವಿಷಯವು ಪ್ರಯೋಗಗಳಿಂದ ವ್ಯಕ್ತಪಟ್ಟಿತು. ೨೦೦ ಅಡಿಗಳ ಉದ್ದದ ತಡೆಗಟ್ಟುಗಳನ್ನು ಹೊಂದಿರುವ ಸಮುದ್ರಗೋಡೆಯು ತೀರ ಪ್ರದೇಶಕ್ಕೆ ಸರಿಣಾಮಕಾರಿಯಾದ ರೀತಿಯಲ್ಲಿ ರಕ್ಷಣೆಯನ್ನು ಕೊಡಬಲ್ಲದೆಂದು ತಿಳಿದಿರುವುದು. ಆದರೆ ತಡೆಗಟ್ಟುಗಳು ೪೦೦ ಅಡಿಗಳ ಅಂತರದಲ್ಲಿರುವುದು, ಸಮುದ್ರತೀರದಲ್ಲಿ ನೀರಿನ ಪಟ್ಟದಿಂದ ೯ ಅಡಿಗಳ ಸೋಲ್ಬಾಗವನ್ನಲ್ಲಿಯೂ, ಶಿರೋಭಾಗದಲ್ಲಿ ಏಳು ಅಡಿಗಳ ಎತ್ತರದಲ್ಲಿಯೂ ಇರಬೇಕಾಗುವುದು.

ಪ್ರಾರಂಭದಲ್ಲಿ ಐದೂವರೆ ಮೈಲಿಗಳಷ್ಟು ತೀರ ಪ್ರದೇಶವನ್ನು ರಕ್ಷಿಸಲಾಗುವುದು. ಪ್ರಯೋಗಾರ್ಥವಾಗಿ ಸಮುದ್ರ ಗೋಡೆಗೆ ಟಾರನ್ನು ಬಳಿದು ಸಮುದ್ರದ ಕಡೆ ಇರುವ ಗೋಡೆಗೆ ಕಲ್ಲರಗು ಹಾಕಿದ ತಂತಿಯನ್ನು ಉಪಯೋಗಿಸಬೇಕೆಂದು ಕೇರಳ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ. ಈಗಾಗಲೆ ಕಟ್ಟಲ್ಪಟ್ಟದ್ದು ಯಶಸ್ವಿಯಾಗಿರುವ ಒಂದು ವೈಲಿ ಉದ್ದದ ಪ್ರಯೋಗಾರ್ಥದ ಸಮುದ್ರ ಗೋಡೆಗೆ ಸೇರಿದಂತೆ ಎರಡು ಫರ್ಲಾಂಗ್‌ಗಳ ಉದ್ದದ ಗೋಡೆಯ ಬಗ್ಗೆ ಈ ಪ್ರಯೋಗ ಮಾಡಲಾಗುವುದು.

(ಭಗೀರಥದ ಸೌಜನ್ಯದಿಂದ)

ಉಡುಪಿ ಡಿ. ಮು. ಕೋರ್ಟನಲ್ಲಿ

O. S. 62 of 1958

ಜಲಜಾಕ್ಷಿ ಅಮ್ಮ ಕೂಡಾ —ವಾದಿರು

ನುತ್ತು

1 ಸುರೇಶ 2 ಸತೀಶ 3 ದಿನೇಶ 4 ರಮೇಶ ಸೀತಾರಾಮ ಶೆಟ್ಟಿ ಮೃತ್ಯುನರ ಪುತ್ರರು-ಗಾರ್ಡಿಯನ್-ತಾಯಿ ಸೀತಮ್ಮ ಶೆಡ್ತಿ-ಸೀತಾರಾಮ ಶೆಟ್ಟಿ ಹೆಂಡತಿ-ಉಡ್ಪಿ ತಾಲೂಕು ಶಿವಳ್ಳಿ ಗ್ರಾಮ-3 to 6ನೇ —ಪ್ರತಿವಾದಿರು.

ಸದ್ರಿ ಮೃತರ ಪ್ರತಿವಾದಿರೆ ಗಾರ್ಡಿಯನರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ಪಾದಿರು ಮೂಲಗೇಣಿ ಬಾಕಿಬಗ್ಗೆ ನೀವು ವಗೈರೆರ ಮೀರ್ ಮಾಡಿದ ಮೇಲ್ಕಂಡ ದಾವೆಯು 18-7-1958ಕ್ಕೆ ಇಟ್ಟುರುಪದ್ರಿಂದ ಉದಾಸರಿಸುವಂಥಾಏದ್ದರೆ ಆ ದಿನ್ನ ಪೂರ್ವಾಹ್ನ 10 ಘಾಂಟೆಗೆ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳಬಹುದು. ತಪ್ಪಿದ್ದ ನಿನ್ನ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Ramakrishna Rao,
Vakil for Plffs.

Udipi Dated 14—7—1958.

ಮಂಗಳೂರು

ನಗರ ಸಭೆಯ ಸಾಮಾನ್ಯ ಸಭೆಯು — ತಾ. 11ರಂದು

ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ನಗರದ ಈಗಿರುವ ವಾರ್ಡುಗಳು ಸಮಾನ ರೀತಿಯಲ್ಲಿ ಇಲ್ಲದಿದ್ದುದರಿಂದ ಅದನ್ನು ಸರಿಪಡಿಸಲು ತಕ್ಕ ಕಾರ್ಯಕ್ರಮವು ಕೈಕೊಳ್ಳಲು ಶ್ರೀಗಳಾದ ಜಿ. ಪಿ. ಮಣಿಪಾಲ, ಭಾಸ್ಕರ ರೈ, ಅಚ್ಯುತ ಪ್ರಭು, ಅಬ್ದುಲ್‌ಖಾದರ್, ರಾಮರಾಜ ಕಿಣಿ, ಖಾಸಗಿ ಕೊಡಿಯಾಲಬೈಲ್, ವಿಶ್ವನಾಥ ಕಾಮತ್, ಡಾ. ಎಮ್. ಪಿ. ಶಾಸ್ತ್ರಿ ಮತ್ತು ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿರವರ ಸಮಿತಿಯೊಂದು ರಚಿಸಲ್ಪಟ್ಟಿತು. ಮಂಗಳೂರು ನಗರದಲ್ಲಿ ಸುರಭಿವನವೊಂದನ್ನು ಕಟ್ಟಿಸುವರೆ ಸರಕಾರವು ಅರ್ಧ ಹಣವನ್ನು ಗ್ರಾಂಟು ರೂಪದಲ್ಲಿಯೂ, ಅರ್ಧವನ್ನು ಸಾಲ ರೂಪದಲ್ಲಿಯೂ ಕೊಡಬೇಕೆಂಬುದಾಗಿ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಮಂಗಳೂರು ನಗರ ಸಭೆಯನ್ನು ‘ಸಿಟಿ ಮುನಿಸಿಪಾಲಿಟಿ’ಯಾಗಿ ಪರಿಗಣಿಸಲಾಗುವುದರಿಂದ ಅದು ಸರಕಾರದೊಡನೆ ಸೇರಿಪತ್ರ ವ್ಯವಹಾರ ನಡೆಸಬಹುದೆಂಬುದಾಗಿ ಡಿಪಿಜರ್‌ಲ್ ಕಮೀಷನರರಿಂದ ಬಂದ ಪತ್ರವನ್ನು ರಿಕಾರ್ಡುಮಾಡಲಾಯಿತು. ಮುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡಿನಲ್ಲಿದ್ದ ಅಧಿಕ ಹಣವಾದ ರೂಪಾಯಿ 10,000 ವನ್ನು ಮೈಸೂರು ಸರಕಾರದ 4½% ಅಭಿವೃದ್ಧಿ ಸಾಲಕ್ಕೆ ಪಂಪಿಸಿಕೊಡುವುದೆಂದು ನಗರಸಭೆಯ ನಿರ್ಣಯವಾಯಿತು.

ಮಂಗಳೂರು ಪತ್ರಿಕೋದ್ಯೋಗಿ ಸಂಘದ — ವಾರ್ಷಿಕ ಮಹಾ ಸಭೆಯು

ತಾ 6ರಂದು ಜರಗಿ ಹೊಸಸದಸ್ಯರ ಕಾರ್ಯಕಾರೀ ಸಮಿತಿ ರಚನೆಯಾಯಿತು. ಶ್ರೀಗಳಾದ ಕೆ ಆರ್. ಆಚಾರ್ ಮತ್ತು ಕೆ. ಎಸ್. ಉದಾಧ್ಯರು ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು

ಅಮೇರಿಕಾ ಪ್ರವಾಸಾನುಭವ—

ಸ್ಥಳೀಯ ಬೆಸೆಂಟ್ ಬಾಲಿಕಾ ಪಾರಕಾರಿಯ ಸಾಲ್ವೆಮೆಂಟಿನಲ್ಲಿ, ಅಲ್ಲಿನ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಾಧಾರಾಯರು ತಮ್ಮ ಈಚೆಗಿನ ಅಮೇರಿಕಾ ಪ್ರವಾಸದ ಅನುಭವಗಳನ್ನು ತಿಳಿಸಿದರು. ಕುಮಾರಿ ಬಿ. ಮಾಲತಿ ಸಭಾಧ್ಯಕ್ಷತೆವಹಿಸಿದ್ದರು. ಕುಮಾರಿ ಹೇಮಲತಾನೆ ಸ್ವಾಗತಮಾತುಗಳನ್ನಾಡಿದರು.

ಯುವಕ ಕಾಂಗ್ರೆಸಿನ ಸಾಪ್ತಾಹಿಕ ಸಭೆಯು—ತಾ. 6ರಂದು

ಶ್ರೀ ಮಹಾಬಲ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಎಮ್. ಇದಿನಬ್ಬ, ಕೆ. ಆರ್. ಆಚಾರ್, ಎಮ್. ಪಿ ಪೊದಲಾದವರು ಸಾಹಿತ್ಯ ವಿಚಾರದಲ್ಲಿ ಮಾತನಾಡಿದರು.

ವಿತರಣಾ ಸಮಾರಂಭ—ನಂಬ್ರ 5ನೇ

ಜಪ್ಪು ಮಂಡಲಕಾಂಗ್ರೆಸ್ ಕಚೇರಿಯಲ್ಲಿ ತಾ. 10ರಂದು ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಶಾಲಾ ಸಂಬಳ ವಿತರಣಾ ಸಮಾರಂಭವು ಡಾ. ಯು. ಪಿ. ಸುಬ್ಬರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜೆ. ಬಿ. ಶೆಟ್ಟರು ಸ್ವಾಗತಿಸಿದರು. ಶ್ರೀಗಳಾದ ಕೆ. ಎಸ್. ಎನ್. ಅಡಿಗ, ಎಚ್. ಕೆ. ತಿಂಗಳಾಯ, ಎನ್‌ಂ ಶ್ರೀನಿವಾಸ ನಾಯಕ್ ಪೊದಲಾದವರು ನುಡಿಲ ಕಾಂಗ್ರೆಸಿಗೆ ಶುಭಾಶಯ ಕೋರಿ ಮಾತನಾಡಿದರು. ಶ್ರೀಮತಿ ಸರೋಜಿನಿ ಅಡಿಗರು ಪುಸ್ತಕ ಮತ್ತು ವಿದ್ಯಾರ್ಥಿ ವೇತನಗಳನ್ನು ವಿತರಣೆಮಾಡಿದರು. ದಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಮ್. ರಮಾನಾಥರು ಧನ್ಯವಾದಗಳನ್ನಾಡ್ತರು.

ವಿದ್ಯಾಯ ಸತ್ಕಾರ— ಮಂಗಳೂರ,

ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸೀ ವಿ. ರೋಜೇರವರಿಗೆ ಗುಲ್ಬರ್ಗಾದ ಸರಕಾರೀ ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ವರ್ಗವಾಗಿರುವುದರಿಂದ ತಾ. 12ರಂದು ಕಾಲೇಜಿನ ಸ್ಟಾಫ್ ಕ್ಲಬ್ಬಿನವರು ಅವರಿಗೆ ವಿದಾಯ ಸತ್ಕಾರಕೂಟವನ್ನೇರ್ಪಡಿಸಿದ್ದರು.

ಜಿಲ್ಲಾ ಲಲಿತಕಲಾ ಶಿಕ್ಷಕರ ಸಂಘದ—ವಾರ್ಷಿಕ ಮಹಾ ಸಭೆಯು

ತಾ. 13ರಂದು ಕೆನರಾ ಹೈಸ್ಕೂಲಿನಲ್ಲಿ ಶ್ರೀ ಪೀಟರ್ ಡಿ ಸೋಜಾರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಟಿ. ವೆಂಕಟರಾಯರು ವರದಿಯನ್ನೋದಿದರು. ಶ್ರೀಗಳಾದ ಕೆ. ಎಸ್. ಪದ್ಮನಾಭಾಚಾರ್ಯ, ಶ್ರೀನಿವಾಸ ಉಡುಪ, ಕೆ. ಜನಾರ್ಧನ, ಕೆ. ಜಿ ರಾವ್, ಲಕ್ಷ್ಮಣ ನಾಯ್ಕ ಪೊದಲಾದವರು ಕಾಲೋಚಿತ ಮಾತುಗಳನ್ನಾಡಿದರು ಹೊಸ ಸದಸ್ಯರ್ಕ್ಕೆ ಶ್ರೀಗಳಾದ ಪೀಟರ್ ಡಿ ಸೋಜಾ, ಅಧ್ಯಕ್ಷ; ಕೆ. ಎಸ್. ಪದ್ಮನಾಭ ಆಚಾರ್ಯ, ಉಪಾಧ್ಯಕ್ಷ; ಟಿ. ವೆಂಕಟ್ರಾವ್, ಕಾರ್ಯದರ್ಶಿ, ಶ್ರೀಮತಿ ಎಮ್. ಅಲ್ಬರ್ಟ್ಸ್, ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ದ ಕ. ಜಿಲ್ಲಾ ಪ್ರಜಾ ಸೋಶಲಿಸ್ಟ್ ಪಾರ್ಟಿಯ—ಕಾರ್ಯಕಾರೀ ಸಮಿತಿ ಸಭೆಯು

ತಾ. 13ರಂದು ಫೆಲಿಕ್ಸ್ ಹೈ ಬಜಾರಿನಲ್ಲಿ ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಒಕ್ಕಲುಹಿತ ಮಸೂದೆಯನ್ನು ಜ್ಯಾರಿಗೆ ತರಬೇಕು-ಅಪ್ಪರ ತನಕ ಗೇಣಿ ಬಾಕಿಗೆ ದಾವೆ ಹೂಡಿ ಒಕ್ಕಲು ಎಬ್ಬಿಸಿದ ಹಾಗೆ-ನೀರಾವಳಿ ಅಚ್ಚು ತರುವಂತೆ ಮೈಸೂರು ಸರಕಾರವನ್ನು ಒತ್ತಾಯಿಸುವ ಒಂದು ಮನವಿಯನ್ನು ಒಪ್ಪಿಸಲು ಶ್ರೀಗಳಾದ ಕೆ. ಆರ್. ಕಾರಂತ, ಬಿ. ಎಸ್. ಲೂವಿಸ್, ಯು. ಎಸ್. ನಾಯಕ್, ಎಮ್. ಎಲ್. ಎ. ಮತ್ತು ವಿ. ಶ್ರೀನಿವಾಸ ಶೆಟ್ಟಿ, ಎಮ್. ಎಲ್. ಎ. ಇವರು ಒಂದು ಶಿಷ್ಟಮಂಡಲಿಯು ಮೈಸೂರು ಸರಕಾರದ ಸಂಬಂಧಪಟ್ಟ ಮಂತ್ರಿಯವರನ್ನು ಕೂಡಬೇಕಂದು ಮಾತಾಡಬೇಕೆಂದು ನಿರ್ಣಯಿಸಲಾಯಿತು.

ಪುತ್ತೂರು— ಸಮಾಜಸೇವಾ ಸಂಘವೊಂದನ್ನು ತಾ 6ರಂದು ಸಮಾಜ ಶಿಕ್ಷಣ ವಿಸ್ತರಣಾಧಿಕಾರಿ ಶ್ರೀ ಮಹಮ್ಮದ್ ಕುಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಸ್ಥಾಪಿಸಲಾಯಿತು. ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಎಸ್. ರಮೇಂದ್ರನಾಥ ರೈ (ಅಧ್ಯಕ್ಷ), ಬಿ. ಎಸ್. ರಾಮಣ್ಣ ರೈ (ಕಾರ್ಯದರ್ಶಿ), ವಿಜಯಕುಮಾರ್, ಅನಂತ ಶೆಣೈ, ಕೇಶವ ಶೈ, ಅನಂತ ಭಂಡಾರಿ, ಕಿಟ್ಟಣ್ಣ ಗೌಡ, ಗೋಪಾಲಕೃಷ್ಣ, ಶ್ರೀಧರ ನಾಯ್ಕ, ಚಂದ್ರಶೇಖರ ನಾಯ್ಕ, ಮೋಸೆಸ್, ಹರಿಕೃಷ್ಣ (ಇತರ ಸದಸ್ಯರು) ಆರಿಸಲ್ಪಟ್ಟರು.

ಅಧಮಾರು— ಸ್ಥಳೀಯ ಹೈಸ್ಕೂಲಿನಲ್ಲಿ

ತಾ. 9ರಂದು ಅಲ್ಲಿಯ ಹೆಡ್ಮಾಸ್ಟರ್ ಶ್ರೀ ಕೆ. ಜಿ. ಕೀಲಿಯರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರೇಮಿಗಳ ಸಭೆಯು ಜರಗಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಉಡುಪಿಯ ಉ. ಲ ಕಿಣಿಯರ ಪರಿಚಯವನ್ನು ಹಿಂದೀ ಅಧ್ಯಾಪಕರಾದ ಶ್ರೀ ಬಿ.ಎಸ್. ಶೆಟ್ಟರು ಮಾಡಿಕೊಟ್ಟರು ಶ್ರೀ ನಾಜರ್ ಅಲಿಯವರು ಸ್ವಾಗತಿಸಿದರು. ಶ್ರೀ ಕೆ. ಎಸ್. ಶಾಸ್ತ್ರಿಗಳು ಧನ್ಯವಾದವಿತ್ತರು

ಪುಂಜಾಲುಕಟ್ಟೆ—ಬೆಳ್ತಂಗಡಿ ತಾಲೂಕಿನ ಪುಂಜಾಲು ಕಟ್ಟೆಯಲ್ಲಿ

ದ. ಕ. ಜಿಲ್ಲಾ ಬೋರ್ಡಿನ ಕನ್ನಡಿಯಿಂದ ಹೈಸ್ಕೂಲು ಒಂದನ್ನು ತಾ. 14ರಂದು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಸುಂಜಯ್ಯ ಹೆಗ್ಡೆಯವರು ಉದ್ಘಾಟಿಸಿದರು. ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಅಧ್ಯಕ್ಷ ಶ್ರೀ ಎಸ್. ಮುಕುಂದ ರಾವ್, ಎಮ್. ಎಲ್. ಸಿ. ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಕೇಶವ ಬಾಳಿಗರು ಸ್ವಾಗತಮಾತುಗಳನ್ನಾಡಿದರು. ಶ್ರೀ ಪಿ. ಎಸ್. ಪಡುಬಿದ್ರಿಯವರು ಮೈಸೂರಿನ ಆರೋಗ್ಯಮಂತ್ರಿ ಡಾ. ಕೆ. ಕೆ. ಹೆಗ್ಡೆ ಹೊದಲಾದವರಿಂದ ಬಂದ ಸಂದೇಶಗಳನ್ನೋದಿದರು. ಸಭಿಕರ ಪರವಾಗಿ ಶ್ರೀಗಳಾದ ಡಿ. ಸುಬ್ಬರಾವ್, ಡಾ. ನಾರಾಯಣರಾವ್, ಜನಾರ್ಧನ ಶೆಟ್ಟಿ, ಸೇವ ನಮಿರಾಜಮಲ್ಲಿ, ಕೆ. ಫಾ ಸಿ. ಪಿ. ಡಿ'ಸೋಜ, ಬಿ. ಶ್ರೀನಿವಾಸರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು ಶ್ರೀ ಪದ್ಮನಾಭ ರೈಗಳು ಧನ್ಯವಾದವಿತ್ತರು.

ಕಾರ್ಕಳ ಡಿ. ಮು. ಕೋರ್ಟನಲ್ಲಿ

O. S. 127/1958

ದಾದಿ ಯಾನೆ ಗುಲಾಬಿ ಹೆಗ್ಡಿ—ವಾದಿಳು

ಅಣ್ಣಪ್ಪ ಹೆಗ್ಡೆ ಕೂಡಾ —ಪ್ರತಿವಾದಿರು

3. ಕೊರಗು ಹೆಗ್ಡೆ, ಚೆನ್ನಕ್ಕ ಹೆಗ್ಡಿ ಮಗ.
7. ಬಾಡು ಹೆಗ್ಡೆ
8. ಸೋಮಕ್ಕ ಹೆಗ್ಡಿ
9. ಅಮ್ಮಕ್ಕ ಹೆಗ್ಡಿ
10. ಸಾಂತು ಹೆಗ್ಡೆ
11. ರುಕ್ಮಿಣಿ ಹೆಗ್ಡಿ } ಲಿಂಗಮ್ಮ ಹೆಗ್ಡಿ ಮಕ್ಕಳು
13. ವಾಸಪ್ಪ ಹೆಗ್ಡೆ } ಕೂಸಮ್ಮ ಯಾನೆ ಶೀತು
14. ದಾದು ಹೆಗ್ಡೆ } ಹೆಗ್ಡಿ ಮಕ್ಕಳು
16. ಅಪ್ಪಿ ಹೆಗ್ಡಿ
17 ಜಾಜಿ ಹೆಗ್ಡಿ
18. ಪದ್ಮಯ್ಯ ಹೆಗ್ಡೆ
19. ಸುಶೀಲ ಹೆಗ್ಡಿ
20. ಗೌರಮ್ಮ ಹೆಗ್ಡಿ } ಜೆರಿಯಮ್ಮ ಹೆಗ್ಡಿ ಮಕ್ಕಳು
21. ಕಮಲ ಹೆಗ್ಡಿ
22. ವಿಠಲ ಹೆಗ್ಡೆ
23. ಮರಿಯಕ್ಕ ಹೆಗ್ಡಿ } ಕೋಮಕ್ಕ ಹೆಗ್ಡಿ ಮಕ್ಕಳು
24. ಗಿರಿಜ ಹೆಗ್ಡಿ — ಅಮ್ಮಕ್ಕ ಹೆಗ್ಡಿ ಮಗಳು

3—ತಿಂದ 11 — ತಿಂದ 24ನೇ ವರೇಗಿನ ಪ್ರತಿವಾದಿರು ಕಾರ್ಕಳ ತಾಲೂಕು ಹೊಸಂಗಡಿ ಗ್ರಾಮದ ಕೊಡಮಣಿ ಎಂಬಲ್ಲಿಯೂ 13ರಿಂದ 20ನೇ ವರೇಗಿನ ಪ್ರತಿವಾದಿರು ಕಾರ್ಕಳ ತಾಲೂಕು ಸಮಾಸಾಡು ಗ್ರಾಮದ ಕಲ್ಲಬೆಟ್ಟು ಮನೆ ಎಂಬಲ್ಲಿಯೂ ಇರುತ್ತಾರೆ.

ಮೇಲ್ಕಂಡ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ನಿಮ್ಮ ಕುಟುಂಬದ ವೀರನ್ನು ಹೆಗ್ಡಿ ವಗೈರೆರು ತಾ. 15-8-1938ರಲ್ಲು ರುಕ್ಮಿಣಿ ಅಮ್ಮ ಕೂಡಾ 2 ಜನರಿಗೆ ರೂ. 2000/ಕ್ಕೆ ರ್ರಿ. ನಿಶಿ ಬರೆಕೊಟ್ಟು ತೋರದವು ದಸ್ತೈವಜನ ಬಾಬ್ತು ಸದ್ರಿ ದಸ್ತೈವಜನ ಸ್ಥಿ ಅಂಶದ ಅಸಲು ಬಡ್ಡಿ ವಸೂಲು ಮಾಡುವ ಹಕ್ಕನ್ನು ಸದ್ರಿ ರುಕ್ಮಿಣಿ ಅಮ್ಮ ಕೂಡಾ 2 ಜನರಿಂದ ತಾ. 30-8 1956ರಲ್ಲು ವಾದಿಳು ರ್ರಿ. ನಿಶಿ ಟ್ರಾನ್ಸ್ಫರ ಪಡೆದು ಸದ್ರಿ ಅರ್ಧಾಂಶದ ಅಸಲು ರೂ. 1000 - ಮತ್ತು ತಾ. 1-5-1956 ರಿಂದ 31-3-1956ರ ವರೇಗಿನ ಬಡ್ಡಿ ವರಿಸ್ಟ್ರಿ ನೋಟಿಸಿನ ಬಾಬ್ತು ವಗೈರೆ ಒಟ್ಟು ರೂ. 1105 — 62 N. P. ಬರವಣಿಕೊಳ್ಳುವರೆ ವಾದಿಳು ನಿಮ್ಮ ವಗೈರೆರ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 5-8-1958ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ಸದ್ರಿ ತಾ. 5-8-1958ಕ್ಕೆ ಮೇಲ್ಕಂಡ ಕೋರ್ಟನಲ್ಲಿ ಘಂಟೆ 10ಕ್ಕೆ ನೀವು ಖುದ್ದಾಗಲೀ ವ ವಕೀಲರ ಮೂಲಕವಾಗಲೀ ಹಾಜ್ರಾಗಿ ಉದಾಸರಿಸತಕ್ಕದ್ದು. ತಪ್ಪಿದರೆ ಸದ್ರಿ ಕೋರ್ಟನವರೇಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟು ಹುಕ್ಮ ಪ್ರಕಾರ ಈ ನೋಟಿಸು ಪ್ರಕಟಿಸಿಯಾದೆ.

D Venkatesh Bhat,
ವಾದಿಳ ಕಡೆ ವಕೀಲ.

ಕಾರ್ಕಳ, 11-7-1958.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ,
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ನಾರದ ಮಹಾನುಭಾವ—

ಶ್ರೀ ಶ್ರೀಮನ್ನಾರಾಯಣ

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಜಾನ್ ಡಿಕ್‌ವಾಟರ್ ಮತ್ತವರ ಸರಿಸಮಾನರಾದ ಅನ್ಯ ಅಗ್ರಗಣ್ಯ ಆಂಗ್ಲ ಸಾಹಿತ್ಯಕಾರರೊಡನೆ ಭೇಟಿಯಾದಾಗ, ಒಬ್ಬ ಭಾರತೀಯ ಮೇಧಾವೀ ಯುವಕನು ಸ್ವದೇಶಕ್ಕೆ ವಾಪಸು ಮೊದಲಬಾರಿಗೆ ಮಗನವಾಡಿಯಲ್ಲಿ ಮಹಾತ್ಮಾಜೀಯವರನ್ನು ಕಂಡರೆ, ಆಗ ಬಾಪೂ ಮತ್ತು ಅವನೊಡನೆ ನಿನ್ನ ಲಿಖಿತ ಪ್ರಶ್ನೋತ್ತರವಾಗುವುದೆಂದು ಆಡಿಕೊಂಡರು.

"ನನಗಾಗಿ ಎಂತಹ ಕೆಲಸ ಮಾಡುವುದು ನಿನಗೆ ಮೆಚ್ಚುಗೆಯಾಗಿದೆ?"

"ನಾನು ನಿಮ್ಮ ಸೇವೆಗಾಗಿ ಬಂದಿದ್ದೇನೆ; ನೀವೇ ದಯವಿಟ್ಟು ತಿಳಿಸಿರಿ."

"ನೀನು ವಿಲಾಯತಿಯಿಂದ ಮರಳಿ ಬಂದವನು. ಸಾಹಿತ್ಯಕ ಕಾರ್ಯಾಸಕ್ತನಾಗಿದ್ದೀಯಾ. ಆದರೆ, ಆ ಕೆಲಸ ನಿನಗೆ ದೊರೆಯಲಾರದು. ಚರಖಾ ಶಾಸ್ತ್ರವನ್ನು ನೀನು ಬಲ್ಲೆಯ? ನೋಡು ನನ್ನ ಈ ಚರಖ ಕೆಟ್ಟುಹೋಗಿದೆ. ಅದನ್ನು ನೀನು ಸರಿಮಾಡುವೆಯ?"

"ಚರಖದ ವಿಷಯ ನನಗೇನೂ ತಿಳಿಯದು. ಆದುದರಿಂದ, ಮೊದಲು ತಾವು ಅದರ ಶಾಸ್ತ್ರವನ್ನು ಕಲಿಸಬೇಕು."

"ಹಾಗಾದರೆ, ನಿನ್ನ ಎಲ್ಲ ಓದುಬರಹ ನಿರರ್ಥಕವಾಗಿದೆ ಎಂದು ತಿಳಿಯಬೇಕೆ? "ಓದಿ ಓದಿ ಕೋಚುಭಟ್ಟ" ಎಂಬ ಗಾದೆಯ ಮಾತನ್ನು ನಿನಗೆ ಅನ್ವಯಿಸಬೇಕಾಗುತ್ತದೆ!"

ನಿಜವಾಗಿಯೂ ಇಂತಹುದೇ ಸಂದರ್ಭ ಒದಗಿತ್ತು. ಅದುದರಿಂದಲೇ ಅಗೆದು ಮಾಡಿದ್ದ ಶಾಚಕೂಪಾದಿಗಳಿಗೆ ಮಣ್ಣು ಹರಡುವ ಕಾರ್ಯದಲ್ಲಿ ಆಶ್ರಮವಾಸಿಯೊಬ್ಬನಿಗೆ ನೆರವಾಗುವಂತೆ ತಿಳಿಸಿದರು.

ಕಾಲ ಕಳೆಯಿತು. ಈ ಹೊಸ ಯುವಕನು ದೇಶದ ಓರ್ವ ನಿಪುಣ ಗಾಂಧೀವಾದಿ, ಅರ್ಥಶಾಸ್ತ್ರಜ್ಞನಾಗಿ ಪರಿಣಮಿಸಿದನು. ಚರಖಾ ಶಾಸ್ತ್ರವನ್ನೇಗ ತನ್ನ ಆತ್ಮದಲ್ಲಿಯೇ ಅರಗಿಸಿಕೊಂಡಿದ್ದಾನೆ; ಭೂದಾನ, ಗ್ರಾಮದಾನ ಹಾಗೂ ವಿಭಿನ್ನ ವಿಕಾಸ ಯೋಜನೆಗಳ ಕುರಿತಾದ ಅವನ ಅಭಿಪ್ರಾಯಗಳು ಅಸಾಧಾರಣ ರೂಪ ತಾಳಿವೆ. ಇಂತಹ ವ್ಯಕ್ತಿಯೆಂದರೆ; ಯೋಜನಾ ಆಯೋಗದ ನೂತನ ಸದಸ್ಯರೆಂದು ಸೇರಿಸಲ್ಪಟ್ಟ ಶ್ರೀ ಶ್ರೀಮನ್ನಾರಾಯಣನು.

ಮೂರುಬಾರಿ ಅಖಿಲ ಭಾರತೀಯ ಕಾಂಗ್ರೆಸಿನ ಕಾರ್ಯದರ್ಶಿಗಳಾಗಿ ಆಯ್ಕೆಹೊಂದಿರುವ ಶ್ರೀ ಶ್ರೀಮನ್ನಾರಾಯಣರು ಒಬ್ಬ ಮಹಾ ಶಿಕ್ಷಾ ಶಾಸ್ತ್ರಿ, ನಿಪುಣ ಅರ್ಥಶಾಸ್ತ್ರಿ ಹಾಗೂ ರಾಜನೀತಿಕ ಮುಖಂಡರಾಗಿದ್ದಾರೆ. ವರ್ಧಾದ ವಾಣಿಜ್ಯ ಮಹಾ ವಿದ್ಯಾಲಯವನ್ನು ದೇಶದ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳ ಸಾಲಿನಲ್ಲಿ ನಿಲ್ಲಿಸಿದ ಯಶಸ್ಸು ಇವರದು. ಅವರಂತೆಯೇ ಕಾಂಗ್ರೆಸ್‌ನ ಸಂಘಟನೆಯಲ್ಲಿ ಈಗ ತೋರಿಬರುತ್ತಿರುವ ಶಿಥಿಲತೆಯನ್ನು ಹೋಗಲಾಡಿಸುವುದಕ್ಕಾಗಿ ಆಗಾಗ ಇವರು ಅಗಾಧ ಸಂಶ್ರಮ ಪಡುತ್ತಿರುವರು

ಶಿಕ್ಷಣ ತಜ್ಞರೂ ವಿಧಾನಸೇತ್ತರೂ ಆದ ಶ್ರೀಮನ್ನಾರಾಯಣರು ಕಳೆದ ವರ್ಷದಲ್ಲಿ ಇದೇ ಸಮಯದಲ್ಲಿ ಕೇರಳದ ಶಿಕ್ಷಣ ಮಸೂದೆಯ ಬಗ್ಗೆ ಭಿನ್ನಾಭಿಪ್ರಾಯವಿತ್ತುದನ್ನು ಯಾರೂ ಮರೆತಿರಲಾರರು. ಇದೇ ರೀತಿಯಲ್ಲಿ ಅವರು ಕಳೆದ ವರ್ಷದಲ್ಲಿ ಭಾರತ ಸರಕಾರದ ಆರ್ಥಿಕ ಕರಗಳ ಸಂಬಂಧದಲ್ಲಿ ಸ್ಪಷ್ಟಾಭಿಪ್ರಾಯವನ್ನು ತಾಳಿದ್ದಾರೆ. ಆರ್ಥಿಕ ಸಮಾನತೆಯನ್ನುಂಟು ಮಾಡುವುದಕ್ಕಾಗಿ ಸಂಪತ್ತಿ ಮತ್ತು ವ್ಯಯ ಕರಗಳನ್ನು ಇವರು ಸ್ವಾಗತಿಸಿದ ಮೇಲೆ ಬಹಳ ದಿನಗಳ ವರೆಗೆ ಅವರ ಆಲೋಚನಾ ಸಮ್ಮುವು ಇದೇ ಆಗಿತ್ತು.

ಗ್ರಾಮದಾನ ಚಳವಳಿಯೆಂದರೆ, ಭೂಮಿಯ ಸುವರ್ಣೀಕ್ಷಣದ ಕಾರ್ಯಕ್ರಮವೆಂದು ಶ್ರೀಮನ್ನಾರಣರು ತಿಳಿಯುತ್ತಾರೆ. ಗ್ರಾಮದಾನ ಭೂದಾನ ಈ ಎರಡು ಕಾರ್ಯಕ್ರಮಗಳೂ ಜೀವನ ಮೂಲ್ಯದಲ್ಲಿ ಪರಿವರ್ತನೆಯನ್ನುಂಟು ಮಾಡುವ ಶಕ್ತಿ ಸಹಿತವಾದ ಚಳವಳಿ. "ಇಂದಿನ ಸಮಾಜ ವ್ಯವಸ್ಥೆಯಲ್ಲಿ ಮಾನವನು ಸಮಾಜದಿಂದ ಏನಾದರೂ ಸ್ವಲ್ಪ ತೆಗೆದುಕೊಳ್ಳುವುದಕ್ಕೆ ಸಿದ್ಧಹಸ್ತನಿದ್ದಾನೆ; ಆದರೆ, ಅವನು ಸಮಾಜಕ್ಕೆ ಏನೇನೂ ಕೊಡುವ ಉತ್ಸಾಹವನ್ನು ತೋರಿಸುತ್ತಿಲ್ಲ" ಎನ್ನುತ್ತಾರೆ, ಶ್ರೀ ಮನ್ನಾರಾಯಣರು. ಸಮಾಜ ತುಂಬ ಈ ರೀತಿಯ ತ್ಯಾಗಕ್ಕೆ ಬದಲಾಗಿ ಭೋಗ ಮತ್ತು ಸ್ವಾರ್ಥ ಸರಾಯಣತೆಗಳಿಗೆದುರು ಬಂಗೇಳಿ ಬೇಕಾಗಿದೆ. ಅಂತಹ ದುರ್ಗುಣಗಳನ್ನು ಮೂಲೋಚ್ಚಾಟನೆ ಮಾಡಿ, ಸಮಾಜದ ಸ್ಥಿತಿಗತಿಗಳನ್ನು ಎತ್ತರಿಸುವುದಕ್ಕೆ ಯೋಜನಾ ಆಯೋಗವೇ ಯುವ ಮಾರ್ಗದರ್ಶನಕ್ಕೆ ನೂತನ ಸದಸ್ಯ ಶ್ರೀ ಶ್ರೀಮನ್ನಾರಾಯಣರಿಂದಲೂ ಅಮೂಲ್ಯ ಸೇವೆ ಸಲ್ಲುವುದೆಂದು ವಿಶ್ವಾಸವಿಡಬಹುದು. ಯೋಜನಾ ಆಯೋಗದ ಸರ್ವವಿಧದ ವಿಚಾರ ಧಾರೆಯಲ್ಲಿಯೂ ಕೂಲಂಕಷ ವಿಚಾರಮಾಡುವ ಶಕ್ತಿ ಇವರಲ್ಲಿದೆ; ಅವರ ಮಾರ್ಗದರ್ಶನದ ಉಪಯೋಗ ಭಾರತೀಯರಿಗೊದಗಲಿ.

ಸ್ವಾತಂತ್ರ್ಯದಲ್ಲಿ ದಾರಿದ್ರ್ಯದೊಡನೆ ಹೋರಾಡಬಲ್ಲ ಆತ್ಮಾಭಿಮಾನ ವಿಧಾನಗಳನ್ನು ವೈಜ್ಞಾನಿಕ ರೀತಿಯಲ್ಲಿ ಕಲಿಸಲಾಗುತ್ತಿದೆ. ಚಿತ್ರದಲ್ಲಿ ವೆಲ್ಸನ ಯುನಿವರ್ಸಿಟಿ ಕಾಲೇಜಿನ ಮಾನಸಿಕ ಶಾಸ್ತ್ರಾಧ್ಯಾಪಕರೊಡನೆ ಮಾನವ ಅನ್ವೇಷಕ ವಿದ್ಯಾರ್ಥಿಗಳು ಮಾತಾಡುತ್ತಿದ್ದಾರೆ.

ಲಿಪಿಯ ಬದಲು ಮನಸಮನ್ವಯವಾಗಲಿ

(೧೫ನೇ ಪುಟದಿಂದ)

ಳಿದ್ದಾರೆ. ಆದರೆ, ಆಂಧ್ರದ ಮುಖ್ಯಮಂತ್ರಿ ಶ್ರೀ ಸಂಜೀವ ರೆಡ್ಡಿಯವರು ಆಂಧ್ರ-ಮದ್ರಾಸ--ಕರ್ನಾಟಕಗಳ ವಿಲಯನವಾಗುವ ಸಂಭವವಿರುವುದನ್ನು ಬಹಿರಂಗಗೊಳಿಸಿದ್ದಾರೆ: ಕೇಂದ್ರ ಮಂತ್ರಿ ಗೋಪಾಲ ರೆಡ್ಡಿಯವರ ಮಾತಿನಲ್ಲಿ ಹೇಳುವುದಾದರೆ, "ಕನ್ನಡ ಮತ್ತು ತೆಲುಗುಗಳಿಗೆ ಏಕಲಿಪಿಯಿರುವುದರಿಂದ ಸಮಸ್ಯೆ ಬಗೆಹರಿಯದು" ಈ ಅಭಿಪ್ರಾಯಕ್ಕೆ ಅವರು ವಿರೋಧಿಯಲ್ಲವಾದರೂ, ಎಲ್ಲ ಭಾರತೀಯ ಭಾಷೆಗಳಿಗೂ ದೇವನಾಗರೀ ಲಿಪಿಯಿರುವುದು ಉತ್ತಮವೆನ್ನುತ್ತಾರೆ. ಆದರೆ, ತೆಲುಗು ಮತ್ತು ಕನ್ನಡಗಳಿಗೆ ಏಕಲಿಪಿ ಇರುವುದರಿಂದ ಸಮಸ್ಯೆ ಬಗೆಹರಿಯದೆನ್ನುವ ಶ್ರೀ ರೆಡ್ಡಿಯವರು ದೇವನಾಗರಿ ಲಿಪಿಯ ಅನ್ವಯದಿಂದ ಇದು ಬಗೆಹರಿಯುವುದೆಂದು ನಂಬಲು ಕಾರಣಗಳು ತಿಳಿಯುವುದಿಲ್ಲ. "ಏಕಲಿಪಿಯಿಂದ ಭಾಷೆಗಳಲ್ಲಿ ಐಕ್ಯವನ್ನು ಸ್ಥಾಪಿಸಬಹುದೆನ್ನುವುದು ಅಸಂಭವ. ಆಯಾ ಪ್ರದೇಶದ ಜನರ ಉಚ್ಚಾರಣೆ, ಸಂಪರ್ಕ ಮೊದಲಾದುವುಗಳಿಂದಲೇ ಭಾಷಾಭೇದಗಳು ಆಗಿರುವಾಗ, ಈ ಭೇದಗಳಲ್ಲಿ ಅಧಾರತವಾಗಿ ಪರಿಸುಷ್ಟವಾಗಿ ಎಲ್ಲ ಭಾಷೆಗಳೂ ಬೆಳೆದಿರುವಾಗ, ಅವುಗಳನ್ನು ಒಂದೇ ಲಿಪಿಯಲ್ಲಿ ಬರೆದುದರಿಂದ ಭಾಷೆಗಳಲ್ಲಿ ಏಕತೆ ಉಂಟಾಗುವುದು ಅಸಾಧ್ಯವೇ ಸರಿ-ಬದಲು ಬರವಣಿಗೆಯಲ್ಲಿ ಆಗಬಹುದು; ಅಷ್ಟೆ.

ಇನ್ನೂ ಒಂದು ಮಾತನ್ನು ಉಲ್ಲೇಖಿಸಬಹುದು. ಲಿಪಿಗಳಲ್ಲಿ ಏಕತೆಯಿರುವುದಕ್ಕಿಂತ ಮನಸ್ಸಿನಲ್ಲಿ ಏಕತೆಯಿರಬೇಕು. ನಮ್ಮ ದೇಶ ಇಂದು ಮಾನಸಿಕವಾಗಿ ಒಂದಾಗುವ ಅಗತ್ಯವಿದೆ. ಒಂದು ಮಂತ್ರಿಮಂಡಳಿಯು ಉರುಳಿ ಇನ್ನೊಂದು ಮಂತ್ರಿಮಂಡಳಿಯು ಅಧಿಕಾರಕ್ಕೆ ಬರುವಾಗ ಹಿಂದಿನ ಮಂಡಳದ ಧ್ಯೇಯಧೋರಣೆಗಳಲ್ಲಿ ಎಲ್ಲವನ್ನೂ ಬಿಟ್ಟುಕೊಟ್ಟು ಹೊಸತಾದ ಗುರಿಗಳನ್ನು ಘೋಷಿಸುವ ನಮ್ಮಲ್ಲಿ, ಪಕ್ಷಗಳಲ್ಲಿ, ಮಂತ್ರಿಮಂಡಳಿಯಲ್ಲಿ ಆಂತರಿಕವಾಗಿ, ಬಹಿರಂಗದಲ್ಲಿ, ಮಾನಸಿಕವಾಗಿ ಭಿನ್ನಾಭಿಪ್ರಾಯ, ವೈಮನಸ್ಯಗಳು ತಾಂಡವವಾಡುತ್ತಿರುವಾಗ, ಲಿಪಿಸಮನ್ವಯದ ಪ್ರಶ್ನೆಗಿಂತ ಮನಸಮನ್ವಯದ ಕೆಲಸ ಮೊದಲಾಗಬೇಕು. ಇದು ಕಾರ್ಯಕಾರಿಯಾದರೆ, ಆಗ ಲಿಪಿಸಮನ್ವಯವೂ ಅನುಪಯೋಗಿಯಾದರೂ, ಇಷ್ಟೊಂದು ಸಮಸ್ಯೆಗಳಿಂದ ಕೂಡಿರಲಾರದೆಂದು ಹೇಳಬಹುದು.

'ಲಿಪಿಸಮನ್ವಯ' ವೆಂಬುದೊಂದು ದೊಡ್ಡ ಮಂತ್ರಿಸಾರೆ. ಅದರಲ್ಲಿ ಎಲ್ಲವೂ ಸೇರಿ ಜಗತ್ತಿಗೊಂದೇ ಲಿಪಿಯಾಗಬೇಕು ಎನ್ನುವ ಮಹಾ ಮೇಧಾವಿಗಳೂ ನಮ್ಮಲ್ಲಿದ್ದಾರೆ! ಲಿಪಿಯು ಒಂದಾದ ಮಾತ್ರಕ್ಕೆ ಭಾಷೆ ಒಂದಾಗಲಿಲ್ಲ; ಸಂಸ್ಕೃತಿ ಒಂದಾಗಲಿಲ್ಲ, ಮನಸ್ಸು ಒಂದಾಗಲಿಲ್ಲ, ಜೀವನ ಪದ್ಧತಿ ಒಂದಾಗಲಿಲ್ಲ—ಎಂಬ ಕಟು ಸತ್ಯವನ್ನು ತಿಳಿಯದಿರುವುದು ಶೋಚನೀಯ! ಆದುದರಿಂದ, 'ಲಿಪಿಸಮನ್ವಯ'ದ ಮಾತೆತ್ತುವರು ಸತ್ಯಸುಮ್ಮನಿರಲಿದು ದೇಶದ ಜಗತ್ತಿನ ಐಕ್ಯ, ಮೈತ್ರಿಗಳಿಗಾಗಿ ಹೆಣಗಾಡಿದರೆ, ಆಗ ಅದರಿಂದ ಸ್ವಲ್ಪವಾದರೂ ಅಪೇಕ್ಷಿತ ಮತ್ತು ಆವಶ್ಯಕ ಪ್ರಯೋಜನ ಸಿಗಬಹುದು. ಅದು ಬಿಟ್ಟು ಅನಪೇಕ್ಷಿತವಾದ ಮತ್ತು ಅನಗತ್ಯವಾದ ಗುಲ್ಲೆಬ್ಬಿಸಿದರೆ, ಏನೋ ಗುಂಡುವಾರಿದ ಸದ್ದಾದೀತು, ಗುರಿಮಾತ್ರ ಉರುಳದು ಎಂಬುದು ಚಿರಸತ್ಯ

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕ,ನರಕ	3=00
ಸಂಚಯತು	2=50
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಸರವಾಣು ಇಂದು ನಾಳೆ	3=00
ಸನಿಕ್ಕೆ	2=50
ಮೈಲುಕಲ್ಲಿನೊಡನೆ ಮಾತುಕತೆಗಳು	1=50
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

೬೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತದೆ.

ಬಾಟ್ಲಿವಾಲಾ ಎಗ್ಲೊಮಿಕ್‌ಶ್ಚರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೆಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ದಿವ್ಯದರ್ಶನ ದೊರೆಯಲಿಲ್ಲ

(೨ನೇ ಪುಟದಿಂದ)

ವದ್ದಾಗಿ ತೋರಲಿಲ್ಲ. ಆದರೆ ಇಂದು ಅದನ್ನು ನೆನೆದಾಗ ದುಃಖವು ಇಮ್ಮಡಿಸುತ್ತಿದೆ. ತನ್ನ ಮನಸ್ಸಿಗೆ ಅದು ಇಂದು ಹೆಚ್ಚಿನ ವೇದನೆಯನ್ನುಂಟುಮಾಡುತ್ತಿದೆ.

ಆದರೂ ತಾನು ತನ್ನ ತಾಯಿಯ ಬಳಿ ಬೆಳೆದುದು. ಸುಮಾರು ಹನ್ನೆರಡು ವರ್ಷಗಳ ತನಕ ತಂದೆ ಸತ್ತರೂ ಸುಖದಿಂದ ತಾಯಿಯ ದುಡಿಮೆಯಿಂದ ಬದುಕಿದುದು. ಆದರೆ ಇಂದು ಅದೇ ತಾಯಿಯ ದುಡಿಯುವ ಸ್ಥಿತಿಯಲ್ಲಿಲ್ಲ. ಮಿತಿಮೀರಿದ ದುಡಿಮೆಯಿಂದಾಗಿ ಕ್ಷಯ ರೋಗಕ್ಕೆ ತುತ್ತಾಗಿದ್ದಾಳೆ ಅವಳಿಗೆಯೈ ಇಂದಿಗೆ ನಿಂತಿದೆ. ಇಷ್ಟು ಸಮಯ ಅವಳ ದುಡಿಸುವಿಕೆಯಿಂದ ಜೀವಿಸುತ್ತಿದ್ದ ತಾನು ಇಂದು ಅವಳ ಅಸಹಾಯಕ ಪರಿಸ್ಥಿತಿಯಲ್ಲಿ ನೆರವಾಗದಿದ್ದರೆ ತುಂಬಾ ತಪ್ಪಾದೀತು—ಹೀಗೆ ಮೆಲುಕು ಹಾಕುತ್ತಾ ಸಾಗುತ್ತಿದ್ದ. ಹುಡುಗನು ಅಳು ನಿಲ್ಲಿಸಿದ. ಯಾವುದೋ ಒಂದು ವಿಷಯವು ಮರೆತುದು ನೆನಪಿಗೆ ಬಂದಂತಾಯಿತು. "ಹೌದು. ಈ ದಿನ ರಥಬೀದಿಯಲ್ಲಿ ಉತ್ಸವ ಸಾಯಂಕಾಲ ಹಲವರು ಬಂದು ಕೂಡುವರು. ಈಗಲೇ ಹೋಗುತ್ತೇನೆ. ಎಂದು ಇಲ್ಲದ ಉತ್ಸಾಹವನ್ನು ತಂದುಕೊಂಡು ನೆಹರು ಮೈದಾನದ ರಸ್ತೆಯಿಂದ ರಥಬೀದಿಗೆ ಧಾವಿಸಿದ.

ದಾರಿಯಲ್ಲಿ "ಐಸ್ ಕ್ಯಾಂಡಿ" ಎಂದು ತನ್ನ ನಿತ್ಯ ಮಂತ್ರವನ್ನು ಜಪಿಸುತ್ತಲೇ ಇದ್ದ ನಡೆದ ರಥಬೀದಿಗೆ ಬಂದ. ಸಂಜೆ ಸುಮಾರು ಮೂರು ಗಂಟೆ ಹೊತ್ತು ಸಾಧಾರಣವಾಗಿ ಜನ ತಿರುಗಾಡುತಿತ್ತು. ಹುಡುಗ ಕೂಗುತ್ತಾ ತಿರುಗಿದ ಹಲವರು ಕ್ಯಾಂಡಿ ಕೊಂಡರು ಕ್ಯಾಂಡಿಗಳನ್ನು ಮಾರಿದ. ಮಂಡರ ಮೋಜಿಗೆ ಬಲಿಬೀಳಲಿಲ್ಲ. ಬೀಳಲು ಅತನ ಮನಃಸ್ಥಿತಿ ಬೇಗನೇ ಮನೆಯನ್ನು ಸೇರಬೇಕೆಂಬ ಹಂಬಲ ತಾಯಿಯ ಅಸ್ವಸ್ಥತೆ ಹುಡುಗ ಇಡೀ ರಥಬೀದಿಯನ್ನು ಸುತ್ತಿದ

ಸಂಜೆಯಾಗಲು ಜನಜಂಗುಳಿ ಹೆಚ್ಚಿತು. ಜಾತ್ರೆಗೆ ಜನ ದೆಚ್ಚಿಚ್ಚಾಗಿ ಬರತೊಡಗಿದರು ಹುಡುಗ ಬೇಗಬೇಗನೇ ಕ್ಯಾಂಡಿ ಮಾರಿದ. ಎಪ್ಪತ್ತೈದು ಕ್ಯಾಂಡಿಗಳು ಮಾರಿಯೋದುವು ಇನ್ನು ಕ್ಯಾಂಡಿಗಳು ಇಲ್ಲ. ಸಾಯಂಕಾಲ ಹೊಂಟೆ ಆರಾಗಿರಬಹುದು. ಮಾರುವುದಾದರೆ ಇನ್ನೂ ಕ್ಯಾಂಡಿಗೆ ೨ ತಂದು ಮಾರಬಹುದಿತ್ತು. ಹುಡುಗನ ಮನಸ್ಸು ತನ್ನ ತಾಯಿಯ ಕಡೆಗೆ ಹರಿಯಿತು. ಅಲ್ಲಿಂದ ಒಂದೇ ಸವನೆ ಕಂಪೆನಿಯತ್ತ ಓಡಿದ. ಕಿಸೆಯಲ್ಲಿದ್ದ ದುಡ್ಡನ್ನು ಮೇಜಿನ ಮೇಲೆ ಸುರುವಿದ ಮ್ಯಾಲಿಕ ದುಡ್ಡು ಎಣಿಸಿದ. ಎರಡು ರೂಪಾಯಿ ಐದೂವರೆ ಆಣೆ. ಹತ್ತೂಕಾಲಾಣೆ ಎಣಿಸಿ ಹುಡುಗನ ಕೈಗಿತ್ತ.

ಇನ್ನು ಮನೆಗೆ ಓಟ. ಇನ್ನೂ ಎರಡು ಮೈಲು ಹಾದಿ ಮನೆಗೆ ಕಿಸೆಯಲ್ಲಿ ದುಡ್ಡು ಅವನ ದಿನದ ದುಡಿತ ಅವನ ಕಿಸೆಯಲ್ಲಿದೆ. ಇನ್ನೆರಡು ಗಳಿಗೆಯಲ್ಲಿ ಮನೆ ಸಮೀಪದ ಅಂಗಡಿ ಮ್ಹಾಲಿಕನ ಮೋಜಿನೊಳಗೆ ಓಡುತ್ತೋಡುತ್ತಾ ನಿತ್ಯೋಪಯೋಗೀ ಸಾಮಾನುಗಳನ್ನೂ, ತಾಯಿಗೆ ಹಲವು ಔಷಧಿಗೆ ಬೇಕಾದ ವಸ್ತು ಕೊಂಡುಕೊಂಡು ನಿಟ್ಟುಸಿರು ಬಿಡುತ್ತಾ ಮನೆಯಕಡೆ ಧಾವಿಸಿದ

ಮನೆಯ ಬಾಗಿಲು ಅರೆ ಮುಚ್ಚಿತ್ತು. ನಾಣಿ ಬಂದವನೇ ಬಾಗಿಲನ್ನು ತೆರೆದು ಒಳಗಡೆ ನೋಡುತ್ತಾನೆ. ಏನನ್ನು? ಅತನ ತಾಯಿಯ ಕಣ್ಣುಗಳು ಮುಚ್ಚಿವೆ. ಮುಖ ನಿಸ್ತೇಜವಾಗಿದೆ. ಹೋದವನೇ ತಾಯಿಯ ದೇಹವನ್ನೊಮ್ಮೆ ಚೆನ್ನಾಗಿ ಅಲುಗಾಡಿಸಿದ. ಆದರೆ ನಿರ್ಜೀವವಾದ ದೇಹವನ್ನು ಅಲುಗಾಡಿಸಿದರೆ ಏನಾದೀತು? "ಅಮ್ಮಾ, ಇಕೋ ನಾನು ಬಂದಿದ್ದೇನೆ; ನಾಣಿ ಇಕೋ, ನೀನು ಹೇಳಲಿಲ್ಲವೇನೇ ಅಮ್ಮ, ಬೇಗ ಬಾ ಎಂದು. ಇದೋ ತಡವಾಗಿ ಬಂದುದಕ್ಕೆ ನನ್ನ ಮೇಲೆ ಕೋಪವೆ? ಯಾಕೆ ಮಾತಾಡುವುದಿಲ್ಲ? ಇಕೋ ಗಂಜಿಗ ಅಕ್ಕಿ ತಂದಿದ್ದೇನೆ. ನಿನಗೆ ಕಿತ್ತಳೆ, ಲಿಂಬೆಹುಳಿ, ಔಷಧಿ ತಂದಿದ್ದೇನೆ. ಕಾಲು ಕರುತ್ತೇನೆ. ಇಲ್ಲಿ ನೋಡಮ್ಮ ಅಮ್ಮಾ" ಎಂದು ತಾಯಿಯ ದೇಹದ ಮೇಲೆ ಬಿದ್ದು ಹೊರಳಾಡುತ್ತಿದ್ದಾನೆ! ಆದರೆ ತಾಯಿಯು ಮಗನನ್ನರಸಿಕೊಂಡು ಹೋಗಿಯಾಗಿತ್ತು. ಇನ್ನೆಲ್ಲಿ ಅವಳ ಮಾತು? ಮಾತೆಯ ದಿವ್ಯದರ್ಶನ ವಿನ್ನೆಂದು ದೊರೆತೀತು?

ಗುರುದೇವರ ಋಷಿತುಲ್ಯ ಜೀವನ ಶಕ್ತಿ

(೩ನೇ ಪುಟದಿಂದ)

ರಿಗೆ ಮಾನವತೆಯಲ್ಲಿದ್ದ ವಿಶ್ವಾಸವು ಬೆಳೆಯುತಿತ್ತು, ಈ ವಿಶ್ವಾಸವೇ ಜೀವನಪಥದಲ್ಲಿನ ವಿಘ್ನ ಬಾಧಗಳನ್ನು ಗಮನಿಸದೆ ಯಾವ ಪ್ರಕಾರದ ತಡೆಯೂ ಇಲ್ಲದೆ ಮುಂಬರಿಯುವ ಪ್ರೇರಣೆ ಯೂಯುವ ಸಾಹಿತ್ಯವನ್ನು ಅವರ ಹಸ್ತಗಳಿಂದ ಬರೆಯಿಸಿಟ್ಟು ಅಜರಾಮರವಾಗಿಸಿತು.

೧೯೪೦ರಲ್ಲಿ ಕಲಕತ್ತೆಯಲ್ಲಿ ಒಂದು ಹಿಂದೀ ರಂಗ ಪಂಚಕ್ಕೋಶ್ವರ ಸೇರ್‌ಗೋವಿಂದ ದಾಸರ "ಹಿಂಸಾ ಯಾ ಅಹಿಂಸಾ" ಎಂಬ ನಾಟಕವು ಅರಿಸಲ್ಪಟ್ಟಿತು. ಈ ನಾಟಕದ ಉದ್ಘಾಟನೆಗಾಗಿ ಗುರುದೇವರೊಡನೆ ನಿಜೇದಿಸಿಕೊಳ್ಳುವ ನಿರ್ಣಯ ವಾಯಿತು ಗುರುದೇವರು ಆ ಸಮಯದಲ್ಲಿ ತಮ್ಮ ಕಲಕತ್ತೆಯ ನಿವಾಸಸ್ಥಾನದಲ್ಲಿಯೇ ಉಳಿದುಕೊಂಡಿದ್ದರು. ಅವರೊಡನೆ, ಈ ವಿನಂತಿಯನ್ನು ಮಾಡಿಕೊಂಡಾಗ, ಅವರು ಮಗುಳ್ನಗುತ್ತ ವಿನಮ್ರಭಾವದಿಂದ, "ಯಾವ ವಸ್ತುವನ್ನು ನಾನು ನೋಡಿಲ್ಲವೋ ಅಥವಾ ಕೇಳಿಲ್ಲವೋ ಅದರ ಉದ್ಘಾಟನೆಯನ್ನು ಮಾಡಲು ಒಂದು ವೇಳೆ ನಾನು ಸ್ವೀಕರಿಸಲು ಅಸಮರ್ಥನಾದರೆ, ಅದನ್ನು ನನ್ನ ದೃಷ್ಟತೆಯೆಂದು ತಿಳಿಯಬಾರದು."

ನಾಲ್ಕು ದಿನಗಳವರೆಗೆ ನಿತ್ಯ ಅಪರಾಹ್ನ (ಮೂರು ಗಂಟೆ ಕಾಲ ಅವರು ಈ ನಾಟಕವನ್ನು ಓದಿಸಿಕೇಳಿದರೆ, ಆಗ, ನಾಟಕದ ಉದ್ಘಾಟನೆಯನ್ನು ಮಾಡಲು ಒಪ್ಪುವರೇ ಎಂದು ತಿಳಿಯುವ ಪ್ರಯತ್ನ ನಡೆಯಿತು. ಮರುದಿನ ಮೂರು ಗಂಟೆಗೆ ರವೀಂದ್ರ ಬಾಬುಗಳ ನಿವಾಸಸ್ಥಾನಕ್ಕೆ ಹೋದರು. ಮಹಾಕವಿಯು ಈ ನಾಟಕವನ್ನಾಲಿಸಲು ಸಿದ್ಧರಿದ್ದರು. ಒಂದು ಆರಾಮಾಸನದಲ್ಲಿ ಮಲಗಿದ್ದರು. ಅವರ ಸಮೀಪದಲ್ಲಿ ಬೇರೊಂದು ಕುರ್ಚಿಯಲ್ಲಿ ಕೂತು, ನಾಟಕಪೋದುವ ಕೆಲಸ ನಡೆಯಿತು. ಆ ನಾಟಕದ ಮೊದಲನೆಯಂಕವನ್ನು ಓದಿ ಹೇಳಲು ನಲುವತ್ತು ಮಿನಿಟುಗಳು ಬೇಕಾದುವು ಈ ಸಮಯದಲ್ಲಿ ಕವಿ ಸಾಮ್ರಾಟರು ಒಂದು ಶಬ್ದವನ್ನಾದರೂ ಆಡಲಿಲ್ಲ ಮತ್ತು ಅತ್ಯಂತ ಶ್ರದ್ಧೆಯಿಂದ ಕೇಳುತಿದ್ದರು ಅವರ ಕಣ್ಣುಗಳು ತೆರೆಯದಿರುತಿದ್ದರೆ, ನಿದ್ದೆ ಹೋಗಿದ್ದರೆಂದೇ ತಿಳಿದುಕೊಳ್ಳುವಂತಿತ್ತು ಆದರೆ, ಒಂದಂಕ ಮುಗಿದ ಮೇಲೂ ಅವರ ನಾಟಕದ ಕುರಿತಾಗಿ ಏನೂ ಆಡದೆ ಅನ್ಯ ವಿಷಯಗಳನ್ನೇ ಎತ್ತಿ ಕೆಲಹೊತ್ತು ತೆಗೆದರು.

ಉಳಿದ ದಿನಗಳೂ ಹಾಗೆಯೇ ಕಳೆದುವು ನಾಲ್ಕನೆಯ ದಿನ ನಾಟಕ ಪೂರ್ತಿಯಾಯಿತು ಅದುವರೆಗೆ ಗುರುದೇವರು ದಿನವೂ ನಾಟಕದ ಕುರಿತು ಏನನ್ನೂ ಹೇಳಲಿಲ್ಲ ಆದರೆ, ಆ ದಿನ ನಾಟಕ ಓದಿ ಮುಗಿಸಿದನೆಯೇ ಅವರು ಕುರ್ಚಿಯಿಂದೆದ್ದು, ನಾಟಕದ ಬಗ್ಗೆ ಎರಡು ಮಾತುಗಳನ್ನಾಡಿ ಉದ್ಘಾಟಿಸಲು ಒಪ್ಪಿಕೊಂಡರು.

ಒಮ್ಮೆ ತನ್ನ ಪರಿಚಿತರಾದರೆ, ಅವರನ್ನು ಗೌರವಿಸುವ ಬುದ್ಧಿ ರವೀಂದ್ರ ಲ್ಲಿದೆ. ತಮ್ಮನ್ನರಸಿಬಂದವರನ್ನು ಕೆಡೆನುಡಿಯುವ ಹವ್ಯಾಸವೆಂದೂ ರವೀಂದ್ರರಲ್ಲಿಲ್ಲ. ಹಾಗೆಯೇ ಅವರ ಸ್ನೇಹಪರತೆಯಿಂದಾಗಿ ಎಲ್ಲರೂ ಅವರ ಸ್ನೇಹಿತರಾಗಿದ್ದಾರೆ ರವೀಂದ್ರರ ನಿರ್ಮಲ ನಿಷ್ಕಲಂಕ ಮನಸ್ಸಿನಿಂದಲೇ ಅವರ ವಿಚಾರಗಳೂ ಪರಿಶುದ್ಧವಾಗಿವೆ ಎಂತಲೇ ಜಗದ್ವಂದ್ಯ ಕವಿವರರಾಗಿ ಪರಿಣಮಿಸಿದ್ದಾರೆ. ಇಂತಹ ಅಸಾಮಾನ್ಯ, ಅಪ್ರತಿಮ, ಪ್ರತಿಭಾ ಸಂಪನ್ನರಾದ ರವೀಂದ್ರರ ಕಥನ ಶೈಲಿಯ ಅನುಭವದಿಂದ ನಮ್ಮಲ್ಲಿ ಸುಪ್ತವಾಗಿದ್ದ (ಮೂಲೆಗೆ ಸೇರಿರುವ, ಪೊಲವಾಗುತ್ತಿರುವ ಮಾನವತೆಯನ್ನು ಎಚ್ಚರಗೊಳಿಸಿ ಬೆಳೆಸಬೇಕು; ಮಾನವತಾ ವಾದಿಗಳಾಗಿ ಮಾನವತೆಯ ಕಲ್ಯಾಣಕ್ಕಾಗಿ ನಾವು ಬದ್ಧ ಕಂಕಣರಾಗಬೇಕು, ಆಗ, ಲೋಕ ಬಯಸುತ್ತಿರುವ ವಿಶ್ವಶಾಂತಿಯೂ ಲಭ್ಯವಾಗದುಳಿಯದು.

ನಾವು ನಮ್ಮ ವಿಚಾರಗಳನ್ನು ನಿರ್ಮಲವಿರಿಸಿದರೆ ನಮ್ಮ ಕರ್ಮಗಳು ನಿರ್ಮಲವಾಗುವುವು. ಗುರುದೇವರಂತಹ ಮನಸ್ಸಿನಂತೆ ನಮ್ಮ ಸಾಹಿತಿಗಳ ವಿಚಾರ ಶೀಲತೆ, ನಿಷ್ಕಲಂಕತೆಯ ರುವುದಾದರೆ, ವಿಶ್ವ ಸಾಹಿತ್ಯ ನಿರ್ಮಾಣವು ಅವರಿಂದ ಆಗದಿರದು. ಹಿಂದಿನ ಕಾಲದಲ್ಲಿ ಋಷಿಗಳು ಸರ್ವಸಂಗ ಪರಿತ್ಯಾಗವಾಡಿ ಉನ್ನತ ಜೀವನವನ್ನು ಬಾಳುತಿದ್ದುದರಿಂದಲೇ ರಾಮಾಯಣ ಮಹಾಭಾರತದಂತಹ ವಿಶ್ವಸಾಹಿತ್ಯ ರಚನೆಯಾಯಿತು. ನಾನೃಷಿಃ ಕುರುತೇ ಕಾವ್ಯಂ ಎಂಬುಕ್ತಿ ಹುಟ್ಟಿಬಂದಿತು. ಅಂತೇಯೇ ಈಗ ಋಷಿತುಲ್ಯ ಪವಿತ್ರಜೀವನದಿಂದ ವಿಶ್ವಸಾಹಿತ್ಯ ನಿರ್ಮಾಣವನ್ನು ಕವೀಂದ್ರ ರವೀಂದ್ರರು ಮಾಡಿದರು. ತಮ್ಮ ಸಾಹಿತಿಗಳೂ ಈ ದಿಸೆಯಲ್ಲಿ ಸ್ರಯತ್ನಶೀಲರಾಗುವರೆಂದು ನಂಬಬಹುದೆ?

ನಿನಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಸ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ- ಐದಾಣೆ ಮಾತ್ರ ಟಿ. ಐ. ಪ್ರತ್ಯೇಕ

ನವಯುಗ ಪ್ರೆಸ್, ಉಡುಪಿ.

ಮದುವೆಗೆ ಹೋಳಿಗೆ ಮಾಡಿಯೇ ಇಲ್ಲವೆ?

ಇಂದು ಕನ್ನಡದ ಸಾನ- ಮಾನ

ಶ್ರೀ ಯು. ನಾ ಉಡುಪಿ, ವಿದ್ವಾನ್

ಮದುವೆಯ ದಿನದಂದು ಎರೆ ತುಂಬ ಹೋಳಿಗೆ ಬಡಿಸಲಾಗುವುದೆಂದು ಜನತೆ ದೃಢ ನಿಶ್ಚಯ ಮಾಡಿದ್ದರೂ ಮದುವೆ ಮುಗಿದು ಇಷ್ಟು ದಿನ ಕಳೆದರೂ ಹೋಳಿಗೆ ದೊರೆಯಲಿಲ್ಲ ಹಾಗಿರುವಾಗ ಸಹಜವಾಗಿ ಕೇಳಲೇ ಬೇಕಾದ ಪ್ರಶ್ನೆ 'ಮದುವೆಗೆ ಹೋಳಿಗೆ ಮಾಡಿಯೇ ಇಲ್ಲವೆ?'

ಕರ್ನಾಟಕದ ಏಕೀಕರಣವಾಯಿತು ಕನ್ನಡಿಗರ ಪ್ರಮುಖ ಜಟಿಲ ಸಮಸ್ಯೆಗಳೆಲ್ಲಾ ಸದ್ಯದಲ್ಲೇ ನಿವಾರಣೆ ಹೊಂದುವುವು, ಆಂಗ್ಲ ಭಾಷೆಯ ತೊತ್ತಿನಂತೆ ದಿನಗಳೆಯುತ್ತಿದ್ದ ಕನ್ನಡವು ನಾಡಿನ ರಾಣಿಯಾಗುವ ಕಾಲ ಬಂತು—ಎಂದು ಪ್ರತಿಯೊಬ್ಬ ಕನ್ನಡಿಗನೂ ಹಾರೈಸಿದ್ದನು. ಆದರೆ ಇಂದಿನ ದಿನಗಳಲ್ಲಿ ನಮ್ಮ ಮುಖಂಡರ ಚಟುವಟಿಕೆ ಮತ್ತು ಧ್ಯೇಯಗಳನ್ನು ಕಂಡರೆ ಕನ್ನಡಿಗರ ಹಾರ್ದಿಕ ಬಯಕೆಗಳು ಈ ತಲೆಮಾರಿನಲ್ಲಿ ಎಂದೂ ಪೂರೈಸುವಂತಿಲ್ಲವೆಂದು ತೋರುತ್ತದೆ. ವಿಜಯನಗರವು ಒಂದೇ ದಿನದಲ್ಲಿ ಕಟ್ಟಲ್ಪಡಲಿಲ್ಲವೆಂಬ ಗಾದೆಯು ಕನ್ನಡನಾಡಿಗೆ ಕೊಂದಿಕೆಯಾಗುವುದಿಲ್ಲ ಕಾರಣ, ನಾಡಿನ ಸ್ವಾತಂತ್ರ್ಯದೊಡನೆ ನುಡಿಯಬಂಧ ವಿಮೋಚನೆಯೂ ಆಗಬೇಕು ಇವೆರಡೂ ಜೊತೆಯಲ್ಲೇ ನಡೆಯುವ ಕಾರ್ಯ ನಾಡಿಗೆ ನುಡಿಯೇ ಪಂಚಪ್ರಾಣ ಒಂದಕ್ಕೆ ಸ್ವಾತಂತ್ರ್ಯ, ಇನ್ನೊಂದಕ್ಕೆ ದಾಸ್ಯದ ಸಟ್ಟ— ಇದು ಸುತರಾಂ ಅಸಾಧ್ಯ.

ನಮ್ಮವರಲ್ಲಿ ಹಲವರು ಮಾತೃಭಾಷಾ ಪ್ರೇಮವಿಲ್ಲದ ಆಂಗ್ಲ ಭಾಷಾ ಪ್ರಿಯರಾಗಿರುವರು. ಕೆಲವರು ಕರ್ನಾಟಕ ಏಕೀಕರಣಕ್ಕೆ ಅಡ್ಡಗಾಲು ಕೊಟ್ಟ ಮಹಾ ಮಹಿಮರು ಇನ್ನು ಅನೇಕರು ಹಿಂದೆ ಕರ್ನಾಟಕ ಏಕೀಕರಣವನ್ನು ವಿರೋಧಿಸಿ ಅಪಪ್ರಚಾರ ಮಾಡುತ್ತಿದ್ದು ಈಗ ಏಕೀಕರಣ ಪಕ್ಷಪಾತಿಗಳಾಗಿ ದೊಡ್ಡ ದೊಡ್ಡ ಮಾತುಗಳನ್ನಾಡುವವರು ಈ ಮೂರು ಗುಂಪುಗಳಲ್ಲಿ ಮೂರನೆಯ ಗುಂಪಿನವರಿಂದಲೇ ಕನ್ನಡ ನುಡಿಗೆ ಇಂದು ಸ್ಥಾನಮಾನವಿಲ್ಲದೆ ಹೋದುದು ಹೀಗೆಂದುದರಿಂದ ಉಳಿದ ಎರಡು ಪಂಡದವರಿಂದ ಕನ್ನಡ ನುಡಿಗೆ ಹಿತವಾಗಿದೆ ಎನ್ನಲು ಸಾಧ್ಯವಿಲ್ಲ ಇವು ನಮ್ಮವರ ದೌರ್ಬಲ್ಯ! ದೌರ್ಭಾಗ್ಯ! ಇಂಥವರು ರಸಾತಳಕ್ಕಿಳಿದಿದ್ದ ಕನ್ನಡತನವನ್ನು ಎತ್ತಿ ನಿಲ್ಲಿಸುವಂತಿಲ್ಲ

ಇಂದೂ ನಮ್ಮ ಮುಖಂಡರಲ್ಲಿ ಹಲವರ ಮುಖವು ಪಶ್ಚಿಮಕ್ಕೇ ತಿರುಗಿಕೊಂಡೇ ಉಂಟು ಪಶ್ಚಿಮವು ಕನ್ನಡಿಗರ ಭಾಗ್ಯ ಸೂರ್ಯನು ಅಸ್ತವಾದ ದಿಕ್ಕು! ಆ ದಿಕ್ಕಿನ ಜನಾಂಗವೇ ಪಾವನಳಾದ ಕರ್ನಾಟಕ ಮಾತೆಯನ್ನು ಛಿನ್ನ ಭಿನ್ನವಾಗುವಂತೆ ಮಾಡಿತು. ನಮ್ಮವರ ಸಂಸ್ಕೃತಿಯನ್ನು ಧೂಳೆಬ್ಬಿಸಿತು! ಆ ಜನಾಂಗದ ಭಾಷೆಯು ನಮಗೆ ಮೋಕ್ಷವನ್ನೇ ಕೊಡುವಂತಿದ್ದರೂ ನಮಗದೇ ಬೇಡವೇ ಬೇಡ. ನಮ್ಮ ಕನ್ನಡ ನುಡಿಯು ನಮ್ಮ ಜನಾಂಗವನ್ನು ನರಕ ಕುಂಡಕ್ಕೆ ನೂಕುತ್ತಿದ್ದರೂ ನಮಗೇ ಈ ನುಡಿಯೇ ಬೇಕು. ನಮ್ಮ ನುಡಿಯೊಂದಿಗೆ ನರಕದಲ್ಲಿ ಬೇಯುವುದಿದ್ದರೂ ನಮಗೆ ಇದೇ ಸಾ ಎ.

ಶ್ರೀ ಬಿ ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಕಂಗೊಳಿಸುವ ಸಾಹಿತ್ಯ ಪರಿಷತ್ತು ಕನ್ನಡಕ್ಕೆ ಸ್ಥಾನಮಾನವನ್ನು ದೊರಕಿಸುವುದಕ್ಕಾಗಿಯೇ ನಿರ್ಮಲ ಗಿದೆ ಅಲ್ಲದೆ ಕನ್ನಡದ ಕಹಳೆಯನ್ನೂದಬಲ್ಲ ವೀರರು ಕನ್ನಡ ನಾಡಿನಲ್ಲಿ ಸಾಕಷ್ಟಿದ್ದಾರೆ ಇವರು ಕರ್ನಾಟಕದ ತನ್ನತನವನ್ನು ಉಳಿಸಿಕೊಳ್ಳಲು ಸಾಕಾಗಿದ್ದಾರೆ ಆದರೆ ಅವರು ಅದಕ್ಕಾಗಿ ಚುರುಕಾಗಿ ದುಡಿಯಬೇಕು. ವೈದ್ಯಾಪ್ಯದ ಮಡಿಲನ್ನು ಸೇರುತ್ತಿರುವ ನವ ಗೆ ಕನ್ನಡವು ಕರ್ನಾಟಕದ ಅಧಿಕೃತ ಭಾಷೆಯಾದ ದನ್ನು ಕಾಣಬೇಕಾಗಿದೆ. ಈಗಿದ್ದ 'ಫಸ್ಟ್ ಲೇಂಗ್ವೆಜ್'ನ್ನು ನೋಡುವ ಆಶೆಯಲ್ಲ ಕನ್ನಡಿಗನಿಗೆ ನಾಡ ನುಡಿಯ ಹಿರಿಮೆಯನ್ನು ಕಾಣುವದಕ್ಕಿಂತ ಹೆಚ್ಚಿನ ವಿಜಯವು ಯಾವುದು? ಶಾಲಾ ಕೋಲೇಜುಗಳ ವಿದ್ಯಾರ್ಥಿಗಳು ಹಾರ್ದಿಕವಾಗಿ ಜಯಕರ್ನಾಟಕವೆನ್ನುವ ದಿನಗಳನ್ನು ನನಗೆನೋಡಬೇಕಾಗಿದೆ

ಮೈಸೂರು ಸರ್ಕಾರವು ಕರ್ನಾಟಕದಲ್ಲಿ ಕನ್ನಡವು ಅಧಿಕೃತ ಭಾಷೆಯಾಗುವದರ ಕುರಿತು ನಿಯಮ ಸಿದ ಒಂದು ತಜ್ಞರ ಸಮಿತಿಯ ವಿಷಯ ವಾಗಿ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಹೀಗೆ ಹೇಳುತ್ತಾರೆ "ಈ ಸಮಿತಿಯಲ್ಲಿ ಗಣ್ಯರಾದ ಮಹನೀಯರ ಜೊತೆಯಲ್ಲಿ ಕನ್ನಡ ಒರವೇ ಇರುವವರನ್ನು ಕೂಡ ಸದಸ್ಯರನ್ನಾಗಿ ಮಾಡಿ ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದ್ದಾರೆ ಆದರೆ ಈ ಮಾತ್ರದ ಸಂಸ್ಥೆಯಲ್ಲಿ ಕನ್ನಡ ನಾಡಿನ ಹಿರಿಯ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತನ್ನು ಉಪೇಕ್ಷಿಸಿದ್ದಾರೆ " ಇದನ್ನು ಕನ್ನಡಿಗರು ಕಿವಿದೆರೆದು ಕೇಳಬೇಕು—

ಇಂದು ಪ್ರತಿಯೊಬ್ಬ ಕನ್ನಡಿಗನ ಕಣ್ಣಮುಂದೆ ವಿಚಾರವಾಗಿ ಮೂರು ವಿಷಯಗಳನ್ನು ಇಟ್ಟುಕೊಳ್ಳಬೇಕಾಗಿದೆ ೧ ನಮ್ಮ ನಾಡು ಕನ್ನಡ ೨ ನಮ್ಮ ತಾಯಿಯ ನುಡಿ ಕನ್ನಡ ೩ ಕನ್ನಡಿಗರ ಸ್ಥಾನಮಾನವು ಕನ್ನಡ ನುಡಿಯ ಸ್ಥಾನಮಾನವನ್ನು ಹೊಂದಿರೆಂಡಿವೆ. ಕನ್ನಡಿಗರಿಗೆ ಯಾವ ಪ್ರಾಂತೀಯರಿಗೂ ಕಡಿಮೆಇಲ್ಲದ ಉಜ್ವಲ ಇತಿಹಾಸವಿದೆ, ದೇದಿಸ್ಯಮಾನವಾದ ಹಿರಿಯ ಸಂಸ್ಕೃತಿ ಇದೆ. ನಮ್ಮಲ್ಲಿಯೂ ಜಗತ್ತನ್ನೇ ತಲೆಬಾಗಿಸಿದ ರಾಜಕಾರಣಿಗಳೂ, ವೀರರೂ, ಪತ್ರಿಭಾವಂತರೂ ನೂರಾರು ಸಾವಿರಾರು ಮಂದಿ ಆಗಿ ಹೋಗಿದ್ದಾರೆ, ಕನ್ನಡಿಗರು ಪುರಾಣ ಕಾಲದಿಂದಲೂ ಯಾವ ಶಕ್ತಿಯನ್ನೂ ಯಾರಿಂದಲೂ ಕಡಕೇಳಿಲ್ಲ ಹೀಗೆಯೇ ಹಲವು ವಿವಿಧ ವರ್ಗಗಳ ದುಟಿಸುವ ಈಗ—ಈ ವರ್ತಮಾನ ಕಾಲದಲ್ಲಿ—ನನಗೆ ಯಾವ್ದೊಂದ ಭಾಷೆಯ ನೆರವಿಲ್ಲದಿದ್ದರೆ ನಾವು ಕೊಪಮಂಡೂಕಗಳಾಗುತ್ತೇವಂತೆ! ಇಂಗ್ಲಿಷು ನಮ್ಮನ್ನು ಬಿಟ್ಟರೆ ನಾವು ಶಿಲಾಯುಗದವರಾಗುತ್ತೇವಂತೆ! ಇಂದಿನ ಪರಿಸ್ಥಿತಿಯಲ್ಲಿ ನಮ್ಮ ವಿಶಾಲ ಹೃದಯದ ಉದಾತ್ತಮನಸ್ಸಿನ ಜನರು ನೀಚ ಸ್ವಾರ್ಥ ಪಿಶಾಚಿಯಿಂದ ಮೈಮರೆತು ಒಂದೊಂದು ವಿಧದಿಂದ ಒಬ್ಬರನ್ನೊಬ್ಬರು ಕರಿದು ಹುರಿದು ಮುಕ್ಕತ್ತಿದ್ದಾರೆ ಪಾಶ್ಚಾತ್ಯ ಸಂಸ್ಕೃತಿಯ ನೆಕಲೆತ್ತಿದ ನಮ್ಮ ನಾಡವರು ಆ ಸಂಸ್ಕೃತಿಯಿಂದ ದೈನಂದಿನ ಈ ನರಕ—ಅಶಾಂತ ಜೀವನದಿಂದ ಬೇಯುವ ಬದಲಿಗೆ ಕೂಸಮಂಡೂಕವಾದರೇನು? ಶಿಲಾ ಯುಗದವರಾದರೇನು? ಕನ್ನಡಿಗರು ಜನ್ಮತಃ ಶಾಂತಿ ಪ್ರಿಯರು ಮನೆ ಮುರುಕು ತನವು ಅವರ ಹುಟ್ಟುಗುಣವಲ್ಲ ಅವರಿಗೆ ಕನ್ನಡ ನುಡಿ ಕನ್ನಡ ಸಂಸ್ಕೃತಿಯಿಂದಲೇ ಹೃದಯ ಪರಿವರ್ತನವಾಗ ಬೇಕಾಗಿದೆ ಆದರಿಂದ ಸುಸ ಶಾಂತಿಗಳು ದೊರೆಯಬೇಕಾಗಿದೆ ಕನ್ನಡಿಗರೇ, ಇದನ್ನು ಕನ್ನಡ ತನದ ಹೃದಯದಿಂದಲೇ ವಿಚಾರ ಮಾಡಿ.

ಇಂಗ್ಲಿಷು ಇಂದಿನ ಹಿರಿಮೆಯನ್ನು ಪಡೆದೇ ಹುಟ್ಟಿಲ್ಲ ಅದು ಮೊದಲು ಕಾಡು ಜನರ ಭಾಷೆಯಾಗಿದ್ದು ಆ ಬಾಷೆಗೆ ಅಭಿಮಾನಿಗಳ ಸಂಖ್ಯೆ ಹೆಚ್ಚದಂತೆ ಅದು ಸರ್ವಾಂಗ ಸುಂದರವಾದ ಭಾಷೆಯಾಗುತ್ತಾ ಬಂದು ಇಂಗ್ಲಿಷು ಜನಾಗರಿಕ ಭಾಷೆಯಾಗಿರುವಾಗ ಸಂಸ್ಕೃತವು ವಿಸ್ತಾರವಾದ ಜ್ಞಾನ ಭಂಡಾರವಿದ್ದ ಬಾಷೆಯಾಗಿತ್ತು ಆಗಲೇ ಆ ಬಾಷೆಯಲ್ಲಿ ಪಾಣಿನಿಯಂದು ವೈಯಾಕರಣಿಗಳೂ, ಕಾಳಿದಾಸನಂಥಾ ಕವಿಗಳೂ, ಚಾಣಕ್ಯನಂದಾ ಅರ್ಥ ಶಾಸ್ತ್ರಜ್ಞರೂ ಆಗಿ ಹೋಗಿದ್ದರು ಇದನ್ನು ತಿಳಿದಿದ್ದ ಆಂಗ್ಲರು ಸಂಸ್ಕೃತವೇ ತಮ್ಮ ಮಾತೃ ಬಾಷೆಯಾಗಲಿ ಎನ್ನಲಲ್ಲ ತಮ್ಮ ಮಾತೃ ಭಾಷೆಯನ್ನು ಸಂಸ್ಕೃತದೊಡನೆ ಮಲ್ಲಕಾಳಗಕ್ಕೆ ಬಿಡಬೇಕೆಂದು ಸೊಂಟ ಕಟ್ಟಿದರು ಅವರ ಧ್ಯೇಯಕ್ಕೆ ಭಗವಂತ ನೊಲಿದ, ಆ ಜನಾಂಗದಲ್ಲಿ ಮಹಾ ಪ್ರತಿಭಾನ್ವಿತರನ್ನು ನಿರ್ಮಿಸಿದನು. ಆ ಜನರು ಭಾಷೋದ್ಧಾರಕ್ಕಾಗಿ ಉಗ್ರ ತಪಸ್ಸನ್ನು ಕೈಕೊಂಡು ಸಾರ್ಥಕರಾದರು ನಾವು ಪರರ ಎಂಬಲಾದ ಅನ್ಯ ಭಾಷೆಯನ್ನೇ ತಿಂದು ಬದುಕುತ್ತೇವೆಂದು ಸಾರಿದರೆ ಕನ್ನಡಿಗರು ಈಗ ಹೊಲೆಯರಾಗಿದ್ದಾರೆ ಎನ್ನಬೇಕಾಗಿದೆ ಎಂಜಲು ತಿನ್ನುವುದೇ ಅವರಿಗೆ ಅಮೃತವಾಗಿದೆಯಂದರೆ ಅದೊಂದು ಕನ್ನಡಿಗರ ದುರ್ದೈವ! ಇವರು ದೇವರು ಕೈಬಿಟ್ಟ ಜನರಾಗಿರಬೇಕು. ಸುಒಂದ್ಗಿ ದುರ್ಬುದ್ಧಿಗಳನ್ನು ಜನರ ಹೃದಯದಲ್ಲಿ ಹೊಳೆದವನು ಪರಮಾತ್ಮನ ವೆ? ನಮ್ಮಡಿಗರು ದೇವರು ಕೈಬಿಟ್ಟ ಜನಾಂಗ ನಿಜವಿರಬಹುದೆ?

ನಾವು ನಮ್ಮ ಕನ್ನಡ ನುಡಿಯಲ್ಲೇ ಜಾಗತಿಕ ಅಮೂಲ್ಯ ವಿಜ ರಗಳನ್ನು ತಿಳಿಯಬೇಕೆಂದು ಪಣತೊಟ್ಟರೆ, ನಮ್ಮ ಸಾನ ಮಾನವು ಬಾಷೆಯಲ್ಲೇ ಜನತೆಗೆ ಬೆಲೆ ಬಾಳುವ ವಿಚಾರಗಳನ್ನು ದಾನ ಮಾಡಬೇಕೆಂದು ಪ್ರತಿಜ್ಞೆ ಮಾಡಿದರೆ ಕಲವು ದಶಕಗಳಲ್ಲಾದರೂ ನಮ್ಮ ನುಡಿಯು ವಿಶ್ವದ ಪ್ರಮುಖ ಭಾಷೆಗಳಲ್ಲೊಂದಾಗದಿರದು ನುಡಿಯ ಒಳವಿಗೆ ಸತತಾಭ್ಯಾಸವೆಂಬ ಬೆಳಕೂ, ಅಭಿಮಾನ ಆತ್ಮೀಯತೆಯ ಗೊಬ್ಬರೆ ನೀರೂ ವಿಪುಲವಾಗಿ ದೊರೆಯಬೇಕು ಲೋಕದಲ್ಲಿ ಎ ಯಕರು ಎತ್ತಾಗುವುದಿಲ್ಲವೆ? ಮಿಡಿಯ ಹಣ್ಣಾಗುವುದಿಲ್ಲವೆ? ದೈವದೊಲ್ಮೆ ಇದ್ದರೆ ಕಾಲನುಕಾಲಕ್ಕಾದರೂ ಒಡ ನುಡಿಯು ಪೊಡವಿಯ ನ ಡಿಯಾಗದಿರುವುದೆ?

ನಮ್ಮ ತನು ಕನ್ನಡ, ಮನ ಕನ್ನಡವೆಂದು ಹಿರಿಯರು ಉಪದೇಶಿಸಿ ಹೋಗಿದ್ದಾರೆ ಬಾಳುವುದೇಕೆ? ಕನ್ನಡ ತಾಯಿಯ ಸೇವೆ ಮಾಡಲು ಅದನ್ನು ಇತರ ಭಾಷಗಳೊಡನೆ ಜಟ್ಟಿ ಕಾಳಗ ಮಾಡಲು ರಣಕಣಕ್ಕೆ ನೂಕುವುದಕ್ಕಾಗಿ—ಎನ್ನುವ ಹಿರಿಯ ಬಾಷಾಪ್ರೇಮಿಗಳು ನಮ್ಮಲ್ಲಿ ಈಗಲೂ ಇದ್ದಾರೆ ಮರಣ ಕಾಲದಲ್ಲಿ ಹರಿಯ ನಾವ ಸ್ಮರಣೆ ಮಾಡುವ ಬದಲು 'ಕನ್ನಡ ಕನ್ನಡ' ಎನ್ನುತ್ತಾ ಪ್ರಾಣ ಬಿಟ್ಟ ಪವಿತ್ರ ಜೀವಿಗಳು ನಮ್ಮಲ್ಲಿದ್ದರು. ಈಗಲೂ ಇತ್ತವೆನ್ನಲು ಸಾಧ್ಯವಿಲ್ಲ ಇಂಥವರ ಮಹಾ ಉದ್ದೇಶಕ್ಕೆ ಹಲವು ಕಡೆಗಳು ಪ್ರಾಪ್ತವಾದರೂ ಕನ್ನಡವು ಇಪ್ಪತ್ತೈದನೆಯ ಶತಮಾನದ ಆರಂಭದ ದಿನಗಳಿಗಿಂತ ಎಷ್ಟೋ ಮುಂದರಿದಿದೆ ಈ ಮಹತ್ಕಾರ್ಯದಲ್ಲಿ ವ್ರತಸ್ಮರಣೀಯರಾದ ಕನ್ನಡ ಇತಿಹಾಸಗಳು ಸಟ್ಟ ಪ್ರಮುಖ್ಯ ನಾವು ತಲೆಬಾಗಬೇಕಾಗಿದೆ ಕನ್ನಡಿಗರು ಮುಂದೊಂದು ದಿನ ಅವರ ಪುಣ್ಯನಾಮವನ್ನು ಸ್ವಾತಃ ಸ್ಮರಣೆಗೆ ಜೋಡಿಸಿ ಹಾಡುವುದಿದೆ ಯುದ್ಧ ಕಾಲದಲ್ಲಿ ಅವರ ಉಜ್ವಲ ಕೀರ್ತಿಯನ್ನು ಪ್ರಿಯರು ತಮ್ಮ ಕೋಕಿಲ ಕಂಠದಿಂದ ಹಾಡಿ ಹಾಡಿ ವೀರರ ಮುಖಕ್ಕೆ ಮಂಗಳಾರತಿ ಎತ್ತುವ ಕಾಲ ಒಂದು ಬರಲಿದೆ!

ಅಖಿಲ ಕರ್ನಾಟಕದ ಏಕೈಕ ಜನತಾ ಸಂಸ್ಥೆಯಾದ ಸಾಹಿತ್ಯ ಪರಿಷತ್ತು ನಡೆಸುವ ಕನ್ನಡಕಾರ ಮತ್ತು ಜಾಣ ಪರೀಕ್ಷೆಗಳಿಗೆ ಸರಕಾರವು ಒಂದು ಗೌರವದ ಸ್ಥಾನ ಕೊಟ್ಟಂತೆ ಕಾಣುವುದಿಲ್ಲ ದಕ್ಷಿಣ ಹಿಂದೀ ಪ್ರಚಾರ ಸಮಿತಿಯವರು ನಡೆಸುವ ಹಿಂದೀ ಪರೀಕ್ಷೆಗಿರುವ ಗೌರವವು ಕನ್ನಡ ಪರೀಕ್ಷೆಗಳಿಗಿಲ್ಲ ಇದರಿಂದ ಸಾಮಾನ್ಯವಾಗಿ ಪ್ರತಿ ಹಳ್ಳಿಯಲ್ಲಿ ಹಿಂದೀ ಪ್ರಚಾರವು ಭರದಿಂದ ನಡೆಯುತ್ತಿರುವಾಗ, ಕನ್ನಡದ ಪರೀಕ್ಷೆಗಳು ನೂರಾರು ಮೈಲಿಗೊಂದೆರಂತೆ ನಿರುತ್ಸಾಹದಿಂದ ನಡೆಯುತ್ತಿವೆ. ಕನ್ನಡ ಪರೀಕ್ಷೆಗಳಿಂದ ಉಪಯೋಗವೇನು? ಎಂದು ಇನ್ನೂ ಜನರು ಮಾತು ಮುರಿಯುತ್ತಿದ್ದಾರೆ. ಈ ತಪ್ಪನ್ನು ಯಾರ ಮೇಲೆ ಹೊರಿಸಬಹುದು? ಇನ್ನು ಮುಂದೆ ಕನ್ನಡ ಪಂಡಿತರು ಸ್ಥಾನಕ್ಕೆ ಬಿ. ಎ. ಪದವೀಧರರನ್ನೇ ಇಡುವ ಯೋಚನೆಯಂತೆ! ಸಂಸ್ಕೃತದ ಗಂಧಗಾಳಿ ಇಲ್ಲದ ಈ ಬಿ. ಎ ಗಳನ್ನು ಕನ್ನಡ

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಟರು ಸಾ ಕಂಪೆನಿ, ಮಂಗಳೂರು—1.

ಪಂಡಿತರನ್ನಾಗಿಡುವುದರಿಂದ ಕನ್ನಡಕ್ಕಾಗುವ ಪ್ರಯೋಜನವೇನು? ಸಂಸ್ಕೃತ ಜ್ಞಾನವಿಲ್ಲದ ಬರೇ ಕನ್ನಡ ಜ್ಞಾನವು—ಇಂಗ್ಲಿಷ್ ಓದಿದವನೆಂದ ಮಾತ್ರಕ್ಕೆ ಹೆದರಿ ಅಭಿವೃದ್ಧಿಯಾಗುವದೆ? ಇಂಗ್ಲಿಷಿನ ಹಿಂದೆ ಕನ್ನಡ ಬರಬೇಕೆನ್ನುವ ಕಾಲ ಕಳೆಯಿತು. ಈಗ ಕನ್ನಡವು ಸಂಸ್ಕೃತದ ಜೊತೆಯಲ್ಲಿ ಸಾಗಬೇಕಾಗಿದೆ. ಸಂಸ್ಕೃತದಿಂದ ಅಗಲಿದ ಕನ್ನಡಕ್ಕೆ ಎಂದೂ ಕೋಭೆ ಬರಲಾರದು.

ನಮ್ಮ ಕನ್ನಡದ ಹಿರಿಯ ಸಾಹಿತಿಗಳು ಹಿಂದೆಯೂ ಕನ್ನಡದ ಸ್ಥಾನಮಾನಕ್ಕಾಗಿ ದುಡಿದಿದ್ದಾರೆ; ಇಂದೂ ದುಡಿಯುತ್ತಿದ್ದಾರೆ; ಮುಂದೂ ದುಡಿಯಬಲ್ಲರು. ಆದರೆ ಸಾಹಿತಿಗಳಿಂದ ಮಾತ್ರವೇ ಈ ವಿಚಾರದಲ್ಲಿ ಸಂಪೂರ್ಣ ಕೆಲಸವಾಗದು. ಸಾಹಿತಿಗಳ ಪವಿತ್ರಪಾವನ ವಿಚಾರಗಳನ್ನು ಒಳಗೊಳ್ಳಲು, ಇಂದಿನ ವಿದ್ಯಾರ್ಥಿಗಳ—ಮುಂದಿನ ಜನಾಂಗದ—ಹೃದಯ ಕವಾಟವನ್ನು ಶಾಲೆಯ ಅಧ್ಯಾಪಕರು ತೆರೆದಿರುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು—ವಿದ್ಯಾರ್ಥಿಗಳು ವಿದ್ಯಾಮಂದಿರದಿಂದ ಹೊರ ಬರುವಾಗಲೇ ಕನ್ನಡ ನುಡಿಯಲ್ಲಿ ಪ್ರೇಮ--ಕನ್ನಡ ನುಡಿಯಲ್ಲಿ ಪ್ರಾಣವುಳ್ಳವರಾಗುವಷ್ಟು ಶಿಕ್ಷಣ ಪಡೆದಿದ್ದರೆ ಯಥೇಷ್ಟವಾಯಿತು. ಪಂಪ, ರನ್ನ, ಲಕ್ಷ್ಮೀಶ, ಕುಮಾರ ವ್ಯಾಸರು ಕನ್ನಡಿಗರಿಗೆ ಏನು ಮಾಡಿದ್ದಾರೆಂದು ಅವರು ತಿಳಿದಿರಬೇಕು. ಮುದ್ದಣನ ಅಕಾಲ ಮರಣವು ಹೇಗಾಯಿತೆಂದು ಪ್ರತಿಯೊಬ್ಬ ವಿದ್ಯಾರ್ಥಿಯೂ ತಿಳಿದಿರಬೇಕು. ಮುದ್ದಣನ ನಂದಳಿಕೆ, ಕುಮಾರ ವ್ಯಾಸನ ಗದುಗು, ಲಕ್ಷ್ಮೀಶನ ದೇವನೂರು, ಪಂಪನ ಬನವಾಸಿ, ಹರಿಹರ ರಾಘವಾಂಕರ ಹಂಪೆ ಮೊದಲಾದ ಊರುಗಳು ಕನ್ನಡಿಗರ ಯಾತ್ರಾಸ್ಥಳವಾಗಬೇಕು. ಮಹಾ ಕವಿಗಳ ಊರೆನಲ್ಲಿ ಒಂದೊಂದು ಸ್ಮಾರಕವೇ ಪಡಿಸಬೇಕು. ಇಂದಿನ ಹರಿದಾಸರೂ, ವಾಗ್ಗೇಯಗಳೂ, ಕವಿ, ನಾಟಕ ಮತ್ತು ಕಥೆಗಾರರು ಸಾಮಾನ್ಯ ಜನತೆಯ ಹೃದಯದಲ್ಲಿ ಕನ್ನಡದ ಅಭಿಮಾನವನ್ನು ಕೆರಳಿಸಬೇಕು. ಉಪಾಧ್ಯಾಯರಿಗೂ ಈ ಕಾರ್ಯದಲ್ಲಿ ಪ್ರಮುಖ ಪಾತ್ರವಿದೆ.

ಹತ್ತು ಸಾಹಿತಿಗಳು ಜನತೆಯ ಮೇಲೆ ಮಾಡುವ ಅದ್ಭುತ ಚಮತ್ಕಾರವನ್ನು ಕನ್ನಡದಲ್ಲಿ ಅಭಿಮಾನವುಳ್ಳ ಒಬ್ಬ ಉಪಾಧ್ಯಾಯನು ಮಾಡಬಲ್ಲ. ಆಂಗ್ಲರ ಆಳಿಕೆಯಲ್ಲಿ ನಿರ್ಮಾಣ ಹೊಂದಿದ ಗುಲಾಮ ಸಂತಾನಕ್ಕೆ ಉಪಾಧ್ಯಾಯರು ಪುನಃ ಕರ್ನಾಟಕಾಭಿಮಾನದ ದೀಕ್ಷೆಯನ್ನು ಕೊಡಬಲ್ಲ ಆಚಾರ್ಯರಾಗಬೇಕು. ಮೊದಲು ಉಪಾಧ್ಯಾಯರೇ ಕನ್ನಡದಲ್ಲಿ ಅಭಿಮಾನವುಳ್ಳವರಾಗಬೇಕು. ಇಂದಿನ ಕನ್ನಡಿಗರನ್ನು ಶುದ್ಧಮಾಡಬೇಕಾದ—ಮಾಡಬಲ್ಲ ಆಚಾರ್ಯರೇ ದಾಸ್ಯ ವೃತ್ತಿಯ ಪ್ರಜೋದಕರಾದರೆ? ಹಿರಿಯೇ ಕೊಲ್ಲಲು ಮನಸ್ಸು ಮಾಡಿದರೆ ರಕ್ಷಿಸುವವರಾರು? ಪರಕೀಯರಿಂದ ಅಳಿಸಿಕೊಳ್ಳುವುದು ಮಾತ್ರ ದಾಸ್ಯ ಪ್ರವೃತ್ತಿಯಾದರೆ, ಪರಭಾಷೆಗೆ ತನುಮನಧನಗಳನ್ನು ಮಾಡಿಕೊಳ್ಳುವುದಕ್ಕೆ ಯಾವ ಹೆಸರನ್ನು ಕೊಡಬಹುದು?

ಸಾಮಾನ್ಯವಾಗಿ ಶಾಲೆಗಳಲ್ಲಿ (ಕೋಲೇಜುಗಳನ್ನು ಬಿಟ್ಟು) ಇಂದು ಇಂಗ್ಲಿಷ್ ಪಾಠವನ್ನು ಬಿಟ್ಟು ಎಲ್ಲಾ ವಿಷಗಳನ್ನು ಕನ್ನಡದಲ್ಲೇ ಕಲಿಸುತ್ತಿದ್ದಾರೆ. ಕೆಲವು ವರ್ಷಗಳಲ್ಲಿ ಎಲ್ಲಾ ಕೋಲೇಜುಗಳಲ್ಲೂ ಈ ಕ್ರಮವು ರೂಢಿಗೆ ಬರಬಹುದು. ಆದರೆ ಕನ್ನಡದಲ್ಲಿ ಪಾಠ ಹೇಳಿದ ಮಾತ್ರಕ್ಕೆ ಕನ್ನಡಕ್ಕೆ ಪ್ರಾಧಾನ್ಯ ಬಂದಂತಾಗಲಿಲ್ಲ. ಎಲ್ಲಾ ವಿಷಯಗಳ ಉತ್ತರ ಪತ್ರಿಕೆಗಳಿಗೂ ವಿಷಯ ಕೈಮತ್ತು ಭಾಷೆಗೆ ಸಮಾನ ಅಂಕಗಳೆಂದು ಹೆಂಚಬೇಕು. ಇಲ್ಲದಿದ್ದರೆ ಇಂದಿನ ವಿದ್ಯಾರ್ಥಿಗಳಿಗೆ ಶಬ್ದರೂಪ ಮತ್ತು ವಾಕ್ಯ ರಚನೆಯನ್ನು ಮಂದಟ್ಟಾಗುವಂತೆ ತಿಳಿಸುವದು ಕಷ್ಟ. ಕನ್ನಡ ಅಧ್ಯಾಪಕರ ಈ ಹೊರೆಗೆ ಉಳಿದ ಉಪಾಧ್ಯಾಯರೂ ಹೆಗಲು ಕೊಡಬೇಕು. ಕನ್ನಡ ಅಧ್ಯಾಪಕರ ಮೇಲೆಯೇ ಈ ಹೊರೆ ಹೇರಿ ಸಿಟ್ಟಿನಿಂದ ಯಿದ್ದರೆ ಕನ್ನಡ ನುಡಿಯ ಉದ್ಧಾರವಾಗಲು ಯುಗಗಳು ಬೇಕಾದಾವು.

ಕನ್ನಡ ಪಂಡಿತರ ಶಾಲಾ ಕೆಲಸವೆಂದರೆ ಅದೂ ಒಂದು ಗುಲಾಮ ತನದ ಸ್ವರೂಪ. ಮನುಷ್ಯನಿಂದ ಆಗಬಲ್ಲ ಕೆಲಸಕ್ಕಿಂತ ಹೆಚ್ಚು ಕೆಲಸವನ್ನು ಅವನಿಂದ ಪಡೆಯುವುದು ಸಲ್ಲದು. ಕಡಿಮೆಯೆಂದರೆ ಒಬ್ಬೊಬ್ಬ ಕನ್ನಡ ಪಂಡಿತನ ಕೈಕೆಳಗೆ ನೂರೈವತ್ತು ಮಂದಿ ವಿದ್ಯಾರ್ಥಿಗಳಾದರೂ ಕನ್ನಡ ಕಲಿಯುತ್ತಿದ್ದಾರೆ ಕನ್ನಡದಲ್ಲಿ ಎಂಡು ಭಾಗಗಳಿವೆ. ತಿಂಗಳಿಗೆ ಒಬ್ಬೊಬ್ಬ ವಿದ್ಯಾರ್ಥಿಯು ಎರಡೆರಡು ಪ್ರಬಂಧಗಳನ್ನು ಬರೆದರೂ, ಕನ್ನಡದ ಎರಡು ಭಾಗಗಳಲ್ಲಿ ಒಟ್ಟು ಒಬ್ಬ ಪಂಡಿತನಿಗೆ ಆರುನೂರು ಪ್ರಬಂಧಗಳನ್ನು ತಿದ್ದಬೇಕಾಗುವುದು. ಇವರೊಡನೆ ತಿಂಗಳಿಗೆ ಒಂದೊಂದು ಕನ್ನಡದ ಪರೀಕ್ಷೆ ಮಾಡಿದರೂ ಎರಡೂ ಭಾಗಗಳಿಂದ ತಿದ್ದಲು ಮನ್ನೂರು ಉತ್ತರ ಪತ್ರಗಳು ದೊರೆಯುತ್ತವೆ. ಇದರೊಂದಿಗೆ ಭಾಷಾಂತರದ ಅಭ್ಯಾಸಗಳನ್ನು ಪ್ರತಿಯೊಬ್ಬನಿಂದ ಒಂದೊಂದಾದರೂ ಬರೆಸ ಬೇಕಾಗುವುದು. ಇವುಗಳ ಹಿಂದೆ ಮುಂದೆ ಕಾಲು ವರ್ಷ ಅರ್ಧ ವರ್ಷ ಮತ್ತು ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಗಳಿವೆ. ಇಷ್ಟು ದೊಡ್ಡ ಹೊರೆ ಕನ್ನಡ ಪಂಡಿತರ ಮೇಲೆ - ಬೆದ್ದರೂ ಪ್ರತಿಯೊಬ್ಬ ಹುಡುಗನಿಂದ ಅವರು ಸಾಕಷ್ಟು ಕೆಲಸ ತೆಗೆದುಕೊಂಡಂತಾಗಲಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯ ಪಾಲಿಗೆ ಅದು ಚಿಕ್ಕ ಕೆಲಸವಾದರೆ, ಕನ್ನಡ ಅಧ್ಯಾಪಕನಿಗೆ ಅದು ಹೊರಲಾರದ ಹೊರೆಯಾಗುತ್ತದೆ. ಉಪಾಧ್ಯಾಯನೂ ಆರೋಗ್ಯವಂತರಾಗಿ ದೀರ್ಘಕಾಲ ಬದುಕಬೇಕೆಂದಿಲ್ಲವೆ? ಅವನಿಗೂ ಇತರ ನಾಗರಿಕರ ಹಕ್ಕುಬಾಧ್ಯತೆಗಳಿದ್ದರೆ, ಅವನಿಗೆ ಶಾಲಾ ದಿನಗಳಿಗಿಂತಲೂ ರಜಾ ದಿನಗಳಲ್ಲಿ ಕೆಲಸ ಹೆಚ್ಚಿರಬಾರದು. ಇದಕ್ಕೆ ವ್ಯತಿರಿಕ್ತವಾಗಿ ನಡೆಯಬೇಕಾದುದರಿಂದ, ಪರೀಕ್ಷಾಧಿಕಾರಿಗಳ ಮೆಚ್ಚಿಗೆ ಪಡೆಯಲು, ಅವರಿಗೆ ತಮ್ಮ ಹೆಚ್ಚಿಜ್ಞ ಕೆಲಸವನ್ನು ತೋರಿಸಲು, ಉಪಾಧ್ಯಾಯರು ಬೇರೆ ಬೇರೆ ಮಾರ್ಗಗಳನ್ನು ಹಿಡಿಯುವುದು ಸಹಜವಾದದ್ದು.

ನಮ್ಮಲ್ಲಿ ಮನಶಾಸ್ತ್ರವನ್ನು ರಕ್ತದಲ್ಲಿ ಅರಗಿಸಿಕೊಂಡ ಶಿಕ್ಷಣ ತಜ್ಞರ ಸಂಖ್ಯೆಯು ನೂರಾರು ಇದೆ. ಆದರೆ ಕನ್ನಡ ಪಂಡಿತರಿಗೆ ಒಪ್ಪಿಸಿದ ಈ ಕೆಲಸ ಸಾಧ್ಯವೇ ಎಂದು ಯಾರೂ ಯೋಚಿಸುವುದಿಲ್ಲ. ನಾನೇ ಪುತ್ತೂರು ಹೈಸ್ಕೂಲಿನಲ್ಲಿ ಒಂಬತ್ತು ಫೋರ್ಮುಗಳಿಗೆ (IV-೪, V-೩, VI-೨) ಅಂದರೆ ಸು. ನಾನೂರು ಹುಡುಗರಿಗೆ ಒಬ್ಬನೇ ಕನ್ನಡ ಪಂಡಿತನಾಗಿದ್ದು ಕಲಿಸಿಕೊಂಡಿದ್ದೆ. ಈ ಕ್ರಮದಲ್ಲಿ ಕಲಿತವರ—ಕಲಿಯುವವರ ಭಾಷೆ ಅಭಿವೃದ್ಧಿಯಾಗುವುದೆಂತು? ಇದೇ ಕ್ರಮದಲ್ಲೇ ಕನ್ನಡದಲ್ಲಿ ಶಿಕ್ಷಣ ಕೊಡುವುದೆಂದಾದರೆ (ಈಗ ಅಂದಿನ ಒಬ್ಬ ಪಂಡಿತರ ಕೆಲಸವನ್ನು ಈಗ ಇಬ್ಬರು ಮಾಡುತ್ತಿದ್ದಾರೆ. ಇದೂ ಸಾಲದು) ಕೆಲವು ಶತಮಾನ ದಾಟಿದರೂ ಕನ್ನಡವು ಇಂದಿನ ಸ್ಥಿತಿಗಿಂತ ಬಹಳ ಮುಂದೆ ಹೋಗದು. ಆದಕ್ಕಾಗಿ ಈಗ ಶಿಕ್ಷಣ ಕ್ರಮವೇ ಬದಲಾಗಬೇಕಾಗಿದೆ. ಒಂದು ವಿದ್ಯಾ ಸಂಸ್ಥೆಯಲ್ಲಿ ಒಬ್ಬ ಕನ್ನಡ ಪಂಡಿತನೆಂದಿರಬಾರದು. ಇದೊಂದು ಕೆಲಸವನ್ನು ಗುತ್ತಿಗೆಗೆ ವಹಿಸುವ ಕ್ರಮ. ಹಿಂದಿನ ಪದ್ಧತಿಯಾದ ಕನ್ನಡವನ್ನು ಗುತ್ತಿಗೆಗೆ ಕೊಡುವ ಕ್ರಮವು ಇಂದೂ ನಡೆಯುತ್ತಿದೆ. ಕನ್ನಡ ಅಧ್ಯಾಪಕರಿಗೆ ಕನ್ನಡದೊಡನೆ ಅದರ ಅಭಿರುಚಿಗೆ ತಕ್ಕಂತೆ ಗಣಿತ, ವಿಜ್ಞಾನ, ಚರಿತ್ರೆ ಮೊದಲಾದ ವಿಷಯಗಳಲ್ಲಿ ಸಾಕಷ್ಟು ಜ್ಞಾನವನ್ನು ಕೊಡಬೇಕು. ಕನ್ನಡ ಅಧ್ಯಾಪಕರಿಗೆ ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಂಡು ತೇರ್ಗಡೆ ಯಾಗಲು ವಿದ್ಯಾ ಸಂಸ್ಥೆಗಳಲ್ಲಿ ಅನುಕೂಲತೆ ಇರಬೇಕು. ಈಗ ಕನ್ನಡ ಪಂಡಿತರಿದ್ದಂತೆ ಮುಂದೆ ಇಂಗ್ಲಿಷ್ ಪಂಡಿತರನ್ನಿಡಬಹುದು. ಸಾರಾಂಶ—ಒಂದೊಂದು ಇಯತ್ತೆಯ ಕನ್ನಡ ಪಂಡಿತರವನ್ನು ಪ್ರತ್ಯೇಕ ಪ್ರತ್ಯೇಕ ಉಪಾಧ್ಯಾಯರು ವಹಿಸುವಂತಾಗಬೇಕು. ಕನ್ನಡದಲ್ಲಿ ವಿಶೇಷ ತಿಳಿದಿದ್ದ ಅಧ್ಯಾಪಕನು ಇಂದಿನ ಗ್ರಾಜ್ಯುವೇಟರಿಗಿಂತ ಚೆನ್ನಾಗಿ ಕಲಿಸಬಲ್ಲ. ಇದೂ ನಿರ್ಮಲ ಹೃದಯದಿಂದ ವಿಚಾರ ಮಾಡಬೇಕಾದ ವಿಷಯ.

ಇನ್ನು ಶಾಲೆಗಳಲ್ಲಿ ಪರೀಕ್ಷಾಧಿಕಾರಿಗಳಿಂದಲೂ ನುಡಿಯ ನಡೆಗೆ ತಡೆಯಾಗುತ್ತಿದೆ. ಶಿಕ್ಷಣದಲ್ಲಿ ಉಪಾಧ್ಯಾಯನಿಗೆ ಸ್ವಾತಂತ್ರ್ಯವಿರಬೇಕು. ಪರೀಕ್ಷಾಧಿಕಾರಿಗಳಾಗಿ ಬರುವವರು ಒಂದು ದಿನವೂ ಕನ್ನಡ ಶಿಕ್ಷಣ ರಂಗದಲ್ಲಿ ದುಡಿದವರಲ್ಲ. ಹತ್ತು ಹದಿನೈದಕ್ಕಿಂತ ಹೆಚ್ಚು ವರ್ಷ ಶಿಕ್ಷಣ ಕಾರ್ಯದಲ್ಲಿ ನುರಿತ ಅಧ್ಯಾಪಕರ ಬೋಧನಾಕ್ರಮವನ್ನೂ ಅಧಿಕಾರಿಗಳು ಖಂಡಿಸಿ ತಮ್ಮ ಅಭಿಪ್ರಾಯವನ್ನು ಕೊಡುವುದು ಹಿಂದಿನಿಂದಲೂ ನಡೆದು ಬಂದ ಪದ್ಧತಿ. ಇನ್ನು ಮುಂದೆ ಅಧ್ಯಾಪಕನು ಬೋಧಿಸಿದ ವಿಚಾರವು ವಿದ್ಯಾರ್ಥಿಗಳಿಗೆ ಮಂದಟ್ಟಾಯಿತೇ ಎಂದು ಪರೀಕ್ಷೆ ಮಾಡುವಂತಾಗಬೇಕು. ಪರೀಕ್ಷಕರು ಕನ್ನಡದಲ್ಲಿ ಚತುರ ಶಿಕ್ಷಕರಾದರೆ ಅವರು ತರಗತಿಯಲ್ಲಿ ತಮ್ಮ ಉತ್ತಮ ಪದ್ಧತಿಯನ್ನು ಪ್ರತ್ಯಕ್ಷ ತೋರಬೇಕು. ಇಂಗ್ಲಿಷ್ ಭಾಷೆಗೆ ಆ ಭಾಷೆಯಲ್ಲಿ ಶಿಕ್ಷಕನಾಗದವನು ಪರೀಕ್ಷಾಧಿಕಾರಿಯಾಗಿ ಹೋಗಿ ತನ್ನ ಅಭಿಪ್ರಾಯ ಕೊಡಲು ಸಾಧ್ಯವುಂಟೆ? ಅದು ಸುತರಾಂ ಅಸಾಧ್ಯ. ಹಾಗೆ ಯೋಚಿಸುವುದೂ ಮಹಾ ಪಾಪ! ಹಾಗಾದರೆ ಕನ್ನಡವು ಯಾರೂ ಸವಾರಿ ಮಾಡಬಲ್ಲ ಬೀದಿಯ ಬಡ ಕತ್ತೆಯೇ? ಕನ್ನಡದಲ್ಲಿ ಅಭಿಮಾನವುಳ್ಳವರೆಲ್ಲಾ ಈ ವಿಚಾರ ಯೋಚಿಸಬೇಕು.

ಹೆಚ್ಚಿನ ಕನ್ನಡ ಅಧ್ಯಾಪಕರಿಗೆ ಭಾಷಾ ಸೇವೆಮಾಡಲು ಈಗ ವೇಳೆಇಲ್ಲ. ಅವರಿಗೆ ಜ್ಞಾನ ಸಂಗ್ರಹ ಮಾಡುವ ಅವಕಾಶವಿಲ್ಲ. ಭಾಷಾಸೇವೆ ಮತ್ತು ಜ್ಞಾನ ಸಂಗ್ರಹವೆಂಬುದು ಕನ್ನಡ ಅಧ್ಯಾಪಕನ ಜನ್ಮಸಿದ್ಧ ಹಕ್ಕು. ಪ್ರಜಾಸ್ವಭುತ್ವದ ಇಂದಿನ ದಿನಗಳಲ್ಲಾದರೂ ಅವನಿಗೆ ಅದನ್ನು ಸರಕಾರವು ತೆರವುಮಾಡಿಕೊಡಬೇಕು. ಇದರಿಂದ ಇಂದು ಸಾಹಿತ್ಯಗಳು ಮಾತ್ರ ಮುಡಿಯುತ್ತಿದ್ದ ಕನ್ನಡ ಕ್ಷೇತ್ರದಲ್ಲಿ ಅಧ್ಯಾಪಕರಿಗೂ ಸೇರಲು ಸಾಧ್ಯವಾಗಿ ಕನ್ನಡ ಪತ್ರಿಕೆಗಳ ವಿಷಯ ದಾರಿದ್ರ್ಯ ಮುಗಿದು ಕನ್ನಡದ ಸ್ಥಾನಮಾನ ಏರುವುದು.

ಕನ್ನಡ ನುಡಿಯ ಸ್ಥಾನಮಾನವು ವಿಶೇಷವಾಗಿ ಕನ್ನಡ ಅಧ್ಯಾಪಕರನ್ನೇ ಹೊಂದಿಕೊಂಡಿದೆ ಎಂದು ಎಷ್ಟು ಸಾರಿ ಹೇಳಿದರೂ ಕಡಿಮೆಯೇ. ಅವರಿಗೆ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಲೂ ಸಾಧ್ಯವಾಗಬೇಕು. ಈಗ, ಕನ್ನಡ ಪಂಡಿತರ ಮುಂದೆ ಅಂಬೆಗಾಲಿಡುತ್ತಿದ್ದು. ಇವರಿಂದ ಓನಾಮ ಕಲಿತ ಎಷ್ಟೋ ಮಂದಿ ವಿದ್ಯಾರ್ಥಿಗಳು ಕೊಂಚ ಆಂಗ್ಲಭಾಷೆ ಕಲಿತವರೆಂಬ ಒಂದೇ ಕಾರಣದಿಂದ ಆ ಶಾಲೆಯ ಮುಖ್ಯೋಪಾಧ್ಯಾಯರಾಗಿ ಬರುತ್ತಾರೆ. ಮುಂದೆ ಕನ್ನಡ ನುಡಿಯ ಸೇವೆಯಲ್ಲಿ ತಲೆ ಹಣ್ಣಾದ ನುಂದಿ ಕನ್ನಡ ಪಂಡಿತರು ಕನ್ನಡ ಅಧ್ಯಾಪಕರಾದ ಪಾಪಕ್ಕಾಗಿ ಆ ಎಳೆಯ ತರುಣ ಶಿಷ್ಯನ ಮುಂದೆ ಕೈ ಜೋಡಿಸಬೇಕಾಗುತ್ತದೆ. ಪಂಡಿತರ ಮೂವತ್ತು ನೆಲವತ್ತು ವರ್ಷಗಳ ಜ್ಞಾನಕ್ಕೆ ಒಂದು ಕುರುಡು ಕವಡೆಯ ಬೆಲೆಯೂ ಇಲ್ಲ. ಇದನ್ನು ಕನ್ನಡ ಪಂಡಿತರ ಜೀವಂತ ಸಮಾಧಿ ಎನ್ನಲೇ? ಅಥವಾ ಕನ್ನಡ ನುಡಿಯು ಗುಲಾಮರ ಭಾಷೆ ಎಂಬುದಕ್ಕೊಂದು ಸಂಕೇತವೆನ್ನಲೇ?

ಶಾಲೆಯ ಮುಖ್ಯೋಪಾಧ್ಯಾಯರು ಕನ್ನಡ ನಾಡಿನಲ್ಲಿ ಕನ್ನಡವನ್ನೇ ಕಲಿಸುವಂತಾಗುವುದರಿಂದ ಅದರ ಸ್ಥಾನಮಾನ ಏರುವುದು. ಮುಖ್ಯೋಪಾಧ್ಯಾಯರು ಇಂಗ್ಲಿಷು ಅಥವಾ ಅನ್ಯ ಭಾಷೆಗಳನ್ನು ಕಲಿಸುವುದಾದರೆ ಅವರು ಆ ಉದ್ಯೋಗಕ್ಕೆ ಸುತರಾಂ ಅನರ್ಹ. ಮುಖ್ಯೋಪಾಧ್ಯಾಯರಂಥಾ ಹಿರಿಯ ಸ್ಥಾನಕ್ಕೆ ಇಂದಿನ ಪಂಡಿತರ ತಿಳಿವು ಕಡಿಮೆಯಾದರೆ (ನಿಜವಾಗಿ ಕಡಿಮೆಯಾಗುವುದಿಲ್ಲ) ವಿದ್ಯಾಸಂಯಾನಿವರ್ಸಿಟಿಯ ಕನ್ನಡ, ಸಂಸ್ಕೃತ, ಹಿಂದೀ ವಿದ್ವಾನಿನಷ್ಟು ಭಾಷಾಜ್ಞಾನ ಮತ್ತು ಎಸ್. ಎಸ್. ಎಲ್. ಸಿ. ಯಷ್ಟು ಇತರ ಜ್ಞಾನವಿರಬೇಕೆನ್ನಲಿ. ಅಥವಾ ಹಿಂದೆ ಹೇಳಿದಷ್ಟು ಜ್ಞಾನಕ್ಕೆ ಸರಕಾರವು ತೆರವುಮಾಡಲಿ. ಇಂಥಾ ಮುಖ್ಯೋಪಾಧ್ಯಾಯರು ಆ ಶಾಲೆಗೂ, ಪ್ರಾಂತಕ್ಕೂ ಒಂದೊಂದು ರತ್ನವಲ್ಲವೆ? ನಮ್ಮನೆ ಕನ್ನಡಕ್ಕೆ 'ಫಸ್ಟ್ ಲ್ಯಾಂಗ್ವೇಜ್' ಎಂದು ಹೆಸರುಕೊಟ್ಟುಮಾತ್ರಕ್ಕೆ ಬರುವ ಪುರುಷಾರ್ಥವೇನು? ಮಗನಿಗೆ ವಾಚಸ್ಪತಿಯೆಂದು ಹೆಸರಿಟ್ಟುಮಾತ್ರಕ್ಕೆ ಅವನಿಗೆ ಸಮಾಜದಲ್ಲಿ ಸ್ಥಾನಮಾನಗಳು ದೊರೆಯುವುವೆ?

ಕನ್ನಡ ಪಠ್ಯ ಉಪಪಠ್ಯ ಪುಸ್ತಕಗಳನ್ನು ಆರಿಸುವ ಕೂಟದಲ್ಲಿಯೂ ಕನ್ನಡದ ಕೊಲೆಯಾಗುತ್ತಿದೆ. ಆ ಕೂಟದಲ್ಲಿ ಕನ್ನಡದ ಯಾವ ಭಾಗದಲ್ಲೂ ಕ್ರಮಿಸದ ಗ್ರಾಜ್ಯುವೇಟರರನ್ನು ಅಧ್ಯಕ್ಷರನ್ನಾಗಿ ಮಾಡಿ ಅವರ ಸಲಹೆಯಂತೆ ಪುಸ್ತಕಗಳ ಚುನಾವಣೆಯಾಗುತ್ತಿದೆ. ಕನ್ನಡವನ್ನು ಕಲಿಸುವ ಪರೀಕ್ಷೆ ಮಾಡುವ ಉಪಾಧ್ಯಾಯರಿಗೆ ಪಠ್ಯಪುಸ್ತಕವನ್ನು ಆರಿಸುವ ಶಕ್ತಿ ಇಲ್ಲವೆ? ನಿತ್ಯವೂ ವಿದ್ಯಾರ್ಥಿಗಳ ಕನ್ನಡದ ಅಭಿರುಚಿಯನ್ನು ಕಾಣುತ್ತಿರುವ ಮನುಷ್ಯನಿಗೆ ಕನ್ನಡದಲ್ಲಿ ವಾಕ್ಯಗಳನ್ನು ಬರೆಯಬಷ್ಟು ಜ್ಞಾನವಿಲ್ಲವೆ? ಸಾರಾಂಶ—ಇಂಗ್ಲಿಷ್ ಕಲಿಸುವ ಅಧ್ಯಾಪಕರು ಆ ಕ್ರಮವನ್ನು ಕನ್ನಡದ ಮೇಲೂ ಹೇರುವುದೊಂದು ಅಭಾಸದ ವಿಚಾರ. ಎಲ್ಲಾ ಭಾಷೆಗಳ ಬೋಧನೆಯನ್ನು ಒಂದೇ ತಕ್ಕಡಿಯಲ್ಲಿ ತೂಗಬಾರದು. ಶಿಕ್ಷಣದಲ್ಲಿ ಪ್ರತ್ಯಕ್ಷ ಅನುಭವಕ್ಕೇ ಮಾನ್ಯತೆಇರಬೇಕು. ಇಂಗ್ಲಿಷ್ ಕೃಪಾ ಛತ್ರದಲ್ಲಿ ನರಳುವ ಕನ್ನಡ ನುಡಿಯನ್ನು ಸ್ವತಂತ್ರಗೊಳಿಸಬೇಕು. ಕನ್ನಡ ಅಧ್ಯಾಪಕನಿಗೆ ಕನ್ನಡ ನಾಡಿನಲ್ಲಿ ಕನ್ನಡದೊಂದಿಗೆ ಇತರ ವಿಷಯಗಳನ್ನೂ ಕಲಿಸಲು ಸಾಧ್ಯವಾಗಬೇಕು. ಅದಕ್ಕಾಗಿ ಶಿಕ್ಷಣದ ಪದ್ಧತಿಯೇ ಬದಲಾಗಬೇಕು. ಕನ್ನಡ ಪಂಡಿತನೆಂಬ ಕನ್ನಡ ನಾಡಿನ ಇಂದಿನ ಬೆರ್ಚಪ್ಪನ ಚಿತ್ರವು ಬೇಗನೆ ಶಿಕ್ಷಣ ರಂಗದಿಂದ ಮರೆಯಾಗಲಿ!

ಜಯ ಕರ್ನಾಟಕ!

REGD. NO. M. 3818

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

24—7—1958

ಸಂಚಿಕೆ ೪೬
NO. 46

ಇರಾಕಿನಲ್ಲಿ ನಡೆದ ಸತ್ಯಚಿತ್ರವೇನು?

ಒಂದು ದಿನದ ರೋಮಾಂಚಕಾರೀ ಕಥೆ

ಇರಾಕಿನ ವಿದ್ರೋಹಿಗಳು ಅಧಿಕಾರ ಸೂತ್ರವನ್ನು ತಮ್ಮ ಹಸ್ತಗತ ಮಾಡಿಕೊಂಡು ಕೆಲವು ದಿನಗಳಷ್ಟೇ ಕಳೆದಿವೆ ಎಲ್ಲೆಲ್ಲಿಯೂ ಜನದಟ್ಟಣೆಯು ಸೇರುತ್ತಿರುವುದು ವರದಿಯಾಗಿದೆ. ಇಲ್ಲಿಂದ ಬಂದ ಪ್ರಕಾಶನಯೋಗ್ಯವಾದ ವರ್ತಮಾನಗಳಾನುಸಾರವಾಗಿ ಜುಲಾಯಿ ೧೪ನೆಯ ದಿನವೆಂಬುದು ಪಶ್ಚಿಮ ಏಶಿಯಾದ ಭಾಗ್ಯವನ್ನು ನಿರ್ಣಯಿಸುವ ದಿನವಾಗಿತ್ತು. ಅಧಿಕಾರಿಗಳು ಈ ಸಂಬಂಧದ ಸೂಚನೆಗಳನ್ನು ಒಂದುಗೂಡಿಸಿ ಕಾಗದ ಪತ್ರಗಳಲ್ಲಿ ಅದರ ವರ್ಣನೆಯನ್ನು ಈ ರೀತಿ ಮಾಡಿದ್ದರು: ಮುಂಜಾನೆ ಐದು ತಾಸಿನ ಸಮಯ. ಬಗ್ದಾದ ನಗರಕ್ಕೆ ನಗರವೇ ನಿದ್ರಾಂಗನಾಕೇಳಿಯಲ್ಲಿ ವಿಹರಿಸುತಿತ್ತು. ಸೂರ್ಯನ ಬಾಲಕಿರಣಗಳು ತೋರಿಬರಹತ್ತಿದ್ದುವು. ನಿಶ್ಚಿಂತೆಯಿಂದ ಹಾಗೂ ತೀವ್ರತೆಯಿಂದ ಸೇನಾಧಿಕಾರಿ ಅಬ್ದುಲ್‌ಕರೀಮ್ ಕಾಸಿಮರು ೨೦ನೆಯ ಸೇನೆಯನ್ನು ತೆಗೆದುಕೊಂಡು ನಿಶ್ಶಂಕೆಯಿಂದ ನಗರ ಪ್ರವೇಶಮಾಡಿದರು.

ಪ್ರವೇಶಿಸಿದೊಡನೆಯೇ ಪಿಸುಧ್ವನಿಯಲ್ಲಿಯೇ ಏನೇನೋ ಆಜ್ಞೆಗಳನ್ನೀಯಲಾಯಿತು. ಮುಂದೆ ಕೆಲವು ಕ್ಷಣಗಳಲ್ಲಿಯೇ ಸರಕಾರೀ ಕಾರ್ಯಾಲಯ, ರೈಲುಮಾರ್ಗ, ಸಂಕಗಳು, ಅಂಚೆ ತಂತಿ ಕಾರ್ಯಾಲಯ, ಮಾರ್ಗಗಳು, ಮುಖ್ಯ ಮುಖ್ಯ ಕಛೇರಿಗಳು ಹಾಗೂ ಬಗದಾದ ಆಕಾಶವಾಣೀ ಕೇಂದ್ರಗಳಲ್ಲಿ ಈ ಜನರು ಸದ್ದಿಲ್ಲದೆ, ಉಪದ್ರವವಿಲ್ಲದೆ ನಿಂತುಕೊಂಡರು. ಈ ಸ್ಥಳಗಳ ಮೇಲೆ ಅಧಿಕಾರ ಸ್ಥಾಪಿಸಲು ಅವರಿಗೆ ರೈಫಲ್‌ಗಳನ್ನು ಬಳಸಿಕೊಳ್ಳುವ ಆವಶ್ಯಕತೆಯಾಗಲೀ ಮೆಶೀನ್ ಗನ್ನುಗಳನ್ನು ಬಿಡುವ ಅಗತ್ಯವಾಗಲೀ ತೋರಿಬರಲಿಲ್ಲ.

ಇದರನಂತರ ಪುನಃ ಪಿಸು ಧ್ವನಿಯಲ್ಲಿಯೇ ಮತ್ತೇನೋ ಆದೇಶವೀಯಲಾಯಿತು. ಆದರೆ, ಈ ಬಾರಿ ಸೈನಿಕರು ಕೈದು ಮಾಡಬೇಕೆಂದು ನಿರ್ಧರಿಸಿರುವ ಕೆಲವು ಜನರು ಹೆಸರು ಹಾಗೂ ವಿಳಾಸಗಳನ್ನು ಹೇಳಲಾಯಿತು. ಸೈನಿಕಾಧಿಕಾರಿಗಳಲ್ಲಿ ಕೆಲವರು ನಿಶ್ಚಿತ ಸ್ಥಳಗಳಿಗೆ ತೆರಳಿದರು. ಬಾಗಿಲನ್ನು ತಟ್ಟಿದರು ಹಾಗೂ ಅಂತಹ ಪೂರ್ವ ನಿಶ್ಚಿತ ವ್ಯಕ್ತಿಗಳನ್ನು ಸೆರೆ ಹಿಡಿದರು. ಸೆರೆ ಹಿಡಿಯುವ ವೇಳೆಯಲ್ಲಿ, ಸೆರೆಯಾಳುಗಳು ಪ್ರತಿರೋಧ ಮಾಡಿದರೆ ಗುಂಡಿಕ್ಕಿ ಕೊಲ್ಲಲಾಗುವುದೆಂದೂ ಸೈನಿಕಾಧಿಕಾರಿಗಳು ಎಚ್ಚರಿಕೆಯನ್ನಿತ್ತರು.

ಇಪ್ಪತ್ತನಾಲ್ಕಕ್ಕೂ ಕಡಿಮೆ ಜನರು ಎರಡು ತಿಂಗಳುಗಳ ಪೂರ್ವದಲ್ಲಿ ವಿದ್ರೋಹದ ಯೋಜನೆಯನ್ನು ಸೂಚಿಸಿದ್ದರು; ಆದರೆ ಈ ವಿದ್ರೋಹದ ಸ್ವರೂಪವನ್ನವರು ತಮ್ಮ ಹೃದಯದಲ್ಲಿಯೇ ಅಡಗಿಸಿಟ್ಟಿದ್ದರು. ಒಂದು ತಾಸಿನ ನಂತರದಲ್ಲಿಯೇ ಈ ಗುಪ್ತ ಯೋಜನೆಯ ಆವಶ್ಯಕತೆಯು ಸಮಾಪ್ತವಾಯಿತು. ಆರು ತಾಸು ಕಳೆಯಿತು. ವಿದ್ರೋಹದ ಪ್ರಥಮಾಧ್ಯಾಯವು ಕೊನೆಗೊಂಡಿತು. ಬಗ್ದಾದ ಆಕಾಶವಾಣಿಯು ಜನತೆಯನ್ನು ನಿದ್ರೆಯಿಂದ ಎಬ್ಬಿಸಿ, ಬಗ್ದಾದ ನಿವಾಸಿಗಳೇ, ಇಲ್ಲಿ ರಾಜಪ್ರಭುತ್ವವು ಮಡಿದು ಹೋಯಿತು, ಹಾಗೂ ಪ್ರಜಾಪ್ರಭುತ್ವವು ಸಾಫ್ಯಪನೆಯಾಯಿತು" ಎಂದು ಘೋಷಿಸಿತು.

ಇದಾದನಂತರ ಸುಮಾರು ೧೫ ವಕ್ತೃಗಳ ಹೆಸರುಗಳನ್ನು ಘೋಷಿಸಲಾಯಿತು. ಇವರಲ್ಲಿ ಹೆಚ್ಚಿನವರು ಯುವಕ ಸೈನಿಕ ಅಧಿಕಾರಿಗಳಿದ್ದರು. ೧೨ ಸೈನಿಕ ಅಧಿಕಾರಿಗಳ ಒಂದು ಮಂತ್ರಿಮಂಡಳವು ನಿರ್ಮಿಸಲ್ಪಟ್ಟಿತು. ಶ್ರೀ ಕಾಸಿಮರು ಪ್ರಧಾನ ಮಂತ್ರಿಗಳಾದರು. ಇವರ ಮೇಲೆ ಮೊದಲು ಸರ್ವೋಚ್ಚ ಅಧಿಕಾರೀ ಪರಿಷತ್ತು ರಚಿಸಲ್ಪಟ್ಟಿತು.

ಓರ್ವ ಸೈನ್ಯಾಧಿಕಾರಿಯು ಇಬ್ಬರು ಅಧಿಕಾರಿಗಳ ಮುಂದಾಳುತನದಲ್ಲಿ ರಾಜಮಹಲನ್ನು ಮುಟ್ಟಿದನು. ಈ ಸಮಯದಲ್ಲಿ ಜನದಟ್ಟಣೆ ಅತ್ಯಧಿಕವಾಗುತ್ತ ಬರುತಿತ್ತು. ಗುಂಪು ಸ್ತಬ್ಧ, ಉತ್ಸುಕ ಮತ್ತು ಉತ್ತೇಜಿತ ಮುದ್ರಾಂಕಿತವಾಗಿತ್ತು. ಸೈನ್ಯಾಧಿಕಾರಿಯು ಬಲಪ್ರಯೋಗ ಮಾಡಿ, ರಾಜಮಹಾಲನ್ನು ಪ್ರವೇಶಿಸಿದನು. ಆವನ ಬೆನ್ನಹಿಂದೆ ಜನಸಂಕುಲ ಸರಿಯಿತು. ಜನರ ಗುಂಪಿನೆದುರು ಯುವರಾಜರನ್ನು ತರಲಾಯಿತು. ತಮ್ಮ ರಾಜನ ಇಂತಹ ಸ್ಥಿತಿಯನ್ನು ಕಂಡು, ಜನರು ಅವಾಕ್ಕಾದರು ೨೩ ವರ್ಷದ ಫೈಜಲ್ ಅವರ ೪೬ ವರ್ಷದ ಚಿಕ್ಕಪ್ಪ ಯುವರಾಜ ಮತ್ತು ಮಾಜಿ ರಿಜೆಂಟ್ ಅಬ್ದುಲ್ ಇಲಿಯಾರನ್ನು ಸಮೀಪದಲ್ಲಿಯೇ ನಿಲ್ಲಿಸಲಾಯಿತು ರಾಜನ ಕಂಕುಳಲ್ಲಿ ಪಿಸ್ತೂಲನ್ನು ಸಿದ್ಧಪಡಿಸಿಟ್ಟಿರಲಿಲ್ಲ. ಅವರೊಡನೆ ಇಬ್ಬರು ರಾಜಭವನದ ಕಾವಲುಗಾರರಿದ್ದರು. ಇವರ ಮೇಲೆ ರೈಫಲನ್ನು ಗುರಿಯಿಡಲಾಗಿತ್ತು. ಈ ಜನರೊಡನೆ ಆತ್ಮಸಮರ್ಪಣೆ ಮಾಡಬೇಕೆಂದು ಹೇಳಲಾಯಿತು. ಯುವರಾಜ ಅಬ್ದುಲ್ ಇಲಿಯರೂ ಆಯುಧದಿಂದ ಕಟ್ಟಲ್ಪಟ್ಟಿದ್ದರು.

ರಾಜ ಮತ್ತು ಯುವರಾಜರು ಅದೇ ದಿನ ತುರ್ಕಿಯ ಅಂಕಾರದಲ್ಲಿ ಸೇರಲಿದ್ದ ಬಗದಾದ ಒಪ್ಪಂದದ ರಾಷ್ಟ್ರಗಳ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ವಿಮಾನ ಮೂಲಕ ಹೋಗುವವರಾದ್ದರು ಆದುದರಿಂದಲೇ ಅವರು ಕೊಂಚ ಮುಂಚೆಯೇ ಎದ್ದಿದ್ದರು. ಯುವರಾಜರು ತಮ್ಮ ಕಾವಲುಗಾರರಿಗೆ ಗುಂಡು ಹಾರಿಸಲು ಆದೇಶವಿತ್ತರು.. ಆದರೆ, ಅವರು ಹಾಗೆ ಎಸಗುವುದಕ್ಕೆ ಮೊದಲೇ ಗುಂಡು ಹಾರಿಸಲಾದುದರಿಂದ ಕಾವಲುಗಾರು ಅಲ್ಲಿಯೇ ಉರುಳಿ ಬಿದ್ದರು. ಯುವರಾಜರು ತಮ್ಮ ಪಿಸ್ತೂಲನ್ನು ತರಲು ಓಡಿದರು, ಆಗ ಸೈನಿಕರು ಪುನಃ ಗುಂಡು ಹಾರಿಸಿದರು. ಈ ಕಾರಣದಿಂದ ಯುವರಾಜ ಮತ್ತು ಶಾಹರು ಅಲ್ಲಿಯೇ ನೆಲದ ಮೇಲೆ ಮಲಗಿದರು ಶಾಹರು ಆಗಲೇ ಮೃತ್ಯುಮುಖರಾದರು; ಆದರೆ, ಯುವರಾಜರು ಆಗಲೂ ಪ್ರಾಯಶಃ ಜೀವ ಹಿಡಿದಿದ್ದರು. ಜನ ಸಂದಣಿ ಮತ್ತೂ ಹೆಚ್ಚಿತು ಈ ಸಂದಣಿಯು ಶಾಹರ ಶವದಿಂದ ಸಮ್ಮಾನಿಸಲ್ಪಟ್ಟವರಾಗಿ ಸ್ವಲ್ಪ ದೂರ ನಿಂತು ಯುವರಾಜರನ್ನು ಹಿಡಿದುಬಿಟ್ಟಿತು.

ಯುವರಾಜರು ಬಹಳ ಜಾಗರೂಕರಾಗಿರುವ ವ್ಯಕ್ತಿ. ಅವರಿಗೆ ಗುಲಾಬಿ ವರ್ಣದ ಅಂಗಿ ಹಾಗೂ ಗೆರೆಗಳುಳ್ಳ ಬಟ್ಟೆಯ ಸೂಟು ಬಹಳ ಮೆಚ್ಚುಗೆಯಾಗಿತ್ತು. ಅವರಿಗೆ ಈ ಜನಸಂದಣಿಯತ್ತ ತಿರಸ್ಕಾರವಿತ್ತು. ಇಂತಹ ಯುವರಾಜರನ್ನು ಒಂದು ಜೀಪಿನ ಹಿಂದೆ ಕಟ್ಟಿ ಬಗದಾದದ ಮಾರ್ಗಗಳಲ್ಲಿ ತಿರುಗಿಸಲಾಯಿತು. ಆ ಮೇಲೆ ಅವರ ಶವವನ್ನು ಒಂದು ಮನೆಯ ಮುಂದೆ ನೇತಾಡಿಸಲಾಯಿತು, ಇದರಿಂದ ಅವರು ಸತ್ತುಹೋಗಿರುವರೆಂದೆಲ್ಲರೂ ಅರಿಯುವಂತಾಯಿತು. ಶಾಹರ ಶವವನ್ನು ಆ ಮೇಲೆ ತೋರಿಸಲಾಯಿತು ಪ್ರಾಯಃ ಈ ಶವವನ್ನು ಅಮೃತಶಿಲೆಯಲ್ಲಿ ಇಟ್ಟು ಪ್ರದರ್ಶಿಸಲಾಯಿತು.

ಪ್ರಧಾನ ಮಂತ್ರಿ ನೂರಿ ಅಲ್ ಸೈಯದರಿಗೆ ಈ ವಿದ್ರೋಹದ ಸೂಚನೆಯು ದೊರೆಯಿತು. ಮುದಿ ಪ್ರಧಾನಮಂತ್ರಿಯು ಉಪನಗರಗಳತ್ತ ಓಡಲು ಬದ್ಧಕಂಕಣರಾಗಿದ್ದರು. ಕ್ರುದ್ಧರಾದ ಸೈನಿಕರು ನೂರು ಸೈಯದರನ್ನು ಕೊಂದು ತಂದವರಿಗೆ ೧೦ ಸಾವಿರ ದೀನಾರ (೧ ಲಕ್ಷ ೫೫ ಸಾವಿರ ರೂಪಾಯಿ) ಗಳ ಪುರಸ್ಕಾರವೀಯಲಾಗುವುದೆಂದು ಘೋಷಿಸಿದರು. ನಿರಂತರ ಶೋಧನೆ ನಡೆಯಿತು. ಆದರೆ, ಎರಡು ದಿನಗಳವರೆಗೂ ಅವರ ಪತ್ತೆಯೇ ದೊರೆಯಲಿಲ್ಲ ಆ ಮೇಲೆ ಸಿಕ್ಕಿತು. ಅವರು ಮುದುಕಿಯ ವೇಷವನ್ನು ಹಾಕಿಕೊಂಡು, ಗುರುತನ್ನು ಡಗಿಸಲು ಒಂದು ಕಪ್ಪಗಿನ ಮುಸುಕನ್ನು ಹಾಕಿಕೊಂಡಿದ್ದರು. ಅವರನ್ನು ಗುಂಡಿಟ್ಟು ಕೊಲ್ಲಲಾಯಿತು. ಅವರ ಮೃತ ಶರೀರವನ್ನೂ ಜನಪ್ರದರ್ಶನಕ್ಕಾಗಿ ನೇತುಹಾಕಲಾಯಿತು.

"ನಾನು ದೃಢ ಮನುಷ್ಯನಾಗಿದ್ದೇನೆ. ಆದರೆ, ಈಗ ನನಗೆ ೫೦ ವರ್ಷ ಪ್ರಾಯ ಕಳೆಯಿತು. ಆದರೂ ನನಗಾರೂ ಉತ್ತರಾಧಿಕಾರಿಯು ದೊರೆಯಲಿಲ್ಲ" ಎಂದು

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O **MANGALORE.** Estd: **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ನಿಷ್ಕಳಂಕ ರಕ್ತಾಶ್ರು

ಶ್ರೀ "ನರೇಂದ್ರ"

ಕೋಣೆಯಲ್ಲಿ ಕುಳಿತು ಚುನಾವಣೆಯ ಬಗ್ಗೆ ಬರೆದಂತಹ ಒಂದು ವಿನೋದ ಲೇಖನವನ್ನು ಓದುತಿದ್ದೆ. ನಮ್ಮೂರಿನಲ್ಲೂ ಆಗ್ಗೆ ಚುನಾವಣೆ ಗೆಲಾಟೆ ಬಹು ಬಿರುಸಿನಿಂದ ಪ್ರಚಾರ ನಾಗುತಿತ್ತು. ಅಂದು ಬೆಳಗ್ಗೆ ಒಬ್ಬ ಉಮೇದ್ವಾರನ ಭಾಷಣ ಕೇಳಿದ್ದೆ....."ಸರ್ವ ಸ್ವತಂತ್ರ ಭಾರತದಲ್ಲಿ ಬಡವ ಶ್ರೀಮಂತನೆಂಬ ಭೇದ ಅಳಿಯಬೇಕು. ಎಲ್ಲರಿಗೂ ಸಮಾನ ಹಕ್ಕು ದೊರಕಬೇಗು...ಎಂದೆಲ್ಲಾ ಆತ ಬಡಬಡಿಸಿದ್ದ. ಆತನ ವ್ಯಾಕರಣರಹಿತವಾದ, ಆದರೂ ದೊಡ್ಡ ದೊಡ್ಡ ಪದಗಳಿಂದ ಕೂಡಿದ, ದಿವ್ಯ, ಭವ್ಯ ಭವಿಷ್ಯ ಭಾರತದ ಕಲ್ಪನೆಗಳಿಂದ ತುಂಬಿದ ಭಾಷಣದ ವೈಖರಿ ಹಳ್ಳಿಯ ಜನರ ಮೇಲೆ ಪರಿಣಾಮಕಾರಿಯಾಗಿತ್ತು.

ಆತನ ಭಾಷಣದ ಇತರ ವಿಷಯಗಳಿಗಿಂತಲೂ ನನಗೆ ಮೆಚ್ಚಿದ ಒಂದುವಾಕ್ಯ "ಸರ್ವ ಸ್ವತಂತ್ರ ಭಾರತದಲ್ಲಿ ಬಡವ—ಶ್ರೀಮಂತನೆಂಬ ಭೇದ ಅಳಿಯಬೇಕು" ಎಂಬುದು ಆತನ ಭಾಷಣದ ಸೀರಸ ವಾಕ್ಯಗಳಲ್ಲಿ ಜೀವ ತುಂಬಿದಂತಹದು—ಈ ವಾಕ್ಯ....."ಅಂತಹ ಭಾರತ ಬರಲಾರದೆ?" ಎಂದಿತು ನನ್ನ ಮನ.

"ಅಣ್ಣಾ ಚಿಕ್ಕಪ್ಪಯ್ಯ ಕರೆಯುತ್ತಿದ್ದಾರೆ...."ಎಂದ ಪಕ್ಕದ ಮನೆಯ ಮಾಸ್ಟರ ಅಣ್ಣನ ಮಗ—ಶ್ರೀಕಂಠ.

"ಏತಕ್ಕೆ?" ಎಂದು ಕೇಳಿದೆ....

"ಯಾಕೋ...." ಎಂದ ಆತ....

ಮಾಸ್ಟರು ನನ್ನ ಆತ್ಮೀಯ ಗೆಳೆಯರು ಅವರ ಹೆಸರು—ಸುಂದರ ರಾಯರು. .. ಅವರ ಮನೆ ತುಂಬಿದ ಮನೆ. ಅವರಿಗೆ ಮಕ್ಕಳಿಲ್ಲದಿದ್ದರೂ, ಮೂರು ಮಕ್ಕಳನ್ನು ಅವರ ಅಣ್ಣ ಅವರ ಪಾಲಿಗೆ ಬಿಟ್ಟುಹೋಗಿದ್ದರು. ತಾಯಿಯನ್ನು ಆ ಮಕ್ಕಳು ಮೊದಲೇ ಕಳೆದುಕೊಂಡಿದ್ದವು. ರಾಯರಿಗೆ ಮದುವೆಯಾಗಿ ಒಂದೂವರೆ ವರ್ಷವಾಗಿತ್ತಷ್ಟೆ....

ಅವರ ಹೆಂಡತಿಯಾಗ ಒಂಬತ್ತು ತಿಂಗಳ ಗರ್ಭಿಣಿ...

"ಮಾಸ್ಟ್ರೇ...ಯಾಕೆ ಕರೆದಿರಿ.. " ಮನೆಯ ಮೆಟ್ಟಲನ್ನು ಹತ್ತುತ್ತಾ ನಾನು ಕೇಳಿದೆ...

"ಅವಳಿಗೆ ಹೊಟ್ಟೆನೋವು...ಆರಂಭವಾಗಿ ಏಳೆಂಟು ಗಂಟೆಯಾಯಿತು ಸ್ವಲ್ಪ 'ಮಿಡ್‌ವಾಫ'ನ್ನ ಕರೆದುಕೊಂಡು ಬನ್ನಿ" ಎಂದರು.

ನಾನು ಹೊರಟೆ—ಬಡ ಜೀವವನ್ನು ಉಳಿಸಲು ಬರುವ ಸೂಲಗಿತ್ತಿಯನ್ನು ಕರೆದುತರಲು...!

ಆಸ್ಪತ್ರೆಗೆ ಹೋದಾಗ ಗಂಟೆ ಮೂರೂವರೆ ಆಗಿತ್ತು. ದೇವರ ದಯೆಯಿಂದಲೋ, ನನ್ನ ಪುಣ್ಯದಿಂದಲೋ ಸೂಲಗಿತ್ತಿ ಆಸ್ಪತ್ರೆಯಲ್ಲಿಯೇ ಇದ್ದಳು.

ಒಳ ಹೋಗಿ ಆಕೆಗೆ ನಮಸ್ಕರಿಸಿ ಕೇಳಿದೆ. "ಒಂದು ಕೇಸಿಗೆ ಬರ್ತೀರಾ?"

"ಎಲ್ಲಿ?"

"ಇಲ್ಲೇ ಒಂದೂವರೆ ಮೈಲಿನ ಒಳಗೆ"

"ತಿಂಗಳು?"

"ಒಂಬತ್ತು ತಿಂಗಳು...ವೆರಿ ಸೀರಿಯಸ್...."

"ಫೀಸ್ ಆರೇಳು ರೂಪಾಯಿ ಆಗುತ್ತದೆ...."

"ಆಗಲಿ. .ಎಷ್ಟಾದರೂ ಕೊಡ್ತೇನೆ" ಎಂದೆ.

ಆರೈಮನಸ್ಸಿನಿಂದ, ಆದರೆ ಹಣ ಬಿಡಲು ಬಯಸದೆ ಆಕೆ ಹೊರಟಳು ಆಕೆಯ ಪೆಟ್ಟಿಗೆ ನನ್ನ ಕೈಗೆ ಬಂತು ..ನಾನು ಮುಂದೆ ಹೊರಟೆ...

ಆಸ್ಪತ್ರೆಯ ಮೆಟ್ಟಲಿಳಿಯುತ್ತಿರುವಾಗ ಕಾರೊಂದು ರಭಸದಿಂದ ಬಂತು ..ಅದರಿಂದ ತರುಣನೊಬ್ಬ ಇಳಿದ. ಆತ ಶ್ರೀಮಂತರ ಮನೆಯವನೆಂದು, ಆತನ ಉಡುಪು, ಸ್ನೋ, ಪೌಡರ್ ಲೇಪಿಸಲ್ಪಟ್ಟ ಮುಖ, ಮೂಗಿಗೆ ಬಡಿಯುತ್ತಿದ್ದ ಸೌಗಂಧ ಸಾರಿಹೇಳುತಿದ್ದವು....

"ಗುಡ್ ಈವಿನಿಂಗ್ ಮಿಸ್ ರತ್ನಾ ..." ಆತ ನಮಸ್ಕರಿಸಿದ.

"ಗುಡ್ ಈವಿನಿಂಗ್ ಹರಿದಾಸ್...ಏನು ವಿಶೇಷ?" ಆಕೆ ಹೇಳಿದಳು.

"ಏನಿಲ್ಲ...ಅಕ್ಕನಿಗೆ ಪ್ರಸವವೇದನೆ..."

ಭಾರತದಲ್ಲಿ ತುಸು ಜಡವಾಗಿಯಾದರೂ ಪ್ರಯೋಗಶಾಲೆಗಳು ಪ್ರಾರಂಭವಾಗಿ ಗಣನೀಯ ಪ್ರಗತಿಯನ್ನು ಸಾಧಿಸುತ್ತಿವೆ. ಚಿತ್ರದಲ್ಲಿ ನವದೆಹಲಿಯ ರಾಷ್ಟ್ರೀಯ ಭೌತಿಕ ಪ್ರಯೋಗ ಶಾಲೆಯಲ್ಲಿ ನೌಕರನು ಕಾರ್ಯಮಗ್ನನಾಗಿರುವುದನ್ನು ಕಾಣಬಹುದು.

"ಸೀರಿಯಸ್.. ." ಒಹು ಗಾಬರಿಬಿದ್ದವಳಂತೆ ಸೂಲಗಿತ್ತಿ ಕೇಳಿದಳು.... "No. ..No .. ನಾಟ್‌ಸೋ ಸೀರಿಯಸ್...." ಎಂದ ಆ ತರುಣ ...

"ಯಾರಾದ್ರೂ ಇದ್ದಾರೇನು?"

"ಡಾಕ್ಟರ್ ಕಮಲಾ ಮತ್ತು ಅವರ ನರ್ಸ್ ಇದ್ದಾರೆ...."

"ಮತ್ತೇಕೆ ನಾನು...."

"ನೀ ವು ಬರಬೇಕಂತೆ. ..ಕಾರಿದೆಯಲ್ಲಾ. ."

ಆತ ಶ್ರೀಮಂತನಾಗಿದ್ದರೂ, ನಾನು ಮೊದಲೇ ಬರಹೇಳಿದ್ದರಿಂದ ಆಕೆ ಅಲ್ಲಿಗೆ ಹೋಗಲಿಚ್ಛಿಸಲಿಲ್ಲವೆಂದು ನನ್ನ ನಂಬಿಕೆ. .

ಆಕೆ ನನ್ನನ್ನು ನೋಡಿ, "ವೆರಿಸಾರಿ.... ನನಗೆ ಇವರಲ್ಲಿಗೆ ಹೋಗಬೇಕು...." ಆಕೆಯ ಮಾತಿನಿಂದ ನನಗೆ ಸಿಡಿಲು ಎರಗಿದಂತಾಯಿತು.

"ನಾನು ಮೊದಲೇ ಬರಹೇಳಿದ್ದೆನಲ್ಲಾ...." ದೀನನಾಗಿ ಕೇಳಿದೆ....ನಿಜಕ್ಕೂ ನಾನು ಆಕೆಯ ಬಳಿ ಭಿಕ್ಷುಕನಂತೆ 'ಬರಲು' ಬೇಡಿದೆ.

"ಮೊದಲು—ಕಡೆಗೆ ಎಂಬ ಪ್ರಶ್ನೆ ಇಲ್ಲಿಲ್ಲ ...ಇದು ಬಹಳ ಸೀರಿಯಸ್ ..." ಆಕೆ ವಿಷಯ ಬದಲಿಸಿ ನುಡಿದಳು. ಆತ "ನಾಟ್‌ಸೋ ಸೀರಿಯಸ್" ಎಂದಿದ್ದ. ಈಕೆ ಸೀರಿಯಸ್ ಅನ್ನುತಿದ್ದಾಳೆ!

ಹೌದು ಶ್ರೀಮಂತರ ಇರುಸೆ ಕಡಿತವೂ ಸೀರಿಯಸ್....ಬಡವರ ನಾವೂ ಬಹಳ ಲಘು ವಿಷಯ!

"ನನ್ನ ಕೇಸೂ ಸೀರಿಯಸ್...."ಎಂದೆ.

"ಮತ್ತೆ ಮತ್ತೆ ಚರ್ಚೆ ಎತ್ತಬೇಡಿ... ಪೆಟ್ಟಿಗೆಯನ್ನು ಕಾರಿನಲ್ಲಿ ಇಟ್ಟುಬಿಡಿ...." ಎಂದಳು ಈಕೆ.

ನನಗೆ ದುಃಖ — ಕ್ರೋಧಗಳೆರಡೂ ಏಕಕಾಲದಲ್ಲಿ ಉಂಟಾದುವು ..ಸಿಟ್ಟು... ತಡೆಯಲಾರದೆ ಸಿಟ್ಟು .. ನಾನು ಬಡವ... ನನ್ನ ಉಡುಪು ಬಡತನದ್ದು....ಆದಕ್ಕಾಗಿ ಈಕೆ ಬರುವುದಿಲ್ಲ ಅನ್ನುತಿದ್ದಾಳೆ... . ನಾನೂ ಕಾರಿನಲ್ಲಿ ಬಂದಿದ್ದರೆ ಈಕೆ ಬರುತಿದ್ದಳೋ ಏನೋ" ಎಂದುಕೊಂಡೆ.

ನನ್ನ ಸಿಟ್ಟು ಮಾತಿನಲ್ಲಿ ಹರಿಯಿತು. "ನಾನೇನೂ ನಿಮ್ಮ ಆಳಲ್ಲ...ತೆಗೆದುಕೊಂಡುಹೋಗಿ ಇಟ್ಕೊಳ್ಳಿ" ಎಂದು ಪೆಟ್ಟಿಗೆಯನ್ನು ಅಲ್ಲೇ ಇಟ್ಟೆ...."ನನ್ನ ಕ್ರೋಧದ ಆವೇಶದಲ್ಲಿ ನಾನು ಮಾತನಾಡುತ್ತಿರುವುದೇನೆಂದು ನನಗೇ ಅರಿಯದು....

ಮರುಗಳಿಗೆ ಆಕೆ ಪೆಟ್ಟಿಗೆ ತಗೆದುಕೊಂಡು ಕಾರನ್ನು ಹತ್ತಿದಳು...ನನ್ನ ಹೃದಯದಲ್ಲಿ ವೇದನೆಯ ಬೀಜಬಿತ್ತಿ ಆ ಕಾರು ಹೊರಟು ಹೋಯಿತು...ನನ್ನ ಕಣ್ಣಿಗೆ

(೧೧ನೇ ಪುಟ ನೋಡಿರಿ.)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.		
3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಭಾರತದ ಪವಿತ್ರ ಸ್ಥಳಗಳು—

ಗಂಗಾ-ಅಲಕೆಯರ ಸಂಗಮ-ದೇವಪ್ರಯಾಗ

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ

ಭಾರತದಂತೆಯೇ ಭಾರತದ ಉತ್ತರ ದಿಕ್ಕಿನಲ್ಲಿರುವ ಹಿಮಾಲಯ ಪರ್ವತ ಶ್ರೇಣಿಗಳೂ ಪ್ರಾಚೀನ ಕಾಲದಿಂದಲೂ ಸಾಕಷ್ಟು ಸುಪ್ರಸಿದ್ಧವಾಗಿರುವುವು ಈ ಪರ್ವತ ಪಟ್ಟಿಗಳಲ್ಲಿ ನಮ್ಮ ಅನೇಕಾನೇಕ ತೀರ್ಥ ಸ್ಥಳಗಳಿವೆ ಈ ತೀರ್ಥ ಸ್ಥಳಗಳು ತಮ್ಮ ಖ್ಯಾತಿಗೆ ಜಗತ್ಪ್ರಸಿದ್ಧವಾಗಿವೆ. ಇಂತಹ ಹೆಸರು ವಾಸಿಯಾದ ತೀರ್ಥ ಸ್ಥಾನಗಳಲ್ಲಿ ಕೇದಾರನಾಥ, ಬದರೀನಾಥ, ಯಮುನೋತ್ರಿ ಹಾಗೂ ಗಂಗೋತ್ರಿ ಮೊದಲಾದುವುಗಳೂ ಸೇರಿಕೊಂಡಿವೆ ಕೆಲವು ಪ್ರಸಿದ್ಧ ಸ್ಥಳಗಳು ವಿಶೇಷ ಪ್ರಕಾಶಕ್ಕೆ ಬೀಳದೆ ಹೋದರೂ ತಮ್ಮದೇ ಆದ ಮಹತ್ವವುಗಳಿಗೆದೆ ಗಂಗೋತ್ರಿಯ ಮಾರ್ಗದಲ್ಲಿ ಉತ್ತರಕಾಶಿ ಹಾಗೂ ಬದರೀನಾಥದ ದಾರಿಯಲ್ಲಿ ದೇವ ಪ್ರಯಾಗ ಜಾಗೂ ಜೋಶೀಮಠಗಳು ಇಂತಹ ತೆರೆಯ ಮರೆಯ ಯಾತ್ರಾ ಸ್ಥಳಗಳಲ್ಲಿ ಅತ್ಯಂತ ಮಹತ್ವ ಸಹಿತವಾದುವುಗಳಾಗಿವೆ

ಭಾಗೀರಥಿ ಮತ್ತು ಅಲಕನಂದಾ ಎಂಬೆರಡು ಪರಮ ಪವಿತ್ರವಾದ ಮಹಾನದಿಗಳ ಸಂಗಮ ಸ್ಥಳದಲ್ಲಿಯೇ ದೇವಪ್ರಯಾಗವಿರುವುದೊಂದು ಅದರ ವಿಶೇಷತೆಯಾಗಿದೆ ಭಾಗೀರಥಿಯು ಗಂಗೋತ್ರಿಯ ಕಡೆಯಲ್ಲಿರುವ ಗಢವಾಲ ಜಿಲ್ಲೆಯ ಮಧ್ಯದಿಂದ ಹರಿದು ಬರುತ್ತದೆ. ಇದೇ ಗಂಗಾ ನದಿ ಪರ್ವತ ಪ್ರದೇಶಗಳಲ್ಲಿ ಗಂಗಾ ನದಿಯನ್ನು ಭಾಗೀರಥಿ ಎಂದೇ ಕರೆಯುತ್ತಾರೆ ಭಾಗೀರಥಿ ನದಿಯು ಅಲಕನಂದೆಯೊಡನೆ ಕೂಡುವ ಸಂಧಿ ಸ್ಥಾನಾನಂತರವೇ ಆದಕ್ಕೆ ಗಂಗೆಯೆಂಬ ನಾಮಧೇಯವೆಂದವರು ತಿಳಿಯಬೇಕಾಗುತ್ತದೆ ಅಲಕನಂದೆಯು ಬದರೀನಾಥಕ್ಕಿಂತಲೂ ದೂರದಲ್ಲಿ ಉದ್ಭವಿಸಿ ಅನೇಕ ಚಿಕ್ಕದೊಡ್ಡ ನದಿನದಗಳಿಂದ ಕೂಡಿಕೊಂಡು ದೇವ ಪ್ರಯಾಗಕ್ಕೆ ಹರಿದು ಅಲ್ಲಿ ಭಾಗೀರಥಿಯನ್ನು ಸೇರುತ್ತದೆ ಈ ಎರಡು ನದಿಗಳ ಸಂಗಮದಲ್ಲಿ ಅತ್ಯಂತ ಸಾವಧಾನದಿಂದ ಸ್ನಾನಮಾಡಬೇಕಾಗುತ್ತದೆ ಇಲ್ಲಿ ನೀರಿನ ಪ್ರವಾಹ ಬಹಳ ತೀವ್ರವಾಗಿರುವುದು. ಯಾತ್ರಿಕರು ಗಂಡುಕಡೆ, ವಿಮಲ ಸಮಾಧಾನದಿಂದ ಸ್ನಾನ ಘಟ್ಟಗಳಲ್ಲಿ ಇಳಿದು, ತಂಬಿಗೆಯಲ್ಲಿ ನೀರನ್ನು ತೆಗೆದು ಮೈಮೇಲೆ ಎರಚಿಕೊಂಡು ಸ್ನಾನಗೈಯುತ್ತಾರೆ

ದೇವ ಪ್ರಯಾಗಕ್ಕೆ ಹೋಗುವ ದಾರಿಯು ಋಷಿಕೇಶದ ಮೂಲಕ ಸಾಗುತ್ತದೆ. ಋಷಿಕೇಶದಿಂದ ಮೋಟಾರು ಒಂಡಿಯಲ್ಲಿ ಬದರೀನಾಥದತ್ತ ಪ್ರಯಾಣಿಸುವವರಿಗೆ ಇದು ದಾರಿಯಲ್ಲಿ ಸಿಗುತ್ತದೆ. ಋಷಿಕೇಶದಿಂದ ದೇವಪ್ರಯಾಗಕ್ಕಿರುವ ಅಂತರ ೮೨ ಮೈಲಿಗಳು. ಮೋಟಾರು ಬಸ್ಸುಗಳು ಸಾಮಾನ್ಯವಾಗಿ ೪ ಘಂಟೆಗಳ ಕಾಲದಲ್ಲಿ ಇಲ್ಲಿ ತಲಪುತ್ತವೆ. ಬದರೀ ಯಾತ್ರೆಯು ನಡೆಯುವ ಗ್ರೀಷ್ಮರ್ತುವಿನ ಕಾಲದಲ್ಲಿ ಇಲ್ಲಿಯೂ ಬಹಳ ನೂಕು ನುಗ್ಗುಲಿರುತ್ತದೆ. ಇಲ್ಲಿ ಮೇಲಿನ ಶ್ರೀನಗರದಿಂದ ಬರುವ ಬಸ್ಸುಗಳು ನಿಲ್ಲುತ್ತವೆ ಹಾಗೆಯೇ ಕೆಳಗಿನ ಋಷಿಕೇಶ ಸಿಯಾಗಮಿಸುವುವುಗಳ ವಿರಮಿಸುತ್ತವೆ. ಪರ್ವತದಾರಿಯು ಇಕ್ಕಟ್ಟಾಗಿರುವುದರಿಂದ, ಎರಡು ಗಾಡಿಗಳು ಒಂದನ್ನೊಂದು ಮಾರ್ಗದಲ್ಲಿ ಹಾದು ಹೋಗುವುದು ದುರ್ಲಭವಾಗಿರುವ ಕಾರಣ ಈ ರೀತಿಯಾಗಿ ದೇವಪ್ರಯಾಗದಲ್ಲಿ ನಿಲ್ಲುತ್ತವೆ. ಇವುಗಳು ಬರಲು ಮತ್ತು ಹೋಗಲು ಸಮಯವನ್ನು ನಿಯಮಿಸಲಾಗಿದೆ ಈ ಸಮಯಕ್ಕನುಸಾರವಾಗಿ ಒಂದು ಬಸ್ಸು ಬಂದ ಮೇಲೆ ಇನ್ನೊಂದು ಮುಂದೆ ತೆರಳುತ್ತದೆ ಹೀಗಾಗಿ ಇಲ್ಲಿ ಯಾತ್ರಾ ಕಾಲದಲ್ಲಿ ಪ್ರತಿ ದಿನವೂ ಬಹಳ ಜನರ ನುಗ್ಗು ನೂಕಲಿರುತ್ತದೆ. ಆದರೂ ಬಸ್ಸು ನಿಲ್ದಾಣಗಳಲ್ಲಿ ಯಾತ್ರಿಕರಿಗಾಗಿ ಉಳಿದುಕೊಳ್ಳುವ ಯಾವ ವ್ಯವಸ್ಥೆಯೂ ಇಲ್ಲವೆಂಬುದನ್ನು ಇಲ್ಲಿ ಉಲ್ಲೇಖಿಸದಿರಬಾರದು. ಸರಕಾರದಿಂದ ಸ್ವಲ್ಪ ಭೂಮಿ ದೊರೆತರೆ, ತಾವು ಅತ್ಯುತ್ತಮ ವಿಶ್ರಾಂತಿ ಗೃಹವೊಂದನ್ನು ಕಟ್ಟಿಸುವುದಾಗಿ ದೇವಪ್ರಯಾಗ ನಗರಸಭೆಯ ಅಧ್ಯಕ್ಷರು ಹೇಳುತ್ತಾರೆ ಸಾರ್ವಜನಿಕ ನಿರ್ಮಾಣ ವಿಭಾಗವು ಈ ಕೆಳಕೆಯನ್ನು ಮನ್ನಿಸಿ ಅದಕ್ಕಾಗಿ ಸ್ವಲ್ಪ ಸ್ಥಳವನ್ನು ಕೊಡುವುದಕ್ಕೂ ಸಿದ್ಧವಿದೆ, ಆದರೆ, ಹೀಗೆ ಕೊಡಮಾಡಿದ ಸ್ಥಳವು ಮಾತ್ರ ಬಸ್ಸು ನಿಲ್ದಾಣಕ್ಕಿಂತ ಸ್ವಲ್ಪ ಕೆಳಗಡೆಯಿರುತ್ತದೆ.

ದೇವಪ್ರಯಾಗವೆಂಬುದು ಒಂದು ದೃಷ್ಟಿಯಿಂದ ನೋಡುವುದಾದರೆ ಪಂಡರ ವಸತಿ ಸ್ಥಾನವೆಂದು ಹೇಳಬಹುದು ಇಂತಹ ಪಂಡರ ನಾಲ್ಕಾರಕ್ಕೂ ಮಿಕ್ಕಿದ ಕುಟುಂಬಗಳು ಇಲ್ಲಿ ವಾಸಿಸುತ್ತವೆ ಗಢವಾಲ ಜಿಲ್ಲೆಯಲ್ಲಿನ ಸ್ಥಳಗಳಲ್ಲಿ ಇದೊಂದು ಒಳ್ಳೆಯ ನಗರವೆಂದು ಹೇಳಬಹುದು. ಇದೊಂದು ಅಭಿವೃದ್ಧಿಯಾಗುತ್ತಿರುವ ಪಟ್ಟಣ. ಕೆಲವು ಕಾಲದಿಂದ ಇಲ್ಲಿ ಒಂದು ವಿಕಾಸ ಕ್ಷೇತ್ರವೂ ಪ್ರಾರಂಭವಾಗಿದೆ ಗಂಗಾ ನದಿಯ ಎರಡು ಕಡೆಗಳಲ್ಲಿಯೂ ಅಂಗಡಿ, ಮನೆಗಳು ಕಟ್ಟಲ್ಪಟ್ಟಿವೆ ವಸತಿಗೆ ತರಳ ಬೇಕಾದರೆ ಗಂಗಾ ನದಿಗೆ ಅಡ್ಡವಾಗಿ ಹಾಕಿದ ಸಂಕವನ್ನು ದಾಟಿ ಹೋಗಬೇಕಾಗಿದೆ. ಅಲಕನಂದೆಯ ಇನ್ನೊಂದು ದಡದಲ್ಲಿ ಒಂದೂ ಕೆಲವು ಮನೆಗಳಿವೆ ಹಾಗಾಗಿ ಈ ದೇವಪ್ರಯಾಗವನಗರವೆಂಬುದು ಎರಡು ನದಿಗಳ ಮೂರು ನಂದೆಗಳಲ್ಲಿ ಹರಡಿಕೊಂಡಿರುವುದು.

ಪಂಡಜನರಲ್ಲಿ ದೇವಪ್ರಯಾಗದವರು ಸಾಕಷ್ಟು ಪ್ರಸಿದ್ಧರೆಂದೇ ಹೇಳಬೇಕು ಕೇದಾರನಾಥ ಮತ್ತು ಬದರೀನಾಥಗಳ ಯಾತ್ರಾರ್ಥಿಗಳಿಗೆ ಈ ಪಂಡರು ಋಷಿಕೇಶದಿಂದಲೇ ಬೇಕಾದ ವ್ಯವಸ್ಥೆಯನ್ನು ಮಾಡಿಕೊಡುತ್ತಾರೆ ಉತ್ತಮ ರೀತಿಯ ದಾನ ದಕ್ಷಿಣೆ ಸಿಗುವುದೆಂಬ ಭರವಸೆಯಿದ್ದರೆ ಅಂತಹ ಯಾತ್ರಿಕರೊಡನೆ ಅವರಾಗಲೀ ಅವರ ಕರ್ಮಚಾರಿಗಳಾಗಲೀ ಯಾತ್ರಾರ್ಥವಾಗುವವರೆಗೂ ಒಟ್ಟಿಗಿರುತ್ತಾರೆ ಯಾತ್ರಿಕರಿಗೆ ಬೇಕಾಗುವ ಉಳಿಕೊಳ್ಳುವ ಏರ್ಪಾಡನ್ನೂ ಇವರು ಮಾಡಿಕೊಡುತ್ತಾರೆ

ದೇವಪ್ರಯಾಗವು ಸಮುದ್ರ ಜಲ ಮಟ್ಟದಿಂದ ಸುಮಾರು ೧೭೫೦ ಅಡಿ ಎತ್ತರದಲ್ಲಿರುವ ನಗರ ಗ್ರೀಷ್ಮರ್ತುವಿನ ಕಾಲದಲ್ಲಿ ಈ ಪ್ರದೇಶದಲ್ಲಿ ವಾಸ್ತವಿಕವಾಗಿ ಸಾಕಷ್ಟು ಪ್ರಖರ ಉಷ್ಣತೆಯಿದ್ದರೂ ಭಾಗೀರಥೀ ಹಾಗೂ ಅಲಕನಂದೆಯರ ಸಂಗಮಸ್ಥಾನವಾಗಿರುವುದರಿಂದ ಹವೆಯು ಶೋಭನೀಯವಾಗಿರುವುದು ಸಂಜೆಯಾದೊಡನೆಯೇ ಇಲ್ಲಿ ಶೀತವೇರುತ್ತದೆ ಮಳಗಾಲಾನಂತರದ ಕೆಲವು ಮಾಸಗಳ ಕಾಲ ಇಲ್ಲಿನ ಹವೆಯು ಅತ್ಯಂತಾನಂದದಾಯಕವಾಗಿರುವುದೆಂದು ಹೇಳುತ್ತಾರೆ

ಪರಮಾತ್ಮನ ಅವತಾರಿಯಾದ ರಾಮನು ಕೆಲಸಮಯ ಇಲ್ಲಿ ವಾಸವಾಡಿಕೊಂಡಿದ್ದನೆಂದು ಪೌರಾಣಿಕ ಕಥೆಗಳು ಹೇಳುತ್ತವೆ ಅವನು ಹಿಮಾಲಯ ಪರ್ವತಗಳಿಗೆ ಹೋಗುವಾಗ ಋಷಿಕೇಶವನ್ನು ದಾಟಿ ದೇವಪ್ರಯಾಗಕ್ಕೆ ಕಾಲಿರಿಸಿದನಂತೆ . ಈ ಕಾಲದ ಚಿರಸ್ಮರಣೆಯು ಲಕ್ಷ್ಮಣಝಾಲಾ ಎಂಬ ಹೆಸರಿನಿಂದ ಋಷಿಕೇಶದ ಸಮೀಪದಲ್ಲಿ ಉಳಿದು ವಿಖ್ಯಾತವಾಗಿದೆ. ರಾಮನ ಸ್ಮಾರಕವಾಗಿ ರಘುನಾಥ ಮಂದಿರವೆಂದು ಕರೆಯಲ್ಪಡುವ ಒಂದು ದೇವಾಲಯವೂ ಇಲ್ಲಿ ಕಂಗೊಳಿಸುತ್ತದೆ ಇಲ್ಲಿರುವ ದೇವಸ್ಥಾನಗಳಲ್ಲಿ ಇದು ಅತಿ ಪುರಾತನವಾದುದೆಂದು ಹೇಳಲಾಗುತ್ತದೆ ಈ ದೇವಾಲಯವು ಭಾಗೀರಥೀ—ಅಲಕನಂದಾ ಸಂಗಮ ಸ್ನಾನದ ಸಮೀಪದಲ್ಲಿ ಒಂದು ಎತ್ತರವಾದ ಸ್ಥಳದಲ್ಲಿ ಕಟ್ಟಲ್ಪಟ್ಟಿದೆ

ದೇವಪ್ರಯಾಗದಲ್ಲಿ ಅಂಚೆ ಮತ್ತು ತಂತಿ ಮನೆ, ಸಾರ್ವಜನಿಕ ನಿರ್ಮಾಣ ವಿಶ್ರಾಮ ಗೃಹ, ಪೋಲೀಸು ಸ್ಟೇಶನು, ಆಸ್ಪತ್ರೆ, ಪುರಭವನ ಸಂಸ್ಕೃತ ವಿದ್ಯಾಲಯ ಹಾಗೂ ಪ್ರೌಢಶಾಲೆಗಳು ಮೊದಲಾದುವಿವೆ ವಿಕಾಸ ಕ್ಷೇತ್ರವು ತೆರೆಯಲ್ಪಟ್ಟುದರಿಂದ ಗ್ರಾಮಗಳ ಕಾರ್ಯಕರ್ತರೂ ಸಾಕಷ್ಟು ಸಂಖ್ಯೆಯಲ್ಲಿ ತಿರುಗುತ್ತಿರುತ್ತಾರೆ

ಜಗದ್ಗುರು ಶಂಕರಾಚಾರ್ಯರೂ ಸ್ವಲ್ಪ ಸಮಯ ಇಲ್ಲಿ ನಿಶ್ವಮಿಸಿಕೊಂಡಿದ್ದರೆಂದು ಹೇಳಲಾಗುತ್ತದೆ. ಅವರು ಜೋಶೀಮಠ ಮೊದಲಾಗೂ ಬದರೀನಾಥಗಳಿಗೆ ಈ ದಾರಿಯಾಗಿಯೇ ಸ್ರಯಾಣಿಸಿದರಂತೆ.

ಆ ದಿನಗಳಲ್ಲಿ ಮಾರ್ಗವು ಬಹಳ ಪ್ರಯಾಸತಮವಾಗಿತ್ತು ಅಲ್ಲಲ್ಲಿ ಉಳಿದುಕೊಂಡೇ ಪ್ರಯಾಣ ಸಾಗಬೇಕಾಗುತ್ತಿತ್ತು ರಘುನಾಥ ಮಂದಿರವು ಶ್ರೀ ಸ್ವಾಮಿ ಶಂಕರಾಚಾರ್ಯರಿಂದಲೇ ಸ್ಥಾಪಿತವಾಯಿತೆಂದು ಪಂಡಜನರು ತಿಳಿಸುತ್ತಾರೆ

ಈಗ ದೇವಪ್ರಯಾಗವನ್ನು ಮೋಟಾರು ಮಾರ್ಗಗಳ ಮೂಲಕ ಟಿಹರಿಯೊಡನೆ ಜೋಡಿಸುವ ಪ್ರಯತ್ನವನ್ನು ಕೈಗೊಳ್ಳಲಾಗುತ್ತದೆ ರಸ್ತೆಯ ನಿರ್ಮಾಣವು ಸಂಪೂರ್ಣವಾದ ಮೇಲೆ ದೇವಪ್ರಯಾಗ ಹಾಗೂ ಟಿಹರಿಗಳ ನಡುವಿನಂತರವು ಕೇವಲ ಮೂವತ್ತು ಮೈಲುಗಳಷ್ಟು ಉಳಿಯುವುದು. ಈಗ ಈ ದೂರವು ತೊಂಭತ್ತು ಮೈಲುಗಳಿಗಿಂತಲೂ ಅಧಿಕವಾಗಿದೆ. ಯಾತ್ರಿಕರು ದೇವಪ್ರಯಾಗಕ್ಕೆ ಬರುವುದಕ್ಕೆ ಋಷಿಕೇಶದನ್ನು ದಾಟಿ ಬೇಕಾಗುತ್ತದೆ ಅಲ್ಲಿಂದ ಮೋಟಾರು ಬಸ್ಸುಗಳು ನೇರವಾಗಿ ಶ್ರೀನಗರಕ್ಕಾಗಿ ಟಿಹರಿಗೆ ಹೋಗಬೇಕಾಗುವುದು. ಹಾಗಾಗಿ ಇಲ್ಲಿ ಉಳಿದಿರುವವರು ಕಾಲು ಮಾರ್ಗದಿಂದಲೇ ಯಾತ್ರೆ ಮಾಡುತ್ತಾರೆ ದೇವಪ್ರಯಾಗದಿಂದ ಹಿಡೋಲಾಖಾಲ್‌ವರೆಗೆ ಹತ್ತು ಮೈಲುಗಳ ಮೋಟಾರು ಮಾರ್ಗವು ಶ್ರಮದಾನದಿಂದ ನಿರ್ಮಾಣವಾಗಿದೆ ಟಿಹರಿಯ ಕಡೆಯಿಂದಲೂ ಸ್ವಲ್ಪ ದೂರ ದಾರಿ ನಡೆದಿದೆ ಇವುಗಳ ನಡುವಿನ ಸ್ವಲ್ಪಾಂಶ ಮಾತ್ರ ಇನ್ನೂ ಅಗಲವಾದ ಮೋಟಾರು ಚಲಿಸುವ ಮಾರ್ಗವಾಗಿ ಪರಿವರ್ತನೆ ಹೊಂದಬೇಕಾಗಿದೆ.

ದೇವಪ್ರಯಾಗದಲ್ಲಿ ಫಲೋದ್ಯಾನ ವಿಭಾಗವು ಪ್ರಾರಂಭವಾಗಿಟ್ಟಿರುವುದರಿಂದ ಪಲವೀಯುವ ವೃಕ್ಷಗಳನ್ನು ನೆಡುವ ಕೆಲಸವು ತೀವ್ರವಾಗಿ ಮುಂದರಿಯುತ್ತಿದೆ. ಈ ಮೊದಲು ಈ ಕಾರ್ಯದಲ್ಲಿ ಸಾಕಷ್ಟು ಪ್ರಯಾಸ ವಹಿಸದೆ ಹೋದರೂ ಈಗ ನಿರಾತಂಕವಾಗಿ ಉತ್ಸಾಹಪೂರ್ವಕವಾಗಿ ಫಲದಾಯಕ ವೃಕ್ಷಗಳನ್ನು ಸ್ಥಾಪಿಸಲಾಗುತ್ತದೆ.

ದೇವಪ್ರಯಾಗದ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ನಿರ್ಮಾಣ ವಿಭಾಗದವರು ಮಹಾರಾಜ ಭಗೀರಥನ ಒಂದು ಮೂರ್ತಿಯನ್ನು ಸಂಸ್ಥಾಪಿಸಿದ್ದಾರೆ ದೇವಲೋಕ (ಪರ್ವತದ ಅತ್ಯುನ್ನತ ಶಿಖರ) ದಿಂದ ಗಂಗೆಯನ್ನು ಭೂಲೋಕಕ್ಕೆ ಇಳಿಸಿ ತರುವುದರಲ್ಲಿ ಮಹಾ ಸಾಹಸವನ್ನು ಮಾಡಿ ಭಾರತದ ಭೂಮಿಯನ್ನು ಫಲವತ್ತಾಗಿಸಿದ ಪ್ರಪಂಚದ ಮೊತ್ತಮೊದಲನೆಯ ಎಂಜಿನಿಯರನೆಂದು ಹೆಸರಾದ) ಮಹಾಜನ ಭಗೀರಥನ ಕಠೋರ ತಪಸ್ಸಿನ ಸ್ಮರಣೆಯನ್ನು ಪ್ರತಿಯೊರ್ವರೂ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದಲೇ ಈ ಮೂರ್ತಿಯನ್ನು ಇರಿಸಲಾಗಿದೆ

೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ } ಮುತೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ { ಎಲ್ಲ ಕೆಮಿಸ್ಟರಲ್ಲಿ ಗ್ರೊಸರರಲ್ಲಿ ದೊರೆಯುತ್ತವೆ

ಬಾಟ್ಲಿವಾಲಾ ಎಗ್ಝಾಮಿಕೇಶನ್ ಮತ್ತು ಗುಳಿಗೆಗಳು

ಸಾಂಪಾಟ ಮಾಡುವ ಏಜಂಟರು ಹರ್ಬರ್ಟ್‌ಸನ್ಸ್ ಪ್ರೈವೆಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras

ಇರಾಕ ಪ್ರಜಾತಂತ್ರದ ಘೋಷಣೆ—

ಯಾರ ದಾಸ್ಯದಲ್ಲೂ ಉಳಿಯಲಾರೆವು

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಗಣತಂತ್ರ ಇರಾಕ್‌ನ ಪ್ರತಿನಿಧಿಯಾಗಿ ಕಳುಹಿಸಲಾದ ಶ್ರೀ ಹಾತಿಮ್ ಜವಾದರು ಸಂಯುಕ್ತ ರಾಷ್ಟ್ರ ಸಂಘಕ್ಕೆ ಜುಲೈ ೧೯ರಂದು ಬಂದರು. ಆ ಸಮಯದಲ್ಲಿ ಅವರು ತಮ್ಮ ಪರಿಚಯ ಪತ್ರವನ್ನು ಸಂಘದ ಅಧಿಕಾರಿಗಳಿಗೊಪ್ಪಿಸಿದನಂತರ, ಸುದ್ದಿಗಾರರು ಅವರನ್ನು ಮುತ್ತಿ ನಾನಾ ಪ್ರಶ್ನೆಗಳನ್ನು ಕೇಳಿ, ಇರಾಕದ ನೂತನ ಸರಕಾರದ ಧ್ಯೇಯಧೋರಣೆಗಳನ್ನು ಹೊರಗೆಡಹಿದರು. ಈ ಪ್ರಶ್ನೆಗಳಿಗೆ ಶ್ರೀ ಜವಾದರಿತ್ತ ಉತ್ತರಗಳ ಆಧಾರದಿಂದ, ಇರಾಕ ಸರಕಾರದ ಧ್ಯೇಯ ನಿರೂಪಣೆಯ ಈ ಲೇಖನವನ್ನು ಸಿದ್ಧಗೊಳಿಸಲಾಗಿದೆ.

"ಇರಾಕಿನ ಹೊಸ ಸರಕಾರವು ಜಗತ್ತಿನ ಸಮಸ್ತ ರಾಷ್ಟ್ರಗಳೊಡನೆ ಮೈತ್ರಿಯಿಂದಿರಲು ಮತ್ತು ಎಲ್ಲ ಮಹಾ ಶಕ್ತಿಗಳೊಡನೆ ಸ್ನೇಹದಿಂದಿರಲು ಬಯಸುತ್ತದೆ. ನಾವು ನಮ್ಮ ದೇಶದಲ್ಲಿ ಮಾಡಿದ ಮಹಾ ಕಾರ್ಯವೆಂದರೆ, ರಾಜಪ್ರಭುತ್ವವನ್ನು ಕೊನೆಗೊಳಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದುದು ಮಾತ್ರ.

"ಎಣ್ಣೆ ರಾಷ್ಟ್ರೀಕರಣದಂತಹ ಯಾವುದೇ ಯೋಜನೆಯು ಇರಾಕದ ನೂತನ ಸರಕಾರಕ್ಕಿರುವುದಿಲ್ಲ. ಅಥವಾ ಎಣ್ಣೆ ಹೊರತೆಗೆಯಲು ಉಪದ್ರವೀಯುಟೇಂಬ ಇರಾದೆಯೂ ಇಲ್ಲ. ನಾವು ನಮ್ಮಲ್ಲಿ ಸಂಧಿ ಮತ್ತು ಕೂಟಗಳ ಪಾಲನೆಗಾಗಿ ಸಿದ್ಧರಿದ್ದೇವೆ. ಹಾಗಿದ್ದರೂ ನಾವು ನಮ್ಮ ದಾಸ್ಯವನ್ನು ದೂರೀಕರಿಸಿ ವಿಶ್ವದಲ್ಲಿ ಸ್ವತಂತ್ರರಾಗಿರ ಬಯಸುತ್ತೇವೆ.

"ಇರಾಕಿನ ನವ ಸರಕಾರದ ಅಧಿಕಾರವು ಅಲ್ಲಿನ ಪ್ರತಿಯಂಗುಲ ಭೂಮಿಯ ಮೇಲೂ ಇರುವುದು. ಪ್ರಜಾಪ್ರಭುತ್ವ ಸರಕಾರ, ಒಂದು ಸಂಸತ್ತು ಹಾಗೂ ಸ್ವತಂತ್ರ ಟ್ರೇಡ್ ಯೂನಿಯನ್‌ಗಳನ್ನು ಸ್ಥಾಪಿಸಬೇಕೆಂಬುದೇ ನಮ್ಮ ಅಪೇಕ್ಷೆ. ಇರಾಕಿನ ಸೈನಿಕ ಕ್ರಾಂತಿಯು ಯಾವುದೇ ಬಾಹ್ಯ ಸೇನೆಯ ಸಂಬಂಧವನ್ನು ಪಡೆದಿಲ್ಲ. ಅದು ಸಂಪೂರ್ಣ ರಾಷ್ಟ್ರೀಯವಿದೆ. ಅದಕ್ಕೆ ಪೂರ್ವ ಇಲ್ಲವೇ ಪಶ್ಚಿಮದಿಂದ ಯಾವುದೇ ಪ್ರೇರೇಪಣೆಯು ದೊರೆತಿಲ್ಲ. ನಮ್ಮ ಅಭಿಮಾನದ ಮುಂದಾಳು ಒಬ್ಬ ಧಾರ್ಮಿಕ ವ್ಯಕ್ತಿಯಾಗಿದ್ದಾನೆ. ಅವನು ಮೊದಲಲ್ಲಿಯೇ ವಿಶ್ವದ ಎಲ್ಲ ರಾಷ್ಟ್ರಗಳೊಡನೆ ಸಹಯೋಗದಿಂದಿರಬಯಸುವೆನೆಂದು ಘೋಷಿಸಿದ್ದಾನೆ. ಅಮ್ಮನ್ ಆಕಾಶವಾಣಿಯು ಈ ಸೈನಿಕ ಕ್ರಾಂತಿಯ ಬಗ್ಗೆ ಜಗತ್ತಿನಲ್ಲಿ ಭ್ರಮೆಯನ್ನು ಹರಡಿಸಿದೆ. ಪಾಶ್ಚಾತ್ಯ ಪತ್ರಿಕೆಗಳಲ್ಲಿ ಪ್ರಕಟವಾದ ಹೆಚ್ಚಿನ ವಾರ್ತೆಗಳು ಕೇವಲ ಕಲ್ಪನಾ ಪೂರ್ಣವಾಗಿಯೇ ಇವೆ.

"ಅಮೆರಿಕೆಯೊಡನೆ ನಮ್ಮ ಮೈತ್ರಿ ಹಿಂದಿನಂತೆಯೇ ಇರುವುದು. ನಮ್ಮ ಸರಕಾರವು ಅಮೆರಿಕೆಯ ಕಡೆಗೆ ಸದ್ಭಾವನೆಯಿಂದಲೇ ಇರಬಯಸುತ್ತದೆ. ಮಾಜಿ ವಿದೇಶಮಂತ್ರಿ ಶ್ರೀ ಪಾದಿಲ್ ಜಮಾಲಿ ಯಾರನ್ನು ಕೊಂದುಹಾಕಿ ಅವರ ಶವವನ್ನು ಬಗದಾದಿನ ರಸ್ತೆಗಳಲ್ಲಿ ಎಸೆದಿಲ್ಲ. ಶ್ರೀ ಜಮಾಲಿಯವರು ಜೀವಿತರಿದ್ದಾರೆ. ಆದರೆ, ಅವರು ಕಾರಾಗೃಹದಲ್ಲಿ ಬಂಧಿಯಾಗಿದ್ದಾರೆ.

"ಅರಸು ಫೈಜಲ, ಯುವರಾಜ ಅಬ್ದುಲ್ ಇಲಾಹ್ ಹಾಗೂ ಮಾಜಿ ಪ್ರಧಾನ ಮಂತ್ರಿ ನೂರಿಯವರ ಮರಣದ ಘಟನಾನಂತರ ಸೈನಿಕ ಕ್ರಾಂತಿಯ ಅಂಗವಾಗಿ ಯಾವುದೇ ರಕ್ತಪಾತ ನಡೆದಿಲ್ಲ. ಅರಸ ಫೈಜಲರು ಆತ್ಮಸಮರ್ಪಣದ ಬದಲು ತನ್ನ ಪ್ರಾಣದ ಸಂರಕ್ಷಣೆಯೊಡನೆ ಗುಂಡುಹಾರಿಸುವ ಆದೇಶವಿತ್ತಿದ್ದರು. ಸೇನೆಯು ಗೋಲಿಯ ಪ್ರತ್ಯುತ್ತರ ರೂಪವಾಗಿ ಗುಂಡುಹಾರಿಸಿದಾಗ ಅವರು ಸತ್ತರು. ಇದೇ ರೀತಿಯಲ್ಲಿ ಪ್ರಧಾನ ಮಂತ್ರಿ ನೂರಿಯವರು ನಿಲುವಂಗಿ ಹೊದ್ದುಕೊಂಡು ಜೀವವುಳಿಸುವ ಪ್ರಯತ್ನಮಾಡುತಿದ್ದ ಸಮಯದಲ್ಲಿ ಸೇನೆಯ ಮೇಲೆ ಗುಂಡುಹಾರಿಸಿದ್ದರು. ಅವರು ತಾವಾಗಿಯೇ ಸೇನೆಯಮೇಲೆ ಗುಂಡುಹಾರಿಸದಿರುತಿದ್ದರೆ, ಅವರ ಮೇಲೂ ಈ ರೀತಿ ಮಾಡುತ್ತಿರಲಿಲ್ಲ.

ನಮಗೆ ಇಂದಿಗೂ ಬ್ರಿಟನ್ನಿನೊಡನೆ ದೃಢವಾದ ಸಂಬಂಧವಿದೆ. ಬಗ್ದಾದಿನ ಬ್ರಿಟಿಷ ರಾಯಭಾರಿ ಕಛೇರಿಯು ಬೆಂಕಿಗಾಹುತಿಯಾದುದರ ನಷ್ಟಪೂರ್ತಿಯ ಬಗ್ಗೆ ಸಾಮಾನ್ಯ ಪ್ರಣಾಳಿಯಂತೆಯೇ ಕಾರ್ಯ ನಡೆಸಲಾಗುವುದು.

ಪಾಶ್ಚಾತ್ಯ ರಾಷ್ಟ್ರಗಳು ನಮಗೆ ಕಾನೂನಿನ ಮೂಲಕವಲ್ಲವಾದರೂ ನೈತಿಕ ರೂಪದಿಂದ ನಮಗೆ ಶಸ್ತ್ರಾಸ್ತ್ರಗಳನ್ನು ಈಯಲು ಬಾಧ್ಯವಾಗಿರುವಾಗ, ನಾವು ಸೋವಿತ್ತಿಯೂನಿಯನ್ನಿನಿಂದ ಅವನ್ನು ಪಡೆದುಕೊಳ್ಳುವ ಆವಶ್ಯಕತೆಯಿರುವುದಿಲ್ಲ. ನಮ್ಮ ಎಣ್ಣೆಯ ಸಾಧನಸ್ರೋತಗಳನ್ನು ಬ್ರಿಟನ್ ಹಾಗೂ ಫ್ರಾನ್ಸ್ ಸಹಿತ ಪಶ್ಚಿಮ ದೇಶಗಳಿಗೆ ದೊರೆಯುವಂತೆ ಮಾಡಲಾಗುವುದು.

"ಜುಲೈ ೧೪ನೇ ದಿನಾಂಕದಂದು ನಡೆಯಲಿರುವ ಬಗ್ದಾದ ಒಡಂಬಡಿಕೆಯ ರಾಷ್ಟ್ರಗಳ ಸಭೆಯಲ್ಲಿ ಇರಾಕ್ ಭಾಗವಹಿಸುವುದೇ ಇಲ್ಲವೇ ಎಂದು ಖಂಡಿತವಾಗಿ ಹೇಳಲಾರೆ. ಸಂಯುಕ್ತ ರಾಷ್ಟ್ರಗಣತಂತ್ರದೊಡನೆ ಸಂಗರನವಾಗುವ ವಿಷಯದಲ್ಲಿ "ಅಪರಿ ಪಕ್ವ" ಸಮಯವೆಂದು ಮಾತ್ರ ಹೇಳಬಲ್ಲೆ."

ವಾರದ ಮಹಾನುಭಾವ—

(ಅ)ಶಾಂತಿಪ್ರಿಯ ಐಸನ್‌ಹಾವರ್



ಪಶ್ಚಿಮ ಏಶಿಯಕ್ಕಾಗಿ ನಿರ್ಮಿಸಲಾಗಿದ್ದ ಐಸನ್ ಹಾವರ್—ಯೋಜನೆಯು ಕೊಟ್ಟಕೊನೆಗಾದರೂ ತನ್ನ ಶಕ್ತಿಯನ್ನು ತೋರಿಸಿಯೇ ಬಿಟ್ಟಿತು. ಈ ಯೋಜನೆಯಲ್ಲಿ ಕಲ್ಪಿಸಲಾದ ಸೋವಿಯೆಟ್ ವಿರೋಧೀಭಾವನೆಯ ಚಿಂತಾಜನಕ ರೂಪವನ್ನು ಇಂದು ಲೆಬನಾನಿನಲ್ಲಿ ನೋಡಬಹುದು. ಈ ವಿರಾಟ ರೂಪವು ಇಂದು ಸಮಸ್ತ ವಿಶ್ವವನ್ನು ಒಂದು ಮಹಾಯುದ್ಧದ ಅಂಚಿನಲ್ಲಿಯಿಂದ ವಿಕಂಪಿತವನ್ನಾಗಿಸಿದೆಯೆಂದರೆ ಅತಿಶಯವಲ್ಲ.

ಎರಡು ವರ್ಷಗಳ ಪೂರ್ವದಲ್ಲಿ ಸುಯೇಜ ಕಾಲುವೆಯಲ್ಲಿ ಬ್ರಿಟನ್ನು ಈಜಿಪ್ತರ ನೇತೃತ್ವದಲ್ಲಿ ಅರಬಶಾಹಿಗೆ ಅಹ್ವಾನವಿತ್ತು ತಮ್ಮ ಪ್ರಭುತ್ವವನ್ನು ಸಂಸ್ಥಾಪಿಸಲು ಬಯಸಿದಂತೆಯೇ ಈ ಬಾರಿ ಅಮೆರಿಕೆಯು ಶ್ರೀ ಐಸನ್ ಹಾವರರ ನಾಯಕತ್ವದಲ್ಲಿ ಲೆಬನಾನಿನಲ್ಲಿ ತನ್ನ ಪ್ರಭಾವ ಪ್ರದರ್ಶಿಸುವ ವೃಥಾ ಪ್ರಯಾಸವನ್ನು ಮಾಡಿತೆನ್ನಬಹುದು.

ಲೆಬನಾನಿನ ಗೃಹ ಯುದ್ಧವನ್ನು ಅರಬ ರಾಷ್ಟ್ರವಾದ ಮತ್ತು ಸೋವಿಯತ್ತಿನ ಸಾಮ್ಯವಾದದ ಕುತ್ಸಿತ ಚಕ್ರವೆಂದು ಹೇಳಿ, ಇರಾಕದ ಒಳಗಿನ ಸೈನಿಕ ವಿದ್ರೋಹವನ್ನು ವಿಶ್ವಶಾಂತಿಗೆ ಅಪಕಾರಿಯೆಂದು ಘೋಷಿಸಿ ಐಸನ್‌ಹಾವರರು ಲೆಬನಾನಿನಲ್ಲಿ ತಮ್ಮ ಸೈನಿಕರನ್ನು ಇಳಿಬಿಟ್ಟಿದ್ದಾರೆ. ಅವರೊಂದು ಹೇಳಿಕೆಯಲ್ಲಿ ತಮ್ಮ ಕಾರ್ಯದ ಔಚಿತ್ಯವನ್ನು ಸಮರ್ಥಿಸಿಕೊಳ್ಳುತ್ತಾ "ಒಂದು ವೇಳೆ ಲೆಬನಾನ್‌ನಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸೇನೆಯನ್ನು ಕಳುಹಿಸಿಕೊಟ್ಟು ನಮ್ಮ ಸೈನ್ಯವನ್ನು ಹಿಂತೆಗೆದುಕೊಳ್ಳುವುದು" ಎಂದು ನುಡಿದರು. ಅವರ ಈ ಬೇಡಿಕೆಯನ್ನು ಸಂಯುಕ್ತ ರಾಷ್ಟ್ರಸಂಘದ ಕಾರ್ಯದರ್ಶಿಯಾದ, ತನ್ನ ನಿಷ್ಪಕ್ಷತೆಗೂ ನ್ಯಾಯಪ್ರಿಯತೆಗಳಿಗಾಗಿ ಸುಪ್ರಸಿದ್ಧರಾಗಿರುವ ಶ್ರೀ ಡಾಗ್ ಹಮ್ಮರ್‌ಶೀಲ್ಡರು ಒಳ್ಳೆಯ ರೀತಿಯಲ್ಲೇ ಖಂಡಿಸಿದರು. "ಲೆಬನಾನಿನಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸೇನೆಯಿಡುವ ಆವಶ್ಯಕತೆಯೇನಿ ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷೆ

(೯ನೇ ಪುಟ ನೋಡಿರಿ)

ದೇಶಕ್ಕೆ ಪ್ರಾಣವು ಹೇಗೋ ಹಾಗೆಯೇ ಜೀವನಕ್ಕೆ ಉಳಿತಾಯ.
ಉಳಿತಾಯವಿಲ್ಲದವನ ಬಾಳು ಹಾಳು; ಅಲ್ಲದೆ, ಅವನು
ಇದ್ದೂ ಇಲ್ಲದಂತೆ. ನಿಮ್ಮ ಬಾಳು ಭವ್ಯವಾಗಿ ಬೆಳಗ
ಬೇಕಾದರೆ, ಜೀವನದಲ್ಲಿ ಹುರುಪು-ಉತ್ಸಾಹ
ಗಳು ನಿಮ್ಮವಾಗಬೇಕಾದರೆ, ನಮ್ಮಲ್ಲಿರುವ
ಉಳಿತಾಯ ಯೋಜನೆಗಳಲ್ಲೊಂದ
ನ್ನಾರಿಸಿ ನೀವು ಪ್ರಯೋಜನ
ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ನೋಟೀಸು
ಮುತ್ತೂರು ಡಿ. ಮುನ್ಸಿಫ್ ಕೋರ್ಟ್
S. C. No. 142/5
ಅಣ್ಣಿ ಪಡಿವಾಳ —ವ
ಅಂತಪ್ಪ ಪಾಂಡಿ ಕೊಡಾ—ಪ್ರತಿವಾ
2ನೇ ಪ್ರತಿವಾದಿ ಗುಮ್ಮಣ್ಣ ಪಾಂಡಿ.
ಮ್ಮ ಹೆಂಗ್ಸು ಮಗ-ಬೆಳ್ತಂಗಡಿ ತಾಲ್ಲೂ
ಜಕಲ್ಲು ಗ್ರಾಮದ ಪೀರ್ಕೊಟ್ಟು ಎಂಬ
ಇವರಿಗೆ
ವಾದಿ ಗೇಣಿ ಬಾಕಿ ಬಗ್ಗೆ ಕೊಡಾ
291-48 ಬರೆಯಾಡುವರೆ ಮಾಡಿದ ಮೇಲೆ
ರುವ ವ್ಯಾಜ್ಯವು ತಾ. 6—8—58ಕ್ಕೆ
ಕೋರ್ಟಿನಲ್ಲಿ ತನ್ನಿಗೆ ಇಟ್ಟದ್ದರಿಂದ ಆ
ಬೆಳಿಗ್ಗೆ 11 ಗಂಟೆಗೆ ನೀವು ಸ್ವತಹಾ
ವಕೀಲರ ಮುಖಾಂತ್ರ ಹಾಜರಾಗಿ ಉತ್ತ
ದಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ಕೋ
ನವರಿಗೆ ಯುಕ್ತಕಂಡಂತೆ ತೀರ್ಮಾನಿಸಲ
ವದು.
By order of court
Sripati Rao
Advocate for P
ಮುತ್ತೂರು 6—7—58.

ಸಮಾಜ ಸೇವೆಯಲ್ಲಿ ಸ್ತ್ರೀಯರ ಪಾತ್ರ—

ಶ್ರೀಮತಿ ಪಾಟರರ ಮಾರ್ಗದರ್ಶನ

ಭಾರತದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಸ್ತ್ರೀಯರು ಸಾಕಷ್ಟು ಮುಂದುವರಿಯದಿದ್ದರೂ ಒಬ್ಬಿಬ್ಬರು ನಗರ ಸಭಾಧ್ಯಕ್ಷರಾಗಿದ್ದಾರೆ ನ್ಯೂಯೋರ್ಕಿನ ಉಪನಗರವಾದ ಕಿಸ್ಕೋ ನಗರದ ಮೇಯರ್ ಶ್ರೀಮತಿ ಬೆಟ್ಟಿ ಪಾಟರ್ ಇವರಲ್ಲಿರಗೂ ಮಾತ್ರವಲ್ಲದೇ ಪುರುಷರಿಗೂ ಮಾರ್ಗದರ್ಶನಿಯಾಗಿದ್ದಾರೆ ಪುರುಸಮಸ್ಯೆಗಳಿಗೂ ಗೃಹಸಮಸ್ಯೆಗಳಿಗೂ ಅಧಿಕಾಂತರವಿಲ್ಲವೆನ್ನುತ್ತಾರೆ ಶ್ರೀಮತಿ ಪಾಟರರು. ಮೂವತ್ತು ವರ್ಷಗಳ ಗೃಹಿಣೀ ಜೀವನ ಹಾಗೂ ಎರಡು ವರ್ಷಗಳ ಸಾರ್ವಜನಿಕ ಸೇವಾಜೀವನಗಳಿಂದ ದೊರೆತ ಅನುಭವದಿಂದ ಕಂಡುಕೊಂಡು ಉಚ್ಚರಿಸಿದ ಮಾತಿದು.

ಶ್ರೀಮತಿಯವರು ಗೃಹದಲ್ಲಿಯೇ ಕೂತು ತಿಂದುಕೊಂಡಿರದೆ ಒಂದು ಸಂಸ್ಥೆಯ ಮುಖ್ಯಾಧಿಕಾರಿಯಾಗಿಯೂ ದುಡಿದಿದ್ದಾರೆ. ೧೯೪೦ರಲ್ಲಿ ಇವರ ಪತಿ ಮೇಯರರಾಗಿದ್ದಾಗಲೇ ಈ ಸ್ಥಿತಿಯೂ ತತ್ಸಂಬಂಧಿತ ತರಬೇತಿಯನ್ನು ಪಡೆದಿದ್ದರೆಂದೂಹಿಸಬಹುದು. ಕೆಲವರ್ತಕರ ಸಲಹೆಯಂತೆ ಇವರು ೧೯೫೫ರಲ್ಲಿ ನಗರಸಭೆಯ ಸದಸ್ಯಸ್ಥಾನಕ್ಕೂ ೫೭ರಲ್ಲಿ ಮೇಯರ್ ಹುದ್ದೆಗೂ ಸ್ಪರ್ಧಿಸಿ, ಜಯಶಾಲಿಯಾದರು.

ತಾತ್ವಿಕನಾಗಿ ಹೇಳುವುದಾದರೆ, ಮೇಯರರಿಗೆ ಬೇಕಷ್ಟು ಸಮಯ ಸಿಗಲೇ ಬೇಕು. ಆದರೆ, ಶ್ರೀಮತಿಯವರು ತಮ್ಮ ಬಿಡುವಿನಮಯವನ್ನು ನಗರಸಭೆಯ ಕಾರ್ಯಾಲಯದಲ್ಲಿಯೇ ಕಳೆಯುತ್ತಾರೆ ತಿಂಗಳೊಂದಕ್ಕೆ ೧೦–೧೫ ಸಭೆಗಳಲ್ಲಿ ಇವರು ಭಾಗವಹಿಸುತ್ತಾರೆ ಸಾರ್ವಜನಿಕ ಗ್ರಾಮಾದಿಕಾರಿ ಮಂಡಳದ ಸಭೆಗಳ ಅಧ್ಯಕ್ಷಸ್ಥಾನ, ಯೋಜನೆ ವಲಯ ನೀರಿನ ಸರಬರಾಯಿ ಮಂಡಳಾದಿ ಅಧಿವೇಶನಗಳಲ್ಲಿ ಭಾಗವಹಿಸುವುದು ಇವರ ಕರ್ತವ್ಯ ಅಷ್ಟಲ್ಲದೇ ಸಾರ್ವಜನಿಕ ಸಭೆಗಳಲ್ಲಿ ಈಕೆ ಉಪಸ್ಥಿತರಿರುತ್ತಾರೆ ನಗರದ ನಿರ್ಮಾಣ ಕಾರ್ಯ, ರಸ್ತೆಗಳನ್ನೆಲ್ಲಾ ನೋಡಿಕೊಳುತ್ತಾರೆ ತನ್ನ ಕಛೇರಿಯಲ್ಲಾಗಲೀ ಮನೆಯ ಲ್ಲಾಗಲೀ ಇದ್ದುಕೊಂಡು ವಾಣಿಜ್ಯರಂಗದಲ್ಲಿ ದುಡಿಯುತ್ತಾರೆ.

ಶ್ರೀಮತಿಯವರಿಗೆ ಟೆಲಿಫೋನ್‌ಗಳ ಹಾವಳಿ ಹೆಚ್ಚು ಸಾರ್ವಜನಿಕರಿಗೆ ಮೇಯರ್ ಎಲ್ಲಿರುವರೆಂದೂ ಗೊತ್ತು ಎಂತಲೇ ಈ ಪರಿಸ್ಥಿತಿ. ಯಾರಾದರೂ ದಿನದುಡಿಮೆಯವನಾದರೆ, ಅವನನ್ನು ಸಂಜೆಯೊಳಗೆ ಭೇಟಿ ಮಾಡುವಂತಿಲ್ಲ, ಫೋನ್ ಮಾಡಿದರೆ, ಉತ್ತರ ಬರುವಂತಿಲ್ಲ, ಆದರೆ, ಸ್ತ್ರೀ ಮೇಯರ್ ಆದುದರಿಂದ ಇಂತಹ ಪರಿಸ್ಥಿತಿಯೊದಗಿ ಬಂದಿಲ್ಲ. ತನ್ನ ಕಛೇರಿಯ ಎಲ್ಲ ಸಮಸ್ಯೆಗಳನ್ನು ಈಕೆ ತೆಗೆದುಕೊಂಡು ಸಣ್ಣ ಸಮಸ್ಯೆಗಳನ್ನು ದಿಟ್ಟತನದಿಂದಲೂ ದೊಡ್ಡವನ್ನು ತೀವ್ರಾಸಕ್ತಿಯಿಂದಲೂ ಪ್ರಾಮುಖ್ಯಾನುಸಾರವಾಗಿ ಬಿಡಿಸಲೆತ್ನಿಸುತ್ತಾರೆ.

ಉಪನಗರದ ನೀರಿನ ಸರಬರಾಯಿ ಸಂಬಂಧದಲ್ಲಿ ಕಾಣಿಸಿದ ಎಡರುತೊಡರುಗಳನ್ನು ನ್ಯೂಯಾರ್ಕ್ ನಗರದ ಮತ್ತು ರಾಂಸ್ಟ್ರಾಸಿಲ ಸರಕಾರದ ಅಧಿಕಾರಿಗಳೊಡನೆ ಒಪ್ಪಂದ ನಡೆಸಿ, ಬಿಡಿಸಿ ಜಯಶೀಲರಾಗಿದ್ದಾರೆ, ಶ್ರೀಮತಿ ಪಾಟರ್. ರಾತ್ರಿಹಗಲೆನ್ನದೆ, ತೆರಿಗೆದಾರರ ಸುಖಕಷ್ಟಗಳತ್ತ ಈಕೆ ಗಮನಕೊಟ್ಟ, ಅವರಿಗೆ ನ್ಯಾಯವನ್ನೊದಗಿಸಲು ಪ್ರಯತ್ನಿಸುತ್ತಾರೆ. "ನನ್ನ ಪರದ ವಿಷಯದಲ್ಲಿ ನನಗೆ ತುಂಬ ಅಭಿಮಾನವಿದೆ. ಅದರ ಸಮಸ್ಯೆಗಳನ್ನು ಬಿಡಿಸುವುದೂ, ಜನತೆಗಾಗಿ ದುಡಿಯುವುದೂ ನನಗೆ ಸಂತೋಷಕರವಾಗಿವೆ" ಯೆನ್ನುತ್ತಾರೆ, ಈಕೆ ತನ್ನ ಪತಿ ಮೇಯರರಾಗಿದ್ದಾಗ, ಮನೆಗೆ ಅವರು ತಡಮಾಡಿಕೊಂಡು ಬರುತ್ತಿದ್ದುದಕ್ಕೆ ತಾನು ದೂರಿಕೊಳ್ಳುತಿದ್ದರೂ, ಈಗ ತನ್ನ ಮೇಲೆ ಪತಿಯ ಸಹಾನುಭೂತಿ ತೋರಿಸುತ್ತಾರೆ ಎನ್ನುತ್ತಾರೆ, ಪಾಟರ್ ಶ್ರೀಮತಿಯವರ ಈ ಸಾರ್ವಜನಿಕ ಜೀವನಕ್ಕೆ ಅವರ ಅಖಂಡ ಕುಟುಂಬವೇ ಪ್ರೋತ್ಸಾಹ ಕೊಡುತ್ತಿದೆ. ಹಾಗಾಗಿ ಹೊರಲಾರದಷ್ಟು ಹೊರೆಗಳನ್ನು ಈಕೆ ಹೊತ್ತಿದ್ದರೂ ನಿಶ್ಚಿಂತೆಯಿಂದ ತನ್ನ ವಾಲಿನ ಕರ್ತವ್ಯಗಳನ್ನು ಮಾಡಿಬಿಡುತ್ತಾರೆ.

ಇನ್ನೊಂದು ಕಾರ್ಯದಕ್ಷತೆಯಿದ್ದರೂ ಶ್ರೀಮತಿಯವರಿಗೆ ಬಾಷಣ ಬಿಗಿಯುವುದೆಂದರೆ, ಬಹಳ ಕಷ್ಟದ ಕೆಲಸವಂತೆ! ಹೀಗಿದ್ದರೂ ಹಲವಾರು ಕಡೆಗಳಿಂದ ಬಾಷಣ ಮಾಡಲು ಅವರಿಗೆ ಕರೆಗಳು ಬಂದು ಮುತ್ತುತ್ತಿವೆ ಮೇಯರ್ ಹುದ್ದೆಯಲ್ಲಿದ್ದುದರಿಂದ ಶ್ರೀಮತಿ ಪಾಟರರಿಗೆ ತಮ್ಮ ಇತರ ಚಟುವಟಿಕೆಗಳಿಗೆ ಆತಂಕ ತೋರಿಬರಲಿಲ್ಲ ಈಕೆಗೆ 'ಹವ್ಯಾಸ'ವನ್ನಿಟ್ಟುಕೊಳ್ಳುವ ಬಯಕೆಯೂ ಇಲ್ಲ, ಸಮಯವೂ ಇಲ್ಲ. "ನನ್ನ ಪಾರ ಚಟುವಟಿಕೆಗಳೇ ನನಗೆ ಮನರಂಜನೆನೀಡುವ ಕಾರ್ಯ" ಎಂದವರು ಉದ್ಗರಿಸುತ್ತಾರೆ

ರಾಜಕೀಯದಲ್ಲಿ ಸ್ತ್ರೀಯರಿಗೆ ಬೇಕಾದಷ್ಟು ಸ್ಥಾನವಿದೆ, ಅವಕಾಶವೂ ಇದೆ. ಬುದ್ಧಿಶಾಲಿಯಾದ ಮಹಿಳೆ ಈ ಕೆಲಸವನ್ನು ಸಂತೋಷದಿಂದ ನಿರ್ವಹಿಸಬಲ್ಲಳು. ಆರೋಗ್ಯ, ಸುರಕ್ಷತೆ, ಯೋಗಕ್ಷೇಮಾದಿಗಳು ಅವರಿಗೆ ಮನೆಗಳಲ್ಲಿಯೇ ಸಾಕಷ್ಟು ಪರಿಚಿತವಿರುವುವು.

ಶ್ರೀಮತಿ ಪಾಟರ್ ಆದರ್ಶ ಮಹಿಳೆಯೂ ಸಾರ್ವಜನಿಕ ಸೇವಾಕಾಂಕ್ಷಿಯೂ ಆಗಿದ್ದಾರೆ ನಮ್ಮ ದೇಶದಲ್ಲಿಯೂ ಸ್ತ್ರೀಯರು ಮುಂದುವರಿದ್ದೇವೆನ್ನುತ್ತಾರೆ ಆದರೆ, ಅವರಲ್ಲಿ ಶ್ರೀಮತಿ ಪಾಟರರಂತಹ ಎಷ್ಟು ಜನರನ್ನು ಹೆಕ್ಕಿ ತೆಗೆಯಬಹುದು? ಬಾಯಿಮಾತಿನಲ್ಲಿ ಜಂಬ ಕೊಚ್ಚಿಕೊಳ್ಳುವುದಕ್ಕಿಂತ, ಆಡಿದುದರಲ್ಲಿ ಒಂದಂಶವನ್ನಾದರೂ ಕಾರ್ಯರೂಪದಲ್ಲಿ ಮಾಡಿ ತೋರಿಸಿದರೆ, ಆದ ವೇ ಶ್ರೇಯಸ್ಕರವಾದುದು. ನಮ್ಮ ಮಹಿಳೆಯರೂ ಅಂತೆಯೇ ನೆಂದುವರಿಯುವುದು ಅವಶ್ಯ

ನಿಮ್ಮ ಮನಸ್ಸು ವಿಕಾಸಗೊಳ್ಳುತ್ತಿದೆಯೇ?

ಆತ್ಮಮನೋವಿಕಾಸೋಪಾಯಗಳು

ಕೇ ಎಂ ಅನಂತಪದ್ಮನಾಭ ಭಟ್ಟ

ನಮ್ಮ ಶರೀರವು ಪ್ರತಿದಿನ ವಿಕಸಿತವಾಗುತ್ತಾ ಇದೆ. ಪ್ರತಿಯೊಂದು ದಿನವೂ ಶರೀರದಲ್ಲಿ ಹೊಸ ರಕ್ತ, ಹೊಸ ಮಜ್ಜಾ ತಂತುಗಳು ವಿಕಸಿತವಾಗುತ್ತಾ ಇರುತ್ತವೆ. ಶಾರೀರಿಕ ಉನ್ನತಿಯ ಪ್ರಮಾಣದಲ್ಲಿ ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಯು ಆಗುವುದಿಲ್ಲವೆಂಬುದು ಸಾತ್ರ ದುಃಖದ ಸಂಗತಿ. ನಮ್ಮ ಶರೀರವು ಬೆಳೆಯುತ್ತಾ ಇದೆ, ಆದರೆ ಮನಸ್ಸು ಮಕ್ಕಳಂತೆ ಅವಿಕಸಿತವಾಗಿಯೇ ಇರುತ್ತದೆ ನಮ್ಮ ಮನಸ್ಸು ವಿಕಸಿತವಾಗಿದೆಯೋ ಇಲ್ಲವೋ ಎಂದು ತಿಳಿಯಲು, ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡಿರಿ.

೧ ನೀವು ಜನರೊಡನೆ ಮಾತಾಡುವಾಗ ಅಧನಾ ವ್ಯವಹಾರ ಮಾಡುವಾಗ, ಅದು ಆಗೌರವವೆಂದು ತಿಳಿಯುತ್ತೀರಾ?

೨ ನಿಮ್ಮ ಮನಶ್ಶಾಂತಿ ಅಥವಾ ಉತ್ಸಾಹಕ್ಕೋಸ್ಕರ ನೀವು ಬೇರೆಯವರ ವಿಚಾರಗಳನ್ನು ಬೇರೆಯವರ ಸಹಾಯವನ್ನು ಪಡೆಯಲು ಬಯಸುವಿರಾ?

೩ ಬೇರೆಯವರ ಕುತ್ಸಿತ ವಿಚಾರಗಳು ನಿಮ್ಮನ್ನು ಆಧೈರ್ಯರನ್ನಾಗಿ ಮಾಡುವುದೇ? ಅಥವಾ ನೀವು ಅದನ್ನು ಗಣನೆಗೆ ತಾರದೇ, ಸ್ಥಿರಭಾವದಿಂದ, ನಿಮ್ಮ ಕರ್ತವ್ಯದಾರಿಯಲ್ಲಿ ಮುಂದುವರಿಯುವಿರಾ?

೪ ನೀವು ಹೆಮ್ಮೆ, ಅಹಂಕಾರಪಡುತ್ತಿರಾ? ಹೊಗಳಭಟ್ಟರಾಗಿರುವಿರಾ? ಸ್ವಲ್ಪ ಹೊಗಳುವಿಕೆಯಿಂದ ಮಕ್ಕಳು ಹೆಮ್ಮೆಪಡುವಂತೆ, ನೀವು ಹೆಮ್ಮೆಪಡುವಿರಾ? ಅನ್ಯರ ಹೊಗಳುವಿಕೆಗೆ ಅಥವಾ ಜಾಣೂ ನಿಮ್ಮ ನೇಲೆ ಪರಿಣಾಮವನ್ನುಂಟುಮಾಡುವುದೇ?

೫. "ತೋಟೆ ಶೃಂಗಾರ ಒಳಗೆ ಗೋಳಿ ನೊಪ್ಪು" ಎಂಬಂತೆ ನಿಮ್ಮ ಅವಸ್ಥೆಯಾಗಿದೆಯೇ? ಮಕ್ಕಳಂತೆ ಬಣ್ಣ ಬಣ್ಣದ ವಸ್ತ್ರಗಳನ್ನುಡಲು ಆತುರರಾಗಿವಿರಾ?

೬. ಸ್ವಾದಿಷ್ಟ ಮೃಷ್ಟಾನ್ನ, ಬೀಡಿ, ಮುಂತಾದುವುಗಳಲ್ಲಿ ನೀವು ಆಸಕ್ತರಾಗಿರುವಿರಾ?

ಮೇಲೆ ಬರೆದ ಪ್ರಶ್ನೆಗಳ ಮೇಲೆ ವಿಚಾರ ಮಾಡಿರಿ ಆಗ ನಿಮಗೆ ನಿಮ್ಮ ರುಚಿ, ವಿಕಾಸದ ಅರಿವಾಗುವುದು.

ಆತ್ಮವಿಕಾಸದ ಕೆಲವು ಉಪಾಯಗಳು

"ನನಗೆ ಒಂದು ದೊಡ್ಡ ಸಂಪತ್ತು ಪ್ರಾಪ್ತವಾಗಿದೆ ಇದರಿಂದಾಗಿ ನಾನು ಮೇಲ್ಮೆಯನ್ನು ಹೊಂದುತ್ತಿದ್ದೇನೆ" ಎಂದು ಯಾವಾಗಲೂ, ಸ್ಮರಣೆ ಮಾಡಿರಿ ಯಾವಾಗಲೂ ಹೊಸ, ಉಪಯೋಗಿ ಜ್ಞಾನವನ್ನು ಹೆಚ್ಚಿಸುತ್ತಾ ಇರಿ ಜ್ಞಾನದ ಕೋಶವನ್ನು ಹೆಚ್ಚಿಸಲು ಸದಾ ಪ್ರಯತ್ನಿಸಿರಿ

ನಿಮ್ಮ ಸಂತೋಷ, ಉತ್ಸಾಹಗಳಿಗೆ, ಬೇರೆಯವರ ಸಹಾಯವನ್ನು ಅಪೇಕ್ಷಿಸಬೇಡಿ ಬೇರೆಯವರನ್ನು ಅನುಸರಿಸಬೇಡಿ ಉತ್ತಮ ಯಾವುದೆಂದು ಸರಿಯಾಗಿ ಆಲೋಚಿಸಿ, ಅದನ್ನೆ ಕೈಗೊಳ್ಳಿ ಯಾರೇನೆಂದರೂ ಹಿಂದಡಿ ಇಡಬೇಡಿ ಆತ್ಮವಿಶ್ವಾಸವನ್ನು ದೃಢಪಡಿಸಿರಿ.

ಒಂದು ವೇಳೆ ನೀವು ಹೆಮ್ಮೆಪಡುವಂತವರಾಗಿದ್ದರೆ, ಅಹಂಕಾರಿಗಳಾಗಿದ್ದರೆ, ಬೇರೆಯವರ ಪ್ರಶಂಸೆಯನ್ನು ಬಯಸುವವರಾಗಿದ್ದರೆ, ಕ್ರೋಧಿಗಳಾಗಿದ್ದರೆ, ನೀವು ಒಳಗಿಂದೊಳಗೆ ಹೀನತೆಯಿಂದಾಗಿ ಬೆದರುತ್ತಿದ್ದೀರಿ. ಹೀನತೆಯ ಪ್ರತಿಕ್ರಿಯೆಯು ಮಾನಸಿಕ ಜಗತ್ತಿನಲ್ಲಿ ಆಗುತ್ತಾ ಇದೆ.

(ಅನೇಪುಟ ನೋಡಿರಿ)

ನಮಗ್ರ ನಾಡಿನ ಅಭಿವೃದ್ಧಿಗಾಗಿ.....!

ರಾಜ್ಯ ಹಾಗೂ ದೇಶ ಸರಕಾರಗಳು ರೂಪಿಸಿದ ಯೋಜನೆಗಳ ಪರಿಪೂರ್ಣತೆಗೆ ಆರ್ಥಿಕ ಸಾಲ ಸಹಾಯಗಳನ್ನು ನೀಡುವುದು ನಿಮ್ಮೆಲ್ಲರ ಕರ್ತವ್ಯ.

ಚಿಕ್ಕ ಪುಟ್ಟ ವೈಯಕ್ತಿಕ ಉಳಿತಾಯ ಯೋಜನೆಗಳನ್ನು ಅನುಸರಿಸುವುದರ ಮೂಲಕ ದೇಶದ ದೊಡ್ಡ ಯೋಜನೆಗಳನ್ನು ಪರಿಪೂರ್ಣಗೊಳಿಸಿ ಸಮೃದ್ಧ ಭಾರತ ರಚನೆಗೆ ನಿಮ್ಮ ಕಾಣಿಕೆಯನ್ನು ಸಲ್ಲಿಸಿರಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

THE CANARA INDUSTRIAL & BANKING SYNDICATE LTD., UDIPI

Life Insurance Corporation of India

Unit New Karnataka Provident Insurance Co Mangalore

Notice having been given of the loss of Policy numbered 301 on the life of Sri B Sadananda Naik, issued by Life Insurance Corporation of India, Unit. New Karnataka Provident Insurance Company Duplicate Policy will be issued unless objection is lodged with us within one month from this date

K R. K. Bhat.
Divisional Manager,
Udipi, Dated 22-7-58

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೨೪-೭-೫೮	ಸಂಚಿಕೆ ೪೭

ಕಾರ್ಯದಕ್ಷತೆ— ಮಿತವ್ಯಯ

ಓರ್ವ ಪ್ರಸಿದ್ಧ ಮಹಿಳೆಯಾದ ಶ್ರೀಮತಿ ದೇಶಮುಖರು ಒಂದು ಬಾರಿ, ಮೈಸೂರು ರಾಜ್ಯಕ್ಕೆ ಭೇಟ್ಟಿಕೊಟ್ಟಾಗ, ಭಾರತದ ರಾಜ್ಯಗಳಲ್ಲೆಲ್ಲಾ ಮೈಸೂರಿನಷ್ಟು ಅಶ್ಚಿಪ್ತಿಕರ ರೀತಿಯಲ್ಲಿ ಕಾರ್ಯನೆಸಗುವ ರಾಜ್ಯ ಬೇರೊಂದಿಲ್ಲವೆಂದಾಡಿದ್ದಾರೆ. ಇದು ಹಲವಾರು ದೃಷ್ಟಿಯಿಂದ ಸರಿಯೆಂದೂ ಒಪ್ಪಬೇಕಾದುದು. ಆದುದರಿಂದಲೇ ಮೈಸೂರು ಸರಕಾರದ ಕಾರ್ಯಾಚರಣೆಯನ್ನು ಕೂಲಂಕಷವಾಗಿ ವಿಮರ್ಶಿಸಿ, ಮಿತವ್ಯಯವನ್ನು ಸಾಧಿಸುವಂತೆಯೂ ಕಾರ್ಯಕ್ಷಮತೆಯು ಹೆಚ್ಚುವಂತೆಯೂ ಅಗತ್ಯವಾದ ಸಲಹೆ ಸೂಚನೆಗಳನ್ನೀಯಲು ಶ್ರೀ ಎ. ಡಿ. ಗೋರವಾಲರನ್ನು ನೇಮಿಸಿತು. ಶ್ರೀ ಗೋರವಾಲರು ತಮ್ಮ ಕರ್ತವ್ಯವನ್ನು ನಿರ್ವಹಿಸಿ ಸುಮಾರು ಒಂದೂವರೆ ಮಾಸ ಪೂರ್ವದಲ್ಲಿಯೇ ತನ್ನ ವರದಿಯನ್ನೊಪ್ಪಿಸಿದ್ದು, ಅದರಲ್ಲಿ ಅಡಕವಾಗಿರುವ ಮುಖ್ಯ ವಿಚಾರಗಳು ಬೆಳಕಿಗೆ ಬಂದಿದ್ದರೂ, ಸಂಪೂರ್ಣ ಪ್ರಕಾಶಕ್ಕೆ ಬಂದಿರಲಿಲ್ಲ. ಇದೀಗ ಈ ವರದಿಯು ಹೊರಗೆ ಬಂದಿದೆ. ತನ್ನ ವರದಿಯಲ್ಲಿ ಶ್ರೀ ಗೋರವಾಲರು ಸರಕಾರದ ಲೋಪದೋಷಗಳನ್ನು ಪರುಷಹಚ್ಚಿ ಕಂಡುಹಿಡಿದು ಎತ್ತಿ ತೋರಿಸಿದ್ದಾರೆ; ಈ ಕುಂದುಕೊರತೆಗಳನ್ನು ಸರಿಗೊಳಿಸುವ ಆವಶ್ಯಕತೆಯನ್ನು ಒತ್ತಿ ಹೇಳಿ, ಸೂಚನೆಗಳನ್ನಿತ್ತಿದ್ದಾರೆ.

ಸಾಮಾನ್ಯವಾಗಿ, ಮೈಸೂರು ಸರಕಾರದ ನೌಕರರು ತಮ್ಮ ಕಾರ್ಯದತ್ತ ಗಮನವೀಯುವುದಕ್ಕಿಂತ ವೈಯಕ್ತಿಕ ಕಾರ್ಯಕ್ರಮಗಳತ್ತವೇ ಧ್ಯಾನಗೊಡುವರೆಂಬ ದೂರು ಅಲ್ಲಗಳೆಯುವಂತಹದಲ್ಲ. "ಇದು ರಾತ್ರೆಯಲ್ಲವೇ?" ಎಂದು ಕೇಳುವ ದೊರೆಗಳೊಡನೆ "ಹೌದು ಮಹಾಸ್ವಾಮಿ" ಎಂದು ಉತ್ತರಿಸುವ ಅಭ್ಯಾಸದ ಸಂಸ್ಕೃತಿಯೂ ಪರಂಪರೆಯೂ ಇರುವ ಒಂದು "ಸಂಸ್ಥಾನದ" ನೌಕರರು ಪ್ರಜಾಪ್ರಭುತ್ವದ ತತ್ವಗಳಿಗೆ ಹೊಂದಿಕೊಂಡು ಬಾಳುವುದನ್ನು ಕಲಿಯಲು ಕೆಲವು ಸಮಯವಾದರೂ ಬೇಕಾದೀತು. ಮಹಾರಾಜರ ಅಧಿಕಾರವು ಹೋಗಿ ಇಷ್ಟು ಕಾಲವಾದರೂ ರಾಜರ ಮೇಲೆ "ಮೈಸೂರಿನ" ಮೇಲೆ ದೇವರಿಗಿಂತಲೂ ಅಧಿಕ ಭಕ್ತಿ ಭಯಗಳನ್ನಿಡುವ "ಮೈಸೂರಿಗರಿಗೆ ಇಂತಹ ಮನಸ್ಸು ಬರುವುದು ಅಷ್ಟು ಸುಲಭವೂ ಅಲ್ಲ. ಮೈಸೂರು ರಾಜ್ಯಪಾಲರ ಮೇಲೆ ಕಳೆದ ದಸರಾ ಸಮಯದಲ್ಲಿ ಹೊರಿಸಲಾದ ಅಪವಾದಗಳನ್ನೂ ಈ ದಿಸೆಯಲ್ಲಿ ಸ್ಮರಿಸಬಹುದು. ಹೇಗಿದ್ದರೂ ತನ್ನ ನೌಕರರಿಗೆ ಕಾಲಕ್ಕನುಗುಣವಾದ ನಿರ್ದೇಶವಿತ್ತು "ಕಾಲಾಯತಸ್ಮೈನಮಃ" ಎಂದು ಕೈಮುಗಿದು ಕಾರ್ಯಗಳನ್ನು ಸುಸೂತ್ರವಾಗಿ ಸಾಗಿಸಿಕೊಂಡು ಹೋಗಬೇಕಾದುದು ಜನನಾಯಕರೆನಿಸುವ ಮಂತ್ರಿಗಳ ಕರ್ತವ್ಯ. ಈ ಮಂತ್ರಿಗಳೂ "ಮೈಸೂರಿನ ಪರಂಪರೆ"ಯಂತೆ ಎಲ್ಲರನ್ನೂ ಮೆಚ್ಚಿಸುವುದರಲ್ಲಿಯೇ ನಿಮಗ್ನರಾಗಿ ಕಾರ್ಯನಿಧಾನಕ್ಕೆ ಪ್ರೋತ್ಸಾಹವೀಯುತ್ತಿರುವಾಗ ಕಾರ್ಯಕ್ಷಮತೆ ಬರುವುದಾದರೂ ಹೇಗೆ? ಈ ಬಗ್ಗೆ ಶ್ರೀ ಗೋರವಾಲರು ಇತ್ತಿರುವ ಸೂಚನೆಯು ಅತಿ ಮುಖ್ಯವಾಗಿದ್ದು ಈ ಕೂಡಲೇ ಕಾರ್ಯಕಾರೀಗೊಳಿಸತಕ್ಕುದಾಗಿದೆ. ವಿಧಾನ ಸೌಧದಲ್ಲಿ ಮಂತ್ರಿಗಳಿಲ್ಲದಿರುವಾಗ ದೂರುಗಳ ಸ್ನೋ ಮನವಿಗಳ ಸ್ನೋ ಸ್ವೀಕರಿಸಲು ಗುಮಾಸ್ತರೂ ಇಲ್ಲವೆನ್ನುವಾಗ, ವಿಧಾನ ಸೌಧದ ಕಾರ್ಯವಿಧಾನವು ವ್ಯಕ್ತವಾಗುತ್ತದೆ. ಕಾಗದ ಪತ್ರಗಳ ಮುಖ್ಯಾಮುಖ್ಯತೆಗಳನ್ನು ಗಮನಿಸುವುದಂತೂ ದೂರ; ಕೆಲಪೊಮ್ಮೆ ಫೈಲುಗಳೇ ಮಾಯವಾಗುತ್ತವೆ ಎಂಬ ದೂರೂ ಇರುವುದು. ಲಂಚಗೂಳಿತನವು ಮಿತಿಮೀರಿದೆ. ಐ.ಎ.ಎಸ್. ಅಧಿಕಾರಿಗಳ ಕೊರತೆ ತೀವ್ರವಾಗಿದೆ. ಭಡತಿಕೊಡುವಾಗ ಯೋಗ್ಯತೆಗೆ ಪ್ರಧಾನ ಸ್ಥಾನವೀಯಬೇಕೇ ಹೊರತು ಜಾತಿ ಕೋಮುಗಳಗಲ್ಲ-ಇತ್ಯಾದಿ ಹೇಳಿಕೆಗಳು ನಿಜವಾಗಿಯೂ ಸ್ವಾಗತಾರ್ಹವಿವೆ. ಸರಕಾರ ಈ ಕೊರತೆಗಳನ್ನು ಸರಿಮಾಡಿಸಿ ಕಾರ್ಯಸ್ಫೂರ್ತಿಯನ್ನು ರೂಪಿಸಿಕೊಂಡಲ್ಲಿ ಸುಧಾರಣೆಯ ಸೋಂಕಾದರೂ ತಾಗೀತು. ಆದರೆ, ಹೀಗೆ ಮಾಡುವಾಗ ವಿಧಾನ ಸೌಧದ ಸೇಕಡಾ ಐವತ್ತರಷ್ಟು ಜನರು ಮನೆಗೆ ಹೋಗಬೇಕಾದೀತು ಎಂದು ಶ್ರೀ ಗೋರವಾಲಾ ಆಡಿದ್ದಾರೆ!

ಆರ್ಥಿಕ ಸರಿಸ್ಥಿತಿಯು ಭದ್ರವಾಗಿಲ್ಲವೆಂದೂ ವರ್ಷ ವರ್ಷವೂ ಸಾಲದ ಮೊತ್ತವು ಏರುತ್ತಾ ಹೋಗುವುದೆಂದೂ ಒಂದು ದೂರು. ಆದರೆ, ಕೇಂದ್ರ ಆರ್ಥಿಕ ವ್ಯವಹಾರ ಮಂತ್ರಿಗಳೂ ಆಂಧ್ರ ಮದ್ರಾಸಗಳಲ್ಲಿ ಅರ್ಥ ಮಂತ್ರಿಯಾಗಿ ಜ್ಞಾನಗಳಿಸಿದ್ದವರೂ ಆದ ಶ್ರೀ ಗೋಪಾಲ ರೆಡ್ಡಿಯವರು ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದಾಗ ಸಂದೇಹತಾಳಲಿಲ್ಲ. ಹಾಗಿದ್ದರೂ, ಮೈಸೂರಿನ ಆರ್ಥಿಕ ಸ್ಥಿತಿ ಭಾರತದ ಇತರ ರಾಜ್ಯಗಳ ನುಟ್ಟಿಕ್ಕಿಂತ ತುಸು ಭದ್ರವಾಗಿಯೋ ಶಿಥಿಲವಾಗಿಯೋ ಇರದೆ ಸಮಾನ ಮಟ್ಟದಲ್ಲಿಯೇ ಇದೆಯೆಂದರೆ ಅತಿಶಯೋಕ್ತಿಯಾಗಲಾರದು. ಆದರೂ, ಮಿತವ್ಯಯ ಸಾಧಿಸುವ ದೃಷ್ಟಿಯಿಂದ ಹಾಗೂ ಖಾಸಗಿ ಕ್ಷೇತ್ರವನ್ನು ಬೆಂಬಲಿಸುವ ಬಗ್ಗೆ ಕಾಲೇಜು, ಮಾಧ್ಯಮಿಕ ಶಾಲೆಗಳನ್ನು ಖಾಸಗಿ ವ್ಯಕ್ತಿಗಳಗೋ ಸಂಸ್ಥೆಗಳಿಗೋ ಒಪ್ಪಿಸುವುದು; ಕೇಂದ್ರ ಸರಕಾರದ ಸಂಸ್ಥೆಗಳಲ್ಲಿ ತೊಡಗಿಸಿದ ಹಣವನ್ನು ಪ್ರಾಂತೀಯ ಸಂಸ್ಥೆಗಳಿಗೆ ಹಾಕುವುದು, ಇಂತಹ ಸಂಸ್ಥೆಗಳ ಆಡಳಿತವನ್ನು ಸರಕಾರವು ನೋಡಿಕೊಳ್ಳದೆ ಪ್ರತ್ಯೇಕ ಮಂಡಳಿಗಳನ್ನು ಸ್ಥಾಪಿಸುವುದು, ದೊಡ್ಡ ಮೊತ್ತದ ವ್ಯಯದ ಬಾಬುಗಳ ಕೇಂದ್ರದ ನೆರವನ್ನು ಹಾರೈಸುತ್ತ, ಅವು ಕೈಸೇರುವುದಕ್ಕೆ ಮೊದಲಾಗಿ ಕೈಗೊಳ್ಳದಿರುವುದು; ಇಂಜಿನಿಯರಾದಿಗಳಿಗೆ ವಿಶೇಷ ಭತ್ತೆ ಇತ್ಯಾದಿಗಳನ್ನೀಯದಿರುವುದು ಮೊದಲಾದ ಸೂಚನೆಗಳು ಸ್ವಾಗತಾರ್ಹವೆನ್ನಬಹುದು.

ಜಿಲ್ಲೆಗಳ ಸಂಖ್ಯೆಯನ್ನು ೧೫ಕ್ಕೆ ಇಳಿಸುವುದಕ್ಕೆ ಮಾತ್ರ ಕೆಲವೆಡೆಗಳಿಂದ ಆಕ್ಷೇಪ ಬರಬಹುದು; ಆದರೆ, ಈಗಿರುವ ನಾಲ್ಕು ಡಿವಿಜನ್‌ಗಳನ್ನು ಮೂರಕ್ಕಿಳಿಸುವಲ್ಲಿ ಈ ತೊಂದರೆ ಬರಲಾರದು. ಮದ್ಯಪಾನ ಪ್ರತಿಬಂಧನದ ವಿಷಯದಲ್ಲಿ ಶ್ರೀ ಗೋರವಾಲರು ತೋರಿಸಿದ ಧೋರಣೆಯು ಅವೆಷ್ಟೇ ಸತ್ಯವಿದ್ದರೂ ಸಮಂಜಸವೆನ್ನಬರುವುದಿಲ್ಲ. ಏಕೆಂದರೆ, ಮದ್ಯಪಾನ ಪ್ರತಿಬಂಧ ಶಾಸನವು ಧಕ್ಷರೀತಿಯಲ್ಲಿ ಕಾರ್ಯಕಾರಿಯಾಗಿಲ್ಲವೆಂಬ ಕಾರಣದಿಂದ ಅದನ್ನು ಕಿತ್ತೊಗೆಯುವುದೆಂದರೆ, ಕಾಲಿಗೆ ಗಾಯವಾಯಿತೆಂದು ಕಾಲನ್ನೇ ಕಡಿದೊಗೆದಂತೆ ಯೆನ್ನಬಹುದು. ಕಲ್ಯಾಣ ರಾಷ್ಟ್ರವನ್ನು ಸ್ಥಾಪಿಸಿ, ಜನತೆಯ ಸರ್ವಾಂಗೀಣಾಭಿವೃದ್ಧಿಯ ಗುರಿಯನ್ನಿಟ್ಟುಕೊಂಡಿರುವಾಗ ನೈತಿಕ ಅಧಃಪತನದತ್ತ ಕೊಂಡೊಯ್ಯುವ ಮಾದಕ ಪೇಯಗಳನ್ನು ತಡೆಹಿಡಿಯಬಾರದೆಂದರೆ ಅದು ಒಪ್ಪದ ಮಾತು. ಸರಕಾರವು ಏನೇ ಆಗಲಿ, ಈ ಕಾಯಿದೆಯನ್ನು ಮತ್ತಷ್ಟು ತೀವ್ರಗೊಳಿಸಿ ವಿಶಾಲ ಕರ್ಣಾಟಕದ ಎಲ್ಲೆಡೆಯಲ್ಲಿಯೂ ವ್ಯವಹಾರಕ್ಕೆ ತರುವುದು ಅವಶ್ಯಕ. ಶ್ರೀ ಗೋರವಾಲರು ಪೋಲೀಸು ಶಾಖೆಯ ಪುನಾರಚನೆಯತ್ತ ವಿಶೇಷ ಗಮನವಿತ್ತಿಲ್ಲವೇಕೋ ತಿಳಿದಿಲ್ಲ. ಇರಲಿ. ಅಂತೂ ಶ್ರೀ ಗೋರವಾಲರ ವರದಿ, ಸೂಚನೆಯಲ್ಲಿ ಒಂದೆರಡು ಅಸಾಮಂಜಸ್ಯ ವಿರುವುದಾದರೂ, ಉಳಿದುವುಗಳನ್ನು ನಮ್ಮ ಸುಧಾರಣಾಸಕ್ತ ಸರಕಾರವು ತೀವ್ರವಾಗಿ ಗಮನಿಸಿ, ಕಾರ್ಯರೂಪದಲ್ಲಿ ತಂದಲ್ಲಿ ಸ್ವಲ್ಪ ಸಮಯದ ನಂತರವಾದರೂ ಉದ್ದೇಶ ಕೈಗೂಡೀತು. ಅದು ಹೊರತು, ತನ್ನ ಇದುವರೆಗಿನ ಆಚರಣೆಯಂತೆ ನಿಧಾನ ಪ್ರಣಾಳಿಯನ್ನೇ ಅವಲಂಬಿಸಿದರೆ, ಜನತೆಯು ಸಂಪೂರ್ಣ ನಿರಾಶರಾಗಬೇಕಾದೀತು. ಅಂತಹ ಗತಿ ಬಾರದಿರಲಿ ಎಂದೇ ನಮ್ಮ ಆಶಯ.

ಮಧ್ಯಪೂರ್ವದ ರಾಜಕೀಯ ಬಿಕ್ಕಟ್ಟು— ವಿದೇಶೀ ಕುಹಕಿಗಳ ಸ್ವಾರ್ಥ ಸಾಧನೆ!

ಸುಮಾರು ಎರಡು ವರ್ಷಗಳ ಹಿಂದೆ ಮಧ್ಯ ಪೂರ್ವದಲ್ಲಿ ಎದ್ದಿದ್ದ ಬಿಕ್ಕಟ್ಟು, ಗಲಭೆ, ಯುದ್ಧಭೀತಿ ಒಮ್ಮೆಗೆ ಸ್ವಲ್ಪ ಸಮಾಧಾನಗೊಂಡರೂ ಇದೀಗ ಪುನಃ ಉದ್ಭವಿಸಿದೆ—ದಿನೇ ದಿನೇ ವಿಸ್ತರಿಸುತ್ತಿದೆ. ಸುಯೇಜ ಕಾಲುವೆಯನ್ನು ರಾಷ್ಟ್ರೀಕರಿಸಿ ಪಾಶ್ಚಾತ್ಯರ ಲಾಭವನ್ನು ನುಂಗಿ ಹಾಕಿದ ಈಜಿಪ್ತದ ಅಧ್ಯಕ್ಷ ಶ್ರೀ ನಸ್ಸೇರರ ಮೇಲೆ ಪಾಶ್ಚಾತ್ಯ ವಕ್ರದೃಷ್ಟಿ ಅಂದಿನಿಂದಲೂ ಇದ್ದೇ ಇದೆ. ಈ ನಡುವೆ, ಅವರನ್ನು ಮುಗಿಸಿ ಬಿಡುವ ಸಾಹಸವೂ ನಡೆದು ವಿಫಲವಾಗಿದೆ. ಕರ್ನೆಲ್ ನಸ್ಸೇರರು ಅರಬ ರಾಷ್ಟ್ರಗಳಲ್ಲಿ ಏಕತೆಯನ್ನು ಸ್ಥಾಪಿಕಬೇಕೆಂಬ ಆಶಯದ ಪ್ರಥಮ ಹೆಜ್ಜೆಯಾಗಿ ಈಜಿಪ್ತ್—ಸಿರಿಯಾಗಳ ವಿಲಯನದಿಂದ ಸಂಯುಕ್ತ ಅರಬ ಒಕ್ಕೂಟವಾಯಿತು. ಹಾಗೆಯೇ ಪಾಶ್ಚಾತ್ಯರ ಕೈಗೊಂಬೆಗಳಾಗಿದ್ದ ಅರಸರ ಒಡೆತನದಲ್ಲಿರುವ ಇರಾಕ್ ಮತ್ತು ಜೋರ್ಡಾನಗಳೂ ಒಂದಾದುವು. ಆದರೆ, ಪ್ರಜಾಪ್ರಭುತ್ವ ಸಾಮ್ರಾಜ್ಯವಾದ ಈ ಕಾಲದಲ್ಲಿ ಇರಾಕಿನ ಜನರು ರಾಜ-ರಾಜವಂಶಜರನ್ನು ನಿರ್ನಾಮಮಾಡಿ ಪ್ರಜಾಸತ್ತೆಯನ್ನು ಸ್ಥಾಪಿಸಿಕೊಂಡಿರುವೆವೆಂದು ಮೊನ್ನೆಮೊನ್ನೆ ಸಾರಿದ್ದಾರೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಶ್ರೀ ನಸ್ಸೇರರು ತಮ್ಮ ರಶ್ಯಾ ಕಾರ್ಯಕ್ರಮಗಳನ್ನೂ ಮುಗಿಸಿಬಂದರು. ಕಾಕತಾಳ ನ್ಯಾಯದಂತೆ, ಇದರಿಂದ ಪಾಶ್ಚಾತ್ಯರ ವಿವಂಚನೆ ಬೆಚ್ಚಾಯಿತು. ಇರಾಕದಲ್ಲಿ ನಡೆದ ಈ ವಿಸ್ಫೋಟವಾಯು ಲೆಬನಾನಿನಲ್ಲಿಯೂ ಆಗಾಗಲೇ ಹುಡಿಕ್ತು. ಅಲ್ಲಿ ಸಂಯುಕ್ತ ರಾಷ್ಟ್ರಸಂಘದ ವೀಕ್ಷಕರ ತಂಡವು ಇದ್ದಿತ್ತು. ಆದರೆ, ತಮ್ಮ ಲಾಭಕ್ಕೆ ಸೊನ್ನೆಯಾದೀತೆಂದು ಊಹಿಸಿದ ಪಾಶ್ಚಾತ್ಯರು ಮಧ್ಯಪೂರ್ವದ ರಾಜ್ಯಗಳಲ್ಲಿ ಕೆಲವನ್ನಾದರೂ ತಮ್ಮ ಪ್ರಭಾವದಡಿಯಲ್ಲಿರಿಸಿಕೊಂಡು, ತಮ್ಮ ಸ್ವಾರ್ಥಸಾಧನೆಗಾಗಿ ನಿನೇನೋ ನೆವನವಿತ್ತು ಸೈನ್ಯವನ್ನಟ್ಟಿದ್ದರು. ಶ್ರೀ 'ಐಸನ್ ಹಾವರರ ಮಧ್ಯಪೂರ್ವ ಸಿದ್ಧಾಂತ'ದಂತೆ ಎಂದು ಅಮೆರಿಕೆಯ ಸೈನ್ಯ ಲೆಬನಾನಿನಲ್ಲಿಯೂ ಜೋರ್ಡಾನ್ ಸಹಾಯಯಾಚಿಸಿತೆಂದು ಬ್ರಿಟನ್ನು ಜೋರ್ಡಾನದಲ್ಲಿಯೂ ತಂತಮ್ಮ ಸೈನ್ಯವನ್ನಿಳಿಸಿದರು.

ಮಧ್ಯಪೂರ್ವದ ರಾಷ್ಟ್ರಗಳ ಮೇಲೆ ಕಮ್ಯುನಿಸ್ಟ್ ರಾಷ್ಟ್ರ (ಅರ್ಥಾತ್ ರಶ್ಯಾ)ಗಳ ಆಕ್ರಮಣವಾದರೆ, ಆಗ, ಅವುಗಳ ರಕ್ಷಣೆಗಾಗಿ ಅಮೆರಿಕೆಯು ತನ್ನ ಸೇನೆಯನ್ನೀಯುವುದು ಎಂಬುದೇ ಐಸನ್ ಹಾವರರ ಸಿದ್ಧಾಂತ. ಪಾಕಿಸ್ತಾನಕ್ಕೆ ಅಮೆರಿಕೆಯು ಒದಗಿಸಿದ ಶಸ್ತ್ರಾಸ್ತ್ರಗಳನ್ನು ಅದು ಭಾರತದ ಮೇಲೆ ಯುದ್ಧಸಾರಲು ಬಳಸಲಾರದು ಎಂದು ಅಮೆರಿಕೆಯಾಡಿದ್ದುದನ್ನು ಇಲ್ಲಿ ಗಮನಿಸಬಹುದು. ಆದರೆ, ಲೆಬನಾನಿನಲ್ಲಿ ಇಂದು ರಶ್ಯವಾಗಲೀ ಇತರ ಯಾವುದೇ ರಾಷ್ಟ್ರವಾಗಲೀ ದಾಳಿ ಮಾಡಿಲ್ಲ. ಲೆಬನಾನಿನಲ್ಲಿ

ಕುಂದಾಪುರ ಅಸಿಸ್ಟೆಂಟ್ ಕಮಿಶನರರ ಕೋರ್ಟಿನಲ್ಲಿ

O. P. 876/1957.

ಗಾರಮ್ಮ ಶೆಟ್ಟಿ —ಅರ್ಜಿದಾರಳು

1 ಕೀನಪ್ಪ ಶೆಟ್ಟಿ, 2 ಮಹಾಬಲ ಶೆಟ್ಟಿ —ಎದ್ರುದಾರರು

ಮಲ್ಕಾಡಿ ಮುತ್ತಕ್ಕ ಶೆಟ್ತಿ ನುಕ್ಕಳು ಕುಂದಾಪುರ ತಾಲೂಕು ತೆಕ್ಕಟ್ಟೆ ಗ್ರಾಮದಲ್ಲಿರುವವರು. P. O. THEKKATTE.

2ನೇ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದ್ರೆ- ನೀವು ಕೂಡಾ ಎದ್ರಿರು ಅರ್ಜಿದಾರಳ ಮೇಗೆ ಜಾಲನೇಕಯಿಂದ ಸ್ವಾಧೀನವಿದ್ದು ಅನುಭವಿಸಿಕೊಂಡು ಬರುವ ಸ್ತಳದ ಸ್ಥಳ ಸ್ವಾಧೀನತೆ ಬಗ್ಗೆ, ಅರ್ಜಿದಾರಳು ಮಾಡಿಕೊಂಡ ಮೇಲಿನ ಅರ್ಜಿಯು ತಾ. 30-7-58ನೇ ಬುಧವಾರಕ್ಕೆ ಅಳ್ಳರುತ್ತಿಗೆ ಇಟ್ಟಿದೆ. ಏನ್ನು ಅಕ್ಷೇಪಣೆಗಳೇನಾದರೂ ಇದ್ದರೆ ಆ ದಿನ ಹಗಲು ಗಂಟೆ 11ಕ್ಕೆ ಸದರಿ ಕೋರ್ಟಿನಲ್ಲಿ ಹಾಜ್ರಾಗಿ ಜ್ಞಾಪಿಸಿರುವುದಾಕೊಳ್ಳತಕ್ಕದ್ದು. ತಪ್ಪಿದಲ್ಲಿ ಎಕ್ಪಾರ್ಟಿಯಾಗಿ ಅರ್ಜಿಯು ತೀರ್ಮಾನವಾದೀತು.

(By order)

G. Kushala Hegde,
Advocate.

Coondapur 21—7—58.

ಉಡುಪಿ

ಬಟ್ಟೆ ಹಾಗೂ ಪುಸ್ತಕಗಳ ವಿತರಣೆ—ಸ್ಥಳೀಯ ಮೊದರ್ನ್ ಹಾ ಎ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಬಟ್ಟೆ ಹಾಗೂ ಪುಸ್ತಕಗಳನ್ನು ವಿತರಣೆ ಮಾಡುವ ಸಮಾರಂಭವು ತಾ. 16ರಂದು ನವಭಾರತದ ಸಂಪಾದಕ ಶ್ರೀ ಸಿ ಎಸ್ ಕುಂದ್ರರಿಂದ ನೆರವೇರಿತು ಸಿಂಡಿಕೇಟ್ ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ ಎ ಪೈಗಳು ಸಭಾಧ್ಯಕ್ಷತೆ ವಹಿಸಿದ್ದು, ಸ್ಥಾಪಿಸಿಕ ಶಿಕ್ಷಣದಲ್ಲಿಯ ಸಮಸ್ಯಾ ಪರಿಹಾರ ಹೇಗೆ ಆಗಬೇಕು ಎಂಬುದನ್ನು ವಿವರಿಸಿದರು

ಸ್ಥಾರಂಭದಲ್ಲಿ ಶಾಲಾ ಮೆನೇಜರ್ ಶ್ರೀ ಕೆ ಜನಾರ್ದನ ನಾಯ್ಕರು ಸ್ವಾಗತ ಮಾತುಗಳನ್ನಾಡಿದರು ಶಾಲಾ ಹೆಡ್ಮಾಸ್ಟರ್ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಧನ್ಯವಾದಗಳನ್ನಿತ್ತರು 73 ವಿದ್ಯಾರ್ಥಿಗಳಿಗೆ ಬಟ್ಟೆಯನ್ನು 68 ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಣೆ ಮಾಡಲಾಯಿತು.

ವಿದಾಯ ಸತ್ಕಾರ—ಸ್ಥಳೀಯ ಬೋರ್ಡ್ ಹೈಸ್ಕೂಲಿನ ಶ್ರೀ ಬಿ ಶ್ರೀನಿವಾಸ ರಾಯರಿಗೆ ಪುಂಜಾಲ ಕಟ್ಟೆಯ ಬೋರ್ಡ್ ಹೈಸ್ಕೂಲಿಗೆ ಹೆಡ್ಮಾಸ್ಟರಾಗಿ ವರ್ಗವಾದುದರಿಂದ ಅವರಿಗೊಂದು ವಿದಾಯ ಸತ್ಕಾರ ಕೂಟವು ತಾ 11ರಂದು ಜರಗಿಲ್ಪಟ್ಟಿತು ಶ್ರೀಗಳಾದಿ ಅನಂತ ಕೃಷ್ಣ ಸಾಮಕ್ಕ (ಹೆಡ್ಮಾಸ್ಟರ್), ಆನಂದ ರಾವ್, ಸಂಜೀವ ಶೆಟ್ಟಿ, ಅಣ್ಣಪ್ಪ ನಾಯಕ್, ನಾಗಪ್ಪಯ್ಯ ಮತ್ತು ಶಂಕರ ಭಟ್ಟರು ಕಾಲೋಚಿತ ಮಾತುಗಳನ್ನಾಡಿದರು, ಶ್ರೀ ಪರಮೇಶ್ವರ ಬಾಯರಿಯವರು ಧನ್ಯವಾದವಿತ್ತರು

ಕರ್ನಾಟಕ ಸಂಘದ ಉದ್ಘಾಟನೆ—ಸ್ಥಳೀಯ ಸೈಂಟ್ ಸಿಸಿಲಿಸ್ ಹೈಸ್ಕೂಲಿನ ಕರ್ನಾಟಕ ಸಂಘವನ್ನು ಈಚೆಗೆ ಶ್ರೀ ಎಸ್. ವೆಂಕಟರಾಜರು ಉದ್ಘಾಟಿಸಿದರು ಶ್ರೀ ಕೆ. ಎಲ್ ಎನ್ ಉಪಾಧ್ಯಾಯರು ಸ್ವಾಗತ ಮಾತುಗಳನ್ನಾಡಿದರು ಕುವೆಂಪು ಜಯಂತಿಯನ್ನರಿಂದ ವಂದನೆಗಳು ಅರ್ಪಿಸಲ್ಪಟ್ಟವು

ರೋಟರಿ ಕ್ಲಬ್ಬಿನ ಸಪ್ತಾಹಿಕ ಸಭೆಯು—ಮಣಿಪಾಲದಲ್ಲಿ ಶ್ರೀ ಕೆ ಆರ್ ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಮ್ ಆರ್ ಕಾರ್ನಾಡರಿಂದ ಪ್ರಾರ್ಥನೆಯಾದ ಬಳಿಕ, ಎಮ್ ಜಿ ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸುಂದರರಾಯರು ಕಲೆ ಮತ್ತು ವಿಜ್ಞಾನದ ಕುರಿತು ಮಾತನಾಡಿದರು ಶ್ರೀ ಟಿ ಎ ಪೈಗಳು ಧನ್ಯವಾದವಿತ್ತರು.

ಕಾನ-ಜಾಣ ಪರೀಕ್ಷೆಗಳು— ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಕಡೆಯಿಂದ 1958ನೇ ದಶಂಬರ ತಿಂಗಳಲ್ಲಿ ನಡೆಯಲ್ಪಡುವ ಸರಕಾರದಿಂದ ಮನ್ನಣೆ ಪಡೆದ 'ಕಾನ, ಜಾಣ ಪರೀಕ್ಷೆಗಳಿಗೆ ಉಡುಪಿ ಕ್ಷೇತ್ರದಿಂದ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವರೆಗೆ ಕಲಾವೃಂದದ ವತಿಯಿಂದ ತರಗತಿಯನ್ನು ತೆರೆಯಲಾಗುವುದು ತರಗತಿಗಳಿಗೆ ಸೇರಿಲಿಚ್ಛಿಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದೇ ತಾ 20ರೊಳಗೆ ಕಲಾವೃಂದದ ಕಾರ್ಯದರ್ಶಿಗಳಿಗೆ ಬರೆಕೊಳ್ಳಬಹುದು

ಚಾಚಾ ನೆಹರೂ ಸಮಾಜದ ಉದ್ಘಾಟನೆ—ಕಡಿಯಾಳಿ ಹಿರಿಯ ಬುನಾದಿ ಶಾಲೆಯ ಮೂರನೆ ವರ್ಗದ 'ಚಾಚಾ ನೆಹರೂ ಸಮಾಜ'ದ ಉದ್ಘಾಟನಾ ಸಮಾರಂಭವು ಕಳೆದ ತಾ 21ರಂದು ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಬಟ್ಟರ ಇವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯಕ್ರಮಗಳ ಅಂಗವಾಗಿ ಶ್ರೀ ಯಸ್ ಸುಬ್ರಾಯ ರಾಯರು ಪಂಡಿತ್ ನೆಹರೂರವರ ಭಾವ ಚಿತ್ರವನ್ನು ಅನಾವರಣ ಮಾಡುತ್ತಾ ಚಿಕ್ಕ ಮಕ್ಕಳು ಚಾಚಾ ನೆಹರೂರವರ ಜೀವನದಿಂದ ಪಾಠವನ್ನು ಕಲಿಯಬೇಕೆಂದು ಹೇಳಿದರು ಶ್ರೀಯುತ ಕೆ ದಾಮೋದರ ಆಚಾರ್ಯರು ಬಾಪೂಜಿಯವರ ಭಾವಚಿತ್ರವನ್ನು ಅನಾವರಣ ಮಾಡಿ ಅವರ ಮಹಿಮೆಗಳನ್ನು ವಿವರಿಸಿದರು ವಿದ್ಯಾರ್ಥಿಗಳಲ್ಲಿ ಕುವೆಂಪು ಉಮೇಶ ಭಟ್ ಹಾಗೂ ಕುಮಾರಿ ಸುಶೀಲ, ಸರಸಿಂಹ ರಾವ್ ಇವರು ಮಾತನಾಡಿದರು ಮನಸರಂಜನೆಯ ಅಂಗವಾಗಿ ಕುಮಾರಿ ಸರಳಾ ಮತ್ತು ಸುರೇಶಾಯ ಅಭಿನಯ ಗೀತೆಗಳನ್ನು ಅಭಿನಯಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಚಾಚಾ ನೆಹರೂ ಸಮಾಜದ ಸದಸ್ಯರ ಪರಿತ್ರ ಮನಸ್ಸನ್ನು ಕೊಂಡಾಡಿ, ನೆಹರೂ ಕಲಾಜವು ಆದರ್ಶವಾಗಬೇಕೆಂದು ಹಾರೈಸಿದರು ಕೊನೆಯಲ್ಲಿ ಸಮಾಜದ ಮುಖ್ಯ ಮಂತ್ರಿ ಬಿ. ಆರ್ ನರಸಿಂಹ ರಾಯರು ಧನ್ಯವಾದವಿತ್ತರು

ಶಿರ್ವ— ಸ್ಥಳೀಯ ಸೈಂಟ್ ಮೇರೀಸ್ ಹೈಸ್ಕೂಲಿನ ಚಾಚಾ ಕೂಡದ ಉದ್ಘಾಟನೆಯನ್ನು ತಾ 11ರಂದು ಹಿಂದಿ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಬಿ ಜಯರಾಮ ಶೆಟ್ಟರು ನೆರವೇರಿಸಿದರು ಸದ್ರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಲ್ ಪೊಂಚೋಸ್ಸರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ಮಣಿಪಾಲ—ಹೈಸ್ಕೂಲಿನ ವಿದ್ಯಾರ್ಥಿ ನಾಯಕರ ಚುನಾವಣೆ ನಡೆದು ಶ್ರೀ ಎಳದ ಎಚ್. ಕೃಷ್ಣಮೂರ್ತಿ ತಂತ್ರಿ ಮತ್ತು ಬಿ ಸಚ್ಚಿದಾನಂದ ಹೆಗ್ಡೆಯವರು ಅನುಕ್ರಮವಾಗಿ ವಿದ್ಯಾರ್ಥಿನಾಯಕ ಮತ್ತು ಉಪನಾಯಕರಾಗಿ ಆರಿಸಲ್ಪಟ್ಟರು ವಿದ್ಯಾರ್ಥಿ ವಿಭಾಗ ಸಭೆಯ ಅಧ್ಯಕ್ಷರಾಗಿ ಶ್ರೀ ಬಿ ರಮಾನಂದ ಹೆಗ್ಡೆಯವರು ಆರಿಸಲ್ಪಟ್ಟರು

ಶೋಚನೀಯ ನಿಧನ— ಬೆಂಗಳೂರಲ್ಲಿ ಡಾಕ್ಟರಾಗಿರುವ ಮಂಗಳೂರಿನ ಡಾ ನಾರಾಯಣ ಅಳ್ಳ ಎಮ್. ಎಲ್. ಎ ಅವರ ಒಂಬತ್ತು ವರ್ಷ ಪ್ರಾಯದ ಪುತ್ರ ಸುಭಾಸ್ ಅಳ್ಳನು ತಾ 18ರಂದು ಬೆಳಿಗ್ಗೆ ಲಂಡಿ ಅನಾರೋಗ್ಯದಿಂದ ಮರಣ ಹೊಂದಿದನು ಡಾ ಅಳ್ಳರ ಇನ್ನೋರ್ವ ಪುತ್ರ ಜೀವರಾಜ ಅಳ್ಳನು ತೀವ್ರವಾಗಿ ಜ್ವರಗೆಗಂಡು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನು.

ಸಂಕ್ಷಿಪ್ತ ಸುದ್ದಿಗಳು

ಕೇಂದ್ರ ಭಾಷಾ ವಿವಾದ

ಕೇಂದ್ರ ಸರಕಾರೀ ಭಾಷೆಯು ಯಾವುದಾಗಬೇಕೆಂದು ಹಿಂದ್ಯೇತರ ಪ್ರದೇಶಗಳ ಜನರು ನಿರ್ಧರಿಸಬೇಕಲ್ಲದೆ, ಹಿಂದೀ ಪ್ರದೇಶದ ಜನರಲ್ಲ ಇದಕ್ಕೆ ತಪ್ಪಿ ಹಿಂದಿ ಪ್ರದೇಶದ ಜನಗಳ ಅಭಿಪ್ರಾಯವನ್ನು ಮನ್ನಿಸಿ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿದರೆ ಆಗ ತಮ್ಮ ಸ್ವಾರ್ಥಕ್ಕಾಗಿಯೇ ಅವರು ಹೀಗೆ ಮಾಡಿದರೆಂದು ಇತರರು ಹೇಳುತ್ತಾರೆ ಹದಿನಾಲ್ಕು ಭಾಷೆಗಳಿರುವ ಭಾರತದಲ್ಲಿ ಅವುಗಳಲ್ಲಿ ಯಾವುದನ್ನೂ ರಾಷ್ಟ್ರಭಾಷೆಯಾಗಿ ಮಾಡುವುದು ಅಸಾಧ್ಯ ಹಾಗೆ, ಸರಕಾರೀ ಭಾಷೆಯೊಂದೇ ಆಗ ಬೇಕಾದರೆ, ಸಂಸ್ಕೃತಕ್ಕೆ ಮಾತ್ರ ಅದನ್ನು ನಿರ್ಮಾಸುವ ಶಕ್ತಿ ಇದೆ. ಸಂಸ್ಕೃತದಂತಹ ಗಾಂಭೀರ್ಯಪೂರ್ಣವಾದ ಆಡಂಬರದ ಭಾಷೆ ಬೇರೊಂದಿಲ್ಲ ಎಂದು ರಾಜಾಜಿಯವರು ಹೈದರಾಬಾದಿನ ಸಮ್ಮೇಳನದಲ್ಲಿ ನುಡಿದರು.

ದುರಭಿಮಾನಿಗಳ ಸ್ವಾರ್ಥ

ರಶ್ಯ ಮತ್ತು ಅಮೆರಿಕೆಯ ಮಹಾನಾಯಕರು ತಮ್ಮ ಪಕ್ಷ ಕಲಹಗಳಿಂದ ಎದ್ದುಬರುವ ಪ್ರಯತ್ನಮಾಡದೆ, ತಂತಮ್ಮ ವಾದಗಳನ್ನೆ ಮಂಡಿಸುತ್ತ ಸಮರ್ಥಿಸುತ್ತ ಒಂದು ವಿಶದವಾದ ಸತ್ಯವನ್ನು ಕಾಣಲಾರದ ದುರಭಿಮಾನಿಗಳಾಗಿದ್ದಾರೆ ತಮ್ಮಷ್ಟು ವ್ಯಾವಹಾರಿಕ ಮನುಷ್ಯರು ಬೇರಾರೂ ಇಲ್ಲವೆಂದು ತಿಳಿದ ಕೊಂಡಿರುವ ಇವರು ಯುದ್ಧಸಂಭವಿಸಿದರೆ, ವಿಶ್ವವಿಡಿ ಅಂತ್ಯಗೊಳ್ಳುವುದು, ಜತೆಗೆ ತಮ್ಮ ಸಮಾಧಿಯೂ ಆಗುವುದು ಎಂಬ ಕಟು ಸತ್ಯವನ್ನು ಕಾಣದಾಗಿದ್ದಾರೆ ಇಕ್ಕಡೆಯವರೂ ಜಗತ್ತನ್ನು ಜಯಿಸುವುದು ತಮಗೆ ಸಾಧ್ಯವಿಲ್ಲವೆಂದು ಮನವರಿಕೆ ಮಾಡಿಕೊಂಡಿಲ್ಲಿ ಮಾತ್ರ ಸಂಧಾನದ ಮಾತುಕತೆಗಳು ಸಫಲವಾದಾವು ಎಂದು ಬ್ರಿಟಿಷ ತತ್ತ್ವಜ್ಞಾನಿ ಶ್ರೀ ರಸ್ಸೆಲ್ ಅಭಿಪ್ರಾಯಪಟ್ಟಿದ್ದಾರೆ

ಇರಾಕ್ ಸಂಯುಕ್ತ ಅರಬ ರಾಷ್ಟ್ರ ಒಪ್ಪಂದ

ಬಗದಾದ ಸೈನಿಕ ಒಪ್ಪಂದದಿಂದ ಇರಾಕ್ ಹೊರ ನಡೆದಿದೆಯೆಂದು ತಿಳಿದು ಬಂದಿದೆ ಆದರೂ ಈ ಬಗ್ಗೆ ಇರಾಕ ಸರಕಾರದಿಂದ ಅಧಿಕೃತ ಪ್ರಕಟಣೆಯು ಹೊರಟಿಲ್ಲ ಆದರೆ, ಈಗಾಗಲೇ ಸಂಯುಕ್ತ ಅರಬ ರಾಷ್ಟ್ರ ಹಾಗೂ ಇರಾಕ್‌ಗಳು ಪರಸ್ಪರ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡಿವೆಯೆಂದು ಪರದಿಯಾಗಿದೆ ಆದರೆ, ಅರಬ ರಾಷ್ಟ್ರದ ಅಧ್ಯಕ್ಷ ಶ್ರೀ ನಸ್ಸೇರರು ಬಗದಾದ ಒಡಂಬಡಿಕೆಯಲ್ಲಿ ಸೇರಿಕೊಂಡಿರುವ ಒಂದು ರಾಷ್ಟ್ರದೊಡನೆ ಒಪ್ಪಂದ ಮಾಡಿಕೊಳ್ಳಲಾರರು, ಏಕೆಂದರೆ, ಬಗದಾದ ಒಪ್ಪಂದಕ್ಕೆ ಅವರ ಬೆಂಬಲವಿರುವುದಿಲ್ಲ.

ಹೋಮಿಯೊಪೆಥಿಕ್ ಮನ್ನಣೆ

ಹೋಮಿಯೋ ಪೆಥಿಕ್ ವೈದ್ಯಕೀಯ ಪದ್ಧತಿಗೆ ಮಾನ್ಯತೆಯನ್ನೀಯಬೇಕೆಂದು ಬಯಸಿ ಮೈಸೂರು ಸರಕಾರವು ಈ ಬಗ್ಗೆ ಶಾಸನವೊಂದನ್ನು ವ್ಯವಹಾರಕ್ಕೆ ಸದ್ಯದಲ್ಲಿಯೇ ತರುವುದೆಂದು ಆರೋಗ್ಯಮಂತ್ರಿ ಡಾ ಕೆ ಕೆ ಹೆಗ್ಡೆಯವರು ನುಡಿದಿದ್ದಾರೆ ಎಲ್ಲ ವೈದ್ಯಕೀಯ ಪದ್ಧತಿಗಳ ಕಡೆಗೂ ಸಮಾನ ದೃಷ್ಟಿಯನ್ನಿಡುವುದು ಸೂಕ್ತ. ಸ್ವದೇಶೀ ವೈದ್ಯಕೀಯ ಪದ್ಧತಿಯ ವೈದ್ಯರು ಈ ಪದ್ಧತಿಯ ಸಾಫಲ್ಯವನ್ನು ತೋರಿಸುವುದಾದಲ್ಲಿ ಸರಕಾರವು ಅದನ್ನು ಮಾನ್ಯಮಾಡದಿರದು ಎಂದರವರು

ಖಾಸಗಿ ಕ್ಷೇತ್ರಕ್ಕೆ ಪ್ರೋತ್ಸಾಹ!

ಸರಕಾರವು ತಾನೇ ಇನ್ನು ಮುಂದೆ ಹೆಚ್ಚು ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸದೆ ಅವುಗಳನ್ನು ಸ್ಥಾಪಿಸಲು ಖಾಸಗೀ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕೆಂಬ ಧೋರಣೆಯನ್ನೆ ಅನುಸರಿಸುತ್ತಿರುವುದರಿಂದ ಖಾಸಗೀ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಮುಂದೆಬಂದು ಸರಕಾರದ ಸಹಾಯದಿಂದ ಇವನ್ನು ನಡೆಸಬೇಕೆಂಬುದಾಗಿ ಮೈಸೂರು ಶಿಕ್ಷಣ ಮಂತ್ರಿಗಳಾದ ಅಣ್ಣಾರಾವ್ ಗಣಮುಖಿಯವರು ಹೇಳಿದ್ದಾರೆ ಆದರೆ, ನಮ್ಮ ಜಿಲ್ಲೆಯಲ್ಲಿ ಖಾಸಗಿ ಮಾಧ್ಯಮಿಕ ಶಾಲೆಗಳನ್ನು ತೆರೆಯುವೆವೆಂದು ಮುಂದೆ ಬಂದವರಿಗೆ ಅನುಮತಿಕೊಡಲಾಗುತ್ತಿಲ್ಲವೆಂಬ ದೂರು ಕೇಳಿಬರುತ್ತಿದೆ.

ನಡೆಯುತ್ತಿರುವುದು ಆಂತರಿಕ ಕಲಹವಷ್ಟೆ ಇದನ್ನು ನಿರೀಕ್ಷಿಸಲು ಸಂಯುಕ್ತ ರಾಷ್ಟ್ರ ಸಂಘದ ಸೇನೆಯಿರುವಾಗ, ಅನ್ಯಾಕ್ರಮಣವಾಗದಿರುವಾಗ ಸೇನೆಯನ್ನು ಕೇವಲ ಸಂದೇಹಭಯಗ್ರಸ್ತರಾಗಿ ಬಳಕೆ ಮಾಡಿದುದು ಅಮೆರಿಕೆಯಂತಹ ಮುತ್ಸದ್ಧಿ ನಾಯಕ ರಾಷ್ಟ್ರದ ಕೀರ್ತಿಗೆ ಕಲಂಕ ಬಳೆಯುವ ವಿಷಯ ಹಿಂದೆ ಹೆಂಗೇರಿಯಲ್ಲಿ ಆಂತರಿಕ ಹೋರಾಟ ನಡೆಯುತಿದ್ದಾಗ, ರಶ್ಯಾ ಧಾವಿಸಿ ತನ್ನ ಬೇಳೆಯನ್ನು ಬೇಯಿಸಿಕೊಂಡಂತೆ, ಆ ಸಮಯದಲ್ಲಿ ರಶ್ಯದ ಕೃತ್ಯವನ್ನು ಅನ್ಯಾಯವೆಂದು ಘೋಷಿಸಿದ್ದ ಅಮೆರಿಕೆಯೂ ಈಗ ತಾನೇ ಅನ್ಯಾಯಗೈಯ್ಯತ್ತಿದೆ. ಸಂಯುಕ್ತ ರಾಷ್ಟ್ರಗಳ ನಿರೀಕ್ಷಕರನ್ನು ಮತ್ತಷ್ಟು ಸಂಖ್ಯೆಯಲ್ಲಿ ಕಳುಹಿಸುವುದಾದರೆ, ತಾನು ಸೇನೆ ಹಿಂತೆಗೆಯುವೆನೆಂದು ಅದು ಹೇಳುತ್ತಿದೆ ಆದರೆ, ಸಂ. ರಾ. ಕಾರ್ಯದರ್ಶಿ ಶ್ರೀ ಡಾಗ ಹೆಮ್ಮರಶೀಲ್ಡರು ಇದನ್ನು ಒಪ್ಪಲಿಲ್ಲ

ಅಂತೂ ಸುನಃ ಕರ್ನೋಡಗಳು ಕವಿದಿವೆ. ನೆಟೋಗಳ ಕೂಡೆತಗಳು, ಗೊತ್ತುವಳಿಗಳ ತಿರಸ್ಕಾರಗಳ ಮಳೆಗಳು, ಬಾಲಬಡಕರ ಮತಸಂಗ್ರಹವೆಲ್ಲವೂ ಎಡೆಬಿಡದೆ ಸಾಗುತ್ತಿದೆ! ಕುರುಡ ಹಿಡಿದದ್ದೇ ಬಡಿಗೆ ಎಂದು ತಿಳಿಯವಾಗ, ಅವನಿಗೆ ತಿಳಿಯ ಹೇಳುವ ಗುರುತರ ಹೊರೆಯನ್ನು ಯಾರು ಹೊರುವರು? ಸರಿಣಾಮವೇನು? ಎಂದು ಕಾದು ಪ್ರತೀಕ್ಷಿಸಬೇಕಷ್ಟೆ.

ಬರುವವಾರ ರಜೆ

ನಾವು ವರ್ಷಕ್ಕೊಂದು ವಾರ ರಜೆ ಪಡೆಯುವ ಪದ್ಧತಿಯಂತೆ ಬರುವ ವಾರದ (31—7—58) 'ನವಯುಗ' ಸಂಚಿಕೆಯನ್ನು ನಿಲ್ಲಿಸಲಾಗಿದೆ ವಾಚಕರು ಗಮನಿಸಬೇಕಾಗಿ ವಿನಂತಿ

ಮೆನೇಜರ್
ನವಯುಗ

NOTICE

Notice is hereby given that Share Certificates Nos 244, 1294, 1597, 1914 and 2339 issued by the Vijaya Bank Ltd in respect of its 45 shares numbered 1029 to 1048 9000 to 9080 11563 to 11567, 12533 to 12542 and 20417 to 20420, standing in the name of Late Sri K Menka Shetty, S/o Annappa Shetty, Landholder Uliyargoli are reported to be lost and an application has been received from Sri B Thukku Shetty N/o K Menka Shetty, and Sri K Sitharama Shetty, Grand N/o K Menka Shetty for the issue of fresh share certificates in lieu thereof, for the purpose of transmission of the said shares to their names Any person having any objection whatsoever for the issue of fresh share certificates or for the transmission of the said shares to the names of the applicants, should communicate immediately the same to the undersigned If objection is not filed within 15 days from this date with the undersigned, fresh Share Certificates in the place of the said original Share Certificate Nos 244 1294, 1597 1914 and 2339 will be issued and the transmission of the said shares to the names of the applicants, will be registered in the books of the Bank

The Vijaya Bank Limited,
Head Office, Mangalore—3
Dated 21—7—1958

(Sd) P Jayarama Shetty,
Secretary.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ.

ಮಂಗಳೂರು

ಮಂಡಲ ಕಾಂಗ್ರೆಸ್ ಸಮಿತಿ ಸಭೆಯು—

ತಾ. 13ರಂದು ಶ್ರೀ ಎ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಎಮ್. ರಮಾನಾಥನರು ಅಕ್ಟೋಬರ್ ಕ್ಷೇತ್ರಕ್ಕೆ ಬೇಕಾದ ಸನಲತ್ತು ಮತ್ತು ಯಾವುನಾವರೂ ಗುಡಿಕೈಗಾರಿಕೆಯನ್ನು ಮಾಡುವುದಿದ್ದಲ್ಲಿ ತಾಲೂಕು ಕಾಂಗ್ರೆಸ್ ಸಮಿತಿಗೆ ತಿಳಿಸಬೇಕೆಂದರು. ಮಂಡಲ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಅರ್ಕುಳ ಬಾಬು ಪೂಜಾರಿಯವರು ಮದ್ಯಪಾನ ನಿಷೇಧದ ಕುರಿತು ಸರಕಾರವು ತೀವ್ರ ಕಾರ್ಯಕ್ರಮ ವಹಿಸುವಂತೆ ಪ್ರಯತ್ನಮಾಡಬೇಕೆಂದರು. ಶ್ರೀಗಳಾದ ಸುಬ್ಬಣ್ಣ ಭಟ್, ರಾಘವೇಂದ್ರ ಹೆಗ್ಡೆ, ಉಂಗಾಯ ಬ್ಯಾರಿ, ಬಿ. ಎಮ್. ಇದಿನಬ್ಬ ಮೊದಲಾದವರು ಮಾತನಾಡಿದರು.

ರೋಟರಿ ಸಭೆಯು—ತಾ. 17ರಂದು ಶ್ರೀ ಕೆ. ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಕಲ್ಚತ್ತದ ನೇಶನಲ್ ಕಾರ್ಬನ್ ಕಂಪೆನಿಯ ಸೇಲ್ಸ್ ಮೆನೆಜರ್ ಶ್ರೀ ಜೆ. ಎ. ಸುರೋನಿಯವರು ಮುಖ್ಯ ಭಾಷಣಕರ್ತರಿದ್ದರು. ಶ್ರೀ ಕೆ. ಪಿ. ಕಸ್ತೂರಿಯವರು ಧನ್ಯವಾದವಿತ್ತರು.

ಕರಿಮೆಣಸು ಅಭಿವೃದ್ಧಿ ಕಚೇರಿ: ಉತ್ತರ ಕನ್ನಡ ಜಿಲ್ಲೆಯ ಸರಸಿಯಲ್ಲಿದ್ದ ಮೈಸೂರು ರಾಜ್ಯ ಕರಿಮೆಣಸು ಅಭಿವೃದ್ಧಿ ಅಧಿಕಾರಿಯವರ ಕಚೇರಿಯನ್ನು ಇದೇ ತಾ. 1ರಿಂದ ದ. ಕ. ಜಿಲ್ಲೆಯ ಮಂಗಳೂರಿಗೆ ಸರಕಾರದ ಹುಕುಮಿನಂತೆ ವರ್ಗಾಯಿಸಲಾಗಿದೆ. ಮಂಗಳೂರಿನ ಕಂಕನಾಡಿ ಬಲ್ಮರ ರಸ್ತೆಯಲ್ಲಿನ ದೀಪಕ್ ಸದನದಲ್ಲಿ ರಾಜ್ಯ ಕರಿಮೆಣಸು ಅಭಿವೃದ್ಧಿ ಕಚೇರಿಯನ್ನು ತೆರೆಯಲಾಗಿದ್ದು, ಕರಿಮೆಣಸು ಅಭಿವೃದ್ಧಿ ಯೋಜನೆಗಳಲ್ಲಿ ಆಸಕ್ತಿಯುಳ್ಳವರು ಅಲ್ಲಿಂದ ಮಾಹಿತಿ ಪಡೆಕೊಳ್ಳಬಹುದು.

ಪ್ರದರ್ಶನವ್ಯವಸ್ಥೆ—ಮಂಗಳೂರಲ್ಲಿ ಮುಂದಿನ ನವಂಬರ ತಿಂಗಳಲ್ಲಿ ಕೈಗಾರಿಕಾ ವ್ಯವಸಾಯ ಮತ್ತು ಸಾಂಸ್ಕೃತಿಕ ಪ್ರದರ್ಶನವನ್ನು ಜರಗಿಸಬೇಕೆನ್ನುವ ನಿರ್ಣಯವು ತಾ. 17ರಂದು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ನಾಗರಿಕ ಸಭೆಯಲ್ಲಿ ಅಂಗೀಕೃತವಾಯಿತು.

ಪ್ರದರ್ಶನದ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಶ್ರೀಗಳಾದ ವೈ. ಸಿ. ಹೊಂಬಾಳಯ್ಯ, ಎನ್. ಎಮ್. ಅಡ್ಯಂತಾಯ, ಕೆ. ಕೆ ಹೆಗ್ಡೆ, ಟಿ. ಎಮ್. ಆರಾನ್ಹಾ, ಬಿ. ಪಿ. ಸುರೇಂದ್ರ, ಬಿ. ಮಂಜಯ್ಯ ಹೆಗ್ಡೆ, ಎ. ಶಂಕರ ಅಳ್ವ, ಕೆ. ವಿಶ್ವನಾಥ ಕಾಮತ್ ಮತ್ತು ಬಿ. ಎಸ್. ಭಾಸ್ಕರ ರೈ (ಕಾರ್ಯದರ್ಶಿ) ಗಳಿರುವ ಸಮಿತಿಯೊಂದು ರಚಿಸಲ್ಪಟ್ಟಿತು.

ವಿದಾಯಸತ್ಕಾರ ಕೂಟಗಳು—ಮೂವತ್ತು ಸರುಷಗಳಕಾಲ ಸಹಕಾರೀ ಇಲಾಖೆಯಲ್ಲಿ ಕೆಲಸಮಾಡಿ ತಾ. 15ರಂದು ನಿವೃತ್ತರಾದ ಮಂಗಳೂರು ಉತ್ತರ ವಲಯದ ಅಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ ಕೆ. ಕಾಳಪ್ಪ ಸೆಟ್ಟಿರಿಗೆ ಸಹಕಾರಿ ಮಹಾಮಂಡಲದಲ್ಲಿ ವಿದಾಯ ಸತ್ಕಾರವೀಯಲಾಯಿತು.

ಮಂಗಳೂರು ದಕ್ಷಿಣ ವಲಯದಿಂದ ಉತ್ತರ ವಲಯಕ್ಕೆ ವರ್ಗಾಯಿಸಲ್ಪಟ್ಟ ಶ್ರೀ ಜಿ. ಕೆ. ಶ್ರೀನಿವಾಸಯ್ಯಂಗಾರರ ವಿದಾಯ ಸತ್ಕಾರಕೂಟವು ಬೋಳೂರಲ್ಲಿರುವ ಆಫೀಸಿನಲ್ಲಿ ಜರಗಿತು.

ಮಂಗಳೂರು ಫಿಶರೀಸ್ ಹಾ. ಎ. ಶಾಲೆಯ—ಉದ್ಘಾಟನೆಯು ಶ್ರೀ ಕೆ. ಕೆ. ಸೆಟ್ಟಿ ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಂಮ ಸಿ. ಕಾಂಚನರು ಸ್ವಾಗತಿಸಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ನಾಗಪ್ಪ ಶ್ಯಾನುಭಾಗರು ವರದಿಯನ್ನೋದಿದರು. ಹೊಸ ಕಟ್ಟಡದ ಉದ್ಘಾಟನೆಯನ್ನು ಶ್ರೀ ಎಫ್. ಎಕ್ಸ್. ಡಿ. ಪಿಂಟೊ, ಎಮ್. ಎಸ್. ಎ. ಅವರೂ, ಅರನೆ ತರಗತಿಯ ಉದ್ಘಾಟನೆಯನ್ನು ಶಾಲಾ ಇನ್ಸ್ಪೆಕ್ಟರ್ ಶ್ರೀ ವೈ. ಗೋಪಾಲರೂ ನೆರವೇರಿಸಿದರು. ಶಾಲಾ ಮಕ್ಕಳಿಗೆ ಸ್ಲೇಟು ಪುಸ್ತಕಗಳನ್ನು ಧರ್ಮಾರ್ಥವಾಗಿ ಪಂಚಲಾಯಿತು. ಶ್ರೀಗಳಾದ ರಮಾನಾಥರಾವ್, ಪಿ. ಶಿವಣ್ಣ ಹೆಗ್ಡೆ, ತಿಂಗಳಾಯ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು. ಶ್ರೀ ಸಿ. ಎ. ಕೋಟಿಯಾನರು ಧನ್ಯವಾದಗಳನ್ನಿತ್ತರು.

ಮಂಗಳೂರು ಯುವಕಕಾಂಗ್ರೆಸ್ ಸಾಪ್ತಾಹಿಕ ಸಭೆಯು ತಾ. 20ರಂದು ಶ್ರೀ ಬಿ. ಎಮ್. ಇದಿನಬ್ಬನವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಯವರು ಮಧ್ಯಪೂರ್ವದ ಅರಬ ರಾಷ್ಟ್ರಗಳ ಪರಿಸ್ಥಿತಿಯನ್ನು ವಿವರಿಸಿ, ಅಮೇರಿಕನ್ ಸೈನ್ಯಗಳನ್ನು ಕುಳುಹಿಸಿದ ನೀತಿಯನ್ನು ಖಂಡಿಸಿದರು. ಶ್ರೀ ಎಮ್. ಸಂಜೀವನವರು ಧನ್ಯವಾದವಿತ್ತರು.

ಮಜ್ದೂರ್ ಸಭಾ— ಮಂಗಳೂರು ಮಜ್ದೂರ್ ಸಭಾದ ಕಾರ್ಯಕಾರೀ ಸಮಿತಿ ಸಭೆಯೊಂದು ತಾ. 13ರಂದು ರಾತ್ರಿ ಶ್ರೀ ಎಮ್. ಬಾಳಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಜಿ. ವಾಸುದೇವ ಕಾಮತರೂ ಅಧ್ಯಕ್ಷರೂ ಹೊಟೆಲು ಕೆಲಸಗಾರರ ಪರಿಸ್ಥಿತಿಯ ಕುರಿತು ಮಾತನಾಡಿದರು.

ಬೆಂಗಳೂರು

ಪಾಂಗಾಳ ನಾಯಕ್ ಬೇಂಕಿನ ಶಾಖೆ

ದ. ಕ. ಜಿಲ್ಲೆಯ ಬೇಂಕುಗಳಲ್ಲೊಂದಾದ ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಸಂಸ್ಥೆಯವರು ತಮ್ಮ 16ನೇ ಹೊಸ ಶಾಖೆಯನ್ನು ತಾ. 17ರಂದು ಬೆಂಗಳೂರಿನ ಬಳೇಪೇಟೆಯಲ್ಲಿ ಆರಂಭಿಸಿದರು.

ಹೊಸ ಶಾಖೆಗೆ ಭೇಟಿಯಿತ್ತ ವ್ಯಾಪಾರಿಗಳನ್ನೂ ಕೈಗಾರಿಕೋದ್ಯಮಿಗಳನ್ನೂ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಬಾಮತ್ ಹಾಗೂ ಬೆಂಗಳೂರು ಶಾಖೆಯ ಏಜಂಟ್ ಶ್ರೀ ಎ. ಕೆ. ಎಸ್. ಜೊಸರು ಸ್ವಾಗತಿಸಿದರು.

ಹೊಸ ಶಾಖೆಗೆ ಭೇಟಿಯಿತ್ತ ಇಪ್ಪಮುವ ಮಹನೀಯರಲ್ಲಿ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆ, ಮತ್ತು ಸಾರ್ವಜನಿಕ ಕಾಮಗಾರಿ ಇಲಾಖಾ ಸಚಿವ ಶ್ರೀ ಎಚ್. ಎಸ್. ಬೆನ್ನೂರ ಸಪ್ತನವರೂ ಇರುವರು 1920ರಲ್ಲು ಉಡುಪಿಯಲ್ಲಿ ಸ್ಥಾಪಿತವಾದ ಈ ಬೇಂಕಿನ ಮೈಸೂರು ರಾಜ್ಯದಲ್ಲಿ 13 ಶಾಖೆಗಳಿವೆ.

ಬೊಂಬಾಯಿ

ಉಡುಪಿ ಅಧಮಾರು ಮಠದ

ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರು ತಾ. 9ರಂದು ಬೊಂಬಾಯಿಯ ವಾಲ್ಕೇಶ್ವರ ಕ್ಕೆ ಆಗಮಿಸಿದಾಗ, ಬಿ. ಎಸ್. ಕೆ. ಬಿ. ಸಂಘದವರೂ, ಕಾಕಿ ಪಂಥದ ಆಡಳಿತ ವರ್ಗದವರೂ ಸಾಂಗ್ಲಾಗತವನ್ನು ನೀಡಿದರು. ಸ್ವಾಮಿಗಳವರು ಚಾತುರ್ಮಾಸ್ಯ ವ್ರತವನ್ನು ಬೊಂಬಾಯಿಯಲ್ಲೇ ಸಾಂಗಗೊಳಿಸಲಿದ್ದು ದಿನಾಲೂ ದ್ವೈತ ತತ್ವಜ್ಞಾನ, ಗೀತಾ ಮೊದಲಾದ ಧಾರ್ಮಿಕ ವಿಚಾರಗಳಲ್ಲಿ ಉಪನ್ಯಾಸ ಕೊಡುತ್ತಿದ್ದಾರೆ ಶ್ರೀಕೃಷ್ಣ ಜನ್ಮಾಷ್ಟಮಿ, ಗಣೇಶ ಚತುರ್ಥಿ, ಅನಂತನ ವ್ರತ ಮೊದಲಾದ ಹಬ್ಬಗಳನ್ನೂ ಬೊಂಬಾಯಿಯಲ್ಲೇ ಆಚರಿಸಲಿರುವರಲ್ಲದೆ ಶ್ರೀ ಕೃಷ್ಣ ಜಯಂತಿದಿನದಂದೆಯುವ ಗೋಪ್ರದರ್ಶನದಲ್ಲಿ ಉತ್ತಮವೆಂದು ತೀರ್ಮಾನಿಸಲಾಗುವ ಗೋವಿಗೆ ಪಾರಿತೋಷಕವನ್ನು ಕೊಡುವ ಸಮಾರಂಭದಲ್ಲೂ ಭಾಗವಹಿಸಲಿರುವರು ಎಂದು ತಿಳಿದುಬರುತ್ತದೆ.

THE VIJAYA BANK LTD., BRAHMAVAR.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಲು ವ ಬಡ್ಡಿಯನ್ನು ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಟ್ಟೆ ರಿಜಿಸ್ಟ್ರಿ ನೋಟೀಸುಗಳು ಸ್ವೀಕೃತ ಪಟ್ಟಿರುವರೆಂಬ ಕಾರಣದಿಂದ ಏಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗೆಗಳನ್ನು ಇದೇ ಬರುವ ೧ತಾರೀಕು 1—8—1958ನೇ ಗುರುವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು 30.6.58ರ ವರೆಗೆ ಬಡ್ಡಿ ಕೂಡಿಸಿ Rs. N P.
311/56	ಲಕ್ಷ್ಮಿನಾರಾಯಣ ರಾವ್, ಪದ್ಮನಾಭಯ್ಯನವರ ಮಗ, ಬೈಕಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	28 . 94
407/56	ಬಿ. ರಾಘವ ಹೆಗ್ಡೆ, ಅಂತ್ಯ ಹೆಗ್ಡೇಯವರ ಅಳಿಯ, ಹಂದಾಡಿ ಪಲ್ಕಮನೆ, ಪೋಸ್ಟ್ ಬ್ರಹ್ಮಾವರ.	76 . 60
666/56	ಎಚ್. ಶಂಕರ ಶೆಟ್ಟಿ, ಮತ್ತಯ್ಯ ಶೆಟ್ಟರ ಮಗ, ಹಂದಾಡಿ ಪಲ್ಕಮನೆ, ಪೋಸ್ಟ್ ಬ್ರಹ್ಮಾವರ.	62 . 87
24/57	ಎಚ್ ಸಂಜೀವ ಶೆಟ್ಟಿ, ಕೃಷ್ಣಯ್ಯ ಶೆಟ್ಟರ ಅಳಿಯ, ಹಕ್ಕಲ್‌ಮನೆ, ಹೋಸಾಳ ಗ್ರಾಮ, ಪೋಸ್ಟ್ ಬಾರ್ಕೂರು.	23 . 50
141/57	— do —	80 . 56
172/57	ಬಿ. ಶೀನಪ್ಪ ಶೆಟ್ಟಿ, ನಾಗಯ್ಯ ಶೆಟ್ಟಿರ ಅಳಿಯ, ಮರ್ಬಿನ ಬಾರ್ಕೂರು ಮನೆ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	114 . 75
251/57	ಬಿ. ವಿಠಲ ಶೆಟ್ಟಿ, ಹೊನ್ನಯ್ಯ ಶೆಟ್ಟರ ಅಳಿಯ, ಕರ್ವಾಡಿ ಮನೆ, ಕುಂದ್ರಗೋಡು ಗ್ರಾಮ, ಪೋಸ್ಟ್ ಬ್ರಹ್ಮಾವರ.	45 . 62
252/57	ನಾರಾಯಣ ಶೆಟ್ಟಿ, ಶೀನಪ್ಪ ಶೆಟ್ಟಿ ಅಳಿಯ, ನೀಲಾವರ ಗ್ರಾಮದ ತಡೆಕಲ್ಲು, ಪೋಸ್ಟ್ ನೀಲಾವರ.	45 . 62
371/57	ಕೆ. ಚಂದ್ರಶೇಖರ ಶೆಟ್ಟಿ, ಕೆ. ವೀರಣ್ಣ ಶೆಟ್ಟಿ ಅಳಿಯ, ಕೊಳ್ಳೇಬೈಲು, ಪೋಸ್ಟ್ ಸ್ಟಾಬರಕಟ್ಟೆ.	83 . 87
434/57	ಜಬ್ಬು ಪೂಜಾರಿ, ಬೆಂಕ್ಟ ಪೂಜಾರ್ರ ಮಗ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	83 . 37
464/57	ಅಸ್ಲು ರೊಡ್ರಿಗಸ್, ಜೋನ್ ವಾಸರ ಹೆಂಡತಿ, ವಾರಂಬಳ್ಳಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	105 . 06
500/57	ಸೀಲು ಪೂಜಾರ್ತಿ, ಬೀರ ಪೂಜಾರ್ರ ಹೆಂಡತಿ, ಉಪ್ಪಿನಕೋಟೆ ದೇವರ ಹಿತ್ಲು, ವಾರಂಬಳ್ಳಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	14 . 75
840/57	ಮಯಾಲಲ ಶೆಟ್ಟಿ, ಚಂದ್ರೆ ಶೆಟ್ರ ಅಳಿಯ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	74 . 94

Office of The Vijaya Bank Ltd, Brahmavar, D/ 18—7—1958. } B. Baskar Shetty, Agent

ಕುಂದಾಪುರ ಪಂಚಾಯತ ಅಧ್ಯಕ್ಷ ಚುನಾವಣೆಯು— ತಾ. 10ರಂದು ನಡೆದು ಶ್ರೀ ಕೆ. ಗಣಪತಿ ಸೇಟರು ತನ್ನ ಪ್ರತಿಸ್ಪರ್ಧಿ ಶ್ರೀ ಎಚ್. ಸುಬ್ಬರಾಯರಿಗಿಂತ ಅಧಿಕ ಮತ ಪಡೆದು ವಿಜಯಿಗಳಾದರು. ಸ್ಪರ್ಧೆಯಿದ್ದ ಇತರ ಸ್ಥಾನಗಳಿಗೆ ಶ್ರೀಗಳಾದ ಕೆ. ಹೆಸನ್ ಸಾಹೆಬ್, ಕೆ. ರಾಮಯ್ಯ ನಾಯಕ್, ಕೆ. ಪದ್ಮನಾಭ, ಬಿ. ಪಿ. ಭಟ್, ಪಿ. ಚಂದ್ರಶೇಖರ ರಾವ್, ಕೆ. ರಾಮಕೃಷ್ಣ ನಾಯಕ್, ಎಚ್. ಮಂಜ ಪೂಜಾರಿ, ಕೆ. ಕೊರಗ ಪೂಜಾರಿ, ಬಿ. ಕೃಷ್ಣಯ್ಯ ಸೇರಿಗಾರ, ಗೋವಿಂದ ಪೂಜಾರಿ ಮತ್ತು ಹರಿಜನ ಸುಬ್ಬನವರು ಆರಿಸಲ್ಪಟ್ಟರು. ಶ್ರೀಗಳಾದ ಕೆ. ಬಾಲಕೃಷ್ಣ ವೈದ್ಯ, ತಿಮ್ಮ ಖಾರ್ವಿ ಮತ್ತು ಹರಿಜನ ರಾಮನವರು ಈ ಮೊದಲೇ ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿ ಮುಖಂಡರಾಗಿ ಶ್ರೀ ಎನ್. ತೇಜಪ್ಪ ಸೆಟ್ಟರೂ ಸಹಾಯ ಮುಖಂಡರಾಗಿ ಶ್ರೀ ಎಮ್. ಲಕ್ಷ್ಮೀನಾರಾಯಣಸೆಟ್ಟರೂ ಆರಿಸಲ್ಪಟ್ಟಿರುವರು

ಕಾರ್ಕಳ— ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿ ನಾಯಕ ಚುನಾವಣೆಯಲ್ಲಿ ಕುಮಾರ ಮುಹಮ್ಮದ್ ಇಸ್ಮಾಯಿಲ್ ಭರೋಕಿಯವರು ಆರಿಸಿಬಂದಿರುವರು.

ಕಾವರಾಡಿ— ಬೈಂದೂರು ಸಮಾಜಾಭಿವೃದ್ಧಿ ಕ್ಷೇತ್ರದ ಸಮಾಜ ಕಲ್ಯಾಣ ಯೋಜನಾಸ್ಥಾನ ತಾ. 13ರಂದು ಕಾವರಾಡಿಯಲ್ಲಿ ಕೇಂದ್ರವೊಂದು ಹಾ. ಎನ್. ಆರ್. ಅಡ್ಯಂತಾಯ ಇವರಿಂದ ಶ್ರೀ ಎಸ್. ಅಂತಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು.

ಗ್ರಾಮ ಸೇವಕ ಶ್ರೀ ಬಿ. ಆನಂದ ಸೆಟ್ಟರು ಅಧ್ಯಕ್ಷರ ಪರಿಚಯಮಾಡಿದರು. ಯೋಜನೆಯ ಅಧ್ಯಕ್ಷೆ ಶ್ರೀಮತಿ ಪ್ರಭುಲ್ಲಾ ಹೆಗ್ಡೆಯವರು ಸ್ವಾಗತಭಾಷಣಮಾಡಿದರು. ಬೈಂದೂರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಫ್. ಎಮ್. ಮಿನೇಜಸ್‌ರವರು ಕ್ಷೇತ್ರದ ಚಟುವಟಿಕೆಗಳನ್ನು ವಿವರಿಸಿದರು. ಸಮಾಜ ಶಿಕ್ಷಣ ನಿಸ್ಸರಣಾಧಿಕಾರಿ ಶ್ರೀ ಬಿ. ವೆಂಕಟ್ರಮಣಾಚಾರ್ಯ, ಡಾ. ಎನ್. ಆರ್. ಅಡ್ಯಂತಾಯ, ಶ್ರೀಗಳಾದ ಎಮ್. ಟಿ. ನಾರಾಯಣಸೆಟ್ಟಿ, ಕೆ. ಎಮ್. ಸಾಹೆಬ್, ಪ್ರಭಾಕರ ಹೆಗ್ಡೆ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು. ಕಾವರಾಡಿ ಪಂಚಾಯತ ಅಧ್ಯಕ್ಷ ಶ್ರೀ ಕೆ. ಚಂದ್ರಶೇಖರ ಸೆಟ್ಟರು ಧನ್ಯವಾದವಿತ್ತರು.

ಆತ್ಮಮನೋನಿಕಾಸೋಪಾಯಗಳು

(ಜನೇ ಪುಟದಿಂದ)

ವಿಕಸಿತ ವ್ಯಕ್ತಿಯು ನೇತ್ರ ಭೂಷಣಗಳು, ಸಾಧಾರಣವಾಗಿರುತ್ತವೆ. ಅವನು ದಪ್ಪ ಬಣ್ಣದ ವಸ್ತ್ರಗಳನ್ನು ಇಚ್ಛಿಸುವುದಿಲ್ಲ. ಅವನು ಸರಳ, ಸಿದಾ, ಸ್ವಚ್ಛವಾದ ಪೋಶಾಕನ್ನು ಬಯಸುವನು.

ನೀವು ಆಡಂಬರ ಪ್ರಿಯರಲ್ಲವಾಗಿದ್ದರೆ, ನೀವು ನಿಮ್ಮ ಆತ್ಮಧ್ವನಿಯನ್ನು ಕೇಳಬಲ್ಲಿರಿ. ಆ ಧ್ವನಿಯ ಅನುಸಾರವಾಗಿ ಸತ್ಯದ ಅನ್ವೇಷಣೆ ಮಾಡುತ್ತಿದ್ದೀರಿ. ನೀವು ನಿಮ್ಮ ಅಭಿವೃದ್ಧಿಯ ಕಡೆಗೆ ಮುಂದುವರಿಯುತ್ತಿದ್ದೀರಿ.

ಎಷ್ಟರವರೆಗೆ ಮನುಷ್ಯನು ಮಾನಸಿಕ ಜಗತ್ತಿನಲ್ಲಿ ಪರಿಶುದ್ಧತೆಯನ್ನು ಪಡೆಯಲಾರನೋ, ಸಣ್ಣ ಸಣ್ಣ ಮಾತುಗಳಿಂದ ಕೋಪಗೊಳ್ಳುವನೋ ತನ್ನ ಭಾವನೆಗಳಲ್ಲಿ ಸಂಯಮವನ್ನು ಇರಿಸಲಾರನೋ, ಅಲ್ಲಿಯವರೆಗೆ ಅವನು ಮಗುವಿನಂತೆಯೇ ಆಗಿರುವನು.

ಮಾನಸಿಕ ದೃಷ್ಟಿಕೋಣದಲ್ಲಿ ಬಾಲಕನಂತಿರಬೇಡಿ. ಸಂಸಾರದ ಭಯಂಕರ ಆಪತ್ತಿಗಳು ಮತ್ತು ಜಂಜಾಟಗಳನ್ನು ಸಹಿಸಿಕೊಳ್ಳುವ ಆತ್ಮಶಕ್ತಿಯನ್ನೂ, ಯಾವಾಗಲೂ ವಿಕಸಿತಗೊಳಿಸಲು ಪ್ರಯತ್ನಿಸುತ್ತಾ ಇರಬೇಕು.

(ಸಾಧಾರ)

ಪ್ರಾಚ್ಯವಸ್ತು ಸಂಶೋಧನಾ ಸಂಸ್ಥೆಯ ಸೇವೆ—

ಸಂಸ್ಕೃತಿ ಪರಂಪರೆಯ ಸಂರಕ್ಷಣೆ

ಭಾರತದ ರಾಷ್ಟ್ರೀಯ ಪ್ರಾಚ್ಯ ವಸ್ತು ಸಂಶೋಧನಾ ವಿಭಾಗವು ಇತ್ತೀಚೆಗೆ, ಖಾಸಗಿಯವರ ಅಧೀನದಲ್ಲಿರುವ, ಭಾರತದ ಅಧುನಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ, ಹಾಗೂ ಈಗ ದೇಶದ ನಾನಾ ಭಾಗಗಳಲ್ಲಿ ಚೆಲ್ಲಾಪಿಲ್ಲಿಯಾಗಿರುವ ಅಮೂಲ್ಯ ದಾಖಲೆ ಪತ್ರಗಳು ಹಾಗೂ ಅಪೂರ್ವ ಹಸ್ತಪ್ರತಿಗಳನ್ನು ವಶಪಡಿಸಿಕೊಳ್ಳುವ ಕಾರ್ಯಕ್ರಮವೊಂದನ್ನು ಆರಂಭಿಸಿದೆ ಅಪೂರ್ವ ಹಸ್ತಪ್ರತಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗದಿರುವಂತಹ ಸಂದರ್ಭಗಳಲ್ಲಿ ಈ ಹಸ್ತಪ್ರತಿಗಳ 'ಮೈಕ್ರೊಫಿಲಂ" ಪ್ರತಿಗಳನ್ನು ಪಡೆದುಕೊಳ್ಳಲಾಗಿದೆ

ಭಾರತೀಯ ಪ್ರಾಚ್ಯ ವಸ್ತು ಸಂಶೋಧನಾ ವಿಭಾಗವು ಇತ್ತೀಚೆಗೆ ಮುಂಬೈ ರಾಜ್ಯದಲ್ಲಿ ಬ್ರೋಚ್, ಅಂಕಲೇಶ್ವರ, ಮತ್ತು ಅಹಮದಾಬಾದಿನಲ್ಲಿ ದಾಖಲೆ ಪತ್ರಗಳು ಮತ್ತು ಹಸ್ತಪ್ರತಿಗಳ ವಿಪುಲವಾದ ಸಂಗ್ರಹವೊಂದನ್ನು 'ಮೈಕ್ರೋಫಿಲಂ" ಪ್ರತಿ ತೆಗೆದು ಸಂರಕ್ಷಿಸಿತು ಈ ವಿಭಾಗವು ಸುಮಾರು ೧೬ ಸಾವಿರ ಪುಟಗಳಷ್ಟು ಖಾಸಗಿ ಪ್ರಾಚ್ಯ ವಸ್ತುಗಳು, ಸಂಸಾರಕ್ಕೆ ಸೇರಿದ ಕಾಗದ ಪತ್ರಗಳು, ದಾಖಲೆಪತ್ರಗಳು ಮತ್ತು ಹಸ್ತಪ್ರತಿಗಳ 'ಮೈಕ್ರೋ ಫಿಲಂ" ಪ್ರತಿ ತೆಗೆದಿದೆ.

ಈ ಪ್ರತಿಗಳು, ಇತಿಹಾಸ, ಜೀವನ ಚರಿತ್ರೆ, ನ್ಯಾಯ ನಿರ್ಣಯ ಮುಂತಾದ ವಿಷಯಗಳನ್ನೊಳಗೊಂಡಿರುವುವು. ಗುಜರಾತಿನ ಇತಿಹಾಸದ ಮೇಲೆ ಇವು ವಿಪುಲವಾದ ಹೊಸ ಬೆಳಕನ್ನು ಚೆಲ್ಲುತ್ತವೆ

ಈ ಅಮೂಲ್ಯ ಸಂಗ್ರಹದಲ್ಲಿ ನೂರ್‌ಜಹಾನ್ ರಾಣಿಯ ಫರ್‌ಮಾನ್ ಇರುವುದು. ಸುಂದರವಾದ ನಸ್ತಾಲ್ ಶೈಲಿಯಲ್ಲಿರುವ ಇದು ನೂರ್‌ಜಹಾನರ ಸ್ವಂತಕೈಯ್ಯ ಮತ್ತು ಮುದ್ರೆಯನ್ನು ಹೊಂದಿರುವುದು

ಬರೋಚ್‌ನಲ್ಲಿ ಚಕ್ರವರ್ತಿಯ ಆಸ್ಥಾನ ವೈದ್ಯನಾಗಿ ಕಕೀಂ ರುಹ್ ಅಲ್ಲಾ (ಕ್ರಿ ಶ ೧೬೫೫) ಎಂಬುವರಿಗೆ ಕೊಟ್ಟಿದ್ದ ಬೂಮಿಯನ್ನು ಪಸಃ ಪಡೆದುಕೊಳ್ಳುವುದಕ್ಕೆ ಈ ದಾಖಲೆ ಪತ್ರವು ಸಂಬಂಧಪಡುತ್ತದೆ. ನೂರ್‌ಜಹಾನಳ ಮುದ್ರೆಯನ್ನುಳ್ಳ ಸರ್ಕಾರೀ ದಾಖಲೆ ಪತ್ರಗಳು ಬಹಳ ಅಪರೂಪವಾಗಿರುವುವು ಆದ್ದರಿಂದ ಈ ಪತ್ರವು, ಜಹಾಂಗೀರ್ ಚಕ್ರವರ್ತಿಯ ಆಡಳಿತದಲ್ಲಿ, ಈ ಚಕ್ರವರ್ತಿನಿಯ ಪ್ರಭಾವವನ್ನು ಸ್ಪಷ್ಟಪಡಿಸುವುದನ್ನು ಸೂಚಿಸುತ್ತದೆ

ಇನ್ನುಳಿದ ಅಪೂರ್ವ ವಸ್ತುಗಳಲ್ಲಿ ಸುಪ್ರಸಿದ್ಧ ಲೇಖಕನೂ ತರೀಖ್-ಇ ಹಕ್ಕಿ ಎಂಬ ಕೃತಿಯ ಕರ್ತೃವೂ ಆದ ದೆಹಲಿಯ ಅಬ್ದುಲ್ ಹಕ್ (೧೬೪೨) ಎಂಬಾತನ ಸ್ವಂತ ಸಹಿ, ಗುಜರಾತಿನ ಮಹಾನ್ ವಿದ್ವಾಂಸ ಸಯ್ಯದ್ ರುಸ್ತಮ್ ಬಿನ್ ಅಲಂ (೧೬೭೪)ರವರ ಸ್ವಂತ ಮುದ್ರೆ ಮತ್ತು ಸಹಿಗಳೂ ಇರುವುವು.

ಅಮೂಲ್ಯ ಹಸ್ತಪ್ರತಿಗಳಲ್ಲಿ ನ್ಯಾಯಾಡಳಿತಕ್ಕೆ ಸಂಬಂಧಪಟ್ಟ ರೈಸಲಾದಾರ್ ಅಹಕಮ್-ಇ-ಖುರತ್ ಎಂಬ ಕೃತಿಯೂ ಸೇನಾ ವ್ಯೂಹಕ್ಕೆ ಸಂಬಂಧಪಟ್ಟ ತರಿಖ್-ಇ-ಪಾನ್-ಇ ಮುಲ್‌ಗಿರಿ ಎಂಬ ಕೃತಿಯೂ, ಆ ಕಾಲದ ವಿವಿಧ ಭಕ್ಷ್ಯ ಭೋಜ್ಯಗಳನ್ನು ಸಾಮಾಜಿಕ ಇತಿಹಾಸಕ್ಕೆ ವಿಪುಲವಾದ ಸಾಮಗ್ರಿಗಳನ್ನು ಒದಗಿಸುವ ರೊಸಾಲ-ಇ ಖ್ವಾನ್ ಇನಿಯತ್ ಎಂಬ ಕೃತಿಯೂ ಇರುವುದು.

ಇದಲ್ಲದೆ ಖಾಸಗಿಯವರಿಗೆ ಸೇರಿದ ಅನೇಕ ಕಾಗದ ಪತ್ರಗಳನ್ನು 'ಮೈಕ್ರೊಫಿಲಂ' ವಿಭಾಗದವರು ಪ್ರತಿ ತೆಗೆದಿರುವರು

ಜುನಘಡ ನವಾಬರ ಮತ್ತು ಬರೋಚ್‌ನ ನವಾಬರ ಕಾಲದ ದಾಖಲೆ ಪತ್ರಗಳನ್ನು ಈ ವಿಭಾಗದವರು ಪ್ರತಿ ತೆಗೆದಿರುವರು ಇವು ಆಗಿನ ಕಾಲದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗಳನ್ನು ತಿಳಿಯಲು ತುಂಬಾ ಅನುಕೂಲವಾಗಿದೆ ಗುಜರಾತ್ ಮತ್ತು ಬರೋಚ್ ಇತಿಹಾಸ ಹಾಗೂ, ಭಾರತದ ಇತಿಹಾಸಕ್ಕೆ ಸಂಬಂಧಪಟ್ಟ ಘಟನಾವಳಿಗಳ ಅನೇಕ ಅಮೂಲ್ಯ ಕಾಗದ ಪತ್ರಗಳ ಪ್ರತಿಯನ್ನು ಮೈಕ್ರೊಫಿಲಂ ವಿಭಾಗದವರು ತೆಗೆದಿರುವರು

ಅಮೂಲ್ಯ ಹಸ್ತಪ್ರತಿಗಳು, ದಾಖಲೆ ಪತ್ರಗಳು ಮತ್ತು ಕಾಗದ ಪತ್ರಗಳನ್ನು ಇಟ್ಟುಕೊಂಡಿರುವ ಖಾಸಗಿಯವರು, ತಮ್ಮ ಸಂಗ್ರಹಗಳನ್ನು 'ಮೈಕ್ರೊ ಫಿಲಂ' ವಿಭಾಗದ ನೆರವಿನಿಂದ ಪ್ರತಿಮಾಡಿಸಲು ಮುಂದೆ ಬರಬೇಕೆಂದು ಆಶಿಸಲಾಗಿದೆ ಇದರಿಂದ ಭಾರತದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಪ್ರಯತ್ನ ಯಶಸ್ವಿಯಾಗುವುದು.

(ಅ)ಶಾಂತಿಪ್ರಿಯ ಐಸನ್‌ಹಾವರ್

(೪ನೇ ಪುಟದಿಂದ)

ತಂಡವೇ ಇದಕ್ಕೆ ಸಾಕು" ಎಂದವರು ಅಭಿಪ್ರಾಯಪಟ್ಟರು ಇದರಿಂದ ಶ್ರೀ ಐಸನ್ ಹಾವರರು ಲೆಬನಾನಿನಲ್ಲಿ ನಡೆಸಿದ ಕಾರಸ್ಥಾನವು ಮಾನವೀಯ ಹಾಗೂ ಅಂತಾರಾಷ್ಟ್ರೀಯ ವಿಭಾನದ ದೃಷ್ಟಿಯಿಂದ ಸರ್ವದಾ ಅನುಚಿತ ಮತ್ತು ಅನ್ಯಾಯಪೂರ್ಣವಾಗಿದೆ ಎಂಬುದು ನಿಸ್ಸಂದೇಹ

ಶ್ರೀ ಐಸನ್‌ಹಾವರರು ತಮ್ಮ ಪೂರ್ವನಿರ್ಧಾರಿತ ಸಿದ್ಧಾಂತವು ವಿಫಲವಾಗುತ್ತಿರುವುದನ್ನು ಗಮನಿಸಿ ಲೆಬನಾನಿನಲ್ಲಿ ಅನ್ಯಾಯೂ ಸೈನಿಕ ಹಸ್ತಾಕ್ಷೇಪಮಾಡುವ ನಿರ್ಧಾರವನ್ನು ಮಾಡಿರಬೇಕು ಪಶ್ಚಿಮ ಏಶಿಯಾದ ಎಲ್ಲ ಮುಸ್ಲಿಂ ರಾಷ್ಟ್ರಗಳೂ ನವಯುಗ ಪ್ರೇರಣೆಯಿಂದ ಪ್ರಭಾವಿತರಾಗಿ ಸಾಮ್ರಾಜ್ಯವಾದದಿಂದ ಮುಕ್ತರಾಗಿ ಸ್ವಾತಂತ್ರ್ಯದ ದೆಸೆಯಲ್ಲಿ ಮುಂದುರಿಯುತ್ತಿವೆಯೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಯಾವುದೇ ಪರಿಸ್ಥಿತಿಯಲ್ಲಾದರೂ ಅವುಗಳು ವಾಶ್ಚಾತ್ಯರ ಪ್ರಭುತ್ವದನ್ನು ಸ್ವೀಕರಿಸಲು ಸಿದ್ಧವಿಲ್ಲ. ಅಂತೆಯೇ ಅಂತಾರಾಷ್ಟ್ರೀಯ ಪಂಗಡದಲ್ಲಿ ಬೇಕಿದೆ ತಟಸ್ಥ ಹಾಗೂ ನಿಷ್ಪಕ್ಷಪಾತವಾಗಿರಲು ಬಯಸುತ್ತಿವೆ. ಆದರೂ ಪಾಶ್ಚಾತ್ಯ ಮಿತ್ರರಾಷ್ಟ್ರಗಳಿಗೆ ಅರಬ ರಾಷ್ಟ್ರಗಳು ಕ್ರಮೇಣ ಸೋವಿಯತ್ತಿನ ಕಂಠುಳಲ್ಲಿ ಸಿಕ್ಕಿಕೊಳ್ಳುತ್ತವೆಯೆಂಬ ಭಯ ಹಾಗೂ ಸಂದೇಹ ಬಲವಾಗಿದೆ ಐಗುಪ್ತ-ಸಿರಿಯಾ ಒಕ್ಕೂಟದ ರಾಷ್ಟ್ರಾಧ್ಯಕ್ಷ ಶ್ರೀ ನಸ್ಸೇರರು ಅನೇಕ ಬಾರಿ ತಮ್ಮ ನೀತಿಯನ್ನು ವಿವರಿಸುತ್ತ ಪ್ರಪಂಚದೆದುರು ತಮ್ಮ ವಾಸ್ತವಿಕ ರೂಪವನ್ನು ಪ್ರಕಟಿಸುತ್ತ ಬಂದಿದ್ದರೂ ಈ ಸಂದೇಹ ಪೂರ್ಣವಾಗಲಿಲ್ಲ.

ಭಯ ಹಾಗೂ ಸಂದೇಹದ ದುರ್ಭಾವನೆಗಳು ಅಮೆರಿಕೆ ಹಾಗೂ ಅದರ ಗೆಳೆಯರನ್ನು, ಲೆಬನಾನಿಗೆ ಕಳಿಸಲಾಗಿದ್ದ ಸಂಯುಕ್ತ ರಾಷ್ಟ್ರ ಸೀರೀಕ್ಷಕ ತಂಡಗಳಲ್ಲಿಯೂ ವಿಶ್ವಾಸವಿಡದಿರುವಂತಹ ಪರಿಸ್ಥಿತಿಗೆ ತಂದು ಮುಟ್ಟಿಸಿವೆ ಇಂಗಿನ ರಾಜ್ಯ ಕ್ರಾಂತಿಯು ತಮ್ಮ ಸಮರ್ಥಕರನ್ನು ನಾಶಮಾಡುತ್ತಿರುವುದರಿಂದ, ಅವರನ್ನು ಮತ್ತಷ್ಟು ರೊಚ್ಚಿಗೆಬ್ಬಿಸಿತು ಇಂದು ಪಶ್ಚಿಮ ಏಶಿಯಾವು ಈ ಪಾಶ್ಚಾತ್ಯರ ಸಿಂಬಿಗಳಿಂದ ಹೊರಬಂದು ವಿಶ್ವರಾಜನೀತಿಯಲ್ಲಿ ಸ್ವತಂತ್ರವಾಗಿರಲು ಬಯಸುತ್ತಿವೆ. ಅವುಗಳು ಸೋವಿಯತ್ತಿನ ಕಡೆಗೂ ಆಕರ್ಷಿತವಾಗಿರುವುದಿಲ್ಲ ಹೀಗಿದ್ದರೂ ಅಮೆರಿಕೆ ಮತ್ತು ಬ್ರಿಟನ್ ತಮ್ಮ ಕಾರಸ್ಥಾನಗಳಿಂದಾಗಿ ಅವುಗಳನ್ನು ವಿರೋಧಿಗಳ ಆಶ್ರಯವನ್ನು ಪಡೆಯುವಂತೆ ಪ್ರಚೋದಿಸುತ್ತಿವೆ ಇಂತಹ ಪರಿಸ್ಥಿತಿಯಲ್ಲಿ ಸುಯೇಜ ಕಾಲುವೆಯ ಘಟನೆಯಲ್ಲಿ ತಮ್ಮ ಕಾಟಸ್ಥ್ಯ ನೀತಿಯ ಮೂಲಕ ಕೀರ್ತಿಶಾಲಿಗಳಾದ ಶ್ರೀ ಐಸನ್ ಹಾವರರು ಇಂದು ಲೆಬನಾನ್ ಘಟನೆಯಲ್ಲಿ ನಿಜವಾಗಿಯೂ ತಪ್ಪಿ ಹೋಗಿದ್ದಾರೆ ಜಗತ್ತಿನ ಶಾಂತಿಪ್ರಿಯ ರಾಷ್ಟ್ರಗಳು ಅಮೆರಿಕೆಯ ನತತೆಯಬಗ್ಗೆ ಹೂರ್ವಾಪರ ವಿವೇಚನೆ ಮಾಡಬೇಕಾದ ಸಂದರ್ಭವಿಂದು ಬಂದಿರುತ್ತದೆ ಶ್ರೀ ಐಸನ್ ಹಾವರರು ತಮ್ಮ ನೀತಿ ಹಾಗೂ ಸಿದ್ಧಾಂತಗಳಲ್ಲಿ ಈ ಕೂಡಲೇ ಪರಿವರ್ತನೆಮಾಡದೆ ಹೋದರೆ, ಅವರು ಜಾಗತಿಕ ಯುದ್ಧದ ಅಪಾಯಗಳಿಗೆ ಜನಕನೆಂಬ ಅಪಖ್ಯಾತಿಯನ್ನು ಪಡೆಯುವುದು ಖಂಡಿತ

ಶಾಂತಿ ಪ್ರಿಯರೆಂದೂ ವಿಶ್ವಶಾಂತಿ ಸಾಧಕರೆಂದೂ ಕರೆದುಕೊಳ್ಳುವ ಶ್ರೀ ಐಸನ ಹಾವರರು ಇಂದು ಶಾಸ್ತ್ರ ಓದಿ ಗಾಳಿಯಿಕ್ಕುವಂತಹ ಕೆಲಸಮಾಡಿದ್ದಾರೆ ವಿವೇಕಿಗಳು ತಾವು ಮಾಡುವುದು ತಪ್ಪೆಂದು ತಿಳಿದುಬಂದೊಡನೆಯೇ ತಮ್ಮ ನಡತೆಯನ್ನು ತಿದ್ದಿಕೊಳ್ಳುತ್ತಿರೆ. ಅಮೆರಿಕೆಯ ಅಧ್ಯಕ್ಷರೂ ಈ ರೀತಿ ಮಾಡುವರೇ ಎಂದು ಜಗತ್ತಿಂದು ಕಾತರಪೂರ್ಣ ನೇತ್ರದಿಂದೀಕ್ಷಿಸುತ್ತಿದೆ

ಮದುವೆಯ ಅದರ್ಶ ಉಡುಗೊರೆ

ಉಷಾ ಹೊಲಿಗೆ ಯಂತ್ರ

ನಮ್ಮ ದೇಶದಲ್ಲಿ ವಿಶೇಷ ಮಾರಾಟವಾಗುವ ಯಂತ್ರ

ಏಕಮೇವ ಮಾರಾಟ ಮಾಡುವ ಏಜಂಟರು

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್,
120, ಅರ್ಮೆನಿಯನ್ ಸ್ಟ್ರೀಟ್,
ಮದ್ರಾಸು—1

ಗ್ರಾಮ್ಸ್ "USHAKO" ಫೋನ್: 2278.

ಓದಲೇಬೇಕಾದ ಕೆಲವು ಪುಸ್ತಕಗಳು

ಬಡುಕು ಬಂಗಾರ (ಕುಮಾರ ಸ್ವಾಮಿ)	1	8	0
ಹಿರೋಶಿಮಾದಿಂದ ಜಿನೇವಾ (ಯು ಆರ್ ಆಚಾರ್ಯ)	1	8	0
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಅನು ಯು ಲಕ್ಷ್ಮೀನಾರಾಯಣಾಚಾರ್ಯ)	1	8	0
ನಡುಹಗಲಿನ ಕಗ್ಗತ್ತಲೆ (ಅನು ಕು ಶಿ ಹರಿದಾಸ ಭಟ್)	2	8	0
ತೀಕ್ಷ್ಣದ ಧ್ಯೇಯಗಳು (ಅನ ಯು ಲಕ್ಷ್ಮೀನಾರಾಯಣ ಆಚಾರ್ಯ ಮತ್ತು ಕೆ ಬಿ ರಾಮಕೃಷ್ಣ ರಾವ್)	2	4	0
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು. ಕು ಶಿ ಹರಿದಾಸ ಭಟ್)	2	0	0
ಏಶಿಯದ ಸಂಪತ್ತು (ಕು ಶಿ ಹರಿದಾಸ ಭಟ್)	2	0	0
ಘಂಟೆಮಾಂಬಾ (ಅನು ಕು ಶಿ ಹರಿದಾಸ ಭಟ್)	2	0	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12	0
ಭಾರತದ ಅಂಗ-ಕಾಶ್ಮೀರ (ರಫಿ ನಂದನ ರಾಂವಾ)	0	5	0
ಭಾರತೀಯ ಮಹಾಪುರುಷರು (ಎಸ್. ಗೋಪೀಚಂದ ರಾವ್)	1	8	0
ಕಥಾ ಕೌಮುದಿ (ಎಸ್ ಗೋಪೀಚಂದ ರಾವ್)	1	8	0

(ಕೆಟಲಾಗಿಗೆ ಬರೆಯಿರಿ)

ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ' ವಾರಪತ್ರಿಕೆ
ಉಡುಪಿ

ವಾರ್ಷಿಕ ಚಂದಾ—
ರೂ 5-12-0 (5=75)
6 ತಿಂಗಳಿಗೆ— ರೂ 3-0-0
ಮುಂಗಡವಾಗಿ ಕಳಿಸಬೇಕು

ಒಂದು ದಿನವೂ ಸುಖಪಡೆದಿಲ್ಲವೆಂದು ದೂರುತ್ತೀರಾ?

ಸುಖಾಪೇಕ್ಷೆಯೇ ದುಃಖದ ಮೂಲ!

ಶ್ರೀ ಕೆ. ಜಿ. ಶಟ್ಟಿ.

ಹೌದು!—ಸುಖಾಪೇಕ್ಷೆಯೇ ದುಃಖದ ಮೂಲ! ಇದು ಹೇಗೆ? ಏನು? ಎಂದು ನೀವು ಕಣ್ಣು ಬಾಯಿ ಬಿಟ್ಟು ಆಶ್ಚರ್ಯಪಡುವಿರೋ ಏನೊ? ಆದರೆ ತುಸು ತಾಳ್ಮೆಯಿಂದ ವಿವೇಚಿಸುತ್ತಾ ವಿಶಾಲ ದೃಷ್ಟಿಯಿಂದ ಕಂಡು ವಿಮರ್ಶಿಸುವ ವಿವೇಕಿಗಳಾಗಿ ನಾವಿರುವುದಾದರೆ ನಮ್ಮ ನಿತ್ಯ ಜೀವನದ ಅನುಭವದಿಂದಲೇ ಈ ವಿಚಾರವು ನಾವು ಕಂಡುಕೊಳ್ಳಬಹುದಾಗಿದೆ. ಆಗ ಅದು ಸತ್ಯವೆಂಬ ನಂಬಿಕೆ ನಮ್ಮಲ್ಲಿ ದೃಢವಾಗುತ್ತದೆ. ಈ ಸಂಗತಿಯು ಸುಳಿವು ಇದನ್ನೋದುವ ಮೊದಲೇ ಹಲವರಿಗಾದರೂ ತಿಳಿದಿರಬಹುದು. ಅಲ್ಲವೇ?—ಹೌದು, ತಿಳಿದಿದೆ. ಆದರೆ ನಾವು ಅದನ್ನು ತಿಳಿದಂತೆ, ಅಪೇಕ್ಷಿತ ಸುಖದಿಂದ ಬರುವ ದುಃಖದ ನಿಮೂಲನವನ್ನು ಮಾಡಲು ಕಾರ್ಯತಃ ಯತ್ನಮಾಡಿಲ್ಲ. ಆಷ್ಟೇ ಅದ ಕಾರಣವೇ ಈ ವಿಷಯವನ್ನೆತ್ತಿ ಬರೆದು ಪತ್ರಿಕಾಲಯಕ್ಕೆ ಕಳುಹಿಸುವ ಕಾರ್ಯ ಲೇಖಕನ ಪಾಲಿಗೊದಗಿತು.—ಈಸಂಗತಿಯಲ್ಲಿದ್ದ ಸತ್ಯಾಂಶವನ್ನು ಕಂಡು ಕೊಂಡೇ ಓದುಗರ ಅವಗಾಹನೆಗೆ ಬರುವಂತೆ ಇದನ್ನು ಒದಗಿಸಿಕೊಡಬೇಕಾದ ಪ್ರಮೇಯ ಲೇಖಕನಿಗೆ ಬಂದೊದಗಿತು—ಇದು ಲೇಖಕನ ಕರ್ತವ್ಯ ಮಾತ್ರವಲ್ಲ ಜೀವನ ಧರ್ಮವೂ ಆಗಿದೆ. ಓದಿದಂತೆ ಮರೆತುಬಿಡುವವರು ನೀವಾದರೆ ಆ ತಪ್ಪಿಗೆ ಲೇಖಕ ಹೊಣೆಗಾರನಲ್ಲ! — ಮರೆತುಬಿಡುವಿರಾದರೆ ಮುಂದೆಯೂ ನಿಮ್ಮ ಜೀವನದಲ್ಲಿ ಅನುಭವಿಸಬೇಕಾದ ದುಃಖಕ್ಕೆ ನೀವೇ ಆಧಾರಾಭಿಮಾನದ ಸ್ವಾಗತವನ್ನಿತ್ತಂತಾಗುವುದು. ಎಚ್ಚರಿಕೆ!

ಪ್ರತಿಯೋರ್ವ ಜೀವಿಯೂ ತನ್ನ ಬಾಳಿನಲ್ಲಿ ಸುಖಪ್ರಾಪ್ತಿಗಾಗಿ ಹೆಂಬಲಿಸಿಕೊಂಡಿರುತ್ತಾನೆ. ಆದರೆ ಜೀವಿಗಳ ಈ ಆಸೆಯು ಆಸೆಯಾಗಿಯೇ ಉಳಿಯುತ್ತದಲ್ಲದೆ ತಾವು ಮನಸಾ ಕಲ್ಪಿಸಿಕೊಂಡ ಯಾವ ಸುಖವೂ ಅವರ ಕರಗತವಾಗುವುದಿಲ್ಲ! ಯಾಕೆಂದರೆ ಜೀವನದಲ್ಲಿ ಸುಖದ ಅನುಭೋಗವು ಜೀವಿಯ ಕರ್ಮ ಧರ್ಮ ಸಂಯೋಗದಿಂದ ಒದಗಿಬರುವ ಒಂದು ನಿರಾಕಾರ ವಸ್ತು! ಇದನ್ನು ಅತಿ ಸುಲಭವಾಗಿ ಯಾರಿಂದಲೂ, ತನ್ನದನ್ನಾಗಿ ಮಾಡಿಕೊಳ್ಳಲು ಕಷ್ಟಸಾಧ್ಯ. ಸುಖಾನುಭೋಗಿಯಾಗಬೇಕೆಂಬ ಅಂತರಿಕ ಆಸೆಯು ಉದ್ಭವಿಸುತ್ತಲೇ ಮಾನವನು ಸ್ವಾರ್ಥಿಯಾಗುತ್ತಾನೆ. ಈ ಸ್ವಾರ್ಥವೇ; ಅವನು ಬದುಕಿನಲ್ಲಿ ಬಯಸಿದ ಸುಖದ ಬದಲಾಗಿ ಜೀವನಾಧ್ಯಂತವೂ ದುಃಖವನ್ನೇ ಅನುಭವಿಸುವವನನ್ನಾಗಿ ಮಾಡುತ್ತದೆ. ಸುಖದ ಸಂಪಾದನೆಗಾಗಿ ಆಡುವ ಮಾತು, ಮಾಡುವ ಕೆಲಸ ಧರ್ಮಬಾಹಿರವಾಗಿದ್ದು ಅವೇ ನಮ್ಮನ್ನು ಪಾತಾಳದ ಹೊಂಡದಲ್ಲಿ ಹೊತಿಟ್ಟು ನರಳುತ್ತಿರುವಂತೆ ಮಾಡುತ್ತವೆ. ಜೀವನದಲ್ಲಿ ಸಂಪಾದಿಸಿಕೊಂಡ ಈ ಕರ್ಮದ ಫಲವೇ ಬೆಂಬಿಡದ 'ವಿಧಿ'ಯಾಗಿ ನಮ್ಮನ್ನು ಕಾಡುತ್ತಿರುವುದು. ಯಾಕೆಂದರೆ ಸ್ವಾರ್ಥಿಯಾದ ಜೀವಿಯು ಲೋಕದಲ್ಲಿ ಸರ್ವರ ಹಿತಕ್ಕಾಗಿ ನಿತ್ಯವಾಗಿರುವ ಧರ್ಮ, ಸತ್ಯ, ಶಾಂತಿ, ಅಹಿಂಸೆ ಮುಂತಾದ ಸನಾತನ ಧರ್ಮವನ್ನು ನಿರ್ಲಕ್ಷಿಸಿ ಅಧರ್ಮದ ಅನುಯಾಯಿಯಾಗಿ ಲೋಕಕಂಟಕನಾಗುತ್ತಾನೆ. ಅಧರ್ಮ, ಅನೀತಿ, ಅನಾಚಾರ ಇವೇ ಮೊದಲಾದ ಲೋಕ ವಿರೋಧವಾದ ವಿಚಾರಗಳನ್ನು ಪ್ರತಿಷ್ಠಾಪಿಸಿ ಕನ್ನ ಸುಖ ಸಾಧನೆಗೆ ಅವೇ ಸೋಪಕವೆಂದು ನಂಬಿ ದುಷ್ಕರ್ಮನಿರತನಾಗುತ್ತಾನೆ. ಇದರಿಂದ ಒಂದೊಮ್ಮೆ ಕ್ಷಣಿಕವಾದ ಸುಖವು ಲಭ್ಯವಾಗಲೂಬಹುದು! —

ಅನಿತ್ಯವಾದ ಈ ಸುಖದಿಂದ ಜೀವನ ಸಾರ್ಥಕವೇ? ನಿತ್ಯ ಸುಖವನ್ನೇ ಅನುಭವಿಸಬೇಕೆಂದು ಮಾಡುವ ಈ ತ್ಯಾಜ್ಯವಾದ ಕರ್ಮಗಳಿಂದ ನಿರಂತರವೂ ಜೀವನಿಗೆ ದುಃಖವೇ ಪ್ರಾಪ್ತಿ ಎಂಬುದರಲ್ಲಿ ಸಂದೇಹವಿಲ್ಲ. ಸ್ವಾರ್ಥ ಜನರಿಗೆ ಪ್ರಿಯವೆನಿಸಿದ ಈ ಮಾರಕವಾದ ನಡವಳಿಕೆಯು ಎಲ್ಲರನ್ನೂ ದುಃಖಸಾಗರದಲ್ಲಿ ಮುಳುಗಿಸಿಬಿಡುತ್ತದೆ.

ಸುಖವು ಎಂದಿಗೂ ಸ್ವಾಭಾವಿಕವಾಗಿರುತ್ತದೆ. ಈ ಸ್ವಾಭಾವಿಕವಾದ ಸುಖವು ಸ್ವಾಭಾವಿಕವಾಗಿಯೇ ಜೀವನದಲ್ಲಿ ಹೊಂದಿಕೊಂಡಿದ್ದರೆ ಮಾತ್ರ ಅದು ಪರಿಣಾಮದಲ್ಲಿ ಸುಖವಾಗಿ ಅನುಭವಿಸಲು ದೊರಕೀತು! ಅದನ್ನು ಅಸ್ವಾಭಾವಿಕವಾಗಿ, ಅಂದರೆ ತಾನು ತನ್ನವರು ಸುಖವಾಗಿ ಬಾಳಬೇಕೆಂಬ ಬಯಕೆಯಿಂದ ಪಾಪಕಾರಿಯಾದ ಕರ್ಮಗಳನ್ನು ಮಾಡಿ ಪಡೆದುಕೊಂಡರೆ ಅದು ಎಂದೆಂದಿಗೂ ಜೀವನವನ್ನು ದುಃಖಮಯವಾಗಿ ಮಾಡಿಬಿಡುತ್ತದೆ.

ಇದು ಹೇಗೆಂಬುದರ ಸ್ಪಷ್ಟತೆಗೆ ಇಷ್ಟೇ ಸಾಕು, ಜೀವಿಗಳ ಬದುಕಿನಲ್ಲಿ ಅನಪೇಕ್ಷಿತವಾಗಿ, ಅನಿರೀಕ್ಷಿತವಾಗಿ ಬಂದೊದಗುವ ಸುಖದುಃಖವನ್ನು ಕಂಡ ನಾವುಅವನವನು ಸಂಪಾದಿಸಿಕೊಂಡ ಒಳಿತು ಕೆಡುಕಿನ ಫಲಿತಾಂಶವನ್ನು ತಿಳಿಯಬಹುದಾಗಿದೆ.

ನದಿಯ ಪ್ರವಾಹವನ್ನು ಕಂಡು ಎಲ್ಲಿಯಾದರೂ ಮಳೆಬಂದಿರಬೇಕು, ಎಂದು ನಾವು ಊಹಿಸುತ್ತೇವೆ. ಅಂತೆಯೇಮನುಷ್ಯನು ಮಾಡುವ ಕರ್ಮ ಧರ್ಮಗಳಿಂದ ಪ್ರಾಪ್ತವಾಗುವ ದುಃಖವನ್ನು ಅನುಭವಿಸಿ, ತಾನು ಯಾವುದೋ ಪಾಪದ ಫಲವನ್ನು ಅನುಭವಿಸುತ್ತಿರುವೆನೆಂದೂ, ಒದಗುವ ಸುಖವನ್ನು ಸವಿಯುತ್ತಾ ಏನೋ ತನ್ನ ಕರ್ಮದಲ್ಲಿ ಶೇಷವಾಗಿ ಉಳಿದ ಪುಣ್ಯದ ಫಲವು ನೆರವಾಯಿತೆಂದೂ ತಿಳಿಯುತ್ತೇವೆ. ಈ ಅರಿವು ನಮಗಾಗುತ್ತಲೇ ನಮ್ಮ ಸುಖಕ್ಕಾಗಿ ಮಾಡಿದ ಕಾರ್ಯದಲ್ಲಿ ಜಯವಾವುದು ಪಾಪಪೂರಿತವಾದುದು? ಇನ್ನಾವುದು ಪುಣ್ಯಪ್ರದವಾದುದೆಂಬುದನ್ನು ಕಂಡುಕೊಳ್ಳಲು ಸಾಧ್ಯವಿಲ್ಲವೇ?—ಇದೆ!

ಹೊಗೆಯನ್ನು ಪ್ರತ್ಯಕ್ಷನೋಡಿದಾಗ ಪರೋಕ್ಷವಾಗಿರುವ ಅಂದರೆ ಕಣ್ಣಿಗೆ ಕಾಣದಿರುವ ಬೆಂಕಿ ಅಲ್ಲಿದೆ, ಎಂಬ ಜ್ಞಾನ ಉಂಟಾಗಲಾರದೆ ಇರದು. ಹಾಗೆಯೇ ಸುಖವನ್ನೇ ಅನುಭೋಗಿಸಬೇಕೆಂಬ ಉತ್ಕಟೇಚ್ಛೆಯಿಂದ ಜ್ಞಾನಕುರುಡಾದಂತಾಗಿ ನಾವು ಮಾಡುವ ಪ್ರತ್ಯಕ್ಷ ಕರ್ಮದಿಂದ ಸಂಗ್ರಹಿಸಿದ ಪಾಪವು ಪರೋಕ್ಷವಾಗಿ ನಮ್ಮನ್ನು ಕಷ್ಟಕ್ಕೀಡುಮಾಡಿ ನಿತ್ಯ ದುಃಖವನ್ನನುಭವಿಸಲು ಕಾರಣವಾಯಿತೆಂದು ನಾವು ತಿಳಿಯಬಹುದು.

ಲೌಕಿಕ ಜೀವನವನ್ನೇ ಸ್ಥಿರವೆಂದು ನಂಬಿಕೊಂಡಿರುವ ನಾವು ಇಷ್ಟದ ಸುಖವೇ ಸುಖವೆಂದು ತಿಳಿದು ಅದನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕೆಂದು ಅಪೇಕ್ಷೆಪಟ್ಟು ಅದರ ಸಿದ್ಧಿಗಾಗಿ ಪಡುವ ಶ್ರಮದ ಫಲವೇ ಮುಂದಿನ ಬದುಕಿನಲ್ಲಿ ಒಂದಲ್ಲ ಒಂದುದಿನ ಅನುಭವಿಸಬೇಕಾದ ದುಃಖಕ್ಕೆ ಅದು ಪೋಷಕವಾಗಿ ಉಳಿಯುತ್ತದೆ.

ವಿನಾಶಕಾರಿಯಾದ ವಿಷಯಾಸಕ್ತಿಯೇ ಜೀವನದಲ್ಲಿ ಸುಖವನ್ನೀಯುವ ಪ್ರಬಲಸಾಧನವೆಂದು ತಿಳಿದು ನಡೆಯುವುದೇ ನಮ್ಮ ದುಃಖಕ್ಕೆ ಕಾರಣವಾಗುತ್ತದೆ. ಕ್ಷಣಿಕವಾದ ಸಂಸಾರದಲ್ಲಿಯೂ, ಅನಿತ್ಯವಾದ ದೇಹಾದಿಗಳಲ್ಲಿಯೂ ತಮ್ಮ ಮನೋಭೀಷ್ಟಕ್ಕೆ ಸರಿಯಾದ ಸುಖಭೋಗವನ್ನು ಹುಡುಕುತ್ತಿರೆಯುತ್ತಾ, ಹಂಬಲಿಸುತ್ತಾ, ನಿರೀಕ್ಷಿಸುತ್ತಾ ಇರುವ ಜೀವರಿಗೆ ಅದಕ್ಕೆ ತದ್ವಿರುದ್ಧವಾದ ದುಃಖವು ಬೇಡವಾದರೂ ಮೇಲಿಂದ ಮೇಲೆ ಬಂದುಬಿಡುತ್ತದೆ. ಇದು ಹೇಗೆ; ಮತ್ತು ಏಕೆ? ಎಂಬ ಪ್ರಶ್ನೆ ಉದ್ಭವಿಸಿದರೆ ಅದಕ್ಕಿಷ್ಟೇ ಉತ್ತರ—ಸಂಸಾರಿಕ ಮತ್ತು ದೈಹಿಕ ಸುಖಾಪೇಕ್ಷೆಗಾಗಿ ಮಾಡುವ ಕರ್ಮದಿಂದಲೇ ಈ ದುಃಖವು ಪ್ರಾಪ್ತಿ! ಎಂದಾಗ ನಮ್ಮ ಅನಪೇಕ್ಷಿತ ದುಃಖಕ್ಕೆ ಕಾರಣವೇ ಅಪೇಕ್ಷಿತ ಸುಖ!

ಹಾಗಾದರೆ ಜೀವರು, ನಿತ್ಯವಾದ ಮತ್ತು ಶಾಶ್ವತವಾದ ಸುಖವನ್ನು ಹೊಂದಬೇಕಾದರೆ ಏನು ಮಾಡಬೇಕೆಂಬ ಪ್ರಶ್ನೆ ಇಲ್ಲಿ ಸಕೇಷವಾಗಿ ಉಳಿಯುತ್ತದೆ.

ತಪ್ಪು ಕಲ್ಪನೆಗಳನ್ನು ಬಿಟ್ಟು ಈ ಸತ್ಯವಾದ ವಿಚಾರವನ್ನು ಸತ್ಯವೆಂದೇ ನಂಬುವಿರಾದರೆ ಅದಕ್ಕೂ ಉತ್ತರವಿದೆ—"ಮುಂಚಂತಿ ಸೃಥಿಗೃವಂತಿ ಜನಾಯಸ್ಯಾಂ ಸಾಮುಕ್ತಿಃ" ಯಾವುದರಲ್ಲಿ ಮನುಷ್ಯನು ಬಿಡುಗಡೆಹೊಂದುತ್ತಾನೋ ಅದಕ್ಕೆ ಮುಕ್ತಿಯೆಂದು ಹೆಸರು. (ಜೀವರಿಗೆ ಶಾಶ್ವತವಾಗಿರುವ ಯಾವ ಸುಖವಿದೆಯೋ ಅದೇ ಮುಕ್ತಿ—ಇಲ್ಲಿ ನಿತ್ಯವಾದ ಸುಖವೇ ಮುಕ್ತಿ ಎಂಬ ತಾತ್ಪರ್ಯ) ನಮಗೆ ಬೇಡವಾದ ಯಾವ ದುಃಖವಿದೆಯೋ ಅದರಿಂದ ನಾವು ಪಾರಾಗಬೇಕಾದರೆ ಕೆಲವೊಂದು ನಿರ್ದಿಷ್ಟ ನಿಯಮಗಳನ್ನು ನಾವು ಪಾಲಿಸಬೇಕಾಗುವುದು.

ಸತ್ಯರೂಪನೂ, ಸತ್ಯಕಾರಿಯೂ, ಸತ್ಯವಾದಿಯೂ, ಸತ್ಯಸೃಷ್ಟಿಯೂ ಆದ ಪರಮಾತ್ಮನು ಸಾರಿದ ಅಪೂರ್ವವೂ, ಅಮರವೂ ಆದ ಆಜ್ಞೆಯನ್ನು ಪಾಲಿಸುವುದೆಂದರೆ ದುಷ್ಕರ್ಮ, ದುರ್ವಿದ್ಯೆ, ದುರ್ವ್ಯಸನ, ದುಷ್ಟ ಸಹವಾಸ, ದುರಾಚಾರಗಳನ್ನು ದೂರಮಾಡುವುದು, ಸತ್ಯಭಾಷಣ, ಸತ್ಯ ಪ್ರತಿಪಾದನ, ಪರೋಪಕಾರ, ನ್ಯಾಯಾಚರಣೆ ಪರಮಾತ್ಮನ ಸ್ತುತಿ ಪ್ರಾರ್ಥನೋಪಾಸನೆಗಳನ್ನೂ ಮಾಡುವುದು, ದಾನಧರ್ಮದಿಂದ ಪುರುಷಾರ್ಥವನ್ನು ಸಾಧಿಸಿ ಹೆರವರ ಜೀವನಕ್ಕೆ ಸಹಕಾರಿಯಾದ ಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವುದು, ಕರ್ತವ್ಯಪಾಲನೆಯಲ್ಲಿ ಧರ್ಮ ಸತ್ಯಾನುಸರಣೆ—ಈ ಮೊದಲಾದ ಸಾಧನಗಳಿಂದ ನಿತ್ಯವಾದ, ಸತ್ಯವಾದ ಮತ್ತು ಶಾಶ್ವತವಾದ ಸುಖವು ಜೀವರಿಗೆ ಪ್ರಾಪ್ತವಾಗುತ್ತದೆ. ಇದಕ್ಕೆ ವಿರುದ್ಧವಾದ ಆಚರಣೆಗಳಿಂದ ಅಪೇಕ್ಷಿತ ಸುಖದ ಬದಲಾಗಿ ದುಃಖವು ಪ್ರಾಪ್ತವಾಗುತ್ತದೆ!—ಇದು ಸತ್ಯವಾದ ವಿಚಾರ. ಸತ್ಯಸಂಗತಿ ಎಂದೆಂದಿಗೂ ಸತ್ಯವಾಗಿಯೇ ಉಳಿಯುತ್ತದೆ. ಇದನ್ನು ಸತ್ಯವಾಗಿಯೇ ಇಲ್ಲಿ ವಿಮರ್ಶಿಸಿ ವಿವರಿಸಲ್ಪಟ್ಟಿದೆ. ಹೀಗಿರುತ್ತಾ ಇದು ಸತ್ಯವೆಂದು ನಂಬಿಕೊಂಡು ಓದುವಿರಾದರೆ ಮಾತ್ರ ಈ ವಿವೇಚನೆಯಲ್ಲಿ ಅಡಕವಾಗಿರುವ ಸತ್ಯದ ಅರಿವು ನಿಮಗಾದೀತು?

ಸತ್ಯಕ್ಕೆ ಶಾಶ್ವತವಾದ ಜಯವು ಇದ್ದೇ ಇದೆ—ಇದೂ ಸತ್ಯ. ಸುಳ್ಳಿಗೆ ನಿಶ್ಚಿತವಾದ ಅಪಜಯವೂ ಇದೆ. ಇದೂ ಸತ್ಯ. ಸತ್ಯಕ್ಕೂ ಸುಳ್ಳಿಗೂ ಹೊಸಿಸುವ ಫಲಿತಾಂಶವೇ ನೆಂಬುದು ನಮಗೆ ಎಂದೋ ತಿಳಿದಾಗಿದೆ. ಸತ್ಯಕ್ಕೆ ಜಯ, ಸುಳ್ಳಿಗೆ ಅಪಜಯವು ಸಿದ್ಧವೆಂಬುದನ್ನು ನಾವು ಸತ್ಯವಾಗಿಯೇ ನಂಬಿಕೊಂಡಿದ್ದೇವೆ. ಹಾಗಾದರೆ ಇಹದ ಸುಖಕ್ಕಾಗಿ ಕೆಲವೊನ್ನು—ಏಕೆ? ಹಲವೊನ್ನು...ಅಲ್ಲ...ನಿತ್ಯವು ಸುಳ್ಳನ್ನೇ ಆಡುತ್ತಾ, ಸುಳ್ಳನ್ನೇ ಪ್ರತಿಪಾದಿಸುತ್ತಾ, ಸುಳ್ಳಿನ ಹಾದಿಯನ್ನೇ ತುಳಿಯುತ್ತಾ ಇರುವ ನಮಗೆ ಆ ಸುಳ್ಳಿನಿಂದ ಲಭ್ಯವಾಗುವ ಅಪಜಯವೇ ನಮ್ಮ ದುಃಖಕ್ಕೊಂದು ಕಾರಣವಾಗಿ ಉಳಿಯುವುದಿಲ್ಲವೇ?—ಇದು ಸತ್ಯವೆಂದೇ ನಾವು ತಿಳಿದಿಲ್ಲವೇ? ಇನ್ನೇಕೆ ಟಣ ಹರಟೆ? ಸತ್ಯದ ರಸವನ್ನು ಆಗಲೇ ಹೀರಿದ ನಿಮಗೆ ಸುನಂಸಿ ಅದರ ಸಿಪ್ಪೆಯನ್ನೇ ಕೊಟ್ಟು ಬೇಸರಿಸಲೇಕೆ?



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಮಿಸ್ವರು: ಷಾ ಕಂಪೆನಿ, ಮಂಗಳೂರು—1.

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕ,ನರಕ	3=00
ಸಂಜಯುತು	2=50
ಮಂಗಳಾರತಿ	1=00
ನಮ್ಮ ಸೆತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=50
ಮೈಲುಕಲ್ಲಿನೊಡನೆ ಮಾತುಕತೆ ಗಳು	1=50
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಷ್ಕಳಂಕ ರಕ್ತಾಶ್ರು

(೨ನೇ ಪುಟದಿಂದ)

ಅದು ಕೇವಲ ನಿರ್ಜೀವ ಕಾರು ಆಗಿರಲಿಲ್ಲ ಬಡವನ ಅರ್ಧನಗ್ನ ದೇಹವನ್ನು ಕಂಡು ನಗುವ ಶ್ರೀಮಂತಿಕೆಯ ಸ್ವರೂಪ ವಾಗಿತ್ತು. ಅವರ ಕರ್ಕಶ ಧ್ವನಿ ವಿಕಟ ಅಟ್ಟಹಾಸವಾಗಿತ್ತು

'ಇದು ಕೇವಲ ಬಡವರಿಗಾಗಿ ಕಟ್ಟಿಸಲ್ಪಟ್ಟ ಆಸ್ಪತ್ರೆ" ಏನು ವರ್ಷಗಳ ಕೆಳಗೆ ಈ ಆಸ್ಪತ್ರೆಯನ್ನು ಉದ್ಘಾಟಿಸುತ್ತ ಉದ್ಘಾಟಕರು ನುಡಿದಿದ್ದರು

ಹೌದು ಇದು ಬಡವರಿಗಲ್ಲ ಬಡ ಶ್ರೀಮಂತರಿಗೆ ಅವರಿಗಿರುವುದು ಕೇವಲ ಹಾರ್ದಿಕ ಬಡತನ..

ಶ್ರೀಮಂತರ ಸ್ವತಿಪ್ಪೆ ಅವರ ಯೋಗ್ಯತೆ ಅಲ್ಲ . ಅವರ ಬಾಲಬಡಕರಾಗಿರುವ ಮಧ್ಯಮ ವರ್ಗದವರ ಹೊಗಳಿಕೆ

ಛೆ ಶ್ರೀಮಂತರದೇನು ತಪ್ಪು? ಶ್ರೀಮಂತರಲ್ಲಿ ಎಷ್ಟು ಜನ ಯೋಗ್ಯರಿಲ್ಲ . ನನಗೆ ಕೆಲಸ ದೊರಕಿಸಿಕೊಟ್ಟು ಹರಸಿದ ಚೆನ್ನಕೇಶವರಾಯರು ಎಂತಹ ಸಾತ್ವಿಕರು .ಅದು ಶ್ರೀಮಂತರ ತಪ್ಪಲ್ಲ ಅವರನ್ನು ಹಿಂಬಾಲಿಸುವ ಮಧ್ಯಮ ವರ್ಗದ ಕುರುಡು ಜನತೆಯ ತಪ್ಪು .."ಎಂದಿತು ಮನಸ್ಸು

ನಾನು ಮನೆಯ ಕಡೆ ಹೊರಟೆ .. ಅಷ್ಟರಲ್ಲಿ ಆಗಸದಲ್ಲಿ ಮೋಡ ಕವಿಯಿತು .. ಫಕ್ಕನೆ ಮಳೆ ಬಂದಿತು—ನನ್ನ ಮನದ ಬೇಗುದಿಯನ್ನು ತಣಿಸಲೆಂದು .

ನಾನು ಕೊಡೆ ತಾರದಿದ್ದದರಿಂದ ಆ ಸ್ವೆತ್ರೆ ಜಗಲಿಯನ್ನು ಆಶ್ರಯಿಸಿದೆ.

ಐದು ನಿಮಿಷ ಕಳೆದರಬಹುದು ಧಾರಾಕಾರವಾಗಿ ಸುರಿದ ಮಳೆ ನಿಧಾನವಾಗಿ ನಿಂತಿತು ಆಗಸದಲ್ಲಿ ಕವಿದಿದ್ದ ಮೋಡಗಳು ಮರೆಯಾದವು ಆದರೆ ನನ್ನ ಹೃದಯದಾಗಸದಲ್ಲಿ ಕವಿದ ಕಮ್ಮಗಿಲು ದಟ್ಟವಾಗಿ ಹಬ್ಬುತ್ತಲೇ ಇತ್ತು .

ನಾನು ಮೆಲ್ಲನೆ ಮೆಟ್ಟಿಲಿಳಿಯುವಂಗಕಾರು ಮರಳಿಬಂತು ನೋಡೋಣ ಈಗಲಾದರೂ ಬರಬಹುದು ಎಂದುಕೊಂಡು ನಿಂತೆ

ಅಕೆ ಕಾರಿನಿಂದ ಕೆಳಗಿಳಿದು, ನನ್ನನ್ನು ನೋಡಿಯೂ, ನೋಡದಂತೆ ಒಳ ಹೋದಳು

"ಇದೇನು ಇಷ್ಟುಬೇಗ ಬಂದಿರಿ?" ಒಳಗೆ ಯಾರೋ ಕೇಳಿದರು.

"ನಾನು ಹೋಗಲಿಕ್ಕೂ 'ಡೆಲಿವರಿ' ಆಗಲಿಕ್ಕೂ ಸರಿಯಾಯ್ತು ಮತ್ತೇನು ಕೆಲಸ .ಹಿಂತಿರುಗಿಬಂದೆ .."

"ಫೀಸ್ ಕೊಟ್ರೇನು ."

ಹೋಗಿಬಂದದಕ್ಕೆ ಹದಿನೈದು ರೂಪಾಯಿ ಕೊಟ್ಟರು. .ಅಗಿನ ಕೇಸಿಗೆ ಹೋಗಿದ್ದರೆ ಐದು ರೂಪಾಯಿ ಸಿಗುವುದೂ ಕಷ್ಟ..."

ಆ ಮಾತು ನನ್ನ ಹೃದಯವನ್ನು ಇರಿಯಿತು ಅದಕ್ಕೆ ನಾನು ಉತ್ತರಿಸಬಹುದಿತ್ತು ಆದರೆ 'ಬಡವನ ಸಿಟ್ಟು ದವಡೆಗೆ ಬೆಟ್ಟು" ಎಂದು ನನಗೆ ಗೊತ್ತಿದ್ದಿತು

ಸಮಾಜದ ಯಾವ ಕ್ಷೇತ್ರದಲ್ಲಿ ನೋಡಿದರೂ ಕಾಂಚನ ದೇವಿಯ ರುದ್ರನೃತ್ಯ .ಹಣವೇ ಜನರ ಸುಖದ ಮೂಲವೆ??

* * *

ಮಳೆ ಸಂಪೂರ್ಣವಾಗಿ ನಿಂತಿತು ಮೋಡ ಚೆದುರಿತು ನಾನು ಮನೆಯ ಕಡೆ ಹೊರಟೆ 'ಏನೇ ಆಗಲಿ .. ಇನ್ನೊಮ್ಮೆ ಕೇಳಿಬಿಡ್ತೇನೆ "ಎಂದು ಒಳ ಹೋದೆ

"ದಯವಿಟ್ಟು ಈಗಲಾದರೂ ಬನ್ನಿ ದೀನವಾಣಿಯಲ್ಲಿ ಕೇಳಿದೆ

"ಸಮಯ ಮೀರಿತು ಇನ್ನು ಬರಲಿಕ್ಕೆ ಆಗುವುದಿಲ್ಲ ಸಾರೇನು ಸಿಮ್ಮ ಆಳಲ್ಲ " ನನ್ನ ಮಾತನ್ನೇ ನನಗೆ ತಿರುಗಿಸಿ ಹೇಳಿದಳು ನನ್ನ ಕೆನ್ನೆಗೆ 'ಛಪ್ಪರಪನೆ' ಹೊಡೆದಂತೆ ಆಯಿತು. ನನ್ನ ಕಣ್ಣು ಗಂಡೆಯೆಡೆಗೆ ಹೋಯಿತು. ಆಗಿನ್ನೂ ನಾಲ್ಕೂವರೆ ಆಗಿತ್ತು

"ಇನ್ನೂ ನಾಲ್ಕೂವರೆ "

"ಹೋಗಿ ಬರುವಷ್ಟರಲ್ಲಿ ಆರು ಆಗುತ್ತದೆ "ತನ್ನ ವಾದವನ್ನು ಆಕೆ ಸಮರ್ಥಿಸಿಕೊಂಡಳು

"ನಿಮ್ಮ ಗೆ ಮನಸಿದ್ರೆ ಬರಬಹುದು " ಯಾಚಕನಂತೆ ಕೇಳಿದೆ.

"ಡೋಂಟ್ ಡಿಸ್ಟರ್ಬ್ ಮಿ "ಎಂದು ಆಕೆ ನುಡಿದು ಆಸ್ಪತ್ರೆಯ ಒಳ ಕೋಣೆಗೆ ನಡೆದಳು.

ನಿಜಕ್ಕೂ ಆಗ ನಗೆಗೆ ಸಿಟ್ಟು ಮಿತಿಮೀರಿತು ಆದರೂ .

ಜೋಲುಮೋರೆ ಹಾಕಿಕೊಂಡು ಮನೆಯ ಕಡೆಗೆ ನಡೆದೆ ದಾರಿಯಲ್ಲಿ ಸುಂದರರಾಯರು ನಿಂತಿದ್ದರು—ಕಾತರರಾಗಿ.

'ಒಂದರೇನು ?" ಬಹು ಉತ್ಸುಕತೆಯಿಂದ ಕೇಳಿದರು

"ಇಲ್ಲ ." ಪ್ರಯತ್ನಪೂರ್ವಕವಾಗಿ ನಾನು ನುಡಿದೆ .ಅವರ ಮುಖ ಬಾಡಿತು ಬೆಂಕಿಗಿಟ್ಟ ಹೂವಿನಂತೆ

"ಇನ್ನು ತಡಮಾಡಬೇಡಿ, .ಯಾರಾದರೂ ಹಳ್ಳಿಯ ವೈದ್ಯರಿದ್ದರೆ ಕರೆದುಕೊಂಡ ಬನ್ನಿ . " ಎಂದು ನಾನು ಸೂಚನೆಯಿತ್ತೆ

ಬಾರವಾದ ಹೃದಯದೊಂದಿಗೆ, ಭಾರವಾದ ಕಾಲುಗಳನ್ನೆತ್ತಿಕೊಂಡು ರಾಯರು ನಡೆದರು

ಅರ್ಧಗಂಟೆಯೊಳಗೆ ರಾಯರು ಹಳ್ಳಿಯ ಸೂಲಗಿತ್ತಿಯೊಬ್ಬಳನ್ನು ಕರೆದುಕೊಂಡು ಬಂದರು

* * *

ರಾಯರ ಹೆಂಡತಿ ಹತ್ತಳು—ಜೊಚ್ಚಲ ಮಗುವನ್ನು

ತನ್ನ ಮನೆಯ ಬಡತನದ ವಾತಾವರಣದಲ್ಲಿ ಸ್ವಲ್ಪವಾದರೂ ಸಂತಸವನ್ನು ಹೊತ್ತುತರುವ ಮಗ್ಗ ಏರುವನ್ನು ಕಾಣಲು ರಾಯರು ಬಹು ಉತ್ಸುಕರಾಗಿದ್ದರು.

ಸೂಲಗಿತ್ತಿ ಹೊರಬಂದಳು .ಆಕೆಯ ಮುಖ ಬಾಡಿತ್ತು

ಒಂದ ಗಂಟೆಯ ಮುಂಚೆ ಬಂದಿದ್ದರೆ ಖಂಡಿತ ಶಿಶುವನ್ನು ಬದುಕಿಸಿಕೊಡುತ್ತಿದ್ದೆ" ಎಂದಳು ಸೂಲಗಿತ್ತಿ.

"ಏನು ! ಶಿಶು ಸತ್ತಿತೆ ?" ರಾಯರು ಗಾಬರಿಬಿದ್ದು ಕೇಳಿದರು. 'ಹೌದು' ಎಂದಳು ಆಕೆ

ರಾಯರು ಕುಸಿದು ಬಿದ್ದರು. ಜೊಚ್ಚಲ ಮಗುವನ್ನು ಕಾಣಬೇಕೆಂದು ರಾಯರು ಬಹು ಆಸೆಯಿಂದ ಕಾದಿದ್ದರು... ಅವರು ಕಂಡದ್ದು—ಹೃದಯಕ್ಕೆ ಸಾಂತ್ವನ ಗೀತೆಯನ್ನು ಹಾಡುವ ಮುಗ್ಧ ಶಿಶುವನ್ನಲ್ಲ ಬಡತನದ ಬಾಳಿಗೆ ದುಃಖದ ಬಿರುಗಾಳಿಯನ್ನು ತಂದ ನಿರ್ಜೀವ ಜೊಚ್ಚಲ ಮಗುವನ್ನು . . .

ಅತ್ತ ರಾಯರ ಹೆಂಡತಿ ಅಳುವನದ್ದು ಕೇಳುತಿತ್ತು. ರಾಯರ ಕಣ್ಣಿನಿಂದ ಕಂಬನಿ ಹರಿಯುತಿತ್ತು. ಏನೂ ಅರಿಯದೆ ರಾಯರ ಅಣ್ಣನ ಮಕ್ಕಳು, ರಾಯರ ಅಳುವನ್ನು ಕಂಡು ತಾವೂ ಅಳತೊಡಗಿದವು ಸೂಲಗಿತ್ತಿ ನಿಧಾನವಾಗಿ ಹೊರ ನಡೆದಳು—ದುಃಖವನ್ನು ನೋಡಲಾರದೆ ನಾನು ಅಲ್ಲೆ ಕೂತಿದ್ದೆ .

ರಾಯರ ದುಃಖವಾಗಲೀ, ಅವರ ಹೆಂಡತಿ ಅಳುವಾಗಲೀ ನನಗೆ ದುಃಖ ತರಿಸಲಿಲ್ಲ ಆ ಮಕ್ಕಳ ಅಳು ನನ್ನ ಹೃದಯವನ್ನು ಅಲುಗಿಸಿತು ನನ್ನ ಕಣ್ಣಿನಿಂದಲೂ ಕಣ್ಣೀರು ಹರಿಯಿತು "ಅಯ್ಯೋ

ನಾನು ಹೋದಕೂಡಲೆ ಆ ಸೂಲಗಿತ್ತಿ ಬಂದಿದ್ದರೆ ರಾಯರ ಮಗು ಬದುಕುತಿತ್ತಲ್ಲವೇ?" ಅವಳ ತಾರತಮ್ಯ ಬಡವನ ಮಗುವಿನ ಬಲಿ ತೆಗೆದುಕೊಂಡಿತು" ಎಂದಿತು ಮೂಕ ಸಂತಪ್ತ ಹೃದಯ ಮತ್ತೆ ಕಂಬನಿ ಹರಿಯಿತು ..

ಅದು ಕೇವಲ ಕಂಬನಿಯಾಗಿರಲಿಲ್ಲ . ಬಡವರ ಮೇಲ್ಮೈಗಾಗಿ ನಡೆಯುವ ಸಮರಾಗ್ನಿಗೆ ಸುರಿಯಲು ತುಪ್ಪವಾಗುವ ನನ್ನ ಮನದಿಂದ ಹೊರಬಿದ್ದ ರಕ್ತಾಶ್ರು .!



ಲಂಡನ್ನಿನಿಂದ ೨೫ ಮೈಲು ದಕ್ಷಿಣದ "ಗೇಟ್‌ವಿಕ್" ವಿಮಾನ ನಿಲ್ದಾಣವನ್ನು ಬ್ರಿಟಿಷ ಮಹಾರಾಣಿಯವರು ಇತ್ತೀಚೆಗೆ ಉದ್ಘಾಟಿಸಿದರು. ಈ ನಿಲ್ದಾಣವು ಬ್ರಿಟನ್ನಿನ ದ್ವಿತೀಯ ಮಹಾನಿಲ್ದಾಣವಾಗಿದೆ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ - ಸಾದಾರಣ ಪ್ರತಿ- ರೂ ೧-೮-೦ (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

PHONE 203 ESTD 1926
FOUNDAT ON STONE
Engraved
MARBLE TABLETS
(GOLD FILLED & LEAD FILLED)
Crown RUBBER STAMP CO.
BALMATTA ROAD, MANGALORE.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ.ನ.)

British Virgin Islands 1955 and 1956-Published by Her Majesty's Stationery Office, London. Copies May be had from the Manager, H. M. O. S. Sales Section, British Information Services, Indra Palace, H. Block, Connaught Circus, New Delhi-1. Pages: 56. Price: Rs. 3-00 Net.

ಅತ್ಲಾಂತಿಕ್ ಸಾಗರ ಮತ್ತು ಕೆರೇಬಿಯನ್ ಸಮುದ್ರಗಳ ನಡುವಿರುವ ಹಲವಾರು ದ್ವೀಪ ಸಮುದಾಯಗಳಲ್ಲಿ, ಕೆಲವು ಬ್ರಿಟಿಷ್ ವಸಾಹತುಗಳಾಗಿದ್ದು, ಅವುಗಳಲ್ಲಿ ಟಾರ್ಟೋಲ, ವರ್ಜಿನ್ ಗೋರ್ಡಾ, ಅನೆಗಡ, ಜೋಸ್ಟ್‌ವಾನ್ ಡೈಕ್ಸ್ ಮತ್ತು ಇತರ ಕೆಲವು ಸಣ್ಣ ಪುಟ್ಟ ದ್ವೀಪಗಳು ಸೇರಿಕೊಂಡಿವೆ. ಇವುಗಳ ಬಗ್ಗೆ ೧೯೫೫ ಮತ್ತು ೫೬ನೆ ವರ್ಷಗಳ ಈ ವರದಿಯಲ್ಲಿ ಈ ದ್ವೀಪಗುಚ್ಛಗಳ ಪ್ರಗತಿ ಪಥದತ್ತ ನಡೆಯುತ್ತಿರುವುದು ಗೋಚರವಾಗುತ್ತದೆ. ಸುಮಾರು ೭೭೦ ಜನಸಂಖ್ಯೆಯಿರುವ ಈ ನಡುಗುಡ್ಡೆಗಳ ಜಕರ ಅಂದಾಜು ಆದಾಯವು ೪೬,೦೪೦ ಡಾಲರುಗಳಿದ್ದು ವ್ಯಯವು ೪೨,೧೮೯ ಡಾಲರುಗಳಾಗಿವೆ. ವಿದ್ಯೆಯಲ್ಲಿ ಹಿಂದುಳಿದಿದ್ದ ಈ ಪ್ರದೇಶದಲ್ಲಿ ಈಗ ಪ್ರೌಢಶಾಲೆಯ ಮಟ್ಟದ ವಿದ್ಯಾಭ್ಯಾಸ ಕೊಡಲಾಗುವುದು. ನಾಗರಿಕ ಹಿತರಕ್ಷಣೆ ಹಾಗೂ ಆರೋಗ್ಯಗಳನ್ನು ಯೋಗ್ಯರೀತಿಯಲ್ಲಿ ನೋಡಿಕೊಂಡಿರುವುದಾಗಿ ವರದಿ ಹೇಳುತ್ತದೆ. ಕೇವಲ ಬೆಟ್ಟ ಗುಡ್ಡಗಳಿಂದ ಕೂಡಿರುವ ಈ ದ್ವೀಪ ಸಮುದಾಯದಲ್ಲಿ ಈಗ ಕೃಷಿಯೂ, ಮೀನುಗಾರಿಕೆಯೂ, ಹೈನು ವೃತ್ತಿಯೂ ಬೆಳೆದುಬರುತ್ತಿದ್ದು ವಿದೇಶೀ ನಿರ್ಯಾತವಸ್ತುಗಳಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿದೆ ಮೂಲವು ಸಾಲಕ್ಕಿಂತ ೪೪,೫೬೬ ಡಾಲರ್‌ಗಳಷ್ಟು ಹೆಚ್ಚಿದೆಯೆಂದು ವರದಿ ಹೇಳುವುದರಿಂದ, ಈ ದ್ವೀಪಗಳ ಭವ್ಯತೆಯು ಯೋಗ್ಯವಾಗಿದೆಯೆಂದು ಹೇಳಬಹುದು. ಸಾಕಷ್ಟು ವಿವರಣೆ, ಅಂಕಿಸಂಖ್ಯೆಗಳ ಬಲದಿಂದ ಕೂಡಿರುವ ಈ ವರದಿಯು ಅಕಾಡಾಯಕವಿರುತ್ತದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E P. No. 67/58.

O. S. No 455/55.

ಕರೀಲ್ ವಿರಲ ಪ್ಲೆ —ಅರ್ಜಿದಾರ
ಚಿಯ್ಯಮ್ಮ ವಗೈರೆರು —ಎದ್ರಿರು

1ನೇ ಎದ್ರಿ ಚಿಯ್ಯಮ್ಮ—ಇಬ್ರಾಯಿ ಬ್ಯಾರಿಯ ವಿಧವೆ.

2 ಪಳ್ಳಿಯಬ್ಬ 8 ಪೊಮ್ಮಿಯನ್ಮ್—ಇಬ್ರಾಯಿ ಬ್ಯಾರಿ ಮಕ್ಕಳು.

9 ಅತೀಜಮ್ಮ 10 ನಾರಿಮ್ಮ—ಮೈನರರು ಗಾರ್ಡಿಯನ್ 1ನೇ ಎದ್ರಿ ಚಿಯ್ಯಮ್ಮ.

ಬೆಳ್ತಂಗಡಿ ತಾಲೂಕು ಪಾಣಿಮಂಗಳೂರು ಗ್ರಾಮದ ಟೋಳಂಗಡಿಯಲ್ಲಿರುವವರು.

ಇವರಿಗೆ ತಿಳಿಸುವುದೇನೆಂದರೆ

ಡಿಕ್ರಿಗೆ ಜವಾಬ್ದಾರಿ ಇರುವ ಆಸ್ತಿಯನ್ನು ಏಲಂ ಮಾಡಬೇಕಿತ್ತ ಅರ್ಜಿದಾರ ದಾಕಲು ಮಾಡಿದ ಅಮಲ್ಜಾರಿ ಮತ್ತು ಏಲಮಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕೆಂತ ದಾಕಲು ಮಾಡಿದ R. E. A. 164/58ನೆ ಅರ್ಜಿ ಕೊಡಾ 2—6—58ಕ್ಕೆ ಇರುವುದರಿಂದ ನಿಮ್ಮನೇಸಾದರೂ ಅಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Petitioner.

ಪುತ್ತೂರು ತಾ. 12—7—58.

ಜನತಾ ವಿಜ್ಞಾನ—ಭಾಗ—೨. ಬರೆದವರು: ಶ್ರೀ ಯು. ರಾಘವೇಂದ್ರ ಆಚಾರ್ಯ, ಎಂ. ಎ., ಪ್ರಕಾಶಕರು: ಯು. ಭಾಸ್ಕರ ಆಚಾರ್ಯ, ಗೀತಾಲಯಂ, ಉಡುಪಿ. ಪುಟಗಳು: ೪೪. ಬೆಲೆ: ರೂ. ೦—೭೫.

ಕ್ಲಿಷ್ಟತಮವಾದ ವೈಜ್ಞಾನಿಕ ವಿಷಯಗಳನ್ನಾದರಿಸಿ ಸರಳ ಕನ್ನಡದಲ್ಲಿ ಸುಲಭವಾಗಿ ಅರ್ಥವಾಗುವಂತೆ ನುಡಿಯಬಲ್ಲ ಶಕ್ತಿ, ಪ್ರತಿಭೆ ಜಾಣ್ಮೆ ವಿದ್ವತ್ತುಗಳು ಶ್ರೀ ರಾಘವೇಂದ್ರ ಆಚಾರ್ಯರಲ್ಲಿವೆ; ಎಂತಲೇ ಅವರು ಕನ್ನಡದಲ್ಲಿ ತುಂಬಿರುವ ಕೊರತೆಯನ್ನು ಹೋಗಲಾಡಿಸಲು ಈಗ್ಗೆ ದುಡಿಯುತ್ತಿದ್ದು ಕನ್ನಡಿಗರಿಗೆ ಸುಲಭ ಗ್ರಾಹಿಯಾದ ವೈಜ್ಞಾನಿಕ ಗ್ರಂಥಗಳನ್ನು ಪದೇ ಪದೇ ಕೊಡುತ್ತಿರುವುದು ಅಭಿನಂದನೀಯ.

ಜನತಾ ವಿಜ್ಞಾನದ ಮೊದಲನೆಯ ಭಾಗದಲ್ಲಿ ಭೂಮಿ ಮತ್ತು ಜಗತ್ತಿನ ವಿಷಯವಾಗಿ ನಿರೂಪಿಸಿ ಈ ಎರಡನೆಯ ಭಾಗದಲ್ಲಿ ಮಾನವನನ್ನು ಉಳಿಸಲೂ ಅಳಿಸಲೂ ಶಕ್ತಿವಂತವಾಗಿರುವ ಅಣು-ಪರಮಾಣುಗಳ ಸ್ಥೂಲ ವಿವರಣೆಗಳನ್ನು ಕೊಟ್ಟಿದ್ದಾರೆ. ಪಂಚಭೂತಗಳೇ ಸೃಷ್ಟಿಗೆ ಕಾರಣವೆಂದು ನಂಬಿದ್ದ ನಮ್ಮ ಪೂರ್ವಿಕರ ವಿಚಾರ ಧಾರೆಯಲ್ಲಿ ಕ್ರಾಂತಿಯೆದ್ದು, ಅಂತಃ ಶಕ್ತಿಗಳು (ಭೂತಗಳು) ೩೨ ಆಗಿ ಮಾರ್ಪಟ್ಟುದನ್ನೂ, ಕೂಲಂಕಷವಾಗಿ ನೋಡಿದರೆ, ಈ ಸೂಲಭಾತುಗಳಲ್ಲಿಯೂ ಇರಕ್ಟ್ರೋನು, ಪ್ರೋಟೋನು ಮತ್ತು ನ್ಯೂಟ್ರೋನ್‌ಗಳೆಂಬ ಮೂರೇ ತರದ ಧಾತುಗಳಿಂದ ಸೃಷ್ಟಿಸಲ್ಪಟ್ಟಿವೆ ಎಂಬುದೂ ಗೊತ್ತಾಗುತ್ತದೆ. ಬೇರೆಬೇರೆ ದ್ರವ್ಯಘನ ಮತ್ತು ಅನಿಲಗಳ ಸಂಬಂಧ, ಅವುಗಳಲ್ಲಿರುವ ಅಣುಪರಮಾಣುಗಳು — ಇವುಗಳೊಳಗಿರುವ ಇಲೆಕ್ಟ್ರೋನು, ಪ್ರೋಟೋನ್ ಮತ್ತು ನ್ಯೂಟ್ರೋನುಗಳು—ಇವುಗಳ ಅಗಾಧ ಶಕ್ತಿಗಳನ್ನು ಬಹು ಸುಂದರವಾಗಿ ವಿವರಿಸಿದ್ದಾರೆ. ಅಣುಬೋಂಬು, ಜಲಜನಕ ಬೋಂಬುಗಳ ಶಕ್ತಿ ಸಾಮರ್ಥ್ಯ, ಅವುಗಳಿಂದ ಸದ್ಯ ಆದ ಅನಾಹುತದರ ಸಡುಸಯೋಗಾವಶ್ಯಕತೆಗಳನ್ನೂ ವಿವರಿಸಿ, ಅಣು — ಪರಮಾಣುಗಳಲ್ಲಂಗಲೇ, ಪ್ರೋಟೋನಾದಿಗಳಲ್ಲಾಗಲೇ ಸೃಷ್ಟಿಯ ಎಲ್ಲ ಅನಾಹುತದಲ್ಲೂ ಒಂದು ಅದ್ಭುತ ಶಕ್ತಿಯ ಕೈವಾಡವು ತೋರಿ ಬರುತ್ತಿದ್ದು, ವಿಜ್ಞಾನ ಕೊಟ್ಟ ಕೊನೆಯ ಮೆಟ್ಟಲೇ ವೇದಾಂತವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದುದರಿಂದಲೇ ವಿಜ್ಞಾನವು ವೇದಾಂತಕ್ಕೆ ಮಾರಕವಲ್ಲ, ಪೋಷಕವೆಂದು ಸಾರಿದ್ದಾರೆ.

ಗ್ರಂಥದಾದಿಯಿಂದ ಅಂತ್ಯವರೆಗೂ ಶ್ರೀ ಆಚಾರ್ಯರ ಮನಮೋಹಕ ಹಾಗೂ ಸರಳ ಭಾಷಾಶೈಲಿಯು ಮನಸ್ಸನ್ನು ಆಕರ್ಷಿಸುತ್ತದೆ. ವಿಷಯ ಗರಿಮೆಯನ್ನೂ ಭಾಷಾ ಹಿಂದಿಯನ್ನೂ ಉಳಿಸಿಕೊಂಡಿದ್ದರೂ ಅರ್ಥವಾಗದಂತಿರದೆ, ಸಾಮಾನ್ಯ ವಿಜ್ಞಾನಭರಿತರಿಯರು ಸವರು ಅರ್ಥವಿಸಿಕೊಳ್ಳಬಹುದಾಗಿರುವುದು. ವಯಸ್ಕರ ಶಿಕ್ಷಣ ಸಾಹಿತ್ಯ ಪ್ರೋತ್ಸಾಹ ಸ್ಪರ್ಧೆಯಲ್ಲಿ ಕೇಂದ್ರ ಸರಕಾರದಿಂದ ಬಹುಮಾನಿತವಾದ ಈ ಪುಸ್ತಕಗೆಯನ್ನು ಕನ್ನಡಿಗರೂ ಗೌರವಿಸದಿರಲೆಂಬ ವಿಶ್ವಾಸದಿಂದ ಈ ಗ್ರಂಥವನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಶ್ರೀ ಆಚಾರ್ಯರ ವೈಶಿಷ್ಟ್ಯಪೂರ್ಣ ಲೇಖನಯುಂ ಜನತಾ ವಿಜ್ಞಾನದ ಮುಂದಿನ ಭಾಗಗಳನ್ನೂ ಶೀಘ್ರದಲ್ಲಿ ಹೊರತರಲೆಂದು ಹಾರೈಸುತ್ತೇವೆ.

—ಗೋರಾ.

ಒಂದು ದಿನದ ರೋಮಾಂಚಕಾರೀ ಕಥೆ

(೧ನೇ ಪುಟದಿಂದ)

ಅವರು ಅಮೆರಿಕೆಯ ರಾಷ್ಟ್ರಾಧ್ಯಕ್ಷ ಐಸನ್ ಹಾವರರೊಡನೆ ಆಡಿದ್ದರೆಂದು ವರದಿಯಿದೆ. ನಿಜವಾಗಿಯೂ ಈ ಭವಿಷ್ಯ ನುಡಿಯು ಸತ್ಯವಾಯಿತು ವಿಧಿಯ ವಿಡಂಬನೆ ಎಂದರೆ ಇದೇ ಅಲ್ಲವೆ?

ವಿಡಂಬನೆಯೆಂದರೆ, ಅವರು ತಾವಾಗಿಯೇ ಮೃತ್ಯುವನ್ನು ಆಹ್ವಾನಿಸಿದುದು. ಹಿಂದಿನ ವಾರದಲ್ಲಷ್ಟೆ ಅವರು ಕಾಸಿಮರ ಸೇನೆಗೆ ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಕೊಟ್ಟಿದ್ದರು. ಅಲ್ಲದೇ ಜೋರ್ಡಾನಿಗೆ ಹೋಗುವಂತೆ ಆದೇಶವಿತ್ತಿದ್ದರು. ಅರಸ ಫೈಜಲರ ದಾಯಾದಿ ಅರಸ ಹುಸ್ಸೇನರಿಗೆ ಸಹಾಯ ನೀಡಲು ಮತ್ತು ಜೂನ್ ತಿಂಗಳ ವಿದ್ರೋಹವನ್ನು ದಮನಿಸಿ ಸ್ಥಿತಿಯನ್ನು ಹತೋಟಿಯಲ್ಲಿಡಲು ಬೇಕಾದ ಆಜ್ಞೆಗಳನ್ನೀಯಲಾಗಿತ್ತು.

ಪೂರ್ವಾಹ್ನ ೮ ತಾಸಿನ ಸಮಯವಾಗಿತ್ತು. ಬಗದಾದ ಆಕಾಶವಾಣಿಯಲ್ಲಿ ನಿಷ್ಕ್ರೋಹದ ಸಮಾಚಾರವು ಪ್ರಸಾರವಾಗುತಿತ್ತು. ಜನಸಂದಣಿಯು ಸರಕಾರೀ ಭವನಗಳು, ಅಮೆರಿಕೆಯ ರಾಯಭಾರಿ ಕಛೇರಿ, ಅಮೆರಿಕೆಯ ಸೂಚನಾ ಪುಸ್ತಕಾಲಯ ಮತ್ತು ಬ್ರಿಟಿಷ ರಾಯಭಾರಿ ಕಛೇರಿಗಳಲ್ಲಿ ತೋರಿಬರುತಿತ್ತು. ಸೇನೆಯ ಉಳಿದ ಶಾಖೆಗಳೂ ಬಗದಾದದ ಬಾಹಿರ ಪ್ರದೇಶಗಳಲ್ಲಿ, ಪರ್ವತ ಮತ್ತು ವೈದಾನ ಪ್ರದೇಶಗಳಲ್ಲಿ ವಿದ್ರೋಹವನ್ನು ಸಮರ್ಥಿಸುವ ಶಪಥ ಮಾಡುತಿದ್ದುವೆಂದು ವರದಿಗಳು ಬಂದಿವೆ

ಈ ನಡುವೆ ಬ್ರಿಟಿಷ ರಾಯಭಾರಿಯ ಕಾರ್ಯಾಲಯದಲ್ಲಿ ಬೆಂಕಿ ಬಿದ್ದಿತು. ಒಬ್ಬ ಬ್ರಿಟಿಷ ಕರ್ನೆಲನನ್ನು ಕೊಲ್ಲಲಾಯಿತು. ವಿದ್ರೋಹಿಗಳು, ಆಂಗ್ಲರೇ ತನ್ಮೂಲ ರಾಯಭಾರಿ ಕಛೇರಿಗೆ ಬೆಂಕಿ ಇಟ್ಟರು ಮತ್ತು ಗುಪ್ತವಾಗಿದ್ದ ಕಾಗದಪತ್ರಗಳನ್ನು ಸುಡತೊಡಗಿದರು ಎಂದು ಆರೋಪಹೊರಿಸಿದರು. ಈ ಸಮಯದಲ್ಲಿಯೇ ಬೆಂಕಿಯ, ಜ್ವಾಲೆಗಳು ಹತೋಟಿಯನ್ನು ಮೀರಿಹೋಗಿದ್ದುವು.

ಮಧ್ಯಾಹ್ನದವರೆಗೆ ಪರಿಸ್ಥಿತಿಯು ಸಂಪೂರ್ಣ ಶಾಂತವಾಗಿಯೇ ಇತ್ತು. ಎಲ್ಲೆಡೆಯಲ್ಲಿಯೂ ಸೈನಿಕರು ಬಂದು ಮುಟ್ಟಿದರು. ಬಗದಾದ ಆಕಾಶವಾಣಿ ಪದೇ ಪದೇ ಜನಸಹಯೋಗಕ್ಕಾಗಿ ವಿನಂತಿಯನ್ನು ಪ್ರಸಾರಮಾಡುತಿತ್ತು. ನೂರಿ ಮಂತ್ರಿಮಂಡಳದ ಕೆಲವು ಸದಸ್ಯರು ಕೊಲ್ಲಲ್ಪಟ್ಟಿದ್ದರು. ಕೆಲವರು ಜೇಲಿನಲ್ಲಿ ಎಸೆಯಲ್ಪಟ್ಟಿದ್ದರು. ಇನ್ನೂ ಕೆಲವರು ಅಡಗಿಕೊಂಡಿದ್ದರು. ಎಲ್ಲಿಯೂ ಸಂಘಟಿತ ಪ್ರತಿರೋಧವನ್ನು ಎದುರಿಸಬೇಕಾಗಿ ಬರಲಿಲ್ಲ. ಇರಾಕಿನ ಹೊರಗೆ, ಜಿದ್ದಾ, ಮಕ್ಕಾ ಮತ್ತು ಬರ್ನ್‌ಗಳಲ್ಲಿ ವಿದ್ರೋಹದ ಯೋಜನೆಗಳು ನಿರ್ಮಾಣವಾಗಿದ್ದುವೆಂದು ವರದಿ ಇದೆ.

ಆ ತಾಸು ರಾತ್ರಿಯ ಹೊತ್ತಿಗೆ ನೂತನ ಬಗದಾದ ಹೋಟೆಲಿನ ಮೇಲೆ ಗುಂಪು ಧಾಳಿಯಿಟ್ಟಿತು. ಅರಸರನ್ನು ಸಮರ್ಥಿಸುವವರನ್ನು ಕೊಂದು ಹಾಕುವುದಕ್ಕಾಗಿಯೇ ಈ ಹೋಟೇಲಿನ ಮೇಲೆ ಆಕ್ರಮಣ ನಡೆಸಲಾಯಿತು. ಇಲ್ಲಿ ಒಬ್ಬರು ಅಮೆರಿಕನ್ನರು ಕೊಲ್ಲಲ್ಪಟ್ಟರೆಂದು ವರದಿ ತಲಪಿದೆ.

ಹೀಗೆ ಇರಾಕದ ಸತ್ತಾಧಿಕಾರವು ಅಂತ್ಯಗೊಂಡ ಜುಲೈ ೧೪ರ ಕಥೆಯು ರೋಮಾಂಚಕಾರಿಯೂ ಕುತೂಹಲ ಪೂರ್ಣವೂ ಆಗಿದೆ.

ಇಂಡೋನೇಶಿಯದಲ್ಲಿ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಹೊಸ ರಾಯಭಾರಿಯಾಗಿ ಕಳಿಸಿ ಪಟ್ಟವಂಯಲ್ಲಿ ಆಯ್ಕೆಗೊಂಡ ಪವರ್ಸ್ ಪಿ. ಜೋನ್ಸ್.

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊನ್ನೆಟ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟಿಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

Edited Printed & Published by K. H. Shetty, at the Navayuga press, UdipiS. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಪುಟ ೩೭
VOL. 37

7—8—1958

ಸಂಚಿಕೆ ೪೭
NO. 47

ಕೇರಳದಲ್ಲಿನ ಕಮ್ಯುನಿಸ್ಟ ಸರಕಾರ—

ವಚನಭಂಗಕ್ಕೆ ಅವರೂ ಬಲಿಬಿದ್ದರು

ಯಾವುದೇ ಪ್ರಜಾಪ್ರಭುತ್ವವಾದಿ ಆಡಳಿತೆಯನ್ನು ವಹಿಸಿಕೊಂಡ ಪಕ್ಷವು ಸಫಲವಾಗಿದೆಯೇ ಇಲ್ಲವೇ ಎಂಬುದನ್ನು ಜನತೆಗೆ ಅನುಕೂಲವಾದ ನೀತಿಯ ಅನುಕರಣೆ ಹಾಗೂ ಕಾರ್ಯಭಾರಗಳ ಉಪಯುಕ್ತತೆ ಮತ್ತು ಸಮಯಕ್ಕನುಕೂಲವಾಗಿ ಉತ್ತರವೀಯುವಿಕೆಯನ್ನೇ ಹೆಚ್ಚಾಗಿ ಹೊಂದಿಕೊಂಡಿದೆ ಕೇರಳದ ಕಮ್ಯೂನಿಸ್ಟ ಸರಕಾರವನ್ನೂ ಇವುಗಳ ಒರೆಗೆ ಹಚ್ಚಿ ನೋಡುವುದು ಅನುಪಯುಕ್ತವಾಗಲಾರದು

ಜಗತ್ತಿನ ಕೆಲವು ದೇಶಗಳಲ್ಲಿ ರಾಜಪ್ರಭುತ್ವಕ್ಕೆ ವಿರುದ್ಧವಾಗಿ ಎದ್ದು ವ್ಯಕ್ತಿವಾದವನ್ನು ಆಧರಿಸಿಕೊಂಡಿರುವ ಸಾಮ್ಯವಾದವು ಕೇರಳದಲ್ಲಿ ಪ್ರಜಾಪ್ರಭುತ್ವದ ಪ್ರಯೋಗವನ್ನು ಮಾಡುತ್ತಿದೆ. ಈ ಪ್ರಯೋಗದಿಂದ ಕಡಿಮೆಯೆಂದರೆ, ಸಾಮ್ಯವಾದಿ ನಾಯಕರಿಗೆ ಅಧಿನಾಯಕವಾದಿ ಮತ್ತು ಪ್ರಜಾಪ್ರಭುತ್ವವಾದಿಗಳ ಶಾಸನ ಪ್ರಣಾಳಿಗಳಲ್ಲಿ ಯಾವುದು ಸರಳವೆಂಬುದರ ಮನವರಿಕೆಯಾದರೂ ಆದೀತು ನಿಸ್ಸಂದೇಹವಾಗಿಯೂ ಸೈನ್ಯ ಬಲವನ್ನೇ ನೆಚ್ಚಿಕೊಂಡಿರುವ ಅಧಿನಾಯಕವಾದದಲ್ಲಿ ವಿರೋಧೀ ಪಕ್ಷಗಳಿಗೆ ಸ್ಥಾನವಿಲ್ಲದಿರುವುದರಿಂದ, ಅಧಿಕಾರಾರೂಢ ಪಕ್ಷವು ನಿಶ್ಚಿಂತೆಯಿಂದಿರಬಹುದು, ಆದರೆ ಪ್ರಜಾಪ್ರಭುತ್ವದಲ್ಲಿ ಜನತೆ ಮತ್ತು ಜನ ಪ್ರತಿನಿಧಿಗಳ ವಿರೋಧವನ್ನೆದುರಿಸುವ ಜಟಿಲ ಸಮಸ್ಯೆಯು ಸದಾ ಇರುವುದು ಕೇರಳದ ನಂಬೂದರಿ ಪಾದರ ಸರಕಾರಕ್ಕೆ ಇಂದು ಇಂತಹುದೇ ಪರಿಸ್ಥಿತಿಯನ್ನೆದುರಿಸುವ ಗತಿ ಬಂದಿದೆ. ಮೊನ್ನೆ ಮೊನ್ನೆಯವರೆಗೆ, ತಮ್ಮ ರಾಜ್ಯದಲ್ಲಿ ಮಜೂರರ ಮೇಲೆ ಗೋಳಿಬಾರು ನಡೆಸುವುದಿಲ್ಲವೆಂದು ಕಮ್ಯೂನಿಸ್ಟ್ ಪಕ್ಷಮತ್ತು ಅದರ ಸರಕಾರವು ಘೋಷಣೆಗಳನ್ನೆಬ್ಬಿಸಿದ್ದವು. ಇದಕ್ಕೆ ಉಚಿತ ಅಥವಾ ಅನುಚಿತ ಕಾರಣವೇನೇ ಇದ್ದಿರಲಿ, ಈಗ ಆ ಪಕ್ಷದ ಸರಕಾರವೂ, ಅನ್ಯ ರಾಜ್ಯಗಳಲ್ಲಿ ಗೋಳೀಬಾರುಗಳು ನಡೆದುದನ್ನು ಪ್ರತ್ಯಕ್ಷಾ ಪ್ರತ್ಯಕ್ಷವಾಗಿ ಛೀ ಛೀ ಎನ್ನುತಿದ್ದವರೂ, ಇದರಿಂದ ದೂರವಾಗುಳಿಯುವುದಕ್ಕೆ ತಪ್ಪಿ ಗೋಳಿಬಾರನ್ನು ಮಾಡಿಯೇ ಬಿಟ್ಟಿತು.

ಕೇರಳದಲ್ಲಿ ಕಮ್ಯೂನಿಸ್ಟ ಸರಕಾರವು ಸ್ಥಾಪನೆಯಾಗುವ ವೇಳೆ ಜನತೆಯ ಎದುರಿಟ್ಟುಕೊಂಡಿದ್ದ ಕಮ್ಯೂನಿಸ್ಟರ ಕಾಲ್ಪನಿಕ ಸ್ವರ್ಗವನ್ನು ಕಾರ್ಯರೂಪಕ್ಕೆ ಕರುವುದೂ ಒಂದು ಸಮಸ್ಯೆಯಾಗಿಯೇ ಉಳಿದಿದೆ ಪ್ರಜಾಪ್ರಭುತ್ವ ಪ್ರಣಾಳಿಯಿಂದ ಸಾಮ್ಯವಾದದ ಗುರಿಗಳನ್ನು ಪೂರ್ಣಮಾಡುವ ಪ್ರಯತ್ನವೊಂದು ಹೊಸ ಪ್ರಯೋಗವಾಗಿದೆ ಚುನಾವಣೆಯ ಸಮಯದಲ್ಲಿ ಜನತೆಯ ಎದುರು ಸುಖ ವೈಭವಗಳ ಚಿತ್ರವನ್ನು ಮುಂದಿಟ್ಟಿದ್ದರೂ ಈಗ ಆ ಚಿತ್ರ ಧೂಳೀ ದೂಸರವಾಗಿದೆ. ವಿರೋಧೀ ಪಕ್ಷಗಳು ಈ ಸರಕಾರದ ನೀತಿ ಮತ್ತು ಕಾರ್ಯಕ್ರಮಗಳನ್ನು ವಿರೋಧಿಸಿ, ಆಂದೋಲನವನ್ನೆಬ್ಬಿಸುವಾಗ, ಇದಕ್ಕೆ ಉತ್ತರ ರೂಪವಾಗಿ ತಿಳಿದೋ ತಿಳಿಯದೆಯೋ ಮುಖ್ಯ ಮಂತ್ರಿ ನಂಬೂದರಿಪಾದರವರು ಭಯಾನಕ ಸಂಗತಿಯನ್ನು ಹೊರಗೆಡುಹುವರು ವಿರೋಧೀ ರಾಜಕೀಯ ಪಕ್ಷಗಳು ಸಂಯುಕ್ತ ವಿರೋಧವನ್ನು ಸ್ಥಿರಗೊಳಿಸಿದರೆ, ಕೇರಳದಲ್ಲಿ ಅಂತರ್ಯುದ್ಧವಾಗಬಹುದು ಎಂದವರು ಎಚ್ಚರಿಸಿದ್ದರು ಕಳೆದ ಜುಲಾಯಿ ೪ನೆ ದಿನಾಂಕವಂದು ಅವರೊಂದು ಪ್ರಶ್ನೆಯನ್ನು ಉತ್ತರಿಸುತ್ತ "ಕಾಂಗ್ರೆಸ್ ತನ್ನ ಸಾಮ್ಯವಾದ ವಿರೋಧೀ ನೀತಿಯನ್ನು ತ್ಯಜಿಸುವುದಾದರೆ, ಗೃಹಯುದ್ಧದ ಸಂಭಾವ್ಯತೆ ಇರುವುದಿಲ್ಲ!' ಎಂದು ಉದ್ಗರಿಸಿದ್ದರು

ಈ ಮಾತುಗಳ ಬಗ್ಗೆ ದೇಶವಿಡಿ ಪ್ರತಿಕ್ರಿಯೆಗಳು ಕಂಡುಬಂದಿದ್ದು ಅವು ವಿರೋಧವಾಗಿರದೆ ಎಚ್ಚರವೂ ಹೊರಬಂದಿವೆ ಎಲ್ಲೆಲ್ಲಿಯೂ ಕಮ್ಯೂನಿಸ್ಟ್ ಪಕ್ಷದ ಈ ಘೋರಣೆಯ ಬಗ್ಗೆ ಸಂದೇಹ ದೃಷ್ಟಿಯಿಂದ ನೋಡಲಾಯಿತು ಕೇರಳದಲ್ಲಿ ಕಮ್ಯೂನಿಸ್ಟ ಸರಕಾರವು ವಿಫಲವಾಗಿ, ಕಮ್ಯೂನಿಸ್ಟ ಪಕ್ಷವು ತನ್ನ ಪ್ರಾಚೀನ ಹಿಂಸಾತ್ಮಕ ಮಾರ್ಗವನ್ನನುಸರಿಸುವುದೆಂಬ ಶಂಕೆಯೂ ಉತ್ಪನ್ನವಾಯಿತು.

ಶ್ರೀ ನಂಬೂದರಿ ಪಾದರವರ ಸೋಣೆಯ ಅರ್ಥವು ಏನೇ ಇರಲಿ, ಕೇರಳ ಸರಕಾರವು ಸಂಯುಕ್ತ ವಿರೋಧೀರಂಗವನ್ನು ಗದರಿಸಿಬಿಟ್ಟಿದೆ ಎಂಬುದಂತೂ ಸತ್ಯ. ಅದರ ನಿಂದೆಯನ್ನು ಮಾಡುವವರಲ್ಲಿ ಅವರೂ ಹಿಂದುಳಿದಿಲ್ಲ ದೇಶದ ಎಲ್ಲೆಡೆಯಲ್ಲೂ ಸಂಯುಕ್ತರಂಗಗಳನ್ನು ಸ್ಥಾಪಿಸಲು ಪ್ರಯತ್ನಿಸಿ ಒಂದೆರಡು ರಾಜ್ಯಗಳಲ್ಲದರೂ ಯಶಸ್ಸು ಸಂಪಾದಿಸಿದ ಈ ಕಮ್ಯೂನಿಸ್ಟ್ ಪಕ್ಷದ ಸರಕಾರವು ತನ್ನೆದುರು ಇಂತಹುದೇ ವಿರೋಧೀ ಸಂಯುಕ್ತರಂಗವನ್ನು ಕಟ್ಟಿಕೊಂಡುದಕ್ಕೆ ಇಷ್ಟೊಂದು ಉರಿದೇಳುವುದೇಕೆ ಎಂಬ ಪ್ರಶ್ನೆಯುದ್ಭವಿಸುತ್ತದೆ. ಅದು ಯಾವ ಸಿದ್ಧಾಂತಗಳ ಆಧಾರದ ಮೇಲೆ ವಿರೋಧೀ ಸಂಯುಕ್ತ ರಂಗವನ್ನು ಆಕಾರ ಪಡುತಾಳಗಳನ್ನೊಂದ ಮಾಡಿ ಕಟ್ಟಿಕೊಂಡಿರುವುದೋ ಅವೇ ಸಿದ್ಧಾಂತಗಳನುಸಾರವಾಗಿ ಕೇರಳದಲ್ಲಿ ಅನ್ಯಪಕ್ಷಗಳು ಮಾಡಿಕೊಂಡಿವೆ ಕಮ್ಯೂನಿಸ್ಟರು ಅನ್ಯ ರಾಜ್ಯಗಳಲ್ಲಿ ಉತ್ತರೂಢ ಪಕ್ಷದ ವಿರುದ್ಧವಾಗಿ ಯಾವ ಸಮಸ್ಯೆಗಳಿಗಾಗಿ ಆಂದೋಲನವನ್ನು ನಡೆಸುತ್ತಿರುವ ರೂಪದಲ್ಲಿಯೇ ಅವೇ ಸಮಸ್ಯೆಗಳನ್ನು ಎತ್ತಿಕೊಂಡು ಕೇರಳದಲ್ಲಿಯೂ ವಿರುದ್ಧ ಪಕ್ಷಗಳು ಆಂದೋಲನ ನಡೆಸುತ್ತಿವೆ ಇಂತಹ ಸ್ಥಿತಿಯಲ್ಲಿ ಕೇರಳ ಸರಕಾರದ ಈ ವರ್ತನೆಗೆ ಮೂಲ ಕಾರಣವಾದರೆ, ಉಳಿದ ಪಕ್ಷಗಳು ತಮ್ಮ ವಿರುದ್ಧವಾಗಿ ಸಂಯುಂಕ್ತರಂಗವನ್ನು ಸ್ಥಾಪಿಸಿಕೊಂಡಿದ್ದಾರೆ!

ಶ್ರೀ ನಂಬೂದರಿಪಾದರು ತಮ್ಮ ಸರಕಾರದ ನೀತಿ ಮತ್ತು ಕಾರ್ಯಕ್ರಮಗಳು ಜನಹಿತಕ್ಕಾಗಿರುವುವೆಂದು ತಿಳಿಯುವುದಾದರೆ, ಮತ್ತು ವಿಶ್ವಾಸವುಳ್ಳವರಾದರೆ, ಹಾಗೆಯೇ ಜನತೆಯು ಇದರಿಂದ ಸಂತುಷ್ಟವಾಗಿರುವುದಾದರೆ, ವಿರೋಧೀ ಪಕ್ಷಗಳವರನ್ನು ಆಕ್ಷೇಪಿಂದು ಹೆದರಿಸಬೇಕಾದ ಅಗತ್ಯವಿರುವುದಿಲ್ಲ ಗೃಹ ಯುದ್ಧ ಮಾತೆತ್ತುವ ಆವಶ್ಯಕತೆಯೂ ಇರಲಿಲ್ಲ ವಾಸ್ತವವಾಗಿ, ಅವರ ವಿಶ್ವಾಸ ಪ್ರಜಾಪ್ರಭುತ್ವದ ಮೇಲಿರುವ ವರೆಗೆ ಅವರ ಈ ಭಯಗ್ರಸ್ತವಾಕ್ಕುಗಳು ವಿರೋಧೀ ಆಂದೋಲನದಿಂದ ಕಂಪಿಸಹೊರಟಿರುವ ಆತ್ಮವಿಶ್ವಾಸವನ್ನು ಕಳೆದುಕೊಂಡಿರುವುದರ ದ್ಯೋತಕವೆನ್ನದಿರುವುದು ಸಾಧ್ಯವೆ? ಅವರ ಶಾಸನ ಪ್ರಣಾಳಿಯು ಜನರ ಹಿತಕ್ಕನುಕೂಲವಾಗಿರುವುದೆಂದು ವಿಶ್ವಾಸವಿರುವುದಾದರೆ, ವಿರೋಧಿಗಳ ಯಾವುದೇ ಒಳಸಂಚು ಸಫಲವಾಗಲಾರದೆಂಬುದನ್ನು ಅವರೇ ತಿಳಿದುಕೊಳ್ಳಬೇಕಾಗಿತ್ತು ಅಲ್ಲದೇ ಇಂತಹ ವಿರೋಧದಿಂದ ಜನತೆಯ ವಿಶ್ವಾಸವು ಬೆಳೆಯುವುವೆಂದು ಅರಿಯಬೇಕಾಗಿತ್ತು. ಆದರೆ, ಇಂದಿನ ಸ್ಥಿತಿಯಲ್ಲಿ ಶ್ರೀ ಶಂಕರನ್ ನಂಬೂದರಿಪಾದರು ಮತ್ತವರ ಸರಕಾರವು ವಿರೋಧೀ ಪಕ್ಷಗಳ ವಿರುದ್ಧ ಕಟು ಆಲೋಚನೆಯನ್ನು ಮಾಡುವ ವಕ್ರಮಾರ್ಗವನ್ನು ಅವಲಂಬಿಸಿದೆ ಇದನ್ನು ಈಕ್ಷಿಸುವಾಗ ಅವರ ಕಾಲುಗಳು ಜಾರಲಾರಂಭಿಸಿವೆಯೇ ಎನ್ನುವ ಸಂಶಯವು ತಲೆದೋರುತ್ತದೆ. ಒಟ್ಟಿನಲ್ಲಿ ಕಮ್ಯೂನಿಸ್ಟರು ಇತರ ರಾಜ್ಯಗಳಲ್ಲಿ ವಹಿಸಿದ ಧೋರಣೆಯೇ ಕೇರಳದಲ್ಲಿ ಅವರಿಗೆ ಸಂಕಟವನ್ನು ತಂದೊಡ್ಡುವಂತಾಯಿತು

ಕೇವಲ ಗೃಹಯುದ್ಧದ ಸೂಚನೆಯೊಂದಲ್ಲ ಎಲ್ಲ ವಿಚಾರಗಳಲ್ಲಿಯೂ ಅಧಿಕಾರಕ್ಕೆ ಬರುವ ಮೊದಲು ಅವರು ಜನತೆಗಿತ್ತ ಭರವಸೆಗಳಲ್ಲಿ ಹೆಚ್ಚಿನವನ್ನು ಪೂರೈಸದಾಗಿದ್ದಾಗಿ ಮೊನ್ನೆ ಮೊನ್ನೆ ಗೋಳಿಬಾರನ್ನು ನಡೆಸಲಾಯಿತು ಇದರಿಂದ ಪ್ರಾಣಹಾನಿ ಸಂಭವಿಸಿತು ಕಾಂಗ್ರೆಸ್ ಸರಕಾರದ ಆಡಳಿತೆಯಲ್ಲಿ

(ಮುಂದೆ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ವಿಧಿಗೆ ಬಲಿಬೇಳಬೇಕಾಯಿತು!

ಶ್ರೀ ಬಿ. ಶ್ರೀನಿವಾಸ ಉಪೇಂದ್ರ ಶೆಣೈ.

"ಆಯಿತು, ಇಡೀ ದಿನ ಎಲ್ಲೆಲ್ಲಿ ಇದ್ದು ಕೊಂಡು ರಾತ್ರಿ ಮನೆಗೆ ಬಂದು ತಲೆಗೆ ಕೈ ಹಿಡಿದು ಕುಳಿತುಕೊಳ್ಳುವುದೊಂದೇ ಕೆಲಸ. ಮೆಟ್ರಿಕಿನವರೆಗೆ ಕಲಿಸಿದ್ದಕ್ಕೆ ಇದೊಂದು ಸಾರ್ಥಕ." ಮಗನನ್ನು ಕಂಡು ತಿರಸ್ಕಾರ ಭಾವದಿಂದ ಶ್ಯಾಮರಾಯನು ಬಡಬಡಿಸಿದನು.

"ಇಲ್ಲಪ್ಪಾ, ನಾನು ಇಡೀ ದಿನ ಊರೆಲ್ಲಾ ಸುತ್ತಾಡಿದರೂ ನೌಕರಿ ಸಿಗದ ಮೇಲೆ ನಾನೇನು ಮಾಡಲಿ?"

"ನೀನೇನು ಮಾಡುವುದು? ಹೆಂಡದಂಗಡಿಗೆ ಹೋಗಿ ಬಿದ್ದು ಕಂಡವರ ಬೆನ್ನು ಹಿಡಿಯಬೇಕು. ಆಗ ತಿಳಿಯುತ್ತದೆ."

"ಇಲ್ಲಪ್ಪಾ, ಬೇಕಾದರೆ ನಾನು ನಿನ್ನ ಕಾಲು ಹಿಡಿದು ಹೇಳುತ್ತೇನೆ. ನಾನು ಹಾಗೆ ಮಾಡಲಿಲ್ಲ. ನಿಜಕ್ಕೂ ನಾನು ಆ ದುರಭ್ಯಾಸವನ್ನು ಕಟ್ಟಿಕೊಳ್ಳಲಿಲ್ಲ. ದೇವರ ಸಾಕ್ಷಿಯಾಗಿ ಹೇಳುತ್ತೇನೆ."

"ಜಾಗ್ರತೆ! ಅಲ್ಲ—ಸಲ್ಲದ ಮಾತನ್ನು ಆಡಿದೆಯೆಂದರೆ ನಿನ್ನ ಸ್ಥಿತಿ ಏನಾದೀತೆಂದು ಆಲೋಚಿಸು. ಅಧಮಾ! ಮೂರ್ಖಾ! ಈ ನಿನ್ನ ಹಾಳು ನಾಲಗೆಯಿಂದ ದೇವರನ್ನು ಅಪವಿತ್ರರನ್ನಾಗಿ ಮಾಡಬೇಡ. ನಡೆ, ಒಳಗೆ! ಬೇಯಿಸಿದ್ದು ಹೇಗೂ ಉಂಟು. ತಿಂದು ಬಿದ್ದುಕೊಳ್ಳು," ಎಂದು ಕೋಪದಿಂದ ಕೆಡಿಕೆಡಿಯಾಗಿ ಜಯರಾಮನನ್ನು ಒಪ್ಪಿದನು.

ಮೆಲ್ಲಗೆ ಕುಂಟುತ್ತಾ ಒಳಕ್ಕೆ ನಡೆದು ಬಟ್ಟೆಲಿನ ಎದುರು ಕುಳಿತುಕೊಂಡರೂ ಜಯರಾಮನಿಗೆ ಯಾವುದೂ ಕಾಣದಾಯಿತು. ಕಣ್ಣುಗಳು ಮಂಜಾದುವು. ದುಃಖದಿಂದ ಗಂಟಲು ಉಬ್ಬಿಬಂತು. ಅನ್ನನ ತುತ್ತು ಹೊಟ್ಟೆಗೆ ಇಳಿಯದಾಯಿತು. ಊಟದ ಶಾಸ್ತ್ರವನ್ನು ಮುಗಿಸಿ ಕೈತೊಳೆದು ಹೊರಗೆ ಜಗಲಿಯ ಮೇಲೆ ಚಾಪೆ ಬಿಡಿಸಿ ಮಲಗಿಕೊಂಡನು. ಜಯರಾಮನಿಗೆ ಏನೂ ಬೇಡವಾಯಿತು. ಪ್ರಪಂಚವೇ ಶೂನ್ಯವೆಂದು ತೋರತೊಡಗಿತು.

ಪುನಃ ಶ್ಯಾಮರಾಯನು ಹೊರಗೆ ಬಂದು—"ಕುಡಿದ ಮತ್ತಿನಲ್ಲಿ ಅನ್ನ ಕೂಡಾ ಸೇರುವುದಿಲ್ಲ. ಅದನ್ನು ಬಿಸಾಡಿದರೆ ಹುಂದಿನ ಗತಿ ಏನೆಂಬುದನ್ನು ಸ್ವಲ್ಪವಾದರೂ ಯೋಚಿಸಬಹುದಿತ್ತಲ್ಲಾ!"

"ದೇವರೆ! ನೀನೇಕೆ ನನಗೆ ಈ ರೀತಿಯಲ್ಲಿ ಕಷ್ಟವನ್ನು ಕೊಡುವೆ? ಮಗನಿಗೆ ಎಲ್ಲಿಲ್ಲದ ದುರಭ್ಯಾಸವು ಏಕೆ ತಗುಲಿತು? ಅಯ್ಯೋ! ದೇವರೆ! ನೀನೇ ನಮ್ಮನ್ನು ಉದ್ಧರಿಸು." ಎಂದು ದೇವರಿಗೆ ಮೊರೆಯಿಟ್ಟ.

ಶ್ಯಾಮರಾಯನು ಓರ್ವ ಬಡಗುಮಾಸ್ತನಾಗಿದ್ದನು. ಸಿಗುವ ಅಲ್ಪ ವೇತನದಲ್ಲಿ ತನ್ನ ಸಂಸಾರವನ್ನು ಸಾಗಿಸುತ್ತಿದ್ದನು. ಅವನ ಸಂಸಾರದೇನೂ ಅಷ್ಟು ದೊಡ್ಡದಿರಲಿಲ್ಲ. ತಾನು, ತನ್ನ ಹೆಂಡತಿ ಮತ್ತು ಮಗ ಜಯರಾಮ ಇಷ್ಟೆ. ಮಗನನ್ನು ಕಷ್ಟದಿಂದ ಮೆಟ್ರಿಕ್ ತನಕ ಓದಿಸಿದ್ದ. ಮನೆಯಲ್ಲಿ ಕುಳಿತು ಐದಾರು ತಿಂಗಳುಗಳಾಗಿತ್ತು. ಆದರೆ ಯಾವ ನೌಕರಿಯೂ ಸಿಕ್ಕಿರಲಿಲ್ಲ.

ತನ್ನಧ್ಯೆ ಜಯರಾಮನ ಸಂಗಡ ಕಲಿಯುತ್ತಿದ್ದ ಆನಂದರಾಯರ ಮಗ ಕಮಲಾಕ್ಷ ಜಯರಾಮನನ್ನು ತುಂಬಾ ದ್ವೇಷಿಸುತ್ತಿದ್ದ. ಅದಕ್ಕೆ ಒಂದೇ ಒಂದು ಕಾರಣವಿತ್ತು. ಜಯರಾಮನು ತರಗತಿಯಲ್ಲಿ ಮೊದಲನೇ ಸ್ಥಾನವನ್ನು ಪಡೆಯುತ್ತಿದ್ದನು. ಕಮಲಾಕ್ಷನು ದ್ವಿತೀಯ. ಎಷ್ಟು ಪ್ರಯತ್ನಪಟ್ಟರೂ ಜಯರಾಮನನ್ನು ಹಿಂದಕ್ಕೆ ಹಾಕಲು ಆಗುತ್ತಿರಲಿಲ್ಲ. ಅದೇ ಒಂದು ವಿಷದ ಬೀಜವು ಮೊಳೆದಿತ್ತು. ಕ್ರಮೇಣ ಮರವಾಗಿ ಬೆಳೆಯುತ್ತಾ ಬರುತ್ತಿತ್ತು. ದಿನಗಳೆದಂತೆ ಕಮಲಾಕ್ಷನಿಗೆ ಜಯರಾಮನನ್ನು ಕಂಡರೆ ಆಗುತ್ತಿರಲಿಲ್ಲ. 'ತಂದೆಯಂತೆ ಮಗ; ಮಗನಂತೆ ತಂದೆ' ಎಂಬ ಮಾತನ್ನು ಆನಂದರಾಯ ಮತ್ತು ಕಮಲಾಕ್ಷರೊಳಗೆ ಕಾಣಬಹುದಿತ್ತು.

"ಓಹೋ, ಶ್ಯಾಮರಾಯರೇ? ಬನ್ನಿ, ಬನ್ನಿ."

"ಒಳ್ಳೆದಲ್ಲ, ಏನು ವಿಶೇಷ?"

"ಏನಿಲ್ಲಾ, ಇವತ್ತು ನಿಮ್ಮ ಮಗ ಹೆಂಡದಂಗಡಿಯಲ್ಲಿ ಕಾಣಸಿಕ್ಕಿದ. ಅವನಿಗೆ ಸ್ವಲ್ಪ ಬುದ್ಧಿವಾದ ಹೇಳಿ ಅಂತ ಹೇಳಲು ನಿಮ್ಮನ್ನು ಹುಡುಕಾಡುತ್ತಾ ಇದ್ದೆ. ಸಂದರ್ಭಕ್ಕೆ ಸರಿಯಾಗಿ ಸಿಕ್ಕಿದಿರಿ. ಹೊಟ್ಟೆಯಲ್ಲಿ ಅಡಗಿಕೊಂಡಿದ್ದನ್ನು ಒಮ್ಮೆಲೇ ಕಾರುವಂತೆ ನುಡಿದರು ಆನಂದರಾಯರು.

"ಎಷ್ಟುಸಲ ಹೇಳಲಿ ರಾಯರೇ? ನನ್ನ ಮಗನಿಗೆ ಈ ದುರ್ಬುದ್ಧಿ ಏಕೆ ಬಂತೆಂದು ನನಗೇನೇ ತಿಳಿಯುವುದಿಲ್ಲ. ಮನೆಗೆ ಬರಲಿ; ಅವನನ್ನು ಒಂದು ಸಿರ್ಧಾರಕ್ಕೆ ತರದೆ ಬಿಡುವುದಿಲ್ಲ." ಹಲ್ಲು ಕಚ್ಚುತ್ತಾ ಗರ್ವದಿಂದ ನುಡಿದ ಶ್ಯಾಮರಾಯ.

ತಮ್ಮ ಆಶೆಯು ಫಲಬಿಡಲಿರುವುದನ್ನು ಕಂಡು ಮನಸ್ಸಿನೊಳಗೆ ನಕ್ಕು ಆನಂದರಾಯ ಮತ್ತು ಕಮಲಾಕ್ಷ ಇಬ್ಬರೂ ಹೊರಟರು.

ಕಮಲಾಕ್ಷನಿಗೂ ನೌಕರಿ ಸಿಕ್ಕಿರಲಿಲ್ಲ. ಇದಕ್ಕೆ ಜಯರಾಮನೇ ಒಬ್ಬ ಕಂಟಕಪ್ರಾಯನೆಂದು ತಿಳಿದು ಬಾರಿ ಬಾರಿಗೂ ಆನಂದರಾಯರು ಅವನನ್ನು ದ್ವೇಷಿಸುತ್ತಿದ್ದರು. ಇಬ್ಬರೂ ಒಂದೇ ಸಂಸ್ಥೆಗೆ ಅರ್ಜಿಯನ್ನು ಸಲ್ಲಿಸಿದ್ದರು. ಸಿಗುವ ಭರವಸೆಯಿದ್ದರೂ ಅದು ಜಯರಾಮನ ಪಾಲಿಗಿರಬಹುದೆಂಬ ಬಲವಾದ ನಂಬಿಗೆಯಿತ್ತು. ಇದಕ್ಕೆ ತಂದೆ-ಮಗ ಇಬ್ಬರೂ ನಾನಾ ಯೋಚನೆ ಮಾಡುತ್ತಿದ್ದರು. ಅದು ಶ್ಯಾಮರಾಯನ ಮೂಲಕ ಫಲಿಸುವ ಹಾದಿಯನ್ನು ಹಿಡಿದು ಮುಂದಕ್ಕೆ ಸಾಗುತ್ತಿತ್ತು.

ಶ್ಯಾಮರಾಯನಿಗೆ ದಿನವಿಡೀ ಗುಮಾಸ್ತೆ ಕೆಲಸದಲ್ಲಿ ಸೋತು ಮನೆಗೆ ಹಿಂತಿರುಗುವಾಗ ಆಲೋಚಿಸುವಷ್ಟು ತಾಳ್ಮೆಯಿರುತ್ತಿರಲಿಲ್ಲ. ಅದ್ದರಿಂದ ಮಗನ ವಿಷಯದಲ್ಲಿ ಕಿವಿಗೆ ಬೀಳುವ ಸಂಗತಿಗಳೇ ನಿಜವೆಂದು ಅರಿತುಕೊಳ್ಳುವ ಮೂಢನಾಗಿದ್ದ. ಮಗನ ವಿಷಯದಲ್ಲಿ ಜುಗುಪ್ಸೆಯುಂಟಾಗುವಾಗ ಆನಂದರಾಯರು ಅದನ್ನು ಇನ್ನೂ ಹೆಚ್ಚಿಸಲು ಪ್ರಯತ್ನಿಸುತ್ತಿದ್ದರು.

ದಿನೇ ದಿನೇ ಜಯರಾಮನ ವಿರುದ್ಧ ಕೇಳಿಬರುವ ಸಂಗತಿಗಳಿಂದ ಶ್ಯಾಮರಾಯನ ತಲೆ ಬಿಸಿಯೇರತೊಡಗಿತು. ಅದು ಒಂದುದಿನ ವಿಪರೀತಕ್ಕೆ ಬಂದು ತಲಪಿತು. ಮಗನು ಮನೆಯೊಳಗೆ ಕಾಲಿಟ್ಟ ಕೂಡಲೇ ರೋಷವು ಉಕ್ಕಿಬಂತು; ಮೈಯೆಲ್ಲಾ ನಡುಗತೊಡಗಿತು; ಕಣ್ಣುಗಳು ಕೆಂಪಗಾದುವು; ಬಿಸಿನೆತ್ತರು ದೇಹದಾದ್ಯಂತ ರಭಸವಾಗಿ ಹರಿಯತೊಡಗಿತು; ಕೈಯ ಮುಷ್ಟಿಯು ತನ್ನಷ್ಟಕ್ಕೆ ಬಿಗಿಹಿಡಿಯತೊಡಗಿತು; ಯೋಚನಾಶಕ್ತಿಯು ಯೋಚಿಸದಷ್ಟು ಕುಂದಿಹೋಯಿತು. ರಭಸದಿಂದ ಒಳಗೆ ಹೋಗಿ ಪಿಸ್ತೂಲನ್ನು ತಂದು ಮಗನೆದುರು ಹಿಡಿದು—

"ಎಲಾ, ದುಷ್ಟನೆ! ನೀನು ನನ್ನ ಮಗನಲ್ಲ; ಯಮದೂತ. ಪಾಪಿ! ನಿನಗಿಷ್ಟೂ ನಾಚಿಕೆ ಇಲ್ಲವೆ? ಕಷ್ಟದಿಂದ ನಿನಗೆ ವಿದ್ಯೆಯನ್ನು ಕಲಿಸಿದ್ದಕ್ಕೆ ನೀನು ಅಡ್ಡದಾರಿ ಹಿಡಿಯಬೇಕೆ? ರಾತ್ರಿ ಎಷ್ಟು ಹೊತ್ತಾದರೂ ನೀನು ಮನೆಗೆ ಹಿಂತಿರುಗದೆ ಯಾರ್ಯಾರ ಮನೆಯಲ್ಲಿ ಬಿದ್ದುಕೊಂಡಿರುವೆಯೋ? ನಾಚಿಕೆಯಿಲ್ಲದವನೇ! ಸಾಸಿವೆಕಾಳಿನಷ್ಟಾದರೂ ಬುದ್ಧಿ ನಿನಗಿಲ್ಲದಾಯಿತೆ? ನಾಯಿಗಿಂತ ಕೀಳಾಗಿ ನೀನು ಬದುಕಿ ಪ್ರಯೋಜನವಾದರೂ ಏನು? ನಮ್ಮ ಕುಟುಂಬಕ್ಕೆ ತಿಲಕಪ್ರಾಯನಾಗಬೇಕಾದ ನೀನು ಕಂಟಕವಾದಿಯಲ್ಲಾ! ನೀಚಾ! ನೀನು ಉಳಿದು ಯಾರನ್ನು ಉದ್ಧರಿಸಲಿಕ್ಕಿದ್ದೆ? ಯಾರನ್ನು ಒಳ್ಳೆಯವನಾಗಿದ್ದು ಮುಂದಕ್ಕೆ ಕೀರ್ತಿಗಳಿಸಬೇಕೆಂದು ನೆನೆದೆನೋ ಅವನೇ ನನಗೆ ಎದುರಾದನಲ್ಲಾ! ಥೂ! ನಿನ್ನ ಜನ್ಮವೇ! ನೀನು ಈಗಲೇ ಸತ್ತರೆ ಒಳ್ಳೆದು ಇಗೊ. ಇ[illegible] ನೀನು ಈ ಗುಂಡಿಗೆ ಆಹುತಿಯಾ[illegible] ನನ್ನ ಕಣ್ಣೆದುರಿನಲ್ಲಿ ನೀನು ಇರ[illegible]ರದು....."

"ಅಪ್ಪಾ! ಇಲ್ಲಪ್ಪಾ! ನಾನು ಅಷ್ಟೇನೂ ಹೀನನಾಗಲಿಲ್ಲ. ಪರರ ಮಾತನ್ನು ನೀನು ನಂಬಿ ಕೆಟ್ಟ ಮನಸ್ಸು ಮಾಡಬೇಡ. ಸರಿಯಾಗಿ ವಿಚಾರಿಸಿ ನೋಡಪ್ಪಾ! ನಾನು ನೌಕರಿಗೋಸ್ಕರ ಪಡುವ ಕಷ್ಟ ನೀನು ಕಣ್ಣಾರೆ ನೋಡಲಿಲ್ಲಪ್ಪಾ! ನಮ್ಮ ದ್ವೇಷಿಗಳು ನಿನಗೆ ಹಿತೈಷಿಯರಂತೆ ತೋರುತ್ತಾರೆ, ಅವರ ಬೋಧನೆಗೆ ಒಳಗಾಗಿ ನನ್ನನ್ನು ತುಚ್ಛೀಕರಿಸಬೇಡಪ್ಪಾ! ನಾನೇನಷ್ಟು ಹೀನ ಪ್ರವೃತ್ತಿಯವನಾಗಲಿಲ್ಲ. ಮುಡುಕಬೇಡಪ್ಪಾ! ಕಣ್ಣಾರೆ ಕಂಡರೆ ನನ್ನ ನಿಜ ಸಂಗತಿಯು ನಿನಗೆ ತಿಳಿಯದೆ ಇರಲಾರದು."

—ತಂದೆಯ ರೀತಿಯನ್ನು ನೋಡಿ ಆಶ್ಚರ್ಯದಿಂದಲೂ, ತಂದೆಯ ಮಂದ ಬುದ್ಧಿಯು ತನ್ನ ಕಷ್ಟವನ್ನು ಅರಿಯಲಿಲ್ಲವಲ್ಲಾ ಎಂಬ ದುಃಖದಿಂದಲೂ ಮೊಣಕಾಲೂರಿ ದೈನ್ಯದಿಂದ ಬೇಡಿಕೊಂಡನು. ಆ ಸಮಯದಲ್ಲಿ ಅಲ್ಲಿ ಕಟ್ಟಿದ್ದರೂ ಕರಗುತ್ತಿತ್ತು. ಜಯರಾಮನ ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಸುರಿಯ ತೊಡಗಿತು.

"ಎಲಾ ದುಷ್ಟ ಪಶುವೇ! ನನಗೆ ಬೋಧಿಸಲು ತೊಡಗಿದೆಯಾ? ನೀಚಾ! ನಿನ್ನ ಬಣ್ಣದ ಮಾತುಗಳು ಯಾರಿಗೆ ಬೇಕು? ನೀನಿನ್ನು ಉ[illegible]ಸಲೇ ಬಾರದು. ಹೆಂಗಸರಂತೆ ಅತ್ತು ನನಗೆ ಮೋಸ ಮಾಡಲು ಬಗೆದೆಯಾ? ಇಗೋ, ಈಗಲೇ ನೀನು ಈ ಗುಂಡಿಗೆ ಬಲಿಯಾ....."—ಎಂದು ಹೇಳುತ್ತಿರುವಂತೆಯೇ ತಲೆ ತಿರುಗ ತೊಡಗಿತು. ಶ್ಯಾಮರಾಯನಿಗೆ ಇಡೀ ಭೂಮಿಯೇ ತಿರುಗಿದಂತೆ ಭಾಸವಾಯಿತು. ಕಾಲುಗಳು ಗಡಗಡನೆ ನಡುಗ ತೊಡಗಿದುವು. ಯಾರೋ ರಭಸದಿಂದ ದೂಡಿದಂತಾಗಿ ಜಯರಾಮನ ಎದೆಯಲ್ಲಿ ಬಿದ್ದು ಬಿಟ್ಟನು.

ನಿಜವಾಗಿಯೂ ಮಗನ ಪ್ರಾಣವನ್ನು ತೆಗೆಯುವ ಅಭಿಲಾಷೆಯು ಶ್ಯಾಮರಾಯನಿಗಿರದಿದ್ದರೂ ವಿಧಿಲಿಖಿತದಂತೆ ಗುಂಡು ಜಯರಾಮನನ್ನು ಬಲಿ ಪಡೆದು ಕೊಂಡೇ ಬಿಟ್ಟಿತು.



ದೇಹಕ್ಕೆ ಪ್ರಾಣವು ಹೇಗೋ ಹಾಗೆಯೇ ಜೀವನಕ್ಕೆ ಉಳಿತಾಯ.
ಉಳಿತಾಯವಿಲ್ಲದವನ ಬಾಳು ಹಾಳು; ಅಲ್ಲದೆ, ಅವನು
ಇದ್ದೂ ಇಲ್ಲದಂತೆ. ನಿಮ್ಮ ಬಾಳು ಭವ್ಯವಾಗಿ ಬೆಳಗ
ಬೇಕಾದರೆ, ಜೀವನದಲ್ಲಿ ಹುರುಪು-ಉತ್ಸಾಹ
ಗಳು ನಿಮ್ಮವಾಗಬೇಕಾದರೆ, ನಮ್ಮಲ್ಲಿರುವ
ಉಳಿತಾಯ ಯೋಜನೆಗಳಲ್ಲೊಂದ
ನ್ನಾರಿಸಿ ನೀವು ಪ್ರಯೋಜನ
ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ).

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.
ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.
ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.
ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನೀವು ಸ್ವತಂತ್ರವಾಗಿಯೇ ಯೋಚಿಸುತ್ತಿರುವಿರಾ?

ಪರಕೀಯ ಪ್ರಭಾವಿತ ವಿಚಾರಧಾರೆ

ಶ್ರೀ ಎಸ್. ಗೋಪೀಚಂದರಾವ್ ವಿದ್ವಾನ್, ವಿಶಾರದ.

ದಾಸ್ಯಕ್ಕೆಂದೊಡನೆಯೇ ಮೂಗು ಮುರಿದು,ಕೊಳ್ಳುವ ಹವ್ಯಾಸ ನಮ್ಮಲ್ಲಿದೆ. ಹೀಗೆ ಎಲ್ಲರ ಹೀನಾಯಕ್ಕೂ ಮುಕ್ತವಾದ ದಾಸ್ಯವೆನ್ನುವುದು ಬಳು ಪ್ರಕಾರತ್ವಳ್ಳದಾಗಿದೆ. ಇವುಗಳಲ್ಲಿ ಅತ್ಯಂತ ಭಯಾನಕ ರೂಪಧಾರಣೆ ಮಾಡಿರುವುದು ಮಾನಸಿಕ ದಾಸ್ಯ.

ಸಾಧಾರಣವಾಗಿ ಮಾನವನು ತಾನು ಜನಿಸಿದ ಸರಿವಾರ, ಸಂಪ್ರದಾಯ ಹಾಗೂ ಧರ್ಮಗಳಿಗೆ ವಿಧೇಯನಾಗಿದ್ದು ಅವಕ್ಕೆ ಒಪ್ಪುವ ರೀತಿಯಲ್ಲಿಯೇ ಆಲೋಚಿಸುತ್ತಾನೆ; ಅಲ್ಲದೇ ವ್ಯವಹರಿಸುತ್ತಾನೆ. ಹೀಗೆ ತನ್ನ ವ್ಯವಹಾರದಲ್ಲಿ ವ್ಯಕ್ತಿಯು ತಾನು ಸ್ವತಂತ್ರವಾಗಿಯೇ ವಿಚಾರಿಸುತ್ತಿದ್ದು, ಸ್ವತಂತ್ರವಾಗಿಯೇ ನಡೆದುಕೊಳ್ಳುವೆನೆಂದು ಭಾವಿಸುತ್ತಾನೆ. ಆದರೆ, ಸತ್ಯಸಂಗತಿಯು ಈ ವಿಚಾರ ಧಾರೆಯಿಂದ ಕೆರದಾರಿ ದೂರವಿರುವುದೆಂಬ ನಿಜ ಸತ್ಯವನ್ನರಿಯುವಷ್ಟು ಆತ ಮುಂದಾಗುವುದಿಲ್ಲ. ಒಳಹೊಕ್ಕು ನೋಡುವುದಾದರೆ, ಬಾಲ್ಯಕಾಲದಲ್ಲಿ ತನ್ನ ಮೇಲೆ ಪ್ರಭಾವ ಬೀರಿದ ಸಂಸ್ಕಾರ, ಹಿರಿಯ ಆಚರಿಸುತ್ತಿದ್ದ ರೂಢಿ ನಿಯಮಗಳನ್ನು ತನಗರಿವಿಲ್ಲದೆಯೇ ಆತನು ಅಜ್ಞಾನಾಂಧನಾಗಿ ಹೆಜ್ಜೆ ಹೆಜ್ಜೆಯಲ್ಲೂ ಅನುಕರಿಸುತ್ತಿರುತ್ತಾನೆ; ಇವನ್ನೇ ತನ್ನ ಸ್ವತಂತ್ರ ಧೋರಣೆಯೆಂದು ಕಣ್ಣುಮುಚ್ಚಿ ತಿಳಿದುಕೊಳ್ಳುತ್ತಾನೆ. ಆದುದರಿಂದ, ಸೂಕ್ಷ್ಮವಲೋಕನಕ್ಕೆ ಒರ್ವ ವ್ಯಕ್ತಿ ತನ್ನ ಸಮಾಜದ ದಾಸನಾಗಿಯೇ ಬದುಕುತ್ತಾನೆ ಎನ್ನದೆ ಅನ್ಯತ್ರಗತಿಯಿಲ್ಲ.

ಒಂದು ಉದಾಹರಣೆಯನ್ನು ತೆಗೆದುಕೊಳ್ಳಿರಿ. ಒರ್ವ ವ್ಯಕ್ತಿ ಹಿಂದೂ ಬ್ರಾಹ್ಮಣ, ನಿರಾಮಿಷ ಭೋಗೀ ಮನೆತನದಲ್ಲಿ ಜನಿಸುತ್ತಾನೆ.ಇಷ್ಟರಿಂದಲೇ ಅವನಿಗೆ ಕೆಲವು ಮಾತುಗಳನ್ನು ಮನ್ನಿಸಬೇಕಾಗುತ್ತದೆ ಇನ್ನು ಕೆಲವನ್ನು ತ್ಯಜಿಸ ಬೇಕಾಗುತ್ತದೆ. ಹೀಗೆಗೈಯುವುದರಲ್ಲಿ ಆತನಕೆಲಸವೇನೂ ಇಲ್ಲ; ಆದರೆ, ಅವನು ಸಮಾಜದ ಒಂದು ಸೂತ್ರಗೊಂಬೆಯಾಗಿರುವುದರಿಂದ, ಇದು ಅವಶ್ಯಕವೆನಿಸುತ್ತದೆ. ಅಸಭ್ಯ ಅಥವಾ ಅವಿ ಮನುಷ್ಯರಲ್ಲಿ ಈ ತ್ಯಾಜ್ಯ ಮಾತುಗಳು ಒಂದು ರೂಪದಲ್ಲಿರುತ್ತವೆ. ಆದರೆ, ಸಭ್ಯರು ಇವುಗಳಿಗೆ ಸಿದ್ಧಾಂತ, ಮತ ಅಥವಾ ವಾದಗಳ ಆಕಾರವನ್ನೀಯುತ್ತಾರೆ ಒಬ್ಬ ಹಿಂದೂ ಬ್ರಾಹ್ಮಣನಿದ್ದಾನೆಂದುಕೊಳ್ಳಿರಿ. ಆತನಿಗೆ ಮಾಂಸಭಕ್ಷಣವು ಪಾಪಕೃತ್ಯವಾಗಿದೆ. ಹಾಗಿರುವಾಗ ಗೋಮಾಂಸ ಭಕ್ಷಣೆಯ ಮಾತಂತೂ ದೂರ ಉಳಿಯಿತೆನ್ನಿ. ಆವನು ಮಾಂಸ ತಿನ್ನದಿರುವಾಗ ನಿರಾಮಿಷ ಭೋಜನದ ಕುರಿತಾಗಿ ವಿಧವಿಧದಿಂದ ಮಾತಾಡುತ್ತಾನೆ. ಇದೇ ಮನುಷ್ಯನು ಹಿಂದೂವಾಗಿ ಜನಿಸಿದ್ದರೂಕಾರಣಾಂತರಗಳಿಂದ ಒಂದು ಮುಸಲ್ಮಾನ ಕುಟುಂಬದಲ್ಲಿ ವಾಸಿಸುವುದಕ್ಕೆ ಪ್ರಾರಂಭಿಸಿದರೆ, ಆಗ ಏನಾಗುವುದು? ಮಾಂಸ ಭಕ್ಷಣೆಯು ವಿಷಯದಲ್ಲಿ ಆತನ ವಿಚಾರವೇನಿರುತ್ತದೆ? ಆಗ, ನಿಜವಾಗಿಯೂ ಮೊದಲಿನ ಮನೋವೃತ್ತಿಯುಳ್ಳದಿಲ್ಲ. ಆತನು ಗೋಮಾಂಸವನ್ನೂ ತಿನ್ನುತ್ತಾನೆ; ಅದರೆ ಎಕ್ಕಲ ಮಾಂಸವೆಂದರೆ ಮಾತ್ರ ದೂರ ನೆಟಿದು ನಿಲ್ಲುತ್ತಾನೆ ಅವನು ಹಿಂದೂ ದೇವದೇವತೆಗಳ ಸ್ಥಾನದಲ್ಲಿ ಪೈಗಂಬರರ ಪೂಜೆಯನ್ನು ಮಾಡುತ್ತಾನೆ. ವೇದ ಪುರಾಣಗಳ ಬದಲು ಕುರಾನ ಶರೀಫ್, ಕಸಸುಲಮ್ಬಿಯಾ ಮತ್ತು ಹದೀಸಗಳನ್ನು ಮನ್ನಿಸುತ್ತಾನೆ.

ಇವನ್ನೆಲ್ಲಾ ನೋಡಿದರೆ,ನಾವು ಯಾವ ಪರಿಸ್ಥಿತಿಯಲ್ಲಿ ಜನಿಸಿ ಬೆಳೆದುಬಂದೆವೋ ಅಂತಹ ಪರಿಸ್ಥಿತಿಯು ನಮ್ಮನ್ನು ನಿಯಂತ್ರಣದಲ್ಲಿಟ್ಟುಕೊಂಡಿದೆ ಎನ್ನಲು ಅಭ್ಯಂತರವಿಲ್ಲ ಹಾಗಿರುವಾಗ, ತನ್ನ ಸಂಸ್ಕಾರಗಳಿಂದ ಪ್ರಭಾವಿತನಾಗುವ ವ್ಯಕ್ತಿಯು ಸ್ವತಂತ್ರ ವಿಚಾರವನ್ನೇ ಮಾಡುತಾನೆ ಎನ್ನಲು ಶಕ್ಯವೆ? ಒರ್ವ ಮುಸಲ್ಮಾನರ ಮಗುವು ಹಿಂದೂವಿನ ಮನೆಯಲ್ಲಿ ಬೆಳೆಯುತೆಂದರೆ, ಅದರಲ್ಲಿ ಭಯಂಕರ ಪರಿವರ್ತನೆಯು ಕಂಡುಬರುವುದು ಕುರಿಗಳ ಮಂದೆಯಲ್ಲಿ ಸೇರಿಹೋಗಿ ಹುಲ್ಲು ಮೇಯುತ್ತಿದ್ದ ಸಿಂಹದ ಮರಿಯ ಕಥೆಯನ್ನು ಹೆಚ್ಚಿನವರು ಕೇಳಿದ್ದೇವೆ. ಈ ಸಂದರ್ಭದಲ್ಲಿ ವಿಶ್ವಕವಿ ರವೀಂದ್ರರ "ಗೋರಾ" ಎಂಬ ಕಾದಂಬರಿಯ ಸ್ಮರಣೆಯೂ ಅನುತ್ತದೆ. ಅದರ ನಾಯಕನಾದ ಗೌರ ಮೋಹನನು ನಿಷ್ಠಾವಂತ ಸನಾತನಿ. ಆದರೆ, ಅವನು ಮೂಲತಃ ಗುಜರ ವಿದ್ರೋಹದಲ್ಲಿ ಮಡಿದುಹೋದ ಒರ್ವ ಆಂಗ್ಲೇಯನ ಸುಕುಮಾರ ಆತನನ್ನು ಒಬ್ಬ ಬಂಗಾಳೀ ಸದ್ಗೃಹಸ್ಥನು ಮಗನೆಂದು ಮನ್ನಿಸಿ ಪೊರೆದುಕೊಂಡು ಬಂದಿದ್ದನು!

ಪ್ರತ್ಯೇಕ ಮಾನವನಲ್ಲಿಯೂ ಕೆಲವು ವೈಶಿಷ್ಟ್ಯಗಳಿದ್ದು, ಅವು ಲಾಲನೆ—ಪಾಲನೆಗಳಿಂದ ಪ್ರಭಾವಿತವಾಗುವುವೆಂದು ಅಧಿಕ ಗಾಂಭೀರ್ಯಪೂರ್ಣವಾಗಿ ಹೇಳಿಸಿದ ಮನೋವೈಜ್ಞಾನಿಕರು ಅಭಿಪ್ರಾಯಪಡುತ್ತಾರೆ. ಅನೇಕ್ಷಿತ ರೀತಿಯಲ್ಲಿ ಈ ವೈಶಿಷ್ಟ್ಯಗಳನ್ನು ಪ್ರದರ್ಶಿಸಬಹುದೂ ಅನ್ನುತ್ತಾರೆ. ಒಬ್ಬನಲ್ಲಿ ಹಾಡುವ ಶಕ್ತಿಯಿದ್ದರೆ,ಅಥವಾ ಅಪರಾಧಿ ನೋವೃತ್ತಿಯಿದ್ದರೆ ಅವನ್ನು ಅನ್ಯವಸ್ತುಗಳಿಂದ, ಸನ್ನಿವೇಶಗಳಿಂದ ಪ್ರಭಾವಿತಗೊಳಿಸಿ, ಪರಿವರ್ತಿಸುವುದೂ ಸಾಧ್ಯವಿದೆ. ಹಾಗಾಗಿ ಒರ್ವನಲ್ಲಿನ ಸ್ವವೃತ್ತಿಯು ಪರಿವರ್ತನೀಯವಲ್ಲವೆನ್ನುವುದು ಮಾತ್ರ ಮಿಥ್ಯ ಕಲ್ಪನೆಯಷ್ಟೆ. ಈಗೀಗ ಈ ಬಗ್ಗೆ ಬೇಕಾದ ಸಂಶೋಧನೆಗಳೂ ನಡೆಯುತ್ತಿದೆ.

ಉಪರೋಕ್ತ ವಿಷಯಗಳನ್ನು ಗಮನಿಸುವಾಗ, ಸ್ವತಂತ್ರರೂಪದಿಂದ ವಿಚಾರಿಸ ಬಯಸುವುದಾದರೆ, ನಾವು ನಮ್ಮ ಪರಿವಾರ, ಸಂಪ್ರದಾಯ, ಧರ್ಮ ಮೊದಲಾದುವುಗಳಿಂದ ದೂರ ಬರಬೇಕೆಂಬುದು ವಿದಿತವಾಯಿತು. ಒಬ್ಬನು ಈ ಸಾಹಸದಲ್ಲಿ ಎಷ್ಟರ ಮಟ್ಟಿಗೆ ಸಫಲನಾದಾನು ಎಂಬುದು ಆತನ ಇಚ್ಛೆಯನ್ನು ಹೊಂದಿ ಕೊಂಡಿದೆ. ಇಂತಹ ಚಿಂತನೆಗೆ ಏನಾದರೂ ತಡೆ ಇದೆಯೆ? ಎಂದರೆ, ಇದೆ ಎಂದೇ ಉತ್ತರಿಸಬೇಕು. ಸರ್ವ ಮಾನವರ ಕಲ್ಯಾಣ, ಪೋಷಣೆಯಿಂದ ಮಾನವರ ಮುಕ್ತಿ ಮತ್ತು ಸಮಾಜವಾದೀ ಸಮಾಜದ ಸ್ಥಾಪನೆ—ಇವುಗಳಿಂದ ಮಾನವನು ಸ್ವತಂತ್ರವಾಗಿ ಆಲೋಚಿಸಬಲ್ಲನು. ಮಾನವನೂ ಈ ಉದ್ದೇಶಗಳನ್ನು ತನ್ನೊಡನಿಟ್ಟುಕೊಂಡು ಸ್ವತಂತ್ರ ಚಿಂತನೆ ಮಾಡಬೇಕಾಗುವುದು,

ನಾವು ಹುಟ್ಟಿದ ಚಿಕ್ಕಸುಟ್ಟ ಕೋಣೆ ಮತ್ತು ಬಂಧನಗಳಿಂದ ನಾವು ಬಲಪೂರ್ವಕವಾಗಿ ಹೊರಬರಲೇ ಬೇಕಾಗಿದೆ. ಅಖಂಡ ವಿಶ್ವದ ಇತಿಹಾಸವನ್ನು ನೋಡುವುದಾದರೆ, ಜನತೆ ಈ ರೀತಿಯ ಉದಾರ ಮನೋವೃತ್ತಿಯಿಂದ ತಮ್ಮ ತಮ್ಮ ವಿಚಾರಧಾರೆಯನ್ನು ರೂಪಿಸಿಕೊಳ್ಳುತಿದ್ದರೆ, ಆಗ ಇಷ್ಟೊಂದು ಸಂಖ್ಯೆಯ ಕಲಹ-ಕದನಗಳೂ ರಕ್ತಪಾತವೂ ಸಂಭವಿಸುತ್ತಿದ್ದಿಲ್ಲವೆಂಬುದು ನೂರಕ್ಕೆ ನೂರರಷ್ಟು ಸತ್ಯ.

ಅತ್ಯಂತ ಸಣ್ಣಪುಟ್ಟ ವಿಷಯಗಳನ್ನೇ ಮಹಾ ಎಂದು ತಿಳಿದುಕೊಂಡು ನಡೆದ ಹೋರಾಟಗಳನ್ನು ಗಣಿಸುವುದಾದರೆ, ಅದು ಹಾಸ್ಯರಸಕ್ಕೊಂದು ಉತ್ತಮ ಉದಾಹರಣೆಯಾಗುವುದು. ಜನರು ತಮ್ಮ ನೆಲೆಕೆರೆಯಲ್ಲಿ ಹಾಸ್ಯಾಸ್ಪದವಾದ ಮಾತುಕತೆಗಳು ನಡೆದರೆ, ಅವನ್ನು ಗಮನಿಸುವಷ್ಟು ತಮ್ಮ ಮಾತುಗಳನ್ನು ದೃಷ್ಟಿಸುವುದಿಲ್ಲವೆಂಬುದು ಬಹು ವಿನೋದದ ವಿಷಯವಾಗಿದೆ. ಉದಾಹರಣೆಗಾಗಿ ಮೂರ್ತಿಪೂಜೆಯನ್ನಿಟ್ಟುಕೊಳ್ಳಿರಿ. ಅದರ ಖಂಡನ-ಮಂಡನಗಳಲ್ಲಿಯೇ ಇರ್ಪಡೆಯಜನರಿದ್ದಾರೆ. ಆದರೆ, ಸಾಮಾನ್ಯತಃ ಪ್ರಪಂಚದಲ್ಲಿರುವ ಎಲ್ಲ ಧರ್ಮಗಳಲ್ಲಿಯೂ ಒಂದಲ್ಲ ಒಂದು ವಿಧದ ಮೂರ್ತಿಪೂಜೆಯು ಪ್ರಚಲಿತವಿರುವುದನ್ನು ಯಾರೂ ನೋಡಿದಂತಿಲ್ಲ. ನಮ್ಮ ದೇಶದಲ್ಲಿ ಮೂರ್ತಿಪೂಜೆಯನ್ನು ನಿಷೇಧಿಸುವ ಆರ್ಯಸಮಾಜದವರಾದರೂ ಸ್ವಾಮಿ ದಯಾನಂದರ ಪಟವನ್ನು ಭಕ್ತಿಪೂರ್ವಕವಾಗಿ ನಮಿಸುತ್ತಾರೆ! ನಾವು ನಮ್ಮ ಧರ್ಮ ಪ್ರವರ್ತಕರ ಚಿತ್ರವನ್ನಿಡಿರಿಟ್ಟು ಅದಕ್ಕೆ ಧೂಪ ದೀಪವೇರಿಸಿದರೆ, ಅಥವಾ ಅವರ ಸಮಾಧಿಯನ್ನು ರಚಿಸಿ ಅದನ್ನು ಪೂಜಿಸಿದರೆ, ಅವೂ ಮೊದಲಿನ ಸಂಪ್ರದಾಯಲ್ಲಿಯೇ ಬಾರದಿರುವುದೆನ್ನುವುದು ದಾಸ್ಯದ ಮಾತಾದೀತು!

ಈ ವಿಧಾನದಿಂದ ಯೋಚಿಸುವುದಾದರೆ, ನಾವು ಆರ್ಷೇಯ ವಾಕ್ಯ, ಪರಮಾತ್ಮನ ವಾಣಿ ಮೊದಲಾದುವುಗಳಲ್ಲಿ ವಿಶ್ವಾಸವಿಟ್ಟಿದ್ದೇವೆ. ಅವುಗಳೂ ಮಾನವರ ವಾಣಿಗಳೆಂದೇ ತಿಳಿಯಬಹುದು. ಮನುಷ್ಯ ಹಲವುಬಾರಿ ಉಚ್ಚಸ್ಥಾನಕ್ಕೆಹರುತ್ತಾನೆ. ಆದುದರಿಂದ ಮಾನವವಾಣಿಯೇ ಪರಮೇಶ್ವರವಾಣಿಯಾಯಿತೆಂದು ಹೇಳಲು ಕಾರಣವಿದೆ. ಆದರೆ, ಹಿಂದಿನವರು ಯಾವುದೋ ಒಂದು ಮಾತನ್ನು ಆರ್ಷೇಯ ಅಥವಾ ಪರಮಾತ್ಮ ವಾಕ್ಯಗಳೆಂದು ತೀರ್ಮಾನಿಸಿದರೆಂದುದರಿಂದ, ನಾವೂ ಅದನ್ನು ಅಂಧರಂತೆ ಅನುಸರಿಸುತ್ತ ಬಂದಲ್ಲಿ ಆಗ ನಾವು ಯಾವ ಬುದ್ಧಿವಂತಿಕೆಯನ್ನೂ ಪ್ರದರ್ಶಿಸಿದಂತಾಗಲಿಲ್ಲ.

(೦೦ನೇ ಪುಟ ನೋಡಿರಿ)

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬ್ರಿಟಿಷನ ಪ್ರಧಾನಿ ಶ್ರೀ ಹೆರಾಲ್ಡ್ ಮೆಕಮಿಲನ್ ಮತ್ತು ವಿರೋಧೀ ಧುರೀಣ ಶ್ರೀ ಹಗ್ ಗೈಟ್ಸ್‌ಕೆಲರು ಗೌರವಪದವಿಗಳನ್ನು ಪಡೆದರು. "ಡಾಕ್ಟರ್ ಆಫ್ ಸಿವಿಲ್ ಲಾ" ಪದವಿಗಳನ್ನು ಇವರಿಗೆ ಇತ್ತು ಗೌರವಿಸಲಾಯಿತು.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತನೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಸಾಹಿತ್ಯ ಸಮೀಕ್ಷೆ—

ಶ್ರೀ ರಾಮಚಂದ್ರನ ಎರಡು ಚಿತ್ರಗಳು

ಶ್ರೀ ಕೆ. ಅನಂತರಾಮ ಉಡುಪ, ವಿಶಾರದೆ.

"ಕಾವ್ಯೇಷು ನಾಟಕಂ ರಮ್ಯಂ" ಎಂಬ ಉಕ್ತಿಯನ್ನು ಸಾಹಿತ್ಯಾಭಿರುಚಿಯುಳ್ಳವರೆಲ್ಲರೂ ಒಪ್ಪುವರ್ತ್ತಾರೆ. ಅತಿ ಪ್ರಾಚೀನಕಾಲದಿಂದ ಬೆಳೆದುಬಂದ ಭಾರತೀಯ ವಿವಿಧ ಭಾಷೆಗಳಲ್ಲಿ ಸಾಹಿತ್ಯಗಳಲ್ಲಿ ಸಂಸ್ಕೃತ ಭಾಷಾಸಾಹಿತ್ಯವೂ ಒಂದು. ಅಲ್ಲದೆ, ಇದುವೇ ಇತರ ಭಾಷೆಗಳ ಸಾಹಿತ್ಯಕ್ಕೂ ಮೇಲ್ಪಂಕ್ತಿಯಾಗಿದೆ ಎನ್ನಬಹುದು. ಕಾಲಿದಾಸನು ಸಂಸ್ಕೃತದ ಕವಿಕುಲಗುರು ಎಂಬ ಗೌರವಕ್ಕರ್ಹನಾಗಿದ್ದಾನೆ. ಮುಂದಿನ ಭವಭೂತಿಯೂ ಒರ್ವ ಮಹಾಕವಿ.

ಭವಭೂತಿಯು ಮಾಲತೀ ಮಾಧವ, ಮಹಾವೀರ ಚರಿತ್ರೆ ಮತ್ತು ಉತ್ತರ ರಾಮ ಚರಿತ್ರೆಗಳನ್ನು ಬರೆದಿದ್ದು ಇವೆಲ್ಲವೂ ನಾಟಕಗಳೇ ಆಗಿವೆ. ಶ್ರೀರಾಮನ ಜೀವನದ ಪೂರ್ವಾರ್ಧವು ಮಹಾವೀರ ಚರಿತ್ರೆಯಲ್ಲೂ ರಾಜ್ಯಾಭಿಷೇಕಾನಂತರದ ಜೀವನವು ಉತ್ತರರಾಮ ಚರಿತ್ರೆಯಲ್ಲೂ ಚಿತ್ರಿಸಲ್ಪಟ್ಟಿದೆ. ಉತ್ತರರಾಮ ಚರಿತ್ರೆಯೆಂಬ ನಾಮಧೇಯದಿಂದಲೇ ಇಲ್ಲಿನ ಕಥಾವಸ್ತು ಸೂಚಿತವಾಗುವುದು. ಆದರೂ ಕವಿಯು ನಾಟಕಲಕ್ಷಣಕ್ಕನುಸಾರವಾಗಿ ಇಲ್ಲಿ ಕಥೆಯನ್ನು ಸಾಕಷ್ಟು ಪರಿವರ್ತಿಸಿಕೊಂಡಿದ್ದಾನೆ. ಸಂಸ್ಕೃತ ನಾಟಕಗಳಲ್ಲಿ ಪರಂಪರಾಗತವಾಗಿ ಬಂದ ಸುಖಾಂತ ಪದ್ಧತಿಯನ್ನೇತನೂ ಮೀರಿ ಹೋಗಿಲ್ಲ. ಹಾಗಾಗಿ ಕಥಾವ್ಯತ್ಯಯಕ್ಕಿದೂ ಒಂದು ಕಾರಣವಾಯಿತು: ಇದನ್ನು ಸೀತೆಯ ನಿಯೋಗದಲ್ಲಿ ಸಮಾಪ್ತಗೊಳಿಸದೆ ಸೀತಾ ಪ್ರಾಪ್ತಿಯಲ್ಲೇ ಅಂತ್ಯಗೊಳಿಸಿದ್ದಾನೆ. ಇತಿಹಾಸದ ದೃಷ್ಟಿಯಿಂದ ಇದೊಂದು ಬೃಹದನ್ಯಾಯವೆನ್ನಬೇಕಾಗಿಯೆಲ್ಲ.

ಶ್ರೀ ರಾಮಚಂದ್ರನ ಸಮಸ್ತ ಕಥೆಗಳು ವಾಲ್ಮೀಕಿರಾಮಾಯಣದಲ್ಲಿವೆ. ಇದು ವಿಶ್ವದ ಆದಿ ಮಹಾಕಾವ್ಯವಲ್ಲದೇ ನಮ್ಮ ಉಜ್ವಲ ಸಂಸ್ಕೃತಿಯ ಸುವರ್ಣಮಯ ಇತಿಹಾಸವೂ ಹೌದು. ಇದರಿಂದ ಪ್ರಭಾವಿತರಾಗಿ ಕೆಲವು ಕವಿಗಳು ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಭವಭೂತಿಯೂ ಇಂತಹ ಕವಿಗಳಲ್ಲಿ ಒಬ್ಬನು.

ಮಹಾಕವಿ ಭವಭೂತಿಯ ಉತ್ತರ ರಾಮಚರಿತ್ರೆಯಲ್ಲಿ ಸೀತಾಪರಿತ್ಯಾಗವೇ ಕೇಂದ್ರಬಿಂದುವಾಗಿದ್ದು ಇದರ ಆಧಾರದಿಂದಲೇ ನಾಟಕವು ಸಾಗುವುದು. ಪ್ರಥಮಾಂಕದ ಕೊನೆಯ ದೃಶ್ಯದಲ್ಲಿ, ಚಿತ್ರದರ್ಶನದಿಂದ ಖಿನ್ನಳಾದ ಸೀತೆಯು ರಾಮನ ವಕ್ಷಸ್ಥಳದಲ್ಲಿ ತಲೆಯಿಟ್ಟು ಮಲಗುತ್ತಾಳೆ. ಅಷ್ಟರಲ್ಲಿ ಗುಪ್ತಚರ ದುರ್ಮುಖನು ಬರಲು ರಾಮನು ಅವನಿಂದ ನಗರದ ಸಮಾಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಅನಂತರ ಚಾರಕನು ರಾಮನ ಕಿವಿಯಲ್ಲಿ ಗುಪ್ತವಾಗಿ ಏನನ್ನೋ ನುಡಿದನು. ಇಲ್ಲಿ ಕವಿಯು ನಾಗರಿಕರ ಅಪವಾದೋಕ್ತಿಯನ್ನು ಸ್ಪಷ್ಟವಾಗಿ ಹೇಳಿದೆ, "ಕರ್ಣೇ ಏವಂ ಏವಂ" ಎಂದು ಸಂಕೇತಿಸಿಬಿಡುತ್ತಾನೆ. ಆ ಕೂಡಲೇ ರಾಮನು ಮೂರ್ಛಿತನಾಗಿ ಬಿದ್ದು ದುರ್ಮುಖನ ಉಪಚಾರಗಳಿಂದ ಎದ್ದನು. ಆಗ, ಕೆಲಕಾಲ ಪೂರ್ವದಲ್ಲಿ ಮಹರ್ಷಿವಸಿಷ್ಠರಿತ್ತ ಸಂದೇಶವು ನೆನಪಿಗೆ ಬಂದು, ತನ್ನಾಜ್ಞೆಯನ್ನು ಲಕ್ಷ್ಮಣನಿಗೆ ತಿಳಿಸಲು ಹೇಳಿದನು. ರಾಮಚಂದ್ರನೂ ದುಃಖವನ್ನು ತಡೆದುಕೊಂಡು ಸೀತೆಯನ್ನು ಕೈಗಿಟ್ಟು, ಲವಣಾಸುರನ ಗುಪ್ಪನ್ನಡಗಿಸಲು ಶತ್ರುಘ್ನನನ್ನಟ್ಟುವ ಯೋಜನೆಯಿಂದ ತೊರೆದು ಹೋದನು. ಇಷ್ಟರಲ್ಲಿಯೇ ರಥವು ಸಿದ್ಧವಾಗಿದೆಯೆಂಬ ವಾರ್ತೆಯು ಬರಲು ಸೀತೆ ರಥಾರೂಢೆಯಾಗಿ ತಪೋವನದತ್ತ ಹೊರಟು ಹೋದಳು.

ಈ ದೃಶ್ಯದಲ್ಲಿ ಯಾರೇ ಆಗಲಿ, ರಥ ಸಿದ್ಧವಾಗಿರುವುದೆಂದೊಡನೆಯೇ ಎದ್ದು ಹೊರಟ ಸೀತೆಯ ಅವಿಚಾರ ಶೀಲತೆಯನ್ನು ಗಮನಿಸದಿರಲಾರರು. ಲಕ್ಷ್ಮಣನಾದರೋ "ಏಷ ನೂತನೋ ರಾಜಾ ರಾಮಃ ಸಮಾಜ್ಞಾಪಯತಿ" ಎಂಬ ವಾಕ್ಯದಿಂದಾಗಿ ತನ್ನ ಕರ್ತವ್ಯವನ್ನು ಕೂಡಲೇ ನೆರವೇರಿಸಬೇಕಾಗಿ ಬಂತು.

ಈ ವಿಷಯವನ್ನು ರಾಮಾಯಣದಲ್ಲಿ ನೋಡುವುದಾದರೆ, ರಾಮನ ಬಗ್ಗೆ ಭವಭೂತಿಯು ಮಾಡಿದ ಅನ್ಯಾಯದ ಅರಿವಾಗುವುದು. ಏಕಾಕಿಯಾಗಿ ಗುಪ್ತಚರನು ಬಂದು, ಅಯೋಧ್ಯಾನಗರದ ಮೂಲೆ ಮೂಲೆಯಲ್ಲೂ ಚರ್ಚೆವಿಷಯವಾದುದನ್ನು ತಿಳಿಸದೆ, ಭದ್ರನು ತಿಳಿಸಿದಾಗ, ಉಳಿದವರೂ ತಲೆದೂಗಿದ ದೃಶ್ಯ ರಾಮಾಯಣದಲ್ಲಿದೆ. ಕುಲಗೌರವರಕ್ಷಣೆ ಹಾಗೂ ಪ್ರಜಾಹಿತಗಳನ್ನೇ ಧ್ಯೇಯವಾಗಿರಿಸಿದ ರಾಮನು ಗುಪ್ತಚಾರರ ಮಾತಿಗೆ ಬೆಲೆಯಿತ್ತು ಸೀತೆಯನ್ನು ತ್ಯಜಿಸುವುದು ಸರ್ವಥಾ ಅನುಚಿತವೆಂದುಕೊಂಡು ರಾಮಾಯಣದ ರಾಮನು ವಿವೇಕಿಯೂ ವಿಚಾರಶೀಲನೂ ಆಗಿ ತೋರಿಬರುತ್ತಾನೆ. ಕ್ಷಿಪ್ರಕರ್ತೃತ್ವದ ಲೇಶವೂ ಇಲ್ಲಿರುವುದಿಲ್ಲ. ರಾಮನು ಗುಪ್ತಚರರನ್ನು ಬೀಳ್ಕೊಟ್ಟು ತನ್ನ ಸೋದರರೊಡನೆ ಈ ವಿಷಯವನ್ನು ಚರ್ಚಿಸಿದನು.

"ಸರ್ವೇ ಶೃಣುತ ಭದ್ರಂ ವೋ ಮಾಕುರುಧ್ವಂ ಮನೋನ್ಯಥಾ | ಪೌರಾಣಾಂ ಮಮಸೀತಾಯಾಂ ಯಾದೃಶೀ ವರ್ತತೇ ಕಥಾ || ಎಂದು ಮುಂತಾಗಿ ವಿವರವಾಗಿ ತಿಳಿಸುತ್ತ ಆಕೆಯನ್ನು ತೊರೆದುಬಿಡುವ ನಿರ್ಧಾರವನ್ನು ಮಾಡುತ್ತಾನೆ. ಆದರೆ, ಭವಭೂತಿಯು ಮಾತ್ರ ಶೀಘ್ರಕರ್ತೃತ್ವ ದೋಷಾರೋಪಣೆಯನ್ನು ಮಾತ್ರ ಮಾಡಿ ತೃಪ್ತನಾಗದೆ, ಹೃದಯಶೂನ್ಯನನ್ನಾಗಿಯೂ ಚಿತ್ರಿಸಿದ್ದಾನೆ. ಇಂತಹ ಆರೋಪಗಳು ಶ್ರೀರಾಮಚಂದ್ರನ ದಿವ್ಯಯಶಸ್ಸಿಗೆ ಮಾಲಿನ್ಯಪ್ರಾಯವಲ್ಲವೆ?

ಮುಂದೆ ಮೂರನೆ ಅಂಕದಲ್ಲಿ ತಮಸಾ ಎಂತ್ತು ಮುರಲಾನದಿಗಳಸಂಭಾಷಣೆಯು ಈ ರೀತಿ ನಡೆಯುತ್ತದೆ — "ಪರಿತ್ಯಜ್ಯ ಗತೇ ಲಕ್ಷ್ಮಣೇ, ಸೀತಾದೇವೀ ಪ್ರಾಪ್ತ ಪ್ರಸವವೇದನಂ ಆತ್ಮಾನಂ ಅತಿದುಃಖ ಸಂತೇಗಾತ್ ಗಂಗಾ ಪ್ರವಾಹೇ ಉಕ್ಷಿಪ್ತವತೀ". (ಲಕ್ಷ್ಮಣನಿಂದ ದೂರವಾದ ಸೀತೆಯು ಪ್ರಸವವೇದನೆಯಿಂದಾಗಿ ಅತಿ ದುಃಖದಿಂದ ಗಂಗಾ ನದಿಗೆ ಹಾರುತ್ತಾಳೆ) ಈ ವಾಕ್ಯದಿಂದ ಸೀತೆಯು ಪ್ರಸೂತಿಯ ಕಾಲವುಸೂಚಿಸಿತ್ತೆಂದೂ ಆಕೆಯು ಪರಿತ್ಯಜಿಸಲ್ಪಟ್ಟಿರುವಳೆಂದೂ, ತಿಳಿಯುತ್ತದೆ. ನಿಸ್ಸಹಾಯಕಸ್ಥಿತಿಯಲ್ಲಿದ್ದಾಳೆಂದೂ ಮನವರಿಕೆಯಾಗುತ್ತದೆ. ಇದರಿಂದಾಗಿಯೇ ಆಕೆಯು ಗಂಗಾ ಪ್ರವೇಶ ಮಾಡಬೇಕಾಯಿತು. ದುರ್ದೈವ ವಶದಿಂದ ಗಂಗಾ ಪ್ರವಾಹದಲ್ಲಿಯೇ ಆಕೆಯು ಮೃತಳಾಗುತಿದ್ದರೆ, ಸೀತೆಯ ಅತ್ಮಹತ್ಯೆ ಹಾಗೂ ಆಕೆಯ ಗರ್ಭದಲ್ಲಂಕುರಿಸಿದ ರಘು ಕುಲೋದ್ಧಾರಕರ ಭ್ರೂಣ ಹತ್ಯಾದೋಷಕ್ಕೂ ಭವಭೂತಿಯೇ ಹೊಣೆಗಾರನಾಗಬೇಕಾಗುತ್ತಿತ್ತು!

ಸೀತೆಯು ನಿಷ್ಕರುಣ ರಾಮನಿಂದ ಅರಣ್ಯದಲ್ಲಿ ಏಕಾಂಗಿಯಾಗಿಯೇ ದೂರೀಕರಿಸಲ್ಪಟ್ಟಿದ್ದಾಳೆಂಬುದನ್ನು ಕವಿ ವಾಲ್ಮೀಕಿಯು ಬಾಯಿಂದ ಮತ್ತೊಮ್ಮೆ ಹೇಳಿಸುತ್ತಾನೆ. ವಾಲ್ಮೀಕಿಯು ಪಂಚವಟಿಯ ವನದೇವತೆಯಾಗಿದ್ದಳು. ಅವಳಿಂದ ರಾಮನನ್ನು "ಕಠೋರ ಹೃದಯಿ" ಎಂದು ಸಂಬೋಧಿಸುವುದು ಅಯುಕ್ತ. ಕವಿ ಅಲ್ಲಿಯೇ ನಿಲ್ಲದೆ, ಕೃತಘ್ನರ ಸಾಲಿಗೂ ರಾಮನನ್ನು ಸೇರಿಸುತ್ತಾನೆ! ಈ ದೃಶ್ಯದಲ್ಲಿ, ರಾಮನು ದುರ್ಮುಖನೊಬ್ಬನ ಮಾತಿಗೆ ಸ್ಥಿರವಾಗಿ ಅಂಟಿ ಸೀತೆಯನ್ನು ತೊರೆದುದು, ತ್ಯಜಿಸುವುದೇ ಬೇಕಾಗಿದ್ದರೂ ಕಟ್ಟಡವಯಲ್ಲಿ ಏಕಾಕಿಯಾಗಿ ಬಿಟ್ಟುದು ಅತನ ನಾಷಾಣ ಪದ್ಯಶವಾದ ಅನುಕಂಪನ ರಹಿತವಾದ ಹೃದಯದ ಪ್ರಕಾಶವಾಗುತ್ತದೆ!

ಇದೇ ಅವಸರದಲ್ಲಿ ವಾಲ್ಮೀಕಿಯಾದರೋ ಅತ್ಯಂತ ದಯಾಮಯ, ಸಹಾನುಭೂತಿಪೂರ್ಣ, ಸೂಕ್ಷ್ಮದರ್ಶಿ ಹಾಗೂ ವಿಚಾರಶೀಲ ಹೃದಯವನ್ನು ತೋರಿಸಿದ್ದಾನೆ. ಸೀತೆಯು ಪರಿಶುದ್ಧೆಯೆಂದೂ ಆಕೆಯ ಪ್ರಸೂತಿದಿನ ಸವಿಾಪಿಸಿತೆಂದೂ ವಾಲ್ಮೀಕಿಯ ರಾಮನು ಬಲ್ಲ. ಆದುದರಿಂದಲೇ ಆಕೆಯನ್ನು ತ್ಯಜಿಸುವ ಬಗ್ಗೆ ಅತ್ಯಂತವಾಗಿ ಚಿಂತಿಸಿ ಯೋಗ್ಯವಾದೆಡೆಯಲ್ಲಿಯೇ ಬಿಟ್ಟಿದ್ದಾನೆ. ಲಕ್ಷ್ಮಣನು ಅಜ್ಞೆಯಂತೆ ಗಂಗೆಯ ನಿಕಟವರ್ತಿನಿಯಾದ ತಮಸಾ ನದಿಯ ತೀರದಲ್ಲಿ ರಾಮನ ಮಾತುಗಳನ್ನು ತಿಳಿಸಿ ಹತ್ತಿರದ ಋಷ್ಯಾಶ್ರಮಗಳನ್ನು ಪರಿಚಯಮಾಡಿಸಿ ಹೋಗುತ್ತಾನೆ.

(೯ನೇ ಪುಟ ನೋಡಿರಿ)

ಕುಂದಾಪುರ ಡಿ. ಮುಂ. ಕೋರ್ಟಿನಲ್ಲಿ
R. E. P. 418/58.
O. S. 147/57.

ಕಾವೇರಮ್ಮ ಯಾನೆ ಗುಲಾಬಿ ಅಮ್ಮ —ಅರ್ಜಿದಾರಳು

ಶೇಷಗಿರಿ ಪೈ ಸಹಾ —ಎದ್ರಿರು

ಅರ್ಜಿದಾರಳ ಕಡೆಯಿಂದ ಈ ಮೂಲ್ಯ ಜಾಹೀರುಮಾಡಿಕೊಳ್ಳುವದೇನೆಂದ್ರೆ

೩ ಕೃಷ್ಣ ಉಡುಪ - ಪದ್ಮನಾಭ ಉಪ್ಪೂರ ಮಗ ೧ ಶಲಾಪತಿ ಯಾನೆ ಪದ್ಮಾವತಿ-ರಾಮಚಂದ್ರ ಪೈ ಪ್ರಭೃತಿ.

ಉಪ್ಪಿ ತಾಲ್ಲೂಕ ನಡೂರು ಗ್ರಾಮ.

ಮೇಲ್ಕಂಡ ಅನ್ಯಾಯದಲ್ಲಿ ಎದ್ರಿರ ಬಾಬ್ತು ಸ್ತಿರಾಸ್ತಿ ರೈಲಾಂ ಮಾಡಿಸುವ ಗೋಸ್ಕರ ಅರ್ಜಿದಾರಳು ಹಾಜ್ರಿಪಡ್ಸಿದ ಯಿಸ್ತಿಹಾರಿನ ಶರ್ತ ನಿರ್ಣಯಿಸುವ ಗೋಸ್ಕರ 26-8-58 ಕ್ಕೆ ಅಪೈರ ತಸ್ಕಿಗೆ ಯಿಡೋಣಾಗಿಯದೆ. ಆ ಕುರಿತು ನಿನ್ನುದೇನಾದ್ರು ಅಕ್ಷೇಪವಿದ್ರೆ ಸದ್ರಿ ದಿವ್ಸ ಹಗ್ಲು 11 ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ಸ್ವತಹಾ ಪ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪದ್ರೆ ನಿನ್ನ ಪೈರ ಹಾಜರಿಯಲ್ಲಿ ಏಕಪಕ್ಷನಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರಳ ಕಡೆಯಿಂದ ಈ ಮೂಲ್ಯ ತಿಳಿಯಪಡ್ಸಿದೆ.

G. Sanjiva Rao, B. A. LLB.
Vakil for Petitioner.
Kundapur Date 1—8—58.

ಸಮಗ್ರ ನಾಡಿನ ಅಭಿವೃದ್ಧಿಗಾಗಿ.....!

ರಾಜ್ಯ ಹಾಗೂ ದೇಶ ಸರಕಾರಗಳು ರೂಪಿಸಿದ ಯೋಜನೆಗಳ ಪರಿಪೂರ್ಣತೆಗೆ ಆರ್ಥಿಕ ಸಾಲ ಸಹಾಯಗಳನ್ನು ನೀಡುವುದು ನಿಮ್ಮೆಲ್ಲರ ಕರ್ತವ್ಯ.

ಚಿಕ್ಕ ಪುಟ್ಟ ವೈಯಕ್ತಿಕ ಉಳಿತಾಯ ಯೋಜನೆಗಳನ್ನು ಅನುಸರಿಸುವುದರ ಮೂಲಕ ದೇಶದ ದೊಡ್ಡ ಯೋಜನೆಗಳನ್ನು ಪರಿಪೂರ್ಣಗೊಳಿಸಿ ಸಮೃದ್ಧ ಭಾರತ ರಚನೆಗೆ ನಿಮ್ಮ ಕಾಣಿಕೆಯನ್ನು ಸಲ್ಲಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್

THE CANARA INDUSTRIAL & BANKING
SYNDICATE LTD., UDIPI.

A REWARD OF RS. 550

LEUCODERMA
(WHITE PATCHES)

A few days' application of this wonderful medicine cures Leprosy and Leucoderma radically. Get rid of this horrible disease by application of this medicine. Price Rs. 5 for external and internal medicine each.

END GREY HAIR

Despite many disappointments by using numerous hair products, our Ayurvedic Scented Mobini Hair Oil is sure to give you complete satisfaction. It restores the natural black colour to the grey hair permanently. Thousands benefited by its wonderful effect. Price Rs. 5/- Full course 3 phials Rs. 12/-

S. K. CHEMICAL WORKS
(M) P.O. KATRI SARAI (GAYA)

ವಸ್ತ್ರೋದ್ಯೋಗದಲ್ಲಿ ನವಚೇತನ–

ಸಲಹಾ ಸಮಿತಿಯ ಸೂಚನೆಗಳು

ಟೆಕ್ಸ್‌ಟೈಲ್ ಕಮಿಶನರರಾದ ಶ್ರೀ. ಡಿ. ಎಸ್. ಜೋಶಿಯವರ ಅಧ್ಯಕ್ಷತೆಯಲ್ಲಿ ನಿಯುಕ್ತವಾದ ಪರಿಶೋಧನಾ ಸಮಿತಿಯು ದೇಶದ ಹತ್ತಿ ಬಟ್ಟೆಯ ಉದ್ದಿಮೆಯ ಪುನರುಜ್ಜೀವನಕ್ಕಾಗಿ ಒಂದು ಏಕೀಕೃತ ಯೋಜನೆಯನ್ನು ಶಿಫಾರಸು ಮಾಡಿತು. ಹತ್ತಿ ಬಟ್ಟೆಯ ಉದ್ಯೋಗದಲ್ಲಿನ ಸಮಸ್ಯೆಗಳನ್ನು ಸಮಿತಿಯು ಅಲ್ಪಕಾಲಿಕ ಹಾಗೂ ದೀರ್ಘ ಕಾಲಿಕವೆಂಬ ಎರಡು ಶ್ರೇಣಿಗಳಲ್ಲಿ ವಿಭಾಗಿಸಿತು. ಎಲ್ಲ ಉತ್ಪಾದನ ಕೇಂದ್ರಗಳ ಮತ್ತು ಅದಕ್ಕೆ ಸಂಬಂಧವಾಗಿರುವವರಪ್ರಾತಿನಿಧಿತ್ವವಿರುವ ಒಂದು ಸಲಹಾ ಸಮಿತಿಯನ್ನು ನಿರ್ಮಿಸಬೇಕೆಂದೂ ಇದು ಸೂಚಿಸಿತು.

ಜೀರ್ಣವಾದ ಯಂತ್ರಗಳೇ ವಸ್ತ್ರೋದ್ಯೋಗದ ಸಮಸ್ಯೆಗಳಿಗೆ ಮೂಲ ಕಾರಣವೆಂದೂ, ಅದಕ್ಕಾಗಿ ಯಂತ್ರ ಸಾಮಗ್ರಿಗಳನ್ನು ಸುಧಾರಿಸಬೇಕೆಂದೂ ಸಮಿತಿಯು ಪತ್ತಾಯಿಸಿದೆ. ಹಾಗೆಯೇ ಯಂತ್ರಗಳ ಅವ್ಯವಸ್ಥೆ, ಮರಮ್ಮತ್ತಿನ ಕಡೆಗೆ ಅಲಕ್ಷ್ಯ, ವ್ಯವಸ್ಥಾಪಕರ ಕಾರ್ಯದಲ್ಲಿ ಅಕ್ಷಮತೆ ಮತ್ತು ಮಜೂರರಲ್ಲಿರುವ ಅಲ್ಪ ಉತ್ಪಾದನಾ ಶಕ್ತಿಗಳೂ ಈ ಸಮಸ್ಯೆಗಳೇಳುವುದಕ್ಕೆ ಇತರ ಕಾರಣಗಳೆಂದು ಹೇಳಿದೆ. ಜನತೆಯಲ್ಲಿ ಕೊಳ್ಳುವ ಶಕ್ತಿ ಕುಂಠಿತವಾದುದು, ಆವಶ್ಯಕ ಸಾಮಗ್ರಿಗಳ ಬೆಲೆಯು ಏರಿದುದು, ಏರಿದ ಕರಭಾರ, ಉತ್ತಮಜಾತಿಯ ವಸ್ತ್ರದ ಆವಶ್ಯಕತೆಯೊಡನೆ ಅಧಿಕ ಪ್ರಮಾಣದಲ್ಲಿ ಉತ್ಪಾದನೆಯಾದುದೇ ವಸ್ತ್ರೋದ್ಯೋಗದಲ್ಲಿ ಈಗಿನದು ಸ್ಥಿತಿಯೊದಗಲು ಕಾರಣವೆಂದು ಹೇಳಲಾಗಿದೆ.

ವಸ್ತ್ರೋದ್ಯೋಗ ಸಲಹಾ ಸಮಿತಿಯ ಸಲಹೆಯನ್ನು ಅಪೇಕ್ಷಿಸುವ ಗಿರಣಿಗಳ ನಿಷಯದಲ್ಲಿ ಔಪಚಾರಿಕ ಪರಿಶೋಧನೆಗಾಗಿ ಕೇವಲ ಔದ್ಯೋಗಿಕ ಕಾನೂನನ್ನು ಅಕ್ರಮಿಸದೆ, ಅವುಗಳ ವ್ಯವಸ್ಥೆ ಅಥವಾ ಒಡೆತನಗಳನ್ನೂ ಆಕಾನೂನಿನಲ್ಲಿ ಅಂತರ್ಗತಗೊಳಿಸಿ ಸರಕಾರ ವಶಪಡಿಸಿಕೊಳ್ಳಬೇಕು. ಇಂತಹ ಗಿರಣಿಗಳ ವ್ಯವಸ್ಥೆಯನ್ನು ನಾಡಲು ಸರಕಾರೀ ಬಂಧನ ರಹಿತವಾದ ಒಂದು ಮಂಡಳವನ್ನು ರಚಿಸಬೇಕು ಎಂದು ಈ ಸಮಿತಿಯು ಅಭಿಪ್ರಾಯಪಟ್ಟಿದೆ.

ಅಂತಃಶುಲ್ಕ ಸಂಬಂಧದ ಸಮಿತಿಯ ಸೂಚನೆಗಳು ಈ ಮೊದಲೇ ಸರಕಾರಕ್ಕೆ ಕೊಡಲಾಗಿದ್ದು ಅವುಗಳನ್ನು ಸರಕಾರವು ಸ್ವೀಕರಿಸಿ ಆವಶ್ಯಕ ಪರಿವರ್ತನೆಯನ್ನು ಮಾಡಿರುತ್ತದೆ. ಈಗ ಸರಕಾರವು ಸಮಿತಿಯ ಇತರ ಸಲಹೆಗಳನ್ನೂ ಬೇಗನೇ ವಿಚಾರಿಸಿ ಈ ಸಂಬಂಧದ ತಮ್ಮ ನಿರ್ಣಯವನ್ನು ಸದ್ಯದಲ್ಲಿಯೇ ಘೋಷಿಸುವ ನಿರೀಕ್ಷೆಯಿದೆ.

ವರ್ಷದ ಮಧ್ಯದಲ್ಲಿಯೇ ಯಾವಾಗ ಬೇಕಾದರೂ ವಸ್ತ್ರದ ಮೇಲೆ ಶೆಗೆದುಕೊಳ್ಳುವ ಅಂತಃ ಶುಲ್ಕದಲ್ಲಿ ಪರಿವರ್ತನೆಗೊಳಿಸುವ ಪದ್ಧತಿಯನ್ನು ತ್ಯಜಿಸಬೇಕು. ಇದರಿಂದ ಅನಿಶ್ಚಿತತೆಯು ದೂರವಾಗುವುದು. ಈ ಪದ್ಧತಿಯು ಉಳಿದರೆ, ವ್ಯಾಪಾರಿಗಳು ತಮ್ಮ ಸ್ಟೋಕನ್ನು ಕಡಿಮೆ ಮಾಡುವುದರಿಂದ ಗಿರಣಿಗಳಲ್ಲಿ ಅಧಿಕ ಸ್ಟೋಕು ಉಳಿಯುವುದು. ಇದರ ದೆಸೆಯಿಂದಾಗಿಯೇ ಉತ್ಪಾದಕ ಮತ್ತು ಅಪೇಕ್ಷಿತರ ನಡುವಿರುವ ನೀರನಳ್ಳಿ ಒಣಗಿ ಹೋದಂತಾಗಿದೆ ಎಂದು ಸಮಿತಿ ತಿಳಿಸಿದೆ.

ಈಗಿನ ಕರಪದ್ಧತಿಯು ದೆಸೆಯಿಂದಾಗಿ, ಪರಿಷ್ಕೃತ ವಸ್ತ್ರಕ್ಕಿಂತ ಸರಳ ಹಾಗೂ ಅಪರಿಷ್ಕೃತ ವಸ್ತುಗಳ ಮೇಲೆ ಕರವು ಅಧಿಕ ಬೀಳುವುದು. ಒಂದೆಡೆ ಪರಿಷ್ಕೃತ ಬಟ್ಟೆಗಳ ಬೇಡಿಕೆಯು ಬೆಳೆಯುತ್ತಿರುವಾಗ, ಇನ್ನೊಂದೆಡೆ ಅಪರಿಷ್ಕೃತ ವಸ್ತ್ರಗಳ ಮೇಲಿನ ಅಂತಃಶುಲ್ಕದ ಹೊರೆಯು ಏರುತ್ತ ಬಂದು ಗಿರಣಿಗಳಿಗೆ ಕಠಿನ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಆದುದರಿಂದ, ಧೋತಿ, ಸೀರೆ ಹಾಗೂ ಅನ್ಯ ವಿಧದ ವಸ್ತ್ರಗಳಲ್ಲಿ ಭೇದ ಭಾವನೆಯಿಡುವ ನೀತಿಯನ್ನು ಬಿಡಬೇಕು; ದಪ್ಪ ಮತ್ತು ಮಧ್ಯಮ ವರ್ಗದ, ನಿಮ್ನ ಮಧ್ಯಮ ವರ್ಗದ ಬಟ್ಟೆಗಳ ಮೇಲೆ ಹೇರುವ ಅಂತಃ ಶುಲ್ಕದ ಪ್ರಮಾಣದ ಅಂತರವನ್ನು ತೀರ ಕಡಿಮೆಯಿಡಬೇಕು; ಮಧ್ಯಮ ವರ್ಗದ ಬಟ್ಟೆಗಳಲ್ಲಿ ೨೫ ಸಂಖ್ಯೆಯವರೆಗಿನ ನೂಲಿನಿಂದ ತಯಾರಿಸಿದ ಮತ್ತು ೨೫ರಿಂದ ೩೫ರ ವರೆಗಿನ ನೂಲಿನಿಂದ ತಯಾರಿಸಿದ ಎಂದು ಎರಡು ವಿಧವೇರ್ಪಡಬೇಕು; ವಸ್ತ್ರಗಳ ಶುದ್ಧತೆ, ಬಣ್ಣಬಳಿಯುವುದು, ಮತ್ತು ಮುದ್ರಣ ಹಾಗೂ ಮರ್ಸರೈಸ್, ಸೆನ್‌ಫೋರೈಸ್ ಅಥವಾ ಅನ್ಯ ರಾಸಾಯನಿಕ ಪ್ರಕ್ರಿಯೆಗಳ ಮೇಲೆ ವಿಶೇಷಕರ ಹೇರಬೇಕು ಎಂಬ ನಾಲ್ಕು ಸಲಹೆಗಳನ್ನು ಸಮಿತಿ ಇತ್ತಿದೆ.

ಅಂತಃಶುಲ್ಕದ ವರ್ತಮಾನಸ್ತರಗಳಲ್ಲಿ ಪರಿವರ್ತನೆ ಮಾಡುವ ಸೂಚನೆಯಿತ್ತು ದಲ್ಲದೇ ವಸ್ತ್ರಗಳ ವಿವಿಧ ವರ್ಗಗಳ ಉತ್ಪಾದನೆಯಲ್ಲಿ ಆಧುನೀಕರಣದ ದೃಷ್ಟಿಕೋಣದಿಂದ ಪರಿವರ್ತನಾ ಸಂಬಂಧದ ಸೂಚನೆಗಳನ್ನೂ ಕೊಟ್ಟಿದೆ. ವಸ್ತ್ರೋತ್ಪಾದನೆಯಲ್ಲಿ ವೈಶಿಷ್ಟ್ಯಗಳಿಗೆ ಪ್ರೋತ್ಸಾಹ ನೀಡಬೇಕು, ಇದಕ್ಕೆ ಬೇಕಾದ ಸೌಲಭ್ಯಗಳನ್ನಿತ್ತು ಉತ್ತಮ ಬಟ್ಟೆಗಳ ನಿರ್ಮಾಣವಾಗುವಂತೆ ಮಾಡಬೇಕು ಎಂದೂ ಸಮಿತಿಯು ಅಭಿಪ್ರಾಯಪಟ್ಟಿದೆ.

ಗಿರಣಿಗಳ ಉತ್ಪಾದನಾಕ್ಷಮತಾ ಸಂಬಂಧವನ್ನು ಮಹತ್ವಪೂರ್ಣವಾಗಿ ವಿವೇಚಿಸುತ್ತ, ಎರಡನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ನಿರ್ಣಯಿಸಲಾದ ಗುರಿಯನ್ನು ಮುಟ್ಟುವ ಬಗ್ಗೆ ತನ್ನ ಸಂದೇಹವನ್ನು ಸಮಿತಿಯು ವ್ಯಕ್ತಪಡಿಸಿದೆ. ಗಿರಣಿಗಳ ಬಗ್ಗೆ ಎದ್ದಿರುವ ಸಮಸ್ಯಾಪರಿಹಾರಕ್ಕೆ ಅದು ಕೆಲವು ಸೂಚನೆಗಳನ್ನೂ ಮಾಡಿದೆ:

(೧) ತಮ್ಮ ಹಳೆಯ ಜೀರ್ಣವಾದ ಯಂತ್ರಗಳಿಂದಾಗಿ ಕಡಿಮೆ ಉತ್ಪಾದಿಸುವ ಗಿರಣಿಗಳನ್ನು ಮುಚ್ಚಿ ಅವುಗಳ ಸ್ಥಾನದಲ್ಲಿ ಅಥವಾ ಸಮೀಪದಲ್ಲಿ ಹೊಸತನ್ನು ಪ್ರಾರಂಭಿಸಲು ಅಪ್ಪಣೆಕೊಡಬೇಕು.

(೨) ಆರ್ಥಿಕ ಸಂಕಷ್ಟಗಳಿಂದ ಬಳಲಿರುವ ಗಿರಣಿಗಳಿಗೆ ಆವಶ್ಯಕ ನೆರವೀಯಬೇಕು.

(೩) ಕಾರಣಾಂತರಗಳಿಂದ ಮುಚ್ಚಿದ ಗಿರಣಿಗಳನ್ನು ಪರಿಶೋಧಿಸಿ ಪುನಾರಂಭಿಸಲು ತೊಡಗಬೇಕು.

(೪) ಅವ್ಯವಸ್ಥೆಗಳಿಂದಾಗಿ ನಷ್ಟದಿಂದ ಬಳಲುವ ಗಿರಣಿಗಳ ಸ್ಥಿತಿಯನ್ನು ಪರಿಶೀಲಿಸಿ ಅಂತಹ ಅವಸ್ಥೆ ಪುನಃ ಆಗದಂತೆ ಮಾಡಲು ಉಚಿತ ವ್ಯವಸ್ಥೆಯನ್ನು ಕೈಗೊಳ್ಳಬೇಕು.

(೫) ಅಲಾಭಕರ ಆಕಾರ-ಪ್ರಕಾರಗಳಿಂದ ೨೮ ಗಿರಣಿಗಳು ಮುಚ್ಚಿ ಹೋಗಿವೆ. ಅವುಗಳಲ್ಲಿ ಒಂಭತ್ತು ಉಚಿತ ಸಂತುಲನದಿಂದ ಪುನಃ ಉದ್ಯೋಗ ಪ್ರಾರಂಭಿಸಬಹುದು. ಅವುಗಳನ್ನು ಯಂತ್ರ ಸಾಮಗ್ರ್ಯಾದಿಗಳನ್ನು ಕೊಳ್ಳುವ ಶಕ್ತಿಯುಳ್ಳವರೊಡನೆ ಸೇರಿಸಿ ಲಾಭಕರವಾಗಿ ನಡೆಸಬಹುದು.—ಎಂಬಿತ್ಯಾದಿ ಸೂಚನೆಗಳನ್ನು ಸಲಹಾ ಸಮಿತಿಯು ಸರಕಾರಕ್ಕೆ ಮಾಡಿರುತ್ತದೆ.

ನಾರದ ಮಹಾನುಭಾವ–

ಜನರಲ್ ಫೂಆದ ಶೇಹಾಬ

ಲೆಬನಾನಿನಲ್ಲಿ ಸೈನಿಕವಿದ್ರೋಹದಿಂದ ಉಂಟಾದ ಸಂಕಟಗ್ರಸ್ತ ಪರಿಸ್ಥಿತಿಯನ್ನು ಹೋಗಲಾಡಿಸಿ ಶಾಂತಿಯನ್ನು ಸ್ಥಾಪಿಸಲು ಇದುವರೆಗೂ ವಿಶ್ವದ ಎಲ್ಲ ರಾಷ್ಟ್ರಗಳೂ ಅಸಫಲವಾಗಿವೆ. ಅಮೆರಿಕೆಯು ತನ್ನ ಸೇನೆಯನ್ನು ಲೆಬನಾನಿನ ಜನರು ಸ್ವಾಗತಿಸುವರು; ಅಲ್ಲಿ ತಳವೂರಲು ಯಾವ ಕಠಿನ ಪರಿಸ್ಥಿತಿಯೂ ಇರಲಾರದು ಎಂದುಕೊಂಡಿತ್ತು. ಆದರೆ, ಹೀಗೆ ಲೆಬನಾನಿನಲ್ಲಿ ಕಾಲಿಟ್ಟ ಅಮೆರಿಕೆಯ ಸೈನ್ಯವು ಇನ್ನೊಂದು ವಿವಾದದ ಕಾರಣವಾಯಿತೇ ಹೊರತು, ಶಾಂತಸ್ಥಿತಿಯನ್ನು ನಿರ್ಮಿಸಲು ಅದು ಅಶಕ್ತವಾಗಿಯೇ ಉಳಿಯಿತು.

ಲೆಬನಾನಿನ ಸರಕಾರೀ ಸೇನೆ ಮತ್ತು ಸರಕಾರದ ಬೆಂಬಲಿಗರು, ಕೆಲವು ಸಂಸತ್ ಸದಸ್ಯರು ಕೂಡ ಅಮೆರಿಕೆಯ ಈ ಧೋರಣೆಯನ್ನು ಸಮರ್ಥಿಸಲು ಸಿದ್ಧರಾಗಿಲ್ಲ. ಹೀಗಾಗಿ ಒಂದು ವಿಚಿತ್ರ ಬಿರುಗಾಳಿ ಎದ್ದುಬಿಟ್ಟಿತ್ತು. ಇಕ್ಕಡೆಗಳಲ್ಲಿಯೂ ದೇಶದಲ್ಲಿ ಶಾಂತಿಸ್ಥಾಪನೆಯಾಗುವುದಕ್ಕಾಗಿ ಒರ್ವ ಹೊಸ ರಾಷ್ಟ್ರಾಧ್ಯಕ್ಷನನ್ನು ಚುನಾಯಿಸಬೇಕು ಎಂದು ಒಮ್ಮತಾಭಿಪ್ರಾಯ ವ್ಯಕ್ತವಾಯಿತು. ಹಾಗೆಯೇ ದೇಶದ ಎರಡೂ ಪಕ್ಷಗಳನ್ನು ಗೌರವಪೂರ್ಣ ಧೋರಣೆಯಿಂದ ಕಾಣಬಹುದಾದ ಒರ್ವ ವ್ಯಕ್ತಿಯನ್ನು ಈ ಸ್ಥಾನಕ್ಕೆ ಆರಿಸಬೇಕು ಎಂದವರು ಪ್ರಯತ್ನಿಸಿದರು. ಈ ರೀತಿಯಾಗಿ, ನಿಷ್ಪಕ್ಷಪಾತ ದೃಷ್ಟಿಯಲ್ಲಿ ಲೆಬನೀನೀ ಸೇನೆಯ ಪ್ರಧಾನ ಸೇನಾಪತಿಯಾದ ಜನರಲ್ ಫುಆದ ಶೇಹಾಬರ ಆಯ್ಕೆಯು ನಡೆಯಿತು.

ಜನರಲ್ ಶೇಹಾಬರು ಸ್ವತಂತ್ರ ವಿಚಾರವಾಹುವ ವ್ಯಕ್ತಿ. ಅಲ್ಲದೇ ಅಮೆರಿಕೆಯ ಸೇನೆಯನ್ನು ಹೊರಗೋಡಿಸುವ ಪಕ್ಷಕ್ಕೆ ಬೆಂಬಲನೀಡುವವರಾಗಿದ್ದಾರೆ. ಈ ಮೊದಲಿನ ಅಧ್ಯಕ್ಷ ಶ್ರೀ ಕಾಮಿಲ್ ಚಮೂರವರು ಪಾಶ್ಚಾತ್ಯ ದೇಶಗಳ ಸಮರ್ಥಕರೂ ಆಗಿದ್ದು ವಿದ್ರೋಹಿಗಳು ಅವರು ಈಗ ಹಾಗೂ ಇನ್ನುಮುಂದಕ್ಕೆ ಅವೇ ಪದವಿಯನ್ನಲಂಕರಿಸಬೇಕೆಂದು ಬಯಸುವುದಿಲ್ಲ. ಆದುದರಿಂದಲೇ ಇದುವರೆಗೆ ತಾಟಸ್ಥ್ಯ ನೀತಿಯನ್ನವಲಂಬಿಸಿದ್ದ ಜನರಲ್ ಶೇಹಾಬರನ್ನು ಎಲ್ಲ ಪಕ್ಷಗಳೂ ಬೆಂಬಲಿಸಿದುವು; ತತ್ಪರಿಣಾಮವಾಗಿ ಅವರು ಗೆದ್ದುಬಂದರು. ಆ ಚುನಾವಣೆಯನ್ನೇ ಅಮೆರಿಕೆಯ ಸೇನೆಗಳನ್ನು ಹಿಂದೆಗೆಯುವಿಕೆಯು ಹೊಂದಿಕೊಂಡಿತ್ತು.

ಒಂದು ಕಾಲದಲ್ಲಿ ಆಟೋಮನ್ ಸಾಮ್ರಾಜ್ಯದ ಒಂದು ಭಾಗದ ರಾಜಕರಾಗಿದ್ದವರ ವಂಶದಲ್ಲಿ ಜನರಲ್ ಶೇಹಾಬರು ಜನ್ಮನಿತ್ತರು. ಅವರ ಶಿಕ್ಷಣಾದಿಗಳು ಒಂದು ಫ್ರೆಂಚ ಸೈನಿಕ ಶಾಲೆಯಲ್ಲಿ ನಡೆದಿದ್ದುವು. ಹಾಗೆಯೇ ಅವರ ವಿವಾಹವೂ ಒರ್ವ ಫ್ರೆಂಚ ಸೈನಿಕಾಧಿಕಾರಿಯ ಪುತ್ರಿಯೊಡನೆ ನಡೆದಿತ್ತು. ೧೯೪೫ರಿಂದ ಅವರು ಲೆಬನಾನೀ ಸೇನೆಯ ಸೇನಾಪತಿಯಾಗಿದ್ದರು. ಹಿಂದಲ್ಲಿ ಅವರು ಅರುದಿನಗಳ ಮಟ್ಟಿಗೆ ರಾಷ್ಟ್ರಾಧ್ಯಕ್ಷ ಪದವಿಯಲ್ಲಿಯೂ ರಾಜಾಜಿಸಿದ್ದರು. ಇದೀಗ ಪ್ರಕಟವಾದ ಅವರ ಮೇಲಿನ ವಿಶ್ವಾಸವು, ಎಂದಿನವರೆಗುಳಿಯುವುದು ಎಂದು ಈಗ ಹೇಳುವುದು ಅಸಾಧ್ಯ. ಹೀಗಿದ್ದರೂ ಆಸಮಂಜಸ ವಾತಾವರಣದಲ್ಲಿ ಅವರತ್ತ ದೃಷ್ಟಿಸುವಾಗ, ಅವರಲ್ಲಿರುವ ಯಾವುದೋ ಒಂದಂಶವಿಂದ ಅವಶ್ಯ ಜನಪ್ರಿಯರಾಗಿದ್ದಾರೆಂದು ಹೇಳಬಹುದು. ೫೬ ವರ್ಷ ಪ್ರಾಯದ ಶೇಹಾಬರು ತಮ್ಮ ಈ ಉತ್ತರದಾಯಿತ್ವದುತ ಎಂಬ ಪದವಿಯಲ್ಲಿ ತಮ್ಮ ರಾಷ್ಟ್ರದ ಹಾಗೂ ವಿಶ್ವದ ಗೆಂದಲಮಯ ಸ್ಥಿತಿಯನ್ನು ತಡೆಯುವರೆಂದು ನಂಬಬಹುದು.

ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಲಿ

ಝೂಂಡು
ಬಾಲಶೂಲಾರ್ಕ
ಉಪಯೋಗಿಸುವುದರಿಂದ
ಮಕ್ಕಳ ಉದರ ದೋಷಗಳೆಲ್ಲಾ
ಖಾತ್ರಿಯಾಗಿ ಗುಣಹೊಂದುವುದು.
ಝೂಂಡು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂಬ್ರ 7015, ಬೊಂಬಾಯಿ.
ಮದ್ರಾಸ್ ಸ್ಟೇಟಿನಲ್ಲೆಲ್ಲಾ ಸ್ಥಾಪಿತರಿರುವರು.

NAVAYUGA

Popular Kannada Weekly

Founder:—

A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೭-೮-೫೮	೪೭

ನಿರರ್ಥಕವಾದ ಉದ್ರೇಕ

ಪ್ರಜಾಪ್ರಭುತ್ವವಾದರಿಯನ್ನು ಹೊಂದಿಸಿಕೊಂಡು ಸಾಮ್ಯವಾದದ ಆಧಾರದಲ್ಲಿ ಅಧಿಕಾರ ಚಲಾಯಿಸುತ್ತಿರುವ ಕೇರಳದ ಆಡಳಿತೆಯು ದಿನದಿಂದ ದಿನಕ್ಕೆ ಪ್ರಜಾಪ್ರಭುತ್ವದಿಂದ ಸೆಟಿದು ದೂರವಾಗುತ್ತಿರುವ ಬಗ್ಗೆ ಆಗಾಗ ವರದಿಗಳು ಬರುತ್ತಿವೆ. ಅಖಿಲಭಾರತ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಸಾದಿಕ್ ಆಲಿಯವರನ್ನುವಂತೆ ಇಂತಹ ವರದಿಗಳಲ್ಲಿ ಉತ್ಪ್ರೇಕ್ಷೆಗಳಿರಬಹುದಾದರೂ ಅವನ್ನು ಸಂಪೂರ್ಣ ನಂಬದಿರುವುದು ಸಾಧ್ಯವಿಲ್ಲ. ಕೇರಳದಲ್ಲಿ ಇತ್ತೀಚೆಗೆ ನಡೆದ ಘಟನೆಗಳು ನಿಜವಾಗಿಯೂ ಅಲ್ಲಿ ಕಮ್ಯುನಿಸ್ಟರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿರುವ ಬಗ್ಗೆ ಸಾಕಷ್ಟು ಭರವಸೆಗಳನ್ನು ಒದಗಿಸಿಕೊಡುವುವು. ಕೇರಳದಲ್ಲಿ ಘಟಿಸಿದ ದುರ್ಘಟನೆಗಳಲ್ಲಿ ಎಲ್ಲವಕ್ಕಿಂತಲೂ ದುರ್ಭಾಗ್ಯಕರವಾದ ಘಟನೆಯೆಂದರೆ ಇದೇ ಎಂಬುದು ನಿರ್ವಿವಾದ ಕಾನೂನು ಎಂಬುದು ಪ್ರಜೆಗಳೆಲ್ಲರಿಗೂ ಸಮಾನವಾಗಿ ನ್ಯಾಯದಾನಮಾಡಬೇಕು ಹೊರತು ಒಂದು ಪಾಕ್ಷಿಕವಾಗಿ ಮಾತ್ರವಲ್ಲ. ಆದರೆ, ಕೇರಳದಲ್ಲಿ ಕಮ್ಯುನಿಸ್ಟ ಸರಕಾರದ ಆಚರಣೆಯಿಂದ ಕಾನೂನು ಸದ್ದತಿಯು ಶಿಥಿಲಗೊಂಡು, ಕಮ್ಯುನಿಸ್ಟರಿಗೆ ಬೇಕಾದಂತೆ, ಸರ್ವಾಧಿಕಾರೀ ಮನೋವೃತ್ತಿಗೆ ಅನುಗುಣವಾಗಿ ಮುನ್ನಡೆಯುತ್ತಿದೆಯೆಂಬುದು ಮಾತ್ರ ಶೋಚನೀಯ ಹೀಗೆಯೇ ಮುಂದುವರಿದರೆ, ಪ್ರಜಾಪ್ರಭುತ್ವವು ಸಂಪೂರ್ಣವಾಗಿ ಸಂಹರಿಸಲ್ಪಟ್ಟು ಕಮ್ಯುನಿಸ್ಟರ ಸರ್ವಾಧಿಕಾರವು ಸ್ಥಾಪಿತವಾಗುವ ಸಂಭವವೇ ಅಧಿಕ.

ಈ ಬಗ್ಗೆ ಸಾದಿಕ್ ಆಲಿಯವರು ಒಂದು ಹೇಳಿಕೆಯನ್ನಿತ್ತು ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸಿಗರು ವಾಸಿಸಿದ್ದ ಒಂದು ಮನೆಗೆ ಮುತ್ತಿಗೆ ಹಾಕಿ, ಅವರನ್ನು ಜೀವನ್ಮಾಗಿ ಕಮ್ಯುನಿಸ್ಟರು ಬಡೆದುದರಿಂದ ಒಬ್ಬ ಕಾಂಗ್ರೆಸಿಗ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳ್ಳುತಿದ್ದಾನೆ; ಕಮ್ಯುನಿಸ್ಟ ಪಕ್ಷದ ೫೦೦ ಕಾರ್ಯಕರ್ತರ ಮೇಲಿನ ಆರೋಪಗಳನ್ನು ತೆಗೆದುಹಾಕಲಾಯಿತು; ಕಮ್ಯುನಿಸ್ಟ ಕಾರ್ಯಕರ್ತರನ್ನು ಬಂಧಿಸಿದ್ದಕ್ಕಾಗಿ ಡಿಸ್ಟ್ರಿಕ್ಟ ಕಲೆಕ್ಟರರನ್ನು ತಿಳಿತಾಸುಗಳಲ್ಲಿಯೇ ವರ್ಗಾಯಿಸಲಾಯಿತು, ಹಾಗೆಯೇ ಮತ್ತೊಬ್ಬನನ್ನು ಅಮಾನತುಗೊಳಿಸಲಾಯಿತು—ಇತ್ಯಾದಿ ಒಂದಲ್ಲ ಹಲವಾರು ಆರೋಪಗಳು ಕಮ್ಯುನಿಸ್ಟರ ಮೇಲೆ ಹೇರಲ್ಪಟ್ಟಿವೆ. ಆದರೆ, ಕಾಂಗ್ರೆಸ್ ಪ್ರಧಾನಕಾರ್ಯದರ್ಶಿಯು ಈ ರೀತಿಯ ಹೇಳಿಕೆ ಹೊರಡಿಸಿರುವುದರಿಂದ "ಕೇಂದ್ರದಲ್ಲಿ ಅಧಿಕಾರಾರೂಢರಾಗಿರುವ ಪಕ್ಷದ ಪದಾಧಿಕಾರಿಗಳು ತಮ್ಮ ಪಕ್ಷವು ವಿರೋಧಿ ಸ್ಥಾನದಲ್ಲಿರುವ ರಾಜ್ಯಸರಕಾರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದಂತಾಗುವುದು" ಎಂದು ಕೇರಳದ ಮುಖ್ಯಮಂತ್ರಿ ಶ್ರೀ ನಂಬೂದರಿ ಪಾದರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಶ್ರೀ ನಂಬೂದರಿಪಾದರು ಈ ಸಂದರ್ಭದಲ್ಲಿ ನ್ಯಾಯವಾದ ವಿವೇಚನೆ ನಡೆಸಿಲ್ಲವೆಂದು ಹೇಳಬಹುದು. ಒಂದು ಸರಕಾರದ ಆಡಳಿತೆಯನ್ನು ಇನ್ನೊಂದು ಸರಕಾರವು ಟೀಕಿಸಿದರೆ, ಅಗ ಮಾತ್ರ ಹಸ್ತಕ್ಷೇಪಮಾಡಿದಂತಾಗುವುದಲ್ಲದೆ, ಪಕ್ಷವು ದೂರಿದರೆ, ಅದೆಂತು ಹಸ್ತಕ್ಷೇಪವಾಗುವುದೋ ತಿಳಿಯದು. ಶ್ರೀ ಸಾದಿಕ್ ಆಲಿಯವರು ಕೇಂದ್ರ ಸರಕಾರದ ಯಾವುದೇ ಅಧಿಕಾರಿಗಳಲ್ಲಿ; ಅವರು ಕೇವಲ ಒಂದು ಪಕ್ಷದ ಕಾರ್ಯದರ್ಶಿಗಳು. ಪ್ರತಿಪಕ್ಷದ ಕಾರ್ಯದರ್ಶಿ ಅಥವಾ ಇತರ ಅಧಿಕಾರಿ ಯಾ ಸದಸ್ಯನು ತನ್ನ ಪಕ್ಷದ ಮೇಲ್ಮೆಗಾಗಿ. ಪ್ರಚಾರಕ್ಕಾಗಿ ಕಾರ್ಯತತ್ಪರನಾಗುವುದು ಅಗತ್ಯ. ಹಾಗೆಯೇ ಸಾಮಾನ್ಯವಾಗಿ ಕೇರಳದಲ್ಲಿ ನಡೆದ ವಿಪರೀತ ಹಾಗೂ ವಿಷಮ ಘಟನೆಗಳು—ಅದು ಯಾವ ನ್ಯಾಯದಂತೆಯೇ ನಡೆಯಲಿ—ಸಾಮಾನ್ಯ ವೀಕ್ಷಕನಿಗೆ ಕಮ್ಯುನಿಸ್ಟರ ಹಾಗೂ ವಿರೋಧೀ ಪಕ್ಷಗಳನ್ನು ಹತ್ತಿಕ್ಕಲು ಅಗತ್ಯವಾದ ಕಾರ್ಯಕ್ರಮವೆಂದೇ ತಿಳಿದು ಬರುತ್ತದೆ. ಅದೇ ಅಭಿಪ್ರಾಯವನ್ನು, ಕೇರಳದಲ್ಲಿಯೂ ಕಾಂಗ್ರೆಸ್‌ನ ಬಲಸಂವರ್ಧನೆಯ ಆಕಾಂಕ್ಷೆಯನ್ನಿಟ್ಟುಕೊಳ್ಳಬೇಕಾದ ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಪ್ರಸ್ತಾಪಿಸಿದರೆ, ಅಲ್ಲಿ ಯಾವ ಘಟನಾವಿರೋಧವೂ ಇರುವುದಿಲ್ಲ. ವಿವಿಧ ರಾಜ್ಯಗಳಲ್ಲಿರುವ ಕಾಂಗ್ರೆಸ್ ಸರಕಾರದ ನೀತಿಯನ್ನು ವಿರೋಧೀಸ್ಥಾನದಲ್ಲಿರುವ ಪಕ್ಷಗಳಮುಖಂಡರು ದೂರುವುದಕ್ಕಿಂತ ಇದೇನೂ ಹೆಚ್ಚಿನದಾಗಲಿಲ್ಲ. ಆಡಳಿತದಲ್ಲಿ ಎದ್ದುತೋರುವ ವಿಶಿಷ್ಟತೆ, ಕುಂದುಕೊರತೆ, ಅನ್ಯಾಯಗಳನ್ನು ಎತ್ತಿ ಕೆದಕುವ ಅಧಿಕಾರ, ಎಲ್ಲ ಪಕ್ಷಗಳಿಗೂ ಇರುವಾಗ, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆಯೆಂಬ ಕಾರಣದಿಂದಾಗಲೀ, ಶ್ರೀ ಸಾದಿಕ್ ಆಲಿಯವರು ಅಖಿಲ ಭಾರತ ಕಾಂಗ್ರೆಸ್‌ನ ಕಾರ್ಯದರ್ಶಿಯವರೆಂದಾಗಲೀ ಅವರಿಂದ ಈ ಸ್ವಾತಂತ್ರ್ಯವನ್ನು ಶ್ರೀ ನಂಬೂದರಿ ಪಾದರಿಗೆ ಅಪಹರಿಸುವುದು ಸಾಧ್ಯವಿಲ್ಲ. ಪಕ್ಷಕ್ಕೂ ಸರಕಾರಕ್ಕೇವಲ ಧ್ಯೇಯ ಸಾಧನೆಯಲ್ಲಿ ಮಾತ್ರ ಸಂಬಂಧವಲ್ಲದೆ, ಸರಕಾರನೆಂಬುದು ಪಕ್ಷದ, ಕಾರ್ಯದರ್ಶಿಗಳ ಕೈಗೊಂಬೆಯಲ್ಲ; ಇಲ್ಲವೇ ಕಾರ್ಯದರ್ಶಿಗಳು ಸರಕಾರದ ಅಧಿಕಾರಯುತ ಪ್ರತಿನಿಧಿಯಲ್ಲ. ಆದರೆ, ಸರ್ವಾಧಿಕಾರೀ ಮನೋವೃತ್ತಿಯ ಕಮ್ಯುನಿಸ್ಟ ಸರಕಾರವು ಮಾತ್ರ ಒಬ್ಬನ ವ್ಯಕ್ತಿಪೂಜೆಯನ್ನು ಮಾಡುತ್ತ ಅತನೊಬ್ಬನ ಕೈಗೊಂಬೆಯಾಗಿರಬಹುದು; ತನ್ನ ಹಾಗೂ ತನ್ನ ಪಕ್ಷದ ಇಚ್ಛಾನುಸಾರವಾಗಿ ಪ್ರಜಾಪ್ರಭುತ್ವವಾದಿ ಪಕ್ಷಗಳ ಬಲವನ್ನು ಕುಗ್ಗಿಸಲು ಸರಕಾರವೂ ಪ್ರತ್ಯಕ್ಷವಾಗಿ ಕಾರ್ಯನಿರತಗುತ್ತಿರಬಹುದು. ಕೇರಳ ಸರಕಾರದ ಆಚರಣೆಯಿಂದ ಜನರಲ್ಲಿ ಸ್ವಾಭಾವಿಕವಾಗಿ ಎದ್ದುತೋರುವ ಸಂದೇಹವೇ ಇದು.

ಶ್ರೀ ನಂಬೂದರಿಪಾದರು ಶ್ರೀಸಾದಿಕ ಆಲಿಯವರು ಹೇಳಿಕೆಯ ತತ್ವದನ್ನು ಎಷ್ಟರಮಟ್ಟಿಗೆ ಯೋಗ್ಯವೆಂದು ಪರಿಶೀಲಿಸಲು ಕೇಳಿಕೊಳ್ಳುವ ಬದಲು, ತಾವು ಕಟ್ಟಿಗಳನ್ನು ಹಿಂತೆಗೆದುಕೊಂಡುದಾಗಲಿ, ಅಧಿಕಾರಿಗಳ ವರ್ಗ, ಅಮಾನತು ಮೊದಲಾದುವಾಗಲೀ ರಾಜ್ಯ ಸರಕಾರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಎಂದು. ಹಾಗೆಯೇ ಇಂತಹ ಆಚರಣೆಗಳ ಬಗ್ಗೆ ಸ್ಪಷ್ಟೀಕರಣವೀಯಲು ಸಿದ್ಧರಿಲ್ಲವಾದರೆ, ಹಾಗೆಯೇ ಹೇಳಿಬಿಡುವುದನ್ನು ಬಿಟ್ಟು, ಒಂದು ಪ್ರಜಾಪ್ರಭುತ್ವವಾದೀ ಪಕ್ಷದ ಪ್ರಧಾನ ಕಾರ್ಯದರ್ಶಿಯು ಹೇಳಿಕೆಯೊಯುವ ಅಧಿಕಾರವನ್ನೇ ಕಿತ್ತೆಗೆದುಕೊಳ್ಳಲು ಹವಣಿಸಿದುದನ್ನು ಕಾಣುವಾಗ, ಕೇರಳದಲ್ಲಿ ಸರ್ವಾಧಿಕಾರೀ ಮನೋವೃತ್ತಿಯೇ ಇದೆ ಎಂದು ಭಾವಿಸಲೇಬೇಕಾಗುತ್ತದೆ. ಇಲ್ಲವಾದರೆ, ಅಂತಹ ಮಾತುಗಳು ಹೊರಬರುತ್ತಿರಲಿಲ್ಲ. ಅಲ್ಲದೇ ಕೇರಳದ ವಿದ್ಯಾರ್ಥಿಗಳ ಚಳವಳದಲ್ಲಾಗಲೀ ಕಾರ್ಮಿಕರ ಸತ್ಯಾಗ್ರಹದಲ್ಲಾಗಲೀ, ವಿರೋಧೀ ಪಕ್ಷಗಳು ಪ್ರೇರೇಪಣೆಯೊಯುತ್ತಿವೆ; ಅದುದರಿಂದಲೇ ಅವು ಉಲ್ಬಣಗೊಂಡುವು ಎಂದು ಅನ್ಯ ಪಕ್ಷಗಳ ಒಳಗುಟ್ಟು ನಂಬೂದರಿಪಾದರಿಗೆ ಅಥವಾ ಅವರ ಪಕ್ಷಗಳ ಸದಸ್ಯರಿಗೆ ಹೇಗೆ ತಿಳಿದು ಬಂತು? ಹಾಗೆ ನುಡಿಯುವ ಅಧಿಕಾರ ಅವರಿಗೆ ಎಲ್ಲಿಂದ ಬಂತು? ತೋರಿಕೆಯಿಂದ, ಸನ್ನಿವೇಶದಿಂದ ಹಾಗೆ ಅವರು ಊಹಿಸಿಕೊಂಡಂತಾದರೆ, ಅಂತೆಯೇ ಅವೇಸನ್ನಿವೇಶ, ಪರಿಸ್ಥಿತಿಗಳಿಂದ, ಸಾದಿಕ್ ಆಲಿಯವರೂ ಅಭಿಪ್ರಾಯ ವ್ಯಕ್ತಪಡಿಸಿದರಷ್ಟೆ ವಿವಿಧ ರಾಜ್ಯಗಳ ಕಾಂಗ್ರೆಸ್ ಸಮಿತಿಗಳ ಕಷ್ಟವಿಷ್ಟೂರಗಳನ್ನು ಅರಿತು, ಅವುಗಳನ್ನು ದೂರಮಾಡಲು ಪ್ರಯತ್ನಿಸುವುದು ಅಖಿಲಭಾರತ ಕಾಂಗ್ರೆಸ್ ಕಾರ್ಯದರ್ಶಿಯ ಕೆಲಸ. ಅಂತೆಯೇ ಕೇರಳದಲ್ಲಿ ಕಮ್ಯುನಿಸ್ಟರು ಅಧಿಕಾರದಲ್ಲಿದ್ದಮಾತ್ರಕ್ಕೆ ಕಾಂಗ್ರೆಸ್ ಮಟ್ಟ ಮಲಗಬೇಕೆಂದು ಪ್ರಜಾಪ್ರಭುತ್ವ ಭಾರತದಲ್ಲಿ ವಾದಿಸುವುದು ಸಾಧ್ಯವಿಲ್ಲ. ಒಂದುವೇಳೆ ಹೀಗೆ ವಾದಿಸುವುದಾದರೆ, ಹಾಗೆನ್ನುವವರು ಒಳ್ಳೆ ಹಾವೆಂದು ಹೇಳುತ್ತ ನಾಗರಹಾವಿನಿಂದಲೇ ಕಚ್ಚಿಸುತ್ತಿರುವರೆಂದು ಊಹಿಸಲೇಬೇಕಾಗುತ್ತದೆ. ಅಗ, 'ಪ್ರಜಾಪ್ರಭುತ್ವ'ವನ್ನು ಮನ್ನಿಸಿದ ಭಾರತದ ಕಮ್ಯುನಿಸ್ಟರ ಗಣರಾಜ್ಯ ಪ್ರೇಮ ಎಲ್ಲಿ ಉಳಿಯಿತು?

ಪ್ರಾದೇಶಿಕ ಕಾಂಗ್ರೆಸ್ ಸಮಿತಿ—
ಅಧ್ಯಕ್ಷರಾಗಿ ಶ್ರೀ ವೀರಣ್ಣ ಗೌಡರ ಆಯ್ಕೆ

ಮಂಡಲ, ಜಿಲ್ಲೆಗಳ ಕಾಂಗ್ರೆಸ್ ಸಮಿತಿಗಳ ಚುನಾವಣೆಯು ಅಗಲೇ ಮುಗಿದಿದ್ದು, ಇದೀಗ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಚುನಾವಣೆಯೂ ಕೊನೆಕಂಡಿತು. ಎಂದಿನಂತೆಯೇ ಗುಂಪುಮನೋವೃತ್ತಿಯ ಕೊಳಕು ಧೋರಣೆಯಿಂದಾಗಿ ತುರುಸಿನ ಸ್ಪರ್ಧೆ ನಡೆದು ಶ್ರೀ ಎಚ್. ಕೆ. ವೀರಣ್ಣ ಗೌಡರು ಅಧ್ಯಕ್ಷರಾಗಿ ಆರಿಸಿಬಂದರು. ಶ್ರೀ ವೀರಣ್ಣ ಗೌಡರ ಆಯ್ಕೆಯಲ್ಲಿಯೂ ಸಮೂಹ ಮನೋವೃತ್ತಿಯು ತನ್ನ ಕೈವಾಡವನ್ನು ತೋರಿಸಿದೆ. ಶ್ರೀ ಗೌಡರು ತಮ್ಮ ಕಾರ್ಯಕ್ರಮಗಳನ್ನು ನಿರೂಪಿಸುವಾಗ ಕಾಂಗ್ರೆಸ್ಸಿನ ಗುಂಪುಗಳನ್ನು ತೊಡೆದು ಏಕತೆಯನ್ನು ಸಾಧಿಸುವುದು, ಮಂಡಲ ಕಾಂಗ್ರೆಸ್‌ಗಳ ಬಲಸಂವರ್ಧನೆ, ಕಾಂಗ್ರೆಸ್ ಮತ್ತು ಜನತೆಯೊಡನೆ ನಿಕಟ ಸಂಪರ್ಕವನ್ನುಂಟುಮಾಡುವುದು ಮುಖ್ಯವಾಗಿ ಅವರ ಗಮನ ಸೆಳೆಯಿತು. ಆದರೆ, ಕೆಲ ವರ್ಷಗಳಿಂದ ಎಲ್ಲ ಹೊಸದಾಗಿ ಆಯ್ಕೆಗೊಂಡವರು ಆರಂಭದಲ್ಲಿ ಇವನ್ನೇ ಮೂಲ ತತ್ವಗಳನ್ನಾಗಿಸಿ, ಮುಂದೆ, ಯಾವುದನ್ನೂ ಕಾರ್ಯರೂಪಕ್ಕಿಳಿಸಲಾರದೆ ಆ ಸುಳಿಯಲ್ಲಿಯೇ ಸುತ್ತುತ್ತುತ್ತ ತಮ್ಮ ಅವಧಿಯನ್ನು ಮುಗಿಸಿ ಬಿಡುವುದು ಸಂಪ್ರದಾಯವಾಗಿ ಬಂದಿದೆ, ನಮ್ಮ ಮೈಸೂರಲ್ಲಿ; ವಿಧಾನ ಸಭೆಯಲ್ಲಿಯೂ ಬಣಗಳು, ಮಂತ್ರಿಗಳ ಆಯ್ಕೆಯ ಹಿಂದೆಯೂ ಗುಂಪುಗಳು, ಕಾಂಗ್ರೆಸ್ ಸಮಿತಿಯಲ್ಲೂ ಪೆಂಗಡಗಳು; ಎಲ್ಲಿ ಕಂಡರೆ ಅಲ್ಲಿ ಇಂತಹ ಪಂಗಡ ಮನೋವೃತ್ತಿ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತ ಸೋಗುತ್ತಿರುವಾಗ, ವೀರಣ್ಣ ಗೌಡರ ವೀರವಾಕ್ಯಗಳಲ್ಲಿ ವಿಶ್ವಾಸವಿಡುವುದಕ್ಕೆ ಧೈರ್ಯಬರುವುದಿಲ್ಲ. ಒಂದು ವೇಳೆ ಅವರು ತಾವು ಕೈಕೊಳ್ಳಲಿರುವ ಕಾರ್ಯಕ್ರಮಗಳಲ್ಲಿ ಸಂಚಾರ ಮೊಂದನ್ನುಳಿದು, ಬೇರೆಯವುಗಳಲ್ಲಿ ಒಂದರಲ್ಲಿಯಾದರೂ ಯಶಸ್ವಿಯಾದರೆ, ಆಗ, ಅದು ಕಾಂಗ್ರೆಸ್‌ನ ಭವಿತವ್ಯವು ಭದ್ರವಾಗುವ ಶುಭ ಚಿಹ್ನೆಯೆನ್ನಬಹುದು. ಇಂದು ಮೈಸೂರು ಕಾಂಗ್ರೆಸ್ಸಿಗೆ ಬೇಕಾದುದಾದರೂ ಅದುವೇ.

ಆದರೆ, ವೀರಣ್ಣ ಗೌಡರು ಹಿಂದೊಮ್ಮೆ ಹಳೆಯ ಮೈಸೂರೇತರ ಕನ್ನಡಿಗರಿಗೆ ಬೇಡವನ್ನುಂಟುಮಾಡಿದುದನ್ನು ಅವರೂ ಮರೆತಿರಲಾರರು. ಅಂದು, ಅವರು ಮೈಸೂರು (ಹಳೆಯ) ಪ್ರಾದೇಶಿಕ ಕಾಂಗ್ರೆ

ನಿರೀಕ್ಷಿಸಿರಿ!

ಬರುವ ವಾರದ ಅಂದರೆ ತಾ. 14-8-58ರ ಸಂಚಿಕೆಯು

ಸ್ವಾತಂತ್ರ್ಯ ದಿನೋತ್ಸವ
ವಿಶೇಷ ಸಂಚಿಕೆಯಾಗಿ
ಪ್ರಕಟಿಸಲ್ಪಡುವುದು.

ಈ ವಿಶೇಷ ಸಂಚಿಕೆಯಲ್ಲಿ ಕರ್ನಾಟಕದ ಅನೇಕ ಪ್ರಸಿದ್ಧ ಲೇಖಕರ ಲೇಖನ-ಕವನ-ಕಥೆಗಳು ಬರಲಿರುವುವು.

ನವಯುಗ ವಾರಪತ್ರಿಕೆಯ ಆಕಾರದ 28 ಪುಟಗಳು. ಬೆಲೆ: ಮೂರಾಣೆ.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ **37** ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **38** ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ಚಂದಾದಾರರೂ, ಚಂದಾಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಸಂಕ್ಷಿಪ್ತ ಸುದ್ದಿಗಳು

ಸರಕಾರಕ್ಕೆ ಮಾನ್ಯತೆ

ಹೊಸ ಇರಾಕಿ ಸರಕಾರವನ್ನು ಅಮೆರಿಕೆ, ಇಟಲಿ, ದಕ್ಷಿಣ ಮಿಯಿ.ಟ್ನಾಮ್, ಸ್ವೀಡನ್, ಡೆನ್‌ಮಾರ್ಕ್ ದೇಶಗಳು ಹೊಸತಾಗಿ ಮನ್ನಿಸಿವೆ. ಭಾರತ, ರಶ್ಯ, ಈಜಿಪ್ತ್‌ಗಳು ಈ ಮೊದಲೇ ತಮ್ಮ ಮನ್ನಣೆಯನ್ನು ಸೂಚಿಸಿದ್ದುವು. ಬ್ರಿಟನ್ ಹಾಗೂ ಫ್ರಾನ್ಸ್‌ಗಳೂ ಮನ್ನಿಸುವನೀರಿಕ್ಷೆಯಿದೆ.

ವಿದ್ಯಾರ್ಥಿ ಚಳವಳ ನಿಂತಿತು-

ದೋಣಿ ದರದಲ್ಲಿನ ಅರ್ಧ ವಿನಾಯತಿಯ ಕೇಳಿಕೆಯ ಬಗ್ಗೆ ಚಳವಳಹೂಡಿದ ಕೇರಳದ ವಿದ್ಯಾರ್ಥಿಗಳು ತಮ್ಮ ಚಳವಳವನ್ನು ಹಿಂತೆಗೆದುಕೊಂಡರು. ಈ ಬಗ್ಗೆ ನಿರ್ಧಾರಮಾಡಲು ಸೇರಿದ್ದ ಸರ್ವಪಕ್ಷೀಯ ಸಭೆಯತ್ತು ನಿಷ್ಫಲವಾದ ಮೇಲೆ, ಮುಖ್ಯ ಮಂತ್ರಿ ನಂಬೂದರಿಪಾದರು ಈ ಬಗ್ಗೆ ಸಂಪೂರ್ಣ ವಿಚಾರಣೆ ನಡೆಸಲು ಒಂದು ನ್ಯಾಯ ಮಂಡಲವನ್ನು ಸ್ಥಾಪಿಸುವುದಾಗಿಯೂ ಅತ್ತರ ವರೆಗೆ, ತಂತಮ್ಮ ಶಾಲೆಯ ಪ್ರಧಾನರ ಗುರುತಿನ ಪತ್ರ ತರುವ ವಿದ್ಯಾರ್ಥಿಗಳನ್ನು ಪುಕ್ಕಟೆಯಾಗಿ ನಡೆ ಡಾಟಿಸಲಾಗುವುದೆಂದೂ ಘೋಷಿಸಿದುದರಿಂದ ಚಳವಳವು ಹಿಂತೆಗೆದುಕೊಳ್ಳಲ್ಪಟ್ಟಿತು. ಇದರಲ್ಲಿ ಬಂದಿತರಾದ ಕೆಲವು ವಿದ್ಯಾರ್ಥಿಗಳನ್ನು ಸರಕಾರವು ಬಿಡುಗಡೆ ಮಾಡಿದೆ.

ಸ್ನ ಅಧ್ಯಕ್ಷರಾಗಿದ್ದಾಗ, ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ಶ್ರೀ ಗೌಡರು ಎರಡು ಕರ್ನಾಟಕದ ವಾದವನ್ನು ಎತ್ತಿದ್ದವರು! ಪಾಪ, ಅವನ್ನು ಸಮಾಧಾನಪಡಿಸಲು ಹನುಮಂತಯ್ಯನವರು ಹನುಮಂತ ದಕ್ಷಿಣಸಮುದ್ರವನ್ನು ಲಂಘಿಸಲು ಮಾಡಿದ ಸಾಹಸಕ್ಕಿಂತಲೂ ಹೆಚ್ಚು ಪ್ರಯಾಸಪಟ್ಟಿರಬಹುದು, ಅಂತೆಯೇ ಶ್ರೀ ಗೌಡರ ನಾಯಕತ್ವದಲ್ಲಿಯೇ ಹನುಮಂತಯ್ಯನವರ ಉಚ್ಚಾಟನೆಯೂ ಆಯಿತು

ಗತಕಾಲದ ಚಿತ್ರಗಳೇನೇ ಇರಲಿ, ಇಂದು ಅವನ್ನು ಎಲ್ಲರೂ ಮರೆತು ಬಿಡಬೇಕು. ಶ್ರೀ ಗೌಡರು ಯುವಕ, ಹಾಗೂ ಅನುಭವಿಕರಿಂದ ಕೂಡಿದ ಜಿಲ್ಲಾವಾರು ಪಾತಿನಿಧ್ಯವಿರುವ ಕಾರ್ಯಕಾರೀ ಸಮಿತಿಯನ್ನು ಅರಿಸಿದ್ದಾರೆ. ದ ಕನ್ನಡದಿಂದ ಶ್ರೀ ಟಿ. ಎ. ಪೈಯವರು ಸದಸ್ಯರಿದ್ದಾರೆ. ಅದಷ್ಟು ಹೊಸಬರಿಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ಅವರು ಕೈಗೊಳ್ಳಿಲಿರುವ ಕಾರ್ಯಕ್ರಮಗಳಲ್ಲಿ ಇವರೂ ಎಲ್ಲ ಕಾಂಗ್ರೆಸಿಗರೂ ಸ್ಪರ್ಧಿಗಳಿಯಬೆ, ಏಕತೆಯನ್ನು ಳಿಸಲ, ಕಾಂಗ್ರೆಸ್‌ನ ಕೀರ್ತಿ ಪತಾಕೆಯನ್ನು ಹಾರಾಡಿಸಲು ಪ್ರಯತ್ನಿಸುವರೆಂದು ನಂಬಬಹುದು. ಭಿನ್ನಾಭಿಪ್ರಾಯಗಳಿಂದ ಒದಗಿ ಬರುವ ಸಂಕಷ್ಟಗಳು ಏನೆಂದು ಇದೀಗ ಎಲ್ಲರೂ ಅರಿತುಕೊಂಡುದಾಗಿದೆ. ಹೀಗೆಯೇ ಕಾಂಗ್ರೆಸಿಗರು ತಂತಮ್ಮಲ್ಲೇ ಹೋರಾಡಿಕೊಂಡು ಒಣಮತ್ಸರದ ಬಳ್ಳಿಗೇನೇ ಮತ್ತೂ ಮತ್ತೂ ನೀರೆರೆಯಬಯಸಿದರೆ, ಈಗಲೇ ಜನಮನ್ನಣೆಗೆ ಎರವಾಗುತ್ತಿರುವ ಕಾಂಗ್ರೆಸ್ ಇನ್ನೂ ಅಧೋಗತಿಗಿಳಿಯುವುದು ಖಂಡಿತ. ಇದೀಗ ಅರಿಸಲ್ಪಟ್ಟ ಅಧ್ಯಕ್ಷರಿಗೂ ಇತರ ಸದಸ್ಯರಿಗೂ ಜನತೆಯ ಕೃತಜ್ಞತೆಗಳನ್ನು ಅರ್ಪಿಸುವುದರೊಡನೆ, ಪಕ್ಷದಲ್ಲಿನ ಬಿರುಕು ಬೆಸೆದು ಬರಲೆಂದು ಪ್ರಾರ್ಥಿಸುತ್ತೇವೆ.

ಉಡುಪಿ

ಆಯುರ್ವೇದ ಕಾಲೇಜಿನ ಉದ್ಘಾಟನೆ—

ಉಡುಪಿ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರತೀರ್ಥ ವಿದ್ಯಾಪೀಠಗಳ ಸ್ವಾಮಿಗಳವರು ತಾ. ೩೦ರಂದು ಉಡುಪಿ ಸಾರ್ವಜನಿಕರು ಶ್ರೀ ಧನ್ವಂತರಿ ಸದನದಲ್ಲಿ, ಉಡುಪಿ ಆಯುರ್ವೇದ ಕಾಲೇಜನ್ನು ಉದ್ಘಾಟಿಸಿದರು ಅದಂಭದಲ್ಲಿ ಶ್ರೀಯುತ ಎಸ್ ನಾಯಕ್, ಎಮ್ ಎಲ್. ಎ ಅವರು ಸ್ವಾಗತಗಳವರಿಗೆ ಪೂರ್ಣ ಸ್ವಾಗತ ಕೋರಿದರು. ಶ್ರೀ ಸಿ ಲಕ್ಷ್ಮೀನಾರಾಯಣ ನಾಯ್ಕರು ಸಾಮಿಗಳವರಿಗೆ ಪಾದಕಾಣಿಕೆಯತ್ತರು. ಬಳಿಕ ಶ್ರೀ ಯು. ಬಾಬರಾಯಣ ಆಚಾರ್ಯರು ಸ್ವಾಗತ ಮಾತುಗಳನ್ನಾಡಿದರು ಶ್ರೀ ಬಿ ವಾಸುದೇವ ರಾಯರು, ಮೈಸೂರುಮಂತ್ರಿ ಶ್ರೀ ಮಾಲಿಪಾಟಿಯಪ್ಪ, ಶ್ರೀ ಕೆ ಆರ್ ಅಡಾಣ್, ಎಮ್ ಪಿ, ಶ್ರೀಮಂಜೇಶ್ವರ ಗೋವಿಂದ ಪೈ, ಶ್ರೀ ಸೋಪೆ, ಶ್ರೀ ಕಾಣೂರು, ಶ್ರೀ ಪರ್ತಗಾಳಿ ಗೋಕರ್ಣ, ಶ್ರೀ ಫಲಿಮಾರು ಸ್ವಾಮಿಗಳವರು ಮೊದಲಾದವರು ಕಳುಹಿಸಿದ ಸಂದೇಶಗಳನ್ನೋದಿದರು ಸಭಿಕರ ಪರವಾಗಿ ಶ್ರೀ ಕೆ. ಸಿ ಸುರಾಣಿಕ, ಪ್ರಾಧ್ಯಾಪಕರು ಎಮ್ ಆರ್. ಭಟ್ ಮತ್ತು ಎಚ್ ಟಿ ರಾಮಚಂದ್ರಾಚಾರ್ಯರು ಕಾರ್ಯೋಚಿತ ಭಾಷಣಗಳನ್ನಿತ್ತರು ಸಂಸ್ಥೆದ ಅಧ್ಯಕ್ಷ ಶ್ರೀ ಬಿ ಶೀನಪ್ಪ ಹೆಗ್ಡೆಯವರು ಧನ್ಯವಾದಗಳನ್ನಿತ್ತರು ಸಭಾಂತ್ಯದಲ್ಲಿ ಸ್ವಾಮಿಗಳವರು ನೆರೆದ ಸಭಿಕರಿಗೆ ಫಲಮಂತ್ರಾಕ್ಷತೆ ನಿತ್ತರೆಂದಿದರು.

ವಿದಾಯ ಸತ್ಕಾರ—

ಸರಕಾರಿ ಸಂಘಗಳ ಅಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ ಕೆ ಕಾಳಪ್ಪ ಸೆಟ್ಟರು ತನ್ನ ಉದ್ಯೋಗದಿಂದ ನಿವೃತ್ತರಾಗುವುದರಿಂದ ಉಡುಪಿ ಕೋಆಪರೇಟಿವ್ ಬ್ಯಾಂಕ್ ಬೇಂಕಿನವರು ಕಳೆದ ತಾ ೨೨ರಂದು ಅವರಿಗೆ ವಿದಾಯ ಸತ್ಕಾರವನ್ನು ಗೌರವಿಸಿದರು ಬೇಂಕಿನ ಅಧ್ಯಕ್ಷ ಶ್ರೀ ಕೆ ಗುರುರಾಜ ರಾಯರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಎಮ್. ಡಿ. ಅಮ್ಮನ ಸಾಹೇಬರು ಸ್ವಾಗತಿಸಿದರು ಶ್ರೀ ಎಸ್ ಆರ್. ಪೈ, ಡಾ ಕೆ. ಎಲ್ ಪಾಳ್ಳಾ ಮತ್ತು ಶ್ರೀ ಯು ಎಸ್ ನಾಯಕ್, ಎಮ್ ಎಲ್. ಎ ಅವರು ಮುಖ್ಯ ಅತಿಥಿಯ ಕುರಿತು ಮಾತನಾಡಿದರು ಶ್ರೀ ಕಾಳಪ್ಪ ಸೆಟ್ಟರು ಸೂಕ್ತ ಉತ್ತರವಿತ್ತರು ನಂತರ ಶ್ರೀ ಎಮ್ ವಾಮನ ಭಟ್ಟರು ಧನ್ಯವಾದವಿತ್ತರು

ಮುನಿಸಿಪಲ್ ಕೌನ್ಸಿಲು ಸಭೆಯು—

ತಾ ೩೦ರಂದು ಸಂಜೆ ಬೇಂಕಿನ ಶ್ರೀ ಕೆ. ಕೆ ಸ್ವಾಗಳ ಅಧ್ಯಕ್ಷತೆಯಲ್ಲಿ ಜರಗಿತು ಸಬಿಟಿ ಇನ್ಸ್‌ಪೆಕ್ಟರ್ ಶ್ರೀ ರಾಘವ ರಾಯರಿಗೆ ೧೯೫೮-೫೯ನೆ ವರ್ಷದ ಬಾಬ್ತು ಸಮ್ಮತ್ತಿ ಹೆಚ್ಚ ರೂಪಾಯಿ ೫೦/ ನ್ನು ಕೊಡುವ ಕುರಿತು ಹೆಲ್ತ್ ಆಫೀಸರರು ಬರೆದ ನೋಟಿನ್ನು ರದ್ದುಮಾಡಬಲಾಯಿತು ಮುನಿಸಿಪಲ್ ಕೌನ್ಸಿಲ್ ಹಾಗೂ ಎ ಶಾಲೆಯ ೩ನೆ ತರಗತಿಯನ್ನು ಮೂರು ವಿಭಜನುಗಳಾಗಿ ಮಾಡಲು ತುಂಬಾರಾತಿ ಕೊಡುವ ಕುರಿತು ತುಂಬ. ಚರ್ಚೆ ನಡೆದು ಕೊನೆಗೆ ಬಾಕಿಯಿದ್ದ ಲಾಯಿರು ಮುನಿಸಿಪಲ್ ಸಾರ್ವಭೌಗೆ ತಿಂಗಳೊಂದರ ರೂಪಾಯಿ ಇಸ್ಪತ್ತರಂತೆ ಸ್ಪೆಶಲ್ ಎಡೋಟೆನ್ಸ್ ಕೊಡಲು ಕೌನ್ಸಿಲಿನ ಒಮ್ಮತದ ನಿರ್ಧಾರವಾಯಿತು.

ಶ್ರೀ ಕೆ ವೇಣೇಂದ್ರ ಶೆಣೈ ಮೊದಲಾದವರ ಮುನಿಸಿಪಲ್ ಚೇರ್ಮೆನ್ ಶ್ರೀ ಕೆ ಕೆ ಸ್ವೈಗಳ ಭಾವಚಿತ್ರವನ್ನು ಕೌನ್ಸಿಲು ಹಾಲಿನಲ್ಲಿ ಇರಿಸಲು ಪುಕ್ಕಟೆಯಾಗಿ ಕೌನ್ಸಿಲಿಗೆ ಕೊಡಲು ಮುಂದೆ ಬಂದ ಬಗ್ಗೆ ಅವರಿಲ್ಲದನ್ನೂ ಅಭಿನಂದಿಸಲಾಯಿತು.

ವಿದಾಯ ಸನ್ಮಾನಂಭ—

ಲ್ಯಾಪ್ ಇನ್ಸೂರೆನ್ಸ್ ಕೊರ್ಪೊರೇಶನ್ ಆಫ್ ಇಂಡಿಯಾ, ಇದರ ಉಡುಪಿ ಶಾಖೆಯ ಬ್ರಾಂಚ್ ಮೆನೇಜರ್ ಶ್ರೀ ಕೆ. ಗಿರಾಧರ ಪೈಗಳಿಗೆ ಮಂಗಳೂರಿಗೆ ವರ್ಗವಾದ ನಿಮಿತ್ತ ಅವರಿಗೆ ವಿದಾಯಸಮಿಯುವ ಸಮಾರಂಭವು ಎಲ್ ಐ ಸಿ. ಯ ಉಡುಪಿ ಡಿವಿಜನ ಅಸಿಸ್ಟಾಂಟ್ ಡಿವಿಜನಲ್ ಮೆನೇಜರ್ ಶ್ರೀ ಇ ಯು ಜಾಕೋಬರ ಅಧ್ಯಕ್ಷತೆಯಲ್ಲಿ ಕಳೆದ ತಾ ೨೯ರಂದು ಟೌಂಬೆಲ್ಯಾಸ್ ಕಟ್ಟಡದಲ್ಲಿ ಜರಗಿತು. ಶ್ರೀ ಕೆ. ಶ್ರೀನಿವಾಸ ಪ್ರಭುಗಳು ಸ್ವಾಗತಿಸಿದರು ಶ್ರೀ ವಿ ಆರ್ ರಮಾರವರು ಅತಿಥಿಗಳಿಗೆ ಮಾನಪತ್ರವನ್ನು ಗಂಧದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು ನಂತರ ಶ್ರೀಗಳಾದ ಟಿ. ಬಿ ಶ್ರೀನಿವಾಸಮೂರ್ತಿ, ಎನ್ ಶ್ಯಾಮಸಿಟ್ಟಿ, ಹಾಗೂ ಟಿ ಸಂಜೀವ ಪೈಗಳು ಕಾರ್ಯೋಚಿತ ಮಾತುಗಳನ್ನಾಡಿದರು ಉಡುಪಿ ಬ್ರಾಂಚಿನ ಹೊಸ ಮೆನೇಜರ್ ಶ್ರೀ ಟಿ ಪಿ. ಎನ್ ನಂಬಿಯಾರರು ನಾಲ್ಕು ಮಾತುಗಳನ್ನಾಡಿದರು. ಶ್ರೀ ಕೆ. ಸಿ ಗೋಪಾಲಸ್ವಾಮಿರವರು ಧನ್ಯವಾದಗಳನ್ನಿತ್ತರು

ಎಮ್. ಜಿ ಎಮ್. ಕಾಲೇಜ್ ಯೂನಿಯನ್—

ಉದ್ಘಾಟನಾ ಸಮಾರಂಭವನ್ನು ತಾ ೧ರಂದು ಸಂಜೆ ೪½ ತಾಸಿಗೆ ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರೊಫೆಸರ್ ಕೇರಳ ವರ್ಮನವರು ನೆರವೇರಿಸಲಿರುವರು

ತಾ ೩ರಂದು ಸಂಜೆ ೪½ ಗಂಟೆಗೆ ಕಾಲೇಜಿನ ಭಾಷಾ ಸಂಘವನ್ನು ಶ್ರೀ ಕೋಟಿ ಶಿವರಾಮ ಕಾರಂತರು ಉದ್ಘಾಟಿಸುವರು

ಕಿಡ್ಡಿದ ಫಾರ್ಮಿನಲ್ಲಿ ಅರ್ಜಿ ಮಾಡಬೇಕು -

ಗೇರುಬೀಜ ಕೃಷಿಗಾಗಿ ಸರಕಾರಿ ಜಾಗಗಳನ್ನು ಗೇಣಿಗೆ ಪಡೆಕೊಳ್ಳಲಿಚ್ಛಿಸುವವರು ಈ ಬಗ್ಗೆ ಮೈಸೂರು ಸರಕಾರದ್ವಾರ ಪ್ರಕಟಿಸಿದ ಕಿಡ್ಡಿದ ಫಾರ್ಮಿನಲ್ಲಿ ಅರ್ಜಿ ಮಾಡತಕ್ಕದ್ದೆಂದೂ ಅರ್ಜಿಗೆ ಸಾಲಾಗಿ ರೆವೆನ್ಯೂ ಬೇಕಾದ ಅಂಟಿಸಬೇಕೆಂತಲೂ ವಹಿಸಿರುವುದರು ತಿಳಿಸುತ್ತಾರೆ

ಪೆರ್ಡೂರು—

ಮಂಡಲ ಕಾಂಗ್ರೆಸ್ ಸಮಿತಿಯ ತಾ ೩ರಲ್ಲಿ ಶ್ರೀ ಟಿ ಎ ಪೈಗಳಿದ ಉದ್ಘಾಟಿಸಲ್ಪಟ್ಟಿತು ಶ್ರೀ ಎ ಜಿ. ಅಲ್ಲಿಯವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಬಿ ಉಮಾನಾಥ ಪೈಗಳವರು ಸ್ವಾಗತಿಸಿದರು. ಭಾಷಣಗಳಾದ ಮೇಲೆ ಶ್ರೀ ಅನಂತಪದ್ಮನಾಭ ಅಡಿಗರು ಧನ್ಯವಾದಗಳನ್ನಿತ್ತರು.

ವನಮಹೋತ್ಸವ—

ನಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವನಮಹೋತ್ಸವವನ್ನು ಶ್ರೀ ಆರ್ ಆರ್ ಕುಂಜೂರ್‌ರವರ ಅಧ್ಯಕ್ಷತೆಯಲ್ಲಿ ಜುಲೈ ಕೊನೆಯ ವಾರದಲ್ಲಿ ಜರಗಿತು ಶಾಲೆಯ ಕನ್ನಡಪಂಡಿತರಾದ ಶ್ರೀ ಎಸ್ ಗೋಪಾಲಪಂಡಿತರಾಯರು ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟ ಮೇಲೆ ಕೆಲವು ವಿದ್ಯಾರ್ಥಿಗಳೂ ಅಧ್ಯಾಪಕರೂ ವನಮಹೋತ್ಸವದ ಅವಶ್ಯಕತೆ ವೃಕ್ಷಗಳ ಹಾಲಿನೆಯ ಕುರಿತಾಗಿ ಮಾತನಾಡಿದರು ತಮ್ಮ ಮನೆಯ ಅವರಣದಲ್ಲಿ ಎಲ್ಲರೂ ಸಾಮ್ಯವಾದಷ್ಟು ಗಿಡಮರಗಳನ್ನು ನಟ್ಟಲ್ಲಿಯೇ ಸಾಕಷ್ಟು ಕೆಲಸಮಾಡಿದಂತಾಗುವುದು ಗಿಡಗಳನ್ನು ನೆಡುವುದೆಲ್ಲದೇ ಅವನ್ನು ಬಳಿಕ ಸಂರಕ್ಷಿಸಬೇಕೆಂದು ಅಧ್ಯಾಪಕರು ಹೇಳಿದರು ಮೆರವಣಿಗೆ ನಂತರ ಸಸಿಗಳನ್ನು ಶಾಲಾ ಅವರಣದಲ್ಲಿ ನೆಟ್ಟ ಮೇಲೆ ಮುಖ್ಯೋಪಾಧ್ಯಾಯರಾದ ಶ್ರೀ ಎಸ್ ಎಕ್ಸ್ ಕರ್ನೇಲಿಯೊ ಅವರು ಧನ್ಯವಾದ ಸಮರ್ಪಿಸಿದರು

ಸರಕಾರಿ ನೌಕರರಿಗೆ ಹಿಂದಿ -

ರಾಜ್ಯ ಸರಕಾರದ ನೌಕರರಿಗೆಬೇಕಾದ ಹಿಂದಿಯ ಬಗ್ಗೆ ನಿಶೇಷ ತರಬೇತಿಯನ್ನೀಯಲು ಹಾಗೂ ಅವರನ್ನು ಹಿಂದೀ ಮಧ್ಯಮಪರೀಕ್ಷೆಗೆ ಸಿದ್ಧರನ್ನಾಗಿ ಮಾಡಲು, ಮೈಸೂರು ಹಿಂದೀಪ್ರಚಾರ ಪರಿಷತ್ತು, ಉಡುಪಿ ಅಂಚಲವಾಡಿಯ ಗಿರಿಜಾ ಭವನಕ್ಕೆ ಅನುಮತಿಯಿತ್ತಿದೆ ಆಪೇಕ್ಷಿತ ಸರಕಾರಿ ನೌಕರರು ಮೂತ್ರ ಸಂತೆ ಕಟ್ಟೆಯಲ್ಲಿನ ತರಗತಿ ನಡೆಯುವ ಪವನದಲ್ಲಿ ವಿಚಾರಿಸಬಹುದು ಸಮಯ ಹರಿದಾ ೬ ಸರಕಾರಿ ನೌಕರರಿಗಾಗಿ ಪ್ರತ್ಯೇಕ ಒಂದು ಸಮಯವನ್ನು ಗೊತ್ತುಮಾಡಿಸಬಹುದು.

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5 ..1955)

ಬಂಗಾರದಂತಹ ಮಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬಿದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಅರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ ರೂ. ೧ : ೨೫

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಮಂಗಳೂರು

ವಿದಾಯ ಸತ್ಕಾರ— ದ. ಕ. ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಬೇಂಕಿನ ಕಾರ್ಯದರ್ಶಿಯಾಗಿ 24 ವರುಷ ಸೇವೆ ಸಲ್ಲಿಸಿ ಕಳದ ತಾ. 29ರಂದು ನಿವೃತ್ತರಾದ ಶ್ರೀ. ಯು. ಶಾಂತಾರಾಮ ರಾಯರಿಗೆ ಬೇಂಕಿನ ಶಿಬಂಧಿಯವರು ತಾ 31ರಂದು ಸಂಜೆ ಬೇಂಕಿನ ಸಭಾ ಭವನದಲ್ಲಿ ವಿದಾಯ ಸತ್ಕಾರನಿತ್ತು ಗೌರವಿಸಿದರು.

ಆರಂಭದಲ್ಲಿ ಬೇಂಕಿನ ಉಪ ಕಾರ್ಯದರ್ಶಿಗಳಾದ ಶ್ರೀ ಎಸ್. ಅನಂತ್ಹಾರೆವರು ಸ್ವಾಗತಭಾಷಣ ಮಾಡಿದರು. ಬಳಿಕ ಶ್ರೀಗಳಾದ ಎಚ್. ಎಸ್. ಕೆಣ್ಣಿ, ಬಿ. ಚಂದ್ರಶೇಖರ ಸೊಳ್ಳ, ಎಮ್. ಎಸ್. ದೇವಯ್ಯ, ಯು. ಗೋವಿಂದರಾವ್, ಎಮ್. ಎಸ್. ಜಾಟ ಮತ್ತು ಕೆ. ವಿ. ಬಿಳಿರಾಯರು ಮುಖ್ಯ ಅತಿಥಿಯ ಕುರಿತು ಗುಣಗಾನ ಮಾಡಿದರು. ಶ್ರೀ. ಶಾಂತಾರಾಮ ರಾಯರು ಸೂಕ್ತ ಉತ್ತರನಿತ್ತರು.

ರೋಟರಿ ಕ್ಲಬ್ಬಿನ ಸಭೆಯು— ತಾ. 31ರಂದು ಶ್ರೀ ಕೆ. ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಗತ ಸಭೆಯ ವರದಿವಾಚನಗಳಾದ ಬಳಿಕ ಶ್ರೀ ಎಸ್. ಮುಕುಂದರಾವ್, ಎಮ್. ಎಲ್. ಸಿ. ಯವರು ಸಮಾಜವಾದಿ ಮಾದರಿ ಸಮಾಜದಲ್ಲಿ ವಿದ್ಯಾಭ್ಯಾಸ ಕ್ರಮ ಹೇಗಿರಬೆಕು ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಜಾತ್ಯಾತೀತ ಹಾಗೂ ವರ್ಗಾತೀತವಾದ ಸಮಾಜವಾದೀ ಮಾದರಿಯ ಸಮಾಜವನ್ನು ಕಟ್ಟಲು ಹೊರಟಿ ನನ್ನು ಚೆಶದಲ್ಲಿ ವಿದ್ಯಾಭ್ಯಾಸ ಕ್ರಮವೂ ಅದಕ್ಕನುಗುಣವಾಗಿ ರೂಪಿಸಲ್ಪಟ್ಟಿರಬೇಕು. ಜಾತ್ಯಾತೀತ ಸಮಾಜದಲ್ಲಿ ಜಾತೀಯ ಮನೋಭಾವನೆಯನ್ನಿಟ್ಟುಕೊಂಡು ವಿದ್ಯಾಸಂಸ್ಥೆಯನ್ನು ನಡೆಸುವ ಆದಳಿತೆಯವರಿಗೆ ಸ್ಥಾನವಿರಬೇಡ ಬಾರದು. ಎಲ್ಲಾ ಶಾಲೆಗಳು ಸಾರ್ವಜನಿಕವಾಗಿ ನಡೆಸಲ್ಪಟ್ಟು ಅವುಗಳು ಎಲ್ಲಾ ಜಾತಿಯವರಿಗೆ ತೆರೆಯಲ್ಪಟ್ಟಿರಬೇಕು ಎಂದು ಮುಂತಾಗಿ ಹೇಳಿದರು. ನಂತರ ನಡೆದ ಚರ್ಚೆಯಲ್ಲಿ ಶ್ರೀಗಳಾದ ವಿ. ಎಸ್. ಕುಡ್ವ, ಎಸ್. ಎನ್. ಕೆಣಿ ಮೊದಲಾದವರು ಭಾಗವಹಿಸಿದ್ದರು. ಶ್ರೀ. ಯು. ರಾಜಾರಾಮ ಮಲ್ಯರು ಧನ್ಯವಾದವಿತ್ತರು.

ಸ್ತ್ರಿಯುನಿವರ್ಸಿಟಿಯಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ರೋಟರಿ ಜಾಹೀರುಮಾಡಿದ ವಿದ್ಯಾರ್ಥಿವೇತನವನ್ನು ಶ್ರೀ. ಇನ್ನ ನಾರಾಯಣರಾವ್ ಮತ್ತು ದೇವದಾಸ ಮಲ್ಯರಿಗೆ ಶ್ರೀ. ಮುಕುಂದ ರಾಯರ ಹಸ್ತದಿಂದ ಕೊಡಲಾಯಿತು.

ತಿಲಕ ದಿನಾಚರಣೆ— ಲೋಕಮಾನ್ಯ ತಿಲಕರ ಪುಣ್ಯ ದಿನಾಚರಣೆಯು ತಾ. 1ರಂದು ಸಂಜೆ ಮಂಗಳೂರು ತಾಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಚರಿಸಲಾಯಿತು. ಶ್ರೀಗಳಾದ ಎಮ್. ರಮಾನಾಥ ಲಕ್ಷ್ಮಣದೇವ ವಿದ್ಯಾರ್ಥಿ ಮತ್ತು ಯು. ಮಂಜಪ್ಪ, ಎಮ್. ಎಲ್. ಎ. ಯವರು ಕಾಲೋಚಿತ ಭಾಷಣಮಾಡಿದರು. ಶ್ರೀ ಬಿ. ಎಮ್. ಇದಿನಬ್ಬರು ಧನ್ಯವಾದವಿತ್ತರು.

ಮಂಗಳೂರು ನಗರಾಭಿವೃದ್ಧಿ ಸಮಿತಿ ಸಭೆಯು— ತಾ. 2ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಉಪಾಧ್ಯಕ್ಷ ಡಾ. ಬಿ. ಜಿ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ನಗರದಲ್ಲಿ ವಾಹನ ಸಂಚಾರ, ಸಿಟಿ ಬಸ್ಸುಗಳ ಸಂಚಾರವನ್ನು ಯಾವ ರೀತಿಯಲ್ಲಿ ಅಭಿವೃದ್ಧಿಗೊಳಿಸಬಹುದೆಂಬುದಾಗಿ ಸಭೆಯಲ್ಲಿ ರಚಿಸಲಾದ ಉಪ ಸಮಿತಿಯ ವರದಿಯನ್ನು ಕಾರ್ಯದರ್ಶಿ ಶ್ರೀ ಎ. ಕೆ. ಸೇವಕರು ಸಭೆಯ ಮುಂದಿರಿಸಿದರು.

ಅಧ್ಯಾಪಕರ ಶಿಷ್ಟಮಂಡಳ— ದ. ಕ. ಜಿಲ್ಲಾ ಬೋರ್ಡ್ ಹೈಸ್ಕೂಲು ಅಧ್ಯಾಪಕರ ಯೂನಿಯನ್ನಿನ ಅಧ್ಯಕ್ಷ ಶ್ರೀ ಎಸ್. ಆರ್. ಆಚಾರ್, ಕಾರ್ಯದರ್ಶಿ ಶ್ರೀ ಕೆ. ಕೃಷ್ಣಮಾಚಾರ್ಯ ಮತ್ತು ಸದಸ್ಯ ಶ್ರೀ ಎಚ್. ವಿ. ಶೆಣೈಯವರು ತಾ., 2ರಂದು ಬೋರ್ಡಿನ ಅಧ್ಯಕ್ಷರನ್ನು ಭೇಟಿಯಾಗಿ ಬೋರ್ಡು ಹೈಸ್ಕೂಲುಗಳ ಅಧ್ಯಾಪಕರಿಗೆ ಹೊಸ ವೇತನ ಕ್ರಮವನ್ನು 1—4—1957ರಿಂದ ಅನ್ವಯಿಸುವ ನಿರ್ಣಯಮಾಡಿದ್ದನ್ನೂ ಅದನ್ನು ಅನ್ವಯಿಸಲಿಲ್ಲ. ಕಳದ 57.56ರ ವರ್ಷದ ಮಿಕ್ಕ ಗ್ರಾಂಟನ್ನು ಸರಕಾರದಿಂದ ಮಾರ್ಚಿಯಲ್ಲಿ ಪಡೆದಿದ್ದರೂ ಈ ವರೆಗೂ ಗತ ಮಿಕ್ಕಂಶವನ್ನು ವಿತರಣೆಮಾಡಲಿಲ್ಲ. ಬೋರ್ಡಿನ ಈ ವಿಳಂಬವು ಅಧ್ಯಾಪಕರಲ್ಲಿ ತುಂಬಾ ಆಸಮಾಧಾನವನ್ನು ಉಂಟುಮಾಡಿರುವುದರಿಂದ ಕೂಡಲೇ ಹೊಸ ವೇತನ ಕ್ರಮವನ್ನು ಅನ್ವಯಿಸಿ ಗತ ಮಿಕ್ಕಂಶವನ್ನು ವಿತರಣೆಮಾಡಬೇಕೆಂದು ಅವರು ನಿವೇದಿಸಿಕೊಂಡರು.

ಬೋರ್ಡಿನ ಅಧ್ಯಕ್ಷರು ಉತ್ತರವೀಯುತ್ತಾ ಬೋರ್ಡಿನ ಆರ್ಥಿಕ ಕೊರತೆಯನ್ನು ನಿವಾರಿಸಲುಸಹಾಯವನ್ನು ಸರಕಾರದೊಡನೆ ಕೇಳಿದೆ. ಬೋರ್ಡಿನಶಿಷ್ಟಮಂಡಳವು ಮುಖ್ಯಮಂತ್ರಿಗಳನ್ನು ಭೇಟಿಮಾಡಿ ವಿವರವಾಗಿ ನಿವೇದಿಸಿಕೊಂಡಿದೆ. ಶೀಘ್ರವೇ ಸರಕಾರದಿಂದ ಉತ್ತರ ಬರಬಹುದು. ಅಲ್ಲದೆ ಇಕ್ವೇಶನ್ ಆರ್ಡರು ನೋರ್ಡಿಗೆ ಇನ್ನೂ ಬಂದಿಲ್ಲ. ಅದು ಬಂದೊಡನೆ ಬೋರ್ಡಿನ ಆರ್ಥಿಕ ಸ್ಥಿತಿ ಹೇಗಿದ್ದರೂ ಹೈಸ್ಕೂಲು ಅಧ್ಯಾಪಕರಿಗೆ ಹಾಗೂ ಆಫೀಸು ನೌಕರರಿಗೆ ಹೊಸ ವೇತನ ಕ್ರಮವನ್ನು ಅನ್ವಯಿಸುವ ಕುರಿತು ಬೋರ್ಡಿನ ಮುಂದಿನ ಸಭೆಯಲ್ಲಿ ವಿಚಾರಮಾಡಲಾಗುವುದು. ಅ ಬಗ್ಗೆ ಬೋರ್ಡಿನವರೂ ತುಂಬಾ ಆತುರರಾಗಿದ್ದಾರೆ. ಆದಷ್ಟಬೇಗ ನಿವಾರಣೆ ಹೊಂದಿ ಬೇಗನೇ ಅದು ಸಾಧ್ಯವಾಗಬಹುದೆಂಬ ಭರವಸೆಯಿದೆ. ಆದುದರಿಂದ ಅಧ್ಯಾಪಕರು ತಾಳ್ಮೆಯಿಂದಿರಬೇಕೆಂದು ಕೇಳಿಕೊಂಡರು.

ಸಿಂಡಿಕೇಟ್ ಬೇಂಕಿನ ಬೆಂಗಳೂರು ಶಾಖೆಯ ರಜತೋತ್ಸವ

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇತರ ಬೆಂಗಳೂರು ಶಾಖೆಯ ರಜತೋತ್ಸವವು ಕಳದ ತಾ. 29ರಂದು ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಪೇರಿ ಭವನದಲ್ಲಿ, ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮೈಸೂರಿನ ಅನೇಕ ಮಂತ್ರಿಗಳೂ, ಇತರ ಅಧಿಕಾರಿಗಳೂ, ಕೆನರಾ ಬೇಂಕಿನ ಚೆರ್‌ಮೆನ್ ಪಾಗೂ ಸುಪರ್ವೈಜಿಂಗ್ ಡೈರೆಕ್ಟರ್ ಶ್ರೀ ಎ. ದಾಮೋದರ ಪೈ ಮತ್ತು ಜನರಲ್ ಮೆನೇಜರ್ ಶ್ರೀ ಪಾಂಗಾಳ ಸರ್ವೋತ್ತಮ ಸಾಯ್ಕರೇ ಮೊದಲಾದವರೂ, ವಾಣಿಜರೂ ದಯಮಾಡಿಸಿದ್ದರು. ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ ಟಿ ಮಾಧವಮೈಯ್ಯರು ಸ್ವಾಗತಭಾಷಣಮಾಡುತ್ತಾ, ರೂ. 8250/- ತೆತ್ತಿಬಂದ ಬಂದವಾಳದಿಂದ ಆರಂಭವಾದೀ ಬೇಂಕು ಇಂದು ರೂಪಾಯಿ 11½ ಕೋಟಿಯನ್ನು ಸಾಧನ ಸಂಪತ್ತುಗಳುಳ್ಳ 118 ಶಾಖೆಗಳ ಬೃಹತ್ ಸಂಸ್ಥೆಯಾಗಿ ಬೆಳೆದುಬಂದ ರೀತಿ ಚರಿತ್ರೆಯನ್ನು ವಿವರಿಸಿದರು. ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತ ಶ್ರೀ ಬಿ. ಡಿ. ಜತ್ತಿಯವರು ದೇಶದ ರಚನಾತ್ಮಕ ರಂಗಗಳಲ್ಲಿ ಬೇಂಕುಗಳು ವಹಿಸಿದ ಪಾತ್ರವು ಹೊಡ್ಡದೆಂದು ಹೇಳಿ, ಸಿಂಡಿಕೇಟ್ ಬೇಂಕು ಸಲ್ಲಿಸುತ್ತಿರುವ ಸೇವೆಯು ಆಶಾಮಾಸ್ಪದವೆಂದೂ ಅಭಿಪ್ರಾಯಪಟ್ಟರು. ರಾಜ್ಯ ಸರಕಾರವು ಎತ್ತಿನ ಐದು ಕೋಟಿ ರೂಪಾಯಿಗಳ ಸಾಲಕ್ಕೆ ಪ. ಜಾ. ಜಿಲ್ಲೆಯ ಬೇಂಕುಗಳು ತೆತ್ತ ಸಂತಿಗೆ ದೊಡ್ಡದು — ಸಿಂಡಿಕೇಟ್ ಬೇಂಕು ಎರಡು ಬಾರಿ ಐನತ್ತು ಲಕ್ಷ ರೂಪಾಯಿಗಳಂತೆ ಸಂತಿಗೆ ತೆತ್ತಿದೆ ಎಂದು ಮೈಸೂರಿನ ಆರ್ಥಸಚಿವ ಶ್ರೀ ಟಿ. ಮರಿಯಪ್ಪನವರು ಭಾಷಣಮಾಡುತ್ತ ಹೇಳಿದರು.

ಸಮಾರಂಭಾರಂಭದಲ್ಲಿ, ಬೇಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳವರು ಧನ್ಯವಾದ ಸಲ್ಲಿಸುತ್ತ, ಗ್ರಾಮಾಂತರಗಳಲ್ಲಿ ಶಾಖೆಗಳನ್ನು ತೆರೆಯಲು ಪ್ರಗತಿಪರ ಕಾರ್ಯೋನ್ಮುಖವಾದ ಸಿಂಡಿಕೇಟಿನ ಶಾಖೆಗಳಲ್ಲಿ ಆರ್ಥಿಕ ಶಾಖೆಗಳು ಗ್ರಾಮ ಕೇಂದ್ರಗಳಲ್ಲಿ ಇವೆಯೆನ್ನುತ್ತ, ರಾಜ್ಯ ಸರಕಾರದ ಸಾಲಕ್ಕೆ ಸಂತಿಗೆ ತೆರುವಲ್ಲಿ ಮುಂಬಂದ ಬೇಂಕುಗಳಿಗೆ ಆರ್ಥಸಚಿವರು ಕೊಟ್ಟ ಧನ್ಯವಾದಗಳು ಬೇಂಕಿಗೆ ಅಲ್ಲ ಈ ಸಂಸ್ಥೆಯ ಪ್ರಗತಿಗೆ ಕಾರಣವಾದ ಜನತೆಗೆ ಸಲ್ಲುವುವು-ಎಂದರು.

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೆ— ಹೊಸ ಅಧ್ಯಕ್ಷ ಶ್ರೀ ಎಚ್. ಕೆ. ವೀರಣ್ಣ ಗೌಡರು ಈ ಕೆಳಗಿನವರನ್ನು ಆರಿಸಿರುವರು. ದ. ಕ. ಜಿಲ್ಲೆಯಿಂದ ಶ್ರೀ ಟಿ. ಎ. ಪೈಗಳು. ಅಯ್ಕೆಗೊಂಡಿರುವರು. ಶ್ರೀಗಳಾದ ಎಸ್. ನಿಜಲಿಂಗಪ್ಪ, ಎಚ್. ಎಸ್. ರುದ್ರಪ್ಪ, ಎಸ್. ಚಿನ್ನಯ್ಯ, ನಾಗಯ್ಯ ರೆಡ್ಡಿ, ಕೋಳೂರು ಮಲ್ಲಪ್ಪ, ಭೀಮಪ್ಪ ನಾಯಕ್, ಸಿ. ಎನ್. ಪೂಣಚ್ಚ, ಜಿ. ವಿ. ಹಳ್ಳಿಕೆರೆ, ಮಹಮ್ಮದ್ ಅಲಿ, ಆರ್. ಬಿ. ದುಬೆ, ರಾಮಕೃಷ್ಣ ಹೆಗ್ಡೆ, ಟಿ. ಎ. ಪೈ, ಕೆ. ವಿ. ಶಂಕರ ಗೌಡ, ಕರಬಸಪ್ಪ, ಎನ್. ಪುಟ್ಟಸ್ವಾಮಿ ಗೌಡ, ಎಚ್. ರಾಮಸ್ವಾಮಿ, ಬಸಪ್ಪ ಅಗಾವಿ, ಎಚ್. ಎಲ್. ತಿಮ್ಮಗೌಡ ಎ. ಬಿ. ನರಸಿಂಹ ರೆಡ್ಡಿ, ಪೈ. ಎಮ್. ಚಂದ್ರಶೇಖರಯ್ಯ, ಮತ್ತು ಅಯ್ಯಣ ಗೌಡ.

ಹಿರಿಯ ಕಾಂಗ್ರೆಸ್ ಧುರೀಣ ಶ್ರೀಗಳಾದ ವಿ. ವೆಂಕಟಪ್ಪ, ಎಮ್. ವಿ. ರಾಮಾರಾವ್, ಕೆ. ಹನುಮಂತಯ್ಯ, ಟಿ. ಸುಬ್ರಹ್ಮಣ್ಯಂ ಮತ್ತು ಶ್ರೀಮತಿ ಯಶೋಧರಾ ದಾಸಪ್ಪನವರು ಕಾರ್ಯ ಸಮಿತಿಯ ಸಭೆಯಲ್ಲಿ ಕಾಯಂ ಆಮಂತ್ರಿತರೆಂದು ತಿಳಿದುಬರುತ್ತದೆ.

ಮೈಸೂರಿನ ಪ್ರಥಮ ಪಶು ಚಿಕಿತ್ಸಾ ಕಾಲೇಜು - ಬೆಂಗಳೂರಿನ ಉಪನಗರವಾದ ಹೆಬ್ಬಾಳದಲ್ಲಿ ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಕಳದ ತಾ. 25 ರಂದು ಉದ್ಘಾಟಿಸುತ್ತಾ, ಪಶು ಚಿಕಿತ್ಸಾ ಕಾರ್ಯದಲ್ಲಿ ಈ ಕಾಲೇಜು ಸಂಸ್ಥಾನಕ್ಕೆ ಎಷ್ಟು ಅವಶ್ಯಕ ಎಂದು ವಿವರಿಸಿದರು. ಈ ಕಾಲೇಜಿಗೆ ಸಂಸ್ಥಾನದ ಹೊರಗಡೆಯವರೂ ಸೇರಿ 100 ಮಂದಿ ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿ ಪ್ರವೇಶಕೊಡಲಾಗಿದೆ. ಕಟ್ಟಡ ಅಗತ್ಯವಾದಷ್ಟೆ ತರಗತಿ ಶಿಕ್ಷಣಗಳಲ್ಲಿಯೇ ನಡೆಯುತ್ತಿದೆ. ಈ ಕಾಲೇಜಿಗಾಗಿ ಭಾರತ ಸರಕಾರ ಗ್ರಾಂಟು ಮತ್ತು ಸಾಲದ ರೂಪದಲ್ಲಿ ಇಪ್ಪತ್ತೆಂಟು ಲಕ್ಷ ರೂಪಾಯಿ ಕೊಟ್ಟಿದೆ; ಅಮೆರಿಕದ ಟೆಕ್ನಿಕಲ್ ಕೋ ಒಪರೇಶನ್ ಮಿಶನ್ ರೂಪಾಯಿ 1½ ಲಕ್ಷ ಬಾಳುವ ಲೆಬರೇಟರಿ ಸಾಮಗ್ರಿಗಳನ್ನೂ ರೂಪಾಯಿ 22,000/- ಬಾಳುವ ಗ್ರಂಥಾಲಯದ ಪುಸ್ತಕಗಳನ್ನೂ ಕೊಟ್ಟಿದೆಯೆಂದು ತಿಳಿಸಿದರು. ಆರಂಭದಲ್ಲಿ ರಾಜ್ಯದ ಎನಿಮಲ್ ಹಸ್ಬೆಂಡ್ರಿ ಮತ್ತು ವೆಟರನರಿ ಸರ್ವಿಸಸ್.ಅದರ ಡೈರೆಕ್ಟರ್ ಡಾ. ಕೆ. ಎಸ್. ಸೆಟ್ಟರು ಸ್ವಾಗತ ಭಾಷಣಮಾಡಿದರು.

ಬೊಂಬಾಯಿ -- ಮೂಲೂರು ಬಿಕ್ಕಗುತ್ತು ದಿ. ಅಣ್ಣಪ್ಪ ಸೆಟ್ಟಿ ಪುತ್ರಿ ಶ್ರೀಮತಿ ಸರೋಜಿನಿಯನ್ನು ಅತ್ತೂರು ಮೂಡ್ಲಗುತ್ತು ಶ್ರೀ ಬೊಗ್ಗಸೆಟ್ಟಿ ಪುತ್ರ ಶ್ರೀ ಮಂಜಣ್ಣ ಬಿ. ಶೆಟ್ಟರು ಕಳದ ತಾ. 13ರಂದು ಬೊಂಬಾಯಿಯ ದಾದರ್ ಶಿವಾಜಿ ಪಾರ್ಕಿನ ಭಾರತ್ ಸ್ಕೌಟ್ ಎಂಡ್ ಗೈಡ್ಸ್ ಹಾಲಿನಲ್ಲಿ ವಿವಾಹವಾದರು. ಬೊಂಬಾಯಿಯ ಅಧ್ಯಾಪಕೀಯರೆನೇಕರು ಉಪಸ್ಥಿತರಿದ್ದು ವಧೂವರರಿಗೆ ಆಶೀರ್ವದಿಸಿ ಪಾರಿತೋಷಕಗಳನ್ನಿತ್ತು ಸನ್ಮಾನಿಸಿದರು.

ಆತ್ರಾಡಿ— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ವನಮಹೋತ್ಸವ ಸಮಾರಂಭವು ಶ್ರೀ ಎ. ನಂಜೀವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಮಜ್ಯೋಪಾಧ್ಯಾಯ ಶ್ರೀ ರಘೀಶ್ ಆಚಾರ್ಯರವರು ಸ್ವಾಗತ ಭಾಷಣಮಾಡಿದರು. ಶ್ರೀ ಸತೀಶ ಹೆಗ್ಡೆಯವರು ಕಾಲೋಚಿತ ಮಾತುಗಳನ್ನಾಡಿದರು.

ಬೆಳ್ಳಾರೆ— ಬೆಳ್ಳಾರೆ ಬೋರ್ಡು ಹೈಸ್ಕೂಲಿನ ಪಾರ್ಲಿಮೆಂಟನ್ನು ಸುಳ್ಯ ಸಮಾಜಶಿಕ್ಷಣ ವಿಸ್ತರಣಾಧಿಕಾರಿ ಕುಮಾರಿ ಎಚ್. ಜಯಲಕ್ಷ್ಮಿಯವರು ಉದ್ಘಾಟಿಸಿದರು ಗವರ್ನರ್ ಶ್ರೀ ಎಮ್. ನಾರಾಯಣರಾಯರು ಮಂತ್ರಿಮಂಡಲದ ಹಾಗೂ ಸದಸ್ಯರ ಪ್ರತಿಜ್ಞಾವಿಧಿ ನೆರವೇರಿಸಿದರು. ಮುಖ್ಯಮಂತ್ರಿ ಶ್ರೀ ಕೆ. ಎನ್. ವಿಠಲ ಸೆಟ್ಟರು ಧನ್ಯವಾದವಿತ್ತರು.

ಕಡಿಯೂರು— ಇಲ್ಲಿಯ ಎಯಿಡೆಡ್ ಹಾ. ಎ. ಶಾಲೆಯಲ್ಲಿ ತಾ. 1ರಂದು ತಿಲಕರ ಪುಣ್ಯದಿನವನ್ನು ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಪದ್ಮನಾಭ ಭಟ್ಟರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶಾಲಾ ಬಾಲಿಕೆಯರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ಎಚ್. ವೆಂಕಟಗಿರಿಗಳು ಸ್ವಾಗತಮಾತುಗಳನ್ನಾಡಿದರು. ಶಾಲಾಧ್ಯಾಪಕ ಶ್ರೀ ಕೆ. ಕೆ. ತಂತ್ರಿ ಮತ್ತು ಮಕ್ಕಳ ಸರಕಾರದ ಮುಖ್ಯಮಂತ್ರಿ ಶ್ರೀ ಕೆ. ವೇದಪನದಾಸ ಹೆಗ್ಡೆಯವರು ಭಾಷಣಮಾಡಿದರು. ಶ್ರೀ ಕೆ. ಶ್ರೀಪತಿಯವರು ಧನ್ಯವಾದವಿತ್ತರು.

JUST PUBLISHED!

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

Written by An Experienced Teacher.

Useful to one and all, the teacher, the student and the layman.

Price: Rs. 1 = 25. (Postage extra)

If Rs. 1=50 is sent by M. O. one copy will be sent by Bookpost.

Copies can be had from the Publishers:

Navayuga Enterprise Ltd.
Navayuga Press,
Udipi.

and also from:

M/s Indian Industrials & Agencies, Mangalore-1.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:

ನವಭಾರತಿ ಪುಸ್ತಕ ಭಂಡಾರ,
ಉಡುಪಿ

ಶ್ರೀ ರಾಮಚಂದ್ರನ ಎರಡು ಚಿತ್ರಗಳು

(೪ನೇ ಪುಟದಿಂದ(

ಸೀತೆಯು ಆಶ್ರಮವನ್ನು ಪ್ರವೇಶಿಸುವಾಗಲೂ ಆತನು ನದೀತೀರದಲ್ಲಿಯೇ ನಿಂತು ನೋಡುತ್ತಿರುತ್ತಾನೆ ಅ ಮೇಲೆ ಆತನು ಹಿಂತಿರುಗಿ ಬರುತ್ತಾನೆ. (ದೃಷ್ಟ್ವಾತು ಮೈಥಿಲೀ ಸೀತಾಂ ಆಶ್ರಮೇ ಸಂಪ್ರವೇಶಿತಾಮ್)

ಲಕ್ಷ್ಮಣನು ನದೀ ತೀರದಲ್ಲಿ ಬಿಟ್ಟು ಹೋದ ಸ್ವಲ್ಪ ಹೊತ್ತಿನಲ್ಲಿಯೇ ವಾಲ್ಮೀಕೀಯು ಸೀತೆಯನ್ನು ಸಮಾಧಾನಗೊಳಿಸುತ್ತ ತನ್ನಾಶ್ರಮಕ್ಕೆ ಕರೆದೊಯ್ದು ಹೇಳುತ್ತಾನೆ—

ನ್ನುಷಾ ದಶರಥಸ್ಯ ತ್ವಂ ರಾಮಸ್ಯ ಮಹಿಷೀ ಪ್ರಿಯಾ । ಜನಕಸ್ಯ ಸುತಾ ರಾಜ್ಞಃ ಸ್ನಾಷಿಂ ತೇ ಪತಿವ್ರತೆ ॥ ಆಯಾಂತೀ ಚೈವ ವಿಜ್ಞಾತಾ ಮಯಾ ಧರ್ಮ ಸಮಾಧಿನಾ । ಕಾರಣಂ ಚೈವ ಸರ್ವಂ ಮೇ ಕೃದಯೇ ನೋಪಲಕ್ಷಿತಮ್॥

ಹಾಗೆಯೇ ತನ್ನ ಆಶ್ರಮದಲ್ಲೆಲ್ಲರಿಗೂ ಸೀತೆಯೊಡನೆ ಆದರ ಪೂರ್ಣ ವ್ಯವಹಾರ ನಡೆಸಬೇಕೆಂದು ಆದೇಶವೀಯುತ್ತಾನೆ. ಆದುದರಿಂದ ಸೀತೆಯು ವನದಲ್ಲೂ ಯಾವ ತೊಂದರೆಯಿಲ್ಲದೆ ಬಾಳುತಿದ್ದಳು ವಾಲ್ಮೀಕಿಯು ಸ್ವಕರ್ತವ್ಯ ನಿರ್ವಹಣ. ಸಂಬಂಧದಲ್ಲಿ ಸಾಕಷ್ಟು ಜಾಗರೂಕನಾಗಿದ್ದಾನೆ; ತನ್ನ ಉದಾತ್ತತೆ, ಗಾಂಭೀರ್ಯಮತ್ತು ದೂರ ದರ್ಶಿತ್ವದ ಶ್ರೀಷ್ಠ ಗುಣಗಳನ್ನೇ ಎಲ್ಲೆಡೆಯಲ್ಲಿಯೂ ತೋರಿಸಿಕೊಟ್ಟಿದ್ದಾನೆ. ಭವಭೂತಿಯ ವಾಸಂತಿಯು ರಾಮಾಯಣದ ಕೆಲವು ಶ್ಲೋಕಗಳನ್ನಾದರೂ ಓದಿಕೊಂಡಿದ್ದರೆ, ರಾಮನನ್ನು ದಾರುಣಕರೋರಿ ಮುಂತಾಗಿ ಹೇಳುವ ದುಸ್ಸಾಹಸವನ್ನು ಮಾಡುತ್ತಿರಲಿಲ್ಲ.

ಅನಂತರ ಅಂಕದಲ್ಲಿ ಜನಕರಾಜ ಕ್ರುದ್ಧನಾಗಿ ಪ್ರವೇಶಿಸುತ್ತಾನೆ: "ಅಹೋ ರಾಮಸ್ಯ ಕ್ಷಿಪ್ರಕಾರಿತಾ" ಎಂದಚ್ಚರಿಪಡುತ್ತಾನೆ. ರಾಮನ ಮೇಲೆ ಸಿಟ್ಟುಗೊಂಡು, ಆತನನ್ನು ವ್ಯಂಗ್ಯವಾಗಿ ಕೆಣಕುತ್ತ ಹಂಚುಕಿಯೊಡನೆ ಕೇಳುತ್ತಾನೆ— "ಆರ್ಯ ಗೃಷ್ಟೆ, ಅಪಿ ಕುಶಲಂ ಆಸಾಃ ಪ್ರಜಾಪಾಲ ಮಾತುಃ?" ಇಲ್ಲಿ ಪ್ರಜಾಪಾಲ ಎಂಬ ಪದವೇ ಸನ್ನಿವೇಶವನ್ನು ಸೂಚಿಸುತ್ತದೆ. ಜನಕನು ಅತ್ಯಂತ ವಿರಕ್ತ, ಲೌಕಿಕ ಬಂಧನಗಳಿಂದ ವಿಮುಕ್ತ, ಆಕರ್ಷಣೆಗಳಿಂದ ಹರದಾರಿ ದೂರನಿರುವಾತ. ತನ್ನ ತಪೋಬಲದಿಂದ ಸೀತೆಯ ವಾತಿವ್ರತ್ಯದ ಮಹತ್ವ ರಾಮನ ವಿವಶತೇ ತ್ಯಾದಿಗಳನ್ನು ಯಥಾರ್ಥವಾಗಿ ತಿಳಿದುಕೊಂಡವನು. ಆದರೆ, ವಾಸಂತಿಯ ಸಂಗತಿ ಬೇರೆ. ಆಕೆ, ಎಷ್ಟೆಂದರೂ ಸ್ತ್ರೀಯು ತಾನೆ?

ಭವಭೂತಿಯು ರಾಮನ ಮೇಲೆ ಹೊರಿಸಿದ ಅಪವಾದಗಳ ಅಂತಿಮ ಘಟ್ಟವು ಏಳನೆಯಂಕದಲ್ಲಿ ತಿಳಿದು ಬರುವುದು. ಭೂಮಾತೆಯೊಂದಿಗೆ ರಾಮನ ವಿಷಯವಾಗಿ ಚಿಗುಪ್ಪೆಯಿಂದ ಹೇಳುತ್ತಾನೆ— "ನ ಪ್ರಮಾಣೀಕೃತಃ ವಾಣಿಃ ಬಾಲ್ಯೇ ಬಾಲೇನ ಪೀಡಿತಃ।ನಾಹಂ ನ ಜನಕಾನಾಗ್ನಿಃ ನಾನುವೃತ್ತಿಃನ ಸಂತತಿ।" ಈಸಂದರ್ಭದಲ್ಲಿ ಮನಕ್ಷು ಉದ್ವಿಗ್ನಗೊಳ್ಳುತ್ತಿರುತ್ತದೆ. ಮಾನವ ಸಂಪನ್ನನಾದ ರಾಮನು ಇಷ್ಟು ನೀಚಸ್ಥಿತಿಗಿಳಿದನೆ? ಹೆಗಲಿರುಳು ನಮ್ಮ ಬಾದ ಪ್ರಹಾರವನ್ನು ಸಹಿಸಿಯೂ ನಮ್ಮನ್ನು ಕ್ಷಮಿಸುವ ಕ್ಷಮಾಸ್ವರೂಪಳಾದ ಭೂಮಾತೆಯ ಮುಖದಿಂದಲೂ ರಾಮನು ನಿಂದಿಸಲ್ಪಡಬೇಕಾದರೆ, ಆತನು ಅದೆಂತಹ ಘೋರಾಪರಾಧವನ್ನು ಮಾಡಿದನು?

ಈ ರೀತಿಯಾಗಿ ನಾಟಕದಲ್ಲಿ ಆದ್ಯಂತವಾಗಿ ರಾಮನಲ್ಲಿ ಅದೂರದರ್ಶಿತ್ವ, ಕಠೋರತೆ ಹಾಗೂ ಅವಧಿ ವಿಸ್ಮರಣೆ ಮುಂತಾದ ದೋಷಗಳನ್ನು ಬೇರೆ ಬೇರೆ ಪಾತ್ರಗಳ ಮೂಲಕ ತೋರಿಸಲು ಕವಿಯು ಯತ್ನಿಸಿದ್ದಾನೆ. ಮಹಾಕವಿ ಭವಭೂತಿಯು ವಿಚಾರವಂತ ಹಾಗೂ ಸೂಕ್ಷ್ಮಮತಿಯಾಗಿದ್ದು ರಾಮನನ್ನು ವಾಸಂತಿ, ಜನಕ ಹಾಗೂ ಭೂಮಾತೆಯರ ಮುಖಗಳಿಂದ ನಿಂದೆಗೆ ಗುರಿಯಾಗುವಂತೆಕೆ ಮಾಡಿದನು.?

ಮಹಾಕವಿ ಕಾಲಿದಾಸನೂ ತನ್ನ ರಘುವಂಶದಲ್ಲಿ ಸೀತಾಪರಿತ್ಯಾಗದ ಘಟ್ಟವನ್ನು ಸರಸವಾಗಿ ವರ್ಣಿಸಿದ್ದಾನೆ. ಆದರೆ, ಆತನು ಎಲ್ಲಿಯೂ ಮೂಲವನ್ನು ಅತಿಕ್ರಮಿಸಲಿಲ್ಲ; ರಾಮನ ಮೇಲೆ ತಿಲಾಂಶದಷ್ಟಾದರೂ ದೋಷವನ್ನಾರೋಪಿಸಿಲ್ಲ.

ಪ್ರಸ್ತುತ ಸೀತೆಯ ಕರುಣಾವಸ್ಥೆಯ ವರ್ಣನೆಯೇ ಕವಿಯ ಉದ್ದೇಶವೆಂಬುದು. ಆದರೆ, ಇದಕ್ಕಾಗಿ ಆದರ್ಶ ಪುರುಷನಾದ ರಾಮನ ಹೆಸರಿಗೆ ಕಲಂಕ ಬಳಿದುದೇಕೆಂದು ಅರ್ಥವಾಗುವುದಿಲ್ಲ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಾಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ.-ನ.)

ಕುಮಾರಿ ಸುನೇತಾ— ಬರೆದವರು: ತಲಚೇರಿಕರ ರಂಗರಾಯ. ಪ್ರಕಾಶಕರು: ಸುಲಭ ಸಾಹಿತ್ಯ ಪ್ರಕಾಶನ, ಕೊಮಟೂರು. ಪುಟಗಳು: ೧೩೬. ಬೆಲೆ. ೦ ೧೨-೦.

ಆಂಗ್ಲ ಭಾಷೆಯಲ್ಲಿ ಶ್ರೀ ಲಿನ್‌ಯು ಟಾಂಗರು ಬರೆದ ಮಿಸ್. ಟು ಎಂಬ ನೀಳ್ಗತೆಯನ್ನು ಕನ್ನಡದ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಪರಿವರ್ತಿಸಿ ಶ್ರೀ ತಲಚೇರಕರರು ಕುಮಾರಿ ಸುನೇತಾ ಎಂಬ ಈ ಆದರ್ಶ ಪ್ರೇಮಮಯ ಕಾದಂಬರಿಯೊಂದನ್ನು ಕನ್ನಡಿಗರಿಗಿತ್ತಿದ್ದಾರೆ.

ಕಾರವಾರದ ಶ್ರೀಧರನು ಮುಂಬಯಿಯಲ್ಲಿ ಅಭ್ಯಸಿಸುತ್ತಿರುವಾಗ ಕಾರಣಾಂತರಗಳಿಂದ ಕುಮಾರಿ ಸುನೇತಾಳನ್ನು ಎದುರ್ಗೊಂಡನು. ಪ್ರಥಮ ಈಕ್ಷಣದಲ್ಲಿಯೇ ಪರಸ್ಪರ ಸುರಾಗ ಮೂಡಿ ಬಂದು, ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ ಶ್ರೀಧರನ ಗೆಳೆಯ ಹಾಗೂ ಸಹಚರ ಅರವಿಂದನ ಒತ್ತಾಸೆಯಿಂದ ಈ ಪ್ರೇಮವೂ ಅಂಕುರಿಸಿ ಮೊಳೆಯುವುದು. ಆದರೆ, ಸುನೇತಾಳ ಒಡಹುಟ್ಟಿದ ಮಾತ್ರ ಇದು ಸರಿಬೀಳುವುದಿಲ್ಲ. ಸುನೇತಾ ತನ್ನಲ್ಲಿಗೆ ಬಂದವರೆಲ್ಲರನ್ನೂ ತೃಪ್ತಿಪಡಿಸಬೇಕಾಗಿತ್ತು. ಅಂತೂ ಕೊನೆಗೆ, ಮಾತೆಯೊಂದು ಮೊತ್ತವನ್ನು ಸ್ವೀಕರಿಸಿ ಸುನೇತಾಳನ್ನು ಶ್ರೀಧರನಿಗೆ ಕೊಡಲೊಪ್ಪಿದಳು. ಆದರೆ, ಈ ಮೊತ್ತಕ್ಕಾಗಿ, ಅರವಿಂದನು ಏನಕೇನ ಪ್ರಕಾರೇಣ ಸುನೇತಾಳನ್ನು ಬಯಸಿದ್ದ ಹರಿರಾಮ ನಾರ್ವೇಕರರ ಸ್ನೇಹ ಶರಣು ಹೋಗಬೇಕಾಗಿ ಬಂತು. ಮುಂದೆ ಇದೇ ಅವರ ಕುತ್ತಿಗೆ ಕೊಯ್ದಿತು ಸುನೇತಾಳನ್ನು ನಾರ್ವೇಕರನಿಗೇನೇ ಒಪ್ಪಿಸಬೇಕಾದ ಸಂದರ್ಭ ಒದಗಿ, ಇದರಿಂದಾಗಿ ಸುನೇತಾ ಕಾರವಾರದ ಸಮೀಪ ವೈಭವಪೂರ್ಣ ಮೆರವಣಿಗೆಯ ಗಡುವೆ ಆತ್ಮಹತ್ಯೆ ಮಾಡಿಕೊಂಡಳು. ಮುಂದೆ ಈ ನಿರ್ವ್ಯಾಜ ಪ್ರೇಮದ ಅರಿವಾಗಿ ಆಕೆಯ ಸಮಾಧಿಯೊಂದು ಕಾಣಿಸಿಕೊಂಡಿತು. ಶ್ರೀಧರ ಹುಚ್ಚು ಹಿಡಿದು ಊರು ಬಿಟ್ಟು ಕೊನೆಗೂ ಆತ್ಮಹತ್ಯೆ ಮಾಡಿಕೊಂಡನು.

ಆದರ್ಶ ಪ್ರೇಮದ ಸಂಗಡ ಚಿತ್ರಣವು ಇಲ್ಲಿದೆ. ಬೇಕೆಯಾಗಿ ಜೀವಿಸುತ್ತಿದ್ದು ದೇವಿಯ ನಾಯಕಯಾಗಿದ್ದ ಸುನೇತಾಳು ಶ್ರೀಧರನೊಬ್ಬನನ್ನೇ ಮನಸಾರೆ ನೆಚ್ಚಿತ್ತಳೆಂಬ ಅಕೆಯ ಸ್ವಭಾವ ಚಿತ್ರಣ ಹೃದಯ ಸ್ಪರ್ಶಿಯಾಗಿದೆ. ಅರವಿಂದನ ಪಾತ್ರ ತೃಪ್ತಿಕರವಿದ್ದರೂ. ಮಾಲತಿಯದು ಸಾಲದು. ಕಥೆಯ ನಿರೂಪಣಾಕ್ರಮವು ಕುತೂಹಲವಾಯಕವಾಗಿರುವುದು. ಶೈಲಿಯೂ ತೃಪ್ತಿಕರವಿದೆ ಆದರೂ, ಸ್ವಚ್ಛಂದದಿಂದ ಹಾರ್ಯಾಡಿದರು, ಮನಸ್ಸಿನಲ್ಲೇ ಸಮೂಡ ಮಾಡಿಕೊಳ್ಳುವದು ಇತ್ಯಾದಿ ಪ್ರಯೋಗಗಳು ಸಾಧುವೆಂದು ಹೇಳಬರುವುದಿಲ್ಲ. ರಸಮಯವೂ ವರ್ಣನಾಪೂರ್ಣವೂ ಆಗಿರುವ ಈ ಕಥಾವಸ್ತುವು ಆದರ್ಶಪ್ರೇಮದ ಪವಿತ್ರ ಸ್ಮಾರಕವಾಗಿದೆಯೆಂದು ಧೈರ್ಯದಿಂದ ಹೇಳಬಹುದು. ಶ್ರೀ ತಲಚೇರಕರರಿಂದ ಇನ್ನೂ ಇಂತಹ ಹಾಗೂ ಇದಕ್ಕಿಂತಲೂ ಉತ್ತಮವಾದ ಕೃತಿಯನ್ನು ನಿರೀಕ್ಷಿಸಬಹುದು.

ಮಾತೃಸ್ಮೃತಿ— ಲೇಖಕರು: ವಿದ್ಯಾಭೂಷಣ ಸಂ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳು ಪ್ರಕಾಶಕರು: ಭುಜಬಲಿ ಹೆಗ್ಗಡೆಯವರು ಕೊಕ್ಕರಾಡಿ ಪುಟಗಳು: ೧೪

ಸಾಮ್ಯ ಕೊಕ್ಕರಾಡಿ ಗ್ರಾಮದಲ್ಲಿ ಪರೇಲೂದ ಆತ್ರಿಣಾಲು ಎ. ಭುಜಬಲಿ ಹೆಗ್ಗಡೆಯವರು. ತಮ್ಮ ಮಾತೃಶ್ರೀಯವರಾದ ರಾಧಕುಸುಮಾವತಿ ಅಮ್ಮನವರ ಚಿರಸ್ಮರಣಗಾಗಿ ಪ್ರಕಟಿಸಿದ ಕಿರುಹೊತ್ತಿಗೆಯಿದು ಇದರಲ್ಲಿ ಜೈನಧರ್ಮ, ಜೈನ ವ್ರತಗಳು, ವೈಯಾವೃತ್ಯ, ಅತಿಥಿ ಸಂವಿಭಾಗ ಮತ್ತು ದಾನ ಎಂಬ ಲೇಖನಗಳೂ ‘ಸಲ್ಲಾಪ’ ಎಂಬ ಕಿರುಗತೆಯೂ ಕೂಡಿಕೊಂಡಿವೆ ವಿದ್ಯಾರ್ಥಿಗಳಿಗೆ ಉಪಯುಕ್ತ ಕೃತಿಯಾಗಿದೆ.

ಪರಾಗ—(ಕನ್ನಡ ಮಾಸಪತ್ರಿಕೆ) ಮುಖ್ಯ ಸಂಪಾದಕರು: ಎಸ್. ಪದ್ಮನಾಭ ನಾಯಕ್, ಉಡುಪಿ, ವಾ. ಚಂದಾ ರೂ ೩-೦೦ ಅರ್ಧ ವಾ ಚಂದಾ ೨—೦೦, ಬಿಡಿ ಸಂಚಿಕೆ ರೂ ೦—೨೫.

ಕನ್ನಡದಲ್ಲಿ ಆಂಗ್ಲ ಡೈಜೆಸ್ಟ್ ಮಾದರಿಯ ಪತ್ರಿಕೆಯು ಕನ್ನಡಿಗರ ಮುಂದೆ ಮೊದಲಾಯಿತು ‘ಪ್ರಸೂಂಜಿ’ ನಾಲ್ಕ ಪತ್ರಿಕೆಯವರಿಂದ ‘ಸಂಗಮ’ ಎಂಬುದು ಹೊರಟಿದ್ದರೂ, ಅದು ಅಲ್ಪಾಯುಷಿಯಾಯಿತು ಈಗ ಇಂತಹುದೇ ಪತ್ರಿಕೆಯೊಂದನ್ನು ‘ಕನ್ನಡ ಭಾಷೆಯಲ್ಲಿ ಪತ್ರಿಕೆಗಳಿಗೆ ಕೊರತೆಯಿಲ್ಲದಿದ್ದರೂ, ಉತ್ತಮ ಪತ್ರಿಕೆಗಳ ಕೊರತೆಯನ್ನು ಹೋಗಲಾಡಿಸುವ ಉದ್ದೇಶವಿಟ್ಟು ತರುಣರಾದ ಶ್ರೀ ಪದ್ಮನಾಭ ನಾಯಕರು ಪ್ರಾರಂಭಿಸಿದ್ದಾರೆ. ಹೀಗಿದ್ದರೂ ಇದರಲ್ಲಿ ಅಡಕವಾಗಿರುವ ವಿಷಯಾದಿಗಳನ್ನು ಕಾಣುವಾಗ, ಈ ಯೋಚನೆ ಸಫಲವಾಗಿದೆಯೇ? ಎನ್ನುವ ಸಂದೇಹ ಬರುತ್ತದೆ. ‘ಅಲ್ಲೊಂದು ಇಲ್ಲೊಂದು ಪತ್ರಿಕೆ ಹೊರಟು ಮೂರೊ ನಾಲ್ಕೊತಿಂಗಳು ಪ್ರಕಟವಾಗಿ ಕೊನೆಗೆ ಬೇಳೆ ಹೊರಿಲ್ಲದಾಗಿ ಹೋಗುವುದು ಇತ್ತೀಚೆಗೆ ಅಭ್ಯಾಸವಾಗಿ ನಿಟ್ಟಿದೆ. ಅದುದರಿಂದ ಅಂತಹ ದುರ್ಗತಿ ಪಂಗಡಕ್ಕೆ ಬರದಿರಲೆಂದು ಹಾರೈಕೆ.

ಶ್ರೀ ಗೋವಿಂದಾಚಾರ್ಯರೆ ಕಲಾಕೃತಿಯು ಮುಖ ಪೃಷ್ಠವನ್ನಲಂಕರಿಸಿದೆ ಪ್ರೆಜೆಸ್ಟ್ ಎಂದೊಡನೆಯೇ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದ ರೇಖಾಚಿತ್ರಗಳನ್ನೇ ಮನಸ್ಮರಿಸಿಕೊಡುವುದು. ಅಥವಾ ಕಥಾ ಸಂಕಲನಗಳಲ್ಲಿ ಸಂಚಿಕೆಗಳನ್ನು ಹೊರಡಿಸುವುದು ಗ್ರಾಮ್ಯ ತಮ್ಮ ಕರ್ತವ್ಯವೆಂದು ತಿಳಿಯಬಾರದು. ವಿವಿಧ ಉತ್ತಮ ಕೃತಿರತ್ನಗಳಿಂದ ಭವಿಷ್ಯ ಸಂಚಿಕೆಗಳು ಹೊತ್ತು ತರುವ ಪಂಗಡದ ಕಂಬು ನಾಲ್ಕೆಯಲ್ಲೂ ಸಲಿಲ. ಇದಕ್ಕೆ ತಕ್ಕ ಪರಿಶ್ರಮವನ್ನು ಸಂಪಾದಕರು ಸಹಿಸಲಿ.

—ಗೋರಾ.

‘NAVAYUGA’ WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 140/1958.

T. R. ವೆಂಕಟ್ರಾಮನ್ —ವಾದಿ

ಮತ್ತು

ಕೊಟ್ಲು ಶೆಡ್ತಿ ಕೂಡಾ —ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ ೩ನೇ ಪ್ರತಿವಾದಿ ಪಿಟ್ಟಲ ಸಟ್ಟ 1ನೇ ಪ್ರತಿವಾದಿ ಕೊಲ್ಲು ಶೆಡ್ತಿಳ ಮಗ ಉಡ್ಪಿ ತಾಲ್ಲೂ ಉಳಿಯಾರಗೋಳಿ ಗ್ರಾಮದ ಧಂಡತೀರ್ಥ ಎಂಬಲ್ಲಿರುವವನಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:

ವಾದಿಯು ಚಾಲಗೇಣಿ ಗೇಣಿಪಾಕಿ ಬಗ್ಗೆ ದಾಕ್ಲುಮಾಡಿದ ಮೇಲ್ಕಂಡ ವ್ಯಾಜ್ಯವನ್ನು ೩ನೇ ಪ್ರತಿವಾದಿಯ ಅಪ್ಪಿರ್ ನೋಟೀಸಿಗೆ ತಾ. 19—8—58ಕ್ಕೆ ಇಟ್ಟಿರುವದ್ರಿಂದ ಅ ಕುರಿತು ಏನಾದರೂ ಅಕ್ಷೇಪ ಇದ್ದಲ್ಲಿ ಸದ್ರಿ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟುಮುಂದೆ ಹಾಜ್ರಾಗಿ ಜ್ಯಾಬೀರುಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಅತನ ಗೈರ ಹಾಜರಿಯಲ್ಲಿ ಸದ್ರಿ ವ್ಯಾಜ್ಯ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ

(By order of the court)

K. Varadaraya Pai,
Advocate for Pltf.

Udipi 4—8—53.

ಓದಲೇಬೇಕಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರ ಸ್ವಾಮಿ)	1	8	0
ಹಿರೋಕಿಮಾದಿಂದ ಜೆನೇವಾ (ಯು. ಆರ್. ಆಚಾರ್ಯ)	1	8	0
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಅನು ಯು. ಲಕ್ಷ್ಮೀನಾರಾಯಣಾಚಾರ್ಯ)	1	8	0
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ. ಹರಿದಾಸ ಭಟ್)	2	8	0
ತಿಕ್ಷಣದ ಸ್ಫೋಟಗಳು (ಅನು: ಯು. ಲಕ್ಷ್ಮೀನಾರಾಯಣ ಆಚಾರ್ಯ ಮತ್ತು ಕೆ. ಬಿ ರಾಮಕೃಷ್ಣ ರಾವ್)	2	4	0
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಭಟ್)	2	0	0
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0	0
ಫಂಟಮಾಂಗ (ಅನು: ಕು ಶಿ. ಹರಿದಾಸ ಭಟ್)	2	0	0
ನೋಹದ ಮಹಾಜಾಲ (ವೀರಪ್ಪ ಯಗಟಿ)	1	12	0
ಭಾರತದ ಅಂಗ-ಕಾಶ್ಮೀರ (ರಘುನಂದನ ರಾವ್)	0	5	0
ಭಾರತೀಯ ಮಹಾಪುರುಷರು (ಎಸ್. ಗೋಪೀಚಂದ ರಾವ್)	1	8	0
ಕದಾ ಕೌಮುದಿ (ಎಸ್. ಗೋಪೀಚಂದ ರಾವ್)	1	8	0

ಸಿಗುವ ಸ್ಥಳಗಳು:

1) **ನವಯುಗ ಪ್ರೆಸ್, ಉಡುಪಿ**
2) ನವಭಾರತ ಪುಸ್ತಕ ಭಂಡಾರ, ಉಡುಪಿ.
3) ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು-3.

ಪರಕೀಯರ ಪ್ರಭಾವಿತ ವಿಚಾರಧಾರೆ

(೩ನೇ ಪುಟದಿಂದ)

ಪ್ರಾಚೀನ ಕಾಲದಲ್ಲಿಯೂ ವಿದೇಶೀಯರು ಇದ್ದರು ನಮ್ಮ ದೇಶದಲ್ಲಿಯೂ ಆಗಾಗ, ಅತ್ಯಂತ ಪ್ರಾಚೀನ ಕಾಲದಲ್ಲಿಯೂ ಕೆಲಕೆಲವು ಜನರು ಸಂಸ್ಕಾರಗಳಿಂದ ಮುಕ್ತರಾಗಿ ಸ್ವತಂತ್ರವಾಗಿ ಯೋಚಿಸುತಿದ್ದರು ಅವರಲ್ಲಿ ಒಬ್ಬರು ಈ ರೀತಿ ಅಭಿಪ್ರಾಯ ಪಡುತ್ತಾರೆ

ಪುರಾಣ ಮಿತ್ಯೇವನಸಾಧು ಸರ್ವಂ
ನ ಚಾಪಿಕಾವ್ಯಂ ನವಮಿತ್ಯವದ್ಯಮ್॥
ಸಂತಃ ಪರೀಕ್ಷ್ಯಾನ್ಯತರದ್ ಭಜಂತೇ
ಮೂರ್ಖಾಃ ಪರಪ್ರತ್ಯಯನೇಯಬುದ್ಧಿಃ॥

ಇದು ಕವಿಕುಲಗುರುವೆನಿಸಿದ ಕಾಲಿದಾಸನ ವಚನವಾಗಿದೆ.

ಪ್ರಾಚೀನವಾದುದೇ ಸರಿ ಎನ್ನಬಾರದು. ಅಲ್ಲದೇ ಹೊಸತೆಂದ ಮಾತ್ರಕ್ಕೆ ಅದು ನಿಂದನೀಯವೆನ್ನಲೂ ಬಾರದು. ಕೆಲವರು ಉತ್ತಮ ಮನುಷ್ಯರು ಎರಡೂ ಕಡೆಗಳಲ್ಲಿರುತ್ತಾರೆ. ಅವರು ಪರೀಕ್ಷೆ ಮಾಡಿ ಅವನ್ನು ಸ್ವೀಕರಿಸುತ್ತಾರೆ, ಹಾಗೆಯೇ ಮೂರ್ಖರು ಅವನ್ನು ಅಂಧರಂತೆ ಸ್ವೀಕರಿಸಿ ಬಿಡುತ್ತಾರೆ—ಎಂದಿದರ ಸಾರಾಂಶ

ಈ ಸಂಬಂಧದಲ್ಲಿ ಪ್ರಾಚೀನೋಕ್ತಿ ಸ್ಮರಣೆಗೆ ಬರುತ್ತದೆ. ಶಿಷ್ಯರನ್ನು ಆಶೀರ್ವದಿಸುವ ಸಮಯದಲ್ಲಿ ಈ ವಚನ ಉಚ್ಚರಿಸಲ್ಪಡುತ್ತದೆ

ನ್ಯಾಯಸ್ಸ್ಮಾಕಮ್ ಸುಚರಿತಾನಿ
ತಾನ್ಯೇವ
ತ್ವಯೋಪಾಸ್ಯಾನಿ ನೋ ಇತರಾಣಿ॥

"ನಮ್ಮ ಒಳ್ಳೆಯ ಮಾತುಗಳು ಮತ್ತು ಒಳ್ಳೆಯ ಕರ್ಮಗಳು ಏನೇನಿವೆಯೋ ಅವುಗಳನ್ನೇ ನೀವು ಸ್ವೀಕರಿಸಿರಿ ಅವುಗಳನ್ನೇ ನೀವು ಅನುಕರಿಸಿರಿ; ಉಳಿದುವನ್ನು ಬಿಟ್ಟುಬಿಡಿರಿ."

ಸ್ವಾಮಿ ವಿವೇಕಾನಂದರೂ ತಮ್ಮೊಂದು ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ "ನೀವು ಹೂವುದೋ ಒಂದು ಪುಸ್ತಕದಲ್ಲಿ ಓದಿದಿರೆಂಬುದರ ಆಧಾರದಿಂದ ಅದರ ಮೇಲೆ ವಿಶ್ವಾಸವಿಡಬೇಡಿರಿ. ಯಾರೋ ಒಬ್ಬರು ಹೇಳಿದರು ಎಂದು ಅಡಿದ ವಿಷಯದಲ್ಲಿ ವಿಶ್ವಾಸವಿಡದಿರಿ ಸ್ವಯಂ ಸತ್ಯವನ್ನು ಅರಸಿ ಕಂಡುಹಿಡಿಯಿರಿ. ಅವನ್ನೇ 'ಸತ್ಯ' ಎಂದು ಬಗೆಯಿರಿ."

ಇಲ್ಲಿ 'ಪುಸ್ತಕ' ಎಂಬ ಉಲ್ಲೇಖವು ಬಹುಮೂಲ್ಯವಾದುದು. ಇದರ ಕಕ್ಷೆಯಲ್ಲಿ ಪ್ರಾಚೀನದಲ್ಲಿ ಪ್ರಾಚೀನ ಹಾಗೂ ನವನವೀನ ಪುಸ್ತಕಗಳು ಬರುತ್ತವೆ. ಇದರಂತೆಯೇ ಪರೋಕ್ಷಗಳಲ್ಲಿ ಮಹಾಪುರುಷ ಮತ್ತು ಉಪರೋಕ್ತ ಮಹಾಪುರುಷರ ವಚನಗಳೂ ಸೇರುತ್ತವೆ.

ಮಹಾಪುರುಷರು ಎಷ್ಟರ ಮಟ್ಟಿಗೆ ಮಾನ್ಯತಾ ಯೋಗ್ಯರು? ಈ ಸಂಬಂಧದಲ್ಲಿ ಮಹಾಪುರುಷರು ಹಲವು ಬಾರಿ ತಮ್ಮ ಮಾರ್ಯದೆಯನ್ನು ಮೀರಿರುವರೆಂಬುದೂ ಆಲೋಚಿಸತಕ್ಕ ವಿಷಯ. ಓರ್ವ ವ್ಯಕ್ತಿ ಉತ್ತಮ ರೀತಿಯ ಜಟ್ಟಿಕಾಳಗ ಮಾಡುತ್ತಾನೆ. ಅವನು ಇದರಲ್ಲಿ ವಿಶ್ವ ವಿಜಯಿಯಾಗುತ್ತಾನೆ. ಆಗ ಯಾವ ರೀತಿಯಲ್ಲಿ ಜಟ್ಟಿಕಾಳಗ ಮಾಡಬೇಕು ಮತ್ತು ಹೇಗೆ ಶರೀರ ರಕ್ಷಣೆ ಗೈಯಬೇಕೆಂದು ಹೇಳುವ ಅಧಿಕಾರ ಅವನಿಗಿದೆ. ಯಾರೋ ಒಬ್ಬ ಕಾರಣಾಂತರದಿಂದ ಹೆಸರುವಾಸಿಯಾದ, ಅವನ ಶಿಷ್ಯಮಂಡಲಿಯೊಂದು ರಚಿತವಾಯಿತು, ಆಗ, ಅವನು ಎಲ್ಲ ವಿಷಯಗಳ ಮೇಲೆಯೂ ತನ್ನ ಅಭಿಪ್ರಾಯ ಪ್ರಕಟಿಸತೊಡಗುತ್ತಾನೆ— ಇಂತಹ ಸ್ಥಿತಿಯು ಅಪಾಯಕರವಾದುದು. ಅದುದರಿಂದ, ನಾವು ಯಾರನ್ನು ಆ ಕ್ಷೇತ್ರದಲ್ಲಿ ಬಹಳ ಪ್ರತಿಭಾಶಾಲಿ ವ್ಯಕ್ತಿಗಳೆಂದು ತಿಳಿಯುತ್ತೇವೆಯೋ ಅಂತಹವರ ಎಲ್ಲ ಮಾತುಗಳನ್ನೂ ನಾವು ವಿಚಾರಿಸಿ ಅರಿತುಕೊಂಡು ಸ್ವೀಕರಿಸ ಬೇಕಾಗಿದೆ.

ಮೇಲಿನ ಮಾತುಗಳನ್ನು ಒರೆಗಲ್ಲಿಗೆ ಹಚ್ಚಿ ನೋಡಿದರೆ ಆಗ ನಮ್ಮ ಹಚ್ಚಿನ ವ್ಯವಹಾರಗಳು, ನಮ್ಮ ಸಂಪ್ರದಾಯ ಪ್ರಿಯತೆ, ನಮ್ಮ ಸ್ವಶಾಸ್ತ್ರಪ್ರೀತಿ, ಎಳೆಯ ಮಡಿಗಳಿಗೆ ಆಗುವ ಜಗಳ ಇವೆಲ್ಲವೂ ಹಾಸ್ಯಾಸ್ಪದವೆನಿಸುವುದಿಲ್ಲವೆ?

ಸ್ವತಂತ್ರ ವಿಚಾರದ ಮಾತೆತ್ತುವಾಗ, ಇಂತಹ ವಿಚಾರವಂತರಿಗೆ ಯಾವುದೇ ನೀತಿ ಅಡವಾ ಸದಾಚಾರವಿಲ್ಲವೆ? ಎಂಬ ಪ್ರಶ್ನೆಯನ್ನೂ ಕೇಳಬಹುದು. ಸ್ವತಂತ್ರಾಲೋಚಕನು ಸ್ವಯಂ ಜೀವಿಸಬಯಸುತ್ತಾನೆ. ತಾನು ಜೀವಿಸಬಯಸುವುದರಿಂದ ಆತನು ಪರರನ್ನೂ ಜೀವಿಸಗೊಡುವನು ಬೇರೆಯವರು ತನ್ನೆದುರು ಬೀಳುವಂತಹ ಯಾವ ಕೆಲಸವನ್ನೂ ಅವನು ಮಾಡಲಾರನು ತನ್ನ ಒಡವೆಗಳನ್ನು ಪರರು ಕದಿಯಬೇಕೆಂದಾತನು ಬಯಸದಿರುವುದರಿಂದ ಆತನು ಪರರೊಡವೆಗಳನ್ನು ಅಪಹರಿಸುವುದಿಲ್ಲ. ತನ್ನೊಡನೆ ಅನ್ಯರು ಅಸಭ್ಯ ವ್ಯವಹಾರವನ್ನು ಮಾಡದಿರಬೇಕೆಂಬ ಆಸೆಯಿಂದ ಆತನೂ ಈ ಹವ್ಯಾಸಕ್ಕೆ ಬಲಿಯಾಗಲಾರನು ಇತ್ಯಾದಿಯಾಗಿ ಹಲವಾರು ವಿಷಯಗಳನ್ನು ಎತ್ತಬಹುದು. ಈಶ್ವರ, ವೇದ, ಪುರಾಣ, ಕುರಾನಗಳನ್ನು ಆತನು ತನ್ನ ಮುಂದಿಟ್ಟು ಕೊಳ್ಳಬೇಕಾಗಿಲ್ಲ. ಪರಮಾತ್ಮ ಮತ್ತು ಧರ್ಮಗ್ರಂಥಗಳನ್ನು ತನ್ನ ನಡುವೆ ಹಾಕಿಕೊಂಡು ಸಲವಾರು ಅನಾಹುತಗಳು ಸಂಭವಿಸಿರುವುದನ್ನು ಆತನು ಬಲ್ಲನು. ಮಹಾಯುದ್ಧಗಳ ಸನ್ನಿವೇಶದಲ್ಲಿ ಒಂದೇ ಧರ್ಮವನ್ನು ಮನ್ನಿಸುವ ಜನರು ಇಗರ್ಜಿ, ಮಸೀದಿ ಹಾಗೂ ದೇವಾಲಯಗಳಲ್ಲಿ ತಂತಮ್ಮ ವಿರೋಧಿಗಳಿಗಾಗಿ ತಮ್ಮ ದೇವರೊಡನೆ ಪ್ರಾರ್ಥಿಸಿಕೊಳ್ಳುತ್ತಿರುವುದು ಸುಳ್ಳೆ?

ಹಾಗೆಯೇ ದೇಶಪ್ರೇಮವೂ ಒಂದು ಮಿತಿಯಲ್ಲಿರಬೇಕು ಅದು ಮರ್ಯಾದೆ ಮೀರಿ, ಇತರ ದೇಶಗಳ ಜನರನ್ನು ಆಳಲು ಬಯಸಿದರೆ, ಸಾಮ್ರಾಜ್ಯವಾದಕ್ಕೆ ಪುಷ್ಟಿಯಿತ್ತರೆ, ಆಗ, ಅದೂ ತ್ಯಾಜ್ಯವಾಗುವುದು. ಹಾಗಾಗಿ ನಾವು ಒಂದು ವಿಷಯವನ್ನು ಆಮೂಲವಾಗಿ ಗಾಂಭೀರ್ಯದಿಂದ ಪರಿಶೀಲಿಸಿ ಸತ್ಯಶೋಧನೆ ಮಾಡಬೇಕು

(ಮೂಲ: ಹಲವು)



ಮಹಾರಾಣಿ ಎರಡನೆ ಎಲಿಜಬೆತರು ಸ್ಕೋಟ್‌ಲೇಂಡಿನ ಕಲ್ಲಿದ್ದಲ ಗನಿಯೊಂದಕ್ಕೆ ಇಳಿದು ಅಲ್ಲಿನ ಕಾರ್ಯಕಲಾಪಗಳನ್ನು ಸಮೀಕ್ಷಿಸಲು ಕಿರ್ಕ್ಯಾಲ್ಡಿಯಲ್ಲಿ ಅಧಿಕಾರಿಗಳೊಂದಿಗೆ ಮುನ್ನಡೆಯುತಿದ್ದಾರೆ.

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಡಿವಿಜನ್ ಅಸಿಸ್ಟಾಂಟ್ ಕಮಿಶನರ ರವರ ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕು ಕರಿಯಂಗಳ ಗ್ರಾಮದ ಪೊಳಲಿಯಲ್ಲಿ (ಸರ್ವೆ ನಂಬ್ರ 125/1, 125/2 ಮತ್ತು 119/1 ನೇ ಜೊಲಗಳಲ್ಲಿ) ಹೊಸತಾಗಿ ಜಾನುವಾರು ಸಂತೆಯೊಂದನ್ನು ಜರಗಿಸುವುದೆಂದು ನಿಶ್ಚೈಸಿರುತ್ತದೆ ಈ ಸಂತೆಯು ಈ ವರ್ಷದಿಂದ ಪ್ರಾರಂಭವಾಗಿ ಪ್ರತಿ ವರ್ಷವೂ ಕಾರ್ತಿಕ ಮಾಸದ ಬಹುಳ ಅಮವಾಸ್ಯೆಯ ಮರುದಿವಸ (ಪಾಡ್ಯದಿನ) ದಿಂದ 10 ದಿವಸಗಳವರೆಗೆ ನಡೆಯಲಿರುವುದು ಈ ವರ್ಷದ ಸಂತೆಯು ದಶಂಬರ ೧೧ನೇ ತಾರೀಕಿನಿಂದ ೨೦ನೇ ತಾರೀಕುವರೆಗೆ ಜರಗಲಿರುವುದು

ಈ ಹೊಸ ಸಂತೆಯು ಕುಲಗುಂದ ಜಾನುವಾರು ಸಂತೆಯ ನಂತರ ಅಂದರೆ ನೀತಾನದಿ ಜಾನುವಾರು ಸಂತೆಯ ಮೊದಲು ಜರಗುವುದು

ಈಗ ಜಾನುವಾರು ಸಂತೆಗೆ ಹುನಾಯಿಸಿದ ಸ್ಥಳವು ನೀತಾನದಿಗೆ ಹೋಗುವ ದಾರಿಯಲ್ಲಿರುವುದರಿಂದ ಜಾನುವಾರುಗಳ ಯಜಮಾನರು ಈ ಹೊಸ ಸಂತೆಯಾದ ಕೂಡಲೆ ನೀತಾನದಿ ಸಂತೆಗೆ ಹೋಗಬಹುದು

ಕುಲಗುಂದ ಜಾನುವಾರುಗಳು ಉಪ್ಪಿನಂಗಡಿಗಾಗಿ ಬಂಟ್ವಾಳ ಬಿ ಸಿ ರೋಡ್ ಬಳಿ ಕಳ್ಳಿಗೆಗಾಗಿ ಪೊಳಲಿ ಜಾನುವಾರು ಸಂತೆಗೆ ಸೇರಿ, ಅನಂತರ ಗುರುಪುರಕ್ಕಾಗಿ ಮೂಡಬಿದ್ರಿ ಕಾರ್ಕಳ ಮಾರ್ಗವಾಗಿ, ನೀತಾನದಿ ಜಾನುವಾರು ಸಂತೆಗೆ ತಲ್ಪುವರೆ ಸರಿಯಾದ ಸಾರ್ವಜನಿಕ ದಾರಿಯಿರುತ್ತದೆ.

ಈ ಜಾನುವಾರು ಸಂತೆಯಲ್ಲಿ ಉತ್ತಮವೆಂದು ಪ್ರಕಟವಾದ ಜಾನುವಾರಿಗೆ ರೂಪಾಯಿ 50-ನ್ನು ಬಹುಮಾನವಾಗಿ ಕೊಡುವುದೆಂತ ನಿಶ್ಚೈಸಿರುತ್ತದೆ. ಸಾರ್ವಜನಿಕರೆಲ್ಲಾ ಸಹಕರಿಸಬೇಕಾಗಿ ವಿನಂತಿ ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ 0-25 ನಯಾ ಪೈಸೆಗಳಂತೆ ತಲೆ ತೆರಿಗೆ ವಸೂಲುಮಾಡಲಾಗುತ್ತದೆ ಸಂದರ್ಭಾನುಸಾರ ಅವಶ್ಯಬಿದ್ದಲ್ಲಿ ಸದ್ರಿ ತೆರಿಗೆಯನ್ನು ಹೊರಿಸಲೂಬಹುದು ಪರಂತು ಅಸಿಸ್ಟಾಂಟ್ ಕಮಿಶನರರು ಅವಶ್ಯವೆಂದು ತೋರುವ ಯಾವ ಜಾನುವಾರುಗಳನ್ನೂ ಸದ್ರಿ ತೆರಿಗೆಗಂತ ವಿರಹಿತಪಡಿಸಬಹುದು

ಪಿ. ಎಸ್ ಟಿ ಶೆಟ್ಟಿ,
ಅಸಿಸ್ಟಾಂಟ್ ಕಮಿಶನರರು, ಪುತ್ತೂರು
ಅಸಿಸ್ಟಾಂಟ್ ಕಮಿಶನರರ ಆಫೀಸು, ಪುತ್ತೂರು. ತಾ 20-6-58.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಉಡುಪಿ ಡಿ. ಮುಂ. ಕೋರ್ಟಿನಲ್ಲಿ

ಸ್ಮಾಲ ನಂಬ್ರ 199/1958.

ತೋಸೆ ಸುಬ್ಬಣ್ಣ —ವಾದಿ
ಮತ್ತ
ಮರಿಯಾ ಡಿ. ಸೋಜಬ್ಬಾ ಕೊಡಾ —ಪ್ರತಿವಾದಿರು

ಯವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ 4ನೇ ಪ್ರತಿವಾದಿಳು ಸೆಲಿನಾ ಡಿ ಕೋಜಬ್ಬಾಗೆ ಆಗತಕ್ಕ ವ್ಯಾಜ್ಯದ ನೋಟಿಸು ತಾರೀಕು 16—8—1958ಕ್ಕೆ ಯಿಟ್ಟಿರುವದ್ರಿಂದ ಆ ದಿನ ಸದ್ರಿ ಪ್ರತಿವಾದಿಳು ತನ್ನ ಅಕ್ಷೇಪಣೆ ಹೇಳುವದನ್ನು ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು

P. Padmanabha Rao,
Vakil for Plff.

Dated 1—8—58 Udipi

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸರದಾರ ಜೀವನದ ಕೆಲ ಘಟನೆಗಳು—

ಬೆಳೆಯಸಿರಿ ಎಳೆಯಲ್ಲಿಯೇ ಕಾಣುತ್ತಿತ್ತು!

ಶ್ರೀ ಕೆ. ಎನ್ ಭಟ್, ಶಿರಾಡಿಸಾಲ್.

ಸರದಾರ್ ವಲ್ಲಭಭಾಯಿ ಪರೇಲರು, ತಮ್ಮ ಬಾಲ್ಯದಲ್ಲಿ ಬಡೋದೆಯ ಶಾಲೆಯೊಂದರಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ನಡೆದ ಒಂದು ಘಟನೆಯಿದು.

ಅಧ್ಯಾಪಕರು, ತಮ್ಮ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಬೀಜ ಗಣಿತವನ್ನು ವಿವರಿಸಿ ಹೇಳುತ್ತಿದ್ದರು. ಲೆಕ್ಕ ಮಾಡುವ ಕ್ರಮವನ್ನು ವಿವರಿಸುತ್ತಿದ್ದ ಅವರಿಗೆ, ಕೊನೆ ಕೊನೆಗೆನ್ನುವಾಗ, ಅದೊಂದು ಸಮಸ್ಯೆಯಂತೆಯೇ ತೋರಿತು ಪೂರ್ಣವಾಗಿ. ವಿವರಿಸಿ ಹೇಳಲು ಅವರಿಂದ ಸಾಧ್ಯವಾಗಲಿಲ್ಲ. ಆಗ ಅವರು ಆಲೋಚಿಸುತ್ತ ಕ್ಷಣಕಾಲ ನಿಂತುಕೊಂಡು; ಅತ್ತಿತ್ತ ಸುತ್ತಾಡಿದರು. ಆದರೂ, ಅದೇಕೋ ಆ ಲೆಕ್ಕದ ಸಮಸ್ಯೆ ಬಗೆಹರಿಯಲಿಲ್ಲ! ಇದನ್ನೆಲ್ಲ ನೋಡುತ್ತ ತರಗತಿಯಲ್ಲಿ ಕುಳಿತಿದ್ದ, ಬಾಲಕ ಪರೇಲರು, ಕುಳಿತಿದ್ದ ಬೆಂಚಿನಿಂದ ಮೇಲೆದ್ದು ನಿಂತು "ಸಾರ್...ಈ ಲೆಕ್ಕ ತಪ್ಪಿಂದ ವಿವರಿಸಲಾಗುವುದಿಲ್ಲವೇ?" ಎಂದು ಕೇಳಿದರು.

ತರಗತಿಯ ಹುಡುಗನ ಈ ಮಾತು ಕೇಳಿದ ಉಪಾಧ್ಯಾಯರಿಗೆ, ಸ್ವಲ್ಪ ಮಟ್ಟಿಗೆ ಮಾನಹಾನಿಯಾದಂತಾಯಿತು. ಅವರು ದುರದುರನೆ ನೋಡುತ್ತ ಗದರಿಸುವ ಧ್ವನಿಯಲ್ಲಿ "ಈ ಲೆಕ್ಕವನ್ನು ನಾನು ಮಾಡಲಾರೆನಾದರೆ, ನ ತ್ತಾರು ನೀನು ಮಾಡುವಿಯೋ?....ಹಾಗಾದರೆ ಮಾಡಿತೋರಿಸಿ, ನೀನೇ ಅಧ್ಯಾಪಕನಾಗ. ಎಂದು ವ್ಯಂಗ್ಯವಾಗಿ ನುಡಿದುಬಿಟ್ಟರು!

ಸಿದ್ಧರಾಗಿಯೇ ಇದ್ದ ಸರದಾರರು ಎದ್ದು ಸರಸರನೆ ಕಪ್ಪು ಹಲಗೆಯ ಬಳಿ ನಡೆದು; ಮತ್ತು ಸ್ವಲ್ಪವೂ ತಡವರಿಸದೆ ಆ ಲೆಕ್ಕವನ್ನು ಪೂರ್ಣವಾಗಿ ವಿವರಿಸಿ ಹೇಳಿ, ಮರಳಿದ ಅವರು, ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳದ ಬದಲು, ನೇರಾಗಿ ಹೋಗಿ, ಉಪಾಧ್ಯಾಯರ ಸ್ಥಾನದಲ್ಲಿ ಕುರ್ಚಿಯ ಮೇಲೆಯೇ ಕುಳಿತುಕೊಂಡರು! ಇದನ್ನು ನೋಡಿದ, ಇತರ ವಿದ್ಯಾರ್ಥಿಗಳು ಚಕಿತರಾಗಿ ಸ್ತಬ್ಧರಾಗಿ ನೋಡುತ್ತ ಕುಳಿತರು.

ಉಪಾಧ್ಯಾಯರು ತಮಗಾದ ಈ ಅಪಮಾನವನ್ನು ಸಹಿಸಲಾರದೆ, ಒಳಗೊಳಗೇ ಕುದಿಯುತ್ತ, ಬೇರೆ ದಾರಿಗಾಣದೆ, ಮುಖ್ಯೋಪಾಧ್ಯಾಯರೊಡನೆ ದೂರುಕೊಟ್ಟರು. ಮುಖ್ಯೋಪಾಧ್ಯಾಯರಿಗೂ ಅಸಮಾಧಾನವಾಯಿತು ಹುಡುಗನ ಈ ವರ್ತನೆ, ಸರಿಯೆಂದು ಅವರು ಹೇಗೆ ಹೇಳುವುದು? ಆ ಕೂಡಲೇ ಬಾಲಕ ಪರೇಲರನ್ನು ಕರೆಸಿ, ವಿಚಾರಣೆ ನಡೆಸಿದರು.

"ನೀನು, ಹೀಗೆ ವರ್ತಿಸಿದುದುಂಟೋ?" ಹೌದು. ಸರದಾರರು ಉತ್ತರವಿತ್ತರು.

"ನೀನು ಏಕೆ ಹಾಗೆ ವರ್ತಿಸಿದೆ?"

"ಉಪಾಧ್ಯಾಯರು ಲೆಕ್ಕ ಸರಿಮಾಡಲು ಹೇಳಿ, 'ಮಾಡಿದರೆ ನೀನೇ ಉಪಾಧ್ಯಾಯನಾಗುವಿ, ಎಂದು ಹೇಳಿದುದರಿಂದ, ನಾನು ಲೆಕ್ಕವನ್ನು ಸರಿಯಾಗಿ ಮಾಡಿದ್ದರಿಂದ. ಅವರ ಮಾತಿನಂತೆ, ಉಪಾಧ್ಯಾಯನಾಗಿ ಕುರ್ಚಿಯ ಮೇಲೆ ಕುಳಿತುಕೊಂಡೆ" ಎಂಬ ದಾಗಿ ಸರದಾರರು ದಿಟ್ಟತನದಿಂದ ತಟಕ್ಕನೆ ಹೇಳಿದರು.

ಒಬ್ಬ ವಿದ್ಯಾರ್ಥಿಯು, ಉಪಾಧ್ಯಾಯನ ಸ್ಥಾನದಲ್ಲಿ ಕುಳಿತುಕೊಳ್ಳುವ ಉದ್ಧಟತನದ ವರ್ತನೆ, ಮುಖ್ಯೋಪಾಧ್ಯಾಯರ ಮನಸ್ಸಿಗೂ ಬಹಳ ನೋವನ್ನುಂಟುಮಾಡಿತು. ಆದರೆ ಉಪಾಧ್ಯಾಯರು ಹೇಳಿದುದರಿಂದಲೇ ಅಂತಹ ಪರಿಸ್ಥಿತಿ ಬಂದೊದಗಿದ್ದರಿಂದ, ಏನು ಹೇಳುವುದಕ್ಕೂ ತೋಚದೆ, ಮುಖ್ಯೋಪಾಧ್ಯಾಯರು ಉಭಯಸಂಕಟಕ್ಕೊಳಗಾಗಿ ಕೊನೆಗೆ ಸರದಾರರೊಡನೇ ನೋಡು. ನಿನ್ನ ಈ ತಪ್ಪು ಸಾಮಾನ್ಯವಾದುದಲ್ಲ. ಆದರೂ, ಈ ಸಲ ನಿನಗೆ ಶಾಖಿಮಾಡಲಾಗುವುದು. ಆದರೆ ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡಿದೆಯಾದರೆ, ನಿನ್ನನ್ನು ಈ ಶಾಲೆಯಿಂದಲೇ ಹೊರಗೆ ತಳ್ಳಿಹಾಕಬೇಕಾಗುತ್ತದೆ, ಎಚ್ಚರಿಕೆ!" ಎಂಬುದಾಗಿ ಗದರಿಸಿ ಹೇಳಿದರು.

ಸರದಾರರು ಸ್ವಲ್ಪವೂ ಹೆದರಲಿಲ್ಲ. ಆ ಕೂಡಲೇ ನಿರ್ಭೀತಿಯಿಂದ, "ಯಾವ ಶಾಲೆಯಲ್ಲಿ ಇಂತಹ ಅಧ್ಯಾಪಕರಿರ ತ್ತಾರೋ ಆ ಶಾಲೆಯಲ್ಲಿ ವಿದ್ಯಾಭ್ಯಾಸಮಾಡಲು ನನಗೆ ಇಷ್ಟವಿಲ್ಲ. ತಾವು ನನ್ನನ್ನು ಹೊರಗೆಹಾಕಲು ಕಷ್ಟಪಡುವುದೇ ಬೇಡ! ನಾನಾಗಿಯೇ ಇಲ್ಲಿಂದ ಹೊರಟುಹೋಗುತ್ತೇನೆ!" ಎಂಬುದಾಗಿ ಹೇಳಿದ್ದು ಮಾತ್ರವಲ್ಲ, ಆ ಕೂಡಲೇ ಆ ಶಾಲೆಗೆ ಬೆನ್ನು ತೋರಿಸಿ ಹೊರಟುಹೋದ ಸರದಾರರು ಮತ್ತೆ ಪುನಃ ಆ ಶಾಲೆಯ ಮೆಟ್ಟಲು ಹತ್ತಲಿಲ್ಲ!

— ೨ —

ಸರದಾರರು ಪರೇಲರ ಶಿಕ್ಷಣವನ್ನು ಪಡೆಯುತ್ತಿದ್ದಾಗ, ಅವರ ಕಂಕುಳಲ್ಲಿ ಒಂದು ದೊಡ್ಡ ಹುಣ್ಣು (ಕುರ) ಎದ್ದಿತು. ಅವರು ಅದರ ನೋವಿನಿಂದಾಗಿ ಬಹಳ ಕಂಗಾಲಾದರು. ಮನೆಯಲ್ಲಿ ಎಷ್ಟೋ ಬಗೆಯ ಹಳ್ಳಿಯ ಮದ್ದುಗಳ ಪ್ರಯೋಗವಾಯಿತು. ಯಾರು ಯಾವ ಮದ್ದು ಹೇಳಿದರೂ, ಬಿಡದೆ ಮಾಡುತ್ತಿದ್ದರೂ, ಯಾವ ಪ್ರಯೋಜನವೂ ಆಗಲಿಲ್ಲ. ಕಂಕುಳಲ್ಲಿಯ ಕುರ, ದಿನ ದಿನಕ್ಕೆ ದೊಡ್ಡದಾಗುತ್ತ ಬಂದು ಕೆಂಪುಬಣ್ಣಕ್ಕೆ ತಿರುಗಿ, ಒಡರ ನೋವು ಮತ್ತೂ ಜಾಸ್ತಿಯಾಗತೊಡಗಿತು ಒಂದು ದಿನ ಮನೆಗೆ ಬಂದಿದ್ದ ಹಳ್ಳಿಯ ವೈಕನೊಬ್ಬನು ಆ ಹುಣ್ಣನ್ನು ನೋಡಿ, ಕನಿಕರಪಟ್ಟು ಅದಕ್ಕೆ ಮದ್ದುಕೊಡುವ ವೈದ್ಯನೊಬ್ಬನ ಹೆಸರನ್ನು ಸೂಚಿಸಿದನು. ಆ ವೈದ್ಯನು ಬೇರಾರೂ, ಆಗಿರದೆ ಆ ಊರಿನ ಕ್ಷೌರಿಕನೇ ಆಗಿದ್ದನು. ಕೂಡಲೇ ಅವನನ್ನು ಹೇಳಿಕಳುಹಿಸಲಾಯಿತು. ಮರುದಿನ ಆತನು ಬಂದ., ಹುಣ್ಣನ್ನು ಪರೀಕ್ಷಿಸಿ ಹೇಳಿದನು—"ಇದಕ್ಕೆ ಒಂದೇ ಒಂದು ಮದ್ದು ಇದೆ ನಿಷ್ಪಾಮಿ ಅದರ ಅದರಿಂದ ಗುಣವಾಗ ಬೇಕಷ್ಟೆ" ಅದರ ಅದರೆ.. "ಎನ್ನುತ್ತಿರುವಾಗಲೇ "ಏನು ಏನು? ಯಾವ ಔಷಧಿಯದು? ಎಂದು ಸರದಾರರು ಉತ್ಸಾಹದಿಂದ ಕೇಳಿದರು". "ಔಷಧಿಯೇನೋ ಇದೆ, ಆದರೆ.....ಸ್ವಲ್ಪ ತಮ್ಮ ಮಟ್ಟಿಗೆ ಕಷ್ಟಕರವಾದುದು" ಎಂದು ಕ್ಷೌರಿಕನು ಅನುಮಾನಿಸುತ್ತ ಹೇಳಿದನು.

ವ ನೆಯವರಿಗೆ ಆಶ್ಚರ್ಯವಾಯಿತು. ಕ್ಷೌರಿಕನಿಗೆ ಅದನ್ನು ಹೇಳಿದ್ದು ಒತ್ತಾಯ ಪಡಿಸುವಾಗ ತಿಳಿಸಿದ. "ಒಂದು ಕಬ್ಬಿಣದ ಸಲಾಕೆಯನ್ನು ಬೆಂಕಿಯಲ್ಲಿಟ್ಟು ಕೆಂಪಗೆ ಕಾಯಿಸಿ, ಅದರಿಂದ ಹುಣ್ಣನ್ನು ಸುಡಬೇಕು" ಎಂದ ವಿವರಿಸಿದನು.

ಕ್ಷೌರಿಕನ ಮಾತು ಕೇಳಿ, ಸರದಾರರ ಮನೆಯವರು ಗಾಬರಿಗೊಂಡರು! "ಎಂತಹ ಭಯಂಕರ ಪ್ರಯೋಗ!" ಎಂದು ಎಲ್ಲರೂ ಭಯ ಭೀತರಾದರು. ಆದರೆ ಸರದಾರರು ಮಾತ್ರ, ಸ್ವಲ್ಪವೂ ಧೃತಿಗೆಡಲಿಲ್ಲ. "ಹತ್ತರೊಟ್ಟಿಗೆ ಹನ್ನೊಂದೆಂಬಂತೆ, ಪ್ರಯೋಗವನ್ನು ಮಾಡಿಸಿಕೊಳ್ಳಲು ಅವರು ಉತ್ಸಾಹದಿಂದ ಸಿದ್ಧರಾದರು.

ಆ ಕೂಡಲೇ ಕಬ್ಬಿಣದ ಸಲಾಕೆಯೊಂದನ್ನು ಧಗಧಗಿಸುವ ಕೆಂಡದಲ್ಲಿ ಹುದುಗಿಸಿ ಇಟ್ಟು ಕೆಂಪಗೆ ಕಾಯಿಸಲಾಯಿತು. ಅದನ್ನು ಕೆಂಡದಿಂದ ಹೊರಗೆಳೆದು ನೋಡಿದಾಗ ಅದು ಕಾದು ಕೆಂಡದಂತೆಯೇ ಕೆಂಪಾಗಿದ್ದು "ಅಬ್ಬಾ" ಎಂದೆನಿಸುವಂತಾಗಿದ್ದಿತು. ಅದನ್ನು ನೋಡಿದ ಸರದಾರರ ಮನೆಯವರೆಲ್ಲರೂ ನಡುಗ ತೊಡಗಿದರು. ಮನೆಯವರೆಲ್ಲರೂ ಹೆದರಿದುದನ್ನು ಕಂಡ ಕ್ಷೌರಿಕನಿಗೂ ಎದೆ "ಝಲ್" ಎಂದಿತು. ಕೆಂಪಗೆ ಕಾದ ಸಲಾಕೆಯನ್ನು ಹುಣ್ಣಿಗೆ, ತಗಲಿಸಲು ಆತನ ಕೈ ಮುಂದಾಗದಂತಾಯಿತು.

ಹಿಂದೆ ಮುಂದೆ ನೋಡುತ್ತಿರುವ ಕ್ಷೌರಿಕನನ್ನು ಕಂಡ ಸರದಾರರು, ಗಟ್ಟಿಯಾಗಿ—"ಏಕೆ ತಡ ಮಾಡುತ್ತಿರುವಿಯೋ? ಕಾದ ಸಲಾಕೆಯು ಆರಿ ಹೋಗುತ್ತಿದೆ!" ಎಂದು ಹೇಳಿದರು ಆಗ ಕ್ಷೌರಿಕನು ಮತ್ತೆ ತಡಮಾಡದೆ, ಕೆಂಪಗೆ ಕೆಂಡದಂತಿದ್ದ ಸಲಾಕೆಯನ್ನು ಹುಣ್ಣಿಗೆ ಸರಿಯಾಗಿ ಹಿಡಿದು ಒತ್ತಿ ಬಿಟ್ಟನು! "ಜರ್" ಎಂಬ ಶಬ್ದದೊಡನೆ ಒಳಗಿನ ಕಶ್ಮಲ ಹರಿಯ ತೊಡಗಿತು. ಪರೇಲರಿಗೆ ನೋವಾಯ್ತೋ? ಏನೋ ಎಂದು ಗ್ರಹಿಸಿದ ಕ್ಷೌರಿಕನು—ಸಲಾಕೆಯನ್ನು ಈಚೆಗೆಳೆದಾಗ—ಸರದಾರರು ನೋವಾಗಿದ್ದರೂ ಸಹಿಸಿಕೊಂಡು, ಏಕೆ ಅನುಮಾನಿಸುವೆ? ಸಲಾಕೆಯನ್ನು ನಾಲ್ಕು ಸುತ್ತಲೂ, ತಿರುಗಿಸಿ, ಹುಣ್ಣನ್ನು ಸುಟ್ಟು ಬಿಡು" ಎಂದರು. ಆಗಲೂ, ಕ್ಷೌರಿಕನಿಗೆ ಅನುಮಾನವಾಯಿತು. ಆ ಒತ್ತನೆಯೇ ಸರದಾರರು, ಆ ಸಲಾಕೆಯನ್ನು ಸ್ವತಃ ತಾನೇ ಕೈಯಲ್ಲಿ ತೆಗೆದುಕೊಂಡು, ಹುಣ್ಣಿನ ಮೇಲೆ ಒತ್ತಿ ಹಿಡಿದು ತಿರುಗಿಸಿದರು. ಕೆಟ್ಟ ರಕ್ತ ಕೀವು ಎಲ್ಲವೂ ಹರಿದುಹೋಯಿತು. ಪರೇಲರಿಗೆ ಆಗ ಸ್ವಲ್ಪ ಸುಖವಾದಂತೆ ಭಾಸವಾಯಿತು ಸರದಾರರ ಈ ಸಾಹಸವನ್ನು ಕೇಳಿದ, ಅವರ ಸ್ನೇಹಿತರೆಲ್ಲರೂ, ಅವಾಕ್ಕಾದರು

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನೇದಿರಿ

ಹೆಚ್ಚೇದಾಯಿಕೆ

ಎಸ್. ಆರ್.

ಬೀಡಿಗಳನ್ನು

S. R. BEEDI WORKS UDIPI, S. K.

TRADE SR MARK

REGD.

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೇದಿರಿ!

(ಬರೆದವರು- ಎಮ್. ರಘುನಂದನ ಬಿ.ಎಲ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ- ಐದಾಣೆ ಮಾತ್ರ ಟಿ. ಖ ಪ್ರತ್ಯೇಕ.

ನವಯುಗ ವೆಸ್, ಉಡುಪಿ

ಹಳೆಯ ರೋಗಕ್ಕೆ ಹೊಸ ಮದ್ದು—

ಸಾಮಾಜಿಕ ಸುರಕ್ಷಣಾಯೋಜನೆಗಳು

ರೋಗರುಜಿನಗಳು, ಅಪಘಾತಗಳು, ಮಾತೃಕಲ್ಯಾಣ ನಿರುದ್ಯೋಗ, ವೃದ್ಧಾಪ್ಯ ಮತ್ತು ಮರಣ—ಇವು ಕೈಗಾರಿಕಾ ಆರ್ಥಿಕ ವ್ಯವಸ್ಥೆಗೊಳಪಡುವ ಕಾರ್ಮಿಕರೆಲ್ಲರೂ ಎದುರಿಸಬೇಕಾದ ಕಂಟಕಗಳಾಗಿರುವುವು. ಈ ಕಂಟಕಗಳು ಭಾರತಕ್ಕೆ ಮಾತ್ರವಲ್ಲದೆ ವಿಶ್ವದ ಎಲ್ಲಾ ಭಾಗಗಳಲ್ಲಿರುವ ಕಾರ್ಮಿಕರಿಗೂ ನಿರಂತರವಾಗಿ ಕಾಡುವ ಕಂಟಕಗಳಾಗಿರುವುವು. ಈ ಅಪಾಯಗಳಿಂದ ಸಾಮಾಜಿಕ ಸುರಕ್ಷಣೆಯನ್ನು ಸಾಧಿಸುವ ಪ್ರಯತ್ನವೇ ಸಾಮಾಜಿಕ ಸುರಕ್ಷಣಾಯೋಜನೆಯ ಮುಖ್ಯ ಗುರಿಯಾಗಿರುವುದು.

ಸಾಮಾಜಿಕ ಸುರಕ್ಷಣೆಯು ಸಮಸ್ಯೆಯು ನಿನ್ನೆಮೊನ್ನೆಯ ಸಮಸ್ಯೆಯೇನಲ್ಲ. ಬಹಳ ಹಿಂದಿನಿಂದಲೂ ನಮ್ಮೊಡನೆ ಸೆಣಸುತ್ತಿರುವ ಸಮಸ್ಯೆ ಇದರ ಪರಿಣಾಮವಾಗಿ ಮಾನವ ಇತಿಹಾಸದಲ್ಲಿ, ಅನೇಕ ಸುರಕ್ಷಣಾ ವ್ಯವಸ್ಥೆಗಳು ಆವಿರ್ಭವಿಸಿದವು. ಅವುಗಳಲ್ಲಿ ಕುಟುಂಬ ಜೀವನ, ವರ್ಗ ಜೀವನ ಹಾಗೂ ಸಾಮೂಹಿಕ ಜೀವನ ವ್ಯವಸ್ಥೆಗಳೇ ಮೊದಲನೆಯವೆನ್ನಬಹುದು.

ಈ ಜೀವನ ವ್ಯವಸ್ಥೆಯಲ್ಲಿ ಅಡಗಿರುವ ಮೂಲತತ್ವವೆಂದರೆ: ಅಪಾಯಕ್ಕೊಳಗಾಗಬಹುದಾದ ಜನರೆಲ್ಲರೂ ಹಣಕಾಸನ್ನೂ ಇತರ ಸಾಧನ ಸಂಪತ್ತುಗಳನ್ನೂ ಶೇಖರಿಸಿ, ಅಗತ್ಯವಿದ್ದವರಿಗೆ ಅದನ್ನು ಒದಗಿಸುವುದು. ವಾಸ್ತವವಾಗಿ ಅವಿಭಕ್ತ ಕುಟುಂಬದಲ್ಲಿ ಅಂತರ್ಗತವಾಗಿರುವ ಮೂಲಭೂತ ತತ್ವವೇ ಇದು.

ಭಾರಿ ಪ್ರಮಾಣದ ಕೈಗಾರಿಕೆಗಳು ಮತ್ತು ವಿಶ್ವವ್ಯಾಪಿ ಮಾರುಕಟ್ಟೆಗಳು ಆವಿರ್ಭವಿಸಿದಂತೆಲ್ಲ ಆರ್ಥಿಕ ಭದ್ರತೆಯು ಅಡಿಗಲ್ಲಿನಂತಿದ್ದ, ಪುರಾತನವೂ ಸುವ್ಯವಸ್ಥಿತವೂ ಆಗಿದ್ದ, ಅವಿಭಕ್ತ ಕುಟುಂಬ ವ್ಯವಸ್ಥೆಯು ತನ್ನ ಸತ್ವವನ್ನು ಕಳೆದುಕೊಳ್ಳತೊಡಗಿತು, ವೈಯಕ್ತಿಕ ತನವು ಅದರ ಸ್ಥಾನವನ್ನು ಆಕ್ರಮಿಸತೊಡಗಿತು. ಇದು ಸಂಸಾರವನ್ನು ಸಾಗಿಸುವವರ ವರಮಾನದಲ್ಲಿ ಕೊರತೆಯನ್ನು ತಂದು ಆರ್ಥಿಕ ಅತಂತ್ರತೆಗೆ, ದಾರಿದ್ರ್ಯಕ್ಕೆ, ನಿರಾಶೆಗೆ ಎಡೆಮಾಡಿಕೊಟ್ಟಿತು. ಇಂತಹ ಸಂದರ್ಭದಲ್ಲಿ ಸಮಾಜವು ಈ ಸಮಸ್ಯೆಯನ್ನು ಎದುರಿಸುವುದು ಅನಿವಾರ್ಯವಾಯಿತು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಸಮಸ್ಯೆಯನ್ನು ಪರಸ್ಪರ ಸಹಾಯ ಸಂಸ್ಥೆಗಳ ಮೂಲಕ ಬಗೆಹರಿಸಲು ಪ್ರಯತ್ನಿಸಲಾಯಿತು. ಸರ್ವ ಸಾಮಾನ್ಯವಾದ ವರ್ಗ ಅಥವಾ ವೃತ್ತಿಯವರು ಏರ್ಪಡಿಸಿಕೊಂಡ ಈ ಸಂಸ್ಥೆಗಳು ಸದಸ್ಯ ಶುಲ್ಕ ಇತ್ಯಾದಿಗಳಿಂದ ಸಂಗ್ರಹಿಸಿದ ಹಣವನ್ನು ಬಳಸಿಕೊಂಡು ಮೇಲೆ ಹೇಳಿದ ಸಾಮಾಜಿಕ ಅವಘಡಗಳಿಂದ, ತಮ್ಮ ಸದಸ್ಯರನ್ನು ಪಾರುಗೊಳಿಸುತ್ತಿದ್ದವು. ಪರಸ್ಪರ ಸಹಾಯ ಸಂಸ್ಥೆಗಳು ಮುಖ್ಯವಾಗಿ ಸ್ವಯಂಸೇವಾ ಸಂಸ್ಥೆಗಳಾಗಿದ್ದವು. ಒಂದೇ ವೃತ್ತಿಯನ್ನು ಅವಲಂಬಿಸಿದ್ದ, ಹಾಗೂ ಒಂದೇಕಡೆ ವಾಸಮಾಡುತ್ತಿದ್ದ ಒಂದೇ ವರ್ಗದ ಜನರು ಇಂತಹ ಸೇವಾ ಸಂಸ್ಥೆಗಳನ್ನು ರೂಪಿಸಿಕೊಳ್ಳುತ್ತಿದ್ದರು. ಪ್ರತಿಯೊಬ್ಬ ಸದಸ್ಯನೂ ಆ ಸಂಸ್ಥೆಯ ಸರ್ವ ಪ್ರಧಾನ ನಿಧಿಗೆ ಕ್ರಮವಾಗಿ ಚಂದಾ ನೀಡುತ್ತಿದ್ದನು. ಯಾವುದೇ ಸೌಲಭ್ಯದ ಅಗತ್ಯವಿದ್ದವರಿಗೆ ಈ ನಿಧಿಯಿಂದ ಹಣವನ್ನು ಒದಗಿಸಲಾಗುತ್ತಿತ್ತು. ಈ ಸೌಲಭ್ಯಗಳು ಸಂಸ್ಥೆಯ ಸದಸ್ಯರಿಗೆ ಮಾತ್ರ ಮೀಸಲಾಗಿದ್ದುದರಿಂದ, ಈ ಯೋಜನೆಯ ವ್ಯಾಪ್ತಿಗೆ ಬಹುತೇಕ ಕಾರ್ಮಿಕರು ಸೇರಿಕೊಳ್ಳಲು ಸಾಧ್ಯವಾಗಲಿಲ್ಲ. ಅಜ್ಞಾನ ಹಾಗೂ ಅಲ್ಪ ವರಮಾನದಿಂದಾಗಿ ಸಮಾಜದ ಕೆಳದರ್ಜೆಯ ಜನತೆಗೆ, ಈ ಯೋಜನೆಯ ಪ್ರಯೋಜನವನ್ನು ಪಡೆಯುವುದು ದುಸ್ಸಾಧ್ಯವಾಯಿತು.

ಪರಸ್ಪರ ಸಹಾಯ ಸಂಸ್ಥೆಗಳು ಈ ಸಮಸ್ಯೆಯನ್ನು ಬಿಡಿಸುವುದರಲ್ಲಿ ಅಸಮರ್ಥವಾದಾಗ, ಈ ಸಮಸ್ಯೆಗೆ ಪರಿಹಾರವನ್ನು ಒದಗಿಸುವ ಪ್ರಯತ್ನವನ್ನು ಸರ್ಕಾರವು ಕೈಗೊಂಡಿತು. ತತ್ಪರಿಣಾಮವಾಗಿ ಬಂದ ಸಾಮಾಜಿಕ ಕಾರ್ಯಪಥಾನವೇ ಕಡ್ಡಾಯ ಸಾಮಾಜಿಕ ವಿಮೆ. ಪ್ರಥಮತಃ, ಜರ್ಮನಿಯಲ್ಲಿ, ಬಿಸ್ಮಾರ್ಕನು ಈ ವಿಮಾ ಯೋಜನೆಯನ್ನು ಆರಂಭಿಸಿ ಅನುಷ್ಠಾನಕ್ಕೆ ತಂದನು. ಅಲ್ಲಿಂದೀಚೆಗೆ, ಮುಂದುವರಿದ ರಾಷ್ಟ್ರಗಳೆಲ್ಲವೂ ವ್ಯಾಪಕವಾದ ಸಾಮಾಜಿಕ ವಿಮಾ ಯೋಜನೆಗಳನ್ನು ಅಂಗೀಕರಿಸಿದವು. ಅಷ್ಟಾಗಿ ಮುಂದುವರಿಯದೇ ಇದ್ದ ರಾಷ್ಟ್ರಗಳಾದ ಚಿಲಿ, ಬ್ರೆಜಿಲ್, ಈಜಿಪ್ಟ್, ಇಸ್ರೇಲ್, ಗ್ರೀಸ್ ಮತ್ತು ಚೀನಾಗಳಲ್ಲಿಯೂ ಈ ಸಾಮಾಜಿಕ ಯೋಜನೆಯ ಆಚರಣೆಗೆ ಬಂದಿತು. ಹಣಕಾಸಿನ ಕೊರತೆ, ಭಿನ್ನವಾದ ಆರ್ಥಿಕ ಪರಿಸ್ಥಿತಿಗಳಿಂದಾಗಿ, ಆರಂಭದಲ್ಲಿ ಸಾಮಾಜಿಕ ವಿಮಾಯೋಜನೆಗಳನ್ನು ಎಲ್ಲಾ ಕಡೆಗಳಲ್ಲಿಯೂ ಆರಿಸಿದ ವರ್ಗದ ಜನತೆಗಾಗಿ, ನಿರ್ದಿಷ್ಟ ಅಪಾಯಗಳಿಂದ ವಿಮುಕ್ತಗೊಳಿಸುವ ದೃಷ್ಟಿಯಿಂದ ಮಾತ್ರವೇ ಆಚರಣೆಗೆ ತರಲಾಯಿತು. ಇಂತಹ ಯೋಜನೆಗಳಿಗೆ, ಮಾಲಿಕರು, ಕಾರ್ಮಿಕರು ಮತ್ತು ಸರ್ಕಾರ ಈ ತ್ರಿಪಕ್ಷಗಳೂ ಹಣವನ್ನು ಒದಗಿಸುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ಈ ವಿಮಾ ಯೋಜನೆಯ ವ್ಯಾಪ್ತಿಯನ್ನು ನಾನಾ ಮುಖವಾಗಿ ವಿಸ್ತರಿಸಲಾಗಿದೆ. ಒಂದು, ಇಡಿ ಜನತೆಗೆ, ರೋಗರುಜಿನಗಳು, ಮಾತೃಕಲ್ಯಾಣ, ಅಶಕ್ತತೆ, ನಿರುದ್ಯೋಗ, ವೃದ್ಧಾಪ್ಯ ಮತ್ತು ಮರಣ ಇವೇ ಮೊದಲಾದ ಅಪಾಯಗಳಿಂದ ಮುಕ್ತಿಯನ್ನು ನೀಡುವಂತೆ ಈ ವಿಮಾಯೋಜನೆಗಳು ವಿಸ್ತಾರಗೊಂಡಿವೆ ಫ್ರಾನ್ಸ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗಳಲ್ಲಿ ಇಂತಹ ವ್ಯಾಪಕವುಳ್ಳ ವಿಮಾಯೋಜನೆಗಳು ಆಚರಣೆಯಲ್ಲಿವೆ.

ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು ೧೯೩೭ರಲ್ಲಿ ಕೈಗಾರಿಕೆ, ವಾಣಿಜ್ಯ ಮತ್ತು ಬೇಸಾಯ ಕ್ಷೇತ್ರಗಳಲ್ಲಿರುವ ಕಾರ್ಮಿಕರ ಆರೋಗ್ಯ ವಿಮೆಯ ಸಂಬಂಧವಾದ ಎರಡು ಒಡಂಬಡಿಕೆಗಳನ್ನು ಪರಿಗ್ರಹಿಸುವ ಮುನ್ನವೇ ಭಾರತದಲ್ಲಿ ೧೯೩೨ರ ಕಾರ್ಮಿಕರ ಪರಿಹಾರ ಕಾನೂನು, ಹಾಗೂ ಮಾತೃಕಲ್ಯಾಣ ಕಾನೂನು, ಆಚರಣೆಯಲ್ಲಿದ್ದು, ಅಶಕ್ತವಾದ, ಅಪಾಯಕ್ಕೀಡಾದ ಕಾರ್ಮಿಕರಿಗೆ ಪರಿಹಾರವನ್ನೂ, ಮಹಿಳಾ ಕೆಲಸಗಾರರಿಗೆ ಮಾತೃಕಲ್ಯಾಣ ಸೌಲಭ್ಯವನ್ನೂ ಒದಗಿಸಿಕೊಡುತ್ತಿದ್ದವು. ಆದಾಗ್ಯೂ ಈ ಕಾರ್ಯಕ್ರಮಗಳು ದುಡಿಮೆಯ ವರ್ಗದ ಜನತೆಯಲ್ಲಿ ಆರ್ಥಿಕ ಅಭದ್ರತೆಯ ಸಮಸ್ಯೆಯನ್ನು ಸ್ವತಿಸಿರಲಿಲ್ಲ. ಕಾರ್ಮಿಕರ ಪರಿಹಾರ ಕಾನೂನಿನಿಂದ ಪರಿಹಾರವನ್ನು ಪಡೆಯುವುದು ಅನಕ್ಷರಸ್ಥ ಕಾರ್ಮಿಕರಿಗೆ ಅನೇಕ ವೇಳೆ ಕ್ಲಿಷ್ಟವಾಗುತ್ತಿತ್ತು. ಅದಲ್ಲದೆ, ಉದ್ಯೋಗದಲ್ಲಿರುವಾಗ ಆದ ಅಪಘಾತದಿಂದ, ಶಾಶ್ವತ ಅಶಕ್ತರಾದ ಕೆಲಸಗಾರರಿಗೂ, ಮೃತರಾದ ಕೆಲಸಗಾರರ ಸಂಬಂಧಿಕರಿಗೂ ಪರಿಹಾರವನ್ನು ಪಡೆಯಲು ಅನುಕೂಲವಾದ ನಿಬಂಧನೆಗಳಿರಲಿಲ್ಲ.

ಮಾತೃಕಲ್ಯಾಣಕ್ಕೆ ಸಂಬಂಧಪಟ್ಟ ಕಾನೂನು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿದ್ದಿತು. ಈ ಕಾನೂನಿನ ಪ್ರಕಾರ ನಗದು ಹಣವನ್ನು ಮಾತೃಕಲ್ಯಾಣಕ್ಕಾಗಿ ಕೊಡಬೇಕಾಗುತ್ತಿತ್ತು. ಅದರಿಂದ ಮಾಲಿಕರು ಹೆಚ್ಚಾಗಿ ವೈವಾಹಿಕ ಸ್ತ್ರೀಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿರಲಿಲ್ಲ. ಅನೇಕ ವೇಳೆ ವೈವಾಹಿತ ಸ್ತ್ರೀಯರು ವೃಥಮತಃ ಗರ್ಭವತಿಯಾದ ಚಿಹ್ನೆ ಕಂಡುಬಂದಾಗ ಅವರನ್ನು ಕೆಲಸದಿಂದ ತೆಗೆದುಬಿಡುತ್ತಿದ್ದರು.

ಆದ್ದರಿಂದ ಈ ಕಾನೂನುಗಳು, ಇಂದು ನಾವು ಪರಿಗ್ರಹಿಸಿರುವ ಸಾಮಾಜಿಕ ವಿಮಾ ಯೋಜನೆಯ ಹತ್ವಗಳನ್ನು ಒಳಗೊಂಡಿರುವುದಿಲ್ಲವೆನ್ನಬಹುದು. ಅವುಗಳನ್ನು ಸಾಮಾಜಿಕ ನೆರವನ್ನೊದಗಿಸುವ ಕಾರ್ಯಕ್ರಮಗಳೆಂದು ಕರೆಯಬಹುದು. ಕಾರ್ಮಿಕರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗುವ ಸ್ವಭಾವದೇಶದ ವಿವಿಧ ಭಾಗಗಳಲ್ಲಿರುವ ವಿಭಿನ್ನ ಆರ್ಥಿಕ ವ್ಯವಸ್ಥೆ, ಕೆಲಸಗಾರರ ಅತ್ಯಲ್ಪ ವರಮಾನ ಈ ಎಲ್ಲಾ ಕಾರಣಗಳಿಂದಾಗಲಿ, ಇದುವರೆಗೂ, ಕಾರ್ಮಿಕರಿಂದ ಕ್ರಮವಾದ ಚಂದಾಪಡೆಯುವಂತಹ ಯಾವ ಸಾಮಾಜಿಕ ವಿಮಾಯೋಜನೆಯನ್ನೂ ಆಚರಣೆಗೆ ತರಲು ಸಾಧ್ಯವಾಗಲಿಲ್ಲ. ಈ ಮಾರ್ಗದಲ್ಲಿ ೧೯೪೦ರ ಮಾರ್ಚಿತಿಂಗಳಲ್ಲಿ ಪ್ರಥಮ ಹೆಜ್ಜೆಯನ್ನು ಹಾಕಲಾಯಿತು. ಭಾರತ ಸರ್ಕಾರದವರು, ಕೈಗಾರಿಕಾ ಶಾರ್ಮಿಕರಿಗಾಗಿ ಆರೋಗ್ಯ ವಿಮಾ ಯೋಜನೆಯನ್ನು ತಯಾರಿಸುವುದಕ್ಕಾಗಿ ಅಧಿಕಾರಿಯೊಬ್ಬನ್ನು ನೇಮಿಸಿದ್ದು ಆಗಲೇ, ಈ ಅಧಿಕಾರಿಯು ೧೯೪೦ರಲ್ಲಿ ಭಾರತಕ್ಕೆ ಆಗಮಿಸಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಹಲವು ಅಧಿಕಾರಿಗಳ ನೆರವನ್ನು ಪಡೆದು ಯೋಜನೆಯೊಂದನ್ನು ತಯಾರಿಸಿದರು. ಈ ಯೋಜನೆಯೇ ಅಂತಿಮವಾಗಿ ಕಾರ್ಮಿಕರ ಸರಕಾರಿ ಜೀವವಿಮಾ ಕಾನೂನಾಗಿ ೧೯೪೮ರಲ್ಲಿ ರೂಪುಗೊಂಡಿತು.

ವಚನಭಂಗಕ್ಕೆ ಅವರೂ ಬಲಿಬಿದ್ದರು

(೦ನೇ ಪುಟದಿಂದ)

ಇಂತಹ ಗೋಳೀಬಾರು ನಡೆದರೆ, ಅದಕ್ಕೆ ತಮ್ಮ ವಿರೋಧ ಸೂಚಿಸುವ "ಕಾರ್ಮಿಕರ ಸರಕಾರ" ಕಮ್ಯುನಿಸ್ಟರ ಕೇರಳದಲ್ಲಿ ಕಾರ್ಮಿಕರ ಮೇಲೂ ಗುಂಡೆಸೆವ ಪವಿತ್ರ ಕಾರ್ಯವನ್ನು ಮಾಡಿತು! ಹಾಗಾದರೆ ಕೇರಳದಲ್ಲಿ ಇಂದು ನಡೆಯುತ್ತಿರುವುದೇನು? ಕಮ್ಯುನಿಸ್ಟರು ಹಾಕಿಕೊಡುವ ಸತ್ಪಂಪ್ರದಾಯ ಯಾವುದು? ಅತ್ಯ ಸಾಮ್ಯವಾದ ಮತ್ತು ಪ್ರಜಾಪ್ರಭುತ್ವಗಳೊಳಗೆ ಬಿರುಸಿನ ತಿಕ್ಕಾಟ ನಡೆಯುತ್ತಿದೆ. ಯಾವುದರ ಕೈ ಮೇಲೆಂದು ಮುಂದೆ ಕಾಣಲಿದೆ. ಈ ಘರ್ಷಣೆಯಿಂದ ಕಾವೇರಿ ಕೇರಳದ ಜನನಾಯಕ ಮಂತ್ರಿವರ್ಯರು ಹೆಚ್ಚುಚ್ಚು ಆಡುತಿದ್ದಾರೆನ್ನಬೇಕೆ? ಅಥವಾ ಆಡಿದಷ್ಟು ಸುಲಭದಲ್ಲಿ ಮಾಡಲಾಗುವುದಿಲ್ಲವೆಂಬುದನ್ನು ಕಮ್ಯುನಿಸ್ಟರೂ ಇದೀಗ ಅರಿತುಕೊಂಡರೆಂದು ತಿಳಿಯಬೇಕೆ?

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦ (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ' ವಾರಪತ್ರಿಕೆ
ಉ ಡು ಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

Edited Printed & Published by K. H. Shetty, at the Navayuga press, UdipiS. India

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೮

NAVAYUGA INDEPENDENCE DAY SPECIAL 1958

ಬೆಲೆ { ಮೂರಾಣೆ (೧೯ ನಯೇ ಪೈಸೆ)

ನಮಗೆ ಬೇಕಾಗುವ ಆಹಾರವನ್ನು ನಮ್ಮ ದೇಶದಲ್ಲೆ ಬೆಳೆಸಿದ್ದಲ್ಲಿ—
ಹೊರಗಿನವರ ಸಂಪತ್ತಿನ ಮೇಲೆ ಹೊಂದಿಕೊಂಡಿರುವುದನ್ನು ಕಡಿಮೆಮಾಡಿದ್ದಲ್ಲಿ
ಮಾತ್ರವೇ

ನಮ್ಮ ಸಂಪತ್ತನ್ನು ಬೆಳೆಸುವುದರ ನಲುವಾಗಿ ಸರ್ವ ಪ್ರಯತ್ನ ಮಾಡೋಣ.
ನಾವೆಲ್ಲರೂ ನಮ್ಮ ಕರ್ತವ್ಯವನ್ನು ನಿರ್ವಹಿಸೋಣ.

ಹದಿನಾಲ್ಕು ಕೋಟಿಗೂ ಮಿಕ್ಕಿದ ಜಲಾವಣೆ ಭಂಡವಲ.

ಟಿ. ಎ. ಪೈ, ಬಿ ಕಾಂ (ಜೊಂ)
ಎ ಐ ಐ ಬಿ ಯ.ಪ್ ಆರ್ ಇ ಯಸ್. (ಲಂಡನ್)
ಜನರಲ್ ಮೆನೇಜರ್

ಡಾ। ಟಿ. ಯಂ. ಎ. ಪೈ,
ಯಂ ಬಿ & ಬಿ ಯಸ್
ಮೆನೇಜಿಂಗ್ ಡೈರೆಕ್ಟರ್

THE CANARA INDUSTRIAL & BANKING SYNDICATE LTD.

H. O. **UDIPI.** ESTD: 1925.

ಹೆಚ್ಚು ಹೊಸ ಶಾಖೆಗಳು

ದಿನೇ ದಿನೇ ಹೆಚ್ಚುತ್ತಿರುವ ನಮ್ಮ ಹಿತೈಷಿಗಳ ಸೇವೆಗಾಗಿ, ಅತಿ ಶೀಘ್ರದಲ್ಲಿ ನಮ್ಮ ಬ್ಯಾಂಕಿನ ಶಾಖೆಗಳನ್ನು ಈ ನಗರಗಳಲ್ಲಿ ತೆರೆಯುವೆವೆಂದು ತಿಳಿಸಲು ಹರ್ಷಿಸುತ್ತೇವೆ.

ಬಳ್ಳಾರಿ
ಬಿಜಾಪುರ
ಗದಗ
ರಾಯಚೂರು
} ಮೈಸೂರು ರಾಜ್ಯ.
ಕೊಲ್ಹಾಪುರ....ಬೊಂಬಾಯಿ ರಾಜ್ಯ.
ತಲ್ಲಿಚೇರಿ ....ಕೇರಳ ರಾಜ್ಯ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿರುವ ಷೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದಾದುದು.

ಪ್ರಧಾನ ಕಛೇರಿ: **ಮಂಗಳೂರು.**

ಆಡಳಿತ ಕಛೇರಿ: **ಬೆಂಗಳೂರು.**

ಒಟ್ಟು ಸಾಧನ ಸಂಪತ್ತು **23** ಕೋಟಿ ರೂ.ಗಳಿಗೂ ಮೀರಿದೆ.

INDIA'S MOST DURABLE & ECONOMICAL

DIESEL TRUCK & BUS CHASSIS....

TATA-MERCEDES-BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD : : MANGALORE.

'Navayuga' Independence Day Special 1958
Vol. 37
No. 48
ಸಂಪುಟ ೩೭
ಸಂಚಿಕೆ ೪೮

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೮

14—8—1958

* * * * * * * * * * * *

ಏಕಾದಶ ವರ್ಷೀಯ ಸ್ವಾತಂತ್ರ್ಯ ಜ್ಯೋತಿ

ಸ್ವಾತಂತ್ರ್ಯದಿನಾಚರಣೆಯ ಸುದಿನದಲ್ಲಿ ನಮ್ಮ ಸ್ವಾತಂತ್ರ್ಯಕ್ಕೆ ಕಾರಣೀಭೂತರಾದ ಸಾವಿರ ಸಂಖ್ಯೆಯ ದೇಶಭಕ್ತರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುವುದರೊಡನೆ, ನಾವೂ ನಮ್ಮ ರಾಷ್ಟ್ರದ ಅಭಿವೃದ್ಧಿಗಾಗಿ ನಮ್ಮ ಕೈಲಾದ ಸೇವೆಯನ್ನು ಸಲ್ಲಿಸುವ ದೃಢ ನಿರ್ಧಾರವನ್ನೂ ಮಾಡಬೇಕು; ಹಾಗಾದರೇನೇ ನಾವು ಒದಗಿದ ನಮ್ಮ ಸ್ವಾತಂತ್ರ್ಯವನ್ನು ಉಳಿಸಬಲ್ಲೆವು, ದಾರಿದ್ರ್ಯದಿಂದ ಬಳಲುತ್ತಿರುವ ದೇಶವನ್ನು ಎತ್ತರಿಸಲು ಶಕ್ತರಾದೇವು.

ಅಗೋಸ್ತು ೧೫ ಪ್ರತಿವರ್ಷವೂ ಬರುತ್ತದೆ ಮತ್ತು ಬಂದಂತೆಯೇ ಹೋಗುತ್ತದೆ. ಆದರೆ, ಕಳೆದ ಹೊತ್ತು ಮಾತ್ರ ಮತ್ತೆ ಬರಲಾರದೆಂಬುದು ಖಂಡಿತ. ನಮ್ಮ ಭಾರತನೂರಾರು ವರ್ಷಗಳು ಪರಕೀಯರ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡುಪಡಬಾರದ ಪಾಡನ್ನೂ, ಸಹಿಸಲಾರದ ಬೇಗೆಯನ್ನೂ ಪಡೆಯಿತೆಂಬುದು ನಿಜ; ಅಂತೆಯೇ ನಾವು ಹನ್ನೊಂದು ವರ್ಷ ಪೂರ್ವದಲ್ಲಿ ಅದರಿಂದ ಹೊರಬಂದು ನಮ್ಮ ಜೀವನವನ್ನು ನಾವೇ ರೂಪಿಸುವ, ನಮ್ಮ ಶಾಸನವನ್ನು ನಾವೇ ಮಾಡಿಕೊಳ್ಳುವ ಅಧಿಕಾರವನ್ನೂ ಪಡೆದೆವು. ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ನಾವೆಲ್ಲರೂ ಸ್ವಪ್ನ ಮಂದಿರವನ್ನು ಕಂಡಿದ್ದೆವು. "ಬ್ರಿಟಿಷರಾಳುವ ಭಾರತದಲ್ಲಿ ಮಾತ್ರ ಭಿಕ್ಷುಕರಿರಬಹುದು; ನನ್ನ ಭಾರತದಲ್ಲಿ ಭಿಕ್ಷುಕರೇ ಇಲ್ಲ" ಯೆಂದು ಹಿಂದೊಮ್ಮೆ ನಮ್ಮ ಇಂದಿನ ಜನಪ್ರಿಯ ಪ್ರಧಾನಿ ಶ್ರೀ ಜವಾಹರಲಾಲರೇ ಉದ್ಗರಿಸಿದ್ದರು. ಆದರೆ, ನಮ್ಮ ಸ್ಥಿತಿ ಹಲವು ಪ್ರಕಾರಗಳಲ್ಲಿ ಎತ್ತರಿಸುತ್ತ ಬರುತ್ತಿರುವುದಾದರೂ, ಪ್ರಜಾಪ್ರಭುತ್ವ ವಿಧಾನದಲ್ಲಿ ನಾವು ಸುಖೀರಾಜ್ಯ ಸ್ಥಾಪನೆಯ ಒಂದೊಂದೇ ಮಜಲನ್ನೇರುತ್ತಿರುವೆವಾದರೂ ನಾವು ಸಾಧಿಸಿದ ಪ್ರಗತಿಯನ್ನು ಪರದೇಶೀಯರು ಮುಕ್ತಕಂಠದಿಂದ ಆಶ್ಚರ್ಯಚಕಿತ ನೇತ್ರಗಳಿಂದನೋಡಿ ಪ್ರಶಂಸಿಸಿರುವಾದರೂ, ಈಬಗ್ಗೆ ನಮ್ಮಲ್ಲೇಯೇ ನಮಗೆ ವಿಶ್ವಾಸ ಸಾಕಷ್ಟು ಹುಟ್ಟಿಲ್ಲವೆಂಬುದು ಮಾತ್ರ ಶೋಚನೀಯ; ನಮ್ಮ ಪ್ರಗತಿಯಲ್ಲಿ ನಾವು ತೃಪ್ತಿಪಟ್ಟುಕೊಳ್ಳುವುದಿಲ್ಲ ನಮ್ಮ ಯೋಜನೆಗಳ ಕಾರ್ಯಕ್ರಮಗಳಲ್ಲಿ ನಮಗೆ ಆಸಕ್ತಿ ಕಂಡುಬರುವುದಿಲ್ಲ; ಯೋಜನೆಗಾಗಿ ನಮ್ಮ ಪಿಚ್ಚವನ್ನು ಕಡಿಮೆಮಾಡಿ ಉಳಿತಾಯ ಸಾಧಿಸುವುದೆಂದರೆ, ಕೈವಿೂರಿದ ಮಾತೆಂದು ಭಾವಿಸುತ್ತೇವೆ ಸರಕಾರಕ್ಕೆ—ನಮಗಾಗಿ, ನಮ್ಮ ಉದ್ಧಾರಕ್ಕಾಗಿ ಅಹೋರಾತ್ರಿ ದುಡಿಯುತ್ತಿರುವ ಸರಕಾರಕ್ಕೆ — ನ್ಯಾಯವಾಗಿ ನಾವು ತೆರಬೇಕಾದ ಕರಗಳಲ್ಲಿಯೂ ವಂಚನೆ ಮಾಡುವಷ್ಟು ಸ್ವಾರ್ಥ ನಮ್ಮಲ್ಲಿ ಬೆಳೆದುಬಂದಿದೆ. ನೀತಿಯ ಪ್ರಶ್ನೆಯು ಮೂಲೆ ಪಾಲಾಗಿ ಸ್ವಾರ್ಥ ಮನೋವೃತ್ತಿಯೇ ತಾಂಡವವಾಡುತ್ತಿದೆ. ಬಡ ಅಜ್ಞ ಗ್ರಾಮೀಣನಿಂದಾರಂಭಿಸಿ ಸುಪ್ರಸಿದ್ಧ ರಾಜಕಾರಣಿಯವರೆಗೂ ಎಲ್ಲರೂ ರಾಷ್ಟ್ರೀಯತೆಯನ್ನು ಪರರಿಗೆ ಉಸುರೇಶಿಸಿ ತಾನು ಮಾತ್ರ ಅದರಿಂದ ನಿಷ್ಪ್ರಯೋಜನಾಗಿರಲು ಬಯಸುತ್ತಿರುವ ಅವಸರ ಎಲ್ಲಿಲ್ಲಿಯೂ ತೋರಿ ಬರುತ್ತದೆ— ಅಂದರೆ, ನಮ್ಮ ರಾಷ್ಟ್ರೀಯತೆಯ ಶಿಕ್ಷಣದ ಬೀಜ ಇನ್ನೂ ಬಿತ್ತಲ್ಪಟ್ಟಿಂತೆ ಕಾಣುವುದಿಲ್ಲ. ಒಂದು ವೇಳೆ ಬಿತ್ತಲ್ಪಟ್ಟಿದ್ದರೂ, ಅದನ್ನು ಸ್ವಾರ್ಥ ಕುಕ್ಕುಟವು ಕುಕ್ಕಿ ತಿಂದಂತೆಯೇ ಭಾಸವಾಗುತ್ತಿದೆ. ಪ್ರಾಂತೀಯತೆ, ಪ್ರಾದೇಶಿಕತೆ, ಜಾತೀಯತೆ, ಭಾಷೀಯತೆಗಳ ಸೋಂಕು ರೋಗ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ನಾವೆಲ್ಲ ಒಂದೇ, ಒಂದೇ ಮಾತರಂ—ಎಂಬ ವೀರ ರಾಷ್ಟ್ರೀಯೋಕ್ತಿಗಳು ಇಂದು ಯಾಂತ್ರಿಕವಾಗಿ ಮಾತ್ರ ಪ್ರಕಟವಾಗುತ್ತಿವೆ ಪಕ್ಷ ಸಂಗಡಗಳು ತಂತಮ್ಮ ಕಾಮತೇಚ್ಛುಗಳನ್ನು ಸಂಪಾದಿಸುವಲ್ಲಿಯೆ ತಲ್ಲೀನವಾಗಿದ್ದು, ದೇಶದ ಹಿತ, ಭದ್ರತೆ, ಏಕತೆಎಂದರೆ ರಾಷ್ಟ್ರೀಯತೆ ಯಬಗ್ಗೆ ಯಾರೂ ಹೆಚ್ಚಿನ ವಿಚಾರಮಾಡುವಂತೆ ಕಾಣುತ್ತಿಲ್ಲ. ಅಧಿಕಾರಿಗಳು ತಮ್ಮ ಸ್ಥಾನಗಳಿಗೆ ಬಲವಾಗಿ ಅಂಟಿಕೊಂಡಿರುವುದಕ್ಕೆ ಅವಶ್ಯಕವಾದ ಕಾರ್ಯಕ್ರಮವೆನಸಿದರೆ, ಇತರರು ಸ್ವಾರ್ಥ ಸಾಧನೆಗಾಗಿ ದುಡಿಯುತ್ತಾರೆ. ಹೀಗಾಗಿ ನಮ್ಮ ಸಮಾಜವಾದೀ ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಬ್ರಹತ್ ಸ್ವಪ್ನ ಕನಸಿನ ಒತ್ತಪೆ? ಎಂಬ ಸಂದೇಹವೂ ಒಮ್ಮೊಮ್ಮೆ ಉದ್ಭವಿಸುತ್ತದೆ. ಹೀಗೆಯೇ ಮುನ್ನಡೆದರೆ, ಸ್ವಾತಂತ್ರ್ಯವು ಸ್ವೈರವಾಗಿ ಮಾರ್ಪಡುವುದು ಎಂಬುದೂ ನಮ್ಮನ್ನು ಕಾಡುವ ಪ್ರಶ್ನೆಯಾಗುತ್ತದೆ.

ಇವನ್ನೆಲ್ಲಾ ಒಂದೆಡೆಯಿಂದ ನೋಡಿ ಕಂಗಾಲಾಗುವಾಗ, ನಿಜವಾದ ಪ್ರಜಾಪ್ರಭುತ್ವವಾದಿಯಾದ ರಾಷ್ಟ್ರೀಯನಿಗೆ ನಾವು ಸಂಪಾದಿಸಿದ ಯಶಸ್ಸಿನ ಬಗ್ಗೆ ಅಭಿಮಾನವೂ ಇನ್ನೊಂದೆಡೆ ಮೂಡುತ್ತದೆ. ವಿಸ್ತಾರದಲ್ಲಿ ವಿಶಾಲವೂ ಜನಸಂಖ್ಯೆಯಲ್ಲಿ ನಿಬಿಡವೂ ಅದ ಭಾರತದಂತಹ ಸಸ್ಯಶ್ಯಾಮಲವಾದ ಕೃಷಿ ಪ್ರಧಾನವಾದ ದೇಶದ ಇತಿಹಾಸದಲ್ಲಿ ೧೦—೧೧ ವರ್ಷಗಳೆಂದರೆ, ದೊಡ್ಡ ಅವಧಿಯೆಂದು ಹೇಳಬರುವಂತಿಲ್ಲ. ಈ ನಡುವೆಯೇ ನಾವು ನಮಗೆ ಬೇಕಾದ ನಾನಾ ಕಾರ್ಯಕ್ರಮಗಳನ್ನು ಯೋಜನೆಗಳ ಮೂಲಕ ಕಾರ್ಯರೂಪಕ್ಕಿಳಿಸಿ ಸಾಕಷ್ಟು ಯಶಸ್ಸು ಸಂಪಾದಿಸಿದ್ದೇವೆ. ಹೊಸತಾಗಿ ಮನೆಮಾರು ಮಾಡಿಕೊಳ್ಳುವ ಕುಟುಂಬವು ಮೊದಲಿನ ಕೆಲವು ಮಾತಗಳಾದರೂ ಕಷ್ಟದಿಂದ ನರಳುವಂತೆ ನಾವೂ ಪ್ರಯಾಸದಿಂದಲಾದರೂ ಪ್ರಗತಿ ಸಾಧಿಸಿದ್ದೇವೆ. ಒಡ್ಡುಗಳು, ಮಾರ್ಗಗಳು, ಶಿಕ್ಷಣ ಸಂಸ್ಥೆಗಳು, ವಿದ್ಯುತ್ಕೇಂದ್ರಗಳು, ಕಾರಖಾನೆಗಳು, ಕುಟೀರೋದ್ಯೋಗಗಳು, ದೀನದಲಿತರ ಅಭಿವೃದ್ಧಿ, ಕಾಲುವೆಗಳ ನಿರ್ಮಾಣ ವಿಜ್ಞಾನ ಕ್ಷೇತ್ರ, ಜಲವಿಭಾಗ—ಹೀಗೆ ಎಲ್ಲಿ ನೋಡಿದರೂ ನಾವು ಹಿಂದಿಗಿಂತ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ, ಇನ್ನೂ ಮುಂದಿಡುತಿದ್ದೇವೆ. ನಮ್ಮ ಮಾತಾಪಿತರು ನಾಟಿದ ವೃಕ್ಷಗಳ ಫಲವನ್ನು ನಾವು ಅನುಭೋಗಿಸುವಂತೆ, ನಾವೀಗ ಸಾಧಿಸಿದ ಪ್ರಗತಿಸರ ಯೋಜನೆಗಳು ನಮಗೂ ಹೆಚ್ಚಿನ ಮಟ್ಟಿಗೆ ಮುಂದಿನ ಪೀಳಿಗೆಗೂ ಪ್ರಯೋಜನಕಾರಿಯಾಗುವುದು ನಿಶ್ಚಿತ. ನಮ್ಮ ದೇಶದ ರಾಷ್ಟ್ರೀಯ ಆದಾಯವಾಗಲೀ, ಆರ್ಥಿಕ ಸ್ಥಿತಿಗತಿಯಾಗಲಿ ಹಿಂದಿಗಿಂತ ಉತ್ತಮಾವಸ್ಥೆಗೆ ಬಂದಿದೆ. ಹಾಗೆಂದು ಇಷ್ಟರಲ್ಲೇ ತೃಪ್ತಿಪಟ್ಟುಕೊಳ್ಳಬೇಕೆಂದು ಭಾವಿಸಬಾರದು. ನಮ್ಮ ಅವಶ್ಯಕತೆಗಳು ಸಾವಿರಾರು; ಆದರೆ ಸಾಧನೆಗಳು ಹತ್ತಾರು. ನಾವೆನ್ನೂ ಸಾಧಿಸಬೇಕಾದ ಕಾರ್ಯಗಳು ಅನೇಕ; ಅನಂತ. ಅವನ್ನೆಲ್ಲಾ ರಾತ್ರೆ ಬೆಳಗಾಗುವುದರೊಳಗೆ ಸಾಧಿಸುವೆವೆಂದರೆ, ಒಣ ಹೆಮ್ಮೆಯಾದೀತು ಅಷ್ಟೆ. ಒದಗಿದ ಸ್ವಾತಂತ್ರ್ಯವನ್ನು ಸ್ವೈರವೆಂದು ಬಗೆಯದೆ, ಭಾರತದ ಪರಂಪರಾಗತ ಆದರ್ಶ ನಿಧಾನದಲ್ಲಿ ಉಳಿಸಿಕೊಂಡು ಆದರ್ಶ ರಾಷ್ಟ್ರೀಯರಾಗಿ ರಾಷ್ಟ್ರದ ಹಿತೇಚ್ಛುಗಳಾಗಿ ಜೀವಿಸುವ ಮನೋನಿರ್ಧಾರವನ್ನು ಮಾಡಿ, ದೇಶದ ಪುನಾರಚನೆಯಲ್ಲಿ ನಮ್ಮ ಅಳಿಲುಸೇವೆಯನ್ನು ಸಲ್ಲಿಸಲು ನಾವು ಮುಂದೆ ಬಂದರೆ, ಅಂದಿಗೆ ನಾವು ಸ್ವತಂತ್ರ ರಾಷ್ಟ್ರೀಯರು. ಆಗ ನಮ್ಮನ್ನು ಎದುರಿಸುವ ಶಕ್ತಿ ಬೇರೊಂದಿರಲಾರದು. ಅದುದರಿಂದ ನಮ್ಮ ಸ್ವಾರ್ಥ, ವಂಚಕ ಮನೋವೃತ್ತಿ ಹಾಗೂ ಆಲಸ್ಯಗಳನ್ನು ದೂರೀಕರಿಸಿ ನಮ್ಮ ಸ್ವಾತಂತ್ರ್ಯದ ರಕ್ಷಣೆಯನ್ನು ಮಾಡುವ ರಾಷ್ಟ್ರೀಯರಾಗುವ ದೃಢ ನಿಶ್ಚಯದಿಂದ ಮುಂದಕ್ಕೂ ಕಾರ್ಯಪ್ರವೃತ್ತರಾಗೋಣ.

ಜೈ ಹಿಂದ್!

ವೀರಾ ಉಕ್ಕಿನ ಫರ್ನೀಚರುಗಳ ವಿವರಗಳಿಗೆ

ಈ ಸಂಚಿಕೆಯ ಹೊರಹೊದಿಕೆಯ ಹಿಂದಿನ ಪುಟ ನೋಡಿರಿ.

ಬಾಕ್ರಾ ನಂಗಲ್ ಒಡ್ಡಿನ ಪ್ರಗತಿ

ಭವಿಷ್ಯಭಾರತದ ತೀರ್ಥಸ್ಥಳಗಳೆಂದು ಕರೆಯಲಾಗುವ ಯೋಜನೆಗಳಲ್ಲಿ ಬಾಕ್ರಾನಂಗಲ್ ಹಿರಿದಾದುದು. ಇದರ ಸ್ಥೂಲ ಪರಿಚಯವನ್ನಿಲ್ಲಿ ಸಂಗ್ರಹಿಸಲಾಗಿದೆ.

ಬಾಕ್ರಾ—ನಂಗಲ್ ಯೋಜನೆಯು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಲ್ಪಟ್ಟ ಎರಡನೆಯ ಯೋಜನೆಯಲ್ಲೂ ಮುಂದುವರಿದ ಒಂದು ಮಹಾ ಯೋಜನೆ. ಇದು ಪೂರ್ಣವಾಯಿತೆಂದರೆ, ದೇಶದಲ್ಲಿ ೧೦ ಲಕ್ಷ ಟನ್ನು ಆಹಾರ ಧಾನ್ಯಗಳೂ ೬ ಲಕ್ಷ ಬೇಲು ಉದ್ದೆಳೆಯ ಹತ್ತಿಯೂ ಅಧಿಕವಾಗಿ ಉತ್ಪಾದಿತವಾಗುವುದು. ಇದರ ಗ್ರಾಮೀಣ ಪ್ರದೇಶದಲ್ಲಿ ೩೦ ನಗರಗಳೂ ಹಲವಾರು ಹೊಸ ಹಳ್ಳಿಗಳೂ ನಿರ್ಮಾಣಹೊಂದುವುವು. ವಾಯವ್ಯ ಭಾರತದ ಹಲವಾರು ಔದ್ಯೋಗಿಕ ಯೋಜನೆಗಳಿಗೂ ನವದೆಹಲಿಗೂ ಇದು ವಿದ್ಯುತ್ತನ್ನು ಒದಗಿಸುವುದು ನಂಗಲ್‌ನಲ್ಲಿ ನೈಟ್ರೊ ಲೈಮ್‌ಸ್ಟೋನ್ ಗೊಬ್ಬರದ ಕಾರಖಾನೆಯು ನಿರ್ಮಾಣವಾಗುತ್ತಿದ್ದು ಇದೊಂದಕ್ಕೇನೇ ೧೬೦ ಸಾವಿರ ಕಿಲೋವಾಟ್ ವಿದುತ್ತು ಬೇಕಾಗುವುದು.

ಬಾಕ್ರವು ಸಟ್ಲೆಜ್ ನದಿಯ ನೆರೆಯನ್ನು ತಡೆ ಹಿಡಿಯುವುದಕ್ಕಾಗಿ ಅಣೆಕಟ್ಟು ಕಾಕಲ್ಪಡುವ ಸ್ಥಳ. ಈ ಕಟ್ಟು ದಿಲ್ಲಿಯಿಂದ ೨೦೦ ಮೈಲಿ ದೂರದಲ್ಲಿದೆ; ೭೦೦ ಅಡಿ ಎತ್ತರವಿದೆ. ನಂಗಲ್ ಇಲ್ಲಿಂದ ೮ ಮೈಲು ಕೆಳಗಿದ್ದು ೯೦ ಅಡಿ ಎತ್ತರದ ಕಟ್ಟೆಕಟ್ಟಿ ನಂಗಲ್ ಕಾಲುವೆಗೆ ನೀರು ಹರಿಸುವ ಸ್ಥಳವಾಗಿದೆ. ಈ ಯೋಜನೆಯು ೧೯೦೮ರಿಂದಲೂ ಪರ್ಯಾಲೋಚನೆಯಲ್ಲೇ ಉಳಿದಿದ್ದು ೪೫ರಲ್ಲಿ ಕೈಗೆ ತೆಗೆದುಕೊಳ್ಳಲ್ಪಟ್ಟಿತು. ರಾಜಸ್ಥಾನ ಹಾಗೂ ಪಂಜಾಬಗಳ ೩೬ ಲಕ್ಷ ಎಕ್ರೆ ಭೂಮಿಗೆ ಇದರಿಂದ ನೀರು ಸರಬರಾಯಿಯಾಗುವುದು. ಅಲ್ಲದೇ ೪ ಲಕ್ಷ ಕಿಲೋವಾಟ್ ವಿದ್ಯುತ್ತನ್ನೂ ಒದಗಿಸುವುದು. ನಂಗಲ್ ಕಟ್ಟೆ ಕಾಲುವೆ ಹಾಗೂ ವಿದ್ಯುತ್ಕೇಂದ್ರವು ಪೂರ್ಣಗೊಂಡಿದ್ದು ಅಧಿಕ ನೀರಿನ ಒತ್ತಡವಿರುವಾಗ ಸಾಮಾನ್ಯವಾಗಿ ವರ್ಷದಲ್ಲಿ ನಾಲ್ಕು ತಿಂಗಳು ಪ್ರಯೋಜನಕ್ಕೆ ಬರುವುವು. ಬಾಕ್ರ ಅಣೆಕಟ್ಟು ಸುಮಾರು ೧೯೬೦ಕ್ಕೆ ಸಂಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಒಟ್ಟು ಈ ಅಣೆಕಟ್ಟಿಗೆ, ರೂ. ೧೮೫ ಕೋಟಿ ವೆಚ್ಚ ತಗಲುವುದು. ಚಿತ್ರದಲ್ಲಿ ಈ ಅಣೆಕಟ್ಟಿಗೆ ಸಂಬಂಧಿಸಿದ ನಾಲ್ಕು ಮನಮೋಹಕ ದೃಶ್ಯಗಳನ್ನು ನೋಡಬಹುದು.

ಮೊದಲನೆಯ ದೃಶ್ಯವು ಬಾಕ್ರ ಅಣೆಕಟ್ಟಿನ ಕಾರ್ಯದಲ್ಲಿ ನಡೆಯುತ್ತಿರುವ ಪ್ರಗತಿಯನ್ನೂ ಎರಡನೆಯದು ನಿರ್ಮಾಣವಾಗುತ್ತಿರುವ ಬಾಕ್ರಾ ಸೈಕತ ಮಾರ್ಗಗಳನ್ನೂ, ಮೂರನೆಯದು ಕಟ್ಟಲ್ಪಡುತ್ತಿರುವ ಬಾಕ್ರಾ ವಿದ್ಯುದಾಲಯವನ್ನೂ ನಾಲ್ಕನೆಯದು ನಂಗಲ್ ಅಣೆಕಟ್ಟಿನ ಒಂದು ನೋಟವನ್ನೂ ಪ್ರತಿಬಿಂಬಿಸುತ್ತವೆ.

ಇಂತಹ ಒಡ್ಡುಗಳೇ ಭವಿಷ್ಯ ಭಾರತದ ತೀರ್ಥಸ್ಥಳಗಳು ಎಂದು ನಮ್ಮ ಪ್ರಧಾನರು ಒಮ್ಮೆ ಉದ್ಗರಿಸಿದುದನ್ನು ಇಲ್ಲಿ ನೆನೆಯ ಬಹುದು.



ಹೃದಯೇನ ಸಲ್ಗೆ ನಮನಂ

ಬೆಳಕು ತೂರಿ ಬಂತು
ದಾಸ್ಯದ ನೊಗವು ಕಳಚಿಬಿತ್ತು
ಮನೆ ಮನೆಗಳಲ್ಲಿ ಬತ್ತಿ
ಕುಡಿವರಿದ ನೇಕ ಹೊತ್ತಿ
ಭುವಿ ಬಾನವೆಲ್ಲ ಬೆಳಗಿ
ಅಭಿಮಾನ ನೆಲಸಲಿತ್ತು
ನವಸ್ಫೂರ್ತಿ ಒದಗಿಸಿತ್ತು ॥ ೧ ॥

ಆ ಇಳುಕಲೊಡಲಿನಲ್ಲಿ
ಸ್ವಾತಂತ್ರ್ಯ ತೇಜ ವಿತ್ತೆಂ—
ದೆನಿಬರಿಗೆ ಅರಿಮೆಯಿತ್ತು?
ಆಧರಿತ ಊರುಗೋಲ
ಆ ವ್ಯಕ್ತಿಯನ್ನೆ ದೇಶ
ಆಧರಿಸಿ ನಲಿವುದೆಂದು
ಏನು ಜನ ನಂಬಿ ಇತ್ತು? ॥ ೨ ॥

ಆ ಮುಗ್ಧ ಮಂದಸ್ಮಿತವು
ಆಧ್ಯಾತ್ಮ ನೇತ್ರ ಹೊಳವು
ವಾಕ್ಸುಧೆಯನುಸೂತಜಲವು
ನಿರ್ಧಾರ ಭಾವದೊಲವು
ಸೌಹಾರ್ದ ಶಾಂತಮನವು
ಅವತಾರ ಮಹಿಮನೆನಲು
ಜಗನನ್ನೆ ಜಯಿಸಿದತ್ತು. ॥ ೩ ॥

ಮತ್ತೊಮ್ಮೆ ದನ್ಮಶಕ್ತಿ
ಇದಿರಾಯಿತ್ತು ಎಂದಿನಂತೆ
ಇಷುಘಾತ ಧರಿಸಿದಂತೆ
ಕ್ರೂಜೆಯನು ಏರಿದಂತೆ
ಬೋಧಿಯನು ಸಾರಿದಂತೆ
ಆ ರಾಮ ನಾಮ ಜಪದೆ
ತೆರಳಿತ್ತು ನಿಲುವಿನೆಡೆಗೆ. ॥ ೪ ॥

ಸತ್ಯವಿದು ನಿತ್ಯ ದೀಪ
ಸೌಹಾರ್ದಭಾವ ಧೂಪ
ಅಹಿಂಸಾ ಮಾರ್ಗ ಮೂಪ
ನಿತ್ಯತೆಯ ನಡೆಗೆ ಸ್ತೂಪ.
ಏರೇರಿ ಕಾಣಲಾ ಭಾ
ನೆಡೆದಿತ್ತು ಹಿಗ್ಗಿ ಹಿಗ್ಗಿ
ಪರಮಾರ್ಥ ಭಾವರೂಪ ॥ ೫ ॥

ಸ್ವಾತಂತ್ರ್ಯ ಬೆಳಕನಿಟ್ಟ
ಪೂಜ್ಯನೆಂದೆನಿಸಿದವಗೆ
ಭಾರತಿಯ ಮ್ಲಾನ ಕಳೆಯೆ
ತಮ್ಮೆಲ್ಲರೆರಕವೆದೆ.
ಬಲಿಕೊಟ್ಟ ಕೆಂಪುಸೈದ
ಆ ಎಲ್ಲ ಶಕ್ತಿಗಳಿಗೆ
ಹೃದಯೇನ ಸಲ್ಗೆ ನಮನಂ ॥ ॥ ೬ ॥

—ಕೆ. ವಾಸುದೇವ ಆಚಾರ್ಯ.

ಗ್ರಾಮೀಣ ಪದ್ಧತಿ

ಭಾರತವು ಅಹಿಂಸಾಮಾರ್ಗದಲ್ಲಿ ವಿಕಾಸಹೊಂದಬೇಕಾದರೆ ಅನೇಕ ವಿಷಯಗಳಲ್ಲಿ ಅದು ವಿಕೇಂದ್ರೀಕರಣವನ್ನು ಕೈಕೊಳ್ಳಬೇಕೆಂದು ನಾನು ಸೂಚಿಸಿರುವೆ. ಕೇಂದ್ರೀಕರಣವನ್ನು ಉಳಿಸಿಕೊಳ್ಳಬೇಕಾದರೆ ಅದಕ್ಕೆ ಸಾಕಷ್ಟು ಶಕ್ತಿಬೇಕು. ಬಡವರ ಮನೆಯಲ್ಲಿ ಕದ್ದೊಯ್ಯುವಂತಹದು ಏನೂ ಇರುವುದಿಲ್ಲ. ಅಲ್ಲಿ ಪೋಲೀಸರ ಕಾವಲು ಏತಕ್ಕೆ? ಸಿರಿವಂತರ ಅರಮನೆಗಳನ್ನು ರಕ್ಷಿಸಲು ಮಾತ್ರ ಬಲವಾದ ಕಾವಲು ಬೇಕು. ಅದೇ ಮೇರೆಗೆ ದೊಡ್ಡ ಕಾರಖಾನೆಗಳಲ್ಲಿಯೂ, ಹಳ್ಳಿಗಳ ತಳಪಡಿಯ ಮೇಲೆ ಸಂಘಟಿತವಾದ ಭಾರತಕ್ಕೆ ಪರಚಕ್ರಗಳ ಚಿಂತೆ ಇಲ್ಲ; ಆದರೆ ನಗರಗಳ ತಳಪಡಿಯ ಮೇಲೆ, ಸೈನ್ಯ, ವಿಮಾನಪಡೆ, ನೌಕಾದಳಗಳಿಂದ ಸುಸಜ್ಜಿತವಾದ ಭಾರತಕ್ಕೇ ಪರರ ಆಕ್ರಮಣದ ಅಂಜಿಕೆ ಹೆಚ್ಚು...

ಕಾರಖಾನೆಗಳ ಮೇಲೆ ನಿಂತ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಹಿಂಸೆ ಬೆಳೆಯದು; ಸ್ವಯಂಪೂರ್ಣವಾದ ಹಳ್ಳಿಗಳ ವಾತಾವರಣವೇ ಅದಕ್ಕೆ ಒಗ್ಗುವುದು.....ಗ್ರಾಮೀಣ ಆರ್ಥಿಕ ಪ್ರಪಂಚದಲ್ಲಿ ಸುಲಿಗೆಯ ಲವಲೇಶವಿಲ್ಲ, ಸುಲಿಗೆ ಹಿಂಸೆಗೆ ಮೂಲ ಆದ ಕಾರಣ ಅಹಿಂಸಾವಾದಿಗಳಾಗುವುದಕ್ಕೆ ಮೊದಲು ನೀತಿ ಗ್ರಾಮೀಣತೆಯನ್ನು ಅರಗಿಸಿಕೊಳ್ಳಬೇಕು, ಗ್ರಾಮೀಣತೆಯನ್ನು ಅರಗಿಸಿಕೊಳ್ಳಲು ರಾಟೆಯಲ್ಲಿ ನಂಬುಗೆ ಬೇಕು.

ಒಂದೇ ಮಾತಿನಲ್ಲಿ ಹೇಳಬೇಕಾದರೆ, ಸಂಪೂರ್ಣ ಮಾನಸಿಕ ಹಾಗು ನೈತಿಕ ವಿಕಾಸದೊಂದಿಗೆ ಮಾನವ ಸುಖವನ್ನು ಸಾಧಿಸುವುದೇ ಗುರಿಯಾಗಿರಲಿ. 'ನೈತಿಕ' ಶಬ್ದವನ್ನು 'ಧಾರ್ಮಿಕ' ಎಂಬರ್ಥದಲ್ಲಿಯೇ ನಾನು ಬಳಸಿದ್ದೇನೆ. ಈ ಗುರಿಯು ವಿಕೇಂದ್ರೀಕರಣದಿಂದಲೇ ಸಾಧ್ಯ.

× × ×

ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನು ಉಪಾಸಾಡುವುದು ನನ್ನ ಮಟ್ಟಿಗೆ ಸ್ವರಾಜ್ಯದ ಉದ್ದೇಶ. ನಾನು ಅನೇಕ ಹೊಸ ಕೆಲಸಗಳನ್ನು ಮಾಡಬೇಕೆನ್ನುತ್ತೇನೆಯಾದರೂ ಅವು ಭಾರತ ಪರಂಪರೆಗನುಸರಿಸಿ ಕೈಗೂಡಬೇಕು ಎನ್ನುತ್ತೇನೆ.

—ಮ. ಗಾಂಧೀ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಪುನಾರಚನಾಯೋಜನೆಗಳು

ನಾವು ನಮ್ಮ ದೇಶದ ಪುನಾರಚನೆಗಾಗಿ ಯೋಜನೆಗಳನ್ನು ರೂಪಿಸಿಕೊಂಡಿದ್ದೇವಾದರೂ ಇವುಗಳನ್ನು ನಮ್ಮ ಯೋಜನೆಗಳಾಗಿ ಮಾತ್ರ ನಾವು ತಿಳಿದಂತೆ ತೋರುವುದಿಲ್ಲ ಈ ಯೋಜನೆಗಳ ಉದ್ದೇಶ, ಫಲ ಮತ್ತು ಸರಕಾರೀ ಹಾಗೂ ಜನತೆಯ ಸಹಯೋಗಗಳ ಅವಶ್ಯಕತೆಯ ಸೂಕ್ಷ್ಮ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ

ಬರೆದವರು ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ

ತಮ್ಮ ಬಾಲದ ಗದ್ದೆಯಲ್ಲಿ ಗೇಯುವ ಅನ್ನ ಸಂಪಾದಿಸುವ ಒಂದು ಕುಟುಂಬ ನಿದೆಯೆನ್ನಿ ಭೂಮಿಯೇನೋ ಅವರದೇ ಆದರೂ ಅದು ಒಣಭೂಮಿಯಾದುದರಿಂದ ಅಧಿಕ ಪರಿಶ್ರಮದಿಂದ ಮಾತ್ರ ಸಾಧ್ಯ. ಅಲ್ಲೊಂದು ಬಾವಿಯಿದ್ದಿದ್ದರೆ, ಅವರು ಸುಲಭದಲ್ಲಿ ಅಧಿಕ ಧಾನ್ಯ ಬೆಳೆಸಬಹುದು ಇದರಿಂದಾಗಿ ಅವರಿಗೆ ಉಣ್ಣಲೂ ತಿನ್ನಲೂ ಮಾರಲೂ ಸಾಕಷ್ಟು ಉತ್ಪತ್ತಿಯಾದೀತು, ಉಳಿದ ಹಣದಿಂದ ಉತ್ತಮ ಗೊಬ್ಬರಗಳನ್ನು ತಂದು ಗದ್ದೆಗೆ ಸುರಿದು, ಇನ್ನೂ ಅಧಿಕ ಫಲವನ್ನು ಪಡೆಯಬಹುದು. ನೀರು ತಂದು ಸುರಿಯುವ ಪ್ರಯಾಸ ತಪ್ಪಿ, ಆ ಸಮಯದಲ್ಲಿ ನೂಲುವುದೋ ನೇಯುವುದೋ ಅಥವಾ ಇನ್ನಾವುದಾದರೂ ಕುಟೀರೋದ್ಯೋಗಗಳಲ್ಲಿ ಅವರು ಕೈಯಾಡಿಸಿ, ತಮಗೆ ಆವಶ್ಯಕವಾದ ಬಟ್ಟೆಯನ್ನೋ ಅಥವಾ ಮತ್ತೇನನ್ನೋ ತಯಾರಿಸಿ ಸಂಸಾರದ ಆದಾಯವನ್ನು ಹೆಚ್ಚಿಸಬಹುದು—ಆದರೆ, ಇವೆಲ್ಲ ಕೈಗೂಡಬೇಕಾದರೆ, ಬೇಕೊಂದು ಬಾವಿ.

ವ್ಯಕ್ತಿ ಬಾವಿ ತೋಡಲು ನಿಶ್ಚಯಿಸುತ್ತಾನೆ ಆದರೆ, ಈ ಪ್ರಯಾಸೇನ ಸಾಧ್ಯವಾದ ಕಾರ್ಯವನ್ನು ಅವನ ಕುಟುಂಬದವರೇ ಮಾಡಬಹುದು. ಇಲ್ಲವೇ ವೇತನ ಕೊಟ್ಟು ಪರರಿಂದ ಅಗೆಸಬಹುದು. ಅವರೇ ಸ್ವತಃ ದುಡಿಯಲುಪುದಾದರೆ, ಗದ್ದೆಯ ಕೆಲಸ ಹಿಂದೆ ಬಿದ್ದು ಊಟಕ್ಕೆ ಎಟು ಬಿದ್ದೀತು, ಪರರಿಂದ ಸೇವೆ ಮಾಡಿಸುವುದಾದರೆ, ಅದಕ್ಕೆ ತೆರಲು ತನ್ನಲ್ಲಿ ಬಂಡವಳವಿಲ್ಲದ ಕಾರಣ ಸಾಲಮಾಡಬೇಕಾಗುವುದು ಸಾಲದ ಮೊತ್ತವನ್ನು ಹಿಂದಿರುಗಿಸಲಿರುವುದರಿಂದ, ಅದರಿಂದಲೂ ಅವರು ತ್ವರಿತಗತಿಯಿಂದ ಅಭಿವೃದ್ಧಿಹೊಂದುವುದು ಅಸಾಧ್ಯ

ಕಾಟುಂಬಿಕರ ಒಂದು ಸಭೆ ಸೇರಿ ಈ ವಿಚಾರ ಚರ್ಚಿಸುತ್ತದೆ ಯಜಮಾನನ ಬಳಿ ತೋಡುವ ಕುರಿತಾದ ವಿವರಗಳನ್ನೀಯುತ್ತಾನೆ ಉಳಿದವರು ತಮ್ಮಿಂದ ಯಾವ ಯಾವ ಕಾರ್ಯವಾದೀತೆಂದು ವ್ಯಕ್ತಪಡಿಸುತ್ತಾರೆ ತತ್ಕಾಲದ ವೆಚ್ಚವನ್ನು ಕಡಿಮೆಗೊಳಿಸುವ ವಿಧಾನವನ್ನು ಚಿಂತಿಸುತ್ತಾರೆ, ಆದರೆ, ಹಳೆಯ ಮೆಟ್ಟುಗಳನ್ನೇ ಈ ವರ್ಷವೂ ಮೆಟ್ಟುವುದು ಸಾಧ್ಯವೆ? ಹರಿದ ಹಳೆಯ ಸೀರೆಯನ್ನೇ ಹೊಲಿದುಡುವುದು ಆದೀತೆ? ಅರಿಹೊಟ್ಟೆಯುಂಡು ವರ್ಷವಿಡಿ ದುಡಿಯುವುದು ಹಿತವಾದೀತೆ?

ಆಗ, ತಾವೆಲ್ಲರೂ ಸಾಕಷ್ಟು ಪರಿಶ್ರಮದಿಂದ ಉಳಿಸಿದ ಸಮಯ ಹಾಗೂ ಅಲ್ಪ ಸಾಲದಿಂದ ಕೊಂಚ ಪರರಿಂದಲೂ ಕೆಲಸ ಮಾಡಿಸಿಕೊಳ್ಳುವ ನಿರ್ಧಾರ ಮಾಡುತ್ತಾರೆ. ಹೀಗೆ ಕಾಟುಂಬಿಕರ ನೆರವು ಹಾಗೂ ನೌಕರರ ಸೇವೆಗಳಿಂದ ಬಾವಿಯು ನಿರ್ಮಾಣವಾಗುವುದು ಈಪೊಂದು ವರ್ಷ ತುಸು ಕಷ್ಟಪಟ್ಟರೂ, ಮುಂದೆ ಅಧಿಕ ಉತ್ಪತ್ತಿಯಾಗಿ, ಆತ ಸಾಲವನ್ನೂ ತೀರಿಸಿ, ಹೊಟ್ಟೆ ತುಂಬ ತಿಂದು, ಒಂದು ಸ್ವಲ್ಪ ಹಣವನ್ನೂ ಕೈಯಲ್ಲಿಟ್ಟುಕೊಳ್ಳಲು ಶಕ್ತನಾಗುತ್ತಾನೆ. ಆದರೆ, ಈಗ ಮಾತ್ರ ತ್ಯಾಗಬೇಕು, ಪರಿಶ್ರಮಬೇಕು, ಆಸಕ್ತಿ ಬೇಕು, ಮುಖ್ಯವಾಗಿ ಸಾಲವೀಯುವವರು ಬೇಕು

ಬಾರತದ ಸಂಚಿತವಾರ್ಷಿಕ ಯೋಜನೆಯನ್ನೂ ಈ ಕುಟುಂಬ ಯೋಜನೆಗೆ ಹೋಲಿಸಬಹುದು ರಾಷ್ಟ್ರವೇ ಕುಟುಂಬ ದೇಶವೇ ಭೂಮಿ, ನಮಗೂ ಕೋಟಿಗಟ್ಟಲೆಯ ಹೊಟ್ಟೆಗಳನ್ನು ತಣಿಸಬೇಕಾಗಿದೆ, ಕಲಸಮಾಡುವ ಅಲೋಚಿಸುವ ತಲೆಗಳಿಗೇನೂ ನಮ್ಮಲ್ಲಿ ಕೊರತೆಯಿಲ್ಲ ನಮ್ಮ ದೇಶ ಪಾರತಂತ್ರ್ಯದಲ್ಲಿ ನರಳುತ್ತಿರುವಾಗ ನಮ್ಮ ಉದ್ಧಾರಕ್ಕಾಗಿ ಚಿಂತಿಸುವುದು ಅಸಾಧ್ಯವಾಗಿತ್ತು, ಈಗ, ನಾವು ಆಹಾರೋತ್ಪತ್ತಿ, ಮೊದಲ ದ ಎಲ್ಲ ಕ್ಷೇತ್ರಗಳನ್ನೂ, ಮುನ್ನಡೆಯಬಲ್ಲೆವೆ. ಹೀಗೆ, ನಾವು ಮುಂದುವರಿದರೆ, ಆಗ ನಾವೂ ಬಡತನದಿಂದ ದೂರವಾಗುವೆವು.

ಈ ಧ್ಯೇಯಸಾಧನೆಗೆ ನಾವೊಂದು ರಾಷ್ಟ್ರೀಯ ಯೋಜನೆಯನ್ನು ರೂಪಿಸಬೇಕು ಯಾರು ಯಾವ ವಿಭಾಗದಲ್ಲಿ ಎಂತಹ ಪ್ರಮಾಣದಲ್ಲಿ ಕಾರ್ಯ ಮಾಡಬಲ್ಲನೆಂಬುದರ ಜ್ಞಾಪಕ ನಮಗಿರಬೇಕು, ಇದಕ್ಕೆ ಸರಿಯಾದ ವ್ಯವಸ್ಥೆಯೂ ಇರಬೇಕು. ಕೇವಲ ಐದು ವರ್ಷಗಳ ಒಂದು ಯೋಜನೆಯಿಂದ ದೇಶವು ನಂದನವನವೋ ರಾಮನ ರಾಜ್ಯವೋ ಆಗುವುದು ಅಸಾಧ್ಯ, ಏಕೆಂದರೆ, ಭಾರತೀಯರು ತಿಪ್ಪೆಯಲ್ಲಿಯೇ ಕೊಳೆಯುತ್ತಿರುವಾಗ ಉಪ್ಪರಿಗೆ ರಾತ್ರಿ ಬೆಳಗಾಗುವುದರೊಳಗೆ ಏರಲಾಗುವುದೆ? ಅಂತು ಬುದ್ಧಿವಂತರಿಲ್ಲ ಲೆಕ್ಕ ಹಾಕಿ ಇಂತಹ ಐದು ಯೋಜನೆಗಳು ಮುಗಿದ ಮೇಲೆ, ಆಗ ನಾವು ೧೯೫೦ ರಲ್ಲಿದ್ದುದ್ದಕ್ಕಿಂತ ಇಮ್ಮಡಿ ಸುಧಾರಿಸುವೆವೆಂದು ನುಡಿದಿದ್ದಾರೆ.

ಯೋಜನೆಯೆಂದೊಡನೆ, ನಮಗೇನು ಬೇಕು, ನಮ್ಮಲ್ಲೇನಿದೆಯೆಂಬುದನ್ನು ಮೊತ್ತಮೊದಲು ಅರಿತುಕೊಳ್ಳಬೇಕು. ದೇಶವು ಕೃಷಿ ಪ್ರಧಾನವಾಗಿರುವುದರಿಂದ, ಕೃಷಿಯೋಗ್ಯ ಭೂಮಿಯೆಷ್ಟು, ಅವುಗಳ ಉಪಯೋಗ ಸರಿಯಾಗಿ ಆಗುತ್ತಿದೆಯೆ? ನಾವು ದೃಢಕಾಯರೂ ವೀರೋಗಿಗಳೂ ಆಗಿರಲು ನಮಗಾವ ಕೊರತೆಯುಂಟೆ? ನೀರಾವರೀ ಸೌಕರ್ಯಗಳು, ರೈಲ್ವೆ, ಬಸ್ಸು, ಗಾಡಿ ಮಾರ್ಗಗಳು, ನದಿಗ ಸಂಕಗಳು

(ಆನೇ ಪುಟಸೊಂದಿ)

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ ಅತ್ಯುತ್ಕೃಷ್ಟ ವಸತಿಗೃಹ—

ರೋಯಲ್ ಮಹಾಲ್

ಉಡುಪಿ.

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿ ಪ್ರಶಾಂತ ಪ್ರದೇಶದಲ್ಲಿ ಪೇಟೆಯ ಮುಖ್ಯ ಸ್ಥಳಗಳಿಗೆ ಅತೀ ಸಮೀಪದಲ್ಲಿ ಇದ್ದುಕೊಂಡು ಜನಾಕರ್ಷಣೆಯನ್ನೂ ಜನಾನುರಾಗವನ್ನೂ ಗಳಿಸಿಕೊಂಡಿದೆ.

ಕೆ. ವೆಂಕಟ್ರಮಣ ಭಟ್,
ಮ್ಯಾನೇಜರ

ROYAL MAHAL
(Regd)
UDIPI.
TRAVELLERS' IDEAL REST HOUSE.
BOARDING & CATERING ATTACHED.

K. Venkatramana Bhat,
Proprietor.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಧಾತುಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಕದ ಮಿಶ್ರಿತ) ಸ್ವಪ್ನ, ಶೀಘ್ರ ಉಚ್ಚಾಟ ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು, ಒಳಸ್ವರ, ಅರೆತ್ತೆ, ಮಂಬುದ್ಧತೆ ಇವುಗಳನ್ನೆಲ್ಲ ಹೋಗಲಾಡಿಸಿ ವೀರ್ಯವೃದ್ಧಿಗೊಳಿಸುವುದು ಡಬ್ಬಿ 1ರ ರೂ 3 - 50

ಕನ್ಯೂರಿಮಿತ್ರಣ ದಶಮೂಲ

ಬಾಣಂತಿಯರ ಪ್ರಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನರುದ್ಧೀಪ್ತಿಸಿ, ರಕ್ತ ಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವುದು. 24 ಔನ್ಸ್ ರೂ 5 00, 12 ಔನ್ಸ್ ರೂ 2 75 6 ಔನ್ಸ್ ರೂ 1-75

ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಕೆಮ್ಮು, ಹೆರೆ ಉಬ್ಬಸ, ಶ್ವಾಸಕೋಶ ಸಮ್ಬಂಧವಾದ ರೋಗಗಳಿಗೆ ದಿವ್ಯ ಔಷದಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಧಾತುಪುಷ್ಟಿ ಉಂಟುಮಾಡುವುದು ಪೌಂಡು 1ರ ರೂ 5-50, ½ ಪೌಂಡು ರೂ. 3-00

ಮೇಹಕುಠಾರ

ಪ್ರಮೇಹ ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು. ಮೂತ್ರದಲ್ಲಿ ಧಾತು ಹೋಗುವುದ, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಮುಂತಾದುವನ್ನು ಗುಣಪಡಿಸುವುದು ಡಬ್ಬಿ 1ರ ರೂ 3-50

ಔಷಧಿಗಳು ಸಿಗುವ ಸ್ಥಳ 1) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್ 818-A, ಡಿಕ್ಸಾಲ್ ರೋಡ್, ಬ್ಯಾಕುಲ್ಲಾ 2) ಜನರಲ್ ಸ್ಟೋರ್ಸ್, G I P ಮಾಟುಂಗಾ. 3) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲಾ. 4) ಪ್ರಭು ಫಾರ್ಮಸಿ, ಕಾರ್ಕಳ 5) ಜಯಾ ಫಾರ್ಮಸಿ, ಕುಂದಾಪುರ 6) H ಗಣಪಯ್ಯ ಸಂಸಿಂಪ ಕಾಮತ್, ಕುಂದಾಪುರ 7) ಶ್ರೀಧರ್‌ಭಟ್ ಬ್ರದರ್ಸ್, ಪುತ್ತೂರು 8) ವೆಂಕಾಟ ಸ್ಟೋರ್ಸ್, ಸಂಳ್ಳ 8] T ಗೋಪಾಲಕೃಷ್ಣ ಪೈ, ಪರ್ಚಂಟ್, ಬ್ರಹ್ಮಾವರ.

ಸಿಂಡಿಕೇಟಿನ ವಿವಿಧ ಬೇಂಕಿಂಗ್ ಸೇವೆಗಳು

ಲೇಖಕರು: ಶ್ರೀ. ಎ. ಕೃಷ್ಣ ರಾವ್, ಎಂ. ಎ., ಎಂ. ಎಲ್.

"ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್" ಎಂಬ ಬೇಂಕಿಂಗ್ ಸಂಸ್ಥೆ ಸ್ಥಾಪಿತವಾದುದು ಸನ್ 1925ರಲ್ಲಿ. ಬೇಂಕಿಂಗ್ ಕ್ಷೇತ್ರದಲ್ಲಿ ಈ ಸಂಸ್ಥೆ ದುಡಿಯಲು ಆರಂಭಿಸಿ ಇನ್ನೂ ಮೂವತ್ತುಮೂರು ವರ್ಷಗಳೂ ಮುಗಿದಿಲ್ಲ. ಕಾಲಮಾನದ ದೃಷ್ಟಿಯಿಂದ ಒಂದು ಸಂಸ್ಥೆಯ ಜೀವನದಲ್ಲಿ ಈ ಅವಧಿಯೇನೂ ಅಷ್ಟು ದೊಡ್ಡದಲ್ಲ. ಈ ಅಲ್ಪಾವಧಿಯಲ್ಲೇ ಸಿಂಡಿಕೇಟಿನ ಆಶ್ಚರ್ಯಕರವಾದ ಪ್ರಗತಿಯನ್ನು ಕಂಡು ಇದರ ರಹಸ್ಯವೇನಿರಬೇಕೆಂದು ಬಹಳ ಮಂದಿ ಕೇಳಿಕೊಳ್ಳುತ್ತಾರೆ. ಕೆಲವೇ ವರ್ಷಗಳ ಹಿಂದೆ ಬೆಟ್ಟದ ಸುಟ್ಟ ತೊರೆಯಂತಿದ್ದ ಈ ಸಂಸ್ಥೆ ಈಗ ದೊಡ್ಡ ನದಿಯಾಗಿ ಬೆಳೆದು ದ್ರುತಗತಿಯಿಂದ ಹರಿಯುತ್ತಿದೆ. 8000 ರೂಪಾಯಿಯ ಬಂಡವಾಳದೊಡನೆ ಬೇಂಕಿಂಗ್ ವ್ಯವಹಾರವನ್ನು ಆರಂಭಿಸಿದ ಈ ಸಂಸ್ಥೆಯ ತೆಕ್ಕೆ ಬಂಡವಾಳವೇ ಇಂದು ಇಪ್ಪತ್ತೆಂಟು ಲಕ್ಷ ರೂಪಾಯಿಗಳಿಗೂ ಹೆಚ್ಚಾಗಿದೆ. ಅದರ ವ್ಯವಹಾರ ಧನ ಹದಿನಾಲ್ಕು ಕೋಟಿ ರೂಪಾಯಿಗಳ ಎಲ್ಲೆಯಲ್ಲಿದೆ. ಇದರ 113 ಶಾಖೆಗಳು ದಕ್ಷಿಣದ ಐದೂ ರಾಜ್ಯಗಳಲ್ಲಿ ವ್ಯಾಪಿಸಿವೆ. ಸಾವಿರ ದೈನೂರು ಮಂದಿ ಕಾರ್ಯಕರ್ತರು ಸಿಂಡಿಕೇಟಿನ ವಿವಿಧ ಶಾಖೆಗಳಲ್ಲಿ ದುಡಿಯುತಿದ್ದಾರೆ. ಲಕ್ಷೋಪಲಕ್ಷ ಗ್ರಾಹಕರಿಗೆ ಸಿಂಡಿಕೇಟು ಬೇಂಕಿಂಗ್ ಸೇವೆಯನ್ನು ಪ್ರತಿ ದಿನವೂ ಸಲ್ಲಿಸುತ್ತಿದೆ. ಇಂದು ಅದು ಮೈಸೂರು ರಾಜ್ಯದಲ್ಲೇ ಸರ್ವಶ್ರೇಷ್ಠವಾದ 'ಬಿ' ವರ್ಗದ ಶೆಡ್ಯೂಲ್ಡ್ ಬೇಂಕುಗಳಲ್ಲಿ ಒಂದಾಗಿದೆ. ಸಿಂಡಿಕೇಟಿನ ಈ ವಿಶಾಲ ಕಾಯ, ಈ ಅದ್ಭುತ ಶಕ್ತಿ—ಸಂಪತ್ತು, ಈ ಸರ್ವತೋಮುಖವಾದ ಪ್ರಗತಿ ಮತ್ತು ಇವೆಲ್ಲಕ್ಕೂ ಮಿಗಿಲಾಗಿ ದಿನದಿನಕ್ಕೂ ಹೆಚ್ಚುತ್ತಿರುವ ಈ ಲೋಕಪ್ರಿಯತೆ ಇವುಗಳನ್ನು ಕಂಡು ಇದರ ಗುಟ್ಟೆಲ್ಲಿ ಅಡಗಿದೆ ಎಂದು ಜನ ಆಶ್ಚರ್ಯಪಡುತ್ತಾರೆ.

ಸಿಂಡಿಕೇಟಿನ ಪ್ರಗತಿಯ ಗುಟ್ಟು ನಿಜವಾಗಿ ನೋಡಿದರೆ ಸಿಂಡಿಕೇಟಿನ ಈ ಅಭಿವೃದ್ಧಿ ಮತ್ತು ಲೋಕಪ್ರಿಯತೆಗಳ ಗುಟ್ಟು ಅಡಗಿರುವುದು ಅದು ತನ್ನ ವ್ಯವಹಾರ ಕ್ಷೇತ್ರದಲ್ಲಿ ಪ್ರತಿನಿತ್ಯವೂ ಸಾವಿರಾರು ಜನರಿಗೆ ಸಲ್ಲಿಸುತ್ತಿರುವ ಸೇವೆಗಳ ವೈಶಿಷ್ಟ್ಯದಲ್ಲಿ. "ಅತ್ಯುತ್ತಮ ಬೇಂಕಿಂಗ್ ಸೇವೆ"ಯನ್ನೇ ತನ್ನ ಮುಖ್ಯ ಮಂತ್ರವಾಗಿ, ತನ್ನ ಆದರ್ಶವಾಗಿ ಇಟ್ಟುಕೊಂಡು ಸಿಂಡಿಕೇಟು ಅನವರತ ದುಡಿಯುತ್ತಿರುವುದುಂದಲೇ ಈ ಅವಧಿಯಲ್ಲಿ ಅದಕ್ಕೆ ಅಶಾತೀತ ವಿಕಾಸ ಅಭಿವೃದ್ಧಿಗಳು ಸಹಜವಾಗಿ ಲಭಿಸಿದವು. ಸಾಮಾನ್ಯ ಜನರಿಗೆ ಮುಖ್ಯವಾಗಿ ಮಧ್ಯಮ ವರ್ಗದ ಚಿಕ್ಕ ಪುಟ್ಟ ವ್ಯಾಪಾರಿಗಳಿಗೂ, ಗುಡಿಕೈಗಾರಿಕೆಗಳಲ್ಲಿ ದುಡಿಯುವ ಕೆಲಸಗಾರರಿಗೂ ಆರ್ಥಿಕ ಸಹಾಯವನ್ನೊದಗಿಸುವ ಉಚ್ಚ ಧ್ಯೇಯದಿಂದಲೇ ಸಿಂಡಿಕೇಟು ಸ್ಥಾಪಿತವಾಗಿತ್ತು. ತನ್ನ ಸೇವೆಗಳು ಜನಸಾಮಾನ್ಯರ ವರೆಗೂ ಮುಟ್ಟಬೇಕು. ಅವುಗಳಿಂದ ಅವರಿಗೆ ಒತ್ತಾಸೆ ದೊರೆಯಬೇಕೆಂದು ಸಿಂಡಿಕೇಟು ಸದಾ ಪ್ರಯತ್ನಿಸುತ್ತಿದೆ. ತನ್ನ ವಿಕಾಸ ಯೋಜನೆಗಳಲ್ಲೂ, ವ್ಯವಹಾರ ನೀತಿಯಲ್ಲೂ ಮತ್ತು ಇತರ ಎಲ್ಲಾ ಕಾರ್ಯಕಲಾಪಗಳಲ್ಲೂ ಈ ಸಂಸ್ಥೆ ಈ ಗುರಿಯನ್ನು ಮುಂದಿಟ್ಟುಕೊಂಡೇ ಕೆಲಸ ಮಾಡುತ್ತದೆ. ಹಲವು ಬಾರಿ ಈ ಆದರ್ಶವಾದೀ ಸೇವೆಯ ಧ್ಯೇಯ ಸಾಧನೆಗಾಗಿ ಸಾಮಾನ್ಯ ಜನರ ಶಕ್ತಿ ಬೇಂಕಿಂಗ್ ಸೇವೆಯನ್ನು ಮುಟ್ಟಿಸಲು ಹೊಸ ಹೊಸ ಮಾರ್ಗಗಳನ್ನು ಕೈಗೊಳ್ಳಬೇಕಾಯಿತು. ಹೊಸ ಹೊಸ ಪ್ರಯೋಗಗಳನ್ನೇ ಮಾಡಬೇಕಾಯಿತು. ಬೇಂಕಿಂಗ್ ವ್ಯವಹಾರದ ಮೌಲಿಕ ನಿಯಮಗಳನ್ನು ಕೂಡಾ ಅಲಕ್ಷಿಸಿ ತನ್ನ ಈ ಸೇವಾವ್ರತಕ್ಕೆ ತಕ್ಕಂತೆ ಮಾರ್ಪಾಟು ಮಾಡಿಕೊಳ್ಳಬೇಕಾಯಿತು. ಬೇಂಕಿಂಗ್ ಕ್ಷೇತ್ರದಲ್ಲೇ ಹೊಸದಾದ ಯೋಜನೆಗಳನ್ನು ಆರಂಭಿಸಿದ ಎದೆಗಾರಿಕೆಯನ್ನು ಪೆಚ್ಚದ ಜನರಿಂದ ವೃಥಾ ಟೀಕೆಗೊಳಗಾಗಬೇಕಾಯಿತು. ಬೇಂಕಿಂಗ್ ವ್ಯವಹಾರದಲ್ಲಿ ಸೇವೆಯ ಈ ಆದರ್ಶವಾದ ಫಲಿಸಲಾರದೆಂದು ಬೆದರಿಸಿದ ಮಂದಿ ಇಂದು ಸಿಂಡಿಕೇಟಿನ ಪ್ರಗತಿಯನ್ನು ಕಂಡು ಆಶ್ಚರ್ಯಪಡಬೇಕಾಗಿದೆ. ಸಿಂಡಿಕೇಟು ಇಂದು ತನ್ನ ಸೇವೆಯ ಆದರ್ಶವನ್ನು ಪಾಲಿಸುವುದರಲ್ಲಿ ಯಶಸ್ವಿಯಾದುದು ಮಾತ್ರವಲ್ಲ. ಅದು ಜನಸಾಮಾನ್ಯರ ಬೇಂಕಿಂಗ್ ಸಂಸ್ಥೆಯಾಗಿ ಅವರ ಹೃದಯದಲ್ಲಿ ಅದರದ ಸ್ಥಾನವನ್ನು ಗಳಿಸಿ ಜನರ ಫಲವಾಗಿ ಅಪಾರವಾದ ಶಕ್ತಿ ಅಭಿವೃದ್ಧಿಗಳನ್ನು ಕೂಡಾ ಪಡೆದಿದೆ.

ಡಾ|| ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್.
ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರರು.



ಸಿಂಡಿಕೇಟಿನ ಮಂಗಳೂರು ಶಾಖೆಯ ಹೊಸ ಕಟ್ಟಡ. ಸಿಂಡಿಕೇಟಿನ ಪ್ರಗತಿಯ ಪ್ರತ್ಯಕ್ಷ ಪ್ರತೀಕ.

ಸಿಂಡಿಕೇಟಿನ ಬೆನ್ನೆಲುಬು

ಭಾರತವು ಬಡಜನರ ನಾಡು. ಇಲ್ಲಿ ಧನಿಕರ ಸಂಖ್ಯೆ ಕಡಿಮೆ. ಇದನ್ನರಿತೇ ಸಿಂಡಿಕೇಟು ಉಚ್ಚ ವರ್ಗದ ಧನಿಕರಿಗೆ ಮಾತ್ರ ತನ್ನ ಸೇವೆಗಳನ್ನು ವಿಸಲಾಗಿರದೆ ಅತ್ಯೋ ಶ್ರದ್ಧೆ ಉತ್ಸಾಹಗಳಿಂದ ಮಧ್ಯಮ ನಿಮ್ನ ವರ್ಗದ ಸಾಮಾನ್ಯ ಜನರಿಗೂ ಸಲ್ಲಿಸುತ್ತದೆ. ಸಾವಿರಾರು ರೂಪಾಯಿಗಳನ್ನು ಶೇಖರಿಸುವ ಜನರಂತೆಯೇ ಪ್ರತಿದಿನ ನಾಲ್ಕಾಣೆಯಂತೆ ಉಳಿಸಿ 'ಸೆಗ್ಗಿ'ಯಲ್ಲಿ ಕೂಡಿಡುವ ಸಹಸ್ರಾರು ಮಂದಿ ಮಧ್ಯಮ ನಿಮ್ನ ವರ್ಗದ ಜನಗಳಿಗೂ ಸಿಂಡಿಕೇಟ್ ಮನ್ನಣೆ ಕೊಡುತ್ತದೆ. ಇಡುಗಂಟನ್ನಿಡುವವರು ಮತ್ತು ನಾಲ ಪಡೆಯುವವರೆಂಬ ಭೇದವಿಲ್ಲದೆ ಸಿಂಡಿಕೇಟು ಎಲ್ಲರ ಸೇವೆಗೂ ಸಿದ್ಧವಾಗಿದೆ. ಆರ್ಥಿಕ ಸಹಾಯವನ್ನು ಸಾಲರೂಪವಾಗಿ ಕೊಡುವಾಗಲೂ ಸಿಂಡಿಕೇಟಿನ

(೨೫ನೇ ಪುಟನೋಡಿರಿ.)

ಬೇಸಾಯದಲ್ಲಿ ಅರ್ಥಶಾಸ್ತ್ರದ ಸೂತ್ರಗಳು

ಅರ್ಥಶಾಸ್ತ್ರವೆಂಬುದು ಕೈಗಾರಿಕೆಯ ಕ್ಷೇತ್ರಕ್ಕೆ ಮಾತ್ರವಲ್ಲ, ನಮ್ಮ ಪ್ರಧಾನ ಕಸುಬಾದ ಬೇಸಾಯದಲ್ಲಿಯೂ ಅನ್ವಯಿಸಲಾಗುವ ಸೂತ್ರಗಳಿಂದ ಕೂಡಿಕೊಂಡಿದೆ ಈ ಲೇಖನದಲ್ಲಿ ಕೃಷಿಯ ಕ್ಷೇತ್ರದಲ್ಲಿರುವ ಅರ್ಥಶಾಸ್ತ್ರದ ಸೂತ್ರಗಳಾವುವೆಂದು ವಿವೇಚಿಸಲಾಗಿದೆ

ಬರೆದವರು ಶ್ರೀ ಕು ಶಿ. ಹರಿದಾಸ ಭಟ್ಟ, ಎಂ. ಎ.

ನಿತ್ಯ ಜೀವನದ ವ್ಯವಹಾರದಲ್ಲಿ ಮನುಷ್ಯನಾದವನು ಹೇಗೆ ಪ್ರವರ್ತಿಸುವನೆಂಬುದನ್ನು ಪರಿಶೀಲಿಸುವುದೇ ಅರ್ಥಶಾಸ್ತ್ರವೆಂದು ಪ್ರಸಿದ್ಧ ಅರ್ಥಶಾಸ್ತ್ರಜ್ಞನಾದ ಮಾರ್ಶಲ್ ಹೇಳಿರುವನು. ಪ್ರಪಂಚದ ಜನಸಂಖ್ಯೆಯಲ್ಲಿ ಮೂರರಲ್ಲೆರಡರಷ್ಟು ಮಂದಿ ಕೃಷಿಯಿಂದಲೇ ಜೀವಿಸಬೇಕಾದುದರಿಂದ ಮನುಷ್ಯನಿಗೆ ಇದರಷ್ಟು ಮುಖ್ಯವಾದ ವ್ಯವಹಾರರಂಗ ಬೇರೆ ಇಲ್ಲವೆಂದಾಯಿತು. ಕೃಷಿಯು ಅರ್ಥಶಾಸ್ತ್ರದಲ್ಲಿ ಮನುಷ್ಯನು ಭೂಮಿಯ ಮೇಲೆ ದುಡಿಯುವುದರ ಪರಿಶೀಲನೆ ನಡೆಸುತ್ತಾರೆ. ಕೃಷಿಯು ಅರ್ಥಶಾಸ್ತ್ರದ ದೃಷ್ಟಿಯಲ್ಲಿ ಒಂದು ವಾಣಿಜ್ಯ ವೃತ್ತಿ ಮಾತ್ರವಲ್ಲದೆ ಉದ್ಯಮವೂ ಆಗಿದೆ ಎನ್ನಬೇಕು ಸಾಮಾನ್ಯ ಅರ್ಥಶಾಸ್ತ್ರವನ್ನು ಕೃಷಿಗೆ ಅನ್ವಯ ಮಾಡುವ ಸೂತ್ರಗಳಿಗೆ ಒಟ್ಟಾಗಿ ಕೃಷಿ—ಅರ್ಥಶಾಸ್ತ್ರವೆನ್ನುವರು. ಸಾಮಾನ್ಯ ಅರ್ಥಶಾಸ್ತ್ರದ ಬೇಡಿಕೆ ಪೂರೈಕೆ, ಧಾರಣೆ, ಮೂಲ್ಯ ಮುಂತಾದ ಸೂತ್ರಗಳನ್ನು ಬೇಸಾಯದಲ್ಲಿಯೂ ನಾವು ಕಾಣುತ್ತೇವೆ. ಬೇಸಾಯದ ಉತ್ಪನ್ನಗಳ ವಿಷಯ ವಿವೇಚಿಸುವುದು ಕೃಷಿಯ ಅರ್ಥಶಾಸ್ತ್ರದ ಮಿತವಾದ ಅರ್ಥ. ಬೇಸಾಯದ ಉದ್ಯಮದಲ್ಲಿ ಸೇರಿರುವ ಎಲ್ಲವನ್ನು, ಉದಾಹರಣೆಗೆ ಪಶುಪಾಲನೆ, ಅರಣ್ಯ ಮತ್ತು ಕಡಲಿನ ಸಂಪತ್ತಿನ ಶೋಧನೆ ಮುಂತಾದುವನ್ನು, ಈ ಶಾಸ್ತ್ರದಲ್ಲಿ ನಾವು ಸೇರಿಸಿಕೊಂಡರೆ ತಪ್ಪಿಲ್ಲ

ಬೇಸಾಯವು ಒಂದು ಕಸುಬು, ವ್ಯಾಪಾರ ಎಂದೆವು ಹಾಗೆಯೇ ಅದೊಂದು ವಿಜ್ಞಾನವೂ ಆಗಿರುವುದನ್ನು ಮರೆಯಬಾರದು ಮಣ್ಣಿನ ಕುರಿತ ವೈಜ್ಞಾನಿಕ ಸಂಶೋಧನೆಗಳಿಂದ ಬೇಸಾಯದ ಮೇಲೆ ತುಂಬಾ ಪರಿಣಾಮವಾಗಿದೆ. ವಿಜ್ಞಾನವು ನೀಡುವ ತಿಳಿವನ್ನು ಹೊಲಗಳಿಗೆ ಹೊಂದಿಸಿಕೊಂಡಾಗ ಬೇಸಾಯದ ಕಸುಬು ಮುಂದುವರಿಯುತ್ತದೆ ಬೇಸಾಯದ ಉತ್ಪನ್ನಗಳನ್ನು ಬೇಟೆಯಲ್ಲಿ ಮಾರಿ ಲಾಭಗಳಿಸಿದರೆ ಬೇಸಾಯವು ಒಂದು ವ್ಯಾಪಾರವಾಗಿ ಕಾಣಿಸಬಹುದು ರೈತನಿಗೆ ಹೊಲದಲ್ಲಿ ಒಳ್ಳೆಯ ಪಸಲುಬರುವಂತೆ ಮಾಡುವ ಜಾಣ್ಮೆ ಇದ್ದರೆ ಸಾಲದು, ಬಂದ ಫಸಲನ್ನು ಮಾರುವ ಗುಟ್ಟೂ ತಿಳಿದಿರಬೇಕು. ಸಾಮಾನ್ಯ ಅರ್ಥಶಾಸ್ತ್ರದಲ್ಲಿ ಒಂದೇ ಕೆಲಸವನ್ನು ಬೇರೆ ಬೇರೆ ಹತ್ತು ಕೆಲಸಗಳಾಗಿ ವಿಭಜಿಸಿ ಉತ್ಪಾದನೆಯನ್ನು ನಡೆಸುವುದಕ್ಕೆ ಶ್ರಮ ವಿಭಾಗವೆನ್ನುತ್ತಾರೆ ಇಂಥ ಶ್ರಮ ವಿಭಾಗಕ್ಕೆ ಬೇಸಾಯದಲ್ಲಿ ಹೆಚ್ಚು ಸ್ಥಾನವಿಲ್ಲ. ಬೇಸಾಯಗಾರ ಒಬ್ಬನೇ ಹತ್ತು ಕೆಲಸಗಳನ್ನು ಮಾಡುತ್ತಾನೆ ಮೊದಲು ಉಳುವುದಕ್ಕೆ ಅನುಕೂಲವಾದ ಭೂಮಿಯನ್ನು ಆಯಬೇಕು, ಯಾವ ಫಸಲನ್ನು ಬೆಳೆಯೋಣ, ಎಷ್ಟು ಎಕರೆ ಸಾಗುವಳಿ ಮಾಡೋಣ ಎಂಬುದನ್ನೇ ನಿರ್ಣಯಿಸಬೇಕು; ಬೀಜ ಯಾವುದು, ಹಸು, ಎತ್ತು ಎಂಥವು ಎಷ್ಟು ಎಂಬುದನ್ನು ಯೋಚಿಸಿಕೊಳ್ಳಬೇಕು, ಉತ್ಪನ್ನವನ್ನು ಬೇಟೆಗೆ ಕೊಂಡುಹೋಗಿ ಮಾರಬೇಕು-ಹೀಗೆ ಹತ್ತು ಹಲವು ಕೆಲಸಗಳನ್ನು ಒಬ್ಬನೇ ಮಾಡುವುದು ಕೃಷಿಯಲ್ಲಿ ಸಹಜವಾಗಿದೆ ಇದರ ಮೇಲಿಂದ ಬೇಸಾಯ ಕಸುಬು ಒಂದು ಸ್ವತಂತ್ರ ಉದ್ಯಮವೆಂದೂ, ಸ್ವತಂತ್ರವಾದ ರೈತನು ನಾಡಿನ ಬೆಂಗೋಲೆಂದೂ ಪ್ರತೀತಿ ಉಂಟಾಗಿದೆ ಆದರೆ ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಿದಲ್ಲಿ ಬೇಸಾಯದಲ್ಲಿರುವ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಕಂಡುಬಂದೀತು. ನಿಸರ್ಗದ ಶಕ್ತಿಗಳಿಗೆ ರೈತನು ಅಧೀನನು ಮಾತ್ರವಲ್ಲದೆ ಆಯಾ ದೇಶದ ಸಾಮಾಜಿಕ ರಾಜಕೀಯ ಪ್ರಭಾವಗಳನ್ನು ಅವನು ಮೀರಿನಿಲ್ಲಲಾರನು ರಶಿಯದಂಥ ಅತ್ಯಾಧುನಿಕವೆಂದು ಕರೆಯಲ್ಪಟ್ಟ ಸಮಾಜ ಪದ್ಧತಿಯಲ್ಲೂ ಕೂಡ ರೈತನಿಗೆ ಎರಡನೆಯ ಸ್ಥಾನವೆಂದು ನಾವು ಕೇಳಿದ್ದೇವೆ, ಕೆಲಪೊಮ್ಮೆ ಅಲ್ಲಿ ಆತನನ್ನೆ ಸೇಟೆಯ ಬೆಳವಣಿಗೆಗೆ ಅಡಿಗಲ್ಲಾಗಿ ತುಳಿದು ಉಪಯೋಗ ಮಾಡಿದ ಪ್ರಕರಣಗಳೂ ಇವೆ. ಹಳ್ಳಿಗ ಗವಾರ, ಪಟ್ಟಣಿಗನು 'ನಾಗರಿಕ'(?) ಎನ್ನುವ ಸಾಮಾಜಿಕ ಭೇದ, ವೈಷಮ್ಯಗಳಿಗೆ ವ್ಯಾಚೀನ ಕಾಲದಿಂದಲೂ ರೈತನು ತುತ್ತಾಗಿದ್ದಾನೆ ಬೇಸಾಯವು ಬರಿಯ ಕಸಬಲ್ಲ, ಅದೊಂದು ವಿಶಿಷ್ಟ ಧ್ಯೇಯ ಸಾಧನೆಗೆ ಉಪಯುಕ್ತವಾದ 'ಜೀವನ ಮಾರ್ಗ' ವೆಂದು ಪ್ರತಿಪಾದಿಸುವವರು ಕೃಷಿ ಮಂಡಲದಲ್ಲಿರುವ ಹೆಚ್ಚಿನ ಜನರು ನಿರುಪಾಯರಾಗಿ ಆ ವ್ಯವಸಾಯವನ್ನು ನೆಮ್ಮಿಕೊಂಡಿರುವ ಅಂಶವನ್ನು ಮರೆತಂತೆ ತೋರುವುದು. ಇದನ್ನೇ 'ಬೇಸಾಯವು ಭಾರತೀಯ ಜೀವನ ಮಾರ್ಗದ ವಿಶಿಷ್ಟದ್ಯೋತಕವೆಂದು ಕರೆಯುವ ಕಾಲ ಹೋಯಿತು— ನಮಗೆ ಅದರ ಹೊರತು ಬೇರೆ ಗತಿಯೇ ಇಲ್ಲ'ವೆಂದು ಮುಖ್ತಾರಸಿಂಗ ಎಂಬ ಆರ್ಥಿಕ ನಿಯೋಗ (1945—50)ದ ಸದಸ್ಯರು ಸೂಚಿಸಿದ್ದಾರೆ

ಕೃಷಿಯ ಕೆಲವು ಲಕ್ಷಣಗಳು

ಕೃಷಿಗೆ ಸ್ವಂತ ಲಕ್ಷಣಗಳು ಕೆಲವು ಇಲ್ಲದಿಲ್ಲ ಕೃಷಿಯು ನಡೆಯಬೇಕಾದ ನಿಸರ್ಗದ ಹಿನ್ನೆಲೆ ಮತ್ತು ಸಾಮಾಜಿಕ ಆವರಣವು ಕೃಷಿಯಿಂದ ಭಿನ್ನವಾದ ಕೈಗಾರಿಕೆಗೂ ಕೃಷಿಗೂ ಇರುವ ಅಂತರಕ್ಕೆ ಮೂಲಕಾರಣವಾಗಿದೆ. ಕೃಷಿಯಲ್ಲಿ, ಇಳಿಯುತ್ತಬರುವ ಪ್ರತಿಫಲದ ಸೂತ್ರ (Law of Diminishing Returns) ಕ್ಕೆ ಹೆಚ್ಚು ಅವಕಾಶವಿದೆ. ಕೃಷಿ ಸರಕುಗಳಲ್ಲಿ ಕೆಲವು ಪೂರಕ ಸರಕುಗಳಾಗಿ, ಸಂಯುಕ್ತ ಸರಕುಗಳಾಗಿ

(ತಳಿಸೇ ಪುಟಸೋದರಿ.)

QUALITY in
PRINTING INKS
means many things . . .
• brilliance
• depth of colour
• covering power
• drying capacity
• workability
• fastness to light etc.
in GANGES inks
the emphasis is on QUALITY
used and proved for 30 years
Factories at
HOWRAH — BOMBAY — MADRAS

ಧರ್ಮಾರ್ಥಗಳ

ಸಹ-ಜೀವನ

(CO-EXISTENCE)

ಸಹ-ಜೀವನ ಪದವು ಸುಂದರವಾಗಿದ್ದಂತೆ ಅರ್ಥಗರ್ಭಿತವಾಗಿಯೂ ಇದೆ. ಒಬ್ಬರ ಅಭಿಪ್ರಾಯವನ್ನು ಇನ್ನೊಬ್ಬರ ಮೇಲೆ ಹೇರ ಹೋಗದೆ, ಇಬ್ಬರೂ ತಮ್ಮ ತಮ್ಮ ಮೇರೆಯೊಳಗೆ ತಮ್ಮ ತಮ್ಮ ಅಭಿರುಚಿಯಂತೆ ಕಾರ್ಯಮಾಡುತ್ತ, ಪರಸ್ಪರ ಪ್ರೇಮಾದರದಿಂದ ಬದುಕುವುದೇ ಸಹ-ಜೀವನ. ಈ ಲೇಖನದಲ್ಲಿ ಸಹ-ಜೀವನವೆಂದರೇನೆಂಬುದನ್ನು ಸವಿಸ್ತಾರವಾಗಿ ವಿವರಿಸಿರುವರು.

ಬರೆದವರು: ಶ್ರೀ. ಜಿ. ಆರ್. ಪಾಂಡೇಶ್ವರ.

ಸಹ-ಜೀವನವು ಎರಡು ಸಮಾನಾಂತರ ಸರಳರೇಖೆ (Two parallel lines) ಗಳಂತಿರುತ್ತದೆ. ಇಂದು ಈ ಪದವು ದೇಶ ವಿದೇಶಗಳಲ್ಲಿ ಒಂದು ಘನತರವಾದ ರಾಜ್ಯಕೀಯ ಮಂತ್ರ (Political Slogan) ಘೋಷವಾಗಿ ಪ್ರಚಾರಗೊಳ್ಳುತ್ತಿರುವುದು ಮಾನವಲೋಕದ ಸುಖಮಯ ಭವಿಷ್ಯತ್ತಿಗೆ ಆಶಾದಾಯಕವಾಗಿದೆ. ಆಂಗ್ಲೋ-ಅಮೆರಿಕನ್ ಪ್ರಧಾನ ಪುರುಷರಾದ ಚರ್ಚಿಲ್-ಐಸೆನ್‌ಹಾವರ್ ಮಹಾಶಯರು ಒಟ್ಟು ಕೂಡಿ ಈ ಪದವನ್ನು 'ಹಡೆ'ದರು. ಈ ಪದವನ್ನು ಪ್ರತ್ಯಕ್ಷ ಕಾರ್ಯಾಚರಣೆಗೊಳಿಸುವ ದೃಷ್ಟಿಯಿಂದಲೇ ಎಂಬಂತೆ, ಹಾಗೂ ಅದರ ಹಿನ್ನೆಲೆಯಲ್ಲಿ ಹುದುಗಿರುವ ನಿಜವಾದ ಅಂತರ್ಯವನ್ನು ಒರೆಗೆ ಹಚ್ಚಿ ನೋಡಲಾಪಂತೆ, ಭಾರತ ಚೀಣಾ ಪ್ರಧಾನ ಧುರೀಣರಾದ ನೆಹ್ರು—ಚೌರಿವರು ಡಿಲ್ಲಿಯಲ್ಲಿ ವಿಚಾರವಿನಿಮಯ ನಡೆಸಿ ಅದಕ್ಕೆ ವ್ಯಾಖ್ಯಾರೂಪವಾಗಿ 'ಪಂಚಶೀಲ' ವೆಂಬ 'ಏಮೊಗದ' ರಾಜ್ಯಕೀಯ ಸಿದ್ಧಾಂತವನ್ನು ಪ್ರಕಟಪಡಿಸಿದರು. ಇಂದು ಈ ಸಹ-ಜೀವನವು ಪೂರ್ವಾರ್ಥ ಮತ್ತು ಪಶ್ಚಿಮಾರ್ಥ ಭೂಗೋಲಗಳ ಸಹ-ಜೀವನವಾಗಿ, ಸ್ಪಷ್ಟವಾದ ಇತ್ತಂಡಗಳನ್ನು ಗುರುತಿಸುವಂತೆ, ಆಸ್ಯಾಫ್ರೊ (ಏಶಿಯಾ ಆಫ್ರಿಕಾ) ರಾಷ್ಟ್ರವ್ಯೂಹ ಮತ್ತು ನ್ಯಾಟೊ-ಸೀಟೊ (ಉತ್ತರ ಅಟ್ಲಾಂಟಿಕ್ ಒಪ್ಪಂದದ ರಾಷ್ಟ್ರವ್ಯೂಹ ಮತ್ತು ಆಗ್ನೇಯ ಏಶಿಯಾ ರಾಷ್ಟ್ರವ್ಯೂಹ) ವ್ಯೂಹ—ಎಂಬ ವ್ಯೂಹರೂಪದಲ್ಲಿ ಮಾರ್ಪಡತೊಡಗಿದೆ. ಕಲಿಗಾಲದ ಕೊನೆಯ ಅಂಕದ ಸರದೆ ಬೀಳುವಹಾಗೆ, ಭೀಕರವಾದ ಅಟಂ, ಹೈಡ್ರೋಜನ್ ಬಾಂಬುಗಳು ಬದ್ದು, ಮಾನವಲೋಕವು ಸರ್ವನಾಶಗೊಳ್ಳುವದನ್ನು ತಡೆಗಟ್ಟುವಂತೆ ಮಾಡುವದಕ್ಕಾಗಿಯೇ ಈ ಬಗೆಯ ಇತ್ತಂಡಗೈದು, ಸಹ—ಜೀವನ ಮಂತ್ರವನ್ನು ಉದ್ಘೋಷಿಸಲಾಗುತ್ತಿದೆ. ಈ ಮಂತ್ರವಾಣಿಯ ವಿಫಲತೆಯಲ್ಲಿ ಪ್ರಳಯದ ಬೀಜವೇ ಹುದುಗಿಕೊಂಡಿದೆಯೆನ್ನಬಹುದು.

ಸಹ—ಜೀವನ ಪದವು ಸುಂದರವಾಗಿದ್ದಂತೆ, ಅರ್ಥಗರ್ಭಿತವಾಗಿಯೂ ಇದೆ. ಭಾರತ ಭೂಮಿಯು ಸಹ-ಜೀವನ ತತ್ತ್ವವನ್ನು ಅನಾದಿಕಾಲದಿಂದಲೂ ಪಾಲಿಸುತ್ತ ಬಂದಿದೆ. ನಮ್ಮ ನಾಡಿನಲ್ಲಿ ನಡೆಯುವ ಲಕ್ಷ್ಮೀ—ಸರಸ್ವತಿಯರ ಸಂಯುಕ್ತಾರಾಧನೆಯೂ, ಲಕ್ಷ್ಮೀ—ಸರಸ್ವತಿಯರ ಭಾವಚಿತ್ರಗಳನ್ನು ಬಾಗಿಲಿನ ಆಚೇಚೆ ಸಮಾನವಾದ ಎತ್ತರದಲ್ಲಿರಿಸುವುದೂ ಪ್ರಪಂಚ—ಪರಮಾರ್ಥಗಳ ಒಂದು ಅಮೋಘವಾದ ಸಹ—ಜೀವನೋದ್ದೇಶವನ್ನೇ ಎತ್ತಿ ಹೇಳುತ್ತಿವೆ. ಲಕ್ಷ್ಮಿಯು ಭೌತಿಕ ಸಂಪತ್ತನ್ನು ಪ್ರತಿನಿಧಿಸಿದರೆ, ಸರಸ್ವತಿಯು ಬೌದ್ಧಿಕ ಸಂಪತ್ತನ್ನು ಪ್ರತಿನಿಧಿಸುವಳು—ಸದೃಢ, ಸುಂದರ ದೇಹದೊಳಗೆ ನಿರ್ಮಲೋದಾತ್ತವಾದ ಬುದ್ಧಿ—ಭಾವನೆಗಳ ಸುಪ್ರಕಾಶವು ತುಂಬಿಕೊಂಡಿರುವಂತೆ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಕಂಡುಬರುವ ಎಲ್ಲ ಬಗೆಯ ಹೋರಾಟಗಳ ಮೂಲದಲ್ಲಿಯೂ ಈ ಲಕ್ಷ್ಮೀ—ಸರಸ್ವತಿಯರ ಘರ್ಷಣೆ ಅಥವಾ ಸಹ—ಜೀವನ ಸಾಹಿತ್ಯವೇ ವ್ಯಕ್ತವಾಗುತ್ತಿದೆ. ಸೂರ್ಯನು ತನ್ನ ಪ್ರಖರ ಕಿರಣಗಳಿಂದ ಬತ್ತಿಸಿ ಆವಿಯ ರೂಪದಲ್ಲಿ ಸೆಳೆದುಕೊಂಡ ನೀರನ್ನು ಪುನಃ ಮಳೆಯ ರೂಪದಿಂದ ಹಿಂದಿರುಗಿಸದಿದ್ದರೆ, ಸೃಷ್ಟಿಯು ತಾಪಗೊಂಡು ಪ್ರಾಣಬಿಡುವುದೇ ಸರಿ. ಹಾಗೆಯೇ ಈ ಜಗಜ್ಜೀವನದಲ್ಲಿ ಬೌದ್ಧಿಕ ಜೀವಿಗಳು ತಮ್ಮ ಬುದ್ಧಿಶಕ್ತಿಯ ಪ್ರಭಾವದಿಂದ ಸಾಮಾನ್ಯರ ಸಂಪತ್ತನ್ನು ರಾತಿರಾತಿಯಾಗಿ ಸೆಳೆದುಕೊಂಡು ಸಂಗ್ರಹಿಸಿಟ್ಟುಕೊಳ್ಳುವಂತೆ ಭೌತಿಕ ಜೀವಿಗಳು ವ್ಯಾಪಾರೋದ್ಯಮಗಳ ಶಕ್ತಿ ಪ್ರಭಾವದಿಂದ ಸಾಮಾನ್ಯ ಜನತೆಯ ಸಂಪತ್ತನ್ನು ಶೋಷಿಸಿ, ರಾತಿಯೊಟ್ಟಿಕೊಳ್ಳುತ್ತಾರೆ. ಅವರು ಅದನ್ನು ಪುನಃ ಸಮಾಜ ಕಲ್ಯಾಣಕ್ಕಾಗಿ, ದಾನರೂಪದಿಂದಲೂ, ಲಾಭ ಹಂಚಿಕೆಯ ರೂಪ (Sharing the profits with the workers) ದಿಂದಲೂ, ವಸ್ತ್ರ—ವಸತಿ—ಅಪಧ್ವನಗಳ ರೂಪದಿಂದಲೂ, ಬಗೆಬಗೆಯ ಉಚಿತವಾದ ಶಿಕ್ಷಣಾನುಕೂಲತೆಯ ರೂಪದಿಂದಲೂ ಸಾಮಾನ್ಯ ಜನತೆಗೆ ಹಿಂದಿರುಗಿಕೊಡಬೇಕು. ಹಾಗೆ ಮಾಡದೆ ಹೋದಲ್ಲಿ ಸಂಪ (ಮುಷ್ಕರ)ಗಳೂ ದಂಗೆಗಳೂ ಉಂಟಾಗಿ, ಸಮಾಜ ಜೀವನವು ಘರ್ಷಣೆಯ ಅಗ್ನಿಕುಂಡಕ್ಕೆ ಕ್ಷಿಬದ್ದು ವಿಲಿ ವಿಲಿ ಒದ್ದಾಡುವುದೇ ಸರಿ. ಇಂತಹ ಭೀಕರ ಪರಿಣಾಮಕ್ಕೆಡೆಗೊಡದಂತೆ, ಲಕ್ಷ್ಮೀ-ಸರಸ್ವತಿಯರ ಸಹಜೀವನ ಬುದ್ಧಿಯನ್ನು ಬಲಿಸುತ್ತ ಬರಬೇಕು. ಈ ಮಹತ್ಕಾರ್ಯಕ್ಕೆ ಸರಕಾರನೇ ತಕ್ಕ ಮಾರ್ಗದರ್ಶನ (Leadership) ವನ್ನೀಯಬೇಕು.

ಲಕ್ಷ್ಮೀ—ಸರಸ್ವತಿಯರ ಸಹಜೀವನಕ್ಕೆ ಧರ್ಮ ಮತ್ತು ಅರ್ಥಗಳ ಸಹಜೀವನವೇ ಮೂಲಸ್ಫೂರ್ತಿಯಾಗಿರಬೇಕು. ಸರಸ್ವತಿಯು ಧರ್ಮದ ಪ್ರತ್ಯಕ್ಷ ರೂಪವಾಗಿದ್ದರೆ, ಲಕ್ಷ್ಮಿಯು ಅರ್ಥದ ಪ್ರತ್ಯಕ್ಷ ರೂಪವಾಗಿರಬೇಕು. ಪರಹಿಂಸೆ ಇಲ್ಲದಂತೆ ತುಂಬಿಗಳು ಹೂವುಗಳಿಂದ ಲೀಲಾಜಾಲವಾಗಿ, ಅವುಗಳಿಗೆ ಹಿಂಸೆಯಾಗದಂತೆ, ಮುಕರಂದವನ್ನು ಕೂಡಿಸುವಂತೆ, ನ್ಯಾಯಮಾರ್ಗದಿಂದ ಅರ್ಥವನ್ನು ಗಳಿಸಬೇಕು; ಹಾಗೆಯೇ ಸರಸ್ವತಿ ಭಕ್ತರು ಅಂದರೆ, ಬೌದ್ಧಿಕ ಜಾತಿಯವರುಳ್ಳವರು, ದಂಭಾಹಂಕಾರಕ್ಕೆ ಬಲಿಬೀಳದೆ, ನಿರ್ಮಲ ಹೃದಯವುಳ್ಳವರಾಗಿ ನಿರ್ಮತ್ಸರಿಗಳಾಗಿ, ಕೇವಲ ಲೋಕಾನಂದವನ್ನು ಹೆಚ್ಚಿಸುವದಕ್ಕಾಗಿಯೇ ಗ್ರಂಥರಚಿಸಬೇಕು, ವಿಜ್ಞಾನ ಸಂಶೋಧನೆಗಳನ್ನು ನಡೆಸಬೇಕು. ಧರ್ಮ ಮತ್ತು ಅರ್ಥ ಎಂಬೀ ಪದಗಳು ಎರಡೆರಡೇ ಅಕ್ಷರಗಳ ಪುಟ್ಟ ಪದಗಳಾದರೂ ಅವುಗಳು ಹೈಡ್ರೋಜನ್ ಮತ್ತು ಆಟಂ ಬಾಂಬುಗಳಂತೆ, ಅದ್ಭುತವಾದ ಶಕ್ತಿಯನ್ನು ಧರಿಸಿಕೊಂಡ ಮಹಾ ಪದಗಳಾಗಿವೆ. ಇತಿಹಾಸವು ಈ ಮಾತನ್ನು ದೃಢಪಡಿಸಿಕೊಡುವಂತಹ ಅನೇಕ ಅಧ್ಯಾಯಗಳನ್ನು ತೆರೆದು ತೋರಿಸುತ್ತದೆ. ಧರ್ಮಕ್ಕಾಗಿ ಅನೇಕ ಸಲ ಅನೇಕ ಭೀಕರ ಯುದ್ಧಗಳಾಗಿವೆ; ಹಾಗೆಯೇ ಅರ್ಥ (ಹಣ, ರಾಜ್ಯ, ವ್ಯಾಪಾರ ವಿಸ್ತರಣೆ)ಕ್ಕಾಗಿ ಅನೇಕ ಮಹಾ ಯುದ್ಧಗಳಾಗಿವೆ. ನಮ್ಮ ಜೀವಿತಕಾಲದಲ್ಲಿ ನಡೆದು ಹೋದ ಎರಡು ಜಾಗತಿಕ ಯುದ್ಧ (World wars)ಗಳು ಅರ್ಥಕ್ಕಾಗಿಯೇ ಆದವೆಂಬುದನ್ನು ಮರೆಯಲಾರೆವು.

ಆದ್ದರಿಂದ ಸಹಜೀವನ ತತ್ತ್ವದ ಪುರಸ್ಕರ್ತರು ಧರ್ಮಾರ್ಥಗಳ ತಳಹದಿಯನ್ನು ಜೆನ್ನಾಗಿ ಪರಿಶೋಧಿಸಿ, ಅಲ್ಲಿರುವ ಕೆಟ್ಟ ಕೊಳೆಗಳನ್ನು ಕಿತ್ತೊಗೆದು ಗೆದ್ದಲು ಹತ್ತದಂತಹ ಶುದ್ಧವಾದ ಮಣ್ಣಿನಿಂದಲೇ, ಭದ್ರವಾದ ತಳಗಟ್ಟನ್ನು ಕಟ್ಟುವ ಪ್ರಯತ್ನಕ್ಕೆ ತೊಡಗಬೇಕು. ಹಾಗೆ ಮಾಡಲು ತಪ್ಪಿದಲ್ಲಿ, ಹೆಗ್ಗಣವನ್ನೊಳಗಿಟ್ಟುಕೊಂಡೇ ಬಿಲದ ಬಾಯಿ ಮುಚ್ಚಹೋದಂತಾದೀತು. ನಮ್ಮ ದೇಶದೊಳಗೇ ನಾವೀ ಕಾರ್ಯವನ್ನು ಮೊತ್ತಮೊದಲಿಗೇ ಕೈಕೊಳ್ಳಬೇಕು. ನಮ್ಮ ರಾಜಕೀಯ ಧುರೀಣರೆಂಬುವರು ಅಧಿಕಾರಪ್ರಿಯರಾಗದೆ ನಿಜವಾದ ವೈರಾಗ್ಯಶಾಲಿಗಳಾಗಿ, ಲಕ್ಷ್ಮೀ-ಸರಸ್ವತಿಯರ, ಅರ್ಥಾತ್ ಅರ್ಥ—ಧರ್ಮಗಳ ಸುಂದರವಾದ ಸಹ-ಜೀವನದಲ್ಲಿ ದೃಢವಾದ ಶ್ರದ್ಧೆಯುಳ್ಳವರಾಗಬೇಕು; ಜ್ಞಾನ—ಸೌಭಾಗ್ಯ ಸಿದ್ಧಿಗಾಗಿ ಕಾರ್ಯಮಾಡುವ ಕರ್ಮಯೋಗಿಗಳಾಗಬೇಕು ಅವರನ್ನು ಅಂತಹ ಸದ್ದೀಕ್ಷೆಗೆ ಅಣಿಮಾಡುವ ಕಾರ್ಯವನ್ನು ಸರಸ್ವತೀ ಪೂಜಕರಾದ, ಬೌದ್ಧಿಕ ಜಾತಿಯವರ ಲೇಖನಿವಂತರು ಕೈಕೊಳ್ಳಬೇಕು. ಕೆರಳದ ಲೇಖನಿಯು ರಾಜ್ಯ-ಸಾಮ್ರಾಜ್ಯಗಳನ್ನು ಕಟ್ಟಿ ಮಡಿ ಮಾಡೀತು; ಭೌತಿಕದ ಮದ್ವಾಸೆಯನ್ನು ಅಂಕುಶದೋಪಾದಿಯಲ್ಲಿ ಇರಿದಿರಿದು, ಮದ ಇಳಿಸಿ, ಲೋಕೋಪಕಾರಕವಾದ ಸನ್ಮಾರ್ಗಕ್ಕೆ ತಂದೀತು; ಧರ್ಮ—ಅರ್ಥಗಳ ಲಕ್ಷ್ಮೀ—ಸರಸ್ವತಿಯರು ದೊಡ್ಡ ಉದ್ಯಮ ಸಣ್ಣ ಕೈಗಾರಿಕೆಗಳ ಪರಸ್ಪರ ಹಿತಕಾರಕವಾದ ಸಹಜೀವನದ ಹೆದ್ದಾರಿಯಲ್ಲಿ ನಡೆವಂತೆ ಸರಕಾರವನ್ನು, ತರ್ಕಿಸಿ, ಟೀಕಿಸಿ, ಉಪದೇಶಿಸಿ "ಲೋಕಾಸ್ತಮಸ್ತಾಸ್ತುವಿನೋಭವಂತು" ಎಂಬ ಸತ್ಯದ ಧ್ವಜವನ್ನು ಎತ್ತಿ ಹಿಡಿದೀತು.

"ಸರ್ವಃ ಸದ್ಬುದ್ಧಿಮಾನ್ಭೋತು ಸರ್ವಃ ಸರ್ವತ್ರ ನಂದತು."



BISON BRAND

QUALITY PAPERS

Manufacturers:

THE MYSORE PAPER MILLS LTD.,

BHADRAVATI.

Distributors:

SCHOOL BOOK COMPANY

CAR STREET

Telephone: 329 Telegrams: SCHOOL BOOK

MANGALORE.

Branch at

Vishwa Bhavan, Hampankatta, MANGALORE.

ಅಶೋಕನ ಕಾಲದ ಭಾರತ

ದೇವಾನಾಂ ಪ್ರಿಯದರ್ಶಿಯೂ ಶಾಂತಿ ಸೇನಾಸ್ಥಾಪಕನೂ ಆದ ಅಶೋಕನೇ ಇಂದಿನ ನಮ್ಮ ಭಾರತದ ತಾತ್ತ್ವಿಕ ನಾಯಕನೆಂದರೆ ಅತಿಶಯೋಕ್ತಿಯಲ್ಲ. ಆತನ ಕಾಲದ ಸಿಂಹಾವಲೋಕನವನ್ನು ಈ ಸಂದರ್ಭದಲ್ಲಿ ಮಾಡುವುದೂ ಅವಶ್ಯಕವಲ್ಲ.

ಬರೆದವರು: ಯು. ನಾ. ಉಡುಪಿ, ವಿದ್ವಾನ್.

ಶ್ರೀಅಶೋಕನು ಜನ್ಮತಃ ಪುಣ್ಯವಂತನಾಗಿಯೇ ಹುಟ್ಟಿರಬೇಕು. ಇಲ್ಲದಿದ್ದರೆ ಆ ಸೇತು ಹಿಮಾಚಲ ಪರ್ಯಂತ ಮಾತ್ರವಲ್ಲ-ಪರ್ಷ್ಯಾ, ಇಜಿಪ್ತು, ಮಧ್ಯ ಏಷ್ಯಾ, ಸಿಂಹಳ, ಚೀನಾ, ಜಪಾನು ಮೊದಲಾದ ದಿಗ್ದೇಶಗಳ ಜನರ ಹೃದಯವನ್ನೂ ಪರಿವರ್ತನ ಮಾಡಲು ಸಾಧ್ಯವೆ? ಅಜ್ಞಾನದಿಂದ ಕುರುಡುಗಟ್ಟಿದ ಜನಪದಕ್ಕೆ ಜ್ಞಾನಜ್ಯೋತಿಯನ್ನು ಎತ್ತಿ ತೋರಿಸಲು ಸಾಧ್ಯವೆ?

ಅಶೋಕ ಚಕ್ರವರ್ತಿಯು ಜನರ ಹೃದಯವನ್ನು ತನ್ನ ವಾಗಮೃತ ಧಾರೆಯಿಂದ ಆಕರ್ಷಿಸಿದ ಮಹಾ ಧೀರನು! ವಾಯುಮಂಡಲದಲ್ಲಿ ಎಲ್ಲೋ ತೊಂ ಮಾಯವಾಗಿದ್ದ ರಾಮರಾಜ್ಯವನ್ನು ಭಾರತದಲ್ಲಿ ಮತ್ತೊಮ್ಮೆ ಎತ್ತಿ ನಿಲ್ಲಿಸಿದ ಮಹಾವೀರನು! ಪ್ರತಿಯೊಬ್ಬ ಮಾನವನೂ ಜೀವನಕ್ಕೆ ಒಂದು ಹಿಡಿ ಅಂಬಲಿ, ಉಡಲು ಒಂದು ತುಂಡು ಕಂಬಳಿ ಸಾಕೆನ್ನುತ್ತಿದ್ದ ನಿತ್ಯತೃಪ್ತರು ಬಾಳಿದ್ದ ಮಹಾ ಪುಣ್ಯಯುಗವದು! 'ಜೀವೋ ಜೀವಸ್ಯಜೀವನಂ' ಜೀವಿಗಳಿಗೆಲ್ಲಾ ಆತ್ಮಾರ್ಪಣವೇ ಜೀವನ ಎಂಬುದನ್ನು ಅಲ್ಲಗಳೆದ ಕಾಲವದು!

ಅಶೋಕನು ಜನಿಸಿದಾಗ ಈ ಪ್ರಪಂಚದ ಮಾಯೆಗೆ ಬೆದರಿ ಚೀರಲಿಲ್ಲ. ಮುಂದೆ ತಾನು ರಾಜ್ಯ ಸೂತ್ರವನ್ನು ಕೈಯಲ್ಲಿ ಹಿಡಿದಾಗ ಒಂದೆರಡು ಸಾರಿ ಎಡವಿದರೂ ಮುಗ್ಗುರಿಸಿಬೀಳದೆ ತನ್ನ ಮಾರ್ಗವನ್ನು ಸರಿಪಡಿಸಿಕೊಂಡು ಪ್ರಜೆಗಳಿಗೆ ಬಾಳಿ ಕಡಲಿನಲ್ಲಿ ದುಃಖದ ತೆರೆಯನ್ನು ತೋರಿಸದೆ ಅವನ್ನು ಮೆಟ್ಟಿ ನಿಂತನು ಇತಿಹಾಸ ಯುಗದಲ್ಲಿ ಅವನೊಬ್ಬನೇ ರಾಜನೆಂಬ ಹೆಸರಿಗೆ ಕಕ್ಕವನು. ಅವನಿಗೆ ಮಾತ್ರ ಅದು ಅನ್ವರ್ಥನಾಮ. ಪ್ರಜೆಗಳ ಸುಖ ದುಃಖಗಳ ಕಡೆಗೆ ಅವನಷ್ಟು ಗಮನಕೊಟ್ಟ ರಾಜ ಏಕಿಣ್ಯನನ್ನು ನಾವು ಇತಿಹಾಸದಲ್ಲೇ ಕಾಣೆವು. ವಿಕ್ರಮಾದಿತ್ಯ, ಸಮುದ್ರಗುಪ್ತ, ಶ್ರೀಹರ್ಷ—ಮೊದಲಾದ ಅಧಿರಾಜರಿಗೆಲ್ಲಾ ಅಶೋಕನೇ ರಾಜ್ಯಭಾರದ ಕುರಿತು ಒನಾನು ಹೇಳಿದವನು. ಅವನನ್ನು ಅನುಕರಿಸಲು ಅವರು ಜೀವನದಲ್ಲಿಲ್ಲಾ ಹೆಣಗಿದರು. ಆದರೆ ರಾಜ್ಯಭಾರದಲ್ಲಿ ಅಶೋಕನಂಥಾ ಕುಶಲ ಶಿಲ್ಪಿಯು ಅಶೋಕನೊಬ್ಬನೇ. ಬಾಳ ಕಡಲಿನಲ್ಲಿ ಸುಖದ ಕಾರಂಜಿಗಳನ್ನು ಪುಟಿಸಲು ಅವನೊಬ್ಬನೇ ಸಮರ್ಥನು.

ಅಶೋಕನ ರಾಜ್ಯಭಾರದ ಕುರಿತು ನಮ್ಮ ಯಾವ ಧರ್ಮ ಗ್ರಂಥಗಳೂ, ಪುರಾಣ ನಾಟಕಗಳೂ ಬಾಯಿತುಂಬಾ ಹೊಗಳಿಲ್ಲ. ಇದಕ್ಕೆ ಅವನ ಬೌದ್ಧಮತ ಪ್ರೇಮವೇ ಕಾರಣ. ಲೋಕದಲ್ಲಿ ಅಜ್ಞಾನವನ್ನು ಹರಡಿ, ಸ್ವರ್ಗಕ್ಕೆ ಹೆಚ್ಚು ಮಂದಿ ಪ್ರವೇಶಿಸದಂತೆಮಾಡಲು ದೇವರು ಬೌದ್ಧಾವತಾರವನ್ನು ತಾಳಿದನೆಂದು ವೈದಿಕ ಮತಾನುಯಾಯಿಗಳಲ್ಲಿ ಒಂದು ಕಲ್ಪಿತ ಕಥೆಯಿದೆ. ಇದರಿಂದ ಸನಾತನ ದರ್ಮಿಯರಿಗೂ ಬೌದ್ಧಮತೀಯರಿಗೂ ಉತ್ತರ ದಕ್ಷಿಣ ಧ್ರುವವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ವೈದಿಕ ಪಂಥೀಯರು ಬೌದ್ಧ ಮತವನ್ನು ಹಳಿದುದಲ್ಲದೆ ಅಶೋಕನ ಮೆಚ್ಚುಗೆಯ ಹೆಸರಾದ 'ದೇವಾನಾಂಪ್ರಿಯ' ಎಂಬುದಕ್ಕೆ 'ಮೂರ್ಖ' ಎಂಬ ಅರ್ಥವನ್ನು ಕಲ್ಪಿಸಿದ್ದಾರೆ. ಒಲ್ಲದಿದ್ದ ಗಂಡನಿಗೆ ಮೊಳರಿನಲ್ಲೂ ಕಲ್ಲು ಕಾಣಿಸಿತಂತೆ!

ಅಶೋಕನ ಕಾಲದ ಭಾರತದಲ್ಲಿ ರಾಜರು ಹಲವು ಸ್ತ್ರೀಯರನ್ನು ಲಗ್ನವಾಗುತ್ತಿದ್ದರು. ಅಶೋಕನ ತಂದೆ ಬಿಂದುಸಾರನಿಗೆ ೧೬ ಜನ ರಾಣಿಯರಿದ್ದರು. ಅವರಿಗೆ ೧೦೧ ಜನ ಗಂಡು ಮಕ್ಕಳಿದ್ದರು. (ದ್ವೀಪವಂಶ—ಮಹಾ ವಂಶ). ಅಶೋಕನಿಗೂ ಕೆಲವು ಹೆಂಡಿರಿದ್ದಂತೆ ತೋರುತ್ತದೆ. ಅಶೋಕನು ಉಜ್ಜಯಿನಿಯ ಅಧಿಕಾರಿಯಾಗಿದ್ದಾಗ ವಿದಿಶಾ ನಗರದ ಒಬ್ಬ ಶ್ರೇಷ್ಠಿಯ ಮಗಳಾದ ವಿದಿಶಾ ದೇವಿಯನ್ನು ಲಗ್ನವಾಗಿದ್ದನು. ಈಕೆಗೆ ಬೌದ್ಧ ಮತದಲ್ಲಿ ಅಪಾರ ಭಕ್ತಿ ಇತ್ತು. ಅಶೋಕನು ಪಾಟಲಿಪುತ್ರದಲ್ಲಿ ನೆಲಸಿದ ಮೇಲೆ 'ಇಲ್ಲೂ ದೆಸೆಗಳಲ್ಲೂ ಇರುವ ನನ್ನ ಅವರೋಧನಗಳು' ಎನ್ನುವುದರಿಂದ ಅವನಿಗೆ ಇನ್ನೂ ಕೆಲವು ಹೆಂಡಿರಬೇಕೆಂದು ತೋರುತ್ತದೆ. ಆಗ ರಾಜನನ್ನು ಅನುಸರಿಸಿ ಶ್ರೀಮಂತ ಪ್ರಜೆಗಳು ಹಲವು ಸ್ತ್ರೀಯರನ್ನು ವಿವಾಹವಾಗುತ್ತಿದ್ದರು.

ಅಂದು ಭಾರತದಲ್ಲಿ ಭಾವೀ ಚಕ್ರವರ್ತಿಯಾಗುವ ರಾಜಕುಮಾರನನ್ನು ಬಾಲ್ಯದಲ್ಲೇ ಕೆಲವು ಮಾರ್ಗಗಳಿಂದ ಪರೀಕ್ಷಿಸುತ್ತಿದ್ದರು. ಅಶೋಕ, ಸುಮನ ಮೊದಲಾದ ರಾಜಕುಮಾರರನ್ನು ಪಿಂಗಳ ವತ್ಸನೆಂಬ ಆ ಜೀವಕನು ಯಾನ, ಆಸನ, ಭಾಜನ, ಪಾನ, ಭೋಜನ ಮುಂತಾದುವುಗಳಲ್ಲಿ ಪರೀಕ್ಷೆ ಮಾಡಲು ಬಿಂದುಸಾರನಿಂದ ನಿಯಮಿಸಲ್ಪಟ್ಟಿದ್ದನು. ಆತನು ಅಶೋಕನನ್ನೇ ಮೆಚ್ಚಿದನು. ಹಿರಿಯ ರಾಜಕುಮಾರನಾದ ಸುಮನನು ಮದಹಂಕಾರಿ, ಇದರಿಂದ ರಾಧಾಗುಪ್ತ ಮೊದಲಾದ ೫೦೦ ಮಂದಿ ಅಮಾತ್ಯರೂ ಅವನನ್ನು ತಿರಸ್ಕರಿಸಿದರು. ಅಶೋಕನನ್ನು ಮಂತ್ರಿಮಂಡಲವು ಮೆಚ್ಚಿತು. ಅವನು ಸಿಂಹಾಸನವೇರಿದನು. ಅಶೋಕನಿಗೆ ರಾಧಾಗುಪ್ತನೇ ಮುಖ್ಯಮಂತ್ರಿಯಾಗಿದ್ದನು. ಇದು ಅಂದಿನ ರಾಜಕುಮಾರರ ಚುನಾವಣೆಯ ಪದ್ಧತಿ.

ಆಗ ಯುವರಾಜನಾಗಿ ಆರಿಸಲ್ಪಟ್ಟವನು ರಾಜನಿಗೆ ತನ್ನ ಯೋಗ್ಯತೆಯನ್ನು ಪ್ರಕಾಶಪಡಿಸಬೇಕಿತ್ತು. ಜನ್ಮತ್ರಿಂತ ಕರ್ಮಕ್ಕೇ ಬೆಲೆ ಹೆಚ್ಚಿತ್ತು. ಅಶೋಕನನ್ನು ಬಿಂದುಸಾರನು ಅವಂತಿ ರಾಷ್ಟ್ರದ ಮಂಡಲಾಧೀಶ್ವರನನ್ನಾಗಿ ಮೊದಲು ನಿಯಮಿಸಿದ್ದನು. ಆಗ ಗಂಗಾನದಿಯ ಕಟ ಪ್ರದೇಶದಿಂದ ಹೊರ ದೇಶಗಳಿಗೂ ಹೊರ ದೇಶಗಳಿಂದ ಗಂಗಾನದೀ ಕಟಪ್ರದೇಶಗಳಿಗೂ ಸೌರಾಷ್ಟ್ರದ ಮೂಲಕ ನಡೆಯುತ್ತಿದ್ದ, ವ್ಯಾಪಾರಕ್ಕೆ ಉಜ್ಜಯಿನೀ ನಗರವೇ ಮುಖ್ಯ ಕೇಂದ್ರವಾಗಿತ್ತು. ಇದರಿಂದ ಉಜ್ಜಯಿನೀ ನಗರವು ಸಂಪತ್ತಿನಿಂದ ಕೂಡಿತ್ತು. ಅದು ಆಗ ವಿದ್ಯಾದೇವತೆಯ ತವರು ಮನೆಯಾಗಿಯೂ ಇತ್ತು. ಉಜ್ಜಯಿನಿಯ ಈ ವೈಭವಕ್ಕೆ ಅಶೋಕನೊಬ್ಬ ಮುಖ್ಯ ಕಾರಣಗಾರ. ಮುಂದೆ ಶಕ್ತಿಶಿಲೆಯಲ್ಲೂ ಅಶೋಕನ ಯೋಗ್ಯತೆ ಬೆಳಕಿಗೆ ಬಂತು. ಬೆಳೆಯ ಸಿರಿಮೊಳೆಯಲ್ಲೇ ತೋರಿತು.

ಕಳಿಂಗ ಯುದ್ಧದ ಮೊದಲು ಅಶೋಕನು ಕ್ರೂರಿಯಾಗಿದ್ದನು—ಎಂಬ ಹೇಳಿಕೆಯೊಂದು ಇದೆ. ಅವನು ಪ್ರಜೆಗಳನ್ನು ಶಿಕ್ಷಿಸುವುದಕ್ಕಾಗಿ ನರಕವನ್ನು ನಿರ್ಮಾಣ ಮಾಡಿ ಚಂಡಗಿರಿಕನೆಂಬ ದೈತ್ಯಮಾನವನಿಗೆ ಅದರ ಸಂಪೂರ್ಣ ಅಧಿಕಾರವನ್ನು ಒಪ್ಪಿಸಿದ್ದನಂತೆ! ಒಮ್ಮೆ ಸಮುದ್ರನೆಂಬ ಒಬ್ಬ ಬೌದ್ಧ ಸನ್ಯಾಸಿಯನ್ನು ಆ ಚಂಡಗಿರಿಕನು ನಿಷ್ಕಾರಣವಾಗಿ ನರಕಕ್ಕೆ ಎಳೆದೊಯ್ದು ಆರು ದಿನ ಚಿತ್ರಹಿಂಸೆಗಳಿಂದ ಪೀಡಿಸಿದನಂತೆ! ಏಳನೆಯ ದಿನ ಅವನನ್ನು ಬೆಂಕಿಯ ಮಧ್ಯದಲ್ಲಿ ಕೂಡಿಸಿದಾಗಿ ಅವನು ನಗುನಗುತ್ತಾ ಬುದ್ಧನ ಧ್ಯಾನಮಾಡುತ್ತಾ ಸುರಕ್ಷಿತನಾಗಿದ್ದುದನ್ನು ಕಂಡು ಚಂಡಗಿರಿಕನು ಬೆದರಿ ಅಶೋಕನನ್ನು ಕರೆತಂದನು. ಈ ದೃಶ್ಯದಿಂದ ಕಾಲಾಶೋಕನು ಶ್ವೇತಾಶೋಕನಾದನು. ಚಂಡಾಶೋಕನು ಧರ್ಮಾಶೋಕನಾದನು. ಅಂದೇ ಬೌದ್ಧನಾದನು (ದಿವ್ಯಾವದಾನ) ಕೆಲವು ಗ್ರಂಥಗಳು ಅಶೋಕನಿಗೆ ಉಪಗುಪ್ತನೆಂಬ ಶ್ರೇಷ್ಠಿಯಿಂದ ಹೃದಯ ಪರಿವರ್ತನವಾಯಿತೆನ್ನುವುವು 'ರಾಜಾ ಪ್ರತ್ಯಕ್ಷ ದೇವತಾ' ಎಂದ ಮೇಲೆ ಪರಲೋಕದಲ್ಲಿ ದೈವನಿರ್ಮಿತ ನರಕವಿರುವಾಗ, ಇಹಲೋಕದ ಪ್ರತ್ಯಕ್ಷ ದೇವತೆಯಾದ ರಾಜ ನಿರ್ಮಿತ ನರಕವಿರಬೇಕೆಂದು ಕರುಣ ಅಶೋಕನಿಗೆ ಹೊಳೆದಿರಬಹುದು ಆ ಕಾಲದ ಜನರಿಗೂ ಕ್ರೂರ ಶಿಕ್ಷೆಗಳ ಅಗತ್ಯವಿದ್ದಿರಬಹುದೆ? ಇದೊಂದು ಸಮಸ್ಯೆ.

ಆ ಕಾಲದ ಭಾರತದಲ್ಲಿ ಶೈವಮತವೇ ಪ್ರಬಲವಾಗಿದ್ದಿರಬೇಕು. ಅಶೋಕನೂ ಮೊದಲು ಶೈವನಾಗಿದ್ದಿರಬೇಕು. ಅವನು ಜೀರ್ಣವಾಗಿದ್ದ ವಿಜಯೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದುದಲ್ಲದೆ, ಎರಡು ಅಶೋಕೇಶ್ವರ ದೇವಾಲಯಗಳನ್ನು ಕಟ್ಟಿಸಿದನು. (ಕಲ್ಹಣನ ರಾಜತರಂಗಿಣಿ).

ಅಂದು ರಾಜಾಧಿರಾಜ, ಮಹಾರಾಜ, ಚಕ್ರವರ್ತಿಯೆಂಬ ಬಿರುದುಗಳನ್ನು ರಾಜರು ಮೆಚ್ಚುತ್ತಿದ್ದಿಲ್ಲ. ಅಶೋಕನಿಗೂ, ಅವನ ಸಮಕಾಲೀನನಾದ ಸಿಂಹಳ ರಾಜ ತಿಷ್ಯನಿಗೂ ದೇವಾನಾಂಪ್ರಿಯ (ದೇವತೆಗಳಿಗೆ ಪ್ರಿಯನಾದವ ನು,ರಾಜಾ)ಎಂಬ ಬಿರುದೇ ಪ್ರಿಯವಾಗಿತ್ತು. ಇನ್ನು ದೇವಾನಾಂ ಪ್ರಿಯದರ್ಶಿ, ಪ್ರಿಯದರ್ಶಿ ರಾಜ—ಈ ಬಿರುದುಗಳೂ ಅಶೋಕನಿಗೆ ಪ್ರಿಯವಾಗಿದ್ದುವು.

ರಾಜನು ಸಂದರ್ಭಬಂದರೆ ವಜ್ರದಂತೆ ಕಠೋರನಾಗಿ ವರ್ತಿಸುತ್ತಿದ್ದನು. ಅಶೋಕನ ಹೆಸರಿನ (ಅಶೋಕ ವೃಕ್ಷ) ಮರವೊಂದನ್ನು ಅಂತಃಪುರ ಸ್ತ್ರೀಯರು ಕೆಡಿಸಿದಾಗ ಐನೂರು ಮಂದಿ ಕೋಮಲೆಯರನ್ನು ರಾಜನು ಸುಡಿಸಿ ಬಿಟ್ಟನಂತೆ! ಅಶೋಕನು ತನ್ನ ಈ ಕ್ರೂರಕಾರ್ಯವನ್ನು ಯಾವ ಶಾಸನದಲ್ಲೂ ಸೂಚಿಸಿಲ್ಲ. ಆದರೆ ಕಳಿಂಗ ಯುದ್ಧದ ಅನಾಹುತಗಳನ್ನು ತೋಡಿಕೊಂಡು ಪಶ್ಚಾತ್ತಾಪಪಟ್ಟದ್ದು ಶಾಸನಗಳಿಂದ ಗೊತ್ತಾಗುತ್ತದೆ?

ಆಗ ಪಾರವೇಲನು ಕಳಿಂಗದ ರಾಜ. ಅಶೋಕನು ಆ ಯುದ್ಧದಲ್ಲಿ ೧೫೦ ಸಾವಿರ ಜನರನ್ನು ಸೆರೆಹಿಡಿದನು. ೧೦೦ ಸಾವಿರ ಜನರು ಯುದ್ಧರಂಗದಲ್ಲಿ ಮಡಿದರು. ಇದರಿಂದ ಅಶೋಕನು 'ಕಲಿಂಗವನ್ನು ಜಯಿಸಿದುದಕ್ಕಾಗಿ ದೇವಾನಾಂಪ್ರಿಯನು ಅನುಶೋಚಿಸುತ್ತಾನೆ' ಎಂದಿರುವನು. ಅವನು ನೊಂದ ಕಲಿಂಗದ ಪ್ರಜೆಗಳನ್ನು ಸಂತೈಸುವುದಕ್ಕಾಗಿಯೇ ಎರಡು ಶಾಸನಗಳನ್ನು ಬರೆದು ಪ್ರಕಾಶಮಾಡಿದನು. ಇದರಿಂದ ಅಶೋಕನು ಮುಂದೆ ಕುಸುಮಕೋಮಲಿ ಹೃದಯದವನಾಗುತ್ತಾ ಸಾಗಿದನೆಂದು ತೋರುತ್ತದೆ.

ಅಶೋಕನ ರಾಜ್ಯಭಾರದ ಆರಂಭಕಾಲದಲ್ಲೇ ಬೌದ್ಧಮತವು ಜನಪ್ರಿಯವಾಗುತ್ತಾ ನಡೆದಿತ್ತು. ಅಶೋಕನು ಅಭಿಷಿಕ್ತನಾದ ನಾಲ್ಕು ವರ್ಷಗಳ ಮೇಲೆ ಅವನ ತಮ್ಮನಾದ ತಿಷ್ಯನು ಮಹಾ ಧರ್ಮರಕ್ಷಿತನೆಂಬ ಸ್ಥವಿರನ ಪಾಂಡಿತ್ಯ ಮತ್ತು ಗುಣ ಶೀಲಗಳಿಗೆ ಮೆಚ್ಚಿ ಬೌದ್ಧ ಭಿಕ್ಷುವಾದನು. ಅದೇ ವರ್ಷ ಅವನ ಅಳಿಯ ಅಗ್ನಿಬ್ರಹ್ಮನೂ ಗೃಹಸ್ಥಾಶ್ರಮವನ್ನು ತ್ಯಜಿಸಿ ಭಿಕ್ಷುಕನಾದನು. ಮತ್ತೆರಡು ವರ್ಷಗಳ ಮೇಲೆ ಅವನ ಮಗ ಇಪ್ಪತ್ತೆರ್ಷ ವಯಸ್ಸಿನ ಮಹೇಂದ್ರನೂ, ಹದಿನೆಂಟು ವರ್ಷ ವಯಸ್ಸಿನ ಸಂಘಮಿತೆಯೂ ಭಿಕ್ಷುಗಳಾದರು. ಇದರಿಂದಲೇ ಅಶೋಕನಿಗೆ 'ಶಾಸನದಾಯಾದ' ಎಂಬ ಬಿರುದು ಸಿಕ್ಕಿತು. ಇವನು ಈ ಮೊದಲೇ ಬೌದ್ಧ ಭಿಕ್ಷುಗಳಿಗೆ ವಸ್ತ್ರ, ಆಹಾರ, ವಸತಿ ಮತ್ತು ಔಷಧವನ್ನು ಹೇರಳವಾಗಿ ಕೊಟ್ಟು 'ಪಚ್ಚಯ ನಾಯಕ' ಎಂಬ ಗೌರವ ಪಡೆದಿದ್ದನು. ಆ ಕಾಲದಲ್ಲಿ ಬೌದ್ಧ ಮತ ತತ್ವಗಳನ್ನು 'ತ್ರಿಪಿಟಕ' ಎಂಬ ಗ್ರಂಥವು ಸಂಪೂರ್ಣ ತಿಳಿಸುತ್ತಿತ್ತು. ಮಹೇಂದ್ರನು ಮೊಗ್ಗಲೀಪುತ್ತ ತಿಷ್ಯನ ಶಿಷ್ಯನಾಗಿ ಮೂರು ವರ್ಷಗಳೊಳಗೆ ಸಂಪೂರ್ಣ ತ್ರಿಪಿಟಕವನ್ನು ಅಭ್ಯಾಸ ಮಾಡಿ ಬೌದ್ಧ ಧರ್ಮದ ಪಾರಂಗತನಾದನು. ಆಗ ಸ್ತ್ರೀಯರೂ ಭಿಕ್ಷುಣಿಯರಾಗುತ್ತಿದ್ದರು. ಸಂಘಮಿತ್ರೆಯು ಧರ್ಮಶಾಲಾ ಎಂಬ ಭಿಕ್ಷುಣಿಯಿಂದ ದೀಕ್ಷೆ ಪಡೆದಳು. ಅಂದಿನ ಭಾರತದಲ್ಲಿ ಬುದ್ಧನ ಉಪದೇಶಗಳು ಜನರ ಹೃದಯಗಳನ್ನು ಸುಲಭದಲ್ಲಿ ಸೆರೆ ಹಿಡಿಯುತ್ತಿದ್ದುವು.

ಆಗ ಭಾರತದಲ್ಲಿ ಬ್ರಾಹ್ಮಣ ಶ್ರಮಣರಿಲ್ಲದ ಜನಪದವಿರಲಿಲ್ಲ. ಸನಾತನ ಧರ್ಮದಂತೆ ಎಲ್ಲಾ ದರ್ಮದವರೂ ಸನ್ಯಾಸಿಗಳಿಗೆ ಮಣಿಯುತ್ತಿದ್ದರು. ಜನರೆಲ್ಲಾ ಯಾವುದಾದರೊಂದು ಮತದಲ್ಲಿ ವಿಶ್ವಾಸವುಳ್ಳವರಾಗಿದ್ದರು.

ಅಶೋಕನು ಬೌದ್ಧ ಮತಕ್ಕೆ ಬಹು

ಲ ಸೇರಲಿಲ್ಲ. ಆಗ ನಿತ್ಯವೂ ಅನನ ಕ ಶಾಲೆಯಲ್ಲಿ ಹಲವು ಸಾವಿರ ಪ್ರಾ ಗಳ ವಧೆಯಾಗುತ್ತಿತ್ತು. ಮೃಗಯಾ ಬುದು ಆಗ ರಾಜ ಧರ್ಮವಾಗಿತ್ತು. ಂದೆ ಅಹಿಂಸೆಯೇ ಮುಖ್ಯವೆಂದು ಅ ೀಕನಿಗೆ ಕಂಡಿತು. ಭಾರತದಲ್ಲೆಲ್ಲಾ ಂಸೆಯ ಪ್ರಚಾರವಾಯಿತು. 'ಜೀವಿ ನ್ನು ಜೀವದಿಂದ ಪೋಷಿಸಲಾಗದು' ದು ಅಶೋಕನು ತನ್ನ ಪ್ರಜೆಗಳಿಗೆ ಉ ಪದೇಶಿಸಿದನು. ಈ ಉಪದೇಶವನ್ನು ಮಾ ವಾಗ ಅಶೋಕನ ಪಾಕ ಶಾಲೆಯಲ್ಲಿ ಕೈ ಎರಡು ನವಿಲು ಮತ್ತು ಒಂದು ಕೆಯನ್ನು ಮಾತ್ರ ಕೊಲ್ಲುತ್ತಿದ್ದರು. ಂದೆ ಆ ಕೊಲೆಯೂ ನಿಂತಿತು. ಅಹಿಂ ಸೇ ಪರಮಧರ್ಮವೆಂದಾಯಿತು.

ಬೌದ್ಧನಾದ ಮೇಲೂ ರಾಜನು ಬ್ರಾ ಣ ಶ್ರಮಣರ ದರ್ಶನ ಆವರಿಗೆ ದಾನ ರೆ ಶುಶ್ರೂಷೆಯಲ್ಲಿ ಆಸಕ್ತಿ ವಹಿಸಿದ್ದ . ಅಲ್ಲದೆ ಸರ್ವ ಮತದ ಸನ್ಯಾಸಿಗಳ ಷ್ಟ, ಸದ್ಗೃಹಸ್ಥರನ್ನೂ ಪೂಜೆಗಳಿಂದ ಜಿಸುತ್ತಿದ್ದನು. ಎಲ್ಲಾ ಧರ್ಮಗಳೂ ನಿಗೆ ಒಂದೇ ಗುರಿಯನ್ನು ಸೇರುತ್ತ ದು ಅಂದಿನ ಭಾರತೀಯರು ತಿಳಿದಿ ರು. ಆಗ ಮಾತ್ರ ಶುಶ್ರೂಷೆ, ಪಿತೃ ಶ್ರೂಷೆ, ಗುರುಹಿರಿಯರ ಶುಶ್ರೂಷೆಗಳಿ ವಾಧಾನ್ಯವಿತ್ತು. ರಾಜನು ಪ್ರಜೆಗಳ ತುಂಬಾ ಪ್ರೀತಿಸುತ್ತಿದ್ದನು. ಅಶೋ ಯ ಒಂದೆಡೆಯಲ್ಲಿ—'ನಾನು ಕಿಂಚಿತ್ತಾ ೂ ಪರಾಕ್ರಮ ಮಾಡುತ್ತಿದ್ದರೆ, ಅದು ವಿಗಳು ಸ್ವರ್ಗವನ್ನು ಪಡೆಯುವ ಸಲ ಗಿ' ಎಂದು ಘೋಷಿಸಿರುವನು. ಆ ೀಕನು ಭೋಜನ ಮಾಡುತ್ತಿರಲಿ, ತಃಪುರದೊಳಗಿರಲಿ, ಒಳಮನೆ ಅಥ ಗೋ ಶಾಲೆಯಲ್ಲಿರಲಿ, ಪಲ್ಲಕಿಯಲ್ಲಿ ವಾ ಉದ್ಯಾನದಲ್ಲಿರಲಿ—ಪ್ರತಿನಿಧಿ ಬಂದು ಅವನಿಗೆ ಅರ್ಥವನ್ನು ತಿಳಿಸ ುದಿತ್ತು. ಇಷ್ಟು ತೆರೆವನಸ್ಸಿನ ರಾಜ ಹಿಂದೆಂದೂ ಭಾರತವನ್ನಾಳಿರಲಿಲ್ಲ. ಜನು ಧರ್ಮಯಾತ್ರೆಯ ಕಾಲದಲ್ಲಿ ನಾಭಿಪ್ರಾಯವನ್ನು ತಿಳಿಯುತ್ತಿದ್ದನು. ನು ಎಲ್ಲಾ ಮನುಷ್ಯರನ್ನು ತನ್ನ ಮ ಂತೆಯೂ, ಆ ಮಕ್ಕಳಿಗೆ ಈ ಲೋಕ ಮತ್ತು ಪರಲೋಕದ ಎಲ್ಲಾ ಸುಖ ೂ ಪ್ರಾಪ್ತವಾಗುವಂತೆಯೂ ಪ್ರಯ ಪಡುತ್ತಿದ್ದನು.

ಅಶೋಕನು ಪಟ್ಟಾಭಿಷಿಕ್ತನಾದ ಕಾ ಲ್ಲಿ ಬೌದ್ಧ ಮತದಲ್ಲಿ ಒಡಕು ಹುಟ್ಟಿ ಜಗಳಗಳು ಹೆಚ್ಚಿದ್ದುವು. ಆಗ ವಿಶಾ ಚಿಂತನೆವಿಲುप्तವಾಗಿತ್ತು. ವಿಹಾರ ವನ ಸುಖಕರವಾದುದರಿಂದ ಅನೇಕ ಭಿಕ್ಷು ಜೀವನಕ್ಕೆ ಇಳಿದಿದ್ದರು. ಇದ ದ ಅಶೋಕನು ಪಾಟಲಿಪುತ್ರದ ಅ ೀಕಾರಾಮದಲ್ಲಿ ಒಂದು ಸಭೆ ಸೇರಿಸಿ, ರುಗಳ ಸಂಗಡ ಅಶೋಕನೊಬ್ಬನೇ ಳಿತು ಬೌದ್ಧ ಭಿಕ್ಷುಗಳನ್ನು ಒಟ್ಟೊ ನ್ನಾಗಿ ಕರೆಸಿ—'ಭಗವಾನ್ ಬುದ್ಧ ಯಾವುದನ್ನು ಉಪದೇಶ ಮಾಡಿದ ?'—ಎಂದು ಪರೀಕ್ಷೆ ಮಾಡಿದನು. ಗ್ಗಲೀಪುತ್ತ ತಿಸ್ಸನು ಒಪ್ಪಿದವರನ್ನು ತ್ರ ಸರಿಯಾದ ಭಿಕ್ಷುಗಳೆಂದು ಕರೆಸಿ ಉಳಿದವರನ್ನು—ಸಾವಿ ರು ಜನರನ್ನು—ಸಂಘದಿಂದ ತೆಗೆದು ಕೆದನು. ಕೌಶಾಂಬಿ, ಸಾಂಚಿ, ಸಾರ ನಾಥ ಸ್ತಂಭದ ಶಾಸನಗಳಿಂದ ಅಶೋಕ ನಿಗೆ ಸಂಘದ ಮೇಲೆ ಇಂತಹ ಅಧಿಕಾರ ವಿತ್ತೆಂದು ತೋರುತ್ತದೆ.

೩ ರಾಜನು ಆಗ ಯಾತ್ರಾದೃಷ್ಟಿಯಿಂದ ಲೂ, ಪ್ರಜಾಭಿಪ್ರಾಯವನ್ನು ತಿಳಿಯುವು ದಕ್ಕಾಗಿಯೂ ಧರ್ಮಯಾತ್ರೆ (ತೀರ್ಥ ಯಾತ್ರೆ) ಯನ್ನು ಆಗಾಗ ಕೈಗೊಳ್ಳುತ್ತಿ ದ್ದನು. ಆಗ ಸಂಬೋಧಿಗೆ ಬೌದ್ಧರು ಪೃಥಿವೀನಾಭಿಯೆಂದು ಕೊಂಡಾಡುತ್ತಿ ದ್ದರು. ಅಂದು ಮೊಗ್ಗಲೀಪುತ್ತ ತಿಸ್ಸನಿಗೆ ಅಶೋಕನ ಮೇಲೂ ಹಿಡಿತವಿತ್ತು. ಗಂ ಗಾನದಿಯ ದಡದಲ್ಲೇ ಆಶ್ರಮಮಾಡಿ ಕೊಂಡಿದ್ದ ತಿಸ್ಸನನ್ನು ಧರ್ಮೋದ್ಧಾರ ಮಾಡ ಲು ಮತ್ತು ಸಂಘಕ್ಕೆ ನೆರವಾಗಲು ಅಶೋಕನು ಪಾಟಲಿಪುತ್ರಕ್ಕೆ ಸ್ವಾಗತ ಸಲು ಆತನು ಹಡಗಿನಲ್ಲೇ ಪಾಟಲಿಪುತ್ರ ಕ್ಕೆ ಬಂದನು. ಆಗ ನೌಕಾಪ್ರಯಾಣವೂ ಸಾಮಾನ್ಯ ವಿಚಾರವಾಗಿತ್ತು.

ದೇಶದಲ್ಲಿ ಧರ್ಮ ನ್ಯಾಯಗಳು ಸಂ ಪೂರ್ಣ ನೆಲೆನಿಲ್ಲಲು ಅಶೋಕನು ತನ್ನ ಪಟ್ಟಾಭಿಷೇಕವಾದ ಹದಿಮೂರನೆಯ ವರ್ಷ ಧರ್ಮ ಮಹಾಮಾತ್ರರನ್ನು ನಿಯ ಮಿಸಿದನು. ಇದು ಆ ಕಾಲದಲ್ಲೇ ತೀರಾ ಹೊಸತು. ಈ ಧರ್ಮ ಮಹಾಮಾತ್ರರು ಅನಾಗರಿಕ ಜನರ ಅಭಿವೃದ್ಧಿಗಾಗಿ, ಪರ ಸಂಸ್ಕೃತಿಯ ಪ್ರಭಾವಕ್ಕೊಳಗಾದವರ ನ್ನು ಒಂದುಮಾಡುವುದಕ್ಕಾಗಿ ತುಂಬಾ ದುಡಿಯಬೇಕಿತ್ತು. ಇವರು ಜನರಲ್ಲಿದ್ದ ದ್ವೇ ಷಾಸೂಯೆ ತಗ್ಗುವಂತೆ, ಪರಸ್ಪರ ಸೌ ಹಾರ್ದಗಳು ಬೆಳೆಯುವಂತೆ ಪ್ರಯತ್ನ ಪಡುತ್ತಿದ್ದರು. ಅನೇಕ ಸಂಸ್ಥೆಗಳೂ ದಾ ನಿಗಳೂ ಜನರ ಉಪಕಾರಕ್ಕಾಗಿ ನೀಡು ವ ಹಣವು ದುರ್ವ್ಯಯವಾಗದಂತೆ ಇವ ರೇ ನೋಡುತ್ತಿದ್ದರು. ಇವರು ಜನರಲ್ಲಿ ದಯೆ, ದಾನ, ಸತ್ಯ, ಶುಚಿ, ಮಾರ್ದವ, ಸಾಧುತೆಗಳುಂಟಾಗಲು ಜಲವು ಮಾರ್ಗ ಗಳನ್ನು ಪ್ರಯತ್ನಪಡುತ್ತಿದ್ದರು. ಈ ಕಾ ರ್ಯಕ್ಕೆ ಧರ್ಮಾನುದಾನ ಅಥವಾ ಧರ್ಮ ಪ್ರತಿಷ್ಠೆ ಎನ್ನುತ್ತಿದ್ದರು. ಈ ಧರ್ಮ ಮಹಾಮಾತ್ರರು ಅಶೋಕನ ಸಾಮ್ರಾ ಜ್ಯದಲ್ಲೆಲ್ಲಾ ಸಂಚಾರಮಾಡಿ ನ್ಯಾಯ ಸ್ಥಾನಗಳ ಸ್ವವಹಾರದಲ್ಲಿ ಆಗುತ್ತಿದ್ದ ಕುಂದುಕೊರತೆಗಳನ್ನು ಹೋಗಲಾಡಿಸು ತ್ತಿದ್ದರು. ಇವರು ಸರೆಮನೆಯಲ್ಲಿ ತೊಳ ಲುವವರಿಗೆ ಸಹಾಯಮಾಡುತ್ತಿದ್ದರು. ಇವರು ಮಕ್ಕಳೊಂದಿಗಾಗಿದ್ದು ವೃದ್ಧ ರಾಗಿದ್ದರೆ ಶಿಕ್ಷೆಯ ಅವಧಿಯನ್ನು ಕಡಿ ಮೆಮಾಡುತ್ತಿದ್ದರು; ಕೆಲವರಿಗೆ ಬಿಡುಗ ಡೆಯೂ ದೊರೆಯುತ್ತಿತ್ತು. ಅಶೋಕನಿಗೆ ಯಾರೂ ಅಕಸ್ಮಾತ ಬಂಧನ ಮತ್ತು ಪರಿಕ್ಲೇಶದಿಂದ ನವೆಯಬಾರದೆಂದಿತ್ತು. ಧರ್ಮ ಮಹಾಮಾತ್ರರು ಗೂಢಚರರ ಕೆಲಸವನ್ನೂ ಮಾಡುತ್ತಿದ್ದರು. ಇವರು ಯಾವನ, ಕಾಂಭೋಜ, ಗಾಂಧಾರ ದೇ ಶಗಳಲ್ಲೂ, ರಾಷ್ಟ್ರಿಕ ಪಿಟಿನಿಕರಲ್ಲೂ, ಪ ರಾಂತಕನ ಇತರರಲ್ಲೂ ಇದ್ದರು (ಶಿ.ಫ ೫) ಭಾರತಕ್ಕೆ ಇಂದು ಈ ವಿಭಾಗದವರ ಅಗ ತ್ಯ ತುಂಬಾ ಇದೆ.

ಐದುವರ್ಷಕ್ಕೊಂದುಸಲವಾದರೂ ಅ ಶೋಕನ ಅಧಿಕಾರಿಗಳು ಧರ್ಮಯಾತ್ರೆ ಮಾಡಿಕೊಂಡು ಬಂದು ಜನರಿಗೆ ಧರ್ಮ ವನ್ನು ಬೋಧಿಸಬೇಕಿತ್ತು. ಆಗ ಚೋಳ, ಪಾಂಡ್ಯ, ತಾಮ್ರಪರ್ಣಿ (ಸಿಂಹಳ) ಯ ವನಗಳ ದೇವಾನಾಂಪ್ರಿಯನಿಗೆ ಧರ್ಮ ವಿಜಯ ದೊರಕಿತ್ತು. ಅವನ ಧರ್ಮಾನು ಶಾಸ್ತಿಯನ್ನು ಯವನ, ಕಾಂಭೋಜ, ನಭಕನಾಭಕ, ಭೋಜಪಿಟಿನಿಕ ಮತ್ತು ಆಂಧ್ರ ಪುಳಿಂದರಲ್ಲಿಯೂ ಅನು ವರ್ತಿಸುತ್ತಿದ್ದರು. ಅಶೋಕನು ಭಾರತದಲ್ಲೂ, ಅದರ ಹೊರಗೂ ಮನುಷ್ಯ ಮತ್ತು ಪಶು ಚಿಕಿತ್ಸಾ ಲಯವನ್ನು ತೆರೆದಿದ್ದನು ಅರ್ಧ ಕ್ರೋಶ (ಹರದಾರಿ) ಕ್ಕೊಂದರಂತೆ ಬಾವಿ ತೋಡಿ ಸಿದ್ದನು. ಮಾರ್ಗದ ಪಕ್ಕದಲ್ಲಿ ನೆರಳ ಗಾಗಿ ಆಲದ ಮರಗಳನ್ನೂ, ಮಾವಿನ ತೋಪುಗಳನ್ನೂ ನೆಡಿಸಿದ್ದನು. ಅಲ್ಲಲ್ಲಿ ಪ್ರಯಾಣಿಕರಿಗಾಗಿ ಛತ್ರಗಳನ್ನೂ, ಅರ ವಟ್ಟಿಗೆಗಳನ್ನೂ ಕಟ್ಟಿಸಿದ್ದನು. ಇವೆಲ್ಲಾ ಮನುಷ್ಯರು ಮತ್ತು ಪಶುಗಳಿಗೆ ಅಶೋ ಕನಿಂದಾದ ಸೌಲಭ್ಯಗಳು. ಅಂದು ರಾಜ ಮತ್ತು ಪ್ರಜೆಗಳಿಗೆ ಇಹಕ್ಕಿಂತ ಪರದ ಕಡೆಗೇ ಹೆಚ್ಚು ಗಮನವಿತ್ತು.

ಅಶೋಕನ ಧರ್ಮಪ್ರಚಾರಕರು ಭಾ ರತದ ಆದ್ಯಂತ ಮಾತ್ರ ಧರ್ಮ ಪ್ರಚಾ ರ ಮಾಡಿದುದಲ್ಲ ಉತ್ತರ ಆಫ್ರಿಕದ ಲಿಬಿಯದ ವರೆಗೂ, ಯವನ ಪ್ರದೇಶ ವಾದ ಎಪಿರಸ್ಸಿನ ವರೆಗೂ ಈ ಮಹಾ ಕಾರ್ಯ ನಡೆದಿತ್ತು. ಕೆಲವು ದೂತರು ಸಿರಿಯಾಕ್ಕೆ ಹೋಗಿದ್ದರು. ಆಗ ಅಲ್ಲಿ ಅಂಟಿಯೋಕಸ್ಸನು ರಾಜನಾಗಿದ್ದನು. ಇ ದರ ದಕ್ಷಿಣದಲ್ಲಿದ್ದ ಇಜಿಪ್ಟಿನಲ್ಲಿ ಆಗ ಕುರಮಾಯು ಅಥವಾ ಟಾಲಮಿಯು ಆಳುತ್ತಿದ್ದನು. ಇವನಿಗೆ ಜ್ಞಾನಪ್ರಿಯ ನೆಂಬ ಬಿರುದಿತ್ತು. ಆಗ ಇಜಿಪ್ಟಿನ ಪಶ್ಚಿ ಮದಲ್ಲಿದ್ದ ಲಿಬಿಯದಲ್ಲಿ ಟಾಲಮಿಯ ತಮ್ಮ ಮಕನೆಂಬ ರಾಜನು ಆಳುತ್ತಿ ದ್ದನು. ಈ ಪ್ರದೇಶಗಳಿಗೆಲ್ಲಾ ಅಶೋಕ ನ ಸಂದೇಶ ತಲಪಿ, ಆದೇಶೀಯರೂ ಭಾರತಕ್ಕೆ ತಲೆಬಾಗಿದರು.

ಕೊನೆಗೆ ಭಾರತದ ಸಮ್ರಾಟನು ಭಿ ಕ್ಷುವಾದಂತೆ ಶ್ರಾಣುತ್ತದೆ. ಚೀನಾ ಯಾ ತ್ರಿಕನಾದ ಇತ್ಸಿಂಗನು ತಾನು ಭಿಕ್ಷು ವಿನ ಉಡಿಗೆಯಿಂದಿದ್ದ ಅಶೋಕನ ಪ್ರತಿ ಮೆಯನ್ನು ಕಂಡಿದ್ದೇನೆಂದು ಹೇಳಿದ್ದಾ ನೆ. ಸಮ್ರಾಟನೇ ಬೌದ್ಧ ಭಿಕ್ಷುವಾದನೆಂ ದಾದ ಮೇಲೆ ಆ ಕಾಲದಲ್ಲಿ ಭಾರತದಲ್ಲಿ ಬೌದ್ಧ ಮತವು ಯಾವ ಮೆಟ್ಟಲಲ್ಲಿತ್ತೆಂ ದು ಊಹಿಸಬಹುದು.

ಬ್ರಿಟಿಷ್ ಅಧಿಪತ್ಯವನ್ನು ಬಿಟ್ಟರೆ ಭಾರತವರ್ಷದಲ್ಲಿ ಅಶೋಕನ ಸಾಮ್ರಾಜ್ಯ ದಂಥಾ ವಿಸ್ತಾರವಾದ ಸಾಮ್ರಾಜ್ಯವ

(೨೨ನೇ ಪುಟ ನೋಡಿರಿ)

ಸಾಕು

(ದೇವರೊಡನೆ ಹೇಳಿಕೆ)

ನಿನ್ನ ಪಡನಾಲೆಯಲಿ
೧ಸಸಿನೊಂದು ಮೂಲೆಯಲಿ
ಮರೆಸಂದು ನಿಲುವೆಡೆಯ ನನಗಿಯೆ ಸಾಕು;
ನಿನ್ನೋಲಗದಿ ಬೆರೆಯೆ—
ನಿನ್ನ ಮೋರೆಗೆ ಮೆರೆಯೆ
ನನ್ನಳವೆ? ನನ್ನರವ ನೀನರಿಯೆ ಸಾಕು. ೬

ನೀನೆನ್ನ ಕೆಂದರಿಯಲಿ
ಕೇಳಬೇಕೆಂದೆರೆಯಲಿ
ಕೇಳಿ, ಬಲ್ಲಂತೆ ಬಾರಿಸಲೀಯೆ ಸಾಕು;
ಉಡುಗೆರೆಯಣಂ ಬೇಡ,
ನಿನ್ನ ೪ನೇಮವ ಮಾಡ
ಲದೆ ಸಾಕು— ಮಾಳ್ಳೆಯುಡುಗೆರೆ ಮಾಳ್ಳೆ ಸಾಕು. ೧೨

೫ಎಳೆಗೆ ಬಾರದ ಸರಳೆ
ಬರಿಸೆ ಕಿನ್ನರಿ ನರಳೆ,
ನೀನೆನ್ನ ನಾಚಿಕೆಗೆ ನಾಚದಿರೆ ಸಾಕು;
ರಾಗ ಮೂಡದೆ ೭ಮುಗ್ಗೆ,
ತಾಳ ಕೂಡದೆ ೮ಕುಗ್ಗೆ,
ಅದೆ ಅಪೂರ್ಣತಾನ ನಿನಗೆನಿಸಲದೆ ಸಾಕು. ೧೮

ನಾನರಿಯೆನಿದು ೯ಸುಮ್ಮ
ನೆಂದಾಗುವುದೊ, ಕೆಮ್ಮ
ನಿಂತೊಡೆಯ ೧೦ನಿಲೆಸುಡಿವರಂ ನುಡಿಸೆ ಸಾಕು;
೧೧ಮಂಗಲಂ ಬೆಸಪನ್ನ
ನಿನ್ನ ಕಣ್ಣಿಗೆ ನನ್ನ
ಕಣ್ಣೊಮ್ಮೆ ಕಲೆಯೆ ಸಾಕೆನಗನಿತೆ ಸಾಕು. ೨೪

ಗೋವಿಂದ ಪೈ
ಮಂಜೇಶ್ವರ

೧ ಸಸಿನೆ = ಮಾನವಾಗಿ. ೨ ಕೆಂದರಿ = ಕಿನ್ನರಿ. ೩ ಎರೆಯ = ಒಡೆಯ. ೪ ನೇಮ = ಕಟ್ಟಳೆ, ಆಜ್ಞೆ. ೫ ಎಳೆ = ಸರಿಗೆ, ತಂತಿ. ೬ ಸರಳೆ = (ಸ ರಿ ಗ ಮ ಪ ದ ನಿ) ಎಂಬ ಸಪ್ತಸ್ವರಗಳು. ೭ ಮುಗ್ಗ = ಮುಗ್ಗರಿಸು, ಕುಸಿದುದೀಳು. ೮ ಪೂರ್ಣತಾನ = ಸ್ವರಗಳ ಐಕ್ಯ. ೯ ಸುಮ್ಮನಾಗು = ಮುಗಿ, ತೀರು. ೧೦ ನಿಲೆಸುಡಿವರಂ = ನಿಲ್ಲಿಸು (= ಮುಗಿಸು) ಎಂದು ಹೇಳುವ ವರೆಗೆ. ೧೧ ಮಂಗಲಂ ಬೆಸಪನ್ನ = ಮಂಗಲಪದವನ್ನು ಪಾಡಿ ಮುಗಿಸು ಎಂದು (ಇಸು) ಹೇಳುವಾಗ.

ಸ್ವಾತಂತ್ರ್ಯದ ವಾಸ್ತವಿಕ ತುಲನೆ

ಸ್ವಾತಂತ್ರ್ಯಪ್ರಾಪ್ತಿ ಪೂರ್ವದಲ್ಲಿ ನಾವು ಕಟ್ಟಿದ ಭಾವನಾಮಂದಿರವು ಪ್ರಾಪ್ತ್ಯನಂತರದಲ್ಲಿ ನೆಲಸಮವಾಗಿದೆ ಆದರೂ ನಾವು ನಿರಾಶಾವಾದಿಗಳೇ ಆಗಬೇಕೆ ಎಂಬುದಕ್ಕೆ ಸಮರ್ಪಕವೆನಿಸಿದ ಉತ್ತರ ಇಲ್ಲಿದೆ.

ಬರೆದವರು ಶ್ರೀ ಸೇವನಮಿರಾಜ ಮಲ್ಲ, ಎಂ ಎ, ಬಿ ಎಲ್.

ಆಶಾವಾದ ಮತ್ತು ನಿರಾಶಾವಾದಗಳಿಗೆ ರಾಜಕೀಯದಲ್ಲಿರುವಷ್ಟು ಅವಕಾಶವು ಬಹುಶಃ ಬೇರೊಂದರಲ್ಲಿಲ್ಲ. ರಾಜಕೀಯ ದೃಷ್ಟಿಯಲ್ಲಿ ಭವಿತವ್ಯವು ಏಕಕಾಲದಲ್ಲೇ ಉಜ್ವಲವಾಗಿಯೂ, ಕತ್ತಲೆಯಾಗಿಯೂ ತೋರುವುದೆಂಬುದು ಅನುಭವಸಿದ್ಧವಾದ ಮಾತು.

ಇದಕ್ಕೆ ಉದಾಹರಣೆಗೆ ನಾವು ಹೆಚ್ಚುದೂರ ಹೋಗಬೇಕಾಗಿಲ್ಲ. ಹನ್ನೊಂದು ವರ್ಷಗಳ ಹಿಂದೆ ನಮಗೆ ಸ್ವಾತಂತ್ರ್ಯ ಸಿಗುವಾಗ ನಮ್ಮಲ್ಲಿದ್ದ ಆಶಾವಾದ ಎಷ್ಟರದು! ದೇಶಭಕ್ತರಾದವರು ಪ್ರಥಮವಾಗಿ ಹಿಂದೆ ಬ್ರಿಟಿಷರಿಗೆ ಸಹಾಯ ಮಾಡಿದ ದೇಶದ್ರೋಹಿಗಳ ಪತನವಾಗಬಹುದು; ಸಮಾಜದಲ್ಲಿ ಅವರಿಗೆ ಸ್ಥಾನ ದೊರೆಯಲಾರದು ಎಂದು ಆಶಿಸಿದ್ದರು. ಸಮಾಜ ಹಿತದ ದೃಷ್ಟಿಯಿದ್ದವರು, ಜನರ ಹಸಿವೆ, ಮಾನ ಮಂತಾದವುಗಳನ್ನು ಕೂಡಾ ಕೋಷಿಸಿ ತಮ್ಮ ಹೊಟ್ಟೆ ಬೆಳೆಸಿಕೊಂಡ ಸಮಾಜ ಘಾತುಕರ ಅಂತ್ಯವಾಗಬಹುದೆಂದು ಭಾವಿಸಿದ್ದರು. ಸ್ವತಃ ಪ್ರಧಾನಿ ಪಟ್ಟದಲ್ಲಿ ಕುಳಿತ ನೆಹರೂರವರೇ ಕಳ್ಳ ಸಂತೆ ಮಾಡುವವರನ್ನು ಅತ್ಯಂತ ಸಮೀಪದ ಮರಕ್ಕೆ ನೇಣು ಹಾಕಬೇಕೆಂದು ಉಗ್ರವಾಗಿ ಸಾರಿದ್ದರು! ಇನ್ನು ದೇಶಪ್ರೇಮದಿಂದ ಬ್ರಿಟಿಷರ ಕೋಪಾಗ್ನಿಗೆ ತುತ್ತಾದ ಮಹಾನುಭಾವರು ದೇಶದ ಕುರಿತು ಮತ್ತು ತಮ್ಮ ಕುರಿತು ಯಾವ ಬವ್ಯ ಆದರ್ಶದ ಕನಸು ಕಟ್ಟಿದ್ದರೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಆದರೆ ನಿಜವಾಗಿ ನಡೆದುದೇನು? ನಾವು ಸ್ವಾತಂತ್ರ್ಯ ಪಡೆದರೂ ಇನ್ನೂ ನಮ್ಮ ಹಿಂದಿನ ಆಳರಸರಾದ ಬ್ರಿಟಿಷರ ಸಂಸರ್ಗವನ್ನು ಕಡಿದಿಲ್ಲ. ಕಾಮನ್‌ವೆಲ್ತ್ ಬಾಂಧವ್ಯವೆಂಬ ಒಣ ಪ್ರತಿಷ್ಠೆಯ ಕೂಟವನ್ನು ತೊರೆಯಲು ನಮಗೆ ಮನಸ್ಸು ಬಾರದು. ಈ ಕಾಮನ್‌ವೆಲ್ತ್ ರಾಷ್ಟ್ರ ಕೂಟದೊಳಗಿರುವ ಹಾಲಾಹಲವೇ ಹತ್ತು ಲೋಕ ಯುದ್ಧಗಳನ್ನು ಪ್ರಚೋದಿಸಲು ಯಥೇಷ್ಟವಾಗಿದೆಯೆಂಬುದನ್ನು ನಾವೆಲ್ಲರೂ ಬಲ್ಲೆವು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಮತ್ತು ಕರಿ ಜನರ ಸ್ಥಳೀಕರು ತಮ್ಮ ರಾಜಕೀಯ ಹಕ್ಕನ್ನು ಮಾತ್ರವಲ್ಲದೆ ಸಾಮಾಜಿಕ ಹಕ್ಕುಗಳನ್ನು ಕಳೆದುಕೊಂಡಿದ್ದಾರೆ. ಉತ್ತರ ಆಫ್ರಿಕಾದ ಕೆನ್ಯಾದಲ್ಲೂ ಭಾರತೀಯರಿಗೆ ತುಟಿ ಪಿಪಿರದ ಮನ್ನಣೆ ದೊರೆಯುತ್ತಿದೆ. ಆಸ್ಟ್ರೇಲಿಯಾ ಖಂಡವಂತೂ ಕೃತಕವಾದ ಶ್ವೇತ ಜನರ ಖಂಡವಾಗಿದೆ. ಇಂದು ನೂರು ಮಿಲಿಯ ಜನರು ಜೀವನ ನಡೆಸುವಷ್ಟು ನಿಸರ್ಗ ಸಂಪತ್ತಿನ ಅನುಕೂಲವುಳ್ಳ ಖಂಡದಲ್ಲಿ ಕೇವಲ ಹತ್ತು ಮಿಲಿಯ ಜನರು ತಮ್ಮ ಭದ್ರವಾದ ಕೋಟೆಯನ್ನು ಕಟ್ಟಿಸಿ ಬಿಳಿಯ ರಲ್ಲದವರ ಮೇಲೆ ಬಹಿಷ್ಕಾರ ಹಾಕಿದ್ದಾರೆ. ಮತ್ತೆ ಬ್ರಿಟಿಷರು ನಮಗೆ ವನ್ನಣೆಯನ್ನು ರಾಜಕೀಯ ದೃಷ್ಟಿಯಿಂದಲಾದರೂ ಈಯುತ್ತಾರೆಂದು? ಸುಯೇಜ್ ಆಕ್ರಮಣ ಮಾಡಿದಾಗ ನಮ್ಮೊಡನೆ ಕೇಳಿದರೇ ಜೋರ್ಡಾನಿಗೆ ಸೈನ್ಯವನ್ನು ಕಳಿಸಲು ನಮ್ಮ ಸಮ್ಮತಿ ಪಡೆದಿರುವರೆ? ಇಷ್ಟಾದರೂ ನಾವು ಕಾಮನ್‌ವೆಲ್ತ್ ಬಂಧುಗಳಾಗಿದ್ದೇವೆ. ನಮ್ಮಿಂದ ಸಿಡಿನು ಯೋಧ ಪಾಕಿಸ್ತಾನಿಗಳೂ ಈ ಕೂಟದ ನಮ್ಮ ಬಂಧುಗಳಾಗಿದ್ದಾರೆ. ಅವರ ಬಾಂಧವ್ಯದ ದೆಸೆಯಿಂದಾಗಿ ಇನ್ನೂ ಪ್ರತ್ಯಕ್ಷ ಯುದ್ಧವಾಗುವುದೊಂದು ಮಾತ್ರ ಬಾಕಿ ಉಳಿದಿದೆ ಎನ್ನಬಹುದು. ಆದರೂ ಕೂಡಾ ನಮ್ಮ ದೇಶದ ಐಶ್ವರ್ಯವನ್ನು ಬ್ರಿಟನಿನ ಸಾಮ್ರಾಜ್ಯ ಶಾಹೀಪವನಿಗೆ ಬಂಧಿಸಲಾಗಿದೆ. ನಾಳೆ ಪವನಿನ ಕ್ರಯ ಇಳಿಯ ತೆಂದರೆ ನಮ್ಮ ನಯಾ ಪೈಸೆಗಳೂ ರೂಪಾಯಿ ನಾಣ್ಯಗಳಿಂದ ಹಾರಿ ಹೋಗುತ್ತವೆ. ನಮ್ಮ ವಿದೇಶ ನೀತಿಯಲ್ಲಿ ಇನ್ನೂ ಬ್ರಿಟನಿಗೆ ಅಗ್ರಪೂಜೆ ಸಲ್ಲುತ್ತದೆ. ನಮ್ಮ ಪ್ರಧಾನಿಗಳು ಆಗಾಗ್ಗೆ ಬ್ರಿಟನಿನಲ್ಲಿ ಕಾಮನ್‌ವೆಲ್ತ್ ಬಾಂಧವ್ಯದ ಆತಿಥ್ಯವನ್ನು ಸ್ವೀಕರಿಸಿ ಬರುತ್ತಾರೆ.

ಮತ್ತೆ ಆಂತರಿಕ ಪರಿಸ್ಥಿತಿ? ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ್ರೋಹಿ ಕೆಲಸಗಳಲ್ಲಿ ನಿರತರಾಗಿದ್ದವರು ಈಗಲಾದರೂ ಎಚ್ಚೆತ್ತು ತಮ್ಮ ಸ್ವಭಾವವನ್ನು ಬದಲಿಸಿದಂತೆ ತೋರುವುದಿಲ್ಲ. ಹಿಂದೆ ದೇಶಭಕ್ತರನ್ನು ಹಿಂಸಿಸಿದ ಕ್ರೂರ ರಾಕ್ಷಸಗಳು, ಭಾರತೀಯ ತತ್ವಕ್ಕೆ ಅನುಗುಣವಾಗಿರದ ಆಡಳಿತ ಯಂತ್ರ ಎಲ್ಲವೂ ಈಗಲೂ ಪ್ರಬಲವಾಗಿವೆ. ಸಮಾಜ ಘಾತುಕರ ಸಂಖ್ಯೆಯಂತೂ ವಿಪರೀತವಾಗಿದೆ. ಶಾಸಕಗಳನ್ನು ಉಲ್ಲಂಘಿಸುವ ಮಂದಿ ಉತ್ತರೋತ್ತರ ಅಭಿವೃದ್ಧಿಗೊಂಡಿದ್ದಾರೆ. ಪಾಪಸಿಪೇಧ ಕಾಯಿದೆಯನ್ನು ಮಾಯಾವಿಯವರಿಂದ ಹಿಡಿದು ಕೋಟೆಗಟ್ಟಲೆ ರೂಪಾಯಿ ತೆರಿಗೆಯನ್ನು ತಪ್ಪಿಸುವವರ ವರೆಗಿನ ಸಮಾಜ ಕಂಟಕರು ತಮ್ಮ ಕೊಬ್ಬನ್ನು ಬೆಳೆಸಿತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟನಿನ ಜನಸಂಖ್ಯೆಯ ಐದು ಜನರಲ್ಲಿ ಒಬ್ಬನಿಗೆ ಭಾರತದ ಸಂಪತ್ತಿನಿಂದಾಗಿ ಜೀವನ ನಡೆಸಲು ಸಾಧ್ಯವಾಗುತ್ತಿತ್ತಂತೆ. ಬ್ರಿಟಿಷ್ ಅಧಿಕಾರಿಗಳು, ಖಾಸಗೀ ಸಂಸ್ಥೆಗಳ ನೌಕರರು ಇತ್ಯಾದಿಯಾಗಿ ಬ್ರಿಟಿಷರನೇಕರು ಆಗ ಇಲ್ಲಿದ್ದರು. ಅದರ ಈಗ ಬ್ರಿಟಿಷ್ ಜನರು ಭಾರತದಿಂದ ತೊಲಗಿದ್ದಾರೆ. ಅವರ ವಾಣಿಜ್ಯ ಸಂಸ್ಥೆಗಳು ಹೆಚ್ಚು ಕಡಿಮೆ ಭಾರತೀಯವಾಗಿವೆ. ಅಂದಿನ ಕೇಳೆ ಹಿಂದೆ ಅವರು ನಮ್ಮಿಂದ ಶೋಷಿಸುತ್ತಿದ್ದ ಸಂಪತ್ತು ಎಲ್ಲಿ ಹೋಯಿತು?

ಊರು ಅಭಿವೃದ್ಧಿಯಾಗಿದೆ ಎನ್ನುವ ಅಂಬೋಣ ಉನ್ನತ ವರ್ಗಗಳಿಂದ ಸದಾ ಕಾಲ ಕೇಳಿಬರುತ್ತಿದೆ. ರಸ್ತೆಗಳಾದರು, ನದಿಗೆ ಸೇತುವೆ, ಊರಿಗೆ ಬಾವಿ ಇತ್ಯಾದಿಗಳು ಜನಜೀವನದ ಮಟ್ಟವನ್ನು ಉನ್ನತಿಗೆ ಒಯ್ದುವೆಯೆಂದು ನಾವು ಒಪ್ಪಿದರೆ, ಆ ಅಭಿವೃದ್ಧಿಯ ಮಾತನ್ನು ಇದ್ದಕ್ಕಿದ್ದಂತೆ ಸ್ವೀಕರಿಸಬಹುದು. ಆದರೆ ಜನಜೀವನದ ಅಭಿವೃದ್ಧಿಯನ್ನು ಅಗ್ರಗಣ್ಯವಾಗಿರುವುದು ಜೀವನ ವೆಚ್ಚದ ಮಟ್ಟ. ಆ ಮಟ್ಟವು ತೇನ್‌ಸಿಂಗ್‌ನಿಗಿಂತಲೂ ಹಿಂದೇ ಹಿಮಾಲಯವನ್ನೇರಿದೆ. ಜೀವನದ ಅತ್ಯವಶ್ಯಕವಾದ ಏಕದಳ ದ್ವಿದಳ ಧಾನ್ಯಗಳ ಉತ್ಪತ್ತಿ ನಮ್ಮಲ್ಲಿ ಎಲ್ಲರ ಹಸಿವೆಯನ್ನೂ ನೀಗಿಸುವ ಬರವನ್ನು ಕೊಡುತ್ತಿಲ್ಲ. ಜನಸಾಂದ್ರ ಬೆಳೆಯ ಪದ್ಧತಿ, ಕೃಷಿಯ ಯಾಂತ್ರೀಕರಣ ಇತ್ಯಾದಿ ಪ್ರಗತಿಪರ ಯೋಜನೆಗಳು ಗುಲ್ಲಿನ ಮಟ್ಟದಲ್ಲೇ ಉಳಿದಿವೆ. ಸಾಮಾನ್ಯ ರೈತನಿಗೆ ಜಾಪಾನ್ ಬೆಳೆ ಜಪಾನಿಗಿಂತಲೂ ದಾರದಲ್ಲಿದ್ದರೆ, ಸಗುವಳಿಯ ಯಾಂತ್ರೀಕರಣವು ಊಹಾಪೋಹಗಳ ಇಂದ್ರಜಾಲದಂತಾಗಿದೆ. ನೀರಾವರಿ ಯೋಜನೆಗಳು, ಬೃಹತ್ ಕಾರಖಾನೆಗಳು ಇತ್ಯಾದಿಗಳು ನಮ್ಮ ಗುಣಾಕಾರವಾಗುತ್ತಿರುವ ನಿರುದ್ಯೋಗ ಸಮಸ್ಯೆಯತ್ತ ದೃಷ್ಟಿ ಹಾಯಿಸುವುದಿಲ್ಲ. ಅಭಿವೃದ್ಧಿಗೆ ಇಷ್ಟು ಕಾರಣಗಳು ಸಾಲದೆಂಬಂತೆ ನಮ್ಮೊಡನೆ ಕಾತ್ಮೀರ ಪ್ರಶ್ನೆಯೆಂಬ ಕೊರೆಯುತ್ತಿರುವ–ಕೊಳೆಯುತ್ತಿರುವ ಅರ್ಬುದವೂ ಬೆಳೆದು ಬಂದು ದೇಶದ ವಾರ್ಷಿಕೋತ್ಪನ್ನದ ಸುಮಾರು ಅರ್ಧಂಶವನ್ನು ಆಹುತಿಪಡೆಯುತ್ತಿದೆ.

ಆಯಿತು, ನಿರಾಶಾವಾದದ ದೃಷ್ಟಿಯ ಭೌತಿಕ ಸಂಪತ್ತಿನ ವಿಚಾರವಾಗಿ ಏನೇನೋ ಹೇಳಲು ಇನ್ನೂ ಪ್ರಚೋದಿಸಬಹುದು. ಬಾಲ್ಯಾವಸ್ಥೆಯಲ್ಲಿ ತೊದಲಾಡುತ್ತಿರುವ ಪ್ರಜಾರಾಜ್ಯಕ್ಕೆ ಬೆಳೆಯಲು ನಾವು ಅವಕಾಶ ಕೊಡಬೇಕು. ಅವಲಕ್ಷಣದ ನಮ್ಮ ಅಂಗೈಯನ್ನೇ ಸದಾ ನೋಡುತ್ತಿರಬಾರದು. ನಾವು ಎಲ್ಲವನ್ನೂ ಸಾಧಿಸುತ್ತಿದ್ದೇನೆ—ನಡಿಗೆ ಮಾತ್ರ ಸಿಧಾನವಾಗಿದೆ. ನಮಗೆ ತಾಳ್ಮೆ ಬೇಕು, ಆಶಾವಾದ ಬೇಕು. ನಮ್ಮ ಸರ್ಕಾರ ಯಾವುದನ್ನೆಲ್ಲ ಯೋಚಿಸಿಲ್ಲ? ಎಲ್ಲ ಸಮಸ್ಯೆಗಳ ಪರಿಹಾರಗಳೂ ಸಿದ್ಧರೂಪಕ್ಕೆ ಬಾರದಿದ್ದರೂ ಸಮಿತಿ ಇಲ್ಲವೇ ಪರಿಶೀಲನಾ ಸಮಿತಿ, ವಿಶೇಷ ಸಮಿತಿ, ಸಲಹಾ ಸಮಿತಿ, ಮಸೂದೆ ಮಂತಾದ ಅನುಷ್ಠಾನಪೂರ್ವದ ಅಗ್ನಿ ಪರೀಕ್ಷೆಯಲ್ಲಿ ಸುಟಗೊಳ್ಳುತ್ತಿವೆ. ಬ್ರಿಟಿಷರಿರುತ್ತಿದ್ದರೆ ಇಷ್ಟಾದರೂ ಮಾಡುತ್ತಿದ್ದರೇ? ಹನ್ನೊಂದು ವರ್ಷವಲ್ಲ, ನೂರು ವರ್ಷ ಕಾಲ ಸರ್ವತಾವಾದಿ ರಷ್ಯನರೇ ನಮ್ಮನ್ನು ಆಳಿದರೂ ಇಷ್ಟು ಬೇಗನೆ, ಇಷ್ಟು ವಿಶೇಷವಾದ ಸುಧಾರಣೆಯನ್ನು ಸಾಧಿಸಲು ಶಕ್ತರಾಗುತ್ತಿದ್ದಿಲ್ಲ.

ಇದು ಕ್ಷಮಾಯಾಚನೆಯ ಪ್ರತಿಪಾದಕರವಾದ

ಆಗಲಿ, ರಾಜಕಾರಣವಲ್ಲದಿದ್ದರೂ ನಾವು ಸಾಕಷ್ಟು ಮಂದಿರಿಸುವೆವೆ? ಅರಸಾತ್ತಿಗೆ ನಿಂಶವಾಗಿದೆ, ಪ್ರಜಾರಾಜ್ಯ ಬಂದಿದೆ. ಆದರೆ 'ನೆಹರೂನಂತರ ಯಾರು?' ಎಂಬ ಪ್ರಶ್ನೆ ನಮ್ಮ ಮಂದುಳನ್ನು ಕೊರೆಯುತ್ತದೆ. ಮೊನ್ನೆ ಮೊನ್ನೆ ನೆಹ್ರೂರಜೆ ಪಡೆಯಬೇಕೆಂದಾಗ 'ಕೂಡದು' ಎಂಬ ಆರ್ಕನಾದ ಎಷ್ಟು ಜನರ ಕಂಠದಿಂದ ಹೊರಬರಲಿಲ್ಲ! ನೆಹರೂ ಕೂಡಾ ಇತರರಂತೆ ಒಬ್ಬ ಮನುಷ್ಯ, ಅವರಿಗೂ ಆಯಸ್ಸು, ಮಿತ್ರ ಮಂತಾದ ಎಲ್ಲವೂ ಮಿತಿಗಳಿವೆ ಎಂಬುದನ್ನು ಪರಿಗಣಿಸುವುದು ಅಶಕ್ತ ದುರಂಧರರಿಗೆ ಮರೆತುಹೋಯಿತು! ದಿನವಿಡೀ ಗಡಿಯಾರದ ಸುತ್ತಲೂ ಹೊರಲಾರದ ಹೊರೆಯನ್ನು ಹೊತ್ತು ವ್ಯಕ್ತಿಮಾತ್ರನೊಬ್ಬನು ನಮ್ಮ ಆತ್ಮರಂತೋಷಕ್ಕಾಗಿ ಸದಾ ನರಳಬೇಕು ಎನ್ನುವುದು ನಮ್ಮ ಆತ್ಮನಿಶ್ಚಿಸದ ಕುರುಹೂ ಅಲ್ಲ, ಪ್ರಜಾಸತ್ತೆಯ ಮೇಲಿನ ಶ್ರದ್ಧೆಯೂ ಅಲ್ಲ. ದೇಶದ ಭವಿತವ್ಯದ ಮೇಲಿನ ಆಶಾವಾದವೂ ಅಲ್ಲ. ಮಹಾತ್ಮಾಗಾಂಧಿ ಹಾಕಿಕೊಟ್ಟ ದಾರಿಯಂತೂ ಅದ್ದೇ ಅಲ್ಲ.

ನಮ್ಮ ಪ್ರಜಾರಾಜ್ಯವು, ಅಧಿಕಾರೀ ರಾಜ್ಯವಾಗಿರಬಹುದು, ಮಂತ್ರಿ ರಾಜ್ಯ

(೨ನೇ ಪುಟ ನೋಡಿರಿ)

ಸೇವಿತ
ಅಖಿಲ ಭಾರತೀಯ
ಎಸ್. ಆರ್.
ಬೀಡಿಗಳನ್ನು
S. R. BEEDI WORKS UDIPI, S. K.
TRADE SR MARK REGD.

ನೀತಿ ಮತ್ತು ಕಾನೂನು

ನೀತಿ ಮತ್ತು ಕಾನೂನುಗಳು ಹಾಲು ನೀರುಗಳಂತೆ ಸಮಾ ಹೊಂದಿ ಕೊಂಡಿದ್ದರೆ ಮಾತ್ರ ಸಮಾಜಜೀವನ ನಡೆಯಬಹುದು. ಮೊದಲು ಮುತ್ತೂ ಮೊಣಸೂ ಕೂಡದಂತಾದರೆ, ಎರಡೂ ನಿರುಪಯೋಗಿಗಳು. ಯಾವುದಾದರೂ ಒಂದು ಶಿಥಿಲವಾಯಿತೆಂದರೆ, ಸಮಾಜಕ್ಕೆ ಪಕ್ಷವಾತ ಬಡಿದಂತಾಗುವುದು.

ಬರೆದವರು: ಶ್ರೀ ತದ್ದಲಸೆ ನಿಷ್ಠೇಶ್ವರ ಶರ್ಮಾ.

ನಾಡಿನಲ್ಲಿ ಸಾಮಾಜಿಕ ಶಾಂತಿ ಸುವ್ಯವಸ್ಥೆ ಸಮೃದ್ಧಿಗಳನ್ನು ರಕ್ಷಿಸಿಕೊಂಡು ಬರಲು ಅನೇಕ ಶಕ್ತಿಗಳು ಅವಶ್ಯವಾಗಿದ್ದರೂ ಅವುಗಳಲ್ಲಿ ಪ್ರಬಲವಾದವುಗಳು ಎರಡು, ನೀತಿ—ಮತ್ತು ಕಾಯಿದೆ. ಇವೆರಡೇ ಶಕ್ತಿಗಳು ವ್ಯಕ್ತಿ ಜೀವನವನ್ನೂ ಸಮಾಜವನ್ನೂ, ರಾಷ್ಟ್ರವನ್ನೂ ಆಳಲು ಸಮರ್ಥವಾದವುಗಳು. ಇದೀಗ ಆಳುತ್ತಲೂ ಇವೆ.

ಇಂದಲ್ಲ, ನಿನ್ನೆಯಲ್ಲ, ಅನೇಕ ಶತಮಾನಗಳಿಂದಲೂ ನಾಡಿನ ಭವ್ಯತೆಯನ್ನು ಕಾದುಕೊಂಡು ದಿವ್ಯತೆಯಕಡೆಗೆ ಒಯ್ಯುತ್ತಿದ್ದುದು ಇವೆರಡೇ ಶಕ್ತಿಗಳು. ಯಾವ ರಾಷ್ಟ್ರವು ಸುಸಂಪನ್ನವಾಗಿವೆಯೋ ಅಲ್ಲಿ ಈ ಶಕ್ತಿಗಳಿಗೆ ಹೆಚ್ಚು ಆಶ್ರಯವಿದೆಯೆಂದು ಊಹಿಸಬೇಕಾಗುತ್ತದೆ.

ವ್ಯಕ್ತಿ, ವ್ಯಕ್ತಿಗಳಲ್ಲಿ ಅವರವರ ಸ್ವಾತಂತ್ರ್ಯ ಹಕ್ಕುಬಾಧ್ಯತೆಗಳಿಗಾಗಿ ಕಾನೂನು ರಕ್ಷಣೆಯನ್ನೊದಗಿಸುತ್ತಿದ್ದರೆ ಜೀವನದಲ್ಲಿ ಸಂಸ್ಕೃತಿ, ಸಭ್ಯತೆಗಳನ್ನೂ ಸಹಕಾರ-ಸೌಹಾರ್ದಗಳನ್ನೂ ಉಂಟುಮಾಡಿ ಮನುಷ್ಯತ್ವದ ಹಾದಿಯಲ್ಲಿ ಮುನ್ನಡೆಸಲು ನೀತಿ ಅನುಕೂಲತೆಯನ್ನು ತರುತ್ತದೆ. ಹೀಗೆ ನೀತಿ ಕಾನೂನುಗಳೆರಡೂ ನಮ್ಮ ಜೀವನದಲ್ಲಿ ಅವಿಭಾಜ್ಯವಾದ ಸಂಬಂಧನ್ನೂ ಪಡೆದುಕೊಂಡಿವೆ.

ಹೀಗಿದ್ದರೂ ಇವೆರಡೇ ಶಕ್ತಿಗಳಲ್ಲಿ ಒಮ್ಮೊಮ್ಮೆ ಪರಸ್ಪರ ಘರ್ಷಣೆಯುಂಟಾಗಿ ಒಂದೊಂದು ಶಕ್ತಿಯು ಹಿಗ್ಗುವುದೂ ಕುಗ್ಗುವುದೂ ಇದೆ. ಹೆಜ್ಜೆ ಹೆಜ್ಜೆಗೂ ಕಾನೂನು ಬಳಕೆಯಲ್ಲಿ ಬಂದರೆ ನೀತಿಯ ಬೆಲೆ ತಗ್ಗುವುದು. ಹಾಗೆಯೇ ನೈತಿಕ ವಿಕಾಸ ಜೀವನದಲ್ಲಿ ಉಂಟಾದರೆ ಕಾನೂನಿನ ಅವಶ್ಯಕತೆಯೂ ಇರಲಾರದು. ನೀತಿಯು ಸತನವಾದಾಗ ಕಾನೂನು ಬೇಕು. ಕಾನೂನು ದುರ್ಬಲವಾದಾಗ ನೀತಿ ಬೇಕು. ಇವುಗಳಲ್ಲಿ ಇಷ್ಟು ಹೊಂದಿಕೆ ಇದೆ.

ಹೀಗೆನ್ನುವಾಗ ಈ ಕಾನೂನು ಮತ್ತು ನೀತಿಗಳಲ್ಲಿ ಯಾವುದು ಪ್ರಬಲಶಕ್ತಿಯುಳ್ಳದ್ದು, ಯಾವುದರಿಂದ ರಾಷ್ಟ್ರದ ವಿಕಾಸವಾಗಬಹುದು ಎಂಬ ನಿಶ್ಚಯ ಅಭಿಪ್ರಾಯಕ್ಕೆ ನಾವು ಗಮನಕೊಟ್ಟರೆ ಅದು ಆಗಿನಕಾಲದ ಜನತೆಯ ಮಾನಸಿಕ ಮಟ್ಟವೇ ಉತ್ತರ ಹೇಳಬೇಕಾಗಿದೆ.

ಆದರೆ ಕಾನೂನು ಜೀವನವನ್ನು ಆಳಲಾರದು. ನೈತಿಕಶಕ್ತಿಗೆ ಬೆಂಬಲವಾಗಿ ಅದನ್ನು ದುರ್ಬಲಗೊಳಿಸುವ ಅಥವಾ ಕಲಂಕತರುವ ಅನೇಕ ದುಷ್ಕ್ರಿಯೆಗಳನ್ನು ಎದುರಿಸುವದಕ್ಕಾಗಿ ಮಾತ್ರ ಕಾನೂನು ಬೇಕು. ಮಾನವನ ಸ್ವಾತಂತ್ರ್ಯ, ಹಕ್ಕುಬಾಧ್ಯತೆ, ಶಿಕ್ಷೆ, ದಂಡನೆ, ಭಯ ಮುಂತಾದ್ದಕ್ಕೆ ನೀತಿಗೆ ರಕ್ಷಣೆಯನ್ನೊದಗಿಸಲು ಕಾನೂನು ಬೇಕು. ಅಲ್ಲದೇ ನೀತಿಯಮೇಲೆಯೇ ತನ್ನ ಪ್ರಭುತ್ವ ನಡೆಸಲು ಕಾನೂನಿಗೆ ಅವಕಾಶವಿರಬಾರದು. ಜೀವನದಲ್ಲಿ ನೀತಿಯಮೇರೆಯನ್ನೂ, ಅದರ ಸಂಬಂಧವನ್ನೂ ಅತಿಕ್ರಮಿಸಿ ಕಾನೂನಿನ ಮೇರೆ ವಿಸ್ತಾರವಾದಾಗ ಜೀವನ ದುರ್ಬಲವಾಗುತ್ತದೆ. ಅದರ ಉಚ್ಚ ಆಶೋತ್ತರಗಳು ಪತನಗೊಳ್ಳುತ್ತವೆ. ಆಗ ಮನುಷ್ಯನು ನೀತಿಗೆ ಪ್ರಧಾನತೆ ಕೊಡಲಾರ. ನೀತಿಭ್ರಷ್ಟನಾದರೂ ಕಾನೂನಿನ ಸಹಾಯದಿಂದ ತಾನು ನೀತಿವಂತನೇ ಎಂದು ಸಾಧಿಸಲು ಪ್ರಯತ್ನಿಸುತ್ತಾನೆ. ಒಮ್ಮೊಮ್ಮೆ ನೀತಿಭ್ರಷ್ಟನೂ ಕಾನೂನಿನ ಬೆಂಬಲದಿಂದ ನೀತಿವಂತನೇ ಎಂದು ಸಿದ್ಧವಾಗಿಯೂ ಬಿಡುತ್ತದೆ.

ನಮ್ಮ ನೈತಿಕ ಶಕ್ತಿಯ ಮೇಲೆ ಪ್ರಭುತ್ವ ನಡೆಸುವಂಥ ಅನೇಕ ಕಾನೂನುಗಳು ನಮ್ಮ ಭಾರತದಲ್ಲಿಂದು ದಿನವೂ ಉದಯಹೊಂದುತ್ತ ನಮ್ಮ ಜೀವನದ ಭವ್ಯ ನೈತಿಕ ತಳಹದಿಯನ್ನೇ ಶೈಥಿಲ್ಯಗೊಳಿಸುತ್ತಿವೆ. ಕಾನೂನಿಗಿರುವಷ್ಟು ಮಹತ್ವ, ಆಶ್ರಯಗಳು ನೀತಿಗಿಲ್ಲದಾಗಿದೆ. ಮಾತು, ಮಾತಿಗೆ, ಹೆಜ್ಜೆ ಹೆಜ್ಜೆಗೂ ಕಾನೂನು. ತನ್ನ ಗೌರವ, ಹಕ್ಕು ಮುಂತಾದ್ದಕ್ಕೆ ಸ್ವಲ್ಪವೂ ಚ್ಯುತಿ ಬಂದೊಡನೆ ಅಲ್ಲಿ ಕಾನೂನಿಗೇ ಅನನ್ಯ ಶರಣು ಹೋಗುತ್ತಿದ್ದಾನೆ ಭಾರತೀಯ ಪ್ರಜೆ!

ನೀತಿ ಬಿಡಿಸಲಾರದ ಸಮಸ್ಯೆ, ಅದು ಕೊಡಲಾರದ ನ್ಯಾಯು ಕಾನೂನು ಕೊಡಬಹುದೇ? ನೀತಿಯಿಂದ ಉಂಟಾಗಬಹುದಾದ ಮಾನಸಿಕ ಶಾಂತಿ, ಪವಿತ್ರ ಭಾವನೆ, ವಿಶಾಲ ಅಂತಃಕರಣ. ಸೌಹಾರ್ದ ಪ್ರೀತಿ ಇವು ಕಾನೂನಿನಿಂದ ಉಂಟಾಗಬಹುದೇ?

ಪಾನಪ್ರತಿಬಂಧ, ಕಳ್ಳು, ಕೊಲೆ, ಮುಂತಾದ ಮಹಾಪರಾಧಗಳ ವಿಚಾರಣೆಯಲ್ಲಿ ಅನೇಕ ಸಂದರ್ಭ ಕಾನೂನು ನೀತಿಯ ಅವಹೇಳನ ಮಾಡುತ್ತದೆ. ನಿಜವಾದ ಅಪರಾಧಿಯ ಮೇಲೆ ಒಮ್ಮೊಮ್ಮೆ ನಿರ್ದೋಷಿಯೆಂಬ ಮುದ್ರೆಯನ್ನೊತ್ತಿತ್ತದೆ. ಸಾಮಾಜಿಕ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಬರುವಂಥ ಅನೇಕ ತತ್ವ ವಿಚಾರಗಳ ಕ್ರಿಯೆಗಳೆಲ್ಲ ನಿಷ್ಫಲವಾಗಿ ಬಿಡುತ್ತವೆ. ಇಷ್ಟೇ ಅಲ್ಲದೇ ಅಂಥ ಮಹಾಪರಾಧಗಳ ಬಗ್ಗೆ, ಇರಬೇಕಾದ ಭಯ, ಹೇಯಗಳೆಲ್ಲ ಅಳಸಿಯೂ ಹೋಗುತ್ತವೆ.

ಒಬ್ಬ ನಿಜವಾದ ಕುಡುಕ, ಇನ್ನೊಬ್ಬ ಕೊಲೆಗಾರ, ಮಗದೊಬ್ಬ ಕಳವುಗಾರ ಇವರೆಲ್ಲ ಕಾನೂನಿನ ಆಶ್ರಯ ಪಡೆದು ನಿರ್ದೋಷಿಯೆಂದು ಹೇಳಿಕೊಳ್ಳುವಾಗ ಅದು ನಮ್ಮ ಜೀವನದಲ್ಲಿ ಬಹುದೊಡ್ಡ ನೈತಿಕ ಪತನವಲ್ಲದೇ ಮತ್ತೇನು? ನಮ್ಮ ನಾಡಿನ ಇಂದಿನ ಕಾನೂನು ಪ್ರಪಂಚದಲ್ಲಿ ಇಂಥ (ದುರ್) ವ್ಯಾಪಾರಗಳು ಎಷ್ಟು ನಡೆಯುತ್ತಿರಬಹುದೆಂದು ಊಹಿಸಲು ಸಾಧ್ಯವೇ?

ಈ ಕಾನೂನಿನ ಪ್ರಭಾವ ಮಾನವನ ಮನಸ್ಸನ್ನು ಎಲ್ಲಿಯ ವರೆಗೆ ಒಯ್ಯಬಹುದೆಂದು ಹೇಳುವುದು ದುಃಸಾಧ್ಯ. ತಂದೆ ಮಕ್ಕಳಲ್ಲಿ, ಪತಿಪತ್ನಿಯರಲ್ಲಿ ಗುರುಶಿಷ್ಯರಲ್ಲಿ ಇರಬೇಕಾದ ಅನ್ಯೋನ್ಯ ಪೂಜ್ಯವೂ ಪವಿತ್ರವೂ ಆದ ಸಂಬಂಧವನ್ನೂ ಸಹಾ ಎಷ್ಟೋ ಸಲ ಕೆಡಿಸಿ ಬಿಡುತ್ತದೆ. ತಂದೆ ಮಕ್ಕಳಲ್ಲಿ ವ್ಯಾಜ್ಯ. ಪತಿಪತ್ನಿಯರಲ್ಲಿ ಗುರುಶಿಷ್ಯರಲ್ಲಿಯೂ ಸಹಾ ತಮ್ಮ ಹಕ್ಕು ಬಾಧ್ಯತೆ, ತಂಟೆ, ವಿರಸಗಳ ನಿವೃತ್ತಿಗೆ ಕೋರ್ಟಿಗೆ ಹೋಗುವ ಪ್ರಸಂಗ ಬರುತ್ತದೆ. ದಿನವೂ ಪತ್ರಿಕೆಗಳಲ್ಲಿ ಬರುತ್ತಿರುವ ಗಂಡಹೆಂಡಿರ ನೋಟೀಸಿನ ಅರ್ಥವೇನು? ಇದೇ ವಿವಾಹದ ನೀತಿಯೇ? ಒಂದು ವಿದ್ಯಾಲಯದಲ್ಲಿ ಗುರುವು ಶಿಷ್ಯನಿಗೆ ಬೇರೊಂದೆಡೆ ಕೂದ್ರಲು ಹೇಳಿದಾಗ ಶಿಷ್ಯ ತನ್ನ ಹಕ್ಕು ಸಮರ್ಥನೆಗಾಗಿ ಕೋರ್ಟಿಗೆ ಹೋದ ಉದಾಹರಣೆಯೂ ನಮಗೆ ಅಪರಿಚಿತವಲ್ಲ.

ಹೀಗೆಂದು ಕಾನೂನುಗಳು ನಮ್ಮ ಜೀವನಕ್ಕೆ ಅವಶ್ಯವಿಲ್ಲೆಂದು ಹೇಳಲು ಬರುವಂತಿದೆಯೇ? ಹಿಂದಿನ ವೈಭವದ ಸಾಮ್ರಾಜ್ಯಗಳಲ್ಲೆಲ್ಲಾ ಕಾನೂನು ಇಂಬಿಲ್ಲವೇ? ರಾಮ-ಕೃಷ್ಣರ ಕಾಲದಲ್ಲಿ ಪ್ರಮಬದ್ಧವಾದ ಶಾಸನದ ಕಾನೂನುಗಳು ಇತ್ತೆಂದು ಚರಿತ್ರೆಯಿಂದ ತಿಳಿಯಬಹುದು. ಮಹರ್ಷಿಗಳಾದ ಮನು-ಯಾಜ್ಞವಲ್ಕ್ಯರಂಥವರು ತಮ್ಮ ಸ್ಮೃತಿಗಳಲ್ಲಿ ಶಾಸನದ ವಿಭಾಗವನ್ನೇಕೆ ಬರೆದರು.

ನಮ್ಮ ಮತಾಚಾರ್ಯರೆಲ್ಲ ಹೇಳಿದ ಧರ್ಮ ಸೂತ್ರಗಳಿಲ್ಲ—ಏನು? ಅವೂ ಒಂದು ಧಾರ್ಮಿಕ ಕಾನೂನೇ, ನಮ್ಮ ಜೀವನವನ್ನು ಸುಸಂಸ್ಕೃತಗೊಳಿಸುವ, ಶಾಂತಿ, ಸುವ್ಯವಸ್ಥೆಗಳ ಚೌಕಟ್ಟಿನಲ್ಲಿ ಸುಂದರಗೊಳಿಸುವ ಸಲುವಾಗಿಯೇ ಆ ರೀತಿ ಶಾಸನದ ಕಾನೂನುಗಳು ಬಂದಿವೆ.

ಪಾರಿಷ್ಯ— ಮತ್ತು ದೈವ ಶಕ್ತಿಗಳ ಬೆಂಬಲದಿಂದ ಮನುಷ್ಯನು ತನ್ನ ಕಾರ್ಯದಲ್ಲಿ ಸಿದ್ಧಿ ಪಡೆಯುವಂತೆ ನೀತಿ, ಕಾನೂನು, ಇವೆರಡನ್ನೂ ಸರಿಯಾಗಿ ಬಳಸಿ ಹೊಂದಿಸಿ ಕೊಂಡವನು ಆಶ್ಚರ್ಯ ನೆನಿಸುವನು. ಎಷ್ಟೋ ಜನ ಸ್ವಾರ್ಥಕ್ಕಾಗಿ ಈ ಕಾನೂನಿಂದ ದುರ್ಲಾಭ ಪಡೆದು ಸಮಗ್ರ ರಾಷ್ಟ್ರವನ್ನೇ ಆಳುವಂಥ ಕಾನೂನಿನ ವಿಶಾಲ ಧ್ಯೇಯಕ್ಕೆ ಕಲಂಕತರುತ್ತಿದ್ದಾರೆ. ಇದು ಸರ್ವಥಾ ಸಲ್ಲದು. ಇದರಿಂದ ಒಮ್ಮೊಮ್ಮೆ ಅನೇಕ ರಾಷ್ಟ್ರೀಯ ಉಜ್ವಲ ಕಾನೂನುಗಳ ಮೇಲೆಯೇ ಜುಗುಪ್ಸೆಯುಂಟಾಗುವ ಪ್ರಸಂಗವೂ ಬರಬಹುದು. ಕಾನೂನಿನ ಬಲಶಕ್ತಿಗಳಲ್ಲಿ ಶೈಥಿಲ್ಯವೂ ಉಂಟಾಗಬಹುದು.

— ಬೇಕು! ತತ್ವಬದ್ಧವಾದ ಸತ್ವಯುಕ್ತ ಕಾನೂನುಗಳು ನಮ್ಮ ನೀತಿಯ ರಕ್ಷಣೆಗೆ ಬೇಕು. ಅನ್ಯಾಯ ಅಪರಾಧಗಳ ಬಗ್ಗೆ ಭಯ ಹುಟ್ಟಿಸಿ ಒತ್ತಾಯದಿಂದಲಾದರೂ ನೈತಿಕ ವಿಕಾಸವನ್ನು ಸಾಧಿಸಲು ಕಾನೂನು ಬೇಕು. ಸ್ವಾರ್ಥ, ದಂಭ, ದುರಭಿಮಾನ, ಅನೂಯೆಗಳಿಂದ ದುರ್ಬಲರೂ ಅಜ್ಞರೂ ಇವರ ಮೇಲೆ ಮಾಡಬಹುದಾದಂಥ ಪ್ರತಿಕ್ರಿಯೆ ತಪ್ಪಿಸಲು ಕಾನೂನು ಬೇಕು.

ಜೀವನದಲ್ಲಿ ಕಾನೂನಿನ ವ್ಯಾಪ್ತಿ ಎಷ್ಟಿರಬೇಕೆಂಬುದನ್ನು ಸೂಕ್ಷ್ಮವಾಗಿ ವಿಚಾರಿಸಬೇಕು. ಎಲ್ಲಿ, ಎಂಥ ಸಂದರ್ಭಕ್ಕೆ, ಎವ್ವರ ಮಟ್ಟಿಗೆ ಕಾನೂನಿನ ಆಶ್ರಯ ಪಡೆಯಬೇಕೆಂಬುದರ ಕಡೆಗೆ ಗಮನ ವಿಡದೆ ಹೆಜ್ಜೆ ಹೆಜ್ಜೆಗೂ ಕಾನೂನಿನ ಅವಲಂಬನೆಯೇ ಆದರೆ ಜೀವನದಲ್ಲಿ ನೈತಿಕ ವಿಕಾಸ ಹೇಗಾಗಬಲ್ಲುದು?

ಇಂದು ನಮ್ಮ ವ್ಯವಹಾರದಲ್ಲುಂಟಾದ ಕಾನೂನುಗಳ ಅತಿವ್ಯಾಪ್ತಿಯೇನು ಸಣ್ಣದೇ? ಅದರಲ್ಲೂ ಅದೆಂತಹ ಕಾನೂನುಗಳು! ಅವಕ್ಕಿರುವ ಧ್ಯೇಯ, ಧೋರಣೆ, ದೃಷ್ಟಿಯಲ್ಲಿ ಒವ್ವುಖವಿದೆಯೇ? ಪಾಂಡಿತ್ಯ, ಪ್ರತಿಭೆ, ಪ್ರಭಾವಗಳ ಪ್ರಾಬಲ್ಯದಿಂದ ದಿನಕ್ಕೊಂದು ರೀತಿಯಾಗಿ ಬದಲಾಯಿಸುವ ಕಾನೂನುಗಳೇನೂ ನಮ್ಮಲ್ಲಿ ಕೊರತೆಯಾಗಿಲ್ಲ. ಇಂಥ ಸರ್ವತೋಮುಖ ದೃಷ್ಟಿಯುಳ್ಳ ಕಾನೂನುಗಳ ಬಗ್ಗಾಗಿಯೇ ನಮ್ಮ ನಾಡಿನಲ್ಲಿಂದು ವಕೀಲರ ಸಂಖ್ಯೆ ಅಸಂಖ್ಯಾತವಾಗಿ ಬೆಳೆಯುತ್ತಿದೆ ನೀತಿಯ ರಕ್ಷಣೆಗಾಗಿ ಹಣ ನೀರಿನಂತೆ ಹರಿಯುತ್ತಿದೆ. ಸುಳ್ಳನ್ನು ನಿಜವಾಗಿಸಲು, ನಿಜವನ್ನು ಸುಳ್ಳಾಗಿಸಲು

(೧೯ನೇ ಪುಟ ನೋಡಿರಿ)

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5...1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬಿದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ V ನೇ ಫಾರ್ಮುಗಳಿಗೆ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಅರಿಸಲ್ಪಟ್ಟಿದೆ.

ಪುಟಗಳು ೧೫೮ ಬೆಲೆ: ರೂ. ೧ : ೨೫

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಕವಿಲಕ್ಷೀಶನ ಬಿರುದು ಯಾವುದು?

ಷ

ಲಕ್ಷ್ಮೀಶ ಮತ್ತವನ ಬಿರುದನ್ನು ತಿಳಿಯದವರು ವಿರಳ. ಆದರೆ, ಇತ್ತೀಚೆಗೆ ಅವನ ಕಾಲ,ಊರುಗಳ ಗಲಭೆ ನಿಂತು ಬಿರುದಿನ ಬಗೆಗೆ ವಾದವಿವಾದಗಳೆದ್ದಿವೆ. ಈ ಬಗೆಗೆ ಪೂರ್ವಾಧಾರ ಪೂರ್ವಪ್ರಯೋಗಗಳನ್ನನುಸರಿಸಿ ಅದು 'ಕರ್ಣಾಟ ಕವಿಜೂತವನ ಜೈತ್ರ' ನೆಂದೇ ಶ್ರೀ ಆಚಾರ್ಯರು ಅಭಿಪ್ರಾಯಪಡುತ್ತಾರೆ.

ಅಭಿಪ್ರಾಯಕಾರರು: ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

ಕನ್ನಡದ ಕವಿಗಳಲ್ಲಿ ಅನೇಕರು ತಂತಮ್ಮ ವೈಶಿಷ್ಟ್ಯದಿಂದ ಕೂಡಿ ಸುಪ್ರಸಿದ್ಧರಾಗಿದ್ದಾರೆ. ಅಂತಹ ಕವಿವರೇಣ್ಯರಲ್ಲಿ ಲಕ್ಷ್ಮೀಶನೊಬ್ಬನು. ಇವನು ಸಂಸ್ಕೃತ ಜೈಮಿನಿಭಾರತದ ಆಧಾರದಿಂದ ಕನ್ನಡದಲ್ಲಿ ಬರೆದ ಅಶ್ವಮೇಧಿಕ ಪರ್ವವು ಆಬಾಲ ವೃದ್ಧರಿಂದಲೂ, ಪಂಡಿತ ಪಾಮರರಿಂದಲೂ ಮನ್ನಣೆಪಡೆದುದಂಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಅವನು ಸಂಗೀತದಂತೆ ಶಬ್ದ ಧ್ವನಿಯ ಮೂಲಕ ಜನರ ಕಿವಿಯನ್ನು ಸೆಳೆಯುವುದರೊಂದಿಗೆ ಕಲಾಮಯವಾಗಿ ಅರ್ಥಶಕ್ತಿಯ ಮೂಲಕ ಮನಸ್ಸನ್ನು ಸೂರೆಗೊಳ್ಳುವ ದಿವ್ಯ ಶಕ್ತಿವಂತನು. ಈ ಬಗ್ಗೆ ಅವನ ಮಾತುಗಳು:

ಜಾಣರಂ ತಲೆದೂಗಿಸದೆ ನುಡಿದೊಡಾ
ಪದ ।
ಕ್ಕೂಣೆಯಂ ಬಕುದೆಂದು
ಸರಸೋಕ್ತಿಯಿಂದೆ ಗೀ ।
ರ್ವಾಣಸುರನಿಲಯ ಲಕ್ಷ್ಮೀವರಂ
ತಾನೆ
ಸಂಗೀತ ಸುಕಲಾ ನಿಪುಣನು ॥
ವೀಣೆಯಿಂ ಗಾನಮಂ ನುಡಿಸುವಂದ
ದೊಳೆನ್ನ ।
ವಾಣಿಯಿಂ ಕವಿತೆಯಂ ಪೇಳಿಸಿದ
ನೆಂದರಿದು ।"

ಇನ್ನೊಂದೆಡೆಯಲ್ಲಿ ಹೇಳಿದ್ದಾನೆ:

'ನಿರುತ ಮಂಜುಳ ಶಬ್ದದಿಂದೆ
ಕವಿಗಿಂಪಾಗಿ ।
ಚರಿಸುವ ಸುಲಲಿತ ಷಟ್ಪದಿಗಳ್ ।'

ಇದು ಕಾರಣದಿಂದ ಈ ಕವಿಯು 'ನಾದಲೋಲ'ನೆಂದು, 'ಉಪಮಾಲೋಲ'ನೆಂದು ಮೊದಲಾಗಿ ವಿಮರ್ಶಕರು ಬರೆಯುವರು.

ಕನ್ನಡದಲ್ಲಿ ದಶಪರ್ವ ಭಾರತವನ್ನು ಬರೆದ ಕುಮಾರವ್ಯಾಸನು, ಆರು ಕಾಂಡಗಳನಕ ರಾಮಾಯಣವನ್ನು ಬರೆದ ಕುಮಾರ ವಾಲ್ಮೀಕಿಯರೂ ಅಯಾ ಮೂಲ ಗ್ರಂಥಗಳ ಆಧಾರದಿಂದಲೇ ಬರೆದರೂ ತಮ್ಮ ಪ್ರತಿಭೆಯ ಪ್ರವಾಹದಲ್ಲಿ ಆ ಕತೆಗಳನ್ನು ಹೊಸದಾಗಿ ನಿರೂಪಿಸಿ ಹರಿಯಿಸಿದಂತೆ ಲಕ್ಷ್ಮೀಶನೂ ಜೈಮಿನಿಯ ಅಶ್ವಮೇಧ ಪರ್ವವನ್ನು ಕನ್ನಡಿಸುವಲ್ಲಿ ಸ್ವಂತಗಾರಿಕೆಯನ್ನು ತೋರಿಸಿದ್ದಾನೆ. ಈ ಬಗ್ಗೆ "ಶ್ರೀಲಾಮಾಶ್ವಮೇಧ"ದ ಕತೆಯನ್ನು ಇಕ್ಕಡೆಗಳಲ್ಲಿ ಹೋಲಿಸಿ ಸುಬೋಧದಲ್ಲಿ ನಾನು ಬರೆದ ಲೇಖನವನ್ನು ನೋಡಬಹುದು. ಅದು ಮಾತ್ರವಲ್ಲ, ಚಂದ್ರಹಾಸಾದಿ ಕಥೆಗಳಲ್ಲೂ ಈ ಅಂತರವು ಹೊಳೆಯುವುದು. ವ್ಯಾಸರ ಅಶ್ವಮೇಧ ಪರ್ವಕ್ಕಿಂತಲೂ ಹೆಚ್ಚಾಗಿ ವೀರಭಕ್ತರ ಕಥನವನ್ನೊಳಗೊಂಡ ಜೈಮಿನಿಯ ಈ ಕಥೆಯು ಅದುವರೆಗೆ ಕನ್ನಡದಲ್ಲಿದ್ದಿಲ್ಲವೆಂದು ಲಕ್ಷ್ಮೀಶನು ಕನ್ನಡಿಸಿದನು. ಕನ್ನಡ ಸಾಹಿತ್ಯ ಪ್ರಸಂಚದಲ್ಲಿ ಇಂತಹ ಗ್ರಂಥಗಳು ವಿರಳವಾಗಿವೆ. ಇಷ್ಟು ಜನಪ್ರೀತನಾದ ಕವಿಯ ವಿಚಾರದಲ್ಲಿ ಅನೇಕ ವಾದಗಳು ಕೇಳುತ್ತಿವೆ. ಕವಿಯು ತನ್ನ ವಿಷಯವಾಗಿ ಹೇಳಿದ ಪದ್ಯವಿದು:

ವಿದ್ವತ್ಸಭಾವಲಯ ಮರಿಯೆ
ವಿರಚಿಸಿದಂ ಭ ।
ರದ್ವಾಜಗೋತ್ರಭವನಣ್ಣಮಾಂಕನ
ಸುತಂ ।
ಸದ್ವಿನುತ ಕರ್ಣಾಟಕವಿ ಜೂತ
ವನಜೈತ್ರ ಲಕ್ಷ್ಮೀಶನೆಂಬೋರ್ವನು।
ಹೃದ್ವನಜದೊಳಗೆ ದೇವಪುರ
ಲಕ್ಷ್ಮೀಶನ ಪ ।
ದದ್ವಯವನಾವಗಂ
ಧ್ಯಾನಿಸುವರಡಿಗಳಂ ।
ಸದ್ವಿನಯದಿಂ ಭಜಿಸ ಬಲ್ಪಿಂದೆ
ವಿಮಲಜೈಮಿನಿ ಭಾರತದ ಕಥೆಯನು ॥
(ಬರೆದನು)

ಇಲ್ಲಿ ಹೇಳಿರುವಂತೆ ಲಕ್ಷ್ಮೀಶನ ತಂದೆಯು ಅಣ್ಣಮನೆಂದು ಸ್ಪಷ್ಟವಿದೆ, ಆದರ ಬದಲು ಅಣ್ಣಯನಿರಬೇಕೆಂಬುದು ಅಷ್ಟು ಸ್ಪಷ್ಟವಾಗಿಲ್ಲ. ಕವಿಯು ಹೆಸರಿಸಿದ ಹಾಗೂ ಕವಿ ಜನನದ ಸ್ಥಳವು ಸುರಪುರಕ್ಕಿಂತಲೂ ದೇವನೂರು ಆಗಿರಬೇಕೆಂದು ವಿದ್ವಾಂಸರಲ್ಲಿ ಬಹುಮತವಿದೆ. ಇನ್ನು ಈದ ಬಿರುದಿನ ವಿಚಾರದಲ್ಲಿ ಇತ್ತೀಚೆಗೆ ಒಂದೆರಡು ಬರೆಹಗಳು ಕಾಣುತ್ತಿವೆ. ಆ ಮೇರೆಗೆ ಸದ್ರಿ ಬಿರುದಿನ ವಿಷಯದಲ್ಲಿ ತುಸ ಬರೆಯಲೆಳಸಿದ್ದೇವೆ.

ಇತ್ತೀಚೆಗೆ ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಮತ್ತು ಶ್ರೀ. ಬಿ. ಪಾಂಡುರಂಗ ದೇಸಾಯಿಯವರು ಬರೆದಿದ್ದಾರೆ:- 'ತಮಗೆ ದೊರೆತ ಹಸ್ತಪ್ರತಿಗಳಲ್ಲಿ (೦ದರ ಕಾಲ ೧೭೮೮ ಇನ್ನೊಂದರ ಕಾಲ ೧೭೫೫) 'ಕರ್ಣಾಟಕವಿಜೈತ್ರವನ ಜೂತ'ನೆಂದು ಲಿಖಿತವಾಗಿದೆ. ಲಕ್ಷ್ಮೀಶನು ತನ್ನ ನಮ್ರ ಸ್ವಭಾವಕ್ಕೆ ತಕ್ಕುದಲ್ಲದ 'ಕರ್ಣಾಟಕವಿಜೂತವನ ಜೈತ್ರ'ನೆಂದು, ಕರೆಯಲು ಒಡಂಬಡಲಾರನು. ಈ ಎರಡು ಪಾಠಗಳಲ್ಲಿ ಕಾರತಮ್ಯವರಿಯದೆ ವಿನಯದಿಂದ ಕವಿಗೆ ಹೆಚ್ಚು ಗೌರವ ಸಲ್ಲುತ್ತದೆಯೆಂಬ ಕಲ್ಪನೆಯುಳ್ಳದ ಕೆಲವು ಅಭಿಮಾನಿಗಳು ಒಂದನೆಯದನ್ನು ಮರೆಯಿಸಿ ಎರಡನೆಯದನ್ನು ಮುಂದೆ ತಂದರೆಂದು ಊಹಿಸಬಹುದು. ಈಗಲಾದರೂ 'ಕರ್ಣಾಟಕವಿ ಜೈತ್ರವನ ಜೂತ'ನೆಂಬ ಪಾಠವು ಸುರಸವಾಗಿದೆಯೆಂದೂ, ಇದುವೇ ಮೂಲ ಪಾಠವಾಗಿರಬೇಕೆಂದೂ ತೋರುತ್ತದೆ" ಈ ಮಾತುಗಳನ್ನು ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯು ಪ್ರಕಟಿಸಿದ (೧೯೫೬) ಕನ್ನಡ ಜೈಮಿನಿ ಭಾರತದಲ್ಲಿ ಶ್ರೀ. ಆಸ್ಥಾನ ವಿದ್ವಾನ್ ಶಿವಮೂರ್ತಿ ಶಾಸ್ತ್ರಿಗಳು ಎತ್ತಿ ಬರೆದಿದ್ದಾರೆ. ಈ ವಾದವು ತಕ್ಕುದಲ್ಲವೆಂದು ನಮಗೆ ತೋರುತ್ತದೆ.

ಈ ಬಗೆಗೆ ವಿಚಾರಿಸುವಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಕವಿ ವಾಕ್ಯಗಳನ್ನು ವಿಶೇಷತಃ ಗಮನಿಸಲು ವಿನಂತಿಸುತ್ತೇವೆ ನಂದನ ಜೈತ್ರ, ಮಾಕಂದ ಜೈತ್ರ (ವಸಂತ)ಗಳೆಂಬವು ಹೇಗೆ ಏಕ ಪ್ರಕಾರವಾಗಿ ಬಂದಿವೆಯೆಂದು ಪರಿಶೀಲಿಸಬೇಕು:

೧) ವಿಸುನಿಗೆ ಕಂಸ, ಅಲರ್ವಿಲ್ಲವನ ಅಸಿಗೆ ಅಗ್ಗದ ಕೂರ್ಪ, ನಂದನ ಶ್ರೀಗೆ ವಸಂತಸಮಾಗಮ ನೊಂದು ವಪೋಲ್ ಪೊಸಜವ್ವನವಮರ್ದುದಾ ಕುಮುದಿಗೆರಸ ॥ (ನೋಮರಾಜನ ಉದ್ಭಟ ಚರಿತೆ, ೬--೮೮) ಇಲ್ಲಿಯ 'ನಂದನ ಶ್ರೀಗೆ ವಸಂತಸಮಾಗಮ' ದಂತೆ 'ಕವಿ ಜೂತವನ ಜೈತ್ರ'ವೂ ಸರಸ ಹಾಗೂ ಸಾರ್ಥಕವಾಗಿದೆ.

೨) ಹರಿಹರ ಮಹಾಕವಿಯು ನಂಬಿಯಣ್ಣನ ರಗಳೆಯಲ್ಲಿ ದೇವ ದೇವನನ್ನು ವರ್ಣಿಸುವಲ್ಲಿ ಹೇಳಿದ 'ಭಕ್ತ ಜನವನ ಫಲಿತ ವಸಂತ'ನೆಂಬುದು ಇಲ್ಲಿ ಸ್ಮರಣೀಯವಾದೆ.

೩) i) ಕನ್ನಡ ಸಾಹಿತ್ಯದ ಅಚಲ ಸಾಕ್ಷಿಗಳೆನ್ನುವ ಶಿಲಾಶಾಸನಗಳಲ್ಲೂ ಈ ಬಗೆಗೆ ಉದಾಹರಣೆಗಳು ದೊರೆಯುತ್ತವೆ. ಚಾಳುಕ್ಯ ಮನೆತನದಲ್ಲಿ ಹುಟ್ಟಿ ಆರನೆಯ ವಿಕ್ರಮಾದಿತ್ಯನೆಂದು ಪ್ರಸಿದ್ಧನಾದ ರಾಜವರ್ಯನ ಆಳಿಕೆಯ ಕಾಲದಲ್ಲಿ ಬರೆದ ಶಿಲಾಶಾಸನಗಳ ಸಂಕಲನವನ್ನು ಭಾರತ ಸರಕಾರದ ಶಾಸನ ಇಲಾಖೆಯು ಪ್ರಕಟಿಸಿದೆ (೧೯೫೫). ಈ ರಾಜನ ಆಳಿಕೆಯ ೨೧ನೆಯ (ಇಸ್ವಿ ೧೦೯೬-೭) ವರ್ಷದಲ್ಲಿ ಬರೆದ ಶಾಸನದಲ್ಲಿ ರಾಜಪತ್ನಿಯನ್ನು ಕುರಿತು ವರ್ಣಿಸಿದೆ:

"ತತ್ಪಾದಪದ್ಮೋಪ ಜೀವಿಗಳಪ್ಪ ಸ್ವಸ್ತಿಯನವರತ ಪರಮ ಕಲ್ಯಾಣಾಭ್ಯುದಯ (ಸ)ಕಸ್ಯ ಫಳ ಭೋಗಭಾಗಿನಿ ದ್ವಿತೀಯ ಲಕ್ಷ್ಮೀಸಮಾನೆ ಸ(ಲ)ಹಂಸಯಾನೆ ಶೃಂಗಾರರಸಸುಧಾಧಾರೆ ಶ್ರೀಮತ್ಪೃಥ್ವಿ (ಸಮ)ಲ್ಲದೇವಚಿತ್ತ ಸಹಕಾರವನ ನಿರಂತರವಸಂತಲಕ್ಷ್ಮಿ ಚಾಳುಕ್ಯರಾಯನರ್ದ್ಧಾಂಗ (ಲಕ್ಷ್ಮಿ)ಯರಪ್ಪ ಶ್ರೀಮದಭಿನವ ಸರಸ್ವತಿ ಚಂದಲದೇವಿಯರು" (ಶಾಸನ ಸಂಖ್ಯೆ ೧೪೨)

ii) ಇನ್ನೊಂದು ಶಾಸನವು ವಿಕ್ರಮ ಶಕ ೨೭ರಲ್ಲಿ (ಇಸ್ವಿ ೧೧೦೩) ಬರೆದುದು. ಅದರಲ್ಲಿ ರಾಜಾಶ್ರಯದ ನಾಕಿಗವುಂಡನನ್ನು ಕುರಿತು ಹೇಳಿದ ಪದ್ಯಗಳು ಅಯ್ದು ಮತ್ತು ಗದ್ಯವೊಂದು ಇವೆ. ಪ್ರಕೃತ ಗದ್ಯಭಾಗವಿಲ್ಲಿದೆ:

"ಇನ್ನವಾಯ್ಯ್ಯ ಭುಜವಿಕ್ರಮನುಂ ಪರಬಳಪ್ರಳಯ ಭೈರವನುಮರಾತಿದಾವಾನಲನುಂ ಮೊರಕ ಬಳಕರೋಚಿನೀ ರಾಜಹಂಸನುಂ ಎ[illegible]ತಂಸನು ಮುದ್ಧತಮಲ್ಲನುಂ ಜಗಕ್ಕೆ ನಲ್ಲನುಂ ಭಯಲೋಭವರ್ಜ್ಜಿತನುಂ ಸಂಸಾರಸಾರನುಂ ವನ್ದಿ ಜನಮಾಕಂದನಂದನ ವಸನ್ತನು ಮತಿನಿರ್ಮ್ಮಳಾಖ್ಯಾತನುಂ ನಿಖಿಲಗುಣಭರಿತನುಂ ಸಿದ್ಧಮಾನಿರತನುಮೆನಿಸಿ ತನ್ನ ಪೆಸರೆ ಪೆಸರಾಗಿ ಪೊಲಿವಘನೇಕಭೋಗದಿನಾಳ್ದು ಸುಖಸಂಕಥಾ ವಿನೋದದಿನಿರ್ದ್ದು"

(೧೮ನೇಪುಟ ನೋಡಿರಿ.)

ಮೈಸೂರು ಟೈಪ್ ಫೌಂಡ್ರಿ,

ಬೆಂಗಳೂರು-2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—

THE MYSORE TYPE FOUNDRY
Subedar Chatram Road, BANGALORE-2.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮು ಗು ಳು

ರಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦(ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಕನ್ನಡ ಸಂಸ್ಕೃತಿಯ ತವರ್ಮನೆ-ಶ್ರೀರಂಗ ಪಟ್ಟಣ

ರಾಷ್ಟ್ರಪ್ರೇಮಿ, ರಾಷ್ಟ್ರಹಿತಚಿಂತಕ, ರಾಷ್ಟ್ರಾಧಿಪತಿಯೂ ಆಗಿದ್ದ ಟಿಪ್ಪು ಸುಲ್ತಾನನ ದಿವ್ಯ ಭವ್ಯ ಸ್ಮಾರಕವಾಗಿ ಶ್ರೀರಂಗ ಪಟ್ಟಣ ತಲೆಯೆತ್ತಿ ನಿಂತಿದೆ. ಅಂತಹ ವೀರಪುರುಷನ ಸ್ಮರಣೆಯಿಂದ, ನಮ್ಮಲ್ಲಿಯೂ ರಾಷ್ಟ್ರೀಯ ಸಂಸ್ಕೃತಿಯ ಕಾರ್ಯ ಕಲಾಪಗಳಲ್ಲಿ ಸಹಕರಿಸುವ, ರಾಷ್ಟ್ರೀಯರಾಗಿ ಬಾಳುವ ಸಂಕಲ್ಪ ದೃಢವಾಗಬಲಿದೆ.

ಬರೆದವರು: ಶ್ರೀ ಎಮ್. ರಘುಸೆಂದನರಾವ್.

ಕನ್ನಡ ನಾಡು ಉಜ್ವಲ ದೇಶಪ್ರೇಮಿಗಳಿಗೆ ಜನ್ಮವಿತ್ತು ಇತಿಹಾಸದಲ್ಲೇ ಪ್ರಸಿದ್ಧವಾಗಿದೆ. ಕನ್ನಾಡಿನ ಧೀರತೆಯ ಕುರುಹಾಗಿ ಟಿಪ್ಪು ಸುಲ್ತಾನನಿಂದು ಈ ದೇಶ ಪ್ರೇಮಿಗಳ ಮಧ್ಯೆ ರಾಜಾಜಿಸುತ್ತಿದ್ದಾನೆ. ಆಂಗ್ಲರು ಈ ನಾಡಿನ ಇತಿಹಾಸದ ಮೇಲೆ ಹೊದಿಸಿರುವ ಮುಸುಕನ್ನೆಳೆದು, ನಿಜ ಸ್ಥಿತಿಯನ್ನರಿಯಲೆತ್ನಿಸಿದರೆ, 'ಮೈಸೂರು ಹುಲಿ'ಯೆಂದು ಪ್ರಸಿದ್ಧನಾಗಿರುವ ಟಿಪ್ಪು ಸುಲ್ತಾನನು ನಿಜವಾಗಿಯೂ ಪ್ರಜಾಪ್ರಿಯ ರಾಜನಾಗಿ ಬಾಳಿದವನೆಂದು ವಿದಿತವಾಗುತ್ತದೆ. ಆಂಗ್ಲ ಇತಿಹಾಸಕಾರರು, ಟಿಪ್ಪು ಮತಾಂಧನೆಂದೂ ಅನ್ಯಮತ ಸಹಿಷ್ಣುತೆಯವನಲ್ಲದಿರಲಿಲ್ಲೆಂದೂ, ಅವನು ಜನರಿಗೆ ಉಪದ್ರವಕಾರಿಯಾಗಿ ಬಾಳಿದನೆಂದೂ ದೂರಿದ್ದಾರೆ. ಆದರೆ ಇದು ಭಾರತೀಯರಲ್ಲಿದ್ದ ಐಕ್ಯಗಟ್ಟನ್ನೊಡೆಯುವ ಕುಹಕ ಯತ್ನವಲ್ಲದೇ ಬೇರೇನಲ್ಲ. ಟಿಪ್ಪು ಎಂತಹ ಮಹಾತ್ಮನಾಗಿದ್ದನೆಂದು ಸರಿಯಾಗಿ ತಿಳಿಯಬೇಕಾದವರು, ಇತಿಹಾಸದ ನಿಜರೂಪವನ್ನರಿಯಲೆತ್ನಿಸಬೇಕು, ಅವನ ರಾಜಧಾನಿಯಾಗಿ ಮೆರೆಯುತ್ತಲಿದ್ದ ಈಗ ಪಾಳುಬಿದ್ದಿರುವ ಶ್ರೀರಂಗ ಪಟ್ಟಣವನ್ನು ನೋಡಬೇಕು.

ಶ್ರೀರಂಗ ಪಟ್ಟಣ — ಪ್ರಭು ರಂಗನಾಥನ ನೆಲೆವೀಡು. ಯಾತ್ರಿಕರಿಗೆ ಪುಣ್ಯಕ್ಷೇತ್ರವಾಗಿ ಇಂದಿಗೂ ತಲೆಯೆತ್ತಿ ನಿಂತಿದೆ, ಈ ದೇಗುಲ. ಭಗವಂತನು ಶೇಷಶಯನನಾಗಿ ಲೋಕ ಕಲ್ಯಾಣವೆಸಗುತ್ತಿದ್ದಾನೆ. ಇದು ಶ್ರೀರಂಗ ಪಟ್ಟಣದ ಇತಿಹಾಸ ಪ್ರಸಿದ್ಧ ದೇವ ಮಂದಿರ. ಈಗ ನೆಲಸಮವಾಗಿರುವ ಟಿಪ್ಪು ಸುಲ್ತಾನನ ಅರಮನೆಯ ಮುಂಭಾಗದಲ್ಲಿದೆ, ಈ ಮಂದಿರ. ಟಿಪ್ಪುವಿನ ಅನೇಕ ಮಹತ್ಕಾರ್ಯ ಸಾಧನೆಗಳಲ್ಲಿ ತುಂಬಾ ನೆರವಿತ್ತು ಸಲಹಿದ್ದಾನೆ, ಶ್ರೀರಂಗನಾಥ. ದೇಗುಲ ಬಹು ಪುರಾತನವಾದುದೆಂದು ನೋಡಿದೊಡನೆಯೇ ತಿಳಿಯುತ್ತದೆ. ಅದರೂ ಗಟ್ಟಿಮುಟ್ಟಾದ ರಚನೆಯಿಂದ ಕೂಡಿದೆ, ಅದು. ಗರ್ಭಗೃಹದಲ್ಲಿ ಪರಮಾತ್ಮನು ಶೇಷಶಾಯಿಯಾಗಿದ್ದಾನೆ. ಶಿಲೆಯಿಂದ ರಚಿತವಾದ ವಿಗ್ರಹ ಕಲಾತ್ಮಕವಾಗಿದ್ದು ಕಂಗೊಳಿಸುತ್ತ ಭಕ್ತಾದಿಗಳ ಮನಸ್ಸನ್ನು ಸೆಳೆಯುತ್ತದೆ. ಗರ್ಭಗೃಹದಲ್ಲಿ ವಿಗ್ರಹದ ಸಮೀಪದ ವರೆಗೆ ಹೋಗಬಹುದು. ಆಂಗ್ಲರು ಈ ಪಟ್ಟಣವನ್ನು ಸೆರೆಗೆ ಮಾಡಿದಾಗ, ಟಿಪ್ಪುವಿನೊಡನೆ ಶ್ರೀರಂಗನಾಥ ದೇವಾಲಯ ತಮ್ಮ ಇಗರ್ಜಿ ಕಟ್ಟಿಸಲು ಕೊಡಬೇಕು, ಇಲ್ಲದಿದ್ದರೆ ಅವನ ಹೊಟ್ಟೆಯ ಮಕ್ಕಳನ್ನು ಕೊಡಬೇಕು ಎಂದು ಕೇಳಿದರಂತೆ, ಆದರೆ ಪರ ಮತ ಸಹಿಷ್ಣುವಾದ ಟಿಪ್ಪು, ತನ್ನ ಮಕ್ಕಳನ್ನಾದರೂ ಕೊಟ್ಟೇನು, ತನ್ನ ಪ್ರೀತಿ ಪಾತ್ರರಾದ ಹಿಂದುಗಳ ದೇವಾಲಯವನ್ನು ಸೂರೆಗೊಳ್ಳ ಬಿಡಲಾರೆ ಎಂದನಂತೆ! ಎಂತಹ ಮಹಾತ್ಮ! ಇದರಿಂದ ಅವನೆಷ್ಟು ಹಿಂದೂ ಮತಾಭಿಮಾನಿಯಾಗಿದ್ದನೆಂದು ಇದರಿಂದ ತಿಳಿಯುತ್ತದೆ. ಅವನ ಹಿರಿಮೆ ಇದರಿಂದಲೇ ವ್ಯಕ್ತವಾಗುತ್ತದೆ. ಈ ದೇವ ಮಂದಿರಕ್ಕೆ ಟಿಪ್ಪುವಿನ ಅಂಬಲಿ ನೊರೆಯತ್ತದೆ. ನಂಬಿ ಬಂದ ಭಕ್ತರಲ್ಲಿ ಚೈತನ್ಯವನ್ನೂ ಹುರುಪನ್ನೂ ಹುಂಬ ಕಳುಹಿಸುತಿದ್ದಾನೆ, ಶ್ರೀರಂಗನಿಲ್ಲಿ.

ಸಾಮಾನ್ಯವಾಗಿ ಶ್ರೀರಂಗ ಪಟ್ಟಣವನ್ನು ಡೀ ಕೋಟೆಯೇ ಆವರಿಸಿದೆಯೆನ್ನಬಹುದು. ನಾವು, ಮಡಿಕೇರಿಯ ಸರಕಾರಿ ಶಿಕ್ಷಣ ಶಾಲೆಯ ಶಿಕ್ಷಣಾರ್ಥಿಗಳು ನಮ್ಮ ವ್ಯಾಯೋಗಿಕ ತರಬೇತಿಗಾಗಿ ಹೋದವರು, ಶ್ರೀರಂಗ ಪಟ್ಟದ ಕೃಷ್ಣರಾಜೇಂದ್ರ ಸಹಕಾರಿ ಸಂಘವನ್ನು ಸಂದರ್ಶಿಸಿ, ಸಂಜೆ ನಮ್ಮ ಪ್ರಾಧ್ಯಾಪಕರೊಡನೆ ಸೈಕಲಿನಲ್ಲಿ ತಿರುಗಾಡಹೊರಟೆವು. ಈ ಪಟ್ಟಣವನ್ನು ಸುತ್ತುವಾಗ ಆಯಾಸವೆಂಬುದೇ ಕಂಡುಬರುವುದಿಲ್ಲ. ಇಲ್ಲಿನ ಪ್ರತಿಯೊಂದು ಮಣ್ಣಿನ ಕಣವೂ ಇತಿಹಾಸಯುಕ್ತವಾಗಿದೆ. ಇಲ್ಲಿನ ಇತಿಹಾಸವನ್ನು ಸರಿಯಾಗಿ ತಿಳಿಯಬೇಕಾದರೆ, ಇಲ್ಲಿನ ಐತಿಹಾಸಿಕ ಸ್ಥಳಗಳನ್ನೆಲ್ಲ ಸರಿಯಾಗಿ ನೋಡಬೇಕಾದರೆ, ಒಂದು ವಾರದ ಕಾಲವೂ ಸಾಲದು. ಸೈಕಲಿನಲ್ಲೇ "ದರಿಯಾ ದೌಲತ್ ಬಾಗ್"ಗೆ ಹೋದೆವು. ಇಲ್ಲಿ ಸುಂದರವಾದ ಹೊದೋಟದಿಂದ ಕೂಡಿದ ವಾತಾವರಣದಲ್ಲಿ 'ದರಿಯಾ ದೌಲತ್' ಕಟ್ಟಡವನ್ನು ಕಟ್ಟಲಾಗಿದೆ. ಇದನ್ನು ಮರದಲ್ಲೇ ಕಟ್ಟಿಸಿದಂತಿದೆ. ಇದರಲ್ಲಿ ಟಿಪ್ಪುವಿನ ದರ್ಬಾರು ನಡೆಯುತ್ತಿತ್ತಂತೆ. ಇಲ್ಲಿಯೇ ಅವನು ತನ್ನ ಜನರಿಗೆ ಸ್ಫೂರ್ತಿಯನ್ನು ತುಂಬುತ್ತಿದ್ದುದಂತೆ. ಈ ಕಟ್ಟಡ ಇತಿಹಾಸದಿಂದ ಕೂಡಿವೆಯೆನ್ನುತ್ತಾರೆ. ಇಲ್ಲಿ ಟಿಪ್ಪುವಿಗೂ, ಆಂಗ್ಲರಿಗೂ ಆದ ಒಪ್ಪಂದಗಳ ಪ್ರತಿಗಳನ್ನು ಕನ್ನಡಿಯ ಕಟ್ಟನಲ್ಲಿ ಕಟ್ಟಿ, ಪ್ರದರ್ಶನಕ್ಕಿಟ್ಟಿದ್ದಾರೆ. ಇಲ್ಲಿ ಕಟ್ಟಡದ ಗೋಡೆಯನ್ನಾಗಲೀ, ಇತರ ಯಾವ ವಸ್ತುವನ್ನಾಗಲೀ ಮುಟ್ಟಕೂಡದು. ಅಲ್ಲದೇ ಇಲ್ಲಿ ಭಾವಚಿತ್ರ ತೆಗೆಯುವುದನ್ನೂ ನಿಷೇಧಿಸಲಾಗಿದೆ. ಇಲ್ಲಿನ ಗೋಡೆಗಳು ಚಿತ್ರಕಲೆಯಿಂದ ತುಂಬಿವೆ. ಟಿಪ್ಪುವಿನ ಕೊನೆಯ ಹೋರಾಟವೂ ಈ ಚಿತ್ರಗಳಲ್ಲಿ ಚಿತ್ರಿತವಾಗಿದೆ.

ಆ ಮೇಲೆ "ಗುಂಬಝ್"ಗೆ ಹೋದೆವು. ಇದು ಹುತಾತ್ಮರ ಸಮಾಧಿಸ್ಥಳ. ಟಿಪ್ಪು, ಹೈದರ್ ಹಾಗೂ ಟಿಪ್ಪುವಿನ ಮಾತೆಯ ಸಮಾಧಿಗಳೂ, ಯುದ್ಧದಲ್ಲಿ ಮಡಿದ ಹುತಾತ್ಮರ ಸಮಾಧಿಗಳೂ ಇಲ್ಲಿ. ಈ ಸ್ಥಳಕ್ಕೆ ಹೋಗುವ ದಾರಿಯ ಇಕ್ಕೆಲಗಳಲ್ಲೂ ಮನಮೋಹಕವಾದ ಮರಗಳಿಂದ ಕೂಡಿದ್ದು, ಕಂಗೊಳಿಸುತ್ತ, ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತದೆ. ಗುಂಬಝ್ ಶಿಲ್ಪಕಲಾಭರಿತವಾದ ಕಟ್ಟಡ. ಇದರ ಸುತ್ತಲೂ ಸುತ್ತುವುದೆಂದರೆ, ಅದೆಷ್ಟು ಆನಂದ! ಈ ಕಟ್ಟಡ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ. ಒಳಗೆ ಟಿಪ್ಪು ಹಾಗೂ ಅವನ ತಾಯ್ತಂದೆಗಳ ಸಮಾಧಿಗಳಿವೆ. ಒಳಗೆ ನಿಶ್ಶಬ್ದ ವಾತಾವರಣ ಅದೇನೋ ಒಂದು ಬಗೆಯ ಸ್ಫೂರ್ತಿ ಆವರಿಸಿ, ಭಾವನಾವಶರಾಗುತ್ತೇವೆ, ಒಳಹೊಕ್ಕೊಡನೆ. ಪ್ರತಿ ಸಮಾಧಿಯ ಮೇಲೂ ವಸ್ತ್ರವನ್ನು ಹೊದಿಸಿದ್ದಾರೆ. ಟಿಪ್ಪುವಿನ ಹಿರಿಮೆ ನೆನೆದುಕೊಂಡು, ಅವನ ಸಮಾಧಿಯನ್ನು ಮುಟ್ಟಿ ನಮಸ್ಕರಿಸಿದೆವು. ಗುಂಬಝ್‌ನ ಚತ್ತಿರವೇ ಮಸೀದಿ. ಇದೂ ಶಿಲ್ಪಕಲಾಭರಿತವಾದ ಸುಂದರ ಕಟ್ಟಡ. ಇದನ್ನೆಲ್ಲ ನೋಡುವುದಕ್ಕೂ ಭಾಗ್ಯಪಡೆದು ಬಂದಿರಬೇಕೆಂದೆನಿಸಿತೆನಗೆ. ಒಮ್ಮೆ ಹೋದರೆ, ಹಿಂದಿರುಗಲು ಕಾಲೇ ಬರುವುದಿಲ್ಲ. ಅಂತೂ ಭಾರವಾದ ಹೃದಯದಿಂದ ಹೊರಟುಬಂದೆವು.

ಅನಂತರ ಕೋಟೆಯ ಸುತ್ತಲೂ ಸುತ್ತಿದೆವು. ಕೋಟೆಯಂತೂ ಭಗ್ನಸ್ಥಿತಿಯಲ್ಲಿದೆ. ಆಂಗ್ಲರು ಒಳಹೊಕ್ಕ ದಾರಿಯನ್ನೂ ನೋಡಿದೆವು. ದೇಶ ದ್ರೋಹಿಗಳಾದ ತಿರುಮಲ, ಮೀರ್ ಸಾದಕ್— ಇವರೀರ್ವರ ದ್ರೋಹದಿಂದಾಗಿ, ಕನ್ನಡದ ಸಂಸ್ಕೃತಿಯ ತವರ್ಮನೆಯಂತಿದ್ದ ಶ್ರೀರಂಗನ ನೆಲೆವೀಡಾದ ಶ್ರೀರಂಗ ಪಟ್ಟವು ಆಂಗ್ಲ ದರೋಡೆಕೋರರ ದಾಳಿಗೆ ತುತ್ತಾಗಬೇಕಾಯಿತು, ಅಸಂಖ್ಯಾತ ಕನ್ನಡಿಗ ದೇಶವೀರರು ಆಂಗ್ಲರ ಗುಂಡಿನೇಟಿಗೆ ಬಲಿಯಾಗಬೇಕಾಯಿತು. ಕೋಟೆಯ ಸ್ಥಿತಿಯನ್ನು ನೋಡಿ, ಹಿಂದೆ ನಡೆದ ಇತಿಹಾಸದ ನೆನಪು ಮಾಡಿದರೆ, ಪ್ರತಿಯೋರ್ವ ಕನ್ನಡಿಗನಿಗೂ ಹೊಟ್ಟೆ ಉರಿಯದಿರದು. ಈ ಕೋಟೆಯ ಗೋಡೆಯ ಒಳ ಭಾಗದಲ್ಲೇ ಸೆರೆಮನೆ (Dungeon) ಯೊಂದಿದೆ. ಇದರಲ್ಲಿ ಟಿಪ್ಪು ಆಂಗ್ಲ ಸೇನಾಧಿಕಾರಿಗಳನ್ನು ಬಂಧಿಸಿಡುತ್ತಿದ್ದನಂತೆ ಈ ಅಂಧಕೂಪವನ್ನು ನೋಡಿದರೇನೇ ಭಯ ಉಂಟಾಗುತ್ತದೆ. ಕೋಟೆಯ ಒಂದು ಪಾರ್ಶ್ವದಲ್ಲಿ ನದಿ ಕಾವೇರಿ ಹರಿಯುತ್ತಿದ್ದಾಳೆ. ನದಿಯಲ್ಲೆಲ್ಲ

(೧೭ನೇ ಪುಟನೋಡಿರಿ.)

38 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಕನ್ನಡ.

ನಮ್ಮ ಮೂರು ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ಬಡ್ಡಿ ಸೇಕಡಾ 5ರಂತೆ

ರೂ. 87=00 ಮೂರು ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100=00ನ್ನು ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಸವಲತ್ತುಗಳು. ಬಡ್ಡಿ ಸೇಕಡಾ 4¾ರ ವರೆಗೆ. ದೊಡ್ಡ ಠೇವಣಿಗಳ ಮೇಲೆ ಹೆಚ್ಚಿನ ಬಡ್ಡಿ.

ಶಾಖೆಗಳು:

ಮಂಗಳೂರು — ಬೆಂಗಳೂರು — ಬೇಲೂರು — ಶಿವಮೊಗ್ಗ — ಕಾಸರಗೋಡು ಇತ್ಯಾದಿ.

ಸ್ಥಾಪನೆ: 1920.

ನೋಟೀಸು

ಪೆರ್ಡೂರು ಶ್ರೀ ಅನಂತಪದ್ಮನಾಭದೇವರ ಭಂಡಾರದ ಬಾಬ್ತು ತೊಳ್ಳಲು ಅಕ್ಕಿ ಮತ್ತು ಬೆಲ್ಲಿಗೆ ಅಕ್ಕಿ ಕೂಡಾ 100 (ಒಂದು ನೂರು) ಮುಡಿಗಳು ಮಾರುವುದಿದೆ. ಈ ಬಗ್ಗೆ ಇದೇ ತಾ. 23-8-58 ನೇ ಶನಿವಾರ ಅಪರಾಹ್ನ ಗಂಟೆ 4-30ಕ್ಕೆ ಭಂಡಾರದ ಶೆರ್ತಕ್ಕೆ ಪಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆ ಉಳ್ಳವರು ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

K. B. Shetty,
Executive Officer.
Sri Ananthapadmanabha Temple, Perdur.

ಪೆರ್ಡೂರು, ತಾ. 6-8-1958.

ಶಿಕ್ಷಣ ಮತ್ತು ವಿಚಾರ ಸ್ವಾತಂತ್ರ್ಯ

ನಮ್ಮ ಕಾಲದ ಮಹಾ ಮೇಧಾವಿ ವಿಜ್ಞಾನಿಯಾದ ಶ್ರೀ ಆಲ್ಬರ್ಟ್ ಐನ್‌ಸ್ಟೈನ್‌ರವರು ಶಿಕ್ಷಣ ಮತ್ತು ವಿಚಾರ ಸ್ವಾತಂತ್ರ್ಯದ ಬಗ್ಗೆ ಅತ್ಯಂತ ಕುತೂಹಲಿಗಳಾಗಿದ್ದರು. ಶಿಕ್ಷಣವು ವಿದ್ಯಾರ್ಥಿಗೆ ಸಂತೋಷಜನಕವಾಗದೆ ದುಃಖಕಾರಕವಾಗಿರುವುದಾದರೆ, ಅದು ಶಿಕ್ಷಣವಲ್ಲ, ವಿಚಾರ ಸ್ವಾತಂತ್ರ್ಯಕ್ಕೆ ಮರಣವಾದೀತು.

ಬರೆದವರು. ಪ್ರೊ ಕೆ ಎಸ್ ನವಣೂರ, ಎಂ ಎಸ್‌ಸಿ

ಆಲ್ಬರ್ಟ್ ಐನ್‌ಸ್ಟೈನ್

ಈ ಲೇಖನಕ್ಕೆ ಪೂರ್ವಭಾವಿಯಾಗಿ ಐನ್‌ಸ್ಟೈನ್‌ರವರು 'ಗುರುಗಳು ಮತ್ತು ವಿದ್ಯಾರ್ಥಿಗಳು ಎಂಬ ವಿಷಯವನ್ನು ಕುರಿತು ಎಂತಹ ಉದಾತ್ತ ವಿಚಾರಗಳನ್ನು ತಳೆದವರಾಗಿದ್ದರು ಎಂಬುದನ್ನು ಹಿನ್ನೆಲೆಯಲ್ಲಿ ಇರಿಸಿ ವಿಚಾರ ಮಾಡಿದಾಗ 'ಶಿಕ್ಷಣ ಮತ್ತು ವಿಚಾರ ಸ್ವಾತಂತ್ರ್ಯ' ಇವುಗಳ ಸಂಬಂಧದಲ್ಲಿಯ ಅವರ ಅಭಿಪ್ರಾಯಗಳ ನೈಜವಾದ ಅರ್ಥವನ್ನು ತಿಳಿಯಲು ನಮಗೆ ಅನುಕೂಲವಾಗುವದು ಗುರುಗಳು ಮತ್ತು ವಿದ್ಯಾರ್ಥಿಗಳು ಎಂಬ ವಿಷಯವನ್ನು ವಿಸ್ತರಿಸುವಾಗ-'ನಿರ್ಮಿತಿ ಹಾಗು ಜ್ಞಾನ' ಇವುಗಳ ವಿಷಯದಲ್ಲಿ ಆನಂದವನ್ನು ಜಾಗ್ರತಗೊಳಿಸುವದೇ ಗುರುವಿನ ಮುಖ್ಯ ಕಲಾಕೌಶಲ್ಯವು

ನೀವೆಲ್ಲರೂ ಶಾಲೆಗಳಲ್ಲಿ ಕಲಿಯಲಿರುವ ಸೋಜಿಗದ ಸಂಗತಿಗಳು, ಉತ್ಸಾಹಕರ ಹಾಗು ಅವಿಶ್ರಾಂತ ಶ್ರಮದಿಂದ ಎಲ್ಲ ರಾಷ್ಟ್ರಗಳಲ್ಲಿಯೂ—ಅನೇಕ ಪೀಳಿಗೆಗಳಲ್ಲಿ—ಕಲೆ ಹಾಕಿದ ದುಡಿತದ ಫಲಗಳು ಇವೆಲ್ಲವುಗಳನ್ನು ನೀವು ಪಿತ್ರಾರ್ಜಿತ ಸೊತ್ತಿನಂತೆ ಸ್ವಾಗತಿಸಿ ಸ್ವೀಕರಿಸಿರಿ. ಇವುಗಳನ್ನು ಸನ್ಮಾನಿಸಿರಿ. ಇವುಗಳಿಗೆ ಬರತಿ ಹಾಕಿರಿ ಮತ್ತು ಮಂದ ಪ್ರಾಮಾಣಿಕ ಬುದ್ಧಿಯಿಂದ ನಿಮ್ಮ ನಿಮ್ಮ ಮಕ್ಕಳಿಗೆ ಒಪ್ಪಿಸಿರಿ ಈ ಪ್ರಕಾರವಾಗಿ ನಾವು ಸಾಮೂಹಿಕವಾಗಿ ನಿರ್ಮಿಸಲಿರುವ ಶಾಶ್ವತ ವಸ್ತುಗಳಿಂದಾಗಿಯೇ ಮರ್ತ್ಯನು ಅಮರತ್ವವನ್ನು ಹೊಂದುವನು

ಈ ಮಾತನ್ನು ನೀವು ಸದಾ ಕಾಲದಲ್ಲಿ ಲಕ್ಷ್ಯದಲ್ಲಿರಿಸಿದರೆ, ನಿಮಗೆ ಜೀವನ ಹಾಗು ದುಡಿಮೆ ಇವುಗಳ ನಿಜವಾದ ಅರ್ಥವಾಗುವದು ಹಾಗು ಭಿನ್ನ ಜನಾಂಗಗಳನ್ನು ಮತ್ತು ಯುಗಗಳನ್ನು ಹೇಗೆ ಕಾಣಬೇಕು ಎಂಬ ವಿಷಯದಲ್ಲಿ ನಿಜವಾದ ಮನೋಭಾವವು ಹುಟ್ಟುವದು'

ಶಿಕ್ಷಣ ಮತ್ತು ವಿಚಾರ ಸ್ವಾತಂತ್ರ್ಯ

ಕೇವಲ ತಜ್ಞನನ್ನಾಗಿ ಮಾಡುವ ಶಿಕ್ಷಣವನ್ನು ಕೊಡುವುದರಿಂದ ಶಿಕ್ಷಣದ ಕಾರ್ಯವು ಪೂರ್ತಿ ಎನಿಸದು ಮನುಷ್ಯನು ಕೇವಲ ತಜ್ಞನಾದಲ್ಲಿ ಅವನು ಒಂದು ಉಪಯುಕ್ತವಾದ ಯಂತ್ರವನ್ನು ಹೋಲಬಹುದಲ್ಲದೆ, ಯೋಗ್ಯವಾದ ರೀತಿಯಲ್ಲಿ ಬೆಳವಣಿಗೆಯನ್ನು ಹೊಂದಿದ ವ್ಯಕ್ತಿತ್ವವನ್ನು ಪಡೆಯಲಾರನು ಭಿನ್ನ ಭಿನ್ನ ವಿಷಯಗಳ ಮೌಲ್ಯಗಳನ್ನು ಯಥಾಯೋಗ್ಯವಾಗಿ ತಿಳಿದು ಅವುಗಳ ಸಂಬಂಧದಲ್ಲಿ ಚೈತನ್ಯಯುತ ಭಾವನೆಗಳನ್ನು ಬೆಳೆಯಿಸಿಕೊಳ್ಳುವುದು ವಿದ್ಯಾರ್ಥಿಯಾದವನಿಗೆ ಅನಿವಾರ್ಯವು. ಯಾವುದು ಸೌಂದರ್ಯಪೂರ್ಣವಿದೆಯೋ ಮತ್ತು ಯಾವುದು ನೈತಿಕವಾಗಿ ಒಳ್ಳೆಯದಿದೆಯೋ ಇವೆರಡರ ವಿಷಯದಲ್ಲಿ ಅವನು ನೈಜವಾದ ಜ್ಞಾನವುಳ್ಳವನು ಇರಲೇಬೇಕಾಗುವದು, ಇಲ್ಲವಾದರೆ ತಜ್ಞತೆಯನ್ನು ಸಾಧಿಸಿದ ಈತನು, ಉತ್ತಮರೀತಿಯಲ್ಲಿ ತರಬೇತಿಗೊಳಿಸಿದ ನಾಯಿಯನ್ನು ಹೋಲುವನಲ್ಲದೆ, ಜೀವನ ಯೋಗ್ಯವಾಗಿ ಜ್ಞಾನವನ್ನು ಸಾಧಿಸಿದ ಮನುಷ್ಯನನ್ನು ಹೋಲುವುದಿಲ್ಲ. ಇವನು—ಮಾನವರ ಉದ್ದೇಶಗಳನ್ನು, ಅವರ ಭ್ರಾಮಕ ಕಲ್ಪನೆಗಳನ್ನು ಮತ್ತು ಅವರು ಪಡುವ ಯಾತನೆಗಳನ್ನು—ತಿಳಿದಲ್ಲಿ, ಇವನಿಗೆ ವ್ಯಕ್ತಿ ಮತ್ತು ಸಮಾಜ ಇವುಗಳೊಳಗಿನ ಸಂಬಂದದ ಕಲ್ಪನೆಯು ಬರುವದು.

ಇಂತಹ ಅಮೌಲ್ಯ ವಿಷಯಗಳನ್ನು ಇಂದಿನ ಯುವಕ ಜನಾಂಗಕ್ಕೆ ಯೋಗ್ಯವಾಗಿ ತಿಳಿಸಲು ನಮಗೆ ಶಿಕ್ಷಣವನ್ನು ಕೊಡಬಹುದಾದಲಿರುವ ಗುರುಗಳೂಂದಿಗೆ ವೈಯ್ಯಕ್ತಿಕ ಸಂಪರ್ಕವು ಕಾರಣವಾಗಬಹುದಲ್ಲದೆ ಕೇವಲ ಪಠ್ಯಪುಸ್ತಕಗಳು ಕಾರಣವಾಗಲಾರವು ಹೀಗಾದಲ್ಲಿ ನಮ್ಮ ಸಂಸ್ಕೃತಿಯನ್ನು ರೂಪಿಸಲು ಮತ್ತು ಇದ್ದುದನ್ನು ಉಳಿಸಿಕೊಳ್ಳಲು ಸಾಧ್ಯವಾಗುವದು. ಇತಿಹಾಸ ಮತ್ತು ತತ್ವಜ್ಞಾನದ ವಿಷಯಗಳಲ್ಲಿಯ ತಜ್ಞತೆಗಿಂತ ಮಾನವಧರ್ಮಗಳಿಗೆ ಸಂಬಂಧಿಸಿದ ವಿಷಯಗಳು ಹೆಚ್ಚು ಮಹತ್ವಪೂರ್ಣವಾದವುಗಳೆಂದು ನಾನು ಹೊಗಳಲು, ಈ ಮೊದಲೇ ವಿವರಿಸಿದ ವಿಚಾರಗಳೇ ಕಾರಣವು

ಕೇವಲ ಉಪಯುಕ್ತತೆಯ ಕಾರಣಕ್ಕಾಗಿ ಸ್ಪರ್ಧಾತ್ಮಕ ಪದ್ಧತಿಗಳಿಗೆ ಅಂತಿರಂಜಿತನೆನಿಸುವಷ್ಟು ಮಹತ್ವವನ್ನು ಕೊಡುವುದು ಮತ್ತು ಆಕಾಲಿಕವಾಗಿ ಪಕ್ವವೆನಿಸುವಂತೆ ತಜ್ಞತೆಯನ್ನು ಸಾಧಿಸುವುದು—ಇವೆರಡೂ ನಮ್ಮ ಸಾಂಸ್ಕೃತಿಕ ಜೀವನವು ಯಾವ ಭಾವನೆಯ ಬುನಾದಿಯ ಮೇಲೆ ನಿಂತಿರುವುದೋ ಅದನ್ನೇ ಹಾಳುಗಡವುವದು

ನಮ್ಮ ಶಿಕ್ಷಣವು ಹೆಚ್ಚು ಬೆಲೆಯುಳ್ಳದು ಎಂದು ಎನಿಸಲು, ಬಿಕ್ಕಟ್ಟರಲ್ಲಿ ಸ್ವತಂತ್ರವಾದ ವಿವೇಚನಾತ್ಮಕ ವಿಚಾರ ಸರಣಿಯು ಬೆಳೆಯುವುದು ಅತ್ಯಾವಶ್ಯಕವಾಗಿದೆ ಅನೇಕ ವಿಷಯಗಳ ಭಾರವನ್ನು ಹೊರಲಾಗದೆನಿಸುವಷ್ಟು ಹೊರಿಸುವದರಿಂದ ಇಂತಹ ಬೆಳವಣಿಗೆಯು ಕುಂಠಿತವಾಗುವದು ಮೇಲಾಗಿ ಇಂತಹ ಭಾರವು ಕೇವಲ ತೋರಿಕೆಯ ಜ್ಞಾನಕ್ಕೆ ಮಾರ್ಗವಾಡಿಕೊಡುವದು ವಿದ್ಯಾರ್ಥಿಯಾದವನಿಗೆ ಶಿಕ್ಷಣವನ್ನು ತೆಗೆದ ಕೂಳ್ಳುವಾಗ ಬೆಲೆಯುಳ್ಳ ಉಡುಗೊರೆಯನ್ನು ತೆಗೆದುಕೊಳ್ಳುವಾಗಿನ ಸಂತೋಷವಿರಬೇಕೇ

ಅಭಿಪ್ರಾಯ ಐನ್‌ಸ್ಟೈನ್

* * *

ಹೊರಲು ಕಠೋರವಾದ ಕರ್ತವ್ಯವನ್ನು ಸೆರವೇರಿಸುವಾಗಿನ ಭಾವನೆಯು ಮಾತ್ರ ಇರಕೂಡದು

'Ideas and opinions by Albert Einstein ಎಂಬ ಪುಸ್ತಕದ ಆಧಾರದಿಂದ.

ಭಾರತ ವಾಣಿ

ಒಂದೇ ಜನ ಪೊಂದೇ ಮನ
ಏ ಭಾರತ ಸಂತಾನ
ಒಂದೇತನ ಪೆರಡಲ್ಲದ
ಹೂಂವಿಕೆಯ ಮಹಾ ಸದನ!

ಅಸೇತು ಹಿಮಾಚಲ ವಿ
ಸ್ತಾರದ ಸಿರಿ ಜೊವಲಯ
ಸೊಸುವ ನಿರ್ಮಲ ಗಂಗಾ
ಜಲಪಾನದ ಪುಣ್ಯಮಯ

ಹಿಂದೂ ಸಿಖ ಪಾರಸಿಕ
ಈಸಾಯಿ ಮುಸಲ್ಮಾನ
ಒಂದೇ ಜನವೆಂದನುದಿನ
ಕೂಡ ವ ಸುಖ ಸನ್ಮಾನ

ಅವರೆಂದರು ಇವರೆಂದರು
ಎಲ್ಲರ ನುಡಿಯನುಸಾರ
ಉಪರಾವರು ಇವರಾದರು
ಎಲ್ಲರ ಹಿರಿ ಸಂಸಾರ!

ಯಾರೆಂದರು ನಮದೊಂದೇ
ಮನದೈಕ್ಯದ ಕುಳಾರ
ಅದೊ! ಬಾವುಟವೇರಿರುವುದು
ಕೌಸ ಹುನ್ಮಿನ ಪರಿಪಂಥ

ಕಡೈಸುವಿದ ಕರಿ ಗೂಗೆಯ
ಕೊಸೆಗಳಿಗೆಯ ಚೀರಾಟ
ಬೆಳ್ಳಂಕಿನ ಬಾನಿಲಿ ನೆ-
ಮ್ಮದಿ ಗರ ದನ ಬಾರಾಟ!

ನಡೆಮ ಂದೆ—ಎಂದೆನುವುದೆ
ನಮ್ಮೆಷ-ದ ಪರಾ ರ
ಇಡು ಹೆಜ್ಜೆಗೆ ನತನಡುಗಿದೆ
ಹಳೆ ದರ್ಶದ ಭೂಮಿತಟ

ಒಂದೇತನದನ ಭುವನ
ನವ ರಾಜ್ಯದ ನಿರ್ಮಾಣ
ಅದಕೆಂದೇ ಬ ಮಂದೆ!—
ಹೇ ಭಾರತ ಸಂತಾನ!

—ಯಸ್ ವೆಂಕಟರಾಜ.

S. R. P. LTD.

ಲೋರಿ ಸರ್ವಿಸ್

ಮಧುರೆ

ಮಂಗಳೂರಿನಿಂದ— ಸಳೇಶಪುರ— ಹಾಸನ ಮಾರ್ಗವಾಗಿ— ಬೆಂಗಳೂರು, ಮದ್ರಾಸು — ವಿಜಯವಾಡ ಗುಂಟೂರು, ಅನಂತಪುರ— ಕರ್ನೂಲು, ಮಧುರೆ, ಈರೋಡು—ಕೊಚ್ಚಿನ್— ಎರ್ನಾಕುಲಂ, ಕೊಯಮುತ್ತೂರು ವಗೈರೆ ದಕ್ಷಿಣ ಹಿಂದೂಸ್ಥಾನದ 200 ಕ್ಕೂ ಮಿಕ್ಕಿದ ಪ್ರಾಮುಖ್ಯ ಪಟ್ಟಣಗಳಿಗೆ ಸರಕು ಸಾಗಾಟ ಮತ್ತು ತರಿಸುವ ವ್ಯವಸ್ಥೆಯನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಅತ್ಯಂತ ದೊಡ್ಡದಾದ ಸಂಸ್ಥೆಗಳಲ್ಲೊಂದು

ತ್ವರಿತ, ಸುಗಮ ಹಾಗೂ ಭದ್ರ ವ್ಯವಸ್ಥೆ.

ಮೈಸೂರು, ಕೇರಳ, ಆಂಧ್ರ, ಮದ್ರಾಸು ರಾಜ್ಯಗಳಲ್ಲಿ ಸರಕು ಸಾಗಾಟದ ಏರ್ಪಾಡು ಇದೆ.

ಹೆಚ್ಚಿನ ವಿವರಗಳಿಗೆ

T.V.S. ಲೋರಿ ಬುಕ್ಕಿಂಗ್ ಆಫೀಸ್,

(S. R. P. Ltd.)

ಹಂಪನಕಟ್ಟೆ, ಮಂಗಳೂರು—1.

ಶ್ರೀ ಶಿವರಾಮ ಕಾರಂತರ ಪುಸ್ತಕಗಳು

ನಂಬಿದವರ ನಾಕುನರಕ	3=00
ಸಂಚಿಹೊತ್ತು	2=50
ಮಂಗಳಾರತಿ	1=00
ನಮ್ಮ ಪುತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=50
ಮೈಲುಕಲ್ಲಿನೊಡನೆ ಮಾತುಕತೆ	1=50
ಬೆದಾಯರ್‌ದ ಉಕುಳಲ್ಲಿ	7=50

ನವಜೀವನ ಪುಸ್ತಕ ಭಂಡಾರ, ಉಡುಪಿ.

ಸೈಕತ ಗಾನ

(SINGING OF SANDS)

ಸಮುದ್ರ ಕಿನಾರೆಯಲ್ಲಿ ವಿಹರಿಸುವವರು ಅಧಿಕ ಸಂಖ್ಯೆಯಲ್ಲಿದ್ದರೂ ಅಲ್ಲಿ ಕೇಳಬರುವ ಮಳಲ ಕಣಗಳ ಗಾನವನ್ನು ಹೆಚ್ಚಿನವರು ಕಿವಿಗೊಟ್ಟಿರಲಾರರು. ಮಳಲ ಕಣಗಳೂ ಹಾಡುವುವೇ ಎಂದು ಸಂದೇಹಿಸಬೇಡಿ. ಒಮ್ಮೆ ಪ್ರತ್ಯಕ್ಷ ಪರಿಶೀಲನೆ ನಡೆಸಿದಾಗ ನಮಗೆ ಇದೇ ಸಮಾಧಾನ ತಂದುಕೊಳ್ಳಬಹುದು ಸಾಧ್ಯಪಿಲ್ಲ

ಲೇಖಕರು- ಶ್ರೀ ಉ ಲಕ್ಷ್ಮೀನಾರಾಯಣ ಆಚಾರ್ಯ, ಎಂ. ಎ., ಎಲ್. ಟಿ

ಕಡಲ ತೀರದಲ್ಲಿ ಸೈಕತ ರಾಶಿಯಲ್ಲಿ ಹಾಯಾಗಿ ಬಿದ್ದುಕೊಂಡವೇಳೆ, ಒಮ್ಮೆಲೇ ತೀರ ಉಚ್ಚ ಸ್ಥಾಯಿಯಲ್ಲಿನ ಸಿಳ್ಳನ್ನು ಹೋಲುವ ಧ್ವನಿಯೊಂದು ಮೂರು ನಾಲ್ಕು ನಿಮಿಷಗಳ ತನಕ ಅವಿಚ್ಛಿನ್ನವಾಗಿಯೇ ಕೇಳಿಸಿದರೆ ನೀವೇನು ಊಹಿಸುವಿರಿ? ಕಡಲ ಮೊರೆತವು ಇದಲ್ಲ; ಆ ನಾದವು ಎಷ್ಟೆಂದರೂ ಮಂದ್ರ ಸ್ಥಾಯಿಯಿಂದ ಮಾತ್ರವಲ್ಲ ಈ ಸಿಳ್ಳಿಗಿಂತ ಮುಂಚಿತವಾಗಿಯೂ ನಂತರವೂ ಕೇಳುತ್ತಿರುತ್ತದೆ. ಕಣ್ಣಿಗೆ ಕಾಣಿಸದಿರುವ ಚಿಕ್ಕ ಕೀಟವೊಂದು, ಅದೂವಾ ಚಿತ್ರ ಪಕ್ಷಿಯೊಂದು ಹೀಗೆ ಉಲಿದಿರಬಹುದೆ? ಇಲ್ಲವೆ, ಇನ್ಯಾವುದೋ ಅಗೋಚರ ಸತ್ವವು ಈ ಸದ್ದನ್ನುಂಟುಮಾಡಿರಬಹುದೆ- ಎಂದು ನಾವು ಭಯಪಡಬಲೂಬಹುದು. ಇದೂ ಅಲ್ಲವಾದರೆ, ದೂರದ ಸ್ಥಾನವೊಂದು ಗಾಳಿಯಲ್ಲಿ ಅಯ್ಯಲಾಡುತ್ತ ಬಂದು ಮರಳ ರಾಶಿಯಲ್ಲಿ ಪ್ರತಿಸಲನಹೊಂದಿ ಮೂಲ ನಾದದ ಪ್ರತಿಧ್ವನಿ (echo) ಯನ್ನೇ ನಾವು ಕೇಳಿರಬಹುದೆ? ಎಂದೂ ತರ್ಕಿಸಬಹುದು. ಅಂತೂ ಒಂದಲ್ಲ ಒಂದು ವಿಧವಾಗಿ, ಈ ಶಬ್ದದ ಅಸ್ತಿತ್ವದ, ಕಾರಣದ ಕುರಿತಾಗಿ ನಾವು ಜಾಣಿಸಬಹುದು. ಆದರೆ, ಮತ್ತೂ ಏಕಾಂತದಲ್ಲಿನ, ನಿರ್ಜನ ಮತ್ತು ನೀರವ ಮರುಭೂಮಿಯಲ್ಲಿ ಎಲ್ಲೋ ನಡುವೆ ಸಕ್ಕನೆ ಇಂಥ ತಾಲಬದ್ಧ ನಾದವು ಸುಶ್ರಾವ್ಯವಾಗಿ ನಮಗೆ ಕೇಳಿಸಿದರೆ ಆಗ ನಿಜವಾಗಿಯೂ ಭಯ ವಿಸ್ಮಯಗಳು ಏಕಕಾಲದಲ್ಲಿ ನಮ್ಮಲ್ಲಿ ಉಂಟಾಗದಿರುವುದಿಲ್ಲ. ಮೇಲ್ನೋಟಕ್ಕೆ ಇದು ತೀರ ಅಸಂಭವ, ಕಾಲ್ಪನಿಕವೆನಿಸಬಹುದು. ಆದರೂ, ಇದು ತೀರ ಸತ್ಯವಿರುವ ನಿಸರ್ಗದ ಚಮತ್ಕಾರಗಳಲ್ಲೊಂದಾಗಿದೆ ಇದೇನು? ಎಂಬುದನ್ನು ವಿವರಿಸುವುದೇ ಪ್ರಸ್ತುತ ಲೇಖನದ ಉದ್ದೇಶ

ಮರುಭೂಮಿಯಲ್ಲಿ ಮಳಲ ಕಣಗಳು ಹಾಡುವ ಕುರಿತು ಉಲ್ಲೇಖಗಳು ಚೀನೀ ಮತ್ತು ಮಂಗೋಲಿಯಾ ಭಾಷೆಗಳಲ್ಲಿ ಹಿಂದಿನಿಂದಲೂ ಇದೆ ಆದರ ಇವೆಲ್ಲವೂ ಕಟ್ಟು ಕಥೆಗಳೆಂದೂ, ತೀರ ಕಾಲ್ಪನಿಕವೆಂದೂ ಪರಿಗಣಿಸಲ್ಪಡುತ್ತಿದ್ದುವು. ಆದರೆ ಈ ಶತಮಾನದಲ್ಲಿ ದಕ್ಷಿಣ ಅರೇಬಿಯಾದ ಮರುಭೂಮಿಯನ್ನು ಸಂದರ್ಶಿಸಿದ ಅನೇಕರು ಇಂಥ ಚಮತ್ಕಾರವನ್ನು ಕಣ್ಣಾರೆ ಕಂಡ ನಂತರವೇ ಇದೇನಿರಬಹುದು ಎಂಬುದನ್ನು ತರ್ಕಿಸಲು ವಿಜ್ಞಾನಿಗಳು ಆರಂಭಿಸಿದರು.

ಮಳಲ ರಾಶಿಗಳು ಅಲ್ಲಲ್ಲಿ ಮರುಭೂಮಿಯಲ್ಲಿರುವುದು ಸಹಜವಷ್ಟೆ. ವೇಗವಾಗಿ ಬೀಸುವ ಶುಷ್ಕ ಗಾಳಿಗಳು ಬೀಸುತ್ತ ಮಳಲಕ್ಷಿದ್ರ ಕಣಗಳನ್ನು ಎತ್ತಿ ಮತ್ತೂ ಮತ್ತು ಈ ದಿನ್ನೆಗಳ ಮೇಲೆ ಹೇರುವುವು. ಹೆಚ್ಚು ಹೆಚ್ಚು ಹೊಯಿಗೆಯು ಒಂದು ಸೇರಿದಂತೆ ದಿನ್ನೆಯ ಕೆಳಭಾಗವು ಭದ್ರವಾಗುತ್ತದೆ ಮತ್ತು ಮೇಲ್ಭಾಗದಲ್ಲಿ ಅತ್ಯಂತ ಕ್ಷುದ್ರವಾದ ಕಣಗಳು ಬಂದು ತಂಗುತ್ತವೆ. ಆದರೆ ಒಂದೊಮ್ಮೆಗೇ ವೇಗವಾಗಿ, ಸುಳಿಸುಳಿಯಾಗಿ ಬಂದು ಈ ದಿನ್ನೆಗೆ ತಾಕುವ ಗಾಳಿಯು ಮೇಲ್ಪದರದಲ್ಲಿ ಸಂಚಯನ ಹೊಂದಿರುವ ಕಣಗಳನ್ನು ಕೆಳಗೆ ಉದುರಿಸುವುದು. ಈ ಕಣಗಳು ಹದವಾಗಿ, ಮೆದುವಾಗಿ ಕೆಳಗೆ ಉರುಳಲಾರಂಭಿಸಿದೊಡನೆಯೇ ಸಂಗೀತದ ಧ್ವನಿಯು ಕೇಳುವುದು, ಉರುಳುತ್ತಿರುವ ತನಕವೂ ಈನಾದವು ಕೇಳುವುದು, ಅನಂತರ ತನ್ನಂತೆಯೇ ಈ ನಾದವು ನಿಂತು ಬಿಡುವುದು, ಇದು ಆ ಜಾಗದ ಭೂತಗಳ ಚೇಷ್ಟೆ ಅಥವಾ ದೇವತೆಗಳ ಮಾತು ಎಂದೆನ್ನುವ ಭಾವನೆ ಅರಬರಲ್ಲಿಯೂ ಮಧ್ಯ ಆಸ್ಯಾ ಖಂಡದ ಊರಿಂದೂರಿಗೆ ಅಲೆದಾಡುತ್ತಲೇ ಜೀವಿಸುವ ಶುರ್ಕಿ ಮತ್ತು ಮಂಗೋಲ ಜನರಲ್ಲಿಯೂ ಇರುತ್ತದೆ. ಆದರೆ ಅರೇಬಿಯಾದಲ್ಲಿ ಒಳಭಾಗಗಳನ್ನೆಲ್ಲ ಶೋಧಿಸಬೇಕೆಂದು ಹೊರಟ ಜ್ಹೋನ್ ಫಿಲ್ಬೀ (John Philby) ಎಂಬಾತನು ಇಂಥ ನಾದವನ್ನು ಒಂದು ವಿಚಿತ್ರ ಸಂದರ್ಭದಲ್ಲಿ ಕಂಡುಕೊಂಡನು ಮಳಲದಿನ್ನೆಯಿಂದ ಸ್ವಲ್ಪವೇ ದೂರದಲ್ಲಿ ಈತನು ಜೇರೆ ಹಾಕಿ, ಸಾಯಂಕಾಲದ ಇಳಿಹೊತ್ತಿನಲ್ಲಿ ಲದರ ಸೊಬಗನ್ನೂ ಅದರ ಹಿಂದೆಯೇ ಆಕಾಶದಲ್ಲಿ ತೋರುತ್ತಿರುವ ವಿವಿಧ ಬಣ್ಣಗಳ ಲಾಸ್ಯವನ್ನೂ ನೋಡುತ್ತಿದ್ದನು ಇಷ್ಟರಲ್ಲಿ ಆಳು ಮಗನೊಬ್ಬ ಆ ಮಳಲದಿನ್ನೆಯನ್ನೇರುತ್ತಿದನು ಈತನು ಮೇಲ್ಭಾಗವನ್ನು ಸೇರಿದನೋ ಇಲ್ಲವೋ ಅಷ್ಟರಲ್ಲೇ ಸುಶ್ರಾವ್ಯವಾದ ಮತ್ತು ತೀರ ಉಚ್ಚ ಸ್ಥಾಯಿಯ ಸದ್ದು ಕೇಳಿಸಿತು. ಪುನಃ ಆತನು ಕೆಳಗಿಳಿಯುವಾಗ, ಮುಖ್ಯವಾಗಿ ಅಮಳಲ ಕಣಗಳು ಕೆಳಗೆ ಉರುಳುತ್ತಿದ್ದಂತೆ ಈ ಸುಶ್ರಾವ್ಯ ಸ್ವರವು ಕೇಳಿಸಿತು ಫಿಲ್ಬೀ ತಾನೂ ಕೌತುಕದಿಂದ ದಿನ್ನೆಯನ್ನೇರಿದನು. ಆಗಲೂ ಇದೇ ಸ್ವರ ಕೇಳಿಸಿತು. ಪುನಃ ಒಂದು ಬಾಟಲಿಯನ್ನು ಆ ದಿನ್ನೆಯ ಶಿಖರದ್ದೆ ಎಸೆದು ಪರೀಕ್ಷಿಸಲು ಆಗಲೂ ಮಳಲ ಕಣಗಳು ಉರುಳಲಾರಂಭಿಸಿದಂತೆ ಈ ನಾದವು ಕೇಳಿಸಿತು. ಈತನೂ, ಈತನ ಸಂಗಡಿಗ ಅಬ್ರಾಹಮ್ ಎಂಬವರು ಈ ವಿಚಿತ್ರದ ವಿವರಗಳನ್ನೂದಗಿಸಿದೊಡನೆ ದಕ್ಷಿಣ ಅಮೇರಿ

ನಾನಾ ಮುಖದಿಂದ ಬೆಳೆಯುತ್ತಿರುವ ಉಡುಪಿಯ
ಅಂತಸ್ತಿಗೆ ತಕ್ಕಂತೆ ವಸತಿಗೃಹ

ನಿಯೋ ರೋಯಲ್ ಕೆಫೆ



ವ್ಯವಹಾರ ಕೇಂದ್ರಗಳಿಗೂ ದೇವಸ್ಥಾನಕ್ಕೂ ಹತ್ತಿರವಾಗಿ, ಬಸ್ ಸ್ಟೇಂಡಿನಿಂದ ಕೆಲವೇ ಯಾರ್ಡುಗಳ ದೂರದಲ್ಲಿದೆ

- ಉತ್ತಮ ಕಾಫಿ ತಿಂಡಿಗಳು, ಥಂಡಾ ಪಾನೀಯಗಳು.
- ಶುಚಿಯಾಗಿರುವ ಸುಸಜ್ಜಿತ ಕೊಠಡಿಗಳು
- ಅಭ್ಯಾಗತರ ಮನಪೊಪ್ಪುವಂಥ ಊಟದ ವ್ಯವಸ್ಥೆ.

ಮುನ್ಸಿಫ್ ಕೋರ್ಟಿನ ವರಾಂದದಲ್ಲೂ ಒಂದು ಕ್ಯಾಂಟೀನು ನಮ್ಮ ಮೇಲ್ವಿಚಾರಣೆಯಲ್ಲಿಯೇ ಜನಪ್ರಿಯವಾಗಿ ನಡೆಸಲ್ಪಡುತ್ತದೆ.

ಪ್ರೊಪ್ರೈಟರ್.- ಯಂ ಸರಸಿಂಹ ಭಟ್ಟ.

NEO ROYAL CAFE, UDIPI, S.K.

ಉಷಾ
ಹೊಲಿಗೆ ಯಂತ್ರಗಳು



ಗಟ್ಟಿಮುಟ್ಟಾದ ರಚನೆ! ಸರ್ವರ ಅಭಿರುಚಿ ಗೊಪ್ಪುವ ವಿವಿಧ ಮಾದರಿಯ ತಯಾರಿಕೆ.

ಪ್ರತಿಯೊಂದು ಶೋಧನೆಯಲ್ಲೂ ಶ್ರೇಷ್ಠತೆಯನ್ನು ಗಳಿಸಿ ನಮ್ಮ ದೇಶದಲ್ಲಿ ವಿಶೇಷವಾಗಿ ವಿಕ್ರಯವಾಗುತ್ತಿರುವ ಯಂತ್ರ.

ನಮ್ಮ ಶೋ ರೂಮನ್ನು ಸಂದರ್ಶಿಸಿ ಯಂತ್ರಗಳನ್ನು ಪರಿಶೀಲಿಸಿರಿ!

ಇಂಡಿಯನ್ ಒಟೊಮೊಬೈಲ್ಸ್

ಕಾನಾಡ್‌ಕರ್ ಬಿಲ್ಡಿಂಗ್ಸ್, ಉಡುಪಿ, ದ. ಕನ್ನಡ.
ಫೋನ್: 65 ತಂತಿ: ಕಾನಾಡ್

ಕದಿಂದಲೂ ಮಂಗೋಲಿಯಾದಿಂದಲೂ, ಪೂರ್ವ ತುರ್ಕಿಯಿಂದಲೂ ಚೀನಾದಿಂದಲೂ ಇದೇ ಗಾನದ ಕುರಿತಾದ ಇನ್ನೂ ಕೆಲವು ವಿವರಗಳು ಬೆಳಕು ಕಂಡವು. ಮರುಭೂಮಿಗಳಲ್ಲಿ ಮಾತ್ರವಲ್ಲದೆ ಕಡಲತೀರದಲ್ಲಿನ ಸೈಕತ ರಾಶಿಯೂ ಇದೇ ತೆರನಾಗಿ ಸಿಳ್ಳುಹಾಕಬಲ್ಲುದು ಎಂಬುದನ್ನು ಸ್ಕಾಟ್‌ಲೇಂಡಿನ ಪಶ್ಚಿಮ ಜಾಗದ ಜನಜಗತ್ತಿಗೆ ತಿಳಿಸಿದರು. ಇವರಂತೆಯೆ ಶಾಂತ ಸಾಗರದ ತೀರದ ಅಮೇರಿಕನರೂ, ಅಟ್ಲಾಂಟಿಕ ತೀರದಲ್ಲಿ ವಾಸಿಸುವ ಮತ್ತೂ ಹೆಚ್ಚಿನ ಮಂದಿ ಇಂಥ ವಿಚಿತ್ರವು ತಮ್ಮೆಲ್ಲರ ಅನುಭವಕ್ಕೆ ಈ ಹಿಂದೆಯೇ ಬಂದಿರುವುದಾಗಿ ಸಾರಿದರು.

ಕಡಲ ತೀರದ ಸೈಕತ ಗಾನವಾದರೋ ಮರುಭೂಮಿಯ ಸೈಕತ ಗಾನಕ್ಕಿಂತ ಮತ್ತೂ ಹೆಚ್ಚಿನ ಉಚ್ಚಸ್ಥಾಯಿಯಲ್ಲಿ(ತಾರಕದಲ್ಲಿ) ಇರುತ್ತದೆ ಇದು ಚಿಕ್ಕ ಗಾತ್ರದ ಸೀಟಿಯನ್ನೂದುವುದರಿಂದ ಕೇಳುವ ಶಬ್ದದಷ್ಟೇ ತಾರಸ್ಥಾಯಿಯಲ್ಲಿರುತ್ತದೆ. ಸಮುದ್ರತೀರದಲ್ಲೂ ಮಳಲಕಣಗಳು ತಮ್ಮಲ್ಲಿನ ಪಸೆಯನ್ನು ಸೂರ್ತಿ ಕಳೆದುಕೊಂಡು ಮೇಲ್ಬಾಗದಿಂದ ಬಿಡುವಾಗಿ ಕೆಳಕ್ಕೆ ಉದುರಲಾರಂಭಿಸಿದಾಗಲೇ ಇಂಥ ಸ್ವರವು ಕೇಳಿಸುತ್ತದೆ ಎಂಬುದನ್ನು ಪರೀಕ್ಷಾ ಪ್ರಯೋಗಗಳಿಂದ ಕಂಡುಹಿಡುಕಲಾಯಿತು. ಅಂಥ ಬಿಡುಮಳಲ ಕಣಗಳನ್ನು ತೆಗೆದುಬಿಟ್ಟರೆ ಇಂಥ ಶಬ್ದವು ಎಂಥ ಸನ್ನಿವೇಶದಲ್ಲೂ ಇಷ್ಟು ಲಕ್ಷಣವಾಗಿ ಕೇಳಿಸುತ್ತಿರಲಿಲ್ಲ.

ಇಂಥ ಹೊಯಿಗೆಯ ಕಣಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಈ ಉದುರುವ ಕಣಗಳೂ ಮತ್ತು ದಿನ್ನೆಯಲ್ಲಿನ ಮೇಲ್ಬಾಗದ ಕಣಗಳೂ ಬಿಸಿಲು ಮತ್ತು ಗಾಳಿಯ ಫಲವಾಗಿ ಸಂಪೂರ್ಣ ಶುಷ್ಕ (dry) ವಾಗಿಯೂ ಹಾಗೆಯೇ ಸಂಪೂರ್ಣ ಉರುಟಾಗಿಯೂ ಕಂಡುಬರುತ್ತಿದ್ದುವು ಇಂಥ ಉರುಟಾದ ಕಣಗಳು ಒಂದನ್ನೊಂದು ತಿಕ್ಕಿದಾಗ ಇಂಥ ಸ್ವರವುಂಟಾಗುತ್ತದೆ ಎಂಬುದನ್ನು ಎಲ್ಲ ಭೌತಶಾಸ್ತ್ರಜ್ಞರೂ ಒಪ್ಪುತ್ತಿದ್ದಾರೆ ಚೆನ್ನಾಗಿ ಕಾದ ಕಣಗಳು ಸ್ವಾಭಾವಿಕವಾಗಿ ತಮ್ಮೊಳಗೆ ಹುದುಗಿರುವ ಗಾಳಿಯ ಅರೆಗಳನ್ನೂ ಬಿಸಿ ಮಾಡುತ್ತವೆ. ಬಿಸಿಲು ಕಮ್ಮಿಯಾದೊಡನೆ ಒಳ್ಳೆಯ ಹೊಳಪುಳ್ಳ ಈ ಹೊಯಿಗೆಯಾದರೋ ತನ್ನ ಕಾವನ್ನು ಕಳೆದುಕೊಳ್ಳಲಾರದು. ಅದರ ಈ ಕಣಗಳ ನಡುವೆ ಗಾಳಿಯ ಅರೆಗಳಿರುವುವಷ್ಟೆ. ಈ ಗಾಳಿಯು ಮೆಲ್ಲನೆ ಉಷ್ಣವನ್ನು ಪಡೆಯುತ್ತದೆ. ಅದರೆ ಬಹಳಕಾಲ ಇದನ್ನು ಕಳೆದುಕೊಳ್ಳುವುದಿಲ್ಲ. ಮತ್ತು ಈ ಕಾರಣದಿಂದ ಅದು ಹಿಗ್ಗಲು ಆರಂಭಿಸುತ್ತದೆ. ಹಿಗ್ಗುತ್ತಲಿದ್ದಂತೆ ಮಳಲ ಕಣಗಳನ್ನು ಕೆಳಗೆ ತಳ್ಳಲಾರಂಭಿಸುತ್ತದೆ. ಇಷ್ಟರಲ್ಲಿ ವಾತಾಹತಿಯಿಂದಲಾಗಲೀ, ಅಥವಾ ಇನ್ನಿತರ ವಸ್ತು, ಪ್ರಾಣಿ ಅಥವಾ ಮನುಷ್ಯರ ಭಾರದ ಫಲವಾಗಿ ಮೇಲ್ಬಾಗದಲ್ಲಿ ಒತ್ತಡವು ಬಿದ್ದರೆ ಇದರಿಂದ ಕಣಗಳು ಉರುಳಲಾರಂಭಿಸುವುವಲ್ಲದೆ, ಈ ಒತ್ತಡ ಅಥವಾ ಪೀಡನೆಗಳು ಕೇವಲ ತಾತ್ಕಾಲಿಕವಿದ್ದರೂ ಒಳಭಾಗದಲ್ಲಿನ ಗಾಳಿಯು ತನ್ನ ಸ್ಥಿತಿಸ್ಥಾಪಕ ಗುಣದಿಂದಾಗಿ ಹಿಗ್ಗುತ್ತಲೂ ಕುಗ್ಗುತ್ತಲೂ ಮತ್ತೂ ಕೆಲವು ಕಾಲ ಇಂಥ ಕಣಗಳನ್ನು ಕೆಳಕ್ಕೆ ಉರುಳಿಸುತ್ತಿರುತ್ತದೆ. ಇನ್ನು ಇಂಥ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗಳೇ ಸುತ್ತಲಿನ ಗಾಳಿಯಲ್ಲಿ ಶಬ್ದದ ಅಲೆಗಳನ್ನುಂಟು ಮಾಡಲು ಶಕ್ತವಾಗಿವೆ ಶಂಖಗಳಲ್ಲಿಯೂ ಚಿಪ್ಪುಗಳಲ್ಲೂ ಅಥವಾ ಸೀಟಿಗಳಲ್ಲೂ ಶಬ್ದವನ್ನುಂಟು ಮಾಡುವ ಕ್ರಮವನ್ನು ನೀವರಿತಿರುವಿರಷ್ಟೆ ಗಾಳಿಯ ಕಾಂಡ (column)ವೊಂದು ತನ್ನಂತೆಯೇ ಸ್ಪಂದಿಸಿದರೆ ಅಥವಾ ಹೊರ ಕಾರಣಗಳಿಂದ ಅನುರಣನೆಗೊಂಡು ಸ್ಪಂದಿಸಲಾರಂಭಿಸಿದರೆ, ಮತ್ತು ಸ್ಪಂದನಗಳ ಆವೃತ್ತಿ ಸಂಖ್ಯೆಯು ಕ್ಷಣ 1ರ 30ನ್ನು ಮೀಕ್ಕರೆ ಶಬ್ದವು ಸುತ್ತಲಿನ ಗಾಳಿಯಲ್ಲಿ ಹರಡುವುದು. ಮಳಲ ಒಳಭಾಗದ ಅನಿಲುಗಳ ಅರೆಗಳ ಕಾಂಡಗಳು ಅತ್ಯಂತ ಚಿಕ್ಕವಿರುವ ಕಾರಣ ಉಂಟಾಗುವ ಶಬ್ದವು ತಾರಕ ಸ್ಥಾಯಿಯಲ್ಲೇ ಇರುವುದು ಸಹಜ ಇನ್ನು ಮಳಲ ಕಣಗಳ ತಿಕ್ಕಾಟದಿಂದ ಉತ್ಪನ್ನವಾಗುವ ಧ್ವನಿಯು ಈ ಅರೆಗಳ ಸಹಜ ಸ್ಪಂದನದಷ್ಟೇ ಆವೃತ್ತಿ ಸಂಖ್ಯೆಯುಳ್ಳದಾದರೆ—ಆಗ ಅನುರಣನೆ (resonance) ಯ ಕಾರಣದಿಂದ ದೊಡ್ಡ ಘೋಷವೇ ಕೇಳಬಹುದು. ಇನ್ನು ವಿಂಚುಗಳ ಕಾರಣದಿಂದ ಗಾಳಿಯಲ್ಲಿಲ್ಲಾ ವಿದ್ಯುತ್ತು ತುಂಬುತ್ತದೆ. ವಿದ್ಯುತ್ತನ್ನು ಪಡೆದ ಕಣಗಳು ಒಂದನ್ನೊಂದು ತಳ್ಳುತ್ತಿರುವಾಗ ಇಂಥ ಮಳಲ ಕಣಗಳ ಉರುಳುವಿಕೆಯೂ, ಅಥವಾ ಸೂಕ್ಷ್ಮ ಅರೆಗಳೊಳಗಿನ ಗಾಳಿಯ ಸ್ಪಂದನಗಳೂ ಉಂಟಾಗಬಹುದು. ಇದರಿಂದ ಲಂಕಾ ಇದೇ ಕೂಗು. ನಾದ ಕೇಳಿಸುವುದು. ಕಾರ್ಯ ಕಾರಣ ಬದ್ಧವಾದ ತರ್ಕ ಸಿಂಧುವಾದ ವಿವರಗಳನ್ನೊದಗಿಸಲು ಇಷ್ಟರ ತನಕ ವಿಜ್ಞಾನಿಗಳಿಗೆ ಸಾಧ್ಯವಾಗಿಲ್ಲ. ಏನಿದ್ದರೂ, ಮರುಭೂಮಿಗಳಲ್ಲಿನ ಏಕಾಂತದ ಬೇಸರವನ್ನು ಕಳೆಯಲು ಪ್ರಕೃತಿಯೊದಗಿಸಿದ ಈ ಗಾನವು ಅತ್ಯಂತ ಸಹಾಯಕವಾಗುತ್ತಲಿದೆ.

—— —

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಮೋಟಾರು ವಾಹನಗಳ ಆವಶ್ಯಕ ವಿಮೆ

ಕಾಂಪ್ರಹೆನ್ಸಿವ್ ಪಾಲಿಸಿಗಳಿಗೆ ಅತಿ ಸುಲಭವಾದ ದರಗಳನ್ನೂ, ಮತ್ತಿತರ ವಿಧವಿಧವಾದ ಆಕರ್ಷಕ ಷರತ್ತುಗಳನ್ನೂ, ಎಲ್ಲಾ ತರಹ ಮೋಟಾರು ವಾಹನಗಳಿಗೆ ನಾವು ಕೊಡುತ್ತೇವೆ.

ವಿವರಗಳಿಗೆ

ಕಾರ್ಯದರ್ಶಿ:—

ಮೈಸೂರು ಸರ್ಕಾರದ ವಿಮಾ ಶಾಖೆ

ಬೆಂಗಳೂರು

ಅಥವಾ

ಹತ್ತಿರ ಇರುವ ನಮ್ಮ ವಿಮಾ ಏಜಂಟರಿಗೆ ಬರೆಯಿರಿ

ಭಾರತದ 12 ನೇ ಸ್ವಾತಂತ್ರ್ಯೋತ್ಸವದ ಸಲುವಾಗಿ ನಮ್ಮ ಎಲ್ಲಾ ಗ್ರಾಹಕರಿಗೂ ಹಿತಚಿಂತಕರಿಗೂ

ಶುಭಾಶಯಗಳು.

ದಶಮೂಲಿಕೆಯಿಂದ ತಯಾರಿಸುವ ದಶಾಂಗ ಧೂಪವು ಮನೆ, ಮಂದಿರ, ಹೋಟೆಲ್ ಇತ್ಯಾದಿಗಳಿಗೂ ದಿನನಿತ್ಯ ಬೇಕಾದುದರಿಂದ ನಮ್ಮ ಉತ್ಕೃಷ್ಟ ತರದ

ಜೈ ಹಿಂದ್ ದಶಾಂಗ ಧೂಪಕ್ಕೆ

ಗ್ರಾಹಕರು ದಿನಂಪ್ರತಿ ಹೆಚ್ಚುತ್ತಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಮೈಸೂರು ಮತ್ತು ಮುಂಬಾಯಿ ರಾಜ್ಯದ ಎಲ್ಲಾ ತಡೆಗಳಲ್ಲಿ ಸ್ಟಾಕಿಸ್ಟರರು ಬೇಕಾಗಿದ್ದಾರೆ

ಜೈ ಹಿಂದ್ ಪರ್‌ಫ್ಯೂಮರಿ ವರ್ಕ್ಸ್,

ವಿಜಯಲಕ್ಷ್ಮಿ ಗಾರ್ಡನ್, ಮಂಗಳೂರು.

ಪ್ರೊಪ್ರೈಟರ್: ಯಂ. ಸೋಮಸುಂದರ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ, ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ, ಬೆಳಕುಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ. ರೂ ೧—೮—೦ (1 = 50)

ರೂ. 1 = 75 ಸುಬ್ಬಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕನ್ನಡ ಚಿತ್ರೋದ್ಯಮದ ಪ್ರಗತಿ ಅಸಾಧ್ಯವೇ?

ಇತರ ಭಾರತೀಯ ಭಾಷಾ ಚಲಚ್ಚಿತ್ರಗಳನ್ನು ನೋಡುವಾಗ, ಕನ್ನಡದಲ್ಲಿ ಈ ಉದ್ಯಮವು ಸಾಕಷ್ಟು ಪ್ರಗತಿ ಹೊಂದಿಲ್ಲವೆಂದು ಯಾರೂ ಸುದಿಯಬಹುದು. ನಮ್ಮ ನಿರ್ಮಾಪಕರು ಪ್ರಗತಿಪರವಾದ ಅತ್ಯುತ್ತಮ ಚಿತ್ರಗಳನ್ನು ತೆಗೆಯಲು ಅಶಕ್ತಿಯುಳ್ಳವರಾದರೆ, ಈ ಉದ್ಯಮ ಲಾಭದಾಯಕವಾಗಬೇಕಾದರೆ, ಕೆಲವು ಸೂಚನೆಗಳು ಇಲ್ಲಿವೆ. ಅವಶ್ಯ ಗಮನಿಸಬಹುದು.

ಸೂಚಿಸಿದವರು: ಶ್ರೀ ಸಂಜೀವಲಕ್ಷ್ಮೀಶ್ವರ, ಬಿ.ಎ.

ಇಂದು ಕನ್ನಡ ಚಿತ್ರೋದ್ಯಮದ ಬಗ್ಗೆ ಅನೇಕಾನೇಕ ಊಹಾಪೋಹಗಳು ಕೇಳಬರುತ್ತಿವೆ. ಇತರ ಭಾಷೆಗಳ ಚಿತ್ರಗಳೊಡನೆ ಕನ್ನಡ ಚಿತ್ರಗಳನ್ನು ಹೋಲಿಸಿ ನೋಡಿದರೆ ನಮ್ಮ ಚಿತ್ರೋದ್ಯಮದ ಪ್ರಗತಿ ಹೆಚ್ಚಾಗಿಲ್ಲವೆಂಬುದು ಕಂಡುಬರುವದು. ನಮ್ಮ ಚಿತ್ರೋದ್ಯಮದಲ್ಲಿದ್ದ ಅನೇಕಾನೇಕ ಕುಂದುಕೊರತೆಗಳನ್ನು ನಾವು ನಿಸ್ಪೃಹವಾಗಿ ಒಪ್ಪಿ ಅವುಗಳನ್ನು ದೂರ ಮಾಡಲು ಪ್ರಯತ್ನಿಸದ ಹೊರತು ಹೆಚ್ಚಿನ ಪ್ರಗತಿ ಸಾಧ್ಯವಾಗಲಾರದು. ನಮ್ಮ ಚಿತ್ರೋದ್ಯಮವು ಇತರ ಭಾಷೆಗಳ ಚಿತ್ರೋದ್ಯಮಗಳಂತೆ ಪ್ರಗತಿಹೊಂದಲು ಅವಶ್ಯವಾದ ವಿಷಯಗಳನ್ನು ಕೂಲಂಕಷವಾಗಿ ವಿಚಾರಿಸಿ ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಇಂದಿನ ಕನ್ನಡ ಚಿತ್ರೋದ್ಯಮವು ನಮ್ಮ ನಾಡಿನ ಒಂದೇ ಭಾಗದಲ್ಲಿ ಒಂದೇ ತರಹದ ಕೆಲವೇ ಕಲಾವಿದರಿಂದ ಅವಲಂಬಿತವಾಗಿದೆ. ಹೀಗೆಂದಾಕ್ಷಣ ಸದ್ಯಕ್ಕೆ ಈ ಉದ್ಯಮದಲ್ಲಿದ್ದವರು ಅಪಾತ್ರರೆಂದಾಗುವದಿಲ್ಲ. ಇದರ ಅರ್ಥ ನಾಡಿನ ಇತರ ಭಾಗದಲ್ಲಿದ್ದ ಅನೇಕ ಕಲಾವಿದರ ನಿರ್ಲಕ್ಷವಾಗಿದೆ ಎಂದು ಮಾತ್ರ. ಕರ್ನಾಟಕದ ಇತರ ಭಾಗದಲ್ಲಿಯ ಅನೇಕ ಶ್ರೇಷ್ಠಮಟ್ಟದ ಕಲಾವಿದರಿಗೆ ಇಂದಿನ ಕನ್ನಡ ಚಿತ್ರಗಳಲ್ಲಿ ನ್ಯಾಯವಾದ ಸ್ಥಾನ ದೊರೆತಿಲ್ಲವೆಂದು ಹೇಳಬಹುದು ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ, ಉತ್ತರ ಹಾಗು ದಕ್ಷಿಣಕನ್ನಡಾ ಮುಂತಾದ ಭಾಗಗಳಲ್ಲಿದ್ದ ಕಲಾವಿದರಲ್ಲಿ ಎಷ್ಟು ಜನರಿಗೆ ಇಂದಿನ ಕನ್ನಡ ಚಿತ್ರಗಳಲ್ಲಿ ಅವಕಾಶವಿದೆ? ನಮ್ಮಲ್ಲಿ ಕಲಾವಿದರಿಗೆ ಕೊರತೆ ಇಲ್ಲ ಆದರೆ ಅಂಥ ಜನರನ್ನು ಹುಡುಕಿ ಅವರಲ್ಲಿದ್ದ ಕಲೆಗೆ ಪ್ರೋತ್ಸಾಹನ ಕೊಡುವಂಥ ಚಿತ್ರಸಂಸ್ಥೆಗಳಲ್ಲ. ಇಂದು ಈ ಉದ್ಯಮದಲ್ಲಿದ್ದವರು ಇತ್ತಕಡೆಗೆ ಲಕ್ಷ ಕೊಟ್ಟಿಲ್ಲವೆಂದು ಹೇಳಬಹುದು. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಉತ್ತರ ಕರ್ನಾಟಕದ ಶ್ರೇಷ್ಠ ಸಂಗೀತಗಾರರಾದ ಶ್ರೀ ಭೀಮಸೇನ ಜೋಶಿಯವರು ಅಖಿಲಭಾರತ ಖ್ಯಾತಿವೆತ್ತ ಕಲಾವಿದರು. ಇಂಥವರನ್ನು ಕನ್ನಡ ಚಿತ್ರಗಳಲ್ಲಿ ಹಿನ್ನೆಲೆ ಗಾಯಕರೆಂದು ತೆಗೆದುಕೊಳ್ಳಲು ಯಾವ ಕನ್ನಡ ಚಿತ್ರನಿರ್ಮಾಪಕನೂ ಮನಸ್ಸುಮಾಡಲಿಲ್ಲ. ಅದೇ ಭೀಮಸೇನ ಜೋಶಿಯವರು ಅನೇಕ ಮರಾಠಿ ಹಾಗು ಹಿಂದಿ ಚಿತ್ರಗಳಲ್ಲಿ ಕೆಲಸ ಮಾಡಿ ಒಳ್ಳೇ ಹಿನ್ನೆಲೆ ಗಾಯಕರೆಂದು ಕೀರ್ತಿಗಳಿಸಿದರು. ಹೀಗೆ ನಮ್ಮಿಂದಲೆ, ನಿರ್ಲಕ್ಷಿಸಲ್ಪಟ್ಟ ಕಲಾವಿದರು ಪರ ಭಾಷೆ ಪರ ಪ್ರಾಂತಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿ ಕೀರ್ತಿ ಶಾಲಿಗಳಾಗುತ್ತಿರುವರು. ಇದುನಮಗೆ ಶೋಭಿಸತಕ್ಕ ವಿಷಯವಲ್ಲ.

ಅದರಂತೆಯೇ ನಾಟಕದ ಖ್ಯಾತಿವೆತ್ತ ಕಾದಂಬರಿಕಾರರಾದ ತ.ರಾ.ಸು ಅವರ "ಹಂಸ ಗೀತೆ" ಕಾದಂಬರಿಯ ಕತೆಯು ಹಿಂದಿ ಚಿತ್ರ ನಿರ್ಮಾಪಕರ ಲಕ್ಷವನ್ನು ಆಕರ್ಷಿಸಿ "ಬಸಂತಬಹಾರ" ಎಂಬ ಹಿಂದಿ ಚಿತ್ರ ಸೃಷ್ಟಿಗೆ ಕಾರಣೀಭೂತವಾಯಿತಲ್ಲದೇ ಒಳ್ಳೇ ಚಿತ್ರವೆಂದು ಗಣಿಸಲ್ಪಟ್ಟಿತು. ಆದರೆ ಕನ್ನಡ ಚಿತ್ರ ನಿರ್ಮಾಪಕರಿಗೆ "ಹಂಸ ಗೀತೆ"ಯ ಮಹತ್ವವೇ ತಿಳಿಯಲಿಲ್ಲವೇನೋ. ಹೀಗೆ "ಹಿತ್ತಲಗಿಡ ಮದ್ದಲ್ಲ" ಎಂಬ ನಮ್ಮ ಧೋರಣೆ ಬದಲಾಗಲೇ ಬೇಕು.

ಕನ್ನಡ ಚಿತ್ರೋದ್ಯಮದ ಇನ್ನೊಂದು ದೊಡ್ಡ ನ್ಯೂನತೆ ಎಂದರೆ ಸಾಮಾಜಿಕ ಚಿತ್ರಗಳ ಕೊರತೆ ನಮ್ಮ ನಿರ್ಮಾಪಕರು ತೆಲಗು, ತಮಿಳು ಚಿತ್ರಗಳಿಂದ ಸ್ಫೂರ್ತಿ ಪಡೆದು ಮತ್ತೆ ಮತ್ತೆ ಪೌರಾಣಿಕ ಚಿತ್ರಗಳನ್ನು ತೆಗೆದು ಕೈಸುಟ್ಟುಗೊಳ್ಳುವರು. ಒಳ್ಳೇ ಸಾಮಾಜಿಕ ಹಾಗು ಹಾಸ್ಯ ಚಿತ್ರಗಳು ನಮ್ಮಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು ಈ ದೃಷ್ಟಿಯಿಂದ ನೋಡಲಾಗಿ ಮರಾಠಿ ಚಿತ್ರೋದ್ಯಮವು ಒಳ್ಳೇ ಪ್ರಗತಿ ಹೊಂದಿದೆ ಎಂದು ಹೇಳಬಹುದು. ಬಹುಶರವಾಗಿ ಮರಾಠಿಯ ಎಲ್ಲ ಚಿತ್ರಪಟಗಳು ಸಾಮಾಜಿಕವಾಗಿದ್ದು ಹಾಸ್ಯಮಯವಾಗಿರುವವು. ಮಧ್ಯಮ ವರ್ಗದ ಜನರ ದೈನಂದಿನ ಜೀವನದ ವಾಸ್ತವಿಕ ಚಿತ್ರವಿರುತ್ತದೆ. ಆದುದರಿಂದ ಅವು ಜನಪ್ರಿಯವಾಗಿ ನಿರ್ಮಾಪಕರಿಗೆ ಹಣ ಹಾಗು ಕೀರ್ತಿ ತಂದು ಕೊಡುತ್ತವೆ. ಇಷ್ಟೇ ಅಲ್ಲ ಕೆಲ ಮರಾಠಿ ಚಿತ್ರಗಳು ಹಿಂದಿ ಚಿತ್ರಗಳನ್ನು ಕೂಡ ಮಿಕ್ಕಿಸಿವೆ ಪಹಿಲೀ ಚ್ಯಾಬಾಂಗಡ್ಯಾ, ಗ.ಗೇತ ಘೋಡ ನ್ಯಾಲ, ಅಂಧಳಾ ಮಾಗತೋ ಎಕಡೋಳಾ, ಶೇವಗ್ಯಾಚಿ ಶೇಂಗಾ ಮುಂತಾದ ಇತ್ತೀಚಿನ ಕೆಲ ಮರಾಠಿ ಚಿತ್ರಗಳು ಶ್ರೇಷ್ಠ ಮಟ್ಟದ್ದೆನಿಸಿ ಅತ್ಯಂತ ಜನಪ್ರಿಯವಾಗಿರುವವು. ಇದಲ್ಲದೇ ಹೋದ ವರುಷ ಒಳ್ಳೇ ಭಾರತೀಯ ಚಿತ್ರವೆಂದು "ಶಾಮಚಿ ಆಯಿ" ಎಂಬ ಮರಾಠಿ ಚಿತ್ರಪಟಕ್ಕೆ ಬಹುಮಾನ ದೊರೆಯಿತು. ಅದರಂತೆ "ಮಹಾತ್ಮಾ ಫುಲೆ" ಎಂಬ ಚಿತ್ರಕ್ಕೆ ಅರವತ್ತರ ಒಳ್ಳೇ ಮರಾಠಿ ಚಿತ್ರವೆಂದು ಪ್ರಥಮ ಬಹುಮಾನ ದೊರೆಯಿತು. ನಮ್ಮ ನೆರೆ ಪ್ರಾಂತದವರು ಈ ಮುನ್ನಡೆಯನ್ನು ಆದರ್ಶವಾಗಿಟ್ಟುಕೊಂಡು ನಮ್ಮಲ್ಲಿ ಕೂಡ ಹೊಸ ಹೊಸ ಸಾಮಾಜಿಕ ಚಿತ್ರಗಳನ್ನು ತೆಗೆಯಬೇಕು.

ಇನ್ನು ಚಿತ್ರ ನಿರ್ಮಾಪಕರ ದೃಷ್ಟಿಯಿಂದ ವಿಚಾರಿಸೋಣ ಅವರ ಅಭಿಪ್ರಾಯದಂತೆ ಕನ್ನಡ ಚಿತ್ರಗಳಿಗೆ ಜನತೆಯಿಂದ ಪ್ರೋತ್ಸಾಹನೆ ದೊರೆಯುವದಿಲ್ಲ ಹಾಗು ಕನ್ನಡ ಚಿತ್ರಗಳಿಗೆ ವಿಸ್ತಾರವಾದ Market ಇಲ್ಲ ಎಂದು. ಮೇಲ್ನೋಟಕ್ಕೆ ಇದು ಸರಿಯಾಗಿ ಕಂಡರೂ ಇದರಲ್ಲಿ ತಥ್ಯವಿಲ್ಲ. ಒಳ್ಳೇ ಚಿತ್ರಗಳಿಗೆ ಕನ್ನಡ ಜನತೆಯಿಂದ ಎಂದಿನಿಂದಲೂ ಪ್ರೋತ್ಸಾಹನೆ ಇದ್ದೇ ಇದೆ. ಕನ್ನಡ ಜನತೆಯ ಸಂಸ್ಕೃತಿ, ಆಚಾರ, ವಿಚಾರಗಳಿಗೊಪ್ಪುವ ಚಿತ್ರಗಳನ್ನು ತೆಗೆಯುವೇ, ತಾವು ತೆಗೆದ ಯಾವದೇ ಕೀಳು ತರಗತಿಯ ಚಿತ್ರಕ್ಕೆ ತಮ್ಮ ಎಣಿಕೆಯಂತೆ ಹಣ ಬರದಿದ್ದರೆ, ನಿರ್ಮಾಪಕರು ತಮ್ಮ ನ್ಯೂನತೆಗಳನ್ನು ಮರೆತು, ಪ್ರೋತ್ಸಾಹನೆ ಕೊಡುವದಿಲ್ಲವೆಂದು ಜನತೆಯನ್ನು ಶಪಿಸುವದು ಸಮಂಜಸವಾಗಲಾರದು. ಹೋದ ವರುಷ ನಿರ್ಮಾಪಕ ಕೆಂಪರಾಜರ "ನಳದಮಯಂತಿ" ಚಿತ್ರವು ಅಷ್ಟು ಯಶಸ್ವಿಯಾಗಲಿಲ್ಲ. ಅವರು ಎಣಿಸಿದಷ್ಟು ಹಣ ತಂದು ಕೊಡಲಿಲ್ಲವೆಂದು ಕೋಪಿಸಿ ಇನ್ನುಮುಂದೆ ತಾವು ಕನ್ನಡ ಚಿತ್ರಗಳನ್ನೇ ತೆಗೆಯುವದಿಲ್ಲವೆಂದು ಸಾರಿದರು. ಕುಣಿಯಲು ಬಾರದ ವೇಶ್ಯೆ ನೆಲವು ಡೊಂಕೆಂದು ಹೇಳುವಂತೆ ಇದೆ ಕೆಂಪರಾಜರ ಹೇಳಿಕೆ. ನಮ್ಮ ಜನತೆಯ ಆಸೆ ಆಕಾಂಕ್ಷೆಗಳಿಗೊಪ್ಪುವಂಥ ಕನ್ನಡ ಚಿತ್ರಗಳನ್ನು ತೆಗೆದರೆ ಜನತೆ ಏಕೆ ಪ್ರೋತ್ಸಾಹನೆ ಕೊಡಲಾರದು? R. N. ರಾವ್ ಅವರ "ಪ್ರೇಮದ ಪುತ್ರಿ"ಗೆ ಜನತೆಯ ಪ್ರೋತ್ಸಾಹನೆ ದೊರೆಯಿತಲ್ಲದೇ ಅಖಿಲಭಾರತ ಮನ್ನಣೆಯು ದೊರೆಯಿತು. ಪ್ರೇಮದ ಪುತ್ರಿ, ಕನ್ಯಾದಾನ, ನ್ಯೂಲ ಪಾಸ್ಟರ ಮುಂತಾದ ಅನೇಕ ಚಿತ್ರಗಳಿಗೆ ಕನ್ನಡಿಗರಿಂದ ಪ್ರೋತ್ಸಾಹನೆ ದೊರೆಯಲಿಲ್ಲವೇ? ಇದ ಕ್ಕೂ ಹೆಚ್ಚಿನ ಪ್ರೋತ್ಸಾಹನೆ ಎಂಥದು ಬೇಕು?

ನಮ್ಮಲ್ಲಿಯೂ ಒಳ್ಳೇ ಕಥಾ ಲೇಖಕರು, ಕಾದಂಬರಿಕಾರರು, ಕವಿಗಳು, ನಾಟಕಕಾರರು ಇರುವರು. ಅವರಿಂದ ಹೊಸ ನಮೂನೆಯ ಕಥೆ, ಸಂಭಾಷಣೆ, ಗೀತೆಗಳನ್ನು ಬರೆಯಿಸಿ ಕನ್ನಡ ಚಿತ್ರೋದ್ಯಮದಲ್ಲಿ ಶ್ರೇಷ್ಠಮಟ್ಟದ ಚಿತ್ರಗಳನ್ನು ತೆಗೆಯುವದು ಶಕ್ಯವಿದೆ. ಜಾನಪದ ಕತೆ, ಗೀತೆಗಳು ಚಿತ್ರಗಳ ವೈವಿಧ್ಯಕ್ಕೆ ಮೆರಗನ್ನು ಕೊಡುವವು. ನಮ್ಮ ಹಳ್ಳಿಗರಲ್ಲಿ ರೂಢಿವಾದ ಜನಪದ ಗೀತಿಗಳು, ಲಾವಣಿಗಳನ್ನು ಒಳಗೊಂಡ ಚಿತ್ರಗಳು ವೈವಿಧ್ಯತೆಯೊಂದಿಗೆ ಜನತೆಯ ವಾಸ್ತವಿಕ ಜೀವನವನ್ನು ನಿರೂಪಿಸಲು ಸಹಾಯಕಾರಿಯಾಗುವವು. ಕನ್ನಡ ಚಿತ್ರನಿರ್ಮಾಪಕರು ಈ ದಿಶೆಯಲ್ಲಿ ಪ್ರಯತ್ನಿಸುವದು ಅವಶ್ಯವಾಗಿದೆ. ಕೇವಲ ನಾಗರಿಕ ಜೀವನವನ್ನು ಚಿತ್ರಿಸುವದೇ ಧ್ಯೇಯವಾಗದೇ ಹಳ್ಳಿಗರ ಜೀವನದ ವಾಸ್ತವಿಕ ಕಥೆಗಳನ್ನು ಚಿತ್ರಿಸುವದು ಅವಶ್ಯವಾಗಿದೆ.

ಕನ್ನಡ ಚಿತ್ರಗಳಲ್ಲಿ ತಾಂತ್ರಿಕ ದೃಷ್ಟಿಯಿಂದ ಕೂಡ ಕೆಲ ಸುಧಾರಣೆಗಳು ಅವಶ್ಯಕರವಾಗಿವೆ. ಛಾಯಾಗ್ರಹಣ (Photography) ಸಂಕಲನ (Editing), ಧ್ವನಿ ಮುದ್ರಣ, (Sound Recording) ಇವುಗಳ ಮಟ್ಟವು ಇನ್ನಷ್ಟು ಹೆಚ್ಚಾಗಬೇಕು. ಎಷ್ಟೋ ಕನ್ನಡ ಚಿತ್ರಗಳು ಅಸ್ಪಷ್ಟ ಧ್ವನಿ ಮುದ್ರಣ, ಯೋಗ್ಯ ಸಂಕಲನದ ಅಭಾವದಿಂದ ಅಷ್ಟು ಪರಿಣಾಮಕಾರಿಗಳಾಗುವದಿಲ್ಲ.

ಕರ್ನಾಟಕದಲ್ಲಿ ಕೂಡ ಅನೇಕ ಚಿತ್ರ ಹಂಚಿಕೆದಾರರಿದ್ದಾರೆ (Film Distributors) ಅವರಲ್ಲಿ ಕೆಲವರಂತೂ ಒಳ್ಳೇ ಪ್ರಸಿದ್ಧರಿರುವರು. ಇಂಥ ಪ್ರಭಾವೀ ಹಂಚಿಕೆದಾರರ ಸಹಾಯದಿಂದ ಕನ್ನಡ ಚಿತ್ರ ನಿರ್ಮಾಪಕರು ನೂತನ ಚಿತ್ರಗಳನ್ನು ತೆಗೆಯಲು ಯತ್ನಿಸುವದು ಶಕ್ಯವಿದೆ. ಕೆಲ ಕನ್ನಡ ಚಿತ್ರ ನಿರ್ಮಾಪಕರು ನುರಿತವರುದ್ದು ವಿಶೇಷ ಪರಿಶ್ರಮವೆಗೆದು ಕೊಂಡಲ್ಲಿ ಕನ್ನಡ ಚಿತ್ರೋದ್ಯಮದಲ್ಲಿ ಕ್ರಾಂತಿಯನ್ನೇ ಮಾಡಬಹುದು. ಹೀಗೆ ಈ ದಿಶೆಯಲ್ಲಿ ಪ್ರಯತ್ನ ಮಾಡಿದಲ್ಲಿ ಕನ್ನಡ ಚಿತ್ರೋದ್ಯಮಕ್ಕೆ ಉಜ್ವಲ ಭವಿತವ್ಯವಿದೆ ಎಂದು ಹೇಳಬಹುದು.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ESTD: 1919 VISIT PHONE NO. 374

K.R.K. SHET DIAMOND MART

JEWELLERS & DIAMOND MERCHANTS

HAMPANKATTA, MANGALORE, S. K.

Prop: K. R. K. SHET. TEL. AD. BLUEYAGAR

ಕನ್ನಡ ಸಂಸ್ಕೃತಿಯ ತವರ್ಮನೆ—ಶ್ರೀರಂಗ ಪಟ್ಟಣ

(೧೩ನೇ ಪುಟದಿಂದ)

ಕಲ್ಲು ಬಂಡೆಗಳು ತುಂಬಿವೆ. ಅವುಗಳಲ್ಲೂ ಕೆಲವು ಶಿಲೆಯ ಕಂಬಗಳೂ ಕಾಣುತ್ತವೆ ನದಿಗೆ ಎರಡು ಸೇತುವೆಗಳನ್ನು ಕಟ್ಟಿದ್ದಾರೆ ಹಿಂದಿನ ಈಸ್ಟ್ ಇಂಡಿಯಾ ಕಂಪೆನಿಯ ಗವರ್ನರ್ ಜನರಲ್ ವೆಲ್ಲಸ್ಲಿಯ ನೆನಪಿಗಾಗಿಯೋ ಎಂಬಂತೆ, ಕಟ್ಟಿಸಿರುವ "ವೆಲ್ಲಸ್ಲೀ ಬ್ರಿಜ್" ಅವುಗಳಲ್ಲೊಂದು

ಅ ಮೇಲೆ ನೋಡತಕ್ಕದ್ದೆಂದರೆ, ಮಹಮ್ಮದೀಯರ ಪ್ರಾರ್ಥನಾ ಮಂದಿರವಾದ ಜುಮ್ಮಾ ಮಸೀದಿ ಇಲ್ಲಿಯೂ ಮಹಮ್ಮದೀಯ ಶಿಲ್ಪಕಲೆ ರೂಪುಪಡೆದು ನಿಂತಿದೆ. ಇಲ್ಲಿನ ಎರಡು ಎತ್ತರದ ಗೋಪುರಗಳಲ್ಲಿ ನಿಂತು ನೋಡಿದರೆ, ಇಡೀ ಶ್ರೀರಂಗಪಟ್ಟನೇ ಕಾಣಿಸುವುದು ಈ ಪ್ರಾರ್ಥನಾ ಮಂದಿರದ ರಚನೆ ನೋಡಿದರೆ ಮನಸ್ಸು ಮುಗ್ಧಗೊಳ್ಳುತ್ತವೆ ಶ್ರೀರಂಗ ಪಟ್ಟಣದ ಗತ ವೈಭವಕ್ಕೆ ಸಾಕ್ಷಿಯಾಗಿ ಈ ಪ್ರಾರ್ಥನಾ ಮಂದಿರಪೊಂದೇ ಸಾಕು

ಕತ್ತಲಾಗುವ ವೇಳೆಗೆ ಸರಿಯಾಗಿ ರಣರಂಗದಲ್ಲಿ ಟಿಪ್ಪು ಮಡಿದು ಬಿದ್ದ ಸ್ಥಳಕ್ಕೆ ಬಂದೆವು. ನಾಲ್ವತ್ತೇ ವೈಸೂರು ಯುದ್ಧ ಶ್ರೀರಂಗ ಪಟ್ಟದ ಅವನತಿಗೆ ಕಾರಣವಾಯಿತು ಈ ಯುದ್ಧಕ್ಕೆ ದೇಶದ್ರೋಹಿಗಳಾದ ತಿರುಮಲ, ಮೀರ್ ಸಾದಕರು ಕಾರಣರಾದರು ಇವರು ಆಂಗ್ಲರಿಗೆ ಕೋಟೆಯ ಗುಪ್ತ ದಾರಿಯನ್ನು ತೋರಿಸಿಕೊಟ್ಟು, ಕನ್ನಡದ ಕೀರ್ತಿ ಶಿಖರವಾದ ಶ್ರೀರಂಗ ಪಟ್ಟವನ್ನು ಕೆಡಹುವಂತೆ ಮಾಡಿದರು ಟಿಪ್ಪು ಹಾಗೂ ಆಂಗ್ಲರೊಳಗೆ ನೆಲೆಯೂರಿದ್ದ ಬದ್ಧ ದ್ವೇಷವು ನಾಲ್ವತ್ತೇ ವೈಸೂರು ಯುದ್ಧ ರೂಪದಲ್ಲಿ ಪರ್ಯವಸಾನಗೊಂಡಿತು. ವೀರ ಟಿಪ್ಪುವನ್ನು ವಂಚನೆಯಿಂದ ಕೊಲ್ಲಲಾಯಿತು ಅವನ ಅರಮನೆಯನ್ನು ಸೂರೆಗೊಳ್ಳಲಾಯಿತು ಈಗ ಅದು ನೆಲಸಮವಾಗಿದೆ. ತಾಯ್ನಾಡ ಬಿಡುಗಡೆಗಾಗಿ ಹೋರಾಡಿದ ಟಿಪ್ಪು, ಕೊನೆಗೂ ಪವಿತ್ರ ಉದ್ದೇಶದ ಸಾಧನೆಗಾಗಿಯೇ ತನ್ನ ದೇಹವನ್ನೂ ಬಲಿದಾನ ಮಾಡಿ, ತನ್ನ ಹೆಸರು ಚಿರಂತನ ವಾಗುಳಿಯುವಂತೆ ಮಾಡಿದ. ಅವನ ದೇಹ ಬಿದ್ದ ಸ್ಥಳದಲ್ಲಿಂದು ಒಂದು ಬಳಿಯ ಕಲ್ಲಿನಲ್ಲಿ "The Body Of Tippu Sultan Was Found Here ಎಂದು ಬರೆಯಲಾಗಿದೆ ಆ ಸ್ಥಳವನ್ನೂ ಕೋಟೆಯನ್ನೂ ಶ್ರೀರಂಗನಾಥ ದೇವಮಂದಿರವನ್ನೂ ನೋಡಿದರೆ, ಶ್ರೀರಂಗಪಟ್ಟಣದ ಪ್ರಾಚೀನ ವೈಭವದ ನೆನಪು ಮರುಕಳಿಸಿ ಕಣ್ಣೀರು ತುಂಬಿಬರುತ್ತದೆ ಮಾತ್ರವಲ್ಲ, ಮಹಮ್ಮದೀಯನಾಗಿದ್ದರೂ, ಭೇದಭಾವ ವೆಣಿಸದೇ ಎಲ್ಲರನ್ನೂ ಸಮತೆಯಿಂದ ಕಂಡು ಎಲ್ಲರ ಸ್ನೇಹವನ್ನೂ ಬೆಳೆಸಿಕೊಂಡು, ಕೊನೆಗೆ ತನ್ನ ಪವಿತ್ರೋದ್ದೇಶ ಸಾಧನೆಗಾಗಿ ಪ್ರಾಣ ತೆತ್ತ ಕನ್ನಡಿಗ ವೀರ ಟಿಪ್ಪುವಿನ ಬಗೆಗೆ ಹೆಮ್ಮೆಯುಂಟಾಗುತ್ತದೆ 'ವೈಸೂರು ಹುಲಿ' ಎಂಬ ಅನ್ವರ್ಥನಾಮವು ಅವನಿಗಲ್ಲದೇ ಸಲ್ಲಬೇಕಾದುದು ಇನ್ನಾರಿಗೆ? ಕನ್ನಡ ನಾಡಿನಲ್ಲಿ ಇಂತಹ ಪ್ರಾತಃಸ್ಮರಣೀಯ ವ್ಯಕ್ತಿತ್ವವುಳ್ಳ ಮಹನೀಯರು ಜನಿಸಿ, ಕನ್ನಡ ಮಾತೆಯ ಶ್ರೇಯೋ ವೃದ್ಧಿಗಾಗಿ ಹೋರಾಡಿ ಪ್ರಾಣ ತೆತ್ತರೆಂಬುದೂ, ಕನ್ನಡಿಗರಾದ ನಮಗೆ ಹೆಮ್ಮೆಯ ಸಂಗತಿಯಲ್ಲದೇ ಇನ್ನೇನು? ಅವರು ಹಂಕೆಕೊಟ್ಟ ಉತ್ತಮ ಮೇಲ್ಪಂಕ್ತಿಯನ್ನು ನಾವು ಸರಿಸಬೇಕಾಗಿದೆ ಅವರ ಬಗ್ಗೆ ನಾವು ಹೆಮ್ಮೆಪಟ್ಟುಕೊಂಡಷ್ಟಕ್ಕೂ ಸಾಲದು. ಅವರಿಂದಾಗಿಯೇ ನಮ್ಮ ಕನ್ನಡದ ಕೀರ್ತಿ ಇಂದಿನ ತನಕ ಉಳಿದಿದೆಯೆಂಬುದನ್ನಿಲ್ಲಿ ಮರೆಯಲಾಗದು ಟಿಪ್ಪುವಿನಂತಹ ವೀರ ಪುತ್ರರು ಈ ನಾಡಿನಲ್ಲಿ ಹುಟ್ಟಬೇಕು, ತಮ್ಮ ಪವಿತ್ರೋದ್ದೇಶ ಸಾಧನಗಾಗಿ ಆತ್ಮಬಲಿದಾನ ಮಾಡಿದರು ಅವರ ಬಲಿದಾನ ವ್ಯರ್ಥವಾಗಲಿಲ್ಲ ಅವರ ಕನಸು ಕೊನೆಗಾದರೂ ನನಸಾಯಿತು ಅದರೆ, ಕನ್ನಡ ಸಂಸ್ಕೃತಿಯ ತವರ್ಮನೆಯಾಗಿ ಬೆಳಗುತ್ತಿದ್ದ ಶ್ರೀರಂಗ ಪಟ್ಟವು ದೇಶದ್ರೋಹಿಗಳ ದ್ರೋಹಕ್ಕೆ ಗುರಿಯಾಗಿ, ಪರಂಗಿಗಳ ದಾಳಿಗೆ ತುತ್ತಾಯಿತು ರಂಗನಾಥನ ನೆಲೆವೀಡು ಪರಹಸ್ತಗತವಾಯಿತು ಇಂದಿನ ಈ ಭಗ್ನಾವಸ್ಥೆಯನ್ನು ನೋಡಿದವನಿಗೆ ಕಣ್ಣೀರು ತುಂಬಿ ಬರದಿರದು, ವಿಧಿಯ ಕ್ರೂರದೃಷ್ಟಿ ಶ್ರೀರಂಗಪಟ್ಟದ ಮೇಲೆ ಬಿದ್ದು, ಮಹಾತ್ಮನಾದ ಟಿಪ್ಪುವಿನೊಂದಿಗೆ, ಈ ಪಟ್ಟಣದ ಗತವೈಭವವೂ ಕೊನೆಗಂಡಿತು. ಆದರೆ, ಕನ್ನಡದ ಪ್ರಾಚೀನ ಉಜ್ವಲ ಸಂಸ್ಕೃತಿಯು, ಹಾಗೂ ಕನ್ನಡಗುವರರ ಧೀರತೆಯು ಕುರುಹಾಗಿ, ಶ್ರೀರಂಗಪಟ್ಟವು ಭಗ್ನಾವಸ್ಥೆಯಲ್ಲಾದರೂ ತಲೆಯೆತ್ತಿ ನಿಂತಿದೆ ಇದೇ ಕನ್ನಡಿಗರ ಸಾಧನೆ ಸಾಧ್ಯವೆನ್ನಬೇಕು! ಟಿಪ್ಪುವಿನಂತಹ ರಾಷ್ಟ್ರಪ್ರೇಮಿಗಳ ನೆನಪೆನ್ನಾದರೂ ಮಾಡಿಕೊಂಡು, ರಾಷ್ಟ್ರೋದ್ಧಾರದ ಮಹೋದ್ದೇಶದಲ್ಲಿ ಕಿಂಚಿತ್ ಸೇವೆಯನ್ನಾದರೂ ಸಲ್ಲಿಸುವುದು ಪ್ರತಿಯೋರ್ವ ಕನ್ನಡಿಗನ ಆವ್ಯಕರ್ತವ್ಯವಾಗಿದೆ

ಶ್ರೀರಂಗನಾಥನು ಸರ್ವರಿಗೂ ಮಂಗಳವನ್ನುಂಟು ಮಾಡಲಿ'

"ಎಲ್ಲರೊಂದಾಗಿ ಸೊಗ ಉಣುವ ಕೃತಿಬೇಕು"

— ೧ —

ರಾಜಕೀಯವಸೇರಿ— ತತ್ವ ನೀತಿಯ ಸಾರಿ,
ಜನಸಾಮಾನ್ಯ ತಣಿಸಿ-ನಳವಲ್ಲ ನಿನಗೆ!
ಬರಿಯ ಬೋಧನೆಗಲ್ಲ ಮರುಳುಮಾಡುವ ಜನವಲ್ಲ
ಜಣಬಂಡೆ, ನಿನ್ನಾಳವರಿಯುವೆಂ ಕಣಿಗೆ?

— ೨ —

ಲೋಕವನ್ನುದ್ಧರಿಸಿ ಶಾಂತಿ ಸಮತೆಗೆ ಶ್ರಮಿಸಿ-
ಇರುವ ನಿನ್ನೇಕಯ್ಯೋ, ಅದಿಕಾರದಾಸೆ?
ಸೇವೆಯಲಿ ಏಕೆ, ಮಂತ್ರಿ ಪಟ್ಟವದೇಕೆ?
ತಾನು ತಾನೆಂದೆನುವ ಮೀಲಾಟ ಸೊಗಸೆ?

— ೩ —

ಪಟ್ಟದಾಸೆಗೆ ವೇಷಕಟ್ಟಿ ನಲಿದಾಡುವೆಯೊ?
ಬಾಡಿಗೆಯ ಬದುಕು ಬಂಗಾರವಿಂದೇನು?
ಮಣಿಮುತ್ತು ನವರತ್ನಗಳ ಕಿರೀಟವ ಧರಿಸಿ-
ಅರಸನಾಸೇರವಾದರು ಕೃತಿಯೇನು?

— ೪ —

ಕಪಟಮೋಸದ ಕೃತ್ಯ ವಂಚನೆಯು ಹಿಂಸೆಗಳ
ಬಿರುಗಾಳಿ ಜಡಿಮಳೆಯ ಧಾರೆಸುರಿಯುತಿದೆ!
ಅರಕ್ಷೆಗಾಗಿ ಧರ್ಮದ ಛತ್ರವನ್ನರಿಳಿ—
ಹಿಡಿಯಲಮಗಾಳಿ ಬಂದೆಡೆಗೆ ಮಾಲಾಡಿತಿದೆ!

— ೫ —

"ಒಂದೆನೆಲನಮ್ಮದಿದು—ಒಂದೆ ಕುಲಮನು ಜರದು"
ಎಂದು ಸಾರುವೆ ನಿತ್ಯ ಬರಿಬಾಯ ಮಾತು!
ಅಂತರಂಗವು ಪಸಿದೆ ಹುಲಿಯಂತೆ
ಹೊಂಚುತಿರೆ—
ಹೇಳಿ ಶಾಸ್ತ್ರವ ಗಾಳಿ ಇಕ್ಕುತಿಹೆ ಎಂತು?

— ೬ —

ಮನೆಯಂದಿ ಪಡಿಯದುದೇದೇ ನಿತ್ಯ ನಲುಗುತಿರೆ
ನೀನಲ್ಲಿ ಪಂಚ ಛತ್ರವನುಂಡು ತೇಗು!
ದಿಗ ಬಡವ ಸಭೆ ಸಮಾರಂಭದಲ್ಲಿ ಸೇರಿದ್ದು,
ಹಸಿವನಗೆ ವೇದಾಂತ ಬೋಧಿಸುವ ಸೋಗು!

— ೭ —

ಸ್ವಾರ್ಥದಾಸೆಯ ಬಿಟ್ಟೆ! ತ್ಯಾಗವಾಪಣತೊಟ್ಟೆ!
ಶುದ್ಧಬುದ್ಧಿಯ ತೊಡುಗೆ ತೊಟ್ಟ ಸಿಂಗಾರ!
ಬಡತನವು ತೊಲಗಿರಲಿ,—ಸಮತೆ
ಎಲ್ಲರಿಗಿರಲಿ, ?—
ಎನುವಸರಸೋಕ್ತಿ ಬರಿ ಮಾಯಬಡಿವಾರ!

— ೮ —

ಗಾಂಧಿವಾದಿಯೊ ನೀನು? ರಾಜಕಾರಣಿ ನೀನು?
ಬಡಜನರ ಹೊಟ್ಟೆ ಬಟ್ಟೆಯ ಮಾಡುನೋಡು!
ಉಳುವವರಿಗೆ ಹೊಲದನೆಲ—ತಮದೆಯವ
ಭಾಗ್ಯ—ಬಲ!
ರಂಗಿನಾ ಮಾತಿನ್ನು ಬಿಡು,—ಇಸ್ಪೆಮಾಡು

— ೯ —

ದೀಪ ಶಿಖಿ ಟೊಂಕ ಕಟ್ಟಿ ನಿಂದಿಹ ನಿನಗೆ.
ಭಸ್ಮ ಬಂಗಲೆಯ ಸಾಬದಾಸೀನವೇಕೆ?
ಸಡೆ ಬಳ್ಳಿಯೂರ ಕತೆ 'ಇರಲೊಂದು ನೆಲೆಇಲ್ಲ'
ಕಣ್ಣಿರಪ ನೋಡು-ಕರುಣೆಯುಬಾರದೇಕೆ?

— ೧೦ —

ಅತಿಮ್ಯಯದ ಆಡಂಬರವು ನಿನ್ನ ಗೌರವಿಸಿ,—
ತೋಪ್ರಗುಂಡು ಳ್ಳದಂಡಂ ಸ್ಕ್ವೋಟವೇಕೆ?
ದಿಟ್ಟ ಹೊರಳಿಸು ಇತ್ತ ಬಡತನದ ಬಾಳಿನಲಿ-
ಹಸಿವ 'ನಾಟಂ' ಸಿಡಿತವೇಕಾಣವೇನು?

— ೧೧ —

ಜೋಳನೆಯ ಬಡಬಡಿಕೆಯೇಕೆ ವಾಸ್ತವದೆಡೆಗೆ
ಇಳಿದು ಬಾ ಕನಸಿನರ ಮನೆಯಿಂದ ಕೆಳಗೆ!
ಗಾಂಧಿ ಹೇಳಿದೆನೆನು? ನೀನು ಮಾಡುವುದೇನು
ನುಡಿಯಂತೆ ನಡೆವ ಆಚಾರವೇಕಮಗೆ!

— ೧೨ —

ಸತ್ಯ ಶಾಂತಿಯ ತತ್ವ ತೀರ್ಥದಲಿನಿನ್ನಾತ್ಮ—
ಶುದ್ಧಪಡಿಸು, ಮಾತಿನಸವೇಶವದು ಸಾಕು!
ಬಡವ ಬಲ್ಲಿದನೆನುವ ಭಿನ್ನ ಭೇದವ ತೊಲಗಿ
ಎಲ್ಲರೊಂದಾಗಿ ಸೊಗಉಣುವ ಕೃತಿಬೇಕು!

—ಕೆ ಜೆ ಶೆಟ್ಟಿ, ಕಡಂದಲೆ

ಕೈಮಗ್ಗದ ಬಟ್ಟೆಗಳಿಗೆ ಮನೆಮಾತು

ಪೂರ್ಣಿಮಾ ಸ್ಟೋರ್ಸ್

ಹೆಸರಾಂತ ಪೂರ್ಣಿಮಾ ಸ್ಪೆಶಲ್ ಶೀರೆ ತಯಾರಕರು.
ಎಲ್ಲಾ ತರದ ಕೈಮಗ್ಗದ ಬಟ್ಟೆಗಳ ರಖಂ ಮತ್ತು ಚಿಲ್ಲರೆ ಜವುಳಿ ಮಳಿಗೆ.

ಪೊಪ್ಯುಲರ ಕಟ್ಟಡ, ಮಂಗಳೂರು-1.

POORNIMA STORES

Manufacturers, Wholesale & Retail
Handloom Cloth Dealers,
POPULAR BUILDINGS, MANGALORE-1.

ಸ್ವಾತಂತ್ರ್ಯ ದಿನದ ಶುಭಾಶಯಗಳು.

ನಂದಿ ಬಾರ್ ಸೋಪ್

ತಯಾರಕರು
ದಿ ವೆಸ್ಟ್ ಇಂಡಿಯಾ ಸೋಪ್ ಎಂಡ್
ಇಂಡಸ್ಟ್ರಿಯಲ್ಸ್ ಕಂಪೆನಿ,
ಮಂಗಳೂರು—1

ಡಿಸ್ಟ್ರಿಬ್ಯೂಟರರು
ಡಿ. ವೈಕುಂಟ ಪೈ,
ಗೋಳಿಕಟ್ಟೆ ಬಜಾರ್,
ಮಂಗಳೂರು-1

ಪ್ರಕಟಣೆ

ಉಡುಪಿ ತಾಲೂಕು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದ ಬಟ್ಟೆ ದಶಾವತಾರ ಮೇಳದ ನಾಮಾನು ಮರಿಷ್ಟಿಗೆ ಕೊಡುವರೆ ತಾ. 20—8—58ನೇ ದಿನ ಅಪರಾಹ್ನ ಗಂಟೆ 3ಕ್ಕೆ ಟೆಂಡರ್ ಕರೆಯಲಾಗುತ್ತದೆ. ಟೆಂಡರ್ ಕೊಡತಕ್ಕವರು ಸಂಬಂಧಿಸಿದ ಶರ್ತಗಳನ್ನು ಮುಂಚಿತವಾಗಿ ಆಫೀಸಿನಲ್ಲಿ ತಿಳಿದುಕೊಳ್ಳತಕ್ಕದ್ದು.

(Sd) B Umesh Rao,
Executive Officer.

Mandarthi 5—8—58

ಕವಿಲಕ್ಷ್ಮೀಶನ ಬಿರುದು ಯಾವುದು?

(೧೧ನೇ ಪುಟದಿಂದ)

ಅದೇ ಶಾಸನದಲ್ಲಿ ದತ್ತಿಯನ್ನು ಪಡೆದವನ ಗುರುಪರಂಪರೆಯವನನ್ನು ಹೇಳಿದ ಪದ್ಯವಿದು:

"ಶಿವಧರ್ಮ್ಯಾಮ್ಭೋಧಿ ಸಂವರ್ದ್ಧನ ತುಹಿನಕರಚಾರುಜಾರಿತ್ರಮಾಕಂ ದವ ಸನ್ತೈಶಬ್ದ ವಿದ್ಯಾಪ್ರಥಿತ ಪ್ರಥುಲ ತಾಳಮ್ಬನರ್"

(ಶಾಸನ ಸಂಖ್ಯೆ ೧೫೨)

iii) ಇನ್ನೊಂದು ಶಾಸನವು ಕ್ರಮ ಶಕ ೩೦೩ (ಇಸ್ವಿ ೧೧೦೫)ರಲ್ಲಿ ಬರೆದುದು. ಅದರಲ್ಲಿ ಗುರುಪರಂಪರೆಯವನೊಬ್ಬನನ್ನು (ಪೂರ್ವೋಕ್ತ ನಾಮವೇದಿಯನ್ನು) ಕುರಿತು ಹೇಳುವಲ್ಲಿ ಅದೇ ಪದ್ಯವಿದೆ:

"ಶಿವಧರ್ಮ್ಯಾಂಭೋಧಿಸಂವರ್ದ್ಧನ ತುಹಿನಕರಂ ಜಾರುಜಾರಿತ್ರಮಾಕಂ। ದವಸ(ನ್ತಂ) ಶಬ್ದವಿದ್ಯಾಪ್ರಥಿತಪೃಥುಲತಾಳತಾಳಂಬನಂ—"

(ಶಾಸನ ಸಂಖ್ಯೆ ೧೫೬)

ಇಲ್ಲಿ ಮೂರು ನಾಲ್ಕು ಕಡೆಗಳಲ್ಲೂ ಸಹಕಾರ-ವಸಂತಗಳ ಸಂಬಂಧ ಏಕಪ್ರಕಾರವಾಗಿದೆ. ಅಂದರೆ 'ಸಹಕಾರವನಕ್ಕೆ ವಸಂತಲಕ್ಷ್ಮಿ'ಯೆಂದೂ, 'ಮಾಕಂದನಂದನವಸಂತ'ನೆಂದೂ 'ಜಾರಿತ್ರಮಾಕಂದವಸಂತ'ನೆಂದೂ ಹೇಳುವಲ್ಲಿ ಸುರಸತೆ ಹಾಗೂ ವಿನಯಶೀಲತೆಗಳು ಒಪ್ಪಿಬಂದಿವೆಯೆಂಬುದಕ್ಕೆ ಮರುಮಾತಿರದು!

೪. ಲಕ್ಷ್ಮೀಶನ ಕಾಲಕ್ಕಿಂತ ಇತ್ತೀಚಿನ ಒಂದೆರಡು ಕವಿಗಳ ಪ್ರಯೋಗಗಳನ್ನು ತಿಳಿಯುವುದು ಅಪ್ರಸ್ತುತವಾಗದು. "ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಪ್ರಭಾವಳಿಯಲ್ಲಿ ಬಳಿದ" ಕವಿಗಳಲ್ಲಿ ಗೋಪ ಇಲ್ಲದೆ ಗೋವಿಂದ ಕವಿಯೊಬ್ಬನು. ಇವನು ಚಿತ್ರಭಾರತ ನಂದಿವಾಹಾತ್ಮ್ಯ ಎಂಬೆರಡು ಗ್ರಂಥಗಳನ್ನು ಬರೆದಿದ್ದಾನೆ. —ಇವನು ಪೂರ್ವಕವಿಗಳಲ್ಲಿ 'ಲಕ್ಷ್ಮೀಪತಿ'ಯನ್ನು ನೆನೆದಿದ್ದಾನೆ. ಅಲ್ಲದೆ 'ಉತ್ತಮ ಕವೀಂದ್ರೋತ್ಸವಂ ಚೈತ್ರ ಶುಕ್ಲನಲಿ ಈವುತ್ತಿರಲು ಸದ್ಗುರು ಕೃಪಾವೃತದ ಪೆದ್ದೊರೆಯ ಒತ್ತಿ ಬಹ ಪರ್ವನಿಂದ ತಳೆದು' (ಚಿತ್ರಭಾರತದ ಪೀಠಿಕೆ ಪದ್ಯ ೨೩) ಎಂಬಲ್ಲಿ ಲಕ್ಷ್ಮೀಶ—ಕುಮಾರವ್ಯಾಸ ಇಬ್ಬರನ್ನೂ ಸೂಚಿಸಿರಬೇಕೆಂಬ ಊಹೆಯಿದೆ" ಎಂದು ಪಾ. ರಂ. ಶ್ರೀ. ಮುಗಳಿಯವರು ಬರೆದಿದ್ದಾರೆ (ಕನ್ನಡ ಸಾಹಿತ್ಯ ಚರಿತ್ರೆ, ಪುಟ—೨೭೫). ಈ 'ಚೈತ್ರ—ಶುಕ್ಲ'ರೆಂಬುದು ಲಕ್ಷ್ಮೀಶ—ಕುಮಾರವ್ಯಾಸರ ಬಿರುದಿನ ಕೊನೆಯನುಡಿಯಾಗಿದೆ! ಹಾಗಿಲ್ಲವಾದರೆ, 'ಚೂತ' ನೆಂದೇ ಎತ್ತಿ ಹೇಳುತ್ತಿದ್ದನು!

೫. ಜರಾಸಂಧ ವಧೆಯೆಂಬ ಯಕ್ಷಗಾನ ಪ್ರಬಂಧದಲ್ಲಿ ದೇವರನ್ನು ವರ್ಣಿಸುವ ಪದ್ಯವಿದೆ:

"ಭಕ್ತಜನ ವನ ಚೈತ್ರ ಶುಕ್ತಿ ಶುಭ್ರ ಚರಿತ್ರ।
ಮತ್ತಗಜಬಳಸಿಂಗ ಭೃತ್ಯಕರುಣಾ ಪಾಂಗ।
ಸತ್ಪ್ರತಿತಯಪೂರ್ಣ ಹರಿ ಕೃಷ್ಣ ಸಲಹೆಮ್ಮನೆನುತ ಚಿಂತಿಸುತಿರ್ದನು (ಧರ್ಮಜನು) ॥"

ಇಲ್ಲಿಯ 'ಭಕ್ತಜನವನ ಚೈತ್ರ' ನೆಂಬ ಹೇಳಿಕೆಗೆ ಲಕ್ಷ್ಮೀಶ ಮೊದಲಾದವರ ಮಾತು ಹಿನ್ನೆಲೆಯಾಗಿದೆಯೆಂದು ತಿಳಿಯಬೇಕು.

ಒಟ್ಟಿನಲ್ಲಿ ಕವಿ ಲಕ್ಷ್ಮೀಶನ ಬಿರುದು ಇದುವರೆಗೆ ಪ್ರಚಲಿತವಾದಂತೆ 'ಕರ್ಣಾಟ ಕವಿ ಚೂತವನ ಚೈತ್ರ'ನೆಂಬುದೇ ಸರಿಯಾಗಿದೆ. 'ಕರ್ಣಾಟ ಕವಿ ಚೈತ್ರನವನ ಚೂತ' ವೆಂಬುದೇ ಕೈಕವ್ವಾಗಿರಬೇಕೆಂದು ಇದರಿಂದ ತಿಳಿಯಲಾಗುವುದು. 'ವಾದೇ ವಾದೇ ಜಾಯತೇ ತತ್ತ್ವಬೋಧಃ—ಸತ್ಯಶೋಧಃ' ಎಂಬುದರಿಂದ ಈ ಸಂಗತಿಯು ಚಿಕ್ಕದಾದರೂ ವಿಚೇಚನೀಯವೆಂದು, ಮನನೀಯವೆಂದು ಭಾವಿಸುತ್ತಾ ಈ ಬರೆಹವನ್ನು ಸೂರಯಿಸುತ್ತೇನೆ.

ಸಹಕಾರ ಮತ್ತು ಸರಕಾರ

ಸ್ವತಂತ್ರ ಭಾರತದಲ್ಲಿ ಸಹಕಾರ ಚಳವಳಿ ಬಲಿಯುತ್ತಿರುವಂತೆಯೇ ಸಹಕಾರೀ ಸಂಸ್ಥೆಗಳ ಮೇಲೆ ಸರಕಾರದ ಅಂಕುಶವೂ ತೀವ್ರವಾಗುತ್ತಿದೆ. ಇದರ ಗುಣಾವಗುಣಗಳೇನೆಂಬುದನ್ನು ಇಲ್ಲಿ ಚುಟುಕಿನಲ್ಲಿ ವಿವರಿಸಲಾಗಿದೆ.

ಲೇಖಕರು: ಶ್ರೀ ಮೋಹನ ಮುತಾಲಿಕ.

ಜೀವನದಲ್ಲಿ ಸರ್ವತೋಮುಖ ಏಳಿಗೆಯಾಗಬೇಕೆಂದು ಬಯಸುವ ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ವಿಧದಲ್ಲಿ ಯಾವ ಕೆಲಸವನ್ನಾದರೂ ಸ್ವತಂತ್ರೋಪದಿಂದ ಮಾಡುತ್ತಾನೆ. ಜೀವನದೇಳಿಗೆ ನಾಡಿನೋದ್ಧಾರದ ಮಾರ್ಗ. ಈ ದಿಶೆಯಲ್ಲಿ ದುಡಿಯುತ್ತಿರುವ ಜನ ಅನೇಕ ದಾರಿಗಳನ್ನು ಹುಡುಕಿಕೊಂಡು ಹೋಗುತ್ತಿದ್ದರೂ ಯಾವುದರಲ್ಲೂ ವಿಶೇಷ ಸುಖ ಸಮಾಧಾನಗಳು ಸಿಗುವುದು ಕಷ್ಟ. ಕಷ್ಟದುಃಖಗಳು ಎಲ್ಲಿ ಹೋದರೂ ಇದ್ದೇ ಇರುತ್ತವೆ. ಆದರೂ ಸಾಧ್ಯವಿದ್ದ ಎಲ್ಲ ಪ್ರಯತ್ನಗಳಿಂದಲೂ ನಾವು ಒಂದು ದಾರಿಯನ್ನು ಬಾಳದೀವಿಗೆಯಾಗಿ ಸ್ವೀಕರಿಸಲೇಬೇಕು.

ಈ ಸಂದರ್ಭದಲ್ಲಿ ನಮಗೆ ಅನೇಕ ದಾರಿಗಳ ವಿಚಾರಗಳಲ್ಲಿ ಇಂದು ವಿಶೇಷ ಮಹತ್ವವನ್ನು ಗಳಿಸಿರುವ ಹಾಗೂ ಅಪಾರ ಸೇವೆ ಸಲ್ಲಿಸುತ್ತಿರುವ ಸಹಕಾರ ಮಾರ್ಗ ಉತ್ತಮವಾದ ದಾರಿ ಎಂದೆನ್ನಬಹುದಾಗಿದೆ.

ಭಾರತದಲ್ಲಿ ಸಹಕಾರಿ ಚಳುವಳಿ ದಿನದಿನಕ್ಕೂ ಬೆಳೆಯುತ್ತಿದ್ದು ಈಗಲಂತೂ ಅದರ ಮಹತ್ವ ತೀರಾ ಹೆಚ್ಚಿದೆ. ಜೀವನದ ಪ್ರತಿಯೊಂದು ಏರಿಳಿತಗಳ ಹೆಚ್ಚು ಕಡಿಮೆಗೂ ಇಂದು ನಾವು ಸಹಕಾರದೆಡೆಗೆ ನೋಡುವಂತಹ ಒಂದು ಪ್ರಸಂಗ ಬಂದಿದೆ.

ಸಹಕಾರ ಕ್ಷೇತ್ರದಲ್ಲಿ ಇಂದು ಅಚ್ಚರಿಪಡಬಹುದಾದಂತಹ ಸಂಘಟನೆಗಳು ನಡೆದುದನ್ನು ನಾವು ನೋಡಬಹುದಾಗಿದೆ. ಸುಖಜೀವನ ಸಹಕಾರಿ ಸಂಸ್ಥೆ, ಮಹಿಳಾ ಸಹಕಾರಿ ಸಂಸ್ಥೆ, ಸಹಕಾರಿ ಬೇಸಾಯ ಸಂಸ್ಥೆ, ನಯನ್ಸ್ ಸಹಕಾರಿ ಸಂಸ್ಥೆ ಮೊದಲಾದ ಬೇರೆ ಬೇರೆ ತರಹದ ಸಂಘಗಳು ಜನಜೀವನದ ನಾಡಿಯಾಗುತ್ತಲಿವೆ. ಸಹಕಾರ ಸಂಸ್ಥೆಗಳು ಪರಸ್ಪರ ಸಹಾಯ, ಮಿತವ್ಯಯ ಮತ್ತು ಸ್ವಾವಲಂಬನೆಗಳ ತವರುಮನೆಯಾಗಿದ್ದು ಸದಸ್ಯರುಗಳ ಆರ್ಥಿಕ ಪುನರುಜ್ಜೀವನದ ಕೈಗನ್ನಡಿ ಆಗಿದೆ. ನಮ್ಮಲ್ಲಿಯ ಆರ್ಥಿಕ ವರ್ಗಭೇದಗಳನ್ನು ಹೊಡೆದೋಡಿಸಬೇಕಾದರೆ ಸಹಕಾರವು ಮಹತ್ವದ ಪಾತ್ರವನ್ನಾಡುವುದರಲ್ಲಿ ಸಂಶಯವೇ ಇಲ್ಲ. ಜಗತ್ತಿನಲ್ಲಿ ನಡೆದಿರುವ ಮಹಾ ಮಹಾ ಕೊಲಾಹಲಗಳೆಲ್ಲ ಕೇವಲ ಆರ್ಥಿಕ ವ್ಯಾಪಾರದ ಮೂಲಗುರಿಗಳಲ್ಲೊಂದಾದ ಕಾರಣದಿಂದಾಗಿದೆಯೇ ಹೊರತು, ಜನರ ವೈಯಕ್ತಿಕ ಸಂತೋಷಕ್ಕೆ ವೈಪರೀತ್ಯಕ್ಕೂ ಕಾರಣವಾಗಿದೆ. ಇಂತಹ ಸಂದರ್ಭಗಳಲ್ಲಿ ನಡೆಯಬಹುದಾದ ಆರ್ಥಿಕ ಏರಿಳಿತವನ್ನು ನಾವು ಲಕ್ಷ್ಯಪೂರ್ವಕವಾಗಿ ಅವಲೋಕಿಸಲೇಬೇಕು. ಈ ಆರ್ಥಿಕ ಬದಲಾವಣೆಗಳಲ್ಲಿ ಸಹಕಾರ ಮಧ್ಯಸ್ಥನಾಗಿ ಬಂದು ಪರಿಸ್ಥಿತಿಯಲ್ಲಿ ಹಿಡಿತವನ್ನುಂಟುಮಾಡಲು ಸಾಧ್ಯವುಂಟು! ಆದರೆ ಅದನ್ನು ಒಪ್ಪಿಕೊಳ್ಳುವವರು ಮಾತ್ರ ಅತ್ಯವಶ್ಯವಾಗಿ ಬೇಕೇಬೇಕು

ಸಹಕಾರ ಜನರಿಂದ ಸಂಘಟಿತವಾದ ತಮ್ಮ ಬೆಳವಣಿಗೆಗಾಗಿ ಮಾಡಿಕೊಂಡ ತಮ್ಮದೇ ಆದ ಒಂದು ಸಂಸ್ಥೆ. ಅದು ಪ್ರಜಾಪ್ರಭುತ್ವದ ಪ್ರತಿಯೊಂದು ತತ್ವವನ್ನೂ ಸಂಪೂರ್ಣವಾಗಿ ನೋಡಿಕೊಂಡು ಹೋಗುತ್ತದಲ್ಲದೆ ಸಿರಿವಂತರೂ ಬಡವರೂ ಸಹಕಾರದ ದೃಷ್ಟಿಯಲ್ಲಿ ಸರಿಸಮಾನರು!

ಇವೆಲ್ಲ ದೃಷ್ಟಿಯಿಂದ ನಾವು ಅವಲೋಕಿಸಿದರೂ ಸಹಕಾರಸಂಸ್ಥೆ ಅತ್ಯುತ್ತಮವೂ ಅವಶ್ಯಕವೂ ಎನಿಸಬಹುದಾದರೂ ಈ ವಿಷಯದಲ್ಲಿ ಸರಕಾರದ ಹಸ್ತಕ್ಷೇಪ ತೀರಾ ಹೆಚ್ಚಾಗಿಯೇ ಇದೆಯೆಂದು ಕೆಲವೊಂದು ಸಲ ಭಾಸವಾಗುತ್ತದೆ. ಭಾರತದಲ್ಲಿ ಸರಕಾರ ವೀಕ್ಷಣೆ, ಶೋಧನೆಗಳುಅಗತ್ಯವಾಗಿವೆಯೆಂಬುದರಲ್ಲಿ ಸಂಶಯವೇ ಇಲ್ಲ. ಆದರೆ ಅದು ತೀರ ಹೆಚ್ಚಾಗಿದೆಯೆಂದು ಭಾಸವಾಗದಿರದು.

ಸಹಕಾರಿ ಸಂಸ್ಥೆಗಳು ಪ್ರತಿಯೊಂದು ವಿಷಯದಲ್ಲೂ ಸರಕಾರದ ಮುಖವನ್ನೇ ನೋಡಬೇಕಾಗುತ್ತದೆ. ಪ್ರತಿಯೊಂದು ವಿಷಯದಲ್ಲೂ ಸಹಕಾರಿ ಸಂಸ್ಥೆಗಳ ಮೇಲೆ ಸರಕಾರದ ಒಪ್ಪಿಗೆ ಬೇಕೇಬೇಕು. ಆದರೆ ಅಶಿಕ್ಷಿತರು ಹೆಚ್ಚಾಗಿರುವ ನಮ್ಮೀ ಭಾರತದಲ್ಲಿ ಸಹಕಾರ ಸಂಸ್ಥೆಗಳ ಮೇಲೆ ಸರಕಾರದ ಅಧಿಕಾರ ಅವಶ್ಯವೆನಿಸಿದರೂ ತೀರಾ ಹೆಚ್ಚೆನಿಸಿದೆ.

ಸಹಕಾರಿಸಂಸ್ಥೆಗಳು ಪ್ರಜಾಪ್ರಭುತ್ವದ ನೈಜ ತತ್ವಗಳನ್ನು ಉಪಯೋಗಿಸುತ್ತಿದ್ದರೂ ಕೊನೆಗೆ ಅದು ಸರ್ವಾಧಿಕಾರ ತತ್ವದೆಡೆಗೆ ಒಯ್ಯುತ್ತಿದೆ ಎಂಬ ಪ್ರತಿಭಾಸ ಕಂಡು ಬರುತ್ತದೆ. ಇದನ್ನು ತೊಡೆದು ಹಾಕಬೇಕಾದರೆ ಸರಕಾರದವರು ಕಡ್ಡಾಯ ಪೂರ್ವಕವಾಗಿ ಸಹಕಾರಿ ಸಂಸ್ಥೆಗಳಲ್ಲಿ ಶೈಕ್ಷಣಿಕ ತರಬೇತಿ ಹೊಂದಿದವರನ್ನೇ ನಿಯಮಿಸುವುದಕ್ಕೆ ಆಜ್ಞಾಪಿಸಬೇಕಲ್ಲದೆ ಈ ಸುಖಾಂತರ ತಾವು ಸಹಕಾರಿ ಸಂಸ್ಥೆಗಳ ಮೇಲಿನ ಹಿಡಿತವನ್ನು ಕಡಿಮೆಮಾಡಬೇಕು. ಅಂದರೆ ಮಾತ್ರ ಸಹಕಾರ ಸಂಸ್ಥೆಗಳು ನಿಜಾರ್ಥದ ಪ್ರಜಾಪ್ರತಿನಿಧಿ ಸಂಸ್ಥೆಗಳಾಗುವವಲ್ಲದೆ, ತಮ್ಮ ಏಳಿಗೆಗಾಗಿ ಕೆಲಮಟ್ಟಿಗಾದರೂ ವಿಶೇಷೋತ್ಸಾಹದಿಂದ ಕೆಲಸಮಾಡಬಹುದು. ಆಗಲೇ ಸಹಕಾರ ಸಂಸ್ಥೆಗಳು ಇನ್ನೂ ಹೆಚ್ಚಿನ ಮಟ್ಟಿಗೆ ಮಿತವ್ಯಯ, ಸ್ವಾವಲಂಬನೆ ಮತ್ತು ಪರಸ್ಪರ ಸಹಾಯಗಳನ್ನು ತಮ್ಮ ಜೀವನದಲ್ಲಿ ವಿಶೇಷವಾಗಿ ಅವಲಂಬಿಸಬಹುದು.

---

೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ. } ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ } ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟಿವಾಲಾ ಎಗ್ಯೂಮಿಕ್‌ಶ್ಚರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಬೇರು ಬಿಟ್ಟಿದೆ ಮೇಲೆ ಗೆಲ್ಲು ಹಬ್ಬಿದೆ ಕೆಳಗೆ ‡

ಕವಿ ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ ಎ

(ನಚಿಕೇತನು ಯಮಲೋಕಕ್ಕೆ ತಂದೆಯಾದೇಶದಂತೆ ಹೋಗಿ, ಅಲ್ಲಿ ಯಮಧರ್ಮನೊಡನೆ ಮೂರು ವರಗಳನ್ನು ಕೇಳಿದನು ಅವುಗಳಲ್ಲಿ ಎರಡು ವರಗಳನ್ನು ಕೊಟ್ಟು ಆ ಮೇಲೆ ಮೂರನೆಯದಾದ 'ಮರಣದಿಂ ಮುಂದೇನು?' ಎಂಬ ಪ್ರಶ್ನೆಗೆ, ತತ್ವಜ್ಞಾನವನ್ನು ತಿಳುಹುವನು ಪ್ರಾರಂಭದಲ್ಲಿ ಈ ಬೋಧೆಗೆ ಆತನು ಅರ್ಹನೇ ಇಂದು ನಾನಾ ವಿಧವಾಗಿ ಪರೀಕ್ಷಿಸುವನು, ಶ್ರೇಯಸ್ಸು ಪ್ರೇಯಸ್ಸುಗಳ ಅಂತರವನ್ನರುಹುವನು ಆಚಾರ್ಯನ ಮೂಲಕ ಉತ್ತಮ ಜ್ಞಾನ ಪಡೆಯಬೇಕೆಂದೂ, ಅಂತರ್ಮುಖಿಯಾದ ಸಾಧಕನಿಗೆ ಪರಮಾತ್ಮ ಜ್ಞಾನವೊದಗುವುದೆಂದೂ ಹೇಳಿ, ಕೊನೆಗೆ ಆತ್ಮನ ಇರವನ್ನು, ಪರಮಾತ್ಮ ಪ್ರಾಪ್ತಿಯನ್ನು ಈ ತೆರನಲ್ಲಿ ತಿಳಿಸುವನು)

— ೧ —

"ಬೇರು ಬಿಟ್ಟಿದೆ ಮೇಲೆ ಗೆಲ್ಲು ಹಬ್ಬಿದೆ ಕೆಳಗೆ
ಅಶ್ವತ್ಥವಿದು ಸನಾತನವೆಂಬುದದುವೆ
ಅದೆ ಶುದ್ಧ ಬ್ರಹ್ಮವನ್ನುತಂ ಲೋಕವದರೊಳಗೆ
ಸೇರಿಹುದು ಮೀರಲದ ನಾರಿಗಳ ವೈ

— ೨ —

"ಪ್ರಾಣಗೊಂಡಿರಲು ಜಗವೆಲ್ಲವಿದು ಹೊರೆಬಂದು
ನಡುಗ ತಿಹುದವನೆಇಂದನೆ ಭಯವೂ ಹರಿದು,—
ನೆತ್ತಿಗೆತ್ತಿಹ ವಜ್ರದಂತೆ, ಯಾರಿದನರಿತು
ಕೊಂಡಿಹರೊ—ಅವರೆತಾವಮೃತರಂದು

— ೩ —

"ಇವನ ಭಯದಿಂದಗ್ನಿ ಸುಡುತಿಹನು, ಸೂರ್ಯ ಸಹ
ಇವನ ಭಯದಿಂ ನಿತ್ಯ ಬೆಳಗುತಿಹನು,
ಭಯದಿಂದಲಿಂದ್ರಸಹ ವಾಯುಸಹ ನಡುಗುತಿಹ
ರಿವಗೆ ಮೃತ್ಯುವೆ ಬೆದರಿಪೋಡುತಿಹನು

— ೪ —

"ಒಡಲುಕೆಡೆಯುವ ಮುನ್ನ ಯಾವನದ ತಿಳಿಯುವನೊ
ಬವಬಂಧನವ ಬಿಡಿಸಿ ಮುಕ್ತನಹನು,
ಅವನೀನೆಲೆಯನರಿಯಲಶಕ್ತನಾಗುವನೊ
ಜನನ ಮರಣದ ಸುಳಿಗೆ ಸಿಲುಕುತಿಹನು

— ೫ —

"ಎಂತು ಶಾಂಬುದೊ ಕನ್ನಡಿಯೊಳಂತೆಯಾತ್ಮನಲಿ,
ಎಂತು ಸ್ವಪ್ನದೊಳಂತೆ ಪಿತೃಲೋಕದಲ್ಲಿ,
ಎಂತು ನೀರಿನೊಳಂತೆ ಗಂಧರ್ವಲೋಕದಲಿ,
ನೆಲಲು ಬೆಳಕುಳಂತೆ ಬ್ರಹ್ಮಲೋಕದಲಿ

— ೬ —

"ಭಿನ್ನಮಿಷ್ಟನ್ನಮಿಷ್ಟಿಂದ್ರಿಯಂಗಳ ಪೃಥಕ್
ಭಾವಮಂ ಜನನಮರಣಂಗಳೆರಡಂ,
ಶುದ್ಧಾತ್ಮ ತತ್ವದರಿವಂತಿಳಿದ ನಾವುದಕು
ಶೋಕಿಸುವುದಿಲ್ಲ ತಾನವನೆಧೀರಂ.

— ೭ —

"ಇಂದ್ರಿಯಂಗಳಿಗಿಂತ ಮನವು ಶ್ರೇಷ್ಠವು ಮತ್ತೆ
ಮನಸಿಗಿಂತಲು ಬುದ್ಧಿ ಶ್ರೇಷ್ಠ, ಮುಂದೆ-
ಬುದ್ಧಿಗಿಂತಲು ಮಹಾನಾತ್ಮನದಿಕನೆಂದೆ ಲ್ತೆ,
ಮಹತಿಗಿಂತ ವ್ಯಕ್ತವಧಿಕವೆಂದೆ

— ೮ —

"ವ್ಯಾಪಕನು ಮೇಣಲಿಂಗನುವಾದ ಪುರುಷನವ
ನವ್ಯಕ್ತಕಿಂತಲಧಿಕನೆನಿಪ್ಪನು,
ಅವನ ನೆಲೆಯನ್ನರಿತ ಜೀವಿತಾ ಮುಕ್ತನಹ
ಅಮೃತತ್ವವಂ ಪಡೆದು ಧನ್ಯನಹನು

— ೯ —

"ದರ್ಶನ ವಿಷಯವಲ್ಲವಿವನರೂಪಂ, ಮೇಣಾ
ಕಣ್ಣಿಂದ ಕಾಣನಾವನುಮಿವನನು,
ಮನದಿಂದ ಮತಿಯಿಂದ ಧೃತಿಯಿಂದ ದೊರಕು
ವನು,
ಇದನರಿತರಮೃತರೈ-ತಿಳಿವುದಿದನು

— ೧೦ —

"ಎಂದಿಂಗೆ ಪಂಚಜ್ಞಾನೇಂದ್ರಿಯಂಗಳು ಮನಸಿ
ನೊಂದಿಂಗೆ ಶಾಂತವಾಗುವುವು ನಿಜಕು,
ಎಂದಿಂಗೆ ಬುದ್ಧಿ ಚಲಿಸದೆಯಿಹುದು-ಪರಮಗತಿ
ಯೆಂದೆನುವರದನು ಬಲ್ಲವರು ತಾವು

— ೧೧ —

"ಆಯಿರವೆ- ಸ್ಥಿರವಾದ ಯಿಂದ್ರಿಯಂಗಳ ಧಾರ
ಣೆಯ ಯೋಗವೆಂದು ತಿಳಿಯುವುದು,
ಆ ನೆಲೆಯನೇರಿದವನ ಪ್ರಮತ್ತನು-ಧೀರ!
ಯೋಗವೆನೆ ಸೃಷ್ಟಿ ಲಯವೆರಡು

— ೧೨ —

"ಮಾತಿನಿಂ ದೊರಕಲೊಲ್ಲಂ ಮತ್ತೆ ಮನಸಿನಿಂ
ಲಭಿಸಲೊಲ್ಲಂ, ಕಣ್ಣಿನಿಂ ಕಾಣಲೊಲ್ಲಂ,
ಇರುವನೆಂದೆಡೆಸುವವನಂ ಹೊರತು ಬೇರೆಲ್ಲ
ಅವನು ಸಿಗುವುದು ಸಾಧ್ಯವಿಲ್ಲಂ

— ೧೩ —

"ಉಂಟೆಯಿಲ್ಲವೆ ಯೆಂಬ ಸಂವಾದವೆರಡರಲಿ
ಉಂಟೆಂಬ ನಿಜ ತತ್ವವಂ ತಿಳಿವುದು
ಉಂಟೆಂಬ ನಿಜವನಂತವನನೆಯೆಂದೆಯಾಳದಲಿ
ಸುಪ್ರಸನ್ನತೆ ಶಾಂತಿ ನೆಲೆಸುತಿಹುದು

— ೧೪ —

"ಇವನ ಹೃದಯದಲಿ ನೆಲೆಸಿಹ ಸರ್ವ ಶಾಖೆ ಗಳು
ಎಂದಿಂಗೆ ನಾಶವಂ ಹೊಂದುತಿಹವು,

ಅಂದಿಂಗೆ ಮರ್ತ್ಯತಾನಮೃತನಪ್ಪಂ—ಕೇಳು!
ಪಡೆವನಿವನಿಲ್ಲಿಯೇ ಬ್ರಹ್ಮನಿರವು

— ೧೫ —

"ಎಂದಿಂಗೆ ಹೃದಯ ದೊಳಗಿನ ಸರ್ವ ಗ್ರಂಥಿಗಳು
ಇಹದಲ್ಲೆ ನಾಶವಂ ಹೊಂದುತಿಹವು,
ಅಂದಿಂಗೆ ಮರ್ತ್ಯನಾನ ಮೃತನಪ್ಪಂ— ಕೇಳು!
ಉಪನಿಷತ್ತು ಪದೇಶವಿದುವೆ ನಿಜವು

— ೧೬ —

"ನೂರು ಮೇಣೊಂದು ನಾಡಿಗಳಿಹವು ಹೃದಯಕ್ಕೆ
ಒಡೆದ ನೆತ್ತಿಯನವುಗಳಲ್ಲಿಂದು ಹೊರಟು-
ವೆ ಲೇರಲಮೃತತ್ವವಂ ಪಡೆವನವನಲ್ತೆ
ಉಳಿದವುಗಳುಭವದ ಸಂಬಂಧವುಂಟು

— ೧೭ —

"ಅಂಗುಷ್ಠ ಮಾತ್ರ ನೀಯಂತರಾತ್ಮಂ ಪುರುಷ,
ಜನರ ಹೃದಯ ವಿ ನಿತ್ಯ ನೆಲೆಸಿರ್ಪನಂ—
ಮುಂಬಿದಿಂ ಗಂಟನ್ನು ಬೇರ್ಪಡಿಸುವಂತೆ ನಿಜ
ದೇಹದಿಂ ದೈರ್ಯದಿ ತೆಗೆವುದವನಂ
ಅವನನರಿವುದು ಶುದ್ಧನೆಂದ ಮೃತನಂದಿಂತ,
ಅವನನರಿವುದು ಶುದ್ಧನಮೃತನಂದು '

— ೧೮ —

ನಚಿಕೇತನಿಂತು ವೃತ್ಯುಪ್ರೋಕ್ತ ವಿಂವಿದ್ಯೆ
ಯಂ ಯೋಗವಿದಿದೆ ಲ್ಲವರಿತು ಕೂಂಡು—
ವಿರಜಂ ವಿಮೃತ್ಯುವೆನೆ ಬ್ರಹ್ಮವಂ ಪಡೆದನ್ನೆ
ಇದನು ತಿಳಿದನ್ಯರಿಗು ಮುಕ್ತಿಯುಂಟು

‡ ಕಠೋಪನಿಷತ್ತಿನ ಕೂನಯುವಲ್ಲಿ

ನೀತಿ ಮತ್ತು ಕಾನೂನು

(೧೦ನೇ ಪುಟದಿಂದ)

ಮಾತಿನ ಡೊಂಬರಾಟವೇ ನಡೆಯುತ್ತಿದೆ

ಇಬ್ಬರ ನ್ಯಾಯದ ಪರ್ಸೆಯಲ್ಲಿ ಇಬ್ಬರೂ ಕಾನೂನು ಬಲ್ಲ ವಕೀಲರ ಆಶ್ರಯ ಪಡೆಯಬೇಕು. ಆಗ ಇಬ್ಬರಿಗೂ ನ್ಯಾಯ ದೊರಕಿಸಿ ಕೊಡುವ ಭರವಸೆ ಸಿಗುತ್ತದೆ ಆದರೆ ಕೋರ್ಟಿನಲ್ಲಿ ನ್ಯಾಯ ಎಂದು ಸಿಗುವ ಜಯಪ್ರಾಪ್ತಿ ಎಂಬ ಸ್ಟಾಕ್ ಐಂಡಿ ತ್ಯವೂ ಪ್ರಭಾವವೂ ಉಳ್ಳ ವಕೀಲರಿಗೆ!

ಹಳ್ಳಿಯಲ್ಲಿ ನಡೆವ ಒಂದೊಂದು ಪ್ರಕರಣ ನ್ಯಾಯದ ಸಿದ್ಧಾಂತಕ್ಕಾಗಿ ಒಮ್ಮೊಮ್ಮೆ ದಿಲ್ಲಿಯ ತನಕವೂ ಹೋಗುತ್ತದೆ ಆಗ ಅಲ್ಲಿಯ ನ್ಯಾಯಾಧೀಶ ನ್ಯಾಯದ ತೀರ್ಪನ್ನು ಹೇಗೆ ಕೊಡಬಲ್ಲನು? ವಾಸ್ತವ ಸಂಗತಿಗಳು ಹೀಗಿದ್ದರೂ ಕಾಗದ ಪತ್ರಗಳು ಕೇಳುವ ನ್ಯಾಯವೇ ಅಲ್ಲಿ ನ್ಯಾಯವಾಗುತ್ತದೆ ಒಮ್ಮೊಮ್ಮೆ ಸತ್ಯ, ನೀತಿಗಳಿಗೆ ಇದು ವಿಪರ್ಯಾಸವೂ ಆಗಬಹುದು.

ಇಂಥ ಪ್ರಯೋಗಗಳನ್ನು ತಪ್ಪಿಸಲು ಹಳ್ಳಿಯ ಸುಂಬಾ ಗ್ರಾಮಸಂಚಾಯತಿಗಳು ಬೆಳೆದರೆ ಕೆಲಮಟ್ಟಿಗಾದರೂ ನೀತಿಗೆ ಪ್ರಾಶಸ್ತ್ಯ ದೊರೆಯಬಹುದು ಭಾರತ ಸರಕಾರವೇನೋ ಈ ಯೋಜನೆ ಮಾಡಿದೆ ಎಲ್ಲ ಹಳ್ಳಿಗಳಿಗೂ ಅನ್ವಯಿಸುವ ರೀತಿಯಲ್ಲಿ ಆದಷ್ಟು ತೀವ್ರ ಬರುವುದು ಅವಶ್ಯ

ರಾಷ್ಟ್ರದ ಜೀವನದ ವ್ಯವಹಾರ ಆಡಳಿತಗಳನ್ನು ಸುಗಮಗೊಳಿಸುವ ಮಹಾನ್ ಉದ್ದೇಶದಿಂದ ದಿನವೂ ಹೊಸ ಹೊಸ ಹೊಂದಿಕೆ ಇಲ್ಲದ ಕಾನೂನು ಸೃಷ್ಟಿಸುವುದಕ್ಕಿಂತಲೂ ಜನತೆಯಲ್ಲಿ ಪರಿಶುದ್ಧವಾದ ನೀತಿಮಟ್ಟವನ್ನು ಬೆಳೆಸುವ ಕಾರ್ಯ ಭವ್ಯವಾದ ಆಡಳಿತಕ್ಕೆ ಹೆಚ್ಚು ಯಶಸ್ಸು ತರಬಲ್ಲದು. ಕಾನೂನಿನ ಭಯಕ್ಕಿಂತಲೂ ನೀತಿಯ ಭಯ ದೊಡ್ಡದಾಗಿರಬೇಕು ನೀತಿಯ ಹಿರಿಮೆ, ಅದರ ಪ್ರಾಬಲ್ಯ, ಪ್ರಭಾವವನ್ನು ಕಾನೂನು ಎಂದಿಗೂ ಸರಿಗಟ್ಟಲಾರದು

ಸರಕಾರ ರಾಷ್ಟ್ರೀಯ ದೃಷ್ಟಿಯಿಂದ ಅನೇಕ ಕಾನೂನುಗಳನ್ನು ಮಾಡಿದರೂ ಜನ ಅದನ್ನು ಆಚರಿಸುವಾಗ ಸತ್ಯವನ್ನೂ ನೀತಿಯನ್ನೂ ತಳಿಯುವಷ್ಟು ಪ್ರಜ್ಞಾಹೀನರಾಗಬಾರದು. ಮಾಡಿದ ಕಾನೂನುಗಳೆಲ್ಲ ಜನಹಿತಕ್ಕಾಗಿಯೇ ಎಂದು ತಿಳಿಯುವದಕ್ಕಿಂತ 'ಜೀವನದ ಮೂಲ ಸತ್ಯ, ನೀತಿ, ನ್ಯಾಯಗಳೇ ಹಿರಿದಾದವು' ಎಂದು ತಿಳಿಯಬೇಕು ಮೇಲು

ವಾರ್ಷಿಕಚಂದಾ NAVAYUGA WEEKLY, UDIPI ಬೆಲೆ ಸಂಚಿಕೆ 12 ನಯಾ ಪೈಸೆ

(ಶ್ರೀಪತಿರಾವ್ ಒಂದು ಸಿನಿಮಾ ಹಾಡನ್ನು ವಿಸಿಲುಹಾಕುತ್ತಾ ಡಬ್ಬ ಡಬ್ಬನೆ ಬೂಟ್ಸು ಸಪ್ಪಳದೊಂದಿಗೆ ಬಂದು ಬಾಗಿಲು ಬಡಿಯುವನು)

ಶ್ರೀಪತಿ—ಕಮಲಾ! ಕಮಲಾ! ಎಲ್ಲಿ ಹೋದಳೋ! ನಾ ಬರೋ ಸಮಯ ಗೊತ್ತಿಗ್ಹೂ.....? ಕಮ್ಲಾ! ಏ ಕಮ್ಲಾ! (ಜೋರಾಗಿ ಬಡೆಯುವನು)

ಸಾವಿತ್ರಮ್ಮ—(ಒಳಗಿನಿಂದಲೇ) ಇಕೋ ಬಂದೇಪ್ಪಾ, (ಬಾಗಿಲು ತೆಗೆಯುವಳು) ಅವಳು ತೋಟದ ಕಡೇ ಹೋಗಿದ್ದಾಳಪ್ಪಾ ಶ್ರೀಪತೀ.

ಶ್ರೀಪತಿ—ತೋಟದಲ್ಲೇನಂತೆ ಈ ಸಾಯಂಕಾಲದಲ್ಲಿ?

ಸಾವಿತ್ರಮ್ಮ—ಹುಡುಗ ಬಾ ಬಾ ಅಂತ ಎಳಕೊಂಡು ಹೋದ. ಪಲ್ಯಕಾಯಿಗೆ ಓಳೀ ತೆಗೀತಾ ಇದ್ದಾಳೆ.

ಶ್ರೀಪತಿ—(ಒಳಗೆ ಹೋಗುತ್ತ) ಥಕ್! ನಾನ್ಸನ್ಸ್! ಇನ್ನವಳು ಬರೋವರೆಗೂ ಬೂಟ್ಸೂ ಕೋಟು ಎಲ್ಲಾ ಹೊತ್ಕೊಂಡು ಕೂತಿರ್ಬೇಕೇ ನಾನು? ಹುಂ! (ಬೂಟ್ಸು ಕಳಚಿ-ಆಚೆಗೆ ಬಿಸುಟು) ದನಕರು ಸಾಕ್ತೇನೇಂತ ಹಟಹಿಡಿದು ಅದು ಬೇರೆ ಕಟ್ಟಿಕೊಂಡ್ಲು. ನೆಗಡೀ ಹುಲ್ಲೂ ಅಂತ ಅವಳು ಗೋಸೇವೆ ಮಾಡೋ ಕಾಟಾನ ಸೈಸಿಕೊಂಡ್ರೆ, ಈಗ ತೋಟದ ಕೆಲ್ಸಕ್ಕೆ ಇಳಿದುಬಿಟ್ಟಳೆ? ಕಲಿತ ಹೆಣ್ಣೂ ಅಂತ ಕೈಹಿಡಿದ್ರೆ ಈಗ ಹಳ್ಳೀ ಹೆಣ್ಣಿನ ಗುಣ ತೋರಿಸ್ತಾ ಇದ್ದಾಳೆ!

ಸಾವಿತ್ರಮ್ಮ—ಆದ್ಯೇನಪ್ಪಾ ಗೊಣಗ್ತಾ ಇದ್ದೀ. ಇಕ್ಕೋ, ಕಾಫೀ ತಿಂಡೀ ತಗೋಸ್ಪ (ಇಡುವಳು)

ಶ್ರೀಪತಿ—ನಂಗೆ ಬೇಡಮ್ಮ ತಕ್ಕೊಂಡು ಹೋಗು.

ಸಾವಿತ್ರಮ್ಮ—ಯಾಕೋ ಅಷ್ಟು ಸಿಟ್ಟು ಮಗಾ?

ಶ್ರೀಪತಿ—ಮತ್ತೇನಮ್ಮ, ನಾನು ಆಫೀಸಿಂದ ಬರೋ ಹೊತ್ತಿಗೆ ಅವಳು ಮನೇಲಿರ್ಬೇಕೋ ಬೇಡ್ವೊ? ನಿನ್ನ ಹತ್ರ ಸೇವೆ ಮಾಡ್ಸಿಕೊಳ್ಳೇ ನಾನು? ನಂಗೆ ಬೇಡಮ್ಮ.

ಸಾವಿತ್ರಮ್ಮ—ಇನೇನು ಮಾತೋ ಮಗಾ? ನಾನು ಹೊತ್ತು ಹೊತ್ತು ನನ್ನ ಕೈಯಾರೆ ಬೆಳೆಸಿದ ಮಗ ನೀನು ನಾನು ಕೊಡೋದನ್ನು ಬೇಡಂತಿಯಾ? ನನಗಿಂತಲೂ ಹೆಚ್ಚಾದಳೇ ಹೆಂಡ್ತಿ? ಅ....ಯ್ಯೋ!....

ಶ್ರೀಪತಿ—ಎಲೆಲಾ! ನೀನ್ಯಾಕಮ್ಮಾ ಅಳ್ತೆ? ಛೆ ಛೆ! ನೀವೆಲ್ಲಾ ಸೇರಿ ಒಟ್ಟಿಗೇ ನನ್ನ ಗೊಳು ಹೊಯ್ಕೊಳ್ತೀರಲ್ಲಾ!

ಸಾವಿತ್ರಮ್ಮ—ನನ್ನ ಮಗನಿಗೆ ಕಾಫೀ ತಿಂಡಿ ಕೊಡೋಭಾಗ್ಯ ಬಂತಲ್ಲಾಂತ ಎಷ್ಟೋ ಸಂತೋಷಪಟ್ಟೆ. ಹೆತ್ತ ತಾಯಿಯ ಕೈ ತಿಂಡೀ ಮಗನಿಗೇ ಬೇಡವಾದರೆ ಅಯ್ಯೋ ನನ್ನ ಹೊಟ್ಟೆ ಕುದೀತಲ್ಲೋ ಮಗಾ!

ಶ್ರೀಪತಿ—ಅಯ್ಯೋ! ಯಾಕಮ್ಮಾ ಹೀಗೆ ತಲೇ ಜಜ್ಜಕೊಳ್ತ್ಯಾ ಅಮ್ಮಾ? ಮಗಾ ಅಂತ ಈಗಲೂ ನಿನ್ನ ಮಡಿಲಲ್ಲಿ ಮಲ್ಕೊಳ್ಳೇ ನಾನು? ನನಗೇನೂ ಬೇಡಾ ನಾ ಹೋಟ್ಲಲ್ಲೇ ಕುಡುದು ಬಂದಾಯ್ತು.

ಸಾವಿತ್ರಮ್ಮ—ಸುಳ್ಳು ಹೇಳ್ತ್ಯಾ, ನಂಗೊತ್ತು ನನ್ನಂತ ಮುದುಕೇರು ಇನ್ನು ಬದುಕಿರಬಾರ್ದಪ್ಪ.

(ಹುಡುಗ ಹಾಡುತ್ತಾ ಬರುತ್ತಾನೆ)

ಹುಡುಗ—

ನೆಲವನು ಅಗೆಯೋಣ
ಓಳಿಯ ತೆಗೆಯೋಣ
ಬೀಜವ ಬಿತ್ತೋಣ
ಬೆಳೆಸನು ಬೆಳೆಸೋಣ.

(ಬಂದು) ಅವ್ವಾ ಅಮ್ಮ ಬದನೇ ಬೀಜ ತಾ ಅಂದ್ಲು. ಇದೇನವ್ವ! ಅಳ್ತಾ ಇದ್ದೀ! (ಗಟ್ಟಿಯಾಗಿ) ಓ ಅಮ್ಮಾ! ಇಲ್ಲಿ ಅಪ್ಪ ಅವ್ವನ್ನ ಅಳಿಸ್ತಾ ಇದ್ದಾರೇ.

ಸಾವಿತ್ರಮ್ಮ— ಮುಚ್ಚಾ ಬಾಯಿ! ಎಂಥದೋ ಅದು ಹಾಗೆ ಕೂಗೋದು ನಾಚಿಕೆ ಇಲ್ದೇ? ನನ್ನ ಕರ್ಮಕ್ಕೆ ನಾ ಅತ್ರೆ ನಿಂಗೇನೊ. ಬದನೇ ಬೀಜ ತಾನೇ ಅಕ್ಕೋ; ಆ ಗೆಂಟೇಲಿ ಹಾಕಿಟ್ಟಿದ್ದೇನೆ. ತಕ್ಕೊಂಡು ಹೋಗು.

ಶ್ರೀಪತಿ—ಲೋ ಮಾಧ! ಏನೋದು ವೈಕ್ಯೆಯೆಲ್ಲಾ ಕೆಸರು ಮಾಡಿಕೊಂಡು ಕೂಲೀಯವನ ಹಾಗೆ?

ಮಾಧು—ಇಲ್ಲಣ್ಣಾ, ತೋಟದ ಕೆಲ್ಸ, ಓಳೀ.....

ಶ್ರೀಪತಿ—ಛೀ ಹುಚ್ಚ! ಬೇರೆ ಕೆಲ್ಸ ಇಲ್ಲಾ ನಿನಗೂ ಅಮ್ಮನಿಗೂ!

ಮಾಧು—ಇದೂ ಭಾಳ ಮುಖ್ಯ ಕೆಲ್ಸಾ ಅಂತ ಮಾಸ್ತರು ಕೂಡಾ ಹೇಳುತ್ತಾರಪ್ಪಾ, ಶಾಲೇಲಿ.....

ಶ್ರೀಪತಿ—ಮಣ್ಣು ಹಾಕಿತು ನಿನ್ನ ಶಾಲೆಗೆ.

ಮಾಧು—ಹೌದಪ್ಪ. ಮಣ್ಣಿನ ಪಾಠ ಕೂಡಾ ಉಂಟು. ಹಣ್ಣುಗಳು, ತರಕಾರಿ, ಧಾನ್ಯ ಇವನ್ನೆಲ್ಲಾ ಬೆಳೆಸಲು ನಾವೂ ಕಲೀಬೇಕಂತೆ.

ಶ್ರೀಪತಿ—ಇದೆಲ್ಲಾ ಕಲ್ತು ಎತ್ತ ಹೊಡಿಯೋ ಉದ್ಯೋಗಕ್ಕೆ ಹೋಗುತ್ತಿಯೇನೋ ಕತ್ತೆ! ಏನು ವಿದ್ಯೆಯೋ ಮಣ್ಣೊ! ಆಫೀಸರ್ ಶ್ರೀಧರರಾಯರ ಮಗ ಕೆಸರಲ್ಲಿ ಹೊರಳಾಡ್ತಾನಂತೆ ಹಂದೀ ಹಾಗೆ. ನಿನ್ನನ್ನು ಈ ಮಣ್ಣಿನ ಶಾಲೇ ಬಿಡಿಸಿ ಬೇರೆ ಶಾಲೆಗೆ ಹಾಕ ಬೇಕು.

ಮಾಧು—ಬೇಡಪ್ಪ. ಇದೇ ಒಳ್ಳೇ ಶಾಲೆ. ಹುಡುಗೇರಿಗೂ ಅಡಿಗೇ ಕಸೂತಿ, ಹೊಲಿಗೆ ಎಲ್ಲಾ ಕಲಿಸುತ್ತಾರಪ್ಪಾ. ಸರಳೇನ ನೋಡಪ್ಪ.

ಸರಳೆ— (ಓಡಿ ಬಂದು ಹಾಡುವಳು)

ಗಂಡುಹೆಣ್ಣು ಭಾರತಮ್ಯದಿಂದ ಮೇರೆ ಮೀರದಂತೆ ಸರಿಸಮಾನರಾಗಿ ದುಡಿಯೋಣಾ.

(ಮಾಧುವೂ ಅವಳೊಂದಿಗೆ ಸೇರಿ ಹಾಡುವನು.)

ಭಾರತೀಯರೆಲ್ಲರೊಂದೆ
ಭಾರತೀಯ ಮಕ್ಕಳಾಗಿ
ಮೇಲುಕೀಳು ಭೇದನೀಗಿ
ಕೆಲಸವೆಲ್ಲ ಕಲಿಯೋಣ
ಆಲಸ್ಯವ ಹರಿಯೋಣ
ಸಮಯದ ಬೆಲೆಯರಿಯೋಣ
ದುಡಿತದ ನೆಲೆ ತಿಳಿದುಕೊಂಡು
ಖ್ಯಾತರಾಗಿ ಬಾಳೋಣ.

ಸಾವಿತ್ರಮ್ಮ—ಆಹಾ! ಎಷ್ಟು ಚೆನ್ನಾಗಿದೆ!

ಮಾಧು—ಅಬ್ಬಾ! ದುಃಖಹೋಯ್ತು ಅವ್ವನಿಗೆ.

ಸಾವಿತ್ರಮ್ಮ-ಛಂದಾಗಿ ನೂರು ವರ್ಷ ಬಾಳೀ ಮಕ್ಕಳೆ. ದೃಷ್ಟಿ ತಾಗೀತು. (ಚಿಟಿ ಚಿಟಿ ಸಿಟಿಕೆ ಮುರಿಯುವಳು.) ನೋಡೋ ಶ್ರೀಪತಿ ಈ ಮಕ್ಕಳ ಉತ್ಸಾಹಾನ ನೋಡು. ಕೋಪ ಹೋಯ್ತಪ್ಪೆ. ಇನ್ನಾದ್ರೂ ಈ ತಿಂಡೀ ತಕ್ಕೋಪ್ಪ. ಇಗೋ, ಕಾಫೀನ ಬಿಸಿಮಾಡಿ ತಂದುಬಿಡ್ತೇನೆ.

ಶ್ರೀಪತಿ-ಏನೂ ಬೇಡಾಂದ್ರೆ ಬೇಡಾ. ಏ ಮಾಧೂ. ಇನ್ಮೇಲೆ ಹೀಗೆ ಮೈ ಕೈ ಮಣ್ಣೂ ಮಾಡ್ಕೊಂಡು ನನ್ಮುಂದೆ ಬಂದೀಯಾ ಚರ್ಮ ಸುಲಿದ್ ಬಿಟ್ಟೇನು. ಥೇಟ್ ಹೊಲೇನ ಹಾಗಿದ್ದಾನೆ!

ಮಾಧು—ಅಯ್ಯಯ್ಯೊ! ಹಾಗೆಲ್ಲಾ ಹೇಳಬಾರ್ದಂತಪ್ಪಾ. ಎಲ್ಲರೂ ಒಂದೇ ಮನುಷ್ಯರೇಂತಪ್ಪಾ!

ಶ್ರೀಪತಿ—ಮುಚ್ಚೋ ಅಧಿಕ ಪ್ರಸಂಗಿ (ಮಾತಿನೊಂದಿಗೇ ಛಟೇಲನೊಂದೇಟು) ಹೇಳಿದ್ದಕ್ಕೆಲ್ಲಾ ತರ್ಕಮಾಡ್ತಾನೆ.

(ಮಾಧು ಅಳುತ್ತಾ ದೂರ ಹೋಗುತ್ತಾನೆ)

ಸಾವಿತ್ರಮ್ಮ—ಏನು ಕರ್ಮ ಬಂತಪ್ಪಾ ಇವತ್ತು! ಮಗೂಗೆ ಯಾಕೋ ಹೊಡ್ದಿ?

ಶ್ರೀಪತಿ—ಛಿ! ನಾನ್ಸೆನ್ಸ್! ಇವನಿಗೆ ಹೊಡ್ದು ನನ್ನ ಕೈಪೂರಾ ಕೆಸ್ರು. ಹೋಗೋ ಮಾಧ! ನೀರುತಾ. ನೋಡ್ತಾನೆ ನಿಂತು!

ಮಾಧು—(ಅಳುತ್ತ) ಊಹುಂ, ನಂ ಕೂಡಪ್ಪಾ. ಮತ್ತಾಕೆ ಹೊಡದ್ದು?

ಶ್ರೀಪತಿ— ಮೂರ್ಖಾ! ಇನ್ನೂ ಬೇಕೆ (ಹಾರಿ ಹಿಡಿದು ಇನ್ನೊಂದೇಟು ಕೊಟ್ಟು) ತಂದೇಂತ ಸ್ವಲ್ಪಾದ್ರೂ ಭಯವಿಲ್ಲ. ಛೀ ಛೀ! ಒಂದೇ ಕೆಸರು. ಏ ಸರಳಾ! ನೀರು ತಾರೇ.

ಸರಳೆ—ನಂಕೂಡ್ದು ಅಪ್ಪಾ. ಆ ಮೇಲೆ ಅಣ್ಣ ನಂಗ ಬಯ್ತಾನೆ.

ಶ್ರೀಪತಿ— ಒಹ್ಹೊ! ನೀನೂ ಕಲ್ತು ಕೊಂಡಿದ್ಯಾ ಅಧಿಕ ಪ್ರಸಂಗತನ? ಓಡುತ್ತ್ಯಾ. ಬಾರದೇ ಇತ್ಯಾರ್ ನೋಡ್ತೇನೆ.

ಸಾವಿತ್ರಮ್ಮ—ಕುಮ್ಮನಿರೋ ಶ್ರೀಪತೀ. ಇನ್ನು ಇವಳನ್ನೂ ಹೊಡದು ಕೂಗಿಸಬೇಡ್ವೊ. ಇಕೋ ನೀರು ನಾ ತಂದೆ.

ಶ್ರೀಪತಿ—ಬೇಡಾಮ್ಮ ನಿನ್ನ ನೀರು ಮತ್ತೆ ನಿನ್ನ ಕೈಲಿ ಸೇವೆ ಮಾಡ್ಸಿಕೊಳ್ಳೋ ಸಾಮರ್ಥ್ಯ ನಾನಲ್ಲ ಬಿಡು. (ಪರ್ರೆಂದು ಒಂದು ಪಸ್ಪವನ್ನು ಹರಿದು ಅದಕ್ಕೆ ಕೈ ಒರೆಸಿಕೊಳ್ಳುವನು)

ಸಾವಿತ್ರಮ್ಮ— ಅಯ್ಯೊ! ಒಳ್ಳೇ ಬೈರಾಸನ್ನು ಹರಿದುಬಿಟ್ಟಿಯಲ್ಲೊ! ಇದೆಂಥಾ ತಲೆತಿರುಕತನ ಬಂತಪ್ಪಾ ನಿನಗೆ? ನೀನು ಮಗುವಾಗಿರುವಾಗ ನಾನಿನ್ನ ಎಷ್ಟು ತೊಳೆದಿದ್ದೇನೆ, ಎಷ್ಟು ಬಳದಿದ್ದೇನೆ, ಎಷ್ಟು.... ...

ಶ್ರೀಪತಿ— ಅದೆಲ್ಲಾ ಈ ಮಗುವಿನ ಮದುವೆ ಆಗೋ ಪರೆಗಾಯ್ತು. ಹೆಂಡ್ತೀ ಬಂದ ಮೇಲೆ ಗಂಡುಗೆ ಬೇಕಾದ್ದೆಲ್ಲಾ ಅವಳೇ ಮಾಡಬೇಕು.

ಸಾವಿತ್ರಮ್ಮ— ಅವಳೇನೋ ಕೆಲ್ಸದಲ್ಲಿದ್ದೆ ನಾನು ಮಾಡಬಾರ್ದೆ? ಎಲಾ! ಹೊಡಬೇಬಿಟ್ಟಿಯಲ್ಲೋ ಶ್ರೀಪತಿ? ಈ ತಿಂಡೀನಾದ್ರೂ ತಿನ್ನೋ ಮಗಾ.

ಒಂದು ದಿನ ಸಂಜೆಯಲ್ಲಿ

ದುಡಿಮೆಯೇ ಜೀವನ ಎಂಬ ನೂತಿಂದು ಕಾರ್ಯರೂಪಕ್ಕೆ ಬರುತ್ತಿರುವುದಾದರೂ ಅದಕ್ಕೆ ಅಲ್ಲಲ್ಲಿ ವಿರೋಧವೂ ಕಿವಿದೆರೆಗೆ ಬಡಿಯುತ್ತದೆ, ಈ ಪ್ರತಿಷೇಧದಿಂದುಂಟಾದ ವಿರಸ-ಸರಸಗಳ ಅಳಸ್ಕರ ಚಿತ್ರವಿದು.

ಚಿತ್ರಿಸಿದವರು: ಶ್ರೀ "ನವಗಿರಿನಂದ"

ನವೀನ ಕಾದಂಬರಿ ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು: ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಅಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ:ರೂ. 1—12—0 (1-75)

ಪ್ರತಿಗಳಿಗೆ— **ನವಯುಗ ಪ್ರೆಸ್, ಉಡುಪಿ.**

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಶ್ರೀಪತಿ—ಬೇಡಾಂದ್ರೆ ಸುಮ್ನೇ ಚರಿ ಪರಿ ಮಾಡಬೇಡ. (ಧಡಧಡನೆ ಹೊರಗೆ ಹೋಗುವಾಗ ಶಾರದೆ ಇದಿರಾಗಿ ಬರುವಳು.)

ಶಾರದೆ— ಏನೋ ಮಾಧು? ಬೀಜ ತಾರಾ ಅಂತ ಕಳಿಸಿದರೆ ಇಲ್ಲಿ ಅಳುವೋರೆ ಹಾಕ್ಕೊಂಡು ನಿಂತಿದ್ದಿ?

ಮಾಧು—ಅಪ್ಪ ನೋಡಮ್ಮ ಅವ್ವನ್ನ ಅಳಿಸಿದ್ರೂ. ನನ್ನ ಹೊಡೆದ್ರೂ. ಸರಳೇನ್ನೂ ಹೊಡೀತಿದ್ರು. ಅವ್ನ ಕಾವಾಡಿ ಬಿಟ್ಲಮ್ಮ.

ಸಾವಿತ್ರಮ್ಮ—ನೋಡೇ ಶಾರದಾ, ನಾ ತಂದುಕೊಟ್ಟ ಕಾಫೀಕಂಡಿ ಬೇಡಾಂತಂದು ಮಕ್ಕಳನ್ನೆಲ್ಲಾ ಅಳಿಸಿ ಹಾಕಿ ಹೋಗ್ತಾ ಇದ್ದಾನೆ.

ಶಾರದಾ— ಏನೊಂದ್ರೆ, ಯಾಕೆ ಹೀಗೆ ಬನ್ನೀಂದೆ. ಆ—ನಿಮಗೇ

ಶ್ರೀಪತಿ—(ದೂರದಿಂದ) ಯಾಕೇ? ನಾಬರೋದಿಲ್ಲ.ಎತ್ತಾದ್ರೂ ಹೋಗ್ತೇನೆ.

ಶಾರದಾ—(ಗಂಡನ ಬಳಿಗೆ ಧಾವಿಸಿ) ನಿಲ್ಲೇಂದ್ರೆ.

ಶ್ರೀಪತಿ—ಆಹಾಹಾ! ಸಾಕ್ಷಾತ್ ಮಹಾಂಕಾಳಿ! ನೀನೂ, ನಿನ್ನ ಕೆದರಿದ ತಲೆಯೂ, ಮಣ್ಣು ಮೆತ್ತಿದ ಸೀರೆಯೂ, ಸುರೂಪವೂ!

ಶಾರದಾ—ಆಯ್ತಾಯ್ತೂ. ಅದೆಲ್ಲಾ ಆ ಮೇಲೆ ವರ್ಣಿಸೀರಂತೆ. ಮೊದಲು ಕಾಫೀ ತಿಂಡಿ ತೆಕೆ ಕೈಳಿ.

ಶ್ರೀಪತಿ—ದೂರ ನಿಲ್ಲೇ. ನಿನ್ನ ಈ ಮಣ್ಣು ಕೈಲಿ ನನ್ನ ಮುಟ್ಟಿಗಿಟ್ಟ ಬಿಡಬೇಡಾ.

ಶಾರದಾ—ಇಲ್ಲಾ ಇಲ್ಲ ಶಾಂತರಾಗಿ. ನಿಮ್ಮ ಕೋಪ ಯಾಕೇಂತ ನನಗೆ ತಿಳೀತು.

ಶ್ರೀಪತಿ—ತಿಳಿದರೆ ಬೇಕಂತ ಮಾಡೋದೂ ಅಂತ ಆಯ್ತು.

ಶಾರದಾ—ಬೇಕಂತ ಮಾಡದೆ ಬೇಡಾಂತ ಮಾಡಿದರೆ ಅರ್ಥ ಉಂಟೆ? ಎಲ್ಲಾ ನಮ್ಮ ಒಳ್ಳೇದಕ್ಕೆ.

ಶ್ರೀಪತಿ—ಒಳ್ಳೇದಕ್ಕೆ ನೀನೇನೇ ಮಾಡೋದು ಮಹಾ?

ಶಾರದಾ—ನಿಮಗೆಗೊತ್ತಿಲ್ಲದೆ ನಾನೇನೂ ಮಾಡಿಲ್ಲಲ್ಲಾ. ನೀವು ಬೇಡಾಂದರೂ ನಾನು ಆಕಳು ಕರು ಕಟ್ಟಿಕೊಂಡೆ. ಈಗ ಮಕ್ಕಳಿಗೆಲ್ಲಾ ಒಳ್ಳೇ ಹಾಲು ಮಜ್ಜಿಗೆಯೂ ಸಿಕ್ಕುತ್ತೆ ಇಲ್ಲವೋ? ಮೊದಲು ತಿಂಗಳಿಗೆ ಮೂವತ್ತು ನಲುವತ್ತು ಬರೀ ಪಾಲಿಗೇ ಖರ್ಚು ಮಾಡಿದರೂ ಮಕ್ಕಳು ಭಾಗ ನೀರೆ.

ಶ್ರೀಪತಿ—ನಾಕು ಬಿಡು. ಸಣ್ಣ ಮಗುವಿಗೆ ಹೇಳಿದ ಹಾಗೆ ನನಗೆ ಹೇಳುತ್ತಿ. ನನ್ನಂಥ ಆಫೀಸರ್ರ ಹೆಂಡತಿಯಾದ ನೀನು ದನದ ಸೆಗಣಿ ಬಾಚುತ್ತ, ತೋಟದಲ್ಲಿ ಹುಲ್ಲು ಹರಿಯುತ್ತ ಇದ್ದರೆ ನಾನು ಮರ್ಯಾದೀನ ಎಲ್ಲಿ ಇಟ್ಟುಕೊಳ್ಳೀ? ಇನ್ನು ನಿನ್ನನ್ನು ನೋಡಿ ನಿನ್ನ ಮಕ್ಕಳೂ ಕಲಿತುಕೊಳ್ಳುತ್ತವೆ ಎತ್ತು ಹೊಡೀಲಿಕ್ಕೆ.

ಶಾರದಾ—ಹಾಗೆ ಎತ್ತೂರೂ ಕಲಿತುಕೊಂಡು ಬಿಟ್ಟರೆ ಮತ್ತೆ ಈ ಭೂಮೇಗೇ ಅವಕಾಶವಿಲ್ಲವಲ್ಲಾ. ಗೋ ಸೇವೆ, ಭೂ ಸೇವೆ ಅಂದರೆ ಎಲ್ಲರೂ ಒಟ್ಟು ಸೇರಿ ಮಾಡಬೇಕಾದ ಕೆಲಸ ತಾನೆ? ನಾವೂ ಮಾಡಬೇಕು. ಬೇರೆಯವರಿಂದಲೂ ಮಾಡಿಸ....

ಶ್ರೀಪತಿ ನಾಕು ಬಿಡು. ಹೋಗಬೇಕು ನನಗೆ.

ಶಾರದಾ—ಕೂಡೀ ಇಲ್ಲಿ. ನಾನೇ ತಂದು ಕೊಡ್ತೇನೆ.

ಶ್ರೀಪತಿ—ಬೇ....ಡಾ.

ಶಾರದಾ— ನಾ ಬಿಡೇ. ಒಂದೇ ನಿಮಿಷ. ನಿಮ್ಮ ಮನಸ್ಸಿಗೆ ಆಗೋ ಹಾಗೇ ತರ್ತೇನೆ. ಸರಿ ತಾನೆ. ಈ ಕ್ಷಣಾ ಮುಖಾ ಕೈ ತೊಳ್ಕೊಂಡು, ಪೌಡರ್, ಸ್ನೋ ಎಲ್ಲಾ ಹಚ್ಚಿಕೊಂಡು ಅದೇ ನೀವು ಹಿಂದೆ ಬಣ್ಣಿಸ್ತಾ ಇದ್ದಿರಲ್ಲ, ಅವಳ ಹಾಗೇ ಆಗಿ ಬರ್ತೇನೆ. ಆಯ್ತಷ್ಟೆ?

ಶ್ರೀಪತಿ—ನಾಕೇ ನಿನ್ನ ಅಣಕ!

ಶಾರದಾ—ಮತ್ತೇನೊಂದ್ರೆ. ಹಿಂದೆಲ್ಲಾ ನೀವು ಹೇಳಿದ ಹಾಗೇ ನಾನೂ ಕುಣೀಲಿಲ್ಲೆ? ನಿಮ್ಮೊಂದಿಗೆ ಎಷ್ಟು ಸಿನಿಮಾ ನೋಡಿಲ್ಲ? ಎಲ್ಲೆಲ್ಲಿಗೆ ವಾಕಿಂಗ್‌ಗೆ ಬರಲಿಲ್ಲ? ನಾನು ಕಳ್ಳೇಲಿ ಕಲಿತ ಎಷ್ಟೋ ಕೆಲಸಗಳನ್ನು ನಿಮ್ಮಗಾಗೇ ಮಾಡದೇನೇ ಇರ್ಲಿಲ್ವೆ?

ಶ್ರೀಪತಿ—ಮತ್ತೆ ಈಗೀಗ ಏನು ಕೋಡು ಬಂತೊ?

ಶಾರದಾ—ಕೋಡಿಗಿಂತ ಹೆಚ್ಚೇ ಬಂತೂನ್ನಿ. ಮೂರು ಮಕ್ಕಳಾದಾಯ್ತು; ಸಂಸಾರ ಭಾರ ಹೆಚ್ಚಾಯ್ತು. ನಿಮ್ಮ ಸಂಬಳ ತಿಂಗಳಪೈರಿ ವರೆಗೆ ಈಗೀಗ ಬರೋದೇ ಇಲ್ಲವಲ್ಲಾ?

ಶ್ರೀಪತಿ—ಆ ಚಿಂತೆ ನಿನಗೆ ಯಾಕೇ ಅಂತ ನಾಕೇಳೋದು?

ಶಾರದಾ—ಅದೇನು ಮಾತೊಂದ್ರೆ? ಸಂಸಾರದಲ್ಲಿ ಹೆಂಡತಿಗೆ ಅರ್ಧ, ಅಲ್ಲಿಲ್ಲ ಮುಕ್ಕಾಲು ಭಾಗ ಜವಾಬ್ದಾರಿ ಉಂಟು ಗೊತ್ತೆ? ಸರಿ. ಅದೆಲ್ಲಾ ಯಾತೀಗ? ನಿಮ್ಮ ಇಷ್ಟ ಪ್ರಕಾರ ಇದ್ದರಾಯಿತಷ್ಟೆ? ಬನ್ನೀಗ. ಅಗೋ - ನಿಮ್ಮ ಸ್ನೇಹಿತರು ಸುಬ್ರಾಯರು ಬರ್ತಾ ಇದ್ದಾರಲ್ಲ.

ಶ್ರೀಪತಿ—ಎಲೆಲಾ! ನಾನು ಆಫೀಸಿನಿಂದ ಬಂದ ವೇಳೆ ನೋಡಿಯೇ ಬಂದಿದ್ದಾನೆ ಮಾರಾಯ!

ಶಾರದಾ— ಓಹೊ! ಅವರ ನಾಲ ಇನ್ನೂ ಕೊಟ್ಟಿಲ್ವೇ ನೀವು?

ಶ್ರೀಪತಿ-ಹೂಂ ಕ್ವಲ್ಪ ಬಾಕಿಯಿತ್ತು. ಬೇಗ ಅವನಿಗೂ ಒಂದು ಲೋಟೆ ಕಾಫಿ ಮಾಡಿ ತಾ. ಹೇಗಾದ್ರೂ ತಾಜಾಮಾಡಿ ಕಳಸಿಬಿಡ್ತೇನೆ.

ಸುಬ್ರಾಯ—ಓ! ಹೊರಟು ನಿಂತಿದ್ದೀರಾ ಶ್ರೀಪತಿರಾವ್? ಸರಿಯಾದ ಸಮಯಕ್ಕೇ ಬಂದೆ ನಾನು

ಶ್ರೀಪತಿ—ಬನ್ನಿ ಬನ್ನಿ. (ಇಬ್ಬರೂ ಒಳಗೆ ಬರುವರು) ಕೂಡಿ ಮಿಸ್ಟರ್ ಸುಬ್ಬರಾವ್. ನೀವು ಬಂದ ಉದ್ದೇಶ ಗೊತ್ತಿದೆ. ನೆನಪಿದೆ. ಈಗ ತಾರೀಕು ಹದಿನೈದಾಗಿ ಹೋಯ್ತು. ಬರುವ ಒಂದನೇ ತಾರೀಕಿಗೆ. .....

ಸುಬ್ರಾಯ—ಅಯ್ಯೋ, ಹಾಗನ್ನಬೇಡೀ ಶ್ರೀಪತಿರಾವ್. ನೀವು ಮೊನ್ನೆ ಒಂದನೇ ತಾರೀಕಿಗೇ ಬಾ ಅಂದಿದ್ದಿರಿ. ಒಂದನೇ ತಾರೀಕಿನ ದಿನವೇ ಸಾಲಗಾರ ಬರೋದು ಜೆನ್ನಾಗಿಲ್ಲಾಂತ ನಾನು ಬಹಳ ಸಾವಕಾಶವಾಗಿ ಬಂದೆ. ಮೊನ್ನೆ ನೀವು ಈ ದಿನ ಕೊಡುತ್ತೇನೇ ಅಂತ ಹೇಳಿದ್ದನ್ನು ನಾನು ತುಂಬಾ ನಂಬಿದ್ದೆ ನೋಡಿ. ಈಗ ನೀವು ಹೇಗಾದರೂ ಕೊಟ್ಟು ತೀರಿಸದಿದ್ರೆ ನಾನು ಬಹಳ ಕಷ್ಟದಲ್ಲಿ ಬೀಳ್ತೇನೆ.

(ಶಾರದೆ ಕಾಫೀ ತಂದಿಡುವಳು)

ಶ್ರೀಪತಿ—ತಕ್ಕೊಳ್ಳಿ ಸುಬ್ರಾಯ್ರೆ.

ಸುಬ್ರಾಯ—ಇದಕ್ಕೇನೀಗ, ನೀವೂ ತಕ್ಕೊಳ್ಳಿ

ಶಾರದೆ—ಏನೊಂದ್ರೆ, ಕ್ವಲ್ಪ ಹೀಗೆ ಬನ್ನಿ.

ಶ್ರೀಪತಿ—(ಒಳಗೆ ಹೋಗಿ) ಏನೆ?

ಶಾರದಾ—ಅವರಿಗೆಷ್ಟು ಇಸ್ಪತ್ತೈದು ತಾನೆ? ಇಕೊಳ್ಳಿ, ಕೊಟ್ಟಿಡಿ.

ಶ್ರೀಪತಿ—ಇದೆಲ್ಲಿಂದ ಶಾರೀ?

ಶಾರದಾ—ಕಳೆದ ತಿಂಗಳು ಮನೆಬಟೀನಲ್ಲಿ ಮಿಗಲಿಸಿದ್ದ. ಸುಮ್ಮನೆ ದುಂದು ವ್ಯಯಮಾಡಿ, ಸಾಲದವರಹತ್ತಿರ ಹಲ್ಲು ತೋರಿಸುವುದು ಏನು ಗೌರವ ಹೇಳಿ? ಕೊಟ್ಟುಬಿಡೀಂದೆ.

ಶ್ರೀಪತಿ—ಸವಾಯಿಕ್ಕೆ ಮರ್ಯಾದೆ ಉಳಿಸಿದಿ.

ಶಾರದಾ— ನೀವು ಪ್ರಸನ್ನರಾದಿರಲ್ಲ. ಅಷ್ಟೇ ನನಗೆ ಸಾಕು. ರಾತ್ರಿ ಊಟದ ಮೇಲೆ ಬೇಕಾದರೆ ಬೆಳುದಿಂಗಳ ವಾಕಿಂಗ್ ಮಾಡೋಣ.

(ಶ್ರೀಪತಿ ನಗುತ್ತಾ ಹೊರಗೆ ಬರುವನು)

ಮಾಧು— ಅಮ್ಮಾ ಒದನೇ ಬೀಜ ಯಾವಾಗಮ್ಮಾ ಹಾಕೋದು? ಒಳಿ ತೆಗೆದಾಯಿತಲ್ಲಾ?

ಶಾರದಾ—ನಾಳೆ ಬೆಳಗ್ಗೆ ಹಾಕೋಣ. ಈ ರಗಳೇಲಿ ಈಗ ಕತ್ತಲಾಯಿತಲ್ಲಾ.

ಮಾಧು— ಹೌದು. ಬೆಳಗ್ಗೆ ಎದ್ದು ಒಂದು ಗಂಟೆ ಮನೇ ಹತ್ತರ ತೋಟದ ಕೆಲಸ ಮಾಡಬೇಕೂಂತ ಮಾಸ್ತರು ಹೇಳಿದ್ದಾರೆ. ಅಲ್ಲೇನೇ ಸರಳಾ?

ಸರಳ—ಹೌದಣ್ಣಾ! ಭೂಸೇವೇ ಮಾತೃಸೇವೆ ಅಲ್ಲಾ, ಗೋಸೇವೆನೂ ಮಾಡಬೇಕಂತೆ.

ಶಾರದ—ನಿಜ ನಿಜ. ಭೂಮಿಯ ಕೆಲಸಕ್ಕೆ ಗೋವಿನ ಸಂಬಂಧವೂ ಉಂಟು. ಕೃಷಿ ಕಾರ್ಯಗಳಿಗೆಲ್ಲಾ ಪಶುಗಳೂ ಅಗತ್ಯ ತಾನೆ?

ಸರಳಾ-ಮಾಧು— ಹೌದು. ಹಾ ದು ಪ್ರತಿ ವರ್ಷವೂ ಸ್ವಾತಂತ್ರ್ಯದಿನದಂದು, ನಾವು ಆಲಸ್ಯರಾಗದೆ ಕೆಲಸಮಾಡುತ್ತೇನೇಂತ ಪ್ರತಿಜ್ಞೆಮಾಡಿಕೊಳ್ಳಬೇಕಂತೆ ಆ ಪ್ರತಿಜ್ಞೇನ ಮರೆಯದೆ ಇಡೀ ವರ್ಷ ಪಾಲಿಸಬೇಕಂತೆ.

ಶಾರದಾ—ಆಹಾ! ಹೀಗೆ ಎಲ್ಲರೂ ತಮ್ಮತಮ್ಮ ಕೆಲಸ ತಾವು ತಾನೇ ಮಾಡುತ್ತ ಹೋದರೆ, ಅತ್ಯಭಿವೃದ್ಧಿ ಎಂಬುದೇ ದೇಶಬಿಟ್ಟು ಹೋದೀತು. ಒಣಜಂಬ ಗಟ್ಟಿಕೆತ್ತೀತು

ಸರಳಾ—ಅಮ್ಮಾ, ನಾಳೆ ನಾನು ಹರುವೇ ಕಳಕ್ಕೆ ನೀರು ತರೀತೇನೆ.

ಮಾಧು— ಒ ನಾನು ನೀರು ಸೇದಿ ಕೊಡ್ತೇನೆ,

ಶ್ರೀಪತಿ-ಸರಿ, ಸರಿ. ನಾಳೆನಂಗೂ ಒಂದು ದೊಡ್ಡ ಹಾರೆ ತಯಾರ್ಮಾಡಿಡು.

ಶಾರದಾ—ಏನು ಬೇಡಾ. ಗಿಡದಲ್ಲೇ ಬಗ್ಗಿಸದಿದ್ರೆ ವಕ್ರವಾಗಿ ಬಗ್ಗೀತೆ? ಕೆಲಸ ಮಾಡುವಾಗ ಹುಮ್ಮಸ್ಸು ಳ್ಳವರಿಗೆ ನಿಮ್ಮಂಥವರ ಹರಕೆಯೂ ಬೆಂಬಲವೂ ಇದೇ ನಾಕು.

ಶ್ರೀಪತಿ—ಅಬ್ಬಾ ಉಳಿಸಿದಿ.

ಸರಳಾ—ಮಾಧು—(ಹಾಡುವರು.)

ಪ್ರತಿ ವರುಷದ ಸ್ವಾತಂತ್ರ್ಯದ ದಿನದಿ
ಪ್ರತಿಜ್ಞೆ ಮಾಡೋಣ - ಜಯ—
ಪ್ರತಿಜ್ಞೆ ಮಾಡೋಣ
ಹಿತಮಿತವಾಗಿ ಕೃಷಿವರು ಕಾರ್ಯದಿ
ಮತಿಯನು ವಗಿಸೋಣ—ದುಡಿತದ
ವ ಕೃತಿಯನರಿಯೋಣ ಸ್ವಾತಂತ್ರ್ಯದ
ಜತನವಿದೇ! ಕಾವಾಡೋಣ!

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು.
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೮. ಬೆಲೆ ರೂ. ೧-೫೦.

ನಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಭಾ

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಅಶೋಕನ ಕಾಲದ ಭಾರತ

(೩ನೇ ಪುಟದಿಂದ)

ನ್ನು ಭಾರತೀಯರು ಕಂಡು ಕೇಳಿ ಅರಿಯರು. ಅವನು ತನ್ನ ಸಾಮ್ರಾಜ್ಯದಲ್ಲಿ ಹಲವು ಸಾವಿರ ಸ್ತೂಪಗಳನ್ನು ಕಟ್ಟಿಸಿದನು. ಇವನ್ನು ಎಂಟು ಶತಮಾನ ಕಳೆದ ಮೇಲೆ ಬಂದ ಹ್ಯುಯನತ್ಸಾಂಗನು ಹಿಂದೂದೇಶವಲ್ಲದೆ ಅಫಘಾನಿಸ್ಥಾನದಲ್ಲೂ ಕಂಡಿದ್ದೇನೆನ್ನುತ್ತಾನೆ. ಭಾರತದಲ್ಲಿ ಆ ಕಾಲದಲ್ಲೇ ಕಾಶ್ಮೀರದ ಶ್ರೀನಗರ ಉದಯನಾಯಿತೆಂದೂ, ಅದನ್ನು ಅಶೋಕನೇ ಕಟ್ಟಿಸಿದನೆಂದೂ, ಅಲ್ಲಿ ೫೦೦ ಉನ್ನತವಾದ ವಿಹಾರಗಳನ್ನು ನಿರ್ಮಿಸಿದ್ದನೆಂದೂ ರಾಜತರಂಗಿಣಿಯಲ್ಲಿದೆ. ಹ್ಯುಯನತ್ಸಾಂಗನು ಹಿಂದೂದೇಶಕ್ಕೆ ಬಂದಾಗ ೧೦೦ ವಿಹಾರಗಳು ಮಾತ್ರ ಅಲ್ಲಿ ಜೀನ್ನಾಗಿದ್ದುವಂತೆ.

ಆ ದಿನಗಳಲ್ಲಿ ಕಟ್ಟಡಗಳಿಗೆ ವಿಶೇಷವಾಗಿ ಮರಗಳನ್ನೇ ಉಪಯೋಗಿಸುತ್ತಿದ್ದರು. ಶಿಲೆಯ ಕಟ್ಟಡಗಳೂ ಇದ್ದುವು. ಅಶೋಕನು ನಿರ್ಮಿಸಿದ ಕಲ್ಲುಮಂಟಪಗಳನ್ನು ಕಂಡು ಅರುನೂರು ವರ್ಷಗಳ ಅನಂತರ ಬಂದ ಫಾಹಿಯಾನನು ಈ ಮಂಟಪಗಳು ಮನುಷ್ಯ ನಿರ್ಮಿತವಲ್ಲ; ಭೂತಗಣಗಳಿಂದ ನಿರ್ಮಿತವಾಗಿರಬೇಕೆಂದು ಬೆರಗಾಗಿರುವನು.

ಅಶೋಕನ ಶಿಲಾಶಾಸನಗಳ ಪಕ್ಕಗಳಲ್ಲಿ ಮತ್ತು ಶಿಲಾಸ್ತಂಭಗಳಲ್ಲಿದ್ದ ಆನೆ, ಎತ್ತು, ಕುದುರೆ, ಚಕ್ರ ಮತ್ತು ಸಿಂಹ– ಇವು ಬೌದ್ಧರಿಗೆ ಪೂಜ್ಯವಸ್ತುಗಳು. ಆಗ ಇವು ಭಾರತೀಯರ ಪೂಜ್ಯ ವಸ್ತುಗಳೆಂದರೂ ತಪ್ಪಾಗದು. ಈ ವಿಗ್ರಹಗಳು ಅಶೋಕನ ಧರ್ಮವನ್ನು ಸೂಚಿಸುವುವು ಭಗವಾನ್ ಬುದ್ಧನು ಅವತಾರ ಮಾಡಿದಾಗ ಬಿಳಿಯ ಆನೆಯಾಗಿ ಸ್ವರ್ಗದಿಂದಿಳಿದು ಮಾಯಾದೇವಿಯಲ್ಲಿ ಜನಿಸಿದುದರಿಂದ ಆನೆಯು ದರ್ಶನವು ಬೌದ್ಧರಿಗೆ ಮಂಗಳಕರವಾಯಿತು. ಶಾರುಣ್ಯದ ಬುದ್ಧನನ್ನು ಸ್ಮರಿಸಬೇಕಾದರೆ ವೃಷಭದ ಚಿಹ್ನೆಯೂ, ಸಂಸಾರ ಜೀವನಕ್ಕೆ ಹೇಸಿ ಅರಮನೆಯನ್ನು ತ್ಯಜಿಸಿದ ಗೌತಮನನ್ನು ಸ್ಮರಿಸಲು ಕುದುರೆಯ ಚಿಹ್ನೆಯೂ, ಬೋಧಿಜ್ಞಾನವನ್ನು ಪಡೆದು ಪ್ರಪಂಚವನ್ನು ಉದ್ಧಾರಮಾಡಿದ ಭಗವಾನನನ್ನು ಸ್ಮರಿಸಬೇಕಾದರೆ ಚಕ್ರ ಚಿಹ್ನೆಯೂ, ಬುದ್ಧನನ್ನು ಶಾಕ್ಯಸಿಂಹನೆಂದು ಸೂಚಿಸಲು ಸಿಂಹದ ಗುರುತೂ ರೂಢಿಗೆ ಬಂದುವು. ಈಗ ಭಾರತವು ಅಶೋಕನ ಸಾಮ್ರಾಜ್ಯ ನೀತಿಯನ್ನು ಅನುಸರಿಸಲಾರದಿದ್ದರೂ ನಾಣ್ಯಗಳು ಮತ್ತು ಬಾವುಟಗಳಲ್ಲಿ ಮೇಲಿನ ಕೆಲವು ಚಿಹ್ನೆಗಳು ಕಾಣಿಸುತ್ತಿವೆ! ಇಂದಿನ ಭಾರತದ ರಾಜ್ಯನೀತಿಯೂ ಅಶೋಕನ ಕಾಲದ ನ್ಯಾಯ ನೀತಿಗಳನ್ನು ಮೆಚ್ಚಿ, ಆ ಮಾರ್ಗವಾಗಿ ಮುಂದಡಿ ಇಡುವ ಉದ್ದೇಶವಿಟ್ಟುಕೊಂಡಿರಬಹುದೆ?

ಆಗ ಇಡೀ ಚಕ್ರಾಧಿಪತ್ಯವು ಪ್ರಾಂತಗಳಾಗಿಯೂ, ಪ್ರಾಂತಗಳು ವಿಷಯಗಳಾಗಿಯೂ ವಿಭಾಗಿಸಲ್ಪಟ್ಟಿತ್ತು. ಇವುಗಳಲ್ಲಿ ಮುಖ್ಯ ಪ್ರಾಂತಗಳು ರಾಜಕುಮಾರರಿಂದಲೇ ಆಳಲ್ಪಡುತಿದ್ದುವು. ಅಶೋಕನು ಸಿಂಹಾಸನನೇರುವ ಮೊದಲು ಉಜ್ಜಯಿನಿ ಮತ್ತು ತಕ್ಷಶಿಲೆಯ ಅಧಿಕಾರಿಯಾಗಿದ್ದನು. ಆಗ ಕಾಶ್ಮೀರ ಪಂಜಾಬು, ಸಿಂಧ, ಮತ್ತು ಅಫಘಾನಿಸ್ಥಾನ ಪ್ರಾಂತಗಳಿಗೆ ತಕ್ಷಶಿಲೆಯೂ, ಗುಜರಾಥ, ಕಾಠಿಯಾವಾಡ, ಮಾಳವಗಳಿಗೆ ಉಜ್ಜಯಿನಿಯೂ, ದಕ್ಷಿಣಾಪಥಕ್ಕೆ ಸುವರ್ಣಗಿರಿಯೂ, ಕಲಿಂಗಕ್ಕೆ ಕೋಸಲಿಯೂ, ಸಂಯುಕ್ತ ಪ್ರಾಂತಕ್ಕೆ ಕೌಶಾಂಬಿಯೂ, ಅಂಗವಂಗಗಳಿಗೆ ಪಾಟಲೀಪುತ್ರವೂ ರಾಜಧಾನಿಯಾಗಿತ್ತು. ರಾಜನ ಕೈಕೆಳಗೆ ರಾಜಕುಮಾರರೂ, ಇವರ ಕೆಳಗೆ ಆರ್ಯಪುತ್ರರೂ, ಇವರ ಕೆಳಗೆ ಪ್ರಾಂತಾಧಿಕಾರಿಗಳೂ ಇದ್ದರು. ಆಗ ಜಾತಿ ಮತಗಳಿಗೆ ಹೆಚ್ಚಿನ ಪ್ರಾಧಾನ್ಯವಿರದೆ ಯೋಗ್ಯತೆಗೇ ಹೆಚ್ಚಿನ ಬೆಲೆಕೊಡುತ್ತಿದ್ದರು. ಅಲೆಗ್ಝಾಂಡರನ ಅನುಯಾಯಿಗಳ ಸಂಪರ್ಕಕ್ಕೆ ಸೇರಿದ್ದ ತುಷಸ್ಪನು ಆಗ ಗುಜರಾತ ಪ್ರಾಂತವನ್ನಾಳುತ್ತಿದ್ದನು.

ರಾಜನ ಸಹಾಯಕ್ಕೆಂದು ಪಾಟಲಿಪುತ್ರದಲ್ಲಿ ಒಂದು ಮಂತ್ರಿಪರಿಷತ್ತಿತ್ತು. ಇದಕ್ಕೆ ಎರಡು ಮುಖ್ಯ ಕೆಲಸಗಳಿದ್ದುವು. ರಾಜಾಜ್ಞೆಗಳು ಕಾರ್ಯರೂಪಕ್ಕೆ ತರುವ ಮೊದಲು ಮಂತ್ರಿಪರಿಷತ್ತಿನಲ್ಲಿ ಅದರ ಗುಣಾವಗುಣಗಳ ವಿಮರ್ಶೆ ನಡೆಯುತ್ತಿತ್ತು. ರಾಜಾಜ್ಞೆಯ ಕುರಿತು ಮಂತ್ರಿಪರಿಷತ್ತಿನಲ್ಲಿ ಭಿನ್ನಾಭಿಪ್ರಾಯಗಳುಂಟಾದರೆ, ಬಹುಮತದ ಕಡೆಗೇ ಗಮನಕೊಡುತ್ತಿದ್ದರು. ಮಂತ್ರಿಪರಿಷತ್ತಿನ ತೀರ್ಮಾನವನ್ನು ತಿದ್ದಲು ರಾಜನಿಂದಲೂ ಅಸಾಧ್ಯ. ಆ ಪರಿಷತ್ತಿನಲ್ಲೇ ಹಲವು ಭಿನ್ನಾಭಿಪ್ರಾಯಗಳುಂಟಾದರೆ ಕೂಕದ ಅಭಿಪ್ರಾಯವನ್ನು ಆರಿಸಲು ರಾಜನಿಗೆ ಅಧಿಕಾರವಿತ್ತು.

ಅಶೋಕನ ನಾಲ್ಕನೆಯ ಸ್ತಂಭ ಶಾಸನದ ಹೇಳಿಕೆಯಂತೆ ಆತನು ತನ್ನ ಪ್ರಾಂತಾಧಿಕಾರಿಗಳಿಗೆ ಶಿಕ್ಷಾ ಸ್ವಾತಂತ್ರ್ಯವನ್ನು ಕೊಟ್ಟಿದ್ದನು ಆ ಅಧಿಕಾರಿಗಳನ್ನು ಪರಿಶೀಲಿಸಲು ಐದು ವರ್ಷಗಳಿಗೊಮ್ಮೆ ಧರ್ಮಮಹಾಮಾತ್ರರನ್ನು ನಿಯಮಿಸುತ್ತಿದ್ದನು. ಇನ್ನು ಪುರುಷರೆಂಬ ಅಧಿಕಾರಿಗಳು ರಾಜ್ಯದಲ್ಲೆಲ್ಲಾ ಸುತ್ತಾಡಿ, ರಾಜಾಜ್ಞೆಯನ್ನು ಅಲ್ಲಿಯ ರಜ್ಜುಕರಿಗೆ ಬೋಧಿಸಿ, ಅವರ ರಾಜಭಕ್ತಿ, ದೇಶಭಕ್ತಿಗಳನ್ನು ತೂಕಮಾಡಿ ಚಕ್ರವರ್ತಿಗೆ ತಿಳಿಸುತ್ತಿದ್ದರು. ಇದರಿಂದಲೇ ಸಾಮ್ರಾಜ್ಯದ ಬಿಗಿ ಸಡಿಲವಾಗಲಿಲ್ಲ, ಆಗ ರಾಜಕುಮಾರರಿಗೂ ಪ್ರಾಂತಾಧಿಕಾರಿಗಳಿಗೂ ರಾಜನ ದೃಷ್ಟಿಯಲ್ಲಿ ಸಮಾನ ಗೌರವವಿತ್ತು.

ಅರಸನು ಲುಂಬಿನೀ ಗ್ರಾಮಕ್ಕೆ ತೀರ್ಥಯಾತ್ರಾ ನಿಮಿತ್ತ ಹೋದಾಗ, ಅಲ್ಲಿಯ ನಿವಾಸಿಗಳು ಅಂದಿನಿಂದ ಅಪ್ಪಭಾಗ ಕಂದಾಯಕೊಟ್ಟರೆ ಸಾಕೆಂದೂ, ಪಡ್ಡಾಗೆರುವುದು ಬೇಡವೆಂದೂ ಘೋಷಿಸಿದನು. ಇದರಿಂದ ಆಗ ಕೃಷಿಕರು ಕಂದಾಯವನ್ನು ಉತ್ಪತ್ತಿಯ ಆರರಲ್ಲೊಂದು ಅಂಶ ಕೊಡಬೇಕೆಂದು ಇದ್ದರೆ ಬೇಕೆಂದು ಊಹಿಸಲು ಸಾಧ್ಯವಿದೆ. ಆಗ ವನಪ್ರದೇಶ ಮತ್ತು ಗಣಿಪ್ರದೇಶಗಳಿಂದಲೂ ಸರಕಾರಕ್ಕೆ ಕಂದಾಯ ಸಲ್ಲುತ್ತಿತ್ತು. ಮಾನಕ ಪದಾರ್ಥಗಳನ್ನು ಸರಕಾರವೇ ತಯಾರುಮಾಡುತ್ತಿತ್ತು, ಇದರಿಂದ ಸರಕಾರಕ್ಕೆ ತುಂಬಾ ಆದಾಯವಿತ್ತು. ಪರದೇಶದ ವಸ್ತುಗಳಿಗೂ. ಒಂದು ಊರಿನಿಂದ ಇನ್ನೊಂದಕ್ಕೆ ಸಾಗಿಸುವ ಪದಾರ್ಥಗಳಿಗೂ ಸುಂಕವಿತ್ತು. ಬಟ್ಟೆಯ ಕಾರ್ಖಾನೆ ಮತ್ತು ಗೋರಕ್ಷಣೆ ಸರಕಾರದ ವಶವಿತ್ತು. ಅಂದು ವ್ಯವಹಾರದಲ್ಲಿ ನಾಣ್ಯಗಳ ಪ್ರಚಾರವಿತ್ತು. ಈ ನಾಣ್ಯಗಳನ್ನು ಕೇಂದ್ರಸರಕಾರವೇ ನಿರ್ಮಿಸುತ್ತಿತ್ತು.

ಆಗ ರಾಜ್ಯ ರಕ್ಷಣೆಯಂತೆ ಶಾಂತಿ ಸ್ಥಾಪನೆಯೂ ಸರಕಾರದ ಮುಖ್ಯ ಉದ್ದೇಶವಾಗಿತ್ತು. ಅಶೋಕನು ಚತುರಂಗ ಸೇನೆಯನ್ನಿಟ್ಟಂತೆ ತೋರುತ್ತದೆ. ಸೇನೆಗೆ ವಿಶೇಷವಾಗಿ ಕ್ಷತ್ರಿಯರೇ ಸೇರುತ್ತಿದ್ದರು. ಆಗ ಗಜಸೇನೆಯು ಮುಖ್ಯವಾಗಿತ್ತು. ಪ್ರತಿ ಆನೆಯಮೇಲೆ ಮೂವರು ಬಿಲ್ಲಾಳುಗಳಿರುತ್ತಿದ್ದರು. ಪ್ರತಿ ರಥದಲ್ಲಿ ಐದು ಮಂದಿ ಯೋಧರಿರುತ್ತಿದ್ದರು. ಇವರು ತಮ್ಮವ್ಯೇ ಉದ್ದವಾದ ಬಿಲ್ಲಿಗೆ ಮೂರು ಗಜ ಉದ್ದದ ಬಾಣಗಳನ್ನು ಉಪಯೋಗಿಸುತ್ತಿದ್ದರು. ಈ ಬಾಣಗಳು ಶತ್ರುಗಳ ಚರ್ಮದ ಗುರಾಣಿಯನ್ನು ಭೇದಿಸಲು ಶಕ್ತವಾಗಿದ್ದುವು. ಆಗ ರಥದಲ್ಲಿ ಯುದ್ಧಮಾಡುವವರು ಮತ್ತು ಶತ್ರುಗಳ ಬಾಣಗಳನ್ನು ಗುರಾಣಿಗಳಿಂದ ತಡೆಯುವವರೆಂದು ಎರಡು ಗುಂಪು ಇರುತ್ತಿತ್ತು. ಯುದ್ಧದಲ್ಲಿ ಖಡ್ಗದ ಪ್ರಚಾರವೂ ತುಂಬಾ ಇತ್ತು. ಪ್ರತಿ ಸವಾರನೂ ಎರಡು ಈಟಿ ಮತ್ತು ಒಂದು ಗುರಾಣಿಯನ್ನು ಧರಿಸುತ್ತಿದ್ದನು.

ಆ ಕಾಲದಲ್ಲಿ ಗೂಢಚರರೂ, ಕಂಟಕಶೋಧಕರೆಂಬ ಅಧಿಕಾರಿಗಳೂ ಇದ್ದರು. ಈ ಕಂಟಕ ಶೋಧಕರು ತಪ್ಪಿತಸ್ಥರಿಗೆ ಚಿತ್ರ ಹಿಂಸೆಯನ್ನು ಕೊಟ್ಟು ಸತ್ಯಾಂಶವನ್ನು ಪೊರಗೆಡವುತ್ತಿದ್ದರು. ಇದು ಅಂದಿನ ಪೋಲಿಸ್ ಇಲಾಖೆಯಾಗಿತ್ತು. ಆಗ ಸೆರೆ ಮನೆಯ ಶಿಕ್ಷೆ ಇತ್ತು; ವಧೆಯ ದಂಡವೂ ಅಪರೂಪವಾಗಿತ್ತು.

ಅಂದು ಕೇಂದ್ರ ಸರಕಾರವು ರಾಜಮಾರ್ಗಗಳನ್ನು ನಿರ್ಮಿಸಿ ರಕ್ಷಿಸುತ್ತಿತ್ತು. ಮೆಗಾಸ್ತಿನೀಸನು ತಕ್ಷಶಿಲೆಯಿಂದ ಪಾಟಲೀಪುತ್ರದ ವರೆಗೆ ಇದ್ದ ರಾಜರಸ್ತೆಯನ್ನು ವರ್ಣಿಸಿದ್ದನೆ. ಆಗ ಬೇಸಾಯಕ್ಕೆ ಅನುಕೂಲವಾಗುವಂತೆ ಕೇಂದ್ರ ಸರಕಾರವೇ ಕೆರೆ ಬಾವಿಗಳನ್ನು ಕಟ್ಟಿಸುತ್ತಿತ್ತು.

ಆಗ ಗಂಗಾ ಮತ್ತು ಶೋಣಾ ನದಿಗಳ ನಡುವೆ ಹದಿನೈದು ಚದರ ಮೈಲಿಗಳಷ್ಟು ವಿಸ್ತಾರವಾದ ಪಾಟಲೀಪುತ್ರದ ಕೋಟೆ ಇದ್ದು ಅದಕ್ಕೆ ೬೪ ಬಾಗಿಲುಗಳೂ, ೫೭೦ ಗೋಪುರಗಳೂ ಇದ್ದುವು. ಕೋಟೆಯ ಕಂದಕವು ೬೦೦ ಅಡಿ ಅಗಲವಿದ್ದು, ೩೦ ಅಡಿ ಆಳವಿತ್ತು. ಮುಖ್ಯ ರಾಜಧಾನಿಯ ಆಡಳಿತವು ೩೦ ಮಂದಿ ಸದಸ್ಯರುಳ್ಳ ಒಂದು ಮಂಡಳಿಗೆ ಸೇರಿತ್ತು. ಈ ಮಂಡಳಿಯು ೬ ಪಂಚಾಯತುಗಳಾಗಿ ವಿಭಾಗಿಸಲ್ಪಟ್ಟು ಕೈಗಾರಿಕೆ, ಸುಖ ಜೀವನವೇ ಮೊದಲಾದ ಒಂದೊಂದು ಭಾಗವು ಒಂದೊಂದು ಪಂಚಾಯತಿಗೆ ಒಪ್ಪಿಸಿದ್ದರು. ಆಗ ಜನನ ಮರಣ ಗಣನೆ ಮೂರನೆಯ ಪಂಚಾಯತಿನ ಆಧೀನವಿತ್ತು.

ಸಾಮಾನ್ಯ ಅಧಿಕಾರಿಗಳಿಗೆಲ್ಲಾ ಆಗ ಪುರುಷರೆನ್ನುತ್ತಿದ್ದರು. ಇವರು ಗೂಢಚರರ ಕೆಲಸವನ್ನೂ ಮಾಡುತ್ತಿದ್ದರು. ಇವರ ಮೇಲಿನ ಅಧಿಕಾರಿಗೆ ಮಹಾ ಮಾತ್ರರೆನ್ನುತ್ತಿದ್ದರು. ಇವರಲ್ಲಿ ಯುಕ್ತ ಮತ್ತು ಉಪಯುಕ್ತವೆಂಬ ಎರಡು ಭಾಗವಿತ್ತು. ಆಗಾಗ ಪುರುಷರ ಮತ್ತು ಇತರ ಅಧಿಕಾರಿಗಳ ವರ್ಗಾವರ್ಗಿ ಇತ್ತು. ಅಲ್ಲದೆ ಉದ್ಯೋಗಸ್ಥರ ಕಾರ್ಯ ತತ್ಪರತೆಯನ್ನು ಕಂಡು ಮೇಲಿನ ಅಧಿಕಾರಕ್ಕೆ ಏರಿಸುತ್ತಿದ್ದರು. ಮಾಖ ನೋಡಿ ಮಣೆ ಹಾಕುವ ಕಾಲ ಅದಾಗಿರಲಿಲ್ಲ.

ಅಶೋಕ ಚಕ್ರವರ್ತಿಯು ಆಳಿ ಅಳಿದು ಇಪ್ಪತ್ತೆರಡು ರತ್ನಮಾನಗಳಾದರೂ, ಅವನು ಭಾರತದ ಪ್ರಜೆಗಳಿಗಾಗಿ ನೆಟ್ಟಿ ಶಿಲಾ ಶಾಸನಗಳು ಮತ್ತು ಸ್ತಂಭ ಶಾಸನಗಳು ಪ್ರಿಯ ದರ್ಶಿಯ ಹೃದಯ ಕವಾಟವನ್ನು ಬಿಚ್ಚಿಡುತ್ತಿವೆ. ಅವನ ಧ್ಯೇಯವೇನಿತ್ತೆಂಬುದನ್ನು ಜಗತ್ತಿಗೆ ಸಾರಲು ಇನ್ನೂ ಸುಳಿ ಬಿಸಿಲಿಗೆ ಅಂಜದೆ ಅಳುಕದೆ ಎದೆಯೊಡ್ಡಿ ನಿಂತಿವೆ. ಅವೆಲ್ಲಾ ಒಂದು ವೇಳೆ ಮಣ್ಣು ಪಾಲಾದರೂ ಅವನ ಮುಕ್ತಾ ಫಲದಂತಹ ನೈತಿಕ ಮಾತುಗಳು ಮಣ್ಣುಪಾಲಾದಾವೆ? ಎಂದೂ ಅಗಲಾರವು. ಕಾಲ ರಾಕ್ಷಸನು ಎಂತೆಂತಹ ಸಾಮ್ರಾಜ್ಯಗಳನ್ನು ನುಂಗಿ ಜೀರ್ಣಿಸಿಕೊಂಡನು! ಅದರೆ ಅಶೋಕನ ಅಮೃತವಾಕ್ಕುಗಳನ್ನು ಎಂದೂ ನುಂಗಲಾರನು. ಕಾರಣ, ಅವು ಮರಣವಿಲ್ಲದ ಅಮೃತವಾಕ್ಕುಗಳು! ಅಶೋಕ— ಅರಸುಕಿನ– ಅಮೃತವಾಕ್ಕು— ಇನ್ನು ಭಾರತೀಯರಿಗೆ ಮರೆಯಲು ಸಾಧ್ಯವಾದೀತೆ? ಸಾಧ್ಯವೇ ಇಲ್ಲ. ದಯಾಮಯನಾದ ಕಾಲಪುರುಷಾ! ನೀನು ಹಿಂದೊಮ್ಮೆ ನುಂಗಿದ್ದದೇವಾನಾಂಪ್ರಿಯನನ್ನು ಪುನಃ ಭಾರತದಲ್ಲೇ ಉಗುಳಬಲ್ಲೆಯಾ? ದಯಮಾಡಿ, ಇಂದು ಭಾರತವು ನೈತಿಕ ಮಾರ್ಗವನ್ನು ಬಿಟ್ಟು ಎಲ್ಲೆಲ್ಲಾ ಅಲೆದಾಡುತ್ತಿದೆ ನೋಡು!

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಸ್ವಾತಂತ್ರ್ಯದ ವಾಸ್ತವಿಕ ತುಲನೆ

(೧ನೇ ಪುಟದಿಂದ)

ವಾಗಿರಬಹುದು, ಆದರೆ ಜನತಾ ರಾಜ್ಯದ ಮಾತು ಅದರಿಂದ ಬಹಳ ದೂರವಿದೆ. ನಾವು ಇಂದು ಕಾಣುವುದು ಅಧಿಕಾರಿಗಳ ಪ್ರಾಬಲ್ಯವನ್ನು. ಬ್ರಿಟಿಷರ ಕಾಲದಲ್ಲೂ ಈ ನೌಕರಶಾಹಿ (ಬ್ಯುರೋಕ್ರೆಸಿ) ಯ ರಕ್ತವರ್ಣದ ಕಟಿಸೂತ್ರವು ಖಂಡನೆಗೊಳಗಾಗಿತ್ತು. ಎಂಥ ಮಹೋದ್ದೇಶವನ್ನೂ ಇಚ್ಛಾನುಸಾರವಾಗಿ ರೂಪುಗೊಳ್ಳುವ ಮೊದಲೇ ಪರಿಸಮಾಪ್ತಿಗೊಳಿಸುವ ಅಪೂರ್ವ ಕಲೆಯನ್ನು ಅದು ಸಾಧಿಸಿತ್ತು. ಇಂದು ಜನರಿಂದಲೇ ಅಧಿಕಾರಹೊಂದಿದ, ಜನತಾಸೇವೆಯ ರಕ್ಷೆಯನ್ನು ಪಡೆದ ಈ ನೌಕರಶಾಹಿಯ ಕಟಿಸೂತ್ರವು ಎಂದಿನಂತೆ ಎಲ್ಲ ಸುಧಾರಣೆಗಳನ್ನು, ಪ್ರಗತಿಪರ ಯೋಜನೆಗಳನ್ನು ವ್ಯಾಪಿಸಿರುವುದು ವಿಡಂಬನಾತ್ಮಕವಾದೆ.

ನೌಕರಶಾಹಿಯನ್ನು ಬಿಟ್ಟು ಬಿಡೋಣ. ನಾವೇ ಆರಿಸಿದ ಮಂತ್ರಿಗಳಿದ್ದರೆ, ಅವರ ಮಂಡಲಗಳಲ್ಲಿ ಜನರ ಅಭಿವೃದ್ಧಿಗೆ ಅವರೆಷ್ಟು ಪರಿಶ್ರಮ ಸುತಿದ್ದಾರೆ?

ಮಂತ್ರಿಎಂಬ ಪದವೇ ಇಂದು ವಿಲಾಸ ಮತ್ತು ಡಾಂಭಿಕತನಗಳ ಸಮಾನಾರ್ಥವುಳ್ಳದ್ದಾಗಿದೆ. 'ನೀನೇನು ಮಂತ್ರಿಯೋ?' 'ನೀನೇನು ಮಂತ್ರಿಯಂತೆ ಜೀವನ ನಡೆಸುತಿದ್ದಿಯಲ್ಲಾ!' ಎಂಬುವುಗಳು ನಮ್ಮ ವಾಡಿಕೆಯ ವಾಕ್ಯಪ್ರಯೋಗಗಳು 'ಮನುಷ್ಯನು ಮಂತ್ರಿಯಾದರೆ ನಡುರಾತ್ರಿಯಲ್ಲಿ ಕೂಡಹಿಡಿಯಬಹುದು' ಎನ್ನುವ ನೂತನ ಗಾದೆಗೆ ನಮ್ಮ ಮಂತ್ರಿಗಳು ಸಾಕಷ್ಟು ಸಮರ್ಥನೆಯನ್ನೊದಗಿಸಿದ್ದಾರೆ. ಉದಾಹರಣೆಗೆ ಕಳೆದ ವರ್ಷ ಒಬ್ಬರು ಮಂತ್ರಿಯಾಗಿ ಪ್ರಥಮ ಬಾರಿ ತಮ್ಮ ಊರಿಗೆ ಬಂದೊಡನೆ, ತಮ್ಮ ಅಂಗಿಯನ್ನು ಕಳಚಿ, ಅಂಗವಸ್ತ್ರವನ್ನು ಧರಿಸಿ ಪಹರೆಯ ಸೋಲೀಸ್ ಪರಿವಾರವನ್ನು ಕೂಡಿಕೊಂಡು ತಮ್ಮ ದೇವಾಲಯಕ್ಕೆ ಹೋಗಿ ಪ್ರಸಾದಪಡೆದರು! ಒಬ್ಬಾಣೆಗೆ ಏಳು ನಯಾಪೈಸೆ ಲೆಕ್ಕಹಾಕಿ ದಿನಂಪ್ರತಿ ಸಾವಿರಾರು ಜನರ ಹಸಿವು-ತೃಷೆಗಳನ್ನು ಕೋಷಿಸುವ, ಬ್ರಿಟಿಷರ ಕಾಲದಲ್ಲಿ ಕಳ್ಳಸಂತೆಯ ಅಪರಾಧಕ್ಕಾಗಿ ಶಿಕ್ಷೆಯನ್ನನುಭವಿಸಿದ ತಮ್ಮ ಜಾತಿಯ ಪುತ್ರ ಹಂಗೂ ತಮ್ಮ ಚುನಾವಣೆಯ ಮಿತ್ರನ ಒಂದಪಚಿತ್ರವನ್ನು ಅದೇ ಬಾರಿ ಅನಾವರಣಮಾಡಿ ದೇಶಾಭಿವೃದ್ಧಿ, ಸಮಾಜಾ ವೃದ್ಧಿಗಳನ್ನು ಏಕಕಾಲದಲ್ಲೇ ಸಾಧಿಸಿಬಿಟ್ಟಿರಿ!

ಮಂತ್ರಿಗಳ ವೈಯ್ಯಕ್ತಿಕ ಚರ್ಯೆಯು ಇಷ್ಟು ಅದರ್ಶಮಯವಾಗಿದ್ದರೆ, ಅವರ ಸಾಮೂಹಿಕ ಚರ್ಯೆಯ ಕುರಿತು ಹೇಳುವುದೇ ಬೇಡ. ಉತ್ತರದ ಪಂಜಾಬಿನಿಂದ ಹಿಡಿದು ದಕ್ಷಿಣದ ನೈಸೂರಿನವರೆಗೂ ಮಂತ್ರಿಮಂಡಲಗಳ ಸ್ಥಿರತೆಯು ಕೈಕೆಸರ ತಲೆಯಲ್ಲಿಟ್ಟ ದೀಪದಂತಾಗಿದೆ. ತಮ್ಮ ಮಂತ್ರಿಮಂಡಲಕ್ಕೆ ಜೀವದಾನವನ್ನೀಯುವ ಮಹಾ ಪವಿತ್ರವಾದ ಅಹಿಂಸಾತ್ಮಕ ಮಾನವೀಯ ಪ್ರಯತ್ನದಲ್ಲಿ ತೊಡಗಿರುವ ಮಂತ್ರಿಮಂಡಲಗಳಿಗೆ ಇತರ ಪ್ರಜಾಕೋಟಿಯ ಅಭ್ಯುದಯದ ಕ್ಷುಲ್ಲಕ ವಿಷಯಗಳತ್ತ ಕಲಹ ಕಲು ಕಾಲಿಟ್ಟ ಕಂಟಕವಾದರೂ ಬೇಕಲ್ಲ? ನಮ್ಮ ನೈಸೂರಿನಲ್ಲಿಂತೂ ಶಾಸನ ಸಭೆಯನ್ನು ವರ್ಷಕ್ಕೊಂದುಬಾರಿಯಂತೆ ಮಾತ್ರ ಸಮಾವೇಶಗೊಳಿಸುವುದರಿಂದ ಮಂಡಲವಾದರೂ ಮಂತ್ರಿಮಂಡಲದ ಆಯಸ್ಸಾನವನ್ನು ಹೆಚ್ಚಿಸಲು ಸಾಧ್ಯವಿದೆಯೇ ಎಂಬ ಅತಿಶಯವಾದ ರಾಜಕೀಯ ಪ್ರಯೋಗವು ನಡೆಯುತ್ತಿರುವುದು ಮಹತ್ವದ ವಿಚಾರ.

ಇಲ್ಲಿ, ನಾವು ನಿರಾಶೆಪಡಬಾರದು. ಸ್ವಾತಂತ್ರ್ಯವನ್ನಂತೂ ನಾವು ಪಡೆದಿದ್ದೇವೆ. ದೇಶದಲ್ಲಿ ಇನ್ನು ಹಾಲಿನ ಹೊಳೆ ಹರಿಯುವುದು, ಜೇನಿನ ಮಳೆ ಸುರಿಯುವುದು. ದಾನವರು ದೇವತೆಗಳಾಗುತ್ತಾರೆ. ಎಲ್ಲರಿಗೂ ಉಚಿತ ವಿದ್ಯೆ, ಉಚಿತ ವಸತಿ, ಉಚಿತ ಅನ್ನ, ಉಚಿತ ಬಟ್ಟೆಗಳು ದೊರೆಯುವುವು. ಹಿಂದಿನದನ್ನು ಎಲ್ಲ ಮರೆತುಬಿಟ್ಟು ಮುಂದೆ ನೋಡೋಣ. ಮರೆವು ನಮ್ಮ ಆಶ್ರಯವಾತ್ರವಲ್ಲ. ಅದು ಇಂದು ನಮ್ಮ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಧರ್ಮವೂ ಆಗಿದೆ.

---

‡ ಸಹಜೀವನ (CO EXISTENCE)

ನಿಮಗಂದ ನಿಮ್ಮ ತಾಯ್, ನಮಗಂದ ನಮ್ಮ ತಾಯ್—
ನಿಮಗೆಮಗೆ ಹುರುಡೇಕೆ, ಕುರುಡೇಕೆ ಬರಿದೆ ಹಾಯ್!
ಆರ್ಯರೊ, ಅನಾರ್ಯರೊ, ಬಿಳಿಯರೋ, ಕರಿಯರೋ,
ಪೂರ್ವ-ಪಶ್ಚಿಮದವರೊ, ದಕ್ಷಿಣೋತ್ತರದವರೊ—
ಅವರವರಿಗವರವರ ನೆಲೆಯುಂಟು ಕಲೆಯುಂಟು,
ಕೂಡುಕಟ್ಟುಗಳುಂಟು ಬಿಜ್ಜೆಬಲ್ಮೆಗಳುಂಟು,
ಹಿಂದುಂಟು ಮುಂದುಂಟು ಹಿರಿದುಂಟುಕಿರಿದುಂಟು,
ನೆಣಸುಂಟು, ಮುನಿಸುಂಟು, ನೇಹನಂಟುಗಳುಂಟು.
ಬಿರ(೧)ದು ಒಯ್ಯುವುದೇಕೆ? ಹಿರಿ(೨)ದು ಹೊಯ್ಯುವುದೇಕೆ?
ಪರಿಮಳಪುಷ್ಪಗಳ ಹರಿದು ಹಿಚುಕುವುದೇಕೆ?
ಪಂಚ ಭೂತಂಗಳುಂ, ಸಪ್ತ ವರ್ಣಂಗಳುಂ,
ಮೃಗಪಕ್ಷಿ ಕ್ರಿಮಿಕೀಟ ವಿವಿಧ ಜಾತಂಗಳುಂ,
ಸೃಷ್ಟಿಶಕ್ತಿಯ ನಂದನೋದ್ಯಾನ ವಸ್ತುಗಳು—
ಅದಿಸತ್ಯದ ಸ್ಫೋಟ, ಸತ್ತಿನ ಅಸತ್ತುಗಳು!
ಸಹಜೀವನದಿ ನಡೆದು, ಸಹಜೀವನದಿ ಹಿಡೆದು
ಮರೆಯಹೆವು ಜೀವನಲಿ ಸಹಜೀವನವ(೩) ಪಡೆದು!

—ಜಿ ಆರ್ ಪಾಂಡೇಶ್ವರ.

(೧) ಗರ್ವಿಸಿ (೨) ಬರಿಯಿಂದ ದೊರತಿಗೆದು (೩) ಸಾಯುಜ್ಯ

‡ ಬೆಂಗಳೂರು ಆಕಾಶವಾಣಿ ಕವಿಸಮ್ಮೇಳನದಲ್ಲಿ ಓದಿದ ಕವನ-ಆಕಾಶವಾಣಿ ಕೃಪೆ ಇಂದಿಲ್ಲಿ ಪ್ರಕಟಿಸಲಾಗಿದೆ

JUST PUBLISHED!

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

Written by An Experienced Teacher.

Useful to one and a'l, the teacher, the student and the layman

Price Rs 1 = 25 (Postage extra)

If Rs 1=50 is sent by M O one copy will be sent by Bookpost

Copies can be had from the Publishers

Navayuga Enterprise Ltd
Navayuga Press,
Udipi

and also from

M/s Indian Industrials & Agencies, Mangalore-1
M/s Navabharat Book Depot, Udipi

ಒಂದು ಹೊಸ ಮಹಾ ಕಾದಂಬರಿ

ನಡುಹಗಲಿನ ಕಗ್ಗತ್ತಲೆ

೩೦೮ ಪುಟಗಳು ಬೆಲೆ 2·50 ರೂಪಾಯಿ

● ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ

● ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ

● ಇದರಲ್ಲಿ ಪ್ರಜಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತರಾಂಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ

● ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು ಕು ಶಿ ಹರಿದಾಸ ಭಟ್ಟರು

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಾರರಲ್ಲಿ ಸಿಗುತ್ತವೆ.

ಬೇಸಾಯದಲ್ಲಿ ಅರ್ಥಶಾಸ್ತ್ರದ ಸೂತ್ರಗಳು

(೫ನೇ ಪುಟದಿಂದ)

ಉತ್ಪನ್ನವಾಗುವುದು. ಭತ್ತ ಬರುವಲ್ಲಿ ಹುಲ್ಲೂ ಇದೆ, ಹತ್ತಿಯ ಎಳೆಯ ಜತೆಗೆ ಕತ್ತಿಯ ಬೀಜವೂ ಬರುತ್ತದೆ. ಹೀಗಾಗಿ ಈ ಪೈಕಿ ಪ್ರತಿಯೊಂದಕ್ಕೂ ಎಷ್ಟು ವೆಚ್ಚ ತಗಲಿತು ಎಂದು ಗುಣಾಕಾರ ಭಾಗಾಕಾರ ಮಾಡುವುದು ಪ್ರಯಾಸದ ಕೆಲಸ. ಕೃಷಿಯಲ್ಲಿ ಭೂಮಿಯ ಪಾತ್ರ ಬಲು ದೊಡ್ಡದಾಗಿರುವುದರಿಂದ ನಿರ್ದಿಷ್ಟ ವಿಸ್ತೀರ್ಣವುಳ್ಳ ಒಂದು ತುಂಡು ಭೂಮಿಯು ದುಡಿಯುವ ಜನ, ಧನ ಹೆಚ್ಚಾದಂತೆ ಉತ್ಪನ್ನವು ಅತಿಶಯವಾಗುವುದರ ಬದಲು ಬಲು ಬೇಗನೆ—ಒಂದು ಮಿತಿಯ ಅನಂತರ-ಇಳಿದರಿಯಾಗುವುದು ಸ್ವಾಭಾವಿಕವಾದ ನಿಯಮವಾಗಿಬಿಟ್ಟಿದೆ. ಅಲ್ಲದೆ ಕೃಷಿಯಲ್ಲಿ ಹೊಲಗಳು ದೂರದೂರವಾಗಿದ್ದು, ಚಿಕ್ಕವಾಗಿರುವುದರಿಂದಲೂ ಔದ್ಯಮಿಕ ಕ್ಷೇತ್ರದಲ್ಲಿ ಆತ್ಯಧಿಕ ಪ್ರಮಾಣದ ಉತ್ಪಾದನೆಯನ್ನು ಅಗ ಮಾಡಿದ ಶ್ರಮ ವಿಭಜನೆಗೆ ಅವಕಾಶ ತೀರ ಕಡಿಮೆಯಾಗಿದೆ. ಕೃಷಿಯಲ್ಲಿ ದುಡಿಮೆಗಾರನೆಂದರೆ ನಿಸರ್ಗವೇ, ಮನುಷ್ಯ ಕೇವಲ ವ್ಯವಸ್ಥಾಪಕ. ಬಂಡವಾಳವನ್ನೂ, ಪ್ರಯತ್ನವನ್ನೂ ಹೂಡಿ ಫಲ ಬರುವವರೆಗೆ ತಡೆದುಕೊಂಡಿರಬೇಕಾದರೆ ರೈತನಿಗೆ ಎಷ್ಟು ಸಹನೆ ಬೇಡ! ಬೀಜಬಿತ್ತುವುದಕ್ಕೆ ಬೆಳೆಬರುವುದಕ್ಕೆ ನಡುವಿನ ಕಾಲದಲ್ಲಿ ಸರಕಿನ ಬೇಡಿಕೆಯಲ್ಲಿ ಹೆಚ್ಚು ಕಡಿಮೆ ಆಗಬಹುದು, ಧಾರಣೆಯಲ್ಲಿ ವ್ಯತ್ಯಾಸ ಬರಬಹುದು, ಒಟ್ಟಿನಲ್ಲಿ ರೈತನ ನಿರೀಕ್ಷೆ ಸುಳ್ಳಾಗುವ ಸನ್ನಿವೇಶಗಳು ಒಂದರ ಮೇಲೊಂದು ಬಂದೆರಗಬಹುದು, ನಿಸರ್ಗವು ಸಂಕಟಗಳನ್ನು ಸೃಷ್ಟಿ ಮಾಡುವಲ್ಲಿ ಭಯಂಕರ ಕ್ಲಿಷ್ಟತೆ, ನಿಯತಿಯನ್ನು ತೋರಿಸಿದರೂ, ಸರಕಿನ ಪ್ರಮಾಣದಲ್ಲಿ ಅಷ್ಟೇ ಭಯಂಕರ ವ್ಯತ್ಯಾಸಗಳನ್ನುಂಟು ಮಾಡಬಲ್ಲದು. ಮಳೆ ಕಾಲಕ್ಕೆ ಸರಿಯಾಗಿ ಬಾದರೂ, ಹೊಲದ ಫಲವತ್ತತೆ ಯಥೋಚಿತವಾಗಿದ್ದರೂ, ಬರುವ ಬೆಳೆಯಲ್ಲಿ ಹೆಚ್ಚು ಕಡಮೆ ಇರಲೇಬೇಕು. ಗಿರಾಕಿ ಇಲ್ಲದೆ, ಬೆಲೆ ಇಳಿದಾಗಲೂ ಬೇಸಾಯದ ಕಸಬಿನಲ್ಲಿ ನಿರತನಾದ ಸಣ್ಣಪಟ್ಟ ರೈತಜನ ಕೂಡಲೆ ಸರಬರಾಜನ್ನು ಕಡಮೆ ಮಾಡಿ ಬೆಲೆ ಏರಿಕೆಗೆ ಪ್ರಯತ್ನಿಸುವುದು ಸಾಧ್ಯವಿಲ್ಲ. ೧೯೨೯-೩೨ರ ವಿಶ್ವವ್ಯಾಪಿ ಮಂದಿಯ ಕಾಲದಲ್ಲಿ ಪ್ರಪಂಚದ ಕೈಗಾರಿಕೆಯ ಸರಕುಗಳ ಉತ್ಪಾದನೆ ೩೩% ನಷ್ಟು ಇಳಿಯಿತಂತೆ. ಆದರೆ ಕೃಷಿಯಲ್ಲಿ ೧% ಮಾತ್ರ ಇಳಿಯುವುದು ಸಾಧ್ಯವಾಯಿತು. ಒಟ್ಟು ಧಾನ್ಯದ ವಾಸಿ ತಗ್ಗುವಾಗ ಬೇಸಾಯದ ಉತ್ಪನ್ನಗಳ ಧಾರಣೆ ಅತಿವೇಗದಿಂದ ಇಳಿಮುಖವಾಗುವುದು.

ಅಭಿವೃದ್ಧಿಯ ದಾರಿಯು ಸಾಗುವ ಒಂದು ಅರ್ಥ ಮಂಡಲದಲ್ಲಿ ಕೈಗಾರಿಕೆ ಮುಂದು, ಕೃಷಿ ಹಿಂದು. ಆಹಾರದ ಸರಕು, ಔದ್ಯಮಿಕ ಸರಕುಗಳಷ್ಟು ಪ್ರಮಾಣದಲ್ಲಿ ಬೆಳೆಯುವುದಿಲ್ಲವೆಂಬುದನ್ನು ನಾವು ಯೋಜನಾಬದ್ಧವಾದ ಭಾರತದ ಪ್ರಚಲಿತ ಪರಿಸ್ಥಿತಿಯಲ್ಲಿ ಅನುಭವಿಸಿ ತಿಳಿದುಕೊಂಡಿದ್ದೇವೆ. ಇನ್ನೊಂದು ವಿಷಯ ಕೈಗಾರಿಕೆಯ ಅಭಿವೃದ್ಧಿ ಎಂದರೆ ಅಲ್ಲಿ ದುಡಿಯುವ ಜನರ ಸಂಖ್ಯೆಯು ಹೆಚ್ಚಾಗಬೇಕು; ಕೃಷಿಯ ಅಭಿವೃದ್ಧಿ ಎಂದರೆ ಬೇಸಾಯಗಾರರ ಸಂಖ್ಯೆ ಕಡಮೆಯಾಗಬೇಕು ಎನ್ನುವುದೂ ಒಂದು ಕೃಷಿಯವು ಲಕ್ಷಣ. ಉದಾ:—ಭಾರತದಲ್ಲಿ ಒಟ್ಟು ಆರ್ಥಿಕ ಉನ್ನತಿಯ ಸಾಧನೆಯ ಕಾಲದಲ್ಲಿ ಪ್ರತಿ ವರ್ಷವೂ ಕೃಷಿರಂಗದಿಂದ ೧೫ ಲಕ್ಷ ಜನರನ್ನಾದರೂ ಬೇರೆ ಉದ್ಯಮಗಳಿಗೆ ವರ್ಗಾವಣೆಮಾಡಬೇಕಾಗುವುದಂತೆ.

ರಾಷ್ಟ್ರದ ಹೆಮ್ಮೆ

ಮೈಸೂರು ಕಬ್ಬಿಣ ಮತ್ತು ಉಕ್ಕು ಎಂಜಿನೀಯರ್ ಮತ್ತು ಕಂಟ್ರಾಕ್ಟರ್ ಜನರ ಸಮುದಾಯದಲ್ಲಿ ಅನ್ಯಾದೃಶ ಕೀರ್ತಿಯನ್ನು ಹೊಂದಿ ರಾಷ್ಟ್ರದ ಹೆಮ್ಮೆ ಆಗಿದೆ. ಈ ಕಾರ್ಖಾನೆಯ ಕಬ್ಬಿಣವೂ ಉಕ್ಕೂ ಎಲ್ಲ ಕಟ್ಟಡ ಕೆಲಸಗಳಲ್ಲಿಯೂ ವಿವಿಧ ಕೈಗಾರಿಕೆಗಳಲ್ಲಿಯೂ ಇರಲೇಬೇಕಾದ ಸಾಮಗ್ರಿ ಆಗಿವೆ.

ಇವುಗಳ ಗುಣ ತಪ್ಪದೆ ಬ್ರಿಟಿಷ್ ಸ್ಟ್ಯಾಂಡರ್ಡ್ ಪ್ರಮಾಣಗಳಿಗೆ ಅನುಸಾರವಾಗಿ ಇದೆ ಎಂದು ಭರವಸೆ ಕೊಡುತ್ತೇವೆ.

ನಮ್ಮಲ್ಲಿ

ಎಲ್ಲ ತರಹೆಗಳ ಕಬ್ಬಿಣ, ಉಕ್ಕು ಮಾರಾಟಕ್ಕೆ ಸಿದ್ಧವಾಗಿವೆ.

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ

ಭದ್ರಾವತಿ.

ವ್ಯಾಪಾರದ ಕಚೇರಿ ಶಾಖೆಗಳು:—

ಮಹಾಲಕ್ಷ್ಮೀ ಭವನ, ಜೇಮ್ಸ್ ಬೀದಿ, ಸಿಕಂದರಾಬಾದ್.

ವ್ಯಾನ್‌ಗಾರ್ಡ್ ಭವನ, ಮೊದಲನೇ ಮಹಡಿ, 2ನೆಯ ಬೀಚ್ ಬೀದಿ, ಜಿ. ಟಿ. ಮದ್ರಾಸ್.

ಲಕ್ಷ್ಮೀ ಭವನ, 5ನೆಯ ಮಹಡಿ, ಸರ್ ಪಿ. ಮೆಹ್ತಾ ರಸ್ತೆ, ಕೋಟೆ, ಮುಂಬಯಿ.

ಎಲ್ಲಾ ತರದ ಫೋಟೋ ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ.

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು—1.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಜನ ಪ್ರಿಯಪುಸ್ತಕದನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳಿಗೆ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ದೇಹಕ್ಕೆ ಪ್ರಾಣವು ಹೇಗೋ ಹಾಗೆಯೇ ಜೀವನಕ್ಕೆ ಉಳಿತಾಯ. ಉಳಿತಾಯವಿಲ್ಲದವನ ಬಾಳು ಹಾಳು; ಅಲ್ಲದೆ, ಅವನು ಇದ್ದೂ ಇಲ್ಲದಂತೆ. ನಿಮ್ಮ ಬಾಳು ಭವ್ಯವಾಗಿ ಬೆಳಗ ಬೇಕಾದರೆ, ಜೀವನದಲ್ಲಿ ಹುರುಪು-ಉತ್ಸಾಹಗಳು ನಿಮ್ಮವಾಗಬೇಕಾದರೆ, ನನ್ನಲ್ಲಿರುವ ಉಳಿತಾಯ ಯೋಜನೆಗಳಲ್ಲೊಂದ ನ್ನಾರಿಸಿ ನೀವು ಪ್ರಯೋಜನ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ).

ಸಿಂಡಿಕೇಟಿನ ವಿವಿಧ ಬೇಂಕಿಂಗ್ ಸೇವೆಗಳು

(೪ನೇ ಪುಟದಿಂದ)

ಧೋರಣೆ ಇದೇ ರೀತಿಯಾಗಿದೆ. ಇನ್ನೂರು ಐನೂರ ರೂ ಬಾಯಿಗಳ ಆರ್ಥಿಕ ಸಹಾಯವನ್ನು ಬಯಸುವವರನ್ನು ಸಾವಿರಾರು ರೂಪಾಯಿಗಳ ಸಾಲ ಬಯಸುವವರನ್ನು ಸಿಂಡಿಕೇಟು ಸಮಾನ ರೀತಿಯಿಂದ ಸ್ವಾಗತಿಸುತ್ತದೆ. ಇಲ್ಲಿ ಬೇಂಕಿಂಗ್ ವ್ಯವಹಾರಂದ ಸಾಧಾರಣ ಸಿಯಮವನ್ನು ಸಿಂಡಿಕೇಟು ಸಡಿಲ ಬಿಡುತ್ತದೆ ಕೊಡುವ ಸಾಲಕ್ಕೆ ಭದ್ರತೆಯಾಗಿ ಸ್ಥಿರ ಚರಸೊತ್ತನ್ನೋ ಇನ್ಶ್ಯೂರೆನ್ಸ್ ಪಾಲಿಸಿ ಕಂಪನಿಯ ಶೇರುಗಳನ್ನೋ ಅಡಮಾನವಾಗಿ ಕೇಳುವುದು ಸಾಧಾರಣವಾಗಿ ಬೇಂಕುಗಳ ನಿಯಮ. ಸಿಂಡಿಕೇಟ್ ಸಾಮ್ಯವಾಗಿ ಈ ಬಾಹ್ಯ ವಸ್ತುಗಳ ಭದ್ರತೆಯನ್ನು ಮಾತ್ರ ನಂಬಿ ಮುಂದುವರಿಯುವುದಿಲ್ಲ. ನಂಬಿಗೆಗೆ ಅರ್ಹರಾಗಿ ತನ್ನ ವ್ಯವಹಾರದಲ್ಲಿ ಸಂಪೂರ್ಣ ಪ್ರಾಮಾಣಿಕತೆಯನ್ನು ತೋರುವ ಸಾಧಾರಣ ಜನರಿಗೂ, ಇತರ ಬೆಲೆಬಾಳುವ ಸೊತ್ತುಗಳ ಭದ್ರತೆಗಾಗಿ ಅಷ್ಟಾಗಿ ಒತ್ತಾಯಪಡಿಸದೆ ಸಿಂಡಿಕೇಟು ಧನ ಸಹಾಯವನ್ನೊದಗಿಸುತ್ತದೆ. ಇದರಿಂದ ನಮ್ಮ ಬಡದೇಶದ ಎಷ್ಟೋ ಮಂದಿ ಚಿಕ್ಕ ವ್ಯಾಪಾರಿಗಳಿಗೆ, ನೌಕರ ವರ್ಗದವರಿಗೆ, ಬೇಸಾಯಗಾರರಿಗೆ ಮತ್ತು ಇತರ ಗುಡಿ ಕೈಗಾರಿಕೆಗಳಲ್ಲಿ ದುಡಿಯುವವರಿಗೆ ಸಹಾಯ ಸಿಕ್ಕಿದೆ ಬೇಂಕಿಂಗ್ ವ್ಯವಹಾರವನ್ನೂ ನಮ್ಮ ದೇಶದಲ್ಲಿ ಬಹುಳವಾಗಿ ಹಬ್ಬಿಲ್ಲ ಸಾಧಾರಣ ಜನರಿಗೂ ಅದರ ಪರಿಚಯ ಮಾಡಿಕೊಡುವುದ ಮತ್ತು ಬೇಂಕಿಂಗ್ ಸೇವೆಗಳ ಲಾಭವನ್ನೊದಗಿಸುವುದು ಈಗ ಬೇಂಕುಗಳ ಕರ್ತವ್ಯವಾಗಿದೆ. ಸಿಂಡಿಕೇಟು ಈ ಕರ್ತವ್ಯವನ್ನು ಪೂರೈಸುತ್ತಿದೆ. ಈ ರೀತಿಯ ಅವಲಂಬನೆಯಿಂದ ಮೇಲಿಂದ ಮೇಲೆ ನೋಡುವಾಗ ಸಿಂಡಿಕೇಟಿನ ಆದಾಯ ಕಡಿಮೆಯಾದಂತೆ ತೋರಬಹುದು. ಆದರೆ ಈ ಸಾಮಾನ್ಯ ವರ್ಗದ ಕೋಟಿ ಕೋಟಿ ಜನರೇ ತನ್ನ ಬೆನ್ನೆಲುಬು ಎಂಬುದನ್ನು ಸಿಂಡಿಕೇಟು ಚೆನ್ನಾಗಿ ತಿಳಿದಿದೆ. ಅದುದರಿಂದಲೇ ಅವರ ಸಹಕಾರ—ಸೌಹಾರ್ದಗಳನ್ನು ಸಂಪಾದಿಸಲು ಸಿಂಡಿಕೇಟು ಬಯಸುತ್ತದೆ.

ಸೇವಾ ಕ್ಷೇತ್ರದ ವಿಸ್ತರಣೆ

ತನ್ನ ಶಾಖೆಗಳನ್ನು ಹೊಸ ಹೊಸ ಸ್ಥಳಗಳಲ್ಲಿ ತೆರೆಯುವುದರ ಮೂಲಕ ಸಿಂಡಿಕೇಟು ತನ್ನ ಸೇವಾ ಕ್ಷೇತ್ರವನ್ನೂ ವಿಸ್ತರಿಸಿಕೊಳ್ಳುತ್ತಿದೆ. ಈಗಾಲೇ ಸಿಂಡಿಕೇಟಿನ 113 ಶಾಖೆಗಳು ಮೈಸೂರು, ಮದ್ರಾಸು, ಮುಂಬಯಿ, ಆಂಧ್ರ ಮತ್ತು ಕೇರಳ ರಾಜ್ಯಗಳಲ್ಲಿ ಜನತೆಯ ಸೇವೆ ಮಾಡುತ್ತಿವೆ. ಹೆಚ್ಚುತ್ತಿರುವ ಸಿಂಡಿಕೇಟಿನ ಶಾಖೆಗಳನ್ನು ಕಂಡು ಕೇವಲ ಆರ್ಥಿಕ ಲಾಭವನ್ನು ಗಳಿಸಬೇಕಂಬ ಮಹತ್ವಾಕಾಂಕ್ಷೆಯಿಂದ ಈ ಸಂಸ್ಥೆ ಹೀಗೆ ತನ್ನ ವ್ಯವಹಾರಕ್ಷೇತ್ರವನ್ನು ವಿಸ್ತರಿಸುತ್ತದೆ ಎಂದು ಜನರು ತಪ್ಪಾಗಿ ತಿಳಿದುಕೊಳ್ಳಬಹುದು. ಇದರಲ್ಲಿ ಆರ್ಥಿಕ ಲಾಭ ಸಂಪಾದನೆ ಮಾತ್ರ ಸಿಂಡಿಕೇಟಿನ ಉದ್ದೇಶವಲ್ಲ ಎಂಬುದು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ ವಿಷದವಾಗುತ್ತದೆ ಬೆಳೆಯುತ್ತಿರುವ ದೊಡ್ಡ ಆಲದ ಮರದ ಬೀಳಲುಬೇರುಗಳಂತೆ ಸಿಂಡಿಕೇಟಿನ ಈ ಹೊಸ ಶಾಖೆಗಳು ಈ ಮಹಾ ಸಂಸ್ಥೆಯ ಆಧಾರವೂ ಹೌದು ಹಾಗೆಯೇ ಹೆಚ್ಚು ಹೆಚ್ಚು ಶಕ್ತಿ—ಸತ್ವಗಳನ್ನೂ ಸಂಪಾದಿಸುವ ಮಾರ್ಗವೂ ಹೌದು. ಸಿಂಡಿಕೇಟು ಕೇವಲ ದೊಡ್ಡ ದೊಡ್ಡ ನಗರಗಳಲ್ಲಷ್ಟೇ ತನ್ನ ಶಾಖೆಗೆ ಆರಿಸಿಕೊಂಡಿಲ್ಲ. ಅಲ್ಪ ಜನಸಂಖ್ಯೆಯಿರುವ ವ್ಯಾಪಾರ ಉದ್ಯಮಗಳು ಹೇಳಿಕೊಳ್ಳುವಷ್ಟು ಬೆಳೆದಿರದ ಚಿಕ್ಕ ಪುಟ್ಟ ಪಟ್ಟಣಗಳಲ್ಲೇ ಸಿಂಡಿಕೇಟಿನ ಶಾಖೆಗಳಲ್ಲಿ ಹೆಚ್ಚಿನವು ಇವೆ. ಒಂದು ಲಕ್ಷಕ್ಕೆ ಮೇಲ್ಪಟ್ಟು ಜನಸಂಖ್ಯೆಯಿರುವ ದೊಡ್ಡ ನಗರಗಳಲ್ಲಿ ಸಿಂಡಿಕೇಟಿನ ಕೇವಲ ಹದಿನಂಟೇ ಶಾಖೆಗಳವೆ ಐದು ಸಾವಿರಕ್ಕೂ ಕಡಿಮೆಯಿರುವ ಚಿಕ್ಕ ಪೇಟೆಗಳಲ್ಲೂ ಸಿಂಡಿಕೇಟಿನ 13 ಶಾಖೆಗಳವೆ. ಇದರಿಂದ ಸಿಂಡಿಕೇಟಿನ ಉದ್ದೇಶ ಸ್ಪಷ್ಟವಾಗಿ ತಿಳಿಯುತ್ತದೆ. ಬೇಂಕಿಂಗ್ ವ್ಯವಹಾರದ ಬೆಳವಣಿಗೆಗೆ ಇಂತಹ ಊರುಗಳಲ್ಲಿ ಅಪ್ಪದ ಕಡಿಮೆ. ಜನರಿಗೆ ಬೇಂಕಿಂಗ್ ವ್ಯವಹಾರದ ಅಭ್ಯಾಸವೇ ಇಂತಹ ಸ್ಥಳಗಳಲ್ಲಿ ಬಹಳ ಅಲ್ಪ ಪ್ರಮಾಣದಲ್ಲಿರುತ್ತದೆ. ಆದರೂ ಸಿಂಡಿಕೇಟ್ ಅಲ್ಲಿ ತನ್ನ ಶಾಖೆಗಳನ್ನು ತೆರೆಯುವ ಧೈರ್ಯವಾಡಿ. ಜನರಿಗೆ ಬೇಂಕಿಂಗ್ ವ್ಯವಹಾರದ ಪರಿಚಯಮಾಡಿಸಿ, ಬೇಂಕಿಂಗ್ ಸೇವೆಗಳ ಸೌಕರ್ಯವನ್ನು ಕಲ್ಪಿಸಿಕೊಟ್ಟಿದೆ. ಬೇರೆ ಬೇಂಕಿಂಗ್ ಸಂಸ್ಥೆಗಳಿಲ್ಲದ ಚಿಕ್ಕ ಚಿಕ್ಕ ಊರುಗಳಲ್ಲಿ ಕೂಡಾ ಅಲ್ಲಿಯ ಜನರಿಗೆ ತನ್ನಿಂದಾದಷ್ಟು ಬೇಂಕಿಂಗ್ ಸೇವೆಯನ್ನು ಸಲ್ಲಿಸುವ ದೃಷ್ಟಿಯಿಂದ ಸಿಂಡಿಕೇಟ್ ತನ್ನ ಶಾಖೆಗಳನ್ನು ತೆರೆದಿದೆ ನಮ್ಮ ಜಿಲ್ಲೆಯಲ್ಲಂತೂ ಸಿಂಡಿಕೇಟು ಇನ್ನೂ ಒಂದು ಕಜ್ಜೆ ಮುಂದರಿದು ಬೇಂಕಿಂಗ್ ಸೇವೆಯನ್ನು ಗಾಮೀಣರಿಗೂ ಮುಟ್ಟಿಸುವ ಉದ್ದೇಶದಿಂದ 23 ಗ್ರಾಮ ಶಾಖೆಗಳನ್ನು ತೆರೆದು ಯಶಸ್ವಿಯಾಗಿ ಹಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ಈ ದಿಸೆಯಲ್ಲಿ ಸಿಂಡಿಕೇಟಿನ ಸಫಲ ಪ್ರಯೋಗವನ್ನು ಎಷ್ಟು ಹೊಗಳಿದರೂ ಸಾಲದು. ಈ ರೀತಿ ಗ್ರಾಮಾಂತರ ಶಾಖೆಗಳನ್ನು ನಡೆಸುವುದು ಆರ್ಥಿಕ ಆದಾಯದ ದೃಷ್ಟಿಯಿಂದ ಸುಲಭವಾದ ಮಾರ್ಗ. ಈ ದಿಸೆಯಲ್ಲಿ ಮುಂದುವರಿಯುವ ಬೇಂಕಿಂಗ್ ಸಂಸ್ಥೆಗಳೇ ಕಡಿಮೆ. ಆದುದರಿಂದ ಇಂತಹ ಗ್ರಾಮಾಂತರ ಶಾಖೆಗಳನ್ನು ತೆರೆದು ಹಳ್ಳಿಗರಿಗೆ ಬೇಂಕಿಂಗ್ ಸೌಲಭ್ಯಗಳನ್ನೊದಗಿಸುವ ಭಾರವನ್ನು ಸ್ಟೇಟ್ ಬೇಂಕಿನ ಮೂಲಕ ಈಗ ಭಾರತ ಸರಕಾರವೇ ಹೊತ್ತಿದೆ. ಸಿಂಡಿಕೇಟು ಈ ಸ್ತುತ್ಯರ್ಹವಿಲ್ಲದ ಅಗ್ರಗಾಮಿಯಾದುದು ಹೆಮ್ಮೆಯ ಮಾತೇ ಸರಿ.

ಕುಶಲ ಕಾರ್ಯಕರ್ತರ ಶಿಕ್ಷಣ

ಬೇಂಕಿಂಗ್ ಸೇವೆಯನ್ನು ಉತ್ತಮ ರೀತಿಯಿಂದ ನೆರವೇರಿಸಲು ನುರಿತ, ವ್ಯವಹಾರ ಕುಶಲರಾದ ಕಾರ್ಯಕರ್ತರಿರಬೇಕಾದುದು. ಅಗತ್ಯ ಸಿಂಡಿಕೇಟು ಈ ವಿಷಯವನ್ನರಿತೇ ತನ್ನ ಸಾಧಾರಣ ಕಾರ್ಯಕರ್ತರಿಗೂ ಮತ್ತು ಮೇಲಣ ಅಧಿಕಾರಿಗಳಿಗೂ ಉಚಿತ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತಿದೆ ಹಾಗೂ ಹಿರಿಯ ಅಧಿಕಾರಿಗಳಿಗೆ ರಿಜರ್ವ್ ಬೇಂಕಿನ ಬೇಂಕರ್ಸ್ ಟ್ರೇನಿಂಗ ಕಾಲೇಜಿನಲ್ಲಿ ಶಿಕ್ಷಣ

ಶ್ರೀ ಟಿ ಎ ಪೈ, ಬಿ ಕಾಂ (ಬೊಂಬಾಯಿ)
ಸಿಂಡಿಕೇಟಿನ ಜನರಲ್ ಮೆನೇಜರರು.

ಕೊಡಿಸಿದೆ ಸಿಂಡಿಕೇಟಿನ ಪ್ರಧಾನ ಕಾರ್ಯಾಲಯದಲ್ಲಿ ಈಗ ಕೆಲವು ವರ್ಷಗಳಿಂದ ಅರ್ಧ ಲೇಖಕ(Accountant) ರಿಗಾಗಿ ಶಿಕ್ಷಣ ವರ್ಗಗಳು ನಡೆಸಲಾಗುತ್ತಿವೆ ಕೆಲವು ಅಧಿಕಾರಿಗಳನ್ನು ವಿದೇಶಗಳಿಗೆ ಕಳುಹಿಸಿ ಬೇಂಕಿಂಗ್ ವ್ಯವಹಾರದ ಉಚ್ಚ ಶಿಕ್ಷಣ ಕೊಡಿಸುವ ಯೋಜನೆ ಸಿಂಡಿಕೇಟಿಗಿದೆ ಈಗಾಗಲೇ ಸಿಂಡಿಕೇಟಿನ ಒಬ್ಬ ಹಿರಿಯ ಅಧಿಕಾರಿಗೆ ಜರ್ಮನಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಕಳೆದ ದಶಂಬರದಲ್ಲಿ ಸಿಂಡಿಕೇಟು ಒಂದು ಸ್ಟಾಫ್ ಟ್ರೇನಿಂಗ್ ಕಾಲೇಜನ್ನೂ ತೆರೆದಿದೆ. ಇದರಲ್ಲಿ ತರುಣ ತರುಣಿಯರಿಗೆ ಆರು ವಾರಗಳ ವರೆಗೆ ಬೇಂಕಿಂಗ್ ವ್ಯವಹಾರದ ತರಬೇತು ಕೊಡಲಾಗುತ್ತದೆ. ಬೇಂಕಿಂಗ್ ವ್ಯವಹಾರ ಕ್ಷೇತ್ರದಲ್ಲಿ ಕಂಡುಬರುವ ಕುಶಲರಾದ ಶಿಕ್ಷಿತ ಕಾರ್ಯಕರ್ತರ ಅವಶ್ಯಕತೆಯನ್ನು ಪೂರೈಸಲು ಸಿಂಡಿಕೇಟ್ ಈ ರೀತಿ ಪ್ರಯತ್ನಿಸುತ್ತಿದೆ. ಅಲ್ಲದೆ ಈ ಶಿಕ್ಷಣ ಕಾಲೇಜಿನಲ್ಲಿ ಯೋಗ್ಯ ರೀತಿಯಿಂದ ಶಿಕ್ಷಣ ಪಡೆದು ಉತ್ತೀರ್ಣರಾದವರಲ್ಲಿ ಹಲವರನ್ನು ಆವಶ್ಯಕತೆಗನುಸಾರವಾಗಿ ಸಿಂಡಿಕೇಟು ತನ್ನ ಕಾರ್ಯಕರ್ತರಾಗಿಯೇ ನೇಮಿಸಿಕೊಳ್ಳುತ್ತದೆ ಹೀಗೆ ಸಿಂಡಿಕೇಟು ಜನತೆಗೆ ತನ್ನ ಕಾರ್ಯಕ್ಷೇತ್ರದಲ್ಲಿ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಬೇಕಂಬ ಉದ್ದೇಶ ಸಾಧನಾಗಾಗಿ ಬೇಕಾದ ಸಿದ್ಧತೆಯನ್ನು ಮಾಡುತ್ತಿದೆ.

ರೇವಣಾತಿ ಯೋಜನೆಗಳು 'ಸಿಗ್ಮಿ'

ಸಿಂಡಿಕೇಟಿನ ಎಲ್ಲಾ ರೇವಣಾತಿ ಯೋಜನೆಗಳಲ್ಲಿ ಅಗ್ರಸ್ಥಾನವನ್ನು ಪಡೆಯಲರ್ಹವಾದುದು ಮತ್ತು ಅದನ್ನು ನಿಜವಾಗಿಯೂ ಜನಸಾಮಾನ್ಯರ ಸಂಸ್ಥೆಯಾಗಿ ಮಾಡಿದುದು ಅದರ 'ಸಿಗ್ಮಿ' ಡಿಪಾಜಿಟ್ ಯೋಜನೆ. ಈ ಪುಟ್ಟ ಉಳಿತಾಯದ ಅತ್ಯಂತ ಸಫಲ ಯೋಜನೆಯನ್ನು ಸಿಂಡಿಕೇಟ್ ಬೇಂಕೇ ಭಾರತದಲ್ಲಿ ಪ್ರಥಮವಾಗಿ 1929ರಲ್ಲಿಯೇ ಬಳಕೆಗೆ ತಂದಿದೆ. ಈಗ ಅದು ಅತ್ಯಂತ ಜನಪ್ರಿಯವಾಗಿದೆ ಸಿಂಡಿಕೇಟಿನ ಆಧಾರ ಸ್ತಂಭವಾಗಿಬಿಟ್ಟಿದೆ. ಸಾವಿರಾರು 'ಸಿಗ್ಮಿ' ರೇವಣಾತಿದಾರರು ಇಂದು ಸಿಂಡಿಕೇಟಿನ ಶಕ್ತಿ-ಸಂಪತ್ತುಗಳನ್ನು ತಿಳಿಸಲು ಕಾರಣವಾಗಿದ್ದಾರೆ. ಜನರಲ್ಲಿ ಉಳಿತಾಯದ ಅಭ್ಯಾಸವನ್ನು ಪ್ರಚುರಗೊಳಿಸಲು ಸರಕಾರವೂ ಈಗ ಅನೇಕ ರೀತಿಯಿಂದ ಪ್ರಯತ್ನಿಸುತ್ತದೆ ನಾಡಿನ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ವಿಷಮತೆಯನ್ನು ದೂರಮಾಡಲು ಜನಸಾಮಾನ್ಯರಲ್ಲಿ ಪುಟ್ಟ ಉಳಿತಾಯದ ಅಭ್ಯಾಸವನ್ನು ಬೆಳೆಸುವುದೇ ಸೂಕ್ತ ಮಾರ್ಗವೆಂದು ಎಲ್ಲರಿಗೂ ಈಗ ಮನದಟ್ಟಾಗಿದೆ ಆದರೆ ಸಿಂಡಿಕೇಟ್ ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿ 30 ವರ್ಷಗಳಾಗಿ ಹೋದವು ಬೇಂಕಿಂಗ್ ವ್ಯವಹಾರವು ಭಾರತದಲ್ಲಿ ಇನ್ನೂ ಎಳವರೆಯದಲ್ಲೇ ಇದೆ. ಇದ್ದಿನ ವಿಶೇಷ ಪರಿಸ್ಥಿತಿಗಳಿಗೆ ಅನುಕೂಲವಾದ ವಿಶಿಷ್ಟ ಯೋಜನೆಗಳನ್ನು ಜನರಲ್ಲಿ ಪ್ರಚುರಗೊಳಿಸುವುದು ಬೇಂಕುಗಳ ಕರ್ತವ್ಯ ನಮ್ಮ ನಾಡಿನ ಬಡ ಜನರಿಗೂ ಉಳಿತಾಯವು ಸುಲಭವಾಗುವಂತೆ ಸಿಂಡಿಕೇಟು 'ಸಿಗ್ಮಿ' ಯೋಜನೆಯನ್ನು ಅವರ ಮುಂದಿಟ್ಟಿದೆ. ಈ ಯೋಜನೆಯಂತೆ ದಿನವೂ ಹನಹನಿಯಾಗಿಯೇ ಒಟ್ಟೇ 25 ನಯೇ ಪೈಸೆಗಳಷ್ಟನ್ನು ಕೂಡಾ ಕೂಡಿಡುವುದು ಸಾಧ್ಯ. ಅದು ಕೂಡಾ ಸಿಂಡಿಕೇಟು ಈ ಪುಟ್ಟ ಮೊಬಲಗನ್ನು ಅವರವರ ಮನೆ ಬಾಗಿಲಿಗೆ ಬಂದೇ ವಸೂಲುಮಾಡುವ ವ್ಯವಸ್ಥೆಯನ್ನಿಟ್ಟಿದೆ ಒಂದೇರಡು ದಿನ ಕಂತುಗಳನ್ನುಳಕಟ್ಟಲಾಗದಿದ್ದರೂ ಆ ಮೇಲೆ ಅವನ್ನು ಕೊಟ್ಟು ಸರಿಪಡಿಸಬಹುದಾದ ಸೌಲಭ್ಯವಿದೆ. ಹೀಗೆ ಏಳು ವರ್ಷಗಳವರೆಗೆ ಸ್ವಲ್ಪಸ್ವಲ್ಪವಾಗಿ 25 ನಯೇ ಪೈಸೆಗಳಂತೆ ಕೂಡಿಸಿಟ್ಟರೆ ಏಳುನೂರು ರೂಪಾಯಿಗಳಷ್ಟು ದೊಡ್ಡ ಮೊಬಲಗು ಕೈಗೆ ಬರುತ್ತದೆ. ಈ 'ಸಿಗ್ಮಿ' ಯೋಜನೆಯ ಲೋಕಪ್ರಿಯತೆಯೇ ಅದರ ಸಫಲತೆಗೆ ಸ್ಪಷ್ಟ ಸಾಕ್ಷಿಯಾಗಿದೆ ನಿಮ್ಮ ವರ್ಗದ ಜನರಿಗೂ, ಚಿಕ್ಕ ವ್ಯಾಪಾರಿಗಳಿಗೂ, ದುಡಿಮೆಗಾರರಿಗೂ ಈ ಯೋಜನೆ ಪುಟ್ಟ ಉಳಿತಾಯದ ಒಂದು ವರದಾನವಾಗಿದೆ.

ಇತರ ರೇವಣಾತಿ ಯೋಜನೆಗಳು

ಪ್ರತಿ ದಿನವೂ ದುಡಿದೋ, ಚಿಕ್ಕ ವ್ಯಾಪಾರದ ಮೂಲಕವೋ ಸ್ವಲ್ಪಸ್ವಲ್ಪವಾಗಿ ವೈನಿಕ ಆದಾಯವನ್ನು ಗಳಿಸುವವರಿಗೆ 'ಸಿಗ್ಮಿ' ಯೋಜನೆ ಅನುಕೂಲವಾಗಿರುವಂತೆ ಮಾಸಿಕಾದಾಯವುಳ್ಳ ಉಪಾಧ್ಯಾಯರಿಗೆ, ಸರಕಾರಿ ಯಾ ಖಾಸಗಿ

ಸಂಸ್ಥೆಗಳ ಉದ್ಯೋಗಸ್ಥರಿಗೆ ಸಿಂಡಿಕೇಟಿನ ಗ.ಣಕ ಕ್ರಮದ ಠೇವಣಿ ಪದ್ಧತಿ (Cumulative Deposit) ಅತ್ಯುಪಯುಕ್ತವಾಗಿದೆ. ಪ್ರತಿ ತಿಂಗಳೂ ಸಂಬಳ ಸಡೆಯುವ ದಿನ ಆದಾಯದಲ್ಲಿ ಸಾಧ್ಯವಾದಷ್ಟು ಅಂಶವನ್ನು ಸ್ವಲ್ಪಸ್ವಲ್ಪವಾಗಿ ಕೂಡಿಡುವುದಕ್ಕೆ ಈ ಯೋಜನೆ ಸಹಕಾರಿಯಾಗಿದೆ. ಇಟ್ಟ ಇಡುಗಂಟಿಗೆ ಆಕರ್ಷಕವಾದ ಬಡ್ಡಿಯೂ ದೊರೆಯುತ್ತದೆ. ತಿಂಗಳೊಂದಕ್ಕೆ ಹತ್ತುರೂಪಾಯಿಗಳಂತೆ ಕೂಡಿಡುತ್ತಾ ಬಂದರೆ ಹನ್ನೆರಡು ವರ್ಷಗಳಲ್ಲಿ ರೂ. 122=75 ಸಿಗುತ್ತದೆ. ಹೀಗೆಯೇ ಆದಾಯ ಮತ್ತು ಅನುಕೂಲತೆಗಳಿಗೆ ತಕ್ಕಂತೆ ಪ್ರತಿ ತಿಂಗಳ ಕಂತನ್ನೂ ಹೆಚ್ಚು ಮಾಡಿಕೊಳ್ಳಬಹುದು. ಅಥವಾ ಕೂಡಿಡಬೇಕಾದ ಅವಧಿಯನ್ನೂ 24, 48 ಅಥವಾ 60 ತಿಂಗಳುಗಳಿಗೆ ಹೆಚ್ಚಿಸಲೂ ಬಹುದು.

ಆಗತ್ಯ ಬಿರುವುದಕ್ಕಿಂತ ಹೆಚ್ಚಿನ ಮೊಬಲಗನ್ನು ಕೈಯಲ್ಲಿಟ್ಟುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ಅದರಿಂದ ಪ್ರಮಾದವಶಾತ್ ನಷ್ಟ ಒದಗುವುದೂ ಇದೆ. ಇಂತಹ ಹಣವನ್ನು ಬೇಂಕುಗಳಲ್ಲಿ ಠೇವಣಿ ಇಡುವುದರಿಂದ ಒಳ್ಳೆಯ ಬಡ್ಡಿಯೂ ಸಿಗುತ್ತದೆ. ಹಣವು ಸುರಕ್ಷಿತವಾಗಿಯೂ ಇರುತ್ತದೆ ಈ ಪ್ರಕಾರದ ಠೇವಣಿಗಳಿಗೆ ಅನುಕೂಲವಾಗುವಂತೆ ಸಿಂಡಿಕೇಟು ನಾನಾ ಪ್ರಕಾರದ ಯೋಜನೆಗಳನ್ನು ಸಿದ್ಧಪಡಿಸಿದೆ. ದೀರ್ಘಕಾಲದವರೆಗೆ ಅಗತ್ಯ ಬೀಳದ ಹಣವನ್ನು ಸ್ಥಿರ ಠೇವಾಗಿ (Fixed Deposit) ಹೆಚ್ಚಿನ ಬಡ್ಡಿಯ ದರದಲ್ಲಿಡಬಹುದು. ಪಕ್ಕನೆ ಆಗತ ಬೀಳಬಹುದಾದ ಹಣವನ್ನು ಆರು ತಿಂಗಳ, ಅಥವಾ ಅದಕ್ಕೂ ಕಡಿಮೆಯಾದ ವಿಶೇಷಾವಧಿಯ ಠೇವಾಗಿ (Special Term Deposit) ಯೂ ಇಡಬಹುದು ಈ ಠೇವುಗಳಿಗೆ ಅವುಗಳ ಮೊಬಲಗಿನ ಮೇಲೆ ಮತ್ತು ಅವಧಿಯ ಮೇಲೆ ಹೊಂದಿಕೊಂಡು ಆಕರ್ಷಕವಾದ ಬಡ್ಡಿಯ ದರಗಳು ನಿಶ್ಚಿತವಾಗಿವೆ. ಅಥವಾ ಇಂತಹ ಹಣಗಂಟನ್ನು ಸಿಂಡಿಕೇಟಿನ ಐದು ವರ್ಷಗಳ ಅವಧಿಯ "ಲಕ್ಷ್ಮೀ ಕೇಶ್‌ಸರ್ಟಿಫಿಕೇಟು" ಮತ್ತು ಮೂರು ವರ್ಷಗಳ 'ಸಿಲ್ವರ್ ಜೂಬಲಿ ಕೇಶ್‌ಸರ್ಟಿಫಿಕೇಟು' ಗಳಲ್ಲಿ ಅಥವಾ ಎರಡೂವರೆ ವರ್ಷಗಳ 'ಜೂಬಲಿ ಕೊಮೇಮರೇಶನ್ ಕೇಶ್ ಸರ್ಟಿಫಿಕೇಟುಗಳಲ್ಲಿ ತೊಡಗಿಸುವುದರಿಂದ ಇನ್ನೂ ಹೆಚ್ಚು ಲಾಭಕರವಾದ ಬಡ್ಡಿಯನ್ನು ಪಡೆಯಬಹುದು. ಅಲ್ಲದೆ ಆಗತ್ಯವೆನಿಸಿದಾಗ ನಿಶ್ಚಿತ ದರದ ಮೇಲೆ ನಗದಿಯಾಗಿ ಹಿಡಿದ ಪಡೆಯುವ ಸೌಕರ್ಯವೂ ಇದೆ.

ವ್ಯಾಪಾರಿಗಳಿಗಾಗಲೀ, ಇತರ ಗೃಹಸ್ಥರಿಗಾಗಲೀ ದೈನಂದಿನದ ವ್ಯವಹಾರಗಳ ಖರ್ಚಿಗೆ ಹಣ ಬೇಕಾಗುತ್ತದೆ. ಈ ರೀತಿ ಚಲಾವಣೆಗೆ ಬೇಕಾದ ಹಣವನ್ನು ವ್ಯಾಪಾರಿಗಳು ಸಿಂಡಿಕೇಟಿನ 'ಕರೆಂಟ್' ಖಾತೆಯಲ್ಲಿಡಬಹುದು ಇದರಲ್ಲಿ ಬಡ್ಡಿಯ ದರ ಕಡಿಮೆಯಾದರೂ ಅವಶ್ಯಕತೆಗಳಿಗನುಸಾರವಾಗಿ ಚೆಕ್ಕುಗಳ ಮೂಲಕ ವ್ಯವಹಾರ ನಡೆಸುವ ಸೌಕರ್ಯಲಭ್ಯವಿದೆ ಆಗಾಗ ಹಣ ಹಿಂತೆಗೆಯುವ ಅವಶ್ಯಕತೆಯಿಲ್ಲದ ಇತರ ಸಾಧಾರಣ ಗೃಹಸ್ಥರಿಗೆ 'ಸೇವಿಂಗ್ಸ್ ಬೇಂಕು' ಖಾತೆ ಹೆಚ್ಚು ಅನುಕೂಲ. ಇದರಲ್ಲಿ ಬಡ್ಡಿಯ ದರ ಹೆಚ್ಚು. ಆದರೆ ಚೆಕ್ಕಿನ ಮೂಲಕ ಹಣ ಹಿಂತೆಗೆಯಲು ಕೆಲವು ನಿರ್ಬಂಧಗಳಿವೆ.

ಇತರ ಸೌಕರ್ಯಗಳು

ಮೈಸೂರು, ಆಂಧ್ರ, ಕೇರಳ, ಮುಂಬಯಿ ಮತ್ತು ಮದ್ರಾಸು ರಾಜ್ಯಗಳಲ್ಲಿ ಪ್ರಧಾನ ವ್ಯಾಪಾರ ಕೇಂದ್ರಗಳಲ್ಲಿರುವ ನಮ್ಮ 113 ಶಾಖೆಗಳ ಸಂಪರ್ಕ ಸೌಕರ್ಯದಿಂದಾಗಿ ಸಿಂಡಿಕೇಟು ಚೆಕ್ಕು ಬಿಲ್ಲು ಮುಂತಾದವುಗಳನ್ನು ಅಲ್ಪ ವ್ಯಯದಲ್ಲಿ ಶೀಘ್ರವಾಗಿ ವಸೂಲು ಮಾಡಿ ಕೊಡಲು ಸಮರ್ಥವಾಗಿದೆ. ವ್ಯಾಪಾರೀ ಸಂಸ್ಥೆಗಳು—ಅವು ದೊಡ್ಡವೇ ಆಗಿರಲಿ ಸಣ್ಣವೇ ಆಗಿರಲಿ—ಸಿಂಡಿಕೇಟಿನ ಈ ಸೇವೆಯ ವಿಶೇಷ ಪ್ರಯೋಜನ ಪಡೆಯಬಲ್ಲವು. ತನ್ನ ಎಲ್ಲಾ ಶಾಖೆಗಳಲ್ಲಿರುವ ವ್ಯವಹಾರ ದಕ್ಷರಾದ ಕಾರ್ಯಕರ್ತರ ಮೂಲಕ ವ್ಯಾಪಾರಿ ಸಂಸ್ಥೆಗಳ ಸಕಾಲಿಕವೂ, ಸುಯೋಗ್ಯವೂ ಆದ ಸೇವೆ ಸಲ್ಲಿಸಲು ಸಿಂಡಿಕೇಟು ಪ್ರಯತ್ನಿಸುತ್ತಿದೆ.

ಇದೇ ರೀತಿ ಸಿಂಡಿಕೇಟು ಒಳದೇಶದ ಪಾವತಿಗಳಿಗೂ ವಿಶೇಷ ಸೌಕರ್ಯಗಳನ್ನೊದಗಿಸುತ್ತದೆ. ಸಿಂಡಿಕೇಟು ತನ್ನ ಅನೇಕ ಶಾಖೆಗಳ ಮೂಲಕ ಸುಲಭವಾಗಿ 'ಟೆಲಿಗ್ರಾಫಿಕ್ ಟ್ರಾನ್ಸ್‌ಫರ್' ಮತ್ತು 'ಮೈಲು ಟ್ರಾನ್ಸ್‌ಫರ್'ಗಳ ಅಥವಾ ಡಿಮಾಂಡ್ ಡ್ರಾಫ್ಟ್‌ಗಳ ಮುಖಾಂತರ ಭಾರತದ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲಿ ಒಂದು ಕಡೆಯಿಂದ ಇನ್ನೊಂದೆಡೆಗೆ ಹಣ ಪಾವತಿಯ ಉತ್ತಮ ಸೌಕರ್ಯವನ್ನು ನೀಡುತ್ತದೆ.

ಭಂಗಾರ, ಆಭರಣ, ಭದ್ರತಾ ಪತ್ರ ಮುಂತಾದ ಬೆಲೆ ಬಾಳುವ ವಸ್ತುಗಳನ್ನು ಸುರಕ್ಷಿತವಾಗಿರಿಸಲು ಸಿಂಡಿಕೇಟು ಯೋಗ್ಯ ವ್ಯವಸ್ಥೆ ಮಾಡಿದೆ. ಇದರಿಂದ ಸಿಂಡಿಕೇಟಿನ ಗ್ರಾಹಕರಿಗೆ ಅತ್ಯಲ್ಪ ವೆಚ್ಚದಲ್ಲಿ ತಮ್ಮ ಅಮೂಲ್ಯವಾದ ವಸ್ತುಗಳನ್ನು ಭದ್ರವಾಗಿರಿಸುವುದು ಸುಲಭವಾಗಿದೆ. ಸಿಂಡಿಕೇಟು ತನ್ನ ಉಡುಪಿಯ ಪ್ರಧಾನ ಕಾರ್ಯಾಲಯದಲ್ಲಿ ಒಂದು ಸೇಫ್ ಡಿಪಾಜಿಟ್ ವಾಲ್ಟನ್ನು ಸಿದ್ಧಪಡಿಸಿದೆ. ಇದೇ ರೀತಿಯ ವ್ಯವಸ್ಥೆಯನ್ನು ಸಿಂಡಿಕೇಟು ತನ್ನ ಮುಂಬಯಿ, ಮಂಗಳೂರು ಇತ್ಯಾದಿ ಇತರ ಪ್ರಮುಖ ಶಾಖೆಗಳಲ್ಲೂ ಒದಗಿಸಿ ತನ್ನ ಗ್ರಾಹಕರ ಸೇವೆಯನ್ನು ಹೆಚ್ಚು ಹೆಚ್ಚಾಗಿ ಮಾಡಬೇಕೆಂದು ಬಯಸುತ್ತದೆ.

ಸಿಂಡಿಕೇಟಿನ ಮಂಗಳೂರು ಶಾಖೆಯಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕವಾಗಿ ಏರ್ಪಡಿಸಿದ ವಿಭಾಗ. ಇದನ್ನು ಮಹಿಳೆಯರೇ ನಡೆಸುತ್ತಾರೆ.

* * *

ನಮ್ಮ ನಾಡಿನಲ್ಲಿ ಬೇಂಕಿಂಗ್ ವ್ಯವಹಾರದ ಅಭ್ಯಾಸವು ಮಹಿಳೆಯರಲ್ಲೂ ಹರಡಬೇಕೆಂದು ಸಿಂಡಿಕೇಟು ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಬೇಂಕಿಂಗ್ ವಿಭಾಗವನ್ನು ತನ್ನ ಪ್ರಮುಖ ಶಾಖೆಗಳಲ್ಲಿ ತೆರೆಯಬೇಕೆಂದು ಯೋಚಿಸುತ್ತಿದೆ. ಈ ವಿಭಾಗವನ್ನು ನುರಿತ ಮಹಿಳಾ ಕಾರ್ಯಕರ್ತರಿಂದಲೇ ನಡೆಸಲಾಗುತ್ತದೆ. ಈಗಾಗಲೇ ಮಂಗಳೂರಿನ ಶಾಖೆಯಲ್ಲಿ ಇಂತಹ ಒಂದ ಮಹಿಳಾ ವಿಭಾಗ ಯಶಸ್ವಿಯಾಗಿ ಕೆಲಸ ಮಾಡುತ್ತದೆ. ಬೆಂಗಳೂರಿನ ಶಾಖೆಯಲ್ಲೂ ಇಂತಹ ವ್ಯವಸ್ಥೆ ಮಾಡಬೇಕೆಂದು ಸಿಂಡಿಕೇಟಿನ ವಿಚಾರವಿದೆ. ಈ ರೀತಿಯ ಸೌಲಭ್ಯವನ್ನು ಮಹಿಳೆಯರಿಗೆ ಒದಗಿಸುವ ಸಿಂಡಿಕೇಟು ಭಾರತದಲ್ಲೇ ಮೊತ್ತನೊದಲಿನದೆನ್ನಬೇಕು.

ವಿದ್ಯಾರ್ಥಿಗಳಿಗೆ ವಿಶೇಷ ಸೌಕರ್ಯಗಳು

ಮುಂಬಯಿ, ಮದ್ರಾಸ್, ಬೆಂಗಳೂರು, ಮಣಿಪಾಲ, ಮಂಗಳೂರುಗಳಂತಹ ದೊಡ್ಡ ದೊಡ್ಡ ಶಿಕ್ಷಣ ಕೇಂದ್ರಗಳಲ್ಲಿ ವಿದ್ಯಾಭ್ಯಾಸವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಯಾವ ಜಾಮೀನು ಇಲ್ಲದೆ ಸಿಂಡಿಕೇಟಿನ ಯಾವ ಶಾಖೆಯಿಂದಾದರೂ ಹಣ ಪಾವತಿಮಾಡುವ ಸೌಕರ್ಯವಿದೆ. ಇದು ವಸ್ತುತಃ ವಿದ್ಯಾರ್ಥಿಗಳ ಪಾಲಕರ ಪಾಲಿಗೆ ಒಂದು ವರದಾನವೆಂತಿದೆ. ಅಲ್ಲದೆ ಸಿಂಡಿಕೇಟು ಹೇಗೆ ಸೇವೆಯ ಹೊಸ್ಸಿಹೊಸ ಮಾರ್ಗಗಳನ್ನು ಕಲ್ಪಿಸಿಕೊಂಡು ಮುನ್ನಡೆಯುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಬೇಂಕಿಂಗ್ ವ್ಯವಹಾರದ ಅಭ್ಯಾಸವು ಬೇರೊರುವಂತೆಯೂ, ಉಳಿತಾಯದ ಸದ್ಗುಣವು ಬೆಳೆಯುವಂತೆಯೂ ಸಿಂಡಿಕೇಟು ವಿದ್ಯಾರ್ಥಿಗಳ 'ಸೇವಿಂಗ್ಸ್ ಬೇಂಕ್' ಖಾತೆಯಲ್ಲಿನ ಹಣಕ್ಕೆ ಹೆಚ್ಚು ಬಡ್ಡಿ ಕೊಡುತ್ತದೆ.

ಹೀಗೆ ತನ್ನ ವಿವಿಧ ಬೇಂಕಿಂಗ್ ಸೇವೆಗಳ ಮೂಲಕ ಸಿಂಡಿಕೇಟು ಲಕ್ಷೋಪಲಕ್ಷ ಸಾಮಾನ್ಯ ಜನರ ಸಂಸ್ಥೆಯಾಗಿ ಬೆಳೆದಿದೆ. ಸೇವೆಯ ಆದರ್ಶವನ್ನು ವ್ಯವಹಾರದ ಯಥಾರ್ಥದೊಡನೆ ಸಮನ್ವಯಗೊಳಿಸಿ ಸಿಂಡಿಕೇಟು ಅದ್ಭುತ ವಿಕಾಸ ಪ್ರಗತಿಗಳನ್ನು ಸಾಧಿಸಿಕೊಂಡಿದೆ. ಸ್ವಲ್ಪ ಸಮಯದ ಹಿಂದೆ ಸಿಂಡಿಕೇಟಿನ ಜನರಲ್ ಮ್ಯಾನೇಜರರಾದ ಶ್ರೀ ಟಿ. ಎ. ಪೈಗಳವರು ತಮ್ಮ ಶಾಖಾಧಿಕಾರಿಗಳ ಸಮ್ಮೇಲನವೊಂದರಲ್ಲಿ ಹೀಗೆ ಹೇಳಿದ್ದರು. "ನಮ್ಮ ನಾಡಿನಲ್ಲಿ ಬೇಂಕಿಂಗ್ ಕ್ಷೇತ್ರದಲ್ಲಿ ಅತ್ಯಂತ ಕಠಿಣವಾದ ಪ್ರತಿಸ್ಪರ್ಧೆ ಇರುವುದೆಂದು ನಾನು ಬಲ್ಲೆ. ಹೆಚ್ಚು ಹೆಚ್ಚು ಬಡ್ಡಿ ಕೊಟ್ಟು, ಅಥವಾ ನಮ್ಮ ಸೇವೆಯ ಜಾಮೀನುಗಳನ್ನು ಕಡಿಮೆಮಾಡಿ ಯಾ ಇತರ ಆಕರ್ಷಣೆಗಳನ್ನು ಮುಂದಿಟ್ಟು ಬೇಂಕುಗಳು ಇತರ ಬೇಂಕಿಂಗ್ ಸಂಸ್ಥೆಗಳ ಗಿರಾಕಿಗಳನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂಬುದೂ ನನಗೆ ಗೊತ್ತು. ಆದರೆ ನೀವು ಮಾತ್ರ ಈ ರೀತಿಯ ಪ್ರತಿಸ್ಪರ್ಧೆಗೆ ಕೈಹಾಕದಾರದೆಂದು ನನ್ನ ಬೇಡಿಕೆ. ಈ ಸ್ಪರ್ಧೆಯಿಂದ ನಮ್ಮ ನಾಡಿನ ಬೇಂಕಿಂಗ್ ಪದ್ಧತಿಯೇ ಕೆಡುತ್ತದೆ. ನಾವು ಹಾಗೆ ಮಾಡಬಾರದು. ಬೇಂಕಿಂಗ್ ವ್ಯವಹಾರ ಕ್ಷೇತ್ರದಲ್ಲಿ ನಮ್ಮ ನಾಡು ಇನ್ನೂ ಸಾಕಷ್ಟು ಮುಂದುವರಿದಿಲ್ಲ. ಈ ನಾಡಿನಲ್ಲಿ ಒಂದು ಉತ್ತಮವಾದ, ಭದ್ರವಾದ ಬೇಂಕಿಂಗ್ ಪದ್ಧತಿಯನ್ನು ನಿರ್ಮಿಸುವುದು ಈಗ ಬೇಂಕುಗಳ ಕರ್ತವ್ಯವಾಗಿದೆ. ನಾವು ಈ ಉದ್ದೇಶದಿಂದ ಕಾರ್ಯಪ್ರವೃತ್ತರಾಗಬೇಕು. 'ಅತ್ಯುತ್ತಮ ಬೇಂಕಿಂಗ್ ಸೇವೆ'ಯೇ ನಮ್ಮ ಮುಖ್ಯಮಂತ್ರನೆಂದು ನೀವು ಮರೆಯಬೇಡಿ. ನೀವು ಇತರ ಬೇಂಕುಗಳೊಡನೆ ಸ್ಪರ್ಧಿಸುವುದಾದರೆ ಇತರರಿಗಿಂತಲೂ ಉತ್ತಮವಾದ, ಸಮರ್ಥವಾದ ಮತ್ತು ಸಕಾಲಿಕವಾದ ಸೇವೆಯನ್ನು ಜನತೆಯ ಮುಂದಿಡುವುದರಲ್ಲಿ ಸ್ಪರ್ಧಿಸಿರಿ." ಸಿಂಡಿಕೇಟಿನ ಸೇವೆಗಳ ಉಚ್ಚ ಧ್ಯೇಯವು ಎಷ್ಟ ವಿಶಾಲವಾದುದೆಂದು ಈ ಹೇಳಿಕೆ ಸ್ಪಷ್ಟಪಡಿಸುತ್ತದೆ.

ರಾಷ್ಟ್ರಧ್ವಜದ ಸರಿಯಾದ ಉಪಯೋಗ

- ವ್ಯಾಪಾರ, ವೃತ್ತಿ, ಉದ್ದಿಮೆಗಳ ಉದ್ದೇಶಕ್ಕಾಗಿ ರಾಷ್ಟ್ರಧ್ವಜವನ್ನು ಉಪಯೋಗಿಸಬಾರದು. ಅದನ್ನು ಬುಡ ಮೇಲಾಗಿ ಪ್ರದರ್ಶಿಸಕೂಡದು.
- ಬಣ್ಣ ಮಾಸಿದ ಧ್ವಜವನ್ನು ಹಾರಿಸಬಾರದು.
- ಒಂದು ಗದ್ದುಗೆಯ ಮೇಲಿನ ಕುರ್ಚಿ ಅಥವಾ ಆಸನಗಳ ಅಡಿಯ ಮಟ್ಟಕ್ಕೆ ಬರುವಂತೆ ಧ್ವಜವನ್ನು ಅಥವ ರಾಷ್ಟ್ರೀಯ ವರ್ಣಗಳನ್ನು ಪ್ರದರ್ಶಿಸಬಾರದು.
- ಧ್ವಜವು ಸಿಕ್ಕಕಡೆಗಳಲ್ಲಿ ಬಿಸಾಡಲ್ಪಟ್ಟು ಕಾಲ್ತೆಳಗೆ ತುಳಿಯಲ್ಪಡುವಂತೆ ಮಾಡಬಾರದು.
- ಹರಿದುಹೋದ ಧ್ವಜವನ್ನು ಹಾರಿಸಬಾರದು
- ಯಾವತ್ತೂ ಮಂಗಲ ಕಾರ್ಯಗಳಲ್ಲಿ ಧ್ವಜದ ತುದಿ ಕಂಬದ ತುದಿಗೆ ಮುಟ್ಟಿರಬೇಕು.

ರಾಷ್ಟ್ರೀಯ ಉತ್ಸವದ ಅನಂತರವು ಅನೇಕ ದಿನಗಳವರೆಗೆ ವಾಸಸ್ಥಾನ ಹಾಗೂ ವ್ಯಾಪಾರ ಸ್ಥಳಗಳ ಮೇಲೆ ರಾಷ್ಟ್ರಧ್ವಜವು ಹಾರಾಡುತ್ತಿರುವುದು ಆಗಾಗ ಕಂಡುಬರುತ್ತದೆ. ಹೀಗೆ ಮಾಡಬಾರದು. ಸ್ವಾತಂತ್ರ್ಯದಿನೋತ್ಸವವು ಸಾಂಗವಾದ ಕೂಡಲೆ ಅದರ ನಿಮಿತ್ತವಾಗಿ ಏರಿಸಿದ ಧ್ವಜವನ್ನು ಇಳಿಸಬೇಕು.

ರಾಷ್ಟ್ರಧ್ವಜವು ವ್ಯಕ್ತಿಯ ಸೊತ್ತಾಗಿರದೆ ರಾಷ್ಟ್ರದ ಚಿನ್ಹೆಯಾಗಿದೆಯೆಂಬುದನ್ನು ಲಕ್ಷದಲ್ಲಿಡಬೇಕು. ಆದಕಾರಣ ಅದನ್ನು ಸರಿಯಾಗಿ ಉಪಯೋಗಿಸಿ ಗೌರವಿಸುವುದಲ್ಲದೆ ಇತರರು ಅದಕ್ಕೆ ಕುಂದನ್ನೆಸಗದಂತೆ ನೋಡಿಕೊಳ್ಳುವುದೂ ಎಲ್ಲರ ಪಾಲಿನ ಕರ್ತವ್ಯವಾಗಿದೆ.

ಕುಂದಾಪುರ ಅಸಿಸ್ಟಾಂಟ್ ಖಮಿಶನರವರ ಕೋರ್ಟ್‌ನಲ್ಲಿ

O. P. No. 241/1958.

ಶ್ರೀಕೃಷ್ಣಾಪುರವಾರಉಡ್ಪಿ ಇದರ ಮೆನೇಜರ್ ಶ್ರೀ ಕೆ ಗೋವಿಂದ ರಾವ್ —ಅರ್ಜಿದಾರ

ಮತ್ತು

ವೈಕುಂಠ ಪೂಜಾರಿ —ಎದ್ರಿ

ಯನವರೊಳಗೆ

ಮೇಲ್ಕಂಡ ಅರ್ಜಿಯ ಎದ್ರಿ—ವೈಕುಂಠ ಪೂಜಾರಿ, ಬಿಲ್ಲ ಎಂಕ ಹೆಂಗ್ಸಿನ ಮಗ, ಉಡ್ಪಿ ತಾಲೂಕು ಕಾಳಿಂಡ ಗ್ರಾಮ— ಈತನಿಗೆ ಈ ಮೂಲಕ ತಿಳಿಸುವುದೇನಂದ್ರೆ

ಅರ್ಜಿದಾರರ ದಳಗೆ ಎದ್ರಿಯು ತಾರೀಕು 4—7—1958ನೇ ಜಾಲಗೇರೆ ಎದುರ್ಸುದಿ ಆಧಾರದ ಮೇಲೆ ಜಾಲಗೇರೆಗೆ ಅನುಭವ್ಸಿ ಕೊಂಡು ಬರುವ ಅಸ್ತಿಗಳ ಸ್ವಾಧೀನತೆ ಬಗ್ಗೆ ಅರ್ಜಿದಾರರು ದಾಕ್ಲು ಮಾಡಿರುವ ಮೇಲ್ಕಂಡ ಅರ್ಜಿಯು ತಾ 10—9—1958ಕ್ಕೆ ನಮ್ಮ ನೋಟೀಸು ಬಗ್ಗೆ ಇಟ್ಟಿರುವುದ್ರಿಂದ ಸದ್ರಿ ಅರ್ಜಿಯಲ್ಲಿ ನಿಮಗೆ ಎದುರಿಸುವದಿದ್ದಲ್ಲಿ ಸದ್ರಿ ತಾ 10—9—58ನೇ ದಿವ್ಸ ಬೆಳಗ್ಗೆ 10 ಘಂಟೆಗೆ ಮೇಲ್ಕಂಡಕೋರ್ಟ್‌ನ ಉಡ್ಪಿ ಕೇಂದ್ರದಲ್ಲಿ ಸ್ವತಹಾ ವ ವಕೀಲರ ಮುಖಾಂತರ ಹಾಜ್ರಾಗಿ ಜ್ಯಾಬೀರುಮಾಡಿಕೊಳ್ಳತಕ್ಕದ್ದು ತಪ್ಪದಲ್ಲಿ ನಿಮ್ಮನ್ನು ಶಿಕ್ಷಾಮಾಡಿ ಸದ್ರಿ ಅರ್ಜಿಯು ಪೈಸಲುಮಾಡಲ್ಪಡುವುದು

P. V. Acharya,
Vakil for Petitioner

ಮೊಕ್ಕಾಂ ಉಡ್ಪಿ ತಾ 9—8—1958.

ಓದಿ ನಗಬಹುದು!

ಇದ್ದುದನ್ನೇ ಬೇಡುತಿದ್ದೇನೆ

ಒಬ್ಬ ಭಿಕ್ಷುಕ ಶ್ರೀಮಂತನೊಬ್ಬನ ಮನೆಯ ಬಾಗಿಲಲ್ಲಿ ನಿಂತು ಚಿಕ್ಕಾನೊಂದನ್ನು ಬೇಡಿದ ಆಗ ಆ ಶ್ರೀಮಂತ ಕೇಳಿದ ನೀನು ಏನಾದರೂ ಕೆಲಸವನ್ನೇಕೆ ಮಾಡುವುದಿಲ್ಲ? ನಿನಗೆ ಮುಖ್ಯವಾಗಿ ಹಣಕ್ಕಿಂತಲೂ ಬುದ್ಧಿಯ ಆವಶ್ಯಕತೆಯಿದೆ

ಭಿಕ್ಷುಕ ಹೌದು ಸ್ವಾಮಿ, ಆದರೆ, ನಾನು ನಿಮ್ಮೊಡನಿದ್ದುದನ್ನೇ ಬೇಡುತಿದ್ದೇನೆ—

ಕುರುಡನಾಗಿದ್ದಿದ್ದರೆ ?

ಕುಂಟನಾದೊಬ್ಬ ಭಿಕ್ಷುಕನಿಗೆ ಚಿಲ್ಲರೆ ಕಾಸನ್ನು ಕೊಡುತ್ತ ಮನೆಯ ಯಜಮಾನನು ದಯನೀಯವಚನದಿಂದ ಸಂತಾಪ ಸೂಚಿಸುತ್ತ ನುಡಿದ ಕುಂಟನಾಗಿರುವುದೇ ಬಹಳ ದುರದೃಷ್ಟದ ಸಂಗತಿ ಆದರೂ, ನೀನು ಕುರುಡನಾಗಿದ್ದರೆ, ಅದರಿಂದ ನಿನಗೆಷ್ಟು ಕಡುಕಾಗುತಿತ್ತು!

ಬಿಕ್ಷುಕನು ಉತ್ತರಿಸಿದ— ಹೌದು ಸ್ವಾಮಿ, ನೀವು ಸತ್ಯವಾದುದನ್ನೇ ಹೇಳಿದಿರಿ ನಾನು ಒಂದುವೇಳೆ ಕುರುಡನಾಗಿದ್ದರೆ, ನನಗೆ ಯಾವಾಗಲೂ ಟಕ್ಕು ನಾಣ್ಯಗಳ ದೊರಯ ತಿದ್ದುವು!

ಕೇವಲ ಅಪ್ರತ್ಯಕ್ಷಕರ!

ಅರ್ಥಶಾಸ್ತ್ರ ಪ್ರಾಧ್ಯಾಪಕರು ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷಕರಗಳ ಬಗ್ಗೆ ಉಪನ್ಯಾಸ ಮಾಡಿ, ಅದರ ಪುನರಾವರ್ತನೆಗೆ ತೊಡಗಿದರು—ರಾಮ, ಅಪತ್ಯಕ್ಷಕರ ಕ್ಕೊಂದು ಉದಾಹರಣೆಯನ್ನು ಕೊಡು.

ರಾಮ—ನಾಯಿ, ದನ, ಎಮ್ಮೆಗಳ ಮೇಲೆ ನಗರಸಭೆಯವರು ಹೇರುವ ಕರ ಥಾರ

ಪ್ರಾಧ್ಯಾಪಕರು ಅದು ಹೇಗೆ?

ರಾಮ—ಏಕೆಂದರೆ, ಅಂತಹ ಕರಗಳನ್ನು ಆ ಪ್ರಾಣಿಗಳು ತಾವೇ ತೆರುವುದಿಲ್ಲವಲ್ಲ!

ಅದೇನು ಮಹಾ?

ದಕ್ಷಿಣ ಧ್ರುವದ ಯಾತ್ರೆಯನ್ನು ಮುಗಿಸಿ ಬಂದಿರುವ ಒಬ್ಬನು ನಕ್ಕು ಹೇಳಿದನು' ನಾವಿದ್ದ ಸ್ಥಳದಲ್ಲಿ ಬಹಳ ಚಳಿಯಿತ್ತಾದುದರಿಂದ, ಮೇಂಬತ್ತಿಯನ್ನು ಉರಿಸುವುದೂ ಅಸಾಧ್ಯವಾಗಿ ಪರಿಣಮಿಸಿತ್ತು ಮೇಣ ಕರಗಿಸ ವುದೇ ಆಗದ ಕೆಲಸವಾಗಿತ್ತು.

ಆಗ, ಅವನ ಪತ್ನಿಪ್ರಧಿ ತನ್ನ ಅನುಭವವನ್ನು ಹೇಳತೊಡಗಿದ—ಅಷ್ಟೇನೆ? ನಾವಿದ್ದ ಸ್ಥಳದಲ್ಲಿ ನಮ್ಮ ಬಾಯಿಯಿಂದ ಬರುವ ಮಾತುಗಳೆಲ್ಲಾ ಗಡ್ಡೆಕಟ್ಟಿ ಮಂಜುಗಡ್ಡೆಗಳಾಗುತಿದ್ದುವು ಆಡಿದ ಮಾತುಗಳನ್ನು ತಿಳಿದುಕೊಳ್ಳಲು ನಾವು ಆ ಗಡ್ಡೆಗಳನ್ನು ಕರಗಿಸಬೇಕಾಗಿತ್ತು!

ಸೂಕ್ತ ಸಲಹೆ

ರಮೇಶ—ನಾನು ಒಂದು ದಿನ ಆಟದಲ್ಲಿ ಸರಾಜಯ ಹೊಂದಿದರೂ ಮರುದಿನ ಜಯಶೀಲನಾಗ ವೆ

ಮೋಹನ—ಹಾಗಾದರೆ, ದಿನಾ ಬಿಟ್ಟು ದಿನ ಆಡುವ ಅಭ್ಯಾಸವನ್ನೇಕೆ ಇಟ್ಟುಕೊಳ್ಳಬಾರದು?

ಕೇವಲ ಊಹನೆ

ರಾಮು—ನೀನೊಬ್ಬ ದೊಡ್ಡ ಸುಳ್ಳುಗಾರ.

ಶಾಮು—ಏನೆಂದೆ? ಇನ್ನೊಂದುಬಾರಿ ಎಂದಾದರೂ ಈ ರೀತಿ ಹೇಳಿದೆಯೆಂದರೆ, ಹಲ್ಲು ಮುರಿದು ಕೈಗೆ ಕೊಟ್ಟೇನು, ಜಾಗ್ರತೆ

ರಾಮು—ಆಗಲಿ, ನಾನೀಗಇನ್ನೊಮ್ಮೆ ಹೇಳಿದೆ ಎಂದು ತಿಳಿದುಕೊ, ಆಗ?

ಶಾಮು— ನಾನೂ ನಿನ್ನ ಹ್ಯನ್ನು ಮುರಿದು ಕೈಗೆಕೊಟ್ಟೇನೆಂದುತಿಳಿದುಕೊ.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 37 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 38 ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ತವಧಿಯು ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯವಾಡಿ ಆದಷ್ಟು ಬೇಗನೇ ಕಳುಹಿಸಿ ಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತೇವೆ.

ಮೆನೇಜರ್

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ! ಶ್ರೀ! ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ – ಸಾಧಾರಣ ಪ್ರತಿ- ರೂ ೧-೮-೦ (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ವ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನಾದ್ವಯಗಳು
ಟ್ರೇಡ್ ಮಾರ್ಕ್
ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ ಗುಳಿಗೆ)
ಈ ಔಷಧವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ ಬೆಲೆ ರೂ 7-4-0.
"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಗೃಷ್ಣ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು, ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತದೆ
ಸಂ|| A R ಅಯ್ಯರ್
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆ"ಗಳಾಗಿದ್ದಾರೆ
ರೋಗಿಯ ವಯಸ್ಸು ಮತ್ತು ಜಾಯಿಲೆಯ ವಿವರಗಳನ್ನು ಬರೆದು 4 ಅಣೆ (25 N P) ಸ್ಟಾಂಪು ಕಳಿಸಿರಿ ಸಲಹೆಯೊಡನೆ ಕ್ರಿಪಣ ಕ್ಯಾಟಲಾಗ್ ಮತ್ತು ಪತ್ರಪತ್ರಿಕೆಗಳ ರವಾನೆ
ಎ ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)
628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S I)

OURSELVES IN AND OUT OF SEASON
IN PLENTY & SCARCITY
Whatever be the market conditions regarding availability of stocks of Papers-- fall or rise in costs-- We continue to serve our customers with the same sincerity & integrity
SRINIVAS BROTHERS
P. B. No. 130 CAR STREET,
MANGALORE-1.
Phone. 449 Grams: ACTIVE

ಪುನಾರಚನಾಯೋಜನೆಗಳು

(೩ನೇ ಪುಟದಿಂದ)

ಕಾರಖಾನೆಗಳು, ಗಿರಣಿಗಳು, ವಾಶಶಾಲೆಗಳು ಹೀಗೆಯೇ. ಎಲ್ಲ ಕ್ಷೇತ್ರಗಳಲ್ಲಿಯೂ ಈಗ ಇರುವ, ನಮಗೆ ಆವಶ್ಯಕವಾದ ಮತ್ತು ಕೊರತೆಬೀಳುವ ಅಂಕೆ ಸಂಖ್ಯೆಗಳನ್ನು ಕಲೆಹಾಕಬೇಕಾಗುತ್ತದೆ.

ನಮ್ಮನ್ನೂ ನಾವು ಮರೆತು ಬಿಡುವುದು ಸರಿಯಲ್ಲ. ನಮ್ಮಲ್ಲಿ ಯಾವ ಕೆಲಸಗಳನ್ನು ಮಾಡಬಲ್ಲವರೆಷ್ಟು ಜನ, ಅಲ್ಪ ಪರಿಶ್ರಮದಿಂದ ಹೆಚ್ಚು ಲಾಭಕರವಾದ ಉದ್ಯೋಗಕ್ಕೆ ಅರ್ಹರಾದವರೆಷ್ಟುಮಂದಿ, ಹೊಸತಾಗಿ ಅನ್ಯ ದೇಶಗಳ ಸಾಹಾಯಕರೆಂದು ಬರಬೇಕಾಗುವವರೆಷ್ಟು ಆಳು ಎಂದು ಮುಂತಾದ ವಿವರಣೆಗಳು, ನಮ್ಮ ಪಶು ಸಂಪತ್ತುಗಳ ಅಂಕೆಸಂಖ್ಯೆಗಳು ಎಲ್ಲವನ್ನೂ ಕೂಡಹಾಕಬೇಕು.

ಆಗ, ನಮ್ಮಲ್ಲಿರುವುದು, ನಮಗೆ ಬೇಕಾಗಿರುವುದು ಮತ್ತು ನಮ್ಮಲ್ಲಿ ಕಡಿಮೆ ಬೀಳುವುದು — ಇವುಗಳ ಚಿತ್ರ ನಮ್ಮ ಕಣ್ಣಮುಂದೆ ನಿಲ್ಲುತ್ತದೆ. ಇನ್ನು ನಮಗೆ ಬೇಕಾದುದನ್ನು ಸಾಧಿಸಲು ಬೇಕಾದ ಹೆಣದ ಚಿಂತೆಯನ್ನೂ ಮಾಡಬೇಕಾಗುತ್ತದೆ. ನಮಗೆ ದೊಡ್ಡ ಆಣೆಕಟ್ಟುಗಳು, ಕಾಲುವೆಗಳು, ಬಾವಿಗಳು, ಕೆರೆಗಳು, ಮಾರ್ಗಗಳು, ಉಗಿ ಬಂಡಿಗಳು, ಬಟ್ಟೆ ಗಿರಣಿಗಳು, ಕಾಗದದ, ಉಕ್ಕಿನ ಕಾರಖಾನೆಗಳು, ಚಿಕಿತ್ಸಾಲಯಗಳು, ತಾಂತ್ರಿಕ ಶಾಲೆಗಳು, ಇನ್ನೂ ಏನೇನೋ ಬೇಕಾಗುತ್ತವೆ. ಇಲ್ಲವೂ ಕಾರ್ಯಗತವಾದರೆ, ಸುಖ ದೊರೆತೀತು. ಆದರೆ ಇದಕ್ಕೆ ಹಣ?

ಬಾವಿಯನ್ನು ತೋಡಿಸುವ ಯೆಜಮಾನ ಪರಿಶ್ರಮ ಪೂರ್ವಕ ದುಡಿದಂತೆ, ತುಸು ನೆಚ್ಚುವನ್ನು ಕಡಿಮೆ ಮಾಡಿ ಉಳಿಸಿದಂತೆ ಹಾಗೆಯೇ ತುಸು ಹೊರಗಿನಿಂದ ಸಾಲ ಪಡೆದಂತೆ ನಾವೂ ನಮ್ಮ ಸರಕಾರವೂ ಮಾಡಬೇಕಾಗುತ್ತದೆ.

ಸರಕಾರವು ಕರಗಳನ್ನು ಹೇರಿ ನಮ್ಮನ್ನು ಒತ್ತಾಯಪೂರ್ವಕವಾಗಿ ಕೊಂಚ ಉಳಿತಾಯ ಮಾಡುವಂತೆ ಪ್ರೇರೇಪಿಸುತ್ತದೆ; ಆದರೆ ಸಂಕ ತೆರುವುದನ್ನು ಹೆಚ್ಚಿಸವರು ದ್ವೇಷಿಸುತ್ತಾರೆ. ಕರ ತೆರುವುದೆಂದರೆ, ಎಲ್ಲರ ಅಭ್ಯುದಯಕ್ಕಾಗಿ ನಾವು ನೀಡುವ ದೇಣಿಗೆಯಷ್ಟೆ. ಸಮಾಜದಲ್ಲಿರುವವರು ಈ ಒಂದು ತ್ಯಾಗಕ್ಕೆ ಸಿದ್ಧರಾಗುವುದು ಅವಶ್ಯ.

ಅಲ್ಲದೇ ನಮ್ಮಿಂದ ಸಾಧ್ಯವಿರುವುದಾದರೆ, ಸರಕಾರೀ ಸಾಲಗಳಲ್ಲಿಯೋ ಅಂಚೆ ಕಛೇರಿಯ ರಕ್ಷಣಾಪತ್ರಗಳಲ್ಲಿಯೋ ನಮ್ಮ ಹಣವನ್ನು ತೊಡಗಿಸಿದರೆ, ಅದಕ್ಕೆ ಬಡ್ಡಿ ರೂಪದಲ್ಲಿ ಸ್ವಲ್ಪ ಮೊಬಲಗೂ ದೊರೆಯುವುದು. ನಾವು ತೊಡಗಿಸಿದ ಹಣವು ದೇಶದ ಪುನಾರಚನಾಕಾರ್ಯದಲ್ಲಿ ಸೇವೆ ಸಲ್ಲಿಸಲು ನೆರವಾಗುವುದು. ಚಿಕ್ಕ ಉಳಿತಾಯ ಯೋಜನೆಗಳಲ್ಲಿ, ಅಥವಾ ಇನ್ನಿತರ ವಿಧಾನಗಳಲ್ಲಿ ಹಣವನ್ನು ಉಳಿಸಬಹುದು. ಇಲ್ಲಿ ಕೊಂಚವಾದರೂ ನೆಚ್ಚೆ ಕಡಿಮೆಮಾಡಿ ಉಳಿತಾಯಮಾಡುವ ಪ್ರಶ್ನೆಯೇ ಮುಖ್ಯ ಹೊರತು ಅದನ್ನು ತೊಡಗಿಸುವ ಪ್ರಶ್ನೆಯಲ್ಲ. ಹಾಗೆಂದು ಒಡವೆ ವಸ್ತುಗಳನ್ನು ಅನಾವಶ್ಯಕವಾಗಿ ಮಾಡಿಸುವುದು ರಾಷ್ಟ್ರೀಯ ದೃಷ್ಟಿಯಿಂದ ಒಳ್ಳೆಯದೆನ್ನಬರುವುದಿಲ್ಲ. ಎಷ್ಟೆಂದರೂ ಅವು ಮೃತ ಬಂಡವಳ—(Dead Capital) ತಾನೆ?

ಇನ್ನು ನಾವು ರಾಷ್ಟ್ರದ ಪುನರುತ್ಥಾನ ಕಾರ್ಯದಲ್ಲಿ ಪ್ರತ್ಯಕ್ಷ ಸೇವೆಯನ್ನೂ ಸಲ್ಲಿಸಬಹುದು. ನಮ್ಮ ನಮ್ಮ ಊರಿನ ರಸ್ತೆಗಳ ನಿರ್ಮಾಣ, ನಿರುಪಯೋಗಿ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡುವಿಕೆ ಮೊದಲಾದುವಲ್ಲಿ ಹಾರೆ ಪಿಕ್ಕಾಸುಗಳನ್ನೂ ಹಿಡಿಯಬಹುದು; ನಿರಕ್ಷರಕ್ಷರಿಗೆ ಅಕ್ಷರಾಭ್ಯಾಸ ಮಾಡಿಸಬಹುದು. ಆರೋಗ್ಯ ಸೂತ್ರಗಳನ್ನು ತಿಳಿಹೇಳಬಹುದು; ಕಳ್ಳಗರಲ್ಲಿನ ಮೂಢತೆಯನ್ನು ದೂರಮಾಡಿ ಅವರಲ್ಲಿ ನವಚೇತನವನ್ನು ತುಂಬಿಸಬಹುದು. ಅವರವರಿಂದ ಸಾಧ್ಯವೆನಿಸಿದ ಯಾವುದೇ ಸೇವೆಯನ್ನೂ ನಾವೂ ಮಾಡಬಹುದು ದೇಶದ ಹಿತಚಿಂತನೆಯನ್ನು ಮುಂದಿಟ್ಟು, ಎಲ್ಲ ಗ್ರಾಮಸ್ಥರೂ ತಂತಮ್ಮ ಗ್ರಾಮದ ಆವಶ್ಯಕತೆಗಳನ್ನು ಪರಸ್ಪರ ಸೌಹಾರ್ದದಿಂದ ಮುಗಿಸಿಕೊಂಡರೆಂದರೆ, ಭಾರತವು ಸುಖೀರಾಜ್ಯವಾಗುವುದೆಂದು ಮರೆಯಬಾರದು ಆದರೆ ಎಲ್ಲವನ್ನೂ ಒಂದೇಬಾರಿ ಮಾಡಿಬಿಡಲಾಗುವುದಿಲ್ಲ. ಆದರೂ ನಮ್ಮ ಆವಶ್ಯಕತೆಗಳಿಗೆ ಯೋಗ್ಯ ಸ್ಥಾನಗಳನ್ನಿತ್ತು ಅವನ್ನು ಒಂದೊಂದಾಗಿ ಕಾರ್ಯರೂಪದಲ್ಲಿ ತರುವಲ್ಲಿ ಮುಂದಾದರೆ, ಸರಕಾರೀ ಪಲಯಗಳೂ ಮುಂದೆ ಬರುವುವು. ಆದರೂ, ಸದಾ ಸರಕಾರದ ಮುಖವನ್ನೇ ಇದಿರು ನೋಡುತ್ತ ಕುಳಿತರೆ ಪ್ರಾಪ್ತ ಕೆಲಸವಾಗದು; ಉದ್ದೇಶ ಪೂರೈಸಲಾರದು.

ಇನ್ನೂ ಕಡಿಮೆ ಬೀಳುವ ಹಣವನ್ನು ಸರಕಾರವು ಇತರ ದೇಶಗಳಿಂದ ದಾನವಾಗಿಯೋ ಸಾಲವಾಗಿಯೋ ತೆಗೆದುಕೊಳ್ಳುತ್ತದೆ; ಅಲ್ಲದೇ ಅವನ್ನು ಕ್ರಮೇಣ ಸಲಾಯಿಸುತ್ತದೆ. ಆದರೂ ನಮಗೆ ಬೇಕಾದ ಬಂಡವಳವನ್ನು ನಾವು ಶಕ್ಯವಾದನ್ನು ಒದಗಿಸುವುದು ನಮ್ಮ ಕರ್ತವ್ಯವೆಂದು ಮರೆಯಬಾರದು. ಹೀಗೆ ನಾವು ಯಥಾಶಕ್ತಿಯಾಗಿ ಸಲ್ಲಿಸಿದ ಸೇವೆಗಳಿಂದ ಫಲಪ್ರಾಪ್ತಿಯಾಗಿ ನಾವೆಲ್ಲರೂ ಒಂದೇ. ಯೋಜನೆಯ ಫಲವೆಲ್ಲವೂ ನಮ್ಮದೇ ಎಂದು ಉದ್ಗರಿಸಬಹುದು.

ಯೋಜನೆಯ ಫಲಗಳು ಪ್ರಾರಂಭದಲ್ಲಿಯೇ ದೊರೆಯಲಾರವು. ಸಾಮಾನ್ಯವಾಗಿ ೫ ಯಾ ೧೦ ವರ್ಷಗಳು ಒಂದು ದೇಶದ ಇತಿಹಾಸದಲ್ಲಿ ಬಹಳ ಅಲ್ಪಸಮಯ. ಆದರೂ ನಾವು ದೃಢಮನಸ್ಸಿನಿಂದ ಇಂತಹ ರಚನಾತ್ಮಕ ಕಾರ್ಯಗಳಿಗೆ ಕೈಹಾಕಿದರೆ, ಆಗ, ಮುಂದಿನವರಿಗೂ ಒಂದು ಭದ್ರವಾದ ಸಂಪ್ರದಾಯವನ್ನು ಹಾಕಿ ಇಷ್ಟಾಗುವುದು. ಈ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಾದರೂ ಬೆಳೆದು ಬಂದಾಗ, ತಮ್ಮ ಹಿರಿಯರ ತ್ಯಾಗಬುದ್ಧಿಯಿಂದಾಗಿ ಸುಖೀ ಜೀವನವನ್ನು ಬಾಳಬಹುದು. ಹೀಗೆಯೇ ಹಲವು ವರ್ಷಗಳು ಸಂದುಹೋಗಲಾದರೂ ಹಾಲು ಸುರಿವ ಜೇನುಹರಿವ ನಾಡಾಗಿ ಭಾರತ ಮನಸಾರ ಚಿಮ್ಮಬಹುದು. ಭಾರತೀಯರು ವಿದ್ಯಾವಂತರೂ ದೃಢಕಾಯರೂ ಆರೋಗ್ಯವಂತರೂ ಆತ್ಮತೃಪ್ತರೂ ಆಗಿ ಬಾಳುವಂತಾಗಬಹುದು. ಆದರೆ, ಕೈಕೆಸರಾದರೆ ತಾನೇ ಬಾಯಿಗೆ ಮೊಸರಾದೀತು? ಆದುದರಿಂದ ಇಂದು ನಮ್ಮ ಸ್ವಾರ್ಥ, ವೈಷಮ್ಯಾತಿಗಳನ್ನು ತಡೆಹಿಡಿದು, ದೇಶಕ್ಕಾಗಿ, ಮುಂಬರುವ ನಮ್ಮ ಪೀಳಿಗೆಗಾಗಿ ಒಮ್ಮತದಿಂದ ದುಡಿಯುವ ದೃಢ ಪ್ರತಿಜ್ಞೆಯನ್ನು ಮಾಡೋಣ. ಈ ಪ್ರತಿಜ್ಞೆಯನ್ನು ಪೊಳ್ಳಾಗಿಸದೆ ಪುರುಳಾಗಿಸಿ ಭವ್ಯ ಭಾರತವನ್ನು ಕಟ್ಟೋಣ. ಜೈಹಿಂದ್.

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ

ನಾವು ಎಂದಿನಂತೆಯೇ ಪ್ರಕಾಶಪಡಿಸುತ್ತಿರುವ "ಸ್ವಾತಂತ್ರ್ಯ ವಿಶೇಷ ಸಂಚಿಕೆ"ಯು ನಿಮ್ಮ ಕೈಯಲ್ಲಿದೆ. ಇದರಲ್ಲಿ ಆಕರವಾಗಿರುವ ಲೇಖನಗಳ ಗೌರವ, ಸಂದರ್ಭೋಚಿತತೆ, ವೈವಿಧ್ಯವೆಲ್ಲವನ್ನೂ ವಾಚಕರೇ ಮನನಮಾಡಿಕೊಳ್ಳಬಹುದು. ಇಂತಹ ಮಹಾಸಂಚಿಕೆಯನ್ನು ಇಂತಹ ಸಂದಿಗ್ಧಕಾಲದಲ್ಲಿ ಹೊರಡಿಸಲು ಸಹಾಯಕರಾದ ಲೇಖಕ ಬಂಧುಗಳಿಗೂ ಜಾಹೀರಾತುದಾರರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸಿ ಇನ್ನುಮುಂದಕ್ಕೂ ಅವರ ಸಹಾಯವು ಇದೇ ರೀತಿಯಲ್ಲಿ ದೊರೆಯಲೆಂದು ಹಾರೈಸುತ್ತೇವೆ. ಸಂಚಿಕೆಯನ್ನು ಇಷ್ಟಕಾಲದಲ್ಲಿ ಹೊರತರಲು ನೆರವಾದ ಮುದ್ರಣಾಲಯದ ನೌಕರರನ್ನೂ ಅಭಿನಂದಿಸಿ ನಿಮ್ಮೆಲ್ಲರ ಸಹಾನುಭೂತಿಯನ್ನು ಆನುಯೋಜಿಸಿ ವಿರಮಿಸುತ್ತೇವೆ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ನೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ

ನೋಟೀಸು

ಉಡುಪಿ ಡಿ. ಮುನ್ಸೀಫ್ ಕೋರ್ಟ್‌ನಲ್ಲಿ

S.C No. 165/1958.

ಶೇಷಿ ಶೆಟ್ಟಿ —ವಾದಿಯ

ಮತ್ತು

ಶೇಕ್ ಬಾಪು ಸಾಹೇಬ —ಪ್ರತಿವಾದಿಯ ವಿರುದ್ಧ

ಪ್ರತಿವಾದಿ ಶೇಕ್ ಬಾಪು ಸಾಹೇಬ. ಶೇಕ್ ಅಲ್ಲಿ ಸಾಹೇಬರ ಮಗ ಹೊನ್ನಾಳಿತಾಲ್ಲೂಕಿನ ಹಳ್ಳಿಯಲ್ಲಿ ಹಾಲಿಯಿರುವವ-ಪ್ರೋಸ್ಟ್ ಹೊನ್ನಾಳಿ-ಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ವಾದಿಯೇಗೆ ಪ್ರತಿವಾದಿಯಿಂದ ಕಳೆದ ಸರೋಥಿ ಸಂವತ್ಸರ ಲಗಾಯ್ತು ಸೇವಕಂಬ ಸಂವತ್ಸರ ವರೆಗಿನ ದಾವಾ ಆಸ್ತಿಯ ಬಾಬ್ತು ಬಹಾ ಮೂಲಗೇಣಿ ನ ಒಡ್ಡಿ ವ್ಯೈರೆ ಒಟ್ಟು ರೂ. 165-09ನ್ನು ಕೇಳಿ ವಾದಿಯು ಪ್ರತಿವಾದಿ ಮೇಲೆ ಮೆಲ್ಮಂಡ ದಾವಾ ದಾಖಲ್ಮಾಡಿ ಅದು ಪ್ರತಿವಾದಿಯ ನೋಟೀಸಿನ ಬಗ್ಗೆ ತಾ 22—8—58ಕ್ಕೆ ಯಿಟ್ಟಿರುತ್ತದೆ. ಪ್ರತಿವಾದಿಯೆ ಅಕ್ಷೇಪ ಪರ್ಗೈರೆಯಿರುವ ಶಕ್ಷ್ಯವಲ್ಲಿ ಸದ್ರಿ ದಿವಸ ಹಗಲು 10 ಗಂಟೆಗೆ ಮೇಲ್ಮಂಡ ಕೋರ್ಟುಮುಂದೆ ಹಾಜ್ರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು—ಎಂತ ಯೂ ಮೂಲ್ಯ ತಿಳಿಸೋಣಾಗುತ್ತದೆ.

(By order of the Court)

(Sd)B.Ananda Shetty,
Advocate for Plff.

Udipi Dated 9—8—1958.

OUR CODE OF CONDUCT

Personal and prompt attention

Speedy and Friendly service

Care and Safety of the Moneys

Quick and high returns for Deposits.

TRY US ONCE

THE

VIJAYA BANK LIMITED

H. O. **MANGALORE.** Estd. **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

THE MYSORE SUGAR COMPANY LTD.

Head Office:

SRI JAYACHAMARAJA WADIYAR ROAD

BANGALORE 2.

* * * * *

Factory and Distillery

(MANDYA (Mysore State)

MANUFACTURERS OF

PURE WHITE CRYSTAL SUGAR

* * *

OTHER PRODUCTS INCLUDE

DELICIOUS GOLDEN SYRUP AND A WIDE RANGE OF ALCOHOLS – ABSOLUTE RECTIFIED DENATURED AND POTABLE

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶಲ್ ನಂ. ೧ (ರಿಜಿಸ್ಟರ್ಡ್)

ಪ್ರಖ್ಯಾತ ಡಾಕ್ಟರರು, ವೈದ್ಯರು ವಿದ್ವಾಂಸರು ಮತ್ತು ಅನೇಕ ಸ್ತ್ರೀ-ಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭವನ್ನು ಕೊಡುತ್ತದೆ.

ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ ಶಾಂತವಾದ ನಿದ್ದೆ ಬರುತ್ತದೆ ತಲೆ ನೋವು ನಿಲ್ಲುತ್ತದೆ ವಿಷಯ ಮತ್ತು ಕಾಮಲಿಗೆ ಶ್ರೇಷ್ಠ

ಸೋಚನೆ ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು ಎಲ್ಲಾ ಋತುಗಳಲ್ಲಿ ಅನುಕೂಲವಾದ ಎಲ್ಲಾ ಕಾಲಗಳಲ್ಲಿ ಸಿಗುತ್ತದೆ ಇದೇ ಎಣ್ಣೆಯನ್ನೇ ಕೇಳಿರಿ

ತೈಲದ ಕ್ರಯ ದೊಡ್ಡ ಬಾಟ್ಲಿ ರೂ ೪ ೦ ೦ ಸಣ್ಣ ಬಾಟ್ಲಿ ರೂ ೨ ೦ ೦

ಪೋಸ್ಟ ಮುಖಾಂತರ ಕಳಿಸುವದು ದೊಡ್ಡ ಬಾಟ್ಲಿಗೆ ರೂ ೫-೧೪-೦ ಸಣ್ಣ ಬಾಟ್ಲಿಗೆ ರೂ ೩ ೧೩ ೦ (ಪೇಕಿಂಗ್ ಖರ್ಚ ಮತ್ತು ಅಂಚೆಪೆಟ್ಟಿ ಸೇರಿ) ಮನಿಆರ್ಡರಿನಿಂದ ಕಳುಹಿಸಬೇಕು ವಿ. ಪಿ. ಮಾಡುವದಿಲ್ಲ

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ್ ರೈಲ್ವೆ) ಮುಂಬಯಿ ೧೪.

ಸ್ಟ್ರಿಂಗುಗಳು ಮುರಿದು ಬೀಳುವುದನ್ನು ತಪ್ಪಿಸಿರಿ.

ಕೆನರಾ ಸ್ಟ್ರಿಂಗುಗಳು ನಿಶ್ಚಿಂತೆಯಿಂದ ನಿಮ್ಮನ್ನೊಯ್ಯುವುವು.

ಬಾಳಿಕೆ ಮತ್ತು ಭರವಸೆ ಬೇಕಾದಲ್ಲಿ ಅವೆರಡೂ ಈ ಸ್ಟ್ರಿಂಗಿನಲ್ಲಿವೆ.

ತಯಾರಿಕೆಯ ಪ್ರತಿ ಮಟ್ಟದಲ್ಲೂ ಗುಣ ಪರೀಕ್ಷಿಸಲಾಗಿದ್ದು ಅಮೇರಿಕದ ಅತ್ಯುತ್ತಮ ಮಟ್ಟದಂತೆ ಸ್ಟ್ರಿಂಗಿನ ಪ್ರತಿ ಹಾಳೆಗಳನ್ನು ದೀರ್ಘ ಕಾಲ ಬಾಳುವಿಕೆಯ ಬಗ್ಗೆ ಆಧುನಿಕ ವಿಜ್ಞಾನ ರೀತ್ಯಾ ಉಷ್ಣ ಶಕ್ತಿ ಪ್ರಯೋಗಿಸಲ್ಪಟ್ಟಿದೆ.

ತಯಾರಕರು–

ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್

ಮಂಗಳೂರು–3.

Regd. No. M. 3618
LICENCE ND. 31
Licensed to Post without Prepayment

ಶಾಸ್ತ್ರೀ ಅಂಡ್ ಕಂಪೆನಿ

ನಮ್ಮಲ್ಲಿರುವ ಸೊಗಸಾದ ಖೀರಾ ಉಕ್ಕಿನ ಫರ್ನೀಚರನ್ನು ನೋಡಲು ಬನ್ನಿರಿ

Khira



ಕ್ಯಾಬಿನೆಟ್ಟುಗಳು (ಕಪಾಟುಗಳು)

ನಿಮ್ಮ ಮನೆಗೆ ಒಂದು ಕ್ಯಾಬಿನೆಟ್ ಆಗತ್ಯ. ಈ ಕ್ಯಾಬಿನೆಟ್ಟುಗಳು ಆಕರ್ಷಕವಾದ ಬೂದು ಬಣ್ಣದಲ್ಲಿಯೂ, ಎಲೆಪಸುರು ಬಣ್ಣದಲ್ಲಿಯೂ ದೊರೆಯುತ್ತವೆ. ಇವುಗಳಿಗೆ ಕಳ್ಳಕಾಕರ ಮತ್ತು ಹುಳುಮುಸ್ಸಟಿಗಳ ಭೀತಿ ಇಲ್ಲದಿರುವುದರಿಂದ ಬಟ್ಟೆಗಳನ್ನು ಮತ್ತು ಪಡವೆಗಳನ್ನು ಜೋಪಾನವಾಗಿಟ್ಟು ಆದರ್ಶವಾಗುವುವು. ಮೂರು ಮಾದಲ್ಲುಗಳು: ಮಿಲಿಟ್, ಮಾನ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು. ಇದರಲ್ಲಿ ಸೆಟ್ಟಿಗೆ ಫಿಟಿಂಗುಗಳು ಬೇಕಾದರೂ ದೊರೆಯುತ್ತವೆ.

3 ಸೋಫಾಗಳುಳ್ಳ ಸೆಟ್ಟುಗಳು

ಕೂಡಲು ಮತ್ತು ಒರಗಿಕೊಳ್ಳಲು ನಿಮಗೊಪ್ಪುವಂತೆ ಮೆತ್ತೆಗಳನ್ನು ಹೊಲೆಯುತ್ತವೆ. ಮನೆಯ ಉಪಯೋಗಕ್ಕಾದರೆ ಸುಂದರವಾದ ಮಾಳಿಗೆ ಮತ್ತೆಗಳು, ಆಫೀಸಿನ ಉಪಯೋಗಕ್ಕಾದರೆ ಆಕರ್ಷಕವಾದ ಮ್ಯೂಟ್ ಲೆದರ್‌ಕ್ಲಾತ್ ಮೆತ್ತೆಗಳು. ಧಳಧಳ ಹೊಳೆಯುವ ತೇಗದಮರದ ಕೈಗಳು. ಸೋಫಾಗಳಿಗೆ ಸರಿಹೊಂದುವ ಮೇಜು.





ಡೈನಿಂಗ್ ಸೆಟ್ಟುಗಳು

ಒಂದೊಂದು ಸೆಟ್ಟಿನಲ್ಲಿ ಎನಾಮಲ್ ಮಾಡಿದ ಅಥವಾ ಸ್ಟೈನ್‌ಲೆಸ್ ಸ್ಟೀಲಿನ ಒಂದು ಮೇಜು ಮತ್ತು ಆರು ಕುರ್ಚಿಗಳಿರುತ್ತವೆ. ಮೇಜಿನ ಪೇಲ್ಮಾಗ ತೇಗದಮರದ್ದಿದ್ದು ಅದರ ಮೇಲೆ ½ ಅಂಗುಲ ದಪ್ಪವಾದ 'ಪಿಟ್ರೋ ಲೈಟ್' ಗಾಜು ಇರುತ್ತದೆ. ಕುರ್ಚಿಗಳಿಗೆ ಫೋಮ್ ರಬ್ಬರಿನ ಮೆತ್ತೆಗಳಿರುತ್ತವೆ. ಅವುಗಳನ್ನು ನಿಮಗೆ ಬೇಕಾದಂತಹ ಮಾಳಿಗೆಯಿಂದ ಹೊಲೆಸಬಹುದು.

ಉಕ್ಕಿನ ಶೆಲ್ಫುಗಳು

ನೋಡಲು ಸೊಗಸಾಗಿರುವ, ಬೇಕಾದಂತೆ ಜೋಡಿಸಬಹುದಾದ ಉಕ್ಕಿನ ಶೆಲ್ಫುಗಳನ್ನು ಪಯೋಗಿಸಿ ಸಾಮಾನಿಡುವ ಜಾಗದ ಪೂರ್ಣ ಉಪಯೋಗ ಮಾಡಿಕೊಳ್ಳಿರಿ. ಈ ಶೆಲ್ಫುಗಳನ್ನು ಜೋಡಿಸುವುದು ಸುಲಭ ಮತ್ತು ಅವು ದೀರ್ಘ ಕಾಲ ಬಾಳಿಕೆ ಬರುತ್ತವೆ.





ಆಫೀಸರುಗಳು ಉಪಯೋಗಿಸುವ ಡೆಸ್ಕುಗಳು ಮತ್ತು ಕುರ್ಚಿಗಳು

ಮೆಸ್ಸೊನೈಟ್ ಮೇಲ್ಮಾಗದ ಸೊಗಸಾದ ಆಫೀಸ್ ಡೆಸ್ಕು. ಒಂದೊಂದು ಕಡೆ ಮೂರುಮೂರು ದೊಡ್ಡ ಡ್ರಾಯರುಗಳು. ಇವುಗಳಿಗೆ ಬಾಲ್ ಬೇರಿಂಗ್ ಇರುವುದರಿಂದ ಹಾಕುವುದು, ತೆಗೆಯುವುದು ಸುಲಭ. ಅನುಕೂಲವಾಗಿ ಎಳೆದುಕುಡಬಹುದಾದ ಟ್ರೇಗಳು ಮತ್ತು ಕಾಲಿಟ್ಟು ಕೊಳ್ಳಲು ಒಂದು ಅಡರೆ!

ಕೆಂಪಂತ ಬಾಗಿ ಸುತ್ತುವ ಸೊಗಸಾದ ಸ್ವಿವೆಲ್ ಕುರ್ಚಿಗಳು. ಇವುಗಳನ್ನು 18 ಅಂಗುಲದಿಂದ 24 ಅಂಗುಲದವರೆಗೆ ಎತ್ತರಿಸಬಹುದು. ಬೆತ್ತದ, ಫೋಮ್ ರಬ್ಬರಿನ ಅಥವಾ ಸ್ಪ್ರಿಂಗಿನ ಸೀಟು. ಪಿ. ವಿ. ಸಿ. ಬೆದರ್ ಕ್ಲಾತಿನ ಹೂದಿಕೆ. ಹೊಳೆಯುವ ತೇಗದಮರದ ಕೈಗಳು.

ನಮ್ಮಲ್ಲಿ ಕ್ಯಾಂಟೀನ್ ಮತ್ತು ಅಪ್ಪಡೈಗಳಲ್ಲಿ ಉಪಯೋಗಿಸುವ ಆಧುನಿಕವಾದ ಖೀರಾ ಉಕ್ಕಿನ ಫರ್ನೀಚರುಗಳೂ ದೊರೆಯುತ್ತವೆ. ಈ ಫರ್ನೀಚರುಗಳು ದೀರ್ಘ ಕಾಲ ಬಾಳಿಕೆ ಬರುವುವಲ್ಲದೆ, ಇವುಗಳನ್ನು ಜೋಡಿಸುವುದು ಸುಲಭ.



ಬರೆಯುವ ಮೇಜುಗಳು ಮತ್ತು ಆಫೀಸ್ ಕುರ್ಚಿಗಳು

ಮೇಜಿನ ಒಂದು ಕಡೆ ಮೂರು ಡ್ರಾಯರುಗಳು, ಇಕ್ಕೆಂಬುಕ್ಕ ಸೆಲ್ಫು ಇರುವುದೂ ಇವೆ, ಇಲ್ಲದಿರುವುದೂ ಇವೆ ನಿಮ್ಮ ಮನೆಯಲ್ಲಿ ಓದಿ ಬರೆದು ಮಾಡುವರಕ್ಕೆ ಕೂಡಾ ಬಹಳ ಅನುಕೂಲವಾದುದು.

ಬೆತ್ತದ ಅಥವಾ ಮೆತ್ತೆಯಿಟ್ಟಿರುವ ಆರ್ಮ್ ಕಟ್ಟಿದ ಕುರ್ಚಿಗಳು. ಕೈಗಳು ಇರುವುದೂ ಇವೆ, ಇಲ್ಲದಿರುವುದೂ ಇವೆ. ಕುಳಿತು ಕೆಲಸ ಮಾಡಲು ಬಹಳ ಅನುಕೂಲವಾದ ಎದು ಮಾದಲ್ಲುಗಳಲ್ಲಿ ದೊರೆಯುತ್ತವೆ. ಸ್ಟೈನ್‌ಲೆಸ್ ಸ್ಟೀಲ್ ಅಥವಾ ಸ್ಟೋವ್ ಎನಾಮಲ್ ಫಿನಿಷ್‌ನಲ್ಲಿ ಬರುತ್ತವೆ.

ಮನೆವಾರ್ತೆಗೆ ಬೇಕಾಗುವ ಎಲ್ಲಾ ತರದ ಶಾಸ್ತ್ರಿ 'ಸ್ಟೈನ್‌ಲೆಸ್ ಸ್ಟೀಲ್' ಪಾತ್ರೆಗಳಿಗೂ ಕಟ್ಟಡಗಳ ಭದ್ರತೆಗೂ ಅಂದಚಂದಗಳಿಗೂ ಉಪಯುಕ್ತವಾಗುವ ಸ್ವಸ್ಟಿಕ್ ರೋಲಿಂಗ್ ಶಟ್ಟರ್‌ಗಳಿಗೂ ಇಲೆಕ್ಟ್ರಿಕ್ ಫಿಟ್ಟಿಂಗ್‌ಗಳಿಗೆ ಬೇಕಾಗುವ ಎಲ್ಲಾ ತರದ ವಯರು ಮತ್ತು 'ಜೆಸ್ಕೋ' ಬ್ರಾಸ್ ಹೋಲ್ಡರುಗಳಿಗೂ ವಿಚಾರಿಸಿರಿ—
ನಮ್ಮ ಶೋರೂಮಿಗೆ ಜಾಗ್ರತೆ ಭೇಟಿ ಕೊಡಿರಿ.

ಹಂಪನಕಟ್ಟೆ - - - ಮಂಗಳೂರು-1

Edited, Printed & Published by K. H. Shetty at the Navayuga Press, Udipi, S. India.

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

21—8—1958

ಸಂಚಿಕೆ ೪೯
NO. 49

ಮೈಸೂರು ರಾಜ್ಯದಲ್ಲಿ ಶೈಕ್ಷಣಿಕ ವಿಕಾಸ—

ಹಿಂದುಳಿದ ಕ್ಷೇತ್ರಗಳಿಗೆ ಅಧಿಕ ಪ್ರಾಶಸ್ತ್ಯ

ಕೇಂದ್ರ ಸರಕಾರವು ಮೈಸೂರು ರಾಜ್ಯಕ್ಕೆ ಕೊಡಮಾಡಿದ ರೂ ೨೧,೪೫,೯೩೬ರ ವೆಚ್ಚದಲ್ಲಿ ರಾಜ್ಯ ಸರಕಾರವು ೬೬೦ ಜನ ಎಸ್. ಎಸ್ ಎಲ್. ಸಿ. ಉತ್ತೀರ್ಣರಾದವರನ್ನು ಶಿಕ್ಷಕರನ್ನಾಗಿ ನೇಮಿಸಿಕೊಳ್ಳುವ ನಿರ್ಧಾರವನ್ನು ಮಾಡಿದೆ ಈ ಉದ್ದೇಶದಿಂದ ವಿದ್ಯಾವಂತರ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಲ್ಲದೆ, ಇದರೊಡನೆ ಪ್ರಾಥಮಿಕ ಶಿಕ್ಷಣ ಪ್ರಚಾರ ಕಾರ್ಯವನ್ನೂ ಮಾಡಿದಂತಾಗುವುದು. ಒಬ್ಬ ಅಧ್ಯಾಪಕನಿಗೆ ಉಪಕರಣ ಸಾಧನಗಳ ಬಗ್ಗೆ ಸರಾಸರಿ ರೂ. ೫೫೦ ನ್ನೂ ಕೇಂದ್ರಸರಕಾರವು ಕೊಡಮಾಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಗುವ ಈ ನೂತನ ಶಾಲೆಗಳಿಗೆ ನೇಮಿಸಲ್ಪಡುವ ಶಿಕ್ಷಕಿಯರ ಸಲುವಾಗಿ, ಉಳಕೊಳ್ಳುವ ವಸತಿ ಸೌಕರ್ಯಕ್ಕಾಗಿ ೫೫ ಮನೆ ಕಟ್ಟಿಸಲು ಪ್ರತಿಯೊಂದಕ್ಕೂ ರೂ. ೨,೫೦೦ ಮಂಜೂರು ಮಾಡಿರುತ್ತದೆ. ಇದರೊಂದಿಗೆ ಹೆಚ್ಚಿನ ಶಾಲೆಗಳ ಮೇಲ್ವಿಚಾರಣೆಯನ್ನು ನಡೆಸುವುದಕ್ಕಾಗಿ ೧೩ ಮಂದಿ ಸರಿಶೀಲನಾಧಿಕಾರಿಗಳನ್ನೂ ನೇಮಿಸಲು ಆವಶ್ಯಕವಾದ ಧನಸಹಾಯವನ್ನು ಕೇಂದ್ರ ಸರಕಾರವು ಕೊಡಮಾಡಿರುತ್ತದೆ.

ಹೊಸತಾಗಿ ತೆರೆಯಲಾಗುವ ಇಂತಹ ಶಾಲೆಗಳಲ್ಲಿ ಕೆಲಸಮಾಡಲು ಬೇಕಾಗುವ ಆವಶ್ಯಕ ವಿದ್ಯಾರ್ಹತೆಯುಳ್ಳ ೬೬೦ ಶಿಕ್ಷಕಿ-ಶಿಕ್ಷಕರಿಗೆ ಸುಮಾರು ೮—೧೦ ವಾರಗಳ ಅಲ್ಪಾವಧಿಯ ತರಬೇತಿಯನ್ನು ನೀಡಲಾಗುವುದು ಈ ತರಬೇತಿಯ ಸಮಯದಲ್ಲಿ ಪ್ರತಿ ತರಬೇತಿದಾರನಿಗೆ ತಿಂಗಳೊಂದರ ರೂ.೧೦ರಂತೆ ಸಹಾಯದನವನ್ನೀಯುವುದಕ್ಕೂ ಕೇಂದ್ರ ಸರಕಾರವು ಮನ್ನಣೆಯಿತ್ತಿದೆ. ಮೊತ್ತಮೊದಲಿಗೆ ಈ ಉಪಾಧ್ಯಾಯರನ್ನು ನೇಮಕಮಾಡಿ ಅವರಿಗೆ ಒಂದು ವಾರದ ತರಬೇತಿಯನ್ನಿತ್ತು ಶಾಲೆಗಳಿಗೆ ನೇಮಿಸಲಾಗುವುದು.

೧೯೫೮-೫೯ರಿಂದ ೬೧ರ ವರೆಗಿನ ಮೂರು ವರ್ಷಗಳ ಅವಧಿಯವರೆಗೆ ಈ ಸಂಬಂಧದ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರಕಾರವೇ ವಹಿಸಿಕೊಳ್ಳುವುದು. ಆಮೇಲೆ ಮಾತ್ರ ರಾಜ್ಯ ಸರಕಾರಗಳು ತಮ್ಮ ಸ್ವಂತ ವೆಚ್ಚದಿಂದಲೇ ಈ ಶಾಖೆಗಳನ್ನು ನಡೆಸಬೇಕಾಗಿ ಬರುವುದು. ಇದಕ್ಕಾಗಿ ರಾಜ್ಯ ಸರಕಾರವು ಮೂರು ವರ್ಷಗಳ ನಂತರ, ಪ್ರತಿ ವರ್ಷ ರೂ. ೯,೫೫,೯೯೯ ರಂತೆ ಅಧಿಕ ವೆಚ್ಚವನ್ನು ಮಾಡಬೇಕಾಗುವುದು. ದ್ವಿತೀಯ ಪಂಚವಾರ್ಷಿಕ ಯೋಜನೆಯಂತೆ ಈ ವರ್ಷ ಪ್ರಾರಂಭಿಸಲ್ಪಟ್ಟ ೪೦೦ ಪ್ರಾಥಮಿಕ ಶಾಲೆಗಳ ವೆಚ್ಚವನ್ನುಳಿದು ಇಷ್ಟು ಹೆಚ್ಚು ಖರ್ಚನ್ನು ಹೊರಬೇಕಾಗುವುದು.

ಕೇಂದ್ರ ಸರಕಾರದ ಈ ಯೋಜನೆಯಂತೆ ಎಸ್. ಎಸ್. ಎಲ್ ಸಿ. ಉತ್ತೀರ್ಣತೆಯುಳ್ಳ ೬೬೦ ಮಂದಿ ಅಧ್ಯಾಪಕರನ್ನು ರಾಜ್ಯದ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ ನೇಮಿಸುವಾಗ, ವಿದ್ಯಾಕ್ಷೇತ್ರದಲ್ಲಿ ಹಿಂದುಳಿದಿರುವ ಪ್ರದೇಶಗಳಿಗೆ ಅಧಿಕ ಪ್ರಾಶಸ್ತ್ಯವನ್ನೀಯಬೇಕಾಗುವುದು ಎಂತಲೆ ಹೆಚ್ಚು ಅಧ್ಯಾಪಕರನ್ನು ಅಲ್ಲಿಯೇ ನೇಮಿಸಬೇಕಾಗಿಬರುವುದು. ಇಂತಹ ಪ್ರತಿಯೊಂದು ಪ್ರದೇಶದ ಆವಶ್ಯಕತೆಗಳನ್ನು ಮನವರಿಕೆಮಾಡಿಕೊಳ್ಳುವುದಕ್ಕಾಗಿ ಒಂದು ಸರಿಶೀಲನೆಯನ್ನು ಕೈಗೊಳ್ಳಲಾಗಿದ್ದು, ಅದನ್ನು ಆಧರಿಸಿಕೊಂಡೇ ಈಗಿನ ಅಧ್ಯಾಪಕರ ಸಂಖ್ಯೆಯನ್ನು ಬೇರೆಬೇರೆಡೆಗೆ ಹಂಚಿ ಹಾಕಲಾಗಿದೆ ಮೈಸೂರು ರಾಜ್ಯದಲ್ಲಿ ವಿದ್ಯಾಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವೆಂದರೆ, ಹೈದರಾಬಾದ ಕರ್ನಾಟಕ. ಇಲ್ಲಿನ ಗುಲ್ಬರ್ಗ ಜಿಲ್ಲೆಗೆ ೨೬೩ ಅಧ್ಯಾಪಕರು ಬೇಕಾಗಿರುವಾಗ, ಕೇವಲ ೧೧೦ ನ್ನು ಒದಗಿಸಲಾಗಿದೆ. ಹಾಗೆಯೇ ೩೬೮ ಉಪಾಧ್ಯಾಯರ ಆವಶ್ಯಕತೆಯಿಂದ ಕಡಿಡಿರುವ ರಾಯಚೂರು ಜಿಲ್ಲೆಗೆ ದೊರೆತುದು ೧೭೦ ಮಾತ್ರ.

ವಿದ್ಯಾಕ್ಷೇತ್ರದಲ್ಲಿ ಹಿಂದುಳಿದ ಗುಲ್ಬರ್ಗ, ರಾಯಚೂರು, ಬೀದರು ಬಳ್ಳಾರಿ ಕೋಲಾರ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಟ್ಟು ೪೪೫ ಏಕೋಪಾಧ್ಯಾಯ ಶಾಲೆಗಳನ್ನು ಪ್ರಾರಂಭಿಸಲಾಗುವುದು.

ಎರಡನೆಯ ಹೆಜ್ಜೆಯಾಗಿ, ಈಗ ೪ನೆ ವರ್ಗವಿರುವ ಪ್ರಾಥಮಿಕ ಶಾಲೆಗಳಲ್ಲಿ ೫ನೆಯ ವರ್ಷದ ತರಗತಿಯನ್ನು ತೆರೆಯುವುದಕ್ಕೋಸ್ಕರ, ಗುಲ್ಬರ್ಗಕ್ಕೆ ೬೦, ರಾಯಚೂರು—೬೫ ಬೀದರ ೧೫, ಬೆಳ್ಳಾರಿ—೪೦, ಕೋಲಾರ—೨೫, ಶಿವಮೊಗ್ಗ—೭, ಮತ್ತು ಚಿಕ್ಕಮಂಗಳೂರು—೩—ಇದರಂತೆ ಅಧಿಕ ಉಪಾಧ್ಯಾಯರನ್ನು ಒದಗಿಸಲಾಗುವುದು. ಹೀಗೆ ಈ ರೀತಿ ನೇಮಿಸುವ ಉಪಾಧ್ಯಾಯರ ಸಂಖ್ಯೆ ೨೫೫ ಆಗುವುದು. ಈ ರೀತಿ ವಿಭಜನೆಯನ್ನು ಮಾಡುವಾಗ, ವಿದ್ಯೆಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಹಿಂದುಳಿದ ಕ್ಷೇತ್ರಗಳ ಜನರನ್ನು ಉಳಿದ ಜಿಲ್ಲೆಗಳ ಮಟ್ಟಕ್ಕೆ ತರುವ ಸದುದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಮಹಿಳಾ ಶಿಕ್ಷಕಿಯರಿಗಾಗಿ ಪ್ರತಿಯೊಂದಕ್ಕೆ ೨೫೦ ರೂಪಾಯಿ ವೆಚ್ಚಬರುವ ೫೦ ವಸತಿ ಸ್ಥಾನಗಳಲ್ಲಿ ೧೨ ಗುಲ್ಬರ್ಗಕ್ಕೆ, ೨೦ ರಾಯಚೂರಿಗೆ, ೮ ಬೀದರಿಗೆ, ೬ ಬಳ್ಳಾರಿಗೆ, ೩ ಕೋಲಾರಿಗೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರುಗಳಿಗೆ ಎರಡೆರಡರಂತೆ ವಿಭಜಿಸಿ ಹಾಕಲಾಗಿದೆ. ಅಲ್ಪಾವಧಿಯ ಏಕರೂಪದ ಶಿಕ್ಷಕ ತರಬೇತಿಯ ವಿಧಾನವನ್ನು ಗೊತ್ತುಪಡಿಸುವುದಕ್ಕಾಗಿ ಒಂದು ಉಪಾಧ್ಯಾಯರ ತರಬೇತಿ ಉಪಸಮಿತಿಯನ್ನು ನೇಮಿಸಲಾಗಿದೆ.

ಕೇಂದ್ರ ಸಹಾಯಧನದಿಂದ ರಾಜ್ಯದಲ್ಲಿ ನೇಮಿಸಲಾಗುವ ೬೬೦ ಅಧ್ಯಾಪಕರ ಸಂಖ್ಯೆಯಲ್ಲಿ ನಾಲ್ವತ್ತರಷ್ಟು ಮೂರರಷ್ಟು ಮಹಿಳಾ ಶಿಕ್ಷಕಿಯರನ್ನೇ ಆರಿಸಬೇಕೆಂದು ಸಿಫಾರಸು ಮಾಡಲಾಗಿದೆ. ಮೈಸೂರು ಸರಕಾರವಾದರೂ ಕೇಂದ್ರದ ಈ ಅಭಿಲಾಷೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸಿ ಸಾಧ್ಯವೆನಿಸಿದರೆ ಮಹಿಳಾ ಅಭ್ಯರ್ಥಿಗಳನ್ನೇ ಈ ಸ್ಥಾನಗಳಿಗೆ ನೇಮಿಸುವುದು. ಆದರೆ, ಒಂದು ವೇಳೆ, ಶಿಸ್ತು ವಿದ್ಯಾರ್ಹತೆಯುಳ್ಳ ಮಹಿಳಾ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದೆ ಹೋದರೆ, ಆಗ ನಿರ್ವಾಹವಿಲ್ಲದೆ ಪುರುಷಾಭ್ಯರ್ಥಿಗಳನ್ನೇ ನೇಮಿಸಬೇಕಾಗುವುದು ಈ ರೀತಿಯಾಗಿ ನೂತನವಾಗಿ ನೇಮಿಸಲ್ಪಡುವ ಶಿಕ್ಷಕರಿಗೆ ೫೦-೩-೮೦-೪-೧೦೦ ರ ಮಟ್ಟದಲ್ಲಿ ವೇತನವನ್ನು ಕೊಡಲಾಗುವುದು.

ಬಾಡಿಗೆಯಿಲ್ಲದ ಕಟ್ಟಡಗಳು ದೊರೆಯಬಹುದಾದ ಅಥವಾ ಊರ ಜನತೆಯು ಕಟ್ಟಡವನ್ನು ಕಟ್ಟಿಸಿಕೊಡಬಹುದಾದ ಸ್ಥಳಗಳಲ್ಲಿ ಈ ನೂತನ ಶಾಲೆಗಳನ್ನು ತೆರೆಯಲಾಗುವುದು ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬೊಂಬಾಯಿ ಕರ್ನಾಟಕವನ್ನುಳಿದ ಪ್ರದೇಶಗಳಲ್ಲಿ ೧೭೮ ವರ್ಗದ ಕೋಣೆಗಳನ್ನು ಕಟ್ಟಿಸುವ ಸಲುವಾಗಿ ರೂಪಾಯಿ ೨೬೭೦೦೦ ವನ್ನು ಸಹಾಯ ಧನವಾಗಿ ಒದಗಿಸಲಾಗಿದೆ ಇದಲ್ಲದೆ, ರೂ. ೪೬೪ ಲಕ್ಷದಷ್ಟನ್ನು ಬೊಂಬಾಯಿ ಕರ್ನಾಟಕದಲ್ಲಿ ಕಟ್ಟಿಸಲಾಗುವ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ನಿರ್ಮಿಸುವಲ್ಲಿ ಸಾಲರೂಪವಾಗಿ ಈಯಲು ಪ್ರತ್ಯೇಕಿಸಿಡಲಾಗಿದೆ ಸಾಮಾನ್ಯ ಕಾರ್ಯಕ್ರಮದಂತೆ ಮೈಸೂರು ಸರಕಾರವು ಶಾಲೆಗಳ ಕಟ್ಟಡಗಳನ್ನು ಕಟ್ಟಿಸುವ ಸಲುವಾಗಿ ೧೧೫—೫೯ ರ ಮುಂಗಡ ಪತ್ರದಲ್ಲಿ ಆರು ಲಕ್ಷ ರೂಪಾಯಿಗಳನ್ನು ಒದಗಿಸಿದೆ.

ರಾಜ್ಯ ಸರಕಾರವು ಸ್ವತಃ ಹಾಗೂ ಕೇಂದ್ರ ಸರಕಾರದ ಸಹಾಯದಿಂದ ಕೈಗೊಳ್ಳಲಿರುವ ಶಿಕ್ಷಣ ಕ್ಷೇತ್ರವಿಕಾಸ ಕಾರ್ಯಕ್ರಮದಿಂದ ಹಿಂದುಳಿದ ಪ್ರದೇಶಗಳಲ್ಲಿಯಾದರೂ ಹೆಚ್ಚು ಹೆಚ್ಚು ಜನರು ಅಕ್ಷರಸ್ಥರಾಗುವರೆಂಬ ನಂಬಿಕೆಯು

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಅವರ ಮುಪ್ಪಿನ ದಿನಗಳು

ಶ್ರೀ ಕೆ. ತಿಮ್ಮಪ್ಪ ಗಟ್ಟಿ.

— ೧ —

ರಾಮ ಮಾಸ್ತರರ ಮುಪ್ಪಿನ ದಿನಗಳು! ಹೌದು, ಮುಪ್ಪಿನ ದಿನಗಳು! ಮುಪ್ಪು ಪ್ರತಿಯೊಬ್ಬನಿಗೂ ಬರಲೇ ಬೇಕು. ಆದರೆ....

ರಾಮರಾಯರು ಪ್ರಾಥಮಿಕ ಶಾಲೆಯ ಬಡ ಉಪಾಧ್ಯಾಯರು. ಉಪಾಧ್ಯಾಯರ ವೃತ್ತಿಯಲ್ಲಿ ಅದನ್ನೇ ನಂಬಿಕೊಂಡು ಹೇಗೆ ಬಾಳು ಸಾಗಿಸಬಹುದೋ ಹಾಗೆಯೇ ಸಾಗಿಸಿಕೊಂಡು ಬಂದವರು. ದಾರಿದ್ರ್ಯ ದೇವತೆಯ ಅಂಕಾಧಿಕರಾದ ಅಧ್ಯಾಪಕರ ಸಾಲಿನಲ್ಲಿ ರಾಮರಾಯರೂ ಇರುವರು! ಆದರೆ ಅವರ ಮನೆ, ಅವರ ಕತೆ ಬೇರೆ.

ಇಂದು ಮಾತ್ರ ಆ ಬಡ—ಅಧ್ಯಾಪಕ ವೃತ್ತಿಯೂ ಇಲ್ಲ. ರಾಮರಾಯರಿಗೆ ನಿವೃತ್ತಿಯಾಗಿದೆ! ನಿವೃತ್ತಿ, ವಿಶ್ರಾಂತಿಗಾಗಿ! ಇಷ್ಟು ಕಾಲ ವಿದ್ಯಾಕ್ಷೇತ್ರದಲ್ಲಿ ದುಡಿದು, ಬಾಳು ಸವೆಸಿದ ವ್ಯಕ್ತಿಗೆ ಇನ್ನು ಮುಂದೆ ವಿಶ್ರಾಂತಿಯೆಂದು ಬಂದಿದೆ ಈ ನಿವೃತ್ತಿ! ಆದರೆ ಎಂತಹ ವಿಶ್ರಾಂತಿ? ಯಾರಿಗೆ?....

ತಾನು ಸೇವೆ ಸಲ್ಲಿಸಿದ ವಿದ್ಯಾ ಸಂಸ್ಥೆಗೆ, ತಾನು ವಿದ್ಯಾಭ್ಯಾಸ ಮಾಡಿದ ಎಷ್ಟೋ ವಿದ್ಯಾರ್ಥಿಗಳಿಗೆ. ತನ್ನ ಉದ್ಯೋಗ ಕ್ಷೇತ್ರದ ಹಲವಾರು ಗೆಳೆಯರಿಗೆ ಕೊನೆಯ ವಂದನೆಯನ್ನರ್ಪಿಸಿ, ಕಣ್ಣೀರ ಕಾಣಿಕೆಯನ್ನೊಪ್ಪಿಸಿ ಸರಳಿ ಮನೆಗೆ ಬಂದಿದ್ದಾರೆ, ವಿಶ್ರಾಂತಿಗೆ! ಶೂನ್ಯದ ಕಡೆಗೆ ನೋಡುತ್ತಾ ಕುಳಿತ ರಾಯರ ಕಣ್ಣ ಮುಂದೆ ತನ್ನ ಗತಜೀವನದ ದೃಶ್ಯಗಳು ಮೂಡಲಾರಂಭಿಸಿದುವು. "ತಾನು ಎಲ್ಲಿಂದ, ಎಲ್ಲಿಯ ವರೆಗೆ ಕಾಲದ ಹಾದಿಯಲ್ಲಿ, ವಿಧಿಯ ನೆರಳಿನಲ್ಲಿ ನಡೆದು ಬಂದೆ?" ಎಂದು ಅವರು ಯೋಚಿಸಿದರು.

— ೨ —

ಅದು ಅವರ ಯೌವನದ ದಿನಗಳು! ಅವರು ಅಧ್ಯಾಪಕ ವೃತ್ತಿಗೆ ತೊಡಗಿದ್ದಾರೆ. ಅಂದು ಆ 'ಅಧ್ಯಾಪಕ—ವಿದ್ಯಾ ಪ್ರಪಂಚ' ಅವರಿಗೆ ಹಿತವಾಗಿ ಕಂಡಿತ್ತು. ಆ ಕಷ್ಟದ ಬಾಳೂ ಅವರಿಗೆ ಸುಖಪೂರ್ಣವಾದಂತೆ ತೋರಿತ್ತು. ತನ್ನಲ್ಲಿ, ತನ್ನ ಜೀವನದಲ್ಲಿ ಅವರಿಗೆ ತೃಪ್ತಿಯಿತ್ತು. ಆದರೆ ದಿನಗಳೆದಂತೆ ನೋವಿನ ಗಾಳಿಗಳು ಬೀಸಲಾರಂಭಿಸಿದುವು. ತಂದೆ ತಾಯಿಗಳು, ತನ್ನ ಕುಟುಂಬವೆಂದರೆ ಬಡತನದ ತವರು ಮನೆ, ಅವರ ಕಣ್ಣ ಮುಂದೆ ಕಾಣಿಸ ತೊಡಗಿದುವು! ತನ್ನ ಅಲ್ಪ ವರಮಾನದ ಸಂಪೂರ್ಣ ಸಹಕಾರ ಮನೆಯ ಕಡೆಗಿಲ್ಲದಿದ್ದರೆ ಮನೆಯ ಸ್ಥಿತಿ ಹೇಳುವಂತಿರಲಿಲ್ಲ.

ಆ ಯೌವನದ ದಿನಗಳಲ್ಲಿ ಅವರೆಣಿಸಿದಂತೆ ಬಾಳು ಅಷ್ಟು ಸುಖಮಯವಾಗಿರಲಿಲ್ಲ. ಅದಕ್ಕೆ ಅವರ ತಂದೆಯೇ ಸಾಕ್ಷಿ! ಪಕ್ಷಪಾತ ಪೀಡಿತರಾಗಿ, ಹಾಸಿಗೆ ಬಿಟ್ಟರೆ ಮನೆಯೊಳಗೆ—ಇಷ್ಟೇ ಅವರ ಜೀವನವಾಗಿತ್ತು. ತಾಯಿ ಸದ್ಗುಣದ ನೆಲೆಯಾಗಿದ್ದಳು. ಆದರೆ ಅವಳ ಜೀವನ ಕಷ್ಟದ ಕುಲಿಮೆ. ತಂದೆತಾಯಿಗಳನ್ನು ಬಾಲ್ಯದಲ್ಲೇ ಕಳೆದುಕೊಂಡು, ಎಳೆವೆಯನ್ನು ಮುಪ್ಪಿನಂತೆ ಕಳೆದ, ಹೆಂಗಸು ಅವಳು. ಅವಳ ಸದ್ಗುಣಿ ಆದರೆ ಅವಳ ಕರುಳು ನೊಂದ ಕರುಳು! ಮುಖದಲ್ಲಿ ಸಂಸಾರವನ್ನು ನಾಗಿಸಲಗ್ಯವಾದ ತೃಪ್ತಿಯ ಛಾಯೆಯಿದ್ದರೂ, ಮನದಲ್ಲಿ ಅಪಾರ ವೇದನೆಯ ಕುಂಡವಿತ್ತು.

ಆದರೆ.....ಆಶ್ಚರ್ಯ! ರೋಗಿಯಾದ ತಂದೆಗಿಂತಲೂ ನೀರೋಗಿಯಾದ ತಾಯಿಯೇ ಮೊದಲು ಇಹವನ್ನು ತ್ಯಜಿಸಿದಳು! ಸರಿ. ರಾಮರಾಯರ ಜೀವನದ ನಿಜ ಜೀವಿತ ಚಕ್ರ ತಿರುಗಲಾರಂಭಿಸಿತು. ತಂದೆಯಳಿವಿಂದ ಬಳಲುವ ಪಾಡಿಗಿಂತ ತಾಯಿಯಳಿವಿನ ಬೇನೆ ಹೆಚ್ಚಾಯಿತು—ಮನೆವಾರ್ತೆ, ಮನೆಯೊಳಗಿನ ಕೆಲಸಗಳು ರಾಮರಾಯರ ತಲೆಯ ಮೇಲೆ ಬಿದ್ದುವು. ತನ್ನ ಉದ್ಯೋಗ ಮತ್ತು ಸ್ತ್ರೀಯಿಂದ ನಿರ್ವಹಿಸಲ್ಪಡ ಬೇಕಾದ ಮನೆಗೆಲಸ ರಾಮರಾಯರನ್ನು ಮುಗ್ಗರಿಸುವಂತೆ ಮಾಡಿದುವರಲ್ಲಿ ಆಶ್ಚರ್ಯವೇನು?

ಮಗ ಮದುವೆ ಮಾಡಿಕೊಳ್ಳಲೆಂದು ತಂದೆಯ ಬಯಕೆ. ಅಸದಳವಾದಯಾತನೆ ಮತ್ತು ನಿರಾಶಾಜೀವನದಿಂದ ನೊಂದು ಹಣ್ಣಾದ ಜೀವಿ ತನಗಾಗಿ ಕಣ್ಣೀರು ಮಿಡಿಯುವುದನ್ನು ರಾಮರಾಯರಿಂದ ನೋಡಲಾಗಲಿಲ್ಲ. ಈ ತಂದೆ-ಮಕ್ಕಳ ಅಸಹಾಯಕ, ಜಿಂತಾಜನಕ ಪರಿಸ್ಥಿತಿ ಹೃದಯ ಕರಗಿಸುವಂತಿತ್ತು.

"ಮದುವೆ! ಇದು ಇನ್ನೊಂದು ದುರಂತ ಪಾಶ! ಮನೆಗೆ ಬಂದ ಮಡದಿ, ಮನೆಯನ್ನು ಅಳಿಸುವಳೋ, ಉಳಿಸುವಳೋ ಎಂದು ಹೇಗೆ ತಿಳಿಯುವುದು?" ಎಂದು ರಾಮರಾಯರು ಚಿಂತಿಸಿದರು. ಆದರೆ ಮುಪ್ಪಿನಲ್ಲಿ ರೋಗದ ಬಂದಳಿಕೆಯನ್ನು ಹಿಡಿಸಿಕೊಂಡು ಮೃತ್ಯು ಶಯ್ಯೆಯಲ್ಲೇ ಎಂಬಂತೆ ಮಲಗಿದ ಮುದಿ ತಂದೆಯ ಕಟ್ಟಕಡೆಯ ಆಶಯವನ್ನು ನೆರವೇರಿಸದಿರುವಂತಿರಲಿಲ್ಲ.

ಸರಿ. ರಾಮರಾಯರಿಗೆ ಮದುವೆಯಾಯಿತು. ವೃದ್ಧ ಸಂತಸದ, ಸಮಾಧಾನದ ಉಸಿರುಬಿಟ್ಟ. ಮುಂದಿನ ತನ್ನ ಬಾಳಾದರೂ ಸುಗಮವಾಗಿ, ತಂದೆಯಾದರೂ 'ಕೊನೆಯ ದಿನಗಳಲ್ಲಿ' ಸುಖವಾಗಿ ಬಾಳುವಂತಾಗಲೆಂದು ರಾಮರಾಯರು ಭಾವಿಸಿದರು.

ರೋಗವು ಬೇರಿಗಂಟಿದ ಹುಳದಂತೆ ರಾಮರಾಯರ ತಂದೆಗೆ ಅಂಟಿತ್ತಾದರೂ ಪ್ರಾಣವನ್ನು ಬೇಗ ಕೊಂಡುಹೋಗಲಿಲ್ಲ. ಆದರೆ ನೊಂದ ಜೀವನಕ್ಕೆ ಕಿಂಚಿತ್—ತೃಪ್ತಿಯಾದರೂ ದೊರೆಯಿತು. ಅದು ಕ್ಷಣಮಾತ್ರ! ಕ್ಷಣಿಕ ಶಾಂತಿಯುಹಿಂದೆ ಕ್ರಾಂತಿಯ ಚಿನ್ಹೆ ಯಿರಲೇಬೇಕೇನೋ? ಮನೆಗೆ ಬಂದ ಸೊಸೆ, ಮಾವನನ್ನು ಕರುಣೆಯ ಕಣ್ಣಿಂದ ನೋಡಲಿಲ್ಲ! ರೋಗಿಯಾಗಿ ನರಳುವ ತನ್ನ ಪತಿಯ ತಂದೆಯನ್ನು, ತನ್ನ ತಂದೆಯಂತೆ ಕಾಣಲಿಲ್ಲ; ಬದಲು ಜಗುಪ್ಸೆಯ, ತಿರಸ್ಕಾರಪೂರಿತ ನೋಟದಿಂದ ನೋಡಿದಳು. ಅಷ್ಟೇ ಸಾಲದಾಗಿತ್ತೆಂದು ಈ ಮುದುಕ ತನಗೇನೋ ಒಂದು ಅಡ್ಡಿಯಾಗಿದೆ'ಯೆಂಬಂತೆ ಅವಳು ವರ್ತಿಸಿದಳು!

ಮುದುಕ ಬಾಳಿನ ಬೇನೆನ್ನು ನುಂಗಿ ನುಂಗಿ ಬಾಳನ್ನೇ ಬೇವಾಗಿಸಿಕೊಂಡ ಅನುಭವಿ. ಅವನಿದನ್ನು ಅರಿಯದಿರುವನೆ? "ಇನ್ನೇನಾಗಬೇಕು? ಪ್ರಾಣ ಹೋಗುವವರೆಗೆ ಹೀಗೆಯೇ ಬಾಳುವುದು" ಎಂದು ವಿಚಿತ್ರ ಸಮಾಧಾನ ತಂದುಕೊಂಡ. ತನ್ನ ಪೂರ್ವಜೀವನದ ದುಃಖದ, ನಿರಾಶಾ ಭಾವನೆಗಳನ್ನು ಬಲವಾಗಿ ಅಪ್ಪಿಕೊಂಡು "ಬಾಳನ್ನು ಅದಷ್ಟುಬೇಗನೆ ಕೊನೆಗೊಳಿಸಿಂ"ದು ದೇವರಲ್ಲಿ ಪ್ರಾರ್ಥಿಸಿಕೊಂಡ. ಇಷ್ಟೇ ಅಲ್ಲ! ತನ್ನನ್ನು ಈ ರೀತಿ ಕಂಡುದಕ್ಕಾಗಿ ಮುದುಕ ಅಷ್ಟು ನೊಂದಿರಲಿಲ್ಲ. ಯಾಕೆಂದರೆ ತಾನು ಅದಷ್ಟು ಬೇಗ ಮರಣ ಕಾಣಲಿರುವನು! ಆದರೆ ಸಾಕ್ಷಾತ್ ತನ್ನ ಪತಿಯನ್ನು ಸೊಸೆ—ಶಕುಂತಳೆ ಸರಿಯಾಗಿ ಕಾಣಲಿಲ್ಲ. ಮನೆವಾರ್ತೆ ಪೂರ್ವದಂತೆಯೇ ಇತ್ತು. ಈ ನೋವು ಮುದುಕನನ್ನು ಬಲವಾಗಿ ಪೀಡಿಸಲಾರಂಭಿಸಿತು. ಆತ ತನ್ನ ಬಾಳಿನ ಪತ್ರಿಸುಕ್ಕೆ ದಿಟ್ಟಿಸಲಾರಂಭಿಸಿದ.

ಕೆಲವೇ ದಿನಗಳು! ರಾಮರಾಯರ ತಂದೆ, ಅವರ ತಾಯಿಯ ಹಿಂದೆ ಪಡೆದರು. ತನ್ನ ತಂದೆಯ ಬಾಳಕೊನೆ ಸಮೀಪಿಸಿದೆಯೆಂದು ರಾಮರಾಯರಿಗೆ ಮೊದಲೇ ಗೊತ್ತಿತ್ತಾದರೂ ಇಷ್ಟು ಬೇಗನೆ ಹೀಗಾದುದಕ್ಕೆ ತನ್ನ ಪತ್ನಿಯೇ ಕಾರಣಳೆಂದು ರಾಮರಾಯರು ತರ್ಕಿಸದಿರಲಿಲ್ಲ. ತನ್ನ ಮಡದಿಯ ಈ ವರ್ತನೆಯಿಂದಾಗಿ ದೈಹಿಕ ಅಸ್ವಸ್ಥತೆಯೊಂದಿಗೆ, ಮಾನಸಿಕ ಸ್ವಾಸ್ಥ್ಯವೂ ತಪ್ಪಿ ತನ್ನ ತಂದೆ ಆದಷ್ಟು ಬೇಗ ಬಾಳು ಮುಗಿಸಿಕೊಂಡರೆಂದು ರಾಮರಾಯರು ದುಃಖಿಸಿದರು. ಆದರೆ ತಂದೆಯ ವೈವಿಧ್ಯಪೂರ್ಣ ಯಾತನೆಗಳಿಂದ ಬಿಡುಗಡೆಗೊಂಡಂತಾದುದರಿಂದ ತಂದೆಯಳಿವಿಗಾಗಿ ರಾಮರಾಯರೊಂದು ವಿಚಿತ್ರ ತೃಪ್ತಿಪಟ್ಟುಕೊಂಡರು!

— ೪ —

ಈಗ ಬಾಳಿನ ಗಾಡಿಗೆ ಎರಡೇ ಚಕ್ರ. ರಾವ ರಾಯರು—ಶಕುಂತಳೆ. ಎಳೆಯುವ ಎತ್ತೂ ಉರುಳುವ ಚಕ್ರವೂ ಒಂದೇ ಆಗಿದೆ. ಆದರೂ ಉರುಳಬಹುದಿತ್ತು! ಕಷ್ಟದಲ್ಲಿ ಸುಖ ಮಾತ್ರವಲ್ಲ, ದಿವ್ಯಾನಂದವನ್ನೂ ಪಡೆಯಬಹುದಿತ್ತು. ಆದರೆ....

ಹಾಗಾಗಿರಲಿಲ್ಲ. ಶಕುಂತಳೆ ಒಬ್ಬಳು ಅತಿ ಕಾಮಿಸ್ತ್ರೀಯೆಂದು ರಾಯರು ತಿಳಿಯಲೇಬೇಕಾಯಿತು. ಅವಳ ದರ್ಪ, ಠೀವಿ-ಠೇಂಕಾರಗಳು ಅವರಲ್ಲಿರಲಿಲ್ಲ. ಜಿಲ್ಲಾಟಿದ ಅವಳ ಬಾಳಿನ ದಿನಗಳು ಉರುಳಲು ಹಣದ ರಾಶಿಯೇ ಬೇಕಾಗಿತ್ತು. ಆದರೆ ಬಡ ಅಧ್ಯಾಪಕ ರಾಮರಾಯರಿಗೆಲ್ಲಿ ಇದು ಸಾಧ್ಯ? ಬರಬರುತ್ತಾ ನಿರಾಸಕ್ತಿ ಅಭ್ಯಾಸವಾಗುವಂತೆ, ಅಭ್ಯಾಸವೇ ಜೀವನವಾಯಿತು. ಶಕುಂತಳೆಯ ಬಾಳೊಂದು ಬೇರೆ. ರಾಮರಾಯರ ಬಾಳಿನ ವಾರಿಯೊಂದು ಬೇರೆಯಾಯಿತು. ದಿನವಿಡೀ ದುಡಿಯುತ್ತಿದ್ದ ರಾಮರಾಯರ ಬಾಳಿಗೆ ಸುಖಶಾಂತಿಗಳ ಗಾಳಿ ಬೀಸಲಿಲ್ಲ; ಹೊಸ ಬೆಳಕು ಬರಲಿಲ್ಲ.

ಗಳಿಗೆ ಗಳಿಗೆಗೂ ತನ್ನ ಮಹಾಪತ್ನಿಯ ನಿಂದೆ, ಭರ್ತ್ಸನೆಗಳನ್ನು ಸಹಿಸಿಕೊಳ್ಳುತ್ತಿದ್ದರು ರಾಮರಾಯರು. ಅವರ ಸಹನೆಯೇ ದೌರ್ಬಲ್ಯವಾಗಿ ಪರಿಣಮಿಸಿತು. ಪರಿಣಾಮವಾಗಿ 'ಹೆಂಡತಿಗೆ ಹೆದರುವ' ವ್ಯಕ್ತಿಯಾದರು ರಾಮರಾಯರು. ನಿಜವಾಗಿಯೂ!

ಕಾಮಿನಿಯಾದ ಹೆಂಡತಿಯ ಚೆಲಾಟ ಮಿತಿಮೀರಿತು. ಊರಿನ ಕಾಮ ದಾಹದ ಸಭ್ಯರು ಶಕುಂತಳೆಯ ಸಮಾಗಮಕ್ಕಾಗಿ ಕಾತರಿಸುತ್ತಿದ್ದರು. ಅದಕ್ಕೆ ಸರಿಯಾದ ಅನುಪೂ ದೊರೆಯಿತು. ಶಕುಂತಳೆಯ ಬಾಳು 'ಊರ ವ್ಯಕ್ತಿಗಳ' ಬಲದಿಂದ, ಬೆಂಬಲದಿಂದ ನಡೆಯಲಾರಂಭಿಸಿತು. ಊರಿನ ಗಣ್ಯರೆನಿಸಿಕೊಳ್ಳುವ ಹಣವಂತ, ಗುಣವಂತ, ಮರ್ಯಾದೆ-ಗೌರವದ ಸಿಂಹಾಸನವನ್ನಲಂಕರಿಸಿದ ಜನರು, ವ್ಯಾಪಾರಿಗಳು ಎಲ್ಲರೂ ಶಕುಂತಳೆಯ ಬಲೆಯಲ್ಲಿ ಬಿದ್ದರು. ದಿವ್ಯಾನಂದವನ್ನುಂಡು ನಲಿದರು. ಕಾಮತೃಪ್ತಿಯೊಂದಿಗೆ ಶಕುಂತಳೆಯ ಬಾಳಿನಂಗಳದಲ್ಲಿ ಹಣದ ಮಳೆಯೂ ಸುರಿಯಿತು. ಶಕುಂತಳೆಯ ಬಾಳು ಪಾವನವಾಯಿತು! ಅವಳ ಅಪೂರ್ವ ಸೌಂದರ್ಯವು ಅಸಭ್ಯ ಜನರಿಂದ ಹಿಡಿದು, ಸಭ್ಯ-ದುರಾಚಾರಿಗಳವರೆಗೆ ನೋಹದ ಬಲೆಯನ್ನು ಬೀಸಿತು! ಊರ ಜನರಿಗೆ ಶಕುಂತಳೆ ಸವಯುಗದ ನವಶಕುಂತಳೆಯಾಗಿ ಕಂಗೊಳಿಸಿದಳು!

(ಎಂಟನೆ ಪುಟ ನೋಡಿರಿ)

ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಲಿ



ಝೂಂಡು
ಬಾಲಶೂಲಾರ್ಕ
ಉಪಯೋಗಿಸುವುದರಿಂದ
ಮಕ್ಕಳ ಉದರ ದೋಷಗಳೆಲ್ಲಾ
ಪಾತ್ರಿಯಾಗಿ ಗುಣಹೊಂದುವುದು.
ಝೂಂಡು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್,
ಪೋಸ್ಟ್ ಬಾಕ್ಸ್ ನಂಬ್ರ 7015, ಬೊಂಬಾಯಿ.
ಮದ್ರಾಸ್ ಸ್ಟೇಟನಲ್ಲೆಲ್ಲಾ ಸ್ಟಾಕಿಸ್ಟರಿರುವರು.

ಇಂಗ್ಲಿಷ್‌ನ ಸ್ಥಾನಮಾನವೇನು?

ರಾಷ್ಟ್ರಭಾಷೆಯ ಮಹಾಪ್ರಶ್ನೆ

ಶ್ರೀ ಎಸ್ ಗೋಪೀಚಂದರಾವ್, ವಿದ್ವಾನ್, ವಿಶಾರದ.

ಸ್ವಾತಂತ್ರ್ಯಕ್ಕಾಗಿ ಹೋರಾಡುತಿದ್ದ ಪ್ರಾರಂಭಿಕ ಸಮಯದಲ್ಲಿ "ರಾಷ್ಟ್ರಭಾಷೆ"ಯ ಮೂಲತತ್ವವು ಕಾಣಿಸಿಕೊಂಡಿರಲಿಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸಂಸ್ಥಾಪಕರು ಹಾಗೂ ಆದರ ಪ್ರಾರಂಭಿಕ ನಾಯಕರು ತಮ್ಮ ಸ್ವಾತಂತ್ರ್ಯ ಸಮರದ ಹೋರಾಟದ ಕಾಲದಲ್ಲಿ ವಿದೇಶೀ ಆಡಳಿತೆಯ ಸ್ಥಾನದಲ್ಲಿ ಸ್ವದೇಶಿಯನ್ನು ಪ್ರತಿಷ್ಠೆಪಿಸಲು ನಿಶ್ಚಯಮಾಡಿದ್ದರಲ್ಲದೇ ಇಂಗ್ಲಿಷ್ ಭಾಷೆಯನ್ನು ಬದಲಾಯಿಸುವ ಆಲೋಚನೆಯನ್ನೂ ಮಾಡಿರಲಿಲ್ಲ. ಭಾರತದಲ್ಲಿ ಆಧುನಿಕ ಪದ್ಧತಿಯ ರಾಜ್ಯವನ್ನು ಸಂಸ್ಥಾಪಿಸುವ ಉದ್ದೇಶದಿಂದ, ಅವರು ಇಂಗ್ಲಿಷ್ ಭಾಷೆಯನ್ನು ಕೈಯೆತ್ತಿ ಸ್ವಾಗತಿಸಿ ಅದನ್ನೊಂದು ಆಸ್ತಿಯೆಂದು ತಿಳಿದುಕೊಂಡರು ತಮ್ಮ ಗುರಿಯನ್ನು ಸಾಧಿಸುವುದಕ್ಕಾಗಿ ಅನ್ಯದೇಶಗಳೊಡನೆ ಸಂಪರ್ಕ ಬೆಳೆಸುವುದು ಅಗತ್ಯವಿದ್ದು ಈ ಭಾಷೆಯೊಂದು ಇಂತಹ ಸಂಪರ್ಕ ಮಾಧ್ಯಮವಾಗಿ ಪರಿಣಮಿಸಿತ್ತು.

ಕ್ರಮೇಣ ವಿದೇಶೀ ಭಾಷೆಯಾದ ಇಂಗ್ಲಿಷಿನ ಗದ್ದುಗೆಯನ್ನು ಒಂದು ಭಾರತೀಯ ಭಾಷೆಗೀಯುವ ಯೋಚನೆಯು ಸ್ವಾತಂತ್ರ್ಯ ಸಮರದ ಅಖಂಡಾಂಗವಾಗಿ ಪರಿಣಮಿಸಿ, ಸ್ವಾಭಾವಿಕವಾಗಿ ಆ ಸ್ಥಾನವನ್ನಾಕ್ರಮಿಸಲು ಹಿಂದಿಯು ಪ್ರತೀಕ್ಷಿತ ರಾಷ್ಟ್ರ ಭಾಷೆಯಾಗಿ ಪರಿಣಮಿಸಿತು ೧೯೪೭ರಲ್ಲಿ ಭಾರತವು ಸ್ವತಂತ್ರವಾದಾಗ, ರಾಷ್ಟ್ರೀಯ ಕರ್ಮಗತಿಯನ್ನು ರೂಪಿಸುವುದು, ಘಟನೆಯನ್ನು ಸಿದ್ಧಪಡಿಸುವುದು ಅವಶ್ಯವಾದಾಗ ಘಟನಾ ಸಮಿತಿಯು ಅಪೇಕ್ಷಿಸಿದ್ದ ಈ ರಾಷ್ಟ್ರ ಭಾಷೆಯ ಯೋಜನೆಯನ್ನು ಕಾರ್ಯರೂಪದಲ್ಲಿ ತರುವ ಕಷ್ಟಗಳನ್ನು ಎದುರಿಸಬೇಕಾಯಿತು; ಹಾಗಾಗಿ ಕರಡು ರಾಷ್ಟ್ರಘಟನೆಯಲ್ಲಿ ಈ ಪ್ರಶ್ನೆಯನ್ನು ಉಲ್ಲೇಖಿಸಿರಲಿಲ್ಲ. ಕೊನೆಯ ಘಟ್ಟದಲ್ಲಿಂತಾದರೂ ಹಿಂದಿಯನ್ನು ಪ್ರತಿಷ್ಠಿತ ರಾಷ್ಟ್ರಭಾಷೆಯಾಗಿ ಸ್ವೀಕರಿಸಲಾಯಿತಲ್ಲದೇ ದೇಶದ ರಾಜಕೀಯ ಕಾರ್ಯಕಲಾಪಗಳಲ್ಲಿ ಉಪಯೋಗವಾಗುವ ಭಾಷೆಯೆಂದಲ್ಲ.

ರಾಷ್ಟ್ರಘಟನೆಯು ವ್ಯವಹಾರಕ್ಕೆ ಬಂದ ಐದು ವರ್ಷಾನಂತ, ರಾಷ್ಟ್ರೀಯ ಭಾಷಾ ಸಮಸ್ಯೆಯನ್ನು ಅಭ್ಯಸಿಸಲು ಒಂದು ಆಯೋಗವನ್ನು ನೇಮಿಸಲಾಯಿತು ಆದರೆ, ಈ ಸಮಿತಿಯು ಹಿಂದೀ ವಿರೋಧೀ ತತ್ವದಿಂದ ಕೂಡಿತ್ತೆಂದು ಕೇಳಬರುವುದಿಲ್ಲ. ಏನೇ ಇದ್ದರೂ ಇದು ಹಿಂದಿಗೆ ಪರವಾಗಿಯೇ ಇತ್ತು. ಈ ಸಮಿತಿಯ ವರದಿಯನ್ನು ಪಾರ್ಲಿಮೆಂಟರಿ ಸಭೆಯೊಂದು ಪರಿಶೀಲಿಸುತ್ತಿದೆ. ಆಯೋಗ ಮತ್ತು ಸಮಿತಿಗಳ ನೇಮಕದಿಂದಲೇ ಇಂಗ್ಲಿಷ್ ಭಾಷೆಯ ಪಟ್ಟವನ್ನು ಭಾರತೀಯ ಭಾಷೆಯೊಂದಕ್ಕೀಯುವುದು ಅತ್ಯಂತ ಸರಳ ವಿಚಾರವಲ್ಲವೆಂಬುದನ್ನು ಯಾರೇ ಆಗಲೀ ಸುಲಭದಲ್ಲಿ ಗ್ರಹಿಸಬಹುದು.

ಆಂಗ್ಲ ಭಾಷೆಯನ್ನು ಭಾರತೀಯ ಭಾಷೆಯೊಂದರಿಂದ ಪ್ರತಿಷ್ಠೆಪಿಸುವ ಸಲುವಾಗಿ ಮುನ್ನಡೆ ನಡೆಯುತ್ತಿರುವಂತೆಯೇ ಅಖಿಲಭಾರತದ ಅಧಿಕೃತ ಭಾಷೆಯಾಗಿ ಇಂಗ್ಲಿಷನ್ನೇ ಉಳಿಸಬೇಕೆಂಬ ವಾದವೂ ಬೆಳೆಯುತ್ತಿದೆ. ಈ ವಾದವನ್ನು ಅನೇಕ ಪ್ರಖ್ಯಾತ ನಾಯಕರೇ ಮುಂದಿಡುತಿದ್ದಾರೆ, ಆದರೆ, ಈ ಹಿಂದೀ ವಿರೋಧೀ ಜಳವಳಿಯು ಭಾರತೀಯ ರಾಷ್ಟ್ರೀಯ ಜೀವನದಲ್ಲಿ ಸದಾ ಉಳಿಯಬೇಕೆಂದಲ್ಲ. ಬದಲು, ಜನತೆಗೊದಗುವ ಕಷ್ಟಗಳನ್ನು ತಪ್ಪಿಸಲಿಕ್ಕಾಗಿ ಅಂತಾರಾಷ್ಟ್ರೀಯ ಸಂಪರ್ಕವನ್ನು ಬೆಳೆಸಲಿಕ್ಕಾಗಿ ಈ ಭಾಷೆಯನ್ನು ಉಳಿಸಬೇಕೆನ್ನುತ್ತಾರೆ ವಿಶ್ವ ವಿದ್ಯಾಲಯಗಳು ಇಂಗ್ಲಿಷ್ ಭಾಷೆಯನ್ನೇ ಶಿಕ್ಷಣ ಮಾಧ್ಯಮವಾಗಿಟ್ಟುಕೊಳ್ಳುವ ಇರಾದೆಯಿಂದ ಕೂಡಿವೆ ಹಾಗೆಯೇ ವೈದ್ಯಕೀಯೇತ್ಯಾದಿ ಔದ್ಯೋಗಿಕ ಕ್ಷೇತ್ರದಲ್ಲಿನ ದುಡಿಮೆಗಾರರೂ ವಿಜ್ಞಾನ ಕ್ಷೇತ್ರದಲ್ಲಿನ ಕರ್ಮಚಾರರೂ ಆಂಗ್ಲ ಭಾಷೆಯನ್ನುಳಿಸಿಕೊಳ್ಳಲು ತಹತಹ ಪಡುತ್ತಿವೆ.

೧೯೫೮ನೆ ವರ್ಷದಲ್ಲಿ ಚೆಕೊಸ್ಲೊವಾಕಿಯಾದಲ್ಲಿ ಜನರಿಗೆ ಜರ್ಮನ್ ಭಾಷೆಯ ಸ್ಥಾನವನ್ನು ತಮ್ಮ ಭಾಷೆಗೆ ಉಳಿಸಲು ವಿಶೇಷ ಪ್ರಯತ್ನವೇನು ಸಲಿಲ್ಲವೆಂಬುದು ಸತ್ಯ. ಆದರೆ, ಭಾರತದ ಪರಿಸ್ಥಿತಿ ಇನ್ನು ಸುಲಭವಲ್ಲ. ದಕ್ಷಿಣ ಆಫ್ರಿಕದ ಡಚ್ಚರು ಆಫ್ರಿಕನ್ಸ್ (ಡಚ್ ಭಾಷೆಯ ಒಂದು ಒಗೆ) ಭಾಷೆಯನ್ನು ಇಂಗ್ಲಿಷಿನೊಡನೆಯೇ ಸಹ ರಾಷ್ಟ್ರ ಭಾಷೆಯೆಂದು ಮನ್ನಿಸಿದ್ದಾರೆ ಕೆನಡದ ಸಂಗತಿಯೂ ಹೀಗೆಯೇ ಅಯರ್ಲೆಂಡಿನಲ್ಲಿ ರಾಷ್ಟ್ರಭಾಷೆಯು ಸಂಬಂಧದಲ್ಲಿ ತಮ್ಮ ಆಳರಸರ ವಿರುದ್ಧ ಗುಲ್ಲೆಬ್ಬಿಸಿದ ದರಿಂದ ಐರಿಷ್ ಭಾಷೆಯು ಸ್ವತಂತ್ರ ಆಯರ್ಲೆಂಡಿನಲ್ಲಿ ರಾಷ್ಟ್ರಭಾಷೆಯ ಗೌರವ ಪಡೆಯಿತು. ಆದರೆ, ಇಂಗ್ಲಿಷ್ ಮಾಯವಾಯಿತೆ?

ಭಾರತವು ಸ್ವತಂತ್ರವಾದಂದಿನಿಂದ, ಅದುವರೆಗೆ ನಮ್ಮಲ್ಲಿ ನೆಲೆಯೂರಿದ್ದ ಆಂಗ್ಲರು ಹೊರನಡೆದುದರಿಂದ, ಹಾಗೂ ಭಾಷೆಯು ಮಾತ್ರ ಉಳಿದು ಹೋದುದರಿಂದ ಅದು ಪರಕೀಯ ಭಾಷೆಯೆಂಬ ಕಲಂಕ ಸಹಿತವಾಗಿದೆಯೆನ್ನಬರುವುದಿಲ್ಲ ಮೂಲತಃ ಇಂಗ್ಲಿಷ್ ಭಾಷೆಯು ಭಾರತವೂ ಇತರ ಹಲವು ದೇಶಗಳು ಸೇರಿರುವ "ಕಾಮನ್‌ವೆಲ್ತ್"ನ ಮೂಲದೇಶವಾದ ಇಂಗ್ಲೆಂಡಿನಲ್ಲಿ ಬೆಳೆದು ಬಂದ ಭಾಷೆ ಸ್ವಾತಂತ್ರ್ಯ ಪಡದನಂತರವೂ ರೈಲ್ವೆ, ಟೆಲಿಗ್ರಾಫ್ ಮೊದಲಾದ ಉಪಯುಕ್ತ ಸರಕುಗಳಂತೆ ಉಳಿದ ಭಾಷೆ ಇಂಗ್ಲಿಷ್! ಭಾರತವು ಇಂತಹ ಸರಕುಗಳನ್ನು ನಿರ್ಯಾತ ಮಾಡಿ ಅವುಗಳ ಸ್ಥಾನವನ್ನು ಭಾರತೀಯ ಸರಕುಗಳಿಂದ ತುಂಬಿಸಿಕೊಳ್ಳಬರುವುದಿಲ್ಲ ಭಾರತವು ಪರದೇಶೀಯ ಆರ್ಥಿಕ ಸಹಾಯವನ್ನು ಸ್ವಾಗತಿಸುತ್ತದೆ; ರಾಷ್ಟ್ರೀಯ ಜೀವನದಲ್ಲಿ ಮುನ್ನಡೆಯುವುದಕ್ಕಾಗಿ ಪರಕೀಯರಿಂದ ಅನುಭವಗಳನ್ನೂ ಮುಕ್ತಹಸ್ತದಿಂದ ಸ್ವೀಕರಿಸುತ್ತದೆ ಹಾಗಿರುವಾಗ, ನಾವು ವಿದೇಶೀಯ ಸರಕುಗಳೊಡನೆ ನಮ್ಮ ಪೂರ್ವದ ಆಳರಸರು ಬಿಟ್ಟುಹೋದ ವಾಲು ಆಸ್ತಿಯೆಂದು ಇಂಗ್ಲಿಷ್ ಭಾಷೆಯನ್ನು ಏಕೆ ಇಟ್ಟುಕೊಳ್ಳಬಾರದು?

ಇಂಗ್ಲಿಷ್ ವಿದೇಶೀಯ ಉಳಿಮೆಯೆಂದು ನಾವು ಹೇಳಬಹುದು? "ವಿದೇಶೀಯ" ಎಂಬ ಪದವನ್ನು ವಾಸ್ತವಿಕತೆಯನ್ನು ಕಂಡೇ ಬಳಸಬೇಕಾಗುತ್ತದೆ ವಿದೇಶ ವಾಲುವಿದ್ದ ಮಾತ್ರಕ್ಕೆ ಒಂದು ವಸ್ತುವನ್ನು "ವಿದೇಶೀಯ" ಎಂಬ ಹೆಸರಿನಿಂದ ಕರೆಯುವುದು ಸಮಂಜಸವಲ್ಲ ಯಾವುದೇ ಒಂದು ವಸ್ತುವು ಒಂದು ನಿರ್ದಿಷ್ಟ ಪರಿಸರದಲ್ಲಿಯೇ ರೂಢಗೊಳ್ಳಬೇಕು, ಮಿತಿಯಿರದೆ ಪ್ರಸಂಚದಲ್ಲೆಲ್ಲಾ ಅದು ರೂಪಸಡೆಯಲಾರದು. ಹಾಗಿದ್ದರೂ ಅದು ರೂಪಸಧಾರಣೆ ಮಾಡಿದ ಪ್ರದೇಶದವರ ಆಸ್ತಿಯಾಗಿರದೆ, ಜನತೆಯ ವಸ್ತುವಾಗುವುದು ವಿಜ್ಞಾನ ವತ್ತು ಕಲೆಗಳ ಸಂಗತಿಯೂ ಇದೇ. ಭಾಷೆ ಮತ್ತು ಸಾಹಿತ್ಯಗಳ ವಿಷಯದಲ್ಲಿಯೂ ಹೀಗೆಯೇ ಆಗಬೇಕು. ಒಂದು ವೇಳೆ, ವಿದೇಶೀಯ ಸರಕುಗಳ ಬದಲು ಸ್ವದೇಶೀಯವನ್ನೇ ಜನರು ಬಳಸುವುದಾದರೆ, ಆರ್ಥಿಕಾಭಿರುಚಿಯಿಂದ ಅಂತಹ ವಸ್ತು ಬಾಹ್ಯವಾಗಿರಬೇಕು. ಆದರೆ; ವಿಜ್ಞಾನ, ಕಲೆ, ಭಾಷೆ ಮತ್ತು ಸಾಹಿತ್ಯ ಗಳಿಗಾಗುವಾಗ ಆರ್ಥಿಕ ಪ್ರಶ್ನೆಯೇ ಉದ್ಭವಿಸುವುದಿಲ್ಲ ದೇಶವು ಆರ್ಥಿಕವಾಗಿ ಅಭಿವೃದ್ಧಿಯಾಗುವುದಕ್ಕೆ ನೆರವಾಗುವ ವಿದೇಶೀಯ ತಜ್ಞರು ಹಾಗೂ ಯಾಂತ್ರಿಕೋಪಕರಣಗಳಂತೆಯೇ ಭಾಷೆಯಿರುವುದು. ವಿಜ್ಞಾನ, ಕಲೆ, ಭಾಷೆ ಮತ್ತು ಸಾಹಿತ್ಯಗಳು ಮೂಲತಃ ಪರಕೀಯವಿದ್ದರೂ ರಾಷ್ಟ್ರೀಯಾಭಿವೃದ್ಧಿಗೆ ಸಹಾಯಕವಾಗಬಹುದು, ಸಾಕಷ್ಟು ಸ್ಫೋತ್ಸಾಹ ಮೊತೆಗೆ, ಇವೂ ಸ್ವಾಗತಿಸಲ್ಪಡಬಹುದು.

ಭಾವನೆಗಳನ್ನು ವ್ಯವಹಾರಂಗಕ್ಕೆಳೆಸುವ ಸಾಧನವೇ ಭಾಷೆ. ಮನುಷ್ಯನಲ್ಲಿ ಕೆಲವು ಸಾಮಾನ್ಯ ಭಾವನೆಗಳೂ ಕೆಲವು ಅಸಾಮಾನ್ಯ ಕಲ್ಪನೆಗಳೂ ಮನೆಮಾಡಿರುವುವು ಸಾಮಾನ್ಯ ಭಾವನೆಗಳು ಸಾಮಾನ್ಯ ಭಾಷೆಯಲ್ಲಿಯೇ ಪ್ರಕಟವಾಗಬಹುದು. ಅಸಾಮಾನ್ಯ ಭಾವನೆಗಳು ಮಾತ್ರ "ವಿಶಿಷ್ಟ" ಭಾಷೆಯಲ್ಲಿಯೇ ವ್ಯಕ್ತವಾಗುತ್ತವು. ಒಂದು ರಾಷ್ಟ್ರವು ತನ್ನ ದೈನಂದಿನ ಕಾರ್ಯಗಳಲ್ಲಿ ಪರಕೀಯರನ್ನು ಮನ್ನಿಸದೆ ಹೋದರೂ ವಿಶೇಷ ಸಂದರ್ಭಗಳಲ್ಲಿ ಸಂದರ್ಭ ಮತ್ತು ಅವಶ್ಯಕತೆಗಳು ಉದ್ಭವಿಸಿದಾಗ ಅವನ್ನು ಶರಣು ಹೋಗಲೇ ಬೇಕಾಗುತ್ತದೆ.

ಇಂಗ್ಲಿಷ್ ಭಾಷೆಯನ್ನು ಉಳಿಸಬೇಕೆಂದು ವಾದಿಸುವವರಲ್ಲಿ ಯಾರೂ ದೇಶೀಯ ಭಾಷೆಗಳನ್ನು ಚ್ಯುತಿಗೊಳಿಸುವ ಕನಸು ಕಾಣುತ್ತಿಲ್ಲ. ವಿದೇಶೀಯ ತಜ್ಞನ ಸೇವೆಯಿಂದ ದೇಶದ ವಿವಿಧ ಕ್ಷೇತ್ರಗಳಲ್ಲಿ ಒದಗುವ ಕಾರ್ಯಾಭಿವೃದ್ಧಿಯಂತೆಯೇ ವಿದೇಶೀಯ ಭಾಷೆಯ ಸೇವೆಯು ದೇಶೀಯ ಭಾಷೆಗಳ ಸುಧೋಭಿವೃದ್ಧಿಗೆ ಸಹಾಯವಾಗುವುದೆಂದು ಹೇಳುವುದು ಸಾಹಸದ ಮಾತಲ್ಲ

ವರ್ಗೀಕರಣ ಮಾಡುವಲ್ಲಿ ವೈವಿಧ್ಯಗಳಿರುತ್ತವೆ ಸಾಮಾನ್ಯವಾಗಿ ಸ್ಥಳೀಯ ಮತ್ತು ವಿದೇಶೀಯ ಎಂಬೆರಡು ವರ್ಗಗಳಾಗಿ ಇವನ್ನು ವಿಂಗಡಿಸಬಹುದು. ಆದರೆ, ಇದನ್ನು ಸಮರ್ಪಕ ವಿಭಾಗಕ್ರಮವೆಂದು

(ಇಂನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ಬಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ವಿಠಾಳ, ಎಂ ಬಿ ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್ ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ

ಏಕರೂಪದ ತೂಕಳತೆಯ ಕ್ರಮ—

ದಶಮಾನ ಪದ್ಧತಿ

ಒಮ್ಮೆ ಮುಂಬಯಿಯ ಒಬ್ಬ ಸದ್ಗೃಹಸ್ಥರು, ಉತ್ತರ ಭಾರತದ ಯಾವುದೊ ನಗರಕ್ಕೆ ಹೋಗಿದ್ದರು. ಅಲ್ಲಿ ನಾನಾ ಬಗೆಯ ಮಿಠಾಯಿಯನ್ನು ನೋಡಿ ಅವರ ಮನಸ್ಸು ಮುದಗೊಂಡಿತು ಒಂದು ಪಾವು ರಬಡಿ (ಉತ್ತರ ಭಾರತದ ಒಂದು ಸಿಹಿ ಪದಾರ್ಥ)ಯನ್ನು ತೆಗೆದುಕೊಂಡು ಅದನ್ನು ಸಂತೃಪ್ತಿಯಿಂದ ಭುಜಿಸಿದರು ಆದರೆ ಅವರ ಈ ಸುಸ್ವಾದ ಸಂತೃಪ್ತಿ ಅಲ್ಪ ಕಾಲಿಕವಾಯಿತು. ತುಸು ಹೊತ್ತಿನಲ್ಲಿಯೇ ಅವರ ರೋಗಗ್ರಸ್ತರಾದರು. ತಾವು, ಸಾಮಾನ್ಯವಾಗಿ ತಿನ್ನುತ್ತಿದ್ದುದಕ್ಕಿಂತ ಎರಡರಷ್ಟು ಆ ಸಿಹಿ ಪದಾರ್ಥವನ್ನು ತಿಂದುದನ್ನು ಅವರು ಮನಗಂಡರು ಈ ಅಜೀರ್ತುರ್ಯಕ್ಕೆ ಕಾರಣ ಉತ್ತರ ಭಾರತದ ಒಂದು ಪಾವು. ಮುಂಬಯಿಯಲ್ಲಿ ಪ್ರಚಲಿತವಾಗಿದ್ದ ಒಂದು ಪಾವಿನ ಎರಡರಷ್ಟು ತೂಗುತ್ತದೆ ಆ ಸದ್ಗೃಹಸ್ಥರು ತಮ್ಮ ದೃಷ್ಟಿಯಿಂದ ಸರಿಯಾದ ಪ್ರಮಾಣದಲ್ಲಿಯೇ ರಬಡಿಯನ್ನು ಕೊಂಡುಕೊಂಡಿದ್ದರು ಆದರೆ, ಅದು ವಾಸ್ತವದಲ್ಲಿ ಎರಡರಷ್ಟಿತ್ತು.

ಈ ಕಥೆ ನಿಜವಿರಬಹುದು, ಅಥವಾ ಕಲ್ಪಿತವಿರಬಹುದು. ಆದರೆ ಇದರಿಂದ ಒಂದು ವಿಷಯ ವ್ಯಕ್ತಪಡುತ್ತದೆ. ದೇಶದ ನಾನಾ ಭಾಗದಲ್ಲಿ ಏಕರೂಪವಾದ ತೂಕ ಪ್ರಮಾಣಗಳಿಲ್ಲದಿದ್ದರೆ, ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ವಿಧವಾದ ತೂಕ ಪ್ರಮಾಣಗಳು ಪ್ರಚಲಿತವಾಗಿದ್ದಲ್ಲಿ ಆಗುವ ಅನಾಹುತವನ್ನು ಇದು ನಿರೂಪಿಸುತ್ತದೆ

ಸೇರು ಮತ್ತು ಮಣ ಇವು ಭಾರತದ ವಿವಿಧ ಭಾಗಗಳಲ್ಲಿ ಬಳಕೆಯಲ್ಲಿರುವುವು ಆದರೂ, ಸೇರಿನ ತೂಕ ೨೪ ತೊಲಗಳಿಂದ ಹಿಡಿದು ೧೧೨ ತೊಲಗಳ ವರೆಗೂ ಬದಲಾಯಿಸುತ್ತ ಹೋಗುವುದು. ಭಾರತದಲ್ಲಿ ಸುಮಾರು ೧೫೦ಕ್ಕೂ ಹೆಚ್ಚು ವಿನ್ನ ತೂಕ ಹಾಗೂ ಅಳತೆಯ ಪ್ರಮಾಣಗಳಿರುವುವು. ಅನೇಕ ಕಡೆಗಳಲ್ಲಿ, ಒಂದೇ ಜಿಲ್ಲೆಯಲ್ಲಿಯೇ ವಿವಿಧ ಬಗೆಯ ತೂಕಮಾನಗಳಿರುವುವು ಅಂದರೆ. ಆಹಾರ ಧಾನ್ಯಗಳನ್ನು ಅಳೆಯುವುದಕ್ಕೆ ಒಂದು ಸೇರು, ಹಾಲನ್ನು ಅಳೆಯಲು ಒಂದು ಸೇರು . . . . ಇತ್ಯಾದಿ.

ಈ ವಿಷಮ ಪರಿಸ್ಥಿತಿಯನ್ನು ಕೊನೆಗಾಣಿಸಲು ಈ ಸಮಸ್ಯೆಯ ಅಧ್ಯಯನವನ್ನು ಯೋಜನಾ ಕಮಿಷನ್ನಿನವರು ೧೯೫೫ರಲ್ಲಿ, ಕೈಗೊಂಡರು ಏಕರೂಪವಾದ ತೂಕ ಮತ್ತು ಅಳತೆಯ ಪ್ರಮಾಣಗಳ ಅಗತ್ಯವನ್ನು ಅಂಗೀಕರಿಸಲಾಯಿತು. ಈ ಪ್ರಮಾಣಗಳು ಯಾವ ಪದ್ಧತಿಯನ್ನು ಅವಲಂಬಿಸಬೇಕೆಂದು ಪರಿಶೀಲಿಸಿದ ನಂತರ, ಪ್ರಪಂಚದ ಮೂರನೆಯ ಎರಡು ಭಾಗದಷ್ಟು ಜನರಿಗಿಂತಲೂ ಹೆಚ್ಚು ಜನರು ಅನುಸರಿಸುತ್ತಿರುವ ದಶಮಾನ ಪದ್ಧತಿಯನ್ನು ಅಂಗೀಕರಿಸಲು ಸರಿಗಣಿಸಲಾಯಿತು.

ಈ ಪದ್ಧತಿಯಲ್ಲಿರುವ ಮುಖ್ಯ ಗುಣ ಸರಳತೆ. ಇದು ೧೦ರ ಗುಣಕಗಳಲ್ಲಿರುವುದರಿಂದ ಲೆಕ್ಕಾಚಾರ ಬಹಳ ಸುಲಭ ದಶಮಾನ ನಾಣ್ಯ ಪದ್ಧತಿ ಈಗಾಗಲೇ ಅಚರಣೆಯಲ್ಲಿರುವುದರಿಂದ, ದಶಮಾನ ತೂಕ ಮತ್ತು ಅಳತೆಯ ಪದ್ಧತಿಯಿಂದ ದಿನಂಪ್ರತಿ ಲೆಕ್ಕಾಚಾರಗಳಿಗೆ ಇನ್ನೂ ಸುಲಭವಾಗುವುದು.



ಸದ್ಯವೇ ವ್ಯವಹಾರದಲ್ಲಿ ಬರಲಿರುವ ಮೆಟ್ರಿಕ್ ತೂಕಳತೆಯ ಕೆಲವು ತೂಕದ ಕಲ್ಲುಗಳಿವು.

ನಮ್ಮ ಪರಂಪರೆ

ದಶಮಾನ ಪದ್ಧತಿಯನ್ನು ಪ್ರಪಂಚಕ್ಕೆ ಮೊತ್ತಮೊದಲು ಕಾಣಿಕೆಯಾಗಿತ್ತವರು ಭಾರತೀಯರು ೨೦೦೦ ವರ್ಷಗಳ ಹಿಂದೆ ಭಾರತದ ಗಣಿತ ಶಾಸ್ತ್ರಜ್ಞರೊಬ್ಬರು 'ಶೂನ್ಯ'ದ ಮೌಲ್ಯವನ್ನೂ, ಗಣಿತದಲ್ಲಿ ಅದರ ಪ್ರಯೋಗವನ್ನೂ ನಿರ್ಣಯಿಸಿದರು ಭಾರತವು, ಈಗ ದಶಮಾನ ಪದ್ಧತಿಯನ್ನು ಅಚರಣೆಗ ತರುವುದರಿಂದ, ಅದು ತನ್ನ ಪರಂಪರೆಗೆ ಮತ್ತೆ ಹಿಂತಿರುಗಿದಂತಾಗುವುದಷ್ಟೇ

ದಶಮಾನ ಪದ್ಧತಿಯು ಪ್ರಚಲಿತ ರೂಪತಾಳಿದ್ದು ಪೆರಿಂಚ್ ಮಹಾ ಕ್ರಾಂತಿಯ ನಂತರ ನಮ್ಮ ಸಂವಿಧಾನದಲ್ಲಿ ಸ್ವಾತಂತ್ರ್ಯ, ಸಮಾನತೆ, ಮತ್ತು ಭ್ರಾತೃ ಭಾವದ ತತ್ವಗಳನ್ನು ಅಂಗೀಕರಿಸಿರುವುದರಿಂದ ಫ್ರಾನ್ಸಿನ ಮಹಾಕ್ರಾಂತಿಯ ಫಲ ಸ್ವರೂಪವಾಗಿ ಬಂದ ಈ ಸುಧಾರಿತ ರೂಪವನ್ನು ಭಾರತವು ಅಂಗೀಕರಿಸಿರುವುದು ಉಚಿತವಾಗಿರುವುದು

೧೯೫೮ರಲ್ಲಿ ಭಾರತದ ಪಾರ್ಲಿಮೆಂಟ್ ದಶಮಾನ ಪದ್ಧತಿಯನ್ನು ಭಾರತದಲ್ಲಿ ಅಚರಣೆಗೆ ತರುವ ಸಂಬಂಧವಾದ ಶಾಸನವನ್ನು ಅಂಗೀಕರಿಸಿತು ಈ ಶಾಸನಕ್ಕೆ ೧೯೫೮ರ ಪ್ರಮಾಣೀಕೃತ ತೂಕ ಮತ್ತು ಅಳತೆಯ ಕಾನೂನು ಎಂದು ಹೆಸರು. ಈಗ ಬಳಕೆಯಲ್ಲಿರುವ ಉದ್ದ, ಕ್ಷೇತ್ರ, ಗಾತ್ರ ಮತ್ತು ತೂಕದ ಪ್ರಮಾಣಗಳ ಸ್ಥಳದಲ್ಲಿ ಪ್ರಮಾಣೀಕೃತ ಪ್ರಮಾಣಗಳನ್ನು ಈ ಶಾಸನವು ವಿಧಿಸುತ್ತದೆ

ವಿಲಂಬ ಪರಿವರ್ತನೆ

ಇಂತಹ ಬೃಹತ್ ಸುಧಾರಣೆಯನ್ನು ಒಮ್ಮಿಂದೊಮ್ಮೆಲೆ ಮಾಡಲು ಸಾಧ್ಯವಾಗದು ಆದ್ದರಿಂದ ಈ ಪರಿವರ್ತನೆಯನ್ನು ೧೦ ವರ್ಷಗಳ ಅವಧಿಯಲ್ಲಿ ಸ್ಥಾಪಿಸಬೇಕೆಂದು ಅಂಗೀಕರಿಸಲಾಯಿತು

ವಿವಿಧ ರಾಜ್ಯ ಸರ್ಕಾರಗಳೊಡನೆ ಸಮಾಲೋಚನೆ ನಡೆಸಿದ ನಂತರ, ದಶಮಾನ ಪದ್ಧತಿಯನ್ನು ೧೯೫೮ರ ಅಕ್ಟೋಬರ್ ೧ರಿಂದ ಆರಂಭಿಸಬೇಕೆಂದು ನಿರ್ಣಯಿಸಲಾಯಿತು ಆ ದಿನದಂದು, ಹತ್ತಿಯ ಒಟ್ಟಿಗಿರಣಿಗಳು, ಕಬ್ಬಿಣ ಮತ್ತು ಉಕ್ಕು ಎಂಜಿನಿಯರಿಂಗ್, ಭಾರಿ ಪ್ರಮಾಣದ ರಾಸಾಯನಿಕ ವಸ್ತುಗಳು, ಸಿಮೆಂಟ್, ಉಪ್ಪು, ಕಾಗದ ಮತ್ತು ಕಾಫಿ ಈ ಉದ್ಯಮಗಳಲ್ಲಿ ದಶಮಾನ ಪದ್ಧತಿಯನ್ನು ಅಚರಣೆಗೆ ತರಲಾಗುವುದು.

೧೯೫೮ರ ಸೆಪ್ಟೆಂಬರ್ ತಿಂಗಳವರೆಗೆ ದಶಮಾನ ಪದ್ಧತಿಯ ಜೊತೆಗೆ ಹಳೆಯ ತೂಕ ಮತ್ತು ಅಳತೆಯ ಪ್ರಮಾಣಗಳೂ ಅಚರಣೆಯಲ್ಲಿದ್ದು, ಜನತೆಗೆ ಹೊಸ ಪದ್ಧತಿಯಲ್ಲಿ ಪರಿಶ್ರಮಪಡೆಯಲು ಕಾಲಾವಕಾಶವನ್ನೂ ವಾತಾವರಣವನ್ನೂ ಕಲ್ಪಿಸಿಕೊಡುವುದು ಎರಡು ವರ್ಷಗಳನಂತರ ದಶಮಾನಪದ್ಧತಿಯು ಮಾತ್ರವಿರುವುದು.

ದಶಮಾನ ನಾಣ್ಯ—ಒಂದು ಸೂಚಕ

೧೯೫೭ರ ಏಪ್ರಿಲ್ ೧ರಂದು ಭಾರತದಲ್ಲಿ ದಶಮಾನ ನಾಣ್ಯ ಪದ್ಧತಿಯನ್ನು ಅಚರಣೆಗೆ ತರಲಾಯಿತು ಇಂದು ಬಹುತೇಕಮಂದಿ ದಶಮಾನ ನಾಣ್ಯ ಪದ್ಧತಿಯಲ್ಲಿ ಸಾಕಷ್ಟು ಪರಿಶ್ರಮಗಳಿಸಿಕೊಂಡಿದ್ದಾರೆ ಅದರಂತೆ ದಶಮಾನ ಪದ್ಧತಿಯ ತೂಕ ಮತ್ತು ಅಳತೆಯ ಬಗೆಗೆ ಅವರು ಬಹುಬೇಗ ಪರಿಶ್ರಮಗಳಿಸುವರು.

೧೯೫೮ರ ಅಕ್ಟೋಬರ್ ೧ರಿಂದ ದೊಡ್ಡ ದೊಡ್ಡ ವ್ಯಾಪಾರಿಕೆಗಳು ತಮ್ಮ ಕಚ್ಚಾ ವಸ್ತುಗಳನ್ನು ಕೊಳ್ಳುವಾಗ ದಶಮಾನ ಪದ್ಧತಿಯನ್ನು ಅನುಸರಿಸುವುವು. ಕಾ

(೧೯ನೇ ಪುಟ ನೋಡಿರಿ)

ದೇಹಕ್ಕೆ ಪ್ರಾಣವು ಹೇಗೋ ಹಾಗೆಯೇ ಜೀವನಕ್ಕೆ ಉಳಿತಾಯ
ಉಳಿತಾಯವಿಲ್ಲದವನ ಬಾಳು ಹಾಳು, ಅಲ್ಲದೆ, ಅವನು
ಇದ್ದೂ ಇಲ್ಲದಂತೆ ನಿಮ್ಮ ಬಾಳು ಭವ್ಯವಾಗಿ ಬೆಳಗ
ಬೇಕಾದರೆ ಜೀವನದಲ್ಲಿ ಹುರುಸು-ಉತ್ಸಾಹ
ಗಳು ನಿಮ್ಮದಾಗಬೇಕಾದರೆ, ನಮ್ಮಲ್ಲಿರುವ
ಉಳಿತಾಯ ಯೋಜನೆಗಳಲ್ಲೊಂದ
ನ್ನಾರಿಸಿ ನೀವು ಪ್ರಯೋಜನ
ಪಡೆಯಬಹುದು

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ಪ್ರಧಾನ ಕಾರ್ಯಾಲಯ. ಉಡುಪಿ (ದ ಭಾರತ).

ನೀವೂ ಸಮಾಜಸೇವೆಗೆ ಅಣಿಯಾದೀರಾ?

ನಿಷ್ಕಲಂಕ ಸಮಾಜಸೇವೆ

ಪ್ರಪಂಚದ ಇತಿಹಾಸದಲ್ಲಿ ಆಗಾಗ ಸಮಾಜಸೇವೆಯ ಆದರ್ಶವನ್ನಿಟ್ಟುಕೊಂಡಿದ್ದ ಮಹಾಪುರುಷರ ಜೀವನದ ಅನುರ ಕಥೆಗಳು ಮಾನವತೆಯ ಮೇಲೆ ಚಿರ ಪ್ರಕಾಶ ಮತ್ತು ನವಸ್ಫೂರ್ತಿಗಳನ್ನು ನೀಡುತ್ತಿರುತ್ತವೆ. ನಮ್ಮ ಭಾರತೀಯ ಸಂಸ್ಕೃತಿಯು ಸದೇಸದೇ ಸಮಾಜಸೇವೆಯ ಸಂದೇಶವನ್ನೇ ಬೋಧಿಸುತ್ತದೆ. ನಮ್ಮ ಆನಾದಿ ಸಂಸ್ಕೃತಿಯ ಹಾಗೂ ನಾಗರಿಕತೆಯ ಪ್ರತೀಕವೆಂದರೆ, ಸಮಾಜ ಸೇವೆಯೇ ಆಗಿದೆ. ನಳಂದಾ, ತಕ್ಷಶಿಲೆಗಳ ಅಮರ ವಿಶ್ವವಿದ್ಯಾಲಯಗಳ ಗಾಥೆಯು ಆ ಕಾಲದ ಸಮಾಜ ಸೇವೆಯ ಸಾಕಾರ ಮೂರ್ತಿಯಾಗಿದ್ದುವು. ನಮ್ಮಲ್ಲಿ ಶಿಕ್ಷಣಾಧಾರವೇ ಸಮಾಜ ಸೇವೆಯಾಗಿತ್ತು. ಗುರುಕುಲದ ಶಿಕ್ಷಣ ಪದ್ಧತಿಯು ರಾಷ್ಟ್ರ ಹಾಗೂ ಸಮಾಜಗಳ ಸೇವಾ ಭಾವನೆಯಿಂದಲೇ ರೂಪಿಸಲ್ಪಡುತಿದ್ದುವು. ನಮ್ಮ ದೇಶದ ಶಿಕ್ಷಣದ ಪ್ರಮುಖ ಉದ್ದೇಶವಾದರೂ ಸೇವೆಯೇ ಆಗಿತ್ತು.

ಸೇವಾ ಭಾವನೆಯು ಮಾನವನ ಹೃದಯದಲ್ಲಿ ಸ್ವಭಾವಗತವಾಗಿರುತ್ತದೆ. ಪ್ರತಿ ಪ್ರಾಣಿಯಲ್ಲಿಯೂ ಈ ಭಾವನೆಯು ಬೀಜರೂಪದಲ್ಲಿ ಇರುತ್ತದೆ. ಅನುಕೂಲ ಇಲ್ಲವೇ ಪ್ರತಿಕೂಲ ಪರಿಸ್ಥಿತಿಗಳ ದೆಸೆಯಿಂದಾಗಿ ಇವುಗಳಲ್ಲಿ ಪರಿವರ್ತನೆಯಾಗುತ್ತದೆ ರಾಷ್ಟ್ರೀಯ ಚರಿತ್ರೆಯ ಉತ್ಥಾನ-ಪತನಗಳು ಈ ಭಾವನೆಯನ್ನು ಜಾಗ್ರತಗೊಳಿಸಬಹುದು, ಇಲ್ಲವೆ ವ್ಯತಿರಿಕ್ತವಾಗಿ ಗೈಯಬಹುದು. ಸೇವಾಭಾವನೆಯಿಂದ ಪ್ರೇರಿಸಲಾಗುವ ಓರ್ವ ವ್ಯಕ್ತಿಯು ಲೋಕ ಹಿತದ ನೆನಪಲ್ಲಿ ತನ್ನ ಜಾತಿ, ದೇಶ ಮತ್ತು ಸಮಸ್ತ ಪ್ರಾಣಿ ವರ್ಗಕ್ಕೆ ತನ್ನ ಜೀವನವನ್ನು ಅರ್ಪಿಸುತ್ತಾನೆ. ಪ್ರತಿಯೊಬ್ಬರ ಉನ್ನತಿಯಾಗಬೇಕಾದರೆ, ಇಂತಹ ಸೇವಾ ಭಾವನೆಯೂ ಅವಶ್ಯಕವಾದುದು. ಭಾರತದ ಇತಿಹಾಸದಲ್ಲಿ ಇಂತಹ ಮಹಾ ಪುರುಷರ ಸಂಖ್ಯೆಯು ತುಂಬಿ ಹೋಗಿದೆ. ಈ ಅಂಧಕಾರ ಯುಗದಲ್ಲಿಯೂ ಮಹಾ ಪುರುಷ ಮಹಾತ್ಮಾ ಗಾಂಧಿಯವರ ರೂಪದಲ್ಲಿ ಪರಮಾತ್ಮನು ಶಕ್ತಿದೀಪ್ತಿಯನ್ನು ಬೆಳಗಿಸಿದನು. ಈ ಮಹಾತ್ಮನು ಪರಾಧೀನತೆಯಿಂದ ದಿಙ್ಮೂಢರಾದ ಆತ್ಮವಿಸ್ಮೃತರಾದ ಭಾರತೀಯರಿಗೆ ತನ್ನ ಅಧಿಕ ಪರಿಶ್ರಮ, ಅಪರಿಮಿತ ತ್ಯಾಗ ಮತ್ತು ಆದರ್ಶಗಳಿಂದ ಸಮಾಜ ಸೇವೆಯ ಸರಳ ಪಾಠವನ್ನು ಕಲಿಸಿದನು ಅಲ್ಲದೇ ಸಮಸ್ತ ಜಗತ್ತಿಗೂ ಸಾರಿದನು.

ಪರಂಪರಾಗತವಾಗಿ ಬಂದಿರುವ ಅಡೆತಡೆಗಳನ್ನು ಸ್ವಯಂ ದೂರಮಾಡುವುದು ಪ್ರತ್ಯೇಕ ರಾಷ್ಟ್ರದ ಉತ್ಥಾನ ಕಾರ್ಯಕ್ಕೆ ಅವಶ್ಯಕವಾದುದು. ಸ್ವತಂತ್ರ ದೇಶವೊಂದರಲ್ಲಿ ನಾಗರಿಕರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಾಸನದತ್ತ ಈಕ್ಷಿಸುವುದಿಲ್ಲ. ಅವರು ಪರಸ್ಪರ ಸಹಯೋಗದಿಂದಲೇ ತಮ್ಮ ಜೀವನ ಮಟ್ಟವನ್ನು ಎತ್ತರಿಸುವ ಪ್ರಯತ್ನ ಮಾಡುತ್ತಾರೆ. ನೆರೆಹೊರೆಯವನ ಹಾನಿಯು ತಮ್ಮ ಹಾನಿಯೆಂಬ ಭಾವನೆಯಿಂದಲೇ ಅವರ ಸಮಸ್ತ ಕಾರ್ಯವು ನಿರಂತರ ಸಾಗುತ್ತಿರುತ್ತವೆ. ಈ ಭಾವನೆಯಿರುವುದರಿಂದಲೇ ರಾಷ್ಟ್ರದ ಉನ್ನತಿಗೆ ಭಂಗ ಬರುವುದಿಲ್ಲ ನಾವು ಮಾಡುವ ಸಮಾಜ ಸೇವೆಯಿಂದ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಯಾಗಬೇಕು. ಜರ್ಮನಿಯಂತಹ ಕೆಲವು ರಾಷ್ಟ್ರಗಳಲ್ಲಿ ಇಪ್ಪತ್ತೊಂದು ವರ್ಷದ ಯುವಕ ಯುವತಿಯರು ಸಮಾಜ ಸೇವಾ ಗೃಹದಲ್ಲಿ ಒಂದು ವರ್ಷ ಸೇವಾವ್ರತವನ್ನು ಸ್ವೀಕರಿಸಬೇಕೆಂಬ ನಿಯಮವಿದಯಂತೆ. ಈ ಸಮಯದಲ್ಲಿ ಅವರು ಸಣ್ಣ ದೊಡ್ಡ ಶಾರೀರಿಕ ಶ್ರಮಕರ್ಮಗಳನ್ನು ಮಾಡುತ್ತಿರುತ್ತಾರೆ. ಮನೆಕಟ್ಟುವುದು, ಗ್ರಾಮವನ್ನು ಶುಚಿಯಾಗಿರಿಸುವುದು, ಮಾರ್ಗ ನಿರ್ಮಿಸುವುದು ಮೊದಲಾದುವು ಈ ವ್ರತಾಂತರ್ಗತವಾಗಿರುತ್ತಿರುತಿದ್ದುವು. ಈ ಶಾಸನದಿಂದಲೇ ಸಮಾಜ ಸೇವೀ ಯುವಕ—ಯುವತಿಯರ ಪರಿಶ್ರಮದ ಫಲವಾಗಿ ಅಲ್ಲಿ ಸುಂದರ ಮಾರ್ಗಸಮೂಹವು ಕಂಗೊಳಿಸುತಿತ್ತು.

ನಮ್ಮ ದೇಶದ ಪರಿಸ್ಥಿತಿಯೇ ವಿಚಿತ್ರವಾಗಿದೆ ಇವರ ಪ್ರಾಚೀನ ಸುವರ್ಣಯುಗವು ಕೇವಲ ಕಾಲ್ಪನಿಕವಾಗಿದೆ ಸುಮಾರು ಮುನ್ನೂರು ವರ್ಷಗಳ ಕಾಲ ಪಾರತಂತ್ರ್ಯದಲ್ಲಿ ಸಿಲುಕಿದ್ದುದರಿಂದ ಭಾರತದ ಜಾರಿತ್ರಿಕ ಹ್ರಾಸವು-ವಷ್ಟು ಪ್ರಾಯಃ ಭಾರತೀಯ ಇತಿಹಾಸದಲ್ಲಿ ಇನ್ನಾವಾಗಲೂ ಆಗಲಿಲ್ಲ ನಮ್ಮ ನಮ್ಮ ಸಖ ದುಃಖಗಳೇ ಈ ಶತಮಾನಗಳಲ್ಲಿ ನಮ್ಮ ಧ್ಯೇಯವಾಗಿತ್ತು. ಸಾಮೂಹಿಕ ಲಾಭ ನಷ್ಟಗಳು ನಮಗೆ ವಿಡಂಬನೆಗಳಂತೆ ಭಾಸವಾಗುತಿದ್ದುವು ಇಂತಹ ಪರಿಸ್ಥಿತಿಯಲ್ಲಿ ರಾಷ್ಟ್ರದ ಪತನವಾಗದುವುದೂ ಸ್ವಾಭಾವಿಕವೇ ಸರಿ ಪಾರತಂತ್ರ್ಯದಲ್ಲಿ ಸಿಲುಕಿಸುವುದರೊಡನೆ ಸಮಾಜ ಸೇವೆಯ ಪವಿತ್ರ ಭಾವನೆಯನ್ನು ನಾಶ ಮಾಡುವುದೂ ಆಳರಸ ಆಂಗ್ಲೇಯರ ಉದ್ದೇಶವಾಗಿತ್ತು ವ್ಯಕ್ತಿಯು ಸಮಾಜಸೇವೆಯ ಕರ್ತವ್ಯವನ್ನು ಮರೆಯದಿರುತಿದ್ದರೆ, ಆತನು ತನ್ನ ಸಂಸ್ಕೃತಿಯ, ನಾಗರಿಕತೆಯ ಮತ್ತು ಆತ್ಮಾಭಿಮಾನದ ರಕ್ಷಣೆಯನ್ನು ಮಾಡಿಕೊಳ್ಳುತಿದ್ದನು.

ಭಾರತದ ಸಾಂಸ್ಕೃತಿಕ ಸಂಪತ್ತು ವಿಸುಲವಾದುದು ಇಂದು ದೇಶವು ಸ್ವತಂತ್ರವಾಗಿದೆ. ಎಲ್ಲ ನಾಗರಿಕರ ಮೇಲೆಯೂ ದೇಶದ ಸರ್ವತೋಮುಖ ಉನ್ನತಿಯ ಭಾರ ಬಿದ್ದಿದೆ. ಗುಜರಿರಿಂದ ಗಿಳಿಂದರ ವರೆಗಿನ ಕ್ರಾಂತಿಗಳು ನಮ್ಮ ಕರ್ತವ್ಯ ಪಥದೆಡೆಗೆ ನಾವು ನಡೆಯುವಂತೆ ಮಾರ್ಗದರ್ಶನ ಮಾಡುತ್ತಿರುವುವು. ಅಗಣಿತ ಪುರುಷ—ಸ್ತ್ರೀಯರ ಬಲಿದಾನದಿಂದ ಸ್ವಾತಂತ್ರ್ಯ ಪುಷ್ಪವು ವಿಕಸಿತವಾಗಿದೆ. ಇದರ ರಕ್ಷಣೆ ಹಾಗೂ ಸಂವರ್ಧನೆಯು ನಮ್ಮ ಕರ್ತವ್ಯವಾಗಿದೆ. ನಮ್ಮ ಸಮಾಜ ಸೇವಾಲುಪ್ತ ಭಾವನೆಯನ್ನು ಪುನಃ ಜಾಗ್ರತಗೊಳಿಸುವುದು ಇಚೀಗ ದೇಶದ ಉನ್ನತಿಗಾಗಿ ಅನಿವಾರ್ಯವಾಗಿದೆ.

ದೇಶದ ಉತ್ಥಾನ ಮತ್ತು ಸರ್ವಾಂಗೀಣ ವಿಕಾಸಕ್ಕಾಗಿ ಸಮಾಜ ಸೇವೆಯತ್ತ ಗಮನ ಹರಿಸುವುದು ಅಗತ್ಯವಿದೆ ದೇಶದ ಭಾವೀ ನಾಗರಿಕರ ಸುರಕ್ಷಣೆಯಿಂದ ಇದನ್ನು ಸುಲಭವಾಗಿ ಕಾರ್ಯರೂಪಕ್ಕೆ ತರಬಹುದು. ಸಮಾಜ ಸೇವೆಯ ಕಾರ್ಯವು ಅಧ್ಯಾಪಕ—ವಿದ್ಯಾರ್ಥಿಗಳ ಮೇಲೆ ಸಂಪೂರ್ಣ ಹೊಂದಿಕೊಂಡಿದೆ. ಪ್ರಾಥಮಿಕ ವರ್ಗದಿಂದ ವಿಶ್ವವಿದ್ಯಾಲಯ ವರ್ಗದ ವರೆಗೂ ಸೇವಾಭಾವನೆಯು ಉದಯವಾಗಿರುವುದು ಅವಶ್ಯಕವೆನಿಸಿದೆ ಸಮಾಜ ಸೇವೆಯಲ್ಲಿಯೂ ನೂರಾರು ವಿಧಾನಗಳಿವೆ ಪ್ರತ್ಯೇಕ ವ್ಯಕ್ತಿಯೂ ಅವುಗಳನ್ನು ಕಾರ್ಯಾನ್ವಿತಗೊಳಿಸುವಲ್ಲಿ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಬಲ್ಲನು. ಸ್ವತಂತ್ರರಾದ ನಾವು ನಮ್ಮ ಹೊಣೆಯನ್ನು ನಿರ್ವಹಿಸುವುದರಲ್ಲಿ ವಿಮುಖರಾಗಬಾರದು ತೀರ ಎಳೆಯ ಕಾರ್ಯವೆನ್ನೂ ಸಮ್ಮಾನ ಕಾರ್ಯವೆಂದು ಬಗೆಯುವುದು ಸಮಾಜಸೇವೆಯ ಲಕ್ಷಣವಾಗಿದೆ. ನಾವು ವಾಸವಾಗಿರುವ ನಗರ—ಗ್ರಾಮಗಳ ಉನ್ನತಿಗಾಗಿ ದುಡಿಯುವುದು ನಮ್ಮ ಕರ್ತವ್ಯ ಸಮಾಜಸೇವೆಯ ವ್ರತವನ್ನು ನಾವು ಸ್ವೀಕರಿಸಿದರೆ, ನಮ್ಮ ನಾಯಕರು ಹೊತ್ತ ಭಾರವು ಹಗುರಾಗುವುದು; ರಾಷ್ಟ್ರನಿರ್ಮಾಣ ಕಾರ್ಯವೂ ಬಹಳ ಸರಳವಾಗುವುದು.

ಸ್ಕೌಟಿಂಗ್, ಜೂನಿಯರ್ ರೆಡ್ ಕ್ರಾಸ್, ಬಾಲವೀರರದಳ ಮೊದಲಾದ ಸಂಸ್ಥೆಗಳ ಅಡಿಗಲ್ಲು ಸಮಾಜಸೇವೆಯಲ್ಲೇ ಆಧಾರಿತವಾಗಿದೆ. ಸಾಮಾನ್ಯವಾಗಿ ಎಲ್ಲೆಡೆಗಳಲ್ಲೂ ಈ ಸಂಸ್ಥೆಗಳ ಶಾಖೆಗಳಿದ್ದರೂ ಅವು ಏನೇನೂ ಸಾಲದು. ಕೇವಲ ಅವುಗಳ ಅಸ್ಥಿಪಂಜರ ಮಾತ್ರ ತೋರಿಬರುತ್ತಿವೆ. ಈ ಸಂಸ್ಥೆಗಳನ್ನು ನವರಾಷ್ಟ್ರೀಯ ಭಾವನೆಗಳಿಂದ ಪುನರ್ಜೀವಿತಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ವಿಪತ್ತು ಮತ್ತು ಅವನತಿಯ ಕೂಪದಲ್ಲಿ ತೊಳಲಾಡುವ ನಮ್ಮ ನೆರೆಹೊರೆಯವರ ಸೇವೆಮಾಡುವುದೇ ಸಮಾಜದ ಸೇವೆ ನಾವು ವಾಸಿಸುವ ಗ್ರಾಮದ ಸರ್ವತೋಮುಖ ಉನ್ನತಿಗಾಗಿದುಡಿಯುವುದೇ ಸಮಾಜ ಸೇವೆ; ಹಾಗೆಯೇ ರಾಷ್ಟ್ರಸೇವೆ ಗ್ರಾಮದ ದುರ್ಗಂಧಪೂರಿತ ಓಣಿಗಳ ಶುದ್ಧತೆ, ಹಳ್ಳ ಪಳ್ಳಗಳನ್ನು ಮುಚ್ಚುವುದು, ಪಂಗಡ ಮನೋವೃತ್ತಿಯ ನಾಶ, ಅನಕ್ಷರಸ್ಥರ ಶಿಕ್ಷಣ ಇವೂ ಸಮಾಜಸೇವೆಯ ಅಂಗಗಳು. ಸ್ವಯಂ ಕಾರ್ಯಶೀಲತೆಯೇ ಸಮಾಜಸೇವೆಯ ಒರೆಗಲ್ಲು. ಉದ್ದುದ್ದ ಭಾಷಣ ಬಿಗಿಯುವುದು ಇಲ್ಲವೇ ಪರೋಪದೇಶ ಮಾಡುವುದರಿಂದ ಸಮಾಜಸೇವೆಯಾಗಲಾರದು. ಮಾನವ ಹೃದಯದ ಉಚ್ಚತಮ ಭಾವನೆಗಳಿಗೆ ಸಾಕಾರ ರೂಪವೀಯುವುದೇ ಸಮಾಜಸೇವೆಯೆನಿಸುವುದು. ಸಮಾಜಸೇವಕನು ತನ್ನ ಸಮಾಜದ ದುಃಖ ದೂರೀಕರಿಸಲು ಮತ್ತು ರಾಷ್ಟ್ರೋನ್ನತಿಯಾಗಲು ನಿಸ್ವಾರ್ಥದೃಷ್ಟಿಯಿಂದ ದುಡಿಯುತ್ತಿರುತ್ತಾನೆ.

ನವಯುವಕರಲ್ಲಿ ಸಮಾಜ ಸೇವಾ ಭಾವನೆಯನ್ನು ಜಾಗ್ರತಗೊಳಿಸುವುದು ಅವಶ್ಯಕವಿದೆ ಇವರೇ ದೇಶದ ಭಾವೀ ಭಾಗ್ಯ ನಿರ್ಮಾತೃಗಳು. ವಿಶ್ವವಿದ್ಯಾಲಯ ಶಿಕ್ಷಣವು ನಮ್ಮ ಯುವಕ ಯುವತಿಯರನ್ನು ಪತನದತ್ತ ಒಯ್ದಿದೆ ತುಂಬ ಇತರ ಜನರಿಗಿಂತ ಬೇರೆಯವರೆಂದೂ ಉಚ್ಚತಮರೆಂದೂ ಉಳಿದವರು ತಮಗಿಂತ ಕೀಳೆಂದೂ ಅವರು ಭಾವಿಸುತಿದ್ದಾರೆ. ಶಾರೀರಿಕ ಶ್ರಮವನ್ನು ಹೇಯವೆಂದು ತಿಳಿಯುತ್ತಾರೆ. ನಮ್ಮ ಅನ್ನದಾತರಾಗಿರುವ ಗ್ರಾಮಿಣರನ್ನು ಪರಾಗಳಂತೆ ಕಾಣುತ್ತಾರೆ. ಆದುದರಿಂದ ಈ ಅನರ್ಗಲ, ಅನಪೇಕ್ಷಣೀಯ ಹಾನಿಪ್ರದ ಭಾವನೆಗಳನ್ನು ದೂರೀಕರಿಸಲು ವಿಶ್ವವಿದ್ಯಾಲಯಾದಿ ಶಿಕ್ಷಣ ಶಾಲೆಗಳಲ್ಲಿ ಸಮಾಜ ಸೇವಾ ವಿಭಾಗವು ಈಗೀಗ ತೆರೆಯಲ್ಪಡುತ್ತಿದೆ. ಇದರಿಂದ ನವಯುವಕರಿಗೆ ಸ್ವತಂತ್ರ ದೇಶದ ನಾಗರಿಕರ ಕರ್ತವ್ಯ ಮತ್ತು ಉತ್ತರದಾಯಿತ್ವವನ್ನು ತಿಳಿಯಲು ಸಹಾಯಕವಾಗಿದೆ ಉದಾಸೀನತೆ, ಅವಹೇಳನೆಗಳನ್ನು ದೂರಮಾಡಿ ಯುವಕರ ಶಕ್ತಿ ಕ್ರಿಯೆಗಳಿಗೆಗೊಂದು ಮಿತಿ ಹಾಕಿದಂತಾಗುವುದು. ಇದರಿಂದಾಗಿ, ಅವರು ಗ್ರಾಮ ಸಮಸ್ಯೆಗಳನ್ನು ಸ್ವಯಂ ಅಧ್ಯಯನ ಮಾಡಬೇಕು ಮತ್ತು ಶಾರೀರಿಕ ಶ್ರಮ

(ಅನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಉಡುಪಿ. (ದ ಭಾ)

ಹತ್ತರಲ್ಲೊಂದು ಪಾಲು

"ಕೈಗೆ ಬಂದುದೆಲ್ಲವನ್ನೂ ವೆಚ್ಚ ಮಾಡದೆ ಅದರಲ್ಲೊಂದು ಅಂಶವನ್ನು, ಹತ್ತನೇ ಒಂದಂಶವನ್ನಾದರೂ ಉಳಿಸಬೇಕು, ಹಾಗೆ ಉಳಿಸಿ ಅಪದ್ಧನವಾಗಿ ಶೇಖರಿಸಿ ಇಡಬೇಕು"— ಎಂಬ ಮಾತು ನಮ್ಮ ಸಂಸ್ಕೃತಿಗೆ ಹೆಸರೇನೂ ಅಲ್ಲ. ಮತ್ತದು ಅಸಾಧ್ಯವೂ ಅಲ್ಲ. ದಿಕವಹಿ ವಾರಕ್ಕೊಮ್ಮೆ ತಿಂಗಳಿಗೊಮ್ಮೆ ಅಥವಾ ಕೈಗೆ ಬಂದಾಗಲೊಮ್ಮೆ ಯಾವ ಸಂದರ್ಭದಲ್ಲೂ ನಿಮ್ಮ ಅಪದ್ಧನ ಶೇಖರಣೆಗೆ ಸಿಂಡಿಕೇಟ್ ಬೇಂಕ್ ಸದಾ ಸಿದ್ಧವಿದೆ.

ಉಳಿಸಿರಿ

THE CANARA INDUSTRIAL & BANKING SYNDICATE LTD, UDIPI.

NAVAYUGA

Popular Kannada Weekly

Founder:—

A. B. SHETTY,

Former Minister for Public Health
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೨೧-೮-೧೯೫೮	ಸಂಚಿಕೆ ೪೯

ಉಭಯ ಪ್ರಧಾನಿ ಸಮ್ಮೇಳನ

ಸಹೋದರ ರಾಷ್ಟ್ರಗಳಾಗಿ ನೆರೆಯಲ್ಲಿಯೇ ಬದುಕಬೇಕಾಗಿ ಬಂದ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಹಿಂದಿನಿಂದಲೂ ವೈಮನಸ್ಯವು ಕೇನಾಪಿಕಾರಣೇನ ಬಲಗೊಳ್ಳುತ್ತಿರುವುದು ಕಂಡುಬಂದಿದ್ದರೂ, ಭಾರತಕ್ಕೆ ಪಾಕಿಸ್ತಾನವು ಒಂದಲ್ಲ ಹಲವು ವಿಧಾನಗಳಿಂದ ದ್ರೋಹವೆಸಗಲು ಹವಣಿಸಿ, ಭಾರತವನ್ನು ಉದ್ರೇಕಿಸುವ ಪ್ರಯತ್ನದತ್ತ ಸಾಗುತ್ತಿರುವುದೂ ಇಂದು ಅತೀವ ಸಾಮಾನ್ಯ ವಿಷಯವಾಗಿ ಪರಿಣಮಿಸಿದೆ. ಪಾಕಿಸ್ತಾನದ ಈ ತರದ ಘಾತಕತನದಿಂದ ಅದರ ಆಂತರ್ಯವೇನೆಂಬುದನ್ನೂ ಊಹಿಸಿಕೊಳ್ಳಬಹುದು. ಯಾವುದೇ ವಿವಾದವನ್ನು ಸಂಸ್ಕೃತರಂತೆ ಶಾಂತಿ ಹಾಗೂ ಸಮಾಧಾನಪೂರ್ವಕವಾಗಿ ವಿಚಾರವಿನಿಮಯದಿಂದ ತೀರ್ಮಾನಿಸಬೇಕೆಂಬುದಕ್ಕೆ ಸೈಗುಟ್ಟುವ ಪಾಕಿಸ್ತಾನವು ತನ್ನ ಕುರುಡು ರಾಜಕಾರಣದಲ್ಲಿ ಕಿಂಕರ್ತವ್ಯತಾ ಮೂಢತನಂತೆ ತನ್ನ ಮೊಂಡು ಮನೋವೃತ್ತಿಯನ್ನು ಪರಿವರ್ತಿಸಿಕೊಳ್ಳದಿರುವುದರಿಂದಲೇ ಭಾರತ—ಪಾಕಿಸ್ತಾನಗಳು ವಿಭಜಿಸಲ್ಪಟ್ಟು ಹನ್ನೊಂದು ವರ್ಷಗಳು ಕಳೆದರೂ ಇಂದಿಗೂ ಹಲವಾರು ಸಮಸ್ಯೆಗಳು ಅನಿರ್ಧಾರಿತ ಸ್ಥಿತಿಯಲ್ಲೇ ಉಳಿದಿವೆ. ಇನ್ನು ಮುಂದಕ್ಕೂ ಬಹುಸಮಯ ಇದೇ ರೀತಿಯಾಗಿ ಮುಂದುವರಿಯುತ್ತಿರುವುದು ಇಕ್ಕಡೆಗಳಿಗೆ ಸುತೋಷಿಯೂ ಅಲ್ಲ; ಅಪೇಕ್ಷಣೀಯವೂ ಅಲ್ಲ. ಹೀಗೆ ಅರ್ಧ ಲ್ಲಿಯೇ ಕೈಬಿಡಲ್ಪಟ್ಟ ವಿವಾದಗಳಲ್ಲಿ ಗಡಿ ನಿರ್ಣಯದ ಪ್ರಶ್ನೆಯೂ ಒಂದಾಗಿರುವುದು ಮಾತ್ರವಲ್ಲದೆ, ಅತ್ಯಂತ ಮಹತ್ವವೂ ಆಗಿದೆ ಎಂದು ಹೇಳಲೇಬೇಕು. ಈ ಸಂಬಂಧದಲ್ಲಿ ಇದುವರೆಗೆ ಯಾವುದೇ ಸುವ್ಯವಸ್ಥಿತ ಮತ್ತು ನಿರ್ಧಾರಿತ ಒಪ್ಪಂದಗಳು ನಡೆದಿರದೆ ಹೋದರೂ, ನಡೆದಿದ್ದ ಕೆಲವು ಟ್ಟದ ಒಪ್ಪಂದಗಳು ಮುರಿಯಲ್ಪಟ್ಟಿದ್ದರೂ ಮುಂದೆ ಎದ್ದು ಬಂದ ಉತ್ಸಾಹವು ಮಾತ್ರ ಅದಷ್ಟು ಶೀಘ್ರದಲ್ಲಿ ಕಾರ್ಯಕಾರಿಯಾಗದೆ, ಮುಂದಕ್ಕೆ ಇದಕ್ಕಾಗಿ ಗುಲ್ಲೇಳದಂತೆಸಗುವುದು ಎರಡೂ ರಾಷ್ಟ್ರಗಳ ಧುರೀಣರ ಆದ್ಯ ಕರ್ತವ್ಯ.

ಭಾರತ ಮತ್ತು ಪಾಕಿಸ್ತಾನಗಳ ಗಡಿಗಳಲ್ಲಿ ಗುಂಡು ಹಾರಿಸುವುದು, ಅಕ್ರಮಣ ನಡೆಸುವುದು ಸಾಮಾನ್ಯವಾಗಿರುವಂತೆಯೇ ಇದರ ಪರಿಣಾಮವಾಗಿ ಗಡಿ ಪ್ರದೇಶದಲ್ಲಿ ಸದಾ ಅಶಾಂತ ವಾತಾವರಣವಿರುವುದೂ ಕೆಲವೊಮ್ಮೆ ಪ್ರಾಣ ಹಾನಿ ಸಂಭವಿಸುವುದೂ ತೃಣ ಸಮಾನ ವಿಷಯಗಳಾಗಿ ಪರಿಣಮಿಸಿವೆ. ಎರಡು ಪ್ರತ್ಯೇಕ ಸಾರ್ವಭೌಮಾಧಿಕಾರವುಳ್ಳ ರಾಜ್ಯಗಳ ಸೀಮೆಗಳಲ್ಲಿ ಇಂತಹ ಅಪಾಂಥಾಗುವುದು ರಾಷ್ಟ್ರದ ಭದ್ರತೆಗಳ ದೃಷ್ಟಿಯಿಂದಲೂ ಜನತೆಯ ಹಿತಾಭಿಲಾಷೆಯ ಆಕಾಂಕ್ಷೆಯಿಂದಲೂ ಅಪೇಕ್ಷಣೀಯವೂ ಅಲ್ಲ; ಸಮಾಧಾನಕರವೂ ಅಲ್ಲ. ಇಂತಹ ಅಕ್ರಮ ಚಟುವಟಿಕೆಗಳಿಂದ ಪ್ರಧಾನಿ ನೆಹರೂರವರ ಮಾತಿನಲ್ಲಿ "ಗಡಿ ತಂಟೆಗಳು ಬಗೆಹರಿಯುವುದಿಲ್ಲ; ಅದರೆ ದ್ವೇಷವು ಬಲಿತು ಆ ಸೀಮೆಗಳಲ್ಲಿ ವಾಸಿಸುವ ಜನರ ಜೀವನವು ಅಸಹ್ಯವಾಗುತ್ತದೆ. ಗಡಿಕಳ್ಳಿಗಳ ಜನರು ಪ್ರಾಣಕ್ಕೆರವಾಗಬೇಕಾಗುತ್ತದೆ; ಆ ಪ್ರದೇಶದ ಆರ್ಥಿಕ ಜೀವನವು ಮುಗ್ಗರಿಸಿ, ಹದಗೆಟ್ಟು ಹೋಗುತ್ತದೆ" ಎಂದು ಹೇಳಬಹುದು. ಇಂತಹ ಅಕ್ರಮಣಗಳಾದರೂ ಯಾವ ಕಾರಣದಿಂದ ನಡೆಯುತ್ತಿರುವುವು? ಒಂದು ರಾಷ್ಟ್ರವನ್ನು ಉದ್ರೇಕಿಸುವ ಭಾವನೆಯಿಂದಲೆ? ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೂ ಆಗ ಏಳುವುದು. ಭಾರತ ಮತ್ತು ಪಾಕಿಸ್ತಾನಗಳ ಪೂರ್ವದ ಗಡಿಪ್ರಶ್ನೆಯ ಬಗ್ಗೆ ಹಲವು ಕಾಲದಿಂದಲೂ ಪತ್ರವ್ಯವಹಾರವು ಉಭಯ ಪ್ರಧಾನಿಗಳ ನಡುವೆ ನಡೆಯುತಿದ್ದರೂ, ಒಮ್ಮತವು ಕೂಡಿ ಬರುವುದು ಮಾತ್ರ ಸಾಧ್ಯವಾಗಿಲ್ಲ. ತಾನು ಸ್ಪಷ್ಟವಾಗಿ ನಂಬಿಕೊಂಡಿರುವ ವಿಷಯವನ್ನು ಪಾಕ್ ಪ್ರಧಾನಿಗಳು ಒಪ್ಪುವುದಿಲ್ಲವೆಂದು ನೆಹರೂ ಉದ್ಗರಿಸಿದರು. ಇದರಿಂದ ಪ್ರಶ್ನೆ ಬಗೆಹರಿಯದೆ ಉಳಿಯಿತು. ಈ ಬಗ್ಗೆ ಚರ್ಚಿಸಲು ಭಾರತ ಸರಕಾರವು ಕಾರ್ಯದರ್ಶಿ ಮಟ್ಟದ ಸಭೆ ಸೇರಲು ನಿರ್ಧರಿಸಿತ್ತು. ಅದು ಇದೇ ತಿಂಗಳ ೨೩ಕ್ಕೆ ಕರಾಚಿಯಲ್ಲಿ ಸೇರಲಿತ್ತು. ಆದರೆ, ಈ ನಡುವೆ ಉಭಯ ಪ್ರಧಾನಿಗಳೂ ಈ ಕುರಿತು ಮಾತುಕತೆ ನಡೆಸುವ ಸೂಚನೆಯು ಮುಂದಿದ್ದು ಪ್ರಾಯಃ ಇದು ಕಾರ್ಯಕಾರಿಯಾಗಲೂ ಬಹುದು, ಎಂದರೆ, ಪಾಕ್ ಪ್ರಧಾನಿ ನೂನರೂ ಈ ಮಾತುಕತೆಗೆ ಸಿದ್ಧರಿರುವರಾಗಿ ಗಡಿ ಪ್ರಶ್ನೆಯನ್ನು ಅನ್ಯೋನ್ಯವಾಗಿ ಬಿಡಿಸಿಕೊಳ್ಳಲು ಪಾಕಿಸ್ತಾನವು ಆತುರದಿಂದಿದೆಯೆಂದು, ನೆಹರುಗಳು ಆಮಂತ್ರಿಸಿದಲ್ಲಿಗೆ ತಾನು ತೆರಳಲು ಸಿದ್ಧನಿರುವೆನೆಂದು ಶ್ರೀ ನೂನರು ನುಡಿದಷ್ಟೇಂದೂ ವರದಿಗಳು ಬಂದಿವೆ. ಆದರೆ, ನೂನರ ಉತ್ಸಾಹವೆಷ್ಟುದಿನವೆಂದು ಖಂಡಿತವಾಗಿ ಹೇಳಬರುವುದಿಲ್ಲ. ಆದುದರಿಂದ ಈ ಉತ್ಸಾಹ ಹಾಗೂ ಆತುರ ಮತ್ತು ಬಯಕೆಗಳ ಕಾವು ತಣ್ಣಗಾಗುವುದಕ್ಕೆ ಮೊದಲೇ ಈ ಸಭೆ ಸೇರಿದರೆ, ಅದುಂದ ಸಂಚಿತ್ ಪ್ರಯೋಜನ ದೊರೆತಕೂಡ ದೊರೆಯಬಹುದು. ಇಲ್ಲವಾದರೆ, ಇನ್ನೊಂದು ಬಾರಿ ಉತ್ಸಾಹ ಮೂಡುವವರೆಗೆ ಅದಷ್ಟು ಹಾನಿ ಸಂಭವಿಸುವುದೋ ಯಾರು ಬಲ್ಲರು?

ಆದರೆ, ಪಾಕಿಸ್ತಾನದ ನಡೆವಳಿಕೆಯನ್ನು ಪರ್ಯಾಲೋಚಿಸುವಾಗ, ಅದರ ಮೇಲೆ ವಿಶ್ವಾಸವಿಡುವುದೂ ಹಾವಿನೊಡನೆ ಸರಸವಾಡುವುದೂ ಸಮಾನವೆಂದು ಕೊಳ್ಳಬೇಕಾಗುತ್ತದೆ. ತಮ್ಮ ನಡುವಿನ ವಿವಾದಗಳನ್ನು ತೀರ್ಮಾನಿಸಲು ಭಾರತವು ಪಾಕಿಸ್ತಾನಕ್ಕೆ ಅನೇಕ ಬಾರಿ ಸೂಚನೆ ಕಳಿಸಿದ್ದರೂ, ಸಮರ್ಪಕವಾದ ಉತ್ತರವು ಬಾರದೆ ವಿಲಂಬವಾಯಿತು. ಹಿಂದೊಮ್ಮೆ ಪಾಕಿಸ್ತಾನದೊಡನಾದ ಒಪ್ಪಂದವನ್ನು ಉಲ್ಲಂಘಿಸಿ ಡಾಕಿ ನಗರದ ಮೇಲೆ ಈಗ ಗುಂಡು ಹಾರಿಸಲಾಯಿತು. ಅಲ್ಲಲ್ಲಿನ ರಾಜ್ಯ ಸರಕಾರ ಹಾಗೂ ಪೂರ್ವ ಪಾಕಿಸ್ತಾನಗಳ ನಡುವೆ ಅನೇಕ ಒಪ್ಪಂದಗಳೂ ಅಕ್ರಮಣ ವಿರುದ್ಧವಾಗಿ ನಡೆದಿದ್ದರೂ ಅವು ಕಾರ್ಯರೂಪಕ್ಕೆಳಿಯಲಿಲ್ಲ. ಇವನ್ನು ನೋಡುವಾಗ, ಈ ಒಪ್ಪಂದ, ಮಾತುಕತೆಗಳ ಬೆಲೆಯೇನು ಎಂದೇ ಕೇಳಬೇಕಾಗುತ್ತದೆ. ಉಚ್ಚ ಮಟ್ಟದ ಸಭೆಯಾಗಲೀ ಅಲ್ಲಿ ನಡೆವ ಸಮಾಲೋಚನೆಯಾಗಲೀ—ನಿರ್ಧಾರವಾಗಲೀ ಸಂಪೂರ್ಣ ವ್ಯವಹಾರಕ್ಕೆ ಬಾರದೆ ಕೇವಲ ಔಪಚಾರಿಕವಾಗಿಯೇ ಮುಕ್ತಾಯ ಹೊಂದುವುದಿಲ್ಲವೆಂಬ ವಿಶ್ವಾಸವು ಪಾಕಿಸ್ತಾನದ ತುಡುಗು ಆಚರಣೆಯಿಂದ ದೃಢವಾಗುವುದಿಲ್ಲ, ಶ್ರೀ ನೂನರು ಇದೀಗ ಹೊರಗೆಡಹಿದ ಸಮ್ಮತಿಯು ಪ್ರಾಮಾಣಿಕವಿರುವುದಾದರೆ ಮಾತ್ರ ಇಂತಹ ಪ್ರಧಾನಿ ಸಮ್ಮೇಳನದಿಂದ ಪ್ರಯೋಜನವಾಗಬಹುದು. "ಒಳಗೊಂದು ಹೊರಗೊಂದು" ಅಭಿಪ್ರಾಯದಿಂದ ವ್ಯಕ್ತಪಡಿಸುವುದಾದರೆ, ವ್ಯರ್ಥ ಹಾಗೂ ಇದು ವರೆಗಿನ ಸಾಮಾನ್ಯ ಒಡಂಬಡಿಕೆಗಳಂತೆಯೇ ನಿರುಪಯೋಗಿ. ಅದುದರಿಂದ, ಮೊತ್ತಮೊದಲಿಗೆ ಪ್ರಾಮಾಣಿಕವಾಗಿ ಸಮಸ್ಯಾ ಪರಿಹಾರವಾಗುವ ಅಭಿಲಾಷೆಯನ್ನು ವ್ಯಕ್ತಪಡಿಸಿ ಮುಂದೆ ಅದರಂತೆ ನಡೆಯಲು ಬದ್ಧಕಂಕಣರಾಗುವುದಾದರೆ ಮಾತ್ರ ಈ ಪ್ರಧಾನಿ ಸಮ್ಮೇಳನದಿಂದ ಪ್ರಯೋಜನವಾದೀತು, ಸಮ್ಮೇಳನಕ್ಕೆ ಗೌರವವೂ ಪ್ರಾಪ್ತವಾದೀತು. ಅಂತಹ ಸದ್ಬುದ್ಧಿ ಇನ್ನಾದರೂ ಬರುವುದೆಂದು ವಿಶ್ವಾಸವಿಡುವುದು ಸಾಧ್ಯವೆ? ಮೊದಲು ಮನೆಗೆ ಬೆಂಕಿ ಇಟ್ಟು ಮತ್ತೆ ನೀರಿಗಾಗಿ ಹರಿದಾಡುವುದೇಕೆ?

ಸಂಕ್ಷಿಪ್ತ ಸುದ್ದಿಗಳು

ರೇಲ್ವೆ ದರದಲ್ಲಿ ಏರಿಕೆ

೧೯೫೫ರಲ್ಲಿ ಡಾ. ಎ. ರಾಮಸ್ವಾಮಿ ಮುದಲಿಯಾರರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದ್ದ ರೇಲ್ವೆ ಸರಕು ಸಾರಿಗೆ ದರ ಸ್ವರೂಪ ವಿಚಾರಣಾ ಸಮಿತಿಯು ಒಪ್ಪಿಸಿದ ವರದಿಯನ್ನು ಅನುಲಕ್ಷಿಸಿ, ಕೇಂದ್ರ ಸರಕಾರವು ಮುಂದಿನ ಒಕ್ಟೋಬರ ಪ್ರಥಮ ದಿನದಿಂದ ರೇಲ್ವೆ ಗೂಡ್ಸ್ ಮತ್ತು ಪಾರ್ಸಲ್ ಸಾರಿಗೆಯ ದರಗಳಲ್ಲಿ ಅಲ್ಪ ಪ್ರಮಾಣದ ಹೆಚ್ಚಳವನ್ನು ಮಾಡಲು ನಿರ್ಧರಿಸಿರುವುದಾಗಿ ರೇಲ್ವೆ ಮಂತ್ರಿ ಶ್ರೀ ಜಗಜ್ಜೀವನ ರಾಮರು ಲೋಕಸಭೆಯಲ್ಲಿ ಬಹಿರಂಗಪಡಿಸಿದರು. ಮುದಲಿಯಾರ ಸಮಿತಿಯು ಈ ದರಗಳನ್ನು ೧೫% ಸೇಕಡಾದಷ್ಟು ಹೆಚ್ಚಿಸಲು ಸೂಚಿಸಿದ್ದರೂ ಸರಕಾರವು ಮಾತ್ರ ಸೇಕಡಾ ನಾಲ್ಕರಂತೆ ಏರಿಸಿದೆ. ಇದರಿಂದ ಸರಕಾರಕ್ಕೆ ೩೨.೩ ಕೋಟಿಯ ಬದಲು ೯.೬ ಕೋಟಿಗಳಷ್ಟು ವಾರ್ಷಿಕ ಆದಾಯ ಹೆಚ್ಚುವುದು. ಹೀಗಿದ್ದರೂ ಈ ದರಗಳನ್ನು ನಿರ್ಧರಿಸುವಾಗ, ಆಹಾರಧಾನ್ಯ, ಹಣ್ಣು ಹಂಪಲು, ಕಾಯಿಪಲ್ಯ, ಕಲ್ಲೆಣ್ಣೆ, ಉಪ್ಪು ಮುಂತಾದುವುಗಳ ಸಾರಿಗೆ ದರ ಏರದಂತೆಯೂ ಖಾದಿ, ಮಗ್ಗದ ಬಟ್ಟೆ, ಪುಸ್ತಕ, ಹಾಲು ಇತ್ಯಾದಿಗಳಿಗೆ ಈಗಿರುವ ವಿಶೇಷ ಸೌಕರ್ಯಗಳು ದೊರೆಯುವಂತೆಯೂ ನೋಡಿಕೊಳ್ಳಲಾಗುವುದು.

ನೆಹರೂ ದಕ್ಷಿಣಕ್ಕೆ?

ಕೇರಳದ ಬಗ್ಗೆ ಸಂಬಂಧಿಸಿದ ಪ್ರಶ್ನೆಗಳನ್ನು ಚರ್ಚಿಸಲು ಮುಖ್ಯಮಂತ್ರಿ ಶ್ರೀ ನಂಬೂದರಿ ಪಾದರು ಪ್ರಧಾನಿ ಹಾಗೂ ಗೃಹಮಂತ್ರಿಯವರೊಡನೆ ಅವಕಾಶವೀಯಲು ಪತ್ರ ಬರೆದಂತೆ ಪಂಡಿತ ನೆಹರೂ ಆಗಸ್ಟ್ ೨೧ಕ್ಕೆ ತನ್ನನ್ನು ಭೇಟಿಯಾಗಬಹುದೆಂದವರಿಗೆ ತಿಳಿಸಿದ್ದಾರೆ. ಶ್ರೀ ನಂಬೂದರಿಪಾದರು ಸ್ವೇಚ್ಛೆಯಿಂದಲೇ ಇದಕ್ಕಾಗಿ ದಿಲ್ಲಿಗೆ ಪ್ರಯಾಣ ಬೆಳೆಸುವರಲ್ಲದೆ, ಅಲ್ಲಿಂದ ಕರೆಯೇನೂ ಬಂದಿಲ್ಲವೆಂಬ ಬಗ್ಗೆ ನಂಬೂದರಿಪಾದರು ಭರವಸೆಯಿತ್ತಿದ್ದಾರೆ.

ಬೇಸಾಯದ ಅರ್ಥಶಾಸ್ತ್ರಜ್ಞರ ಅಂತಾರಾಷ್ಟ್ರೀಯ ಪರಿಷತ್ತು ತಾ. ೨೪ರಂದು ಮೈಸೂರಿನಲ್ಲಿ ನಡೆಯಲಿದೆ. ಇದನ್ನು ಉದ್ಘಾಟಿಸುವ ಸಲುವಾಗಿ ಪ್ರಧಾನಿ ನೆಹರೂರವರು ಅಂದು ಮೈಸೂರಿಗೆ ಆಗಮಿಸುವರು. ಹಾಗೆಯೇ ಇಲ್ಲಿನ ಕೆಲವು ಕಾರ್ಯಕ್ರಮಗಳನ್ನು ಪೂರೈಸಿ ಮರುದಿನ ನವದೆಹಲಿಗೆ ಮರಳುವರು.

ಅಧ್ಯಕ್ಷರ ವಿದೇಶ ಸಂಚಾರ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಮುಂದಿನ ಸೆಪ್ಟಂಬರ-ಒಕ್ಟೋಬರ ತಿಂಗಳುಗಳಲ್ಲಿ ಜಪಾನು ಮತ್ತು ಬ್ರಹ್ಮದೇಶಗಳನ್ನು ಸಂದರ್ಶಿಸುವರು. ಈ ಬಗ್ಗೆ ಅವರ ಕಾರ್ಯಕ್ರಮವು ಅಂತಿಮ ರೂಪವನ್ನು ಪಡೆದಿದೆ. ಈಗಿನಂತೆ, ಸೆಪ್ಟಂಬರ ೨೫ರಂದು ಜಪಾನಿಗೆ ವಿಮಾನದ ಮೂಲಕ ತೆರಳಿ, ಅಲ್ಲಿ ಏಳು ದಿನವಿದ್ದು, ಕೃಷಿಕ್ಷೇತ್ರ, ಕುಟೀರೋದ್ಯೋಗಾಭಿವೃದ್ಧಿ ಮತ್ತು ಅಲ್ಲಿನವರ ಸಾಂಸ್ಕೃತಿಕ ಜೀವನವನ್ನು ನಿರೀಕ್ಷಿಸುವರು. ಹಂ ಲಕ್ಷಕ್ಕೂ ಮಿಕ್ಕಿದ ಸಂಖ್ಯೆವರಿಯುಳ್ಳ ವಾರ್ತಾ ಪತ್ರಿಕೆಗಳ ಕಛೇರಿಗೆ ಭೇಟಿ ನೀಡುವುವು. ಕೃಷಿಯಲ್ಲಿ ಆಸಕ್ತರೂ ನಮ್ಮ ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಬಯಸುವವರೂ ಆದ ಅಧ್ಯಕ್ಷರು ಅಲ್ಲಿನ ಭತ್ತ ಬೆಳೆಸುವ ಕ್ರಮವನ್ನವಲೋಕಿಸುವರು. ಜಪಾನೀ ವಿಧದ ಭತ್ತದ ಬೇಸಾಯ

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 37 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 38 ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹಾಶೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಚಂದಾ ಹಣವನ್ನು ಯಾವ ತರದ ಖರ್ಚೂ ಇಲ್ಲದೆ 'ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗದ ಖಾತೆಗೆ ಕಟ್ಟಬಹುದು.

ಮೆನೇಜರ್.

ಉಡುಪಿ

ಸ್ವಾತಂತ್ರ್ಯ ದಿನಾಚರಣೆಯು— ತಾ. 15ರಂದು ಬೆಳಿಗ್ಗೆ ನಗರಸಭೆಯ ಉಪಾಧ್ಯಕ್ಷ ಶ್ರೀ ಪಿ. ಪಿ. ಆಚಾರ್ಯರಿಂದ ಗಾಂಧಿ ವೈದಾನದಲ್ಲಿ ಧ್ವಜಾರೋಹಣದೊಡನೆ ಪ್ರಾರಂಭವಾಯಿತು. ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲ್ ಮತ್ತು ಸೈಂಟ್ ಸಿಸಿಲೀಸ್ ಕಾನ್ವೆಂಟಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಎನ್. ಸಿ. ಸಿ. ಎ ಸಿ. ಸಿ. ಪರೇಡುಗಳಾದುವು. ಶ್ರೀ ಎಸ್. ಎಸ್. ಶ್ರೀನಿವಾಸನನವರು ಗೌರವ ವಂದನೆ ಸ್ವೀಕರಿಸಿದರು ಸಂಜೆ ಬೋರ್ಡ್ ಹೈಸ್ಕೂಲಿನ ಪ್ರಿಂಸಿಪಲ್ಸ್ ಹಾಲಿನಲ್ಲಿ ಶ್ರೀ ಕು. ಶಿ ಪರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಭಾಷಣಗಳಾದುವು ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನಿತ್ತರು ಸಂತರ ವಿಸೋದಾವಳಿಗಳಾದುವು.

ಸ್ಥಳೀಯ ವಿಕ್ಟೋರಿಯಾ ಜುಬಿಲೀ ಕ್ಲಬ್ಬಿನಲ್ಲಿ ಡಾ. ಎಸ್. ಆರ್ ಪೈಗಳ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ಸಭೆ ಜರಗಿ ಡಾ. ಟಿ ಎಸ್. ಎ. ಪೈ. ಡಾ. ನಿ. ಎಲ್. ಪಂಡಿತ್, ಶ್ರೀಗಳಾದ ಕೆ. ಆರ್. ಕೆ ಭಟ್, ಎ ಜೆ. ಅಳ್ಳಿ ಮೊದಲಾದವರ ಭಾಷಣಗಳಾದುವು, ಶ್ರೀ ಎಸ್ ಎಲ್. ನಾರಾಯಣ ಭಟ್ಟರು ಧನ್ಯವಾದಗಳನ್ನಿತ್ತರು.

ಸ್ಥಳೀಯ ಆಯುರ್ವೇದ ಕಾಲೇಜಿನಲ್ಲಿ ಶ್ರೀ ಯು.ಎಸ್. ನಾಯಕ್, ಎನ್. ಎಲ್. ಎ. ಅವರು ಬೆಳಿಗ್ಗೆ ಧ್ವಜಾರೋಹಣಮಾಡಿದರು ಸಂಜೆ ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಪ್ರಿನ್ಸಿಪಾಲ್ ಶ್ರೀ ವಿನಾಯಕ ರಾವ್ ಬಾಪಟ್ಟಾರವರು ಸ್ವಾಗತ ಮಾತುಗಳನ್ನಾಡಿದರು. ಡಾ ಎಸ್. ಎಸ್. ಎ ಶರ್ಮರಿಂದ ಆಸಾನಾದಿ ಪ್ರದರ್ಶನಗಳಾದ ಬಳಿಕ ಡಾ ಎಸ್ ಎಸ್ ನಾಗೇಶ ರಾವ್ ಮತ್ತು ಶ್ರೀ ಕೆ. ಗುರುರಾಜಾಚಾರ್ಯರ ಭಾಷಣಗಳಾದುವು

ಸ್ಥಳೀಯ ಆಫೀಸರ್ಸ್ ಕ್ಲಬ್ಬಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಭೋಜನ ಸಮಾರಂಭವಿತ್ತು ಶ್ರೀಗಳಾದ ಟಿ. ಎ ಪೈ ಮತ್ತು ಆಸ್ಸಾಂಟ್ಟ್ ಕಮಿಶನರ್ ಶ್ರೀ ಕೆ. ಸೂರ್ಯನಾರಾಯಣ ರಾಯರು ಶಾಲೋಚಿತ ಭಾಷಣಗಳನ್ನಿತ್ತರು. ಶ್ರೀ ಟಿ. ಆನಂದ ಶೆಟ್ಟರು ಧನ್ಯವಾದಗಳನ್ನಿತ್ತರು

ಸ್ಥಳೀಯ ಎಂ ಜಿ ಎಸ್. ಕಾಲೇಜಿನಲ್ಲಿ ಸ್ವಾತಂತ್ರ್ಯದಿನಾಚರಣೆ ನಿಮಿತ್ತ ಬೆಳಿಗ್ಗೆ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಧ್ವಜಾರೋಹಣ ಮಾಡಿದರು. ಬಳಿಕ ಯೂನಿಯನ್ ಅಧ್ಯಕ್ಷ ಶ್ರೀ ಶಂಕರ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪ್ರೊಫೆಸರ್ ಟಿ ವಿ. ಸ್ವಾಮಿ, ಕುಮಾರಿ ನಳಿನಿ ಮೊದಲಾದವರ ಕಾಲೋಚಿತ ಭಾಷಣಗಳಾದುವು ತಾಲೂಕು ಕಚೇರಿಯಲ್ಲಿ ತಹಶಿಲ್ದಾರ್ ಶ್ರೀ ಕೆ ಮಹಮ್ಮದ್ ಬ್ಯಾರಿಗಳು ಧ್ವಜಾರೋಹಣಮಾಡಿದರು.

ಅಂಚೆ ಮತ್ತು ತಂತಿ ಇಲಾಖೆ ನೌಕರರು ಹೆಸ್ ಪೋಸ್ಟಾಫೀಸು ಎದುರಲ್ಲಿ ಸ್ವಾತಂತ್ರ್ಯದಿನವನ್ನು ಶ್ರೀ ಕೆ ವರದರಾಯ ಪೈಗಳ ಅಧ್ಯಕ್ಷತೆಯಲ್ಲಿ ಆಚರಿಸಿದರು ಶ್ರೀಗಳಾದ ಎನ್. ಕೆ. ಮೆನೆಸಾ, ಎಚ್. ಎಲ್. ರಾವ್, ಎನ್. ಎಸ್ ಆಚಾರ್ ಮತ್ತು ಕೇಶವ ತ್ರಿಸಿಕಾರ್ ಮೊದಲಾದವರು ಸಂದ ಭೋಚಿತ ಮಾತುಗಳನ್ನಾಡಿದರು.

ಕಲಾವೃಂದದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ ಎನ್. ಸುಬ್ರಹ್ಮಣ್ಯ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯಾದವ ಸರಳಾಯ ಮತ್ತು ಮಹಾದೇವ ಹೊಳ್ಳರು ಕಾಲೋಚಿತಮಾತುಗಳನ್ನಾಡಿದರು

ಉಡುಪಿ ಯಕ್ಷಗಾನ ಕಲಾಮಂಡಲದವರು ಸ್ವಾತಂತ್ರ್ಯ ಸಿಹಿಯೋತ್ಸವದ ಅಂಗವಾಗಿ ಶ್ರೀ ಮಧ್ವಸಂತೇಶ್ವರ ದೇವಸ್ಥಾನದ ಎದುರ ಶ್ರೀ ಪೊಲ್ಯ ದೇವಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಸುಗ್ರೀವ ಕಾಳಗದ ಉತ್ತರ ಭಾಗದ ಯಕ್ಷಗಾನ ಕಾರ್ಯಕ್ರಮವನ್ನು ಜರಗಿಸಿದರು. ಶ್ರೀ ಗೋಪಾಲ ಶೆಟ್ಟರು ಯಕ್ಷಗಾನ ಕಲೆಯ ಉಗಮ ಭಾಷಣವಿತ್ತರು. ಸಭಾಧ್ಯಕ್ಷರೂ ಯಕ್ಷಗಾನದ ಹಿರಿಮೆಯನ್ನು ವಿವರಿಸಿ ಮಾತನಾಡಿದರು. ಮುಂಡಲದ ಕಾರ್ಯದರ್ಶಿಗಳು ಧನ್ಯವಾದಗಳನ್ನಿತ್ತರು

ಅಂಬಲಪಾಡಿ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನವು ಶ್ರೀ ಕೆ ವೆಂಕಟ್ರಾಯರಿಂದ ಧ್ವಜಾರೋಹಣ, ಶ್ರೀ ಕೆ. ಎಲ್. ಎನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಮಕ್ಕಳಿಗೆ ಸಿಹಿತಿಂಡಿ ಹಂಚೋಣ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

೨ನೇ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ— ವರ್ಷಂಪ್ರತಿ ನಡೆಯುವುದು ಭಜನೆ ಸಪ್ತಾಹವು ಇದೇ ತಾ. 10ರಂದು ಪ್ರಾರಂಭವಾಗಿ ತಾ. 26ರಂದು ಕೊನೆಗೊಳ್ಳುವುದು.

ಉದ್ಘಾಟನೆ— ಸ್ಥಳೀಯ ಮೊರ್ಡರ್ನ್ ಹಾ ಎ. ಶಾಲಾ ಪ್ರಗತಿಶೀಲ ಸಮಾಜದ ವಿದ್ಯಾರ್ಥಿ ಪಾರ್ಲಿಮೆಂಟಿನ ಉದ್ಘಾಟನೆಯನ್ನು ತಾ. 9ರಂದು ಶ್ರೀ ಎ. ಕೃಷ್ಣರಾಯರು ನೆರವೇರಿಸಿದರು ಸಮಾಜದ ಅಧ್ಯಕ್ಷರು ಸ್ವಾಗತ ಮಾತುಗಳನ್ನಾಡಿದರು, ಕೊನೆಯಲ್ಲಿ ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಧನ್ಯವಾದಗಳನ್ನಿತ್ತರು.

ನಗರ ಸಭೆಯು— ತಾ. 12 ರಂದು ಅಧ್ಯಕ್ಷ ಶ್ರೀ ಕೆ. ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ದೇವೇಂದ್ರ ಶೆಣೈಯವರು ಎತ್ತಿದ ಎರಡು ವಿಧಿ ಬಿಂದುಗಳನ್ನು ಅಧ್ಯಕ್ಷರು ತಳ್ಳಿಹಾಕಿದರು ಶ್ರೀ ಶೆಣೈಯವರು ಅಸಂತುಷ್ಟರಾಗಿ ಹೊರ ಪ್ರಯಾಣ ಬೆಳೆಸಿದರು. ನಗರಸಭೆಯ ಮೇಸ್ತ್ರಿಗಳಿಗೆ ಸ್ವಂತ ಸ್ಥಳಗಳು ಇದ್ದಲ್ಲಿ, ಆವರಿಗೆ ಕಳದ ಎಪ್ರಿಲ್ ತಿಂಗಳಿಂದ ರೊಕಾಯಿ ಹತ್ತರಂತೆ ಭತ್ತೆ ಕೊಡಬಹುದೆಂದಾಯಿತು ಸಭಾಂತ್ಯದಲ್ಲಿ ಸಭಾಪತಿಯಾದ ಶ್ರೀ ಪೈಗಳು ತನ್ನ ವಿದೇಶ ಪ್ರವಾಸದ ಪೂರ್ವಭಾವಿಯಾಗಿ ಸದಸ್ಯರಿಗೆ ವಿದಾಯವನ್ನಿತ್ತರು ಸದಸ್ಯರ ಕಡೆಯಿಂದ ಡಾ. ಪಿ. ಜಿ. ಆಚಾರ್ಯರು ಶ್ರೀ ಪೈಗಳಿಗೆ ಸುಖವನ್ನು ಕೋರಿದರು.

ಆಯುರ್ವೇದ ಕಾಲೇಜ್ ತಪಾಸಣೆ ಕಮಿಶನ್— ಮೈಸೂರು ಸರಕಾರದಿಂದ ನೇಮಿಸಲ್ಪಟ್ಟ ತಪಾಸಣೆ ಕಮಿಶನ್ ಡಾ ಎಸ್. ವೆಂಕಟ್ ನಾರಾಯಣನ್, ಅವರ ನಾಯಕತ್ವದಲ್ಲಿ ತಾ 11ರಂದು ಸಂಜೆ ಉಡುಪಿಗೆ ಆಗಮಿಸಿ ಮರ್ಪೆ ಬಂದರು, ಶ್ರೀಕೃಷ್ಣ ಸಂದರ್ಶನ, ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥಸ್ವಾಮಿ ದರ್ಶನಲಾಭವನ್ನು ಪಡೆದರು ತಾ 12ರಂದು ಬೆಳಿಗ್ಗೆ ಸಾಡಿಗಾರಿನಲ್ಲಿರುವ ಆಯುರ್ವೇದ ಕಾಲೇಜಿಗೆ ಭೇಟಿಯಿತ್ತು ಅಲ್ಲಿಯ ಸ್ಥಿತಿಗತಿಗಳನ್ನು ವಿಮರ್ಶಿಸಿ ಮಣಿಪಾಲಕ್ಕೆ ಹೋಗಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿದರು.

ಮಧ್ಯಾಹ್ನ ನಗರ ಸಭೆಯ ಪರವಾಗಿ ಕಮಿಶನ್ ಮೆಂಬರರಿಗೆ ಮುನಿಸಿಪಲ್ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಕೆ. ಪೈಗಳು ಮಾನಪತ್ರವಿತ್ತು ಗೌರವಿಸಿದರು. ಕಮಿಶನ್ ನಾಯಕರು ಉತ್ತರಿಸುತ್ತಾ, ಇಲ್ಲಿಯ ಆಯುರ್ವೇದ ಕಾಲೇಜಿಗೆ ಚಲೋಭವಿಷ್ಯವಿರುವುದಾಗಿ ನುಡಿದರು. ಕಮಿಶನ್ ಸದಸ್ಯ ವೈದ್ಯ ರಘುನಾಥ ಆಚಾರ್ಯರು ಮಾತನಾಡುತ್ತಾ, ನಗರಸಭೆಯವರು ನಗರದಲ್ಲಿ ಆಯುರ್ವೇದೀಯ ಆಸ್ಪತ್ರೆಗಳನ್ನು ತೆರೆಯಬೇಕಾಗಿ ವಿನಂತಿಸಿದರು, ಡಾ. ಪಿ. ಜಿ ಆಚಾರ್ಯರು ಧನ್ಯವಾದಗಳನ್ನಿತ್ತರು.

ಕುಡುಮಲ್ಲಿಗೆ—ಸ್ಥಳೀಯ ಸರ್ವೋದಯ ಸಹಕಾರಿ ಸಂಘದ ಅಧ್ಯಕ್ಷ ಡಾ. ಯು. ಚಿಂದ್ರಶೇಖರ ಇವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯದಿನೋತ್ಸವವು ಕುರುಡೇಸುಕ್ಕಿ ಶಾಲೆಯಲ್ಲಿ ಜರಗಿತು.

ಸರ್ವೋದಯ ಮತ್ತು ಸರ್ವೋದಯ ಪಾತ್ರೆ ಇದುವ ವಿಚಾರವಾಗಿ ಬೊದಾನ ಸೇವಕ ಶ್ರೀ. ಬಿ. ಬಾಬಾ. ಕೃಷ್ಣಪ್ಪನವರು ಮಾತನಾಡಿದರು. ಶ್ರೀ ಟಿ. ಅಚ್ಚಣ್ಣ ಶೆಟ್ಟರು ಭೂದಾನ ಗೀತೆಯನ್ನು ಹಾಡಿದರು. ಶ್ರೀ ಟಿ. ಎ ಗುರುವಪ್ಪನವರ ಭಾಷಣವಾದ ತರುವಾಯ ಅಧ್ಯಕ್ಷರ ಹಸ್ತದಿಂದ ಈ ಗ್ರಾಮದಲ್ಲಿ 5 ಸರ್ವೋದಯ ಪಾತ್ರೆಗಳನ್ನು ಉದ್ಘಾಟಿಸಲಾಯಿತು. ಕೊನೆಗೆ ಅಧ್ಯಕ್ಷರ ಭಾಷಣ, ಶ್ರೀ ಯೆಮ್. ಎಸ್. ನಾರಾಯಣಾಚಾರ್ಯರಿಂದ ಧನ್ಯವಾದ, ರಾಷ್ಟ್ರಗೀತೆ ಆದುಳಿಕ ಮಕ್ಕಳಿಗೆ ಸಿಹಿತಿಂಡಿ ಹಂಚೋಣ ಕಾರ್ಯಕ್ರಮಗಳೊಂದಿಗೆ ಸಭೆಯು ಕೊನೆಗೊಂಡಿತು.

ಅಖಿಲ ಭಾರತೀಯ ಸಂಸ್ಕೃತ ಭಾಷಾ ಪ್ರಚಾರ ಸಮಿತಿಯ (ಸ್ವಾಧ್ಯಾಯ-ಪಾಂಡಿತ್ಯ) ಸಂಸ್ಕೃತ ಪರೀಕ್ಷೆಗಳು ಅಕ್ಟೋಬರ ದಿನಾಂಕ ೪, ೫ ಮತ್ತು ೬ರಂದು ಜರಗಲಿರುವುವು ಇವುಗಳಲ್ಲಿ ಭಾಗವಹಿಸಲಿರುವವರು ತಮ್ಮ ಅರ್ಜಿನಾ ಪತ್ರಗಳನ್ನು ನಿರ್ದಿಷ್ಟ ಶುಲ್ಕದೊಡನೆ ಸಪ್ಟಂಬರ ೮ರ ಬಳಿಗೆ ಕಾರ್ಯದರ್ಶಿ, ಗೀತಾಭವನ, ಅಂಬಲಪಾಡಿ ಉಡುಪಿ ಇವರಿಗೆ ತಲುಪಿಸಬೇಕಾಗಿದೆ (ಉಡುಪಿ ಪಲಯದವರು ಮಾತ್ರ) ಈ ಬಾರಿ ಶ್ರದ್ಧೆ ಮಾಡಿದಿಂದ ವಿಕಾರದ ಹಾಗೂ ಸಾಹಿತ್ಯ ಪ್ರವೀಣ, ರತ್ನ ಮತ್ತು ಆಚಾರ್ಯ ಪರೀಕ್ಷೆಗಳೂ ಗೀತಾ ಪರಿಚಯ ಹಾಗೂ ಗೀತಾ ಪ್ರವೇಶಿಕಾ ಪರೀಕ್ಷೆಗಳೂ ನಡೆಯಲಿರುವುವು.

ಸ್ವಾತಂತ್ರ್ಯ ದಿನೋತ್ಸವ—ಸಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 15ರಂದು ಸ್ವಾತಂತ್ರ್ಯ ದಿನೋತ್ಸವವು ವಿಜೃಂಭಣೆಯಿಂದ ನೆರವೇರಿತು. ಶ್ರೀ ಕೆ. ಹನುಮಾಚಾರ್ಯರು ಧ್ವಜಾರೋಹಣವನ್ನು ಮಾಡಿದರು ನೆರವಣಿಗೆಯ ನಂತರ ಶ್ರೀಗಳಾದ ಎಸ್. ನಿರಲ ಶೆಟ್ಟಿಗಾರ ಹಾಗೂ ಟಿ ಮಹಮದ ಅಮಿರೋ ಶಾಲಾ ಮೆನೇಜರ್ ಶ್ರೀ ಮಾರ್ಸೆಲ್ ಕರ್ನೇಲರೂ ಸಲವಾರು ವಿದ್ಯಾರ್ಥಿಗಳೂ ಸ್ವಾತಂತ್ರ್ಯ ರಾಷ್ಟ್ರಜಗಳ ಕುರಿತಾಗಿ ಉಪನ್ಯಾಸವಿತ್ತರು ಮುಖ್ಯೋಪಾಧ್ಯಾಯರಾದ ಶ್ರೀ ಎಫ್ ಎಕ್ಸ್. ಕರ್ನೇಲಿಯೊರವರು ಕೃತಜ್ಞತೆಯನ್ನರ್ಪಿಸಿದರು. ಶಾಲಾ ಅಧ್ಯಾಪಕ ಸಂಘದವರಿತ್ತ ಸಿಹಿತಿಂಡಿ ಎತ್ತರೆಯೂವರೆ ಮೇಲೆ ಸಭೆಯು ಚದರಿತು. ಮರುದಿನ ಶ್ರೀ ಫರ್ಟಾಡೊರವರು ಕೊಡಮಾಡಿದ ಸಿಹಿಯನ್ನೂ ಆದರ ಪೂರ್ವಕವಾಗಿ ವಿತರಿಸಲಾಯಿತು.

ವಿದಾಯ ಸತ್ಕಾರ ಸಮಾರಂಭಗಳು—ಉಡುಪಿ ಮುನಿಸಿಪಲ್ ಚೆರ್‌ಮೇನ್ ಶ್ರೀ. ಕೆ. ಕೆ. ಪೈಗಳವರು ಪೆಟ್ಟಿನ ಬೇಂಕಿಂಗ್ ಅನುಭವದ ಬಗ್ಗೆ ವಿದೇಶ ಪ್ರವಾಸಕ್ಕೆ ಹೋಗಲಿರುವುದರಿಂದ ಅವರಿಗೆ ತಾ 17ರಂದು ಕಾಂಗ್ರೆಸ್ ಮುನಿಸಿಪಲ್ ಪಾರ್ಟಿ ಕಚೆಯಿಂದ ತಾ. 18ರಂದು ಬೆಳಿಗ್ಗೆ ಸ್ಥಳೀಯ ಶಾಲಾ ಸರಬರಾಯಿ ಸಂಘದ ಕಡೆಯಿಂದಲೂ, ರಾತ್ರಿ ಮುನಿಸಿಪಲ್ ಕೌನ್ಸಿಲಿನ ಕಡೆಯಿಂದಲೂ ಬೆಡಾ ಸತ್ಕಾರಗಳು ಜರಗಿತು ಡಾ ಎಸ್. ಆರ್ ಪೈ, ಡಾ. ಟಿ ಎಸ್. ಎ ಪೈ ಮತ್ತು ಸಿ. ವಿ ಆಚಾರ್ಯರು ಅನುಕ್ರಮವಾಗಿ ಸಭಾಧ್ಯಕ್ಷತೆ ವಹಿಸಿದ್ದರು

ಸಂಯುಕ್ತ ತರ್ಕ ಸಭಾ ಉದ್ಘಾಟನಾ ಸಮಾರಂಭ—ಕಡಿಯಾಳಿ ಹಿರಿಯ ಬುನಾದಿ ಶಾಲೆಯ 6, 7 ಮತ್ತು 8ನೇ ತರಗತಿಗಳ ಸಂಯುಕ್ತ ತರ್ಕ ಸಭಾ ಉದ್ಘಾಟನಾ ಸಮಾರಂಭವು ಕಳೆದ ತಾ. 14ರಂದು ಶ್ರೀ. ಎ. ಜೆ. ಅಳ್ಳಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕ್ರಮವನ್ನು ನಮ್ಮ ದೇಶದ ಕೆಲವೆಡೆಗಳಲ್ಲಿ ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಅಂತೆಯೇ ಇದೇ ಕ್ರಮವನ್ನು ಗೋಧಿ ಮೊದಲಾದುವುಗಳಿಗೂ ಅನ್ವಯಿಸಬಹುದೇ ಎಂದು ಅವರು ಪರಿಶೀಲಿಸುವರು. ಅಲ್ಲಿಂದ ೭ ದಿನಾನಂತರ ೪ ದಿನಗಳ ಮಟ್ಟಿಗೆ ಅವರು ಬ್ರಹ್ಮದೇಶಕ್ಕೆ ಹೋಗುವರು ಬ್ರಹ್ಮವು ಭಾರತದಿಂದ ಬೇರೆಯಾದ ಮೇಲೆ ಅವರದನ್ನು ಸಂದರ್ಶಿಸಿರುವುದಿಲ್ಲ. ಅವರು ಈ ಸಮಯದಲ್ಲಿ ರಂಗೂನ್ ಮತ್ತು ಮೆಂಡಲೇಗಳಲ್ಲಿ ಇಳಿಯುವರು. ೧೯೫೭ರಲ್ಲಿ ಅವರು ಬ್ರಹ್ಮವನ್ನು ಸಂದರ್ಶಿಸಿದ್ದರು ರಾಷ್ಟ್ರಾಧ್ಯಕ್ಷ ರಾಗಿ ೧೯೫೬ರಲ್ಲಿ ವಿದೇಶ ನೇಪಾಳಕ್ಕೆ ಮಾತ್ರ ಭೇಟಿಯಿತ್ತಿರುವರು.

ಭೂಮಿಯಿಂದ ೨,೩೧,೦೦೦ ಮೈಲಿ ದೂರದಲ್ಲಿರುವ ಚಂದ್ರಲೋಕಕ್ಕೆ ಪ್ರಯಾಣ ಬೆಳೆಸಲು ಅಮೆರಿಕೆಯು ಬಿಟ್ಟ ರಾಕೆಟ್ ನಿರ್ಪಯೋಗಿ ಯಾಯಿತೆಂದು ವರದಿ ಬಂದಿದೆ. ಇದರಲ್ಲಿ ಚಂದ್ರನ ಮೈಯ ಚಿತ್ರ ತೆಗೆವ ಯಂತ್ರೋಪಕರಣಗಳು ಇದ್ದುವಲ್ಲದೆ ಒಂದು ಉಪಗ್ರಹವೂ ಇದ್ದಿತ್ತು ಆದರೆ, ೨೮ರವರೆಗೆ ದಿನಗಳ ಪ್ರಯಾಣಕ್ಕೆ ಅಣಿಯಾಗಿ ಹೊರಟ ೮೮.೧ ಅಡಿ ಉದ್ದದ ಈ ಯಾನವು ಚಂದ್ರನತ್ತ ಧಾವಿಸುತ್ತ ಸುಮಾರು ೨೭ ಸೆಕುಂದುಗಳ ವರೆಗೆ ಸರಾಗವಾಗಿ ಭಯಂಕರ ಉಗಿಯುಗುಳುತ್ತ ಸಾಗಿತು. ಆದರೆ ಅಷ್ಟರಲ್ಲಿ ಯೇ ಸ್ಫೋಟಗೊಂಡುದುದರಿಂದ ಸಿಡಿದು ಹೋಗಿ ಕಟ್ಟಿಕೊಂಡಿದ್ದ ಆಸೆಯು ನೀರುಪಾಲಾಯಿತು. ಸಪ್ಟಂಬರ ತಿಂಗಳಲ್ಲಿ ಚಂದ್ರನು ಭೂಮಿಗೆ ಅತಿ ನಿಕಟವಾಗಿರುವುದರಿಂದ, ಈ ಸಾಹಸವು ಪ್ರಯೋಜನಕಾರಿಯಾಗುವುದೆಂದೂ, ಭೂಗೋಚರವಾಗದ ಚಂದ್ರನ ಇನ್ನೊಂದು ಮೈಯ ಬಗ್ಗೆ ವಿವರಣೆ ದೊರೆಯುತ್ತಿತ್ತು. ಆದರೆ, ಈ ಕೆಲಸ ಸಾಗಲು ಇನ್ನು ಮುಂದಿನ ಸಪ್ಟಂಬರನನ್ನು ಎದುರು ನೋಡಬೇಕಾಯಿತು, ಅಂತೂ ಮಾನವನ ಒಂದು ಬಾರಿಯ ಪರಿತ್ರಮವೆಲ್ಲವೂ ನೀರಮೇಲಿನ ಹೋಮವಾಯಿತು.

ಪ್ರಕಟಣೆ

ರೂ. 25—0—0 ಬಹುಮಾನ

ತಾ. 15—8—58ರಲ್ಲು ನಾನು ಉಡುಪಿಯಿಂದ ಶಿವಮೊಗ್ಗಕ್ಕೆ ಹೋಗುವಾಗ ಆಗುಂಬೆ ಶಿವಮೊಗ್ಗ ಸಡು ಬಸ್ಸಿನಲ್ಲಿ ನನ್ನ ಕೈಚೀಲ ಒಂದು ಕಳದಿರುತ್ತದೆ. ಅದರಲ್ಲಿ ಇದ್ದ ಶಿಗ್ಗಾವಿ ತಾಲೂಕು ನನ್ನ ಸ್ವಂತ ವ್ಯವಸಾಯದ ಕೈಯ ಪಾವತಿ ಮೂರು ೩ ಲೆಕ್ಕದ ಪೈರಿ 1 ಪಾಕೇಟು 1 ಅದರಲ್ಲಿ 18—6—0 ನಗದಿ.

ಕೆಲವು ಅರಿವೆ ಪರ್ಟುಗಳು ಇರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಕೆಳಗಿನ ವಿಳಾಸಕ್ಕೆ ಮುಟ್ಟಿಸಿದ ಯೂ ಕೆಳಗಿನ ವಿಳಾಸಕ್ಕೆ ತಿಳ್ಸಿರಿ.

ಕೇಶವಣ್ಣ, ಗುಂಡಿಬೈಲು ಕಲ್ಯಂಕ, ಉಡ್ಪಿ
ಪೋಸ್ಟು ಉಡ್ಪಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ 1-4-0 (1-25). ಒಂದಾನವರೆ ರೊಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಷ್ಕಳಂಕ ಸಮಾಜಸೇವೆ

(ಜನೇ ಪುಟದಿಂದ)

ದಿಂದ ಆರೋಗ್ಯ ಸುಧಾರಣೆ ಹೊಂದಿ ಪರಿಗೂ ಅದರ ಉಪಯೋಗವನ್ನು ಮುಟ್ಟಿಸುವಂತಾಗಬೇಕು.

ನಿಜವಾಗಿಯೂ ಸಮಾಜಸೇವೆಂಬುದು ಮಹಾವ್ರತ. ಅನೇಕ ಭೌತಿಕ ಸುಖಾನುಕೂಲತೆಗಳನ್ನು ಇದಕ್ಕಾಗಿ ತ್ಯಜಿಸಬೇಕಾಗುತ್ತದೆ—ಕೆಲವೊಮ್ಮೆ ಬಲಿದಾನವೇಯಬೇಕಾಗಲೂ ಬಹುದು. ಪ್ರಪಂಚದ ಎಲ್ಲ ಮೂಲೆಯ ಜನರೂ ಇದಕ್ಕಾಗಿ ದುಡಿದಿದ್ದಾರೆ ಆ ಕಾಲದಲ್ಲಿ ಆಲ್ಪಿನ ಜನತೆಯ ನಿಂದನೆಗೆ ಗುರಿಯಾಗಬೇಕಾಗಿ ಬರುತಿತ್ತು. ಸೊಕ್ರೊಟಿಸನು ಈ ಕಾರಣದಿಂದಲೇ ವಿಷಪಾನ ಮಾಡಬೇಕಾಯಿತು. ಮಹಾತ್ಮಾಯೇಸುವು ಕ್ರೂಜೆಯನ್ನು ಏರಬೇಕಾಯಿತು. ನಮ್ಮ ದೇಶದಲ್ಲಿಯೂ ಸಮಾಜಸೇವೆಯ ಜ್ವಲಂತ ಪ್ರತೀಕ ಬಾಪೂಜಿಯವರೇನು ಮಾಡಬೇಕಾಯಿತು? ಆದುದರಿಂದ ಸೇವೆಗಿಳಿಯುವುದೆಂದರೆ ಬಿಡ್ಡದೊಡನೆ ನೆಣಸಾಟವೆಂಬುದು ಸತ್ಯ. ಆದರೆ, ಸಮಾಜಸೇವಿ ನೈರಾಶ್ಯಭಾವವ ಹೊಂದುವುದಿಲ್ಲ. ರಾತ್ರಿ ಅಂಧಕಾರ ಆವರಿಸುವಾಗ ಧ್ರುವತಾರೆ ಬೆಳಗುವಂತೆ, ನಿರಾಶೆಯ ಕಾರ್ಮೋಡಗಳು ಕವಿದಾಗ, ಸಮಾಜಸೇವಿಯು ಆಶಾವಾದಿಯಾಗಿ ಮುನ್ನಡೆಯುತ್ತಾನೆ.

ಭಾರತವು ಸ್ವತಂತ್ರವಾದಂದಿನಿಂದ ಸೇವಾ ಭಾವನೆಯು ಜಾಗ್ರತಗೊಳ್ಳುತ್ತಿದೆ. ಆದರೆ, ಸೇವಾಭಾವನೆಯಲ್ಲಿ ಸ್ವಾರ್ಥ ವಿರಬಾರದು. ನಮ್ಮ ವ್ಯಾಪೇನಪರಂಪರೆಯ ನಿಸ್ವಾರ್ಥ ಸೇವಾಭಾವನೆ ಬೆಳೆದು ಬರಬೇಕು. ಋಷಿ ಮುನಿಗಳ ಆದರ್ಶಗಳನ್ನು ಸ್ವೀಕರಿಸಿ ಸ್ರವಂಚದಲ್ಲಿ ವಿಶ್ವಬಂಧುತ್ವದ ಭಾವನೆಯನ್ನು ನಾವು ಜಾಗ್ರತಗೊಳಿಸಬೇಕು. ಇಂತಹ ಮಾನವ ಸೇವಾವ್ರತವನ್ನು ಕೈಗೊಳ್ಳಬೇಕು. ಇಂದಿನ ಭಯಾನಕ ಹಾಗೂ ಕುತ್ಸಿತ ಭಾವನೆಗಳ ಯುಗದಲ್ಲಿ ಸಮಾಜ ಸೇವೆಯು ವಿಶೇಷ ಸ್ಥಾನವನ್ನು ಪಡೆಯುವುದು ಖಂಡಿತ. "ವಸುಧೈವ ಕುಟುಂಬಕಮ್" ಎಂಬ ವಿಶ್ವಪ್ರೇಮದ ನುಡಿಮುತ್ತು ನಡೆಯುತ್ತಾದರೆ, ಆಗ ಮಾನವನು ಮಾನವನಾಗುವನು. ಇಂಥ ಸಮಾಜ ಸೇವೆಯನ್ನು ಭಾರತೀಯರು — ಮುಖ್ಯವಾಗಿ ನವಯುವಕ ಯುವತಿಯರು — ಹೇಯವೆಂದೆಣಿಸದೆ ಮಾಡಬೇಕು. ಅವರು ರಾಷ್ಟ್ರಪುನಾರಚನಾ ಕಾರ್ಯದಲ್ಲಿ ತಮ್ಮ ಪಾಲಿನ ಕರ್ತವ್ಯವನ್ನು ಪೂರೈಸಿ, ಮುಂದಿನ ಜನಾಂಗಕ್ಕೆ ಮಾರ್ಗದರ್ಶನ ಮಾಡಬೇಕು. "ಸೇವೆಯೇ ಮಾನವನ ಜೀವನದ ಗುರಿ" ಎಂಬ ಮಾತನ್ನು ಅವಶ್ಯ ಸ್ಮರಣೆಯಲ್ಲಿಟ್ಟು, ಅದಕ್ಕೆ ಕ್ರಿಯಾರೂಪವನ್ನಿಯುತ್ತಿರಬೇಕು.

'ನವಯುಗ' ವಾರಪತ್ರಿಕೆ

ಉಡುಪಿ.

ವಾರ್ಷಿಕ ಚಂದಾ—

ರೂ. 5-12-0 (5=75)

6 ತಿಂಗಳಿಗೆ— ರೂ. 3-0-0

ಮುಂಗಡವಾಗಿ ಕಳಿಸಬೇಕು.

ಮಂಗಳೂರು

ನೃತ್ಯ ವಿದ್ಯಾಸಿಲಯದಲ್ಲಿ ಸತ್ಕಾರ

ಕದ್ರಿಯ ನೃತ್ಯ ವಿದ್ಯಾಸಿಲಯದಲ್ಲಿ ತಾ. 7ರಂದು ನೃತ್ಯ ವಿದ್ಯಾಲಯದ ಶ್ರೀ ಯು. ಎಸ್. ಕೃಷ್ಣರಾಯರು, ಶ್ರೀಗಳಾದ ಕೆ. ಬಾಲಕೃಷ್ಣರಾವ್, ಎಸ್. ಎಲ್. ಸಿ; ಜಿಲ್ಲಾ ನ್ಯಾಯಾಧೀಶ ಎಸ್. ಎಸ್. ಕೃಷ್ಣಮೂರ್ತಿ, ನಿವೃತ್ತ ಜಿಲ್ಲಾಧಿಕಾರಿ ನರಸಿಂಹ, ವಿದ್ಯುತ್ ಇಲಾಖೆಯ ಡಿವಿಜನಲ್ ಇಂಜಿನಿಯರ್ ಕೆ. ವಿ. ಶ್ಯಾಮಭಾಗ, ಡಾ. ಎಸ್. ಸಿ. ಶಾಸ್ತ್ರಿ ಮೊದಲಾದವರನ್ನು ಬರಮಾಡಿಕೊಂಡು ಅಲ್ಲಿನ ಕಾರ್ಯಕ್ರಮಗಳ ಪರಿಚಯಮಾಡಿಸಿಕೊಟ್ಟರು. ಆಭ್ಯಾಗತರು ವಿದ್ಯಾಲಯದ ಪ್ರಗತಿಯ ಬಗೆ ಮೆಚ್ಚುಗೆಯನ್ನು ಪ್ರಕಟಿಸಿದರು. ಬಳಿಕ ಉಪಹಾರವಾಯಿತು.

ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯು— ತಾ. 15ರಂದು ಬೆಳಿಗ್ಗೆ ಜಿಲ್ಲಾ ಡಿಸ್ಟ್ರಿಕ್ಟ್ ಕಮಿಶನರ್ ಶ್ರೀ ವೈ. ಸಿ. ಹೊಂಬಾಳಯ್ಯನವರಿಂದ ಧ್ವಜಾರೋಹಣದೊಡನೆ ಪ್ರಾರಂಭವಾಯಿತು. ಸಂಜೆ ಸಾರ್ವಜನಿಕ ಸಭೆಯು ಕೇಂದ್ರ ಮೈದಾನದಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಎಡ್ವೊಕೇಟ್ ಶ್ರೀ ಬಂಟ್ವಾಳ ಕೃಷ್ಣರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಬಳಿಕ ಬಹುಮಾನ ವಿತರಣೆಯಾಗಿ ಅಧ್ಯಕ್ಷರ ಭಾಷಣವಾಯಿತು. ನಗರದ ಶಾಲಾ ಕಾಲೇಜುಗಳಲ್ಲೂ ಧ್ವಜವಂದನೆ, ಸಭೆ, ಭಾಷಣ ಕಾರ್ಯಕ್ರಮಗಳಾದುವು. ಕದ್ರಿಯ ಬುಲ್ಲಾ ಕಲಾಸಂಘದಲ್ಲಿ ಶ್ರೀ ಮಂಜುನಾಥ ಕೃಷ್ಣಾಪೋಷಿತ ಯಕ್ಷಗಾನ ಮಂಡಳಿಯವರಿಂದ ಯಕ್ಷಗಾನವಾಯಿತು.

ಯುವಕ ಕಾಂಗ್ರೆಸ್ ದಿನಾಚರಣೆಯು—ತಾ. 9ರಂದು ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಸ್. ಎಲ್. ಸಿ. ಪಾರಸ ಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಶ್ರೀ ರಾಮರಾಜಕಣಿ ಮೊದಲಾದವರು ಮಾತನಾಡಿದರು. ಯುವಕರು ಶಿಸ್ತಿನಿಂದ ಜೀವನ ನಡೆಸಬೇಕೆಂದೂ, ಮಿತ ವ್ಯಯದಿಂದ ಉಳಿತಾಯ ಮಾಡಬೇಕೆಂದೂ ಅಧ್ಯಕ್ಷರು ಸಲಹೆ ನೀಡಿದರು.

ಅಖಂಡ ಭಾರತದ ದಿನಾಚರಣೆ ಭಾರತೀಯ ಜನಸಂಘದ ಮಂಗಳೂರು ಮಂಡಲ ಸಮಿತಿಯ ಆಶ್ರಯದಲ್ಲಿ ತಾ. 15ರಂದು ಅಖಂಡ ಭಾರತ ದಿನಾಚರಣೆ ಆಚರಿಸಲ್ಪಟ್ಟಿತು. ಶ್ರೀ ಪದ್ಮನಾಭ ಭಂಡಾರ್‌ಕಾರ್, ಅವರು ಸಭಾಧ್ಯಕ್ಷತೆ ವಹಿಸಿದ್ದರು. ಮಂಡಲ ಸಮಿತಿ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ಟರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಎಮ್. ಭಾಸ್ಕರರಾವ್ ಮತ್ತು ಟಿ. ಜಿ. ರಾಯರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಬಿ. ಕೊರಗಪ್ಪ ಸುವರ್ಣರು ಧನ್ಯವಾದಗಳನ್ನಿತ್ತರು.

ಕೆನರಾ ಚೇಂಬರ್ ಆಫ್ ಕಾಮರ್ಸ್— ಇದರ ಮಹಾ ಸಭೆಯು ತಾ. 16 ರಂದು ಜರಗಿ ಶ್ರೀಗಳಾದ ಮಹೇಲ್ ಶ್ರೀನಿವಾಸ ನಾಯಕ್, (ಅಧ್ಯಕ್ಷ), ಎಮ್. ದೇವರಾಯ ಕಾಮತ್, (ಉಪಾಧ್ಯಕ್ಷ), ಎಮ್. ಸುಬ್ರಾಯ ಮಲ್ಯ ಮತ್ತು ಪಿ. ನರಸಿಂಹರಾವ್ (ಕಾರ್ಯದರ್ಶಿಗಳು) ಇವರು 1958-59ನೆ ವರ್ಷಕ್ಕೆ ಅಧಿಕಾರಿಗಳಾಗಿ ಆರಿಸಲ್ಪಟ್ಟರು.

ಸಂಚಾರೀ ವೈದ್ಯಕೀಯ ವಾಹನದ ಉದ್ಘಾಟನೆ— ಮಂಗಳೂರು ಭಗಿನೀ ಸಮಾಜದ ಆಶ್ರಯದಲ್ಲಿ ಬಂಟ್ವಾಳ ಕ್ಷೇತ್ರದಲ್ಲೊಂದು ಸಂಚಾರೀ ವೈದ್ಯಕೀಯ ವಾಹನ ಸಾಕಾರ್ಯವನ್ನು ಜಿಲ್ಲಾ ಡಿಸ್ಟ್ರಿಕ್ಟ್ ಕಮಿಶನರ್ ಶ್ರೀ ವೈ. ಸಿ. ಹೊಂಬಾಳಯ್ಯನವರು ತಾ. 16ರಂದು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷ ಡಾ। ಯು. ಪಿ. ಮಲ್ಯರು ವಹಿಸಿದ್ದರು.

ಶ್ರೀಮತಿ ಲೀಲಾಬಾಯಿ ಬಾಳಿಗರಿಂದ ಪ್ರಾರ್ಥನೆಯಾದ ಬಳಿಕ, ಕೊಲಾಬ ಮಹಿಳಾ ಸಮಾಜದ ಶ್ರೀಮತಿ ಬಿ. ಚಂದ ಬಾಗಿ ರೈಗಳವರು ಸ್ವಾಗತ ಮಾತುಗಳನ್ನಾಡಿದರು. ಮಂಗಳೂರು ಭಗಿನೀ ಸಮಾಜದ ಜತೆ ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟರು ಸಮಾಜದ ಕಾರ್ಯಕಲಾಪಗಳನ್ನು ವಿವರಿಸಿದರು. ಪುತ್ತೂರಿನ ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಶ್ರೀ ಎ. ಲಕ್ಷ್ಮೀನಾರಾಯಣ ಅಳ್ವ ಮತ್ತು ಜಾ। ಭಾಸ್ಕರರಾವ್ ಮೊದಲಾದವರು ಮಾತನಾಡಿದರು. ಶ್ರೀಮತಿ ಉಮಾ ವಿ. ಕಾಮತರು ಧನ್ಯವಾದಗಳನ್ನಿತ್ತರು.

ಪ್ರಜಾ ಸೋಶಲಿಸ್ಟ್ ಪಾರ್ಟಿಯ-ಮಂಗಳೂರು ಕ್ಷೇತ್ರದ ಸದಸ್ಯರ ಸಭೆಯು ತಾ. 17ರಂದು ಶ್ರೀ ಡಿ. ಮೋಹನರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿ. ಗೋವಿಂದರ್ನಾರವರು ಪಾರ್ಟಿಯ ಸಂಘಟನೆ ಮತ್ತು ಬೆಂಗಳೂರಲ್ಲಿ ನಡೆದ ದಕ್ಷಿಣ ಭಾರತ ಪಿ. ಎಸ್. ಪಿ. ಸಮ್ಮೇಳನದ ನಿರ್ಣಯಗಳನ್ನು ವಿವರಿಸಿದರು. ಬಳಿಕ ಪಾರ್ಟಿಯ ಮಂಗಳೂರು ಕ್ಷೇತ್ರದ ಕಾನ್ಸಿಲಿಗೂ, ಪಾರ್ಟಿಯ ಜಿಲ್ಲಾ ಕಾನ್ಸಿಲಿಗೂ ಮೆಂಬರರ ಆಯ್ಕೆ ನಡೆಯಿತು.

ದಸರಾ ಸ್ಪರ್ಧೆ— ಮಂಗಳೂರು ತಾಲೂಕು ದಸರಾ ಸ್ಪರ್ಧೆಗಳ ಸಮಿತಿ ಸಭೆಯು ತಾ. 14ರಂದು ತಹಶೀಲ್ದಾರ್ ಶ್ರೀ ಎಮ್. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ತಾ 20ರಂದು ಸ್ಪರ್ಧೆ ಜರಗಿಸಬೇಕೆಂದು ನಿರ್ಣಯವಾಯಿತು.

ಸರಕಾರಿ ತರಬೇತಿ ಕಾಲೇಜಿನ ಸೋಶಿಯಲ್ ಸರ್ವಿಸ್ ಲೀಗಿನ ಉದ್ಘಾಟನೆಯನ್ನು ತಾ 14ರಂದು ಶ್ರೀಮತಿ ಕೆ. ಸಿ. ಜೆ. ಪ್ರಭುಗಳು ನೆರವೇರಿಸಿದರು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಜನೇಯ ಸಭಾಧ್ಯಕ್ಷತೆ ವಹಿಸಿದ್ದರು.

ತಲ್ಲೂರು— ಬೋರ್ಡು ಹಾ. ಎ. ಶಾಲೆಯಲ್ಲಿ ಗ್ರಾಮಸ್ಥರ ಸಹಕಾರದಿಂದ ಶ್ರೀ ಎ. ನಾಗಪ್ಪ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಾಂಗವಾಯಿತು. ಶ್ರೀಗಳಾದ ಎಸ್. ಎಸ್. ಸುಬ್ಬಣ್ಣ ಗುಪ್ತ ಎಸ್. ಸುಬ್ಬಯ್ಯ ಶೆಟ್ಟಿ, ಡಿ. ತ್ರಿಧರ ಐತಾಳ, ಪಿ. ರಾಘಾಕೃಷ್ಣರಾವ್, ಕೆ. ಫಾ ತೋಮಸ್ ಜೇಸಾ ಮೊದಲಾದವರ ಭಾಷಣಗಳಾದುವು. ಯಕ್ಷಗಾನ ಕಾಲಕ್ಷೇಪವೂ ಇತ್ತು.

ದೇವಲ್ಕುಂದ— ಶ್ರೀ ವಿಜಯ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯದಿನೋತ್ಸವವು ಶ್ರೀ ಎನ್. ರಾಮಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಹೆಡು ಕಳತ್ತೂರು—ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಶ್ರೀ ಕೆ. ವಿ. ಕೃಷ್ಣಯ್ಯನವರಿಂದ ಧ್ವಜಾರೋಹಣವಾಗಿ ಮಹಾಜನ ಸಭೆ ಜರಗಿ ಭಾಷಣಗಳಾದುವು. ಶಾಲಾ ಪೆಡ್ಡಾಸ್ಟರ್ ಶ್ರೀ ಕೆ. ಶೇಷಪ್ಪಯ್ಯನವರು ಧನ್ಯವಾದಗಳನ್ನಿತ್ತರು.

ಸ್ಥಳೀಯ ಹಾ. ಎ. ಶಾಲೆಯಲ್ಲಿ ಶ್ರೀ ನಿತ್ಯಾನಂದ ಬೋಳಾರ್‌ರವರಿಂದ ತಾ. 12 ರಂದು ಧ್ವಜಾರೋಹಣವೆಂಬ ಪರಿಕಥಾ ಕಾಲಕ್ಷೇಪವಾಯಿತು. ಶಾಲಾ ಪೆನೇಜರ್ ಶ್ರೀ ಅಯ್ಯಣ್ಣ ಯಾನಿ ವೆಂಕಪ್ಪಯ್ಯನವರು ಪಾರಿತೋಷಕ ಸ್ವಾರ್ಪಿಸಿತ್ತರು.

ಸುರತ್ಕಲ್—ಮುಕ್ತ ಗಂಗಯ್ಯ ಸ್ವಾರಕ ರಾತ್ರಿ ಶಾಲೆ ಮತ್ತು ಅಗ್ರಹಾರಿ ಹಾ. ಎ. ಶಾಲೆಗಳಲ್ಲಿ ಸದ್ರಿ ಶಾಲೆಗಳ ಮುಖ್ಯೋಪಾಧ್ಯಾಯರುಗಳ ನೇತೃತ್ವದಲ್ಲಿ ತಾ. 15ರಂದು ಸ್ವಾತಂತ್ರ್ಯದಿನವನ್ನು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಬಾರಕೂರು— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. 15ರಂದು ಸ್ವಾತಂತ್ರ್ಯದಿನಾಚರಣೆಯು ಶ್ರೀ ಜೆ. ಪಿ. ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುಜ್ಞ ನಾರಾಯಣರಾಯರು ಧ್ವಜವನ್ನೇರಿಸಿದರು.

ಶಿರ್ವ— ರಿಕ್ರಿಯೇಶನ್ ಕ್ಲಬ್ಬಿನ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯು ಡಾ. ವೈ. ಆರ್. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಡಾ. ಯು. ಕೆ. ಆಚಾರ್ಯರು ಪಂಡಿತ ನೆಹರೂರವರ ಭಾವಚಿತ್ರವನ್ನು ಅನಾವರಣ ಮಾಡಿದರು. ಶ್ರೀ ಬಿ. ಜಯರಾಮ ಶೆಟ್ಟರು ಭಾಷಣವಿತ್ತರು. ಶ್ರೀ ಸಿ. ಎನ್. ರಾಯರು ಧನ್ಯವಾದವಿತ್ತರು.

ಪೊಲಿಪು— ಸರಕಾರೀ ಫಿಶರೀಸ್ ಎಲಿಮೆಂಟರಿ ಮತ್ತು ಹೈಸ್ಕೂಲುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ನಾರಾಯಣ ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಸುಬ್ಬರಾಯರು ಧ್ವಜಾರೋಹಣಮಾಡಿದರು. ಶ್ರೀ ಕೊರಗಪ್ಪನವರು ಧನ್ಯವಾದವಿತ್ತರು.

ಕಡಂದಲೆ—ಬೋರ್ಡು ಹಾ. ಎ. ಶಾಲೆಯಲ್ಲಿ ಶ್ರೀ ಕೆ. ಸಂಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ಭಾಷಣ ಹಾಗೂ ಮುಕ್ಕಳಿಗೆ ಸಿಹಿತಿಂಡಿ ಹಂಚುವ ಕಾರ್ಯಕ್ರಮಗಳಿದ್ದುವು.

ಇರಾ— ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಮಂಚಿ ಇರಾ ಪಂಚಾಯತ ಉಪಾಧ್ಯಕ್ಷ ಶ್ರೀ ಕೆ. ದೇವಪ್ಪ ಮಲ್ಲಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಪಟೇಲ್ ಶ್ರೀ ಬಿ. ಮಹಾಬಲ ರೈಗಳು ಧ್ವಜಾರೋಹಣಮಾಡಿದರು. ಹೆಡ್ಮಾಸ್ಟರ್ ಶ್ರೀ ಮಹಾಬಲ ಶೆಟ್ಟರು ಧನ್ಯವಾದಗಳನ್ನಿತ್ತರು. ಇದೇ ದಿವಸ ಶ್ರೀ ಸೋಮನಾಥೇಶ್ವರ ಪುಸ್ತಕ ಭಂಡಾರದ ವಾರ್ಷಿಕೋತ್ಸವವು ಕೂಡಾ ಜರಗಿತು.

ಬೆಳ್ಳಾರೆ—ತಾ. 15—8—1958ರಲ್ಲಿ ಸ್ವಾತಂತ್ರ್ಯ ದಿನವನ್ನು ಕೊಡಿಯಾಲ ಶಾಲೆಯವರು ಮತ್ತು ಊರವರು ಸೇರಿ ಆಚರಿಸಿದರು. ಸಂಚಾಯತ ಅಧ್ಯಕ್ಷ ಶ್ರೀ ಬಿ. ಬಾಲಕೃಷ್ಣ ರೈಯವರು ಧ್ವಜಾರೋಹಣಮಾಡಿ ನಂತರ ಶಾಲಾ ಮಕ್ಕಳ ಮತ್ತು ಊರವರ ವಿವಿಧ ರೀತಿಯ ಸ್ಪರ್ಧೆಗಳು ಜರಗಿದುವು.

ಸಂಜೆ ಬೆಳ್ಳಾರೆ ಸರಕಾರಿ ಆಸ್ಪತ್ರೆಯ ಡಾಕ್ಟರ್ M. P. ಕಲ್ಲೂರರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗಿತು. ಊರವರ ಸಂಗೀತ, ಶಾಲಾ ಮಕ್ಕಳ ನಾಟಕ ಇತ್ಯಾದಿ ಅನೇಕ ಕಾರ್ಯಕ್ರಮಗಳು ಜರಗಿದುವು.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದೆ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ. ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ದಶಮಾನ ಪದ್ಧತಿ

(೪ನೇ ಪುಟದಿಂದ)

ಖಾನೆಗಳು, ಅವಕ್ಕೆ ಸಾಮಗ್ರಿಗಳನ್ನು ಸರೈಸುವವರು ಮತ್ತು ಗಿರಾಕಿಗಳು ಇವರು ಮಾತ್ರ ಈ ಹೊಸ ಪದ್ಧತಿಯನ್ನು ಆರಂಭದಲ್ಲಿ ಅನುಸರಿಸುವರು ಈ ಕಾರ್ಖಾನೆಗಳ ಸಿದ್ಧ ವಸ್ತುಗಳ ಚಿಲ್ಲರೆ ವ್ಯಾಪಾರದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ

ಸೆಣಬಿನ ಕೈಗಾರಿಕೆಯಲ್ಲಿ ಈ ಪದ್ಧತಿಯು ಜೂಲೈ ೧ ರಿಂದ, ಮೂರು ತಿಂಗಳ ಮೊದಲೇ, ಸಗಟು ವ್ಯಾಪಾರದಲ್ಲಿ ಆರಂಭವಾಗಿದೆ ಸರ್ಕಾರಿ ಇಲಾಖೆಗಳು, ಮತ್ತಿತರ ಕೈಗಾರಿಕಾ ಸಂಸ್ಥೆಗಳು ನಿರ್ಧರಿಸಿದ ಅವಧಿಯಲ್ಲಿ ಹೊಸ ಪದ್ಧತಿಯನ್ನು ಆಚರಣೆಗೆ ತರುವುವು ಸರೈಸುವ ಹಾಗೂ ಪಡೆಯುವ ವಸ್ತುಗಳ ತೂಕ, ಗಾತ್ರ ಮತ್ತು ಅವುಗಳ ಬೆಲೆಯನ್ನು ದಶಮಾನ ಪದ್ಧತಿಯಲ್ಲಿಯೇ ನಮೂದಿಸಲಾಗುವುದು. ಹೊಸದಾಗಿ ಮಾಡುವ ಭೂಮಿ ಕಾಣಿಯನ್ನು ದಶಮಾನ ಪದ್ಧತಿಯಲ್ಲಿಯೇ ಅಳೆಯಲಾಗುವುದು ಅಂಕಿ ಅಂಶಗಳನ್ನು ದಶಮಾನ ಪದ್ಧತಿಯಲ್ಲಿಯೇ ಸಂಗ್ರಹಿಸಲಾಗುವುದು

ಪೂರ್ವಭಾವೀ ಸಿದ್ಧತೆ

ಹೊಸ ಪದ್ಧತಿಯನ್ನು ಮನ್ನಾಚಿಸುವ ಸಲುವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗಾಗಲೇ ಪೂರ್ವಭಾವಿ ಕಾರ್ಯಕ್ರಮಗಳನ್ನು ಕೈಗೊಂಡಿವೆ ದಶಮಾನ ಪದ್ಧತಿಯ ತೂಕ ಮತ್ತು ಅಳತೆಯ ಮಾನಗಳನ್ನು ಸಿದ್ಧಗೊಳಿಸಲು ಪರವಾನಿಗೆಗಳನ್ನೀಯಲಾಗಿದೆ.

ತೂಕ ಮತ್ತು ಅಳತೆಯನ್ನು ನಿರ್ದೇಶಿಸುವ ಸಂಬಂಧ ಶಾಸನಗಳು, ರಾಜ್ಯ ಸರ್ಕಾರಗಳ ವ್ಯಾಪ್ತಿಗೊಳಪಟ್ಟ ವಿಷಯ. ರಾಜ್ಯ ಸರ್ಕಾರಗಳು ಈಗಾಗಲೇ ಈ ಶಾಸನಗಳನ್ನು ಆಚರಣೆಗೆ ತಂದಿರುವುವು ರಾಜ್ಯಗಳಲ್ಲಿ ತೂಕ ಮತ್ತು ಅಳತೆಯ ಇಲಾಖೆಗಳು ಈಗಾಗಲೇ ಅಸ್ತಿತ್ವಕ್ಕೆ ಬಂದಿವೆ ಈ ಶಾಸನದ ಅಭಿಯೋಜನೆಗೆ ಸಂಬಂಧಪಟ್ಟ ಸಿಬ್ಬಂದಿಗೆ ತರಬೇತಿಯನ್ನೂ ಸಹ ನೀಡಲಾಗುತ್ತಿದೆ ಹೊಸ ಪದ್ಧತಿಯ ತೂಕ ಮತ್ತು ಅಳತೆಯ ಪ್ರಮಾಣಗಳ ಪ್ರಚಾರ ಕಾರ್ಯಗಳೂ ನಡೆಯುತ್ತಿವೆ

ಭಾರತವು ದಶಮಾನ ಪದ್ಧತಿಯನ್ನು ಅನುಸರಿಸುವ ವಿಷಯ ಜಗತ್ತಿನ ಅಸಕ್ತಿಯನ್ನು ಕೆರಳಿಸಿದೆ ಭಾರತದೇ ಈ ಪದ್ಧತಿಯನ್ನು ಅನುಸರಿಸುತ್ತಿರುವಾಗ ತಾವೇಕೆ ಅನುಸರಿಸಬಾರದೆಂದು ಬ್ರಿಟನ್ ಹಾಗೂ ಅಮೆರಿಕದ ಸಂಯುಕ್ತ ಸಂಸ್ಥಾನಗಳು ಆಲೋಚಿಸುತ್ತಿವೆ ಕಳೆದ ನೂರು ವರ್ಷಗಳಲ್ಲಿ ಸುಮಾರು ೫೦ ರಾಷ್ಟ್ರಗಳು ದಶಮಾನ ಪದ್ಧತಿಯನ್ನು ಅಂಗೀಕರಿಸಿವೆ ಆ ರಾಷ್ಟ್ರಗಳು ಈ ತಂದ ಬರಿ ವರ್ತನೆಗಾಗಿ ಪರಿತಪಿಸಿಲಿಲ್ಲ. ಭಾರತದ ನೆರೆಯ ರಾಷ್ಟ್ರಗಳೂ, ಈ ಪದ್ಧತಿಯನ್ನು ಅನುಸರಿಸಲು ಆಲೋಚಿಸುತ್ತಿವೆ.

ಐಕ್ಯತಾ ವಿಧಾನ

ಈ ಪದ್ಧತಿಯು, ದೀರ್ಘ ಕಾಲಾವಧಿಯಲ್ಲಿ ಭಾರತೀಯರಲ್ಲಿ, ಅದರಲ್ಲಿಯೂ ಯುವಜನರಲ್ಲಿ, ಸಮಯ ಹಾಗೂ ಪ್ರಯತ್ನದ ಉಳಿತಾಯವನ್ನು ಬಹುವಾಗಿ ಸಾಧಿಸುವುದೆಂಬುದನ್ನು ಮನಗಾಣಬಹುದು ಇಂದಿರುವ ವಿಭಿನ್ನ ತೂಕ ಮತ್ತು ಅಳತೆಯ ಪ್ರಮಾಣಗಳು, ಅನೈಕ್ಯತೆಯ ಅಂಶಗಳಲ್ಲೊಂದು

ಭಾರತದಲ್ಲೇಕ್ಯ ಏಕರೂಪದ ತೂಕ ಮತ್ತು ಅಳತೆಯ ಪದ್ಧತಿ ಹಾಗೂ ನಾಣ್ಯ ಪದ್ಧತಿಯು ಯಿಶಿಸ್ಟಿಯಾಗಿ ಆಚರಣೆಗೆ ಬಂದಾಗ ದಶಮಾನ ಪದ್ಧತಿಯು, ರಾಷ್ಟ್ರದ ಐಕ್ಯತೆಯ ಹಾದಿಯಲ್ಲಿ ಒಂದು ಮಹತ್ತರವಾದ ಹೆಜ್ಜೆಯೆಂದು ಅರಿವಾಗದಿರದು



ಜಪ್ತಿನ ನೊತ್ತಮೊದಲನೆಯ ಅಣುಶಕ್ತಿಯಿಂದ ಚಲಿಸುವ ಹಡಗಾದ ಎನ್. ಎಸ್. ಸವನ್ನಾ ಬೋಡಿಸಲು ಸಿದ್ಧಪಡಿಸಿದ ಅಣು ರಿಆಕ್ಟರಿನ ಚಿತ್ರವಿದು ಇದು ೩೩ ಅಡಿ ವ್ಯಾಸ ಮತ್ತು ೫೦ ಅಡಿ ಉದ್ದವಿರುವುದು

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಾಗಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ ನ)

Montserrat— 1955-1956 Published by Her Majesty's Stationery Office, London Copies are available from the Manager, H M S O Sales Section, British Information Services, Indra Palace H Block, connaught circus, New Delhi 1 PP 34 Price Rs 2—62 (net)

ಅತ್ಯಾಂತಿಕ ಮತ್ತು ಕೆರೇಬಿಯನ್ ಸಮುದ್ರಗಳಲ್ಲಿರುವ ದ್ವೀಪಸಮೂಹದಲ್ಲಿ ಮೊಂಟ್ಸೆರಾಟ್ ಎಂಬುದೂ ಒಂದು ಇದು ಬ್ರಿಟಿಷರ ನಾಮತ ೧೯೫೫-೫೬ ರಲ್ಲಿ ಅಲ್ಲಿನ ಜನ ಸಂಖ್ಯೆಯ ೧೮ ಶತಕಡ ಇತ್ತೆಂದು ಊಹಿಸಲಾಗಿದೆ ಯುನೈಟೆಡ್ ಕಿಂಗ್‌ಡಮ್ ಲೇಬರ್ ಪಾರ್ಟಿ ಅಭ್ಯರ್ಥಿ ಅಂದ್ರೆ ಗ್ರಾಂಟ್ ಇವರಿಂದು ಪ್ರತ್ಯೇಕ ವಸಾಹತುವಾಗಿ ಸರ್ಕಾರಿಯ ಹೊಂದಿದೆ ವರದಿಯಲ್ಲಿ ನಮೂದಿಸಿದಂತೆ ೩ ಜನರನ್ನೆಲ್ಲಿ ವಿಸ್ತಾರವಿದೆ ಈ ದ್ವೀಪದಲ್ಲಿ ೧ ಜನ ಬ್ರಿಟಿಷರು ನೆಲೆಯೂರಿದ್ದಾರೆ ಪತ್ರಿಕೆ ಅಕ್ಷರವಾಣಿ, ಚಲಚ್ಚಿತ್ರ, ಅಂಚೆ, ರಸ್ತೆಗಳು, ನೌಕೆ, ಹೆಲು, ರಕ್ಷಣೆ, ವಿದ್ಯಾಭ್ಯಾಸ ಮೊದಲಾದ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿಯು ತೋರಿದೆ ವರದಿ ವರ್ಷದಲ್ಲಿ ೩೫ ಕಾಯಿಲೆಗಳು ವೈದ್ಯಾಸ್ಪತ್ರೆಗೆ ಬಂದಿವೆ ೧೯೫೬ರಲ್ಲಿ ೩,೩೦೩ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದರು ಆರ್ಥಿಕ ಸ್ಥಿತಿಯು ಸಮಾನ್ಯವಿದೆ ವರದಿಯಲ್ಲಿ ದ್ವೀಪದ ಸಾಧನೆಗಳನ್ನು ಪ್ರದರ್ಶಿಸುವ ಕೆಲವು ಚಿತ್ರಗಳೂ ಇರುವುದು ಒಟ್ಟಿನಲ್ಲಿ ಬ್ರಿಟಿಷರ ಉಳಿದ ವಸಾಹತುಗಳಂತೆಯೇ ಇದೂ ಮುನ್ನಡೆಯುತ್ತಿರುವ ಒಂದು ವಸಾಹತು ಎಂದು ಹೇಳಬಹುದು

ಸಾಫಲ್ಯ ಸೇವಾ ಸಂಘ— ಮುಂಬಾಯಿ ಇದರ ೧೯೫೭ನೆ ಇಸವಿಗೆ ಸಂಬಂಧಿಸಿದ ೧೦ನೆ ವರ್ಷದ ವರದಿಯು ಕೈಸೇರಿದೆ "ಗಾಂಧಿಗ ಯಾನೆ ಸಫಲಿಗ" ಸಮಾಜದ ಸುದ್ಧಾರಕ್ಕಾಗಿ ಈ ಸಂಘವು ದುಡಿಯುತ್ತಿರುವುದು ಅಭಿನಂದನೀಯ ಸಂಘವು ವಿದ್ಯಾರ್ಥಿವೇತನಗಳನ್ನು ಕೊಡುತ್ತಿರುವುದಲ್ಲದೇ ಸ್ವಯಂಸೇವಾ ದಳವೊಂದನ್ನೂ ಸ್ಥಾಪಿಸಿದೆ ಸಂಘದ ಆರ್ಥಿಕ ಪರಿಸ್ಥಿತಿಯೂ ಸಾಕಷ್ಟು ತೃಪ್ತಿಕರವಿದ್ದು ಅದು ದಾಯಕರಾಗಿವೆ ಜಾತೀಯ ಬಂದುಗಳ ಉದಾರ ಸಹಾಯದಿಂದ ಸಂಘವು ಪ್ರವರ್ಧಮಾನವಾಗಲಿ

—ಗೋರಾ

ಕಾರ್ಕಳ ಡಿ ಮುನ್ಸ೿ ಕೋರ್ಟಿನಲ್ಲಿ
O S No 134/1958

A ದೊಡ್ಡಣ್ಣ ಸೆಟ್ಟಿ ಸಿದ್ದು ಸೆಟ್ಟಿ ಅಳಿಯ ಪಟೇಲ್ ಉಡುಪಿ ತಾಲೂಕು ನಂದಿಕೂರು ಗ್ರಾಮದಲ್ಲಿರುವವ — ವಾದಿ

ಮತ್ತು

ಮಹಾಬಲ ಸೆಟ್ಟಿ ದಾಸು ಸೆಟ್ಟಿ ಅಳಿಯ ಉಡುಪಿ ತಾಲ್ಲೂ ಫಲಿಮಾರು ಗ್ರಾಮದ ಮೇಗಿನ ಮನೆಯಲ್ಲಿರುವವ — ಪ್ರತಿವಾದಿ

ಯವರೊಳಗೆ

ವಾದಿಯು ನಿಮ್ಮ ಮೇಲೆ ತಾರೀಕು 31—8—1958ನೇ ವಾಯಿದೆಗೆ ಬಹಾ ವಾಯಿದೆಗೇನೆ ಗೋಣಬಾಕಿ ಕೇಳಿ ರೂಪಾಯಿ 523 00ಕ್ಕೆ ದಾಕಲು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾ 8—9—1958ನೇ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಮುಂದೆ ಇಟ್ಟಿರುವದೆ ಕಿಂದ, ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಕ್ತಿಯಾರ ಸದ್ರಿ ಕೋರ್ಟಮುಂದೆ ಹಾಜರಾಗಿ ಜ್ಯಾಬೀಸುಮಾಡಿ ಕೊಳ್ಳಬಹುದಾಗಿಯೂ ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈ ಮೂಲಕ ಕೋರ್ಟು ಹುಕ್ಕುಂ ಪ್ರಕಾರ ನಿಮಗೆ ತಿಳಿಯಪಡಿಸೋಣಾಗುತ್ತದೆ

A N S Achar,
Advocate for Plaintiff
Karkala Date 16—8—1958



ಇದೀಗ ಬಿಕರಿಗೆ ಸಿದ್ಧವಾಗಿದೆ

ಶ್ರೀ ನಚಿಕೇತರವರ

"ಸ್ನೇಹಸೃಷ್ಟಿ"

(ಸಮಾಜ ಸುಧಾರಕ ಕಾದಂಬರಿ)

ದ್ವಿವರ್ಣ ರಕ್ಷಾಕವಚ ಬೆಲೆ ರೂ 1=25

ವಿವರಗಳಿಗೆ

ಗಾಯತ್ರಿ ಪ್ರಕಾಶನ

ರಾಮುಂಡಿಪುರಂ, ಮೈಸೂರು 1

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕನರಕ	1=00
ಮಂಚಿಯುತು	2=00
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=00
ಮೈಲುಕಲ್ಲಿನೊಡನೆ ಮಾತುಕತೆಗಳು	1=50
ಬಿದಾಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ

ರಾಷ್ಟ್ರಭಾಷೆಯ ಮಹಾಪ್ರಶ್ನೆ

(೩ನೇ ಪುಟದಿಂದ)

ಹೇಳ ಬರುವುದಿಲ್ಲ. ಆರ್ಥಿಕ ಮೂಲತತ್ವಗಳು ಹಾಗೂ ವ್ಯಾಪಾರಿಕ ಪರಕುಗಳ ಸಂದರ್ಭದಲ್ಲಿ ಮಾತ್ರ ಸ್ಥಳೀಯ ಮತ್ತು ಪರಕೀಯವೆಂಬ ವಿಧಾನ ಕ್ರಮವನ್ನು ಅನುಸರಿಸಬಹುದು. ಬಟ್ಟೆಗಳನ್ನು ಸ್ವದೇಶಿ ಮತ್ತು ವಿದೇಶಿ ನಿರ್ಮಿತವೆಂದು ವರ್ಗೀಕರಿಸಬಹುದು; ನಾವು ಕ್ಷ-ಕಿರಣವನ್ನು ಜರ್ಮನ್ ಸಂಶೋಧನೆಯೆಂದು ಹೇಳಬಹುದು; ಆದರೆ, ಕ್ಷ-ಕಿರಣ, ನಿಸ್ತಂತು (ವಯರ್‌ಲೆಸ್) ಮತ್ತು ಅಣು ವಿಭಜನೆ ಮೊದಲಾದ ಶ್ರೇಷ್ಠ ಸಂಶೋಧನೆಗಳನ್ನು ಜರ್ಮನ್, ಇಂಗ್ಲಿಷ್ ಅಥವಾ ಅಮೆರಿಕನ್ ಎಂದು ವರ್ಗೀಕರಿಸಿದರೆ, ಅದಕ್ಕೆ ಬೆಲೆಯೇನು ಬಂತು? ಇದು ಸಮರ್ಪಕವಾದ ವರ್ಗೀಕರಣವೆ?

ಸ್ಥಳೀಯ ಮತ್ತು ವಿದೇಶೀಯವೆಂಬ ವರ್ಗೀಕರಣವು ಭಾಷಾದೃಷ್ಟಿಯಲ್ಲೂ ದೋಷಪೂರಿತ ವರ್ಗ ವಿಭಾಗಕ್ರಮ. ಸಾಮಾನ್ಯ ವ್ಯಾವಹಾರಿಕ ಮತ್ತು ಮಹಾ ಗ್ರಾಂಥಿಕ—ಎಂಬೆರಡು ವಿಧವಾಗಿ ಭಾಷೆಗಳನ್ನು ವರ್ಗೀಕರಿಸುವುದು ಸರಿಯಾದ ಪದ್ಧತಿಯೆನ್ನಬಹುದು. ಮಾನವನ ಸಾಮಾನ್ಯ ಭಾವನೆಗಳನ್ನು ಮಾತ್ರ ವ್ಯಕ್ತಪಡಿಸಲು ಶಕ್ತವಾದ ಭಾಷೆಗಳು ಸಾಮಾನ್ಯ ಭಾಷೆಗಳು; ಮತ್ತು ಕಲೆ, ವಿಜ್ಞಾನ ಮತ್ತು ಸಾಹಿತ್ಯಗಳನ್ನೂ ವ್ಯಕ್ತಪಡಿಸಲು ಸಶಕ್ತವಾದ ಭಾಷೆಯು ಮಹಾ—ಆಗುವುದು. ಇಂತಹ ವರ್ಗೀಕರಣವು ಭಾರತದ ಅತಿ ಪ್ರಾಚೀನ ನಾಗರಿಕತೆಯ ಕಾಲದಲ್ಲೂ, ಎಂದರೆ, ಋಗ್ವೇದದ ಸಮಯದಲ್ಲಿಯೂ ಇದ್ದುದು ಕಂಡು ಬರುತ್ತದೆ. ಇಲ್ಲಿ ಸಾಮಾನ್ಯ ಜನರಾಡುತಿದ್ದ ಭಾಷೆಯ ಪ್ರಯೋಗಗಳು, ಒಟ್ಟಿನ ಕೇವಲ ನಾಲ್ಕನೆಯ ಒಂದೆಂಶದಷ್ಟಿದ್ದು, ಉಳಿದ ಮೂರಂಶ ಕವಿ ಮತ್ತು ಭಾವುಕರಿಂದ ಅಡಪ್ಪಡುತ್ತಿತ್ತು. ಆದರೆ, ಹೇಗೆ ಕವಿ ಭಾವುಕರ ಭಾಷೆಯು ಮಾತ್ರ ಜನಸಾಮಾನ್ಯರಿಗೆ ಅರ್ಥವೇ ಆಗದಂತಿದ್ದು ಕತ್ತಲೆಯ ಗವಿಯಲ್ಲಿರುವಂತೆ ಅವರಿಗೆ ಭಾಸವಾಗುತ್ತಿತ್ತು. ಸಂಸ್ಕೃತವು ದೇವ ಭಾಷೆಯೆಂಬ ಮಾತಿನ ಮೂಲವಾದರೂ ಇಲ್ಲಿಯೇ ಅಡಗಿದೆ. ದೇವತೆಗಳು ಮತ್ತು ಅಂತರ್ಗೂಢ ಭಾಷೆಯ ನಡುವಿನ ಸಂಬಂಧವು ವಿಶೇಷ ಮಟ್ಟದ ಭಾಷೆಯಾಗಿ ಋಗ್ವೇದದಲ್ಲಿ ತೋರಿಬರುತ್ತದೆ. ದೇವತೆಗಳ ಭಾಷೆಯೆಂಬ ನಂಬಿಕೆಯಿಂದ ಏನಾದರೂ ಪುರುಷಾರ್ಥ ಸಾಧಿಸಿಕೊಂಡ ಬಗ್ಗೆ ಯಾವ ಆಧಾರವೂ ಇರುವುದಿಲ್ಲ. ಅಥವಾ ಭಾಷೆಯು ಕೇವಲ ಭೂಮಿಯ ಜನರಿಗೆ ಸೀಮಿತವಾಗಿದೆಯೆಂಬುದರಿಂದ ಗೌರವಕ್ಕೆ ಕುಂದೂ ಇರುವುದಿಲ್ಲ. ದೇವಭಾಷೆಯೆಂಬ ಹೆಮ್ಮೆಯನ್ನೂ ಗೌರವವನ್ನೂ ಪಡೆಯಲು, ಮಹಾಕವಿ ಹಾಗೂ ಭಾವುಕರ ಬರವಣಿಗೆಯಿಂದ ರೂಪಿಸಲ್ಪಟ್ಟ ಆ ಭಾಷೆಯ ಸಾಹಿತ್ಯವೇ ಮೂಲಕಾರಣವೆಂಬುದು ನಿರ್ವಿವಾದ.

ಎಲ್ಲ ಭಾಷೆಗಳೂ ಜ್ಞಾನದ ಅಧಿದೇವತೆಯಾದ ಸರಸ್ವತಿಯ ಪ್ರತಿರೂಪವೆಂಬ ಮಾತಿನಿಂದ ಎಲ್ಲವೂ ಪವಿತ್ರತೆಯಲ್ಲಿ ಸಮಾನವೆಂಬಂಶವು ವ್ಯಕ್ತವಾಗುವುದು. ಈ ಸಂಬಂಧದಿಂದ ದೇಶದ ಅಂತರ್ಭಾಷೆ, ಬಾಹ್ಯ ಭಾಷೆಯೆಂಬ ಪ್ರಶ್ನೆ ಏಳುವುದಿಲ್ಲ. ಭಾರತೀಯ ಪರಂಪರೆಯಲ್ಲಿಯೂ ಆರ್ಯ-ದ್ರಾವಿಡ, ಮೃತ—ಅಧುನಿಕವೆಂಬ ಭಾಷಾ ಭೇದಗಳಿಲ್ಲ. ಸಂಸ್ಕೃತದ ಪಂಡಿತರು ಸರಾಗವಾಗಿ ವಿವಿಧ ಅಧುನಿಕ ಭಾಷೆಗಳಲ್ಲಿ ಸಾಹಿತ್ಯರೂಪದಲ್ಲಿ ಜ್ಞಾನ ಹರಿಯಬಿಟ್ಟರು. ಇದರಿಂದ ಒಳಗಿಂದೊಳಗೇನೇ ವಿವಿಧ ಭಾರತೀಯ ಗ್ರಾಂಥಿಕ ಭಾಷೆಗಳು ಬೆಳೆದುಬಂದು, ಒಂದು ಸಮಾನ ಸಂಸ್ಕೃತಿಯ ಪ್ರತೀಕವಾಗಿ ಪರಿಣಮಿಸಿದುವು.

ಪೊಲ್ಲಿಚ್ ಪೊಲಿಟೆಕ್ನಿಕ್ ಕಾಲೇಜಿನ ಒಂದು ಪ್ರಯೋಗಶಾಲೆಯಲ್ಲಿ ಬೊಂಬಾಯಿಯ ಶ್ರೀ ಇ. ಯಾಜ್ಞಿಕರು ತಮ್ಮ ಅಧ್ಯಾಪಕರೊಂದಿಗೆ ಉಗಿಯಂತ್ರವೊಂದನ್ನು ಪರಿಶೀಲಿಸುತ್ತಿದ್ದಾರೆ.

ಇಂತಹ ಭವ್ಯ ಪರಂಪರೆಯುಳ್ಳ ಭಾರತದಲ್ಲಿ ಸಂಸ್ಕೃತದಂತೆಯೇ ಉಳಿದ ಪ್ರಾದೇಶಿಕ ಭಾಷೆಗಳಂತೆಯೇ ಗೌರವಸ್ಪದವಾದ ಭಾಷೆಯು ಅವಹೇಳನೆಗೆ ಗುರಿಯಾಗುವುದು ಹೀನಾಯದ ಘಟನೆ. ಇಂಗ್ಲಿಷ್ ಭಾಷೆಯೂ ಅಪಾರ ಸಾಹಿತ್ಯ, ಪರ್ಯಾಪ್ತ ವೈಜ್ಞಾನಿಕ ಹಾಗೂ ತಾತ್ವಿಕ ಭಂಡಾರಗಳಿಂದ ಕೂಡಿದ್ದ ಪರಸ್ವತೀ ರೂಪವಾಗಿದ್ದು ಸಂಸ್ಕೃತ ಮತ್ತಿತರ ವ್ಯಾದೇಶೀಕ ಭಾಷೆಗಳಂತೆಯೇ ಪೂಜನೀಯವಾಗಿದೆ.

ದುರ್ದೈವದಿಂದ, ದೇಶದ ಭಾಷೆಗಳು ವ್ಯಾವಹಾರೀ ಪರಕುಗಳಂತೆ ಗಣಿಸಲ್ಪಟ್ಟಿವೆ. ಇದರಿಂದಲೇ ಸ್ವಭಾಷೆಯ ಮೇಲೆ ವಿಶೇಷ ಮಮತೆ ಹೆಚ್ಚಿದೆ. ಮತ್ತು ಇಂಗ್ಲಿಷ್ ಪರಕೀಯ ಭಾಷೆಯನ್ನು ವಂತೆಯೇ ಅನ್ಯ ವ್ಯಾದೇಶೀಕ ಭಾಷೆಗಳೂ "ಪರಕೀಯ" ವೆಂಬ ದೃಷ್ಟಿಯಿಂದ ಗಣಿಸಲ್ಪಡುತ್ತವೆ.

ಪರದೇಶಗಳಿಂದ ವಿವಿಧ ಸಹಾಯವನ್ನೂ ಪರಕುಗಳನ್ನೂ ಆಯಾತಮಾಡುವುದು ಆತ್ಮ ಪ್ರತಿಷ್ಠೆಗೆ ಕುಂದನ್ನು ತರುವುದಿಲ್ಲವಾದರೆ, ಇಂಗ್ಲಿಷ್ ಭಾಷೆಯನ್ನು ಉಳಿಸುವುದೂ ಕಲಂಕ ತಂದುಕೊಂಡಂತಲ್ಲ. ಇದರಿಂದಲೇ ಮಾನವತೆ ಬೆಳೆಯಬಹುದು. ಭಾರತದಲ್ಲಿ ಇಂಗ್ಲಿಷ್ ಭಾಷೆಯೇ ಸರಕಾರೀ ಭಾಷೆಯಾಗಿದೆಯೆಂದು ಇತರರು ಮುಸುಕಿತ್ತಿ ನೋಡದಿರಲಾರರು. ಯುಕ್ತ ರಾಷ್ಟ್ರಸಂಘದಲ್ಲಿಯೋ ಅಂತಾರಾಷ್ಟ್ರೀಯ ಸಭೆಗಳಲ್ಲೋ ಭಾರತೀಯ ಪ್ರತಿನಿಧಿಗಳು ಈಗಿನಂತೆಯೇ ಮುಂದೆಯೂ ಇಂಗ್ಲಿಷ್ ಭಾಷೆಯಲ್ಲಾಡಿದರೆ, ಭಾರತದ ಮಾನ ಮಾಯವಾಗಲಾರದು. ತಮ್ಮ ಭಾಷೆ, ಸಾಹಿತ್ಯಗಳೊಡನೆ ಒಂದು ಪರಕೀಯ ಭಾಷೆ ಮತ್ತು ಸಾಹಿತ್ಯಗಳನ್ನೂ ಅರಗಿಸಿಕೊಳ್ಳುತ್ತಿರುವರೆಂಬ ಗೌರವವೇ ಆಗ ಭಾರತೀಯರಿಗೆ ಲಭಿಸುವುದು. ನಮ್ಮ ದೇಶೀಯ ಭಾಷೆಗಳೊಡನೆ ನಾವು ಇಂಗ್ಲಿಷನ್ನೂ ಬೆಳೆಯಿಸುತಿದ್ದೇವೆ. ಸರಸ್ವತಿಯ ಒಂದುರೂಪವನ್ನು ನಿಂದಿಸುತ್ತ ಭಾಷೆಯಲ್ಲಿ ವ್ಯಾವಾರೀ ದೃಷ್ಟಿಯನ್ನಿಡದೆ, ಜ್ಞಾನದ ಪ್ರತಿರೂಪವಾದ ಎಲ್ಲ ಭಾಷೆಗಳನ್ನೂ ಗೌರವಿಸುವ ಪದ್ಧತಿಯಿಂದ ನಾವು ಕೂಡಿರುವುದು ತಪ್ಪೆ?

('ಹಿಂದೂ' ಪತ್ರಿಕೆಯಲ್ಲಿ ಡಾ. ಸಿ. ಕುಞ್ಞನ್ ರಾಜರು ಬರೆದ ಲೇಖನವನ್ನು ಹೊಂದಿಕೊಂಡು ಬರೆಯಬಹುದು.)

NOTICE

ಉಡುಪಿ ಡಿ. ಮುನ್ಸ೿ಫ್ ಕೋರ್ಟಿನಲ್ಲಿ

H.R.C.O.P No. 16/1958.

ಶ್ರೀ ಕೃಷ್ಣಾಪುರ ಮಠ ಉಡ್ಪಿ-ಇದರ ಮೆನೇಜರ್, ಕೆ. ಗೋವಿಂದ ರಾವ್— ಅರ್ಜಿದಾರರು.

ಉಮ್ಮರ್ ಬ್ಯಾರಿ, ಮೈದಿನ ಬ್ಯಾರಿಗಳ ಮಗ Door No. 10-5-75 ಸಿರಿಬೀಡು ವಾರ್ಡು, ಉಡ್ಪಿ ಕ್ವಬಾ— ಎದ್ರಿಯವರೊಳಗೆ—

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನಂದರೆ:—

ಅರ್ಜಿದಾರ ಮೆರವ ವಳಗೆ ಎದ್ರಿಯು ತಿಂಗಳುಗಟ್ಲೆ ಬಾಡಿಗೆಗೆ ಅನುಭವಿಸಿಕೊಂಡುಬರುವ ಉಡ್ಪಿ ಮುನ್ಸಿಪಾಲ್ಟಿಯ ಸಿರಿಬೀಡು ವಾರ್ಡಿಗೆ ಸೇರಿದ Door No 10-5-75 ನೇ ಕಟ್ಟೋಣದ ಸ್ವಾಧೀನತೆ ಬಗ್ಗೆ ಅರ್ಜಿದಾರರು ದಾಕ್ಲು ಮಾಡಿರುವ ಮೇಲ್ಕಂಡ ಅರ್ಜಿಯು ತಾ. 1-9-1958ಕ್ಕೆ ಎದ್ರಿಯ ನೋಟೀಸುಬಗ್ಗೆ ಯಿಟ್ಟಿರುವುದ್ರಿಂದ ಆ ಕುರಿತು ಎದ್ರಿಗೆ ಆಕ್ಷೇಪಯಿದ್ದಲ್ಲಿ ಸದ್ರಿ ತಾ. 1-9-58ನೇ ದಿನ್ವ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವಕೀಲರ ಮುಖಾಂತರ ಹಾಜರ್ಗಿ ಜ್ಞಾಪೀರು ಮಾಡಿಕೊಳ್ಳತಕ್ಕದು. ತಪ್ಪಿದ್ದಲ್ಲಿ ಶಿಫ್ಯಾ ಮಾಡಿ ಸದ್ರಿ ಅರ್ಜಿಯು ಪೈಸಲು ಮಾಡಲ್ಪಡುವುದು.

P. V. Acharya,
Vakil for Petitioner.

ಪೊಕ್ಕಾಂ-ಉಡ್ಪಿ, ತಾ. 12-8-58.

JUST PUBLISHED!

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)



Written by An Experienced Teacher.

Useful to one and all, the teacher, the student and the layman.

Price. Rs. 1 = 25. (Postage extra)

If Rs. 1=50 is sent by M. O. one copy will be sent by Bookpost.

Copies can be had from the Publishers:

Navayuga Enterprise Ltd.
Navayuga Press,
Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಅವರ ಮುಪ್ಪಿನ ದಿನಗಳು

(೨೦ನೇ ಪುಟದಿಂದ)

— ೫ —

ದಿನ ಹೀಗೆಯೇ ಸಾಗಿತು! ಶಕುಂತಳೆಗೆ ಮುದ್ದಿನ ಮಗಳಾಗಿ ವಿಜಯ ಜನಿಸಿದಳು; ರಾಯರಿಗಲ್ಲ! ಏಕೆಂದರೆ, ರಾಯರಿಗೆ ಮಗಳನ್ನು ಮಂದ್ದಿಸುವ ಅಧಿಕಾರವೂ ಇಲ್ಲ ಹಲವು ಪ್ರೇಮದ ಕುಸುರು ಹಲವು ಜೀವದ ಹೆಸರು, ವಿಜಯ ಶಕುಂತಳೆಯ ಬಾಳ ಹೆಸರಾಗಿ ಬೆಳೆದಳು ಶಕುಂತಳೆಯನ್ನು ವಿರಿಸುವ ಸುರಸುಂದರಿ ವಿಜಯ! ಶಕುಂತಳೆಯ 'ಪ್ರಿಯಜನರ' ಸುಪುತ್ರರು ತಮ್ಮ ಮುಂದಿನ ಮಿಡಿ, ಕಾಯಾಗಿ ಹಣ್ಣಾಗುವ ದಿನಕ್ಕಾಗಿ ಕಾದು ಕುಳಿತುಕೊಳ್ಳುವಂತಾಯಿತು!

ಒಬ್ಬಳೇ ಮಗಳು ವಿಜಯ! ಮುದ್ದಿನಿಂದ ಸ್ವತಂತ್ರಳಾಗಿ ಬೆಳೆದಳು! ಶಕುಂತಳೆಯ 'ಪ್ರೇಮದ ಮಡಿಲಲ್ಲಿ" ಸುಮತಿಯ ಬಳ್ಳಿಯಾಗಿ ಬೆಳೆದಳು! ಶಕುಂತಳೆಯ ಬಾಳಿನಲ್ಲಿ, ಅ ಮನೆಯಲ್ಲಿ, ಅ ಕುಟುಂಬದಲ್ಲಿ ರಾಯರ ಹೆಸರು ಅಗತ್ಯವಿರಲಿಲ್ಲ! ಅವರ ಹೆಸರು, ಹೆಸರಿಗೆ ಬೇಕಲಿಲ್ಲ! ಎಲ್ಲೆಲ್ಲೂ ಶಕುಂತಳೆ!

ಇಂದು... ... ಶಕುಂತಳೆಯ ಯೌವನದ ದಿನಗಳು ಹಿಂದೆ, ಹಿಂದೆ ತೆರಳಲಾರಂಭಿಸಿವೆ! ಆ ಸೊಬಗಳಿದಿದೆ! ಆದರೆ ಹಿಂದಿನಿಂದ ನೋಡಿದಾಗ 'ನಾಗರಿಕ ನವ್ಯ ಫ್ಯಾಶನ್'ನಿಂದ ರಾಜಿಸುವ ಬೆಡಗಿನ ರಾಣಿ ಶಕುಂತಳೆ ಕಾಲೇಜು ಹುಡುಗಿಯಂತೆಯೇ ಕಾಣುತ್ತಿದ್ದಳು! ಬಾಗಿದ ನಿತಂಬವೂ, ಚೆಲುಮುಡಿಯೂ, ನವ ವಿಧದ ವಸ್ತ್ರಧಾರಣವೂ ಅವಳ ಆಸ್ಪತ್ಯಕ್ಷ ಸೊಬಗನ್ನು ಹಾಗುಳಿಸಿವೆ!

ಆದರೆ ಮುಂದಿನಿಂದ ನೋಡಿದಾಗ ರಕ್ತ ನಾಂದ ಮುಖ, ಬಾಡಿಹೋದ ನಯನಗಳು, ಬಿಳುಪೇರಿದ ತುಟಿ ಎಂಬ ಗಾಳಿಯಲ್ಲಿ ಸಡುಗುತ್ತಿವೆ! ಪಲ್ಲವಾದರ ವಿಂದು ಬಾಡಿಹೋಗಿದೆ! ತಾರುಣ್ಯದ ತುಂಟೆಯೆಂದು ಬತ್ತಿಹೋಗಿದೆ! ಮಿತಿ ಮೀರಿದ ಕಾಮ ಜೀವನದಿಂದಾಗಿ ಅವಳ ದೇಹವೆಂದು ಮಹಾರೋಗದ ಮನೆಯಾಗಿದೆ! ಅದರ ನೆಳವಿಗೆ ದೇಹದ ಮಿಂಚೂ ಅಡಗಿದೆ ಆದರೆ.... ಶಕುಂತಳೆ! ಇಂದೂ ಹೆರೆಯದ ತರುಣರೆದುರೂ ವೇಶ್ಯಾಭಿನಯ ಮಾಡುತ್ತಿದ್ದಳು! ಕಾಮದ ಕಣ್ಣಿನಿಂದ ನೋಡುತ್ತಿದ್ದಳು! ಕಾಮನ ಬೇಟೆಗಾಗಿ ಪಾಯುವಿಹಾರ ಮಾಡುತ್ತಿದ್ದಳು! ಆದರಿಂದವಳ ರೂಪವನ್ನು ಕಂಡು ಮುನಿನಕ್ಕು ದೂರ ಸರಿಯುತ್ತಿದ್ದರು ಜನರು! ಅಂದಿನ ಪ್ರಿಯರಿಂದು ಅಪ್ರಿಯರಾಗಿದ್ದರು.. ಗೇಲಿ—ಅಣಕಗಳಿಗೊಂದು ವಸ್ತುವಾಗಿ ಇಂದು ಬಾಳುತ್ತಿರುವಳು ಶಕುಂತಳೆ!

ಆದರೆ ತಾಯಿಗಿಡ ಜಣಗಿಹೋಗದರೂ ತನ್ನೆದುರು, ನಳನಳಿಸಿ ಬೆಳೆಯುತ್ತಿರುವ ಸೊಂಪಿನ ಮರಗಿಡವನ್ನು ಕಂಡು ಹರ್ಷಪಡುತ್ತಿದೆ! ವಿಜಯಳ ಬಾಳಿನಲ್ಲಿ ಗುಲಾಬಿಯಂತೆ ಅರಳಿದ ಯೌವನವು ಸೌರಭವನ್ನು ಸೂಸಿ ದುಂಬಿಗಳನ್ನು ಕರೆಯುದಿರಲಿಲ್ಲ ಬಣ್ಣವು ಚಿಟ್ಟೆಗಳನ್ನು ಮರುಳುಗೊಳಿಸದಿರಲಿಲ್ಲ. ಚಂಚಲೆಗೂ ಚಂಚಂಗಣಕಕ್ಕೂ ನಂಟು! ಮಧುವಿಗಾಗಿ ಮಾತ್ರ ಈ ಗಂಟು!

ಶಾಲೆಗೆ ಹೋಗುತ್ತಿರುವ ವಿಜಯಳಿಂದು ಹದಿನಾಲ್ಕು! ಇಷ್ಟರಲ್ಲೆ ತಾಯಿಯ ವೈಭವದ ಜೀವನವನ್ನು ಕಂಡ, ಅವಳ ಬಾಳ ಬಯಲಲ್ಲಿ ತರಬೇತಿ ಪಡೆದ ವಿಜಯಳಿಗೆ ಸರಿಯಾದ ಮಾನಸಿಕ ತರಬೇತಿ ದೊರೆತಿರ್ತು! ಆ ಪ್ರೌಢ ಶಾಲೆಯ ವಿದ್ಯಾರ್ಥಿನಿಯಾದ ವಿಜಯ ಅಷ್ಟರಲ್ಲೇ ಶಾಲೆಯೊಳಗೆ ಕೆಲವು ಸಾಹಸಗಳನ್ನೆಸಗಿದ್ದಳಂತೆ! ಅದು ಸತ್ಯವೂ ಆಗಿತ್ತು! ಹೌದು, ಕಬ್ಬುತಿನ್ನುವುದನ್ನು ನೋಡಿ ಮಗುವೊದವೊದಲು ಮೆಲ್ಲಮೆಲ್ಲನೆ ಕಚ್ಚಿನೋಡುತ್ತದೆ, ಬಳಿಕ, ರುಚಿ ಕಂಡನಂತರ ಮನಸಾರೆ ಅಜೀರ್ಣವಾಗುವಷ್ಟೂ ತಿನ್ನುತ್ತದೆ!

ವರ್ಷಗಳೆರಡು ಕಳೆದುವು. ತನ್ನ ಸಾಹಸದಿಂದಲೇ ವಿಜಯಳನ್ನು ಕಾಲೇಜಿಗೆ ಸೇರಿಸಿದಳು ಶಕುಂತಳೆ! ಕೇಳಬೇಕೆ? ಗುಡ್ಡದಲ್ಲಿ ಸೊಪ್ಪು ದೊರೆಯದ ಆಡನ್ನು ತೋಟದೊಳಗೆ ಬಿಟ್ಟಂತಾಯಿತು.

ಬಣ್ಣದ ಚಿಟ್ಟೆಗಳಾದ ಗೆಳತಿಯರು ದೊರೆತರು! 'ಜೋಕಿ'ಗೆಂದೇ ಕಾಲೇಜು ಸೇರಿ, ಆ ಸುಖವನ್ನು ಇನ್ನಷ್ಟು ಪಡೆಯಲೆಂದು ಒಂದೇ ತರಗತಿಯಲ್ಲಿ ಆದಷ್ಟು ಹೆಚ್ಚು ಕುಳಿತುಕೊಳ್ಳುವ ಹಣವಂತರ ಮಕ್ಕಳಿಗೆ ಕಾಲೇಜಿನಲ್ಲಿ ಬರಗಾಲವೇನು? ಹಲವು ತರುಣರು ಬಂದು ವಿಜಯಳ ಬಾಳನಲ್ಲಿ ವಿಜಯ-ವೈಭವದ ಕನಸನ್ನು ಕಾಣಿಸಿದರ ! ಒಬ್ಬರಿಬ್ಬರೊಡನಲ್ಲ, ಬಂದ ಬಯಕೆಯ ಒಳಗಕ್ಕೆಲ್ಲಾ ವಿಜಯ ಪ್ರೇಮ ಸ್ವಾಗತವಿತ್ತಳು! ಪ್ರೇಮ ಸಾಗರದಲ್ಲಿ ದಿವ್ಯವಾದ ತೃಪ್ತಿ-ಆನಂದಗಳಲ್ಲಿ ಮುಳುಗಿ ಎದ್ದಳು! ಚೆನ್ನಾಟವಾಡಿದಳು! ಮನಸಾರೆ ನಲಿದಳು ನಿಜವಾಗಿಯೂ ಮಾದಕ ದೇಹದ, ಮೋಹಕ ರೂಪಿನ ವಿಜಯ ಬೆಡಗಿನ ರಾಣಿ! ಯೌವನವೂ, ರೂಪು ಕಲೆತಿದೆ. ಬೆಡಗೂ ಬೆಳಕೂ ಬೆನೆದಿದೆ. ಕೇಳಬೇಕೆ? ಸೊಟ್ಟ ಮೋರೆಯ, ಅಂಕುಡೊಂಕಿನ, ಕುಳ್ಳುಕಪ್ಪಿನ ಸ್ತ್ರೀಗೂ ತಾರುಣ್ಯವೊಂದಿದ್ದರೆ ಸಾಕೆಂಬ ದಿನಗಳಲ್ಲಿ ಇಂತಹ ದಿವ್ಯ ಸುಂದರಿ ವಿಜಯ ನಡೆಸಿದ ವೈಭವದಲ್ಲಿ ವಿಚಿತ್ರವೇನಿದೆ? ಆವ್ಯತವನ್ನು ಹೀರಲು ದೇವತೆಗಳೇ ಬಂದರು! ಕಮಲದಿಡೆಗೆ ಸುಂದರ, ಶ್ರೀಮಂತ ದುಂಬಿಗಳೇ ಹಾರಿಬಂದುವು

"ಎಂತಹ ಸುಂದರಿ ವಿಜಯ ಅಹ್ಹಾ ವಿಜಯಾ ವಿಜಯಾ....!" ವಿಜಯ ನಾಮಸ್ಮರಣೆಯಿಂದ, ಧಾವೊದ್ವೇಗದಿಂದ ಹೃದಯವನ್ನು ಹಿಡಿದು ಕಾತರಿಸುವ ಕಾಲೇಜು ತರುಣರು ಎಷ್ಟಿದ್ದರೋ ಅವರೆಲ್ಲರೂ ಅಗಮಿಸಿ ಅಮರ ಸುಖಸಂಗದಿಂದ ಮಲಕಿತರಾಗಿ ನಲಿದು, ಸುಖವುಂಡು ಹೋದರು.

ಬಾಳು-ಸುಖಗಳೆಂಬುದು ಇಂತಹ ಹುಚ್ಚಲ್ಲ. ಬಾಳಿನ ಧ್ಯೇಯವೆಂಬುದು ತನ್ನ ತಾಯಿ ನಡೆಸಿದ ಜೀವನವಲ್ಲವೆಂದು ಪಾಪ, ವಿಜಯಗೆಳೆಯ ಬಲ್ಲಳೆ! ತಾರುಣ್ಯ ಬಂತು! ಬಯಕೆ ಹುಟ್ಟಿತು; ಬಯಸಿದಳು. ಸುಖಸಿಟ್ಟಳು, ಆದರೆ ಯಾವುದು ಸುಖ? ಜ್ಞಾನೋದಯವಾಗುವ ಮೊದಲೇ ಬಾಳುಬಯಲಾಗಿತ್ತು!

— ೬ —

ಕಳೆದ ದಿನಗಳ ದೃಶ್ಯಗಳು ಕಣ್ಮುಂದೆ ಮರೆಯಾದುವು! ರಾಮರಾಯರ ಕಣ್ಣಿನಲ್ಲಿ ದಾರಾಕಾರವಾಗಿ ನೀರು ಹರಿಯುತ್ತಿತ್ತು. ಅವರ ಕಣ್ಣಿಂದ ಮುತ್ತಿನಂತೆ ಅಪಾರ ವೇದನೆಯ ಕಂಬನಿಗಳುದುರುತ್ತಿದ್ದುವು. ಹೆಂಡತಿ ಮತ್ತು ಮಗಳು ಇದುವರೆಗೆ ತನ್ನನ್ನು ನಾಯಿಯಂತೆ ಕಂಡಿದ್ದರು! ಇಂದಿನ ತನಕ ತನ್ನ ಇಲ್ಲ ಸಂಬಳವಾದರೂ ಸಿಕ್ಕುತ್ತಿತ್ತು; ಆದರೆ ಇಂದಿನಿಂದ ದೂರಕುವ ಮೂರು ಕಾಸು ನಿವೃತ್ತಿ ವೇತನವು ಚಿನ್ನದ ನಾಣ್ಯದೆದುರಿನ ಅಕ್ಕಿ ಕಾಳಿನಂತೆ ಎಲ್ಲಿಯ ಸಾಟಿ? ತನಗೆ ಮಾತ್ರ, ಅಕ್ಕಿಯ ಕಾಳೇಗತಿ! ಚಿನ್ನದ ನಾಣ್ಯ ನುಂಗಲಾರದ, ಕರಗಲಾರದ ವಸ್ತು. ಆದರೆ ಈ ಅಕ್ಕಿ ಕಾಳಿನಿಂದ ಮುಂದೆ ದಿನ ಸಾಗುವುದೆ?

ನಾಯಿಗಿಂತಲೂ ಕೇಳಾಗಿ 'ಶಕುಂತಳೆಯ ಮನೆಯಲ್ಲಿ" ಕೆಲಸದಾಳಿನಂತೆ ರಾಮರಾಯರು ತನ್ನ ಆರುವತ್ತರ ಹಿಂದು ಮುಂದಿನ ನಾಲ್ಕೈದು ವರ್ಷಗಳನ್ನು ಕಳೆದರು! ಅಷ್ಟರಲ್ಲಿ ಶಕುಂತಳೆಯ 'ಗಳಿಕೆಯ ನಿಧಿ'ಯ ಬಲದಿಂದ ವಿಜಯ B A. ಪದವೀಧರಳಾದಳು. ಶಕುಂತಳೆಯ ಆನಂದಕ್ಕೆ ಪಾರವಿರಲಿಲ್ಲ. ಆದರೆ ರಾಮರಾಯರಿಗೆ ಪಡಲು ಆನಂದವೇ ಇರಲಿಲ್ಲ! ಆನಂದವನ್ನು ತೋರಿಸಿದರೆ ಈ ಸಂತಸವನ್ನು ಅನುಭವಿಸುವ ಹೆಕ್ಕುನನಗೆಲ್ಲಿ ಎಂದು ಶಕುಂತಳೆ ಕೇಳಿದಂತೆ ಭಾಸವಾಗುತ್ತಿತ್ತು ರಾಯರಿಗೆ!

ಹಿರಿಯ ಸರಕಾರೀ ಅಧಿಕಾರಿಯೊಬ್ಬನ ಪ್ರೇಮಹಸ್ತದಿಂದಾಗಿ ಯೋಗ್ಯ ಉದ್ಯೋಗವೊಂದು ದೊರದ ಪಟ್ಟಣದಲ್ಲಿ ವಿಜಯಳಿಗೆ ದೊರಕಿತು. ವಿಜಯಳ ಬಾಳಿಗೆ ಅನುಕೂಲ ಸನ್ನಿವೇಶ ದೊರಕಿತು. ಪರಿಸ್ಥಿತಿಯ ನಿರ್ಮಾಪಕಳಾಗಿ ತಾಯಿಯಿದ್ದಾಳೆ! ಪಟ್ಟಣಕ್ಕೆ, ಪಟ್ಟಣದ ದಿವ್ಯವಾಸಕ್ಕೆ ಶಕುಂತಳೆ ಬಯಸಿದ್ದಳು; ಇಂದು ಮಗಳಿಂದಾಗಿ ದೊರಕಿತು! ವಿಜಯಳಿಗೆ ಹೇಗೂ ಬಯಸಬೇಕಾದ ಕಾಲವೇ! ಇರಲಿ ಇಂದು ಹಿರಿಮೆಯಿದೆ; ಗೌರವವೂ ಇದೆ, ಜನರದುರಲ್ಲೊಂದು ಸ್ಥಾನವಿದೆ. ಮುಂದೆ.... ...ವೈಭವದಿಂದೆ ಸಾಗುವುದು! ಅಹಾ ವೈಭವ?....ಸುಖ, ಸಂತೋಷ... ...ತೃಪ್ತಿ ಸುಖ! ಸುಖ'....

ಆದರೆ ಈ ಮುದುಕನನ್ನು ತಮ್ಮೊಂದಿಗೆ ಕರೆದೊಯ್ಯಲು ಇಬ್ಬರಿಗೂ ಇಷ್ಟವಿರವಿರಲಿಲ್ಲ. ಮೊಸರು ತಿನ್ನುವಾಗ ಕಲ್ಲು ಸಿಕ್ಕಿದರೆ ಹೇಗೆ? ಈ ಶನಿಯನ್ನು ತೊಲಗಿಸುವುದೆಂತು? ಎಂದು ತಾಯಿ ಮಗಳು ಯೋಚಿಸಿದರು. ಯೋಚಿಸಿದಂತೆ ಕಾರ್ಯ ಮುಂದರಿಸಿದರು. ಸಾಮಾನು ಸರಂಜಾಮ ಗಳನ್ನು ಜೋಡಿಸಿ ಇಬ್ಬರೂ ಹೊರಟುನಿಂತರು. ಏಕೆ, ಏನೆಂದು ಕೇಳುವ ಪರಿವೆಯಾಗಲೀ, ಜ್ಞಾನವಾಗಲೀ, ಆಸಕ್ತಿಯಾಗಲೀ ರಾಯರಿಗಿದ್ದಂತಿರಲಿಲ್ಲ.

ಇಷ್ಟು ಕಾಲ ತಮ್ಮೊಂದಿಗೆ ಬಾಳಿ, ತಮಗಾಗಿ ಬಾಳು ಸವೆಸಿ, ತಮ್ಮಿಂದ ನರಕ ಅನುಭವಿಸಿ, ತಮ್ಮ ಬಾಳಿನ ಬಡವಾದ ರಾಯರನ್ನು ಮುಂದೆ ಸುಖವಾಗಿರಿಸುವುದಂತಿರಲಿ, ಮುಂದೆ ನಿರ್ಗತಿಕನಾಗಲಿರುವ ಆ ಬಡವಾಯಿಯೊಡನೆ "ನಾವು ಹೋಗುತ್ತೇವೆ" (ನಿನ್ನನ್ನು ಬಿಟ್ಟು!) ಯೆಂದು ಕೂಡಾ ತಾಯಿ ಮಗಳು ಹೇಳದೆ ಹೊರಟು ಹೋದರು! ಅಬ್ಬಾ! ಇಂದು ಇಂತಹ ವ್ಯಕ್ತಿಗಳಿಗೆ ಎಂತಹ ಬೆಲೆ? ಆದರೆ ಇವರಿಗೆ ಗೊತ್ತೇ ತಮ್ಮ ನೆಲೆ?

— ೭ —

ಐದು ವರ್ಷ! ಐದೇ ಐದು ವರ್ಷ! ರಾಮರಾಯರು ಬಾಳಿದ್ದರು! ಅದಕ್ಕಿಂತ ಐಹಿಕ ನರಕ ಬೇರೆ ಇರಲಿಲ್ಲ ಅವರನ್ನು ನೋಡಿದರೆ ಯಾವುದೋ ಬಾವಲೋಕದಲ್ಲಿ ಇರುವಂತೆ ಅರುಳು ಮರುಳರಂತಿದ್ದರು! ಕಣ್ಣಂಚಿನಲ್ಲಿ ಕಣ್ಣೀರು ತಪ್ಪತ್ತಿರಲಿಲ್ಲ. ತಮಗೆ ಹೆಂಡತಿ, ಮಗಳು ಇದ್ದರೆಂಬುದನ್ನು ವಿರತಂತೆ ವರ್ತಿಸುತ್ತಿದ್ದರು ತಾನೇ ಏನಾದರೂ ಬೇಯಿಸಿ ತಿನ್ನುತ್ತಿದ್ದರು. ಅದೂ ಹಸಿವಾದರೆಉಂಟು, ಇಲ್ಲದಿದ್ದರೆ ಇಲ್ಲ! ಆ ಮುರುಕು ಗುಡಸಲಿನಲ್ಲೂ, ಕಂಬನಿಯನ್ನು ಸುರಿಸುತ್ತಾ, ನಿರ್ಲಿಪ್ತ ಭಾವದಿಂದ ನೊಂದು—ಬೆಂದು ಜೀವಿಸಿದರು ರಾಮರಾಯರು ಐದು. ವರ್ಷ!

ಐದು ವರ್ಷದ ಬಳಿಕ ಕಡೆಗೊಂದು ದಿನ! ಸುಪ್ತ ಭಾರತದಲ್ಲಿ ನೊಂದ ಜೀವ ಶಾಂತಿ ಹೊಂದಿತು! ಯಾವುದೋ ಹೊಸ ಲೋಕದ ಕಡೆಗೋ, ಅನಂತ ವಿಶ್ವದೆಡೆಗೋ ರಾಮರಾಯರು ಹೊರಟು ಹೋಗಿದ್ದರು.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- (ವಿ ಪಿ. ಪ್ರತ್ಯೇಕ). ದೀರ್ಘಕಾಲದ ಬಾಧೆಗೆ ರೂ. 8/- ಎಲ್ಲೆಲ್ಲೂ ಮಾರಲ್ಪಡುತ್ತದೆ!

P. DEVEE & Co. (N. J.) CALCUTTA—40

ಸ್ವಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ.

ವಾರದ ಮಹಾನುಭಾವ—

ಕಾರ್ಯಕುಶಲ ತಖ್ತಮಲ ಜೈನ

ಒಂದು ಕಾಲದಲ್ಲಿ ಸರ್ವಜನಪ್ರಿಯವಾಗಿದ್ದ ದೇಶದ ವಿಖ್ಯಾತ ರಾಜಕೀಯ ಪಕ್ಷವಾದ ಕಾಂಗ್ರೆಸ್ ದಿನೇ ದಿನೇ ಜನರ ಅನುರಾಗಕ್ಕೆ ಎರವಾಗುತ್ತಿರುವ ಈ ಸಮಯದಲ್ಲಿ ಕಾಂಗ್ರೆಸ್ಸಿನ ಅಶಕ್ತಿ, ನಿರುತ್ಸಾಹಗಳನ್ನು ಹೋಗಲಾಡಿಸಿ, ಪುನಃ ಅದರಲ್ಲಿ ಚೈತನ್ಯವನ್ನು ಹುರಿದುಂಬಿಸಬೇಕೆಂಬ ಆಕಾಂಕ್ಷೆ ಬಲಗೊಳ್ಳುತ್ತಿರುವ ಈ ಸಂಧಿಕಾಲದಲ್ಲಿ ಕಾಂಗ್ರೆಸ್ ವರಿಷ್ಠರು ವಿವಿಧ ಉಪಾಯಗಳನ್ನು ಯೋಚಿಸುತ್ತಿರುವುದು ಸಂತೋಷದ ವಿಷಯ. ಇವರು ಈ ಕಾರ್ಯವನ್ನು ಕೈಗೊಂಡುದರ ಪರಿಣಾಮವಾಗಿಯೇ ಒಬ್ಬ ವಿಶ್ವಸ್ಥ, ಸತ್ಯಸಂಧ, ಕಾರ್ಯಕುಶಲ ಮತ್ತು ಯೋಗ್ಯನಾದ ವ್ಯಕ್ತಿಯು ರಾಜಕೀಯದ ಪ್ರಕಾಶಕ್ಕೆ ಬೀಳುವ ಸುಸಂದರ್ಭ ಮೊದಗಿಬಂತು. ತನ್ನ ವ್ಯಕ್ತಿತ್ವ ಮತ್ತು ನೇತೃತ್ವಗಳಿಂದ ಕಾಂಗ್ರೆಸ್ಸನ್ನು ಸಬಲಗೊಳಿಸುವ ಮತ್ತು ಪ್ರಭಾವಶಾಲೀ ಪಕ್ಷವಾಗಿಸಿ, ಅದರ ಕಳೆದುಕೊಂಡ ಸಮ್ಮಾನ ಹಾಗೂ ಪ್ರತಿಷ್ಠೆಗಳನ್ನು ಪುನಃ ಅದಕ್ಕೆ ತಂದುಕೊಡುವುದಕ್ಕೆ ಸಶಕ್ತನಾದ ಒರ್ವ ತತ್ವಪ್ರಿಯ ವ್ಯಕ್ತಿಯ ಆವಶ್ಯಕತೆ ಇಂದು ಕಾಂಗ್ರೆಸ್ಸಿನಲ್ಲಿ ತಲೆದೋರಿದೆಯೆಂಬುದು ನಿರ್ವಿವಾದ. ಈ ಕಾರಣದಿಂದಲೇ ವಾಯವ್ಯ. ಮಧ್ಯಪ್ರದೇಶದ ಕೃಷಿ ಹಾಗೂ ಉದ್ಯೋಗ ಮಂತ್ರಿಯಾದ ಶ್ರೀ ತಖ್ತಮಲ ಜೈನರನ್ನು ಅವರ ಮಂತ್ರಿ ಪದವಿಯಿಂದ ವಿಮುಕ್ತಗೊಳಿಸಿ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸುವ ನಿಶ್ಚಯವನ್ನು ಮಾಡಲಾಗಿದೆಯೆಂದೂಹಿಸಿಕೊಂಡರೆ, ಅದು ತಪ್ಪೆನಿಸಲಾರದು.

ಪ್ರಾಯಶಃ ಕಾಂಗ್ರೆಸಿನ ನೇತೃತ್ವದಲ್ಲಿ ಹೊಸ ತತ್ವಗಳನ್ನು ಸಮಾವೇಶಗೊಳಿಸಿ ಅದನ್ನು ಪ್ರಗತಿಶೀಲ ಹಾಗೂ ಬಲಶಾಲೀ ಪಕ್ಷವನ್ನಾಗಿ ಮಾಡಲಾಗುವುದೆಂದು ಸದ್ಯದಲ್ಲಿಯೇ ಘೋಷಣೆ ಹೊರಡಬಹುದು. ೬೩ ವರ್ಷ ಪ್ರಾಯದ ಶ್ರೀ ಜೈನರನ್ನು ಕಾಂಗ್ರೆಸ್‌ನ ಶ್ರೇಷ್ಠ ವರ್ಗಕ್ಕೆ ಎಳೆದು ತರುವುದರ ಸ್ಪಷ್ಟಾರ್ಥ. ಅವರಲ್ಲಿ ಈ ವೃದ್ಧಾವಸ್ಥೆಯಲ್ಲಿಯೂ ಯುವಕರ ಕಾರ್ಯದಕ್ಷತೆ ಹಾಗೂ ಉತ್ಸಾಹವಿದೆ ಎಂಬ ದೃಢವಾದ ನಂಬಿಕೆ ಎಂದು ನಿಸ್ಸಂದೇಹವಾಗಿ ತಿಳಿದುಬರುತ್ತದೆ. ಅವರು ಸರಕಾರೀ ಪದವಿಯಿಂದ ಮುಕ್ತರಾಗಿ ರಚನಾತ್ಮಕ ಕಾರ್ಯಗಳಲ್ಲಿಯೇ ತಮ್ಮ ಶಕ್ತಿ ಪ್ರಯೋಗಿಸುವ ಇರಾದೆಯನ್ನು ಹಿಂದೊಮ್ಮೆ ವ್ಯಕ್ತಪಡಿಸಿದ್ದರೂ ಮಧ್ಯಭಾರತದ ರಾಜನೈತಿಕ ಹಾಗೂ ಶಾಸನಿಕ ಜೀವನದಲ್ಲಿ ಆಗಾಗ ಇವರು ತೋರಿಸಿದ ತನ್ಮಯತೆ, ಸಾಹಸ, ದೃಢತೆ, ವಿಶ್ವಾಸ ಮತ್ತು ಕಾರ್ಯಕುಶಲತೆಗಳಿಂದಾಗಿ ಮಧ್ಯಭಾರತವು ವಿಭಾಟಕವಾದ ನಂತರವೂ ಮಧ್ಯ ಪ್ರದೇಶದ ಮಂತ್ರಿ ಮಂಡಲದಲ್ಲಿ ಇವರು ಸೇರಿಕೊಂಡಿರುವುದು ಅತ್ಯಗತ್ಯವೆಂದು ತಿಳಿದು ಬಂದುದರಿಂದ, ಅವರ ಮೂಲಾಪೇಕ್ಷೆಯು ಈಡೇರದುಳಿಯಿತು.

ಪ್ರಾರಂಭಿಕ ಸಮಯದಿಂದಲೂ ಅವರ ರಾಜನೈತಿಕ ಜೀವನವು ಉಜ್ವಲವೂ ತ್ಯಾಗಮಯವೂ ಆಗಿ ಬೆಳೆದು ಬಂದಿತ್ತು. ಎಂತಲೇ ಅವರು ಸದಾ ಉನ್ನತ ಪದವಿಗಳಲ್ಲಿಯೇ ರಾರಾಜಿಸುತಿದ್ದರು. ೧೯೪೫ರಲ್ಲಿ ಬಾಸೌದಾದ ಒಂದು ಪ್ರಸಿದ್ಧ ಹಾಗೂ ಸಂಪನ್ನ ಜೈನ ಕುಟುಂಬದಲ್ಲಿ ಅವರು ಜನಿಸಿದರು. ಕೇವಲ ೧೮ನೇ ವಯಸ್ಸಿನಲ್ಲಿಯೇ ಅವರು ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭೇಲಸಾದ ಒರ್ವ ಸುಪ್ರಸಿದ್ಧ ವಕೀಲರಾದರೆನ್ನುವಾಗ, ಅವರ ವಿಲಕ್ಷಣ ಪ್ರತಿಭೆಗೆ ಅನ್ಯ ನಿದರ್ಶನವು ಅನಗತ್ಯ. ೨೯ನೆ ವಯಸ್ಸಿನಲ್ಲಿ ಅವರು ಭೇಲಸಾ ನಗರಸಭೆಯ ಸದಸ್ಯರಾಗಿ ಆರಿಸಲ್ಪಟ್ಟರು. ತನ್ನ ಸೇವೆ ಹಾಗೂ ತ್ಯಾಗಗಳ ಫಲವಾಗಿ ೧೯೩೯-೪೦ರ ಕಾಲಾವಧಿಯಲ್ಲಿ ಅವರು ನಗರಸಭಾಧ್ಯಕ್ಷರಾಗಿಯೂ ನಿಯುಕ್ತರಾದರು. ಈಗಲ್ಲಿ ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ಕಾರ್ಯವೆಸಗುವ ಸಾಹಸವು ಯಾರಿಗೂ ಅಸಾಧ್ಯವಾಗಿ ಪರಿಣಮಿಸಿದಾಗ, ಅವರು ಭಿಂಡ ಜಿಲ್ಲೆಯ ರಾಜಕೀಯ ಸಮ್ಮೇಳನದ ಸಭಾಪತಿಯ ಸ್ಥಾನವನ್ನೂ ವಹಿಸಿದರು. ಅಂದಲ್ಲಿ ಗ್ವಾಲಿಯೋರ್ ಸಂಸ್ಥಾನದ ಮಂತ್ರಿಮಂಡಳದಲ್ಲಿ ಸೇರಿಸಲ್ಪಟ್ಟರು. ೧೯೪೨ರಲ್ಲಿ ತಮ್ಮ ಮಂತ್ರಿಪದವಿಗೆ ರಾಜಿನಾಮೆಯಿತ್ತರೂ ಈ ಅಲ್ಪಾವಧಿಯಲ್ಲಿ ತಮ್ಮಮಂತ್ರಿತಾಪಟ್ಟದಲ್ಲೆಸಗಿದ ಸುಧಾರಣೆ ಹಾಗೂ ಕಾರ್ಯಗಳಿಂದ ಅವರ ಜನಪ್ರಿಯತೆಯು ಬೆಳೆದು ಬಂದಿತು. ಶಿಕ್ಷಣ ಪ್ರಚಾರ ಹಾಗೂ ಹರಿಜನ ಸೇವೆಯಲ್ಲಿಯೂ ಇವರು ಆಸಕ್ತಿ ತೋರಿಸುತಿದ್ದರು. ಆದರೆ ಮೇ ೨೮ರಂದು ಮಧ್ಯಭಾರತ ರಾಜ್ಯವು ರೂಪುಗೊಂಡಾಗ ಇವರದರ ಅರ್ಧಮಂತ್ರಿಯಾಗಿ ದುಡಿದರು. ಮುಂದೆ ಸುಮಾರು ಎರಡು ವರ್ಷಗಳ ಕಾಲ ಅದರ ಮುಖ್ಯಮಂತ್ರಿಯೂ ಆದರು. ಜಮೀನ್ದಾರಿ ಮತ್ತು ಜಹಗೀರುದಾರಿಯ ನಿರ್ಮೂಲನ ಹಾಗೂ ರೈತರ ಹಿತರಕ್ಷಣೆಗಳನ್ನು ಮಾಡಿ ಪರಮ ಶ್ರೇಯಸ್ಸನ್ನಿವರು ಗಳಿಸಿಕೊಂಡರು. ಇಷ್ಟಾದರೂ ಅಧಿಕಾರದ ಮೋಹಾಂಧತೆಯಾಗಲೀ ಮಹಾಂಧತೆಯಾಗಲೀ ಅವರಲ್ಲಿ ಸುಳಿಯದಿರುವುದು ಮಾತ್ರ ಆಶ್ಚರ್ಯ. ಮಂತ್ರಿಯಾಗಿದ್ದರೂ ವೈಭವಾಡಂಬರಗಳನ್ನು ತ್ಯಜಿಸಿ ಸರಳ ಜೀವನವನ್ನೇ ಇವರು ಬಾಳಿದ್ದರು. ಕಾಂಗ್ರೆಸ್‌ನ ಒಳಗಿನ ಪಂಗಡ ಮನೋವೃತ್ತಿಯಿಂದಾಗಿ ಅವರು ಎರಡು ಬಾರಿ ಚುನಾವಣೆಯಲ್ಲಿ ಪರಾಜಿತರಾದರೂ ೫೫ರಲ್ಲಿ ಭೇಲಸಾದ ಉಪ ಚುನಾವಣೆಯಲ್ಲಿ ಪ್ರಬಲ ಬಹುಮತದಿಂದ ವಿಜಯಿಯಾಗಿ ೫೫ನೇ ಎಪ್ರಿಲ್ ೧೬ರಿಂದ ಪುನಃ ಮಧ್ಯಭಾರತದ ಮುಖ್ಯಮಂತ್ರಿಯಾಗಿ ಆರಿಸಲ್ಪಟ್ಟರು.

ಮಧ್ಯ ಪ್ರದೇಶವು ನಿರ್ಮಾಣಗೊಂಡ ಮೇಲೆ ಇವರೇ ಮುಖ್ಯಮಂತ್ರಿಯಾಗಬೇಕೆಂಬ ವಿವಾದ ನಡೆದಿದ್ದರೂ ವಯೋವೃದ್ಧ ನಾಯಕ ಸ್ವರ್ಗೀಯ ಪಂ. ರವಿಶಂಕರ ಶುಕ್ಲರ ಕಾರಣದಿಂದ ಶ್ರೀ ಜೈನರು ಅಸ್ಥಾನವನ್ನೇರಲಿಲ್ಲ. ಅಲ್ಲದೇ ಶ್ರೀ ಶುಕ್ಲರು ದಿವಂಗತರಾದಮೇಲೂ ಅಲ್ಲಿನ ರಾಜಕೀಯ ವಿವಾದಗಳಿಂದಾಗಿ, ಡಾ. ಕೈಲಾಸನಾಥ ಕಟ್ಜೂರನ್ನು ಮುಖ್ಯ ಮಂತ್ರಿಯಾಗಿ ಆಮಂತ್ರಿಸಬೇಕಾಗಿ ಬಂತು. ಈ ನಡುವೆ ಶ್ರೀ ಜೈನರು ಮಧ್ಯ ಪ್ರದೇಶದ ರಾಜಕೀಯ ದ್ವಂದ್ವತೆಯಲ್ಲಿ ತೋರಿಸಿದ ದೂರದರ್ಶಿತ್ವ ಹಾಗೂ ಕಾರ್ಯಕುಶಲತೆಗಳೇ ಕಾಂಗ್ರೆಸ್ ವರಿಷ್ಠರ ದೃಷ್ಟಿಯನ್ನೆತ್ತ ಅಪಹರಿಸಿದುವು. ಮತ್ತು ಇಂದು ಇವುಗಳ ಕಾರಣದಿಂದಲೇ ಶ್ರೀ ಜೈನರು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗುವ ಅವಕಾಶವೊದಗಿ ಬಂದಿದೆ.

ಶ್ರೀ ಜೈನರ ಅನುಭವಿಕ ಕಾರ್ಯದಕ್ಷತೆ ಹಾಗೂ ಸಂಘಟನಾ ಸಾಮರ್ಥ್ಯದಿಂದ ಕಾಂಗ್ರೆಸ್ ಪುನಃಸಬಲ ಪ್ರಭಾವೀ ಪ್ರಗತಿಶೀಲವಾಗಿ ಪರಿಣಾಮ ಹೊಂದ ಬೇಕೆಂಬುದೇ ಎಲ್ಲರ ಅಪೇಕ್ಷೆ. ಇದಕ್ಕೆ ಬೇಕಾದ ಶಕ್ತಿಯನ್ನು ಪರಮಾತ್ಮನು ಅವರಿಗೆ ಈಯಲಿ. ಕಾಂಗ್ರೆಸ್ ಪಕ್ಷದಲ್ಲಿ ಹೊಸ ರಕ್ತ ಚಿಮ್ಮಿ ಹರಿಯಲಿ.



ಆಫೀಸುಗಳಲ್ಲಿ ಕೆಲಸ ಮಾಡುವುದಕ್ಕಾಗಿ ಬಳಸುವ ಅಂಕೆಗಳನ್ನು ಗುಣಿಸುವ ಒಂದು ಯಂತ್ರ. ಇದು ಇದೇಕ್ಯಾನಿಕ್‌ನ ಸಹಾಯದಿಂದ ನಡೆಯುವ ಪಶ್ಚಿಮ ಯುರೋಪದ ಅತ್ಯಂತ ದೊಡ್ಡವಾದ ಯಂತ್ರವಾಗಿದೆ.

ಹಿಂದುಳಿದ ಕ್ಷೇತ್ರಗಳಿಗೆ ಅಧಿಕ ಪ್ರಾಶಸ್ತ್ಯ

(೧ನೇ ಪುಟದಿಂದ)

ದೆ. ಈ ಕಾರ್ಯಕ್ರಮಗಳು ಎಂದಿನಿಂದ ಪ್ರಾರಂಭವಾಗುವುವು ಎಂದು ಮಾತ್ರ ಸದ್ಯ ನಿರ್ದಿಷ್ಟವಾಗಿ ತಿಳಿದು ಬಂದಿಲ್ಲ. ದೇಶದಲ್ಲಿ ಮನೆಮಾಡಿ ಮಹಾ ಮಾರಿಯಂತೆ ಬೆಳೆದಿರುವ ಈ ಅನಕ್ಷರತೆಯು ದೂರವಾದಂದೇ ನಮ್ಮ ದೇಶದ ಉದ್ಧಾರವಾದುದರಿಂದ, ಸರಕಾರವು ತೀವ್ರವಾಗಿ ತನ್ನ ಗುರಿಗಳನ್ನು ಕಾರ್ಯರೂಪಕ್ಕಿಳಿಸುವುದು ಅತ್ಯಗತ್ಯವೆಂದು ಮಾತ್ರ ಹೇಳಬಹುದು.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಪ್ರಣಯ ನೂದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕುಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧-೮-೦ (1 = 50)

ರೂ. 1 = 75 ಮುನಾಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited Printed & Published by K. H. Shetty, at the Navayuga press, Udipi S. India.

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

28—8—1958

ಸಂಚಿಕೆ ೫೦
NO. 50

ಸಂಸ್ಕೃತಿರಕ್ಷಣೆಯ ಮಾರ್ಗದಲ್ಲಿ—

ಸ್ತ್ರೀಯರ ಅಮೂಲ್ಯ ಕರ್ತವ್ಯ..

• ನಾನು ಕಾಲೇಜಿನಲ್ಲಿ ಅಭ್ಯಸಿಸುತ್ತಿರುವ ಯುವತಿಯರನ್ನು ಕಂಡಾಗ, ಏಪಾಹಿತೆಯರಾಗುವ ಅವರ ಕರ್ತವ್ಯವನ್ನು ಪೂರೈಸುವಂತೆ ಒತ್ತಾಯಿಸುತಿದ್ದೇನೆ. ಕಾಲೇಜು ವಿದ್ಯಾಭ್ಯಾಸವನ್ನು ಪಡೆದಿರುವ ಯುವಕರು ಹೆಂಡಂದಿರನ್ನು ಮದುವೆಯಾಗುವುದರಲ್ಲಿ ಅವರರವನ್ನು ವ್ಯಕ್ತಪಡಿಸುತ್ತಿಲ್ಲ. ಮದದಿಯೆಂದರೆ ಕುತ್ತಿಗೆಗೊಂದು ಕೊರಡು ಎಂದವರು ಭಾವಿಸುತ್ತಾರೆ. ಯುವತಿಮರೇ ತಮ್ಮ ವಿವಾಹದ ವಿಷಯದಲ್ಲಿ ಮುಂದಾಗುವರೆಂದವರು ಯೋಚಿಸುತ್ತಾರೆ. ಯುವಕರ ಮಾರು ಕಟ್ಟೆಯಿರುವುದೇ ಹೊರತು ಯುವತಿಯರದಲ್ಲವೆಂದವರು ತಿಳಿಯುತ್ತಾರೆ. ಇದರ ಅರ್ಥವೇನೆಂದು ಸ್ತ್ರೀವು ಊಹಿಸಿರಬಹುದು. ಯುವಕರು, "ಇಲ್ಲ, ಇಲ್ಲ, ನಾನು ಕೊಂಡುಕೊಳ್ಳಬಯಸುವುದಿಲ್ಲ" ಎನ್ನಬಹುದು; ಆದರೆ, ಯುವತಿಯರು ಮಾತ್ರ "ಇಲ್ಲ, ಇಲ್ಲ, ನೀನು ನಮ್ಮನ್ನು ಕೊಳ್ಳಲೇಬೇಕು." ಎನ್ನುವುದರ ಸಾರಾಂಶವೇ ಹುಡುಗರ ಮಾರುಕಟ್ಟೆ ಎಂದು. ಈ ಕಾರಣದಿಂದಲೇ ವಿವಾಹವೆಂಬುದೊಂದು ಇಂದಿನ ದಿನಗಳಲ್ಲಿ ಹೆಮ್ಮರವಾಗಿ ಕಷ್ಟಪ್ರದವಾಗಿ ಪರಿಣಮಿಸಿದೆ. ಹಿಂದಿನ ಕಾಲದಲ್ಲಾದರೋ ಹುಡುಗಿಯರಂತೆಯೇ ಹುಡುಗರಿಗೂ ಮದುವೆಯಾಗುವ ಬಗ್ಗೆ ಆಸುರವಿತ್ತು. ಹೆತ್ತವರಿಗೂ ತಮ್ಮ ಮಕ್ಕಳ ಮದುವೆಯನ್ನು ಬಹು ಶೀಘ್ರವಾಗಿಯೇ ಮುಗಿಸಬೇಕೆಂಬ ಬಯಕೆಯೂ ಇತ್ತು. ಹುಡುಗರು ಇಂದು ದೂರ ಸೆಟೆದುನಿಂತು ಅಂಗಡಿಯನ್ನು ಪ್ರವೇಶಿಸಲು ಹಿಂಜರಿಯುವಂತಾಗಲು ಏನು ಕಾರಣ? ಅವರು ಹೊರಗಡೆಯೋ ಹಿಂಗಡೆಯೋ ನಿಂತು, ಅಂಗಡಿಯ ಕಿಟಕಿ ಬಾಗಿಲುಗಳನ್ನು ನೋಡುತ್ತಾರೆಯೇ ಹೊರತು ಒಳಗೆ ಬರಲು ಬಯಸುವುದಿಲ್ಲ. ಎಂದರೆ, ಅವರು ಕೊಂಡುಕೊಳ್ಳುವ ಬಗ್ಗೆ ತುಂಬ ಆಸಕ್ತಿಯಿರುವವರಂತೆ ತೋರಿಸಿಕೊಳ್ಳುತ್ತಾರೆಯೇ ಹೊರತು ಸರಕನ್ನು ಕೊಂಡೊಯ್ಯಲು ಮಾತ್ರ ಸಿದ್ಧರಿಲ್ಲ. ಇದೇ ರೀತಿಯ ವ್ಯಾಪಾರವು ತೀರಕೆಟ್ಟದು. ನಾನು ಹೇಳಿದರೂ ಅವರು ಅತ್ತ ಗಮನಿಸುವುದಿಲ್ಲ. ಅವರು ತೀರ ವಿದ್ಯಾವಂತರೂ ಬುದ್ಧಿವಂತರೂ ಆಗಿದ್ದಾರೆ. ಅವರ ದೂರದರ್ಶಿತನವು" ಹೊಣೆಗಾರಿಕೆಯನ್ನು ಸಾಧ್ಯವಾದಷ್ಟು ತಡವಾಗಿ ವಹಿಸಿಕೊಳ್ಳಬೇಕು" ಎನ್ನುವಷ್ಟರ ವರೆಗೂ ಮುನ್ನಡೆದಿದೆ.

• ಹೊಣೆಗಾರಿಕೆ ಹೊರುವುದನ್ನು ಹಿಂದೂಡುವುದರಿಂದ ಪ್ರಯೋಜನವೇನು? ಹೀಗೆ ದಿನ ದೂಡಲು ಬಯಸುತ್ತಿರುವವರು ದಿನೇ ದಿನೇ ಒಂದು ಕೆಲಸವನ್ನು ಮುಂದೂಡುವುದಕ್ಕಿಂತ ತ್ವರಿತಗತಿಯಲ್ಲಿಯೇ ಮುಗಿಸಿ ಕೈತೊಳೆದು ಕೂರುವುದು ಶ್ರೇಯಸ್ಕರ (ಇಂದು ನಾಳೆಯೆನ್ನದೆ ಕಲಿತವನೇ ಕಡು ಜಾಣ) ಎಂಬ ಗಾದೆ ಮಾತನ್ನು ಪದೇ ಪದೇ ಕೇಳುತ್ತಿರುತ್ತಾರೆ. ಕಾಲವಿಲಂಬವೆಂಬುದು ಸಮಯವನ್ನು ಪಹರಿಸುವ ಚೋರ. ಆದುದರಿಂದ ಕಳೆದುಹೋದ ಸಮಯವನ್ನು ಮತ್ತೆ ಅವರು ಪಡೆಯಲಾರರು. ನಾನು ಈ ಬಗ್ಗೆ ಹೇಳುವುದು ಉಚಿತವಲ್ಲ; ಅವರ ಪ್ರಾಧ್ಯಾಪಕರೇ ಅವರಿಗೆ ತಿಳಿಹೇಳಬೇಕು. ಆದರೆ, ಪ್ರಾಧ್ಯಾಪಕರು ಹುಡುಗರಿಗೆ ಜೇಳಲು ಅಂಜುತ್ತಾರೆ. ಅಲ್ಲದೇ ಅವರು ತಮ್ಮ ವಿದ್ಯಾರ್ಥಿಗಳನ್ನೂ ಹೆದರುತ್ತಾರೆ. ಹೀಗಿದ್ದರೂ ಹುಡುಗಿಯರೆಂದರೆ, ಅವರು ಭಯಪಡುವುದಿಲ್ಲ. ಹುಡುಗರವರನ್ನು ಅರ್ಥಮಾಡಿಕೊಳ್ಳದೆ ಒಂದುಗೂಡಿ ಕಾಲೇಜಿನ ಅಧಿಕಾರಿಗಳಿಗೆ ಕೀಟಲೆಕೊಡಲಾರಂಭಿಸುತ್ತಾರೆ. ಆದರೆ, ಹುಡುಗಿಯರು ಹೀಗೆ ಮಾಡಲು ಇದುವರೆಗೂ ಪ್ರಾರಂಭಿಸಿಲ್ಲ. ಸ್ವಾಭಾವಿಕವಾಗಿ ಜನ್ಮತಃ ಹುಡುಗಿಯರು ಹುಡುಗರಿಗಿಂತ ಜವಾಬುದಾರಿಯುತರಾದುದರಿಂದ ಹುಡುಗಿಯರೆಂದೂ ಈ ರೀತಿ ಗುಲ್ಲೆಬ್ಬಿಸಲಾರರು. ಎಲ್ಲ ಪ್ರಾಣಿಗಳ ಪರಿಸ್ಥಿತಿಯೇ ಹೀಗೆ. ಪ್ರಾಣಿಗಳಲ್ಲಿಯೂ ಗಂಡುಗಳಿಗಿಂತ ಹೆಣ್ಣುಗಳೇ ಉತ್ತರದಾಯಿತ್ವದ ಹೊಣೆ ಹೊರುವುವು. ಹಾಗೆಯೇ ಮಾನವರಲ್ಲಿಯೂ ಬಹಳ ಎಳೆಯ ಪ್ರಾಯದಿಂದಲೇ ಹೆಣ್ಣು ಹುಡುಗಿಯರು ಹೊಣೆಗಾರಿಕೆಯನ್ನು ಹೊರುತ್ತ ಬರುತ್ತಿರುವರು. ಅವರಿಗದರ ಅರಿವೂ ಆಗುವುದು ನಿಜವಾಗಿಯೂ ನನ್ನ ಅಭಿಮತದಂತೆ ಸ್ತ್ರೀಯರಿಗೆ ಕಾಲೇಜು ಶಿಕ್ಷಣದ ಅಗತ್ಯವಿಲ್ಲ. ಅವರಿಗೆ ಬೇಕಾದ ಎಲ್ಲ ವಿದ್ಯೆಯನ್ನೂ ಅವರು ತಾವು ಹುಟ್ಟಿ ಬರುವಾಗಲೇ ಅರ್ಜಿಸಿಕೊಂಡು ಬಂದಿದ್ದಾರೆ. ಆದುದರಿಂದ ಅವರ ಮೆದುಳಿನೊಳಗೆ ಅನಾವಶ್ಯಕವಾದ ವಿದ್ಯೆಯನ್ನು ತುರುಕಿಸುವ ಅಗತ್ಯವಿಲ್ಲ. ಇದು ನನ್ನ ಅಭಿಪ್ರಾಯ. ಆದರೆ, ಶ್ರೀ ಎತಿರಾಜರು (ಮದ್ರಾಸಿನ ಎತಿರಾಜ ಕಾಲೇಜ್ ಫಾರ್ ವಿಮನ್‌ದ ಸ್ಥಾಪಕರು) ಹಾಗೆ ತಿಳಿಯುವುದಿಲ್ಲ. ವಿದ್ಯೆಯ ಮಾರ್ಗದಲ್ಲಿ ಹುಡುಗಿಯರಿಗೆ ಮಾಡಬೇಕಾದ ಅನೇಕ ಮಹತ್ವದ ಕಾರ್ಯಗಳಿವೆ. ಆದುದರಿಂದಲೇ ಅವರು ಹುಡುಗಿಯರಿಗಾಗಿ ಈ ಕಾಲೇಜನ್ನು ಕೊಟ್ಟಿದ್ದಾರೆ. ಈ ವರ್ಷ ಸುಮಾರು ೬೦ ಮಹಿಳೆಯರು ಪದವಿ ಪಡೆದರೆಂದವರಿಗೆ ತುಂಬ ಸಂತೋಷವಾಗಿದೆ. ಇದು ಅಲ್ಪವೇನಲ್ಲ.

ನಾನು ನೂರಸವಾಗಿ ಸದವಿಧೆಯರಾದವರಿಗೆ ಆಶೀರ್ವಾದವನ್ನು ಕೊಟ್ಟು ಶುಭಕೋರುವುದಕ್ಕಾಗಿ ಇಲ್ಲಿ ಬಂದಿದ್ದೇನೆ. ನಿಮ್ಮಲ್ಲಿ ಕೆಲವರು ಈಗಾಗಲೇ ವಿವಾಹಿತರಿರುವಿರಿ. ಉಳಿದವರೂ ಆದಷ್ಟು ಶೀಘ್ರವಾಗಿ ವಿವಾಹಮಾಡಿಕೊಳ್ಳಬೇಕು. ನಿಮ್ಮನ್ನು ಸುಖದಲ್ಲಿರಿಸಲು ಉತ್ತಮ ನಡತೆಯ, ಸಾಕಷ್ಟು ವಿದ್ಯಾವಂತರಾದ ಹುಡುಗರು ದೊರೆಯಲೆಂದು ಹಾರೈಸುವೆ. ನೀವು ಅಭ್ಯಾಸ ಮಾಡಿದುದರ ಬಗ್ಗೆ ವ್ಯಸನ ಪಡಬೇಡಿರಿ. ನೀವು ಏನೇನನ್ನು ಪಡೆದಿರುವಿರೋ ಅದು ಹಾಗೆಯೇ ಶಾಶ್ವತವಾಗಿ ಉಳಿಯಬಲ್ಲುದು. ಏಕೆಂದರೆ, ನೆನಪಿನಲ್ಲಿಡುವುದಕ್ಕಿಂತಲೂ ಮರೆತುಬಿಡುವುದು ಅತಿ ಪ್ರಯಾಸಕರವಾದ ಕೆಲಸವೆಂಬುದನ್ನು ಮರೆಯಬೇಡಿರಿ.

ಒಂದು ರಾಷ್ಟ್ರದ ಸಂಸ್ಕೃತಿಯನ್ನು ಉಳಿಸಿಕೊಡುವವರು ಸ್ತ್ರೀಯರು. ಪುರುಷರು ರಾಷ್ಟ್ರವು ತೋರಿಸಿದ ಸಂಸ್ಕೃತಿಯ ಪಥದಲ್ಲಿ ಭ್ರಮಿಸುವಾಗ ಹಾದಿ ತಪ್ಪುವರು. ಅಲ್ಲದೇ ಅವರು ಬಹಳ ಮುಂದುವರಿಯಲೂ ಬಯಸಬಹುದು. ಆದರೆ, ರಾಷ್ಟ್ರದ ನಾರಿಯರು ಈ ಸಂಸ್ಕೃತಿಯನ್ನು ಏಕ ಪ್ರಕಾರವಾಗಿ ಉಳಿಸಿಕೊಂಡಿರುವರೆಲ್ಲದೇ, ಅತ್ಯಂತ ಸ್ವಗತಿಯಿಂದ ಓಡುತ್ತಿರುವುದನ್ನು ತಡೆದು ನಿಲ್ಲಿಸಿರುವರು. ದೇಶದ ಸಂಸ್ಕೃತಿಯು ಸರಿಯಾದ ದಿಸೆಯಲ್ಲಿ ವಿಕಾಸಹೊಂದುವಂತೆ ಸ್ತ್ರೀಯರು ಪ್ರಯತ್ನಶೀಲರಾಗಬೇಕು. ಅವರು ತೀವ್ರವಾಗಿ ಮುಂದುವರಿದರೆ, ಆಗ ಅವರ ಹಿತ ತತ್ವಗಳಲ್ಲಿ ಕೆಲವು ಮುಗ್ಗಿಸಿ ಕುಸಿದು ಬೀಳುವುದು ಖಂಡಿತ.

ತಮ್ಮ ಸಂಸ್ಕೃತಿಯ ಬಗ್ಗೆ ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ, ಭಾರತೀಯ ಸ್ತ್ರೀಯರು ಸಂಸ್ಕೃತದಲ್ಲಿರುವ ಹಾಗೂ ಇತರ ಭಾಷೆಗಳಲ್ಲಿಯೂ ಬರೆಯಲ್ಪಟ್ಟಿರುವ ಶ್ರೇಷ್ಠ ವರ್ಗದ ಕೃತಿಗಳನ್ನು ಓದಿ ಅಭ್ಯಾಸಮಾಡಬೇಕು. ಇಂಗ್ಲಿಷ್ ಭಾಷೆಯಿಂದ ಈ ಬಗ್ಗೆ ಅಧುನಿಕ ತಿಳುವಳಿಕೆಯು ಬರುವುದು. ಆದುದರಿಂದ, ಆ ಭಾಷೆಯಲ್ಲಿನ ಅತ್ಯುತ್ತಮ ಪುಸ್ತಕಗಳನ್ನೂ ಸ್ತ್ರೀಯರು ಓದಿಕೊಳ್ಳಬೇಕು; ಮತ್ತು ಈ ಮೂಲಕ ದೊರೆಯಬಹುವಾದ ಜ್ಞಾನವನ್ನೂ ಸಂಪಾದಿಸಿಕೊಳ್ಳಬೇಕು.

(೨೦—೮—೫೮ರಂದು ಎತಿರಾಜ ಮಹಿಳಾ ಕಾಲೇಜಿನಲ್ಲಿ ರಾಜಾಜಿ ಮಾಡಿದ ಭಾಷಣದ ಸಾರ.)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. **MANGALORE.** Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

'ನವಯುಗ' ವಾರಪತ್ರಿಕೆ
ಉಡುಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

ವಾರದ ಸಣ್ಣ ಕಥೆ—

ಹರತಾಳದಲ್ಲಿ ಹರಿದಾಟ

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ.

ಲಾಲಾ ಧನಪತಿಲಾಲರು ತಮ್ಮ ಮಜೂರರ ಬೇಡಿಕೆಗಳನ್ನು ಮನ್ನಿಸಲು ತಮ್ಮ ಅಸಮರ್ಥತೆಯನ್ನು ಪ್ರಕಟಿಸಿದರು. ತಮ್ಮ ಕಾರಖಾನೆಗೂ ಅವರು ಬಾಗಲಿಕ್ಕಿದರು. ಮಜದೂರ ಸಂಘದ ಅಧ್ಯಕ್ಷರೊಡನೆ "ತಾನು ಈ ಕಾರಖಾನೆಗಾಗಿ ಸುರಿದ ಲಕ್ಷ ಲಕ್ಷ ರೂಪಾಯಿ ಬಡ್ಡಿಯೂ ದೊರೆಯುವುದು ಅನ್ಯಾಯವೆಂದು ತಾವು ಭಾವಿಸಿದಂತೆ ತೋರುವುದೆ"ಂದು ಸ್ಪಷ್ಟವಾಗಿಯೇ ನುಡಿದಿದ್ದರವರು. ಹೀಗೆ ಆದರೆ, ಕಾರಖಾನೆಯೂ ಅವರದಾಗುವುದಿಲ್ಲ. ಬಂದ ಹಣವೆಲ್ಲ ಮಜೂರರಿಗೇನೇ ಆದರೆ, ಲಾಭ ದೊರೆಯದೆ ಹೋದರೆ, ನಷ್ಟಕ್ಕಾಗಿ ಕಾರಖಾನೆಯನ್ನಾದರೂ ಯಾಕೆ ನಡೆಸಬೇಕು?

ಲಕ್ಷಗಟ್ಟಲೆಯ ರೂಪಾಯಿ .. ಮತ್ತದರ ಮೇಲಿನ ಬಡ್ಡಿ! ಒಂದು ಹೆರಕು ಮುರುಕು ಅರೆಕತ್ತಲ ಗುಡಿಸಲಿನಲ್ಲಿ ಭಾರವಾದ ಉಸಿರು ಬಿಡುತಿದ್ದ ವಿಮಲೆ ಸಾಹುಕಾರರು ಹೇಳುವುದೂ ನಿಜವೆಂದು ಒಪ್ಪಿದಳು. ಅವರಿಗೆ ತಾವು ಸುರಿದ ಲಾಕ್ಷಾಂತರ ರೂಪಾಯಿ, ಬೇಡ, ಅದರ ಮೇಲಿನ ಬಡ್ಡಿಯೂ ಸಿಗುವುದಿಲ್ಲವಾದರೆ, ಕಾರಖಾನೆಯನ್ನು ಏತಕ್ಕಾಗಿ ನಡೆಸುವರು?

ಆದರೆ, ವಿಮಲೆಯ ಪತಿ ಕಮಾಲ ಅದನ್ನು ಮನ್ನಿಸಲಾರ. ಆವನು ಈಗೀಗಲೂ ಹೇಳುತ್ತಿದ್ದ—"ಶ್ರೀಮಂತರ ಈ ಮಾತುಗಳೆಲ್ಲವೂ ನಿರಾಧಾರ. ಹಣದ ಮೇಲಿನ ಬಡ್ಡಿಯೂ ಅವರಿಗೆ ದೊರೆಯುವುದಿಲ್ಲ! ಹ್ಯೂಂ, ನಾಲ್ಕಾಣೆಗೆ ಒಂದು ಗಜದಂತೆ ಮಾರುತಿದ್ದ ಬಟ್ಟೆಯನ್ನು ರೂಪಾಯಿಗೊಂದು ಗಜದಂತೆ ಮಾರುತ್ತಿರುವಾಗಲೂ ನೌಕರರಿಗೆ ಒಂದಾಣೆಯ ಬದಲು ಒಂದೂವರೆ ಆಣೆ ಕೊಡಲು ಲಾಭ ದೊರೆಯುವುದಿಲ್ಲ ಎಂಬ ಮಾತನ್ನು ಯಾರು ತಾನೇ ನಂಬುವರು? ಮಜೂರ ಸಂಘದ ಅಧ್ಯಕ್ಷ ಈ ಪ್ರಶ್ನೆಯ ಬಗ್ಗೆ ಲಾಲಾಜಿಯವರೊಡನೆ ಈ ವಾರ ಮಾತುಕತೆ ನಡೆಸುತಿದ್ದಾರೆ. ಏನಾಗುವುದೋ ನೋಡೋಣ... ಮತ್ತೇನಾದೀತು? ಲಾಲಾಜಿ ತಲೆ ಬಗ್ಗಿಸಿ ಮಜೂರರ ಕೇಳಿಕೆಗೆ ಹ್ಯೂಂ ಎನ್ನಲೇಬೇಕು. ಹೀಗಾಗದೆ ಹೋದರೆ ಅವರ ಉತ್ಪಾದನೆಯೂ ನಿಂತು ಹೋಗುವುದು!"

ಇದಕ್ಕೆ ಯಾವ ಪ್ರತ್ಯುತ್ತರವನ್ನೂ ಪತ್ನಿಯಿಂದ ಹಾರೈಸದೆ ಆತ ಹೋಗಿಬಿಟ್ಟಿದ್ದ.

ಸಂಜೆಯ ಹೊತ್ತು ಈ ದಿನಗಳಲ್ಲಿ ಕಾರಖಾನೆಯ ಹೆಬ್ಬಾಗಿಲ ಹೊರಗೆ ಮಜೂರರ ಸಭೆಯು ನಡೆಯುತ್ತಿದೆ. ಮಜೂರರ ಧೈರ್ಯವನ್ನು ಹೆಚ್ಚಿಸಿ, ಶಾಂತಿಪೂರ್ವಕವಾಗಿ ಹರತಾಳವನ್ನಾಚರಿಸಲು ಹಾಗೂ ತಮ್ಮ ಆಕಾಂಕ್ಷಾ ಫಲವನ್ನು ಶೀಘ್ರವಾಗಿ ಪಡೆಯಲು ಈ ಸಭೆಗಳು ನೆರವಾಗುವುವು.

ಮಜೂರ ಸಂಘದ ಕಾರ್ಯದರ್ಶಿಯು ಬಂದು, "ಹರತಾಳದಲ್ಲಿ ಯಾವುದೇ ಹಿಂಸಾಚರಣೆ ನಡೆಯಬಾರದು, ವಿದೇಶೀ ಸರಕಾರದೊಡನೆ ವ್ಯವಹರಿಸಿದಂತೆ ಕ್ರೂರಾಚರಣೆ ನಡೆಯಬಾರದು. ಇಷ್ಟು ಸಣ್ಣ ವಿಚಾರಗಳಿಗಾಗಿ ನಾವು ನಮ್ಮ ಸರಕಾರವನ್ನು ಚಿಂತಿತಗೊಳಿಸಬಾರದು. ಅದರೆದುರು ಮಹಾ ಸಮಸ್ಯೆಗಳಿವೆ. ಇಂತಹ ಸ್ಥಿತಿಯಲ್ಲಿ ನಮ್ಮ ಹರತಾಳದ ಕಡೆಗೆ ಸರಕಾರದ ಗಮನ ಹರಿಯುವಂತೆ ಮಾಡಬಾರದು; ಅಲ್ಲದೆ, ಇದು ಒಡೆಯ—ನೌಕರರ ಜಗಳ. ಇವನ್ನೂ ಶಾಂತಿಯಿಂದಲೇ ವಿರೋಧ ಪ್ರದರ್ಶನದಿಂದಲೇ ತೀರ್ಮಾನಿಸಿಕೊಳ್ಳಬಹುದು" ಎಂದು ಹೇಳಿದ್ದನು.

ಆದರೆ, ಈ ಗಲಭೆಯು ಶಾಂತಿಯಿಂದ ಪೂರ್ಣಗೊಳ್ಳದೆಂದು ವಿಮಲಳಿಗೆ ಅಂಜಿಕೆ ಮಾಡಿತು. ನೆರೆಯ ಮಜೂರರ ಮನೆಗಳಲ್ಲಿ ಬೆಂಕಿಯುರಿಯದಿರುವುದೂ ಆಕೆಗೆ ತಿಳಿಯದಿರಲಿಲ್ಲ. ಹರತಾಳದ ಮೂರನೆಯ ವಾರವಿದಾಗಿತ್ತು. ಅದರೂ ಲಾ ಲಾ—ಮಜದೂರ ಸಂಘಗಳ ನಡುವೆ ಹೂವುದೇ ಸಮಾಧಾನವಾಗುವ ಲಕ್ಷಣಗಳು ತೋರಿ ಬರುತ್ತಿರಲಿಲ್ಲ. ಎಂದಿಗೂ ಸಮಾಧಾನವಾಗುವುದೇ ಇಲ್ಲವೆ? ಯಾರಿಗೆ ಗೊತ್ತು? ಹೀಗೆಯೇ ಇನ್ನೂ ಒಂದರ್ಧ ವಾರ ನಡೆದರೆ ಮಜೂರರ ಗತಿ?

ವಿಮಲಳ ಬುದ್ಧಿ ಚಕ್ರದಂತೆ ಭ್ರಮಿಸತೊಡಗಿತು. ಈ ವಾರಾನಂತರ ತನ್ನ ಮನೆಯ ವೆಚ್ಚವನ್ನು ನೋಡಿಕೊಳ್ಳುವುದಾದರೂ ಹೇಗೆಂದು ಆಕೆಗೆ ಹೊಳೆಯಲಿಲ್ಲ. ಎರಡು ದಿನಗಳಲ್ಲಿ ಧಾನ್ಯದ ಒಂದು ಕಾಳೂ ಉಳಿಯಲಾರದು ನಗದಿ ರೂಪಾಯಿಯನ್ನಾಕೆ ಈ ಮನೆಯಲ್ಲಿರಲಿ, ತನ್ನ ತಂದೆಯ ಮನೆಯಲ್ಲೂ ಕಂಡಿರಲಿಲ್ಲ. ಹೀಗಾದರೂ ದಿನಗಳು ಸುಖವಾಗಿ ಸಾಗುವುದೇ ಆಕೆಯ ಪಾಲಿಗೆ ಬಂದ ಭಾಗ್ಯ. ಆದರೆ, ಆಕೆಗೆ ಬುದ್ಧಿ ತಿಳಿದನೆಲಾದರೂ ಧನವುಳಿಸುವುದು ಸಾಧ್ಯವಿದ್ದರೂ ಮಜೂರರ ಪಾಲಿಗೆ ಅದು ಕೇವಲ ಸ್ವಪ್ನವೇ ಆಗಿರುತಿತ್ತು.

ತನಗರಿವಿಲ್ಲದಂತೆಯೇ ಆಕೆಗೆ ಮಜೂರ ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಯರಮೇಲೆ ಕ್ರೋಧವುದ್ಭವಿಸಿತು. ಏನೋ ಸ್ವಲ್ಪ ದೊರೆಯುತಿತ್ತು; ಅದರಿಂದ ಸಲ್ಪ ಕಾಳು ಕಡ್ಡಿ ಸಿಗುತಿತ್ತು; ಅವನ್ನು ಮಜೂರರು ಕೊಂಡು ಏನೋ ಒಂದು ಬಗೆಯಲ್ಲಿ ಹೊಟ್ಟೆಯ ಉರಿಯನ್ನು ಶಾಂತಗೊಳಿಸುತಿದ್ದರು. ಆದರೆ, ಒಂದಾಣೆಯ ಬದಲು ಒಂದೂವರಾಣೆಯ ಬೇಡಿಕೆ ಪೂರ್ತಿಯಾಗುವ ಸಂಬಂಧದಲ್ಲಿ ಹಸಿವೆಯಿಂದಲೇ ಇವರು ಸಾಯಬೇಕಾಗಿ ಬಂದಿತ್ತು.

ಇಂದು ಮುಂಜಾವಿನಿಂದಲೂ ನಂದಿನಿಯ ಮಗಳು ಹೇಗೆ ಮರುಗುತಿದ್ದಳು! ಪಾಪ, ತಾಸುಗಟ್ಟಲೆ ಅಳುತಿದ್ದಳು! ವಿಮಲೆಯ ದನ್ನು ತಾಳಲಾರದೆ ಅಕ್ಕಿಗೆ ಹೋಗಿ ವಿಚಾರಿಸುವಾಗ, ಆಕೆ ಗಂಜಿಗಾಗಿ ಕೂಗುತಿದ್ದಾಳೆಂದು ತಿಳಿದು ಬಂತು! ಎರಡು ವಾರ ಹೀಗೆ—ಹಾಗೆ ದಿನಗಳೆದು ಈಗ ಆ ಸಂಸಾರವು ಕಡಲೆ ಕಡಿದ-ಕೊಂಡು ದಿನದೂಡುತಿತ್ತು. ಹುಡುಗಿಗಾಗಿ ಗಂಜಿ ಎಲ್ಲಿಂದಬರಬೇಕು? ಕೊನೆಗೆ ವಿಮಲೆ ಆಕೆಯನ್ನು ತನ್ನ ಮನೆಗೆ ಕರೆದೊಯ್ದು ಗಂಜಿ ಕುಡಿಸಿ ಸುಮ್ಮನಾಗಿಸಿದ್ದಳು ತನ್ನ ತಂದೆ ಒಂದಾಣೆಗೆ ಒಂದೂವರಾಣೆಯ ಬೇಡಿಕೆಯನ್ನು ಮುಂದಿಟ್ಟು, ಹರತಾಳವಾಚರಿಸುತ್ತಿರುವುದರಿಂದ, ತನ್ನ ಸಂಸಾರ ಉಪವಾಸ ಬೀಳಬೇಕಾಯಿತೆಂದು ಆ ಸಣ್ಣ ಮಗುವಿಗೆ ಕೇಗೆ ಗೊತ್ತಾಗಬೇಕು?

ಆನಂದಿನಿಯೂ ಹತಭಾಗ್ಯೆ ಎಂದು ವಿಮಲಳಿಗೆ ತಿಳಿದುಹೋಗಿತ್ತು. ಆರು ತಿಂಗಳ ಕೆಳಗೆ ಆಕೆಯ ಪತಿ ಈ ಲೋಕದಿಂದ ವಾರಾಗಿ ಹೋಗಿದ್ದನು. ಅತ್ತೆ ಮನೆಯಲ್ಲಿ ಆಕೆಯ ಭಾವ ಹಾಗೂ ಅತ್ತೆಯಿದ್ದಾರೆ. ಆದರೆ, ಭಾವನ ಮಡದಿ ತೀರಿಹೋಗಿದ್ದಳು. ತನ್ನ ತಮ್ಮನು ಮೃತ್ಯುಮುಖನಾದ ಮೇಲೆ ಮೂರು ತಿಂಗಳುಗಳ ವರೆಗೆ ಆತನು ನಂದಿನಿಯನ್ನೂ ಮಗುವನ್ನೂ ಸಾಕಿದ್ದನು. ಮುಂದೆ, ಈಗಿನ ತುಟ್ಟಿಯ ಸಮಯದಲ್ಲಿ ಆ ಮರಣಾಂತ ಪಾಲಿಸುವುದು ತನ್ನಿಂದ ಅಸಾಧ್ಯವೆಂದಾತ ಆಡಿ ಬಿಟ್ಟಿದ್ದನು. ಆದರೂ ಆ ಮನೆಯ ಗೃಹಿಣಿಯಾದರೆ, ತಾನು ಅವರನ್ನುಳ್ಳಿಸಲು ಸಿದ್ಧನೆಂದೂ ನುಡಿದಿದ್ದನು.

ಈ ಸೂಚನೆಯನ್ನು ಕೇಳಿ ನಂದಿನಿಗೆ ಏಟು ಬಿದ್ದಂತಾಯಿತು. ಆಕಾಶವೇ ಕಳಚಿ ಉರುಳಿದಂತಾಯಿತು. ತನ್ನ ಪತಿಯ ವಿರಹದ ದುಃಖಾಶ್ರುವಿನ್ನೂ ಆರುವಮೊದಲೇ ಈ ಕಲಹೆಯನ್ನು ಕೇಳಿ, ಬೆಂಕಿಗೆ ಉದ್ವೇಗಜಿದಂತಾಯಿತು. ಆಕೆ ಈ ಭಾವನ ಮಾತನ್ನು ತಿರಸ್ಕರಿಸಿ ಸೋದರನ ಮನೆಗೆ ಬಂದಿಳಿದಳು.

ನಂದಿನಿಯ ಸೋದರ ಮಜೂರನಾದರೂ ಆತನ ಹೃದಯವು ಉತ್ತಮ ನಾಗರಿಕನಂತೆ ಸಂವೇದನಶೀಲವಾಗಿತ್ತು. ವಿಧವೆ ತಂಗಿಯ ಮಾನಸಿಕ ಪೀಡೆಯಿಂದ ಆತ ಚಿಂತಿತನಾದ. ನಂದಿನಿ ಮನೆಗೆ ಬಂದವಳೇ ಆತನೊಡನೆಂದಳು, "ಅಣ್ಣಾ, ನಾನೂ ನಿನ್ನೊಡನೆ ಕೂಲಿಗಾಗಿ ಹುಡಿಯುತ್ತೇನೆ. ಭಾವನಂತಹ ಕುಡುಕನ ಮಡದಿಯಾಗಿರಲು ನಾನು ಸಿದ್ಧಳಿಲ್ಲ."

ಆಕೆಯಲ್ಲಿ ಧೈರ್ಯದುಂಬಿಸುತ್ತ ಆತ ಹೇಳಿದ—"ನಂದಿನಿ, ನೀನು ನನ್ನ ತಂಗಿ. ನನ್ನ ಬೈಕಾಲು ಅಲ್ಲಾಡುವವರೆಗೆ ನಿನ್ನನ್ನು ಕಾಪಿಡಿರ ಬಿಡಲಾರೆನು. ನೀನು ದುಡಿಯಬೇಕಾಗಿಲ್ಲ ನಿನ್ನ ಹೊಟ್ಟೆಯು ನನಗೇನೂ ಭಾರವೆನಿಸುವುದಿಲ್ಲ."

ಆದರೆ, ವಿಧಿಯನ್ನು ವಿರುವವರಾರು? ಪರಿಸ್ಥಿತಿಗಳು ಹೇಗೆ ಬಂದು ನಿಲ್ಲುವೆಂದು ಯಾರಿಗೆ ಗೊತ್ತಾಗುವುದು? ಪಾಪ, ಆಕೆಯ ಸೋದರನಿಗೆ, ತನ್ನ ಕಾರಖಾನೆಯಲ್ಲಿ ಎರಡೇ ತಿಂಗಳೊಳಗೆ ಇಂತಹ ಹರತಾಳನಡೆದು ತಂಗಿಯನ್ನೂ ಆಕೆಯ ಮಗು ಉಪವಾಸ ಕೆಡಹಬೇಕಾಗುವುದೆಂದು ಮೊದಲೇ ತಿಳಿದಿರಲಿಲ್ಲ—ತನ್ನ ಕೈಕಾಲು ಗಟ್ಟಿ ಮುಟ್ಟಾಗಿದ್ದರೂ, ತನ್ನ ಮಾತಿಗೆ ತಪ್ಪುವ ಪರಿಸ್ಥಿತಿ ಬಂದೀತೆಂದು ಹೊಳೆಯಲಿಲ್ಲ. ಅವನಿಂದ ಬೇರೆ ಉದ್ಯೋಗ ಮಾಡುವುದು ಅಸಾಧ್ಯವಿತ್ತು. ಹೀಗೆ ಮಾಡಿದರೆ, ಆತನು ತನ್ನ ಮಜೂರ ಬಂಧುಗಳ ಹಾಗೂ ಸಂಘದ ಎದುರಲ್ಲಿ ಅಪರಾಧಿಯಾಗುತ್ತಾನೆ ತನ್ನ ಅಸಮರ್ಥತೆಗಾಗಿ ಆತಲಜ್ಜೆ ಪಟ್ಟುಕೊಂಡ.

ನಂದಿನಿಯಂತಹ ಅದೆಷ್ಟು ಸ್ತ್ರೀ ಪುರುಷ ಬಾಲಕ ಬಾಲಕಿಯರು ಈ ರೀತಿಯ ಹರತಾಳದಿಂದ ಕಂಗೆಟ್ಟಿದ್ದಾರೆಂದು ವಿಮ

(೧೧ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ



ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು. ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.



ಏಕಲಿಪಿಯ ಪ್ರಶ್ನೆ ದೂರವಿರಲಿ—

ಕನ್ನಡಿಗರು ಕನ್ನಡವನ್ನು ಉಳಿಸಬೇಕು

ನಮ್ಮ ರಾಷ್ಟ್ರಾಧ್ಯಕ್ಷರು ಈ ಬಾರಿ ಕೈಗೊಂಡ ಬೆಂಗಳೂರು ಸಂದರ್ಶನದ ವೇಳೆಯಲ್ಲಿ ಭಾರತೀಯ ದೇವನಾಗರೀ ಪರಿಷತ್ತು ಅವರಲ್ಲಿಗೊಂದು ಶಿಷ್ಟಮಂಡಳವನ್ನು ಕಳಿಸಿತ್ತು. ಈ ಮಂಡಳಕ್ಕೆ ಉತ್ತರವೀಯುತ್ತ ಮಾನ್ಯ ರಾಷ್ಟ್ರಪತಿಗಳು ದೇವನಾಗರೀ ಲಿಪಿಯನ್ನು ಜನಪಿಯಗೊಳಿಸುವುದು ಮತ್ತು ಪ್ರಾದೇಶಿಕ ಭಾಷೆಯ ಬರವಣಿಗೆಗಾರರಿಂದ ಅದೆಷ್ಟರ ಮಟ್ಟಿಗೆ ಉಪಯೋಗಿಸಲ್ಪಡುವುದು ಎಂಬುದನ್ನು ಪರೀಕ್ಷಿಸುವುದು—ಈ ಎರಡು ಕಾರ್ಯಗಳು ತ್ವರಿತಗತಿಯಲ್ಲಿ ನಡೆಯಬೇಕೆಂದು ಅಭಿಪ್ರಾಯಪಟ್ಟರು. ಅವರ ಅಭಿಪ್ರಾಯದ ಸಾರಾಂಶವನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.

'ಸುಮಾರು ವರ್ಷಗಳಿಗೆ ಮೊದಲು ನನಗೆ ಭಾರತೀಯ ಭಾಷೆಗಳಿಗೆಲ್ಲ ದೇವನಾಗರೀ ಲಿಪಿಯನ್ನು ಸ್ವೀಕರಿಸಬೇಕೆನ್ನುವ ಏಕಲಿಪಿ ವಿಸ್ತಾರ ಪರಿಷತ್ತಿನ ಸಂಬಂಧ ಕಲ್ಪತ್ತೆಯಲ್ಲಾಯಿತು ಸಂಸ್ಕೃತದ ಪ್ರಕಾಂಡ ಪಂಡಿತರಾದ ಶ್ರೀ ಶಾರದಾ ಚರಣ ಮಿತ್ರರು ಈ ಚಳವಳದ ನಾಯಕರಿದ್ದರು. ಅವರು 'ದೇವನಾಗರ"ವೆಂಬ ಪತ್ರಿಕೆಯನ್ನು ಪ್ರಾರಂಭಿಸಿ, ಅದರಲ್ಲಿ ವಿವಿಧ ಭಾರತೀಯ ಭಾಷೆಗಳ ಲೇಖನಗಳನ್ನು ದೇವನಾಗರೀ ಲಿಪಿಯಲ್ಲಿ ಅಚ್ಚು ಹಾಕತೊಡಗಿದರು ಈ ಕಾರ್ಯ ಕೆಲವು ಸಮಯದ ವರೆಗೆ ಮುನ್ನಡೆಯಿತು ಆದರೆ, ಕಾರಣಾಂತರಗಳಿಂದ ಕಾಲದ ಹೊಡೆತದಿಂದ, ತನ್ನ ಶಕ್ತಿಯನ್ನಿದು ಕಳೆದುಕೊಂಡಿತು ಅದರೊಂದಿಗೆನೇ ಏಕಲಿಪಿ ವಿಸ್ತಾರ ಪರಿಷತ್ತು ಕೂಡ ಮಾಯವಾಯಿತು. ಹಾಗಿದ್ದರೂ ಅಂದಿನಿಂದಲೂ ನಾನು ಈ ವಿಷಯದಲ್ಲಿದ್ದ ಆಸಕ್ತಿಯನ್ನು ಕಳೆದುಕೊಂಡಿಲ್ಲ

"ಆದರೆ, ಇದೊಂದು ಪುರಾಣದ ಕಥೆ ಇತ್ತೀಚೆಗಿನ ದಿನಗಳಲ್ಲಿಯೂ ನಾನು ಹಿಂದೀ ಪ್ರೇಮಿ ಹಾಗೂ ಪಂಡಿತರೂ ಸೇರಿರುವ ಲೋಕ ಸಭೆಯ ಹಲವಾರು ಸದಸ್ಯರೊಡನೆ ಆ "ದೇವನಾಗರ"ವನ್ನು ಒಂದು ತ್ರೈಮಾಸಿಕ ಪತ್ರಿಕೆಯಾಗಿಯಾದರೂ ಪುನರ ಜ್ಜೀವಿಸುವಬಗ್ಗೆ ಮತ್ತಾಯ ಮಾಡುವುದಕ್ಕೆ ಸಮರ್ಥನಾಗಿದ್ದೇನೆ ಈ ಪತ್ರಿಕೆ ಇನ್ನೂ ಹೊರಬರಬೇಕಷ್ಟೆ ಇತರ ಭಾಷೆಗಳ ಲೇಖನಗಳನ್ನು ದೇವನಾಗರೀ ಲಿಪಿಯಲ್ಲಿ ಒದಗಿಸುವುದೊಡನೆ, ಆ ಭಾಷೆಗಳಲ್ಲಿ ಬೆಳಕುಕಂಡ ಲೇಖನಗಳನ್ನು ಹಿಂದೀ ಭಾಷೆಗೆ ಭಾಷಾಂತರಿಸಿಯೂ "ದೇವನಾಗರ" ವು ಈಯುತ್ತಿತ್ತು ಹಿಂದಿಬಲ್ಲವರು ಪ್ರಾದೇಶಿಕ ಭಾಷೆಗಳನ್ನು ಕಲಿಯಲು ಮತ್ತು ಹಿಂದಿ ತಿಳಿಯದಿರುವವರು ಹಿಂದಿಯನ್ನೆತ್ತಿಕೊಳ್ಳಲು ಇದಕ್ಕಿಂತ ಉತ್ತಮವಾದ ವಿಧಾನ ಬೇರೊಂದಿದೆಯೆನ್ನಬಹುದು ಬಹಳ ಪ್ರಾಮುಖ್ಯವೂ ಅತ್ಯಂತ ಮಹತ್ವಪೂರ್ಣವೂ ಆಗಿದ್ದ ಈ ಕಾರ್ಯವು ದುರ್ದೈವದ ವಶದಿಂದ ಅದು ಪಡೆಯಬೇಕಾದ ಮನ್ನಣೆಯನ್ನು ಪ್ರಾಪ್ತಿಸದಿರುವುದು ಶೋಚನೀಯ ಹಿಂದಿ ಸಹಿತ ಎಲ್ಲ ಭಾರತೀಯ ಭಾಷೆಗಳಿಗೂ ರೋಮನ್ ಲಿಪಿಯನ್ನು ಸ್ವೀಕರಿಸಬೇಕೆಂದು ಸೂಚಿಸುವವರೂ ಕೆಲಮಂದಿ ನಮ್ಮಲ್ಲಿದ್ದಾರೆ ಆದರೆ, ಇದೊಂದು ವಿಭಿನ್ನ ಪ್ರಶ್ನೆಯದ್ದು ಅದರ ಸರವಾಗಿಯಾಗಲೀ ವಿರೋಧವಾಗಿಯಾಗಲೀ ನಾನೀಗ ಆಡಬಯಸುವುದಿಲ್ಲ ಸದ್ಯ, ನಾವು ದೇವನಾಗರೀ ಲಿಪಿಯನ್ನೇ ಪ್ರಚಾರ ಮಾಡಿ, ಪ್ರಾದೇಶಿಕ ಭಾಷೆಗಳ ಬರಹಗಾರರು ಅದನ್ನು ಸ್ವೀಕರಿಸುವಂತೆ ಮಾಡುವುದರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕು ಈ ಕೆಲಸವು ಸಾಕಷ್ಟು ಆಸಕ್ತಿಸಹಿತವಾಗಿ ಪ್ರಾರಂಭವಾಯಿತೆಂದರೆ, ಅದೇನೂ ಆಸಂಭವವೂ ಪ್ರಯಾಸತರವೂ ಆಗಲಾರದು.

"ನಮ್ಮ ದೇಶದಲ್ಲಿ ಮೊರೆತಿರುವ ಸಂಸ್ಕೃತ ವಾಙ್ಮಯದ ಬಹುಭೇಕ ಭಾಗವು ದೇವನಾಗರೀ ಲಿಪಿಯಲ್ಲಿಯೇ ಇತ್ತು ಎಂಬುದನ್ನು ನಾವು ಈ ಚಳವಳವನ್ನು ಬಲವಾಗಿಸಲು ಮಾಧ್ಯಮವಾಗಿ ಬಳಸಿಕೊಳ್ಳಬೇಕು

"ಭಾರತೀಯ ವಿವಿಧ ಭಾಷೆಗಳಿಗೆ ಪ್ರತಿ ಪ್ರತ್ಯೇಕ ಲಿಪಿಯಿರುವುದಾದರೂ ಸ್ವರಾಕ್ಷರ ಮತ್ತು ವ್ಯಂಜನಾಕ್ಷರಗಳ ವ್ಯವಸ್ಥೆಯು ಏಕಸಮವಾಗಿದೆ ಇದು ಕೇವಲ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಮಾತ್ರವಿರುವ ಸಾಮ್ಯವಲ್ಲದೆ, ಒಂದು ಕಾಲದಲ್ಲಿ ವಾಙ್ಮಯವು ತನ್ನ ಪ್ರಭಾವವನ್ನು ಬೀರಿರುವ ಬ್ರಹ್ಮ, ಹಾಯಿಲೇಂಡ್ ಮುಂತಾದ ದೇಶ ಭಾಷೆಗಳಲ್ಲಿಯೂ ಸಾಮ್ಯದೃಶ್ಯವಿರುವ ಅಂಶವಾಗಿದೆ ಆದರೆ ಚೀನ ದೇಶದಲ್ಲಾದರೋ ಅವರ ಭಾಷೆಯಲ್ಲಿ ಲಕ್ಷರ ಅಥವಾ ವರ್ಣಗಳಿಗೆ ಬದಲು ಚಿತ್ರಲಿಪಿಗಳಿವೆ ಪೂರ್ವದ ಕೆಚ್ಚಿನ ದೇಶಗಳಲ್ಲಿ ದೇವನಾಗರಿ ಮಾದರಿಯ ವ್ಯವಸ್ಥೆಯೇ ಬಹುವಾಗಿದೆ

"ಉತ್ತರ ಖಂಡ ಮತ್ತು ಪಶ್ಚಿಮಭಾರತಗಳಲ್ಲಿ ಈಗಲೂ ದೇವನಾಗರೀ ಇಲ್ಲವೆ ಆದರೆ ಸಿಕಟ ವರ್ತಿಸಿಯಾದ ಲಿಪಿಯೇ ಬಳಕೆಯಲ್ಲಿರುವುದರಿಂದ, ಈ ಸಂಬಂಧದ ಚಳವಳಿಯಲ್ಲಿ ದಾಕ್ಷಿಣಾತ್ಯರೇ ಮುಂದಳುಗಳಾಗಿ ಮುಂದುರಿಯಬೇಕು ಉದಾಹರಣೆಗಾಗಿ ಗುಜರಾತೀ ಬಾಷೆಯನ್ನು ಬರೆಯಲು ಬಳಸುವ ಲಿಪಿಯು ಸರ್ವಸಾಮಾನ್ಯವಾಗಿ ಹಿಂದೀ ಬಾಷಾ ಲಿಪಿಯೇ ಇದೆ ಬಂಗಾಲಿ ಅದವಾ ಒರಿಯ ಹಾಗೂ ದೇವನಾಗರೀ ಲಿಪಿಗಳಲ್ಲಿ ಅಷ್ಟೊಂದು ಅಂತರವೇ ಕಾಣಿಸುವುದಿಲ್ಲ ಏನಿದ್ದರೂ ಈ ಕಾರ್ಯವು ಆಕಸ್ಮಿಕ ಮಾರ್ಗದಿಂದ ನಡೆಯಬಹುದಾದುದಲ್ಲ ಕ್ರಮಬದ್ಧವಾಗಿ ಇದು ನಡೆಯಬೇಕಾದುದರಿಂದ, ಒಂದು ಸುದೃಢ ಸಂಸ್ಥೆಯೊಂದನ್ನು ಈ ಉದ್ದೇಶಸಾಧನೆಗಾಗಿ ಕಟ್ಟಬೇಕಾಗಿದೆ ಈ ಸಂಬಂಧದಲ್ಲಿ ನಾನು ನನ್ನ ಸಹಾಯವನ್ನು ನೀಡಬಲ್ಲೆ.

"ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ದಕ್ಷಿಣದಲ್ಲಿ ಹಿಂದೀ ಪ್ರಚಾರಕ್ಕಾಗಿ ದುಡಿಯುತ್ತಿದೆ ಅದರೊಂದಿಗೆ ದೇವನಾಗರೀ ಲಿಪಿಯ ಪ್ರಚಾರವನ್ನೂ ಮಾಡತೊಡಗಿದರೆ, ಅದರಿಂದ ಕಾರ್ಯ ಸಲಭವಾಗುವುದು. ಭಾಷಾ ಸಪ ನೈಯ ಬೆನ್ನೆಲುಬನ್ನು ಮುರಿಯಲೂ ಇದು ಸಹಾಯಕವಾಗುವುದು ದಕ್ಷಿಣದಲ್ಲಿ ಈ ಕೆಲಸಕ್ಕಾಗಿ ಈಗಾಗಲೇ ದೇವನಾಗರೀ ವಿಸ್ತಾರ ಪರಿಷತ್ತು ಸ್ಥಾಪನೆಯಾಗಿರುವುದು ಸಂತೋಷದ ಸಂಗತಿ "

ಇದು ಸಾಮ್ಯ ರಾಜೇಂದ್ರ ಪ್ರಸಾದರ ಹೇಳಿಕೆಯ ಸಾರ ದೇವನಾಗರೀ ಲಿಪಿಯನ್ನಾಗಲೀ ಇತರ ಯಾವುದೇ ಒಂದು ಬಗೆಯ ಲಿಪಿಯನ್ನಾಗಲೀ ಒಂದು ಭಾಷೆಗೆ ಏತೆ ಬಳಸಬೇಕು ಎಂಬ ದನ್ನು ಮಾತ್ರ ಇಲ್ಲಿ ಅವರು ಸ್ಪಷ್ಟೀಕರಿಸಲಿಲ್ಲ ಮದ್ರಾಸಿನ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಈ ಬಾರಿಯ ಪರೀಕ್ಷೆಗಳಲ್ಲಿ 'ಅನುವಾದ ದ (ಮಾತೃಭಾಷೆಗೆ) ಲಿಪಿಯನ್ನೂ ದೇವನಾಗರಿಯಾಗಿ ಬಳಸಬೇಕೆಂದು ಆದೇಶವಿತ್ತಿರುವರಾಗಿ ತಿಳಿದು ಬಂದಿದೆ ಕನ್ನಡ ಬಾಷೆಯನ್ನು ದೇವನಾಗರೀ ಲಿಪಿಯಲ್ಲಿ ಬರೆದು, ಅದನ್ನು ಓದಿ ಒಂದು ವೃತ್ತಾರಿ ನೋಡಿ

ಕನ್ನಡ ಒಡೆಯನು ಓಡುತ್ತಾನೆ
ನಾಗರೀ ಓಡೇಯನು ಓಡುತ್ತಾನೆ

'ಒಡೆಯ"ನು 'ಓಡೇಯ' ಅವನ! ಇದೀಗ ನಮ್ಮ ಪ್ರಾದೇಶಿಕ ಭಾಷೆಯ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಅದರ ಉನ್ನತಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ ನಾವು ದೇವನಾಗರೀ ಲಿಪಿಯನ್ನು ಸ್ವೀಕರಿಸಬೇಕು! ಅದಕ್ಕಾಗಿ ಚಳವಳವೆಬ್ಬಿಸಬೇಕು!

ಆಯಾ ಮತ್ತು ದ್ರಾವಿಡ ಭಾಷೆಗಳಲ್ಲಿ ಸ್ವರ, ವ್ಯಂಜನಗಳೆಂಬ ಅಕ್ಷರ ವಿಂಗಡಣೆ ಕ್ರಮ ಒಂದೇ ಆದರೂ (ದೇವನಾಗರಿ) ಆರ್ಯ ಭಾಷೆಗಳಲ್ಲಿದ್ದ ಎ, ಒ, ಶಕಟರೇಫ, ಳ ಗಳೆಂಬವು ದ್ರಾವಿಡ (ದಕ್ಷಿಣದ) ಭಾಷೆಗಳಲ್ಲಿವೆ ಇವುಗಳಲ್ಲಿ ಕೆಲವು ಭಾಷೆಗಳಲ್ಲಿ ಕೆಲವು ಅಕ್ಷರಗಳು ಈಗ ವ್ಯವಹಾರದಲ್ಲಿ ಇಲ್ಲದಿರಬಹುದು.

(ಉಂಸಿ ಪುಟನೋಡಿರಿ)

ಇದೀಗ ಬಿಕರಿಗೆ ಸಿದ್ಧವಾಗಿದೆ

ಶ್ರೀ ನಚಿಕೇತರವರ

"ಸ್ನೇಹಸ್ತ್ರಿ"

(ಸಮಾಜ ಸುಧಾರಕ ಕಾದಂಬರಿ)

ದ್ವಿವರ್ಣ ರಕ್ಷಾಕವಚ ಬೆಲೆ ರೂ.1=25

ವಿವರಗಳಿಗೆ

ಗಾಯತ್ರಿ ಪ್ರಕಾಶನ

ಚಾಮುಂಡಿಪುರಂ, ಮೈಸೂರು-1

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ (ದ ಭಾ)

ಹತ್ತರಲ್ಲೊಂದು ಪಾಲು

"ಕೈಗೆ ಬಂದುದೆಲ್ಲವನ್ನೂ ವೆಚ್ಚ ಮಾಡದೆ ಅದರಲ್ಲೊಂದು ಅಂಶವನ್ನು, ಹತ್ತನೇ ಒಂದಂಶವನಾದರೂ ಉಳಿಸಬೇಕು, ಹಾಗೆ ಉಳಿಸಿ ಆಪದ್ಧನವಾಗಿ ಶೇಖರಿಸಿ ಇಡಬೇಕು"— ಎಂಬ ಮಾತು ನಮ್ಮ ಸಂಸ್ಕೃತಿಗೆ ಹೊಸತೇನೂ ಅಲ್ಲ ಮತ್ತದು ಅಸಾಧ್ಯವೂ ಅಲ್ಲ ದಿಕಸಹಿ ವಾರಕ್ಕೊಮ್ಮೆ ತಿಂಗಳಿಗೊಮ್ಮೆ ಅಥವಾ ಕೈಗೆ ಬಂದಾಗಲೊಮ್ಮೆ ಯಾವ ಸಂದರ್ಭದಲ್ಲೂ ನಿಮ್ಮ ಆಪದ್ಧನ ಶೇಖರಣೆಗೆ ಸಿಂಡಿಕೇಟ್ ಬೇಂಕ್ ಸದಾ ಸಿದ್ಧವಿದೆ.

ಉಳಿಸಿರಿ

THE CANARA INDUSTRIAL & BANKING SYNDICATE LTD, UDIPI

ನಿಮ್ಮ ಬಲ ನಿಮಗೆ ತಿಳಿದಿರಲಿ—

ಭಾರತದ ವಾಯುಸೇನೆ

ಸ್ಕ್ವಾಡ್ರನ್ ಲೀಡರ್ ಯು. ಆರ್. ಆಚಾರ್ಯ.

ನಮ್ಮ ದೇಶದ ಜನರಿಗೆ ಸಾಮಾನ್ಯವಾಗಿ ಸೈನ್ಯದ ವಿಚಾರ ಹೆಚ್ಚಿನ ಜ್ಞಾನವಿರುವುದಿಲ್ಲ. ಈ ವಿವರಗಳನ್ನು ತಿಳಿಸುವ ಪುಸ್ತಕಗಳು ಮತ್ತು ಲೇಖನಗಳು ಅತಿ ವಿರಳ. ಕನ್ನಡದಲ್ಲಿಯೂ ಇಲ್ಲವೇ ಇಲ್ಲವೆನ್ನಬಹುದು. ಬ್ರಿಟಿಷರು ನಮ್ಮನ್ನಾಳುತ್ತಿದ್ದಾಗ ನಮ್ಮ ಜನರು ಅವರ ಮೇಲೆ ದಂಗೆ ಏಳದಂತೆ ತಮ್ಮ ಸೈನ್ಯವನ್ನು ಕಾವಲಾಗಿ ಇಟ್ಟಿದ್ದರು. ಆದುದರಿಂದ ತಮ್ಮ ಸೈನ್ಯದ ಕುರಿತಾದ ವಿವರಗಳನ್ನು ಅವರು ನಾಡಿನ ಜನರಿಂದ ಗೋಪ್ಯವಾಗಿಟ್ಟಿದ್ದರು. ಆದರೆ ಪರಿಸ್ಥಿತಿ ಈಗ ಬದಲಾಗಿದೆ. ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ನಮ್ಮ ನಾಡಿನ ಜನರ ರಕ್ಷಣೆಗಾಗಿ ಮತ್ತು ಅವರ ನಿತ್ಯ ಜೀವನದ ಭದ್ರತೆಗಾಗಿ ನಮ್ಮ ಸರಕಾರವು ನಮ್ಮದೇ ಆದ ಸೈನ್ಯವನ್ನು ಇಟ್ಟಿರುತ್ತದೆ. ಆದುದರಿಂದ ಈ ಪ್ರಜಾಪ್ರಭುತ್ವದಲ್ಲಿ ನಮ್ಮನ್ನು ಕಾಯುವ ಸೈನ್ಯದ ಕುರಿತಾದ ಜ್ಞಾನವನ್ನು ಜನರು ಆದಷ್ಟು ಪಡಕೊಳ್ಳಬೇಕಾಗುವುದು ಅವಶ್ಯ; ಇದನ್ನು ತಿಳಿಸಬೇಕಾದುದು ಸರಕಾರದ ಕರ್ತವ್ಯ.

ಕೇಂದ್ರ ಸರಕಾರದ ವರಮಾನದಿಂದ ವರ್ಷಕ್ಕೆ ೩೩೦ ಕೋಟಿ ರೂಪಾಯಿ ಸೇಕಡಾ ಅಂದಾಜು ಸೈನ್ಯಕ್ಕೆ ಖರ್ಚಾಗುತ್ತದೆ. ಈ ಹಣವನ್ನು ತೆರಿಗೆಯ ಮೂಲಕ ಜನರೇ ಒದಗಿಸುತ್ತಾರೆ. ಮಾತೃವಲ್ಲವೆ ಸೈನ್ಯಕ್ಕೆ ಬೇಕಾದ ಸೈನಿಕರನ್ನು ನಮ್ಮ ಜನರೇ ಒದಗಿಸುತ್ತಾರಷ್ಟೆ. ಹೀಗೆ ಧನ ಮತ್ತು ಜನರನ್ನು ಒದಗಿಸುವ ತಂದೆ ತಾಯಂದಿರಿಗೆ ಸೈನ್ಯದ ಕುರಿತಾದ ತಿಳುವಳಿಕೆ ಎಷ್ಟು ಅವಶ್ಯವೆಂತ ನೀವೇ ಯೋಚಿಸಬಹುದು.

ನಮ್ಮ ದೇಶದ ವಿದೇಶ ಧೋರಣೆಯು ಪಂಚಶೀಲ ತತ್ವವನ್ನು ಅವಲಂಬಿಸಿಕೊಂಡಿದೆ. ನಮಗೆ ಇತರರ ರಾಜ್ಯತನ್ನು ಆಕ್ರಮಣಮಾಡುವ ದುರಾಶೆಇಲ್ಲ. ಆದುದರಿಂದ ನಮ್ಮ ಸೈನ್ಯವನ್ನು ಅದಕ್ಕಾಗಿ ಉಪಯೋಗಿಸುವ ಅವಕಾಶವಿಲ್ಲ. ಪರಕೀಯರು ನಮ್ಮ ಮೇಲೆ ಧಾಳಿಯಿಟ್ಟರೆ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ನಮ್ಮ ದೇಶದ ಗಡಿಯನ್ನು ಭದ್ರಗೊಳಿಸುವುದಕ್ಕಾಗಿ ಮತ್ತು ನಮ್ಮ ದೇಶದ ಜನ ಸಂಪತ್ತು, ಧನ ಸಂಪತ್ತು ಇವನ್ನು ಪರರ ದಾಳಿಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ನಮ್ಮ ಸೈನ್ಯವು ಉಪಯೋಗಿಸಲ್ಪಡುವುದು. ಈ ರಕ್ಷಣಾ ಇಲಾಖೆಯಲ್ಲಿ ನೆಲ ಸೇನೆ, ಜಲಸೇನೆ ಮತ್ತು ವಾಯುಸೇನೆ ಎಂಬ ಮೂರು ಅಂಗಗಳೆ ಈ ವಾಯು ಸೇನೆಯ ರೂಪರೇಷೆಯನ್ನು ಸ್ಥೂಲವಾಗಿ ವಿವರಿಸುವುದೇ ಈ ಲೇಖನದ ಉದ್ದೇಶ.

ಶತ್ರುವಿನ ವಿಮಾನಗಳು ನಮ್ಮ ದೇಶದ ಮೇಲೆ ಧಾಳಿ ಇಡಲು ಬಂದಾಗ ಅವುಗಳನ್ನು ಆದಷ್ಟು ದೂರದಿಂದಲೇ ಕೆಡವಿ ನಾಶಗೊಳಿಸುವುದು ನಮ್ಮ ವಾಯು ಸೇನೆಯ ಆದ್ಯ ಕರ್ತವ್ಯ. ಶತ್ರುವಿನ ನೆಲ ಸೇನೆ ಮತ್ತು ಜಲ ಸೇನೆ ನಮ್ಮ ರಾಜ್ಯವನ್ನು ಆಕ್ರಮಿಸಲು ಬಂದಾಗ ಅವುಗಳನ್ನು ನಾಶಗೊಳಿಸುವುದು ಎರಡನೆಯ ಕರ್ತವ್ಯ. ಶತ್ರು ರಾಜ್ಯದ ಮೇಲೆ ಬಾಂಬುಗಳನ್ನು ಎಸೆದು ಅವನ ಯುದ್ಧ ಪೌರುಷವನ್ನು ಅಡಗಿಸುವುದು ಮೂರನೆಯ ಕರ್ತವ್ಯ. ನಮ್ಮ ಸೇಗಿಯನ್ನು ಮತ್ತು ಯುದ್ಧ ಸಾಮಗ್ರಿಗಳನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ವಿಮಾನಗಳ ಮೂಲಕ ಸಾಗಿಸುವುದು ನಾಲ್ಕನೆಯ ಕರ್ತವ್ಯ. ಈ ವಿವಿಧ ಕಾರ್ಯಗಳಿಗೆ ಅನುಕೂಲವಾಗುವ ನಾನಾ ತರದ ವಿಮಾನಗಳು ಈ ವಾಯು ಸೇನೆಯಲ್ಲಿದೆ.

ವಿಮಾನಗಳನ್ನು ಮುಖ್ಯವಾಗಿ ಮೂರು ಭಾಗವಾಗಿ ವಿಂಗಡಿಸಬಹುದು. ಮೊದಲನೆಯದು 'ಫೈಟರ್' (Fighter), ಎರಡನೆಯದು 'ಬಾಂಬರು' (Bomber) ಮೂರನೆಯದು 'ಟ್ರಾನ್ಸ್ ಪೋರ್ಟ್' ವಿಮಾನ, (Transport). ಫೈಟರ್ ವಿಮಾನವು ಚಿಕ್ಕದಾಗಿದೆ ಮತ್ತು ಅದರಲ್ಲಿ ಒಬ್ಬನೇ ವೈಮಾನಿಕನು ಇರುವನು, ಇದರ ವೇಗ ಅಧಿಕವಾಗಿದೆ. ಇದು ಬಹು ಬೇಗನೇ ಮೇಲಕ್ಕೇರಬಲ್ಲುದು. ಆದರೆ ಇದು ಗಾಳಿಯಲ್ಲಿ ಎರಡು ಗಂಟೆಗಿಂತ ಅಧಿಕವಾಗಿ ನಿಲ್ಲಲಾರದು. ಏಕೆಂದರೆ ವಿಮಾನವು ಚಿಕ್ಕದಾಗಿರುವುದರಿಂದ ಅದರಲ್ಲಿ ಹೆಚ್ಚು ಪೆಟ್ರೋಲು ತುಂಬಿಸಿಕೊಳ್ಳಲು ಅವಕಾಶವಿರುವುದಿಲ್ಲ. ಈಗೀಗ ಎಲ್ಲಾ ಫೈಟರ್ ವಿಮಾನಗಳು 'ಜೆಟ್' (jet) ವಿಮಾನಗಳೇ. ಅಂದರೆ ಇದರ ಇಂಜಿನುಗಳಲ್ಲಿ ಪ್ರೊಪೆಲ್ಲರುಗಳಿಲ್ಲ, ಜೆಟ್ ವಿಮಾನದಲ್ಲಿ ಪೆಟ್ರೋಲಿನ ಬದಲು ಸೀಮೆ ಎಣ್ಣೆಯನ್ನು ಉರಿಸುತ್ತಾರೆ. ಗಾಳಿಯಲ್ಲಿ ಹಂಪಿನ ಮೂಲಕ ಒಳಸೆಳೆದುಕೊಂಡು ಅದನ್ನು ದಟ್ಟಣಿಸಿ ಅದರಲ್ಲಿ ಸೀಮೆಯೆಣ್ಣೆಯನ್ನು ಉರಿಸಿ, ಉಂಟಾದ ಬಿಸಿ ಗಾಳಿಯನ್ನು ಸಪೂರ ನಳಿಗೆಯಿಂದ ಹೊರಬಿಡುವರು. ಈ ಗಾಳಿ ಹೊರ ಬಿದ್ದ ರಭಸಕ್ಕೆ ವಿಮಾನವು ಮುಂದೆ ತಳ್ಳಲ್ಪಡುವುದು. ನಮ್ಮ ವಿಮಾನ ಸೇನೆಯಲ್ಲಿ ವಾಂಪೈಯರ್ (Vampire), ತೂಫಾನಿ Toofani). ಹಂಟರ್ (Hunter) ಮತ್ತು ಮಿಸ್ಟಿಯರ್ (Mystere) ಎಂಬ ನಾಲ್ಕು ತರದ ಫೈಟರ್ ಜೆಟ್ ವಿಮಾನಗಳಿವೆ. ಇವುಗಳ ವೇಗ ಗಂಟೆಗೆ 400—500 ಮೈಲುಗಳಷ್ಟಿವೆ. ಇವು 40 ಸಾವಿರ ಅಡಿ ಎತ್ತರದ ವರೆಗೆ ಹಾರಬಲ್ಲವು. ಇದರ ವೈಮಾನಿಕನು ಗಾಳಿಯಲ್ಲಿ ಮೇಲೇರುವಾಗ, ಮೊದಲೇ ಸಂಗ್ರಹಿಸಿಟ್ಟಿದ್ದ ಆಮ್ಲಜನಕ ವಾಯುವನ್ನು ಸೇವಿಸಬೇಕಾಗುವುದು. ಈ ವಿಮಾನದಲ್ಲಿ ಎರಡು ಕೋವಿಗಳಿವೆ. ಇವುಗಳಿಂದ ಗುಂಡುಗಳನ್ನು ಹಾರಿಸಿ ಶತ್ರುವಿನ ವಿಮಾನಗಳನ್ನು ಗಾಳಿಯಲ್ಲೇ ನಾಶ ಮಾಡುವರು. ಇವುಗಳಿಂದ ರಾಕೇಟುಗಳನ್ನು ಸಹಾ ಶತ್ರು ಪಡೆಯ ಮೇಲೆ ಎಸೆಯಬಹುದು.

ಲಿಬರೇಟರ್ (Liberator) ಮತ್ತು ಕೇನ್‌ಬೇರ (Canberra) ಎಂಬ ವಿಮಾನಗಳನ್ನು ಬಾಂಬರುಗಳಾಗಿ ಉಪಯೋಗಿಸಿಕೊಳ್ಳುತ್ತೇವೆ. ಲಿಬರೇಟರುಗಳಲ್ಲಿ ಪ್ರೊಪೆಲ್ಲರುಗಳಿರುವ ನಾಲ್ಕು ಇಂಜಿನುಗಳಿವೆ. ಇದರಲ್ಲಿ ಬಾಂಬುಗಳನ್ನು ಹಿಡಕೊಂಡು ಹೋಗಿ ಶತ್ರುರಾಜ್ಯದ ಮೇಲಾಗಲೀ ಶತ್ರು ಸೈನ್ಯದ ಮೇಲಾಗಲೀ ಶತ್ರುವಿನ ನೌಕಾಪಡೆಯ ಮೇಲಾಗಲೀ ಹಾಕಬಹುದು. ಕೇನ್‌ಬೇರಾವು ಜೆಟ್ ವಿಮಾನ. ಇದರಲ್ಲಿ ಎರಡು ಜೆಟ್ ಇಂಜಿನುಗಳಿವೆ. ಇದು 50 ಸಾವಿರ ಅಡಿ ಎತ್ತರದವರೆಗೆ ಹಾರುವುದು. ಇದರ ವೇಗವು ಗಂಟೆಗೆ 400 ರಿಂದ 500 ಮೈಲುಗಳು. ಇದು ಸುಮಾರು 10—12 ಗಂಟೆಗಳ ಕಾಲ ಗಾಳಿಯಲ್ಲಿರಬಲ್ಲುದು. ಇದರಲ್ಲಿ ಇಬ್ಬರು ವೈಮಾನಿಕರು ಮಾತ್ರ ಇರುತ್ತಾರೆ.

ಡಕೋಟಾ ಮತ್ತು ಸೇಕೆಟ್ ಮತ್ತು ವೈಕೊಂಟ್ (Viscount) ಎಂಬ ವಿಮಾನಗಳನ್ನು ಟ್ರಾನ್ಸ್‌ಪೋರ್ಟ್ ವಿಮಾನವಾಗಿ ಉಪಯೋಗಿಸುತ್ತಾರೆ ಇವು ಮೂರು ತಂದವುಗಳಲ್ಲದೆ, ವಿಮಾನ ಬಿಡಲು ಕಲಿಯುವುದಕ್ಕಾಗಿ ಟೈಗರ್‌ಮೋತ್ (Tiger Moth). ಎಚ್. ಟಿ ಟು (H. T. 2), ಹಾರ್ವರ್ಡ್ (Harward) ಮೊದಲಾದ ಚಿಕ್ಕ ವಿಮಾನಗಳನ್ನು ಉಪಯೋಗಿಸುವರು.

ಭಾರತದ ವಿಮಾನ ಸೇನಾಧಿಪತಿ ಏರ್ ಮಾರ್ಶಲ್ ಎಸ್. ಮುಖರ್ಜಿ ಎಂಬವರು, ಡಿಲ್ಲಿಯಲ್ಲಿರುವ ಇವರ ಆಫೀಸಿಗೆ ಏರ್ ಹೆಡ್‌ಕ್ವಾರ್ಟರ್ಸ್ (Air Headquarters) ಎಂದು ಹೆಸರು. ಇದರ ಕೆಳಗೆ ಆಪರೇಶನ್ ಕಮಾಂಡ್ (Operation Command) ಮೈಂಟಿನೆನ್ಸ್ ಕಮಾಂಡ್ (Maintenance Command) ಮತ್ತು ಟ್ರೈನಿಂಗ್ (Training Command) ಎಂಬ ಮೂರು ಮುಖ್ಯ ವಿಭಾಗಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಆಪರೇಶನ್ ಕಮಾಂಡು. ಇದರ ಮುಖ್ಯ ಅಧಿಕಾರಿ ಏರ್ ವೈಸ್ ಮಾರ್ಶಲ್ ಅರ್ಜುನಸಿಂಗ್ ಎಂಬವರು, ಈ ಕಮಾಂಡಿನ ಕೆಳಗೆ ಹಲವಾರು ವಿಂಗ್ಸ್ (Wings) ಅಥವಾ ಸ್ಟೇಶನ್ (Station) ಗಳಿವೆ. ಒಂದೊಂದು ವಿಂಗಿನ ಕೆಳಗೆ ಹಲವಾರು ಸ್ಕ್ವಾಡ್ರನ್ (Squadron) ಗಳಿವೆ. ಅವುಗಳಲ್ಲಿ ಕೆಲವು ಫೈಟರ್ ಸ್ಕ್ವಾಡ್ರನ್, ಕೆಲವು ಬಾಂಬರ್ ಸ್ಕ್ವಾಡ್ರನ್, ಕೆಲವು ಟ್ರಾನ್ಸ್‌ಪೋರ್ಟ್ ಸ್ಕ್ವಾಡ್ರನ್. ಯುದ್ಧಕಾಲದಲ್ಲಿ ವಿಮಾನ ಬಲವನ್ನು ಒದಗಿಸುವುದು ಈ ಆಪರೇಶನ್ ಕಮಾಂಡಿನ ಕೆಲಸ. ವಾಯುಸೇನೆಗೆ ಬೇಕಾದ ವಿಮಾನಗಳನ್ನು ಅಸ್ತ್ರ ಶಸ್ತ್ರಗಳನ್ನು ಒದಗಿಸುವುದು, ಕೆಟ್ಟು ಹೋದ ವಿಮಾನಗಳನ್ನು ರಿಪೇರಿ ಮಾಡುವುದು ಮೈಂಟಿನೆನ್ಸ್ ಕಮಾಂಡಿನ ಕೆಲಸ. ಈ ಕಮಾಂಡಿನ ಸರ್ವಾಧಿಕಾರಿ ಏರ್ ಕಮೊಡೋರ್ ಹರಿಜೀಂದ್ರ ಸಿಂಗ್ ಎಂಬವರು. ವಿಮಾನ ಸೇನೆಗೆ ಬೇಕಾದ ಆಫೀಸರ್ ಮತ್ತು ಜನರನ್ನು ಒದಗಿಸಿಕೊಡುವುದು ಮತ್ತು ಅವರನ್ನು ವಿವಿಧ ಇಲಾಖೆಗಳನ್ನು ತರಬೇತು ಮಾಡುವುದು ಟ್ರೈನಿಂಗ್ ಕಮಾಂಡಿನ ಕೆಲಸ. ಈ ಕಮಾಂಡಿನ ಕೆಳಗೆ ಮೂರು ಕಾಲೇಜುಗಳು, ಮೂರು ಸ್ಕೂಲುಗಳೂ ಇವೆ ಕಾಲೇಜುಗಳಲ್ಲಿ ಆಫೀಸರರೂ ಸ್ಕೂಲುಗಳಲ್ಲಿ ಇತರರೂ ತರಬೇತು ಪಡೆಯುತ್ತಾರೆ.

ಒಂದನೇಯ ಕಾಲೇಜಿನಲ್ಲಿ ಹಾರಲು ಕಲಿಸುತ್ತಾರೆ. ಎರಡನೆಯ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮತ್ತು ಸಿಗ್ನಲ್ಸ್

(ಕನೇ ಪುಟ ನೋಡಿರಿ)

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 263/58.

ರಾಮಭದ್ರ ಅಡಿಗ —ವಾದಿ

ಶೀನಪ್ಪ ಶೆಟ್ಟಿ ಕೂಡಾ —ಪ್ರತಿವಾದಿ

ಈ ಮೂಲಕ ೩-೪ನೇ ಪ್ರತಿವಾದಿರಾದ ಶೀನ ಶೆಟ್ಟಿ ಮತ್ತು ಶೀನಪ್ಪ ಶೆಟ್ಟರಿಗೆ ತಿಳಿಯಪಡಿಸುವುದೇನೆಂದ್ರೆ,

ವಾದಿಯು ತನಗೆ ದಾವಾ ಸ್ಥಳಗಳ ಬಾಬ್ತು ಬರತಕ್ಕ ಗೇಣಿಬಾಕಿ ಬಗ್ಗೆ ಸದ್ರಿ ದಾವೆ ದಾಕ್ಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ. 12-9-1958ಕ್ಕೆ ತನ್ನಗೆಇದೆ. ಸದ್ರಿ ದಾವೆಯಲ್ಲಿ ನಿಮ್ಮದೇನಾದ್ರು ಅಕ್ಷೇಪ ಇದ್ದಲ್ಲಿ ಆ ದಿವ್ಸ ಕೋರ್ಟುಮುಂದೆ ಹಾಜ್ರಾಗಿ ಅರಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ exparte ಡಿಕ್ರಿ ಆಗುತ್ತದೆ. ತಿಳಿದಿರಲಿ.

H. Laxminarayanayya,
Advocate,
Coondapoor 20—8—58.

ನಿಮಗಾಗಿ ನಮ್ಮಲ್ಲಿ ನೂಧಾರು ನುರಿತ ಕಾರಕೂನರಿದ್ದಾರೆ!

"ಕೊಪ್ಪೊರೇಶನ್" ಬೇಂಕಿನಲ್ಲಿ ನೀವು ಒಂದು ಹಣಖಾತೆಯನ್ನು ತೆರೆದಿರಂದರೆ, ನಮ್ಮ ಬೇಂಕಿನ ಕಾರಕೂನರೂ ನಿಮ್ಮದೇ ಕಾರಕೂನರಾದಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹಣದ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ ಭಾರತ)

(ಮೈಸೂರು ರಾಜ್ಯದಲ್ಲಿ ಪ್ರಧಾನ ಕಚೇರಿಗಳನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಹಳೆಯದು.)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ವಿದ್ಯಾರ್ಥಿಗಳಲ್ಲಿ ಅಶಿಸ್ತು ನಿವಾರಣೆ—

ರಾಷ್ಟ್ರೀಯ ಶಿಸ್ತು ಕಾರ್ಯಯೋಜನೆ

ನಮ್ಮ ಯುವಕರು ಯಾವ ದಿಕ್ಕಿನಲ್ಲಿ ಹೋಗುತ್ತಿರುವರು? ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ದಿನ ಬೆಳಗಾದರೆ ಹರತಾಳ ಮತ್ತು ಪ್ರದರ್ಶನಗಳು ಪ್ರತಿ ದಿನದ ವಿಷಯಗಳಾಗಿ ಪರಿಣಮಿಸಿವೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಧ್ಯಾಪಕ ವರ್ಗದಲ್ಲಿ ಆದರೆ, ವಿಶ್ವಾಸ, ಗೌರವಗಳಿಲ್ಲದೆ ಹೋಗಿರುವ ಪ್ರವೃತ್ತಿ ಕಂಡು ಬಂದಿದೆ ಅವರ ಜೀವನದಲ್ಲಿ ಆದರ್ಶ ಹಾಗೂ ಉದ್ದೇಶಗಳ ಅಭಾವವುಂಟಾಗಿರುವುದು ದೇಶದಲ್ಲಿ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ

ಕೆಲವರು ಇದನ್ನು ತಾತ್ಕಾಲಿಕ ಅವಸ್ಥೆಯೆಂದೂ ಕಾಲಕ್ರಮೇಣ ಇದು ಸರಿ ಹೋಗುವುದೆಂದೂ ಭಾವಿಸಿರುವರು ಆದರೆ ಇದು ಕೇವಲ ಆಂಶಿಕ ವಿವರಣೆಯಾಗಿದ್ದು ಸಮಾಜ ವಿಜ್ಞಾನಿಗಳು ಇದಕ್ಕೆ ಕೆಲವು ಸ್ಪಷ್ಟವಾದ ಕಾರಣಗಳಿವೆಯೆಂದು ಹೇಳುವರು

ಈ ಅಶಿಸ್ತಿನ ಮನೋಭಾವಕ್ಕೆ ಸಂಬಂಧಿಸಿದ ಹಲವಾರು ಕಾರಣಗಳಲ್ಲಿ ಮೂರು ಮುಖ್ಯವಾದವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ ಅಧ್ಯಾಪಕರಲ್ಲಿ ನಾಯಕತ್ವದ ಅಭಾವ ಕಂಡು ಬಂದಿರುವುದು ಮೊದಲನೆಯ ಕಾರಣವನ್ನಬಹುದಾಗಿದೆ ತಮ್ಮ ತಮ್ಮ ಸಮಸ್ಯೆಗಳಲ್ಲಿ ತಲ್ಲೀನರಾಗಿರುವ ಈ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಯಥೋಚಿತವಾದ ಶಿಕ್ಷಣವೀಯುವ ಬಗ್ಗೆ ಲಕ್ಷ್ಯಹರಿಸಲು ಸಾಧ್ಯವಾಗುತ್ತಿಲ್ಲ ಪ್ರಾಂತೀಯತೆ ಹಾಗೂ ಜಾತಿ ಪಂಥಗಳು ಈ ಮುಂತಾದ ಸಂಕೀರ್ಣ ಭಾವನೆಗಳಿಂದಾಗಿ ರಾಷ್ಟ್ರದ ಗೌರವ, ಪ್ರೀತಿ, ಕರ್ತವ್ಯ ಭಾವನೆಗಳು ಕುಂಠಿತಗೊಳ್ಳುವುವು, ಇದೇ ಎರಡನೆಯ ಕಾರಣವಾಗಿದೆ. ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ರಾಜಕೀಯ ಹಾಗೂ ಆರ್ಥಿಕ ಸಮಸ್ಯೆಗಳು ಹಾಗೂ ವಿಚಾರಗಳಲ್ಲಿ ಆಸಕ್ತಿ ವಹಿಸುತ್ತಿರುವುದು ಮೂರನೆಯ ಕಾರಣವಾಗಿದೆ

ರಾಜಕೀಯ ಹಾಗೂ ಆರ್ಥಿಕ ಸಮಸ್ಯೆಗಳು ವಿದ್ಯಾರ್ಥಿಗಳ ಅಧ್ಯಯನದ ವಿಷಯವಾಗಿರುವುದರ ಪ್ರತಿಫಲಾಗಿ ಚಳವಳಿಯ ವಸ್ತುವಾಗಿ ಪರಿಣಮಿಸಿವೆ. ಇಂದಿನ ಶಿಕ್ಷಣ ಪದ್ಧತಿಯು ಗುಮಾಸ್ತರನ್ನು ತಯಾರಿಸುವ ವಿಧಾನವಾಗಿದೆಯೆಂಬ ಸಾಮಾನ್ಯ ಟೀಕೆಯು ಯುವಕ-ಯುವತಿಯರ ಮೇಲೆ ವಿಶೇಷವಾಗಿ ಪರಿಣಾಮವನ್ನುಂಟು ಮಾಡಿದೆ.

ಇದರಿಂದಾಗಿ ನಾವು ನಿರಾಶೆಗೊಳ್ಳುವ ಪ್ರಮೇಯವಿಲ್ಲ ಏಕೆಂದರೆ ತನ್ನಲ್ಲಿ ಕಂಡು ಬಂದಿರುವ ಲೋಪದೋಷಗಳನ್ನು ತಮ್ಮ ತಮ್ಮಲ್ಲಿಯೇ ಬಗೆಹರಿಸಿಕೊಳ್ಳಲು ಯುವಕ—ಯುವತಿಯರು ಕಂಕಣ ಬದ್ಧರಾಗಿರುವುದೊಂದು ಶುಭ ಸಮಾಚಾರವಾಗಿದೆ ಈ ಸಮಸ್ಯೆಯನ್ನು ಬಗೆಹರಿಸಲು ಒಂದು ಉಪಾಯವಿದೆ ದೇಶದ ಯುವಜನತೆಯ ಮೇಲ್ಮೆಯದಲ್ಲಿ ಅಡಗಿರುವ ಶಕ್ತಿ ಸಾಮರ್ಥ್ಯಗಳು ಮತ್ತು ಕಾರ್ಯಾರಂಭ ಶಕ್ತಿಗಳನ್ನು ದೇಶದ ಹಿತರಕ್ಷಣೆಗಾಗಿ ಹಾಗೂ ಯುವಕ ಯುವತಿಯರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವುದಕ್ಕಾಗಿ ವಿನಿಯೋಗಿಸುವುದೇ ಈ ಉಪಾಯವಾಗಿದೆ

ರಾಷ್ಟ್ರೀಯ ಶಿಸ್ತು ಕಾರ್ಯಯೋಜನೆಯ ಉದ್ದೇಶವೂ ಇದೇ ಆಗಿರುವುದು ಮೊದಲನೆಯದಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶಾರೀರಿಕ ವ್ಯಾಯಾಮದ ಮೂಲಕ ಆರೋಗ್ಯವಂತರನ್ನಾಗಿ ಮಾಡುವುದಾಗಿದೆ "ಸ್ವಸ್ಥವಾಗಿರುವ ವ್ಯಕ್ತಿಯಲ್ಲಿ ಮನಸ್ಸು ಸಹ ಸ್ವಸ್ಥತೆಯಿಂದ ಕೂಡಿರುವುದು" ಎಂಬುದೇ ಶಿಸ್ತು ಯೋಜನೆಯ ಮುಖ್ಯ ಗುರಿ ಬಾಲಕ ಬಾಲಕಿಯರಿಗೆ ಅಂಗಸಾಧನೆ, ಕವಾಯಿತು, ಪರೇಡ್‌ಗಳು ಮತ್ತು ಆಟಗಳ ಮೂಲಕ ಶಾರೀರಿಕ ಶಿಕ್ಷಣವೀಯುವುದು ಶಿಸ್ತು ತರಬೇತಿಯ ಮೂಲ ಉದ್ದೇಶವಾಗಿದೆ ಶಾಲೆಗಳಿಗೆ ಹೋಗುವ ಮಕ್ಕಳು ವಿಹಾರ ಯಾತ್ರೆಗಳು ಮತ್ತು ಶಿಬಿರಗಳಲ್ಲಿ ಭಾಗವಹಿಸುವಂತೆ ಉತ್ತೇಜಿಸಲಾಗುವುದು. ಅವರು ಸಮಾಜ ಸೇವಾ ಕಾರ್ಯಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಲಾಗುವುದು. ವಿಹಾರ ಯಾತ್ರೆಗಳು ಮತ್ತು ಶಿಬಿರಗಳಲ್ಲಿ ಭಾಗವಹಿಸುವಂತೆ ಅವರನ್ನು ಬಲಾತ್ಕಾರಿಸುವುದಿಲ್ಲ ಅವರುಗಳು ಸ್ವಂತ ಇಚ್ಛೆಯ ಮೇಲೆ ಭಾಗವಹಿಸಬಹುದಾಗಿದೆ

ಎರಡನೆಯದಾಗಿ ಮಕ್ಕಳು ಉಪನ್ಯಾಸಗಳು ಪ್ರತ್ಯಕ್ಷ ಪ್ರದರ್ಶನಗಳು ಮತ್ತು ಪ್ರವಾಸಗಳ ಮೂಲಕ ಸಹನಶೀಲತೆ, ಜ್ಞಾನ ಮತ್ತು ವಿಚಾರ ಶಕ್ತಿಗಳನ್ನು ಗ್ರಹಿಸಿಕೊಳ್ಳುವಂತೆ ಮಾಡುವುದು ಈ ಶಿಸ್ತು ಯೋಜನೆಯ ಉದ್ದೇಶವಾಗಿದೆ ಮಕ್ಕಳು ವೀಕ್ಷಣೆ ಹಾಗೂ ಅನುಭವಗಳ ಮೂಲಕ ಕಲಿತುಕೊಳ್ಳಲು ಅವಕಾಶವೀಯಲಾಗುವುದು ಈ ರೀತಿಯ ತರಬೇತಿ ಪಡೆದ ಭಾವಿ ಪ್ರಜೆಗಳು ಸೈತಾನಿ ಹಾಗೂ ಉದ್ದಂಡತೆಯ ಮನೋಭಾವವನ್ನು ತ್ಯಜಿಸಿ ಹೆಚ್ಚು ಹೆಚ್ಚಾಗಿ ಸಹನಶೀಲತೆ ಮತ್ತು ವಿಚಾರಶಕ್ತಿಯನ್ನು ಪಡೆಯುವರಲ್ಲದೆ ರಾಷ್ಟ್ರಕ್ಕೆ ಸೇವೆ ಸಲ್ಲಿಸುವಂತಹವರಾಗುವರು.

ಪ್ರಧಾನ ಮಂತ್ರಿಗಳಾದ ಶ್ರೀ ಜವಾಹರಲಾಲ್ ನೆಹರೂ ಅವರು ೧೯೫೧ ರ ಅದಿಭಾಗದಲ್ಲಿ ದೆಹಲಿಯಲ್ಲಿ ರಾಷ್ಟ್ರೀಯ ಸೈನಿಕ ವಿದ್ಯಾರ್ಥಿದಳದ ಸೈನಿಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ವಿದ್ಯಾರ್ಥಿಗಳು ದೇಶಕ್ಕೆ ಆಪತ್ತು ಸಂಭವಿಸಿದ ಸಮಯದಲ್ಲಿ ದೇಶವನ್ನು ರಕ್ಷಿಸಲು ಸಿದ್ಧವಾಗಿರಬೇಕೆಂದು ನುಡಿದಿದ್ದರು. ಆ ಸಮಯದಲ್ಲಿಯೇ ರಾಷ್ಟ್ರೀಯ ಶಿಸ್ತು ಕಾರ್ಯ ಯೋಜನೆಯೊಂದನ್ನು ಅಸ್ತಿತ್ವಗೊಳಿಸಬೇಕೆಂಬ ಕಲ್ಪನೆಯೂ ರೂಪತಳೆದು ಈ ಕಾರ್ಯಯೋಜನೆಗೆ ಮೂಲಕಾರಣರಾರೆಂದರೆ ಪುನರ್ವಸತಿ ಮಂತ್ರಿಶಾಖೆಯಲ್ಲಿ ಉಪಮಂತ್ರಿಗಳಾಗಿದ್ದ ಶ್ರೀ ಜೆ. ಕೆ. ಭೋಂಸ್ಲೆ ಅವರು. ಜಪಾನ್ ಮತ್ತಿತರ ರಾಷ್ಟ್ರಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಎಷ್ಟರಮಟ್ಟಿಗೆ ಶಿಸ್ತನ್ನು ಬೆಳೆಸಲಾಗಿದೆ ಎಂಬುದನ್ನು ಅವರು ಅಧ್ಯಯನಮಾಡಿದ್ದರು. ಅವರ ಅಧ್ಯಯನಗಳ ಫಲಸ್ವರೂಪವಾಗಿ ರಾಷ್ಟ್ರೀಯ ಶಿಸ್ತು ಕಾರ್ಯಯೋಜನೆಯು ರೂಪುಗೊಂಡಿತು.

ಮೊದಲು ಶ್ರೀ ಭೋಂಸ್ಲೆ ಅವರು ಈ ಕಾರ್ಯ ಯೋಜನೆಯನ್ನು ದೆಹಲಿಯಲ್ಲಿ ಸ್ಥಾನಸಲ್ಲಟ ವಿದ್ಯಾಲಯಗಳು, ಅವರ ಮಕ್ಕಳು ಮತ್ತು ಅನಾಥ ಮಕ್ಕಳಿಗಾಗಿ ಸ್ಥಾಪಿತಗೊಂಡಿರುವ ಕಸ್ತೂರಿಬಾ ನಿಕೇತನದಲ್ಲಿ ಪ್ರಾರಂಭಿಸಿದರು. ೧೯೫೪ರ ಕೊನೆಯ ವೇಳೆಗೆ ಪ್ರಧಾನ ಮಂತ್ರಿಗಳು ಕಸ್ತೂರಿ ಬಾ ನಿಕೇತನದ ಶಿಕ್ಷಣಾರ್ಥಿಗಳು ನಡೆಸಿದ ಕವಾಯಿತನ್ನು ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರಲ್ಲದೆ ಈ ಕಾರ್ಯ ಯೋಜನೆಯನ್ನು ದೇಶದ ಎಲ್ಲ ಭಾಗಗಳಲ್ಲಿಯೂ ಅನುಷ್ಠಾನಕ್ಕೆ ತರಬೇಕೆಂದು ಸಲಹೆ ಮಾಡಿದರು

ಸಾರ್ವಜನಿಕರಿಂದ ದೊರೆತ ಉತ್ತೇಜನದಿಂದಾಗಿ ಈ ಕಾರ್ಯ ಯೋಜನೆಗಳನ್ನು ದೆಹಲಿಯಲ್ಲಿ ಮಾತ್ರವೇ ಅಲ್ಲದೆ ಘಾಜಿಯಾಬಾದ್, ರಾಜಪುರ, ಉಲ್ಲಾಸನಗರ (ಮುಂಬೈ) ಮತ್ತು ಜಲಂಧರಗಳಿಗೂ ಸಹ ವಿಸ್ತರಿಸಲಾಯಿತು ೧೯೫೪ ಮಾರ್ಚಿಯಲ್ಲಿ ಈ ಕಾರ್ಯಯೋಜನೆಗಾಗಿ ಕೇವಲ ಒಂದು ಲಕ್ಷ ರೂಗಳ ಹಣವನ್ನು ಒದಗಿಸಲಾಗಿತ್ತು. ೧೯೫ ವಿದ್ಯಾ ಸಂಸ್ಥೆಗಳಲ್ಲಿ ೨೪,೮೮೧ ವಿದ್ಯಾರ್ಥಿಗಳು ತರಬೇತಿ ಪಡೆದರು.

೧೯೫೫-೫೬ರಲ್ಲಿ ಈ ಕಾರ್ಯಯೋಜನೆಗಾಗಿ ೨ ಲಕ್ಷ ರೂಗಳ ಸಹಾಯ ಧನವನ್ನು ನೀಡಲಾಯಿತು ಆಗ ಅಂಬಾಲ, ಪಂಚಕುಲ, ಗುರ್‌ಗಾಂವ್, ಪಾಣಿಪತ್ತು ಮತ್ತು ಸೌರಾಷ್ಟ್ರಗಳಲ್ಲಿ ಈ ಕಾರ್ಯಯೋಜನೆಯನ್ನು ಜಾರಿಗೆ ತರಲಾಯಿತು. ೧೯೫೬-೫೭ರಲ್ಲಿ ೪೦,೦೦೦ ಬಾಲಕ ಬಾಲಕಿಯರು ಈ ಕಾರ್ಯಯೋಜನೆಯ ಪ್ರಕಾರ ತರಬೇತಿ ಪಡೆದರು. ಇವರಲ್ಲಿ ೧೫,೦೦೦ ಮಕ್ಕಳು ದೆಹಲಿಯಲ್ಲೂ, ೧೨,೦೦೦ ಮಕ್ಕಳು ಪಂಜಾಬಿನಲ್ಲಿಯೂ ೩,೦೦೦ ಮಕ್ಕಳು ಪೆಪ್ಸು ರಾಜ್ಯದಲ್ಲಿಯೂ, ೨,೦೦೦ ಮಕ್ಕಳು ಸೌರಾಷ್ಟ್ರದಲ್ಲಿಯೂ, ೪,೦೦೦ ಮಕ್ಕಳು ಮುಂಬೈನಲ್ಲಿಯೂ ೭ ೦೦೦ ಮಕ್ಕಳು ಪಶ್ಚಿಮ ಬಂಗಾಳದಲ್ಲಿಯೂ ತರಬೇತಿ ಪಡೆದರು. ೧೯೫೭ರ ಅಂತ್ಯದ ವೇಳೆಗೆ ಸುಮಾರು ೬೯,೦೦೦ ಶಾಲಾ ಮಕ್ಕಳು ರಾಷ್ಟ್ರೀಯ ಶಿಸ್ತು ಕಾರ್ಯಯೋಜನೆಯ ಸೌಲಭ್ಯಗಳನ್ನು ಪಡೆಯುತ್ತಿದ್ದರು ಯೋಜನಾ ಕಮಿಷನ್ನಿನವರು ಈ ಕಾರ್ಯಯೋಜನೆಗೆ ಸಂಬಂಧಿಸಿದ ವಿಸ್ತರಣ ಕಾರ್ಯ ಸೂಚನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ದ್ವಿತೀಯ ಯೋಜನಾವಧಿಯಲ್ಲಿ ಇದಕ್ಕಾಗಿ ೫೦ ಲಕ್ಷ ರೂ. ಗಳ ಹಣವನ್ನು ನಿಗದಿ ಮಾಡಿದರು

ಈಗ ಈ ಕಾರ್ಯಯೋಜನೆಯು ಪಂಜಾಬ್, ಮುಂಬೈ, ಪಶ್ಚಿಮ ಬಂಗಾಳ, ದೆಹಲಿ, ಮಧ್ಯ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ರಾಜ್ಯಗಳಲ್ಲಿ ಮತ್ತು ಉತ್ತರ ಪ್ರದೇಶದ ಕೆಲವು ಶಾಲೆಗಳಲ್ಲಿ ಕಾರ್ಯಾಚರಣೆಗೆ ಬಂದಿದೆ ಪ್ರಸ್ತುತ ವರ್ಷದ ಅಂತ್ಯದ ವೇಳೆಗೆ ಈ ಕಾರ್ಯಯೋಜನೆಯು ಸುಮಾರು ಒಂದು ಲಕ್ಷ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೊಳಗೊಂಡ ೨೦೦ ಶಾಲೆಗಳಿಗೆ ವ್ಯಾಪಕವಾಗಲಿದೆ. ಶಿಕ್ಷಕರ ತರಬೇತಿಗಾಗಿ ದೆಹಲಿಯ ಮಾಲವೀಯ ನಗರ ಮತ್ತು ಘಾಜಿಯಾಬಾದ್‌ಗಳಲ್ಲಿ ಎರಡು ತರಬೇತಿ ಕೇಂದ್ರಗಳು ಪ್ರಾರಂಭಿಸಲ್ಪಟ್ಟಿವೆ. ಮೂರು ತಿಂಗಳ ಕಾಲ ತರಬೇತಿ ನೀಡುವ ಈ ಕೇಂದ್ರಗಳು ಈಗಾಗಲೆ ೬೦೦ ಶಿಕ್ಷಕರಿಗೆ ತರಬೇತಿ ನೀಡಿವೆ

ಈ ಕಾರ್ಯ ಯೋಜನೆಯನ್ನು ದೇಶದ ಎಲ್ಲ ಭಾಗಗಳಲ್ಲಿಯೂ ಅನುಷ್ಠಾನಕ್ಕೆ ತರಲು ಅಪಾರ ಹಣ, ಸಂಘಟನೆ ಮತ್ತು ಶ್ರಮ ಅತ್ಯಾವಶ್ಯಕವಾಗಿದೆ. ನಾಲ್ಕು ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಅವಲೋಕಿಸಿದ್ದಾದರೆ ಈ ಕಾರ್ಯ ಯೋಜನೆಯು ತಳ ಊರಿದೆ ಎಂಬುದು ಸ್ಪಷ್ಟವಾಗಿದೆ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕುಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ನಿಶಾರದ.

ಬೆಲೆ. ರೂ ೧—೮—೦ (1 = 50)

ರೂ 1 = 75 ನುನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆಯ ಸ್ಥಳ:

ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ ಎ)

ಸಾಮಾನ್ಯ ರೋಗಗಳು
(ಡಾ ಕೆ ಎಲ್ ಐತಾಳ್, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್ ಎಲ್ ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ,
ಉಡುಪಿ

NAVAYUGA

Popular Kannada Weekly

Founder:—

A. B. SHETTY,

Former Minister for Public Health
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೨೮-೮-೫೮	ಸಂಚಿಕೆ ೫೦

ಸಂಪತ್ತಿನ ಸದುಪಯೋಗ

ಒಂದು ದೇಶದ ಸಂಪತ್ತನ್ನು ಗಣಿಸುವಾಗ ಚಿನ್ನ ಬೆಳ್ಳಿ ಮೊದಲಾದ ಬೆಲೆ ಬಾಳುವ ಹಿಡುವೆ ವಸ್ತುಗಳಿಂದ ಅಳಿಯುವುದೊಂದು ಕ್ರಮವಾದರೆ, ಅಲ್ಲಿನ ಜನ ಸಂಪತ್ತು, ಮತ್ತು ಪಶುಸಂಪತ್ತುಗಳಿಂದ ನಿರ್ಣಯಿಸುವುದೂ ಇನ್ನೊಂದು ವಿಧಾನವಾಗಿದೆ. ನಮ್ಮ ದೇಶದಲ್ಲಾದರೋ ಚರ ಸಂಪತ್ತು ಅತ್ಯಲ್ಪವಾಗಿದ್ದರೂ ಸ್ಥಿರ ಸಂಪತ್ತಾದ ಜನ, ಪಶು, ವನ ಮೊದಲಾದುವು ವಿಪುಲವಾಗಿರುವುದರಿಂದ ನಮ್ಮ ದೇನೂ ತೀರ ಬಡ ರಾಷ್ಟ್ರವೆಂದು ವಿಮಂಚನೆಗೀಡಾಗಬೇಕಾಗಿಲ್ಲ. ನಮ್ಮ ನಲ್ವತ್ತು ಕೋಟಿ ಜನರಲ್ಲಿ ಪ್ರಾಯಃಪ್ರಬುದ್ಧರಾಗಿ ದುಡಿಯುವ ಶಕ್ತಿಯುಳ್ಳವರು ತಮ್ಮ ಸೇವೆಯಲ್ಲಿ ಒಂದಲ್ಪ ಪ್ರಮಾಣವನ್ನು ದೇಶಕ್ಕಾಗಿ ಮೀಸಲಿಂಸುವುದಾದರೆ, ಅದೇ ಬಹುವಾಗಿ ಪರಿಣಮಿಸುವುದು ಹಾಗೆಯೇ ನಮ್ಮ ಪಶುಸಂಪತ್ತೂ ನಮ್ಮ ಬಲಪಾದ ಸ್ಥಿರಸೊತ್ತು ಎಂದು ಹೇಳಬಹುದು. ಆದುದರಿಂದ ಜನ ಕಲ್ಯಾಣದತ್ತ ಮುನ್ನಡೆಯುವಾಗ ಈ ಪಶುಗಳನ್ನೂ ನಾವು ಹಿಂದಿಟ್ಟುಕೊಂಡು ಮುಂಬರಿಯ ಬೇಕಾಗಿದೆ. ಪಶುಗಳನ್ನು ಜನರಂತೆಯೇ ಅತಿ ನಿಷ್ಠೆಯಿಂದ ಪೋಷಿಸಿ, ಅವುಗಳಿಂದ ನಮ್ಮ ಚರಸಂಪತ್ತನ್ನೂ ಅಧಿಕಗೊಳಿಸಬಹುದು. ಇದರಿಂದ ಪಶು-ಜನರು-ಇಬ್ಬರಿಗೂ ಕ್ಷೇಮವೇ ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ, ನಾವು ನಮ್ಮ ಪಶುಗಳನ್ನು ಸರಿಯಾಗಿ ನೋಡಿಕೊಳ್ಳುತಿದ್ದೇವೆಯೆ? ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಅಸಾಧ್ಯ. ನಮ್ಮ ದೇಶದ ಸಾಮಾನ್ಯ ಪ್ರಜಾಜನರು ತಮ್ಮ ಹಾಗೂ ತಮ್ಮ ಕುಟುಂಬದ ಹೊಟ್ಟೆ ಹೊರೆಯುವುದೇ ದುಸ್ಸಾಧ್ಯವಿರುವಾಗ, ಅವರು ತಮಗಾಗಿ ಬಡುಕುವ ಪಶುಗಳತ್ತ ಸಾಕಷ್ಟು ಗಮನ ಹರಿಸಬೇಕೆನ್ನುವುದಾದರೂ ಹೇಗೆ? ನಮ್ಮ ಜನತೆಯೂ ದುರ್ಬಲವಾಗಿದೆ; ಪಶುಗಳೂ ಬಡವಾಗಿದ್ದು, ಅವುಗಳಿಂದ ಸಾಕಷ್ಟು ಪ್ರಯೋಜನಗಳೂ ದೊರೆಯುತ್ತಿಲ್ಲ. ಜಗತ್ತಿನ ಪಶುಗಳಲ್ಲಿ ನೂರಕ್ಕೆ ೧೯ ರಂತೆ ಭಾರತದಲ್ಲಿರುವುವು; ಎಂದರೆ ಒಟ್ಟು ೧೩೫ ಕೋಟಿ ಪಶುಗಳು ಭಾರತೀಯವೆನಿಸುವುವು. ಪ್ರತಿ ಮೂವರು ಭಾರತೀಯರಿಗೆ ಒಂದು ಪಶು! ಆದರೆ, ನಮ್ಮಲ್ಲಿ ಹಾಲುಕರೆವ ಪಶುಗಳು ಮಾತ್ರ ತೀರ ಅಲ್ಪ. ನಮ್ಮ ದನಕರುಗಳು ಕೊಡುವ ಹಾಲಿನ ಪ್ರಮಾಣವನ್ನು ಉಳಿದ ದೇಶಗಳೊಡನೆ ತುಲನೆಮಾಡಿದರೆ, ನಮ ಶಿರಸ್ಸು ಲಜ್ಜೆವನದಲ್ಲಾಗುವುದು. ಇದಕ್ಕೆ ನಮ್ಮ ದುರ್ದೆಸೆಯೇ ಕಾರಣವೆನ್ನಬೇಕು. ನಮ್ಮ ಪಶುಗಳಿಗೆ ಸರಿಯಾಗಿ ಪುಷ್ಟಿದಾಯಕವಾದ ಆಹಾರವನ್ನೀಯಲು ನಾವು ಸಮರ್ಥರಾಗುವುದಿಲ್ಲ. ಒಟ್ಟಿನಲ್ಲಿ ನಮ್ಮಲ್ಲಿ ಸಿರ್ಬಲ ಹಾಗೂ ಹಾಲೀಯದ ಪಶುಗಳೇ ಅಧಿಕ. ಇದಕ್ಕೆ ಪೋಷಣೆಯು ಚೆನ್ನಾಗಿರದಿರುವುದೇ ಪ್ರಬಲ ಕಾರಣ. "ಹೆಚ್ಚು ಆಹಾರ ಬೆಳೆಯಿರಿ" ಎಂಬ ಚಳವಳಿಯು ಪ್ರಬಲಿಸಿದಂತೆ ವಿಸ್ತಾರವಾಗಿ ಪಶುಗಳ ಮೇವಿಗಾಗಿ ಮೀಸಲಿಟ್ಟ ಹುಲ್ಲು ಮೈದಾನುಗಳು ಗದ್ದೆಗಳಾಗಿ ಮಾರ್ಪಾಡು ಹೊಂದತೊಡಗಿದುವು. ಮಾನವ ಸಂಖ್ಯೆಯೂ ಏರುತ್ತ ಬಂದಂತೆ, ವಸತಿ ನಿರ್ಮಾಣಕ್ಕಾಗಿಯೂ ಪಶುಗಳ ಆಹಾರ ಸ್ಥಾನಗಳು ಕೊರೆಯಾಗತೊಡಗಿದುವು. ನಗರಗಳು ಬೆಳೆಯುತ್ತ ಬಂದಂತೆ, ಅಲ್ಲಿದ್ದ ಹುಲ್ಲುಗಾವಲುಗಳು ಮಾಯವಾಗುತ್ತಿವೆ! ಒಂದು ಕಾಲದಲ್ಲಿ ಗೋಚರಾವಿಗಾಗಿ ಮೀಸಲಾಗಿಡಲ್ಪಟ್ಟಿದ್ದ ಹುಲ್ಲು ಬೆಳೆವ ಪ್ರದೇಶಗಳೂ ಜನೋಪಯೋಗಕ್ಕೆ ಕೊಡಲ್ಪಟ್ಟಿವೆ. ಎಲ್ಲೆಲ್ಲಿಯೂ ಇದೇ ಹಾಡು. ಹೀಗೆಯೇ ಕೆಲವು ವರ್ಷ ಕಳೆದರೆ, ಪಶುಗಳಿಗೆ ತುಣುಕು ಹುಲ್ಲಾದರೂ ಸರಿಯಾಗಿ ಸಿಗಲಾರದು! ಹಸಿಹುಲ್ಲು ದೊರೆಯದೆ ಹೋದರೆ, ಆವು ಬೆಳೆಯುವುದಾದರೂ ಎಂತು? ಪಶುಗಳ ಮೇವಿಗಾಗಿ ನಾವು ಅವಶ್ಯ ಸ್ಥಳಗಳನ್ನು ಒದಗಿಸಬೇಕು. ನಮ್ಮ ಯೋಜನೆಗಳಲ್ಲಿ ಪಶುಗಳ ಅಭಿವೃದ್ಧಿ-ಕಾರ್ಯಕ್ರಮವಿದ್ದರೂ ಇವೆಲ್ಲ ತಳಗಳನ್ನು ನಿರ್ಮಿಸುವುದರಲ್ಲಿಯೇ ನಾವು ಆಲೋಚನಾಮಗ್ನರಾಗುತ್ತಿರುವೆವು. ಆದರೆ, ಅವಕ್ಕೆ ಉತ್ತಮರೀತಿಯ ಆಹಾರವನ್ನು ಒದಗಿಸುವುದರಲ್ಲಿ ಮಾತ್ರ ನಾವು ನಮ್ಮ ಮನಸ್ಸು ಹರಿಯಿಸುವುದಿಲ್ಲವೆಂದು ಹೇಳಬಹುದು. ಡೆನ್‌ಮಾರ್ಕಿನಂತಹ ಒಂದು ಎಳೆಯದಾದ ದೇಶವು ಹೈನವೃತ್ತಿಯಿಂದಲೇ ಪ್ರಮುಖ ರಾಷ್ಟ್ರಗಳ ನಾಲಿನಲ್ಲಿ ನಿಂತಿರುವಾಗ, ಸಂಖ್ಯೆಯಲ್ಲಿ ವಿಪುಲ ಪಶುಸಹಿತರಾದ ನಾವು ಈ ದಿಸೆಯಲ್ಲಿ ಹಿಂದುಳಿಯುವುದು ಭೂಷಣವಲ್ಲವೆಂಬುದು ಖಂಡಿತ. ನಮ್ಮ ನಗರಗಳಲ್ಲಿ ಪಶುಗಳು ಬೀದಿ ಬೀದಿ ತಿರುಗುತ್ತ ಕಾನದ, ಕಸಕಡ್ಡಿ ಗೋಣಿ ಇತ್ಯಾದಿಗಳಿಗೆ ಬಾಯಿ ಹಾಕುತ್ತಿರುವುದು ದಿನನಿತ್ಯವೆಂಬಂತೆ ಎದುರು ಕಾಣುವ ದೃಶ್ಯ. ಹಳ್ಳಿಗಳಲ್ಲಾದರೂ ಹುಲ್ಲಿನ ಮಟ್ಟಿಗೆ ನೇಟಿಗಳಷ್ಟು ತೊಡಕಿಲ್ಲವಾದರೂ ಹಿಂಡಿ, ಕತ್ತಿಕಾಳು ಇತ್ಯಾದಿಗಳನ್ನು ಹಾಕುವ ಶಕ್ತಿ ಯಜಮಾನರಲ್ಲಿಲ್ಲ. ಹೀಗಾಗಿ ನಮ್ಮಂತೆಯೇ ದುಸ್ಥಿತಿಯಲ್ಲಿ ಸಹಭಾಗಿಗಳಾಗಿರುವ ಪಶುಗಳತ್ತವೂ ನಾವು ಗಮನವಿತ್ತು, ಅವುಗಳನ್ನು ಉತ್ತಮ ರೀತಿಯಲ್ಲಿ ಸಲಹಿ, ಅವುಗಳಿಂದ ಸಂಪೂರ್ಣ ಪ್ರಯೋಜನವನ್ನು ಪಡೆಯುವಂತೆ ಪ್ರಯತ್ನಿಸುವುದು ಅಗತ್ಯ.

ಪಶುಗಳನ್ನು ನಾವು ದೇವತೆಗಳೆಂದು ಪೂಜಿಸುತ್ತೇವೆ. ಅವುಗಳನ್ನು ನಾನಾ ವಿಧವಾಗಿ ವಂದಿಸುತ್ತೇವೆ. ಗೋಧನವೆಂಬುದೇ ಮಾನವನ ಮೂಲ ಧನವಾಗಿದ್ದ ಕಾಲವೂ ಒಂದಿತ್ತು. ಅಂತಹ ದನಕರುಗಳನ್ನು ನಾವು ಕಾಣುತ್ತಿರುವ ದೃಷ್ಟಿ, ಬದಲಾಗಬೇಕು; ನಮ್ಮಿಂದ ಉತ್ತಮ ರೀತಿಯಲ್ಲಿ ಪೋಷಿಸಲು ಸಾಧ್ಯವಿರುವಷ್ಟೇ ಪಶುಗಳನ್ನು ಸಾಕಬೇಕು. ಅವನ್ನು ಎಂದೂ ಅರೆಹೊಟ್ಟೆಯಿಂದ ಬಳಲುವಂತೆ ಮಾಡಬಾರದು.

ಈ ಬಗ್ಗೆ ನಮ್ಮ ಸರಕಾರವೂ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈಗಾಗಲೇ ಗೋಚರಾವಿಗೆ ಮೀಸಲಾಗಿಟ್ಟ ಮೈದಾನುಗಳನ್ನು ಯಾವ ಕಾರಣದಿಂದಲೂ ಬೇರೆ ಉದ್ದೇಶಗಳಿಗೆ ಬಳಸಬಾರದು. ಆಯಾ ಊರಿನಲ್ಲಿರುವ ಪಶುಗಳ ಸಂಖ್ಯೆಯನ್ನನುಸರಿಸಿ, ಅವಕ್ಕೆ ಸಾಲುವಷ್ಟು ಹುಲ್ಲುಗಾವಲುಗಳನ್ನು ಅವುಗಳಿಗಾಗಿ ಪ್ರತ್ಯೇಕಿಸಿಡಬೇಕು. ಅಸಿರ್ಬಂಧವಾಗಿ ಎಲ್ಲ ಪಶುಗಳೂ ಅಲ್ಲಿ ಮೇಯುವ ಸೌಲಭ್ಯ ದೊರೆಯಬೇಕು. ಜನತೆಯಲ್ಲಿಯೂ ತಮ್ಮ ಸಹಜೀವಿಗಳಾಗಿ ಬಾಳುವ ಈ ಪಶುಗಳನ್ನು ತಮ್ಮ ಕುಟುಂಬದಂತೆಯೇ ನೋಡಿಕೊಳ್ಳುವ ಮನೋಭಾವನೆಯನ್ನು ಹುಟ್ಟಿಸಬೇಕು. ಉತ್ತಮ ತಳಿಗಳನ್ನು ಶೋಧಿಸುವುದು, ಪಶುರೋಗಗಳನ್ನು ನಿರೋಧಿಸುವುದು, ರೋಗಗ್ರಸ್ತ ಪಶುಗಳ ಆರೋಗ್ಯವನ್ನು ಯೋಗ್ಯರೀತಿಯಲ್ಲಿ ಕಾಪಾಡುವುದು—ಇತ್ಯಾದಿ ವಿಭಾಗಗಳಲ್ಲಿ ಜನತೆಗೆ-ಸರಕಾರ ಮಾರ್ಗದರ್ಶನಮಾಡಬೇಕು. ಆಗಮಾತ್ರ ನಮ್ಮ ಪಶುಗಳು ಸಮೃದ್ಧವಾಗಿ ಬೆಳೆದು, ಅವು ಜನತೆಗೆ ಉಪಯೋಗಿಯಾಗುವುವು. ಇದರಿಂದ, ಜನರಿಗೂ ಸಂಪೂರ್ಣ ಪ್ರಯೋಜನ ದೊರೆಯುವುದು. ಜನನಿಬಿಡವಾದ ಹಾಗೂ ಪಶುಸಮೃದ್ಧವಾದ ನಮ್ಮ ದೇಶದಲ್ಲಿ ಒದಗಿರುವ ಇಬ್ಬಗೆಯ ಆಹಾರಾಭಾವವನ್ನು ಧೈರ್ಯದಿಂದ ಸಮರ್ಥ ಯೋಜನೆಗಳಿಂದ ಎದುರಿಸುವಂತಾದರೆ ಮಾತ್ರ ರಾಷ್ಟ್ರದ ಉನ್ನತಿ ಸಾಧ್ಯ. ಹಾಗಾಗುವಂತೆ ನಾವೆಲ್ಲರೂ ಪ್ರಯತ್ನಿಸುವುದು ನಮ್ಮ ಆದ್ಯ ಕರ್ತವ್ಯ.

ಮೂವತ್ತೇಳು ವರ್ಷಗಳು

ಈ ಸಂಚಿಕೆಯೊಡನೆ ನಮ್ಮ ಪತ್ರಿಕೆಯು ತನ್ನ ಮೂವತ್ತೇಳನೆಯ ವರ್ಷವನ್ನು ಯಶಸ್ವಿಯಾಗಿ ಮುಗಿಸಿ, ಎಂಟನೆಯ ಸಂಚಿಕೆಯಿಂದ ಮೂವತ್ತೆಂಟನೆಯ ವರ್ಷಕ್ಕೆ ಪಾದಾರ್ಪಣ ಮಾಡಲಿರುವುದು. ಪತ್ರಿಕೋದ್ಯಮದಲ್ಲಿ—ಅದರಲ್ಲೂ ಕನ್ನಡದ ಈ ಉದ್ಯಮದಲ್ಲಿ—ಮೂವತ್ತೇಳು ವರ್ಷವೆನ್ನುವುದು ಅಲ್ಪ ಕಾಲಾವಧಿಯಲ್ಲ. ಇಷ್ಟೊಂದು ವರ್ಷಗಳಲ್ಲಿ ನಾವು ಕನ್ನಡಿಗರ ಸೇವೆಯನ್ನು ನಮ್ಮ ಶಕ್ತ್ಯನುಸಾರ ಮಾಡಿರುತ್ತೇವೆ. ಇನ್ನು ಮುಂದಕ್ಕೂ ಇದೇ ರೀತಿಯಲ್ಲಿ ಮುಂದುವರಿಸುವುದಾಗಿ ನಿರ್ಧರಿಸಿದ್ದೇವೆ.

ಜನತೆಯ ಅಭಿರುಚಿಯು ದಿನೇದಿನೇ ಬದಲಾಗುತ್ತಿರುವಾಗ, ಜನತೆಗಾಗಿ ಪತ್ರಿಕೆಗಳಿರುವಾಗ, ಜನಾಭಿರುಚಿಗೆ ತಕ್ಕಂತೆ ಅವಶ್ಯಕ ಪರಿವರ್ತನೆಗಳನ್ನು ಮಾಡಿಕೊಳ್ಳುವುದೂ ಅಗತ್ಯವೇ ಆಗಿದೆ. ಈ ದಿಸೆಯಲ್ಲಿ ನಾವೂ ಈಗಾಗಲೇ ಕೆಲವೊಂದು ಪರಿವರ್ತನೆಗಳನ್ನು ಮಾಡಿ ಕಾರ್ಯರೂಪಕ್ಕೆ ತಂದಿರುತ್ತೇವೆ. ಅಲ್ಲದೆ, ಮುಂದಿನ ವರ್ಷದಿಂದ, ಈ ಮಾರ್ಗದಲ್ಲಿ ಇನ್ನೊಂದು ದಿಟ್ಟ ಹೆಜ್ಜೆಯಿಡಲು ಬಯಸುತ್ತೇವೆ. ವಿಭಿನ್ನ ಅಭಿರುಚಿಯುಕ್ತರಾದ ಜನರೆಲ್ಲರಿಗೆ ಬೇಕಾಗುವ, ಹಾಗೂ ರುಚಿಸುವ ವಿಷಯಾದಿಗಳನ್ನು ಆಳವಡಿಸಿಕೊಳ್ಳಬೇಕಾದರೆ, ಅದಕ್ಕೆ ಪತ್ರಿಕೆಯ ಸ್ಥಳಾವಕಾಶವೂ ಹೆಚ್ಚಾಗಬೇಕು; ಆದು ಹೆಚ್ಚಾಗುವಾಗ, ಬೆಲೆಯೂ ಏರಬೇಕು. ಆದರೆ, ಮುದ್ರಣದ ಕಾಗದದ ತುಟ್ಟಿಯ ಇಂದಿನ ಕಾಲದಲ್ಲಿ ಓದುಗರ ಕೈಗೆ ನಿಲುಕುವ ಬೆಲೆಯಲ್ಲೇ ಉತ್ತಮೀಕರಣವಿರುವುದೂ ಅಗತ್ಯ. ಕಾಗಾಗಿ, ಮುಂದಿನ ವರ್ಷದಿಂದ, ಈಗ ಇರುವ ಸ್ಥಳಾವಕಾಶದಲ್ಲಿಯೇ ಹೆಚ್ಚು ವಿಷಯಗಳ ಬಗ್ಗೆ ಲೇಖನಾದಿಗಳನೀಯಬೇಕೆಂದು ನಿರ್ಧರಿಸಿದ್ದೇನೆ. ನಮ್ಮ ಕಾರ್ಯದಲ್ಲಿ ಚಂದಾದಾರರೂ ಲೇಖಕ ಬಂಧುಗಳೂ ಜಾಹೀರಾತುದಾರರೂ ಈ ವರೆಗಿತ್ತ ಸಹಾಯ ಸಹಕಾರಗಳಿಗೆ ಕೃತಜ್ಞತೆಯನ್ನೀಯುವುದಲ್ಲದೆ, ಇನ್ನು ಮುಂದಕ್ಕೂ ಇವರೆಲ್ಲರ ನೆರವು ಅಧಿಕಾದಿಕವಾಗಿ ಲಭ್ಯಮಾನವಾಗಲೆಂದು ಹಾರೈಸುತ್ತೇವೆ.

ಲೇಖಕ ಬಂಧುಗಳಲ್ಲಿ ಒಂದು ಕೇಳಿಕೆ. "ನವಯುಗ"ಕ್ಕೆ ವಿವಿಧ ಮುಖಗಳ ಕುರಿತಾದ ಲೇಖನಾದಿಗಳನ್ನು ಪ್ರಕಟಣೆಗಾಗಿ ಕಳಿಸಬಹುದು. ಆದರೆ, ಇವು ಸಾಮಾನ್ಯವಾಗಿ ಪತ್ರಿಕೆಯ ಎರಡು ಅಥವಾ ಮೂರು ಕಾಲಂಗಳಿಗೆ ಸರಿಯಾಗಿ ಹೊಂದಿಕೊಂಡಿದ್ದು ಹಾಳೆಯ ಒಂದೇ ಮಗ್ಗುಲಲ್ಲಿ ಬರೆದರೆ, ಉತ್ತಮ. ದೀರ್ಘ ಲೇಖನಗಳಿಗೆ ಎಡೆಕಲ್ಪಿಸುವುದರಿಂದ ವಿಷಯ ವೈವಿಧ್ಯಕ್ಕೆ ದಕ್ಕೆ ಬರುವುದು. ಲೇಖಕರು ಇದನ್ನು ಗಮನಿಸಿ ಸಹಕರಿಸಬೇಕು.

ಜೈ ಹಿಂದ್!

ಮೈಸೂರು ಮಜೂರ ಮಂತ್ರಿಗಳಿಗೆ ಬೀಡಿ ಮಜೂರರ ಮನವಿ—ಕರ್ನಾಟಕ ಬೀಡಿ ವರ್ಕರ್ಸ್ ಫೆಡರೇಶನ ಮೂಲಕ ಬೀಡಿ ಮಜೂರರ ಪ್ರತಿನಿಧಿಗಳ ಶಿಷ್ಟಮಂಡಲವೊಂದು ತಾ. ೨೨ರಂದು ಬೆಂಗಳೂರಿನಲ್ಲಿ ಮಜೂರರ ಮಂತ್ರಿಗಳನ್ನು ಭೇಟಿಮಾಡಿ, ಸಾವಿರ ಬೀಡಿಗೆ ರೂಪಾಯಿ ಎಂಡರಂತೆ ಕನಿಷ್ಠ ಕೂಲಿ ನಿರ್ಣಯಿಸಬೇಕು, ಬೀಡಿ ಮಜೂರರಿಗೆ ಇಂದು ಜ್ಯಾರಿಯಲ್ಲಿರುವ ಫೆಕ್ಟರಿ ಆಕ್ಟು ಇತ್ಯಾದಿ ಕಾನೂನುಗಳ ಸೌಕರ್ಯ ದೊರೆಯುವಂತೆ ಸ್ಪೆಶಲ್ ಕಾನೂನು ರಚಿಸಬೇಕು ಇತ್ಯಾದಿ ಕೇಳಿಕೆಗಳ ಮನವಿಯನ್ನು ಒಪ್ಪಿಸಿತು. ಮಂತ್ರಿಗಳು ಸಹಾನುಭೂತಿಯನ್ನು ಪ್ರದರ್ಶಿಸಿ, ಪ್ರಾಂತದ ಬೀಡಿ ಮಜೂರರ ಹಿತರಕ್ಷಣೆಯ ಕಾನೂನನ್ನು ಆದಷ್ಟು ಬೇಗನೆ ರಚಿಸಲಾಗುವುದೆಂದರು.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ **37** ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **38** ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿ ಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಚಂದಾ ಹಣವನ್ನು ಯಾವ ತರದ ಖರ್ಚೂ ಇಲ್ಲದೆ 'ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ನವಯುಗದ ಖಾತೆಗೆ ಕಟ್ಟಬಹುದು.

ಮೆನೇಜರ್.

ಸಂಕ್ಷಿಪ್ತ ಸುದ್ದಿಗಳು

ವ್ಯವಸಾಯ ಅರ್ಥಶಾಸ್ತ್ರಜ್ಞರ ಅಂತಾರಾಷ್ಟ್ರೀಯ ಸಮ್ಮೇಳನವು ಮೊತ್ತಮೊದಲನೆಯ ಬಾರಿ ಏಷಿಯಾದಲ್ಲಿ ನಡೆದಿದೆ. ಪ್ರಧಾನ ಮಂತ್ರಿಗಳಾದ ಶ್ರೀ. ಜವಾಹರಲಾಲ್ ನೆಹರೂರವರು, ಇದೇ ಆಗಸ್ಟ್ ೨೪ರಂದು ಮೈಸೂರಿನಲ್ಲಿ ಈ ಸಮ್ಮೇಳನದ ಹತ್ತನೆಯ ಅಧಿವೇಶನವನ್ನು ಉದ್ಘಾಟಿಸಿದರು. ವ್ಯವಸಾಯ ಅರ್ಥಶಾಸ್ತ್ರದಲ್ಲಿ ವೈಜ್ಞಾನಿಕ ಅಧ್ಯಯನ ಹಾಗೂ ಸಂಶೋಧನೆಗಳಿಗೆ ಪ್ರೋತ್ಸಾಹವೀಯುವ ಉದ್ದೇಶದಿಂದ ಸ್ಥಾಪಿತಗೊಂಡಿರುವ ಈ ಸಮ್ಮೇಳನವು ಸರ್ಕಾರೇತರ ಮಂಡಲಿಯಾಗಿದೆ. ವಿಶ್ವವಿದ್ಯಾನಿಲಯಗಳು, ಸರ್ಕಾರಿ ಇಲಾಖೆಗಳು ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಕೆಲಸಮಾಡುತ್ತಿರುವ ವಿಶ್ವವಿಖ್ಯಾತ ವಿಜ್ಞಾನಿಗಳು ಈ ಮಂಡಲಿಯ ಸದಸ್ಯರುಗಳಾಗಿರುವರು

ಮೈಸೂರಿನಲ್ಲಿ ನಡೆಯುವ ಅಧಿವೇಶನದಲ್ಲಿ ಗ್ರೇಟ್ ಬ್ರಿಟನ್ನಿನ ಶ್ರೀ ಎಲ್. ಕೆ. ಎಲ್ಮ್‌ಹರ್ಸ್ಟ್ ಅವರು ಅಧ್ಯಕ್ಷತೆ ವಹಿಸಿದರು. ೨೯ ವರ್ಷಗಳ ಹಿಂದ ಸ್ಥಾಪಿಸಲ್ಪಟ್ಟಾಗಿನಿಂದಲೂ ಶ್ರೀ ಎಲ್ಮ್‌ಹರ್ಸ್ಟ್ ಅವರೇ ಈ ಸಮ್ಮೇಳನದ ಅಧ್ಯಕ್ಷರಾಗಿರುವರು. ೧೯೨೧ರಿಂದ ೨೪ರ ವರೆಗೆ ಶ್ರೀ ಎಲ್ಮ್‌ಹರ್ಸ್ಟ್ ಅವರು ಶಾಂತಿನಿಕೇತನ, ವಿಶ್ವಭಾರತೀಯ ಗ್ರಾಮಾಂತರ ಪುನರ್ಜನಾ ಸಂಸ್ಥೆಯ ಡೈರೆಕ್ಟರ್ ಆಗಿದ್ದರಲ್ಲದೆ ಕವಿನರ್ಯ ಡಾ। ರವೀಂದ್ರನಾಥ ಠಾಕೂರ್ ಅವರ ನಿಕಟ ಸಹಿಪಾಠಿಗಳೂ ಆಗಿದ್ದರು.

ಈ ಸಮ್ಮೇಳನದಲ್ಲಿ ವ್ಯವಸಾಯ ಹಾಗೂ ವ್ಯಾಪಾರ ಸಂಬಂಧವಾದ ವಿಷಯವನ್ನು ಕುರಿತು ವರ್ಯಾಲೋಚನೆ ನಡೆಸಲಾಯಿತು. ದೇಶಗಳ ಆರ್ಥಿಕ ವಿಕಾಸದ ಕ್ರಮದಲ್ಲಿ ವ್ಯವಸಾಯ ಹಾಗೂ ಇತರ ಕಾರ್ಯಚಟುವಟಿಕೆಗಳ ನಡುವೆ, ಸಮತೋಲನ ಮತ್ತು ಜಗತ್ತಿನಲ್ಲಿ ಸುಭದ್ರವಾದ ಆರ್ಥಿಕ ವ್ಯವಸ್ಥೆ—ಈ ಮುಂತಾದ ವಿಷಯಗಳೂ ಈ ಸಮ್ಮೇಳನದಲ್ಲಿ ಚರ್ಚಿಸಲ್ಪಟ್ಟವು. ಜಗತ್ತಿನ ವಾರ್ಷಿಕ ಬಂಡವಾಳಗಳಿಕೆಯನ್ನು ಹೇಗೆ ವಿನಿಯೋಗಿಸಬಹುದೆಂಬ ವಿಷಯವು ದೊಡ್ಡ ಸಮಸ್ಯೆಯಾಗಿ ಉಳಿದಿದೆ. ಮೈಸೂರಿನಲ್ಲಿ ನಡೆದ ಸಮ್ಮೇಳನದಲ್ಲಿ ೭೦ಕ್ಕೂ ಹೆಚ್ಚು ರಾಷ್ಟ್ರಗಳ ಸುಮಾರು ೩೫೦ ಮಂದಿ ಪ್ರತಿನಿಧಿಗಳು ಭಾಗವಹಿಸಿ, ಭಾರತಕ್ಕೆ ಮಹತ್ವವೇ ಅಲ್ಲದೆ, ಇಡೀ ಏಷಿಯಾಖಂಡಕ್ಕೆ ಸಂಬಂಧಿಸಿದ ವ್ಯವಸಾಯ ಸಂಬಂಧವಾದ ಸಮಸ್ಯೆಗಳನ್ನು ಕುರಿತು ಸಮಾಲೋಚನೆ ನಡೆಸಿದರು.

ಅಧ್ಯಾಪಕರಿಗೆ ಪ್ರವಾಸ ಶಿಕ್ಷಣ

ಭಾರತದ ಕೇಂದ್ರ ಸರಕಾರದ ವಿದ್ಯಾಮಂತ್ರಿ ಶ್ರೀಯುತ ವಿವಿಧ ರಾಜ್ಯಗಳ ಮತ್ತು ಕೇಂದ್ರಾಳಿತ ಪ್ರದೇಶಗಳ ಉಪಾಧ್ಯಾಯರುಗಳಿಗೆ ತ್ರೈಕ್ಷಣಿಕ, ಐತಿಹಾಸಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಸಹಿತವಾದ ಸ್ಥಳಗಳನ್ನು ಸಂದರ್ಶಿಸುವ ಬಗ್ಗೆ ಸಹಾಯ ನೀಡುವ ಒಂದು ಯೋಜನೆಯನ್ನು ಸಿದ್ಧಪಡಿಸಿದೆ. ಈ ಯೋಜನೆಯು ಸದ್ಯ, ಈ ಆರ್ಥಿಕ ವರ್ಷದಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲ್ಪಟ್ಟಿದೆ. ಈ ಯೋಜನೆಯನ್ನು ಕೇಂದ್ರ ಸರಕಾರವು ಮೂಡನೆ ವರ್ಗದ ರೇಲ್ವೆ ಶುಲ್ಕದ ಅರ್ಧಾಂಶದಷ್ಟನ್ನು ವಹಿಸುವುದು; ಉಳಿದ ಅರ್ಧಾಂಶವನ್ನು ರೇಲ್ವೆ ವಿಭಾಗವೇ ರಿಯಾಯಿತಿ ತೋರಿಸುತ್ತದೆ. ಆಗ ಪುಕ್ಕಟೆ ಪ್ರಯಾಣವೊದಗಿದಂತಾಗುವುದು. ರೇಲ್ವೆ ಸಂಬಂಧವಿಲ್ಲದ ಸ್ಥಳಗಳಾದಿತೆ, ಸಮರ್ಪಕವಾದ ಬಸ್ಸಿನ ಶುಲ್ಕವನ್ನು ಸರಕಾರವು ಕೊಡುವುದು. ಅಧ್ಯಾಪಕರ ಸಂಖ್ಯೆಯ ಎರಡು ವಾರಗಳವಧಿಯ ವರೆಗೆ ಮುಂಬರಿಯಬಹುದಾದರೂ ವಿಶೇಷ ಸಂದರ್ಭಗಳಲ್ಲಿ ಈ ಕಾಲವು ಸುದಲ್ಲಿ ಕೆಲವೊಂದು ರಿಯಾಯಿತಿ ದೊರೆಯಬಹುದು.

ರಾಜಾಜೀ ಕೃತಜ್ಞರು!

"ಸಾಕಷ್ಟು ತಡವಾಗಿಯಾದರೂ ದಯೆದೋರಿದುದಕ್ಕೆ ಕೃತಜ್ಞತೆ" ಎಂದು ಶ್ರೀ ರಾಜಾಜಿಯವರು ಸಂಯುಕ್ತರಾಷ್ಟ್ರ ಮತ್ತು ಬ್ರಿಟಿಷ ರಾಜ್ಯಗಳು ಅಣ್ವಸ್ತ್ರಗಳನ್ನು ಅವಮಾನತಗೊಳಿಸುವ ಬಗ್ಗೆ ಇತ್ತ ಘೋಷಣೆಗಳನ್ನು ಸ್ವಾಗತಿಸಿದರು. "ರಷ್ಯವು ಒಂದು ಬಾರಿ ಈ ಬಗ್ಗೆ ತನ್ನ ನಿರ್ಧಾರವನ್ನು ಘೋಷಿಸಿದ ಸಂದರ್ಭದಲ್ಲಿಯೇ ಈ ಮಹಾ ರಾಜ್ಯಗಳು ಅವುಗಳ ನಿಷೇಧಕ್ಕೆ ಸಿದ್ಧವಾಗುವುವೆಂದು ನಂಬಿದ್ದೆನ ಅಮೆರಿಕೆಯು ಸರಿಯಾದುದನ್ನು ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಸರಿಯಾಗಿಸುವುದೆಂದು ಆಗ ಕೇಳಿದ ಘೋಷಣೆಗಳಿಂದ ಯೂರೋಪ ಆಗಲಿ ಅಮಾಕ್ಯಾಗಲೀ ಕಾಯಬೇಕು. ರಷ್ಯವು ತನ್ನ ಸಾಹಸದ ಘೋಷಣೆಗಳನ್ನು ಮಾಡುವುದಕ್ಕೆ ಮೊದಲೇ ಅಮೆರಿಕೆಯು ತನ್ನ ಅಣ್ವಸ್ತ್ರಗಳನ್ನು ನಿಷೇಧಿಸಿದ್ದರೆ, ಎಷ್ಟು ಒಳಿತಾಗುತಿತ್ತು?" ಎಂದು ಅವರು ಅಭಿಪ್ರಾಯಪಟ್ಟರು.

ಭಾರತಕ್ಕೆ ಒಹುಮುಖ ಸಹಾಯ

ಸಪ್ತಂಬರ ತಿಂಗಳಿಂದ ಭಾರತಕ್ಕೆ ಬಹುಮುಖ ಆರ್ಥಿಕ ಸಹಾಯವು ದೊರೆಯುವುದೆಂದು ನಿರೀಕ್ಷಿಸಲಾಗಿದೆ. ಜಾಗತಿಕ ಬೇಂಕು ಮುಂದಿನ ವಾರದಲ್ಲಿ ಭಾರತಕ್ಕೆ ಯಾವ ರೀತಿ ನೆರವೀಯಬಹುದೆಂದು ಚರ್ಚಿಸುವ ಶಿಲುವಾಗಿ ಮೂರು ದಿನಗಳ ಸಮ್ಮೇಳನವೊಂದನ್ನು ಕರೆದಿದ್ದು, ಅದರಲ್ಲಿ ಅಮೆರಿಕ, ಬ್ರಿಟನ್, ಪಶ್ಚಿಮ ಜರ್ಮನಿ, ಜಪಾನು ಮತ್ತು ಕೆನಡೆಗಳು ಭಾಗವಹಿಸುವುವು. ಈ ಎಲ್ಲ ರಾಷ್ಟ್ರಗಳೂ ಕಳೆದ ಕೆಲವರ್ಷಗಳಿಂದ ಭಾರತಕ್ಕೆ ನೆರವಿತ್ತಿರುವುವು ವಾಶಿಂಗಟನ್ನಿನಲ್ಲಿ ದೊರೆವ ಅಂಕಿಸಂಖ್ಯೆಗಳಂತೆ ಭಾರತಕ್ಕೆ ೬೧ನೆ ವರ್ಷಾಂತ್ಯದೊಳಗೆ ತನ್ನ ದ್ವಿತೀಯ ಯೋಜನೆಯನ್ನು ಕಾರ್ಯಗತಗೊಳಿಳಲು ಸುಮಾರು ಒಂದು ಸಾವಿರ ಮಿಲಿಯ ಡಾಲರ್‌ಗಳು ಬೇಕಾಗಬಹುದಿಲ್ಲದೇ ಇದರಮೂರರಲ್ಲೊಂದಂಶವು ಈ ವರ್ಷಾಂತ್ಯದೊಳಗೆ ಅವಶ್ಯಕ ಬೀಳುವುದು. ಸಪ್ತಂಬರ ತಿಂಗಳಾಂತ್ಯದೊಳಗೆ ಸಹಾಯದ ಹೊಸ ಮೂಲೆಯ ಪ್ರಾರಂಭವಾಗುವುದೆಂದು ನಿರೀಕ್ಷಿಸಲಾಗಿದೆ.

ನೆಹರೂರವರಿಂದ ಅಭಿವಂದನೆ!

ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯಲ್ಲಿ ಪಶ್ಚಿಮ ಆಸ್ಯದ ಪರಿಸ್ಥಿತಿಯ ಸಂಬಂಧದಲ್ಲಿ ಕಯಗಾರಿಸಿದ ಗೊತ್ತುವಳಿಯೊಂದನ್ನು ಮಂಡಿಸಿದುದಕ್ಕೆ ಮತ್ತು ಸಂಯುಕ್ತ ರಾಷ್ಟ್ರಸಂಘವು ಅದನ್ನು ಸ್ವೀಕರಿಸಿದುದಕ್ಕೆ ಪಂಡಿತ ನೆಹರೂರವರು ತನ್ನ ಹೃತ್ಪೂರ್ವಕ ಸಂತೋಷವನ್ನು ವ್ಯಕ್ತಪಡಿಸಿದರು ಈ ಗೊತ್ತುವಳಿಯ ಸ್ವೀಕಾರದಿಂದ ಹೊಗೆಯಾಡುತಿದ್ದ ರಣಭೂಮಿಯ ಕೊಂಚ ದೂರಸರಿಯಿತು ಇಂತಾಕಿನಲ್ಲಾದ ಅಂತರಿಕ ವಿದ್ರೋಹದ ಬೆನ್ನಲ್ಲೆ ಎನ್ನ ಲೆಬನಾನ್ ಮತ್ತು ಜೋರ್ಡನ್‌ಗಳಲ್ಲಿ ಉದ್ಭವಿಸಿದ ಪರಿಸ್ಥಿತಿಯು ನಮ್ಮೆಲ್ಲರನ್ನು ಕಂಗಾಲು ಮಾಡಿತ್ತು. ಈಗ ಈ ಪರಿಸ್ಥಿತಿಯು ತಿಳಿಗೊಂಡುಯುದ್ಧದ ಹೆದರಿಕೆಯು ಕೊಂಚ ದೂರಸರಿದಂತಾಯಿತು". ಎಂದವರು ಉದ್ಗರಿಸಿದರು.

ಉಡುಪಿ

ಎಮ್. ಜಿ ಎಮ್. ಕಾಲೇಜಿನಲ್ಲಿ

ತಾ. ೨೦ರಂದು ಆ ಕಾಲೇಜಿನ ಕೋಮರ್ಸ್ ಎಸೋಸಿಯೇಶನ ಉದ್ಘಾಟನೆಯನ್ನು ಶ್ರೀಟಿ ಎ ಪೈಗಳವರು ನೆರವೇರಿಸಿದರು ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಜ್. ಸುಂದರರಾಯರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಟಿ ಕೃಷ್ಣರಾಯರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕೆ. ರಾಮದಾಸ ಶೆಣೈಯವರು ಧನ್ಯವಾದಗಳನ್ನಿತ್ತರು.

ನಗರಸಭೆ— ಉಡುಪಿ ನಗರ ಸಭೆಯ

ತಾ ೩೦ರಂದು ಸಂಜೆ ಉಪಾಧ್ಯಕ್ಷ ಶ್ರೀ ಪಿ ವಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯಎ ಎಸ್ ನಾಯಕ್, ಎಮ್. ಎಲ್. ಎ, ಮತ್ತು ಡಾ. ಪಿ. ವಿ ವ್ಯಾಸರಾಯರ ಭಾವಚಿತ್ರಗಳನ್ನು ನಗರಸಭಾ ಹಾಲಿನಲ್ಲಿಡಲು ಕೋಡುತ್ತೀರ್ತಾಗಿ ಮುಂದೆ ಬಂದ ದಾನಿಗಳ ದಾನ ಸ್ವೀಕರಿಸಬೇಕೆಂದಾಯಿತು ಮುನಿಸಿಪಲ್ ಬಸ್‌ಸ್ಟೇಂಡಿನ ಅಂಗಡಿಗಳನ್ನು ಮೂರು ವರ್ಷಗಳ ಬಗ್ಗೆ ತನಗೇನೇ ಕೊಡಬೇಕೆಂದು ಶ್ರೀ ರಾಮಚಂದ್ರನವರು ಮಾಡಿದ ಅರ್ಜಿ ಕುರಿತು ಚರ್ಚೆ ನಡೆಯಿತು. ಡಾ. ಪಿ ಜಿ ಆಚಾರ್ಯರು ಏಲಂ ಮಾಡಬೇಕೆಂದು ನಿರ್ಣಯ ತಂದರು. ಶ್ರೀ ಟಿ. ಎ ವಾಸುದೇವನ್ ವಿರೋಧಿಸಿದರು. ಪೋಟಿಗೆ ಹಾಕಲಾಗಿ ಅಧ್ಯಕ್ಷರ ಕಾಸ್ಟಿಂಗ್ ವೋಟಿನಿಂದ ಡಾ. ಆಚಾರ್ಯರ ನಿರ್ಣಯ ಬಿದ್ದುಹೋಯಿತು.

ಸತ್ಕಾರ ಸಮಾರಂಭ—ಕಡಿಯಾಳಿ ದಿ

16 ವಿಶೇಷ ಪ್ರವಾಸವನ್ನು ಕೈಕೊಂಡಿರುವ ಉಡುಪಿ ನಗರ ಸಭಾಪತಿ ಶ್ರೀ ಕೆ ಕೆ ಪೈ ಇವರನ್ನು ಸತ್ಕರಿಸುವ ಸಮಾರಂಭವೊಂದನ್ನು ಕಡಿಯಾಳಿ ದಾ ಎ ಶಾಲಾ ಅಧ್ಯಾಪಕವೃಂದದವರು ಏರ್ಪಡಿಸಿದ್ದರು. ಶಾಲಾ ವ್ಯವಸ್ಥಾಪಕರಾದ ಶ್ರೀ ವಿಠ್ಠಲ ನಾರಾಯಣಪ್ಪಯ್ಯನವರು ಅಧ್ಯಕ್ಷತೆ ಸ್ಥಾನವನ್ನು ವಹಿಸಿದ್ದರು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎ ಗುರುರಾಜ ಭಟ್ಟರು ಸ್ವಾಗತಿಸಿದರು ಅಧ್ಯಾಪಕರಲ್ಲಿ ಶ್ರೀ ಬಿ ಲಿಂಗಪ್ಪ ಶೆಟ್ಟಿ, ವಾಸು ಶೇಣಿಗಾರ್, ಸದಾಶಿವರಾವ್, ರಾಮಚಂದ್ರ ಭಟ್ಟರ್ ಇವರು ಅತಿಥಿಗಳು ಶಾಲಾ ಹಳೆವಿದ್ಯಾರ್ಥಿಯಾಗಿ ನಗರ ಸಭಾಪತಿಗಳಾಗಿ ಶಾಲಾ ಹಿತಚಿಂತಕರಾಗಿ ಶಾಲೆಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅವರ ಪ್ರವಾಸವು ಸುಖಾಂತ್ಯವಾಗಲೆಂದು ಹಾರೈಸಿದರು ಶ್ರೀ ಕೆ ಕೆ ಪೈ ಇವರು ತನ್ನ ಪ್ರತ್ಯುತ್ತರದಲ್ಲಿ ತನ್ನ ಈ ಎಲ್ಲ ಕಾರ್ಯಗಳಿಗೆ ನಾಗರಿಕರ ದಾನ ಇತರ ಸಹಾಯವೇ ಕಾರಣವಾಗಿದೆ ಶಾಲೆಯ ಬಗ್ಗೆ ತನ್ನದೇವಾದ ಸಲಹೆ ಮಾಡಲು ಸದಾ ಸಿದ್ಧ ಎಂದು ಹೇಳಿ ತನ್ನ ವಿಶೇಷ ಪ್ರವಾಸದ ಸೂಕ್ಷ್ಮ ಕಾರ್ಯಕ್ರಮಗಳನ್ನು ವಿವರಿಸಿದರು ಅಧ್ಯಕ್ಷರು ಅತಿಥಿಗಳ ಪ್ರವಾಸವು ಸುಖದಾಯಿಯಾಗಿ ಎಲ್ಲೆಡೆ ಇವರಿಗೆ ಆದರದ ಸ್ವಾಗತ ದೊರೆಯಬೇಕೆಂದು ಹಾರೈಸಿದರು

ಶಾಲಾ ಹಳೆವಿದ್ಯಾರ್ಥಿ ಸಂಘದ ಪತಿಯಾದ ಶ್ರೀ ಕೆ ಕೆ ಪೈಗಳವರನ್ನು ಸತ್ಕರಿಸುವ ಸಮಾರಂಭವು ಶ್ರೀ ಕು ಶಿ ಹರಿದಾಸ ಭಟ್ಟ, ಎಂ ಎ ಇವರ ಅಧ್ಯಕ್ಷತೆಯಲ್ಲಿ ತಾ 17ರಂದು ಜರಗಿತು ಶ್ರೀ ಎಸ್. ಕೆ ಶ್ರೀಪತಿ ಆಚಾರ್, ಬಿ ಎ ಎಲ್ ಇವರು ಸ್ವಾಗತಿಸಿದರು ಸಭಿಕರಲ್ಲಿ ಶ್ರೀ ಸಾ ಲ. ನಾ. ಉಪಾಧ್ಯಾಯರು ವಂದನಾರ್ಹರಾಗಿದ್ದರು ಅತಿಥಿಗಳು ತಮ್ಮ ಭಾಷಣದಲ್ಲಿ ಶಾಲಾ ಹಳೆವಿದ್ಯಾರ್ಥಿಗಳಲ್ಲಿ ವಿಶೇಷ ಪ್ರವಾಸ ಕೈಗೊಳ್ಳುವವರಲ್ಲಿ ತಾನು ಮೂರನೆಯವನೆಂದು ಹೇಳಿ ತನ್ನ ಪ್ರವಾಸದ ಉದ್ದೇಶ ತಿಳಿಸಿ, ತನ್ನನ್ನು ಗೌರವಿಸಿದುದಕ್ಕಾಗಿ ಆದರ ಸೂಚಿಸಿದರು ಅಧ್ಯಕ್ಷರು ತನ್ನ ಭಾಷಣದಲ್ಲಿ ಶ್ರೀಯುತ ಪೈಗಳು ವಿದೇಶ ಪ್ರವಾಸದಿಂದ ಪಡೆದ ಅನುಭವದಿಂದ ನಾವು ಪ್ರಯೋಜನ ಪಡೆಯುವಂತಾಗಲಂದು ಹಾರೈಸಿ ಶುಭ ಕೋರಿದರು ಸಂಘದ ಕಾರ್ಯದರ್ಶಿ ಶ್ರೀ ಗೋವಿಂದರಾಯರು ಧನ್ಯವಾದವಿತ್ತರು.

ಯಕ್ಷಗಾನ ಕಲಾ ಗೋಷ್ಠಿ

ಜರಗುವ ಸ್ಥಳ—ಬ್ರಹ್ಮಾವರ, ದ ಕ

27ನೇ ಸಪ್ತಂಬರದಿಂದ 30ರ ವರೆಗೆ.

ಇದೇ ಬರುವ ಸಪ್ತಂಬರ ತಿಂಗಳ ಕೊನೆಯ ನಾಲ್ಕು ದಿನಗಳಲ್ಲಿ ಈ ವಿಚಾರ ಗೋಷ್ಠಿಯನ್ನು ಕರೆಯಲಾಗಿದೆ. ಈ ಕೆಲಸದಲ್ಲಿ ಅಸಕ್ತರಾದವರು ಏರ್ಪಡಿಸಿ ಅವಕ್ಕೆ ಬೇಕಾದ ಏರ್ಪಾಟು ಮಾಡುತ್ತಿದ್ದಾರೆ.

ಯಕ್ಷಗಾನ ಬಯಲಾಟದ ಕಲೆಯು ತನ್ನ ಸಾಂಪ್ರದಾಯಿಕತೆಯನ್ನು ಉಳಿಸಿ, ಬೆಳೆಸಲು ಏನು ಕಾರ್ಯಕ್ರಮ ಕೈಗೊಳ್ಳಬಹುದು, ಈ ವ್ಯವಸಾಯವನ್ನು ಅನುಸರಿಸುವವರಿಗೆ ಆರ್ಥಿಕ ಜೀವನ ಸುಗಮವಾಗಲು ಯಾವ ರೀತಿಯ ನೆರವು, ಪ್ರೋತ್ಸಾಹ ಬೇಕು-ಎಂದು ಯೋಚಿಸುವುದೇ ಇದರ ಗುರಿ.

ಬಯಲಾಟಕ್ಕೆ ಸಂಬಂಧಿಸಿದ-ಗೀತ, ನಾಟ್ಯ, ನೃತ್ತ, ನೃತ್ಯ, ವೇಷ, ಭೂಷಣ, ರಂಗಪರಿಕರ, ಅಡಳಿತಗಳ ವಿಚಾರವನ್ನು,

ನೃತ್ಯ, ಗೀತ, ನಾಟ್ಯ, ಶಿಕ್ಷಣ ಪರಂಪರೆಯನ್ನು ಉಳಿಸಲು ಬೇಕಾಗುವ ಏರ್ಪಾಟು, ಸೌಲಭ್ಯಗಳನ್ನು

ಈ ಕಲೆಗೆ ಸ್ಪಷ್ಟ ದೇಶದ ಹೊರಗೂ ಮಾನ್ಯತೆಯಾಗುವಂತೆ—ಕಥಕ್ಕಳಿ, ಕಥಕ್, ಭರತನಾಟ್ಯ, ಮಣಿಪುರಿ ನೃತ್ಯ ವಿಧಾನಗಳಂತೆ ಅಭಿವೃದ್ಧಿಗಾಗಿ ಮಾಡಬೇಕಾದ ಯಾವ ರೀತಿಯಿಂದ ತನ್ನ ಸೈಶಿಷ್ಟ್ಯವನ್ನು ಕಾಯಲು ಪ್ರಯತ್ನಿಸಬೇಕೆಂಬ ವಿಷಯಗಳನ್ನು ಕುರಿತು ವಿಚಾರ ವಿನಿಮಯ ಮಾಡುವುದು, ಆ ವಿಷಯವಾದ ಶಾಸ್ತ್ರ ಬೆಳೆಯನ್ನು ನಡೆಯಿಸುವುದು ಈ ಗೋಷ್ಠಿಯ ಮುಖ್ಯ ಉದ್ದೇಶವಾಗಿದೆ

ಅನುಭವಕ್ಕೆ ಕಲಾವಿದರ ಸಹಕಾರದಿಂದ ಕಲಾವಿದರಿಗಾಗುವೇ ಇದು ನೆಮ್ಮದಿಯುವುದು ಪ್ರತಿನಿಧಿಗಳ ಸಂಖ್ಯೆ ಮಿತಿಯನ್ನಿರಿಸಿಕೊಳ್ಳುವ ಅವಶ್ಯಕತೆ ಬಿದ್ದಿರುವುದರಿಂದ—ಬಂದು ಬಾಗಿಯಾಗುವವರ ಕಲಾವಿದರು ಮುಂತಾದವಾಗಿ ವಿವರಗಳು ತಾವಾ ತಿಳಿಸಿಕೊಂಡು ತಿಳಿಸಿ, ಪ್ರತಿನಿಧಿಗಳ ಸಂಖ್ಯೆ ಮಾಡಿಕೆ ಕೃಪೇಕಟಾಕ್ಷವೇ ಜಲವರ. ತನ್ನ ಜಿಲ್ಲೆ ತಿಳಿದಾರೆ ಕಾಸರಗೋಡು, ಮೃದಂಗ ಮತ್ತು ಚಂಡೆವಾದಕರು, ಸಂಗೀತಕ್ಕೆ ವಾದ್ಯ ಮೇಳ, ಸ್ತ್ರೀ ವೇಷ ಮಾಸ್ಟರರು, ವೇಷ ವಿನ್ಯಾಸಕರು, ಸಂಸ್ಕೃತಿ ಮೀಮಾಂಸಕರ್—ಕೊಡಿಸಿ ಸಂಗೀತಮಾಡ ಈ ಗೋಷ್ಠಿಗೆ ಸುಮಾರು ೩೦ ಮಂದಿ ಪ್ರತಿನಿಧಿಗಳ ಕೊಟ್ಟನ್ನು ಕರೆಯಲಾಗಿದೆ

ಅನುಭವಕ್ಕೆ ಪ್ರತಿನಿಧಿಗಳಿಂದ, ಅವರವರ ಕ್ಷೇತ್ರಗಳಲ್ಲಿರುವ ಅನುಭವದ ಸಿರಿ ಮೊತ್ತ ಬರೆಕ-ಅಯಾ ಕ್ಷೇತ್ರದ ಹಿತಕ್ಕೆ ಸಂಬಂಧಿಸಿದ ವಿಚಾರವಾದ ಪ್ರಶ್ನಾವಳಿಯನ್ನು ಕಳುಹಿಸಿಕೊಡುತ್ತೇವೆ ಮುಂದೆ ಗೋಷ್ಠಿಯಲ್ಲಿ ಈ ಪ್ರಶ್ನಾವಳಿಯನ್ನು ನಿರ್ಣಯ, ವಿವರಗಳೊಂದಿಗೆ ವಿವೇಚಿಸಲಾಗುವುದು

ಪ್ರತಿನಿಧಿಗಳ ಊಟೋಪಚಾರ ಉಚಿತ

ಈ ಗೋಷ್ಠಿಗೆ ದೇವಲಿಯ ಸಂಗೀತ ನಾಟಕ ಎಕ್ಕಾಡೆಮಿಯ ಮತ್ತು ರೇಡಿಯೋ ಕ್ಷೇತ್ರಗಳ ನಿರೀಕ್ಷಕರೂ ಬರಬಹುದೆಂದು ಅಶಿಸಲಾಗಿದೆ

ಪ್ರತಿನಿಧಿಗಳು-ಸಂಚಾಲಕರಿಗಾಗಲಿ, ಕಾರ್ಯದರ್ಶಿಯರಿಗಾಗಲಿ ಹೆಚ್ಚಿನ ವಿವರಗಳಿಗೆ ಬರೆಯಬಹುದು

ಶೇಷಗಿರಿ ಕಿಣಿ (ಛಾಯಾಚಿತ್ರ), ಅಧ್ಯಕ್ಷ. ಪಾರಾಡಿ ರಾಮ ಗಾಣಿಗ, ಉಪ ಧ್ಯಕ್ಷ ಗೋಷ್ಠಿಯ ಸಂಚಾಲಕರು. ಶಿವರಾಮ ಕಾರಂತ, ಪಿ. ಬಿ ಮುಕ್ತಾರ್, ಪಿ. ಕೆ. ಸ್ವಾಗತ ಸಮಿತಿ ಕಾರ್ಯದರ್ಶಿಯರು ಬೈಕಾಡಿ ವೆಂಕಟಕೃಷ್ಣರಾಯ ಬಿ ಸುಬ್ರಹ್ಮಣ್ಯ ಭಟ್ಟ, ಬಿ ಎ. ಎಲ್. ಟಿ,

ಮಂಗಳೂರು

ಯೊನಿಯನ್ ಉದ್ಘಾಟನೆ—ಮಂಗಳೂರು ಗವರ್ನಮೆಂಟ್ ಕಾಲೇಜು ಯೂನಿಯನ್ನಿನ ಉದ್ಘಾಟನೆಯನ್ನು ತಾ. 20ರಂದು ಶ್ರೀ ಯು. ಮಂಗೇಶರಾಯರು ನೆರವೇರಿಸಿದರು. ಶ್ರೀ ಎ. ಸೀತಾರಾಮ ಸೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ರಾಜರತ್ನಂಬೆಯವರಿಂದ ಪ್ರಾರ್ಥನೆಯಾದ ಬಳಿಕ ಯೂನಿಯನ್ ಗವರ್ನರ್ ಶ್ರೀ ಎಮ್. ಆರ್. ಶಾಸ್ತ್ರಿಗಳು ಸ್ವಾಗತ ಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಮಹಮ್ಮದ್ ಹುಸ್ಸೇನರು ಧನ್ಯವಾದ ವಿತ್ತರು.

ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯೂಟರ್—ಮಂಗಳೂರಿನ ಎಡ್ವೋಕೇಟ್ ಶ್ರೀ ಇರ್ನಾಡಿ ಆನಂದ ಸೆಟ್ಟಿರನ್ನು ಎಡಿಶನಲ್ ಪಬ್ಲಿಕ್ ಪ್ರೊಸಿಕ್ಯೂಟರರಾಗಿ ಮೂರು ವರ್ಷದವರೆಗೆ ಮೈಸೂರು ಸರಕಾರವು ನೇಮಿಸಿರುವುದು.

ಸಾಹಿತ್ಯ ಸಭೆ—ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಾಹಿತ್ಯದ ಆಶ್ರಯದಲ್ಲಿ ತಾ. 21ರಂದು ಶ್ರೀ ಕೆ. ಶ್ರೀನಿವಾಸ ಶಾನುಭಾಗ 'ಸಾಹಿತ್ಯ ಮತ್ತು ವಿಮರ್ಶೆ' ಕುರಿತು ಭಾಷಣಮಾಡಿದರು. ಸಂಘದ ಅಧ್ಯಕ್ಷ ಶ್ರೀ ಜಿ. ಕೆ. ಭಟ್ಟರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ತಮ್ಮ 'ಲಬರು'ಯ ಕೆಲವು ಪದ್ಯಗಳನ್ನು ಓದಿದರು. ಕಾರ್ಯದರ್ಶಿ ಶ್ರೀ ಎಮ್. ರಾಮಚಂದ್ರನವರು ಧನ್ಯವಾದಗಳನ್ನಿತ್ತರು.

ಮಂಗಳೂರು ಕಸ್ಟೂಬಾ ಮೆಡಿಕಲ್ ಕಾಲೇಜ್—ಯೂನಿಯನ್ ಉದ್ಘಾಟನೆಯನ್ನು ತಾ. 21ರಂದು ಶ್ರೀ ಕೆ. ಆರ್. ಕಾರಂತರು ನೆರವೇರಿಸುತ್ತಾ ಹಿಂದಿ ಭಾಷೆ ಕಲಿಯುವ ಆವಶ್ಯಕತೆಯನ್ನು ಸ್ಪಷ್ಟಗೊಳಿಸಿದರು. ಯೂನಿಯನ್ ಅಧ್ಯಕ್ಷ ಶ್ರೀ ಎ. ಆರ್. ಪೈಗಳು ಸ್ವಾಗತಮಾತುಗಳನ್ನಾಡಿದರು ಕಾಲೇಜ್ ಪ್ರಿನ್ಸಿಪಾಲ್ ಡಾ. ಜಿ. ಡಿ. ಪೀಲಿಯತರು ಕಾರ್ಯೋಚಿತ ಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಎಮ್. ಆರ್. ತಂಗಾರ್ ರವು ಧನ್ಯವಾದಗಳನ್ನಿತ್ತರು.

ಅಟಿದ ಸಾಮಾನು ತಯಾರಿಸುವ ತರಬೇತಿ ಕೇಂದ್ರ—ಮೈಸೂರು ರಾಜ್ಯದಲ್ಲಿ ವಿವಿಧ ಕುಶಲ ಕಲಾವಸ್ತುಗಳ ತಯಾರಿಕೆಯಲ್ಲಿ ಕುಶಲ ಕೆಲಸಗಾರರಿಗೆ ತರಬೇತಿ ಕೊಡುವ ಸಲುವಾಗಿ ಕೇಂದ್ರ ಸರಕಾರವು ಏಳು ಯೋಜನೆಗಳಿಗೆ ಆರ್ಥಿಕ ಸಹಾಯ ಮಂಜೂರುಮಾಡಿದೆ. ಅದರಂತೆ ಮಂಗಳೂರಿನಲ್ಲಿ ಸುಹಿಳಯರಿಗೆ ಬೊಂಬೆಗಳು ಮತ್ತು ಅಟಿದ ಸಾಮಾನುಗಳನ್ನು ತಯಾರಿಸುವ ವಿಚಾರದಲ್ಲಿ ತರಬೇತಿ ಕೇಂದ್ರವೊಂದು ತೆರೆಯಲಾಗುವುದು. ತರಬೇತಿ ಅವಧಿಯಲ್ಲಿ ಕಲಾವಾರರಿಗೆ ತಿಂಗಳೊಂದರ ರೂಪಾಯಿ 25/-ರಿಂದ ರೂ. 30/-ರ ತನಕ ಸ್ಟೈಪೆಂಡ್ ಸಿಗುವುದು.

ಮಂಡಲ ಕಾಂಗ್ರೆಸ್ ಸಮಿತಿ ಉದ್ಘಾಟನೆ—ಪುಂಜಾಲಕಟ್ಟೆಯಲ್ಲಿ ನಾವೂರು ಮಂಡಲ ಕಾಂಗ್ರೆಸ್ ಸಮಿತಿಯನ್ನು ತಾ. 19 ರಂದು ಶ್ರೀ ಟಿ. ಎ. ಪೈಗಳು ಉದ್ಘಾಟಿಸುತ್ತಾ, ಪ್ರಗತಿಪರವಾದ ಭೂಸುಧಾರಣೆಗಳನ್ನು ಪ್ರತಿಯೊಂದು ರಾಜ್ಯ ಸರಕಾರಗಳು ಮುಂದೆ ತರುವುದರಿಂದಲೇ ದೇಶವನ್ನೆಂದು ಎದುರಿಸುತ್ತಿರುವ ಆಹಾರ ಸಮಸ್ಯೆಯ ಪರಿಹಾರ ಸಾಧ್ಯವೆಂದು ನುಡಿದರು. ಅಧ್ಯಕ್ಷ ಸ್ಥಾನವಹಿಸಿದ ಶ್ರೀ ರತ್ನವರ್ಮ ಹೆಗ್ಡೆ, ಎಮ್. ಎಲ್. ಎ., ಅವರು ಮಾತನಾಡುತ್ತಾ, ಅಧಿಕಾರದಲ್ಲಿರುವವರು ತಮ್ಮ ಸ್ವಾರ್ಥದ ಚಿಂತನೆಯನ್ನು ಮಾಡದೆ ಇಡೀ ರಾಷ್ಟ್ರದ ಏಳಿಗೆಯ ವಿಶಾಲ ದೃಷ್ಟಿಯಿಂದ ನುಡಿಯಬೇಕೆಂದರು. ಪುಂಜಾಲಕಟ್ಟೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವೊಂದನ್ನು ತೆರೆಯಲು ತಾನು ಪ್ರಯತ್ನಿಸುವುದಾಗಿ ಅವರು ಭರವಸೆ ನೀಡಿದರು.

ಆರಂಭದಲ್ಲಿ ಶ್ರೀ ಬಿ. ಕೇಶವ ಬಲ್ಲಿಗರು ಸ್ವಾಗತಿಸಿದರು. ಶ್ರೀಗಳಾದ ಪಿ. ಎಸ್. ಭಾಸ್ಕರ ರೈ, ಬಿ. ಜನಾರ್ಧನ ಸೆಟ್ಟಿ ಮತ್ತು ಭೋಜರಾಜ ಹೆಗ್ಡೆಯವರು ಭಾಷಣವಿತ್ತರು. ಶ್ರೀ ಕೆ. ಬಿ. ಜನರಾಜ ಹೆಗ್ಡೆಯರು ಧನ್ಯವಾದಗಳನ್ನಿತ್ತರು.

ಹರಿದ್ರಾವತಿ— ಶಿವಮೊಗ್ಗಾ ಜಿಲ್ಲಾ ಹರಿದ್ರಾವತಿಯಲ್ಲಿ ತಾ. 15ರಂದು ಸ್ವಾತಂತ್ರ್ಯ ದಿನಾಚರಣೆಯು ಡಾ. ಪಿ. ಎಸ್. ಮಂಜಪ್ಪ ಎಲ್. ಎ. ಎಮ್. ಎಸ್. (ಮೈಸೂರು) ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಊರ ಪ್ರಮುಖರೆಲ್ಲೊಬ್ಬರಾದ ಶ್ರೀ ಶ್ಯಾ. ವೆಂಕಟರಾಯರು ಧ್ವಜಾರೋಹಣಮಾಡಿದರು. ಮೆರವಣಿಗೆಯಾದ ಬಳಿಕ ಶ್ರೀ ಎಚ್. ವಿ. ಕೃಷ್ಣಮೂರ್ತಿ ರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎ. ಎಚ್. ಚೆನ್ನವೀರಪ್ಪ, ಜಿ. ಎಮ್. ಭಾಸಚಂದ್ರ, ಜಿ. ಕೃಷ್ಣಪ್ಪ, ಎಚ್. ಪಿ. ರಾಮರಾವ್, ಡಾ. ಎ. ವಿ. ಶ್ರೀನಿವಾಸರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶಾಲಾ ಬಾಲ ಬಾಲಕಿಯರಿಂದ ವಿವಿಧ ವಿನೋದಾವಳಿಗಳಾದ ನಂತರ ಶ್ರೀ ಬಿ. ಕೆ. ಸತ್ಯನಾರಾಯಣ ಜೋಯಿಸರು ವಂದನೆಗಳನ್ನಿತ್ತರು.

ಬೆಂಗಾರಕಟ್ಟೆ— ಬಾಳೇಕುದ್ರು ಶ್ರೀ ಮಠದಲ್ಲಿ ಶ್ರೀ ವಿಕಾರಿ ಸಂವತ್ಸರದ ಶ್ರೀ ಶಂಕರ ಜಯಂತೀ ಸಭೆಯ ಕಾಲ ನಡೆಯುವ ಪರೀಕ್ಷೆಗೆ ಪಠ್ಯ ಪುಸ್ತಕಗಳು ಈಗಾಗಲೇ ನಿಯಮಿಸಲ್ಪಟ್ಟಿವೆ. ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಯು ಅಚ್ಚಾದ ಅರ್ಜಿದಾ ಪತ್ರಿಕೆಯನ್ನು ಸಭಾ ಕಾರ್ಯದರ್ಶಿಗಳಿಂದ ಪಡೆದು, ಅದನ್ನು ತುಂಬಿಸಿ ಒಂದು ರೂಪಾಯಿ ಪ್ರವೇಶ ಧನ ಸಹಿತ ವಿಳಂಬಿ ಸಂ/ಪ ಪಾಲ್ಗುಣ ಶುದ್ಧ 15ರೊಳಗೆ ಸಭಾ ಕಾರ್ಯದರ್ಶಿಗಳಿಗೆ ಕಳುಹಿಸತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಸಭಾ ಕಾರ್ಯದರ್ಶಿಗಳಿಂದ ಪಡೆಯಬಹುದು.

ಕಡಿಯಾಳಿ—ಇಲ್ಲಿಯ ಹಿರಿಯ ಬುನಾದಿ ಶಾರೆಯ ಶಾಲಾ ವಿದ್ಯಾರ್ಥಿ ನಾಯಕನ ಚುನಾವಣೆಯು ನಡೆದು ಕುಮಾರಿ ಕೆ. ವೆಂಕಟರಾಜ ಸರಳಾಯನು ನಾಯಕನಾಗಿಯೂ, ಪಿ. ಶ್ರೀ ಕಾಂತ ತಂತ್ರಿಯು ಉಪನಾಯಕನಾಗಿಯೂ, ಪಿ. ಅನಂತರಾಮ ಭಟ್ಟನು ಕಾರ್ಯದರ್ಶಿ ಹಾಗೂ ಕುಮಾರಿ ಕೆ. ಲೀಲಾ ಪೈಯು ಉಪಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಸ್ವಾತಂತ್ರ್ಯ ದಿನಾಚರಣೆಯು ತಾ. 15 ರಂದು ಶ್ರೀ ಪಿ. ಗುರುರಾಜಭಟ್ಟರ ಅಧ್ಯಕ್ಷತೆಯಲ್ಲಿ 'ವಿವೇಕಾನಂದ ಸಮಾಜ'ದ ಆಶ್ರಯದಲ್ಲಿ ನಡೆಯಿತು. ಮುಖ್ಯೋಪಾಧ್ಯಾಯರು ಸ್ವಾಗತಿಸಿದ ನಂತರ ಸಾಂಸ್ಕೃತಿಕ ಮಂತ್ರಿ ಶ್ರೀಮತಿ ದೇವಿಯವರು ವರದಿ ಒಪ್ಪಿಸಿದರು. ಶ್ರೀಗಳಾದ ಸದಾಶಿವರಾವ್ ಮತ್ತು ಗೋಪಾಲ ಸೆಟ್ಟಿಗಾರರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ ಧನ್ಯವಾದ ಅರ್ಪಣೆಗಳಾಗಿ ಸಭೆ ಮುಗಿಯಿತು.

ನಿಂಜೂರು—ಶ್ರೀರಾಮ ಹಾ. ಎ. ಶಾಲೆಯಲ್ಲಿ ಪಂಚಾಯತ ಬೋರ್ಡು ಮತ್ತು ಶ್ರೀ ವಿವೇಕಾನಂದ ಸೇವಾ ಸಂಘದಲ್ಲಿ ಪ್ರತ್ಯೇಕ್ಯೆಕನಾಗಿ ಸ್ವಾತಂತ್ರ್ಯ ದಿನಾಚರಣೆಯು ಜರಗಿತು.

ಬೊಂಬಾಯಿ

ಸ್ವಾತಂತ್ರ್ಯ ದಿನಾಚರಣೆ—ಬೊಂಬಾಯಿಯಲ್ಲಿರುವ ದ. ಕ. ಜಿಲ್ಲಾ ಬ್ರಾಹ್ಮಣ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ. ಭುಜಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎನ್. ಎನ್. ಮೂರ್ತಿಯವರು ಸ್ವಾಗತ ಭಾಷಣಮಾಡಿದರು. ಮುಖ್ಯ ಅತಿಥಿಗಳಾದ ಅಧ್ಯಾಪಕರು ಮತ್ತು ಶ್ರೀ ಪಿಬುಧೇಶ ತೀರ್ಥ ಸ್ವಾಮಿಗಳವರು ದ್ವಿತೀಯ ಪಂಚವಾರ್ಷಿಕ ಯೋಜನೆಯ ಯಶಸ್ವಿಗೆ ಶ್ರೀಕೃಷ್ಣನ ಆಶೀರ್ವಾದವನ್ನು ಕೋರಿದರು. ಸಂಗೀತ ಕಾರ್ಯಕ್ರಮವಾಗಿ ಶ್ರೀಮತಿ ಶಾರದಾ ಆರ್. ರಾಯರಿಗೆ ಬಂಗಾರದ ಚೈನು ಪಾರಿತೋಷಕ ವೀಯಲಾಯಿತು. ಕರ್ನಾಟಕ ಕಲ್ಚರಲ್ ಎಂಡ್ ಎಡ್ಯುಕೇಶನಲ್ ಸೊಸೈಟಿಯವರು ಸ್ವಾತಂತ್ರ್ಯ ದಿನಾಚರಣೆಯನ್ನು ಶ್ರೀ ಬಿ. ವಿಠಲ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀಗಳಾದ ಬಿ. ಎಮ್. ಸೆಟ್ಟಿ, ಸಿ. ನಾರಾಯಣ ಸೆಟ್ಟಿ, ಎಮ್. ಹರೀಶಪುರ್, ಎ. ಎಮ್. ಕೋಟಿಗಾರ್ ಮೊದಲಾದವರು ಕಾಲೋಚಿತ ಭಾಷಣವಿತ್ತರು. ಗೌರವ ಕಾರ್ಯದರ್ಶಿ ಶ್ರೀ ಬಿ. ಎಮ್. ಸೆಟ್ಟಿರು ಧನ್ಯವಾದಗಳನ್ನಿತ್ತರು.

ದುಃಖಸೂಚಕ ಸಭೆ—ಕರ್ನಾಟಕ ಕಲ್ಚರಲ್ ಎಂಡ್ ಎಡ್ಯುಕೇಶನಲ್ ಸೊಸೈಟಿಯ ವಿಶೇಷ ಸಭೆಯು ತಾ. 17ರಂದು ಶ್ರೀ ಬಿ. ವಿ. ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ವಿಜಯಲಕ್ಷ್ಮಿ ವಿ. ಸೆಟ್ಟಿರ ಅಕಾಲ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಗಿ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ವಾರ್ಷಿಕೋತ್ಸವ— ಮೊಗವೀರ ವೈದ್ಯ ಸ್ಥಾಪಕ ಮಂಡಳಿಯ ವಾರ್ಷಿಕೋತ್ಸವ ಮತ್ತು ಅದರ ನೇತೃತ್ವದಲ್ಲಿ ನಡೆಸಲ್ಪಡುವ ಮೊಗವೀರ ಫ್ರೀನ್ಯಾಟ್ ಹೈಸ್ಕೂಲಿನ ಪಾರಿತೋಷಕ ವಿತರಣಾ ಸಮಾರಂಭವು ತಾ. 17 ರಂದು ಸರ್ರ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಜರಗಿತು. ಶ್ರೀ ವಿಠಲ್ ಲಾಲ್, ಪೋಚನ್‌ಲಾಲ್, ಎಮ್. ಎಲ್. ಸಿ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಸಿ. ಪಡಿ ಬಿದ್ರಿಯವರು ಸ್ವಾಗತ ಮಾತುಗಳನ್ನಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ. ಎಚ್. ಕೆ. ಪುತ್ರನು ಸಂದೇಶಗಳನ್ನು ಓದಿದರು. ಶ್ರೀಮತಿ ವಿಠಲ್‌ಲಾಲ್ ಪೋಚನಲಾಲ್‌ರವರು ಶಾಲಾ ವಿದ್ಯಾರ್ಥಿಗಳಿಗೂ ಮಂಡಳಿಯ ಕೆಲಸಗಾರರಿಗೂ ಬಹುಮಾನ ವಿತರಣೆ ಮಾಡಿದರು. ಸಮಾರಂಭಕ್ಕೆ ಚೈತ್ಯವಿದ ಅಧಮಾರು ಮುರೆದ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರು, ಶ್ರೀಗಳಾದ ಜಿ. ಎಸ್. ವೈದ್ಯ, ಕೆ. ಎಸ್. ಬಾರಿಯಾ, ಮನಮೋಹನ್‌ಸಿಂಗ್, ಭೇಟಿ, ಬಿ. ಎಮ್. ಕೋಡಿಕಲ್, ಎಚ್. ಕೆ. ತಿಂಗಳಾಯ, ಗೋಪಾಲ ಕೋಟ್ಯಾನ್, ಎಚ್. ವಿ. ಇಮಾರತಿ, ನಾಗೇಶ ಕೋಟ್ಯಾನ್ ಮೊದಲಾದವರು ಮಂಡಳಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು ಮಂಡಳಿಯ ಉಪಾಧ್ಯಕ್ಷ ಶ್ರೀ ಡಿ. ಪಿ. ಕೋಟ್ಯಾಂಕಾರ್‌ರವರು ಧನ್ಯವಾದಗಳನ್ನಿತ್ತರು. ಜನಮನರಂಜನೆ ಕಾರ್ಯಕ್ರಮಗಳಾಗಿ ಸಮಾರಂಭ ಯಶಸ್ವಿಯಾಗಿ ಕೊನೆಗೊಂಡಿತು.

ಬೆಂಗಳೂರಲ್ಲಿ ಹಾಲಿನ ಪೂರೈಕೆ ಕೇಂದ್ರದ ಶಂಕುಸ್ಥಾಪನೆ— ಮನ್ನು ತಾ. 23ರಂದು ಬೆಳಗೆ ಕೇಂದ್ರ ಆಹಾರ ಮತ್ತು ಒಕ್ಕಲತನ ಮಂತ್ರಿಗಳಾದ ಶ್ರೀ ಎ. ಸಿ. ಜೈನರು ನೆರವೇರಿಸುತ್ತಾ, ದೇಶದ ಒಕ್ಕಲತನ ಸಮಸ್ಯೆಗಳನ್ನು ಪರಿಹರಿಸಬಲ್ಲವರಾದ ಒಕ್ಕಲತನ ಮತ್ತು ಪಶು ವೈದ್ಯಕ ಪದವೀಧರರಿಗೆ ಸಂಬಳ ಸಾರಿಗೆ, ಮತ್ತಿತರ ಸೌಲಭ್ಯಗಳನ್ನು ಹೆಚ್ಚು ಯೋಗ್ಯರೀತಿಯಲ್ಲಿ ಒದಗಿಸಿ ಕೊಡಬೇಕೆಂದರು. ದನಗಳ ಕಳ್ಳ ಬೇಕೆಸುವುದ ಕ್ಕಿಂತ ಅವುಗಳಿಗೆ ಮೇವು ಸರಿಯಾಗಿ ಒದಗಿಸುವಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು. ಪಟ್ಟಣಗಳಲ್ಲಿ ದನಗಳು ಬಹಳ ಕೆಟ್ಟ ಪರಿಸ್ಥಿತಿಯಲ್ಲಿರುವುವು ನಗರ ಪಟ್ಟಣಗಳಲ್ಲಿಯ ದನಗಳನ್ನೆಲ್ಲ ಗ್ರಾಮಾಂತರ ಪ್ರದೇಶಕ್ಕೆ ಸಾಗಿಸುವ ನಿಸ ಬೇಗ ಬರುವುದೆಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಮೈಸೂರಿನ ಒಕ್ಕಲತನ ಮಂತ್ರಿ ಶ್ರೀ ಕೆ. ಎಫ್. ಪಾಟೀಲರು ಮಾತನಾಡುತ್ತ, ಹಾಲಿಗೆ ಉದ್ದಿಮೆಯು ಗ್ರಾಮೀಣ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಹಾಗೂ ಪಟ್ಟಣದ ಜನತೆಗೆ ಅತ್ಯವಶ್ಯವಾದ ಪೌಷ್ಟಿಕ ಆಹಾರ ಒದಗಿಸಲು ಬಹು ಉಪಯುಕ್ತವಾದುದೆಂದು ನುಡಿದರು.

ಪಶು ಸಂಗೋಪನೆ ಮತ್ತು ಪಶು ವೈದ್ಯಕ ಸೇವಾ ವಿಭಾಗದ ಡೈರೆಕ್ಟರರಾದ ಡಾ. ಕೆ. ಎಸ್. ಸೆಟ್ಟಿರು ಸ್ವಾಗತ ಭಾಷಣ ಮಾಡುತ್ತ, ಬೆಂಗಳೂರಿನ ಹಾಲಿನ ಯೋಜನೆಯು ಈಗಿದ ಜನವರಿ ತಿಂಗಳಿಂದ ಅರಂಭವಾಗಿದ್ದು, ಸದ್ಯಕ್ಕೆ ಅಶ್ವತ್ತೆಗಳು, ಹರಿಗೆ ಮಂದಿರಗಳು ಶಿಶು ಕಲ್ಯಾಣ ಕೇಂದ್ರಗಳಿಗೆ ಪೂರೈಸಲಾಗುತ್ತಿದೆ ಎಂದು ತಿಳಿಸಿದರು. ದಿನಕ್ಕೆ 500 ಮಣ ಹಾಲನ್ನು ಪೂರೈಸುವುದು ಈ ಯೋಜನೆಯ ಗುರಿಯಾಗಿರುವುದು. ಇದರಲ್ಲಿ ಸೇಕಡಾ 50ರಷ್ಟು ಜಾಸ್ತಿ ಮಾಡಿಕೊಳ್ಳಲು ಅವಕಾಶವಿದೆ ದ್ವಿತೀಯ ಯೋಜನೆಯಲ್ಲಿ 18.45 ಲಕ್ಷ ರೂಪಾಯಿ ಒದಗಿಸಿದ್ದು ಕೇಂದ್ರ ಸರಕಾರವು ಸೇಕಡಾ 60ರಷ್ಟನ್ನು ಧನ ಸಹಾಯವೆಂದೂ ಉಳಿದುದನ್ನು ಸಾಲವೆಂದೂ ಕೊಡುವುದು ಲಾಭ ಹಾನಿಯಾಗದಂತೆ ಈ ಯೋಜನೆ ನಡೆಸಿಕೊಂಡು ಹೋಗಲಾಗುವುದು. ಕಾರ್ಪೊರೇಶನಿನ ವಿವಿಧ ವಾರ್ಡುಗಳಲ್ಲಿ ಮೂರಾಟ ಕೇಂದ್ರಗಳನ್ನು ತೆರೆಯಲಾಗುವುದು. ಮನೆ ಮನೆಗೆ ಪೂರೈಸುವ ಸಾಧ್ಯತೆಯನ್ನು ವಿಚಾರಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕನರಕ	3=00
ಪಂಚಮಿತು	2=50
ಮಂಗಳಾರತಿ	1=00
ನಮ್ಮ ಸೆತ್ತಲಿನ ಕಡಲು	1=75
ಪರನೂಗಾ ಇಂದು ನಾಳೆ	3=00
ಸಮೀಕ್ಷೆ	2=50
ಮೈಲುಕಲ್ಲನೊಡನೆ ಮಾತುಕತೆಗಳು	1=50
ಬೆದಾಯರ್‌ದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

೨೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | **ಮುಲೇರಿಯಾ** | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತದೆ.

ಬಾಟ್ಲಿವಾಲಾ ಎಗ್ರೊಮಿಕ್‌ಶ್ಚರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ವಿಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ನೋರ್ಟನ್, ಬೊಂಬಾಯಿ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—

ನವಯುಗ ಪ್ರೆಸ್ ಉಡುಪಿ

ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.

NAVAYUGA PRESS, UDIPI.

ವಾರದ ಮಹಾನುಭಾವ—

ಶ್ರೀ ಸಾಯಬ್ ಸಲಾಮ್

ಲೆಬನಾನಿನ ರಾಷ್ಟ್ರವಾದದ ಪ್ರಚಂಡ ಲಹರಿಗಳ ಸಮ್ಮುಖದಲ್ಲಿ ಅಲ್ಲಿನ ಅಡಳಿತಾಧಿಕಾರಿಗಳಿಗೆ ಅವನತ ಶಿರಸ್ಕಾರಬೇಕಾಗಿ ಬಂದು ಸ್ಥಿತಿಯನ್ನು ಯಾರಿಂದಲೂ ಮರೆಯಾಗಿಡಲು ಇನ್ನು ಸಾಧ್ಯವಿಲ್ಲ. ಲೆಬನಾನಿನ ಜನತೆ ಇಂದು ಯಾವುದೇ ಅಂತಾರಾಷ್ಟ್ರೀಯ ಪಕ್ಷದಲ್ಲಿ ಸುತ್ತಿಕೊಳ್ಳುವುದನ್ನು ತ್ಯಜಿಸಿಬಿಟ್ಟು, ತಮ್ಮ ಸ್ವತಂತ್ರ ಅಸ್ತಿತ್ವವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಪ್ರಯತ್ನ ನಡೆಸುತ್ತಿದೆ. ಆದುದರಿಂದಲೇ ಲಬನ ವಿದ್ರೋಹಿಗಳ ಅಧಿನಾಯಕರಾದ ಶ್ರೀ ಸಾಯಬ್ ಸಲಾಮರ ನೇತೃತ್ವದಲ್ಲಿ ಪಾಶ್ಚಾತ್ಯ ಶಕ್ತಿಗಳ ಕಪಿಮುಷ್ಟಿಯೊಳಗಿರುವ ಅಧಿಕಾರಾರೂಢ ಪಕ್ಷವೆದುರು ಸಶಸ್ತ್ರ ವಿದ್ರೋಹವನ್ನು ಮುನ್ನಡೆಸುವುದರಲ್ಲಿಯೇ ತಲ್ಲೀನವಾಗಿದೆ. ರಾಷ್ಟ್ರಾಧ್ಯಕ್ಷ ಚಮೂರವರಿಗೆ ಅಂತರ್ಯುದ್ಧವನ್ನು ತಡೆಗಟ್ಟಲು, ವಿದ್ರೋಹಿಗಳಿಗೆ ವಿದೇಶಗಳಿಂದ—ಮುಖ್ಯವಾಗಿ ಸಿರಿಯಾದಿಂದ ಶಸ್ತ್ರಾಸ್ತ್ರಗಳ ಸಹಾಯ ಹೊದಗಿ ಬಂದಿದೆಯೆಂಬ ಆರೋಪವನ್ನು ಅವರ ಮೇಲೆ ಹೊರಿಸಿ ಅಮೆರಿಕೆಯಿಂದ ಸೇನಾಸಹಾಯವನ್ನು ಯಾಚಿಸಬೇಕಾಗಿ ಬಂದ ಸಂದರ್ಭದಿಂದಲೇ ಶ್ರೀ ಸಲಾಮರ ಅವರ ಹಾಗೂ ಆಜೇಯ ಶಕ್ತಿಯನ್ನು ಊಹಿಸಿಕೊಳ್ಳಬಹುದು. ಅಮೆರಿಕೆಯಾದರೂ ಲೆಬನಾನಿನಲ್ಲಿ ತನ್ನ ಪ್ರಭುತ್ವವು ಕ್ಷೀಣವಾಗುತ್ತಿರುವುದನ್ನು, ಅಧಿಕಾರಾರೂಢ ಪಕ್ಷದ ಪಾದಗಳು ಗಡಗಡನೆ ಕಂಪಿಸುತ್ತಿರುವುದನ್ನು ನೋಡಿಕೊಂಡೇ, ಸಂಯುಕ್ತ ರಾಷ್ಟ್ರದ ಸಂವಿಧಾನವನ್ನು ಉಪೇಕ್ಷಿಸಿ ತನ್ನ ಸೇನೆಯನ್ನು ಲೆಬನಾನಿಗೆ ಕಳುಹಿಸಲು ಎಳ್ಳಷ್ಟೂ ಸಂಕೋಚಪಡಲಿಲ್ಲ. ರಾಷ್ಟ್ರಾಧ್ಯಕ್ಷ ಚಮೂರವರ ಆರೋಪವನ್ನು ಪರೀಕ್ಷಿಸುವುದಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಡಾಗ್ ಹೆಮ್ಮರ್ ಶೀಲ್ಡರೂ ಆ ಆರೋಪಗಳನ್ನು ಖಂಡಿಸುತ್ತಿರುವಾಗ, ಅಮೆರಿಕೆಯು ಅಲ್ಲಿನ ಚಮೂ ಸರಕಾರದ ರಕ್ಷಣೆಗಾಗಿ ಬಾಹ್ಯ ಶಕ್ತಿಗಳ ಉಪಾಯದ ಹೆಸರಿನಿಂದ ತನ್ನ ಸೇನೆಗಳನ್ನು ಕಳುಹಿಸಿಕೊಟ್ಟಿತು.

ಇಂತಹ ಸಂಕಟಮಯ ಕಾಲದಲ್ಲಿಯೂ ವಿದ್ರೋಹೀ ನಾಯಕರಾದ ಶ್ರೀ ಸಲಾಮರು ಪ್ರದರ್ಶಿಸಿದ ತನ್ನ ಕುಶಲ ನಾಯಕತನ ಮತ್ತು ಬಲ ಶಕ್ತಿಗಳ ಪರಿಚಯವು ಪ್ರಶಂಸಾರ್ಹವಾಗಿದೆ. ಅಮೆರಿಕೆಯ ಸೇನೆಗಳು ಲೆಬನಾನಿನಲ್ಲಿ ಕಾಲೂರಿದಾಗ, ಇದು ಅಮೆರಿಕಯು ಲೆಬನಾನಿನಲ್ಲಿ ಮಾಡುವ ಪ್ರತ್ಯಕ್ಷ ಆಕ್ರಮಣವಾದುದರಿಂದ, ಲೆಬನಾನೀ ಜನತೆಯು ಇದನ್ನು ಎದುರಿಸುವುದರಲ್ಲಿ ಮತ್ತು ತನ್ನ ಸ್ವಾತಂತ್ರ್ಯ ರಕ್ಷಿಸಿಕೊಳ್ಳುವುದಕ್ಕೆ ಸರ್ವಸ್ವವನ್ನು ಕೀಳೆನಿಸಲು ಸಿದ್ಧರಾಗುವಲ್ಲಿ ಹಿಂದುಳಿಯಬಾರದೆಂದು ಶ್ರೀ ಸಲಾಮರು ಘೋಷಿಸಿದರು. ಇವರು ಸಶಸ್ತ್ರ ವಿದ್ರೋಹದ ಮೂಲಕವೇ ವರ್ತಮಾನ ಕಾಲದ ಅಡಳಿತೆಯನ್ನು ಕಿತ್ತೆಸೆಯ ಬಯಸಬೆ, ಚುನಾವಣೆಗಳ ಮೂಲಕವೂ ತಮ್ಮ ಶಕ್ತಿ ಪರೀಕ್ಷೆಮಾಡಲು ತಯಾರಿದ್ದಾರೆ. ಇದರಿಂದ ಅವರ ದೇಶಭಕ್ತಿ ಮತ್ತು ಉಗ್ರ ರಾಷ್ಟ್ರೀಯತೆಯು ಅರಿವು ನಮಗಾಗುವುದು. ಅವರ ಆಸ್ಥೆಯು ಕೇವಲ ಹಿಂಸಾತ್ಮಕ ಕ್ರಾಂತಿಯಲ್ಲಿ ಮಾತ್ರವಲ್ಲ, ಪ್ರಜಾಪ್ರಭುತ್ವ ಪ್ರಣಾಲಿಯಲ್ಲೂ ಸಾಕಷ್ಟಿದೆ. ಜನಶಕ್ತಿಯ ಆಧಾರದಿದಲೇ ಅವರು ಇಂದು ಗದ್ದುಗೆಯೇರಿದವರನ್ನು ಆಹ್ವಾನಿಸುವ ಧೈರ್ಯ ತಾಳಿದ್ದಾರೆ. ಜನಂಲಘ ಆದ ಶೂರಾಬರು ರಾಷ್ಟ್ರಾಧ್ಯಕ್ಷರಾಗಿ ಆಯ್ಕೆಗೊಂಡ ನಂತರ ಲೆಬನಾನಿನಲ್ಲಿ ನಿರ್ಮಿತವಾದ ಪರಿಸ್ಥಿತಿಯಿಂದಲೂ ಶ್ರೀ ಸಲಾಮರ ಶಾಂತಿಪ್ರಿಯತೆಯ ಪರಿಚಯ ನಮಗಾಗುವುದು. ಭಾರತದ ಕಡೆಗವರ ನಿಷ್ಠೆ ತೀವ್ರವಾಗಿದೆ. ಇವರ ವಿದೇಶ ನೀತಿಯ ಮೇಲೆಯೂ ಅವರಿಗೆ ದೃಢ ವಿಶ್ವಾಸವಿದೆ. ಈ ಕಾರಣದಿಂದಲೇ ಅವರು ಭಾರತದ ಪ್ರಧಾನಿ ಶ್ರೀ ನೆಹರೂರವರ ಲೆಬನಾನಿನಿಂದ ಅಮೆರಿಕೆಯ ಸೇನೆಗಳನ್ನು ಹೊರ ನೂಕುವುದರಲ್ಲಿ ತಮ್ಮ ಪ್ರಭಾವವನ್ನು ಉಪಯೋಗಿಸಬೇಕು ಎಂದು ವಿನಂತಿಸಿಕೊಂಡರು.

ಶ್ರೀ ಸಲಾಮರಿಗೆ ತಾಟಸ್ಥ್ಯ ಮತ್ತು ಪಂಚಶೀಲಗಳಲ್ಲಿ ವಿಶ್ವಾಸವಿದೆಯೆಂಬುದು ಸ್ಪಷ್ಟವಾಗಿದೆ. ಆದುದರಿಂದಲೇ ಅವರು ಅಂತಾರಾಷ್ಟ್ರೀಯ ರಾಜನೀತಿಯಲ್ಲಿ ಶ್ರೀ ನಸ್ಸೇರ ಹಾಗೂ ಪಂಡಿತ ನೆಹರೂರವರ ಜತೆಗಿದ್ದಾರೆ. ಈ ಕಾರಣದಿಂದಲೇ ಪಾಶ್ಚಾತ್ಯ ರಾಷ್ಟ್ರಗಳು ಅವರನ್ನು ಸಂದೇಹದೃಷ್ಟಿಯಿಂದ ನೋಡುತ್ತಾರೆ. ಅಲ್ಲದೇ ಅವರಿಗೆ "ಕೆಂಪು ಸಮರ್ಥಕ" ರೆಂಬ ಬಿರುದನ್ನೂ ದಯಪಾಲಿಸಿದ್ದಾರೆ.

ಭಾರತದ ವಾಯುಸೇನೆ

(೪ನೇ ಪುಟದಿಂದ)

ಅಧೀನರುಗಳಿಗೆ ತರಬೇತು ಕೊಡುತ್ತಾರೆ. ಮೂರನೆಯ ಕಾಲೇಜಿನಲ್ಲಿ ಇತರ ಶಾಖೆಗಳ ಅಧೀನರುಗಳು ತರಬೇತು ಹೊಂದುತ್ತಾರೆ. ಅಂತೆಯೇ ಮೂರು ಶಾಲೆಗಳಲ್ಲೂ ವಿಮಾನ ಸೇನೆಗೆ ಸಂಬಂಧಪಟ್ಟ ಬೇರೆ ಬೇರೆ ಕಸುಬುಗಳಲ್ಲಿ ತರಬೇತಿಯನ್ನು ಕೊಡುತ್ತಾರೆ.

ನಮ್ಮ ವಿಮಾನ ಸೇನೆಗೆ ಬೇಕಾದ ಎಲ್ಲಾ ಜನರನ್ನೂ ನಮ್ಮ ದೇಶದಲ್ಲೇ ನಾವು ಶಿಕ್ಷಣಕೊಟ್ಟು ತಯಾರಿಸಿಕೊಳ್ಳುತ್ತೇವೆ. ಇದಕ್ಕಾಗಿ ಮುಂಚಿನಂತೆ ಇವರನ್ನು ಪರದೇಶಗಳಿಗೆ ಕಳುಹಿಸಿಕೊಡಬೇಕಾದ ಅವಶ್ಯವಿಲ್ಲ. ಅದಲ್ಲದೆ ಬರ್ಮಾ, ಇಂಡೋನೇಶಿಯಾ ಮತ್ತು ಆಫ್‌ಘಾನಿಸ್ಥಾನದ ವಿಮಾನದಳದವರಿಗೆ ಇಲ್ಲಿಯೇ ನಾವು ಶಿಕ್ಷಣವನ್ನು ಕೊಡುವುದು ಹೆಮ್ಮೆಯ ಸಂಗತಿ. ನಾವು ನಮ್ಮ ವಿಮಾನ ಸೇನೆಗೆ ಬೇಕಾದ ವಿಮಾನಗಳನ್ನು ಮಾತ್ರ ತಯಾರು ಮಾಡುತ್ತಿಲ್ಲವೆಂಬುದೇ ಒಂದು ದೊಡ್ಡ ಕೊರತೆ. ಇನ್ನು ಹತ್ತು ವರ್ಷಗಳಲ್ಲಿ ಇವುಗಳನ್ನೂ ನಾವು ತಯಾರಿಸಬಹುದೆಂಬ ನಿರೀಕ್ಷಣೆ ಇದೆ. ಅಂತೂ ಸ್ವಾತಂತ್ರ್ಯ ಸಿಕ್ಕಿ ಈ ಹನ್ನೊಂದು ವರ್ಷಗಳಲ್ಲಿ ನಮ್ಮ ಚಿಕ್ಕ ವಾಯುಸೇನೆಯು ಸರ್ವತೋಮುಖವಾಗಿ ಬೆಳೆದು ಪ್ರಗತಿದಾರಿಯಲ್ಲಿ ಸಾಗುತ್ತಿರುವುದು ಹೆಮ್ಮೆಯ ವಿಷಯ.

(ಸ್ವಾತಂತ್ರ್ಯ ಸಂಚಿಕೆಗಾಗಿ ಬಂದುದು)

ಗುಜರಾತ ರಾಜ್ಯಕ್ಕಾಗಿ ಆಂದೋಲನ—

ಶ್ರೀ ಇಂದೂಲಾಲರು ಯಶಸ್ವಿಯಾದರೆ?

ಶ್ರೀ ಇಂದೂಲಾಲ ಯಾಜ್ಞಿಕರು ಗುಜರಾತಿನ ಸಾರ್ವಜನಿಕ ಆಂದೋಲನಗಳ ವಿಶೇಷ ಅನುಭವವಿರುವ ಮತ್ತು ತಮ್ಮ ಜೀವನದಲ್ಲಿ ಅನೇಕ ರಾಷ್ಟ್ರೀಯ ಹಾಗೂ ಸಾಮಾಜಿಕ ಆಂದೋಲನಗಳಲ್ಲಿ ಸಕ್ರಿಯ ಭಾಗವಹಿಸಿ ತ್ಯಾಗ ಮತ್ತು ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಪರೋಪಕಾರಿ ನಾಯಕರ ಸಾಲಿನಲ್ಲಿ ಗಣಿಸಲ್ಪಡುತ್ತಾರೆ. ಇವರೊಬ್ಬ ಮಹಾ ಸ್ವತಂತ್ರ ವಿಚಾರಗಳು. ಆದುದರಿಂದಲೇ ಅವರು ಯಾವ ಪಕ್ಷ ವಿಶೇಷಕ್ಕೂ ಅಂಟಿಕೊಂಡಿಲ್ಲ. ಅವರು ವಕೀಲರೂ, ಪ್ರತಿಕಾರ್ತರೂ ಕೃಷಿಕ ನಾಯಕರೂ ಆಗಿದ್ದಾರೆ. ತಮ್ಮ ಹೆಚ್ಚಿನ ಸಮಯವನ್ನು ಕೃಷಿಕ ಸಂಘಟನೆಯಲ್ಲಿಯೇ ಕಳೆಯುತ್ತಿರುತ್ತಾರೆ. ಈ ಬಲವತ್ತರವಾದ ಕಾರಣದಿಂದಲೇ ಕೃಷಿಕರ ಮೇಲೆ ಅವರು ಅತ್ಯಂತ ಪ್ರಭಾವ ಬೀರಿದ್ದಾರೆ.

ಮಹಾ ಗುಜರಾತಿಗಾಗಿ ಆಂದೋಲನ ಮಾಡುತ್ತಿರುವ ಮಹಾ ಗುಜರಾತ ಜನತಾ ಪರಿಷತ್ತಿನ ಅಧ್ಯಕ್ಷರೂ ಶ್ರೀ ಇಂದುಲಾಲ ಯಾಜ್ಞಿಕರೇ ಆಗಿದ್ದಾರೆ. ಈ ಪರಿಷತ್ತಿನಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಪ್ರತಿನಿಧಿತ್ವವಿದೆ; ಎಲ್ಲ ಪ್ರಕಾರದ ತತ್ವಗಳಿಂದ ಕೂಡಿದ ಒಂದು ವಿಶಿಷ್ಟ ದೆಸೆಯಲ್ಲಿ ಮಾರ್ಗದರ್ಶನಮಾಡುವ ಗುರುತರವಾದ ಹೊಣೆ ಅವರ ಮೇಲಿದೆ. ಇಂದಿನ ಪರಿಸ್ಥಿತಿಯಲ್ಲಿ "ಶಹೀದ್ ನ್ಯಾಯಕ" ಆಂದೋಲನದ ಸಂಬಂಧವಷ್ಟೆ ಅಹಮದಾಬಾದಿನಲ್ಲಿ ನಡೆದ ಹಿಂಸಾತ್ಮಕ ಕಾಂಡದಿಂದ, ಪರಿಷತ್ತಿನ ಹೆಸರಿನ ಮೇಲೆ ಧಕ್ಕೆಯು ಬಂದಿತು. ಆದರೆ, ಶ್ರೀ ಯಾಜ್ಞಿಕರು ಈ ಕಾಂಡಗಳನ್ನು ನಿಂದಿಸಿದೆರಲ್ಲದೇ ಪ್ರಾಯಶ್ಚಿತ್ತ ರೂಪವಾಗಿ ಅನಶನ ವ್ರತವನ್ನೂ ಕೈಕೊಂಡರು. ಆದರ ನಂತರ ಸಂಚಾರ ಬಂದೀ ಕಾಯಿದೆಯನ್ನು ಉಲ್ಲಂಘಿಸಿ ನ್ಯಾಯಕ ಆಂದೋಲನದ ಸೂತ್ರಪಾತವನ್ನೂ ಮಾಡಿದರು.

ಶ್ರೀ ಯಾಜ್ಞಿಕರು ಈಗ ಮಹಾ ಗುಜರಾತ ನಿರ್ಮಾಣದ ಬಗ್ಗೆ ನಡೆಯುತ್ತಿರುವ ಆಂದೋಲನವನ್ನು ಸಫಲವಾಗಿಸಲು ಕಂಕಣ ಬದ್ಧರಾಗಿ ದುಡಿಯುತ್ತಿದ್ದಾರೆ. ಈ ಆಂದೋಲನದ ಸಫಲತೆ ಇಲ್ಲವೇ ವಿಫಲತೆಯ ಬಗ್ಗೆ ಈಗೇನೂ ಹೇಳುವುದು ಅಸಾಧ್ಯವಾದರೂ ಮಹಾ ಗುಜರಾತ ನಿರ್ಮಾಣವನ್ನು ಬೆಂಬಲಿಸುತ್ತಿರುವವರ ದೃಷ್ಟಿಯಲ್ಲಿಯೂ ಅವರತ್ತ ಹೊರಳಬೇಕೆಂಬುದು ನಿಜ. ಆಂದೋಲನದ ಬಲಗೊಳ್ಳುತ್ತ ಹೋದಂತೆ ನಾಯಕರ ಹಿಂದಾಲಕರಲ್ಲಿ ಸಂದರ್ಭಾನುಸಾರವಾದ ಏಕಸೂತ್ರದ ಪ್ರಯತ್ನ ನಡೆಯುವುದು ಸಂಭವಿಸಬಹುದು. ಹಾಗಾದರೆ, ಇಂತಹ ಕಾರ್ಯಕರ್ತರಿಂದ ಶ್ರೀ ಯಾಜ್ಞಿಕರು ಸುರಕ್ಷಿತವಾಗಬೇಕಾಯಿತಲ್ಲದೇ ಎಂಬುದೇ ನೋಡಬೇಕಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಲೇಖಕರು- ಎಸ್. ರಘುನಂದನ ರಾವ್, ತಲ್ಲೂರು)
ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.
ಬೆಲೆ- ಎರಡಾಣೆ ಮಾತ್ರ, ಟಿ. ಪಿ. ಪ್ರತ್ಯೇಕ.
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕರ್ನಾಟಕದಲ್ಲಿ ಭೂದಾನ ಚಳವಳಿ—

ಜನತೆಯಿಂದ ಆಶಾದಾಯಕ ಪ್ರೋತ್ಸಾಹ

ಪೂಜ್ಯ ವಿನೋಬಾಜಿಯವರ ಪ್ರೇರಣೆ ಮತ್ತು ಆದೇಶದಿಂದ ಮೈಸೂರು ರಾಜ್ಯದಲ್ಲಿ ಇಲ್ಲಿನ ವರೆಗೆ ನಡೆದಿರುವ ಭೂದಾನ ಚಳವಳಿಯ ಸಂಕ್ಷಿಪ್ತ ಪರಿಚಯವನ್ನು ತಮ್ಮ ಮುಂದೆ ಇಡಲು ತುಂಬಾ ಹರ್ಷಿಸುತ್ತೇವೆ.

ಕಳೆದ ಏಳು ವರ್ಷಗಳಿಂದ ಅನೇಕ ನಮ್ಮ ಸೇವಕರು ಭೂದಾನ ತತ್ವವನ್ನು ರಾಜ್ಯದ ಹತ್ತೊಂಬತ್ತು ಜಿಲ್ಲೆಗಳಲ್ಲಿ ಶ್ರದ್ಧಾ ಭಕ್ತಿಯಿಂದ ಹರಡುತ್ತಾ ಬಂದಿದ್ದಾರೆ. ೫,೦೮೩ ದಾನಿಗಳಿಂದ ೧೪,೯೫೫ ಎಕ್ರೆ ಭೂಮಿಯು ಈ ತನಕ ದಾನವಾಗಿ ದೊರೆತಿದೆ. ಈ ಪೈಕಿ ೩,೨೦೦ ಎಕರೆಯನ್ನು ೮೦೦ ಕುಟುಂಬಗಳಿಗೆ ಹಂಚಲಾಗಿದೆ.

ಹಾಗೆಯೇ ೧೪೬೮ ದಾನಿಗಳಿಂದ ೧,೧೭,೫೫೦ ರೂಪಾಯಿಯ ವಾರ್ಷಿಕ ಸಂಪತ್ತಿದಾನ ವಾಗ್ದಾನ ಪತ್ರಗಳನ್ನೂ ಪಡೆಯಲಾಗಿದೆ. ಅಗಾಗಲೇ ಸುಮಾರು ೧೪,೧೧೦ ರೂಪಾಯಿಗಳು ವಾಸ್ತವಾಗಿದೆ. ಪ್ರಾಂತ್ಯದ ಸಂಪತ್ತಿ ದಾನಿಗಳ ನೆರವಿಗಾಗಿ ಒಂದು ಸಂಪತ್ತಿದಾನ ಸಮಿತಿ ರಚನೆಯಾಗಿ ಕೆಲಸ ಮಾಡುತ್ತಿದೆ.

ಮೈಸೂರು ರಾಜ್ಯದಲ್ಲಿ ೧೨೫ ಮಂದಿ ಲೋಕ ಸೇವಕರು ಪ್ರತಿಜ್ಞೆಯನ್ನು ಕೈಕೊಂಡಿರುತ್ತಾರೆ. ಇವರಲ್ಲಿ ಸುಮಾರು ೬೦ ಮಂದಿ ಪೂರ್ಣ ಸಮಯದ ಸೇವಕರಲ್ಲದೆ ೫೧ ಮಂದಿ ಶಾಂತಿ ಸೈನಿಕರ ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದಾರೆ.

ವಿವಿಧ ಜಿಲ್ಲೆಗಳಿಂದ ಒಟ್ಟು ೬೬ ಗ್ರಾಮ ದಾನಗಳು ಬಂದಿವೆ. ಆ ಗ್ರಾಮದಲ್ಲಿ ವಿಧಾಯಕ ಕಾರ್ಯದ ಬಗ್ಗೆ ವ್ಯವಸ್ಥೆ ನಡೆಯುತ್ತಿದೆ. ಗಾಂಧೀ ಸ್ಮಾರಕ ನಿಧಿ, ಖಾದೀ ಗ್ರಾಮೋದ್ಯೋಗ ಬೋರ್ಡ್, ಸರ್ಕಾರಿ ಮತ್ತು ಇತರ ಕೆಲವು ಸಂಘ, ಸಂಸ್ಥೆಗಳು ಗ್ರಾಮದಾನ ಹಳ್ಳಿಗಳಿಗೆ ವಿಶೇಷ ರೀತಿಯ ನೆರವನ್ನು ಕೊಡಲು ಮುಂದೆ ಬಂದಿವೆ.

ಭೂದಾನ ಮತ್ತು ಸರ್ವೋದಯ ಸಾಹಿತ್ಯ ಪ್ರಚಾರವು ಸಾಕಷ್ಟು ವ್ಯಾಪಕವಾಗಿ ನಡೆದಿರುತ್ತದೆ. ಇಲ್ಲಿನ ವರೆಗೆ ೪೩ ಬಗೆಯ ಗ್ರಂಥಗಳು ಪ್ರಕಟವಾಗಿವೆ. ೧೬ ತಾ ಪ್ರಸಚನ ೯೦,೦೦೦ ಪ್ರತಿಗಳು ಅಚ್ಚಾಗಿವೆ ೧,೪೩,೨೦೦ ರೂಪಾಯಿಯ ಸಾಹಿತ್ಯ ಅಚ್ಚಾಗಿ ೭೫,೦೦೦ ರೂಪಾಯಿ ತನಕ ಮಾರಾಟವಾಗಿದೆ ಕನ್ನಡದಲ್ಲಿ "ಭೂದಾನ" ಹೆಸರಿನಿಂದ ಒಂದು ವಾರಪತ್ರಿಕೆ ಹೊರಡುತ್ತಿದೆ. ೧೯೦೦ ಚಂದಾದಾರರಿದ್ದಾರೆ. "ಸರ್ವೋದಯ ನಗರ" ಎಂಬ ಶೀರ್ಷಿಕೆಯಲ್ಲಿ ಇಂಗ್ಲೀಷಿನಲ್ಲಿ ಒಂದು ಪಾಕ್ಷಿಕ ಬುಲೆಟಿನ್ ಸಹ ಪ್ರಕಟವಾಗುತ್ತಿದೆ.

ಕೇರಳದಲ್ಲಿ ಪ್ರಾರಂಭವಾದ ಸಮ್ಮತಿ ದಾನವು ಪೂಜ್ಯ ಬಾಬಾ ಅವರ ಯಾತ್ರಾಸಮಯದಲ್ಲಿ ಈ ರಾಜ್ಯದಲ್ಲಿ ಸರ್ವೋದಯ ಪಾತ್ರೆಯ ಸ್ವರೂಪವನ್ನು ತಾಳಿತು. ಚಿಕ್ಕ ಮಕ್ಕಳ ಪುಟ್ಟ ಹಸ್ತಗಳಿಂದ ಪ್ರತಿನಿತ್ಯವೂ ಊಟಕ್ಕೆ ಮೊದಲು ಒಂದು ಹಿಡಿ ಕಾಳನ್ನು ಒಂದು ಪಾತ್ರೆಯಲ್ಲಿ ಹಾಕಿಸುವುದು, ಇದರ ಮೂಲಕ ಹಂಚಿಕೊಂಡು ಬಾಳಬೇಕು—ಕೊಟ್ಟು ಭೋಗಿಸಬೇಕು,—ಯೆಂಬ ಸಂಸ್ಕಾರ ಮಕ್ಕಳಲ್ಲಿ ಬೆಳೆಯಲು ಅವಕಾಶ ದೊರೆಯುವುದು. ನಿತ್ಯ ಸರ್ವೋದಯ ವಿಚಾರದಕಡೆ ಹಿರಿಯರ ಗಮನಹೋಗುವುದು—ಪಾತ್ರೆಯ ಧಾನ್ಯವು ವಿಚಾರ ಪ್ರಚಾರಕ್ಕಾಗಿ ಆರ್ಥಿಕ ನೆರವಾಗುವುದು. ಇದೆಲ್ಲವೂ ಸರ್ವೋದಯವಿಚಾರಕ್ಕೆ ಸಮ್ಮತಿಯಂತಿರುವುದು.

ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಶಿರಸಿ, ಉಡುಪಿ ಇತ್ಯಾದಿ ಮುಖ್ಯ ಮುಖ್ಯ ಸ್ಥಳಗಳಲ್ಲಿ ಸುಮಾರು ೨೦೦೦ ಸರ್ವೋದಯ ಪಾತ್ರೆಗಳನ್ನು ಇಡಲಾಗಿದೆ. ಬಹು ಆಸಕ್ತಿಯಿಂದ ಈ ಕೆಲಸ ಮುಂದುವರಿಯುತ್ತಿದೆ. ಅನೇಕ ಮಹಿಳೆಯರು ಇದಕ್ಕಾಗಿ ಮುಂದೆಬಂದಿರುತ್ತಾರೆ.

ವಿನೋಬಾಜಿಯವರೇ ಹೇಳುವಂತೆ ಮೈಸೂರಲ್ಲಿ ತಮಗೆ ಹೊಳೆದ ಮೂರು ಹೊಸ ವಿಷಯಗಳಲ್ಲಿ ಸರ್ವೋದಯ ಪಾತ್ರೆ ಒಂದು.

ಲೋಕಸೇವಕರೆಲ್ಲರು ಅಧ್ಯಯನ ಶೀಲರಾಗಬೇಕು, ಅದಕ್ಕಾಗಿ ಪ್ರತಿಯೊಬ್ಬರಿಗೂ ಸಾಹಿತ್ಯ ಬೇಕೆಂಬುದು, ಎರಡನೆಯ ವಿಚಾರ. ಇದರಂತೆ ೬೦ ಸೇವಕರಿಗೆ ಪ್ರತಿ ಮಾಹೆ ೫ ರೂಪಾಯಿಯ ಸಾಹಿತ್ಯವನ್ನು ಸಂಪತ್ತಿದಾನಿಗಳ ನೆರವಿನಿಂದ ಕೊಡಲಾಗುತ್ತಿದೆ.

ಪಾರಿವ್ರಾಜಕ ಮಹಿಳೆಯರ ಅಖಂಡ ಪಾದಯಾತ್ರೆ ಮೂರನೇ ಹೊಸ ವಿಚಾರ. ಮಹಿಳೆಯರ ಒಂದು ಗುಂಪು ಕೆಲವು ಆಜೀವ ಬ್ರಹ್ಮಚಾರಿಣಿಯವರ ನೇತೃತ್ವದಲ್ಲಿ ಗ್ರಾಮದಾನ ಕ್ಷೇತ್ರದಲ್ಲಿ ಯಾತ್ರೆ ಮಾಡುತ್ತಿದೆ ಜನಗಳಲ್ಲಿ ಪ್ರೇಮಭಾವನೆ ಬೆಳೆಸಲು ಈ ಮಹಿಳಾ ಯಾತ್ರೆ ಬಹಳ ಆಶಾದಾಯಕವಾಗಿದೆ.

ವಿನೋಬಾಜಿಯವರ ಆದೇಶಾದ ಪಡೆದು ಸುರಿತ ಹಿರಿಯ ಕಾರ್ಯಕರ್ತರೊಬ್ಬರ ನೇತೃತ್ವದಲ್ಲಿ ರಾಜ್ಯದ ೧೯ ಜಿಲ್ಲೆಯಲ್ಲಿ ಅಖಂಡ ಪಾದಯಾತ್ರೆಯೊಂದು ಸದ್ಯದಲ್ಲಿ ನಡೆಯುತ್ತಿದೆ ಈಗಾಗಲೇ ಆರು ಜಿಲ್ಲೆಗಳ ಪ್ರವಾಸ ಮುಗಿದಿದೆ ರಾಜ್ಯದ ಮುಖ್ಯಮಂತ್ರಿಗಳ ಜೊಬಲವೂ ಈ ಯಾತ್ರಿಕರಿಗೆ ದೊರೆತಿದೆ.

ಗ್ರಾಮ ಸ್ವರಾಜ್ಯ ಸ್ಥಾಪಿಸಲು ಬೇಕಾಗುವ ಗ್ರಾಮದ ಒಗ್ಗಟ್ಟಿನ ಭಾವನೆ ತುಂಬಲು ಪಾದಯಾತ್ರೆಯು ಬಹಳ ಯಶಸ್ವಿಯಾಗುತ್ತಿದೆ. ಈ ತರದ ಅಖಂಡ ಪಾದಯಾತ್ರೆಯು ಭಾರತಕ್ಕೆ ಒಂದು ಮಾದರಿಯಾಗಿದೆ.

ವಿಶ್ವಮಾನವದ ಹಿತವನ್ನು ಕೋರುವ, ವಿಶ್ವಶಾಂತಿಯನ್ನು ಬಯಸುವ ಜಯ ಜಗತ್ತಿಯೆಂಬ ಘೋಷಣೆಯು ಮೈಸೂರುರಾಜ್ಯದಲ್ಲಿ ಪ್ರಾರಂಭವಾದದ್ದು ಒಂದು ಮಹತ್ವದ ವಿಚಾರ. ಇಂದು ಭಾರತದಲ್ಲೆಲ್ಲಾ ಈ ಘೋಷಣೆಯು ಕೇಳಿಬರುತ್ತಿದೆ.

ಲೋಕ ಸೇವಕರ ಪರಸ್ಪರ ಸಂಪರ್ಕ ಇಟ್ಟುಕೊಂಡು ಇದೇ ಪ್ರಾಂತ್ಯದ ಪ್ರಗತಿಯನ್ನೂ ಕ್ರೋಢೀಕರಿಸಲು ಮತ್ತು ಗ್ರಾಮದಾನ ಚಳವಳಿಯ ಪ್ರಗತಿಗೆ ನೆರವಾಗಲು ಆರು ಮಂದಿ ಸದಸ್ಯರ ಒಂದು ಗ್ರಾಮದಾನ ಸಮಿತಿಯನ್ನೂ ಪೂಜ್ಯ ವಿನೋಬಾಜಿಯವರು ಗೊತ್ತುಮಾಡಿರುತ್ತಾರೆ. ಪ್ರಾಂತ್ಯದ ಕೆಲಸದಲ್ಲಿ ಪೂರ್ಣ ನೆರವಾಗಲು ಈ ಸಮಿತಿಯು ದುಡಿಯುತ್ತಿದೆ.

ಪೂಜ್ಯ ವಿನೋಬಾಜಿಯವರು ಏಳು ತಿಂಗಳು ಪಾದಯಾತ್ರೆ ನಡೆಸಿ, ಕರ್ನಾಟಕವನ್ನು ಪಾವನಗೊಳಿಸಿದರು. ತಾರೀಕು ೨೪—೮—೫೭ರಂದು ಮೈಸೂರು ಪ್ರಾಂತ್ಯವನ್ನು ಪ್ರವೇಶಿಸಿ ೧೪ ಜಿಲ್ಲೆಗಳಲ್ಲಿ ಯಾತ್ರೆಮಾಡಿ ತಾ. ೨೨-೩-೫೮ರಂದು ಬೆಳಗಾಂವ ಜಿಲ್ಲೆಯ ನಿಪ್ಪಾಣಿ ಮೂಲಕ ಮಹಾರಾಷ್ಟ್ರವನ್ನು ಪ್ರವೇಶಿಸಿದರು.

(೧೬ನೇ ದಿನಾಂಕ ರಾಷ್ಟ್ರಾಧ್ಯಕ್ಷರೆದುರು ಓದಿದ ವರದಿಯ ಸಾರ)

ಕನ್ನಡಿಗರು ಕನ್ನಡವನ್ನು ಉಳಿಸಬೇಕು

(೩ನೇ ಪುಟದಿಂದ)

ಆದರೆ, ಸಾಹಿತ್ಯದಲ್ಲಿ ಅವಿಲ್ಲವಾಗುವುದೆ?

ನಮ್ಮ ಕನ್ನಡದ ಬಗ್ಗೆ ಹೇಳುವುದಾದರೆ, ದೇವನಾಗರೀ ಲಿಪಿಯ ಅನಾಹುತ ಸರೋಪದೇ ಕಾಣಿಸುವುದು. ನಾವು ನಮ್ಮ ಭಾಷೆಯನ್ನು ದೇವನಾಗರೀ ಲಿಪಿಯಲ್ಲಿ ಬರೆಯತೊಡಗಿದರೆ, (ಪದಾಂತ್ಯ ಮತ್ತು ಪದ ಮಧ್ಯದ ಹಿಂದೀ ಉಚ್ಚಾರಣಾ ಭೇದವನ್ನು ಬದಿಗಿರಿಸಿ, ಸಂಸ್ಕೃತ ಭಾಷೋಚ್ಚಾರಣಾ ಪದ್ಧತಿಯನ್ನು ಅವಲಂಬಿಸಿದರೂ) ಒಲೆ ಮತ್ತು ಓಲೆ ಗಳೆರಡೂ ಓಲೇ ಆಗುವುವು! ಮನೆಗೆ ಎಂಬುದು ಮನೇಗೇ ಆದೀತು!

ಹೀಗೆಯೇ ಹೊಸ ಹೊಸ ಪದಗಳು ನಿರ್ಮಾಣಕೊಂದಿದಂತೆ ಭಾಷೆಯೂ ಬೆಳೆಯುತ್ತದೆಂದು ತಿಳಿಯಬೇಕೆ? ಈ ನೂತನ ಪದಗಳ ಸಾಧುತ್ವ ಕಲ್ಪಿಸಲು ಹೊಸ ಹೊಸ ವ್ಯಾಕರಣ ಗ್ರಂಥಗಳು, ಅರ್ಥ ತಿಳಿಸಿಹೇಳುವುದಕ್ಕೆ ನಿಘಂಟುಗಳು ಹಾಗೆಯೇ ಖಂಡನೆ ಮಂಡನೆಗಾಗಿ ವಿಪುಲ ಪುಸ್ತಕಗಳು, ಒಸಗುವ ವಿನೋದ ಪ್ರದರ್ಶನಕ್ಕಾಗಿ ಸಾಹಿತ್ಯ ಕೃತಿಗಳು ಹೆಚ್ಚುಹೆಚ್ಚಾಗಿ ಅಚ್ಚಾಗಿ ಪಾಂಡಿತ್ಯವು ಕೋಡಿ ಹರಿಯುವ ಅಸಂಖ್ಯ ಸಂಪತ್ತಾಗಿ ನಮ್ಮ ಭಾಷೆಯು ಕೂಡಿ ಬೆಳೆಯುವುದೆಂದು ಹಾರೈಸಿ ದೇವನಾಗರಿಯ ಬೆನ್ನು ಹಿಡಿಯಬೇಕೆ?

ಬೇರೆ ಬೇರೆ ಮೂಲ ಭಾಷೆಯಿಂದ ಕವಲೊಡೆದ ಭಾಷೆಗಳು ಉತ್ತರ ಮತ್ತು ದಕ್ಷಿಣ ಭಾರತದವು. ಅವುಗಳಿಗೆ ವರಂಪರಾಗತವಾದ ಲಿಪಿಗಳು ಬೇರೆಯೇ ಇವೆ. ಆ ಲಿಪಿಯಲ್ಲಿ ಬರೆದರೆ ಮಾತ್ರ ಆಯಾ ಭಾಷೆಗಳು ಸ್ಪಷ್ಟವಾಗಿ ಓದಲ್ಪಡಬಹುದು. ತುಳು ಅಥವಾ ಕೊಂಕಣಿ ಭಾಷೆಯನ್ನು ಕನ್ನಡ ಲಿಪಿಯಲ್ಲಿ ಬರೆವ ಹವ್ಯಾಸ ನಮ್ಮಲ್ಲಿದೆ. ಆದರೆ, ಅದರಿಂದ ತಟ್ಟುವ ಹಾನಿ ಆ ಭಾಷೆಯನ್ನು ಕೊಲೆಮಾಡಲು ಸಾಕಷ್ಟು ಸಾಕಾಗಿರುವಾಗ, ಕನ್ನಡಿಗರು ನಮ್ಮ ಭಾಷೆಗೆ ಜೂರಿಹಾಕಿ ದೇವನಾಗರಿಯನ್ನೋ ಇನ್ನಾವುದೇ ಲಿಪಿಯನ್ನೋ ಸ್ವೀಕರಿಸಬೇಕು ಎಂದರೆ, ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ ಅಲ್ಲವೆ? ಆದುದರಿಂದ, ಈ ಸಂದರ್ಭದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಈ ಕಟುನೀತಿಯನ್ನು ಕನ್ನಡಿಗರು ಏಕಕಂಠದಿಂದ ವಿರೋಧಿಸಬೇಕು ಇನ್ನುಮುಂದಾದರೂ ಕನ್ನಡವನ್ನು ದೇವನಾಗರಿಯ ಕೈಯಲ್ಲಿತ್ತು ನಮ್ಮ ಭಾಷೆಗೆ ಅವಮರ್ಯಾದೆಯನ್ನು ಮಾಡಬಾರದು. ಈ ಬಗ್ಗೆ ಕನ್ನಡದ ಹಿಂದಿ ಪ್ರಚಾರಕರು ತಾವೂ ಕನ್ನಡಿಗರೆಂಬುದನ್ನು ಗಮನಿಸಿ ತಮ್ಮ ಮಾತೃಭಾಷೆಯ ಕೊಲೆಯಾಗುವುದಕ್ಕೆ ವಿರೋಧವನ್ನು ಪ್ರದರ್ಶಿಸುವರೆಂದು ನಂಬಬಹುದೆ?

(ಬರೆದು ಬಂದುದು)

ಲಂಡನ್ ವಿಶ್ವವಿದ್ಯಾಲಯದ ಸಮಾಜ ಶಾಸ್ತ್ರದ ಪ್ರಾಧ್ಯಾಪಕಿಯಾದ ಶ್ರೀಮತಿ ಬಾರ್ಬರ ಪೂಟ್ಸನ್. ಈಕೆ ರಾಜಪೂಜೆತೆಯದ್ದು ಈಗಾಗಲೇ ಶ್ರೀಮಂತರ ಸಭೆಗೆ ಸದಸ್ಯರಾಗುವ ಸೌಲಭ್ಯ ಇವರಿಗೆ ದೊರೆತಿದೆ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕ್ಸರು: ಪಾ ಕಂಪೆನಿ, ಮಂಗಳೂರು—1.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಹರತಾಳದಲ್ಲಿ ಹರಿದಾಟ

(೨೮ನೇ ಪುಟದಿಂದ)

ಲೆಗೆ ಲೆಕ್ಕಬರಲಿಲ್ಲ. ಈ ಹರತಾಳದಿಂದಾಗಿ ನಾಲ್ಕು ದಿನಾನಂತರ ತನಗೂ ಯಾವ ದುರ್ಗತಿ ಬಂದೀತೆಂದು ಹೊಳೆಯಲಿಲ್ಲ. ವಿಮಲಳ ವಿವಾಹವಾಗಿ ಕೇವಲ ಎರಡು ಮಾಸಗಳು ಗತಿಸಿದ್ದುವು. ಆಗ "ಬಸಳ" ಸಂಪತ್ತನ್ನೂ ಸೀಡಿದ್ದರು. ಇದರಿಂದಲೇ ಇಷ್ಟುದಿನ ವ್ಯಸನವಿಲ್ಲದೆ ಕಳೆಯಿತು; ಇಲ್ಲವಾದರೆ, ಈ ಮನೆಯ ಒಳ ಇಷ್ಟರೊಳಗೆ ಅದೇ ಉಪವಾಸ ತಾಂಡವವಾಡುತಿತ್ತು!

ಲಾಲರಿಗೇನಾದರೂ ಚಿಂತೆಯಿರಬಹುದೆ? ಅವರ ಮನೆಯ ತಿಜೋರಿಗಳು ತುಂಬಿವೆ. ಅವರ ಕಾರಖಾನೆಯೂ ಹದಿನೈದು ದಿನ ಮುಚ್ಚಿದೆ. ಅವರಿಗೆ ಉಣ್ಣುವ ತಿನ್ನುವ ಚಿಂತೆಯಿದೆಯೇ? ಈ ಹರತಾಳದ ನೆವನದಲ್ಲಿ ಪ್ರಾಯಃ ಅವರ ಬಡ್ಡಿ ಮಾತ್ರ ಹೋದೀತು; ಆದರೆ, ಮಜೂರರ ಪ್ರಾಣಗಳು ಹೀರಲ್ಪಡುತ್ತಿವೆ! ಲಾಲಾರೂ ಈ ಹರತಾಳ ಬಹುದಿನ ನಡೆದು ಮಜೂರರು ಹೊಟ್ಟೆಗಿಲ್ಲದೆ ಸಾಯಲೆಂದು ಪ್ರಾರ್ಥಿಸುತ್ತಿರಬಹುದು. ಹಾಗಾದರೆ, ಸಮಸ್ಯೆ ತನಗೆ ತಾನೇ ಬಗೆ ಹರಿದು, ಮಜೂರರ ಕೇಳಿಕೆಗಳನ್ನು ಮನ್ನಿಸದೆಯೇ ಹರತಾಳವು ಮುಕ್ತಾಯಗೊಳ್ಳುವುದೆಂದವರು ಎಣಿಸುತ್ತಿರಬಹುದು.

ವಿಮಲಳ ಕಲ್ಪನೆಯೂ ಸುಳ್ಳಾಗಿರಲಿಲ್ಲ. ಆಕೆ ತನ್ನ ಪತಿಯೊಡನೆಯೂ ಇದೇ ಮಾತನ್ನು ಆಡಿದ್ದಳು. ಆದರೆ, ಕಮಾಲನು ಮಜೂರ ಸಂಘದಿಂದ ಬಂಧಿಸಲ್ಪಟ್ಟಿದ್ದಾನೆ. ಆತನು ಈ ಮಧ್ಯಾಹ್ನವೂ ನುಡಿದಿದ್ದನು— "ವಿಮಲಾ, ನಾನು ನಿನ್ನ ಮಾತನ್ನು ಅರ್ಥ ಮಾಡಿಕೊಂಡೆನು. ಬಹಳ ವಿಚಾರ ಮಾಡುತಿದ್ದೇನೆ. ಆದರೆ, ಎಲ್ಲ ಮಜೂರರೂ ಈ ಮಾತಿಗೆ ಒಪ್ಪಿದರೆ, ಮಾತ್ರ, ಇಲ್ಲವಾದರೆ....?"

"ಯಾವ ಮಜೂರರ ಕುಟುಂಬವು ಹಸಿವಿನಿಂದ ಸಾಯುತ್ತಿದೆಯೋ ಆ ಮಜೂರರು ನಿಜಕ್ಕೂ ಇದನ್ನು ಮನ್ನಿಸುವರು. ವಿಮಲಾ ಗಂಭೀರವಾಗಿಯೇ ಉತ್ತರಿಸಿದಳು. "ಆದರೆ, ಅವರಿಗೆ ತಿಳಿಹೇಳಿ ಅಗತ್ಯವಿದೆ, ಅಷ್ಟೆ."

"ಸರಿ, ಇಂದಿನ ಸಲೆಯಲ್ಲೇ ಇದನ್ನು ವಿಚಾರಿಸುವ ಪ್ರಯತ್ನ ಮಾಡುವೆನು"

ರಂಗೂನಿನ ಕಿವುಡರ ಶಾಲಾಧ್ಯಾಪಕರು ಕೊಲಂಬೊ ಯೋಜನೆಯಂತೆ ಮೂರು ತಿಂಗಳ ಕಾಲಾವಧಿಯಲ್ಲಿ ಗ್ರೇಟ್ ಬ್ರಿಟನ್ನಿನಲ್ಲಿ ಕುರುಡ ಮತ್ತು ಕಿವುಡ ಮಕ್ಕಳ ಶಾಲೆಯಲ್ಲಿ ಅಭ್ಯಾಸ ಮಾಡುತಿದ್ದಾರೆ. ಎಲೊಕ್ಟ್ರೊನಿಕ್ ಚಿಕಿತ್ಸೆಯನ್ನು ಅವರು ಪರೀಕ್ಷಿಸುತ್ತಿರುವುದನ್ನಿಲ್ಲಿ ಕಾಣಬಹುದು.

ಕಮಾಲ ಹೀಗೆ ನುಡಿದು ಹೊರಗೆ ಹೋಗಿಬಿಟ್ಟ.

ಸಂಧ್ಯಾ ಸಮಯದ ಸಭೆಯಲ್ಲಿ ಈ ಪ್ರಸ್ತಾಪ ಬಂದಾಗ ಹೆಚ್ಚಿನ ಮಜೂರರು ಇದನ್ನು ಸಮರ್ಥಿಸಿದರು. ಆದರೆ ಸಂಘದ ಅಧಿಕಾರಿಗಳು ಹೀಗೆ ಮಾಡುವುದರಿಂದ ತಮ್ಮ ಗೌರವಕ್ಕೆ ಕಂದೆಂದೂ, ತಮ್ಮ ಕೇಳಿಕೆಗಳು ಎಂದೂ ಫಲಕಾರಿಯಾಗಲಾರವೆಂದೂ ತಿಳಿಸಿಹೇಳಿದರು. ಆದರೆ, ಬಹುಮತದಿಂದ ಮುಂದೆ ಅವರೂ ತಲೆತಗ್ಗಿಸಿ ಲಾಲಾರು ಅರ್ಥಬೇಡಿಕೆಯನ್ನು ಮನ್ನಿಸುವುದಾಗಿತ್ತ ಆಶ್ವಾಸನೆಯನ್ನು ಸ್ವೀಕರಿಸಿ ಹರತಾಳವನ್ನು ನಿಲ್ಲಿಸವ ನಿಶ್ಚಯ ಮಾಡಬೇಕಾಗಿ ಬಂತು. "ವರ್ಷದಲ್ಲಿ ಹದಿನೈದು ದಿನ ಸಂಬಳ ರಜೆ ಮತ್ತು ಏಳು ದಿನಗಳ ಅನೌಖ್ಯದ ವೇತನ ರಜೆಗಳು ಕೊಡಲಾಗುವುವು. ಮಜೂರರ ಸ್ಥಿತಿ ಕಂಗೆಡುತ್ತಿರುವುದರಿಂದ ನಾಳೆಯಿಂದಲೇ ಕಾರಖಾನೆಯು ತೆರೆಯಲ್ಪಡುವುದು" ಎಂಬ ಲಾಲಾರ ಘೋಷಣೆಯೂ ಆಯಿತು.

ಎಲ್ಲ ಮಜೂರರ ಕಣ್ಣುಗಳಲ್ಲಿಯೂ ಪ್ರಕಾಶ ಬೆಳಗಿತು. ಸಂತೋಷದ ಲಹರಿಗಳು ಹೊಡಾಡಿದುವು. ಕೈಗೆ ದೊರೆತದೇ ಸ್ವರ್ಗವಾಯಿತು. ಹೊಟ್ಟೆಗಿಲ್ಲದೆ ಸಾಯುವುದಕ್ಕಿಂತ ಅರೆಹೊಟ್ಟೆ ಉಂಡಾದರೂ ಆಶಾಆಕಾಶದಲ್ಲಿ ಜೀವಿಸಿ ಹೋರಾಡುವುದು ಇಷ್ಟವಾಗಿತ್ತು.

ಕಮಾಲನು ವಿಮಲಳಿಗೆ ಇದನ್ನೆಲ್ಲಾ ತಿಳಿಸಿದ. ಆಗ ಆಕೆಯು ತನ್ನ ಮಾತಿನಿಂದ ಅನಂತ್ಯ ಕುಟುಂಬಗಳು ಬದುಕುವಂತಾಯಿತೆಂದು ಹೆಮ್ಮೆಪಟ್ಟಳು —"ಏನು ದೊರೆಯಿತೋ, ಅದರಿಂದಲೇ ಸಂತೋಷ ಪಡಬೇಕು; ಸಂದರ್ಭಸೋಡಿ ಮುಂದೆ ಹೋಗತಕ್ಕದ್ದು." ಆಕೆಯೆಂದಳು.

"ಆದರೆ, ವಿಮಲಾ, ಹರತಾಳವಾದಾಗ ಹೀಗೇ ಆಗುವುದು ಕೇಳಿಕೆಗಳು ಎಂದೂ ಪೂರ್ಣವಾಗಲಾರವು."

"ಆಗುವುವು. ಹರತಾಳಕ್ಕೆ ಮೊದಲು ಮಜೂರರು ಒಂದು ತಿಂಗಳಿಗೆ ಸಾಕಾಗುವಷ್ಟನ್ನು ಉಳಿಸಬೇಕು. ಹೀಗೆ ಮಾಡಿದೆ ಸುನ್ನುನೆ ಹರತಾಳವಾಚರಿಸಿದರೆ, ನಾವು ಗೆಂದೂ ಜಯವಾಗದು."

"ನಿಜವನ್ನು ಹೇಳುತ್ತಿರುವೆ. ವಿಮಲಾ ಮುಂದಿನ ಬಾರಿ, ಹರತಾಳವಾದಾಗ ನಿನ್ನನ್ನೇ ಕಾರ್ಯದರ್ಶಿಸಿಯಾಗಿ ಮಾಡೋಣ" ಕಮಾಲ ನಗುತ್ತ ಹೇಳಿದ.

"ಹೋ, ನೀನು ಹೇಳಿದ್ದೆಯೆ ಎತ್ತರೂ ಒಪ್ಪುತ್ತಾರೆಯೆ?"

"ಏಕಿಲ್ಲ? ನೀನು ಚಿಟಿಕೆ ಹಾಕುವಷ್ಟರಲ್ಲಿಯೇ ಜಯ ಸಂಪಾದಿಸುತ್ತಿಯಾ— ಇಂದಿನ ಸಫಲತೆಯೇ ಅದಕ್ಕೆ ಸ್ವಮಾಣ. ಆದರೆ, ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು, ಹರತಾಳವನ್ನು ಸಾಕಷ್ಟು ಹೆಚ್ಚು ದಿನಕ್ಕೆ ಎಳೆಯುವ ಪ್ರಯತ್ನ ಮಾಡುವರೆಂದು ಕೆಲವರನ್ನುತ್ತಾರೆ."

"ಏಕೆ?" ವಿಮಲಾ ಆಶ್ಚರ್ಯದಿಂದ ಪ್ರಶ್ನಿಸಿದಳು.

"ಹರತಾಳ ಉಳ್ಳವಾದರೆ, ಮಜೂರರು ತಾವಾಗಿಯೇ ತಲೆ ತಗ್ಗಿಸುವರು. ಅಲ್ಲಿಲಾಲಾಜಯವರಿಂದಲೂ ಸುಮಾರು ರೂ ಪಾಯಿಗಳ ಲಂಚವನ್ನೂ ಇವರು ಸ್ವೀಕರಿಸಿದ್ದಾರಂತೆ!"

"ಎಂತಹ ಮಾತಿದು? ಪ್ರಪಂಚದಲ್ಲಿ ಲಂಚಕೊಳ್ಳದವರಾರು? ಆದರೆ, ಪ್ರಮಾಣವಾಗದೂ ದೊರೆಯದೆ ಯಾವುದೇ ಸಾರ್ವಜನಿಕ ಕಾರ್ಯಕರ್ತರ ಮೇಲೆ ಅವಿಶ್ವಾಸದ ಲೇಪ ಅಂಟಿಸಬಾರದು."

"ನಾನೇನೂ ಸಂಶಯ ವ್ಯಕ್ತಪಡಿಸುತ್ತಿಲ್ಲ; ಇತರರ ಮಾತನ್ನು ಹೇಳಿದೆ ಅಷ್ಟೆ."

"ಅವರು ಕಪ್ಪು ತಿಳಿದಿರಬಹುದು. ನಿಮಗದರಿಂದೇನು? ಹಾಗಿರುವವರು ಹಾಗೆಯೇ ಕಾಲಿ ಈಗ ಯಾತ್ರೆಯಾಯಿತು. ಉಪಾಯ ಮಾಡಿ ಸುಲಿಗೋಣ ಮಂಜಾನೆ ಕಾರಖಾನೆಗೆ ಹೋಗಬೇಕು ತಾನೆ?"

"ಮಜೂರರಿಗೆ ಇದೇ ಜೀವನ ಹಗಲಿಡಿ ಮಡಿಯುವುದು: ಸಂಸಾರವು ಆಕಾಶದ ಕೆಳಗಿನ ಕಾತ್ತ ಬಿದ್ದಿರುವುದು—ಈ ಮುರುಕು ಕಸ್ತೆಯ ಜೋಪಡಿಯಲ್ಲಿ."

ಅವರು ಮಾತು ಮುಗಿಸಿದರು. "ಓರ್ವ ನಾಯಕ ಮೋಸಮಾಡಿಯಾನು, ಇಬ್ಬರು ಮಾಡಿಯಾರು, ಆದರೆ, ಕೊನೆಗೆ ಮಜೂರರೇ ಜಯಿಸುವರು" ಎಂದೆಂದ ಮನಸ್ಸು ಹೇಳುತಿತ್ತು. ದೂರವಲ್ಲಿ ಎಲ್ಲಿಂದಲೋ ಒಂದು ತಾತು ಕೇಳಿಬರುತಿತ್ತು— ಎಲ್ಲೋ ಯಾರೋ ತಡೆಯುತಿದ್ದಿರು..."

(ಅಖಾರ-ಯೋಜನಾ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		1%

The Moolky Bank, Ltd.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು.
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೩ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ಪಟ್ಟಿಮಾಡಿ ಎಂಡು ಪ್ರತಿಗಳನ್ನು ಕಳಿಸಬೇಕು ಸಂ ಸ)

ಯಾತ್ರಿಕ ಮೂಲ ರೇಖಾಕಾರ: ಪ್ರಬೋಧಕುಮಾರ ಸನ್ಯಾಲ ಅನುವಾದಕರು: ಶ್ರೀ ಜಿ. ಆರ್ ಕೌಗಡೆ. ಪ್ರಕಾಶಕರು: ಸಲಭಸಾಹಿತ್ಯ ಪ್ರಕಾಶನ, ಕುಮಟಾ ಪುಟಗಳು ೨೦೭. ಬೆಲೆ ರೂ ೧.೫೦.

ಕನ್ನಡ ಸಾಹಿತ್ಯದಲ್ಲಿರುವ ಬಹುಮುಖ ಕೊರತೆಗಳಲ್ಲಿ ಪ್ರವಾಸ ಸಾಹಿತ್ಯವೂ ಒಂದು. ಈಗೀಗ ಈ ಬಗ್ಗೆಯೂ ಕೆಲವೊಂದು ಸ್ವತಂತ್ರ ಗ್ರಂಥಗಳು ಬೆಳಕು ಕಾಣುತ್ತಿವೆ. "ರಜತ ಪುರದಿಂದ ರಜತಾದ್ರಿಗೆ", "ನನ್ನ ಪ್ರವಾಸ" ಇತ್ಯಾದಿ ಪ್ರವಾಸ ಕಥನಗಳು ಯಾತ್ರಾರ್ಥಿಗಳ ಕೈಪಿಡಿಯಂತಿವೆಯೆಂದು ಹೇಳಬಹುದು. ಇವುಗಳಿಂದ ಯಾತ್ರಾಸ್ಥಳಗಳ ಇತಿಹಾಸ, ಅಲ್ಲಿನ ಪ್ರೇಕ್ಷಣೀಯ ಸ್ಥಳಗಳು ಹಾಗೂ ಯಾತ್ರೆ ಮಾಡುವವರಿಗೆ ಕೆಲವು ಸಲಹೆ ಸೂಚನೆಗಳು ಇತ್ಯಾದಿಯಿರುತ್ತವೆ. ಆದರೆ, ಪ್ರವಾಸವೇ ವಿಷಯವಾಗಿದ್ದು, ಅದರೆ ಅಂಗಿಕವಾಗಿ ಕಥೆಗಳೂ ಅಭ್ಯಾಯಿಕೆಗಳೂ ಜೊತೆಯಬಂದು ಮನಸ್ಸಿಗೂ ಬುದ್ಧಿಗೂ ಏಕಕಾಲದಲ್ಲಿ ಆನಂದವನ್ನು ತಂದೀಯಬಲ್ಲ ನಿಜಕ್ಕೂ ಕೃತಿಗಳಲ್ಲಿ ಪ್ರಬೋಧಕುಮಾರ ಸನ್ಯಾಲರ ಬಂಗಾಲೀ ಪುಸ್ತಕ "ಯಾತ್ರಿಕ"ವಾಗಿದೆ ಸಾಮಾನ್ಯವಾಗಿ ಅಖಿಲಭಾರತದ ಶ್ರೇಷ್ಠ ಸಾಹಿತಿಗಳಿಂದ ಮಾನ್ಯವಾದ ಪ್ರಶಂಸೆಗೆ ಪಾತ್ರವಾದ ಈ "ಕಾದಂಬರಿ"ಯನ್ನು ಶ್ರೀಮಾನ್ ಕೌಗಡೆಯವರು ಕನ್ನಡಕ್ಕೆ ಅನುವಾದಿಸುವ ಪ್ರಯಾಸ ವಹಿಸಿದುದು ನಿಜವಾಗಿಯೂ ಪಂಡಾರ್ಹವಿದೆ ೨೦ನೆಯ ಶತಮಾನದ ಅತ್ಯುತ್ಕೃಷ್ಟ ಕಾದಂಬರಿಗಳಲ್ಲಿ ಇದೂ ಒಂದಾಗಿದೆಯೆಂಬ ಹೊಗಳಿಕೆಯನ್ನಿದು ಪಡೆದಿದೆ.

ಸಂಸಾರದಲ್ಲಿ ಯೇನೋ ಕಾರಣದಿಂದ ವಿರಕ್ತಿಯನ್ನು ತಂದುಕೊಂಡು ಯಾವ ಉದ್ದೇಶವೂ ಇಲ್ಲದೆ ವ್ಯರ್ಥವೋ ಎನ್ನುವಂತೆ ತೀರ್ಥ ಕ್ಷೇತ್ರಗಳ ಪರ್ಯಟನೆಗಾಗಿ ಹೊರಟು, ದಾರಿಯಲ್ಲಿ ನಾನಾ ವಿಧದ, ನಾನಾ ವರ್ಗದ, ವಿವಿಧ ವಿಚಾರ ಧಾರೆಯ, ಬಗೆ ಬಗೆಯ ಆಚಾರಗಳ ಯಾತ್ರಾರ್ಥಿಗಳ ಸಂಗದಿಂದ ತನ್ನ ಮನೋಧಾರೆಯನ್ನೂ ಸಾಜೆಗೆ ಹಿಡಿಯುತ್ತ ಬಂದು, ಕೊನೆಗೆ ಮರಳಿ ಬರುವಾಗ, ಮೊದಲಿನ ಸನ್ಯಾಸಿ ವೇಷವನ್ನು ತ್ಯಜಿಸಿ, ಅನಂತತೆಯ ಪ್ರೇಮಿಯಾಗಿ ಮರಳುವಂತಾಗುತ್ತಾನೆ ಹೆಸರ, ಉಚ್ಚ ಜೀವನ, ಪಾಪರಹಿತ ಪ್ರೇಮ, ಕಲಂಕರಹಿತ ಮಾನವತೆ, ದಾಕ್ಷಿಣ್ಯಮಯ ಜೀವ ಪ್ರೀತಿಗಳು ಸಂಗಾತಿಗಳಾದುದರ ದೆಸೆಯಿಂದಲೇ ಅಂತಹ ವ್ಯಸನದಿಂದ, ಸ್ವಲಾಭಕ್ಕಾಗಿ ವಿರಾಗಿಯಾಗಿ ಹೊರಟ ಯಾತ್ರಾರ್ಥಿ ನಿಜವಾದ ವಿರಾಗಿಯಾಗಿ ಮಾರ್ಪಡುತ್ತಾನೆ.

ಯಾತ್ರಿಕರಿಗೆ ಕೇವಲ ತಮ್ಮ ಯಾತ್ರೆಯೊಂದು ಸುಗಮವಾಗಿ ಕಳೆದರಾಯಿತು; ಎಂದು ಪರರ ಸುಖದುಃಖಗಳನ್ನು ಕಡೆಗಣಿಸಿ, ಏನೇ ಕ್ಷೇತ್ರಗಳನ್ನು ಸಂದರ್ಶಿಸುವುದರಿಂದಲೇ ದೇವರ ಕೃಪೆಗೆ ಪಾತ್ರರಾಗುವೆವೆಂಬ ಸಿದ್ಧಾಭಿಮಾನವಿರುವ ಕಲಂಕರಹಿತರಾದರೆ ದೇವರು ಏನಾದರೂ ಒಲಿಯುವನೆ? "ತನುಮನಗಳೊಳಗಿದ್ದು ಫಲವೇನು? ಮನದಲ್ಲಿ ದೃಢವಿಲ್ಲದವರೆಗೆ" ಎಂಬುತ್ತಿಯಂತೆ ಮನಸ್ಸೇ ನಮ್ಮ ಸೊರತು ಬೆಣ ಯಾತ್ರೆಯಲ್ಲ. ಯಾತ್ರೆಯನ್ನು ಯಾರೂ ಮಾಡಬಹುದು. "ಹಿರಿದೊಡೇನರಿಗಿ ಮಾತಾವುದೆ?" ಎಂಬಂತೆ ಅಂತಹರ ಯಾತ್ರೆ ನಾಮಕ್ಕೆ ಮಾತ್ರ ಹೊರತು ಅದರಿಂದ ಪುಣ್ಯಪ್ರಾಪ್ತಿಯಾಗುವುದೆಂದು ನಂಬುವುದು ದುಸ್ಸಾಧ್ಯ ದಬಲ್ಲ, ತನಗರಿವಿಲ್ಲದೆಯೇ ಶಿವಲಿಂಗದ ಮೇಲೆ ಪತ್ರೆಯೆಸೆದ ಬೇಡನಿಗೆ ಶಿವನೊಲಿದಂತೆ, ಉದ್ದೇಶರಹಿತವಾದ ಯಾತ್ರೆಯಲ್ಲಿಯೂ ದೈವ ಭಕ್ತಿಯುದ್ಭವಿಸಿ ಪರರ ಸುಖ ದುಃಖಗಳಲ್ಲಿ ಭಾಗಿಯಾಗಿ, ಅವರಿಗೆ ತಂತಾನಾದ ಸಹಾಯ ಸೌಕರ್ಯಗಳನ್ನಿತ್ತು ಮಾನವತಾ ಪ್ರೇಮಿಯಾದುದರಿಂದಲೇ, ದೈವ ಭಕ್ತಿಯ ದ್ಯೋತಕವಾಗಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೂ ಪಡೆಯಲುಸಾಧ್ಯವಾದ ಸರ್ವಸಂಗ ಪರಿತ್ಯಾಗ ಹಾಗೂ ನಿರ್ಲಿಪ್ತತೆಯನ್ನು ಜನ ಮಧ್ಯದಲ್ಲಿಯೇ ಪಡೆಯಬಹುದು ಎಂಬುದನ್ನು ಈ ಕಾದಂಬರಿ ಪ್ರತಿಬಿಂಬಿಸುತ್ತದೆ.

ಕಾದಂಬರಿಯ ಉದ್ದಕ್ಕೂ ಬರುವ ವರ್ಣನೆಗಳು ಭೌಗೋಲಿಕ ಅಥವಾ ಸಂಪ್ರದಾಯ ಶರಣವಾಗಿಲ್ಲ ಮಾನವತೆಯ ಪ್ರತಿಬಿಂಬವಾಗಿ ಎಲ್ಲ ವರ್ಣನೆಗಳೂ ಉಚಿತವಾಗಿರುಬರುತ್ತಿವೆ. ಅಲ್ಲಲ್ಲಿ ಬರುವ ವಿವಿಧ ವ್ಯಕ್ತಿಗಳ ಪಾತ್ರ ಚಿತ್ರಣವೂ ಸುಂದರವಾಗಿ, ಮೂಲಕ್ಕೆ ಕಳೆಯೊಯುತ್ತವೆ ಇದರಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳು ಒಬ್ಬಬ್ಬರಲ್ಲ, ಪ್ರಪಂಚದ ಎಲ್ಲ ಬಗೆಯ ಜನರೂ ಇಲ್ಲಿನ ಪಾತ್ರಗಳಲ್ಲಿ ಪ್ರತಿಫಲಿಸಲ್ಪಟ್ಟಿದ್ದಾರೆ. ಅಂತಹರಬಗೆ ಮಾನವೀಯತೆಯ ಪ್ರಭಾವ ಬಿದ್ದುದರಿಂದಲೇ ಇದು ಸಾಹಿತ್ಯದಲ್ಲೊಂದ ಧ್ರುವತಾರೆಯಾಗಿದೆ. ಅನುವಾದಕರ ಭಾಷಾ ಶೈಲಿಯೂ ಹಿಜೋ ಪೂರ್ಣವಾಗಿದೆ. ಭಾಗಾನಾ ಪೂರ್ಣ ವರ್ಣನೆಗಳಲ್ಲಿ ಬರುವ ಉತ್ತಮ ವರ್ಣನೆಯನ್ನು ಓದುವಾಗ ಓದುಗರ ಮನಸ್ಸು ತಲ್ಲೀನವಾಗಿಯೋಗುತ್ತದೆ

ಪುಸ್ತಕದ ಸ್ವಾರಂಭದಿಂದಲೂ ಪಾತ್ರಕರ ಮನಸ್ಸು ಮುಂದಿನ ವೃತ್ತಾಂತಾಖಲೀಸಿಯಾಗಿ ಹಾತೊರೆಯುತ್ತಿರುವುದರಿಂದ, ಎತ್ತಿಕೊಂಡ ಪುಸ್ತಕವನ್ನು ಪೂರ್ಣ ಮೋದದೆ ಕೆಳಗಿಡುವಂತಿಲ್ಲ. ಅಲ್ಲದೆ, ಮುಕ್ತಾಯವಾಗಿ ನಿಟ್ಟುಸಿರು ಬಿಡುವಾಗ, ಅಯ್ಯೋ ಈಗಲೇ ಕೊನೆಗೊಂದಿತೆ? ಎಂಬ ಉದ್ಗಾರ ಬಾಯಿಂದ ಆನಂದ ದುಃಖಗಳ ಸಮ್ಮಿಲನದಿಂದ ಹೊರಬರುವುದು. ಕೆಲವೊಂದು ಘಟನಾವರ್ಣನೆಯನ್ನು ಓದುತ್ತಿದ್ದಂತೆ ಕಣ್ಣಿಂದ ಆನಂದ ಬಾಷ್ಪಗಳೇ ಉದುರುವುದೂ ಉಂಟು, ಗಟ್ಟಿಯಾಗಿ ಓದತೊಡಗಿದರೆ, ಕುತ್ತಿಗೆಯೂ ಗದ್ಗದಿತವಾಗುವುದು. ಒಟ್ಟಿನಲ್ಲಿ ಈ ಅನುವಾದದಿಂದ ಕನ್ನಡಿಗರಿಗೊಂದು ಅತ್ಯುತ್ತಮ ಕೃತಿ ದೊರೆಕಿದಂತಾಯಿತು; ಮುಖಚಿತ್ರವನ್ನು ಶ್ರೀ ಎಸ್ ಜಿ. ಭಟ್ಟರು ಸುಂದರವಾಗಿಸಿದ್ದಾರೆ. ಪ್ರತಿಯೊಬ್ಬ ಕನ್ನಡಿಗನೂ ಇದನ್ನು ದ್ವಿಹಸ್ತಗಳಿಂದ ಸ್ವಾಗತಿಸಿಯೇ ತೀರುವನೆಂಬುದು ನಿಸ್ಸಂದೇಹ ಈ ಅಮೂಲ್ಯ ಕೃತಿಯನ್ನು ಅನುವಾದಿಸಿದ ಶ್ರೀ ಕೌಗಡೆಯವರೂ ಬೆಳಕು ಕಾಣಿಸಿದ ಪ್ರಕಾಶಕರೂ ಅಭಿನಂದನಾರ್ಹರು

ಕಾಲಗಣನೆ ಮತ್ತು ಪಂಚಾಂಗ—

ಬರೆದವರು: ಶ್ರೀ. ಯು ರಾಘವೇಂದ್ರ ಆಚಾರ್ಯ ಎಂ ಎ, ಪ್ರಕಾಶಕರು. ಶ್ರೀ. ಯು ಭಾಸ್ಕರ ಆಚಾರ್ಯ, ಗೀತಾ ಶಿಲಯರ ಉಡುಪಿ. ಪುಟಗಳು ೩೬. ಬೆಲೆ. ರೂ ೫೦ ನಯೇ ಪೈಸೆ.

ಭಾರತದ ವಿಭಿನ್ನ ಆಚಾರಗಳು, ಮತಗಳ ತತ್ವರೂಪಾಮದರ ಪ್ರಯತ್ನ ಇಲ್ಲಿನ ಜನತೆಯ ಜೀವನ ವಿಧಾನ, ಆಚಾರ, ವಿಚಾರಗಳಲ್ಲಿಯೂ ವಿವಿಧ ಪ್ರಕಾರಗಳಿವೆ ನಮ್ಮಲ್ಲಿನ ನೂರಾರು ಸಂಪ್ರದಾಯಗಳು ನಮ್ಮ ದೈನಂದಿನ ಜೀವನದಲ್ಲಿ ಒಂದಲ್ಲಿ ಒಂದು ಬಗೆಯ ಪ್ರಭಾವವನ್ನು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಮಾಡಿರುತ್ತದೆ. ಪಂಚಾಂಗ ಕ್ರಮದಲ್ಲಿ ಅಥವಾ ಕಾಲಗಣನೆಯಲ್ಲಿಯೂ ನಾವು ನಮ್ಮ ಪೂರ್ವಿಕರು ವಾರಂಪರಿಕವಾಗಿ ಅನುಸರಿಸಿಕೊಂಡು ಬಂದ ಕ್ರಮವನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಭೂಮಿಯ ವ್ಯಾಸವೂ ಹೆಚ್ಚುವುದೆಂಬ ಹೊಚ್ಚ ಹೊಸ ಸಂಶೋಧನೆಗಳು ಆಗುತ್ತಿರುವಾಗ, ಖಗೋಲವು ತನ್ನ ಚನ್ನತೆಯನ್ನೂ ಸೂಕ್ಷ್ಮತೆಯನ್ನೂ ಪ್ರದರ್ಶಿಸುತ್ತಿರುವಾಗ, ಈ ಗ್ರಹಂದಿಗಳ ಆಧಾರದಿಂದಲೇ ಕಾಲಗಣನೆಯನ್ನು ಮಾಡಿ ಪಂಚಾಂಗಗಳನ್ನು ರೂಪಿಸುತ್ತಿರುವಾಗ ನಾವು ಪಂಚಾಂಗಕ್ರಮದಲ್ಲಿ ಹಿಂದಿನ ದಾರಿಯನ್ನೇ ಹಿಡಿದು ಸುಮ್ಮನೆದೆದಿರುವುದರಿಂದಲೇ ಈಗ ಎಷ್ಟು ದಿನ ಹಿಂದುಳಿದಿದ್ದೇವೆ ನಿಜವಾಗಿ ಉತ್ತರಾಯಣವು ಜೂನ್ ೨೧ರಂದು ಪ್ರಾರಂಭವಾಗಿದ್ದರೂ ನಮಗೆ ಅದು ಪ್ರಾರಂಭವಾದುದು ಕರ್ಕಾಟಕ ಸಂಕ್ರಮಣದ ದಿನ ಎಂದರೆ, ಜುಲೈ ೧೬ರಂದು! ನಾವು ಹೀಗೆಯೇ ಮುಂದುವರಿದರೆ, ೧೮೦೦ ವರ್ಷಗಳಲ್ಲಿ ಒಂದು ತಿಂಗಳ ಕಾಲ ಹಿಂದೆ ಬೀಳುತ್ತೇವೆ! ಈ ದೋಷಗಳಿಗಳ ನಿರ್ಮೂಲನೆಗಾಗಿ ನಮ್ಮ ಪಂಚಾಂಗವನ್ನು ಶುದ್ಧೀಕರಿಸುವ ಅಗತ್ಯವಿದೆ. ಭಾರತ ಸರಕಾರವೂ ಪ್ರಾರಂಭಿಸಿರುವನೂತನ ಪಂಚಾಂಗವು ಈ ದಿಸೆಯಲ್ಲಾದ ಒಂದು ಪರಿವರ್ತನೆ. ಅವಕ್ಕನುಸಾರವಾಗಿಯೇ ನಮ್ಮ ಹಬ್ಬ ಹುಣ್ಣಿಮೆಗಳ ಆಚರಣೆಯನ್ನು ನಾವು ಮಾಡುವ ಅಗತ್ಯವಿದೆ

ಶ್ರೀ ಯು. ರಾಘವೇಂದ್ರಾಚಾರ್ಯರು ವಿಜ್ಞಾನ ವಿಷಯದಂತೆಯೇ ಖಗೋಲ ಶಾಸ್ತ್ರದಲ್ಲಿಯೂ ಆಸಕ್ತಿಯ ಪಾಂಡಿತ್ಯವಿರುವ ಕನ್ನಡಿಗರು ಅವರು ಈ ಪುಸ್ತಕದಲ್ಲಿ ನಮ್ಮ "ಪಂಚಾಂಗ"ದ ಕಥೆಯನ್ನು ಬಿಚ್ಚಿದ್ದಾರೆ, ಗ್ರೆಗೋರಿಯನ್ ಪಂಚಾಂಗದ ಕೊರತೆಯನ್ನೂ ಎತ್ತಿ ತೋರಿಸಿದ್ದಾರೆ ಕಾಲಗಣನೆಗೆ ಆಧಾರವಾಗಿರುವ ಸೂರ್ಯ, ಚಂದ್ರ ಭೂಮಿಗಳ ಗತಿ ಈ ಗತಿಯ ಲಕ್ಷಣದ ವಿಕಾಸ ಆದಾಯ ಹ್ರಾಸಗಳು ಅವುಗಳಿಂದಾಗುವ ಅನಾಯತಗಳನ್ನು ತಿಳಿಸುತ್ತ ಇವಲ್ಲವುಗಳಾ ದಿನೇ ದಿನೇ ಬದಲಾವಣೆ ಹೊಂದುವುದರಿಂದ, ಅದನ್ನು ಸೂಕ್ಷ್ಮವಾಗಿ ಅವುಗಳ ಚಲನೆಯನ್ನು ಕಂಡು ಹಿಡಿದು ಅವಶ್ಯವನುಸರಿಸಿ ಪಂಚಾಂಗ ರಚಿಸುವ ಅವಶ್ಯಕತೆಯನ್ನು ಎತ್ತಿ ತೋರಿಸಿದ್ದಾರೆ, ಜ್ಯೋತಿಷ ಶಾಸ್ತ್ರದ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಹ್ರಾಯಃ ಈ ಬಗೆಯ ಗ್ರಂಥವೊಂದು ಕನ್ನಡದಲ್ಲಿ ಇಲ್ಲವೆಂದೇ ಹೇಳಬೇಕು. ಎಲ್ಲೆಲ್ಲಿಯೂ ಅಂಕೆ ಸಂಖ್ಯೆಗಳಿಂದ ಕೂಡಿದ ಉಪಾಹಾರಗಳಿಂದಲೂ ತುಂಬಿದ ಇಷ್ಟೊಂದು ಎಳೆಯ ಹೊತ್ತಗೆಯನ್ನೋದುವಾಗಲೇ ಶ್ರದ್ಧೆಯಿಲ್ಲದವರಿಗೆ ಪುಸ್ತಕವನ್ನೆಸೆದು ಬಿಡುವ ಎಂದು ತೋರಿಬಹುದು. ಆದರೂ ಕ್ಲಿಷ್ಟಕರವಾದ ಮತ್ತು ಮಾನಸಿಕ ಶ್ರಮ ಸಾಧ್ಯವಾದ ಇಂತಹ ವಿಷಯವನ್ನು ಸುಲಭ ಕನ್ನಡದಲ್ಲಿ ಸರಸವಾಗಿ ವಿವರಿಸುವ ಸಾಹಸದಲ್ಲಿ ಶ್ರೀ ಆಚಾರ್ಯರು ಕೃತಾರ್ಥರಾಗಿದ್ದಾರೆ. ಖಾಶ್ಚಾರ್ಯರ ತಾರೀಕು ಪಟ್ಟಿಯನ್ನು ಅನುಸರಿಸುವವರಿಗೆ ನಮ್ಮ ಪೂರ್ವಿಕರ ಪಂಚಾಂಗ ಕ್ರಮವನ್ನೂ ವೇದ ಯುಗಿಗಳಿಗೆ ಆಧುನಿಕ ವೈಜ್ಞಾನಿಕ ಖಗೋಳ ಶಾಸ್ತ್ರವನ್ನು ಸೂಕ್ಷ್ಮವಾಗಿ ತಿಳಿಸಿ, ನಮ್ಮ ದೇಶವು ಈ ವಿಷಯದಲ್ಲಿ ಹಿಂದುಳಿದಿದೆ ಎಂಬುದನ್ನು ಓದುಗರಲ್ಲಿ ಚಿತ್ತುವ" ರೀತ್ಯಿಕರ ವಿಚಾರಧಾರೆ ಫಲಕಾರಿಯಾಗಿನೆಯೆನ್ನಬಹುದು. — ಗೋರಾ.



ರಾಯಲ್ ಕಾಲೇಜ್ ಆಫ್ ಸರ್ಜನ್ಸ್‌ನಲ್ಲಿ ಹೊಸತಾಗಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳು ಪರೀಕ್ಷಕಮಂಡಳದ ಸಮ್ಮುಖದಲ್ಲಿ ನಿಂತುಕೊಂಡಿದ್ದಾರೆ.

ಜನ ಪ್ರಿಯಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಶಕ್ತ ಪ್ರತಿಫಲ ಪಡೆಯಿರಿ.

Edited Printed & Published by K. H. Shetty, at the Navayuga press, UdipiS. India

ನಮೆಂಟುಗ

1958-59.

ನಿಷ ಮಟಕ

1)	4-	9-	1958	12
2)	11-	9-	1958	12
3)	18	9-	1958	12
4)	25	9-	1958	12
5)	2-	10	1958	12
6)	9-	10	1958	12
7)	16	10	1958	12
8)	23	10	1958	12
9)	6-	11-	1958	12
10)	13	11-	1958	12
11)	20	11-	1958	12
12)	27-	11-	1958	12
13)	4-	12-	1958	12
14)	11-	12-	1958	12
15)	18-	12-	1958	12
16)	25-	12-	1958	12
17)	1-	1-	1959	12
18)	8-	1-	1959	12
19)	15-	1-	1959	12
20)	29-	1	1959	32 ಸರಾಸರಿ ಸಂಖ್ಯೆ
				260

21)	5	2 -	1959	12
22)	12 -	2	1959	12
23)	19	2 -	1959	12
24)	26	2 -	1959	12
25)	5	3	1959	12
26)	12	3	1959	12
27)	11 -	3	1959	12
28)	26	3	1959	12
29)	2 -	4 -	1959	12
30)	9 -	4 -	1959	12
31)	16	4 -	1959	12
32)	23	4 -	1959	12
33)	30	4 -	1959	12
34)	1 -	5 -	1959	12
35)	14 -	5 -	1959	12
36)	21 -	5 -	1959	12
37)	28	5 -	1959	12
38)	4 -	6	1959	12
39)	11 -	6	1959	12
40)	18	6	1959	12
				- 240

41)	25	6-	1959	12
42)	2	7-	1959	12
43)	9-	7	1959	8
44)	16	7-	1959	12
45)	23	7-	1959	12
46)	30	7-	1959	12
47)	6	8	1959	12
48)	13-	8	1959	32 [illegible]
49)	20	8	1959-	12
50)	27-	8	1959	12
				136

1) 260

2) 240

3) 136

[illegible] 6

ನವಯುಗ

ವಾ.ಚಂದಾರೂ 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ.ಪೈಸೆ.

ವರುಷ ೩೮. ಸಂಚಿಕೆ ೧ 4-9-1958 Vol. 38. No. 1.

ಆರೋಗ್ಯ ಶಾಲನೆ

ಆರೋಗ್ಯವೇ ಭಾಗ್ಯ ವೆಂಬುದು ಎದಿಗೂ ಮಿಥ್ಯಾವಾದಲ್ಲ.

ನಮ್ಮ ಜನರು, ಜನತಾಸರಕಾರವು ಇದಕ್ಕಾಗಿ ಆವಶ್ಯಕ ಕಾರ್ಯ ಕೈಗೊಳ್ಳಲಿ

ಒಂದು ದೇಶದ ವಾಸ್ತವ ಸಂಪತ್ತು ಎಂದರೆ, ಆ ದೇಶದಲ್ಲಿ ವಾಸಿಸುತ್ತಿರುವ ಪ್ರಜಾಜನರ ಆರೋಗ್ಯವೆಂದನ್ನು ಎಲ್ಲರೂ ಒಪ್ಪಬೇಕು. ಆರೋಗ್ಯವಿಲ್ಲದೆಂದಾದರೆ, ಅಂತಹ ದೇಶವಾಸಿಗಳು ಯಾವ ಉಪಯೋಗಕ್ಕೂ ಬೀಳಲರು. "ಆರೋಗ್ಯವೇ ಭಾಗ್ಯ" ಎಂಬೂತಿನ ಸತ್ಯಾಂಶವಾದರೂ ಇಲ್ಲಿ ಸ್ಮರಿಸಬಾರದಿರದು. ಆದುದರಿಂದ, ಜನರು ತನ್ನ ಆರೋಗ್ಯಪಾಲನೆಯತ್ತ ಗಮನವೀಯಬೇಕು; ಜನತಾ ಸರಕಾರ ಆರೋಗ್ಯ ರಕ್ಷಣೆಯತಡೆಗೆ ಲಕ್ಷ್ಯ ಹರೇಕು.

ಭಾರತದ ಪ್ರಥಮ ಪಂಚಾರ್ಷಿಕ ಯೋಜನೆಯಲ್ಲಿ ಅನ್ನ, ಬಟ್ಟೆಗೂ ನೀರಾವರೀ ಯೋಜನೆಗಳನ್ನೆಗೊಂಡು ನಾವು ಬಹಳಷ್ಟು ಕಾರ್ಯಸಾಧಿಸಿದ್ದೇವೆ. ದ್ವಿತೀಯ ಯೋಜನೆಯಲ್ಲಿ ಮಹಾ ಉದ್ದೇಗಳು, ಕುಟೀರೋದ್ಯೋಗಗಳು ಮತ್ತು ಹಸ್ತಕಲೆಗಳ ಬಗ್ಗೆ ಯೋಜನೆಗಳನ್ನೂಪಿಸಿಕೊಳ್ಳಲಾಗಿವೆ ಮಣ್ಣು ಮತ್ತಹರಕಲು ಮನೆಗಳ ಸ್ಥಾನದಲ್ಲಿ ಉತ್ತಮ ಗೃಹಗಳನ್ನು ಕಟ್ಟಿಸುವ, ಅಧಿಕ ಕೈಗಳಲ್ಲಿ ವಗಾರ್ಗ, ಕಾಲುವೆ ವಿದ್ಯುತ್ತು ನೀರ ಪೂರೈಕೆ ಮೊದಲಾದವುಗಳಿಗಿರುವ ಕಷ್ಟವನ್ನು ವಹಿಸಿಕೊಳ್ಳಗಿದೆ.

ಔದ್ಯೋಗೀಕರಣದಿಂದ ಹೆಚ್ಚಿನರಿಗೆ ಉದ್ಯೋಗ ದೊರೆಯುವುದರಿಂದಾಗಿ ಜನ ಜೀವನಸ್ತರವೂ ಉನ್ನತವಾಗುವುದು; ಜನ ಕಲ್ಯಾಣರಾಜ್ಯದಲ್ಲಿ ಯೋಜನೆಗಳಲ್ಲಿ ಅಂತರ್ಗತಗೊಂಡ ವಿಷಯಗಳಲ್ಲಿ ಜನತೆಯ ಆರ್ಥಿಕ ಮತ್ತು ಸಾಮಾಜಿಕ ವಿಕಾಸಕ್ಕೆ ವಿಶೇಷ ಮನವೀಯ ಬೇಕಾಗುವುದು ಆದರೆ ಅದರೊಂದಿಗೇನೇ ಆರೋಗ್ಯ ಸಂಬಂಧೀ ಜನೆಗಳತ್ತವೂ ಅಷ್ಟೇ ಮನಸ್ಸು ಹಾಕುವುದು ಅಗತ್ಯವೆಂದು ಹೇಳಬೇಕು. ಆರೋಗ್ಯ ರಕ್ಷಣೆಯನ್ನು ಮಾಡದಿದ್ದರೆ ವಿದ್ದರೂ ಒಂದೇ, ಇರದಿದ್ದರೂ ಒಂದೇ.

ನಮ್ಮ ದೇಶದ ವರ್ತಮಾನ ಪರಿಸ್ಥಿತಿಯನ್ನು ನೋಡುವುದಾದರೆ, ಅದು ಬಹಳ ಶೋಚನೀಯವಾಗಿದೆ. ೧೯೫೫ರಲ್ಲಿ ಜ್ವರ ಸಂಬಂಧಿರೋಗ, ವಾಂತಿಬೇಧಿ ಮೊದಲಾದುವುಗಳಿಂದ, ೪೫,೬೧೪ ಜನರು ಮಲೇರಿಯಾದಿಂದ ೧,೧೯,೨೩೩ ಜನರು ಮತ್ತು ಕ್ಷಯರೋಗದಿಂದ ೧೧,೪೯೬ ಜನರು ಕಾಲನ ಬಾಯಿಗೆ ತುತ್ತಾಗಿದ್ದಾರೆ. ನಿಯಂತ್ರಣದಲ್ಲಿ ತರಬಹುದಾದ ಈ ಕಾಯಿಲೆಗಳಿಂದ ಸುಮಾರು ಎರಡೂವರೆ ಲಕ್ಷ ಜನರು ತಮ್ಮ ಜೀವವನ್ನು ಕಳೆದುಕೊಳ್ಳಬೇಕಾಯಿತು. ಈ ಸಂಖ್ಯೆಯ ಶೇಕಡ ಮರಣವನ್ನು ಬಿಟ್ಟು ಉಳಿದ ಮರಣಗಳದ್ದಾಗಿದೆ. ಅದನ್ನೂ ಸೇರಿಸಿದರೆ, ಸಂಖ್ಯೆಯು ಬೆಳೆಯುತ್ತ ಹೋಗುವುದು.

ಈ ಸಂದರ್ಭದಲ್ಲಿ ಇಂಗ್ಲೆಂಡ್ ಮತ್ತು ಭಾರತದ ತುಲನಾತ್ಮಕ ದೃಶ್ಯವೊಂದನ್ನು ನೋಡಬಹುದು ಭಾರತದಲ್ಲಿ ಪ್ರತಿ ಮೂರು ಸಾವಿರ ಜನರಿಗೊಂದು ಚಿಕಿತ್ಸಾಲಯ, ೧ ಸಾವಿರ ಜನರಿಗೊಬ್ಬ ವೈದ್ಯ, ೪೩ ಸಾವಿರ ಜನರಿಗೊಂದು ಆರೈಕೆಗಾರ (ನರ್ಸ್) ಮತ್ತು, ೬೬ ಸಾವಿರಕ್ಕೊಬ್ಬ ದಾದಿಯಿದ್ದರೆ, ಅಷ್ಟೇ ಜನರಿಗೆ ಕ್ರಮವಾಗಿ, ೧೪೧ ಆಸ್ಪತ್ರೆ, ೧ ಸಾವಿರ ವೈದ್ಯರು, ೩೦೦ ಆರೈಕೆಗಾರ್ತಿಯರು ಮತ್ತು ೬೮೮ ದಾದಿಯರಿರುತ್ತಾರೆ! ಯೋಜನೆಗಳಿಂದ ಜನತಾ ಜೀವನವು ಎತ್ತರಿಸಲ್ಪಡುವುದೆಂದು ಯಾವಾಗಲೂ ಅಡಿಕೊಳ್ಳುವವರು ಈ ಅಂಕೆ ಸಂಖ್ಯೆಗಳನ್ನು ಅವಶ್ಯ ಗಮನಿಸಬೇಕು ಹಣವನ್ನು ಹೆಚ್ಚು ಹೆಚ್ಚಾಗಿ ಖರ್ಚುಮಾಡಿದೊಡನೆಯೇ ಜೀವನ ಮಟ್ಟ ಉನ್ನತವಾಯಿತೆಂದು ನಾವು ತಪ್ಪು ತಿಳಿಯುತ್ತೇವೆ. ಆದರೆ, ರಾಷ್ಟ್ರೀಯ ಧನವ್ಯಯದ ಸುಫಲವನ್ನು ಯಾರೂ ಪಡೆಯದೆ ಹೋದರೆ, ಅಂತಹ ವ್ಯಯ ನೀರಿಗೆ ಸುರಿದ ಹಣವಲ್ಲವೆ? ಜನತೆಯ ಆರೋಗ್ಯ ಸಂರಕ್ಷಣೆಯೂ ದೇಶದ ಸಮೃದ್ಧತೆಯ ಒಂದು ದ್ಯೋತಕ. ಈ ದೃಷ್ಟಿಕೋಣದಿಂದ ನಾವು ಅಸಂಖ್ಯ ಜನರ ಜೀವನ ರಕ್ಷಣೋಪಾಯವನ್ನು ಕುರಿತು ವಿಚಾರಿಸುವುದು ಅಗತ್ಯವಿದೆ. ನಾವು ಕೆಳಗೆ ಸೂಚಿತವಾದ ಕೆಲವು ಸೂಚನೆಗಳನ್ನು ಅವಶ್ಯವಾಗಿ ಕಾರ್ಯರೂಪಕ್ಕೆ ತರುವಂತೆ ಪ್ರಯತ್ನಿಸಿ, ಅದರಲ್ಲಿ ಜಯಶೀಲರಾಗಬೇಕು

೧. ವ್ಯಕ್ತಿಗತ ಆರ್ಥಿಕ ಸಾಧನೆಗಳನ್ನು ನೋಡಬೇಕೇ ಎಲ್ಲರಿಗೂ ಶಾಸ್ತ್ರೀಯ ಚಿಕಿತ್ಸೆ ಕೊಡುವುದು.

೨. ವಾಸ್ತವಿಕ ಆರೋಗ್ಯವನ್ನು ಒದಗಿಸುವ ಉಪಾಯಗಳನ್ನು ಗ್ರಹಿಸುವುದು.

೩. ವೈದ್ಯ ಶಿಕ್ಷಣವನ್ನು, ಆ ಬಗ್ಗೆ ಸಂಶೋಧನೆಗಳನ್ನು ಹೆಚ್ಚಿಸಿ ಪ್ರಚಾರ ಮಾಡುವುದು.

೪. ಜನರಿಗೆ ಶುದ್ಧ ನೀರಿನ ಪೂರೈಕೆ ಯಾಗುವಂತೆ ಸೂಕ್ತ ಕ್ರಮಗಳನ್ನು ಕೈಕೊಳ್ಳುವುದು.

೫. ಸ್ವಚ್ಛತೆಯ ಯೋಗ್ಯ ವ್ಯವಸ್ಥೆ ಮಾಡುವುದು

೬. ಮನೆಗಳ ಶುಚಿತ್ವದತ್ತ ಗಮನ ಹರಿಸುವುದು.

೭. ಹೆಸರು ತುಂಬಿದ ವೈದ್ಯಾನು, ಉದ್ಯಾನಗಳ ನಿರ್ಮಾಣವೆಸಗುವುದು.

೮. ಶಾಲೆಯಲ್ಲಿ ಅಭ್ಯಸಿಸುವ ಮಕ್ಕಳಿಗೆ ಮತ್ತು ಗರ್ಭವತಿಯರಾದ ಸ್ತ್ರೀಯರಿಗೆ ಉಚಿತ ಕ್ಷೀರವನ್ನು ಸರಬರಾಜುಮಾಡುವುದು.

೯. ಶಾಲಾ ವಿದ್ಯಾರ್ಥಿಗಳು, ಮಜೂರರು ಮತ್ತು ರೈತ ಜನರ ಆರೋಗ್ಯವನ್ನು ಆಗಾಗ ಪರೀಕ್ಷಿಸುವುದು.

(ಇನೇ ಪುಟ ನೋಡಿರಿ)

ಕಾಕಸಸ್ ಪರ್ವತಾರೋಹಣವನ್ನು ಮಾಡಿದ ಶ್ರೀಗಳಾದ ಜಾರ್ಜ್ ಚೇಂಡ್ (ಎಡ) ಮತ್ತು ಕ್ರಿಸ್ಟೋಫರ್ ಬ್ರಾಕರ್ಡ್ (ಬಲ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಕಥಾ ವಿಹಾರ

ಡಾಕ್ಟರರೂ ಪಾಠ ಕಲಿತರು!

ಆದುದೇನೋ ಪರನೋಕಿ ಆದರೆ, ಆದರವರು ವಿದ್ಯಾರ್ಥಿ.

ವೇಗವಾಗಿ ಅಲ್ಲವಾದರೂ, ನಿಧಾನವಾಗಿ ಗಾಳಿಬೀಸುತ್ತಾ ಮಳೆ ಸುರಿಯುತ್ತಿದೆ; ಒಮ್ಮೊಮ್ಮೆ ಮಿಂಚು ತೋರುತ್ತಾ ಗುಡುಗು ಕೇಳಿಸುತ್ತದೆ. ಮಳೆಗಾಲ ಬಂತೆಂದು ಕೂಗಾಡುವ ಕಪ್ಪೆಗಳ ತಾರಸ್ವರ; ಕೀಟಗಳ ಕೂಗಾಟ, ನಾಯಿಗಳ ಚೀರಾಟದ ಹೊರತು ಬೇರೇನೂ ಸ್ವರ ಕೇಳಿಸದು. ಬಾರದ ಮಳೆ ಬಂದ ಸಂತಸದಿಂದ-ಮುಂಜಾವಿಂದ ಸಂಜೆಯವರೆಗೆ ದುಡಿದ ಆಯಾಸದಿಂದ-ಹಳ್ಳಿಗೆ ಹಳ್ಳಿಯೇ ನಿದ್ರಾದೇವಿಯ ವಶವಾಗಿದ್ದಾರೆ.

ಜೂನ್ ತಿಂಗಳ ಮೂರನೇ ವಾರವದು. ದೇವೇಂದ್ರನ ಮುನಿಸೋ—ಎಂಬಂತೆ ಪ್ರಾರಂಭದ ಮಳೆ ಬೀಳುವಾಗಲೇ ಎರಡನೇ ವಾರ ಪ್ರಾರಂಭವಾಗಿತ್ತು. ಆ ಹಳ್ಳಿಯಲ್ಲಾರೂ ನೀರಿನ ಬರಗಾಲದಿಂದ-ಬಿಸಿಲ ಬೇಗೆಯಿಂದ ಅಸು ನೀಗಿಲ್ಲವಾದರೂ, ಬೇರೆ ಭಾಗಗಳಲ್ಲಿನ ನಾವು ನೋವುಗಳ ವರದಿ ಆ ಹಳ್ಳಿಗರ ಮುಗ್ಧ ಹೃದಯಕ್ಕೆ ಬರೆಯನ್ನೆಳೆದಿತ್ತು. ಕಪ್ಪೆಗಳನ್ನು ಆ ಮೇರಿಕಕ್ಕೆ ಕಳುಹಿಸಿದ್ದರಿಂದ ಆವು ಕೂಗಾಡುವುದು ಕಡಮೆಯಾಗಿ ಮಳೆರಾಯನ ಬರೋಣ ನಿಧಾನವಾಗಿದೆ—ಎಂದು ಕೆಲವರು ವಾದಿಸಿದ್ದರೆ, ಬೆಟ್ಟ ಪರ್ವತಗಳಲ್ಲಿನ ಕಾನನಧ್ವಂಸವೂ ಅದಕ್ಕೆ ಬಲವಾದ ಕಾರಣವೆಂದು ಇನ್ನು ಕೆಲವರು ಅಡ್ಡ ಸವಾಲು ಹಾಕಿದ್ದರು. ನೀರಿಲ್ಲದೆ ನೇಜಿ ಒಣಗತೊಡಗಿ, ಭೂಮಿ ಬಿರುಕುಬಿಡಲು ಪ್ರಾರಂಭವಾದಾಗಲಂತೂ ಸುರುವಾಯಿತು ಮಳೆಗಾಲ. ರೈತರ ಕರ್ಮ ಕಾಂಡ ಪ್ರಾರಂಭವಾಯಿತು.

ಆ ರಾತ್ರಿ ನಿದ್ರಿಸದವರೆಂದರೆ, ತಿಮ್ಮಪ್ಪ ಗೌಡ ಮತ್ತು ಆತನ ಸಹಧರ್ಮಿಣಿ ಅಕ್ಕಮ್ಮ.

ನಾಲ್ಕು ವರ್ಷದ ಒಬ್ಬನೇ ಒಬ್ಬ ಮಗ ಚೆನ್ನಪ್ಪ ಜ್ವರದಿಂದ ನರಳುತ್ತಿರಲು ಆ ದಂಪತಿಗಳಿಗೆ ನಿದ್ರೆಯಾದರೂ ಹೇಗೆ ಬಂದೀತು?

ಹಳ್ಳಿಯ ವೈದ್ಯ ಪಂಡಿತರುಗಳ ಕಷಾಯ, ಮಾತ್ರೆಗಳೆಲ್ಲಾ ಆಗಿದ್ದರೂ ಮಗು ಗುಣಮುಖನಾಗದಿರಲು, ಮುಂದೇನು ಮಾಡುವುದೆಂದು ಆ ತಂದೆತಾಯಿಗಳಿಗೆ ಹೊಳೆಯಲಿಲ್ಲ. ನೆರೆಮನೆಯ ದುಗ್ಗಪ್ಪ ಪೂಜಾರಿ ಡಾಕ್ಟರರಲ್ಲಿಗೆ ಹೋಗುವುದೇ ಕಡೆಯ ಉಪಾಯವೆಂದು ಅದೇ ಆಗ ಸಂಜೆ ಸೂಚಿಸಿದ ದಾರಿ ಸರಿಯೇ ಎಂದು ಗೌಡಗೂ ಕಂಡಿತ್ತು. ಆದರೆ....!

ಆತ ಕೇಳಿ ಬಲ್ಲ— ಡಾಕ್ಟರರ ಔಷಧಿ ಹಣದಲ್ಲಿದೆಯೆಂದು ಆದಕ್ಕೇನು ಮಾಡುವದೆಂದೇ ಆತ ಆಲೋಚನೆಗೀಡಾಗಿದ್ದ.

ಕೊನೆಗೆ ಅಕ್ಕಮ್ಮನ ಕೊರಳಲ್ಲಿದ್ದ—ಆಕೆಯ ತಂಡೆ ಮಾಡಿಸಿಕೊಟ್ಟಿದ್ದ—ಒಂದೆಳೆಯ ಚಿನ್ನದ ಹಾರವನ್ನೇ ಹಣಕ್ಕೆ ವಿನಿಯೋಗಿಸಿಕೊಳ್ಳುವುದೆಂದು ಅವರೀರ್ವರೂ ನಿರ್ಣಯಕ್ಕೆ ಬಂದರು.

ಡಾಕ್ಟರರಿರುವುದು ಅಲ್ಲಿಂದ ಹದಿನಾರು ಮೈಲು ದೂರದ ಪೇಟೆಯಲ್ಲಿ. ಮೂರು ಮೈಲು ನಡೆದರೆ ಮತ್ತೆ ಮೋಟಾರಿನಲ್ಲಿ ಪ್ರಯಾಣಿಸುವುದೆಂದು ಗೌಡ ಯೋಜನೆ ಹಾಕಿದ.

— ೨ —

ಗೌಡ ಚೆನ್ನಪ್ಪನೊಂದಿಗೆ ಹರಿಯೂರಿಗೆ ತಲಪುವಾಗ ಗಂಟೆ ಹತ್ತಾಗಿತ್ತು. ಪರಿಚಯಕ್ಕೆಂದು ದುಗ್ಗಪ್ಪ ಪೂಜಾರಿಯೂ ಜತೆಯಲ್ಲೇ ಬಂದಿದ್ದ. ಅವರು ನೇರವಾಗಿ ಡಾಕ್ಟರ್ ಬಿ. ಎಸ್. ಮೋಹನ ರಾಯರಲ್ಲಿಗೇ ತೆರಳಿದರು.

ಹರಿಯೂರಿನಲ್ಲಿ ಡಾಕ್ಟರರೆಂದರೆ ಮೋಹನರಾಯರೊಬ್ಬರೇ. ಅವರೂ ಇತ್ತೀಚೆಗೆ ಹೊಸದಾಗಿ ಡಾಕ್ಟರಿಕೆ ಪಾಸಾಗಿ ಬಂದವರು. ಇನ್ನೂ ಇಪ್ಪತ್ತನಾಲ್ಕರ ತರುಣರು, ತುಂಬಾ ಉತ್ಸಾಹಿಗಳು. ಜನಪ್ರೀತಿ ಗಳಿಸಿದ್ದರು.

ಗೌಡರನ್ನು ಕೂಡಲೇ ಏನು ಬಂದಿರೆಂದು ವಿಚಾರಿಸಿ, ಮಗುವನ್ನು ಪರೀಕ್ಷಿಸಿದರು.

ಜ್ವರ ಕೆಂಡದಂತೆ ಕಾಯುತ್ತಿತ್ತು. ಡಿಗ್ರಿಯಿಟ್ಟು ನೋಡಲಾಗಿ ನೂರಮೂರು ಡಿಗ್ರಿ ತೋರಿಸಿತು.

"ಗೌಡರೇ, ಭಯಪಡಬೇಡಿ; ಮಗು ವಿಗೇನೂ ಆಗದು. ಇಂಜೆಕ್ಷನ್ ಒಂದೆರಡು ಕೊಡಬೇಕಾಗುವುದು. ಒಂದು ಈಗ ಕೊಡುತ್ತೇನೆ. ಔಷಧಿಯೂ ಕೊಡುತ್ತೇನೆ. ನಾಡದು ಮನೆ ನೀವು ಬರಬೇಕಾಗುವುದು."—ಎಂದರು ಡಾಕ್ಟರರು.

"ಆಗಬಹುದು ಸ್ವಾಮಿ; ನಾನು ಬಡವ. ಕೃಪೆಮಾಡಬೇಕು"— ಗೌಡರು ಕುಳಿತಲ್ಲಿಂದ ಒಮ್ಮೆ ಎದ್ದು ಹೇಳಿದರು.

"ನಾನು ಬಲ್ಲೆ; ಔಷಧಿಯ ಬೆಲೆ ಮಾತ್ರ ನೀವು ಕೊಟ್ಟರೆ ಸಾಕು. ನಾನು ಹಾಗೇನೂ ಬಡವರಿಂದ ಹೆಚ್ಚಿಗೆ ವಸೂಲು ಮಾಡುವುದಿಲ್ಲ. ನಾನೂ ಬಡತನದ ಬಾಳಿನಲ್ಲೇ ಬೆಳೆದವ ಗೌಡರೇ."— ನಗು ಮುಖದಿಂದ ನುಡಿದರವರು. ಅವರ ಮಾತು ಸತ್ಯವಾಗಿತ್ತು. ಬಡವರಿಂದ ಸಿಕ್ಕಾಬಟ್ಟೆ ಹಣ ಸುಲಿಯುತ್ತಿರಲಿಲ್ಲವರು. ದೇಶಕ್ಕೆ ತನ್ನಿಂದ ಅಲ್ಪವಾದರೂ ಸೇವೆ ಸಲ್ಲಬೇಕೆಂಬ ಉದ್ದೇಶ ಅವರದಾಗಿತ್ತು. ಆದರೆ ತನ್ನಂತೆ ಎಲ್ಲಾ ವೈದ್ಯರೂ ಹಣದ ಮುಖ ನೋಡದಿರಲಾರರೆಂದೂ ಅವರು ಬಲ್ಲರು.

ಇಂಜೆಕ್ಷನಿಗೆ ಎರಡು ರೂಪಾಯಿ, ಔಷದಿಗೆ ಎಂಟಾಣೆ ಅಂತೂ ಎರಡೂವರೆ ರೂಪ್ಯಾ ಕೊಡಬೇಕಾಗುತ್ತದೆಂದರವರು—ಇಂಜೆಕ್ಷನ್ ಚುಚ್ಚಿದ ಮೇಲೆ. ಗೌಡರು ಔಷಧಿ ತೆಗೆದುಕೊಂಡು ಹಣತೆತ್ತು ಒಂದುದಿನ ಕಡೆದು ಬರುವೆನೆಂದು ನಮಸ್ಕಾರಮಾಡಿ ತೆರಳಿದರು. ಎಲ್ಲಾ ಡಾಕ್ಟರರಂತಲ್ಲವೆಂದು ಗೌಡರಿಗೆ ಹರ್ಷವಾಗಿತ್ತು.

೦೦ ೦೦ ೦೦

ಮೂರನೇ ದಿನ ಗೌಡರು ಬಂದರು. ಮೋಹನ ರಾಯರು ಒಂದು ಅಪರೇಷನ್ ಸಿದ್ಧತೆಯಲ್ಲಿದ್ದರು. ಮಗುವಿಗೊಂದು 'ಸೂಜಿ' ಚುಚ್ಚಿ ಔಷಧಿ ಕುಡಿಯಲು ಕೊಡಲು ಕಂಪೌಂಡರಿಗೆ ಹೇಳಿ ಇನ್ನೊಮ್ಮೆ ಮಗುವಿಗೆ ಇಂಜೆಕ್ಷನ್ ಚುಚ್ಚಿದಲ್ಲಿ ಪೂರ್ತಿ ಗುಣವಾಗುವುದೆಂದು ತಿಳಿಸಿದರು. ಮಗುವಿನ ಜ್ವರ ಕಡಮೆಯಾಗಿ ತುಸು ಹುಷಾರಾಗಿತ್ತು.

ಡಾಕ್ಟರರು ಅಪರೇಷನ್ ಕೋಣೆಗೆ ತೆರಳಿದರು. ಕಂಪೌಂಡರ್ ಔಷಧಿ ತಂದಿತ್ತು ನಡೆದನು. ಗೌಡರು ಮನೆಗೆ ಮರಳಿದರು.

ಮಧ್ಯಾಹ್ನ ನಾಲ್ಕು ಘಂಟೆ. ಒಮ್ಮೆಲೇ ಚೆನ್ನಪ್ಪನಿಗೆ ಜೋರಾಯಿತು. ಗೌಡರು ಗಾಬರಿಯಾದರು. ಕೈಕಾಲು ಶೀತವಾಗಿತ್ತು. ಏನು ಮಾಡುವುದೆಂದು ಯೋಚಿಸುವುದರೊಂದೇ ಆ ಕಂದನ ಪ್ರಾಣ ಪಕ್ಷಿ ಹಾರಿಹೇಗಿತ್ತು.

೦ ೦೦

ಡಾಕ್ಟರರ ಆಲೋಚನಾಗ್ರಸ್ಥರಾದರು. ಗುಣವಾಗುವಾಗಿದ್ದ ಗೌಡರ ಮಗನ ಮರಣ ಇರಿಗೇ ಆಶ್ಚರ್ಯವಾಗಿತ್ತು. ಏನೋ ಯೋಚಿಸಿ ಒಳನಡೆದರು. ಹೌದು, ಅವರಿಗೆರಿವಾಯಿತು. ಕಂಪೌಂಡರನನ್ನು ಕೆಲ ದೃಢವಾಯಿತು. ಮಮ್ಮಲ ಮರಿದರು. ಆದರೇನು! ಕಾರ್ಯ ಮಿಯೋಗಿತ್ತು! ಅಪರೇಷನಿನ ಆ ಗಡಿಬಿಡಿಯಲ್ಲಿ ಗೌಡರಿಗೆ ಕೊಟ್ಟ ಔಷಧಿ- ವಿಷವಾನವಾಗಿತ್ತು. ಅವೆರಡೂ ಹತ್ತಿದ್ದರಿಂದ ಕೊಡುವಾಗ ಬದಲಾವಣೆ ಇಂದಿತ್ತು, ಗೌಡರಿಗೆ ಯಾವ ಔಷಧಿ ಕೊಟ್ಟೆಕಾಗಿತ್ತೋ ಅದು ಮೊದಲಿನ ಸೇ ಒಂದು ಬಾಟ್ಲಿ ಪೂರಾ ಮುಗಿದಿ ಎರಡನೇ ಸಲಕ್ಕೆ ಬೇರೆ ಹೊಸ ಬ್ಲ ಒಡೆಯಬೇಕಿತ್ತು. ಆದರೆ ಅದು ಖುದೆ ಹಾಗೆಯೇ ಇದ್ದುದರಿಂದ ಔಷದಲಾವಣೆ ಹೊಂದಿದುದನ್ನು ಕಂಡುದರವರ.!

ಗಾಗೆ ತಿಳಿಸಿದರೆ ಅವರು ನೊಂದುಕೊಳ್ಳೆಂದು ಈ ವಿಷಯ ಅವರಿಬ್ಬರೊಳ್ಳಡಾಕ್ಟರ್, ಕಂಪೌಂಡರ್) ಉಳಿಯಿ ಅದರೆ, ಈ ಘಟನೆ ಮುಂದೆ ಎಲ್ಲಾ ಮಯಕ್ಕೂ ಅವರಿಗೆ ಪಾಠವಾಗಿ ತಮಿಸದಿರಲಿಲ್ಲ. ಒಂದು ನಿಮಿಷದ ಬಿಡಿ—ಅಜಾಗರೂಕತೆ—ಒಂದು ಜೀವ್ಯೇ ಬಲಿಗೊಂಡಿತ್ತು, ತಿಳಿದೂ ತಿಳಿದೇ ಇರುವ ಇಂತಹ ಘಟನೆಗಳು ಅಲ್ಲಲ್ಲಿ ನಡೆಯುವವೋ ಆ ವಿಧಿರಾಯನೇ!!

ಕೆ. ವ. ಕೇಶವ, ದೇಲಂಪಾಡಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಬಿಲ್ಲವರ ಆಸ್ತಿ
ಎಸ್. ಆರ್.
ಬೀಡಿಗಳು
TRADE SR MARK
REGD.
S.R.BEEDI WORKS, UDIPI, S.K.

ಶಿವರಾಮ ಕಾರಂತರ

ಪುಸ್ತಕಗಳು

ನೇಗರ ನಾಕಾವರಕ	3=00
ಪುನರ್ತ	2=50
ಮೂಕಜ್ಜಿ	1=00
ನಮ್ಮ ತ್ತಲಿನ ಕಡಲು.	1=75
ಪುಣ್ಯ ಇಂದು ನಾಳೆ	3=00
ಸ್ಪ ,,	2=50
ಕೆಲ್ಲಿನೊಡನೆ ಮತುಕತೆಗಳು	1=50
ಬೆಳ್ಳಿದ ಉರುಳಲ್ಲಿ	7=50

ಭಾರತ ಪುಸ್ತಕ ಭಂಡಾರ, ಉಡುಪಿ.

ವಿಜ್ಞಾನ ವಿಸ್ಮಯ

ವಾಮನ ಪರಮಾಣುವಿನ ತ್ರಿವಿಕ್ರಮಾವತಾರ!

ಸಸ್ಯಗಳನ್ನು ಹೊಂದಿಕೊಳ್ಳಬೆಯೇ ಆಹಾರವನ್ನು ಉತ್ಪಾದಿಸಬಹುದು!

ಗತಿಸೂಚಕ ಪರಮಾಣುಗಳು ಅಥವಾ ರೇಡಿಯೊ ಐಸೋಟೋಪ್ಸ್ ಎಂದು ಕರೆಯುವ ಪರಮಾಣು ವಸ್ತುಗಳಿಂದ ನಡೆಸುತ್ತಿರುವ ಸಂಶೋಧನೆಗಳ ಪರಿಣಾಮ ಸ್ವರೂಪವಾಗಿ ವ್ಯವಸಾಯದ ವಿಧಾನಗಳನ್ನು ಉತ್ತಮೀಕರಿಸುವ ಹೊಸ ಅಮೂಲ್ಯ ಮಾರ್ಗಗಳು ಸಂತಶವಾಗಿ ಕಂಡುಬರುತ್ತವೆ.

ನ್ಯೂಕ್ಲಿಯರ್ ರೇಡಿಯೇಷನ್ನಿಗೆ ಒಳಪಡಿಸುವ ಮೂಲಕ ರೇಡಿಯೋ ಚಟುವಟಿಕೆಯನ್ನು ಪಡೆದ ಸಾಮಾನ್ಯ ಪರಮಾಣುಗಳೇ ರೇಡಿಯೋ ಐಸೊಟೋಪ್ಸ್ ಗಳು. ಗೈಗರ್ ಕೌಂಟರ್ ಪತ್ತೆ ಮಾಡಬಲ್ಲ ರೇಡಿಯೊ ಜಾಲಕ ಕಿಡಿಗಳನ್ನು ಈ ರೇಡಿಯೋ ಪರಮಾಣುಗಳು ವಿಸರ್ಜಿಸುತ್ತವೆ. ಸಸ್ಯದಲ್ಲಿ ಅಥವಾ ಪ್ರಾಣಿಯಲ್ಲಿ ಚಲಿಸುವ ಈ ಪರಮಾಣುಗಳ ಗತಿಯನ್ನು ಗುರುತಿಸಬಹುದಾದುದರಿಂದ ಇವುಗಳನ್ನು ಗತಿಸೂಚಕ ಪರಮಾಣುಗಳು ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

ಇಂತಹ ಪರಮಾಣುಗಳ ಅನುಸರಣೆಯ ಫಲವಾಗಿ, ಬೆಳೆಗಳ ಉತ್ಪನ್ನವನ್ನು ಹೆಚ್ಚಿಸಲು ಯಾವಾಗ ಎಲ್ಲಿ ಗೊಬ್ಬರಗಳನ್ನು ಬಹು ಪರಿಣಾಮಕಾರಕವಾಗಿ ಉಪಯೋಗಿಸಬಹುದೆಂಬುದನ್ನು ಪತ್ತೆಹಚ್ಚಲು ವಿಜ್ಞಾನಿಗಳು ಸಮರ್ಥರಾಗಿದ್ದಾರೆ.

ಸಸ್ಯ ಜೀವನ, ಸಸ್ಯರೋಗಗಳು, ಬೆಳೆಗಳನ್ನು ನಾಶಮಾಡುವ ಸರಾವಲಂಬಿ ಕೀಟಗಳನ್ನು ಕುರಿತು ಅನೇಕ ಹೊಸ ಸಂಗತಿಗಳನ್ನು ವಿಜ್ಞಾನಿಗಳು ಅರಿತುಕೊಂಡಿದ್ದಾರೆ. ಈ ಹಿಂದಿನ ವೈಜ್ಞಾನಿಕ ಪ್ರಯೋಗಗಳು ಅಸಮರ್ಪಕವೆಂದು ಸಿದ್ಧಾಂತಿಸಲ್ಪಟ್ಟಿದ್ದ ಇತರ ಅನೇಕ ವ್ಯಾವಸಾಯಿಕ ವಿಷಯಗಳಲ್ಲಿ ಅವರು ಅಮೂಲ್ಯ ಸಂಶೋಧನೆಗಳನ್ನು ನಡೆಸಿದ್ದಾರೆ.

ಹೊಗೆಸೊಪ್ಪಿನ ಸಸ್ಯಗಳಿಗೆ ಗೊಬ್ಬರ ಹಾಕುವ ವಿಷಯದಲ್ಲಿ ನಡೆಸಿರುವ ಸಂಶೋಧಕ ಅಧ್ಯಯನವನ್ನು ಗತಿಸೂಚಕ ಪರಮಾಣು ತಂತ್ರಗಳ ಮೌಲ್ಯಕ್ಕೆ ಒಂದು ಉದಾಹರಣೆಯನ್ನಾಗಿ ಕೊಡಬಹುದು.

ಈ ಅಧ್ಯಯನಕ್ಕೆ ಮೊದಲು ಅಮೆರಿಕೆಯ ದಕ್ಷಿಣ ವಿಭಾಗದ ಹೊಗೆಸೊಪ್ಪು ರೈತರು ಸಸ್ಯ ಬೆಳೆವ ಸಮಯದಲ್ಲಿ ಫಾಸ್ಫೇಟ್ ಗೊಬ್ಬರವನ್ನು ಧಾರಾಳವಾಗಿ ಬಳಸಿಕೊಳ್ಳುತ್ತಿದ್ದರು. ಆದರೆ, ಬೆಳೆಯುವ ಕಾಲದಲ್ಲಿ ಮಣ್ಣಿನ ಮೇಲೆ ಹಾಕಲಾಗುವ ಫಾಸ್ಫೇಟ್ ಗೊಬ್ಬರವನ್ನು ಹೊಗೆಸೊಪ್ಪಿನ ಸಸ್ಯಗಳು ಉಪಯೋಗಿಸುವುದಿಲ್ಲವೆಂಬುದನ್ನು ರೇಡಿಯೋ ಜಾಲಕ ಪರಮಾಣುಗಳ ಸಹಾಯದಿಂದ ವಿಜ್ಞಾನಿಗಳು ಸಂಶೋಧಿಸಿರುತ್ತಾರೆ. ಆದುದರಿಂದ ಹೊಗೆಸೊಪ್ಪು ಬೆಳೆಸುವ ರೈತರು ಗೊಬ್ಬರಕ್ಕೆ ಸುರಿಯುತ್ತಿದ್ದ ಸ್ವಲ್ಪ ಹಣವನ್ನು ವರ್ಷಂಪ್ರತಿ ಉಳಿಸಿಕೊಳ್ಳಲು ಸಮರ್ಥರಾಗಿದ್ದಾರೆ.

ಅಲ್ಪ ಪ್ರಮಾಣದ ಖನಿಜಗಳು ಈ ಮೊದಲು ಭಾವಿಸಿರುವುದಕ್ಕಿಂತಲೂ ಅತ್ಯಲ್ಪ ಪ್ರಮಾಣದಲ್ಲಿ ಸಸ್ಯದ ಬೆಳವಣಿಗೆಯ ಮೇಲೆ ಅನೇಕ ವಿಧಾನಗಳಲ್ಲಿ ಬಹು ಪರಿಣಾಮಗಳನ್ನುಂಟುಮಾಡುತ್ತಿವೆಯೆಂದು ಗತಿಸೂಚಕ ಪರಮಾಣುಗಳ ಸಹಾಯದಿಂದ ನಡೆಸಿದ ಇತರ ವ್ಯಾವಸಾಯಿಕ ಪ್ರಯೋಗಗಳು ತೋರಿಸಿಕೊಟ್ಟಿವೆ.

ಕೀಟ ನಾಶಕವಾದ ಡಿ. ಡಿ. ಟಿ. ಯನ್ನು ಸಸ್ಯಗಳನ್ನು ಹಾಳುಮಾಡುವ ಕೆಲವು ಪರೋಪಜೀವಿ ಕೀಟಗಳು ಹೇಗೆ ಎದುರಿಸಿಬದುಕುತ್ತವೆಯೆಂಬುದನ್ನು ಇನ್ನೊಂದು ಪ್ರಯೋಗ ತಿಳಿಸಿದೆ. ಡಿ. ಡಿ. ಟಿ. ಯನ್ನು ನಿರಪಾಯಕಾರಿಯಾದ ನಿರ್ವಿಷದ ವಸ್ತುವನ್ನಾಗಿ ಒಡೆಯುವ ಸಾಮರ್ಥ್ಯವು ಈ ಕೀಟಗಳಿಗಿದೆಯೆಂಬುದನ್ನು ಸಂಶೋಧನೆಯು ತೋರಿಸಿಕೊಟ್ಟಿದೆ. ಹೊಸ ವಸ್ತುಗಳನ್ನು ಡಿ. ಡಿ. ಟಿ ಪುಡಿಯೊಂದಿಗೆ ಮಿಶ್ರಿಸುವುದರಿಂದ, ಅಂತಹ ಕೀಟಗಳನ್ನೂ ನಾಶಮಾಡಬಹುದಾಗಿದೆ.

ಪ್ರತಿವರ್ಷವೂ ಸಸ್ಯರೋಗಗಳಿಂದ ರೈತರು ಬಹಳ ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಈ ನಷ್ಟದಿಂದ ಅವರನ್ನುಳಿಸುವ ನಾನಾ ಬಗೆಯ ಮಾರ್ಗಗಳನ್ನು ಕಂಡು ಹಿಡಿಯುವ ಕಾರ್ಯದಲ್ಲೂ ಪರಮಾಣು ಅಮಿತ ಸೇವೆ ಸಲ್ಲಿಸಿದೆ. ಸಸ್ಯಗಳಿಗೆ ಅಂಟುವ ರೋಗಗಳೆಲ್ಲೆಲ್ಲಾ ಕಾಳು ನೀಡುವ ಧಾನ್ಯಗಳಿಗೆ ಬರುವ ಕಾಂಡದ ತುಕ್ಕು ಅತ್ಯಂತ ಕೆಟ್ಟದಾದುದು. ಒಟ್ಟಿನ ಬೀಜಗಳಿಗೆ ಪರಮಾಣು ರೇಡಿಯೇಶನ್ ಚಿಕಿತ್ಸೆ ನೀಡಿದರೆ, ಈ ಚಿಕಿತ್ಸೆಗೆ ಒಳಗಾಗುವ ಪ್ರತಿಯೊಂದು ಹೊಸ ಕಳೆಯೂ ಈ ಕಾಂಡದ ತುಕ್ಕನ್ನು ಕಡೆಯಬಲ್ಲ ಅಧಿಕ ಸಾಮರ್ಥ್ಯ ಗಳಿಸಿಕೊಳ್ಳುತ್ತ ಹೋಗುತ್ತದೆಂಬುದನ್ನು ಅಮೆರಿಕಾದ ಬ್ರೂಕ್ ಹೇವನ್ನಿನ ಪ್ರಯೋಗಶಾಲೆಯ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಅದರೆ, ಪರಮಾಣೀ ವಿಜ್ಞಾನ ವ್ಯವಸಾಯಕ್ಕೆ ನೀಡಿರುವ ಅತಿ ಮಹತ್ವಪೂರ್ಣ ಅನ್ವಯ ಸಸ್ಯಗಳ ಮತ್ತು ಪ್ರಾಣಿಗಳ ತಳಿ ಅಭಿವೃದ್ಧಿಯ ಕ್ಷೇತ್ರದಲ್ಲಿ ಅನುಕೂಲವಾದ ಹೊಸ ಜಾತಿಗಳು—ಎಂದರೆ, ಸಾಮಾನ್ಯವಾಗಿ ಉತ್ಪನ್ನವನ್ನು ಅಧಿಕಗೊಳಿಸುವ ಹಾಗೂ ಸಸ್ಯ ರೋಗಗಳನ್ನು ನಿರೋಧಿಸುವ ಜಾತಿಗಳು—ನೈಸರ್ಗಿಕವಾಗಿ ಅಭಿವೃದ್ಧಿ ಹೊಂದುವುದು ಮಾತ್ರ ತೀರ ಅಸಂಭವ. ಆದರೂ ಪರಮಾಣು ಶಕ್ತಿಯಿಂದ ಇಂತಹ ತಳಿಗಳನ್ನು ಬೇಗ ಬೇಗನೆ ಅಭಿವೃದ್ಧಿಗೊಳಿಸುವುದು ಸಾಧ್ಯವೆಂದು ಸಂಶೋಧಿಸಲಾಗಿದೆ. ಬ್ರೂಕ್ ಹೇವನ್‌ನಲ್ಲಿ ಜಾತಿಗಳ ವೇಗವನ್ನು ೧೭ ಸಾವಿರದಷ್ಟು ಹೆಚ್ಚಿಸಲಾಗಿದೆ. ಈ ಸಂಶೋಧನೆಯ ಫಲವಾಗಿ, ಗಿಡ್ಡವಾದ ಅದರೆ, ಅಧಿಕ ಉತ್ಪನ್ನವೀಯಬಲ್ಲ ಮೆಕ್ಕೆ ಜೋಳದ ವರ್ಗವನ್ನು ಸಿದ್ಧಪಡಿಸುವ ಭರವಸೆಯೊಗೆ ತೋರಿ ಬರುತ್ತಿದೆ.

ಈ ಗತಿಸೂಚಕ ಪರಮಾಣುಗಳು ಕಿರಣ ಸಂಯೋಗ ಕ್ರಿಯೆಯ ರಹಸ್ಯವನ್ನೂ ಬೇಗನೆ ಬಿಡಿಸಬಹುದೆಂದು ನಂಬಲಾಗಿದೆ. ಸೂರ್ಯನ ಕಿರಣಗಳನ್ನು ಒಳಸಿಕೊಂಡು ಸಸ್ಯಗಳು ಹೇಗೆ ಸಜೀವ ಮಾಲೆಗಳನ್ನು ಸೃಷ್ಟಿಸುತ್ತವೆ ಎಂಬುದೂ ತಿಳಿದು ಬರಬಹುದು. ಕಿರಣಜನ್ಯ ಸಂಯೋಗ ಕ್ರಿಯೆಯ ಅನೇಕ ಹೆಜ್ಜೆಗಳನ್ನು ಈಗಾಗಲೇ ಪ್ರಯೋಗ ಶಾಲೆಯಲ್ಲಿ ಸಂಧಿಸಲಾಗಿದೆ.

ಈ ಸಂಶೋಧನೆಯ ಫಲಸ್ವರೂಪಗಳು, ಮಾನವನು ಸದ್ಯ ಸಸ್ಯಗಳನ್ನು ಅವಲಂಬಿಸಿಕೊಂಡಿದ್ದರೂ ಅವುಗಳಿಗೆ ಹೊಂದಿಕೊಳ್ಳಬೇಕೇ ತನಗೆ ಬೇಕಾದ ಆಹಾರವನ್ನು ಪಡೆಯುವ ಕಾಲ ಸಾಧ್ಯವೆನಿಸಿದೆ ಎಂಬುದಾಗಿ ಅಮೆರಿಕೆಯ ಪರಮಾಣು ಶಕ್ತಿ ಸಮಿತಿಯ ಅಧ್ಯಕ್ಷರು ಅಭಿಪ್ರಾಯಪಟ್ಟಿದ್ದಾರೆ.

ಕ್ಷೇತ್ರ ಮಹಾತ್ಮ್ಯ

ಧಾರ್ಮಿಕ ಭಾವನೆಯಿಂದಲೇ ಭಾರತೀಯ ತತ್ವಶಾಸ್ತ್ರವು ಬೆಳೆದು ಬಂದಿತು!

ತಿರುಪತಿಯ ವೆಂಕಟರಮಣನು ಹಿಂದೂಳುಟುಂಬದ ಸದಸ್ಯನಿದ್ದಾ

ಭಾರತದಲ್ಲಿ ಆಕರ್ಷಕ ಅವಶೇಷವತ್ತು ತತ್ವಶಾಸ್ತ್ರಗಳಿಗೆ ಬೆಳೆದು ಬರುವಂತೆ ಸಾಕಷ್ಟು ಪ್ರೋತ್ಸಾಹವಿತ್ತು. ಭಾರತೀಯ ಪ್ರತಿಭೆಗಳಲ್ಲಿ ಧಾರ್ಮಿಕ ಭಾವನೆಯೇ ಪ್ರಧಾನವಾದುದು. ಭಾರತವು ಸುಪ್ರಸಿದ್ಧವಾದ ವೇದಗಳು ಹುಟ್ಟಿ ಬೆಳೆದು ಬಂದ ನಾಡಾಗಿದೆ. ನಮಗೆ ತಿಳಿದಿರುವಂತೆ ವೈದಿಕ ಯುಗದ ಧಾರ್ಮಿಕ ಅವಶೇಷಗಳು ಸದ್ಯ ಕಾಣಬರುವುದಿಲ್ಲ. ಆಗ ಪೂಜೆಯು ಸಾಂಸ್ಥಿಕ ಮಟ್ಟವನ್ನೂ ಮುಟ್ಟಿರಲಿಲ್ಲ. ಪೂಜಾರ್ಹವಾದ ಯಜ್ಞಗಳೆಲ್ಲವೂ ಯಾಜ್ಞಿಕನ ಇಲ್ಲವೇ ಆತನ ಕುಟುಂಬದ ಬಾಹ್ಯ ಪ್ರಯೋಜನಕ್ಕಾಗಿಯೇ ಇರುತಿದ್ದುವು. ಪ್ರತಿ ಯಜ್ಞವೂ ತನ್ನದೇ ಆದ ಆರಂಭ ಮತ್ತು ಅಂತ್ಯಗಳಿದ್ದು ಸ್ವತಂತ್ರವಾಗಿತ್ತು.

ಬೌದ್ಧ ಮತವು ಅವನತಿಯನ್ನು ಪಡೆದ ನೇಲೆ, ಭಾರತದಲ್ಲಿ ಹಿಂದೂ ಮತವು ಪ್ರಬಲವಾಗುತ್ತ ಬೆಳೆಯಿತು. ಹಲವಾರು ಧಾರ್ಮಿಕಗುರುಗಳು ಕಾಣಿಸಿಕೊಂಡು ಹಿಂದುಗಳ ಭಾವನೆಯನ್ನು ಸರಿಶುದ್ಧಗೊಳಿಸಿದರು. ಹಿಂದುಗಳ ಉನ್ನತಿಯ ಕಾಲದಲ್ಲಿ ಅನೇಕಾನೇಕ ಸುಂದರವಾದ ದೇವಾಲಯಗಳು ಕಟ್ಟಲ್ಪಟ್ಟುವು. ದೇವಂನ್ನು ಪೂಜಿಸಬೇಕೆಂಬ ಇಚ್ಛೆಯಿರುವ ಜನರೆಲ್ಲರೂ ಒಂದು ಸೇರಿ, ಭಾರತದಲ್ಲಿ ತುಂಬ ದೇವಾಲಯಗಳನ್ನು ನಿರ್ಮಿಸತೊಡಗಿದರು. ಹಿಂದುಗಳ ದೈವ ಭಕ್ತಿಯು ಅವರ ನಾಡಿನಾಡಿಗಳಲ್ಲೂ ಹರಿದುದರಿಂದ ಅನೇಕಾನೇಕ ಬಗೆಯ ಬಗೆಯ ಮಂದಿರಗಳು ನಿರ್ಮಿತವಾದುವಲ್ಲದೇ ಅವುಗಳಿಗೆ ಕೋಟೆ ಗಟ್ಟಲೆ ಬೆಲೆಬಾಳುವ ಉಂಬಳಿಗಳೂ ದೊರೆತುವು. ಈ ಕಾಲದಲ್ಲಿಯೇ ಭಾರತದಲ್ಲಿ ಶಿಲ್ಪಕಲೆ ಮತ್ತು ಕೆತ್ತನೆಯ ಕೆಲಸವು ಉನ್ನತಿಯ ಅಗ್ರ ಭಾಗವನ್ನು ತಲಪಿತು.

ಹಿಂದೂಗಳ ಶಿಲ್ಪಕಲೆಯು ಅದ್ಭುತವೂ ರಮಣೀಯವೂ ಆಗಿದೆ. ಬಂಡೆಕಲ್ಲುಗಳನ್ನೂ ಕೆತ್ತಿ ಮೂರ್ತಿ, ಸ್ತಂಭ, ಗುಡಿಗೋಪುರ, ಮಂಟಪಾದಿಗಳನ್ನಾಗಿ ಪರಿವರ್ತಿಸಿದ ಅಪಾರ ಶಕ್ತಿಪ್ರತಿಭಾ ಸಂಪನ್ನರಾದ ಶಿಲ್ಪಿಗಳಾದ ನಮ್ಮ ಪೂರ್ವಜರ ಅಮರಾಕರ್ಷಕ ಕೃತಿಗಳನ್ನು ಕಂಡು ನಾವು ಶಿರವಾಗಬೇಡವೆ? ನಮ್ಮ ಭಾರತದಲ್ಲಿ ಕಂಡು ಬರುವಂತಹ ಶಿಲ್ಪ ಕಲೆಯು ಪ್ರಪಂಚದ ಬೇರಾವ ದೇಶದಲ್ಲಾದೂ ಇದೆಯೆ? ಇಂತಹ ಸರ್ವ ಶಿಲ್ಪ ಗುರುವೆನಿಸುವ ಅಮರ ಕೃತಿಯು ರಚಿತವಾಗುವುದಕ್ಕೆ ನಮ್ಮವರ ಧಾರ್ಮಿಕ ಭಾವನೆಯೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ

ತಿರುಪತಿಯ ವೆಂಕಟರಮಣ ದೇವಾಲಯವು ಹಿಂದುಗಳಿಗೆ ಪರಮ ಪವಿತ್ರವಾಗಿದೆ. ನಮ್ಮ ದೇಶದ ಮೂಲೆ ಮೂಲೆಯಲ್ಲಿರುವ ಹಿಂದೂ ಗೃಹಸ್ಥನ ಮನೆಯ ಮೇಲೂ ಪರಮಾತ್ಮನ ಕೈವಾಕಟಾಕ್ಷವು ಹರಿದಿದೆ, ದುಃಖಿತರಿಗೂ ಪೀಡಿತರಿಗೂ ಆತನೇ ಮೋಕ್ಷದಾತಾರ ನಮ್ಮನ್ನು ಸರಿದಾರಿ ತಪ್ಪದಂತೆ ಮುನ್ನಡೆಸುವ ಮಾರ್ಗದರ್ಶಕ; ಸರಿಯಾದ ಮಾರ್ಗವನ್ನು ನಮಗೆ ತೋರಿಸುವ ದಾರಿದೀವಿಗೆ; ಕಷ್ಟ ಕಾರ್ಪಣ್ಯಗಳಲ್ಲಿ ನಮ್ಮ ಕೈಬಿಡದೆ ಮುಂದೆ ಕರೆದುಕೊಂಡು ಹೋಗುವಾತ. ಎಂತಲೇ ಪ್ರತಿನಿತ್ಯವೂ ಸಾವಿರಾರು ಜನರು ಬಂದು ಈತನ ದರ್ಶನ ಪಡೆದು ಕೃತಾರ್ಥರಾಗಿ ತೆರಳುತ್ತಾರೆ. ತಿರುಪತಿಯ ಏಳು ಮೈಲುದ್ದದ ಗುಡ್ಡದ ದಾರಿಯನ್ನು ಬರೆಗಾಲಿನಿಂದ ಯಾತ್ರಾರ್ಥಿಗಳು ನಡೆಯುತ್ತಾರೆ. ಭಕ್ತಿಗೆ ಮಿತಿಯೆಂಬುದಿರುವುದಿಲ್ಲ. ಭಕ್ತರು ತಮ್ಮನ್ನೇ ಭಗವಂತನಿಗ

(೧೦ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಸುಗಿಕೇಟೆಡ್

ಸ್ಮರಣಿ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 3—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ದೇಶ ಪರಿಚಯ

ಮಧ್ಯಪೂರ್ವದ ಬಿರುಕಿಗೆ ಈಜಿಪ್ತವೇ ಮೂಲ ಕಾರಣ

ವಿಶಾಲ ದೇಶವಾಗಿದ್ದರೂ ನದಿಯ ದಂಡೆಯಲ್ಲಿಯೇ ಹೆಚ್ಚಿನಜನರಿದ್ದಾರೆ

ಸಂಯುಕ್ತ ಅರಬ ಪ್ರಜಾರಾಜ್ಯದ ಒಂದು ಭಾಗವಾದ ಈಜಿಪ್ತವು ಹಿಂದೊಂದು ರಾಜ್ಯವೇ ಆಗಿತ್ತು. ಇದರ ವಿಸ್ತೀರ್ಣವು ೩,೮೯,೧೧೮ ಚದರ ಮೈಲಿಗಳಷ್ಟಿದ್ದರೂ ಜನ ಸಂಖ್ಯೆಯು ಕೇವಲ ೨,೩೪,೧೦೦೦೦.

ವಿಸ್ತೀರ್ಣದಲ್ಲಿ ಅಮೆರಿಕೆಯ ಟೆಕ್ಸಾಸ್ ಮತ್ತು ನ್ಯೂ ಮೆಕ್ಸಿಕೊಗಳ ಒಟ್ಟಿನಷ್ಟು ವಿಸ್ತಾರವಿದ್ದರೂ, ಈಜಿಪ್ತದ ಬಹು ಭಾಗವು ನಿರುಪಯೋಗಿ ಮತ್ತು ಜನವಾಸಕ್ಕೆ ಅನುಪಯುಕ್ತವಾಗಿದೆ. ಅರಬ ರಾಷ್ಟ್ರಗಳಲ್ಲೆಲ್ಲಾ ಅತ್ಯಧಿಕ ಜನಸಂಖ್ಯೆಯಿರುವ ರಾಜ್ಯವಾದರೂ ಇಲ್ಲಿನ ಜನರು ದಕ್ಷಿಣದಿಂದ ಉತ್ತರಕ್ಕೆ ಹರಿಯುವ ನೀಲನದಿಯ ದಂಡೆಯ ಹಾಗೂ ಮುಖಜ ಭೂಮಿಯ ಸುಮಾರು ೧೪ ಸಾವಿರ ಚದರ ಮೈಲುಗಳಲ್ಲಿಯೇ ಹೆಚ್ಚಾಗಿ ನೆಲೆಯೂರಿರುತ್ತಾರೆ. ಈ ಪ್ರದೇಶದ ಜನಸಾಂದ್ರತೆಯು ಚದರ ಮೈಲಿಗೆ ೭೭೨ ಇದ್ದು, ಇದು ಪ್ರಪಂಚದ ಜನಸಾಂದ್ರ ಪ್ರದೇಶಗಳಲ್ಲಿ ಒಂದಾಗಿದೆ.

ಈಜಿಪ್ತನ ಬಹುಸಂಖ್ಯೆಯ ಜನರು ಚಿಕ್ಕ ಬೇಸಾಯಗಾರರು. ಇಲ್ಲವೇ ಪಾಲಾಗಿ ಬೆಳೆ ಬೆಳೆಯುವವರು. ಇವರನ್ನು ಅರಬ್ಬೀ ಭಾಷೆಯಲ್ಲಿ ಫೆಲ್ಲಹೀನ್ ಎಂದು ಕರೆಯುತ್ತಾರೆ. ಜನಸಂಖ್ಯೆಯಲ್ಲಿ ಸೇಕಡಾ ೭೪ರಷ್ಟು ನಿರಕ್ಷರಕ್ಷರರಾಗಿದ್ದಾರೆ. ವರ್ತಮಾನ ಪತ್ರಿಕೆಗಳನ್ನು ಕೊಳ್ಳುವ ಜನರಿಗಿಂತ (೫,೫೫,೦೦೦) ಆಕಾಶವಾಣಿ (ರೇಡಿಯೋ)ಯನ್ನು ಕೊಂಡುಕೊಳ್ಳುವವರ ಸಂಖ್ಯೆ (೮,೫೦,೦೦೦) ಅಧಿಕವಾಗಿದೆ. ದೇಶವು ವ್ಯಾವಸಾಯಿಕೋತ್ಪನ್ನಗಳನ್ನು—ಮುಖ್ಯವಾಗಿ ಹತ್ತಿಯನ್ನು—ನಿರ್ಯಾತವಾಗುತ್ತದೆ. ಹತ್ತಿಯನ್ನು ಉತ್ಪಾದಿಸುವ ರಾಷ್ಟ್ರಗಳಲ್ಲಿ ಈಜಿಪ್ತವು ಆರನೆಯ ಸ್ಥಾನವನ್ನು ಪಡೆಯುತ್ತದೆ.

ಈಜಿಪ್ತದಲ್ಲಿ ೧೮೮೨ರಲ್ಲಿ ಬ್ರಿಟಿಷರು ನೆಲೆಯೂರಿದರು. ಸಾಮಾನ್ಯ ಸ್ವಾತಂತ್ರ್ಯವು ೧೯೨೩ರಲ್ಲಿಯೇ ಕೊಟ್ಟಿದ್ದರೂ, ಅರಸ ಫಿರೂಕರನ್ನು ದಬ್ಬಿ ಶ್ರೀ ಗಮಾಲ್ ಅಬ್ದುಲ್ ನಸ್ಸೇರರ ನಾಯಕತನದಲ್ಲಿ ಪ್ರಜಾರಾಜ್ಯ ಸ್ಥಾಪಿತವಾದ ೧೯೫೨ರ ವರೆಗೂ ಬ್ರಿಟಿಷ ಸೇನೆಯು ಸಂಪೂರ್ಣವಾಗಿ ಅಲ್ಲಿಂದ ಕಾಲ್ಕಿಗೆಯಲಿಲ್ಲ. ಅಮೆರಿಕೆಯ ಸಂಯುಕ್ತ ರಾಷ್ಟ್ರಗಳು ಈಜಿಪ್ತದ ಅಧ್ಯಕ್ಷ ನಸ್ಸೇರರಿಗೆ ಯುದ್ಧೋಪಕರಣಗಳನ್ನು ವಿಕ್ರಯಿಸಲು ನಿರಾಕರಿಸಿದಾಗ, ಶ್ರೀ ನಸ್ಸೇರರು ಪೂರ್ವ ಯೂರೋಪಿನಿಂದ ಅವನ್ನು ತಂದುಕೊಂಡರು.

ಅಧ್ಯಕ್ಷ ನಸ್ಸೇರರು ೧೯೫೬ರಲ್ಲಿ ಸುಯೇಜ ಕಾಲುವೆಯ ಕಾರ್ಯಾಚರಣೆಯನ್ನು ತೆಗೆದುಕೊಂಡರು. ಆ ಕೂಡಲೇ ಇಸ್ರಾಯೇಲ್, ಬ್ರಿಟನ್ ಮತ್ತು ಫ್ರಾನ್ಸ್ ಈಜಿಪ್ತವನ್ನು ಆಕ್ರಮಿಸಿದುವು. ರಶ್ಯ, ಅಮೆರಿಕೆ, ಭಾರತ ಮೊದಲಾದ ರಾಷ್ಟ್ರಗಳು ಯುಕ್ತರಾಷ್ಟ್ರ ಸಂಘದಲ್ಲಿ ಈ ಬಗ್ಗೆ ಅನ್ಯ ಸೈನ್ಯವನ್ನು ಹಿಂತೆಗೆಯಬೇಕೆಂಬುದಾಗಿ ಎಚ್ಚರಿಸಿದುವು. ಹಾಗೆಯೇ ಮುಂದೆ ಆಯಿತು. ಈ ನಡುವೆ ಅಧ್ಯಕ್ಷ ನಸ್ಸೇರರು ಮಾತ್ರ ಬೆಂಕಿಯಲ್ಲಿ ಕಾದ ಸುತ್ತಳಿ ಬಂಗಾರದಂತಾಗಿ ಅರಬ ಕ್ಷೇತ್ರದಲ್ಲಿ ಒಬ್ಬ ರಾಷ್ಟ್ರೀಯ ನಾಯಕರಾಗಿ ಪರಿಣಮಿಸಿದರು.

ಈ ಘಟನೆಯಿಂದ ನಸ್ಸೇರರು ಜನಪ್ರೀತರಾದುದಲ್ಲದೇ ಮುಂದೆ, ಅವರ ಕಿರೀಟಕ್ಕೆ ನವಿಲುಗರಿಯಿಡುವ ಘಟನೆಗೂ ನಾಂದಿಯಾಯಿತು. ಕಳೆದ ಫೆಬ್ರವರಿ ತಿಂಗಳಲ್ಲಿ ಈಜಿಪ್ತ ಮತ್ತು ಸಿರಿಯಾಗಳು—ಒಂದರಿನ್ನೊಂದು ದೂರವಿದ್ದರೂ—ಬಂದು ಸೇರಿ, ಸಂಯುಕ್ತ ಅರಬ ಪ್ರಜಾರಾಜ್ಯವಾಗಿ ಪರಿಣಾಮ ಹೊಂದುವುದಕ್ಕೆ ಸಿರಿಯಾನರಲ್ಲಿ ನಸ್ಸೇರರ ಅಪಾರ ಶಕ್ತಿ ಬುದ್ಧಿಜಾಣತನಗಳ ಬಗ್ಗೆ ಇದ್ದ ಅಭಿಮಾನಗಳೇ ಕಾರಣವೆನ್ನಬಹುದು.

ಇಂದು ಶ್ರೀ ನಸ್ಸೇರರು ಅರಬ ರಾಷ್ಟ್ರೀಯತೆಯ ಪ್ರತೀಕವೆಂಬ ಸ್ಥಾನ ಗೌರವನ್ನು ಪಡೆಯುತಿದ್ದಾರೆ. ಯುಗೊಸ್ಲಾವಿಯಾದ ಶ್ರೀ ಮಾರ್ಶಲ್ ಟಿಟೋರವರೊಡನೆ ಸಮೀಪ ಸಂಬಂಧವಿಟ್ಟುಕೊಂಡಿದ್ದರೂ ಅವರು ಸೋವಿಯೆಟ್ ರಶ್ಯದಿಂದ ಪ್ರತ್ಯೇಕವಾಗಿರಬಯಸುತ್ತಾರೆ. ಆದರೆ, ಸಂಯುಕ್ತ ಅರಬ ರಾಷ್ಟ್ರದ ಪ್ರಚಾರವಾದರೊ ಮಧ್ಯಪೂರ್ವದಲ್ಲಿನ ಪಾಶ್ಚಾತ್ಯ ನೀತಿಯನ್ನು ಸಂಪೂರ್ಣವಾಗಿ ನಿರೋಧಿಸುವ ಭಾವನೆಯಿಂದ ಕೂಡಿದೆ.

(ಮುಂದಿನ ಚಾರ: ಸಿರಿಯಾ.)

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಮ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ- ಐದಾಣೆ ಮಾತ್ರ. ಟ. ಖ. ಪ್ರತ್ಯೇಕ.

ನವಯುಗ ಪ್ರೆಸ್, ಉಡುಪಿ.

ಸಾಹಿತ್ಯ ಸಮೀಕ್ಷೆ

ಪ್ರತಿಭೆಯಿಂದ ಹೊರಬರುವ ಕೃತಿಗಳಿಗೆ ಮುಪ್ಪೆಂಬುದಿಲ್ಲ.

ಅವು ತಮ್ಮ ಹಳೆಯ ಪೊರೆಯನ್ನು ಕಳಚಿ ಮತ್ತೆ ಹೊಸ ಹೊಸ ಪೊರೆ ಧರಿಸುತ್ತವೆ.

ಕಾಳಿದಾಸನು ಮಹಾಭಾರತದಲ್ಲಿನ ಶಾಕುಂತಲದ ಕಥೆಯನ್ನು ಎತ್ತಿಕೊಂಡು ನಾಟಕ ಬರೆದಿದ್ದಾನೆ. ಮಹಾಭಾರತದಲ್ಲಿಯ ಶಾಕುಂತಲದ ಕಥೆಯ ರೀತಿ ಆಖ್ಯಾನದ ರೀತಿ. ಕಾಳಿದಾಸನ ಕಥೆ ನಾಟಕಕ್ಕೆ ಅನುಕೂಲವಾಗಿ ವಿಸ್ತಾರಗೊಂಡಿದೆ. ಅದರೊಳಗಿನ ಒಂದೊಂದು ಘಟನೆಯೂ ಕಾಲಿವಾಸನದೇ, ಉತ್ತಮ ದಾಂಪತ್ಯ ಧರ್ಮ, ತಪಸ್ವಿಗಳ ಆಶ್ರಯದ ಸಂತತಿ, ಈ ಆದರ್ಶದತ್ತ ಸಮಾಜದ ಮನವೊಲಿಸುವ ಧೋರಣೆ ಕಾಳಿದಾಸನಲ್ಲಿ ಕಾಣುತ್ತದೆ. ಮೊದಲ ಮೂರು ಅಂಕಗಳಲ್ಲಿ ದುಷ್ಯಂತನ ಮನದಲ್ಲಿ ಶಕುಂತಲೆಯ ವಿಷಯದಲ್ಲಿ ಬೆಳೆದ ದೈವಿಕ ಪ್ರೇಮ ನಾಟಕೀಯವಾಗಿ ವರ್ಣಿತವಾಗಿದೆ. ನಾಲ್ಕನೆಯ ಅಂಕದಲ್ಲಿ ಕಣ್ವನಲ್ಲಿ ಕಾಣುವ ವಾತ್ಸಲ್ಯ ಮಹಾವಾತ್ಸಲ್ಯ. ಅವನ ಕರುಣೆ ಸಾಮಾನ್ಯ ಕೌಟುಂಬಿಕರ ಕರುಣೆಯಲ್ಲ. ಅದು ತನ್ನದೇ ಆದ ಅಳದಿಂದ ಬಂದು ತನ್ನದೇ ಆದ ಎತ್ತರವನ್ನು ಮುಟ್ಟುತ್ತದೆ. ಶಾಕುಂತಲದ ಐದನೆಯ ಅಂಕ ದುರಂತದ ಅಂಚಿಗೆ ಮುಟ್ಟುವ ಸಂದರ್ಭ. ಆಕಾಶದೊಳಗಿನ ಜ್ಯೋತಿ ಶಕುಂತಲೆಯನ್ನು ಎತ್ತಿಕೊಂಡು ಹೋಗಿರದಿದ್ದರೆ ಶಕುಂತಲೆ ಯಾವ ನೀರಿನ ಪಾಲಾಗುತಿದ್ದಳೋ? ಅರಮನೆಯ ಅಂಕದಲ್ಲಿ ದೈವ ತನ್ನ ಮುಖ ಹೊರಳಿಸುತ್ತದೆ. ಕಳೆದ ಉಂಗುರ ರಾಜನ ಕೈಗೆ ಬರುತ್ತದೆ ಮೂರುವರೆ ವರೆಳದ ಜೀವಂತ ಸುಂದರ ಮೂರ್ತಿ ದುಷ್ಯಂತನ ಮೇಲೆ ಮಾಡದ ಪರಿಣಾಮ ಆ ಉಂಗುರ ಮಾಡುತ್ತದೆ.

ಉಂಗುರವು ದುಷ್ಯಂತನ ಪ್ರೇಮದ ಕುರುಹು. ಅದನ್ನು ಕಂಡಾಗ ದುಷ್ಯಂತನ ಹೃದಯದಲ್ಲಿ ನೆಲೆಗೊಂಡ ಶಕುಂತಲೆಯ ಪ್ರೇಮಮಯ ಮೂರ್ತಿ ಆವಿಷ್ಕೃತವಾಗುತ್ತದೆ. ರಕ್ತ ಮಾಂಸದ ಹೆಣ್ಣನ್ನು ದೂಡಿದ ದುಷ್ಯಂತ ಚಿತ್ರದ ಶಕುಂತಲೆಗೆ ಪ್ರಣಿವಾತವಾಡುತ್ತಾನೆ. ಪ್ರಣಯಪೂಜೆ ಮಾಡುತ್ತಾನೆ. ಹಾನುದಿಕರಿಸಿ ಒಂದು ಹೆಣ್ಣನ್ನಲ್ಲ, ಮನೆಯ ವರೆಗೆ ಸಂತತಿಯನ್ನು ತಂದ ವಂಶದ ತಾಯಿಯನ್ನು ತಾನು ಮನೆ ಮುರಕನಾದೆ ಎಂಬ ಸಂಕಟದಿಂದ ದುಷ್ಯಂತ ಮೂರ್ಛಿತನಾಗುತ್ತಾನೆ. ಅದಾಗಲೇ ದೇವಲೋಕದಿಂದ ಮಾತಲಿ ಬಂದು ಅವನನ್ನು ದೇವಲೋಕಕ್ಕೆ ಒಯ್ಯುತ್ತಾನೆ. ಅಲ್ಲಿ ಇಂದ್ರನ ಪಕ್ಷಕಟ್ಟಿ ದುಷ್ಯಂತ ಅಸುರ ಸಂಹಾರ ಮಾಡುತ್ತಾನೆ. ಸೂರ್ಯನಿಗೆ ತಗ್ಗದ ಕತ್ತಲೆಯನ್ನು ಚಂದ್ರನುನಿಂದ ಓಡಿಸಿದಂತೆ ಇಂದ್ರ ಈ ಚಂದ್ರ ವಂಶದ ರಾಜನಿಂದ ತನ್ನ ದೇವ ಕಾರ್ಯ ಸಾಧಿಸುತ್ತಾನೆ. ದುಷ್ಯಂತನು ಇಂದ್ರಕಾರ್ಯ ಸಾಧಿಸುತ್ತಾನೆ. ದುಷ್ಯಂತನು ಇಂದ್ರ ಸಮಸಮಾನನಾಗುತ್ತಾನೆ. ಇಂದ್ರನ ಅರ್ಧ ಸಿಂಹಾಸನದಲ್ಲಿ ವಿರಾಜಮಾನನಾಗುತ್ತಾನೆ. ಅಂಥ ದುಷ್ಯಂತ ಅಧಿಪತಿ ಕಶ್ಯಪರ ಆಶ್ರಮಕ್ಕೆ ಬಂದು ತನ್ನ ಮಗುವನ್ನು ತನ್ನ ಸ್ವತಂತ್ರ ರೀತಿಯಿಂದ ತಿಳಿದುಕೊಂಡು ಈ ಶಾಕುಂತಲೇಯ ಅಂದರೆ ಶಕುಂತಲೆಯ ಮಗ, ದಾಸ್ಯಂತಿ ಅಂದರೆ ದುಷ್ಯಂತನ ಮಗನೂ ಹೌದು—ಎಂದು ಕಂಡುಕೊಳ್ಳುತ್ತಾನೆ. ಚಕ್ರವರ್ತಿತ್ವದ ಕುರುಹುಗಳನ್ನು ಗುರುತಿಸುತ್ತಾನೆ. ವೈಖಾನಸರ ಆಶೀರ್ವಾದ ಫಲಿಸಿ ನಾಟಕ ಮುಕ್ತಾಯಕ್ಕೆ ಬರುತ್ತದೆ. ದೇವತೆಗಳು, ಋಷಿಗಳು, ರಾಜರ್ಷಿಗಳು—ಈ ಮೂವರ ಒಕ್ಕೂಟವಾದರೆ, ಅಸುರರನ್ನು, ಪಿಶಾಚಿಗಳನ್ನು ನಮ್ಮ ಭೂಮಿಯ ವಾತಾವರಣದಿಂದ ದೂರಕ್ಕಟ್ಟಬಹುದು. ಅಂಥ ರಾಜ್ಯದಲ್ಲಿ ದೇವತೆಗಳ ಅವತಾರಕ್ಕೂ ಅನುವಾಗಬಹುದು—ಎಂಬ ತಾನುಕಂಡ ಆದರ್ಶವನ್ನು ತನ್ನ ಕಾಲದ ಸಮಾಜಕ್ಕೆ ಕಾಳಿದಾಸನು ತೋರಿಸಿರುವನಲ್ಲದೆ ತನ್ನ ಕೃತಿ ಸೌಂದರ್ಯದಿಂದ ಇಂದಿನ ಭಾರತದಲ್ಲಿಯೂ ಮುಂದಿನ ಭಾರತದಲ್ಲಿಯೂ ಭೂಮಂಡಲದ ಸಾಂಸ್ಕೃತಿಕ ಇತಿಹಾಸದಲ್ಲಿಯೂ ಅಮರ ಪಟ್ಟವನ್ನು ಗಳಿಸಿದ್ದಾನೆ. ಈ ಕೃತಿ ಕನ್ನಡದಲ್ಲಿಯೂ ಅನೇಕ ಸಲ ಭಾಷಾಂತರಗೊಂಡಿದೆ.

ಪ್ರತಿಭೆಯಿಂದ ಬಂದ ಕೃತಿಗಳಿಗೆ ಮುಪ್ಪಿಲ್ಲ. ಅವು ಮತ್ತೆ ಮತ್ತೆ ತಮ್ಮ ಹಳೆ ಪೊರೆಯನ್ನು ಬಿಗೆದು ಹೊಸ ರೂಪ ತಾಳುತ್ತವೆ. ಇಂಥ ಕೃತಿಯನ್ನು ನಮ್ಮ ನಾಡ ಜನರು ಓದಿ ಅರಗಿಸಿಕೊಂಡು ವಾಲ್ಮೀಕಿ ವ್ಯಾಸರ ಸಾಲಿನ ಈ ಮಹಾಭಾರತೀಯ ಕವಿಯ ಆದರ್ಶವು ಮತ್ತೆ ಭಾರತದಲ್ಲಿ ಸುಪ್ರತಿಷ್ಠಿತವಾಗಿ ಹೊಸ ಜೀವನಕ್ಕೆ ಹೊಸ ಹಾದಿಯನ್ನು ತೆರೆಯುವುದ.

(ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣಾ ವಿಭಾಗದ ಉಪನ್ಯಾಸ ಶಿಬಿರದಲ್ಲಿ ಶ್ರೀ ಡಿ. ರಾ. ಬೇಂದ್ರೆಯವರು ಮಾಡಿದ ಭಾಷಣದ ಸಾರ.)

ನಿಮಗಾಗಿ ನಮ್ಮಲ್ಲಿ ನೂರಾರು ನುರಿತ ಕಾರಕೂನರಿದ್ದಾರೆ!

"ಕೊಪ್ಪೊರೇಶನ್" ಬೇಂಕಿನಲ್ಲಿ ನೀವು ಒಂದು ಹಣಖಾತೆಯನ್ನು ತೆರೆದಿರೆಂದರೆ, ನಮ್ಮ ಬೇಂಕಿನ ಕಾರಕೂನರು ನಿಮ್ಮದೇ ಕಾರಕೂನರಾದಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹಣದ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

(ಮೈಸೂರು ರಾಜ್ಯದಲ್ಲಿ ಪ್ರಧಾನ ಕಚೇರಿಗಳನ್ನಿಟ್ಟುಕೊಂಡಿರುವ ರೆಜ್ಯೊಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಹಳೆಯದು.)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಕಲಾ ನಿಕೇತನ

ಸರ್ವಸಜ್ಜಿತ ಅಜಮೀರದ ರಜಪುತಾನ ಸಂಗ್ರಹಾಲಯ

ಅಲ್ಲಿ ಎಲ್ಲಿಯೂ ಇಲ್ಲದ ಕಲಾ ವಸ್ತುಗಳು ಕೂಡಿಸಿಡಲ್ಪಟ್ಟಿವೆ.

ಅಜಮೀರ ರೈಲ್ವೆ ನಿಲ್ದಾಣಕ್ಕೆ ಅತಿ ಸಮೀಪದ ನಯಾಬಜಾರ್ ಪ್ರದೇಶದಲ್ಲಿ ಕ್ರಿ. ಶ ೧೫೭೨ರಲ್ಲಿ ಅಕ್ಬರ್ ಚಕ್ರವರ್ತಿಯು ನಿರ್ಮಿಸಿದ ಮೊಗಲ್ ಕೋಟೆಯಿರುವುದು. ಈ ಕೋಟೆಯ ಮಧ್ಯ ಸಭಾಂಗಣದಲ್ಲಿ ೧೯೫೮ರ ಅಕ್ಟೋಬರ್ ತಿಂಗಳಲ್ಲಿ ರಜಪುತಾನ ವಸ್ತುಸಂಗ್ರಹಾಲಯವು ವಿಧ್ಯುಕ್ತವಾಗಿ ಪ್ರಾರಂಭವಾಯಿತು.

ಬ್ರಿಟಿಷ್‌ರ ಆಳ್ವಿಕೆಯ ಸಮಯದಲ್ಲಿ ರಾಜಪುತಾನದಲ್ಲಿ ಅಜಮೀರವಲ್ಲದೆ ೨೨ ಸಂಸ್ಥಾನಗಳಿದ್ದುವು. ಈ ವಸ್ತುಸಂಗ್ರಹಾಲಯದಿಂದ ಈ ಸಂಸ್ಥಾನಗಳಿಗೆ ಅನುಕೂಲ ಪ್ರಾಪ್ತಿಯಾಗಿಲೆಂಬುದೇ ಈ ಸಂಗ್ರಹಾಲಯದ ಸಂಸ್ಥಾಪಕರ ಪೂರ್ವೋದ್ದೇಶವಾಗಿತ್ತು. ಆಳ್ವಾರ್‌ನಿಂದ ಬಾಂಸವಾಡ್ ಹಾಗೂ ಧೋಲಪುರದಿಂದ ಜೈಸಲ್ಮರ್‌ದ ವರೆಗಿನ ಸಂಸ್ಥಾನಗಳಲ್ಲಿ ಸಂಗ್ರಹಿಸಲ್ಪಟ್ಟ ಕಲಾವಸ್ತುಗಳನ್ನು ಈ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ಈ ವಸ್ತುಸಂಗ್ರಹಾಲಯದ ಐದು ಮುಖ್ಯ ವಿಭಾಗಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಅವಶೇಷಗಳು ಪ್ರದರ್ಶಿಸಲ್ಪಟ್ಟಿವೆ. ಮೊಹೆಂಜೋದಾರೊ ಹಾಗೂ ಉಳಿದ ಸ್ಥಳಗಳಲ್ಲಿ ದೊರೆತ ೫೦೦ ಕ್ಕೂ ಹೆಚ್ಚಿನ ಸಂಖ್ಯೆಯ ಅವಶೇಷ ವಸ್ತುಗಳು, ೨೩ ಮೊಹರುಗಳು ಮತ್ತು ಈ ನಿವೇಶನಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳು ಪ್ರಾಗೈತಿಹಾಸಿಕ ಅವಶೇಷಗಳ ವಿಭಾಗದಲ್ಲಿ ಪ್ರದರ್ಶಿಸಲ್ಪಟ್ಟಿವೆ. ಈ ವಿಭಾಗವನ್ನು ೧೯೫೯ರಲ್ಲಿ ವಿದ್ವಾಂಸರ ಅನುಕೂಲಕ್ಕಾಗಿ ತೆರೆಯಲಾಯಿತು. ಭಾರತೀಯ ಶಾಸ್ತ್ರಜ್ಞರು ಹರಪ್ಪಾ ಮತ್ತು ಮೊಹೆಂಜೋದಾರೋ ಕಾಲಕ್ಕೆ ಸಂಬಂಧಿಸಿದ ಜನಜೀವನದ ಅವಶೇಷಗಳನ್ನು ರಾಜಪುತಾನದಲ್ಲಿ ಪತ್ತೆಹಚ್ಚಬಹುದಾಗಿದೆಯೆಂದು ಭಾವಿಸಿರುವರು. ಈ ಅವಶೇಷಗಳು ಜೋಧಪುರ, ಬಿಕಾನೀರ್ ಮತ್ತು ಜೈಸಾಲ್ಮರ್ ಮರಳು ಪ್ರದೇಶಗಳಲ್ಲಿ ಹುದುಗಿರಬಹುದೆಂದು ಭಾರತೀಯ ಶಾಸ್ತ್ರಜ್ಞರು ಭಾವಿಸಿರುವರು.

ವಸ್ತುಸಂಗ್ರಹಾಲಯದ ಕೇಂದ್ರ ಸಭಾಂಗಣದಲ್ಲಿ ಕ್ರಿ. ಶ. ೨೪ನೆಯ ಶತಮಾನದಿಂದ ೧೪ನೆಯ ಶತಮಾನಕ್ಕೆ ಸಂಬಂಧಿಸಿದ ವಿಶಿಷ್ಟಪೂರಿತ ಹಿಂದೂ ಪ್ರತಿಮೆಗಳಿವೆ. ಈ ವಿಭಾಗದಲ್ಲಿರುವ ಅಸಕ್ತಿಪೂರ್ಣ ಪ್ರತಿಮೆಗಳಲ್ಲಿ ಚತುರ್ಮುಖ ಶಿವಲಿಂಗ, ಕಮಲ್‌ನಲ್ಲಿ ದೊರೆತ ಗುಪ್ತರ ಕಾಲದ ವೈವಾಹಿಕ ಮೂರ್ತಿ, ಹರಸ್‌ಬೆಟ್ಟದಲ್ಲಿ ದೊರೆತ ಲಿಂಗೋದ್ಭವ ಮಹೇಶ್ವರ ಕಟಾರಾ ಹಾಗೂ ಕಾಸ್ಯಾಗಳಲ್ಲಿ ದೊರೆತ ಮನಮೋಹಕ ಶಿವ-ಪಾರ್ವತಿ ಪ್ರತಿಮೆ, ಸೂರ್ಯ, ಬ್ರಹ್ಮ ಮತ್ತು ವಿಷ್ಣು ಪ್ರತಿಮೆಗಳು ಮತ್ತು ವಿಷ್ಣು, ಹರಿಹರ ಹಾಗೂ ಲಕ್ಷ್ಮೀನಾರಾಯಣರ ತ್ರಿಮೂರ್ತಿ ವಿಗ್ರಹ ಇವು ಮುಖ್ಯವಾದವು.

ಈ ವಸ್ತುಸಂಗ್ರಹಾಲಯದಲ್ಲಿ ನವಗ್ರಹಗಳು, ನಕ್ಷತ್ರಗಳು, ವಿಷ್ಣುವಿನ ಅವತಾರಗಳು, ದೇವಂತ, ವರುಣ ಮತ್ತು 'ಮಾತೆ ಹಾಗೂ ಶಿಶು' ಈ ವಿಗ್ರಹಗಳೂ ಇರುವುವು. ದೇವತೆಯರಲ್ಲಿ ಸಪ್ತ ಮಾತೃಕೆಯರು, ಮಹಿಷಾಸುರ ಮರ್ಧಿನಿ, ಕಾಳಿ, ಗಣೇಶ ಜನನಿ, ಗಂಗಾ ಮತ್ತು ನಾಗಕನ್ಯಾ ಈ ಪ್ರತಿಮೆಗಳು ಉಲ್ಲೇಖಾರ್ಹವಾದವು. ಜಯಪುರ ಜಿಲ್ಲೆಯ ಬಘೇರಾದಲ್ಲಿ ದೊರೆತ ಕ್ರಿ. ಶ. ೯ ರಿಂದ ೧೨ನೆಯ ಶತಮಾನಕ್ಕೆ ಸಂಬಂಧಪಟ್ಟ ಕುಬೇರನ ವಿಗ್ರಹ ಮುಂತಾದುವು ಸಂಗ್ರಹಾಲಯದಲ್ಲಿ ಸಂಗ್ರಹವಾಗಿರುವ ವಸ್ತುಗಳಲ್ಲಿ ಉತ್ತಮ ವಿಗ್ರಹಗಳೆನ್ನಿಸಿಕೊಂಡಿವೆ.

ರಾಜಾಸ್ಥಾನವು ಜೈನ ಸಂಸ್ಕೃತಿಯ ಒಂದು ಪ್ರಮುಖ ಕೇಂದ್ರವಾಗಿರುವುದರಿಂದ ಈ ವಸ್ತುಸಂಗ್ರಹಾಲಯದಲ್ಲಿ ಜೈನ ಮತೀಯ ಕಲಾಪೂರ್ಣ ವಸ್ತುಗಳನೇಕವು ಪ್ರದರ್ಶಿಸಲ್ಪಟ್ಟಿವೆ. ಈ ಸಂಗ್ರಹಾಲಯದಲ್ಲಿರುವ ಋಷಭನಾಥ, ಸುಮತಿನಾಥ, ಶ್ರೇಯಾಂಸನಾಥ, ಶಾಂತಿನಾಥ ಪಾರ್ಶ್ವನಾಥ ಹಾಗೂ ಮಹಾವೀರರ ಪ್ರತಿಮೆಗಳು ಉಲ್ಲೇಖಾರ್ಹವಾದುದಾಗಿವೆ. ಯಕ್ಷಿ ಹಾಗೂ ಲಕ್ಷಿಣಿಯರ ವಿಗ್ರಹಗಳಲ್ಲಿ ಗೋಮುಖ ಹಾಗೂ ಸರಸ್ವತಿ ಪ್ರತಿಮೆಗಳು ದರ್ಶನೀಯವಾದವು.

ಸಂಗ್ರಹಾಲಯದಲ್ಲಿ ಈಗ ಸ್ತಂಭಗಳು ಛಾಗಗಳು ಹಾಗೂ ತಿಂಗಳು, ಆಮಲಕಗಳು, ತೋರಣಗಳು, ದ್ವಾರದ ಜಾಕಟ್ಟುಗಳು, ಕೀರ್ತಿಮುಖಗಳು ಇವುಗಳು ಪ್ರದರ್ಶಿಸಲ್ಪಟ್ಟಿವೆ.

ಸಂಗ್ರಹಾಲಯದ ಶಿಲಾಶಾಸನಗಳ ವಿಭಾಗದಲ್ಲಿ ೧೦೦ ಕ್ಕೂ ಹೆಚ್ಚಿನ ಸಂಖ್ಯೆಯ ಶಿಲಾಶಾಸನಗಳಿರುವುವು. ಇವು ದೇಶದ ಉಳಿದ ವಸ್ತುಸಂಗ್ರಹಾಲಯಗಳಲ್ಲಿರುವ ಶಿಲಾ ಶಾಸನಗಳಿಗಿಂತಲೂ ಹೆಚ್ಚು ಮಹತ್ವಪೂರಿತವಾದುದ್ದಾಗಿದೆ. ಭಾರತದ ಮಧ್ಯಕಾಲದ ಇತಿಹಾಸಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವ ಸಂಶೋಧಕರಿಗೆ ಈ ಶಿಲಾಶಾಸನಗಳು ಅತ್ಯಗತ್ಯವಾಗಿವೆ. ಮಧ್ಯಕಾಲದ ಇತಿಹಾಸಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಈ ಶಿಲಾಶಾಸನಗಳ ನೆರವಿಲ್ಲದೆ ಯಾವುದೇ ಸಂಶೋಧನೆಗಳನ್ನೂ ಕೈಗೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಶಿಲಾಶಾಸನಗಳಲ್ಲಿ ಅತ್ಯಂತ ಮುಖ್ಯವಾದವುಗಳಾವುವೆಂದರೆ:— (೧) ಬಾರ್ಲಿಯಲ್ಲಿ ದೊರೆತ ಕ್ರಿ. ಪೂ. ನಾಲ್ಕನೆಯ ಶತಮಾನಕ್ಕೆ ಸಂಬಂಧಿಸಿದ ಬ್ರಾಹ್ಮೀ ಲಿಪಿಯ ಶಿಲಾಶಾಸನ; (೨) ಸಂವತ್ ೭೦೩ರ ಶಿಲಾದಿತ್ಯನ ಕಾಲದ ಸಮೋಲಿ ಶಿಲಾಶಾಸನ; (೩) ಸಂವತ್ ೮೯೪ರ ಟೊಕ ಕಾಲದ ಜೋಧಪುರದ ಶಿಲಾಶಾಸನ; (೪) ಎರಡನೆಯ ನುಹೇಂದ್ರವಾಲನ ಕಾಲದ ಪ್ರತಾಪಘಡದ ಶಿಲಾಶಾಸನ. (೫) ಹರಕೇಲಿ ನಾಟಕ ಅಂಕಿತ ಎರಡು ಹಾಸುಗಲ್ಲುಗಳು; (೬) ಸೋಮದೇವನ ಲಲಿತ—ವಿಗ್ರಹರಾಜ ನಾಟಕ ಅಂಕಿತ ಹಾಸುಗಲ್ಲು; ಮತ್ತು (೭) ಸಂವತ್ ೧೨೩೪ರ ಮೂರನೆಯ ಪೃಥ್ವಿರಾಜನ ಕಾಲದ ಬಾರ್ಲಿ ಶಿಲಾಶಾಸನ.

ಈ ಶಾಸನ ವಿಭಾಗದಲ್ಲಿ ಉಜ್ಜಲಕಲ್ಪದ ಮಹಾರಾಜ ಸರ್ವನಾಥನ ಕಾಲದ ಎರಡು ತಾಮ್ರಶಾಸನಗಳು (ತಾಲಚೂರಿ ಶಕೆಯ ಪ್ರಕಾರ ಕ್ರಿ. ಶ. ೪೩೭ ೩೮೭); ಮೊದಲಾದ ಮುಖ್ಯವಾದ ತಾಮ್ರಶಾಸನಗಳೂ ಇವೆ.

ವಸ್ತುಸಂಗ್ರಹಾಲಯದ ಅಪೂರ್ವ ನಾಣ್ಯಗಳ ಸಂಗ್ರಹ ವಿಭಾಗದಲ್ಲಿ ಕ್ರಿ. ಪೂ. ೩ನೆಯ ಶತಮಾನದಿಂದ ಹಿಡಿದು ಕ್ರಿ. ಶ. ೧೮ನೆಯ ಶತಮಾನದ ವರೆಗೆ ಸಂಬಂಧಿಸಿದ ದುರ್ಲಭ ನಾಣ್ಯಗಳನೇಕ ಪ್ರದರ್ಶಿಸಲ್ಪಟ್ಟಿವೆ. ಸಂಗ್ರಹಾಲಯದಲ್ಲಿರುವ ನಾಗರಿಯ ರಂಧ್ರ ಸಹಿತದ ಹಾಗೂ ಸಿಬಿ ಜನಪದದ ನಾಣ್ಯಗಳು ತಕ್ಷಶಿಲಾದ ಹಿಂದೂ-ಗ್ರೀಕ್ ಹಾಗೂ ಕುಶಾನರ ಕಾಲದ ನಾಣ್ಯಗಳು, ರಾಜಾ ಸ್ಥಾನದ ಕ್ಷತ್ರಪ ಹಾಗೂ ಹಿಂದೂ-ಸಸೆನಿಕ್ ನಾಣ್ಯಗಳು, ಗುಪ್ತರ ಕಾಲದ ಸುವರ್ಣ ನಾಣ್ಯಗಳು ಉಲ್ಲೇಖನಾರ್ಹವಾದುವು. ಅನೇಕ ರಾಜ್ಯ ಸರಕಾರಗಳಿಂದ ಪಠಾಣ ಹಾಗೂ ಮೊಗಲಾಯಿ ಆರಸರ ಕಾಲದ ಸಹಸ್ರಾರು ನಾಣ್ಯಗಳನ್ನು ಪಡೆದುಕೊಳ್ಳಲಾಗಿದೆ. ಈ ನಾಣ್ಯಗಳಲ್ಲಿ ಅನೇಕವನ್ನು ಆ ಕಾಲದಲ್ಲಿ ಅಜಮೀರದಲ್ಲಿ ಉಚ್ಚಾಯ ಸ್ಥಿತಿಯಲ್ಲಿದ್ದ ಟಂಕಸಾಲೆಯಲ್ಲಿ ಮುದ್ರಿಸಲಾಗಿತ್ತು.

ವರ್ಣ ಚಿತ್ರಗಳು ಹಾಗೂ ಛಾಯಾಚಿತ್ರ ವಿಭಾಗದಲ್ಲಿ ೧೦೦ಕ್ಕೂ ಹೆಚ್ಚಿನ ಚಿತ್ರಗಳಿವೆ. ಈ ಚಿತ್ರಗಳಲ್ಲಿ ಸುಮಾರು ೧೨ ಅಪೂರ್ವ ರಾಜಾಸ್ಥಾನೀ ವರ್ಣ ಚಿತ್ರಗಳಿವೆ. ಛಾಯಾ ಚಿತ್ರಗಳು ಕೇವಲ ಪ್ರಾಚೀನ ಸುರಕ್ಷಿತ ಕಟ್ಟಡಗಳಿಗೆ ಸಂಬಂಧಿಸಿವೆ.

ವಸ್ತುಸಂಗ್ರಹಾಲಯದ ಐದು ಮುಖ್ಯ ವಿಭಾಗಗಳ ಜೊತೆಗೆ ಮೂರು ಇತರ ವಿಭಾಗಗಳಿವೆ. ಒಂದು ವಿಭಾಗದಲ್ಲಿ ಪ್ರಾಚೀನ ಅಸ್ತ್ರಶಸ್ತ್ರಗಳು, ಎಂಡನೆಯ ವಿಭಾಗದಲ್ಲಿ ಅಜಮೀರದ ಆಧಾರ್-ದಿನ್‌ಕ ಜೋಂಪರಾ ಮಸೀದಿಯಲ್ಲಿ ಲಭ್ಯವಾದ ಅನೇಕ ವಸ್ತುಗಳು ಹಾಗೂ ಮೂರನೆಯ ವಿಭಾಗದಲ್ಲಿ ಅಷ್ಟು ಪ್ರಾಮುಖ್ಯವಲ್ಲದ ಅವಶೇಷ ವಸ್ತುಗಳ ಪ್ರತಿಕೃತಿಗಳು ಸಂಗ್ರಹಿಸಿಡಲ್ಪಟ್ಟಿವೆ.

ವಿದೇಶೀ ಸಹಾಯ

ದೇಸಾಯಿಯವರಿಗೆ ಅಭಿಮಾನಪೂರ್ವಕ ಸ್ವಾಗತ

ಭಾರತದ ಯೋಜನೆಗೆ ಬ್ರಿಟನ್ನು ತನ್ನ ದೇಣಿಗೆ ಈಯಲು ತಪ್ಪದು

ಭಾರತೀಯ ಅರ್ಥಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ಲಂಡನ ನಗರವನ್ನು ಸೇರಿದ ಸ್ವಲ್ಪವೇ ಹೊತ್ತಿನಲ್ಲಿ ಬ್ರಿಟಿಷ ಪ್ರಧಾನಮಂತ್ರಿ ಶ್ರೀ ಹೆರಾಲ್ಡ್ ಮ್ಯಾಕಮಿಲನರು ಭಾರತಕ್ಕೆ ನೀಡಲಾಗುವ ಪ್ರಸ್ತಾವಿತ ಸಾಲದ ಕುರಿತಾದ ಅಂತಿಮ ವಿವರಣೆಯನ್ನು ತಯಾರಿಸುವ ಸಲುವಾಗಿ ಮಂತ್ರಿಗಳ ಸಭೆಯೊಂದನ್ನು ಕರೆದರು. ಈ ಸಭೆಯಲ್ಲಿ ಬ್ರಿಟಿಷ ಅರ್ಥಮಂತ್ರಿ, ವ್ಯಾಪಾರ ಪರಿಷತ್ತಿನ ಅಧ್ಯಕ್ಷ ಮತ್ತು ರಾಷ್ಟ್ರಮಂಡಲೀಯ (ಕಾಮನ್‌ವೆಲ್ತ್) ಸಂಬಂಧ ವಿಭಾಗದ ರಾಜ್ಯ ಮಂತ್ರಿಗಳೂ ಉಪಸ್ಥಿತರಿದ್ದರು.

ಬ್ರಿಟಿಷ ಅರ್ಥಮಂತ್ರಿ ಶ್ರೀ ಡೇರಿಕ್ ಹರ್ಕಟ ಅವೋರಿಯವರು ಶ್ರೀ ದೇಸಾಯರ ಗೌರವಾರ್ಥ ಸಂಬಂಧದಲ್ಲಿ ಒಂದು ಭೋಜನ ಸಮಾರಂಭನನ್ನು ಏರ್ಪಡಿಸಿದ್ದರು. ಈ ಕೂಟದಲ್ಲಿ ಅರ್ಥವಿಭಾಗದ ಕೆಲವು ಪರಿಷ್ಕೃಧಿಕಾರಿಗಳೂ ಲಂಡನ್ ನಗರದ ಪ್ರಮುಖ ಬೇಂಕರರೂ ಹಿರಿಯ ಉದ್ದಿಮೆಗಾರರ ಪ್ರತಿನಿಧಿಗಳೂ ಉಪಸ್ಥಿತರಾಗಿದ್ದರು. ಶ್ರೀ ಮ್ಯಾಕಮಿಲನ್ ಹಾಗೂ ಹರ್ಕಟ ಅವೋರಿಯವರು ಬ್ರಿಟಿಷ ಸರಕಾರವು ಭಾರತಕ್ಕೆ ಸಾಕಷ್ಟು ಸಹಾಯ ನೀಡುವುದೆಂದು ಆಶ್ವಾಸನೆಯಿತ್ತರು.

ಬ್ರಿಟಿಷ ಸರಕಾರವು ಶ್ರೀ ದೇಸಾಯಿಯವರೊಡನೆ ಭಾವೀ ರಾಷ್ಟ್ರ ಮಂಡಲೀಯ ಅರ್ಥ ಸಮ್ಮೇಳನದ ಸಂಬಂಧದಲ್ಲಿಯೂ ಮಾತುಕತೆ ನಡೆಸುವ ಉತ್ಸಾಹದಿಂದಿದೆ. ಈ ಸಮ್ಮೇಳನವು ಸಪ್ಟಂಬರ ೧೫ರಿಂದ ಮೊಂಟ್ರೀಲಿನಲ್ಲಿ ನಡೆಯುವುದು ಬ್ರಿಟಿಷ ಸರಕಾರದ ಈ ಸಮ್ಮೇಳನ ಸಿದ್ಧತೆಯು ಈಗಾಗಲೇ ಅಂತಿಮ ಘಟ್ಟಕ್ಕೆ ಬಂದಿದೆ. ಈ ಸಮ್ಮೇಳನದ ರೂಪರೇಷೆಗಳೂ ಈಗ ಸ್ವಲ್ಪ ಸ್ಪಷ್ಟವಾಗಿ ಗೊತ್ತಾಗಿದೆ. ಬ್ರಿಟಿಷ ಸರಕಾರವು ಅಲ್ಪ ಕಾಲೀನ ಮತ್ತು ದೀರ್ಘ ಕಾಲೀನ ಸಾಲ ಸೌಲಭ್ಯವನ್ನು ಈಯುವುದೆಂದೂ ಅರ್ಥವಿಕಸಿತ ದೇಶಗಳಲ್ಲಿ ಪ್ರಗತಿಶೀಲ ದೇಶಗಳ ಸಾಲಿನ ನಿರ್ಯಾ

(೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ. (ದ. ಭಾ)

ಹತ್ತರಲ್ಲೊಂದು ಪಾಲು

"ಕೈಗೆ ಬಂದುದೆಲ್ಲವನ್ನೂ ನೆಚ್ಚ ಮಾಡದೆ ಅದರಲ್ಲಿನ್ದೊಂದು ಅಂಶವನ್ನು, ಹತ್ತನೇ ಒಂದಂಶವನ್ನಾದರೂ ಉಳಿಸಬೇಕು, ಹಾಗೆ ಉಳಿಸಿ ಅವದ್ಧನವಾಗಿ ಶೇಖರಿಸಿ ಇಡಬೇಕು"— ಎಂಬ ಮಾತು ನಮ್ಮ ಸಂಸ್ಕೃತಿಗೆ ಹೊಸತೇನೂ ಅಲ್ಲ. ಮತ್ತಿದು ಅಸಾಧ್ಯವೂ ಅಲ್ಲ. ದಿನವಹಿ ವಾರಕ್ಕೊಮ್ಮೆ ತಿಂಗಳಿಗೊಮ್ಮೆ ಅಥವಾ ಕೈಗೆ ಬಂದಾಗಲೊಮ್ಮೆ ಯಾವ ಸಂದರ್ಭದಲ್ಲೂ ನಿಮ್ಮ ಅವದ್ಧನ ಶೇಖರಣೆಗೆ ಸಿಂಡಿಕೇಟ್ ಬೇಂಕ್ ಸದಾ ಸಿದ್ಧವಿದೆ.

ಉಳಿಸಿರಿ

THE CANARA INDUSTRIAL & BANKING SYNDICATE LTD, UDIPI.

ಸೋಮಾರಿಯಾಗಿ ಒರಗಿಕೊಂಡಿರುವವನಲ್ಲಿಗೆ ಲಕ್ಷ್ಮಿಯು ಎಂದೆಂದಿಗೂ ಎಡತಾಕಲಾರಳು; ಕರ್ಮಕುಶಲನಾದ ಮನುಷ್ಯನು ಮಾತ್ರ ನಿಶ್ಚಯವಾಗಿಯೂ ಸುಖವನ್ನು ಪಡೆಯಲು ಅರ್ಹನಾಗುತ್ತಾನೆ.

NAVAYUGA

Founder:—

A. G. SHETTY,
Former Minister for Public Health Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ ೩ಲ	ಉಡುಪಿ ೪-೯-೨೫ಇಲ	ಪಾರ ೧

ಯೋಜನೆಗೆ ಆರ್ಥಿಕ ಸಹಾಯ

ಪ್ರಥಮ ಪಂಚವಾರ್ಷಿಕ ಯೋಜನೆಯು ಮುಗಿದು ದ್ವಿತೀಯ ಯೋಜನೆಯ ರೂಪರೇಖೆಗಳಿಗೆ ಅಂತಿಮ ರೂಪವನ್ನೀಯುವಾಗಲೇ ಭಾರತದ ಮೂಲೆಮೂಲೆಯಲ್ಲಿಯೂ ಇದೊಂದು ಮಹತ್ವಪೂರಿತವಾದ ಆಕಾಂಕ್ಷಾಸಹಿತವಾದ ಯೋಜನೆಯೆಂಬ ಅಭಿಪ್ರಾಯವು ಹೊರಟಿತ್ತು. ವಾಸ್ತವಿಕವಾಗಿ ಭಾರತಕ್ಕೆ ತನ್ನ ಆಂತರಿಕ ಉಳಿತಾಯಗಳಿಂದಲೇ ಕೈಗೊಳ್ಳಬಹುದಾದ ಯೋಜನೆಯ ಎದುರು ಈ ಬೃಹತ್ಪರಿಮಾಣದ ಯೋಜನೆಯು ಮಹತ್ವಾಕಾಂಕ್ಷಾಯುತವಾಗಿದೆಯೆಂದೇ ಹೇಳಬಹುದು. ಆದರೆ, ಒಂದು ದೇಶವು ಅಭಿವೃದ್ಧಿಯನ್ನು ಹೊಂದುವುದಕ್ಕಾಗಿ ಯೋಜನೆಗಳನ್ನು ಕೈಗೊಳ್ಳುತ್ತಿರುವಾಗ, ಕೇವಲ ತನ್ನ ಆಂತರಿಕ ಸಂಪತ್ತನ್ನು ಮಾತ್ರ ಹೊಂದಿಕೊಂಡು ಕುಳಿತರೆ, ಪ್ರಗತಿಯ ನೆಡೆ ಆಮೆಯ ನಡೆಯಾಗುವುದರಿಂದ, ವಿದೇಶಗಳಿಂದ ಆವಶ್ಯಕ ಬಂಡವಳವನ್ನು ಹಾರೈಸುವುದೂ ನಿರೀಕ್ಷಿಸುವುದೂ ಪಡೆಯುವುದೂ ಆಯುಕ್ತವೆಂದು ಹೇಳಬರುವುದಿಲ್ಲ. ಹಾಗಾಗಿ, ಭಾರತವೂ ವಿದೇಶಗಳಿಂದ ಯಾವುದೇ ಪ್ರಯಾಸಕರವಾದ ಶರ್ತಗಳನ್ನು ಹೇರದೆ ಕೊಡನೂಡಬಲ್ಲುಡುವ ಸಹಾಯವನ್ನು ಇಂದು ಸ್ವೀಕರಿಸುತ್ತದೆ. ಹೀಗೆ ನಿಶ್ಶರ್ತವಾಗಿ ಸಾಲವೀಯುವಂತೆ ವಿದೇಶಗಳ ಜನರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸುವ ಪ್ರಯಾಸವನ್ನೂ ಮಾಡುತ್ತಿದೆ.

ಭಾರತಕ್ಕೆ ಈ ದ್ವಿತೀಯ ಯೋಜನೆಯು ಸಂಪೂರ್ಣವಾಗಿ ಕಾರ್ಯಾಚರಣೆಯಾಗುವಾಗ ಸುಮಾರು ೧,೦೦೦ ಮಿಲಿಯ ಡಾಲರುಗಳು ಬೇಕಾಗುತ್ತವೆಯೆಂದೂ ಮುಂದಿನ ಆರು ತಿಂಗಳುಗಳೊಳಗೆ ಸುಮಾರು ೩೫೦ ಮಿಲಿಯ ಡಾಲರುಗಳು ಆವಶ್ಯಕವಿರುವುದೆಂದೂ ತಿಳಿದು ಬಂದಿದೆ. ಹಿಂದಿನ ವರ್ಷವೂ ಇದೇ ರೀತಿಯ ಆವಶ್ಯಕತೆಯದ್ದು ಆ ಕಾಲದ ಅರ್ಥಮಂತ್ರಿಯವರಾದ ಶ್ರೀ ಕೃಷ್ಣಮಾಚಾರಿಯವರು. ವಿದೇಶ ಹಾಣ್ತಿಯನ್ನು ಕೈಗೊಂಡು ಅಲ್ಲಲ್ಲಿನ ಜನರ ಮನಸ್ಸನ್ನೊಲಿಸಲು ಪ್ರಯತ್ನಿಸುವುದರಲ್ಲಿ ಬಹಳ ಪ್ರಯಾಸಪಟ್ಟಿದ್ದಾರೆ. ಆದರೂ ಅಂದು ಭಾರತವು ನಿರೀಕ್ಷಿಸಿದ್ದು ಸಹಾಯವು ಮಾತ್ರ ಒದಗಿ ಬರಲಿಲ್ಲವೆಂಬುದೇನೋ ಹೌದು; ಆದರೆ, ಅದಕ್ಕೆ ಬೇರೆಯೇ ರಾಜಕೀಯ, ಕಾರಣಗಳಿದ್ದುವು ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ಈ ಭಾರಿಯೂ ಶ್ರೀ ಮುರಾರಜಿ ದೇಸಾಯಿಯವರು ದೇಶದ ಅರ್ಥಮಂತ್ರಿಯ ಸ್ಥಾನದಲ್ಲಿದ್ದು ತಮ್ಮ ಸರದಿಯೆಂದು ವಿದೇಶಗಳ ಮನವೊಲಿಸಲು ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಬ್ರಿಟನ್ನಿನ ಪ್ರಧಾನಿ ಮ್ಯಾಕಮಿಲನರು ಶ್ರೀ ದೇಸಾಯಿಯವರನ್ನು ಆಮಂತ್ರಿಸಿದ್ದಾರೆ; ಮೋಂಟ್ರೀಲಿನಲ್ಲಿ ಸೇರಲಿರುವ ಕಾಮನ್‌ವೆಲ್ತ್ ಆರ್ಥಿಕ ಸಮ್ಮೇಳನದಲ್ಲಿಯೂ ಅವರು ಭಾಗ ವಹಿಸಿ ವಾಶಿಂಗ್‌ಟನ್ ಮೊದಲಾದ ಕೇಂದ್ರಗಳಲ್ಲಿ ತಂಗಿ ಅಯಾ ದೇಶಗಳಲ್ಲಿ ಭಾರತದ ಬಗ್ಗೆ ಸದಭಿಪ್ರಾಯ ಮೂಡಿಸಲಿರುವರು. ಭಾರತವು ಬ್ರಿಟಿಷ ಕಾಮನ್‌ವೆಲ್ತಿನ ಒಂದು ಮುಖ್ಯ ರಾಷ್ಟ್ರವಾಗಿದ್ದು; ತನ್ನ ಅಭಿವೃದ್ಧಿ ಯೋಜನೆಗಳಿಗೆ ಬ್ರಿಟನ್ನು ಮುಕ್ತ ಹಸ್ತದಿಂದ ಸಹಾಯಮಾಡಬೇಕು ಎಂದು ಹೇಳುತ್ತದೆ; ಅಲ್ಲದೆ, ಬ್ರಿಟಿಷ ಪ್ರಧಾನಿಯವರೂ ಭಾರತದ ಅಭಿವೃದ್ಧಿ ಹೇತುವಿಗಾಗಿ ಬ್ರಿಟನ್ನು ತನ್ನ ಕರ್ತವ್ಯಕ್ಕೆ ಚ್ಯುತಿಯನ್ನುಂಟು ಮಾಡದೆ, ಸಹಾಯ ನೀಡುವ ಭರವಸೆಯನ್ನೂ ಇತ್ತಿದ್ದಾರೆ. ಭಾರತಕ್ಕೆ ಇಂದು ತಲೆದೋರಿರುವ ವಿದೇಶ ವಿನಿಮಯಗಳ ಕೊರತೆಯು ತಾತ್ಕಾಲಿಕವಾದುದಲ್ಲದೇ, ಭಾರತದ ಆಯೋಜನಾ ಮಾರ್ಗದಲ್ಲಿ ಕಂಡು ಬರುವ ಕಂಟಕಗಳಿಗೆ ಭಾರತವು ಸ್ವತಃ ಕಾರಣವಾಗಿರದೆ, ಅಂತಾರಾಷ್ಟ್ರೀಯ ಪರಿಸ್ಥಿತಿಯೇ ಕಾರಣವೆಂದೂ ಪಾಶ್ಚಾತ್ಯ ರಾಷ್ಟ್ರಗಳು ತಿಳಿದುಕೊಂಡಿವೆ. ಇತ್ತೀಚೆಗೆ ಅಮೆರಿಕೆ, ಬ್ರಿಟನು, ಕೆನೆಡ, ಪಶ್ಚಿಮ ಜರ್ಮನಿ ಮತ್ತು ಜಪಾನಗಳು ವಾಶಿಂಗ್‌ಟನ್ನಿನಲ್ಲಿ ಸಭೆ ಸೇರಿ, ಭಾರತದ ದ್ವಿತೀಯ ಯೋಜನೆಯ ಸಲುವಾಗಿ ಎಷ್ಟರ ಮಟ್ಟಿಗೆ ಸಹಾಯವೀಯಬಹುದು ಎಂಬುದನ್ನು ಔಪಚಾರಿಕವಾಗಿ ಪರಿಶೀಲಿಸಿದ್ದುವು. ಈ ಸಭೆಯಲ್ಲಿ ಯಾವುದೇ ನಿರ್ಧಾರವನ್ನು ಮಾಡಲಿಲ್ಲವಾದರೂ ಸಾಕಷ್ಟು ಪ್ರಮಾಣದ ಸಹಾಯವನ್ನರ್ಪಿಸುವ ನಿಶ್ಚಯವಾಗುವುದೆಂದು ತಿಳಿದುಬರುತ್ತದೆ. ಅಲ್ಲದೇ, ಅಮೆರಿಕೆ, ಬ್ರಿಟನ್ ಮೊದಲಾದ ಕೆಲವು ದೇಶಗಳು ಭಾರತದ ಬಗ್ಗೆ ಹಿಂದೆ ಭಾವನಾಗೋಪುರವನ್ನು ಕಟ್ಟಿಕೊಂಡಿದ್ದಂತೆ ಇಂದಿರುವುದಿಲ್ಲ. ಭಾರತದಂತಹ ರಾಷ್ಟ್ರದ ಪ್ರಗತಿಯನ್ನು ಬಯಸುವುದು ತಮ್ಮ ಕರ್ತವ್ಯವೆಂಬುದನ್ನು ಅವು ತಿಳಿದುಕೊಂಡಿವೆ. ಬ್ರಿಟನ್ನು ಸುಮಾರು ೨೧೦ ಮಿಲಿಯ ಡಾಲರ್ ಹಾಗೂ ಪಶ್ಚಿಮ ಜರ್ಮನಿಯು ೧೦೦ ಮಿಲಿಯ ಡಾಲರ್‌ಗಳನ್ನೂ ಕೊಡುವಂತೆ ತಿಳಿದುಬಂದಿದೆ. ಭಾರತಕ್ಕೆ ಈಗಾಗಲೇ ಅತ್ಯಧಿಕ ಸಾಲವನ್ನಿತ್ತ ವಿಶ್ವಬೇಂಕು ಸುನಃ ಒಂದು ದೊಡ್ಡ ಮೊತ್ತದ ಸಾಲವನ್ನೀಯುವ ನಿರೀಕ್ಷೆಯಿದೆ. ಭಾರತದ ಕಮ್ಯುನಿಸ್ಟ್ ವಿರೋಧೀ ಭಾವನೆಯಿಂದಲೂ, ತಮ್ಮ ವಿದೇಶ ಸಹಾಯದ ಬಂಡವಳದಿಂದಲೂ ಅಮೆರಿಕೆಯೂ ಇಂತಹುದೇ ಸಹಾಯ ಕೊಡುವುದೆಂದು ಧೈರ್ಯವಿದೆ. ಹೀಗಾಗಿ ಇಂದಿನ ಅಂತಾರಾಷ್ಟ್ರೀಯ ಪರಿಸ್ಥಿತಿಗಳನ್ನು ಅವಲೋಕಿಸುವಾಗ, ಹಿಂದಿನ ವರ್ಷ ತುಂಬಿಕೊಂಡಿದ್ದ ಅಂಧಕಾರವು ಇಂದು ಸ್ವಲ್ಪ ತಿಳಿಗೊಂಡಂತೆ ಕಾಣಬರುವುದರಿಂದ ಅರ್ಥಮಂತ್ರಿಯವರ ಈ ಸಂಚಾರವು ವ್ಯರ್ಥ ಸಂಚಾರವಾಗಲಾರದು ಎಂದು ಕಂಡುಬರುತ್ತದೆ

ಜಗತ್ತಿನ ಅತಿ ವಿಶಾಲ ಜನಸಮುದ್ಧಾಹಾಗೂ ನಿರ್ಧನ ಪ್ರಜಾಪ್ರಭುತ್ವವಾದೀ ರಾಷ್ಟ್ರ ಭಾರತದ ಪ್ರಗತಿಯನ್ನೇ ವಿಶ್ವದ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳು ಕಣ್ಣಿಟ್ಟು ನೋಡುತ್ತಿವೆ. ಭಾರತವು ತನ್ನ ಮುಂದಿರುವ ಮಹಾ ಸಮಸ್ಯೆಗಳನ್ನು—ಹೊಟ್ಟೆ, ಬಟ್ಟೆ, ಮತ್ತು ವಸತಿ, ಅಕ್ಷರತೆಯ ಪ್ರಶ್ನೆಗಳನ್ನು—ಯಾವ ರೀತಿ ಎದುರಿಸುವುದೆಂಬುದೇ ಒಂದು ಕುತೂಹಲಕಾರಕ ಪ್ರಶ್ನೆ. ಪ್ರಜಾಪ್ರಭುತ್ವ ವಿದಾನದಲ್ಲಿಯೇ ಇಂತಹ ಬೃಹತ್ಸಮಸ್ಯೆಯನ್ನು ಭಾರತವು ಕಾಣುತ್ತಿರುವಾಗ, ಪ್ರಜಾಪ್ರಭುತ್ವದ ಬೆಳವಣಿಗೆಗಾಗಿ ಪ್ರಜಾಪ್ರಭುತ್ವ ಪ್ರಿಯ ರಾಷ್ಟ್ರಗಳು ತಮ್ಮ ಹೃತ್ಪೂರ್ವಕ ಸಹಾಯ ನೀಡುವುದು ಅಗತ್ಯ. ಹೀಗಿರುತ್ತ ನಮ್ಮ ಅರ್ಥಮಂತ್ರಿಗಳು ತಮ್ಮ ವಿದೇಶ ಪ್ರವಾಸದ ಕಾಲದಲ್ಲಿ ಭಾರತದ ಬಗ್ಗೆ ಇರಬಹುದಾದ ತಪ್ಪು ಕಲ್ಪನೆಗಳನ್ನು ದೂರವಾಗಿಸಿದ್ದುವೇಕದಿಂದ ಮುಕ್ತದಾನವೀಯುವಂತೆ ಸಗುವ ಕಾರ್ಯದಲ್ಲಿ ಜಯಶೀಲರಾಗಬೇಕು. ಪ್ರಸಂಚದಲ್ಲಿ ಪ್ರಜಾಪ್ರಭುತ್ವವೇ ಅಳಬಲ್ಲುದು ಎಂಬುದನ್ನು ಭಾರತವು ವಿಶ್ವಕ್ಕೆ ಎತ್ತಿ ತೋರಿಸಬೇಕು. ನಿರ್ಧನತೆಯನ್ನು ದೂರ ಮಾಡುವುದಕ್ಕೆ ಕಮ್ಯೂನಿಜಂ ಒಂದೇ ತಾರಕವಲ್ಲ; ಪ್ರಜಾಪ್ರಭುತ್ವ ವಿಧಾನದಿಂದಲೂ ಅದನ್ನು ಯಶಸ್ವಿಯಾಗಿ ಎದುರಿಸಲಾಗುವುದೆಂದು ವಿಶ್ವದಲ್ಲಿ ಹೊಸ ಬಾಖಲೆಯನ್ನು ಮಾಡುವಂತಾಗಬೇಕು.

ನಮ್ಮ ವಿಜ್ಞಾಪನೆ

ಈ ಸಂಚಿಕೆಯೊಡನೆ ನವಯುಗದ ಮೂವತ್ತನೆಂಟನೆಯ ವರ್ಷವು ಆರಂಭವಾಗಿದೆ ನಾವು ಕಳೆದ ವಾರದಲ್ಲಿ ಈ ಪುಟದಲ್ಲಿಯೇ ಪತ್ರಿಕೆಯಲ್ಲಿನ ಕೆಲವೊಂದು ಸುಧಾರಣೆಯ ಬಗ್ಗೆ ಸೂಚಿಸಿದ್ದೆವು. ಅಂತಹವುಗಳಲ್ಲಿ ಕೆಲವೊಂದನ್ನು ಈ ಸಂಚಿಕೆಯಲ್ಲಿ ಕಾಣಬಹುದು. ಅಲ್ಲದೇ ಇವುಗಳೆಲ್ಲವೂ ಜನರಿಗೆ ವಿವಿಧ ವಿಷಯ ಜ್ಞಾನವನ್ನೊದಗಿಸುವುದು ಮಾತ್ರವಲ್ಲದೇ ಉಪಯುಕ್ತವೂ ಆಗಿ ಪರಿಣಮಿಸುವುದೆಂಬ ಆಶೆಯಿದೆ.

'ಪತ್ರಿಕೆಯ ಜೀವಾಳವೆನಿಸುವ ಚಂದಾದಾರರು ಈ ಸಮಯಕ್ಕೆ ಅವಧಿ ತೀರುವವರು ತಮ್ಮ ಹೊಸ ವರ್ಷದ ಚಂದಾ ಹಣವನ್ನು ದಯವಾಡಿ ಬೇರೆ ಪತ್ರವನ್ನು ಹಾರೈಸದೆ, ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಬಗ್ಗೆ ತಮ್ಮ ಅಭಿಪ್ರಾಯದೊಡನೆ ಕಳುಹಿಸಿ ಕೊಡಬೇಕು. ಪತ್ರಿಕೆಯ ಚಂದಾದಾರರಲ್ಲಿ ಇದುವರೆಗಿನ ಚಂದಾ ಬಾಕಿ ಮಾಡಿಕೊಂಡವರಿದ್ದರೆ, ಅವರೂ ಸ್ವಯವಾಗಿಯೇ ಈ ರೀತಿ ಕಳುಹಿಸಿಕೊಟ್ಟು ಮುನ್ನಡೆಸಿದರೆ, ಪತ್ರಿಕೆಯು ಇನ್ನೂ ಸುಂದರವಾಗಿ ವಿವಿಧ ರೀತಿಯ. ಲೇಖನಾದಿಗಳಿಂದೊಡಗೂಡಿ ಬೆಳೆಯಲುಕಾಣಲು ಸುಲಭವಾಗುವುದು. ಆದುದರಿಂದ, ಈ ಸಂದರ್ಭದಲ್ಲಿ ನಮ್ಮೆಲ್ಲ ಚಂದಾದಾರರಿಗೆ ಇದು ವಿನಿತ್ತ ಸಹಕಾರಕ್ಕಾಗಿ ತುಂಬು ಹೃದಯದ ಅನಂತ ಕೃತಜ್ಞತೆಗಳನ್ನು ಸಮರ್ಪಿಸುವುದಲ್ಲದೇ ಇದಕ್ಕಿಂತಲೂ ಇತೋಪ್ಯತಿಶಯವಾಗಿ ಅವರ ನೆರವು ದೊರೆಯಬೇಕೆಂದು ಹಾರೈಸುತ್ತೇವೆ.

ಹಾಗೆಯೇ "ನವಯುಗ"ದ ಚಂದಾದಾರರ ಸಂಖ್ಯೆಯೂ ಬೆಳೆಯುವಂತಾಗಬೇಕು. ಅದಕ್ಕಾಗಿಯೂ ಈಗಿನ ಚಂದಾದಾರರು ತಮ್ಮ ಬಂಧುಮಿತ್ರರಿಗೂ 'ನವಯುಗ"ದ ರೂಪರೇಷೆಯ ಪರಿಚಯವನ್ನು ಮಾಡಿ, "ನವಯುಗ"ದ ಬೆಳವಣಿಗೆಯಲ್ಲಿ ತಮ್ಮ ಪಾಲಿನ ನೆರವೆಯನ್ನೂ ಸಲ್ಲಿಸುವುದು ಅಪೇಕ್ಷಣೀಯವಾಗಿದೆ. ಎಂದರೆ, ಸಾಕಷ್ಟು ಚಂದಾದಾರರು ದೊರೆತಲ್ಲಿ ಪತ್ರಿಕೆಯೂ ತನ್ನ ಕಾಲಮೇಲೆ ಬಲವಾಗಿ ಊರಿ, ಸ್ವತಂತ್ರವಾಗಿ, ತನ್ನ ಗ್ರಾಹಕರಿಗೆ ಆವಶ್ಯಕ ಸೇವೆಯನ್ನು ಸಲ್ಲಿಸಲು ಸಹಾಯ ದೊರೆತಂತಾಗುವುದು. ನಮ್ಮ ಈ ಕಳಕಳಿಯ ಕೇಳಿಕೆ ಹಾಗೂ ನಮ್ರ ವಿನಂತಿಯನ್ನು ಓದುಗರು ಅರ್ಥವಿಸಿಕೊಂಡು ಮುಂದೆಯೂ ಹಿಂದೆಗಿಂತ ದ್ವಿಗುಣವಾಗಿ ತ್ರಿಗುಣವಾಗಿ ಬಹು ಗುಣವಾಗಿ ಸಹಾಯ ಸಲ್ಲಿಸುವರೆಂದು ನಿರೀಕ್ಷಿಸುತ್ತೇವೆ.

ಜೈಹಿಂದ್!

ಸಂಕ್ಷಿಪ್ತ ಸುದ್ದಿಗಳು

ನೂನರು ಭವಿಷ್ಯ ನುಡಿದರು!

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಎದ್ದಿರುವ ಗಡಿತಂಟೆಯ ಪ್ರಶ್ನೆಯನ್ನು ಬಿಡಿಸಿ ಶಾಂತ ವಿಧಾನದಿಂದ ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಉಭಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಸಮ್ಮೇಳನವು ಸದ್ಯದಲ್ಲಿಯೇ ನವದೆಹಲಿಯಲ್ಲಿ ಸೇರಲಿರುವುದು. ಇದಕ್ಕೆ ಪೂರ್ವಭಾವಿಯಾಗಿ ಈಗಾಗಲೇ ಸೇರಿದ್ದ ಕಾರ್ಯದರ್ಶಿ ಮಟ್ಟದ ಪರಿಷತ್ತು ಸಂಪೂರ್ಣ ವಿಫಲವಾಗಿದೆಯೆಂಬುದಾಗಿ ಪಾಕ್ ಪ್ರಧಾನಿ ಶ್ರೀ ಫಿರೋಜಖಾನ ನೂನರು ಪಾಕ್ ರಾಷ್ಟ್ರೀಯ ವಿಧಾನ ಸಭೆಯಲ್ಲಿ ಘೋಷಿಸಿದರು. ಅಲ್ಲದೇ ಮುಂದೆ ಸೇರಲಿರುವ ಪ್ರಧಾನಿಗಳ ಪರಿಷತ್ತಿನಲ್ಲಿ ತಾನು ಹೆಚ್ಚು ಕಠಿನ ಸಮಸ್ಯೆಯನ್ನು ಎದುರಿಸಬೇಕಾಗುವುದೆಂದು ಭವಿಷ್ಯ ನುಡಿದಿದ್ದಾರೆ. ಇಂತಹ ಸಂದರ್ಭಗಳಲ್ಲಿ ನುಡಿದ ಶ್ರೀ, ನೂನರ ಭವಿಷ್ಯವು ಇದು ವರೆಗೆ ಸುಳ್ಳಾಗದಿರುವಾಗ ಇದೂ ಸತ್ಯವಾಗುವುದೆಂದು ಮತ್ತೆ ಬೇರೆ ಹೇಳಬೇಕಾಗಿಲ್ಲ. ಏಕೆಂದರೆ, ಶ್ರೀ ನೂನರಿಗೆ ಪ್ರಾಯಃ ಇಂತಹ ಜಟಿಲ ಸಮಸ್ಯೆಗಳು ಬೇಗನೇ, ಅದರಲ್ಲೂ ಶಾಂತ ವಿಧಾನದಲ್ಲಿ, ಬಗೆಹರಿಯಲೇಬೇಕು ಎಂಬ ಮಿಥ್ಯಾಕಾಂಕ್ಷೆಯಿರುವುದಿಲ್ಲವೆಂಬುದು ಭಾರತೀಯರಿಗೆಲ್ಲಾ ಈ ಮೊದಲೇ ಗೊತ್ತು.

ಕತ್ತಿಯ ಬಾಯಲ್ಲಿ ಜತ್ತಿ ವರದಿ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ವಿಶೇಷಾಧಿವೇಶನವು ಜತ್ತಿ ಸಮಿತಿಯ ಭೂಸುಧಾರಣಾ ವರದಿಯ ಬಗ್ಗೆ ಸಾಮಾನ್ಯ ಚರ್ಚೆಯನ್ನು ಈ ತಿಂಗಳ ಮೊದಲನೆ ದಿನಾಂಕ ನಡೆಸಿತು. ದೇಶದಲ್ಲಿರುವ ಸದ್ಯದ ಗಂಭೀರ ಆಹಾರ ಪರಿಸ್ಥಿತಿಯನ್ನು ಅವಲೋಕಿಸಿ, ಅಧಿಕ ಆಹಾರೋತ್ಪಾದನೆಯ ಮಾರ್ಗದಲ್ಲಿ ವೈ

ತ್ಯಯವನ್ನು ತರಬಹುದಾದ ಯಾವುದೇ ತೀವ್ರ ಕ್ರಮವನ್ನು ಕೈಗೊಳ್ಳಬಾರದೆಂದೂ, ಭೂಸುಧಾರಣೆಯ ಬಗ್ಗೆ ಯೋಜನಾ ಆಯೋಗದವರು ಹಾಕಿಕೊಟ್ಟ ಸಾಮಾನ್ಯ ನಿರ್ದೇಶಗಳು ಒಪ್ಪುವಂತಹವಾದರೂ ಅದರ ಪರಿಮಿತಿಯಲ್ಲಿಯೇ ರಾಜ್ಯದ ಆಹಾರೋತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಆತಂಕ ಹೇರದ ಸರ್ವಸಮ್ಮತ ಯೋಜನೆಯೊಂದನ್ನು ತಯಾರಿಸಬೇಕೆಂದೂ, ಜತ್ತಿ ಸಮಿತಿಯ ವರದಿ ಮತ್ತು ಆ ಬಗ್ಗೆ ವಿವಿಧ ವರ್ಗದ ಜನರಿಂದ ಬಂದ ವಿನಂತಿ ಪತ್ರಗಳನ್ನು ಕೂಲಂಕಷವಾಗಿ ಚರ್ಚಿಸಿ, ಸರಕಾರಕ್ಕೆ ಸೂಕ್ತ ಸಲಹೆಯೀಯಲು ಉಪಸಮಿತಿಯೊಂದನ್ನು ನೇಮಿಸಬೇಕೆಂದೂ ತೀರ್ಮಾನಕ್ಕೆ ಬರಲಾಯಿತು. ಈ ರೀತಿಯಾಗಿ ಒಕ್ಟೋಬರ ಎರಡನೆ ವಾರದೊಳಗೆ ಸಲಹೆಯನ್ನು ಪಡೆದು ರಾಜ್ಯ ಸರಕಾರವು ಅಕ್ಟೋಬರ್ ಅಂತ್ಯದೊಳಗೆ ಭೂಸುಧಾರಣಾ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸುವುದೆಂದು ತಿಳಿದುಬಂದಿದೆ. ಜತ್ತಿ ಸಮಿತಿಯ ವರದಿಯು ಈ ಗಿದ್ದಹಿಡುವಳಿಯನ್ನು ಒಡೆದು ಚೂರು ಚೂರು ಮಾಡಲು ಪ್ರೇರೇಪಿಸುವುದರಿಂದ, ಆಹಾರೋತ್ಪಾದನೆಯಲ್ಲಿ ಮಹತ್ತರ ಕಂಟಕವಾಗುವುದೆಂಬ ಪ್ರತಿಕ್ರಿಯೆಯು ವಿಶೇಷವಾಗಿರುವುದರಿಂದ, ಜತ್ತಿಯವರ ವರದಿಯ ಬಹ್ಯಂಶಕ್ಕೆ ಈಗಾಗಲೇ ಒರಳೆ ಹಿಡಿದಂತಾಯಿತು; ಅದರೊಂದಿಗೆ, ಇತ್ತೀಚೆಗೆ ಜತ್ತಿಯವರು ನೇಮಿಸುವೆವೆಂದು ಘೋಷಿಸಿದ, ಆದರೆ, ಇದುವರೆಗೂ ನೇಮಿಸದ, ನೂತನ ಭೂ ಸುಧಾರಣಾ ಪರಿಶೀಲನಾ ಸಮಿತಿಯು ಕಲ್ಪನೆಯಲ್ಲೇ ಕಾಲವಶವಾಯಿತೆನ್ನುವುದೂ ಸತ್ಯವಾಗದಿರದು.

ಪೋಲೀಸು ದಳದವರಿಗೆ ಮನೆ ಬತ್ತೆ

ಮೈಸೂರು ರಾಜ್ಯ ಮಂತ್ರಿಗಳು ಸಭೆ ಸೇರಿ ರಾಜ್ಯದ ಪೋಲೀಸು ದಳದ ವಿವಿಧಾಧಿಕಾರಿಗಳಿಗೆ ಮನೆ ಬಾಡಿಗೆಯ ಬಗ್ಗೆ ವಿಶೇಷ ಬತ್ತೆಯನ್ನು ಈಗಿಂದೀಗಲೇ ಕೊಡಬೇಕೆಂಬ ನಿರ್ಣಯವನ್ನು ಮಾಡಿತು. ಸಬ್ ಇನ್ಸ್ಪೆಕ್ಟರ್ ಅಥವಾ ತತ್ಸಮ ಪದದಲ್ಲಿರುವವರಿಗೆ ನಗರಗಳಲ್ಲಿ ರೂ. ೧೨; ಇತರೆಡೆಯಲ್ಲಿ ರೂ. ೮; ಸಹಾಯಕ ಸಬ್ ಇನ್ಸ್ಪೆಕ್ಟರಿಗೆ ನಗರಗಳಲ್ಲಿ ರೂ. ೮ ಮತ್ತು ಬೇರೆಡೆ ರೂ. ೭; ಹೆಡ್‌ಕಾನ್ಸ್ಟೇಬಲ್ಲರಿಗೆ ನಗರದಲ್ಲಿ ರೂ. ೭ ಮತ್ತು ಇತರೆಡೆ ರೂ. ೫ ಹಾಗೂ ಸಾಮಾನ್ಯ ಕಾನ್ಸ್ಟೇಬಲ್ಲರಿಗೆ ನಗರದಲ್ಲಿ ರೂ. ೫.೫೦ ಮತ್ತು ಉಳಿದೆಡೆ ರೂ. ೪ರಂತೆ ಪತಿ ತಿಂಗಳಿಗೆ ಮನೆ ಬಾಡಿಗೆ ಬತ್ತೆಯೆಂದೀಯಲಾಗುವುದು. ಬೆಂಗಳೂರು, ಮೈಸೂರು, ಕೋಲಾರ ಚಿನ್ನದ ಗಣಿಗಳು, ಭದ್ರಾವತಿ, ದಾವಣಗೆರೆ, ಹರಿಹರ, ಹುಬ್ಬಳ್ಳಿ, ಮಂಗಳೂರು, ಮತ್ತು ಬೆಳಗಾವಿಗಳಲ್ಲಿನ ಪೋಲೀಸ ಇನ್ಸ್ಪೆಕ್ಟರರಿಗೆ ರೂ. ೧೫ ಮನೆ ಬಾಡಿಗೆ ಬತ್ತೆಅಥವಾ ಬಾಡಿಗೆಯಿಲ್ಲದೆ ಮನೆಗಳನ್ನು ಕೊಡಲಾಗುವುದು.

ಅಲ್ಲಲ್ಲಿಯ ಸುದ್ದಿಸಾರ

ಲೇಖನ ಸ್ಪರ್ಧೆ—

ಬ್ರಹ್ಮಾವರ ಕರ್ನಾಟಕ ಸಂಘವು ನಾಡಹಬ್ಬದ ಸಲುವಾಗಿ ಒಂದು ಲೇಖನ ಸ್ಪರ್ಧೆಯನ್ನು ಏರ್ಪಡಿಸಿದೆ. ಲೇಖನದ ವಿಷಯ 'ನಿಮ್ಮ ನೆಚ್ಚಿನ ಆಧುನಿಕ ಕನ್ನಡ ಸಾಹಿತಿ ಮತ್ತು ಅವನ ಕೃತಿಗಳು'. ಲೇಖನವು ಫೂಲ್‌ಸ್ಕ್ಯಾಪ್ ೫ ಪುಟಗಳಿಗೆ ಸೀಮಿತವಾದುದು. ಹಾಳೆಯ ಒಂದೇ ಭಾಗದಲ್ಲಿ ಬರೆದಿರಬೇಕು. ಪ್ರಥಮ ಬಹುಮಾನ ರೂಪಾಯಿ 10/- (ಹತ್ತು) ದ್ವಿತೀಯ ಬಹುಮಾನ ರೂಪಾಯಿ 5/- (ಐದು) ಕೊಡಬೇಕೆಂದು ನಿರ್ಧರಿಸಿದೆ. ಲೇಖನವು ಅಕ್ಟೋಬರ್ ತಾ. ೨೭ ವಳಗಾಗಿ—ಕಾರ್ಯದರ್ಶಿ, ಕರ್ನಾಟಕ ಸಂಘ, ಬ್ರಹ್ಮಾವರ, ದ. ಕ.—ಇವರಿಗೆ ಕಳಿಸಬೇಕು. ಬಹುಮಾನ ಸಮಾರಂಭ ನಾಡಹಬ್ಬದ ಕಾಲದಲ್ಲಿ ವಿತರಣೆ ಮಾಡಲಾಗುವುದು.

ಗ್ರಾಮಸ್ಥರ ಶ್ರಮದಾನ—

ಅಲೆವೂರು, ಮರ್ಣೆ, ಪೆರ್ಣಂಕಿಲ, ಕಣಂಜಾರು ರಸ್ತೆ ನಿರ್ಮಾಣದ ಅಂಗವಾಗಿ ಕೊಡಂಗಲ್ ಹೊಳೆಯ ಕಡೆಯಿಂದ ರಸ್ತೆ ಕೆಲಸ ಪ್ರಾರಂಭಿಸುವರೆ ಗ್ರಾಮಸ್ಥರ ಸಭೆಯು ಕಳೆದ ತಾ. ೨೪ರಂದು ಶ್ರೀ. ಯು. ಯಸ್. ನಾಯಕ್, ಎಮ್. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಮ್. ಗೋವಿಂದ ಶೆಟ್ಟರು ಸ್ವಾಗತಿಸಿದರು. ಶ್ರೀಗಳಾದ ಎಮ್. ಮಹಾಬಲ ಶೆಟ್ಟಿ, ಕೆ. ವಿಠಲ ಸರಳಾಯ, ಎಮ್. ಸದಾನಂದ ಶೆಟ್ಟಿ ಮೊದಲಾದವರು ಮಾತನಾಡಿದರು. ನಂತರ ಅಧ್ಯಕ್ಷರು ಮಾತನಾಡುತ್ತಾ, ಗ್ರಾಮಸ್ಥರೆಲ್ಲರೂ ತಂತಮ್ಮ ಗ್ರಾಮಗಳ ರಸ್ತೆ ಸಾಕರ್ಯಗಳಿಗಾಗಿ ಶ್ರಮದಾನ ನೀಡಬೇಕೆಂದು ಹೇಳಿ ತಾನು ಸಾಧ್ಯವಾದ ಸಹಾಯ ನೀಡುವುದಾಗಿ ಭರವಸೆಯಿತ್ತರು. ರಸ್ತೆ ಕೆಲಸವನ್ನು ಪ್ರಾರಂಭಿಸಲು ನಿರ್ಧಾರವಾಯಿತು.

ಶಂಕು ಸ್ಥಾಪನೆ—

ಪಡುಬಿದ್ರೆ ಸರಕಾರಿ ಫಿಶರೀಸ್ ಹಾ. ಎ. ಶಾಲೆಯ ಹೊಸ ಕಟ್ಟಡದ ಶಂಕು ಸ್ಥಾಪನೆಯನ್ನು ಕಳೆದ ತಾ. ೨೪ರಂದು ಪಂಚಾಯತ್ ಬೋರ್ಡ್ ಅಧ್ಯಕ್ಷ ಶ್ರೀ ಸಿ. ಮಹಾಬಲ ಶೆಟ್ಟರು ನೆರವೇರಿಸಿದರು. ಬೋರ್ಡ್ ಶಾಲಾ ಹೆಡ್ಮಾಸ್ಟರ್ ಶ್ರೀ. ಎಮ್. ಮಂಜುನಾಥ ಪ್ರಭುಗಳು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ. ವೈ. ಲಕ್ಷ್ಮೀನಾರಾಯಣ ಜ್ಯೋತಿಷರು ಧ್ವಜಾರೋಹಣ ಮಾಡಿದರು.

"ನೂತಂಗ ಕನ್ಯಾ" ನಾಟಕ—

ಬೊಂಬಾಯಿಯ ಕರ್ನಾಟಕ ಸಾಂಸ್ಕೃತಿಕ ಮತ್ತು ವಿದ್ಯಾ ಸಂಸ್ಥೆಯ ಮೊದಲ ಕಾಣಿಕೆಯಾದ 'ನೂತಂಗ ಕನ್ಯಾ' ನಾಟಕದ ಪ್ರಾರಂಭೋತ್ಸವವನ್ನು ತಾ. ೩೧ರಂದು ಭಾಗವಾಡಿ ಥಿಯೇಟರಿನಲ್ಲಿ ಜರಗಿಸಲಿದೆ. ಶ್ರೀ. ಎನ್. ಕೆ. ತಿರ್ಪುಡೆಯವರು ನೆರವೇರಿಸಿದರು. ಪ್ರಿನ್ಸಿಪಾಲ್. ಆರ್. ಆರ್. ಮೇಲ್ಮನೆ, ಜೆ. ಸಿ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸೊಸ್ಯಾಟಿ ಅಧ್ಯಕ್ಷ ಶ್ರೀ ಬಿ. ವಿ. ಸೆಟ್ಟರು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಬಿ. ಎಮ್. ಸೆಟ್ಟರು ಧನ್ಯವಾದಗಳನ್ನಿತ್ತರು.

ಬೊಂಬಾಯಿಯ ದ. ಕನ್ನಡಿಗರು—

ಸುರತ್ಕಲ್ ಕುಲಾಲ ಪರಸ್ಪರ ಸಹಾಯಕ ಸಂಘದ ವಾರ್ಷಿಕೋತ್ಸವವು ತಾ. ೨೪ರಂದು ಡಾ. ಲಲಿತಾ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಸ್ವಾಗತ ಭಾಷಣ, ವರದಿವಾಚನ, ಬಹುಮಾನ ವಿತರಣೆ ಇತ್ಯಾದಿ ಕಾರ್ಯಕ್ರಮಗಳು ಸಾಂಗವಾದುವು. ಸಂಘದ ಚಟುವಟಿಕೆಗಳನ್ನು ಮೆಚ್ಚಿ ಅಧ್ಯಕ್ಷರು ಎರಡು ನೂರು ರೂಪಾಯಿ ದಾನವಿತ್ತರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಗ್ರಾಮಸ್ಥರ ಪರಿಷತ್ತು—

ದ. ಕ. ಜಿಲ್ಲಾ ಗ್ರಾಮಾಧಿಕಾರಿಗಳ ಪರಿಷತ್ತು ಪುತ್ತೂರಲ್ಲಿ ತಾ. ೩೧ರಂದು ಶ್ರೀ. ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾಧಿಕಾರಿ ಶ್ರೀ. ವೈ. ಸಿ. ಹೊಂಬಾಳಯ್ಯನವರು ಪರಿಷತ್ತನ್ನು ಉದ್ಘಾಟಿಸುತ್ತಾ ರಾಜ್ಯದ ಗತ ವೈಭವನನ್ನು ಮರಳಿ ಹೊಂದುವ ಮಹತ್ಕಾರ್ಯ ಸಾಧನೆಗಾಗಿ ಕ್ರಮಿಸಿ ದುಡಿಯುವ ಹೊಣೆಗಾರಿಕೆಯು ಗ್ರಾಮಾಧಿಕಾರಿಗಳದ್ದೆಂದೂ ಈ ಜಿಲ್ಲೆಯ ಗ್ರಾಮಾಧಿಕಾರಿಗಳಿಗೆ ಸಂಬಳದ ಬದಲು ಗೌರವ ರೂಪದ ಸಂಭಾವನೆ ಮಾತ್ರವೇ ಕೊಡಲಾಗುತ್ತಿದೆಯೆಂದರು. ಶ್ರೀ. ಸಿ. ಶ್ರೀನಿವಾಸ ರಾಯರು ಸ್ವಾಗತ ಭಾಷಣಮಾಡಿದರು. ಪುತ್ತೂರು ಅಸಿಸ್ಟಾಂಟ್ ಕಮಿಶನರ್ ಶ್ರೀ. ಸಿ. ಎಸ್. ತಿಮ್ಮಪ್ಪ ಶೆಟ್ಟರು ಮಾತನಾಡುತ್ತಾ ಗ್ರಾಮಾಧಿಕಾರಿಗಳು ಸರಕಾರ ಮತ್ತು ಗ್ರಾಮಗಳ ಪ್ರತಿನಿಧಿಗಳೆಂದೂ ಈ ವರ್ಗದವರಿಗೆ ಅವರು ಮಾಡುವ ಕೆಲಸವನ್ನು ಹೊಂದಿದ ವೇತನ ಸಿಗಬೇಕಾದುದು ನ್ಯಾಯವೆಂದೂ ವಿವರಿಸಿದರು

ಕನ್ನಡಿಗರ ಸಮ್ಮೇಳನ—

ಮಂಗಳೂರಿನ ಪ್ರಮುಖ ನಾಗರಿಕರ ಸಭೆಯೊಂದು ತಾ. ೨೨ರಂದು ಮಂಗಳೂರು ಬಾರ್ ಎಸೋಸಿಯೇಶನ ಆಫೀಸಿನಲ್ಲಿ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿ, ಕಾಸರಗೋಡು ತಾಲೂಕಿನ ಕನ್ನಡ ಪ್ರದೇಶಗಳನ್ನು ಮೈಸೂರು ರಾಜ್ಯದೊಡನೆ ವಿಲೀನಗೊಳಿಸುವ ಕುರಿತು ತಕ್ಕ ಕಾರ್ಯಕ್ರಮ ಕೈಗೊಳ್ಳುವರೆ ಕನ್ನಡಿಗರ ಸಮ್ಮೇಳನವೊಂದನ್ನು ಇದೇ ತಿಂಗಳ ತಾ. ೨೩ ಮತ್ತು ೨೪ರಂದು ಮಂಗಳೂರಲ್ಲಿ ಜರಗಿಸಲು ನಿರ್ಣಯವಾಯಿತು.

ಪ್ರದರ್ಶನ ಪ್ರಚಾರ—

ದೇಶದ ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗುವಂತೆ ಜನತೆ ಹಾಗೂ ಅಧಿಕಾರಿಗಳಲ್ಲಿ ವಿಶಿಷ್ಟರೀತಿಯ ಉತ್ಸಾಹವನ್ನು ಉಂಟುಮಾಡುವ ಉದ್ದೇಶದಿಂದ ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನ ಆಶ್ರಯದಲ್ಲಿ ಮಂಗಳೂರಲ್ಲಿ ದಶಂಬರ ಕೊನೆಯ ವಾರದಲ್ಲಿ ಪ್ರದರ್ಶನ ಮಹೋತ್ಸವವನ್ನು ಜರಗಿಸಲು ನಿಶ್ಚಯಿಸಲಾಗಿದೆ. ಈ ಬಗ್ಗೆ ತಾ. ೩೦ರಂದು ಮಾಜಿಮಂತ್ರಿ ಶ್ರೀ. ವೈ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಪ್ರಮುಖರ ಸಭೆ ಜರಗಿತು. ಜಿಲ್ಲಾಧಿಕಾರಿ ಶ್ರೀ. ವೈ. ಸಿ. ಹೊಂಬಾಳಯ್ಯನವರು ಸಭೆ ಕರೆದವರ ಉದ್ದೇಶಗಳನ್ನು ವಿವರಿಸಿದರು. ಶ್ರೀ. ಬಿ. ಎಸ್. ಭಾಸ್ಕರ ರೈಗಳು ಧನ್ಯವಾದಗಳನ್ನಿತ್ತರು.

ಕಾಲೇಜು ವರ್ಧಂತಿ—

ಉಡುಪಿ ಸಂಸ್ಕೃತ ಕಾಲೇಜಿನ ೫೩ನೆ ವರ್ಧಂತಿಯು ತಾ. ೩೧ರಂದು ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಸಿ. ವಿ. ಆಚಾರ್ಯರು ಸ್ವಾಗತಿಸಿದರು. ಪ್ರಿನ್ಸಿಪಾಲ್ ಕಾಲಿಗೆ ಶೇಷಾಚಾರ್ಯರು ವರದಿಯನ್ನೋದಿದರು. ಶಿಷ್ಯಾನ್ ಎ. ಸುಬ್ರಾಯರಿಂದ ಸ್ವಸ್ತಿವಾಚನವಾದನಂತರ ಅಧ್ಯಕ್ಷರು ಭಾಷಣಮಾಡುತ್ತಾ ವೃತ್ತಿಪರ ಕಾಲೇಜುಗಳ ಕುರಿತು ಆಗುತ್ತಿರುವ ವಿಪ್ಲಂಸಕಟೀಕೆ ಅಸಮಂಜಸವೆಂದರು. ವರ್ಧಂತಿ ಸಂಬಂಧ ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶತೀರ್ಥ ಸ್ವಾಮಿಗಳವರು ಕಾಲೇಜಿನ ಪಂಡಿತರಿಗೂ ವಿದ್ಯಾರ್ಥಿಗಳಿಗೂ ವಿಶೇಷ ಭೋಜನ ವ್ಯವಸ್ಥೆ ಮಾಡಿದ್ದರು.

ಎರಡು ಮೆಡಿಕಲ್ ಕಾಲೇಜುಗಳು—

ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನವರು ಮಣಿಪಾಲದಲ್ಲಿಯೂ ಮಂಗಳೂರಿನಲ್ಲಿಯೂ ನಡೆಸುತ್ತಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂಪೂರ್ಣವಾಗಿ ಮಂಗಳೂರಿನೆಡೆ ಒಯ್ಯಲಾಗುವುದೆಂದೂ ಮಣಿಪಾಲದಲ್ಲಿ ಸ್ವಯಂಪೂರ್ಣವಾದ ಪ್ರತ್ಯೇಕ ಮೆಡಿಕಲ್ ಕಾಲೇಜನ್ನು ಸ್ಥಾಪಿಸುವ ಸಿದ್ಧತೆಗಳಾಗುತ್ತಿವೆಯೆಂದೂ ಕಳೆದ ತಾ. ೩೧ರಂದು ಎಕೆಡೆಮಿಯ ಸುಪ್ರೀಮ್ ಗವರ್ನಿಂಗ್ ಬೋಡಿ ಸಭೆಯು ಮುಕುಂದ ನಿವಾಸದಲ್ಲಿ ಶ್ರೀ. ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿದಾಗ ರಿಜಿಸ್ಟ್ರಾರ್ ಟಿ. ಮಾಧವ ಪೈಗಳವರು ವ್ಯಕ್ತಪಡಿಸಿದರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 142/58.

ಅಯ್ಯ ಬುಣ್ಣು ಸಹಾ — ವಾದಿರು

ಕುಂಞಾಣಿ ಬುಣ್ಣು ಜಿನ್ನಮ್ಮನವರ ಮಗ ಮಣಿ ನಾಲ್ಕೂರು ಗ್ರಾಮದ ಅಂತರ—

1ನೆ ಪ್ರತಿವಾದಿ

ಸದ್ರಿ 1ನೇ ಪ್ರತಿವಾದಿಗೆ ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನೀವು ತಾ. 9—11—58ರಲ್ಲಿ 2ನೇ ಪ್ರತಿವಾದಿಗೆ ಬರೆಕೊಟ್ಟ ವ್ಯಾದಿ ಗೇಣಿಚೀಟು ನ್ಯಾಯವಾದ್ದಲ್ಲವೆಂತಲೂ, ವಾದಿರಿಗೂ ಅವರ ಕುಟುಂಬಕ್ಕೂ ಭಾಧಿಸತಕ್ಕದ್ದಲ್ಲವೆಂತಲೂ, ಅದರ ಉಲ್ಲಂಘನೆ ಶಿಕ್ಷಾ ಸದ್ರಿ ವ್ಯಾದಿ ಗೇಣಿಚೀಟಿಗೆ ಸಮ್ಮಂದ ಪಟ್ಟ ಭೂಮಿ ಸ್ವಾಧೀನತೆ ಪಡಿಸಿಕೊಳ್ಳುವ ನೋಟಿಸ ದಾವೆಯನ್ನು ತಾ. 11—9—58ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಹಾಜರಾಗಿ ಉದಕ ರಿಸಿತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುತ್ತಕಂಡಂತೆ ತೀರ್ಮಾನಿಸಲಾದೀತು.

M. Radhakrishna Rao,
Advocate for Plff.

ಪುತ್ತೂರು 1—9—58.

ಏಲಂ ನೋಟೀಸು.

ದಿ ಕೆಥೋಲಿಕ್ ಬೇಂಕ್, ಲಿ., ಕುಂದಾಪುರ.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈದಿನ ಮೇಲೆ ಸಡಕೊಂಡ ಸಾಲವನ್ನು ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಸುರುವಾತ ಮಾಡದೆ ಇರುವುದರಿಂದ, ಸದರಿಯವರ ಈಡಿಟ್ಟ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 19—9—58ನೇ ಶುಕ್ರವಾರ ದಿನ ಸುಮಾರ್ಹ್ ಘಂಟೆ ಎರಡಕ್ಕೆ ಸರಿಯಾಗಿ ನಮ್ಮ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಮೇಲ್ಕಾಣಿಸಿದ ತಾರೀಕಿಗೆ ಏಲಂ ಮಾಡಲು ಅಸಾಧ್ಯವಾದಲ್ಲಿ ಸುನಃ ನೋಟೀಸು ಕೊಡದೇನೇ ಬ್ಯಾಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಯೇಲಂ ಸುಂದುವರಿಸಲಾದೀತು.

ತಾರೀಕು ಮತ್ತು ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು ರೂ. ನ ಸೈ.
24.6.1957 38/1057-21	ಶಂಕರ ಶೆಟ್ಟಿ, ಸೂರಪ್ಪ ಶೆಟ್ಟಿ ಅಳಿಯ ಚಪ್ಪರ ಮಕ್ಕಿಮನೆ ಕೊಲ್ಲೂರು ಪೋಸ್ಟು ದ. ಕ.	30-00
24.8.1957 38/1567. 1	ಗೋವಿಂದ ಮೊಗೇರ, ಮುಡುರ ಮೊಗೇರನ ಅಳಿಯ, ಪಕ್ಲಾಡಿ ಪೋಸ್ಟು ಕುಂದಾಪುರ ದ. ಕ.	25-00
15.9.1956 32/1459-24	ದೇವದಾಸ ಪೇಸ್ತ, ಪುಟ್ಟಯ್ಯ ಪೇಸ್ತರ ಮಗ, ಮಡ್ಡು ಗುಡ್ಡೆ ಕುಂದಾಪುರ ಪೋಸ್ಟು.	12-00
27.10.1956 32/1739. 3	ಫ್ರಾನ್ಸಿಸ್ ಡಿಸೋಜ, ದುಮಿಂಗ್ ಡಿಸೋಜರ ಮಗ ಗುರು ವಿನಟೆಟ್ಟು, ಆನಗಳ್ಳಿ ಪೋಸ್ಟು ಕುಂದಾಪುರ.	15-00

Office of the Catholic Bank Ltd, (Sd) I. Menezes
Coondapur 1—9—1958. ಏಜಂಟ್.

ಇದೀಗ ಬಿಕರಿಗೆ ಸಿದ್ಧವಾಗಿದೆ

ಶ್ರೀ ನಚಿಕೇತರವರ

"ಸ್ನೇಹಸ್ತ್ರಿ"

(ಸಮಾಜ ಸುಧಾರಕ ಕಾದಂಬರಿ)

ದ್ವಿವರ್ಣ ರಕ್ಷಾಕವಚ ಬೆಲೆ ರೂ.1=25

ವಿವರಗಳಿಗೆ:

ಗಾಯತ್ರಿ ಪ್ರಕಾಶನ

ಚಾಮುಂಡಿಪುರಂ, ಮೈಸೂರು-1.

ವಿದೇಶೀ ಸಹಾಯ

(ಜನೇ ಪುಟದಿಂದ)

ತಕ್ಕಾಗಿ ಬಲಗೊಡುವುದೆಂದೂ ಹೇಳಲಾಗುತ್ತಿದೆ, ಬ್ರಿಟಿಸ ಬೇಂಕು ಹಾಗೂ ಉದ್ದಿಮೆದಾರರು ಈ ಬಗ್ಗೆ ವತ್ತಾಯ ಮಾಡುತ್ತಿದ್ದರು. ಅಂತಾರಾಷ್ಟ್ರೀಯ ಮಂಡಲೀಯ ವ್ಯಾಪಾರವನ್ನು ಹೆಚ್ಚಿಸುವುದಕ್ಕೆ ಇಂತಹೆ ಸೌಕರ್ಯಗಳು ಬೇಕೆಂಬುದಾಗಿ ಇವರು ಅನ್ನುತ್ತಿದ್ದರು,

ಬೊಂಬಾಯಿಯಿಂದ ದೀರ್ಘ ಪ್ರವಾಸ ಮಾಡಿದ್ದರೂ ಶ್ರೀ ದೇಸಾಯರು ಪ್ರಸನ್ನಮುಖರಾಗಿ ತನ್ನ ನಿಯೋಗವು ಸಾರ್ಥಕವಾಗುವುದೆಂದು ನಂಬಿಕೊಂಡಿದ್ದಾರೆ. ಭಾರತದ ಈಗಿನ ಆರ್ಥಿಕ ನೀತಿಗಳನ್ನು ಉಗ್ರಪಡಿಸಿಕೊಂಡಿದ್ದರೂ ಬ್ರಿಟಿಸ ಮಂತ್ರಿಗಳೊಡನೆ ಆಡುತ್ತಿರುವಾಗ, ಗಾಂಧೀವಾದಿ ಸರಳತೆ ಹಾಗೂ ವಿನಮ್ರತೆಯನ್ನು ಪ್ರದರ್ಶಿಸಿದ್ದರಂತೆ!

ಬ್ರಿಟಿಸ ವಾರ್ತಾಪತ್ರಿಕೆಗಳೂ, ಜನರೂ ಶ್ರೀ ದೇಸಾಯರನ್ನು "ಪಂಡಿತ ನೆಹರೂರವರ ಭಾವಿ ಉತ್ತರಾಧಿಕಾರಿ" ಎಂದು ತಿಳಿದು ಕೊಂಡಂತೆ ವರ್ತಿಸಿದ್ದುವು. ಇದರಿಂದ ಶ್ರೀ ದೇಸಾಯಿಯವರು ಕೊಂಚ ಬೇಸರ ಹೊಂದಿದಂತೆ ಕಂಡುಬಂದರೆಂದು ವರದಿಯಾಗಿದೆ ಏಕೆಂದರೆ, ಶ್ರೀ ದೇಸಾಯಿಯವರು ಬ್ರಿಟಿಷ ಪ್ರಧಾನಿ ಮ್ಯಾಕಮಿಲನ ಆಮಂತ್ರಣವನ್ನು ಮನ್ನಿಸಿ ಅಲ್ಲಿಗೆ ಹೋಗಿರುತ್ತಾರೆ.

ಭಾರತದ ಈಗಿನ ಆರ್ಥಿಕ ಕಠಿಣತೆಗಳು ಅತಿ ಮಹತ್ವಾಕಾಂಕ್ಷೆ ಮತ್ತು ದೋಷಪೂರ್ಣ ಆಯೋಜನೆಯ ಕಾರಣದಿಂದ ಕಾಣಿಸಿಕೊಂಡಿರದೆ ಸುಯೋಜಿತ ಕಾಲುವೆಯ ಸಂಕಟಿ, ಆವಿರಿಕೆಯ ಮಂದೀ ಮೊದಲಾದ ಅಕಸ್ಮಿಕ ಘಟನೆಗಳಿಂದಲೇ ಉದ್ಭವಿಸಿದೆ ಎಂದು ಬ್ರಿಟನ್ನಿನಲ್ಲಿ ಈಗ ವಿಶ್ವಾಸ ಹುಟ್ಟಿದೆಯೆಂಬುದನ್ನು ಸಂತೋಷಚಿತ್ತದಿಂದ ಮುರಾರ್ಜಿ ತಿಳಿದುಕೊಂಡಿದ್ದಾರೆ.

ಭಾರತದ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ದ್ವಿತೀಯ ಯೋಜನೆಯಲ್ಲಿ ಕಂಡುಬಂದ ಕಠಿನತೆಗಳನ್ನು ಕಠಿನತೆಗಳು ಕಂಡುಬರುವುದಿಲ್ಲವೆಂದೂ ನಂಬಲಾಗಿದೆ. ಭಾರತವು ತನ್ನ ದೋಷಗಳನ್ನು ತಿಳಿದುಕೊಂಡು, ತೃತೀಯ ಯೋಜನೆಯನ್ನು ದೇಶದ ಆರ್ಥಿಕ ವಟ್ಟದ ಒಳಗಡೆಯೇ ರೂಪಿಸಿಕೊಳ್ಳಬೇಕು ಎಂಬ ಅಭಿಪ್ರಾಯಗಳು ಬ್ರಿಟನ್ನಿನಲ್ಲಿ ಕಂಡು ಬರುತ್ತಿದೆ. ಅವರಿಗೆ ಶ್ರೀ ದೇಸಾಯರ—"ಭಾರತಕ್ಕೆ ವಿದೇಶೀ ಸಹಾಯವು ಎಷ್ಟರ ವಟ್ಟಿಗೆ ದೊರೆಯುವುದೆಂದು ನಿಗದಿಯಾದ ನಂತರವೇ ಭಾರತದ ತೃತೀಯ ಯೋಜನೆಯು ರೂಪಿತವಾಗುವುದು. ಅದುದರಿಂದ, ಭಾರತಕ್ಕೆ ನೀವು ಎಷ್ಟು ಸಹಾಯ ಮಾಡುವಿರೆಂಬುದನ್ನು ತಿಳಿಸಿರಿ" ಎಂದು ಕೇಳುತ್ತಾರೆ)

ಈ ನಡುವೆ, ಶ್ರೀ ದೇಸಾಯಿಯವರು ಈಗ ಕೈಗೊಳ್ಳಲಾಗುವ ಯೋಜನೆಯನ್ನು ತೀವ್ರ ಪ್ರಯಾಸದಿಂದಲಾದರೂ ಮುಗಿಸಿಯೇ ತೀರುವೆವೆಂಬ ಮಾತನ್ನೂ ಒತ್ತಿಒತ್ತಿ ಅಡುತ್ತಿದ್ದಾರೆ ಹೀಗಾಗಿ, ಈ ಬಾಗಿ ಭಾರತಕ್ಕೆ ಅನುಕೂಲವಾದ ವಾತಾವರಣವು ಬ್ರಿಟನ್ನಿನಲ್ಲಿ ಹರಡಿದೆಯೆಂದು ಹೇಳಬಹುದು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ.ನ.)

ಬಾಪೂಜಿಯ ಬದುಕು—

ಬರೆದವರು: ಗೋವಿಂದಮೂರ್ತಿ ದೇಸಾಯ್, ಬಿ. ಎ. (ಆನರ್ಸ್). ಪ್ರಕಾಶಕರು: ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ. ಪುಟಗಳು xii+೧೫೭. ಬೆಲೆ ಉತ್ತಮ ಪ್ರತಿ ರೂ ೨-೫೦. ಸಾದಾ ಪ್ರತಿ ರೂ ೨.

ಭಾರತದಲ್ಲಿ ಮಾತ್ರವಲ್ಲ ಜಗತ್ತಿನ ಸಮಸ್ತ ದೇಶಗಳಲ್ಲಿಯೂ ಸಾಕಷ್ಟು ಪ್ರಸಿದ್ಧಿಯನ್ನು ಪಡೆದ, ಭಾರತೀಯರಿಂದ ಬಾಪೂಎಂಬ ಪ್ರತಿಪೂರ್ಣ ಅಂಕಿತದಿಂದ ಕರೆಯಲ್ಪಡುವ ರಾಷ್ಟ್ರಪಿತನೆಂದು ಗೌರವಿಸಲ್ಪಡುವ ಮಹಾತ್ಮಾ ಗಾಂಧಿಯವರು ಎಲ್ಲರಿಗೂ ಸುಪರಿಚಿತರು ಅಂತಹ ವ್ಯಕ್ತಿ ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕವೇ ಮೊದಲಾದ ಸಕಲ ವಿಭಾಗಗಳಲ್ಲಿಯೂ ಹುಡಿದು, ತಮ್ಮ ಪ್ರಭಾವವನ್ನು ಬೀರಿ, ಅವುಗಳ ಉನ್ನತಿಗಾಗಿ ಸೇವೆ ಸಲ್ಲಿಸಿದ್ದಾರೆಂಬುದನ್ನು ಒಪ್ಪಲೇಕು ವರ್ಷ ಎಪ್ಪತ್ತಕ್ಕೂ ಮೀರಿದ್ದ ಗಾಂಧಿಯವರು ಇಪ್ಪತ್ತು ತುಂಬಿದ ನವ ಯುವಕರಂತೆ ಕಾಯಕಕ್ಕೆ ಪಡಿತಿದ್ದುದೂ ಪ್ರಾಚೀನ ಋಷಿವರರಂತೆ ಹಿತೋಪದೇಶವಿತ್ತು ನಾಯಕತನವನ್ನು ವಹಿಸುತಿದ್ದುದೂ ಎಲ್ಲರ ಮನಸ್ಸಿನಿಂದಲೂ ಮರೆಯಲಾಗಲಾರದು. ಅವರು ತಮ್ಮ ಕಾರ್ಯಕ್ರಮಗಳಲ್ಲಿಯೇ ಅಹೋರಾತ್ರಿ ಅಂಟಿಕೊಂಡಿರುತಿದ್ದರೂ ತರಲೆಯೆತ್ತುವುದಕ್ಕೂ ಅವಕಾಶ ದೊರಯದೆ ಹೋಗುತಿದ್ದರೂ ಗೆಳೆಯರೊಂದಿಗೆ, ಅಕ್ಕಮವಾಸಿಗಳೊಂದಿಗೆ, ಎಳೆಯ ಪರೆಯರೊಂದಿಗೆ ಸಾಕಷ್ಟು ಬೆರೆಯುತಿದ್ದು ತಮ್ಮ ಸಂಪರ್ಕದಲಿಸಿದವರೆಲ್ಲರೂ ತಮ್ಮ ಸಸಿಬೇವನದ ಮಹಾಮಾಯೆಯನ್ನು ಬೀರಿ, ತಮ್ಮ ಮೋಹಪಾಶದಲ್ಲಿ ಬಂಧಿಸುತಿದ್ದರು ಅವರ ಜೀವನದಲ್ಲಿ ಎದುರಾಕಿದ ಘಟನೆಗಳು ಭಾರತೀಯರಿಗೆ ಮಾತ್ರವಲ್ಲ, ಸಕ್ಷದ ಪ್ರತಿಯೊಬ್ಬ ನಾಗರಿಕನಿಗೂ ಮಾರ್ಗದರ್ಶನ ಮಾಡುತ್ತವೆಂಬುದು ನಿರ್ವಿವಾದ.

ಭಾರತೀಯ ಬಾಷೆಗಳಲ್ಲಿ ಗಾಂಧೀಸಾಹಿತ್ಯ ಅಗಾಧ ಬೆಳಕು ಕಾಣತ್ತಿರುವುದಾದರೂ ಕನ್ನಡದಲ್ಲಿ ಅದಕ್ಕೆ ವಿಶೇಷ ಪ್ರಯಾಸವನ್ನು ಪಡಿಸಿಕೊಂಡುಬರುವುದಿಲ್ಲ ಕನ್ನಡದಲ್ಲಿ ಸಾಕಷ್ಟು ಉತ್ಸಾಹ ಬರಹಗಾರರು ಇದ್ದರೂ ಗಾಂಧೀ ಸಾಹಿತ್ಯವನ್ನೇ ಪೈಯೆಲ್ಲಾ ಕಣ್ಣಾಗಿಸಿ ಅಧ್ಯಸಿಸಿ ಅರಗಿಸಿಕೊಂಡಿರುವವರೂ ಇಲ್ಲವೆಂದು ನುಡಿಯುವುದು ದುರ್ಸ್ಥಿತಿ ಮಾತಾದೀತು. ಅದರೂ ಅದೇನು ಕಾರಣದಿಂದಲೋ ಕನ್ನಡದಲ್ಲಿ ಗಾಂಧೀ ಸಾಹಿತ್ಯ ಪಡೆಯಬೇಕಾದಷ್ಟು ಪ್ರಯತ್ನಗತೆಯನ್ನು ಹೊಂದಿರುವುದನ್ನು ಇಲ್ಲಿ ವಿಷಾದಪೂರ್ವಕವಾಗಿ ನೆನೆಯಬೇಕಾಗಿದೆ. ಅಂತಹ ಸಮಯದಲ್ಲಿ, ಶ್ರೀ ಗೋವಿಂದಮೂರ್ತಿ ದೇಸಾಯಿಯವರು ಬಾಪೂಜಿಯ ಬದುಕಿನ ಎಪ್ಪತ್ತೊಂಬತ್ತು ಸಮಿಸಗಳನ್ನು ಎತ್ತಿ ಕನ್ನಡಿಗರಿಗೆ ತೋರಿಸಿದ್ದಾರೆ

ಬಾಪೂಜಿಯವರು ಬದುಕಿದ ೭೯ ವರ್ಷಗಳ ಅವಧಿಯ, (ನಮ್ಮುಸಾಗಿ ಅವರ ೨೦ನೆ ವರ್ಷ ಪ್ರಾಯ ಸಂತರದ) ಘಟನಾ ಪುಷ್ಪಗಳ ಮಾಲೆಯಿದು ಸಾಮಾನ್ಯವಾಗಿ ಅರಿದಿದೆ ಘಟನೆಗಳು ಹಿರಿಯರಿಗೂ ಕಿರಿಯರಿಗೂ ಸುಪರಿಯಾಗಿರುತ್ತವೆ. ಬಾಪೂಜಿಯವರ ವ್ಯಕ್ತಿತ್ವ, ಅವರ ಜನಪ್ರಿಯತೆ, ನಿಸ್ಪೃಹವಾದಿತನ, ರಸಿಕತನ, ಹಾಗೂ ಯಾರಿಗೂ ತಲೆಬಗ್ಗಿಸದ ಮನೋನೈತ್ತಿ ಮೊದಲಾದುವುಗಳು, ಕರ್ತವ್ಯ ದಕ್ಷತೆ, ಕಾರ್ಯಕ್ಷಮತೆ ಪರರಿಂದ ಸೇವೆ ಮಾಡಿಸಿಕೊಳ್ಳುವುದು, ಪರರ ಸೇವೆಮಾಡುವುದು—ಎಲ್ಲವೂ ಈ ಘಟನೆಗಳಿಂದ ನಮ್ಮ ಕಣ್ಣಮುಂದೆ ಕಟ್ಟುವಂತೆ ಕಾಣುತ್ತದೆ. ಬಾಪೂಜಿಯವರ ಜೀವನ ಚರಿತ್ರೆಯದಲ್ಲವಾದರೂ ಅವರ ಜೀವನ ಚರಿತ್ರೆಯ ಪೈಲುಗಲ್ಲುಗಳಾಗಲು ಅರ್ಹವಾದ ಕೆಲವಾರು ಚಿತ್ರಗಳು ಇಲ್ಲಿವೆ. ಇಂತಹ ಮಹತ್ವಪೂರ್ಣ ಘಟನೆಗಳನ್ನು ವಿವಿಧ ಆಕರಗಳಿಂದ ಅರಿಯುವ ಮಹಾಸಾಹಸದಲ್ಲಿ ಶ್ರೀ ದೇಸಾಯಿಯವರು ಕೃತಾರ್ಥರಾಗಿದ್ದಾರೆಂದೇ ಹೇಳಬಹುದು.

ಘಟನೆಗಳ ಜೊಂದಾಣಿಕೆಯ ಬಗ್ಗೆ ಒಂದು ಮಾತನ್ನು ಉಲ್ಲೇಖಿಸುವುದು ಅಪ್ರಸ್ತುತವಾಗಲಾರದು. ಬಾಪೂಜಿ ಬಾಳಿದ ೭೯ ವರ್ಷಗಳ ಸವಿ ನೆನಪಿನಿಂದ ೭೯ ಘಟನೆಗಳನ್ನು ಅಂತಿದಂತೆಯೇ ಹೀಗೆ ಎತ್ತಿಕೊಂಡುಬಗಳನ್ನು ಕಾಲಕ್ರಮವಾಗಿ ಜೋಡಿಸಿದ್ದರೆ, ಆಗ ಬಾಪೂ ಜೀವನವನ್ನು ಇನ್ನೂ ಉತ್ತಮ ರೀತಿಯಲ್ಲಿ ಪ್ರದರ್ಶಿಸಬಹುದಾಗಿತ್ತು. ಅಧವಾ "ಅಸ್ಪೃಶ್ಯತಾ ನಿವಾರಣೆ" ಯ ಬಗ್ಗೆ ಹೆಕ್ಕಿತೆಗೆದ ಘಟನೆಗಳೆಲ್ಲವನ್ನೂ ಎಲ್ಲಾದರೊಂದು ಗಡೆಯೇ ಜೋಡಿಸಿದ್ದರೆ. ಈ ಪ್ರಧಾನ ವಿಭಾಗದಲ್ಲಿ ಗಾಂಧೀಜಿಯವರ ವಿಚಾರವೇನಿತ್ತೆಂಬುದು ತಟ್ಟನೆ ಪರಿಸುಸ್ಪಷ್ಟವಾಗಿ ದೊರೆಯುವಂತಾಗುತಿತ್ತು. ಹಾಗೆಯೇ ಉಳಿದ ಕ್ಷೇತ್ರಗಳ ಕುರಿತಾದ ಘಟನೆಗಳನ್ನೂ ಒಂದರ ಹಿಂದೊಂದನ್ನು ಜೋಡಿಸಬಹುದಿತ್ತು

ಸರಳ ಭಾಷೆ ಲಲಿತ ಶೈಲಿ ಹಾಗೂ ಸುಮಧುರ ಪದ ಪ್ರಯೋಗಗಳಿಂದ ಕೂಡಿದ ಈ ಹೊಮಾಲೆಯು ಓದುಗರ ಮನಸ್ಸನ್ನು ಆಕರ್ಷಿಸಬಲ್ಲುದು. ಕನ್ನಡಿಗರು ಅವಶ್ಯಕ ಓದಿ ತಿಳಿಯಬೇಕಾದ ಗ್ರಂಥಗಳಲ್ಲಿ ಇದೊಂದೆಂದು ಹೇಳಬಹುದು.

ಅದ್ವೈತ ಶ್ರೀ ಜಗದ್ಗುರು ಶ್ರೀ ಶಂಕರ ಭಗವತ್ಪಾದಾಚಾರ್ಯರ ಕಾಲ ನಿರ್ಣಯ— ರೇಖಕ ಮತ್ತು ಪ್ರಕಾಶಕರ: ನಟ್ಟೋಜ ಶಿವರಾವ್, ಪುತ್ತೂರು, ದ. ಕ. ಪುಟಗಳು ೧೪.

ಅದ್ವೈತ ಮತ ಪ್ರತಿಷ್ಠಾಪನಾಚಾರ್ಯರಾದ ಶ್ರೀ ಆದ್ಯ ಶಂಕರರ ಕಾಲವು ಕ್ರಿ ಶ ಎಂಟನೆಯ ಶತಮಾನವೆಂದು ಈಗೀಗ ಹೇಳತ್ತಿರುವಾಗ ಶ್ರೀ ಶಿವರಾಯರು ಕಾಂಚಿ ಕಾಮಕೋಟಿ ಪೀಠ ಹಾಗೂ ಶೃಂಗೇರಿ ಪೀಠಗಳ ಪಟ್ಟದ, ಗುರು ಪರಂಪರೆಗಳಿಗೆ ಸಂಬಂಧವನ್ನು ಕಲ್ಪಿಸಿ, ಆದ್ಯ ಶಂಕರರು ಕ್ರಿ. ಪೂ ೩೮-೦೦೪ ಸಮಯದಲ್ಲಿದ್ದರೆಂದು ಸಾಧಿಸಹೊರಟಿದ್ದಾರೆ ಕಾಂಚೀ ಪೀಠದ ಗುರು ಪರಂಪರೆಯ ಅಧಾರದ ಮೇಲೆ ಶೃಂಗೇರಿಯ ಶ್ರೀ ನಿತ್ಯಬೋಧ ಸರಸ್ವತಾಚಾರ್ಯ (ಕ್ರಿ ಶ ೭೫೮-೮೪೮)ರ ಹಿಂದಿನ ಪರಂಪರೆಯ ದಾಖಲೆಗಳು ಪರಾಕ್ರಮಣದಿಂದ ಲುಪ್ತವಾಗಿ ಹೋಗಿದುವೆಂದು ಊಹಿಸುವುದಾಗಲೀ, "ಆದ್ಯ ಶಂಕರರ ಸಂಮತಿಪೈರಾದ ಮಹಾ ಯೋಗಿನಿರ್ಯತಿ ಎನಿಸಿದ" ಸುರೇಶ್ವರಾಚಾರ್ಯರೇ ಕ್ರಿ. ಪೂ. ೨೩ ರಿಂದ ಕ್ರಿ ಶ ೭೯೫ರ ವರೆಗೆ ೫೦ ವರ್ಷಗಳ ಕಾಲ ತಮ್ಮ ಯೋಗ ಮಹಿಮೆಯಿಂದ ಶೃಂಗೇರಿ ಪೀಠದಲ್ಲಿಯೇ ಮೆರೆಯುತಿದ್ದರು" ಎಂದು ಹೇಳುವುದಾಗಲೀ ವಾಸ್ತವವೆನ್ನಬರುವುದಿಲ್ಲ. ಪರಕೀಯರ ಆಕ್ರಮಣವು ಮುಖ್ಯವಾಗಿ ಹಿಂದೂ ವಿರೋಧಿಗಳ ಆಕ್ರಮಣವು ನಡೆದುದು ೯-೦೦ನೆಯ ಶತಮಾನಾಂತರವೇ ಹೊರತು ಅ ಸೊದಲ್ಲಿ ಹಾಗಿರುವಾಗ ನಿತ್ಯಬೋಧ ಘನಾಚಾರ್ಯರ ದಾಖಲೆ ಸಿಗುವಾಗ, ಅದರೊಂದಿಗೆ ಅ ಹಿಂದಿನದೂ ಸಿಗದಿರುವುದೂ ಯೋಗಮಹಿಮೆಯಿಂದ ೫೦ ವರ್ಷ ಜೀವಿಸಿದ್ದರೆಂದು ಹೇಳುವುದೂ ವಿಶ್ವಾಸಾರ್ಹವೆನ್ನಲಾಗದು. ಈ ದಿಸೆಯಲ್ಲಿ ಇನ್ನೂ ಸಾಕಷ್ಟು ಸಂಶೋಧನೆಗಳು ನಡೆದು ನಿಜಸಂಗತಿ ಬಯಲಾಗದ ಹೊರತು ಶ್ರೀ ಶಿವರಾಯರು ಮಂಡಿಸಿದ ವಾದಸರಣಿಯನ್ನು ಹೇಗೆ ಒಪ್ಪಬೇಕೋ ತಿಳಿಯದು.

ಶ್ರೀ ಶಿವರಾಯ ತಮ್ಮ ಈ ಅವಾಸ್ತವ ಕಲ್ಪನೆಗೆ ಬೈಬಲಿನ ಉದಾಹರಣೆಯನ್ನು ಎತ್ತಿಕೊಂಡಿದ್ದಾರೆ. ಅವರೆ, ಇಬ್ರಾಹಿಮನಂತೆ ಪುರಾಣಪ್ರಿಯ ಮಹಾಕವಿಯೇ "ಪುರಾಣ ಮಿತ್ಯೇವ ನ ಸಾಧು ಸರ್ವಂ" ಎಂದು ಹೇಳಿರುವಾಗ ಅಂಥ್ಲ ಪುರಾಣವಾದ ಬೈಬಲಿನ ಬಗ್ಗೆ ಹೆಚ್ಚು ಹೇಳುವುದು ಅನಗತ್ಯ. ಸಂಶೋಧನೆಯು ಹೆಚ್ಚುದಂತೆ ನಿಜ್ಯ ಜ್ಞಾನವು ಪ್ರಾಪ್ತಿಯಾಗುವುದರಿಂದ ಇನ್ನೂ ಸಾಕಷ್ಟು ಸಂತೋಧನೆಗೆ ಅವಕಾಶವಿದೆಯೆಂದು ಮಾತ್ರ ಹೇಳಬಹುದು ಈ ಗ್ರಂಥದಲ್ಲಿ ಶೃಂಗೇರಿಯ ಹಿಂದಿನ ಮತ್ತು ಇಂದಿನ ಪೀಠಾಧಿರೂಢರ ಚಿತ್ರಪಟಗಳನ್ನೀಯಲಾಗಿದೆ.

—ಗೋರಾ

ಸಾದರ ಸ್ವೀಕಾರ

೧ ನಮ್ಮ ಮೈಸೂರು ರಾಜ್ಯ—ರೇಖಕರು: ಎಲ್. ಐ ಅಕಳವಾಡಿ, ಬಿ. ಎ; ಬಿ ಕಾಮ್. ಬೆಲೆ ರೂ ೦-೮೭

೨, ಅನೆ ತರಗತಿಯ ಸಚಿತ್ರ ಭೂಗೋಲಿಕ ಅಭ್ಯಸನಗಳು—ರೇಖಕರು: ಎಲ್ ಐ ಅಕಳವಾಡಿ, ಬಿ ಎ ಬಿ. ಕಾಂ. ಬೆಲೆ. ರೂ. ೦-೩೦.

ಮೇಲಿನ ಎರಡೂ ಸುಸ್ತಕಗಳ ಪ್ರಕಾಶಕರು, ಮಾಸ್ಟರ್ ಬುಕ್ ಡಿಪೊ, ಧಾರವಾಡ.

ಕವಿತಾ ವಿತಾನ

ಪ್ರೇತಗಳು

ಪ್ರೇತಗಳ ಬಗ್ಗೆ ಇಬ್ಬಗೆಯ ಅಭಿಪ್ರಾಯಗಳು ಇಲ್ಲಿವೆ!

ಪ್ರೇತಗಳೆಂದರೆ ಮತ್ತೇನಲ್ಲವೊ—
ಶರೀರವಿಲ್ಲದ ಪ್ರಾಣಗಳು;
ಸುತ್ತುವ, ಸುಳಿಯುವ ಗಾಳಿ-ಧೂಳಿಗಳೊ
ಭೂತ-ಪ್ರೇತಗಳ ರಾಣಗಳು!
ಸುಳಿವವು ಕೆಲವೆಡೆ, ನೆಲದೊಳಕಿಳಿವವು
ಅವುಗಳ ಕೆಲ ಕೆಲ ಭಾಗಗಳು;
ಕೇಳಿಸಿ ಬರುವವು ಮಾನಗಾಡಿನಲಿ—
ಕೂಗುವ, ಕರೆಯುವ ರಾಗಗಳು!
ಬಿದ್ದಿವೆ ರಾಜರ, ಬಿದ್ದಿವೆ ಬಡವರ ದೇಹಗಳು;
ಸತ್ತಿವೆ ನೋಡವೋ, ಸರ್ವರ ಸುತ್ತಿವೆ
ಮೋಹಗಳು!

*

ಪ್ರೇತಗಳೆಂದರೆ ಮತ್ತೇನಲ್ಲವೊ
ಮನಸಿನ ಭ್ರಾಮಕ ಬಿಂಬಗಳು;
ದುರ್ಬಲ ಇಂದ್ರಿಯಗಳನೋ ಜಯಿಸುವ
ವಿಷಣ್ಣ—ವಿತರ್ಕ-ಶಕ್ತಿಗಳು!
ಅತ್ತಲಿತ್ತಲೋ ಸಂಚಲಿಸುತಲಿಯ
ಮೆದುಳಿನ ಮಂತ್ರದ ನೋಟಗಳು;
ಸರ್ವರ ತರೆ-ತರೆ ತಿನ್ನುತಲಿರುತಿಪ
ನಳುವ-ಬೀಳುವ ಬಾವಗಳು!
ಬಿದ್ದಿವೆ ರಾಜರ, ಬಿದ್ದಿವೆ ಬಡವರ ದೇಹಗಳು;
ಎದ್ದಿವೆ ಮೇಲಕೆ ಎದ್ದಿವೆ ಬಿದ್ದಿವು, ಎಲುಬುಗಳು!

—ಬಿ ಬಿ ಹಿಂಗಮಿರೆ, ಆಫಣಿ.

ಪುತ್ತೂರು ಡಿ ಮುನ್ಸೇಫ್ ಕೋರ್ಟಿನಲ್ಲಿ

R E P 211/58.

'O S 418/56)

ನಾಥರಾಜ ಶೆಟ್ಟಿ — ಅರ್ಜಿದಾರ

ಶಿವಪ್ಪ ಪೂಜಾರಿ ಕೂಡಾ — ಎದ್ರಿಯ ಎದ್ರಿರು

2. ಇಲುವನ್ನು ಜೆನ್ನಯ್ಯ ಹೆಂಗ್ಸು ಮಗಳು ಗಡಾಣಿಗ್ರಾಮ

3 ಉಮ್ಮಣ್ಣ ರುಕ್ಕಿಣಿ ಹೆಂಗ್ಸು ಮಗ ತಣ್ಣೀರು ಪಂತಗ್ರಾಮ

4. ವಾಣಿ ಯಾನಿ ಕೊರಪಳು ವೆಂಕಮ್ಮ ನವ ಮಗಳು ಮಚ್ಚಿನಗ್ರಾಮ

8 ಮುಮ್ಮಳ್ಳ ಜೆಲುವಮ್ಮನ ಮಗಳು ಕಟೆಕಾರುಗ್ರಾಮ

9 ಬೆರ್ಕ್ಕ ಪೂವಳಿ ಮಗಳು ತಣ್ಣೀರು ಪಂತಗ್ರಾಮ

10. ಶಿವಪ್ಪ ಹೊನ್ನಮ್ಮನ ಮಗ ಪಡಂಗಡಿಗ್ರಾಮ

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನಿಮ್ಮ ವಗೈರೆರ ಬಾಬ್ತು ಸ್ತ್ರೀರಾಸ್ತಿಯನ್ನು ಜಪ್ತಿಪಡ್ಸಿ, ನೋಟೀಸಿನ ಬಗ್ಗೆ ತಾರೀಕು 5—9—58ಕ್ಕೆ ಇಟ್ಟಿರುತ್ತದೆ ಆ ದಿವಸ ಹಾಜರಾಗಿ ಉಮರಂಶತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಕಿಸ್ತಾಮೂರಿ ಯುಕ್ತ ಕಂದಂತೆ ತೀರ್ಮಾನಿಸಲಾದೀತು.

M Radhakrishna Rao,
Advocate for Petitioner,
ಪುತ್ತೂರು 25—8...58.

ಮಹಾನುಭಾವ

ನರಹರಿ ವಿಷ್ಣು ಗಾಡಗೀಳರುಉಗ್ರವಾದಿ!

ಅವರು ಸೇವೆಯಿಂದಲೇ ರಾಜ್ಯಪಾಲ ಪದವಿ ಪಡೆದರು.

ಕಾಂಗ್ರೆಸ್‌ನ ವಯೋವೃದ್ಧ ನಾಯಕ ಶ್ರೀ ನರಹರಿ ವಿಷ್ಣು ಗಾಡಗೀಳರು ಸಿದ್ಧಾಂತದ ಪ್ರಶ್ನೆ ಬರುವಾಗ ಕಾಂಗ್ರೆಸ್ಸಿನ ಕಡೆಗೂ ತೀವ್ರ ಯೋಚನೆ ಮಾಡಲು ಹಿಂದು ಮುಂದು ನೋಡದ ಮಹಾನಾಯಕರ ಸಾಲಿಗೆ ಸೇರುತ್ತಾರೆ. ರಾಷ್ಟ್ರಕ್ಕಾಗಿ ಅವರು ತುಂಬ ತ್ಯಾಗವನ್ನೂ ನಿಸ್ವಾರ್ಥಸೇವೆಯನ್ನೂ ಸಲ್ಲಿಸಿದ್ದಾರೆ. ಬಹಳ ಎಳೆಯರಿರುವಾಗಲೇ ಅವರು ಬ್ರಿಟಿಷ ಸತ್ತೆಗೆ ವಿರುದ್ಧವಾಗಿ ಎದ್ದ ಸಂಘರ್ಷಣೆಗಳಲ್ಲಿ ಭಾಗವಹಿಸಿದರು. ಹಾಗೆಯೇ ಮಹಾರಾಷ್ಟ್ರದ ಜನತೆಗೆ ಯೋಗ್ಯ ಮಾರ್ಗದರ್ಶನ ಮಾಡಿದರು. ಇವರು ಪ್ರಖ್ಯಾತ ಲೇಖಕರೂ ಸುಪ್ರಸಿದ್ಧ ಶಾಸ್ತ್ರಕಾರರೂ ಅಪ್ರತಿಮ ವಕ್ತಾರರೂ ಕೀರ್ತಿಶಾಲಿ ವಕೀಲರೂ ಆಗಿದ್ದಾರೆ. ೧೮೯೭ರಲ್ಲಿ ಜನ್ಮಿಸಿದ ಶ್ರೀ ಗಾಡಗೀಳರು ೧೯೨೦ರಲ್ಲಿ ಪೂನಾ ನಗರದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು ಈ ಕಾಲದಿಂದಲೂ ಅವರು ದೇಶದ ರಾಜಕಾರಣದಲ್ಲಿ ಸಕ್ರಿಯಾತ್ಮಕವಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಬಹುಬಾರಿ ಕಾರಾಗೃಹವಾಸವನ್ನೂ ಅನುಭವಿಸಿದರು. ಕಾಂಗ್ರೆಸ್ ಸಂಸ್ಥೆಯ ಬೇರೆ ಬೇರೆ ಪದವಿಗಳಲ್ಲಿ ಅವರು ವಿರಾಜಿಸಿದ್ದರು. ಬೊಂಬಾಯಿ ವಿಧಾನ ಸಭೆ ಮತ್ತು ಭಾರತೀಯ ಲೋಕ ಸಭೆಯ ಸದಸ್ಯರೂ ಆಗಿದ್ದರು ಕೇಂದ್ರ ಸರಕಾರದಲ್ಲಿ ಜನ ಕಲ್ಯಾಣ, ಗಣಿ ಮತ್ತು ವಿದ್ಯುಚ್ಛಕ್ತಿ ಖಾತೆಗಳ ಮಂತ್ರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಭಾಷೆಯ ಆಧಾರದ ಮೇಲೆ ರಾಜ್ಯ ಪುನರ್ಘಟನೆಯಾಗುವ ಕಾಲದಲ್ಲಿ ಅವರಿಗೂ ಕಾಂಗ್ರೆಸ್ಸಿನ ಮಹಾ ನಾಯಕರಿಗೂ ತೀವ್ರವಾದ ಮತ ಭೇದವೆದ್ದಿತು. ಶ್ರೀ ಗಾಡಗೀಳರು ಆರಂಭದಿಂದಲೂ ಬೊಂಬಾಯಿ ಸಹಿತ ಮಹಾ ರಾಷ್ಟ್ರ ರಾಜ್ಯ ಸ್ಥಾಪಿಸಬೇಕೆಂಬ ವಾದವನ್ನು ಬೆಂಬಲಿಸುತಿದ್ದರು. ಇದರಿಂದಾಗಿ ದ್ವಿಭಾಷೀ ಬೊಂಬಾಯಿ ರಾಜ್ಯವು ನಿರ್ಮಾಣ ಮಾಡಲಾಗುವುದೆಂಬ ಘೋಷಣೆಯನ್ನು ಮಹಾ ನಾಯಕರು ಮಾಡಿದಾಗ ಅವರು ಅದನ್ನು ಬಲವಾಗಿ ವಿರೋಧಿಸಿದರು. ಇಷ್ಟರಲ್ಲೇ ತೃಪ್ತರಾಗದೆ, ಅವರು ಕಾಂಗ್ರೆಸ್ಸಿನ ಆದೇಶಗಳನ್ನು ಮೀರಿ, ಸಂಯುಕ್ತ ಮಹಾರಾಷ್ಟ್ರ ನಿರ್ಮಾಣಕ್ಕಾಗಿ ಪ್ರಚಂಡಾಂದೋಲನವೆಬ್ಬಿಸುವಂತೆ ಆಹ್ವಾನವಿತ್ತರು. ಈಗಿರುವ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ನಿರ್ಮಾಣದಲ್ಲಿಯೂ ಅವರು ತಮ್ಮ ಜಾಕ ಚಕ್ಯತೆಯನ್ನು ತೋರಿಸಿದ್ದರು. ಆದರೆ ಈ ಸಮಿತಿಯ ಆಂದೋಲನವು ಉಗ್ರ ಹಾಗೂ ಹಿಂಸಾತ್ಮಕ ರೂಪಧಾರಣೆ ಮಾಡಿದಾಗ, ಬೊಂಬಾಯಿ ಮತ್ತು ಮಹಾರಾಷ್ಟ್ರ ಕಾಂಗ್ರೆಸಿಗರಿಗೆ ಈ ಸಮಿತಿಯಿಂದ ಹೊರ ಬರಬೇಕೆಂದು ಕಾಂಗ್ರೆಸ್ ಕಾರ್ಯಸಮಿತಿಯು ಆದೇಶವಿತ್ತಾಗ, ಕರ್ತವ್ಯಕ್ರಮಕ ಸ್ಥಿತಿಯಲ್ಲಿದ್ದ ಶ್ರೀ ಗಾಡಗೀಳರು ಕಾಂಗ್ರೆಸಿನ ಆದೇಶಗಳನ್ನು ಮನ್ನಿಸುವುದರಿಂದಲೇ ತನ್ನ ಕಲ್ಯಾಣವಾಗುವುದೆಂದು ಭಾವಿಸಿದರು. ಅಂದಿನಿಂದ ಸಂಯುಕ್ತ ಮಹಾರಾಷ್ಟ್ರ ಆಂದೋಲನವು ವಿರೋಧೀ ಪಕ್ಷಗಳ ಮುಂದಾಳು ತನದಲ್ಲಿ ಮುನ್ನಡೆಯತೊಡಗಿತು. ಶ್ರೀ ಗಾಡಗೀಳರು ಕಾಂಗ್ರೆಸ್ಸಿನಲ್ಲಿದ್ದರೂ ಸಂಯುಕ್ತ ಮಹಾರಾಷ್ಟ್ರದ ಪಕ್ಷದಲ್ಲಿ ತನ್ನ ಸ್ವರವೆಬ್ಬಿಸುವುದನ್ನು ಮಾತ್ರ ಬಿಡಲಿಲ್ಲ ಲೋಕಸಭೆಯಲ್ಲಿ ಅವರು ಸಂಯುಕ್ತ ಮಹಾರಾಷ್ಟ್ರದ ಪ್ರಶ್ನೆಯ ಮೇಲೆ ಮಾಡಿದ ಭಾಷಣವು ವಿರೋಧೀ ಪಕ್ಷಗಳ ಆಂದೋಲನಕ್ಕೆ ನಾಕಷ್ಟು ಜೀವನವಿತ್ತಿತು. ಮತದಾನದ ಸಂದರ್ಭದಲ್ಲಿಯೂ ಅವರು ಕಾಂಗ್ರೆಸ್ಸಿಗೆ ವಿರೋಧವಾಗಿ ಮತವಿತ್ತರಂತೆ! ತಮ್ಮ ವಿಚಾರಗಳಲ್ಲಿ ಶ್ರೀ ಗಾಡಗೀಳರು ಅದೆಷ್ಟು ನಿಸ್ಸುರವಾದಿಗಳೆಂದು ಇದರಿಂದ ತಿಳಿಯಬಹುದು ಆದರೆ, ಕಾಂಗ್ರೆಸ್ಸು ಇವರ ವಿರುದ್ಧವಾಗಿ ಅನುಶಾಸನದ ಯಾವ ಕಾರ್ಯವನ್ನೂ ಅನುಷ್ಠಾನಕ್ಕೆ ತರಲಿಲ್ಲ.

ಸಂಯುಕ್ತ ಮಹಾ ರಾಷ್ಟ್ರದ ಪ್ರಬಲ ಸಮರ್ಥಕರಾದರೂ ಗಾಡಗೀಳರು ಕಳೆದ ಮಹಾ ಚುನಾವಣೆಯಲ್ಲಿ ಈ ಪ್ರಶ್ನೆಯಿಂದಾಗಿಯೇ ವಿರೋಧಿಗಳೆದುರು ಬಾಯಿ ಮುಚ್ಚಬೇಕಾಗಿ ಬಂತು. ಅಂದಿನಿಂದ ದೇಶದ ರಾಜಕೀಯ ಕ್ಷೇತ್ರದಲ್ಲಿ ಅವರ ಮಾತುಗಳು ಕಡಿಮೆಯಾಯಿತೆಂದೇ ಹೇಳಬಹುದು. ಆದರೂ, ದೇಶದ ಆರ್ಥಿಕ ಮತ್ತು ಖಾದ್ಯ ಸಂಬಂಧಿ ಸಮಸ್ಯೆಗಳ ಮೇಲೆ ಆಗಾಗ ತನ್ನ ಉಗ್ರ ವಿಚಾರವನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಲೋಕ ಸಭೆಯಿಂದ ದೂರವಾದ ಮೇಲೆ ಅವರಿಗೆ ರಾಜಕೀಯ ಕ್ಷೇತ್ರದಲ್ಲಿ ತಾನು ದುಡಿಯಬೇಕಾದ ಆವಶ್ಯಕತೆಯು ಅಷ್ಟಿಲ್ಲವೆಂದು ಕಂಡು ಬಂದಿರಬೇಕು.

ಅದೇನೇ ಇರಲಿ, ಶ್ರೀ ನರಹರಿ ವಿಷ್ಣು ಗಾಡಗೀಳರು ಈಗಾಗಲೇ ಪಂಜಾಬ ರಾಜ್ಯದ ರಾಜ್ಯಪಾಲರಾಗಿ ಯುಕ್ತರಾಗಿದ್ದಾರೆ. ಇಂದಿನ ಪಂಜಾಬಿನ ದುಸ್ಥಿತಿಯನ್ನೂ ಶ್ರೀ ಗಾಡಗೀಳರನ್ನು ರಾಜ್ಯಪಾಲರಾಗಿ ನೇಮಿಸಿರುವುದನ್ನೂ ತುಲನಾತ್ಮಕ ದೃಷ್ಟಿಯಿಂದ ನೋಡುವುದಾದರೆ, ಶ್ರೀ ಗಾಡಗೀಳರ ನೇಮಕವು ಮಹತ್ವಪೂರ್ಣವಾಗಿದೆ ಎಂದೂಹಿಸಬಹುದು ಶ್ರೀ ಗಾಡಗೀಳರಾದರೂ, ತನ್ನ ಈ ಹುದ್ದೆಯನ್ನು ಯಥೋಚಿತವಾಗಿ ನಿರ್ವಹಿಸಿ, ಪಂಜಾಬದಲ್ಲಿ ಒಂದು ಸ್ಥಿರತೆಯನ್ನು ನಿರ್ಮಿಸುವವರೆಂದು ನಂಬಿ, ಅವರು ಈ ಕಾರ್ಯದಲ್ಲಿ ಕೃತಕೃತ್ಯರಾಗಲಿ ಎಂದು ಹಾರೈಸುವುದು ಎಲ್ಲರ ಆದ್ಯ ಕರ್ತವ್ಯ.

ಆರೋಗ್ಯ ಪಾಲನೆ

(೧ನೇ ಪುಟದಿಂದ)

೧೦. ನಿರ್ದನರೂ ಆವಶ್ಯಕತೆಯುಳ್ಳವರೂ ಆದ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನೀಯುವ ಚಿಕಿತ್ಸಾ ಮಂದಿರಗಳನ್ನು ತೆರೆಯುವುದು.

೧೧. ರೋಗಗಳನ್ನು ಹರಡಿಸುವ ಗುಣವುಳ್ಳ ರೋಗಗಳಿಂದ ಪೀಡಿತರಾದವರನ್ನು ಇರಿಸಲು ಪ್ರತ್ಯೇಕ ಚಿಕಿತ್ಸಾಲಯಗಳ ನಿರ್ಮಾಣ ಮಾಡುವುದು.

೧೨. ಆರೋಗ್ಯ ಪಾಲನೆಯ ಬಗ್ಗೆ ಜನತೆಗೆ ಸಾಕಷ್ಟು ಶಿಕ್ಷಣವೀಯುವುದು.

೧೩. ಆರೋಗ್ಯ ಸೇವಾ ಯೋಜನೆಯನ್ನು ನಗರಗಳಲ್ಲಿಯಲ್ಲದೆ ಗ್ರಾಮ ಗ್ರಾಮದಲ್ಲಿಯೂ ಸ್ಥಾಪಿಸುವುದು,

೧೪. ನಕಲಿ, ಮೋಸದ ಔಷಧಗಳ ಮೇಲೆ ಬಲವಾದ ನಿಯಂತ್ರಣವಿಡುವುದು ಮತ್ತು

೧೫. ಮಿಥ್ಯಾಚಿಕಿತ್ಸಕರನ್ನು ತಡೆಹಿಡಿದು ಉತ್ತಮ ಚಿಕಿತ್ಸಕರನ್ನೇ ಒದಗಿಸುವುದು.

ಈ ಪುನರುತ್ಥಾನ ಕಾಲದಲ್ಲಿ ಭಾರತವು ಹಲವಾರು ರಾಷ್ಟ್ರೀಯ ರಚನಾ ಕಾರ್ಯಗಳನ್ನು ಮಾಡಬೇಕಾಗಿ ಬರುತ್ತದೆ ಆದರೆ, ಕ್ಷಯರೋಗದ ಮೇಲೆ ನಿಯಂತ್ರಣವನ್ನು ತರುವುದು ಎಲ್ಲವುಗಳಿಗಿಂತ ಪ್ರಧಾನವೂ ಆವಶ್ಯಕವೂ ಆಗಿದೆ. ಈ ರೋಗವನ್ನು ದೂರಮಾಡುವ ಕಾರ್ಯವನ್ನು ಕೈಗೊಳ್ಳುವುದು ಇಂದಿನ ನಮ್ಮ ದೇಶದ ಪರಿಸ್ಥಿತಿಯಲ್ಲಿ ಅತ್ಯಂತ ಪ್ರಯಾಸವಾಗಿದೆ. ಆದರೂ ನಾವು ಈ ಮಹಾಮಾರಿಯನ್ನು ದೂರವಿರಿಸಲು ಪ್ರಯತ್ನಿಸಬೇಕು ಅದಕ್ಕಾಗಿ ಪ್ರತಿ ಪ್ರಜೆಯೂ ತನ್ನ ಪಾಲಿನ ಕರ್ತವ್ಯವನ್ನೂ ಪೂರೈಸಲೇ ಬೇಕು.

ಸುದೈವದಿಂದ ಸರಕಾರದ ದೃಷ್ಟಿಯು ಈಗೀಗ ಕ್ಷಯರೋಗದ ಕಲ್ಪನಾತೀತ ಹಾನಿಯತ್ತ ಸರಿದಿದ್ದು ಆ ಬಗ್ಗೆ ಸಾಕಷ್ಟು ಸಂಶೋಧನೆಗಳನ್ನು ನಿರಂತರವಾಗಿ ಮುಂದುವರಿಸುತ್ತಿರುವುದು ಆಶಾದಾಯಕವಾಗಿದೆ. ಈ ಘಾತಕ ರೋಗ ನಿಯಂತ್ರಣಕ್ಕಾಗಿ ಈಗೀಗ ಹಲವಾರು ಔಷಧಿಗಳೂ ನಿರ್ಮಾಣವಾಗುತ್ತಿವೆ.

ಆರೋಗ್ಯ ಪಾಲನೆ ಮತ್ತು ರಕ್ಷಣೆಗಳು ಜನತೆಗೆ ಅತ್ಯಾವಶ್ಯಕವಾಗಿರುವುವುಗಳು. ಈ ದೃಷ್ಟಿಯಿಂದ ನಮ್ಮಲ್ಲಿ ನೋಡುವುದಾದರೆ, ವೈದ್ಯ ಪದ್ಧತಿಯನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ, ರೋಗಗಳಿಗೆ ತಕ್ಕ ಔಷಧಿಯನ್ನೀಯಬಲ್ಲ ವೈದ್ಯರ ಅಭಾವವೇ ಎಲ್ಲೆಲ್ಲಿಯೂ ತೋರಿ ಬರುತ್ತಿರುವುದು. ಪಾಶ್ಚಾತ್ಯ ವೈದ್ಯ ಕ್ರಮವಿರಲಿ, ದೇಶೀಯವೇ ಇರಲಿ, ವೈದ್ಯನಾಗುವವನಿಗೆ ರೋಗದ ಗುಟ್ಟು ತಿಳಿಯುವುದು ಮತ್ತು ಅದಕ್ಕೆ ತಕ್ಕುದಾದ ಔಷಧಿಯನ್ನು ಕೊಡಲು ತೀರದಿರುವುದು ಮುಖ್ಯ. ಇದಕ್ಕಾಗಿ ದೇಶದ ತುಂಬ ನಾನಾ ವಿಧದ ವೈದ್ಯ ವಿದ್ಯಾ ಮಂದಿರಗಳು ಸ್ಥಾಪಿತವಾಗಬೇಕು.

ಭಾರತದಂತಹ ದರಿದ್ರರ ದೇಶದಲ್ಲಿ ಜನರು ರೋಗಕ್ಕೆ ಬಲಿಬೀಳುವುದೂ ಅತಿ ಸುಲಭ ಆದರೂ ಈ ರೋಗಗಳನ್ನು ತಕ್ಕ ಚಿಕಿತ್ಸೆಯಿಂದ ಗುಣಪಡಿಸಿಕೊಳ್ಳಲು ಅನುಕೂಲವಾಗುವಂತೆ ಅವರಿಗೆ ಉಚಿತ ವ್ಯವಸ್ಥೆಯಿರಬೇಕು. ಔಷಧಾಲಯಗಳನ್ನು ದೇಶದ ಎಲ್ಲ ಗ್ರಾಮಗಳಲ್ಲಿಯೂ ಸರಕಾರ, ಜಿಲ್ಲಾ ಬೋರ್ಡ್ ಇಲ್ಲವೇ ನಗರಸಭೆ ಅಥವಾ ಪಂಚಾಯತುಗಳ ಆಶ್ರಯದಲ್ಲಿ ತೆರೆಯಬಹುದು. ಒಂದು ವೇಳೆ ಸ್ಥಳೀಯ ಸಂಸ್ಥೆಗಳಿಗೆ ಇವನ್ನು ತೆರೆಯುವ ಶಕ್ತಿಯಿಲ್ಲವಾದರೆ, ಸರಕಾರದ ಸಹಾಯದಿಂದ ಪ್ರಾರಂಭಿಸಬಹುದು, ಇಲ್ಲವೇ ಸರಕಾರವೇ ತೆರೆಯಬಹುದು ನಿಷ್ಪಕ್ಷಪಾತತನದಿಂದ. ಯಾವುದೇ ಭೇದಭಾವನೆಯಿಲ್ಲದೆ, ಸರ್ವರಿಗೂ ಹೀಗೆ ತೆರೆಯಲಾಗುವ ಆಲಯಗಳಲ್ಲಿ ಶಾಸ್ತ್ರೀಯ ರೀತ್ಯಾ ಚಿಕಿತ್ಸೆ ದೊರೆಯಬೇಕು.

ಇಂದು ಸಾಮಾನ್ಯವಾಗಿ ತಾಲೂಕಿಗೆ ಒಂದೋ ಎರಡೋ ಸರಕಾರಿ ಆಸ್ಪತ್ರೆಗಳಿವೆ. ಅಲ್ಲಿ ಸದಾ ರೋಗಿಗಳ ಹಿಂಡು ಕಾಯುತ್ತಿರುವುದನ್ನು ಕಾಣಬಹುದು. ದಿನದ ಮೂರುನಾಲ್ಕು ತಾಸುಗಳಲ್ಲಿ ಸಾವಿರಾರು ರೋಗಿಗಳನ್ನು ಒಬ್ಬೊ ವೈದ್ಯರು ಸರಿಯಾಗಿ ಪರೀಕ್ಷಿಸುವುದುಂಟೆ? ರೋಗಕ್ಕೆ ತಕ್ಕ ಮದ್ದು ದೊರೆವುದುಂಟೆ? ಈ ಪದ್ಧತಿ ತಪ್ಪಬೇಕು ರೋಗಿ ಔಷಧಿಗಾಗಿ ಎರಡು ಮೈಲಿಗಳಿಗಿಂತ ಹೆಚ್ಚು ನಡೆಯುವಂತಾಗಬಾರದು; ಅಗ ಒಂದೆಡೆಯಲ್ಲೇ ಸೇರುವ ದಟ್ಟಣೆಯೂ ಕಡಿಮೆಯಾಗಿ, ಸರಿಯಾದ ಪರೀಕ್ಷೆ ನಡೆದು; ಯೋಗ್ಯ ಔಷಧಿ ದೊರೆತೀತು; ಇಲ್ಲವಾದರೆ, ಸರಕಾರ ಈಗಾಗಲೇ ಮಾಡುವ ವೆಚ್ಚದ ಬಹುಭಾಗವು "ಆಸ್ಪತ್ರೆಯ ನೀರಿ"ನಲ್ಲಿಯೇ ಕೊಚ್ಚಿಹೋದೀತು ಸರಕಾರವು ಗಮನ ಈ ಕಡೆಗೆ ಹರಿದು ಆರೋಗ್ಯ ಸೌಕರ್ಯವನ್ನು ಹೆಚ್ಚಿಸುವಲ್ಲಿ ಯತಾರ್ಥವಾಗಿ ದುಡಿದರೆ; ಆಗಲೇ ದೇಶವಲ್ಲಿ ಸುದೃಢ ಜನಾಂಗ ನಿರ್ಮಾಣವಾಗುವುದು.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು: ಎಸ್ ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೩ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪ ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಇದು ಶುದ್ಧ ಹರಟೆ

ದಣಿದು ಮನೆಗೆ ಬಂದಾಗ ಏಕರೂಪತೆಯ ಕನಸು!

ಆದರಲ್ಲಿ ಡಾರ್ವಿನ್ ಸಂಶೋಧಿಸಿದ ವಿಕಾಸವಾದಕ್ಕೆ ಪ್ರತಿ ವಿಕಾಸವಾದ!

ವೇಟೆಯಿಂದ ಮನೆಗೆ ಬರುವ ದಾರಿಯಲ್ಲಿ ನಡೆದು ಬರುತಿದ್ದೆ. ಹಾಗೆಯೇ ನಮ್ಮ ಆಚಾರ್ಯರು ಸಿಕ್ಕಿ ಮಾತಾಡಿಸಿಯೇ ಬಿಟ್ಟರು: "ಏನು ರಾಯರೇ, ಬಂದುಬಿಟ್ಟಿರಾ ಮನೇಗೇ?" ಎಂದು. ರಾಯರು ಹಿಂದೆಸುಂದೆ ಸಿಳಿಸಿಳಿ ಕಣ್ಣುಬಿಟ್ಟು ನೋಡತೊಡಗಿದರು. ಆಚಾರ್ಯರಿಗೆ ದೆವ್ವ ಬಡೆದ ಸೂಚನೆ ಕಾಣಲಿಲ್ಲ. ಆಗ ಪಟಕ್ಕನೆ ಸ್ಮರಣೆಗೆ ಬಂತು— ಸಂಗೀತ ಕಲಿಯಲು ಆಚಾರ್ಯರು ಪ್ರಾರಂಭಿಸಿದ್ದಾರೆಂದು. ಅದರ ಪ್ರಭಾವವಿರಬಹುದು ಎಂದು ಯೋಚಿಸಿ "ಮನೆಯತ್ತಗಡೆ ಹೊರಟೆ" ಎಂದುತ್ತರಿಸಿದರು ರಾಯರು "ಛೇ ಛೇ ಹಾಗಲ್ಲಾಂದೇ. ಮನೇಯತ್ತಗಡೇ ಹೊರಟೇಯೆನ್ನಿ" ಎಂದು ಆಚಾರ್ಯರು ತಿದ್ದಿದರು. ಆಚಾರ್ಯರ ಈ ಸಂಗೀತದ ಗೀಳಿನಿಂದ ತಪ್ಪಿಸಿ ಮನೆಯಲ್ಲಿ ತಯಾರಾಗಿದ್ದ ಕಾಫಿ ಕುಡಿಯಲು ತಹ ತಹ ಪಡುತಿದ್ದ ರಾಯರು "ಹಾಗೆಯೇ ತಿಳಿದುಕೊಳ್ಳಿ" ಎಂದು ಕಂಬಿ ಕೀಳುವಷ್ಟರಲ್ಲಿಯೇ ರಟ್ಟೆ ಹಿಡಿದು ನಿಲ್ಲಿಸಿ, "ಹಾಗೆಯೇ ತಿಳಿದುಕೊಳ್ಳಿ ಎನ್ನು" ಎಂದು ಉಪದೇಶಿಸಿದರು. ಅವರ ಕೈಯಿಂದ ತಪ್ಪಿಸಿಕೊಳ್ಳುವದಕ್ಕೆ ಉಪಾಯಗಾಣದೆ, ನಾನಾ ವಿಧವಾಗಿ ನಾಲಗೆಗೆ ಡ್ರಿಲ್ ಮಾಡಿಸಿ, ಅವರೆಂದಂತೆಂದು ಒಮ್ಮೆಗ ಒಚವಾಗಿ ಮನೆಯ ಸಮೀಪ ಬಂದರು; ಬಿಸಿ ಬಿಸಿ ಕಾಫಿಯನ್ನು ಸ್ಮರಿಸುತ್ತ ಕೃಷ್ಣನನ್ನು ನೆನೆಯುತ್ತ ದ್ವಾರಕೆಗೆ ಹೊರಟ ಅರ್ಜುನನಂತೆ! (ಎಂದರೆ, ಆಚಾರ್ಯದಿಂದ ಬಿಡುಗಡೆ ಹೊಂದಲು ಮುಗಿದ ಕೈ ಶಾಗೆಯೇ ಇತ್ತು)

ಂ ಂ ಂ

ಮನೆಯಿಂದ ಹತ್ತು ಗಜ ದೂರವಿರುವಾಗ ರಾಯರ ಕುಮಾರ ಕಂಠೀರವರ ಗಾರ್ದಭ ಗಾಯನ ಕಿವಿದೆರೆಗೆ ಬಡೆಯುತಿತ್ತು.

"ಕಿವಿದೇರೇಯಂತೇರೇದುಂ ಹೋಗಿಸಿದು ಗುರುವೇಂದವಾತನಾತಂ ಮನದೋಳಗಂ...." ಹೀಗೆಯೇ ಸಾಗುತಿತ್ತು. ಎಂಟನೇ ದರ್ಜೆಯಲ್ಲಿ ಓದುತ್ತಿರುವ ಈ ಯುವರಾಜನಿದೇನು ಓದುತಿದ್ದಾನೆಂದು ರಾಯರಿಗೆ ಹೊಳೆಯಲಿಲ್ಲ. ಅವರು ಮನೆಯನ್ನು ತಲಪಿ ಕೈಯಲ್ಲಿದ್ದ ಪುಸ್ತಕ ನೋಡುತ್ತಾರೆ, ಕನ್ನಡ ವಾರಮಾಲೆ! ಇದಾವ ಕನ್ನಡವಪ್ಪಾ ಎಂದು ವಿಚಾರಿಸಿದರೆ, ನಮ್ಮ ಹೊಸ ಪಂಡಿತರು ಬಂದು ಹೀಗೆ ಓದೋಕೇಹೇಳಿದ್ದಾರೇ ಎಂದ ಅದೇ ಕಪ್ಪು ಎಂದರೆ, 'ಭಾರತ ಹಿಂದೇ ಪಂಚೇ ಮಾತರಂ ಆದುದರಿಂದ ದೇವನಾಗರಿ ಹಿಂದೇ ಲಿಪಿಯಾಗಬೇಕು ಎಂದು ಹೇಳಿ ಹೀಗೇ ಉರು ಹೊಡೇಯಲು ಆಜ್ಞೇಯಿತ್ತಿದ್ದಾರೇ' ಎಂದ ರಾಯರು ಇನ್ನೂ ಏನೇನೋ ಕೇಳುವವರಿದ್ದರು. ಆದರೆ, ಹೆಂಡ್ತಿ ತನಗೆ ಬಿಡುವಿಲ್ಲ ಎಂದು ಸೂಚಿಸಿದ್ದರಿಂದ ಅದನ್ನು ಮನ್ನಿಸಿ ಮುಖಪಾದ ಪ್ರಕ್ಷಾಳನಕ್ಕೆ ಬಚ್ಚಲ ಮನೆಯನ್ನು ಪ್ರವೇಶಿಸುವಾಗ, ಅಪ್ಪಾ ಅಪ್ಪಾ ಎಂದ ಹಾದು ಬಂದಳು ರಾಜ ಕುಮಾರಿ.

ಂ ಂ ಂ

"ಕಾಫಿ ಕುಡಿಯಿರಿ" ಎಂದು ಆಕೆ ಕಾಫಿ ತಂದಿತ್ತು ಸುಖ ದುಃಖ ಕೇಳಲು ಎರಡು ಮಾತು ಆಡಿದಳು, ರಾಯರ ರಾಣಿ. "ಏನಿದು, ಇಂದು ತುಂಬ ತಡವಾಯಿತು? ಏಕಿಷ್ಟು ತಡಮಾಡುತ್ತೀರಿ" —ರಾಯರು ಸುಮ್ಮನಿದ್ದರು, ಅವರವರ ಕೆಲಸದಲ್ಲಿಯೇ ಸಾಕಷ್ಟು ಸುಸ್ತಾಗಿರುವಾಗ, ಈ ಕ್ಷುಲ್ಲಕ ಪ್ರಶ್ನೆಗಳಿಗೆಲ್ಲಾ ಉತ್ತರಕೊಡಲು ಬಿಡುವಿದೆಯೆ? ರಾಯರು ಗಂಭೀರವಾಗಿಯೇ ಕುಳಿತಿದ್ದಾಗ, ರಾಣಿಯವರು ಮಾತೆತ್ತಿದರು: ನಮ್ಮ ರಾಷ್ಟ್ರಾಧ್ಯಕ್ಷರು ಹಾಗೂ ಇತರ ಮಹಾನುಭಾವ ನಾಯಕರವರು ಭಾರತದ ಭಾಷೆಗಳಿಗೆಲ್ಲಾ ಏಕಲಿಪಿಯಿರಬೇಕೆಂದು ಸಲಹೆಯೊಯುತಿದ್ದಾರಂತೆ! ಆದರಿಂದಾಗಿ ನಮ್ಮ ಜಾತಿಯ ಪುಸ್ತಕವನ್ನೂ ನಾಗರೀ ಲಿಪಿಯಲ್ಲಿ ಅಚ್ಚು ಹಾಕಿಸುತ್ತಾರಂತೆ! ತೆಲುಗು-ಕನ್ನಡಗಳಿಗೆ ಏಕಲಿಪಿಯಾಗುವ ಬದಲು ಇದೇ ಆದರೆ, ಚೆನ್ನೂ ಎನ್ನಿ. ಏಕೆಂದರೆ, ಹೆಮ್ಮಕ್ಕಳಿಗೆ ಸಂಗೀತ ಬೇಗನೇ ಬಂದು ಬಿಡುತ್ತೆ!" ಎಂದಳು

ರಾಯರಿಗೆ ಕೊಂಚ ಕಹಿಯೆನ್ನಿಸಿದರೂ ಕರ್ಣಾರಸುರಿದು ಮಡಚಿಕೊಟ್ಟ ವೀಳ್ಯದೆಲೆಯ ರುಚಿಯಲ್ಲಿ ಅದನ್ನು ನುಂಗಿಕೊಂಡು ಮಂತ್ರಿಗಾಂಭೀರ್ಯದಿಂದ ಹೂವಾಪರ ವಿನೇಜನೆ ನಡೆಸಿದಾಗ ತಿಳಿದುಬಂತು: "ನಮ್ಮವರು ಏಕಲಿಪಿಯ ಚಳವಳಿಕ್ಕೆ ಸಿದ್ಧವಾಗಿಯೂ ಬೆಂಬಲ ನೀಡುತಿದ್ದಾರೆ. ಅದರ ಪ್ರಭಾವವೇ ಆಚಾರ್ಯರ ಭೇಟಿಯಿಂದಾರಭ್ಯಮಾಣವಾಗಿ ಕಂಡುಬಂತು" ಎಂದು. ಈ ಸಮಸ್ಯೆಯು ನಮ್ಮ ಇತರ ಸಮಸ್ಯೆಗಳಂತೆ ಸುಲಭದಲ್ಲಿ ಬಗೆಹರಿಯುವಂತಹದ್ದಲ್ಲವಾದರೂ ಉಳಿದವರು ಶತವಾರ್ಷಿಕ ಯೋಜನೆಯಲ್ಲಿ ನೇರಿಸಿದ್ದರೂ ಗಂಭೀರ ಪರಿಶೀಲನಾನಂತರವೇ ಕಲಿತ್ಯಾಗಿ ಹನುಮನ ಸುಸ್ಮರಣೆಯಿಂದ, ಅನ್ಯಭಾಷೀಯರಿಗೆ ಮಾದರಿಯಾಗಿ ತಮ್ಮತನವನ್ನು ಸ್ವಾರ್ಥವನ್ನು ತ್ಯಜಿಸಿ ಪರರಿಗೋಸ್ಕರ ತಮ್ಮತನ್ನು ದಾನವಾಗಿಸಿ ಕೊಟ್ಟುಬಿಡುವ ಉದಾರ ಮನೋಭಾವನೆಯು ಕನ್ನಡದ

ಸಮಾಜ ಸುಧಾರಣೆ

ಸಮಾಜ ಸುಧಾರಣೆಗೆ ಆರ್ಥಿಕ ಪುನರ್ವ್ಯವಸ್ಥೆ

ಹಿತೋದ್ಧಾರ ಕಾರ್ಯದಲ್ಲಿ ಸಮಾಜ ಕಲ್ಯಾಣ ಮಂಡಲಿ

ಕೇಂದ್ರ ಸಮಾಜ ಕಲ್ಯಾಣ ಮಂಡಲಿಯವರು, ಕೆಲವು ತಿಂಗಳಿಂದೀಚೆಗೆ ಕೈಗೊಂಡಿರುವ ಹಿತರಕ್ಷಣಾ ಕಾರ್ಯಕ್ರಮಗಳಲ್ಲಿ ಆರ್ಥಿಕ ಪುನರ್ವ್ಯವಸ್ಥೆ ಹಾಗೂ ಪಾಲನೋತ್ತರ ಸೇವಾ ಸೌಲಭ್ಯಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಇಂದು, ಕೇವಲ, ಪುರುಷರು ಮಕ್ಕಳು ಮತ್ತು ಅಂಗವಿಹೀನರ ಹಿತರಕ್ಷಣೆ ಕಾರ್ಯವನ್ನಷ್ಟೇ ಮಂಡಲಿಯು ನಿರ್ವಹಿಸುತ್ತಿಲ್ಲ. ಈ ಮಂಡಲಿಯು, ಈ ವರ್ಗಗಳಿಗೆ ಆರ್ಥಿಕ ಪುನರ್ವ್ಯವಸ್ಥೆಯನ್ನು ತಂದುಕೊಡುವಂತಹ ಹಿತರಕ್ಷಣಾ ಕಾರ್ಯಕ್ರಮಗಳಿಗೆ ಪ್ರಾಮುಖ್ಯನೀಡುತ್ತಿದೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ, ಅಲ್ಪ ಪ್ರಮಾಣ ವರ್ಗದವರ ಮಹಿಳೆಯರಿಗೆ ಇಂದಿನ ಅಗತ್ಯಗಳಿಗನುಗುಣವಾಗಿ ಕುಶಲ ವಸ್ತುಗಳು ಅಥವಾ ಗೃಹ ಕೈಗಾರಿಕೆಗಳಲ್ಲಿ ಮೂಲಭೂತ ತರಬೇತಿಯನ್ನು ನೀಡಲಾಗುವುದು.

ಪತಿತ ಸ್ತ್ರೀಯರು, ಅಪರಾಧಿ ಬಾಲಕರು, ಮತ್ತು ಯುವಕರಿಗೆ ಆಶ್ರಯ ಅಥವಾ ಜೀವನ ಸುಧಾರಣೆ ಮಾಡುವಂತಹ ಸಂಸ್ಥೆಗಳನ್ನು ತೆರೆಯುವುದರ ಜೊತೆಗೆ ಅವರು ತಮ್ಮ ಕಾಲಿನ ಮೇಲೆ ತಾವು ನಿಲ್ಲುವುದಕ್ಕೆ ಅನುಕೂಲವಾಗುವಂತೆ ಅವಕಾಶ ಕಲ್ಪಿಸಿಕೊಡುವ ದೃಷ್ಟಿಯಿಂದ, ಅವರಿಗೆ, ಉದ್ಯೋಗಗಳನ್ನು ಕಲ್ಪಿಸಿಕೊಡುವುದಕ್ಕೂ ಉದ್ದೇಶಿಸಲಾಗಿದೆ. ಅದೇ ಅವರಿಗೆ ಎಲ್ಲಕ್ಕಿಂತಲೂ ದೊಡ್ಡ ಉಪಕಾರವೆನಿಸುವುದು. ಮಂಡಲಿಯು ಈಗ ಸ್ತ್ರೀಯರಿಗೆ, ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಆರಂಭಿಸುವ ಯೋಜನೆಗಳನ್ನು ಸಿದ್ಧಗೊಳಿಸಿದೆ. ಈ ಯೋಜನೆಗಳಿಗೆ ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಶಾಖೆಯವರ ನೆರವು ದೊರೆಯುವುದು.

೧೯೩೮ರ ಎಪ್ರಿಲ್ ತಿಂಗಳಲ್ಲಿ ನಡೆದ, ರಾಜ್ಯಗಳ ಸಾಮಾಜಿಕ ಹಿತರಕ್ಷಣಾ ಮಂಡಲಿಗಳ ಅಧ್ಯಕ್ಷರ ವಾರ್ಷಿಕ ಸಮ್ಮೇಳನದಲ್ಲಿ ಆರ್ಥಿಕ ಉನ್ನತಿಯನ್ನು ಸಾಧಿಸುವ ವಿವಿಧ ಕಾರ್ಯಕ್ರಮಗಳಿಗೆ ನಿರ್ದಿಷ್ಟವಾದ ರೂಪವನ್ನು ಕೊಡಲಾಯಿತು. ಈ ಸಮ್ಮೇಳನದಲ್ಲಿ ಕೈಗಾರಿಕಾ ಶಾಖೆಯ ಮಂತ್ರಿಗಳು, ನಗರಗಳು ಮತ್ತು ಗ್ರಾಮಗಳಲ್ಲಿ ಸ್ತ್ರೀಯರಿಗೆ ಯಾವುದಾದರೂ ಉದ್ಯೋಗವನ್ನು ದೊರಕಿಸಿಕೊಡುವಂತಹ, ಕೇಂದ್ರ ಸಮಾಜ ಕಲ್ಯಾಣ ಮಂಡಲಿಯ ಯೋಜನೆಗಳಿಗೆ, ತಮ್ಮ ಮಂತ್ರಿಶಾಖೆಯು ಎಲ್ಲಾ ವಿಧವಾದ ಸಹಕಾರವನ್ನು ನೀಡುವುದಾಗಿ ಆಶ್ವಾಸನೆಯಿತ್ತರು. ಈ ಯೋಜನೆಗಳ ಪ್ರಕಾರ, ಕೊಂಚ ಓದು ಬರೆಹಬಲ್ಲ ಸ್ತ್ರೀಯರಿಗೆ ಆರಿಸಿದ ತಾಲೂಕಾನೆಗಳು ಮತ್ತು ಕುಶಲ ವಸ್ತುಗಳ ತಯಾರಿಕೆಯಲ್ಲಿ ತರಬೇತಿಯನ್ನಿತ್ತು ಅವರು ತರಬೇತಿ ಪಡೆದನಂತರ, ಗ್ರಾಮಗಳು ಮತ್ತು ನಗರಗಳಿಗೆ ಹಿಂತಿರುಗಿ ಹೋಗಿ ಇತರ ಸ್ತ್ರೀಯರಿಗೆ ಆ ವೃತ್ತಿಗಳಲ್ಲಿ ತರಬೇತಿ ನೀಡುವರು. ಕೈಗಾರಿಕಾ

(೧೨ನೇ ಪುಟ ನೋಡಿರಿ)

ಓರ್ವ ಪಂಡಿತರಿಂದಲೇ ಉದ್ಘಾಟಿತವಾಗುವ ಸುಸಂದರ್ಭ ಒದಗಿಬಂದುದಕ್ಕೆ ಅವರನ್ನೂ ಅಭಿವಂದಿಸುವಷ್ಟರಲ್ಲಿಯೇ ಜೊಂಪುಹರಿಡಿ ಮೈಮರೆತರು ರಾಯರು.

ಂ ಂ ಂ

ಸ್ವಪ್ನದಲ್ಲಿ ಅವರು ಕೆಲವು ವಿಚಿತ್ರ ಚಳವಳ (ವಿದ್ಯೋಪವಲ್ಲ)ಗಳನ್ನು ಪ್ರಾರಂಭಿಸಿದರು. "ಎಲ್ಲರೂ ನೆರೆತ ತಲೆಕೂದಲುಗಳನ್ನೇ ಬೆಳೆಸಬೇಕು;" "ಕಾಶ್ಮೀರಿ ಶಾಯಿಗಳನ್ನೇ ತೋಡಬೇಕು;" "ಅಕಾರ ಕಂಠದಲ್ಲಿ ಏಕರೂಪತೆಯಿರಬೇಕು!" ಮುಂದುವರಿಸು; "ಮಾನವರೂ ಮಂಗಗಳಂತೆ ಬಾಲ ತೊಡಬೇಕು, ಹುಲಿಯಂತೆ ಗರ್ಜಿಸಬೇಕು; ಕಿರುಬನಂತೆ ಕತ್ತು ಹಿಸುಕಬೇಕು" ಅಯ್ಯೋ!!

—ಗೋರಾ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕುಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮುಂಗಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

(೩ನೇ ಪುಟದಿಂದ)

ಪಿಸುತ್ತಾರೆ. ಇಲ್ಲಿ ಜನರು ತಮ್ಮ ತಲೆಯನ್ನು ಬೋಳಿಸುತ್ತಾರೆ. ಅವರು ಅತನಲ್ಲಿಯೇ ಐಕ್ಯವಾಗಬಯಸುತ್ತಾರೆ. ವೃಥಾಭಿಮಾನ ಮತ್ತು ಪ್ರಶಂಸೆಗಳು ಹಿಂದೂ ಸಂಸ್ಕೃತಿಗೆ ಬಾಹ್ಯವಾದುವುಗಳು. ಅತನ ದರ್ಶನ ಪಡೆದು ತನ್ಮಯರಾಗುವರು. ಅವರು ತಮ್ಮನ್ನೇ ಮರೆತು ಅತನೆಮರೇ ನಿಲ್ಲಬಯಸುವರು. ಕಸಿವು ನೀರಡಿಕೆಯನ್ನು ತೊರೆದು, ಭಗವಂತನನ್ನು ಬಾಯಿ ತುಂಬ ಪ್ರಕಂಸಿಸುವರು.

ಭಾರತದಲ್ಲಿ ತಿರುಪತಿಯ ಹೆಸರು ತಿಳಿಯದವರಿಲ್ಲ. ಪ್ರತಿ ಹಿಂದೂ ಕುಟುಂಬದಲ್ಲಿ ತಿರುಪತಿಯ ವೆಂಕಟರಮಣನೊಬ್ಬ ವಾಲುದಾರ ತಮ್ಮ ಕಾಯಿಲೆಕಸಾರೆಗಳನ್ನು ದೂರಮಾಡುವ ಭವರೋಗ ವೈದ್ಯ; ಕಂಗೆಟ್ಟು ಬೀಳುತ್ತಿರುವಾಗ ಬಲವಾಗಿ ಹಿಡಿದುಕೊಳ್ಳಲಾಗುವ ನಾಂಖಾರಿಕ ಯಷ್ಟಿ; ಎಂತಲೇ ಭಾರತೀಯ ಹಿಂದೂ ಕುಟುಂಬದವರು ತಮ್ಮ ಜೀವಿತಾವಧಿಯಲ್ಲಿ ಒಂದು ಬಾರಿಯಾದರೂ ತಿರುಪತಿಯ ವೆಂಕಟರಮಣನನ್ನು ಕಣ್ಣಾರೆ ಕಾಣುವ ತವಕ ಪಡುತ್ತಿರುತ್ತಾರೆ.

— ——

ಮಧ್ಯ ಪೂರ್ವ

ಲೆಬನಾನ್ ಜೋರ್ಡಾನ್‌ಗಳ ಸೈನಿಕಾಚರಣೆಗೆ ಕಾರಣವೇನು?

ಜೋರ್ಡಾನಿಂದ ಬ್ರಿಟಿಷ ಸೇನಾಪಡೆ ತ್ವರಿತವಾಗಿ ಹೊರಬರಲಿ.

ಅಮೆರಿಕ ಮತ್ತು ಬ್ರಿಟಿಷ ಸರಕಾರಗಳು ಲೆಬನಾನ್ ಮತ್ತು ಜೋರ್ಡನ್‌ಗಳಿಗೆ ತಮ್ಮ ಸೈನಿಕ ಸೇನೆಯನ್ನು ಕಳುಹಿಸಿ ಕೊಟ್ಟಾಗ, ನಿಜವಾಗಿಯೂ ಇರಾಕಿನ ಅಂತರ್ವಿದ್ರೋಹವು ಅನ್ಯತ್ರ ಹರಡುವುದೆಂದು ಭಾವಿಸಿದ್ದವು. ಮಧ್ಯಪ್ರಾಚ್ಯ ದೊಡನೆ ನಿಕಟ ಸಂಬಂಧವಿಟ್ಟುಕೊಂಡಿದ್ದ ಬ್ರಿಟನ್ನು ಅಲ್ಲಿನ ಸಂಭವನೀಯ ಅಭಿವೃದ್ಧಿಯ ಬಗ್ಗೆ ತನ್ನ ವಿಶೇಷಾಯ ಕಚೇರಿಗೆ ಅಂತಹ ಆಜ್ಞೆಯಿತ್ತುದು ವಿಸ್ಮಯ ಜನಕವಾಗಿದೆ. ಅರಬ ರಾಷ್ಟ್ರೀಯತೆ ಮತ್ತು ವಿಶಾಲ ಅರಬೀಯತೆಗಳು ಒಂದೇ ಅಲ್ಲವೆಂಬುದನ್ನು ತಿಳಿಯಲು ಅದು ತಪ್ಪಿತು. ಅರಬರಲ್ಲಿಯೇ ವಿವಿಧ ಅರಬ ರಾಜ್ಯಗಳ ಸಮೀಕರಣದತ್ತ ಒಯ್ಯುವ ವಿಶಾಲ ಅರಬೀಯತೆಯ ವಿಚಾರ ಧಾರೆಯನ್ನು ಎಷ್ಟರಮಟ್ಟಿಗೆ ಒಪ್ಪಬೇಕೆಂಬ ವಿಷಯದಲ್ಲಿಯೇ ನಾಕಷ್ಟು ಭಿನ್ನಾಭಿಪ್ರಾಯಗಳಿರುತ್ತವೆ. ವಿಶಾಲ ಅರಬೀಯತೆಯು ಅರಬ ರಾಷ್ಟ್ರಗಳನ್ನು ಈಜಿಪ್ಟಿನೊಡನೆ ಸೇರಿಸಿ ಎಣ್ಣೆಯ ಅದಾಯದಲ್ಲಿ ಬಹುಭಾಗವು ಈಜಿಪ್ಟಿನ ಲಾಭಕ್ಕಾಗಿ ಬಳಸಿಕೊಳ್ಳುವಂತೆಸಗುವುದೆಂಬ ಸಂದೇಹವೂ ಬಹಳವಾಗಿದೆ. ಈ ವಿಶಾಲ ಅರಬೀಯತೆಯು ಸುಲಭದಲ್ಲಿ ಈಜಿಪ್ಟಿನ ರಾಷ್ಟ್ರೀಯತೆಯ ಉತ್ತಮವಾದ ಹೊದಿಕೆಯಾಗಿದೆ ಎಂದವರು ಊಹಿಸುತ್ತಾರೆ.

ಬಗ್ದಾದಿನಲ್ಲಿ ನಡೆದ ಆಂತರಿಕ ವಿದ್ರೋಹದಲ್ಲಿ ಇರಾಕ ರಾಷ್ಟ್ರೀಯತೆಯ ಪ್ರಭಾವಕ್ಕಿಂತ ವಿಶಾಲ ಅರಬೀಯತೆಯ ಪ್ರಭಾವ ಬಹಳವಾಗಿ ಬಿದ್ದಿದೆ ಎಂಬುದಾಗಿ ಅಮೆರಿಕೆ ಮತ್ತು ಬ್ರಿಟಿಷ ಸರಕಾರಗಳು ನಂಬುವಂತೆ ಮಾಡಿದ ಸಂಗತಿಯಲ್ಲಿ ಅರಬರಲ್ಲಿನ ಇಬ್ಬಣಗಳು ತಂತಮ್ಮ ಶಕ್ತಿಯನ್ನು ಗೊತ್ತುಪಡಿಸಿಕೊಳ್ಳದಿರುವುದೂ ಪರಿಣಾಮ ಮಾಡಿದೆ. ಈ ತಪ್ಪು ಹೆಜ್ಜೆಯಿಂದಾಗಿ, ಮಧ್ಯಪೂರ್ವದಲ್ಲಿರುವ ಪಾಶ್ಚಾತ್ಯ ಅಭಿಮಾನಿಯೆಲ್ಲವೂ ಸಂಪೂರ್ಣವಾಗಿ ನಾಶವಾಗಿ ಹೋಗುವುವೆಂಬ ದುರಭಿಪ್ರಾಯಕ್ಕೆ ಎರಡು ಸರಕಾರಗಳೂ ಅಂಟಿಕೊಂಡುವು. ವಿಶಾಲ ಅರಬೀಯತೆಯ ಚಳವಳವು ಕ್ರಮೇಣ ರಾಷ್ಟ್ರೀಯ ಉಸಿರುಗಳನ್ನು ಒಲಿಸುವುದಕ್ಕೆ ಪಾಶ್ಚಾತ್ಯ ರಾಜ್ಯತಂತ್ರವು ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಜೊಂದಿಕೊಂಡು ಮುನ್ನಡೆಯಲು ತಪ್ಪಿದುದೇ ಕಾರಣವಾಗಿದೆ. ಅರಬರು ವಾಣಿಜ್ಯತೆಯ ಸ್ವಭುತ್ವವನ್ನು ಕೊನೆಗೊಳಿಸುವಲ್ಲಿ ವಿಶಾಲ ಅರಬೀಯತೆಯೇ ಪ್ರಮುಖ ಸಾಧನವೆಂಬುದಾಗಿ ಅರಬರು ತಿಳಿದುಕೊಂಡಿದ್ದಾರೆ. ನಿಜವಾಗಿಯೂ ಅರಬ ರಾಷ್ಟ್ರಗಳು ಒಂದು ರೀತಿಯ ಸಂಯುಕ್ತ ರಾಜ್ಯಗಳಾಗಲು ಬಯಸುತ್ತಿವೆ. ಆದರೆ, ನ್ಯಾಯವಾದ ರಾಷ್ಟ್ರೀಯ ಜೀವಳವು ಮುಂಬರಿದಂತೆ ಈ ರೀತಿಯ ಸಂಯುಕ್ತ ರಾಜ್ಯವಾಗುವ ಸಾಧ್ಯತೆಯು ದೂರವಾಗುತ್ತ ಬರುತ್ತಿದೆ.

ಇರಾಕಿನ ಹೊಚ್ಚ ಹೊಸತಾದ ಸರಕಾರವು ಈಜಿಪ್ಟಿನ ಕೈಗೊಂಬೆಯಂತಿದೆ ಎಂಬ ಅಭಿಪ್ರಾಯ ಹರಡಿ ಬಿಟ್ಟಿದೆ. ಯು.ಗೊಸ್ಲಾವಿಯಾವನ್ನು ಮೋಸ್ಕೋದಿಂದ ಬೇರ್ಪಡಿಸಿದ "ಮಾವರಿ ರಾಷ್ಟ್ರ"ದ ಕಲ್ಪನೆಯ ಮೇಲಿನ ಕ್ರೋಧದಂತೆಯೇ ಕೈರೊವು ತನ್ನತ್ತ ಇರಾಕನ್ನು ಆಕರ್ಷಿಸಿದರೆ ಇರಾಕಿನಲ್ಲಿಯೂ ಈ ಕ್ರೋಧವು ಎದ್ದು ತೋರಬಹುದು. ನಸ್ಸೇರರಿಗೂ ಈ ಕಷ್ಟದ ಅರಿವಿದೆ. ಸ್ವತಂತ್ರ ಅರಬ ರಾಜ್ಯಗಳನ್ನು ವಿಲೀನೀಕರಿಸುವಲ್ಲಿರುವ ಅವರ ಆಕಾಂಕ್ಷೆಯನ್ನವರು ಸುಸಂಗತಗೊಳಿಸಿದರೆ, ಅವರ ಅಪ್ರಸ್ತಾಪಕ ರಾಜ್ಯತಂತ್ರವನ್ನು ಪರೀಕ್ಷಿಸಿದಂತಾಗುವುದು.

ಈ ಸಮಸ್ಯೆಯ ಪರಿಸ್ಥಿತಿಯನ್ನು ತಪ್ಪಾಗಿ ಗಣಿಸಿ ಅಮೆರಿಕೆಯ ಮತ್ತು ಬ್ರಿಟಿಷ ಸರಕಾರಗಳು ತಮ್ಮ ತೆಕ್ಕೆಗೆ ಸಿಕ್ಕದ ಒಂದು ಮಾರ್ಗವನ್ನು ಅರಸುತ್ತಿವೆ. ಲೆಬನಾನಿನಲ್ಲಿ ಎಲ್ಲವಕ್ಕೂ ಮೂಲವಾದ ಪರಾಕ್ರಮಣದ ಪರಿಸ್ಥಿತಿಗಿಂತಲೂ ಮೊದಲಿನಿಂದಲೂ ಆಂತರಿಕ ರಾಜಕೀಯ ಪರಿಸ್ಥಿತಿಯೇ ಇದ್ದಿತೆಂಬುದನ್ನು ಒಪ್ಪಬೇಕು. ರಾಜಕೀಯ ಉಪದ್ರವಗಳು ಮುಕ್ತಾಯಗೊಂಡಂತೆ ಕಂಡುಬರುವುದರಿಂದ, ಅಮೆರಿಕೆಗೆ ನೇನೆ ಹಿಂತೆಗೆಯಲು ದ್ವಾರ ಮುಕ್ತವಾಗಿದೆ. ಆದರೆ, ಬ್ರಿಟಿಷ ಸರಕಾರವು ಮಾತ್ರ ತನ್ನ ಉಪದ್ರವಗಳ ಪ್ರಥಮ ಘಟ್ಟದಲ್ಲಿಯೇ ಇದೆ. ಅದು ಈ ಪ್ರಶ್ನೆಯನ್ನು ಯುಕ್ತ ರಾಷ್ಟ್ರ ಸಂಘದ ಬೆನ್ನಿಗೆ ಕಟ್ಟಲು ಬಯಸುತ್ತಿದೆ.

ಮಧ್ಯಪೂರ್ವದ ಎಣ್ಣೆಯ ಮೇಲೆ ಪಾಶ್ಚಾತ್ಯರಿಗೆಷ್ಟು ಆಸಕ್ತಿಯಿರುವುದು ಸ್ವಾಭಾವಿಕವೇ. ಏನೇ ಆದರೂ ತಮ್ಮ ವಾಲಿನ ಎಣ್ಣೆ ತಮಗೆ ದೊರೆಯುತ್ತಲೇ ಇರಬೇಕೆನ್ನುವುದು ಆ ರಾಷ್ಟ್ರಗಳು. ಇದಕ್ಕಾಗಿ ಸೈನಿಕ ಕಾಮಾ ಚರಣೆ ಮಾಡಬೇಕಾಗಿಲ್ಲ. ಇರಾಕದ ವಿದ್ರೋಹವು ಯಾವ ತಡೆಯೂ ಇಲ್ಲದೆ ತಮ್ಮ ಎಣ್ಣೆಯನ್ನು ಪಾಶ್ಚಾತ್ಯರೀಯರು ಯಾವ ಅಡೆತಡೆಯನ್ನೂ ತಂದಂತೆ ಕಾಣುವುದಿಲ್ಲ. ಯುಕ್ತರಾಷ್ಟ್ರಸಂಘದ ಸೈನ್ಯವು ಅಲ್ಲಿದ್ದರೆ, ಶಾಂತಿಯುತವಾಗಿ ಮಧ್ಯ ಪೂರ್ವದ ರಾಜಕೀಯ ಸಂಸ್ಥೆಗಳನ್ನು ಪುನರ್ತಿಸಬಹುದೆಂದು ವಾದಿಸಬಹುದಾದರೂ ಇದು ಅಸಾಧ್ಯ.

ಯುಕ್ತರಾಷ್ಟ್ರ ಸಂಘವು ಕ್ರಾಂತಿಯನ್ನು ತಡೆಗಟ್ಟಲಾರದು; ಆದರೆ, ಶಾಂತಿಯನ್ನುಳಿಸುವುದು ಅದರ ಕರ್ತವ್ಯ. ಆಕ್ರಮಣವನ್ನು ತಡೆಗಟ್ಟಬೇಕು. ನವೀನ ಜಗತ್ತಿನಲ್ಲಿ ಜನತೆಯು ವಿದ್ರೋಹಗಳ ಮೂಲಕ ಸರಕಾರಗಳನ್ನು ಬದಲಿಸುತ್ತಿರುವಾಗ ಶಾಂತಿ ಸ್ಥಾಪಿಸುವುದೇ ಮಹಾ ಸಮಸ್ಯೆ.

ಜೋರ್ಡಾನದಲ್ಲಿನ ಬ್ರಿಟಿಷ ಸೇನೆಯನ್ನು ಬ್ರಿಟನ್ನು ಏಕೆ ರಿಕ್ತಮಾಡುವುದಿಲ್ಲ? ರಾಜ ಹುಸ್ಸೇನರ ಸರಕಾರವು ಅವರನ್ನು ಅಹ್ವಾನಿಸಿತ್ತೇ ಹೊರತು ಹೋಗಲು ಬೇಳಿಲ್ಲ. ಇದೇ ಬ್ರಿಟಿಷ ಸರಕಾರಕ್ಕೊಂದು ಸಮಸ್ಯೆ. ಜೋರ್ಡಾನಿನ ಮೇಲೆ ಪರಾಕ್ರಮಣ ನಡೆಯುತ್ತಿದೆ ಎಂಬ ದೂರಿರುವುದಾದರೆ, ಅದನ್ನು ಸಾಧಿಸಿ ತಪ್ಪಿತಸ್ಥರನ್ನು ಶಿಕ್ಷಿಸಿ ಹೊರತರಲಿ. ಇದು ನಿಜವೇ ಆದರೆ, ಯುಕ್ತ ರಾಷ್ಟ್ರಸಂಘವು ಕೈಹಾಕಿ ತನ್ನ ಕರ್ತವ್ಯವನ್ನು ನೆರವೇರಿಸಬೇಕಲ್ಲದೆ, ಬ್ರಿಟಿಷ ಸರಕಾರವಲ್ಲ. ಸತ್ಯವಾಗಿ ಕೇಳುವುದಾದರೆ, ಅರಸ ಹುಸ್ಸೇನರಿಗೆ ತಮ್ಮ ಜನರ ಮೇಲೆಯೇ ವಿಶ್ವಾಸವಿಲ್ಲ. ಇವರೆಂದು, ವಿದ್ರೋಹವೆದ್ದೀತೋ ಎಂಬ ಭಯದಿಂದ ತಮ್ಮ ರಕ್ಷಣೆಗಾಗಿ ಬ್ರಿಟಿಷ ಸೇನೆಯನ್ನು ಅಹ್ವಾನಿಸಿದ್ದಾರೆ. ಆದರೆ, ಈ ದಿಸೆಯಲ್ಲಿ ಅವರು ಸಂಯುಕ್ತ ರಾಷ್ಟ್ರಸಂಘಕ್ಕೆ ಅಗಲೇ ಬ್ರಿಟಿಷ ಸರಕಾರಕ್ಕಾಗಲೇ ದೂರುವುದಕ್ಕೆ ಕಾರಣವಿಲ್ಲ. ಪರಾಕ್ರಮಣ ನಡೆದಲ್ಲಿ ಮಾತ್ರ ಮುಂದಿನ ಮಾತೇ ಹೊರತು, ಜೋರ್ಡಾನಿನೊಳಗಾಗಲೀ ಲೆಬನಾನಿನೊಳಗಾಗಲೀ ಜನತೆ ತಮ್ಮ ಸರಕಾರಗಳ ವಿರುದ್ಧ ಬಂಡೆದ್ದರೆ, ಬಾಹ್ಯ ರಾಷ್ಟ್ರಗಳು ಅಂತಹ ಬಂಡನ್ನು ಹತ್ತಿಕ್ಕಲು ಮುನ್ನುಗ್ಗುವುದು ಸರ್ವಥಾ ನ್ಯಾಯವಲ್ಲ.

ಮಹಿಳೋತ್ಸರ್ಗ

ಬಲ್ಗೇರಿಯಾದ ನಾರಿಯರು ಅಜ್ಞ ಶಿಕ್ಷಿಕೆಯರಾಗಿದ್ದರು!

ಇಂದಿನದೇ ಪುರುಷರಿಗೆ ಸಮಜೋಡಿಯಾಗಿರುತ್ತಾರೆ.

ಒಟ್ಟೋಮನ್ ಸಾಮ್ರಾಜ್ಯದ ಐದು ಶತಮಾನಗಳ ದೀರ್ಘಕಾಲೀನ ಪರಾಧೀನತೆಯಿಂದ ಇತ್ತೀಚೆಗೆ ಬಲ್ಗೇರಿಯವು ವಿಮೋಚನೆಯನ್ನು ಪಡೆದ ತರುವಾಯ, ವಿಕಾಸ ಕಾರ್ಯಕ್ರಮದ ವಿಸ್ತೃತ ಫಲ ನಿರೀಕ್ಷೆಯನ್ನು ಎದುರಿಸಬೇಕಾಯಿತು. ಆದರೆ ಮಹಿಳೆಯರ ಸಾಮಾಜಿಕ ಸ್ಥಾನವು ಮೂಲಭೂತವಾಗಿ ಏನೂ ಮಾರ್ಪಾಡು ಹೊಂದಲಿಲ್ಲ. ಅವರನ್ನು ಶಿಕ್ಷಿಕೆಯ ವೃತ್ತಿಗೆ ಮಾತ್ರವನ್ನೇ ಯೋಗ್ಯರೆಂದು ಪರಿಗಣಿಸಲಾಗುತ್ತಿತ್ತು. ನಾಟಕಗಳಲ್ಲಿ ಗಂಡಸರೇ ಮಹಿಳೆಯರ ಪಾತ್ರಗಳನ್ನು ವಹಿಸುತ್ತಿದ್ದರು. ಮೊದಲು ನಾಟಕ ರಂಗವನ್ನು ಪ್ರವೇಶಿಸಿದ ಮಹಿಳೆಯರು ತುಂಬಾ ಸಾಹಸ, ಸೃಧೆ, ಕಲಾಪ್ರಿಯತೆಗಳನ್ನು ಹೊಂದಿದ್ದು, ಅವಮಾನವನ್ನೂ ಮತ್ತು ಕೌಟುಂಬಿಕ ಸಂಘರ್ಷಗಳನ್ನೂ ಎದುರಿಸಿ ಜಯಿಸಬೇಕಾಗುತ್ತಿತ್ತು.

ಆದರೆ ದೇವರು ಮುನ್ನಡೆಯಿತು. ಕಾಲಕ್ರಮದಲ್ಲಿ ಮಹಿಳೆಯರು ಸಾರ್ವಜನಿಕ ಜೀವಕ್ಷೇತ್ರಗಳನ್ನು ಪ್ರವೇಶಿಸಿದರು. ಆದರೂ ಕೂಡ ಅವರು ಸಾಧಿಸಿದ ವಿಜಯಗಳು ವಿರಳವಾಗಿದ್ದುವು, ಏಕಪಕ್ಷೀಯವಾಗಿದ್ದುವು. ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಜೀವನದ ಅನೇಕ ಕ್ಷೇತ್ರಗಳು ಇನ್ನೂ ಅವರ ಪಾಲಿಗೆ ಮುಚ್ಚಲ್ಪಟ್ಟಿದ್ದುವು. ಕೇವಲ ಸೀಮಿತ ಸಂಖ್ಯೆಯ ಮಹಿಳೆಯರು ಮಾತ್ರವೇ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶವನ್ನು ಪಡೆಯಲು ಸಾಧ್ಯವಾಯಿತು. ನ್ಯಾಯಶಾಸ್ತ್ರ ಪದವೀಧರೆಯರಾದವರಿಗೆ ಉನ್ನತ ನ್ಯಾಯಾಲಯಗಳಲ್ಲಿ ವಾದಿಸಲು, ವಕೀಲಿಯನ್ನು ನಡೆಸಲು, ಅಥವಾ ಸಾರ್ವಜನಿಕ ಹುದ್ದೆಯಾದಿ (ಪಬ್ಲಿಕ್ ಪ್ರಾಸಿಕ್ಯೂಟರ್) ಅಧಿಕಾರಿಗಳಾಗಿರಲು ಅವಕಾಶವಿರಲಿಲ್ಲ. ವಾಸ್ತು ಶಿಲ್ಪಿಗಳು, ಯಂತ್ರ ಶಿಲ್ಪಿಗಳು, ಉದ್ಯಮಗಳ, ಕಚೇರಿಗಳ ಅಥವಾ ಸಂಸ್ಥೆಗಳ ವ್ಯವಸ್ಥಾಪಕರು— ಮುಂತಾದ ವೃತ್ತಿಗಳಿಗೆ ಮಹಿಳೆಯರಿರಕೂಡದೆಂಬ ನಿಷೇಧವಿತ್ತು. ಅದರೆ ಕಾರಖಾನೆಗಳಿಗೂ, ಯಂತ್ರಸ್ಥಾವರಗಳಿಗೂ ಹೋಗಲು ಅವರಿಗೆ ಅವಕಾಶವಿತ್ತು. ವಾಸ್ತವಿಕವಾಗಿಯೂ ಜನಳಿಯ ಗಿರಣಿಗಳಲ್ಲಿ ಪುರುಷರಿಗಿಂತಲೂ ಮಹಿಳಾ ಕಾರ್ಮಿಕರೇ ಹೆಚ್ಚಾಗಿದ್ದರು ಆದರೆ ಅವರಿಗೆ, ಪುರುಷರಿಗೆ ಸಮಾನವಾದ ಹಕ್ಕುಗಳಿರಲಿಲ್ಲ ಅವರಿಗೆ ಸಮಾನವಾದ ಕೂಲಿಯೂ ಸಹ ದೊರೆಯುತ್ತಿರಲಿಲ್ಲ.

ಇತ್ತೀಚಿನ ಫಾಸಿಜಮ್ಮಿನಿಂದ ದೇಶವು ವಿಮೋಚನೆ ಪಡೆದ ಮೇಲೆ, ಜನತಾ ಸರಕಾರವು ಅಧಿಕಾರಕ್ಕೆ ಬಂದ ಮೇಲೆ, ಮಹಿಳೆಯರ ಸಾಮಾಜಿಕ ಸ್ಥಾನದಲ್ಲಿ ಆಮೂಲಾಗ್ರವಾದ ಬದಲಾವಣೆಯುಂಟಾಯಿತು. ಮಹಿಳೆಯರೂ ಕೂಡ ಗಣತಂತ್ರದ ಪೂರ್ಣ ಪದವೀಧರೆಯರು ಸ್ವಾಗರಿಕರೆಂದು ಘೋಷಿಸಲಾಯಿತು ಸಂಪೂರ್ಣ ರಾಜಕೀಯ ಹಕ್ಕುಗಳ ಜತೆಗೇ, ಮಹಿಳೆಯರು ಯಾವ ಬಗೆಯ ವೃತ್ತಿಯನ್ನಾದರೂ ಅನುಸರಿಸುವ ಹಕ್ಕೂ ಅವರಿಗೆ ಮಂಜೂರಾಯಿತು. ಇತ್ತೀಚೆಗೆ ಘಟನಾಸಭೆಯು ಅಂಗೀಕರಿಸಿದ ಸಂವಿಧಾನದಲ್ಲಿ ಅವರ ಹಕ್ಕುಗಳನ್ನು ಪ್ರತಿಷ್ಠಿಸಲಾಯಿತು.

ಈ ಕಾಲದಲ್ಲಿ ಆರ್ಥಿಕ ರಾಜಕೀಯ ಸೈತಿಕ ಮತ್ತು ಸಾಂಸ್ಕೃತಿಕ ಜೀವನದ ಎಲ್ಲ ರಂಗಗಳಲ್ಲಿಯೂ ಸ್ತ್ರೀಯರು ಭಾಗ ವಹಿಸುತ್ತಾರೆ ಅವರಲ್ಲಿ ತಜ್ಞರಿಗೆ ಪ್ರಸಿದ್ಧಿ ಪ್ರಶಸ್ತಿಗಳೂ, ಸಮಾಜವಾದೀ ವೀರವನಿತೆಯರೆಂಬ ಬಿರುದುಗಳೂ ದೊರೆತಿವೆ.

ವಿಶ್ವವಿದ್ಯಾನಿಲಯಗಳ ವದವೀಧರರ





ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ತರು: ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3618

UDIPI, THURSDAY
4-9-1958

LICENSE NO. 31
Licensed to Post without Prepayment

ನೈಕಿ ಶೇ ೨೨ರಷ್ಟು ಜನ ಮಹಿಳೆಯರೇ ಆಗಿರುತ್ತಾರೆ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವವರಲ್ಲಿ ಶೇ ೫೧ರಷ್ಟು ಜನರೂ, ಕಲಾ ಕ್ಷೇತ್ರದಲ್ಲಿ ಶೇ ೩೮ ೧ರಷ್ಟು ಜನರೂ ಮಹಿಳೆಯರೇ ಆಗಿದ್ದಾರೆ

ಬಲ್ಗೇರಿಯದ ವಕೀಲಿ ವೃತ್ತಿಯಲ್ಲಿರುವವರಲ್ಲಿ ಹತ್ತರಲ್ಲೊಂದು ಪಾಲು ಜನ ಹೆಂಗಸರು ಅಲ್ಲಿ ೨೨೫೦ ಮಂದಿ 'ಡಾಕ್ಟರ್'ರೂ (ಚಿಕಿತ್ಸಕಿಯರು), ೧೧೦೦ ಜನ ವೈದ್ಯಕೀಯ ಶಾಸ್ತ್ರವಿದೆಯರೂ ಇದ್ದಾರೆ ಬಲ್ಗೇರಿಯದ ವಿಜ್ಞಾನ ಶಾಸ್ತ್ರ ಪರಿಷತ್ತಿನ ವೈಜ್ಞಾನಿಕ ಸಂಶೋಧನಾ ನಿಲಯಗಳಲ್ಲಿ ಈಗ ೩೦೫ ಮಂದಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ 'ಪ್ರೊಫೆಸರ'ರಾಗಿಯೂ, ಸಹಾಯಕ ಪ್ರೊಫೆಸರರಾಗಿಯೂ, ವಿಶ್ವವಿದ್ಯಾನಿಲಯದ ವ್ಯಾಖ್ಯಾನಕಾರರಾಗಿಯೂ ಗಣ್ಯತೆಯನ್ನು ಪಡೆದಿರುವ ಮಹಿಳೆಯರೂ ಇದ್ದಾರೆ ಬಲ್ಗೇರಿಯದ ವಿಜ್ಞಾನ ಶಾಸ್ತ್ರ ಪರಿಷತ್ತಿನ ಪತ್ರ ವ್ಯವಹಾರ ಸದಸ್ಯೆಯಾಗಿ ಒಬ್ಬ ಮಹಿಳಾ ವಿಜ್ಞಾನಿ ಇದ್ದಾರೆ

ಬಲ್ಗೇರಿಯದ ರಾಜಕೀಯ ಸಂಘಟನೆಗಳಲ್ಲಿ ಗಂಡಸರೊಂದಿಗೇ ಕೂಡಿಕೊಂಡು ಮಹಿಳೆಯರೂ ಕೆಲಸಮಾಡ ತೊಡಗಿದ್ದಾರೆ 'ಪಿತೃಭೂಮಿರಂಗ'ದ ಸಂಘಟನೆಯಲ್ಲಿ ಅವರು ಅಧಿಕ ಸಂಖ್ಯೆಯಲ್ಲಿ ಭಾಗ ವಹಿಸಿ ಪ್ರಾಮುಖ್ಯತೆಯನ್ನು ಪಡೆದಿದ್ದಾರೆ ದೇಶದ ರಾಷ್ಟ್ರಪ್ರೇಮಿ ಶಕ್ತಿಗಳು ಈ ಸಂಘಟನೆಯಲ್ಲಿ ಒಂದುಗೂಡಿವೆ ಅಧಿಕ ಸಂಖ್ಯೆಯ ಸ್ತ್ರೀಯರು ಪಿತೃಭೂಮಿರಂಗ ಕಾರ್ಯನಿರ್ವಾಹಕ ಮಂಡಲಗಳ ಸದಸ್ಯೆಯರಾಗಿದ್ದಾರೆ ಪಿತೃಭೂಮಿರಂಗದ ಬಹ್ಯಂಶದ ಸ್ತ್ರೀ ಸದಸ್ಯೆಯರು, ಈ ರಂಗವು ಸಂಘಟಿಸುವ ರಾಜಕೀಯ, ಸಾಹಿತ್ಯಿಕ, ಶೈಕ್ಷಣಿಕ ಪಾಠ ಕ್ರಮಗಳಿಗೆ ಹಾಜರಾಗುತ್ತಾರೆ. ಈ ತರಗತಿಗಳು ಅವರ ರಾಜಕೀಯ, ಸಾಂಸ್ಕೃತಿಕ ಸಟ್ಟವನ್ನು ಸುಧಾರಿಸಲು ಅವರಿಗೆ ಸಹಾಯ ಮಾಡುತ್ತವೆ

ಇಲ್ಲಿ ಕಂಡು ಬರುವ ಮಹಾ ಸುಧಾರಣೆಯೂ, ಜನತೆಯ ಸರಕಾರವು ಮಕ್ಕಳ ವಿಷಯದಲ್ಲಿ ವಹಿಸುತ್ತಿರುವ ಆಸಕ್ತಿಯೂ, ಮಹಿಳೆಯರ ಮನೆಗೆಲಸದ, ಕುಟುಂಬದ ಜವಾಬುದಾರಿಗಳ ಭಾರವನ್ನು ತಪ್ಪಿಸುತ್ತದೆ ಒಬ್ಬರು ಯಾವ ಅಡ್ಡಿಯೂ ಇಲ್ಲದೆ ವೃತ್ತಿನಿರತರಾಗುವುದಕ್ಕೆ ಸಾಧ್ಯತೆಯನ್ನುಂಟು ಮಾಡುತ್ತದೆ ವಿದ್ಯುಚ್ಛಕ್ತಿಯೂ ಸಹ ಅವರ ಸಹಾಯಕ್ಕೆ ಬಂದಿದೆ ೧೯೪೪ರ ಸೆಪ್ಟೆಂಬರ್ ದಿನ ಕರ್ಕ್ಕೆ ಮೊದಲು ೬೮೦ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿತ್ತು ಇಂದು ಅವುಗಳ ಸಂಖ್ಯೆಯು ೩೫೦೦ರಷ್ಟಾಗಿದೆ ನಗರಗಳ ಮತ್ತು ಹಳ್ಳಿಗಳ ಮನೆಗಳಿಗೆ ವಿದ್ಯುಚ್ಛಕ್ತಿಯ ಕಾವು-ಕಟ್ಟಿಗೆಗಳನ್ನೂ, ಬಟ್ಟೆ ಒಗೆಯುವ ಯಂತ್ರಗಳನ್ನೂ ಮತ್ತು ಒಲೆಗಳನ್ನೂ ಒದಗಿಸಲಾಗಿದೆ ರೊಟ್ಟಿ ಕಾರಖಾನೆಗಳು, ಸಾರ್ವಜನಿಕ ಸ್ನಾನಗೃಹಗಳು, ಗ್ರಾಮಾಂತರಗಳಲ್ಲಿ ತಿರುಗಾಡುವ ಗ್ರೀಷ್ಮ ಪಾಕಶಾಲೆಗಳು, ಉದ್ಯಮಗಳಲ್ಲಿಯೂ, ಕಚೇರಿಗಳಲ್ಲಿಯೂ, ಪಾಠಶಾಲೆಗಳಲ್ಲಿಯೂ ಇರುವ ಉಪಾಹಾರ ಮಂದಿರಗಳು, ಅನೇಕ ಶಿಶು ಪೋಷಣಾಲಯ

ಸಮಾಜ ಸುಧಾರಣೆ

(೧೦೦೯ ಪುಟದಿಂದ)

ಮಂತ್ರಿಶಾಖೆಯ ಬಜೆಟ್‌ನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗಾಗಿ ಗೊತ್ತು ಮಾಡಲ್ಪಟ್ಟಿರುವ ಹಣದಲ್ಲಿ ಕೊಂಚ ಹಣವನ್ನು, ಕೇಂದ್ರ ಹಾಗೂ ರಾಜ್ಯ ಸಮಾಜ ಕಲ್ಯಾಣ ಮಂಡಲಿಗಳು ಸಿದ್ಧಗೊಳಿಸಿರುವ ಈ ಯೋಜನೆಗಳಿಗಾಗಿ ಕೊಡಲು ಕೈಗಾರಿಕಾ ಶಾಖೆಯ ಮಂತ್ರಿಗಳು ಅನುಮತಿಸಿರುವರು ಸ್ತ್ರೀಯರು ಸಿದ್ಧಪಡಿಸಿದ ವಸ್ತುಗಳನ್ನು ಮಾರಾಟಮಾಡುವುದು ಮುಂತಾದ ವಿಷಯಗಳಲ್ಲಿಯೂ ಕೇಂದ್ರ ಕೈಗಾರಿಕಾ ಮಂತ್ರಿ ಶಾಖೆಯವರು ಮಾರ್ಗದರ್ಶನವನ್ನೀಯುವರು

ಈ ಸಮ್ಮೇಳನದಲ್ಲಿ ಮಾಡಿದ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಅವುಗಳಲ್ಲಿ ಮುಖ್ಯವಾದುದೆಂದರೆ, ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಿಶಾಖೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಅಧ್ಯಕ್ಷತೆಯಲ್ಲಿ, ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಮಹಿಳೆಯರಿಗೆ ತರಬೇತಿ ನೀಡುವ ಸಂಬಂಧವಾಗಿ ಉತ್ಪಾದನಾ ಕೇಂದ್ರಗಳನ್ನು ರಚಿಸಲು ಸ್ವಯಂ ಸೇವಾ ಸಂಸ್ಥೆಗಳಿಂದ ಬರುವ ಕಾರ್ಯಯೋಜನೆಗಳನ್ನು ಪರಿಶೀಲಿಸಲು ಸ್ಥಾಪಿಸಲಾಗಿದ್ದ ಕಾರ್ಯನಿರತ ವರ್ಗಗಳನ್ನು ಕ್ರಮಬದ್ಧವಾದ ಸ್ಥಾಯಿ ಸಮಿತಿಯನ್ನಾಗಿ ನಿಯಮಿಸಲಾಗುವುದು ಅಖಿಲ ಭಾರತ ಕುಶಲ ವಸ್ತುಗಳ ಮಂಡಲಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ, ಮುಂತಾದ ಮಂಡಲಿಗಳು, ಕೇಂದ್ರ ಸಮಾಜಕಲ್ಯಾಣ ಮಂಡಲಿಯು ಪ್ರಚಲಿತ ವರ್ಷದ ಕಾರ್ಯಕ್ರಮಗಳಿಗಾಗಿ ವಿಶಿಷ್ಟ ದೆಸವನ್ನು ತೆಗೆದಿರಿಸಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು

ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳನ್ನು ತಯಾರಿಸುವ ಪ್ರಯತ್ನದಲ್ಲಿ ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿಶಾಖೆಯಿಂದ ಸಹಯೋಗ ಪಡೆದಿರುವುದು ಅತ್ಯತ್ತಮವಾದ ಆರಂಭವಾಗಿರುವುದು ಇದುವರೆಗೆ ಅಖಿಲ ಭಾರತ ಕುಶಲ ವಸ್ತುಗಳ ಮಂಡಲಿಯು ೨೦೦ ಕೇಂದ್ರಗಳಲ್ಲಿ ಕುಶಲ ವಸ್ತುಗಳ ಸಮೀಕ್ಷೆ ನಡೆಸಲು, ಆವಗಳನ್ನು ರಾಜ್ಯಮಂಡಲಿಗಳ ಮೂಲಕ ವಿಕ್ರಯಮಾಡಿಸಿ, ಆ ಕುಶಲ ವಸ್ತುಗಳನ್ನು ಜನತೆಯು ನೋಡಿಕೊಂಡು ಕೊಳ್ಳುವ ರೀತಿಯಲ್ಲಿ ಸೂಕ್ತವಾದ ಸ್ಥಳಗಳಲ್ಲಿ ಇಡುವ ವ್ಯವಸ್ಥೆಗಾಗಿ ೬೦,೦೦೦ ರೂಗಳನ್ನು ನೀಡಿದೆ ಕುಶಲ ವಸ್ತುಗಳ ಮಂಡಲಿಯು ೧೯೫೮-೫೯ರಲ್ಲಿ ಕಲ್ಯಾಣ ವಿಸ್ತರಣ ಕೇಂದ್ರಗಳಲ್ಲಿ ೪೦ ಉತ್ಪಾದನಾ ಕೇಂದ್ರಗಳನ್ನು ತೆರೆಯುವ ಸಲುವಾಗಿ, ಪ್ರತಿಯೊಂದು ಯೂನಿಟ್ಟಿಗೂ ೧೨,೫೦೦ ರೂಗಳನ್ನು ನೀಡುವ ನಿರೀಕ್ಷೆಯಿರುವುದು

ಅಖಿಲ ಭಾರತ ಕೈಮಗ್ಗ ಮಂಡಲಿಯು ಪ್ರಚಲಿತ ವರ್ಷದಲ್ಲಿ ಸುಮಾರು ೩೦ ಕೈಮಗ್ಗಗಳನ್ನುಳ್ಳ ೧೫೦ರಿಂದ ೨೦ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಯೋಜನೆಯೊಂದನ್ನು ತಯಾರಿಸಿದೆ ಈ ಪ್ರತಿಯೊಂದು ಕೇಂದ್ರವೂ ಸುಮಾರು ೬೦ ಮಂದಿ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುವುದು. ಖಾದಿ ಮತ್ತು ಗೃಹ ಕೈಗಾರಿಕೆಗಳ ಕಮೀಷನ್ನಿನವರು, ಅಂಬರ ಚರಕ, ಕೈಯಿಂದ ಭತ್ತ ಕುಟ್ಟಿ ಅಕ್ಕಿ ಮಾಡುವುದು, ಖಾದಿ ಒಟ್ಟಿಯ ಮೇಲೆ ಕಸೂತಿ ಹಾಕುವುದು—ಇತ್ಯಾದಿಗಳಲ್ಲಿ ಮಹಿಳೆಯರಿಗೆ ತರಬೇತಿ ನೀಡುವ ಕಾರ್ಯಯೋಜನೆಗಳನ್ನು ಉದ್ದೇಶಿಸಿರುವರು.

ಪತಿತ ಜೀವನದಿಂದ ವಿಮುಕ್ತರಾಗುವ ಸ್ತ್ರೀ-ಪುರುಷರಿಗೆ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸಿಕೊಡುವುದಕ್ಕಾಗಿ ಪ್ರತಿಯೊಂದು ರಾಜ್ಯ ಸರಕಾರವೂ ಆಶ್ರಮ ಅದವಾ ಸದನದಲ್ಲಿ ಯಾವುದಾದರೊಂದು ಉದ್ಯೋಗವನ್ನು ಆರಂಭಿಸುವುದು ಇದು ವರೆಗೆ ೩೨ ಸರ್ಕಾರಿ ಆಶ್ರಮಗಳನ್ನು ತೆರೆಯಲು ಅನುಮತಿ ನೀಡಲಾಗಿದೆ ಈ ಆಶ್ರಮಗಳಲ್ಲಿ ೨೪ ಆಶ್ರಮಗಳು ಈಗಾಗಲೆ ನಿರ್ವಹಿಸುವ ಕೇಂದ್ರ ಸಮಾಜ ಕಲ್ಯಾಣ ಮಂಡಲಿಯ ಸ್ಥಿ ಸಣ್ಣ ಪ್ರಮಾಣದ ಉದ್ಯೋಗ ವಿಭಾಗವನ್ನು ವ್ಯವಸ್ಥೆಗೊಳಿಸುವ ಉದ್ದೇಶವಿರುವುದರಿಂದ ಈ ಕಾರ್ಯ ಪ್ರಗತಿಯ ಗತಿಯು ಇನ್ನೂ ಹೆಚ್ಚುವುದೆಂಬ ನಿರೀಕ್ಷೆಯಿರುವುದು

ಆರ್ಥಿಕ ಲಾಭ ದೊರಕಿಸಿಕೊಟ್ಟು ಸ್ತ್ರೀಯರನ್ನು ಉತ್ಸಾಹಗೊಳಿಸುವುದು ವಾಸ್ತವವಾಗಿ ಒಂದು ಹೊಸ ವಿಚಾರವಾಗಿರುವುದು ಆದರೆ, ಅದು ಪಂಚ ವಾರ್ಷಿಕ ಯೋಜನೆಯ ಉದ್ದೇಶದೊಂದಿಗೆ ಸರ್ವಥಾ ಅನುರೂಪವಾಗಿದೆ ಜನತೆಯನ್ನು ಸುಖಿಗಳನ್ನಾಗಿ, ಸಮೃದ್ಧರನ್ನಾಗಿ ಮಾಡುವುದೇ ಈ ಯೋಜನೆಯ ಗುರಿಯಾಗಿರುವುದು



ಬೆಟ್ಟದೂರಾದ ಸಿಮ್ಲಾದ ಒಂದು ದೃಶ್ಯ, ಹಿಂದಿನ ಕಾಲದಲ್ಲಿ ಭಿರತದ ರಾಜಪ್ರತಿನಿಧಿಯು ವೈಶಾಖದ ವಾಸಸ್ಥಾನವಾಗಿದ್ದು ಸಮುದ್ರತಳದಿಂದ ೭ ಸಾವಿರ ಅಡಿ ಎತ್ತರದಲ್ಲಿನ ಒಂದು ಇಗರ್ಜಿ ಮತ್ತು ಸಾರ್ವಜನಿಕ ವಾಚನಾಲಯಗಳನ್ನು ಜಾಕೂ ಪರ್ವತಗಳ ಹಿನ್ನೆಲೆಯಲ್ಲಿ ನೋಡಬಹುದು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ - ಸಾಧಾರಣ ಪ್ರತಿ- ರೂ ೧ ೮-೦ (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

Edited Printed & Published by K H Shetty, at the Navayuga press Udipi S India

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮ ವಾರ ೨ 11-9-1958 Vol. 38 No. 2

ಕೇರಳದಲ್ಲಿ ಶಿಕ್ಷಣ

ನಾಗರಿಕ ಸ್ವಾತಂತ್ರ್ಯವೆ ಅಪಹರಿಸಲ್ಪಟ್ಟಿದೆ!

ಪಠ್ಯಪುಸ್ತಕಗಳಲ್ಲಿ ಕಮ್ಯುನಿಸ್ಟ್ ಭಾವನೆಯನ್ನು ತುರುಕಿಸಲಾಗಿದೆ

ಕೇರಳ ಶಾಲಾ ವ್ಯವಸ್ಥಾಪಕ ಸಂಘದ ಅಧ್ಯಕ್ಷರಾದ ಶ್ರೀ ವಿ. ಒ. ಅಬ್ರಹಾಮರು ಆಧ್ಯಕ್ಷ ರಾಜೇಂದ್ರ ಪ್ರಸಾದರನ್ನು ಕಂಡು, ಕೇರಳದ ಶಾಲೆಗಳ ವಿವಿಧ ವರ್ಗಗಳಿಗೆ ಪಠ್ಯಪುಸ್ತಕಗಳನ್ನಾಗಿ ನಿಯುಕ್ತಗೊಳಿಸಲಾದ ಬೇರೆ ಬೇರೆ ಪುಸ್ತಕಗಳು ಪಾಠ್ಯಕ್ರಮಕ್ಕನುಸಾರವಾಗಿಲ್ಲದಿರುವುದನ್ನೂ ವಿದ್ಯಾರ್ಥಿಗಳಲ್ಲಿ ಕಮ್ಯೂನಿಸ್ಟ್ ಭಾವನೆ ಮತ್ತು ಕಮ್ಯೂನಿಸ್ಟ್ ಸಾಮಾಜಿಕ ಕಾಯದೆಯನ್ನೂ ತುರುಕಿಸುವಂತಹ ರೀತಿಯಲ್ಲಿರುವುವೆಂಬುದನ್ನೂ ಒಂದು ಮನವಿಯ ಮೂಲಕ ವೇದ್ಯಪಡಿಸಿದರು. ಈ ಮನವಿಯ ಒಂದು ಪ್ರತಿಯನ್ನು ಉಪರಾಷ್ಟ್ರಪತಿ ಡಾ ಎಸ್. ರಾಧಾಕೃಷ್ಣನ್ನರಿಗೂ ಒಪ್ಪಿಸಿದ್ದಾರೆ.

ವಿಜ್ಞಾನ, ಗಣಿತ ಮೊದಲಾದ ಪುಸ್ತಕಗಳನ್ನು ಸಮರ್ಥ ವ್ಯಕ್ತಿಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ ಬರೆದು ಪ್ರಕಟಿಸುವ ಅಧಿಕಾರವನ್ನು ಅಪಹರಿಸಿಕೊಂಡು ಕೆಚ್ಚು ಕಡಿಮೆ ಪಕ್ಷೀಯ ತಳಹದಿಯ ಮೇಲೆ ನಾಮಕರಣ ಮಾಡಲ್ಪಟ್ಟ ಲೇಖಕರಿಂದಲೇ ಅವನ್ನು ಬರೆಯಿಸಿ ಈ ಪುಸ್ತಕಗಳನ್ನು ಪ್ರಕಾಶಿಸುವ ಮತ್ತು ವಿತರಿಸುವ ಅಧಿಕಾರವನ್ನು ಸರಕಾರವು ಪ್ರತ್ಯಕ್ಷವಾಗಿ ತನ್ನ ಕೈಗೆ ತೆಗೆದುಕೊಂಡಿದೆ. ವಿಷಯಕ ಪುಸ್ತಕಗಳನ್ನು ಆರಿಸುವಲ್ಲಿಯೂ ಈ ಹಿಂದೊದಗಿಸಿದಂತೆ ಸ್ವಾತಂತ್ರ್ಯವೇನೂ ಇಲ್ಲ. ಸರಕಾರದಿಂದ ಚುನಾಯಿಸಲ್ಪಟ್ಟ ಪಠ್ಯ ಪುಸ್ತಕಗಳನ್ನೇ ಎಲ್ಲ ಅಧ್ಯಾಪಕರೂ ವಿದ್ಯಾರ್ಥಿಗಳೂ ಉಪಯೋಗಿಸಿಕೊಳ್ಳಲೇ ಬೇಕಾಗಿದೆ. ಈ ವಿದ್ಯಾಸಂಬಂಧದಲ್ಲಿ ಸರಕಾರವು ಮಾಡಿದ ಕಾರ್ಯಾಚರಣೆಯು ಮೆಚ್ಚತಕ್ಕ ವಿಷಯವಲ್ಲ; ಭಾರತದ ಪ್ರಜಾಪ್ರಭುತ್ವವಾದಿ ಘಟನೆಯನ್ವಯ ಕಾರ್ಯಾಮಗ್ನವಾಗಬೇಕಾದ ಸರಕಾರವು ಈ ರೀತಿ ಮಾಡುವುದು ನ್ಯಾಯವಲ್ಲ ವೆಂಬುದಕ್ಕೆ ಬೇರೆ ನಿದರ್ಶನ ಬೇಕು.

ಶಾಲಾ ವ್ಯವಸ್ಥಾಪಕರ ಸಂಘವು ಸಂಕಾರದಿಂದ ಪ್ರಕಟಿತವಾದ ಎಲ್ಲ ಪಠ್ಯ ಪುಸ್ತಕಗಳನ್ನೂ ಕೂಲಂಕಷವಾಗಿ ಅಭ್ಯಸಿಸಿದೆ ಇವುಗಳಲ್ಲಿ ಹೆಚ್ಚಿನ ಪುಸ್ತಕಗಳು ಜೀವನದ ನೀತಿ ತತ್ವಗಳಿಂದ ದೂರವಾಗಿದ್ದು ಭೌತಿಕ ಜೀವನದ ಪ್ರತ್ಯಕ್ಷ ದರ್ಶನವನ್ನು ಮಾಡುವ ದೃಷ್ಟಿಯಿಂದ ಬರೆಯಲ್ಪಟ್ಟವೆ ಅಧಿಕ ಸಂಖ್ಯಾಕ ಪುಸ್ತಕಗಳು ಮಕ್ಕಳ ಮನಸ್ಸಿನಲ್ಲಿ ಕಮ್ಯೂನಿಸ್ಟ್ ಭಾವನೆಯನ್ನು ಮತ್ತು ಕಮ್ಯುನಿಸ್ಟ್ ಸಮಾಜಿಕ ತತ್ವಗಳನ್ನು ಭದ್ರವಾಗಿ ಅಚ್ಚೊತ್ತಲು ಅನುಕೂಲವಾಗುವಂತೆ ಲಿಖಿಸಲ್ಪಟ್ಟವೆ ಕಮ್ಯುನಿಸ್ಟ್ ರಾಜ್ಯಗಳು ಮತ್ತು ಅವುಗಳ ಸಾಧನೆಗಳು, ಕಮ್ಯುನಿಸ್ಟ್ ರಾಷ್ಟ್ರಗಳು, ಕಮ್ಯುನಿಸ್ಟ್ ಪಕ್ಷದ ನಾಯಕರ ಜೀವನ ಚರಿತ್ರೆಗಳು ಮೊದಲಾದುವುಗಳಿಗೆ ಅತ್ಯಧಿಕ ಪ್ರಾಶಸ್ತ್ಯವನ್ನೀಯಲಾಗಿದ್ದು ಮಕ್ಕಳೆಲ್ಲರ ಮನಸ್ಸನ್ನು ಆಕ್ರಮಿಸುವಂತೆ ವಿವರವಾಗಿ, ನಿರೂಪಿಸಲಾಗಿದ್ದರೂ ಸ್ವಾತಂತ್ರ್ಯಸಮರದ ಮೇಳೆಯಾಗಲಿ, ಅನಂತರವಾಗಲಿ ಭಾರತವು ಸಾಧಿಸಿದ ಪ್ರಗತಿಯ ಬಗ್ಗೆ ಬಹಳ ಸ್ವಲ್ಪಾಂಶವನ್ನಷ್ಟೇ ಹೇಳಲಾಗಿದೆ. ಭಾರತೀಯ ಮಹಾ ನಾಯಕರ ಜೀವನೇತಿಹಾಸವು ಅತ್ಯಲ್ಪಾವಕಾಶವನ್ನಷ್ಟೇ ಪಡೆದಿದೆ

ಈ ಮನವಿಯಲ್ಲಿ ಮಾನ್ಯ ಅಧ್ಯಕ್ಷರು ಕೇರಳ ರಾಜ್ಯದ ಮಕ್ಕಳು ಕಮ್ಯುನಿಸ್ಟ್ ತತ್ವಗಳನ್ನು ಆರಂಭದಿಂದಲೇ ಕಲಿಯ ಬೇಕಾಗಿ ಬಂದಿರುವ ದುರವಸ್ಥೆಯನ್ನು ಗಂಭೀರವಾಗಿ ಪರಿಶೀಲಿಸುವಂತೆ ಕೇಳಿಕೊಳ್ಳಲಾಗಿದೆ ಕೆಂಡರ್ ಗಾರ್ಟನ್ ನಿಂದ ಮಾಧ್ಯಮಿಕ ವಿದ್ಯಾಭ್ಯಾಸದ ಕೊನೆಯ ತರಗತಿಯವರೆಗೆ ನಿಯುಕ್ತವಾದ ವಿವಿಧ ಪಠ್ಯಪುಸ್ತಕಗಳ ಸಂಪೂರ್ಣ ವಿವರಣೆಯು ಈ ಮನವಿಯಲ್ಲಿ ಅಡಕವಾಗಿದೆ.

ಈಗ ನಿಯುತಗೊಳಿಸಿದ ಪಠ್ಯಪುಸ್ತಕಗಳು ಹಿಂದಿನ ಸರಕಾರಗಳಿಂದ ಆರಿಸಲ್ಪಟ್ಟ ಪುಸ್ತಕಗಳಂತೆಯೇ ಇರುವುವೆಂದು ಕೇರಳದ ಮುಖ್ಯಮಂತ್ರಿ ಶ್ರೀ ನಂಬೂದರಿ ಪಾದರಿತ್ತು ಹೇಳಿಕೆಯನ್ನು ಶ್ರೀ ಅಬ್ರಾಹಾಮರು ಒಪ್ಪಾನಿಸಿದರು ಈಗಿನ ವಿದ್ಯಾಮಂತ್ರಿಯವರು ಬರೆದಿದ್ದ ಪತ್ರವೊಂದು ನೆನೆ ಇಂತ್ತೆಯ ನಿಯತ ಪುಸ್ತಕದಲ್ಲಿ ಬೆಳಕು ಕಂಡಿರುವುದನ್ನೂ ಇದೇ ವಿಷಯವನ್ನು ಸಾಮಾಜಿಕ ಅಧ್ಯಯನ ಮಂಲೆಯಾಳ ಪರಿತ ಪುಸ್ತಕ ಮತ್ತು ಹಿಂದಿ ಪಠ್ಯ ಪುಸ್ತಕಗಳಲ್ಲಿಯೂ ಓದಲೇ ಬೇಕಾಗಿ ಬಂದಿರುವುದನ್ನೂ ಈ ಕಾಗದವು ರಶ್ಯ ಮತ್ತು ರಶ್ಯದ ಎಲ್ಲ ವಿಷಯಗಳ ಪ್ರಶಂಸಾರೂಪವಾಗಿರುವುದೆಂಬುದನ್ನೂ ಈ ವಿನಂತಿಪತ್ರದಲ್ಲಿ ನಮೂದಿಸಲಾಗಿದೆ.

ಕೇರಳದ ಕಮ್ಯುನಿಸ್ಟ್ ಪಕ್ಷವು ಈ ಪಠ್ಯಪುಸ್ತಕಗಳನ್ನು ಪರಿಶೀಲಿಸಲು ಡಾ ಎಸ್. ರಾಧಾಕೃಷ್ಣನರ ಮುಂದಿಡಲು

(ಉಳಿದುದು ನೋಡಿರಿ)



ಜಮ್ಮು ಮತ್ತು ಕಾಶ್ಮೀರ ರಾಜ್ಯವು ತನ್ನ ಶಾಂತಿಸೇವೆಯನ್ನು ಕಾಯುತ್ತಿದೆ. ಈ ಪ್ರದೇಶವು ಜನರಹಿತವೂ ಹಿಮಭರಿತವೂ ಆಗಿದ್ದು ಸಾರಿಗೆ ಸಂಪರ್ಕಗಳು ಅತ್ಯಲ್ಪವಿದೆ ಇದರಿಂದಾಗಿ ಈ ರಕ್ಷಣಾಗಾರರು ಅತುಲ ಕಷ್ಟದಿಂದ ತಣ್ಣಗಿನ ಹವೆಯಲ್ಲಿ ಜೀವಿಸಿ ದೇಶಕ್ಕಾಗಿ ಕರ್ತವ್ಯವನ್ನು ನಿರ್ವಹಿಸುತ್ತಿರುವರು ಆಗಾಗ ಈ ಜನರು ಆರೋಗ್ಯವಂತರಾಗಿದ್ದಾರೆಯೇ ಎಂದು ಪರೀಕ್ಷಿಸಲು ಮಳೆಸುರಿಯದ ಹಿಮಬೀಳದ ಕಾಲದಲ್ಲಿ ಸೈನಿಕ ವೈದ್ಯರು ಸಂದರ್ಶಿಸುತ್ತಿದ್ದಾರೆ.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd. **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಕಥಾ ವಿಹಾರ

ಆಗಬಾರದ ಘಾತ ಆಗಿ ಹೋಯಿತು!

ಅವನು ಅದನ್ನು ನಿರೀಕ್ಷಿಸಿರಲಿಲ್ಲ. ವಿಧಿಯು ಕೈವಾಡ ಹಾಗೆ ಮಾಡಿಸಿತು!

ಮಳೆ ಜೋರಾಗಿ ಬಡಿಯುತ್ತಿತ್ತು. ಆಗಾಗ ತೊರೆದ ಚಳಿಗಾಳಿಯಿಂದ ಗೋವಿಂದ ನಡುಗುತ್ತಿದ್ದ. ಚಿಂದಿ ಬಟ್ಟೆಯ ಮೋಷಾಕು. ಅದರ ಮೇಲೆ ಹರಕು ಹೊದಿಕೆ ದೇಹದ ಮುಕ್ಕಾಲು ಭಾಗವನ್ನು ಚಳಿಗಾಳಿಗೆ ಬಿಟ್ಟುಕೊಟ್ಟಿತ್ತು. ಮುದುಡಿ ಮಲಗಿದರೂ ಚಳಿಗಾಳಿ ಹರಕು ಚಾಪೆಯೊಂದಿಗೆ ಮೈತ್ರಿ ಬೆಳೆಸಿತ್ತು. ಹೆಂಡತಿ, ಮಕ್ಕಳ ಅವಸ್ಥೆಯನ್ನು ನೆನೆದಾಗ ಅತನ ಕಣ್ಣುಗಳು ಅಶ್ರುಧಾರೆಗಳಿಂದ ತುಂಬಿಬಿಡುತ್ತಿದ್ದುವು. ತನ್ನ ಬಡತನವನ್ನು ನೆನೆಸಿಕೊಂಡಾಗ ಧೂಳಿನಿಂದ ಪುನೀತವಾದ ಅವನ ದೇಹಕ್ಕೆ ಅಶ್ರುಧಾರೆಗಳೇ ಬಿಸಿನೀರಿನ ಸ್ನಾನವಾಗಬೇಕೇ?

ತಂಬು ಗರ್ಭಿಣಿ ಮಡದಿ ಪುಟ್ಟ ಮಕ್ಕಳೆರಡು ಜೊತೆಗೆ ಬಡತನದ ಭೂತ-ಅವನ ಮೇಲಿದ್ದ ಹೊರೆಗಳು. ಮೂರು ವರ್ಷದ ಮಗುವೊಂದು ಆ ಚಳಿಗಾಳಿಯ ರಭಸಕ್ಕೆ ಹಾರಲು ಸಿದ್ಧವಾಗಿರುವಂತೆ ತೋರುತಿತ್ತು. ಮತ್ತೊಂದು ಮಗು ರೋಗದಿಂದ ನರಳುತಿತ್ತು.

ಮನೆಯ ಒಳಭಾಗ, ಹೊರಭಾಗವನ್ನು ಲೆಕ್ಕಿಸದೆ ಚಳಿಗಾಳಿ ಒಂದೇ ಸವನೆ ಬೀಸುತ್ತಿತ್ತು. ಜೊತೆಗೆ ಮಳೆಯ ಉಬ್ಬರ.

ಗೋವಿಂದ ಯೋಜನೆಯ ಮಳಿಗೆ ಸಿಕ್ಕಿ ಒದ್ದಾಡಕೊಡಗಿದ

ರಿಕ್ಷಾಗಳನ್ನು ಎಳೆದುಕೊಂಡು ಓಡುವ ಪರಿಪಾಟಿ ಅವನ ಪಾಲಿನದಾಗಿತ್ತು. ಗಾಣಕ್ಕೆ ಕಟ್ಟಿದ ಎತ್ತಿನಂತೆ ದಿನವಿಡಿ ಮೈಮುರಿದು ದುಡಿಯುತ್ತಿದ್ದ. ಮಳೆಗಾಳಿಗಳನ್ನು ಗಣ್ಯಮಾಡದೆ ಬಿಸಿಲಿನ ಝಳಕ್ಕೂ ಹಿಂಜರಿಯದೆ, ರೋಗ, ರುಜಿನಗಳನ್ನು ಲೆಕ್ಕಿಸದೆ, ದೇಹ ಸವೆಯಿಸಿದರೂ ಸಿಗುವ ಪುಡಿಕಾಸು, ಒಡತನದ ಭೂತದ ಉಪದ್ರವದಿಂದ ಬಳಲುತ್ತಿದ್ದ ಆತನ ಸಂಸಾರದ ಕಣ್ಣೀರಿಗೆ ಆಣೆಕಟ್ಟು ಕಟ್ಟಲು ಅಸಮರ್ಥವಾಯಿತು. ಬೆಂಕಣದೂಟದ ಎಲೆಗಳಲ್ಲಿ ಉಳಿದ ಎಂಜಲು ಕೂಳಿಗಾಗಿ ಕಚ್ಚಾಡುವ ನಾಯಿಗಳಂತೆ ಅವನ ಸಹೋದ್ಯೋಗಿಗಳ ಪಾಡು. ಧರ್ಮ, ಕರುಣೆ ನೀತಿಪರನಾದವನಿಗೆ ಬೈಗಳ ಸುರಿಮಳೆ. ವಾಗ್ದಂಡವನ್ನುಪಯೋಗಿಸಿದವನು, ಭುಜದಂಡಕ್ಕೆ ಮಣಿಯಬೇಕಾಗಿತ್ತು. ಗೋವಿಂದ ಈ ಶಾಸ್ತ್ರದಲ್ಲಿ ಶಿರೋಮಣಿ ಪದವಿಯನ್ನು ಹೊಂದಿದ್ದ.

"ದೇಶಸೇವೆಯೇ ಈ ಸೇವೆಯೆಂದು ಬಾಹ್ಯಾಡಂಬರಕ್ಕಾಗಿ ನುಡಿಯುತ್ತಿದ್ದ ಜಿಪುಣಾಗ್ರೇಸರರಾದ, ಆಗರ್ಭ ಶ್ರೀಮಂತರಿಗೂ ನಮ್ಮ ಮೇಲೆ ಕನಿಕರ ಬರುವುದಿಲ್ಲವಲ್ಲಾ, ಯೋಗಲಿ. ನಮ್ಮ ಪ್ರಯತ್ನಕ್ಕೂ ತಕ್ಕ ಫಲ ದೊರೆಯಬೇಡವೇ? ಹುಟ್ಟು ದರಿದ್ರನಿಗೂ ಸಿಗುವ ಪುಡಿಕಾಸಿಗೂ ಕಲ್ಲುಹಾಕುವ ಮೋಸಗಾರರಿಗೆ ಇರುವ ಚಾತುರ್ಯ "ವ್ಯರ್ಥ" ಇದು ಅತನ ನಂಬಿಕೆಯ ವಾದ.

"ಈ ಕಾಲದಲ್ಲಿ ದುಡ್ಡಿದ್ದವನೇ ದೊಡ್ಡಪ್ಪ"—ಎಂಬ ಮಾತು ಅತನ ಅನುಭವ ಜನ್ಯವಾಗಿತ್ತು. ಇವೆಲ್ಲಾ ಕೃತ್ಯಗಳಿಂದ ಇಷ್ಟ ವರ್ಷದ ಗೋವಿಂದ ಮುಕ್ಕಾಲು ಪಾಲು ಆಯುಷ್ಯವನ್ನು ಸವೆಯಿಸಿದಂತೆ ತೋರುತ್ತಿದ್ದುದು ಸ್ವಾಭಾವಿಕವೇ ಸರಿ.

ತುದಿಮೊದಲಿಲ್ಲದೆ ಹುಚ್ಚು ಚಿಂತನೆ ಅತನನ್ನು ಕೆರಳಿಸುತ್ತಲೇ ಇತ್ತು. ನುಸಿಗಳ ಆಕ್ರಮಣದಿಂದ ನಿದ್ರಾಂಗನೆಯನ್ನು ಒಲಿಸಿಕೊಳ್ಳುವಾಗ ಮಧ್ಯರಾತ್ರಿ ಕಳೆದಿತ್ತು.

೦ ೦ ೦

"ನಿಮ್ಮ ಹೆಂಡತಿಯನ್ನು ಮಕ್ಕಳನ್ನೂ ಉಪವಾಸ ಹಾಕಿ ಸಾಯಿಸಿ. ಅನಂತರ ಕೈಯಲ್ಲಿ ತಂಬೂರಿ ಹಿಡಿಯಕೊಂಡು ಪುರಂಧರ ದಾಸರ ಶಿಷ್ಯತ್ವವನ್ನು ಸ್ವೀಕರಿಸಿ, ಧರ್ಮಬೋಧೆ ಮಾಡಿ ಪುಣ್ಯಸಂಪಾದಿಸಿ. ದಯೆ, ನೀತಿ, ನ್ಯಾಯಕ್ಕೆಲ್ಲಾ ನೀವೇ ತೌಬನುನೆಯೆಂದು ನಂಬಿಕೊಂಡು ತೆಪ್ಪಗೆ ಕೂತುಬಿಡಿ. ತನ್ನಂತೆಯೇ "ಕ್ಷೀಣ ನಿಮಗೆ ಒಲಿಯುತ್ತಾಳೆ. ಹೆಂಡತಿ ಮಕ್ಕಳನ್ನು ಉಪವಾಸಹಾಕಿ, ಅವರ ಕಣ್ಣೀರನ್ನೂ ಕೂಗಾಟವನ್ನೂ ಕಂಡು ಆನಂದಿಸುವ ಮಹಾನುಭಾವರು ಧರ್ಮಾತ್ಮರು; ನ್ಯಾಯನಿಷ್ಠರು, ಸತ್ಯ ಪರಿಪಾಲಕರು." ತನ್ನ ಮಡದಿಯ ಮೂದಲಿಕೆಯ ನುಡಿಗಳು ಮತ್ತೆ ಮತ್ತೆ ಪ್ರತಿಧ್ವನಿಸುತ್ತಿದ್ದುವು.

"ನನ್ನ ಮಡದಿ ನನ್ನನ್ನು ಈ ರೀತಿ ಹೀಯಾಳಿಸುವುದಕ್ಕೆ ಅರ್ಥವುಂಟೇ?" ಜಾಗ್ರತವಾಗಿ, ಮನಸ್ಸು ಪ್ರಶ್ನಿಸಿತು. "ಇದೆ ಅರ್ಥವಿದೆ. ಕೈಹಿಡಿದ ಮಡದಿಯನ್ನು, ನಿನ್ನನ್ನೇ ನಂಬಿ, ನಿನಗಾಗಿಯೇ ತನ್ನ ಬಾಳನ್ನು ಒತ್ತೆಯಿಟ್ಟ ನಿನ್ನ ಮಡದಿಯನ್ನು ಒಂದು ದಿನವಾದರೂ ಸುಖವಾಗಿರಿಸಿದ್ದುಂಟೇ?

ರೋಗ ರುಜಿನಗಳಿಗೆ ತುತ್ತಾಗಿ, ಹಸಿವೆಯ ಬಾಧೆಯನ್ನು ತಾಳಲಾರದೆ ಅತ್ತು ಅತ್ತು ಸೊರಗಿಹೋದ ನಿನ್ನ ಮಕ್ಕಳು ಎಂದಾದರೂ ನಕ್ಕುನಲಿದಿದ್ದಾರೆಯೇ? ಸಂಸಾರ ತಾಪತ್ರಯಗಳನ್ನು ಸುಸೂತ್ರವಾಗಿ ಸಂಸಾರ ನಿರ್ವಹಣೆಯನ್ನು ಮಾಡುವ ತ್ರಾಣವಿಲ್ಲದವನಿಗೆ ಹೆಂಡತಿಯೇಕೆ? ಮಕ್ಕಳೇಕೆ? ನೀನೊ ಒಬ್ಬ ಮನುಷ್ಯನೇ?" ಎಂದಿತು ಮನಸ್ಸು ದುಃಖದಿಂದ ತಪ್ತವಾಗಿ.

"ಸರಿ. ಉಪಾಯ ಹೊಳೆಯಿತು. ಇಂದಿನಿಂದಲೇ ನನ್ನ ಕಾರ್ಯದಲ್ಲಿ ಚಾತುರ್ಯವನ್ನು ತೋರ್ಪಡಿಸುತ್ತೇನೆ" ಗೋವಿಂದ ಧೃಢಸಂಕಲ್ಪವಾಗಿ ಪಣತೊಟ್ಟ.

೦ ೦ ೦

"ಅಕ್ಕಾಟ್ ರೋಡಿನಲ್ಲಿರುವ ಮಹಾರಾಣೀ ಆಸ್ಪತ್ರೆಗೆ ಹೋಗುತ್ತೀಯೇ ಸಪ್ಪಾ?"

ಗೋವಿಂದ ಬೆರಗಾಗಿ ಹಿಂತಿರುಗಿ ನೋಡಿದ. ಮಗುವನ್ನೆತ್ತಿಕೊಂಡು ಬಹಳ ಪ್ರಯಾಸದಿಂದ ನಿಂತ ತುಂಬು ಗರ್ಭಿಣಿ ಹೆಂಗಸು. ಗೋವಿಂದನ ಬಾಯಿಯಿಂದ ಮಾತೇ ಹೊರಡಲಿಲ್ಲ. ಕಳಮಳಗೊಂಡ ಮನಸ್ಸು ಸ್ವಲ್ಪಹೊತ್ತಿನಲ್ಲಿ ಶಾಂತವಾದ ಮೇಲೆ ಕೇಳಿದ, "ಜೊತೆಗೆ ಯಾರೂ ಇಲ್ಲವೇ ತಾಯಿ?"

"ಇದು ಅನಾಥ ಮಗು." ಎನ್ನುವಾಗ ಅವಳ ಮುಖದ ಮೇಲೆ ಅಶ್ರುವೃಷ್ಟಿಯಾಯಿತು. ಗೋವಿಂದ ಎಲ್ಲವನ್ನೂ ಅರ್ಥಮಾಡಿಕೊಂಡು ಎಲ್ಲವನ್ನೂ ನಿರ್ಧಾರ ಮಾಡಿದ.

"ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ ತಾಯೂ ಕರುಣಾಮಯಿ ಹೃದಯದಲ್ಲಿ ಬಚ್ಚಿಟ್ಟುಕೊಂಡಿದ್ದ ಮಾತುಗಳು ಹೊರಜಾರಿದುವು.

ವ ನಸ್ಸು ಒಳಗೊಳಗೇ ಸ್ವಾರ್ಥದ ಕಹಳೆಯನ್ನೂದುತ್ತಿತ್ತು. ತನ್ನ ಮಗುವಿನೊಂದಿಗೆ ಆಕೆ ಬಂಡಿಯನ್ನೇರಿದಳು ಆಭರಣಗಳ ಶಬ್ದದಿಂದ ಆಕೆಯ ಮನಸ್ಸು ತತ್ತರಿಸಿ ಹೋಯಿತು. ಹೃದಯದ ಶಬ್ದವೂ ಜೋರಾಗತೊಡಗಿತು. "ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ"—ಎಂಬ ಆತನಾಡಿದ ಮಾತುಗಳು ಆಕೆದು. ಅಂತರಂಗಕ್ಕೆ ನಾಟಿತು. ಅದರ ಹಿಂಬದಿಯಲ್ಲಿ ಮರೆಯಾದ ವಿಚಾರ ಆಕೆಗೆ ತಿಳಿಯದಾಯಿತು. ಆದರೆ ಗೋವಿಂದನಿಗೆ ತಿಳಿಯದಿರುವುದೇ?

ಸಂಧ್ಯಾಸಮಯ ಸನ್ನಿಹಿತವಾಯಿತು. ಆದರೆ ಅದು ಯಾರ ಸಂಧ್ಯಾಕಾಲವೆಂಬುದನ್ನು ಗೋವಿಂದ ಮಾತ್ರ ಮೇಲುಕುಹಾಕುತ್ತಿದ್ದ.

ಗೋವಿಂದ ನಿರ್ಜನ ಪ್ರದೇಶದಲ್ಲಿ ನಿಂತ, ಜೊತೆಗೆ ಗಾಡಿಯೂ ನಿಂತಿತು. ಆ ಪ್ರದೇಶದಲ್ಲಿ ಗೋವಿಂದನ ಧ್ವನಿ ಮತ್ತು ಆತನ ರೂಪಲ್ಲದೆ ಬೇರೆ ಯಾವ ಜೀವಂತ ಪ್ರಾಣಿಯೂ ಆಕೆಗೆ ಗೋಚರಿಸುತ್ತಿದ್ದಿಲ್ಲ. "ಇಲ್ಲಿಂದ ಒಂದು ಕಾಲುದಾರಿಯಿದೆ ತಾಯಿ. ಅದರಿಂದಲೇ ಹೋಗಬೇಕು ಇಳಿಯಿರಿ". ಎಂದ ಗೋವಿಂದ.

ಆಕೆ ಮಗುವನ್ನು ಹಿಡಿಕೊಂಡು ಗಾಡಿಯಿಂದ ಇಳಿದಳು. ಗೋವಿಂದ ಒಂದೇ ನೆಗೆತಕ್ಕೆ ಆಕೆಯನ್ನು ಸಮೀಪಿಸಿದ ಕಂಗಾಲಾದ ಆಕೆಯ ಕೈಯಿಂದ ಪುಟ್ಟಮಗುವಿಗೆ ಬಿದ್ದು ಬಿಟ್ಟಿತು. ಗೋವಿಂದನ ಕೈಗಳು ಆಕೆಯ ಕೊರಳನ್ನು ಒತ್ತಿ ಹಿಡಿದುವು ಸ್ವಲ್ಪ ಹೊತ್ತಿನಲ್ಲೇ ಆಕೆಯ ಪ್ರಾಣಪಕ್ಷಿ ಹಾರಿಹೋಯಿತು. ಆತನ ದೃಷ್ಟಿ ಕೆಳಬಿದ್ದ ಮಗುವಿನತ್ತ ಹೊರಳಿತು.

ಗೋವಿಂದ ಸುತ್ತಲೂ ನೋಡಿದ ಗಶ್ವತ್ಥ ಮರದ ಕೆಳಗೆ ಒಂದು ದೊಡ್ಡ ಕಲ್ಲು ಕಾದುಕುಳಿತಿತ್ತು. ತನ್ನ ಬಲವನ್ನೆಲ್ಲಾ ಉಪಯೋಗಿಸಿ ಕಂದನ್ನೆತ್ತಿ ಮಗುವಿನ ಮೇಲೆಸೆಯುವುದಕ್ಕಾಗಿ ಎತ್ತಿ ಹಿಡಿದಿದ್ದ. "ನನ್ನ ಮಗು ರಾಮ ರಾಮ" ಎನ್ನುವುದರೊಳಗಾಗಿ ಆ ಕಲ್ಲು ಮಗುವಿನ ಮೇಲೆ ಬಿದ್ದಿತ್ತು. ಇತ್ತ ಗೋವಿಂದನೂ ನೆಲಕ್ಕೆರಗಿದ ಹೆಬ್ಬಾವು ಗೋವಿಂದನ ಕಾಲನ್ನು ಸುತ್ತಿಕೊಂಡಿತು. ಗೋಪಾಲ ಬೆಕ್ಕಿನ ಬೆರಗಾಗಿ ಆ ಹೆಂಗಸಿನತ್ತ ದೃಷ್ಟಿ ಹಾಯಿಸಿದ. ಆಕೆ ಅತನ ಮಡದಿಯೇ ಆಗಿದ್ದಳು.

"ನನ್ನನ್ನು ಪರೀಕ್ಷಿಸುವುದಕ್ಕೋಸ್ಕರ ಬಂದೆಯಾ ಎಂಥಾ ಪುಜ್ಜಾಟವನ್ನು ಮಾಡಿದೆ?" ಎಂದು ಕಳಕಳಿಯುವ ಮನಸ್ಸು ನುಡಿಯಿತು.

"ನನ್ನ ಪಾಪ ಜೀವನ ಮುಕ್ತಿ ಸಿದ್ಧವಾಯಿತು. ದೇವನೇ ಕೊನೆಗೂ ನನ್ನ ಮೇಲೆ ಕೃಪೆ ದೋರಿದೆ" ಎಂಬುದಾಗಿ ವರುಗಿದನಾತ-ತನ್ನ ಪಾಪ ಕಾರ್ಯಕ್ಕೆ

—ಶ್ರೀ ಬಿ. ಕೆ. ಗಣೇಶರಾವ್,
ಉಜಿರೆ.

JUST PUBLISHED!

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

Written by An Experienced Teacher.

Useful to one and all, the teacher, the student and the layman.

Price. Rs. 1 = 25. (Postage extra)

If Rs. 1=50 is sent by M. O one copy will be sent by Bookpost.

Copies can be had from the Publishers:

Navayuga Enterprise Ltd.
Navayuga Press,
Udipi.

and also from:

M/s Indian Industrials & Agencies, Mangalore-1.
M/s Navabharat Book Depot, Udipi.

ಕಲಾರಾಧನೆ

ಪೌರ್ವಾತ್ಯ ಕಲೆಗಳಲ್ಲಿ ಪಾಶ್ಚಾತ್ಯರಿಗೆ ಆಸಕ್ತಿ!

ಅವರ ಕಲಾಭಿಜ್ಞತೆಯು ವಿಶ್ವ ಮಾರ್ಗವನ್ನು ಅನುಸರಿಸಿಲ್ಲ.

ಅಮೆರಿಕೆಯ ಕಾರ್ಲ್‌ಕೂಪರು ಜಪಾನಿನಿಂದ ತುರ್ಕಿಯ ವರೆಗಿನ ಏಳು ರಾಷ್ಟ್ರಗಳನ್ನು ಸಂಚರಿಸಿ ಅಲ್ಲಿನ ಸಂಗ್ರಹಣೀಯ ಚಿತ್ರಾದಿಗಳನ್ನು ಒಟ್ಟು ಸೇರಿಸುವ ಇರಾದೆಯಿಂದ ಪ್ರವಾಸ ಕೈಗೊಂಡಿದ್ದಾರೆ. ಈ ರಾಷ್ಟ್ರಗಳ ಐತಿಹಾಸಿಕ ಸ್ಥಳಗಳನ್ನವರು ಸಂದರ್ಶಿಸಲಿರುವರು.

ಇತ್ತೀಚೆಗೆ ಶ್ರೀ ಕೂಪರು ಮದರಾಸಿಗೆ ಭೇಟಿಯಿತ್ತಾಗ, ಸರಕಾರದ ಪ್ರಾಚೀನ ಹಸ್ತಪ್ರತಿಗಳ ಬಂಡಾರ, ಸರಕಾರಿ ಪ್ರಾಚ್ಯ ವಸ್ತು ಸಂಗ್ರಹಾಲಯ, ಥಿಯೋಸೊಫಿಕಲ್ ಸೊಸೈಟಿಯ ಪುಸ್ತಕಾಲಯ, ಮಹಾಬಲಿಪುರ, ಕಾಂಚಿ ಮತ್ತು ನೆಗರದ ಹಾಗೂ ಸುತ್ತುಮುತ್ತಲಿನ ದೇವಾಲಯಗಳು, ಪುಣ್ಯಕ್ಷೇತ್ರಗಳು ಮೊದಲಾದವನ್ನು ನೋಡಿದರು.

ಶ್ರೀ ಕೂಪರು ನ್ಯೂಯಾರ್ಕ್‌ಸಾರ್ವಜನಿಕ ಪುಸ್ತಕ ಬಂಡಾರದ ಕ್ಯುರೇಟರರಾಗಿರುತ್ತಿರಲ್ಲದೇ ಅದರ ಬಗ್ಗೆ ಸಂಗ್ರಹಕ್ಕಾಗಿ ಅವರು ಕೈಗೊಂಡಿರುವ ಈ ಪ್ರವಾಸವು ಮಹತ್ವದ್ದಾಗಿದೆ. ಈ ವರ್ಷಾಂತ್ಯದಲ್ಲಿ ನ್ಯೂಯಾರ್ಕನಲ್ಲಿ ಗ್ವಾಲಿಯರ್ ಕ್ಲಬ್ಬಿನ ಆಶ್ರಯದಲ್ಲಿ ಪ್ರಾಚೀನ ಬೌದ್ಧರ ಕಾಲದಿಂದ ಮೊಗಲರ ಕಾಲದವರೆಗಿನ ಭಾರತದ ಎಲ್ಲ ಹಸ್ತಪ್ರತಿಗಳ, ಸಚಿತ್ರ ಪುಸ್ತಕಗಳ ಮತ್ತು ವರ್ಣ ಚಿತ್ರಗಳ ಸಮಗ್ರ ಸಂಗ್ರಹದ ಪ್ರದರ್ಶನವೊಂದನ್ನು ಏರ್ಪಡಿಸುವ ಉದ್ದೇಶದಿಂದ ಕೂಪರು ಈ ಪ್ರವಾಸವನ್ನು ಕೈಕೊಂಡಿದ್ದಾರೆ.

ನೇಪಾಳ ಹಾಗೂ ಭಾರತಗಳ ಪ್ರಾಚೀನ ಬೌದ್ಧರ ಕಾಲದ ತಾಳೆಗರಿ ಗ್ರಂಥಗಳು, ೧೫—೧೮ನೆ ಶತಮಾನದವರೆಗಿನ ಸಚಿತ್ರ ಜೈನ ಗ್ರಂಥಗಳು ರಾಜಸ್ಥಾನ, ಗುಜರಾತಗಳ ವರ್ಣಚಿತ್ರಗಳು ಈ ಪ್ರದರ್ಶನದಲ್ಲಿರುವುವು. ಪ್ರಾಚೀನ ಕಾಲದಲ್ಲಿ ಟಬೇಟಿನ, ಮೊಗಲರ ಕಾಲದಲ್ಲಿ ಇರಾನದ ಪ್ರಭಾವ ಬಿದ್ದಿದ್ದರೂ ಭಾರತದ ವರ್ಣ ಚಿತ್ರಗಳು ಏಕ ಧಾರೆಯಾಗಿ ಮುಂದುವರಿದುದನ್ನು ಈ ಪ್ರದರ್ಶನವು ಸಾರುವುದು.

ಹಸ್ತಪ್ರತಿ ಹಾಗೂ ವರ್ಣ ಚಿತ್ರಗಳಲ್ಲದೇ ಶ್ರೀ ಕೂಪರು ದೇವಾಲಯಗಳ, ಶಿಲ್ಪಕೃತಿಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸುತಿದ್ದಾರೆ. ಪುಸ್ತಕಗಳಲ್ಲೂ ಹಸ್ತಪ್ರತಿಗಳಲ್ಲೂ ಇರುವ ವರ್ಣ ಚಿತ್ರಗಳಿಗೂ ದೇವಾಲಯಗಳ ಶಿಲ್ಪಕ್ಕೂ ನಿಕಟ ಸಂಬಂಧವಿದೆ. ದೇವಾಲಯಗಳ ಶಿಲ್ಪ ವಿವರಣೆಗಾಗಿ ಛಾಯಾ ಚಿತ್ರಗಳನ್ನು ಸಂಗ್ರಹಿಸಲಾಗುತ್ತಿದೆ. ಕಲಾಭಿವ್ಯಕ್ತಿಯಲ್ಲಿ ವರ್ಣ ಚಿತ್ರಕಾರರಿಗೂ ಶಿಲ್ಪಿಗಳಿಗೂ ಹತ್ತಿರದ ಸಂಬಂಧವಿತ್ತೆಂಬುದು ಗೊತ್ತಾಗುತ್ತದೆ ಎಂದು ಶ್ರೀ ಕೂಪರೆನ್ನುತ್ತಿರ್ತಾರೆ.

ಶ್ರೀ ಕೂಪರು ನ್ಯೂಯಾರ್ಕನ ಪುಸ್ತಕ ಭಂಡಾರಕ್ಕಾಗಿ ಭಾರತದ ಪುಸ್ತಕಗಳನ್ನು ಮುಖ್ಯವಾಗಿ ಶುದ್ಧ ಕಲೆಗಳ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕೊಂಡು ಕೊಳ್ಳುತಿದ್ದಾರೆ.

ಭಾರತದ ೩೫ ಹಸ್ತಪ್ರತಿ ಗ್ರಂಥಗಳನ್ನು ಶ್ರೀ ಕೂಪರು ಸಂಗ್ರಹಿಸಿದ್ದಾರೆ. ಇವುಗಳಲ್ಲಿ ಕೆಲವು ತಾಳೆಗರಿಯವು; ಉಳಿದುವು ಕಾಗದದವು. ಇವುಗಳಲ್ಲಿ ೧೩ರಿಂದ ೧೭ನೆಯ ಶತಮಾನದ ವರೆಗಿನ ಸೊಗಸಾದ ಭಗವದ್ಗೀತೆ, ಮಹಾಭಾರತ ಮತ್ತು ರಾಮಾಯಣಗಳ ಹಸ್ತಪ್ರತಿಗಳೂ ಇರುತ್ತವೆ.

ಭಾರತದ ಪ್ರಾಚೀನ ಪುಸ್ತಕಗಳ ನಿರ್ಮಾಣ ಮತ್ತು ಅವುಗಳ ರಕ್ಷಣೆಗಳನ್ನು ಕುರಿತಾದ ಈ ಅಧ್ಯಯನವನ್ನು ನ್ಯೂಯಾರ್ಕಿನ ಹ್ರಾಯ್ಟ್ ಸಂಸ್ಥೆ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯಗಳಲ್ಲಿ ತಾಳ್ಮೆ ನೀಡುವ ಪ್ರವಚನಗಳಿಗೆ ಸೇರಿಸಿಕೊಳ್ಳಲಿದ್ದಾರೆ. ಈ ಎರಡು ಸಂಸ್ಥೆಗಳಲ್ಲೂ ಕೂಪರು ಆಗಾಗ ಪುಸ್ತಕಗಳ ಮತ್ತು ಮುದ್ರಣದ ಚರಿತ್ರೆಯನ್ನು ಕುರಿತು ತರಗತಿಗಳನ್ನು ನಡೆಸುತ್ತಾರೆ. ಇದುವರೆಗೆ ಇಂತಹ ತರಗತಿಗಳಲ್ಲಿ ನಡೆಸುತ್ತಾರೆ. ಇದುವರೆಗೆ ಇಂತಹ ತರಗತಿಗಳಲ್ಲಿ ಪೂರ್ವದ ಗ್ರಂಥಗಳನ್ನು ಕುರಿತು ಪಾಠಪ್ರವಚನ ನಡೆದಿಲ್ಲ.

"ಜಪಾನಿನ ಪುಸ್ತಕಗಳಲ್ಲಿ ಚಿತ್ರಗಳು" ಎಂಬ ಹೆಸರಿನ ಪುಸ್ತಕವೊಂದನ್ನು ಇವರು ಸಿದ್ಧಪಡಿಸುತಿದ್ದಾರೆ. ಭಾರತದ ಚಿತ್ರರಚನೆಯನ್ನೂ ಸಾಕಷ್ಟು ಅಭ್ಯಾಸ ಮಾಡಿ ಇಂತಹುದೇ ಒಂದು ಪುಸ್ತಕ ಬರೆಯಬೇಕೆಂಬ ಬಯಕೆ ಅವರಲ್ಲಿ ಹುದುಗಿಕೊಂಡಿದೆ.

ಶ್ರೀ ಕೂಪರು ಮದರಾಸು ಮಾತ್ರವಲ್ಲದೇ ಕಲಕತ್ತೆ, ಭುವನೇಶ್ವರಿ, ಪಾಟ್ಲಿ, ದೆಹಲಿ, ಆಗ್ರ, ಜಯಪುರ, ಭೋಪಾಲ, ಬೆರಂಗಾಬಾದ, ಬೊಂಬಾಯಿ, ವೈಸೂರು ಮತ್ತು ಬೆಂಗಳೂರುಗಳಿಗೆ ಭೇಟಿಯಿತ್ತಿದ್ದಾರೆ.

ಮೈಸೂರು ರಾಜ್ಯದ ಸೋಮನಾಥಪುರ, ಬೇಲೂರು ಮತ್ತು ಹಳೆಯ ಬೀಡುಗಳ ದೇವಾಲಯಗಳ ಶಿಲ್ಪಕಲಾ ವೈಭವವನ್ನು ಕಂಡು, ವೈಮರೆತು ವಿಸ್ಮಯಕಾರಕ ಕಥನ ನಿರೂಪಕವಾದ ಈ ಕಲ್ಲಿನ ಕೆತ್ತನೆಗಳು ಬಹು ಅಪರೂಪದ ಕಲಾ ರತ್ನಗಳು ಎಂದುದ್ಗರಿಸಿದರು.

ದೇಶ ಪರಿಚಯ

ಸುಖಸಂಮೃದ್ಧಿಗಳ ತವರ್ಮನೆ- ಸಿರಿಯಾ

ನೆರೆಮನೆಗೆ ಬೆಂಕಿ ಹಚ್ಚಲು ಲೆಬನಾನು ಪ್ರಯತ್ನಿಸುತ್ತಿದೆಯೆ?

ಕೆಲವು ಮಾಸಗಳ ಹಿಂದೆ ರಚಿತವಾದ ಸಂಯುಕ್ತ ಅರಬ ರಾಷ್ಟ್ರದ ಒಂದು ಭಾಗವಾದ ಈಜಿಪ್ತದ ಸೂಕ್ಷ್ಮ ಪರಿಚಯವನ್ನು ಕಳೆದವಾರ ಓದಿದವರೆಲೆ ಅದರ ಇನ್ನೊಂದಂಗವಾದ ಸಿರಿಯಾದ ಸಂಕ್ಷಿಪ್ತಾವಲೋಕನವೆಸಗುವುದು ಅಗತ್ಯ.

ಕೇವಲ ೭೨,೫೩೪ ಚದರ ಮೈಲಿಗಳಷ್ಟು ವಿಸ್ತೀರ್ಣವಿದ್ದು ೪೦,೫೫,೦೦೦ ಜನಸಂಖ್ಯೆಯಿಂದ ಕೂಡಿರುವ ಈ ಸಿರಿಯಾವು ಇತಿಹಾಸದ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಯೆಂಬುದನ್ನು ಅಲ್ಲಗಳೆಯುವಂತಿಲ್ಲ.

ಸುರುಭೂಮಿ, ಕೆರವಾನ್, ಹಚ್ಚಹಸುರಾದ ನೀರೊರತೆಗಳು ಮತ್ತು ಕೆಲವು ಮೈಲುಗಳಂತರದಲ್ಲಿ ಮರ ಮರ ಸ್ವರವೆಸಗುವ ಹಸುರು ಗದ್ದೆಗಳಿಂದ ಸಿರಿಯಾವು ತುಂಬಿ ತುಳುಕುತ್ತಿದೆ.

ಸಿರಿಯಾವು ೧೯೧೮ರಲ್ಲಿ ತುರ್ಕೀಯರ ದವಡೆಯಿಂದ ಸ್ವಾತಂತ್ರ್ಯವನ್ನು ಪಡೆದಿದ್ದರೂ ಅದಕ್ಕೆ ಮುಕ್ತಿ ಪಡೆಯುವ ಭಾಗ್ಯ ಅಷ್ಟು ಬೇಗನೆ ಬರಲಿಲ್ಲ. ಇದರಿಂದಾಗಿ, ಗುಪ್ತ ಸಮರಕಾಲ ಒಟ್ಟಂದದಲ್ಲಿ ಫ್ರೆಂಚರು ಸಿರಿಯಾವನ್ನು ತಮ್ಮ ಕಪಿ ಮುಷ್ಟಿಯಲ್ಲಿಟ್ಟು ಕೊಂಡರು ಆದರೆ, ಅಲ್ಲೆದ್ದ ಒಂದು ದಂಗೆಯನ್ನು ಅಣಗಿಸಲಾರದೆ, ೧೯೪೬ರಲ್ಲಿ ಫ್ರೆಂಚರು ಕಾಲು ಕೀಳಬೇಕಾಯಿತು. ಇದರಿಂದಾಗಿ ಅಂದಿನಿಂದ ಸಿರಿಯಾವು ಒಂದು ಸ್ವತಂತ್ರ ಪ್ರಜಾಪ್ರಭುತ್ವವಾದಿ ರಾಷ್ಟ್ರವಾಯಿತು.

ರಾಜಕೀಯ ಅತಾಂತಿಯ ದೆಸೆಯಿಂದಾಗಿ, ಇಸ್ರೇಲಿನ ಆಜಯದ ಬೆನ್ನ ಹಿಂದೆ, ಅಲರಲ್ಲಿ ಹಿಂಸಾತ್ಮಕ ಕಾಂಡಗಳು ನಡೆದು, ೪೯೧೯ರಲ್ಲಿ ಜನರಲ್ ಅದಿಬ್ ಶಿಶಾಕ್ಲಿಯವರ ಸರ್ವಾಧಿಕಾರಕ್ಕೆ ಸಿರಿಯಾ ಒಳಗಾಗಬೇಕಾಯಿತು. ಜನರಲ್ ಶಿಶಾಕ್ಲಿಯವರು ೧೯೫೪ರ ವರೆಗೆ ತನ್ನ ಅಡಳಿತೆಯನ್ನು ಮುಂದುವರಿಸಿದರು. ಈ ಪ್ರಕರಣದ ಸಮಯದಲ್ಲಿ ಇತ್ಯರ್ಥಕ್ಕೆ ಬಂದು ಸಮಯದಲ್ಲಿ ಶಿಶಾಕ್ಲಿಯವರನ್ನು ಅಧಿಕಾರದಿಂದ ತಳ್ಳಿಹಾಕಲಾಯಿತು. ಒಂದು ಕಾಲದಲ್ಲಿ ಸಿರಿಯಾದ ರಾಷ್ಟ್ರೀಯಂತಾಗಿ, ಈಜಿಪ್ತಕ್ಕೆ ಕಾರಣಾಂತರಗಳಿಂದ ನೇಪಾಂತರ ಮಾಡಲ್ಪಟ್ಟ ಶ್ರೀ ಶುಕ್ರಿ ಅಲ್-ಕುವಾಟ್ಲಿಯವನ್ನು ಸ್ವದೇಶಕ್ಕೆ ಮರಳಿ ತರಿಸಿ ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಆ ಕೂಡಲೇ ಅವರು ತಮ್ಮ ಜಾಣಾಕ್ಷತನವನ್ನು ಉಪಯೋಗಿಸುತ್ತ ಬಂದುದರಿಂದ ಕಳೆದ ಫೆಬ್ರವರಿಯಲ್ಲಿ ಸಂಯುಕ್ತ ಅರಬ ಪ್ರಜಾಪ್ರಭುತ್ವವು ಸ್ಥಾಪನೆಯಾಯಿತು.

ಸಿರಿಯಾವು ಈಜಿಪ್ತದೊಡನೆ ತನ್ನ ಸಂಬಂಧವನ್ನು ಬಲಪಡಿಸುತ್ತ ಬಂದಂತೆ ಪಾಶ್ಚಾತ್ಯ ರಾಷ್ಟ್ರಗಳೊಡನಿದ್ದ ತನ್ನ ಸಂಬಂಧವನ್ನು ಒಂದು ದೊಡ್ಡ ಹೊರೆಯನ್ನಾಗಿ ತಿಳಿದುಕೊಳ್ಳತೊಡಗಿತು. ಈಜಿಪ್ತದಂತೆಯೇ ಸಿರಿಯಾವೂ ಪಾಶ್ಚಾತ್ಯ ರಾಷ್ಟ್ರಗಳೊಡನೆ ಶಸ್ತ್ರಾಸ್ತ್ರಗಳನ್ನು ಬೇಡಿತು; ಮತ್ತು ಅವು ದೊರೆಯದೆ ಹೋಗಲು ಪೂರ್ವ ಯುರೋಪಿನ ರಾಷ್ಟ್ರಗಳಿಗೆ ಶರಣುಹೋಗಿ, ತನ್ನ ಆವಶ್ಯಕತೆಗಳನ್ನು ಪೂರೈಸಿಕೊಂಡಿತು. ಈಜಿಪ್ತದಂತೆಯೇ ಇದಕ್ಕೂ ತನ್ನ ಹೆಳೆಯ ಗಿರಾಕಿಗಳಾದ ಪಾಶ್ಚಾತ್ಯ ರಾಷ್ಟ್ರಗಳಿಗೆ ತನ್ನ ಉತ್ಪತ್ತಿಯನ್ನು ನಿರ್ಯಾತಗೊಳಿಸುವಲ್ಲಿ ಪ್ರಯಾಸಪಡಬೇಕಾಗಿ ಬಂತಲ್ಲದೇ ಪೂರ್ವ ಯುರೋಪಿನ ರಾಷ್ಟ್ರಗಳನ್ನೇ ತನ್ನ ವ್ಯಾಪಾರಕ್ಕಾಗಿ ಸಾಗೂ ಅಭಿವೃದ್ಧಿ ಬಂಡವಳಕ್ಕಾಗಿ ಹೊಂದಿಕೊಳ್ಳಬೇಕಾದ ಪರಿಸ್ಥಿತಿಯೂ ಕಾಣಿಸಿಕೊಂಡಿತು.

ಈಜಿಪ್ತದೊಡನೆ ಸೇರಿಕೊಂಡನಂತರ ಸಿರಿಯಾವು ಈಜಿಪ್ತದಲ್ಲಿ ನಸ್ಸೇರನು ಮಾಡಿದಂತೆಯೇ ಎಲ್ಲ ರಾಜಕೀಯ ಪಕ್ಷಗಳನ್ನು ತಡೆಹಿಡಿದು ಕಮ್ಯುನಿಸ್ಟ ಚಟುವಟಿಕೆಗಳನ್ನು ಅಡಗಿಸಿದರು. ಸಿರಿಯಾವು ನಿಜವಾಗಿಯೂ ಸ್ವರ್ಗ ಸಮವಾದ ದೇಶವಾಗಿದ್ದು ನೆರೆರಾಷ್ಟ್ರ ಲೆಬನಾನಿನ ಹೆಚ್ಚಿನ ರಾಜಕಾರಣಿಗಳು ಸಿರಿಯಾ ಲೆಬನಾನ್‌ಗಳ ಸಂಯುಕ್ತ ರಾಜ್ಯವನ ಕನಸನ್ನೂ ಕಂಡಿದ್ದರು. ಆದರೆ, ಅದು ವಿಫಲವಾಗಿ ಪರಿಣಮಿಸಿದುದರಿಂದ ಲೆಬನಾನಿಗಳು ಹತಾಶರಾಗಿದ್ದಾರೆ. ವ್ಯಾಯಃ ಈ ಕಾರಣದಿಂದಲೇ, ಲೆಬನಾನಿಗಳು ಸಿರಿಯಾವು ತಮ್ಮ ದೇಶದಲ್ಲಿ ಕಳೆದ ಮೇ ತಿಂಗಳಲ್ಲಿ ನಡೆದ ದಂಗೆಗೆ ಸಿರಿಯಾ ಪ್ರೋತ್ಸಾಹವನ್ನೂ ಸಹಾಯವನ್ನೂ ಈಯುತ್ತಿದೆ ಎಂಬ ಗಂಭೀರ-ಆರೋಪವನ್ನು ಹೊರಿಸಿವೆ.

(ಮುಂದಿನವಾರ: ಇರಾಕ.)

ನೆರೆಯ ರಾಜ್ಯ ಕೇರಳದಲ್ಲಿ ....

[ತಾ 24 ಅಗೋಸ್ತು 1958ರಂದು]

ಕೈಮಗ್ಗದ ಬಟ್ಟೆ ಮತ್ತು ಪ್ಲೈವುಡ್ ತಯಾರಿಕೆಯ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ ಕೇರಳದ ಕಣ್ಣನೂರು. ಆರ್ಥಿಕ ವ್ಯವಹಾರದಲ್ಲಿ, ಕೈಗಾರಿಕೆಯಲ್ಲಿ ಕುಶಲರಾದ ಸರಳ ಜೀವನಕ್ಕೆ ಪ್ರಸಿದ್ಧ ಕೊಂಡಿದ ಈ ಭಾಗದ ಜನರಿಗೆ ಆದರ್ಶ ಆರ್ಥಿಕ ಸೇವೆಯನ್ನು ನೀಡಬೇಕೆಂಬ ಉತ್ತಮ ಉದ್ದೇಶದಿಂದ ಸಿಂಡಿಕೇಟ್ ಬೇಂಕಿನ ಶಾಖೆಯೊಂದು ಇಪ್ಪತ್ತೈದು ವರ್ಷಗಳ ಹಿಂದೆ ಇಲ್ಲಿ ಸ್ಥಾಪಿಸಲ್ಪಟ್ಟಿತು.

ಅಂದಿನಿಂದ ಆ ಭಾಗದ ಕೇರಳೀಯರ ಪ್ರೀತಿ ಆದರಗಳಿಗೆ ಪಾತ್ರವಾಗಿ, ಅವರ ಸುಖದುಃಖಗಳಲ್ಲಿ ಸಹಭಾಗಿಯಾಗಿ ನುಡಿಯಲಾಗದ ಸೇವೆಯನ್ನು ಸಲಿಸುತ್ತಾ ಬಂದು ಇದೇ ಆಗೋಸ್ತು ಇಪ್ಪತ್ತನಾಲ್ಕರಂದು ತನ್ನೀ ಇಪ್ಪತ್ತೈದು ವರುಷಗಳ ಸಫಲ ಸೇವೆಯ ಸ್ಮರಣೆಗಾಗಿ, ತನ್ನ ಗ್ರಾಹಕರ ಸಂತೃಪ್ತಿಗಾಗಿ ಬೆಳ್ಳಿಸಬ್ಬವನ್ನು ತಲಿಚೇರಿಯ ಬಿಶಪರಾದ ರೈಟ್‌ರೆವರೆಂಡ್ ಡಾ. ಸೆಬಿಸ್ಟಿನ್ ವಲ್ಲೊಪಿಳ್ಳಿಯವರ ಅಧ್ಯಕ್ಷತೆಯಲ್ಲಿ ಸೊಗಸಾಗಿ ಆಚರಿಸಿತು. ಕೇರಳದಲ್ಲಿರುವ ನಮ್ಮ 13 ಶಾಖೆಗಳೂ ದಕ್ಷಿಣ ಭಾರತದಲ್ಲಿರುವ ಇತರ 100 ಶಾಖೆಗಳೂ ತಮ್ಮ ಸಹ ಸಂಸ್ಥೆಯಾದ ಕಣ್ಣನೂರು ಶಾಖೆಯ ಫಲಭರಿತ ಸೇವೆಗಾಗಿ ಅಭಿನಂದಿಸುವುವಲ್ಲದೆ "ಅತ್ಯುತ್ತಮ ಬೇಂಕಿಂಗ್ ಸೇವಾ" ಪ್ರತಿಜ್ಞೆಯನ್ನು ಪುನರುಚ್ಚರಿಸುವುವು.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಉ ಡು ಪಿ. (ದ ಭಾ.)

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಹಿಸಿರಿ

ಉತ್ಪನ್ನ ಶಕ್ತಿ

ಕಾರ್ಯದಕ್ಷತೆ ಹೆಚ್ಚಲು ಆವಶ್ಯಕ ಕಾರ್ಯಕ್ರಮ

ಮಜೂರ ಮಾಲಿಕರು ಪರಸ್ಪರ ಲಾಭಕ್ಕಾಗಿ ದುಡಿಯಬೇಕು

ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಕಾರ್ಮಿಕರು, ಮಾಲಿಕರು ಮತ್ತು ಸರ್ಕಾರ—ಇವರ ಸಮ್ಮಿಳನ ಪ್ರಯತ್ನದಿಂದಾಗಿ ಉತ್ಪನ್ನ ಶಕ್ತಿಯ ಚಳವಳಿಯ ಬೆಳವಣಿಗೆಯಾಗಿದೆ. ಯುದ್ಧಾನಂತರದ ವರ್ಷಗಳಲ್ಲಿ, ಉತ್ಪಾದನೆಯನ್ನು ಹೆಚ್ಚಿಸುವುದೇ ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸುವ ವಿಧಾನವೆಂದು ಅಂಗೀಕರಿಸಲಾಗಿದೆ.

ಜಪಾನ್, ಇಂಗ್ಲೆಂಡ್, ಮತ್ತಿತರ ಐರೋಪ್ಯ ರಾಷ್ಟ್ರಗಳಲ್ಲಿ ಉತ್ಪನ್ನ ಪರಿಷತ್ತು ಅಥವಾ ಕೇಂದ್ರಗಳೆಂದು ಕರೆಯಲಾಗುವ ವಿವಿಧ ಉತ್ಪನ್ನ ಮಂಡಳಿಗಳಿರುವುವು ಐರೋಪ್ಯ ಆರ್ಥಿಕ ಸಹಕಾರ ಸಂಸ್ಥೆಯು-ಸರಕಾರಗಳು, ಕೈಗಾರಿಕೆಗಳು, ಬೇಸಾಯ ಮತ್ತು ಸಂಶೋಧನ ಸಂಸ್ಥೆಗಳು, ಖಾಸಗಿ ಉದ್ಯಮ ಸಂಸ್ಥೆಗಳು ಮುಂತಾದುವುಗಳ ಮೇಲೆ—ಪ್ರಭಾವ ಬೀರಿ ಉತ್ಪನ್ನ ಶಕ್ತಿಯನ್ನು ಹೆಚ್ಚಿಸುವ ಸಂಸ್ಥೆಯಾಗಿರುವುದು.

ಭಾರತದಲ್ಲಿ ಈ ಕೆಲಸವು ಅಂಕಿ ಅಂಶಗಳ ಸಂಸ್ಥೆ, ಅಹಮದಾಬಾದ್ ಹತ್ತಿ ಬಟ್ಟೆ ಉದ್ಯಮ ಸಂಶೋಧನಾ ಸಂಸ್ಥೆ ಮತ್ತು ಇತರ ಉದ್ಯಮಗಳ ಆಡಳಿತ ಸಂಸ್ಥೆಗಳ ಖಾಲಿಗೆ ಬಂದಿತ್ತು. ಅಂತಾರಾಷ್ಟ್ರೀಯ ಕಾರ್ಮಿಕ ಸಂಘವು ಹಲಕೆಲವು ಅಧ್ಯಯನಗಳನ್ನು ನಡೆಸಿತು; ತಾಂತ್ರಿಕ ಸಹಕಾರ ಕಾರ್ಯಕ್ರಮಗಳ ಪ್ರಕಾರ ವ್ಯಾಯೋಗಿಕ ಕೇಂದ್ರಗಳನ್ನು ಸ್ಥಾಪಿಸಿತು. ಈ ವರ್ಷ ಫೆಬ್ರುವರಿ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಉತ್ಪನ್ನ ಪರಿಷತ್ತು ಈಗ ರಾಷ್ಟ್ರೀಯ ಮಟ್ಟದಲ್ಲಿ ಉತ್ಪಾದನೆಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ರೂಪಿಸಿ ಸಮನ್ವಯಗೊಳಿಸುವುದು. ಈ ಪರಿಷತ್ತು ಸ್ವಯಂಮಧಿಕಾರವುಳ್ಳ ಸಂಸ್ಥೆಯಾಗಿರುವುದು. ಅದರಲ್ಲಿ ಕಾರ್ಮಿಕರು, ಮಾಲಿಕರು ಮತ್ತು ಸರಕಾರದ ಪ್ರತಿನಿಧಿಗಳಿರುವರು. ತಾಂತ್ರಿಕ ಪರಿಣತರು ಮತ್ತು ವಿದ್ವಾಂಸರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಅಧಿಕಾರ, ಸಂಪತ್ತಿಗೆ ಇರುವುದು.

ವಸ್ತುವಿನ ತಯಾರಿಕೆಗೆ ತೊಡಗಿಸಿದ ಸಾಧನ ಸಂಪತ್ತುಗಳಿಗೂ, ಸಿದ್ಧಗೊಂಡ ವಸ್ತುವಿಗೂ ಇರುವ ಅನುಪಾತವೇ ಉತ್ಪನ್ನ ಶಕ್ತಿಯೆನ್ನಿಸುವುದು. ಸಾಧನ ಸಂಪತ್ತುಗಳಲ್ಲಿ ಮಾನವಶಕ್ತಿ, ಬಂಡವಾಳ, ಯಂತ್ರೋಪಕರಣಗಳು ಮತ್ತು ಕಚ್ಚಾ ಸಾಮಗ್ರಿ ಇವುಗಳೆಲ್ಲವೂ ಸೇರುತ್ತವೆ. ಈ ಅನುಪಾತವನ್ನು ಹಲವು ವೇಳೆ. ಪ್ರತಿ ವ್ಯಕ್ತಿ ಅಥವಾ ಪ್ರತಿಗಂಟೆಯ ಪ್ರಮಾಣದಲ್ಲಿ ಹೇಳುವುದೂ ಉಂಟು ಆದರೆ, ದುಡಿಮೆ ಉತ್ಪಾದನಾ ವೆಚ್ಚದಲ್ಲಿ ಒಂದು ಅಂಶ ಮಾತ್ರ ಆದ್ದರಿಂದ ಉತ್ಪಾದನೆಯನ್ನು ದುಡಿಮೆಯ ಅಥವಾ ಗಂಟೆಯ ಮಾತುಗಳಲ್ಲಿ ಅಳೆಯುವುದು ಅಷ್ಟಾಗಿ ನಿಖರವೆನಿಸುವುದಿಲ್ಲ. ಉತ್ಪನ್ನ ಶಕ್ತಿಯನ್ನು ಉತ್ಪಾದನೆಯೆಂದು ಭಾವಿಸಬಾರದು. ಉತ್ಪಾದನೆಯು, ಉತ್ಪನ್ನ ಶಕ್ತಿಯೊಡನೆ ಯಾವ ರೀತಿಯ ಸಂಬಂಧವನ್ನೂ ಹೊಂದಿರದೆ ಹೆಚ್ಚಬಹುದು. ೧೦೦ ಮಂದಿ ಕೆಲಸಗಾರರುಳ್ಳ ಒಂದು ಕಾರ್ಖಾನೆಯು ದಿನವಹಿ ೧೦ ಬೀಸಣಿಗೆಗಳನ್ನು ಉತ್ಪಾದಿಸುತ್ತವೆ. ೧೨೦ ಮಂದಿ ಕೆಲಸಗಾರರಿರುವ ಮತ್ತೊಂದು ಕಾರಖಾನೆಯು ದಿನವಹಿ ಅಷ್ಟೆ ಬೀಸಣಿಗೆಗಳನ್ನು ಉತ್ಪಾದಿಸುತ್ತದೆ ಎಂದಿಟ್ಟುಕೊಳ್ಳೋಣ. ಅಂತಹ ಸಂದರ್ಭದಲ್ಲಿ ಉತ್ಪಾದನೆಯು ಎರಡು ಕಾರ್ಖಾನೆಗಳಲ್ಲಿಯೂ ಒಂದೇ ಆಗಿರುವುದು. ಆದರೆ, ಮೊದಲನೆಯ ಕಾರ್ಖಾನೆಯ ಉತ್ಪನ್ನ ಶಕ್ತಿ ಎರಡನೆಯ ಕಾರ್ಖಾನೆಗಳಿಗಿಂತಲೂ ಹೆಚ್ಚಾಗಿರುವುದು.

ಮಾನವ ಶಕ್ತಿ ಮತ್ತು ಸಾಮಗ್ರಿಗಳನ್ನು ಅತ್ಯಲ್ಪ ವೆಚ್ಚದಲ್ಲಿ ಪರಮಾವಧಿ ಸೇವೆಯು ದೊರಕುವಂತೆ ಸೂಕ್ತರೀತಿಯಿಂದ ಪಳಗೂ ದಕ್ಷತೆಯಿಂದ ಬಳಸುವುದೇ ಉತ್ಪನ್ನ ಶಕ್ತಿಯ ಚಳವಳಿಯನ್ನು ಪರೀಕ್ಷಿಸುವ ಮಾರ್ಗ ಇದನ್ನು ಯಾವುದೇರೀತಿಯ ಆರ್ಥಿಕ ಅಥವಾ ಸಾಂಸ್ಕೃತಿಕ ತೊಂದರೆಯನ್ನು ಸೃಜಿಸದೆ ಸಾಧಿಸಬೇಕು ಉದಾಹರಣೆಗೆ ಕೆಲಸಗಾರನ ಕಾರ್ಯವೇಗವನ್ನು ಭಾರವನ್ನು ಅವನಿಗೆ ಅಯಾಸವಾಗದಂತೆ, ಅವನು ಅಪಾಯಕ್ಕೊಳಗಾಗದಂತೆ, ಹೆಚ್ಚಿಸಬೇಕು.

ಉತ್ಪನ್ನ ಶಕ್ತಿಯನ್ನು ಹೆಚ್ಚಿಸಲು ಅನುಸರಿಸಲಾಗುವ ಕಾರ್ಯವಿಧಾನಗಳೇನು? ಅವು (೧) ಕೆಲಸವನ್ನು ಶೀಘ್ರವಾಗಿಯೂ ಉತ್ತಮವಾಗಿಯೂ ನಿರ್ವಹಿಸುವ ವಿಧಾನಗಳನ್ನು ನಿರಂತರವಾಗಿ ನಿಯೋಜಿಸುತ್ತಿರುವುದು (೨) ಕಾರ್ಮಿಕ—ಮಾಲಿಕರ ನಡುವೆ ಮಧುರ ಭಾಂಧವ್ಯ ಇವು ಮುಖ್ಯ ಸಾಧನಗಳಾಗುತ್ತವೆ. ಖಾರಿಭಾಷಿಕ ಮಾತುಗಳಲ್ಲಿ ಹೇಳುವುದಾದರೆ ಸಮಯ ಮತ್ತು ಚಲನೆಯ ಅಧ್ಯಯನ ವೈಜ್ಞಾನಿಕ ರೀತಿಯ ಅಡಳಿತ ತಂತ್ರಗಳು, ಕೈಗಾರಿಕೆಯಲ್ಲಿ ಮಾನವೀಯ ಸೌಹಾರ್ದ ಪ್ರಮಾಣೀಕರಣ ಹತೋಟಿ ಮತ್ತು ತಂತ್ರ ವಿಧಾನಗಳು.

ಮಗುವೂ ಒಬ್ಬ ಕಲಾಗಾರನೆಂದು ಒಪ್ಪಬೇಕು ವಿಚಾರ ಪ್ರಕಟ ಮಾಡುವ ವಿಧಾನವೆಲ್ಲವನ್ನೂ ಆದಕ್ಕೆ ಸರಿಯಾಗಿ ಕಲಿಸಿದರೆ, ಆಗ ಕಲೆಯನ್ನೇ ಆಯ ನೆಚ್ಚಿಕೊಂಡೀತು. ಕಲಾರಾಧನೆಯನ್ನು ಅದಕ್ಕೆ ಕಲಿಸುವುದೂ ಇಂದಿನ ಶಿಕ್ಷಣವಾಗಿದೆ. ಇದರಿಂದಲೇ ಭಾರತದಲ್ಲಿಯೂ ಪೂರ್ವನಾಡಿನಲ್ಲಿಯೂ ಕಲೆಯ ಬಗ್ಗೆ ವಿಶೇಷ ಶಾಲೆಗಳನ್ನೂ ತೆರೆಯಲಾಗುತ್ತಿದೆ. ಇತ್ತೀಚೆಗೆ ನವದೆಹಲಿಯಲ್ಲಿ ಜರಗಿದ ಅಂತಾರಾಷ್ಟ್ರೀಯ ಶಿಶು ಕಲಾ ಪ್ರದರ್ಶನದಲ್ಲಿಟ್ಟಿದ್ದ ರಶ್ಯದ ಮಗುವೊಂದರ ಕಲಾಗಾರಿಕೆಯನ್ನು ಈ ಚಿತ್ರದಲ್ಲಿ ಇತರರು ಮೆಚ್ಚುತ್ತಿರುವುದನ್ನು ಕಾಣಬಹುದು.

ಈ ಪರಿಷತ್ತಿನ ಕಾರ್ಯಕಲಾಪಗಳನ್ನು ವ್ಯಾಪಕವಾಗಿ ನಿರ್ವಹಿಸುವ ಸಲುವಾಗಿ ಪ್ರಚಲಿತ ವರ್ಷದಲ್ಲಿ ದೇಶದ ನಾನಾ ಭಾಗಗಳಲ್ಲಿ ೧೫ ಶ್ರೇಷ್ಠೀಯ ಉತ್ಪನ್ನ ಪರಿಷತ್ತುಗಳನ್ನು ರಚಿಸಲಾಗುವುದು. ಬೆಂಗಳೂರು ಮತ್ತು ಕೊಯಮುತ್ತೂರಿನಲ್ಲಿ ಇಂತಹ ಪರಿಷತ್ತುಗಳು ಈಗಾಗಲೇ ರೂಪುಗೊಂಡಿವೆ

ಯಾವ ದೇಶದಲ್ಲಿ ಉತ್ಪನ್ನ ಶಕ್ತಿಯ ಬಗೆಗೆ ಚಳವಳಿಯು ನಡೆಯುತ್ತಿದೆಯೊ ಅಲ್ಲಿ ಈ ಚಳವಳಿಯ ಕಾರಣದಿಂದಾಗಿ, ಸಾಮಗ್ರಿಗಳ ಅಪವ್ಯಯ ಕಡಿಮೆಯಾಗಿದೆ ಸಿದ್ಧ ವಸ್ತುಗಳ ಮಾರಾಟ ವ್ಯವಸ್ಥೆ ಉತ್ತಮಗೊಂಡಿದೆ. ರಾಷ್ಟ್ರೀಯ ಸಂಪತ್ತು ಹೆಚ್ಚಿದೆ

ಭಾರತದಲ್ಲಿಯೂ ಕಳೆದ ವರ್ಷ ಉತ್ಪನ್ನ ಪ್ರಾಯೋಗಿಕ ಕೇಂದ್ರವು ಅಧ್ಯಯನವನ್ನು ನಡೆಸಿತು ಬೆಂಗಳೂರಿನಲ್ಲಿ ಮೋಟರ್‌ಗಳನ್ನು ತಯಾರಿಸುವ ಕಾರ್ಖಾನೆಯೊಂದರಲ್ಲಿ ಯಂತ್ರವಿಭಾಗದ ಸಿಬ್ಬಂದಿಗೊಳಿಸುವಿಕೆಯಲ್ಲಿ ಸುಧಾರಣೆ ಮಾಡಿದ ನಂತರದ ಉತ್ಪಾದನೆಯು ಪ್ರತಿಶತ ಅರವತ್ತು ಹೆಚ್ಚಿತು. ಇದೇ ರೀತಿ ದೆಹಲಿಯ ನಾರಿಗೆ ಸೇವಾ ವ್ಯವಸ್ಥೆಯ ಕೇಂದ್ರ ಕಾರ್ಖಾನೆಯಲ್ಲಿ ಇರುವ ಕಾರ್ಮಿಕರು ಮತ್ತು ಯಂತ್ರಗಳ ಸಹಾಯದಿಂದಲೇ ಕಾರ್ಯದಕ್ಷತೆಯನ್ನು ಹೆಚ್ಚಿಸಲಾಯಿತು.

ಹೊಸ ಯಂತ್ರಗಳನ್ನು ಅಳವಡಿಸದೆ, ಕೆಲಸಗಾರರನ್ನು ಕೆಲಸದಿಂದ ತೆಗೆಯದೆ, ಉತ್ಪಾದನೆಯಲ್ಲಿ ಹೆಚ್ಚಳವನ್ನು ಹೆಚ್ಚಿಸಲು ಸಾಧ್ಯವೆಂಬುದು ಇದರಿಂದ ವ್ಯಕ್ತಪಡುತ್ತದೆ.

ವೈಜ್ಞಾನಿಕ ವಿಧಾನಗಳಿಂದ ಕಾರ್ಮಿಕರಿಗೂ ಲಾಭವುಂಟು ಆದರಿಂದ ಅವರಿಗೆ ಅಧಿಕ ವೇತನ ದೊರೆಯುವುದು ಅಥವಾ ಕಡಿಮೆ ಸಮಯದಲ್ಲಿ ಹೆಚ್ಚಿನ ಕೆಲಸ ನಡೆಯುವುದು. ಯಾವ ದೇಶದಲ್ಲಿ ಉತ್ಪನ್ನ ಶಕ್ತಿಯು ಅಧಿಕವಾಗಿರುವುದೊ ಅಲ್ಲಿ ಕಾರ್ಮಿಕರ ವೇತನವೂ ಹೆಚ್ಚಾಗಿರುವುದು.

ಉತ್ಪನ್ನ ಶಕ್ತಿಯು ಹೆಚ್ಚುವುದರಿಂದ ಕೆಲಸಗಾರರನ್ನು ಕೆಲಸದಿಂದ ತೆಗೆಯುವುದು, ಅಥವಾ ನಿರುದ್ಯೋಗ ಪರಿಣಮಿಸುವುದು ಎಂಬ ದಿಗ್ಭ್ರಮೆಯು ಜನತೆಯಲ್ಲಿ ಆಗಾಗ ಉಂಟಾಗುವುದು. ಆದರೆ, ಉತ್ಪನ್ನ ಶಕ್ತಿಯನ್ನು ಹೆಚ್ಚಿಸುವ ವಿಧಾನಗಳನ್ನು ಆಚರಣೆಗೆ ತಂದಿರುವ ದೇಶಗಳಲ್ಲಿ ವ್ಯಕ್ತಗೊಂಡಿರುವ ಅನುಭವವು ಇದಕ್ಕೆ ವಿರುದ್ಧವಾಗಿರುವುದು.

ಮಾಲಿಕರು ಮತ್ತು ಕೆಲಸಗಾರರ ನಡುವೆ ಪರಸ್ಪರ ಗೌರವ ಭಾವನೆಯ ಆಧಾರವನ್ನು ಉತ್ಪನ್ನ ಶಕ್ತಿಯು ಅವಲಂಬಿಸಿರುವುದು ಮಾಲಿಕರ ಲಾಭಾಂಶವನ್ನು ಹೆಚ್ಚು ಮಾಡಲು ಕಾರ್ಮಿಕರು ಪ್ರಯತ್ನಿಸಬೇಕು; ಉತ್ಪನ್ನ ಶಕ್ತಿಯ ಫಲವಾಗಿ ಬರುವ ಸೌಲಭ್ಯಗಳು ಕಾರ್ಮಿಕರಿಗೂ ದೊರೆಯಬೇಕು ಇದರ ಜೊತೆಗೆ, ಪರಸ್ಪರ ಅಪನಂಬಿಕೆ ಅಥವಾ ಭಯವನ್ನುಂಟು ಮಾಡುವಂತಹ ವಾತಾವರಣವನ್ನು ತಡೆಹಿಡಿಯುವುದು ಉತ್ಪನ್ನ ಪರಿಷತ್ತಿನ ಕರ್ತವ್ಯವಾಗುವುದು.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ನಿಮಗಾಗಿ ನಮ್ಮಲ್ಲಿ ನೂರಾರು ಸುರಿತ ಕಾರಕೂನರಿದ್ದಾರೆ!

"ಕೊರ್ಪೊರೇಶನ್" ಬೇಂಕಿನಲ್ಲಿ ನೀವು ಒಂದು ಹಣಖಾತೆಯನ್ನು ತೆರೆದರೆಂದರೆ, ನನ್ನ ಬೇಂಕಿನ ಕಾರಕೂನರು ನಿಮ್ಮದೇ ಕಾರಕೂನರಾದಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹಣದ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ ಭಾರತ)

(ಮೈಸೂರು ರಾಜ್ಯದಲ್ಲಿ ಪ್ರಧಾನ ಕಚೇರಿಗಳೆನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳೆಲ್ಲಾ ಇದು ಅತಿ ಹಳೆಯದು)

ಗಣೇಶನ ಚವುತಿ

ವಿನಾಯಕನು ಪಾರ್ವತಿಯ ಮೈಮಣ್ಣಿನಿಂದ ಹುಟ್ಟಿದನು!

ಚೌತಿಯ ದಿನ ಚಂದ್ರನನ್ನು ಯಾರೂ ನೋಡಬಾರದೆಂಬ ಕಟ್ಟಳೆಯಿದೆ!

ಆನೆಯ ಮುಖ, ಮಾನವ ದೇಹ, ದೇವತೆಗಳಂತೆ ನಾಲ್ಕು ಭುಜದ ಮೂರ್ತಿ ವಿನಾಯಕನನ್ನು ವಿನಾಯಕ ಚತುರ್ಥಿಯ ಪರ್ವದಿನದಂದು ವಿಜೃಂಭಣೆಯಿಂದ ಎಲ್ಲೆಲ್ಲಿಯೂ ಅರ್ಚಿಸಲಾಗುವುದು. ಗಣಪತಿ, ಗಣೇಶ, ಗಣಾಧಿಪತಿ ಎಂಬಿತ್ಯಾದಿ ನಾಮ ಧೇಯಗಳಿಂದ ಆತನು ಶಿವಗಣಗಳ ಒಡೆಯನೆಂದೂ, ವಿಘ್ನವಿನಾಶ, ವಿಘ್ನೇಶ್ವರ ಎಂಬುವು ವಿಘ್ನ ವಿಡ್ಡೂರಗಳನ್ನು ನಾಶಮಾಡಬಲ್ಲ ಮಹಾನು ಭಾವನೆಂಬುದೂ ಸೂಚಿತವಾಗುವುವು. ಇದರಿಂದಾಗಿಯೇ ಧಾರ್ಮಿಕಾಸಕ್ತಿಯಿರುವ ಜನರು ಯಾವುದೇ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮೊದಲು ಶ್ರೀ ಗಣೇಶನನ್ನು ಆರಾಧಿಸುತ್ತಾರೆ. ಎಂತಲೇ ಒಂದು ಕೆಲಸ ಮೊದಲು ಮಾಡುವುದಕ್ಕೆ ಶ್ರೀ ಗಣೇಶ ಹಾಕುವುದು ಎನ್ನುತ್ತಾರೆ.

ಭಾದ್ರಪದ ಶುದ್ಧ ಚತುರ್ಥಿ ದಿನದಂದು ಸರ್ವ ಮಂಗಲಕಾರಕನಾದ ಬೆನಕನನ್ನು ಆರಾಧಿಸುವ ಪದ್ಧತಿಯಿದೆ. ಮಣ್ಣಿನಲ್ಲಿ ಈತನ ಮೂರ್ತಿಗಳನ್ನು ವಿವಿಧ ಭಂಗಿಗಳಲ್ಲಿ ನಿರ್ಮಿಸಿ ಶಾಸ್ತ್ರೋಕ್ತ ವಿಧಾನಗಳಿಂದ ಆರಾಧಿಸಿ, ಒಂದು ದಿನವೋ ಮೂರು ದಿನವೋ ಐದು ದಿನವೋ ಪೂಜೆಸಿ ನೀರಿನಲ್ಲಿ ಲೀನಮಾಡಿಬಿಡುವರು ಗಣಪತಿಯೇ ಅಧಿಷ್ಠೈವವೆಂದು ನಂಬಿದ ಗಾಣಪತ್ಯವೆಂಬ ಸಂಪ್ರದಾಯವೊಂದಿದೆ. ಈಶ್ವರ—ಪಾರ್ವತಿಯರ ದ್ವಿತೀಯ ಪುತ್ರನಾದ ವಿನಾಯಕನು ತನ್ನ ತಾಯ ಕೈಯಿಂದಲೇ ರೂಪುಗೊಂಡ ಕಥೆ ರೋಮಾಂಚಕಾರಕವಾಗಿದೆ.

ಪಾರ್ವತಿ ಸ್ನಾನಾಗಾರಕ್ಕೆ ತೆರಳಿ ತನ್ನ ಮೈಮಣ್ಣಿನಿಂದ ಸಜೀವ ಮೂರ್ತಿಯೊಂದನ್ನು ನಿರ್ಮಿಸಿ ಬಾಗಿಲಲ್ಲಿ ಯಾರನ್ನೂ ಪ್ರವೇಶಿಸಬಿಡಬಾರದೆಂದು ಆಜ್ಞಾಪಿಸಿ ನಿಲ್ಲಿಸಿದಳಂತೆ. ಈಶ್ವರ ಆಕಳ-ನ್ನು ಕಾಣಲು ಬಚ್ಚಲ ಮನೆಗೆ ಧಾವಿಸಲು ಪಹರೆದಾರನು ತಡೆಯಲು ಕೋಪೋದ್ರೇಕದಿಂದ ಈತ್ತಿಗೆ ಕತ್ತರಿಸಿ ಬಿಟ್ಟನಂತೆ. ಪಾರ್ವತಿಯ ರೋದನವನ್ನು ತಾಳಲಾರದೆ, ಮುಂದೆ ಉತ್ತರ ದಿಕ್ಕಿಗೆ ಹೋಗಿ ಅತ್ತ ತಲೆಯಿಟ್ಟು ಮಲಗಿದ ಪ್ರಾಣಿ (ಚೇತನ ವಸ್ತು) ಯ ತಲೆ ಕಡಿದು ತನ್ನಿರೆಂದು ಪರಿವಾರಕ್ಕೆ ಆಜ್ಞಾಪಿಸಿದಾಗ, ಅವರ ಕತ್ತಿಗೆ ದುರ ದೃಷ್ಟಶಾಲಿ ಹಸ್ತಿಯೊಂದರ ಕತ್ತು ಆಹುತಿಯಾಗಬೇಕಾಗಿ ಬಂದಿತಂತೆ. ಆ ತಲೆಯನ್ನು ವಿನಾಯಕನ ಮುಂಡಕ್ಕೆ ಜೋಡಿಸಲಾಯಿತಂತೆ. ಹೀಗವನು ಗಜ ಮುಖನಾದನಂತೆ! ತಿನು ಅತನ ಕರ್ತವ್ಯ ದಕ್ಷತೆಗೂ ಪ್ರಾಮಾಣಿಕತೆಗೂ ಮೆಚ್ಚಿ ಗಣಾಧಿಪತ್ಯವನ್ನಿತ್ತನಂತೆ!

ದೇವಾನು ದೇವತೆಗಳೆಲ್ಲರನ್ನೂ ಸದೆಬಡಿದ ಗಜಾಸುರನನ್ನು ಇವನೇ ಕೊಂದನಂತೆ. ಪರಶುರಾಮನಿಗೂ ಈತನಿಗೂ ಕಾಳೆಗವೊದಗಿಬರಲು, ಪರಶುರಾಮನೆಸೆದ ಶಿವಾಸ್ತ್ರಕ್ಕೆ ತನ್ನೊಂದು ದಂತವನ್ನು ಆಹುತಿಯಿತ್ತು ಏಕದಂತನಾದನಂತೆ! ಪ್ರತಿ ಪಕ್ಷದ ನಾಲ್ಕನೆಯ ತಿಥಿಯು ಈತನ ಉಪಾಸನೆಗೆ ಮೀಸಲಾಗಿದೆ. ಗಣಪತಿಗೆ ಪ್ರಿಯವಾದ ಅಂಕೆ ೨೧. ಚೌತಿಯ ದಿನ ಚಂದ್ರನನ್ನು ನೋಡಿದರೆ, ಮಿಥ್ಯಾಪವಾದಗಳು ಬರುವುವೆಂಬ ಧಾರಣೆ ಹಿಂದೂ ಜನರಲ್ಲಿದೆ.

ಒಂದು ಬಾರಿ ಚೌತಿಯ ದಿನ ಮೂಷಿಕ ವಾಹನನಾಗಿ ಗಣೇಶನು ಭಕ್ತ ಜನರೊಲಿದಿತ್ತ ಮೋದಕಗಳನ್ನು ಹೊಟ್ಟೆಯಂಬ ತಿಂದು ಮನೆಯ ದಾರಿಹಿಡಿದು ಬಂದಾಗ, ಇಲಿಯು ಎಡವಿ ಮುಗ್ಗರಿಸಿ ಬೀಳಲು, ಗಣಪತಿಯು ಉರುಳಿ ಬಿದ್ದನಂತೆ! ಕಾಲ್ಚೆಂಡಿನೊಳಗಿದ್ದ ಗಾಳಿಯು ಚೆಂಡಿಗೆ ಕೂತಾದೊಡನೆಯೇ ಹೊರಬರುವಂತೆ, ಬಿದ್ದೇಟಿಗೆ ಗಣಪತಿಯ ಉದರ ಬಿರಿದ ,ಒಳಗಿಂದ ಮೋದಕಗಳು ಹೊರಗುರುಳತೊಡಗಿದುವಂತೆ! ಆಗ ಅಲ್ಲೇ ಸರಿಯುತಿದ್ದ ಸರ್ಪವೊಂದನ್ನು ಎತ್ತಿ ಹೊಟ್ಟೆಗೆ ಬಿಗಿದುಕೊಳ್ಳುವಷ್ಟರಲ್ಲಿ ಚಂದ್ರ ಅಕಾಶದಲ್ಲೆ ವಿಹರಿಸುತಿದ್ದ ನು ಈ ದುರವಸ್ಥೆಯನ್ನು ಕಂಡು ಪರರ ದುಃಖದಲ್ಲಿ ಸುಖವುಣ್ಣುವ ಮೂರ್ಖನಂತೆ ಗಹಗಹಿಸಿ ನಗಲು, ಚಂದ್ರನನ್ನು "ಎಂದೆಂದಿಗೂ ಕೋರದೆ ಹೋಗೆಂ"ದು ಶಪಿಸಿದನಂತೆ. ಮುಂದೆ, ಚಂದ್ರನ ಪಶ್ಚಾತ್ತಾಪ, ದೇವತೆಗಳ ಮಧ್ಯಸ್ಥಿಕೆಗಳಿಂದಾಗಿ, ತನ್ನ ವಿಶೇಷ ಆರಾಧನೆಯ ದಿನ (ಭಾದ್ರಪದ ಶುದ್ಧ ಚತುರ್ಥಿ) ನಿನ್ನನ್ನು ಜನರು ನೋಡದಿರಲಿ. ಒಂದು ವೇಳೆ ಈಕ್ಷಿಸಿದರೆ, ಅವರಿಗೆ ಅಪವಾದಗಳೊದಗಿಬರಲಿ' ಎಂದು ನುಡಿದನಂತೆ! ಇದರಿಂದಾಗಿ ಚವುತಿಯ ಚಂದ್ರನನ್ನು ನೋಡಬಾರದೆಂಬ ಪ್ರಥ ನಮ್ಮಲ್ಲಿಂದಿಗೂ ಇದೆ.

ಶ್ರೀಕೃಷ್ಣನೊಂದುಬಾರಿ ತನಗರಿವಿಲ್ಲದೆ ಚೌತಿಯ ಚಂದ್ರದರ್ಶನ ಮಾಡಿದುದರಿಂದಲೇ ಮುಂದೆ ಸ್ಯಮಂತಕ ಮಣಿಯನ್ನು ಕದ್ದನೆಂಬ ಅಪವಾದಕ್ಕೆ ಗುರಿಯಾದನೆಂದು ಭಾಗವತದ ಕಥೆಯು ಉಲ್ಲೇಖವಿದೆ.

ಮಹಾರಾಷ್ಟ್ರದಲ್ಲಿ ಗಾಣಪತ್ಯರು ಇರುತ್ತಾರೆ. ಅವರ ಅಧಿದೇವತೆ ಗಣಪತಿ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಶ್ರೀ ಗಣೇಶ ಕಾಶಿದ ಸ್ವರ್ಗೀಯ ಬೋಕನಮಾನ್ಯ ಬಾಲಗಂಗಾಧರ ತಿಲಕರು ಶಿವಾಜಿ ಉತ್ಸವದೊಂದಿಗೆ ಗಣೇಶೋತ್ಸವಕ್ಕೂ ರಾಷ್ಟ್ರೀಯ ರೂಪವನ್ನಿತ್ತರು. ಇಂತಹ ರಾಷ್ಟ್ರೀಯ ಪರ್ವದಿನಾಚರಣೆಯಿಂದ ಪರಸ್ಪರ ಪಕ್ಷ ಸಂಗಡ ಭೇದಗಳು ದೂರವಾಗಿ ಐಕ್ಯವು ಉತ್ಪನ್ನವಾಗುವುದು ಸಾಧ್ಯವೆಂದವರು ತಿಳಿದಿದ್ದರು. ಮತ್ತು ಈ ತಿಳುವಳಿಕೆಯು ಸಾಮಾನ್ಯವಾಗಿ ವಿ.ಧ್ಯ ಧಾರಣೆಯಾಗಲಿಲ್ಲವೆಂದು ಹೇಳಬಹುದು.

ಹೀಗೆ ಗಣಪತಿಯು ವಿಘ್ನಹರನಾಗಿದ್ದಾನೆ. ಹಿಂದೆ ರಾವಣನು ತನಗಿಂತ ಶ್ರೇಷ್ಠರಿಲ್ಲವೆಂಬ ಉನ್ಮತ್ತತೆಯಿಂದ ಆತನನ್ನು ಪೂಜಿಸಿಲಿಲ್ಲವೆಂದೂ ಅದರಿಂದಾಗಿ ಆತನು ಸಾವನ್ನಪ್ಪಿದನೆಂದೂ, ಕೌರವರೊಡನೆ ಹೋರಾಡುವುದಕ್ಕೆ ಮೊದಲು ಧರ್ಮರಾಯನು ಪೂಜಿಸಿದುದರಿಂದ ಜಯವೆಣ್ಣನ್ನು ವರಿಸಿದನೆಂದೂ ಅನ್ನುತ್ತಾರೆ. ಎಂತಲೇ ಎಲ್ಲ ಶುಭಕಾರ್ಯದಲ್ಲಿಯೂ ಗಣಪೋಮ ಇಲ್ಲವೇ ಗಣಪತಿ ಸ್ತಾರ್ಥನೆಯನ್ನು ಮಾಡುವ ಸಂಪ್ರದಾಯ ಇಂದಿಗೂ ಉಳಿದು ಬೆಳೆದು ಬಂದಿದೆ.

ಗಣಪತಿಯ ಹುಟ್ಟು, ದೇಹ ರಚನೆ, ವಾಹನ, ಆತನ ಬಗ್ಗೆ ಜನಮನಧಾರಣೆಯಲ್ಲವೂ ಒಂದು ವಿಚಿತ್ರವಾಗಿವೆ. ಎಂತಲೇ ಗಣಪತಿಯ ವಿಚಿತ್ರ ಮೂರ್ತಿಯನ್ನು ನೋಡುವುದರಲ್ಲಿ, ವಿಚಿತ್ರಾರಾಧನೆಯನ್ನು ಮಾಡುವುದರಲ್ಲಿ ಜನತೆ ಕುತೂಹಲಿಯಾಗಿದೆ.

—ಶ್ರೀ ಎಸ್. ಗೋಪೀಚಂದರಾವ್
ಉಡುಪಿ.

ನೋಟೀಸು

ಮಂಗಳೂರು ಸ್ಪೆಶಲ್ ಅಸಿಸ್ಟಾಂಟ್ ಖಮಿಶನರವರ ಕೋರ್ಟಿನಲ್ಲಿ

O. P. No. 436/1958.

ಪಿ. ಕೃಷ್ಣದಾಸ ಭಟ್ಟ — ಅರ್ಜಿದಾರ

ಮತ್ತು

ಬಿ. ಮಂಜುನಾಥ ರಾವ್ — ಎದ್ರಿ

ಇವರೊಳಗೆ

ಎದ್ರಿ ಬಿ. ಮಂಜುನಾಥ ರಾವ್ ಪಟ್ಟಾಜಿ ರಾಯರ ಮಗ ಉಡ್ಪಿ ತಾಲ್ಲೂಕ ಬಡಾನಿಡಿಯೂರು ಗ್ರಾಮದಲ್ಲಿರುವವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ಅರ್ಜಿದಾರನು ಅಸ್ತಿ ಸ್ವಾಧೀನತೆ ಕೇಳಿದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 18—9—58ಕ್ಕೆ ಉಡ್ಪಿ ಮೊಕ್ಕಾಂನಲ್ಲಿ ಇಟ್ಟಿರುವದ್ರಿಂದ ಅಕುರಿತು ನಿಮ್ಮ ಅಕ್ಷೇಪ ಬಗ್ಗೆರೆ ಇದ್ದಲ್ಲಿ ಸದ್ರಿ ತಸ್ತಾದಿವಸ ಬೆಳಿಗ್ಗೆ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟುಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪದಲ್ಲಿ ಸದ್ರಿ ಅರ್ಜಿಯನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು. ಎಂತ ಈ ಮೂಲಕ ತಿಳಿಯಪಡ್ಸಿಯದೆ.

(By order of the Court)

K. Varadaraya Pai,
Advocate for Petitioner.

Udipi S. K. Dated 6—9—58.

ಉಡುಪಿ ಡಿ. ಮು ಕೋರ್ಟಿನಲ್ಲಿ

ಸ್ಮಾಲ ನಂಬ್ರ 275/1958

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ—ಕಚೆಯಿಂದ ರಿಕವರಿ ಆಫೀಸರ M. S. ಭಂಡಾರಿ — ವಾದಿ.

ಮತ್ತು

ನಿಕ್ಕರ್ ಕೋಟ್ಯಂಣ್ಣ ಕೂಡಾ—ಪ್ರತಿವಾದಿರು

ಇವರೊಳಗೆ

1ನೇ ಪ್ರತಿವಾದಿ— ನಿಕ್ಕರ್ ಕೋಟ್ಯಣ್ಣ —ಎಲಿಯಾಸ್ ಕೋಟ್ಯಂಣ್ಣರ ಮಗ— ಚಿ. ಮೂ. ಬಡಗಬೆಟ್ಟು ಗ್ರಾಮ— ಇವರಿಗೆ.

ಪ್ರತಿವಾದಿರು ವಾದಿ ಬ್ಯಾಂಕಿಗೆ ತಾರೀಕು 21.7.56ರಲ್ಲಿ ರೂ. 200/-ಕ್ಕೆ ಬರೆಕೊಟ್ಟ ದಿಮಾಂಡ್ ನೋಟಿನ ಅಸಲು ಬಾಕಿ ಪಬಡ್ಡಿ ಮತ್ತು ರಿ. ನೋಟೀಸಿನ ಖರ್ಚು ಕೂಡಾ ರೂಪಾಯಿ 114.55ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾ. 18—9—58ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಆ ದಿನ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದುರಿಸದೆಯಿದ್ರೆ ಅವರ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damodar Kamath,
Advocate for Plff.

ಉಡುಪಿ, ದ. ಕ. ತಾರೀಕು 5.9.58.

ಹಲವು ಶಾಖೆಗಳು ತೆರೆಯಲ್ಪಡುವುವು

ನಮ್ಮ ಬಳ್ಳಾರಿ ಶಾಖೆ
ಮೈಸೂರು ರಾಜ್ಯದಲ್ಲಿ 29ನೇ ಶಾಖೆ
ತಾ. 19ನೇ ಸಪ್ಟಂಬರ 1958ರಂದು
ತೆರೆಯಲ್ಪಡುವುದು.

* * *

ನಮ್ಮ ಮೈಸೂರು ರಾಜ್ಯದಲ್ಲಿನ ಬಿಜಾಪುರ, ಗದಗ ಮತ್ತು ರಾಯಚೂರು ಶಾಖೆಗಳು,
ಮುಂಬಯಿ ರಾಜ್ಯದ ಕೊಲ್ಹಾಪುರ ಶಾಖೆ ಮತ್ತು
ಕೇರಳ ರಾಜ್ಯದ ತಲಚೇರಿ ಶಾಖೆ
ಬೇಗನೇ ತೆರೆಯಲ್ಪಡುವುವು

—: ಅಧಿಕ ಜನರಿಗೆ ಅಧಿಕ ಸೇವೆಗಾಗಿ :—

ಕೆನರಾ ಬೇಂಕ್ ಲಿಮಿಟೆಡ್

(ಸ್ಥಾಪನೆ: 1906)

'ನವಯುಗ' ವಾರಪತ್ರಿಕೆ
ಉಡುಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

ಚಂದನ ವೃಕ್ಷವನ್ನು ಭಯಂಕರಾಕಾರದ ಘೋರ ವಿಷದ ಹಾವುಗಳು ಸದಾ ಆಪ್ಪಿ ಕೊಂಡಿರುತ್ತವೆ; ಆದರೆ, ಚಂದನವು ತನ್ನನ್ನು ಆಲಂಗಿಸಿದ ಈ ಹಾವುಗಳಿಂದ ಒಂದು ತಟಿಕು ವಿಷವನ್ನಾದರೂ ಹೀರಿಕೊಳ್ಳದೆ, ಸರ್ವದಾ ಸುಗಂಧಿತವಾಗಿಯೇ ಇರುತ್ತದೆ.

NAVAYUGA

Founder:—

A. B. SHETTY,

Former Minister for Public Health Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೧-೯-೫೮	೨

ಚಂದನಾರ್ಹ ನಿರ್ಧಾರ

ಸ್ವರಾಜ್ಯ, ಸ್ವಾತಂತ್ರ್ಯಗಳ ಮೂಲೋದ್ದೇಶವೆಂದರೆ, ದೇಶದ ಜನತೆ ಸುಖೀ, ತೃಪ್ತ ಜೀವನವನ್ನು ನಡೆಸುವಂತೆ ಮಾಡುವುದೆಂದು ಹೇಳಬಹುದು. ಜನರು ಅತೀವ ಕಾಯಕಷ್ಟ ಪಡುವುದೂ ಸಿರಿವಂತಿಕೆಯನ್ನು ಬಯಸುವುದೂ ಪರವಸ್ತುಗಳನ್ನು ಕಾಂಕ್ಷಿಸುವುದೂ ಇನ್ನೂ ಮುಂದುವರಿದು ಚೌರ್ಯವೇ ನೊದಲಾದ ದುರ್ವ್ಯವಹಾರಗಳಿಗಿಳಿಯುವುದೂ ಕೇವಲ ಹೊಟ್ಟೆ ಮತ್ತು ಬಟ್ಟೆಗಳಿಗಾಗಿ ಯಾವನೇ ಆದರೂ ಬಹುಕಾಲ ಉದರ ಶಾಂತಿಯನ್ನು ಪಡೆಯದೆ ಹೋದರೆ, ಸುಮ್ಮನಿರಲಾರನು. ಉದರದೇವರನ್ನು ಸಂತೃಪ್ತಿಗೊಳಿಸುವುದಕ್ಕಾಗಿಯೇ ಜನತೆ ಪಡಬಾರದ ಬನ್ನಗಳಿಗೆ ಎರವಾಗುತ್ತದೆ. ಎಂತಲೇ ಅನ್ನಬ್ರಹ್ಮನ ವಿನಃ ಜನತೆಗೆಂಬೂ ಶಾಂತಿಯೆಂಬುದಿಲ್ಲವೆಂಬುದು ಶತಸ್ಸಿದ್ಧ. ಭಾರತವು ಜನಸಮೃದ್ಧವಾದ ದೇಶ; ದಿನೇ ದಿನೇ ಜನಸಂಖ್ಯೆಯು ಹೆಚ್ಚುತ್ತ ಬರುತ್ತಿರುವ ದೇಶಗಳ ಪಂಕ್ತಿಯಲ್ಲಿ ಅಗ್ರಸ್ಥಾನವನ್ನು ಹೊಂದಿದ ರಾಷ್ಟ್ರ. ನಮ್ಮ ದುಡಿಮೆ, ಪರಿಶ್ರಮ, ಪಂಚವಾರ್ಷಿಕ ಯೋಜನೆ, ವಿದೇಶೀಯ ಸಾಲ ಸಹಕಾರಗಳ ಯಾಚನೆ—ಎಲ್ಲವೂ ನಮ್ಮ ಜೀವನಸ್ತರನನ್ನು ಉನ್ನತೀಕರಿಸುವುದಕ್ಕಾಗಿವೆ. ನಾವು ನಮ್ಮ ಸಂಪಾದನೆಯಲ್ಲಿ ಒಂದಂಶವನ್ನು ಸರಕಾರಕ್ಕೆ ಕರಗಳ ರೀತಿಯಲ್ಲಿ ಕ್ರಮವಾಗಿ ತೆರುತ್ತ ಬರುವುದಾದರೂ, ನಮ್ಮ ಅಭಿವೃದ್ಧಿಗಾಗಿ, ಬಳಿತಿಗಾಗಿ ಸರಕಾರ ದುಡಿಯಬೇಕು; ನಮ್ಮ ಮುಂದಿರುವ ಬಹುಬೇಕುಗಳನ್ನು ಸಾಕುಗಳನ್ನಾಗಿಸಬೇಕು ಎಂಬ ಏಕಮೇವಾಕಾಂಕ್ಷೆಯಿಂದ ಎಂದು ಹೇಳಬಹುದು. ಇಂದಿನ ನಾಗರಿಕ ಯುಗದಲ್ಲಿ, ಜನತೆಯ ಸಾಮೂಹಿಕ ರಕ್ಷಣೆಯ ಭಾರವನ್ನು ಹೊತ್ತುಕೊಂಡ ಸರಕಾರವೇ ತನ್ನ ಪ್ರಜಾಕೋಟಿಯ ಕಲ್ಯಾಣವನ್ನು ಮಾಡಬೇಕಾಗಿದೆ. ಹೀಗೆ ಜನತೆಗೆ ಒದಗಿಸಿಕೊಡಬೇಕಾದ ಹಲವಾರು ಸೌಲಭ್ಯಗಳಲ್ಲಿ, ಆಹಾರ ಸೂಚಿಕೆಯೂ ಒಂದಾಗಿದೆ.

"ಬುಭುಕ್ಷಿತಃ ಕಿಂ ನ ಕರೋತಿ ಪಾಪಮ್" ಎಂಬೊಂದು ಆರ್ಯೋಕ್ತಿಯ ಉಲ್ಲೇಖದಿಂದಲೇ ಆಹಾರವೆಂಬುದು ಮಾನವನ ಜೀವನದಲ್ಲಿ ಎಷ್ಟು ಪ್ರಧಾನ ಪಾತ್ರ ವಹಿಸಿದೆ ಎಂಬುದರ ಅರಿವಾಗುವುದು. ಉಂಡುಡಲಿಕ್ಕಿರದ ಅರಸನೋಗೆಕ್ಕಿಂತ ತುಂಬಿದೂರೊಳಗೆ ತಿರುಗುಂಬುವುದೆ ಲೇಸು ಎಂದು ದಾಸರು ಹಾಡಿದ್ದಾರೆ. ಆದರೆ, ಅನ್ನದ ಪ್ರಶ್ನೆಯನ್ನೇ ನಾವು ನಮ್ಮ ಮುಂದಿಟ್ಟುಕೊಂಡು, ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ-ವ್ಯವಸಾಯಕ್ಕೇನೇ ಪ್ರಾಧಾನ್ಯವನ್ನಿತ್ತು, ಹಲವಾರು ಬೃಹತ್ ನೀರಾವರೀ ಯೋಜನೆಗಳು, ಚಿಕ್ಕ ನೀರಾವರೀ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಆಗಲೂ ಆ ಹಿಂದೆಯೂ ಹೆಚ್ಚು ಆಹಾರ ಬೆಳೆಸುವ ಚಳುವಳಿಯನ್ನು ಆರಂಭಿಸಿದ್ದೇನೆ, ಇನ್ನೂ ಖಾದ್ಯ ಧಾನ್ಯಗಳ ಅಧಿಕೋತ್ಪತ್ತಿಯಾಗುವಂತೆ, ಜಾಪಾನೀ ಮಾದರಿಯ ಕೃಷಿಕ್ರಮವನ್ನೋ, ರಾಸಾಯನಿಕ ಪದ್ಧತಿಯ ಗೊಬ್ಬರಗಳ ಬಳಕೆಯನ್ನೋ ಜನಪ್ರಿಯಗೊಳಿಸುತಿದ್ದೇವೆ. ಬಾಕ್ರ, ನಂಗಲ್, ತುಂಗಭದ್ರ ಮೊದಲಾದ ಮಹಾಬಂಧಗಳನ್ನು ಕಟ್ಟಿ, ವಿಶಾಲ ಭೂಪ್ರದೇಶವನ್ನು ನೀರ ಸೌಕರ್ಯದಿಂದ ಸಮೃದ್ಧವಾಗಿಸಿ ಬಂಜರು ಭೂಮಿಯನ್ನು ಹಸನು ಮಾಡಿ ದೇಶದ ಆಹಾರ ಧಾನ್ಯೋತ್ಪಾದನೆಯನ್ನು ಅಧಿಕಗೊಳಿಸಲಾಗುವುದೆಂದು ನಾವು ಆಶೆಯಿಟ್ಟಿದ್ದೆವು. ಈ ಎಲ್ಲಾ ಯೋಜನೆಗಳು ಸಂಪೂರ್ಣಗೊಳ್ಳದೆ ಹೋದರೂ ಕಳೆದ ಎಂಟು ವರ್ಷಗಳಲ್ಲಿ ಅಲ್ಪ ಪ್ರಗತಿಯೂ ಆಹಾರ ಪರಿಸ್ಥಿತಿಯಲ್ಲಿ ತೋರಿಬಂದಿಲ್ಲವೆಂಬುದು ಅಭಿಮಾನಾಸ್ಪದವೆನ್ನಲಾದೀತೆ? ಇದಲ್ಲದೇ ನಾವು ಪರದೇಶೀಯರಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವುದನ್ನೂ ಸಂಪೂರ್ಣವಾಗಿ ನಿಷೇಧಿಸಿಲ್ಲ. ಹೀಗೆ ರಾಷ್ಟ್ರದ ಅಂತರಿಕ ಸಾಧನೆ ಹಾಗೂ ಬಾಹ್ಯ ಆಯಾತಗಳಿಂದಲೂ ದೇಶದ ಆಹಾರಪರಿಸ್ಥಿತಿಯು ಸುಧಾರಣೆಗೊಂಡಿಲ್ಲವಾದರೆ ಇದರಲ್ಲಿ ಏನಾದರೂ ದೋಷವಿರುವುದೆಂಬುದು ಸತ್ಯ. ರಾಜ್ಯ ಹಾಗೂ ಕೇಂದ್ರ ಸರಕಾರಗಳ ಆಹಾರ ಧೋರಣೆಯು ಸಮರ್ಪಕವಿಲ್ಲವೆಂಬುದು ಇದರಿಂದ ಸುನಿಶ್ಚಿತವಿದೆ. ದೇಶದ ವಿವಿಧ ರಂಜ್ಯಗಳಲ್ಲಿ ಕೆಲವೆಡೆ ಆಹಾರ ಪರಿಸ್ಥಿತಿಯು ತೀರ ಕೆಟ್ಟು ಹೋಗಿದೆಯೆಂಬುದಕ್ಕೆ ಉತ್ತರ ಪ್ರದೇಶದ ಉದಾಹರಣೆಯೇ ಸಾಕು. ರಾಜಸ್ಥಾನದಲ್ಲಿ ವಿನಂಚನಾಸ್ಪದ ಪರಿಸ್ಥಿತಿಯಿದೆಯೆಂದು ವರದಿಯಿದೆ. ಕೇರಳದಿಂದಲೂ ಇಂತಹುದೇ ವಾರ್ತೆ ಬಂದಿತ್ತು. ಇನ್ನು ಉಳಿದ ಕೆಲವು ರಾಜ್ಯಗಳಲ್ಲಿ ಆಹಾರ ಸ್ಥಿತಿಯು ಭದ್ರವಾಗಿದೆಯೆಂದು ಹೇಳಲಾಗುತ್ತಿದ್ದರೂ ಅದನ್ನೆಷ್ಟರ ಮಟ್ಟಿಗೆ ನಂಬಬೇಕು ಎಂಬುದು ತಿಳಿದಿಲ್ಲ. ಏನೇ ಇರಲಿ, ಸದ್ಯ ಉತ್ತರ ಪ್ರದೇಶ ರಾಜ್ಯದಲ್ಲಿ ಮಾತ್ರ ಈ ಬಗ್ಗೆ ದೊಡ್ಡದೊಂದು ಕೋಲಾಹಲವೇ ನಡೆದಿದೆ. ಪ್ರಜಾ ಪಕ್ಷದ ನೇತೃತ್ವದಲ್ಲಿ ಸತ್ಯಾಗ್ರಹವು ಆರಂಭವಾಗಿದೆ. ಕೇಂದ್ರ ಲೋಕಸಭೆಯಲ್ಲಿ ವಿರೋಧೀ ಪಕ್ಷಗಳಿಂದ ಈ ಬಗ್ಗೆ ಮೂರು ಬಾರಿ ನಿಲುವಳಿ ಸೂಚನೆಯನ್ನೂ ಮಂಡಿಸುವ ಪ್ರಯತ್ನ ನಡೆಯಿತು. ಈ ಸಾಹಸದಲ್ಲಿ ಅವರು ಜಯಶೀಲರಾಗದೇ ಹೋದರೂ, ಆಹಾರದ ಸ್ಥಿತಿ ನೆಟ್ಟಗಿಲ್ಲವೆಂಬುದನ್ನು ಕೇಂದ್ರ ಸರಕಾರವೂ ಅನುಮೋದಿಸಿದಂತಾಗಿದೆ. ಈ ಹಿಂದೆಯೇ ಲೋಕಸಭೆಯ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿಯೇ ಆಹಾರ ಶಾಖೆಯ ಬಗ್ಗೆ ಸ್ವಪಕ್ಷೀಯರಿಂದಲೇ ವಿವಿಧ ಪ್ರದೇಶಗಳ ಟೀಕೆಯು ಕೇಳಿಬಂದಿತ್ತು. ಆದರೆ, ಅವರಲ್ಲಾಗಲೀ, ಲೋಕಸಭಾಧಿವೇಶನ ಸೇರಿದ ಮೇಲೆ ಲೋಕ ಸಭೆಯಲ್ಲಾಗಲೀ ಸದಸ್ಯರ ವಿವಂಚನೆ, ಭಯಗಳನ್ನು ದೂರ ಮಾಡುವ ತಮ್ಮ ಭಗೀರಥ ಪ್ರಯತ್ನದಲ್ಲಿ ಆಹಾರಶಾಖಾಮಂತ್ರಿ ಶ್ರೀ ಅಜಿತಪ್ರಸಾದ ಜೈನರು ಕೃತಾರ್ಥರಾಗಲಿಲ್ಲವೆಂಬುದನ್ನು ಅಲ್ಲಗಳೆಯುವಂತಿಲ್ಲ. ಇದರಿಂದಾಗಿಯೇ ಲೋಕಸಭೆಯಲ್ಲಿ ಈ ಬಗ್ಗೆ ವಾಗ್ವಾದಗಳು ನಡೆದವೇಳೆ ಪ್ರಧಾನಿ ಪಂಡಿತ ನೆಹೆರೂರವರು ಸ್ವಯಂ ಸರಕಾರವು ಈಗ ಆಹಾರ ಪರಿಸ್ಥಿತಿಯ ಮಹತ್ತಿಕೆಯನ್ನರಿತುಕೊಂಡಿದೆ ಎಂದು ಆಡಬೇಕಾಗಿ ಬಂದಿತು. ಅಂತೂ ದೇಶದಲ್ಲಿ ಆಹಾರದ ಪರಿಸ್ಥಿತಿ ಬಿಗಡಾಯಿಸಿದೆಯೆನ್ನುವುದಂತೂ ಸತ್ಯವೇ ಆಗಿದೆ.

ಈಗ, ಪ್ರಧಾನಿ ನೆಹರೂರವರು ದೇಶದ ಆಹಾರದ ಗಂಭೀರ ಸ್ಥಿತಿಯನ್ನು ಚರ್ಚಿಸುವ ಬಗ್ಗೆ ಸಕಲ ಪಕ್ಷೀಯರ ಸಭೆಯೊಂದನ್ನು ಇಂದು (ದಿನಾಂಕ ೧೧) ಕರೆದಿದ್ದಾರೆ. ಇದರಲ್ಲಿ ವಿವಿಧ ಪಕ್ಷಗಳ ಮೂವತ್ತು—ನಲುವತ್ತು ಪ್ರತಿನಿಧಿಗಳು ಭಾಗವಹಿಸುತ್ತಾರೆ. ಇಂತಹ ಸರಪ್ಪರ ಜಜ್ಞಾಸೆಯು ಅದಾವ ಕಾರಣದಿಂದಲೇ ಆಗಲಿ, ನಡೆಯುವುದು ಸುದೈವವೆನ್ನಬೇಕು. ಏಕೆಂದರೆ, ಈ ಘಟನೆಯಿಂದ, ಜನತೆಯ ತೀವ್ರಾವಶ್ಯಕತೆಗಳತ್ತ ಸರಕಾರದ ಗಮನ ಹರಿಯಿತೆನ್ನುವುದು ಅಭಿಮಾನಾಸ್ಪದ. ಮತ್ತು ಈ ಸಭೆಯು ಇದನ್ನು ಪರಿಹರಿಸಲು ಸುಲಭ ಮಾರ್ಗವನ್ನು ತೋರಿಸಿಕೊಡುವುದೆಂದು ಬಯಸುತ್ತೇವೆ. ಅಲ್ಲದೇ ಇದೇ ರೀತಿಯಲ್ಲಿ ದೇಶದ ಮುಂದಿರುವ ಸಮಸ್ಯೆಗಳೆಲ್ಲವನ್ನೂ ಏಕಪಕ್ಷೀಯವಾಗಿ ತೀರ್ಮಾನಿಸಿ ಸುಮ್ಮನಿರುವುದಕ್ಕಿಂತ, ವಿರೋಧೀ ಪಕ್ಷಗಳ ಅಭಿಮತವನ್ನೂ ಸಂಗ್ರಹಿಸಿ, ಅವನ್ನು ಮಥಿಸಿ, ತನ್ನದೇ ಆದ ಸ್ವತಂತ್ರ ದಾರಿಯನ್ನು ಆರಿಸಿ, ಆದರಲ್ಲಿ ಮುಂಬರಿಯುವುದು ಶ್ರೇಯಸ್ಕರ. ಆಗ, ಪ್ರಜಾ ಪ್ರಭುತ್ವದಲ್ಲಿ ಅನಿವಾರ್ಯವಾಗಿರಲೇ ಬೇಕಾದ ವಿರೋಧೀ ಪಕ್ಷಗಳ ಬೆಂಬಲವೂ ಸರಕಾರಕ್ಕೆ ದೊರೆಕು, ಜನತೆಯ ಹಿತರಕ್ಷಣೆಯನ್ನು ಹೊರುವ ಸರಕಾರದ ಗುರುತರವಾದ ಜವಾಬುದಾರಿಯು ಯೋಗ್ಯ ರೀತಿಯಲ್ಲಿ ಸಾರ್ಥಕಗೊಂಡೀತು ಎಂದು ಹಾರೈಸಬಹುದು. ಅನುಭವದಿಂದ ಕಡೆದು ಬರುವ ಅಭಿಪ್ರಾಯ ಬೆಣ್ಣೆಯಂತೆ ಸತ್ವಯುತವಾಗಿರುವುದು; ಇಂತಹ ಕಾರ್ಯಕ್ರಮಗಳಿಂದ ದೇಶದ ಜನತೆಗೂ ಹೆಚ್ಚಿನ ಪ್ರಯೋಜನ ದೊರೆತೀತು. ಎಂತಲೇ ಪ್ರಧಾನಿಯವರ ಈ ಹೇಳಿಕೆಯನ್ನು ಹಾಗೂ ರಾಜ್ಯಮಟ್ಟದಲ್ಲಿಯೂ ಇದೇ ರೀತಿಯ ಸರ್ವಪಕ್ಷೀಯ ವಿವೇಚನೆಯನ್ನು ಮಾಡಬೇಕೆಂಬ ಅಪೇಕ್ಷೆಯನ್ನು ನಾವು ಸ್ವಾಗತಿಸಿ, ಗಂಡಾಂತರ ಸ್ಥಿತಿಯಲ್ಲಿರುವ ರಾಷ್ಟ್ರದ ಸಮಸ್ಯೆಗಳು ಸುಲಭದಲ್ಲಿ ಬಗೆಹರಿಯಲಿ ಎಂದು ಪ್ರಾರ್ಥಿಸುತ್ತೇವೆ. ವಿರೋಧೀ ಪಕ್ಷಗಳೂ ಈ ದಿಸೆಯಲ್ಲಿ ತಮ್ಮ ಕರ್ತವ್ಯವನ್ನು ಮರೆಯದೆ, ತಮ್ಮ ಅಮೂಲ್ಯಾಭಿಪ್ರಾಯವನ್ನಿತ್ತು ಸರಕಾರೀ ಪಕ್ಷದೊಡನೆ ಸಹಕರಿಸುವ ಅವಶ್ಯಕತೆಯನ್ನು ಎತ್ತಿ ಹೇಳಬಯಸುತ್ತೇವೆ.

ಚಂದಾದಾರರಲ್ಲಿ ವಿನಂತಿ

ಕಳೆದ ತಿಂಗಳಾಂತ್ಯಕ್ಕೆ 'ನವಯುಗ'ದ 37 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 38 ನೇ ವರ್ಷಾರಂಭವಾಗಿರುವುದು ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿ ಕೊಟ್ಟು, ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತೇನೆ. ಚಂದಾ ಹಣವನ್ನು ಯಾವ ತರದ ಖರ್ಚೂ ಇಲ್ಲದೆ 'ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ನವಯುಗದ ಖಾತೆಗೆ ಕಟ್ಟಬಹುದು.

ಮೆನೇಜರ್.

ಪರಿತೀಲಿಸಿ ಖಾತ್ರಿಯಾದುದನ್ನೇ ಪಡಕೊಳ್ಳಿರಿ!

ನಮ್ಮ ಶೋ ರೂಮನ್ನು

ಸಂದರ್ಶಿಸಿ ಸಂಪೂರ್ಣ ಸಂತೃಪ್ತಿ ಹೊಂದಿರಿ!

ಸಂಪೂರ್ಣ ಹೊಸ ಮಾಲು ಹೆಚ್ಚಿನ ಆಕರ್ಷಕಗಳು

ಮನೆಗಳಿಗೆ ಬೇಕಾಗುವ ಎಲ್ಲಾ ತರದ 'ಸ್ಟೈನ್‌ಲೆಸ್' ಸ್ಟೀಲ್ ಪಾತ್ರೆಗಳು

ವೀರಾ ಸ್ಟೀಲ್ ವರ್ಕ್ಸ್ ಪ್ರೈ. ಲಿ. ಬೊಂಬಾಯಿ.

ಇವರ ಅತ್ಯಾಧುನಿಕ ರೀತಿಯ ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ

ದೊಡ್ಡ, ಸಣ್ಣ ಅಳತೆಗಳಲ್ಲಿ, ಹೋಟೇಲು, ಅಸ್ಪತ್ರೆ, ಮನೆಗಳಿಗೆ ಬೇಕಾಗುವ ಮಾಡಿದ ಕುರ್ಚಿಗಳು, ನಿತ್ಯೋಪಯೋಗದ ಬೀರುಗಳು, ಮೇಜುಗಳು, ಸೋಫಾಗಳು ಮತ್ತು ಸೆಲ್ಫುಗಳು, ಸ್ಪ್ರಿಂಗಿನ, ಸರಿಗೆಯ ಮತ್ತು ತೀರ್ಥ ಮಂಚಗಳು

ಇವುಗಳಲ್ಲದೆ ಅನೇಕ ತರದ ಸ್ಟೀಲು ಫರ್ನಿಚರುಗಳು

ಎಲ್ಲಾ ವಿಧದ 'ಜೆಸ್ಕೊ' ಇಲೆಕ್ಟ್ರಿಕ್ ಲೇಂಪ್ ಹೋಲ್ಡರುಗಳು

ರಬಂ ದರದಲ್ಲಿ ದೊರೆಯುತ್ತವೆ.

ಭದ್ರತೆ, ಬಾಳಿಕೆ ಮತ್ತು ವಿಶ್ವಾಸಾರ್ಹತೆಯ ಬಾಗಿಲುಗಳಿಗಾಗಿ 'ಸ್ವಸ್ತಿಕ್ ರೋಲಿಂಗ್ ಶಟ್ಟರ್'ಗಳನ್ನೇ ಪಡೆಯಿರಿ.

ವಿವರಗಳಿಗೆ:

ಶಾಸ್ತ್ರಿ & ಕಂಪೆನಿ

ಹಂಪನಕಟ್ಟೆ, ಮಂಗಳೂರು.

ಸಂಕ್ಷಿಪ್ತ ಸುದ್ದಿಗಳು

ಅಭಿಪ್ರಾಯ ಪರಿವರ್ತನೆಯಿಲ್ಲ

ಕೇರಳದ ಬಗ್ಗೆ ತಾನು ವ್ಯಕ್ತಪಡಿಸಿದ್ದ ಹೀನ ದಿನ ಅಭಿಪ್ರಾಯವನ್ನು ಬದಲಿಸಬೇಕಾದ ಅಗತ್ಯ ಇಂದಿಗೂ ತೋರುತ್ತಿಲ್ಲ ಇತ್ತೀಚೆಗೆ ಅಲ್ಲಿ ನಡೆದ ಘಟನೆಗಳು ಮತ್ತು ಅಲ್ಲಿಂದ ದೊರೆತ ತಿಳುವಳಿಕೆಗಳು ತನ್ನ ಹಿಂದಿದ ಅಭಿಪ್ರಾಯವನ್ನೇ ಮತ್ತಷ್ಟು ಬಲಪಡಿಸುತ್ತವೆ. ಕೇರಳ ಸರಕಾರವು ಉದ್ದೇಶಪೂರ್ವಕವಾಗಿಯೇ ಈ ಪರಿಸ್ಥಿತಿಯನ್ನು ನಿರ್ಮಿಸಿರಲಾರದು; ಆದರೆ, ಅದು ಕೈಗೊಂಡಿರಬಹುದಾದ ಕೆಲವು ಕ್ರಮಗಳ ಪರಿಣಾಮವು ಇದಾಗಿರಬಹುದು. ಕೇರಳದಲ್ಲಿ ವಿರೋಧೀ ಪಕ್ಷಗಳು ಸದಾ ಸರಿಯಾಗಿಯೇ ವರ್ತಿಸಿವೆಯೆನ್ನುವುದು ಅಸಾಧ್ಯವಾದರೂ, ಅಲ್ಲಿನ ಸರಕಾರದ ಮೇಲೆ ಗುರುತರ ಉತ್ತರದಾಯಿತ್ವವಿದೆಯೆನ್ನಬೇಕು. ಜನರಲ್ಲಿ ಸುರಕ್ಷಿತತೆಯ ಸದ್ಭಾವನೆಯು ಜನಿಸುವಂತೆಸಗುವುದು ಸರಕಾರದ ಕರ್ತವ್ಯ. ದರೋಡೆಗಾರರಿಂದ ಪೀಡಿತವಾದ ಪ್ರದೇಶದಲ್ಲಿನ ಅಸುರಕ್ಷಿತತೆಗೂ ರಾಜಕೀಯ ಅಭದ್ರತೆಗೂ ಅಂತರವಿದೆ. ರಾಜಕೀಯ ಅಸುರಕ್ಷಿತತೆಯು ನಿಜವಾಗಿಯೂ ದುರ್ದೈವದ ಪರಿಸ್ಥಿತಿ. ಕೇರಳ ಸರಕಾರಕ್ಕೂ ಇದು ಬೇಕಾಗಿರಲಾರದು. ಆದರೆ, ಅದು ಕೈಗೊಂಡ ಕೆಲಕ್ರಮಗಳ ಪರಿಣಾಮವಾಗಿ ಈ ಪರಿಸ್ಥಿತಿಯು ಉದ್ಭವಿಸಿದ್ದು, ಅದರಿಂದ ವಿಮೋಚಿತವಾದ ಶಕ್ತಿಗಳನ್ನು ನಿಯಂತ್ರಿಸುವುದು ಅಸಾಧ್ಯವಾಗಿದೆ. ಯಾವುದೇ ರಾಜ್ಯ ಸರಕಾರ ದೊಡನೆ ವಾಗ್ಯುದ್ಧ ಹೂಡುವುದು ತನಗೆ ಬೇಡ. ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ಮತ್ತು ಪ್ರಧಾನ ಹಾಗೂ ಮುಖ್ಯ ಮಂತ್ರಿಗಳಲ್ಲಿರಬೇಕಾದ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಬೇಕೆಂದು ತನ್ನ ಇಚ್ಛೆಯಿರುವುದರಿಂದ ಕೇರಳದ ಬಗ್ಗೆ ತನ್ನ ಮಿತಿಯನ್ನು ಮೀರಿ ತಾನೇನೂ ಹೇಳಲಾರೆನೆಂದು ಶ್ರೀ ನೆಹರೂ ತನ್ನ ಪತ್ರಿಕಾ ಪರಿಷತ್ತೊಂದರಲ್ಲಿ ಹೇಳಿದರು.

ಕಲಾವಿದರು ಉಳಿಯಬೇಕೆ?

ಸುಪ್ರಸಿದ್ಧ ಕಾದಂಬರಿಗಾರರೂ ಕಲಾವಿದರೂ ಆದ ಶ್ರೀ ಅ. ನ. ಕೃಷ್ಣರಾಯರ ಐವತ್ತನೆ ಜನ್ಮದಿನ ಹಾಗೂ ಅವರ ಐವತ್ತನೆಯ ಕಾದಂಬರಿ "ವಿಜಯ ವಿದ್ಯಾರಣ್ಯ"ದ ಉದ್ಘಾಟನೋತ್ಸವವು ೭ ನೆ ದಿನಾಂಕದಂದು ಬೆಂಗಳೂರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀ 'ಅನಕೃ' ರವರು "ಕರ್ಣಾಟಕದ ಸಾಹಿತಿಗಳು ಹಾಗೂ ಇತರ ಕಲಾವಿದರು ಇಂದು ದುಸ್ಥಿತಿಯಲ್ಲಿ ಬಾಳುತಿದ್ದಾರೆ. ಸರಕಾರವಾಗಲೀ ಜನತೆಯಾಗಲೀ ಅವರನ್ನು ಲಕ್ಷಿಸಿರುವುದಿಲ್ಲ, ಕರ್ಣಾಟಕದ ರಾಜಧಾನಿಯಲ್ಲಿಯೂ ಕಲಾವಿದರಿಗೆ ಉತ್ತೇಜನ ದೊರೆಯುತ್ತಿಲ್ಲ. ಈಗ ಸರಕಾರವೂ ಜನತೆಯೂ ಒಂದಾಗಿ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸದೆ ಹೋದರೆ, ಮುಂದೆ ಆರೆಯೇ ಇಲ್ಲದಂತಾಗುವುದು. ಪ್ರಖ್ಯಾತ ವೀಣೆ ಶೇಷಣ್ಣನವರ ಮಕ್ಕಳು ಮೊಮ್ಮಕ್ಕಳು ಈಗ ಸ್ಫೋತ್ಸಾಹ ವಿಹೀನರಾಗಿ, ತಮ್ಮ ವೀಣೆಗಳನ್ನೂ ಮಾರಾಟ ಮಾಡಲಾರದೆ ಉಪವಾಸ ವನವಾಸಗಳನ್ನು ಅನುಭವಿಸುತಿದ್ದಾರೆ. ಶಿಲ್ಪಿಗಳೆಲ್ಲರೂ ಗಿರಣಿ ಕೂಲಿಗಾರರಾಗಿ ಹೋಗಿದ್ದಾರೆ. ಕಲಾವಿದರ ಬಗ್ಗೆ ಜನತೆ ಹಾಗೂ ಸರಕಾರವು ಇದೇ ರೀತಿಯ ನಿರ್ಲಕ್ಷ್ಯಭಾವನೆಯನ್ನೇ ಮುಂದುವರಿಸುತ್ತ ಹೋದರೆ, ಇಡಿ ರಾಜ್ಯದಲ್ಲಿ ಒಬ್ಬನೇ ಒಬ್ಬ ಕಲಾವಿದನಾಗಲೀ ಒಂದೇ ಒಂದು ಲಲಿತ ಕಲೆಯಾಗಲೀ ಉಳಿಯಲಾರದು" ಎಂದು ಅಭಿಪ್ರಾಯಪಟ್ಟರು.

ಉಭಯ ಪ್ರಧಾನಿ ಸಮ್ಮೇಳನ

ಪೂರ್ವನಿಶ್ಚಿತ ವೇಳಾಪತ್ರಿಕೆಯಂತೆ, ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿತಂಟೆಯ ಬಗ್ಗೆ ಮಾತುಕತೆ ನಡೆಸುವುದಕ್ಕೋಸುಗ ನವದೆಹಲಿಯಲ್ಲಿ ಉಭಯ ಪ್ರಧಾನರೊಳಗೆ ಮಾತುಕತೆಗಳು ನಡೆಯಲು ಪ್ರಾರಂಭವಾಗಿದೆ. ಈ ಮೊದಲೇ ಉಭಯ ರಾಷ್ಟ್ರಗಳ ಸರಕಾರೀ ಕಾರ್ಯದರ್ಶಿಗಳು ಈ ಬಗ್ಗೆ ಚರ್ಚಿಸಿದ್ದರೂ ಆ ಸಭೆಯಲ್ಲಿ ಸಾಕಷ್ಟು ಪ್ರಗತಿ ಕಂಡುಬಂದಿಲ್ಲ. ಕಾಶ್ಮೀರ ಸಮಸ್ಯೆ ಮತ್ತು ಕಾಲುವೆ ನೀರಿನ ತಂಟೆಯನ್ನು ಈ ಪ್ರಕೃತದ ಸಮ್ಮೇಳನದಲ್ಲಿ ಚರ್ಚಿಸುವರೇ ಇಲ್ಲವೇ ಎಂಬುದು ತಿಳಿದುಬಂದಿಲ್ಲ.

ಚೀನದ ಬಳಿ ಭೀಕರತೆಯೆ?

ಫಾರ್ಮೋಸಾ ದ್ವೀಪದಲ್ಲಿರುವ ಚಿಯಾಂಗ ಕೈಶೇಕರ ಸೈನ್ಯಕ್ಕೆ ಸಹಾಯ ಸಲ್ಲಿಸುವ ಸಲುವಾಗಿ ಅಮೆರಿಕೆಯ ಯುದ್ಧ ನೌಕೆಗಳು ಚೀನ ಕರಾವಳಿಯತ್ತ ಹಾಗುತ್ತಿವೆ ಇದನ್ನನುಲಕ್ಷಿಸಿ ಕೆಂಪು ಚೀನವು ತನ್ನ ಸಮುದ್ರ ಮಿತಿಯನ್ನು ೧೨ ಮೈಲುಗಳವರೆಗೆ ವಿಸ್ತರಿಸಿ ಎಚ್ಚರಿಕೆಯಿತ್ತಿದೆ. ಕಾಲ ಅನುಕೂಲವಾದಾಗ, ಫಾರ್ಮೋಸಾ, ಪೆಸ್ಕೆಡೋರ್ಸ್‌ಗಳನ್ನು ಕೈವಶಮಾಯ್ ಮತ್ತು ಮಾತ್ಸು ದ್ವೀಪಗಳನ್ನು ವಿಮೋಚನೆಗೊಳಿಸಲುತನಗೆ ಅಧಿಕಾರವಿದೆಯೆಂದು ಚೀನವು ಸಾರಿದೆ ಅಲ್ಲದೆ ಪೂರ್ವ ಏಶ್ಯಾದ ಸಮಸ್ಯಾಪರಿಹಾರಕ್ಕಾಗಿವಾತುಕತೆ ನಡೆಸಲು ತಮ್ಮ ಸರಕಾರವು ಸಿದ್ಧವಿರುವುದಾಗಿ ಚೀನೀ ಪ್ರಧಾನಿ ಶ್ರೀ ಚೌ. ಎನ್-ಲಾಯ್ ಸೂಚಿಸಿದ್ದಾರೆ ಹಾಂಕಾಂಗದಲ್ಲಿ ಚೀನೀಯ ವಿಮಾನ, ನೌಕಾ ಪಡೆಗಳು ಸನ್ನದ್ಧವಾಗಿ ನಿಂತಿವೆಯೆಂದೂ ವರದಿಗಳು ಬಂದಿವೆ.

ಭಾರತ ಸರಕಾರದ ಹೊಸ ಸಾಲ

ಭಾರತ ಸರಕಾರವು ೩೦ ಕೋಟಿ ರೂಪಾಯಿಗಳನ್ನು ಪಡೆಯುವುದಕ್ಕಾಗಿ ಸೇಕಡಾ ಮೂರುವರೆಯ ದರದಲ್ಲಿ ಹೊಸ ಸಾಲವೊಂದನ್ನು ಎತ್ತಬೇಕೆಂದು ನಿರ್ಧರಿಸಿದೆ. ಈ ಹಣವನ್ನು ೧೯೬೮ರಲ್ಲಿ ಮರುಪಾವತಿ ಮಾಡಲಾಗುವುದು. ಇನ್ನೊಂದು ೩೦ ಕೋಟಿ ರೂಪಾಯಿಗಳನ್ನು ಪಡೆಯಲು ಮೂರೂವರೆಯ ದರದಲ್ಲಿಯೇ ರಿಸರ್ವ್‌ಬ್ಯಾಂಕ್‌ನವರು ಬಾಂಡುಗಳ ಹೊಸ ಶ್ರೇಣಿಯೊಂದನ್ನು ಕೆಲ್ಪಿಸಬೇಕೆಂಬುದಾಗಿಯೂ ಅದು ನಿರ್ಧರಿಸಿದ್ದು ಇದನ್ನು ೬೭ರಲ್ಲಿ ಹಿಂತಿರುಗಿಸಲಾಗುವುದು.

ಸರಕಾರದ ಮೋರೆ ಕಾಯಬೇಡಿ.

ಒಕ್ಕಲುತನ ಮತ್ತು ಕೈಮಗ್ಗ ನೇಕಾರಿಕೆಗಳು ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬುಗಳು; ಅದರೆ ಸ್ವಾವಲಂಬನೆ ಹಾಗೂ ಸಂಯೋಜನೆಯ ಅಭಾವದಿಂದಾಗಿ ಈ ಎರಡೂ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿ ಸಾಧ್ಯವಾಗಿಲ್ಲ. ಸರಕಾರವು ಪ್ರಗತಿ ಸಾಧನೆಗೆ ಸಹಾಯಮಾಡುವುದು ನಿಜವಾದರೂ, ಎಲ್ಲವಕ್ಕೂ ಸರಕಾರದ ಮೋರೆಯನ್ನೇ ನೋಡುತ್ತ ಕೂರುವ ಪ್ರವೃತ್ತಿ ಬೆಳೆಯಬಾರದು; ಸಹಕಾರ ಹಾಗೂ ಸ್ವಾವಲಂಬನದ ಪ್ರವೃತ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಉಪಮಂತ್ರಿಕ ಶ್ರೀಮತಿ ಲೀಲಾವತಿ ಮಾಗಡಿಯವರು ಜನತೆಗೆ ಉಪದೇಶಿಸಿದರು.

ಅಲ್ಲಲ್ಲಿಯ ಸುದ್ದಿಸಾರ

ಭಾರತೀಯ ವಿದ್ಯಾಭ್ಯಾಸ ಪದ್ಧತಿ—

ತಾ. ೪ರಂದು ಮಂಗಳೂರಿನ ರೋಟರಿ ಕ್ಲಬ್ಬಿನ ಸಭೆಯಲ್ಲಿ ಶ್ರೀ. ಕೆ ವಾಸುದೇವ ಕಾರಂತರು 'ವಿದ್ಯಾಭ್ಯಾಸ'ದ ಕುರಿತು ಮಾತನಾಡುತ್ತಾ, ಭಾರತದಲ್ಲಿನ ಪ್ರಾಚೀನ ವಿದ್ಯಾಭ್ಯಾಸ ಪದ್ಧತಿಯನ್ನು ಅವರೋಕಿಸಿದರೆ ನಾವು ಇಂದು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಕಲಿಯುವುದಕ್ಕಿಂತ ಅವರು ನಮ್ಮಿಂದ ಅನೇಕ ವಿಷಯಗಳನ್ನು ಕಲಿಯಲಿವೆ ಎಂದು ಹೇಳಿದರು. ವಿದ್ಯಾಭ್ಯಾಸವು ಪ್ರಗತಿಹೊಂದಬೇಕಾದಲ್ಲಿ ವಿದ್ಯಾಕ್ಷೇತ್ರದಲ್ಲಿಂದು ಕ್ರಾಂತಿಕಾರಕ ಬದಲಾವಣೆಯಾಗಬೇಕೆಂದರು.

ರೋಟರಿ ಅಧ್ಯಕ್ಷ ಶ್ರೀ. ಕೆ. ವಿಶ್ವನಾಥ ಕಾಮತರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಗಳಾದ ಟಿ. ಎ. ಪೈ, ಎಸ್. ಎನ್. ಕಿನಿ, ಶ್ರೀನಿವಾಸ ಕುಡ್ವ ಮೊದಲಾದವರು ಮಾತನಾಡಿದರು.

ಶ್ರಮಜೀವನದ ಮಹತ್ವ—

ವಿದ್ಯಾವಂತರಾದೊಡನೆ ಶ್ರಮದ ಕೆಲಸವನ್ನು ಮಾಡುವುದು ತಮ್ಮ ಪನತೆಗೆ ಕಡಮೆತಾವು ಅಧೀಕಸುಗಳಲ್ಲಿ ಕೆಲಸಮಾಡುವುದಕ್ಕೆ ಯೋಗ್ಯರು ಎಂಬ ಭಾವನೆಯನ್ನು ವಿದ್ಯಾವಂತ ಯುವಕರು ತ್ಯಜಿಸಿ, ದೇಶದ ಹಾಗೂ ತಮ್ಮ ಒಳಿತಿನ ಹಿತದೃಷ್ಟಿಯಿಂದ ಸರ್ವರೂ ಶ್ರಮ ಜೀವನಕ್ಕೆ ಸಿದ್ಧರಾಗಬೇಕು ಎಂದು ಮುಂತಾಗಿ ಶ್ರೀ ಟಿ ಎ. ಪೈಗಳು ತಾ ೬ ರಂದು ಮಂಗಳೂರು ಸರಕಾರಿ ಕಾಲೇಜಿನ ಹೊಸ ಪದವೀಧರರನ್ನು ಗೌರವಿಸುವ ಕೂಟದಲ್ಲಿ ಭಾಷಣ ಮಾಡಿದರು. ವಿದ್ಯಾರ್ಥಿ ಯೂನಿಯನ್ ಅಧ್ಯಕ್ಷ ಶ್ರೀ ಎ ಸೀತಾರಾಮ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಹಂಗಾಮಿ ಪ್ರಿನ್ಸಿಪಾಲ್ ಶ್ರೀ ಎಸ್. ಆರ್. ಶಾಸ್ತ್ರಿಗಳು ಸ್ವಾಗತ ಮಾತುಗಳನ್ನಾಡಿದರು ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಮಹಮ್ಮದ್ ಹುಸೈನರು ಧನ್ಯವಾದವಿತ್ತರು.

ಕಾಸರಗೋಡಿನ ಭವಿಷ್ಯ— ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕಾಸರಗೋಡಿನ ಸರ್ವ ಪಕ್ಷ ಕನ್ನಡಿಗರ ಸಭೆಯು ತಾ. ೨ರಂದು ಜಿಲ್ಲಾ ಬೋರ್ಡ್ ಸಭಾ ಭವನದಲ್ಲಿ ಶ್ರೀ ಕೆ. ಸುಂದರರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಕಾಸರಗೋಡಿನ ಭವಿಷ್ಯದ ಕುರಿತು ಪರ್ಯಾಲೋಚಿಸಲು ಮಂಗಳೂರಲ್ಲಿ ಮುಂದಿನ ಅಕ್ಟೋಬರ ತಿಂಗಳ ತಾ. ೧೨ರಂದು ಸರ್ವ ಪಕ್ಷ ಸಮ್ಮೇಳನವೊಂದನ್ನು ಜರಗಿಸಲು ಗೊತ್ತು ಮಾಡಲಾಯಿತು.

ಕಾಂಗ್ರೆಸನ್ನು ಬಲಪಡಿಸಿರಿ—

ಮೈಸೂರು ಸರಕಾರದ ಉಪ ಆರ್ಥಿಕ ಮಂತ್ರಿ ಶ್ರೀ ಶಮ್ಮುದ್ದಿನ್‌ರವರು ತಾ. ೩೦ರಂದು ಮಂಗಳೂರು ಕಾಂಗ್ರೆಸ್ ಕಚೇರಿಯಲ್ಲಿ ಮಾತನಾಡುತ್ತಾ, ದೇಶದಲ್ಲಿ ಮುಸಲ್ಮಾನ ಕ್ರಿಶ್ಚಿಯನರಂತಹ ಅಲ್ಪ ಸಂಖ್ಯಾಕರು ತಮ್ಮ ಬದುಕಿನ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವತತ್ವಕ್ಕನುಗುಣವಾಗಿ ನಡೆಯುವಂತಹ ಕಾಂಗ್ರೆಸ್ ಸಂಸ್ಥೆಯನ್ನು ಸೇರಿ ಸಂಸ್ಥೆಯನ್ನು ಬಲಪಡಿಸಬೇಕೆಂದರು.

ಶ್ರೀ ಕೆ. ಕೆ. ಶೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಶ್ರೀಗಳಾದ ಬಿ ವೈ ಕುಂದರ್‌ಬಾಳಿಗ, ಎಸ್. ಎಲ್. ಎ. ಹಾ. ಯು ಪಿ ಮಲ್ಯ, ಡಾ ಕೆ. ಬಾಲಪ್ಪ ಶೆಟ್ಟಿ ಮೊದಲಾದವರು ನಗರದ ಸಮಸ್ಯೆಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು.

ಶ್ರೀಕೃಷ್ಣ ಜಯಂತಿಯುತ್ಸವ—

ಉಡುಪಿಯಲ್ಲಿ ತಾ. ೬ ಮತ್ತು ೨ರಂದು ಪರ್ಯಾಯ ಪೀಠಸ್ಥರಾದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರಿಂದ ಧಾರ್ಮಿಕ ಶುಭಸಂದರ್ಭಗಳಿಗನುಗುಣವಾಗಿ ವೈಭವದಿಂದ ಜರಗಿಸಲ್ಪಟ್ಟಿತು. ಕಲಾಕೌಶಲಗಳನ್ನು ಪ್ರದರ್ಶಿಸಿದ ವೇಷಧಾರಿಗಳೆಲ್ಲರಿಗೂ ಪರ್ಯಾಯ ಸ್ವಾಮಿಗಳವರು ಸಂಭಾವನೆಯನ್ನು ಆಶೀರ್ವದಿಸಿದರು.

ಶೈಲಚಿತ್ರ ಅನಾವರಣ—

ಮಂಗಳೂರು ಪುರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ತಾ. ೨ರಂದು ಸ್ಥಳೀಯ ಮುನಿಸಿಪಲ್ ಮಹಾತ್ಮಾಗಾಂಧಿ ಟೌನ್‌ಹಾಲ್ ಎಲಿಮೆಂಟರಿ ಶಾಲೆಯ ಹಾಲಿನಲ್ಲಿ ಉಡುಪಿ ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳ ಶೈಲಚಿತ್ರ ಅನಾವರಣ ಗೈದರು.

ಚೆರ್‌ಮೆನ್ ಡೆಲಿಗೇಟರಾದ ಶ್ರೀ ಪಿ. ವಿ. ಅಣ್ಣಾಯ್‌ರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ್, ಆರ್. ಫೆರ್ನಾಂಡೀಸ್, ಟಿ. ಎ. ಪೈ, ಡಾ ಸಿ. ಜಿ. ಆಳ್ವಾರ್ ಮೊದಲಾದವರು ಶ್ರೀ ಪೈಗಳ ಕಾರ್ಯಜಾಣ್ಮೆಯನ್ನು ಸ್ತುತಿಸಿ ಮಾತನಾಡಿದರು. ಉದ್ಯಾಪಕರು ಶ್ರೀ ಪೈಗಳ ದಕ್ಷ ಆಡಳಿತವನ್ನು ಕೊಂಡಾಡಿ ಭಾಷಣವಿತ್ತರು.

ಯಕ್ಷಗಾನ ಕೂಟ—

ಉಡುಪಿ ಯಕ್ಷಗಾನ ಕಲಾಮಂಡಲದವರು ತಮ್ಮ ಪ್ರಧಾನ ಕಾರ್ಯಾಲಯದಲ್ಲಿ ತಾ. ೬ ರಂದು ಶ್ರೀಕೃಷ್ಣಜಯಂತಿ ನಿಮಿತ್ತ 'ಶ್ರೀಕೃಷ್ಣ ಸಂಧಾನ'ವೆಂಬ ಯಕ್ಷಗಾನ ಸಮರಂಭವನ್ನು ನುರಿತ ಅರ್ಥಧಾರಿಗಳ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿಸಿದರು.

ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಳಿದಲ್ಲಿ ತಾ. ೧೧ರಂದು ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಶ್ರೀ ಕೆ. ಮಾಸ್ಟರ್ ವಿಷ್ಣುಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಭಾಷಣಗಳಾಗಿ 'ಶ್ರೀಕೃಷ್ಣ ವಿಜಯ'ವೆಂಬ ಯಕ್ಷಗಾನ ತಾಳಮದ್ದಳೆ ಜರಗಿತು.

ವ್ಯಾಪಾರಿಗಳಿಗೆ ಕಿವಿಮಾತು—

ಮೈಸೂರು ಸರಕಾರದ ಆರ್ಥಿಕ ಖಾಯೆಯ ಉಪಸಚಿವ ಶ್ರೀ ಜೆ ಎಮ್. ಶಮ್ಮುದ್ದಿನ್‌ರವರು ತಾ. ೩೦ರಂದು ಕೆನರಾ ಚೇಂಬರ್ ಆಫ್ ಕಾಮರ್ಸ್ ಸಭೆಯಲ್ಲಿ ಮಾತನಾಡುತ್ತಾ ವ್ಯಾಪಾರಿಗಳು ತಾವು ಲಾಭ ಪಡೆಯುವುದರೊಂದಿಗೆ ದೇಶದ ಅಭಿವೃದ್ಧಿಯಲ್ಲಿ ತಮ್ಮ ಭಾಗದ ಕಾರ್ಯವನ್ನು ಮಾಡಲು ಅವಕಾಶ ಒದಗಿಸುವಂತಹ ಚಿಕ್ಕ ಉಳಿತಾಯ ಯೋಜನೆಗಳಿಗೆ ಪ್ರೋತ್ಸಾಹ ನೀಡಬೇಕೆಂದರು.

ದ. ಕ. ಜಿಲ್ಲೆಯ ಸಮಸ್ಯೆಗಳ ಕುರಿತು ನಡೆದ ವಿಚಾರವಿನಿಮಯದಲ್ಲಿ ಶ್ರೀಗಳಾದ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ; ಎಮ್. ಎಲ್. ಎ. ಗಳಾದ ಬಿ. ಆರ್. ಕರ್ಕೇರ, ಯು ಮಂಜಪ್ಪ, ಎಸ್. ಎಸ್. ಡಿ. ಪಿಂಟೊ, ಗಣಪತಿರಾವ್ ಪಂಡಿತ್, ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆ, ಶ್ರೀಗಳಾದ ಸಿ. ಎಸ್. ತಿಮ್ಮಪ್ಪ ಶೆಟ್ಟಿ, ಎಮ್. ಯು ಪಿ. ನಾಯಕ್ ಮೊದಲಾದವರು ಭಾಗವಹಿಸಿದ್ದರು. ಜಿಲ್ಲೆಯ ಅಧ್ಯಾಪಕರ ಹಾಗೂ ಸರಕಾರೀ ಉದ್ಯೋಗಸ್ಥರ ಸಂಕಷ್ಟಗಳನ್ನು ಸಚಿವರ ಗಮನಕ್ಕೆ ತರಲಾಯಿತು.

ಕರ್ಣಾಟಕ ಹೈಸ್ಕೂಲಿನ ವಿಜಯ—

ಅಶೋಕ್‌ನ ಕಾಂಜನ್ ಘಾಟ್ ಫುಟ್‌ಬಾಲ್ ಟೂರ್ನಾಮೆಂಟ್ ಪಂದ್ಯಾಟವು ತಾ. ೧ರಂದು ಬೊಂಬಾಯಿಯ ಓವೆಲ್ ಮೈದಾನದಲ್ಲಿ ನಡೆದು ಅದರಲ್ಲಿ ಕರ್ಣಾಟಕ ಸೈಟ್ ಹೈಸ್ಕೂಲಿನ A ಟೀಮು, ಬೊಂಬೇ ಪೊರ್ಟುಗೀಸ್ ಹೈಸ್ಕೂಲಿನ B ಟೀಮನ್ನು 4. 2. ಗೋಲುಗಳಿಂದ ಸೋಲಿಸಿತು. ಈ ಪಂದ್ಯಾಟವನ್ನು ನೋಡಲು ಸಾವಿರಾರು ಮಂದಿ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ಕಿಟ್ಟಿ ಸೆಟ್ಟಿ 3 ಗೋಲನ್ನು ಅಂ. ಡಿ. ಸೆಟ್ಟಿ ಒಂದು ಗೋಲನ್ನೂ ಹೊಡೆದರಲ್ಲದೆ ಕೆ. ಟಿ. ಸವರ್ಣ, ಸದಾನಂದ ಸಾಲಿಯನ್, ರಾಮ ಸೆಟ್ಟಿ, ಭೋಜ ಸೆಟ್ಟಿ ಇವರು ಆಡುವ ಕೌಶಲತೆಯನ್ನು ನೋಡಿದ್ರಾಕ್ಷಕರು ಹರ್ಷೋದ್ಗಾರ ಮಾಡಿದರಲ್ಲದೆ ನಾಂದ ಇವರಿಗೆ ಒಳ್ಳೆ ಭವಿಷ್ಯವಿದೆಯೆಂದು ಅಭಿಪ್ರಾಯಪಟ್ಟರು.

ನಿಧನ—

ಕುತ್ತಾರು ಗ್ರಾಮದ ಕೇಂಜ ಹೊಸಮನೆ ಜೋಗಿ ಶೆಟ್ಟಿರು ತಮ್ಮ 71ನೆ ವಯಸ್ಸಿನಲ್ಲಿ ದೈವಾಧೀನರಾದರೆಂಬುದು ವಿಷಾದಕರವಾದ. ದಿನಂಗತರು ಕೃಷಿ ವ್ಯವಸಾಯದಲ್ಲಿ ಅನ್ಯರ್ಗ್ಯಾಗಿ ಸ್ವಪ್ರಯತ್ನದಿಂದ ಮೇಲೆಯುತ್ತಿದ್ದ ಜನಪ್ರಿಯ ಆದರ್ಶವ್ಯಕ್ತಿಯಾಗಿದ್ದರಲ್ಲದೆ ತನ್ನ ತಮ್ಮ ಪಡುಬಿದ್ರಿ ಕಾಂಗ್ರೆಸು ಕಾರ್ಯಕರ್ತಕೆ. ಹಿರಿಯಣ್ಣ ಶೆಟ್ಟಿ ಖಾದೀ ಕೆಲಸಕ್ಕೆ ತುಂಬಾ ನೆರವಾಗಿದ್ದರು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಆದರ್ಶ ಜೈನ ಮಹಿಳೆಯರು—

ಲೇಖಕರು ವಿದ್ಯಾಬೊಣ ಶ್ರೀ ಕೆ. ಭುಜಬಲಿ ಶಾಸ್ತ್ರಿಗಳು, ಪ್ರಕಾಶಕರು: ಶ್ರೀಮತಿ ಮಹಾದೇವಿ ಅಮ್ಮನವರು ಕೆರವಾಸ, ಪಡೆಂಗಾಡಿ, ಪುಟಗಳು ೨೯, ಬೆಲೆ. ರೂ. ೦—೧೫—೦.

ಭಾರತದ ಪ್ರಾಚೀನ ಧರ್ಮವಾದ ಜೈನ ಮತಾವಲಂಬಿಗಳಾಗಿ ಅನೇಕ ಮಹನೀಯರೂ ಮಹಿಳೆಯರೂ ಜನ್ಮವಿತ್ತು ಕೀರ್ತಿಶೇಷರಾಗಿದ್ದಾರೆ. ಪುರುಷರಿಗಿಂತ ಸ್ತ್ರೀಯರಿಗೆ ಸಮಾಜದ ಪದ್ಧತ್ಯನುಸಾರವಾಗಿ ತರಬೇತಿತ್ತು ಸಲ್ಲುವ ಸದವಕಾಶಗಳು ತೀರ ಕಡಿಮೆಯಿದ್ದ ಸುದಾತನ ಕಾಲದಲ್ಲಿಯೂ ನಮ್ಮ ಭಾರತದಲ್ಲಿ ಕೆಲವೊಂದು ಸ್ತ್ರೀಯರು ತಮ್ಮ ಮಹತ್ವ್ಯತಿಯಿಂದ ಪುರುಷರನ್ನೂ ಮೆಟ್ಟಿ ನಿಂತಿದ್ದಾರೆನ್ನುವುದು ಅಭಿಮಾನಾಸ್ಪದ. "ಆದರ್ಶ ಜೈನ ಮಹಿಳೆಯರು" ಎಂಬ ಈ ಸಣ್ಣ ಪುಸ್ತಕದಲ್ಲಿ ಅತ್ತಿಮಬ್ಬೆ, ಸತಿಧಾರಿಣಿ, ಪಂಪಾದೇವಿ, ಶಾಂತಲದೇವಿ, ಸೋಮಲಾದೇವಿ, ಜಯಂತಿ, ಅಬ್ಬಕ್ಕದೇವಿ, ಜಕ್ಕಮಬ್ಬೆ ಮತ್ತು ಪನ್ನೆಯರ ಜೀವನ ಕಥೆಯನ್ನು ಸಮಾಜಕ್ಕೆ ಅವರು ಸಲ್ಲಿಸಿದ ಸೇವೆಯನ್ನೂ ಸಂಗ್ರಹಿಸಿಕೊಡಲಾಗಿದೆ. ಈ ವ್ಯಕ್ತಿಗಳ ಜೀವನಚರಿತ್ರೆಯನ್ನು ಕಷ್ಟ ಸಂಗ್ರಹ ಸಾಧ್ಯವೆಂತಲೇ ಕೆಲವೆಡೆ ಅರಿಸಿದ ಮಹಿಳೆಯರ ಬದಲು ಅವಳ ಪರಿಷತೋ ಸಂಬಂಧಿಯೋ ಪ್ರಾಧಾನ್ಯ ಪಡೆದಂತೆ ಗೋಚರವಾಗುತ್ತದೆ. ಅಂತೂ ಆಕ್ಷುತ್ತಮ ಭಾಷೆಯಲ್ಲಿ ಇಂತಹ ಇತಿಹಾಸದ ಮರೆಯಲ್ಲಿದ್ದ ಕೆಲವು ಮಹಿಳೆಯರನ್ನಾದರೂ ಸಾಮಾನ್ಯ ಜನರ ಸಂಮುಖಕ್ಕೂ ತಂದು ನಿಲ್ಲಿಸಿದ್ದಕ್ಕಾಗಿ ಲೇಖಕ ಪ್ರಕಾಶಕರನ್ನು ಅಭಿನಂದಿಸಬೇಕು. ಗ್ರಂಥಕ್ಕೆ ರಾಷ್ಟ್ರಕವಿ ಗೋವಿಂದ ಪೈಯವರ ಮುನ್ನುಡಿಯು ಕಳಸವಿಟ್ಟಂತಾಗಿದೆ. ಗ್ರಂಥದಲ್ಲಿ ಪ್ರಕಾಶಕಿಯವರ ಉದಾರ ಚರಿತ್ರೆಯನ್ನೂ ಜೋಡಿಸಲಾಗಿದೆ. ಅದರೂ ಪುಸ್ತಕದ ಬೆಲೆಯು ಮಾತ್ರ ಇನ್ನೂ ಮೂರುಮಡಿಯಾಗಿ ಗೋಚರಿಸುತ್ತದೆ.

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ ಇದರ ವಾರ್ಷಿಕ ಸಂಚಿಕೆ—

ಸಂಪಾದಕರು: ಶ್ರೀಗಳಾದ ಎಚ್. ಸುಂದರ ರಾವ್, ಎಂ ಎ; ಮತ್ತು ಕೆ. ಎಸ್. ಪರಿಮಾಸ ಭಟ್, ಎಂ. ಎ.

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಎಂಟನೆಯ ವಾರ್ಷಿಕ ಪತ್ರಿಕೆಯನ್ನು ಪ್ರತ್ಯೂರ್ವಕ ಸ್ವಾಗತಿಸುತ್ತೇವೆ. ಈ ಸಂಚಿಕೆಯಲ್ಲಿ ಕಾಲೇಜಿನ ಪ್ರಾಧ್ಯಾಪಕರ ಹಾಗೂ ವಿದ್ಯಾರ್ಥಿಯರ ಅನುಭವಪೂರ್ಣ ಲೇಖನಗಳು ಅತಕವಾಗಿವೆ ಆಂಗ್ಲ, ಕನ್ನಡ, ಹಿಂದೀ ಹಾಗೂ ಸಂಸ್ಕೃತ ಭಾಷೆಗಳಿಗೆ ಇಲ್ಲಿ ಸ್ಥಾನ ಕೊಡಲಾಗಿದೆ. ವಿವಿಧ ವಿಷಯಗಳನ್ನು ಆಧರಿಸಿ ಬರೆದ ಆಂಗ್ಲ ಭಾಷಾ ಲೇಖನಗಳು ಉತ್ತಮರೀತಿಯಲ್ಲೇ ಇರುತ್ತವೆ. ಕನ್ನಡದ ಸ್ಥಾನಮಾನ ವೇರುತ್ತಿರುವಾಗ, ಅದನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಸಂಖ್ಯೆಯೂ ವಿಪುಲವಿರುವಾಗ, ಕನ್ನಡಕ್ಕೆ ಮೂಲಲಿಟ್ಟ ಸ್ಥಾನವಾದರೂ, ಇದ್ದುದರಲ್ಲಿಯೂ ಬೆಳಕುಕಂಡ ವಿಷಯಾದಿಗಳೂ ಸುಧಾರಣಾರ್ಹವಿವೆ. ಹಿಂದೀಯಲ್ಲಿ ಕೇವಲ ಒಬ್ಬ ವಿದ್ಯಾರ್ಥಿಯ ಮತ್ತು ಸಂಸ್ಕೃತದಲ್ಲಿ ಬರೇ ಓರ್ವ ಪ್ರಾಧ್ಯಾಪಕರ ಬಂದೊಂದು ಕೃತಿಗಳು ಮಾತ್ರವಿರುವುದು ಗೌರವಾಸ್ಪದವಲ್ಲ, ಇಂಗ್ಲಿಷಿನ ಸ್ಥಾನಮಾನಗಳು ಕಡಿಮೆಯಾಗಬೇಕೆಂಬಾಗ ಬೇಕೇಯು ಭಾಷೆಗಳ ಪ್ರಾಧಾನ್ಯವೇರುತ್ತಿರುವಾಗ, ಅವಕ್ಕೂ ಇಂಗ್ಲಿಷಿನಷ್ಟೇ ಅವಕಾಶವನ್ನು ಕೊಡುವುದು ಸೂಕ್ತವಲ್ಲವೆನ್ನಿ? ಸುಮಾರು ನೂರು ಪುಟಗಳನ್ನು ಇಂಗ್ಲಿಷ್ ಭಾಷೆಗೆ, ೫೬ ಪುಟಗಳನ್ನು ಕಾಲೇಜಿನ ವರದಿಗೆ ಒದಗಿಸಿರುವಾಗ, ೫- ಪುಟಗಳನ್ನು ಉಳಿದ ಮೂರು ಭಾಷೆಗಳಿಗೆ ಕೊಟ್ಟಿರುವುದು ಸಮಂಜಸವೆಂದು ಹೇಳುವಂತಿಲ್ಲ ಕಾಲೇಜಿನ ವರದಿಯು ವಿವರವಾಗಿದ್ದು, ಪ್ರಗತಿದಾಯಕವಿರುತ್ತದೆ. ವಿವಿಧ ಬಗೆಯ ಕಾಲೇಜಿನ ಅಂಕಿಅಂಶ ಹಾಗೂ ಬಾಹ್ಯ ಚಿತ್ರಪಟಗಳು ಮನಚೇತೋಹಾರಿಗಳಾಗಿವೆ ಬಾಹ್ಯ ಸೌಂದರ್ಯವೂ ಉನ್ನತ ಮಟ್ಟದ್ದಿದೆ ಪತ್ರಿಕೆಯು ಕೇವಲ ಬಾಹ್ಯಾಂಗ ಸುಂದರವಾಗಿದೆ ಪ್ರತ್ಯೇಕ ವಿಭಾಗವಲ್ಲೂ ಗೌರವಪೂರ್ಣವಾಗಿ ಹೊರಬರುವಂತಾದರೆ, ಕೀರ್ತಿಕ್ಕೆ ನವಿಲುಗರಿ ಅರಿಸಿದಂತಾಗುವುದು. ಇನ್ನು ಸುಂದರ ವರ್ಷಗಳಲ್ಲಿ ಈ ಕೊರತೆಗಳನ್ನು ತುಂಬಿಸಿ ಸರ್ವಾಂಗ ಸುಂದರವಾಗಿ ಗೌರವಯುಕ್ತವಾಗಿ ಪತ್ರಿಕೆಯು ಪ್ರಕಾಶಕ್ಕೆ ಬರುವಂತಾಗಲೆಂದು ಬಯಸುತ್ತೇವೆ.

ಅಖಿಲಕರ್ನಾಟಕ ಮಕ್ಕಳ ಕೂಟ—

ಬೆಂಗಳೂರು-೨ ಇದರ ರಜತಮಹೋತ್ಸವ ನಡೆದು ಮೂರು ವರ್ಷಗಳ ಹಿರಿಯ ಸಮಗತವಾಗಿದೆ ಕೂಟದ ಕಾರ್ಯಕಲಾಪಗಳು ಇನ್ನೂ ಹೆಚ್ಚಬೇಕು "ಅಖಿಲಕರ್ನಾಟಕ" ನೆಂಬ ದೊಡ್ಡ ಹೆಸರನ್ನು ತೊಟ್ಟು ಬೆಂಗಳೂರಲ್ಲಿ ಮಾತ್ರ ಕಾರ್ಯಮಗ್ನರಾಗಿ ಕುಳಿತಿರದೆ, ತನ್ನ ಶಾಖೆಯನ್ನು ಕರ್ನಾಟಕದ ಮೂಲೆಮೂಲೆಯಲ್ಲೂ ತೆರೆದು ಬಾಲ ಜನಾಂಗದ ಉನ್ನತಿಯನ್ನು ಬಯಸುವಂತಾಗಬೇಕು; ಆಗ, ಈಗ ಕುಗ್ಗುತ್ತ ಬಂದಿರುವ ಆರ್ಥಿಕ ಸ್ಥಿತಿಗತಿಯೂ ಹಿಗ್ಗಬಹುದು ಸದಸ್ಯರ ಸಂಖ್ಯೆಯೂ ಏನೇನೂ ಸಾಲದೆಂದು ಕಂಡುಬರುತ್ತಿದೆ. ಈ ರೀತಿಯಾಗುವುದಕ್ಕೆ ಕೂಟದ 'ಮೂಲ ಸಂವಿಧಾನವು' ಕಾರಣವಾದರೆ, ಅದನ್ನು ವಿಶಾಲ ದೃಷ್ಟಿಯಿಟ್ಟು ತಿದ್ದುಪಡಿ ಮಾಡಬೇಕು; ಈ ಕಾರಣವಲ್ಲವಾದರೆ, ಕೂಟವು ತನ್ನ ಕಾರ್ಯಕ್ಷೇತ್ರವನ್ನೂ ಸೇವೆಯನ್ನೂ ವಿಸ್ತರಿಸಬೇಕೆಂದು ಇಲ್ಲಿ ಸೂಚಿಸಬಯಸುತ್ತೇವೆ

ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ—ಕಾಲೇಜ ಪತ್ರಿಕೆ, ೧೯೫೭-೫೮. ಪ್ರಧಾನ ಸಂಪಾದಕರು: ಡಾ. ಕೆ. ರಾಮಾಚಾರ್, ಎಲ್. ಐ ಎಮ್. (ಮದ್ರಾಸ್).

ಕಾಲೇಜಿನ ವಿದ್ಯಾರ್ಥಿ ಸಂಘದಿಂದ ಹೊಸತಾಗಿ ಬೆಳಕುಕಂಡ ಈ ಪತ್ರಿಕೆಯು ಅವಸರದ ಕೃತಿಯೆಂದು ಸಂಪಾದಕೀಯದನ್ನು ಓದಬೇಕೇ ಮುಖಲೆಳ್ಳೆವನ್ನು ಕಂಡೇ ಹೇಳಬಹುದು. ಈ ಸಂಪುಟದಲ್ಲಿ ಇಂಗ್ಲಿಷ್, ಕನ್ನಡ, ಹಿಂದಿ ಹಾಗೂ ತೆಲುಗು ಭಾಷೆಗಳಲ್ಲಿ ಆಯುರ್ವೇದದ ವಿವಿಧ ವಿಷಯಗಳ ಬಗ್ಗೆ ಪ್ರಕಾಶ ಬೀರುವ ಲೇಖನಗಳಿವೆ. ವಿದ್ಯಾರ್ಥಿಗಳ ಸ್ವಾನುಭವಗಳೂ ಇರುತ್ತವೆ ಕಾಲೇಜಿನ ವಿವಿಧ ಚಟುವಟಿಕೆಗಳ ವಿವರವೂ ಚಿತ್ರಗಳೂ ಇರುವುವು. ಪಂಡಿತ ತಾರಾನಾಥರ ಜೀವನೇತಿಹಾಸವು ಅವರ ಭಾವಚಿತ್ರವೂ ಇದರಲ್ಲಿವೆ. ಈ ಸಂಪುಟದಲ್ಲಿ ಅಚ್ಚಿನ ದೋಷಗಳು ವಿಪುಲವಾಗಿವೆಯೆಂದು ಸಂಪಾದಕರು ಬರೆದ ಅಡಿಟಿಪ್ಪಣಿಯಲ್ಲಿಯೇ ತಪ್ಪು ಇದೆಯೆನ್ನುವಾಗ ಒಳಗಿನ ವಿಷಯಗಳ ಅಚ್ಚಿನಲ್ಲಿರುವುದು ಹೆಚ್ಚಲ್ಲ ಮುಖ್ಯವಾಗಿ ಇಂತಹ ಶಾಸ್ತ್ರ ಪ್ರಧಾನ ಸಂಪುಟಗಳಲ್ಲಿ ಅಚ್ಚಿನ ದೋಷಗಳು ತುಂಬಿದ್ದರೆ, ವಿಷಯ ಹೇಗೆ ಅರ್ಥವಾಗಬೇಕು? ಅನುದರಿಂದ ಈ ಕಡೆಗೆ ಇನ್ನು ಮುಂದಾದರೂ ಅವಶ್ಯ ಗಮನವೀಯುವುದು ಅವಶ್ಯಕವೆಂದು ಬೇರೆ ಹೇಳಬೇಕೆ?

—ಗೋರಾ.

ಸಾದರ ಸ್ವೀಕಾರ

೧ ಕಸ್ತೂರಿಯ ತುತ್ತೂರಿ (ಸನ್ಮನದ ಗೀತಾವಳಿ). ಪುಟ. ೧೪. ಬೆಲೆ. ೯ ನಯೇ ಪೈಸೆ.

೨. ದೀಪ ಮಾಲೆ (ಮಕ್ಕಳ ಕವನ ಸಂಕಲನ). ಪುಟ; ೨೬ ಬೆಲೆ: ೧೯ ನ. ಪೈ

ಮೇಲಿನ ಎರಡೂ ಕಿರು ಹೊತ್ತಗೆಗಳ ಲೇಖಕರು: ಸದಾನಂದ, ಸೂಡ ಪ್ರಕಾಶಕರು: ರಾಜಕಮಲ್ ಸಾಹಿತ್ಯ, ಮೋಸ್ಟ್; ಸೂಡ, ದ. ಕ.

ಇದೀಗ ಬಿಕರಿಗೆ ಸಿದ್ಧವಾಗಿದೆ

ಶ್ರೀ ನಚಿಕೇತರವರ

"ಸ್ನೇಹಸ್ತ್ರೀ"

(ಸಮಾಜ ಸುಧಾರಕ ಕಾದಂಬರಿ)

ದ್ವಿವರ್ಣ ರಕ್ಷಾಕವಚ ಬೆಲೆ ರೂ.1=25

ವಿವರಗಳಿಗೆ:

ಗಾಯತ್ರಿ ಪ್ರಕಾಶನ

ಚಾಮುಂಡಿಪುರಂ, ಮೈಸೂರು-1.

NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

The Vijaya Bank Ltd: Udipi.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈದಿನ ಮೇಲೆ ಸಾಲ ಪಡೆಕೊಂಡು, ಕ್ಲಪ್ತವಾಯಿದೆಗೆ ಅಕಲುಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವದರಿಂದಲೂ ಸದ್ರಿ ಸಾಲವನ್ನು ಒರವಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಿದ್ದಲೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಜೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 27 9—58ನೇ ಶನಿವಾರ ಮಧ್ಯಾಹ್ನ ೧ ಗಂಟೆ 2ಕ್ಕೆ ಸರಿಯಾಗಿ ಆಥವಾ ಬ್ಯಾಂಕಿನ ಯುಕ್ತಕಂಡ ಇತರ ಬೇರುವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-6-958 ವರೆಗೆ Rs N P.
101/53	ಮುದ್ದಣ್ಣ ಸೆಟ್ಟಿ, ನರಸಿ ಸೆಟ್ಟಿಯರ ಮಗ, ಶಿವಳ್ಳಿಗ್ರಾಮ, ಇಂದ್ರಾಳಿ, ಪೋಸ್ಟು ಉಡುಪಿ.	60 — 98
490/56	ಬಿ ಕೆ. ಸುಂದರ ಸೆಟ್ಟಿ ಪಟೇಲ್ ಬೊಮ್ಮರಬೆಟ್ಟುಗ್ರಾಮ, ಪೋಸ್ಟು ಹಿರಿಯಡ್ಕ.	112 — 37
504/56	ಗಿರಿಯಪ್ಪ ಆಚಾರಿ, ರುಕ್ಮಯ ಆಚಾರಿ ಮಗ, ಅರೂರು ಗ್ರಾಮ, ಪೋಸ್ಟು ಕುಂಜಾಲು.	40 — 00
127/57	ಯನ್. ಎ ಮಹಮ್ಮದ್, ಅಬ್ದುಲ್ಲರ ಮಗ, ಮರ್ಚಂಟ್ ಸಂತೆಕಟ್ಟೆ, ಉಡುಪಿ.	45 — 74
227/57	ಸಿ ಪಿ ಮಹಮ್ಮದ್, ಅಬ್ದುಲ್ ರಹಿಮಾನರ ಮಗ ಹೊಗೆ ಸೊಪ್ಪು ವ್ಯಾಪಾರಿ, ಸಂತೆಕಟ್ಟೆ, ಉಡುಪಿ.	67 — 19
303/57	ಬಿ ಕೆ ಸುಂದರ ಸೆಟ್ಟಿ, ಪಟೇಲ್, ಬೊಮ್ಮರಬೆಟ್ಟು ಗ್ರಾಮ, ಪೋಸ್ಟು ಹಿರಿಯಡ್ಕ.	206 — 18
319/57	ರಾಜು ಸೆಟ್ಟಿ, ಅಂಠಯ್ಯ ಸೆಟ್ಟಿ ಅಳಿಯ, ಸಂಜೂರು ಚತ್ರ ಬೈಲು, ಪೋಸ್ಟು ಚತ್ರಬೈಲು.	109 — 76

Udipi 8—9—1958. K. Kristappa Shetty, B. Com., Agent.

ಏಲಂ ನೋಟೀಸು

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್ ಶಿರ್ವಾ, ದ. ಕ.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡಿಸಿದ ಬೇಂಕಿನಿಂದ ಚಿನ್ನಾಭರಣಗಳ ಈದಿನ ಮೇಲೆ ಪಡೆಕೊಂಡ ಸಾಲವನ್ನು ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸಮಾಧಾನ ಮಾಡದೆ ಇರುವುದರಿಂದ, ಸದರಿಯವರಿಗೆ, ಆ ಸದರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದೆ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 18—9—58ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 20 9—58ನೇ ಮಧ್ಯಾಹ್ನ ಘಂಟೆ 12ಕ್ಕೆ ಯಾ ನಮಗೆ ಯುಕ್ತಕಂಡ ಕಾಲಕ್ಕೆದಲ್ಲಿ ಪುನ: ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರುಪ್ಯಾ Rs N.P.
32/1130	ಕಾಶ್ಯ ಪೂಜಾರಿ, ಕಾಂತಪ್ಪ ಪೂಜಾರಿ ಅಳಿಯ, ಕೋಡು ಬಾಕ್ಯಾರ್, ಪೆರ್ಗಡೆ, ಪೋಸ್ಟು, ಶಿರ್ವಾ.	80 00
33/ 335	ಕಿಸ್ತು ದಿಮೆಲ್ಲೊ, ಅಲೆಕ್ಸ್ ದಿಮೆಲ್ಲೋರ ಮಗ, ಪೋಸ್ಟು, ಬೆಳ್ಳಿಮ್ಣು.	16 00
33/1042	ಲಿಯೋ ಅಲ್ಫ್ರಾಂಸಾ, ಇನಾಸ್ ಅಲ್ಫ್ರೋಸರ ಮಗ ಪಳೆ ಇಗರ್ಜಿಯ ಬಳಿ ಪೋಸ್ಟು ಶಿರ್ವಾ.	16 00
33/1500	ಕುಡ್ಡು ಸೆಟ್ಟಿ, ಬೂಬು ಸೆಟ್ಟರ ಅಳಿಯ, ಕಲತ್ತೂರು, ಪೇಟೆ ಮನೆ, ಪೋಸ್ಟು, ಪಾದೂರು.	10 00
33/1757	ರಾಮ ನಾಯ್ಕ, ಶ್ಯಾಮ ನಾಯ್ಕರ ಮಗ, ಕಡಂಬು, ಮೇಲ್ಮನೆ, ಪೋಸ್ಟು, ಮಟ್ಟಾರ್.	45 00
33/2551	ಸಲ್ವಡೋರು ಮಸ್ಕರೇನ್ಹಸ್, ಅಲೆಕ್ಸ್ ಮಸ್ಕರೇನ್ಹಸ್‌ರ ಮಗ, ಕಾಡಿಕರಟ್ಟು, ಪೋಸ್ಟು, ಶಿರ್ವಾ.	25 00

Office of the Catholic Bank Ltd., Shirva, 8—9—1958. E. D'CUNHA. Agent.

ಯೋಜನಾ ಪ್ರಗತಿ

ರಿಹಂದ ಅಣೆಕಟ್ಟು ಭವಿಷ್ಯದ ಸ್ಮಾರಕವಿದೆ

ಅದು ಪೂರ್ಣಗೊಂಡಾಗ ಬಲಸೆ ಹೋದ ನಾಡಿಗರು ಮರಳಿ ಬಾರದುಳಿಯರು.

ಉತ್ತರ ಪ್ರದೇಶದ ಪೂರ್ವಭಾಗವು ಶುಷ್ಕವಾಗಿದೆ. ಮಹಾಪೂರ ಮತ್ತು ಒಣಗಿದ ಭಾಗವೆಂಬುದು ಇಲ್ಲಿಯ ಮಟ್ಟಿಗೆ ಹೊಸ ವಿಷಯವೇನಲ್ಲ. ಮೊದಲು ಜನರು ಇದರ ಒಗ್ಗೆ ಚಿಂತಿಸುತ್ತಿರಲಿಲ್ಲ. ಕಾರಣ ಕಡಿಮೆ ಜನಸಂಖ್ಯೆಯೆನ್ನಬಹುದು. ವರ್ಷಕ್ಕೊಂದು ಬೆಳೆ ಅಲ್ಲಿ ಬೆಳೆಯುತಿತ್ತು. ಹಿಂದ ಇಲ್ಲಿಯ ಮಣ್ಣು ಬಹಳ ಫಲವತ್ತಾಗಿದ್ದರೂ ಈಗ ಅದು ಸಾರವನ್ನು ಕಳಕೊಂಡಿದೆ. ಇಲ್ಲಿ ಯಾವುದೇ ಜಲಮಾರ್ಗವಿರಲಿಲ್ಲ. ವಿಶೇಷ ಬರಗಾಲದಿಂದಾಗಿ ಇಲ್ಲಿ ಒಣಭಾಗ ತುಂಬಿದೆ. ಇಲ್ಲಿ ಜಮೀನ್ದಾರಿಯನ್ನು ನಿರ್ಮೂಲಿಸಿ ಒಕ್ಕಲಿಗೆ ಆಸ್ತಿಯನ್ನು ಕೊಟ್ಟರೂ ಆತನು ಕೃಷ್ಟಿಸಟ್ಟುಕೊಂಡಿಲ್ಲ. ಜನರು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಹೋಗುತ್ತಿದ್ದಾರೆ. ಹಸಿವೆಯಿಂದ ಕಂಗಾಲಾಗಿದೆ ಇಲ್ಲಿಯ ಜನತೆ.

ಮಿರ್ಜಾಪುರದ ಸಬ್ ಡಿವಿಜನಿನ್ನೊಂದು ಭಾಗವು ಬಂಡೆಗಳಿಂದಲೂ, ಕಾಡುಗಳಿಂದಲೂ ಕೂಡಿದೆ. ಸಂಚಾರಕ್ಕೆ ಬೇಕಾದ ಅನುಕೂಲತೆಗಳು ಇಲ್ಲಿಲ್ಲ. ರಿಹಂದ್ ಮತ್ತು ಸೋನಾಯಿಂಬ ಎರಡು ನದಿಗಳಲ್ಲಿ ಹರಿಯುತ್ತವೆ. ಮನ್‌ಸೂನಿನ ಸಮಯದಲ್ಲಿ ಈ ನದಿಗಳಲ್ಲಿ ನೆರೆಯು ಬರುತ್ತದೆ. ಆದರೆ ಉಳಿದ ದಿನಗಳಲ್ಲಿ ಅವು ಒಣಗಿಕೊಂಡಿರುತ್ತವೆ.

ರಿಹಂದ ನದಿಯ ಮೇಲೆ ೩೫೫ ಅಡಿ ಉದ್ದ ಮತ್ತು ೨೯೬ ಅಡಿ ಎತ್ತರದ ಅಣೆಕಟ್ಟನ್ನೂ, ಒಂದು ವಿದ್ಯುಚ್ಛಕ್ತಿ ಕೇಂದ್ರವನ್ನೂ ನಿರ್ಮಿಸುತ್ತಾರೆ; ಇದಕ್ಕೆ ೪೫ ಕೋಟಿ ೨೬ ಲಕ್ಷ ರೂಪಾಯಿ ಖರ್ಚು ತಗಲಬಹುದೆಂದು ಅಂದಾಜುಮಾಡಲಾಗಿದೆ. ಇಲ್ಲಿ ೨೮೦ ಚದರ ಮೈಲಿನ ಒಂದು ಜಲಾಶಯ ನಿರ್ಮಿಸುತ್ತಾರೆ. ಅದು ಪ್ರಪಂಚದ ಎಲ್ಲಾ ಅಣೆಕಟ್ಟುಗಳ ಎತ್ತರವನ್ನು ಮೀರಿಸುವುದು. ಭಕರಾ ಅಣೆಕಟ್ಟಿ ನೆತ್ತರವು ಇದನ್ನು ಮೀರಿಸಬಹುದಾದರೂ ವಿಸ್ತೀರ್ಣವು ಮೀರಿಸಲಾರದು. ಇದರ ನಿರ್ಮಾಣಕ್ಕೆ ೬೨೮ ಕೋಟಿ ಘನ ಅಡಿ ಕಾಂಕ್ರೀಟು ಬೇಕಾಗುವುದು.

ಇಲ್ಲಿಯ ವಿದ್ಯುಚ್ಛಕ್ತಿ ಕೇಂದ್ರದಲ್ಲಿ ೩ ಲಕ್ಷ ಕಿಲೋವಾಟ್ ವಿದ್ಯುತ್ ಉತ್ಪಾದನೆಯಾಗುವುದು. ಇದರಿಂದ ತಯಾರು ಮಾಡಿದ ವಿದ್ಯುತ್ ಯುಪಿಟಿನಕ್ರಯವು ೨ ನಯೇ ಪೈಸೆಯಾಗುವುದು. ಇದರಿಂದ ಭಾರತದಲ್ಲಿ ಅತೀ ಕಡಿಮೆ ಕರ್ಚಿನಲ್ಲಿ ವಿದ್ಯುತ ದೊರೆತಂತಾಗುವುದು.

ಈ ಅಣೆಕಟ್ಟನ್ನು ಮಿರ್ಜಾಪುರ್ ಜಿಲ್ಲೆಯ 'ಪಿಪರೀ' ಯೆಂಬಲ್ಲಿ ಕಟ್ಟುತ್ತಾರೆ. ೨೦ ವರ್ಷಗಳ ಹಿಂದೆ ರಿಹಂದ್ ಅಣೆಕಟ್ಟಿನ ಕಲ್ಪನೆ ಅಲ್ಲಿಯ ಜನರಲ್ಲಿ ಮೂಡಲಾರಂಭವಾಗಿತ್ತು. ೧೯೪೫ರಲ್ಲಿ ಅದಕ್ಕಾಗಿ ಸರ್ವೆಯಾಯಿತು. ಸ್ವಾತಂತ್ರ್ಯ ಸಿಕ್ಕಿದ ಒಂದೆರಡು ವರ್ಷಗಳಲ್ಲಿ ಯೋಜನಾ ಕಾರ್ಯಕ್ಕೆ ಹಣ ಮಂಜೂರಾಯಿತು.

೧೯ನೇ ಜುಲಾಯಿ ೧೯೫೫ರಲ್ಲಿ ಪ್ರಧಾನ ಮಂತ್ರಿ ಶ್ರೀ ನೆಹರುರವರು 'ಪಿಪರಿ'ಗೆ ಆಗಮಿಸಿ ಈ ರೀತಿಯಾಗಿ ಹೇಳಿದರು— 'ಈ ಕಾರ್ಯವನ್ನು ನೆರವೇರಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಈ ಅಣೆಕಟ್ಟಿನಿಂದ ಈ ಪ್ರದೇಶದ ಅಭಿವೃದ್ಧಿಯಾಗುವುದಿಲ್ಲವೆ? ಯಾವ ವಸ್ತುಗಳು ನಮ್ಮ ಜನರಲ್ಲಿರಲೆಂದು ನಾವು ಅಶಿಸುತ್ತೇವೋ ಆ ವಸ್ತು ಅವರಲ್ಲಿರಬಿರುವುದರಿಂದ ಅವರು ಬಡವರಾಗಿದ್ದಾರೆ. ಯೋಜನಾ ಕಾರ್ಯವನ್ನು ರೂಪಿಸಿದ ಇಂಜಿನಿಯರರು ಈ ಅಣೆಕಟ್ಟನ್ನು ಮುಂದಿನ ಜನಾಂಗಕ್ಕೆ ಸ್ಮಾರಕವಾಗುಳಿಯುವಂತೆ ನಿರ್ಮಿಸಲಿ.' ಎಂದು ಹಾರೈಸಿದರು.

ಈ ಅಣೆಕಟ್ಟಿಗೆ ಬೇಕಾಗುವ ಸಿಮೆಂಟನ್ನು ಪೂರೈಸುವ ಉದ್ದೇಶದಿಂದ ೪೫ ಕೋಟಿ ರೂಪಾಯಿ ಕರ್ಚುಮಾಡಿ ಚಿಕ್ಕ ಸಿಮೆಂಟು ಕಾರ್ಖಾನೆಯೊಂದನ್ನು ತೆಗೆದರು. ಅದೇ ಸಮಯ ಸೋನಾ ನದಿಯ ಮೇಲೆ ೩೩೦೦ ಅಡಿ ಉದ್ದದ ಚಿಕ್ಕ ಅಣೆಕಟ್ಟನ್ನು ಕಟ್ಟಿದರು ೧೯೫೬ರ ವರೆಗೆ ಕೆಲಸ ಭರದಿಂದ ಸಾಗಿತು. ಅಣೆಕಟ್ಟನ್ನು ಕಟ್ಟುವ ಸ್ವಳದವರೆಗೆ ೫೦ ಮೈಲು ಉದ್ದದ ರಸ್ತೆಯ ನಿರ್ಮಾಣಮಾಯಿತು. ನೀರಿನ ಧಾರೆಯನ್ನು ಕೊಂಡೊಯ್ಯುವ ಸುರಂಗಗಳೂ, ಜಲೋಪರೋಧಗಳ ನಿರ್ಮಾಣವಾದುವು.

ಅಣೆಕಟ್ಟಿನ ಕಾಯವು ಈಗ ಪೂರ್ಣವಾಗಿದೆ. ಆದರ ತಯಾರಿಗೆ ಬೇಕಾದ ಸಾಮಾನುಗಳ ಸಿದ್ಧ ಯಾಗಿದೆ. ರಿಹಂದ ನದಿಯ ಮೇಲೆ ಅಣೆಕಟ್ಟಿನ ಹತ್ತಿರ ೬೬೦ ಅಡಿ ಉದ್ದದ ಸೇತುವೆಯ ನಿರ್ಮಾಣವಾಗಿದೆ.

ಮನ್‌ಸೂನ್ ದಿನಗಳಲ್ಲಿ ಕೆಲಸ ಮುಂದುವರಿಸಲು ಅಲ್ಲಿ ಅಸಾಧ್ಯವಾಗಿದೆ. ಪ್ರತಿ ವರ್ಷ ೨೧೦ ದಿನಗಳು ಮಾತ್ರ ಕೆಲಸ ಮಾಡಬಹುದಾಗಿದೆ. ಹೀಗೆ ಕಾರ್ಯ ಮುಂದೊತ್ತಿದರೆ ೧೯೫೯ಕ್ಕೆ ಜಲಾಶಯ ತುಂಬಿಸುವ ಕಾರ್ಯ ನಡೆದು ೧೯೬೦ಕ್ಕೆ ಅದು ಪೂರ್ತಿಯಾಗಬಹುದು. ೧೯೬೧ರಲ್ಲಿ ಅಣೆಕಟ್ಟಿನ ವಿದ್ಯುತ್ ಕೇಂದ್ರದ ಕಾರ್ಯಗಳು ಕೊನೆಗೊಳ್ಳಬಹುದು.

ನೆನೆಸಿದಂತೆ ಕಾರ್ಯವು ಮುಂದೊತ್ತುತ್ತ ಹೋದರೆ ೧೯೬೧ರಲ್ಲಿ ಪೂರ್ವ ಉತ್ತರ ಪ್ರದೇಶದಲ್ಲಿ ೨ ಲಕ್ಷ ಎಕ್ರೆ ಭೂಮಿಗೆ ನೀರು ದೊರೆತಂತಾಗುವುದು. ಮತ್ತು ೨ ಲಕ್ಷ ಟನ್ ಧಾನ್ಯಗಳ ಬೆಳೆಯು ಹೆಚ್ಚುವುದು. ಬೀಹಾರಿಗೂ ಈ ಅಣೆಕಟ್ಟಿನಿಂದ ನೀರನ್ನು ಹಂಚಲಾಗುವುದು. ಅಲ್ಲಿ ೫ ಲಕ್ಷ ಎಕ್ರೆ ಭೂಮಿಗೆ ನೀರು ದೊರೆತು ೧ ಲಕ್ಷ ಟನ್ ಉತ್ಪತ್ತಿ ಹೆಚ್ಚುವುದು. ವಿದ್ಯುಚ್ಛಕ್ತಿಯಿಂದ ಸಿಮೆಂಟು, ಕಾಗದ ಮತ್ತು ಅಲ್ಯುಮಿನಿಯಂ ಉದ್ಯೋಗಗಳ ವಿಕಾಸ ಹೊಂದುವುದು. ಗುಡಿ ಕೈಗಾರಿಕೆಯು ಕೂಡಾ ಇದರಿಂದ ವಿಕಾಸಗೊಳ್ಳುವುದು. ಮಧ್ಯ ಪ್ರದೇಶದ ಕಾರ್ಖಾನೆಗಳಿಗೆ ಇದನ್ನೊದಗಿಸುವುದರಿಂದ ಕಾತುತ್ಪತ್ತಿಯ ಸದುಪಯೋಗಗೊಳ್ಳುವುದು. ಕಾಡು ಪ್ರಾಣಿಗಳನ್ನು ಇಲ್ಲಿ ರಕ್ಷಿಸಬಹುದು. ೪೮ ಸಹಸ್ರ ಜನರು, ಹಿಂದೆ ಈ ನೆಲವನ್ನು ಬಿಟ್ಟು ಹೋಗಿದ್ದವರು ಪುನಃ ಅದೇ ನೆಲದಲ್ಲಿ ಬಂದು ವಾಸಿಸುವಂತಾಗುವುದು.

ಆದರೆ ಇದೆಲ್ಲದಕ್ಕೂ ನಾಲ್ಕು ವರ್ಷಗಳ ಕಾಲ ಕಾಯ ಬೇಕಾಗುವುದು.

("ಯೋಜನಾ"ದಿಂದ)

ಶ್ರೀ ಕೆ. ದಾಮೋದರ ಶಣಾಳೆ,
ಉಡುಪಿ.

ಉಚ್ಚಶಿಕ್ಷಣ

ಆವಶ್ಯಕತೆ ಉಳ್ಳವರಿಗೆ ಉಚ್ಚ ಶಿಕ್ಷಣ ದೊರೆಯಲಿ

ವಿದ್ಯಾರ್ಥಿ ಸಂಖ್ಯೆ ಬೆಳೆದೊಡನೆಯೇ ಪ್ರಗತಿ ಸಾಧಿಸಿದಂತಾಗಲಿಲ್ಲ!

ವಿಶ್ವವಿದ್ಯಾನಿಲಯಗಳ ವಿದ್ಯಾಭ್ಯಾಸದ ಮಟ್ಟವನ್ನು ಉನ್ನತಗೊಳಿಸುವುದು ನಮ್ಮ ದೇಶದಲ್ಲಿ ಅಗತ್ಯವಾಗಿದೆ. ಕರ್ಕರೀಕ್ರಮುಖಸ್ಥಿತಿಯಲ್ಲಿರುವ ಇಂದಿನಸಿದ್ಧತಿಯು ಸುಧಾರಣೆಹೊಂದಿ, ಉಚ್ಚ ವಿದ್ಯಾಭಾಸವು ಅದರಿಂದ ಸ್ರಯೋಜನ ಹೊಂದಬಲ್ಲವರಿಗೆ ಮಾತ್ರ ದೊರೆಯುವಂತೆ ಮಿತಿಗೊಳಿಸಲ್ಪಡಬೇಕು.

ಇಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಎದುರಿಸಬೇಕಾದ ಸಮಸ್ಯೆಗಳಲ್ಲಿ ಅವರು ಅಂಕಿತದಲ್ಲಿರುವ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೊಂದಾಗಿದೆ. ಪ್ರವೇಶವು ಅದಷ್ಟು ಕಡಿಮೆಯಾಗಬೇಕು. ಪ್ರವೇಶವನ್ನು ಮಿತಿಗೊಳಿಸುವುದರಿಂದ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ಯೇ ತನ್ಮಯರಾಗುವಂತೆಸಗಲು ಸಮರ್ಥರಾಗುತ್ತಾರೆ. ಯಾವುದೇ ಕಾಲೇಜಿನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ಒಂದು ಸಾವಿರಕ್ಕೆ ಮೀರಬಾರದು ಎಂಬ ವಿಶ್ವವಿದ್ಯಾಲಯ ಸಹಾಯಧನಾಯೋಗದ ಹಿತೋಕ್ತಿಯು ಸ್ವೀಕಾರಾರ್ಹ ವಿರುತ್ತದೆ.

ಉಚ್ಚ ಶಿಕ್ಷಣವು ಅದರಿಂದ ಸಾಕಷ್ಟು ಪ್ರಯೋಜನ ಪಡೆಯಬಲ್ಲ ಬುದ್ಧಿವಂತ ವಿದ್ಯಾರ್ಥಿಗಳಿಗಷ್ಟೇ ಈಯಲ್ಪಡಬೇಕು. ಸಮಾಜದ ಯಾವುದೇ ಒಂದು ವಿಶಿಷ್ಟ ಗುಂಪಿಗೆ ಕಾಯ್ದಿರಿಸುವ ಪದ್ಧತಿಯನ್ನೂ ಇದು ಹೊರತಿಲ್ಲ. ವಿಶ್ವವಿದ್ಯಾಲಯ ಶಿಕ್ಷಣವು ಕೇವಲ ವೈಭವಶಾಲಿಗಳಾದ ಶ್ರೀಮಂತರ ಮಕ್ಕಳಿಗೆ ಮಾತ್ರ ದೊರೆಯುವ ಸೌಲಭ್ಯವೆಂಬ ಕಾಲವು ಹಿಂದೆ ಹೋಯಿತು. ಇಂದು ಬೌದ್ಧಿಕವಾಗಿ ಅದಕ್ಕೆ ಅರ್ಹರಾದ ಎಲ್ಲರಿಗೂ ಅದನ್ನು ಒದಗಿಸುವಂತೆ ಏರ್ಪಾಡು ಮಾಡುವುದು ಸರಕಾರದ ಕರ್ತವ್ಯವಾಗಿದೆ ಒಬ್ಬ ಜಾಣಾಕ್ಷ ವಿದ್ಯಾರ್ಥಿಗೆ ಉಚ್ಚ ಶಿಕ್ಷಣವನ್ನು ಪಡೆಯುವ ದಾರಿಯಲ್ಲಿ ಬಡತನವು ಅಡ್ಡಬರಬಾರದು ಸರಕಾರವು ಸಮಾಜದಲ್ಲಿರುವ ಇಂತಹ ಯೋಗ್ಯತಾ ಸಂಪನ್ನರಾದ ವಿದ್ಯಾರ್ಥಿಗಳನ್ನು ಆರಿಸಿ ಅವರಿಗೆ ಉಚ್ಚ ಶಿಕ್ಷಣ ಪಡೆಯಲು ನೆರವಾಗಬೇಕು.

ಇಂದು ನಮ್ಮ ದೇಶದಲ್ಲಿ ವಿಜ್ಞಾನಿಗಳ ಮತ್ತು ತಾಂತ್ರಿಕಜ್ಞರ ಅಭಾವವಿದೆ. ಅದರ, ಇಂತಹದನ್ನು ಅಧಿಕ ಪ್ರಮಾಣದಲ್ಲಿ ಸಿದ್ಧಪಡಿಸುವಾಗ ನಾವು ಗುಣಗಳನ್ನು ಲೆಕ್ಕಿಸದೆ ಬಿಡುವುದು ಸರಿಯಲ್ಲ. ಇಂದಿನ ನಮ್ಮ ಶಿಕ್ಷಣ ಮಟ್ಟವು ಬಹಳ ಕೋಲಾಡುತ್ತಿದೆ. ಉದಾಹರಣೆಗಾಗಿ ಕಲೆಯಲ್ಲಿ ಪದವೀಧರನಾದವನಿಗೆ ವಿಜ್ಞಾನದ ಮೂಲ ತತ್ವಗಳೂ ತಿಳಿಯುವಂತಿಲ್ಲ. ಅದಕ್ಕಾಗಿ ಮುಂದಿನ ವರ್ಷದಿಂದ (ಕರ್ನಾಟಕ ವಿಶ್ವವಿದ್ಯಾಲಯದಲ್ಲಿ) ಸಾಮಾಜಿಕ ವಿಜ್ಞಾನದ ಒಗ್ಗೆ ಒಂದು ಪ್ರಶ್ನಾಪತ್ರವನ್ನು ಕಲಾಪದವಿಯ ಮೊದಲ ವರ್ಷದ ಅಭ್ಯಾಸಕ್ಕೂ ವಿಜ್ಞಾನ ಪದವಿಯ ಮೊದಲ ವರ್ಷದ ಅಭ್ಯಾಸಕ್ಕೂಂದು ಕಲಾ ಪ್ರಶ್ನಾಪತ್ರವನ್ನೂ ಆಳವಡಿಸಲು ಸೂಚಿಸಲಾಗಿದೆ. ಈ ಸುಧಾರಿತ ಪಾಠಕ್ರಮವು ಒಬ್ಬ ವಿಶ್ವವಿದ್ಯಾಲಯದ ವಿದ್ಯಾರ್ಥಿಗೆ ಸಾಕಷ್ಟು ಉದಾರ ವಿದ್ಯಾಭ್ಯಾಸವನ್ನೊದಗಿಸುವುದಕ್ಕೆ ಸಮರ್ಥವಾಗಬಹುದು. ಸುಧಾರಿತ ಪಾಠಕ್ರಮದಿಂದ ಪರೀಕ್ಷೆಗಳೂ ತುಸು ಕಷ್ಟವಾಗುವುವು. ವಿಶ್ವವಿದ್ಯಾಲಯದ ಹೆಬ್ಬಾಗಿಲಿನಿಂದ ಅಧಿಕ ಸಂಖ್ಯೆಯಲ್ಲಿ ಪದವೀಧರರನ್ನು ಹೊರಬಿಡುವುದರಿಂದ ಈ ಮಕ್ಕಳನ್ನು ನಿಜವಾದ ವಿದ್ವಾಂಸರನ್ನಾಗಿ ಪರಿವರ್ತನೆ ಹೊಂದಿಸಿದಂತಾಗುವುದಿಲ್ಲ ಎಂಬುದನ್ನು ನೆನೆಸಿನಲ್ಲಿಟ್ಟುಕೊಳ್ಳಬೇಕು.

(ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಪಿ. ಸಿ. ಪಾಟೀಯವರ ರಾಜಾ ಲಕ್ಷ್ಮಿಗೌಡ ಸಾಯನ್ಸ್ ಇನ್ಸ್ಟಿಟ್ಯೂಟಿನ ಉದ್ಘಾಟನಾ ಭಾಷಣದಿಂದ ಆಯ್ದುದು)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 440/1958.

ರಾಘವೇಂದ್ರ ಶೆಣೈ —ವಾದಿ

ಬಾಬುರಾಯ ಶೈಡ —ಪ್ರತಿವಾದಿ

ಕುಂದಾಪುರ ತಾಲೂಕು ತೆಕ್ಕಟ್ಟೆ ಗ್ರಾಮದಲ್ಲಿರುವ ಕೆರೆಮನೆ ನಂಕಟಾಚಲ ಶೈಡರ ಮಗ ಬಾಬುರಾಯ ಶೈಡರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಸದ್ರಿ ದಾವೆಯಲ್ಲಿ ಪ್ರತಿವಾದಿಯು ವಾದಿಗೆ ತಾ. 24—5—49ರಲ್ಲಿ ರೂ 100.00ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿ ಬರವಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 10—9—1958ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕಾರಣ ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನಸ ಹಗಲು 11 ಗಂಟೆಗೆ ಮೇಲಿನ ಕೋರ್ಟುಮುಂದೆ ಹಾಜರಾಗಿ ಜ್ಞಾಪೀರುಸುಮಾಡಿಕೊಳ್ಳತಕ್ದು. ಎಂಬ ಸಾಗ್ತಿ ಈ ಮೂಲಕ ತಿಳಿಯಪಡಿಸಿಯಾದೆ.

N. S. Parameshwaraiah
Advocate for Pltff.

Date 1—9—58. Coondapoor.

೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ. } ಮೆಕೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ } ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತದೆ.

ಬಾಟ್ಲಿವಾಲಾ ಎಗ್ಯೂಮಿಕ್‌ಶ್ಚರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ವಿಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಜೀವನೇತಿಹಾಸ

ಸ್ಕೋಟ್ಲೆಂಡಿನ ಸ್ಕಾಟನು ಕಾಲು ಕಳೆದು ಕುಂಟನಾದನು!

ಅವನ ಕೃತಿಗಳು ಮನೋರಂಜಕ ಜೀವನವು ಮನೋ ಸಂಸ್ಕಾರಕವಿನೆ

ಇಂಗ್ಲಿಷ್ ಸಾಹಿತ್ಯ ಕ್ಷೇತ್ರದ ಸುಪ್ರಸಿದ್ಧ ಸಾಹಿತಿ ಸರ್ ವಾಲ್ಟರ್ ಸ್ಕಾಟನ ಹೆಸರು ಕೇಳದವರು ವಿರಳ. ತನ್ನ ಸುಪ್ರಸಿದ್ಧ ಸಾಹಿತ್ಯ ಕೃತಿಗಳಿಂದ ಈತ ಸಾಹಿತ್ಯ ಕ್ಷೇತ್ರದ ಧ್ರುವತಾರೆಯಾದಂತೆ ತನ್ನ ಜೀವನದಿಂದ ಒಬ್ಬ ಸುಪ್ರಸಿದ್ಧ ಗೌರವಾನ್ವಿತ ವ್ಯಕ್ತಿಯಾಗಿದ್ದಾನೆ. ತನ್ನ ಕೊನೆಯುಸಿರಿನ ತನಕವೂ ಬಾಡಿಗೆಯ ಕೋಣೆಯೊಂದರಲ್ಲಿ ಕುಳಿತು ಈತನು ಮತ್ತೂ ಬರೆಯುತ್ತಲೇ ಇದ್ದ. ಆರು ವರುಷಗಳ ತನಕ ಈತ ಎಡೆಬಿಡದೆ ಮೇಲಿಂದ ಮೇಲೆ ಬರೆಯುತ್ತಲೇ ಇದ್ದ. ಅಂತಹ ದುಡಿಮುಗಾರ ವಾಲ್ಟರ್ ಸ್ಕಾಟ್.

ವಾಲ್ಟರ ಸ್ಕಾಟನ ಜನನ ೧೭೭೧ರಲ್ಲಿ ಸ್ಕಾಟ್‌ಲೆಂಡಿನಲ್ಲಾಯಿತು. ಅವನು ಹದಿನೆಂಟು ತಿಂಗಳ ಮಗುವಾಗಿದ್ದಾಗ ಆತ ಜ್ವರದ ಭಾಧೆಗೆ ತುತ್ತಾದ. ಈ ಜ್ವರ ಆತನನ್ನು ಅಜೀವ ಪರ್ಯಂತ ಕುಂಟನನ್ನಾಗಿ ಮಾಡಿತು. ಆತನ ತಂದೆ ತಾಯಿಗಳು ಇದರ ನಿವಾರಣೆಗೆ ಮಾಡಿದ ಪ್ರಯತ್ನವೆಲ್ಲಾ ನೀರ ಮೇಲೆ ಮಾಡಿದ ಹೋಮವಾಯಿತು. ಸ್ಕಾಟನ ಜೀವನದ ಮೊತ್ತಮೊದಲನೆಯ ನೋವೆಂದರೆ ಆತನ ಈ ಹಿಳವತನ. ತನ್ನ ಕುಂಟಾದ ಕಾಲುಗಳಿಂದ ನಡೆಯುವುದು ದುಸ್ಸಾಧ್ಯ ವೆನಿಸಿದರೂ ಸ್ಕಾಟನು ಓಡಾಡುವುದರಲ್ಲಿ ತುಂಬಾ ಆಸಕ್ತನಾಗಿದ್ದ. ಆತನು ಸ್ಕಾಟಲೆಂಡಿನ ಗುಡ್ಡಗಳಲ್ಲಿ ಅಲೆದಾಡಲಾರಂಭಿಸಿದ. ಅಲ್ಲಿಯ ಹಳ್ಳಿಯ ಜನರೊಂದಿಗೆ ಆಡುತ್ತಿದ್ದ. ಅವರಿಂದ ಜನಪದಕತೆಗಳನ್ನು ಕುತೂಹಲದಿಂದ ಆಲಿಸುತ್ತಿದ್ದ. ಈತನಿಗೆ ಆ ಕಾಲ ಹಳೆಯ ಸೈನಿಕರನೇಕರ ಪರಿಚಯವಾಯಿತು. ಆ ಪರ ಸಂಪರ್ಕದಿಂದ ಆತ ಅವರ ಗತ ಜೀವನದ ಯುದ್ಧಗಳ ಕತೆಯನ್ನು ತಿಳಿದುಕೊಂಡ. ಅವರು ತಮ್ಮ ಸಾಹಸವನ್ನು ಎಷ್ಟು ಉತ್ಸಾಹದಿಂದ ಬಣ್ಣಿಸುತ್ತಿದ್ದರೋ ಅದಕ್ಕೂ ಮಿಗಿಲಾದ ಉತ್ಸಾಹದಿಂದ ಸ್ಕಾಟ ಅವುಗಳನ್ನು ಕೇಳುತ್ತಿದ್ದ. ಸ್ಕಾಟಲೆಂಡಿನ ಎಲ್ಲೆಡೆಗಳಲ್ಲೂ ಅಲ್ಲಲ್ಲಿ ಹಾಳಬಿದ್ದ ಮನೆಗಳು, ಗುಡಿಗಳು, ಕಟ್ಟಡಗಳು ಆತನಿಗೆ ತನ್ನ ದೇಶದ ಗತ ಚರಿತ್ರೆಯ ಸಾಕ್ಷಿಯನ್ನು ನುಡಿಯುತ್ತಿದ್ದವು.

ಸ್ಕಾಟನು ಹದಿನೇಳು ವರ್ಷ ಪ್ರಾಯದವನಾದಾಗ ಆತನನ್ನು ಎಡಿನ್‌ಬರ್ಗನ ಒಂದು ಹೈಸ್ಕೂಲಿಗೆ ಸೇರಿಸಿದರು. ಹೈಸ್ಕೂಲಿನ ವ್ಯಾಸಂಗ ಆತನಿಗೆ ಎಳ್ಳಷ್ಟು ಹಿಡಿಸಲಿಲ್ಲ. ಕಾರಣ, ಆತನಿಗೆ ತಲೆ ಸಿಡಿತ ಹುಟ್ಟಿಸುವಂತಹ ಕೆಲವು ವಿಷಯಗಳನ್ನು ಅಲ್ಲಿ ಅಭ್ಯಸಿಸಬೇಕಾಗಿತ್ತು. ಆತನ ನೆಚ್ಚಿನ ವಿಷಯವೆಂದರೆ 'ಚರಿತ್ರೆ' ಆಗಿತ್ತು. ಸ್ಕಾಟಲೆಂಡಿನ ಚರಿತ್ರೆಯಲ್ಲಿ ಈತನಿಗಿದ್ದ ಅಪಾರ ಹಾಗೂ ಆಳವಾದ ಅನುಭವನು ಜನಪದ ಸಾಹಿತ್ಯದಲ್ಲಿ ಈತನ ಪಾಂಡಿತ್ಯವನ್ನು ಕಂಡು ಅಧ್ಯಾಪಕರು ಬೆರಗಾದರು. ಕಾಲ ಕಳೆಯುತ್ತ ಬಂದಂತೆ ಸ್ಕಾಟನು ಸ್ಕಾಟ್‌ಲೆಂಡ್ ಚರಿತ್ರೆಯ ಮೇಲೆ ಕವನ, ಕಾದಂಬರಿಗಳನ್ನು ಬರೆಯಲಾರಂಭಿಸಿದ. ಈತನ ಮನಾಕರ್ಷಕ ಪುಸ್ತಕಗಳು ಈತನನ್ನು ಜಗತ್ಪ್ರಸಿದ್ಧನನ್ನಾಗಿ ಮಾಡಿದುವು. ಈತನ ಕವನವು ಉತ್ತಮವಾಗಿದ್ದರೆ, ಕತೆಗಳು ಇನ್ನೂ ಒಂದುತೂಕ ಮಿಗಿಲಾಗಿದ್ದುವು. ಮೊತ್ತಮೊದಲಿನ ಕೃತಿ 'ಮೇವಲ್ಲ' ಯನ್ನು ಹಿಂಬಾಲಿಸಿ ಈತನ ಕೃತಿರತ್ನಗಳು ಒಂದರ ಹಿಂದೊಂದು ಬರಲಾರಂಭಿಸಿದುವು. 'ಗೈ ಮೇನ ರಿಂಗ್', 'ದಿ ಎಂಟ ಕ್ವಾರಿ', ದಿ ಬ್ಲೇಕ್ ಡ್ವಾರ್ಫ್', 'ರೋಖ್ ಲ್ಯೂ', 'ದಿ ಹಾರ್ಟ್ ಓಫ್ ಮಿಡ್ ಲೋಥಿಯನ್' ಇವು ಆತನ ಕೃತಿ ವಿಶೇಷಗಳು. ಪ್ರತಿಯೊಂದು ಪುಸ್ತಕವೂ ಸಾಹಸಗಳಿಂದ ರಂಜಿತವಾಗಿತ್ತು. ಆತನ ಪುಸ್ತಕಗಳನ್ನು ಹಿಡಿದವರು ಮುಗಿಸದೆ ಕೆಳಗಿಡುವುದೇ ಕಷ್ಟವಾಗಿತ್ತು. ತನ್ನ ಕೃತಿಗಳಿಂದ ವಾಲ್ಟರ್ ಸ್ಕಾಟ್ ಇಂಗ್ಲಿಷ್ ಸಾಹಿತ್ಯದ ಶ್ರೇಷ್ಠ ಸಾಹಿತಿಯಾದ ಮಾತ್ರವಲ್ಲ ತನ್ನ ಮನಸ್ಕಗಳ ಮಾರಾಟದಿಂದ ಹೇರಳ ಸಂಪತ್ತು ಈತನನ್ನು ಆಶ್ರಯಿಸಿತು.

ತನ್ನ ಜೀವನದ ಮೊದಲ ನೋವಾದ "ಹಿಳವತನ"ವನ್ನು ಸ್ಕಾಟನು ಧೈರ್ಯದಿಂದ ಎದುರಿಸಿ ಜಯಶಾಲಿಯಾದ. ಆದರೆ ಉತ್ತರಾರ್ಧದಲ್ಲಿ ಎದುರಿಸಿದ ಚಿಂತೆಯು ಆತನನ್ನು ಸಂಪೂರ್ಣ ಕುಗ್ಗಿಸಿಬಿಟ್ಟಿತು. ಸ್ಕಾಟನು ಆರ್ಥಿಕ ವ್ಯವಹಾರದಲ್ಲಿ ಕೈ ಸುಟ್ಟುಕೊಂಡು ಕಾಸಿಲ್ಲದ ವ್ಯಕ್ತಿಯಾದ ಮಾತ್ರವಲ್ಲ ಸಾವಿರಾರು ಪೌಂಡುಗಳ ಧನಿಕನಾಗಿದ್ದವನು ಅಷ್ಟೇ ಸಾಲದಲ್ಲಿ ಮುಳುಗಿದ. ಈತನು ಒಂದು ಪುಸ್ತಕ ಪ್ರಕಾಶನ ಸಂಸ್ಥೆಯಲ್ಲಿ ವಾಲುಗಾರನಾಗಿ ಸೇರಿದ ಈ ಸಂಸ್ಥೆಯು ಸಂಪೂರ್ಣ ದಿವಾಳಿಯಾದ ದೆಸೆಯಿಂದ ಸ್ಕಾಟನು ನಷ್ಟ ತುಂಬಬೇಕಾದ ಪ್ರಮೇಯ ಒದಗಿತು. ಸ್ಕಾಟನು ಒಬ್ಬ ಸಾಹಿತ್ಯ ತಜ್ಞನಾಗಿದ್ದನೇ ಹೊರತು ವ್ಯವಹಾರ ತಜ್ಞನಾಗಿರಲಿಲ್ಲ.

ಸ್ಕಾಟನು ಈ ಘಟನೆಯಿಂದ ತುಂಬಾ ಆಘಾತಕ್ಕೆಳಗಾದ. ಬಿದ್ದ ಈ ಗುದ್ದು ಈತನನ್ನು ಏಳಲಾರದವನನ್ನಾಗಿ ಮಾಡಿತು. ಆತನ ಗೆಳೆಯರು ಆತನಿಗೆ ಸಾಲ ಕೊಡಲು ಮುಂದೆ ಬಂದರೂ ಸ್ಕಾಟನು ಸ್ವೀಕರಿಸಲೊಪ್ಪಲಿಲ್ಲ. ಆತನ ಸಾಲಗಾರರು ಆತನು ಕೊಟ್ಟದ್ದನ್ನು ಸ್ವೀಕರಿಸಲು ಸಿದ್ಧರಿದ್ದರು, ನಷ್ಟವನ್ನು ತಾವೇ ತುಂಬುವುದಾಗಿ ಹೇಳಿದರು. ಸ್ಕಾಟನು ಇದಕ್ಕೂ ಸಮ್ಮತಿ ಸಲಿಲ್ಲ. ಸ್ಕಾಟನು ಆಗ ೫೫ ವರ್ಷ ಪ್ರಾಯದವನಾಗಿದ್ದ. ತನ್ನ ಉಳಿದ ಜೀವನವನ್ನು ಪುಸ್ತಕ ಬರೆಯುವುದಕ್ಕೇ ವಿನಿಯೋಗಿಸಬೇಕೆಂದು ಆತನು ದೃಢ ನಿಶ್ಚಯ ಮಾಡಿದ. ಇದರ ಆನಾಯದಿಂದ ತನ್ನ ಸಾಲ ತೀರಿಸಬಹುದೆಂಬ ಧೈರ್ಯ, ಆತ್ಮ ವಿಶ್ವಾಸ ಅವನಾಗಿತ್ತು. 'ನನ್ನ ಇದೇ ಬಲಗೈ ಎಲ್ಲಾ ಕೆಲಸಮಾಡಿ ಮುಗಿಸಬಲ್ಲುದು' ಆತ ಘೋಷಿಸಿದ. ಈ ನಿರ್ಧಾರವು ಅಮೂಲ್ಯವಾದುದು ಮಾತ್ರವಲ್ಲ ಒಬ್ಬ ಧೈರ್ಯಶಾಲಿ ಮತ್ತು ಪ್ರಾಮಾಣಿಕ ವ್ಯಕ್ತಿಯಿಂದ ಮಾತ್ರವೇ ಪೂರೈಸಲ್ಪಡುವಂತಹದಾಗಿತ್ತು. ಆತನೇನೂ ನವತರುಣನಾಗಿರಲಿಲ್ಲ. ದೇಹದಲ್ಲಿ ತಾರುಣ್ಯದ ಬಿಸಿ ನೆತ್ತರೂ ಇರಲಿಲ್ಲ ಆದರೂ ಆತ ನಿಶ್ಚಯವನ್ನು ಮಾಡಿಯೇ ಮುಗಿಸಿದ.

ಆತನ ಸಾಲವು ಎಳ್ಳುನೂರು ಸಾವಿರ ಡಾಲರುಗಳಿಗೂ ಮಿಕ್ಕಿತ್ತು. ಆತನು ತನ್ನ ಪ್ರೀತಿಯ ಮನೆಯನ್ನು ಸಾಲಕ್ಕಾಗಿ ಮಾರಿದ. ಇದು ಆತನ ಹೃದಯವನ್ನು ವೇದನೆಗೆ ಗುರಿ ಮಾಡಿತು. ಈ ದುಃಖದ ಜೊತೆಗೆ ಆತನ ಪ್ರೀತಿಯ ಮಡದಿಯು ಕಾಯಿಲೆಗೆ ಬಿದ್ದು ಮರಣ ಹೊಂದಿದಳು ಸ್ಕಾಟನು ಈ ಘಟನೆಗಳಿಂದ ತುಂಬಾ ನೊಂದ. ಮೇಲಿಂದ ಮೇಲೆ ಬಿದ್ದ ಪೆಟ್ಟಿನಿಂದ ಆತನ ಹೃದಯ ಜರ್ಜರಿತವಾಗಿತ್ತು. ಸ್ಕಾಟನ ನಿರ್ಧಾರ ಬದಲಾಗಲಿಲ್ಲ. ಆತನು ಎಡಿನ್‌ಬರ್ಗನಲ್ಲೊಂದು ಮನೆಯನ್ನು ಬಾಡಿಗೆಗೆ ಹಿಡಿದ. ಅದೇ ಬಾಡಿಗೆಯ ಮನೆಯಲ್ಲಿ ಸ್ಕಾಟನು ಹಲವಾರು ವರ್ಷಗಳ ತನಕ ಎಡೆಬಿಡದೆ ದುಡಿದ. ತನ್ನ ತಾಳ್ಮೆ, ಸಹನೆ, ಕಷ್ಟ ಸಹಿಷ್ಣುತೆಗಳ ಸಂಪೂರ್ಣ ಪರೀಕ್ಷೆಯನ್ನು ಸ್ಕಾಟನು ಮಾಡಿದ. ಅವಿಶ್ರಾಂತನಾಗಿ ದುಡಿದ. ಎರಡು ವರ್ಷಗಳ ಅವಿಶ್ರಾಂತ ಪರಿಶ್ರಮದಿಂದ ಅವನು ತನ್ನ ಸಾಲಗಾರರಿಗೆ ಎರಡು ಕ್ಷಿಮೂರು ಸಾವಿರ ಡಾಲರುಗಳನ್ನು ಕೊಟ್ಟ. ಮತ್ತೂ ಸ್ಕಾಟನು ಬರೆಯುತ್ತಲೇ ಇದ್ದ. ರಾತ್ರಿ ಹಗಲೆನ್ನದೆ, ಮಳೆ ಬಿಸಿಲು ಚಳಿಯೆನ್ನದೆ, ಹಬ್ಬ ಹರಿದಿನವೆನ್ನದೆ. ನೋವು ಸಂಕಟವೆನ್ನದೆ ಸ್ಕಾಟನು ಒರೆದ. ಆತನ ಬಲಗೈ ಆತನ ಅನುಭವದಿಂದ ಪಕ್ವವಾದ ಮಿದುಳಿನ ವಿಚಾರಗಳನ್ನು ಬಳಿ ಕಾಗದದ ಮೇಲೆ ಕಪ್ಪು ಅಕ್ಷರದಲ್ಲಿ ಬಿಂಬಿಸುತ್ತಿತ್ತು. ಮಿತಿಮೀರಿದ ದುಡಿಮೆಯಿಂದ ಆತನ ಮಿದುಳು ಕೆಟ್ಟುಹೋಗುವಷ್ಟೂ ಆತ ದುಡಿದ. ೧೮೩೦ರಲ್ಲಿ ಈತನು ಮಿದುಳಿಗೆ ಸಂಬಂಧಿಸಿದ ಪೆರಲಿಸಿಸ್ ರೋಗಕ್ಕೆ ತುತ್ತಾದ ಈ ರೋಗದಿಂದ ಕೊನೆಯ ಗಳಿಗೆಯ ವರೆಗೂ ಸ್ಕಾಟನು ಪಾರಾಗಲಿಲ್ಲ.

೧೮೩ೢ ಸೆಪ್ಟಂಬರ ೨೧ರಂದು ಸ್ಕಾಟನ ಪ್ರಾಣಪಕ್ಷಿ ಹಾರಿಹೋಯಿತು. ತನ್ನ ೩೧ನೇ ವಯಸ್ಸಿನಲ್ಲಿ ಈತ ಕಾಲವಾದ. ತನ್ನ ಸಂಪೂರ್ಣ ಸಾಲವನ್ನು ಸ್ಕಾಟನು ತೀರಿಸಿದ್ದರೂ ಆ ಸಾಲ ತೀರಿಸಲು ಆತನು ಇಟ್ಟ ಧೀರ ಹೆಜ್ಜೆ, ಕೈಕೊಂಡ ದೃಢ ನಿರ್ಧಾರ, ಇವುಗಳು ಸ್ಕಾಟನ ಪ್ರಾಮಾಣಿಕತೆಗೆ ಸಾಕ್ಷಿ. ಸ್ಕಾಟನು ತನ್ನ ಜೀವಮಾನದಲ್ಲಿ ಒಬ್ಬ ಅಪ್ರತಿಮ ಸಾಹಿತಿಯೆನಿಸಿದನು ಮಾತ್ರವಲ್ಲ ಒಬ್ಬ ಉಚ್ಚ ಪ್ರಾಮಾಣಿಕ ವ್ಯಕ್ತಿಯೆನಿಸಿದನು. ಇಂದು ಸ್ಕಾಟನ ಕಾಯ ಉಳಿದಿಲ್ಲವಾದರೂ ಆತನ ಆದರ್ಶ, ಆತ್ಮವಿಶ್ವಾಸ, ಕಾರ್ಯಕ್ಷಮತೆಗಳು ಅಚ್ಚಳಿಯದೆ ನಿಂತಿವೆ. ಆತನ ಕೃತಿಗಳು ನಮಗೆ ಮನರಂಜನೆಗೆ ನೆರವಾಗಬಲ್ಲುವಾದರೆ ಆತನ ಜೀವನವು ಮನ ಸಂಸ್ಕಾರಕ್ಕೆ ಆಧಾರವಾಗಬಲ್ಲುದು.

—ಶ್ರೀ ಎಸ್. ಸದಾಶಿವ ರಾವ್, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಒಳಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ. ದ. ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಮ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ- ಐದಾಣೆ ಮಾತ್ರ. ಪ. ಪ. ಪ್ರತ್ಯೇಕ.

ನವಯುಗ ಪ್ರೆಸ್, ಉಡುಪಿ.

ನಗರ ಪರಿಚಯ

ಕಾನ್‌ಸ್ಟಾಂಟಿನೋಪಲ್ ಏಸ್ಯಾ ಮತ್ತು ಯುರೋಪುಗಳ ಸಂಧಿ ಸ್ಥಳವಾಗಿತ್ತು

ಅದರ ಕೆಲವು ವೈಶಿಷ್ಟ್ಯಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಕಾನ್ಸ್ಟಾಂಟಿನೋಪಲ್ ಎಂಬದು ಪ್ರಾಚೀನ ಕಾಲದ ಪಟ್ಟಣಗಳಲ್ಲಿ ಒಂದು ಪ್ರಸಿದ್ಧಪಟ್ಟಣವಾಗಿದೆ ಲಂಡನ್, ಪೇರಿಸ್ ಬರ್ಲಿನ್, ನ್ಯೂಯೋರ್ಕ್ ಎಂಬ ಈಗಿನ ಪ್ರಖ್ಯಾತ ಪಟ್ಟಣಗಳು ಕಾನ್ಸ್ಟಾಂಟಿನೋಪಲ್ ಎಂಬದು ಲೋಕದಲ್ಲಿ ಪ್ರಖ್ಯಾತ ಪಟ್ಟಣವಾಗಿ ಮೆರೆಯುತ್ತಿದ್ದಾಗ ಕುಗ್ರಾಮಗಳಾಗಿದ್ದವು ಎಥೇನಿಯ ಮತ್ತು ರೋಮ್ ಪಟ್ಟಣಗಳು ಇದಕ್ಕಿಂತ ಪುರಾತನ ಕಾಲದವುಗಳಾದರೂ ಅವುಗಳು ಶಮ್ಮ ಚರಿತ್ರೆಯ ಮಧ್ಯ ಕಾಲದಲ್ಲಿ ಮಟ್ಟ ಹಿಡಿದು ನಾಮಾವಶೇಷಗಳಾದ ಸಮಯವು ಆಗಾಗ್ಯೆ ಕಂಡು ಬಂದಿದೆ

ಈ ಪಟ್ಟಣವನ್ನು ಬೈಜಾಸ್ (Byzas) ಎಂಬವನು ಮತ್ತು ಅಲ್ಲಿ ವಲಸೆ ಹೋದ ಅವನ ಗ್ರೀಕ್ ಅನುಯಾಯಿಗಳು ಸ್ಥಾಪಿಸಿದರು ಆದ್ದರಿಂದಲೇ ಇದಕ್ಕೆ ಬೈಜಾಂಟೆನ್ ಎಂದು ಸಹ ಕರೆಯುವರು ಕಾನ್ಸ್ಟಾಂಟೈನ್ (Constantine) ಎಂಬ ಚಕ್ರವರ್ತಿಯು ಇದನ್ನು ರೋಮ ಪಟ್ಟಣದ ಪ್ರತಿಯಾಗಿ ಮಾಡಬೇಕೆಂದು ಏರು ಗುಡ್ಡೆಯ ಮೇಲೆ ಕಟ್ಟಿ ಇದನ್ನು "ನವ ರೋಮ" (Nova Roma) ಎಂದು ಹೆಸರಯಿಟ್ಟನು ಆಂದಿನಿಂದ ಜನರು ಈ ಪಟ್ಟಣವನ್ನು ಕಾನ್ಸ್ಟಾಂಟಿನೋಪಲ್ ಎಂದೇ ಕರೆಯುತ್ತಿದ್ದರು

ಥಿಯೊಡೋಸ್ಸಿಯಸ್ (Theodosius) ಎಂಬ ಚಕ್ರವರ್ತಿಯು ತನ್ನ ಸಾಮ್ರಾಜ್ಯವನ್ನು ತನ್ನ ಇಬ್ಬರು ಮಕ್ಕಳಿಗೆ ಪಾಲುಮಾಡಿ ಕೊಟ್ಟಾಗ ಪೂರ್ವ ಭಾಗವನ್ನು ಒಬ್ಬನಿಗೂ ಪಶ್ಚಿಮ ಭಾಗವನ್ನು ಇನ್ನೊಬ್ಬನಿಗೂ ವಿಭಂಗಿಸಿ ಕೊಟ್ಟನು. ಕಾನ್ಸ್ಟಾಂಟಿನೋಪಲ್ ಎಂಬುದು ಪೂರ್ವ ಭಾಗದ ರಾಜ್ಯಕ್ಕೆ ಮುಖ್ಯ ಪಟ್ಟಣವಾಯಿತು. ರೋಮ್ ಎಂಬುದು ಪಶ್ಚಿಮ ಸಾಮ್ರಾಜ್ಯದ ಮುಖ್ಯ ಪಟ್ಟಣವಾಯಿತ ಗ್ರೀಕರು ಕಾನ್ಸ್ಟಾಂಟಿನೋಪಲ್‌ನ್ನು ದೇವಲೋಕವೆಂದ. ಕರೆದಿರುವರು ಕ್ರೈಸ್ತರು ಇದನ್ನು ಕ್ರೈಸ್ತ ಸಾಮ್ರಾಜ್ಯದ ರಾಣಿಯೆಂದಿರುವರು (Queen of Xian dom) ಸುಮಾರು ಕದಿನೈದನೇ ಶತಮಾನದ ಸಮಯ ಕೆಲವು ಜಿನೇವಾ ವಲಸೆಗಾರರು ಅಲ್ಲಿ "ಗಲಟೆ" (Galata) ಎಂಬ 148 ಮೀಟರ್ ಎತ್ತರದ ದೊಡ್ಡ ಗೋಪುರವನ್ನ ಕಟ್ಟಿದರು ಇದು ನಮ್ಮ ಕಾಂಚಿ ಗೋಪುರದಷ್ಟು ಎತ್ತರವಿಲ್ಲವಾದರೂ ಅತಿ ಉತ್ತಮವಾದದ್ದು

ಆ ಪಟ್ಟಣದೊಳಗೆ "ಸ್ಕುಟಾರಿ" (Scutari) ಎಂಬೊಂದು ಸ್ಥಳವಿದೆ ಅಲ್ಲಿ ತುಂಬಾ ಶೋಕ ವೃಕ್ಷಗಳಿವೆ (Cypresis trees) ಇದನ್ನು ತುರಾಯಿ ಮಂಪಂದು ಸಹ ಹೇಳುವರು ಈ ಮರದ ಎಲೆಗಳು ದುಃಖ ಸೂಚಕವೆಂದು ಜನರು ಭಾವಿಸಿದ ಕಾರಣ ಇದಕ್ಕೆ ಶೋಕ ವೃಕ್ಷ ಎಂಬ ಹೆಸರು ಬಂತು ಸುಮಾರು ಮೂರು ಚತುರಾಕ ವೈಲಾಗಳನ್ನು ವಿಸ್ತೀರ್ಣವಿರುವ ಮುಸಲ್ಮಾನರ ಸ್ಮಶಾನವನ್ನೇ ಈ ಮರಗಳು ಆವರಿಸಿ ಮುಚ್ಚಿಕೊಂಡಿರುವವು. ಈ ಸ್ಮಶಾನದಲ್ಲಿ ಲಕ್ಷೋಪ ಲಕ್ಷ ಸಮಾಧಿಗಳಿವೆ ಪ್ರತಿಯೊಂದು ಸಮಾಧಿಯ ತಲೆಯ ಭಾಗದಲ್ಲಿ ಒಂದು ಕಲ್ಲನ್ನು ನೆಟ್ಟು ಆ ಕಲ್ಲಿನ ತುದಿಯನ್ನು ರುಮಾಲಾಕೃತಿಯಲ್ಲಿ ಕೆತ್ತಿರುವರು ಪ್ರತಿಯೊಂದು ಸಮಾಧಿಯ ತಲೆ ಮತ್ತು ಕಾಲು ಬದಿಯಲ್ಲಿ ಒಂದೊಂದು ಶೋಕ ವೃಕ್ಷದ ಗಿಡವನ್ನು ನೆಡುವ ಸಾಂಪ್ರದಾಯ ಅವರಲ್ಲಿದ್ದ ಕಾರಣ ಈ ರೀತಿ ಮರಗಳು ತುಂಬಾ ಬೆಳೆದಿರುವವು

ಈ ಶೋಕ ವೃಕ್ಷಗಳಿಗೆ ಸಂಬಂಧಪಟ್ಟಿ ಒಂದು ದಂತ ಕಥೆಯು ಅಲ್ಲಿಯ ಜನರಲ್ಲಿ ಪ್ರಚಾರದಲ್ಲಿದೆ ಆ ಊರಿನ ಸಮುದ್ರ ಕಿನಾರೆಯಲ್ಲಿಗೆರುವೆ ಹಕ್ಕಿಗಳ ತರಹದ ಸಣ್ಣ ಹಕ್ಕಿಗಳು ಸುಳಿದಾಡುವವು. ಅವುಗಳು ನೀರಿನ ಮೇಲೆ ಸದಾ ತೇಲಾಡುವವು. ಈ ಹಕ್ಕಿಗಳು ರಾತ್ರಿ ಹಗಲು ಎನ್ನದೆ ಎಡೆಬಿಡದೆ ಅತ್ತಿತ್ತ ಸಮುದ್ರದ ಕಡೆಗೂ ಹಿಂದಕ್ಕೂ ಮುಂದಕ್ಕೂ ಹಾರಾಡಿ ದುಮುಕುವವು ಅವುಗಳಿಗೆ ಒಂದೇ ಒಂದು ಗಳಿಗೆ ಮಾತ್ರಕ್ಕೂ ವಿಶ್ರಾಂತಿ ಎಂಬುದೇ ಇಲ್ಲ ಪಾಪ ಕೃತ್ಯಗಳನ್ನು ಮಾಡಿದ ರಾಜ ರದಲ್ಲಿ ಸತ್ತ ತರ್ಕಿಯರಿಗೆ ದೇವರು ಶಿಕ್ಷೆಸಿ ಈ ಹಕ್ಕಿಗಳ ಜನ್ಮವನ್ನು ಕೊಟ್ಟಿರುವನೆಂದು ಅಲ್ಲಿಯ ಜನರು ಹೇಳುವ ವಾಡಿಕೆ. ವರುಷಕ್ಕೊಮ್ಮೆ ಈ ಪಕ್ಷಿಗಳೆಲ್ಲವೂ ಶೋಕ ವೃಕ್ಷಗಳ ಮೇಲೆ ಸಭೆಯಾಗಿ ಕೂಡುವಂತೆ ಆಗ ಇತ್ತೀಚೆಗೆ ಸತ್ತವರ ಪ್ರೇತಗಳನ್ನು ತಮ್ಮ ಗುಂಪಿಗೆ ಹೊಸ ಸದಸ್ಯರನ್ನಾಗಿ ಸೇರಿಸಿಕೊಳ್ಳುವೆಂಬ ಕಥೆಯು ಜನರಲ್ಲಿ ರೂಢಿಯಿದೆ

ಪಟ್ಟಣದ ಬೀದಿಗಳಲ್ಲಿ ನೋಡತಕ್ಕ ದೃಶ್ಯ ಬಹಳ ವಿಶೇಷವಾಗಿರುವದು ಎಲ್ಲಿ ನೋಡಿದರು "ಹಮಾಲರ" (Hamals or Porters) ದೃಶ್ಯವಾಗುವದು. ಇವರು ಹೊರೆಗಳನ್ನು ಹೊತ್ತು ಸಾಗಿಸುವ ಮಾನವ ಮೃಗಗಳೆಂದು ಭಾವಿಸಬೇಕು ತಮ್ಮ ತಂದೆ ಮುತ್ತಜ್ಜನವರು ಮಾಡಿ ಬಂದಿರುವರು ಉದ್ಯೋಗದಲ್ಲಿ 6—10 ವರುಷದ ಹುಡುಗರನ್ನು ಹೀಗೆ ಹೊರೆ ಹೊರಲು ತಿದ್ದುವರು ಈ ಕಾರಣದಿಂದ ಅವರು ಬಲಶಾಲಿಗಳಾಗಿ ಬೆಳೆಯುವರು ಮಾತ್ರವಲ್ಲ ಅವರು ಹೊತ್ತ ಹೊರೆಯನ್ನು ಸಾಧಾರಣದ ಮನುಷ್ಯರಿಂದ ಹೊರಲು ಅಸಾಧ್ಯ ಪ್ರತಿಯೊಂದು ಬೀದಿಯ ಮೂಲೆಯಲ್ಲೂ ಸಾಣ್ಣಿಗಳನ್ನು ಬದಲಾಯಿಸುವ ಮತ್ತು ಚಿಲ್ಲರೆ ಬೇಕಾಗುವರಿಗೆ ಕೊಡ ವರಿಸುವ (Sarraf) ಇರುವರು ಬೀದಿ ಬೀದಿಗಳಲ್ಲಿ ಪ್ರತಿಯೊಂದು ಮನೆಗೆ ಮಗ ಕಾಳವಂತೆ ಬೀದಿಯಲ್ಲಿ ನಿಲ್ಲಿಸಿದ ಕಟ್ಟಿಗೆ ಹೊಡದು ಶಬ್ದಮಾಡಿ ಹೋಗುವ ಪೆಸ್ಕೀಸ್ (Beskjies) ಎಂಬವನ ದೃಶ್ಯವಾಗುವದ ರಾತ್ರಿ ಸಮಯ ಕಾಯುವ (Night Watcher) ಮತ್ತು ಪ್ರತಿ ವನೆಯ ದ್ವಾರಪಾಲಕನಾದ ಕಪುಡ್ಜಿ (Kapudji) ಇವರು ಸಹ ಗೋಚರಿಸುತ್ತಿರುವರು

ಆ ಪಟ್ಟಣದಲ್ಲಿ ಒಂದೊಂದು ಒಡೆಯನ್ನು ಕೊಂಡ ಕೂಳ್ಳಬೇಕಾದರೆ ಒಂದೊಂದ ಬೀದಿಗೆ ಹೋಗಬೇಕಾಗುವದು ಸ್ವತ್ತು ಸ್ವತ್ತಿಗೆ ಪ್ರತ್ಯೇಕ ಮಾರ್ಕೆಟುಯಿದೆ ತರ್ಕಿಯರಿಗೆ ಸಿಹಿತಿಂಡಿ ಎಂದರೆ ಪ್ರೀತಿ ಕಜೂರ ಅಂಜೂರ, ಕಿತ್ತಳೆ, ಟೊಮೊಟೊ, ಕಾಗಂಜಿ ದ್ರಾಕ್ಷೆ ಹಣ್ಣು ಶರಬತ್ತು ಹಣ್ಣು ಕೋಳಿ, ಹಣ್ಣಿನ ಸತ್ತ ಇವುಗಳೆಲ್ಲವುಗಳೂ ಹಣ್ಣಿನ ಮಾರ್ಕೆಟ್‌ನಲ್ಲಿ ದೊರೆಯುವುವು.

ಅಂಗಡಿಕಾರರು ತಮ್ಮ ಅಂಗಡಿಗಳಲ್ಲಿ ಕಾಲು ಮಡಚಿ ಚಕ್ರಮಟ್ಟಿಹಾಕಿ ಬಚ್ಚು ಪಾನೆ ಹಾಸಿದ ಎತ್ತರದ ಸ್ಥಳಗಳಲ್ಲಿ ಕೂತು ಕೊಳ್ಳುವರು ಕೊಂಡುಕೊಳ್ಳುವದು ಜಟಿಪಟಿಯಿಂದ ನಡೆಯುವುದಲ್ಲ. ಸ್ವಲ್ಪ ಹೊತ್ತು ಕುಳಿತು ಆದಷ್ಟು ಜಾಕಿಯಿಂದ ನಾನಾ ತರದ ವಾಕ್ಚಾತುರ್ಯ ತೋರಿಸಿ ಚರ್ಚೆ ಮಾಡಿದ ನಂತರವೇ ವ್ಯಾಪಾರ ವಾಗುವದು. ಅವಸರದಿಂದ ವ್ಯಾಪಾರ ನಡೆದರೆ ಮೋಸದಲ್ಲಿ ಬೀಳುವರು.

ಸುತ್ತುಕಟ್ಟಿ ತಲೆತೊಗಾಡಿಸಿ ಸ್ವಾರ್ದನೆಮಾಡುವಮುಸಲ್ಮಾನ ಸನ್ಯಾಸಿಗಳವ್ರಾರ್ಥನೆಯ ದೃಶ್ಯವು ಸಹಾ ಶಲ್ಲ ಕಿಣ್ಣಹದು ಇವರ ಪ್ರಾರ್ದನೆಯ ಕ ಮವು ಬಹಳ ವಿಶೇಷರೀತಿಯದ ಗಿದೆ ಒಬ್ಬ ಇಮಾಮ (Imam)ಕ ರಾನಿನ ಯಾವದಾದರೊಂದಂಶವನ್ನು ಒದುವನು ಕೆಲವರ ಶೃತಿಯನ್ನೂ ತಂಬಟೆಯನೂ ವೀಣೆಯನ್ನೂ ಊದುವರು ಭಾರಿಸುವರು ಮತ್ತಿಳದವರೆಲ್ಲರೂ ಕೆಳಗೆ ನೆಲವನ್ನು ನೋಡುತ್ತು ಮೌನವಿರುವರು ಆಗ ಬಳೀ ಅಂಗಿ ಹಾಕಿದ ಸನ್ಯಾಸಿಗಳ ಮುಖ್ಯಸ್ಥನು ಸುತ್ತುತಿರುಗಿ ಪ್ರಾರ್ಥನೆಮಾಡಲುದ್ಯುಕ್ತನಾಗುವನು ಆ ಕೂಡಲೇ ಅವನ ಅನುಯಾಯಿಗಳು ಅವನೊಟ್ಟಿಗೇ ಸುತ್ತುತಿರುಗಲಾರಂಭಿಸುವರು. ಇವರು ಒಬ್ಬನ ಹಿಂದೆ ಒಬ್ಬರು ರಭಸದಿಂದ ಹೀಗೆ ಸಂಗೀತದ ಯೇರು ಇಳಿಯನ್ನುಸರಿಸಿ ಹೋಗುವರು ಕಳದ ಒಂದನೇ ಮಹಾಯುದ್ಧದ ನಂತರ ಕಮಲಸಾರನ ಸರಕಾರವು ಈ ತಂಡವು ಒಂದು ಉಪದ್ರಕಾರಕ (Nuesance) ರೆಂದು ಅವರನ್ನು ಗಡೀಪಾರು ಮಾಡಿತು. ಹೀಗೆ ಹೊರತಳ್ಳಿದವರ ಪೈಕಿ ಸುಮಾರು 2000 ಎರಡು ಸಾವಿರ ಜನ ಸನ್ಯಾಸಿಗಳು ತಮ್ಮ ಪ್ರಾರ್ದನೆಯನ್ನು ರದ್ದುಮಾಡುವುದು ಸರಿಯಲ್ಲವೆಂದು ಬಲ್ಗೇರಿಯಕ್ಕೆ ಹೋದರು. ಇಂಥಾ ಸನ್ಯಾಸಿಗಳ ಪಂಗಡಗಳು 60 ಅರವತ್ತು ಇದ್ದಿವೆ (Sixty orders) ಪ್ರತಿಯೊಂದು ಪಂಥದವರಿಗೂ ಅವರವರದ್ದೆ ಪೂಜಾಪ್ರಾರ್ಥನೆ ಕ್ರಮಾಚರಣೆಗಳಿದ್ದಂತೆ ಕಾಣುವದು.

—ಶ್ರೀ ಸಿ ಎಚ್ ಶೆಟ್ಟಿ, ಬೈಂದೂರು

ಅಲಾಸ್ಕಾದ ಪರ್ವತ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ಒಂದು ಬಗೆಯ ಅತಿ ಚಿಕ್ಕ ಆಕಾರದ ವಿಮಾನವನ್ನು ಚಿತ್ರದಲ್ಲಿ ಕಾಣಬಹುದು,

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ-

ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು ಪಾ ಕಂಪೆನಿ, ಮಂಗಳೂರು—1.

ವಿಶಾಲ ಪ್ರಚಾರವನ್ನಿಲ್ಲರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ನೆಟ್ಟು ತ್ವರಿತ ಪ್ರತಿಫಲ ಪಡೆಯಿರಿ.

NAVAYUGA
REGD. NO. M. 3618

UDIPI, THURSDAY
11—9—1958

LICENSE NO. 31
Licensed to Post without Prepayment

ಅಭಿಪ್ರಾಯ

ಅಜಿತ ಪ್ರಸಾದ ಜೈನರು ಆಹಾರ ಮಂತ್ರಿ ಶಾಖೆಗೆ ಸಮರ್ಥ ಮಂತ್ರಿಯಲ್ಲ!

ಅವರು ಕಿಡ್ವಾಯಿಯವರ ಸ್ನೇಹವನ್ನು ಪಡೆದಿದ್ದರಲ್ಲದೆ ಗುಣಗಳನ್ನಲ್ಲ.

ಕೆಲವು ಸಮಯದಿಂದ ಆಹಾರ ಪರಿಸ್ಥಿತಿಯ ಬಗ್ಗೆ ವಿವಿಧ ಪ್ರಕಾರದ ವ್ಯಕ್ತಿಗಳಿಂದಲೂ ವಿಭಿನ್ನ ಪಕ್ಷಗಳಿಂದಲೂ ಟೀಕೆಯ ಸುರಿಮಳೆಯನ್ನು ಶ್ರೀ ಅಜಿತ ಪ್ರಸಾದ ಜೈನರು ಸಹಿಸಿಕೊಳ್ಳಬೇಕಾಗಿ ಬಂತು. ಅದರೂ ಈ ಯೆಲ್ಲ ಟೀಕೆ ಟಿಪ್ಪಣಿಗಳ ಪ್ರಭಾವವು ಶ್ರೀ ಜೈನರ ಮೇಲೆ ಬೀಳದೆ ಹೋದುದರಿಂದಲೇ ಪ್ರಧಾನಿ ಶ್ರೀ ನೆಹರೂರವರು "ಈಗ ಸರಕಾರವು ಆಹಾರ ಪರಿಸ್ಥಿತಿಯ ಮಹತ್ವವನ್ನು ತಿಳಿದುಕೊಂಡಿದೆ" ಎಂದು ಹೇಳಬೇಕಾಗಿ ಬಂತು. ಲೋಕಸಭೆಯ ಕೆಲವು ಸದಸ್ಯರು ಪ್ರಧಾನ ಮಂತ್ರಿಯವರೇ ಈ ವಿಭಾಗವನ್ನು ವಹಿಸಿಕೊಳ್ಳಬೇಕೆಂಬ ಸೂಚನೆಯಾನೆ ಸಲಹೆಯನ್ನಿತ್ತರು.

ದೇಶದ ಸಮಸ್ತ ಜನತೆಯ ಉದರ ಸಂಬಂಧವಿರುವ, ಜನತೆಯ ಜೀವನ ನಿರ್ವಾಹಕ್ಕೆ ಹೇತುವಾದ ಈ ಆಹಾರ ಖಾತೆಯು ಕೋಟಿಗಟ್ಟಲೆ ಜನರನ್ನು ಹಸಿವೆಯಿಂದಲೇ ಸಾಯುವಂತೆ ಮಾಡಬಲ್ಲುದು. ಆದುದರಿಂದಲೇ ಮಂತ್ರಿ ಶಾಖೆಗಳಲ್ಲಿ ಅಧಿಕೋತ್ತರದಾಯಿತ್ವವಿರುವ ಮತ್ತು ಅತ್ಯಂತಾವಶ್ಯಕವಿರುವ ಖಾತೆಗಳಲ್ಲಿ ಇದೂ ಒಂದಾಗಿರುವುದರಿಂದ, ಇದರ ಕಾರ್ಯನಿರ್ವಹಣೆ ಎಷ್ಟು ಕಷ್ಟವೆಂದು ಊಹಿಸಿಯೇ ತಿಳಿದುಕೊಳ್ಳಬಹುದು.

ಆಹಾರ ಶಾಖೆಯ ಕಾರ್ಯಕುಶಲತೆಯ ಸ್ಮರಣೆಯಾದಾಗ ಜನತೆಗೆ ಸ್ವರ್ಗೀಯ ರಫೀ ಅಹಮದ ಕಿಡವಾಯಿಯವರು ಜ್ಞಾಪಕವೂ ತಾನೇ ತಾನಾಗಿ ಬರುವುದು. ದೇಶದ ಪರಿಸ್ಥಿತಿಯು ವಿಷಮಸ್ಥಿತಿವಾಗಿದ್ದು ಕೈರ ಕೆಟ್ಟುಹೋಗಿದ್ದ ಸಮಯದಲ್ಲಿ ಅದರ ಪ್ರಮುಖತೆಯ ಸಮಸ್ಯೆಯನ್ನು ಧೈರ್ಯದಿಂದೆದುರಿಸಿ ಜಯಶೀಲನಾದ ಓರ್ವ ವ್ಯಕ್ತಿಯ ಸುಸ್ಮರಣೆಯಾಗುವುದಾದರೂ ಸ್ವಾಭಾವಿಕವೇ ಆಗಿದೆ. ಇಂದು, ಶ್ರೀ ಕಿಡವಾಯಿಯವರ ಸ್ಥಾನದಲ್ಲಿ ವಿರಾಜಮಾನರಾಗುತ್ತಿರುವ ಶ್ರೀ ಜೈನರು ಲೋಕಸಭೆಯ ಜನರು ಬಯಸಿದಂತೆಸಗುವುದರಲ್ಲಿ ಸಮರ್ಥರಾಗುವರೇ ಇಲ್ಲವೆ? ಎಂಬುದೇ ಒಂದು ಪ್ರಶ್ನೆ.

ಸ್ವರ್ಗೀಯ ರಫೀ ಅಹಮದ ಕಿಡ್ವಾಯಿಯವರು ಜೀವಂತರಾಗಿದ್ದಾಗ ಶ್ರೀ ಜೈನರಿಗೆ ಅವರ ಕೃಪೆಯು ಪ್ರಾಪ್ತವಾಯಿತು ಶ್ರದ್ಧೇಯ ತಂಡನರೊಡನೆ ಕಿಡವಾಯಿ ಸಾಹೇಬರು ಪ್ರಕರಣವೆದ್ದಾಗ, ಈ ಮಾತು ಮತ್ತಷ್ಟು ಸ್ಪಷ್ಟವಾಗಿ ವ್ಯಕ್ತವಾಯಿತು. ಶ್ರೀ ಕಿಡ್ವಾಯಿಯವರು ಸ್ವರ್ಗಸ್ಥರಾದ ಮೇಲೆ ಶ್ರೀ ಜೈನರಲ್ಲಿರುವ "ಕಿಡ್ವಾಯಿ ಮೈತ್ರಿ"ಯನ್ನು ಗಮನಿಸಿಯೇ ಅವರಿಗೆ ಆಹಾರ ವಿಭಾಗವನ್ನು ಒಪ್ಪಿಸಲಾಯಿತೆಂದರೂ ತಪ್ಪಾಗಲಾರದು. ಆದರೆ, ಜನತೆಯು ಆಗ ಇರಿಸಿಕೊಂಡಿದ್ದ ಆಶೆಯು ಮಾತ್ರ ಇದುವರೆಗೂ ಪೂರ್ತಿಯಾಗದುಳಿಯಿತು. ಈ ವಿವೇಚನೆಯಿಂದ ಮನನೀಯ ಕಿಡ್ವಾಯಿರ ಮೈತ್ರಿಯನ್ನು ಅತ್ಯಂತ ಸಫಲತಾಪೂರ್ಣರಾಗಿ ಶ್ರೀ ಜೈನರು ಪಡೆದಿರುವುದು ಸತ್ಯವಾದರೂ ಅವರ ಗುಣಗಳಲ್ಲಿ ಒಂದಂಶವನ್ನೇ ಆದರೂ ಸಂಪಾದಿಸಿಕೊಂಡಿಲ್ಲವೆಂಬುದು ಸುವಿದಿತವಿದೆ.

ಶ್ರೀ ಅಜಿತ ಪ್ರಸಾದರೊಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದಾರೆ. ಅವರಲ್ಲಿ ಒಂದು ವಿಭಾಗದ ಕರ್ಮಚಾರಿಗಳು ಹಾಗೂ ಅಧಿಕಾರಿಗಳು ತಂತಮ್ಮ ಮಾರ್ಗಗಳಲ್ಲಿ ಸುವ್ಯವಸ್ಥಿತರೀತಿಯಲ್ಲಿ ಮುಂದುವರಿಯುವಂತೆ ಮಾಡುವ ಕೂಟ ನೀತಿಜ್ಞತೆಯು ಪ್ರಾಯಶಃ ಕಡಿಮೆಯಿದ್ದಿರಬೇಕು. ವ್ಯಾಪಾರಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಪ್ರತಿಭೆಯೂ ಅಲ್ಪವಿದ್ದು ಅವರು ಕೇವಲ ಅಂಕೆ ಸಂಖ್ಯೆಗಳ ಮಾಯಾಜಾಲವನ್ನೇ ನಿಜಸ್ಥಿತಿಯೆಂದು ದೃಢವಾಗಿನಂಬಿ ಪಾಸ್ತವಿಕತೆಯನ್ನು ಅವಿಶ್ವಾಸದಿಂದ ಧಿಕ್ಕರಿಸುವ ಪ್ರವೃತ್ತಿಯವರೆಂದು ಊಹಿಸಿದರೆ ತಪ್ಪಾಗಲಾರದು. ಇನ್ನೆಲ್ಲವೂ ಶ್ರೀ ಜೈನರ ವ್ಯಕ್ತಿತ್ವಕ್ಕೆ ಕರಿ ಬರೆಯಬಹುದಾದುವು.

ಈಗ ಎದ್ದಿರುವ ಪ್ರಸಂಗದಲ್ಲಿ ತಪ್ಪು ಯಾರದೇ ಇರಲಿ, ಆಹಾರ ಮಂತ್ರಿ ಶಾಖೆಯು ಸಾಕಷ್ಟ ಕಾರ್ಯಕ್ಷಮವಾಗಿಲ್ಲವೆನ್ನುವುದಂತೂ ನಿಶ್ಚಯ ಹಾಗಿರುವಾಗ ತಮ್ಮ ಇದುವರೆಗಿನ ಕಾರ್ಯಪದ್ಧತಿಯನ್ನು ಪರಿಶೀಲಿಸಿ, ಕಾರ್ಯಧಕ್ಷತೆಯನ್ನು ಸುವ್ಯಕ್ತಗೊಳಿಸಬೇಕಾದ ಸಮಯವೀಗ ಬಂದಿದೆ; ಇದರಲ್ಲಿ ಶ್ರೀ ಜೈನರು ಅದೆಷ್ಟು ಮಂಬರಿಯುವರೆಂಬುದನ್ನು ಕಾದು ನೋಡಬೇಕಾಗಿದೆ, ಅಷ್ಟೆ.

ಈ ನಡುವೆ ಒಂದು ಕೆಂಪವಂತಿಯೂ ಪಸರ ಗೊಂಡಿತ್ತು. ಲೋಕಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿಯೂ ಶ್ರೀ ಜೈನರ ಬಗ್ಗೆ ಸ್ವಪಕ್ಷೀಯರಿಂದಲೂ ವಿಪುಲ ಕಟು ಟೀಕೆ ಎದ್ದುದರಿಂದ, ಅವರು ತಮ್ಮ ರಾಜಿನಾಮೆಯನ್ನು ಪ್ರಧಾನಮಂತ್ರಿಯವರ ಗೊಪ್ಪಿಸಿದ್ದಾರಂತೆ; ಅದರೊಂದಿಗೆ, ಪ್ರಧಾನಮಂತ್ರಿಗಳು ಕೇಂದ್ರ ಮಂತ್ರಿಮಂಡಳದ ಪಾತೆಗಳನ್ನು ಪುನರ್ವಿಂಗಡಣೆ ಗೈಯಲಿರುವರಂತೆ. ಯಾವುದು ಸತ್ಯ, ಯಾವುದು ಸಂಭವನೀಯವೆಂದು ಸದ್ಯವೇ ತಿಳಿದುಬರಬಹುದು.

ಆದರ್ಶ ಜಿಜ್ಞಾಸೆ

ಮಹಾವೀರ ಜಯಂತಿಯರ ನಡುವೆ ಜಿಜ್ಞಾಸೆ ಹುಟ್ಟಿತು

ನಮ್ಮ ನಿಮ್ಮ ಕೆಲವು ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳು ಇಲ್ಲಿವೆ.

ಮಹಾವೀರನ ದರ್ಶನಲಾಭಕ್ಕಾಗಿ ಹೋದ ಮಹಾರಾಜ ಸಹಸ್ರಾನೀಕನ ಮಗಳು ಜಯಂತಿಯಲ್ಲಿ ತತ್ತ್ವ ಜಿಜ್ಞಾಸೆಯು ಹುಟ್ಟಿ ಅವರೊಳಗೆ ಸಂಭಾಷಣೆ ಪ್ರಾರಂಭವಾಯಿತು.

ಜಯಂತಿ — ಭಗವಂತನೆ, ಜೀವನು ಯಾವ ರೀತಿಯಿಂದ ಭಾರಕರ್ಮಿಯಾಗುವನು?

ಮಹಾವೀರ — ಜಯಂತಿ, ಹಿಂಸೆ, ಅಸತ್ಯ, ಚೋರತನ ಮೊದಲಾದ ಪಾಪಗಳನ್ನು ಮಾಡುವುದರಿಂದ ಜೀವನು ಭಾರಕರ್ಮಿಯಾಗುವನು.

ಜಯಂತಿ — ಸ್ವಪ್ನಾವಸ್ಥೆಗಿಂತಲೂ ಜಾಗರಣಾವಸ್ಥೆಯಲ್ಲಿ ಜೀವನು ಹೆಚ್ಚಾಗಿ ಪಾಪಮಾಡುತ್ತಾನೆ. ಆದುದರಿಂದ ಸದಾ ನಿದ್ರಿತನಾಗಿರುವುದು ಉತ್ತಮವೇ? ಅಥವಾ ಜಾಗ್ರತನಾಗಿರುವುದೆ?

ಮಹಾವೀರ — ಜಯಂತಿ, ಸದಾಚರಣೆಯನ್ನು ಆಚರಿಸದಿರುವವನೂ, ಹಿರಿಯರ ಹಾಗೂ ಪೂಜ್ಯರ ಆಜ್ಞೆಯನ್ನುಲ್ಲಂಘಿಸುವವನೂ ಧರ್ಮವಿಮುಖನೂ ಸ್ವಕುಲಾಚಾರವನ್ನು ತ್ಯಜಿಸಿದವನೂ ಅನೀತಿ ದುರಾಚಾರಗಳನ್ನು ಮಾಡುವವನೂ ಹಾಸಿಗೆಯ ಮೇಲೆ ಬಿದ್ದುಕೊಂಡು ಗೊರಕೆ ಹೊಡೆಯುವುದೇ ಲೇಸು. ಏಕೆಂದರೆ, ಅಂತಹ ವ್ಯಕ್ತಿಗಳಿಂದ ಪರರಿಗೆ ಪೀಡೆಯೇ ಹೊರತು ಉಪಕಾರವಾಗುವದಾಗಿಲ್ಲ. ಇದಕ್ಕೆ ವಿಪರೀತವಾಗಿ ಸದಾಚಾರಿಯೂ ಧಾರ್ಮಿಕನೂ ಪರೋಪಕಾರಿಯೂ ಗುರುಹಿರಿಯರಲ್ಲಿ ಭಕ್ತಿಯುಕ್ತನೂ ನೀತಿಗೂ ಧರ್ಮಕ್ಕೂ ಅನುಕೂಲವಾಗಿ ನಡೆಯುವವನೂ ಎಚ್ಚರವಾಗಿರುವುದು ಮೇಲು; ಏಕೆಂದರೆ, ಅವನು ಸಮಾಜಕ್ಕೂ ಇತರ ಪ್ರಾಣಿಗಳಿಗೂ ಯಥೇಷ್ಟ ಹಿತವನ್ನು ಮಾಡಬಲ್ಲನು.

ಜಯಂತಿ — ಭಗವನ್, ಬಲಿಷ್ಠರಾಗಿರುವುದು ಉತ್ತಮವೆ? ನಿರ್ಬಲರಾಗಿರುವುದೆ?

ಮಹಾವೀರ — ಜಯಂತಿ, ಮೇಲೆ ಹೇಳಿದ ಪಾಪಾತ್ಮರು ನಿರ್ಬಲರಾಗಿರುವುದೇ ಒಳ್ಳೆಯದು. ಅವರು ದುರ್ಬಲರಾಗಿರುವುದರಿಂದ ಅನ್ಯಪ್ರಾಣಿಗಳು ಅವರ ಪೀಡೆಯಿಂದ ಬದುಕುವುವು. ಆದರೆ ಧರ್ಮಾತ್ಮರು ಬಲಿಷ್ಠರಾಗುವುದೇ ಉತ್ತಮ; ಏಕೆಂದರೆ ಅವರು ತಮ್ಮ ಬಲದಿಂದ ಇತರರಿಗೆ ಕಲ್ಯಾಣವನ್ನು ಮಾಡಬಲ್ಲರು.

ಜಯಂತಿ — ಭಗವನ್, ಜೀವನು ಸುಖಾರ್ಥಿಯಾಗಿರುವುದು ಉತ್ತಮವೆ? ಅಲಸಿಯಾಗಿರುವುದೆ?

ಮಹಾವೀರ — ಜಯಂತಿ, ಧರ್ಮಾತ್ಮರು ಉದ್ಯೋಗಿಗಳಾಗಿರುವುದೇ ಲೇಸು. ಆದರೆ ಪಾಪಾತ್ಮರು ಆಲಸಿಗಳಾಗಿರುವುದೇ ಮೇಲು. ಏಕೆಂದರೆ, ಅಷ್ಟು ಜೊತ್ತು ಅವರು ದುಷ್ಕಾರ್ಯಗಳಿಂದ ಬದುಕುವರು.

— ಶ್ರೀ ಕೆ. ಭುಜಬಲಿ ಶಾಸ್ತ್ರಿ,
ಮೂಡುಬಿದ್ರೆ.

("ಆದರ್ಶ ಜೈನ ಮಹಿಳೆಯರು"ದಿಂದ)

ಕೇರಳವಲ್ಲಿ ಶಿಕ್ಷಣ

(೧೯೫೧ ದಿಂದ)

ಕಣಿಯಾಗಾಗ ಶಾಲಾ ವ್ಯವಸ್ಥಾಪಕರು ಇದನ್ನು ಒಪ್ಪಿದರೂ, ಇಂತಹ ಒಂದು ಕ್ಷುದ್ರವೆನಿಸಬಹುದಾದ ಕೆಲಸವನ್ನು ಉಪರಾಷ್ಟ್ರಪತಿಗಳು ಮಾಡುವುದು ಸಮಂಜಸವೆಂದು ಬಗೆವಿಲ್ಲ. ಆದುದರಿಂದ, ಈ ಪಠ್ಯ ಪುಸ್ತಕಗಳ ಪರಿಶೀಲನೆಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟ ಲೋಕಸಭಾ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ಏರ್ಪಡಿಸಬೇಕು ಎಂದು ಹೇಳಲಾಗಿದೆ.

ಜನ ಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆಗಾಬರಿಯೇಕೆ?

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಹಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

Edited Printed & Published by K. H. Shetty, at the Navayuga press Udipi S. India

ನವಯುಗ

ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮. ವಾರ ೩. 18-9-1958 Vol 38. No. 3.

ಅಭಿಪ್ರಾಯ

ಕೇರಳದಲ್ಲಿ ಸಂಪೂರ್ಣ ಅರಾಜಕತೆಯಿದೆ- ಅದಕ್ಕೆ ವಿರೋಧೀಪಕ್ಷ ಕಾರಣವಲ್ಲ.

ಶ್ರೀ ನಂಬೂದರಿ ಪಾದರೇ ಮುಂದೆ ಬಂದು ಜನತೆಯಲ್ಲಿ ನೆಲೆಯೂರಿರುವ ಅಭದ್ರತಾ ಭಾವನೆಯನ್ನು ದೂರ ಮಾಡಬೇಕು

ಅಖಿಲ ಭಾರತೀಯ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ ಯು. ಎಲ್. ದೇಬಾರರು ತನ್ನ ಏಳು ದಿನದ ಕೇರಳ ರಾಜ್ಯ ಸಂಚಾರ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು. ಕೇರಳ ರಾಜ್ಯದ ಬಗ್ಗೆ ಅವರು ಎರ್ನಾಕುಲಮಿನಲ್ಲಿ ತಮ್ಮ ಅಭಿಪ್ರಾಯವನ್ನೂ ಸವಿವರವಾಗಿ ತಿಳಿಸಿದರು. ಅದರ ಸಾರಾಂಶವನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಕೇರಳ ರಾಜ್ಯದ ವಾತಾವರಣವು ಒಂದೆಡೆಯಿಂದ ಇನ್ನೊಂದೆಡೆಯಲ್ಲಿ ಕಹಿ ಅನುಭವಗಳು, ದ್ವೇಷ ಮತ್ತು ಅಭದ್ರತೆಗಳಿಂದ ಮಲಿನವಾಗಿದೆ ವಿವೇಚನಾಶೀಲ ವ್ಯಕ್ತಿಗಳೆಲ್ಲರೂ ಇಂತಹ ಕಲುಷಿತ ವಾತಾವರಣವು ತಿಳಿಯಾಗಬೇಕೆಂದು ಬಯಸುತ್ತಾರೆ. ರಾಜ್ಯದಲ್ಲಿ ಈಗಿರುವ ಪರಿಸ್ಥಿತಿಗಳಿಗೆ ಅಲ್ಲಿನ ಕಮ್ಯುನಿಸ್ಟ್ ಸರಕಾರ ಸ್ವೀಕರಿಸಿದ ಕೆಲವು ಧ್ಯೇಯಗಳೂ ಕಮ್ಯುನಿಸ್ಟ್ ಪಕ್ಷದ ನಾಯಕತನದ ಪರಿಣಾಮವೂ ಕಾರಣವಾಗಿದೆ. ಸರಕಾರ ಮತ್ತು ಕಮ್ಯುನಿಸ್ಟ್ ಪಕ್ಷಗಳು ತನ್ನ ಧ್ಯೇಯ ಹಂಗೂ ಸಾಧನೆಗಳನ್ನು ಪರಿವರ್ತಿಸಿಕೊಳ್ಳಬೇಕು ಮತ್ತು ಈ ಅವಶ್ಯಕ ಕೆಲಸಕ್ಕೆ ಅಲ್ಲಿನ ಮುಖ್ಯ ಮಂತ್ರಿ ಶ್ರೀ ನಂಬೂದರಿಪಾದರೇ ಮುಂದಾಗಬೇಕು.

ಪ್ರಜಾಪ್ರಭುತ್ವ ವಿಧಾನವನ್ನು ಪುನಃ ಸ್ಥಾಪಿಸಲು ಸಾಕಷ್ಟು ಪ್ರತಿಕ್ರಿಯೆಗಳು ಈಗಾಗಲೇ ಕಂಡು ಬರುತ್ತವೆ ಕೇರಳದ ಮುಖ್ಯ ಮಂತ್ರಿಯವರೂ ಅವರ ಪಕ್ಷವೂ ತನ್ನನ್ನು ಗಮನಿಸದಿರಬಹುದಾದರೂ ಸಾರ್ವಜನಿಕ ಪ್ರತಿಕ್ರಿಯೆಯನ್ನು ಗಣನೆಗೆತಾರದಿರುವುದು ಮಾತ್ರ ಅಸಾಧ್ಯ. ಶ್ರೀ ನಂಬೂದರಿಪಾದರು ಕಳೆದ ನವೆಂಬರ್ ಜುಲೈ ತಿಂಗಳಲ್ಲಿ ಪ್ರಧಾನ ಧ್ಯೇಯಗಳ ಮಾಲಿಕೆಯನ್ನು ಹೊರಡಿಸಿದ ಸಮಯದಿಂದಲೇ ಅಲ್ಲಿ ಅಭದ್ರತೆಯ ಭಾವನೆಯು ಉದ್ಭವಿಸಲು ಆರಂಭವಾಗಿದೆ

ತನ್ನ ಭಾವನೆಯೂ ಮುಖ್ಯ ಮಂತ್ರಿ ಪಾದರ ಭಾವನೆಯೂ ಏಕರೂಪಕ್ಕೆ ಬರಲು ಅಸಾಧ್ಯವಾಯಿತು. ತಾನೊಬ್ಬ ಪಕ್ಷೀಯ ವ್ಯಕ್ತಿಯೆಂದವರು ಜಾಡಿಸಿಬಿಟ್ಟರು ತಾನು ನಿಜವಾಗಿಯೂ ಶ್ರೀ ನಂಬೂದರಿ ಪಾದರನ್ನು ವಿರೋಧಿಸುವ ಪಕ್ಷಕ್ಕೆ ಸೇರಿಕೊಂಡಿದ್ದೇನೆ; ಆದರೂ ದ್ವೇಷ ಮತ್ತು ಹೋರಾಟಗಳನ್ನು ಎಬ್ಬಿಸಿ ತನ್ನ ಪಕ್ಷದ ಹಿತವನ್ನು ಬಯಸಲು ತಾನೆಂದೂ ಯೋಚಿಸುವುದಿಲ್ಲ. ಏಕೆಂದರೆ, ಹಾಗೆ ಮಾಡಿದರೆ, ಅದು ತನ್ನ ಪಕ್ಷಕ್ಕೆ ಸೇವೆಮಾಡಿದಂತಾಗುವುದಿಲ್ಲ

ಮುಖ್ಯಮಂತ್ರಿಯವರಿಗೆ ಸರಕಾರದ ಧೋರಣೆ ಮತ್ತು ಪಕ್ಷದ ನಿಲುವುಗಳು ಸಂದೇಹ ಮತ್ತು ಅವಿಶ್ವಾಸಗಳಲ್ಲಿ ಪರಿಣಾಮಹೊಂದಿದ ಉದಾಹರಣೆಯನ್ನು ವಿವರಿಸಿ ಹೇಳಿದೆನು ಅವನ್ನು ನಿರಾಕರಿಸುವ ಹಕ್ಕು ಅವರಿಗಿದೆ; ಆದರೂ, ಅವೆಲ್ಲವನ್ನೂ ವಿಪಕ್ಷೀಯವಾಗಿ ನುಡಿದುದಲ್ಲವೆಂದು ಮುಖ್ಯಮಂತ್ರಿಗಳು ಒಂದು ದಿನ ತಿಳಿದುಕೊಳ್ಳಬಹುದು.

ಕಾಂಗ್ರೆಸ್ಸಿಗೆ ತುಂಬ ಪ್ರಯೋಜಕರವಾದ ಕೆಲಸಗಳನ್ನು ಮಾಡಬೇಕಾಗಿದೆ. ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿಸಂವಿಧಾನ ಮಾನ್ಯವಾಗುವ ರೀತಿಯಲ್ಲಿ ಅಧಿಕಾರ ಪಕ್ಷದಿಂದ ಮಾತ್ರ ಸಾಧ್ಯವಾಗುವ ನಾಗರಿಕರ ಸಮಾನತೆ ವ್ಯಕ್ತಿಗಳ ಭದ್ರತೆ, ಸಂ



ಅಲಾಸ್ಕಾದಲ್ಲಿನ ಎಸ್ಕಿಮೊಗಳು
ಇಲ್ಲಿಯ ಮುಖ್ಯ ಸಂಪತ್ತುಗಳು ಟಿಂಬರ್, ಗಣಿಸಂಪತ್ತು, ಎಣ್ಣೆ ಕಲ್ಲಿದ್ದಲು ಅಲ್ಲದೆ ಬಂಗಾರದ ಉತ್ಪಾದನೆ ಲಾಭದಾಯಕವಾಗಿರುವುದು

ಪತ್ತುಗಳ ರಕ್ಷಣೆಯನ್ನೂ ಮಾಡಬೇಕಾಗಿದೆಯಲ್ಲದೇ; ಸಮರ್ಥ ವಿರೋಧೀ ಪಕ್ಷವಾಗಿಯೂ ಇರಬೇಕಾಗುವುದು ಈಗ, ವಿರೋಧೀ ಪಕ್ಷಗಳಿಂದ ಸಕಲಕಾರವನ್ನು ಕೋರಿದ ಮುಖ್ಯ ಮಂತ್ರಿಯವರು ತಮ್ಮ ಪಕ್ಷೀಯರ ತಾತ್ವಿಕ ಬನಾದಿಯೇನೇ ಇರಲಿ, ಘಟನೆಯ ತತ್ವಗಳು ಹಾಗೂ ಪ್ರಜಾಪ್ರಭುತ್ವವು ಗೌರವಿಸಲ್ಪಡುವುದೆಂಬ ವಿಶ್ವಾಸವನ್ನು ಹುಟ್ಟಿಸಬೇಕಾಗಿದೆ. ತತ್ವಗಳನ್ನು ಹೊಂದಿಕೊಂಡೇ ಸಹಕಾರವಿದೆ ಮುಖ್ಯಮಂತ್ರಿಯವರ ಕೀಲಿಕೆಯಲ್ಲಿ ಈ ವಿಷಯವಿದ್ದು ಅವರು ಅದನ್ನು ಅನುಸರಿಸುವರೆಂದು ನಂಬಿಗೆಯಿದೆ.

ರಾಜ್ಯದಲ್ಲಿ ನಡೆದ ಗಲಭೆ, ಕೊಲೆ ಮೊದಲಾದುವು ಕೆಲವು ಕೇವಲ ವಿರೋಧೀ ಪಕ್ಷಗಳ ಸೆಣಸಾಟದಿಂದಲೇ ಎನ್ನುವುದು ಅಸಾಧ್ಯ ಸರಕಾರದ ಕಾನೂನುಕಾಯದೆಗಳನ್ನೂ ಕಟ್ಟಳೆಗಳನ್ನೂ ವ್ಯವಹಾರಕ್ಕೆ ತರುವ ಪದ್ಧತಿಯಿಂದಲೇ ಹಾಗಾಗಿದೆ. ಕಟ್ಟಳೆಗಳನ್ನು ಹಿಂತೆಗೆದುಕೊಂಡುದರಿಂದ ಕಮ್ಯುನಿಸ್ಟ್ ಪಕ್ಷಕ್ಕೆ ಸರಕಾರದ ಕೃಪಾಕಟಾಕ್ಷವಿದೆ ಎಂದು ಜನರು ತಿಳಿಯುವಂತಾಯಿತು.

ಕೇರಳ ಸರಕಾರವು ಅಧಿಕಾರಕ್ಕೆ ಬಂದೊಡನೆಯೇ ಹಿಂದಿನ ಸರಕಾರಗಳ ವಿರುದ್ಧ ದೂರಿತು. ಸಂಚವಾರ್ಷಿಕ ಯೋಜನೆಯಲ್ಲಿ ಕಾಯ್ದಿರಿಸಿದ ಅಂಶವು ಅತೃಪ್ತಿಕರವೆಂದು ಕೇಂದ್ರಸರಕಾರವನ್ನು ನಿಂದಿಸಿತು ಆದರೆ, ಒದಗಿಸಲಾದುದನ್ನೇ ಪೂರೈಸಲು ಸಾಧ್ಯವಾಗದೆ ಹೋಯಿತು. ರಾಜ್ಯದಲ್ಲಿ ಯೋಜನಾಗುರಿಯನ್ನು ಸಾಧಿಸಲು ಶಾಂತಿ ವತ್ತು ಕುತೂಹಲಗಳು ಬೇಕು. ಹೀಗಾಗಿ ಕೇರಳದಲ್ಲಿನ ಅಶಾಂತತೆಯಿಂದಾಗಿಯೇ ಎಲ್ಲವೂ ಅಪೂರ್ಣವಾ

(ಅನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O **MANGALORE.** Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಪಿಗ್ಮಿ — ಜನಪ್ರಿಯವಾದ ಸುಲಭ ಉಳಿತಾಯ ಯೋಜನೆ — ಸಿಂಡಿಕೇಟ್ ಬೇಂಕ್

ಕಥಾ ವಿಹಾರ

ಇದೇಕೆ ಹೀಗೆ?

ಅವರಿಬ್ಬರ ಸ್ನೇಹಲತೆಯು ಬೆಳೆದು ಬರುತಿತ್ತು: ಆದರೆ ಅದಕ್ಕೆ ಯಾರು ಹುಳಿ ಹಿಂಡಿದರು?

ಒಂದೇ ಕೋಣೆಯಲ್ಲಿ ವಾಸವಾಗಿದ್ದ ಸೋಮು ರಾಮು ಇಂದು ಬೇರೆ ಬೇರೆಯಾಗಿದ್ದಾರೆ. ಅವರಿಬ್ಬರ ಜೀವನವು ಒಂದಾಗಿ ಒಂದು ಕಾಲದಲ್ಲಿ ನಾಗಿತ್ತು. ರಾಮು ತನ್ನ ಬಡತನದಿಂದ ಬಹು ಬಳಲಿದ್ದರೆ ಸೋಮು ತನ್ನ ಸಂಪತ್ತಿನಿಂದ ಹಿಗ್ಗಿದ್ದನು. ಆದರೆ ಇದೆಂತೋ ಅವರಲ್ಲಿ ಏಕರಸ ಸಾಧಿಸವಾಗಿತ್ತು

೦೦ ೦೦

ಸೋಮು. ರಾಮು ಪುತ್ತೂರನ್ನು ಸೇರುವ ಮೊದಲೇ ಪುತ್ತೂರು ಸೇರಿದ್ದನು. ವಿದ್ಯಾರ್ಥಿ ದೆಸೆಯಲ್ಲಿ ರಾಮುವಿಗೆ ಸ್ವಲ್ಪ ಸೋಮುವಿನ ಪರಿಚಯವಿತ್ತು. ರಾಮುವಿಗೆ ಅಲ್ಲೇ ಅವನಿರುವ ತಾಲೂಕು ಆಫೀಸಿನಲ್ಲೆ ಕೆಲಸವಾಯಿತೆಂದಾಗ ಸೋಮುವಿನ ನೆನಪು ಆತನಿಗೆ ಅನಿವಾರ್ಯವಾಗಿಯಾಯಿತು ರಾಮು, ಮುಂಚಿತವಾಗಿ ತಾನು ಬರುವ ದಿನವನ್ನು ಸೂಚಿಸಿ ಸೋಮು ಒಸ್ ಸ್ಟೇಂಡ್ ಕಾಯುವಂತೆ ಮಾಡಿದ್ದನು.

ಇದೀಗ ಎರಡು ವರ್ಷಗಳಿಂದ ಅವರಿಬ್ಬರೂ ಒಂದೇ ಕೋಣೆಯಲ್ಲಿ ವಾಸವಾಗಿದ್ದರು. ತಮ್ಮ ಕಷ್ಟಸುಖಗಳ ವಿಚಾರ ಅವರೆ. ಜನ್ಯೋನ್ಯ ವಿನಿಮಯ ಮಾಡಿಕೊಳ್ಳುತ್ತಿದ್ದರು. ರಾಮು ವಿನ ವಿಚಾರ ಧಾರೆಗಳ ಅರಿವು ಸೋಮುವಿಗೆ ಚೆನ್ನಾಗಿಯೇ ಆಗಿತ್ತು.

ರಾಮು ಬಹಳ ಕಷ್ಟದಿಂದ ಓದಿ ಮೆಟ್ರಿಕ್ ಪಾಸಾಗಿ ಯಾರು ಯಾರ ಕೈಕಾಲು ಹಿಡಿದು ತಾನು ಕೆಲಸಮಾಡಿಕೊಂಡಿದ್ದನು. ಕಲಿಯುತ್ತಿರುವಾಗಲೇ ಆತನ ತಾಯಿ ತಂದೆಗಳು ಕಾಯಿಲೆಯಿಂದ ನರಳುತ್ತಿದ್ದು ಸಾವನ್ನಪ್ಪುವವರಂತಿದ್ದರು. ಆದರೂ ಏನೊ ರಾಮುವಿನ ಪುಣ್ಯದಿಂದ ಇದುತನಕ ಬದುಕಿ ಉಳಿದಿದ್ದರು. ಪ್ರಾಯ ಒಂದೆ ಹುಡುಗಿ, ರಾಮುವಿನ ತಂಗಿ ಮನೆಯಲ್ಲಿರುವುದು ಎಲ್ಲರಿಗೂ ಅಸಮಂಜಸವಾಗಿತ್ತು.

ರಾಮುವಿನ ತಂದೆ ಅಸ್ತಿಪಂಕರಾಗಿರಲಿಲ್ಲ. ವಾಗನನ್ನು ಕಲಿಸಲು ಅವರು ತುಂಬಾ ಶ್ರಾಲಮಾಡಿದ್ದರು. ಪ್ರತಿನಿತ್ಯವೂ ಅವರು ಕಾಯಿಲೆಯಿಂದ ನರಳುತಿದ್ದುದು ಮಾತ್ರವಲ್ಲದೆ ನಿರುದ್ಯೋಗಿಯೂ ಆಗಿದ್ದರು. ಸಾಲಮಾಡಿ ಜೀವಿಸುವುದು ಅವಶ್ಯವಾಗಿತ್ತು ಅವರಿಗೆ. ಸಾಲ ಮಾಡುವುದು ಬಹಳ ಸುಲಭ. ಆದರೆ ಅದರ ಬಡ್ಡಿ ಸೇರಿ ಸಾಲ ಅನೇಕ ಬಾರಿ ಇಮ್ಮಡಿಯಾಗುವುದಿದೆ. ಹಾಗೆಯೇ ಆಗಿದೆ ಇಂದು ಇವರ ಪರಿಸ್ಥಿತಿ.

ತಂದೆತಾಯಿಗಳ ಹೊಟ್ಟೆ ತುಂಬಿಸುವ ಭಾರ ಈಗ ರಾಮುವಿನ ತಲೆಯ ಮೇಲೆ ಬಿದ್ದಿತ್ತು. ಸಾಲದ ಸಂಪೂರ್ಣ ಹೊಣೆ ಆತನ ಮೇಲೆ ಬಿದ್ದಿತ್ತು.

ಈಗಿನ ಕಾಲದಲ್ಲಿ ಪ್ರಾಂತೀಯ ಸರಕಾರದ ನೌಕರರು ಜೀವನ ನಿರ್ವಹಿಸುವುದು ಬಹಳ ಕಷ್ಟ. ಸಿಗುವುದು ನಾಲ್ಕು ತಾಸು ಸಂಬಳ. ಹೊಸ ವೇತನ ಮಟ್ಟವನ್ನು ಸರಕಾರ ಘೋಷಿಸಿದರೂ ಅದು ಜಾರಿಯಾಗುವಾಗ ಅನೇಕ ವರ್ಷಗಳು ಕೂಡಾ ಕಳೆಯುವುದಿದೆ. ತನ್ಮಧ್ಯೆ ನೌಕರರು ಹೆಚ್ಚಿನ ಸಂಬಳ ಬರುವುದೆಂದು ಸಾಲ ಮಾಡಿ ತಮ್ಮ ಜೀವಾರ್ಪಣೆ ಮಾಡಬೇಕಾದ ಸಂದರ್ಭವು ಬಂದೊದಗುವುದಿದೆ. ಸಾಲವನ್ನು ಮೂಲಕ್ಕೆ ಗಂಟುಹಾಕಿದ್ದ ರಾಮು ಸಾಲಗಾರರಿಂದ ಸಂಪೂರ್ಣ ಹತನಾಗಿದ್ದನು.

ಈ ರೀತಿ ಹೊಣೆಯನ್ನು ಹೊತ್ತಿದ್ದ ರಾಮು ಬಹು ಸೂಕ್ಷ್ಮ ರೀತಿಯಲ್ಲಿ ಕರ್ಚುಮಾಡುತ್ತಿದ್ದನು. ಕೇವಲ 25 ರೂಪ್ಯಾಗಳಲ್ಲಿ ತನ್ನೊಟ್ಟಿನ ಜೀವನವನ್ನು, ಆದರಲ್ಲೂ ಸರಪೂರಲ್ಲಿ ನಿರ್ವಹಿಸುತ್ತಿದ್ದನು. ಬೆಳಗ್ಗೊಂದು ಲಘುಪಹಾರ, ಮಧ್ಯಾಹ್ನ ಮತ್ತು ರಾತ್ರಿಯೊಂದು ಊಟವನ್ನು ಬಿಟ್ಟರೆ ಅವನು ಬೇರೇನನ್ನೂ ಸೇವಿಸುತ್ತಲಿರಲಿಲ್ಲ. ಕೋಣೆ ಬಾಡಿಗೆದ್ದಾದರೂ ಸೋಮು ಆದರ ಹೆಚ್ಚಿನಂಶದ ಪಾಲುಗಾರನಾಗಿದ್ದನು. ರಾಮು ಮಡಿವಾಳನಿಂದ ಮಡಿಮಾಡಿಸಿದ ಬಟ್ಟೆಗಳನ್ನು ಎಂದೂ ಧರಿಸಿದವನಲ್ಲ ಅವನಿಗೆ ಅವನೇ ಮಡಿವಾಳನಾಗಿದ್ದನು. ಹೀಗೆ ಸಾಧ್ಯವಾದಷ್ಟು ಅವನು ತನ್ನ ಕರ್ಚಿನಲ್ಲಿ ಮಿತವ್ಯಯ ಸಾಧಿಸಿದ್ದನು.

ಸೋಮು ಮಿತವ್ಯಯಿ ಆಗದಿದ್ದರೂ, ಅನಾವಶ್ಯಕ ಹಣ ಕರ್ಚುಮಾಡುವವನಲ್ಲ. ಧನವಂತನಾಗಿದ್ದರೂ ಬಡವನಂತೆ ವರ್ತಿಸುವುದು ಅವನ ಬದಲಾಗದ ಧೋರಣೆಯಾಗಿತ್ತು. ಸಾಯಂಕಾಲದ ಕಾಫಿ ಆಗತ್ಯವೆನಿಸಿದಾಗ ಮಾತ್ರ ಅವನು ಕುಡಿಯುತ್ತಿದ್ದನು. ಅವನು ಇಸ್ತ್ರಿ ಅಂಗಿಗಳನ್ನು ಧರಿಸುವುದು ತಿಂಗಳಿಗೊಮ್ಮೆ ಮಾಡಿಕೆಯಾಗಿತ್ತು. ಮನೆಗೆ 2, 3 ತಿಂಗಳಿಗೊಂದು ಬಾರಿ ಅವನು ಹೋಗಿಬರುತಿದ್ದನು. ಮನೆಗೆ ಹೋಗುವಾಗ ತನ್ನ ನೆಚ್ಚಿನ ಮಡದಿಯ ಮೆಚ್ಚುಗೆಯ ಸಾಮಾನುಗಳನ್ನು ಅವನು ಆಗ ತೆಗೆದುಕೊಂಡು ಹೋಗುತಿದ್ದನು.

ಮಾನವಿಕ ಸೇವೆಗಳಲ್ಲಿ ಪೋಷಣೆಯೊಂದು ಪ್ರಾಚೀನ ಕಾಲದಿಂದಲೂ ಅಪೇಕ್ಷಾವಾಗಿದೆ. ಹಳ್ಳಿಗಳಲ್ಲಿ ವಾಸವಾಗಿರುವ ಅಧಿಕ ಸಂಖ್ಯಾಕ ಭಾರತೀಯರಿಗೆ ಮತ್ತಳಿ ಪೋಷಣೆಯ ಮಹತ್ವವನ್ನು ಸಮಾಜವಿಕಾಸ ಕ್ಷೇತ್ರಗಳಲ್ಲಿ ಕೊಡಲಾಗುತ್ತಿದೆ ಮೇಲಿನ ಚಿತ್ರದಲ್ಲಿ ಸಂಜಾಬ ರಾಜ್ಯದಲ್ಲಿ ಒಬ್ಬಾಕೆ ಸಂದರ್ಶಕಳು ತಾಯಿಗೆ ಮಗುವನ್ನು ಹೇಗೆ ಉಪಚರಿಸಬೇಕೆಂಬುದರ ಬಗ್ಗೆ ಕಲಹೆಯೊಯುತ್ತಿರುವುದನ್ನು ಕಾಣಬಹುದು.

ಸೋಮು ಮತ್ತು ರಾಮುವಿನಲ್ಲಿ ಸಾಧಿಸಿದ ಗೆಳತನ ಎಲ್ಲರನ್ನು ಬೆರಗುಗೊಳಿಸಿತ್ತು. ರಾಮು ಯಾವ ತರದ ಅಂಗಿ ಹೊಲಿಸಿದ್ದನೋ ಅದೇ ತರದ ಅಂಗಿ ಸೋಮುವಿನಲ್ಲೂ ತಯಾರಾಗುತಿತ್ತು. ಇವರನ್ನು ಕಂಡವರೆಲ್ಲಾ ಇವರು ಪೂರ್ವ ಜನ್ಮದಲ್ಲಿ ಸಹೋದರರಾಗಿರಬೇಕೆಂದು ಅನುಮಾನಪಡುತ್ತಿದ್ದರು ಇಬ್ಬರು ಪರಸ್ಪರ ಒಬ್ಬರನ್ನೊಬ್ಬರು ಅನುಸರಿಸುತಿದ್ದರು. ಇಬ್ಬರೂ ಒಂದಾಗಿಯೇ ಸ್ನಾನಮಾಡುತಿದ್ದರು. ಊಟದ ಸಮಯದಲ್ಲೂ ಒಬ್ಬರನ್ನೊಬ್ಬರು ಅಗಲುತ್ತಿರಲಿಲ್ಲ. ಆಫೀಸಿನ ವೆಚ್ಚಲು ಹೆತ್ತುವುದು ಇಬ್ಬರೂ ಒಂದೇ ಕೊಠಡಿನಲ್ಲಿ ಆಫೀಸಿನಿಂದ ಯಿಳಿಯುವುದು ಒಂದೇ ಸಮಯದಲ್ಲಿ. ಆಫೀಸಿನಿಂದ ಬಂದವರೇ ತಮ್ಮ ದಿನನಿತ್ಯದ ಕಷ್ಟಗಳನ್ನು ವಿವರಿಸುತ್ತಾ ಅವರು ಕಾಲಕ್ಷೇಪ ಕಳೆಯುತ್ತಿದ್ದರು.

ರಾಮು ತನ್ನ ಪ್ರಾಣ ಸ್ನೇಹಿತನಲ್ಲಿ ತನ್ನೆಲ್ಲ ವಿಚಾರಗಳನ್ನು ಹೇಳಿದ್ದನು. ತನ್ನ ಸಾಲ ಮೂಲದ ವಿಚಾರವನ್ನು ರಾಮು ಸೋಮುವಿಗೊಪ್ಪಿಸಿದ್ದನು. ಸೋಮುವಿನ ಮನ ಕರಗಿ ಅವನು ಅನೇಕ ಬಾರಿ ರಾಮುಗೆ ಹಣವ ಮಟ್ಟಿಗೆ ಸಹಾಯಮಾಡಿದ್ದನು. ಅಂತೂ ಅವರಲ್ಲಿ ಸಾಧಿಸವಾದ ಪ್ರೇಮ ಎಲ್ಲರನ್ನು ಬೆರಗುಗೊಳಿಸಿತ್ತು

ಪ್ರತಿತಿಂಗಳು ಆರ್ಥಿಕ ಮುಗ್ಗಟ್ಟಿನಿಂದ ನಜ್ಜುಗುಜ್ಜಾದ ರಾಮು ಕಷ್ಟವೆಂದು ತನ್ನ ಜೀವನ ಸಾಗಿಸುತ್ತಿದ್ದನು. ಅವನ ಈ ಕಷ್ಟ ಜೀವನ ಅನೇಕ ಅವನ ಸಹೋದ್ಯೋಗಿಗಳ ಸಹಾನುಭೂತಿಗೆ ಗುರಿಯಾಗಿತ್ತು ಅನ್ನಾಹಾರವನ್ನು ಬಿಟ್ಟು ಅವನು ತನ್ನ ಜೀವ ಉಳಿಸಿ ಮಾಡಿಕೊಳ್ಳುವನೆಂದು ಅವನ ಮಿತ್ರರು ಅವನನ್ನು ಬೆದರಿಸಿದ್ದರು. ಅವನ ಕ್ಷೀಣ ಶರೀರವನ್ನು ಕಂಡು ಅನೇಕರು ಡಾಕ್ಟರರಿಂದ ಸಲಹೆ ಪಡೆಯಬೇಕೆಂಬ ಸಲಹೆ ನೀಡಿದರು. ತಲೆಗೊಂದು ಮಾತು ಹೊರಡಲಾರಂಭಿಸಿದರೂ ಲಕ್ಷ್ಯ ವಿಶ್ವಾಸಿ ರಾಮು ತಾನು ಆರೋಗ್ಯವಂತನೆಂದೇ ಭಾವಿಸಿದ್ದನು.

ಒಂದನೆಯ ತಾರೀಕೆಂದರೆ ನೌಕರರಿಗೆ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ಬಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

PHONE 203 ESTD 1926

ಸೋವುಗಳ ಅತ್ಯುತ್ಕೃಷ್ಟ ಸಂಯೋಜಿಣೆ

ಅಮೃತಾಂಜನ

ತಾರಾ ಮಿ ಮಾಸಾ

ಭೂಮ್ಯಾಕಾಶಗಳ ತಾರೆಯರು ಜಗಜ್ಜನಪ್ರಾಣಹಾರೆಯರು

ಇತರ ಸ್ತ್ರೀಯರಂತೆ ಈ ತಾರಾ ಜೀವನವೂ ಒಂದು ರಹಸ್ಯಪೂರ್ಣ ಶಾಸ್ತ್ರ!

ರಾತ್ರಿಯಲ್ಲಿ ಪ್ರಭಾಮಯವಾಗಿ ಕಾಣುವ ಆಕಾಶದಲ್ಲಿ ತಾರೆಗಳು ಹೊಳೆಯುತ್ತವೆ. ಆ ತಾರೆಗಳ ಬೆಳಕಿನಿಂದಲೇ ಆಕಾಶವು ಪ್ರಭಾಮಯವಾಗುತ್ತದೆಂದರೂ ಸರಿ. ಕತ್ತಲೆ ಮುಸುಗಿದ ಸಿನಿಮಾ ಥಿಯೇಟರಿನೊಳಗೆ ಪ್ರಕಾಶಮಾನರಾಗಿ ಕಾಣಿಸುತ್ತಾರೆ ಸಿನಿಮಾ ತಾರೆಯರು. ಅಥವಾ ಆ ತಾರೆಯರಿಂದಲೇ ಸಿನಿಮಾ ಸರದೆ ಬೆಳಗುತ್ತದೆಂದರೂ ಹೇಳಬಹುದು. ಅಂತೆಯೇ ಅವರಿಗೆ ತಾರೆಯರೆಂಬ ಹೆಸರು ಸಾರ್ಥಕವಾಯಿತು. ತಾರೆ ಎಂಬುದು ಸ್ತ್ರೀ ವಾಚಕಕ್ಕೆ ಉಪಯೋಗಿಸುವ ಶಬ್ದವಾದರೂ, ಸಿನಿಮಾ ತಾರೆಯರ ಗುಂಪಿನಲ್ಲಿ ಪುರುಷ ತಾರೆಯರೂ ಬಳಕೆಯಾಗುತ್ತಾರೆ. ಅಂದರೆ ಸ್ತ್ರೀಯರು ಬೆಳಕಿನಲ್ಲೇ ಅವರು ಬೆಳಗುವವರು ಎಂದಾಗುತ್ತದೆ ಅಷ್ಟೆ.

ತಾರೆ ತಾರಾ ಎಂದರೆ ನಕ್ಷತ್ರವೆಂದಾದರೂ ಹೊಳೆಯುವಂಥಾದ್ದೆಂಬುದೇ ಅದರ ಭಾವಾರ್ಥ. ಕಣ್ಣಿನ ಗುಡ್ಡು, ಮುತ್ತು ಇವುಗಳಿಗೂ ತಾರೆಯೆನ್ನುವುದುಂಟು. ದಾಟು, ಪಾರು ಮಾಡು ಎಂಬರ್ಥಕ್ಕೂ ತಾರೆ ಬರುವುದುಂಟು. ಈ ಎಲ್ಲಾ ಅರ್ಥಗಳನ್ನೂ ಸಿನಿಮಾ ಸೂತ್ರಧಾರರು ಕಂಡುಕೊಂಡಿದ್ದಾರೆ. ತಾರೆಯ ಮುಖವು ಚೆನ್ನಾಗಿ ಹೊಳೆಯುವಂತೆ ನೋಡಿಕೊಳ್ಳುತ್ತಾರೆ. ಅದಕ್ಕಾಗಿ ಬಗೆಬಗೆಯ ಮೇಕಪ್ಪು ಮಾಯೆಗಳನ್ನು ಅವಲಂಬಿಸುತ್ತಾರೆ. ಅದರಲ್ಲಿ ತಜ್ಞರಾದ ತಂತ್ರಗಾರರಿದ್ದಾರೆ. ಸಿನಿಮಾದಲ್ಲಿ ಆ ತಾರೆ ಕಾಣಿಸುವುದರೊಳಗೇ ನಾಗರಿಕರಿಂದ ಹಿಡಿದು, ಗ್ರಾಮೀಣರವರೆಗೆ, ಆಬಾಲವೃದ್ಧರಿಗೂ ಅವಳ ಪರಿಚಯವಾಗುವಂತೆ ಮಾಡಿಬಿಡುತ್ತಾರೆ ಎಲ್ಲಾ ಸ್ತ್ರೀಯರಿಗೂ ಸಿನಿಮಾ ತಾರೆಯರೇ ಆದರ್ಶರಮಣಿ. ಅವಳ ನಡಿಗೆಯುಡುಗೆ ತೊಡುಗೆಗಳನ್ನೆ ಪ್ರತಿ ರಮಣಿಯೂ ಅವಲಂಬಿಸುವ ಆಶೆ ತೋರಿಸುತ್ತಾರೆ. ಸಿನಿಮಾ ತಾರೆಯ ಹಾವಭಾವನ್ನು ಕಲಿತು ಹಾಡಿ ವರನ ಬೀಟೆಯಾಡುವ ವಧೂಮಣಿಗಳಿದ್ದಾರೆ. ಕೆಲವರು ಸಿನಿಮಾ ತಾರೆಯ ಆದರ್ಶದಿಂದ ಉತ್ತಮ ಗೃಹಿಣಿಯರಾದರೆ, ಹೆಲವರು ಅದೇ ಆದರ್ಶದಿಂದ ಗೃಹಕ್ಕೆ ಹಿಡಿದ ಗ್ರಹಚಾರಿಣಿಯರಾಗುತ್ತಾರೆ. ಅಂತೂ ಒಳ್ಳೆಯದಾಗುವವರಿಗೂ ಕೆಡಕಾಗಿಸಿಕೊಳ್ಳುವವರಿಗೂ ಸಿನಿಮಾವೇ ಆದರ್ಶವೆನಿಸಿದ ಅಗ್ಗದ ಸಾಧನವಾಗಿದೆಯೆಂಬುದನ್ನು ಬಹಿರಂಗ ರಹಸ್ಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಎಷ್ಟೇ ಒಳ್ಳೆಯ ಕತೆಯಾದರೂ, ಎಷ್ಟೇ ಒಳ್ಳೆಯ ದೃಶ್ಯ—ಘಟನೆಗಳಿದ್ದರೂ ಆಕರ್ಷಣೆಯು ತಾರೆಯರಿಲ್ಲದಿದ್ದರೆ ಆ ಸಿನಿಮವು ತಾರಾಮವಾಗಲಾರದು. ಸಿನಿಮಾ ತಾರಕಾಂಡುದರಿಂದಲೇ ಅವರು ತಾರೆಯರು. ಕಣ್ಣು ಗುಡ್ಡುಗಳನ್ನು ತಿರುಗಿಸುವುದರಲ್ಲಿ, ಕುಣಿಸುವುದರಲ್ಲಿ ಇಡಿಯ ಸಿನಿಮಾವನ್ನೂ, ನೋಡುವ ಜನತೆಯ ಹೃದಯವನ್ನೂ ಮುಟ್ಟಿ ಕಲಕಿಸುವುದರಲ್ಲಿ ವೀಕ್ಷಣ ವಿಶೇಷಣಪಡೆದಿರುವುದರಿಂದಲೂ ಅವರು ತಾರೆಯರಾಗುತ್ತಾರೆ. ಏನೂ ಇಲ್ಲದೆ ಬರಿಯ ತಾರಾವಿಲಾಸಗಳಿಂದಲೇ ವಿಜಯ ಸಾಧಿಸಿದ ಸಿನಿಮಾ ಚಿತ್ರಗಳುಂಟು.

ಮುಖ್ಯ ಮೂರಾರು ತಾರೆಯರಿಗೇ ಮುಖ್ಯತ್ವವಾದನಂತರ ಉಳಿದ ಹಲವು ಮಂದಿ ನಟೀ ನಟರ ವಿಷಯ ಅಷ್ಟೊಂದು ಲಕ್ಷ್ಯವಾಡುವವರಿಲ್ಲ. ಮುಖ್ಯ ತಾರೆ ಸಾವಿರಾರು ಗಳಿಸಿದರೆ ಉಪನಟರು ನೂರಾರು ಕೂಡ ಗಳಿಸುವುದು ಕಷ್ಟ. ಮುಖ್ಯ ತಾರೆಯರ ಸಮಯಕ್ಕೆ ಸರಿಯಾಗಿ ಯಜಮಾನರುಗಳು ವರ್ತಿಸುವವರಾದರೆ, ಉಪತಾರೆಯರು ಕ್ಷುದ್ರಜೀವಿಗಳಂತೆ ಸಮಯ ಕಾದುಕೊಂಡಿರಬೇಕಾಗುತ್ತದೆ. ಈ ಉಪತಾರೆಯರಲ್ಲಿ ಎಕ್‌ಸ್ಟ್ರಾಗಳ ಪಾಡು ಪತ್ತೇಕವೇ ಇದೆ

ಈ ಎಕ್‌ಸ್ಟ್ರಾಗಳನ್ನು ಸಿನಿಮಾ ಚಿತ್ರಗಳಲ್ಲಿ ಯಾರೂ ಗುರ್ತಿಸುವುದಿಲ್ಲ. ಲಕ್ಷ್ಯವಾಡುವುದೂ ಇಲ್ಲ. ಅವರುಗಳು ಬೀದಿಗಳಲ್ಲಿ ಬೇಕಾದ ಹಾಗೆಲ್ಲಾ ಕಾಣಸಿಗುತ್ತಾರೆ. ಅವರ ವಿಶಿಷ್ಟರೀತಿಯ ನಡಿಗೆ ಉಡುಗೆಗಳನ್ನು ಜನರು ನೋಡಿ ಸ್ವಲ್ಪ ಕುತೂಹಲಿಗಳಾಗಿ ಸ್ವಾರಸ್ಯ ಕಳೆದುಕೊಳ್ಳುತ್ತಾರೆ. ಆದರೆ, ನಿಜವಾದ ಬೆಳಗುವ ತಾರೆಯರಿದ್ದಾರಲ್ಲವೆ, ಅವರು ಹಾಗೆಲ್ಲಾ ಬೀದಿಯಲ್ಲಿ ಕಾಣಸಿಗಲಾರರು. ಕಾಣು ಹೊಂಚಿದರೆ ಮಿಂಚಿ ಹೋಗುವರು! ಪಾರ್ಕು, ಬೀಚು, ಮುಂತಾದ ವಾಹ್ಯಾಳಿ ಪ್ರದೇಶಗಳಿಗೂ ಅವರು ಬರುವುದಿಲ್ಲ. ಪಾಪ, ಆ ಭಾಗ್ಯವನ್ನು ಅವರು ಪಡೆದಿಲ್ಲ ಜೈಲಿನಲ್ಲಿ ಮೋಲೀಸರು ಕಾಯುವಂತೆ ಅವರ ಮನೆಯಲ್ಲಿ ಘೂರ್ಕಾ ಕಾವಲಿರುತ್ತಾನೆ. ಅವರು ಸ್ಟೂಡಿಯೋವಿಗೆ ನಡೆದು ಹೋಗುವುದಿಲ್ಲ; ಓಡುವುದು ತಾರಿನಲ್ಲಿ. ಹಾಗೆ ಓಡುವಾಗ ಕೂಡಾ ಕೆಲವು ಮಹತ್ತು ವಿಕ್ಕ ತಾರೆಯರಾದರೆ ಮುಖವನ್ನೂ ತಲೆಯನ್ನೂ ಬುರಖಾದಿಂದ ಮುಚ್ಚಿಕೊಂಡು ಬಿಡುತ್ತಾರೆ ತಾರೆ ತಾನೆ? ಎಲ್ಲರ ಹಾಗೆ ಹಿಡಾಡಿದರೆ ಅವರೂ ಎಲ್ಲರ ಹಾಗೇ ಆಗಿ ಬಿಡುವುದಲ್ಲವೆ? ತಾರೆಯರು ರಾತ್ರಿಯಲ್ಲವ್ವೇ ಬೆಳಗಬೇಕು, ಬಿಳಿ ಪರದೆಯಲ್ಲವ್ವೇ ಹೊಳೆಯಬೇಕು. ವಾಲ್ ಪೋಸ್ಟರಿನಲ್ಲವ್ವೇ ಧಳಧಳಿಸಬೇಕು. ಇನ್ನು ಅಪೂರ್ವವಾಗಿ ಅವರು ಆಭರಣಗಳ ಅಂಗಡಿಯಲ್ಲಿಯೋ ಜವಳಿಯಂಗಡಿಯಲ್ಲಿಯೋ ಜನತೆಗೆ ಕಾಣಸಿಕ್ಕಿದಾಗ ಅವರು ಕುತೂಹಲಿಗಳಾದ ಜನತೆಯ ಗುಂಪಿಗೆ ಸಿಕ್ಕು ಹಿಂಬಾಗಿಲಿನಿಂದಲೋ ಮತ್ತೆ ಹೇಗೋ ಮಾಯವಾಗಿ ಬಿಡಬೇಕಾಗುತ್ತದೆ. ಆದಿನ ಸಂದರ್ಭಗಳು ಪತ್ರಿಕೆಯಲ್ಲಿರುವ ಸ್ವಾರಸ್ಯದ ಸುದ್ದಿಯಾಗುತ್ತವೆ. ಹೀಗೆ ಅನುದಿನವೂ ಎಲ್ಲರಂತೆ ಕಾಣಸಿಕ್ಕಿದರೆ ಸಿನಿಮಾ ಸ್ವಾರಸ್ಯವೆಲ್ಲಿ ಉಳಿದೀತು? ತಾರಾಪಟ್ಟವೆ ಬರುವುದೇ ಕಷ್ಟ, ಅಥವಾ ಅದೃಷ್ಟ. ಅದನ್ನು ಭದ್ರವಾಗಿ ಕಾಪಾಡಿಕೊಳ್ಳಲು ಅವರು ಅಪೂರ್ವಗಾಮಿನಿಗಳಾಗಿಯೇ ಇರಬೇಡವೆ?

ಆದರೆ ಸಿನಿಮಾ ನೋಟ್ಸರುಗಳಿಗೂ, ಕ್ಯಾಲೆಂಡರು, ಜಾಹೀರಾತು ಮೊದಲಾದುವುಗಳಿಗೂ ಆ ವಿದಿದ ನಿರ್ಬಂಧವೇನೂ ಇಲ್ಲ. ಏಕೆಂದರೆ ಅವು ನಿರ್ಜೀವಗಳು ಬೀದಿಯ ಗೋಡೆಗಳೆಲ್ಲಾ ಈ ನಿರ್ಜೀವ ತಾರಾಮಯ! ಅದನ್ನು ಕಾಣುವ ಜನರ ಕಣ್ಣುಗಳೆಲ್ಲಾ ಮಯಮಯ! ತಾರಾವಾಕ್ಯಗಳೋ, ಸಾಬಾನು ಸುಗಂಧ ದ್ರವ್ಯಗಳಿಗೆ ವೇದವಾಕ್ಯ. ಪತ್ರಿಕೆಗಳಿಗೂ ತಾರಾ ಸಹಾಯಬೇಕು ಅವರ ಹೊಳಪಿಲ್ಲದ ಪತ್ರಿಕೆ ಸಾರ್ವಜನಿಕರ ಕರಲಂಕಾರವಾಗಲಾರದು. ತಾರೆಯೇ ಪತ್ರಿಕೆಗೊಂದು ವಿಶೇಷ ಪ್ರಕಾಶದಾಯಿನಿ.

ಶಾಲೆಯಲ್ಲಿ ಒಂದನೇ ಕ್ಲಾಸು ಕಲಿಯುವ ಬಾಲರಿಂದ ಹಿಡಿದು ಮುದುಕರವರೆಗೂ ತಾರಾಪರಿಚಯವಿದವರಿಲ್ಲ. ಎಲ್ಲರೂ ಕೆಲವೊಂದು ತಾರೆಯರ ಅಭಿಮಾನಿಗಳಾಗಿರುತ್ತಾರೆ ಎಲ್ಲಾ ತಾರೆಯರಿಗೂ ಕೆಲವೋ ಹಲವೋ ಅಭಿಮಾನಿಗಳಿದ್ದೇ ಇರುತ್ತಾರೆ.

ಈಗೊಂದು ಮೂವತ್ತು ವರ್ಷಗಳ ಹಿಂದೆ ಹೀಗೆಲ್ಲಾ ತಾರಾ ಪ್ರಭಾವವಿರಲಿಲ್ಲ, ಆಗಲೂ ಲೋಕ ನಡೆಯುತಿತ್ತು. ಈಗಾದರೆ ಅವರಿಲ್ಲದೆ ಲೋಕ ನಡೆಯುವಂತೆ ಕಾಣುವುದಿಲ್ಲ. ಹಾಡು, ಸಿಗರೇಟು ಮೊದಲಾದ ಅಭ್ಯಾಸ ಅಂಟಿಕೊಳ್ಳುವುದಕ್ಕೆ ಮೊದಲೂ ಚೆನ್ನಾಗಿಯೇ ಜೀವನ ಸಾಗುತಿತ್ತು. ಅದು ಅಂಟಿಕೊಂಡಮೇಲೆ ಅದಿಲ್ಲದೆ ಜೀವನ ಸಾಗುತ್ತದೆಯೇ! ಹಾಗೆಯೇ ಸಿನಿಮಾ ವಿಲ್ಲದೆ ಈಗ ಜೀವನ ಸಾಗುವಂತಿಲ್ಲ. ದೂರದ ಒಂದು ಮೂಲೆಯ ಗ್ರಾಮಕ್ಕಾದರೂ ಒಂದು ಟೂರಿಂಗ್ ಸಿನೆಮಾಜೇರಿ, ಧ್ರುವ ಪ್ರದೇಶದ ಪ್ರಾಂತದ ಹಾಗೆ ವರ್ಷಕೊಂದಾವರ್ತಿಯಾದರೂ ಬಾರದೇ ಹೋದರೆ ಆ ಗ್ರಾಮ ಮುಂದುವರಿಯುವಂತಿಲ್ಲ.

ಸಂತೋಷಕ್ಕೂ ಸಿನಿಮಾಬೇಕು, ದುಃಖಕ್ಕೂ ಸಿನಿಮಾಬೇಕು, ವಧ್ಯಾಹ್ನ ರಣಗುಡುವ ಬಿಸಿಲಿನಲ್ಲಿ, ಅಥವಾ ಸುರಿಯುವ ಮಳೆಯಲ್ಲಿ ಕ್ಯೂನಿಂತು ನಾಗರಿಕರು ಸಿನಿಮಾ ಟಿಕೆಟ್ಟಿನ ತಪಸ್ಸು ಮಾಡುತ್ತಾರೆ ಇತರ ಸಾಧಾರಣ ಊರುಗಳಲ್ಲಿ ಕುಸ್ತ್ಯಾಕಸ್ತಿಯಿಂದ ಅಂಗಿ ಒಟ್ಟೆ ಹರಿದುಕೊಂಡು ಟಿಕೇಟು ಸಾಧನೆಮಾಡುತ್ತಾರೆ.

ಹೀಗೆ ಸಿನಿಮಾವನ್ನು ಮುಗಿಬಿದ್ದು ಎಲ್ಲರೂ ನೋಡುವುದು ಅದರಲ್ಲಿರುವ ತಾರಾ ಮಾಹಾತ್ಮ್ಯವನ್ನು ಕಣ್ಣಾರೆಕಂಡು ಆನಂದಿಸಲಿಕ್ಕೆ. ಆನಂದ ಪಡೆಯಬೇಕಾದುದು ಅವಶ್ಯಕವೆಂಬುದೇನೋ ನಿಜ. ಆದರೆ ಭ್ರಮೆಯೂ ಮೋಸವೂ, ವಾಮಾಚಾರವೂ ನೀತಾಖಿಲಾಷೆಯೂ ಅಂಟಿಕೊಂಡು ಬಿಡಬಾರದು. ಸಿನಿಮಾ ಚಿತ್ರವಾಯವಾಗುತ್ತಲೇ ಅಲ್ಲಿ ಬೆಳೆಪರದೆಯೇ ಉಳಿಯುವಂತೆ ಸಿನಿಮಾ ನೋಡಿದವರ ಹೃದಯವೂ ವಿಶುದ್ಧವಾಗಬೇಕು. ಹಾಗಾಗಿಸಿಕೊಳ್ಳುವ ಮನೋಧೈರ್ಯವನ್ನೂ, ಯೋಚನಾಶಕ್ತಿಯನ್ನೂ ಜನತೆ ಪಡೆಯಬೇಕು ಅಂದರೇನೇ ಸಿನಿಮಾ ನೋಡಿದ ಆನಂದವು ಸಾರ್ಥಕವೆನಿಸುತ್ತದೆ. ತಾರೆಯರ ವಿಲಾಸಗಳನ್ನು ನೋಡಿ ನಮ್ಮ ಬಾಳುವೆಯನ್ನು ಒಳ್ಳೆಯರೀತಿಯಲ್ಲಿ ತಾರಣಗೊಳಿಸಲು ನಾವಿನ್ನೂ ಕಲಿಯ ಬೇಕಾಗಿದೆ.

—ಶ್ರೀ ಎಂ. ರಂಗರಾವ್, ಮದ್ರಾಸು.

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಮ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.

ಬೆಲೆ- ಐದಾಣೆ ಮಾತ್ರ ಟ. ಖ. ಪ್ರತ್ಯೇಕ.

ನವಯುಗ ಪ್ರೆಸ್, ಉಡುಪಿ.

ನೆರೆಯ ರಾಜ್ಯ ಕೇರಳದಲ್ಲಿ ....

[ತಾ. 24 ಅಗೋಸ್ತು 1958ರಂದು]

ಕೈಮಗ್ಗದ ಬಟ್ಟೆ ಮತ್ತು ಪ್ಲೈವುಡ್ ತಯಾರಿಕೆಯ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ ಕೇರಳದ ಕಣ್ಣಾನೂರು. ಆರ್ಥಿಕ ವ್ಯವಹಾರದಲ್ಲಿ, ಕೈಗಾರಿಕೆಯಲ್ಲಿ ಕುಶಲವಾದ ಸರಳ ಜೀವನಕ್ಕೆ ಪ್ರಸಿದ್ಧ ಹೊಂದಿದ ಈ ಭಾಗದ ಜನರಿಗೆ ಆದರ್ಶ ಆರ್ಥಿಕ ಸೇವೆಯನ್ನು ನೀಡಬೇಕೆಂಬ ಉತ್ತಮ ಉದ್ದೇಶದಿಂದ ಸಿಂಡಿಕೇಟ್ ಬೇಂಕಿನ ಶಾಖೆಯೊಂದು ಇಪ್ಪತ್ತೈದು ವರ್ಷಗಳ ಹಿಂದೆ ಇಲ್ಲಿ ಸ್ಥಾಪಿಸಲ್ಪಟ್ಟಿತು.

ಅಂದಿನಿಂದ ಆ ಭಾಗದ ಕೇರಳೀಯರ ಪ್ರೀತಿ ಆದರಗಳಿಗೆ ಪಾತ್ರವಾಗಿ, ಅವರ ಸುಖದುಃಖಗಳಲ್ಲಿ ಸಹಭಾಗಿಯಾಗಿ ಸುರಿಯಲಾಗದ ಸೇವೆಯನ್ನು ಸಲಿಸುತ್ತಾ ಬಂದು ಇದೇ ಆಗೋಸ್ತು ಇಪ್ಪತ್ತನಾಲ್ಕರಂದು ತನ್ನೇ ಇಪ್ಪತ್ತೈದು ವರುಷಗಳ ಸಫಲ ಸೇವೆಯ ಸ್ಮರಣೆಗಾಗಿ, ತನ್ನ ಗ್ರಾಹಕರ ಸಂತೃಪ್ತಿಗಾಗಿ ಬೆಳ್ಳಿಹಬ್ಬವನ್ನು ತಲಿಚೇರಿಯ ವಿಶಪರಾದ ರೈಟ್‌ರೆವೆರೆಂಡ್ ಡಾ. ಸೆಬೆಸ್ಟಿನ್ ವಲ್ಲೂಪಿಳ್ಳಿಯವರ ಅಧ್ಯಕ್ಷತೆಯಲ್ಲಿ ಸೊಗಸಾಗಿ ಆಚರಿಸಿತು. ಕೇರಳದಲ್ಲಿರುವ ನಮ್ಮ 13 ಶಾಖೆಗಳೂ ದಕ್ಷಿಣ ಭಾರತದಲ್ಲಿರುವ ಇತರ 100 ಶಾಖೆಗಳೂ ತಮ್ಮ ಸಹ ಸಂಸ್ಥೆಯಾದ ಕಣ್ಣಾನೂರು ಶಾಖೆಯ ಫಲಭರಿತ ಸೇವೆಗಾಗಿ ಅಭಿನಂದಿಸುವುದಲ್ಲದೆ "ಅತ್ಯುತ್ತಮ ಬೇಂಕಿಂಗ್ ಸೇವಾ" ಪ್ರತಿಜ್ಞೆಯನ್ನು ಪುನರುಚ್ಚರಿಸುವುವು.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಉಡುಪಿ. (ದ ಭಾ.)

ಗೋ ವಿಜಯ

(ಗೋವಿನಕಥೆ)

ಶ್ರೀ ಮುಮ್ಮಶ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ಪಯಸ್ವರ ಶಿಕ್ಷಣಕ್ಕೂ ಅನುಕೂಲವಾದ ಕಥಾಸಂಗ್ರಹ.

ತಮ್ಮಪ್ಪಟ್ಟೆ ಹಾವೇ ಕತೆ, ಹಾಡು, ಅರ್ಥಗಂಭೀರತೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

80 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ವಿದೇಶೀಬಂಡವಳ

ಭಾರತದಲ್ಲಿ ಸುಮಾರು ೪೪೦ ಕೋಟಿ ವಿದೇಶೀ ಬಂಡವಳ!

ಯೋಜನಾಭಿವೃದ್ಧಿಗಾಗಿ ವಿದೇಶೀ ಬಂಡವಳವನ್ನು ಆಮಂತ್ರಿಸಿ ಬಂಡವಳಿಗಾರರಿಗೆ ಕೆಲವು ಸೌಕರ್ಯಗಳನ್ನು ನೀಡಲಾಗಿದೆ.

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಔದ್ಯೋಗೀಕರಣ ಕಾರ್ಯಕ್ರಮಗಳಿಗೆ ವಿಶೇಷ ಪ್ರಾಧಾನ್ಯ ಕೊಡಲಾಗಿದೆ. ಈ ಔದ್ಯೋಗೀಕರಣ ಕಾರ್ಯಕ್ರಮಗಳಿಗಾಗಿ ನಮಗೆ, ಆರ್ಥಿಕ ಪ್ರಮಾಣದಲ್ಲಿ ಬಂಡವಾಳ ಬೇಕಾಗುತ್ತದೆ. ಆದ್ದರಿಂದ ಸ್ವದೇಶದೊಳಗಿನ ಕೈಗಾರಿಕೋದ್ಯಮಿಗಳು ತೊಡಗಿಸುವ ಬಂಡವಾಳವಲ್ಲದೆ, ವಿದೇಶಿ ಬಂಡವಾಳವೂ ನಮ್ಮ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಲು ಅನುಕೂಲವಾಗುವುದು. ವಿದೇಶಿ ಬಂಡವಾಳವು ಈಗಾಗಲೇ ನಮ್ಮ ದೇಶದ ಪ್ರಜಲಿತ ಆರ್ಥಿಕ ಸ್ಥಿತಿಯನ್ನು ನಿರ್ಮಿಸುವ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸಿದೆ. ಕಳೆದ ಕೆಲವು ವರ್ಷಗಳಿಂದ, ಭಾರತದಲ್ಲಿ ತೊಡಗಿಸಲಾದ ವಿದೇಶಿ ಬಂಡವಾಳದ ಪ್ರಮಾಣವು ಹೆಚ್ಚುತ್ತಿದೆ. ೧೯೪೮ರಲ್ಲಿ ಅದು ೨೮೭.೭ ಕೋಟಿ ರೂಪಾಯಿಗಳಿದ್ದದು. ೧೯೫೫ರಲ್ಲಿ ಅದು ಅನಧಿಕೃತ ಅಂದಾಜಿನ ಪ್ರಕಾರ ೧೫೦ ಕೋಟಿ ರೂಪಾಯಿಗಳಷ್ಟು ಹೆಚ್ಚಾಗಿರುವುದೆಂದು ವ್ಯಕ್ತವಾಗುವುದು.

ನಮ್ಮ ದೇಶದ ಪ್ರಗತಿಗೆ ಹಾಗೂ ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಸಾಧನ ಸಂಪತ್ತುಗಳ ಸಂಗ್ರಹಣೆಗೆ ವಿದೇಶಿ ಬಂಡವಾಳವು ನೀಡಬಹುದಾದ ನೆರವನ್ನು ಭಾರತ ಸರಕಾರದವರು ಗಮನಿಸಿ ಯೋಜನಾವಧಿಯಲ್ಲಿ ಫಲದಾಯಕವಾಗುವಂತೆ, ೧೦೦ ಕೋಟಿ ರೂಪಾಯಿಗಳಷ್ಟು ವಿದೇಶಿ ಬಂಡವಾಳವನ್ನು ತೆಗೆದುಕೊಂಡಿರುವರು. ೧೯೫೮ರ ಕೈಗಾರಿಕಾ ನೀತಿಯ ನಿರ್ಣಯಾನುಸಾರ, ಭಾರತ ಸರಕಾರದವರು ಖಾಸಗಿ ಬಂಡವಾಳಗಾರರಿಗೆ, ವಿದೇಶಿಯರು ಮುಖ್ಯವಾಗಿ ವಿದೇಶೀ ಬಂಡವಾಳಗಾರರಿಗೆ, ಆವರಿಗಿರುವ ವ್ಯಾಪ್ತಿ ಹಾಗೂ ಸದವಕಾಶಗಳ ಬಗೆಗೆ ಭರವಸೆಯನ್ನು ನೀಡುವ ಅನೇಕ ಕ್ರಮಗಳನ್ನು ಕೈಗೊಂಡಿರುವರು. ಅವಶ್ಯಕತೆಗನುಗುಣವಾಗಿ ಸಾಮಾನ್ಯ ಕೈಗಾರಿಕಾ ನೀತಿಯ ಚೌಕಟ್ಟಿನೊಳಗೆ ಹಲಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಉದಾಹರಣೆಗೆ: ಅಧಿಕೃತ ನೀತಿಯ ಪ್ರಕಾರ ಶೈಲಿಸ್ಟ್ ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ಸ್ಥಾನವಿರುವುದು. ಅದೇ ಸಮಯದಲ್ಲಿ, ವಿದೇಶೀ ಉದ್ಯಮ ಸಂಸ್ಥೆ ಹಾಗೂ ಬಂಡವಾಳವು, ಸರಕಾರದವರೊಂದಿಗೆ ಪಾಲುಗೊಂಡು, ಆಯಿಲ್ (ಇಂಡಿಯಾ) ಲಿಮಿಟೆಡ್ ಎಂಬ ಸಂಸ್ಥೆಯು ರೂಪುಗೊಂಡಿದೆ.

ನಮ್ಮ ದೇಶದ ಉನ್ನತಿಗಾಗಿ, ಔದ್ಯೋಗೀಕರಣವು ಅವಶ್ಯಕ. ಅದನ್ನು ಅಭಿವೃದ್ಧಿಪಡಿಸಲು, ಭಾರತ ಸರಕಾರದವರು, ವಿದೇಶಿ ಕಂಪನಿಗಳು ಭಾರತೀಯ ಬಂಡವಾಳಗಾರರೊಂದಿಗೆ ಬಂಡವಾಳವನ್ನು ತೊಡಗಿಸುವುದಕ್ಕೆ ಉತ್ತೇಜನವೀಯುತ್ತಿರುವರು. ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಅವಶ್ಯಕವಾಗುವ ಯಂತ್ರೋಪಕರಣಗಳನ್ನು ವಿದೇಶಗಳಿಂದ ಕೊಂಡುಕೊಳ್ಳಬೇಕಾಗುವುದು. ಅಷ್ಟು ಬಂಡವಾಳವನ್ನು ತೊಡಗಿಸಲು ಮಂಜೂರಾತಿಯನ್ನು ಕೊಡಲಾಗುವುದು. ಈ ಮೊತ್ತವನ್ನು ವಿದೇಶೀ ಕಂಪನಿಯ ಶೇರು ಅಥವಾ ಪಾಲು ಮತ್ತು ಸಾಲಗಳೆಂದು ಪರಿಗಣಿಸಲಾಗುವುದು. ಕೈಗಾರಿಕೆಗಳಲ್ಲಿ ಭಾರತದ ಪಾಲು ಅಧಿಕಾಂಶವಾಗಿರಬೇಕೆಂದು ಭಾರತ ಸರ್ಕಾರದವರು ಇಚ್ಛಿಸುತ್ತಾರೆ. ಆದರೆ, ಅಗತ್ಯವಾದಲ್ಲಿ ವಿದೇಶೀಯರು ಅಧಿಕಾಂಶದ ಪಾಲನ್ನು ಇಟ್ಟುಕೊಳ್ಳುವುದಕ್ಕೂ ಸರ್ಕಾರದವರು ಅನುಮತಿ ನೀಡುವರು. ಅಂತಹ ಸಂದರ್ಭದಲ್ಲಿ, ಭಾರತೀಯರಿಗೆ ಕೆಲಸ ಕಲಿಯಲು, ಹಾಗೂ ಆಡಳಿತದಲ್ಲಿ ಅವರಿಗೆ ಅವಕಾಶ ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು.

ವಿದೇಶಿ ಬಂಡವಾಳಗಾರರು, ತೆರಿಗೆ ಇತ್ಯಾದಿಗಳನ್ನು ನೀಡಿದ ನಂತರ, ತಮ್ಮ ಲಾಭದ ಹಣವನ್ನು ತಮ್ಮ ದೇಶಗಳಿಗೆ ಕಳುಹಿಸಲು, ಹಾಗೂ ಬಂಡವಾಳವನ್ನು ತಮ್ಮ ದೇಶಗಳಿಗೆ ಪರಳಿಸುವುದಕ್ಕೂ ಆಶ್ವಾಸನೆ ಹಾಗೂ ಅನುಕೂಲಗಳನ್ನು ಮಾಡಿಕೊಡಲಾಗುವುದು. ಇದುವರೆಗೂ ಈ ವಿಷಯದಲ್ಲಿ, ಭಾರತ ಸರ್ಕಾರದವರೊಂದಿಗೆ ಯಾವ ವಿದೇಶಿ ಕಂಪನಿಗೂ ಯಾವ ಅನುಮಾನವೂ ಬಂದಿರುವುದಿಲ್ಲ. ಬಂಡವಾಳವನ್ನು ಹಿಂತಿರುಗಿ ಪಡೆಯುವ ಸಮಯದಲ್ಲಿ ವಿಶ್ವಾಸನೀಯ ರೀತಿಯಿಂದ ನ್ಯಾಯವಾದ ಲೆಜ್ಜೆಪತ್ರಗಳ ಪ್ರಕಾರ, ಬಂಡವಾಳವನ್ನು ಪಡೆದುಕೊಳ್ಳಲಾಗುತ್ತಿದೆಯೇ ಇಲ್ಲವೇ ಎಂಬ ದೃಷ್ಟಿಯನ್ನಿಟ್ಟುಕೊಂಡು ಅನುಮತಿಯನ್ನು ಕೊಡಲಾಗುವುದು. ಭಾರತೀಯ ಹಾಗೂ ವಿದೇಶೀ ಕಂಪನಿಗಳೆರಡೂ ಸೇರಿಕೊಂಡು ಉದ್ಯಮ ನಡೆಸುವ ಸಂಬಂಧದಲ್ಲಿ, ವಿದೇಶಿ ಬಂಡವಾಳವನ್ನೂ ಸಾಲದ ರೂಪದಲ್ಲಿ ಪಡೆದುಕೊಳ್ಳಲಾಗುವುದು. ಸರ್ಕಾರದವರು ಅದರ ಮೇಲೆ ಸೂಕ್ತವಾದ ಬಡ್ಡಿಯನ್ನು ನೀಡಲು ಅನುಮತಿಸುವರು. ಇತ್ತೀಚೆಗೆ ಆದಾಯ ತೆರಿಗೆಯ ಕಾನೂನಿನಲ್ಲಿ ಮಾಡಿರುವ ತಿದ್ದುಪಡಿಯ ಅನುಸಾರ, ಈ ಸಾಲಗಳ ಬಗೆಗೆ, ವಿಶಿಷ್ಟ ಅರ್ಜಿಗಳನ್ನು ಸಲ್ಲಿಸಿದರೆ, ಅದರ ಮೇಲ್ದೆ ಆದಾಯ ತೆರಿಗೆಯನ್ನು ತೆಗೆದುಕೊಳ್ಳಲಾಗುವುದಿಲ್ಲ.

ಭಾರತ ಸರ್ಕಾರದವರು ಇತ್ತೀಚೆಗೆ ಅಮೆರಿಕ ಸರ್ಕಾರದವರೊಡನೆ, ಒಂದು ಒಪ್ಪಂದವನ್ನು ಮಾಡಿಕೊಂಡಿರುವರು. ಅದರ ಪ್ರಕಾರ, ಭಾರತದಲ್ಲಿ, ಭಾರತ ಸರ್ಕಾರದವರು ಅಂಗೀಕರಿಸಿದ ಯೋಜನೆಗಳ ಮೇಲೆ ಅಮೆರಿಕೆಯ ಯಾವ ಬಂಡವಳದಾರರೇ ಆಗಲಿ, ಬಂಡವಾಳವನ್ನು ತೊಡಗಿಸಿದಲ್ಲಿ, ಆ ಬಂಡವಾಳ ಹಾಗೂ ಅದರ ಮೇಲಿನ ಪರಮಾನವನ್ನು ಡಾಲರ್‌ಗಳಿಗೆ ಪುನರ್‌ಪರಿವರ್ತಿಸುವ ಸಂಬಂಧವಾಗಿ ಬರವಸೆಯನ್ನು ಅಮೆರಿಕೆಯ ಸರಕಾರವು ನೀಡಿದೆ.

ಯೋಗಾಭ್ಯಾಸ

ಯೋಗಾಭ್ಯಾಸದಿಂದಲೇ ಯೋಗಿವರ ಅರವಿಂದರು ಲೇಖಕರಾದರು!

ಅವರು ಬರಹಗಾರರಾಗಿರಲಿಲ್ಲ. ತಮ್ಮ ಮಿತ್ರನಿಂದಾಗಿ ಆ ಕಲೆಯನ್ನು ಸಾಧಿಸಿಕೊಂಡರು.

ಶ್ರೀ ಅರವಿಂದರ ಹೆಸರನ್ನು ಇಂದು ನಾವು ವಿಶ್ವದ ಶ್ರೇಷ್ಠ ದಾರ್ಶನಿಕರ ಗುಂಪಿನಲ್ಲಿ ಎಣಿಸಬಹುದಾಗಿದೆ, ಅಂತಹ ಅರವಿಂದರಿಗೆ ಒಂದೊಮ್ಮೆ ಒಂದು ಸುಟವನ್ನೂ ಸಹ ಓದುವುದೆಂದರೆ ದೊಡ್ಡ ಭಾರಪ್ರಾಯವಾಗಿತ್ತೆಂದರೆ ಯಾರೂ ಅಚ್ಚರಿಗೊಳ್ಳದಿರಲಾರರು. ದರ್ಶನದ ಕಡೆಗೆ ಅವರ ಪ್ರವೃತ್ತಿ ಹೇಗೆ ಜಾಗೃತವಾಯಿತು? ಹೇಗೆ ಅವರೊಬ್ಬ ವಿಶಿಷ್ಟ ಲೇಖಕರಾದರು? ಮುಂಕಾದ ಪ್ರಶ್ನೆಗಳನ್ನು ಶ್ರೀ ಅರವಿಂದರೇ ಉತ್ತರಿಸಿದ್ದಾರೆ.

"ನಾನೆಂದೂ ದಾರ್ಶನಿಕನಾಗಿರಲಿಲ್ಲ. ನಾನು ಹುಟ್ಟುಕವಿಯಾಗಿದ್ದೇನೆ ಒಂದೊಮ್ಮೆ ರಾಜಕೀಯ ಮುಂದಾಳೂ ಆಗಿದ್ದೆ. ಆದರೆ ನಾನೊಬ್ಬ ದಾರ್ಶನಿಕನಾಗಬಲ್ಲೆ ಎಂಬ ವಿಚಾರವನ್ನು ಸ್ವಪ್ನದಲ್ಲೂ ಆಲೋಚಿಸಿರಲಿಲ್ಲ. ನನ್ನೊಬ್ಬ ಗೆಳೆಯರು ತನ್ನ "ಆರ್ಯ" ಎಂಬ ದಾರ್ಶನಿಕ ಪತ್ರಿಕೆಯೊಂದಕ್ಕೆ ಸಹಕಾರ ನೀಡಲು ನನ್ನಲ್ಲಿ ಕೇಳಿಕೊಂಡಾಗ ನಾನು ಸಂತೋಷದಿಂದ ಒಪ್ಪಿಕೊಂಡೆ ಕೆಲಸಮಯದ ನಂತರ ಭಾರತದಲ್ಲಿ ಯುದ್ಧವು ಪ್ರಾರಂಭವಾದಾಗ ಅನಿವಾರ್ಯ ಕಾರಣದಿಂದಾಗಿ ಅವರಿಗೆ ಭಾರತವನ್ನು ತೊಲಗಬೇಕಾದ ಸಂದರ್ಭ ಬಂತು. ತತ್ಪಮಯ ಪತ್ರಿಕೆಯ ಎಲ್ಲಾ ಜವಾಬ್ದಾರಿಯೂ ನನ್ನ ತಲೆಯ ಮೇಲೆಯೇ ಬಿತ್ತು ಅಂದಿನಿಂದ ಆಧ್ಯಾತ್ಮಿಕ ಸಾಧನೆಯಿಂದಾಗಿ ಪಡಕೊಂಡ ಅಲ್ಪಸ್ವಲ್ಪ ಜ್ಞಾನವನ್ನು ಲಿಸಿಬದ್ಧವನ್ನಾಗಿ ಮಾಡಲು ಉಪಕ್ರಮಿಸಿದೆ. ಅದೊಂದು ದರ್ಶನದ ರೂಪವನ್ನು ತಾಳಿತು."

ಪ್ರಶ್ನೆ— "ಅದರೆ ಲೇಖನಕ್ಕೆ ಶೈಲಿಯು ಅತ್ಯಾವಶ್ಯಕವೆ? ಅಧ್ಯಯನವಂತೂ ಅನಿವಾರ್ಯವಷ್ಟೆ! ಈ ಬಗ್ಗೆ ತಮ್ಮ ಅಭಿಪ್ರಾಯವೇನಾಗಿತ್ತು?"

ಉತ್ತರ: ಶೈಲಿಯ ನಿರ್ಮಾಣವಾಗುವುದಿಲ್ಲ. ಹೊರತಾಗಿ ಅದು ಸ್ವತಃ ವಿಕಸಿತಗೊಳ್ಳುತ್ತದೆ. ವ್ಯಾಸಂಗದಿಂದ ನನಗೆ ನಿಶ್ಚಿತ ಲಾಭವಂತೂ ದೊರಕಿತು. ಆದರೆ ಅದಕ್ಕೆ ಯೋಗ್ಯ ಅವಕಾಶ ಮಾತ್ರ ದೊರೆಯುತ್ತಿರಲಿಲ್ಲ. ನಿಜವಾಗಿ ಹೇಳುವುದಿದ್ದರೆ—ನನ್ನ ಹೃದಯದೊಳಗೆ ಯೋಗದ ಮೂಲಕ ಉತ್ತರೋತ್ತರವಾದ ಚೈತನ್ಯದ ವಿಕಾಸ ಮತ್ತು ಅಂತಃಪ್ರೇರಣೆಯ ಸ್ಫೋಟವಾಯಿತು. ಇವುಗಳ ಮೂಲಕವೇ ಅವಶ್ಯಕವಾದ ಪ್ರತೀಕ ಹಾಗೂ ಶಬ್ದಗಳ ಸಂಗ್ರಹವಾಗುತ್ತಾ ನನ್ನ ಶೈಲಿಯು ಹೊಸರೂಪವೊಂದನ್ನು ತಾನಾಗಿಯೇ ಪಡೆಯಿತು."

ಪ್ರಶ್ನೆ: "ಶಿಲ್ಪ, ಸಾಹಿತ್ಯ ಮತ್ತು ಕಲೆಯ ಕ್ಷೇತ್ರದಲ್ಲಿಯೂ ಯೋಗಶಕ್ತಿಯು ತನ್ನ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಲು ಸಮರ್ಥಕವಾಗುವುದೊ?"

ಉತ್ತರ: "ನಿಶ್ಚಯವಾಗಿಯೂ! ನನಗೆ ಚಿತ್ರಕಲೆಯ ಜ್ಞಾನವಿದ್ದಿರಲಿಲ್ಲ. ಒಂದೇ ಘಂಟೆಯೊಳಗೆ ನನಗೆ ಅದರ ಬಣ್ಣ-ರೇಖೆ ಮತ್ತು ಯೋಜನೆಗಳ ಕುರಿತಾಗಿ ಮನವರಿಕೆಯಾಯಿತು. ಮೊಟ್ಟಮೊದಲು ಕೇವಲ ಒಂದು 'ಸರಗ್ರಾಫ್' ಬರಿಯಲು ಘಂಟೆ ಹೊತ್ತು ಮೆದುಳಿಗೆ ಕೆಲಸಕೊಡಬೇಕಾಗುತ್ತಿತ್ತು. ಅಲ್ಲದೆ ಒಂದು ಕವನವನ್ನು ರಚಿಸಬೇಕಾಗಿದ್ದರೆ ಕವಿತೆಯಂದರೆ ೨ ತಿಂಗಳ ಕಾಲಾವಧಿಯಾದರೂ ಬೇಕಾಗುತ್ತಿತ್ತು. ಆದರೆ ಯೋಗಾಭ್ಯಾಸದ ಪ್ರಭಾವದಿಂದಾಗಿ ರಚನಾಶಕ್ತಿಯು ಸ್ರೋತವು ಒಮ್ಮೆಯೇ ಉಕ್ಕಿಬಂತು."

ಪ್ರಶ್ನೆ. "ಹಾಗಾದರೆ, ಯೋಗಾಭ್ಯಾಸದಿಂದಲೇ ಶೈಲಿಯಲ್ಲಿ ಪ್ರೌಢತೆ ಬರುವುದೇ?"

ಉತ್ತರ: "ಅವಶ್ಯವಾಗಿಯೂ ನಾನು ಖಂಡಿತವಾಗಿಯೂ ಬರಿಯುವುದರ ಕುರಿತು ಎಂದೂ ಏನೂ ಪ್ರಯತ್ನ ಮಾಡಲಿಲ್ಲ. ನಾನು ನನ್ನನ್ನು ಕೇವಲ ಊರ್ಧ್ವ ಶಕ್ತಿಯ ಭರವಸೆಯ ಮೇಲೆ ಬಿಟ್ಟುಬಿಡುತ್ತಿದ್ದೆ. ಆ ಶಕ್ತಿಯ ಅವರೋಹಾವಸ್ಥೆಯು ಪೂರ್ತಿಗೊಂಡನಂತರ ನಾನು ಲೇಖನ ವ್ಯಾಪಾರದಿಂದ ವಿಮುಖನಾಗುತ್ತಿದ್ದೆ. ಬರಿಯಲು ಉಪಕ್ರಮಿಸಿದೆನೆಂದರೆ ಶೈಲಿಯ ವಿಷಯವಾಗಿ ಕಿಂಚಿತ್ತೂ ಆಲೋಚಿಸುತ್ತಿರಲಿಲ್ಲ. ಮೇಲಿನ ಶಕ್ತಿಯಿಂದ ಕಾರ್ಯ ಪ್ರೇರಣೆಯು ದೊರಕುವುದರಿಂದಲೇ ಸಂಶೋಧನೆಯನ್ನೂ ಸಹಾ ಮಾಡಬಲ್ಲೆ.

— ಶ್ರೀ ಕೆ. ಅನಂತರಾಮ ಉಡುಪಿ,
ಉಡುಪಿ.

ನಿಮಗಾಗಿ ನಮ್ಮಲ್ಲಿ ನೂರಾರು ಸುರಿತ ಕಾರಕೂನರಿದ್ದಾರೆ!

"ಕೊರ್ಪೊರೇಶನ್" ಬೇಂಕಿನಲ್ಲಿ ನೀವು ಒಂದು ಹಣಖಾತೆಯನ್ನು ತೆರೆದಿರೆಂದರೆ, ನಮ್ಮ ಬೇಂಕಿನ ಕಾರಕೂನರು ನಿಮ್ಮದೇ ಕಾರಕೂನರಾದಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹಣದ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ ಭಾರತ)

(ಮೈಸೂರು ರಾಜ್ಯದಲ್ಲಿ ಪ್ರಧಾನ ಕಚೇರಿಗಳನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಹಳೆಯದು.)

NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಪುಸ್ತಕಾಲಯ

ಓದುಗರಿಗೆ ಬಲ್ಗೇರಿಯಾವು ಸದವಕಾಶ ಕಲ್ಪಿಸಿದೆ.

ಎಲ್ಲೆಡೆಯೂ ಅಮೂಲ್ಯ ಪುಸ್ತಕ ಸಂಗ್ರಹಕ್ಕೆ ಅಲ್ಲಿನ ಸರಕಾರವು ಉತ್ತೇಜನವೀಯುತ್ತಿದೆ

ಬಲ್ಗೇರಿಯಂದಲ್ಲಿ ಕಾರ್ಮಿಕ ಜನತೆಯ ಸಾಂಸ್ಕೃತಿಕ, ರಾಜನೈತಿಕ ಜ್ಞಾನೋದಯಕ್ಕಾಗಿ ಸಾರ್ವಜನಿಕ ಪುಸ್ತಕಾಲಯಗಳು ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತವೆ ಅವುಗಳ ಸಮೃದ್ಧ ಪುಸ್ತಕ ಭಂಡಾರವೂ, ಜನಸಮುದಾಯಗಳ ವೈವಿಧ್ಯಪೂರ್ಣ ಶೈಕ್ಷಣಿಕ ಚಟುವಟಿಕೆಗಳೂ ದೇಶದ ಅತ್ಯಂತ ಸುದೂರ ಸ್ಥಾನಗಳಿಗೆ ಪುಸ್ತಕಗಳನ್ನು ಯಾವಾಗಲೂ ಕೊಂಡೊಯ್ದಿವೆ ಆದರೆ, ಜನತೆಯ ರಾಜ್ಯಾಧಾರವು ಸ್ಥಾಪಿಸಲ್ಪಟ್ಟ ತರುವಾಯ ಅವುಗಳ ಕಾರ್ಯವು ವಿಶೇಷ ಮಹತ್ವವನ್ನು ಪಡೆಯಿತು, ಮತ್ತು ತ್ವರಿತಗತಿಯಿಂದ ವಿಕಾಸಗೊಂಡಿತು ೧೯೪೪ರಲ್ಲಿ ಬಲ್ಗೇರಿಯದಲ್ಲಿ ೬೯೧ ಪುಸ್ತಕಾಲಯಗಳಿದ್ದುವು. ಈಗ ೧೪ ವರ್ಷಗಳಲ್ಲಿ ಅವುಗಳ ಸಂಖ್ಯೆಯು ಇಮ್ಮಡಿಗಿಂತಲೂ ಹೆಚ್ಚಾಗಿದೆ (೧೫,೦೦೦) ಅವುಗಳಲ್ಲಿರುವ ಪುಸ್ತಕಗಳ ಸಂಖ್ಯೆಯೂ, ೧೯೪೪ರಲ್ಲಿದ್ದ ೬೯೪,೦೦೦ ಪ್ರತಿಗಳಿಂದ ಇಂದಿನ ೧,೫೫,೩೬,೦೦೦ ಪ್ರತಿಗಳ ವರೆಗೆ—ಎಂದರೆ ಸುಮಾರು ನಾಲ್ಕಾಡಿ ವೃದ್ಧಿಯಾಗಿದೆ ಪ್ರತಿ ವರ್ಷವೂ ಪುಸ್ತಕಾಲಯಗಳು ಬಲ್ಗೇರಿಯನ್ ಮತ್ತು ಇತರ ಭಾಷೆಗಳಲ್ಲಿ ಆಧುನಿಕ ಸಾಹಿತ್ಯದ ೧೦,೦೦,೦೦೦ಕ್ಕಿಂತಲೂ ಹೆಚ್ಚು ಪ್ರತಿಗಳನ್ನು ಪಡೆಯುತ್ತವೆ. ಇವುಗಳಿಗಾಗಿ ರಾಜ್ಯದ ಆಯವ್ಯಯ ಪತ್ರಿಕೆಯು ಬೃಹನ್ನಿಧಿಗಳನ್ನು ನಿಗದಿಗೊಳಿಸುತ್ತದೆ.

ಬಲ್ಗೇರಿಯಂದ ಸಾರ್ವಜನಿಕ ಪುಸ್ತಕಾಲಯಗಳೆಲ್ಲವೂ ಯಾವ ಶುಲ್ಕವನ್ನೂ ತೆಗೆದುಕೊಳ್ಳದೆಯೇ ಪುಸ್ತಕಗಳನ್ನು ಓದುಗರಿಗೆ ಒದಗಿಸುತ್ತವೆ. ಇತ್ತೀಚೆಗೆ, ತತ್ಪರಿಣಾಮವಾಗಿ, ಓದುಗರ ಸಂಖ್ಯೆಯೂ ಬಹುಮಟ್ಟಿಗೆ ವೃದ್ಧಿಯಾಗಿದೆ. ಉದಾಹರಣೆಗೆ ಹೇಳುವುದಾದರೆ, ೧೯೫೬ರಲ್ಲಿ ಪುಸ್ತಕಾಲಯಗಳಿಂದ ಓದುಗರು ಪಡೆಯಲಾದ ಪುಸ್ತಕಗಳ ಸಂಖ್ಯೆಯು ಒಟ್ಟು ೨ ೨೮,೦೦,೦೦೦ ಪ್ರತಿಗಳ ವರೆಗೇರಿದ್ದು, ಎಂದರೆ ಪ್ರತಿಯೊಬ್ಬರಿಗೂ ೩ ಪ್ರತಿಗಳಂತಾಯಿತು.

ತುರ್ಕಿಯಾಪ್ರಾಬಲ್ಯದತಾಲಾವಧಿಯ ಅಂತ್ಯಾವಸ್ಥೆಯಲ್ಲಿ ಪುಸ್ತಕಾಲಯ ಕೂಟಗಳಿಂದ—ನಾಟಕ ಮಂಡಲಿಗಳನ್ನೂ, ನೃತ್ಯ ಮಂಡಲಿಗಳನ್ನೂ, ಗಾನ ವೃಂದಗಳನ್ನೂ, ವಾದ್ಯ ವೃಂದಗಳನ್ನೂ, ವಿವಿಧ ವಸ್ತು ಸಂಗ್ರಹಾಲಯಗಳನ್ನೂ ಕೂಡ ಸಂಘಟಿಸಿದ ಸಾಂಸ್ಕೃತಿಕ ಶೈಕ್ಷಣಿಕ ಸಂಸ್ಥೆಗಳಿಂದ,—ಪ್ರಪ್ರಥಮ ಪುಸ್ತಕಾಲಯಗಳು ತೆರೆಯಲ್ಪಟ್ಟುವು.

ಕಳೆದ ೧೪ ವರ್ಷಗಳಲ್ಲಿ ಪುಸ್ತಕಾಲಯ ಕೂಟಗಳಿಗೆ ಇನ್ನೂ ಹೆಚ್ಚು ಶಕ್ತಿಯು ಲಭಿಸಿದೆ ತಮ್ಮ ವೈವಿಧ್ಯಪೂರ್ಣ ಚಟುವಟಿಕೆಗಳಿಂದ, ಸಂಸ್ಕೃತಿಯ ಮತ್ತು ಶಿಕ್ಷಣದ ನಿಜವಾದ ಕೇಂದ್ರಗಳಾಗಿ ಅವು ತಮ್ಮನ್ನು ಕ್ರೋಢೀಕರಿಸಿಕೊಂಡಿವೆ.

೧೯೫೮ರಲ್ಲಿ ಒಟ್ಟು ೩,೯೧೮ ಪುಸ್ತಕಾಲಯ ಕೂಟಗಳಿದ್ದುವು, ಅವುಗಳ ಒಟ್ಟು ೨೦೬,೦೦೦ ಪ್ರತಿಗಳು ಇದ್ದುವು. ಈಗಲಾದರೋ ಆತಹ ೪,೫೩೪ ಸಂಸ್ಥೆಗಳಿದ್ದು, ಅವುಗಳಲ್ಲಿ ೬೦,೯೯,೫೮೮ ಪುಸ್ತಕಗಳಿವೆ

೧೯೫೬ರಲ್ಲಿ ಮಾತ್ರವೇ ಈ ಪುಸ್ತಕಾಲಯ ಕೂಟಗಳು ೧ ೨೦,೯೧೧ ಪುಸ್ತಕಗಳನ್ನು ಓದುಗರಿಗೆ ನೀಡಿದುವು ಪ್ರತಿವರ್ಷವೂ ಈ ಸಂಸ್ಥೆಗಳು ಬಲ್ಗೇರಿಯನ್ ಪುಸ್ತಕ ಸಪ್ತಾಹವನ್ನೂ ಮಕ್ಕಳ ಶಿಶು ಸಾಹಿತ್ಯ ಸಪ್ತಾಹವನ್ನೂ ಸಂಘಟಿಸುತ್ತವೆ ಪುಸ್ತಕಾಲಯ ಕೆಲಸಗಾರರಿಗೂ ಮತ್ತು ಓದುಗರಿಗೂ ಈ ಸಪ್ತಾಹಗಳು ವಿಜೃಂಭಣೆಯ ವಾರ್ಷಿಕೋತ್ಸವಗಳಾಗಿರುತ್ತವೆ

ಬಲ್ಗೇರಿಯದಲ್ಲಿ ರಾಜ್ಯ—ಪುಸ್ತಕಾಲಯಗಳೂ ಕೂಡ ಇವೆ. ಸಾರ್ವಜನಿಕ ಪುಸ್ತಕಾಲಯಗಳ ವಿಕಾಸಕ್ಕೆ ಅವು ವಿಶೇಷ ಮಹತ್ವಪೂರ್ಣವಾಗಿವೆ. ಅಲ್ಲಿ ೫೩ ರಾಜ್ಯಪುಸ್ತಕಾಲಯಗಳಿವೆ ಸೋಫಿಯಾ ನಗರದಲ್ಲಿರುವ ಎ ಕೋಲರೊವ್ ರಾಜ್ಯ ಪುಸ್ತಕಾಲಯ, ಜಿಲ್ಲೆಗೂಂದರಂತೆ ಹನ್ನೊಂದು ಜಿಲ್ಲಾ ಪುಸ್ತಕಾಲಯಗಳು, ಅತ್ಯಂತ ದೊಡ್ಡ ಔದ್ಯೋಗಿಕ ಕೇಂದ್ರಗಳಲ್ಲಿ ೧೧ ಪಟ್ಟಣ ಪುಸ್ತಕಾಲಯಗಳು—ಈ ರೀತಿಯಾಗಿ ಅಲ್ಲಿ ೨೩ ಪುಸ್ತಕಾಲಯಗಳನ್ನು ಸರಕಾರವೇ ಚಲಾಯಿಸುತ್ತದೆ.

ಸರಕಾರವು ನಡೆಸುವ ಪಟ್ಟಣದ ಹಾಗೂ ಜಿಲ್ಲೆಯ ಪುಸ್ತಕಾಲಯಗಳು ಅಯಾಪಟ್ಟಣಗಳಿಗೂಜಿಲ್ಲೆಗಳಿಗೂ ಸಾರ್ವಜನಿಕ ಪುಸ್ತಕಾಲಯಗಳನ್ನು ನಡಸುವ ವಿಧಾನದ ತಿಳಿವಳಿಕೆಯನ್ನು ಒದಗಿಸುವ ಕೇಂದ್ರಗಳಾಗಿರುತ್ತವೆ ಅವುಗಳಲ್ಲಿ ವಿಶಿಷ್ಟ ಪರಾಮರ್ಶ ಶಾಖೆ, ಸಾಂಸ್ಕೃತಿಕ ಜ್ಞಾನೋದಯ ಶಾಖೆ, ಪ್ರತ್ಯೇಕ ಶಿಶು ಶಾಖೆ, ವಿಧಾನ ಪರಿಚಾಯಕ ಕಚೇರಿ-ಇತ್ಯಾದಿ ಶಾಖೆಗಳು ಇರುತ್ತವೆ.

ವಿ ಕೋಲರೋವ್ ರಾಜ್ಯ ಪುಸ್ತಕಾಲಯ, ಎಲಿನ್ ಪೆಲಿನ್ ಬಲ್ಗೇರಿಯನ್ ಗ್ರಂಥ ವಿವರಣ ಸಂಸ್ಥೆ, ಸರಕಾರೀ ಗ್ರಂಥವಿವರಣಾ ಸಂಸ್ಥೆ-ಇವು ರಾಜ್ಯದ ಪುಸ್ತಕಾಲಯಗಳ ಶ್ರೇಣಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ

ವಿ ಕೋಲರೋವ್ ರಾಜ್ಯ ಪುಸ್ತಕಾಲಯವು ಕೇಂದ್ರೀಯ ಪುಸ್ತಕ ಭಂಡಾರವಾಗಿಯೂ ಮತ್ತು ವೈಜ್ಞಾನಿಕ ವಿದ್ಯಾಲಯವಾಗಿಯೂ ಕೂಡ ಇದೆ ಈ ಪುಸ್ತಕಾಲಯವನ್ನು ೧೮೭೮ರಲ್ಲಿ ಸ್ಥಾಪಿಸಲಾಯಿತು ಅದರಲ್ಲಿ ಇಂದು ೬ ೦೦,೦೦೦ ಕ್ಕಿಂತಲೂ ಹೆಚ್ಚು ಪುಸ್ತಕಗಳಿವೆ. ದಸ್ತೈವಜುಗಳ ಅಮೂಲ್ಯ ಸಂಕಲನಗಳೂ ಅದರಲ್ಲಿ ಅನೇಕವಿವೆ ಬಲ್ಗೇರಿಯದ ಐತಿಹಾಸಿಕ ಪ್ರಾಚೀನ ಪತ್ರಾಗಾರದಲ್ಲೊಂದರಲ್ಲಿಯೇ ಸುಮಾರು ೩ ೫೦ ೦೦೦ ದಸ್ತೈವಜುಗಳಿವೆ. ತುರ್ಕಿಯ ವ್ಯಾಪಾರ್ಯದ ದಿನಗಳಲ್ಲಿ ಬಲ್ಗೇರಿಯದ ಕ್ರಾಂತಿಕಾರೀ ಚಳವಳಿಯ ಸಂಘಟಕರಾದ ಜಿ ಎಸ್. ರಾಕೋವ್‌ಸ್ಕಿ, ಎಚ್. ಬೋಟೇವ್, ವಿ ಲೆವ್‌ಸ್ಕಿ, ಎಲ್ ಕಾರಾವೆಲೋವ್ ಮೊದಲಾದವರ ಪ್ರಾಚೀನ ಪತ್ರಗಳೂ ಕೂಡ ಇಲ್ಲಿಯೇ ಇವೆ

ತುರ್ಕಿಯ ಪ್ರಾಚೀನ ಪತ್ರ ಭಂಡಾರವು ವಿಶೇಷತಃ ಮೌಲಿಕವಾದುದು. ಅದರಲ್ಲಿ ೨ ೦೦,೦೦೦ದ ದಸ್ತೈವಜುಗಳೂ, ೩೦೦೦ ಫೌಂಡುಸಿಲಿಗಳೂ ಇವೆ ಇದ್ರಿಸಿಯಜಾಗತಿಕಭೂಗೋಳ(೧೨ನೆಯ ಶತಮಾನ) ಒಂದು ಪ್ರತಿಯೂ ಉತ್ಕೃಯಯೂಮಿನ್ ಚರಿತ್ರೆಯ (೯೬೧ ೧೨೫೬) ಒಂದು ಪ್ರತಿಯೂ ಇನ್ನಿತರ ಪ್ರಾಚೀನ ಪತ್ರಗಳೊಂದಿಗೆ ಅಲ್ಲಿವೆ,

ಫೌಂಡು ಲಿಪಿಗಳ, ಹಳೆಯ ಮುದ್ರಿತ ಪುಸ್ತಕಗಳ ಮತ್ತು ಅಪರೂಪ ಪುಸ್ತಕಗಳ ಶಾಖೆಯಲ್ಲಿ, ಪ್ರಸ್ತಾವನ ಒಲ್ಗೇರಿಯನ್ ವಾರ್ತಾ ಪತ್ರಿಗೆ "ಬಲ್ಗೇರಿಯದಗಿಡುಗ" ಮೊದಲುಗೊಂಡು ೨,೫೦೦೦ ಕ್ಕಿಂತಲೂ ಹೆಚ್ಚು ಸಂಖ್ಯೆಯ ಹಳೆಯ ಮುದ್ರಿತ ಪುಸ್ತಕಗಳು (೧೫೦೬-೧೮೭೮ ರ ಕಾಲಾವದಿಯಿಂದೀಚೆಗಿನವು) ಇವೆ. ೧೯೫೫ರಲ್ಲಿ ಈ ಪುಸ್ತಕಾಲಯ ವನ್ನು ಸುಂದರವಾದ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು ಇಲಂಕ್ಕಿಂತಲೂ ಹೆಚ್ಚು ಜನರು ಕುಳಿತುಕೊಳ್ಳಲು ಸ್ಥಳಾವಕಾಶ ವಿರುವ ದೊಡ್ಡ ಪರನ ಮಂದಿರಗಳೂ, ಅತ್ಯಾಧುನಿಕ ಪುಸ್ತಕ ಭಂಡಾರದ. ಕೋಣೆಗಳೂ, ಅಧ್ಯಯನ ಶಾಲೆಗಳೂ, ಸೂಕ್ಷ್ಮ ಛಾಯಾ ಚಿತ್ರ ಪಟಲಗಳ ಕಾರ್ಯಾಲಯವೂ ಸುಸಜ್ಜಿತವಾದ ಛಾಯಾ ಚಿತ್ರಗ್ರಹಣ ಪ್ರಯೋಗ ಶಾಲೆಯೂ, ಸಂಗೀತ ಶಾಲೆ, ಇತ್ಯಾದಿಗಳೂ ಈ ನೂತನ ಕಟ್ಟಡದಲ್ಲಿವೆ

ಪಾಠ ಶಾಲೆಗಳಲ್ಲಿಯೂ ಕೂಡ ಪುಸ್ತಕಾಲಯಗಳಿವೆ. ದೇಶದಲ್ಲೆಲ್ಲೆಡೆಯೂ ಅವುಗಳ ಜಾಲಬಂಧವು ಅತ್ಯಂತ ದೊಡ್ಡದಾಗಿದೆ. ಪ್ರತಿಯೊಂದು ಪಾಠ ಶಾಲೆಗೂ ಸ್ವಂತ ಪುಸ್ತಕಾಲಯವಿದೆ. ಉಪಾಧ್ಯಾಯರಿಗೆ ಅವರ ಶೈಕ್ಷಣಿಕ ಕಾರ್ಯದಲ್ಲಿಯೂ, ವಿದ್ಯಾರ್ಥಿಗಳ ಸಾಂಸ್ಕೃತಿಕ ಅಭಿವೃದ್ಧಿ ಮತ್ತು ಅವರ ಸಕಲ ಕಲಾ ಶಿಕ್ಷ

(೮ನೇ ಪುಟ ನೋಡಿರಿ)

ಸೈಂಟ್ ಅಥನಾಸಿಯಸ್‌ನಲ್ಲಿ ಮೂವರು ಕಾಮನ್‌ವೆಲ್ತ್ ಆಟಗಾರರು ಪತ್ರಗಳನ್ನು ಬರೆಯುತ್ತಿದ್ದಾರೆ.

LIFE INSURANCE CORPORATION OF INDIA
DIVISIONAL OFFICE. UDIPI

* * * * *

TENDER NOTICE

Sealed tenders will be received upto 2 P M on 9th October 58 for the following items of works

1 Repairing the masonry compound wall and fixing up a gate at our Divisional Office premises (Canara Mutual compound) at Udipi at an estimated cost of Rs 590/-
2 White and colour washing, painting Doors and windows etc to our Branch Office premises, Bombay Life Building, Udipi at an estimated cost of Rs 2700/-
3 Construction of a masonry compound wall of about 92 feet in length at an estimated cost of Rs 676/- at our "Blessington" premises occupied by the State Bank of India, Udipi.
4 Construction of four closets in the existing bath rooms and sanitary arrangements at our Branch Office premises Bombay Life Building, Udipi at an estimated cost of Rs 2230/

Four separate Tenders should be addressed and tenders may be given for any one or more or all items Necessary tender Schedules and conditions can be obtained from this Office on payment of Rs 2/- for each work by Money order or cash For any further particulars please apply to the undersigned

Udipi
12—9—1958

K R. K. Bhat,
Divisional Manager

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ ಕೆ.ಎಲ್ ಪಿತಾಳ, ಎಂ ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಾನವನು ತನ್ನ ಕುಕರ್ಮಗಳನ್ನು ಅಡಗಿಸಿಕೊಂಡು ಪ್ರಪಂಚದಲ್ಲಿ ಏಕಾಏಕಿ ನಿಧ್ರಿಸ ಬಯಸುತ್ತಾನೆ; ಆದರೆ ಏಕಾಂತದಲ್ಲಿ ಆತನ ಅಂತರಾತ್ಮನ ಮೊರೆತದಿಂದಾಗಿ, ಅವನು ಸುಖನಿದ್ರೆಯನ್ನು ಎಂದಿಗೂ ಮಾಡಲಾರದೆ ಜಸವಳಿದು ಹೊರಳಾಡುತ್ತಾನೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೮-೯-೫೮	೩

ನೆಹರೂ–ನೂನ ಒಪ್ಪಂದ

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸೂರ್ವಗಡಿ ವಿವಾದಗಳಲ್ಲಿ ಒಂಭತ್ತು ಬಗೆಹರಿದು ಇನ್ನೆರಡು ಉಳಿದಿವೆಯೆಂದೂ, ಪಶ್ಚಿಮ ಗಡಿಯ ಬಗ್ಗೆ ಯಾವುದೇ ಒಪ್ಪಂದವಾಗುವುದು ಅಸಾಧ್ಯವಾಯಿತೆಂದೂ ಶ್ರೀ ನೆಹರೂ ಲೋಕಸಭೆಯಲ್ಲಿ ತಿಳಿಸಿದರು. ಉಳಿದಿರುವ ವಿವಾದಗಳಾದರೋ ತೀವ್ರವಾದುವುಗಳು. ಗುಂಡುಗಳ ಸುರಿಮಳೆ, ಪ್ರಾಣಹಾನಿಗಳೂ ಸಂಭವಿಸಿದ ವಿವಾದಗಳು. ಈಗ, ಭಾರತವು ಸುಮಾರು ೧೧ ಸಾವಿರ ಜನರಿರುವ ೨೮ ಚದರ ಮೈಲು ವಿಸ್ತೀರ್ಣದ ಭಾಗಗಳನ್ನು ಪಾಕಿಸ್ತಾನಕ್ಕಿತ್ತು ೯ ಸಾವಿರ ಜನರಿರುವ ೧೭ ಚದರ ಮೈಲಿ ಭೂಮಿಯನ್ನು ಸ್ವೀಕರಿಸಬೇಕಾಗಿದೆ. ಗಡಿ ವಿವಾದಗಳ ಬಗ್ಗೆ ಪಾಕಿಸ್ತಾನದ ನೀತಿಯೇ ಉದ್ರೇಕಕಾರಿಯಾಗಿದೆಯಲ್ಲವೆ ಹಿತಕಾರಿಯಲ್ಲ. ನೆಹರೂ ನೂನ ಮಾತುಕತೆಗಳ ಪರಿಣಾಮವಾಗಿ, ವಿನಿಮಯಗೊಂಡು ಪಾಕಿಸ್ತಾನಕ್ಕೆ ಹೋದ ಭಾಗಗಳ ಮುಸ್ಲಿಮೇತರರು, ತಾವು ಪಾಕಿಸ್ತಾನ ಸೇರಿದ ನಂತರ ಅಭದ್ರತಾಭಾವನೆಯನ್ನು ತಾಳಿದುಳಿಯಲಾರರು; ಪುನಃ ಜಹಾದಿನ ಬೊಬ್ಬೆಯು ಕೇಳಬರುವುದೂ ಅಸಂಭವವೇನಲ್ಲ.

ಲೋಕಸಭೆಯಲ್ಲಿ ಪ್ರಧಾನಿ ನೆಹರೂರವರ ಹೇಳಿಕೆಯಂತೆ ಕೆಲವು ಭಾಗಗಳು ೧೯೫೯ನೆ ಜನವರಿ ೧೫ರ ಮೊದಲೂ ವಿನಿಮಯ ಮಾಡಿಕೊಳ್ಳಬೇಕಾಗಿದೆ; ಕೆಲವು ಸರಿಸಮಾನವಾಗಿ ಪಾಲು ಮಾಡಿಕೊಳ್ಳಬೇಕಾಗಿದೆ ಸೂರ್ಮಾ ನದಿಯ ಪ್ರದೇಶದಲ್ಲಿ ಗಡಿ ನಿರ್ಣಯವಾಗಬೇಕಾಗಿದ್ದರೂ ಇದೇನೂ ಸುಲಭದ ಕೆಲಸವೆಂದು ಹೇಳುವಂತಿಲ್ಲ. ಇತ್ತಡೆಗಳಲ್ಲೂ ನ್ಯಾಯಾಲಯವನ್ನು ಅವಶ್ಯವಾಗಿ ಕೊಡಬೇಕಾಗುತ್ತದೆ; ತ್ರಿಪುರದ ಗಡಿಯಲ್ಲಿ ಭಾರತೀಯ ಪ್ರದೇಶದಲ್ಲಿ ಪಾಕಿಸ್ತಾನೀ ರೇಲ್ವೆಯೊಂದು ಹಾದುಹೋಗುವುದು. ಭಾರತವೀಗ ಈ ಭಾಗವನ್ನು ಪಾಕಿಸ್ತಾನಕ್ಕೆತ್ತು ಒದಗಬಹುದಾದ ಅನಾಹುತಗಳಿಗೆ ಅವಕಾಶವೀಯದಂತೆ ನೋಡಲು ಹವಣಿಸಿದೆ. ಕೂಚ್-ಬೆಹಾರ ಗಡಿಯಲ್ಲಿರುವ ಭಾಗವು ಬಕಳ ಸಣ್ಣ ಚೂರುಗಳಷ್ಟೇ ಉಳಿದಿರುವುದರಿಂದ, ಕಾಯದೆ ಮತ್ತು ಕಾನೂನನ್ನು ವ್ಯವಹಾರದಲ್ಲಿ ತರುವುದು ಎರಡು ರಾಷ್ಟ್ರಗಳಿಗೂ ಕಷ್ಟಸಾಧ್ಯವಾಗಿಬಿಟ್ಟಿದೆ. ಆದುದರಿಂದ ಈ ಸಮಸ್ಯೆಯನ್ನು ಬಿಡಿಸಲು, ಎರಡು ರಾಷ್ಟ್ರಗಳೂ ತಂತಮ್ಮ ಭಾಗಗಳನ್ನು ವಿನಿಮಯ ಮಾಡಿಕೊಳ್ಳಲು ನಿಶ್ಚಯಿಸಿರುತ್ತವೆ. ಆದರೆ, ಈ ಪ್ರದೇಶದಲ್ಲಿ ಪಾಕಿಸ್ತಾನದಿಂದ ಬಂದ ಸುಮಾರು ೧೦ ಸಾವಿರ ನಿರಾಶ್ರಿತರಿಗೆ ವಸತಿ ಸೌಕರ್ಯವನ್ನು ಭಾರತವು ಒದಗಿಸಿದ್ದು, ಈಗ ಪುನಃ ಈ ಸಮಸ್ಯೆಯನ್ನು ಎದುರಿಸಬೇಕಾಗಿ ಬರುತ್ತದೆ.

ನೆಹರೂ ನೂನರ ಈ ಸಮ್ಮೇಳನದ ಫಲಶ್ರುತಿಯು ಹೇಗೆ ಉಳಿಯುವುದೆಂಬುದು ಹೇಳಬರುವಂತಿಲ್ಲ. ಪಾಕಿಸ್ತಾನವು ಸೈನಿಕ ಬಲಕ್ಕಿಂತ ಪರಸ್ಪರ ವಿಚಾರ ವಿನಿಮಯಗಳಿಂದಲೇ ಈಗ ಉಳಿದ ಗಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದೆಂದೂ ಇನ್ನು ಮುಂದಕ್ಕಾದರೂ ಗಡಿಪ್ರದೇಶದಲ್ಲಿ ಅಕ್ರಮಣವನ್ನೋ ಗುಂಡೆಸೆತವನ್ನೋ ಪ್ರಾಣಹಾನಿಯನ್ನೋ ಗೈಯ್ಯಲಾರದೆಂದೂ ಭಾವಿಸಬೇಕಾದರೆ ಧೈರ್ಯಸಾಲದು. ಏಕೆಂದರೆ, ಪಾಕಿಸ್ತಾನೀ ಇರಾದೆಯೇ ಇದಕ್ಕೆ ವ್ಯತಿರಿಕ್ತವಾಗಿದೆ. ಹಾಗಿದ್ದರೂ ಉಭಯ ಪ್ರಧಾನಿಗಳು ತಂತಮ್ಮೊಳಗೆ ಸಂಬಂಧವನ್ನಿಟ್ಟುಕೊಳ್ಳಲು ಒಪ್ಪಿಕೊಂಡಿರುವುದು ಸಂದೇಹ ಘನತುಂಬಿದ ಆಕಾಶದಲ್ಲಿ ಮಿನುಗುವ ನಕ್ಷತ್ರವೊಂದು. ಗಡಿ ಸಮಸ್ಯೆಯು ಪೂರ್ಣವಾಗಿ ಕೊನೆಗಾಣಬೇಕಾದರೆ, ಪೂರ್ವ ಪಶ್ಚಿಮಗಳಲ್ಲಿ ಈ ಗಡಿಯು ಮೊತ್ತಮೊದಲಾಗಿ ನಿಶ್ಚಯಿಸಲ್ಪಡಬೇಕು ಮತ್ತು ಅದುವೇ ಕೊಟ್ಟಕೊನೆಯದಾಗುವಂತಾಗಬೇಕು. ಆದರೆ, ಈಗಲಾದರೋ ಪಶ್ಚಿಮದ ೧೪೭೬ ಮೈಲಿಗಳ ಗಡಿಯಲ್ಲಿ ೧೬೬ ಮೈಲಿಗಳ ಸೀಮೆಯು ನಿರ್ಣಯವಾಗಿದ್ದು ಇನ್ನೂ ೧೩೦೬ ಮೈಲಿ ಶೇಷವುಳಿದಿದೆ. ಪೂರ್ವದ ೨೪೯ ಮೈಲುದ್ದದ ಪೂರ್ವ ಗಡಿಯೂ ಅಂತಿಮವಾಗಿ ನಿರ್ಣಯವಾಗಬೇಕು. ಇದಾಗದೆ ಹೋಗುವವರೆಗೆ, ಪಾಕಿಸ್ತಾನೀಯ ಗುಂಡು ಹಾರಾಟ, ಅಕ್ರಮ ಪ್ರವೇಶಾದಿಗಳು ನಿರಾತಂಕವಾಗಿ ನಾಗುವ ನಿರೀಕ್ಷೆಯೇ ಹೆಚ್ಚು.

ಅದರೂ ಪ್ರಧಾನಿದ್ವಯರ ಈ ನವದೆಹಲಿ ಸಮ್ಮೇಲನದಿಂದ ಏನೂ ಉಪಯೋಗವಾಗಿಲ್ಲವೆಂದರೆ, ಸಂಪೂರ್ಣ ನಿರಾಶೆಯ ಅಭಿಪ್ರಾಯವಾಯಿತು. ಪಾಕಿಸ್ತಾನವು ತನ್ನ–ಭಾರತಗಳ ನಡುವೆ ಸ್ನೇಹದಿಂದಿರಬಯಸುವ ರಾಷ್ಟ್ರವೆಂದು ಪದೇ ಪದೇ ಘೋಷಿಸುವ ಕರಾಚಿಯ ರಾಷ್ಟ್ರನಾಯಕರು ಇನ್ನು ಮುಂದಕ್ಕಾದರೂ ನವದೆಹಲಿಯ ಕಡೆಗೆ ಸಾಕಷ್ಟು ಗಮನ ಕೊಡುವರೆಂದು ಊಹಿಸಬಹುದು. ಗಡಿಗಳ ಉಲ್ಲಂಘನೆಗಳ ಬಗ್ಗೆ ಭಾರತ ಸರಕಾರವು ಸಲ್ಲಿಸಿದ ಪರೋಧವನ್ನು ಭಾವಿ ದಿನಗಳಲ್ಲಿ ಲಕ್ಷ್ಯಪೂರ್ವಕವಾಗಿ ಕರಾಚಿಯು ಗಮನಿಸುವುದಕ್ಕೆ ಈ ಭೇಟಿಯು ಕಾರಣವಾಗಿ, ಗಡಿ ವಿದ್ರೋಹಗಳು ನಡೆಯದೆ ಈ ಪ್ರಶ್ನೆಯೂ ಇದರಂತೆಯೇ ಉಳಿದ ಸಮಸ್ಯೆಗಳೂ ಶಾಂತನಾರ್ಗದಲಿಂದ ಬಗೆಹರಿಯುವಂತಾಗಲಿ.

ಸಂಕ್ಷಿಪ್ತ ಸುದ್ದಿಗಳು

ಆಯುರ್ವೇದಕ್ಕೆ ಪ್ರೋತ್ಸಾಹ

ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗಡೆಯವರು ಆಯುರ್ವೇದ ಮಹಾ ಮಂಡಳವನ್ನು ದಿನಾಂಕ ೧೨ರಂದು ಉದ್ಘಾಟಿಸುತ್ತ, ಆಯುರ್ವೇದದ ಮಹತ್ವವನ್ನು ಒತ್ತಿಹೇಳಿ, ರಾಜ್ಯ ಸರಕಾರವು ಸಾಧ್ಯವಾದಷ್ಟು ಸಹಾಯವನ್ನು ಆಯುರ್ವೇದದ ಅಭಿವೃದ್ಧಿಗಾಗಿ ಈಯುವುದೆಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ಸ್ಥಾನವನ್ನು ಅಲಂಕರಿಸಿದ್ದ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಎಚ್. ಕೆ. ವೀರಣ್ಣಗೌಡರು, ಆಯುರ್ವೇದವು ಜೀವನದ ವಿಜ್ಞಾನ. ಇದನ್ನು ಅಭ್ಯಸಿಸಿದವರು ಜೀವನದ ಆದರ್ಶವನ್ನು ಸಾಧಿಸಿ, ಗ್ರಾಮೀಣ ಜನರಿಗೆ ಆಯುರ್ವೇದ ಚಿಕಿತ್ಸೆಯನ್ನು ಒದಗಿಸಬೇಕು. ವೈದ್ಯರು ಉತ್ತಮ ಚಿಕಿತ್ಸಾ ಪದ್ಧತಿಯನ್ನು ಕಂಡುಹಿಡಿದು, ಚಿಕಿತ್ಸೆಯ ಇತರ ಪದ್ಧತಿಗಳಿಗೆ ಸಮಸ್ಥಾನದಲ್ಲಿ ನಿಲ್ಲಲು ಅದು ಸಶಕ್ತವಿದೆ ಎಂಬುದನ್ನು ತೋರಿಸಿಕೊಡಬೇಕು ಎಂದರು ಆಯುರ್ವೇದದಲ್ಲಿ ಕೊನೆಯ ಸಂಶೋಧನೆಯೆಂಬಂತಹ ಬಹು ಮೂಲ್ಯ ಶೋಧನೆಗಳನ್ನು ಈ ಮಂಡಳವು ಕೈಗೊಳ್ಳಬೇಕೆಂದು ಹಾರೈಸಿದರು. ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು ಮಾತಾಡುತ್ತ ಆಯುರ್ವೇದವು ಪ್ರಾಚೀನ ಕಾಲದ ಋಷಿಗಳಿಂದ ಪಡೆದ ಜೀವನ ವಿಜ್ಞಾನವೆಂದೂ ಮಾನವರ ಆನಂದಕ್ಕೋಸ್ಕರ ಇದನ್ನು ಬಳಸಿಕೊಳ್ಳಬೇಕೆಂದೂ ಆರ್ಥಿಕ ಒಡವೆ ವಸ್ತುಗಳಂತೆ ಆಯುರ್ವೇದವನ್ನು ಉಪಯೋಗಿಸಬಾರದೆಂದೂ ಆಯುರ್ವೇದ ವೈದ್ಯರಿಗೆ ಕರೆಯಿತ್ತರು. ಡಾ. ಪಾರ್ಥನಾರಾಯಣ ಪಂಡಿತರು ಸಂಶೋಧನೆಯನ್ನು ಬೆಳೆಸಬೇಕು, ಆಯುರ್ವೇದ ಕಾಲೇಜುಗಳನ್ನು ತೆರೆದು, ಚಿಕಿತ್ಸಾಲಯಗಳನ್ನೂ ಕುಷ್ಠ, ಅರ್ಬುದ ಚಿಕಿತ್ಸಾಲಯಗಳನ್ನೂ ತೆರೆಯಬೇಕು ಎಂದು ಪ್ರಾರ್ಥಿಸಿದರು.

ವಿನೋಬಾ ಜಯಂತಿ

ದಿನಾಂಕ ೧೧ರಂದು ಮಹಾರಾಷ್ಟ್ರದ ಅಕ್ಕಲಕೂವದಲ್ಲಿ ಆಚಾರ್ಯ ವಿನೋಬಾ ಭಾವೆಯವರ ಅರುವತ್ತನಾಲ್ಕನೆಯ ಜನ್ಮದಿನವನ್ನು ಆಚರಿಸಲಾಯಿತು. ಈ ಸಮಯದಲ್ಲಿ ಅಕ್ಕಲಕೂವದ ಅರುವತ್ತನಾಲ್ಕು ಗ್ರಾಮಗಳನ್ನು ಅವರಿಗೆ ದಾನವಾಗಿ ಕೊಡಲಾಯಿತು. ಈ ಗ್ರಾಮಗಳ ಜೊಗೂ ಹಿಂದಿನವುಗಳ ಒಟ್ಟು ೧೫೬ ಗ್ರಾಮಗಳ ದಾನಪತ್ರಗಳನ್ನು ಭೂದಾನ ನಾಯಕರಿಗೆ ದಿನಾಂಕ ೧೪ರಂದು ಒಪ್ಪಿಸಿದ್ದಾರೆ. ಶ್ರೀ ಭಾವೆಯವರು ತಮ್ಮ ಜನ್ಮದಿನವನ್ನು ಕಾಧಿಯ ತಮ್ಮ ಶಿಬಿರದಲ್ಲಿ ಕಳೆದಿದ್ದರು.

ಕಾಂಗ್ರೆಸ್ಸಿಗೆ ವಿವಂಚನೆ

ಕೇರಳದ ರಾಜಕೀಯ ಪರಿಸ್ಥಿತಿಯ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀಯುತ ಎನ್. ಧೇಬರರು ಕಾಂಗ್ರೆಸ್ ಕಾರ್ಯ ಸಮಿತಿಗೆ ಒಪ್ಪಿಸಿದ ವರದಿಯನ್ನದು ಅವಿರೋಧವಾಗಿ ಸ್ವೀಕರಿಸಿ, ಕಾರ್ಯ ಸಮಿತಿಯು ಕೇರಳ ರಾಜ್ಯದಲ್ಲಿನ ಅಸ್ಥಿರ ವಾತಾವರಣವು ಇನ್ನೂ ಮುಂದುವರಿಯುತ್ತಿರುವುದಕ್ಕೆ ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸುವ ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. ಕೇರಳ ಸರಕಾರವು ಅನೇಕ ಸಲ ಪಕ್ಷಪಾತದ ಹಾಗೂ ಕಾಯದೆ ಬದ್ಧವಲ್ಲದ ಆಸಮಂಜಸ ಧೋರಣೆಯನ್ನು ಅನುಸರಿಸುತ್ತಿರುವ ಬಗ್ಗೆಯೂ ತನ್ನ ವಿವಂಚನೆಯನ್ನು ವ್ಯಕ್ತಪಡಿಸಿತು.

ಶಾರೀಕೀಯ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ ಘೋಷರು, ಕಾಂಗ್ರೆಸ್ಸು ತನ್ನ ಧೋರಣೆಯ ಈ ಮೊದಲೇ ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನೇ ಪುನಃ ಉಚ್ಚರಿಸಿದುತಾಯಿತೆಂದು ಈ ಗೊತ್ತುವಳಿಯ ಬಗ್ಗೆ ತನ್ನ ವ್ಯಾಖ್ಯೆಯನ್ನು ಒರೆದಿದ್ದಾರೆ.

ಪ್ರಾಚ್ಯವಸ್ತು ಶೋಧನಾ ಮಂಡಳಿ

ಭಾರತ ಸಂಕಾರದವರು ಪ್ರಾಚ್ಯವಸ್ತು ಶೋಧನಾ ಮಂಡಳಿಯೊಂದನ್ನು ಪುನಾರಚಿಸಿರುವರು. ಈ ಪುನಾರಚಿತ ಮಂಡಳಿಯಲ್ಲಿ ಶಾಸ್ತ್ರವೇತ್ತರು ಸಂಘದಿಂದ ನೇಮಕವಾದ ಮೂವರು ಪ್ರತಿನಿಧಿಗಳು, ಹದಿನಾಲ್ಕು ರಾಜ್ಯಸರಕಾರಗಳಿಂದ ೧೪ ಪ್ರತಿನಿಧಿಗಳು, ಭಾರತೀಯ ವಿಶ್ವವಿದ್ಯಾಲಯಗಳನ್ನು ಪ್ರತಿನಿಧೀಕರಿಸುವ ನಾಲ್ವರು, ಭಾರತ ಸರಕಾರದಿಂದ ನಾಮಕರಣ ಮಾಡಲ್ಪಟ್ಟ ಐವರು ಹಾಗೂ ಇವರು ಲೋಕಸಭಾ ಸದಸ್ಯರೂ ಇರುವರು. ಮೈಸೂರು ರಾಜ್ಯದ ಪ್ರತಿನಿಧಿಯಾಗಿ ಕೇಂದ್ರ ಸಲಹಾ ಮಂಡಲಿಯಲ್ಲಿ ಡಾ. ಎಂ. ಶೇಷಾದ್ರಿಯವರಿರುವರು. ಈ ಸಲಹಾ ಮಂಡಳಿಯು ಭಾರತ ಸರಕಾರದವರು ಅಧಿನಾಮಂಡಳಿಯ ಸದಸ್ಯರು ಕಾಲಕಾಲಕ್ಕೆ ನೂಚಿಸುವ ಪ್ರಾಚ್ಯಶೋಧನಾ ವಿಷಯಗಳಲ್ಲಿ ಸಲಹೆ ನೀಡುವುದು.

ಚೀನದಲ್ಲಿ ಸೈನಿಕ ಶಿಕ್ಷಣ

ಚೀನದಾದ್ಯಂತ ಪ್ರಾರಂಭವಾಗಿರುವ ಸೈನಿಕ ಕೇಂದ್ರಗಳಲ್ಲಿ ಸ್ವಯಂಸೇವಕರಾಗಿ ಸೇರಿ ಸೈನಿಕ ಶಿಕ್ಷಣವನ್ನು ಪಡೆಯಲು ಸ್ತ್ರೀಯರುಪುರುಷರು ಗುಂಪುಗುಂಪಾಗಿ ಬರುತ್ತಿರುವರೆಂದು ವರದಿಯಾಗಿದೆ. ಅಮೇರಿಕನ್ ಸಾಮ್ರಾಜ್ಯವಾದಿಗಳು ಯು

ಚಂದಾದಾರರಲ್ಲಿ ವಿನಂತಿ

ಕಳೆದ ತಿಂಗಳಾಂತ್ಯಕ್ಕೆ 'ನವಯುಗ'ದ **37** ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **38** ನೇ ವರ್ಷಾರಂಭವಾಗಿರುವುದು ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯವಾಡಿ ಆದಷ್ಟು ಬೇಗನೇ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತೇವೆ. ಚಂದಾ ಹಣವನ್ನು ಯಾವ ತರದ ಖರ್ಚೂ ಇಲ್ಲದೆ 'ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್' ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ನವಯುಗದ ಖಾತೆಗೆ ಕಟ್ಟಬಹುದು. ವಿ. ಪಿ. ಮಾಡಿದರೆ ಹನ್ನೆರಡಾಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಚಂದಾ ಹಣವನ್ನು ಮುಂದಾಗಿ ಕಳುಹಿಸಬೇಕಾಗಿ ವಿನಂತಿ.

ಮೆನೇಜರ್.

ದ್ದ ಪ್ರಚೋದನೆಯನ್ನು ಮಾಡುತ್ತಿರುವುದರಿಂದ "ಪ್ರತಿಯೊಬ್ಬರೂ ಸೈನಿಕರು" ಎಂಬ ನೂತನ ಚಳವಳಿಯು ತ್ವರಿತಗತಿಯಿಂದ ಮುಂದ ವರಿಯುತ್ತಿದೆ. ಈ ಸ್ವಯಂ ಸೇವಕರೆಲ್ಲರೂ ೧೭ರಿಂದ ೪೦ ವರ್ಷಗಳ ವಯಸ್ಸಿನವರಿದ್ದಾರೆ. ಅನೇಕ ಸ್ಥಳಗಳಲ್ಲಿ "ಅವಸ್ಥ ಅಲ್ಪಾವಧಿಯಲ್ಲಿ ಸೈನಿಕ ತಂತ್ರವನ್ನು ಕಲಿಯಲೇಬೇಕು" ಎಂದು ಹೆಚ್ಚು ಜನರು ಪ್ರತಿಜ್ಞೆ ಸ್ವೀಕರಿಸಿರುವರು ಅನೇಕರು ಮೆಶಿನುಗನ್ನುಗಳ ಸ್ವಯೋಗಲ್ಲಿ, ಸಶಸ್ತ್ರ ತರಬೇತಿಯಲ್ಲಿ ಬಹಳ ಆಸ್ಥೆ ಮುಂದಿರುವರು. ಹೆಚ್ಚಿನ ಕಾರಖಾನೆ ಹಾಗೂ ಶಾಲೆಗಳಲ್ಲಿ ಸೈನಿಕರ ಕೇಂದ್ರಗಳು ತೆರೆಯಲ್ಪಟ್ಟು ಸೈನಿಕ ತರಬೇತಿಯನ್ನು ಕೊಡಲಾಗುತ್ತಿದೆ. ಅಮೆರಿಕೆಯ ಶುಂಟ ಬುದ್ಧಿಯನ್ನು ಎದುರಿಸುವುದಕ್ಕಾಗಿ ಈ ಸಿದ್ಧತೆಯೆ ನ್ನಲಾಗುತ್ತಿದೆ.

ಅಲ್ಲಲ್ಲಿಯ ಸುದ್ದಿಸಾರ

ಭಾಷಣ—

ಕಡಿ.ಬಿಡ್ರಿ ಬೋರ್ಡ ಹಾ| ಎ| ಶಾಲೆಯ ವಿದ್ಯಾರ್ಥಿಗಳ ಸಭೆಯು ತಾ 10ರಂದು ಜರಗಿದಾಗ ದ ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಧೋಕಿಯ ಅಧ್ಯಕ್ಷರಾದ ಶ್ರೀ ಎಮ್. ಎಸ್. ವಿಶ್ವಾಂಬರರಾಯರು ಲೈಬ್ರೆರಿ ಪುಸ್ತಕಗಳನ್ನೋದುವುದರ ಪ್ರಯೋಜನ ಮತ್ತು ವಿದ್ಯಾರ್ಥಿಗಳು ಈ ವಿಷಯದಲ್ಲಿ ಕೈಕೊಳ್ಳಬೇಕಾದ ಕಾರ್ಯಕ್ರಮದ ಕುರಿತು ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ಎಮ್. ಪ್ರಭುಗಳು ಧನ್ಯವಾದಗಳನ್ನಿತ್ತರು

ಉದ್ಘಾಟನೆ—

ಸ್ಥಳೀಯ ಅಭಿವೃದ್ಧಿ ಯೋಜನೆಯನ್ವಯ ಬಾಳೆಲದಲ್ಲಿ ಸುಮಾರು ರೂಪಾಯಿ 18,000 ವೆಚ್ಚದಿಂದ ಕಟ್ಟಿಸಲಾದ ಶ್ರೀ ವಿದ್ಯಾ ಬೋಧಿನಿ ವಿಡೆಡ್ ಹಾ| ಎ| ಶಾಲೆಯ ಹೊಸ ಕಟ್ಟಡವನ್ನು ತಾ 7ರಂದು ಮೈಸೂರಿನ ಅರ್ಥಶಾಸ್ತ್ರಯ ಉಪಸಚಿವ ಶ್ರೀ ಜೆ ಎಚ್ ಶಂಕುದ್ದಿನ್, ಅವರು ಉದ್ಘಾಟಿಸಿದರು ಶ್ರೀ ಕೆ ವಿ. ಗೌಡ, ಎಮ್. ಎಲ್. ಎ, ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಮೆನೇಜರ್ ಶ್ರೀ ಎನ್. ವೆಂಕಟ ಸುಬ್ರಾಯರು ಸ್ವಾಗತಿಸಿದ ಬಳಿಕ ಶ್ರೀ ಪಿ ಎಸ್. ಗಣಪಯ್ಯನವರು ವರದಿಯನ್ನೋದಿದರು ಗಾಂಧೀಜಿ, ರಾಜೇಂದ್ರ ಪ್ರಸಾದ್, ನೆಹರೂ, ತಿಲಕ್ ಬಾಗೋರಿ, ವಿವೇಕಾನಂದ ರಾಮಕೃಷ್ಣಪರಮಹಂಸ, ಸುಭಾಸ್ ಬೋಸ್ ಮತ್ತು ಸರ್ದಾರ್ ಪಟೇಲರ ಭಾವಚಿತ್ರಗಳನ್ನು ಅನುಕ್ರಮವಾಗಿ ಶ್ರೀಗಳಾದ ಎಸ್ ಸುಬ್ಬಯ್ಯ ನಾಯಕ್, ಎಮ್ ಎಲ್ ಎ, ಪಿ ಎಸ್ ತಿಮ್ಮಪ್ಪ ಶೆಟ್ಟಿ ಅಸಿಸ್ಟಾಂಟ್ ಕಮಿಶನರ್ ಕೆ ಜತ್ತಪ್ಪ ರೈ, ಬಿ ನಾರಾಯಣ ಶೇಕ ಕುಮಾರಿ ಜಯಲಕ್ಷ್ಮಿ, ಮೊಗ್ರ ಸುಬ್ರಾಯ, ಟಿ ಟಿ ಬಂಗೇರ, ಕುಮಾರಿ ವಿಜಾಕ್ಷಿ ಪೌಲ್ಡಿ, ಸಲೆಮಾನ್ ಸೂರಿಯ ರು ಅನಾವರಣ ಮಾಡಿದರು

ತತ್ವಜ್ಞಾನ ಗೋಷ್ಠಿ—

ಉಡುಪಿಯಎಮ್ ಜಿ.ಎಮ್.ಕಾಲೇಜಿನಲ್ಲಿ ತಾ10ರಂದು ಮೈಸೂರಿನ ನಿವೃತ್ತ ಪ್ರೊಫೆಸರ್ ಶ್ರೀ.ಎಮ್.ವಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ತತ್ವಜ್ಞಾನ ಗೋಷ್ಠಿಯನ್ನು ಪ್ರಿನ್ಸಿಪಾಲ್ ಎಚ್ ಸುಂದರ ರಾಯರು ಉದ್ಘಾಟಿಸಿದರು. ವಿದ್ಯಾರ್ಥಿಗಳ ಶ್ರೀ ಕು ಶಿ. ಹರಿದಾಸ ಭಟ್ಟರು ಸ್ವಾಗತ ಮಾತುಗಳನ್ನಾಡಿದರು ಶ್ರೀಗಳಾದ ಎನ್. ಶ್ರೀಪ ಬಲ್ಲಾಳರು ಬಾಹ್ಯಜೀಯವರ ರಾಜಕೀಯ ತತ್ವಜ್ಞಾನದ ಕುರಿತೂ, ಟಿ ವಿ. ಕುಪ್ಪುಸ್ವಾಮಿಯವರು ಗಾಂಧಿಜಿಯವರ ಅರ್ಥಶಾಸ್ತ್ರತತ್ವಜ್ಞಾನದ ಕುರಿತೂ, ಪಿ ಗುರುರಾಜ ಭಟ್ಟರು ಮಹಾತ್ಮಾಜೀಯವರ ಅಹಿಂಸಾ ತತ್ವಜ್ಞಾನದ ಕುರಿತೂ ಲೇಖನಗಳನ್ನೋದಿದರು. ಶ್ರೀ ಕೆ ಕೃಷ್ಣ ಶರ್ಮರು ಧನ್ಯವಾದಗಳನ್ನಿತ್ತರು.

ವೇತನದಲ್ಲಿ ಏಕರೂಪತೆ—

ಉಡುಪಿ ಮುನಿಸಿಪಲ್ ನೌಕರರ ಸಂಘದ ಮಹಾಸಭೆಯು ಶ್ರೀ ಸುಬ್ಬಣ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹೊಸವರ್ಷಕ್ಕೆ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಆಯ್ಕೆ ಮಾಡಲಾಯಿತು. ಕೇಂದ್ರ ಸರಕಾರದ ರಾಜ್ಯ ಸರಕಾರದ ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ನೌಕರರಲ್ಲಿ ಏಕರೂಪತೆಯ ವೇತನವು ಮೂರೆಯಂತೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವಂತೆ ರಾಜ್ಯ ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು.

ಚಿಕ್ಕ ಉಳಿತಾಯ ಯೋಜನೆಗೆ ಬೆಂಬಲ—

ಮೈಸೂರು ರಾಜ್ಯ ಸರಕಾರದ ಆರ್ಥಿಕ ಉಪಸಚಿವ ಶ್ರೀ ಜೆ ಎಚ್ ಶಂಕುದ್ದೀನ್‌ರವರು ತಾ 9ರಂದು ಕುಂದಾಪುರದ ಬೇಳ್ಳರ್ಡ್ ಹೈಸ್ಕೂಲಿನ ಕಲಾಮಂದಿರವನ್ನು ಉದ್ಘಾಟಿಸುತ್ತಾ, ಪಂಚವಾರ್ಷಿಕ ಯೋಜನೆಯ ಸಫಲತೆಗಾಗಿ ಸರ್ವರೂ ಚಿಕ್ಕ ಉಳಿತಾಯ ಯೋಜನೆಯನ್ನು ಕೈಕೊಳ್ಳಬೇಕೆಂದು ವಿದ್ಯಾರ್ಥಿಗಳೂ ಈ ಯೋಜನೆಯಲ್ಲಿ ಸಹಕರಿಸಲು ಅವಕಾಶವಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸಾರ್ವಭೌಮರಾಯಣ ಆಚಿಗರು ವಹಿಸಿದ್ದರು ಶ್ರೀ ಕೈ. ಮಂಜಯ್ಯ ಶೆಟ್ಟಿ, ಎಲ್. ಎಲ್ ಎ. ಅವರು ಸಚಿವರ ಪರಿಚಯ ಮಾಡಿದ ಬಳಿಕ ಶ್ರೀ ಎನ್. ಎಸ್. ಹೆಗ್ಡೆರು ಸ್ವಾಗತಿಸಿದರು ಶಾಲಾ ಹೆಡ್ಮಾಸ್ಟರ್ ಶ್ರೀ ಎಮ್ ವಿಟ್ಟಪ್ಪನವರು ವರದಿಯನ್ನೋದಿದರು ಶ್ರೀ ಎಸ್. ಎಸ್. ಪರಮೇಶ್ವರಯ್ಯನವರು ಧನ್ಯವಾದಗಳನ್ನಿತ್ತರು. ಉಪಮಂತ್ರಿಗಳು ತಾ.10ರಂದು ಗಂಗೋಳ್ಳಿ ಬಂದರ ಸಂದರ್ಶಿಸಿದರು. ಸ್ಥಳೀಯ ಎಸ್ ವಿ. ಹೈಸ್ಕೂಲಿನಲ್ಲಿ ಅಲ್ಲಿಯ ವಿದ್ಯಾರ್ಥಿಗಳು ಗೌರವ ವಂದನೆಯನ್ನು ನೀಡಿದರು. ಕುಂದಾಪುರ ತಾಲೂಕು ವ್ಯಾಪಾರಿ ಸಂಘ, ಸಂಜೀವಯತ ಬೋರ್ಡು ಗ್ರಾಮ ಸೇವಾ ಸಂಘ ಮೊದಲಾದ ಸಂಸ್ಥೆಗಳು ಸಚಿವರಿಗೆ ಮಾನಪತ್ರ ಅರ್ಪಿಸಿದವು ಬೈಂದೂರಲ್ಲಿಯೂ ಸಚಿವರಿಗೆ ಮಾನಪತ್ರವೀಯಲಾಯಿತು.

ವಿನೋಬಾ ಜಯಂತಿ—

ಕುಡುಪುಮ್ಲಿಗೆ ಸರ್ವೋದಯ ಮಂಡಳಿಯವರು ತಾ 11ರಂದು ಸಂತ ವಿನೋಬಾಜಿಯವರ 64ನೆ ಜನ್ಮದಿನವನ್ನು ಯಶಸ್ವಿಯಾಗಿ ಆಚರಿಸಿದರು ಬೆಳಿಗ್ಗೆ ಮಂಡಳಿಯ ಅಧ್ಯಕ್ಷ ಜಾ| ಯು ಡಂಬ್ರಿ ಶ್ರೀಧರನವರ ನೇತೃತ್ವದಲ್ಲಿ ಧ್ವಜವಂದನಾದಿ ಕಾರ್ಯಕ್ರಮಗಳಾದುವು. ಸಂಜೆ ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಬಿ.ಅಚ್ಚಣ್ಣ ಶೆಟ್ಟಿ, ಜಿ. ಎ ಗುರುವಪ್ಪ, ಕರಮೀಸ್ಸು ಮುಸ್ಮಿಗಟ್ಟಿ, ಡಾ| ಯು. ಚಂದ್ರಶೇಖರ್ ಮೊದಲಾದವರ ಭಾಷಣಗಳಾದುವು ಸರ್ವೋದಯ ಮಂಡಳಿಯ ವತಿಯಿಂದ, ಸ್ಥಳೀಯ ಶಾಂತಿ ಸೈನಿಕರಾದ ಶ್ರೀ ಬಿ ಎಚ್. ಕೃಷ್ಣಪ್ಪನವರ ನೇತೃತ್ವದಲ್ಲಿ ಕಾರ್ಯಕರ್ತರ ತಂಡ ಹೊರಟು, ತೀರ್ಥಹಳ್ಳಿ ಕಡೆ ಸರ್ವೋದಯ ಪ್ರಚಾರಕ್ಕೆ ಹೊರಟಿದ್ದು, ಅವರನ್ನು ಬೀಳ್ಕೊಡಲಾಯಿತು.

ವಾರ್ಷಿಕೋತ್ಸವ—

ಸಾಮಳ್ಳ ಸೇವಾ ಸಂಘ, ಮುಂಬಯಿ, ಇದರ ವಾರ್ಷಿಕೋತ್ಸವವು ತಾ 31ನೆ ರವಿವಾರ ಅಪರಾಹ್ನ 2½ಗಂಟೆಗೆ ಸರ್ ಜೆಜೀಭಾಯ್ ಮೇರಿ ಮೆಮೋರಿಯಲ್ ಸಭಾ ಸಭಾಸದಲ್ಲಿ ಶ್ರೀ ಜೆ. ಎನ್ ಅಯ್ಯರ್, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಗಾಂಧಿ ಶಿಷ್ಯರೊಬ್ಬರ ನಿಧನ—

ಗಾಂಧಿಜೀಯವರ ಅಸಹಕಾರ ಚಳವಳದಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನು ಅನುಭವಿಸಿದ ನಿಷ್ಠಾವಂತ ಕಾಂಗ್ರೆಸಿಗರಂದ ಪಕಾಶ ಬಡಗಬೆಟ್ಟು ಶ್ರೀ ಸದಾಶಿವ ಹೆಗ್ಡೆಯವರು ಕಳದ ತಾ 29ರಂದು 57ನೇ ವಯಸ್ಸಿನಲ್ಲಿ ನಿಧನ ಹೊಂದಿದರೆನ್ನಲು ವಿಷಾದ ವೆನಿಸುತ್ತದೆ. ಶ್ರೀಯುತರು ಕೆಲಕಾಲ ಮಂಗಳೂರು ಸರಕಾರೀ ಆಸ್ಪತ್ರೆಯಲ್ಲಿ ಪ್ರಧಾನೋಗ ಕ್ಕಾಗಿ ಚಿಕಿತ್ಸೆ ಪಡೆಯುತ್ತಿದ್ದು, ಸಫಲವೆಂದು ಹಿಂತಿರುಗುವಷ್ಟರಲ್ಲೇ ಮಧ್ಯವಾರಿಯಲ್ಲಿ ಪ್ರಾಣಪಕ್ಷಿಗಳು ದಿವಂಗತರು ಹಿಂದೆ ತಾಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ, ಕೆ. ಪಿ. ಸಿ ಯ ಸದಸ್ಯರಾಗಿಯೂ ರಾಷ್ಟ್ರ ಸೇವೆ ಸಲ್ಲಿಸಿದ್ದರು. ಭಗವಾನ ಚಳವಳಿಗೆ ಮತ್ತು ಎಳ್ಳೆ ಜೊಮು ಸಹಕೊಟ್ಟಿದ್ದರು ಸಾಧು. ಸರಳ ಸ್ವಭಾವದ ಕಾರ್ಯಕರ್ತರಾಗಿದ್ದರು.

ಸಂಯುಕ್ತ ರಾಷ್ಟ್ರಸಂಘದ ಒಂದಂಗವಾದ ಭದ್ರತಾಮಂಡಳಿವು ಸಭೆ ಸೇರಿರುವ ದೃಶ್ಯವಿದು.

ಪ್ರವಾಸ—

ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಚ್. ಕೆ. ವೀರಣ್ಣ ಗೌಡ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರು ಇದೇ ತಾ 23ರಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚರಿಸಲಿರುವರು.

ಹೆತ್ತವರ ದಿನಾಚರಣೆ—

ಕಿದಿಯೂರು ಎಯ್ಡೆಡ್ ಹಾಯರ್ ಮತ್ತು ಕಿರಿಯ ಬುನಾದಿ ಶಾಲೆಯಲ್ಲಿ ತಾ 10ರಂದು "ಹೆತ್ತವರ ದಿನಾಚರಣೆಯು" ಶ್ರೀ ಎನ್. ವಿಶ್ವನಾಥ, ಇವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ ಪದ್ಮನಾಭಭಟ್, ಬಿ. ಎ, ಬಿ. ಟಿ. ಯವರು ಸ್ವಾಗತ ಭಾಷಣಮಾಡಿದರು. ಡಾ. ಶ್ರೀ ಕೆ. ರಾಮಕೃಷ್ಣ ಭಾಗವತರು ಭಾಷಣಮಾಡಿದುದರಿಂದ ವಿವಿಧ ಕಾರ್ಯಕ್ರಮಗಳಾದುವು.

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಅಸಿಸ್ಟಾಂಟ್ ಕಮಿಶನರವರದ ಪ್ರಕಟಣೆ.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಕುಂದದಲ್ಲಿ ವರ್ಷಂಪ್ರತಿ ಜರಗುವ ಜಾತ್ರೆಯು ಸಂತೆಯು ಇದೇ 1958ನೇ ಇಸವಿ ನವಂಬರ ತಿಂಗಳ ತಾರೀಕು 26ರಿಂದ ದಶಂಬರ ತಿಂಗಳ ತಾರೀಕು 10ರ ವರೆಗೆ ಜರಗುವುದು. ಅಂದರೆ ಸಂತೆಯ ಆರಂಭ ಕಾರ್ತಿಕ ಪೂರ್ಣಿಮೆಯ ದಿನ ಪ್ರಾರಂಭವಾಗಿ ಕಾರ್ತಿಕ ಅಮವಾಸ್ಯೆಯ ದಿನ ಅಂದರೆ ಸುಬ್ರಹ್ಮಣ್ಯ ದೀಪೋತ್ಸವ ತನಕ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ 25 ನಯಾ ಪೈಸೆಗಳಂತೆ ಫೀಸು ವಸೂಲು ಮಾಡಲಾಯಿತು ಒಂದು ತಿಂಗಳ ಕರುಗಳನ್ನು ಸದ್ರಿ ಫೀಸಿನಿಂದ ನಿರ್ವಹಿಸಪಡಿಸಿರೆಣಂಗಿಯಿದೆ. ಸಂದರ್ಭಾನುಸಾರ ಅವಶ್ಯ ಬಿದ್ದಲ್ಲಿ ಸದ್ರಿ ಫೀಸು ಏರಿಸಲೂ ಬಹುದು ಯಾ ಇಳ್ಳಿಕರ ಫೀಸನ್ನು ಹೊರಿಸಲೂ ಬಹುದು ಸಂತೆಯ ಅಸಿಸ್ಟಾಂಟ್ ಕಮಿಶನರವರು ಅವಶ್ಯವೆಂದು ತೋರುವ ಯಾವ ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ನಿರ್ವಹಿಸಪಡಿಸಬಹುದು

(Sd) ಪಿ ಎಸ್. ತಿಮ್ಮಪ್ಪ ಶೆಟ್ಟಿ,
ಅಸಿಸ್ಟಾಂಟ್ ಕಮಿಶನರ್, ಪುತ್ತೂರು.

ಪುತ್ತೂರು ಅಸಿಸ್ಟಾಂಟ್ ಕಮಿಶನರ ಕಚೇರಿ.
ತಾ 9-9-1958.

ಮಕ್ಕಳ ಮಗ್ಗಿಪುಸ್ತಕ

(ನಯೋ ಪೈಸೆ ಕೋಷ್ಟಕ ಸಹಿತ)

ಬೆಲೆ 1ನೈ 0 1 0

ನವಯುಗ ಪ್ರೆಸ್, ಉಡುಪಿ.

ಕಾರ್ಕಳ ಡಿ. ಮು. ಕೋರ್ಟುನಲ್ಲಿ

O. P. No 36/1958

1. ಸುಲೋಚನ ಯಾನೆ ತಾರಾ ಬ್ಯಾ,
2. ನರಸಿಂಹ ಸ್ವೆ —ಅರ್ಜಿದಾರರು.

ಮತ್ತು

1. ಮುಕ್ತಾ ಬಾಯಿ, 2 ಕೆಚ್ಚಿ ಬಾಯಿ,
3. ಮಹಮ್ಮಾಯಿ —ಎದ್ರಿರು.

ಈ ಮೂಲ್ಕ ಸಮಸ್ತ ಜನರಿಗೆ ತಿಳಿಸುವದೇನಂದ್ರೆ,

ಅರ್ಜಿದಾರರ ಮತ್ತು ಎದ್ರಿರ ಸಹೋದರರ ತಾರೀಕು 18-1-1957ರಲ್ಲು ಮೃತಪಟ್ಟ H. ಲಕ್ಷ್ಮೀನಾರಾಯಣ ಪೈಗಳಿಗೆ All India General Insurance Co, Ltd., Bombay. ಯಿದ್ರ ಪೊಲಿಸಿ ನಂಬ್ರ 24716ರ ಪ್ರಕಾರ ಬರತಕ್ಕ ರೂ. 063-91ನ್ನು ಪಡಿಯುವರೆ ತಮಗೆ ನಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಅರ್ಜಿಯು ತಾರೀಕು 23-9-58ಕ್ಕೆ ತನ್ನಗೆ ಇಟ್ಟಿದೆ. ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ತಿಳಿಸಿಯದೆ.

K. V Kamath,
Advocate for Petitioners.
Karkal, 14-9-58

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನ ವ ಯು ಗ ಪ್ರೆಸ್ ಉ ಡು ಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋವಾಗಿ ಮುದ್ರಿಸಿ ಕೊಡಲಾಗುವುದು
NAVAYUGA PRESS, UDIPI.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸುಗಂಧ ಪುಷ್ಪ — (ಕಥಾಸಂಕಲನ) ವಿವಿಧ ಲೇಖಕರಿಂದ. ಪ್ರಕಾಶಕರು: ಸರದಾರ ಸಾಹಿತ್ಯ ಮಾಲೆ, ಉಡಿರೆ. ಪುಟಗಳು: ೧೦. ಬೆಲೆ: ರೂ. ೧-೦೦.

ಕಥೆಯೆಂದೊಡನೆಯೇ ಸುಖಾಸಮಸ್ಯೆಗಳನ್ನೆತ್ತಿಕೊಂಡು ಸಂಕ್ಷಿಪ್ತವಾಗಿಸುವದೆಲ್ಲ. ಕಾದಂಬರಿ ಮತ್ತು ಕಥೆಗಳೊಗೆಗೆ ತುಂಬ ಅಂತರವಿದೆ. ಕಾದಂಬರಿಯು ಬೃಹತ್ತಾದರೆ, ಕಥೆಯು ಚುಟುಕಾಗಿ ಘಟನಾಪ್ರಧಾನವಾಗಿರಬೇಕು. ಪಾತ್ರಗಳ ಚಿತ್ರಣವೂ ಸಾಕಷ್ಟು ಪರಿಪೂರ್ಣವಾಗಿರಬೇಕು. ಅಲ್ಲದೆ, ಕಥಾ ಲೇಖಕರು ಕಥಾಂತ್ಯವನ್ನೂ ಕರಗತ ಮಾಡಿಕೊಳ್ಳದೆ ಹೋದರೆ, ಅದು ಕಥೆಯಾಗಿರದೆ ಒಂದು ಚೀಳಿಕೆಯಾದೀತು. ರಸಪುಷ್ಟಿಯೂ, ತಾಂತ್ರಿಕತೆಯೂ, ಪಾತ್ರಚಿತ್ರಣವೂ, ಶೈಲಿಯೂ ಒಂದಕ್ಕೊಂದು ಅಂಗಿಕವಾಗಿದ್ದರೆ ಮಾತ್ರ ಅಂತಹ ಕಥೆಯು ಪಾಚನೀಯವಾಗಬಹುದು.

ಉಡಿರೆಯ ಸರದಾರ ಸಾಹಿತ್ಯ ಮಾಲೆಯವರು ಈ ಸುಗಂಧ ಪುಷ್ಪವನ್ನು ತಮ್ಮ ಮಾಲೆಯ ತೃತೀಯ ಕುಸುಮವಾಗಿ ಅರಳಿಸಿದ್ದಾರೆ. ಶ್ರೀಕೆ.ಎಸ್. ಪದ್ಮನಾಭ ಆಚಾರ್ಯರ ರಾಯರ ಚೇಲುವಾಸ ಅಲ್ಲಿ ಅವರ ಉಪವಾಸ ಎಂಬುದು ಒಬ್ಬ ಶ್ರೀಮಂತ ಮನೆತನದವನ ಜೀವನಕ್ಕೆ ಪನ್ನವೇ ಆದ ಮಿರುಗನ್ನು ಕೊಡುತ್ತದೆ. ಅದಿಯಿಂದ ಅಂತ್ಯದ ವರೆಗೂ ಒಂದರ ಹಿಂದೊಂದು ಅನೇಕಾನೇಕ ಪರಿಸ್ಥಿತಿಗಳು ಎಡತಾಕಿದರೂ, ತಾವೇ ಸಾಕಿ ಸಲಹಿ, ತನ್ನ ಮುಂದಾಳುತನದಲ್ಲೇ ತಮ್ಮ ಗೃಹವಾಸಿಯೊಬ್ಬನಿಗೆ ತಾವೇ ವಿವಾಹವಾಗಿಸಿಕೊಟ್ಟ ರಾಯರು ಅಂತಹ ಎಳೆಯಲ್ಲಿ ಅನುರಕ್ತರಾಗುವ ಚಿತ್ರವುಚಿತ್ರಿಸಲ್ಪಟ್ಟಿದ್ದರೂ ಅದು ಎಸ್ಟರ ಮಟ್ಟಿಗೆ ವೆಂಘಾತ್ಮದೆಂದು ಹೇಳಲು ಧೈರ್ಯಸಾಲದು. ಸಮಾಜದ ಕುಂದುಕೊರತೆಗಳನ್ನು ಚಿತ್ರಿಸಿ ಜನತೆಗೆ ಸನ್ಮಾರ್ಗವನ್ನು ತೋರಿಸಿಕೊಡುವ ಲೇಖಕರ ಲೇಖನಿಯು ಎಚ್ಚರವಾಗಿಯೇ ಇರಬೇಕಾದುದು ಅವಶ್ಯಕವಲ್ಲವೆ? ಈ ಕಥೆಯಿಂದ ಜನತೆಗೆನು ಪಾಠ ದೊರೆತಂತಾಯಿತು ಎಂದು ಅ ಮೇಲೆ ಹೊಳೆಯುವುದಿಲ್ಲ. ಅಂತೂ ಆತ್ಮಹತ್ಯಾಪ್ರಯತ್ನಗಳು, ಸಾಗುವಿನ ಸಂಬಂಧಿಕರ ಹೊಲಿಲ್ಲದ ನ್ಯಾಯಾಲಯದ ರಾಯರ ನೆಲೆಗೆ ಕಟ್ಟಿ ಹೊರಿಸಿದುದು ಅಸಂಭಾವ್ಯವೆನ್ನದೆ ಗತ್ಯಂತರವಿಲ್ಲ. ರವಿ ಕಾಣದಿದ್ದುದನ್ನು ಕವಿ ಕಂಡನೆಂಬುದಕ್ಕೆ ಒಂದು ನಿದರ್ಶನ ಕಥಾಂತ್ಯ, ಸಮ್ಮತ ಹಾಗೂ ಚಿತ್ರಣಗಳ ದೃಷ್ಟಿಯಲ್ಲಿ ಶ್ರೀ ಎಸ್. ತಿರುಮಲೇಶ್ವರ ಭಟ್ಟರ ಅಂಧಕಾಂಡ ಪಡಿಲ್ಲ ಮತ್ತು ಶ್ರೀ ಹರಿದಾಸರ ಹಳ್ಳಿಯ ಸುದ್ದಿ ಉತ್ತಮವಾಗಿದ್ದು ಪಾಚನೀಯವಿದೆ. ಅಲ್ಲದೇ ಸಂಕಲನದ ಶ್ರೇಷ್ಠ ಕಥೆಗಳಾಗಿವೆ. ಶ್ರೀ. ಕೆ ಎಸ್. ಭಟ್ ಶಿರಾಡಿಪಾಲರ ಕನ್ಯಾದಾನ ಬ್ರಾಯ! ಭಾವಿ ಶತಮಾನಗಳ ಒಂದು ಕಲ್ಪನಾಚಿತ್ರವಿರಬೇಕು ಹೋಟೇಲಿನ ನೌಕರನೊಬ್ಬ ಒಂದು ವಾರದಲ್ಲಿ ಒಂದು ಕಾದಂಬರಿ ಬರೆದು, ಹಿರಿಯ ಕೈಸೆಯನ್ನು ಪಡೆದ ಸ್ವಾರಸ್ಯ ಚಿತ್ರ ಇಲ್ಲಿದೆ. ಕನ್ನಡದಲ್ಲಿ ಕವಿ ಅಥವಾ ಲೇಖಕನಾದವನಿಗೆ ಹೆಣ್ಣು ಕೊಡಲೂ ಅಂಜುತ್ತಿರುವ ತಾಯ್ತಂದೆಯರ ನಡುವೆ ಇಲ್ಲಿ ಲೇಖಕನನ್ನೇ ಹುಡುಕಿ ಹೊರಟಿರುವಲ್ಲಿ ಕ್ಷಣ ಮಾತಾಸಿಕರು ಕೊರುತ್ತಾರೆ. ಶ್ರೀ ವಾಸುದೇವ ನಾಯಕರ ಸಂಸಾರದ ಸುಳಿಯಲ್ಲಿ ಪಾಚನೀಯವಿದೆ.

ಸಣ್ಣ ಕಥೆಗಳ ಪ್ರೋತ್ಸಾಹವು ಕ್ಷೀಣಗೊಳ್ಳುತ್ತಿರುವ ಈ ವೇಳೆಯಲ್ಲಿ ಕಾದಂಬರಿಗಳ ಬರುಗಾಳಿಗೆ ಸಿಕ್ಕು ಸುಗಂಧ ಪುಷ್ಪವು ತನ್ನ ಪರಿಮಳವನ್ನು ಉಳಿಸಿಕೊಳ್ಳುವಂತಾಗಲಿ ಪ್ರತಿ ಕಥೆಯ ಲೇಖಕರ ಭಾಷಾಚಿತ್ರಗಳನ್ನೂ ಪರಿಚಯಿಸನ್ನೂ ಆಯಾ ಕಥಾಂಶಕ್ಕೆ ಮೊದಲು ಇತ್ತುದು ಯೋಗ್ಯವಿದೆ. ಅಚ್ಚು ಮಾಡುವಾಗ ಅವೇ ಲೇಖಕರ ಇನ್ನೂ ಉತ್ತಮ ಕೃತಿಗಳನ್ನೇ ಆರಿಸಿದ್ದರೆ, ಸುಗಂಧ ಪುಷ್ಪವು ಸುಗಂಧಭರಿತವೇ ಆಗುತಿತ್ತು.

ಆನೆಯ ತರಗತಿಯ ಸಚಿತ್ರ ಭಾಗೋಲಿಕ ಅಭ್ಯಸನಗಳು—ಲೇಖಕರು: ಎಲ್. ಅಯ್ ಅಕಲವಾಡಿ, ಬಿ ಎ. ಬಿ ಕಾಮ್. ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೊ, ಧಾರವಾಡ. ಪುಟಗಳು. ೨೨. ಬೆಲೆ: ರೂ. ೦-೩೧.

ಆನೆಯ ಇಯತ್ತೆಯ ವರೆಗೆ ರಾಜ್ಯದ ಭೂಗೋಲ ಪಾಠವನ್ನು ಮಾಮುಸ್ತಿರುವಾಗ, ಯೋಗ್ಯ ನಕ್ಷೆಗಳ ಅನುಭವವೂ ಅಗತ್ಯವಿದೆ. ಅದಕ್ಕಾಗಿ ಭೂಗೋಲ ಪಾಠಕ್ಕೆ ಸಂಬಂಧಿಸಿದ ಚಿತ್ರ ಪರಗಳಿಂದಲೂ ನಕ್ಷೆಗಳಿಂದಲೂ ಅಭ್ಯಾಸಗಳಿಂದಲೂ ಕೂಡಿದೆ. ಸಾಮಾನ್ಯವಾಗಿ ನೈಸೆಯ ಸಾಯಿಲೆ ಅಥವಾ ಅಭ್ಯಾಸ ಪುಸ್ತಕಗಳನ್ನು ಹೋಲುವ ಈ ಕಿರಿಯ ಅಭ್ಯಸನ ಪುಸ್ತಕವು ಮೈಸೂರು ರಾಜ್ಯದ ಭೂಗೋಲ ಪಾಠವನ್ನು ಕಲಿಸುವ ಅಧ್ಯಾಪಕರಿಗೂ ಕಲಿಯುವ ವಿದ್ಯಾರ್ಥಿಗಳಿಗೂ ಉಪಯೋಗಿಯಾಗಿದೆ. ಸಾಮಾನ್ಯ ನಕಾಶೆಗಳನ್ನು ಗುರುತಿಸಲು ಅಂತ್ಯದಲ್ಲಿ ನಾಲ್ಕು ನಕ್ಷೆಗಳ ದ್ವಾರಾ ಮಾರ್ಗದರ್ಶನವನ್ನು ಮಾಡಲಾಗಿರುವುದು ಸೂಕ್ತವಿದೆ

— ಗೋದಾ.



ಸುಮಾರು ೦೦ ಪ್ರಯಾಣಿಕರನ್ನು ಹೊರಬಲ್ಲ ವಿಮಾನವೊಂದರಲ್ಲಿ ಅತಿಥಿಗಳನ್ನು ತಿಗೆದು ಸಾಮಾನು ತುಂಬಿಸುವ ವ್ಯವಸ್ಥೆಯನ್ನು ಮಾಡುತಿದ್ದಾರೆ.

ಆಭಿಪ್ರಾಯ

(೧೧ನೇ ಪುಟದಿಂದ)

ಗಿ ಉಳಿಯುವಂತಾಗಿದೆ.

ಕಾಂಗ್ರೆಸ್ಸಿನ ನಾಯಕರಿಗೆ ಸಮಜೋಡಿಯಾಗಿ ನಿಲ್ಲಬಲ್ಲೆನೆಂದು ಮುಖ್ಯಮಂತ್ರಿಯವರು ಹೇಳುತ್ತಾರೆ; ಆದರೆ, ರಾಜ್ಯದಲ್ಲಿ ಅಸಮಾಧಾನವಿರುವಾಗ, ಯಾವ ಪಕ್ಷವೇ ಇರಲಿಕವಾಧಾನದಿಂದ ಕಾರ್ಯನಿಮಗ್ನವಾಗುವುದುಅಸಾಧ್ಯವಾಗುತ್ತದೆ.

ಕಮ್ಯುನಿಸ್ಟರು ರಾಜ್ಯದ ಆಡಳಿತೆಯಲ್ಲಿ ಹಸ್ತಕ್ಷೇಪ ನಡೆಯಿಸುತ್ತಾರೆ ಎಂಬುದು ಸರ್ವಸಾಕ್ಷಿತವಿದೆ. ನ್ಯಾಯಾಲಯಗಳ ತೀರ್ಪುಗಳಲ್ಲಿಯೇ ಇದಕ್ಕೆ ಸಮಾಧಾನಕರವಾದ ಉತ್ತರವು ದೊರೆಯುತ್ತದೆ. ಭೂಮಿಗೆ ಸಂಬಂಧಪಟ್ಟ ಕಟ್ಟಳೆಗಳನ್ನು ಪರಿಶೀಲಿಸಿದರೆ, ಇದರ ಸತ್ಯಾಸತ್ಯತೆಯು ಪ್ರಕಟಗೊಂಡೀತು.

ತಾನೇನೂ ಕೇರಳವನ್ನು ವಿಭಾಗಿಸ ಹೊರಡುವುದಿಲ್ಲ. ರಾಜ್ಯದ ಎಲ್ಲ ಕಾರ್ಯಭಾರಗಳೂ ಸಂವಿಧಾನಕ್ಕನುಸಾರವಾಗಿ ನಡೆಯುವಂತಾಗಬೇಕೆಂದು ಮಾತ್ರ ಬಯಸುತ್ತೇನೆ. ಕಾಂಗ್ರೆಸ್, ಪ್ರಜಾಪಕ್ಷಗಳು ಉಳಿದ ವಿರೋಧೀ ಪಕ್ಷಗಳ ಬಲದಿಂದ ಒಂದು ವಿರೋಧೀ ಗುಂಪನ್ನು ಕಟ್ಟಿಕೊಂಡಿವೆ. ಅವು ಪರಸ್ಪರ ಸೌಹಾರ್ದದಿಂದ ನಡೆದುಕೊಳ್ಳುತ್ತದೆ; ಆದರೆ, ಅದಕ್ಕೆ ರಾಜ್ಯಸರಕಾರವಾಗಲೀ ಕಮ್ಯುನಿಸ್ಟ ಪಕ್ಷವಾಗಲೀ ಜವಾಬ್ದಾರಿಯಲ್ಲವೆಂಬುದು ನಿರ್ವಿವಾದ.

ಜನತೆಯಲ್ಲಿ ತಲೆದೋರಿರುವ ವಿಲಕ್ಷಣಾ ಮನೋಭಾವನೆಯನ್ನು ಕಂಡು ಕಂಡೂ ಸುಮ್ಮನುಳಿಯುವುದು ಅಸಾಧ್ಯವಾದುದರಿಂದ, ಅವನ್ನು ದೂರೀಕರಿಸಲು ಏನಾದರೂ ಸೂಕ್ತ ಕ್ರಮಗಳನ್ನು ಕೈಗೊಳ್ಳಲೇಬೇಕಾಗುತ್ತದೆ.

ಸಾದರ ಸ್ವೀಕಾರ

೧. ಶ್ರೀನಿವಾಸಾಚಾರ್ಯ ವಿರಚಿತ **ಅಭಿಧಾನ ರತ್ನಮಾಲಾ ಅಥವಾ ಪಡ್ಯಸನಿಘಂಟು**—ಪುಟಗಳು: xxiv + ೯೪. ಬೆಲೆ: ರೂ. ೩.೨೦.

೨. **ಔಮಾಪತಮ್** (ಸಂಸ್ಕೃತ) ಪುಟ: xiv + ೩೬. ಬೆಲೆ: ರೂ.೨-೨-೦

೩. ಶ್ರೀನಿವಾಸಾಚಾರ್ಯ ವಿರಚಿತ **ಶ್ರೀ ಭಾಷ್ಯಪ್ರಕಾಶಿಕಾ** (ಸಂಸ್ಕೃತ) ಪುಟಗಳು: xxvi+೩೦ + ೩೧೧. ಬೆಲೆ: ರೂ ೬-೮-೦.

೪. ಭಾಸ್ಕರಾಚಾರ್ಯಕೃತ **ಮಹಾಭಾಸ್ವತೀಯಮ್** ಗೋವಿಂದ ಸ್ವಾಮಿಕೃತ ಭಾಷ್ಯ, ಪರಮೇಶ್ವರಕೃತ ವ್ಯಾಖ್ಯೆ ಸಿದ್ಧಾಂತ ದೀಪಿಕಾ ಸಹಿತ. (ಸಂಸ್ಕೃತ) ಪುಟಗಳು: Lxvii+೪೪೦. ಬೆಲೆ:ರೂ೧೧.

೫. ಮೀಳಾನಾದಾಚಾರಿಯಾರ ಕೃತ **ನೈಯೆದ್ಯಸಂಗ್ರಹ**. (ಸಂಸ್ಕೃತ) ಪುಟಗಳು: LLIX + ೨೮೪. ಬೆಲೆ: ರೂ. ೯.೧೨-೦.

ಮೇಲಿನ ಐದು ಪುಸ್ತಕಗಳೆ ಸಾಮಾನ್ಯ ಸಂಸ್ಕಾರಕರು ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿ ಸಂಗ್ರಹಾಲಯದ ಕ್ಯೂರೇಟರ ರಾದ ಶ್ರೀ ಟಿ ಚಂದ್ರಶೇಖರನ್, ಎಂ. ಎ. ಎಲ್. ಟಿ. ಪ್ರಕಾಶಕರು: ಸರಕಾರೀ ಪ್ರಾಚ್ಯ ಹಸ್ತಪ್ರತಿ ಸಂಗ್ರಹಾಲಯ, ಮದ್ರಾಸು.

ಪುಸ್ತಕಾಲಯ

(೩೩ನೇ ಪುಟದಿಂದ)

ಣ ಕಾರ್ಯಗಳಲ್ಲಿಯೂ ಈ ಪುಸ್ತಕಾಲಯಗಳು ಸಹಾಯ ವಾಗಿರುತ್ತವೆ.

ಪ್ರಾಥಮಿಕ ಶಾಲೆಗಳ ಮಟ್ಟಿಗೆ ಹೇಳುವುದಾದರೆ, ಖಂಡಿತವಾಗಿಯೂ, ಉನ್ನತ ವಿದ್ಯಾ ಶಾಲೆಗಳಲ್ಲಿ ಅತ್ಯಂತ ಸುಸಜ್ಜಿತವಾದ ಪುಸ್ತಕಾಲಯಗಳಿರುತ್ತವೆ. ಈ ಉನ್ನತ ವಿದ್ಯಾ ಶಾಲೆಗಳಲ್ಲಿ ದೊಡ್ಡ ಕೇಂದ್ರೀಯ ಪುಸ್ತಕಾಲಯಗಳೂ ಮತ್ತು ವಿಭಿನ್ನ ಶಾಖೆಗಳಿಗೂ ವಿಶಿಷ್ಟ ವಿಭಾಗಗಳಿಗೂ, ಅಧ್ಯಯನ ಭಾಗಗಳಿಗೂ ಪ್ರತ್ಯೇಕವಾದ ಸಣ್ಣ ಸಣ್ಣ ಪುಸ್ತಕಾಲಯಗಳೂ ಇರುತ್ತವೆ. ಸೋಫಿಯಾವಿಶ್ವವಿದ್ಯಾಲಯದಲ್ಲಿಯೂ ಬಟ್ಗೇರಿಯದ ವಿಜ್ಞಾನಶಾಸ್ತ್ರ ಪರಿಷತ್ತಿನಲ್ಲಿಯೂ ಅತ್ಯಂತ ದೊಡ್ಡ, ಆದರ್ಶ ಪುಸ್ತಕಾಲಯಗಳಿವೆ.

ವಿಭಿನ್ನ ಶಿಕ್ಷಣ ಸಂಸ್ಥೆಗಳೂ, ಸೇನಾ ವಿಭಾಗಗಳೂ, ಜೇರಿಗಳೂ, ಸ್ನಾನಾರೋಗ್ಯ ವರ್ಧಕಾಲಯಗಳೂ ವಿಶ್ರಾಂತಿ ಗೃಹಗಳೂ ಮತ್ತಿತರ ಸಂಸ್ಥೆಗಳೂ ಆರೋಗ್ಯ ಸಚಿವಾಲಯ, ರಕ್ಷಣಾ ಸಚಿವಾಲಯ ಮತ್ತು ಒಳದೇಶೀಯ ವ್ಯವಹಾರಗಳ ಸಚಿವಾಲಯಗಳಿಂದ ನಡೆಸಲ್ಪಡುತ್ತವೆ. ಇವುಗಳಲ್ಲಿಯೂ ಕೂಡ ಅನೇಕ ಪುಸ್ತಕಾಲಯಗಳನ್ನು ನೆಲೆಗೊಳಿಸಲಾಗಿದೆ.

ಉಪಯುಕ್ತ ಪುಸ್ತಕಗಳು

ಬಡಂಕು ಬಂಗಾರ (ಕುಮಾರ ಸ್ವಾಮಿ)	1	8	0
ಹಿರೋಶಿಮಾದಿಂದ ಜಿನೇವಾ (ಯು. ಆರ್. ಆಚಾರ್ಯ)	1	8	0
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8	0
ನಡುಹಗಲಿನ ಕಗ್ಗತ್ತಲೆ (ಅನು: ಕು ಶಿ. ಹರಿದಾಸ ಭಟ್)	2	8	0
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣ ಆಚಾರ್ಯ ಮತ್ತು ಕೆ. ಬಿ ರಾಮಕೃಷ್ಣ ರಾವ್)	2	4	0
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು ಶಿ. ಹರಿದಾಸ ಭಟ್)	2	0	0
ಎಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0	0
ಘಂಟೆಮಾಲಾ (ಅನು: ಕು ಶಿ. ಹರಿದಾಸ ಭಟ್)	2	0	0
ನೋಪದ ಮಹಾಜಾಲ (ವೀರಪ್ಪ ಯಾಗಟಿ)	1	12	0
ಭಾರತದ ಅಂಗ-ಕಾಶ್ಮೀರ (ರಘು.ನಂದನ ರಾವ್)	0	5	0
ಭಾರತೀಯ ಮಹಾಪುರುಷರು (ಎಸ್. ಗೋಪೀಚಂದ ರಾವ್)	1	8	0
ಕಥಾ ಕೌಮುದಿ (ಎಸ್. ಗೋಪೀಚಂದ ರಾವ್)	1	8	0
Letter Writing Made Easy (ಸುಲಭದಲ್ಲಿ ಪತ್ರಲೇಖನ)	1	4	0

ಸಿಗುವ ಸ್ಥಳಗಳು:

1) ನವಯುಗ ಪ್ರೆಸ್, ಉಡುಪಿ
2) ನವಭಾರತ ಪುಸ್ತಕ ಭಂಡಾರ, ಉಡುಪಿ.
3) ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು-3.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ

ಮಾನವ ಜೀವನ

ಸ್ವಾಭಿಮಾನವಿಹೀನನು ತೃಣಪ್ರಾಯನಾಗಿರುವನು!

ಆತ್ಮಗೌರವಿಯನ್ನು ಎಲ್ಲರೂ ಗೌರವಿಸುತ್ತಾರೆ, ಮನಸಾರೆ ಹಾಡಿ ಕೊಂಡಾಡುತ್ತಾರೆ.

ಆತ್ಮಾಭಿಮಾನಕ್ಕೆ ಸಮಜೋಡಿಯಾಗಿ ನಿಲ್ಲಬಲ್ಲ ಶಕ್ತವಾದ ಪದಾರ್ಥ ಜಗತ್ತಿನಲ್ಲಿ ಬೇರೊಂದಿಲ್ಲ. ತನ್ನ ಮಾನ ಮರ್ಯಾದೆಯನ್ನು ಗಮನಿಸುವವನೂ ತನ್ನ ಬಗ್ಗೆ ಅಭಿಮಾನ ಪಡುವವನೂ ತನ್ನ ಮಾನಾಪಮಾನಗಳನ್ನು ಅರಿತುಕೊಳ್ಳುವ ಸಾಮರ್ಥ್ಯವಿರುವವನೂ ಮಾನವನೆಂಬ ನಾಮಕ್ಕೆ ಸುಯೋಗ್ಯನಾಗುತ್ತಾನೆಯೇ ಹೊರತು ಇವಿಲ್ಲವಾದರೆ, ಅವನು ಮನುಷ್ಯನೇ ಅಲ್ಲ. ಆತ್ಮಾಭಿಮಾನ ಶೂನ್ಯನಾದವನು ಮೃಶಪ್ರಾಯನೇ ಸರಿ. ವಿಶ್ವದಲ್ಲಿ ಅಂತಹನಿಗೆ ಯಾವ ಸ್ಥಾನವೂ ಇಲ್ಲ; ಯಾವ ಅಧಿಕಾರವೂ ಇಲ್ಲ; ಯಾವ ಅಸ್ತಿತ್ವವೂ ಇಲ್ಲ. ಅಪಮಾನಿತ ಜೀವನವು ನರಕವಾಸಕ್ಕಿಂತಲೂ ಹೇಯವಾದುದು.

ಜೀವನದಲ್ಲಿ ಮಾಧುರ್ಯ ಹಾಗೂ ಸ್ವಾರಸ್ಯವುಳಿಯಬೇಕಾದರೆ, ಒರ್ವನಲ್ಲಿ ಆತ್ಮಸಮ್ಮಾನದ ದೃಷ್ಟಿಯಿರಬೇಕು. ಆತ್ಮಾಭಿಮಾನಕ್ಕೆ ಧಕ್ಕೆ ಬಾದೊದಗಿದಾಗ ಕೊಂಚ ಸಮಯದವರೆಗೆ ದುಃಖವೂ ಹೃದಯಖಿನ್ನತೆಯೂ ಕಾಣಿಸುವುದು; ಆದರೂ ವಿರೋಧೀ ಶಕ್ತಿಯ ಘರ್ಷಣೆಯಿಂದ ಸಾಫಲ್ಯಪ್ರಾಪ್ತಿಯಾಗಿ ಸ್ಥಾಯೀ ಶಾಂತಿಯು ದೊರೆತು ಜೀವನವು ಆನಂದಮಯವಾಗುವುದು. ಮಾನವನಿಗೆ ಶಕ್ತಿಯನ್ನೂ ಉತ್ಸಾಹವನ್ನೂ ಈ ಸ್ವಾಭಿಮಾನವೇ ತಂದೀಯುತ್ತದೆ. ಇದರೆರುರು ಮಾನಸಿಕ ದುರ್ಬಲತೆಯೂ ಹೇಡಿತನವೂ ಕ್ಷಣಮಾತ್ರ ನಿಲ್ಲಲಾರದು ಆತ್ಮಾಭಿಮಾನವೊಂದಿದ್ದರೆ, ಮನುಷ್ಯನು ಯಾವ ಸಂದಿಗ್ಧ ಪರಿಸ್ಥಿತಿಯೂ ಧೈರ್ಯಗುಂದದೆ ನಿರ್ಭೀತನಾಗಿ ಮುಂದುವರಿಯಬಲ್ಲನು.

ಆತ್ಮಸಮ್ಮಾನವು ಒರ್ವನ ಉನ್ನತಿಯ ಸೂಚಕದ್ವಾರ; ಅವನನ್ನು ಇತರ ಸಾಮಾನ್ಯ ಜನರಿಗಿಂತ ಮೇಲೇರಿಸುವ ಸಾಧನ. ಇಂದಿನ ದಿನಗಳಲ್ಲಿ ಒಬ್ಬನಿನ್ನೊಬ್ಬನನ್ನು ಮೆಟ್ಟಿಬಯಸುತ್ತಾನೆ. ಆಗ ತನ್ನ ಗೌರವಕ್ಕೆ ಬೆಲೆಯೊಯುವ ವ್ಯಕ್ತಿಯು ವಿರೋಧೀ ವಾತಾವರಣವನ್ನು ಎದುರಿಸಿ ಪರಮಾತ್ಮನ ಕೃಪೆಯಿಂದ ಎದ್ದು ನಿಲ್ಲುತ್ತಾನೆ. ಅವನಲ್ಲಿ ಉತ್ಸಾಹವೂ ಸಾಹಸವೂ ತುಂಬಿಬರುವುದು; ಮತ್ತು ಅತನು ಉತ್ಥಾನಪಥದಲ್ಲಿನ ಪಾಂಥನಾಗುವನು.

ಆತ್ಮಾಭಿಮಾನದಿಂದ ಗೌರವೂ ಪ್ರಾಪ್ತಿಸುವುದು; ವಿಶ್ವದಲ್ಲಿಯೂ ಪ್ರತಿಷ್ಠೆಲಭಿಸುವುದು; ಆ ಜೀವನ ಯಶಪ್ರಾಪ್ತಿಯಾಗುವುದು; ಮೃತ್ಯುವುಬನಾದ ನಂತರವೂ ಅವನ ಯಶಶ್ಚಂದ್ರಿಕೆಯ ಪ್ರಕಾಶ ಪಸರಿಸುವುದು. ಬಲಾತ್ಕಾರವನ್ನು ತಡೆಹಿಡಿಯುವ, ಆತ್ಮಘಾತವನ್ನು ವಿರೋಧಿಸುವ, ತನ್ನ ಮಾನಮರ್ಯಾದೆಗಾಗಿ ಹೋರಾಡುವ ವ್ಯಕ್ತಿಗೆ ಜನತೆಯ ಸಹಾನುಭೂತಿಯಿರುವುದು; ಜನತೆಯು ಅವನಿಗೆ ನೆರವಿತ್ತು ಸಹಕರಿಸುವುದು. ಯಾರೊಬ್ಬರಾದರೂ ತನ್ನ ಆತ್ಮಗೌರವವನ್ನು ಕಳೆದುಕೊಳ್ಳ ಬಯಸುವುದಿಲ್ಲ ಯಾರೊಬ್ಬನ ಗೌರವವು ನಾಶವಾದರೆ, ಜನತೆ ಅದನ್ನು ಸಹಿಸದು; ಅದು ಪ್ರಕೃತಿ ನಿಷ್ಠಗುಣ. ಕೆಲವರು ಸರಮಾನಾಪಹಾರ ಮಾಡುವುದರಿಂದಲೇ ತೃಪ್ತರಾಗುವವರಿದ್ದರೂ ಹಲವರು ಇಂತಹ ಘಾತಕರನ್ನು ನೆಲಸಮ ಮಾಡಲು ತಮ್ಮತನುಮನಧನಗಳನ್ನು ಮೀಸಲಿಡುತ್ತಾರೆ. ಸ್ವಾಭಿಮಾನವೇ ಸರ್ವಸ್ವವಾಗಿರುವವರನ್ನು ಊರಿಗೆ ಊರೇ ಗೌರವಿಸುತ್ತದೆ.

ಸ್ವಾಭಿಮಾನದಿಂದ ಆತ್ಮಸಂಸ್ಕಾರವೂ ದೊರಗುತ್ತದೆ; ಆತ್ಮವು ಸಬಲವಾಗುತ್ತದೆ. ಸ್ವಾಭಿಮಾನಿಯು ಯೋಗಿಯಂತೆ ತ್ಯಾಗಿಯೂ ಕಷ್ಟ ಸಹಿಷ್ಣುವೂ ಆಗಿರಬೇಕಾಗುತ್ತದೆ; ಆದರೆ, ಹೀಗಾಗುವುದರಿಂದ ಆತ್ಮಸುಧಾರಣೆಯಾಗುತ್ತದೆ; ಆತ್ಮಸಮ್ಮಾನದ ಸಾಧನೆಯೂ ಒಂದು ಬಗೆಯ ತಪಸ್ಸು. ತಪಶ್ಚರ್ಯೆಯಿಂದ ಆತ್ಮೋದ್ಧಾರವಾಗುವಂತೆ ಆತ್ಮಸಂಮಾನದಿಂದರೂ ಆತ್ಮೋದ್ಧಾರವಾಗುವುದೆಂದರೆ, ಅತಿಶಯೋಕ್ತಿಯಲ್ಲ.

ಸ್ವಾಭಿಮಾನೀ ಆತ್ಮಗಳ ಗೌರವಪೂರ್ಣ ನಾಮಗಳಿಂದ ಇತಿಹಾಸವು ಬೆಳಗುತ್ತಿದೆ. ಮಹಾರಾಣಾ ಪ್ರತಾಪನು ಸ್ವಾಭಿಮಾನ ರಕ್ಷಣೆಗಾಗಿ ಧನ, ಸಂಪತ್ತು, ರಾಜ್ಯವೆಲ್ಲವನ್ನೂ ತೊರೆದನಲ್ಲದೇ ಪರವಾಸ್ಯವನ್ನಂಗೀಕರಿಸಲಿಲ್ಲ. ದಕ್ಷಿಣ ಆಫ್ರಿಕೆಯ ತೊಗಲಕ ರಾಜ್ಯಭಾರದಲ್ಲಿ ಮಹಾತ್ಮಾ ಗಂಧೀಜಿಯವರು ತಲೆ ತಗ್ಗಿಸದೆ ಸ್ವಾಭಿಮಾನ ರಕ್ಷಣೆಗೋಸ್ಕರ ಹೋರಾಡಿದರು. ಭಾರತದಲ್ಲಿಯೂ ಅವರು ಇದೇ ರೀತಿಯ ಹೋರಾಟದಲ್ಲಿ ಜಯಶೀಲರಾಗಿ ಯಶಸ್ವಿಲಕರಾದರು. ಸ್ವಿಜರ್‌ಲೆಂಡಿನ ದೇಶಭಕ್ತ ಸ್ವಾಭಿಮಾನಿಯಾಗಿದ್ದ ವಿಲ್ಲಿನ ಕಥೆಯನ್ನು ಯಾರು ತಾನೇ ತಿಳಿದಿಲ್ಲ? ರಾಣೀ ಲಕ್ಷ್ಮೀಬಾಯಿ, ದುರ್ಗಾವತಿ ಮೊದಲಾದ ವೀರರಮಣಿಯರನ್ನು ನಾವು ಮರೆತವರಲ್ಲ. ಈ ಐತಿಹಾಸಿಕ ಪುರುಷರೆಲ್ಲ ಸ್ವಾಭಿಮಾನ ಸಹಿತನಾದುದರಿಂದಲೇ ಇಂದು ಕೀರ್ತಿಸಲ್ಪಟ್ಟುತ್ತಿದ್ದಾರೆ. ಮಾನವನವಲ್ಲರಬೇಕಾದ ಶಿಷ್ಟ ಸಂಪ್ರದಾಯಗಳಲ್ಲಿ ಈ ಸ್ವಾಭಿಮಾನವೂ ಒಂದೆಂಬುದಕ್ಕೆ ಅನ್ಯ ನಿದರ್ಶನ ಅನಗತ್ಯ.

ಇದರಿಂದ, ನಾವೂ ನಮ್ಮ ಸ್ವಾಭಿಮಾನವನ್ನು ರಕ್ಷಿಸುವುದು ಅತ್ಯಗತ್ಯವೆಂದು ತಿಳಿಯಬೇಕು. ನಾವೆಂತಹ ಕಠಿಣ ಪ್ರಸಂಗಗಳನ್ನೆದುರಿಸಬೇಕಾಗಿ ಬಂದರೂ ಎಂತಹ ಕಷ್ಟನಷ್ಟಗಳಿಗೆ ಗುರಿಯಾಗುವ ಸಂದರ್ಭವೊದಗಿದರೂ, ನಾವು ನಮ್ಮ ತನವನ್ನು ಸರಿರಿ ಧಾರಿಯೆರಿಯದೆ ಸರ್ವದಾ ಸ್ವಾಭಿಮಾನರಕ್ಷಣೆಗಾಗಿ ಹೋರಾಡಬೇಕು. ಆತ್ಮಾಭಿಮಾನದ ಬೆಲೆಯು ಪ್ರಾಣ ಮೌಲ್ಯಕ್ಕಿಂತಲೂ ಅಧಿಕ. ಅಪಮಾನಿತ ಜೀವನವನ್ನು ಜಾಳುವುದಕ್ಕಿಂತ ಆತ್ಮಹತ್ಯೆಯೇ ಶ್ರೇಯಸ್ಕರವಾಗಿದೆ. ಯಾರು ತಮ್ಮ ಮಾನ ಮರ್ಯಾದೆಗಳಿಗೆ ಎರವಾಗಿ ಪಶುಗಳಿಗಿಂತಲೂ ನಿಷ್ಕೃಷ್ಟ ಜೀವನವನ್ನು ನಡೆಯಿಸುವರೋ ಅವರು ಬದುಕುವುದಕ್ಕಿಂತಲೂ ಸಾಯುವುದೇ ಪರಮ ಸುಖ

"ತನ್ನ ಗೌರವ ಹಾಗೂ ದೇಶಾಭಿಮಾನಗಳಿಲ್ಲದ ನರನು ಮನುಷ್ಯನಲ್ಲ; ಪಶುಗಳಿಂದಲೂ ಹೀನನು; ಮೃತ ಶರೀರಕ್ಕೆ ಸಮಾನನಾದವನು" ಎಂಬ ಮಾತು ನೂರುಬಾರಿಗೂ ಸತ್ಯ.

—ಎಸ್. ಗೋಪೀಚಂದ ರಾವ್,
ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನಾಡ ಹಬ್ಬ

ಮೈಸೂರು ರಾಜ್ಯದಲ್ಲಿ ವಿವಿಧ ಕಾರ್ಯಕ್ರಮಗಳು

ಸರ್ವ ರೀತಿಯ ಆಕರ್ಷಣೆಗಳನ್ನು ಜೋಡಿಸುವ ಮಹಾಪ್ರಯತ್ನ

ಕಳೆದ ವರ್ಷದಂತೆ ಈ ವರ್ಷವೂ ದಸರಾ ಉತ್ಸವವನ್ನು ಸಮಗ್ರ ರಾಜ್ಯದಲ್ಲಿ ನಾಡ ಹಬ್ಬದಂತೆ ಸಂಘಟಿಸಬೇಕೆಂದು ಮೈಸೂರು ಸರಕಾರವು ನಿರ್ಧರಿಸಿದೆ. ಈ ಉತ್ಸವಗಳು ಅಕ್ಟೋಬರ್ ೧೩, ೧೯೫೮ರಿಂದ ಪ್ರಾರಂಭವಾಗಿ ಅಕ್ಟೋಬರ್ ೨೨, ೧೯೫೮ರ ವರೆಗೆ ನಡೆಯುವವು.

ದಸರೆಯ ಹಬ್ಬವನ್ನು ತಾಲೂಕು, ಜಿಲ್ಲೆ ಮತ್ತು ಡಿವಿಜನ್ ಮಟ್ಟದ ಮೇಲೆ ಕೆಳಗೆ ಕಾಣಿಸಿದ ಎಲ್ಲ ಅಥವಾ ಕೆಲವು ವಿಷಯಗಳನ್ನು ಸಾರ್ವಜನಿಕರ ಅಭಿರುಚಿಗೆ ಅನುಸಾರವಾಗಿ ಸಂಘಟಿಸುವ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ:—

೧. ರಾಷ್ಟ್ರೀಯ ಸಂಗೀತ ಮತ್ತು ಜನಪದ ಗೀತಗಳು.

೨. ಪ್ರಾಚೀನ ಮತ್ತು ಆಧುನಿಕ ಕಾವ್ಯಗಳ ವಾಚನ.

೩. ನಾಟಕ, ಜಾನಪದ ನೃತ್ಯ ಮತ್ತು ಜಾನಪದ ಸಂಗೀತ.

೪. ನೃತ್ಯ ಪ್ರದರ್ಶನ.

೫. ವ್ಯಾಯಾಮ ಪ್ರದರ್ಶನ ಮತ್ತು ಕಸರತ್ತು.

ರಾಜ್ಯಾದ್ಯಂತ ಕ್ರೀಡಾ ಮಹೋತ್ಸವವನ್ನು ಏರ್ಪಡಿಸಲಾಗುವುದು. ಅದರಲ್ಲಿ ಗ್ರಾಮ ಮಟ್ಟಕ್ಕಿಂತ ಮೇಲಿನ ಮಟ್ಟದ ಮತ್ತು ಜಿಲ್ಲಾ ಮಟ್ಟದ ಟೀಮುಗಳು ಪ್ರತಿನಿಧಿಸುವವು ವಿವಿಧ ಸ್ಪರ್ಧೆಗಳ ಫೈನಲ್ ಆಟಗಳು ಮೈಸೂರಿನಲ್ಲಿ ದಸರೆಯ ಕೊನೆಯ ಮೂರು ದಿನಗಳಲ್ಲಿ ನಡೆಯುವವು. ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಮಾತ್ರವಲ್ಲದೆ ಸಾರ್ವಜನಿಕರೂ ಭಾಗವಹಿಸಬಹುದು.

ದಸರಾ ಮಹೋತ್ಸವ ಕಾಲದಲ್ಲಿ ಮೈಸೂರಿನ ನಗರ ಭವನದಲ್ಲಿ ಪ್ರತಿದಿನ ಸಾಯಂಕಾಲ ಸಾರ್ವಜನಿಕ ಸಮಾರಂಭಗಳು ಜರಗುವವು. ಆಗ ಸಂಗೀತ, ನೃತ್ಯ ಕಸರತ್ತು, ವ್ಯಾಯಾಮ ಪ್ರದರ್ಶನ ಮೊದಲಾದ ಮನರಂಜನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ಇದರಲ್ಲಿ ರಾಜ್ಯದ ವಿವಿಧ ಭಾಗಗಳ ಶ್ರೇಷ್ಠ ಕಲಾವಂತರು ಭಾಗವಹಿಸುವರು.

ದಸರಾ ಮಹೋತ್ಸವ ಕಾಲದಲ್ಲಿ ಪ್ರತಿದಿನ ಸಾಯಂಕಾಲ ಅರಮನೆ, ಸರಕಾರಿ ಕಟ್ಟಡ ಮತ್ತು ಬೃಂದಾವನ ತೋಟಗಳನ್ನು ದೀಪಗಳಿಂದ ಅಲಂಕರಿಸಲಾಗುವುದು.

ವಿಜಯದಶಮಿ, ಅಕ್ಟೋಬರ್ ೨೨, ೧೯೫೮ರಂದು ಸಾಯಂಕಾಲ ಒಂದು ಸಾರ್ವಜನಿಕ ಮೆರವಣಿಗೆಯನ್ನು ಏರ್ಪಡಿಸಲಾಗುವುದು. ರಾಜ್ಯಪಾಲರು ಅರಮನೆಯಿಂದ ಬನ್ನಿ ಮಂಟಪಕ್ಕೆ ಈ ಮೆರವಣಿಗೆಯಲ್ಲಿ ತೆರಳುವರು. ಈ ಮೆರವಣಿಗೆಯಲ್ಲಿ ಸ್ಟೇಟ್ ರಿಜರ್ವ್ ಪೋಲೀಸರು ಬಾಲಭಟರು, ಸ್ವಯಂಸೇವಿಕೆಯರು (ಗರ್ಲ್ ಗೈಡ್ಸ್) ಭಾರತ ಸೇವಾದಳ ರಾಷ್ಟ್ರೀಯ ಕೇಡೆಟ್‌ನ ಸೈನಿಕರು, ರಾಜ್ಯದ ಬೇರೆ ಬೇರೆ ಭಾಗಗಳಿಂದ ಬರುವ ಟೀಮುಗಳು ತಮ್ಮ ಧ್ವಜಗಳ ಸಮೇತ ಭಾಗ ವಹಿಸುವರು.

ಈ ಮೆರವಣಿಗೆಯಲ್ಲಿ ಸೇನೆಗಳೂ ಭಾಗ ವಹಿಸುವಂತೆ ವ್ಯವಸ್ಥೆ ಮಾಡಲಾಗುವುದೆಂದು ಅತಿಶಯಿಸಲಾಗಿದೆ.

ಈ ಪ್ರದರ್ಶನಗಳ ಅಂಗವಾಗಿ ಐತಿಹಾಸಿಕ ಘಟನೆಗಳನ್ನು ಅಥವಾ ಸ್ಥಳೀಯ ಮಹತ್ವದ ಇನ್ನಿತರ ದೃಶ್ಯಗಳನ್ನು ಪ್ರತಿಬಿಂಬಿಸುವ ಹಾಗೂ ಜಿಲ್ಲೆಗಳ ರೂಪಕಗಳ ಮೆರವಣಿಗೆಯನ್ನೂ ಹೊರಡಿಸಲಾಗುವುದು

ದಸರಾ ಮಹೋತ್ಸವಗಳ ಅಂಗವಾಗಿ ಪ್ರತಿಯೊಂದು ತಾಲೂಕು ಅಥವಾ ಜಿಲ್ಲೆಯಲ್ಲಿ ದವಗಳ ಪ್ರದರ್ಶನವನ್ನೇರ್ಪಡಿಸಬೇಕೆಂದಿದೆ, ಜಿಲ್ಲೆಯಲ್ಲಿ ಉತ್ತಮ ಪಶುವಿಗೆ ಬಹುಮಾನ ಕೊಡಲಾಗುವುದು. ಪ್ರತಿಯೊಂದು ಜಿಲ್ಲೆಯ ಬಹುಮಾನಿತ ಪಶುವನ್ನೂ ಮೈಸೂರಿಗೆ ತರಲಾಗುವುದು ಅವಿಲ್ಲವುಗಳಲ್ಲಿ ಅತ್ಯುತ್ತಮವೆಂದು ತೀರ್ಮಾನಿಸಲಾದ ದನಕ್ಕೆ ರಾಜ್ಯಮಾರಿತೋಷಕವನ್ನು ನೀಡಲಾಗುವುದು. ಈ ಬಹುಮಾನ ಪಡೆದ ದನವನ್ನೂ ದಸರೆಯ ಮೆರವಣಿಗೆಯಲ್ಲಿ ಮೆರಸಲಾಗುವುದು.

ರಾಜ್ಯದಲ್ಲಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣ್ಯ ಸೇವೆಯನ್ನು ಸಲ್ಲಿಸಿದವರಿಗೆ ಸಾರ್ವಜನಿಕ ಸೇವಾ ಪದಕಗಳನ್ನು ಕೊಡುವ ಏರ್ಪಾಟುಗಳನ್ನು ಮಾಡಲಾಗುತ್ತಿದೆ. ಸ್ಟೇಟ್ ಟೂರ್ನಮೆಂಟ್ಸ್ ಮತ್ತು ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೂ ಪದಕಗಳನ್ನು ನೀಡಲಾಗುವುದು.

ದಸರಾ ಮಹೋತ್ಸವದ ಅಂಗವಾಗಿ ಮೈಸೂರು ನಗರದಲ್ಲಿ ಎಂದಿನಂತೆ ಅಖಿಲ ಭಾರತ ಕೈಗಾರಿಗೆ ಮತ್ತು ವ್ಯವಸಾಯ ಪ್ರದರ್ಶನವನ್ನು ಏರ್ಪಡಿಸಲಾಗುವುದು. ಹಿಂದಿನ ವರ್ಷಗಳಂತೆ ಈ ವರ್ಷವೂ ಈ ಪ್ರದರ್ಶನದಲ್ಲಿ ಎಲ್ಲ ರಾಜ್ಯ ಸರಕಾರಗಳು, ಕೇಂದ್ರ ಸರಕಾರ ಮತ್ತು

(೧೨ನೇ ಪುಟ ನೋಡಿರಿ.)

ಕವಿತಾ ವಿತಾನ

ಶಾಂತಿ ಸರ್ವೋದಯದ ಬೆಳಕು ಬೇಕೆಮಗಿಂದು!

ಶಾಂತಿ ಸರ್ವೋದಯದ ಜ್ಯೋತಿಯುದಯಿಸಿ
ಬರಲಿ,
ವಿಶ್ವವೇ ಬೆಳಕಾಗಿ ಬೆಳಗುತಿರಲಿ!
ಶಾಂತಿಯೇ ಬೇಕೆಂದು, ಉದಯ ಜೀವನಕೆಂದು
ಶಾಂತಿ ಭೂಮಿಯನು ತುಂಬಿ ನಗುತಲಿರಲಿ!

ಎತ್ತಲೋ ದೂರದಲಿ ಕ್ರಾಂತಿ ಸ ನಗುತ
ಲಿಹುದು,
ಆ ಬೇಗೆ ಭುವಿಯಗಲ ಪಸರುತಿಹುದು
ಅತ್ತಣಂದೀಕಡೆಗೆ ಉರಿಗಾಳಿ ಬೀಸುವುದು,
ತತ್ತಳಿಗಿದೆ ಮನವು ಚಿಂತೆ ಕಾಡುವುದು!

ಉರಿವ ದೀಪದಿ ಸಿಡಿದ ಕಿಡಿಯೊಂದು ಮನೆ-
ಮನೆಯ
ಸುಟ್ಟುರುಹಿ ನಾಶವನು ನೀಡಬಹುದು,
ಪರಿಣ ಪಾಶಕೆ ಸಿಡಿದ ಕಲ್ಲಿನೊಳಗಿನ ಕಿಚ್ಚು—
ಕಾನನವನಾವರಿಸಿ ಭಗಿಸಬಹುದು!

ಬಲೆಯಗೋಡಲಿಯಲ್ಲಿ ಹೂಗಿಡವಬೆಳೆಯಿಸಲು
ಬಾಳಬಹುದೇ, ಸುಮವ ನೀಡಬಹುದೆ?
ಯುದ್ಧ ಭೂಮಿಯ ಮೇಲೆ ಸುಖ ಶಾಂತಿ
ಸಂತಸವ
ಕಾಣಬಹುದೇ, ಕಂಡು ನಲಿಯಬಹುದೆ?

ಉನ್ನತಿಯ ಸಾಧನೆಯು, ಮಾನವನ ಹಿರಿ
ತನವು;
ಅದರಿಂದ ಬೆಳಗುವುದು ದೇಶವೆಲ್ಲ!
ಜನತೆ-ಜನತೆಯ ನಡುವೆ, ದೇಶ-ದೇಶದ
ನಡುವೆ,
ಮತ್ಸರದ ಉರಿಯೇಕೆ ತಿಳಿಯದಲ್ಲ!

ವಿಜ್ಞಾನ, ಸಾಹಿತ್ಯ ಶೋಧನೆಯ ಹಾದಿಯಲಿ
ನೆಲೆಸ ಬೇಕೈ ವಿಶ್ವ ಬೇಳಗೆಯನು.
ಘೋರ ನಾಶ ವಿನಾಶ ಸೂರಕ ವಿಕಾರತರ
ಸೃಷ್ಟಿ ತರುವುದೆ ಶಾಂತಿ ಉನ್ನತಿಯನು!

ಜಡದಿಂದೆ ಜೀವನವು ಹುಟ್ಟುವುದು ವಿಶ್ವದಲಿ,
ನವ್ಯ ಚೇತನದಿಂದೆ 'ಎಲ್ಲ' ಬದುದು!
ಹೊಸ ಶಕ್ತಿ ಸಾಧನೆಯು, ಹೊಸ ಹಾದಿ
ಹೊಸ ತಿಳಿವು,
ಹೊಸ ಸೃಷ್ಟಿಯಿಂದ ಈ ಬಾಳು 'ಇಹುದು!'

ನೈಜ ನಿಜತೆಗಳೇನು, ಕೃತಕ ರಚನೆಗಳೇನು,
ನೈಜದಲ್ಲೇ ಕೃತಕ ಮೂಲವಿಹುದು.
ಜೀವ-ಮಾನವ ಸೃಷ್ಟಿಯೆಂಬ ಭೇದಗಳೇಕೆ,
ಕೃತಕ ಸೃಷ್ಟಿಯೆ ಮುಂದೆ ನೈಜವೆನಿಸು
ವುದು'

ಮನಮೊಳಗೆ ಪಿರಸವನು ತುಂಬಿ ಪೈರದ ಕತ್ತಿ-
ಎತ್ತಿ ನಾಡಿಗೆ ಉರಿಯ ಹಚ್ಚಲೇಕೆ?
ನೇಹ ಮಾನುತೆಯು, ಐಕ್ಯ ಒಮ್ಮತವ ಬದಿ
ಗೊತ್ತಿ,
ಉನ್ನತಿಯ ಬಿಟ್ಟು ಹೊಡೆದಾಡಲೇಕೆ?

ಪರಮಾಣು ಶಕ್ತಿಯನು ಬೆಳಸಿ, ಲೋಕವ
ಸುಡುವ
ಹೊಂಚು ಸಂಚುಗಳೆಣಿಕೆಯೇಕೆ ವ್ಯರ್ಥ!
ಜಗವು ಮಸಣವು ಎನಿಸೆ, ಮತ್ತೆ ಉಳಿವವ
ನಾರು?
'ತಾನು ತನ್ನನೆ ಕೊಯುವ!' ಏನು ಅರ್ಥ?

ಎಲ್ಲರನು ಸಡೆಬಡೆದು ತಾನೆ ಮೆರೆಯುವೆನೆಂಬ
ಹವ್ಯಾಸದೊಳಗಿರುವ ತತ್ವವೇನು?
ಸರ್ವರನು ಸಂಹರಿಸಿ ತಾನುಬಾಳುವೆ ಬಯಕೆ!
ಏನು ಬಾಳ್ಳೆ ಆಯುವು! ಬಾಳು ಏನು?

ಹಿರಿಯ ಸಂಸ್ಕೃತಿಯೇನು, ಶಾಂತಿನೀತಿಗಳೇನು
ನಾಗರಿಕತನವೇನು, ಶೋಧವೇನು?
ನವ್ಯಸಾಧನೆಯೇನು ಬಿಸ್ಮಪಂಥಗಳೇನು?
ಎಲ್ಲ ನಾಶಕೆ ಮೂಲವಾಯಿತೇನು?

ವಿಜ್ಞಾನ ಬೆಂಕಿಯೋ, ಸಾಹಿತ್ಯ ಕಳಪೆಯೋ,
ಮಾನವನು ಜಂಜಡದ ಕ್ರಾಂತಿಪಡುವೊ?
ಹೊಸಹಾದಿ ಯುದ್ಧವೋ, ಹೊಸನೀತಿ ಕ್ರಾಂ
ತಿಯೋ,
ಶಾಂತಿ ಸಂತಸಗಳಿಗೆ ಬನಗಾಲವೊ?

ವಿಶ್ವವೊಂದೇ ಮನೆಯು ನಾವೆಲ್ಲ ಬಾಂಧವರು,
ನಮ್ಮೊಳಗೆ ಹಾಲು ಬಡಿದಾಟ ಸಾಕು!
ಮನ-ಮನೆಯ ರುಜಿಗೊಳಿಸಿ, ಹೊಂದಿ ಬೆಳೆ
ಯನು ಬೆಳೆಸಿ
ಶಾಂತಿ ಸ್ರೋಮದಿ ತುಂಬಿ ಬಾಳಬೇಕು?

ಶಾಂತಿಸಾಧಿಸಬೇಕು, ಶಾಂತಿಯೇ ಉನ್ನತಿಯು
ಶಾಂತಿ ಭೂಮಿಯು ನಮ್ಮದಾಗಿ ಇರಲಿ!
ಶಾಂತಿಯೇ ಜಗದ ಸರ್ವೋದಯದ ಸಂದೇಶ
ಶಾಂತಿಯೇ ಬೇಕೆಂದು ಶಾಂತಿಯಿರಲಿ!

—ಕೆ. ತಿಮ್ಮಪ್ಪ ಗಟ್ಟಿ, ಪೆರಡಾಲ.

ಭಾರತದ ರಾಷ್ಟ್ರೀಯ ಪ್ರಯೋಗ ಶಾಲೆಯಲ್ಲಿ ಒರ್ವ ಸತ್ಯ ಶಾಸ್ತ್ರಜ್ಞನು ತನ್ನ ಪರಿಶೀಲನಾ ಕಾರ್ಯದಲ್ಲಿ ತಲ್ಲೀನನಾಗಿರುವುದನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ನೀನೇ ಹೇಳಿದ್ದೀರಿ

ಅಧ್ಯಾಪಕರು ತಾಜಮಹಾಲಿನ ಕಥೆಯನ್ನು ರಸವತ್ತಾಗಿ ವರ್ಣಿಸಿ ಹೇಳಿ, ಸುನೀಲಾವರ್ತನೆ ಮಾಡುತ್ತ ಪ್ರಶ್ನಿಸಿದರು —ಶಹಾಜಹಾನನು ಯಾರು?

ಗೋಪಾಲ—ಭಾರೀ ದೊಡ್ಡ ಉಪ್ಪಾರ, ಸರ್.

ಅಧ್ಯಾಪಕ—ನಿನಗಾತನು ಉಪ್ಪಾರನೆಂದು ಅದಾವ ಮೂರ್ಖನು ಹೇಳಿದ್ದನು?

ಗೋಪಾಲ—ಸರ್, ಅವನು ಬಹಳ ದೊಡ್ಡ ದೊಡ್ಡ ಮಂದಿರಗಳನ್ನು ಕಟ್ಟಿಸಿದನೆಂದು ನೀನೇ ಹೇಳಿದಿರಲ್ಲ?

ಸರಳವಿದ್ದೇ ಸಿಕ್ಕಿಬಿದ್ದೆ

ತಂದೆ—ಮಗು, ಇಂದಿನ ಪರೀಕ್ಷೆ ಹೇಗಿತ್ತು?

ಮಗ—ಇಂದಿನ ಪರೀಕ್ಷೆಯಲ್ಲಿ ಬಂದಂತಹ ಪ್ರಶ್ನೆಗಳೆಲ್ಲ ಸರಳ ಪ್ರಶ್ನೆಗಳು ಇದುವರೆಗೂ ಬಂದಿರಲಿಲ್ಲ.

ತಂದೆ—ಹಾಗಾದರೆ, ನೀನು ಉತ್ತೀರ್ಣನಾಗುವೆ ಈ ಬಾರಿಯಾದರೂ:

ಮಗ—(ದುಃಖದಿಂದ) ಅದು ಹೇಗಪ್ಪ, ನಾನು ಕಷ್ಟ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಅಭ್ಯಸಿಸಿ ಹೋಗಿದ್ದೇನೆ. ಆದರೆ, ಎಲ್ಲವೂ ಸುಲಭವಾಗಿಯೇ ಬಂದುದರಿಂದ ಒಂದಕ್ಕೂ ಉತ್ತರಿಸುವುದು ಸಾಧ್ಯವಾಗದೆ ಹೋಯಿತಪ್ಪಾ!

ಯೋಗ್ಯ ರುಸುಂ

ವಕೀಲ ಹೊಸತಾಗಿ ಬಂದ ಕಕ್ಷಿಗಾರನೊಡನೆ—ಏನೋ ಅಪ್ಪಾ, ನಿನ್ನಲ್ಲಿ ನನ್ನ ರುಸುಂ ಕೊಡುವಷ್ಟು ಹಣವಿದೆಯೆ?

ಕಕ್ಷಿಗಾರ—ಇಲ್ಲ, ಅದರೆ, ನನ್ನೊಡನೆ ಒಂದು ಚೆವರ್ಲೆಟ್ ಮೋಟಾರುಕಾರು ಇದೆ

ವಕೀಲ—ಈಗ ಸರಿಹೋಯಿತು. ಆಗಲಿ, ನಿನ್ನ ದೂರು ಏನು? ನಿನ್ನ ಮೇಲೆ ಯಾವ ಆರೋಪ ಹೊರಿಸಿದ್ದಾರೆ?

ಕಕ್ಷಿಗಾರ—ಚೆವರ್ಲೆಟ್ ಮೋಟಾರು ಕಾರನ್ನು ನಾನು ಕದ್ದಿದ್ದೇನಂತೆ ಸ್ವಾಮಿ.

ಅಜ್ಞಾನಿ ದೇವರು

ಗೋಪು ತನ್ನ ನೆರೆಮನೆಯವನ ಎತ್ತು ಸತ್ತೇ ಹೋಗಲಿ ಎಂದು ದಿನನಿತ್ಯ ಎರಡೆರಡು ಬಾರಿ ದೇವರಲ್ಲಿ ಪ್ರಾರ್ಥನೆ ಮಾಡುತಿದ್ದ. ಒಂದು ದಿನ ಗೋಪುವಿನ ಕುದುರೆಯೇ ಇಹಲೋಕ ತ್ಯಾಗಮಾಡಿಬಿಟ್ಟಿತು. ಆಗ ಗೋಪು ತಲೆಯಲ್ಲಿ ಕೈಗಳನ್ನು ಹಿಡಿದುಕೊಂಡು ಅಳುತ್ತ ಹೇಳಿದ—ಎಲೆ ಪರಮಾತ್ಮನೆ, ನೀನೇ ಪ್ರಪಂಚದ ಒಡೆಯನಾಗಿದ್ದೀಯೆ? ಮನೆಯ ಜಯಮಾನನಿಗೆ ತನ್ನ ಮನೆಯ ಹುಡುಗ ಮತ್ತು ಹುಡುಗಿಯರೊಳಗಿನ ಭೇದ ತಿಳಿಯದಂತೆ, ನಿನಗೂ ಎತ್ತು ಯಾವುದು, ಕುದುರೆ ಯಾವುದು ಎಂದೂ ತಿಳಿಯದೆ ಹೋಯಿತಲ್ಲ?

ಓದುವುದೇ ಬೇಡ!

ಬಾಲಕ ಮೋಹನನು ತನ್ನ ಪಿತನ ಸನಿಹ ಬಂದು ಹೇಳಿದನು.—ಅಪ್ಪಾ, ನಾನು ನನ್ನಂತೆಯೇ ದೊಡ್ಡವನಾದ ಮೇಲೆ, ಶಿಕ್ಷಕನಾಗ ವೆನು.

ತಂದೆ—ಆಗಬಹುದು; ಆದರೆ, ಶಿಕ್ಷಕನಾಗಬೇಕಾದರೆ ಎಲ್ಲವನ್ನೂ ತಿಳಿದುಕೊಳ್ಳಬೇಕು. ಅದಕ್ಕಾಗಿ ಈಗ ಚೆನ್ನಾಗಿ ಪರಿಶ್ರಮಪಟ್ಟು ಅಭ್ಯಸಿಸಬೇಕು.

ಮೋಹನನು ಗಂಭೀರತೆಯಿಂದಲೇ ಉತ್ತರಿಸಿದ—ನೀನು ಸುಳ್ಳು ಹೇಳುತ್ತಿಯಪ್ಪ! ಒಡಬೇಕಾದ ಅಗತ್ಯವೇ ಇಲ್ಲ! ಅಧ್ಯಾಪಕರು ಕೇವಲ ಪ್ರಶ್ನೆಗಳನ್ನು ಮಾತ್ರ ಕೇಳುತ್ತಾರೆ.

ಅದೃಷ್ಟ ಬಲ

ರಾಮ—ಮೋಹನ, ನಾನಿಂದು ನತ್ತು ಸುನಃ ಹುಟ್ಟಿ ಬಂದೆ.

ಮೋಹನ—ಅಂತಹ ವಿಪತ್ತು ಬಂದೊದಗಿದುದೇನೂ ಏನು?

ರಾಮ—ನೋಡ, ಇಂದು ನಾನು ಒಣ ಹಾಕಿದ ಒಟ್ಟೆಯನು ಅಯೇ ಜಾರಿ ಬಾವಿಗೆ ಬಿದ್ದು ಬಿಟ್ಟಿತು.

ಮೋಹನ—ಸರಿ, ಅದರಿಂದೇನು?

ರಾಮ—ಒಂದು ಮೇಳೆ, ನಾನು ಅದೇ ಬಟ್ಟೆಯನ್ನುಟ್ಟು ಕೊಂಡಿದ್ದುದಾದರೆ....?

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಅಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ದೇಶ ಪರಿಚಯ

ನದೀ ಬಯಲಿನ ಪ್ರದೇಶ ಸ್ವತಂತ್ರ ಇರಾಕ

ನಸ್ಸೇರರ ಪ್ರಭಾವದ ಬಲಗೆ ಬೀಳುವುದೆ? ಇಲ್ಲವೇ ಸ್ವತಂತ್ರ ಧೋರಣೆ ವಹಿಸಿ ಸುಮ್ಮನುಳಿವುದೆ?

ಟರ್ಕಿ ಮತ್ತು ಸಿರಿಯಾಗಳನ್ನು ಹಾದುಬರುವ ಯುಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ಬಯಲುಭಾಗದ ವಿಶಾಲಾಂಶವು ಇರಾಕಕ್ಕೆ ಸೇರುತ್ತದೆ. ಈ ನದೀದ್ವಯವು ಪರ್ಶಿಯನ್ ಕೊಲ್ಲಿಯನ್ನು ಸೇರುತ್ತವೆ. ಇರಾಕದ ವಿಸ್ತೀರ್ಣವು ೧೧೭,೬೦೦ ಚದರ ಮೈಲಿಗಳು; ಜನಸಂಖ್ಯೆ ಕೇವಲ ೬೬ ಲಕ್ಷ.

ದೇಶವನ್ನು ಭೌಗೋಳಿಕ ದೃಷ್ಟಿಯಿಂದ ಎರಡು ವಿಭಾಗಗಳಾಗಿ ಒಡೆಯಬಹುದು. ಉತ್ತರ ಇರಾಕಿನಲ್ಲಿ ಕುರಿಗಳನ್ನು ಸಾಕುವ ಕುರ್ದ್ ಎಂಬ ಜಾತಿಯ ಕುರುಬರು ಹುಲ್ಲುಗಾವಲುಗಳಲ್ಲಿದ್ದು ಕುರಿಗಳನ್ನು ಸಾಕಿಯೇ ಜೀವಿಸುತ್ತಾರೆ. ಮಾತ್ರವಲ್ಲದೆ, ಪಾಶ್ಚಾತ್ಯರ ದೃಷ್ಟಿ ಹರಿಯಲು ಕಾರಣವಾದ ಸುಪ್ರಸಿದ್ಧ ಎಣ್ಣೆಯ ಬಾವಿಗಳೂ ಈ ಉತ್ತರ ಪ್ರದೇಶದಲ್ಲಿಯೇ ಇರುತ್ತವೆ. ಇರಾಕಿನ ಈಗಿನ ಹಾಗೂ ಕ್ರಿ. ಶ. ೭೫೦ರಿಂದ ೧೧೫೫ರ ವರೆಗೆ ಅರಬ ಮಹಾರಾಷ್ಟ್ರದ ಸುಪ್ರಸಿದ್ಧ ರಾಜಧಾನಿಯಾಗಿ ಮೆರೆದಿರುವ ಬಗದಾದದಿಂದ ದಕ್ಷಿಣಭಾಗದ ವಿಶಾಲವಾದ ಬಯಲಿನಲ್ಲಿ ಗೋಧಿ, ಬಾರ್ಲಿ, ಭತ್ತ ಮತ್ತು ಖರ್ಜೂರಗಳನ್ನು ಬೆಳೆಯುವ ಹೊಲಗಳು ಸಮುದ್ರದಂಡೆಯವರೆಗೂ ನಮಗೆ ಕಾಣಸಿಗುತ್ತವೆ.

ಪ್ರಥಮ ಜಾಗತಿಕ ಯುದ್ಧಕ್ಕೆ ಮೊದಲು ಇರಾಕವು ಒಟ್ಟೊಮನ್ ಸಾಮ್ರಾಜ್ಯಕ್ಕೆ ಒಳಪಟ್ಟಿದ್ದು ಆಗ, ಬ್ರಿಟಿಷರೂ ಜರ್ಮನರೂ ತಮ್ಮ ಆರ್ಥಿಕ ಪ್ರಭಾವವನ್ನು ಬೀರುವುದರಲ್ಲಿಯೇ ತೃಪ್ತಿಪಟ್ಟುಕೊಂಡಿದ್ದರು. ಈ ಯುದ್ಧವು ಕೊನೆಗಂಡನಂತರದಲ್ಲಿ ಬ್ರಿಟಿಷ ನಿಯಂತ್ರಣವು ಕಾಲಕ್ರಮವಾಗಿ ಸಡಿಲಾಗುತ್ತಬಂತು. ಏಕೆಂದರೆ, ಇದರ ಬಲವಾದ ರಾಷ್ಟ್ರೀಯ ವಿರೋಧವನ್ನೆದುರಿಸಬೇಕಾದ ಪ್ರಸಂಗ ಬಂದ.

ಇರಾಕನನ್ನು ಘೋಷಿಸಿ, ರಾಷ್ಟ್ರದ ವಿದೇಶೀಯ ನೀತಿಯನ್ನು ಮೇಲ್ವಿಚಾರಣೆಯ ಅಧಿಕಾರವನ್ನು ಮಾತ್ರ ಬ್ರಿಟಿಷರು ಇಟ್ಟುಕೊಂಡು ಮುಂದೆ ನಡೆದ ಬಂದರು.

ಆದರೆ, ದ್ವಿತೀಯ ಲೋಕ ಯುದ್ಧಾನಂತರ, ಇಸ್ರಾಯೇಲ್ ನಿರ್ಮಾಣವಾದುದರ ಬೆನ್ನಿಗೇನೇ ಬ್ರಿಟಿಷ ಸೈನ್ಯಗಳು ಇರಾಕದಿಂದಲೂ ಕಾಲು ಕೀಳಬೇಕಾಗಿ ಬಂತು. ೧೯೪೮ರಲ್ಲಿ ಬ್ರಿಟಿಷ ವಿರೋಧೀ ಭಾವನೆಯು ಹುಟ್ಟಿ ಬೆಳೆದು ಬಂದಿತು. ಪರ್ಶಿಯಾದ ಎಣ್ಣೆ ಗಣಿಗಳ ರಾಷ್ಟ್ರೀಕರಣ (೧೯೫೧), ಈಜಿಪ್ತದ ಕ್ರಾಂತಿ (೧೯೫೨)ಬಗ್ದಾದ ಒಡಂಬಡಿಕೆಯ ರಚನೆ (೧೯೫೮)ಅವುಗಳಿಂದ ಮಧ್ಯಪೂರ್ವದ ರೈತರು ಮತ್ತು ಶ್ರಮಿಕವರ್ಗದ ಜನರು ಪ್ರಗತಿ ಪಥದತ್ತ ಮುನ್ನಡೆಯತ್ತ ಬಂದಿದ್ದಾರೆ.

ಇರಾಕಿನ ಬಲಿಷ್ಠ ವ್ಯಕ್ತಿಯಾದ ಶೀ ನುರಿ ಎಸ್ ಸೈದರು ಅಲ್ಲಿ ಕಾಯದೆಯನ್ನು ಬಲಪಡಿಸುವ ಉದ್ದೇಶದಿಂದ ಪತ್ರಿಕೆಗಳ ಮೇಲೆ ಭದ್ರವಾದ ನಿಯಂತ್ರಣವನ್ನು ಇಟ್ಟುಕೊಂಡಿದ್ದರು. ರಾಜಕೀಯ ಪಕ್ಷಗಳನ್ನು ಬಗ್ಗು ಬಡಿದಿದ್ದರು, ಸೂರಾರು ಜನರ ಬಂಧನವನ್ನೂ ಮಾಡಿದ್ದರು. ಆದರೆ, ಈ ರೀತಿಯಲ್ಲಿ ಒಳಗೊಳಗೇ ಬೂದಿ ಮುಚ್ಚಿದ ಕೆಂಡದಂತೆ ಉರಿಯುತಿದ್ದ ಸ್ವಾತಂತ್ರ್ಯ ಜ್ಯೋತಿಯು ಮೊನ್ನೆ ಜುಲೈ ೧೪ರಂದು ಪ್ರಜ್ವಲಿಸಿತು. ಅಂದು ಒಂದು ಸಣ್ಣ ಗುಂಪು, ಪ್ರಧಾನಿನೂರಿ, ರಾಜ ಮತ್ತು ರಾಜ ಕುಮಾರರನ್ನು ಕೊಂದು, ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸಿಕೊಳ್ಳುವಂತೆ ಮಾಡಿಬಿಟ್ಟಿತು.

ಈ ರೀತಿಯಾಗಿ ಆಕಸ್ಮಿಕವಾಗಿಯೇ ವಿಶೇಷಸಂರಂಭವಿಲ್ಲದೆಯೇ ಪರಿವರ್ತನೆ ಹೊಂದಲ್ಪಟ್ಟ ಈ ಇರಾಕ ಪ್ರಜಾಪ್ರಭುತ್ವದಲ್ಲಿ ಇದು ವರೆಗಿನ ಅಧಿಕಾರಿಗಳು ಸ್ವತಂತ್ರ ಹಾಗೂ ಸಾಮ್ಯ ಧೋರಣೆಯನ್ನೇ ಅನುಸರಿಸಿದ್ದಾರೆ ಈಗ ಸಾಮಾನ್ಯವಾಗಿ ಈ ರಾಜ್ಯ ಸ್ಥಾಪನೆಯಾಗಿ ಕೇವಲ ಎರಡೇ ಮಾಸಗಳು ಕಳೆದರೂ, ಆರಂಭದಲ್ಲಿ ಈ ಕ್ರಾಂತಿಯನ್ನೂ ಧೋರಣೆಗಳನ್ನೂ ವಿಚಿತ್ರ ರೀತಿಯಿಂದ ಸಂದೇಹ ದೃಷ್ಟಿಯಿಂದ ನೋಡಲಾಗಿದ್ದರೂ, ಜಗತ್ತಿನ ಹೆಚ್ಚಿನ ರಾಷ್ಟ್ರಗಳು ಈ ನೂತನ ಸರಕಾರವನ್ನು ವಸ್ತುಸ್ಥಿತಿಯತ್ತ ಪ್ರ ಸ್ಥಿಸಿರುತ್ತವೆ

ಈಗ, ಪ ಧ್ಯ ಪೂರ್ವದ ಸ್ವಾತಂತ್ರ್ಯ ಕ್ರಾಂತಿಗೆ ಮೂಲಭೂತ ವ್ಯಕ್ತಿಯಾದ ಈಜಿಪ್ತ ಸಿರಿಯಾದ ಅಧ್ಯಕ್ಷ ನಸ್ಸೇರರ ಪ್ರಭಾವವು ಇರಾಕದ ಮೇಲೆಯೂ ಬಿದ್ದಿದ್ದು, ಸಂಯುಕ್ತ ಅರಬ್ಬ ಜಾರಾಜ್ಯದಲ್ಲಿ ಸೇರಿಕೊಳ್ಳುವುದೆಂಬ ವದಂತಿಯಿದೆ. ಈಜಿಪ್ತ ಮತ್ತು ಸಿರಿಯಾಗಳು ಏಕರಾಷ್ಟ್ರೀಯತೆಯಲ್ಲಿ ಒಂದಿಸಲ್ಪಟ್ಟಾಗ, ಆಗಿನ ಅರಸರು ಜೋರ್ಡಾನ್ ಮತ್ತು ಇರಾಕಗಳನ್ನೂ ಏಕ್ರ ಸೂತ್ರತೆಯಡಿಕರು ವಸಾಹತು ತೋರ್ಪಡಿಸಿದ್ದರು ಆದರೆ, ಇರಾಕದ ಕ್ರಾಂತಿಯ ಕಾರಣದಿಂದ ಆ ಸೂತ್ರ ಬಂಧನವು ಕಡಿದು ಹೋಗಿದೆ. ಇರಾಕದಲ್ಲಿ ಹೊಸತಾಗಿ ಪ್ರಾರಂಭವಾದ ಈ ರಾಷ್ಟ್ರೀಯತೆಯು ಸ್ವತಂತ್ರವಾಗಿ ಯಾಗಲೀ ಸಂಯುಕ್ತ ಅರಬ ಪ್ರಜಾರಾಜ್ಯದಲ್ಲಿ ಸೇರ್ಪಡೆ ಹೊಂದಿ ಯಾಗಲಿ ಎಷ್ಟು ಮುಂಬರಿಯುವುದೆಂಬುದನ್ನು ಮುಂದೆ ತಾನೇ ಕಾಣಬೇಕಾಗಿದೆ.

(ಮುಂದಿನ ವಾರ. ಲೆಬನಾನ್)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.		
3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd



ರ

(೨೦ ನೆಯಿಂದ)

ಸಂತಸದ ದಿನ. ಅದು ಸಂಬಳ ಬರುವ ದಿನ. ಹೊಸ ಬಟ್ಟೆಗಳಿಗೆ ಆರ್ಡರ್ ಕೊಡುವ ದಿನ. ಸುಖದಲ್ಲಿ ಕಾಫಿಯನ್ನು ಸಿಹಿ ತಿಂಡಿಯೊಂದಿಗೆ ಸೇವಿಸುವ ಸುಖ ದಿನ. ಶ್ರಮಪಟ್ಟದ್ದನ್ನು ಮರೆಯುವ ಶುಭ ದಿನ ರಸ್ತೆಯಲ್ಲಿ ತಿರುಗುವಾಗ ಸಾಹಸಕಾರರಿಂದ ಭವ್ಯ ಸ್ವಾಗತವನ್ನು ಪಡೆಯುವ ಒಳ್ಳೆ ದಿನ. ಬೇಕಾದ ಸಾಮಾನುಗಳು ಅಂಗಡಿಯಿಂದ ಮನೆಯನ್ನು ಸೇರುವ ಸುದಿನ.

ಅಂದು ರಾಮು ಸೋಮ, ಇವರಿಬ್ಬರಿಗೂ ಸಂಬಳ ಬಂದಿತ್ತು. ಇಬ್ಬರೂ ಹಣವನ್ನು ಅಭದ್ರ ಪೆಟ್ಟಿಗೆಯಲ್ಲಿ ತುಂಬಿಸಿದ್ದರು ಪೆಟ್ಟಿಗೆ ಅಭದ್ರವಾಗಿದ್ದರೂ ಅವರಲ್ಲಿ ಮಾನಸಿಕ ಭದ್ರತೆ ಸಾಕಷ್ಟಿತ್ತೆನ್ನಬಹುದೆ.

ಸೋಮು ಒಂದೆರಡು ದಿನಗಳಲ್ಲಿ ಪೆಟ್ಟಿಗೆಯಲ್ಲಿದ್ದ ಹಣವನ್ನು ಬೇಂಕಿಗೆ ಕಟ್ಟಬೇಕೆಂದು ನಿಶ್ಚಯಿಸಿ ಪೆಟ್ಟಿಗೆಯ ಕದ ತೆರೆದನು.

ರಾಮು ಆ ತಿಂಗಳಲ್ಲಿ ಸ್ವಲ್ಪ ವಿಪರೀತ ಗಂಡಾಂತರದಲ್ಲೇ ಬಿದ್ದಿದನು ಪ್ರತಿ ತಿಂಗಳ ಕಳುಹಿಸುವ ಹಣಕ್ಕಿಂತ 20 ರೂಪಾಯಿ ಹೆಚ್ಚಿಗೆ ಕಳುಹಿಸಲೇ ಬೇಕು ಹೇಗಾದರೂ ಮಾಡಿ ಇಲ್ಲವಾದರೆ ತಂದೆ ಬಯಸುವುದೇ ಕಷ್ಟವೆಂದು ತಂಗಿ ರಾಮುವಿಗೆ ಬರೆದಿದ್ದಳು. ಈ ವಿಷಯ ಸೋಮುವಿಗೆ ತಿಳಿದಿತ್ತು. ಅತಿ ಸ್ನೇಹಿತರಲ್ಲಿ ಕಷ್ಟಗಳನ್ನು ಭಿನ್ನವಿಸಿಕೊಳ್ಳುವುದರಿಂದ ಮಾನಸಿಕ ಶಾಂತಿ ದೊರೆಯುವುದಷ್ಟೆ!

ಸೋಮು ಪೆಟ್ಟಿಗೆಯ ಕದ ತೆರೆದನು. ಹಣವನ್ನು ಗಣಿಸಿದನು ರೂಪಾಯಿ 20 ಅವನ ಲೆಕ್ಕದಲ್ಲಿ ಕಡಿಮೆಯಾಗಿತ್ತು. ಸುಮ್ಮನಿದ್ದು, ಹಣವೇನಾಯಿತೆಂದು ಬಹಳ ಬಾರಿ ಯೋಚಿಸಿದನು—ಬಡ ರಾಮುವಿನಲ್ಲಿ ಅವನು ಸಂಶಯವನ್ನು ಪಟ್ಟುಕೊಂಡನು. 20 ರೂಪಾಯಿಗಳು ರಾಮುವಿಗೆ ಅವಶ್ಯವಾಗಿದ್ದುವು ಇಷ್ಟೇ ಹಣವಿಲ್ಲ. ಬಾಯಿಯಲ್ಲಿ ಹೊರಬರ ಮಾತುಗಳನ್ನಾಡುವವರನ್ನು ನಂಬುವುದು ಕಷ್ಟವೆಂದು ನಮ್ಮ ಹಿರಿಯರು ಹೇಳುತ್ತಿದ್ದರು. ಅದು ಸರಿಯೆ? ಆದರೆ ಅವನು ಇದು ತನಕ ಸಸ್ನಿಂದ ಪಡೆದ ಹಣ ಹಿಂತಿರುಗಿಸಿರುವನೇ? ಅಂತೂ ಅತ ಮೋಸಗಾರನಲ್ಲ. ಮೋಸಗಾರರು ಒಮ್ಮೆಲೆ ಮೋಸಹಾಕುವರೆ? ಇಲ್ಲ. ಸಮಯ ನೋಡಿ ಮೋಸ ಹಾಕುವರು. ಖೆನಮ್ಮ ರಾಮು ಮೋಸಗಾರನಲ್ಲ ಕಂಡಿತ ಅಲ್ಲ. ಅವನೆ ಹಣದ ಅವಶ್ಯಕತೆ ಜಾಸ್ತಿಯಾದಾಗ ಎಂತಹವನಾದರೂ ಮೋಸಗಾರನಾಗುವನು. ಪ್ರಾಯಃ ಅವನು ಹಣದ ಅವಶ್ಯಕತೆಯಿದ್ದುದನ್ನ ಪೆಟ್ಟಿಗೆಯಿಂದ ಹಣ ತೆಗೆದು ಮನೆಗೆ ಕಳುಹಿಸಿರಬಹುದು. ಹೇಳಲು ಮರೆತಿರುವನೊ ಏನೊ! ಹಾಗೆಯೆ ಇರಬೇಕೆಂದು ಸೋಮು ಮನೇ ಸಿದ್ಧಾರವಮಾಡಿಕೊಂಡು ರಾಮುವನ್ನು ಈ ವಿಷಯದಲ್ಲಿ ಪ್ರಶ್ನಿಸಿದನು. ರಾಮು ಎಷ್ಟು ಈ ವಿಚಾರವನ್ನು ಅಲ್ಲಗಳೆದರೂ ಸೋಮು ನಂಬಲಿಲ್ಲ ಮಾತಿನಿಂದ ಆರಂಭವಾದ ಜಗಳ ರಾಮು ಸೋಮು ಇವರಿಬ್ಬರನ್ನು ಎಳೆದಂತಿದ್ದ ಇವರಿಬ್ಬರನ್ನು ಬೇರ್ಪಡಿಸಿಯರಸ್ತಿಯಾಯಿತು ಇಂದು ರಾಮು ಸೋಮುವಿನಿಂದ ಬೇರೆಯಾಗಿದ್ದಾನೆ.

೦೮ ೦೦

ಈ ಘಟನೆ ನಡೆದ ೧೫ ದಿನಗಳ ಅನಂತರ ಸೋಮುವಿನ ಮಿತ್ರ ರಾಮಯ್ಯ ಮಾಸ್ಟರರು ೨೦ ರೂಪಾಯಿಗಳನ್ನು ತಂದು ಕೊಟ್ಟು— ದಿನಾಂಕ ಒಂದರಂದು ಗಡಿಬಿಡಿಯಲ್ಲಿದ್ದ ತಾವು ಈ ರೂಪಾಯಿಗಳನ್ನು ನನಗೆ ಕೊಟ್ಟು ತುಂಬಾ ಉಪಕಾರ ಮಾಡಿದಿರಿ. ಈ ಉಪಕಾರವನ್ನೆಂದೂ ಮರೆಯಲಾರೆ" ಎಂದು ಹೇಳುತ್ತಾ ಅವನಿಗೆ ಧನ್ಯವಾದಗಳನ್ನರ್ಪಿಸಿದರು.

—ಕೆ. ದಾಮೋದರ ಐತಾಳ,
ಉಡುಪಿ.

'ನವಯುಗ' ವಾರಪತ್ರಿಕೆ
ಉ ಡು ಪಿ.

ವಾರ್ಷಿಕ ಚಂದಾ—
ರೂ. 5-12-0 (5-75)
6 ತಿಂಗಳಿಗೆ— ರೂ. 3-1-0
ಮುಂಗಡವಾಗಿ ಕಳಿಸಬೇಕು.

NAVAYUGA
REGD. NO. M. 3618

UDIPI, THURSDAY
18-9-1958

LICENSE NO. 31
Licensed to Post without Prepayment

ಸೀಮಾಮಿತಿ ಪ್ರಶ್ನೆ

ಭಾರತ ಪಾಕ್ ಪ್ರಧಾನಿ ಸಮ್ಮೇಳನದ ಫಲಶ್ರುತಿ

ನಿರಾಶಾದಾಯಕವಿಲ್ಲದಿದ್ದರೂ ಆಶಾದಾಯಕವಿದೆಯೆ?

ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂರವರ ಆಮಂತ್ರಣವನ್ನು ಮನ್ನಿಸಿ ಕಿಸ್ತಾನದ ಪ್ರಧಾನಿ ಶ್ರೀ ಫಿರೋಜಖಾನ ನೂನರು ಈ ತಿಂಗಳ ಎರಡನೆ ವಾರದಲ್ಲಿ ಹೊಸ ದೆಹಲಿಗೆ ಭೇಟಿಯಿತ್ತರು. ಭಾರತ ಮತ್ತು ಪಾಕಿಸ್ತಾನಗಳ ಗಡಿಯಲ್ಲಿ ಶಾಂತಿಯನ್ನು ಪ್ರಸ್ಥಾಪಿಸಿ ಎರಡೂ ದೇಶಗಳ ಸೀಮಾ ಪ್ರದೇಶದಲ್ಲಿ ತ್ವೇಷಪಟ ಮನಮಾಡುವ ಸಾಹಿತ್ಯದ ಉದ್ದೇಶವನ್ನು ಈ ಪ್ರಧಾನಿ ದ್ವಯ ಸಂದರ್ಶನದಲ್ಲಿಟ್ಟುಕೊಳ್ಳಲಾಗಿತ್ತು. ಉಭಯ ಪ್ರಧಾನಿಗಳು ಎರಡೂ ರಾಷ್ಟ್ರಗಳ ಬೇರೆ ಬೇರೆ ಸೀಮಾ ಪ್ರಶ್ನೆಯನ್ನು ಸಮಾಧಾನಪೂರ್ವಕವಾಗಿ ಚರ್ಚಿಸಿದರು.

ಈ ಸಮಸ್ಯೆಗಳ ಬಗ್ಗ ಪ್ರಧಾನಿ ದ್ವಯರು ಬಿಚ್ಚು ಮನಸ್ಸಿನ ಮತ್ತು ಸ್ನೇಹಪೂರ್ಣ ಮಾತುಕತೆಗಳನ್ನು ನಡೆಸಿದರು. ಪೂರ್ವ ಭಾಗದಲ್ಲಿಯ ಪರಮಾವಧಿ ಗಡಿ ಶಂಟೆಗಳ ಬಗ್ಗೆ ಉಭಯತರು ಒಂದು ಒಪ್ಪಂದಕ್ಕೆ ಬಂದರು ಭಾರತ ಕೂಚ ಬಿಹಾರಕ್ಕೆ ಸೇರಿದ ನಡುಗುಡ್ಡೆಗಳನ್ನು ಪಾಕಿಸ್ತಾನವೂ ಪಾಕಿಸ್ತಾನಕ್ಕೆ ಸೇರಿದ ನಡುಗುಡ್ಡೆಗಳನ್ನೂ ಭಾರತವೂ ವಿನಿಮಯಮಾಡಿಕೊಳ್ಳಬೇಕೆಂದು ಒಪ್ಪಂದವಾಯಿತು. ಪೂರ್ವಭಾಗದಲ್ಲಿ ರ್‍ಯಾಡಕ್ಲಿಫ್ ಹಾಗೂ ಬ್ಯಾಗೆ ಐತೀರ್ಪಿಗೆ ಸಂಬಂಧಿಸಿದ ಎರಡು ಶಂಟೆಗಳು ಮತ್ತು ಪಶ್ಚಿಮ ವಿಭಾಗದಲ್ಲಿನ ಐದು ಶಂಟೆಗಳ ಬಗ್ಗೆ ಇನ್ನೂ ಹೆಚ್ಚಿನ ಪರ್ಯಾಲೋಚನೆಯು ಅವಶ್ಯಕವಾಗಿರುವುದೆಂದು ಇಬ್ಬರೂ ಕಂಡುಕೊಂಡರು.

ಈಗತಾನೇ ಮಾಡಿಕೊಂಡ ಒಡಂಬಡಿಕೆಯನ್ನಷ್ಟೂ ಗಡಿರೇಖೆಯನ್ನು ನಿರ್ಧರಿಸುವ ಕಾರ್ಯವನ್ನು ಕ್ಷತಿಗೊಳಿಸಲು ಸರ್ವೇ ಶಾಖೆಯ ಸಿಬ್ಬಂದಿಗೆ ಆದೇಶವೀಯಬೇಕೆಂದು ಇಬ್ಬರೂ ನಿರ್ಧರಿಸಿರುವರಲ್ಲದೇ ಇದುವರೆಗೆ ನಿರ್ಣಯವಾಗದೆ ಉಳಿದಿರುವ ಶಂಟೆಗಳ ಪರಿಹಾರದ ಬಗ್ಗೆ ಹೊಸ ಉಪಾಯಗಳನ್ನು ವಿಚಾರಿಸುವುದಕ್ಕೂ ಒಪ್ಪಿರುವರು. ಹುಸೇನವಾಲಾ ಮತ್ತು ಸೊಲೆಮಂಕಿ ಸಮಸ್ಯೆಗಳ ಬಗ್ಗೆ ಭಾರತದ ಸ್ಥಾಯಿಸಮಿತಿ ಶಾಖೆಯ ಕಾರ್ಯದರ್ಶಿಗಳು ಮತ್ತು ಪಾಕಿಸ್ತಾನದ ವಿಶೇಷ ಶಾಖೆಯ ಕಾರ್ಯದರ್ಶಿಗಳು ತಂತಮ್ಮ ಇಂಜಿನಿಯರರೊಡನೆ ವಿಚಾರವಿನಿಮಯ ಮಾಡಿ ಪ್ರಧಾನ ಮಂತ್ರಿಗಳಿಗೆ ಹೊಸ ಸೂಚನೆಗಳನ್ನು ಮಾಡಲಿರುವರು.

ಈ ರೀತಿ ವಾದಗ್ರಸ್ತ ಪ್ರದೇಶಗಳ ಪ್ರಶ್ನೆಯು ಬಗೆಹರಿದು ಗಡಿರೇಖೆಯು ನಿರ್ಧರಿಸಲ್ಪಟ್ಟ ಬಳಿಕ ಮುಂದೆ ಗೊತ್ತುಪಡಿಸಲಾಗುವ ದಿನದಂದು (ಸಾಮಾನ್ಯ ಜನವರಿ ೧೫) ಈ ಪ್ರದೇಶಗಳ ನಿವಾಸಿಗಳನ್ನುದ್ದೇಶಿಸಿ ಒಂದು ಬಿನ್ನಹವನ್ನು ಹೊರಡಿಸಿ ಯಾವ ರಾಷ್ಟ್ರಗಳಿಗೆ ಆಯಾ ಪ್ರದೇಶವು ವರ್ಗಾಯಿಸಲ್ಪಟ್ಟಿರುವುದೋ ಆ ರಾಷ್ಟ್ರಗಳ ನಾಗರಿಕರಾಗಿ ಇದ್ದಲ್ಲಿಯೇ ಇರಲು ಕೇಳಿಕೊಳ್ಳಲಾಗುವುದು.

ಈಗ ಬಗೆಹರಿಯದಿರುವ ಶಂಟೆಗಳು ಮುಂದೆ ಪರಸ್ಪರ ಒಡಂಬಡಿಕೆಯ ಮೇರೆಗೆ ಬಗೆಹರಿಯುವ ವರೆಗೆ ಈಗಿನ ಯಥಾಸ್ಥಿತಿ ಪರಿಸ್ಥಿತಿಯನ್ನು ಶಕ್ತಿಬಲದ ಸಹಾಯದಿಂದ ಬದಲಿಸಬಾರದು ಮತ್ತು ಗಡಿಪ್ರದೇಶಗಳಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವುದು ಅವಶ್ಯವೆಂದು ಉಭಯ ಪ್ರಧಾನಿಗಳು ಒಪ್ಪಿಕೊಂಡಿರುವರು. ಈ ಬಗ್ಗೆ ಅವಶ್ಯ ಆದೇಶಗಳನ್ನು ಸಂಬಂಧಿಸಿದ ರಾಜ್ಯಗಳಿಗೆ ಮತ್ತು ಗಡಿಯಲ್ಲಿರುವ ಸ್ಥಾನಿಕ ಅಧಿಕಾರಿಗಳಿಗೆ ಕಳಿಸಲಾಗುವುದು. ಭಾರತ ಹಾಗೂ ಪಾಕಿಸ್ತಾನಗಳಲ್ಲಿ ಮಿತ್ರತ್ವದ ಹಾಗೂ ಸಹಕಾರದ ಸಂಬಂಧವನ್ನು ಹೆಚ್ಚಿಸುವುದೇ ಇತ್ತಡೆಯವರ ಗುರಿಯಾಗಿದ್ದು, ಇದನ್ನು ಸಾಧಿಸುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಇಬ್ಬರೂ ಸರಸ್ಪರ ಸಂಪರ್ಕವನ್ನಿರಿಸಿಕೊಳ್ಳಲು ಸಿದ್ಧರಿರುವರೆಂದು ತಿಳಿದು ಬಂದಿದೆ.

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇದ್ದಿರುವ ಸಮಸ್ಯೆಗಳಲ್ಲಿ ಗೊಂದಲವನ್ನೂ ಪ್ರಾಣಹಾನಿಯನ್ನು ಉಂಟುಮಾಡುವಂತೆ ಪ್ರೇರೇಪಿಸುವ ಈ ಗಡಿ ಪ್ರಶ್ನೆಯು ಸಂಪೂರ್ಣವಾಗಿ ಇಗೆ ಹರಿಯದೆ ಹೋದರೂ ಈ ಮಾತು ಕಥೆಗಳ ಪರಿಣಾಮವಾಗಿ ಕೊಂಚ ಸಮಾಧಾನಕರ ಸನ್ನಿವೇಶ ನಿರ್ಮಿತವಾಗುವುದೆಂದು ನಂಬಬಹುದು.

ಸ್ಥಳೀಯ ಸಂಸ್ಥೆಗಳು

ಬಿಹಾರದಲ್ಲಿ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಸರಕಾರ ವಹಿಸಿತು.

ಇದರಿಂದ ಅನ್ಯ ರಾಜ್ಯಗಳೂ ಪಾಠ ಕಲಿಯುವ ಕಾಲ ಬಂದಿದೆ.

ಬಿಹಾರದ ರಾಜ್ಯಪಾಲರು ಒಂದು ಸುಗ್ರೀವಾಜ್ಞೆಯನ್ನು ವಿಧಿಸಿ ೭೩ ವರ್ಷ ಇತಿಹಾಸವುಳ್ಳ ಸ್ವಾಯತ್ತ ಸಂಸ್ಥೆಗಳನ್ನು ತಮ್ಮ ರಾಜ್ಯದಲ್ಲಿ ಸಮಾಪ್ತಿಗೊಳಿಸಿದರು. ಸಪ್ತಂಬರ ೧೫ನೆ ದಿನದಿಂದ ಜಿಲ್ಲಾ ಮತ್ತು ಸ್ಥಳೀಯ ಬೋರ್ಡ್ ಸಂಸ್ಥೆಗಳನ್ನು ಸರಕಾರವು ವ್ಯವಸ್ಥೆಗೊಳಿಸುವಂತೆ ಈ ಸುಗ್ರೀವಾಜ್ಞೆಯು ವಿಧಿಸುತ್ತದೆ.

ರಾಜ್ಯಪಾಲರು ಬಿಹಾರ ರಾಜ್ಯದಲ್ಲಿ ರಾಜ್ಯಸರಕಾರವೇ ಸದ್ಯ ಜಿಲ್ಲಾ ಬೋರ್ಡ್ ಮತ್ತು ಲೋಕಲ್ ಬೋರ್ಡುಗಳನ್ನು ತಮ್ಮ ಕೈಗೆ ತೆಗೆದುಕೊಂಡು ವ್ಯವಸ್ಥೆ ಮಾಡಿಸುವುದು ಅಗತ್ಯವೆಂದು ಮನಗಂಡಿದ್ದಾರೆ. ಆದರೆ, ಯಾವ ಕಾರಣದಿಂದ ಹೀಗೆ ಮಾಡಲಾಯಿತೆಂಬುದಕ್ಕೆ ಮಾತ್ರ ಸಮಾಧಾನವನ್ನು ಈ ಸುಗ್ರೀವಾಜ್ಞೆಯಲ್ಲಿ ತೋರಿಸಲಿಲ್ಲ.

ರಾಜ್ಯದ ಕೆಲವು ಸ್ಥಳೀಯ ಸಂಸ್ಥೆಗಳ ಬಗ್ಗೆ ವಿವಿಧ ಪತ್ರಿಕೆಗಳೂ ಟೀಕಿಸಿದ್ದುವು. ಹೆಚ್ಚಿನ ಜಿಲ್ಲಾ ಬೋರ್ಡುಗಳಲ್ಲಿ ಬಹುಕಾಲದಿಂದ ಚುನಾವಣೆಯೇ ನಡೆದಿಲ್ಲ; ಕೆಲವೆಡೆ ೪-೫ ಮಾಸಗಳಿಂದ ನೌಕರರಿಗೂ ವೇತನ ದೊರೆತಿಲ್ಲವೆಂದಿದ್ದುದೂ ದೂರಿದ್ದುವು.

ಸಪ್ತಂಬರ ೧೫ರಿಂದ ಜಿಲ್ಲೆಯ ಬೋರ್ಡ್ ಹಾಗೂ ಸ್ಥಳೀಯ ಸಂಸ್ಥೆಗಳನ್ನು ಕೈಗೆ ತೆಗೆದುಕೊಳ್ಳಲು ಆಯಾಯಾ ಜಿಲ್ಲೆಯ ಮೆಜಿಸ್ಟ್ರೇಟರಿಗೆ ಆದೇಶವೀಯಲಾಗಿದೆ. ಆದು ವರೆಗಿದ್ದ ಬೋರ್ಡುಗಳ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಇತರ ಸದಸ್ಯರಿಗೆ ಈ ತಾರೀಕಿನಿಂದ ಅವರ ಪದವುಂಕ್ತವಾಯಿತೆಂದೂ ಘೋಷಿಸಲಾಗಿದೆ.

ಇವುಗಳಿಗೆ ರಾಜ್ಯ ಸರಕಾರವು ವಿಶೇಷಾಧಿಕಾರಿಗಳನ್ನು ನೇಮಿಸುವ ವರೆಗೆ ಮೆಜಿಸ್ಟ್ರೇಟರೇ ಉಚಿತ ವ್ಯವಸ್ಥೆಯನ್ನು ಮಾಡಬೇಕೆಂದೂ ಲೆಕ್ಕಪತ್ರಾದಿಗಳನ್ನು ಸರಿಯಾಗಿ ಪರಿಶೀಲಿಸಬೇಕೆಂದೂ ಆದೇಶವಿತ್ತಿದೆ.

ಆಖಂಡ ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ತಡೆಹಿಡಿದು ಈ ರೀತಿ ಮೆಜಿಸ್ಟ್ರೇಟರ ಕೈಗೆ ಕೊಡುವ ಘಟನೆಯು ನಡೆಯುವುದೇ ಅಪರೂಪವೆನ್ನಬಹುದು. ಈಗ ಬಿಹಾರ ಸರಕಾರವು ಈ ರೀತಿಯಾಗಿ ಮಾಡಿ ಹೊಸ ದಾಖಲೆಯನ್ನು ನಿರ್ಮಿಸಿದೆ. ಸುಮಾರು ೭೩ ವರ್ಷಗಳಿಂದ ನಿರಂತರವಾಗಿ ನಡೆದುಬಂದ ಸ್ಥಳೀಯ ಸಂಸ್ಥೆಗಳು ನಾಶವಾಗಿ ಸರಕಾರದ ಕಾರ್ಯಭಾರವು ಮುಂದಾಗಿದೆ. ಇತರ ರಾಜ್ಯಗಳ ಸ್ಥಳೀಯ ಸಂಸ್ಥೆಗಳು ಈ ಘಟನೆಯಿಂದಲಾದರೂ ಕೂಡಲೇ ಎಚ್ಚರವಾಗುವುದು ಆವಶ್ಯಕವಲ್ಲವೆ?

ಮೈಸೂರು ರಾಜ್ಯದಲ್ಲಿ ವಿವಿಧ ಕಾರ್ಯಕ್ರಮಗಳು

(೧ನೇ ಪುಟದಿಂದ)

ಖಾಸಗಿ ಕೈಗಾರಿಕೋದ್ಯಮಿಗಳು ಭಾಗವಹಿಸಬೇಕೆಂದು ಅವರನ್ನು ಆಮಂತ್ರಿಸಲಾಗಿದೆ. ಪ್ರದರ್ಶನದಲ್ಲಿ ಲಲಿತ ಕಲೆಗಳು ಗ್ರಾಮೀಣ ಮತ್ತು ಗೃಹಕೈಗಾರಿಕೆ, ಖಾದಿ ಮತ್ತು ಹಳ್ಳಿಯ ಕಸುಬುಗಳ ವಿಭಾಗಗಳಿರುವವು. ಉತ್ತಮ ಪ್ರದರ್ಶಿತಗಳಿಗೆ ಮತ್ತು ಸಂಸ್ಥೆಗಳಿಗೆ ಬಹುಮಾನಗಳನ್ನೂ ಮನ್ನಣೆ ಪತ್ರಗಳನ್ನೂ ನೀಡಲಾಗುವುದು.

ದಸರಾ ಮಹೋತ್ಸವಗಳಲ್ಲಿ ಮೈಸೂರು ನಗರವನ್ನು ನೋಡಲು ಬರುವವರ ಅನುಕೂಲಕ್ಕಾಗಿ ರಾಜ್ಯಸಾರಿಗೆ ಇಲಾಖೆಯವರು ಆವಶ್ಯಕವಾದ ವಿಶೇಷ ಬಸ್ಸು ಸಂಚಾರವನ್ನೇರ್ಪಡಿಸುವರು. ಪರದೇಶದ ಪ್ರವಾಸಿಗಳು ಮತ್ತು ಪ್ರಮುಖ ಸ್ಪರ್ಧಿಕರು ದಸರಾ ಮಹೋತ್ಸವಗಳ ಸ್ಪೆಷಲ್ ಡ್ಯೂಟಿ ಆಫೀಸರ್ ಡಿಸ್ಟ್ರಿಕ್ಟ್ ಆಫೀಸರ್ ಮೈಸೂರು ಅವರಿಗೆ ವಿಜ್ಞಾಪನೆ ಮಾಡಿಕೊಂಡರೆ ಅವರಿಗೆ ಉಚಿತವಾದ ಸೌಕರ್ಯಗಳನ್ನೊದಗಿಸಲಾಗುವುದು.

ರಾಜ್ಯಾದ್ಯಂತ ಜನರು ನಾಡ ಹಬ್ಬದಲ್ಲಿ ವಿಶೇಷ ಸಂಖ್ಯೆಯಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಬೇಕೆಂದು ಬಿನ್ನಹ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು. ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.

ಬೆಲೆ ರೂ 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಥವಾ

ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಮಂಗಳೂರು.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

Edited Printed & Published by K. H. Shetty, at the Navayuga press Udipi S. India

ನವಯುಗ

ವಾ ಚಂದಾ ರೂ 5 75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನಯಾ ಪೈಸೆ

ವರುಷ ಹಿಲ ವಾರಿಳ 25-9-1958 Vol. 38 No. 4

ದಶಮಾನ ಪದ್ಧತಿ

ಸರ್ವಮಾನ್ಯ ಸರ್ವೋಪಯೋಗಿ ದಶಮಾನ ಪದ್ಧತ್ಯಾಚರಣೆ

ಪ್ರಗತಿಪಥ ಸಾಂಥರೆಂದು ಹೇಳಿಸಿಕೊಳ್ಳಲು ಇದನ್ನು ಅನುಸರಿಸುವುದೂ ಒಂದು ಕಾರಣವಾಗಿದೆ.

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗಳನ್ನು ವಿಶ್ವದ ಬಹುಬೇಕ ರಾಷ್ಟ್ರಗಳು ಆಚರಣೆಗೆ ತಂದಿವೆ ವಾಸ್ತವವಾಗಿ, ಅನೇಕ ರಾಷ್ಟ್ರಗಳಲ್ಲಿ ಈ ಪದ್ಧತಿ ಯೊಂದೇ ಕಾಯದೆಯಿದ್ದವಾದುದೆಂದು ಘೋಷಿಸಲ್ಪಟ್ಟಿದೆ ಭಾರತವು ಈಗ ವಿಶ್ವದ ರಾಷ್ಟ್ರಗಳಲ್ಲಿ ಸಂಯುಕ್ತ ಹಾಗೂ ಸ್ವತಂತ್ರ ಗಣರಾಜ್ಯವಾಗಿ ತನ್ನ ಸ್ಥಾನವನ್ನು ಗಳಿಸಿಕೊಂಡಿದೆ. ಆದುದರಿಂದ ನಾವು ಮೆಟ್ರಿಕ್ ಪದ್ಧತಿಯನ್ನೂ ರಾಷ್ಟ್ರೀಯ ಹಿತದೃಷ್ಟಿಯಿಂದ ಅಂಗೀಕರಿಸಿದ್ದೇವೆ

ವಿಶ್ವದ ಅಧ್ಯಂತ ವೈಜ್ಞಾನಿಕರು, ಎಲ್ಲ ವಿಧವಾದ ಭೌತಿಕ ತೂಕ ಮತ್ತು ಅಳತೆಗಳಿಗೂ ಅಂತಾರಾಷ್ಟ್ರೀಯವಾದ ಮಾನಗಳನ್ನು ಅಂಗೀಕರಿಸುವುದರಿಂದ ಲಭ್ಯವಾಗುವ ವಿಪುಲವ ದ ಸೌಕರ್ಯ ಹಾಗೂ ಸೌಲಭ್ಯಗಳನ್ನು ಒಯ ಹಿಂದೆಯೇ ಮನಗಂಡಿರುವರು. ಅದರ ಜತೆಗೆ ವೈಜ್ಞಾನಿಕ ಸಂಶೋಧನೆಯು ಸ್ವಭಾವತಃ ಅಂತಾರಾಷ್ಟ್ರೀಯ ರೀತಿಯದು. ಆದುದರಿಂದ, ವೈಜ್ಞಾನಿಕ ಪ್ರಗತಿಗಾಗಿ ಎಲ್ಲಾ ಭೌತಿಕ ತೂಕ ಮತ್ತು ಅಳತೆಗಳಿಗೂ ಅಂಗೀಕೃತ ಮಾನಗಳನ್ನು ಅನುಸರಿಸುವುದು ಅಕ್ಯಗತ್ಯ.

ಉದ್ದ, ತೂಕ ಮತ್ತು ಕಾಲ ಇವು ಮೂರು ಭೌತಿಕ ವೀಕ್ಷಣೆಗೆ ಅಳವಡುವ ಹಾಗೂ ಇನ್ನೂ ಸುಲಭಸ್ಥಿತಿಗೆ ತರಲಾಗದಂಕಹ ಮೂಲ ಮಾನಗಳು. ಆದುದರಿಂದ ವಿಜ್ಞಾನಕ್ಷೇತ್ರದಲ್ಲಿ ಈ ಮೂಲ ಮಾನಗಳ ಪ್ರಮಾಣವನ್ನನುಸರಿಸಿ ಉಳಿದ ಭೌತಿಕ ವಸ್ತುಗಳ ಉದ್ದ, ತೂಕ ಮತ್ತು ಕಾಲವನ್ನು ಅಳೆಯ ಬೇಕಾಗುತ್ತದೆ.

ಈ ಉದ್ದೇಶಗಳಿಗಾಗಿ ಅಂಗೀಕರಿಸಲಾಗಿರುವ ಪ್ರಮಾಣೀಕೃತ ಮೂಲಮಾನವನ್ನು ಪ್ರಥಮತಃ ಸಂಶೋಧಿಸಿದ್ದು ಫ್ರಾನ್ಸ್ ದೇಶದಲ್ಲಿ ಆ ದೇಶದಲ್ಲಿ ರಾಜಕೀಯ ಮಹಾಕ್ರಾಂತಿಯಾದನಂತರ ಇವು ಆಚರಣೆಗೆ ಬಂದವು ಸದದೃಷ್ಟವಶದಿಂದ, ಆ ಕಾಲದಲ್ಲಿ ಫ್ರಾನ್ಸಿನ ವೈಜ್ಞಾನಿಕ ಪ್ರತಿಭೆಯು ಅತ್ಯುನ್ನತವಾಗಿತ್ತು ವಿಜ್ಞಾನದ ಎಲ್ಲ ಕ್ಷೇತ್ರಗಳಲ್ಲಿಯೂ ಈ ದೇಶವು ವಿಶ್ವಕ್ಕೆ ಮಾರ್ಗದರ್ಶಿಯಾಗಿತ್ತು ಆದುದರಿಂದ ಈ ದೇಶದ ಮಾರ್ಗನಿರ್ದೇಶನವನ್ನು ಸ್ವೀಕರಿಸಲು ಜಗತ್ತಿನ ಯಾವ ದೇಶವೂ ಹಿಂದೆ ಮುಂದೆ ನೋಡಲಿಲ್ಲ. ಇದರಿಂದ, ವಿಜ್ಞಾನ ಕ್ಷೇತ್ರದಲ್ಲಿ ವಿವರಣೆಯನ್ನೀಯುವಾಗ ತೂಕ ಮತ್ತು ಅಳತೆಯಲ್ಲಿ ಮೆಟ್ರಿಕ್ ಪದ್ಧತಿಯನ್ನು ಸರ್ವಸಾಮಾನ್ಯವಾದ ಸದ್ಧತಿಯನ್ನಾಗಿ ಆಚರಣೆಗೆ ತರುವುದು ಸಾಧ್ಯವನಿಸಿತು.

ಮೆಟ್ರಿಕ್ ಪದ್ಧತಿಯಲ್ಲಿರುವ ಮೂಲಭೂತ ತತ್ವವೆಂದರೆ, ಮೂಲ ಮಾನಗಳನ್ನು ಶಾಶ್ವತವಾದ ಹಾಗೂ ಸ್ವಲ ವತಃ ಅಸ್ತಿತ್ವದಲ್ಲಿರ ವ ಪ್ರಮಾಣಗಳಿಂದ ಸಾಧಿಸಬಹುದು ಒಳಕೆಯಲ್ಲಿರುವ ಸಹಾಯಕ ಮಾನಗಳು ಈ ಮೂಲ ಮಾನಗಳಿಗೆ ಹತ್ತರಗುಣಕಗಳಲ್ಲಿರುವುವು ಅದುದರಿಂದ, ದಶಮಾನ ಪದ್ಧತಿಯ ಸಂಕಲನ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು

ಈ ಉದ್ದೇಶಗಳನ್ನು ವಾಸ್ತವವಾಗಿ ಮೆಟ್ರಿಕ್ ಪದ್ಧತಿಯಲ್ಲಿ ಸಾಧಿಸಲಾಗಿದೆ.

ನೋಬೆಲ್ ಪಾರಿತೋಷಕ ವಿಜೇತ ಡಾ. ಸಿ ವಿ ರಾಮನ್

ಬಳಕೆಯಲ್ಲಿರುವ ಪ್ರಮಾಣೀಕೃತ ಮಾನಗಳು ಅಂತಾರಾಷ್ಟ್ರೀಯ ಒಪ್ಪಿಗೆ ಪಡೆದ ಯ ದಾವತ್ತಿದ ಪಡಿಯಚ್ಚುಗಳಾಗಿರುವುವು. ಈ ಯದ ವತ್ ಪಡಿಯಚ್ಚುಗಳನ್ನು ಆಯಾಯ ರಾಷ್ಟ್ರಗಳ್ಳಿ ಭದ್ರಪಡಿಸಲಾಗಿರುವ ಶಾಸ್ತ್ರೀಯ ಪಡಿಯಚ್ಚುಗಳಂತೆ ಸಿದ್ಧಗೊಳಿಸಲಾಗುವುದು.

ನಾಗರಿಕತೆಯ ಬಳೆದಂತೆಲ್ಲ ವೈಜ್ಞಾನಿಕ ಜ್ಞಾನ ಹಾಗೂ ವೈಜ್ಞಾನಿಕ ಸಲಿತಾಂಶಗಳು ಎಲ್ಲ ವಿಧವಾದ ಮಾನವೀಯ ಚಟುವಟಿಕೆಗಳ ಮೇಲೂ ತಮ್ಮ ಪ್ರಭಾವವನ್ನು ಬೀರುತ್ತವೆ ಅನೇಕ ಬಗೆಯ ಯಂತ್ರಗಳು, ವೆಕ್ಯಾನಿಕಲ್ ಮತ್ತು ವಿದ್ಯುತ್ ಶಕ್ತಿ, ಜೈವಿಕ ಉಷ್ಣ ಅಥವಾ ಪ್ರೇರಜನಿತ ಶಕ್ತಿಗಳು, ಬೆಳಕಿನ ವಿದ್ಯುಚ್ಛಕ್ತಿ ಸಂಪರ್ಕ, ಆಕಾಶವಾಣಿ ಮತ್ತು ದೂರದರ್ಶಕ (ಟೆಲಿವಿಜನ್)ಗಳನ್ನು ಇಲ್ಲಿ ಉದಾಹರಿಸಬಹುದ.

ಇನ್ನೆಲ್ಲಕ್ಕೂ ಒಂದಲ್ಲಿ ಒಂದು ರೀತಿಯಲ್ಲಿ ನಿಷ್ಪೃಷ್ಟತೆಯಿರಬೇಕಾಗುವುದು. ಆದುದರಿಂದ ವೈಜ್ಞಾನಿಕರು ತಮ್ಮ ಸಂಶೋಧಿತ ಈ ಪದ್ಧತಿಯನ್ನು ಇತರ ಕ್ಷೇತ್ರಗಳಿಗೂ ತೆಗೆಡಗಿಸುವುದು ಅನಿವಾರ್ಯವಾಯಿತು ಅಂತೆಯೇ ಸರ್ವಮಾನ್ಯವಾಯಿತು ಇದು ತೀವ್ರಾಪೇಕ್ಷಿತ ಫಲಿತಾಂಶ ಆದುದರಿಂದ ಎಲ್ಲ ರಾಷ್ಟ್ರಗಳೂ ಹೆಚ್ಚಿನ ಉತ್ಸಾಹದಿಂದ ಈ ಮೆಟ್ರಿಕ್ ಪದ್ಧತಿಯನ್ನು ಆಚರಣೆಗೆ ತರಬೇಕು

ನಮ್ಮ ಭಾರತದಲ್ಲಿಯೂ ಈ ಕಾರಣದಿಂದ ಇದೇ ತಿಕ್ಕೋಬರ ೧೫ ದಿನಾಂಕದಿಂದ ಕೇವ ಒಂದು ಕ್ಷೇತ್ರಗಳಲ್ಲಿ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯ ಕ್ರಮಗಳನ್ನು ವ್ಯವಹಾರಕ್ಕೆ ತರಲಾಗುವುದು ನಾಗ್ಯಗಳಲ್ಲಿ ದಶಮಾನ ಪದ್ಧತಿಯನ್ನು ನಾವು ಈಗಾಗಲೇ ಬಳಸಿಕೊಂಡಿದ್ದೇವ ಭಾರತವು ಮುನ್ನಡೆಯುತ್ತಿರುವುದನ್ನು ಸೂಚಿಸುವ ದ್ಯೋತಕಗಳಲ್ಲಿ ಮಾಟ್ರಿಕ್ ಅಥವಾ ದಶಮಾನ ಪದ್ಧತಿಯ ಅಂಗೀಕಾರವೂ ಒಂದೆಂದು ಹೇಳಬಹುದು.

—ಡಾ| ಸಿ ವಿ ರಾಮನ್

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕಣಜ ವಾಗಬೇಕಾದರೆ ತೆನೆ ಕೂಡಬೇಕು; ಹಣದ ಗಂಟಾಗಬೇಕಾದರೆ ಪುಡಿಕಾಸು ಉಳಿಸಬೇಕು ಸಿಂಡಿಕೇಟ್ ಬ್ಯಾಂಕ್

ಕಥಾ ವಿಹಾರ

ಬಯಸಿದ ಬಯಕೆ

ಇಂದೂ–ಶೇಖರರ ಪ್ರಣಯಲತೆ ಹಬ್ಬಿ ಹರಡಿತ್ತು; ಪ್ರೇಮದ ಬೆಲೆಯರಿಯದವರು ಲತಾಘಾತ ಮೆಸಗಿದರು.

ಅಂದು ಸಂಜೆ ಗಡಿಯಾರ ಸರಿಯಾಗಿ ನಾಲ್ಕು ಬಾರಿಸಿತು. ಪಿಲಿಂಗ್ಟನ್ ಕಾಲೇಜಿನಲ್ಲಿ ಸಂತೋಷದ ವಾತಾವರಣ ಹಬ್ಬಿತ್ತು. ಶೇಖರನು ಇಂಟರ ಪರೀಕ್ಷೆಯಲ್ಲಿ ಮೊದಲನೇ ವರ್ಗದಲ್ಲಿ ತೇರ್ಗಡೆಯಾಗಿದ್ದನು. ಮುಂದೆ ಅವನು ಎಮ್. ಬಿ. ಬಿ. ಎಸ್. ಕಲಿಯಲಿಕ್ಕೆ ಮುಂಬಯಿಯ ಮೆಡಿಕಲ್ ಕಾಲೇಜಿಗೆ ಹೋಗುವದರಿಂದ ನಾಲ್ಕು ಘಂಟೆಗೆ ಒಂದು ಸಂತೋಷದ ಕೂಟವನ್ನು ಏರ್ಪಡಿಸಲಾಗಿತ್ತು. ಎಲ್ಲರೂ ಶೇಖರನ ವಿಷಯವಾಗಿ ಉಪನ್ಯಾಸ ಮಾಡಿದರು.

ಇಂದ್ದೂನಿಗೆ ಬಹಿರ್ಮುಖವಾಗಿ ಆನಂದ ಹೊರ್ಮೊಮ್ಮುತ್ತಿದ್ದರೂ, ಅವಳ ಅಂತರಾತ್ಮದಲ್ಲಿ ದುಃಖದ ಉದ್ವೇಗವು ಹೆಚ್ಚದೇ ಇರಲಿಲ್ಲ ಯಾಕೆಂದರೆ ಶೇಖರನು, ಅವಳನ್ನು ಅಗಲುವ ಪ್ರಸಂಗ ಬಂದಿದ್ದರಿಂದ ಮುಂದೆ ಸಭೆಯು ಸ್ಥಿಮುಕ್ತಾಯವಾದ ಕೂಡಲೇ ಎಲ್ಲರೂ ತಮ್ಮ ತಮ್ಮ ಮನೆಯತ್ತ ನಡೆದರು. ಶೇಖರನು, ಹಾಗೂ, ಇಂದಿರಾ ಇವರೀರ್ವರೇ ಅಲ್ಲಿ ಉಳಿದರು. ಇಂದುವಿನ ಮುಖ ಚಂದ್ರಮನು ನಿಸ್ತೇಜನಾಗಿದ್ದನು. ಅವಳ ಸ್ಥಿತಿಯನ್ನು ಅರಿತುಕೊಂಡು ಶೇಖರನು "ಇಂದೂ ನಿನ್ನ ಮುಖ ಚಂದ್ರಮಕ್ಕೆ ಗ್ರಹಣ ಹಿಡಿದಿದೆಯಲ್ಲಾ, ದುಃಖದ ಜ್ವಾಲೆಯನ್ನು ಹೃದಯದಲ್ಲಿ ಬಚ್ಚಿಟ್ಟು ಆನಂದವನ್ನು ವ್ಯಕ್ತಮಾಡ ಬೇಕಾಗಿದೆ" ಎಂದ. "ನೀವು ನನ್ನನ್ನು ಅಗಲುವದರಿಂದ" ಎಂದಳು "ಹುಚ್ಚೀ ನಾನು ಮುನಃ ಬರುವದಿಲ್ಲವೇ? ನಿನ್ನ ಅಗಲಿ ಒಂದು ಗಳಿಗೆಯಾದರೂ, ಜೀವಿಸಲಾರೆಎಂದು ಅವರೀರ್ವರೂಮಾತನಾಡುತ್ತ ಕೆರೆಯಬಳಿಗೆ ಬಂದರು. ಪ್ರತಿನಿತ್ಯ ಅವರು ವಾಯುವಿಹಾರಕ್ಕೆ ಬರುವ ಸ್ಥಾನ. ಸೂರ್ಯನು ಅಸ್ತಗತನಾಗುತ್ತಿದ್ದನು. ಆತನ ಹೊಂಬಣ್ಣದ ಕಿರಣ ಎಲ್ಲೆಡೆಯಲ್ಲಿಯೂ ಹರಡಿಕೊಂಡಿದ್ದವು. ಎಲ್ಲ ರೈತರು ತಮ್ಮ ತಮ್ಮ ಹೊಲಗಳಿಂದ ಮನೆಯತ್ತ ಸಾಗಿದ್ದರು. ಭೂದೇವಿಯು ತನ್ನ ಹಸಿರು ಸೀರೆಯಿಂದ ಪ್ರಣಯಿಗಳಬ್ಬರಿಗೆ ನೆದರು ಅದೀತೆಂಬ ಭಾವನೆಯಿಂದ ಅವನ್ನು ಮರೆಮಾಡಿರುವಳೋ? ಏನೋ ಎಂಬಂತೆ ಎಲ್ಲಡೆಯಲ್ಲಿಯೂ ಹಚ್ಚಗೆ ಶೋಭಿಸುತ್ತಿತ್ತು. ಪಕ್ಷಿಗಳು ಕಿಲಿಬಿಲಿ ಧ್ವನಿಯಿಂದ ಶೇಖರ ಮತ್ತು ಇಂದೂನ ಕಿವಿಗಳು ಗಡುಚಿಕ್ಕಿದ್ದವು. ಕೆರೆಯ ಕೋಡಿಯಲ್ಲಿ ನೀರು ಜುಳು ಜುಳು ಎಂದು ಹರಿಯುವ ಪ್ರವಾಹದನಿನಾದ ಅವರನ್ನು ಸಂತೋಷಗೊಳಿಸಿತ್ತು. ಎಲ್ಲವೂ ನಿಶ್ಶಬ್ದ ಮಂದ ಮಾರುತನು ತನ್ನ ಕುಳಿಡಾಟವನ್ನು ಪ್ರಾರಂಭಿಸಿದನು. ಶೇಖರನು ಇಂದಿರಾನನ್ನು ಬಿಗಿದಪ್ಪಿ ಮನ ತೃಪ್ತಿಯಾಗುವಂತೆ ಅವಳನ್ನು ಚುಂಬಿಸಿದನು. ಇಂದೂ ಅವನ ತೋಳ ತೆಕ್ಕೆಯಲ್ಲಿ ಸೆರೆಸಿಕ್ಕು ಬಿಡಿಸಿಕೊಳ್ಳುವದಾಗದೇ ಅವನ ತೊಡೆಯ ಮೇಲೆ ತಲೆಯಿಟ್ಟು ಮಲಗಿದಳು. ಶೇಖರನು ಅವಳ ನೀಳವಾದ ಕೇಶರಾಶಿಗಳನ್ನು ನೇವರಿಸುತ್ತಾ "ಪ್ರಿಯ ಇಂದಿರಾ, ನಾಳೆ ನಾನು ಮುಂಬಯಿಗೆ ಹೊರಡುತ್ತೇನೆ. ನನ್ನ ಪ್ರಯಾಣಕ್ಕೆ ಅಡ್ಡಿ ಮಾಡಬೇಡ. ಆಗಾಗ ಕಾಗದ ಬರೆಯುತ್ತಿರುತ್ತೇನೆ ಉತ್ತರ ಕೊಡುತ್ತಿರು" ಎಂದ "ನಾನು ಅಡ್ಡೀ ಮಾಡುವದಿಲ್ಲ. ಆದರೆ...." ಎಂದಳು "ಆದರೆ ಏನು! ಏನೋ ನಿನ್ನ ಮಾತಿನಲ್ಲಿ ಗೂಢಾರ್ಥವಿದೆ" ಎಂದ. "ಏನೂ ಇಲ್ಲ ನಿಮಗೆ ಅರ್ಥವಾಗಲಿಲ್ಲ ಬೇ?" ಎಂದು ತನ್ನ ಮೃದುವಾದ ಕೈಯನ್ನು ಶೇಖರನ ಕೆನ್ನೆಯ ಮೇಲೆ ಎಳೆದಳು. ಆಗ ಶೇಖರನು. "ಓ ತಿಳಿಯಿತು. ಆದರೆಲ್ಲೇನಿದೆ ನಿನ್ನ ಹೊರತಾಗಿ ಯಾರನ್ನೂ ವಿವಾಹ ಮಾಡಿಕೊಳ್ಳಲಾರೆ. ನಮ್ಮೀರ್ವರ ಆತ್ಮಗಳು ಒಂದಿರುವಾಗ ಯಾರದೇನು ಭಯ" ಎಂದ. "ಈ ಮಾತನ್ನು ನೀವು ನಡೆಯಿಸಿಕೊಡ ತ್ತೇನೆಂದು ನನಗೆ ವಚನ ಕೊಡುವಿರಾ?" ಎಂದಳು "ಓಹೊ ಅಗತ್ಯವಾಗಿ ಕೊಡುತ್ತೇನೆ" ಎಂದು ಶೇಖರ ಅವಳ ಕೈಮೇಲೆ ಕೈ ಹಾಕಿದನು. ಪ್ರೇಮದ ವ್ಯಾಮೋಹ ಜಾಲದಲ್ಲಿ ಸಿಕ್ಕುಬಿದ್ದ ಪ್ರಣಯಿಗಳಿಗೆ ವೇಳೆಯ ಅರಿವಾಗಲಿಲ್ಲ. ಮೆಲ್ಲಗೆ ನಿಶಾದೇವಿಯು ಪ್ರವೇಶಿಸಲು ಪ್ರಾರಂಭಿಸಿದಳು. ಆಗ ಶೇಖರನು "ಇಂದೂ ನಾನು ಎಲ್ಲಿದ್ದರೂ ನಿನ್ನವನೇ ಎಂದು ಭಾವಿಸಿಕೋ" ಎಂದ. ಅದರಂತೆ ಇಂದೂ—"ನೀವು ಎಲ್ಲಿದ್ದರೂ ನಾನು ನಿಮ್ಮವಳೆಂದು ಭಾವಿಸಿಕೊಳ್ಳುತ್ತೇನೆ" ಎಂದಳು ಇಬ್ಬರೂ ಗಹಗಹಿಸಿ ನಕ್ಕು ಮನೆಯ ಹಾದಿ ಹಿಡಿದರು.

ಮಾರನೇಯ ದಿನ ಶೇಖರನು ಪ್ರಯಾಣಕ್ಕೆ ಸಿದ್ಧನಾದನು. ಅಂದು ಇಂದೂನಿಗೆ ದುಃಖವೇ ದುಃಖ. ಅವಳು ನೀರು ತರಲು ಕೆರೆಗೆ ಹೋದಳು. ಶೇಖರನು ಊಟ, ತೀರಿಸಿಕೊಂಡು ಸರಿಯಾಗಿ ೧೦ ಘಂಟೆಯ ಟ್ರೇನಿಗೆ ಹತ್ತಿದನು. ಗಾಡಿಯ ರಸ್ತೆ ಕೆರೆಯ ಮಗ್ಗಲಿಗೆ ಇತ್ತು. ಇಂದೂ ನೀರು ತುಂಬಿಕೊಂಡು ಕೊಡವನ್ನೂ ಬಗಲಲ್ಲಿ ಇಟ್ಟುಕೊಂಡು ಹೊರಟಿರುವಾಗ ಶೇಖರ ಹೊರಟ ಗಾಡಿಯು ಸಿಳ್ಳು ಹಾಕಿ ಕೆರೆಯ ಸಮೀಪದಲ್ಲಿ ಬಂತು. ಆಗ ಇಂದೂ ವಾಕ್‌ದೃಷ್ಟಿಯುಳ್ಳವಳಾಗಿ ಗಾಡಿಯನ್ನೇ ನೋಡುತ್ತಿದ್ದಳು. ಆಗ ಅವಳ ಕಣ್ಣುಗಳಲ್ಲಿ ನೀರು ಬಂದವು. ಸಿರುವಾಯಳಾಗಿ ಮನೆಗೆ ಒಂದಳು. ಯಾವಾಗಲೂ ಇಂದೂಳ ಕಣ್ಣಲ್ಲಿ ಶೇಖರನ ಚಿತ್ರವೇ ಚಿತ್ರ.

ಸಲ್ಪ ದಿವಸಗಳು ಗತಿಸಿದ ಮೇಲೆ ಇಂದೂಳ ವಿವಾಹ ಮಾಡುವದಾಗಿ ಅವಳ ತಂದೆ ತಾಯಿಗಳು ನಿರ್ಧರಿಸಿದರು. ಈ ವಿಷಯವು ಅವಳಿಗೆ ಮೊದಲೇ ಬೇಡವಾಗಿತ್ತು. ಅವಳು ತನ್ನ ತಂದೆ ತಾಯಿಗಳಿಗೆ ಎಷ್ಟು ಪಾ ಪರಿಯಿಂದ ಬೇಡಿಕೊಂಡರೂ ಅವರ ಕಲ್ಲು ಹೃದಯ ಕರಗಲಿಲ್ಲ. ಮದುವೆಯ ದಿನವನ್ನು ನಿರ್ಧರಿಸಿ ಲಗ್ನದ ಕಾರ್ಡುಗಳನ್ನು ಹಂಚಲಾಯಿತು. ಒಂದು ಕಾರ್ಡನ್ನು ಶೇಖರನಿಗೆ ಕಳುಹಿಸಿದರು.

ಅಂದು ಕಾಲೇಜಿನ ವಲ್ಯಾಂಡದಲ್ಲಿ ಗೆಳೆಯರ ಬಳಗದಲ್ಲಿ ಶೇಖರನು ರೀತಿಯಿಂದ ಹೊರಟಿದ್ದಾನೆ. ಪೋಸ್ಟಮನ್ನನು ಬಂದು ಒಂದು ಕಾರ್ಡನ್ನು ಶೇಖರನ ಕೈಗಿತ್ತನು. ಅದನ್ನು ನೋಡಿದ ಕೂಡಲೇ ಅವನ ಕೈ ಕಾಲು ತಣ್ಣಗಾದವು. ದುಃಖವು ಉಕ್ಕಿ ಬಂಸು. ಹಾಗೆಯೇ ರೂಮಿಗೆ ಬಂದು ಅಳುತ್ತ ಕುಳಿತುಕೊಂಡನು. ಇತ್ತ ಇಂದೂ ಆತ್ಮಹತ್ಯೆ ಮಾಡಿಕೊಳ್ಳುವ ಸಿದ್ಧತೆ ನಡೆಸಿದ್ದಳು. ಮರುದಿವಸ ಮದುವೆಯ ಕಾರ್ಯ, ಅಂದು ರಾತ್ರಿ ಇಂದೂ, ಶೇಖರನನ್ನು ಸ್ಮರಿಸಿ "ದೇವಾ, ಮುಂದಿನ ಜನ್ಮದಲ್ಲಿಯಾದರೂ ಶೇಖರ ನನ್ನ ಪತಿಯಾಗಲಿ ಶೀಘ್ರವೇ ನನ್ನನ್ನು ಕಣ್ಣು ಮುಚ್ಚಿಸು" ಎಂದು ತನ್ನ ಕೋಣೆಯ ಬಾಗಿಲುಗಳನ್ನು ಭದ್ರವಾಗಿರಿಸಿ, ಮಂಚದ ಮೇಲೆ ಮಲಗಿ ಶೇಖರನ ಚಿತ್ರವನ್ನು ಒಮ್ಮೆ ಕಣ್ಣು ತುಂಬ ನೋಡಿ ವಿಷ ತೆಗೆದುಕೊಂಡಳು. ಅವಳ ಪ್ರಾಣ ಪಕ್ಷಿಯು ಶರವೇಗದಲ್ಲಿ ಹಾರಿ ಹೊಯಿತು.

ಅಂದು ಮಾರುವೆಯದಿನ ಇಂದೂಳ ಮನೆಯಲ್ಲಿ ಸಂಭ್ರಮವೇ ಸಂಭ್ರಮ. ಆದರೆ ಇಂದೂಳ ಪರಿಸ್ಥಿತಿ ಅವರಿಗೆ ಗೊತ್ತಾಗುವದಾದರೂ ಹೇಗೆ? ಅವಳ ತಾಯಿಯು "ದಿನಾಲು ನನ್ನ ಮುದ್ದು ಇಂದೂ ಏಳು ಘಂಟೆಗೆ ಎಳುತ್ತಿದ್ದವಳು ಇಂದು ಯಾಕೆ ಬಹಳ ಹೊತ್ತು ಮಲಗಿರಬಹುದು"? ಎಂದು ತನ್ನ ಗಂಡನನ್ನು ಪ್ರಶ್ನಿಸಿದಳು. "ಮಲಗಲಿ ಬೆಳೆಯುವ ಮಗು" ಎಂದು ಇಂದೂನ ತಂದೆಯು ಸುಮ್ಮನಾದರು.

ಸೂರ್ಯನು ಮೇಲಕ್ಕೇರುತ್ತ ತನ್ನ ಹೊಂಬಣ್ಣದ ಕಿರಣಗಳನ್ನು ಇಂದೂನ ಮನೆಯಲ್ಲೆಲ್ಲ ಹರವಿದ್ದನು. ಇಂದೂ ನಿಶ್ಚೇಷ್ಟಿತಳಾಗಿ ಬಿದ್ದಿದ್ದಾಳೆ. ಅಪ್ಪರಲ್ಲಿ ಅವಳ ತಾಯಿಯು ಬಾಗಿಲನ್ನು ತಟ್ಟಿ "ಇಂದೂ ಇಂದೂ', ಎಂದು ಹಲವಾರು ಸಲ ಒದರಿದರೂ ಇಂದುವಿನಿಂದ ಉತ್ತರವೇ ಬರಲಿಲ್ಲ. ಕದ ದೂಡಿದರೆ ಒಳಕ್ಕೆ ಕೊಂಡಿ ಹಾಕಿದ್ದಿತು. ಅವಳ ತಾಯಿಯು ಅಳಲು ಪ್ರಾರಂಭಿಸಿದಳು. ಸೇವಕರು ಬಂದು ಕದಗಳನ್ನು ಮುರಿದು ಒಳಹೊಕ್ಕು ನೋಡಲಾಗಿ ಇಂದಿರಾ ಮುಂಚದ ಮೇಲೆ ಓರೆಯಾಗಿ ಬಿದ್ದಿದ್ದಳು. ಅವಳ ನೀಳವಾದ ಕೇಶರಾಶಿಗಳು ಚಲ್ಲಾಪಿಲ್ಲಿಯಾಗಿದ್ದವು. ಅವಳ ತಾಯಿ "ಇಂದೂ" ಎಂದು ಅವಳ ಮೈಮೇಲೆ ಬಿದ್ದಳು. ಎಲ್ಲಿ ಇದ್ದಾಳೆ ಇಂದೂ! ಇಂದೂಳ ಮರಣದಿಂದ ಎಲ್ಲರೂ ದುಃಖದಿಂದ ಜರ್ಝರಿತರಾದರು. ಇತ್ತ ಶೇಖರನಿಗೆ ಇಂದೂಳ ಆತ್ಮಹತ್ಯೆಯ ತಂತಿ ಮುಟ್ಟಿದ ಕೂಡಲೇ ಹುಚ್ಚನಾದನು. "ಏನಿದೆ ಈ ಜಗತ್ತಿನಲ್ಲಿ ಪ್ರೇಮದ ವಿಷಯವನ್ನರಿಯದ ಮರುಳರು ಅಸಂಖ್ಯಾತರಿದ್ದಾರೆ. ಆ, ಹಾ, ಹಾ, ಹಾ, ಶೂನ್ಯ ಜಗತ್ತು ನನ್ನ ದೃಷ್ಟಿಯಲ್ಲಿ ಶೂನ್ಯ ಶೂನ್ಯ, ಶೂನ್ಯ ಎಂದು ನಗುತ್ತ, ನಗುತ್ತ, ಶೇಖರ ಎಲ್ಲಿಯೋ ಹೋಗಿಬಿಟ್ಟ.

—ಶ್ರೀ ಚಂದ್ರಶೇಖರ ಹುರಳಿ,
ಧಾರವಾಡ.

In the Court of the District Munsif of Kundapur.

S. C 488/1958

Between—

Manja ... Plaintiff

and

Sheena ... Defendant.

To

The defendant

Sheena, son of Mogaveera Balumanjanamane Linga Naika—Dakuhithlu Gangu.h—Coondapoor Taluk.

Whereas the Plaintiff has instituted the above suit against you on the demand promissory note passed by you in his favour under date 11—7—1955, for Rs. 100/- You are hereby summoned to appear before this Court on 9—10—1958 at 11 A. M. and be heard in answer to the same failing which, the suit will proceed 'exparte'.

By order of the Court

S. N. Acharya,
Advocate for Plff.

Coondapoor, 15—9—1958.

ಪರಿಶೀಲಿಸಿ ಖಾತ್ರಿಯಾದುದನ್ನೇ ಪಡೆಕೊಳ್ಳಿರಿ!

ನಮ್ಮ ಶೋ ರೂಮನ್ನು

ಸಂದರ್ಶಿಸಿ ಸಂಪೂರ್ಣ ಸಂತೃಪ್ತಿ ಹೊಂದಿರಿ!

ಸಂಪೂರ್ಣ ಹೊಸ ಮಾಲು ಹೆಚ್ಚಿನ ಆಕರ್ಷಕಗಳು

ಮನೆಗಳಿಗೆ ಬೇಕಾಗುವ ಎಲ್ಲಾ ತರದ 'ಸ್ಟೈನ್‌ಲೆಸ್' ಸ್ಟೀಲ್ ಪಾತ್ರೆಗಳು

ಖೇರಾ ಸ್ಟೀಲ್ ವರ್ಕ್ಸ್ ಪ್ರೈ. ಲಿ. ಬೊಂಬಾಯಿ.

ಇವರ ಅತ್ಯಾಧುನಿಕ ರೀತಿಯ ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ ದೊಡ್ಡ, ಸಣ್ಣ ಅಡಿಗೆಮನೆಗಳಿಗೆ, ಹೋಟೇಲು, ಆಸ್ಪತ್ರೆ, ಮನೆಗಳಿಗೆ ಬೇಕಾಗುವ ಮಾಡಬೇಕಾದ ಕುರ್ಚಿಗಳು, ಸ್ನಿಗ್ಧೋಪಯೋಗದ ಬೀರುಗಳು, ಮೇಜುಗಳು, ಸೋಫಾಗಳು ಮತ್ತು ಸೆಲ್ಫ್‌ಗಳು, ಸ್ಪ್ರಿಂಗಿನ, ಸರಿಗೆಯ ಮತ್ತು ಶೀಟ್ ಮಂಚಗಳು

ಇವುಗಳಲ್ಲದೆ ಅನೇಕ ತರದ ಸ್ಟೀಲು ಫರ್ನಿಚರುಗಳು

ಎಲ್ಲಾ ವಿಧದ 'ಜೆಸ್ಕೊ' ಇಲೆಕ್ಟ್ರಿಕ್ ಲೇಂಪ್ ಹೋಲ್ಡರುಗಳು ರಖಂ ದರದಲ್ಲಿ ದೊರೆಯುತ್ತವೆ.

ಭದ್ರತೆ, ಬಾಳಿಕೆ ಮತ್ತು ವಿಶ್ವಾಸಾರ್ಹತೆಯ ಬಾಗಿಲುಗಳಿಗಾಗಿ 'ಸ್ವಸ್ತಿಕ್ ರೋಲಿಂಗ್ ಶಟ್ಟರ್'ಗಳನ್ನೇ ಪಡೆಯಿರಿ.

ವಿವರಗಳಿಗೆ:

ಶಾಸ್ತ್ರಿ & ಕಂಪೆನಿ

ಹಂಪನಕಟ್ಟೆ, ಮಂಗಳೂರು.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ದೇಶ ಪರಿಚಯ

ಭೂಮಧ್ಯ ಸಮುದ್ರ-ಕಿನಾರೆಯ ಕಿರಿಯ ದೇಶ—ಲೆಬನಾನ್

ನೂತನ ಅಧ್ಯಕ್ಷರ ಅಧಿಕಾರ ಗ್ರಹಣದಿಂದ ಪರಿಸ್ಥಿತಿಯು ಸುಧಾರಿಸುವುದೆ?

ಭೂಮಧ್ಯ ಸಮುದ್ರದ ಪೂರ್ವ ಕರಾವಳಿಯಲ್ಲಿರುವ ಕೇವಲ ನಾಲ್ಕು ಸಾವಿರ ಚದರ ಸ್ಕ್ವೆರಿಗಸ್ಟೇ ವಿಸ್ತಾರವಿರುವ ಒಂದು ಪುಟ್ಟ ದೇಶ ಲೆಬನಾನ್. ಇಲ್ಲಿನ ಜನಸಂಖ್ಯೆ ೧೪ ೫ ಲಕ್ಷಗಳಷ್ಟಿದೆ. ಸಮುದ್ರಕ್ಕೆ ಸಮಾನಾಂತರವಾಗಿರುವ ಎರಡು ಪರ್ವತ ಶ್ರೇಣಿಗಳಿಂದ ಇದು ಮುಕ್ಕಡಿಯಾಗಿ ವಿಭಜಿತವಾಗಿದೆ. ಈ ಪರ್ವತ ಪಂಜ್ತಿಗಳ ನಡುವೆ ಬಹಳ ಫಲವತ್ತಾದ ಕಣಿವೆಯಿರುವುದು ಹಿಂದಿನ ಪೆಲೆಸ್ತೀನವು ಚ್ಯುತಿಗೊಂಡು ಇಸ್ರಾಯೇಲ್ ಮತ್ತು ಲೆಬನಾನ್‌ಗಳೆಂಬ ಎರಡು ಪ್ರತ್ಯೇಕ ರಾಷ್ಟ್ರಗಳು ನಿರ್ಮಾಣಗೊಂಡನಂತರ, ಲೆಬನಾನ್ ಸಾಕಷ್ಟು ಪ್ರಗತಿಯನ್ನು ಪಡೆದಿದೆ ಮಧ್ಯಪೂರ್ವದ ಅರಬಂಗೆ ಆರ್ಥಿಕ ವಿನಿಮಯ ಮಾಡಿಕೊಳ್ಳುವ ಮತ್ತು ಸಾರಿಗೆ ಸಂಪರ್ಕದ ಬಹು ದೊಡ್ಡ ಕೇಂದ್ರವಾಗಿ ಪರಿಣಮಿಸಿದೆ, ಎಂತಲೇ ದೇಶ ಸಣ್ಣದಾದರೂ ಇಲ್ಲಿನ ಕೀರ್ತಿಯು ಮಾತ್ರ ದೊಡ್ಡದೆಂದು ಹೇಳಬಹುದು.

ಪುರಾತನ ಜಾಗತಿಕ ಸಮಾರಾಂತ್ಯವಾದ ಮೇಲೆ ಆಗ ವಿಶ್ವಶಾಂತಿಗಾಗಿ ಸ್ಥಾಪಿಸಲ್ಪಟ್ಟ ಜನಾಂಗ ಸಂಘದ ಆದೇಶದಂತೆ ಫ್ರೆಂಚರು ಲೆಬನಾನಿನ ಆಡಳಿತೆಯನ್ನು ನಿರ್ವಹಿಸಿದರು. ಆದರೆ, ದ್ವಿತೀಯ ಲೋಕ ಯುದ್ಧಾನಂತರ ೧೯೪೬ರಲ್ಲಿ ಒಂದು ಮಹಾಕ್ರಾಂತಿಯು ನಡೆದನಂತರವೇ ಫ್ರೆಂಚರ ಸೈನ್ಯಗಳು ಲೆಬನಾನಿನಿಂದ ಕಾಲುಕಿತ್ತುವು ಈ ಕ್ರಾಂತಿಯು ವಿಸ್ತೃತರೂಪವನ್ನು ತಾಳಿತ್ತಲ್ಲದೇ ರಕ್ತಪಾತಕ್ಕೂ ಕಾರಣವಾಗಿತ್ತು

೧೯೫೭ರಲ್ಲಿ ಅಮೆರಿಕೆಯ ಸೈನಿಕ ಸಹಾಯವನ್ನು ಪಡೆಯಲು ಲೆಬನಾನು ನಿರ್ಧರಿಸುವ ಬಗ್ಗೆ ಭಿನ್ನಾಭಿಪ್ರಾಯಗಳಿದ್ದು ಬೂದಿಯೊಳಗೇನೇ ಕೆಂಡವು ಜ್ವಲಿಸುವಂತೆ ಒಳಗೊಳಗೆ ಬಿಸ್ಕಟ್ಟು ಲೆಯೂರತೊಡಗಿತ್ತು. ಆದರೆ, ಇದೇ ಅಧ್ಯಕ್ಷ ಚೌಮನರು ತಾನು ಎರಡನೆಯ ಬಾರಿಗೂ ಈ ಪದವಿಗೆ ಆರಿಸಿ ಬರುವಂತೆ ಮಾಡಬಹುದಾದಂತೆ ರಾಷ್ಟ್ರ ಪಟ್ಟಿಸೆಯನ್ನು ತಿದ್ದುಪಡಿ ಮಾಡಲಿರುವರೆಂಬ ವರದಿಗಳು ಪ್ರಕಟಗೊಂಡೊಡನೇ, ಎದ್ದು ದಾವಾಗ್ನಿಯಂತೆ ಉರಿಯತೊಡಗಿತು

ಅಧ್ಯಕ್ಷ ಚೌಮನರ ಹಿಂದಿನ ಹಿಂಬಾಲಕರಿಂದ ಮನ್ನಡೆಸಲ್ಪಟ್ಟ ದಂಗೆಗಾರರು ಮೇ ತಿಂಗಳಲ್ಲಿ ಮೇಲೆ ಬಿದ್ದರು. ಆಗ ಅಧ್ಯಕ್ಷರು ಈ ದಂಗೆಕೋರರಿಗೆ ಸಿರಿಯಾದಿಂದ ಆಯುಧ ಹಾಗೂ ಜನ ಸಹಾಯವು ದೊರೆತಿದೆಯೆಂದು ಆರೋಪಿಸಿ, ಯುಕ್ತ ರಾಷ್ಟ್ರಸಂಘಕ್ಕೆ ದೂರು ಕೊಟ್ಟರು. ಆಗ ಅದು, ಇದರ ಸತ್ಯಾಸತ್ಯತೆಗಳನ್ನು ಪರಿಶೀಲಿಸುವುದಕ್ಕೆ ಒಂದು ಗಡಿಸಮಿತಿಯನ್ನು ನೇಮಿಸಿತು. ಜುಲೈ ತಿಂಗಳಲ್ಲಿ ಇರಾಕಿನಲ್ಲಿ ನಡೆದ ಮಹಾರಕ್ತಕ್ರಾಂತಿಯು ಸಮೀಪದಲ್ಲಿ, ಚೌಮನರು ಮತ್ತಷ್ಟು ವಿರೋಧವನ್ನು ಎದುರಿಸಬೇಕಾಗಿ ಬಂದು, ತನ್ನ ಅಸಮರ್ಥತೆಯಿಂದಾಗಿ, ಅವರು ಅಮೆರಿಕೆಯೊಡನೆ ಸಹಾಯವನ್ನು ಯಾಚಿಸಿದರು"

ಅಮೆರಿಕೆಯ ಯುದ್ಧ ನೌಕೆಗಳು ಬೀರುತ್ತಿನಲ್ಲಿ ನೆಲೆಯೂರಿ, ದಂಗೆಕೋರರನ್ನು ಸದೆಬಡಿಯತೊಡಗಿದುವು. ಹಾಗಿದ್ದರೂ ದೇಶದ ಒಂದಂಶವು ದಂಗೆಗಾರರ ಕೈಯಲ್ಲಿಯೇ ಉಳಿದಿದೆ ಅಮೆರಿಕೆಯು ಇಷ್ಟು ಶಾಂತಿ ರಕ್ಷಣೆ ಮಾಡುವುದಕ್ಕಾಗಿ ಶಾಂತಸೂರ್ಣವಾಗಿ ಅಧ್ಯಕ್ಷ ಚುನಾವಣೆ ನಡೆಯುವ ಏರ್ಪಾಡು ಮಾಡುವೆವೆಂದರು, ಇದರ ಪರಿಣಾಮವಾಗಿ, ನಿನ್ನೆ ಸಪ್ತಂಬರ ೨೪ನೇ ದಿನಾಂಕದಿಂದ ಜನರಲ್ ಸಾವುದ್ ಜೆಹಾಬರು ಅಧ್ಯಕ್ಷರಾಗಿ ಅಧಿಕಾರಗ್ರಹಣಮಾಡಿದರು

ಲೆಬನಾನಿನಲ್ಲಿ ಅಮೆರಿಕೆಯ ಸೇನೆಯು ಕಾಲಿಟ್ಟಿದ ಯುಕ್ತತೆ ಹೇಗೆ ಇರಲಿ, ಅದು ಅಲ್ಲಿಂದ ಕಾಲ್ದೆಗೆಯುತ್ತಿದೆ ಎಂಬುದು ಸಂತೋಷಾಸ್ಪದ ಇಂಥಾಕಲ್ಲಿ ನಡೆದ ಮಹಾಕ್ರಾಂತಿಯ ಪರಿಣಾಮಕ್ಕಾಗೂ ಕಾರಣಗಳೆಂದಾಗಿಯೇ ಲೆಬನಾನಿನ ಆಂತರಿಕ ವಿದ್ರೋಹವು ಬಲಿತು, ಮಹಾಜನರ ಮಧ್ಯಪೂರ್ವ ಸಿದ್ಧಾಂತದಂತೆ, ಸಿರಿಯಾವು ತನ್ನ ದಂಗೆಗಾರರಿಗೆ ಪ್ರೋತ್ಸಾಹವಿತ್ತಿದೆಂದು ಆರೋಪಿಸಿ ಅಮೆರಿಕೆಯ ಸೇನೆಯನ್ನು ಕರಸಿಕೊಂಡು ದಂಗೆಯಣಗಿಸಲು ಪ್ರಯತ್ನಿಸಿತು. ಇದುವರೆಗೆ ನಡೆದ ಘಟನೆಗಳನ್ನು ಒತ್ತಿಗಿಟ್ಟು ನೂತನ ಅಧ್ಯಕ್ಷರ ಕಾರ್ಯಭಾರ ಹೇಗೆ ಸಾಗಬಹುದೆಂಬುದನ್ನು ಸದ್ಯ ನಿರೀಕ್ಷಿಸಬಹುದು.

(ವಂದಿನ ವಾರ: ಜೋರ್ಡಾನ)

ರಾಯಲ್ ವಿಮಾನದಳದ ಮುಖ್ಯಾಧಿಕಾರಿ ಸರ್ ಡಗಲಸ್ ಮೆಕ್‌ಫೇಡಿಯನ್ (ಬಲ) ಮತ್ತು ಸಂಯುಕ್ತ ರಾಷ್ಟ್ರಗಳ ಮೇಜರ್ ಜನರಲ್ ಡಬ್ಲ್ಯೂ ಆರ್ ಆಗಿಯನದು ಮಾತಾಡಿಕೊಳ್ಳುತಿದ್ದಾರೆ

ಭಾವುಕತೆ

ಕಷ್ಟದಿಂದ ಅರಸಿದರೂ ಅತೀವ ನಿರಾಶನಾಗಿರುವೆ!

ಒಂದು ಬಾರಿಯಾದರೂ ಬಂದು ನಿನ್ನ ರೂಪನ್ನು ತೋರಿಸಿ ಹೋಗಲಾರೆಯ?

ನೀನು ನನ್ನ ಹೃದಯದಲ್ಲಿ ಬಂದು ನೆಲಸದೆ ಹೋದಾಗ, ಅಧೀರ ಹೃದಯವು ತಾನೇ ತಾನಾಗಿ ನಿನ್ನೆಡೆಗೆ ಹೊಂಟಿತು ಆದರೆ, ಬಹಳ ಪ್ರಯತ್ನಿಸಿದರೂ ನಿನ್ನನ್ನು ಕಾಣಲಾರದೆ, ಕೊನೆಗೆ ಅತೀವ ಪರಾಶವಾಗಿ ಹಿಂತಿರುಗಿ ಬಂದಿತು

ಎಲ್ಲ ಮತಿವಂತರು ನೀನು ದೃಷ್ಟಿಗೋಚರನಲ್ಲವೆನ್ನುತ್ತಾರೆ ಎಂತಲೇ ನಾನೂ ಈ ಪರಾತನ್ನು ಮನ್ನಿಸದಿರುವುದು ಎಂದಿಗಾದರೂ ಸಾಧ್ಯವೆ? ನಯನಗಳನ್ನು ಮುಚ್ಚಿ ನಾನೂ ಧ್ಯಾನಿಸತೊಡಗಿದೆ; ಆದರೆ, ನನ್ನ ದುರದೃಷ್ಟದಿಂದ ನನಗೆ ನಿನ್ನ ಕಿಂಚಿತ್ ಜ್ಞಾನವೂ ಒದಗಲಿಲ್ಲ

ಮನಸಿಟ್ಟು ಕೇಳು, ಒಂದು ದಿನ ರಾತ್ರಿ ನಡೆದ ಕತೆಯಿದು. ನಾನು ಮಲಗಿದ್ದನು, ಒಹಳ ಹೊತ್ತು ಇರುಳೂ ಕಳೆದಿರಬೇಕು, ನನ್ನ ಬಳಿಯಲ್ಲಿಯೇ ನೀನು ನಿಂತುಕೊಂಡಿರುವಿ ಎಂಬ ಜ್ಞಾನವು ಆಗಿಬಿಟ್ಟಿತು, ಆದರೆ ನಾನು ಕಣ್ಣುಗಳನ್ನು ತೆರೆದು ಉತ್ಸಿಸುವಾಗ ಮಾತ್ರ ನಜರ ಘಾತವಾದಂತೆ ಬಾಹವಾಯಿತು.

ಆಗಾಗ ನಾನು ಬಹಳ ಆಹ್ಲಾದದಿಂದ ಗಕಗಹಿಸಿ ನಗುವೆ, ಅತೀವ ವಿಷದಕ್ಕೆ ಗುರಿಯಾಗಿ ಆಗಾಗ ರೋದಿಸುವೆ; ನಿನ್ನ ಮೇಲಿನ ಪ್ರೇಮದಿಂದಾಗಿ ಚಿರಕಾಲವೂ ನಿನ್ನನ್ನು ಹಾಡುವೆ; ಆದರೆ, ಈ ಜನರು ಮಾತ್ರ ನನಗೆ ಉನ್ಮಾದ ಹಿಡಿದಿದೆಯೆಂದು ಏಕೆ ಹೇಳುತ್ತಾರೆ?

ಈಗ ನನ್ನ ನಿರಾಶಾತ್ಮಹೃದಯವು ಅತೀವ ಅಧೀರವಾಗಿ ಹೋಗಿದೆ; ಯಾವಾಗಲೂ ನನ್ನ ಶರೀರವು ಒಣಗಿ ಹೋಗುತ್ತ ಇದೆ, ನನ್ನ ಕಣ್ಣುಗಳು ನೀರನ್ನು ಸುರಿಸುತ್ತಿವೆ, ಅವುಗಳಿಗೆ ಯಾವ ವ್ಯಥೆಯು ಒದಗಿಬಂದಿತು? ನನಗೆ ನಿನ್ನ ದೇಶಲಿರುವ ಪ್ರೇಮದ ಬಾಣವು ಅವುಗಳಿಗೂ ತೀವ್ರವಾಗಿ ತಗಲಿಬಿಟ್ಟಿತೆ?

ನಾನು ಎಷ್ಟು ದಿನಗಳಿಂದ ನಿನ್ನ ದಾಸನಾಗಿದ್ದೇನೆ ಎಂಬುದನ್ನು ಭಾವಿಸು; ಹಾಗಿರುವಾಗ, ನೀನು ನನ್ನನ್ನು ಮತ್ತೂ ಮತ್ತೂ ಏಕೆ ನಿರಾಶನನ್ನಾಗಿಸುತ್ತೀಯ? ಆಲೋಚಿಸಿರಲಿ, ಈಗ ನಿನ್ನ ವಾಸಸ್ಥಾನವೆಲ್ಲಿ ಎಂಬುದನ್ನಾದರೂ ನೀನು ತಿಳಿಸುವ ಕೃಪೆಮಾಡು; ಅಲ್ಲಿ ನನ್ನ ಅಮೂಲ್ಯವಾದ ಪ್ರೇಮಸ್ತ್ರಕಾಶವೂ ಕರಿಯಲಾರದೆ ಎಂಬುದನ್ನು ಉಸುರು.

ನಿನ್ನ ಗುಣಗಳ ಗಾನವನ್ನು ಅದೆಷ್ಟು ಸಮಯದಿಂದ ಮಾಡಲು ಉಸಕ್ರಮಿಸಿದ್ದೇನೆ! ಆದರೂ ನಿನಗೆ ನನ್ನ ಧ್ಯಾನವು ಎಳ್ಳಷ್ಟಾದರೂ ಇದೆಯೆ? ನನಗೆ ನಿನ್ನ ಸಂಸ್ಥಾನ ಯಾವುದು ಮತ್ತು ಪ್ರೇಮ ಪಿಶಾನೆಯು ಅಲ್ಲಿಗೆ ಹೇಗೆ ತಾನೇ ಸುಳಿಯಬಲ್ಲುದು ಎಂಬುದನ್ನು ದಯ ಮಾಡಿ ಹೇಳಿಬಿಡು.

ಕೆಲವು ಶಾಸ್ತ್ರಜ್ಞರು ತಾವು ಜ್ಞಾನಗಳಿಗೆಲ್ಲ ಆಶ್ರಯದಂತಿರುವವರೆಂದು ತಿಳಿದುಕೊಳ್ಳುತ್ತಾರೆ, ಆದರೆ, ಅವರಲ್ಲಿ ಯಾರೊಬ್ಬರಿಗೂ ತಿಂಗಳದಷ್ಟೂ ನಿನ್ನ ಪರಿಚಯವಿಲ್ಲ. ಇದನ್ನು ತಿಳಿದೇ ನಾನು ಮಹಾ ಅಜ್ಞನೂ ಮೂಢನೂ ಆಗಿ ಉಳಿದಿದ್ದೇನೆ. ಹಾಗಿದ್ದರೂ ನನ್ನ ಚಿತ್ತದಲ್ಲಿ ನಿನ್ನ ಜ್ಞಾನವು ಮಾತ್ರ ಆಗಲಿಲ್ಲ.

ಇದುವರೆಗೆ ನಿನ್ನ ಗುರುತು ಹಿಡಿಯದೆ ಇದ್ದರೂ ನೀನು ಸಹೃದಯನೂ ಸರಳನೂ ಆಗಿರುವಿ ಎಂದೇ ಅನುಮಾನವಿದೆ. ಆದರೂ ನಿನ್ನ ಮಹಾವಿಯೋಗದ: ಖವನ್ನು ಇನ್ನು ಮುಂದೆಕ್ಕೂ ಸಹಿಸುತ್ತ ಕೂತುಕೊಳ್ಳುವುದು ಅಸಾಧ್ಯದ ಮಾತಾಗಿದೆ; ಆದುದರಿಂದ ಪರಮಪವಿತ್ರನಾದ ಪರಮಾತ್ಮನೇ, ನನಗೊಂದು ಬಾರಿ ದರ್ಶನಕೊಟ್ಟು ಉದ್ಧರಿಸು

—ಗೋಪಾಲ ಶರಣಸಿಂಹ.

(ಹಿಂದಿ)

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.		
3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd

೭೦ ವರ್ಷ ಗಳಿಂದಲೂ ಪ್ರಸಿದ್ಧ ಇದೆ

ಮಲೇರಿಯಾ

ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ

ಬಾಟ್ಲಿವಾಲಾ ಎಗ್ಯೂಮಿಕ್‌ಶ್ಚರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು **ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್,** ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಕಾವ್ಯ ಪ್ರಕಾಶ

ತುಲಾ ಮಧ್ಯೆ ಅನಾಸಕ್ತ ಪಥಿಕ!

ಜನಜಗತ್ತು ದುಃಖ ಹೇತುವೆಂದಾತ ದೂರವೋಡಿ ಬಂದರೆ, ಸಾಧು ಅಲ್ಲಿಗೆ ಮರಳಿ ಹೋಗುವಂತೆ ಹೇಳುತ್ತಾನೆ!

ಒಂದು ದಿನ ಪ್ರಕೃತಿಯ ಅತ್ಯಧಿಕ ಸುಂದರ ರೂಪಿಯಾದ ಸರಸ ಮತ್ತು ವಿಶಾಲ ಪ್ರಸನ್ನ ಪ್ರಭಾತ ಸಮಯದ ಕೆಂಬಣ್ಣದ ರಥವನ್ನೇರಿ ಸುಂದರಿಸಿರುವ, ಕೆಂಪು ಬಣ್ಣದ ಸೂರ್ಯನು ತನ್ನ ಹೊಂಗಿರಣಗಳಿಂದ ಸರೋವರ ಸಮುದ್ರತಟವನ್ನು ಮುದ್ದಿಸುತ್ತ ಪೂರ್ವ ದಿಸೆಯಲ್ಲಿ ಉದಯಿಸುತ್ತಿರುತ್ತ ಬರುತಿದ್ದನು.

ಪ್ರಭಾತ ಕಾಲದಲ್ಲಿ ಸಮುದ್ರ ದಂಡೆಯ ವಾಯು ಸೇವನೆಯ ಅಕಾಂಕ್ಷೆಯಿಂದ ಸಮುದ್ರ ತಟಕ್ಕೆ ಬಂದು, ಓರ್ವ ಪಥಿಕನು ಪ್ರಕೃತಿಯ ಮನೋಹರತೆಯನ್ನು ಈಕ್ಷಿಸುತಿದ್ದನು. ಅವನು ಪ್ರಾಕೃತಿಕ ಸೌಂದರ್ಯವನ್ನು ಸವಿಯುತ್ತ ತನ್ನ ತನುಮನಗಳ ಅರಿವನ್ನೂ ಕಳೆದುಕೊಂಡನು.

ಅಷ್ಟರಲ್ಲಿಯೇ ಒಬ್ಬಾಕೆ ಸುಂದರಿಯಾದ ರಮಣಿಯು ಅಲ್ಲಿ ಬಂದು ನಿಂತಳು. ಆಕೆಯು ಸ್ವರ್ಗದಿಂದಿಳಿದು ಬಂದ ಕಿರಣದಂತೆ, ಕವಿಯ ಭಾವನಾ ಮೂರ್ತಿಯಂತೆ, ಪಿಶ್ವದ ಆಶ್ಚರ್ಯದಂತೆ ಕಾಣಿಸುತಿದ್ದಳು.

ಆಕೆ ಪ್ರಸನ್ನಳಾಗಿದ್ದಳು. ಆಕೆಯ ಹೃದಯರೂಪೀ ಪುಷ್ಪದಲ್ಲಿ ವಿಷಾದದ ಕೀಟವೊಂದು ಹೊಕ್ಕಿಕೊಂಡಿತ್ತು. ಉದ್ಯಾನದಲ್ಲಿ ಸಂಧ್ಯಾ ಸಮಯವು ಬರುತ್ತಿರುವಾಗ ಉದಾಸೀನತೆಯು ಆವರಿಸುವಂತೆ, ಆಕೆಯ ಮುಖ ಕಮಲದಲ್ಲಿ ದುಃಖದ ನೆರಳು ಪ್ರತಿಬಿಂಬಿಸುತಿತ್ತು.

ಪಥಿಕನನ್ನು ಆಕೆ ಗುರುತಿಸಿದಳು. ಅವನೇ ಆಕೆಯ ಪತಿಯಾಗಿದ್ದನು. ಆಕೆಯು ಅತೀವ ಹರ್ಷಿತಳಾದಳು. ಅವಳು ತನ್ನೆರಡು ಹಸ್ತಗಳನ್ನು ಜೋಡಿಸಿ, ತನ್ನ ಪ್ರಿಯತಮನ ಚರಣಗಳಿಗೆ ನಮಸ್ಕರಿಸಿ, ಆತನ ಚರಣಧೂಳಿಯನ್ನು ಶಿರಸ್ಸಿಗೇರಿಸಿದಳು. ಅನಂತರ ಆತನನ್ನೇ ಎವೆಯಿಕ್ಕದೆ ದೃಷ್ಟಿಸತೊಡಗಿದಳು.

ಪಥಿಕನು ತನ್ನ ಧ್ಯಾನದಲ್ಲಿಯೇ ತತ್ಪರನಾಗಿ ಹೋಗಿದ್ದುದರಿಂದ ಅವನಿಗೆ ಇವಾವುದರ ಅರಿವೂ ಆಗಲಿಲ್ಲ. ಆತನ ಮನಸ್ಸು ಪ್ರೇಮ ಭವನ ಪ್ರೕಯಸಿಯ ಸೌಂದರ್ಯವನ್ನು ಸವಿಸವಿಯುತ್ತ ರಮಣಿಯ ಕಾಲ ಮಧುರ ಧ್ವನಿಯೂ ಕೇಳದಷ್ಟು ದೂರ ಸಾಗಿ ಹೋಗಿತ್ತು. ತನ್ನ ಮಾರ್ಗ ಭ್ರಮಣದಲ್ಲಿ ಆತನು ಆಯಾಸಗೊಂಡು ಹಿಂತಿರುಗಲಿಲ್ಲ. ಪಥಿಕನ ಪ್ರೇಮಸಿದ್ಧಿಯು ಖಂಡಿತವಾಗಲಿಲ್ಲ. ಇದನ್ನು ನೋಡಿ, ಆ ಕಾಮಿನಿಯು ಒಂದು ಮನೋಹರವಾದ ಗೀತೆಯನ್ನು ಹಾಡಿದಳು. ಈ ಗೀತೆಯಿಂದ ಪಥಿಕನ ಧ್ಯಾನಕ್ಕೆ ಭಂಗವುಂಟಾಗಿತು. ಆತನು ಕಣ್ಣು ತೆರೆದನು. ಸಮೀಪದಲ್ಲಿ ರಮಣಿಯನ್ನು ಕಂಡು, ಆತನು ಪ್ರಕೃತಿಯ ಆನಂದದ ಉನ್ಮತ್ತತೆಯಲ್ಲಿ ಆಲಾಪಿಸತೊಡಗಿದನು. ಆತನ ಪ್ರೇಮ ಪ್ರಲಾಪಗಳನ್ನು ಕೇಳಿ, ರಮಣಿಯ ರತಾಕಾಂಕ್ಷೀ ನಯನಗಳಲ್ಲಿ ನೀರಧಾರೆಯು ಸುರಿಯಿತು. ಆಕೆಯು ಕೈ ಮುಗಿದು, ಬಹಳ ಪ್ರಾರ್ಥಿಸಿ, ಪಥಿಕನೊಡನೆ ಮನೆಗೆ ಹಿಂತಿರುಗಿ ಬರುವಂತೆ ಬೇಡಿಕೊಂಡಳು. "ನೀವು ಪ್ರಾಕೃತಿಕ ಸೌಂದರ್ಯದಿಂದ ವಿಮುಗ್ಧರಾಗಿ ಮನೆಯನ್ನು ತ್ಯಜಿಸಿ, ವನಕ್ಕೆ ನಡೆದುಹೋದಾಗ, ಈ ವರ್ತಮಾನವನ್ನು ತಿಳಿದು, ನಿಮ್ಮನ್ನರಸುತ್ತ ಆಗಾಗಲೇ ಮನೆಯಿಂದ ಹೊರಬಿದ್ದಿದ್ದೆನು. ನಿಮ್ಮ ಎಳೆಯ ಮಗನು ತನ್ನ ಎಡೆ ಕೈಗಳಿಂದ ನನ್ನನ್ನು ಹಿಡಿದು ನಿಲ್ಲಿಸಿದನು. ಆತನ ಕೈಗಳ ಬಂಧನದಿಂದ ತಪ್ಪಿಸಿಕೊಂಡು, ಕೇವಲ ನಿಮಗಾಗಿ ಕಾಡಿಗೆ ಬಂದೆನು. ಎಷ್ಟೋ ವನ, ಪರ್ವತ, ನದೀ ನಾಲೆಗಳನ್ನು ದಾಟಿ ಬಂದರೂ ನೀವು ಸಿಗಲಿಲ್ಲ. ಇಂದು, ಸಮುದ್ರದ ವಿಶಾಲ ನೀರಿನಲ್ಲಿ ಶರೀರವನ್ನು ಪರಿತ್ಯಜಿಸಿ, ಅಸಹ್ಯವಿರಹ ವೇದನೆಯಿಂದ ವಿಮುಕ್ತಳಾಗಲು ಇಲ್ಲಿಗೆ ಬಂದಿದ್ದೆನು. ಅಷ್ಟರಲ್ಲಿಯೇ ನಿಮ್ಮ ದರ್ಶನವಾಯಿತು. ಈಗ, ನನ್ನ ಪ್ರಾರ್ಥನೆಯನ್ನು ಮನ್ನಿಸಿ, ದಯವಾಡಿ ಮನೆಗೆ ಹಿಂತಿರುಗಿ ಬನ್ನಿರಿ. ಇಲ್ಲವಾದರೆ, ಈ ಶರೀರದೊಡನೆ ಈ ದಾಸಿಯು ನಿಮಗೆ ತಿರುಗಿ ದೊರೆಯಲಾರಳು." ಎಂದು ತನ್ನ ಇತಿವೃತ್ತವನ್ನು ಅರುಹಿದಳು

ಆದರೆ, ಪಥಿಕನು ಮಾನವ ವರ್ಗದ ದುಃಖಗಳನ್ನು ವರ್ಣಿಸುತ್ತ ಆಕೆಯನ್ನು ತಿರಸ್ಕಾರ ದೃಷ್ಟಿಯಿಂದ ನೋಡಿದನು. ಮಾನವ ವರ್ಗಕ್ಕಿಂತಲೂ ವನವೇ ಸುಖದಾಯಕವೆಂಬುದನ್ನು ತುಲನಾತ್ಮಕವಾಗಿ ತೋರಿಸಿ ಕೊಟ್ಟನು. ಆ ನಾರಿಯನ್ನು ಅಲ್ಲಿಯೇ—ಸಮುದ್ರ ದಂಡೆಯಲ್ಲಿಯೇ ತೊರೆದು, ತಾನು ಕಾಡನ್ನು ಹೊಕ್ಕು ಮರೆಯಾದನು. ರಮಣಿಯು ಮೂರ್ಛಾಹತಳಾಗಿ ಅಲ್ಲಿಯೇ ಮೂರ್ತಿಯಂತೆ ನಿಂತುಬಿಟ್ಟಳು.

ಪಥಿಕ ಮತ್ತು ಆತನ ಪತ್ನಿಯರ ಸಮ್ಮಿಲನವಾದ ಸ್ಥಳಕ್ಕೆ ಸಮೀಪವಾಗಿಯೇ ಒರ್ವ ಸಾಧು ಕೂತಿದ್ದನು. ಆತನು ಸತಿ ಪತಿಯರ ಮಾತುಕತೆಯನ್ನು ಗಮನವಿಟ್ಟು ಆಲಿಸಿದ್ದನು. ಪಥಿಕನು ಹೊರಟು ಹೋಗ ತೊಡಗಿದಾಗ, ಅವನು ಮುಂದೆ ಬಂದು ಪಥಿಕನನ್ನು ಭೇಟಿಯಾಗಿ ಅದೇ ಸ್ಥಳದಲ್ಲಿ ಅರ್ಧ ರಾತ್ರಿ ಸಮಯಕ್ಕೆ ಎದುರ್ಗೊಳ್ಳುವ ವಚನವನ್ನು ಕೇಗದು ಕೊಂಡನು.

ಮಧ್ಯರಾತ್ರಿಯ ವೇಳೆಯಲ್ಲಿ ಪಥಿಕನು ಸಾಧುವಿನೊಡನೆ ಅದೇ ಸ್ಥಳದಲ್ಲಿ ಕೂಡಿದನು. ಸಾಧುವು ಅವನಿಗೆ ಕರ್ಮಮಯ ಜಗತ್ತಿನ ಗೂಢ ರಹಸ್ಯವನ್ನು ತಿಳಿಸಿ, ಕರ್ಮವೇ ಮನುಷ್ಯ ಜೀವನದ ಪ್ರಧಾನ ಲಕ್ಷ್ಯವೆಂದು ಹೇಳಿದನು ಅತನು ಪಥಿಕನ ವಿಚಾರಗಳನ್ನು ಅಲ್ಲಗಳೆದು ಮಾನವ ಜಗತ್ತಿನಲ್ಲಿ ಕಾಲಿಟ್ಟು, ಕರ್ಮ ಪೂರೈಸುವಂತೆ ಸೂಚಿಸಿದನು. "ಮನುಷ್ಯನೊಡನೆ ಪೌರುಷ, ಸಾಹಸ, ಸತ್ಯ, ನ್ಯಾಯ, ಶ್ರದ್ಧೆ, ಕರುಣೆ, ಉದಾರತೆ, ಸುಶೀಲತೆ, ರಜ್ಜನತೆ, ಧರ್ಮ ಮತ್ತು ಕ್ಷಮೆ ಮೊದಲಾದ ಗುಣಗಳನ್ನು ಪರಮಾತ್ಮನು ಕೊಟ್ಟಿದ್ದಾನೆ; ಆವಶ್ಯಕತೆ ಕಂಡಿಸಿಕೊಂಡಾಗ ಮಾತ್ರ ಇವುಗಳನ್ನು ಮಾನವನು ಉಪಯೋಗಿಸಬೇಕೆಂದಾತನನ್ನೊಡನೆ ಅವನ್ನಿಟ್ಟಿದ್ದಾನೆ; ನೀನು ಈ ಧರ್ಮವನ್ನು ತ್ಯಜಿಸಿ, ಮನುಷ್ಯನಾದುದಿಂದ ದೂರದಲ್ಲಿ-ಈ ಕಾಡಿನಲ್ಲಿ-ಓಡಿ ಆಶ್ರಯ ಪಡೆದುಕೊಳ್ಳುತ್ತೀಯ! ನೀನು ಪರಮಾತ್ಮನಿಗೆ ಮಹಾಪರಾಧಿಯಾಗುವೆನಿಗಿದೆ. ನೀನು ಮಾನವ ಸಮಾಜಕ್ಕೆಯೋಗಿಬದುಕು; ನಿನ್ನ ಗುಣಗಳಲ್ಲಿ ಯಾವುದು ಆವಶ್ಯಕವೋ ಅವನ್ನು ಅಲ್ಲಿ ಉಪಯೋಗಿಸು" ಎಂದು ತಿಳಿಹೇಳಿದನು.

ಸಾಧುವು ಉಪದೇಶಿಸಿ, ಅಲ್ಲಂದೆದ್ದು ತನ್ನ ದಾರಿ ಹಿಡಿದನು

(ಕ್ರಮಶಃ)

(ಸಾಧಾರ)

—ಗೋರಾ, ಉಡುಪಿ.

ಇತಿಹಾಸ

ಪ್ರಾಚೀನ ಭಾರತವು ಪಂಚಾಯತು ರಾಜ್ಯಗಳ ತೊಂಗಲಾಗಿ ಇತ್ತು

ನಮ್ಮ ಗ್ರಾಮ ರಾಜ್ಯದ ಕಲ್ಪನೆಗೆ ಅವುಗಳ ಇತಿಹಾಸ ಸಾರವನ್ನೂ ಬೆರೆಸಬಾರದೇಕೆ?

ಗಂಗಾ, ಯಮುನಾ, ಗೋದಾವರಿ, ಕಾವೇರಿ ಮೊದಲಾದ ಸರಸ ಪವಿತ್ರವಾದ ನದೀ ನಾಲೆಗಳು ಪ್ರವಹಿಸುತ್ತಿರುವ, ಋಷಿಭೂಮಿಗಳ ತಪೋಭೂಮಿಯಾಗಿದ್ದ ರಾಮ, ಕೃಷ್ಣ ಮೊದಲಾದ ರೂಪದಲ್ಲಿ ಪರಮಾತ್ಮನು ಅವತರಿಸಿರುವ, ವಾಸಿಗಳ ವಾಸವನ್ನು ವಿನಾಶಪಡಿಸಿ, ಭೂಭಾರವನ್ನು ದೂರಮಾಡಿದ ದೇವ ದೇವತೆಗಳ ನೆಲೆವೀಡಾದ ಭಾರತ ವರ್ಷವು ಕಾಲದೇವನ ಕುದೃಷ್ಟಿಯಿಂದ ಅಧಪತನದ ಹೃದದಲ್ಲಿ ದುಮುಕಿಬಿಟ್ಟಿತು. ಪರಾಧೀನತೆಯ ಸಂಕೋಲೆಗಳ ಬಂಧನದಿಂದ. ಭಾರತೀಯರು ಅವಿದ್ಯೆ ಹಾಗೂ ದರಿದ್ರತೆಯನ್ನಷ್ಟಿಕೊಂಡು, ತಮ್ಮ ಸಂಸ್ಕೃತಿಯನ್ನು ಪರಿತ್ಯಜಿಸಿಬಿಟ್ಟರು. ಇಂತಹ ಸಮಯದಲ್ಲಿ ಪರಾಧೀನತೆಯ ಬೇಡಿಯನ್ನು ಕಡಿದೊಗೆದು, ಸ್ವತಂತ್ರ ವಾಯುಮಂಡಲದಲ್ಲಿ ವಿಚರಿಸುವ ಅವಸರವನ್ನು ಕಲ್ಪಿಸಿಕೊಟ್ಟ ಮಹಾತ್ಮಾ ಗಾಂಧಿಯವರ ಅವಿರ್ಭಾವವಾಯಿತು. ಭಾರತವು ಗ್ರಾಮಗಳಲ್ಲಿಯೇ ರೂಢಿಸಲಾಗಿದೆ; ನಮ್ಮ ಪ್ರಾಚೀನ ಸಂಸ್ಕೃತಿಯು ಗ್ರಾಮಗಳಲ್ಲಿಯೇ ಕೇಂದ್ರೀಕೃತವಾಗಿದೆಯೆನ್ನುತಿದ್ದರು. ಗಾಂಧೀಜಿ. ಭಾರತದ ಏಳು ಲಕ್ಷ ಗ್ರಾಮಗಳು ಉನ್ನತ, ಸ್ವಾವಲಂಬಿ ಹಾಗೂ ಸಮೃದ್ಧ ಶಾಲಿಗಳಾಗದ ಪರೆಗೆ, ಅಜ್ಞಾನ ಅವಿದ್ಯಾ. ಅಂಧಕಾರ, ದರಿದ್ರತಾ ದಾನವ ವತ್ತು ಉಚ್ಚ ನೀಚ ಭೇದಭಾವ ಹೋಗುವುದಿಲ್ಲ; ಸ್ವಾತಂತ್ರ್ಯ ಇಲ್ಲದೇ ಸ್ವರಾಜ್ಯಕ್ಕೆ ಅರ್ಥ ವರೆಗೆ ಯಾವ ಬೆಲೆಯೂ ಇಲ್ಲ. ವಸ್ತುತಃ ಇಂದು ನಮ್ಮ ಗ್ರಾಮಗಳು ನಿಂಕ ಸದೃಶವಾಗಿವೆ ಅಶುಚಿತ್ವ, ಅಶಿಕ್ಷಣ, ದರಿದ್ರತೆ, ಭೇದಭಾವ ಮತ್ತು ಪಾರಸ್ಪರಿಕ ಕಲಹಗಳ ಮೂರ್ತಿಯಾಗಿವೆ ಗ್ರಾಮಜೀವನವೆಂಬುದು ಶಪ್ತಜೀವನ ಸಮವಾಗಿವೆ. ಅದರಲ್ಲಿ ಸರಸತೆಯಾಗಲೀ ಉತ್ಸಾಹವಾಗಲೀ ಉಳಿದಿಲ್ಲ ಗ್ರಾಮಗಳ ಉನ್ನತಿಯಲ್ಲಿಯೇ ನಮ್ಮ ದೇಶದ ಉನ್ನತಿಯು ಸುಡುಗಿಕೊಂಡಿದೆ. ಸ್ವಾವಲಂಬಿ, ಸಮೃದ್ಧ ಹಾಗೂ ಸ್ವಾವಲಂಬೀ ಸಮಾಜವೇ ಉತ್ತಮ ಸತ್ಯ ಪ್ರಜಾಸ್ವಾಭಿತ್ವದ ಪ್ರತೀಕವಾಗಿದೆ. ನಿಜ ಲೋಕತಂತ್ರ ಅಥವಾ ಪ್ರಜಾಸ್ವಾಭಿತ್ವ ಸ್ಥಾಪನೆಗೆ ಪಂಚಾಯತ ರಾಜ್ಯವೇ ಆವಶ್ಯಕವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಸಾಧೀ, ಸಮೃದ್ಧ ಹಾಗೂ ಸ್ವಾವಲಂಬೀ ಗ್ರಾಮ ಹಾಗೂ ಗ್ರಾಮ ಪ್ರಜೆಗಳು; ನಿರ್ಧನ—ಧನಿಕ, ಸ್ತ್ರೀ—ಪುರುಷ, ಕರಿಯ—ಬಿಳಿಯ, ಜಾತಿ—ಧರ್ಮಗಳ ಕಾರಣದಿಂದ ಅಸಮಾನತೆಯಿಲ್ಲದಿರುವುದು; ಎಲ್ಲ ಭೂಮಿಯೂ ಅಧಿಕಾರವೂ ಜನತೆಯ ಕೈಯಲ್ಲಿರುವುದು; ಶೀಘ್ರ, ಶುದ್ಧ ನ್ಯಾಯ ದೊರೆಯುವುದು; ಉಪಾಸನೆ, ವಾಕ್ ಮತ್ತು ಲೇಖನ ಸ್ವಾತಂತ್ರ್ಯವಿರುವುದು ಮತ್ತು ಇವುಗಳ ಆಧಾರದಿಂದ ಸ್ವೇಚ್ಛಾಸಂಯಮ ಮತ್ತು ಧರ್ಮಪಾಲನೆ—ಇವುಗಳು ಇರುವ ಪ್ರಜಾಸ್ವಾಭುತ್ವವನ್ನು ಬಾಪೂಜಿಯವರು ಪಂಚಾಯತ ರಾಜ್ಯವೆಂದು ಹೇಳುತ್ತಿದ್ದರು.

ಭಾರತದ ಇತಿಹಾಸ ಪುಟಗಳನ್ನು ನಾವು ತಿರುಗಿಸಿದರೆ, ಪ್ರಾಚೀನ ಭಾರತದಲ್ಲಿ ಪಂಚಾಯತ ರಾಜ್ಯಗಳ ಪ್ರತಿರೂಪವಾಗಿದ್ದ ಎಳೆಯ ಪ್ರಜಾತಂತ್ರಗಳನ್ನು ಕಾಣಬಹುದು. ಜನತೆಯ ನೈತಿಕ, ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜನೈತಿಕ ಸ್ತರಗಳನ್ನು ಉನ್ನತೀಕರಿಸುವುದೇ ಅವುಗಳ ಉದ್ದೇಶವಾಗಿತ್ತು. ಅವುಗಳಲ್ಲಿ ಜೀವನದ ವಿವಿಧ ಸಮಸ್ಯಾಸಂಬಂಧಿ ಅಧಿಕಾರವಿತ್ತು; ಅವು ಶಾಸನವಾತ್ರವಲ್ಲದೇ ಶಿಕ್ಷಣ ಮತ್ತು ನ್ಯಾಯ ಸಂಬಂಧಿ ಕೆಲಸಗಳನ್ನೂ ಮಾಡುತಿದ್ದುವು ಈ ಪಂಚಾಯತುಗಳ ಆಡಳಿತೆಯು ಹೆಚ್ಚಾಗಿ ಅಲಿಖಿತ ನಿಯಮಗಳಿಗನುಸಾರವಾಗಿಯೇ ನಡೆಯುತ್ತಿತ್ತು. ಚಿಕಿತ್ಸೆ, ಶಿಕ್ಷಣ ಉದ್ಯೋಗ ನ್ಯಾಯ, ಸಾರ್ವಜನಿಕ ಭವನ, ಮುಂದೆ

(೯ನೇ ಪುಟ ನೋಡಿರಿ)

ನಿಮಗಾಗಿ ನಮ್ಮಲ್ಲಿ ನೂರಾರು ನುರಿತ ಕಾರಕೂನರಿದ್ದಾರೆ!

"ಕೊರ್ಪೊರೇಶನ್" ಬೇಂಕಿನಲ್ಲಿ ನೀವು ಒಂದು ಹಣಖಾತೆಯನ್ನು ತೆರೆದಿರೆಂದರೆ, ನಮ್ಮ ಬೇಂಕಿನ ಕಾರಕೂನರು ನಿಮ್ಮದೇ ಕಾರಕೂನರಾದಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹಣದ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ ಭಾರತ)

(ಮೈಸೂರು ರಾಜ್ಯದಲ್ಲಿ ಪ್ರಧಾನ ಕಚೇರಿಗಳನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಹಳೆಯದು.)

ಶೈಕ್ಷಣಿಕ ಕ್ಷೇತ್ರ

ಮೈಸೂರು ರಾಜ್ಯದಲ್ಲಿ ಉಚಿತ ಅನಿವಾರ್ಯ ಶಿಕ್ಷಣ

ಮಾನ್ಯ ವಿದ್ಯಾಮಂತ್ರಿಗಳಿಂದ ಸರಕಾರದ ನಿರ್ಧಾರ ಪ್ರಕಟಣೆ

ಮೈಸೂರಿನ ವಿದ್ಯಾಮಂತ್ರಿಶ್ರೀ ಅಣ್ಣಾ ರಾವ್ ಗುರುಮುಖಿಯವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ಸರಕಾರವು ದ್ವಿತೀಯ ಯೋಜನಾವಧಿಯಲ್ಲಿ ೬ರಿಂದ ೧೧ ವರ್ಷ ಪ್ರಾಯದೊಳಗಿನ ಎಲ್ಲ ಮಕ್ಕಳಿಗೆ ನಿಶ್ಶುಲ್ಕ ವಿದ್ಯಾಭ್ಯಾಸವನ್ನೀಯುವ ಮತ್ತು ಸಾರ್ವತ್ರಿಕ ಶಿಕ್ಷಣ ಕ್ರಮವನ್ನು ವ್ಯವಹಾರಕ್ಕೆ ತರುವ ನಿರ್ಧಾರವನ್ನು ಮಾಡಿರುವುದೆಂದು ತಿಳಿಸಿದರು ರಾಜ್ಯಸರಕಾರವು ೧೦ ವರ್ಷದೊಳಗೆ ೧೪ ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಅನಿವಾರ್ಯ ಶಿಕ್ಷಣವನ್ನೀಯುವ ಸೌಕರ್ಯವೊದಗಿಸಬೇಕೆಂಬ ಸಂವಿಧಾನದ ತತ್ವಕ್ಕನುಗುಣವಾಗಿ ಈ ನಿರ್ಧಾರವನ್ನು ಮಾಡಲಾಯಿತು.

೧೯೫೮ರಲ್ಲಿ ರಾಜ್ಯದ ಜನ ಸಂಖ್ಯೆಯು ೨೨೧ ಲಕ್ಷವಿದ್ದು ಇವರಲ್ಲಿ ೬ ರಿಂದ ೧೪ ವರ್ಷ ಪ್ರಾಯದವರು ಸೇರಿದಂತೆ, ಅಂದರೆ, ಸಾಧಾರಣ ೪೪೨ ಲಕ್ಷ ವಿರುವರು. ಈಗ ೧೧ರಿಂದ ೮ನೇ ತರಗತಿಯ ವರೆಗೆ ವಿವಿಧ ಶಾಲೆಗಳಲ್ಲಿ ದಾಖಲಿರುವವರು ೧೯.೭ ಲಕ್ಷ. ಹೀಗಾಗಿ ೩೪ ಲಕ್ಷ ಹೊಸ ಮಕ್ಕಳನ್ನು ದ್ವಿತೀಯ ಯೋಜನಾಂತ್ಯದೊಳಗೆ ಶಾಲೆಗಳಿಗೆ ದಾಖಲು ಮಾಡಬೇಕಾಗಿದೆ. ರಾಜ್ಯ ಸರಕಾರವು ೬ರಿಂದ ೧೧ ವರ್ಷದ ಮಕ್ಕಳಿಗೆ ದ್ವಿತೀಯ ಯೋಜನಾವಧಿಯಲ್ಲೂ ೧೧ರಿಂದ ೧೩ ವರ್ಷಗಳ ಮಕ್ಕಳಿಗೆ ತೃತೀಯ ಯೋಜನಾವಧಿಯಲ್ಲೂ ಉಚಿತ ಹಾಗೂ ಸಾರ್ವತ್ರಿಕ ಶಿಕ್ಷಣವನ್ನು ಕೊಡುವುದು.

ಇದಕ್ಕಾಗಿ ಒಂದು ವೈಲು ತ್ರಿಜ್ಯದೊಳಗೆ ಅಥವಾ ೩೦೦ ಜನಸಂಖ್ಯೆಯಿರುವ ಹಳ್ಳಿಯಲ್ಲಿ ಒಂದೊಂದು ಏಕೋಪಾಧ್ಯಾಯ ಶಾಲೆಯಿರುವಂತೆ ಮಾಡಲಾಗುವುದು. ಈ ಜನಸಂಖ್ಯೆಯು ೬೦೦ ಆದರೆ ಆ ಶಾಲೆಗೆ ಇಬ್ಬರು ಅಧ್ಯಾಪಕರನ್ನೀಯಲಾಗುವುದು ಮಲೆನಾಡು ಪ್ರದೇಶದಲ್ಲಿ ಮಾತ್ರ ಈ ಜನಸಂಖ್ಯೆಯನ್ನು ೨೦೦ರಿಂದು ಇಟ್ಟುಕೊಳ್ಳಲಾಗುವುದು ಈ ಲೆಕ್ಕದಂತೆ ಮೈಸೂರು ಸರಕಾರವು ೨೫೭೭ ಪೂರಕ ಶಾಲೆಗಳನ್ನು ತೆರೆಯಬೇಕಾಗುವುದು.

ಉಚ್ಚ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲಾ ವಿದ್ಯಾಭ್ಯಾಸವೂ ಸರಕಾರದ ಕರ್ತವ್ಯವಾಗಿದೆ. ಉಚಿತ ಮತ್ತು ಸಾರ್ವತ್ರಿಕ ವಿದ್ಯಾಭ್ಯಾಸ ಯೋಜನೆಯನ್ನು ೧೧ ರಿಂದ ೧೩ ವರ್ಷಗಳ ಮಕ್ಕಳಿಗೆ ತೃತೀಯ ಯೋಜನಾಂತ್ಯದೊಳಗೆ ಒದಗಿಸಲಾಗುವುದು. ಸದ್ಯ, ಹಳೆ ಮೈಸೂರು ಮತ್ತು ಕೊಡಗುಗಳಲ್ಲಿ ಎನೆ ತರಗತಿಯ ವರೆಗೆ ಉಚಿತ ಶಿಕ್ಷಣವನ್ನೀಯಲಾಗುತ್ತಿದೆ. ಹೈದರಬಾದ, ಬೊಂಬಾಯಿ ಕರ್ನಾಟಕ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ೫ನೆ ತರಗತಿಯಿಂದ ಶುಲ್ಕವನ್ನು ಹೊರಿಸಲಾಗುತ್ತಿದೆ (ಸದ್ಯ, ದಕ್ಷಿಣ ಕನ್ನಡದ ಶಾಲೆಗಳಲ್ಲಿನ ಈ ಶುಲ್ಕವನ್ನು ಸರಕಾರವೇ ಶಾಲೆಯ ಆಡಳಿತದಾರರಿಗೆ ಕೊಡುತ್ತಿರುವುದರಿಂದ, ವಿದ್ಯಾರ್ಥಿಗಳಿಗೆ ಶುಲ್ಕ ತೆರಬೇಕಾಗಿಲ್ಲ ಆದರೆ, ಹೆತ್ತವರ ಯಾ ರಕ್ಷಕರ ಆದಾಯವು ವರ್ಷಕ್ಕೆ ೧,೨೦೦ ರೂಪಾಯಿಗಳಿಗಿಂತ ಹೆಚ್ಚಿರಬಾರದು.—ಸಂ. ನ.)

ಇತ್ತೀಚೆಗೆ ನಡೆಸಿದ ಪರೀಕ್ಷಣೆಯಂತೆ ಮೂರು ವೈಲು ತ್ರಿಜ್ಯದೊಳಗೆ ಒಂದು ಮಾಧ್ಯಮಿಕ ಶಾಲೆಯಿರಬೇಕಾಗುವುದೆ. ಈ ತತ್ವದಂತೆ ೮೦೦ ಶಾಲೆಗಳನ್ನು ಮಾಧ್ಯಮಿಕ ಶಾಲೆಗಳಾಗಿ ಉನ್ನತೀಕರಿಸಬೇಕಾಗಿದೆ. ಹೊಸ ಯೋಜನೆಯಂತೆ, ೧೯ ಸಾವಿರ ಅಧ್ಯಾಪಕರನ್ನೂ ೨೨೬ ಪರೀಕ್ಷಾಧಿಕಾರಿಗಳನ್ನೂ ಹೊಸತಾಗಿ ನೇಮಿಸಬೇಕಾಗುತ್ತದೆ. ಇದಕ್ಕಾಗಿ ೧೭೬ ಲಕ್ಷ ಆವೃತ್ತವೆಚ್ಚವೂ ೪೦೬ ಲಕ್ಷ ಅನಾವೃತ್ತ ವೆಚ್ಚವೂ ತಗಲುತ್ತದೆ. ೧೯೫೭-೫೮ರಲ್ಲಿ ರಾಜ್ಯದಲ್ಲಿ ಒಟ್ಟು ೩೩,೧೮೫ ಪ್ರಾಥಮಿಕ ಶಾಲೆಗಳಾಗುತ್ತವಲ್ಲದೇ ೧೫೮—೫೯ರಲ್ಲಿ ಮತ್ತು ೩೮೦ ಶಾಲೆಗಳು ಪ್ರಾರಂಭವಾಗುವುವು.

೬ರಿಂದ ೧೧ರ ವರೆಗಿನ ಮಕ್ಕಳಿಗೆ ಶಿಕ್ಷಣಕೊಡುವ ಹೊಸ ಯೋಜನೆಯು ಗ್ರಾಂಟ್-ಇನ್-ಎಡ್ ತಳಹದಿಯಲ್ಲಿನ ಖಾಸಗಿ ಶಾಲೆಗಳಿಗೆ ಅನ್ವಯವಾಗುವುದಿಲ್ಲ. ಸರಕಾರದ ಸಹಾಯಧನವು ಅವುಗಳಿಗೆ ಮುಂದಕ್ಕೂ ದೊರೆಯುವುದು. ಖಾಸಗಿ ಕ್ಷೇತ್ರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅವಕಾಶವಿದೆ; ಆದರೆ, ೫೯—೬೦ರಿಂದ ಖಾಸಗಿ ಶಾಲೆಗಳು ಶುಲ್ಕವನ್ನು ಮಾತ್ರ ಹೊರಿಸುವಂತಿಲ್ಲ.

ರಾಜ್ಯ ಸರಕಾರದ ಸಹಾಯದಿಂದ ಪ್ರಾಥ ಶಾಲೆಗಳನ್ನು ತೆರೆಯಲು ಖಾಸಗಿ ಕ್ಷೇತ್ರವನ್ನು ಪ್ರೋತ್ಸಾಹಿಸಲಾಗುವುದು. ಆದರೂ ಈಗ ಪ್ರಾಥ ಶಾಲೆಗಳಿಲ್ಲದ ಪ್ರತಿಯೊಂದು ತಾಲೂಕಿನಲ್ಲಿಯೂ ಸರಕಾರವು ತನ್ನದೇ ಶಾಲೆಯನ್ನು ತೆರೆಯುವುದು.

ಆದರೆ, ರಾಜ್ಯ ಸರಕಾರವು ಕಲೆ, ವಿಜ್ಞಾನ, ನ್ಯಾಯಶಾಸ್ತ್ರ ಅಥವಾ ಅಂಕಶಾಸ್ತ್ರಾಂತ್ರಿಕ ಕಾಲೇಜುಗಳನ್ನು ತೆರೆಯದೆ, ಅವನ್ನು ಪ್ರಾರಂಭಿಸಲು ಖಾಸಗಿ ವಿಭಾಗವು ಮುಂದೆ ಬರುವಂತೆ ಮಾಡುವುದು.

೫೯—೬೦ರಿಂದ ಅಖಂಡ ರಾಜ್ಯದಲ್ಲಿನ ಹೊಸ ಶಾಲಾ ಶುಲ್ಕವನ್ನು ಸರಕಾರಗಾಗಿ ರೂಪಾಯಿ 72,950 ಹೆಚ್ಚುವಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಂತೆ ಪ್ರಾರಂಭಿಸಿದ ಕೆಲಸಗಳಿಗೆ ರೂಪಾಯಿ 60,500 ಖರ್ಚಾಗಿರುತ್ತದೆ ಹೌಡಲ ಸಂಕದ ಕೆಲಸವು ಈ ವರ್ಷ ಪೂರ್ತಿಗೊಂಡಿದೆ.

ಪ್ರಾಥಮಿಕ ಶಿಕ್ಷಣ: ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಅಭಿವೃದ್ಧಿಯಾಗಿದೆ. ವರ್ಷಾಂತ್ಯದಲ್ಲಿ 96 ಹಾಯರ್ ಎಲಿಮೆಂಟರಿ ಶಾಲೆಗಳೂ 520 ಎಲಿಮೆಂಟರಿ ಶಾಲೆಗಳೂ ಇದ್ದು ಒಟ್ಟು 616 ಶಾಲೆಗಳೆ ಈ ಶಾಲೆಗಳಲ್ಲಿ ಕಲಿಯುವ ಮಕ್ಕಳ ಸಂಖ್ಯೆಯೂ ವರದಿ ವರ್ಷದಲ್ಲಿ 61,560 ರಿಂದ 67,997ಕ್ಕೆ ಏರಿದೆ. ವಿದ್ಯಾರ್ಥಿಗಳ ಹಾಜರಿಯೂ ಹೆಚ್ಚಾಗಿದೆ. ಜಿಲ್ಲಾ ಬೋರ್ಡು ರೂಪಾಯಿ 1,,,89 ಹೆಚ್ಚದಿಂದ ಶಾಲೆಗಳಿಗೆ ಕುರ್ಚಿ,ಮೇಜು ಬೆಂಚು, ಕವಾಟು ಮುಂತಾದ ಸಾಧನಗಳನ್ನೊದಗಿಸಿದೆ. 26 ಶಾಲಾ ಕಟ್ಟಡಗಳನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗನುಗುಣವಾಗಿ ಕಟ್ಟಲಾಗಿದೆ. ಇವುಗಳಲ್ಲದೆ ಗ್ರಾಮಸ್ಥರ, ಶಾಲಾ ಸಮಿತಿಗಳ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಸಹಾಯದಿಂದ ಹಲವು ಮೂತ್ರದ ದೊಡ್ಡಿಗಳನ್ನೂ, ಪಾಯಿಖಾನೆಗಳನ್ನೂ ಕಟ್ಟಿಸಲಾಗಿದೆ.

ಸೆಕೆಂಡರೀ ಶಿಕ್ಷಣ: ಸೆಕೆಂಡರೀ ಶಿಕ್ಷಣ ವಿಭಾಗದಲ್ಲಿ ಜಿಲ್ಲಾ ಬೋರ್ಡ 2 ಹೊಸ ಹೈಸ್ಕೂಲುಗಳನ್ನು ತೆರೆಯುತ್ತದೆ ಉಪ್ಪಿನಂಗಡಿ ಮತ್ತು ಬೆಳ್ತಂಗಡಿಗಳಲ್ಲಿನ ಎರಡು ಮಿಡ್ಲ್ ಸ್ಕೂಲ ಗಳನ್ನು ಹೈಸ್ಕೂಲುಗಳಾಗಿ ಮಾಡಿರುತ್ತದೆ. ಹೀಗೆ ಈಗ ಒಟ್ಟು 20 ಹೈಸ್ಕೂಲುಗಳಿವೆ. ಹೆಜಮಾಡಿಯ ಬೋರ್ಡ್ ಹೈಸ್ಕೂಲನ್ನು ಕೃಷಿ ಪ್ರಧಾನ ವಿಷಯವಾದ ವಿವಿಧೋದ್ದೇಶ ಶಾಲೆಯನ್ನಾಗಿ ಮಾಡಿರುತ್ತದೆ. ಕುಂದಾಪುರ, ಉಡುಪಿ, ಕಾರ್ಕಳಗಳ ಹೈಸ್ಕೂಲುಗಳನ್ನು ಹಾಯರ್ ಸೆಕೆಂಡರೀ ಶಾಲೆಗಳನ್ನಾಗಿ ಮಾಡಲು ಸರಕಾರವು ಮಂಜೂರಾತಿ ಕೊಟ್ಟಿರುತ್ತದೆ.

(ಉಳಿದ ಮಟ್ಟ ನೋಡಿರಿ)

ಆಡಳಿತ ವರದಿ

ದಕ್ಷಿಣ ಕನ್ನಡದ ಜಿಲ್ಲಾ ಬೋರ್ಡಿನ ವರದಿಯು ಪ್ರಗತಿದಾಯಕವಿದೆ;

ಆರ್ಥಿಕ ಸ್ಥಿತಿಯು ಮಾತ್ರ ಸುದೃಢವಾಗಿಲ್ಲ

ಸಾರಿಗೆ ಸಂಪರ್ಕ: ಸಾರಿಗೆಗಾಗಿ ಜಿಲ್ಲಾ ಬೋರ್ಡು ರೂಪಾಯಿ 2,84,842 ನ್ನು ಖರ್ಚು ಮಾಡಿರುತ್ತದೆ. ವರದಿ ವರ್ಷದಲ್ಲಿ ದುರಸ್ತಿಯ ವಿಶೇಷ ಕೆಲಸಗಳು ನಿಶ್ಚಯಿಸಿದೆ. ಎನೆನೆ ತರಗತಿಯ ವರೆಗಿನ ಪ್ರಾಥಮಿಕ ಶಿಕ್ಷಣವು ೫ನೆ ಜೂನಿನಿಂದ ಉಚಿತವಾಗುವುದು. ಆದರೆ, ಈ ತರಗತಿಯ ವಿದ್ಯಾರ್ಥಿಗಳು ವರ್ಷಕ್ಕೆ ೫೦ ನ. ಪೈ. ವೈದ್ಯಕೀಯ ಪರೀಕ್ಷಣ ಶುಲ್ಕವೆಂದೂ ೭೫ ನ. ಪೈ. ಶೈಕ್ಷಣಿಕ ಚಿತ್ರ ಶುಲ್ಕವಾಗಿಯೂ ತೆರಬೇಕಾಗುವುದು. ಇದರಿಂದ ೭ನೆ ತರಗತಿಯವರು ಕ್ರೀಡಾಂಗಣ ಮತ್ತು ವಾಚನಾಲಯ ಸೌಕರ್ಯಕ್ಕಾಗಿ ರೂ. ೩ರನ್ನು ಪ್ರತಿವರ್ಷ ಕೊಡಬೇಕಾಗುವುದು, ಉಚ್ಚ ಪ್ರಾಥ ಶಾಲೆಗಳಲ್ಲಿಂದ ೧೧ನೆ ತರಗತಿ ವರೆಗಿನ ಶುಲ್ಕವನ್ನೂ ಸರಕಾರವು ಈಗ ಸಾರ್ವತ್ರಿಕವಾಗಿ ನಿಶ್ಚಯಿಸಿದೆ. ೧೧ನೆ ತರಗತಿಗಳಿಗೆ ರೂ ೪.೫೦, ೧೦ ತರಗತಿಗೆ ರೂ. ೫, ಮತ್ತು ೧೧ನೆ ತರಗತಿಗೆ ರೂ. ೬ ಮಾಸಿಕ ಶುಲ್ಕವಿದ್ದು, ಎಂಟು ತಿಂಗಳು ವರೂಲು ಮಾಡಲಾಗುವುದು. ಕ್ರೀಡಾಂಗಣ, ವಾಚನಾಲಯ, ವೈದ್ಯಕೀಯ ಪರೀಕ್ಷೆ, ಪ್ರಯೋಗಶಾಲೆ, ಮತ್ತು ಶೈಕ್ಷಣಿಕ ಚಿತ್ರಗಳ ಶುಲ್ಕವಾಗಿ ಶಿಕ್ಷಣ ಶುಲ್ಕವಲ್ಲದೇ ವರ್ಷಕ್ಕೆ ರೂ ೯ನ್ನೂ ವಸೂಲು ಕೊಡಬೇಕಾಗುವುದು.

ಈ ಸುಧಾರಿತ ಶುಲ್ಕಸ್ತರವು ೬ ವರ್ಷಗಳ ಪ್ರಾಥಮಿಕ ಶಿಕ್ಷಣ ಮತ್ತು ೪ ವರ್ಷಗಳ ಪ್ರಾಥ ಶಿಕ್ಷಣಗಳನ್ನೊಳಗೊಂಡನೂತನ ವಿದ್ಯಾಪದ್ಧತಿಯು ವ್ಯವಹಾರಕ್ಕೆ ಬಂದಂದೇ ಈಚೆಗೆ ಬರಲಿರುವುದು (ಈಗಿನ ಯೋಜನೆಯಂತೆ, ಈ ನೂತನ ಶಿಕ್ಷಣ ಪದ್ಧತಿಯು ೫೫ರಿಂದ ವಿದ್ಯಾವರ್ಷದಾರಂಭದಿಂದ ಪ್ರಾರಂಭವಾಗಲಿರುವುದು —ಸಂ ನ.)

ವಿಶಾಲ ಮೈಸೂರು ರಾಜ್ಯದಲ್ಲಿ ವಿಸ್ತೃತ ಸೇವೆಗಾಗಿ

ನಮ್ಮ ಶೇಷಾದ್ರಿಪುರಂ ಶಾಖೆಯು

ಸೆಪ್ಟೆಂಬರ್ ೧೫ರಂದು ತೆರೆಯಲ್ಪಟ್ಟಿರುವುದು.

ಇನ್ನೂ ಎರಡು ಶಾಖೆಗಳು ಸದ್ಯದಲ್ಲಿಯೇ ತೆರೆಯಲ್ಪಡುವುವು.

ಕೊಪ್ಪ ಮತ್ತು ಗಂಗಾವತಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

THE CANARA INDUSTRIAL & BANKING SYNDICATE LTD.

ಪುತ್ತೂರು ಡಿ ಮುನ್ಸಿಫ್ ಕೋರ್ಟು

O S 170/1958.

ಶಿವಣ್ಣ ಗೌಡ — ಪಾದಿ

ಸಂಕಪ್ಪ ರೈ —ಪ್ರತಿವಾದಿ

ಸಂಕಪ್ಪ ರೈ ಬಿಳಿಂಜ ಕರಿಯಪ್ಪ ರೈಗಳ ಮಗ ದೇಲಂಪಾಡಿ, ಸಂಕಯ್ಯ ಬಾಬರ ಅಳಿಯ ಪುತ್ತೂರು ತಾಲ್ಲೂಕ್ ಕೊಳ್ತಿಗೆ ಗ್ರಾಮದ ಉರ್ಮಿ ಎಂದಲ್ಲಿ, ಪೋಸ್ಟು ದೇಲಂಪಾಡಿ (ದ. ಕ.)

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ

ನೀವು ವಾದಿಗೆ ತಾ. 26 6 1955ರಲ್ಲಿ ರೂಪಾಯಿ 1000/-ಕ್ಕೆ ಬರೆಕೊಟ್ಟ ಅಡವಿನ ಅಸಲು ಮತ್ತು ಬಡ್ಡಿ ಅಪೇಜುಗಳನ್ನು ಬರಮಾಡಿಕೊಳ್ಳುವರೇ ನಿಮ್ಮ ಮೇಲೆ ವಾದಿರು ಮಾಡಿದ ಮೇಲಿನ ದಾವೆಯು ತಾರೀಕು 29—9—58ಕ್ಕೆ ನಿಮ್ಮ ಹಾಜರಾತಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿನಸ ಹಾಜರಾಗಿ ಉದಾಪಿಸಕಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ದಾವೆಯನ್ನು ತೀರ್ವಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ

K R Chamayya,
Advocate for plff.

ಪುತ್ತೂರು 1 9—58.

ವಿಪತ್ತುಗಳು ಎದುರು ಬರುವಾಗ, ನಿರಾಶನಾಗದೆ, ಆ ಹೊತ್ತನ್ನು ತನ್ನ ಪರೀಕ್ಷಾ ಸಮಯವೆಂದು ತಿಳಿದುಕೊಂಡು, ಧೈರ್ಯಪೂರ್ವಕವಾಗಿ, ನಿರ್ಭೀತನಾಗಿ ಅವನ್ನು ಸಹಿಸಿಕೊಳ್ಳುವವನೇ ನಿಜವಾದ ಕರ್ಮಶೀಲನೆನಿಸಲು ಅರ್ಹನು.

NAVAYUGA

Founder:—

A. B. SHETTY,
Former Minister for Public Health Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ ೩೮	ಉಡುಪಿ ೨೫-೯-೧೯೫೮	ವಾರ ೪

ಸಾರ್ವತ್ರಿಕ ಉಚಿತ ಶಿಕ್ಷಣ

ಮೈಸೂರಿನ ಮಾನ್ಯ ವಿದ್ಯಾಮಂತ್ರಿಗಳು ಇತ್ತೀಚೆಗೆ ರಾಜ್ಯದಲ್ಲಿ ಉಚಿತ ಹಾಗೂ ಸಾರ್ವತ್ರಿಕ (ಯುನಿವರ್ಸಲ್) ಶಿಕ್ಷಣವನ್ನು ಈಯುವ ನಿರ್ಧಾರವನ್ನು ರಾಜ್ಯ ಮಂತ್ರಿಮಂಡಳಿಯು ಮಾಡಿರುವುದೆಂದು ತಿಳಿಸಿ, ಆ ಬಗ್ಗೆ ಸವಿವರವಾದ ಟೀಕೆಯೊಂದನ್ನು ಇತ್ತಿದ್ದಾರೆ. ಈ ಟೀಕೆಯ ಸಾರಾಂಶವನ್ನು ಇದೇ ಸಂಚಿಕೆಯ ಬೇರೆ ಸುಟದಲ್ಲಿ ಪ್ರಸಿದ್ಧಿಸಲಾಗಿದೆ. ಸರಕಾರದ ಮುಖ್ಯ ಕರ್ಮಗಳಲ್ಲಿ ದೇಶದ ಜನತೆಗೆ ಶಿಕ್ಷಣ ಸೌಕರ್ಯವನ್ನೊದಗಿಸುವುದೂ ಒಂದು. ಸಾಮಾನ್ಯವಾಗಿ ಶಾಲಾಪ್ರಾಯದ ಮಕ್ಕಳೆಲ್ಲರೂ ಶಾಲೆಯಲ್ಲಿ ಸೇರಿಕೊಂಡು ವಿದ್ಯಾಭ್ಯಾಸವನ್ನು ಪಡೆಯುವಂತೆ ಎಲ್ಲೆಲ್ಲಿಯೂ ವಿದ್ಯಾಲಯಗಳನ್ನು ತೆರೆಯುವ ಯೋಜನೆಯು ಈ ನಿರ್ಧಾರದಲ್ಲಿ ಇದೆ. ಸದ್ಯ, ದ್ವಿತೀಯ ಯೋಜನಾವಧಿಯಲ್ಲಿ ೬ ರಿಂದ ೧೧ ವರ್ಷದ ಮಕ್ಕಳಿಗೂ ತೃತೀಯ ಯೋಜನಾಂತ್ಯದೊಳಗೆ ೧೧ ರಿಂದ ೧೩ ವರ್ಷದವರಿಗೂ ಈ ಸೌಕರ್ಯವನ್ನು ಒದಗಿಸಲಾಗುವುದೆಂಬುದು ಸಂತೋಷದ ಸಂಗತಿಯಾಗಿದೆ. ಭಾರತದ ಸಂವಿಧಾನದಲ್ಲಿ ಹೆತ್ತು ವರ್ಷದೊಳಗೆ ೬ ರಿಂದ ೧೪ ವರ್ಷ ಪ್ರಾಯದ ಎಲ್ಲ ಮಕ್ಕಳಿಗೂ ಅನಿವಾರ್ಯ ಉಚಿತ ಶಿಕ್ಷಣ ಈಯಬೇಕೆಂದು ಒಪ್ಪಿಕೊಂಡಿರುವಾಗ, ಈಗಿನ ಮಂತ್ರಿಮಂಡಳಿಯು ಈ ನಿರ್ಧಾರವು ಶಾಸ್ತ್ರರೂಪಕ್ಕೆ ಬಂದರೆ, ಆಗ ಅಂಶತಃ ಮೂಲೋದ್ದೇಶವು ಸಫಲವಾಗುವುದು. ಈಗಾಗಲೇ ರಾಜ್ಯದ ಕೆಲವೆಡೆಗಳಲ್ಲಿ ಉಚಿತ ಪ್ರಾಥಮಿಕ ಶಿಕ್ಷಣವು ಕೊಡಲ್ಪಡುತಿದ್ದರೂ, ಅದನ್ನು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುವಕೆಲಸ ಬಾಕಿಯುಳಿದಿದ್ದು ಈ ಕಾರ್ಯವು ಮುಂದಿನ ಜೂನಿಗೆ ಮೊದಲಾಗುವುದೆಂಬುದೂ ಸ್ವಾಗತಾರ್ಹ

ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯುತ್ತಿರುವಂತೆ ಶಾಲೆಗಳಲ್ಲದ ಹಳ್ಳಿಗಳಲ್ಲಿ ಹೊಸತಾಗಿ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮವೂ ಪ್ರಶಂಸಾರ್ಹ. ಇಂತಹ ಕಾರ್ಯವು ಈ ಮೊಲೇ ಆಗಬೇಕಾಗಿತ್ತು; ಅದು ಮುಂದಿನ ಕೇವೇ ಸಮಯದಲ್ಲಿಯಾದರೂ ಪೂರ್ಣವಾದೀತೆಂದು ವಿಶ್ವಾಸಪಡಬಹುದು. ಸರಕಾರವು ಇಷ್ಟೊಂದು ಯೋಜನೆಯನ್ನು ತಯಾರಿಸುತ್ತಿರುವಾಗ ಖಡ್ಡಾಯ ಶಿಕ್ಷಣದ ಮಾತು ಮಾತ್ರ ಎತ್ತದಿರುವುದಕ್ಕೆ ಏನು ಕಾರಣವೋ ತಿಳಿಯದು. ಜನತೆಯು ಸಾಕ್ಷರಿತವಾಗುವುದು ಅಗತ್ಯವಿರುವಾಗ, ಮತ್ತು ಉಚಿತ; ಸಾರ್ವತ್ರಿಕವೆಂಬೆರಡು ವಿಶೇಷಣಗಳನ್ನು ಅದಕ್ಕೆ ಜೋಡಿಸಿರುವಾಗ, "ಅನಿವಾರ್ಯ" ಅಥವಾ "ಖಡ್ಡಾಯ" ಎಂಬುದೂ ಸೇರಿಸಲ್ಪಡದಿರುವುದು ಆಶ್ಚರ್ಯವೆನಿಸುತ್ತದೆ. ಹಾಗೆಂದು ಖಡ್ಡಾಯ ಶಿಕ್ಷಣ ಯೋಜನೆಯನ್ನು ಮಾಡುವಾಗ, ತುಂಬ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆಯೆಂಬುದೇನೋ ನಿಜ; ಆದರೆ, ದೇಶದ ಜನರ ಉನ್ನತಿಯನ್ನು ಬಯಸುವ ಸರಕಾರವೇ ಹಿಂದು ಮುಂದು ನೋಡುತ್ತ ಕುಳಿತರೆ, ಹೇಗೆ ಎಂಬುದನ್ನು ಉತ್ತರಿಸುವವರಾರು?

ಹೊಸ ಯೋಜನೆಯಂತೆ ಸರಕಾರವು ಏಕೋಪಾಧ್ಯಾಯ ಶಾಲೆಗಳನ್ನು ಸುಮಾರು ೩೦೦ ಜನರಿರುವ ಹಳ್ಳಿಗಳಲ್ಲಿ ತೆರೆಯಲು ನೊದಲು ಮಾಡುವುದು. ಈಗಾಗಲೇ ಕೇಂದ್ರ ಸರಕಾರದ ಯೋಜನೆಯಂತೆ ತೆರೆದ ಇಂತಹ ಶಾಲೆಗಳು ಹಲವಾರಿವೆ; ಆದರೆ ಇವುಗಳ ಕಾರ್ಯದಕ್ಷತೆಯ ಮಟ್ಟಿಗೆ ಭರವಸೆಯಿರುವುದು ಸಾಧ್ಯವೆ? ಹಿಂದೊಮ್ಮೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಇಂತಹ ಶಾಲೆಗಳನ್ನು ಪ್ರೋತ್ಸಾಹಿಸಿದ್ದು, ಅವುಗಳಿಂದ ಪ್ರಯೋಜನವಿಲ್ಲವೆಂದು ಕಂಡುಬಂದುದರಿಂದ, ಅವನ್ನು ಮುಚ್ಚಿತೆಂದು ಕೇಳುತ್ತೇವೆ. ಅಂತಹ ಶಾಲೆಯಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳು ಪಡೆಯಬಹುದಾದಷ್ಟು ಪ್ರಯೋಜನವನ್ನು ಪಡೆಯುವುದಿಲ್ಲವೆಂಬ ದೂರೂ ಅಲ್ಲಲ್ಲಿ ಕೇಳಿಬರುತ್ತಿವೆ. ಸಾರಿಗೆ ವ್ಯವಸ್ಥೆಯು ಸಮವಾಗಿದ್ದರೆ, ಕೊಂಚ ದೂರವಾದರೂ, ಉತ್ತಮ ಶಾಲೆಗಳಿಗೇನೇ ಮಕ್ಕಳನ್ನು ಕಳಿಸಬಹುದಿತ್ತು ಎನ್ನುವ ಹೆತ್ತವರೂ ಇದ್ದಾರೆ. ಈ ಮಾತು ನಿಜವಾದಾಗ, ನಮ್ಮ ಸರಕಾರಕ್ಕೆ ಶಾಲಾಪ್ರಾಯದ ಮಕ್ಕಳ ಹೆಸರು ಶಾಲೆಯ ಪ್ರವೇಶಪತ್ರಿಕೆಯಲ್ಲಿ ಸೇರಿದರೆ ಮಾತ್ರ ಸಾಕೆಂದಿದೆಯೆನ್ನಬೇಕೆ? ಅಥವಾ ನಿಜವಾದ ಅಕ್ಷರಾಭ್ಯಾಸಿಗಳಾಗಬೇಕೆಂದಿದೆಯೆನ್ನಬೇಕೆ? ಎಂಬುದು ತಿಳಿಯುವುದಿಲ್ಲ. ಅದೇನೇ ಇರಲಿ, ಎದುರು ಬರುವ ಬರಬಹುದಾದ ಗಂಡಾಂತರಗಳೆಲ್ಲವನ್ನೂ ಬಲಭೀಮನಂತೆ ಎದುರಿಸಿ, ಸಾರ್ವತ್ರಿಕ ಉಚಿತ ಹಾಗೂ ಖಡ್ಡಾಯ ಮತ್ತು ಯೋಗ್ಯ ಶಿಕ್ಷಣವನ್ನು ಮಕ್ಕಳಿಗೆ ಈಯುವುದು ಅತ್ಯಗತ್ಯ; ಈಗಾಗಲೇ ಹಿಂದುಳಿದವರ ನೆಲೆವೀಡಾದ ಮಾದರಿ ಮೈಸೂರು ಇನ್ನೂ ಇನ್ನೂ ಹಿಂದುಳಿಯದೆ ಮುಂದುವರಿದು ಅಭಿವೃದ್ಧಿಗೆ ಮಾದರಿ ಮೈಸೂರಾಗಿ ಪರಿಣಮಿಸಬೇಕು.

ಮಾನ್ಯ ವಿದ್ಯಾಮಂತ್ರಿಗಳು ದಿನಾಂಕ ೧೬ರಂದು ಹುಬ್ಬಳ್ಳಿಯಲ್ಲಿ ನೂತನತಾತ್ತ ರಾಜ್ಯದಲ್ಲಿಯ ಎಲ್ಲ ಪ್ರಾಥಮಿಕ ಶಾಲೆಗಳ ಆಡಳಿತವನ್ನು ಸರಕಾರವು ಸದ್ಯದಲ್ಲಿಯೇ ವಹಿಸಿಕೊಳ್ಳುವುದೆಂದು ತಿಳಿಸಿದ್ದರು. ಇದು ಅವರ ವೈಯಕ್ತಿಕ ಅಭಿಪ್ರಾಯವೇ ಏನು ಎಂಬುದು ಖಚಿತವಿಲ್ಲವಾದರೂ, ದ್ವಿತೀಯ ಯೋಜನೆಯಲ್ಲಿ ಖಾಸಗಿ ಕ್ಷೇತ್ರಗಳಲ್ಲಿ ಪ್ರಾಥಮಿಕ ಶಾಲೆಗಳ ಅದು ಯುದ್ಧ ಸ್ವರೂಪವನ್ನು ಸಡೆಯುತ್ತಿದೆ. ಅಮೆರಿಕೆಯು ತನ್ನ ಶಾಂತ ಸಾಗರದ ನೌಕೆಗಳನ್ನು ಸಾಗಿಸುತ್ತಿರುವಾಗ, ಚೀನದಲ್ಲಿ ಅನಿವಾರ್ಯ ಸೈನಿಕ ಶಿಕ್ಷಣ ದೊಡನೆ ಸೈನ್ಯ ಸಂಗ್ರಹವೂ ನಡೆದಿದೆ. ಫಾರ್ಮೋಸಾವನ್ನು ಬಿಳಿಯರ ಕಪಿ ಮುಷ್ಟಿಯಿಂದ ವಿಮೋಚನೆಗೊಳಿಸಲು ಚೀನವು ದೃಢ ನಿರ್ಧಾರ ಮಾಡಿರುವುದೆಂದೂ ಅಂತಿಮ ಜಯ ಪ್ರಾಪ್ತಿಯಾಗುವ ವರೆಗೂ ಅದು ತನ್ನ ಹೋರಾಟವನ್ನು ನಿಲ್ಲಿಸಲಾರದೆಂದೂ ವರದಿಗಳು ಬಂದಿವೆ. "ಕೊರಿಯಾ ಯುದ್ಧದಲ್ಲಿ ಬಿದ್ದ ಪೆಟ್ಟು ತಮಗೆ ಸಾಕಾಗದೆ ಇದ್ದಿದ್ದರೆ ಅಮೆರಿಕೆನ್ನರು ಇನ್ನೊಮ್ಮೆ ನಮ್ಮನ್ನು ಎದುರಿಸಲಿ, ಇಡಿ ಜಗತ್ತಿನಲ್ಲಿ ಅಮೆರಿಕೆಯ ಬಳಿಯಲ್ಲಿ ಮಾತ್ರ ಅಣುಬಾಂಬು ಮತ್ತು ಜಲಜನಕ ಬಾಂಬುಗಳಿರುವುದಲ್ಲ" ಎಂದೂ ಪೇಕಿಂಗಿನ ಒಂದು ಪತ್ರಿಕೆ ಅಮೆರಿಕೆಗೆ ಎಚ್ಚರಿಕೆಯಿತ್ತಿದೆ.

ಯಾವುದಕ್ಕೂ ಅಂಜಬೇಡಿ

ಮೈಸೂರಿನ ನ್ಯಾಯಾಧಿಕಾರಿಗಳ ಸಂಘತ್ತಿನಲ್ಲಿ ಪ್ರಧಾನ ನ್ಯಾಯಾಧೀಶ ಶ್ರೀ ಎಸ್. ಆರ್. ದಾಸಗುಪ್ತರು "ನ್ಯಾಯಾಧಿಕಾರಿಗಳು ಪ್ರಾಮಾಣಿಕತೆ ಹಾಗೂ ಸಚ್ಚೀಲತೆಗೆ ಹೆಚ್ಚು ಪ್ರಾಧಾನ್ಯವೀಯಬೇಕು; ನಾನು ಬುದ್ಧಿಮತ್ತೆಗಿಂತ ಇವಕ್ಕೆ ಹೆಚ್ಚು ಬೆಲೆಯನ್ನು ಕೊಡುವೆನು. ಸಂಬಳ ಸಾರಿಗೆ ಪ್ರಶ್ನೆ ಯೇನೇ ಇರಲಿ; ಪ್ರಾಮಾಣಿಕ ಸಮರ್ಥ ಅಧಿಕಾರಿಗಳಾಗಬೇಕೆಂಬುದನ್ನು ಮರೆಯಬೇಡಿರಿ. ಇಂದು ನಮ್ಮ ದೇಶದಲ್ಲಿ ಪ್ರಾಮಾಣಿಕತೆಯ ಅಗತ್ಯ ಹೆಚ್ಚಿರುವುದು. ನ್ಯಾಯಾಂಗವು ಪ್ರಾಮಾಣಿಕ ನಿರಿದಿದ್ದರೆ, ದೇಶದ ಸಾಮಾಜಿಕ ಸ್ವರೂಪವೇ ಕುಪ್ಪಳಿಸುವ ಸಂಭವವಿದೆ. ನಾವು ನಿರ್ಭೀತರಾಗಿರಬೇಕು; ಯಾವುದಕ್ಕೂ ಹೆದರಂಬೇಕಾದ ಅಗತ್ಯವಿಲ್ಲ" ಎಂಬುವಾಗಿ ಬಿನ್ನವಿಸಿಕೊಂಡರು.

ವಿದೇಶ ಸಂಚಾರ

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ತಮ್ಮ ಜಾಪಾನ ಸಂಚಾರಕ್ಕಾಗಿ

ಸಂಕ್ಷಿಪ್ತ ಸುದ್ದಿಗಳು

ಲಲಿತಕಲಾ ಅಕಾಡೆಮಿ

ಲಲಿತಕಲಾ ಅಕಾಡಮಿಯವರು ಮುಂದಿನ ವರ್ಷ ವ್ಯವಸ್ಥೆಗೊಳಿಸುವ ರಾಷ್ಟ್ರೀಯ ಕಲಾವಸ್ತು ಪ್ರದರ್ಶನದಲ್ಲಿ ಪಾಂಡಿತ್ಯಪೂರ್ಣ ಆಧುನಿಕ ಹಾಗೂ ಪಾಶ್ಚಾತ್ಯ ವರ್ಗಗಳಿಗೆ ಸಂಬಂಧಿಸಿದ ಕಲಾವಸ್ತುಗಳನ್ನು ಪ್ರದರ್ಶಿಸಲಾಗುವುದು. ಇತ್ತೀಚೆಗೆ ನಡೆದ ಅಕಾಡಮಿಯ ಸಾಮಾನ್ಯ ಪರಿಷತ್ತಿನ ವಿಶೇಷ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಅಕಾಡಮಿಯು ಹೊರಡಿಸುತ್ತಿರುವ "ಲಲಿತಕಲಾ" ಎಂಬ ಪತ್ರಿಕೆಯನ್ನು ಎರಡು ಭಾಗಗಳಾಗಿ ಪ್ರಕಟಿಸಲಾಗುವುದು. ಮೊದಲನೆಯ ವಿಭಾಗವು ಸಂಕೋಚನೆಗಳಿಗೂ ಎರಡನೆಯದು ಸಮಕಾಲೀನ ಪ್ರವೃತ್ತಿ ಮತ್ತು ವಿಕಾಸಗಳಿಗೂ ಸಂಬಂಧಪಡುತ್ತವೆ. ವಿಖ್ಯಾತ ಕಲಾವಿದರಾದ ರಾಜಾ ರವಿವರ್ಮ, ಅಬನೀಂದ್ರನಾಥ ಠಾಕೂರ, ಜಮಿನಿರಾಯ್, ರಾಮಕಿಂಕರ ಬೈಜ್, ಕೆ. ಕೆ. ಹೆಬ್ಬಾರ ಮತ್ತು ಎಸ್. ಜಾನದರ ಕುರಿತು ಜನಪ್ರಿಯ ಲಘುಗ್ರಂಥಗಳನ್ನೂ ಅಕಾಡಮಿಯು ಪ್ರಸಿದ್ಧಿಸುವುದು.

ಗುಜರಾಥದಲ್ಲಿ ಪಾದಾರ್ಪಣ

ಆಚಾರ್ಯ ವಿನೋಬಾ ಭಾವೆಯವರು ತಮ್ಮ ಐನತ್ತು ಅನುಯಾಯಿಗಳೊಡನೆ ಮಹಾರಾಷ್ಟ್ರದ್ವಿಸಂಚಾರ ಕಾರ್ಯಕ್ರಮವನ್ನು ಮುಗಿಸಿ ಸೋನಾಗಡ ಕೋಟೆಯ ಮೊಲಕ ಗುಜರಾಥ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ "ಮಹಾತ್ಮಾ ಗಾಂಧಿಯವರ ಕಾರ್ಯವನ್ನು ನಾನು ನನಗೆ ತಿಳಿದ ರೀತಿಯಲ್ಲಿ ಮುಂದುವರಿಸುವೆನು. ನನ್ನ ಕಾರ್ಯಕ್ರಮದಲ್ಲಿ ನಿಮಗೆ ಸರಿದೋರಿದ ಅಂಶಗಳನ್ನು ಪಾಲಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸುವೆ. ನನ್ನ ಶಕ್ತಿ ಮೀರಿ ನಾನು ನಿಮಗೆ ಸೇವೆ ಸಲ್ಲಿಸುವೆ" ಎಂದವರು ಗುಜರಾಥಕ್ಕೆ ಪಾದಾರ್ಪಣ ಮಾಡುತ್ತಾ ನುಡಿದರು.

ಅಮೆರಿಕೆಗೆ ಬಗ್ಗಲಾರೆವು

ಫೋರ್ಮೋಸ ಮತ್ತು ಕ್ವೆಮಾಯಿಗಳ ಸಂಬಂಧದಲ್ಲಿ ಚೀನ ಹಾಗೂ ಅಮೆರಿಕೆಗಳ ನಡುವೆ ತೀವ್ರ ವಾಗ್ವಾದವೆದ್ದಿದ್ದು, ಅವು ಕುಲ್ಲವನ್ನು ಮಾತ್ರ ಮಾಡುವುದಿಲ್ಲವೆಂದೂ ತಿಳಿಸಿ, ಈಗ ಇರುವ ಖಾಸಗಿ ಶಾಲೆಗಳಿಗೆ ಗ್ರಾಂಟ್-ಇನ್-ಎಡ್ ನಿಯಮಗಳಿಗನುಸಾರವಾಗಿ ಸಹಾಯಧನ ದೊರೆಯುವುದೆಂದೂ ತಿಳಿಸಿದ್ದಾರೆ. ಹೀಗಾದರೆ, ಮೊದಲನೆಯ ಹೇಳಿಕೆಗೆ ಅರ್ಥವೇನು ಎಂಬುದೂ, ಆ "ಸದ್ಯ" ವೆಂದರೇನು ಎಂಬುದೂ ಅಗೋಚರವಾಗುಳಿಯುತ್ತದೆ. ಈ ರೀತಿ ಹೊಣೆಗಾರ ಸ್ಥಾನದಲ್ಲಿ ಮಂಡಿಸುತ್ತಿರುವ ಮಂತ್ರಿಗಳು ಪೂರ್ವಾಪರ ಸಂಬಂಧವಿಲ್ಲದ ಹೇಳಿಕೆಗಳನ್ನಿತ್ತು ಗಲಿಬಿಲಿಯ ವಾತಾವರಣವನ್ನು ಉಂಟು ಮಾಡುವುದು ಸರಿಯೆ? ಸರಕಾರದ ನಿರ್ಧಾರಗಳು ಕಾರ್ಯರೂಪೀ ನಿರ್ಧಾರಗಳಾಗಿ ಪರಿಣಮಿಸಿದರೆ ಮಾತ್ರ ಪ್ರಯೋಜನ. ಹಾಗಾಗುವುದೆಂದು ನೀರೀಕ್ಷಿಸುವುದು ಎಂದಿಗೂ ತಪ್ಪಲ್ಲ.

ಚಂದಾದಾರರಲ್ಲಿ ವಿನಂತಿ

ಕಳೆದ ತಿಂಗಳಾಂತ್ಯಕ್ಕೆ 'ನವಯುಗ' ದ 37 ನೇ ವರ್ಷವು ಅಂತ್ಯವಾಗಿ ಸಪ್ಟಂಬರ ದಿಂದ 38 ನೇ ವರ್ಷಾರಂಭವಾಗಿರುವುದು ಈ ಸಮಯಕ್ಕೆ ಚಂದಾ ಅವಧಿಯು ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿ ಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ. ಚಂದಾ ಹಣವನ್ನು ಯಾವ ತರವ ಖರ್ಚೂ ಇಲ್ಲದೆ 'ವಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ನವಯುಗದ ಖಾತೆಗೆ ಕಟ್ಟಬಹುದು. ವಿ. ಪಿ. ಮಾಡಿದರೆ ಹನ್ನೆರಡಾಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಚಂದಾ ಹಣವನ್ನು ಮುಂದಾಗಿ ಕಳುಹಿಸಬೇಕಾಗಿ ವಿನಂತಿ.

ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ಪಂಚವಾರ್ಷಿಕ ಯೋಜನಾ ದಿನಾಚರಣೆ—

ಉಡುಪಿಯ ಯಂ. ಜಿ. ಯಂ. ಕಾಲೇಜಿನಲ್ಲಿ ತಾ 18ರಂದು ಪಂಚವಾರ್ಷಿಕ ಯೋಜನಾ ದಿನಾಚರಣೆಯು ಪ್ರೊ. ಕೃಷ್ಣರಾವ್, ಯಂ. ಕೊಂ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ವಶ್ರೀ, ಶಂಕರ ಶೆಟ್ಟಿ, ಪಿಂಟೋನಾಯ್ಕ, ನಾರಾಯಣ ಮದಿವಾಳ್ಕ, ಗುರುರಾಜ ಭಟ್ಟ, ಕೃಷ್ಣ ಶರ್ಮ, ದಾಮೋದರ ಹೆಗ್ಡೆ,

ಬ್ರಾಜರೆಂದು ವಿಮಾನದ ಮೂಲಕ ಕಾಂಗ್ಕಾಂಗದಲ್ಲಿ ಕೊಂಚ ಹೊತ್ತು ಇದ್ದು, ತೊಕ್ಕೆ ಟೋಕಿಯೊವನ್ನು ತಲಪುವರು. ಅಲ್ಲಿ ಅವರು ಏಳು ದಿನ ತಂಗಿದ್ದು ಅಕ್ಟೋಬರ ಇರಂದು ಬ್ರಹ್ಮ ದೇಶದ ರಂಗೂನಿಗೆ ತೆರಳುವರು. ಅಲ್ಲಿ ಮೂರು ದಿನವುಳಿದು ಅಕ್ಟೋಬರ ೬ಕ್ಕೆ ನವದೆಹಲಿಯನ್ನು ತಲಪುವರು. ರಾಷ್ಟ್ರಾಧ್ಯಕ್ಷರು ತಾವು ಈ ಹುದ್ದೆಯನ್ನಲಂಕರಿಸಿದ ಮೇಲೆ ವಿದೇಶ ಸಂಚಾರಕ್ಕೆ ಹೊರಟಿರುವುದು ಇದೀಗ ಎರಡನೆ ಬಾರಿಯಾಗಿದೆ. ಮೊದಲೊಮ್ಮೆ ಅವರು ನೇಪಾಳಕ್ಕೆ ಮಾತ್ರ ತೆರಳಿದ್ದರು.

ಪ್ರಧಾನಿ ನೆಹರೂರವರು ಭೂದಾನ ಸಂದರ್ಶನವನ್ನು ಈಗಾಗಲೇ ಮುಗಿಸಿ ಮರಳಲಿದ್ದಾರೆ. ಭೂದಾನದ ಎಲ್ಲೆಲ್ಲಿಯೂ ಅವರನ್ನು ಆದರದಿಂದ ಸ್ವಾಗತಿಸಲಾಯಿತು. ಅಲ್ಲಿನವರು ಇವರನ್ನು "ಗೌತಮ ಬುದ್ಧನ ಅವತಾರ" ವೆಂದು ಭ್ರಮೆಯಿಂದ ಉದ್ಗರಿಸಿದರಂತೆ. ಭೂದಾನದ್ಯೋಗರಾಜ—ರಾಣಿಯರನ್ನೂ ಶ್ರೀ ನೆಹರು ಭೆಟ್ಟಿಯಾಗಿ ಕಾಣಿಕೆಯಿತ್ತು ಅವರಿತ್ತುದನ್ನು ಸ್ವೀಕರಿಸಿದ್ದಾರೆ. ಗುಡ್ಡ ಕಾಡುಗಳ ನಿಸರ್ಗ ಸೌಂದರ್ಯ ಹಾಗೂ ಗ್ರಾಮಾಂಚಕಾರಕ ದೇಶ ಭೂದಾನದಲ್ಲಿ ಶ್ರೀ ನೆಹರೂ ಮತ್ತವರ ಮಗಳು ಶ್ರೀಮತಿ ಇಂದಿರಾ ಗಾಂಧಿಯವರು ಆನಂದದಿಂದ ಕಾರ್ಯಶ್ರಮಗಳನ್ನು ಮುಗಿಸುತ್ತಲಿದ್ದಾರೆ.

ಮೈಸೂರು ರಾಜ್ಯದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮತ್ತು ಕಾರ್ಯದರ್ಶಿ ಸಭೆಯು ಬೆಂಗಳೂರಲ್ಲಿ ನಡೆಯಿತು. ವಿಶಾಲ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರು ತಮ್ಮ ತಮ್ಮ ಜಿಲ್ಲೆ, ತಾಲೂಕು ಮತ್ತು ಮಂಡಳ ಕಾಂಗ್ರೆಸ್ ಸಮಿತಿಗಳು ಸದಸ್ಯರನ್ನು ಮಾಡಿಕೊಳ್ಳುವುದು, ಯುವಕ ಕಾಂಗ್ರೆಸ್ ಮತ್ತು ಸೇವಾದಳಗಳ ಸಂಘಟನೆ, ಮಹಿಳಾ ವಿಭಾಗ, ವಿಧಾಯಕ ಕಾರ್ಯಕ್ರಮಾದಿಗಳ ಬಗ್ಗೆ ಸಾಧಿಸಿದ ಪ್ರಗತಿಯ ವರದಿಯನ್ನೊಪ್ಪಿಸಿದರು. ಅಧಿಕಾಹಾರೋತ್ಪಾದನೆಗೆ ಪ್ರತಿಯೊಂದು ಪ್ರಾಥಮಿಕ ಕಾಂಗ್ರೆಸ್ ಸಮಿತಿಯು ಶಕ್ತಿ ಮೀರಿ ಪ್ರಯತ್ನಿಸಬೇಕೆಂದೂ ಜಿಲ್ಲೆಯ ಜನಸಂಖ್ಯೆಯ ಸೇವಾದಳ ಎರಡೂವರೆಯಷ್ಟು ಜನರನ್ನು ಕಾಂಗ್ರೆಸ್ ಸದಸ್ಯರನ್ನಾಗಿ ಮಾಡಬೇಕೆಂದೂ ಚಿಕ್ಕ ಉಳಿತಾಯ ಯೋಜನೆ, ಕೂಲಿಗಾರ ಸಂಘಟನೆಗಳು ಮೊದಲಾದುವನ್ನು ಪ್ರೋತ್ಸಾಹಿಸಬೇಕೆಂದೂ ಈ ಸಭೆಯಲ್ಲಿ ನಿರ್ಣಯವಾಯಿತು. ಪ್ರತಿ ಮಂಡಳ ಕಾಂಗ್ರೆಸ್ಸೂ ಚೇತನಾಯುತವಾಗಿ ಬೆಳೆದು ಬರುವಂತೆ ಎಚ್ಚರಿಸಿ ಕಾಂಗ್ರೆಸ ಸಂದೇಶವೆಂಬ ಪತ್ರಿಕೆಯನ್ನು ಪ್ರಸಿದ್ಧಿಯಗೊಳಿಸಲು ನಿರ್ಧರಿಸಲಾಯಿತು.

ಸೋಮಶೇಖರ ಭಟ್ಟ, ವಿಷ್ಣು ಆಚಾರ್ ವಾಮನ ಕಾಮತ್, ಇವರು ಭಾಷಣಮಾಡಿದರು. ಅಧ್ಯಕ್ಷರು ದ್ವಿತೀಯ ಯೋಜನೆಯು ಆರಂಭದಿಂದಲೇ ಅಸಫಲವಾಗಲು ಕಾರಣವೇನೆಂದು ವಿವರಿಸಿ, ಒಂದನೇ ಮತ್ತು ಎರಡನೇ ಯೋಜನೆಗಳ ಸಾಫಲ್ಯ ವೈಫಲ್ಯವನ್ನು ವಿವರಿಸಿದರು. ಕಾರ್ಯದರ್ಶಿ ಕೃಷ್ಣ ಶರ್ಮರು ಧನ್ಯವಾದನಿತ್ತರು

ಹಿಂದೂ ಮಹಾಸಭೆ—

ಇತ್ತೀಚೆಗೆ ಶಿವಮೊಗ್ಗಾದಲ್ಲಿ ಸೇರಿದ ಮೈಸೂರು ರಾಜ್ಯ ಹಿಂದೂ ಮಹಾಸಭಾ ಕಾರ್ಯಕಾರಿ ಸಮಿತಿಯಲ್ಲಿ ಮಾಜಿ ದಕ್ಷಿಣ ಕನ್ನಡ ಜಿಲ್ಲೆಯ ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ ಬಿ. ವಿ. ಮಾಧವರಾವ್ ಉಡುಪಿ, ಶ್ರೀ ಕೇಶವ, ರಾಮಚಂದ್ರ ಶೆಟ್ಟಿ, ಕಾರ್ಕಳ, ನೂತನ. ದ. ಕ. ಜಿಲ್ಲಾ ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಮತ್ತು ಶ್ರೀ ಶೇಟ್ ವಾಮನರಾಯ, ಜಿಲ್ಲಾ ಹಿಂದೂ ಮಹಾಸಭಾ ಸಂಘಟಕ, ಮಂಗಳೂರು, ಇವರನ್ನು ಕಾರ್ಯಕಾರಿ ಸಮಿತಿಗೆ ಸೇರಿಸಿಕೊಳ್ಳಲಾಗಿದೆ.

ದ. ಕ ಜಿಲ್ಲಾ ಹಿಂದೂ ಮಹಾಸಭಾ ಸಮಿತಿಯ ಸಭೆಯು ಇದೇ ತಾ 28-9-58ರಲ್ಲಿ ಸಾಯಂ. ಘಂಟೆ ೫ಕ್ಕೆ ಮಂಗಳೂರು ಪೆಂಟಲೆಂಡ ಪೇಟೆಯ ಶ್ರೀ ಸಂಕಟೇಶ ಅಯ್ಯರ್ವೆದ ಭವನದಲ್ಲಿ ಸೇರಿ ಬರುವ ತಿಂಗಳಾಂತ್ಯದಲ್ಲಿ ಶಿವಮೊಗ್ಗಾ ಜಿಲ್ಲೆಯ ಸಾಗರದಲ್ಲಿ ಸೇರುವ ಅಖಿಲಕರ್ನಾಟಕ ಹಿಂದೂ ಮಹಾಸಭಾ ಸಮ್ಮೇಳನಕ್ಕೆ ಸ್ಥಳೀಯ ಪ್ರತಿನಿಧಿಗಳನ್ನು ಜುನಾಯಿಸಲಿರುವುದು.

ಮಂಡಲ ಕಾಂಗ್ರೆಸ್ ಸಮಿತಿಯವರ ಸಮ್ಮೇಳನ —

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಚ್. ಕೆ. ವೀರಣ್ಣ ಗೌಡರು ದಕ್ಷಿಣ ಕನ್ನಡ ಜಿಲ್ಲಾ ಸಂಚಾರವನ್ನು ತಾ 22ರಿಂದ ಕೈಗೊಂಡಿದ್ದು ತಾ 26 ನೇ ಶುಕ್ರವಾರ ಅಪರಾಹ್ನ 3 ಗಂಟೆಗೆ ಮಂಗಳೂರಿನ ಗಣಪತಿ ಹೈಸ್ಕೂಲಿನ ಶ್ರೀ ಶಾರದಾ ಸದನದಲ್ಲಿ ಜರಗುವ ಇಡೀ ಜಿಲ್ಲೆಯ ಮಂಡಲ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ಕಾರ್ಯದರ್ಶಿಗಳ ಮತ್ತು ಇನ್ನಿತರ ಸದಸ್ಯರ ಸಮ್ಮೇಳನವನ್ನು ಉದ್ಘಾಟಿಸಲಿರುವರು. ಈ ಸಮ್ಮೇಳನದಲ್ಲಿ ಮಂಡಲಗಳ ಸಂಘಟನೆ, ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳ ಪ್ರಚಾರ, ಜನತಾ ಸಂಪರ್ಕ, ಕಾಂಗ್ರೆಸ್ ಪಕ್ಷ ಮತ್ತು ಸರಕಾರಕ್ಕಿರುವ ಸಂಬಂಧ, ಆಡಳಿತ ದೋಷಗಳು ಮೊದಲಾದ ವಿಷಯಗಳ ಕುರಿತು ಅಭಿಪ್ರಾಯ ವಿನಿಮಯ ನಡೆಯುವುದು

ವಿವಾಹ ಸಮಾರಂಭ—

ಶ್ರೀ ಕಟ್ಟಾಡಿಬೀಡು ಸೀತಾರಾಮ ದೊರೆ ಬಲ್ಲಾಳರ ಪುತ್ರಿ ವಿ ವಕೀಲ್ ಕೆ ಜಿ ಬಲ್ಲಾಳರ ಮೊಮ್ಮಗಳು ಕು. ಶಾಂತಕುಮಾರಿ ಎಂಬ ವಧುವನ್ನು ವಿ ಕುಂಬ್ರು ವೆಂಕಪ್ಪ ಪೂಂಜರ ಪುತ್ರ ವಿ ಶ್ರೀ ಬಾಡೂರು ಸುಬ್ಬಪ್ಪ ರೈಗಳ ಮೊಮ್ಮಗ ಶ್ರೀ ರಾಮಯ್ಯ ಪೂಂಜ ಎಂಬ ವರನು ಇದೇ ತಾ. 15ರಂದು ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ವಿವಾಹವಾದರು

ಶ್ರೀ ಪಿ. ಭೀಮರಾಯರ ಪುತ್ರಿ ಕುಮಾರಿ ಲೀಲಾ ಎಂಬ ವಧುವನ್ನು ವಿ. ಡಾ. ಕೆ. ಯು. ಜಿ. ರಾಯರ ಪುತ್ರ ಡಾ. ಕೆ. ಯು. ಹರಿರಾಯರು ಇದೇ ತಾ 21ರಂದು ಕರೂರಿನಲ್ಲಿ ವಿವಾಹವಾದರು.

ಧರ್ಮಾರ್ಥ ಅಕ್ಕಿ ಮತ್ತು ಹೊಬಲಗು ವಿತರಣೆ—

ಇದೇ ತಾ. 27ನೇ ಶನಿವಾರ ಮಧ್ಯಾಹ್ನ ಉಡುಪಿ ಪಾಂಗಾಳ ನಾಯಕರ್ ಬೇಂಕಿನ ವರಾಂಡದಲ್ಲಿ ಮೊಡ್ಡರಿಗೆ ಎರಡು ಸಾವು ಅಕ್ಕಿ ಮತ್ತು ಎರಡಾಣೆಯಂತೆಯೂ ಸಣ್ಣವರಿಗೆ ಒಂದು ಪಾವು ಅಕ್ಕಿ ಮತ್ತು ಒಂದಾಣೆಯಂತೆಯೂ ತಾನು ಸಂಗ್ರಹಿಸುವುದಾಗಿಯೂ ಭಾಗಿದಾರರು ಸ್ವೀಕರಿಸಬೇಕಾಗಿಯೂ ಶ್ರೀ ಪಾಂಗಾಳ ಉಮೇಂದ್ರ ಶ್ರೀನಿವಾಸ ನಾಯಕರು ವಿನಂತಿಸುತ್ತಾರೆ.

ಗ್ರಾಮೋದ್ಯೋಗಿಸ್ಥರ ಸಂಘ—

ಉಡುಪಿ ತಾಲೂಕು ಗ್ರಾಮ ಉದ್ಯೋಗಿಸ್ಥರ ಸಂಘದ ಉದ್ಘಾಟನೆಯು ತಳಸಿದ್ದಾರ್ ಶ್ರೀ ಕೆ. ಸುಬ್ರಮ್ಮಣ್ಯ ಬ್ಯಾರಿಯವರ ನೇತೃತ್ವದಲ್ಲಿ ಇದೇ ತಾ. 21ರಲ್ಲು ಜರಗಿ ಹಲವರ ಭಾಷಣಗಳಾದಿ ಹಲವು ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು ಆಲ್ಲದೆ ಶ್ರೀ ಎಸ್. ವೆಂಕಟರಾಜರು ಅಧ್ಯಕ್ಷರಾಗಿರುವ ಕಾರ್ಯ ಸಮಿತಿಯೂ ರಚಿಸಲ್ಪಟ್ಟಿತು.

ನೃತ್ಯ ಕಲಾವಿದ ಶ್ರೀ ಕೆ ಕೆ. ಶೆಟ್ಟಿರು

ಬೊಂಬಾಯಿಯ ಭಾರತೀಯ ನೃತ್ಯಕಲಾ ಮಂಡಲದ ನಿರ್ದೇಶಕ ಶ್ರೀ ಕೆ ಕೆ ಶೆಟ್ಟಿರು ಇತ್ತೀಚೆಗೆ ಮಂಗಳೂರಿಗೆ ಬಂದಿದ್ದು ತಾ 18ರಲ್ಲಿ ಮಂಗಳೂರು ಪತ್ರಿಕೋದ್ಯೋಗಿ ಸಂಘದಲ್ಲಿ ತಾನು 1955 ಮತ್ತು 57ರಲ್ಲಿ ಜಪಾನಿದ ವಿದೇಶ ಪ್ರವಾಸದ ಕುರಿತು ಭಾಷಣ ಮಾಡಿದರು ನಿವೇದನೆಗಳಲ್ಲಿ ಭಾರತೀಯ ನೃತ್ಯಕಲೆಯನ್ನು ನೋಡಲು ಜನರು ಆಸಕ್ತಿ ತಾಳಿರುತ್ತಿದ್ದಾರೆಂದೂ ಈಗ ನಮ್ಮಲ್ಲಿ ಕಲೆಗೆ ಪ್ರೋತ್ಸಾಹ ಸಿಗಬೇಕಾಗಿರುವುದೆಂದೂ ಕಲಾವಿದರು ಸಾಕಷ್ಟು ಅಭ್ಯಾಸಮಾಡಿ ಕಲೆಯಲ್ಲಿ ಪೂರ್ಣತೆಯನ್ನು ಸಾಧಿಸಬೇಕೆಂದೂ ಹೇಳಿದರು.

ಪ್ರಾರಂಭೋತ್ಸವ—

ಶಿರಾಳದ ಕೆ. ವಾಸುದೇವ ನಾಯಕ್ ಮತ್ತು ಕೆ. ಸರಸರಿ ಕಾಮತ್ ಇವರ ನೇತೃತ್ವದಲ್ಲಿ ಇದೇ ತಾ 19ರಲ್ಲು ಉಡುಪಿಯ ತೆಂಕಪೇಟೆಯಲ್ಲಿ "ಲಕ್ಷ್ಮಿ ಜುವೆಲರೀಸ್" ಎಂಬ ಸಂಸ್ಥೆ ಪ್ರಾರಂಭಿಸಲ್ಪಟ್ಟಿದೆ.

ಸುಹಿಳಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಶ್ರೀಮತಿ ಸಂಜೀವಿ ಟೋಳಾರ್‌ರವರ ಅಧ್ಯಕ್ಷತೆಯಲ್ಲಿ ತಾ 17ರಲ್ಲಿ ಜರಗಿ ಕೆಲವೊಂದು ವಿಚಾರವಿನಿಮಯ ನಡೆಸಿತು.

ಹಿಂದೀ ತರಗತಿಯ ಪ್ರಾರಂಭೋತ್ಸವ

ಸಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ವಿಶಿಷ್ಟ ಹಿಂದಿ ಪರೀಕ್ಷೆಗಳಿಗೆ ತರಬೇತಿಕೊಡುವ ತರಗತಿಯು ದಿನಾಂಕ ೨೫ರಂದು ಪ್ರಾರಂಭವಾಯಿತು ಶ್ರೀ ಎಸ್. ಗೋಪೀಚಂದ ರಾಯರು ಶಾಲೆಯಲ್ಲಿ ಹಿಂದಿನ ವರ್ಷಕ್ಕಿಂತ ಈ ವರ್ಷ ಹಿಂದಿ ಕಲಿಯಲು ತಾವಾಗಿಯೇ ಮುಂದಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗುವುದಕ್ಕೆ ಅಭಿನಂದಿಸುತ್ತೆ, ಕನ್ನಡಿಗರಿದ್ದಂತೆಯೇ ನಾವು ಭಾರತೀಯರಾದುದರಿಂದ ಕನ್ನಡವನ್ನು ಕಲಿಯುವಂತೆಯೇ ಹಿಂದಿಯನ್ನೂ ಸ್ವಲ್ಪಮಟ್ಟಿಗಾದರೂ ಕಲಿತುಕೊಳ್ಳುವುದು ಅಗತ್ಯ ಎಂದು ಹೇಳಿ ಪ್ರಾರಂಭಭಾಷಣವನ್ನು ಆರಂಭಿಸಿದರು.

ಪ್ರಗತಿ ಪಥ

ಕಾರ್ಮಿಕ ರಾಜ್ಯವಿಮಾ ಯೋಜನೆಯ ಅನುಷ್ಠಾನ

೧೯೫೮ರ ಕಾರ್ಮಿಕರ ರಾಜ್ಯ ವಿಮಾ ಕಾನೂನಿನ ಅವಕಾಶಗಳು, ವಿದ್ಯುಚ್ಛಕ್ತಿಯನ್ನು ಬಳಸುವ, ೨೦ ಮಂದಿ ಅಥವಾ ಹೆಚ್ಚು ಮಂದಿಯನ್ನು ಕೆಲಸಕ್ಕೆ ನೇಮಿಸಿಕೊಂಡಿರುವ, ತಿಂಗಳಿಗೆ ೪೦೦ ರೂ.ಗಳಿಗೂ ಕಡಿಮೆ ಸಂಪಾದನೆಯುಳ್ಳ ಕಾರ್ಮಿಕರು ಹಾಗೂ ಅಡಳಿತ ಸಿಬ್ಬಂದಿಯನ್ನೊಳಗೊಂಡ ವರ್ಷಾಕಾಲ ಕೆಲಸ ಮಾಡುವ ಎಲ್ಲಾ ಕಾರ್ಖಾನೆಗಳಿಗೂ ಅನ್ವಯವಾಗುವುವು.

ಈ ಕಾನೂನಿನ ಪ್ರಕಾರ ಆರೋಗ್ಯ ವಿಮಾ ಕಾರ್ಯಯೋಜನೆಯನ್ನು ಪ್ರಥಮತಃ ೧೯೫೨ರ ಫೆಬ್ರುವರಿಯಲ್ಲಿ ದೆಹಲಿ ಮತ್ತು ಕಾನ್ಪುರಗಳಲ್ಲಿ ಆರಂಭಿಸಲಾಯಿತು. ಈ ಕಾರ್ಯಯೋಜನೆಯ ಸೌಲಭ್ಯ ಕೇವಲ ವಿಶೇಷ ಇಳಿಸಿದಗ,೨೦,೦೦೦ ಮಂದಿಗೆ ಮಾತ್ರ ದೊರೆಯಿತು. ಅಲ್ಲಿಂದೀಚೆಗೆ ಈ ಕಾರ್ಯಯೋಜನೆಯನ್ನು ರಾಷ್ಟ್ರದ ವಿವಿಧ ಭಾಗಗಳಲ್ಲಿರುವ ೧೩ ಲಕ್ಷ ಮಂದಿ ಕಾರ್ಮಿಕರಿಗೆ ವಿಸ್ತರಿಸಲಾಯಿತು.

ದ್ವಿತೀಯ ಯೋಜನಾವಧಿಯಲ್ಲಿ ೧,೫೦೦ ಮಂದಿ ಕಾರ್ಖಾನೆ ಕಾರ್ಮಿಕರಿರುವ ಪ್ರತಿಯೊಂದು ಕೈಗಾರಿಕಾ ಕೇಂದ್ರದಲ್ಲೂ ಈ ಕಾರ್ಯಯೋಜನೆಯನ್ನು ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ. ಈ ರೀತಿ, ಯೋಜನೆಯ ಅಂತ್ಯದ ವೇಳೆಗೆ ಸುಮಾರು ೨೨ ಲಕ್ಷ ಮಂದಿ ಕಾರ್ಮಿಕರಿಗೆ ಈ ಕಾರ್ಯಯೋಜನೆಯ ಸೌಲಭ್ಯವನ್ನು ವಿಸ್ತರಿಸಲಾಗುವುದು.

ಈ ಯೋಜನಾವಧಿಯಲ್ಲಿ, ಈ ಕಾರ್ಯ ಯೋಜನೆಯ ಪ್ರಾಪ್ತಿಗೊಳಪಡುವ ಕಾರ್ಮಿಕರ ಕುಟುಂಬದವರಿಗೆ ವೈದ್ಯಕೀಯ ರಕ್ಷಣೆಯನ್ನು ನೀಡಲೂ ಉದ್ದೇಶಿಸಲಾಗಿದೆ. ಈ ಹಾದಿಯಲ್ಲಿ ಈಗಾಗಲೇ ಆರಂಭವನ್ನು ಮಾಡಲಾಗಿದೆ. ಈ ಸಂಬಂಧ ಕ್ರಮ ಕೈಗೊಂಡ ಮೊದಲನೆ ರಾಜ್ಯವಾದ ಮೈಸೂರು ರಾಜ್ಯಕ್ಕೆ ಇದರ ಗೌರವ ದೊರೆತಿದೆ. ಇತರ ರಾಜ್ಯಗಳೂ ಸಹ ಮೈಸೂರು ರಾಜ್ಯದಂತೆ, ಶೀಘ್ರದಲ್ಲಿಯೇ ಕ್ರಮಕೈಗೊಳ್ಳುವ ನಿರೀಕ್ಷೆಯಿದೆ.

ಅಗಾಧ ಸಂಖ್ಯೆಯ ಕಾರ್ಮಿಕರು ಹಾಗೂ ಅವರ ಕುಟುಂಬದವರು ಈ ಕಾರ್ಯ ಯೋಜನೆಯ ವ್ಯಾಪ್ತಿಗೊಳಗಾಗುವಂತೆ ವಿಸ್ತರಿಸುವುದರ ಜೊತೆಗೆ, ಈ ಕಾರ್ಯ ಯೋಜನೆಯ ಪ್ರಕಾರ ದೊರೆಯುವ ವೈದ್ಯಕೀಯ ಸೇವೆಗಳ ಗುಣಾಂಶವನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ.

ಉದಾಹರಣೆಗೆ, ಇಂದು, ನಿಮೆ ಇಳಿಸಿದ್ದು, ಕ್ಷಯರೋಗದಿಂದ ನರಳುತ್ತಿರುವವರಿಗೆ ವಿಶೇಷ ನಗದು ಹಣದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ನಿಮೆ ಇಳಿಸಿದವರು ಕಾರ್ಖಾನೆಯಲ್ಲಿ ಅಕಸ್ಮಿಕ ಅಪಘಾತಗಳು ಅಥವಾ ಇನ್ನಾವುದೇ ರೀತಿಯಲ್ಲಿ, ಅನಾಯವಗಳನ್ನು ಕಳೆದುಕೊಂಡರೆ ಅಂತಹವರಿಗೆ ಕೃತಕ ಅವಯವಗಳನ್ನು ಒದಗಿಸಲೂ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಯೋಜನೆಯ ಪ್ರಕಾರ ನೀಡುವ ವೈದ್ಯಕೀಯ ಸೌಲಭ್ಯದ ಮಟ್ಟವನ್ನೂ ಉತ್ತಮಪಡಿಸಲಾಗಿದೆ.

ಮದರಾಸು ಮತ್ತು ಬೆಂಗಳೂರ ಗಳಲ್ಲಿ ಈಗ, ನಿಮೆ ಇಳಿಸಿದವರಿಗಾಗಿಯೇ ಆಸ್ಪತ್ರೆಗಳಿರುವುವು ಮುಂಬೈ, ಕಲ್ಕತ್ತ, ಕಾನ್ಪುರ, ಬೆಂಗಳೂರು ಮತ್ತು ಮದರಾಸುಗಳಲ್ಲಿ ಹೊಸ ಆಸ್ಪತ್ರೆಗಳ ನಿರ್ಮಾಣದ ಯೋಜನೆಗಳು ವಿವಿಧ ಅಭಿವೃದ್ಧಿ ಘಟ್ಟಗಳಲ್ಲಿವೆ. ಹೊಸ ಆಸ್ಪತ್ರೆಗಳ ನಿರ್ಮಾಣಕ್ಕಾಗಿ ೫೫೬ ಕೋಟಿ ರೂಗಳನ್ನು ಮೀಸಲಿಡಲಾಗುತ್ತಿದೆ. ಇದರ ಜೊತೆಗೆ, ಈ ಕಾರ್ಯಯೋಜನೆಯ ವ್ಯಾಪ್ತಿಗೊಳಪಡುವ ವಿವಿಧ ಕೈಗಾರಿಕಾ ಕೇಂದ್ರಗಳಲ್ಲಿ ಅನೇಕ ಚಿಕಿತ್ಸಾಲಯ ಗಳನಿರ್ಮಾಣಕ್ಕಾಗಿ ೫.೫೫ ಕೋಟಿ ರೂ. ಗಳನ್ನು ಮೀಸಲಿಡಲಾಗುವುದು ಇದೆ.

ಉಡುಪಿ ಸಿವಿಲ್ ಮುನ್ಸಿಫ್ ಕೋರ್ಟಿನಲ್ಲಿ

R. E P 375/1958.

ಸಿಲೆಸ್ತಿನ್ ಪೀರೇರ ಬ್ಯಾ—ಅರ್ಜಿದಾರರು

ಮತ್ತು

ಫ್ರಾಂಶಿಸ್ ಪೀರೇರ ಕೊಡಾ —ಎದ್ರಿರು

1ನೇ ಎದ್ರಿ ಫ್ರಾಂಶಿಸ್ ಪೀರೇರ-ನತ್ತಾಲಿ ಪಂತ್ತಾದ ಬ್ಯಾ ಮಗ-Joseph wadi, Azad Road, Ville Parle,-Bombay 24.

ಅರ್ಜಿದಾರರು ದಿಕ್ಕಿಯ ಅಸ್ತಿ ಯೇಬಂಕೇಳಿ ನಾಪಲು ಮಾಡಿದ ಮೇಲಿನ ಅಮಲಜ್ಜಾರಿಯು ಇಸ್ತಿಹಾರಿನ ಶರತುಗಳ ನಿರ್ಣಯದ ಬಗ್ಗೆ 4—10—58ಕ್ಕೆ ಇಟ್ಟಿದೆ ಸದರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಮೇಲಿನ ಅಮಲಜ್ಜಾರಿಯಲ್ಲಿ ಸದರಿ ಕೋರ್ಟು ಮುಂದೆ ಹಾಜರಾಗುವರೆ ತಪ್ಪಿದಲ್ಲಿ ಸದ್ರಿ ಅಮಲಜ್ಜಾರಿಯು 1ನೇ ಎದ್ರಿಯ ಗೈರು ಹಾಜ್ರಿಯಿಂದ ತೀರ್ಮಾನಿಸಲ್ಪಡುವುದು.

Gracian C. Rego,
Vakil for Petitioner.

ಉಡ್ಪಿ ತಾ. 17—9—58.

ಆಡಳಿತೆ ವರದಿ

(೫ನೇ ಪುಟದಿಂದ)

ಬೋರ್ಡು ಹೈಸ್ಕೂಲುಗಳ ವಿದ್ಯಾರ್ಥಿಗಳ ಸಂಖ್ಯೆಯು ೫,394 ಇದ್ದುದು ವರದಿವರ್ಷದಲ್ಲಿ 5,811ಕ್ಕೆ ಏರಿದೆ. ಸರಕಾರೀ ಪರೀಕ್ಷೆಗೆ ಕಳುಹಿಲ್ಪಟ್ಟ 650 ವಿದ್ಯಾರ್ಥಿಗಳಲ್ಲಿ 536 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ವಿಶ್ವವಿದ್ಯಾಲಯಗಳಲ್ಲಿ ಕಲಿವ ಯೋಗ್ಯತೆ ಪಡೆದಿರುತ್ತಾರೆ. ಹೀಗೆ ಸೇಕಡಾ 87ರಷ್ಟು ಮಂದಿ ತೇರ್ಗಡೆ ಹೊಂದಿದಂತಾಗಿದೆ. ಉಡುಪಿ ಮತ್ತು ಕುಂದಾಪುರ ಹೈಸ್ಕೂಲುಗಳಲ್ಲಿ N.C.C. ದಳಗಳೂ, ಉಳಿದ 9 ಹೈಸ್ಕೂಲುಗಳಲ್ಲಿ A.C.C. ದಳಗಳೂ ಇವೆ. ವರದಿ ವರ್ಷದಲ್ಲಿ ಹೈಸ್ಕೂಲುಗಳನ್ನು ನಡೆಯಿಸುವುದಕ್ಕಾಗಿ ಜಿಲ್ಲಾ ಬೋರ್ಡು ರೂಪಾಯಿ 4,03,587 ವೆಚ್ಚ ಮಾಡಿರುತ್ತದೆ.

ಸಾರ್ವಜನಿಕ ಆರೋಗ್ಯ: ಸಾರ್ವಜನಿಕ ಖಾತೆಯಲ್ಲಿ ಜಿಲ್ಲಾ ಬೋರ್ಡು 9 ಸರಿಯಾದ ಆಸ್ಪತ್ರೆಗಳನ್ನೂ 32 ಗ್ರಾಮಾಸ್ಪತ್ರೆಗಳನ್ನೂ ನಡೆಸಿಕೊಂಡು ಬಂದಿದೆ. ವರದಿ ವರ್ಷದಲ್ಲಿ 3,89,971 ಮಂದಿ ಈ ಆಸ್ಪತ್ರೆಗಳಲ್ಲಿ ಹೊರರೋಗಿಗಳು ಔಷಧಿ ಪಡೆದಿರುತ್ತಾರೆ. 1,163 ಮಂದಿ ಒಳರೋಗಿಗಳಾಗಿ ಔಷಧೋಪಚಾರ ಪಡೆದಿರುತ್ತಾರೆ. ಈ ಆಸ್ಪತ್ರೆಗಳ ಔಷಧಿಗಳಿಗಾಗಿ ರೂ. 40;370ನ್ನೂ ಆಹಾರಕ್ಕಾಗಿ ರೂ. 8,251ನ್ನೂ ಖರ್ಚು ಮಾಡಿರುತ್ತದೆ. ಇದಲ್ಲದೆ ಜಿಲ್ಲಾ ಬೋರ್ಡು 14 ಬಾಣಂತಿ ಮತ್ತು ಶಿಶು ರಕ್ಷಣಾ ಕೇಂದ್ರಗಳನ್ನೂ ನೋಡಿಕೊಳ್ಳುತ್ತದೆ.

ಆರ್ಥಿಕ ಪರಿಸ್ಥಿತಿ: ಜಿಲ್ಲಾ ಬೋರ್ಡಿನ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲ. ಸರಕಾರದಿಂದ ಬರುವ ಗ್ರಾಂಟುಗಳು ಸಕಾಲದಲ್ಲಿ ಬಾರದ್ದರಿಂದ ಹಲವಾರು ಸಂಕಷ್ಟಗಳೂದಗಿದುವು. ಆದ್ದರಿಂದ ರೇವಣಾತಿಯಲ್ಲಿನ ನಿಧಿಗಳಿಂದ ವೆ

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಅಸಿಸ್ಟಾಂಟ್ ಕಮಿಶನರವರ ಪ್ರಕಟಣೆ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಕುಂದದಲ್ಲಿ ವರ್ಷಂಪ್ರತಿ ಜರಗುವ ಜಾತ್ರೆಯವರು ಸಂತೆಯು ಇದೇ 1958ನೇ ಇಸವಿ ನವಂಬರ ತಿಂಗಳ ತಾರೀಕು 26ರಿಂದ ದಶಂಬರ ತಿಂಗಳ ತಾರೀಕು 10ರ ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಪೂರ್ಣಿಮೆಯ ದಿನ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆಯ ದಿನ ಅಂದರೆ ಸುಬ್ರಹ್ಮಣ್ಯ ದೀಪೋತ್ಸವ ತನಕ ಜರಗುವುದು.

ಸಂತೆಗೆ ಬರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ 2ಸಿ ನಯಾ ಪೈಸೆಗಳಂತೆ ಫೀಸು ವಸೂಲು ಮಾಡಲಾದೀತು. ಒಂದು ತಿಂಗಳ ಕರುಗಳನ್ನು ಸದ್ರಿ ಫೀಸಿನಿಂದ ವಿರಹಿತ ಪಡಿಸೀಸಲಾಗಿಯದೆ. ಸಂದರ್ಭಾನುಸಾರ ಅವಶ್ಯ ಬಿದ್ದಲ್ಲಿ ಸದ್ರಿ ಫೀಸು ಏರಿಸಲೂ ಬಹುದು ಯಾ ಇನ್ನಿತರ ಫೀಸನ್ನು ಹೊರಿಸಲೂ ಬಹುದು ಪರಂತು ಅಸಿಸ್ಟಾಂಟ್ ಕಮಿಶನರರು ಅವಶ್ಯವೆಂದು ತೋರುವ ಯಾವ ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿರಹಿತಪಡಿಸಬಹುದು.

(Sd.) ಪಿ. ಎಸ್. ಶಿಮ್ಮಪ್ಪ ಶೆಟ್ಟಿ,
ಅಸಿಸ್ಟಾಂಟ್ ಕಮಿಶನರ್, ಪುತ್ತೂರು.
ಪುತ್ತೂರು ಅಸಿಸ್ಟಾಂಟ್ ಕಮಿಶನರರ ಕಚೇರಿ.
ತಾ 9-9-1958.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

The New Mysore Medical and Pharmaceutical Directory 1958—

Published by New Mysore Publishers, Line Bagar, Dharwar. Pages: 440 Price: Rs. 10-50.

ಕರ್ನಾಟಕ (ಹೊಸ ಮೈಸೂರು)ದಲ್ಲಿರುವ ವೈದ್ಯಕೀಯ ವಿಷಯಗಳೆಲ್ಲವನ್ನೂ ಸಂಗ್ರಹಿಸಿ ಅವುಗಳ ಪರಿಚಯವನ್ನು ಮಾಡಿಕೊಡುವ ಸದುದ್ದೇಶದಿಂದ ಪ್ರಕಾಶನಗೊಂಡ ಪುಸ್ತಕವಿದು. ಅವಶ್ಯಕ ಮಾಹಿತಿಗಳನ್ನು ಡಾಕ್ಟರುಗಳಾದ ಎಲ್. ಜಿ. ಭಟ್, ಬೊಂಬಾಯಿ, ಎಸ್. ಜಿ ದಿಯೋಧರ್, ಹುಬ್ಬಳ್ಳಿ, ಸಿ. ಡಿ. ಗೋಖಲೆ, ಬೊಂಬಾಯಿ, ಯು. ಬಿ. ನಾರಾಯಣರಾವ್, ಬೊಂಬಾಯಿ, ಎಸ್. ರಾಮಕೃಷ್ಣರಾವ್, ಮೈಸೂರು, ಯು ಶೇಷರಾವ್, ಉಡುಪಿ, ಮತ್ತು ಶ್ರೀ ಯು. ರಾಮರಾವ್, ಬೊಂಬಾಯಿ ಇವರ ಸಹಾಯದಿಂದ ಶ್ರೀಯುತರಾದ ಬಿ. ಸುಬ್ಬರಾವ್ ಮತ್ತು ಕೆ. ಆನಂದರಾವ್ ಇವರು ಈ ವಿಸ್ತಾರವಾದ ಪುಸ್ತಕದ ರೂಪದಲ್ಲಿ ಕಲೆಹಾಕುವ ಸಾಹಸ ಮಾಡಿದ್ದಾರೆ ಭಾರತೀಯ ಮೆಡಿಕಲ್ ಎಸೋಸಿಯೇಶನ್ನಿನ ಅಧ್ಯಕ್ಷರಾದ ಡಾ. ಡಿ. ವಿ. ವೆಂಕಪ್ಪನವರು ಮುನ್ನುಡಿಯನ್ನು ಬರೆದಿದ್ದಾರೆ

ಪುಸ್ತಕವು ಎಂಟು ಬಾಗಗಳಾಗಿ ವಿಭಾಜಿತವಾಗಿದ್ದು ಅವುಗಳಲ್ಲಿ ಕ್ರಮವಾಗಿ ಕರ್ನಾಟಕದ ಭೂಗೋಳ ಹಾಗೂ ಇತಿಹಾಸ; ಪ್ರಾಚೀನ ಭಾರತೀಯ ವೈದ್ಯಕ್ರಮ (ಆಯುರ್ವೇದಿಕ); ಆಧುನಿಕ ವೈದ್ಯಕೀಯ ವಿಜ್ಞಾನ (ಅಲೋಪಥಿ ಪದ್ಧತಿ; ಮೈಸೂರಿನಲ್ಲಿ ಔಷಧಿಗಳು, ದಂತ ವೈದ್ಯ ವಿಜ್ಞಾನ, ಔಷಧಾಲಯ ಮತ್ತು ಔಷಧಿ ಶಾಸ್ತ್ರಗಳ ವಿವರಣೆ; ರಾಜ್ಯದ ವೈದ್ಯಕೀಯ ಸಂಸ್ಥೆಗಳು, ಚಿಕಿತ್ಸಾಲಯಗಳ ವಿವರ ಮತ್ತು ರಾಜ್ಯದ ಆಯುರ್ವೇದ, ಯುನಾನಿ ಮತ್ತು ಆಲೋಪಥಿ ವೈದ್ಯಾಲಯ ಹಾಗೂ ವೈದ್ಯರೆಜಿಸ್ಟರ ಜಿಲ್ಲಾವಾರು ದರ್ಶಿಕೆಯೂ ಸೇರಿದೆ.

ವೈದ್ಯಕೀಯ ಸಂಸ್ಥೆಗಳ ಸೂಕ್ಷ್ಮ ಪರಿಚಯ, ಕಾಯಿದೆಗಳ ಉಲ್ಲೇಖ, ವಿವಿಧ ವೈದ್ಯ ಶಾಸ್ತ್ರಗಳ ಹಾಗೂ ವೈದ್ಯಕೀಯ ಶಿಕ್ಷಣಾಲಯಗಳ ವಿವರಣೆಗಳು, ಬೇರೆ ಬೇರೆ ಚಿಕಿತ್ಸಾಲಯಗಳಲ್ಲಿರುವ ವೈದ್ಯಕೀಯ ಸೌಲಭ್ಯಾದಿಗಳು ಅಯಾಯಾ ಸಂದರ್ಭದಲ್ಲಿ ಸರಿಯಾಗಿ ವಿವರಿಸಲ್ಪಟ್ಟಿರುವುದು. ಮೈಸೂರು ವೈದ್ಯಕೀಯ ಸೇವಾವಿಭಾಗದ ಅಗ್ರೇಸರರಾದ ಡಾ. ಬಿ. ವೆಂಕಟಾಚಲ್ಬರಾಯರು ತಮ್ಮ ಮುನ್ನುಡಿಯಲ್ಲಿ ಹೇಳಿದಂತೆ, ಇಂತಹ ಒಂದು ಸಂಪುಟವು "ಮೈಸೂರು ರಾಜ್ಯ"ದಲ್ಲಿ ಈ ವರೆಗೆ ಪ್ರಕಾಶಿತಗೊಳ್ಳಲಿಲ್ಲ. ಇಂತಹ ಒಂದು ಸಂಪುಟದ ಅವಶ್ಯಕತೆ ನಿಜವಾಗಿಯೂ ಮೈಸೂರಿಗಿತ್ತು. ಹಿಂದಿದ್ದ ಕೊರತೆಯು ಈ ಪ್ರಕಾಶನದಿಂದ ಪೂರ್ಣಗೊಂಡಿತೆಂದು ತಿಳಿಯಬಹುದು.

ವಿವಿಧ ವಿಭಾಗಗಳಲ್ಲಿಕೊಡಲಾದ ವಿವರಣೆಗಳು ಅಯಾ ವಿಭಾಗಗಳಲ್ಲಿ ಆಸಕ್ತರಾದವರಿಗೆ ಪ್ರಯೋಜನಕರವೆನಿಸುವುದು. ಅಸಾಧ್ಯ ಪರಿಶ್ರಮ ಸಾಧ್ಯವಾದ ಇಂತಹ ಅನೂಹ್ಯ ವಿಷಯ ಸಂಗ್ರಹವನ್ನು ಮಾಡಿದ ಸಂಗ್ರಹಕಾರರೂ ಪ್ರಕಾಶಿಸಿದ ಪ್ರಕಾಶಕರೂ ಮೈಸೂರು ರಾಜ್ಯದ ಹಾಗೂ ಅನುವಾಸಿನ ಜನತೆಯ ಕೃತಜ್ಞತೆಗಳಿಗಾಗಿದ್ದಾರೆ. ಇದೀಗ ಪ್ರಕಟಣೆಯ ಮೊದಲನೆ ವರ್ಷವಾಗಿದೆ. ಇನ್ನು ಮುಂದಿನ ವರ್ಷಗಳಲ್ಲೂ ಇದೇ ರೀತಿಯ ಕುಂದುಕೊರತೆಗಳಿಲ್ಲದ ಅಮೂಲ್ಯ ಸಂಗ್ರಹವು ಬೆಳಕು ಕಾಣುತ್ತಿರಲಿ

ಪುಸ್ತಕದಲ್ಲಿ ಕರ್ಣಾಟಕ ಭೂಗೋಳಕ್ಕೆ ಸಂಬಂಧಿಸಿದ ಕೆಲವು ಚಿತ್ರಗಳಿವೆ. ಮುದ್ರಣ, ಹೊದಿಕೆ, ಪುಸ್ತಕೀಕರಣದ ಕಾರ್ಯವು ಅಚ್ಚುಕಟ್ಟಾಗಿದೆ. ಸಂಗ್ರಾಹ್ಯ ಪುಸ್ತಕಗಳಲ್ಲಿ ಇದೊಂದೆಂದು ದಾರಾಳವಾಗಿ ಹೇಳಬಹುದು

ತೆಂಗಿನ ಬುಲ್ಲೆಟಿನ್ (ಸ್ವಾತಂತ್ರ್ಯ ದಿನ ಸಂಚಿಕೆ) ಸಂಪಾದಕರು: ಡಾ|| ಪಿ. ಜಿ. ಗ್ರೆಗರಿ ಪ್ರಕಾಶಕರು: ಭಾರತದ ಕೇಂದ್ರ ತೆಂಗಿನ ಕಮಿಟಿ, ಎರ್ನಾಕುಳಂ, ದ. ಭಾರತ. ವಾರ್ಷಿಕ ಚಂದಾ: ರೂ. ಒಂದು.

ತೆಂಗಿನ ಬುಲ್ಲೆಟಿನ್‌ನ ಸ್ವಾತಂತ್ರ್ಯ ಸಂಚಿಕೆಯು ಸರ್ವಾಂಗ ಸುಂದರವಾಗಿದೆ ಇದರಲ್ಲಿ ಕೇವಲ ಭಾರತದಲ್ಲಿ ಮಾತ್ರವಲ್ಲ, ಭಾರತೇತರ ದೇಶಗಳಲ್ಲಿ ತೆಂಗನ್ನು ಬೇಗೆ ಬೆಳೆಸುತ್ತಾ ರೆಂಬುದನ್ನು ವಿವರಿಸುವ ಲೇಖನಗಳೂ ಅಡಕವಾಗಿವೆ. ಮುಖ್ಯವಾಗಿ, ಫಿಲಿಪ್ಪೈನ್ಸ್ ದ್ವೀಪಗಳು, ಇಂಡೋನೇಶ್ಯ, ಮಲಯ, ಫೀಜಿ ಸಮುಗುದ್ದೆ, ಪಾಂಡಿಯನ್ ದ್ವೀಪ, ಘಾನಗಳಲ್ಲಿ ತೆಂಗಿನ ಬೆಳೆಯ ಪ್ರಗತಿ ಹಾಗೂ ಲಾಭದಾಯಕವಾಗಿ ತೆಂಗನ್ನು ಬೆಳೆಸುತ್ತಿರುವ ಪದ್ಧತಿಯ ವಿವರಣೆಯುಳ್ಳ ಸಚಿತ್ರವಾಗಿ ಅಯಾ ಪ್ರದೇಶಗಳ, ಅಧಿಕಾರಿಕ ವ್ಯಕ್ತಿಗಳಿಂದ ಬರೆಯಲ್ಪಟ್ಟ ಲೇಖನಗಳು ಇರುವುದು ಒಂದು ವಿಶಿಷ್ಟತೆಯೆನ್ನಬಹುದು. ಸಾಮಾನ್ಯವಾಗಿ ತೆಂಗಿನ ತೋಟದಲ್ಲಿರುವವರು ಮಾತ್ರವಲ್ಲದೇ ಈ ವಿಷಯದಲ್ಲಿ ಆಸಕ್ತರಾಗಿರುವ ಪ್ರತಿಯೊಬ್ಬ ಕನ್ನಡಿಗನೂ ಅವಶ್ಯ ಸಂಗ್ರಹಿಸಬೇಕಾದ ಸಂಚಿಕೆಯಿದು. ಈ ದಿಸೆಯಲ್ಲಿ ಸಂಪಾದಕರ ಪರಿಶ್ರಮವು ಅಭಿನಂದನೀಯವಾಗಿದೆ. ಸಂಚಿಕೆಯ ಮುದ್ರಣ ಹಾಗೂ ಸುಂದರಚಿತ್ರ ಅಕರ್ಷಕವಿದೆ. — ಗೋರಾ.

ಸಾದರ ಸ್ವೀಕಾರ

೧ ಮಲ್ಲಿಗೆ ನಗುತಾವೆ (ಜನಪದ ಗೀತೆಗಳು. ಸಂಕಲಿಸಿದವರು: ಶ್ರೀ ಕೆ. ರಾಮಕೃಷ್ಣ ಪ್ರಕಾಶಕರು: ಕಾವ್ಯೋದಯ ಪ್ರಕಾಶನ ವಿದ್ಯಾಶ್ರಮ ಸರಸ್ವತಿಪುರಂ ಮೈಸೂರು. ಪುಟಗಳು: ೧೭೩ ಬೆಲೆ: ಸಾಧಾರಣ ಪ್ರತಿ ರೂ. ೨-೦೦, ಉತ್ತಮ ಪ್ರತಿ ರೂ. ೨-೫೦; ಕ್ಯಾರಿಕೊ ಪ್ರತಿ ರೂ ೩-೦೦

೨ "ಎಲ್ಲಿ ಸ್ತ್ರೀತಿಯೋ ಅಲ್ಲಿ ದೇವರು"—(ಏಕಾಂಕ ಸರಸ ಸಂಗೀತ ನಾಟಕ) ರಚಿಯಿತರು: ಶ್ರೀ ಕೆ ಎಸ್. ಪದ್ಮನಾಭಾಚಾರ್ಯ, ಕನ್ನಡ ಹಿಂದೀ ಪಂಡಿತರು ಮತ್ತು ಸಂಗೀತಾಧ್ಯಾಪಕರು. (ಶ್ರೀ ಎಸ್ ಆನಂದರಾವ್ ಅವರ ಮುನ್ನುಡಿಯೊಡನೆ) ಪ್ರಕಾಶಕರು: ಬಾಲ ಸಾಹಿತ್ಯ ಮಂಡಲ, ಮಂಗಳೂರು, ಪ ಕ. ಪುಟಗಳು: 36. ಬೆಲೆ: ಎಂ ಟಾಣಿ

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ಸಾಲು ಪಡೆಯುವೆನು

ಮದನ—ತಮ್ಮಾ, ನಮ್ಮ ಹಿರಿಯಣ್ಣ ಮೋಟಾರು ಸೈಕಲ್ಲು ಕೊಂಡುಕೊಳ್ಳುತ್ತಾನಂತೆ!

ರಮೇಶ—ಬಹಳ ಒಳ್ಳೆಯದಾಯಿತು. ನಾನು ಅವನೊಡನೆ ಮೋಟಾರನ್ನು ಇಟ್ಟುಕೊಂಡು ಸೈಕಲನ್ನು ನನಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಂ ಂ

ನಿಜವಾದ ಕಾರಣ

ಅಧ್ಯಾಪಕ—ಒಣ ಮರವು ನೀರಿನಲ್ಲಿ ತೇಲುವುದಕ್ಕೆ ಕಾರಣವೇನು?

ವಿದ್ಯಾರ್ಥಿ—ಅದಕ್ಕೆ ನೀರಿನೊಳಗೆ ವಿಸರೇತ ಬೆಳೆಯಾಗುತ್ತದೆ.

ಂ ಂ

ಅದೇಕಾಗದು?

ರೇಲ್ವೆ ಡಬ್ಬಿಯಲ್ಲಿ ಪ್ರಯಾಣಿಸುತ್ತಿದ್ದ ಆತನನ್ನು ಟಿಕೆಟ್ ಚೆಕ್ಕರನು ಕೇಳಿದನು ಟಿಕೇಟು ಎಲ್ಲಿದೆ? ತೋರಿಸಿರಿ.

ಆತ ತನ್ನ ಅಂಗಿಯ ಮೇಲೆ ಅಂಟಿಸಿಕೊಂಡಿದ್ದ ಹದಿನೈದು ನಯೇ ಪೈಸೆಯ ಅಂಚೆಚೀಟಿಯನ್ನು ತೋರಿಸಿದಾಗ, ಚೆಕ್ಕರ್ ಹೇಳಿದ: ಅದು ಟಿಕೇಟಲ್ಲ.

ಆತ: ಅಯ್ಯೋ, ಸ್ವಾಮಿ, ಈ ಟಿಕೇಟನ್ನು ಕಸರಿಗೆ ಹಚ್ಚಿದರೆ, ಅದು ಅಖಂಡ ಭಾರತ ಯಾತ್ರೆ ಮಾಡಬಲ್ಲುದು; ನಾನಾದರೋ ಬೆಂಗಳೂರಿಂದ ಶಿವಮೊಗ್ಗೆಗೆ ಹೊರಟಿದ್ದೇನೆ, ಅಷ್ಟೆ!

ಂ ಂ

ಹಣವುಳಿಯಿತು!

ಆಗಾಗಲೇ ಮಡಿವಾಳ ಮಡಿಮಾಡಿದ ಬಟ್ಟೆಗಳನ್ನು ತಂದೊಪ್ಪಿಸಿದ. ರಾಮು ಅವನ್ನೆಲ್ಲಾ ಗಣಿಸುವಾಗ, ಒಂದು ಬಟ್ಟೆ ಕಡಿಮೆಯಿತ್ತು. ಎಂತಲೇ ತಂದೆಯೊಡನೆ ಹೇಳಿದ: ಅಪ್ಪಾ, ಒಂದು ಬಟ್ಟೆ ಕಡಿಮೆಯಿದೆ.

ತಂದೆ—ಬಾಯಿ ಬಡಬೇಡ; ಮಡಿವಾಳನಿಗೆ ಸಲ್ಲುವ ಹಣ ಕಡಿಮೆಯಾಯಿತು ತಾನೆ?

ಹಾಗಲ್ಲ, ನೀರಿಗೆ ಹಾಲು!

ಗೌಳಿಗನೊಬ್ಬ ತನ್ನ ಮಗನಿಗೆ ಬುದ್ಧಿ ಮಾದವನ್ನು ಹೇಳುತ್ತ ತಿಳಿಸಿದ: ಮಗು, ಎಂದಿಗೂ ಸುಳ್ಳನ್ನಾಡಬೇಡ.

ಮಗ - ಆಗಬಹುದು ಅದರೆ, ಯಾರಾದರೂ ಅಪ್ಪ ಹಾಲಿಗೆ ನೀರು ಬೆರಸುತ್ತಾರೆಯೇ ಎಂದರೆ, ಏನೆಂದು ಉತ್ತರಿಸಲಿ?

ಗೌಳಿಗ—ಇಲ್ಲ ಎನ್ನು; ಏಕೆಂದರೆ, ನಾವು ನೀರಿಗೆ ಹಾಲು ಬೆರೆಸುತ್ತೇವೆ ನೋಡು!

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದೆ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೭೪. ಬೆಲೆ ರೂ ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಚಿಕ್ಕ ಉಳಿತಾಯ

ಉಳಿತಾಯ ಯೋಜನೆಯು ನನ್ನ ಸ್ವಂತ ಯೋಜನೆ

ತೃಣದಿಂದ ತಯಾರಿಸಿದ ಹಗ್ಗದಿಂದ ನಾಗನನ್ನೂ ಬಂಧಿಸಬಹುದು!

ನಿಜ ಪರಿಮಾಣದ ಉಳಿತಾಯ ಯೋಜನೆಯು ಭಾರತದ ಎರಡನೇ ಪಂಚವಾರ್ಷಿಕ ಯೋಜನೆಯ ಅಂಗವಾಗಿದೆ, ಈ ಯೋಜನೆಯ ಪಲಕಾರಿಯಾಗಬೇಕಾದರೆ ದೇಶದ ದನಿಕರ ಮತ್ತು ಸಾಮಾನ್ಯ ಜನರ ಸಹಾಯ ಅವಶ್ಯಕ. "ಹನಿಗೂಡಿದರೆ ಹಳ್ಳ" ಎಂಬ ಉಕ್ತಿಯಂತೆ ಪ್ರತಿ ಪಂಚಾರದ ಚಿಕ್ಕ ಉಳಿತಾಯವು ಒಟ್ಟು ಗೂಡಿದರೆ ಕೋಟ್ಯಂತರ ದ್ರವ್ಯದ ದೊಡ್ಡ ಮೊತ್ತವಾಗಿ ದೇಶದ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುವ ದೊಡ್ಡ ಶಕ್ತಿಯನ್ನು ಕೊಡುವುದು

ಅಲ್ಪ ಉಳಿತಾಯ ಯೋಜನೆಯು ೧೯೩೮ನೆಯ ವರ್ಷದಲ್ಲಿ, ಯುದ್ಧ ನಿಧಿ ಸಂಗ್ರಹಕ್ಕಾಗಿ ಹುಟ್ಟಿತು. ಈ ಯೋಜನೆಯು ಸ್ವಾತಂತ್ರ್ಯ ಲಭಿಸಿದನಂತರ ಉತ್ಸಾಹಪೂರಿತ ಯೋಜನೆಯಾಗಿ ಪರಿಣಮಿಸಿದೆ ಇದು ದ್ವಿತೀಯ ಯೋಜನೆಯಲ್ಲಿ ದೇಶದ ಅಭ್ಯುದಯ ಕಾರ್ಯದಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ ಸಣ್ಣ ಉಳಿತಾಯವು ತೆಂಗಿನ ಗರಿಯನ್ನು ಸಡಿಲಿಸಿದೆ, ಹಣಕಾಸಿನ ವಿಚಾರದಲ್ಲಿ ಪರದೇಶದ ಸಹಾಯವನ್ನೇ ಕೇಳಿಕ್ಕಿಸಿ ಕುಳಿತ ಕೊಳ್ಳದೆ ಅಭಿವೃದ್ಧಿ ಕಾರ್ಯಗಳು ಮುಂದುವರಿಯುವಂತೆ ಮಾಡಿ, ಭಾರತದ ಪರಾಧೀನತೆಯ ಕಾರ್ಯದಲ್ಲಿ ನರವೇಯುತ್ತಿದೆ

ಮೈಸೂರು ರಾಜ್ಯದಲ್ಲಿ ಈ ಯೋಜನೆಯು ೧೯೩೬-೩೭ರಲ್ಲಿ ಪದಿನೇಳು ಜನರಿಂದ ಪ್ರಾರಂಭವಾಯಿತು. ೫೬ರ ವೇಳೆಗೆ ಅದು ನೂರು ಜನಗಳ ಸತತ ಪ್ರಯತ್ನದಿಂದ ನಿರ್ವಹಿಸಲ್ಪಟ್ಟುತ್ತಿದ್ದಿತು ಇದರಲ್ಲಿ ಮೈಸೂರು ಜಿಲ್ಲೆಯೊಂದರಲ್ಲಿಯೇ ೧೧೦ ಗ್ರಾಮಸನವರು ಎಲ್ಲಾ ತಾಲ್ಲೂಕುಗಳಲ್ಲಿಯೂ, ಪ್ರಚಾರ ಮತ್ತು ದೈವ್ಯಶೇಖರಣಾ-ಕಾರ್ಯದಲ್ಲಿ ನಿರಂತರಿರುತ್ತಾರೆ ಸರಕಾರದ ನೌಕರರೂ ಹಾಂಬಾ ಸಹಕರಿಸಿ ಸಹಾಯಮಾಡುತ್ತಿದ್ದಾರೆ

ಕ್ಷೀಣ ಕನ್ನಡ, ಕೊಡಗು ಈ ಪ್ರದೇಶಗಳಲ್ಲಿ ನಾವು ಸಂಚಾರಮಾಡಿದ ಸ್ವಲ್ಪ ಕಾಲದಲ್ಲಿಯೇ ಎರಡು ಲಕ್ಷ ರೂಪಾಯಿಗಳು ಸಂಗ್ರಹವಾದುದಲ್ಲದೆ ಒಂದು ಲಕ್ಷ ರೂಪಾಯಿಗಳಷ್ಟು ವಾಗ್ದಾನವೂ ಲಭಿಸಿತು ದಕ್ಷಿಣ ಕನ್ನಡ ಜಿಲ್ಲೆಗೆ 15 ಲಕ್ಷ ರೂಪಾಯಿ ಶೇಖರಣೆಯ ಗುರಿಯಿಡಲಾಗಿತ್ತು ಅದರಲ್ಲಿ ಹನ್ನೆರಡು ಲಕ್ಷದಷ್ಟು ಶೇಖರವಾಗಿದೆ ಒಂದು ಲಕ್ಷ ರೂಪಾಯಿಗಳ ವಾಗ್ದಾನವೂ ಆಗಿರುವುದರಿಂದ ಶೇಖರವಾದಲ್ಲಿಯೇ ನಮ್ಮ ಗುರಿಯನ್ನು ಸೇರುವೆನ್ನಬಹುದು ಕೊಡಗು ಜಿಲ್ಲೆಗೆ ಗೊತ್ತುಮಾಡಿರುವ ಹತ್ತು ಲಕ್ಷ ರೂಗಳ ವೈಕಿ ಆಗಲೇ ಐದು ಲಕ್ಷ ರೂಗಳು ಸಂಗ್ರಹವಾಗಿರುತ್ತವೆ

ಈ ಅಲ್ಪ ಉಳಿತಾಯ ಯೋಜನೆಯು ಮೊದಲು ಪ್ರಾರಂಭವಾದಾಗಿನಿಂದ, ಎಂದರೆ ೧೯೩೩ನೆ ಇಸವಿ ಅಕ್ಟೋಬರ್‌ನಿಂದ ೩೮ನೆ ಇಸವಿ ಜುಲೈ ೩೬ರ ವರೆಗೆ ಸುಮಾರು ತೊಂಬತ್ತೆರಡು ಲಕ್ಷ ರೂಪಾಯಿಗಳ ಶೇಖರವಾದಂತಾಗಿದೆ ೧೯೩೬ನೆ ಇಸವಿ ನವೆಂಬರು ಒಂದನೇ ತಾರೀಖಿನಿಂದ ೨೮ನೆ ಇಸವಿ ಜುಲೈ ೩೬ರ ವರೆಗೆ ಐವತ್ತೈದು ಲಕ್ಷದ ಇಪ್ಪತ್ತೆಂಟು ಸಾವಿರದ ನಾನೂರು ಐವತ್ತೈದು ರೂಪಾಯಿ ಸೇವಿಂಗ್ಸ್ ಸರ್ಟಿಫಿಕೇಟುಗಳ ಮೂಲಕ ಗಳಿಸಲಾಗಿದೆ ಈ ವೈಕಿ ಕಳೆದ ವರ್ಷದೊಂದರಲ್ಲಿಯೇ ಸುಮಾರು ಮೂವತ್ತುಮೂರು ಲಕ್ಷ ರೂಪಾಯಿಗಳ ಸರ್ಟಿಫಿಕೇಟುಗಳನ್ನು ವಿಕ್ರಯಿಸಲಾಯಿತು ಈ ವರ್ಷ ಏಪ್ರಿಲ್ ೧ರಿಂದ ಜುಲೈ ೨೬ರ ವರೆಗೆ ಹತ್ತು ಲಕ್ಷ ಮೂವತ್ತು ಸಾವಿರದ ಮುನ್ನೂರ ಮೂವತ್ತಾಲ್ಕು ರೂಪಾಯಿಗಳು ಶೇಖರವಾಗಿದೆ ಇದರಿಂದ ಜನಗಳ ಆಸಕ್ತಿಯು ಈ ಯೋಜನೆಯ ವಿಷಯದಲ್ಲಿ ಉತ್ಸಾಹಪೂರ್ಣವಾಗಿದೆ ಎಂಬುದು ವ್ಯಕ್ತವಾಗುತ್ತಿದೆ

ಅಲ್ಪ ಉಳಿತಾಯ ಯೋಜನೆಯ ಹೊಣೆಯ ಮಹಿಳಾ ಜನತೆಗೆ ಸೇರಿದುದಾಗಿದೆ ನಾವು ನಮ್ಮ ವ್ಯಯದಲ್ಲಿ ಮಿತ ಮಾಡುವುದನ್ನು ಅಭ್ಯಾಸಿಸಬೇಕು ಮಿತ ವ್ಯಯದಿಂದ ಉಳಿಸಿದ ಹಣವನ್ನು ಸರಕಾರದಲ್ಲಿ ಶೇಖರಿಸುತ್ತಲೋ ಅಥವಾ ಉಳಿತಾಯದ ಸರ್ಟಿಫಿಕೇಟ ಗಳನ್ನು ಕೊಳ್ಳುವ ಮೂಲಕ ಸರ್ಕಾರಕ್ಕೆ ಸಾಲಕೊಡುವುದರಿಂದಲೋ ಸಹಾಯಮಾಡಿದರೆ ನಮ್ಮ ಕಣಕ್ಕೆ ಬಡ್ಡಿಯೂ ಸೇರಿ ಅದು ಹೆಚ್ಚುವುದು.

"ಅಲ್ಪಾನಾಮತಿ ವಸ್ತೂನಾಂ |
ಸಂಹತಿಃ ಕಾರ್ಯಸಾಧಿಕಾ |
ತೃಣೈರಾವೇಷ್ಟ್ಯತೇ, ರಜ್ಜುಃ |
ಶಯನಾಗೋಪಿ ಬಧ್ಯತೆ —

ಎಂಬುದಾಗಿ ಆಯೋಕ್ತಿ ಇದೆ ನೊದೆ ಹುಲ್ಲು ಅಲ್ಪವಾದುದ. ಅಂದ ಅನೇಕ ನೊದೆ ಹುಲ್ಲುಗಳನ್ನು ಸೇರಿಸಿ ಹೊಸೆದ ಹಗ್ಗವು ಆನೆಯನ್ನೂ ಕಟ್ಟಿ ಹಾಕುವ ಶಕ್ತಿಯನ್ನು ಪಡೆಯುವುದು ಹಾಗಾಯೇ ದ್ರವ್ಯ ಶೇಖರಣೆಯೂ ಅಲ್ಪ ಸ್ವಲ್ಪ ಸೇರಿ ದೊಡ್ಡ ನಿಧಿಯಾಗುವುದು ಈ ವಿಷಯವು ನಮ್ಮ ಮಹಿಳೆಯರ ಮತ್ತು ಮಹನೀಯರ ಗಮನಕ್ಕೆ ಬಂದು ಅವರ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ಬರಬೇಕು ಅವರು ಉಳಿತಾಯ ಮಾಡುವ ಪ್ರತಿ ಆಣೆಯೂ ಜನತೆಯ ಉದ್ಧಾರಕ್ಕೆ ವಿನಿಯೋಗವಾಗುವುದೆಂಬ ದು ಅವರಿಗೆ ಮಂದಟ್ಟಾಗಿ ಅವರು ಇನ್ನು ಹೆಚ್ಚಾಗಿ ಉಳಿತಾಯ ಮಾಡುವುದನ್ನು ರೂಢಿಯಲ್ಲಿ ತಂದಬೇಕು. ದುಂದು ವೆಚ್ಚವಿಲ್ಲದ ಮಿತ ವ್ಯಯವು ದೇಶೋದ್ಧಾರಕ್ಕೆ ನೆರವಾಗುವುದು. ಏರುತ್ತಿರುವ ಧಾರಣೆ ವಾಸಿಗಳನ್ನು ತಡೆಗಟ್ಟುವುದು.

ಉಳಿತಾಯ ಯೋಜನೆ ನಮ್ಮ ಸ್ವಂತ ಯೋಜನೆ ಈ ಯೋಜನೆಗೆ ಸ್ತ್ರೀ ಸಮಾಜವು ದೃಢಚಿತ್ತವುಳ್ಳವರಾಗಿ ಸರ್ವ ಪ್ರಯತ್ನದಿಂದ ಸಹಾಯವಾಗಬೇಕೆಂದು ಕೋರುತ್ತೇವೆ ನಮ್ಮ ಮೈಸೂರು ರಾಜ್ಯವು ಇತರ ರಾಜ್ಯಗಳಿಗೆ ಮಾದರಿಯಾಗಲೆಂದೂ, ಮಾರ್ಗದರ್ಶಕವಾಗಲೆಂದು ಆಶಿಸುತ್ತೇವೆ, ಉಳಿತಾಯದ ಅಭ್ಯಾಸದಿಂದ ನಮ್ಮ ದೇಶದಲ್ಲಿರುವ ಬಡತನವು ಮಾಯವಾಗಿ ಜನರ ಆರೋಗ್ಯ ಭಾಗ್ಯವು ಹೆಚ್ಚಿ ಅವರ ಕುಂದು ಕೂರತೆಗಳು ನಾಶವಾಗುವುವು.

ಇತಿಹಾಸ

(೪ನೇ ಪುಟದಿಂದ)

ರ, ಕೆರೆಗಳು, ವಿದ್ಯಾಮಂದಿರಗಳು, ಬಾವಿಗಳು, ಜಲಮಾರ್ಗಗಳ ನಿರ್ಮಾಣ, ಧಾರ್ಮಿಕ ಸ್ಥಳಸಂರಕ್ಷಣೆ ಮೊದಲಾದ ಅನೇಕ ವಿಭಾಗಗಳಿದ್ದುವು ದುಃಖಿತರ ದುಃಖನಿವಾರಣೆ ಹಾಗೂ ಮೃತರ ಅಂತ್ಯ ಸಂಸ್ಕಾರಗಳೂ ಪ್ರಜಾತಂತ್ರದ ಹೊಣೆಯಾಗಿದ್ದುವು ಮತದಾನದಿಂದ ಚುನಾಯಿಸಿದ ಸದಸ್ಯರ ಮಂಡಳಿಯಿಂದ ಇವೆಲ್ಲವುಗಳ ಮೇಲ್ವಿಚಾರಣೆಯು ನಡೆಯುತ್ತಿತ್ತು ಕಾಲಾಂತರದಲ್ಲಿ ಈ ವ್ಯವಸ್ಥೆಯು ಲುಪ್ತವಾಗಿ ಹೋಯಿತು.

ಪ್ರಾಚೀನ ಭಾರತದ ಈ ಪ್ರಜಾತಂತ್ರಗಳ ಆಡಳಿತ ಕ್ರಮವನ್ನು ಅವಲೋಕಿಸುವಾಗ, ಇಂದು ನಮಗೆ ಯಾವ ರೀತಿಯ ಗ್ರಾಮ ಪಂಚಾಯತುಗಳು ಬೇಕು ಎಂಬುದನ್ನು ನಾವು ಬಯಸುತ್ತಿದ್ದೇವೆಯೋ ಅಂತಹುದೇ ಜಡಳಿತ ವ್ಯವಸ್ಥೆಯು ಹಿಂದಿನ ಕಾಲದಲ್ಲಿ ಇತ್ತು ಎಂಬುದನ್ನು ಸುಲಭದಲ್ಲಿ ಅರ್ಥಮಾಡಿಕೊಳ್ಳಬಹುದು ನಾಗರಿಕರ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಇಂತಹ ಗ್ರಾಮ ಸ್ವರಾಜ್ಯದ ಸ್ಥಾಪನೆಯೇ ಏಕಮೇವ ಸಾಧನವೆಂದು ಹೇಳುವುದ ದರಿ, ಅದರಲ್ಲಿ ಅತಿಶಯೋಕ್ತಿಯಿರುವುದಿಲ್ಲ ಆದುದರಿಂದ ನಾವೂ ಇಂದು ಇದೇ ರೀತಿಯ ಗ್ರಾಮ ಪಂಚಾಯತುಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ಇನ್ನೂ ಮುಂದಡಿಯಿಡಬೇಕು

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ, ಎಲ್‌ಎಲ್ ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾಧಾರಕ್ಕೆದ ಮೂಲಕ ವ್ಯಕ್ತವಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ

ಇದರಲ್ಲಿ ವರ್ಣಿಸಲಾದ ಅದ್ಭುತ ಸಾಹಸ, ಅಪರ ಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಳಿ ಕಾಗದ ಬೆಲೆ: ರೂ 1—12—0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಕವಿತಾ ವಿತಾನ

ಹೆಂಗಸರು

ನಾರಿಯಂನ್ನು ಪೂಜಿಸುವೆಡೆ
ದೇವತೆಗಳು ವಾಸಿಸುವರು

ಹೆಂಗಸರನು ಹೀಗಳೆಯುವ ಭಾವನೆ
ಇನ್ನೂ ಇನ್ನೂ ಹೋಗಿಲ್ಲ,
ಹೆಂಗಸರನು ಬಿಟ್ಟರೆ, ಮತ್ತೆಮಗೆ
ಯಾರೂ ಯಾರೂ ಗತಿಯಿಲ್ಲ;
ಹೊತ್ತಿಗೆ ಹೊತ್ತಿಗೆ ಕೂಳಿಲ್ಲ,
ನಮಗೂ ನಿಮಗೂ—ದಿಕ್ಕಿಲ್ಲ!

೦೦

ಜೀವನ-ಸಖಿಗಳ ಪೋಷಣೆಗೆಯ್ಯುವ
ತಾಯ್ಗಳೆ ಮಾದೇವಿಯರು;
ತಾಯ್ಗಳೆ ನಮ್ಮಯ ಬಾಳ ತುಂಬಿರುವ
ಮಮತೆಯ ವಂದಿರ, ಕಲ್ಪತರು:
ಅತ್ತರೆ, ಸತ್ತರೆ ಸರ್ವರೂ ನಾವು—
ತಾಯಿ-ಅಕ್ಕದಿರೆ ಅಳುವವರು,
ಎದೆಯುಮ್ಮಳವನ್ನೆರೆವವರು!

೦೦

ಹೆಂಗಸರೆಂದರೆ ದಾಸಿಗಳೆನ್ನುವ
ಕತ್ತಲೆಯುಗಕೋ – ಧಿಕ್ಕಾರ,
ಸ್ತ್ರೀಯರಿಗೆಂದೋ ಅಪೂರ್ವ ಗೌರವ—
ಅಂದೇ ಹೊಸಯುಗದವತಾರ:
ಅಂದೇ ಗೆಲುವುದು ಸಂಸಾರ,
ಅಂದೇ ಜೀವನ—ಜೀರ್ಣೋದ್ಧಾರ!

೦೦

ಊಟಕೆ-ಉಡಿಗೆಗೆ, ಆಟಕೆ-ನೋಟಕೆ
ನಿತ್ಯ-ನಿರಂತರ ನವಸೃಷ್ಟಿ;
ತಾಯ ಕಣ್ಣಳೇ ಸಾವಿರ ಯುಗಗಳ—
ಚಿತ್ರ-ಚಂದ್ರಮರ ಅಂತರ್ದೃಷ್ಟಿ.
ಎಲ್ಲೆಯ ತಾಯ್ಮಡಿ ಜೇನ್-ವೃಷ್ಟಿ!
ನಿತ್ಯ ನಿರಂತ—ನವಸೃಷ್ಟಿ!

—ಬಿ ಬಿ ಹಿಂಗಮಿರೆ, ಬಿ. ಎ,
ಅಧಣಿ.

ಗೋ ವಿಜಯ

ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ ಮಧ್ಯಸ್ಥರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅಧ್ಯಾಯ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಆದರ್ಶ ಜೀವನ

ರಾಷ್ಟ್ರಪ್ರಜೆಗಳ ಅಭಿವೃದ್ಧಿ ಹೇತು–ವಿಶ್ವೇಶ್ವರಯ್ಯಕೃತ ದ್ವಾದಶ ಜೀವನ ಸೂತ್ರಗಳು

ಅವನ್ನು ಅನುಸರಿಸುವಲ್ಲಿಯೇ ನಮ್ಮ ನಿನ್ನ ಉದ್ಧಾರಬೀಜ ಮಡಗಿದೆ

ಮೈಸೂರು ಸಂಸ್ಥಾನದ ನಿರ್ಮಾತೃರೂ ಶಿಲ್ಪಿಗಳೂ ಎಂದು ಹೆಸರಾದ ಭಾರತ ರತ್ನ ಡಾ. ಎಮ್. ವಿಶ್ವೇಶ್ವರಯ್ಯನವರ ೧೮೦ನೆಯ ಜನ್ಮದಿನೋತ್ಸವವನ್ನು ಬೆಂಗಳೂರಲ್ಲಿ ವಿಜೃಂಭಣೆಯಿಂದ ನಡೆಸಲಾಯಿತು. ತನ್ನ ಭಾಷಣದಲ್ಲಿ ಶ್ರೀ ವಿಶ್ವೇಶ್ವರಯ್ಯನವರು ಮಾನವರು ಯಾವರೀತಿಯಲ್ಲಿ ಬದುಕಬೇಕು ಮತ್ತು ದೇಶದ ಅಭಿವೃದ್ಧಿಗಾಗಿ ತಮ್ಮ ದೇಣಿಗೆಯನ್ನು ಹೇಗೆ ಸಲ್ಲಿಸಬೇಕು ಎಂಬುದನ್ನು ವಿವರಿಸುತ್ತ ಉತ್ತಮಜೀವನವನ್ನುಬದ ಕುವುದಕ್ಕಾಗಿ ದ್ವಾದಶ ಸೂತ್ರಗಳನ್ನು ರಚಿಸಿಕೊಟ್ಟಿದ್ದಾರೆ ನಾವು ಆ ನಿಯಮಗಳನ್ನು ಅನುಷ್ಠಾನಕ್ಕೆ ತಂದು ಆದರ್ಶ ನಾಗರಿಕರಾಗಿ ಜೀವಿಸುವ ಪ್ರಯತ್ನ ಮಾಡಬೇಡವೆ? ಆದಕ್ಕಾಗಿ ಆ ಹನ್ನೆರಡು ಸೂತ್ರಗಳನ್ನು ಇಲ್ಲಿ ಕೊಡುತ್ತೇವೆ. ಇವೆಲ್ಲವೂ ಉತ್ತಮ ಹಾಗೂ ಆದರ್ಶವಾಗಿದ್ದು ಅನುಕರಣೀಯವಿರುತ್ತವೆ.

(೧) ಪ್ರತಿಯೊಬ್ಬ ನಾಗರಿಕನೂ ಆದಷ್ಟು ಸುರಕ್ಷಿತ ಜೀವನವನ್ನು ನಡೆಸಲು, ಸಾಕಷ್ಟು ಆದಾಯ ನೀಡಬಲ್ಲಯೋಗ್ಯ ವೃತ್ತಿಯನ್ನು ಅವಲಂಬಿಸಬೇಕು.

(೨) ಪ್ರತಿ ವ್ಯಾಧಿ ವ್ಯಕ್ತಿಯೂ ದಿನಾಲೂ ನಿರ್ದಿಷ್ಟ ಅವಧಿಯನ್ನು ತನ್ನ ವೃತ್ತಿಗಾಗಿ ವಿನಿಯೋಗಿಸಬೇಕು. ಅಂದರೆ ದಿನಾಲೂ ಆರರಿಂದ ಎಂಟು ಗಂಟೆಗಳ ವರೆಗೆ ಅಥವಾ ಆರು ದಿನಗಳ ಒಂದು ವಾರದಲ್ಲಿ ೩೬ರಿಂದ ೪೮ ಗಂಟೆಗಳ ವರೆಗೆ ತನ್ನ ಉದ್ದಿಮೆಯಲ್ಲಿ ತೊಡಗುವದನ್ನು ಕಲಿಯಬೇಕು.

(೩) ಈ ಕೆಲಸವನ್ನು ನಿಯಮಿತವಾಗಿ ಶಿಸ್ತಿನಿಂದ ಸಮಾಜವು ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಮಾಡುತ್ತ ಹೋಗಬೇಕು.

(೪) ಕುಟುಂಬದ ಪರಿಸ್ಥಿತಿಯನ್ನು ತನ್ನ ಕುಟುಂಬದಲ್ಲಿಯ ಸ್ತ್ರೀಯರಾದಿಯಾಗಿ ಸಕಲರೂ ನಿಯಮಿತವಾಗಿ ನಿರ್ದಿಷ್ಟ ಅವಧಿಯ ವರೆಗೆ ಲಾಭದಾಯಕ ಕೆಲಸ ಮಾಡುವಂತೆ ಅವರ ಮನವೊಲಿಸಬೇಕು ಈ ವಿಷಯದಲ್ಲಿ ಗಿಡಿಯೂರದ ಉಪಯೋಗ ಪಡೆಯಬಹುದು.

(೫) ಪ್ರತಿಯೊಬ್ಬ ನಾಗರಿಕನೂ ಕೆಲಸಗಾರನೂ ತನ್ನ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳುವಂತೆ ತನ್ನ ದುಡಿಮೆಯ ನೀತಿಯನ್ನು ಇಟ್ಟುಕೊಳ್ಳಬೇಕಲ್ಲದೆ ಅದರಿಂದ ತನ್ನ, ತನ್ನ ಕುಟುಂಬದ ಹಾಗೂ ದೇಶದ ಉದ್ಧಾರವನ್ನು ಸಾಧಿಸಬೇಕು.

(೬) ಆತನು ತನ್ನ ಕಾರ್ಯಕ್ರಮಗಳಲ್ಲಿ, ಆಯಾಸನಗಳನ್ನು ನಡೆಸಿಕೊಡುವಲ್ಲಿ ತತ್ಪರನಾಗಿರಬೇಕು. ಪ್ರಾಮಾಣಿಕತನ, ಸತ್ಯ, ನಿಷ್ಠೆ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಂಡು ಬರಬೇಕು.

(೭) ನಮ್ಮಲ್ಲಿ ಸಾಂಘಿಕ ಶಕ್ತಿ ಬೆಳೆಯಬೇಕು ಅಂದರೆ, ನಾವು ನಮ್ಮ ಪರಿಷ್ಕರೊಡನೆ, ಸಹಕಾರಿಗಳೊಡನೆ, ಕೈಕೆಳಗಿನವರೊಡನೆ ಪರಿಣಾಮಕಾರಕವಾಗಿ ದುಡಿಯುವ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕು.

(೮) ರೈತರು ಕೂಲಿಕಾರರು ಮುಂತಾದವರಿಗೆ ಸ್ವಾವಲಂಬನ, ಮಿತವ್ಯಯ, ಸಮಯದ ಸದುಪಯೋಗ ಮುಂತಾದವನ್ನು ಕಲಿಸಬೇಕು ಪ ತಿಯೊಂದು ಶಾಲೆಯಲ್ಲಿ ಈ ಬಗ್ಗೆ ಆವಶ್ಯಕ ನಿಯಮಗಳನ್ನು ಹೇಳಿಕೊಡಬೇಕು

(೯) ವ್ಯವಹಾರದ ರೀತಿ ನೀತಿ, ಸಾಮಾಜಿಕ ನಡೆವಳಿಕೆ, ಶಿಸ್ತಿನ ಪದ್ಧತಿ ಮುಂತಾದವುಗಳನ್ನು, ಸಮಯ ಹಾಗೂ ಪರಿಶ್ರಮಗಳಲ್ಲಿ ಮಿತವ್ಯಯ ಸಾಧಿಸಲು ಅನುಕೂಲವಾಗುವಂತೆ ಪ್ರಮಾಣೀಕರಿಸಿ ಬೆಳೆಸಿಕೊಂಡು ಬರಬೇಕು.

(೧೦) ಪ್ರತಿಯೊಬ್ಬ ನಾಗರಿಕನೂ ಹೊಸ ಜ್ಞಾನವನ್ನು ಸಂಪಾದಿಸುವದಕ್ಕಾಗಿ ಮತ್ತು ವ್ಯವಹಾರದ ಜಗತ್ತನ್ನು ಅರಿತುಕೊಳ್ಳುವದಕ್ಕಾಗಿ ವಾರದಲ್ಲಿ ಕೆಲ ಸಮಯವನ್ನು ಮೀಸಲಾಗಿಡಬೇಕು. ತನ್ನ ಉಪಜೀವನಕ್ಕಾಗಿ ತಾನು ದುಡಿಯುತ್ತಿರುವದಿಲ್ಲ. ಆದರೆ ದೇಶದ ಸಮೃದ್ಧಿ ಹಾಗೂ ಸುಯಶಸ್ಸಿಗಾಗಿ ತಾನು ದುಡಿಯುತ್ತಿದ್ದೇನೆಂಬ ಭಾವನೆಯನ್ನು ಜಪಾನಿಗಳಂತೆ ನಾವೂ ಬೆಳೆಸಿಕೊಳ್ಳಬೇಕು.

(೧೧) ತನ್ನ ಆದಾಯ-ವೆಚ್ಚಗಳನ್ನು ಕಾಲಕಾಲಕ್ಕೆ ತನ್ನ ಸಹಕಾರಿಗಳ ಆದಾಯ ವೆಚ್ಚಗಳೊಡನೆ ಹೋಲಿಸಿ ನೋಡಿಕೊಳ್ಳಬೇಕು. ಪತ್ತು ಆಗಾಗ ಬೇರೆ ರಾಜ್ಯದ ಸುಧಾರಿಸಿದ ಜನರ ಆದಾಯ ವೆಚ್ಚಗಳೊಡನೆಯೂ ತನ್ನ ಗಳಿಗೆ—ಬಳಕೆಯನ್ನು ಹೋಲಿಸಿ ನೋಡಿಕೊಳ್ಳಬೇಕು.

(೧೨) ಈ ನಿಯಮಗಳನ್ನು ಅವಶ್ಯಕತೆಯಂತೆ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಪ್ರತಿ ವರ್ಷ ಇಲ್ಲವೆ ಪ್ರತಿ ಐದು ವರ್ಷಕ್ಕೊಮ್ಮೆ ಪುನರ್ವಿಮರ್ಶಿಸಬೇಕು.

ಈ ನಿಯಮಗಳು ನಮ್ಮ ಬಾಳ ಒಟ್ಟಿಯ ಮೈಲಿಗಲ್ಲುಗಳೆಂದು ಹೇಳಬಹುದು. ಆ ಆ ಪ್ರದೇಶದ ಅವಶ್ಯಕತೆಗೆಗೆ ತಕ್ಕಂತೆ ಇವನ್ನು ಮಾರ್ಪಡಿಸಿಕೊಳ್ಳಬಹುದು. ಆ ಆ ಪ್ರದೇಶದ ಹಿರಿಯರು ಸೇರಿ ಇಂಥ ಮಾರ್ಪಾಡುಗಳನ್ನು ಸಾಧಿಸಬಹುದು.

ನಿಮ್ಮಪ್ಪನ್ನಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಯಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
SUPERIOR
Crown RUBBER STAMP CO.
BALMATTA ROAD MANGALORE

ಶುದ್ಧ ಹರಟೆ

ಗುಂಡನಿಗೆ ತಾನು ಗಂಡೆಂದು ಅತುಲ ಆನಂದ!

ನಾಯಿಯಾಗಿ ಜನಿಸುವುದಾದರೂ ಗಂಡಾಗಿ ಹುಟ್ಟಿದರೆ, ಸುಹಾಭಾಗ್ಯ

ತಾನೂ ಒಬ್ಬ 'ಗಂಡು' ಎಂಬ ಹೆಮ್ಮೆಯಿಂದ ಗುಂಡ ಆಗಾಗ ಮೀಸೆಯ ಮೇಲೆ ಕೈಯಾಡಿಸುತ್ತಿದ್ದ! ಸೂರ್ವ ಜನ್ಮದಲ್ಲಿ ಭಾರೀ ಕರ್ಮ ಮಾಡಿದವರೇ ಇಲ್ಲಿ ಹೆಣ್ಣಾಗಿ ಹುಟ್ಟುತ್ತಾರೆಂಬುದು ಗುಂಡನ ಸ್ವಕಲ್ಪಿತ ಸಿದ್ಧಾಂತ. ಗಂಡಾಗಿ ಹುಟ್ಟಿ-ಇಲ್ಲದ ಅನ್ಯಾಯವನ್ನು ಮಾಡುವುದೇ ಪುರುಷಾರ್ಥವೆಂದು ತಿಳಿದ ಗುಂಡನಿಗೆ, ಇನ್ನೊಂದು ಜನ್ಮದಲ್ಲಿ ಅಂಥವರು ಏನಾಗಿ ಹುಟ್ಟುವರೋ ಎಂಬ ವಿಚಾರ ಮಾತ್ರ ತಿಳಿಯಬೇಕೆಂಬ ಆಗತ್ಯವಿರಲಿಲ್ಲ!— ಯಾಕೆಂದರೆ— ಅನ್ಯಾಯದ ಎಲ್ಲಾ ಕೆಲಸಗಳಲ್ಲಿ ಆತ ಸಾಕಷ್ಟು ಅನುಭವ ಪಡೆದು ಈಗ 'ಟೈಡರ್' ಆಫೀಸರನಾಗಿ ವಿಶ್ರಾಂತಿ ಪಡೆಯುತ್ತಿದ್ದ ಈ ವಿರಾಮ ಕಾಲದಲ್ಲಾದರೂ ತಾನು ಸ್ವಲ್ಪ ಪುಣ್ಯ ಸಂಪಾದನೆ ಮಾಡಬೇಕೆಂದು ಅವನ ಆಸೆ. ಹಾಗಾಗಿ ದೈವ ದೇವರ ಮೇಲೆ ಅವನಿಗೆ ಈಗೀಗ ಬಹಳ ಭಕ್ತಿ. ಒಂದು ವೇಳೆ ತಾನು ಸತ್ತ ಮೇಲೆ ದಾರಿ ತಪ್ಪಿ ನರಕಕ್ಕೆ ಬಂದುಬಿದ್ದರೆ?.... ಅಲ್ಲಿಯಮಧರ್ಮರಾಯನ ಮುಂದೆ ತಾನು ಮಾಡಿದ ಪುಣ್ಯ ಕೆಲಸದ ಕುರಿತು ತನ್ನ ಪಕ್ಷವಹಿಸಿ ಸಾಕ್ಷಿಹೇಳುವುದಕ್ಕೊಂದು ಜನ ಬೇಕಲ್ಲ!—ಆದಕ್ಕೆ ಬೇತಾಗಿ ಬದುಕಿದ್ದಾಗಲೇ ಆತ ದೇವರಿಗೆ ಬೇಕಾದಷ್ಟು ಹರಕೆ, ಪೂಜೆಗಳನ್ನು ಕೊಟ್ಟು ತನ್ನ ಭಕ್ತಿಯನ್ನು ಅವರಿಗೆ ಮೂರಿ, ದೇವರ ಪ್ರೀತಿ ವಿಶ್ವಾಸವನ್ನು ತಾನು ಗಳಿಸಿಕೊಳ್ಳುವ ಯತ್ನದಲ್ಲಿದ್ದ.

ದಿನವೂ ಜಪತಪ ಮಾಡಿ ದೇವರಿಗೆ ಮೂರು ಸುತ್ತು ಬಲಿತೆಗೆದು, "ಭಗವಂತಾ! ನನ್ನ ವಿಚಾರ ಏನೆಂದು ಹೇಳಲಿ?—ಎಲ್ಲವೂ ನಿನಗೆ ತಿಳಿದಿದೆ—ಆದ್ದರಿಂದಲೇ ನನ್ನದನ್ನು ನಿನ್ನ ಮುಂದೆ ಹೇಳುತಿದ್ದೇನೆ—ಅಷ್ಟೇನೂ ಪಾಪ ಮಾಡಿಲ್ಲ! ಮಾಡಿದ್ದರೂ -ಎಲ್ಲವನ್ನೂ ಒಂದು ದಿನ ನಿನ್ನ ಮುಂದೆ ಹೇಳಿ ಕ್ಷಮೆ ಕೇಳಿಕೊಳ್ಳಬೇಕೆಂದು ನಿರ್ಧರಿಸಿದ್ದೆ... ತಪ್ಪು ಮಾಡುವುದು ಮಾನವ ಸ್ವಭಾವ—ಕ್ಷಮಿಸುವುದು ನಿನ್ನ ಕರ್ತವ್ಯ! ನೀನೇ ಕರ್ಮಯೋಗದಲ್ಲಿ ಹೇಳಿರುವಂತೆ—ನಾನೂ ಪಾಪದ ಫಲಾಪೇಕ್ಷೆಯನ್ನು ಬಿಟ್ಟೇ.... ಅಪ್ಪಿತಪ್ಪಿ ಒಂದೆರಡು ಅನ್ಯಾಯ ಮಾಡಿದ್ದಿರಬಹುದು—ಅವೆಲ್ಲವೂ ನಿನಗೇ ಅರ್ಪಿತ...ಎಂದು, ಹಿಂದೆ ತಾನೇ ತಾನೆಂದು ಮಾಡಿದ ಪಾಪಕರ್ಮಗಳನ್ನು ಇಂದು ನೀನೇ ಪರಿಹರಿಸಬೇಕೆಂದು" ಬೇಡಿಕೊಳ್ಳುವಾಗ ಗುಂಡನ ಭಕ್ತಿಯಲ್ಲಿ ರಸ ಒಸರ ತಿತ್ತು. ದೇವರು ದಾಕ್ಷಿಣ್ಯ ಜೀವಿ, ಎಂದು ಗುಂಡನಿಗೂ ತಿಳಿದಿತ್ತು ಆದ್ದರಿಂದಲೇ ಅವರನ್ನು ತನ್ನ ಸ್ವಾರ್ಥಕ್ಕೇಮದ ಭಕ್ತಿಯ ಒಲೆಯೊಳಗೆ ಹಾಕಿಕೊಳ್ಳಲು ಯತ್ನಿಸುತ್ತಿದ್ದ.

ಇದಿಷ್ಟು ಕೆಲಸ ಅವನಿಂದ ಯಾವಾಗ ಆಯ್ತೆಂದ್ರೆ—ಸ್ಮಶಾನ ಯಾತ್ರೆಗೆ ಹೊರಡುವ ಸ್ವಲ್ಪ ದಿನಗಳಿಗೆ ಮೊದಲು ಅವರೆಗೆ ಗುಂಡ, ಮೀಸೆ ಬರುವಾಗ ಮೂಗಿನ ಪರಿಚಯವಿಲ್ಲದೆ ಮೆರೆದಾಡುವವರಂತೆ ಹಾರಾಡಿದ್ದ!

ಮೊದಲೇ ಹೇಳಿದಂತೆ ಗುಂಡನಿಗೆ ತಾನೊಬ್ಬ ಗಂಡು, ಎಂಬಿಷೇ ಹೆಮ್ಮೆ ಅಲ್ಲ—ಗಂಡು ಹೆತ್ತವರ ಮೇಲೆಯೂ ಅವನಿಗೆ ತುಂಬ ಅಭಿಮಾನ ಗಾಢವೇ ಇದೆಯಲ್ಲ—'ನಾಯಿಯ ಮರಿ ಆದರೂ ಗಂಡಾಗಿ ಹುಟ್ಟಬೇಕಂತೆ', ಈ ತತ್ವವನ್ನೂ, ಇದರಿಂದ ಸಿಗುವ ಪ್ರಯೋಜನವನ್ನೂ ಗುಂಡ ಚೆನ್ನಾಗಿ ಅರ್ಥಮಾಡಿಕೊಂಡಿದ್ದ. ಗಂಡು ಹೆತ್ತವರ ಮಕ್ಕಳು ವಿದ್ಯೆ ಕಲಿತು ದೊಡ್ಡ ದೊಡ್ಡ ಪದವೀಧರರಾದಾಗ ಕಣ್ಣು ಹೆತ್ತವರಿಂದ ಸಿಗುವ ಮಾನ, ಸನ್ಮಾನವನ್ನೂ ಕಂಡು ಗುಂಡ ಮರುಳಾಗಿದ್ದ. ನಸೀಬು ನೆಟ್ಟಗಿರುವಾಗ ಸಟ್ಟಾ ಲಾಟರಿಯಲ್ಲಿ ಸಾವಿರಗಟ್ಟಲೆ ಹಣ ಏಳಗಂಟೆನಲ್ಲಿ ಎನೂ ಕಷ್ಟವಿಲ್ಲದೆ ಸಿಗುವಂತೆ—ವರದಕ್ಷಿಣೆಯಾಗಿ ಹೆಣ್ಣು ಹೆತ್ತವರಿಂದ ಸಿಗುವಾಗ ತಾನೂ ಅವರ ದಕ್ಷಿಣೆಗೆ ಕೈಕೊಡಲು ಅರ್ಹನಾಗಿ ಗಂಡು ಜಾತಿಯಲ್ಲಿ ಹುಟ್ಟಿದೆನಲ್ಲಾ? ಎಂಬ ಹಿಗ್ಗು. ಒಂದು ವಿಧದ ಅಭಿಮಾನ ಗುಂಡನಿಗಿದ್ದರೆ ಯಾರಾದರೂ ಆಶ್ಚರ್ಯಪಡುವುದೇಕೆ? ಗುಂಡ ಹುಟ್ಟುವಾಗ ಒಬ್ಬನೇ ಹುಟ್ಟಿದನಂತೆ! ಅಂದರೆ ಅವನ ತಾಯಿತಂದೆಗೆ ಹುಟ್ಟಿದ ಮಕ್ಕಳಲ್ಲಿ ಗಂಡು ಅವನೊಬ್ಬನೆ'—ಆ ರೂ ಗುಂಡ ಅಷ್ಟು ಆಗ್ಗವಾಗಿ ಹುಟ್ಟಿಲ್ಲ! ತಂದೆತಾಯಂದಿರ ಪ್ರಯತ್ನವೇ ಗುಂಡನ ಜನನಕ್ಕೆ ಕಾರಣವಲ್ಲ. ದೇವರು ದಿಂಡರಿಗೆ ಎನ್ನೋ ಹರಕೆಳಿದ ಫಲವಾಗಿಯೇ ಗುಂಡ ಈ ಭೂಲೋಕಕ್ಕೆ ಬರುವಂಥವನಾದ? ಹರಕೆ ಹೇಳಿ ಹುಟ್ಟುವ

(೧೨ನೇ ಪುಟ ನೋಡಿರಿ)

ವಿಚಾರ ವರ್ಷ

ಆವಶ್ಯಕ ಪದಾರ್ಥಗಳ ಬೆಲೆಯಲ್ಲಿ ಸ್ಥಿರತೆಯಿರಲಿ

ಆಸನ, ವಸನ ಅಶ್ರಯವು ತುಟ್ಟಿಯಾದರೆ, ಜನಸಾಮಾನ್ಯರು ಕಂಗೆಟ್ಟು ಅನಾಚಾರಕ್ಕೂ ಬಲಿಬೀಳ ಬಹುದು.

ಪ್ರಪಂಚದಲ್ಲಿ ಜೀವನ ನಿರ್ವಹಿಸಬೇಕಾದರೆ, ಕಲವೊಂದು ವಸ್ತುಗಳು ಆವಶ್ಯಕವಾಗಿವೆ. ಪ್ರತಿ ವ್ಯಕ್ತಿಗೂ ತನ್ನದೇ ಆದ ಒಂದೊಂದು ಜೀವನ ಮಟ್ಟವಿರುತ್ತದೆ ಆಗ, ಎಲ್ಲರೂ ತನ್ನ ಶ್ರೇಣಿಯಲ್ಲಿ ಬರಬಹುದಾದ ಯಾವನೇ ಒಬ್ಬನಿಗಿಂತ ತಾನು ಕೀಳೆನಿಸಬಾರದೆಂಬ ಸಂಶೆ ಅಂತಹನಲ್ಲಿ ಸ್ವಾಭಾವಿಕವಾಗಿರುತ್ತದೆ ಅಲ್ಲದೇ ತನ್ನ ಜೀವನ ಮಟ್ಟವು ಇಳಿಯದೆ ಇನ್ನೂ ಉನ್ನತೋನ್ನತವಾಗಬೇಕೆಂಬ ಇರಾಡೆಯನ್ನಾತ ಇಟ್ಟುಕೊಳ್ಳುತ್ತಾನೆ ಮತ್ತು ಅದಕ್ಕಾಗಿ ತನ್ನ ಕೈಮೀರಿ ಪ್ರಯತ್ನ ನಡೆಸುತ್ತಾನೆ

ಆರ್ಥಿಕ ದೃಷ್ಟಿಕೋಣವನ್ನು ಕೊಂಡುಕೊಂಡು ಜನತೆಯನ್ನು ಉನ್ನತ ಮಧ್ಯಮ ಮತ್ತು ದರಿದ್ರವೆಂಬಂತಾಗಿ ಮೂರು ವಿಧವಾಗಿ ವರ್ಗೀಕರಿಸುತ್ತಾರೆ ಜಗತ್ತಿನ ಹೆಚ್ಚಿನ ಜನರು ಮಧ್ಯಮ ವರ್ಗಕ್ಕೆ ಸೇರುತ್ತಾರೆ ಶ್ರೀಮಂತರೂ ತೀರ ದರಿದ್ರರೂ ಬಹಳ ಕಡಮೆ. ಅವರವರ ವರ್ಗಕ್ಕನುಗುಣವಾಗಿ ಅವರವರ ಜೀವನೋಪಯೋಗಕ್ಕೆ ಆತ್ಯಾವಶ್ಯಕವೆನಿಸಿದ ವಸ್ತುಗಳೂ ಇರುತ್ತವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ

ಶ್ರೀಮಂತ ವರ್ಗದವರು ವಿಲಾಸದ ವಸ್ತುಗಳನ್ನು ಜೀವನೋಪಯೋಗಿ ಪದಾರ್ಥಗಳೆಂದು ತಿಳಿದ, ಅವುಗಳ ಮೌಲ್ಯವು ಸ್ಥಿರೀಕರಣಗೊಳ್ಳಬೇಕೆಂದು ಬಯಸಿದರೆ, ಸರಕಾರಕ್ಕೆ ಅವರಿಂದ ಹಾನಿಯಿದ ಆದರೆ, ಇದಕ್ಕೆ ವ್ಯತಿರೇಕವಾಗಿ ಈ ವಸ್ತುಗಳ ಮೂಲ್ಯದಲ್ಲಿ ಸ್ಥಿರತೆಯುಳಿಯದೆ ಹೋದರೆ, ಅವರು ತಮ್ಮ ಆವಶ್ಯಕತೆಯನ್ನು ಅಧಿಕ ಬೆಲೆ ತೆತ್ತಾದರೂ ಪೂರ್ಣವಾಗಿಕೊಳ್ಳಬಲ್ಲರು ಇದರ ಪರಿಣಾಮವಾದರೂ ಅವರ ಪ್ರತಿದಿನದ ವ್ಯವಹಾರದ ಮೇಲೆ ಬೀಳುವುದಿಲ್ಲ, ಹೀಗೆ, ಅಸ್ತ್ರತ್ಯಕ್ಷೋಪದಲ್ಲಿ ಸಂಕಾರದ ಆದಾಯವೂ ಹೆಚ್ಚುವುದು

ಸಾಮಾನ್ಯ ಜನತೆಯ ಜೀವನೋಪಯೋಗಿ ವಸ್ತುಗಳೆಂದು ತಿಳಿಯಲ್ಪಟ್ಟ ವಸ್ತುಗಳ ಬೆಲೆಯು ಬೆಳೆಯುತ್ತ ಹೋದರು ಪರಿಣಾಮವು ಬೇರೆಯಾಗುವುದು. ಭಾರತದಲ್ಲಿ ಸೇಕಡಾ ಎಪ್ಪತ್ತಂಷ್ಟು ಜನರು ಹಳ್ಳಿಗಳಲ್ಲಿ ನೆಲೆಯೂರಿರುವರು. ಇವರಲ್ಲಿ ಅರುವತ್ತೈದು ಶತಕಡ ಜನರು ಕೂಲಿ ಕೆಲಸವನ್ನು ಮಾಡಿ ಜೀವನ ಸಾಗಿಸುತ್ತಿರುವರು. ಅನ್ನ, ವಸ್ತ್ರ ಮತ್ತು ಆಶ್ರಯವೇ ಈ ಆಧಿಕ ಸಂಖ್ಯಾಕ ಜನರ ಆವಶ್ಯಕ ವಸ್ತುಗಳು. ಈ ಮೂರು ವಸ್ತುಗಳು ಮನುಷ್ಯನ ಮೂಲಭೂತ ಆವಶ್ಯಕತೆಗಳಲ್ಲಿ ಸಮಾವೇಶಗೊಳ್ಳುತ್ತವೆ. ಇವುಗಳಲ್ಲಿ ಯಾವುದಾದರೊಂದರ ಮೌಲ್ಯವು ಬೆಳೆಯಿತೆಂದರೆ, ಪರಿಣಾಮ ಭಯಂಕರವಾಗುವುದು. ಕೂಲಿಗಳ ಆದಾಯ ದಲ್ಲಿ ಒಂದು ಸ್ಥಿರತೆಯಿರುತ್ತದೆ; ಅದೆಂದಿಗೂ ಏರುವುದಿಲ್ಲ. ಅಂತಹರಿಗೆ ಬೇಕಾಗುವ ಆವಶ್ಯಕತೆಯ ಪದಾರ್ಥಗಳ ಪರಿಮಾಣದಲ್ಲಿಯೂ ಒಂದು ಸ್ಥಿರತೆಯಿದೆ. ಆದರೆ, ಈ ಪದಾರ್ಥಗಳ ಬೆಲೆಯಲ್ಲಿಯೂ ಸ್ಥಿರತೆಯೆಂಬುದು ಇಲ್ಲದೆ ಹೋದರೆ, ಅಂತಹ ಮನುಷ್ಯರಿಗೆ ಅನ್ಯಾಯವಾಗುವುದು ತನ್ನ ಆದಾಯವನ್ನೂ ಅವರು ಹೆಚ್ಚಿಸಿಕೊಳ್ಳಬಯಸುತ್ತಾರೆ: ತಾವು ಅದುವರೆಗೆ ಜೀವಿಸಿಕೊಂಡು ಬಂದಿದ್ದ ಸ್ತರದಿಂದ ಕೆಳಗಿಳಿಯಬಯಸದಿರುವುದರಿಂದ, ಅವರು ಒಹಳ ತ್ರಾಸಪಡಬೇಕಾಗುತ್ತದೆ ಹಾಗಿರುವಾಗ ಆವಶ್ಯಕ ಪದಾರ್ಥಗಳ ಬೆಲೆಯು ಏರಿತ್ತ ಹೋದಂತೆ ಅಧಿಕ ಸಂಖ್ಯಾಕ ಜನತೆಯು ಜೀವನ ಕ್ರಮವು ಕುಸಿಯುತ್ತ ಬರುವುದು ಇದರಿಂದಾಗಿ, ಅವರು ಕಲವೊಮ್ಮೆ ಅನಾಚಾರಕ್ಕೂ ಇಳಿಯಬೇಕಾಗುವುದು ಆಗ, ಸಮಾಜದಲ್ಲಿ ಅವರು ಅದುವರೆಗೆ ಉಳಿಸಿ, ಬೆಳೆಸಿಕೊಂಡು ಬಂದಿದ್ದ ಸ್ಥಾನಕ್ಕೂ ಎರವಾಗಬೇಕಾಗಿ ಬರುವುದು

ಭಾರತವನ್ನು ನಾವು ಉನ್ನತೀಕರಿಸಬೇಕೆಂದು ಬಯಸುವುದಾದರೆ, ಜನಸಾಮಾನ್ಯರ ಕಡೆಗೆ ನಮ್ಮ ಲಕ್ಷ್ಯವನ್ನು ಮೊತ್ತಮೊದಲಿಗೆ ಹರಿಸಬೇಕಾಗಿದೆ ಭಾರತದಂತಹ ದಟ್ಟದರಿದ್ರರ ನಿತ್ಯಕಂಗಾಲರ ದೇಶದಲ್ಲಿ ಹೆಚ್ಚಿನ ಬಾರತೀಯರ ಆದಾಯದಲ್ಲಿ ಒಂದು ಪರಿಮಿತಿಯಿರುವಾಗ, ಆ ಪರಿಮಿತಿಯನ್ನು ಮೀರಿ ಆದಾಯ ಹೆಚ್ಚುವುದಿಲ್ಲವಾದುದರಿಂದ ಅದರೊಳಗೇನೇ ಮರ್ಯಾದೆಯ ಜೀವನವನ್ನು ಭಾರತೀಯರು ಬದುಕಬೇಕಾಗಿರುವಾಗ, ಜೀವನಕ್ಕೆ ಆತ್ಯಂತಾವಶ್ಯಕ ಪದಾರ್ಥಗಳಾದ ಅನ್ನ, ವಸ್ತ್ರ ಮತ್ತು ಆಶ್ರಯಗಳ ಮೇಲೆ ಬೆಲೆಯನ್ನು ಸ್ಥಿರೀಕರಿಸುವುದು ಬೇರೆ ದೇಶಬೇಕಾಗಿಲ್ಲ ತಿಂಗಳೊಂದರ ೪೦-೫೦ ರೂಪಾಯಿ ಸಂಪಾದನೆಯುಳ್ಳ ಒಂದು ಸಸ್ಯರ ಕುಟುಂಬವು ಮನೆಯ ಬಾಡಿಗೆಯಾಗಿಯೇ ಲ—೧ ರೂಪಾಯಿಗಳನ್ನು ತೆರುವ ಅಗತ್ಯ ಬಿದ್ದರೆ, ಅಂತಹ ಕುಟುಂಬವು ನೈತಿಕವಾಗಿಯೂ ಸಾಮಾಜಿಕವಾಗಿಯೂ ಹೇಗೆ ಜೀವನ ಸಾಗಿಸಿ ಸಮರ್ಥವಾದಿಯಿಂದ ಬಾಳಬಹುದು? ಅಂತಹ ವೇಳೆಯಲ್ಲಿ ಆವಶ್ಯಕ ಪದಾರ್ಥಗಳ ಬೆಲೆಯು ಏರುತ್ತ ಹೋಗತೊಡಗಿದರೆ, ಈ ಸಂಸಾರದಲ್ಲಿ ಸಾರವೇನು ಉಳಿದೀತು? ಆದುದರಿಂದ ಜನಸಿತ್ಯೋಪಯೋಗಿ ಪದಾರ್ಥ—ಮುಖ್ಯವಾಗಿ ಅಶನ, ವಸನ ಮತ್ತು ಆಶ್ರಯಗಳ ಬೆಲೆಯು ನಿಮಿತಿಯಲ್ಲಿರುವುದು ಅಗತ್ಯ ಆದುದರಿಂದ, ಜನಹಿತ ಸಾಧಕ ಸರಕಾರದ ಕರ್ತವ್ಯಗಳಲ್ಲಿ ಇಂತಹ ಪದಾರ್ಥಗಳ ಬೆಲೆಯನ್ನು ಸ್ಥಿರೀಕರಿಸುವುದೂ ಒಂದೆಂದು ಧಾರಾಳವಾಗಿ ಹೇಳಬಹುದು ಜನೋನ್ನತಿಯಾದಂದೇ ದೇಶದುನ್ನತಿಯೆಂಬುದು ನೂರು ನೆಯೇ ಪೈಸೆಯಷ್ಟು ನಿಜವಿರುವಾಗ, ನಮ್ಮ ಸರಕಾರವೂ ಇತ್ತ ಗಮನವೀಯಬೇಕೆಂದು ಹೇಳುವ ಆವಶ್ಯಕತೆ ಮತ್ತೆ ಉಳಿದಿಲ್ಲ

ಪರಿಚಯ

ಕಾಂಗ್ರೆಸ್ ಅಧ್ಯಕ್ಷ ಧೇಬರರು ಜನಸೇವೆಗಾಗಿ ಬಂದರು

೫೪ ವರ್ಷ ತುಂಬುವ ಈ ವಾರದಲ್ಲಿ ಅವರಿಗೆ ಆಯುರಾರೋಗ್ಯ ಕೋರಬೇಕು



ಶ್ರೀ ಧೇಬರ್‌ರವರು ರಾಷ್ಟ್ರದ ಮತ್ತು ಕಾಂಗ್ರೆಸಿನ ಸೇವಕರಲ್ಲಿ ಒಬ್ಬರಾಗಿದ್ದಾರೆ ಸ್ವಾತಂತ್ರ್ಯ ಸಿಕ್ಕಿದ ಶರವಾಯ ಸೌರಾಷ್ಟ್ರದ ಸಂಸ್ಥಾನಗಳು ಒಂದರತವಲ್ಲಿ ಸೇರಿಸಲ್ಪಟ್ಟ ನಂತರ, ಇವರು ಸೌರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ೧೯೫೨ರ ಮಹಾಚುನಾವಣೆಯಲ್ಲಿ ವಿಜಯಿಯಾದ ಮೇಲೆ ಮಸ್ ಮುಖ್ಯ ಮಂತ್ರಿಗಳಾದರೆ ಹಾಗೂ ಜನವರಿ ೧೯, ೫೫ರಿಂದ ತಮಿಳ ಬಾರತೀಯ ಕಾಂಗ್ರೆಸಿನ ಅಧ್ಯಕ್ಷ ಪದವಿಯ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಾರೆ ಅವರ ವಿದ್ವತ್ತಿನ ಪರಿಚಯವನ್ನು ಕೊಡುತ್ತಾ, ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ನೆಹ್ರೂರವರು ಒಂದೆಡೆ ಹೀಗೆ ಹೇಳಿದ್ದರು: "ಶ್ರೀ ಧೇಬರರು ಕಾಂಗ್ರೆಸಿನ ಕಾರ್ಯವನ್ನು ಬಹುಮಾದ ಮಾದರಿಯಲ್ಲಿ ನಿರ್ವಹಿಸುತ್ತಿದ್ದಾರೆ ನನ್ನಲ್ಲಿ ಯಾವ ದೋಷವಿದೆಯೋ, ಅದು ಅವರಲ್ಲಿ ಒಂದು ವೇಳೆ ನನ್ನಲ್ಲಿ ಯಾವುದಾದರೂ ಗುಣವಿದ್ದರೆ, ಅದು ಅವರಲ್ಲಿ ಒಹಳ ಜಾಸ್ತಿಯಿದೆ"— ಈ ಮಾತುಗಳಿಂದ ನಾವು ಧೇಬಾರರ ವಿಷಯದಲ್ಲಿ ಹೆಚ್ಚಿನ ಪರಿಚಯವನ್ನು ಮಾಡಿಕೊಳ್ಳಬಹುದಾಗಿದೆ.

ಶ್ರೀ ಧೇಬರ್‌ರವರು ೨೧ನೇ ಸೆಪ್ಟಂಬರು ೧೦೦೫ರಷ್ಟು ಗಂಗಾ ಜಲ ಎಂಬ ಗ್ರಾಮದಲ್ಲಿ ಹುಟ್ಟಿದರು. ಇವರ ಶಿಕ್ಷಣವು ರಾಜಕೋಟ್ ಮತ್ತು ಮುಂಬಾಯಿಯಲ್ಲಿ ನಡೆಯಿತು. ಇವರು ಬಿ.ಎ., ಎಲ್‌ಎಲ್.ಬಿ ಪಾಸಾದ ನಂತರ ೧೯೩೬ರಲ್ಲಿ ವಕೀಲಿ ಕ್ಷೇತ್ರಕ್ಕೆ ಪ್ರವೇಶಿಸಿದರು ರಾಜಕೋಟ್ ಅವರ ಪ್ರಾರಂಭಿಕ ಕ್ಷೇತ್ರವಾಗಿತ್ತು. ಏಳು ವರ್ಷಗಳ ಪರ್ಯಂತರ ವಕೀಲಿ ನಡೆಸಿ, ಕೊನೆಗೆ ೧೯೩೬ರಿಂದ ಇವರು ಕಾಂಗ್ರೆಸ್ ಆಂದೋಲನದಲ್ಲಿ ಭಾಗವಹಿಸತೊಡಗಿದರು. ೧೯೩೭ರಿಂದ ೪೧ರ ವರೆಗೆ ಇವರು ಕಾಥಿಯಾವಾಡದ ರಾಜಕೀಯ ಪರಿಷತ್ತಿನ ಮಂತ್ರಿಗಳಾಗಿದ್ದರು ೧೯೩೮ರಲ್ಲಿ ರಾಜಕೋಟೆಯ ಸತ್ಯಾಗ್ರಹದ ಸಂಬಂಧದಲ್ಲಿ ಇವರು ೮ ತಿಂಗಳ ಕಾರಾಗೃಹ ಶಿಕ್ಷೆಗೆ ಒಳಗಾಗಬೇಕಾಯಿತು. ಅಲ್ಲದೆ ಇವರೊಡನೆ ಇವರ ಪತ್ನಿ ಹಾಗೂ ಇಬ್ಬರು ಮಕ್ಕಳು ಕೂಡಾ ಜೈಲುವಾಸವನ್ನನುಭವಿಸಿದರು. ೧೯೪೧ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಇವರು ೬ ತಿಂಗಳುಗಳ ತನಕ ಜೈಲಿನಲ್ಲಿದ್ದರು ಹಾಗೂ ೧೯೪೨ರ "ಭಾರತ ಬಿಟ್ಟು ತೊಲಗಿರಿ" ಆಂದೋಲನದಲ್ಲಿ ಇವರು ೩ ವರ್ಷಗಳ ತನಕ ಜೈಲಿನಲ್ಲಿರಬೇಕಾಯಿತು

ಶ್ರೀ ಧೇಬರ್‌ರವರು ಸರಳ ಹಾಗೂ ಸಾದಾ ಜೀವನವನ್ನು ಪ್ರಾರಂಭದಿಂದಲೂ ಸಾಗುತ್ತ ಬಂದವರು. ಇವರ ಗಂಡು ಹೃದಯ ಹಾಗೂ ಸಾಹಸ ಜೀವನ ಎಲ್ಲರಿಗೆ ಆದರ್ಶವಾಗಿದೆ ಇವರು ತನ್ನ ಕುರಿತೇ ಒಂದೆಡೆ ಹೀಗೆ ಹೇಳಿದ್ದಾರೆ. "ನನ್ನ ಜೀವನದ ಮೇಲೆ ಬಿದ್ದ ಮೂರು ಪ್ರಾಥಮಿಕ ಪ್ರಭಾವಗಳು ಪೊಂದಲನೆಯದಾಗಿ—ತಂದೆಯವರ ಬಡತನ ಹಾಗೂ ಸತ್ಯನಿಷ್ಠೆ, ಎರಡನೇದಾಗಿ ಕುಟುಂಬದ ಗಂಭೀರ ಹಾಗೂ ಸಾಧಾರಣ ಜೀವನ; ಕೊನೇದಾಗಿ—ಮಹಾತ್ಮಾ ಗಾಂಧೀಜಿ ಹಾಗೂ ಟಾಲ್‌ಸ್ಟಾಯರ ಕೃತಿಗಳು"

ಇವರು ಆವಡಿ ಕಾಂಗ್ರೆಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಾಗ ಅಕಸ್ಮಾತ್ ಇವರ ದೇಶದೇ ಚಕಿತಗೊಂಡಿತ್ತು. ವಾಸ್ತವವಾಗಿ ವಿಷಯವು ಕೂಡಾ ಸ್ವಲ್ಪ ಹಾಗೇ ಇತ್ತು. ಏಕೆಂದರೆ ಕಾಂಗ್ರೆಸಿನ ಇತಿಹಾಸದಲ್ಲಿ ಇದು ಹೊಸ ವಿಷಯವಾಗಿತ್ತು. ಇದರ ಮೊದಲು ಧೇಬರರು ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರಾಗಿರಲಿಲ್ಲ ಕಾಂಗ್ರೆಸ್ ಸಮಿತಿಯ ಮೊದಲು ಅವರಿಗೆ ಸಲಹೆ ಕೊಡುವ ರೂಪದಲ್ಲಿಯೂ ಅದಿನೇರನಕ್ಕೆ ಬರಲು ಕರೆಕೊಡಲಿಲ್ಲ ಹಾಗೂ ಕಾಂಗ್ರೆಸ್ ಮಹಾ ಸಮಿತಿಯಲ್ಲಿ ಕೂಡಾ ಇವರು ಯಾವ ಸದಸ್ಯರೂ ಆಗಲಿಲ್ಲ ಆದರೂ ಕೂಡಾ ಇವರು ಕಾಂಗ್ರೆಸಿನಟಂನೇ ಅಧಿವೇಶನದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು ಆದರೆ ಧೇಬರ್ ಆ ಗುರುತರವಾದ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸಿ, ಯಶಸ್ವಿಗಳಾದರು. ಇವರು ವಿಶಾಲವಾದ ಆಗಸದಿಂದ ಜನ ಸೇವೆಗಾಗಿಯೇ ತೂರಿಬಂದ ತಾರೆ.

ಜನವರಿ ೧೧, ೧೯೫೫ರಿಂದ ಇವರು ಈ ಹೊಣೆಗಾರಿಕೆಯ ಪದವಿಯನ್ನೂ, ಕಾರ್ಯವನ್ನೂ ಬಹಳ ದಕ್ಷತೆಯಿಂದ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಈಗಾಗಲೇ ದಿನದಿಂದ ದಿನಕ್ಕೆ ಜನತೆಯ ಪ್ರೀತಿಗೆ ಪಾತ್ರರಾಗಿ ಲೋಕ ಪ್ರಿಯತೆ ಪಡೆದಿದ್ದಾರೆ. "ಶ್ರೀ ಪರಮಾತ್ಮನು ಮಾನ್ಯ ಧೇಬರ್‌ರವರಿಗೆ ದೀರ್ಘಾಯುಸ್ಸನ್ನು ಕೊಡಲಿ" ಎಂಬುದೇ ಅವರ ಜನ್ಮದಿನದಂದು ನನ್ನೆಲ್ಲರ ಆಕಾಂಕ್ಷೆಯಾಗಿದೆ.

(ಆಧಾರ)

—ಎನ್. ನಾರಾಯಣ

ಕುಮಾರಿ ಪಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ಕೃಷ್ಟ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ವಿ ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಯಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3618

UDIPI, THURSDAY
25—9—1958

LICENSE NO. 31
Licensed to Post without Prepayment

ಇದು ಶುದ್ಧ ಹರಟೆ

(ಗಂಸೇ ಪುಟದಿಂದ)

ರಲ್ಲಿ ಸರ್ವಸಾಮಾನ್ಯ ಸೋಮಾರಿಗಳೇ ಹೆಚ್ಚು. ಯಾಕೆಂದರೆ ಇಂಥವರ ಹುಟ್ಟಿಗೆ ಕಾರಣನಾದ ದೇವನೂ ಸೋಮಾರಿಯಲ್ಲವೇ?

ಹರಕೆಹೇಳಿ ಹುಟ್ಟಿದ ಗುಂಡ ತಾಯಿ ತಂದೆಯ ಪ್ರೀತಿಯ ಪುತ್ರನಾಗಿದ್ದ. ಗುಂಡನ ಜನನ ನಕ್ಷತ್ರ,—ಭರಣಿಯಂತೆ! 'ಭರಣಿಯಲ್ಲಿ ಹುಟ್ಟಿದವ ಧರಣಿ ಆಳುವ' ನೆಂದು ಹೇಳಿದ ಭಟ್ಟರ ಬಟಾಟೆಯನ್ನು ಕೇಳಿ ಗುಂಡನ ತಾಯಿ-ತಂದೆ ಉಬ್ಬಿದ ಉಂಡೆಯಾದರು! ಆದರೆ ತಮ್ಮ ಸ್ವಂತ ಮಗನೇ ಧರಣಿಯನ್ನಾಳುವಾಗ ತಾವೂ ಆತನ ಕೈಳಗಿನವರಾಗಿದ್ದರೆ, ಇಲ್ಲದ ಮರ್ಯಾದೆಗೆ ಭಾರೀ ಧಕ್ಕೆಯಾದೀತೆಂಬ ಭಯದಿಂದ ಬೇಗನೆ ಯಮಸಿಂದ 'ಗೇಟ್ ಪಾಸ್'ನ್ನು ತರಿಸಿಕೊಂಡು ಅವರು ಪರಲೋಕ ಯಾತ್ರೆಗೆಂದು ನೆಟ್ಟಗೆಕಟ್ಟಿದ್ದರು.

ಹೀಗೆ, ಹರಕೆಹೇಳಿ ಹುಟ್ಟಿದ ಗುಂಡ ತಾಯಿ ತಂದೆಯನ್ನಂತೂ ಬೇಗನೆ ಮುಕ್ತಿತಿಂದ ಭರಣಿಯಲ್ಲಿ ಹುಟ್ಟಿದ ಗುಂಡ ಧರಣಿ ಆಳುವ ಮಾತು, ಅವನ ಜಾತಕ ನೋಡಿದ ಭಟ್ಟರೂ ಮರೆತುಹೋಗಿತ್ತು. ಹೀಗಾಗಿ ಆತ ಮದುವೆಯಾಗಿ ತರುಣಿಯನ್ನಾದರೂ ಆಳಬೇಕೆಂಬ ಯೋಜನೆಗೆ ಬಂದ. ಈಗಿಗ ಗುಂಡನ ತಾಪತ್ರಯವೂ ಕಜ್ಜಾಯಿತು! ಹಾಗೆಯೇ ಗುಂಡ, ಕನ್ಯಾಪಿತೃಗಳ ಮುಂದೆ ತಲೆಎತ್ತಿ ನಡೆಯಲಾರಂಭಿಸಿದ. ಹೆಣ್ಣಿಗೆ ಕೈಕೊಟ್ಟು-ಅಲ್ಲ-ಕೈಹಿಡಿದು ಗುಣ್ಣನಕಡೆಯಿಂದ ಸಿಗುವ ವರದಕ್ಷಿಣೆಯಿಂದ !ಕೆಲವು ತಿಂಗಳಾದರೂ ತಾನು 'ಇಸ್ಟೇಟ್' ರಾಜನಾಗಿ ಮೆರೆದಾಡಬಹುದಲ್ಲಾ! ಎಂದು ಗುಂಡನ ಯೋಚನೆ.

ಹೇಗಿದ್ದರೂ ಈ ವರದಕ್ಷಿಣೆ ಪಡೆಯುವ ಭಾಗ್ಯ, ಯೋಗ್ಯತೆ ನನಗೂ ಇದೆಯಲ್ಲಾ, ಎಂದೇ ಗುಂಡನಿಗೆ ತಾನೂ ಒಬ್ಬ ಗಂಡು ಎಂದು ಹೆಮ್ಮೆ! ಜೀವನದಲ್ಲಿ ಇಷ್ಟನ್ನೇ ಪಡೆದರೆ ಸಾಕೆಂದು ಬಗೆದು—'ಹುಟ್ಟುವುದಾದರೆ ಗಂಡಾಗಿ ಹುಟ್ಟಬೇಕು' ಎಂದು ಗುಂಡ ಆಗಾಗ ಹೇಳುವುದುಂಟು. ಬ್ರಹ್ಮನೂ ಗಂಡನಿಗೆ ಒಂದು ಹೆಣ್ಣನ್ನು ಗಂಟುಹಾಕಿಡಲು ಮರೆಯಲಿಲ್ಲ! ಹೀಗೆ ಗುಂಡನ ಮದುವೆಯೂ ಆಯ್ತಲ್ಲಾ! ಮದುವೆಯ ಕಾಲ ಗುಂಡ ಬಹಳ ಗಂಡಾಂತರದಲ್ಲಿದ್ದ. ಪಾಪ ಅವನ ಅಡಚಣೆ ಅಷ್ಟಿಷ್ಟೆಂದು ಹೇಳುವುದೇ ಬೇಡ. ಆ ಸಮಯ ಅವನಿಗೆ ಮದುವೆಯಾಗದೆ ಬಾಕಿ ಉಳಿಯುತ್ತಿದ್ದರೆ ಆಳದು ಉಳದ ಸ್ವಲ್ಪ ಮರ್ಯಾದೆಯೂ ಹೋಗುತಿತ್ತೊ! ಏನೋ! ಹುಟ್ಟಿಸಿದ ದೇವ ಹುಲ್ಲು ಮೇಯಸಲಾರ'ನೆಂಬ ಮಾತಿನ ಸತ್ಯವನ್ನು ಆ ವೇಳೆ ಸೂರಾ ನಂಬಿದ್ದ ಗುಂಡ ಹುಟ್ಟಿದಾರಭ್ಯ ಒಂದೇ ಒಂದು ವೈ ಕೂಡ ಆತ ಸಂವಾದನೆ ಮಾಡಿಲ್ಲ ಅಲ್ಲ—ಕೆಲಸ ಮಾಡದೆ ತಿನ್ನುವುದಕ್ಕೂ ಪುಣ್ಯ ಬೇಕಪ್ಪ!-ಏನೋ ಹಿರಿಯರು ಮಾಡಿಟ್ಟುದುದನ್ನೇ ಆತ ಕರಗಿಸುವ ಭಾಗ್ಯವಂತನಾಗಿದ್ದ. ಗುಂಡ ಮದುವೆಯ ದಿನ,—ಕಚ್ಚೆ ಹಾಕಲು ಬೇಕಾದ ಸಂಚಿಯನ್ನೂ ಕಮ್ತಿಯರ ಅಂಗಡಿಯಲ್ಲಿ ಮೂರುದಿನದ ವಾಯಿದೆಗೆ ಕಡ ತಂದಿದ್ದ. ಹಂಡೆ ಎಂದೇನು? ಎಲ್ಲವೂ ಅಷ್ಟೆ! ಹೆಚ್ಚೇಕೆ ಮದುವೆಯ ಆಮಂತ್ರಣವನ್ನೂ ಪ್ರಿಂಟ್‌ಮಾಡಿಸಲು ಉಸಾಯವಿಲ್ಲದೆ ಗುಂಡ ಕಣ್ಣು ಬಾಯಿ ಬಿಟ್ಟಾಗ, ಸಿರಿಮನೆಯ ಗೋಪು ನಾಳಿನ ಭರವಸೆಯಿಂದ ಹತ್ತು ರೂಪ್ಯಾ ತೆಗೆದುಕೊಟ್ಟಿದ್ದ. ಗುಂಡಾಗಿ ಹುಟ್ಟಿದ ಗುಂಡನ ಆವಸ್ಥೆ ಇಲ್ಲಿಯವರೆಗೆ ಬಂದುಮುಟ್ಟಿತ್ತು! ಮದುವೆಯಾದರೂ ಅವನಿಗೆ ಸುಖಉಂಟೆಂದು ನಂಬಿದಿರಾ?

ಮದುವೆಯ ಮರುದಿನವೇ ಅವನನ್ನು ಕಾಣಲು ಒಬ್ಬೊಬ್ಬರೇ ಮನೆಯವರೇಗೂ ಬಂದರು. ಗುಂಡ ಹಾಗೆಲ್ಲ ಧಕ್ಕನೆ ಸಿಗುವ ಆಸಾಮಿಯಲ್ಲ. ಮದುವೆಯಾದ ಮೊದಲಿಗೇ ಕೈಹಿಡಿದವಳ ಮುಂದೆ ಎಲ್ಲಿ ತನಗೆ ಪಾದುಕಾಪೂಜೆಯಾಗುವುದೋ ಎಂಬ ಭಯದಿಂದ ಬಂದವರಿಗೆಲ್ಲ ಕೊಟ್ಟು ಹಿಂದೆ ಕಳುಹಿದ. ಹೀಗೆ ಸಿಕ್ಕಿದುದರಲ್ಲಿ ಕೆಲವಂಶ ಸಾಲ ಸಂದಾಯಮಾಡ್ಕಾಯ್ತು. ಮತ್ತೆ?—ಮತ್ತೇನು ಕೈಹಿಡಿದವಳ ಕರಿಮಣಿಯೋ—ಮೂಗುತಿಯೋ ಹೇಗೂ ಇದೆಯಲ್ಲಾ? ಉಳಿದ ಅಡಚಣೆಗೆ ಅವನ್ನು ಬೇಕಿಗೆ ಮುಟ್ಟಿಸಿದರಾಯ್ತು! ಇದ್ದುದನ್ನು ತೆಗೆಯುವ ಹಕ್ಕು ಪೂರಾ ಗಂಡಿಗೆ ಇದೆಯಷ್ಟೆ! ಗಂಡಾಗಿ ಹುಟ್ಟಿದರೆ ಸಾಕು ಅವನಿಗೆಒಂದಲ್ಲ ಒಂದು ವಿಧದ ಅನುಕೂಲ ಪರಿಸ್ಥಿತಿ ಬಂದೇ ಬರುತ್ತದೆ—ಎಂದೇ ಗುಂಡನ ನಂಬಿಕೆ. ಹೀಗೆಲ್ಲಾ ಅನುಕೂಲವಿರುವಾಗ, ಹುಟ್ಟುವುದಾದರೆ ಗಂಡಾಗಿ ಹುಟ್ಟಬೇಕೆಂಬುದು ಗುಂಡನ ವಾದ! ಇಂಥವರ ಕೈಹಿಡಿವ ಭಾಗ್ಯವಂತೆಯರು ಮಾತ್ರ—ತಮ್ಮ ಮರ್ಯಾದೆ ಎನಾದರೂ ಇದ್ದರೆ—ಅದನ್ನು ತವರುಮನೆಯಲ್ಲೇ ತೆಗೆದಿಟ್ಟುಬರುವುದು ಲೇಸು! ಗುಂಡನೊಬ್ಬನನ್ನೇ ದೂರುವುದೇಕೆ? ಅವನ ಸಮಾನಬುದ್ಧಿಯ ಸಹೋದರರು ನಮ್ಮಲ್ಲಿ ಹಲವರಿಲ್ಲವೇ?

— ಕೆ. ಜೆ. ಶೆಟ್ಟಿ, ಕಡಂದಲೆ.

ಕೆಂಚಿನ ಡಚ್ಚೆಸರು ಗ್ರೇಟ್ ಬ್ರಿಟನ್ನಿನ ಕುಮಾರಿ ಆಂಜೆಲ ಬುಕ್ಕಿಟನ್ (ಎಡಪಕ್ಕ) ಮತ್ತು ಅಮೆರಿಕೆಯ ಕುಮಾರಿ ಅಲ್ಲಿಯ ಗಿಬ್ಸನ್ (ಬಲಪಕ್ಕ)ರು ಸ್ಕ್ರೀಯರ ಟೆನ್ನಿಸ್ ಡಬ್ಬಲ್ಸ್‌ನಲ್ಲಿ ವಿಂಬ್ಲೆಡನ್ನಿನಲ್ಲಿ ಗೆದ್ದನಂತರ ಬಹುಮಾನವನ್ನು ಹಂಚುತ್ತಿರುವುದು.

ಆರೋಗ್ಯ ರಕ್ಷಣೆ

ಜನತೆಯ ಆರೋಗ್ಯ-ರಕ್ಷಣೆಯು ಸರಕಾರದ ಕೆಲಸಮಾತ್ರವಲ್ಲ

ದೇಶದ ವಿವಿಧ ಭಾಗಗಳ ವಿವಿಧ ವೈದ್ಯರೂ ಸರಕಾರದೊಡನೆ ಅನಿವಾರ್ಯ ಸಹಕರಿಸಬೇಕು

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ನವದೆಹಲಿಯಲ್ಲಿ ನೇರಿದ್ದ ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ ಭವನದ ಅಡಿಗಲ್ಲಿಡುವ ಸಂದರ್ಭದಲ್ಲಿ ಭಾರತದ ಬೇರೆ ಬೇರೆ ಭಾಗಗಳಿಂದ ಆಗಮಿಸಿದ ಡಾಕ್ಟರರನ್ನು ಉದ್ದೇಶಿಸಿ, ಅವರು ತ್ಯಾಗ ಮತ್ತು ಅನಾಸಕ್ತ ಭಾವನೆಗಳಿಂದ ದೇಶದ ಜನತೆಯ ಸೇವೆಯನ್ನೈಗಬೇಕೆಂದು ಉಪದೇಶಿಸಿದರು.

ಭಾರತೀಯ ಯೋಜನೆಯಲ್ಲಿ ಅಡಕವಾದ ನಮ್ಮ ಧ್ಯೇಯ ಗಳಲ್ಲಿ ರೋಗಗಳನ್ನು ಸಂಪೂರ್ಣವಾಗಿ ದೂರೀಕರಿಸುವುದೂ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಅತ್ಯುತ್ತಮ ರೀತಿಯ ಚಿಕಿತ್ಸೆಗಳನ್ನು ಒದಗಿಸುವುದೂ ಸೇರಿಕೊಂಡಿದೆ ದೇಶದಲ್ಲಿರುವ ರೋಗಗಳನ್ನು ಹೊಡೆದೋಡಿಸುವ ಮಹಾ ಕಾರ್ಯದಲ್ಲಿ ದೇಶ ಡಾಕ್ಟರರ ಸಹಾಯವೂ ಮಹತ್ವಪೂರ್ಣವಾಗಿದೆಯೆಂಬುದಾಗಿ ಡಾ. ರಾಜೇಂದ್ರ ಪ್ರಸಾದರು ತಿಳಿಸಿದರು.

ಇಂದು ನಮ್ಮ ದೇಶದಲ್ಲಿ ಚಿಕಿತ್ಸೆ ಮತ್ತು ಸಾಮಾಜಿಕ ಆರೋಗ್ಯಪಾಲನೆಗಾಗಿ ಒದಗಿಸಿರುವ ಸೇವಾ ಸೌಲಭ್ಯಗಳು ಹೆಚ್ಚಿರುವುವಾದರೂ ಅವು ನಮ್ಮ ಜನತೆಯ ಆವಶ್ಯಕತೆಯ ಮಟ್ಟಕ್ಕೆ ಹೋಲಿಸಿದಾಗ, ಸರ್ಯಾಪ್ತವಾಗಿರುವುದಿಲ್ಲ. ನಮ್ಮ ಆರೋಗ್ಯ ಪ್ರಗತಿಯು ಇದೇ ಮಟ್ಟದ ಗತಿಯಲ್ಲಿ ನಡೆಯುತ್ತ ಹೋಗುವುದಾದರೆ ಅದು ಸಂತೋಷಜನಕ ವಿಷಯವಲ್ಲವೆಂದವರು ಅಭಿಪ್ರಾಯಪಟ್ಟರು.

ಚಿಕಿತ್ಸಾ ವ್ಯವಸ್ಥೆಯ ಸೌಕರ್ಯಗಳನ್ನು ಜನತೆಗೆ ಕಲ್ಪಿಸಿಕೊಡುವುದು ಸರಕಾರದ ಕೆಲಸವೆಂಬುದಾಗಿ ಜನತೆಯು ಭಾವಿಸಿದಂತೆ ನಮ್ಮ ಪರಿಸ್ಥಿತಿಯಿದೆ. ಆದರೆ ಈ ದೃಷ್ಟಿಯು ಸಮಂಜಸವೆಂದು ಅನಿಸಬರುವುದಿಲ್ಲ. ಮುಖ್ಯವಾಗಿ ಜನತೆ ಸರಕಾರದ ಕೆಲಸವೆಂದಾದರೂ ಚಿಕಿತ್ಸಾ ವ್ಯವಸ್ಥೆಯ ದಲ್ಲಿ ತೊಡಗಿರುವ ಜನರು ದೇಶದ ರೋಗದೂರೀಕರಣದ ಮಹಾ ಸಾಹಸದಲ್ಲಿ ಮತ್ತು ಸಾರ್ವಜನಿಕ ಸ್ವಾಸ್ಥ್ಯ ಸೇವೆಗಳನ್ನು ವಿಕಾಸಗೊಳಿಸುವುದರಲ್ಲಿ ಸರಕಾರದೊಡನೆ ಸಹಕರಿಸುವುದು ಅವಶ್ಯಕವಿದೆಯೆಂದು ರಾಷ್ಟ್ರಪತಿಯವರು ಹೇಳಿದರು.

ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ನಿನ ಸೇವೆಯನ್ನು ಪ್ರಶಂಸಿಸುತ್ತ ಮಾನ್ಯ ರಾಷ್ಟ್ರಪತಿಯವರು ಎಸೋಸಿಯೇಶನ್ ತನ್ನ ಸ್ಥಾಪನೆಯಾದಂದಿನಿಂದ ಮೂವತ್ತು ವರ್ಷಗಳಲ್ಲಿ ಚಿಕಿತ್ಸಾ ವ್ಯವಸಾಯಕ್ಕೆ ಮಹತ್ವ ಪೂರ್ಣಸೇವೆಸಲ್ಲಿಸಿದೆ; ಅದು ಕೇವಲ ಚಿಕಿತ್ಸೆ ಮತ್ತು ವೈದ್ಯಕೀಯ ಸಂಬಂಧಿತ ಕಾರ್ಯಗಳಲ್ಲಿಮಾತ್ರ ನಿಮಗ್ನವಾಗಿರದೆ, ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣಗಳನ್ನು ಸುದೃಢವಾದ ಆಧಾರದ ಮೇಲೆ ನಿಲ್ಲಿಸಿದೆಯೆಂದರು.

ವೈದ್ಯರ ಪ್ರಧಾನ ಸಂಘವಾದುದರಿಂದ, ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ ವ್ಯವಸಾಯದಲ್ಲಿ ಮಾರ್ಗದರ್ಶಕನದ ಅಂತರ್ಕಾಲೀನ ಸ್ಥಿತಿಯಲ್ಲಿ ಸರಕಾರದೊಡನೆ ಸಹಕರಿಸುವ ಅತ್ಯಧಿಕ ಹೊಣೆಯನ್ನು ಹೊರಬೇಕಾಗಿದೆ ಎಂದು ಸೂಚಿಸಿದರು.

ಜನಪ್ರಿಯ ಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎಂ. ಎಸ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga press Udipi S. India

ನ್ಯಾಯದಾನ

ಚಂದಾರೂ 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮ ವಾರ ೫ 2-10-1958 Vol 38 No 5.

ನ್ಯಾಯದಾನ

ನ್ಯಾಯಾಂಗವು ಶಾಸನಾಂಗಕ್ಕೆ ಸಂಪೂರ್ಣ ದೂರನಿರಬೇಕು

ತನ್ನ ತಪ್ಪಿಗೆ ಶಾಸನಾಂಗವು ನ್ಯಾಯಾಂಗವನ್ನು ದೂರುವುದು ಅವಿವೇಕದ ಪರಮಾವಧಿ! ತಜ್ಞರಿಂದ ನ್ಯಾಯಶಾಸ್ತ್ರವು ಪುನರ್ಘಟಿತವಾಗಲಿ

ಇತ್ತೀಚೆಗಿನ ದಿನಗಳಲ್ಲಿ ಅತ್ಯಂತ ಉಚ್ಚ ವರ್ಗಗಳಿಂದಲೇ ನ್ಯಾಯಾಂಗದ ಕುರಿತಾದ ಟೀಕೆ ಟಿಪ್ಪಣಿಗಳು ಬಂತೊಡಗಿರುವುದು ಶೋಚನೀಯ. ನಿಜವಾಗಿ ನೋಡುವುದಾದರೆ, ಶಾಸನಾಂಗದ ಮೂಲಕವಾಗಿಯೇ ಆರ್ಥಿಕ ಮತ್ತು ಸಾಮಾಜಿಕ ಲಾಭಗಳಿಗೆ ಸಂಬಂಧಿಸಿದ ಮಾರ್ಗಗಳ ಕಾರಣವಾಗಿಯೇ ಇವುಗಳು ಹುಟ್ಟಿಕೊಂಡವೆ. ಆದರೆ, ಈ ಟೀಕೆ ಹಾಗೂ ಟಿಪ್ಪಣಿಗಳು ತಪ್ಪು ಕಲ್ಪನೆಯಿಂದ ಬಂದುವುಗಳು. ನ್ಯಾಯ ಸೂತ್ರವನ್ನು ರಚಿಸುವ ಕೆಲಸವು ಮಾತ್ರ ಸಾಕಷ್ಟು ಕಟ್ಟಿ ಹೋಗಿದೆಯೆಂಬುದನ್ನು ನಾವಿಂದು ನೋಡುತಿದ್ದೇವೆ ಇದು ನ್ಯಾಯಾಲಯದ ತಪ್ಪು ಆಗಿರುವುದಿಲ್ಲ ನ್ಯಾಯಾಲಯಗಳು ನ್ಯಾಯಸೂತ್ರಗಳ ಅರ್ಥವನ್ನು ಇದ್ದದಕ್ಕಿದ್ದಂತೆಯೇ ಹೇಳಬೇಕಾಗುತ್ತದೆ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ನ್ಯಾಯಾಂಗ ಮತ್ತು ಶಾಸನಾಂಗಗಳು ಪ್ರತಿಪ್ರತ್ಯೇಕವಾಗಿವೆ. ಶಾಸನಾಂಗವು ತತ್ವಗಳನ್ನು ಹಾಕಿ ಈ ತತ್ವ ಅಥವಾ ಧ್ಯೇಯಗಳು ಫಲಿಸುವಂತೆ ಮಾಡಲು ಶಾಸನಗಳನ್ನು ಸಿದ್ಧಪಡಿಸುತ್ತದೆ. ನ್ಯಾಯಾಂಗವು ನ್ಯಾಯಸೂತ್ರಕ್ಕನುಸಾರವಾಗಿ ಅವನ್ನು ಅರ್ಥಮಾಡಿಕೊಂಡು ನ್ಯಾಯವನ್ನು ಹರಿಸುತ್ತದೆ ಆದುದರಿಂದ ಶಾಸನೀಕರಣದ ಉದ್ದೇಶಗಳಿಗೂ ಒರ್ವ ನ್ಯಾಯಾಧೀಶನಿಗೂ ಯಾವ ಸಂಬಂಧವೂ ಇರುವುದಿಲ್ಲ.

ನಿಷ್ಪಕ್ಷಪಾತ ದೃಷ್ಟಿಯಿಂದ ಯಾವುದೇ ವಿಷಯವನ್ನು ಕೈಗೆ ತೆಗೆದ ಕೊಳ್ಳುವುದಷ್ಟೆ ಒಬ್ಬ ನ್ಯಾಯಾಧೀಶನ ಕರ್ತವ್ಯವಾಗಿದೆ. ಆದರೆ, ಅವನು ಎಷ್ಟೇ ಅಲಿಪ್ತನಾಗಿರಲಿ. ಈ ರಾಷ್ಟ್ರದ ನಾಗರಿಕತನ ಸಿಂದಾತನು ವಂಚಿತನಾಗುವುದಿಲ್ಲ. ಈ ರಾಷ್ಟ್ರದ ಪ್ರಗತಿಗೂ ಆತನಿಗೂ ಇರುವ ಸಂಬಂಧವು ದೂರವಾಗುವುದಿಲ್ಲ ತನ್ನ ಸುತ್ತು ಮುತ್ತಲೂ ಇರುವ ತನ್ನ ರಾಷ್ಟ್ರೀಯರ ಬಡತನವನ್ನು ತಹೇಗೆ ಮರೆತು ಬಿಡಬಲ್ಲನು? ಜೀವನಮಟ್ಟವು ಉನ್ನತವಾಗಬೇಕು ಎಂಬ ಗುರಿಯುನ್ನವನು ಹೇಗೆ ತಾನೇ ಸ್ವರಣಾಬಾಹಿರಗೊಳಿಸಬಲ್ಲನು?

ಒಬ್ಬ ನ್ಯಾಯಾಧೀಶನು, ಒಂದು ಶಾಸನವನ್ನು ಸಿದ್ಧಪಡಿಸುವಾಗ, ಅದರಿಂದ ಒಕ್ಕೆಸಿಕೊಂಡಿರುವ ಕೇಡುಗಳನ್ನು ದೂರಮಾಡುವಲ್ಲಿ ಶಾಸನಾಂಗಕ್ಕೆ ನೆರವಾಗಬಲ್ಲನು

ಶಾಸನಾಂಗಕ್ಕೆ ಅನುಕೂಲವಾಗುವ ಹಾಗೆ ನ್ಯಾಯ ಸೂತ್ರಗಳನ್ನು ಒಬ್ಬ ನ್ಯಾಯಾಧಿಪತಿಯು ವಿವರಿಸಬಹುದು. ಆದರೆ, ಇಂತಹ ಸಂದರ್ಭದಲ್ಲಿ ನ್ಯಾಯ ಸೂತ್ರದಲ್ಲಿ ಅವಕಾಶವಿರಬೇಕಾಗುತ್ತದೆ ನ್ಯಾಯ ಶಾಸ್ತ್ರಕ್ಕನುಸಾರವಾಗಿ ನ್ಯಾಯದಾನ ಮಾಡುವೆನೆಂದು ನ್ಯಾಯಾಧಿಪತಿಯು ಪ್ರತಿಜ್ಞೆ ಸ್ವೀಕರಿಸಿರುತ್ತಾನೆ ಹಾಗಿರುವಾಗ ನ್ಯಾಯ ಸೂತ್ರವೇ ಶಾಸನಾಂಗಕ್ಕೆ ಬೇಕಾದ ರೀತಿಯಲ್ಲಿಲ್ಲವಾದರೆ, ಆತನಾದರೂ ಏನು ಮಾಡಬಲ್ಲ?

ಈ ಕಾರಣದಿಂದ ವ್ಯರ್ಥವಾಗಿ ನ್ಯಾಯಾಲಯಗಳನ್ನು ನಿಂದಿಸುವುದಕ್ಕಿಂತ, ನ್ಯಾಯ ಶಾಸ್ತ್ರದಲ್ಲಿಯೇ ಪಳಗಿದವರ ಸಹಾಯದಿಂದ ನ್ಯಾಯ ಸೂತ್ರವನ್ನು ಸಮಯಕ್ಕೆ ಸರಿಯಾಗಿ ಜೋಡಿಸುವಂತೆ ಮಾಡಿ ಅದಕ್ಕೆ ಹಣವನ್ನು ಕರ್ಚುಮಾಡುವುದು ಉಪಯೋಗಕರವಾದೀತು

ಇಂಗ್ಲೆಂಡಿನಲ್ಲಿ ಸುರಿತ ಪಾರ್ಲಿಮೆಂಟರಿ ಶಾಸ್ತ್ರ ರಚನಕಾರರು ಇರುತ್ತಾರೆ ಇಂಡಿಯನ್ ಪೆನಲ್‌ಕೋಡ್, ಎವಿಡೆನ್ಸ್ ಆಕ್ಟ್, ಕಾನ್ಟ್ರಾಕ್ಟ್ ಆಕ್ಟ್ ಮೊದಲಾದುವುಗಳಿಗೆ ಸಮವಾದ ನ್ಯಾಯ ಸೂತ್ರಗಳಿರುತ್ತವೆ, ಆದರೆ, ಅವುಗಳನ್ನು ತಯಾರಿಸುವ ಗಣ ವಿಶೇಷ ಬುದ್ಧಿವಂತಿಕೆಯನ್ನು ಉಪಯೋಗಿಸಿರುವುದರಿಂದ, ಅವು ಇಂದಿಗೂ ಸಮಯ ಪರೀಕ್ಷೆಗೆ ಗುರಿಯಾಗಿಲ್ಲ

ಒಂದು ಶಾಸನವು ಕೆಟ್ಟದೆಂದು ಹೇಳಿದ ಮಾತ್ರಕ್ಕೆ ಶಾಸನಾಂಗವು ನ್ಯಾಯಾಲಯಗಳನ್ನು ದೂರುವುದಾಗಲೀ ಟೀಕಿಸುವುದಾಗಲೀ ಸಲ್ಲದು. ಹೀಗೆ ಶಾಸನವನ್ನು ದೂರುವುದು ನ್ಯಾಯಾಲಯಗಳ ಅಪರಾಧವಲ್ಲ ನ್ಯಾಯಾಲಯಗಳು ನ್ಯಾಯಸೂತ್ರಗಳ ಅರ್ಥವನ್ನು ಅದರಂತೆಯೆ ಹೇಳಬೇಕಾಗುತ್ತದೆ. ನಮ್ಮ ರಾಷ್ಟ್ರಸಂವಿಧಾನವು ಶಾಸನಾಂಗದ ಎಲ್ಲೆಗಳಲ್ಲಿ ನ್ಯಾಯಾಂಗವು ಕಾರ್ಯವನ್ನು ಮಾಡಿದ್ದು ಇದು ಸಂವಿಧಾನವು ಮಾಡಿದ ಸರ್ವೋಚ್ಚ ಕೆಲಸವಾಗಿದೆ

ನ್ಯಾಯಾಂಗ ಮತ್ತು ಆಡಳಿತಗಳು ಬೇರ್ಪಡಬೇಕಾಗಿರುವುದು ಸಂವಿಧಾನದಲ್ಲಿ ಸೂಚಿತವಾದ ತತ್ವಗಳಲ್ಲಿ ಒಂದಾಗಿದೆ. ಆದರೆ, ಹೆಚ್ಚಿನ ರಾಜ್ಯಗಳು ಈ ಸುಧಾರಣೆಯನ್ನು ಮಾಡಿಕೊಳ್ಳದಿರುವುದು ಶೋಚನೀಯ ಬೊಂಬಾಯಿ ಸರಕಾರವು ಈ ಸಂಬಂಧವನ್ನು ಕಡಿದುಕೊಂಡುದು ಅಭಿನಂದನೀಯ. ಆದರೂ ಸರಕಾರವು ಸಾಮಾನ್ಯ ನ್ಯಾಯಪತಿಗಳ ವರ್ಗಾವಣೆ, ಭಡತಿ, ಮತ್ತು ನೇಮಕಗಳಲ್ಲಿ ತನ್ನ ಹಸ್ತಕ್ಷೇಪವನ್ನು ಮಾಡುವ ಅಧಿಕಾರವಿಟ್ಟುಕೊಂಡಿರುವುದು ವಾಂಛನೀಯವಲ್ಲ.

(ಇನ್ನೂ ಪುಟ ನೋಡಿರಿ)

ಅಮೆರಿಕೆಯ ಅಂತರಾಷ್ಟ್ರೀಯ ಭೂಶಾಸ್ತ್ರ ಸಮಿತಿಯ ಡಾ ಜೇಮ್ಸ್ ವಾನ್ ಆಲೆನರು ಸಾಲ್ಸನೆಯ ಎಕ್ಸ್‌ಪ್ಲೋರರ್‌ನ ವಿಶೇಷವಾಗಿ ವಿವರಿಸುತ್ತಿದ್ದಾರೆ ಪ್ರಪಂಚದ ಸಕ್ಷಿಯಲ್ಲಿ ಇವು ಹಾರಿಸಿದ ಉಪಗ್ರಹದಲ್ಲಿ ಪಥಗಳನ್ನು ಗುರುತಿಸುತ್ತ ಸರದಿಗಾರರಿಗೆ ಸೂಚನೆಯನ್ನು ಕೊಡುತ್ತಿದ್ದಾರೆ ಎಡಗೈಯಲ್ಲಿ ಅವರು ಇನ್ನು ಉಪಗ್ರಹದ ಮಾದರಿಯೊಂದನು ಇಟ್ಟುಕೊಂಡಿದ್ದಾರೆ

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd· 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಮನೆಯಲ್ಲಿರಬೇಕು ಕರೆಯುವುದಕ್ಕೆ ಬೇಂಕಿನಲ್ಲಿರಬೇಕು ಒಂದಿಷ್ಟು ಧನ | ಸಿಂಡಿಕೇಟ್ ಬೇಂಕ್

NAVAYUGA
REGD. NO. M. 3618

UDIPI, THURSDAY
25—9—1958

LICENSE NO. 31
Licensed to Post without Prepayment

ಇದು ಶುದ್ಧ ಹರಟೆ

(ಂಂನೇ ಪುಟದಿಂದ)

ರಲ್ಲಿ ಸರ್ವಸಾಮಾನ್ಯ ಸೋಮಾರಿಗಳೇ ಹೆಚ್ಚು. ಯಾಕೆಂದರೆ ಇಂಥವರ ಹುಟ್ಟಿಗೆ ಕಾರಣನಾದ ದೇವನೂ ಸೋಮಾರಿಯಲ್ಲವೇ?

ಹರಕೆಯೇಳಿ ಹುಟ್ಟಿದ ಗುಂಡ ತಾಯಿ ತಂದೆಯ ಪ್ರೀತಿಯ ಪುತ್ರನಾಗಿದ್ದ. ಗುಂಡನ ಜನನ ನಕ್ಷತ್ರ—ಭರಣಿಯಂತೆ! 'ಭರಣಿಯಲ್ಲಿ ಹುಟ್ಟಿದವ ಧರಣಿ ಆಳುವ' ನೆಂದು ಹೇಳಿದ ಭಟ್ಟರ ಬಟಾಟೆಯನ್ನು ಕೇಳಿ ಗುಂಡನ ತಾಯಿ-ತಂದೆ ಉಬ್ಬಿದ ಉಂಡೆಯಾದರು! ಆದರೆ ತಮ್ಮ ಸ್ವಂತ ಮಗನೇ ಧರಣಿಯನ್ನಾಳುವಾಗ ತಾವೂ ಆತನ ಕೈಳಗಿನವರಾಗಿದ್ದರೆ, ಇಲ್ಲದ ಮರ್ಯಾದೆಗೆ ಭಾರೀ ಧಕ್ಕೆಯಾದೀತೆಂಬ ಭಯದಿಂದ ಬೇಗನೆ ಯಮಸದನ 'ಗೇಟ್ ಪಾಸ್'ನ್ನು ತರಿಸಿಕೊಂಡು ಅವರು ಪರಲೋಕ ಯಾತ್ರೆಗೆಂದು ಪೆಟ್ಟಿಗೆಕಟ್ಟಿದ್ದರು.

ಹೀಗೆ ಹರಕೆಯೇಳಿ ಹುಟ್ಟಿದ ಗುಂಡ ತಾಯಿ ತಂದೆಯನ್ನಂತೂ ಬೇಗನೆ ಮುಗಿಸಿದ. ಭರಣಿಯಲ್ಲಿ ಹುಟ್ಟಿದ ಗುಂಡ ಧರಣಿ ಆಳುವ ಮಾತು, ಅವನ ಜಾತಕ ನೋಡಿದ ಭಟ್ಟರೂ ಮರೆತುಹೋಗಿತ್ತು. ಹೀಗಾಗಿ ಆತ ಮನುಮೆಯಾಗಿ ತರುಣಿಯನ್ನಾದರೂ ಆಳಬೇಕೆಂಬ ಯೋಚನೆಗೆ ಬಂದ. ಈಗೀಗ ಗುಂಡನ ತಾಪತ್ರಯವೂ ಕಜ್ಜಾಯಿತು! ಹಾಗೆಯೇ ಗುಂಡ, ಕನ್ಯಾಪಿತೃಗಳ ಮುಂದೆ ತಲೆಎತ್ತಿ ನಡೆಯಲಾರಂಭಿಸಿದ. ಹೆಣ್ಣಿಗೆ ಕೈಕೊಟ್ಟು—ಅಲ್ಲ-ಕೈಹಿಡಿದು ಕಣ್ಣನಕಡೆಯಿಂದ ಸಿಗುವ ವರದಕ್ಷಿಣೆಯಿಂದ ಕೆಲವು ತಿಂಗಳಾದರೂ ತಾನು 'ಇಸ್ಟೇಟ್' ರಾಜನಾಗಿ ಮೆರೆದಾಡಬಹುದಲ್ಲಾ! ಎಂದು ಗುಂಡನ ಯೋಚನೆ.

ಹೇಗಿದ್ದರೂ ಈ ವರದಕ್ಷಿಣೆ ಪಡೆಯುವ ಭಾಗ್ಯ ಯೋಗ್ಯತೆ ಇನಗೂ ಇದೆಯಲ್ಲಾ, ಎಂದೇ ಗುಂಡನಿಗೆ ತಾನೂ ಒಬ್ಬ ಗಂಡು ಎಂದು ಹೆಮ್ಮೆ! ಜೀವನದಲ್ಲಿ ಇಷ್ಟನ್ನೇ ಪಡೆದರೆ ಸಾಕೆಂದು ಬಗೆದು—'ಹುಟ್ಟುವುದಾದರೆ ಗಂಡಾಗಿ ಹುಟ್ಟಬೇಕು' ಎಂದು ಗುಂಡ ಆಗಾಗ ಕೇಳುವುದುಂಟು. ಬ್ರಹ್ಮನೂ ಗುಂಡನಿಗೆ ಒಂದು ಹೆಣ್ಣನ್ನು ಗಂಟುಹಾಕಿಡಲು ಮರೆಯಲಿಲ್ಲ: ಹೀಗೆ ಗುಂಡನ ಮದುವೆಯೂ ಆಯ್ತೆನ್ನಿ! ಮದುವೆಯ ಕಾಲ ಗುಂಡ ಬಹಳ ಗಂಡಾಂತರದಲ್ಲಿದ್ದ. ಪಾಪ ಅವನ ಅಡಚಣೆ ಅಷ್ಟಿಷ್ಟೆಂದು ಹೇಳುವುದೇ ಬೇಡ. ಆ ಸಮಯ ಅವನಿಗೆ ಮದುವೆಯಾಗದೆ ಬಾಕಿ ಉಳಿಯುತ್ತಿದ್ದರೆ ಆಳದು ಉಳದ ಸ್ವಲ್ಪ ಮರ್ಯಾದೆಯೂ ಹೋಗುತಿತ್ತೊ! ಏನೋ! ಹುಟ್ಟಿಸಿದ ದೇವ ಹುಲ್ಲು ಮೇಯಿಸಲಾಂ'ನೆಂಬ ಮಾತಿನ ಸತ್ಯವನ್ನು ಆ ವೇಳೆ ಸೂರಾ ನಂಬಿದ್ದ ಗುಂಡ. ಹುಟ್ಟಿದಾರಭ್ಯ ಒಂದೇ ಒಂದು ಪೈ ಕೂಡ ಆತ ಸಂಪಾದನೆ ಮಾಡಿಲ್ಲ. ಅಲ್ಲ—ಕೆಲಸ ಮಾಡದೆ ತಿನ್ನುವುದಕ್ಕೂ ಪುಣ್ಯ ಬೇಕಪ್ಪ!-ಏನೋ ಹಿರಿಯರು ಮಾಡಿಟ್ಟುದುದನ್ನೇ ಆತ ಕರಗಿಸುವ ಭಾಗ್ಯವಂತನಾಗಿದ್ದ. ಗುಂಡ ಮದುವೆಯ ದಿನ,—ಕಚ್ಚೆ ಹಾಕಲು ಬೇಕಾದ ಶಂಡೆಯನ್ನೂ ಕಮ್ತಿಯರ ಅಂಗಡಿಯಲ್ಲಿ ಮೂರುದಿನದ ವಾಯಿದೆಗೆ ಕಡ ತಂದಿದ್ದ. ಹಂಜೆ ಎಂದೇನು? ಎಲ್ಲವೂ ಅಷ್ಟೆ! ಹೆಚ್ಚೇಕೆ ಮದುವೆಯ ಆಮಂತ್ರಣವನ್ನೂ ಪ್ರಿಂಟ್‌ಮಾಡಿಸಲು ಉಪಾಯವಿಲ್ಲದೆ ಗುಂಡ ಕಣ್ಣು ಬಾಯಿ ಬಿಟ್ಟಾಗ, ಸೆರೆಮನೆಯ ಗೋಸು ನಾಳಿನ ಭವಿಷ್ಯದಿಂದ ಹೆಚ್ಚು ರೂಪ್ಯಾ ತೆಗೆದುಕೊಟ್ಟಿದ್ದ. ಗುಂಡಾಗಿ ಹುಟ್ಟಿದ ಗುಂಡನ ಆಪತ್ಕಾಲ ಇಲ್ಲಿಯವರೆಗೆ ಬಂದುಮುಟ್ಟಿತ್ತು! ಮದುವೆಯಾದರೂ ಅವನಿಗೆ ಸುಖಉಂಟೆಂದು ನಂಬಿದಿರಾ?

ಮದುವೆಯ ಮರುದಿನವೇ ಅವನನ್ನು ಕಾಣಲು ಒಬ್ಬೊಬ್ಬರೇ ಮನೆಯವರೇಗೂ ಬಂದರು. ಗುಂಡ ಹಾಗೆಲ್ಲ ಫಕ್ಕನೆ ಸಿಗುವ ಆಸಾಮಿಯಲ್ಲ. ಮದುವೆಯಾದ ಮೊದಲಿಗೇ ಕೈಹಿಡಿದವಳ ಮುಂದೆ ಎಲ್ಲಿ ತನಗೆ ಪಾದುಕಾಪೂಜೆಯಾಗುವುದೋ ಎಂಬ ಭಯದಿಂದ ಬಂದವರಿಗೆಲ್ಲ ಕೊಟ್ಟು ಹಿಂದೆ ಕಳುಹಿದ. ಹೀಗೆ ಸಿಕ್ಕಿದುದರಲ್ಲಿ ಕೆಲವೇ ಕಾಲ ಸಂದಾಯಕ್ಕಾಯ್ತು. ಮತ್ತೆ?—ಮತ್ತೇನು ಕೈಹಿಡಿದವಳ ಕರಿಮಣಿಯೋ—ಮೂಗುತಿಯೋ ಹೇಗೂ ಇದೆಯಲ್ಲಾ? ಉಳಿದ ಅಡಚಣೆಗೆ ಅವನ್ನು ಬೇಂಕಿಗೆ ಮುಟ್ಟಿಸಿದರಾಯ್ತು! ಇದ್ದುದನ್ನು ತೆಗೆಯುವ ಹಕ್ಕು ಪೂರಾ ಗಂಡಿಗೆ ಇದೆಯಷ್ಟೆ! ಗುಂಡಾಗಿ ಹುಟ್ಟಿದರೆ ಸಾಕು ಅವನಿಗೆಬಂದಲ್ಲಿ ಒಂದು ವಿಧದ ಅನುಕೂಲ ಪರಿಸ್ಥಿತಿ ಬಂದೇ ಬರುತ್ತದೆ—ಎಂದೇ ಗುಂಡನ ನಂಬಿಕೆ. ಹೀಗೆಲ್ಲಾ ಅನುಕೂಲವಿರುವಾಗ, ಹುಟ್ಟುವುದಾದರೆ ಗಂಡಾಗಿ ಹುಟ್ಟಬೇಕೆಂಬುದು ಗುಂಡನ ವಾದ! ಇಂಥವರ ಕೈಹಿಡಿವ ಭಾಗ್ಯವಂತೆಯರು ಮಾತ್ರ—ತಮ್ಮ ಮರ್ಯಾದೆ ಏನಾದರೂ ಇದ್ದರೆ—ಇದನ್ನು ತವರುಮನೆಯಲ್ಲೇ ತೆಗೆದಿಟ್ಟುಬರುವುದು ಲೇಸು! ಗುಂಡನೊಬ್ಬನನ್ನೇ ದೂರುವುದೇಕೆ? ಅವನ ಸಮಾನಬುದ್ಧಿಯ ಸಹೋದರರು ನಮ್ಮಲ್ಲಿ ಹಲವರಿಲ್ಲವೇ?

— ಕೆ. ಜೆ. ಶೆಟ್ಟಿ, ಕಡಂದಳಿ.

ಕೆಂಚಿನ ಡಚ್ಚಸರು ಗ್ರೇಟ್ ಬ್ರಿಟನ್ನಿನ ಕುಮಾರಿ ಆಂಜೆಲ ಬುಕ್ಸಟನ್ (ಎಡಪಕ್ಕ) ಮತ್ತು ಅಮೇರಿಕೆಯ ಕುಮಾರಿ ಆಲ್ಥಿಯ ಗಿಬ್ಸನ್ (ಬಲಪಕ್ಕ)ರು ಸ್ತ್ರೀಯರ ಟೆನ್ನಿಸ್ ಡಬ್ಬಲ್ಸ್‌ನಲ್ಲಿ ವಿಂಬ್ಲೆಡನ್ನಿನಲ್ಲಿ ಗೆದ್ದನಂತರ ಬಹುಮಾನವನ್ನು ಹಂಚುತ್ತಿರುವುದು.

ಆರೋಗ್ಯ ರಕ್ಷಣೆ

ಜನತೆಯ ಆರೋಗ್ಯ-ರಕ್ಷಣೆಯು ಸರಕಾರದ ಕೆಲಸಮಾತ್ರವಲ್ಲ

ದೇಶದ ವಿವಿಧ ಭಾಗಗಳ ವಿವಿಧ ವೈದ್ಯರೂ ಸರಕಾರದೊಡನೆ ಅನಿವಾರ್ಯ ಸಹಕರಿಸಬೇಕು

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ನವದೆಹಲಿಯಲ್ಲಿ ನೇಂದ್ದ ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ ಭವನದ ಅಡಿಗಲ್ಲಿಡುವ ಸಂದರ್ಭದಲ್ಲಿ ಭಾರತದ ಬೇರೆ ಬೇರೆ ಭಾಗಗಳಿಂದ ಆಗಮಿಸಿದ ಡಾಕ್ಟರರನ್ನು ಉದ್ದೇಶಿಸಿ, ಅವರು ತ್ಯಾಗ ಮತ್ತು ಅನಾಸಕ್ತ ಭಾವನೆಗಳಿಂದ ದೇಶದ ಜನತೆಯ ಸೇವೆಯನ್ನೆಸಗಬೇಕೆಂದು ಉಪದೇಶಿಸಿದರು.

ಭಾರತೀಯ ಯೋಜನೆಯಲ್ಲಿ ಅಡಕವಾದ ನಮ್ಮ ಧ್ಯೇಯ ಗಳಲ್ಲಿ ರೋಗಗಳನ್ನು ಸಂಪೂರ್ಣವಾಗಿ ದೂರಕರಿಸುವುದೂ ಆನಾರೋಗ್ಯದಿಂದ ಬಳಲುತ್ತಿರುವವರಿಗೆ ಅತ್ಯುತ್ತಮ ರೀತಿಯ ಔಷಧಿಗಳನ್ನು ಒದಗಿಸುವುದೂ ಸೇರಿಕೊಂಡಿದೆ. ದೇಶದಲ್ಲಿರುವ ರೋಗಗಳ್ನು ಹೊಡೆದೋಡಿಸುವ ಮಹಾ ಕಾರ್ಯದಲ್ಲಿ ದೇಶದ ಡಾಕ್ಟರರ ಸಹಾಯವೂ ಮಹತ್ವಪೂರ್ಣವಾಗಿದೆಯೆಂಬುದಾಗಿ ಡಾ. ಪ್ರಸಾದರು ತಿಳಿಸಿದರು.

ಇಂದು ನಮ್ಮ ದೇಶದಲ್ಲಿ ಚಿಕಿತ್ಸೆ ಮತ್ತು ಸಾಮಾಜಿಕ ಆರೋಗ್ಯಪಾಲನೆಗಾಗಿ ಒದಗಿಸಿರುವ ಸೇವಾ ಸೌಲಭ್ಯಗಳು ಹೆಚ್ಚಿರುವುದಾದರೂ ಅವು ನಮ್ಮ ಜನತೆಯ ಆವಶ್ಯಕತೆಯ ಮಟ್ಟಕ್ಕೆ ಹೋಲಿಸಲ್ಪಡುವಾಗ, ಪರ್ಯಾಪ್ತವಾಗಿರುವುದಿಲ್ಲ. ನಮ್ಮ ಆರೋಗ್ಯ ಪ್ರಗತಿಯು ಇದೇ ಮಂದಗತಿಯಲ್ಲಿ ನಡೆಯುತ್ತ ಹೋಗುವುದಾದರೆ, ಅದು ಸಂತೋಷಜನಕ ವಿಷಯವಲ್ಲವೆಂದವರು ಅಭಿಪ್ರಾಯಪಟ್ಟರು.

ಚಿಕಿತ್ಸಾ ವ್ಯವಸ್ಥೆಯ ಸೌಕರ್ಯಗಳನ್ನು ಜನತೆಗೆ ಕಲ್ಪಿಸಿಕೊಡುವುದು ಸರಕಾರದ ಕೆಲಸವೆಂಬುದಾಗಿ ಜನತೆಯು ಭಾವಿಸಿದಂತೆ ನಮ್ಮ ಪರಿಸ್ಥಿತಿಯಿದೆ. ಆದರೆ, ಈ ದೃಷ್ಟಿಯು ಸರಿಯೆಂದು ಅನ್ನಬರುವುದಿಲ್ಲ. ಮುಖ್ಯವಾಗಿ ಜನತಾ ಸರಕಾರದ ಕೆಲಸವಾದರೂ ಚಿಕಿತ್ಸಾ ವ್ಯವಸಾಯದಲ್ಲಿ ತೊಡಗಿರುವ ಜನರು ದೇಶದ ರೋಗದೂರೀಕರಣದ ಮಹಾ ಸಾಹಸದಲ್ಲಿ ಮತ್ತು ಸಾರ್ವಜನಿಕ ಸ್ವಾಸ್ಥ್ಯ ಸೇವೆಗಳನ್ನು ವಿಕಾಸಗೊಳಿಸುವಲ್ಲಿ ಸರಕಾರದೊಡನೆ ಸಹಕರಿಸುವುದು ಆವಶ್ಯಕವಿದೆಯೆಂದು ರಾಷ್ಟ್ರಪತಿಯವರು ಹೇಳಿದರು.

ಇಂಡಿಯನ್ ಮೆಡಿಕಲ್ ಎಸೋಸಿಯೇಷನ್ನಿನ ಸೇವೆಯನ್ನು ಪ್ರಶಂಸಿಸುತ್ತ ಮಾನ್ಯ ರಾಷ್ಟ್ರಪತಿಯವರು ಎಸೋಸಿಯೇಷನ್ ತನ್ನ ಸ್ಥಾಪನೆಯಾದಂದಿನಿಂದ ಮೂವತ್ತು ವರ್ಷಗಳಲ್ಲಿ ಚಿಕಿತ್ಸಾ ವ್ಯವಸಾಯಕ್ಕೆ ಮಹತ್ವ ಪೂರ್ಣಸೇವೆಸಲ್ಲಿಸಿದೆ; ಅದು ಕೇವಲ ಚಿಕಿತ್ಸೆ ಮತ್ತು ತತ್ಸಂಬಂಧಿತ ಕಾರ್ಯಗಳಲ್ಲಿ ಮಾತ್ರ ನಿಮಗ್ನವಾಗಿರದೆ, ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣಗಳನ್ನು ಸುದೃಢವಾದ ಆಧಾರದ ಮೇಲೆ ನಿಲ್ಲಿಸಿದೆಯೆಂದರು.

ವೈದ್ಯರ ಪ್ರಧಾನ ಸಂಘವಾದುದರಿಂದ, ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ ವ್ಯವಸಾಯದಲ್ಲಿ ಮಾರ್ಗದರ್ಶನದ ಅಂತರ್ಕಾಲೀನ ಸ್ಥಿತಿಯಲ್ಲಿ ಸರಕಾರದೊಡನೆ ಸಹಕರಿಸುವ ಅತ್ಯಧಿಕ ಹೊಣೆಯನ್ನು ಹೊರಬೇಕಾಗಿದೆ ಎಂದು ಸೂಚಿಸಿದರು.

ಜನಪ್ರಿಯ ಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K H. Shetty, at the Navayuga press Udipi S. India